—N. Vithaldas Achut Keni Kumta near

Reg. No. B 1270

Thursday, 7th June 1923.

ವರ್ಷ ೭.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೪.

ಚಂದಾ ದರಗಳು:—

ಕುಮಟೆಯಲ್ಲಿ ಆಗಾವು ರೂಪಾಯಿ 2-1-0.

ಪರ ಊರವರಿಗೆ ರೂ. 3-0-0

ಪ್ರತಿ ಅಂಚೆವೆಚ್ಚ ಸಹಿತ ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपजनपदयोर्नां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಪ್ರಾಣಾ ಅಕ್ಷರ(೧೫ ಎಮ್‌ಅಕ್ಷ)ದ ಸಾಲುಗಳ ವರೆಗೆ ರೂ. 1-0-0.
ಅನಂತ, ಪ್ರತಿ ಸಾಲಿಗೆ 0-2-0.
ಹಲವು ಸಾರೆ ಹಾಕಿಸುವರಿಗೆ ಬೇರೆ ಬೇರೆ ದರ ಅದ್ಯ ಸಾಲುಗಳಿಗೆ ಹಾಕಲ್ಪಡುತ್ತವೆ.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೭ ನೇ ಜೂನ ಸನ್ ೧೯೨೩ ನೇ ಇಸವಿ)—

हिंदुस्थानात व इतिहासास उत्तमप्रकारें हिंदुस्थानची हवा त्यामध्येच हे औषध हिंदुस्थानातील लोकांस ज्यास्त फायदेशीर आहे.

द्राक्षासव— { दीड रतलची किंमत २ रुपये,

रामबाण औषधें —

सर्दि घालविणारें,
भूक वाढविणारें
शौचास साफ करणारें,
झोप आणणारें,
शक्ति देणारें,
तेजस्वीपणा आणणारें,

— पिण्यास रुचिकर.

क्याटलाग मागवा,

झंडु फार्मास्युटिकल वर्क्स लिमिटेड,
मुंबई नं. १३

GLAXO:- FRESH STOCK NEW BRAND. a *food for infants and invalids*

Kalmegh :- *Well-tried remedy in Liver complaints especially of children*

Syrup of Vasaka :- *Highly efficacious in cold cough, cough and bronchitis.*

Besides we have in stock other patent medicines, Thermometres, Glycerine Syringes etc.

Orders will be executed by V. P. P.

The New Emporium,
Honavar. (N. Kanara.)

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ವಿಷಯಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ
ವಾ. ವರ್ಗಣಿ ಅಂಚೆವೆಚ್ಚ ಸಹಿತ ೧—೧೨—೦ ಮಾತ್ರ.
(೧) ಗ್ರೀಸ ದೇಶದ ಗಾಂಧಿ ೧ನೇ ಭಾಗ ಬೆಲೆ ೦—೬—೦ (೨) ಸದರ ೨ನೇ ಭಾಗ ೦—೫—೦ (೩) ಸ್ವಾತಂತ್ರ್ಯಸಾಧನೆ ೦—೫—೦ (೪) ಗರ್ವ—ಹಿರಿಯರೂ, ಚಿಕ್ಕಂದಿನಿಯರೂ ೦ ೫—೦.

ವಾ. ಅ. ಜೋಗ್ಳೆ,
ರಾಷ್ಟ್ರೀಯ ಶಾಲಾ ವ್ಯಾಪಕ ಶಿರಸಿ

ಸಾಧನ.

ಧಾರ್ಮಿಕ, ನೈತಿಕ, ರಾಜಕೀಯ ವಿಷಯಗಳನ್ನೂ, ಸುಂದರವಾದ ನಾಟಕ ಕಾದಂಬರಿಗಳನ್ನೂ ಒಳಗೊಂಡಿರುವ ಸಾಧನ ಮಾಸಪತ್ರಿಕೆಯು ಒಂದು ಪ್ರತಿ ತಿಂಗಳಲ್ಲಿ ತಪ್ಪದೆ ಪ್ರಕಟವಾಗುವದು ವಾರ್ಷಿಕ ವರ್ಗಣಿ ಅಂಚೆವೆಚ್ಚ ಸೇರಿ ೨ ರೂಪಾಯಿ. ಪತ್ರಿಕೆ ಚಂದಾದಾರರಾಗಲಿಚ್ಛಿಸುವವರು ಕೆಳಗಿನ ಪತ್ತೆಗೆ ಕಾಗದ ಬರೆಯತಕ್ಕದು.

ಗಣಪತಿ ಶಂಕರ ಭಟ್ಟ,
ಸಂಪಾದಕ— 'ಸಾಧನಪತ್ರಿಕಾ'
ಪೋಸ್ಟ ಕರ್ಕಿ (ಜಿ ಕಾರವಾರ)

ಸವಲತು.

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಗಳಿಂದ ಸಣ್ಣ—ದೊಡ್ಡ ಪುಸ್ತಕಗಳೂ, ಕಟಲಾಗುಗಳೂ, ಜಾಹೀರಾತುಗಳೂ, ಲಗ್ನಪತ್ರಿಕೆಗಳೂ ವ ಇತರೇ ಕಾಗದ-ಪತ್ರಗಳೂ, ಬಹಳೇ ಸವಲತ್ತಿಯ ದರಗಳಿಂದ ಬೇಕಾದ ಬಣ್ಣಗಳಿಂದ ಸ್ವಚ್ಛವಾಗಿಯೂ, ಅಂದವಾಗಿಯೂ ಛಾಪಿಸಿ ಕೊಡಲ್ಪಡುವವು ಬೇಕಾದವರು ಕೆಳಗಿನ ಪತ್ತೆಯ ಮೇಲೆ ದರವಾರ ತಿಳುಕೊಳ್ಳಬಹುದು.

ಪತ್ತೆ— **ಕೃಷ್ಣಾ ಕೇಶವ ಶಾನಭಾಗ,**
ಮಾಲಕ,
ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ.

ಎಲ್ಲ ತರದ ಜ್ವರಗಳಮೇಲೆ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ, ಶೈತ್ಯ, ಬಂಗಲೆ ಅಥವಾ ದೂಷಿತ ಹವೆಯಿಂದ ಒದಗುವ ನಾನಾ ಬಿಮಾರೀ ಅಥವಾ ಇತರ ಜ್ವರಗಳೂ, ಇನ್‌ಫ್ಲುಯೆಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನ್ಯಾನ ದುಷ್ಪರಿಣಾಮರಹಿತ ಕೇವಲ ನಿಸ್ಸಂಶಯ ಈ ವಸ್ತು ಸೇವಿಸಿದರೆ ಅಶಕ್ತತೆಯಾಗದೆ ಬೆವರು ಬಂದು ಜ್ವರ ಇಳಿಯುತ್ತದೆ. ಹಾಗು ರೋಗಿಯು ತರಿತ ವಾಸಿಯಾಗುತ್ತಾನೆ.

೩ ಔಂಸ ಬಾಟ್ಲಿ ಕಿಂಮತ ರೂ. ೧—೦—೦.
ಇದರ ಹೊರತು ಇನ್ನೂ ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ ಉಚ್ಚ ಪ್ರತಿಯ ಕೋಲನ ವಾಟರ, ಲವೆಂಡರ ಇತ್ಯಾದಿ ಸಾಮುಗ್ರಿಗಳು ಅಲೆಂಬಿಕದ ಕಾರಖಾನೆಯಲ್ಲಿ ತಯಾರಾಗುತ್ತವೆ. ಮಾಹಿತಿ ಕೇಳಬಾರದು ಇದೆ.

ಅಲೆಂಬಿಕ್ ಕೆಮಿಕಲ್ ವರ್ಕ್ಸ,
ಕಂಪನಿ, ಲಿಮಿಟೆಡ್.
ನಂ ೫೦, ಪ್ರಿನ್ಸೆಸ್‌ಸ್ಟ್ರೀಟ, ಮುಂಬಯಿ.

अलेंबिक केमिकल वर्क्स कं० लि०
नं. ५० प्रिन्सेस स्ट्रीट मुंबई.

ಶುದ್ಧ ಖಿದ್ದರ್ ರೇಶ್ಮೆ ಮಡಿಗಳು.

ಸುಲಭ ಕ್ರಯಕ್ಕೆ ಖಾತ್ರಿಯಾದ ಎಲ್ಲಾ ರಂಗುಗಳಲ್ಲಿಯೂ ಈ ಕೆಳಗೆ ಬರೆದ ಕ್ರಯಕ್ಕೆ ದೊರೆಯುವವು.

೧೮ ಮೊಳ ಉದ್ದ	೩॥ ಅಗಲ	ರೂ.	೨೩	ರಿಂದ	೨೫	ವರೆಗೆ
೧೬	,,	,,	೨॥	,,	,,	೨೦	—	೩೦ ,,
೮	,,	,,	೨॥	,,	,,	೯	—	೧೫ ,,
೬			೨॥	,,	,,	೭	—	೧೧ ,,

SUNBCO BENARES CITY.

ಅಂಗಿ ಬಟ್ಟೆಗಳು ೧೮ ಮೊಳ × ೨ ಮೊಳ ರೂಪಾಯಿ ೧೮ ರಿಂದ ೩೦ ವರೆಗೆ. ಪೇಟ ೧೨ ಮೊಳ × ೧॥ ಮೊಳ ಅಗಲ ರೂಪಾಯಿ ೧೦ ರಿಂದ ೧೫ ವರೆಗ ಜೀನ್‌ಕಾನಾ ೧೪ ಮೊಳ × ೨ ಮೊಳ ರೂ. ೨೪ ರಿಂದ ೩೫ ವರೆಗೆ ಇವುಗಳಲ್ಲದೆ ಕಾಶೀ ಪೀತಾಂಬರ, ಕಾಶ್ಮೀರಿ ಶಾಲು, ರುದ್ರಾಕ್ಷಿ, ಜಾಗಂಟೆ, ಶಾಳ, ಪನ್ನೀರ್ ದಾನಿ, ಬಟುವ ಸಾಮಾನುಗಳು, ದೇವರ ಮತ್ತು ಗಾಂಧಿವಂಶಾದವರ ಚಿತ್ರಗಳಿರುವ ಉಂಗುರಗಳ ಮತ್ತು ಇನ್ನು ಅನೇಕ ಸಾಮಾನುಗಳ ಕ್ಯಾಟಲಾಗ್ ಇನಾಂ.

ವಿಳಾಸ:— ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. (ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶರಾಶಿಯನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ.)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿರುವದೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ ಆಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ತಣ್ಣಗಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಕೂಡಲೆ ಹೆಚ್ಚುತ್ತವೆ. ಎಂದಿಗೂ ಜಗುಳಿ ಬಿದ್ದು ಹೋಗಲಾರವು, ಆದರೆ, ಅವು ದೊಡ್ಡವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಹಾಳುಮಾಡಿಕೊಳ್ಳುವದಕ್ಕಿಂತ ಒಂದೇ ಒಂದು ಬಾರಿ ಈ “ಕಾಮಿನಿಯಾ ಆಯಿಲ್” ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ವೈಸೂರು ಪ್ರದರ್ಶನದಲ್ಲಿ “ಸರ್ಟಿಫಿಕೇಟು ಆಫ್ ಮೆರಿಟ್” ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ — ಸೀಸೆ ಒಂದಕ್ಕೆ 1 0 0, ಸೀಸೆ 3ಕ್ಕೆ ರೂಪಾಯಿ 2-10-0, ಪೋಸ್ಟೇಜ 0 4 0.

ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ ಕೋಮಲ ಚಿರಸ್ಥಾಯಿ ಮತ್ತು ಅತ್ಯುತ್ತಮವು. ಚನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ಸಿದ್ಧಪಡಿಸಿದ್ದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೀಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆ 1 ಕ್ಕೆ 0-8-0; 1 ಡ್ರಾಮಿನ (ಪಿ.2ಯ) ಸೀಸೆ 1 ಕ್ಕೆ 0 12 0, ½ ಔನ್ಸ ಗೊಡ್ಡ ಸೀಸೆ 1 ಕ್ಕೆ 2-0-0 ಅಂಚೆಯ ವೆಚ್ಚ ಬೇರೆ 0-4-0.

ಒಟ್ಟೋದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ 1 ಕ್ಕೆ 0 12 0

Address - **The Anglo Indian Drug & Chemical Co,**
16, Market, **BOMBAY. 2.**

ಖರೇ ಪತ್ತಾಲು! ಶೀಘ್ರ ಕಳ್ಳು" ಪ್ರತಿ ಗ್ಯಾರಿ

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳೆಸಿ, ಪುರುಷರಿಗೆ ಸ್ತ್ರೀ ವಿಷಯವಾಗಿಯೂ, ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷಯುಕ್ತ ಶಕ್ತಿಯನ್ನು ಉಂಟುಮಾಡಿ, ದಿನೇ ದಿನೇ ಶರೀರದ ಜರಠಪನವನ್ನು ರೋಗಗಳನ್ನು ದೂರಪಡಿಸಿ ಆಯುರಾರೋಗ್ಯವನ್ನು, ರತಿಯಲ್ಲಿ ಹೆಗ್ಗಳವಾದ ಕೌತುಕಲವನ್ನು ತೋರಿಸುವ ಕ್ರೀಡಾ ಶಕ್ತಿಯ ಉತ್ಸಾಹವನ್ನು, ಸಂಭೋಗದಲ್ಲಿ ತೃಪ್ತಿಯನ್ನೂ, ಸೌಖ್ಯವನ್ನು ಕೊಟ್ಟು ಮನಸ್ಸಿನ ದೃಢತೆಯನ್ನು ಯೌವನದ ಕಳೆಯನ್ನು ದೊರಕಿಸಿ ಮುದಿತನವನ್ನು ನೀಗಿ ಬಲವನ್ನು ಉಂಟುಮಾಡುವದು. ಮೃತ್ಯುವನ್ನು ನಿರಾಕರಿಸಿ, ಹಿಗಿಬಿಗಿಯ ರೋಗಗಳನ್ನು ನಾಶಮಾಡುವದು. ಜೀರ್ಣಜ್ವರ, ಮಂದಾಗ್ನಿ, ಶುಕ್ಲಸ್ರಾವ, ಅಮುಕಂಪ ಇವುಗಳನ್ನು ಬಿಡದೇ ನಾಶಮಾಡುವದು. ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, ದೇಶಕಾಲಗಳಿಂದಲೂ, ಅತ್ಯಾಚಾರಗಳಿಂದಲೂ, ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡಿಸುವ ಬಲಾತ್ಕಾರದ ಹಸ್ತಘರ್ಷಣದಿಂದಲೂ ಅತಿವಿಷಯೋಪಭೋಗದಿಂದಲೂ ಇಂದ್ರಿಯ ಶಿಥಿಲವೂ ತೆಳುವೂ, ನಿಸ್ತೇಜವೂ ಆಗಿ ಯತ್ನವಿಲ್ಲದೆ ಸ್ಖಲನವಾಗುವದು. ಒಂದೊಂದು ಸಾರಿ ಮೂತ್ರದಲ್ಲಿಯೂ ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತೆ, ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈಬಿಸುವು, ನಿದ್ರೆಯಲ್ಲಿ ಭೀಕರವಾದ ಸ್ವಪ್ನ, ಅರಿವು, ಮರುವು ಮತ್ತು ಶರೀರದ ಕಾಂತಿ ಮನಸ್ಸಿನ ಚೇತನ ಕುಂದಿ ಹೋಗುವದು, ಇವೆಲ್ಲವುಗಳಮೇಲೆ ರಾಮಬಾಣದಂತಿರುವದು. ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ. ೧॥. ನಂ ೧ ನಂ ೨. ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಂತು ಒಂಗುಳಿಗೆಗಳುಳ್ಳ ಸೀಸೆಗಳಿಗೆ ರೂ. ೩. ಪೋಸ್ಟೇಜ ಬೇರೆ

ಎಮ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ್,
ಕುಕೀ (ಕೆನರಾ.)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧ ರಾಗದ ಕೈಪೆಟ್ಟಿಗೆ ಕಿಂ ೨೦, ೪೦, ೫೫, ೫೦, ೬೨

೨ „ ಕಾಲಿನ ಪೆಟ್ಟಿಗೆ ಕಿಂ ೬೫, ೭೫, ೧೪೦, ೧೬೦

೩ ತಬಲೆ ಜೋಡಿ ಕಿಂ ೧೩, ೧೫, ೧೮, ೨೦,

೪. ಹಾರ್ಮೋನಿಯಮ ಗ್ಯಾತ ಕಿಂ ೧, ತಬಲೆಗಳ ಡ ಕಿಂ. ೧೨ ೮

ವಿಶೇಷ ಸಮಾಚಾರ ಬೇಕಾದಲ್ಲಿ ನಮ್ಮ ಕ್ಯಾಟಲಾಗ ಪ್ರುಕ್ಕಟೆ ಕೊಡುವೆವು.

ವತ್ರ ವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ನಡೆಸಬೇಕು

ಪತ್ತೆ **ಗೋಪಾಳ ಸಖಾರಾಮ ಮತ್ತು ಕಂಪನಿ, ನಂ ೨೩೨**

ಕಾಳಬಾದೇವಿ ರೋಡ, ಮುಂಬಯಿ

ಕಾಡಿನ ಸುರಾಜ್ಯ.

ಮಿ॥ ಹೇಗರರಿಗೆ ಸಮರ್ಪಕ ಜವಾಬು

ರಾ॥ ಎಸ್ ಜಿ. ಡಬ್ಲ್ಯುರವರ ವಿಸ್ತೃತ ಟೀಕೆ ಟಾಯಿಮ್ಸ್ ಆಫ್ ಇಂಡಿಯಾ ಪತ್ರಿಕಾಕರ್ತರಿಗೆ:—

ಆರ್ಯರೇ,

ಕಾನಡಾ ಜಿಲ್ಲೆಯ ಕಲೆಕ್ಟರರಾದ ಮಿ॥ ಹೇಗರರವರು ನನ್ನ ಪತ್ರದಲ್ಲಿ ಒಳಗೊಂಡ ಕೆಲ ಮುದ್ದೆಗಳನ್ನು ಉತ್ತರಿಸಲು ಯತ್ನಿಸಿರುವರು. ಅದಕ್ಕೆ ನಾನು ಮಿ॥ ಹೇಗರರವರ ಉಪಕಾರ ಮನ್ನಿಸುವೆನು. ಮಿ॥ ಹೇಗರರವರು ನನ ಏನೂ ಹೇಳಲಿ, ಪ್ರಜೆಗಳ ಕೂಗ ಜಂಗಲ ಧೋರಣದ ಬಗ್ಗೆ ಆಲೋಚನೆ ಮಾಡಬೇಕೆಂಬ ಸರಕಾರಕ್ಕೆ ತೋರಲಿಲ್ಲೆಂಬುದನ್ನು ಮಿ॥ ಹೇಗರರವರ ಪತ್ರದ ಮೇಲಿಂದಲೇ ಸಿದ್ಧವಿದೆ. ಮಿ॥ ಹೇಗರ ನೆವವನ್ನು ವಿಚಾರಿಸುವ ಗೃಹಸ್ಥರಿಗೆ ಕಮಿಟಿಯ ಮೆಂಬರರಾಗಲಿಕ್ಕೆ ಸರಕಾರವು ನಿಮಂತ್ರಿಸಿತು, ಅವರೂ ಒಪ್ಪಿಕೊಂಡರು. ಮುಂದೆ ಅವರ ನೇಮಣೂಕಿಗೆ ಕೆಲ ಸರಕಾರಿ ಅಧಿಕಾರಿಗಳೇ ಅಡ್ಡಿ ಹೇಳಿದರು. ಸ್ವಾಭಿಮಾನಿ ಸದ್ಗೃಹಸ್ಥರು ಸರಕಾರಿ ನಿಮಂತ್ರಣವನ್ನು ತಿರಸ್ಕರಿಸಿದರು. ಮತ್ತೊಂದು ಕಾರಣವಿದೆ. ದಿವಾಣರಾದ ನಾಮದಾರ ಮೋಘಾರವರು ಕಮಿಟಿಯನ್ನು ಕೂಡಲೇ ನೇಮಿಸಿ, ಜಂಗಲ ಪ್ರಶ್ನೆಯನ್ನು ೩ ತಿಂಗಳುಗಳೊಳಗೆ ನಿರ್ಣಯಿಸುತ್ತೇವೆಂದು ಹೇಳಿ, ೬ ತಿಂಗಳುಗಳ ವರೆಗೆ ಆಲೋಚನೆಯನ್ನೇ ನಡಿಸಿದರು. ಅಷ್ಟರಲ್ಲಿ (ಅಸಹಯೋಗದ ದಿನಗಳಲ್ಲಿ ಕಾನಡಾ ಜಿಲ್ಲೆಯು ಸಿಲುಕಿ) ಕಮಿಟಿಯ ಮೆಂಬರರಾಗಲಿಕ್ಕೆ ಒಪ್ಪಿದವರು ಅಸಹಯೋಗಿಗಳಾದರು. ಅದಕ್ಕೂ, ಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾದ ಯೋಗ್ಯ ಗೃಹಸ್ಥರೆಂದು ಕೆಲವರ ಹೆಸರುಗಳು ನಾಮದಾರ ಮೋಘಾರವರಿಗೆ ಸೂಚಿಸಲ್ಪಟ್ಟದ್ದವು. ಇಷ್ಟರಲ್ಲಿ ಜನತೆಯ ಲಕ್ಷ್ಯವು ಅಸಹಯೋಗದ ಮೇಲೆ ಕೇಂದ್ರವಾಯಿತು. ಕಾನಡಾ ಜಿಲ್ಲೆಯೊಳಗಿನ ಜಂಗಲ ತಳಮಳದ ತೀಕ್ಷ್ಣತೆಯು ಕಡಿಮೆಯಾಯಿತು. ನಾಮದಾರ ಮೋಘಾರವರಿಗೆ ವೈಗಳ್ಯವಾಗಿ ಕಾಲಹರಣ ಮಾಡಲು ಸಂಧಿ ದೊರೆಯಿತು. ನಾನೊಂದು ಪ್ರಶ್ನೆ ಕೇಳುತ್ತೇನೆ. ಒಬ್ಬ ರೋಗಿಯು ರೋಗದ ತೀಕ್ಷ್ಣತೆಯಿಂದ ಒರಳುವನು. ವೈದ್ಯನು ಹತ್ತರ ಹರಗೊಡುವದಿಲ್ಲ. ಇಂಥವನಿಗೆ ಯಾವದೂ ಮದ್ದು ಕೊಡುವದನ್ನು ಬಿಟ್ಟು ಅವನಿಗೆ ತಾನೇ ಗುಣಗೊಡುವಷ್ಟು ನಿಷ್ಠುರರಾಗುವರೇನು? ಇದೇ ಪರಿಸ್ಥಿತಿಯು ಕಾನಡಾ ಜಿಲ್ಲೆಯಲ್ಲುಂಟಾಗಿದೆ.

ಆಮೇಲೆ ಜಿಲ್ಲೆಯೊಳಗಿನ ಮುಂದಾಳುಗಳನ್ನು ಪತ್ರ ಸರೆಮಿಸಿ, ಆಲೋಚಿಸಬೇಕೆಂದು ಯತ್ನಗಳು ನಡೆದವು. ಈ ಬಗ್ಗೆ ಕಾನಡಾ ಜಿಲ್ಲೆಯ ನಾಮದಾರರು ಎಷ್ಟರ ಮಟ್ಟಿಗೆ ಈ ಪರಿಷತ್ತನ್ನು ನೆರೆಯಿಸಲು ಯತ್ನಿಸಿದವರು, ಅವರ ಯೋಗ್ಯತೆಯೆಷ್ಟು? ಎಂಬ ಸಂಗತಿಗಳನ್ನು ಯಾರಿಗೂ ಹೇಳಬೇಕೆಂದಿಲ್ಲ. ಈ ಗೃಹಸ್ಥರು ಕೌನ್ಸಿಲಿನಲ್ಲಿ ಚುನಾವಣೆಯಾಗಿಬಂದದ್ದು ಕೌನ್ಸಿಲ ಚುನಾವಣೆಯ ಒಂದು ವಿನೋದವೇ ಸರಿ ಎಂದು ಮಿ॥ ಹೇಗರಿಗೆ ಪ್ರತ್ಯೇಕ ಹೇಳಬೇಕಾಗಿಲ್ಲ. ನಿಜವಾಗಿ ಇವರೊಂದು ಪಕ್ಷದ ಬುದ್ಧಿಯ ಅಸಹಕಾರಿಗಳ ಅಟ. ನಾಮದಾರ ಮೋಘಾರವರು ಕಾರವಾರದ ಪ್ರಜಾಸಮ್ಮತ ಮುಂದಾಳುಗಳಾದ ಶ್ರೀ॥ ಎಮ್ ಆರ್. ತೇಲಂಗರವರನ್ನು ಹತ್ತರ ಕರೆದು ಅವರಗೂಡ ಆಲೋಚನೆ ನಡಿಸಿದ್ದರೆ, ಅವರ ಪ್ರಯತ್ನವು ಸಫಲವಾಗುತ್ತಿತ್ತು. ಆದರೆ, ಈಗೀಗ, ದಿವಾಣರು ಶ್ರೀ ತೇಲಂಗರವರನ್ನು ದೂರದೂರ ಮಾಡಿರುವರು. ಇದಲ್ಲದೆ, ಮೋಘಾರವರಲ್ಲಿ ಹೊಸ ಮನೋವೃತ್ತಿಯುಂಟಾಗಿವೆಂದು ನನಗೆ ಕಂಡುಬರುತ್ತದೆ.

ಸರಕಾರವು ತಾನಾಗಿ ಜಿಲ್ಲೆಯೊಳಗಿನ ಹೆಸರುಗೊಂಡ ಕೆಲ ಗೃಹಸ್ಥರನ್ನು ಕಾರವಾರದಲ್ಲಿ ಕರೆಯಿಸಿ, ಈ ಪ್ರಶ್ನೆಯನ್ನು ಆಲೋಚಿಸಬೇಕೆಂದು ನಾನೂ ನಾಮದಾರ ಮೋಘಾರವರಿಗೆ ಸೂಚಿಸಿದ್ದೆನು. ಆದರೆ, ಪ್ರಜೆಗಳು ತಾವಾಗಿ ಕೂಡಿಕೊಂಡು ಮನವಿಯನ್ನು ಸಾದರಪಡಿಸಿ, ಇಂಥ ಪರಿಷತ್ತನ್ನು ನೆರೆಯಿಸಲು ಪ್ರಾರ್ಥಿಸಬೇಕೆಂದು ಮೋಘಾರವರ ನಿಶ್ಚಯವಿತ್ತು. ಈ ಕುರಿತಾದ ಮೇಲೆ ಅರ್ಜಿಯನ್ನು ಸಾದರಪಡಿಸಲು ಪ್ರಜೆಗಳು ಒಪ್ಪಲಿಲ್ಲ. ಯಾಕಂದರೆ, ಜವಾಬುದಾರ ಸ್ವರಾಜ್ಯ ಸರಕಾರದ ದಿವಾಣರಾದ ಮಿ॥ ಮೋಘಾರವರು, ಅವಶ್ಯಕವಾಗಿ ಪ್ರಜಾಗೌರವವು ಸರಕಾರಿ ಗೌರವಕ್ಕಿಂತ ಯಾವದೇ ರೀತಿಯಿಂದ ಕಡಿಮೆಯೆಂದು ಸಿದ್ಧಪಡಿಸಲು ಹವಣಿಸಬಾರದಿತ್ತು. ಈ ಪ್ರಶ್ನೆಯನ್ನು ನಿರ್ಣಯಿಸಬೇಕೆಂದು ಸರಕಾರಕ್ಕೆ ಅಂತಃಕರಣಪೂರ್ವಕ ಇಚ್ಛೆ ಇದ್ದರೆ, ಪ್ರಜೆಗಳ ಸಹಕಾರಿತೆಯು ಸರಕಾರಕ್ಕೆ ಸಿಕ್ಕುತ್ತಿತ್ತು ಎಂಬ ಸಂಗತಿಯು ಈ ವಿವರಣೆಯಿಂದ ಸ್ಪಷ್ಟವಾಗುತ್ತದೆ.

ಮಿ॥ ಹೇಗರವರ ವಿಧಾನಗಳನ್ನು ಸಮಾಲೋಚಿಸಿದರೆ, ಇಷ್ಟು ಕಾಡನ್ನೆಲ್ಲ ಪ್ರಜೆಗಳಿಗೆ ಹಂಚಿ ಕೊಟ್ಟರುವರೆಂದು ಭಾವನೆಯಾಗುತ್ತದೆ. ಕಾನಡಾ ಜಿಲ್ಲೆಯಲ್ಲಿ ಜಂಗಲಿನ ಮಾನವು ವಿಶಾಲವಿದೆ. ಜಿಲ್ಲೆಯೊಳಗಿನ ಕೇಕಡಾ ೮೦ ರಷ್ಟು ಕ್ಷೇತ್ರವು ಕಾಡೇ ಕಾಡು. "ನಾಗುಭೂಮಿಯೆಂದಾಗಲಿ, ಸಂರಕ್ಷಕ ಕಾಡುಗಳೆಂದಾಗಲಿ, ಕೆಲ ಕ್ಷೇತ್ರವನ್ನು ಆ ಪ್ರಾಂತಗಳಿಂದ ಕಳದರೆ, ಜಂಗಲುಗಳಿಗೆ ವಿಶೇಷ ಹಾನಿ ಬರಲಿಕ್ಕಿಲ್ಲ" ಕುಮಟಾ ತಾಲೂಕಿನ ನನ್ನ ಮೂಲ ಉದಾಹರಣೆಯನ್ನೇ ತೆಗೆದುಕೊಳ್ಳುವ. ೩೫,೦೦೦ ಎಕರೆ ಸಾಗು ಭೂಮಿಗಾಗಿ ವಹಿವಾಟು ನಡಿಸಲು ೨೬,೦೦೦ ಎಕರೆ ಕಾಡು ಹಂಚಿಹಾಕಲ್ಪಟ್ಟಿದೆ. ಇದೇ ತಾಲೂಕಿನಲ್ಲಿದ್ದ ಕಾಡಿಗೂ, ಪ್ರಜೆಗಳಿಗೆ ಪಾಲು ಮಾಡಿಕೊಟ್ಟ ಕಾಡಿಗೂ ಪ್ರಮಾಣ ಹಚ್ಚಿದರೆ, ಇಲ್ಲಿ ೧ ಪಾಲು ಕಾಡು ಪ್ರಜೆಗಳಿಗೆ ಕೊಡೋಣಾಗಿದೆ. ಮತ್ತೆ ಎಲ್ಲೆಲ್ಲಿ ಕಾಡನ್ನು ಪಾಲುಮಾಡಿ ಕೊಡಬಹುದು ಎಂಬದನ್ನು ಸೂಚಿಸಲು ಮಿ॥ ಹೇಗರು ನನಗೆ ಆಹ್ವಾನ ಮಾಡುತ್ತಾರೆ. ನಾನು ಸೆಟ್ಲಮೆಂಟ ಆಫೀಸರನಾಗಿ ನೇಮಣೂಕ ಹೊಂದಿದ್ದರೆ, ಅಥವಾ ಮಿ॥ ಕೂಲಿನ್ಸರಗೂಡ ನನಗೂ ನೇಮಿಸಿದ್ದರೆ, ನಾನೂ ಸಹ ಸೂಚಿಸುತ್ತಿದ್ದೆ.

ಕಾಡುಗಳ ಅವಶ್ಯಕತೆಯು ಪ್ರಜೆಗಳಿಗೆ ಅತಿ ಮಹತ್ವದ್ದು. ಜಂಗಲ ಖಾತೆಯ ಕಾರಭಾರವು ನಡಿಯುವದರಿಂದ ವಹಿವಾಟಗಳು ವಿನಿದ್ದರೂ, ಅವು ನಿಷ್ಪ್ರಯೋಜಕವಾಗುತ್ತವೆ ಇದು ಜನರ ಅನುಭವದ ಮಾತು. ಈ ಬಗ್ಗೆ "ನಾನಿಂದೆ ವಿಚಾರ ಮಾಡುತ್ತೇನೆ, ಮುಂದೆ ನಿರ್ಣಯಿಸುತ್ತೇವೆ" ಎಂದು ಮಿ॥ ಹೇಗರು ನುಡಿಯುತ್ತಾರೆ. ಈ ವಚನಗಳು ಸಮಾಧಾನಕರವೆಂದು ಯಾರುಹೇಳುವರು? ಇಂಥ ವಚನಗಳಲ್ಲಿ ಶ್ರದ್ಧೆಯಿಟ್ಟು ನಾವೆಲ್ಲರೂ ಬೇಸತ್ತಿರುವೆವು. ಮತ್ತೆ ಅವುಗಳನ್ನು ನಂಬಿಕೊಂಡಿರುವದು ಎಂದೂ ಯೋಗ್ಯವೆನಿಸಲಾರದು. ಇನ್ನು ೧೦ ವರ್ಷಗಳದ ಮೇಲೆ "ಗ್ರಾಮ ಕಾಡುಗಳನ್ನು ಗ್ರಾಮಪಂಚಾಯತಗಳ ಪಾಲಕ್ಕೇ ಕೊಡಿರಿ, ಅಥವಾ, ಸದ್ಯಕ್ಕೆ ಮುಲ್ಕಿ ಖಾತೆಯಾದರೂ ಅವುಗಳ ಆವಶ್ಯಕತೆಯನ್ನು ನೋಡಲಿ" ಎಂದ. ನಿಮ್ಮ ವೃತ್ತಪತ್ರದಲ್ಲಿ ಪ್ರಕಾಶಪಡಿಸಿದ್ದರಿಂದ ಆಂದೋಲನ ಒದಗುವದು, ಹೀಗಾದರೆ, ಅದೇನು ಆಶ್ಚರ್ಯವೆನಿಸಲಾರದು. ನವಯುಗವು ಉತ್ಸಾಹದಿಂದ ಪ್ರಾರಂಭವಾಗಿ ೩ ವರ್ಷಗಳಾಗುತ್ತ ಬಂದವು ಇಷ್ಟು ಅವಧಿಯಲ್ಲಿ ಒಂದೇ ಒಂದು ಜಿಲ್ಲೆಯ ಹಳೇ ದೂರು ವಿಚಾರಿಸಲಿಕ್ಕೆ, ಸುಧಾರಿಸಿದ ಕಾರಭಾರಕ್ಕೆ ಪುರಸತ್ತೇ ದೊರಕ ನದಿಲ್ಲ. ಭವಿಷ್ಯ ಕಾಲದ ವಚನಗಳ ಬಗ್ಗೆ ನಾನು ಹೇಗೆ ಆಶೆ ಹಿಡಿಯಲಿ? ೧೯೨೧ನೇ ಇಸ್ವಿಯ ಜಂಗಲ ರಿಪೋರ್ಟಿನಲ್ಲಿ ದಕ್ಷಿಣ ಭಾಗದ ಅವಶ್ಯತೆಯ ಬಗ್ಗೆ ಕಮೀಶನರರು ಒಂದು ಮಾತು ಬರೆದಿರುವರು. ಅದೇನಂದರೆ:— ಕೆಲ ಸಂಗತಿಗಳಲ್ಲಿ ಜನರ ಹಕ್ಕುಗಳನ್ನು ರಜಿಸ್ಟರುಗಳಲ್ಲಿ ನೋಂದು ಮಾಡಲಿಲ್ಲ. ನೋಂದು ಆದ ಹಕ್ಕುಗಳ ಅರ್ಥವೇ ಕೆಲವೆಡೆಯಲ್ಲಿ ತಿಳಿಯಲೊಲ್ಲದು. ಹೀಗಾಗಿ, ಹಕ್ಕುಗಳ ಪೇಚಾಟವಾಗಿದೆ. ಜಂಗಲ ಖಾತೆಯ ಅವಶ್ಯತೆಯು ಯಾವ ಪರಿಯಿಂದ ನಡೆಯುತ್ತದೆ ಎಂಬುದಕ್ಕೆ ಇದೊಂದು ಉದಾಹರಣೆ.

ನಾನು ಅವತರಿಸಿದ ಕಲೆಕ್ಟರರ ಟೀಕೆಯು ಕಾನಡಾ ಜಿಲ್ಲೆಯ ಪೂರ್ವ ಭಾಗದ ಫೊರೆಸ್ಟರರು ಕೊಟ್ಟ ೧೯೨೨-೧೯೨೩ನೇ ಸಾಲಿನ ವರದಿಗೆ ಸಂಬಂಧಿಸಿರುತ್ತದೆಂದು ಮೊದಲೇ ಹೇಳಿಬಿಟ್ಟಿದ್ದೇನೆ ಅನ್ಯ ಕಡೆಯಲ್ಲಿ ನಮೂದಾದ ವಿ॥ ಫಿಸ್ಸರರವರ ಟೀಕೆಗಳನ್ನು ಸಮಾಲೋಚಿಸಿದರೆ, ಸಮುದ್ರ ದಂಡೆಯ ಮೇಲಿನ ಪ್ರದೇಶಕ್ಕೂ ಇದೇ ಟೀಕೆಯು — ಅಷ್ಟು ತೀವ್ರವಲ್ಲದಿದ್ದರೂ — ಲಾಗು ಇರುತ್ತದೆಂದು ಸುಲಭವಾಗಿ ಸಿದ್ಧ ಮಾಡಬಹುದು. ಸಮುದ್ರ ಪ್ರದೇಶದ ದಂಡೆಗಳ ಮೇಲಿನ ಪ್ರಜೆಗಳ ಆರ್ಥಿಕ ಸ್ಥಿತಿಯು ಅವನತಿ ಹೊಂದುತ್ತಿರುವದಿಲ್ಲೆಂದು ಮಿ॥ ಹೇಗರು ಹೇಳಿರಲಿ, ಬೇಕಾದ ಹಾಗೆ ಲೆಕ್ಕ ಮಾಡಲಿ, ತರ್ಕ ಮಾಡಲಿ. ಕುಮಟಾದ ತಾಲೂಕಿನವರು ಜಿಲ್ಲೆಯಲ್ಲಿ ಅತಿ ಶ್ರೀಮಂತರೆಂದು ಎಲ್ಲರೂ ಹೇಳುತ್ತಾರೆ. ಅಲ್ಲಿಯೂ ಅವನತಿಯ ಚಿನ್ಹಗಳು ದೃಗ್ಗೋಚರವಾಗುತ್ತಿವೆ. ಕಳೆದ ೧೦ ವರ್ಷಗಳಲ್ಲಿಯೇ ೬,೦೦೦ ದಷ್ಟು ಜನಸಂಖ್ಯೆಯು ಕಡಿಮೆಯಾಯಿತು. ಅಂಕೋಲೆಯ ಹೆಸರುಗೊಂಡ ಜಮೀನದಾರರೊಬ್ಬರು ನನಗೆ ಸಿಕ್ಕಿದ್ದರು, ಅವರು ವಿಶ್ವವಿದ್ಯಾಲಯದ ಪದವೀಧರರಾಗಿರುವರು. ಸಾರ್ವಜನಿಕ ಪ್ರಶ್ನೆಗಳ ಚಲೋ ಮಾಹಿತಿಯೂ ಅವರಿಗಿದೆ. ಅಂಕೋಲಾ ತಾಲೂಕಿನೊಳಗಿನ ಗುಂಡಬಾಳೆಯ ನೆರೆಹೊರೆಯ ಕೆಲ ಹಳ್ಳಿಗಳು ತಾಲೂಕಿನ ಕಣಜಗಳೆಂದು ಖ್ಯಾತಿಗೊಂಡಿದ್ದವು. ಈಗ ಅಲ್ಲಿ ಏನಿದೆ? ಜನರೆಲ್ಲರೂ ಸ್ಥಲಾಂತರ ಹೊಂದಿದರು. ಭೂಮಿಯೆಲ್ಲ ಬಂಜರು ಬಿದ್ದಿದೆ. ಕಾರಣವೇನೆಂದು ಕೇಳಲು ಜಂಗಲ ಧೋರಣವೆಂದು ಉತ್ತರವಿತ್ತರು.

ಮಿ॥ ಹೇಗರವರ ಪತ್ರವು ಸ್ಪಷ್ಟವಿದೆ, ನಿಜಸ್ಥಿತಿಯ ದ್ಯೋತಕವಿದೆ. ಆ ಬಗ್ಗೆ ನನ್ನ ಅಂಬೋಣವೇನಿಲ್ಲ. ಸರಕಾರಿ ಮುದ್ರಣಲೇಖಗಳನ್ನು ಸಮಾಲೋಚಿಸಿ, ನಾನು ಒಂದು ಕರು ಬರೆಯಬೇಕಾಗಿದೆ. ಸರಕಾರವು, ಸ್ಪಷ್ಟವಾಗಿ ಕಾಣುವ ಸತ್ಯಸ್ಥಿತಿಯನ್ನು ಅಡಗಿಸಲು, ಆ ಬಗ್ಗೆ ಹೊಸ ತರ್ಕಗಳನ್ನು ಶೋಧಿಸಿ, ಅಸಮರ್ಥನೀಯ ಧೋರಣವನ್ನು ಸ್ಥಿರಪಡಿಸಲು ಬಹಳೇ ಪರಿಶ್ರಮವನ್ನೂ, ಚಾತುರ್ಯವನ್ನೂ ವೆಚ್ಚಮಾಡಿದೆ. ಅಷ್ಟೇ ಚಾತುರ್ಯವನ್ನೂ, ಪರಿಶ್ರಮವನ್ನೂ ಕಾನಡಾ ಜಿಲ್ಲೆಯ ಜಂಗಲ ಕಷ್ಟಗಳ ನಿವಾರಣೆಗಾಗಿ ಪ್ರಜೆಗಳ ಸಹಾಯತೆಯ ಜತೆ, ನಿರ್ಣಯಿಸಲು ಅಂತಃಕರಣಪೂರ್ವಕ ಯತ್ನಿಸಿದ್ದರೆ, ಈ ಪ್ರಶ್ನೆಯು ನಿರ್ಣಯವಾಗಿ ಎಷ್ಟೋ ವರ್ಷಗಳು ಕಳೆದು ಹೋಗುತ್ತಿದ್ದವು.

ಮುಂಬಯಿ. ಎಸ್ ಜಿ. ಡಬ್ಲ್ಯು

ತಾ. ೮-೫-೨೩

ದೇಶಿ ಸೆಂಟೋನಾಯಿನ್.
(ಜಂತುವಿನ ಪುಡಿ.)

ಅನಾಯಾಸಕರವಿದ್ದಿದೆ ಗುಣ ಕೊಡುವಂಥಾದ್ದು. ಪ್ರಪಂಚದಲ್ಲಿ ಪ್ರಖ್ಯಾತ ಔಷಧ.

ಔಂಸಿನ ಶೀಸೆಗೆ ೭ ರೂ ೮ ಆಣೆ.

ಸಿಗುವ — ಎಸ್. ಜಿ ಭಾಗ್ವತ್,

ಆಯುರ್ವೇದಿಕ್ ಕೆಮಿಸ್ಟ್, ಕರ್ಕಿ. (ಕೆನರಾ)

BOMBAY LODGING.
ದಿ ಮೊಡರ್ನ್ ಹಿಂದೂ ಹೊಟೆಲ್ ಗೋವಾಲಿಯಾ ಟೆಂಕ್ ರೋಡ, ಮುಂಬಯಿ.

ಮುಂಬಾಯಿಯ ಬಹಳ ಆರೋಗ್ಯಕರವಾದ ಭಾಗದಲ್ಲಿದೆ. ವಿದ್ಯಾರ್ಥಿಗಳಿಗೆ ನಿಲ್ಲುವುದಕ್ಕೂ, ವರ್ತಕರಿಗೆ ಇಳಿಯುವುದಕ್ಕೂ, ಬಹಳ ಅನುಕೂಲವಾದ ಸ್ಥಳ. ನಮಗೆ ಮೊದಲೇ ತಿಳಿಸಿದ್ದಲ್ಲಿ, ಪರಸ್ಥಳಿಕರಿಗೆ ಬಂದರ ವ ರೇಲ್ವೆಸ್ಟೇಶನ್ ಮೇಲಿಂದ ಕರೆತರುವ ಮತ್ತು ಮುಂಬಾಯಿ ಊರಿನ ಸರ್ವ ಮಾಹಿತಿಯನ್ನು ಕೊಡುವ ಏರ್ಪಾಡುಗಳನ್ನು ಮಾಡಲಾದೀತು.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. (ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಅಂತಹ ಕೇಶಪಾಶವನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ.

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ..

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ಕಡ್ಡಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹಚ್ಚಿದ ಕೂಡಲೇ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಹಾಳು ಮಾಡಿಕೊಳ್ಳುವದಕ್ಕಿಂತ ಒಂದೇ ಒಂದು ಬಾರಿ ಈ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಅನೇಕ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ — ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0, ವಿ.ಪಿ. ಚಾರ್ಜ 0-14-0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ ಕೋಮಲ ಚಿರಸ್ಥಾಯಿ ಮತ್ತು ಅತ್ಯುತ್ತಮವು. ಚನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ದ ಸಿದ್ಧ ಮಾಡುದು ಇದರಲ್ಲಿ ಮದಿರೆಯ (ಆಲ್ಕೋಹೋಲ್) ನ ಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ವಸ್ತ್ರಗಳು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುತ್ತದೆ. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆ 1 ಕ್ಕೆ 0-8-0, 1 ಡ್ರಾಂ ನ (ಮಿಡಿಯಂ) ಸೀಸೆ 1 ಕ್ಕೆ 0-12-0, 1 ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0 ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ 1 ಕ್ಕೆ 0-12-0

Address **The Anglo Indian Drug & Chemical Co,**

16, Market, **BOMBAY. 2.**

ಒಂದೇ ಮಾತು ! ತಾಜಾ ಕಲ್ಮ ! ತ್ವರೆ ಗ್ರಾಹಿಯರೆ!!!

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳೆಸಿ ಪುರುಷರಿಗೆ ಸ್ತ್ರೀ ವಿಷಯವಾಗಿಯೂ, ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷಯುಕ್ತ ಶಕ್ತಿಯನ್ನು ಉಂಟು ಮಾಡಿ, ದಿನೇ ದಿನೇ ಶರೀರದ ಜರಠತನವನ್ನೂ ರೋಗಗಳನ್ನೂ ದೂರಪಡಿಸಿ ಆಯುರಾರೋಗ್ಯವನ್ನೂ ರತಿಯಲ್ಲಿ ಪ್ರಬಲವಾದ ಕುತೂಹಲವನ್ನು ತೋರಿಸುವ ಕ್ರೀಡಾ ಶಕ್ತಿಯ ಉತ್ಸಾಹವನ್ನೂ ಸಂಭೋಗದಲ್ಲಿ ತೃಪ್ತಿಯನ್ನೂ, ಸೌಖ್ಯವನ್ನೂ ಕೊಟ್ಟು ಮನಸ್ಸಿನ ದೃಢತೆಯನ್ನೂ ಯೌವನದ ಕಳೆಯನ್ನೂ ದೊರಕಿಸಿ ಮುದಿತನವನ್ನು ನೀಗಿ ಬಲವನ್ನು ಉಂಟು ಮಾಡುವದು. ಮೃತ್ಯುವನ್ನು ನಿರಾಕರಿಸಿ, ಹಗೆಬಗೆಯ ರೋಗಗಳನ್ನು ನಾಶಮಾಡುವದು. ಜೀರ್ಣಜ್ವರ ಮಂದಾಗ್ನಿ, ಶುಕ್ಲಸ್ರಾವ, ಮೂತ್ರಕೃಚ್ಛ್ರ ಇವುಗಳನ್ನು ಬಿಡದೇ ನಾಶಮಾಡುವದು. ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, ದೇಶಕಾಲಗಳಿಂದಲೂ, ಅತ್ಯಾಚಾರಗಳಿಂದಲೂ, ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡಿಸುವ ಬಲಾತ್ಕಾರದ ಹಸ್ತಘರ್ಷಣದಿಂದಲೂ ಅತಿವಿಷಯೋಪಭೋಗದಿಂದಲೂ ಇಂದ್ರಿಯ ಶಿಥಿಲವೂ ತಿಳುವೂ, ನಿಸ್ತೇಜವೂ ಆಗಿ ಯತ್ನವಿಲ್ಲದೆ ಸ್ಖಲನವಾಗುವದು. ಒಂದೊಂದು ಸಾರಿ ಮೂತ್ರದಲ್ಲಿಯೂ ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತೆ, ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈ ಬಿಸುವು ನಿದ್ರೆಯಲ್ಲಿ ಭೀಕರವಾದ ಸ್ವಪ್ನ ಅಳಿವು, ಮರುವು ಮತ್ತು ಶರೀರದ ಹಾಂಗೂ ಮನಸ್ಸಿನ ಚೇತನ ಕುಂದಿ ಹೋಗುವದು, ಇವೆಲ್ಲವುಗಳ ಮೇಲೆ ರಾಮಬಾಣದಂತಿರುವದು. ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ ೧॥ ನಂ ೧ ನಂ ೨ ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಂತು ೬೦ ಗುಳಿಗೆಗಳುಳ್ಳ ಸೀಸೆಗಳಿಗೆ ರೂ ೩ ಪೋಸ್ಟೇಜ ಬೇರೆ

ಎಮ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ್,

ಕೆಕ್ಕಾರ (ಕೆನರಾ)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧ ರಾಗದ ಕೈಪೆಟ್ಟಿಗೆ ಕಿಂ ೨೦, ೪೦, ೪೫, ೫೦, ೬೦
೨ „ ಕಾಲು ಪೆಟ್ಟಿಗೆ ಕಿಂ ೬೫ ೭೫ ೧೪೦, ೧೬೦
೩ ತಬಲೆ ಜೋಡಿ ಕಿಂ ೧೩, ೧೫ ೧೮ ೨೦,
೪ ಹಾರ್ಮೋನಿಯಮ್ ಗೈಡ ಕಿಂ ೧।, ತಬಲೆಗೈಡ ಕಿಂ ೧೩ ಆ

ವಿಶೇಷ ವರ್ತಮಾನಕ್ಕಾಗಿ ನಮ್ಮ ಕ್ಯಾಟಲಾಗ ಪುಸ್ತಕ ತರಿಸಿರಿ

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಆಗಬೇಕು

ಪತ್ತೆ ಗೋವಿಂದರಾವ ಟೆಂಬೆ ಆಂಡ ಕಂಪನಿ, ನಂ ೨೬೩

ಕಾಳಬಾದೇವಿ ರೋಡ, ಮುಂಬಯಿ

ಕಾಡಿನ ಸುರಾಜ್ಯ.

ಮಿ। ಹೇಗರಿಗೆ ಸಮರ್ಪಕ ಜವಾಬು

ರಾ। ಎಸ್ ಜಿ ಡಬ್ಲ್ಯೂರವರ ಸಿಷ್ಟರ ಟೀಕೆ ಟಾಯಿಮ್ಸ ಆಫ್ ಇಂಡಿಯಾ ಪತ್ರಿಕಾಕರ್ತರಿಗೆ —

ಉವಾಚ,

ಕಾನಡಾ ಜಿಲ್ಲೆಯ ಕಲೆಕ್ಟರರಾದ ಮಿ। ಹೇಗರವರು ನನ್ನ ಪತ್ರದಲ್ಲಿ ಒಳಗೊಂಡ ಕೆಲ ಮುದ್ದೆಗಳನ್ನು ಉತ್ತರಿಸಲು ಯತ್ನಿಸಿರುವರು. ಇದಕ್ಕೆ ನಾನು ಮಿ। ಹೇಗರವರ ಉಪಕಾರ ಮನ್ನಿಸುವೆನು. ಮಿ। ಹೇಗರವರು ಏನೇ ಹೇಳಲಿ, ಪ್ರಜೆಗಳ ಕಷ್ಟ ಜಂಗಲ ಧೋರಣದ ಬಗ್ಗೆ ವಿಚಾರಣೆ ಮಾಡಬೇಕೆಂತ ಸರಕಾರಕ್ಕೆ ತೋರಲಿಲ್ಲೆಂಬುದನ್ನು ಮಿ। ಹೇಗರವರ ಪತ್ರದ ಮೇಲಿಂದಲೇ ಸಿದ್ಧವಿದೆ. ಮಿ। ಹೇಗರ ಮತವನ್ನು ವಿಚಾರಿಸುವ ಗೃಹಸ್ಥರಿಗೆ ಕಮಿಟಿಯ ಮೆಂಬರರಾಗಲಿಕ್ಕೆ ಸರಕಾರವು ನಿಮಂತ್ರಿಸಿತು, ಅವರೂ ಒಪ್ಪಿಕೊಂಡರು. ಮುಂದೆ ಅವರ ನೇಮಣೂಕಿಗೆ ಕೆಲ ಸರಕಾರಿ ಅಧಿಕಾರಿಗಳೇ ಅಡ್ಡಿ ಹೇಳಿದರು. ಸ್ವಾಭಿಮಾನಿ ಸದ್ಗೃಹಸ್ಥರು ಸರಕಾರಿ ನಿಮಂತ್ರಣವನ್ನು ತಿರಸ್ಕರಿಸಿದರು. ಮತ್ತೊಂದು ಕಾರಣವಿದೆ. ದಿವಾಣರಾದ ನಾಮದಾರ ಮೇಘಾರವರು ಕಮಿಟಿಯನ್ನು ಕೂಡಲೇ ನೇಮಿಸಿ, ಜಂಗಲ ಪ್ರಶ್ನೆಯನ್ನು ೩ ತಿಂಗಳುಗಳೊಳಗೆ ನಿರ್ಣಯಿಸುತ್ತೇವೆಂದು ಹೇಳಿ, ೬ ತಿಂಗಳ ನಂತರ ವರೆಗೆ ಆಲೋಚನೆಯನ್ನೇ ನಡೆಸಿದರು. ಅಷ್ಟರಲ್ಲಿ (ಅಸಹಯೋಗದ ತೆರೆಗಳಲ್ಲಿ ಕಾನಡಾ ಜಿಲ್ಹೆಯೂ ಸಿಲುಕಿ) ಕಮಿಟಿಯ ಮೆಂಬರರಾಗಲಿಕ್ಕೆ ಒಪ್ಪಿದವರು ಅಸಹಯೋಗಿಗಳಾದರು. ಆದರೂ ಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾದ ಯೋಗ್ಯ ಗೃಹಸ್ಥರುಗಳ ಕೆಲವರ ಹೆಸರುಗಳ ಸಹ ನಾಮದಾರ ಮೇಘಾರವರಿಗೆ ಸೂಚಿಸಲ್ಪಟ್ಟಿದ್ದವು. ಇಷ್ಟರಲ್ಲಿ ಜನತೆಯ ಲಕ್ಷವು ಅಸಹಯೋಗದ ಮೇಲೆ ಕೇಂದ್ರವಾಯಿತು. ಕಾನಡಾ ಜಿಲ್ಲೆಯೊಳಗಿನ ಜಂಗಲ ಚಳವಳಿಯು ತೀಕ್ಷ್ಣತೆಯು ಕಡಿಮೆಯಾಯಿತು. ನಾಮದಾರ ಮೇಘಾರವರಿಗೆ ವೈಗಳ್ಯರಾಗಿ ಕಾಲಹರಣ ಮಾಡಲು ಸಂಧಿ ದೊರೆಯಿತು. ನಾನೊಂದು ಪ್ರಶ್ನೆ ಕೇಳುತ್ತೇನೆ. ಒಬ್ಬ ರೋಗಿಯು ರೋಗದ ತೀಕ್ಷ್ಣತೆಯಿಂದ ಒಳಲುವನು. ವೈದ್ಯನ ಹತ್ತರ ತೆರಳಲು ಅವನಿಗೆ ಶಕ್ತಿಯಿಲ್ಲ. ಅಂಥವನಿಗೆ ಯಾರಾದರೂ ಮದ್ದು ಕೊಡುವದನ್ನು ಬಿಟ್ಟು, ಅವನಿಗೆ ರೋಗ ಸಾಯುಗೊಡುವಷ್ಟು ನಿಷ್ಠುರರಾಗುವರೇನು? ಇದೇ ಪರಿಸ್ಥಿತಿಯು ಕಾನಡಾ ಜಿಲ್ಹೆಯಲ್ಲುಂಟಾಗಿದೆ.

ಆಮೇಲೆ ಜಿಲ್ಲೆಯೊಳಗಿನ ಮುಂದಾಳುಗಳನ್ನು ಏಕತ್ರ ನೆರೆಯಿಸಿ, ಆಲೋಚಿಸಬೇಕೆಂದು ಯತ್ನಗಳು ನಡೆದವು. ಈಬಗ್ಗೆ ಕಾನಡಾ ಜಿಲ್ಹೆಯ ನಾಮದಾರರು ಎಷ್ಟರ ಮಟ್ಟಿಗೆ ಈ ಪರಿಷತ್ತನ್ನು ನರೆಯಿಸಲು ಯತ್ನಿಸಿರುವರು? ಅವರ ಯೋಗ್ಯತೆ ಎಷ್ಟು? ಎಂಬ ಸಂಗತಿಗಳನ್ನು ಯಾರಿಗೂ ಹೇಳಬೇಕೆಂದಿಲ್ಲ. ಈ ಗೃಹಸ್ಥರು ಕೌನ್ಸಿಲಿನಲ್ಲಿ ಚುನಾವಣೆಯಾಗಿ ಬಂದದ್ದು ಕೌನ್ಸಿಲ ಚುನಾವಣೆಯು ಒಂದು ವಿನೋದವೇ ಸರಿ ಎಂದು ಮಿ। ಹೇಗರಿಗೆ ಪ್ರತ್ಯೇಕ ಹೇಳಬೇಕಾಗಿಲ್ಲ. ನಿಜವಾಗಿ ಇದೊಂದು ಮತ್ಸರ ಬುದ್ಧಿಯ ಅಸಹಕಾರಿಗಳ ಆಟ. ನಾಮದಾರ ಮೇಘಾರವರು ಕಾರವಾರದ ಪ್ರಜಾಪಕ್ಷದ ಮುಂದಾಳುಗಳು ಪತ್ರಿ। ಎಮ್ ಆರ್ ತೇಲಂಗರವರನ್ನು ಹತ್ತರ ಕರೆದು ಅವರೊಡನೆ ಆಲೋಚನೆ ನಡಿಸಿದ್ದರೆ ಅವರ ಪ್ರಯತ್ನವು ಸಫಲವಾಗುತ್ತಿತ್ತು. ಆದರೆ, ಈಗೀಗ, ದಿವಾಣರು ಶ್ರೀ ತೇಲಂಗರವರನ್ನು ದೂರದೂರ ಮಾಡಿರುವರು. ಇದಲ್ಲದೆ, ಮೇಘಾರವರಲ್ಲಿ ಹೊಸ ಪ್ರವೃತ್ತಿಯು ಬಂದಿದೆಂದು ನನಗೆ ಕಂಡುಬರುತ್ತದೆ.

ಸರಕಾರವು ೫ನಾಗಿ ಜಿಲ್ಹೆಯೊಳಗಿನ ಹೆಸರುಗೊಂಡ ಕೆಲ ಗೃಹಸ್ಥರನ್ನು ಕಾರವಾರದಲ್ಲಿ ನೆರೆಯಿಸಿ ಈ ಪ್ರಶ್ನೆಯನ್ನು ಆಲೋಚಿಸಬೇಕೆಂದು ನಾನೂ ನಾಮದಾರ ಮೇಘಾರವರಿಗೆ ಸೂಚಿಸಿದ್ದೆನು. ಆದರೆ, ಪ್ರಜೆಗಳು ಕಾರ್ಯಕಾರಿ ಮಂಡಳಿಯನ್ನು ಸಾದರಪಡಿಸಿ, ಅಂಥ ಪರಿಷತ್ತನ್ನು ನೆರೆಯಿಸಲು ಪ್ರಾರ್ಥಿಸಬೇಕೆಂದು ಮೇಘಾರವರ ಮತವಿತ್ತು. ಈ ಕರಾರಿನಮೇಲೆ ಅರ್ಜಿಯನ್ನು ಸಾದರಪಡಿಸಲು ಪ್ರಜೆಗಳು ಒಪ್ಪಲಿಲ್ಲ. ಯಾಕಂದರೆ, ಜವಾಬುದಾರ ಸ್ವರಾಜ್ಯ ಸರಕಾರದ ದಿವಾಣರಾದ ಮಿ। ಮೇಘಾರವರು, ಅನಾವಶ್ಯಕವಾಗಿ ಪ್ರಜಾಗೌರವವು ಸರಕಾರಿ ಗೌರವಕ್ಕಿಂತ ಯಾವದೇ ರೀತಿಯಿಂದ ಕಡಿಮೆಯೆಂದು ಸಿದ್ಧಪಡಿಸಲು ಹವಣಿಸಬಾರದಿತ್ತು. ಈ ಪ್ರಶ್ನೆಯನ್ನು ನಿರ್ಣಯಿಸಬೇಕೆಂದು ಸರಕಾರಕ್ಕೆ ಅಂತಃಕರಣಪೂರ್ವಕ ಇಚ್ಛೆ ಇದ್ದಿದ್ದರೆ, ಪ್ರಜೆಗಳ ಸಹಕಾರಿತೆಯು ಸರಕಾರಕ್ಕೆ ಸಿಗುತ್ತಿತ್ತು ಎಂಬ ಸಂಗತಿಯು ಈ ವಿವರಣೆಯಿಂದ ಸ್ಪಷ್ಟವಾಗುತ್ತದೆ.

ಮಿ। ಹೇಗರವರ ವಿಧಾನಗಳನ್ನು ಸಮಾಲೋಚಿಸಿದರೆ, ಇತ್ತ ಕಾಡನ್ನೆಲ್ಲ ಪ್ರಜೆಗಳಿಗೆ ಹಂಚಿ ಕೊಟ್ಟಿರುವರೆಂದು ಭಾವನೆಯಾಗುತ್ತದೆ. ಕಾನಡಾ ಜಿಲ್ಹೆಯಲ್ಲಿ ಜಂಗಲಿನ ಮಾನವು ವಿಪರೀತವಿದೆ. ಜಿಲ್ಹೆಯೊಳಗಿನ ಶೇಕಡಾ ೮೦ ರಷ್ಟು ಕ್ಷೇತ್ರವು ಕಾಡೇ ಕಾಡು. "ಸಾಗುಭೂಮಿಯೆಂದಾಗಲಿ, ಸಂರಕ್ಷಕ ಕಾಡುಗಳೆಂದಾಗಲಿ, ಕೆಲ ಕ್ಷೇತ್ರವನ್ನು ಅರಣ್ಯಗಳೊಳಗಿಂದ ಕಳೆದರೆ, ಜಂಗಲುಗಳಿಗೆ ವಿಶೇಷ ಹಾನಿ ಬರಲಿಕ್ಕಿಲ್ಲ" ಕುಮಟಾ ತಾಲೂಕಿನ ನನ್ನ ಮತದ ಉದಾಹರಣೆಯನ್ನೇ ತೆಗೆದುಕೊಳ್ಳುವ. ೩೫,೦೦೦ ಎಕರೆ ಸಾಗ ಭೂಮಿಗಾಗಿ ಪಹಿಮಾಟ ನಡಿಸಲು ೨೬,೦೦೦ ಎಕರೆ ಕಾಡು ಹಂಚಿಹಾಕಲ್ಪಟ್ಟಿದೆ. ಇದೇ ತಾಲೂಕಿನಲ್ಲಿದ್ದ ಕಾಡಿಗೂ, ಪ್ರಜೆಗಳಿಗೆ ಪಾಲು ಮಾಡಿಕೊಟ್ಟ ಕಾಡಿಗೂ ಪ್ರಮಾಣ ಹಚ್ಚಿದರೆ, ೯ ಲ್ಲಿ ೧ ಪಾಲು ಕಾಡು ಪ್ರಜೆಗಳಿಗೆ ಕೊಡೋಣಾಗಿದೆ. ಮತ್ತೆ ಎಲ್ಲೆಲ್ಲಿ ಕಾಡನ್ನು ಪಾಲುಮಾಡಿ ಕೊಡಬಹುದು, ಎಂಬುದನ್ನು ಸೂಚಿಸಲು ಮಿ। ಹೇಗರು ನನಗೆ ಆಹ್ವಾನ ಮಾಡುತ್ತಾರೆ. ನಾನು ಸೆಟ್ಲಮೆಂಟ ಆಫೀಸರನಾಗಿ ನೇಮಣೂಕ ಹೊಂದಿದ್ದರೆ, ಅಥವಾ ಮಿ। ಕೊಲಿನ್ಸರಗೂಡ ನನಗೂ ನೇಮಿಸಿದ್ದರೆ, ನಾನೂ ಸಹ ಸೂಚಿಸುತ್ತಿದ್ದೆ.

"ಕಾಡುಗಳ ರಕ್ಷಣೆಯು ಪ್ರಜೆಗಳಿಗೆ ಅತಿ ಮಹತ್ವದ್ದಿದೆ. ಜಂಗಲ ಖಾತೆಯು ಕಾರಭಾರವು ನಡಿಯುವದರಿಗೆ ಪಹಿಮಾಟಗಳು ಏನಿದ್ದರೂ, ಅವು ನಿಷ್ಪ್ರಯೋಜಕವಾಗುತ್ತವೆ. ಇದು ಜನರ ಅನುಭವದ ಮಾತು. ಈ ಬಗ್ಗೆ ವಂದದ ವಿಚಾರ ಮಾಡುತ್ತೇವೆ. ಮುಂದೆ ನಿರ್ಣಯಿಸುತ್ತೇವೆ" ಎಂದು ಮಿ। ಹೇಗರು ನುಡಿಯುತ್ತಾರೆ. ಈ ವಚನಗಳು ಸಮಾಧಾನಕರವೆಂದು ಯಾರು ಹೇಳುವರು? ಇಂಥ ವಚನಗಳಲ್ಲಿ ಶ್ರದ್ಧೆಯಿಟ್ಟು ನಾವೆಲ್ಲರೂ ಬೇಸತ್ತಿರುವೆವು. ಮತ್ತೆ ಅವುಗಳನ್ನು ನಂಬಿಕೊಂಡಿರುವದು ಎಂದೂ ಯೋಗ್ಯವೆನಿಸಲಾರದು. ಇನ್ನು ೧೦ ವರ್ಷಗಳಾದ ಮೇಲೆ "ಗ್ರಾಮ ಕಾಡುಗಳನ್ನು ಗ್ರಾಮಪಂಚಾಯತಗಳ ವಶಕ್ಕೇ ಕೊಡಿರಿ, ಅಥವಾ, ಸದ್ಯಕ್ಕೆ ಮುಲ್ಕಿ ಖಾತೆಯಾದರೂ ಅವುಗಳ ರಕ್ಷಣೆಯನ್ನು ನೋಡಲಿ" ಎಂದು ನಿಮ್ಮ ವೃತ್ತಪತ್ರದಲ್ಲಿ ಪ್ರಜಾಪಕ್ಷರಿಂದ ಆಂದೋಲನ ಬರುವದು ಹೇಗಾದರೆ, ಅದೇನು ಆಶ್ಚರ್ಯವೆನಿಸಲಾರದು. ನವಯುಗವು ಉತ್ಸಾಹದಿಂದ ಪ್ರಾರಂಭವಾಗಿ ೩ ವರ್ಷಗಳಾಗುತ್ತ ಬಂದವು. ಇಷ್ಟು ಅವಧಿಯಲ್ಲಿ ಒಂದೇ ಒಂದು ಜಿಲ್ಹೆಯ ಹಳೇ ದೂರು ವಿಚಾರಿಸಲಿಕ್ಕೆ, ಸುಧಾರಿಸಿದ ಕಾರಭಾರಕ್ಕೆ ಪುರಸತ್ತೇ ದೊರಕ ಲಿಲ್ಲ. ಭವಿಷ್ಯ ಕಾಲದ ವಚನಗಳ ಬಗ್ಗೆ ನಾನು ಹೇಗೆ ಆಶೆ ಹಿಡಿಯಲಿ? ೧೯೨೧ ನೇ ಇಸ್ವಿಯ ಜಂಗಲ ರಿಪೋರ್ಟಿನಲ್ಲಿ ದಕ್ಷಿಣ ಭಾಗದ ರಕ್ಷಣೆಯ ಬಗ್ಗೆ ಕಮೀಶನರರು ಒಂದು ಮಾತು ಬರೆದಿರುವರು. ಅದೇನಂದರೆ — ಕೆಲ ಸಂಗತಿಗಳಲ್ಲಿ ಜನರ ಹಕ್ಕುಗಳನ್ನು ರಜಿಸ್ಟರುಗಳಲ್ಲಿ ನೋಂದು ಮಾಡಲಿಲ್ಲ. ನೋಂದು ಆದ ಹಕ್ಕುಗಳ ಅರ್ಥವೇ ಕೆಲವರಿಗೆ ತಿಳಿಯಲೊಲ್ಲದು. ಹೀಗಾಗಿ, ಹಳ್ಳಿಗರ ಕೇವಲ ಲೂಟವಾಗಿದೆ. ಜಂಗಲ ಖಾತೆಯ ರಕ್ಷಣೆಯು ಯಾವ ಪರಿಯಿಂದ ನಡೆಯುತ್ತದೆ ಎಂಬುದಕ್ಕೆ ಇದೊಂದು ಉದಾಹರಣೆ.

ನಾನು ಅವಲೋಕಿಸಿದ ಕಲೆಕ್ಟರರ ಟೀಕೆಯು ಕಾನಡಾ ಜಿಲ್ಹೆಯ ಪೂರ್ವ ಭಾಗದ ಫೋರೆಸ್ಟರರು ಕೊಟ್ಟ ೧೯೧೭-೧೮ನೇ ಸಾಲಿನ ವರದಿಗೆ ಸಂಬಂಧಿಸಿರುತ್ತದೆಂದು ಮೊದಲೇ ಹೇಳಿಬಿಟ್ಟಿದ್ದೇನೆ. ಅನ್ಯ ಕಡೆಯಲ್ಲಿ ನಮೂದಾದ ಮಿ। ಟಿಪ್ಪರರವರ ಟೀಕೆಗಳನ್ನು ಸಮಾಲೋಚಿಸಿದರೆ, ಸಹ್ಯಾದ್ರಿ ಘಾಟಿಯ ಮೇಲಿನ ಪ್ರದೇಶಕ್ಕೂ ಇದೇ ಟೀಕೆಯು — ಅಷ್ಟು ತೀವ್ರವಲ್ಲದಿದ್ದರೂ — ಲಾಗು ಇರುತ್ತದೆಂದು ಸುಲಭವಾಗಿ ಸಿದ್ಧ ಮಾಡಬಹುದು. ಸಮುದ್ರ ಪ್ರದೇಶದ ದಂಡೆಗಳ ಮೇಲಿನ ಪ್ರಜೆಗಳ ಆರ್ಥಿಕ ಸ್ಥಿತಿಯು ಅವನತಿ ಹೊಂದುತ್ತಿರುವದಿಲ್ಲೆಂದು ಮಿ। ಹೇಗರು ತೋರಿಸಲಿ, ಬೇಕಾದ ಹಾಗೆ ಲೆಕ್ಕ ಮಾಡಲಿ, ತರ್ಕ ಹೂಡಲಿ. ಕೊಂಕಣದವರ ತಾಲೂಕಿನವರು ಜಿಲ್ಹೆಯಲ್ಲಿ ಅತಿ ಶ್ರೀಮಂತರೆಂದು ಎಲ್ಲರೂ ಹೇಳುತ್ತಾರೆ. ಅಲ್ಲಿಯೂ ಅವನತಿಯ ಚಿಹ್ನಗಳು ವ್ಯಗ್ರೋಚರವಾಗುತ್ತಿವೆ. ಕಳೆದ ೧೦ ವರ್ಷಗಳಲ್ಲಿಯೇ ೨,೦೦೦ ದಷ್ಟು ಜನಸಂಖ್ಯೆಯು ಕಡಿಮೆಯಾಯಿತು. ಅಂಕೋಲೆಯ ಹೆಸರುಗೊಂಡ ಜಮೀನದಾರರೊಬ್ಬರು ನನಗೆ ಸಿಕ್ಕಿದ್ದರು. ಅವರು ವಿಶ್ವವಿದ್ಯಾಲಯದ ಪದವೀಧರರಿರುವರು. ಸಾರ್ವಜನಿಕ ಪ್ರಶ್ನೆಗಳ ಚಲೋ ಮಾಹಿತಿಯೂ ಅವರಿಗಿದೆ. ಅಂಕೋಲಾ ತಾಲೂಕಿನೊಳಗಿನ ಗುಂಡಬಾಳೆಯ ನೆರೆಹೊರೆಯ ಕೆಲ ಹಳ್ಳಿಗಳು ತಾಲೂಕಿನ ಕಣಜಗಳೆಂದು ಖ್ಯಾತಿಗೊಂಡಿದ್ದವು. ಈಗ ಅಲ್ಲಿ ಏನಿದೆ? ಜನರೆಲ್ಲರೂ ಸ್ಥಲಾಂತರ ಹೊಂದಿದರು. ಭೂಮಿಯೆಲ್ಲ ಬಂಜರು ಬಿದ್ದಿದೆ. ಕಾರಣವೇನೆಂದು ಕೇಳಲು ಜಂಗಲ ಧೋರಣವೆಂದು ಉತ್ತರ ಕೊಟ್ಟರು.

ಮಿ। ಹೇಗರವರ ಪತ್ರವು ಸ್ಪಷ್ಟವಿದ್ದು, ನಿಜಸ್ಥಿತಿಯ ದ್ಯೋತಕವಿದೆ. ಆ ಬಗ್ಗೆ ನನ್ನ ಅಂಬೋಣವೇನಿಲ್ಲ. ಸರಕಾರಿ ಮುದ್ರಣಲೇಖಗಳನ್ನು ಸಮಾಲೋಚಿಸಿ, ನಾನು ಒಂದು ಕರಾ ಬರೆಯಬೇಕಾಗಿದೆ. ಸರಕಾರವು, ಸ್ಪಷ್ಟವಾಗಿ ಕಾಣುವ ಪರಿಸ್ಥಿತಿಯನ್ನು ಅರಗಿಸಲು, ಆ ಬಗ್ಗೆ ಹೊಸ ತರ್ಕಗಳನ್ನು ಶೋಧಿಸಿ, ಅಸಮರ್ಥನೀಯ ಧೋರಣವನ್ನು ಸ್ಥಿರಪಡಿಸಲು ಬಹಳೇ ಪರಿಶ್ರಮವನ್ನು, ಚಾತುರ್ಯವನ್ನೂ ವೆಚ್ಚ ಮಾಡಿದೆ. ಅಷ್ಟೇ ಚಾತುರ್ಯವನ್ನೂ, ಪರಿಶ್ರಮವನ್ನೂ ಕಾನಡಾ ಜಿಲ್ಹೆಯ ಜಂಗಲ ಕಷ್ಟಗಳ ನಿವಾರಣೆಗಾಗಿ ಪ್ರಜೆಗಳ ಸಹಾಯ ಪಡೆದು, ನಿರ್ಣಯಿಸಲು ಅಂತಃಕರಣಪೂರ್ವಕ ಯತ್ನಿಸಿದ್ದರೆ, ಈ ಪ್ರಶ್ನೆಯು ನಿರ್ಣಯವಾಗಿ ಎಷ್ಟೋ ವರ್ಷಗಳು ಕಳೆದು ಹೋಗುತ್ತಿದ್ದವು.

ಮುಂಬಯಿ. ಎಸ್ ಜಿ ಡಬ್ಲ್ಯೂ

ತಾ ೮-೫-೨೩

ದೇಶಿ ಸೆಂಟೋನಾಯಿನ್.
(ಜಂತುವಿನ ಪುಡಿ.)

ಅಪಾಯಕರವಿಲ್ಲದೆ ಗುಣ ಕೊಡುವಂಥಾದ್ದು. ಪ್ರಪಂಚದಲ್ಲಿ ಪ್ರಖ್ಯಾತ ಔಷಧ

ಔನ್ಸಿನ ಶೀಸಗೆ ೭ ರೂ ೮ ಆಣೆ

ವಿಳಾಸ — ಎಮ್ ಜಿ ಭಾಗ್ವತ್,

ಆಯುರ್ವೇದಿಕ್ ಕೆಮಿಸ್ಟ, ಕರ್ಕಿ (ಕೆನರಾ)

BOMBAY LODGING.
ದಿ ಮೊಡರ್ನ್ ಹಿಂದೂ ಹೊಟೆಲ್
ಗೋವಾಲಿಯಾ ಟೆಂಕ್ ರೋಡ,
ಮುಂಬಯಿ.

ಮುಂಬಾಯಿಯ ಬಹಳ ಆರೋಗ್ಯಕರವಾದ ಭಾಗದಲ್ಲಿದೆ. ವಿದ್ಯಾರ್ಥಿಗಳಿಗೆ ನಿಲ್ಲುವದಕ್ಕೂ, ಪರಸ್ಥಳಿಕರಿಗೆ ಇಳಿಯುವದಕ್ಕೂ, ಬಹಳ ಅನುಕೂಲವಾದ ಸ್ಥಳ. ನಮಗೆ ಮೊದಲೇ ತಿಳಿಸಿದ್ದಲ್ಲಿ, ಪರಸ್ಥಳಿಕರಿಗೆ ಬಂದರ ವ ರೇಲ್ವೆಸ್ಟೇಶನ್ ಮೇಲಿಂದ ಕರೆತರುವ ಮತ್ತು ಮುಂಬಾಯಿ ಊರಿನ ಸರ್ವ ಮಾಹಿತಿಯನ್ನು ಕೊಡುವ ಏರ್ಪಾಡುಗಳನ್ನು ಮಾಡಲಾಗಿದೆ.

ಕಾನಡಾವೃತ್ತ.

ಗುರುವಾರ, ತಾರೀಖು ೭ ಮಾಹೆ ಜೂನ ೧೯೨೩

ರಾಷ್ಟ್ರಕಾರ್ಯರತರಾಗಿ.

ಮುಂದಾಳುಗಳ ಕಟ್ಟಪ್ಪಣೆ.

ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ಕಳೆದ ತಾ ೨೫ ನೇ ಶುಕ್ರವಾರದಿಂದ ಸೋಮವಾರ ವರೆಗೆ ೪ ದಿನ ನಡೆಯಿತು. ಈ ಪರಿಷತ್ತಿಗೆ ಒಂದು ಹಿರಿಯ ಮಹತ್ವವು ಪ್ರಾಪ್ತವಾಗಿತ್ತು. ಸ್ವರಾಜ್ಯ ಪಕ್ಷದ ನೇತೃತ್ವದಲ್ಲಿ ಸಾಲ್ಕೊ ಬದಿಯಿಂದ ಕೌನ್ಸಿಲಪ್ರವೇಶದ ಗೊಂದಲವೆಬ್ಬಿರುವಾಗ, ಹೊಸ ಪರಿಸ್ಥಿತಿಯ ಮೇಲೆ ರಾಷ್ಟ್ರಾಜ್ಞೆಯೇನಿರುವದು ಎಂಬದನ್ನು ಅರಿತುಕೊಳ್ಳಲು ಅಖಿಲರೂ ಆತುರರಾಗಿದ್ದರು. ಮುಂದಾಳುಗಳಾದರೂ ಅಖಿಲ ಭಾರತೀಯ ಕಮಿಟಿಯಂಥ ಸರ್ವಮಾನ್ಯ ಸಂಸ್ಥೆಯ ಅಭಿಪ್ರಾಯವನ್ನು ಬೆಂಬಲಕ್ಕೆ ಕೊಂಡರೆ, ರಾಷ್ಟ್ರಕಾರ್ಯವು ತಕ್ಕ ದಿಕ್ಕಿನಿಂದ ಸ್ಥಿರ ಪ್ರಗತಿಯನ್ನು ಮಾಡುವದೆಂದು ತಿಳಿದಿದ್ದರು. ಆದರಿಂದ ಮುಂಬಯಿಯಲ್ಲಿ ನೆರೆದ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಗೆ ಭರತಖಂಡದೊಳಗಿನ ಎಲ್ಲ ಪ್ರಾಂತಗಳಿಂದ ಮುಖಂಡರು ಹಾಜರಾಗಿದ್ದರು.

ದೇಶಬಂಧು ದಾಸರಿಗೆ ಅಧ್ಯಕ್ಷಸ್ಥಾನವನ್ನು ಸಮರ್ಪಿಸಿ, ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ವಿಚಾರಾರ್ಹವನ್ನೂ ಧೈರ್ಯ ಬುದ್ಧಿಯನ್ನೂ ಒಮ್ಮೆಲೇ ವ್ಯಕ್ತಪಡಿಸಿತು. ದೇಶಬಂಧುಗಳು ಯಾವದೇ ಪಕ್ಷಕ್ಕೆ ಸೇರಿದವರಲಿ ಅವರು ಯಾವಾಗಲೂ ಅಖಿಲ ಭಾರತೀಯರಿಗೆ ಪೂಜ್ಯಗುಣದ ಲೋಕೋತ್ತರ ಪುರುಷರೇ. ಮಾತ್ಸರ್ಯವನ್ನು ಮನ್ನಿಸಿದ್ದನ್ನು ನೋಡಿ ನಮಗೆ ಸಂತೋಷವಾಗುತ್ತದೆ. ದೇಶಬಂಧುಗಳು ಠರಾವುಗಳನ್ನು ಚರ್ಚಿಸುವ ಮೊದಲು ಪ್ರಾಂತಿಕ ಪರಿಸ್ಥಿತಿಯನ್ನು ಪ್ರಾಂತಿಕ ಮುಂದಾಳುಗಳ ಕೂಡ ನಿವೇದಿಸಹೇಳಿದರು. ಪರಿಸ್ಥಿತಿಯ ಶ್ರವಣಾನಂತರ ಮೇಲೆ, ಠರಾವುಗಳ ಚರ್ಚೆ ನಡೆಯಿತು. ರಾಷ್ಟ್ರೀಯ ಸಭೆಯ ಕಾರ್ಯಕಾರಿ ಕಮಿಟಿಯು ಜಾದಾ ಕೊಂಗ್ರೆಸನ್ನು ನೆರೆಯಿಸಿ, ಹೊಸ ಪರಿಸ್ಥಿತಿಗೆ ಅನುಗುಣವಾದ ಯಾವದೇ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ಹಿಂದಿನ ದಿನವೇ ಠರಾಯಿಸಿತ್ತು. ಈ ಠರಾವು ಚರ್ಚೆಗೆ ಬಂತು. ಸಂಯುಕ್ತ ಪ್ರಾಂತದ ಶ್ರೀ॥ ಪುರುಷೋತ್ತಮದಾಸ ಟೆಂಡನ್‌ರವರು ಇದಕ್ಕೆ ಒಂದು ಉಪಸೂಚನೆಯನ್ನು ತಂದರು. ರಾಷ್ಟ್ರೀಯ ಸಭಾಭಿಮಾನಿಗಳಲ್ಲಿ ಅನೇಕರು ಸರಕಾರಿ ಕೌನ್ಸಿಲುಗಳನ್ನು ಸೇರಬಿಚ್ಛಿಸುವವರಿದ್ದದರಿಂದ, ಐಕ್ಯಸಂರಕ್ಷಣೆಗೆಂದು ಅವರಿಗೆ ವಿರೋಧವಾಗಿ ಗಯಾ ಕೊಂಗ್ರೆಸಿನ ಠರಾವಿನನ್ವಯ ಕೌನ್ಸಿಲು ಬಹಿಷ್ಕಾರದ ಚಳವಳಿಯನ್ನು ತಹಕೂಬು ಮಾಡಬೇಕೆಂದರು. ಈ ಠರಾವಿನ ಮೇಲೆ ಎರಡು ದಿವಸ ಭಯಂಕರ ವಾದ-ವಿವಾದವಾಯಿತು. ಗಯಾ ಕೊಂಗ್ರೆಸಿನ ಠರಾವನ್ನು ಬದಲಿಸುವ ಅಧಿಕಾರವು ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಗಿಲ್ಲೆಂದು ಬಂಗಾಲದ ಶ್ರೀ॥ ಶ್ಯಾಮಸುಂದರ ಚಕ್ರವರ್ತಿ, ಹರದಯಾಳ ನಾಗ ಮೊದಲಾದವರು ಪ್ರತಿಪಾದಿಸಿದರು. "ನಾವೇನು ಹೊಸ ಠರಾವನ್ನು ಮಾಡುವದಿಲ್ಲ. ಕೊಂಗ್ರೆಸ್ಸಿನ ಠರಾವನ್ನು ರದ್ದು ಮಾಡುವದಿಲ್ಲ. ಕೌನ್ಸಿಲ ಬಹಿಷ್ಕಾರವು ನಮಗೂ ಇಷ್ಟವೇ. ಮತ ಕೊಡಲಿಕ್ಕಾಗಲಿ, ಉಮೇದವಾರರಾಗಲಿಕ್ಕಾಗಲಿ ನನ್ನ ಒಪ್ಪಿಗೆಯಿಲ್ಲ. ನಮ್ಮ ನಮ್ಮೊಳಗೆ ಬಿಕ್ಕಟವಾಗಬಾರದೆಂದು, ಕೇವಲ ರಾಷ್ಟ್ರೀಯ ಐಕ್ಯ ಸಂರಕ್ಷಣೆಗಾಗಿ, ರಾಷ್ಟ್ರೀಯ ಸಭೆಯ ಗೌರವವನ್ನು ಪ್ರಸ್ಥಾಪಿಸುವದಕ್ಕಾಗಿ ಬಹಿಷ್ಕಾರ ತತ್ವಕ್ಕೆ ಸಮ್ಮತಿಸುತ್ತಾಗ, ಅದನ್ನು ಅನುಲಂಘಿಸುವಣಿ ಮಾಡಲು ಚಳವಳಿಯನ್ನು ಕೈಕೊಳ್ಳಬಾರದು. ಇದೊಂದು ತಪಶೀಲು. ಇದನ್ನು ಠರಾಯಿಸುವ ಹಕ್ಕು ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಗಿರುವದು" ಎಂದು ಪಂಡಿತ ಜವಾಹರಲಾಲ ನೆಹರೂ ಶ್ರೀ॥ ಸಂತಾನಂ ಮೊದಲಾದವರು ಆವೇಶದಿಂದ ಪ್ರಮಾಣ ಪ್ರತಿಪಾದಿಸಿದರು. ಶ್ರೀ॥ ರಾಜಗೋಪಾಲಾಚಾರ್ಯರು ಕಾರ್ಯಕಾರಿ ಕಮಿಟಿಯ ಜಾದಾ ಕೊಂಗ್ರೆಸಿನ ಠರಾವನ್ನು ಪರತ್ ಪಡಕೊಂಡರು. ಶ್ರೀ॥ ಪುರುಷೋತ್ತಮದಾಸರ ಠರಾವಿನ ಮೇಲೆ ರವಿವಾರ ೩ ಘಂಟೆಯವರೆಗೆ ಚರ್ಚೆ ನಡೆದು, ಆಖೈರಿಗೆ ಮತ ಎಣಿಸಲು ೯೬ ಅನುಕೂಲ, ೭೧ ಪ್ರತಿಕೂಲ ಹೀಗೆ ಮತವಿಭಾಗಣೆಯಾಗಿ, ಠರಾವು ಮಂಜೂರಾಯಿತು.

ಶ್ರೀ॥ ರಾಜಗೋಪಾಲಾಚಾರ್ಯ ಮೊದಲಾದ ೭ ಮಂದಿ ಕಾರ್ಯಕಾರಿ ಕಮಿಟಿಯ ಸಭಾಸದರು ರಾಜೀನಾಮೆಗಳನ್ನಿತ್ತರು. ಪಂಡಿತ ಜವಾಹಿರಲಾಲರೂ, ಶ್ರೀ॥ ಪುರುಷೋತ್ತಮದಾಸರೂ ಹೊಸ ಠರಾವಿನ ಮಂಜೂರಿಯಿಂದ ತತ್ವವು ಯಾವದೇ ಪರಿಯಿಂದ ಭಂಗವಾಗಲಿಲ್ಲೆಂದೂ ಕಾರ್ಯಕಾರಿ ಕಮಿಟಿಯ ಮೇಲೆ ಈ ಠರಾವು ಶ್ರದ್ಧಾಹೀನತೆಯ ದ್ಯೋತಕವಲ್ಲೆಂದೂ ಬಹು ಪರಿಯಿಂದ ಶ್ರೀ॥ ರಾಜಗೋಪಾಲಾಚಾರ್ಯ ಮೊದಲಾದವರಿಗೆ ಹೇಳಿಕೊಂಡು, ತಮ್ಮ ತಮ್ಮ ರಾಜೀನಾಮೆಗಳನ್ನು ಪರತ್ ಪಡೆದು, ರಾಷ್ಟ್ರಧುರೆಯನ್ನು ಈವರೆಗೆ ನಡಿಸಿದಂತೆ ಮುಂದೆಯೂ ನಡಿಸಿರಿ ಎಂದು ಅ. ಭಾ. ಕೊಂ ಕಮಿಟಿಯು ವಿದ್ಯಮಾನ ಬಿನ್ನೈಸಿಕೊಂಡರು. ಆದರೂ, ಶ್ರೀ॥ ರಾಜಗೋಪಾಲಾಚಾರ್ಯ ಮೊದಲಾದವರು ಅದಕ್ಕೆ ಒಪ್ಪದ್ದರಿಂದ, ಅವರ ರಾಜೀನಾಮೆಗಳು ಮಂಜೂರಾದವು. ದೇಶಬಂಧುಗಳು ಗಯಾ ಕ್ಷೇತ್ರದಲ್ಲಿ ಕೊಟ್ಟ ರಾಜೀನಾಮೆಯನ್ನೂ ಕಮಿಟಿಯು ಮಂಜೂರು ಮಾಡಬೇಕಾಯಿತು. ಯಾಕಂದರೆ, ದೇಶಬಂಧುಗಳು ಕಮಿಟಿಯಲ್ಲಿ ವಿವರಿಸಿದಂತೆ, ಕಲಕತ್ತೆಯಲ್ಲಿದ್ದು, ಅವರಗೂಡ ಕೆಲಸ ಮಾಡುವ ಕಾರ್ಯದರ್ಶಿಗಳು ಸದ್ಯಕ್ಕೆ ಸಿಗಲಿಲ್ಲ. ಹೀಗಾಗಿ, ಡಾ॥ ಅನ್‌ಸಾರಿಯವರ ನೇತೃತ್ವದಲ್ಲಿ ಹೊಸ ಕಾರ್ಯಕಾರಿ ಕಮಿಟಿಯು ನೇಮಣೂಕ ಹೊಂದಿದೆ.

ಸೋಮವಾರಕ್ಕೆ ಎರಡುಮೂರು ಠರಾವುಗಳು ಪಾಸಾದವು. ಗಯಾ ಕೊಂಗ್ರೆಸ್ಸಿನಲ್ಲಿ ನಿರ್ಣಯಿಸಲ್ಪಟ್ಟ ಎಪ್ರಿಲ್ ತಾ. ೩೦ ರೊಳಗೆ ಅಖಿಲ ಭರತ ಖಂಡದಲ್ಲಿ ಟಿಳಕ ಸ್ವರಾಜ್ಯ ಫಂಡು ರೂಪಾಯಿ ೧೧ ಲಕ್ಷ,೩೬೧—೯—೭ ಹಾಗು ಸ್ವಯಂಸೇವಕರು ೧೦,೨೪೬ ಹೀಗೆ ಕೂಡಿದ್ದಾರೆಂದು ಬಾಬು ರಾಜೇಂದ್ರ ಪ್ರಸಾದರವರು ಸಭಿಕರಿಗೆ ತಿಳಿಸಿದರು. ಜುಲೈ ಅಂತ್ಯದ ವರೆಗೆ ಈ ಕಾರ್ಯಕ್ರಮವನ್ನು ವಿಶೇಷ ಉತ್ಸಾಹದಿಂದ ಮುಂದರಿಸಿ, ತಮ್ಮ ತಮ್ಮ ಪಾಲನ್ನು ಆಯಾ ಪ್ರಾಂತಗಳು ಮುಗಿಸಬೇಕೆಂಬ ಠರಾವು ಪಾಸಾಯಿತು. ಇನ್ನೊಂದು ಮಹತ್ವದ ಠರಾವು ರಾಷ್ಟ್ರೀಯ ಕರಾರಿನದು. ದೇಶಬಂಧು ದಾಸ, ಹಕೀಮ ಅಜಮಲಖಾನ, ಡಾ॥ ಅನ್‌ಸಾರಿ ಹಾಗು ಜಮಾಯತ-ಉಲ್-ಉಲೆಮಾದ ಅಧ್ಯಕ್ಷ ಹೀಗೆ ನಾಲ್ವರು ಕೂಡಿ ರಾಷ್ಟ್ರೀಯ ಕರಾರಿನ ಮಸೂದೆಯನ್ನು ತಯಾರಿಸಿರುವರು. ಇದರೊಳಗೆ ಹಿಂದೂ-ಮುಸಲ್ಮಾನರಲ್ಲಿ ಐಕ್ಯದಿಂದ ಸಂಸಾರ ಮಾಡುವಂಥ ಯೋಜನೆಗಳಿವೆ. ಪಂಡಿತ ಮಾಲವೀಯಜೀಯವರ ಆಲೋಚನೆ ಪಡೆದು, ಈ ಕರಾರನ್ನು ಪೂರ್ಣ ಮಾಡಬೇಕೆಂದು ಹೊಸ ಕಾರ್ಯಕಾರಿ ಕಮಿಟಿಗೆ ಅಪ್ಪಣೆಯಾಯಿತು. ಅಖಿಲ ಭಾರತೀಯ ಹಿಂದೂ ಮಹಾಸಭೆಯು ಅಸ್ಪೃಶ್ಯತಾನಿವಾರಣೆಯ ಬಗ್ಗೆ ತಕ್ಕ ಇಲಾಜು ಕೈಕೊಳ್ಳಬೇಕೆಂದು ಮತ್ತೊಂದು ಠರಾವು ಪಾಸಾಯಿತು. ಡಾ॥ ಅನ್‌ಸಾರಿಯವರ ಸಮಾರೋಪದ ಭಾಷಣವಾದ ಬಳಿಕ, ಸಭೆಯು ವಿಸರ್ಜನವಾಯಿತು.

ಕಳೆದ ಅ. ಭಾ. ಕೊಂ ಕಮಿಟಿಯ ಸಂದೇಶವೆಂಬುದು ಇದೇ. ಕೌನ್ಸಿಲು ಬಹಿಷ್ಕಾರಕ್ಕಾಗಿ, ಜಗಳಗಂಟರಂತೆ ನಮ್ಮ ದೇಶಬಾಂಧವರಗೂಡ ಜಗಳಾಡಬೇಡಿರಿ. ಬಹಿಷ್ಕಾರ ತತ್ವವು ಈಗ ಅಖಿಲ ಪ್ರಜೆಗಳಿಗೆ ಮಾನ್ಯವಿದೆ. ಮಹಾತ್ಮರು ಅದನ್ನು ಕಳೆದ ಚುನಾವಣೆಯ ಕಾಲಕ್ಕೆ ಅಖಿಲ ಪ್ರಜೆಗಳ ಮೇಲೆ ಬಿಂಬಿಸಿರುವರು. ಪುನಃ ಅದೇ ಹಾಡನ್ನು ರಾಷ್ಟ್ರೀಯ ಸಭೆಯು ಹಾಡಲಿಚ್ಛಿಸುವದಿಲ್ಲ ಬಹಿಷ್ಕಾರ ಚಳವಳಿಗಿಂತ

ವಿಶೇಷ ಮಹತ್ವದ ರಾಷ್ಟ್ರೀಯ ಸಂಘಟನೆಯನ್ನು ನಾವೀಗ ವಿಶೇಷ ತೀವ್ರತೆಯಿಂದ ಪುರಸ್ಕರಿಸಬೇಕಾಗಿದೆ ಕೌನ್ಸಿಲು ಪ್ರವೇಶವಾದಿ ದೇಶಬಾಂಧವರ ಸಾಹಚರ್ಯವು ನಮಗೆ ಬೇಕೇಬೇಕು. ಕೌನ್ಸಿಲು ಪ್ರವೇಶವು ದೇಶಹಾನಿಕರವೆಂದು ಮಹಾತ್ಮರು ಸಿದ್ಧಪಡಿಸಿರುವರು. ಅದರಿಂದ ಸ್ವರಾಜ್ಯಪ್ರಾಪ್ತಿಯಾಗುವದೆಂದು ಸಿದ್ಧಪಡಿಸುವ ಜವಾಬದಾರಿಯು ದಾಸ-ನೆಹರು ಕೂಟದ ಮೇಲಿದೆ. ಪ್ರಜೆಗಳು ಈಗ ೨—೩ ವರುಷಗಳಿಂದ ಕೌನ್ಸಿಲು ಪ್ರವೇಶದ ಲಾಭಾಲಾಭಗಳನ್ನೂ, ಯುಕ್ತಾಯುಕ್ತತೆಯನ್ನೂ ಸ್ವಾನುಭವದಿಂದ ಅರಿತಿರುವರು. ಅಂಥವರಿಗೆ "ಕೌನ್ಸಿಲುಗಳನ್ನು ಬಹಿಷ್ಕರಿಸಿರಿ" ಎಂದು ಏಕೆ ಹೇಳಬೇಕು? ಕೌನ್ಸಿಲುಗಳನ್ನು ಬಿತ್ತಿಸ್ಟಗೆ ಬಿಡಿರಿ. ರಾಷ್ಟ್ರಸಂಘಟನೆಯ ಕಾರ್ಯವನ್ನು ಶಿಸ್ತಿನಿಂದ, ಒಮ್ಮನಸ್ಸಿನಿಂದ, ರಾಷ್ಟ್ರಶಕ್ತಿಯನ್ನು ಏಕತ್ರಿತ ಮಾಡಿ, ಸರಕಾರಕ್ಕೆ ಇದಿರಾಗಲು ತಯಾರಾಗಿರಿ"ಎಂಬುದೇ ಕಳೆದ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಆಜ್ಞೆಯಿದೆ. ಗಯಾ ರಾಷ್ಟ್ರೀಯ ಸಭೆಯು ವಿಧಿಸಿದ ಕಾರ್ಯಕ್ರಮವನ್ನು ನಾವು ನಾಲ್ಕರಲ್ಲಿ ಒಂದು ಪಾಲಿನಷ್ಟು ಸಹ ಕೊನೆಗಾಣಿಸಲಿಲ್ಲ. ಅಖಿಲ ಭರತಖಂಡದಲ್ಲಿ ೩೧ ಕೋಟಿ ಪ್ರಜೆಗಳಿರುವಾಗ, ರಾಷ್ಟ್ರೀಯ ಸಭೆಯು ಸರ್ವಮಾನ್ಯ ಸಂಸ್ಥೆಯೆಂದು ಖ್ಯಾತಿಗೊಂಡಾಗ, ಅಸಹಯೋಗವು ಭಾರತೀಯರಿಗೆ ಸಮ್ಮತವಿದೆಂದು ಜಾಹೀರಾಗಿರುವಾಗ,ರಾಷ್ಟ್ರೀಯ ಸಭೆಯು ಬರೀ ೫೦,೦೦೦ ಸ್ವಯಂಸೇವಕರನ್ನು ಭೂಮಾತೆಯ ಉದ್ಧಾರಕ್ಕಾಗಿ ಅರ್ಪಿಸಿರೆಂದು ಬೇಡಿರುವಾಗ, ೧೦ ೧೧ ಸಾವಿರ ಸ್ವಯಂಸೇವಕರು ಮುಂದಾಗುವದು ನಮಗೆ ಲಾಂಛನಾಸ್ಪದವಲ್ಲವೇ! ರಾಷ್ಟ್ರೀಯ ಸಭೆಯ ಕಾರ್ಯವು ಮಾತ್ರ ಸುಸಂಘಟಿತವಾಗಿ ನಡೆಯಬೇಕಾಗಿ ಮತ್ತೇನು ಹೇಳಬೇಕು? ಅಖಿಲರೂ ರಾಷ್ಟ್ರಾಜ್ಞೆಯನ್ನು ಮನ್ನಿಸಿ, ಕೌನ್ಸಿಲುಗಳ ಚುನಾವಣಿಯು ಯಾವ ದಿಕ್ಕಿನಿಂದ ಬಂತು, ಯಾವ ದಿಕ್ಕಿಗೆ ಹೋಯಿತು ಎಂಬುದನ್ನು ಲಕ್ಷಿಸದೆ, ಉಮೇದವಾರರ ಸವಿಸವಿ ಮಾತುಗಳಿಗೆ ಬಲಿಬೀಳದೆ, ಟಿಳಕ ಸ್ವರಾಜ್ಯ ಫಂಡು ಎತ್ತುವದು, ಪಿಂಜರನ್ನು ಕೂಡಿಸುವದು, ಸ್ವಯಂಸೇವಕರನ್ನು ಒಟ್ಟುಗೂಡಿಸುವದು, ಮುಂತಾದ ರಾಷ್ಟ್ರೀಯ ಸಂಘಟನೆಯ ಕೆಲಸಗಳನ್ನು ದೃಢ ಮನಸ್ಸಿನಿಂದ ಪುರಸ್ಕರಿಸಬೇಕು. ಇದೇ ಅ. ಭಾ. ಕೊಂ. ಕಮಿಟಿಯ ಆಜ್ಞೆ. ಅಖಿಲರೂ ಇದನ್ನು ನಿಷ್ಠೆಯಿಂದ ಪಾಲಿಸಬೇಕೆಂದು ನಮ್ಮ ಪ್ರಾರ್ಥನೆ

—※—

ಸ್ಫುಟ ಸೂಚನೆಗಳು.

೧. ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ಮುಂಬೂರ ಮಾಡಿದ ಬಹಿಷ್ಕಾರ ಚಳವಳಿಯ ತಹಕೂಬಿಯ ಠರಾವನ್ನು ಮಾನ್ಯ ಮುಂದಾಳುಗಳಾದ ಶ್ರೀ. ರಾಜಗೋಪಾಲಾಚಾರ್ಯರು ಮುರಿದು, ಗಯಾ ಕೊಂಗ್ರೆಸಿನ ಕೌನ್ಸಿಲು ಬಹಿಷ್ಕಾರದ ಠರಾವನ್ನು ಯಶಸ್ವೀ ಮಾಡಲು, ತಾವು ಚಳವಳಿಯನ್ನು ಕೈಕೊಳ್ಳುವದಿದ್ದೇವೆಂದು ಜಾಹೀರು ಮಾಡಿರುವರು. ಗಯಾ ಕೊಂಗ್ರೆಸಿನ ಠರಾವನ್ನು ಮಾನ್ಯ ಮಾಡಿ, ಅದಕ್ಕನುಗುಣವಾಗಿ ಚಳವಳಿಯನ್ನು ಮಾತ್ರ ಕೈಕೊಳ್ಳದಿರುವದು ತಾತ್ವಿಕ ಮಾನ್ಯತೆಯೆಂದು ರಾಜಗೋಪಾಲಾಚಾರ್ಯರು ಅದಕ್ಕೆ ಕರಾ ಹೊಡೆದಿರುವರು. "ನನಗೆ ಮತ ಕೊಡಿರಿ," "ನನಗೆ ವೋಟು ಕೊಡಿರಿ" ಎಂಬ ಮತದಾರರ ಮೇಲೆ ಅನೇಕ ಪರಿಯ ಆಗ್ರಹ ನಡೆಸಿರುವಾಗ, ಸಾಮಾನ್ಯ ಮನುಜರು ರಾಷ್ಟ್ರೀಯ ಸಭೆಯ ಮೌನವೃತ್ತಿಯನ್ನು ಅನ್ಯಥಾ ಗ್ರಹಿಸಿ, ಮತದಾನ ಮಾಡುವ ಅನೇಕ ಸಂಭವಗಳಿವೆ. ಇದನ್ನು ಯಾರೂ ಒಪ್ಪುವರು. ರಾಷ್ಟ್ರೀಯ ಸಭೆಯ ಸಂದೇಶವನ್ನಿಸಹಿ, ಚಂಚಲಮನಸ್ಕ ಮತದಾರರಿಗೆ ಕಾಪಾಡುವದು ರಾಷ್ಟ್ರೀಯ ಸಭೆಯ ಕರ್ತವ್ಯವೆಂದು ನಾವು ಎಣಿಸುಸುತ್ತೇವೆ. ಬಹಿಷ್ಕಾರ ತಹಕೂಬಿಯಿಂದ ರಾಷ್ಟ್ರಸೇವಕರಿಗೆ ಬಲು ಅತ್ತೆಯಾಗಿದೆ. ಆದರೆ, ವಿನಿಷ್ಟರೂ, ಇವೇ ಮೊದಲಾದ ಕಾರಣಗಳನ್ನು ವಿಚಾರಿಸಿ, ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ರಾಷ್ಟ್ರದ ಹಿತವಾಗದೆ ಕೆಂದು, ಅವರಿಗೂ ಐಕ್ಯಬುದ್ಧಿಯಿಂದ ರಾಷ್ಟ್ರಕಾರ್ಯ ನಡಿಸಲು ಅನುವಾಗಬೇಕೆಂದು ತಹಕೂಬಿಯನ್ನು ಮಂಜೂರು ಮಾಡಿದೆ. ಕಮಿಟಿಯು ಕೈಕೊಂಡ ನಿರ್ಣಯವನ್ನು ಯಾರೊಬ ವ್ಯಕ್ತಿಗಳ ಮತಕ್ಕೆ ವಿರೋಧವಾಗಿರುವದಿಲ್ಲೆಂದು ತಿರಸ್ಕರಿಸುವದು ಸರ್ವಥಾ ಅನುಚಿತವು. ರಾಷ್ಟ್ರಕ್ಕೆ ಆದರಿಂದ ಅಪಾಯ ಹಾನಿಯಾಗುವದು. ರಾಜಗೋಪಾಲಾಚಾರ್ಯರವರು ರಾಷ್ಟ್ರೀಯ ಸಭೆಗೆ ನಿಷ್ಠೆಯನ್ನು ಪ್ರದರ್ಶಿಸುವದಕ್ಕಾಗಿ ಕಮಿಟಿಯ ನಿರ್ಣಯವನ್ನು ಮುರಿಯಬೇಕಾಗಿದೆನ್ನುತ್ತಾರೆ ಇದೊಂದು ವಿಚಿತ್ರ ವಿಧಾನವು. ಹೀಗೆ ಮತಯೊಬ್ಬರು ಮನಬಂದಂತೆ ನಡಕೊಂಡರೆ, ರಾಷ್ಟ್ರ ಸಂಘಟನೆಯು ಶೀಘ್ರವೇ ಶಿಥಿಲವಾಗುವದು. ಇದೊಂದು ದೊಡ್ಡ ಗಂಡಾಂತರವು. ಬಂಗಾಲದಲ್ಲಿಯೂ ಇದೇ ಪರಿಯ ವಿಚಾರಸರಣಿಯು ಪ್ರಾಬಲ್ಯಹೊಂದುವ ಚಿಹ್ನಗಳು ದೃಗ್ಗೋಚರವಾಗುತ್ತಿವೆ. ಇದರಿಂದ ಎಂದೂ ಹಿತವಾಗದು. ಮಾನ್ಯ ಮುಂದಾಳುಗಳು ಶಾಂತವಾಗಿ ವಿಚಾರ ಮಾಡಿ, ರಾಷ್ಟ್ರದ ಶಿಸ್ತನ್ನು ಭಂಗಿಸಲು ಕಾರಣರಾಗಬಾರದಾಗಿ ನಮ್ಮ ವಿನಂತಿ

———

೨ ವಿಲಾಯತಿಯೊಳಗಿನ ಉಪ್ಪಿನ ಚಳವಳಿಯ ಇತ್ಯರ್ಥವೇನಾಯಿತು? ಎಂದು ಸನದಶೀರ ಚಳವಳಿಯ ಉಪಾಸಕರು ಕೇಳಬಹುದು. ಹಿಂದುಸ್ಥಾನಕ್ಕೆ ಉಪಕಾರ ಮಾಡುವವರು ವಿಲಾಯತಿಯೊಳಗಿನ ಕೂಲಿಕಾರ ಪಕ್ಷದವರು. ಈ ಪಕ್ಷದೊಳಗಿನ ಮಿ. ತ್ರೆವೇಲಿಯನ್‌ರವರು ಮುಖ್ಯಪ್ರಧಾನರಾದ ಮಿ. ಬೋಲ್ಡವಿನ್‌ರವರಿಗೆ ಹಿಂದುಸ್ಥಾನದ ತೆರಿಗೆಯ ಕಾಯಿದೆಯ ಬಗ್ಗೆ ಬಾದಶಹರಿಗೆ ಬಿನ್ನೈಸಲು ಸಂಧಿಗೊಡುವಿರೇನೆಂದು ಕಳೆದ ಬುಧವಾರ ತಾ. ೩೦ನೆಯ ಪ್ರಶ್ನಿಸಿದರು. "ಕಾಯಿದೆಯಂತೆ ೮ ದಿನಗಳ ಅವಧಿಯಿತ್ತು. ಅದು ಸೋಮವಾರ ತಾ. ೨೮ಕ್ಕೇ ಮುಗಿಯಿತು. ಕಾಯಿದೆಯಂತೆ ಹಿಂದುಸ್ಥಾನದಲ್ಲಿ ಅಮಲಬಜಾವಣೆಯೂ ನಡೆದಿದೆ. ಇನ್ನು ಸಂಧಿ ಸಿಗಲಾರದೆಂ" ದು ಮುಖ್ಯಪ್ರಧಾನರು ನುಡಿದರು. ಈಗ ಬಾದಶಹರ ಮಂತ್ರಿಮಂಡಳಕ್ಕೆ ಕಾಯಿದೆಯನ್ನು ನಿರಾಕರಿಸಲು ಪ್ರಾರ್ಥಿಸುವದೊಂದು ಉಪಾಯವಿದೆಂತಲೂ ಅವರು ಸೂಚಿಸಿದರು. ಕರ್ನಲ್ ವೆಜವುಡ್‌ರವರು ಸಂಸ್ಥಾನಿಕರ ರಕ್ಷಣೆಯ ಕಾಯಿದೆಯ ಕಾಲಕ್ಕೆ ಚರ್ಚೆಗೆ ಇಂಬುಗೊಟ್ಟಂತೆ, ಈಗಲೂ ಯಾಕೆ ಕೊಡುವದಿಲ್ಲ? ಎಂದು ಮಿ. ಬೋಲ್ಡವಿನ್‌ರವರಿಗೆ ಕೇಳಿದರು ಸರ್ವಾಧಿಪತಿಗಳು ಈ ಕಾಯಿದೆಯನ್ನು ಅವಕಾಶಕ್ಕೆಂದು ಪರ್ಯಾಯಿಸಿರುವರೆಂತಲೂ, ಈ ಬಗ್ಗೆ ಚರ್ಚೆ ಮಾಡುವದಿದ್ದರೆ ಹಿಂದುಸ್ಥಾನಕ್ಕೆ ಸಂಬಂಧಪಟ್ಟ ದವಾಖರ್ಚು ಮಂಜೂರಿಯ ಕಾಲಕ್ಕೆ ಚರ್ಚೆ ಮಾಡಬಹುದೆಂತಲೂ ಮಿ. ಬೋಲ್ಡವಿನ್‌ರವರ ಸ್ಪಷ್ಟೀಕರಣವಾಯಿತು. ಕೌನ್ಸಿಲ್ ಒಫ್ ಸ್ಟೇಟಿನ ಹಾಗು ವರಿಷ್ಠ ಕಾಯಿದೆ ಕೌನ್ಸಿಲಿನ ಸಭಿಕರು ಪಾರ್ಲಿಮೆಂಟಿಗೆ ಸಾದರಪಡಿಸಲು ತಯಾರಿಸಿದ ಅರ್ಜಿಯನ್ನು ಪಾರ್ಲಿಮೆಂಟಿನ ಸಭಾಸದರಾದ ಮಿ. ಬೆನೆಟ್‌ರವರು ಕಳೆದ ಶುಕ್ರವಾರ ತಾ. ೧ನೇಗೆ ಪಾರ್ಲಿಮೆಂಟಿಗೆ ಸಾದರಪಡಿಸಿದರು. ಒಟ್ಟಿಗೆ, ಸನದಶೀರ ಚಳವಳಿಯು ಸ್ಥಿರವಾಗಿ ಮುಂದರಿಯುತ್ತಿದೆ. ಇತ್ತ ಬಡ ಭಾರತೀಯರು ಮಾತ್ರ ಉಪ್ಪಿನ ತೆರಿಗೆಯನ್ನು ತೆರುತ್ತಲೇ ಇರುವರು. ಸನದಶೀರ ಚಳವಳಿಯು ಎಲ್ಲಿಂದ, ಯಾವ ದಿಕ್ಕಿಗೆ ಮುಟ್ಟುತ್ತದೆಂದು ನೋಡಲಿಕ್ಕೆ ಉಪ್ಪಿನ ಪರಿಕೆಯು ಚಲೋ ಸಂಧಿಯನ್ನು ಸಾಧಿಸಿಕೊಟ್ಟಿದೆ.

———

೩. ಕರ್ನಾಟಕದಲ್ಲಿ ಉದಾರ ಮತವಾದಿಗಳ ಯಾನೆ ನೇಮಸ್ತರ ಪ್ರಾಂತಿಕ ಪರಿಷತ್ತಾಯಿತು. ಪರಿಷತ್ತಿನ ಕಾರ್ಯವನ್ನು ಇಂದಿಗೆ ನಾವು ಚರ್ಚಿಸಲಿಚ್ಛಿಸುವದಿಲ್ಲ. ಅಧ್ಯಕ್ಷರಾದ ರಾ। ಜಿ. ಬಿ. ತ್ರಿವೇದಿಯವರು ಕೆಲ ಅಂಕಿಗಳನ್ನು ಸಾದರಪಡಿಸಿದರು ಅವು ವಿಚಾರಾರ್ಹವಿವೆ. ನವಯುಗದಲ್ಲಿ ೨ ಖಾತೆಗಳಿವೆ. ಕಾಯಿಟ್ಟ ಖಾತೆಗಳು, ವರ್ಗಾಯಿಸಿ ಕೊಟ್ಟ ಖಾತೆಗಳು ಶಿಕ್ಷಣ, ಆರೋಗ್ಯ, ಉದ್ಯೋಗ ಮೊದಲಾದ ಪ್ರಜಾಕಲ್ಯಾಣಪ್ರದ ಖಾತೆಗಳನ್ನು ದಿವಾಣರಿಗೆ ವಿಂಗಡಿಸಿ ಕೊಟ್ಟಿರುವರು, ಇವುಗಳಿಗಾಗಿ ೧೯೨೧—೨೨ ರಲ್ಲಿ ೬ ಕೋಟಿ ೧೬ ಲಕ್ಷ ರೂಪಾಯಿಗಳು ಖರ್ಚಾದವು ನುರುವರ್ಷ ೫ ಕೋಟಿ ೩೪ ಲಕ್ಷ ರೂಪಾಯಿಗಳು; ಈ ವರ್ಷ ಮ-ತೂ ೫ ಕೋಟಿ ೧೫ ಲಕ್ಷ ರೂಪಾಯಿಗಳು ಮಂಜೂರಾಗಿವೆ ವರ್ಷ ವರ್ಷಕ್ಕೆ ಖರ್ಚು ಇಳಿಯುತ್ತ ನಡೆದಿದೆ. ಕಾದಿಟ್ಟ ಖಾತೆಗಳ ಖರ್ಚು ನೋಡಿರಿ. ೧೯೨೧—೨೨ ರಲ್ಲಿ ೯ ಕೋಟಿ ೮೭ ಲಕ್ಷ ರೂಪಾಯಿಗಳು ವೆಚ್ಚವಾದವು. ಮರುವರ್ಷವೇ ಅವು ಏರಿ, ೧೦ ಕೋಟಿ ೩೬ ಲಕ್ಷ ರೂಪಾಯಿಗಳಿಗೆ ಮುಟ್ಟಿದವು. ಈ ವರ್ಷವಂತು ಅವು ಮತ್ತೂ ಏರಿ, ೧೧ ಕೋಟಿ, ೫೯ ಲಕ್ಷ ರೂಪಾಯಿಗಳಿಗೆ ಮುಟ್ಟಿವೆ. ಸರಕಾರದ ಹತ್ತರ ಶಿಕ್ಷಣ—ಆರೋಗ್ಯಗಳಂಥ ಪ್ರಜಾಕಲ್ಯಾಣಪ್ರದ ಖಾತೆಗಳಿಗೆ ಖರ್ಚು ಮಾಡಲಿಕ್ಕೆ ಮಾತ್ರ ಹಣವಿಲ್ಲ. ಅವುಗಳಿಗೆ ಬೇಕಾದರೆ, ನಾವು ಮತ್ತೂ ಕರ ತೆರಬೇಕು. ನವಯುಗದಲ್ಲಿ ೧ ಕೋಟಿ, ೩೦ ಲಕ್ಷದಷ್ಟು ಹೊಸ ಕರವನ್ನು ಸರಕಾರ

ಗಳು ದೇಶಬಾಂಧವರಮೇಲೆ ಹೊರಿಸಿದರು. ಆದರೂ, ಶಿಕ್ಷಣ-ಆರೋಗ್ಯ ಖಾತೆಗಳ ಉಪೋಷಣ ಪ್ರಶ್ನ ದುಃಸ್ಥಿತಿ ಕಠಿಣವಾಯಿತು ಸಹಕಾರಿಗಳು ಕೌನ್ಸಿಲ ಗಳನ್ನು ಸೇರಿಕೊಂಡು, ಉಂಟು ಮಾಡಿದ ಪ್ರಜಾ ಹಿತವೆಂಬುದು ಇದೇ.

---

೪. ಇಲಾಖೆಯಲ್ಲಿ ಟೋಲ ನಾಕೆಗಳ ಪುನ ರುಜ್ಜೀವನವಾಗಲಿಕ್ಕೂ ಮೊಂಟೆಗ್ಯೂ ಸ್ವರಾಜ್ಯವನ್ನು ಯಶಸ್ವೀಮಾಡಲು ಮುಂದಾದ ಸಹಕಾರಿಗಳೆ ೧೯೧೪ ರಲ್ಲಿ ಸರಕಾರವು ಟೋಲ ನಾಕೆಗಳ ಹಕ್ಕುಗ ಳನ್ನು ಮಾರಿತು, ಅವನ್ನೆತ್ತಿ [illegible] ಗಳಿಂದ ಜಿಲ್ಹಾ ಬೋರ್ಡುಗಳಿಗೆ ಉಂಟಾದ ಹಾನಿ ಯನ್ನು ಸರಕಾರವು ಗ್ರ್ಯಾಂಟುಗಳನ್ನು ಕೊಟ್ಟು ತುಂಬಿ ತರುತ್ತಿತ್ತು. [illegible] ವರ್ಷ ಕಳೆಯುವಷ್ಟರಲ್ಲಿ ಮೊಂಟೆಗ್ಯೂ ಸ್ವರಾಜ್ಯದ ಕಾಯಿದೆಯಾಗಿ ಸಹಕಾರಿ ಗಳ ಜವಾಬದಾರ ಸ್ವರಾಜ್ಯ ಕಾರಭಾರವು ಪ್ರಾರಂ ಭವಾಯಿತು. [illegible] ರಲ್ಲಿ ಜವಾಬದಾರ ಸರಾ ಜ್ಯದ ಮೊದಲನೆ [illegible] ಪತ್ರಕವು ಟಾಕೀಗ [illegible], ಸಹಕಾರಿ ಸಭಾಸದರು ಸರಕಾರಿ ಖಜಿನ ದ [illegible] ತಮ್ಮ ನಡೆದಿರುವದೆಂದು ತೋರಿಸಲು ಜಿಲ್ಹಾ ಬೋರ್ಡುಗಳಿಗೆ ಕೊಡುವ ಭರಪಾಯಿ ರಕಮನ್ನು ಕಡಿಮೆ ಮಾಡಬೇಕೆಂದರು. ದಿವಾಣರಾದ ಖಾನ ಬಹಾದ್ದೂರ ಶೇಖ ಗುಲಾಮ ಹುಸೇನರವರ ಟೋ ಲ ನಾಕೆಗಳ ಪುನರುಜ್ಜೀವನದ ಇಡಿ ಪ್ರಶ್ನೆಯನ್ನೇ ಪುನರಾಲೋಚಿಸುತ್ತೇವೆಂದು ವಚನ ಕೊಟ್ಟರು. ಅದ ರಂತೆ ಟೋಲ ನಾಕೆಗಳು ಅಲ್ಲಲ್ಲಿ ಪ್ರಾರಂಭವಾ ಗಿರುವವೆಂದು ದಿವಾಣ ಶೇಖ ಗುಲಾಮ ಹುಸೇನ ರವರು ಕಳೆದ ಮಾರ್ಚ ತಿಂಗಳಿನ ಕೌನ್ಸಿಲಿನ ಅಧಿವೇ ಶನದಲ್ಲಿ ಸ್ವೀಕರಿಸಿದರು. ಕೌನ್ಸಿಲ ಪ್ರವೇಶಗೊಂ ಡು ಸಹಕಾರಿಗಳು ಮಾಡಿದ ಪ್ರಜಾ ಹಿತದ ಗಾಲಿ ಕೆಯು ಇದೊಂದು ಮಣಿಯು. ದಿವಾಣರೂ ಉಳಿದ ವಚನಗಳನ್ನು ಎಷ್ಟರಮಟ್ಟಿಗೆ ಪಾಲಿಸಿದ್ದಾರೆಂಬು ದಕ್ಕೆ ನಮಗಿನ್ನೂ ಗೊತ್ತಿಲ್ಲ. ಪ್ರಜೆಗಳಿಂದ ಹಣವಸೂಲ ಟೋಲ ನಾಕೆಗಳ ಪುನರುಜ್ಜೀವನದ ವಚನವನ್ನು ಪಾಲಿಸಿದಂತೆ, ದಿವಾಣರು ಪ್ರಜಾ ಹಿತಕ್ಕಾಗಿ ಕೊಟ್ಟ ಇತರ ವಚನಗಳನ್ನೂ ಪಾಲಿಸಿದ್ದಾರೆಂದು ತಿಳಿಸಿ ದ್ದರೆ, ನಮಗೆ ಸಂತೋಷವಾಗುತ್ತಿತ್ತು. ದಿವಾಣರ ವಚನ ಪಾಲಿಸಿದ ಶುಭ ಸುದ್ದಿಯನ್ನು ಯಾಕೆ ರು ಮಾಡುವರೇನು?

---

೫ ಕಳೆದ ತಾ. ೫೦ ನೇ [illegible] ಸ ನ್ನಲ್ಲಿಂದ ಜಿಲ್ಹಾ ಲೋಕಲ್ ಬೋರ್ಡಿನ ಸಾಧಾರಣ ಸಭೆಯು ಕಾರವಾರ ಮುನ್ಸಿಪಲ್ಲಿನಲ್ಲಿ ನೆರೆಯಿತು. ಅಲ್ಲಿ ೩ ಠರಾವುಗಳು ಪಾಸಾದವು. ಲೋಕಲ್‌ಫಂಡು ಈ ವರೆಗೆ ರೂಪಾಯಿಗೊಂದಾಣೆಯಿತ್ತು. ಅದನ್ನು ಈಗ ೧॥ ಆಣೆಗೆ ಏರಿಸಬೇಕೆಂದು ಲೋಕಲ್ ಬೋರ್ಡು ಠರಾಯಿಸಿದೆ. ಜಿಲ್ಹೆಯಲ್ಲಿ ಬೋರ್ಡಿನ ಮಾರ್ಗಗಳ ಮೇಲೆ ೧೮ ಹೊಸ ಟೋಲ ನಾಕೆಗಳನ್ನೂ ಏರ್ಪಡಿಸ ಬೇಕೆಂದು ಮತ್ತೊಂದು ಠರಾವೂ ಪಾಸಾಗಿದೆ. ಅಂ ತು ನಮ್ಮ ಜಿಲ್ಹಾ ಪ್ರಜೆಗಳ ಮೇಲೆ ಹೊಸ ಗಂಡಾಂ ತರವು ಬಂತು. ಇತರ ಜಿಲ್ಹೆಗಳ ಬೋರ್ಡುಗಳು ಇಂಥ ಠರಾವು ಮಾಡಿದ್ದೇನು ನಮ್ಮ ಲಕ್ಷಕ್ಕೆ ಬರ ಲಿಲ್ಲ. ಹೀಗಿರುವಾಗ, ನಮ್ಮ ಬೋರ್ಡಿನವರು ಪ್ರಜಾ ಕಲ್ಯಾಣ ಮಾಡುವ ಅತ್ಯುತ್ಸಾಹದಲ್ಲಿ ಠೇರಿಗೆಯನ್ನೇ ರಿಸುವ ಉಪಕಾರ ಮಾಡದಿದ್ದರೆ, ಪ್ರಜೆಗಳು ಅನ ೧ಗೆ ಬಹಳ ಋಣಿಯಾಗುತ್ತಿದ್ದರು. ನೌಕರಶಾ ಹಿಯು ಪ್ರಜೆಗಳಿಗೆ ಕೊಟ್ಟ ಜವಾಬದಾರ ಸ್ವರಾಜ್ಯದ ಚಾಲಕರು ಕೌನ್ಸಿಲುಗಳಲ್ಲಿ ಸೇರಿ, ಕಾಯಿದೆಗಳನ್ನು ನಿರ್ಮಿಸಿ, ಎಂದು ಒದಗಿದ ಪ್ರಜೆಗಳಿಗೆ ಹಿಂದು ಸ್ತಾನದ, ಇನ್ನೊಂದು ಬದಿಯಿಂದ ನೌಕರಶಾಹಿಯು ಸ್ವರಾಜ್ಯ ಸಂಸ್ಥೆಗಳು 'ಪ್ರಜೆಗಳಿಗೆ ಸ್ವರಾಜ್ಯ' ವಾರ ಕಲಿಸುವ ಹವ್ಯಾಸ ಹಿಡಿದ, ಹಿಂದುಸ್ತಾನದ ಅಂತು ಪ್ರಜೆಗಳ ಹಿಂದೆ ಹಿಪ್ಪೆ ಇಂಥ ಕರಗಳನ್ನು ಪ್ರತಿನಿಧಿ ಗಳೆಂದು ಅರಿಸಿ ಹೋದ ಮಂದಿಗಳು ಪ್ರಜೆಗಳ ಬಡ ಸ್ಥಿತಿಯನ್ನು ಎಳ್ಳಷ್ಟು ಸಹ ಲೆಕ್ಕಿಸದೆ, ಹೊರಿಸುವ ಷ್ಟು, ಹೇಗೆ ನಿಷ್ಠುರರಾಗುತ್ತಾರೆಂಬುದು ನಮಗೆ ತಿಳಿ ಯುವ ಮಾತು. ಇದನ್ನೆಲ್ಲ ನೋಡಿ, ಪ್ರಜೆಗಳು ನೌಕ ರಶಾಹಿಯ ಸ್ವರಾಜ್ಯವೂ ಬೇಡ, ಕರಗಳೂ ಬೇಡ, ಆ ಹಿತವೂ ಬೇಡ ಎಂದು ದೇಶಾಂತರ ಮಾಡಲುದ್ಯು ಕ್ತರಾದರೆ, ಆಶ್ಚರ್ಯವೇನು?

ವಿನಂತಿ— ಇದಿಗೆ 'ವೃತ್ತ'ವು ಅಷ್ಟಪೃಷ್ಠಗಳು ಳ್ಳದ್ದು. ಕೆಲ ಅನಾನುಕೂಲತೆಯ ದೆಸೆಯಿಂದ ಎರ ಡು ಪೃಷ್ಠಗಳು ಕಡಿಮೆಯಾಗಿವೆ. ವಾಚಕರು ಸಂತೋ ಷದಿಂದ ಅದನ್ನು ಮರೆಯಾಗಿ ನಂಬಿಗೆ. ವ್ಯವಸ್ಥೆ ವೃತ್ತವ್ಯವಹಾರ ವೂ ಸ್ವರಾಭಾವದ ಮೂಲಕ ಪ್ರಕಟವಾಗಲಿಲ್ಲ ಇನ್ನು ಮೇಲೆ ಯಥಾನುಕೂಲ ಪ್ರಕಟವಾಗುವದು

ಸಂಪಾದಕ ಕಾ. ವೃ.]

ಸ್ಥಾನಿಕ ವೃತ್ತಾಂತ.

ಕುಮಟಾ— ಎಲ್ಲಿ ನೋಡಿದಲ್ಲಿ ನೀರಿನ ಗೋ ಳು. [illegible] ದಿನೇ ದಿನೇ ಹೆಚ್ಚೆಚ್ಚು ಬಾವಿಗಳ ಒತ್ತೂ ಇಳಿಯುತ್ತಿದೆ. ನೆರೆಯ ಕೋಟಿ ಕರ್ಜ ಎಲ್ಲಿ ಬಿಲ್ಲಿ ಏನೂ ನೀರಿಲ್ಲದ, ೧ ವೈಲು ದೂರದಿಂದ ಹಳ್ಳದೊಳಗಿಂದ ನೀರು ಹೊರುತ್ತಿದೆ. [illegible] ಮ್ಯುನಿಸಿಪಾಲಿಟಿಯವರು ಮೊದಲಾಗಿ ಜನರು ಮತ್ತು ನೀರು ಪೂರೈಕೆಯನ್ನು ಮಾಡಿತ್ತಿರುವರು ಎಂದಾಗಲಿಲ್ಲ ಇದೇ ಎಂದು ಅಧಿಕ ಮಾತು. ಶಕೆ ವಿಷ ಯಿತ. ನಲೆಯ ಅಲ್ಪ ಸ್ವಲ್ಪ ಸೃಷ್ಟಿಗಳಾದವು. ಆದರ ಮಳೆಗಾಲದ ಪ್ರಾರಂಭದ ಗಳನ್ನೂ ಕಾಣುವದಿಲ್ಲ. ೧ಗಾವಾ ಗ ಮಳೆರಾಯನು ದಯಪಾಲಿಸುವನು? ಎಂದು ಜನರೆಲ್ಲರೂ ನಿರೀಕ್ಷಿಸುತ್ತಿರುವರು. ಇತ್ತಿತ್ತ ಹುಚ್ಚ ಸಂಖ್ಯೆಯು ವಿಗಿಲಾಗುತ್ತಿದೆ.

ಹೊನ್ನಾವರ— ಆತಿ ಶಕೆ. ನೋಡಗಗಿದ ದ ಳ ಟೀಳ ವದಿಲ್ಲ.

ಹತ್ತು ಸಮುತ್ಸರದಿಂದ ವಾರದಲ್ಲಿ ಅಧಿಕ ಮಾಸದ ಬಗ್ಗೆ ಹ ರಿಕೀರ್ತನೆಯು ಸಪ್ತಾಹ ನಡೆದದೆ. ಕಾಸರಕೋಡ ಕಾಲಾ ಪಾತ್ರರಾದ ರಾ। ಹನುಮಂತ ವೆಂಕಟೇಶ ಕಾಮತರ ವರು ಕೊಂಕಣಿ ಭಾಷೆಯಿಂದ "ಚಂದ್ರಹಾಸ" ಆಖ್ಯಾ ನವನ್ನು ವಿವರಿಸುತ್ತಾರೆ ದಿನಾಲು ಹೆಚ್ಚೆಚ್ಚು ಪ್ರೋತ್ಸ ಮುದಾಯವು ನೆರೆಯುತ್ತಿದೆ

ಇಲ್ಲಿಂದ ೧-೩ ಮೈಲಿನ ಮೇಲೆ ಮುಂತಗೋಡ ಎಂಬ ಗ್ರಾಮವಿದೆ. ಕಳೆದ ತಾ ೩ನೇ ರವಿವಾರಕ್ಕೆ ಅಲ್ಲಿಯ ಮು ಕ್ರಿಗಳು ಬಂದು. ಹುಲಿಯನ್ನು ಯಮಸದನಕ್ಕಟ್ಟಿದ್ದರು. ಯುಕ್ತಿಯು ಬಲು ಸುಲಭ ಹುಲಿಯು ಗವಿಯಲ್ಲಿ ಹೊ ಕ್ಕಿತ್ತು. ಗವಿಯ ಬಾಯಿಯಮುಂದೆ ದೊಡ್ಡ ಕಲ್ಲು ಇಟ್ಟರು ಮತ್ತು ಜೋರಾಗ ಮೆಣಸಿನ ಹೊಗೆಯನ್ನು ಹಾಕಿ ಗವಿಯ ನ್ನೆಲ್ಲ ಧೂಮ್ರಮಯವನ್ನಾಗಿ ಮಾಡಿದರು. ಹುಲಿಯು ಉಸುರು ಕಟ್ಟಿ ನಿಧನ ಹೊಂದಿತು. ಹಂಚಿಕೆ ಹುಡುಕಿ ತೆ ಗೆದ ಮುಕ್ತಿ ಬಾಂಧವರಿಗೆ ಅಭಿನಂದಿಸಿದಷ್ಟು ಕಡಿಮೆ. ಈ ಹುಲಿಯು ೩-೪ ವರ್ಷಗಳಲ್ಲಿ ೧೦೦-೧೫೦ ದನಗಳ ನ್ನು ಸಂಹರಿಸಿತ್ತು ಹುಲಿಯ ಉದ್ದಳತೆಯು ೧೨ ಪುಟ್ಟು

ಸೋಮವಾರ ತಾ. ೪ ನೇಗೆ ಮಂಕಿಯಲ್ಲಿ ಸಿಡಿಲುಬಿ ತ್ತು. ನಾಮಧಾರಿ ಹೆಂಗಸೊಬ್ಬಳು ಅಲ್ಲಿಂದಲ್ಲೇ ಮೃತ ಪಟ್ಟಳು. ಇನ್ನು ಇಷ್ಟು ಹುಡುಗರು ಘೋಯವಾಗಿ ಅಸ್ವಸ್ಥ ರಾಗಿರುವರು

ಮುಲಾಕರದಿಂದ ಮುಂಬಯಿ ಅತ್ತ ಕಡೆಗೆ ಹಲಿಗೆಗಳ ನ್ನು ತುಂಬಿಕೊಂಡು ಹೋಗುವ ಒಂದು ಫತ್ತೆಮಾರಿಗೆ ಸಮುದ್ರದಲ್ಲಿ ಗಾಬುದಿಯಾಯಿತು. ಅದು ಈಗ ಕಾಸರ ಕೋಡ ದಂಡೆಗೆ ಬಂದು ಸೇರಿಯತ್ತದೆ. ಕಸ್ಟಮ್ ಖಾತೆ ಯವರು ಅದರ ಯೋಗ್ಯ ವ್ಯವಸ್ಥೆ ಮಾಡಿರುವರಂತೆ.

ಶಿರಸಿ— ಶ್ರೀಯುತ ಪಟವರ್ಧನಯವರೂ, ಅವರ ಪತ್ನಿ ಯವರಾದ ಶ್ರೀಮತಿ ಸೀತಾಬಾಯಿಯವರೂ ಶಿರಸಿಗೆ ಆಗ ಮಿಸಿ ತಮ್ಮ ಭಾಷಣಗಳಿಂದಲೂ, ಕಾರ್ಯಕ್ರಮದಿಂದ ಲೂ ಜನರಲ್ಲಿ ದ್ವಿಗುಣಿತ ಉತ್ಸಾಹವನ್ನು ಹುಟ್ಟಿಸಿರುವ ರು. ಶುಕ್ರವಾರ ಸ್ತ್ರೀಯರ ಸಭೆಯೂ, ಶನಿವಾರ ವಿದ್ಯಾರ್ಥಿ ಗಳ ಸಭೆ, ಜಾಹೀರ ಸಭೆಗಳೂ ನೆರೆದವು. ಇಲ್ಲಿಯ ರಾ ಷ್ಟ್ರೀಯ ಶಾಲೆಯ ಆರ್ಥಿಕ ಅವನತಿ ನೋಡಿ ಕಳವಳಿಸಿ, ಶ್ರೀ ಪಟವರ್ಧನಯವರೂ, ಅವರ ಅರ್ಧಾಂಗಿಯವರೂ ಸಭೆ ಯ ಹೊರ್ತಾಗಿ ಮಿಕ್ಕ ವೇಳೆಯನ್ನು ರಾಷ್ಟ್ರೀಯ ಶಾಲೆ ಗಾಗಿ ಫಂಡು ವಸೂಲಿಯಲ್ಲಿಯೇ ಕಳೆದರು. ಸೀತಾಬಾ ಯಿಯವರೇ ೫೦೦ ರೂ ಗಳವರೆಗೆ ಕೂಡಿಸಿದ್ದಾಗಿದೆ. ಇಲ್ಲಿಯ ರಾಷ್ಟ್ರೀಯ ಶಾಲೆಯನ್ನು ಸುಸ್ಥಿತಿಯಲ್ಲಿಡಲು ಪ್ರಯತ್ನ ಮಾಡುವದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿರಬೇ ಕೆಂಬುದೇ ಅವರ ಭಾಷಣದ ಸಾರಾಂಶವಾಗಿತ್ತು.

ಈಗ ಎರಡು ವಾರದಿಂದ ಮೊದಲಿನಂತೆ ಮುಷ್ಟಿ ಧಂ ಡು ಪ್ರಾರಂಭವಾಗಿದೆ. ಪ್ರತಿದಿನ ಸಾಯಂಕಾಲ ಪ್ರಾಥ ಶಾಲೆಗಳಲ್ಲಿ ಗಾಂಧಿ ಆಶ್ರಮದಲ್ಲಿ ಸರ್ವರೂ ಕೂಡಿ ದೇವ ರ ಭಜನೆಯನ್ನು ತಪ್ಪದೆ ಮಾಡುವ ಪರಿಪಾಠವಿಟ್ಟಿದ್ದಾರೆ

ಇಲ್ಲಿಯ ಸಬ್‌ಜಜ್ಜ ಮಿ। ಉಸ್ಕೋಣಿಯವರಿಗೆ ವರ್ಗ ವಾಗಿ, ಅವರ ಸ್ಥಳದಲ್ಲಿ ಮಿ। ಬಿ ಎಸ್. ಕೆಂಭಾವಿಯವರು ಬಂದಿರುವರು.

ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿ.

ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಸಭೆಯು ಕಳೆದ ರವಿವಾರ-ಸೋಮವಾರ ಧಾರ ವಾಡದಲ್ಲಿ ಕೂಡಿತು. ಎರಡೂ ದಿವಸ ಮೂರು ಮೂರು ತಾಸುಗಳವರೆಗೆ ಭಯಂಕರ ವಾದ-ವಿ ವಾದವಾಗಿ, ಠರಾವುಗಳು ಮಂಜೂರಾದವು. ಅವು ಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸುವೆವು

(೧) ಮುಂಬಯಿಯಲ್ಲಿ ದಾಸ ಪಕ್ಷದವರು ಅ ಭಾ. ಕೊಂ ಕಮಿಟಿಯಲ್ಲಿ ಪಾಸು ಮಾಡಿದ ಠರಾ ವು ಗಯಾ ಕೋಂಗ್ರೆಸಿಗೆ ವಿರುದ್ಧವಿದೆ. ಅದನ್ನು ಈ ಕಮಿಟಿಯು ಮನ್ನಿಸಲಿಲ್ಲ

(೨) ಗಯಾ ಕೊಂಗ್ರೆಸಿನ ಠರಾವಿನ ಸಂರಕ್ಷಣೆ ಗಾಗಿ, ಅಗತ್ಯ ಬಿದ್ದಾಗ್ಯ ಅಗತ್ಯವಿದ್ದಲ್ಲಿ ದಾಸ ಪಕ್ಷ ದವರ ಠರಾವಿಗೆ ವಿರೋಧವಾಗಿ ಪ್ರಯತ್ನಿಸತಕ್ಕದ್ದು.

(೩) ಅ. ಭಾ. ಕೊಂ ಕಮಿಟಿಯನ್ನು ಪುನಃ ಆದಷ್ಟು ಬೇಗನೆ ನೆರೆಯಿಸಬೇಕು. ಕೌನ್ಸಿಲ ಪ್ರವೇಶ ಪ್ರಶ್ನೆಯಿಂದ ಉಂಟಾದ ಪರಿಸ್ಥಿತಿಯನ್ನು ಪುನರಾ ಲೋಚಿಸಬೇಕು.

(೪) ನಾಗಪೂರದ ರಾಷ್ಟ್ರೀಯ ಧ್ವಜದ ಸತ್ಯಾ ಗ್ರಹವು ಈ ಸಭೆಗೆ ಮಾನ್ಯವಿದೆ. ಅದರ ಸಹಾಯಕ್ಕಾ ಗಿ ಕಮಿಟಿಯು ೫೦ ಮಂದಿ ಸ್ವಯಂಸೇವಕರನ್ನು ಕಳುಹಿಸಬೇಕೆಂದು ಅರ್ಜಿಸುತ್ತದೆ

(೫) ಬರುವ ಅಕ್ಟೋಬರ ತಿಂಗಳಿನಲ್ಲಿ ಕರ್ನಾ ಟಕ ಪ್ರಾಂತಿಕ ಪರಿಷತ್ತನ್ನು ಕಾರವಾರ ಜಿಲ್ಹೆಯಲ್ಲಿ ಕೂಡಿಸಬೇಕೆ

ಅನಂತರ ಶ್ರೀ। ರಾಜಗೋಪಾಲಾಚಾರ್ಯ, ರಾ ಮದಾಸ ಗಾಂಧಿಯವರ ಅಭಿನಂದನವಾಗಿ ಸಭಾವಿಸರ್ಜನವಾಯಿತು.

ಸಾಭಾರ ಸ್ವೀಕಾರ.

ಸಾಧನೆ— ಫಾಲ್ಗುಣ ಮಾಸದ ಸಂಚಿಕೆ. ಸಂಪಾದಕ— ಗಣಪತಿ ಶಂಕರ ಭಟ್ಟ, ಕರ್ಕಿ, ವಾರ್ಷಿಕ ಟಪಾಲ ಅಂಚೆ ವೆಚ್ಚ ಸೇರಿ ರೂ. ೨-೦-೦.

The Health — May issue. Edited by Dr. U. Rama Rau, M. L. C. 323, Thambu Chetty Street, Madras. Annual subscription Rs. 1-8-0. Acknowledged with thanks.

ವೃತ್ತಸಾರ.

ಇರಾಣದೊಳಗಿನ ತುರ್ಬತ್—ಇ—ಹೈದರೀ ಎಂಬ ಸ್ಥಳ ಭೂಕಂಪವಾಗಿ ೪ ಸಾವಿರ ಜನರು ಮಡಿದರು. ಅನೇಕ ಹಳ್ಳಿಗಳು ಮಣ್ಣುಪಾಲಾದವು.

ವಿಜಾಪುರದ ಕಾಂಗ್ರೆಸ ಪ್ರಚಾರಕರಾದ ಶ್ರೀ ವಿಷ್ಣುಪಂತ ಅನಖಾಂಡಿಯವರ ಮೇಲಿನ ರಾಜದ್ರೋಹದ ಖಟ್ಲೆಯು ವಿಚಾರಣೆಯಾಯಿತು. ವಿಚಾರಣೆಯು ತಾ. ೩೧ ನೆಯ ನಡೆಯಿತು. ೧೨ ಮಂದಿ ಸಾಕ್ಷಿದಾರರಿದ್ದರು. ಸಾಕ್ಷಿಗಳೆಲ್ಲ ಎರಡೇ ತಾಸುಗಳಲ್ಲಿ ಮುಗಿದವು. ಆರೋಪಿಗಳಿಗೆ ನಿಮ್ಮ ಹೇಳಿಕೆಯೇನಿದೆ ? ಎಂದು ಮೆಜಿಸ್ಟ್ರೇಟ ಮಿ. ಪಂಡರಕರ್‌ರವರು ಕೇಳಲು, ತಾವು ೧ ದಿವಸ ಪುರಸತ್ತು ಕೊಟ್ಟರೆ, ತಮ್ಮ ಸ್ಟೇಟ್‌ಮೆಂಟನ್ನು ಬರಕೊಡತ್ತೇನೆಂದು ನುಡಿದರು. ಮೆಜಿಸ್ಟ್ರೇಟರು ನಿಮಗೆ ನೋಟೀಸು ಸರಿಯಾಗಿ ಬಹಳ ದಿನಗಳಾದವು. ಸ್ಟೇಟಮೆಂಟ ತಯಾರಿಸಲಿಕ್ಕೆ ಬೇಕಷ್ಟು ಹೊತ್ತಿತ್ತು. ಆಗ ನೀವು ತಯಾರಿಸಲಿಲ್ಲ. ಆದ್ದರಿಂದ ಹೇಳಬೇಕಾದ್ದನ್ನೆಲ್ಲ ಬಾಯಿಯಿಂದ ಈಗಲೇ ಹೇಳಬೇಕು. ಎಂದು ನುಡಿದರು. ಶ್ರೀ ವಿಷ್ಣುಪಂತರು ೧ ತಾಸಿನ ಅವಧಿ ಕೊಡಿರಿ ಎಂದರು. ಅದಕ್ಕೆ ಒಪ್ಪಿಗೆಯಾಗಲಿಲ್ಲ. ಆಗ, "ನನಗೆ ಕಾಯಿದೆಯ ಜ್ಞಾನವಿಲ್ಲದರಿಂದ ನಾನು ಏನೂ ಹೇಳಲಾರೆನೆಂ"ದು ವಿಷ್ಣುಪಂತರು ನುಡಿದು ಸುಮ್ಮಗಾದರು. ಮೆಜಿಸ್ಟ್ರೇಟರು ಜಾಮೀನು ಕೊಡಬೇಕೆಂದು ತೀರ್ಪು ಕೊಟ್ಟರು. ಆರೋಪಿಗಳು ಜಾಮೀನು ಕೊಡಲೊಪ್ಪದ್ದರಿಂದ ಅವರಿಗೆ ೧ ವರ್ಷದ ಕಠಿಣ ಶಿಕ್ಷೆಯಾಯಿತು. ಶ್ರೀ ವಿಷ್ಣುಪಂತರು ಸಾತ್ವಿಕ ಅಸಹಕಾರಯೋಗಿಗಳಂತೆ ಸಂತೋಷದಿಂದ ಸೆರೆಮನೆಗೆ ಕೂಚುಮಾಡಿದರು.

— ಕರ್ನಾಟಕ ವೈಭವದ ಸಂಪಾದಕರಾಗಿ ಸೆರೆಮನೆಗೆ ಹೋದ ಶ್ರೀ ಹನುಮಂತರಾವ ಮೋಹರೆಯವರಿಂದ ೧೦೦೦ ರೂಪಾಯಿಗಳ ದಂಡಿನ ರಕಮನ್ನು ವಸೂಲ ಮಾಡುವರೆ, ಅವರ ಸ್ಥಿರ ಸೊತ್ತುಗಳಮೇಲೆ ವಾರಂಟು ಹೊರಟಿದೆ.

— ಸರಕಾರದವರು ಪ್ರತಿಯೊಂದು ಸರಕಾರಿ ಆಫೀಸಿನಲ್ಲಿ ಜನರಿಗೆ ಅರ್ಜಿಗಳನ್ನು ಹಾಕಲು ಒಂದು ಪೆಟ್ಟಿಗೆಯನ್ನಿಡುವ ವ್ಯವಸ್ಥೆ ಮಾಡಿದ್ದಾರೆ.

— ಮಹಾತ್ಮರ ಸಹಧರ್ಮಚಾರಿಣಿಯವರಾದ ಶ್ರೀಮತಿ ಕಸ್ತೂರಬಾಯಿ ಗಾಂಧಿಯವರು ಸದ್ಯಕ್ಕೆ ಮಹಾತ್ಮರ ಭೆಟ್ಟಿ ಪಡೆದರು. ಅವರಿಗೆ ಆರೋಗ್ಯ ಸ್ಥಿತಿಯಿಂದಿರುವರು. ತೂಕವು ಮಾತ್ರ ೯ ರತ್ತಲು ಕಡಿಮೆಯಾಗಿದೆ. ಅಶಕ್ತಿಯು ಮಾತ್ರ ವಿಶೇಷವಿದೆ. ಆದರಿಂದ ಈಗ ಮಹಾತ್ಮರು ನೋಡುವರಲ್ಲೆಂದು ತಿಳಿಯುತ್ತದೆ.

— ಜಪಾನ ದೇಶದ ಸಾಮಗ್ರಿಗಳನ್ನು ಬಹಿಷ್ಕರಿಸುವ ಚಳವಳಿಯು ಚೀನ ದೇಶದಲ್ಲಿ ಪ್ರಾರಂಭವಾಗಿದೆ. ಫುಲಿಂಗ ಎಂಬಲ್ಲಿ ಜಪಾನದಿಂದ ಸಾಮಾನು ತಂದವರಿಗೆ ಚೀನ ದೇಶದವರು ಅಡ್ಡಿ ಮಾಡಿದರು. ಜಪಾನರಿಂದ ಮದ್ದುಗುಂಡು ಸಹಿತ ಒಂದು ಹಡಗು ಬಂತು. ಚೀನದವರು ಕಲ್ಲುಗಳನ್ನೆಸೆದರು. ಕಡೆಗೆ ಗೋಳೀಬಾರ ಆಗಿ, ೩ ಮಂದಿ ಚೀನದವರು ಮಡಿದರು; ೬ ಮಂದಿಗೆ ಗಾಯವಾಗಿದೆ.

— ಗುಜರಾಥ ಪ್ರಾಂತದವರು ನಾಗಪೂರದ ಸ್ವರಾಜ್ಯ ಧ್ವಜದ ಸತ್ಯಾಗ್ರಹಕ್ಕಾಗಿ ೩೦೦ ಮಂದಿ ಸ್ವಯಂಸೇವಕರನ್ನು ಕಳಿಸುವ ವ್ಯವಸ್ಥೆ ಮಾಡಿರುವರು.

— ಮೆಸೊಪೊಟೆಮಿಯಾದಲ್ಲಿ ಯುಫ್ರೇಟಿಸ ನದಿಗೆ ನೆರೆ ಬಂದು, ಬಗದಾದದಿಂದ ೪೦ ಮೈಲುಗಳಿರುವ ಕಟ್ಟು ಒಡೆದು, ೪೫ ಸಾವಿರ ಎಕರೆ ಭೂಮಿಯು ಜಲಮಯವಾಗಿದೆ.

— ಚಿತಗಾಂಗದಲ್ಲಿ ಒಂದು ಭಯಂಕರ ಬಿರುಗಾಳಿ ಎದ್ದು ೧೦೦-೨೦೦ ಮೈಲು ಅಗಲ ಈಚೆಯ ಪೈರೆಲ್ಲ ಮಣ್ಣುಪಾಲಾಯಿತು. ದೊಡ್ಡ ದೊಡ್ಡ ವೃಕ್ಷಗಳು ಬುಡಮೇಲಾದವು, ೩೦೦೦ ಮನೆಗಳು ನಿಧನಹೊಂದಿದವು, ಮೂವರು ಸತ್ತರು. ಕಾಕ್ಸ ಬಝಾರದ ಬಂದರದಲ್ಲಿ ಮೊದಲು ಗಾಳಿಯಾಯಿತು; ಆ ಮೇಲೆ ಮಳೆಯಾಯಿತು. ಕಾಳು, ಬೀಜ ಮೊದಲಾದವುಗಳೆಲ್ಲ ಹರಿದು ಹೋದವು.

— ಮಹಾತ್ಮರನ್ನೂ, ಅಲ್ಲೀಬಂಧುಗಳನ್ನೂ ವಿರೋಧಿಸಬೇಕೆಂದು ವರಿಷ್ಠ ಕಾಯಿದೆ ಕೌನ್ಸಿಲಿನ ಮಹಮ್ಮದೀಯ ಸಭಾಸದರೊಬ್ಬರು ಕೌನ್ಸಿಲಿನ ಜುಲೈ ಅಧಿವೇಶನದಲ್ಲಿ ಠರಾವು ತರುವವರಿದ್ದಾರೆ.

— ಜಬಲಪುರದಲ್ಲಿ ೧೦ ವರುಷ ಪ್ರಾಯದೊಳಗಿನ ಹುಡುಗರು ಒಂದು ಕೂಟ ಮಾಡಿ, ಸತ್ಯಾಗ್ರಹವನ್ನು ಮಾಡಬೇಕೆಂದಿರುವರು.

— ರಶಿಯಾ ದೇಶದಲ್ಲಿ ಯುದ್ಧದ ಪೂರ್ವ ತಯಾರಿಯು ಜ್ಯಾರಿಯಿಂದ ನಡೆದಿದೆ. ಮಂತ್ರಿಗಳು ದಿನಾಲು ಸಭೆ ಸೇರಿಕೊಂಡು ಸೈನ್ಯವನ್ನು ಸಜ್ಜುಮಾಡುವ ಆಲೋಚನೆಯಲ್ಲಿ ನಿರತರಾಗಿರುವರು. ಬಾಲ್ಟಿಕ್ ಹಾಗೂ ಕಪ್ಪು ಸಮುದ್ರದ ಮೇಲಿನ ಪ್ರದೇಶಗಳನ್ನು ಭದ್ರಗೊಳಿಸುವ ಉಪಾಯ ಯೋಜನೆಗಳಾಗುತ್ತಿವೆ. ತುರ್ಕರು ರಶಿಯಾ ದೇಶದ ಹಡಗಗಳು ತಮ್ಮ ಪ್ರದೇಶದಲ್ಲಿ ಬರಬಾರದೆಂದು ಪ್ರತಿಬಂಧಿಸಿರುವರು.

— ಮುಂಬಯಿ ಖಿಲಾಫತ ಪರಿಷತ್ತಿನ ಪ್ರಥಮ ಅಧಿವೇಶನವು ಕಳೆದ ಶನಿವಾರ ತಾ ೨೬ ನೇ ಸಾಯಂಕಾಲ ೩||| ಘಂಟೆಗೆ ಮಸ್ತಾನ (?) ಕೆರೆಯ ಸಮೀಪದಲ್ಲಿ ನಿರ್ಮಿಸಿದ ಡೇರೆಯಲ್ಲಿ ನೆರೆಯಿತು. ಮೌಲಾನಾ ಅಬ್ದುಲ ಕಲಮ ಆಝಾದರವರು ಅಸ್ವಸ್ಥರಿದ್ದದರಿಂದ, ಹಜರತ ಮೌಲಾನಾ ಅಬ್ದುಲ ಮಜೀದ ಕಾದ್ರಿ ಬದಾಯೂನಿಯವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಆರಂಭಕ್ಕೆ ಮೂರು ಠರಾವುಗಳು ಖಿಲಾಪತೂಲ-ಮುಸ್ಲಮೀನ,-ಅಮೀರೋಲ,-ಮೋಮಿನ-ಸುಲ್ತಾನ ಅಬ್ದುಲ್ ಮಜೀದ ಖಾನರವರಿಗೆ ಅಂತಃಕರಣಪೂರ್ವಕ ನಿಷ್ಠೆಯನ್ನು ಪ್ರದರ್ಶಿಸಿ, ಅವರ ಖಿಲಾಫತ ಕಾರಕೀರ್ದಿಯು ಇತಿಹಾಸದಲ್ಲಿ ಸಂಸ್ಮರಣೀಯನಾಗಲೆಂದು ಪ್ರಾರ್ಥಿಸುವ ಮೊದಲನೇ ಠರಾವು ಪಾಸಾಯಿತು. ಅಂಗೋರಾ ಸರಕಾರ ಹಾಗು ಗ್ರಾಂಡ ನೆಶನಲ್ ಎಸೆಂಬ್ಲಿಯವರ ಬೇಡಿಕೆಗಳು ನ್ಯಾಯ್ಯ ಹಾಗು ಯೋಗ್ಯವಿದ್ದು, ಮಿತ್ರಪಕ್ಷದವರ, ವಿಶೇಷವಾಗಿ, ಬ್ರಿಟಿಶ ಸರಕಾರದ ಚಟುವಟಿಕೆಯು ವಿಶ್ವಾಸಘಾತವಲ್ಲೆಂದು ಈ ಪರಿಷತ್ತಿನ ಮತವಿದೆಂತಲೂ, ಸದ್ಯದ ಲೌಸೇನ ಪರಿಷತ್ತು ಮೊದಲಿನಂತೆಯೇ ವಿಫಲವಾದರೆ, ಅದಕ್ಕೆ ಬ್ರಿಟಿಶ ಸರಕಾರವನ್ನೇ ಜವಾಬದಾರ ಹಿಡಿದು, ಧರ್ಮಾಜ್ಞೆಗಳ ಪ್ರಕಾರ ಭಾರತೀಯ ಮಹಮ್ಮದೀಯರೆಲ್ಲರೂ ವರ್ತಿಸುವರೆಂದು ಪರಿಷತ್ತು ಜಾಹೀರು ಮಾಡಿತು. ಮೂರನೇ ಠರಾವು ಗ್ಯಾಝೀ ಎನ್ವರ ಪಾಶಾರವರ ನಿಧನದ ಬಗ್ಗೆ ದುಃಖ ಪ್ರದರ್ಶನ ಮಾಡಿ, ಅವರು ಇಸ್ಲಾಮು ಧರ್ಮಕ್ಕೆ ಅರ್ಪಿಸಿದ ಸೇವೆಯನ್ನು ಪ್ರೇಮಪೂರ್ವಕ ಮನ್ನಿಸಿತು.

— ಉಡುಪಿಯ ಅದಮಾರು ಮಠದ ಶ್ರೀ ಪಾದಂಗಳವರು, ಅವರ ಶಿಷ್ಯವರ್ಗದಲ್ಲನೇಕರೂ ಸಕ್ಕರೆಯನ್ನು ಬಹಿಷ್ಕರಿಸಿರುವರಂತೆ.

— ಕಲಕತ್ತೆಯ ಸೆರೆಮನೆಯಲ್ಲಿ ೩೪ ದಿವಸಗಳವರೆಗೆ ರಾಜಕೀಯ ಕೈದಿಯೊಬ್ಬರು ಅನ್ನ ನೀರುಗಳನ್ನು ವರ್ಜಿಸಿದ್ದರು. ಕಾಂಗ್ರೆಸ ಕಮಿಟಿಯವರು ಈ ವ್ರತವನ್ನು ಬಿಡಲಿಕ್ಕೆ ಅವರಿಗೆ ಬಹುಪರಿಯಿಂದ ಹೇಳಿಕೊಂಡದ್ದರಿಂದ, ಅವರು ಅನ್ನಗ್ರಹಣ ಮಾಡಲಾರಂಭಿಸಿರುವರು.

— ಲಂಡನದಲ್ಲಿ ೫೦ ಮಂದಿ ಹೆಂಗಸರನ್ನು ಪೋಲೀಸ ಖಾತೆಯಲ್ಲಿ ಸೇರಿಸಿಕೊಂಡಿರುವರು. ಇವರಿಗೆ ಮದುವೆಯಾಗಲಿಲ್ಲ. ಇವರು ಪುರುಷ ಪೋಲೀಸರಂತೆ, ಗಂಡಸರನ್ನು ಗಿರಫದಾರ ಮಾಡಬಲ್ಲರು.

ನೋಟೀಸು.

ಅಪ್ಪಾ ವಿಠೋಬ ಪ್ರಭು ಹೆರವಟ್ಟಾ ಈತನು ತಿಳಿಸುವದೇನಂದರೆ:—

ನನ್ನ ಸಹೋದರ ಭಿಕ್ಕು ವಿಠೋಬ ಪ್ರಭು ಈತನು ನನಗೆ ಮೋಸ ಹಾಕುವ ದುರಾಲೋಚನೆಯಿಂದ ನಮ್ಮ ಕುಟುಂಬದ ಆಸ್ತಿಯನ್ನು ಪರಾಧೀನ ಮಾಡುವ ವಿಚಾರದಲ್ಲಿದ್ದಾನೆಂಗು ತಿಳಿದು ಬರುತ್ತದೆ. ನಮಗೆ ಕುಟುಂಬದ ಸಾಲವೇನಿಲ್ಲ. ಆದರಿಂದ ಕುಟುಂಬದ ಯಾವದೇ ಆಸ್ತಿಯನ್ನು ಅಡವು ಯಾ ಕ್ರಯ ಮಾಡಲಾಗಿ ಏನೊಂದು ಪರಾಧೀನ ಮಾಡುವ ಹಕ್ಕು ಅವನಿಗಿರುವದಿಲ್ಲ. ಇದನ್ನು ಈ ನೋಟೀಸ ದ್ವಾರಾ ಜಾಹೀರ ಮಾಡುತ್ತೇನೆ. ಇದನ್ನು ಉಲ್ಲಂಘಿಸಿ, ಯಾರಾದರೂ, ಆಸ್ತಿಯನ್ನು ಪಡಕೊಂಡರೆ ಅದಕ್ಕೆ ನಾನು ಯಾವದೇ ರೀತಿಯಿಂದ ಜವಾಬದಾರನಲ್ಲ. ತಿಳಿಯುವದು ತಾ. ೬-೬-೨೩.

ಅಪ್ಪಾ ವಿಠೋಬ ಪ್ರಭು, ಹೆರವಟ್ಟಾ.

ಮಗ್ಗದ ಮಾಹೀತಿಯ ಸವಲತ್ತು.

ನಮ್ಮ ಮಗ್ಗದಲ್ಲಿ ಎಲ್ಲಾ ತರದ ಡಿಝ್ಯಾನಿನ ಕೋಟಿಂಗ, ಶರ್ಟಿಂಗ, ಚಾದರ, ಟಾವೆಲ್ಸ ವಗೈರೆ ತಯಾರಾಗುತ್ತಿದ್ದು, ಮಗ್ಗದ ಮಾಹೀತಿಯುಳ್ಳವರಿಗೆ ನಮ್ಮ ಮಗ್ಗದಲ್ಲಿ ೪ ನಾಲ್ಕು ತಿಂಗಳು ಕೆಲಸ ಮಾಡಿದ್ದಲ್ಲಿ ಮೇಲಿನ ಮಾಹೀತಿ ಪುಕ್ಕಟೆಯಾಗಿ ಕೊಡಲಾಗುವದು. ಕುಮಟಾ, ತಾ ೩೦-೫-೨೩.

ರಾಮದಾಸ ಗಣಪಯ್ಯಾ ಗೋಳಿ,
ಹೆರವಟ್ಟಾ



ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಇದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೇಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು [illegible] ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ. ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೊ, ಫೋರ್ಟ,
ಮುಂಬಯಿ.

ಅಗಿಯ ಹುಣ್ಣಿಮೆಯು (೭ನೇ) ಹಜ್ಜೆ.

ಧಾರವಾಡದಲ್ಲಿ ಹುಣ್ಣಿಮೆಗೊಮ್ಮೆ ಹೊರಡುವ,

"ಜಯಕರ್ನಾಟಕ"

ಎಂಬ

ಸಚಿತ್ರ ಮೇಲ್ತರದ ಮಾಸಪತ್ರಿಕೆ.

ಸಂಪಾದಕರು — [illegible] ಬಿ. ಎ., ಎಲ್. ಎಲ್. ಬಿ.,

ಇದರಲ್ಲಿ ಅಖಿಲ ಕರ್ನಾಟಕದ [illegible] 'ಮೊಡರ್ನ ರಿವ್ಯೂ' ಆಕಾರದ ೮೦ ಪುಟಗಳುಳ್ಳ ದೊಡ್ಡ ಮಾಸಪತ್ರಿಕೆಯಿದೊಂದೇ.

ಕರ್ನಾಟಕದ [illegible] ಹೆಚ್ಚಿನ ಲಾಭ. ಹೊಸದಾಗಿ ಆಗುವ ಚಂದಾದಾರರು ಹೊಸ ಸಂಚಿಕೆಯಿಂದಲೇ ಪ್ರಾರಂಭಿಸಬೇಕು. ಹಿಂದಿನ ಸಂಚಿಕೆಗಳು ತೀರಿದ್ದರಿಂದ ಅರ್ಜಿಗಳನ್ನು ಮುಟ್ಟಿಸುವ ಹೊಣೆಯನ್ನು ಹೊರಲಾರೆವು. [illegible] ಸಂಚಿಕೆಗಳನ್ನು ಕಳಿಸಿದರೆ ಬೆಲೆ ಕೊಟ್ಟು ಕೊಳ್ಳುವೆವು.

೭ನೇ ಸಂಚಿಕೆಯ ಲೇಖಗಳು

೧ ಶ್ರೀ ಬಸವೇಶ್ವರರೂ ಅವರ ತತ್ವಜ್ಞಾನವೂ [illegible] ಮಾವಟಿ, ಬಿ. ಎ., ಎಲ್. ಎಲ್. ಬಿ.

೨ ನಮ್ಮ ಅಕ್ಕ [illegible] [ಹುಬ್ಬಳ್ಳಿ.

೩ ಹೊಸ್ಸಿನ ನಾಣ್ಯಗಳ ಹೊರಟು [illegible] ಪಾಳ್ಯೇಕರ, ಬಿ. ಎ., ಎಲ್. ಎಲ್. ಬಿ.,

೪ ಮದ ಮಾಡ [illegible] [ಹುಬ್ಬಳ್ಳಿ.

೫. ಕಳವಿನ ಕೊಳಲು (ಕವಿತೆ) [illegible] ಗಜೇಂದ್ರಗಡ

೬. ಆರ್ಯ ಸಂಸ್ಕೃತಿಯೂ ಸ್ತ್ರೀಯರೂ [illegible] ಕೊಣ್ಣೂರ, ಬಿ. ಎಸ್ ಸಿ, ವಿಜಾಪುರ.

೭ ಸ್ತ್ರೀ ವಿದ್ಯಾಭ್ಯಾಸ [illegible]

೮ ಭಾರತ ವರ್ಷದ ಇತಿಹಾಸ [illegible]

೯ [illegible] ಬಿ ಎಸ್ ಸಿ, ಮದ್ರಾಸು.

೧೦. [illegible] ವೆಂಕಟಾದ್ರಿ ಶಾಸ್ತ್ರಿ ಬೆಂಗಳೂರ

ಇವಲ್ಲದೆ ಅನೇಕ ವಿದ್ವಾಂಸರ ಲೇಖಗಳು [illegible] ವಿಷಯಗಳೂ, ಪ್ರಪಂಚ ಪರಿಚಯ, ಜೇನಹುಟ್ಟು ಬಿಡಿಸ ಡಿಗಳು [illegible]

ಇವರಲ್ಲಿ ಚಾಲುಕ್ಯ ವಿಕ್ರಮ [illegible] ಬಣ್ಣದ ಚಿತ್ರಗಳು ಇರುವವು ನೋಡಿ ಸಂತೋಷಪಡಿರಿ

ವಾರ್ಷಿಕ ವರ್ಗಣಿ ೫—೮—೦ ಮಾತ್ರ [illegible] ಕಳಿಸಲಾಗುವದಿಲ್ಲ

ಕಾರ್ಯದರ್ಶಿ, ಜಯ ಕರ್ನಾಟಕ, ಸಾಧನಕೇರಿ, ಧಾರವಾಡ.

ಮನೆ ಕಟ್ಟುವವರಿಗೆ ಸುಸಂಧಿಯು.



ಮೇಲಿಂತಸ್ಥಿಗೆ ಶೋಭೆ ಬರುವದಕ್ಕೆ ನಾನಾ ತರ ನಕ್ಷೀ ಕೊರೆಯಲ್ಪಟ್ಟ ಬೀಡಿನ ಕಟಾಂಜನಗಳೂ, ಹುಡಿಕೋಲು, ಬಿಳಂಗಳ, ಉಪ್ಪರಿಗೆ, ದಿವಾನಖಾನೆ ಮೊದಲಾದ ಸ್ಥಳಗಳಲ್ಲಿ ವಿಶ್ರಾಂತಿಗೊಳ್ಳುವದಕ್ಕೆ ತಕ್ಕ ಬಾಕುಗಳೂ ಕಿರ್ಲೋಸ್ಕರ ಕಾರಖಾನೆಯಲ್ಲಿ ಸಾಕಷ್ಟು ದರದಿಂದ ದೊರೆಯುತ್ತವೆ. ಪತ್ರ ಬರೆದು 'ಚಿ' ಕ್ಯಾಟಲಾಗು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ)

ತ್ವರೆ ಮಾಡಿರಿ! ತ್ವರೆ ಮಾಡಿರಿ !!

ವಿದ್ವಜ್ಜನಪರಿಶೋಧಿತ ಯಜುರ್ವೇದೀಯ

ಬ್ರಹ್ಮಕರ್ಮಸಮುಚ್ಚಯ

ಪುಸ್ತಕ.

ಬೌಧಾಯನೀಯ ಸ್ವರಸಹಿತ ಸನಿರ್ಣಯ ಗೃಹ್ಯಕರ್ಮಸಮುಚ್ಚಯವೆಂಬ ಪ್ರಯೋಗ ಪುಸ್ತಕವು ಬರುವ ವರ್ಷಪ್ರತಿಪದೆಗೆ (೧) ಸಂಪುಟವು ಮಾರಾಟಕ್ಕೆ ಸಿದ್ಧವಾಗುವದು. ಪೂರ್ಣ ಪುಸ್ತಕದ ಕ್ರಯ ರೂಪಾಯಿ ೧೩-೦-೦. ಬೇಕಾದವರು ೧-೧-೧೯೩೩ ರ ಒಳಗೆ ಎಡ್ವಾನ್ಸ ರೂಪಾಯಿ ೩-೦-೦ ಕಳಿಸಿ ಹೆಸರು ದಾಖಲ ಮಾಡಿಸಿದ್ದಲ್ಲಿ ಅಂಥವರಿಗೆ ಪುಸ್ತಕವು ೧೨ ರೂಪಾಯಿ ಕಿಮ್ಮತ್ತಿಗೆ ದೊರೆಯುವದು. ಗ್ರಾಹಕರು ತ್ವರೆ ಮಾಡಬೇಕು.

ಪತ್ತೆ:—ಗ್ರಂಥ ಪ್ರಚಾರಕ ಸಂಘ,

ಶ್ರೀ ಕ್ಷೇತ್ರ ಗೋಕರ್ಣ.

ಜಿಲ್ಲಾ:- ಉತ್ತರ ಕಾನಡಾ

ಬಹು] ಪ್ರಸಿದ್ಧ ಶಾಯಿ. [ಅಗ

ಬಣ್ಣ ಬಾಳಿಕೆಗಳಲ್ಲಿ ಪ್ರಸಿದ್ಧವಿಟ್ಟ ನೀಲಿ, ಕಪ್ಪು, ಕೆಂಪು, ಜಾಂಬಳಿ, ಪುಡಿ ಮತ್ತು ಗುಳಿಗೆಗಳು ೧೦೦ ಕ್ಕೆ ೦-೧೦-೦. ಒಂದೇ ಸತಿ ೧೦೦೦ ತೆಗೆದುಕೊಳ್ಳುವವರಿಗೆ ೫-೮-೦. ಮತ್ತು ೫೦೦ ಕ್ಕೆ ೨-೧೨-೦ ಟಪಾಲ ಖರ್ಚು ಮಾಫ

ಪತ್ತೆ:- ಎಸ್. ವ್ಹಿ. ಭಾಗ್ವತ.

ಪೋ ಹೆಗಡೆ, ಉತ್ತರ ಕಾನಡಾ.

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಮುಕ್ತಾ [illegible] ಬಹುದು

ಪುರುಷೋತ್ತಮ ಲಕ್ಷ್ಮಣಯ್ಯ ಕ್ಯಾಸಭಾಗ

ಹೆಗಡೇಕರ, ದುಕಾನ, ಕುಮಟಾ.

ಶುದ್ಧ ಖಾದಿ

ವಿಕ್ರಿಗೆ ತಯಾರ.

ಹೊನ್ನಾವರ ತಾಲೂಕಾ ಕಾಂಗ್ರೆಸ ಕಮೀಟಿಯಿಂದ ಕೈಮಗ್ಗದ ಕೈರಾಟಿಯ ಶುದ್ಧ ನೂಲಿನ ಖಾದಿ ಮಾರಾಟಕ್ಕೆ ಕಾಂಗ್ರೆಸ ಆಫೀಸಿನಲ್ಲಿ ಸಿಗುವದು.

ಹೊನ್ನಾವರ, } ಸೆಕ್ರೆಟರಿ,
೧೦-೧೨-೩೨ } ತಾ ಕಾ ಕಮಿಟಿ, ಹೊನ್ನಾವರ

ಮೂರ್ತಿಗಳು ಬೇಕೋ

ನಮ್ಮಲ್ಲಿ ಬಂಗಾರ, ಬೆಳ್ಳಿ, ಪಂಚಧಾತು, ಹಿತ್ತಾಳಿ ತಾಮ್ರ ದ ಕರೆಶಿಲೆಯ ಮೂರ್ತಿಗಳೂ, ಇದಲ್ಲದೆ ನಾನಾಪೀಠಗಳೂ, ಪ್ರಭಾವಳಿಗಳೂ, ಈಶ್ವರ ಮುಖವಟಿಗಳೂ, ನಾಗಾಭರಣಗಳೂ, ಕವಚಗಳೂ ಯಾವದೇ ತರದ ಪ್ರತಿಮೆಗಳೂ ನಮ್ಮಲ್ಲಿ ಯೋಗ್ಯ ದರಕ್ಕೆ ವ ಯೋಗ್ಯ ಹೊತ್ತಿಗೆ ಮಾಡಿ ಕೊಡಲ್ಪಡುವವು ಬೇಕಾದವರು ಪತ್ರವ್ಯವಹಾರ ಮಾಡಿ ವಿವರವನ್ನು ಬಂದು ನಜರಿಗೆ ತಿಳಕೊಳ್ಳಬಹುದು

ಪತ್ತೆ—ನಾರಾಯಣ ಹುವಯ್ಯ ಶೇಟ

ಗುಡಗಾರ, ಗುಡಿಗಲ್ಲಿ, ಕುಮಟಾ

(ಉ. ಕಾನಡಾ

Printed and Published by Krishnarao Keshav Shenvi (Editor) at his Star of Kanara Press, Kumta

Reg. No. B 1270 | Thursday, 14th June 1923.

ವರ್ಷ ೭. | ಸಂಚಿಕೆ ೩೫.

ಕಾನಡಾವೃತ್ತ.

THE KANARA NEWS.

ಪತ್ರದ ವರ್ಗಣಿ:-

ಕುಮಟೆಯಲ್ಲಿ ಆಗಾವು ರೂಪಾಯಿ 2-4-0.

ಮನಿಯಾರ್ಡರಿಯಿಂದ ರೂ. 3-0-0

ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ವ್ಯಾಖ್ಯಾನ(೧೫ ಎಮ್‌ಅಗಲ) ೫ ಸಾಲುಗಳ ವರೆಗೆ ರೂ. 1-0-0.

ಅನಂತರ, ಪ್ರತಿ ಸಾಲಿಗೆ 0-2-0.

ಹೆಚ್ಚಿನ ಸಾಲು ಎಷ್ಟು ಹೊತ್ತು ಬರುವವೋ ಆ ಮೂಲದಿಂದ ಅಪ್ಪು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷಮ ತಿಳಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖ ೧೪ ಮಾಹೆ ಜೂನ ಸನ್ ೧೯೨೩ ನೇ ಇಸವಿ)—

हिंदुस्थानातील रहिवाशांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानातील लोकांस ज्यास्त फायदेशीर आहे.

द्राक्षासव- { दीड रत्तलची किंमत २ रुपये;

रामबाण औषधें

सर्दि घालविणारें,
मुक बाढविणारें,
शौच्यास साफ करणारें,
झोप आणणारें,
शक्ति देणारें,
तेजस्वीपणा आणणारें,

पिण्यास रुचिकर.

क्याटलाग मागवा,

झंडु फार्मास्युटिकल वर्क्स लिमिटेड,
मुंबई नं. १३

CLAXO:- FRESH STOCK. NEW BRAND. a *food for infants and invalids.*

Kalmegh :- *Well-tried remedy in Liver complaints especially of children.*

Syrup of Vasaka :- *Highly efficacious in cold, cough, crough and bronchitis.*

Besides we have in stock other patent medicines, Thermometres, Glycerine Syringes etc.,

Orders will be executed by V. P. P.

The New Emporium,
Honavar. (N. Kanara.)

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ವಿಷಯಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಅಗ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ.

(೧) ಗ್ರೀಸ ದೇಶದ ಗಾಂಧಿ ೧ನೇ ಭಾಗ ಬೆಲೆ ೦-೬-೦ (೨) ಸದರ ೨ನೇ ಭಾಗ ೦-೫-೦ (೩) ಸ್ವಾತಂತ್ರ್ಯಸಾಧನೆ ೦-೫-೦ (೪) ಗುರು-ಹಿರಿಯರೂ, ಬಂಧುಭಗಿನಿಯರೂ ೦-೪-೦.

ವಾ. ಅ. ಪೊದ್ದಾರ,
ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ.

ಸಾಧನ.

ಧಾರ್ಮಿಕ, ನೈತಿಕ, ರಾಜಕೀಯ ವಿಷಯಗಳನ್ನೂ, ಸುಂದರವಾದ ನಾಟಕ ಕಾದಂಬರಿಗಳನ್ನೂ ಒಳಗೊಂಡಿರುವ ಸಾಧನ ಮಾಸಪತ್ರಿಕೆಯು ಬರುವ ಪ್ರತಿ ತಿಂಗಳಲ್ಲಿ ತಪ್ಪದೆ ಪ್ರಕಟವಾಗುವದು. ವಾರ್ಷಿಕ ವರ್ಗಣಿ ಅಂಚೆವೆಚ್ಚ ಸೇರಿ ೨ ರೂಪಾಯಿ. ಪುಟ ೩೨. ಚಂದಾದಾರರಾಗಲಿಚ್ಛಿಸುವವರು ಕೆಳಗಿನ ಪತ್ತೆಗೆ ಕಾಗದ ಬರೆಯತಕ್ಕದ್ದು.

ಗಣಪತಿ ಶಂಕರ ಭಟ್ಟ,
ಸಂಪಾದಕ— 'ಸಾಧನಪತ್ರಿಕಾ,'
ಪೋಸ್ಟ ಕಶೀ. (ಜಿ. ಕಾರವಾರ.)

ಸವಲತು.

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಗಳಿಂದ ಸಣ್ಣ-ದೊಡ್ಡ ಪುಸ್ತಕಗಳೂ, ಕೆಟಲಾಗುಗಳೂ, ಜಾಹೀರಾತುಗಳೂ, ಲಗ್ನಪತ್ರಿಕೆಗಳೂ ಮ ಇತರೇ ಕಾಗದ-ಪತ್ರಗಳೂ, ಬಹಳೇ ಸವಲತ್ತಿಯ ದರಗಳಿಂದ ಬೇಕಾದ ಬಣ್ಣಗಳಿಂದ ಸ್ವಚ್ಛವಾಗಿಯೂ, ಅಂದವಾಗಿಯೂ ಛಾಪಿಸಿ ಕೊಡಲ್ಪಡುವವು. ಬೇಕಾದವರು ಕೆಳಗಿನ ಪತ್ತೆಯ ಮೇಲೆ ದರವಾರ ತಿಳುಕೊಳ್ಳಬಹುದು.

ಪತ್ತೆ:— **ಕೃಷ್ಣಾ ಕೇಶವ ಶಾನಭಾಗ,**
ಮಾಲಕ,
ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ.

ಎಲ್ಲ ತರದ ಜ್ವರಗಳಮೇಲೆ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ, ಶೈತ್ಯ, ಜಂಗಲಿ, ಅಥವಾ ದೂಷಿತ ಹವೆಯಿಂದ ಬರುವ ಸಾದಾ ವಿಷಾರೀ ಅಥವಾ ಇತರ ಜ್ವರಗಳೂ, ಇನ್ಫ್ಲುಎಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನಾಯ್ನದ ದುಷ್ಪರಿಣಾಮರಹಿತ ಕೇವಲ ವನಸ್ಪತಿಯ ಈ ಮಸ್ತು ಸೇವಿಸಿದರೆ ಅಶಕ್ತತೆಯಾಗದೆ, ಬೇಗನೆ ಜ್ವರ ಇಳಿಯುತ್ತದೆ. ಹಾಗು ರೋಗಿಯು ಶರಿತ ವಾಸಿಯಾಗುತ್ತಾನೆ.

೭ ಔಂಸ ಬಾಟ್ಲಿ ಕಿಂಮತ ರೂ. ೧-೦-೦.

ಇದರ ಹೊರತು ಇನ್ನೂ ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ, ಉಚ್ಚ ಪ್ರತಿಯ ಕೊಲನ ವಾಟರ, ಲ ಂಡರ ಇತ್ಯಾದಿ ಸಾಮಗ್ರಿಗಳು ಅಲೆಂಬಿಕದ ಕಾರಖಾನೆಯಲ್ಲಿ ತಯಾರಾಗುತ್ತ . ಮರಾಠಿ ಕೆಟಲಾಗು ತರಿಸಿರಿ.

ಅಲೆಂಬಿಕ್ ಕೆಮಿಕಲ್ ವರ್ಕ್ಸ,
ಕಂಪನಿ, ಲಿಮಿಟೆಡ್.
ನಂ. ೫೦, ಪ್ರಿನ್ಸೆಸ್‌ಸ್ಟ್ರೀಟ, ಮುಂಬಯಿ.

अलेंबिक केमिकल वर्क्स कं॰ लि॰
नं. ५० प्रिन्सेस स्ट्रीट मुंबई.

ಶುದ್ಧ ಖದ್ದರ್ ರೇಶ್ಮಿ ಮಡಿಗಳು.

ಸುಲಭ ಕ್ರಯಕ್ಕೆ ಖಾತ್ರಿಯಾದ ಎಲ್ಲಾ ರಂಗುಗಳಲ್ಲಿಯೂ ಈ ಕೆಳಗೆ ಬರೆದ ಕ್ರಯಕ್ಕೆ ದೊರೆಯುವದು.

೧೮ ಮೊಳ ಉದ್ದ ೨॥ ಅಗಲ ರೂ. ೨೩ ರಿಂದ ೨೫ ವರೆಗೆ
೧೬ „ „ ೨॥ „ „ ೨೦ — ೩೦ „
೮ „ „ ೨॥ „ „ ೯ — ೧೫ „
೬ „ „ ೨॥ „ „ ೭ — ೧೧ „

S.U.N. & CO BENARES CITY

ಅಂಗಿ ಬಟ್ಟೆಗಳು ೧೮ ಮೊಳ × ೨ ಮೊಳ ರೂಪಾಯಿ ೧೮ ರಿಂದ ೩೦ ವರೆಗೆ. ಕೋಟು ೧೨ ಮೊಳ × ೧।। ಮೊಳ ಅಗಲ ರೂಪಾಯಿ ೧೦ ರಿಂದ ೧೫ ವರೆಗೆ. ಜೀನ್‌ಖಾನ್ ೧೪ ಮೊಳ × ೨ ಮೊಳ ರೂ. ೨೪ ರಿಂದ ೩೫ ವರೆಗೆ. ಇವುಗಳಲ್ಲದೆ ಕಾಶೀ ಪೀತಾಂಬರ, ಕಾಶ್ಮೀರ ಶಾಲು, ರುದ್ರಾಕ್ಷಿ, ಜಾಗಂಟೆ, ತಾಳ, ಪನ್ನೀರ ದಾನಿ, ಆಟದ ಸಾಮಾನುಗಳು, ದೇವರ ಮತ್ತು ಗಾಂಧಿ ಮುಂತಾದವರ ಪಟಗೆಳಿರುವ ಉಂಗುರಗಳ ಮತ್ತು ಇನ್ನೂ ಅನೇಕ ಸಾಮಾನುಗಳ ಕ್ಯಾಟಲಾಗ್ ಇನಾಂ.

ವಿಳಾಸ:— ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. (ರಿಜಿಸ್ಟರ್

ಮೃದುವಾದ ಗುಂಗುರು ಗುಂಗುರಾಗಿರುವ ನೀಲಿಮೆಯಿಂದ ನಿಬಿಡವಾದ ಕೇ ಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಅಂತಹ ಕೇಶರಾಶಿಯನ್ನು ... ರಿಗೆ ಒದಗಿಸಿ ಕೊಡತಕ್ಕ ಉಪಕರಣವಾವದರೋ.

ಕಾಮಿನಿಯಾ ಆಯಿಲ್. (ರಿಜಿಸ್ಟರ್.

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿರದೊ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅ... ಅಗತ್ಯದ ಸಹಕಾರಿಯಾಗಿರುತ್ತದೆ ಈ ಆಯಿಲ್ ಹಾಕಿಕೊಳ್ಳುತ್ತಲೇ ಮಸ್ತಿಷ್ಕದ... ನೆಯು ತಣ್ಣಗಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ... ಬುಡದ ಹೊಟ್ಟಿನ ಬಗೆ ಎಂದಿಗೂ ಉದುರಿ ಬಿದ್ದು ಹೋಗಲಾರವು, ಅವರೆ, ಅವು... ವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕ... ಆಗಿರುವುದು

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ಕಳೆಯ... ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ " ಕಾಮಿನಿಯಾ ಆಯಿ... ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯು ದೆಸೆಯಿಂದ ನಮಗೆ ಮೈಸೂ... ಪ್ರದರ್ಶನದಲ್ಲಿ ಸರ್ಟಿಫಿಕೇಟ ಒಫ್ ಮೆರಿಟ " ಅಥವಾ ಯೋಗ್ಯತಾಪತ್ರವೂ, ... ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ — ಸೀಸೆಗೆ ರೂಪಾಯಿ 1 0 0, ಸೀಸೆ 3ಕ್ಕೆ ರೂಪಾಯಿ 2 10 0 ಟಪಾಲ 0 14-0.

ಅತಿ ಮನೋಹರವಾದ ಸುವಾಸಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಆತ್ಯುತ್ಕೃಷ್ಟವು ಚನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ಧಾಸಿದ ವಾ ಇದರಲ್ಲಿ ಸುರಿಯ (ಆಲ್ಕೊಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿ ಪರೆ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ-ದಿಲ್ ಭಿನ್ನಗಂಧಗಳು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊಳ್ಳುವುದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0, 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0 ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2 0 0 ಅಂಚೆಯ ವೆಚ್ಚ ಬೇರೆ 0-
ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0

Address - **The Anglo Indian Drug & Chemical C**
16 Market, **BOMBAY.**

ಖರೇ ಮಾತು ! ಹಾಜ ಕಲ್ಯು !! ತ್ವರೆ ಗೈಯಿರಿ

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳೆಸಿ, ಪುರುಷರಿಗೆ ಸ್ತ್ರೀ ವಿಷಯವಾಗಿಯೂ, ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷ ಯುಕ್ತ ಶಕ್ತಿಯನ್ನು ಉಂಟುಮಾಡಿ, ದಿನೇ ದಿನೇ ಶರೀರದ ಜರಠತನವನ್ನೂ ರೋಗಗಳನ್ನೂ ದೂರಪಡಿಸಿ ಆಯುರಾ ರೋಗ್ಯವನ್ನೂ, ರತಿಯಲ್ಲಿ ಹೆಗ್ಗಳವಾದ ಕುತೂಹಲವನ್ನು ತೋರಿಸುವ ಕ್ರೀಡಾ ಶಕ್ತಿಯ ಉತ್ಸಾಹವನ್ನೂ ಸಂ ಭೋಗದಲ್ಲಿ ತೃಪ್ತಿಯನ್ನೂ, ಸೌಖ್ಯವನ್ನೂ ಕೊಟ್ಟು, ಮನಸ್ಸಿನ ಧೃಢತೆಯನ್ನೂ ಯೌವ್ವನದ ಕಳೆಯನ್ನೂ ದೊರ ಕಿಸಿ ಮುದಿತನವನ್ನುನೀಗಿ ಬಲವನ್ನು ಉಂಟುಮಾಡುವದು ಮೃತ್ಯುವನ್ನು ನಿರಾಕರಿಸಿ, ಬಳಿಬಗೆಯ ರೋಗಗಳ ನ್ನು ನಾಶಮಾಡುವದು ಜೀರ್ಣಜ್ವರ, ಮಂದಾಗ್ನಿ, ಶುಕ್ಲಸ್ರಾವ, ಆಮಶಂಕೆ ಇವುಗಳನ್ನು ಬಿಡದೇ ನಾಶಮಾಡು ವದು ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧಮಾರ್ಗಿಯೂ, ದೇಶಕಾಲಗಳಿಂದಲೂ, ಆಹಾರಾಂಗಗಳಿಂದಲೂ, ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡಿಸುವ ಬಲತ್ಕಾರದ ಹಸ್ತದೋಷಗಳಿಂದಲೂ ಅತಿವಿಷಯೋಪಭೋಗದಿಂದಲೂ, ಇಂದ್ರಿಯ ಶಿಥಿಲವೂ, ತೆಳುವೂ, ನಿಸ್ತೇಜವೂ ಆಗಿ ಯತ್ನವಿಲ್ಲದೆ ಸ್ಖಲನವಾಗು ವದು ಒಂದೊಂದು ಸಾರಿ ಮೂತ್ರದಲ್ಲಿಯೂ ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣ ತೆ, ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈಬಿಸುವು, ನಿದ್ರೆಯಲ್ಲಿ ಭೀಕ ರವಾದ ಸ್ವಪ್ನ ಅರಿವು, ಮರುವು ಮತ್ತು ಶರೀರದ ಹಾಗೂ ಮನಸ್ಸಿನ ಚೇತನ ಕುಂದಿ ಹೋಗುವದು ಇವೆಲ್ಲವು ಗಳಮೇಲೆ ರಾಮಬಾಣದಂತಿರುವದು. ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ. ೧॥ ನಂ ೧ ನಂ ೨ ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಅಂತು ೬೦ಗುಳಿಗೆಗಳುಳ್ಳ ಸೀಸೆಗಳಿಗೆ ರೂ. ೩ ಪೋಸ್ಟೇಜ ಬೇರೆ

ಎಮ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ,
ಕರ್ಕಿ (ಕೆನರಾ)

ರಾಗದ ಪೆಟ್ಟಿಗೆಗಳು

ತಬಲೆ ಜೋಡಿ ಇತ್ಯಾದಿ ಗಾ... ಸಾಮಾನು.



೧ ರಾಗದ ಕೈಪೆಟ್ಟಿಗೆ ಕಿಂ ೩೦, ೪೦, ೪೫, ...
೨ „ ಕಾಲು ಪೆಟಿಗೆ ಕಿಂ ೬೫, ೭೫, ೧೪...
೩ ತಬಲೆ ಜೋಡಿ ಕಿಂ ೧೩, ೧೫, ೧೮ ...
೪ ಹಾರ್ಮೋನಿಯಮ ಗ್ರ್ಯಾಂಡ ಕಿಂ ೧, ತಬ... ಡ ಕಿಂ ೧೨ ಆ

ವಿಶೇಷ ಮಾಹಿತಿ ಬೇಕಾದರೆ ನಮ್ಮ ಕ್ಯಾಟಲಾಗ... ತ ಕೊಡುವೆವು

ಪತ್ರವ್ಯವಹಾರ ಮರಾಠಿಯಿಂದ ಇ... ಗ್ರಜಿಯಿಂದ ಮಾಡತಕ್ಕದ್ದು

ಪತ್ತೆ – **ಗೋಪಾಳ ಸಖಾರಾಮ... ಕಂಪನಿ, ನಂ...**
ಕಾಳಬಾದೇವಿ ರೋಡ, ಮುಂ...

"ಲಿಂಗಾಯತರ ಮೇಲೆ ಪರಮಾತ್ಮನ ಕೃಪೆ."

ಗವ್ಹರ್ನರರ ದರ್ಶನ ಮಿ॥ ಹೀಗರ ಪ್ರಯತ್ನ

ಮುಂಬಯಿ ಇಲಾ ಖಾದಿಪತ್ರಿಕೆಗಳ ಗೀರಸಪ್ಪೆ ಜೋಗು ನೋಡಿಕೊಂಡ ತಿರುಗಿ ಬರುವಾಗ ಮೊದಲೇ ನಿಶ್ಚಯ ವಾದಂತೆ ತಾರೀಖು ೩೦ ನೇ ೧೯೨೩ ನೇ ಯ ೧೦ ಘಂಟೆ ಸಮಯಕ್ಕೆ ಸಿದ್ದಾಪುರ ತಾಲೂಕಿನ ವೀರಶೈವ ಸಮಾಜದ ಪರಿಯಿಂದ ಕೊಡಲಿಕ್ಕೆ ಬಂದ ಮಾನಪತ್ರವನ್ನು ಸ್ವೀಕರಿಸುವರೆ ತೆರೆದ ತೋರಣಗಳಿಂದಲೂ ಪತಾಕೆಗಳಿಂದಲೂ ಶೋಭಿತವಾದ ಮಂಟಪಕ್ಕೆ ಆರ ಕತೇರ ವ ಂವೆ ತಮ್ಮ ವಾಹನದಿಂದಿಳಿದು ಮಾವ ಶೇದಾರ ಮಿ॥ ಸ ಬ್ರ್ಯಾನ ಕಲೆಕ್ಟರ ಇವರಿಂದ ವೀರಶೈವ ಸಮಾಜದ ಪ್ರಮುಖ ಜನರ ಪರಿಚಯ ಮಾಡಿಕೊಂಡು ರಮ್ಯವಾಗಿ ರಚಿಸಿದ ಸಿಂಹಾಸನವನ್ನಲಂಕರಿಸಿದರು ಆ ನಂತರ ಮಿ॥ ಸಜ್ಜೂರ ಸದಾಶಿವ ಗೌಡ ಪಟೇಲ, ನಾಶೀಲ ಇವರು ಮಾನಪತ್ರವನ್ನು ಓದಿದರು.

ನೇಕ ನಾಮದಾರ ಮುಂಬಯಿ ಗವ್ಹರ್ನರ ದೊರೆಗಳ ಸನ್ನಿಧಾನಕ್ಕೆ

ಸಿದ್ದಾಪುರ ತಾಲೂಕಿನ ಲಿಂಗಾಯತ ಸಮಾಜದವರಾದ ನಮ್ಮ ಮೇಲೆ ಪರಮಾತ್ಮನ ಕೃಪೆಯಾಗಿದೆ ಇಂದು ಬ್ರಿಟಿಶ ಸರಕಾರಕ್ಕೆ ನಮ್ಮ ರಾಜನಿಷ್ಠೆಯನ್ನು ಪ್ರದರ್ಶಿಸಲಿಕ್ಕೂ ಬಾದಶಹರ ಪ್ರತಿನಿಧಿಗಳಿಗೆ ನಮ್ಮ ಅಂತಃಕರಣ ಪೂರ್ವಕ ಕೃತಜ್ಞತೆಯನ್ನು ಪೂರ್ತ ವ್ಯಕ್ತಪಡಿಸಲಿಕ್ಕೂ ಅನಪೇಕ್ಷಿತ ಸುಯೋಗವು ನಮಗೆ ಪ್ರಾಪ್ತವಾಗಿದೆ

(೧) ಈ ತಾಲೂಕಿನ ಒಟ್ಟು ಜನಸಂಖ್ಯೆಯು ೩೩ ಸಾವಿರ ಈ ಪೈಕಿ ನಮ್ಮ ಸಮಾಜದವರ ಸಂಖ್ಯೆಯು ಬರೇ ೬೦೦ ಇವೆ ಈ ತಾಲೂಕಿನಲ್ಲಿ ೨೦೩ ಹಳ್ಳಿಗಳಿವೆ, ೧೩ ಹಳ್ಳಿಗಳಲ್ಲಿ ಮಾತ್ರ ಲಿಂಗಾಯತರಿರುವರು. ನಾವು ಅಲ್ಪ ಸಂಖ್ಯಾಕರಿದ್ದರೂ, ಯಾವಾಗಲೂ ರಾಜನಿಷ್ಠರಿದ್ದೇವೆ ಯುದ್ಧಕಾಲದಲ್ಲಿಯೂ, ಶಾಂತಿ ಕಾಲದಲ್ಲಿಯೂ, ಚಲೋ ಸೇವೆಯನ್ನು ನಡಿಸಿದ್ದೇವೆ ಇದನ್ನು ತಿಳಿಸಲು ನಮಗೆ ಆತ್ಯಾನಂದವಾಗುತ್ತದೆ 'ರಾಜಾ ಪ್ರತ್ಯಕ್ಷ ದೇವತಾ' ಎಂಬ ಶಾಸ್ತ್ರ ವಚನವನ್ನು ಧರಿಸಿ, ಕರ್ತವ್ಯವನ್ನು ಅರುಗಿಸಿದವು ಕರ್ತವ್ಯವೆಂತಲೇ ನಾವು ಸೇವೆಯನ್ನು ಮಾಡಿದೆವು ನಮಗೆ ಸ್ವತಃ ಎಷ್ಟು ಗೈರಸೋಯಿಯಾದರೂ ಅದನ್ನು ಲಕ್ಷಿಸದೆ, ಯಾವಾಗಲೂ ಸರಕಾರಕ್ಕೆ ನಮ್ಮ ಸಮಾಜವು ಸಹಾಯ ಮಾಡುವದೆಂದು ನಾವು ತಮ್ಮ ವಿದ್ಯಮಾನ ಬಾದಶಹರಿಗೆ ಆಶ್ವಾಸನವನ್ನೀಯುತ್ತೇವೆ ಅದನ್ನು ನಾವು ಬಾದಶಹರಿಗೆ ದಯಮಾಡಿ ತಿಳಿಸಬೇಕೆಂದು ನಮ್ಮ ಪ್ರಾರ್ಥನೆ ಇದೆ

(೨) ನಮಗೇನಾದರೂ ಉಪಕಾರ ಮಾಡಿ ಹೇಳುವ ಸಮಯವು ಇದಲ್ಲವೆಂದು ನಾವು ಅರಿತಿರುವೆವು ತಾವು ಅಧಿಕಾರನಿವೃತ್ತರಾಗುವ ಸಮಯದಲ್ಲಿ ನಮ್ಮ ತಾಲೂಕಿಗೆ ದಯಮಾಡಿಸಿರುವಿರಿ, ಈ ದರ್ಶನದ ಕುರುಹೆಂದು, ನಮ್ಮ ರಾಜನಿಷ್ಠೆಯ ಪ್ರಶಂಸೆಯ ದ್ಯೋತಕವೆಂದು ಈ ತಾಲೂಕಿನ ಲಿಂಗಾಯತ ವಿದ್ಯಾರ್ಥಿಗಳಿಗೆ ಶಾಲೆಗಳಲ್ಲಿಯೂ, ಕಾಲೇಜುಗಳಲ್ಲಿಯೂ ಫೀ ಪಡೆಯದೆ, ಮಾಫಿಯಿಂದ ಕಲಿಸತಕ್ಕದಾಗಿ ನಮ್ಮ ಪ್ರಾರ್ಥನೆಯಿದೆ. ಇದೇನೂ ದೊಡ್ಡದಾಗಲಿಕ್ಕಿಲ್ಲ ಆದರೆ, ಈ ವರಪ್ರಧಾನದಿಂದ ಸಮಾಜಕ್ಕೆ ಉತ್ತೇಜನವೂ, ಪ್ರಶಂಸೆಯೂ ಒಮ್ಮೆಲೇ ದೊರಕುವವು

ಸಿದ್ದಾಪುರ. ತಾ ೩೦ ೫-೧೯೨೩ ನೇ ಇಸವಿ.

ನೇಕ ನಾಮದಾರ ಗವ್ಹರ್ನರ

ದೊರೆಗಳ ರಾಜನಿಷ್ಠ ಹಾಗು

ನಮ್ರ ಸೇವಕರು

ಸದಾಶಿವ ಎಸ್ ಪಟೇಲ, ಸಿ ಎಸ್ ಹೆಗ್ಗೋಡಮನಿ, ಎಸ್ ಟಿ ಕುಸಾಳೆ, ಎಮ್ ಎಮ್ ಕೋಲಸಿರ್ಸಿ, ವಿ ಬಿ ಹೊಸೂರ, ಡಿ ಎನ್ ಕೊಸೂರ, ಪ್ರಿ ಜಿ ದೊಡ್ಡಮನಿ

ಸಿದ್ದಾಪುರದ ವೀರಶೈವ ಸಮಾಜದವರು ಬ್ರಿಟಿಶ ಸರಕಾರದ ಸಂಗಡ ರಾಜನಿಷ್ಠೆಯಿಂದ ವರ್ತಿಸಿ ಬಜಾಯಿಸಿದ ಕೆಲಸಗಳನ್ನು ವಿವರಿಸಿ ಈ ಸಮಾಜದ ಏಳಿಗೆಯ ಕಡೆಗೆ ತಮ್ಮ ಲಕ್ಷ್ಯ ಯಾವಾಗಲೂ ಇರುತ್ತದೆಂಬ ಅಭಿಪ್ರಾಯದ ಭಾಷಣ ಮಾಡಿ ಸಮಾಜದವರಿಂದ ಅರ್ಪಿಸಿದ ಹಾರ ತುರಾಯಿಗಳನ್ನು ಸ್ವೀಕರಿಸಿ, ಮುಂದೆ ತಮ್ಮ ಪ್ರಯಾಣವನ್ನು ಬೆಳಸಿದರು

ಗವ್ಹರ್ನರ ಸಾಹೇಬರವರು ಮಾಡಿದ ಇಂಗ್ಲಿಷ ಭಾಷಣದ ಕನ್ನಡ ಸಾರಾಂಶ —

ಗೇರಸಪ್ಪೆ ಜೋಗು ನೋಡುವರೆ ನಾವು ಬಹಳ ಸಾತಿಯಿಂದ ಬಂದವರಾಗಿದ್ದು, ನೀವು ಮಾನಪತ್ರ ಅರ್ಪಣ ಮಾಡುವ ಪ್ರಸಂಗ ಬಂದೀತೆಂಬುದಾಗಲಿ, ನಾವು ತಿಳಿದಿರಲಿಲ್ಲಾ ಆದರೆ ನಿಮ್ಮ ಕಲೆಕ್ಟರ ಮಿ। ಹೀಗ ಇವರು ನೀವು ಬ್ರಿಟಿಶ ಸರಕಾರದ ರಾಜನಿಷ್ಠೆಯುಳ್ಳ ಪ್ರಜೆಗಳಿದ್ದೀರೆಂತ ತಿಳಿಸಿದ್ದರಿಂದ ನಿಮ್ಮ ಸಮಾಜದ ತರ್ಫೆಯಿಂದ ಮಾನಪತ್ರ ಸ್ವೀಕರಿಸುವರೆ ಒಪ್ಪಿಕೊಂಡಿದೆವು ನಿಮ್ಮ ಮಾನಪತ್ರದಲ್ಲಿ ನಮೂದಿಸಿದಂತೆ ನೀವು ಬ್ರಿಟಿಶ ಸರಕಾರದ ಅಭಿಮಾನವುಳ್ಳ ರಾಜನಿಷ್ಠ ಪ್ರಜೆಗಳೆಂದು ನಮಗೆ ತುಂಬಾ ಸಂತೋಷವಾಗಿದೆ ನಾವು ಹಿಂದುಸ್ಥಾನಕ್ಕೆ ಬಂದ ದಿವಸದಿಂದ ನಿಮ್ಮ ಸಮಾಜವನ್ನು ಬಲ್ಲೆವು ಈ ಸಮಾಜವು ಯಾವಾಗಲೂ ರಾಜನಿಷ್ಠೆಯುಳ್ಳದ್ದೆಂದು ಮನಗಂಡಿರುವೆವು, ಮತ್ತು ಈ ಸಮಾಜದ ಅಭಿವೃದ್ಧಿ ಕುರಿತು ಸಾಧ್ಯವಿದ್ದ ಮಟ್ಟಿಗೆ ತಮ್ಮ ಸರಕಾರವು ಸಹಾಯ ಮಾಡಿರುತ್ತದೆ, ಮತ್ತು ಮಾಡುತ್ತ ಇದೆ. ಹಿಂದಕ್ಕೆ ನಡೆದ ಈ ತಾಲೂಕಿನ ಪಾಟೀಲ ಜನರ ಸಂಪಿನಲ್ಲಿ ನಿಮ್ಮ ಸಮಾಜದವರು ಸೇರದೇ ಬಹಳ ಸರಕಾರಿ ಕೆಲಸಕ್ಕೆ ತೊಂದರೆ ಬಾರದಂತೆ ಸ್ವಂತ ಗೈರಸೋಯಿ ಕಡೆಗೆ ಲಕ್ಷ ಕೊಡದೆ ಸ್ವಾರ್ಥತ್ಯಾಗ ಮಾಡಿ, ಖಾಲಿ ಬಿದ್ದ ಪಟೇಲರ ಚಾರ್ಜ ವಹಿಸಿಕೊಂಡು ಕೆಲಸ ಮಾಡಲಿಕ್ಕೆ ತಯಾರಾಗಿ ಹಾಜರಾಗಿಯೇ ಮುಂದೆ ಬಂದ ಸಂಗತಿಯು ನಮಗೆ ತಿಳಿದು ನಿಮ್ಮ ವಿಷಯವಾಗಿ ತುಂಬಾ ಅಭಿಮಾನವುಂಟಾಗಿದೆ ಇತ್ತಲಾಗಿ ನಡೆದ ಅಸಹಕಾರಿತೆಯ ಚಳವಳಿಯಲ್ಲಿ ನಿಮ್ಮ ಸಮಾಜವು ಸೇರದೆ, ಸಹಕಾರಿಗಳಾಗಿರುವ ಸಂಗತಿ ನಾವು ಬಲ್ಲೆವು. ನಿಮ್ಮ ಸಮಾಜದ ಅಭಿವೃದ್ಧಿ ಕಡೆಗೆ ಸರಕಾರವು ಯಾವಾಗಲೂ ಲಕ್ಷ್ಯ ಕೊಡುತ್ತ ಇರುತ್ತದೆಂಬದನ್ನು ನೀವು ಖಾತ್ರಿಯಾಗಿ ತಿಳಿಯಿರಿ ನೀವು ಓದಿದ ಮಾನಪತ್ರದಲ್ಲಿ ಈ ತಾಲೂಕಿನ ಲಿಂಗಾಯತ ವಿದ್ಯಾರ್ಥಿಗಳ ಬಗ್ಗೆ ಸ್ಕೂಲ ಮತ್ತು ಕಾಲೇಜ ಫೀ ಮಾಫಿ ಆಗಬೇಕೆಂದು ಮಾಡಿಕೊಂಡ ವಿನಂತಿಯು ವ್ಯಕ್ತಿವಿಷಯವಾದದ್ದು ಇರುತ್ತದೆ ಆದಾಗ್ಯೂ ಈ ಕುರಿತು ವಿಚಾರ ಮಾಡುತ್ತೇವೆ ಪ್ರೇಕ್ಷಕ

—o*o—

ಪ್ರಾಥಮಿಕ ಶಿಕ್ಷಕರ ಸಮ್ಮೇಲನ.

ಪ್ರಾಥಮಿಕ ಶಿಕ್ಷಕರ ಸಮ್ಮೇಲನದ ಚತುರ್ಥ ಮಹಾ ಸಭೆಯು ಕಳೆದ ಮೇ ತಾರೀಖು ೧೯-೫-೧೯೨೩ ನೇಗೆ ಅಂಕೋಲೆಯಲ್ಲಿ ಎವ್ಹಿಡ್ ಇಂಗ್ಲಿಷ ಶಾಲೆಯಲ್ಲಿ ನೆರೆದಿತ್ತು ಅಧ್ಯಕ್ಷಸ್ಥಾನವನ್ನು ರಾ। ವಿ ವಿ ಕಲ್ಯಾಣಪೂರಕರ ಬಿ ಎ, ಎಲ್ ಎಲ್ ಬಿ ರಿಟಾಯರ್ಡ ಎಸಿಸ್ಟಂಟ ಜಡ್ಜರವರು ಅಲಂಕರಿಸಿದ್ದರು. ಈ ಮಹಾ ಸಭೆಯಲ್ಲಿ ಪಾಸಾದ ಠರಾವುಗಳು —

(೧) ನಮ್ಮ ಪರಮಪೂಜ್ಯ ಸಾರ್ವಭೌಮರಾದ ಪಂಚಮ ಜಾರ್ಜ ಹಾಗೂ ರಾಣಿಗಳ ಬಗ್ಗೆ ಈ ಸಭೆಯು ರಾಜನಿಷ್ಠೆಯನ್ನು ವ್ಯಕ್ತಗೊಳಿಸುತ್ತದೆ.

(೨) ನಮ್ಮ ಜಿಲ್ಲಾ ಸಂಘದ ಎರಡನೇ ಮಹಾ ಸಭೆಯ ಅಧ್ಯಕ್ಷರೂ, ಸಾರ್ವಜನಿಕ ಕೆಲಸಗಳ ಪುರಸ್ಕರ್ತರೂ, ಉದಾರ ಮತವಾದಿಗಳೂ, ಶಿಕ್ಷಣಾಭಿಮಾನಿಗಳೂ ಆದ ಕೈಲಾಸವಾಸಿ ಶ್ರೀಯುತ ವಿ ಎ. ಪಾಪ, ಬಿ ಎ ಎಲ್ ಎಲ್ ಬಿ, ರಿಟಾಯರ್ಡ I ಕ್ಲಾಸ ಸಬಜಜ್ಜರವರ ಆಕಸ್ಮಿಕ ನಿಧನದ ಬಗ್ಗೆ ಈ ಸಭೆಗೆ ಕಡು ವಿಷಾದವಾಗಿದೆ

(೩) ನಮ್ಮ ಇಲಾಖಾ ಲೆಜಿಸ್ಲೇಟಿವ್ಹ ಕೌನ್ಸಿಲದ ಅಧ್ಯಕ್ಷರೂ, ಶಿಕ್ಷಣಾಭಿಮಾನಿಗಳೂ, ಆಂಗ್ಲ ಭಾಷಾವಿಶಾರದರೂ ಆದ ನಾರಾಯಣ ಚಂದಾವರಕರರವರು ಆಕಸ್ಮಾತ್ತಾಗಿ ಕೈಲಾಸವಾಸಿಯಾದ ಬಗ್ಗೆ ಈ ಸಭೆಗೆ ಕಡು ದುಃಖವೆನಿಸುತ್ತದೆ

(೪) ಹಿಂದೆ ನಾ। ಸಾಠೆ ಹಾಗೂ ಪರಾಂಜಪೆಯವರು ಸೂಚಿಸಿದ ಸ್ಕೇಲನ್ನಾದರೂ ಇನ್ನೂ ಅಮಲಿನಲ್ಲಿ ತರದ ಬಗ್ಗೆ ಈ ಸಭೆಗೆ ಕಡು ವಿಷಾದವಾಗಿರುವದಲ್ಲದೆ, ಹೊಸತನ್ನಾಗಿ ನೇಮಿಸಿದ ಶಿಕ್ಷಕರಿಗೆ ಇನ್ನೂ ಸ್ಕೇಲು ದೊರೆಯದೆ ಬಹಳ ಲುಕ್ಸಾನು ಆಗುತ್ತಿರುವದರಿಂದ ನಾ। ದಿವಾನರು (ಶಿಕ್ಷಣಮಂತ್ರಿ) ಆ ಸ್ಕೇಲನ್ನು ಆದಷ್ಟು ಬೇಗನೆ ಅಮಲಿನಲ್ಲಿ ತಂದು ಶಿಕ್ಷಕರೊಳಗೆ ಪಸರಿಸಿದ ಅಸಂತೋಷವನ್ನು ದೂರಪಡಿಸಬೇಕಾಗಿ ಈ ಸಭೆಯ ವಿನಂತಿ ಇರುತ್ತದೆ

(೫) ಪ್ರಾಥಮಿಕ ಸಕ್ತೀ ಶಿಕ್ಷಣದ ಕಾಯದೆಯಂತೆ ಆಗುವ ಸ್ಕೂಲಬೋರ್ಡಿನಲ್ಲಿ ಜಿಲ್ಹಾ ಶಿಕ್ಷಕ ಸಂಘದ ಪತಿಯಿಂದ ಆರಿಸಲ್ಪಡುವ ಕಿರಿಯನ ಇಬ್ಬರು ಪ್ರತಿನಿಧಿಗಳಾದರೂ ಇರಬೇಕೆಂದು ಈ ಸಭೆಯು ಮತವಿರುತ್ತದೆ

(೬) ಸಮಾನ ಯೋಗ್ಯತೆಯ ಸರ್ಟಿಫಿಕೇಟ ಪಡೆದ, ಸಮಾನ ಸರ್ವಿಸಿನ ಪು। ಮಾಸ್ತರ ಮತ್ತು ಅ। ಮಾಸ್ತರರ ಪಗಾರದೊಳಗೆ ಭೇದಭಾವವಿರಬಾರದಾಗಿ ಈ ಸಭೆಯ ಮತವಿರುತ್ತದೆ

(೭) ಯಾವನೊಬ್ಬ ಶಿಕ್ಷಕನನ್ನು ಒಂದೇ ಸವನೆ ಎರಡು ವರ್ಷಗಳಿಗಿಂತ ಹೆಚ್ಚು ಕಾಲ ಹಾಗೂ ಒಟ್ಟು ಸರ್ವಿಸಿನಲ್ಲಿ ಆರು ವರ್ಷಗಳಿಗಿಂತ ಹೆಚ್ಚಿನಕಾಲ ಅವರ ಇಚ್ಛೆಯ ವಿರುದ್ಧವಾಗಿ ಘಟ್ಟದ ಮೇಲೆ ಇಡಬಾರದಾಗಿ ಈ ಸಭೆಯ ಅಭಿಪ್ರಾಯವಿದೆ.



ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯುವವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚ ಬೇರೆ.

ಅಮೃತಾಂಜನ ಡಿಪೋ, ಫೋರ್ಟ,
ಮುಂಬಯಿ.

ವಿವಿಧ ಸಂಗ್ರಹ.

ಪರ್ಜನ್ಯಯೋಗಗಳು

ಈಗ ಮಳೆಗಾಲದಲ್ಲಿ ಎಲ್ಲರೂ ಮಳೆಯ ಹಾದಿ ಕಾತುರರಾಗಿರುವರು. ಆದದರಿಂದ ಈ ವರ್ಷದ ಯೋಗಗಳನ್ನು ನಿರೂಪಿಸುತ್ತೇವೆ. ಮೊದಲನೇ ಪರ್ಜನ್ಯಯೋಗವು ಅಧಿಕ ಜ್ಯೇಷ್ಠ ಶುಕ್ಲ ೧೪ ಶನಿವಾರ ರವಿ-ಬುಧ ಯುತಿಯಿದೆ. ಅಧಿಕ ಜ್ಯೇಷ್ಠ ಕೃಷ್ಣ ೧ ಮಂಗಳವಾರ ಚಂದ್ರ-ಮಂಗಳ ಪ್ರತಿಯುತಿಯಿದೆ. ಈ ಯೋಗಗಳಿಂದ ದಕ್ಷಿಣ ಹಿಂದುಸ್ಥಾನದಲ್ಲಿ ಮಳೆಬೀಳಲಾರಂಭಿಸುವದು. ಕೃಷ್ಣ ೧೦ ಮಿಗೆ ಮುಂಬಯಿಯವರೆಗೆ ಈ ಯೋಗದ ಮೂಲಕ ವೃಷ್ಟಿಯಾಗುವದು. ೧೩ನೆಯ [illegible] ಜ್ಯೇಷ್ಠ ಶುಕ್ಲ ೨ಗೆ ವರೆಗೆ ಚದುರ ವೃಷ್ಟಿಯಾಗುವ ಯೋಗಗಳಿವೆ. ರವಿಗೆ ಚಂದ್ರ-ಕೇಂದ್ರಯುತಿಯು ೧೫ನೆಯ ಮಂಗಳವಾರ ಕರ್ಕರಾಶಿಗೆ ಸಂಕ್ರಮಣ ಮಾಡುತ್ತದೆ. ಇದರಿಂದ ರವಿಯಿಂದ ಕೃಷ್ಣ ೨ನೆ ವರೆಗೆ ಸಾಧಾರಣ ವೃಷ್ಟಿಯಾಗುವದು. ಮುಂದೆ ೮-೧೦ ದಿವಸ ಮಳೆಯ ಯೋಗವಿಲ್ಲ. ೧೩ನೆ [illegible] ೧೪ನೆಗೆ ಚಂದ್ರ-ಬುಧ ಪ್ರತಿಯುತಿ, ಮರುದಿನ ಚಂದ್ರ-ಮಂಗಳ ಯುತಿ ಹೀಗೆ ಎರಡು ತಿಗಳು ಪ್ರಕಟವಾಗುವದರಿಂದ ಈ ೩-೪ ದಿವಸಗಳಲ್ಲಿ ಜೋರಿನ ಮಳೆ ಸುರಿಯುವದು. ಆಷಾಢ ಶುಕ್ಲ ೬ಕ್ಕೆ ಬುಧನು ಕರ್ಕರಾಶಿಯನ್ನು ಪ್ರವೇಶಿಸುತ್ತಾನೆ. ಕರ್ಕವು ಜಲರಾಶಿಯು. ಶನಿಗೆ ಚಂದ್ರ ಕೇಂದ್ರಯುತಿ, ೯ ಮಿಗೆ ರವಿ-ಬುಧ ಯುತಿ, ೧೫ನೆಗೆ ಚಂದ್ರ-ಶುಕ್ರಯುತಿ, ಕೃಷ್ಣ ೧ರಿಗೆ ಚಂದ್ರ-ಮಂಗಳ ಪ್ರತಿಯುತಿ, ೪ರಿಗೆ ಚಂದ್ರ-ಹರ್ಷಲಯುತಿ ಇವೇ ಮೊದಲಾದ ಯೋಗಗಳ ಮೂಲಕ ಈ ೮-೧೦ ದಿವಸಗಳಲ್ಲಿ ಸಾಕಷ್ಟು ಬಿತ್ತನೆಗೆ ಬೇಕಾದಷ್ಟು ವೃಷ್ಟಿಯಾಗಿ ಪ್ರದೇಶಗಳಿಗೆ ಸಮಾಧಾನವಾಗುವದು. ಆಮಿಯಿಂದ ಶ್ರಾವಣ ವರೆಗೆ ಪುನಃ ಯೋಗಗಳಿರುವವೇ. ಶ್ರಾವಣಕ್ಕೆ ಚಂದ್ರ-ಶುಕ್ರಯುತಿ ಹಾಗೂ ಚಂದ್ರ-ಮಂಗಳ ಯುತಿಗಳಿವೆ. ಈ ದಿವಸಗಳಲ್ಲಿಯೇ ಚಕ್ರವೃಷ್ಟಿ ಪ್ರಾರಂಭವಾಗುತ್ತದೆ. ಶ್ರಾವಣ ಶುಕ್ಲ ೪ರಿಗೆ ಚಂದ್ರ-ಶನಿಯುತಿ ಈ ಯೋಗಗಳ ಮೂಲಕ ಕೆಲವೆಡೆಗಳಲ್ಲಿ ಅತಿವೃಷ್ಟಿಯಿಂದ ಪರ್ಜನ್ಯನಾಗುವದು. ಕೃಷ್ಣಪಕ್ಷದಿಂದ ಪೌರ್ಣಿಮೆವರೆಗೆ ಎಲ್ಲ ಕಡೆಯಲ್ಲಿ ವೃಷ್ಟಿಯಾಗುವದು. ೧೪ನೆಗೆ ಚಂದ್ರ-ನೆಪ್ಚ್ಯೂನ ಯುತಿ ಹಾಗೂ ರವಿ-ಹರ್ಷಲ ಪ್ರತಿಯೋಗಗಳಿವೆ. ಶ್ರಾವಣಕ್ಕೆ ರವಿ-ಶುಕ್ರಯುತಿ. ಭಾದ್ರಪದ ಶುಕ್ಲ ೧ರಿಗೆ ಚಂದ್ರ-ಶುಕ್ರಯುತಿ. ಈ ಯೋಗಗಳ ಮೂಲಕ ಪೂರ್ವ ದಿಕ್ಕಿನ ವೃಷ್ಟಿಯಾಗುವದು. ೧೩ನೆಗೆ ಬುಧನ ಅಸ್ತವಾಗುತ್ತದೆ. ಕೃಷ್ಣ ೫ಮಿಗೆ ಶನಿಯೂ ಅಸ್ತ ಹೊಂದುತ್ತಾನೆ. ಕೃಷ್ಣ ೧೨ರಿಂದ ಆಶ್ವಿನವರೆಗೆ ಗ್ರಹಗಳ ಚಲನೆ ಬುಧ-ಶುಕ್ರ-ಯುತಿಗಳ ಯೋಗಗಳಿವೆ. ಮಂಗಳನು ಸಿಂಹ ರಾಶಿಯನ್ನು ಕನ್ಯಾರಾಶಿಗೆ ಗಮಿಸುತ್ತಾನೆ. ಇದರಿಂದ ಈ ೪-೬ ದಿನಗಳಲ್ಲಿ ಎಲ್ಲ ಕಡೆಯಲ್ಲಿ ವೃಷ್ಟಿಯಾಗುವದು. ೧೫ಮಿಯಿಂದ ಶ್ರಾವಣ ವರೆಗೆ ಸಾಧಾರಣ ವೃಷ್ಟಿಯಾಗುವದು. ಆಶ್ವಿನ ಶುಕ್ಲ ೧ರಿಗೆ ಬುಧನ ಅಸ್ತವಿದೆ. ಇತರ ಕೆಲ ಯೋಗಗಳ ಮೂಲಕ ಈ ಸಪ್ತಾಹದಲ್ಲಿ ಅಲ್ಪ ವೃಷ್ಟಿಯಾಗುವ ಸಂಭವವಿದೆ. ಕೃಷ್ಣ ೧೪ರಿಗೆ ಚಂದ್ರ-ಶನಿಯುತಿ ಇದ್ದು, ಕಾರ್ತಿಕ ಶುಕ್ಲ ೧ರಿಗೆ ಗುರುವಿನ ಅಸ್ತವಾಗುತ್ತದೆ. ಆದರೂ ಬಿಡಿ ಪರ್ಜನ್ಯ ಯೋಗವೇ ಉಳಿಗೆ ರವಿ-ಬುಧಯುತಿ ೧೩ನೆಗೆ ಬುಧ-ಗುರುಯುತಿ ಕೃಷ್ಣ ೩ಯಿಗೆ ಚಂದ್ರ-ಶುಕ್ರ ಪ್ರತಿಯುತಿಗಳಿವೆ. ಚಂದ್ರ-ಮಂಗಳ, ಚಂದ್ರ-ಶನಿ ಪ್ರತಿಯುತಿಗಳೂ ಈ ೮-೧೦ ದಿನಗಳಲ್ಲಿಯೇ ಒದಗಿಬರುತ್ತವೆ. ಈ ಯೋಗಗಳು ಬಲಹೀನವಿವೆ. ಆದರೂ, ಆಷಾಢದಿಂದ ೧ ಮಾಸದ ವರೆಗೆ ಮಳೆ ಸುರಿದು, ಈ ವರ್ಷದ ಪರ್ಜನ್ಯಕಾಲವು ಸಮಾಪ್ತಿಯಾಗುವದು. ಮಾರ್ಗಶೀರ್ಷ ಕೃಷ್ಣ ೨ಗೆ ಸುಮಾರಿಗೆ ಒಂದು ವೃಷ್ಟಿಯೋಗವಿದೆ. ಆದರಿಂದ ಸ್ವಲ್ಪ ಕಡೆಗೆ ವೃಷ್ಟಿಯೂ ಸಂಭವಿಸುವದು. ಆದರೆ, ಇದೇನೂ ಅಷ್ಟು ಮಹತ್ವದ್ದಲ್ಲ. ಸಂಕ್ಷಿಪ್ತವಾಗಿ ಹೇಳಬೇಕಾದರೆ, ಈ ವರ್ಷ ಪರ್ಜನ್ಯನು ಕೈಬಿಡಲಿಕ್ಕಿಲ್ಲ, ವೃಷ್ಟಿಯು ಸುರಿದ ಮೇಲೆ ಪ್ರತಿಯೊಂದು ತಿಂಗಳಿನಲ್ಲಿ ೮-೧೦ ದಿವಸಗಳ ವರೆಗಾದರೂ ಸೂರ್ಯನ ಕಾಪವಾಗುವದು ಆದಕಾರಣ, ಬೇಸಾಯಗಾರರೆಲ್ಲರೂ ವೃಗಳ್ಳರಾಗಿ ಕಾಲಹರಣಮಾಡದೆ ಮಳೆ ಬಿದ್ದಾಗಲೇ ಹೊಲಗೆಲಸಗಳನ್ನೆಲ್ಲ ಸಾಗಿಸಿಕೊಳ್ಳುವದು ಉತ್ತಮ ಪಕ್ಷ, ಯಾಕಂದರೆ ಮಳೆ ಬಂದಾಗ ತೂರಿಕೊಳ್ಳುವದೇ ಜಾಣತನವು.

* * *

೬೦೦ ವರ್ಷ ಆಯುಷ್ಯದ ಋಷಿವರ್ಯರು!

ಮೇಜರ ಕ್ರೋಸ್ ಎಂಬ ಹೆಸರಿನ ಯುರೋಪಿಯನ್ ಗೃಹಸ್ಥರೊಬ್ಬರು ಟಿಬೇಟ ವರೆಗೆ ಪ್ರವಾಸಮಾಡಿ ಬಂದಿರುವರು. ಅವರು ಗೋವೆ (ಗೋವಾ)ದಲ್ಲಿ ಒಂದು ವ್ಯಾಖ್ಯಾನ ಕೊಟ್ಟರು. ಆ ವ್ಯಾಖ್ಯಾನದಲ್ಲಿ ಅವರು ನಿವೇದಿಸಿದ್ದೇನಂದರೆ — ಹಿಮಾಲಯದಲ್ಲಿ ಪ್ರವಾಸಮಾಡುವಾಗ ಅವರಿಗೆ ದಾರಿ ತೋರಿಸಲು ಹೋದ ಸಂಗಡಿಗನು ಸುಮಾರು ೬೪೦ ವರ್ಷ ವಯಸ್ಸಿನ ಋಷಿವರ್ಯರೊಬ್ಬರನ್ನು ತೋರಿದನು. ಬಿಟ್ಟೆಂಟ ಆಮ್ನವರಿಗೆ ಗುರುಸ್ಥಾನದಲ್ಲಿದ್ದ ಥಿಯೋಸೋಫಿ ಸಂಘದ ಸಂಸ್ಥಾಪಕರಾದ ಮೆಡಮ್ ಬ್ಲಾವಟ್ಸ್ಕಿಯವರ ಗುರುಗಳು ಈ ಋಷಿವರ್ಯರಂತೆ. ಇವರ ಸಾಮರ್ಥ್ಯವು ಅದ್ಭುತವಿದೆ, ಬುದ್ಧಿಶಕ್ತಿಯೂ ಅಸಾಮಾನ್ಯವಿದೆ. ವಿಖ್ಯಾತ ಗಣಿತ ಶಾಸ್ತ್ರಜ್ಞರಾದ ನ್ಯೂಟನ್‌ರವರ ಕಲನ ಸಿದ್ಧಾಂತಗಳೆಲ್ಲ ಅವರಿಗೆ ಅವಗತವಿರುವವು. ಇಷ್ಟಾಗಿ ನ್ಯೂಟನ್‌ರ ಹೆಸರು ಋಷಿಗಳು ಕೇಳಿರುವದಿಲ್ಲ. ಅವರು ತಮ್ಮ ಇಚ್ಛೆಯಿದ್ದರೆ ಗತಪ್ರಾಯಗಬಲ್ಲರು, ಹಾಗು ಪ್ರಕಟರಾಗಬಲ್ಲರು. ಇಷ್ಟೇ ಅಲ್ಲದೆ, ಕೈಕಾಲುಗಳನ್ನು ಬದ್ಧಗೊಳಿಸುವ ಸಾಮರ್ಥ್ಯವಿದೆಯಂತೆ. ಅವರ ಗೂಢ ವಿದ್ಯೆಯು ಜ್ಞಾನವು ಇತರ ಋಷಿಗಳಿಗಿಂತ ವಿಶೇಷವಿದೆಯೆಂದು ಹೇಳುತ್ತಾರೆ. ಈ ವಿದ್ಯಾಬಲದಿಂದಲೇ ಅವರು ತಮ್ಮ ಆಯುಷ್ಯವನ್ನು ಬೆಳೆಸಿದ್ದಿರಬೇಕು. ಈ ಋಷಿವರ್ಯರು ಒಂದು ಭವಿಷ್ಯಮಾಡಿರುವರು. ಅದೇನಿರುವದು — ೧೯೩೫ನೇ ಇಸವಿಯಲ್ಲಿ ಒಂದು ಭಯಂಕರ ಯುದ್ಧವು ಪ್ರಾರಂಭವಾಗಿ, ಅದು ಬಹುಕಾಲದ ವರೆಗೆ ನಡೆಯುವದು. ಆಮೇಲೆ ಒಂದು ಪ್ರಚಂಡ ಬಿರುಗಾಳಿಯು ಬೀಳುವದು. ಮೇಜರ ಕ್ರೋಸ್‌ರವರು ಅಲ್ಲಿ ಹೋದಾಗ ಋಷಿಗಳು ಒಬ್ಬ ಹುಡುಗನ ಭವಿಷ್ಯವನ್ನು ನಿರೂಪಿಸುತ್ತಿದ್ದರು. ಆಗ ಋಷಿವರ್ಯರು ಕೆಲ ಅಂತರದ ಮೇಲೆ ಒಂದು ಕಾಗದದ ಮೇಲೆ ತಮ್ಮ ದೃಷ್ಟಿಶಕ್ತಿಯನ್ನು ಕೇಂದ್ರೀಕರಿಸಿ, ಅದನ್ನು ಚೂರು ಚೂರು ಮಾಡಿಬಿಟ್ಟರು. ಇದನ್ನು ನೋಡಿ ಮೇಜರ ಕ್ರೋಸ್‌ರವರು ಚಕಿತರಾದರು. ಹಿಮಾಲಯದೊಳಗಿನ ಋಷಿವರ್ಯರ ಆಯುಷ್ಯವನ್ನು ಕೇಳಿ ಯಾರಾದರೂ ಆಶ್ಚರ್ಯಚಕಿತರಾದರೆ, ಆಶ್ಚರ್ಯವೇನು?

* * *

ಖರ್ಜೂರದ ಮರದ ಶಯನ-ಉತ್ಥಾಪನ!

ಅನಂತಪೂರ ಜಿಲ್ಲೆಯಲ್ಲಿ ರಾಯಲ್ ಚೆರು ಎಂಬ ಊರಿದೆ. ಇಲ್ಲಿಂದ ೩ ಮೈಲುಗಳೊಳಗೆ ಒಂದು ಅದ್ಭುತ ಖರ್ಜೂರದ ಮರವಿದೆ. ಮರವು ನೆಟ್ಟಗಿಲ್ಲ. ಥಂಡಿಯ ದಿವಸ ಸ್ವಲ್ಪ ಬಗ್ಗಿದೆ. ಈ ಮರವು ರಾತ್ರಿ ೧೨ ಘಂಟೆಗೆ ಬಗ್ಗಲಾರಂಭಿಸಿ, ಮಧ್ಯಾಹ್ನ ೧೨ ಘಂಟೆಗೆ ನೆಲಸಮವಾಗುತ್ತದೆ. ಕೂಡಲೆ ಅದು ಏಳಲಾರಂಭಿಸಿ, ರಾತ್ರಿ ೧೨ ಘಂಟೆಗೆ ಮೊದಲಿನಂತೆ ಎದ್ದು ನಿಲ್ಲುತ್ತದೆ. ಇದು ಸುಮಾರು ೩೦ ಅಡಿ ಎತ್ತರವಿದೆ. ಮರದ ಎಲೆಗಳೆಲ್ಲ ಅಚ್ಚ ಹಸುರಿವೆ. ನೆರೆಹೊರೆಯ ಮರಗಳ ಎಲೆಗಳು ಇಷ್ಟು ತೇಜಃಪುಂಜವಿಲ್ಲ. ಈ ಹಳ್ಳಿಯು ಎಮ್. ಎಸ್. ಎಮ್. ರೇಲ್ವೆ ಮಾರ್ಗದ ಸಮೀಪದಲ್ಲಿದೆ. ಆದರಿಂದ ನೂರಾರು ಮಂದಿ ಈ ಅದ್ಭುತ ಮರದ ದರ್ಶನ ಪಡೆಯಲು ಹೋಗುತ್ತಿದ್ದಾರೆ. ಅನೇಕರು ಇದೊಂದು ದಿವ್ಯ ವೃಕ್ಷವೆಂದು ಭಾವಿಸಿ, ಹಣ್ಣು ಕಾಯಿ ಮಾಡುತ್ತಿರುವರು. ಈ ರೀತಿ ಖರ್ಜೂರದ ಮರವು ಶಯನ-ಉತ್ಥಾಪನ ಮಾಡಹತ್ತಿ ಸುಮಾರು ೩೦-೩೫ ದಿನಗಳಾಗಿರಬಹುದು. ಅದರ ಶಯನ-ಉತ್ಥಾಪನ ಕ್ರಮವು ಇನ್ನೂ ೩-೪ ತಿಂಗಳುಗಳಿರಬಹುದು. ಈ ಸಂಗತಿಯು ಮದ್ರಾಸಿನ 'ಸ್ವರಾಜ್ಯ' ಪತ್ರಿಕೆಯಲ್ಲಿ ಪ್ರಕಟವಾಗಿದೆ.

* * *

ವೈರು ತಿನ್ನುವ ಬೇಲಿ!

ಇತ್ತೀಚೆ ಬಂಗಾಲದ ಪೋಲೀಸ ಚಿತ್ರಗುಪ್ತರು ಚಿತ್ತವೇಧಕ ಶೋಧಗಳನ್ನು ಹಚ್ಚಹತ್ತಿರುವರು. ಕಲಕತ್ತೆಯಲ್ಲಿ 'ಏಡನ್ ಗಾರ್ಡನ್' ಎಂಬ ಉಪವನವಿದೆ. ಅಲ್ಲಿ ಊರ ನಾಗರಿಕರು, ಮಾನ್ಯ ಗೃಹಸ್ಥರು ಮನೋರಂಜನಕ್ಕಾಗಿ, ವಾಯುಸೇವನಕ್ಕಾಗಿ ಹೋಗುತ್ತಿರುವರು. ಸಂಗಡ ಪತ್ನಿಯವರನ್ನಾಗಲಿ, ಪುತ್ರಿಯರನ್ನಾಗಲಿ ಇತರ ಪರಿಚಿತ ಸ್ತ್ರೀಯರನ್ನಾಗಲಿ ಕರೆತರುವರು. ಕಾವಲಿಗಿದ್ದ ಪೋಲೀಸರು ಸರಕಾರಿ ಪೋಷಾಕು ತೆಗೆದು, ಖಾಸಗಿ ಉಡಿಗೆತೊಡಿಗೆ ತೊಟ್ಟುಕೊಂಡು, ನಿರಪರಾಧಿ ನಾಗರಿಕರನ್ನು "ನಿಮ್ಮ ಮೇಲೆ ಬಂದ ಆರೋಪ ಬಂದಿದೆ ಅದಕ್ಕಾಗಿ ಪೋಲೀಸ ಸ್ಟೇಶನಿಗೆ ನಡೆಯಿರಿ. ನನಗೇನಾದರೂ ಕೊಟ್ಟರೆ ನಾನು ನಿಮ್ಮ ಮೇಲೊದಗಿದ ಈ ಸಂಕಟವನ್ನು ಪರಿಹರಿಸುವೆನು" ಎಂದು ಹೇಳಿ, ಅಲ್ಲಿಯ ಜನರನ್ನು ಸುಲಿಯುವರು. ಬೇಲಿಯೂ ಹೊಲ ತಿನ್ನುವ ಸುದ್ದಿಯು ಊರಲ್ಲೆಲ್ಲ ಹಬ್ಬಿತು. ಇದರ ಶೋಧ ಹಚ್ಚಲು ಬಂಗಾಲದ ಗುಪ್ತ ಪೋಲೀಸರು ಟೊಂಕಕಟ್ಟಿದರು. ಒಬ್ಬ ಸಾರ್ಜಂಟನು ನಾಗರಿಕರ ಉಡುಪು ತೊಟ್ಟುಕೊಂಡನು. ಇನ್ನೊಬ್ಬನು ಹೆಣ್ಣು ವೇಷ ಹಾಕಿಕೊಂಡು ಸಾರ್ಜಂಟ ನಾಗರಿಕನ ಹೆಂಡತಿಯಾದನು. ಗಂಡ-ಹೆಂಡರು ಏಡನ್ ಉಪವನಕ್ಕೆ ನಡೆದರು. ಅಲ್ಲಿ ಒಂದು ಬೆಂಚಿನ ಮೇಲೆ ಕುಳಿತು ಹರಟೆ ಕೊಚ್ಚಲಾರಂಭಿಸಿದರು. ಪೋಲೀಸನೊಬ್ಬನು "ನಿಮ್ಮ ಮೇಲೆ ಚಾರ್ಜ ಬಂದಿದೆ. ನನ್ನ ಕೈ ಬಿಸಿಮಾಡದಿದ್ದರೆ ಪೋಲೀಸ ಕೋಣೆಯಲ್ಲಿ ಹಾಕುವೆನು" ಎಂದು ಗದರಿಸುವಷ್ಟರಲ್ಲಿ ಈ ಗಂಡ-ಹೆಂಡರ ಹಿಂಬದಿಗೆ ಗಿಡಗಂಟಿಯಲ್ಲಿ ಅಡಗಿಕೊಂಡಿದ್ದ ಇನ್ನೊಬ್ಬ ಸಾರ್ಜಂಟನು ಇದಿರಿಗೆ ಬಂದು, ದಿನಾಲು ಇನಾಮು ಪಡೆದು ದುಃಖ ಪರಿಹರಿಸುವ ಪೋಲೀಸ ಬಂಟನನ್ನು ಕೈದು ಮಾಡಿ ಒಯ್ದುಬಿಟ್ಟನು. ಬಂಗಾಲದ ಚಿತ್ರಗುಪ್ತರ ಈ ಬಗಾಡಿಯನ್ನು ಬಣ್ಣಿಸಿದಷ್ಟು ಕಡಿಮೆ.

* * *

ತಲೆತಿರುಕ ಜವಾಬದಾರ ಅಧಿಕಾರಿಗಳು

ಮಿ। ಬಿಜಲ್ಲಿ ಎಂಬುವರು ಪಂಜಾಬ ಪ್ರಾಂತದ ಲಾಹೋರಿನ ಡೆಪ್ಯುಟಿ ಕಮಿಶನರರಿರುವರು. ಇವರ ಬಗ್ಗೆ 'ವಂದೇ ಮಾತರಂ' ಪತ್ರಿಕೆಯ ಸಂಪಾದಕರು ಒಂದು ಲೇಖ ಬರೆದು, ಸಾಹೇಬರು ಪ್ರದರ್ಶಿಸಿದ ತಲೆತಿರುಕತನವನ್ನು ಬಣ್ಣಿಸಿದರು. ಆ ಬಗ್ಗೆ ಮಿ। ಬಿಜಲ್ಲಿಯವರು ಪತ್ರಿಕೆಯ ಸಂಪಾದಕರ ಮೇಲೆ ೧೫,೦೦೦ ರೂಪಾಯಿಗಳ ಅಬ್ರುಲುಕ್ಸಾನಿಯ ದಾವೆ ತಂದರು. ನ್ಯಾಯಾಧೀಶರು ವಿಚಾರಣೆ ನಡಿಸಿ, ಬಿಜಲ್ಲಿಯವರಿಗೆ ಕೆಲ ಸ್ಥಳಗಳ ಮೂಲಕ ತೋರಿಕೆಯ ಪ್ರಾರ್ಥನೆಂ ರೂಪಾಯಿ ಕೊಡಿಸಿ, ಡೆಪ್ಯುಟಿ ಕಮಿಶನರರ ವರ್ತನದ ಬಗ್ಗೆ ಟೀಕಿಸುತ್ತಾರೆ — ಮಿ। ಬಿಜಲ್ಲಿಯವರು ಬೀದಿ ಹುಡುಗನಂತೆ ಜೋಕ್ಕೆ ಹರಟೆಯಿಂದ ಇನಸ್ಪೇಕ್ಟರ ಪಲ್ಲಿ ನುಗ್ಗಿದ್ದು ತೀರ ಅನುಚಿತವು. ಸಾರ್ವಜನಿಕವಾದಲ್ಲಿ ಇವರು ಅಯೋಗ್ಯರಾಗಲೂ ಹೀಗೇ ವರ್ತಿಸುತ್ತಿದ್ದರು. ಆವರು ಕ್ರೋಧ ಕೋಪಿಗಳು. ಒಮ್ಮೆ ಡೆಪ್ಯುಟಿ ಕಮಿಶನರರ ಮುಂದೆ ಬಂದು ಒಟ್ಟಿ ಸುನಾವಣಿನಡೆದಿತ್ತು. ಥಟ್ಟನೆ, ನ್ಯಾಯಾಧೀಶ ಬಿಜಲ್ಲಿಯವರು ನ್ಯಾಯಾಸನವನ್ನು ತೊರೆದರು. ಧಪಾ ಧಪಾ ನ್ಯಾಯ ಮಂದಿರದಿಂದ ಹೊರಗೆ ಹೋದರು. ಒಂದು ಗಳವನ್ನು ಎರಡೂ ಕೈಗಳಿಂದ ಘಟ್ಟಿಯಾಗಿ ಹಿಡಿದು, ತಮ್ಮ ತಲೆಯ ಸುತ್ತಲೂ ಗರಗರನೆ ತಿರುಗಿಸಿದರು. ಅನೇಕರಿಗೆ ಪೆಟ್ಟು ಬಿತ್ತು. ಡೆಪ್ಯುಟಿ ಕಮಿಶನರರು ದಾಡಿಯ ಒಟ್ಟಿಗಳಲ್ಲಿ ಕಕ್ಕ ರೀತಿಯಿಂದ ವರ್ತಿಸುವರಲ್ಲವೆಂತಲೂ ಕರು ಹೊಡೆದಿರುವರ. ಜವಾಬದಾರ ಸ್ವರಾಜ್ಯದೊಳಗಿನ ಜವಾಬದಾರ ನೌಕರರ ರೀತಿಗಳಿವು.

ಮಹಾತ್ಮರ ಲೋಕೋತ್ತರತೆ.

ಕಳೆದ ಮೇ ೧೮ನೇ ತಾರೀಖಿನ ಗಾಂಧೀ ದಿನಕ್ಕೆ ಪೂನಾದ ವಾಡಿ ವಿದ್ಯಾಲಯದಲ್ಲಿ ನೆರೆದ ಜಾಹೀರ ಸಭೆಯಲ್ಲಿ ಶ್ರೀ ಮುಕುಂದರಾವ ಜಯಕರರವರು ಮಹಾತ್ಮರ ಲೋಕೋತ್ತರತೆಯ ಸಣ್ಣ ಕಥೆಯನ್ನು ಅರುಹಿದರು. ಸನ್ ೧೯೨೨ನೇ ಇಸವಿಯ ಜನವರಿ ತಿಂಗಳ ಪ್ರಾರಂಭದಲ್ಲಿ ಮುಂಬಯಿಯಲ್ಲಿ ಒಂದು ಪ್ರಾತಿನಿಧಿಕ ಪರಿಷತ್ತಾಗಿತ್ತು. ಮದ್ರಾಸಿನ ಸರ್ ಶಂಕರನ್ ನಾಯರರವರು "ಸ್ಪೀಕರ" ಅಂದರೆ, ಸಭಾವ್ಯವಸ್ಥಾಪಕರಾಗಿದ್ದರು ಪ್ರತಿನಿಧಿಗಳು ಚರ್ಚೆ ಮಾಡುತ್ತಿರುವಾಗ ಪರಿಷತ್ತಿನಲ್ಲಿ ಇಕ್ಕಟ್ಟಿನ ಪರಿಸ್ಥಿತಿಯುಂಟಾಯಿತು. ಪರಿಷತ್ತು ಮುರಿಯುತ್ತದೋ ಏನೋ ಎಂದು ಶ್ರೀ ಜಯಕರ ಮೊದಲಾದ ಚಾಲಕರು ಭೀತಿಗೊಂಡರು. "ನಾನು ಈ ಪರಿಷತ್ತನ್ನು ಚದರಿಸಿ ಬಿಡುವೆನು. ಗಾಂಧಿಯು ಹೊರಗೆ ಹೋಗಬೇಕಾದರೆ, ಮತ್ತೊಂದು ಸಭೆಯನ್ನು ನೆರೆಯಿಸಬೇಕು ಅಷ್ಟು ವ್ಯವಸ್ಥೆಯನ್ನು ಮಾಡಿ ಬಿಡುತ್ತೇನೆ. ನೋಡಿ.' ಎಂದು ಸರ್ ಶಂಕರನ್ ನಾಯರರವರು ಅಹಂಕಾರಪೂರಿತರಾಗಿ ನುಡಿದರು. ಕೆಲಕಾಲ ವರೆಗೆ ಎಲ್ಲರೂ ಸ್ತಬ್ಧರಾದರು ಏನು ಮಾಡಬೇಕೆಂದು ಯಾರಿಗೂ ತೋಚಲಿಲ್ಲ ಸ್ಥಿತಿಯು ಅಷ್ಟು ಇಕ್ಕಟ್ಟಿನದಾಯಿತು, ಗಾಂಧೀಜಿಯವರು ಮುಂದಾಗಿ ಪರಿಷತ್ತನ್ನು ಒದುಕಿಸಿದರು ನಮ್ರತೆಯಿಂದ ಶಾಂತತೆಯಿಂದ ಅವರು ಅಂದದ್ದೇನೆಂದರೆ.— "ಸರ್ ಶಂಕರನ್‌ರವರೇ, ನನ್ನನ್ನು ಅಗಲಲು ನೀವು ಇಚ್ಛಿಸಬಹುದು. ಆದರೆ, ನಿಮ್ಮನ್ನು ಬಿಡಲು ನನ್ನ ಇಚ್ಛೆಯಿಲ್ಲ ನನ್ನ ಹೊರತು ನಿಮ್ಮ ಕೆಲಸವು ಸಾಗಬಹುದು, ಆದರೆ ನಿಮ್ಮ ಹೊರತು ನಾನು ನನ್ನ ಕೆಲಸವ ಮುಂದರಿಯದು" ಸರ್ ಶಂಕರನ್‌ರವರಿಗೆ ಇದೊಂದು ಚಿವಿಟೊಟ್ಟು ಹಿಡಿದಂತಾಯಿತು. ಪರಿಷತ್ತಿನಲ್ಲಿಯ ಒಂದು ಏಕ ಪ್ರಕಾರದ ನವಚೇತನವು ಪ್ರಾಪ್ತವಾಯಿತು. ಮಹಾತ್ಮರು ಐಕ್ಯಕ್ಕಾಗಿ ತನ್ನ ಮನದ ಧವಳದಿಂದ ದುಡಿಯುತ್ತಾರೆಂಬುದು ಸ್ಪಷ್ಟವಾಯಿತು. ಅವರ ಲೋಕೋತ್ತರತೆಯೂ ಸಭಿಕರ ನಿದರ್ಶನಕ್ಕೆ ಬಂತು.

* * *

ಮೌಲಾನಾ ಹಜರತ್ ಮೋಹಾನಿ

ಕಳೆದ ಜೂನ ತಾ. ೯ನೇ ಶನಿವಾರಕ್ಕೆ ನೆರೆದ ಮುಂಬಯಿಯ ಕಾಯಿದೆ ಕೌನ್ಸಿಲಿನ ಅಧಿವೇಶನದಲ್ಲಿ ಡಾ॥ ಜಿ. ಬಿ. ತ್ರಿವೇದಿಯವರು ಯರೋಡಾ ಜೈಲಿನಲ್ಲಿಟ್ಟ ಮೌಲಾನಾ ಹಜರತ್ ಮೋಹಾನಿಯವರ ನಡಾವಳಿಯ ಬಗ್ಗೆ ಪ್ರಶ್ನಿಸಿದರು. ಸರಕಾರಿ ಕಡೆಯಿಂದ ಸರ್ ಮೋರಿಸ್ ಹೇವರ್ಡರವರು ಉತ್ತರವನ್ನಿತ್ತಿದ್ದೇನೆಂದರೆ — ಮೌಲಾನಾರವರು ಯಾವದೇ ಪ್ರಕಾರದ ಕೆಲಸವನ್ನು ಮಾಡಲೊಪ್ಪುವದಿಲ್ಲ. ಇದರಿಂದ ಶಿಕ್ಷೆಯೆಂದು ಅವರಿಗಿರುವ ಭೆಟ್ಟಿಗೊಡುವ ಹಾಗು ಪತ್ರಬರೆಯುವ ಹಕ್ಕು ರದ್ದು ಮಾಡಲ್ಪಟ್ಟಿದೆ. ಅವರ ಶಿಕ್ಷೆಯನ್ನು ಸಾದಾ ಶಿಕ್ಷೆಯಾಗಿ ರೂಪಾಂತರ ಮಾಡುವದು ಸರಕಾರದ ಇಚ್ಛೆ ಇಲ್ಲ. ಮೌಲಾನಾರವರಿಗೆ ಯರೋಡಾ ಜೈಲಿನಲ್ಲಿ ಸಿಗುವ ವನವಾಸವಿದು-

BOOK-SELLERS,

We supply all kinds of School books, novels and books on other Subjects in English, Kanarese Marathi etc, and all kinds of Stationery at the lowest prices.

The Modern Trading Bureau,

Gowallia Tank Road, Cumballa Hill, **BOMBAY.**

ರಾಷ್ಟ್ರ ಧ್ವಜದಸಂಗ್ರಾಮಕ್ಕಾಗಿ

ಡಾ॥ ಹರ್ಡೀಕರರ ವಿನಂತಿ

ಮೊನ್ನೆ ಧಾರವಾಡದಲ್ಲಿ ಕೂಡಿದ ಪ್ರಾಂತಿಕ ಕೊಂಗ್ರೆಸ ಕಮಿಟಿಯವರು ನಾಗಪೂರದಲ್ಲಿ ನಡೆಯುತ್ತಿರುವ ಸತ್ಯಾಗ್ರಹವನ್ನು ಜೋರಿನಿಂದ ನಡಿಸುವದರ ಸಲುವಾಗಿ ನಮ್ಮ ಪ್ರಾಂತದಿಂದ ೫೦ ಸೈನಿಕರನ್ನು ಕಳಿಸಬೇಕೆಂದು ನಿರ್ಣಯಿಸಿರುತ್ತಾರೆ ಇದರ ಸಲುವಾಗಿ ಎಲ್ಲ ಜಿಲ್ಲಾ ವ್ಯವಸ್ಥಾಪಕರಿಗೂ (District organizers) ಬರೆದು ತಮ್ಮ ತಮ್ಮ ಜಿಲ್ಲೆಯಿಂದ ೧೫ ಸ್ವ. ಸೈನಿಕರನ್ನು ಆರಿಸುವದಕ್ಕೆ ತಿಳಿಸಿರುತ್ತೇವೆ. ತಮ್ಮ ತಮ್ಮ ಊರಿನಿಂದ ೨ ೩ ಸೈನಿಕರನ್ನು ಆರಿಸಿ, ಜಿಲ್ಲಾ ಕಾಂಗ್ರೇಸ ಕಮಿಟಿಯವರಿಗೂ ಮತ್ತು ನಮಗೂ ಆದಷ್ಟು ತೀವ್ರ ತಿಳಿಸಬೇಕೆಂದು ವಿನಂತಿ ಇದೆ.

ಈ ಕೆಲಸವು ಇದೇ ತಿಂಗಳ ೨೦ ನೇ ತಾರೀಖಿನೊಳಗಾಗಿ ಮುಗಿದರೆ ೨೫ನೇ ತಾರೀಖಿಗೆ ಎಲ್ಲ ಸೈನಿಕರನ್ನು ಹುಬ್ಬಳ್ಳಿಗೆ ಕರೆಕಳಿಸಿ, ಅವರಿಗೆ ಹತ್ತು ದಿವಸದ ಶಿಕ್ಷಣ (Training) ವನ್ನು ಕೊಡಬೇಕೆಂದು ನಮ್ಮ ವಿಚಾರವದೆ ಕಾರಣ ಸ್ವ ಸೈನಿಕರನ್ನು ಆರಿಸಿ ಅವರ ಹೆಸರುಗಳನ್ನು ತೀವ್ರವಾಗಿ ನಮಗೆ ತಿಳಿಸಬೇಕು.

ಸೈನಿಕರನ್ನು ಆರಿಸುವಾಗ್ಗೆ ಕೆಳಗಿನ ಸೂಚನೆಗಳನ್ನು ನೆನಪಿನಲ್ಲಿಡತಕ್ಕದ್ದು.

(೧) ಸ್ವಯಂಸೇವಕರು ಅಹಮ್ಮದಾಬಾದ ಮತ್ತು ಗಯಾ ಕಾಂಗ್ರೆಸುಗಳಲ್ಲಿ ಪಾಸಾದ ಠರಾವುಗಳನ್ನು ಪೂರ್ಣತೆಗೊಳಿಸಿದವರು ಇರತಕ್ಕದ್ದು.

(೨) ಸತ್ಯಾಗ್ರಹಕ್ಕಾಗಿ ನಾಗಪೂರಿಗೆ ಹೋಗಲು ಸಿದ್ಧರಿರತಕ್ಕದ್ದು.

(೩) ಆ[illegible]ಗಳೂ, ಸಶಕ್ತರೂ, ಒಳ್ಳೇ ನೀತಿವಂತರೂ ಇರತಕ್ಕದ್ದು

(೪) ಕುಟುಂಬದ ಬಂಧನಗಳು ಯಾವದೇ ತರದ್ದು ಇರಕೂಡದು

(೫) ಖಾದೀ ಭಾಂಡಾರಗಳಲ್ಲಿಯೂ, ರಾಷ್ಟ್ರೀಯ ಶಾಲೆಗಳಲ್ಲಿಯೂ, ಅಥವಾ ಯಾವದೇ ಸ್ಥಿರವಾದ ಕಾಂಗ್ರೆಸ ಸಂಸ್ಥೆಗಳಲ್ಲಿದ್ದ ತೊಡಗಿದವರಿರಬಾರದು (ಯಾಕಂದರೆ ಅವರು ಹೋಗುವದರಿಂದ ಆಯಾ ಸಂಸ್ಥೆಗಳ ಹಾನಿಯಾಗುತ್ತದೆ.)

(೬) ನಾಗಪೂರದ ಕೆಲಸದ ನಂತರ ತಮ್ಮ ತಮ್ಮ ಮೊದಲಿನ ಸ್ಥಾನಗಳಿಗೆ ತಿರುಗಿಹೋಗಿ ಅಲ್ಲಿ ತಮಗೆ ದೊರೆತ ಜ್ಞಾನದ ಉಪಯೋಗವನ್ನು ಮಾಡಿಕೊಳ್ಳತಕ್ಕವರು ಇರತಕ್ಕದ್ದು

(೭) ಶಿಸ್ತನ್ನು (Discipline) ಕಡಕರೀತಿಯಿಂದ ಪಾಲಿಸುವಂಥವರಿರತಕ್ಕದ್ದು

ಹುಬ್ಬಳ್ಳಿ ತಾ ೧೦-೬-೨೩. } N S Hardiker, *Director K. P V Boards*

ವೃತ್ತಸಾರ.

— ಲಾಲಾ ಲಜಪತರಾಯರು ಕಳೆದ ೩-೪ ವಾರಗಳಿಂದ ಅಸ್ವಸ್ಥರಿರುವರು. ದಿನಾಲು ಸಣ್ಣ ಜ್ವರ ಬರುತ್ತದೆ. ಒಂದು ಪುಪ್ಪುಸವು ಕೆಟ್ಟುಹೋಗಿದೆಂದು ಹೇಳುತ್ತಾರೆ. ಸ್ಥಿತಿಯು ಚಿಂತಾಜನಕವಿದೆ. ಇಷ್ಟಾದರೂ ಸರಕಾರವು ಲಾಲಾಜಿಯವರ ಆಪ್ತೇಷ್ಟರನ್ನು ಭೆಟ್ಟಿಯಾಗಗೊಡುವದಿಲ್ಲ

— ಮುಂಬಯಿಯ ಪ್ರಾಂತಿಕ ಕೊಂಗ್ರೆಸ ಕಮಿಟಿಯು ಕಳೆದ ಗುರುವಾರ ತಾ, ೭ನೇ ಸಾಯಂಕಾಲಕ್ಕೆ ನೆರೆದು, ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಠರಾವಿಗೆ ಮನ್ನಣೆಯನ್ನಿತ್ತು, ಕೌನ್ಸಿಲ ಪ್ರವೇಶ ಪಕ್ಷವು ತಮಗೆ ಮಾನ್ಯವಿಲ್ಲೆಂಬ ಬಗ್ಗೆ ಅಧ್ಯಕ್ಷರಾದ ಶ್ರೀಮತಿ ಸರೋಜಿನಿ ನಾಯಡುರವರು ಒಂದು ಪ್ರಕಟಣೆಯನ್ನು ಪ್ರಸಿದ್ಧಿಸಬೇಕೆಂತು ಠರಾವು ಮಾಡಿರುವರು. ಬರುವ ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನಕ್ಕೆ ಮೌಲಾನಾ ಮಹಮ್ಮದ ಅಲ್ಲಿಯವರ ಹೆಸರು ಸೂಚಿಸಲ್ಪಟ್ಟಿದೆ.

— ಬೆಳಗಾಂವಿಯಲ್ಲಿ ಪ್ರೊ॥ ಧೋಂಡೋಪಂತ ಕರ್ವೇಯವರು ಮಹಿಲಾ ವಿದ್ಯಾಲಯವನ್ನು ಸ್ಥಾಪಿಸಿರುವರು

— ಜಂಬುಲಿಂಗಮನೆಂಬ ಕುಲಿಗಗಾರನು ಹತ್ತೊಂದು ಹಗಲುಗಳ್ಳತನವನ್ನು ಆಚರಿಸಿದನು ಮದ್ರಾಸ ಕಡೆಯ, ತಿನೆವೆಲ್ಲಿ ಹಳ್ಳಿಯಲ್ಲಿ ಮದುವೆ ನಡದಿತ್ತು, ಬೀಗ ನೆಂಟರೊಡನೆ ಜಂಬುಲಿಂಗಮನು ಮದುವೆಯ ಚಪ್ಪರದಲ್ಲಿ ಸೇರಿಕೊಂಡನು, ಸಂಧಿ ಸಾಧಿಸಿಕೊಂಡು ಹೆಂಗಸರ ಮೈಮೇಲಿನ ೪-೫ ಸಾವಿರ ಬೆಲೆ ಬಾಳುವ ಚಿನ್ನವನ್ನು ತೆಗೆದುಕೊಂಡು ಪಲಾಯನ ಮಾಡಿದನು

— ನಾಗಪುರದಲ್ಲಿ ಸತ್ಯಾಗ್ರಹವು ಸ್ಥಿರವಾಗಿ ನಡೆದಿರುತದೆ, ಶಿಕ್ಷೆಕೊಡುವ ಪದನವು ಈಗ ಈಗ ೬ ತಿಂಗಳಿಗೆ ಮುಟ್ಟಿದೆ, ನಾಗಪೂರ ಜೈಲಿನಲ್ಲಿ ಸ್ಥಲಸಂಕೋಚವಾದ್ದರಿಂದ, ೨೫ ಸತ್ಯಾಗ್ರಹಿಗಳನ್ನು ಅಕೋಲಾ ಜೈಲಿಗೆ ಸ್ಥಳಾಂತರ ಮಾಡಿರುವರು, ಕೆಲ ಸ್ವಯಂಸೇವಕರು ಶಿಕ್ಷೆ ಕೇಳಿಕೊಂಡು 'ಗಾಂಧೀ ಮಹಾರಾಜಕೀ ಜಯ' ಎಂದು ಘೋಷಿಸಿದರು, ನ್ಯಾಯಮೂರ್ತಿಗಳಿಗೆ ಅಪಮಾನವಾಗಿ, ಆ ಬಗ್ಗೆ ಮತ್ತೊಮ್ಮೆ ತನಖಿ ನಡಿಸಿ, ಪುನಃ ಶಿಕ್ಷೆಯನ್ನು ವಿಧಿಸಿದರು, ಇಷ್ಟು ದಿವಸಗಳ ವರೆಗೆ ಒಬ್ಬರು ರಾಷ್ಟ್ರ ಧ್ವಜವನ್ನು ಒಯ್ದರೂ, ಅದಕ್ಕೆ 'ಮೆರವಣಿಗೆ' ಯೆಂದು ಸಂಬೋಧಿಸಿ, ಅವರನ್ನು ಕೈದು ಮಾಡುತ್ತಿದ್ದರು. ಈ ಧೋರಣವು ಈಗ ಬದಲಾಗಿದೆ, ಇಬ್ಬರನ್ನು ಅಥವಾ ಅವರಿಗೆ ಮಿಕ್ಕಿ ಸ್ವಯಂಸೇವಕರು ರಾಷ್ಟ್ರ ಧ್ವಜವನ್ನು ಧರಿಸಿ, ಪ್ರತಿಬಂಧಕ ಸ್ಥಳದಲ್ಲಿ ನಡೆದರೆ, ಅವರಿಗೆ ಮಾತ್ರ ಕೈದು ಮಾಡುತ್ತಾರೆ ಶ್ರೀ ರಾಜಗೋಪಾಲಾಚಾರ್ಯರು ಶ್ರೀ ಪ್ರಕಾಶಂ, ಸರೋಜಿನಿದೇವಿ, ಮೊದಲಾದ ಅಖಿಲ ಭಾರತೀಯ ಮುಂದಾಳುಗಳೂ ನಾಗಪೂರದೊಳಗಿನ ರಾಷ್ಟ್ರಧ್ವಜದ ಕಾದಾಟವನ್ನು ಸಂದರ್ಶಿಸಿ ಮರಳಿರುವರು

— ಜಬಲಪುರದ ಸತ್ಯಾಗ್ರಹ ಸಂಗ್ರಾಮವನ್ನು ನೋಡಹೋದ ಶ್ರೀಮತಿ ಸರೋಜಿನಿ ನಾಯಡು ಹಾಗು ಮೌಲಾನಾ ಆಜಾದ ಸೋಭಾನಿಯವರು ಅಲ್ಲಿಯ ನಾಗರಿಕರಿಗೆ ಶಿಸ್ತಿನಿಂದ ಸಂಗ್ರಾಮ ನಡಿಸಿದ ಬಗ್ಗೆ ಅವರನ್ನು ಅಭಿನಂದಿಸಿರುವರು.

— ಕೆನಿಯಾ ವಸಾಹತಿನ ಶಿಷ್ಟ ಮಂಡಳದ ಮಿ॥ ಪರ್ಸಿ ಗ್ರೀನರವರು ಹಿಂದೀಯರಿಗೆ ಸಮತೆಯಿಂದ ನಡಿಸಿಕೊಳ್ಳಲು ಯುರೋಪಿಯನ್ನರು ಒಪ್ಪುವದಿಲ್ಲವೆಂತಲೂ, ಅವರನ್ನು ಹಿಂದುಸ್ಥಾನಕ್ಕೆ ರವಾನೆ ಮಾಡಬೇಕೆಂತಲೂ ನುಡಿದರು

— ಲಾಹೋರ ಮ್ಯುನಿಸಿಪಾಲಿಟಿಯು ಮೇ ತಾ- ೧೯ನೇಗೆ ಪಾಸು ಮಾಡಿದ ಠರಾವನ್ನು ಪಂಜಾಬ ಸರಕಾರವು ವಿಚಾರಿಸುತ್ತದೆಂತಲೂ ಲೋರೆನ್ಸ ಮೂರ್ತಿಗೆ ಯಾವದೇ ತರದಿಂದ ಅನಾದರ ಮಾಡಗೊಡಲಿಕ್ಕಿಲ್ಲೆಂತಲೂ ಭಾರತ ಮಂತ್ರಿಗಳಾದ ಪೀಲ ದೊರೆಗಳು ಪಾರ್ಲಮೆಂಟಿನಲ್ಲಿ ಜಾಹೀರು ಮಾಡಿರುವರು.

— ಒಬ್ಬ ಏಳ ಪಠಾಣನನ್ನು ಸರಹದ್ದಿನ ಮೇಲೆ ಕಳೆದ ೨೪ ನೇ ತಾರೀಖಿಗೆ ಕೃತ್ರಿಮ ೧೦೦ ರೂಪಾಯಿಯ ನೋಟನ್ನು ಮುರಿಸುವಾಗ ಪೋಲೀಸರು ಹಿಡಿದರು, ಶೋಧ ನಡಿಸಲು ಅವನ ಗೂಡ ೧೫,೦೦೦ ರೂಪಾಯಿಗಳ ನೋಟುಗಳು ಸಿಕ್ಕಿದವು, ಆ ಪಠಾಣನು ಒಬ್ಬ ಡಾಕ್ಟರನು ಈ ನೋಟುಗಳನ್ನು ತನಗೆ ಕೊಟ್ಟನೆಂದು ಹೇಳಲು, ಡಾಕ್ಟರನಿಗೂ ಸೆರೆಹಿಡಿದರು, ಇಂಥ ಕೃತ್ರಿಮ ೧೦೦ ರೂಪಾಯಿಗಳ ನೋಟುಗಳನ್ನು ಸಾವಿರಾರು ತಯಾರು ಮಾಡಿ ಜನರಿಗೆ ಕೊಟ್ಟಿರಬೇಕೆಂದು ಹೇಳುತ್ತಾರೆ.

— ಮದ್ರಾಸಿನ ತೆಲುಗು ನಿವಾಸಿಕರಿಗೆ "ಸಿಗರ" ಅಂದರೆ ಬಹು ಪ್ರೀತಿ ಗಂಡಸರೂ, ಹೆಂಗಸರೂ, ಹುಡುಗರೂ, ಹುಡುಗಿಯರೂ, ಮುದುಕರೂ ಪ್ರೀತಿಯಿಂದ ಅದನ್ನು ಸೇವಿಸುವರು ತಮಿಳ ಹಾಗು ಮಲೆಯಾಳದೊಳಗಿನ ಜನರು "ಬೀಡಿ" ಸೇದುವವರನ್ನು ಹತ್ತಿರ ಬರಗೊಡುವದಿಲ್ಲ, ಹೊಗೆಸೊಪ್ಪು ಸೇವಿಸುವವರ ಬಗ್ಗೆ ಇಷ್ಟು ತಿರಸ್ಕಾರವಿದೆ.

ಕಾನಡಾವೃತ್ತ.

ಗುರುವಾರ, ತಾರೀಖು ೧೪ ಮಾಹೆ ಜೂನ ೧೯೨೩

ಹೊಸ ಗಂಡಾಂತರ.

ಅಖಿಲ ಭರತಖಂಡದಲ್ಲಿ ಈಗೊಂದು ಹೊಸ ಗಂಡಾಂತರವೆದ್ದಿದೆ. ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ರಾಷ್ಟ್ರದಲ್ಲಿ ಐಕ್ಯಮತ್ಯವನ್ನುಂಟುಮಾಡುವರೆ, ಕೌನ್ಸಿಲು ಪ್ರವೇಶದ ಬಹಿಷ್ಕಾರ ಚಳವಳಿಯನ್ನು ಕಳೆದ ಅಧಿವೇಶನದಲ್ಲಿ ಮುಂದೂಡಲಾಗಿತ್ತು. ಆದಿಲರೂ ಅದನ್ನು ನಿಷ್ಠೆಯಿಂದ ಪಾಲಿಸಬೇಕೆಂದು ನಾವು ಪ್ರಾರ್ಥಿಸಿ, ಕಳೆದ ಸಂಚಿಕೆಯ ಲೇಖವನ್ನು ಮುಗಿಸುವಷ್ಟರಲ್ಲಿ, ಶ್ರೀ ರಾಜಗೋಪಾಲಾಚಾರ್ಯರ ಭಿನ್ನ ಮತಪತ್ರಿಕೆಯು ನಮ್ಮ ಕೈಸೇರಿತು. ಸಂಚಿಕೆಯು ಮುದ್ರಣ ಸಮಯಕ್ಕೆ ನಮ್ಮ ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಠರಾವುಗಳು ಹಸ್ತಗತವಾದವು. ಬಂಗಾಲದ ಪ್ರಾಂತಿಕ ಕಮಿಟಿಯೂ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ನಿರ್ಣಯವನ್ನು ಧಿಕ್ಕರಿಸುವ ಠರಾವನ್ನು ಕಳೆದ ಜೂನ ೮ನೇ ಶುಕ್ರವಾರಕ್ಕೆ ಕೈಕೊಂಡಿದೆ. ಹೀಗೆ ರಾಷ್ಟ್ರದಲ್ಲೆಲ್ಲ ಗೊಂದಲವೆದ್ದಿದ ಸುದ್ದಿಗಳು ಬರುತ್ತಿವೆ. ಆದರಿಂದ ಪ್ರಜೆಗಳು ದಿಙ್ಮೂಢರಾಗಬಾರದೆಂದು ವಿರೋಧಕ ವಾಗ್ದಾಳಿಗಳ ವಿಚಾರಸರಣಿಯನ್ನು ಇಂದಿಗೆ ವಿಸ್ತರಶಃ ಚರ್ಚಿಸಬೇಕಾಗಿದೆ.

ಶ್ರೀ ರಾಜಗೋಪಾಲಾಚಾರ್ಯರ ಕಾರಣಗಳು ಪ್ರಾಮುಖ್ಯವಾಗಿ ಎರಡು. ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಗೆ ಗಯಾ ರಾಷ್ಟ್ರೀಯ ಸಭೆಗೆ ವಿರೋಧವಾಗಿ ನಡೆಯುವ ಅಧಿಕಾರವಿಲ್ಲೆಂಬದು ಮೊದಲನೇದು. ಇದಕ್ಕೆ ಮದ್ರಾಸಿನ ಶ್ರೀ ಪ್ರಕಾಶಂರವರು ಚೊಕ್ಕ ಉತ್ತರವನ್ನಿತ್ತಿರುವರು. ಪ್ರಕಾಶಂರವರು ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭಾಸದರಿದ್ದು, ಮದ್ರಾಸಿನ 'ಸ್ವರಾಜ್ಯ' ದೈನಿಕ ಪತ್ರಿಕೆಯ ಸಂಪಾದಕರಿರುವರು. ಅವರು ಶ್ರೀ ರಾಜಗೋಪಾಲಾಚಾರ್ಯರ ವಚನಾಧಾರಗಳಿಂದಲೇ ಅವರ ಅಧಿಕಾರಾತಿಕ್ರಮಣದ ಮುದ್ದೆಯನ್ನು ಖಂಡಿಸಿರುವರು. ತಮಿಳ ನಾಡು ಕೊಂಗ್ರೆಸ ಕಮಿಟಿಯು ಕಳೆದ ಮೇ ತಾ. ೧೫ ನೇಗೆ ನೆರೆದಿತ್ತು. ಶ್ರೀ ನಾರಾಯಣ ಅಯ್ಯಂಗಾರರವರು ಗಯಾ ಕೊಂಗ್ರೆಸಿನ ಆಜ್ಞೆಯನ್ನು ಉಲ್ಲಂಘಿಸಬಹುದೋ? ಹ್ಯಾಗೆಂದು ಪ್ರಶ್ನಿಸಲು, ಅಧ್ಯಕ್ಷರಾದ ಶ್ರೀ ರಾಜಗೋಪಾಲಾಚಾರ್ಯರು ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಗೆ ಇಂಥ ಅಧಿಕಾರವಿದೆಂದು ಉತ್ತರವನ್ನಿತ್ತರು. ಅಷ್ಟು ದೂರವೇಕೆ? ಮೇ ೨೩, ೨೪ ನೇ ತಾರೀಖಿಗೆ ಕಾರ್ಯಕಾರಿ ಕಮಿಟಿಯ ಸಭೆ ನಡೆದಾಗ, ಶ್ರೀ ಜಮನಾಲಾಲ ಬಜಾಜ ಶೆಟ್ಟರು ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಗೆ ಜಾದಾ ಕೊಂಗ್ರೆಸಿನ ಅಧಿವೇಶನದ ಹೊರತು ಬಹಿಷ್ಕಾರ ಚಳವಳಿಯನ್ನು ತಹಕೂಬ ಮಾಡಬಹುದೋ, ಹೇಗೆ? ಎಂದು ಪ್ರಶ್ನಿಸಲು, ಶ್ರೀ ಆಚಾರ್ಯರು 'ಅಹುದು' ಎಂದು ಉತ್ತರಿಸಿದರು. ಹೀಗೆ ಶ್ರೀ ಆಚಾರ್ಯರ ಮತವಿರಲು, ಮೇ ೩೧ ನೇ ತಾರೀಖಿಗೆ ಮಾತ್ರ ಅ. ಭಾ. ಕೊಂ. ಕಮಿಟಿಗೆ ಇಂಥ ಅಧಿಕಾರವಿಲ್ಲೆಂದು ಪ್ರತಿಪಾದಿಸುವದು ಅನುಚಿತವೆಂದು ಶ್ರೀ ಪ್ರಕಾಶಂರವರು ಕರಾ ಹೊಡೆಯುತ್ತಾರೆ. ಪರಿಸ್ಥಿತಿಯು ಶ್ರೀ ಪ್ರಕಾಶಂರವರು ನಿರ್ದೇಶಿಸಿದಂತಿದ್ದರೆ, ಶ್ರೀ ಆಚಾರ್ಯರ ಮತ ಸಂಕ್ರಾಂತಿಯು ಅಕ್ಷಮ್ಯವೆಂದು ನಾವು ಎಣಿಸಬೇಕಾಗಿದೆ. ಇಂಥ ವಕ್ರರೀತಿಯಿಂದ ಪ್ರಜೆಗಳು ಎಂದೂ ಮೋಸಹೋಗಲಾರರು.

ಶ್ರೀ ರಾಜಗೋಪಾಲಾಚಾರ್ಯರವರ ಇನ್ನೊಂದು ಆಕ್ಷೇಪವು ವಿಚಿತ್ರವಿದೆ. "ಕೌನ್ಸಿಲು ಬಹಿಷ್ಕಾರದ ಚಳವಳಿಯನ್ನು ತಹಕೂಬ ಮಾಡಿದರೆ ನಾವೇನು ಮಾಡುವದು?" ಎಂಬುದೇ ಆಚಾರ್ಯರ ಪ್ರಶ್ನೆ. ಮಹಾತ್ಮರ ಮಾನ್ಯ ಶಿಷ್ಯರಾದ ಆಚಾರ್ಯರ ಇಂಥ ಪ್ರಶ್ನೆಯನ್ನು ಕೇಳಿ, ನಾವು ಗೊಂದಲದಲ್ಲಿ ಬಿದ್ದಿರುವೆವು. ಕೌನ್ಸಿಲು ಬಹಿಷ್ಕಾರದಂಥ ವಿನಾಶಕ ಚಟುವಟಿಕೆಯ ಹೊರತು ಅನ್ಯ ಕಾರ್ಯಕ್ರಮವು ಸಿದ್ಧವಾಗಿ ರಾಷ್ಟ್ರೀಯ ಸಭೆಯ ಮುಂದಿರದಿದ್ದರೆ ರಾಷ್ಟ್ರೀಯ ಸಭೆಯು ಎಂದೂ ಲೋಕಮಾನ್ಯವಾಗುತ್ತಿದ್ದಿಲ್ಲ. ಅದಕ್ಕೆ ಅಷ್ಟು ಮಹತ್ವವೂ ಪ್ರಾಪ್ತವಾಗುತ್ತಿದ್ದಿಲ್ಲ. ಕಳೆದ ಕೌನ್ಸಿಲು ಚುನಾವಣೆಯು ಮುಗಿದು, ಈಗ ೩ ವರುಷಗಳಾಗುತ್ತ ಬಂದವು. ಇಷ್ಟು ಹೊತ್ತು ರಾಷ್ಟ್ರೀಯ ಸಭೆಯು ಸ್ತಬ್ಧವಿತ್ತೇನು? ಶ್ರೀ ಆಚಾರ್ಯರೇ ಉತ್ತರಿಸಬೇಕು. ರಾಷ್ಟ್ರೀಯ ಸಭೆಯವರ ಮುಖ್ಯ ಕಾರ್ಯವು ರಾಷ್ಟ್ರಸಂಘಟನೆಯು. ಪ್ರಚಲಿತ ರಾಜ್ಯಪದ್ಧತಿಯನ್ನು ಅಮಾನ್ಯ ಮಾಡುವ ಪ್ರಜೆಗಳನ್ನೆಲ್ಲ ಒಟ್ಟುಮಾಡಿ, ರಾಷ್ಟ್ರಶಕ್ತಿಯನ್ನು ಸಂಘಟಿಸುವದಕ್ಕಾಗಿಯೇ ಮಹಾತ್ಮರು ಬಾರ್ಡೋಲಿ ಕಾರ್ಯಕ್ರಮವನ್ನು ವಿಧಿಸಿರುವರು. ಅದನ್ನೇ ಆದರಿಸಿ, ಗಯಾ ಕೊಂಗ್ರೆಸು ವಿಧಾಯಕ ಕಾರ್ಯಕ್ರಮವನ್ನು ಮಂಜೂರು ಮಾಡಿದೆ. ಅದಕ್ಕಾಗಿ ದುಡಿಯುವದು ಆಚಾರ್ಯರಂಥ ಏಕನಿಷ್ಠ ದೇಶಸೇವಕರ ಧರ್ಮವಲ್ಲವೇ? ಆಚಾರ್ಯರು ಮತ್ತೂ ಸೂಕ್ಷ್ಮ ರೀತಿಯಿಂದ ವಿಚಾರಿಸಿ, ತಮ್ಮ ಧೋರಣವನ್ನು ತಿದ್ದುಪಡಿಸುವರೆಂದು ಕೋರಿಕೆ.

ಕರ್ನಾಟಕ ಹಾಗು ಬಂಗಾಲ ಪ್ರಾಂತಿಕ ಕೊಂಗ್ರೆಸ ಕಮಿಟಿಗಳೂ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ನಿರ್ಣಯವು 'ಅಧಿಕಾರಾತಿಕ್ರಮಣ'ವೆಂದು ನಿರ್ಣಯಿಸಿ, ಅದನ್ನು ಉಲ್ಲಂಘಿಸುವ ಠರಾವನ್ನು ಕೈಕೊಂಡು, ರಾಷ್ಟ್ರವನ್ನು ಮತ್ತೂ ಗೊಂದಲದಲ್ಲಿ ಹಾಕಿರುವವು. ಪ್ರಾಂತಿಕ ಕಮಿಟಿಗಳಿಗೆ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ನಿರ್ಣಯದ ಯುಕ್ತಾಯುಕ್ತತೆಯನ್ನು ಚರ್ಚಿಸುವ ಹಕ್ಕು ಎಲ್ಲಿಂದ ಪ್ರಾಪ್ತವಾಯಿತು? ಎಂಬುದು ನಮಗೆ ತಿಳಿಯದು. ಏನೆಂದರೂ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ವರಿಷ್ಠ ಮಂಡಳವು. ಅದರ ನಿರ್ಣಯಗಳನ್ನು ಶಿರಸಾ ಮನ್ನಿಸುವದು ಅದರ ಅಧಿಕಾರಕ್ಕೊಳಪಟ್ಟ ಎಲ್ಲ ಕಮಿಟಿಗಳ ಆದ್ಯ ಕರ್ತವ್ಯವಿದೆಂದು ನಮ್ಮ ಮತವಿದೆ. ಪ್ರಾಂತಿಕ ಕಮಿಟಿಗಳು ಅ. ಭಾ. ಕೊಂ. ಕಮಿಟಿಯ ನಿರ್ಣಯಗಳನ್ನು ಉಲ್ಲಂಘಿಸಿದರೆ, ಜಿಲ್ಹಾ ಕಮಿಟಿಗಳು ಪ್ರಾಂತಿಕ ಮಂಡಳಗಳನ್ನು ಧಿಕ್ಕರಿಸುವವು, ತಾಲೂಕಾ ಕಮಿಟಿಗಳು ಜಿಲ್ಹಾ ಕಮಿಟಿಯನ್ನು ಬದಿಗೊತ್ತುವವು; ಗ್ರಾಮ ಕಮಿಟಿಗಳು ತಾಲೂಕಾ ಮಂಡಳಕ್ಕೆ ವಿಧೇಯರಾಗಲಿಕ್ಕಿಲ್ಲ. ಇದೇನು ಕಲ್ಪನಾಸೃಷ್ಟಿಯಲ್ಲ. ನಮ್ಮ ಪ್ರಾಂತದ ಸ್ಥಿತಿಯನ್ನೇ ಉದಾಹರಿಸುವೆವು. ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯು ಬಹಿಷ್ಕಾರ ಚಳವಳಿಯನ್ನು ಪುರಸ್ಕರಿಸುವ ಠರಾವನ್ನು ಪಾಸು ಮಾಡಿದೆ, ನಮ್ಮ ಜಿಲ್ಹಾ ಕಮಿಟಿಯು ಅ. ಭಾ. ಕೊ. ಕಮಿಟಿಯ ನಿರ್ಣಯವನ್ನು ಆದರಿಸಿದೆ; ಸಿದ್ದಾಪುರದ ತಾಲೂಕಾ ಕೊಂಗ್ರೆಸ ಕಮಿಟಿಯು ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯ ನಿರ್ಣಯವನ್ನು ಕೈಕೊಂಡು, ಜಿಲ್ಹಾ ಕಮಿಟಿಯನ್ನು ದೂರ ಸಾರಿದೆ. ನಮ್ಮ ಪ್ರಾಂತದೊಳಗಿನ ರಾಷ್ಟ್ರಸಂಸ್ಥೆಗಳಲ್ಲಿ ಒದಗಿದ ಬಡದಾಟದ ಕಥೆಯಿದು. ಮದ್ರಾಸಿನ ಶ್ರೀ ವರದರಾಜಲು ನಾಯುಡುರವರು ಉದ್ಗರಿಸಿದಂತೆ, ಈಗ ರಾಷ್ಟ್ರದಲ್ಲಿ ಅರಾಜಕತೆಯು ತಲೆದೋರಹತ್ತಿದೆ. ರಾಷ್ಟ್ರಸಂಘಟನೆಯು ಶಿಥಿಲವಾಗಿ, ರಾಷ್ಟ್ರದಲ್ಲೆಲ್ಲ ಒಂದು ಬಗೆಯ ಬೇಸತ್ತು ಒದಗಿದೆಂಬದಕ್ಕೆ ನಮ್ಮ ಪ್ರಾಂತಿಕ ಪರಿಸ್ಥಿತಿಯ ಉದಾಹರಣೆಯೇ ಸಾಕು. ವೈಯಕ್ತಿಕ ಮತಗಳನ್ನು ಸಂಸ್ಥೆಗಳ ಮೇಲೆ ಹೊರಿಸುವದರಿಂದ ಉಂಟಾಗುವ ವಿಪನ್ನಾವಸ್ಥೆಯಿದು.

ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯು ಇನ್ನೊಂದು ಠರಾವನ್ನು ಪಾಸು ಮಾಡಿದೆ. ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ಪುನಃ ನೆರೆದು, ಈ ಪ್ರಶ್ನೆಯನ್ನು ಪುನರಾಲೋಚಿಸಬೇಕೆಂದು ಕಮಿಟಿಯವರು ನಿರ್ಣಯಿಸುತ್ತಾರೆ. ಕಳೆದ ಅ. ಭಾ. ಕೊಂ. ಕಮಿಟಿಯ ನಿರ್ಣಯದ ಗತಿಯು ಈ ಪರಿ

ದಾದ ಮೇಲೆ ಮುಂದಿನ ಕಮಿಟಿಯ ನಿರ್ಣಯವನ್ನಾದರೂ ಇವರು ಮನ್ನಿಸುವರೆಂದು ಯಾರಾದರೂ ಹೇಗೆ ಹೇಳುವದು? ಅಂತು ದಾಸ-ನೆಹರೂ ಕೂಟದವರಿಗೆ ‘ದೇಶದ್ರೋಹಿ’ ಮಂದಿಗಳೆಂದು ಸಂಬೋಧಿಸುವವರೇ ಈಗ ದೇಶದ್ರೋಹಿಗಳಾಗಿರುವರು. ಮಹಾತ್ಮರು, ಅಸಹಯೋಗದ ಶೈಶವ ಕಾಲದಲ್ಲಿ ದೇಶಸೇವೆಯನ್ನು ಜರುಗಿಸುವ ಅತ್ಯುತ್ಸಾಹದಲ್ಲಿ “ಶಿಸ್ತನ್ನು ಭಂಗಿಸಬೇಡಿರಿ” ಎಂದು ಪುನಃ ಪುನಃ ಪ್ರಜೆಗಳಿಗೆ ಬೋಧಿಸುತ್ತಿದ್ದರು. ರಾಷ್ಟ್ರದ ಮುಂದಾಳುಗಳೇ ಈಗ ಸ್ವತಃ ಶಿಸ್ತನ್ನು ಸುಸಂಘಟಿತ ರೀತಿಯಿಂದ ಮುರಿಯುವದನ್ನು ನೋಡಿ, ಯಾರಿಗೆ ತಾನೇ ವ್ಯಸನವಾಗದಿರದು! ಶ್ರೀ|| ರಾಜಗೋಪಾಲಾಚಾರ್ಯರಿಗಾಗಲಿ, ನಮ್ಮ ಗಂಗಾಧರರಾವ ದೇಶಪಾಂಡೆಯವರಿಗಾಗಲಿ, ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯ ನಿರ್ಣಯಕ್ಕನುಕೂಲವಾಗಿ ರಾಷ್ಟ್ರಸೇವೆ ನಡಿಸಲು ಮನೋದೇವತೆಯು ಒಪ್ಪದಿದ್ದರೆ, ತಮ್ಮ ತಮ್ಮ ಅಧಿಕಾರಸ್ಥಾನಗಳನ್ನು ತ್ಯಜಿಸಿ, ಸ್ವತಂತ್ರ ರೀತಿಯಿಂದ, ಸ್ವಂತ ಜವಾಬದಾರಿಯಿಂದ, ತಮ್ಮ ಇಚ್ಛೆಯಂತೆ ರಾಷ್ಟ್ರಸೇವೆ ನಡಿಸಲು ಯಾರದೂ ಅಡ್ಡಿಯಿರಲಾರದು. ಅಲ್ಪಸಂಖ್ಯಾಕರಿಗೆ ಮತ ಸ್ವಾತಂತ್ರ್ಯವಿದೆಂದು ಮಹಾತ್ಮರೇ ಹೇಳಿರುವಾಗ, ಈ ರಾಜಮಾರ್ಗವನ್ನು ಅವರು ತೊರೆದು, ಸಂಘಟಿತ ಸಂಸ್ಥೆಗಳಲ್ಲಿ ಗೊಂದಲ ಹಾಕುವದನ್ನು ನೋಡಿ, ಎಲ್ಲರೂ ಚಕಿತರಾಗಿರುವರು. ಈ ಪ್ರಕಾರವು ಹೀಗೆಯೇ ಮುಂದಾದರೆ, ರಾಷ್ಟ್ರೀಯ ಸಂಸ್ಥೆಗಳೆಲ್ಲ ಚದರಿ, ಕ್ಷಣಾರ್ಧದಲ್ಲಿ ಅವು ಮಣ್ಣುಪಾಲಾಗುವವು. ರಾಷ್ಟ್ರಭಕ್ತರು ರಾಷ್ಟ್ರಸೇವೆ ಮಾಡುವ ಅತ್ಯುತ್ಸಾಹದಲ್ಲಿ ರಾಷ್ಟ್ರವನ್ನೇ ಭಂಗಿಸಿ, ಅಪರಿಮಿತ ಹಾನಿ ಮಾಡುವರು. ಇದೊಂದು ದೊಡ್ಡ ಗಂಡಾಂತರವು. ಮಹಾತ್ಮರಂಥ ಯೋಜಕ ಪುರುಷರು ಅದೃಶ್ಯರಾದ್ದರಿಂದ, ಇಂಥ ಗೊಂದಲವೆಬ್ಬಿದೆ. ಆದರೂ, ಮಾನ್ಯ ಮುಂದಾಳುಗಳು ಮಹಾತ್ಮರ ವಚನಗಳನ್ನು ಸೂಕ್ಷ್ಮ ರೀತಿಯಿಂದ ವಿಚಾರಿಸಿ, ರಾಷ್ಟ್ರೀಯ ಸಭೆಯ ಮೇಲಿರುವ ಸಾಮಾನ್ಯ ಪ್ರಜೆಗಳ ನಿಷ್ಠೆಯನ್ನು ಎಳ್ಳು ಕಾಳಿನಷ್ಟು ಕಡಿಮೆ ಮಾಡಗೊಡದೆ, ಶಿಸ್ತಿನಿಂದ, ಆತ್ಮಗೌರವವನ್ನು ಬದಿಗೊತ್ತಿ, ಕೇವಲ ರಾಷ್ಟ್ರಹಿತ ಬುದ್ಧಿಯಿಂದಲೇ ನಡೆಯಬೇಕಾಗಿ ನಮ್ಮ ಅಗ್ರಹಪೂರ್ವಕ, ಅಂತಃಕರಣಪೂರ್ವಕ ಬಿನ್ನಹವಿದೆ. ಇಲ್ಲದಿದ್ದರೆ, ರಾಷ್ಟ್ರಸಂಘಟನೆಯನ್ನು ಶಿಥಿಲಪಡಿಸಿದ ಜವಾಬದಾರಿಯು ಈ ಮುಂದಾಳುಗಳ ಮೇಲೆ ಬರುವದು. ಆದರಿಂದ ನಾವು ವಿರೋಧಿ ಮುಂದಾಳುಗಳಿಗೆ ‘ಜೋಕೆ, ಜೋಕೆ, ಜೋಕೆ’ ಎಂದು ತ್ರಿವಾರ ಹೇಳಿ, ಈ ಲೇಖವನ್ನು ಪರಿಸಮಾಪ್ತಗೊಳಿಸುವೆವು.

ಸ್ಫುಟ ಸೂಚನೆಗಳು.

೧. ಸ್ವರಾಜ್ಯ ಸರಕಾರ ಹಾಗು ನೌಕರಶಾಹಿಯ ಕಾರಭಾರದೊಳಗಿನ ಭೇದವನ್ನು ಮತ್ತೊಂದು ಬಗೆಯಿಂದ ಉದಾಹರಿಸಬಹುದು. ಹಿಂದುಸ್ಥಾನದಲ್ಲಿ ರಾಜಕೀಯ ಕೈದಿಗಳಿಗೆ ವೃತ್ತಪತ್ರ ಮೊದಲಾದ ರಾಜಕೀಯ ವಾಙ್ಮಯವನ್ನು ಓದಗೊಡುವದಿಲ್ಲ. ಅಷ್ಟೇಕೆ? ರಾಜಕೀಯ ವಿಷಯಗಳನ್ನು, ಅಸ್ಪೃಶ್ಯರಂತೆ, ಅವರು ಆಪ್ತೇಷ್ಟರಿಗೆ ಮಾಡುವ ಪತ್ರವ್ಯವಹಾರದಲ್ಲಿ ಸಹ ಸ್ಪರ್ಶಿಸಬಾರದು. ಇಷ್ಟು ಇಲ್ಲಿಯ ರಾಜಕೀಯ ಕೈದಿಗಳು ಮುಚಿ ಇರುವರು. ಈಗ ೭ ವರ್ಷಗಳ ಸಜೆಯಾದ ಹೊರೇಶಿಯೋ ಬೊಟಮ್ಲೀ ಎಂಬ ವಿಲಾಯತಿಯೊಳಗಿನ ಅಪರಾಧಿಯ ನಡಾವಳಿಯನ್ನು ಕೇಳಿರಿ. ಆಪ್ತರಿಗೆ ಪತ್ರ ಬರೆಯುವ ಹಕ್ಕು ಇವರಿಗಿದೆ. ಅವರು ಏನು ಪತ್ರಗಳಲ್ಲಿ ಬರೆಯುತ್ತಾರೆಂದು ಬಲ್ಲಿರೇನು? ಜೈಲಿನಲ್ಲಿ ಅಧಿಕಾರಿಗಳು ತಮಗೆ ನಡಿಸಿಕೊಳ್ಳುವ ಬಗೆ, ಜರ್ಮನಿಯು ಆಕ್ರಮಿಸಿದ ರೂರ ಪ್ರದೇಶದಲ್ಲಿ ಮಾಡಿದ ಅತ್ಯಾಚಾರಗಳು, ಬ್ರಿಟನದಲ್ಲಿ ವೈಮಾನಿಕ ಸಂರಕ್ಷಣೆ ಸೇನೆ, ಮಂತ್ರಿಮಂಡಳದ ಬದಲಾವಣೆ, ಕೂಲಿಕಾರ ಪಕ್ಷದ ಭವಿತವ್ಯತೆ ಮೊದಲಾದ ಪ್ರಶ್ನೆಗಳನ್ನು ವಿಸ್ತರಶಃ ಚರ್ಚಿಸಿರುವರು. ಗ್ರೇಟ ಬ್ರಿಟನ್ನದಲ್ಲಿ ವಂಚಕನೆಂದು ಶಿಕ್ಷೆ ಹೊಂದಿದ ಹೊರೇಶಿಯೋ ಬೋಟಮ್ಲೀಯವರ ನಡಾವಳಿಯು ಸಂಗಡ ಜಗತ್ ಶ್ರೇಷ್ಠ ಪುರುಷರೆಂದು ಖ್ಯಾತಿಹೊಂದಿದ ಮಹಾತ್ಮರ ನಡಾವಳಿಯನ್ನು ತುಲನೆ ಮಾಡಿದರೆ, ವಿಲಾಯತಿಯೊಳಗಿನ ಸ್ವರಾಜ್ಯ, ಹಿಂದುಸ್ಥಾನದೊಳಗಿನ ನೌಕರಶಾಹಿಯು ಜವಾಬದಾರ ಸ್ವರಾಜ್ಯ ಇವುಗಳೊಳಗಿನ ಭೇದವು ಸ್ಪಷ್ಟೋತ್ಪತ್ತಿಗೆ ಬರುತ್ತದೆ. ಅದರಿಂದಲೇ ಸುರಾಜ್ಯವು ಸ್ವರಾಜ್ಯಕ್ಕೆ ಸರಿಬರಲಾರದೆಂದು ಹೇಳುತ್ತಾರಲ್ಲವೇ!

---

೨. ಕರ್ನಾಟಕ ಸಾಹಿತ್ಯ ಸಮ್ಮೇಲನದ ವಾದವು ಸಮಾಧಾನಕರ ರೀತಿಯಿಂದ ನಿಕಾಲೆಯಾಯಿತೆಂದು ತಿಳಿಸಲು ನಮಗೆ ಅತ್ಯಂತ ಸಂತೋಷವಾಗುತ್ತದೆ. ಧಾರವಾಡದ ಮಾನ್ಯ ಶ್ರೀ|| ಆಲೂರ ವೆಂಕಟರಾಯರು ಬೆಂಗಳೂರ ಮೈಸೂರ ವರೆಗೆ ಪ್ರಯಾಣ ಬೆಳಿಸಿ, ಸಾಹಿತ್ಯ ಪರಿಷತ್ತಿನ ಚಾಲಕರ ಭೆಟ್ಟಿ ಪಡಕೊಂಡರು. ಅಲ್ಲಿ ಅವರಗೂಡ ವಿಜಾಪುರದ ಸಮ್ಮೇಲನದ ಬಗ್ಗೆ ಸಾಂಗೋಪಾಂಗ ಚರ್ಚೆಯಾಯಿತು. ಮತ್ತು ಶ್ರೀಮಾನ್ ತಾತಾಚಾರ್ಯರವರೇ ಪರಿಷತ್ತಿನ ಅಧ್ಯಕ್ಷರಾಗಬೇಕೆಂದು ನಿರ್ಣಯವಾಯಿತು. ಮೇಲಾಗಿ, ಬೆಂಗಳೂರಿನ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳು ವಿಜಾಪುರಕ್ಕೆ ಬಂದು, ಸರಸ್ವತೀ ದೇವಿಯನ್ನು ಅರ್ಚಿಸಲು ಒಪ್ಪಿರುವರೆಂದು ತಿಳಿದು, ನಮ್ಮ ಸಂತೋಷವು ದ್ವಿಗುಣಿತವಾಗಿದೆ. ಬೆಂಗಳೂರಿನ ಸಾಹಿತ್ಯ ಪರಿಷತ್ತಿನ ಚಾಲಕರ ತಪ್ಪು ತಿಳುವಳಿಕೆಗಳನ್ನು ದೂರಪಡಿಸಿ, ಸಮ್ಮೇಲನ ಕಾರ್ಯವನ್ನು ಮುಂದರಿಸಿದ ಬಗ್ಗೆ ನಾವು ಆಲೂರ ವೆಂಕಟರಾಯರ ಉಪಕಾರ ಮನ್ನಿಸುವೆವು. ಬೆಂಗಳೂರಿನವರಾದರೂ ತಾವು ಹಿಡಿದ ಮೊಲಕ್ಕೆ ಮೂರೇ ಕಾಲು ಎಂಬ ಒಣ ಗೌರವದ ದುರಾಗ್ರಹಕ್ಕೆ ಬಲಿಬೀಳದೆ, ತಪ್ಪು ಒಪ್ಪಿಕೊಳ್ಳುವಷ್ಟು ಔದಾರ್ಯ ಪ್ರದರ್ಶಿಸಿದ ಬಗ್ಗೆ ಅವರನ್ನೂ ಅಭಿನಂದಿಸಬೇಕಾಗಿದೆ. ಇನ್ನು ಸಾಹಿತ್ಯ ಸೇವಕರೆಲ್ಲರೂ ವಿಜಾಪುರಕ್ಕೆ ಉತ್ಸಾಹದಿಂದ ಗಮಿಸಿ, ಸಾಹಿತ್ಯ ಸಮ್ಮೇಲನವನ್ನು ವಿಶೇಷ ವಿಜೃಂಭಣೆಯಿಂದ ನೆರವೇರಿಸಿ, ಕರ್ನಾಟಕ ಸಾಹಿತ್ಯ ದೇವಿಯನ್ನು ಪ್ರಸನ್ನಗೊಳಿಸಬೇಕಾಗಿ ಅಗ್ರಹಪೂರ್ವಕವಾಗಿ ಬಿನ್ನೈಸುವೆವು.

---

೩. ಹೊಸ ಜಂಗಲ ಧೋರಣದ ಮೇಲೆ ಮುಂಬಯಿಯ ರಾ|| ಎಸ್. ಜಿ. ಡಬ್ಲ್ಯು ಹಾಗು ನಮ್ಮ ಜಿಲ್ಲಾಧಿಪತಿ ಮಿ|| ಹೇಗರವರೊಳಗಿನ ಪತ್ರವ್ಯವಹಾರವನ್ನು ನಾವು ಈ ಮೊದಲೇ ಪ್ರಕಟಿಸಿರುವೆವು. ಹೊಸ ಯೋಜನೆಯು ಹಳೇ ಮುದ್ರಣ ಲೇಖದ ಒಂದು ತಪಶೀಲಿನ ವಿವರವೆಂದು ವಾಚಕರಿಗೆ ಪುನಃ ಹೇಳಬೇಕಾಗಿಲ್ಲ. ಮೂಲ ಮುದ್ರಣ ಲೇಖದ ಧೋರಣವೇ ಪ್ರಜೆಗಳಿಗೆ ಮಾನ್ಯವಾಗದಿರಲು, ಈ ಹೊಸ ಯೋಜನೆಯು ಅವರಿಗೆ ಹ್ಯಾಗೆ ಮಾನ್ಯವಾಗುವದು? ಮಿ| ಹೇಗರವರು ಬರೆದ ಪತ್ರಕ್ಕೆ ರಾ| ಎಸ್. ಜಿ. ಡಬ್ಲ್ಯುರವರು ಚೊಕ್ಕ ಉತ್ತರವನ್ನಿತ್ತಿರುವರು. ೩೦,೦೦೦ ಎಕರೆ ಜಂಗಲು ಕ್ಷೇತ್ರವನ್ನು ತಾವು ಬೆಳಿಸಿ, ೩೩,೩೧೧ ಎಕರೆ ವರೆಗೆ ಒಯ್ದೆವೆಂದು ಮಿ| ಹೇಗರು ಬಡಿವಾರ ಹೊಡೆಯುತ್ತಾರೆ. ಈ ಕ್ಷೇತ್ರವು ಪರಮಾವಧಿಯ ಕ್ಷೇತ್ರವೆಂತಲೂ, ಇನ್ನು ಜಂಗಲು ಕ್ಷೇತ್ರವನ್ನು ಪ್ರಜೆಗಳಿಗೆ ಕೊಡಬೇಕೆಂದಿದ್ದರೂ, ಜಂಗಲೇ ಇಲ್ಲೆಂತಲೂ ಹೇಗರ ಅಂಬೋಣವಿದೆ. ಈ ತಾಲೂಕಿನಲ್ಲಿ ಬಿಂಗಡಿಸಿಕೊಟ್ಟ ಕ್ಷೇತ್ರವು ೯ರಲ್ಲಿ ಒಂದು ಪಾಲು ಸಹ ಇಲ್ಲವೆಂದು ಎಸ್. ಜಿ. ಡಬ್ಲ್ಯುರವರು ಅಂಕೆಗಳನ್ನು ಸಾದರಪಡಿಸಿ, ಸಿದ್ಧ ಮಾಡಿರುವರು. ಈ ಬಗ್ಗೆ ಕಲೆಕ್ಟರರ ಉತ್ತರವೇನಿರುವದು? ಮಿ| ಹೇಗರವರು ಇನ್ನು ಜಂಗಲಿದ್ದರೆ, ಬಂದು ತೋರಿಸಿಕೊಡಿರಿ, ಎಂದು ಅಹ್ವಾನವನ್ನು ಮಾಡುತ್ತಾರೆ. ದೊಡ್ಡ ದೊಡ್ಡ ಭತ್ತೆ, ಸಂಬಳ ತಿನ್ನುವದು ಕೊಲಿನ್ಸ ಸಾಹೇಬರು, ಎಲ್ಲೆಲ್ಲಿ ಪ್ರಜೆಗಳಿಗೆ ಕೊಡತಕ್ಕ ಜಂಗಲು ಇರುವದೆಂದು ತೋರಿಸುವದು ರಾ|| ಎಸ್. ಜಿ. ಡಬ್ಲ್ಯುರವರು. ಈ ಪಾಲುಗಾರಿಕೆಯು “ಖಾನೇ ಪಿನೇಕು ಮೈ, ಲಢನೇಕು ಮೆರಾ ಬಡಾ ಭಾಯಿ” ಎಂಬಂತಾಗಿರುವದಲ್ಲವೇ? ಇನ್ನೊಂದು ಪ್ರಶ್ನೆಯಿದೆ. ಮೊದಲು, ಡಿಪೋಗಳಿಗೆ ಕಟ್ಟಿಗೆಯನ್ನು ಪೂರೈಸುವದು ಜಂಗಲ ಖಾತೆಯ ಅಡಳಿತೆಯೊಳಗಿನ ಕ್ಷೇತ್ರದಿಂದ. ಈಗ ಮ್ಯಾನರು ಜಂಗಲುಗಳಿಂದಲೇ ಅದನ್ನು ಪೂರೈಸಿಕೊಳ್ಳಬೇಕೆಂದು ವಿಧಿಸೋಣಾಗಿದೆ. ಮೊದಲೇ ಮ್ಯಾನರ ಜಂಗಲುಗಳಲ್ಲಿ ಕಟ್ಟಿಗೆಯ ಮಾನವು ಅಷ್ಟಕ್ಕಷ್ಟೇ. ಮೇಲೆ ಡಿಪೋ ಕಟ್ಟಿಗೆಯನ್ನು ಪೂರೈಸಹತ್ತಿದರೆ, ಮ್ಯಾನರ ಜಂಗಲುಗಳು ೪-೫ ವರ್ಷಗಳಲ್ಲಿ ಬರಿದಾಗದೆ ಹೋಗಲಿಕ್ಕಿಲ್ಲ. ಮ್ಯಾನರ ಜಂಗಲುಗಳ ಮೇಲಿನ ಹೊಸ ಹೊರೆಯಿದು. ಮಿ|| ಹೇಗರು ಕ್ಷೇತ್ರ ಹೆಚ್ಚಿಸಿ, ಉಪಕಾರ ಮಾಡಿದ ಸುದ್ದಿ ಹೇಳುವಾಗ, ಹೊರೆ ಹೆಚ್ಚಿಸಿದ ಸುದ್ದಿಯನ್ನು ಮಾತ್ರ ಯಾಕೆ ಅಡಗಿಸುತ್ತಾರೆ? ಇರಲಿ. ಈ ಯೋಜನೆಯು ಮೂಲತಃ ತಪ್ಪಿದೆ. ಇದನ್ನು ಆಮೂಲಾಗ್ರ ತಿದ್ದುಪಡಿಸಿದ ಹೊರತು, ಅದು ಪ್ರಜೆಗಳಿಗೆ ಎಂದೂ ಸಮ್ಮತವಾಗದು; ಸುಖವೂ ಆಗದು; ಬೇಸಾಯವೂ ಲಾಭದಾಯಕವಾಗಲಾರದು. ಆ ಬಗ್ಗೆ ಎಲ್ಲ ಪ್ರಜೆಗಳು ವಿಶೇಷ ಚಳವಳಿ ಮಾಡತಕ್ಕದು ಅವಶ್ಯವಿದೆ

---

೪. ಲಿಂಗಾಯತರ ಮೇಲಿನ ಪರಮಾತ್ಮನ ಕೃಪೆಯನ್ನು ಇನ್ನೊಂದೆಡೆಯಲ್ಲಿ ಕೊಟ್ಟಿರುವೆವು. ಅದನ್ನು ಓದಿ, ಅನೇಕ ವಿಚಾರಗಳು ಸೂಚಿಸುತ್ತವೆ.

ಮೊಟ್ಟಮೊದಲು, ಮಿ॥ ಹೇಗರಿಗೆ ಅಭಿನಂದಿಸಬೇಕಾಗಿದೆ ಯಾಕಂದರೆ, ಅವರು ಪರಮಾತ್ಮನ ಕೃಪೆಯನ್ನು ಲಿಂಗಾಯತರ ಮೇಲೆ ಸುರಿಸಲು ಬಹುಪರಿಯಿಂದ ದಣಿದರು. ಶಾಮುದ್ರಾರ ಗವ್ಹರ್ನರರು ನುಡಿದಂತೆ, ಲಿಂಗಾಯತರು ಬ್ರಿಟಿಶ ಸರಕಾರದ ರಾಜನಿಷ್ಠ ಪ್ರಜೆಗಳೆಂದು ವರದಿ ಮಾಡ್ಸಿರುವರು ಕಲೆಕ್ಟರ ಮಿ॥ ಹೇಗರೇ ರಾಜನಿಷ್ಠ ಪ್ರಜೆಗಳಿಗೂ, ರಾಜ ಪ್ರತಿನಿಧಿಗಳಿಗೂ ಪಿತಾ-ಪುತ್ರರಂತೆ ಏಕತ್ರ ಕೂಡಿಸಿದ್ದು ಮುಖಾ ಪುಣ್ಯದಾಯಕವು. ಗವ್ಹರ್ನರರು ಇತರ ಪ್ರಜೆಗಳು 'ಯಾ ರಾಜನಿಷ್ಠರಿದ್ದಿ?' ಎಂದು ಮಿ॥ ಹೇಗರಿಗೆ ಪ್ರಶ್ನಿಸಿ, ಇತರರನ್ನೂ ಲಿಂಗಾಯತರಂತೆ 'ರಾಜನಿಷ್ಠ ಮಾಡಲು ಹವಣಿಸಿದ್ದರೆ, ಬಹಳ ಶ್ರೇಯಸ್ಕರವಾಗುತ್ತಿತ್ತು ನಮಗೆಂತು, ಎಲ್ಲ ಪ್ರಜೆಗಳು ರಾಜನಿಷ್ಠರೇ ಎಂದು ತೋರುತ್ತದೆ ರಾಜದ್ರೋಹಿಗಳು ಯಾರೂ ಇಲ್ಲ. ನೌಕರಶಾಹಿಯು ರಾಜ್ಯತಂತ್ರವನ್ನು ಅರ್ಥಗಳೆಯುವವರು ಎದೆ ತರಿದ್ದರೂ ಬಾಹರಹರೆ ನಿಷ್ಠೆಯನ್ನು ಎಲ್ಲಿಯೂ ಪ್ರದರ್ಶಿಸುವರೇ ಹೀಗಿದ್ದು, ಮಿ॥ ಹೇಗರವರು ಗವ್ಹರ್ನರರಿಗೆ ಲಿಂಗಾಯತರನ್ನು ಮಾತ್ರ ರಾಜನಿಷ್ಠರೆಂದು ಪರಿಚಯಿಸಿ ಕೊಡಿಸುವ ಹೇತುವೇನಿರಬಹುದು? ಪರಾಜಯದಲ್ಲಿ ಪಕ್ಷಪಾತ, ಒಡಕು ಹುಟ್ಟಿಸಿ, ತಮ್ಮ ಕಾರ್ಯ ಸಾಧಿಸುವ ನೌಕರಶಾಹಿಯ ಪರಂಪರಾಗತ ಧೋರಣದ ಇದೊಂದು ಮಾದರಿಯೆಂದು ನಾವು ಗ್ರಹಿಸಿದರೆ, ಅಯಥಾರ್ಥವಾಗುವದೇನು?

ಲಿಂಗಾಯತ ಬಾಂಧವರಿಗೂ ಎರಡು ಪ್ರಶ್ನೆ ಕೇಳಬೇಕಾಗಿದೆ. ಪರಮಾತ್ಮನ ಕೃಪೆಯಿಂದ ತಮಗೆ ಲಭಿಸಿದ್ದೇನು? ಬ್ರಾಹ್ಮಣೇತರ ಪ್ರತಿನಿಧಿಗಳ, ಇಲಾಖಾಧಿಪತಿಗಳ ದರ್ಶನವು ತಮಗಾಯಿತು. ತಾವು ಧನ್ಯತೆಯನ್ನು ಪಡೆದಿರಿ. ಇದೆಲ್ಲ ಸರಿ. ತಾವು ಪಡೆದದ್ದೇನು? ಶಾಲಾ-ಕಾಲೇಜುಗಳ ಮಾಹಿತಿ, ಒದೇನ, ಸಿ-ಸೀ ಕಲ್ಪನೆ ದೊರೆತದ್ದೊಂದು. ನಾಡಿನಲ್ಲಿ ಎಷ್ಟು ಪದವೀಧರ ತರುಣರಿದ್ದೀರಿ? ವೈಯಕ್ತಿಕ ಬೇಡಿಕೆಗಳಿಂದ ಗವ್ಹರ್ನರರು ಶರಾ ಕೊಡದೆ, ಅದನ್ನು ನಿರಾಕರಿಸಿ ಬಿಟ್ಟರು ಅದರ ಬದಲಿಗೆ ಪ್ರಾಸ್ತಾವಿಕವಾದದ್ದು ಏನು. ಸರಿ ಎಷ್ಟು ಜನ ಮಾತುಗಳು. ಮುಕ್ತಿದಾಯ ಪ್ರಶ್ನೆಯದೆ. ಎಲ್ಲರು ಹೊಟ್ಟೆಯ ಸಲುವಾಗಿ ಸಂಪು ಮಾಡಿದಾಗ ನೀವು ಬಾಜೂ ವಹಿಸಿಕೊಂಡು ನೌಕರಶಾಹಿಗೆ ಸಹಾಯಿಸಿದ್ದೀರಿ. ಈ ಒತ್ತಿನ ಪ್ರತಿಫಲವೇನು? ಸಂಬಳವು ಏರಿಸಲಾಯಿತೋ? ಇಲ್ಲಿ ಅಕ್ಷರಶಃ ದೇಶದ ಸಲುವಾಗಿ ಹೊಟ್ಟೆ ಕಟ್ಟಿಕೊಂಡಿದ್ದಲ್ಲಿ ನಿಮಗೆ ಏನಾದರೂ, ಏನು ಸಿಕ್ಕಿತೋ? ಅದೂ ಇಲ್ಲ. ಯಾಕಂದರೆ, ಎಲ್ಲರ ಹೊಟ್ಟೆಯ ಸೇವೆ ನಡೆದಿರುವದಲ್ಲವೇ? ಸತ್ತೊಂದು ವಿಚಾರವಿದೆ. ನಿಮ್ಮ ಇತರ ಬ್ರಾಹ್ಮಣೇತರ ಬಾಂಧವರ ಪಕ್ಷವಹಿಸಿದಂತೆ ಕಲಹ ನಡೆಸುವಂತೆ ಸಂಬಳ ಬೆಳೆಸಲು ಅಧಿಕಾರಗಳನ್ನು ಕೇಳಿದ್ದಲ್ಲಿ ಇತರ ಜಾತಿಯವರು ನಿಮ್ಮ ಮೇಲೆ ದ್ವೇಷ ಮಾಡಿ, ನಿಮ್ಮ ಅಧಿಕಾರಗಳನ್ನು ಪಡೆದರೆ, ನೀವು ಸಂತಾಪವಾಗಲಿಕ್ಕಿಲ್ಲೇನು? ಇದನ್ನೇ ಸ್ವಲ್ಪ ವಿಚಾರಿಸಿರಿ. ನಿಮ್ಮ ವಿದ್ಯಾರ್ಥಿಗಳಿಗೆ ಫೀ ಮಾಫಿ ಮಾಡದ್ದೇ ಕನ್ನಡತೀರಿ ಅದು ಎಲ್ಲಿಯ ಒಪ್ಪತ್ತದೆ? ಇತರ ಪ್ರಜೆಗಳು ತೆರುವ ಕರಗಳಿಂದಲೇ ನಿಮಗೆ ಅದನ್ನು ಕೊಡಬೇಕಲ್ಲವೇ? ಕಲೆಕ್ಟರರಾಗಲಿ, ಗವ್ಹರ್ನರರಾಗಲಿ, ತಮ್ಮ ಕಿಸೆಯೊಳಗಿಂದ ಈ ರಕಮು ಕೊಡುವದಿಲ್ಲವೆಂದು ನಿಮಗೆ ಪ್ರತ್ಯೇಕ ಹೇಳಬೇಕಾಗಿಲ್ಲ ಆದ ಕಾರಣ, ಪರಿಸ್ಥಿತಿಯನ್ನು ಚನ್ನಾಗಿ ವಿಚಾರಿಸಿ, ತಮ್ಮ ನೆರೆಹೊರೆಯ ಸಮಾಜಕ್ಕೆ ನೊಂದಿಸದೆ, ಸುಖ ಸಮಾಧಾನದಿಂದ ಉಳಿಯುವಂತೆ ನಿಮ್ಮ ಧೋರಣವನ್ನು ಬದಲಿಸಿರೆಂದು ರಾ॥ ನೆಜೂರ ಸದಾಶಿವ ಗೌಡಾ ಪಾಟೀಲ ಮೊದಲಾದ ಲಿಂಗಾಯತ ಬಾಂಧವರಿಗೆ ನಾವು ವಿನಯಪೂರ್ವಕ ಸೂಚಿಸ ಬಲ್ಲೆವು

ಸ್ಥಾನಿಕ ವೃತ್ತಾಂತ.

ಕುಮಟಾ— ಅಂತು ರವಿವಾರ ರಾತ್ರಿಯಿಂದ ಮೇಘರಾಜನು ದಯಾಪ್ರಸನ್ನನಾಗಿರುವನು ಕಳೆದ ೨-೪ ದಿವಸಗಳಲ್ಲಿ ಜೋರಾದ ಮಳೆ ಸುರಿಯಿತು ಹವೆಯಲ್ಲಿ ವಿಲಕ್ಷಣವಾದ ತಂಪು ಒಮ್ಮೆಲೆ ಒದಗಿದಾಗಿದೆ ನೀರಿನ ಗೋಳಾಟವೂ ಬಹು ಮಟ್ಟಿಗೆ ಕಡಿಮೆಯಾಗಿದೆ ಈ ವರೆಗೆ ೩-೪ ಇಂಚು ಮಳೆ ಬಿದ್ದಿರಬಹುದು, ಕಣ್ಣು ಬೇನೆಗಳ ಕಾವಳಿ ಯಥಾಸ್ಥಿತ ಕಾಲುವೆಗಳನ್ನು ಸ್ವಚ್ಛಿಸುವ ಮತ್ತು ಮಾರ್ಗಗಳಲ್ಲಿ ಬಳದು ಹೋಗಲಾರಂಭಿಸಿದೆ ಮ್ಯುನಿಸಿಪಾಲಿಟಿಯವರು ಎಚ್ಚರಾಗಲಿ

ಶ್ರೀ ಸ್ವಾಮಿ ಮಠದ ಗುರುಗಳು ಕಳೆದ ರವಿವಾರ ಸಾಯಂಕಾಲಕ್ಕೆ ಆಗಮಿಸಿ ಇಲ್ಲಿ ಆಗಮಿಸಿದ ಶಿಷ್ಯರ ಸತ್ಕಾರಗಳನ್ನು ಸ್ವೀಕರಿಸಿ ಸೋಮವಾರ ಸಾಯಂಕಾಲಕ್ಕೆ ಹೊನ್ನಾವರಕ್ಕೆ ತೆರಳಿದರು

ಮೆಕೆಂಜಿ ಸಂತತ್ತು ಈಗ ಕಾರವಾರ ಜಿಲ್ಲೆ ತಯಾರಾಗಿದೆ

ಇಲ್ಲಿಯ ಸಬ್ಜಜ್ಜರ ನ್ಯಾಯಾಲಯದ ಪ್ರಜೆಗೆ ಬ್ಯಾಂಕಿನ ರಿಪೋರ್ಟಿನ ಕಿತ್ತೂರ ಡಿ. ಪಿ. ಎಚ್ ಬೆನಾಡ ಎಂಬವರ ನೇಮಕವಾಗಿದೆ. ಕೆಲ ದಿವಸಗಳಲ್ಲಿ ಬಿಡ ಕಾರವಾರಕ್ಕಾಗಿ ತಿಳಿಯುತ್ತದೆ

ಸಾಭಾರ ಸ್ವೀಕಾರ

ಸ್ವಪ್ನ-ಫಲ:— ಲೇಖಕ ಹಾಗೂ ಪ್ರಕಾಶಕ— ಎಂ. ಶ್ರೀನಿವಾಸರಾವ (೧) ಮೆಸರ್ಸ ಕೆ ಎಚ್ ಎಂ ಸಾಲೋಮನ್, ಎಕಾಂಗಿ ನರ ಪ್ರೆಸ್ ಬೆಳ್ಗಾಂವ, ಮೆಜೋರಸ ಸ್ಟ್ರೀಟ, ಧಾರವಾಡ, ಮುಂಬಯಿ ಬೆಲೆ ೦-೩-೦ ಆಣೆ

ಸಿದ್ದಾಪುರ— ಮಳೆಯು ತಾ ೨ ನೇಗೆ ಆರಂಭಿಸಿತ್ತು. ಒಕ್ಕಲಿಗರು ಬೀಜ ಬಿತ್ತುವದರಲ್ಲಿ ತೊಡಗಿದವರು.

ಈ ತಾಲೂಕಿನ ಕಾಂಗ್ರೆಸ ಕಮಿಟಿಯ ತರ್ಫೆಯಿಂದಲೂ, ತಾಲೂಕಿನ ಜನರ ತರ್ಫೆನಿಂದಲೂ ಕಮಿಟಿಯ ಅಧ್ಯಕ್ಷರಾದ ಶ್ರೀ. ಹರಿಯಪ್ಪಾ ವಾಸುದೇವಪ್ಪಾ ಚಂದ್ರಘಟ್ಟಿಯವರು "ಅಸಹಕಾರಿತಾವಾದಿಗಳು ಕೌನ್ಸಿಲು ಬಹಿಷ್ಕಾರ ಚಳವಳಿಯನ್ನು ಮಾಡಬಾರದೆಂ"ದು ಕುಮಟೆಯಲ್ಲಿ ಕೂಡಿದ ಜಿಲ್ಲಾ ಕಮಿಟಿಯು ತಾ ೨೭-೫-೨೯ ನೇಗೆ ಮಾಡಿದ ಠರಾವು ತಮ್ಮ ತಾಲೂಕಿಗೆ ಸಮ್ಮತವಿಲ್ಲೆಂದು ತಿಳಿಸುತ್ತಾರೆ.

ತಾ ೯ ನೇ ಶನಿವಾರಕ್ಕೆ ರಾಷ್ಟ್ರೀಯ ಶಾಲೆಯಲ್ಲಿ ಭಗಿನಿ ಮಂಡಳದ ಸಭೆಯಾಯಿತು ಶ್ರೀ. ಚಂದ್ರಘಟ್ಟಿ ಹರಿಯಪ್ಪನವರು ರಾಷ್ಟ್ರೀಯ ಸಭೆಯ ಧ್ಯೇಯ, ಕಾರ್ಯಗಳನ್ನು ಭಗಿನಿಯರಿಗೆ ಚನ್ನಾಗಿ ತಿಳಿಸಿಹೇಳಿದರು.

ಶ್ರೀ ರಾಮರಾವ ಪತಂಜಿನ್ನಿಯವರು ಸೌ॥ ಸೀತಾಬಾಯಿಯವರ ಸಹಿತ ಕಳೆದ ತಾ. ೧೦ ನೇ ಬುಧವಾರಕ್ಕೆ ಆಗಮಿಸಿ, ಸುಶ್ರಾವ್ಯ ಭಾಷಣವಿತ್ತು, ಗುರುವಿನ ರಾತ್ರೆ ಶಿರಸಿ ಕಡೆಗೆ ಪ್ರಯಾಣ ಬೆಳೆಸಿದರು

ತಾ ೯ ನೇ ಶನಿವಾರಕ್ಕೆ ಮುಷ್ಟಿಫಂಡಿನ ಲೆಕ್ಕಕ್ಕೆ ೧೪ ಗಿದ್ನದಷ್ಟು ಅಕ್ಕಿ ಮತ್ತು ನಗದಿ ರೂ ೦-೮-೩ ವಸೂಲು ಬಂದಿದೆ.

ಕಾರವಾರ— ಕಳೆದ ಸೋಮವಾರಕ್ಕೆ ಅನಪೇಕ್ಷಿತವಾಗಿ ಇಲ್ಲಿ ಮಳೆ ಸುರಿಯಲಾರಂಭಿಸಿತು. ಅದೇ ದಿವಸ ಬಿರುಸಿನ ಮಳೆ ಸುರಿಯಿತು ಶೆಕೆಯಿಂದ ಬಳಲುವವರಿಗೆಲ್ಲ ಆನಂದವಾಗಿದೆ ಮಾರ್ಗಗಳೆಲ್ಲ ಮಳಲಿನಿಂದ ತುಂಬಿ ಹೋಗಿವೆ

ಕರ್ನಾಟಕ ಪ್ರಾಂತಿಕ ಕಮಿಟಿಯ ಠರಾವಿನನ್ವಯ ನಾಗಪೂರ ಸತ್ಯಾಗ್ರಹಕ್ಕೆ ಇಲ್ಲಿಂದ ಇಬ್ಬ ಸ್ವಯಂಸೇವಕರ ಹೋಗಲು ಸಿದ್ಧರಾಗಿರುವರು

ವೃತ್ತಸಾರ.

— ಲಾಹೋರ ಮ್ಯುನಿಸಿಪಾಲಿಟಿಯಲ್ಲಿ ಹೊಸ ಮ್ಯುನಿಸಿಪಲ್ ಛಟಣೆಯ ಬಗ್ಗೆ ಚರ್ಚೆ ನಡೆದಿತ್ತು. ಅಧ್ಯಕ್ಷರಾದ ಮಿ॥ ಬಶೀರ ಕಹಾಬುದ್ದೀನರವರು ಸಭಾನಿಯಮಗಳನ್ನು ಧಿಕ್ಕರಿಸಿ, ವರ್ತಿಸಿದರೆಂದ ಡಾ॥ ಗೋಪಿಚಂದ ಮೊದಲಾದ ೧೪ ಮಂದಿ ಮುಸಲ್ಮಾನೇತರ ಸಭಾಸದರು ರಾಜೀನಾಮೆ ಕೊಟ್ಟಿರುವರು

— ಪಂಜಾಬದಲ್ಲಿ ಒಬ್ಬರ ಅಕಾಲಿ ಜಾಥಾ ಚಳವಳಿಯ ಸಹಾಯಕರ ಪೈಕಿ ೫೬೭ ಮಂದಿಗಳನ್ನು ಸೆರೆಹಿಡಿದಿರುವರು ಪಂಜಾಬ ಸರಕಾರವು ಅದರ ಸಂಸ್ಥೆಯನ್ನು ಬೇಕಾಯಿದೇಶೀರ ಎಂದು ಠರಾಯಿಸಿರುವರು

— ಐರ್ಲಂಡದಲ್ಲಿ ಸರಕಾರದ ಬೇಕಾಯಿದೇಶೀರ ವರ್ತನದ ಬಗ್ಗೆ ರಾಜ್ಯಕ್ರಾಂತಿಯಾಯಿತು ಸೈನಿಕರು ಮಂತ್ರಿಗಳನ್ನೆಲ್ಲ ಸೆರೆ ಹಿಡಿದರು ಹೊಸ ಮಂತ್ರಿಮಂಡಳವು ಅಧಿಕಾರಾರೂಢವಾಗಿದೆ.

— ಚೀನ ದೇಶದಲ್ಲಿ ಮಂತ್ರಿಮಂಡಳದ ಸ್ಥಿತಿಯು ಚಿಂತಾಜನಕವಿದೆ ಪೋಲೀಸರು ಸಂಬಳ ಕೊಡದ್ದರಿಂದ ಸಂಪು ಹೂಡಿದರ ಕೂಡಲೇ ಅವರಿಗೆ ಒಂದು ತಿಂಗಳ ಸಂಬಳ ದೊರೆಯಿತು ಅವರು ಪುನಃ ಹಾಜರಾಗಿರುವರು

— ಮುಂಬಯಿಯ ಸೆಂಟ್ರಲ್ ಬೋರ್ಡ ಕಮಿಟಿಯ ಅಧ್ಯಕ್ಷರಾದ ಮಿ॥ ವಿಯುವಾ ಮಹಮ್ಮದ ಛೋಟಾನಿಯವರು ಅಧ್ಯಕ್ಷಸ್ಥಾನವನ್ನು ಕೆಲ ಖಾಸಗಿ ಕಾರಣಗಳ ಮೂಲಕ ತ್ಯಜಿಸಿರುವರ ಡಾ॥ ಅನ್ಸಾರಿಯವರು ಈ ಅಧಿಕಾರಕ್ಕೆ ನೇಮಿಸಲ್ಪಡುವರು

— ಕಲಕತ್ತೆಯ ಜನರಲ್ ಪೋಸ್ಟ ಆಫೀಸಿನ ಪರದೇಶದ ಮನಿಆರ್ಡರ ಖಾತೆಯ ಕಾರಕೂನನಾದ ಪಿ. ಕೆ ಘೋಷ್‌ರು ೯೦,೦೦೦ ರೂಪಾಯಿಗಳ ಇನ್ಶೂರ್ಡ ಪಾರ್ಸಲುಗಳನ್ನು ಕಳವು ಮಾಡಿದ ಬಗ್ಗೆ ಹೈಕೋರ್ಟಿನಲ್ಲಿ ತನಿಖೆ ನಡೆದು, ಆರೋಪಿಗೆ ೩ ವರ್ಷಗಳ ಕಠಿಣ ಸಜೆಯಾಯಿತ.

— ಮದ್ರಾಸ ಪ್ರಾಂತದ ಕಲ್ಲಿಕೋಟೆಯ ಬ್ರಾಹ್ಮಣರು ಮಲಬಾರಿನ ಪೋಲೀಸರು ೨೦೦ ಮಂದಿ ಮಾಪಿಳ್ಳೆಯರನ್ನು ದಂಗೆಮಾಡಿದ ಆರೋಪದ ಮೇಲೆ ಸೆರೆಹಿಡಿದಿರುವರೆಂದು ತಿಳಿಸುತ್ತಾರೆ ಈಗ ಹಳೆ ದಂಗೆಯ ಬಗ್ಗೆ ೩೦೦ ಮಂದಿಗಳನ್ನು ಒಮ್ಮೆಲೇ ಹಿಡಿದಿರುವದು ಅನುಚಿತವೆಂದು ಅವರ ಮತವಿದೆ.

— ಕಳೆದ ತಾ. ೩ ನೇ ರವಿವಾರ ಧಾರವಾಡದಲ್ಲಿ ಶ್ರೀ॥ ರಾಜಗೋಪಾಲಾಚಾರ್ಯ, ದೇವಿದಾಸ ಗಾಂಧಿಯವರ ಆಗಮನವಾಯಿತು ಅವರಿಗೆ ಧಾರವಾಡಿಗರು ವಿಜೃಂಭಣೆಯಿಂದ ಸ್ವಾಗತವನ್ನಿತ್ತರು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಸಭೆಯಲ್ಲಿ ಅವರಿಗೆ ಮಾನಪತ್ರ ಅರ್ಪಿಸಿದರು.

— ಮೈಸೂರ ಮಹಾರಾಜರು ನೆಲಮಂಗಲದ ಮ್ಯುನಿಸಿಪಾಲಿಟಿಗೆ ರೂ ೨೫೦೦೦ ಗಳನ್ನು ದಾನ ಮಾಡಿರುವರು. ಅಲ್ಲಿಯ ಮ್ಯುನಿಸಿಪಾಲಿಟಿಯವರು ತಮ್ಮ ಶಾಲೆಗಳಲ್ಲಿ

ನೂಲಲು ಕಲಿಯಬೇಕೆಂದು ಇಚ್ಛಿಸುವ ವಿದ್ಯಾರ್ಥಿಗಳಿಗೆ ಚರಖಗಳನ್ನು ಪೂರೈಸಿ, ಆ ಕಲೆಯನ್ನು ಕಲಿಸುವ ಏರ್ಪಾಟು ಮಾಡಬೇಕೆಂದು ನಿರ್ಧರಿಸಿರುವರು.

— ಮುಂಬಯಿ ಗವ್ಹರ್ನರರ ಕೆಲಸದ ಮುದ್ದತ್ತು ತೀರುತ್ತ ಬಂತು. ಅವರ ಸ್ಥಳಕ್ಕೆ ಲೋರ್ಡ ವಿಲೋಬೀ ಎಂಬ ದೊರೆಗಳು ಬರುವವರಿದ್ದಾರೆಂದು "ಸಂಡೇ ಎಕ್ಸಪ್ರೆಸ" ಪತ್ರಿಕೆಯು ಸುದ್ದಿ ಎಬ್ಬಿಸಿದೆ.

— ಕಳೆದ ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ಸಿಂಧೂ ನದಿಗೆ ಕಾಲುವೆಗಳನ್ನು ಕಡಿದು ಬೇಸಾಯಕ್ಕೆ ಅನುಕೂಲ ಮಾಡಬೇಕೆಂಬ ಸಕ್ಕರ ಬೇರೇಜ ಯೋಜನೆಯು ಮಂಜೂರಾಗಿದೆ. ಈ ಯೋಜನೆಗೆ ೧೮ ಕೋಟಿ ರೂಪಾಯಿ ತಗಲುವದಂತೆ! ಸದ್ಯಕ್ಕೆ ಕೌನ್ಸಿಲವು ೫೬ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದೆ.

— ಕಳೆದ ಶನಿವಾರ ರಾತ್ರಿಗೆ ದಿಲ್ಲಿಯ ಗುಪ್ತ ಪೋಲೀಸ ಖಾತೆಯ ಸುಪರಿಂಟೆಂಡೆಂಟ ಮಿ| ಬ್ಲಿಂಡನ್‌ರವರ ಮನೆಯಲ್ಲಿ ಕಳ್ಳರು ಹೊಕ್ಕು ಒಂದು ತುಬಾಕಿ, ನೂರು ೧೦ ರೂಪಾಯಿಯ ನೋಟುಗಳು, ಕೀಲಿ ಕೈಗಳ ಗೊಂಚಲು ಒಂದು ಹೀಗೆ ಕದ್ದೊಯ್ದರು.

— ಕವಿಶ್ರೇಷ್ಠ ರವೀಂದ್ರನಾಥ ಟಾಗೋರರು ಆಗಸ್ಟ ತಿಂಗಳಲ್ಲಿ ಚೀನದೇಶಕ್ಕೆ ಗಮಿಸುವರೆಂತಲೂ, ಅಲ್ಲಿಂದ ಜಪಾನಿಗೆ ಬರಲು ನಿಮಂತ್ರಿಸಬೇಕೆಂತಲೂ ಜಪಾನದಲ್ಲಿ ವಿಚಾರ ನಡೆದದೆ.

— ಮಹಾರಾಷ್ಟ್ರ ಪ್ರಾಂತಿಕ ಕೊಂಗ್ರೆಸ ಕಮೀಟಿಯು ಬಹಿಷ್ಕಾರ ತಹಕೂಬಿಯ ಠರಾವು ಪಾಸು ಮಾಡಲಿಕ್ಕೆ ಮುಂಬಯಿಯ ಅಖಿಲ ಭಾರತೀಯ ಕಮೀಟಿಗೆ ಅಧಿಕಾರವಿಲ್ಲೆಂತಲೂ, ಈ ಪ್ರಶ್ನೆಯನ್ನು ಜಗಾ ಕೊಂಗ್ರೆಸ ಕಮಿಟಿ ನಿರ್ಣಯಿಸಬೇಕೆಂತಲೂ ಠರಾವು ಮಾಡಿದೆ.

— ಭಗೂರಿನೊಳಗಿನ ಹರತಾಳವು ವಿಕಸವನೆ ನಡೆದದೆ. ಇಂದಿಗೆ ಸುಮಾರು ೫|| ತಿಂಗಳುಗಳಾದವೆ. ಮುಂಬಯಿ ಸರಕಾರ, ಲಷ್ಕರಿ ಖಾತೆ ಇವುಗಳೊಳಗೆ ಭಗೂರಿನ ಪ್ರಜೆಗಳು ಗೋಳಿಡುತ್ತಾರೆ.

— ಬಂಗಾಲದ ಬಿರುಗಾಳಿಯಿಂದ ನಿರಾಶ್ರಿತರಾದವರಿಗೆ ಸರಕಾರವು ೨೫,೦೦೦ ರೂಪಾಯಿ ಸಾಲ ಕೊಡಬೇಕೆಂದೂ ನಿರ್ಧರಿಸಿದೆ; ಆಚಾರ್ಯ ರೋಯ್‌ರವರು ಈ ಬಗ್ಗೆ ೫೦,೦೦೦ ರೂಪಾಯಿಗಳಾದರೂ ತಗಲುವವೆಂದು ಅಂದಾಜು ಮಾಡಿರುವರು.

— ಮುಲತಾನಿನಲ್ಲಿ ನಿರಾಶ್ರಿತ ಮಾಪಿಳೆಯರನ್ನು ಪುನಃ ಪ್ರಸ್ಥಾಪಿಸಲು ಜಮಾಯತ ಸಭೆಯವರು ಬಿಜಾಪುರ ಡಿಸ್ಟ್ರಿಕ್ಟದಲ್ಲಿ ಒಂದು ಹಗ್ಗ ಹೊಸೆಯುವ ಕಾರಖಾನೆಯನ್ನು ನಿರ್ಮಿಸಿರುವರು. ಇಲ್ಲಿ ೪೦೦ ಮಾಪಿಳೇ ಹೆಂಗಸರು ಕೆಲಸ ಮಾಡುತ್ತಾರೆ. ಸ್ಥಾನಿಕ ಮುಸಲ್ಮಾನರಿಯರು ಈ ಸಂಸ್ಥೆಗೆ ಏನೊಂದೂ ಸಹಾಯ ಮಾಡುವದಿಲ್ಲೆಂದು ಮಿ| ಕೆ. ಎಸ್. ಅಬ್ದುಲ್ ರಹಿಮಾನರವರು ಉದ್ಗರಿಸಿ, ಈ ಬಗ್ಗೆ ಜ್ಞಾತಿಯವರು ತಕ್ಕ ಸಹಾಯವನ್ನಿತ್ತು, ಮಾಪಿಳೇಯವರ ದುಃಖ ನಿವಾರಿಸಿ ಪುಣ್ಯವನ್ನು ಸಂಪಾದಿಸಬೇಕಾಗಿ ಬಿನ್ನೈಸುತ್ತಾರೆ.

— ಅಮಳನೇರಿನ ಖಾನದೇಶ ಶಿಕ್ಷಣ ಮಂಡಳವು ಸ್ಥಾನಿಕ ಸರಕಾರಿ ಅಮಲದಾರರ ಹಾಗು ಪ್ರತಿಷ್ಠಿತ ವಕೀಲ ವರ್ಗದವರ ದುರ್ಬೋಧನೆಗೆ ಬಲಿಬಿದ್ದು, ಕಳೆದ ೩ ವರ್ಷಗಳಿಂದ ಚಲೋ ರೀತಿಯಿಂದ ನಡಿಸಿದ ರಾಷ್ಟ್ರೀಯ ವಿದ್ಯಾಲಯ ಹಾಗು ಮಹಾ ವಿದ್ಯಾಲಗಳನ್ನು ಮುಚ್ಚಿ ಪುನಃ ಒಂದು ನಿಮ ಸರಕಾರಿ ಹ್ಯಾಸ್ಕೂಲನ್ನು ನಡಿಸುವ ಠರಾವು ಮಾಡಿದಯಂತೆ.

ದೇಶಿ ಸೆಂಟೋನಾಯಿನ್.

(ಜಂತುವಿನ ಪುಡಿ.)

ಅಪಾಯಕರವಿಲ್ಲದೆ ಗುಣ ಕೊಡುವಂಥಾದ್ದು. ಪ್ರಪಂಚದಲ್ಲಿ ಪ್ರಖ್ಯಾತ ಔಷಧ.

ಔಂಸಿನ ಶೀಸೆಗೆ ೭ ರೂ. ೮ ಆಣೆ.

ವಿಳಾಸ:— ಎಮ್. ಜಿ. ಭಾಗ್ವತ್,

ಆಯುರ್ವೇದಿಕ್ ಕೆಮಿಸ್ಟ, ಕಾರ. (ಕೆನರಾ)

ವಿಮರ್ಶೆ.

ಸಾಧನ— ಫಾಲ್ಗುಣಮಾಸದ ಸಂಚಿಕೆಯಲ್ಲಿ ಪಾದಾಯಣ ವೆಂಕಟೇಶ ಕಾಣಿಯವರು ಪನ್ನಾಕ ಧರ್ಮ ನಿರೂಪಣವನ್ನು ಮುಂದರಿಸಿರುವರು. ಶ್ರೀಧರ ಶಾಸ್ತ್ರರ ಹಗಡೆಯವರು ನಮ್ಮ ಈಗಿನ ಅವನತಿಯನ್ನು ವಿಶದವಾಗಿ, ಮನೋಹರ ಶೈಲಿಯಿಂದ ಸುಧಾರಣೆಯ ಮಹಾದ್ವಾರವೆಂಬ ತಮ್ಮ ಲೇಖದಲ್ಲಿ ನಿವೇದಿಸಿರುವರು. ವಿಚಾರವಿಲಾಸ ಕಾದಂಬರಿಯ ೫ ಪರಿಚ್ಛೇದಗಳು ಪ್ರಕಟವಾಗಿವೆ. ಮೊದಲಿನ ಎರಡು ಪರಿಚ್ಛೇದಗಳಂತೆ ಇವಾದರೂ ಆಹ್ಲಾದದಾಯಕವಿದ್ದು, ಓದಿಬಿದದಾಗಿ ಮುಂದೇನು ಸಂಭವಿಸಿತು? ಎಂದು ತಿಳಕೊಳ್ಳಲು ಮನಸ್ಸು ಕುತೂಹಲದಿಂದಿತ್ತರೆ ಸಂಚಿಕೆಯು ಲೋಕಾಶ್ರಯಕ್ಕೆ ಪಾತ್ರವಿದೆ.

ಸ್ವಪ್ನಫಲ— ಈ ಚಿಕ್ಕ ಪುಸ್ತಕದಲ್ಲಿ ಎಂ. ಶ್ರೀನಿವಾಸರಾಯರು ಗೌತಮ ಬುದ್ಧನ ಸೌಭಾಗ್ಯವತಿಯು ತನ್ನ ಪತಿಯನ್ನೊಡಗೂಡಬೇಕಾದರೆ ಯಾವ ಪರಿಯಿಂದ ಮಾಡಬೇಕಾಯಿತು? ಸಿದ್ಧಾರ್ಥನು ಪತ್ನಿಯ ಭಕ್ತಿಯನ್ನು ಪರೀಕ್ಷಿಸಲು ಯಾವ ಯಾವ ಹಂಚಿಕೆಯನ್ನು ಕೈಕೊಂಡನು? ಸಂಭಾವಿತದ ಪರೋಪಕಾರವು ದೇವರಿಗೆ ಹೇಗೆ ಮಾನ್ಯವಾಗುವದಿಲ್ಲ? ಲೋಕ ರೂಢಿಯಲ್ಲಿ ಪರೋಪಕಾರಿಯೆಂದು ಖ್ಯಾತಿಗೊಳ್ಳುವದು ಬೇರೆ, ಅಂತಃಕರಣದಲ್ಲಿ ಪರೋಪಕಾರ ಬುದ್ಧಿಯಿಂದ ಪ್ರೇರಿತರಾಗುವದು ಬೇರೆ ಎಂಬುದನ್ನು ಕೃಪೆಯಿಂದ ತಿಳಿಸುವ ಮುದುಕನನ್ನು ಮುಂದೊಡ್ಡಿ ಸಿದ್ಧಪಡಿಸಿರುವನು. ಪುಸ್ತಕವನ್ನು ಓದಹತ್ತಿದರೆ, ಅದರೊಳಗೆ ಬಣ್ಣಿಸಿದ ಸಂಗತಿಗಳೆಲ್ಲ ಕಣ್ಣ ಮುಂದೆ ನಡೆಯುವಂತೆ ಭಾಸವಾಗುತ್ತವೆ. ಪುಸ್ತಕವು ಬೋಧಪ್ರದವಿದೆಂದು ಹೇಳಬೇಕಾಗಿಲ್ಲ. ಯಾಕಂದರೆ, ಗೌತಮ ಬುದ್ಧನ ಇದೇ ಚರಿತ್ರವೇ ಬೋಧಪ್ರದವಿದೆ. ಇಂಥ ಪುಸ್ತಕದ ಹಸ್ತ ಪ್ರತಿಯನ್ನು ೬-೭ ವರ್ಷಗಳ ವರೆಗೆ ಕಾದಿಟ್ಟು ಎಂ. ಶ್ರೀನಿವಾಸರಾಯರು ಕರ್ನಾಟಕ ಸಾಹಿತ್ಯದ ಮೇಲಿನ ತಮ್ಮ ಪ್ರೀತಿಯನ್ನು ಪ್ರದರ್ಶಿಸಿರುವರು.

The Health - The May issue of the HEALTH, edited and published by Dr. U. Rama Rau, M. L. C., 323, Thambu Chetty street, Madras, as usual contains very intteresting, instructive and useful articles. Frontispiece contains a very attractive diagram about 25 games played with balls. Among other instructive articles, the following are worth mentioning:- Tobacco - its pleasures, profits and penalties; Is sugar a food or poison?; Health of our school-boys; Indian dress; Melancholy and its cure; How to live to a ripe old age; Evils of walking bare-footed, Where is the enemy -- Consumption? Burning and scars'; Fainting and fits; How fasting purifies the body; and How to bathe etc., etc.,

ನೋಟೀಸಿಗೆ ಉತ್ತರ.

ಭಿಕ್ಕು ವಿಠೋಬ ಪ್ರಭು, ಈತನು ಜಾಹೀರ ಮಾಡುವದೇನಂದರೆ:—

ನನ್ನ ಸಹೋದರ ತಮ್ಮ ಅಪ್ಪಾ ವಿಠೋಬ ಪ್ರಭು ಹೆರವಟ್ಟಾ ಈತನು ಸನ್ ೧೯೨೩ ನೇ ಇಸವಿ ಜೂನ ತಾರೀಖು ೭ ನೇಗೆ ಪ್ರಸಿದ್ಧವಾದ ಕಾನಡಾವೃತ್ತದಲ್ಲಿ ಕೊಟ್ಟ ನೋಟೀಸಿನ ಮಜಕೂರು ಪೂರಾ ಸುಳ್ಳು ಆದೆ. ನನ್ನ ವ ಸದರಿ ಅಪ್ಪಾ ವಿಠೋಬ ಪ್ರಭು ವ ನನ್ನ ಅವಿಭಕ್ತ ಕುಟುಂಬಕ್ಕೆ ಖರ್ಚು ಎಷ್ಟು ತಗಲುತ್ತಿತ್ತು ವ ನಮ್ಮ ವ್ಯಾಪಾರ ಧಂದೆಯಿಂದಲೂ ವ ಕುಟುಂಬದ ಉತ್ಪನ್ನದಿಂದಲೂ ಏನು ಸಿಗುತ್ತಿತ್ತು ಹಾಗೂ ನಮಗೂ ನಮ್ಮ ಋಣ ಅನಂತ ಪ್ರಭುಗೂ ವಾಂಟಣೀ ಆಗುವಾಗ್ಯೆ ಸಾಲ ಎಷ್ಟು ಇತ್ತು ಸದರಿ ವಾಂಟಣಿ ನಂತರಾ ನಮ್ಮ ಅವಿಭಕ್ತ ಕುಟುಂಬದ ಆಸ್ತಿಯ ಉಗ್ವಾಡಿನ ಬಗ್ಗೆ ವ ನಮ್ಮ ಅವಿಭಕ್ತ ಕುಟುಂಬದ ವ್ಯಾಪಾರದ ಬಗ್ಗೆ ಕೂಡಾ ಎಷ್ಟು ಸಾಲ ಬಾಕಿಯಲ್ಲಿ ಅದೆ ಎಂಬ ಸಂಗತಿ ಸದರಿ ಅಪ್ಪಾ ವಿಠೋಬ ಪ್ರಭುನು ಬೇರೆಯವರ ಹತ್ತರಾ ಇರುವ ನಮ್ಮ ಖಾತೆಯ ಮೇಲೆ ಸ್ವತಃ ಕೊಟ್ಟುಕೊಂಡ ವೈವಾಟಿನ ಮೇಲಿಂದಲೂ ವ ಮೂಲಗಾರರಿಗೆ ಸಪ್ತಿತಕ್ಕೆ ಗೇಣಿ ಬಾಕಿಯ ಬಗ್ಗೆ ಸದರಿ ಅಪ್ಪಾ ವ ನಾನು ಬರಕೊಟ್ಟ ನೋಟಿನ ಮೇಲಿಂದಲೂ ವ ಇತರೆ ಸಂಗತಿಗಳಿಂದಲೂ ಉಘಡವಿದೆ. ಸದರಿ ಅಪ್ಪಾ ವಿಠೋಬ ಪ್ರಭುಗೆ ಇದೇ ಸಾಲಿನಲ್ಲಿ ವಂಚರ ಸಮಸ್ತ ನಮ್ಮ ಅವಿಭಕ್ತ ಕುಟುಂಬಕ್ಕೆ ಒಪ್ಪಿದ ಪೂರಾ ಆಸ್ತಿಯ ವೈವಾಟು ಹಾಗೂ ಹೊರಗಿಂದ ಬರತಕ್ಕ ಸಾಲ ವಸೂಲ ಮಾಡುವ ವೈವಾಟು ಕೂಡಾ ನಮ್ಮಿಂದ ಹೊರಗೆ ಸಲ್ಲತಕ್ಕ ಸಾಲಗಳ ಫೇಡ ಮಾಡುವರೆ ನಾನು ವೈಶಿಕೊಟ್ಟಿದ್ದೆನು. ಹೀಗಿರುತ್ತಾ ನಮ್ಮ ಅವಿಭಕ್ತ ಕುಟುಂಬಕ್ಕೆ ವಂಚನೆ ಮಾಡುವ ಇರಾದೆಯಿಂದಾ ಹೊರಗಿಂದ ನಮಗೆ ಬರತಕ್ಕ ಸಾಲಗಳನ್ನು ಸದರಿ ಅಪ್ಪಾ ಪ್ರಭುನು ವಸೂಲ ಮಾಡಿದ್ದಲ್ಲದೇ, ನಮ್ಮ ಅವಿಭಕ್ತ ಕುಟುಂಬದ ಆಸ್ತಿಯ ಹುಟ್ಟುವಳಿಯಿಂದ ಬಂದ ಬೆಲ್ಲ ವ ಭತ್ತ ಹಾಗೂ ಕಂಚು, ತಾಂಬ್ರ, ಹಿತ್ತಾಳೆ ವಗೈರೆ ಪಾತ್ರೆ ವ ಬೇರೆ ಸಾಮಾನುಗಳನ್ನು ಕೂಡಾ ಬೇರೆ ಕಡೆಗೆ ನನ್ನ ಗೈರಹಾಜರಿಯಲ್ಲಿ ವೈದಿಟ್ಟು, ಅದನ್ನು ಅಪಹರಿಸಿಕೊಂಡಿದ್ದಾನೆ. ಮತ್ತು ಆ ಹಣದ ಭಾಂಡವಲಿನಿಂದಲೂ, ವ ಮುಂಚಿನಿಂದಲೂ ಕಪಟತನದಿಂದ ಕುಟುಂಬಕ್ಕೆ ವಂಚನೆ ಮಾಡುತ್ತಾ ಬಂದ ಹಣದಿಂದಲೂ ಎಲಿಕಡೆ ಸದ್ಯದಲ್ಲಿ ಪ್ರತ್ಯೇಕ ದುಕಾನ ಮಾಡಿರುತ್ತಾನೆ. ಸದರಿ ದುಕಾನು ಮಾಡುವ ಕಾಲಕ್ಕೆ ಅದು ಅವಿಭಕ್ತ ಕುಟುಂಬದ ಹಿತಕ್ಕಾಗಿಯೇ ತಾನು ಮಾಡಿರುವದಾಗಿಯೂ ವ ಅದರ ಉತ್ಪನ್ನದಿಂದ ಕುಟುಂಬದ ಸಾಲ ಪೂರಾ ತಾನು ಫೇಡ ಮಾಡುತ್ತೇನಾಗಿಯೂ ನನಗೆ ಭರವಸೆ ಕೊಟ್ಟಿದ್ದನು. ಅದರ ವಿಶ್ವಾಸದಿಂದಾ ನಾನು ಈ ವರೆಗೆ ಸುಮ್ಮನೆ ಉಳಿದಿದ್ದೆನು, ಆದರೆ ಅವನು ಕೊಟ್ಟಿರುವ ಈ ದುಸ್ಸಾಧನೆಯ ಸದರಿ ನೋಟೀಸಿನಿಂದ ಅವನ ಹೇತು ಪೂರ್ಣವಾಗಿ ಪ್ರದರ್ಶನವಾಯಿತು. ಮತ್ತು ಅಂಥಾ ನೋಟೀಸಿನ ಮೇಲಿಂದ ಅವನಿಗೆ ಏನೊಂದು ಪ್ರಯೋಜನವಾಗಲಾರದು. ಮತ್ತು ಸದರಿ ಅಪ್ಪಾ ವಿಠೋಬ ಪ್ರಭುನು ನಮ್ಮ ಅವಿಭಕ್ತ ಕುಟುಂಬಕ್ಕೆ ವಂಚನೆ ಮಾಡಿಕೊಂಡು ಹೋದ ಯಾವತ್ತು ಸೊತ್ತು ವ ಹಣ ಕೂಡಾ ನನ್ನ ನಜರಿಗೆ ಬಂದ ಮೇರೆಗೆ ಈ ತಾರೀಖಿನಿಂದಾ ೧೫ ದಿವಸಗಳಲ್ಲಿ ನನಗೆ ತಂದು ಕೊಟ್ಟು ಆ ಬಗ್ಗೆ ನನ್ನಿಂದಾ ಪಾವತಿ ಪಡೆಯತಕ್ಕದ್ದು. ಇಲ್ಲವಾದರೆ ಅವನ ಮೇಲೆ ಕ್ರಾಯದೇಶಿರ ಇಲಾಜ ಮಾಡಲಾದೀತು. ತಾ. 14-6-1923.

ಭಿಕ್ಕು ವಿಠೋಬ ಪ್ರಭು.

ಅಗಿಯ ಹುಣ್ಣಿವೆಯು (೭ನೇ) ಹಜ್ಜೆ.

[illegible]ವಾಡದಲ್ಲಿ ಹುಣ್ಣಿವೆಗೂಮ್ಮೆ ಹೊರಡುವ,

"ಜಯಕರ್ನಾಟಕ"

ಎಂಬ

ಸಚಿತ್ರ ಮೇಲ್ತರದ ಮಾಸಪತ್ರಿಕೆ.

[illegible] ರಾಯರು ಬಿ. ಎ., ಎಲ್. ಎಲ್. ಬಿ.

ಇದರಲ್ಲಿ [illegible] ಗಳೂ ಇರುತ್ತವೆ. ಮಾಡರ್ನ ರಿವ್ಯೂ ಆಕಾರದ ೮೦ ಪುಟಗಳ [illegible] ದೊಡ್ಡ [illegible]

[illegible] ಇದರ ಹಬ್ಬುಗೆ ಜಾಹೀರಾತದಾರರಿಗೆ ಹೆಚ್ಚಿನ ಲಾಭ ಕೊಡದಾಗಿ [illegible] ಹೊಸ [illegible] ಸ್ವಾರ [illegible] ಬೇಕು ಹಿಂದಿನ ಸಂಚಿಕೆಗಳು ತೀರಿದ್ದರಿಂದ ಅವುಗಳನ್ನು [illegible] ರೂ ಹಿಂದಿನ ಸಂಚಿಕೆಗಳನ್ನು ಕಳಿಸಿಸದೆ [illegible] ನೆವು

೭ನೇ ಹಜ್ಜೆಯ ಲೇಖಗಳು

[illegible] ಸಿದ್ಧರಾಮಪ್ಪ ದುಂಡಪ್ಪ ಪಾವಟೆ ಬಿ. ಎ., ಎಲ್. ಎಲ್. ಬಿ. [ಹುಬ್ಬಳ್ಳಿ

[illegible] ಕೃಷ್ಣರಾವ ವಾಳ್ವೇಕರ, ಬಿ. ಎ. ಎಲ್. ಎಲ್. ಬಿ. [ಹುಬ್ಬಳ್ಳಿ

[illegible] ಗಜೇಂದ್ರಗಡ

[illegible] ಮಂಕರಾವ ಕೊಣ್ಣೂರ, ಬಿ. ಎಸ್. ಸಿ. ವಿಜಾಪುರ

[illegible] ಬೆಂಗಳೂರ

[illegible]

[illegible] ರಾಮಯ್ಯ ಬಿ. ಕ. ಸಿ. ಮದ್ರಾಸು

[illegible] ವೆಂಕಟರಾವ್ ಶಾಸ್ತ್ರಿ ಬೆಂಗಳೂರ

[illegible] ಯುಗದ ಕವಿಗಳ ರಸಗವಿತೆಗಳೂ, ಪ್ರಪಂಚ ಪರಿಚಯ, [illegible]

[illegible] ಗಾಂಧಿಯವರ ಮನೋಹರ ಬಣ್ಣದ ಚಿತ್ರಗಳು ಇರುವವು [illegible]

[illegible] ವಾರ್ಷಿಕ ವರ್ಗಣಿ ೫ [illegible] ಮಾಡಬೇಕು ವ್ಹಿ. ಪಿ. ಯಿಂದ ಕಳಿಸಲಾಗುವದಿಲ್ಲ

ಕಾರ್ಯದರ್ಶಿ, ಜಯ ಕರ್ನಾಟಕ, ಸಾಧನಕೇರಿ, ಧಾರವಾಡ.

ಮನೆ ಕಟ್ಟುವವರಿಗೆ ಸುಸಂಧಿಯು.



ಮೇಲಿಂತಸ್ತಿಗ ಶೋಭೆ ಬರುವದಕ್ಕೆ ನಾನಾ ತರ ನಕ್ಷೀ ಕೊರೆಯಲ್ಪಟ್ಟ ಬೀಡಿನ ಕಟಾಂಜನಗಳೂ ಹೂದೋಟ, ಬಳಂಗಳ, ಉಪ್ಪರಿಗೆ, ದಿವಾನಖಾನೆ ಮೊದಲಾದ ಸ್ಥಳಗಳಲ್ಲಿ ವಿಶ್ರಾಂತಿಗೊಳ್ಳುವದಕ್ಕೆ ತಕ್ಕ ಬಾಕುಗಳೂ ಕಿರ್ಲೋಸ್ಕರ ಕಾರಖಾನೆಯಲ್ಲಿ ಸ್ವಲ್ಪ ಖರ್ಚದಿಂದ ದೊರೆಯುತ್ತವೆ. ಪತ್ರ ಬರೆದು 'ಬಿ' ಕ್ಯಾಟಲಾಗು ತರಿಸಿಕೊಳ್ಳಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ)

ತ್ವರ ಮಾಡಿರಿ ! ತ್ವರೆ ಮಾಡಿರಿ !!

ವಿದ್ವಜ್ಜನಪರಿಶೋಧಿತ ಯಜುರ್ವೇದೀಯ

ಬ್ರಹ್ಮಕರ್ಮಸಮುಚ್ಚಯ

ಪುಸ್ತಕ.

ಬೌಧಾಯನೀಯ ಸ್ವರಸಹಿತ ಸನಿರ್ಣಯ ಗೃಹ್ಯಕರ್ಮಸಮುಚ್ಚಯವೆಂಬ ಪ್ರಯೋಗ ಪುಸ್ತಕವು ಬರುವ ವರ್ಷಪ್ರತಿಪದೆಗೆ (೧) ಸಂಪುಟವು ಮಾರಾಟಕ್ಕೆ ಸಿದ್ಧವಾಗುವದು. ಪೂರ್ಣ ಪುಸ್ತಕದ ಕ್ರಯ ರೂಪಾಯಿ ೧೭-೦-೦. ಬೇಕಾದವರು ೧-೧-೧೯೨೭ ರ ಒಳಗೆ ಎಡ್ವಾನ್ಸ ರೂಪಾಯಿ ೩-೦-೦ ಕಳಿಸಿ ಹೆಸರು ದಾಖಲ ಮಾಡಿಸಿದ್ದಲ್ಲಿ ಅಂಥವರಿಗೆ ಪುಸ್ತಕವು ೧೫ ರೂಪಾಯಿ ಕಿಮ್ಮತಿಗೆ ದೊರೆಯುವದು. ಗ್ರಾಹಕರು ತ್ವರೆ ಮಾಡಬೇಕು.

ಪತ್ತೆ—ಗ್ರಂಥ ಪ್ರಚಾರಕ ಸಂಘ,
ಶ್ರೀ ಕ್ಷೇತ್ರ ಗೋಕರ್ಣ.
ಜಿಲ್ಲಾ :- ಉತ್ತರ ಕಾನಡಾ

ಬಹು] ಪ್ರಸಿದ್ಧ ಶಾಯಿ. [ಅಗ

ಒಳ್ಳೆ ಬಾಟಲಿಗಳಲ್ಲಿ ಪ್ರಸಿದ್ಧಪಟ್ಟ ನೀಲಿ, ಕಪ್ಪು, ಕೆಂಪು ಜಾಂಬಳಿ, ಪುಡಿ ಮತ್ತು ಗುಳಿಗೆಗಳು ೧೦೦ ಕ್ಕೆ ೦-೧೦-೦ ಒಂದೇ ಸರ್ತಿ ೧೦೦೦ ತೆಗೆದುಕೊಳ್ಳುವವರಿಗೆ ೫-೮-೦ ಮತ್ತು ೫೦೦ ಕ್ಕೆ ೨-೧೨-೦ ಟಪಾಲ ಖರ್ಚ ಮಾಫ.

ಪತ್ತೆ:- ಎಸ್. ವ್ಹಿ. ಭಾಗ್ವತ
ಪೋ ಕಗಡಿ, ಉತ್ತರ ಕಾನಡಾ.

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಕಾಗದ ಬರೆದು ಕೆಳಗಿನ ಪತ್ತೆಗೆ ಮುಕ್ತಾ ಠೀಕ್ಕ ತಿಳಕೊಳ್ಳಬಹುದು.

ಪುರುಷೋತ್ತಮ ಲಕ್ಷ್ಮಯ್ಯ ಶ್ಯಾನಭಾಗ
ಹೆಗಡೇಕರ. ಪ್ರಕಾಶ, ಕುಮಟಾ.

ಶುದ್ಧ ಖಾದಿ

ವಿಕ್ರಿಗೆ ತಯಾರ.

ಹೊನ್ನಾವರ ತಾಲೂಕಾ ಕೊಂಗ್ರೆಸ ಕಮಿಟಿಯಿಂದ ಕೈನೂಲಿನ ಕೈಮಗ್ಗದ ಖಾದಿ ಮಾರಾಟಕ್ಕೆ ಕೊಂಗ್ರೆಸ ಆಫೀಸಿನಲ್ಲಿ ಸಿಗುವದು.

ಹೊನ್ನಾವರ } ಸಕ್ರೇಟರಿ
೧೦-೧೨-೨೭ } ತಾ. ಕಾ. ಕಮಿಟಿ, ಹೊನ್ನಾವರ

ಮೂರ್ತಿಗಳು ಬೇಕೋ?

ನಮ್ಮಲ್ಲಿ ಬಂಗಾರ, ಬೆಳ್ಳಿ, ಪಂಚಧಾತು, ಹಿತ್ತಾಳಿ, ತಾಮ್ರ ಮತ್ತು ಕರೇಕಲ್ಲಿನ ಮೂರ್ತಿಗಳೂ, ಇದಲ್ಲದೆ ಗಣಪತಿಗಳೂ, ಪ್ರಭಾವಳಿಗಳೂ, ಈಶ್ವರ ಮುಖಗಳೂ, ನಾಗಾಭರಣಗಳೂ, ಕವಚಗಳೂ ಮತ್ತು ಯಾವತ್ತು ತರದ ಪ್ರತಿಮೆಗಳೂ ನಮ್ಮಲ್ಲಿ ಯೋಗ್ಯ ದರಕ್ಕೆ ಮತ್ತು ಯೋಗ್ಯ ಹೊತ್ತಿಗೆ ಮಾಡಿ ಕೊಡಲ್ಪಡುವವು. ಬೇಕಾದವರು ಪತ್ರವ್ಯವಹಾರ ಮಾಡಿ ಯಾ ಪ್ರತ್ಯಕ್ಷ ಬಂದು ದರವಾರ ತಿಳಕೊಳ್ಳತಕ್ಕದ್ದು

ಪತ್ತೆ:-ನಾರಾಯಣ ಹುವಯ್ಯ ಶೇಟ,
ಸೊನಗಾರ, ಸೊನಾರಗಲ್ಲಿ, ಕುಮಟಾ
(ಉ. ಕಾನಡಾ)

Printed and Published by Krishnarao Keshav Shenvi (Editor) at his Star of Kanara Press, Kumta.

g. No. B 1270 Thursday, 21th June 1928.

ವರ್ಷ ೬. ಸಂಚಿಕೆ ೪೬.

ಕಾನಡಾವೃತ್ತ.

THE KANARA NEWS.

ಪತ್ರಿಕೆಯ ವರ್ಗಣಿ:-

ಕುಮಟೆಯಲ್ಲಿ ಆಗಾವು
ರೂಪಾಯಿ 2-4-0.
ಮನಿಆರ್ಡರಿಯಿಂದ
ರೂ. 3-0-0
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

जनपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಸ್ಮಾಲ ಪ್ಯಾಯಿಕ(೧೫ ಎಮ್‌ಜ್) ೮ ಸಾಲುಗಳ ವರೆಗೆ ರೂ. 1-0-0. ಅನಂತರ ಪ್ರತಿ ಸಾಲಿಗೆ 0-2-0.

ಹೆಚ್ಚಿಗೆ ಸಾಲು ಎಷ್ಟು ಹೆಚ್ಚು ದಿಲುದರೋ ಆ ಮಾನ ದಿಂದ ಅವು ಸಾಲುಗಳು ಹಿಡಿ ಯಲ್ಪಡುವವು.

ಖಾಸ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ದಿಂದ ನಿಮಗೆ ತಿಳಿಸಲ್ಪಡುವದು

—(ಕುಮಟಾ— ಕಾನಡಾವೃತ್ತ, ಗುರುವಾರ, ತಾರೀಖು ೨೧ ಮಾಹೆ ಜೂನ ಸನ್ ೧೯೨೮ ನೇ ಇಸವಿ.)—

हिंदुस्थानातील रहिवाशांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानातील लोकास ज्यास्त फायदेशीर आहे,

द्राक्षासव- { दीड रत्तलची किंमत २ रुपये,

रामबाण औषधे

सर्दि घालविणारें,
भूक वाढविणारें,
शौच्यास साफ करणारें,
झोप आणणारें,
शक्ति देणारें,
तेजस्वीपणा आणणारें,

पिण्यास रुचिकर.

क्याटलाग मागवा,

झंडु फार्मास्युटिकल वर्क्स लिमिटेड,
मुंबई नं. १३

GLAXO:- FRESH STOCK NEW BRAND. *a food for infants and invalids.*

Kalmegh :- *Well-tried remedy in Liver complaints especially of children*

Syrup of Vasaka :- *Highly efficacious in cold, cough, crough and bronchitis*

Besides we have in stock other patent medicines, Thermometres, Glycerine Syringes etc.,

Orders will be executed by V. P. P

The New Emporium
Honavar. (N. Kanara)

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ವಿಷಯಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ಕೃಷ್ಟೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ

ವಾ. ವರ್ಗಣಿ ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ.

(೧) ಗ್ರೀಸ ದೇಶದ ಗಾಂಧಿ ೧ನೇ ಭಾಗ ಬೆಲೆ ೦-೬-೦ (೨) ಸದರ ೨ನೇ ಭಾಗ ೦-೫-೦ (೩) ಸ್ವಾತಂತ್ರ್ಯಸಾಧನೆ ೦-೫-೦ (೪) ಗುರು-ಹಿರಿಯರೂ, ಬಂಧುಭಗಿನಿಯರೂ ೦-೫-೦.

ವಾ. ಅ. ಹೊದ್ಕೆ,
ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ.

ಸಾಧನ.

ಧಾರ್ಮಿಕ, ನೈತಿಕ, ರಾಜಕೀಯ ವಿಷಯಗಳನ್ನೂ, ಸುಂದರವಾದ ನಾಟಕ ಕಾದಂಬರಿಗಳನ್ನೂ ಒಳಗೊಂಡಿರುವ ಸಾಧನ ಮಾಸಪತ್ರಿಕೆಯು ಬರುವ ಪ್ರತಿ ತಿಂಗಳಲ್ಲಿ ತಪ್ಪದೆ ಪ್ರಕಟವಾಗುವದು ವಾರ್ಷಿಕ ವರ್ಗಣಿ ಅಂಚೆವೆಚ್ಚ ಸೇರಿ ೨ ರೂಪಾಯಿ. ಪ ಟ ೩೨. ಚಂದಾದಾರರಾಗಬಿಚ್ಛಿಸುವವರು ಕೆಳಗಿನ ಪತ್ತೆಗೆ ಕಾಗದ ಬರೆಯತಕ್ಕದ್ದು.

ಗಣಪತಿ ಶಂಕರ ಭಟ್ಟ,
ಸಂಪಾದಕ— "ಸಾಧನಪತ್ರಿಕಾ,"
ಪೋಸ್ಟ ಕಕ್ಕಿ (ಜಿ ಕಾರವಾರ)

ಸವಲತು.

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಗಳಿಂದ ಸಣ್ಣ-ದೊಡ್ಡ ಪುಸ್ತಕಗಳೂ, ಕಟಲಾಗುಗಳೂ, ಜಾಹೀರಾತುಗಳೂ, ಲಗ್ನಪತ್ರಿಕೆಗಳೂ ವ ಇತರೇ ಕಾಗದ-ಪತ್ರಗಳೂ, ಬಹಳೇ ಸವಲತ್ತಿಯ ದರಗಳಿಂದ ಬೇಕಾದ ಬಣ್ಣಗಳಿಂದ ಸ್ವಚ್ಛವಾಗಿಯೂ, ಅಂದವಾಗಿಯೂ ಛಾಪಿಸಿ ಕೊಡಲ್ಪಡುವವು. ಬೇಕಾದವರು ಕೆಳಗಿನ ಪತ್ತೆಯ ಮೇಲೆ ದರವಾರ ತಿಳುಕೊಳ್ಳಬಹುದು.

ಪತ್ತೆ:— **ಕೃಷ್ಣಾ ಕೇಶವ ಶಾನಭಾಗ,**
ಮಾಲಕ,
ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ.

ಎಲ್ಲ ತರದ ಜ್ವರಗಳಮೇಲೆ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ, ಶೈತ್ಯ, ಬಂಗಲಿ, ಅಥವಾ ದೂಷಿತ ಹವೆಯಿಂದ ಬರುವ ಸಾದಾ ವಿಷಾರೀ ಅಥವಾ ಇತರ ಜ್ವರಗಳೂ, ಇನಫ್ಲುಎಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನ್ಯಾನದ ದುಷ್ಪರಿಣಾಮರಹಿತ ಕೇವಲ ವನಸ್ಪತಿಯ ಈ ಮದ್ದು ಸೇವಿಸಿದರೆ ಅಶಕ್ತತೆಯಾಗದೆ, ಬೆವರು ಬಂದು ಜ್ವರ ಇಳಿಯುತ್ತದೆ ಹಾಗು ರೋಗಿಯು ತರಿತ ಪಾಸಿಯಾಗುತ್ತಾನೆ

೪ ಔಂಸ ಬಾಟ್ಲಿ ಕಿಂಮತ ರೂ ೧-೦-೦.

ಇದರ ಹೊರತು ಇನ್ನೂ ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ, ಉಚ್ಚ ಪ್ರತಿಯ ಕೋಲನ ವೋಟರ, ಲವೆಂಡರ ಇತ್ಯಾದಿ ಸಾಮುಗ್ರಿಗಳು ಅಲೆಂಬಿಕದ ಕಾರಖಾನೆಯಲ್ಲಿ ತಯಾರಾಗುತ್ತವೆ. ಮರಾಠಿ ಕೆಟಲಾಗು ತರಿಸಿರಿ.

ಅಲೆಂಬಿಕ್ ಕೆಮಿಕಲ್ ವರ್ಕ್ಸ,
ಕಂಪನಿ, ಲಿಮಿಟೆಡ್.
ನಂ ೫೦, ಪ್ರಿನ್ಸೆಸ್‌ಸ್ಟ್ರೀಟ, ಮುಂಬಯಿ.

अलेंबिक केमिकल वर्क्स कं० लि०
नं. ५० प्रिन्सेस स्ट्रीट मुंबई.

ಶುದ್ಧ ಖದ್ದರ್ ರೇಶ್ಮಿ ಮಡಿಗಳು.

ಸುಲಭ ಕ್ರಯಕ್ಕೆ ಖಾತ್ರಿಯಾದ ಎಲ್ಲಾ ರಂಗುಗಳಲ್ಲಿಯೂ ಈ ಕೆಳಗೆ ಬರೆದ ಕ್ರಯಕ್ಕೆ ದೊರೆಯುವವು.

೧೮ ಮೊಳ ಉದ್ದ	೨॥	ಅಗಲ	ರೂ.	೨೭ ರಿಂದ	೩೫	ವರೆಗೆ
೧೬ ,,	,,	೨॥	,,	,, ೨೦ —	೩೦	,,
೮ ,,	,,	೨॥	,,	,, ೯ —	೧೫	,,
೬ ,,	,	೨॥	,,	,, ೬ —	೧೧	,,

SUN & CO
BENARES CITY

ಅಂಗಿ ಬಟ್ಟೆಗಳು ೧೮ ಮೊಳ × ೨ ಮೊಳ ರೂಪ್ಯಾ ೧೮ ರಿಂದ ೩೦ವರೆಗೆ. ಪೇಟ ೧೨ ಮೊಳ × ೧॥ ಮೊಳ ಅಗಲ ರೂಪ್ಯಾ ೧೦ರಿಂದ ೧೫ ವರೆಗೆ ಜೀನ್‌ಖಾನ್ ೧೪ ಮೊಳ × ೨ ಮೊಳ ರೂ ೨೪ ರಿಂದ ೩೫ ವರೆಗೆ. ಇವುಗಳಲ್ಲದೆ ಶಾಲ ಪೀತಾಂಬರ, ಕಾಶ್ಮೀರ್ ಶಾಲು, ರುದ್ರಾಕ್ಷಿ, ಜಾಗಂಟೆ, ತಾಳ, ಪನ್ನೀರ್ ದಾನಿ, ಆಟದ ಸಾಮಾನುಗಳು, ದೇವರ ಮತ್ತು ಗಾಂಧಿ ಮುಂತಾದವರ ಪಟಗಳಿರುವ ಉಂಗುರಗಳ ಮತ್ತು ಇನ್ನೂ ಅನೇಕ ಸಾಮಾನುಗಳ ಕ್ಯಾಟಲಾಗ್ ಇನಾಂ.

ವಿಳಾಸ:— ಎಸ್. ಯು ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಸ್ತ್ರೀಯರಿಗೆ ಕೇಶ ಭೂಷಣವೇ

ಕಾಮಿನಿಯಾ ತೈಲ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿವ ದುವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇ ರಿಗೆ ಒದಗಿಸಿ ಕೊಡಲಾದ ಉಪಕರಣವಾದರೋ

ಕಾಮಿನಿಯಾ ಆಯಿಲ್. (

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿ ಅಗತ್ಯದ ಸಹಕಾರಿಯಾಗಿರುತ್ತದೆ ಈ ಆಯಿಲ್ ತೊಡೆದ ನೆಯು ತಣ್ಣಗಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುರಿ ಬಿದ್ದು ಹೋಗಲಾರವು ಆದರೆ, ಅವು ದಟ್ಟ ವಾಗಿ ಬೆಳೆದು ಸಮೃದುವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ಕಳೆಯುವ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ "ಸರ್ಟಿಫಿಕೇಟ ಒಫ್ ಮೆರಿಟ" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗ್ರಾಹಕರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ — ಸೀಸೆಗೆ ರೂಪಾಯಿ 1 0-0,. ಸೀಸ 3ಕ್ಕೆ ರೂಪಾಯಿ 2 10 0, ವಿಪಿ ಖರ್ಚು 0-14-0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಚನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ದ ಸಿದ್ಧ ಮಾಡುದು ಅದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈ ಒಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿ ದರೆ ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾ ರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0, 1 ಡ್ರಾಮಿನ (ಪಿ ತಿಂಗ) ಸೀಸ 1 ಕ್ಕೆ 0-12 0 ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0 ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ ದಿಲ್ "ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12 0.

Address- **The Anglo Indian Drug & Chemical Co.**

16, Market, **BOMBAY. 2.**

ಖರೇ ಮಾಲು ! ತಾಜ ಕಲ್ಮ ! ಖರೆ ಗ್ಯಾರಂಟಿ!!!

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳಿಸಿ, ಪುರುಷರಿಗೆ ಸ್ತ್ರೀ ವಿಷಯವಾಗಿಯೂ, ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷ ಯುಕ್ತ ಶಕ್ತಿಯನ್ನು ಉಂಟುಮಾಡಿ, ದಿನೇ ದಿನೇ ಶರೀರದ ಜರಠತನವನ್ನೂ ರೋಗಗಳನ್ನೂ ದೂರಪಡಿಸಿ ಆಯುರಾ ರೋಗ್ಯವನ್ನೂ, ರತಿಯಲ್ಲಿ ಬೇರೆಯಾದ ಕುತೂಹಲವನ್ನು ತೋರಿಸುವ ಕ್ರೀಡಾ ಶಕ್ತಿಯ ಉತ್ಸಾಹವನ್ನೂ, ಸಂ ಭೋಗದಲ್ಲಿ ತೃಪ್ತಿಯನ್ನೂ, ಸೌಖ್ಯವನ್ನೂ ಕೊಟ್ಟು, ಮನಸ್ಸಿನ ದೃಢತೆಯನ್ನೂ ಯೌವ್ವನದ ಕಳೆಯನ್ನೂ ದೊರ ಕಿಸಿ ಮುದಿತನವನ್ನುನೀಗಿ ಬಲವನ್ನು ಉಂಟುಮಾಡುವದು ಮೃತ್ಯುವನ್ನು ನಿರಾಕರಿಸಿ, ಬಗೆಬಗೆಯ ರೋಗಗಳ ನ್ನು ನಾಶಮಾಡುವದು ಜೀರ್ಣಜ್ವರ, ಮಂದಾಗ್ನಿ, ಶುಕ್ಲಸ್ರಾವ, ಪ್ರಮೇಹ ಇವುಗಳನ್ನು ಬಿಡದೇ ನಾಶಮಾಡು ವದು ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, ದೇಶಕಾಲಗಳಿಂದಲೂ, ಅತ್ಯಾಹಾರಗಳಿಂದಲೂ, ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡಿಸುವ ಬಲತ್ಕಾರದ ಹಸ್ತಘರ್ಷಣದಿಂದಲೂ ಅತಿವಿಷಯೋಪಭೋಗದಿಂದಲೂ, ಇಂದ್ರಿಯ ಶಿಥಿಲವೂ, ತೆಳುವೂ, ನಿಸ್ತೇಜವೂ ಆಗಿ ಯತ್ನವಿಲ್ಲದೆ ಸ್ಖಲನವಾಗು ವದು. ಒಂದೊಂದು ಸಾರಿ ಮೂತ್ರದಲ್ಲಿಯೂ ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣ ತ, ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈಬಿಸುವು, ನಿದ್ರೆಯಲ್ಲಿ ಭೀಕ ರವಾದ ಸ್ವಪ್ನ, ಅರಿವು, ಮರುವು ಮತ್ತು ಶರೀರದ ಹಾಂಗೂ ಮನಸ್ಸಿನ ಚೇತನ ಕುಂದಿ ಹೋಗುವದು, ಇವೆಲ್ಲವು ಮೇಲೆ ರಾಡುಬಾರದಂತಿರುವದು ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ. ೧॥ ನಂ ೧. ನಂ ೨. ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಅಂತು ೬೦ ಗುಳಿಗೆಗಳುಳ ಸೀಸೆಗಳಿಗೆ ರೂ ೩. ಪೋಸ್ಟೇಜ ಬೇರೆ

ಎಮ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ್,

ಕಕೀ. (ಕೆನರಾ.)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧ ರಾಗದ ಕೈಪೆಟ್ಟಿಗೆ

೨ ,, ಕಾಲು ಪೆಟಿಗೆ

೩. ತಬಲೆ ಜೋಡಿ ೬

೪ [ಹಾರ್ಮೋನಿಯಮ

ಡ ಕಿಂ. ೧೨ ೮.

ವಿಶೇಷ ಮಾಹಿತಿ ಬ

ಟೆ ಕೊಡುವ ಪ್ರ

ಪತ್ರವ್ಯವಹಾರ

ಗ್ರಹಿಯಿಂದ ಮಾಡಬೇ

ಪತ್ತೆ – ಗೋಪಾ

ಕಾಳಬಾದೇವಿ

ಶ್ರೀ। ಗಂಗಾಧರರಾಯರ ಭಾಷಣ.

೧೧ ನೇ ತಾರೀಖಿನ ದಿವಸ ಗದಗಿನಲ್ಲಿ ಕೊಟ್ಟ ಉಪನ್ಯಾಸದ ಸಾರಾಂಶವು —

ನಮ್ಮ ಸರಕಾರಕ್ಕೂ ನಮಗೂ ಮುಖ್ಯ ತಂಟೆಯು ಯಾತರ ಬಗ್ಗೆ ಇರುತ್ತದೆಂಬದನ್ನು ನನ್ನ ಮಿತ್ರರು ಹೇಳಿರುವರು, ನಮ್ಮ ಮತ್ತು ನಮ್ಮ ಕಂದೋಗಳಿನ ಸರಕಾರದವರ ಹಿತಸಂಬಂಧಗಳು ಎಂದಿಗೂ ಒಂದಾಗಲಾರವು. ನಮ್ಮ ಹಿತವು ಯಾತರಿಂದಾಗುವದೆಂಬದನ್ನು ಹೇಳುವ ಅಧಿಕಾರವು ಅವರಿಗೆ ಹ್ಯಾಗೆ ಮುಟ್ಟುತ್ತದೆಯೋ ತಿಳಿಯದು ನಮ್ಮ ಹೊಟ್ಟೆ ಹ್ಯಾಗೆ ತುಂಬುವದು, ನಮ್ಮ ಮಕ್ಕಳ ಮದುವೆ ಯಾವ ಬಗೆಯಿಂದ ಮಾಡಬೇಕು, ನಾವು ಯಾವ ಅನ್ನವನ್ನು ಉಣ್ಣಬೇಕು, ಇದನ್ನು ನಿಶ್ಚಯಿಸುವ ಅಧಿಕಾರವು ನಮ್ಮದೆಂಬು ನಾವು ಅನ್ನುತ್ತೇವೆ ಆ ಅಧಿಕಾರವು ನಮ್ಮದೆಂದು ಸರಕಾರದವರು ಅನ್ನುತ್ತಾರೆ ಇದೇ ನಮ್ಮ ಜಗಳದ ಮುಖ್ಯ ಬೀಜವು ಈ ಜಗಳದಲ್ಲಿ ನ್ಯಾಯವು ನಮ್ಮ ಕಡೆಗಿರುವದೆಂದು ಸಣ್ಣ ಮಗುವು ಸಹ ಹೇಳಬಹುದು ಇದೇ ಭೂಮಿಯಲ್ಲಿ ನಾವು ಹುಟ್ಟಿ ಬೆಳೆದವರು ನಮ್ಮ ಪೂರ್ವಜರು ಇಲ್ಲಿಯೇ ಸಾವಿರಾರು ವರ್ಷಗಳಿಂದ ಇರುವರು ನಮ್ಮ ವಂಶಜರಾದರೂ ಇಲ್ಲಿಯೇ ಇರುವರು ಇಂಥ ಭೂಮಿಯಲ್ಲಿ ಇವರದೇನು ಜುಲುಮೆಯು? ನಮ್ಮಲ್ಲಿ ಹುಟ್ಟಿದ ಜೋಳವನ್ನು ನಾವು ನಮ್ಮ ಮನೆಯೊಳಗೆ ರೊಟ್ಟೀ ಮಾಡಿ ತಿನ್ನಲಿಕ್ಕೆ ಇವರದೇಕೆ ಅಡ್ಡಿ? ನಮ್ಮ ನೂಲು ನಮ್ಮ ನೇಕಾರರು—ಇವರಿಂದಾದ ನಮ್ಮ ಖಾದೀ ನಾವು ಹಾಕಿದರೆ ಇವರ ವಕ್ರದೃಷ್ಟಿಯಂತೆ! ಗಾಂಧೀ ಟೊಪ್ಪಿಗೆ ಹಾಕಿದರೆ ಇವರ ಕಣ್ಣು ಕೆಂಪಾಗುತ್ತದೆ

ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠನಾದಂಥ ಸಾಧುವು ನಮ್ಮಲ್ಲಿ ಹುಟ್ಟಿರುತ್ತಾನೆ ಅವನ ಹೆಸರು ಮಹಾತ್ಮಾ ಗಾಂಧಿ. ಅವನನ್ನು ಸೆರೆಮನೆಯಲ್ಲಿ ಇವರು ಹಾಕಿದ್ದಾರೆ ಅಂದಮೇಲೆ ಇವರ ಜುಲುಮೆಯ ಕಲ್ಪನೆಯನ್ನು ನೀವು ಹಾಳು ಮಾಡಬಹುದು. ನಮಗೂ ಶಿಕ್ಷೆಯಾದ ಕೂಡಲೇ ಮಹಾತ್ಮರ ಸ್ಮರಣೆ ಮಾಡಿದರೆ ಅದು ಗುನ್ಹೆಯಾಗಿ ಅದಕ್ಕೆ ೬ ತಿಂಗಳ ಶಿಕ್ಷೆ ಹೆಚ್ಚು' ನಾಳೆ ಇವರು ಬೇಕಾದ ಕಾನೂನುಗಳನ್ನು ಮಾಡುವಂತೆ ತೋರುತ್ತದೆ. ನಿಮ್ಮ ಮಗನು, ಲಗ್ನದ ಮೆರವಣಿಗೆಯ ಕಾಲಕ್ಕೆ ಕತ್ತೆಯ ಮೇಲೆ ಕೂತರೆ ಚಂದಕಾಣುವದು ಅದ್ದರಿಂದ ಅದರ ಮೇಲೆಯೇ ಕೂಡಬೇಕು ಎಂದೆನ್ನಬಹುದು! ಸಾಧುಗಳ ಹೆಸರು ತೆಗೆದುಕೊಂಡರೆ ಶಿಕ್ಷೆ ಮಾಡುವ ಇವರು ಏನು ಮಾಡಲಿಕ್ಕಿಲ್ಲ?

ನಾಗಪೂರದಲ್ಲಿಯಾದರೂ ಏನು ನಡೆದಿರುವದು? ನಮ್ಮ ಮಾನ ಮರ್ಯಾದೆಯ ಕೊಲೆ ನಡೆದಿರುವದಷ್ಟೇ! ಸರಕಾರದವರದೊಂದು ಯೂನಿಯನ್ ಜಾಕ್ ಎಂಬುವ ನಿಶಾನೆಯಿರುವದು ಅದರ ಅರ್ಥವು ನಮಗಂತೂ ಗೊತ್ತಿಲ್ಲ. ಆದ್ದರಿಂದ ನಮಗೆ ತಿಳಿಯುವಂಥ ಒಂದು ನಿಶಾನೆಯನ್ನು ಮಹಾತ್ಮರು ನಮಗೆ ಕೊಟ್ಟಿದ್ದಾರೆ ಈ ಸ್ವಯಂಸೇವಕರು ಹಿಡಿದುಕೊಂಡು ಕೆಂಪು, ಹಸರು, ಬಿಳೇ ಬಣ್ಣಗಳು ಕೂಡಿದ ರಾಟಿಯ ಚಿತ್ರವಿದ್ದ ನಿಶಾನೆಯೇ ನಮ್ಮ ರಾಷ್ಟ್ರಧ್ವಜವು. ಕೆಂಪು ಅಂದರೆ ಹಿಂದೂ ಜನರು, ಹಸರೆಂದರೆ ಮುಸಲ್ಮಾನರು, ಬೆಳ್ಳಗೆಂದರೆ ಮಿಶ್ರಜಾತಿಗಳು. ಈ ಮೂರು ಜನಾಂಗಗಳ ಸಮೀಕರಣವನ್ನು ಮಾಡಿ ಮೇಲೆ ಶಾಂತಿ ಹಾಗೂ ಸ್ವಾವಲಂಬನಗಳನ್ನು ತೋರಿಸುವ ರಾಟಿಯನ್ನು ಅದರ ಮೇಲೆ ಬರೆದು, ಮಹಾತ್ಮರು ಈ ನಿಶಾನೆಯನ್ನು ನಮ್ಮ ಕೈಯಲ್ಲಿ ಕೊಟ್ಟಿದ್ದಾರೆ. ಇದನ್ನು ನಾವು ಕೈಯಲ್ಲಿ ಹಿಡಿದು ನಮ್ಮ ಬೀದಿಗಳೊಳಗಿಂದ ಹಿಡಕೊಂಡು ಹೋಗಬಾರದೆಂದು ಸರಕಾರದ ಕಾಯದೆ! ಹೀಗೆ ಮಾಡಲಿಕ್ಕೆ ಇವರು ಯಾರು? ನಾವು ಈ ಧ್ವಜಕ್ಕೆ ಮಾನ ಮಾಡಿದರೆ ಇವರ ಹೊಟ್ಟೆಯೊಳಗೆ ಬೆಂಕಿ ಏಕೆ? ಈ ಮಾನವನ್ನು ರಕ್ಷಿಸುವದರ ಸಲುವಾಗಿ ವೀರ ಸ್ತ್ರೀಯರು ಸಹ ಸೆರೆಯಾಳಾಗುತ್ತಿರುವರು. ಈಗ ೫೫೦ ಜನರು ಸೆರೆಮನೆಗೆ ಹೋಗಿರುವರು, ಇನ್ನೂ ಹೋಗುತ್ತಿರುವರು ಮಹಾತ್ಮಾಜಿಯವರ ಶಾಂತಿಮಯ ಸ್ವಾವಲಂಬೀ ಮಾರ್ಗದಿಂದಲೇ ನಮ್ಮ ರಾಜಕೀಯ ಮೋಕ್ಷವಾಗುವದು. ಆದ್ದರಿಂದ ನಾವು ಈ ಮಾರ್ಗದಿಂದಲೇ ಸಾಗಬೇಕು, ಎರಡನೇ ಮಾರ್ಗದ ನೆನಪು ಸಹ ನಮಗೆ ಬೇಡ

ಕೌನ್ಸಿಲು ಮುಂತಾದವುಗಳ ವಿಷಯಕ್ಕೆ ನಾನು ನಿಮಗೆ ಎಷ್ಟೋ ಮಾತುಗಳನ್ನು ಹೇಳಬಹುದು. ಆದರೆ ಯಾವ ಪ್ರಸಂಗದಲ್ಲಿ ನಾವು ನಮ್ಮ ತರುಣರನ್ನು ಅರಸರುಗಳ ಜುಲುಮೆಯೆಂಬ ರಾಕ್ಷಸನ ಎದೆಯ ಮೇಲೆ ಕಾಲಿಟ್ಟು ಹೋಗಿರೆಂದು ನಾಗಪೂರದಲ್ಲಿ ಕಳಿಸುತ್ತಿರುವೆವೋ ಅಂಥ ಸಮಯದಲ್ಲಿ ಮಿಶ್ರ ವಿಷಯಗಳನ್ನು ವಿಚಾರಿಸಕೂಡದು ನಮ್ಮ ಬ್ರಾಹ್ಮಣೇತರ ಬಂಧುಗಳು ಇತ್ತ ವಿಶೇಷ ಲಕ್ಷ ಕೊಟ್ಟಿಲ್ಲವೆಂಬುದು ನಿಜವು. ಆದರೆ ಅವರಿಗೆ ಇದರ ತತ್ವವು ಒಮ್ಮೆ ತಿಳಿಯಲಿ ಅಂದರೆ ಅವರು ನಮಗಿಂತಲೂ ಮುಂದೆ ಬರುವರೆಂಬಲ್ಲಿ ಸಂಶಯವಿಲ್ಲ. ನಿಮ್ಮಲ್ಲಿಯ ಮುಖಂಡರು ಸದ್ಯಕ್ಕೆ ಕೌನ್ಸಿಲಕ್ಕೆ ಹೋಗುತ್ತಾರೆ ಆದರೆ ಈಗ ಮೂರು ವರ್ಷ ಹೋಗಿ ಏನು ಹಿತವನ್ನು ಮಾಡಿದರೆಂದು ಕೇಳಬಾರದೇ ನಾಳೆ ಮತಗಳನ್ನು ಕೊಡಿರೆಂದು ನಿಮ್ಮೆದುರಿಗೆ ಬಂದಾಗ, ನಮ್ಮ ಕರಗಳನ್ನು ಕಡಿಮೆ ಮಾಡಿರುವಿರಾ, ನಮ್ಮ ಶಿಕ್ಷಣವನ್ನು ಹೆಚ್ಚಿಸಿರುವಿರಾ ನಮಗೆ ಯಾವ ತರದ ಹೆಚ್ಚಿನ ಹಿತವನ್ನು ಮಾಡಿರುವಿರೆಂದು ಅವಶ್ಯವಾಗಿ ಕೇಳಿರಿ ಬಿಡಬೇಡಿರಿ

ಆದರೆ ಇದರಲ್ಲಿ ಅವರ ತಪ್ಪಿಲ್ಲ. ಅವರು ಪ್ರಾಮಾಣಿಕತನದಿಂದ ನಿಮ್ಮೆಲ್ಲರ ಹಿತವನ್ನು ಮಾಡಲಿಕ್ಕೆಂದು ಕೌನ್ಸಿಲುಗಳಲ್ಲಿ ಹೋಗುತ್ತಿರಬಹುದು. ಆದರೆ ನಮ್ಮ ಹಿತವನ್ನು ಮಾಡಲಿಕ್ಕೆಂದು ಸರಕಾರದವರು ಕೌನ್ಸಿಲುಗಳನ್ನು ಕೊಟ್ಟಿಲ್ಲ ತಮ್ಮ ಆಟವನ್ನು ಆಡಿ ನಮ್ಮನ್ನು ಹೆಚ್ಚು ದಿನ ಇದೇ ಸ್ಥಿತಿಯಲ್ಲಿ ಹ್ಯಾಗೆ ಇಡಬೇಕು, ಈ ಲಕ್ಷ್ಯದಲ್ಲಿ ಅವರು ಇರುವರು ಕೌನ್ಸಿಲುಗಳೆಂದರೆ ಅವರು ಚಾಚಿದ ಬಲೆಗಳು ಅವು ನಮ್ಮ ಹಿತಕ್ಕಾಗಿ ಇಲ್ಲವೆಂಬುದು ಉಪ್ಪಿನ ಕರವು ಇಮ್ಮಡಿಯಾದದ್ದರಮೇಲಿಂದ ಸ್ಪಷ್ಟವಾಗುತ್ತದೆ ಅಲ್ಲಿ ಬ್ರಾಹ್ಮಣರೂ ಇದ್ದಿಲ್ಲ. ಅಥವಾ ಅಸಹಕಾರಿಗಳೂ ಇದ್ದಿಲ್ಲ ಆದರೆ ಸರಕಾರದ ಪ್ರೇಮಪಾತ್ರರಾದ ಉದಾರ ಮತವಾದಿಗಳೇ ಅಲ್ಲಿ ಬಹುಸಂಖ್ಯಾಕರಿದ್ದರು ಹೀಗಿದ್ದರೂ ಸಹ ಎರಡು ಸಾರೆ ಲೆ। ಅಸೆಂಬ್ಲಿಯವರು ಉಪ್ಪಿನ ಕರವು ಬಡಬಗ್ಗರಿಗೆ ಅತ್ಯಂತ ಘಾತುಕವೆಂದು ಹೇಳಲಿಕ್ಕಾಗಿ ವ್ಹಾಯಿಸರಾಯರು ತಮ್ಮ ಶಕ್ತಿಯ ಉಬ್ಬಿನಿಂದ, ಮದದ ಕೊಬ್ಬಿನಿಂದ ಸರಟಿಫಿಕೇಟು ಕೊಟ್ಟು ಉಪ್ಪಿನ ಕರವನ್ನು ಹೇರಿದರು. ಅಂದಮೇಲೆ ಕೌನ್ಸಿಲುಗಳು ನಮ್ಮ ಹಿತಕ್ಕೆಂದು ಯಾವ ಮೋರೆಯಿಂದೆನ್ನಬೇಕು? ಇದನ್ನು ನಿಮ್ಮ ಮುಖಂಡರು ತೀವ್ರವೇ ಅರಿಯುವರು. ಅವರಿಗೆ ಈ ಮಾತನ್ನು ತಿಳಿಸುವದು ನಿಮ್ಮ ಕರ್ತವ್ಯವಾಗಿದೆ ನಮಗೆ ನಿಮ್ಮಿಂದ ಯಾವ ಹಿತವೂ ಆಗುವದಿಲ್ಲ. ಕೌನ್ಸಿಲುಗಳಿಗೆ ಹೋಗುವ ಮೋಹವನ್ನು ಬಿಟ್ಟು ಗಾಂಧೀ ಮಾರ್ಗದಿಂದ ನಮ್ಮನ್ನು ಕರೆದುಕೊಂಡು ಹೋಗಿರೆಂದು ನೀವು ಅವರಿಗೆ ಹೇಳಿದರೆ, ಅವರು ಹಾಗೆಯೇ ಮಾಡುವರು. ಅವರಾದರೂ ದೇಶಹಿತವನ್ನು ಮಾಡಬೇಕೆಂದೇ ಹಂಬಲಿಸುವರು ಇವತ್ತಿಲ್ಲ, ನಾಳೆ ಸ್ವಾರ್ಥತ್ಯಾಗಕ್ಕೆ ಸಿದ್ಧರಿರುವರು. ಈ ಸಂಗತಿಗಳನ್ನು ನೀವು ಅವರಿಗೆ ತಿಳಿಸಿದರೆ ಅವರು ಒಮ್ಮೆಲೆ ಸಿದ್ಧರಾಗುವರು. ಆ ಮೇಲೆ ಅವರು ನಮ್ಮೆಲ್ಲರಕ್ಕಿಂತಲೂ ಮುಂದೋಡುವರೆಂಬಲ್ಲಿ ಸಂಶಯವಿಲ್ಲ. ನಮಗಂತೂ ಸ್ವಾವಲಂಬನದಕ್ಕಿಂತ ಹೆಚ್ಚಿನ ಮಾರ್ಗವು ಕಾಣುವದಿಲ್ಲ ಮಹಾತ್ಮಾಜೀಯವರ ಮಾರ್ಗ ಹೆಚ್ಚಿನ ಶ್ರೇಷ್ಠ ಮಾರ್ಗವು. ಅದರಂತೆ ವರ್ತಿಸುತ್ತ ಹೋದರೆ ನಾವೆಲ್ಲ ಒಂದಾಗಿ ರಾಷ್ಟ್ರದ ಉದ್ಧಾರವು ಆಗೇ ತೀರುವದು ಇದನ್ನು ಲಕ್ಷದಲ್ಲಿಟ್ಟು ಪ್ರಿಯ ಬಾಂಧವರೇ, ಎಚ್ಚರಿಟ್ಟು ಮುಂದೆಸಾಗಿರಿ.

—ಕರ್ಮವೀರ.

— ೧೯೧೩-೧೪ರಲ್ಲಿ ಸೆಕ್ರೆಟರಿಯಟ್‌ದ ಖರ್ಚು ೮ ಲಕ್ಷ ೯೩ ಸಾವಿರ ರೂಪಾಯಿಗಳಿದ್ದವು. ೧೯೨೧-೨೨ರಲ್ಲಿ ೧೮ ಲಕ್ಷ ೧೫ಸಾವಿರ ೫೦೦ ಆಗಿವೆ ೫೦೦ ರೂಪಾಯಿ ಹಾಗು ಅದಕ್ಕೂ ಹೆಚ್ಚು ಸಂಬಳ ತಿನ್ನುವ ಪ್ರಚಂಡ ನೌಕರರು ೧೯೧೩-೧೪ರಲ್ಲಿ ೧೯ ಮಂದಿಗಳಿದ್ದರು ೧೯೨೧-೨೨ರಲ್ಲಿ ಅವರ ಸಂಖ್ಯೆಯು ೩೧ಕ್ಕೆ ಮುಟ್ಟಿದೆ.

BOMBAY LODGING.

ದಿ ಮೊಡರ್ನ್ ಹಿಂದೂ ಹೊಟೆಲ್

ಗೋವಾಲಿಯಾ ಟೆಂಕ್ ರೋಡ,

ಮುಂಬಯಿ.

ಮುಂಬಾಯಿಯ ಬಹಳ ಆರೋಗ್ಯಕರವಾದ ಭಾಗದಲ್ಲಿದೆ ವಿದ್ಯಾರ್ಥಿಗಳಿಗೆ ನಿಲ್ಲುವುದಕ್ಕೂ, ಪರಸ್ಥಳಿಕರಿಗೆ ಇಳಿಯುವುದಕ್ಕೂ, ಬಹಳ ಅನುಕೂಲವಾದ ಸ್ಥಳ. ನಮಗೆ ಮೊದಲೇ ತಿಳಿಸಿದ್ದಲ್ಲಿ, ಪರಸ್ಥಳಿಕರಿಗೆ ಬಂದರ ವ ರೇಲ್ವೇಸ್ಟೇಶನ್ ಮೇಲಿಂದ ಕರೆತರುವ ಮತ್ತು ಮುಂಬಾಯಿ ಊರಿನ ಸರ್ವ ಮಾಹಿತಿಯನ್ನು ಕೊಡುವ ಏರ್ಪಾಡುಗಳನ್ನು ಮಾಡಲಾಗಿದೆ.

ದೇಶಿ ಸೆಂಟೋನಾಯಿನ್.

(ಜಂತುವಿನ ಪುಡಿ.)

ಅಪಾಯಕರವಿಲ್ಲದೆ ಗುಣ ಕೊಡುವಂಥಾದ್ದು. ಪ್ರಪಂಚದಲ್ಲಿ ಪ್ರಖ್ಯಾತ ಔಷಧ

ಔಂಸಿನ ಶೀಸೆಗೆ ೭ ರೂ ೮ ಆಣೆ.

ವಿಳಾಸ — ಎಮ್. ಜಿ ಭಾಗ್ವತ್,

ಆಯುರ್ವೇದಿಕ್ ಕೆಮಿಸ್ಟ, ಕರ್ಕಿ (ಕೆನರಾ)



ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು ಕಿಮ್ಮತು ೧೦ ಆಣೆ, ವ್ಹಿ ಪಿ ಖರ್ಚು ಬೇರೆ.

ಅಮೃತಾಂಜನ ಡಿಪೊ, ಫೋರ್ಟ್,

ಮುಂಬಯಿ.

ಜಿಲ್ಲಾ ಬೋರ್ಡಿನಲ್ಲಿ ಪಾಸಾದ ಠರಾವುಗಳು.

ಜಿಲ್ಲಾ ಸಾಧಾರಣ ಸಭೆಯು ಕಳೆದ ತಾ ೨೮
ನೇ ಸೋಮವಾರ ಆದಿಯಾಗಿ ೨ ದಿವಸಗಳ ವರೆ
ಗೆ ನಡೆಯಿತು ಈ ಪ್ರಶ್ನೆಗಳ ಪರಿವಾರಿಯಾಯಿ
ತು ಮಹತ್ವದ ಪ್ರಶ್ನೆಗಳ ಇತ್ಯರ್ಥವನ್ನು ಕೆಳ
ಕೊಟ್ಟಿರುತ್ತೇವೆ

ಲೋಕಲ್ ಪಂಡಿನ ಏರಿಕೆ

ಹೊಸ ಲೋಕಲ್ ಬೋರ್ಡ ಕಾಯಿದೆಯ ೩೩
ನೇ ಕಲಮಿನನ್ವಯ ಈಗಿರುವ ರೂಪಾಯಿ ಗೋಪ
ರ ಲೋಕಲ್ ಫಂಡು ಪರವಾರಿಯನ್ನು ೧। ಆಣೆ
ಗೆ ಏರಿಸಬೇಕೆಂದು ಬಹುಮತದಿಂದ ಠರಾವು ಆ
ಯಿತು ಈ ಠರಾವಿಗೆ ಅನುಕೂಲ ಮತಕೊಟ್ಟವ
ರ — (೧) ಅಧ್ಯಕ್ಷ ಮಿ। ಕಾ ಶೆಣೈ ( ) ಮಿ
ಆದವರ್ ಸಾಹೇಬ (೩) ... ಸ... ವಾರ ...
ಯ (೪) ಎಚ್ ಕೆ ಶೆಟ್ಟಿ ವಕೀ (೫) ರಾ
ವಸಾಹೇಬ ವಕೀಲ ಗಂಗ ಬೋರ್ಕರ (೬) ರಾ।
ಮುಕುಂದ ಶಿವರಾವ ಉಪ್ಯಾವರ ಪ್ರತಿಕೂಲ —
(೧) ರಾ। ವಕಾಮೇಶ್ವರ ಗಣಪತಿ ಗೋಖಲೆ
(೨) ಸೀತಾರಾಮ ಗಣೇಶ ಹೆಗಡೆ (೩) ಪಿನಾ
ಯಕ ಗೋವಾಳ ಕಾಮತ (೪) ರಾಮಚಂದ್ರ
ಗಣೇಶ ಹರ್ಡೀಕರ [ಅನುಕೂಲಿಯ ರಾ ವಂ
ಸಂಘ ದಾಮೋದರ ಪ್ರಭು, ಹಳಿಯಾಳದ ಪತ್ರ
ತ್ರಯ ರಾಮಚಂದ್ರ ಕೇಳಕರ ಇವರೀರ್ವರು ಸ
... ಹಾಜರಿದ್ದಿಲ್ಲ]

೧೨ ಹೊಸ ಟೋಲ ನಾಕೆಗಳು

ಲೋಕಲ್ ಬೋರ್ಡುಗಳ ಮಾರ್ಗಗಳ ಮೇಲೆ
ಹೊಸ ಟೋಲ ನಾಕೆಗಳನ್ನು ಏರ್ಪಡಿಸುವ ಬಗ್ಗೆ
ಯಾಗಿ ಇಡೀ ಜಿಲ್ಲೆಯಲ್ಲಿ ೧೨ ಟೋಲ ನಾಕೆಗಳನ್ನು
ಹೊಸದಾಗಿ ಏರ್ಪಡಿಸಬೇಕೆಂದು ಠರಾವಾಯಿತು

ತಾರೀ ಹಾಸಲಿನ ಏರಿಕೆ

ತಾರಿ ಹಾಸಲಗಳನ್ನು ಏರಿಸುವ ಬಗ್ಗೆ ಯ
ವಿಚಾರವಾಯಿತು ಶಿ ದಾರ್ಸ, ವ ಣಕಿ, ವ ಕಚಾ
ಪುರ ಉಳಿದ ತಾರಿಗಳ ಹಾಸಲಗಳು ಏರಿಸಲ್ಪ
ಟ್ಟವು ಗಾಡಿಗಿದ್ದ ೪ ಆಣೆ ಹಾಸಲು ಈಗ ೬ ಆಣೆಯಾ
ಗಿದೆ ಇದರಂತೆ ಇತರ ವಾಹನಗಳ ಮೇಲಿನ ಹಾಸ
ಲೂ ಏರುವದು

ಜಿಲ್ಹಾ ಬೋರ್ಡು ಅಧ್ಯಕ್ಷರ ಭತ್ತೆ ರೂ ೧,೫೦೦

ಜಿಲ್ಹಾ ಬೋರ್ಡಿನ ಅಧ್ಯಕ್ಷರಿಗೆ ಇತರ ಖರ್ಚನ್ನು
ಹೊರ್ತುಪಡಿಸಿ, ವಾರ್ಷಿಕ ರೂಪಾಯಿ ೧೨೦೦ರ
ವರೆಗೆ ಭತ್ತೆ ಕೊಡಬೇಕೆಂದು ನಿಶ್ಚಯಿಸಿರುವರು
ತಾಲೂಕಾ ಲೋಕಲ್ ಬೋರ್ಡುಗಳ ಅಧ್ಯಕ್ಷರಿಗೂ,
ಕಾರ್ಯಕಾರಿ ಕಮಿಟಿಯ ಚೇರಮನರಿಗೂ ವಾ
ರ್ಷಿಕ ೩೦೦ ರೂಪಾಯಿಗಳಿಗಿಂತ ಹೆಚ್ಚು ವೇತನ
ಕೊಡಬಾರದೆಂದೂ ಠರಾವಾಯಿತು.

ಶಿಕ್ಷಣ ಬೋರ್ಡಿನ ಸ್ಥಾಪನೆ

ಪೂಣೆಯಿಂದ ಮಿ। ಹೆಸ್ಯಾರವರಿಂದ ಜಿಲ್ಹೆಯಲ್ಲಿ
ಶಿಕ್ಷಣ ಬೋರ್ಡಿನ ಏರ್ಪಾಟಿನ ಬಗ್ಗೆ ಬರೆದ ಪತ್ರದ
ಚರ್ಚೆಯಾಗಿ, ೧೨ ಮಂದಿಗಳ ಶಿಕ್ಷಣ ಕಮಿಟಿ
ಯೊಂದು ನೇಮಿಸಬೇಕೆಂದು ಠರಾವಾಯಿತು ಅದರ
ಘಟನೆಯು ಈ ಪ್ರಕಾರದ್ದು —

(೧) ಶಿಕ್ಷಣ ತಜ್ಞ ಪುರುಷ, (೨) ಶಿಕ್ಷಣ ತಜ್ಞ
ಸ್ತ್ರೀ (೩) (೪) ಮ್ಯುನಿಸಿಪಾಲಿಟಿಯಿಂದ ನೇಮಿಸಲ್ಪ
ಟ್ಟ ಸಭಾಸದರೀರ್ವರು, (೫) ಅಂತ್ಯಜರ ಪ್ರತಿನಿಧಿ,
(೬) ಹಿಂದುಳಿದವರ ಪ್ರತಿನಿಧಿ, (೭) ಮಹಮ್ಮದೀ
ಯರ ಪ್ರತಿನಿಧಿ, (೮) ಕ್ರಿಶ್ಚನ್ನರ ಪ್ರತಿನಿಧಿ, (೯)
(೧೦) (೧೧) (೧೨) ಸಾಧಾರಣ ಸಭಾಸದರು

ಈ ೧೨ ಸಭಾಸದರಲ್ಲಿ ೯ ಜನರು ಪ್ರಜೆಗಳಿಂದ
ಆರಿಸಲ್ಪಡಬೇಕು ಮೂವರು ಸರಕಾರದಿಂದ ನೇ
ಮಿಸಲ್ಪಡಬೇಕು

ಬೇಸಾಯ ಶಿಕ್ಷಕ

ಎಜ್ಯುಕೇಶನಲ್ ಇನ್ಸಪೆಕ್ಟರರಿಂದ ಜಿಲ್ಹಾ ಬೋ
ರ್ಡಿಗೆ ೫೦೦ ರೂಪಾಯಿಗಳನ್ನು ಖರ್ಚುಮಾಡಿ ಒ
ಬ್ಬ ಶಿಕ್ಷಕನನ್ನು ಬೇಸಾಯ ಶಾಲೆಗೆ ಕಳಿಸುವ ಬಗ್ಗೆ
ವಿಚಾರವಾಗಿ ಜಿಲ್ಲಾ ಬೋರ್ಡು ಒಬ್ಬ ಶಿಕ್ಷಕನನ್ನು
ಬೇಸಾಯ ಶಾಲೆಗೆ ಕಳಿಸಬೇಕೆಂದು ಗೊತ್ತಾಯಿತು.
ಈ ಬಗ್ಗೆ ೫೦ ರೂಪಾಯಿಗಳು ಮಂಜೂರಾದವು
ಈ ಶಿಕ್ಷಕರನ್ನು ನೇಮಿಸಿಕೊಂಡು ಜಿಲ್ಹಾ ಬೋರ್ಡು
ಮಾವರಿಗಾಗಿ ಕೆಲ ಶಾಲೆಗಳಲ್ಲಿ ಬೇಸಾಯ ಶಿಕ್ಷಣವ
ನ್ನು ಕೊಡತಕ್ಕದ್ದೆಂದು ಠರಾಯಿಸಲಾಯಿತು

ಯಾವ ಕರಗಳನ್ನು ಏರಿಸಬೇಕು?

ಪ್ರಾಥಮಿಕ ಶಿಕ್ಷಣ ಕಾಯಿದೆಯ ಬಗ್ಗೆ ಬಂದ ಜಿ
ಓ ಎಸ್ ಈ ಡಿ ನಂ.೨೩೭ ೨/೧೮—೪—೨೨
ನೆ ಪತ್ರವು ಓದಲಾಯಿತು ಪ್ರಾಥಮಿಕ ಶಿಕ್ಷಣ
ಪ್ರಸಾರದ ಬಗ್ಗೆ ಬೋರ್ಡಿನ ಆರ್ಥಿಕ ಸ್ಥಿತಿ
ಯನ್ನು ಸುಧಾರಿಸಲು ಏನು ಮಾಡಬೇಕೆಂದು ವಿಚಾ
ರ ನಡೆಯಿತು ಈ ವಿಷಯವನ್ನು ಜಿಲ್ಹಾ ಶಿಕ್ಷಣ
ಬೋರ್ಡಿಗೆ ವಹಿಸಬೇಕೆಂದು ಠರಾವಾಯಿತು.

ರೋಗಿಗಳ ಮೇಲಿನ ಕರ ನಾಪಾಸ

ಔಷಧಾಲಯಗಳಲ್ಲಿ ಔಷಧ ಪಡೆಯುವ ರೋಗಿ
ಗಳಿಗೆ ದಿನ ೧ ದಕ್ಕೆ ೧ ಆಣೆಯಂತೆ ಫೀ ಇಡ
ಬೇಕಾಗಿ ಠರಾವಿಗೆ ಸೂಚನೆಯಾಯಿತು ಆದರೆ,
ಈ ಠರಾವಿಗೆ ಬೆಂಬಲವಿಲ್ಲದೆ ಬಿದ್ದ ಹೋಯಿತು

ನನ್ನ ನೋಟಬುಕು.

(ಲೇಖಕ:— ಪ್ರವಾಸಿ.)

ಕಳೆದ ೧೫-೨೦ ದಿವಸಗಳಲ್ಲಿ ತಮ್ಮಿತ್ತ ಕಡೆಗೆ
ಪ್ರವಾಸ ಮಾಡುವ ಪ್ರಸಂಗ ಒದಗಿತು ಅನೇಕ
ಅನುಭವಗಳು ನಿದರ್ಶನಕ್ಕೆ ಬಂದವು ಅಂಕೋಲೆ
ಗೆ ಹೋಗುವ ರಸ್ತೆಯಮೇಲೆ ಕೆಲ ಆಳುಗಳು ಸಾ
ಲು ಮರಗಳನ್ನು ಕಡಿಯುತ್ತಿದ್ದರು ಪ್ರಚಂಡ ಬಿಸಿ
ಲು, ತಾವ ಮಾರ್ಗಗಳ ಬದಿಯ ಮರಗಳ ಟೊಂ
ಗೆಗಳನ್ನು ಯಾಕೆ ಕಡಿಯುತ್ತೀರೆಂದು ನಾನು ಕೇಳಿ
ದೆನು. ಉತ್ತರವೇನೆಂದು ಬಲ್ಲಿರಾ? "ಎಕ್ಷಿಕ್ಯೂಟಿ
ವ್ಹ ಇಂಜಿನಿಯರರು ತಮ್ಮ ಮಾರ್ಗಗಳ ಮೇಲೆ ಛ
ತ್ರ ಹಿಡಿಯುವ ಸಾಲು ಮರಗಳ ಟೊಂಗೆಗಳನ್ನು
ಕಡಿಯಲಿಕ್ಕೆ ಹುಕುಮು ಮಾಡಿರುವರು" ಇದೇ
ನು ಚೋದ್ಯ? ಯಾರಾದರೂ ನೆರಳಿಗಾಗಿ ಸಾಲು
ಮರಗಳನ್ನು ನೆಡುತ್ತಾರೆ ಇದೊಂದು ಪುಣ್ಯ ಕೆಲ
ಸವೆಂಬಲೂ ಜನರ ಭಾವನೆಯಿದೆ. ದಿಲ್ಲೀ ದರಬಾರಿ
ನ ಸಮಯ ಬ್ರಿಟಿಶ ಸಾಮ್ರಾಜ್ಯದಿಂದ ಪ್ರಜೆಗಳಿಗೊ
ದಗಿದ ಉಪಕಾರಮಾಲಿಕೆಯಲ್ಲಿ ಸಾಲು ಮರಗಳ
ನ್ನೂ ಕವಿಗಳೊಬ್ಬರು ಸೇರಿಸಿದ್ದು, ನನ್ನ ಸ್ಮರಣೆಯ
ಲ್ಲಿದೆ ಪಾಂಥಸ್ಥರಿಗೆ ವೃಕ್ಷಛಾಯೆ ಇಲ್ಲದೆ ಆಯಾಸ
ವಿಲ್ಲದೆ ನಡೆದಾಡಲಿಕ್ಕಾಗುತ್ತದೆ ಇಂಥ ಪ್ರಜೆಗಳಿಗೆ
ಉಪಕಾರಮಾಡುವ ವೃಕ್ಷಗಳನ್ನು ಮಾರ್ಗದ ಬ
ದಿಗೇ ಕಡಿದು ಬೋಳುಮಾಡುವ ವಿಚಿತ್ರ ಹು
ಕುಮುನ್ನು ನಮ್ಮ ಇಂಜಿನಿಯರರು ಹೇಗೆ ಹೊರಡಿ
ಸಿದರು? ಎಂಬದೊಂದು ಗೂಢವು ನನಗಾ
ಯಿತು ಕಡಿಯುವವರಿಗೆ ಮತ್ತೂ ಪ್ರಶ್ನಿಸಿದೆನು. ಅ
ವರಿಗೂ ತಿಳಿಯಲೊಲ್ಲದು, ಸಾಲು ಮರಗಳನ್ನು ಹ
ಚ್ಚಬೇಕಾಗಿತ್ತು. ಹಚ್ಚಿ ಬೆಳೆದವನ್ನು ಯಾಕೆ ಕಡಿ
ಯುತ್ತಾರೆ? ಇದೊಂದು ವಿಕ್ಷಿಪ್ತ ಪ್ರಕಾರವು ಅದರ
ಈ ವಿಚಾರವು ನಮಗೇಕೆ? ಕಡಿದು ಹಾಕಿದರೆ ದಿನ
ಮಜೂರಿ ಸಿಗುತ್ತದೆ ಈ ಕಠಿಣ ಪ್ರಸಂಗದಲ್ಲಿ ಅಷ್ಟೇ
ಲಾಭ ಮತ್ತೂ ಚೌಕಶಿ ನಡೆಸಿದೆನು. ಆಗ ದೊರೆ
ತ ಮಾಹಿತಿಯು ನಿಮಗೆ ಹೇಳಿಬಿಡುತ್ತೇನೆ. ಮಳೆಗಾ
ಲದಲ್ಲಿ ಮರಗಳೊಳಗಿಂದ ನೀರು ಸುರಿದು ಮಾರ್ಗ
ಗಳು ಕೆಡುತ್ತವೆ. ಕಾರಣ, ಈ ಹುಕುಮವಾಗಿದೆ. ಇ
ದನ್ನು ಕೇಳಿ ನಾನು ಚಕಿತನಾದೆ ನಾಳೆಗೆ ಸಾಹೇಬ
ರು ಗಾಡಿ, ಜನರು ತಿರುಗಾಡಿದರೆ ತಮ್ಮ ಮಾರ್ಗ
ಜೀರ್ಣವಾಗುವವೆಂದು ಪ್ರತಿಬಂಧಕ ಹುಕುಮುಗಳ
ನ್ನು ಹೊರಡಿಸದಿದ್ದರೆ ಸಾಕು

***

ಇನ್ನು ಹೊನ್ನಾವರ ಬದಿಗೆ ತೆರಳಿದ ಅಲ್ಲಿ ಬ
ಡಗಣಿ ಧಕ್ಕೆಯನ್ನು ನೋಡಿದೆನು. ಏನು ದೊಡ್ಡ
ಕಾಮಗಿರಿ! ನಮ್ಮ ಲೋಕಲ್ ಬೋರ್ಡಿಗೆ ೧೨,೦೦೦
ರೂಪಾಯಿ ಖರ್ಚು ದೊಡ್ಡದೊಂದು ಎತ್ತರವಾದ
ದಿನ್ನೆಯಂಥ ಧಕ್ಕೆಯನ್ನು ಕಟ್ಟಿರುವರು. ತುಂಬಿ
ಭರತಿಯ ಹೊತ್ತಿಗಾದರೂ ಧಕ್ಕಗೂ, ನೀರಿಗೂ
೩-೪ ಪೂಟು ಅಂತರವಿರುತ್ತದೆ. ಇಳಿತದ ಹೊತ್ತಿ
ಗೆ ೬-೭ ಅಡಿ ತಗ್ಗು ಇದ ದಿನ್ನೆ ಕಟ್ಟುವದರಲ್ಲಿ ನ
ಮ್ಮ ಲೋಕಲ್ ಬೋರ್ಡು ೧೨,೦೦೦ ರೂಪಾಯಿಗ
ಳನ್ನು ಹಗಿದು ಬಿಟ್ಟಿದೆ ತಾರಿಗೆ ಜಂಗಲು ವಾಹನ
ದಿಂದ ಅದನ್ನು ಪೂರೈಸಬೇಕೆಂದು ತಾರೀ ಪಟ್ಟಿಯಲ್ಲಿ
ಸ್ಪಷ್ಟ ನಿರ್ದೇಶವಿದೆ ಈ ಬಗ್ಗೆ ಜನರ ತಕ್ರಾರು ನಡೆ
ಯಿತು ಕಲೆಕ್ಟರ ಸಾಹೇಬರೂ ಜನರ ಅಂಬೋಣ
ಕೇಳಿಕೊಂಡರು ಜಂಗಲನ್ನು ಪೂರೈಸಬೇಕೆಂದು ಅ
ವರು ಹೇಳಿದ್ದಿಲ್ಲವೆ, ಪಟ್ಟಿಯಲ್ಲಿ ಇದ್ದ ಸೂಚನೆಯನ್ನೂ
ತೋರಿಸಿದರಂತೆ! ಆದರೆ, ಮಿ। ಹೇಗರೂ ಚತುರ
ಸಾಹೇಬರು ಈ ಶರ್ತು ಬಾಕಿ ಎಲ್ಲ ತಾರಿಗಳಿಗೆ ಲಾ
ಗು, ಬಡಗಣಿತಾರಿಗೆ ಜಂಗಲು ಪೂರೈಸಬೇಕೆಂದು
ಸ್ಪಷ್ಟ ನಿರ್ದೇಶವಿದ್ದದ್ದು ತೋರಿಸಿರಿ ನೋಡುವ ಎಂ
ದು ಪ್ರಶ್ನಿಸಿದರಂತೆ! ಶಾಭಾಶ!! ಇದನ್ನು ಕೇಳಿ
ಚತುರ ವಕೀಲರು ಸಹ ಬೆರಗಾಗಿದರು. ಎತ್ತರವಾ
ದ ಧಕ್ಕೆಯ ಮೂಲಕ ದೋಣಿ ಹತ್ತಿ ಬಂದ ಜನರು
ನೆಲದ ಮೇಲೆ ಏರುವದೊಂದು ಹಾರಗುಪ್ಪಿ ಕಸ
ರತ್ತು ಮಾಡಬೇಕು ಗಾಡಿಗಳ ಕರುಣ ಕಥೆಯ
ನ್ನು ಬಣ್ಣಿಸಿದಷ್ಟು ಕಡಿಮೆ ಧಕ್ಕೆಯನ್ನು ಹಿಂದೆತೆ
ಬಿಟ್ಟು, ಬೇರೆಯವರ ಸ್ಥಳದೊಳಗಿಂದ ತಾರಿಗೆ ಹೋ
ಗಬೇಕಾಗುತ್ತದೆ ತಾರಿಯ ಸ್ಥಿತಿಯನ್ನು ವಿಚಾರಿ
ಸುವ ಚರ್ಚೆ ಇಳಿತ ಬಂದರೆ, ತಾಡಿಯೆಲ್ಲ ಬೆಳಿ
ಬೀಳುತ್ತದೆ ಸ್ವಲ್ಪ ಕಡೆಯಲ್ಲಿ ಗುಂಡಿಯಿದೆ ಇ
ಲ್ಲಿ ಸಂಕ ಕಟ್ಟಿದ್ದರೆ, ಮುತ್ತೂ ೪-೫ ಸಾವಿರ ರೂಪಾ
ಯಿ ಹೆಚ್ಚು ವೆಚ್ಚವಾಗುತ್ತಿದ್ದವು ಜನರಿಗಿಲ್ಲ ತೋ
ಯಿಯಾಗುತ್ತಿತ್ತು ಆದರೆ, ಇವೆಲ್ಲ ನಿಜ. ಲೋಕಲ್
ಬೋರ್ಡಿಗೆ ಇಷರಿಂದ ವರುಷವೊಂದರ ೧-೨ ಸಾವಿ
ರ ರೂಪಾಯಿ ಹಾನಿಯಾಗುತ್ತದಲ್ಲವೇ? ಜನರ

ಸೋಯಿ ನೋಡಹೋದರೆ, ಹಣವನ್ನು ಕಳಕೊಳ್ಳಬೇಕಾಗುತ್ತದೆ. ಇದರಿಂದಲೇ ಈ ಜಾರಿಗೆ ಸ್ವಾಕರ್ಯವಿದ್ದರೂ, ಸಾಕಷ್ಟಲಿಲ್ಲೆಂದು ಅನೇಕರ ಊಹೆ.

***

ಹೀಗೆಯೇ ಮುಂದರಿಯುತ್ತ, ಕಾಸರಕೋಡ ಮಾರ್ಗದಿಂದ ಭಟ್ಕಳಕ್ಕೆ ತೆರಳಿದ. ಮಾರ್ಗದ ಮೇಲೆ ಕೆಲವೆಡೆಗಳಲ್ಲಿ ಅಲ್ಪ ಸ್ವಲ್ಪ ದುರುಸ್ತಿಯ ಚಿನ್ಹಗಳು ಕಾಣುತ್ತವೆ. ಮೋರಿಗಳು, ಕಾಲುವೆಗಳು ಚೊಕ್ಕವಾಗಬೇಕು. ಮಾರ್ಗದ ಮೇಲೆ ಮಣ್ಣು ಹರಡದೆ ಖಡಿ ಹಾಕಿದರೆ, ಮಾರ್ಗಗಳು ವಿಶೇಷ ಭದ್ರವಾಗುತ್ತವೆ. ನೋಡ ನೋಡುತ್ತ ಭಟಕಳವಲ್ಲೇ ಬಂದು ಬಿಟ್ಟೆ. ಮುನ್ನಾದಿನ ಜಲೋಮಳೆ ಬಿದ್ದಿತ್ತು. ಭಟಕಳದೊಳಗಿನ ಮಾರ್ಗಗಳನ್ನು ನೋಡಿ, "ಮ್ಯುನಸಿಪಾಲಿಟಿಯಿಲ್ಲದ್ದರಿಂದ ಹೀಗಾಗುತ್ತದೆ ಇಲ್ಲಿ ಒಂದು ಮ್ಯುನಿಸಿಪಾಲಿಟಿಯಿಡಬೇಕು" ಎಂದು ನನಗೆ ತೋಚಿತು! ಕೆಲವರಿಗೆ "ಇಲ್ಲಿ ನೀವು ಮ್ಯುನಿಸಿಪಾಲಿಟಿಯನ್ನು ಯಾಕೆ ಇಡುವದಿಲ್ಲ? ರಸ್ತೆಗಳ ಸ್ಥಿತಿ ನೋಡಿರಿ ಹೊಣೆಗಳಂತಿವೆ ಕಾಲುವೆಗಳಿಲ್ಲ ನೀರೆಲ್ಲ ಮಾರ್ಗಗಳ ಮೇಲೆ ಹರಿದಾಡುತ್ತದೆ. ಪಾಂಥಸ್ಥರ ಗೋಳು. ನನ್ನಂಥ ಪರಸ್ಥನ ಸ್ಥಿತಿಯಂತೂ ಕೇಳಬೇಡಿರಿ." ಎಂಬ ಮ್ಯುನಿಸಿಪಾಲಿಟಿಯ ಲಾಭಗಳ ದೊಡ್ಡ ಪುರಾಣವನ್ನು ಬಿಚ್ಚಿದೆನು ಇದನ್ನು ಕೇಳಿ, ಅವರು ಕೆಲ ಕಾಲ ಸುಮ್ಮಗಾದರು. ಕಡೆಗೆ ನುಡಿದದ್ದೇನಂದರೆ — "ಇಲ್ಲಿ ಒಂದು ಮ್ಯುನಿಸಿಪಾಲಿಟಿಯಿದೆ ದೊಡ್ಡ ಮ್ಯುನಿಸಿಪಾಲಿಟಿ ಇದರಿಂದ ಒದಗಿದ ದಸ್ಥಿತಿಯಿದು. ಮ್ಯುನಿಸಿಪಾಲಿಟಿಯ ಲಾಭವೇ ಇದು. ಮುಂದಾಗಿರಿ. ಇದು ನೋಡಿರಿ ಮಾರ್ಗದ ಮೇಲೆ ಹರಡಲಿಕ್ಕೆಂದು ತಂದ ಖಡಿಗಳ ರಾಶಿಗಳು, ಬಿಸಿಲು ಮಳೆ ತಿನ್ನುತ್ತವೆ ಅದರಗೊಡವೆ ಮ್ಯುನಿಸಿಪಾಲಿಟಿಗಿಲ್ಲ ನಿಮ್ಮ ಮ್ಯುನಿಸಿಪಾಲಿಟಿಯ ಪುರಾಣ ಕೇಳಿ, ನಾವು ಬೆರಗಾದ ಕಾರಣವೂ ಇದೇ." ಇದನ್ನು ಕೇಳಿ ನಾನು ವಿಸ್ಮಿತನಾದೆನು. ಇದೆಂಥ ಮ್ಯುನಿಸಿಪಾಲಿಟಿ! ರಸ್ತೆಗಳು ಬಿಳಬು ಹೋದರೂ ಮ್ಯುನಿಸಿಪಾಲಿಟಿಯ ಕಾರಭಾರಿಗಳು ಎಚ್ಚರಾಗುವದಿಲ್ಲ! ಇಷ್ಟು ಎಚ್ಚರದಪ್ಪಿ ಬಿದ್ದಿರುವರು! ಎಂದು ನನಗೆ ಅನಿಸಿತು ನನ್ನ ನೋಟ ಬೂಕಿನಲ್ಲಿ ಇನ್ನೂ ವಿವಿಧ ಚಮತ್ಕಾರಿಕ ಸಂಗತಿಗಳಿವೆ. ಪುರಸತ್ತು ಸಿಕ್ಕಿದಾಗ ಬರೆಯುವೆನು. ಸ್ಥಳಾವಕಾಶವಿದ್ದಂತೆ ನೀವು ಪ್ರಕಟಿಸಬೇಕಾಗಿ ವಿನಂತಿ.

ಮಿ॥ ಬಸರೂರರವರ ಸಹಕಾರಿತೆ.

೧೯೨೧–೨೨ ನೇ ಇಸವಿಯ ಜಂಗಲ ಅಡಳತೆಯ ಮೇಲಿನ ಸರಕಾರಿ ಠರಾವು ತಾ ೨೩–೨–೨೩ ನೇಗೆ ಪ್ರಕಟಗೊಂಡಿದೆ ಅದರೊಳಗಿನ ೯ ನೇ ಕಲಮಿನ ಭಾಷಾಂತರ --

ದಕ್ಷಿಣ ಭಾಗದೊಳಗಿನ ಜಂಗಲ ಖಾತೆಯ ವಿರೋಧಿ ಚಳವಳವು ಕುಗ್ಗಿದೆಂದು ಸಮೂದಿಸಲು ಸಮಾಧಾನವಾಗುತ್ತಿದೆ. ಮಿ॥ ಕೊಲಿನ್ಸರವರು ಪ್ಯಾನರ ಜಂಗಲುಗಳ ವಿಸ್ತಾರ ಹಾಗು ವಹಿವಾಟ ಹಕ್ಕುಗಳ ಬಗ್ಗೆ ಉದಾರ ಬುದ್ಧಿಯಿಂದ ಯೋಜನೆಗಳನ್ನು ಸರಕಾರಕ್ಕೆ ಸೂಚಿಸಿದರು ಸರಕಾರವು ಅದನ್ನು ಮನ್ನಿಸಿದೆ. ತಾ. ೨೧–೯–೧೯೨೨ನೇ ಮುದ್ರಣದೊಳಗಿನ ೨೦,೦೦೦ ಎಕರೆ ಕ್ಷೇತ್ರವನ್ನು ಕೈಬಿಟ್ಟ ಕಳಗಿನ ಮ್ಯಾನರ ಜಂಗಲಿಗೆ ವಿಂಗಡಿಸಿ ಕೊಡಲು ಸರಕಾರವು ಆಶ್ವಾಸನವನ್ನಿತ್ತಿತ್ತು. ಅದನ್ನು ಬೆಳೆಸಿ ೩೩,೩೧೧ ಎಕರೆ ಕ್ಷೇತ್ರಕ್ಕೆ ಒಯ್ಯಲ್ಪಟ್ಟಿದೆ ಉರುವಲ ಕಟ್ಟಿಗೆ, ಸೊಪ್ಪು, ಬೇಸಾಯ ಸಾಮಗ್ರಿಗಳಿಗೆ ತಗಲುವ ಗಿಡಗಂಟಿ, ಮುಂತಾದವುಗಳ ಬಗ್ಗೆ ವಿಶೇಷ ಸವಲತುಗಳು ಕೊಡಲ್ಪಟ್ಟಿವೆ. 'ಸ್ಟ್ರಿಪ್' ನಿಯಮಗಳನ್ನು ತಿದ್ದುಪಡಿ ಮಾಡಿದ್ದಲ್ಲದೆ, ಬೆಟ್ಟದ ಕರಾರುಗಳ ಪ್ರಶ್ನೆಯು ಈಗ ಸರಕಾರದ ಆಲೋಚನೆಯಲ್ಲಿದೆ. ಈ ಉದಾರ ಯೋಜನೆಗಳಿಂದ ಜಂಗಲ ಅಡಳತೆಯ ಬಗ್ಗೆ ಕಾನಡಾ ಜಿಲ್ಹೆಯಲ್ಲಿರುವ ನಿಜವಾದ ಅಸಂತೋಷವು ವಿಲಯವಾಗುವದೆಂದು ಸರಕಾರದ ನಂಬಿಗೆಯಿದೆ. ಹೊನ್ನಾವರ ತಾಲೂಕಿನೊಳಗಿನ ಜನರಿಗೆ ಜಂಗಲ ಖಾತೆಯಗೂಡ ಸಹಕಾರ್ಯ ಹೊಂದಲಿಕ್ಕೆ ಮಿ॥ ಬಸರೂರವರು ಮಾಡಿದ ಯತ್ನಗಳ ಬಗ್ಗೆ ಸರಕಾರವು ಅವರನ್ನು ಪ್ರಶಂಸಿಸುತ್ತದೆ.

—❦—

ಎಲಾಯನ್ಸ ಬೇಂಕಿನ ದಿವಾಳಿ.

ಸಿಮಲಾದೊಳಗಿನ ಎಲಾಯನ್ಸ ಬೇಂಕು ದಿವಾಳಿ ತೆಗೆದ ಸಂಗತಿಯು ಈಗ ಎಲ್ಲರಿಗೂ ವಿದಿತವಿದೆ ಇದು ಯುರೋಪಿಯನ್ ಬೇಂಕು ಈ ಬೇಂಕಿಗೆ ಯುರೋಪಿಯನ್‌ರೂ, ಅಧಿಕಾರಿಗಳೂ ಬಹಳೇ ಸಹಾಯವನ್ನಿತ್ತರು ಬೇಂಕು ಹೊರಬೀಳಬಾರದೆಂದು ಬಹು ಪರಿಯಿಂದ ಯತ್ನಿಸಿದರು. ಆದರೂ, ತಡೆಯದೆ, ಬೇಂಕು ದಿವಾಳಿಯನ್ನು ಜಾಹೀರು ಮಾಡಬೇಕಾಯಿತು ಬೇಂಕಿನ ಜಮಾಖರ್ಚು ಪತ್ರಗಳಲ್ಲ ಮೊನ್ನೆ ಮೊನ್ನೆ ವರೆಗೆ ಆಶಾಸ್ಪದವಿರಲು, ದಿವಾಳಿ ತೆಗೆಯುವ ಪ್ರಸಂಗವು ಹೇಗೆ ಒದಗಿತು? ಎಂದು ಅನೇಕರಿಗೆ ಗೂಢ ಬಿತ್ತು ಯುರೋಪಿಯನ್‌ರಂದರೆ, ಜಗತ್ತಿನಲ್ಲಿ ಕಾರ್ಯಕ್ಷಮ ಮಂದಿಗಳೆಂದು ವಿಖ್ಯಾತಿ ಪಡೆದ ಯುರೋಪಿಯನ್‌ರದೇಖರೇಖಿಯಿಂದ ತುದಿಯ ವರೆಗೆ ಆಡಳಿತೆಯಲ್ಲಿದ್ದ ಈ ಬೇಂಕು ಹೇಗೆ ದಿವಾಳಿ ತೆಗೆಯಿತು? ಎಂದು ಅನೇಕ ಭಾವಿಕರು ತಮ್ಮ ಪ್ಷಕ್ಕೆ ಪ್ರಶ್ನಿಸುತ್ತಿದ್ದರು. ಈಗ ನೋಡಿದರೆ, ಈ ಬೇಂಕು ಸಟ್ಟೆ ಬಾಜಿಗೆ ಬಿತ್ತು ಬೇಂಕಿನ ಡ್ಯಾರೆಕ್ಟರರಿಗೆ ೧॥ ಕೋಟಿ ರೂಪಾಯಿಗಳ ವರೆಗೆ ಸಾಲ ಕೊಟ್ಟಿತು. ಆದರೆ, ಈ ಸುದ್ದಿಯನ್ನು ಜಮಾ–ಖರ್ಚು ಪತ್ರಕದಲ್ಲಿ ಕಾಣಿಸಲಿಲ್ಲ ಹಿಂದುಸ್ಥಾನ ಸರಕಾರೀ ಬೇಂಕು ಅಂದರೆ, ಇಂಪೀರಿಯಲ್ ಬೇಂಕು ೧॥ ಕೋಟಿ ರೂಪಾಯಿಗಳನ್ನು ಈ ಬೇಂಕಿಗೆ ಸಾಲ ಕೊಟ್ಟಿತು ಇಷ್ಟಾದರೂ, ಬೇಂಕು ತಡೆಯದೆ ಹೋಯಿತು. ಈಗ ಪುನಃ ಇಂಪೀರಿಯಲ್ ಬೇಂಕು ಎಲಾಯನ್ಸ ಬೇಂಕಿನ ಇತರ ಸಾಲಗಾರರಿಗೂ ಶೇಕಡಾ ೫೦ ರಂತೆ ತನ್ನಿಂದ ಹಣ ಪಡೆಯಲು ಅನುಜ್ಞೆಯನ್ನಿತ್ತಿದೆ. ಸರ್ವತೋಮುಖ ಅವ್ಯವಸ್ಥೆಯನ್ನು ಬಚ್ಚಿಡುವ ದುರಾಶೆ ನೋಡಿರಿ. ಈ ಬಗ್ಗೆ ಇಂಪೀರಿಯಲ್ ಬೇಂಕಿನ ಭಾಗೀದಾರರೊಬ್ಬರು ಸದರಿ ಬೇಂಕಿನ ಗವ್ಹರ್ನರರ ಮೇಲೆ ಮುಂಬಯಿ ಹ್ಯಾಕೋರ್ಟನಲ್ಲಿ ದಾವೆ ಮಾಡಿ, ಪ್ರತಿವಾದಿಗಳು ಎಲಾಯನ್ಸ ಬೇಂಕಿನ ಸಾಲಗಾರರ ಸಹಾಯಕ್ಕೆ ಹೋಗುವದು ಅಧಿಕಾರಬಾಹ್ಯವೆಂತಲೂ, ಅದನ್ನು ಪ್ರತಿಬಂಧಿಸಬೇಕೆಂತಲೂ ನ್ಯಾಯಮೂರ್ತಿಗಳಾದ ಮಿ॥ ಕಾಜೀಜಿಯವರಗೂಡ ಪ್ರಾರ್ಥಿಸಿದರು. ನ್ಯಾಯಮೂರ್ತಿಗಳು ವಾದಿಯ ಹೇಳಿಕೆಯನ್ನು ಕೇಳಿಕೊಂಡು, ಹಂಗಾಮಿ ಪ್ರತಿಬಂಧಕ ಹುಕುಮನ್ನು ಕೊಟ್ಟಿರುವರು ಪ್ರತಿವಾದಿಗಳು ಈಗ ತಮ್ಮ ಸಮರ್ಥನೆಯನ್ನು ಹೇಗೆ ಮಾಡುತ್ತಾರೆಂದು ಕಾಣುವದು

ನೌಕರರ ದೀನ ಸ್ಥಿತಿ.

ನೌಕರರ ಆಧಾರಸ್ತಂಭರಾದ ನೌಕರ ದೀನ ಸ್ಥಿತಿಯನ್ನು ಚೌಕಶಿ ಮಾಡುವದೆ ಹಿಂದುಸ್ಥಾನ ಸರಕಾರವು ಕಮಿಟಿಯನ್ನು ನೇಮಿಸಿದೆ. ಈ ಕಮಿಟಿಗೆ ೩ ಲಕ್ಷ ಖರ್ಚು ತಗಲೀತೆಂತಲೂ, ಅದನ್ನು ಮಂಜೂರು ಮಾಡಬೇಕೆಂತಲೂ ಸರಕಾರವು ಪರಿಪರಿಯಿಂದ ಹೇಳಿಕೊಂಡರೂ, ವರಿಷ್ಠ ಕಾಯಿದೆ ಕೌನ್ಸಿಲಿನ ಸಭಾಸದರು ಕೇಳದೆ, ಖರ್ಚನ್ನು ನಾಮಂಜೂರು ಮಾಡಿಬಿಟ್ಟರು ಸರ್ವಾಧಿಪತಿಗಳು ಬಾದಶಹೀ ಅಧಿಕಾರವನ್ನು ಪ್ರಯೋಗಿಸಿ ಖರ್ಚು ಮಂಜೂರು ಮಾಡಿದರು. ಈ ಕಮಿಶನಿನ ಸಭಾಸದರ ಹೆಸರುಗಳು ಹೊರಬಿದ್ದಿವೆ. ಲೀ ದೊರೆಗಳು ಅಧ್ಯಕ್ಷರು. ಸರ್ ರಿಜಿನೋಲ್ಡ ಕ್ರೆಡೋಕ ಮೊದಲಾದ ಮೂವರು ಹಿಂದೀ ಸಭಾಸದರು. ಹಿಂದೀ ಸಭಾಸದರೆಲ್ಲ ಸರಕಾರೀ ನೌಕರರೇ ಎಂದು ಹೇಳಬಹುದು. ಬಿರ್ಕೆಂಟ ಅಮ್ಮನವರು ಬಹಿಷ್ಕರಿಸಬೇಕೆನ್ನುತ್ತಿದರು ಈಗೇನು ಮಾಡುತ್ತಾರೆಂದು ನೋಡುವ.

ವೃತ್ತಸಾರ.

— ಜಶೋರ ಎಂಬಲ್ಲಿ ೩೦ ಮಂದಿ ಯಾತ್ರಸ್ಥರು ಒಂದು ದೋಣಿಯಲ್ಲಿ ಕುಳಿತುಕೊಂಡು ಗೋಮತಿ ಕೆರೆಯನ್ನು ದಾಟುವಾಗ ದೋಣಿಯ ಭಾರವು ಹೆಚ್ಚಾಗಿ ದೋಣಿಯು ಜಲಸಮಾಧಿ ಹೊಂದಿತು. ೧೩ ಮಂದಿಗಳ ಪತ್ತೆಯೇ ಇಲ್ಲ. ೧೭ ಮಂದಿಗಳು ಬೇರೆ ಬೇರೆ ಪ್ರಕಾರದಿಂದ ಬದುಕಿಕೊಂಡರು

— ಆಸ್ಟ್ರಿಯಾ ದೇಶದ ಹಾನ್ಸ್ಯಾಬ ಪ್ರದೇಶದಲ್ಲಿ ಒಂದು ತರದ ನೊಣಗಳ ಹಾವಳಿ ಎದ್ದಿದೆ. ಇವು ಕಡಿದು ೧೫೦೦೦ ದನಗಳನ್ನೂ, ಅನೇಕ ಪ್ರಜೆಗಳನ್ನೂ ನಾಶಪಡಿಸಿದವು.

— ಜನೋವಾದಲ್ಲಿ ಒಬ್ಬನು ತನ್ನ ಸೌಭಾಗ್ಯವತಿಯ ವಿಮೆ ಹಣವನ್ನು ಪಡೆದು ಸಾವುಕಾರನಾಗಬೇಕೆಂಬ ದುರಾಶೆಯಿಂದ ಅವಳನ್ನು ಕೊಂದನು ರೀತಿಯಂತೆ ಅವನ ವಿಚಾರಣೆ ನಡೆಯಿತು. ನಾನು ಅಪರಾಧ ಮಾಡಿದ್ದರೆ ದೇವರೇ ನನ್ನನ್ನು ನಾಶ ಮಾಡುವನು' ಎಂದು ಉದ್ಗರಿಸುವಷ್ಟರಲ್ಲೇ ಥಕ್ಕನೆ ಕೆಳಗೆ ಬಿದ್ದು ಮೃತನಾದನು.

— ಸಂಗೀತ ಮದನ ಮೋಹನ ಮಾಲವೀಯದೇರವರ ಸ್ತ್ರಿಯ ಪುತ್ರಿಯು ಕಳೆದ ತಾರೀಖು ೨೪ ನೇಗೆ ಕಾಲಾಧೀನಳಾದಳು. ಅವಳ ಅಸ್ವಸ್ಥತೆಯ ಮೂಲಕ ಮಾಲವೀಯಜೀರವರಿಗೆ ಸಾರ್ವಜನಿಕ ಕಾರ್ಯವನ್ನು ಜರುಗಿಸಲಾಗಲಿಲ್ಲ.

— ಈಜಿಪ್ತದಲ್ಲಿ ಮದ್ಯಪಾನವನ್ನು ಪೂರ್ಣವಾಗಿ ಪ್ರತಿಬಂಧಿಸಬೇಕೆಂದು ೬೦೦೦ ಸ್ತ್ರೀಯರು ಮಂತ್ರಿಮಂಡಳಕ್ಕೆ ಅರ್ಜಿ ಮಾಡಿಕೊಂಡಿರುವರು.

— ಸೋಲಪು ಜಿಲ್ಲಾ ಬೋರ್ಡು ಗೋವಧಬಂದಿಯ ಠರಾವನ್ನು ಪಾಸು ಮಾಡಿದೆ. ಜರ್ಮನಿಯ ಮಾರ್ಕ ಎಂಬ ನಾಣ್ಯವು ಯುದ್ಧಪೂರ್ವದಲ್ಲಿ ಪವನು ೧ಕ್ಕೆ ೨೦ ಇತ್ತು. ಈಗ ಅದರ ದರವು ೩ ಲಕ್ಷ ೧೨೦೦೦ ಆಗಿದೆ. ಅಂದರೆ ೧ ಆಣೆಗೆ ೧೩೦೦೦ ಮಾರ್ಕು ಸಿಗುತ್ತದೆಂದಾಯಿತು ಜರ್ಮನಿಯಲ್ಲಿ ಹಣವು ಬಹಳೇ ಅಗ್ಗವಾಗಿದೆ

— ಮಾಜಿ ಭಾರತ ಮಂತ್ರಿಗಳಾದ ಮಿ॥ ಮೋಂಟೆಗ್ಯೂಗವರು ರಾಜಕಾರಣವನ್ನು ತೊಲಗಿ ಈಗ ಖಣಿಯ ಉದ್ಯೋಗವನ್ನು ಕೈಕೊಂಡಿರುವರು.

— ಹೊಸ ೧೦ ರೂಪಾಯಿಯ ನೋಟಿನಲ್ಲಿ ಎಡಬದಿಗೆ ಖಾಲಿ ಜಾಗವಿದೆ. ಅದರೊಳಗೆ ಮಹಾತ್ಮರ ಭಾವಚಿತ್ರವನ್ನು ಹಾಕಬೇಕಾಗಿ ಒಬ್ಬನ ಮತವಿದೆಂದು ಮದ್ರಾಸಿನ 'ಜನ್ಮಭೂಮಿ' ಯು ತಿಳಿಸುತ್ತದೆ. ಆದರೆ ಮಹಾತ್ಮರ ಸ್ಥಳವು ತಪೋವನವೆಂತಲೂ, ನೋಟಿನ ಮೇಲೆ ತಮ್ಮ ಭಾವಚಿತ್ರವನ್ನು ಇರಿಸಲಿಕ್ಕೆ ಅವರು ಒಪ್ಪಲಿಕ್ಕಿಲ್ಲೆಂತಲೂ, ಅದೇ ಪತ್ರವು ನುಡಿಯುತ್ತದೆ.

— ಜಿಕಂದರಾಬಾದಿನ ಲೋಕೋಪಕಾರಿಗಳಾದ ದಿವಾನ ಬಹಾದ್ದೂರ ಶೇಟ ರಾಮ ಗೋಪಾಲರವರು ಕಳೆದ ಜೂನ ತಾ. ೧೧ ನೇಗೆ ಮೃತ ಹೊಂದಿದರು

— ಮುಂಬಯಿಯ ಮುಳಜಿಜಾಠಮೋತಿಲಾಲ ಮುಳಜಿಯವರ ಗೋದಿಗಳಿಗೆ ಬೆಂಕಿ ಬಿದ್ದು, ಸುಮಾರು ೬ ಲಕ್ಷ ರೂಪಾಯಿಗಳ ಹತ್ತಿಯು ನಷ್ಟವಾಯಿತು.

— ಆಚಾರ್ಯ ಪ್ರಫುಲ್ಲಚಂದ್ರ ರೊಯ್‌ರವರು ಕೊಂಗ್ರೆಸಿನ ಸಭಾಸದರಾಗಿರುವರು.

— ಬರ್ಮಾ ಪ್ರಾಂತದ ಮೌಲಮೀನದ ಬೆರಿಸ್ಟರರಾದ ಮಿ॥ ರಘೀಯುವರು ಖಾನಸಾಹೇಬರನ್ನು ತ್ಯಜಿಸಿರುವರೆಂದೂ ತಿಳಿಯುತ್ತದೆ

ಕಾನಡಾವೃತ್ತ.

ಗುರುವಾರ, ತಾರೀಖು ೨೧ ಮಾಹೆ ಜೂನ ೧೯೨೩.

ನಮ್ಮ ದೊಡ್ಡಸ್ತಿಕೆ.

ವಾರ್ಷಿಕ ಉತ್ಪನ್ನ ರೂಪಾಯಿ ೪೧.

ಬ್ರಿಟಿಶ ಸಾಮ್ರಾಜ್ಯದ ಛತ್ರವು ಹಿಂದುಸ್ಥಾನದ ಮೇಲೆ ಆರೂಢವಾದಂದಿನಿಂದ ಪ್ರಜೆಗಳು ಸ್ಥಿರವಾಗಿ ದಿನೇ ದಿನೇ ಬಡಬೀಳುತ್ತ ನಡೆದಿರುವರು. ಪರಮಪೂಜ್ಯ ದಾದಾಭಾಯಿ ನವರೋಜಿಯವರು ಭಾರತೀಯರ ವಾರ್ಷಿಕ ಸರಾಸರಿ ಉತ್ಪನ್ನವು ತಲೆಗೆ ರೂಪಾಯಿ ೨೪ ಬೀಳುತ್ತವೆಂದು ಅಂದಾಜು ಮಾಡಿದ್ದರು. ಕರ್ಝನ ದೊರೆಗಳು ಭಾರತೀಯರ ಶ್ರೀಮಂತಿಕೆಯನ್ನು ವಿಶೇಷ ಚೌಕಶಿ ಮಾಡಿ ೧೯೦೧ ರಲ್ಲಿ ಉತ್ಪನ್ನದ ಮಾನವು ರೂಪಾಯಿ ೩೦ ಎಂದು ನಿರ್ಧರಿಸಿದ್ದರು. ಕ್ರೋಮರ ದೊರೆಗಳೂ ೧೮೮೦ ರಲ್ಲಿ ಒಂದು ಅಂದಾಜು ಮಾಡಿದ್ದರು. ಇವರು ರೂಪಾಯಿ ೨೭ ಉತ್ಪನ್ನವಾಗುತ್ತವೆಂದು ಲೆಕ್ಕ ಮಾಡಿದ್ದರು ಮಿ। ಶಿರಾಸ ಇವರು ಇದೇ ಪ್ರಕಾರದಿಂದ ೧೯೧೧ ರಲ್ಲಿ ಲೆಕ್ಕ ಹೂಡಿ, ತಲೆಗೆ ೫೦ ರೂಪಾಯಿ ಉತ್ಪನ್ನವೆಂದು ಮೊದಲು ಅಂದಾಜು ಮಾಡಿದರು, ಸೂಕ್ಷ್ಮ ರೀತಿಯಿಂದ ಚೌಕಶಿ ಮಾಡಲು, ಮಿ। ಶಿರಾಸರವರ ಲೆಕ್ಕವು ರೂಪಾಯಿ ೮೦ ರ ವರೆಗೆ ಹೋಯಿತು. ಇವೆಲ್ಲ ವೈಯಕ್ತಿಕ ಅಂದಾಜುಗಳು. ಹಿಂದುಸ್ಥಾನ ಸರಕಾರವು ಈ ಮಹತ್ವದ ಪ್ರಶ್ನೆಯ ಬಗ್ಗೆ ಚೌಕಶಿ ನಡಿಸಿ, ಪ್ರಜೆಗಳ ಉತ್ಪನ್ನವೇನಿದೆ? ಖರ್ಚಿಗೆ ಎಷ್ಟು ಬೇಕು? ಎಂಬ ಸಂಗತಿಗಳನ್ನು ಇನ್ನೂ ವಿಚಾರಿಸಿಲ್ಲ. ಜುಲೈ ತಿಂಗಳಿನ ವರಿಷ್ಠ ಕಾಯಿದೆ ಕೌನ್ಸಿಲಿನ ಅಧಿವೇಶನದಲ್ಲಿ ಮಿ। ಸೇಟನಾರವರು ಈ ಬಗ್ಗೆ ಸರಕಾರಿ ಚೌಕಶಿ ನಡಿಸಬೇಕೆಂದು ಒಂದು ಠರಾವನ್ನು ಸೂಚಿಸಿರುವರು. ಈ ಸಂದರ್ಭದಲ್ಲಿ ವಿಖ್ಯಾತ ಅರ್ಥಶಾಸ್ತ್ರಜ್ಞರಾದ ಪ್ರೊ। ಖುಶನಲಾಲ ಶಹಾರವರ ಅಂದಾಜನ್ನು ವಾಚಕರಿಗೆ ಸಾದರಪಡಿಸುವೆವು.

ಪ್ರೊ। ಶಹಾರವರು 'ಹಿಂದುಸ್ಥಾನದೊಳಗಿನ ವ್ಯಾಪಾರ, ಆಮದ-ರಫ್ತು ಮೇಲಿನ ಡ್ಯೂಟಿ, ಕರ-ಬಿರ್ಯಾಣ' ಇವುಗಳ ಮೇಲೆ ಒಂದು ಗ್ರಂಥವನ್ನು ಬರೆದಿರುವರು ಈ ಪುಸ್ತಕದಲ್ಲಿ ಭಾರತೀಯರ ಉತ್ಪನ್ನವನ್ನು ನಿಷ್ಕರ್ಷ ಮಾಡುವ ಅವಶ್ಯ ತೋರಿದ್ದರಿಂದ, ಪ್ರೊ। ಮಹಾಶಯರು ಅದನ್ನು ಒಂದು ಪ್ರಕರಣದಲ್ಲಿ ಚರ್ಚಿಸಬೇಕಾಯಿತು. ಇದೇನು ಮೂಲ ಉದ್ದೇಶವಿಲ್ಲದ ಮೂಲಕ, ಈ ಚರ್ಚೆಗೆ ಅದರ ಮಹತ್ವಕ್ಕನುಗುಣವಾಗಿ ವಿಶೇಷ ಅವಕಾಶ ದೊರೆಯಲಿಲ್ಲ. ಆದರೂ, ಪ್ರೊ। ಶಹಾರವರು ತಮ್ಮ ಅಂದಾಜನ್ನು ಸಾಕಷ್ಟು ಚೊಕ್ಕ ರೀತಿಯಿಂದ ನಡಿಸಿರುವರು. ಅವರ ಅಂಕೆಗಳೆಲ್ಲ ಸರಕಾರಿ ರಿಪೋರ್ಟುಗಳ ಮೇಲಿಂದಲೇ ತಯಾರಾಗಿವೆ. ಆದರಿಂದ ಅವು ಸರಕಾರಕ್ಕೂ ಮಾನ್ಯವಾಗುವವೆಂದು ನಮ್ಮ ನಂಬಿಗೆ.

೧೯೨೧-೨೨ ರಲ್ಲಿ ದರ ಪರಿಕೆಯ ಮಾನದ ಮೇಲಿಂದ ಹಾಗು ಉತ್ಪನ್ನವು ಮಿಗಿಲಾದ್ದರಿಂದ ಒಟ್ಟು ಬೇಸಾಯದ ಉತ್ಪನ್ನವು ೧ ಖರ್ವ, ೩ ಅಬ್ಜ, ೬೮ ಕೋಟಿ ರೂಪಾಯಿಯಾಯಿತು. ಇದೇ ವರ್ಷ ಉದ್ದಿಮೆಗಳಿಂದ ಉತ್ಪನ್ನವು ಸುಮಾರು ೧೦೦ ಕೋಟಿಯಾಯಿತು ಅಂದರೆ, ಒಟ್ಟು ಉತ್ಪನ್ನವು ೧ ಖರ್ವ, ೪ ಅಬ್ಜ, ೬೮ ಕೋಟಿಯಾಯಿತು. ಈ ಉತ್ಪನ್ನದಲ್ಲಿ ದೇಶೀ ವ್ಯಾಪಾರಿಗಳ ಲಾಭವು ಹಿಡಿಯಲ್ಪಟ್ಟಿಲ್ಲ. ಯಾಕಂದರೆ, ಅವರೇನು ಹುಟ್ಟುವಳಿ ಮಾಡುವದಿಲ್ಲ ಬೇಸಾಯಗಾರರು, ಉದ್ದಿಮೆಯವರು ಮಾಡಿದ ಉತ್ಪನ್ನವನ್ನು ಪ್ರಜೆಗಳಿಗೆ ಹಂಚಿ, ಅವರಿಂದಲೇ ದಲಾಲಿ ತಿನ್ನುತ್ತಾರೆ ಬೇಸಾಯಗಾರ-ಉದ್ಯೋಗಿಗಳ ದುಡ್ಡು ಕಿಸೆಯಿಂದ ಕೋಶದೊಳಗೆ ಹೋಗುತ್ತದೆ, ಹೊರತು ವೃದ್ಧಿ ಹೊಂದುವದಿಲ್ಲ ದೇಶದಲ್ಲಿಯೇ ಸಂಚರಿಸುತ್ತದೆ. ಆದರಿಂದ ಅವರ ಉತ್ಪನ್ನವನ್ನು ದೇಶದ ಶ್ರೀಮಂತಿಕೆಯಲ್ಲಿ ಎಣಿಸಿದರೆ, ಅದೇ ಉತ್ಪನ್ನವನ್ನು ಪುನಃ ಎಣಿಸಿದಂತಾಗುತ್ತದೆ. ಮತ್ತೊಂದು ಬಾಬನ್ನೂ ಪ್ರೊ। ಶಹಾರವರು ತಮ್ಮ ಲೆಕ್ಕದಲ್ಲಿ ಹಿಡಿಯಲಿಲ್ಲ ಅದು ಯಾವದೆಂದರೆ, ನಮ್ಮ ಬೇಸಾಯಗಾರರ ಸಾಲದ ರಕಮು ಬೇಸಾಯಗಾರರು ದೇಶೀ ಸಾವುಕಾರರಿಗೆ ಕೊಡುವ ಸಾಲವು ರೂಪಾಯಿ ೬ ಖರ್ವವಿದೆ. ದೇಶೀ ಸಾವುಕಾರರ ಗಂಟಿದು. ಇದೇನು ಅವರು ಮಾಡಿದ ಉತ್ಪನ್ನದ ರಕಮಲ್ಲ ಬೇಸಾಯಗಾರ-ಉದ್ದಿಮೆಯವರು ಪ್ರತಿ ವರ್ಷಕ್ಕೆ ಮಾಡಿದ ಉತ್ಪನ್ನದೊಳಗಿಂದ ಸಾವುಕಾರರು ಗಂಟು ಕಟ್ಟಿ ಪುನಃ ಅವರಿಗೇ ಸಾಲ ಕೊಟ್ಟು ಜಮೆ ಮಾಡಿದ ರಕಮಿದು, ಇದನ್ನೂ ಉತ್ಪನ್ನದ ಬಾಬಿನಲ್ಲಿ ಹಿಡಿದರೆ, ಇಮ್ಮಡಿ ಎಣಿಕೆಯಾಗುತ್ತದೆ. ಸಾಲದ ಮೂಲವು ಈ ಪ್ರಕಾರವಿರಲು, ಈ ಸಾಲಕ್ಕೆ ತೆರುವ ಬಡ್ಡಿಯೂ ಪ್ರಜೆಗಳ ಉತ್ಪನ್ನವನ್ನು ವೃದ್ಧಿ ಪಡಿಸಲು ಕಾರಣವಾಗಲಾರದು. ಹೀಗೆ ಒಟ್ಟು ಲೆಕ್ಕ ಮಾಡಿ ನೋಡಿದಲ್ಲಿ ವಾರ್ಷಿಕ ಉತ್ಪನ್ನವು ೧೯೨೧-೨೨ ರಲ್ಲಿ ೧ ಖರ್ವ, ೪ ಅಬ್ಜ, ೬೮ ಕೋಟಿ ರೂಪಾಯಿಗಳಿಗೆ ಮಿಕ್ಕಿ ಹೋಗುವದಿಲ್ಲ. ಹಿಂದುಸ್ಥಾನದ ಜನಸಂಖ್ಯೆಯು ೩೨ ಕೋಟಿ ಇದೆ, ಇವುಗಳ ಮೇಲಿಂದ ಪ್ರೊ। ಶಹಾರವರು ವಾರ್ಷಿಕ ಉತ್ಪನ್ನವನ್ನು ತಲೆಗೆ ರೂಪಾಯಿ ೪೬ ಎಂದು ನಿಷ್ಕರ್ಷ ಹೊರಡಿಸಿರುವರು.

ಇನ್ನು ಇದರೊಳಗೆ ಮಾಡತಕ್ಕ ವಜಾಬಾಕಿಯ ವಿಚಾರ ಮಾಡುವ. ದೇಶದೊಳಗಿನ ಸಾಲವನ್ನು ಉತ್ಪನ್ನದಲ್ಲಿ ಹಿಡಿಯದಿದ್ದರೂ, ಪರದೇಶಗಳಲ್ಲಿ ತೆಗೆದ ಸಾಲಗಳನ್ನು ನಾವು ಖರ್ಚಿನ ಬದಿಗೆ ಹಿಡಿಯಬೇಕು. ಯಾಕಂದರೆ, ಈ ಸಾಲಗಳನ್ನು ಹಿಂದುಸ್ಥಾನದ ಪ್ರಜೆಗಳು ಹಿಂದುಸ್ಥಾನದಲ್ಲಿ ಮಾಡಿದ ಉತ್ಪನ್ನದಿಂದ ತೀರಿಸಬೇಕು. ಈ ಸಾಲದ ಮೇಲಿನ ವಾರ್ಷಿಕ ಬಡ್ಡಿಯು ನಮ್ಮ ವಾರ್ಷಿಕ ಉತ್ಪನ್ನದೊಳಗಿಂದ ವಜಾ ತೆಗೆಯಬೇಕಾಗಿದೆ. ಈ ಬಗ್ಗೆ ವಿಚಾರಿಸಹೋದರೆ, ಹಲವು ಬಾಬುಗಳನ್ನು ಆಲೋಚಿಸಬೇಕು. ಸರಕಾರಿ ಸಾಲಗಳ ಬಗ್ಗೆ ನಮಗೆ ೪೫ ಕೋಟಿಗಳ ವರೆಗೆ ಖರ್ಚು ತಗಲುತ್ತದೆಂದು ಕಳೆದ ಅಂದಾಜು ಪತ್ರಿಕೆಯಲ್ಲಿ ಕೋಶಾಧಿಕಾರಿಗಳು ನಮೂದಿಸಿರುವರು ಹಿಂದುಸ್ಥಾನದ ಸುವರ್ಣ ಭೂಮಿಯನ್ನು ಸುಲಿಯಲು ಸ್ಥಾಪಿಸಿದ ಪರದೇಶೀ ಭಂಡವಲಿನ ಮೇಲೆ ದರ ಸಾಲ ದರ ಶೇಕಡಾ ರೂ. ೬ ರಂತೆ ಬಡ್ಡಿ ಹಿಡಿದರೂ, ೯ ಕೋಟಿ ರೂಪಾಯಿಗಳು ತಗಲುವವು. ಭರತಖಂಡದ ಹೊರಗೆ ಆಫೀಸುಗಳನ್ನು ತೆರೆದು, ಭಾರತೀಯ ಸುವರ್ಣವನ್ನು ಎಳೆದೊಯ್ಯುವ ಪಾಶ್ಚಾತ್ಯರ ಭಂಡವಲಿನ ರಕಮು ೫೦೦ ಕೋಟಿ ರೂಪಾಯಿಗಳಿದ್ದಾವೆಂದು ಹಿಂದುಸ್ಥಾನ ಸರಕಾರವು ಪ್ರಕಟಿಸಿದೆ. ಇದರ ಮೇಲೆ ೬ ರಂತೆ ಬಡ್ಡಿ ಹಿಡಿದರೆ, ವರ್ಷಕ್ಕೆ ೩೦ ಕೋಟಿ ರೂಪಾಯಿಗಳು ಅವರ ಪಾಲಿಗೆ ಹೋಗುತ್ತವೆ. ಮತ್ತೊಂದು ಬಾಬನ್ನೂ ನಾವು ಲೆಕ್ಕದಲ್ಲಿ ಹಿಡಿಯಬೇಕು. ಹಿಂದುಸ್ಥಾನಕ್ಕೆ ಆಮದು-ರಫ್ತು ಮಾಡುವ ಪರದೇಶೀ ಹಡಗುಗಳ ಖರ್ಚನ್ನೂ ನಮ್ಮ ಉತ್ಪನ್ನದಿಂದಲೇ ತೆರಬೇಕು. ಸರಾಸರಿ ಶೇಕಡಾ ೧೦ ರಂತೆ, ಈ ಖರ್ಚು ಸಾಧಾರಣ ೪೫ ಕೋಟಿಗೆ ಮುಟ್ಟುವದು. ಹೀಗೆ ಅಂತು ೧ ಅಬ್ಜ, ೨೯ ಕೋಟಿ ರಕಮನ್ನು ಮೂಲ ಉತ್ಪನ್ನದೊಳಗಿಂದ ವಜಾ ಕಳೆಯಬೇಕಾಗಿದೆ. ಇದನ್ನು ಕಳೆದರೆ, ಒಟ್ಟು ಉತ್ಪನ್ನವು ೧ ಖರ್ವ, ೩ ಅಬ್ಜ, ೩೯ ಕೋಟಿ ರೂಪಾಯಿಗಳು ಉಳಿಯುತ್ತವೆ. ಪ್ರೊ। ಶಹಾರವರು ಹಿಡಿದಂತೆ ಜನಸಂಖ್ಯೆಯನ್ನು ೩೨ ಕೋಟಿಯೆಂದು ಹಿಡಿದರೆ, ಉತ್ಪನ್ನವು ತಲೆಗೆ ರೂಪಾಯಿ ೪೧—೪೨ ರಂತೆ ಬೀಳುತ್ತವೆ. ಇದೇ ಭಾರತೀಯ ಪ್ರಜೆಗಳ ಶ್ರೀಮಂತಿಕೆಯು. ಸುಧಾರಣೆಯ ಶಿಖರವನ್ನೇರಿದ ಪಾಶ್ಚಾತ್ಯರ ಸಾಮ್ರಾಜ್ಯದಲ್ಲಿ ಹಿಂದುಸ್ಥಾನವು ಪಳಗೆ ಹೊಂದಿದ ಪರಿಮಾಣವಾದರೂ ಇದೇ.

ಈ ಉತ್ಪನ್ನದೊಳಗಿಂದ ಪ್ರಜೆಗಳು ಸರಕಾರಿ ಕರಗಳನ್ನು ತೆರಬೇಕು. ಪರದೇಶೀ ಸಾಮಗ್ರಿಗಳನ್ನು ಖರೇದಿ ಮಾಡಿ ಪರದೇಶೀ ಮಂದಿಗಳ ಹೊಟ್ಟೆ ತುಂಬಬೇಕು. ಕರಗಳನ್ನು ಪ್ರೊ। ಶಹಾರವರು ೨ ಅಬ್ಜ, ೫೦ ಕೋಟಿ

ಯೆಂದು ಹಿಡಿದಿರುವರು. ಹಿಂದುಸ್ಥಾನ ಸರಕಾರ, ಪ್ರಾಂತಿಕ ಸರಕಾರ, ಇವುಗಳ ಖರ್ಚಿನ ಹೊರತು ಲೋಕಲ್‌ಬೋರ್ಡು, ಮ್ಯುನಿಸಿಪಾಲಿಟಿ ಮೊದಲಾದವುಗಳ ಕರಗಳನ್ನೂ ನಾವು ಲೆಕ್ಕಕ್ಕೆ ಹಿಡಿದರೆ, ಈ ರಕಮು ವಿಶೇಷ ದೊಡ್ಡದಾಗುವದು. ಪರದೇಶೀ ಸರಕುಗಳ ಬೆಲೆಯು ೩ ಅಬ್ಜ. ಇವುಗಳನ್ನು ಕೆತ್ತು ಉಳಿಯುವ ಹಣದಿಂದ ಭಾರತೀಯರು ಉಂಡುಡಬೇಕು. ಈ ಎರಡು ಬಾಬುಗಳಿಂದ ತಲೆಗೆ ೧೮ ರೂಪಾಯಿಗಳು ಬಯಲಾಗುತ್ತವೆ. ಉಳಿಯುವ ರೂಪಾಯಿಗಳು ೨೪ ಹೆಚ್ಚೆಂದರೆ ೨೪.

ಕಳೆದ ಗುರುವಾರಕ್ಕೆ ಪಾರ್ಲಿಮೆಂಟಿನಲ್ಲಿ ಉಪ್ಪಿನ ಡ್ಯೂಟಿಯ ಇಮ್ಮಡಿಕೆಯ ಬಗ್ಗೆ ಚರ್ಚೆ ನಡೆದಾಗ, ಭಾರತಮಂತ್ರಿಗಳಾದ ವಿಂಟರಟನ್‌ರವರು ಉಪ್ಪಿನ ಏರಿಕೆಯ ಕರವೇನು ದೊಡ್ಡದೊಂದು ಮಾತಲ್ಲವೆಂದು ಉದ್ಗರಿಸಿದರು. ಐವರ ಕುಟುಂಬಕ್ಕೆ ವರ್ಷಕ್ಕೆ ೧ ರೂಪಾಯಿ ಹೆಚ್ಚಿಗೆ ತಗಲುವದೆಂತಲೂ, ಅದೇನು ವಿಶೇಷವಲ್ಲೆಂತಲೂ ಸಾಹೇಬರ ಮತವಿತ್ತು. ಟವನುಗಳಲ್ಲಿ ವ್ಯವಹಾರ ನಡಿಸುವ ದೊರೆಗಳಿಗೆ ೧ ರೂಪಾಯಿಯು ತಿರಸ್ಕರಣೀಯವೆಂದು ತೋರುವದು ಸಹಜವು. ಆದರೆ ಭಾರತೀಯರು ಅವರಂತೆ ಸಾವುಕಾರರಲ್ಲ. ಸಾವುಕಾರರ ಸಂಖ್ಯೆಯು ಭರತಖಂಡದಲ್ಲಿ ತೀರ ಅಲ್ಪವಿದೆ. ಇಲ್ಲಿಯ ಜನತೆಯು ವಿಶೇಷವಾಗಿ ಬೇಸಾಯದಿಂದ ಜೀವಿಸುವದೇ. ಇದ್ದ ಸಾವುಕಾರರು ಬ್ರಿಟಿಶ ಸಾಮ್ರಾಜ್ಯದ ಛತ್ರವನ್ನಾಶ್ರಯಿಸಿದಂದಿನಿಂದ, ಸ್ಥಿರವಾಗಿ ದರಿದ್ರರಾಗುತ್ತ ನಡೆದಿರುವರು. ವರ್ಷಕ್ಕೆ ೨೩-೨೪ ರೂಪಾಯಿಗಳ ಉತ್ಪನ್ನವಿದ್ದವರಿಂದ ತಲೆಗೆ ೩-೪ ಆಣೆಗಳನ್ನು ಬರೇ ಉಪ್ಪಿಗಾಗಿ ಹೆಚ್ಚು ವಸೂಲ ಮಾಡುವದು ನಿರ್ದಯತೆಯಲ್ಲೇನು? ದೊರೆಗಳು ಭಾರತೀಯ ಮಂತ್ರಿಗಳಿದ್ದು, ಭರತಖಂಡದ ಸತ್ಯಸ್ಥಿತಿಯನ್ನು ಅವರರಿತಿರುವದಿಲ್ಲ. ಇಲ್ಲದಿದ್ದರೆ, ಇಷ್ಟು ಬೇಜವಾಬದಾರರಾಗಿ ಅವರು ಮಾತಾಡುತ್ತಿದ್ದಿಲ್ಲ. ಇರಲಿ. ಈ ಅಂದಾಜುಗಳೆಲ್ಲ, ನಾವು ಮೊದಲು ಹೇಳಿದಂತೆ, ವೈಯಕ್ತಿಕ ಅಂದಾಜುಗಳು. ಸರಕಾರವು ಇವುಗಳ ಬಗ್ಗೆ ತಾವು ಜವಾಬದಾರರಲ್ಲವೆಂದು ಕೌನ್ಸಿಲ ಆಫ್ ಸ್ಟೇಟಿನಲ್ಲಿ ಜಾಹೀರು ಮಾಡಿತು. ಹಿಂದುಸ್ಥಾನ ಸರಕಾರವು ಈ ಅಂಕೆಗಳ ಬಗ್ಗೆ ಜವಾಬದಾರರಲ್ಲೆಂದು ನಾವು ಮೊದಲೇ ಹೇಳಿಬಿಟ್ಟಿದ್ದೇವೆ. ಆದ್ದರಿಂದ ಮಿ| ಸೇಟನಾರವರ ಠರಾವನ್ನು ಸರಕಾರವು ಆದರಿಸಿ, ಈ ಬಗ್ಗೆ ಚೌಕಶಿ ನಡಿಸಿ, ತಮ್ಮಂಥ ಸುಧಾರಿಸಿದ ರಾಷ್ಟ್ರವನ್ನು ಆಶ್ರಯಿಸಿ ಪ್ರಜೆಗಳು ಎಷ್ಟರ ಮಟ್ಟಿಗೆ ಭೌತಿಕ ಉನ್ನತಿಯನ್ನು ಸಾಧಿಸಿದರು ಎಂದು ಜಗತ್ತಿಗೆ ಜಾಹೀರು ಮಾಡುವ ಸುಸಂಧಿಯನ್ನು ಹೋಗಲಾಡಿಸಬಾರದೆಂದು ನಮ್ಮ ಸೂಚನೆಯಿದೆ. ಇಲ್ಲದಿದ್ದರೆ, ವ್ಯಕ್ತಿಗಳ ಅಂದಾಜನ್ನು ಪ್ರಜೆಗಳು ನಂಬಿ, ಸರಕಾರದ ಗೌರವಹಾನಿಯಾದರೆ, ಅದಕ್ಕೆ ಸರಕಾರವೇ ಜವಾಬದಾರವಾಗಬೇಕಾದೀತು.

ಸ್ಫುಟ ಸೂಚನೆಗಳು.

೧. ಉಪ್ಪಿನ ಡ್ಯೂಟಿಯನ್ನು ಇಮ್ಮಡಿ ಮಾಡಿದ ಬಗ್ಗೆ ಪಾರ್ಲಿಮೆಂಟಿನಲ್ಲಿ ಕಳೆದ ಗುರುವಾರ ತಾ. ೧೪ ನೇಗೆ ಚರ್ಚೆ ನಡೆಯಿತು. ಕೂಲಿಕಾರ ಪಕ್ಷದ ವಿದ್ಯಮಾನ ಮಿ| ತ್ರಿವೇಲಿಯನ್‌ರವರು ಸಮರ್ಪಕ, ನೇಮಸ್ತ ಭಾಷಣವನ್ನು ಮಾಡಿ ಉಪ್ಪಿನ ಡ್ಯೂಟಿಯನ್ನು ವರಿಷ್ಠ ಕಾಯದೆ ಕೌನ್ಸಿಲಿನ ಮತ ಬದಿಗೊತ್ತಿ ಏರಿಸುವದು ಏಕತಂತ್ರಿಯದೆಂದೂ, ಇಂಥ ಪ್ರಕಾರಗಳಿಂದ ಸುಧಾರಣಾ ಕಾಯಿದೆಯು ತೋರಿಕೆಯ ಜವಾಬದಾರಿಯದಾಗುವದೆಂದೂ ಮುಂತಾದ ತರ್ಕಗಳನ್ನು ಸಾದರಪಡಿಸಿದರು. ವಾದ ಎದ್ದಿತು. ಭಾರತಮಂತ್ರಿಗಳಾದ ಅರ್ಲ ವಿಂಟರಟನ್‌ರವರು ಹಿಂದುಸ್ಥಾನ ಸರಕಾರದ ವಕೀಲಿಯನ್ನು ನಡಿಸಿದರು. ಹೊಸ ವ-ದ್ದಿಗಳೇನಿಲ್ಲ. ಸರಕಾರದ ಜಮಾಖರ್ಚು ಪತ್ರಿಕೆಯಲ್ಲಿ ಪ್ರತಿ ವರ್ಷಕ್ಕೆ ತೂಟ್ಟಿ ಬರುತ್ತದೆ. ಈ ಹೊಂಡವನ್ನು ತುಂಬಿ ತೆಗಲಿಕ್ಕಾಗಿ ಉಪ್ಪಿನ ಡ್ಯೂಟಿಯನ್ನು ಏರಿಸಬೇಕಾಯಿತೆಂಬಿವೊಂದು ತರ್ಕ. ಈ ತರ್ಕಕ್ಕೆ ಮುಂಬಯಿಯ 'ಟೈಮ್ಸ್ ಆಫ್ ಇಂಡಿಯಾ' ಪತ್ರಕರ್ತರು ಚೊಕ್ಕ ಉತ್ತರವನ್ನಿತ್ತು ಖಂಡಿಸಿಬಿಟ್ಟಿರುವರು. ಇಂಚಕೇಪ ಕೊಡ್ಲಿಯಿಂದ ಸವರಿಸಿದಷ್ಟು ಹಣವನ್ನು ಬಿಟ್ಟು ಹಾಕಿದ್ದರೆ, ಉಪ್ಪಿನ ಡ್ಯೂಟಿಯನ್ನು ಏರಿಸುವ ಅವಶ್ಯಕತೆಯು ಬೀಳುತ್ತಿದ್ದಿಲ್ಲವೆಂದು ನಾವು ಮೊದಲೇ ಪ್ರತಿಪಾದಿಸಿದ್ದೇವೆ. ಆಖೈರಿಗೆ, ತ್ರಿವೇಲಿಯನ್‌ರವರ ಸೂಚನೆಯು ನಾಪಾಸು; ಉಪ್ಪಿನ ಡ್ಯೂಟಿಯ ಏರಿಕೆಯು ಕಾಯಂ. ಕೂಲಿಕಾರ ಪಕ್ಷದ ನಾಯಕ ಮಿ| ಮೆಕ್‌ಡೋನಲ್ಡರವರು ಈ ವಾದದಲ್ಲಿ ಸೇರಿಕೊಳ್ಳಲಿಲ್ಲ. ಯಾರು ಯಾರು, ಯಾವ ಯಾವ ಬದಿಗೆ ಮತ ಕೊಟ್ಟರೆಂಬ ಎಣಿಕೆಯು ಸಹ ಆಗಲಿಲ್ಲ. ಅಷ್ಟು ಅನ್ಯೋನ್ಯ ಪ್ರೇಮದಿಂದ ಈ ವಾದವು ಮುಗಿಯಿತು. ಕೂಲಿಕಾರ ಪಕ್ಷದ ಮೇಲೆ ಕಣ್ಣಿಟ್ಟು, ಕೈಕಾಲು ಚಾಚಿಕೊಂಡು ಕೂತವರಿಗೆ ಇದೊಂದು ಮನನೀಯ ಸಂಗತಿಯಿದೆ. ಪಾರ್ಲಿಮೆಂಟಿನಲ್ಲಿ ಭರತಖಂಡದ ಹಿತಚಿಂತಕರು ಹೋರಾಡಿ ನಮ್ಮನ್ನು ಕಾಯುವರು ಎಂದು ಆಶಾಧರಿತರಾಗಿ, ಬಾಯಿ ತೆರೆದ ನೇಮಸ್ತರಿಗೆ ಇದೊಂದು ಬೋಧಪ್ರದ ಸಂಗತಿಯು. ಖಾಸದಾರ ಮುನಶಿ ಈಶ್ವರ ಶರಣರವರು ಪಾರ್ಲಿಮೆಂಟಿನಲ್ಲಿ ಸನದಶೀರ ಚಳವಳಿಯು ವಿಫಲವಾದರೆ ತಾವು ರಾಜಿನಾಮೆ ಕೊಡುವೆವೆಂದು ಜಾಹೀರು ಮಾಡಿದ್ದರು. ಮಾತನ್ನು ಕೃತಿಯಲ್ಲಿ ರೂಪಾಂತರಿಸುವ ಸುಯೋಗವನ್ನು ಪಾರ್ಲಿಮೆಂಟು ತಂದುಕೊಟ್ಟಿದೆ. ಉಪ್ಪಿನ ಡ್ಯೂಟಿಯು ಸಹಕಾರಿಗಳ ಸತ್ವಪರೀಕ್ಷೆಗಾಗಿ ಟೊಂಕಕಟ್ಟಿದೆಂಬಂತೆ ಭಾಸವಾಗುತ್ತಿದೆ. ಈಗ ಉಪ್ಪಿನ ಡ್ಯೂಟಿಯ ಏರಿಕೆಯಂತೂ ಕಾಯಂ ಆಯಿತು. ಸಹಕಾರಿಗಳ ಚರವಳಿಯು ಮಾತ್ರ ಬಾಕಿ ಉಳಿದಿದೆ.

---

೨. ದೇಶಬಂಧು ದಾಸರು ಒಂದು ಹಳೇ ವಾದ ಎಬ್ಬಿಸಿರುವರು. ಕಳೆದ ೩೧ನೇ ತಾರೀಖಿಗೆ ಮದ್ರಾಸಿನಲ್ಲಿ, ದೇಶಬಂಧುಗಳು ಸ್ವರಾಜ್ಯ ಪಕ್ಷದ ಮಂಡನದ ಭಾಷಣ ಮಾಡುವಾಗ ೧೯೨೧ನೇ ಡಿಶಂಬರದಲ್ಲಿ ಕಲಕತ್ತೆಯಲ್ಲಿ ಯುವರಾಜರ ಆಗಮನವಾಗುವಾಗ ಸರಕಾರವು ನಮಗೆ ಶರಣು ಬಂದಿತ್ತೆಂತಲೂ, ಮಹಾತ್ಮರ ಅಚಾತುರ್ಯದ ಮೂಲಕ ಈ ಸುಯೋಗದ ಫಲವು ರಾಷ್ಟ್ರಕ್ಕೆ ಒದಗಲಿಲ್ಲೆಂತಲೂ ಉದ್ಗರಿಸಿದರು. ಈ ಪ್ರಸಂಗದಲ್ಲಿ ಮಹಾತ್ಮರ ಜೊತೆಯಲ್ಲಿದ್ದು, ಅವರ ಖಾಸಗಿ ಪತ್ರವ್ಯವಹಾರವನ್ನೆಲ್ಲ ನಡಿಸಿದ ಶ್ರೀ| ಕೃಷ್ಣದಾಸರವರು ಈ ವಿಷಯದ ಮೇಲೆ ಆ ಕಾಲಕ್ಕೆ ನಡೆದ ತಂತಿಗಳನ್ನು ಪ್ರಕಟಿಸಿ, ದೇಶಬಂಧುಗಳ ಆರೋಪವನ್ನು ಅಯಥಾರ್ಥವೆಂದು ಸಿದ್ಧಪಡಿಸಿರುವರು. ಸರಕಾರವು ಈಗ ಹರತಾಳಿನ ಆಜ್ಞೆಯನ್ನು ರಾಷ್ಟ್ರೀಯ ಸಭೆಯು ಹಿಂತೆಗೆದುಕೊಂಡರೆ, ಅದರ ಪ್ರತೀಕಾರಾರ್ಥವಾಗಿ ಎಸೆದ ಸಭಾಬಂದಿ ಕಾಯಿದೆಯ ಶಸ್ತ್ರವನ್ನು ಒರೆಯಲ್ಲಿ ಹಾಕಲಿಕ್ಕೆ ಒಪ್ಪಿದ್ದಲ್ಲದೆ, ಈ ಕಾಯಿದೆಯನ್ವಯ ಸೆರೆಹಾಕಿದ ದೇಶಬಂಧು ದಾಸ, ಮೌಲಾನಾ ಅಬ್ದುಲ್ ಕಲಮ್ ಆಝಾದ್ ಮೊದಲಾದವರನ್ನು ಬಿಡುಗಡೆ ಮಾಡಲು ಒಪ್ಪಿಕೊಂಡಿತ್ತು. ಇದಲ್ಲದೆ, ದೇಶದ ಮುಂದಾಳುಗಳನ್ನು ಏಕತ್ರ ನೆರೆಯಿಸಿಕೊಂಡು, ಮತ ಕೇಳಿಕೊಳ್ಳಲೂ ಸರಕಾರವು ತಯಾರಿತ್ತು. ಇದಕ್ಕೆ ದೇಶಬಂಧುಗಳು 'ಶರಣಾಗತ ಸರಕಾರ'ವೆಂದು ಸಂಬೋಧಿಸುತ್ತಾರೆ. ಮಹಾತ್ಮರು ದೂರದೃಷ್ಟಿಯವರು. ಲೀಡಿಂಗ ದೊರೆಗಳು ಹರತಾಳಿನಿಂದ ಒದಗಿದ ವಿಪನ್ನಾವಸ್ಥೆಯಿಂದ ಪಾರಾಗಲು ಹೊಂಚು ಹಾಕಿರುವರೆಂದು ಮಹಾತ್ಮರು ತರ್ಕಿಸಿದರು. ಸಭಾಬಂದಿ ಕಾಯಿದೆಯನ್ನು ತಹಕೂಬ ಮಾಡದಾಗಲಿ, ಅದರಂತೆ ಬಂಧಿಸಿದವರನ್ನು ವಿಮೋಚಿಸುವದಾಗಲಿ, ಸರಕಾರದ ಪಶ್ಚಾತ್ತಾಪದ ನಿದರ್ಶಕವಲ್ಲ. ಯಾಕಂದರೆ, ಈ ಕಾರ್ಯಗಳಿಗೆ ಕಾರಣವಾದ ಹರತಾಳವನ್ನೇ ಹಿಂತೆಗೆದುಕೊಂಡ ಮೇಲೆ ಈ ಪ್ರತಿಕಾರ ಕಾಯಿದೆಯ ಅವಶ್ಯಕತೆ ಎಲ್ಲಿ ಉಳಿಯಿತು? ಪರಿಷತ್ತಿನ ಬಗ್ಗೆ ಸರಕಾರವು ಘಟನೆಯನ್ನೂ ಸ್ಪಷ್ಟೀಕರಿಸಲಿಲ್ಲ. ಅಲ್ಲಿ ಪಾಸಾಗುವ ಠರಾವುಗಳ ಮನ್ನಣೆಯ ಬಗ್ಗೆ ಆಶ್ವಾಸನವನ್ನೀಯಲಿಲ್ಲ. ಯಾವಾಗ ಪರಿಷತ್ತು ನೆರೆಯತಕ್ಕದ್ದು? ಎಂಬದೂ ಗುಪ್ತ ಸಂಗತಿಯೇ. ಆದರಿಂದಲೇ ಮಹಾತ್ಮರು 'ಕಾಲ, ಸ್ಥಳ, ಘಟನೆಗಳನ್ನು ತಿಳಿಸಿರಿ. ಸರಕಾರವು ಪಶ್ಚಾತ್ತಾಪ ಹೊಂದಿರುವದಾದರೆ, ಅಲ್ಲೀ ಬಂಧುಗಳನ್ನೂ, ಫತ್ವಾ ಕೈದಿಗಳನ್ನೂ ಬಿಡುಗಡೆ ಮಾಡಲಿ' ಎಂದು ಪಂಡಿತ ಮಾಲವೀಯರಿಗೆ, ದೇಶಬಂಧು ದಾಸ, ಮೌಲಾನಾ ಆಝಾದ್‌ರವರಿಗೆ ತಿಳಿಸಿದರು. ಬರೇ ಪರಿಷತ್ತು ನೆರೆಯಿಸಲಿಕ್ಕೆ ಸರಕಾರವು ಒಪ್ಪಿದ ಕೂಡಲೆ, ಆನಂದ ಸಾಗರದಲ್ಲಿ, ತಮ್ಮ ವಿಜಯವಾಯಿತೆಂದು, ೧೯೨೧ ನೇ ಡಿಶಂಬರದಲ್ಲಿ ಕಲಕತ್ತೆಯ ಜೈಲಿನಲ್ಲಿ ದಾಗ ದೇಶಬಂಧುಗಳು ತೇಲಾಡುತ್ತಿದ್ದಿರಬಹುದು. ೧-೧½ ವರ್ಷದ ಅನುಭವದಿಂದ ತಮ್ಮ ಗ್ರಹಿಕೆಯು ಸರಿಯಿರುತ್ತದೆಂದು ಹಿಡಿದು, ಮೇಲೆ ಮಹಾತ್ಮರಿಗೆ ದೂಷಿಸಿದ್ದನ್ನು ನೋಡಿ ನಮಗೆ ವ್ಯಸನವಾಗುತ್ತದೆ. ಈ ಬಗ್ಗೆ ಮಹಾತ್ಮರ ಮೇಲೆ ತಾವು ಯಾವದೊಂದು ಆರೋಪ ಹೊರಿಸಿಲ್ಲೆಂದು ದೇಶಬಂಧುಗಳು ಇತ್ತ ಸ್ಪಷ್ಟೀಕರಿಸಿರುವರು. ಈ ಸ್ಪಷ್ಟೀಕರಣವೂ, ಮದ್ರಾಸಿನ ಭಾಷಣವೂ ಒಂದಕ್ಕೊಂದು ವಿರೋಧವಿವೆ. ಯಾವದು ನಿಜವೆಂದು ದೇಶಬಂಧುಗಳೇ ಹೇಳಬೇಕು; ಹೊರತು, ನಾವೇನು ಹೇಳಲಾರೆವು. ಈ ಪತ್ರವ್ಯವಹಾರವನ್ನು ವಿಮರ್ಶಿಸಿದರೆ, ಮಹಾತ್ಮರೇ ೧೯೨೧ರಲ್ಲಿ ದೇಶದ ಮಾನ ಕಾಯ್ದರೆಂದು ಯಾರೂ ಹೇಳದಿರಲಾರರು.

೩ ನಮ್ಮ ಜಿಲ್ಹಾ ಬೋರ್ಡಿನ ಹಕೀಕತನ್ನು ಇನ್ನೊಂದೆಡೆಯಲ್ಲಿ ಕೊಟ್ಟಿರವೆವು. ಅವರ ಮೇಲಿಂದ ನಮ್ಮ ಜಿಲ್ಹಾ ನಿವಾಸಿಕರ ಮೇಲೆ ನಮ್ಮ ಸ್ವರಾಜ್ಯ ಸಂಸ್ಥೆಯು ಹೊರಿಸಿದ ಹೊರೆಯು ಅರಿವಾಗುವದು. ಲೋಕಲ್ ಫಂಡಿನ ೧ಕ್ಕೆ ೧॥ ಪಟ್ಟಿನ ಪಟ್ಟಿಯನ್ನು ಈ ಮೊದಲೇ ವಿಮರ್ಶಿಸಿರುವೆವು. ಈ ಠರಾವಿನ ಮೇಲೆ ಮತಕೊಟ್ಟ ಸಭಾಸದರ ಹೆಸರುಗಳನ್ನು ಮಾತ್ರ ಎಲ್ಲ ಜಿಲ್ಹಾ ನಿವಾಸಿಕರು ಸ್ಮರಣೆಯಲ್ಲಿಡಬೇಕು. ಸರಕಾರನಿಯುಕ್ತ ಸಾಲ್ಹಿ ಮೆಂಬರರು ಈ ಯೋಜನೆಯನ್ನು ಪುರಸ್ಕರಿಸಿ, ತಮ್ಮ ಸರಕಾರಿ ನೇಮಣೂಕಿಗೆ ಅವಶ್ಯವಿರುವ ಯೋಗ್ಯತೆಯನ್ನು ಸಿದ್ಧಪಡಿಸಿರುವರು. ಹೊನ್ನಾವರದ ರಾ| ಮಂಜುನಾಥ ಶಿವರಾವ ಉದ್ಯಾವರರು ಲೋಕನಿಯುಕ್ತರಿದ್ದು ಯೋಜನೆಯನ್ನು ಹೇಗೆ ಪುರಸ್ಕರಿಸಿದರು ? ಎಂಬದೊಂದು ಕೂಟ ಪ್ರಶ್ನೆ. ಯಲ್ಲಾಪುರದ ರಾವಸಾಹೇಬ ಬೋರಕರರವರು ತಾಲೂಕಾ ಬೋರ್ಡಿನಲ್ಲಿ ಸರಕಾರನಿಯುಕ್ತರಿದ್ದರೂ, ಜಿಲ್ಹಾ ಬೋರ್ಡಿನ ಲೋಕ ಪಕ್ಷದಿಂದಲೇ ಬಂದಿದ್ದಾರೆ. ಅವರೂ ಲೋಕಲ್ ಫಂಡಿನ ಏರಿಕೆಗೆ ಮತಕೊಟ್ಟಿರುವರು. ಹೀಗೆ ೬ ಮತಗಳು ಅನುಕೂಲ ಬಿದ್ದ, ಠರಾವು ಬಹುಮತದಿಂದ ಮಂಜೂರಾಯಿತು. ಹಳಿಯಾಳದ ರಾ| ದತ್ತಾತ್ರಯ ಕೇಳಕರರವರೂ, ಅಂಕೋಲೆಯ ರಾ| ಮಂಜನಾಥ ಪ್ರಭುಗಳೂ ಈ ಮಹತ್ವದ ಸಭೆಗೆ ಹಾಜರಿದ್ದಿಲ್ಲ. ಹಳಿಯಾಳದಿಂದ ಕಾರವಾರಕ್ಕೆ ಹೋಗಲಿಕ್ಕೆ ರಾ| ಕೇಳಕರರಿಗೆ ಸವಡಿದೊರೆಯದು. ಅಂಕೋಲೆಯ ರಾ| ಮಂಜನಾಥ ಪ್ರಭುಗಳು ಮೈಗಳ್ಳರಾದರೇಕೆ ? ಇರಲಿ. ೧೮ ಕೋಸ ಟೋಲು ನಾಕಗಳ ಕೋಟೆಯೂ ಒಂದು ಕಟ್ಟಲ್ಪಟ್ಟಿದೆ. ಗಾಡಿ ಮೊದಲಾದ ವಾಹನಗಳ ಮೇಲಿನ ತೆರಿಗೆ ಕಾಸಲೂ ಏರಿತು. ನಾಕಗಳಿಗೆ ಟೋಲು, ತೆರಿಗೆ ಕಾಸಲು ಕೊಟ್ಟು ಗಾಡಿಕಾರರ ಸಿಕ್ಕ ಬಾಡಿಗೆಯನ್ನು ಓಡಿ ಯೋಗವಾತ್ತಿ, ಮನೆಯಲ್ಲಿ ಒಲಿ ಜಿಲಿ ನಿಡಿ ಕುಡಿದರಾಯಿತು. ಪತ್ರೊ ಕರಗಳು ಏರಿದವು. ಪ್ರಾಥಮಿಕ ಶಿಕ್ಷಣ ಕೊಟ್ಟು ನಮಗೆ ಜ್ಞಾನಾರ್ಜನ್ನ ಮಾಡಲಿಕ್ಕೆ ಮತ್ತು ಪ್ರಜೆಗಳಿಂದ ಹಣ ಎತ್ತಲ್ಪಡುವದು ಈ ವಿಚಾರವು ಸಮ್ಯಕ್ಕ ತಡಕೂಟ ಇಡಲ್ಪಟ್ಟಿದೆ. ಜಿಲ್ಹಾ ನಿವಾಸಿಕರು ಕರಗಳನ್ನು ತೆರೇಕ್ಕೆ ಮತ್ತೂ ಸಿದ್ಧರಾಗಲಿ.

---

೪. ಶನ್ಮಧ್ಯ ಒಂದು ಗೊಂದಲವೆಬ್ಬಿದೆ. ಲೋಕಲ್‌ಫಂಡು ಏರಿಕೆಯ ವಿಚಾರವು ಲೋಕಲು ಬೋರ್ಡ ಕಾಯಿದೆಯ ಕಲಮು ೮೩ (೧) ರ ಅನ್ವಯ ನಡೆಸಲ್ಪಟ್ಟಿದೆ. ಈ ಕಲಮಿನನ್ವಯ ಲೋಕಲ್‌ಫಂಡನ್ನು ಏರಿಸಬೇಕಾದರೆ, ಜಾಡಾ ಸಭೆಯನ್ನೇ ಕರಿಸಿ, ಠರಾವು ಮಾಡಬೇಕೆಂದಿದೆ. ಇದು ಕಲಮಿನಲ್ಲಿ ಸ್ಪಷ್ಟ ನಮೂದಾಗಿದೆ. ಇದು ಸಭೆಯೊಳಗಿನ ವಕೀಲರಿಗೆ ಹ್ಯಾಗೆ ತೋಚಲಿಲ್ಲೆಂದು ನಾವರಿಯೆವು. ಅಥವಾ, ಕರವನ್ನೇರಿಸಿ ಪ್ರಜೆಗಳಿಗೆ ಉಪಕಾರ ಮಾಡುವ ಅತ್ಯುತ್ಸಾಹದಲ್ಲಿ ಕಾಯಿದೆಯ ಅಪ್ಪಣೆಯನ್ನ ಮರೆತರೋ ಏನೋ ! ಏನು ಹೇಗೂ ಇರಲಿ. ಜಿಲ್ಹಾಧಿಪರು ಈ ಠರಾವನ್ನು ಅಮಲಬಜಾವಣೆ ಮಾಡಲು ಒಪ್ಪದೆ, ಜಾಡಾ ಸಭೆಯನ್ನೇ ಕರೆಯಬೇಕೆಂದು ಅಧ್ಯಕ್ಷರಿಗೆ ತಿಳಿಸಿರುವರು. ಅದರಂತೆ ಜಾಡಾ ಸಭೆಯೊಂದು ಜುಲೈ ೨ ನೇ ಸೋಮವಾರಕ್ಕೆ ಕಾರವಾರದಲ್ಲಿ ನೆರೆಯುವದು. ಬರೇ ಲೋಕಲ್‌ಫಂಡ ಏರಿಕೆಯ ಪ್ರಶ್ನೆಯೊಂದೇ ಚರ್ಚಿಸಲ್ಪಡುವದು. ಲೋಕಲ್‌ಬೋರ್ಡಿನ ಮೆಂಬರರೆಲ್ಲರೂ ಈ ವಿಷಯವನ್ನು ಪುನರಾಲೋಚನೆ ಮಾಡಿ ಪ್ರಜೆಗಳ ಬಡ ಸ್ಥಿತಿಯನ್ನು ನೆನಿಸಿ, ಠರಾವನ್ನು ರದ್ದುಪಡಿಸುವರೆಂದು ಕೋರಿಕೆ. ಲೋಕನಿಯುಕ್ತರಾಗಿ ಜಿಲ್ಹಾ ಬೋರ್ಡಿಗೆ ಹೋದ ಪ್ರಜಾ ಪ್ರತಿನಿಧಿಗಳೆಲ್ಲರೂ ಈ ಸಭೆಗೆ ತಪ್ಪದೇ ಹಾಜರಾಗಿ, ಈ ಠರಾವನ್ನು ಕಿತ್ತೊಗೆಯಲು ಪ್ರಾಪ್ತವಾದ ಸುಸಂಧಿಯನ್ನ ಹೋಗಲಾಡಿಸಬಾರದೆಂದು ವಿನಂತಿ.

---

೫. ಶಿರಸಿಯಲ್ಲಿ ಹೈಸ್ಕೂಲು ತೆಗೆಯುವ ವಿಚಾರವು ಈ ವರ್ಷ ಪ ರ್ತ ಸ್ವರೂಪವನ್ನು ತಳೆಯುವ ಸುಚಿನ್ಹಗಳಾಗಿವೆ. ಊರ ಮುಂದಾಳುಗಳೂ, ಮ್ಯುನಿಸಿಪಾಲಿಟಿಯವರೂ ಆಸ್ಥೆಯಿಂದ ಹ್ಯಾಸ್ಕೂಲಿಗಾಗಿ ಮಡಿಯುತ್ತಿದ್ದಾರೆಂದು ನಮಗೆ ತಿಳಿಯುತ್ತದೆ. ಹೈಸ್ಕೂಲಿನ ವಿಚಾರವು ಸ್ತುತ್ಯವದೆ. ರಾಷ್ಟ್ರೀಯ ಶಾಲೆಯ ನ್ಯಾಷ್ಟಿಯನ್ನು ಬೆಳೆಸುವ ಕಾಲದಲ್ಲಿ ಬಹುಜನಸಮಾಜಕ್ಕೆ ಈ ಯೋಜನೆಯ ಪರಿಪೋಷಕ ಸಂಭವಗಳಿವೆ. ಆದರೂ, ಶಿಕ್ಷಣವನ್ನು ಪ್ರಸಾರ ಮಾಡುವ ಅವಶ್ಯಕತೆಯಿರುವದರಿಂದ ಯಾವದೇ ಶಿಕ್ಷಣವಾಗಲಿ, ಅದನ್ನು ನಾವು ಸ್ವಾಗತೀಕರಿಸಲೇ ಬೇಕಾಗಿದೆ. ಯೋಜನೆಯನ್ನು ಸ್ವಾಗತೀಕರಿಸುವಾಗ ಶ್ರೀ ಮಾರಿ ದೇವಸ್ಥಾನದ ಮೊಕ್ತೇಸರರ ಒಂದು ಕೃತ್ಯವನ್ನು ನಿಷೇಧಿಸದಿರಲಾರೆವು. ಶ್ರೀ ಅಮ್ಮನವರ ಭಂಡಾರದೊಳಗಿಂದ ರೂಪಾಯಿ ೫,೦೦೦ ವರೆಗೆ ವಂತಿಗೆ ಕೊಡುವದಲ್ಲದೆ ಪ್ರತಿ ವರ್ಷಕ್ಕೆ ರೂಪಾಯಿ ೫೦೦ ಗ್ರ್ಯಾಂಟು ಕೊಡಬೇಕೆಂದು ರಾ| ಕೇಶವೈನ ಮೊದಲಾದ ಮೊಕ್ತೇಸರರು ನಿರ್ಧರಿಸಿರುವರಂತೆ. ಇದು ಕೇಳಿ ನಮಗೆ ಆಶ್ಚರ್ಯವಾಗಿದೆ. ಅಧುನಿಕ ಸಂಸ್ಕೃತಿಯ ಸುಂದರ ಸ್ವರೂಪವರಿಗ ದೇವಸ್ಥಾನದೊಳಗಿನ ಹಣ ನಿರರ್ಥಕವೆಂದು ಕಾಣಬಹುದು. ಶ್ರೀ ಅಮ್ಮನವರ ಭಂಡಾರದ ಹೇತುವು ಬೇರೆ ಇದ್ದು, ಅದನ್ನು ಅನ್ಯ ಕಲಸಕ್ಕೆ ಉಪಯೋಗಿಸುವದು ಕಾಯಿದೆಗ ವಿರೋಧವಾದ ನೀತಿಗೂ ವಿರೋಧವಾಗಿರುವದು. ಶ್ರೀ ದೇವರಿಗೆ ಪರಲೋಕ ಸಾಧನೆಗಾಗಿ, ಇಹಲೋಕದೊಳಗಿನ ಸಂಕಟ ನಿವಾರಣಾರ್ಥವಾಗಿ ಭಕ್ತಿಯಿಂದ ಅರ್ಪಿಸಿದ ನಿಧಿಯನ್ನು ಹ್ಯಾಸ್ಕೂಲಿಗೆ ಉಪಯೋಗಿಸುವದು ದುರುಪಯೋಗವು. ಇಂದು ಹ್ಯಾಸ್ಕೂಲು, ನಾಳೆ ವೈದ್ಯರ ಫಂಡು, ನಾಡದು ಅವರ ಜೇ ಫಂಡು, ಹೀಗೆ ಲೋಕೋಪಯೋಗಿ ನಿಧಿಗಳಿಗಾಗಿ ಶ್ರೀ ದೇವರ ಭಂಡಾರವು ಬೇಗನೆ ಸಮಾಪ್ತಿಯಾಗುವದು. ಫಂಡು ಕೂಡಿಸುವ ಉಪಪ್ರವಗಳ ಮೂಲಕ ಮೊಕ್ತೇಸರರು ಸುಲಭವಾಗಿ ಶಿಗಬಹುದಾದ ಹಣವನ್ನು ಪವಿತ್ರ ಕಾರ್ಯಕ್ಕಾಗಿ ಕೊಟ್ಟರು ವರೆಂದು ನಾವು ಅರಿತಿರುವೆವು. ಆದರೆ, ಈ ಸುಲಭ ಮಾರ್ಗವನ್ನು ಅನುಸರಿಸಿದರೆ, ಮುಂದೆ ಭಕ್ತ ಜನರು ಮುನಿಯುವ ಸಂಭವವಿದೆ. ಆದ ಕಾರಣ, ಹ್ಯಾಸ್ಕೂಲಿನ ಚಾಲಕರು ಈ ಗೋಜಿಗೆ ಹೋಗದೆ, ಸ್ವತಂತ್ರ ರೀತಿಯಿಂದ ಹ್ಯಾಸ್ಕೂಲನ್ನು ಸ್ಥಾಪಿಸುವದೇ ಉತ್ತಮ ಪಕ್ಷ.

---

೬. ಕಳೆದ ತಾ. ೧೫ ನೇ 'ಸ್ವದೇಶಾಭಿಮಾನಿ' ಯಲ್ಲಿ ಪ್ರಕಟವಾದ 'ಪ್ರವಾಸಿ' ಯರೊಬ್ಬರ ಉತ್ತರ ಕನ್ನಡ ಜಿಲ್ಹೆಯ ಸಂಚಾರದೊಳಗಿನ ಅನುಭವಗಳನ್ನು ಓದಿದರೆ, ನಮ್ಮ ಜಿಲ್ಹೆಯಲ್ಲಿ ಅಸಹಕಾರಿತೆಯು ದಕ್ಷಿಣ ಕನ್ನಡ ಜಿಲ್ಹೆಯೊಳಗಿನದಷ್ಟು ಸಹ ಇಲ್ಲೆಂದು ಅಭಿಪ್ರಾಯವಾಗುತ್ತದೆ. 'ಪ್ರವಾಸಿ' ಗಳಿಗೆ 'ತನ್ನ ಮರಿ, ಹೊನ್ನ ಮರಿ' ಎಂದು ಕಾಣುವದು ಸಹಜವು. ದಕ್ಷಿಣ ಕನ್ನಡ ಜಿಲ್ಹೆಯು ಅಸಹಕಾರಿತೆಯನ್ನು ಪುರಸ್ಕರಿಸಿ, ಹೆಚ್ಚಿನ ಧ್ವಜವು ನಮಗೆ ಗೊತ್ತಿದ್ದದ್ದೇ. ಆ ಬಗ್ಗೆ ಪ್ರವಾಸ ಮಾಡುವ ಸಹಗರಜಿಲ್ಲ. 'ಪ್ರವಾಸಿ' ಗಳು ತಮ್ಮ ಸಂಚಾರದ ಕೊನೆಯ ಟಿಪ್ಪಣೆಯಲ್ಲಿ "ಉತ್ತರ ಕನ್ನಡದೊಳಗಿನ ಪುಢಾರಿಗಳಾದರೂ ಪ್ರತಿಯೋಗೀ ಅಸಹಕಾರಿಗಳೇ. ಅವರು ತಮ್ಮ ಜಿಲ್ಹೆಯ ಪರವಾಗಿ ರಾಷ್ಟ್ರ ಭಕ್ತರನ್ನು ಕೌನ್ಸಿಲಿಗೆ ಕಳುಹಿಸಲಿಕ್ಕಿದ್ದಾರೆಂದು ನಾವು ಕೇಳಿದೆವು" ಎಂದು ನಮೂದಿಸುತ್ತಾರೆ. ಈ ಸಂಗತಿಯೇನು ನಮಗೆ ಗೊತ್ತಿಲ್ಲ. ಆದರೆ, ಕಳೆದ 'ಕಾನಡಾ ಧುರೀಣ'ದಲ್ಲಿ ರಾ| ವಿಶ್ವೇಶ್ವರ ವೆಂಕಟೇಶಯ್ಯಾ ಕಲ್ಯಾಣಪೂರಕರರವರು ಕೌನ್ಸಿಲು ಚುನಾವಣೆಗೆ ನಿಲ್ಲುವವರಿದ್ದಾರೆಂದು ಪ್ರಕಟಗೊಂಡಿದೆ. ಈ ಪ್ರಕಟಣೆಗೂ, 'ಪ್ರವಾಸಿ'ಗಳ ಪ್ರತಿಯೋಗಿ ಅಸಹಕಾರಿತೆಯ ಪುಢಾರಿಗಳಿಗೂ ಸಂಬಂಧವಿದ್ದರೆ ಇರಬೇಕು. ಹೊರತು, ಪ್ರತಿಯೋಗಿ ಅಸಹಕಾರಿತೆಯು ನಮ್ಮ ಜಿಲ್ಹೆಯಲ್ಲಿ ಇನ್ನೂ ತಲೆದೋರಲಿಲ್ಲ. ಇರಲಿ. 'ಪ್ರವಾಸಿ' ಗಳು ಓಡೋಡುತ್ತ ಮಾಡಿದ ಟಿಪ್ಪಣಿಗಳವು. ಅವಕ್ಕೆ ವಿಶೇಷ ಮಹತ್ವವೇಕೆ ಕೊಡಬೇಕು ?

ಸ್ಥಾನಿಕ ವೃತ್ತಾಂತ.

ಕುಮಟಾ— ನಾಲ್ಕೈದು ದಿನಗಳಿಂದ ಜೋರಿನ ಜಡಿಮಳೆ, ತೆರಪಿಲ್ಲದೆ ಮಳೆ ಸುರಿಯುತ್ತಿದೆ. ತಾ|. ಈ ವಾರದಲ್ಲಿ ೧೩, ೧೪ ಇಂಚು ಮಳೆಬಿತ್ತು. ರೈತರು ಹೊಲಗಲಸಗಳಲ್ಲಿ ನಿಮಗ್ನರಾಗಿರುವರು. ಮಾರ್ಗಗಳೆಲ್ಲ ಒಡೆದು ಹೋದವು. ಮ್ಯುನಿಸಿಪಾಲಿಟಿಯು ಪುನಃ ದುರುಸ್ತಿ ಮಾಡಲಿಕ್ಕೆ ವ್ಯಯ ಮಾಡಿದಂತಾಯಿತು.

ಕಳೆದ ರವಿವಾರ ಮಣಕಿ ತಾರಿಯಲ್ಲಿ ಚೆಲೋ ಅಪಘಾತವಾಗುತ್ತಿತ್ತು. ೩೫ರಿಂದ ಹಿಂದೆ ಮೋಟಾರು ನೆಟ್ಟಿಗೆ ಜಂಗಲನ್ನು ಹತ್ತಿ ಅರ್ಧ ಹಾಕಿದ ಎಳೆಯನ್ನು ಮುರಿದು ತಾರಿಯಲ್ಲಿ ಮುಳುಗಿತು. ಪೆಸಂಜರರು ಕಷ್ಟದಿಂದ ಮೋಟಾರಿನೊಳಗಿಂದ ಹಾರಿ ನಿಲಕಾಡಿದರು. ಕಡೆಗೆ ೪೦-೫೦ ಮಂದಿಗಳು ಒಟ್ಟಾಗಿ ಮೋಟಾರಿಗನ ನೆಲಕ್ಕಾಳಿಸಿಬಿಟ್ಟರು. ಡ್ರಾಯ್ವರನ ತಪ್ಪೆಂದು ಹಲವರು, ತಾರಿಯವರ ತಪ್ಪೆಂದು ಕೆಲವರು, ಹೀಗೆ ತರ್ಕಗಳು ನಡೆದಿವೆ. ಚೌಕಶಿ ನಡಿಸುವದುತ್ತಮ.

ಕಳೆದ ೧೮ ನೇ ತಾರೀಖಿಗೆ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಗಾಂಧೀ ದಿನವು ಗೀತ, ಪ್ರಾರ್ಥನೆ ಮೊದಲಾದವುಗಳಿಂದ ವಾಡಿಕೆಯಂತೆ ನೆರವೇರಿತು.

ಅದೇ ದಿನ ಮುಂಜಾನೆ ಜಿಲ್ಹಾ ಕೊಂಗ್ರೆಸ ವರ್ಕಿಂಗ ಕಮೀಟಿಯು ಸಭೆ ನೆರೆದು, ತಾ| ನಾರಾಯಣರಾವ ಹರ್ಡೀಕರರ ಪತ್ರದ ವಿಚಾರವಾಗಿ, ಇಲ್ಲಿಂದ ೨, ಕಾರವಾರದಿಂದ ೨, ಹೊನ್ನಾವರದಿಂದ ೩ ಹೀಗೆ ೭ ಮಂದಿ ಸ್ವಯಂಸೇವಕರನ್ನು ನಾಗಪೂರದ ಧ್ವಜಧ್ವಜದ ಸುಗ್ರಾಮಕ್ಕೆ ಕಳಿಸಬೇಕೆಂದು ಗೊತ್ತಾಯಿತು. ೫೫, ದಿಪ್ಪರಗಳಿಂದ ಸಿದ್ಧರಿದ್ದ ಸ್ವಯಂಸೇವಕರ ಹಂಚೆ ತಿಳಿಯಲಿಲ್ಲ, ಜಿಲ್ಹಾ ಕೊಂಗ್ರೆಸ ಕಮಿಟಿಯ ಸಾಧಾರಣ ಸಭೆಯನ್ನು ಜುಲೈ ತಾ. ೧೫ ನೇಗೆ ನೆರೆಯಿಸಬೇಕೆಂತಲೂ ಠರಾವಾಗಿದೆ.

ಇಲ್ಲಿ ನೇಮಣೂಕ ಆದ ಮಿ| ಜೆ. ಎಚ್. ಬಿಸ್‌ಮಳಗುಂದ ಸಬ್ಬಜಜ್ಜರು ಮೊನ್ನೆ ಇಲ್ಲಿ ಬಂದು ಚಾರ್ಜು ವಹಿಸಿಕೊಂಡು, ನಿನ್ನೆಯಿಂದ ಕೆಲಸ ನಡಿಸಹತ್ತಿರುವರು.

ಶ್ರೀ ರಾಮಕೃಷ್ಣ ಮುದ್ರಣಾಲಯದಲ್ಲಿ ಮುದ್ರಿಸಿದ 'ಸ್ವರಾಜ್ಯವೋ, ಪರರಾಜ್ಯವೋ' ಎಂಬ ಪುಸ್ತಕವು ರಾಜದ್ರೋಹಾತ್ಮಕವೆಂದು ಸರಕಾರವು ಠರಾಯಿಸಿ, ಅದರ ಪ್ರತಿಗಳನ್ನೆಲ್ಲ ಜಪ್ತ ಮಾಡಲು ಹುಕುಮು ಹೊರಡಿಸಿದೆ

ಕಳೆದ ಬಿ. ಏ. ಪರೀಕ್ಷೆಯಲ್ಲಿ ಉತ್ತೀರ್ಣಹೊಂದಿದ ಇಲ್ಲಿ ಹ್ಯಾಸ್ಕೂಲ ವಿದ್ಯಾರ್ಥಿಗಳು.— (೨ ನೇ ವರ್ಗ) ರಾ। ಬಿ. ಎನ್. ಕಾಮತ; ಜಿ. ಪಿ. ಪ್ರಭು. (೩ ನೇ ವರ್ಗ) ರಾ। ಎಸ್. ವ್ಹಿ. ಲೋಕೇಶ್ವರ; ಎನ್. ಟಿ. ಹಳಕಾರ.

ಶಿರಸಿ— ೪—೮ ದಿನದಿಂದ ಒಂದೇಸಮನೆ ಮಳೆ ಬೀಳುತ್ತದೆ.

ಇಲ್ಲಿಯ ರಾಷ್ಟ್ರೀಯ ಶಾಲೆಯ ಹುಡುಗರೆಲ್ಲ ಕೂಡಿ, 'ಬಾಲವೀರ' ನೆಂಬ ಸಾಪ್ತಾಹಿಕ ಹಸ್ತಲಿಖಿತ ವೃತ್ತಪತ್ರವನ್ನು ಹೊರಡಿಸುತ್ತಿದ್ದು, ಈಗ ಎರಡು ಸಂಚಿಕೆಗಳು ಹೊರಬಿದ್ದಿವೆ. ಅದು ಪ್ರತಿ ರವಿವಾರ ಹೊರಡುತ್ತದೆ.

ಕಳೆದ ೧೮ ನೇ ತಾರೀಖಿನ ಗಾಂಧಿ ದಿನ ೨೪ ತಾಸು ಸತತವಾಗಿ ನೂಲು ತೆಗೆಯುವ ಕ್ರಮವು ನಡೆದಿತ್ತು. ಬೆಳಗ್ಗೆ ಊರಲ್ಲೆಲ್ಲ ಭಜನೆಯಾಯಿತು. ಸಾಯಂಕಾಲ ರಾಷ್ಟ್ರೀಯ ಶಾಲೆಯು ಧ್ವಜ-ತೋರಣಾದಿಗಳಿಂದ ಚಿತ್ತಾಕರ್ಷಕವಾಗಿ ಅಲಂಕೃತವಾಗಿತ್ತು. ಶ್ರೀ। ಗುಲವಾಡಿ ಮುಕ್ತಾಬಾಯಿ ಇವರು ನೆರೆದವರಿಗೆಲ್ಲ ನಮ್ಮ ಸದ್ಯದ ಕರ್ತವ್ಯದ ವಿಷಯವಾಗಿ ಬಳ್ಳೇ ಬಿಂಬಿಸಿಹೇಳಿದರು. ಆ ಮೇಲೆ ದೇವರ ಪ್ರಾರ್ಥನೆಯಾಗಿ ಆ ದಿನದ ಕಾರ್ಯ ಸಮಾಪ್ತವಾಯಿತು.

ಇಲ್ಲಿಯ ರಾ. ಬಾಲ ಶಿಕ್ಷಕರಾದ ದತ್ತಾತ್ರಯ ಜೋಶಿ ಇವರು ಮುಗ್ಗ ಕಲಿಯಲಿಕ್ಕಾಗಿ ಹುಬ್ಬಳ್ಳಿಗೆ ಹೋಗಿದ್ದು ಡಾ। ಹರ್ಡೀಕರರ ಸೇವಾಶ್ರಮದಲ್ಲಿ ಉಳಿದುಕೊಂಡಿದ್ದಾರೆ.

ನಾಗಪುರದ ಸಂಗ್ರಾಮ.

ಶೇಟ ಜಮನಾಲಾಲ ಬಜಾಜ, ಶ್ರೀ। ನೀಲಕಂಠರಾವ ದೇಶಮುಖರವರಿಗೆ ಸೆರೆಹಿಡಿದರು!

ನಾಗಪುರದ ರಾಷ್ಟ್ರಧ್ವಜದ ಸಂಗ್ರಾಮಕ್ಕೆ ಹೊಸ ಕಳೆಯೇರುತ್ತಿದೆ. ನಿತ್ಯವೂ ಸತ್ಯಾಗ್ರಹಕ್ಕಾಗಿ ಅಖಿಲ ಭರತಖಂಡದೊಳಗಿಂದ ಸ್ವಯಂಸೇವಕರು ಸತ್ಯಾಗ್ರಹಕ್ಕಾಗಿ ದಾಖಲಾಗುತ್ತಿರುವರು. ಕಳೆದ ಸೋಮವಾರದ ಗಾಂಧೀ ದಿನಕ್ಕೆ ವಿಶೇಷ ಜೋರಿನಿಂದ ಸತ್ಯಾಗ್ರಹವನ್ನು ಹೂಡಬೇಕೆಂದು ಶೇಟ ಜಮನಾಲಾಲ ಬಜಾಜ ಮೊದಲಾದ ಚಾಲಕರು ನಿರ್ಧರಿಸಿದ್ದರು. ಭರತಖಂಡದೊಳಗಿನ ಮಾನ್ಯ ಮುಖಂಡರು ಸತ್ಯಾಗ್ರಹ ಕುರುಕ್ಷೇತ್ರದಲ್ಲಿ ಸ್ವತಃ ಹಾಜರಾಗಿರುವರು. ಪಂಡಿತ ಜವಾಹರಲಾಲ ನೆಹರು, ಶ್ರೀ। ಪುರುಷೋತ್ತಮ ದಾಸ ಟಂಡನ್, ಮಿ। ಜೋಬ ಜೋಸೆಫ್, ಡಾ। ನಾರಾಯಣರಾವ ಹರ್ಡೀಕರರವರು ಸತ್ಯಾಗ್ರಹವನ್ನು ಶಿಸ್ತಿನಿಂದ ಪುರಸ್ಕರಿಸಲಿಕ್ಕೆ, ದೇಶಬಾಂಧವರಿಗೆ ತಕ್ಕ ಸಹಾಯವನ್ನಿತ್ತು ರಾಷ್ಟ್ರದ ಮಾನ ಕಾಯಲು ಉತ್ತೇಜಿಸಲಿಕ್ಕೆ ಯತ್ನಿಸುತ್ತಿರುವರು. ನಾಗಪುರದ ಅಧಿಕಾರಿಗಳು ರಾಷ್ಟ್ರಧ್ವಜದ ಸಂಗ್ರಾಮದ ಹಕೀಕತು ವಿಸ್ತಾರಪೂರ್ವಕ ತಿಳಿಯಗೊಡಬಾರದೆಂದು 'ಮುಂಬಯಿ ಕ್ರಾನಿಕಲ್' ಮೊದಲಾದ ಪತ್ರಿಕೆಗಳಿಗೆ ಕಳಿಸಿದ ಕೆಲ ತಂತಿಗಳನ್ನು ಆಕ್ಷೇಪಾರ್ಹವೆಂದು ಅಚ್ಚು ಹೊಡೆದು, ಬಚ್ಚಿಡುತ್ತಿರುವರು. ಇಷ್ಟಲ್ಲದೆ, ಹೊರ ಪ್ರಾಂತಗಳಿಂದ ಶೇಟ ಬಜಾಜರವರಿಗೆ ಸ್ವಯಂಸೇವಕರ ಸಂಘ ಮೊದಲಾದವುಗಳ ಕಳಿಸಿದ್ದ ತಂತಿಗಳೂ ಆಕ್ಷೇಪಾರ್ಹವೆಂದು ಹಿಂತಿರುಗಿ ಬಂದವು. ಡಾ। ಹರ್ಡೀಕರರು ನಾಗಪುರಕ್ಕೆ ಕಳಿಸಿದ ತಂತಿಯು ಹಾಗೆ ಹೀಗಾಯಿತು. ಇಷ್ಟಾದರೂ, ನಾಗಪುರಸ್ಥರ ನಿಶ್ಚಯವು ಎಳ್ಳಷ್ಟು ಕಳೆಗುಂದದೆ, ಸತ್ಯಾಗ್ರಹವು ಸ್ಥಿರವಾಗಿ ನಡೆಯಿತು. ಈಗ ಏನೂ ಮಾಡಿದರೂ ಸತ್ಯಾಗ್ರಹದ ನಿಶ್ಚಯವು ಕಳೆಗುಂದುವದಿಲ್ಲ ಎಂದು ಎಣಿಸಿ, ಕಳೆದ ರವಿವಾರಕ್ಕೆ ಸತ್ಯಾಗ್ರಹದ ಚಾಲಕರಾದ ಶೇಟ ಜಮನಾಲಾಲ ಬಜಾಜ ಹಾಗು ಶ್ರೀ। ನೀಲಕಂಠರಾವ ದೇಶಮುಖರವರನ್ನು ಸೆರೆ ಹಿಡಿದುಬಿಟ್ಟರು. ಇವರೀರ್ವರೂ ಅಸಹಯೋಗಿಗಳು. ತಮ್ಮ ಗೌರವಕ್ಕನುರೂಪವಾಗಿ ಪೋಲೀಸರ ವಶಕ್ಕೆ ಹೋದರು. ಶೇಟ ಬಜಾಜರವರಿಗೂ, ಪಂಡಿತ ಜವಾಹರಲಾಲ ನೆಹರೂರವರಿಗೂ ಬಹು ಕಾಲದವರೆಗೆ ಸಂಭಾಷಣ ನಡೆಯಿತೆಂತಲೂ ತಿಳಿಯುತ್ತದೆ. ಈಗ ನಾಗಪುರದೊಳಗಿನ ಸತ್ಯಾಗ್ರಹಕ್ಕೆ ಹೊಸ ಕಳೆ ಏರಿದೆ. ಇಷ್ಟರೊಳಗೆ ಸುಮಾರು ೬೦೦ ಸ್ವಯಂಸೇವಕರು ಸೆರೆಯಾಳಾಗಿರುವರು. ನಾಲ್ಕೂ ಬದಿಯಿಂದ ಸ್ವಯಂಸೇವಕರು ಸಂಗ್ರಾಮಕ್ಷೇತ್ರಕ್ಕೆ ತೆರಳುತ್ತಿರುವರು. ಸ್ತ್ರೀಯರೂ ಸತ್ಯಾಗ್ರಹೋತ್ಸುಕರಾಗಿರುವರು. ಗುಜರಾಥ ಪ್ರಾಂತದಿಂದ ಹೋದ ಸ್ವಯಂಸೇವಕರಲ್ಲಿ ಒಬ್ಬ ಬಿಹುರು ಭಗಿನಿ ಇದ್ದಳು. ಶ್ರೀ। ವಲ್ಲಭಭಾಯಿ ಪಟೇಲರವರು ಅವಳನ್ನು ಪರಾವೃತ್ತಮಾಡಲು ಬಹು ಪರಿಯಿಂದ ಬೋಧಿಸಿದರು. ಆದರೂ, ಅವಳಿಗೆ ಮನ ಒಪ್ಪದೆ, ಅವಳು ನಾಗಪುರಕ್ಕೆ ತೆರಳಿದಳು. ಕರ್ನಾಟಕದಿಂದ ೬ ಮಂದಿ ಸ್ವಯಂಸೇವಕರು ಡಾ। ಹರ್ಡೀಕರರ ನೇತೃತ್ವದಲ್ಲಿ ನಾಗಪುರಕ್ಕೆ ಹೋಗಿರುವರು.

ಹೊಸ ಹುಕುಮು

ಡಿಸ್ಟ್ರಿಕ್ಟ ಮೆಜಿಸ್ಟ್ರೇಟ ಮಿ। ಗೋವಾನರವರು ಈಗ ಹೊಸ ಹುಕುಮನ್ನು ಕ್ರಿ. ಪ್ರೋ. ಕೋ. ಕಲಂ ೧೪೪ರ ಅನ್ವಯ ಹೊಸ ಹುಕುಮನ್ನು ಹೊರಡಿಸಿರುವರು. ಈ ಕಾಯಿದೆಯನ್ವಯ ನಾಗಪುರ ಮ್ಯುನಿಸಿಪಾಲಿಟಿಯ ಹದ್ದೂ, ಸಿವ್ಹಿಲ್ ಸ್ಟೇಶನವೂ ಪ್ರತಿಬಂಧಕ ಸ್ಥಳವೆಂದು ನಿರ್ಣಯಿಸಲ್ಪಟ್ಟಿವೆ. ಇಲ್ಲಿಯೂ ರಾಷ್ಟ್ರಧ್ವಜಕ್ಕೆ ಪ್ರತಿಬಂಧವಾಗಿದೆ. ಇದಲ್ಲದೇ ೫ಕ್ಕೆ ಮಿಕ್ಕ ಜನರು ಇಲ್ಲಿ ನೆರೆಯಲಾಗದೆಂದು ವಿಧಿಸೋಣಾಗಿದೆ. ಸಾರ್ವಜನಿಕ ಸಭೆಯೂ ಈ ಹದ್ದಿನಲ್ಲಿ ಸೇರಲಾಗದು. ಈ ಹೊಸ ಹುಕುಮು ಎರಡು ತಿಂಗಳುಗಳವರೆಗೆ ಅಮಲಿನಲ್ಲಿರುವದು. ಈ ಹೊಸ ಹುಕುಮನ್ನು ಹೊರಡಿಸುವ ಕಾರಣವು ಸತ್ಯಾಗ್ರಹಿ ಸ್ವಯಂಸೇವಕರಿಂದ ತಮಗೆ ತೊಂದರೆಯಾಗುತ್ತದೆಂದು ನಾಗರಿಕರು ದೊರೆಗಳ ಕೂಡ ದೂರಿದ್ದರಂತೆ. ಈ ಬಗ್ಗೆ ೮—೧೦ ದಿನಗಳ ಮೊದಲು ಶೇಟ ಬಜಾಜರವರಿಗೂ, ಜಿಲ್ಹಾಧಿಪರಿಗೂ ದೊಡ್ಡ ಸಂಭಾಷಣವು ನಡೆದು, ಶೇಟಜೀಯವರು ಇದೊಂದು ಕುಯುಕ್ತಿಯೆಂದು ಸಪ್ರಮಾಣ ಪ್ರತಿಪಾದಿಸಿದ್ದಲ್ಲದೆ, ಯಾರಿಗೇನು ತೊಂದರೆಯಾಯಿತು? ಎಂದು ನಿವೇದಿಸಲು ಮಿ। ಗೋವಾನರವರಿಗೆ ಆಹ್ವಾನ ಮಾಡಿದ್ದರೆಂದೂ ತಿಳಿಯುತ್ತದೆ.

ವೃತ್ತಸಾರ.

— ಮುಂಬಯಿ ಕಾರ್ಯಕಾರಿ ಕೌನ್ಸಿಲಿನ ಸಭಾಸದರಾದ ಸರ್ ಚಿಮಣಲಾಲ ಸೆಟಲವಾಡರವರು 'ಸ್ವತಂತ್ರ ಮನುಷ್ಯನಾಗಲು' ತಮ್ಮ ಅಧಿಕಾರಸ್ಥಾನಕ್ಕೆ ರಾಜಿನಾಮೆಯನ್ನಿತ್ತಿರುವರು. ಅವರ ಸ್ಥಾನಕ್ಕೆ ದಿವಾಣ ಮಿ। ಠಾಕೂರರವರು ನೇಮಿಸಲ್ಪಟ್ಟಿರುವರು. ದಿವಾಣರ ಜಾಗೆಕ್ಕೆ ರಾವಬಹಾದ್ದೂರ ಚಿತಳೇಯವರು ಬರುವರೆಂದು ಸುದ್ದಿ.

— ಸರ್ ಇಬ್ರಾಹಿಮ್ ರಹಿಮತುಲ್ಲಾರವರ ಜಾಗೆಕ್ಕೆ ಮಿ। ಕಾವಸಜೀ ಜಹಾಂಗೀರರವರ ನೇಮಣೂಕಿಯಾಗಿದೆ.

— ಸುರತದ 'ನವಯುಗ'ದ ಸಂಪಾದಕರಾದ ಶ್ರೀ। ಕಲ್ಯಾಣಜೀಯವರ ಮೇಲೆ ರಾಜದ್ರೋಹ ಕಲಮಿನನ್ವಯ ತನಿಖಿ ನಡೆದು, ೨ ವರ್ಷಗಳ ಕಠಿಣ ಸಜೆಯಾಯಿತು.

— ಕೋಕೋನಾಡದಲ್ಲಿ ನೆರೆಯಲಿಕ್ಕಿದ್ದ ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನಕ್ಕೆ ಮೌ। ಮಹಮ್ಮದ ಅಲ್ಲೀ, ಶ್ರೀ। ಗಂಗಾಧರರಾವ ದೇಶಪಾಂಡೇ, ಸಿ. ರಾಜಗೋಪಾಲಾಚಾರ್ಯ, ನರಸೋಪಂತ ಕೇಳಕರ, ಶ್ರೀಮತಿ ಸರೋಜಿನಿ ನಾಯಡುರವರ ಹೆಸರುಗಳನ್ನು ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ ಕಮೀಟಿಯು ಸೂಚಿಸಿದೆ.

— ಬಂಗಾಲದ ಗವರ್ನರರಾದ ಲಿಟನ್ ದೊರೆಗಳು ನೌಖಾಲಿಗೆ ಆಗಮಿಸುವರಿದ್ದರು. ಅಲ್ಲಿಯ ಲೋಕಲ್‌ಬೋರ್ಡಿನವರು ದೊರೆಗಳಿಗೆ ಮಾನಪತ್ರವನ್ನರ್ಪಿಸಬೇಕೆಂದು ಆಲೋಚಿಸಿದ್ದರು. ಆದರೆ, ಈ ಠರಾವು ನಾಮಂಜೂರಾಯಿತು.

— ಗುಜರಾಥ ಪ್ರಾಂತದೊಳಗಿನ ಸ್ವರಾಜ್ಯ ಪಕ್ಷದ ಚಾಲಕರು ಕೈನೂಲಿನ ಬಟ್ಟೆಗಳನ್ನು ಧರಿಸುವವರು ಮಾತ್ರ ಕೌನ್ಸಿಲು ಚುನಾವಣಿಗೆ ನಿಲ್ಲಬೇಕೆಂದು ಠರಾಯಿಸಿರುವರು.

— ಕಲಕತ್ತೆಯಲ್ಲಿ ಬ್ಲೆಕ್‌ಹೋಲ ಯಾನೆ ಕತ್ತಲೆ ಕೋಣೆಯ ಅತ್ಯಾಚಾರದ ಸ್ಮಾರಕವೊಂದಿದೆ. ಅದನ್ನು ಕಿತ್ತೆಗೆಯಲು ಹಲವರು ಯತ್ನಿಸುತ್ತಿರುವರು. ಈ ಸ್ಮಾರಕ ಉಚ್ಚಾಟನದ ಚಳವಳಿಗೆ ಸ್ಥಾನಿಕ ಕಾಂಗ್ರೆಸ್ ಕಮಿಟಿಯಾಗಲಿ, ಖಿಲಾಫತ ಕಮಿಟಿಯಾಗಲಿ ಸಾಹ್ಯ ಪುರಸ್ಕರಿಸುವದಿಲ್ಲೆಂದು ಜಾಹೀರು ಆಗಿದೆ. ಈ ಸ್ಮಾರಕವನ್ನು ಕಿತ್ತೆಗೆಯಲು ಹವಣಿಸಿದ ಅಮರಸಿಂಗರವರಿಗೆ ಆರು ತಿಂಗಳ ಶಿಕ್ಷೆಯಾಯಿತು.

— ಫ್ರಾನ್ಸಿನಲ್ಲಿ ಒಂದು ವಿಚಿತ್ರ ಮಗು ಹುಟ್ಟಿದೆ. ಅದಕ್ಕೆ ಹುಟ್ಟುವಾಗಲೇ ಎಲ್ಲ ಹಲ್ಲುಗಳು ಬಂದಿವೆ.

— ಸುಮಾತ್ರಾ ದ್ವೀಪದಲ್ಲಿ ಒಂದು ಗಜದಷ್ಟು ಅಗಲವೂ, ಅರ್ಧ ಮಣ ಭಾರದಷ್ಟು ಹೂವುಗಳು ಬೆಳೆಯುತ್ತವೆ.

— ಚಿಕೋಡಾದ ಕಾಂಗ್ರೆಸ ಆಫೀಸಿನಲ್ಲಿ ಸೆಕ್ರೆಟರಿಗಳ ಬಳಿಗಿದ್ದ ೧,೧೨,೧೧೦ ರೂಪಾಯಿಗಳು ಕಳವಾದವು. ಸದರಿ ರಕಮನ್ನು ಕಾರ್ಯದರ್ಶಿಗಳು ಅನ್ಯರಿಂದ ಸಾಲ ತೆಗೆದು ಕಮಿಟಿಗೆ ಭರತಿಮಾಡಿಕೊಟ್ಟರು.

— ಬಕರೀದ ಹಬ್ಬದಲ್ಲಿ ಗೋವಧೆಯನ್ನು ನಿಲ್ಲಿಸಬೇಕೆಂಬ ಆಲೋಚನೆಗಾಗಿ ಡಾ। ಅನ್‌ಸಾರಿ, ಶ್ರೀಮತಿ ಸರೋಜಿನಿ ನಾಯಡುರವರು ಗುರುವಾರ ತಾ. ೨೮ನೇಗೆ ಒಂದು ಪರಿಷತ್ತು ಸೇರಿಸುತ್ತಿರುವರು.

— ವರಿಷ್ಠ ಕಾಯಿದೆ ಕೌನ್ಸಿಲಿನ ಚುನಾವಣಿಗೆ ಪಂಡಿತ ಮದನಮೋಹನ ಮಾಲವೀಯಜೀಯವರು ಉಮೇದವಾರರಾಗಿ ನಿಲ್ಲುವವರಿದ್ದರೆಂದು ಸುದ್ದಿ.

— ಮದ್ರಾಸಿನ ಸರ್ ಶಂಕರನ್ ನಾಯರರವರು ಮುಂಬಯಿಯ ಶ್ರೀ। ಕೆ. ನಟರಾಜನರವರಿಗೆ ಪತ್ರ ಬರೆದು, ಈಗ ಬೇಕಾದದ್ದು ಅಸಹಕಾರಿತೆಯು ಅವಶ್ಯ ಬಿದ್ದರೆ, ಅದಕ್ಕಿಂತ ಹೆಚ್ಚು ತೀವ್ರ ಅಸ್ತ್ರವನ್ನು ಉಪಯೋಗಿಸಲು ನಾವು ಸಿದ್ಧರಿರಬೇಕೆಂತಲೂ ತಿಳಿಸಿರುವರು. ಮಹಾತ್ಮರ ಬಗ್ಗೆ ತಮಗೆ ವಿಶೇಷ ಆದರವಿದೆಂತಲೂ ಸರ್ ನಾಯರರು ನಮೂದಿಸುತ್ತಾರೆ.

— ಕೌನ್ಸಿಲ ಆಫ್ ಸ್ಟೇಟಿನ ಅಧಿವೇಶನವು ಮುಂದಿನ ತಿಂಗಳಿನಲ್ಲಿ ದಿಲ್ಲಿಯಲ್ಲಿ ನೆರೆಯುವದು. ತಾ. ೧೬,೧೮,೨೩ ಈ ಮೂರು ದಿನಗಳಲ್ಲಿ ಬಿನ್ ಸರಕಾರಿ ಸಭಾಸದರ ಸಾರ್ವಜನಿಕ ಮಹತ್ವದ ಪ್ರಶ್ನೆಗಳ ಚರ್ಚೆ ನಡೆಯುವದು.

— ವಿದ್ಯುಚ್ಛಕ್ತಿಯಿಂದ ಉಗಿ ಬಂಡಿಯನ್ನು ನಡಿಸುವ ಜಿ. ಆಯ್. ಪೀ. ರೇಲ್ವೆಯ ಯೋಜನೆಯು ಸದ್ಯಕ್ಕೆ ಅಮಲಿನಲ್ಲಿ ಬರುವದು. ಈ ಯೋಜನೆಯಂತೆ ಪ್ರತಿ ತಾಸಿಗೆ ೯ ಗಾಡಿಗಳು ನಡೆಯುವ ವ್ಯವಸ್ಥೆಯಾಗುವದು.

— ಮಹಾತ್ಮರ ಪ್ರಕೃತಿಯು ಈಗ ಚಲೋ ಸುಧಾರಿಸಿದೆ. ಅವರು ದಿನಾಲು ೩—೪ ತಾಸು ನೂಲುತ್ತಾರೆಂದು ತಿಳಿಯುತ್ತದೆ.

ಅಗಿಯ ಹುಣ್ಣಿವೆಯ (೭ನೇ) ಹೆಜ್ಜೆ.

ಧಾರವಾಡದಲ್ಲಿ ಹುಣ್ಣಿವೆಗೊಮ್ಮೆ ಹೊರಡುವ,

"ಜಯಕರ್ನಾಟಕ"

ಎಂಬ

ಸಚಿತ್ರ ಮೋಲ್ತರದ ಮಾಸಪತ್ರಿಕೆ.

ಸಂಪಾದಕರು. — ಆಲೂರ ವೆಂಕಟರಾಯರು ಬಿ. ಎ., ಎಲ್. ಎಲ್. ಬಿ.,

ಇದರಲ್ಲಿ ಅಖಿಲ ಕರ್ನಾಟಕದ ಲೇಖಕರ ಲೇಖಗಳೂ ಬರುತ್ತಾವೆ. 'ಮಾಡರ್ನ ರಿವ್ಯೂ' ಆಕಾರದ ೮೦ ಪುಟಗಳುಳ್ಳ ದೊಡ್ಡ ಮಾಸಪತ್ರಿಕೆಯಿದೊಂದೇ.

ಕರ್ನಾಟಕದ ಸಂದಿಗೊಂದಿಗಳಲ್ಲಿಯೂ ಇದರ ಹಬ್ಬುಗೆ. ಜಾಹೀರಾತದಾರರಿಗೆ ಹೆಚ್ಚಿನ ಲಾಭ. ಹೊಸದಾಗಿ ಆಗುವ ಚಂದಾದಾರರು ಹೊಸ ಸಂಚಿಕೆಯಿಂದಲೇ ಪ್ರಾರಂಭಿಸಬೇಕು. ಹಿಂದಿನ ಸಂಚಿಕೆಗಳು ತೀರಿದ್ದರಿಂದ ಅವುಗಳನ್ನು ಮುಟ್ಟಿಸುವ ಹೊಣೆಯನ್ನು ಹೊರಲಾರೆವು. ಯಾರಾದರೂ ಹಿಂದಿನ ಸಂಚಿಕೆಗಳನ್ನು ಕಳಿಸಿದರೆ ಬೆಲೆ ಕೊಟ್ಟು ಕೊಳ್ಳುವೆವು.

೭ನೇ ಹೆಜ್ಜೆಯ ಲೇಖಗಳು.

೧ ಶ್ರೀ ಬಸವೇಶ್ವರರೂ ಅವರ ತತ್ವಜ್ಞಾನವೂ ಶ್ರೀ ಸಿದ್ಧರಾಮಪ್ಪ ಪುಂಡಪ್ಪ ಪಾವಟೆ, ಬಿ ಎ, ಎಲ್. ಎಲ್. ಬಿ.
೨. ನಮ್ಮ ಅಕ್ಕ ಶ್ರೀ ಗಣೇಶರಾವ ಪಾಜ ಕುಮಟಾ ಹುಬ್ಬಳ್ಳಿ
೩ ಹೊಸ್ಮನ ನಾಣ್ಯಗಳು ಹೊರಟು ಹೋದವು ಶ್ರೀ ಗರರಾವ ಕೃಷ್ಣರಾವ ವಾಳ್ವೇಕರ, ಬಿ ಎ ಎಲ್ ಎಲ್. ಬಿ,
೪. ಮದುವೆಯ ಮಾಸ ಹರಟೆಯ ಮಲ್ಲ ವ್ಯಸನ. ಹುಬ್ಬಳ್ಳಿ.
೫. ಕಳವಿನ ಕೊಳಲು (ಕವೆ) ಶ್ರೀ ಶಂಕರರಾವ ಕ ಒಕರ್ಣ ಗಜೇಂದ್ರಗಡ
೬ ಆರ್ಯ ಸಂಸ್ಕೃತಿಯೂ ಸ್ತ್ರೀಶಿಕ್ಷಣವೂ ಶ್ರೀ ಹನುಮಂತರಾವ ಕೌಜಲಗಿ, ಬಿ. ಎಸ್ ಸಿ, ವಿಜಾಪುರ.
೭. ಸ್ತ್ರೀ ವಿದ್ಯಾಭ್ಯಾಸ ಶ್ರೀಮತಿ ರಾಜಮ್ಮನವರು, ಬೆಂಗಳೂರ
೮ ಭರತ ವರ್ಷದ ಇತಿಹಾಸ ಆಗಸ್ಟ ಬ್ರಾ
೯ ದಾಷ್ಟೀಯ ಶಿಕ್ಷಣವೂ, ವಿಜ್ಞಾನವೂ ಶ್ರೀ ಪಾ ರಾ ರಾವ ಎ, ಬಿ ಎಸ್ ಸಿ, ಮದ್ರಾಸು
೧೦ ಪ್ರತ್ರಿಯಾಜನ ಬೆಹಲಿಯ ಲಾಭ (ಕಥಾನಕ) ಎ ವಿ ಕಟಾವಿ ಶಾಸ್ತ್ರಿ, ಬೆಂಗಳೂರ.

ಇವಲ್ಲದೆ ಅನೇಕ ವಿದ್ವಾಂಸರ ಲೇಖಗಳೂ ಹೊಸ ಹೊಗದ ಕವಿಗಳ ರಸಗವಿತೆಗಳೂ, ಪ್ರಪಂಚ ಪರಿಚಯ, ಜೇನಹುಟ್ಟು ಬಿಡಿನುಡಿಗಳೂ ಇರುವವು

ಇದರಲ್ಲಿ ಚಾಲುಕ್ಯ ಶಿಲ್ಪದ ಮತ್ತು ಮಹಾತ್ಮಾ ... ನವರ ... ಚಿತ್ರಗಳು ಇರುವವು ನೋಡಿ ಸಂತೋಷಪಡಿರಿ

ವಾರ್ಷಿಕ ವರ್ಗಣಿ ೫—೮—೦ ಮಾತ್ರ. ಮಾದರಿ ಮಾಡಲು ... ಯಿಂದ ಕಳಿಸಲಾಗುವದಿಲ್ಲ.

ಕಾರ್ಯದರ್ಶಿ, ಜಯ ಕರ್ನಾಟಕ, ಸಾಧನಕೇರಿ, ಧಾರವಾಡ.

ಮನೆ ಕಟ್ಟುವವರಿಗೆ ಸುಸಂಧಿಯು.



ಮೇಲಂತಸ್ತಿಗೆ ಶೋಭೆ ಬರುವದಕ್ಕೆ ನಾನಾ ತರ ನಕ್ಷೀ ಕೊರೆಯಲ್ಪಟ್ಟ ಬೀಡಿನ ಕಟಾಂಜನಗಳೂ, ಹೂದೋಟ, ಒಳಂಗಳ, ಉಪ್ಪರಿಗೆ, ದಿವಾನಖಾನೆ ಮೊದಲಾದ ಸ್ಥಳಗಳಲ್ಲಿ ವಿಶ್ರಾಂತಿಗೊಳ್ಳುವದಕ್ಕೆ ತಕ್ಕ ಬಾಕುಗಳೂ ಕಿರ್ಲೋಸ್ಕರ ಕಾರಖಾನೆಯಲ್ಲಿ ಸೌಕರ್ಯದಿಂದ ದೊರೆಯುತ್ತವೆ ಪತ್ರ ಬರೆದು 'ಚಿ' ಕ್ಯಾಟಲಾಗು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ.)

ತ್ವರೆ ಮಾಡಿರಿ ! ತ್ವರೆ ಮಾಡಿರಿ !!

ವಿದ್ವಜ್ಜನಪರಿಶೋಧಿತ ಯಜುರ್ವೇದೀಯ

ಬ್ರಹ್ಮಕರ್ಮಸಮುಚ್ಚಯ

ಪುಸ್ತಕ.

ಬೌಧಾಯನೀಯ ಸ್ವರಸಹಿತ ಸನಿರ್ಣಯ ಗೃಹ್ಯಕರ್ಮಸಮುಚ್ಚಯವೆಂಬ ಪ್ರಯೋಗ ಪುಸ್ತಕವು ಬರುವ ವರ್ಷಪ್ರತಿಪದೆಗೆ (೧) ಸಂಪುಟವು ಮಾರಾಟಕ್ಕೆ ಸಿದ್ಧವಾಗುವದು. ಪೂರ್ಣ ಪುಸ್ತಕದ ಕ್ರಯ ರೂಪಾಯಿ ೧೬—೦—೦. ಬೇಕಾದವರು ೧—೧—೧೯೩೪ ರ ಒಳಗೆ ಎಡ್ವಾನ್ಸ ರೂಪಾಯಿ ೩—೦—೦ ಕಳುಹಿ ಹೆಸರು ದಾಖಲ ಮಾಡಿಸಿದ್ದಲ್ಲಿ ಅಂಥವರಿಗೆ ಪುಸ್ತಕವು ೧೨ ರೂಪಾಯಿ ಕಿಮ್ಮತಿಗೆ ದೊರೆಯುವದು. ಗ್ರಾಹಕರು ತ್ವರೆ ಮಾಡಬೇಕು.

ಪತ್ತೆ — **ಗ್ರಂಥ ಪ್ರಚಾರಕ ಸಂಘ,**

ಶ್ರೀ ಕ್ಷೇತ್ರ ಗೋಕರ್ಣ.

ಜಿಲ್ಲಾ :- ಉತ್ತರ ಕಾನಡಾ.

ಬಹು] ಪ್ರಸಿದ್ಧ ಶಾಯಿ. [ಅಗ

ಒಣ್ಣ ಬಾಕಿಗಳಲ್ಲಿ ಪಸಿದ್ಧಪಟ್ಟ ನೀಲಿ, ಕಪ್ಪು, ಕೆಂಪು, ಜಾಂಬಳಿ, ಪುಡಿ ಮತ್ತು ಗುಳಿಗಗಳು ೧೦೦ ಕ್ಕೆ ೦—೧೦—೦. ಒಂದೇ ಸರ್ತಿ ೧೦೦೦ ತೆಗೆದುಕೊಳ್ಳುವವಗೆ ೫—೮—೦. ಮತ್ತು ೫೦೦ ಕ್ಕೆ ೨—೧೨—೦ ಟಪಾಲ ಖರ್ಚ ಮಾಫ

ಪತ್ತೆ:— ಎಸ್. ವ್ಹಿ. ಭಾಗ್ವತ.

ಪೊ ಹೆಗಡೆ, ಉತ್ತರ ಕಾನಡಾ.

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಪತ್ತಿ ಕೆಳಗಿನ ಪತ್ತೆಗೆ ಮುಕ್ತಾ ಶಿಕ್ಕಿ ತಿಳಕೊಳ್ಳಬಹುದು

ಪುರುಷೋತ್ತಮ ಲಕ್ಷ್ಮಣಯ್ಯ ಕ್ಯಾನಭಾಗ

ಹೆಗಡೇಕರ, ದುಕಾನ, ಕುಮಟಾ.

ಶುದ್ಧ ಖಾದಿ

ವಿಕ್ರಿಗೆ ತಯಾರ.

ಹೊನ್ನಾವರ ತಾಲೂಕಾ ಕಾಂಗ್ರೆಸ ಕಮಿಟಿಯಿಂದ ಕೈಮಗ್ಗದ ಕೈರಾಟಿಯ ಶುದ್ಧ ನೂಲಿನ ಖಾದಿ ಮಾರಾಟಕ್ಕೆ ಕಾಂಗ್ರೆಸ ಆಫೀಸಿನಲ್ಲಿ ಸಿಗುವದು.

ಹೊನ್ನಾವರ, } ಸೆಕ್ರೆಟರಿ,
೧೦—೧೨—೩೩ } ತಾ. ಕಾ. ಕಮಿಟಿ, ಹೊನ್ನಾವರ

ಮೂರ್ತಿಗಳು ಬೇಕೋ?

ನಮ್ಮಲ್ಲಿ ಭಂಗಾರ, ಬೆಳ್ಳಿ, ಪಂಚಧಾತು ಹಿತ್ತಾಳಿ, ತಾಮ್ರ ವ ಕರೇಶಿಲೆಯ ಮೂರ್ತಿಗಳೂ, ಇದಲ್ಲದೆ ನಾಣಪೀಠಗಳೂ, ಪ್ರಭಾವಳಿಗಳೂ, ಈಶ್ವರ ಮುಖವಟಗಳೂ, ನಾಗಾಭರಣಗಳೂ, ಕವಚುಗಳೂ ವ ಯಾವದೇ ತರದ ಪ್ರತಿಮೆಗಳೂ ನಮ್ಮಲ್ಲಿ ಯೋಗ್ಯ ದರಕ್ಕೆ ವ ಯೋಗ್ಯ ಹೊತ್ತಿಗೆ ಮಾಡಿ ಕೊಡಲ್ಪಡುವವು. ಬೇಕಾದವರು ಪ್ರತ್ಯಕ್ಷವಾಗಿ ಮಾಡಿ ಯಾ ಸಮಕ್ಷ ಬಂದು ದರವಾರ ತಿಳಕೊಳ್ಳಬಹುದು.

ಪತ್ತೆ:— **ನಾರಾಯಣ ಹುವಯ್ಯ ಶೇಟ,**

ಗುಡಗಾರ, ಗುಜರಗಲ್ಲಿ, ಕುಮಟಾ

(ಉ. ಕಾನಡಾ)

Printed and Published by Krishnarao Keshav Shenvi (Editor) at his Star of Kanara Press, Kumta.

ug. No. B 1270 — Thursday, 28th June 1923.

ವರ್ಷ ೭. — ಸಂಚಿಕೆ ೩೭.

ಕಾನಡಾವೃತ್ತ.

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ:-

ಕುಮಟೆಯಲ್ಲಿ ಆಗಾವು ರೂಪಾಯಿ 2-4-0.
ಮನೆಯವರ್ದರಿಯಿಂದ ರೂ. 3-0-0
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1 0

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಪ್ರಾಕ್ಯಾಪಿನ (೧೫ ಎಮ್‌ಉದ್ದ) ಆ ಸಾಲುಗಳ ವರೆಗೆ ರೂ. 1-0-0. ಅನಂತ ಪ್ರತಿ ಸಾಲಿಗೆ 0-2-0. ಹತಿ ಂಗಡ ಸಾಲು ಎಷ್ಟು ಹೋಕದಿರುವದೋ ಆ ಮಾತ್ರದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಖಾಸ ಜಾಹಿರಾತುಗಳ ಬಗ್ಗೆ ಪತ್ರವ್ಯಾರ ಯಾ ಸಮಕ್ಷ ತಿಳಿಸಲ್ಪಡುವದು.

(ಕುಮಟಾ— ಕಾನಡಾವೃತ್ತ, ಗುರುವಾರ, ತಾರೀಖು ೨೮ ನಾಹೆ ಜೂನ ಸನ್ ೧೯೨೩ ನೇ ಇಸವಿ.)

हिंदुस्थानांतील रहिवाशांस ज्याप्रमाणे हिंदुस्थानची हवा मानमानवे हें औषध हिंदुस्थानांतील लोकांस ज्यास्त फायदेशीर आहे.

द्राक्षासव- { दीड रत्तलची किंमत २ रुपये;

रामबाण औषधें

सर्दी घालविणारें,
भूक वाढविणारें,
शौच्यास साफ करणारें,
झोप आणणारें,
शक्ति देणारें,
तेजस्वीपणा आणणारें,

पिण्यास रुचिकर.

कॅटलाग मागवा,

झंडु फार्मास्युटिकल वर्क्स लिमिटेड,
मुंबई नं. १३

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ವಿಷಯಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ.
ವಾ. ವರ್ಗಣಿ ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ.
(೧) ಗ್ರೀಸ ದೇಶದ ಗಾಂಧಿ ೧ನೇ ಭಾಗ ಬೆಲೆ ೦-೬-೦ (೨) ಸದರ ೨ನೇ ಭಾಗ ೦-೫-೦ (೩) ಸ್ವಾತಂತ್ರ್ಯಸಾಧನೆ ೦-೫-೦ (೪) ಗುರು-ಹಿರಿಯರೂ, ಬಂಧು-ಭಗಿನಿಯರೂ ೦ ೫-೦.

ವಾ. ಅ. ಹೊದ್ದೆ,
ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ,

ಸಾಧನ.

ಧಾರ್ಮಿಕ, ನೈತಿಕ, ರಾಜಕೀಯ ವಿಷಯಗಳನ್ನೂ, ಸುಂದರವಾದ ನಾಟಕ ಕಾದಂಬರಿಗಳನ್ನೂ ಒಳಗೊಂಡಿರುವ ಸಾಧನ ಮಾಸಪತ್ರಿಕೆಯು ಬರುವ ಪ್ರತಿ ತಿಂಗಳಲ್ಲಿ ತಪ್ಪದೆ ಪ್ರಕಟವಾಗುವದು. ವಾರ್ಷಿಕ ವರ್ಗಣಿ ಅಂಚೆವೆಚ್ಚ ಸೇರಿ ೨ ರೂಪಾಯಿ. ವ್ಹಿ. ಪಿ. ಚಂದಾದಾರರಾಗಲಿಚ್ಛಿಸುವವರು ಕೆಳಗಿನ ಪತ್ತೆಗೆ ಕಾಗದ ಬರೆಯತಕ್ಕದ್ದು.

ಗಣಪತಿ ಶಂಕರ ಭಟ್ಟ,
ಸಂಪಾದಕ— 'ಸಾಧನಪತ್ರಿಕಾ,'
ಪೋಸ್ಟ ಕಕೇರಿ. (ಜಿ. ಕಾರವಾರ.)

ಸವಲತು.

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಗಳಿಂದ ಸಣ್ಣ-ದೊಡ್ಡ ಪುಸ್ತಕಗಳೂ, ಕೆಟಲಾಗುಗಳೂ, ಜಾಹೀರಾತುಗಳೂ, ಲಗ್ನಪತ್ರಿಕೆಗಳೂ ವ ಇತರೇ ಕಾಗದ-ಪತ್ರಗಳೂ, ಬಹಳೇ ಸವಲತ್ತಿಯ ದರಗಳಿಂದ ಬೇಕಾದ ಬಣ್ಣಗಳಿಂದ ಸ್ವಚ್ಛವಾಗಿಯೂ, ಅಂದವಾಗಿಯೂ ಛಾಪಿಸಿ ಕೊಡಲ್ಪಡುವವು. ಬೇಕಾದವರು ಕೆಳಗಿನ ಪತ್ತೆಯ ಮೇಲೆ ದರವಾರ ತಿಳುಕೊಳ್ಳಬಹುದು.
ಪತ್ತೆ:— **ಕೃಷ್ಣಾ ಕೇಶವ ಶಾನಭಾಗ,**
ಮಾಲಕ,
ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ.

ಎಲ್ಲ ತರದ ಜ್ವರಗಳಮೇಲೆ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ, ಕೈಕ್ಕ, ಬಂಗಲಿ, ಅಥವಾ ದೂಷಿತ ಹವೆಯಿಂದ ಬರುವ ಸಾದಾ ವಿಷಾರೀ ಅಥವಾ ಇತರ ಜ್ವರಗಳೂ, ಇನಫ್ಲುಎಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನ್ಯಾನದ ದುಷ್ಪರಿಣಾಮರಹಿತ ಕೇವಲ ಸನ್ನತಿಯ ಈ ಮದ್ದು ಸೇವಿಸಿದರೆ ಅಶಕ್ತತೆಯಾಗದೆ, ಬೆವರು ಬಂದು ಜ್ವರ ಇಳಿಯುತ್ತದೆ. ಹಾಗು ರೋಗಿಯು ತರಿತ ವಾಸಿಯಾಗುತ್ತಾನೆ.

೪ ಔಂಸ ಬಾಟ್ಲಿ ಕಿಂಮತ ರೂ. ೧-೦-೦.
ಇದರ ಹೊರತು ಇನ್ನೂ ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ, ಉಚ್ಚ ಪ್ರತಿಯ ಕೊಲನ ವೊಟರ, ಲವೆಂಡರ ಇತ್ಯಾದಿ ಸಾಮಗ್ರಿಗಳು ಅಲೆಂಬಿಕದ ಕಾರಖಾನೆಯಲ್ಲಿ ತಯಾರಾಗುತ್ತವೆ. ಮರಾಠಿ ಕೆಟಲಾಗು ತರಿಸಿರಿ.

ಅಲೆಂಬಿಕ್ ಕೆಮಿಕಲ್ ವರ್ಕ್ಸ,
ಕಂಪನಿ, ಲಿಮಿಟೆಡ್.
ನಂ ೫೦, ಪ್ರಿನ್ಸೆಸ್‌ಸ್ಟ್ರೀಟ, ಮುಂಬಯಿ.

अलेंबिक केमिकल वर्क्स कं० लि०
नं. ५० प्रिन्सेस स्ट्रीट मुंबई.

ಶುದ್ಧ ಖದ್ದರ್ ರೇಶ್ಮಿ ಮಡಿಗಳು.

ಸುಲಭ ಕ್ರಯಕ್ಕೆ ಖಾತ್ರಿಯುಳ್ಳ ಎಲ್ಲಾ ರಂಗುಗಳ ಧೋತ್ರಗಳಿಗೆ ಒರದ ಕ್ರಯಕ್ಕೆ ದೊರೆಯುವದು.
೧೮ ಮೊಳ ಉದ್ದ ೨॥ ಅಗಲ ರೂ. ೨೩ ರಿಂದ ೨೫ ವರೆಗೆ
೧೬ „ „ ೨॥ „ „ ೨೦ — ೩೦ „
೮ „ „ ೨॥ „ „ ೯ — ೧೫ „
೬ „ „ ೨॥ „ „ ೭ — ೧೧ „

S U N. & CO.
BENARES CITY.

ಅಂಗಿ ಬಟ್ಟೆಗಳು ೧೮ ಮೊಳ ×೨ ಮೊಳ ರೂಪ್ಯಾ ೧೮ ರಿಂದ ೩೦ವರೆಗೆ. ಕೋಟ ೧೨ ಮೊಳ ×೧॥ ಮೊಳ ಅಗಲ ರೂಪ್ಯಾ ೧೦ ರಿಂದ ೧೫ ವರೆಗೆ. ಜೀನ್‌ಜಾನ್ ೧೪ ಮೊಳ ×೨ ಮೊಳ ರೂ. ೨೪ ರಿಂದ ೩೫ ವರೆಗೆ. ಇವುಗಳಲ್ಲದೆ ಕಾಶೀ ಪೀತಾಂಬರ, ಕಾಶ್ಮೀರ್ ಶಾಲು, ರುದ್ರಾಕ್ಷಿ, ಜಾಗಂಟೆ, ತಾಳ, ಕಾಶ್ಮೀರ್ ಹಾನಿ, ಆಟಿಕೆ ಸಾಮಾನುಗಳು, ದೇವರ ಮತ್ತು ಗಾಂಧಿ ಮುಂತಾದವರ ಪಠಗಳಿರುವ ಉಂಗುರಗಳ ಮತ್ತು ಇನ್ನೂ ಅನೇಕ ಸಾಮಾನುಗಳ ಕ್ಯಾಟಲಾಗ್ ಇನಾಂ.
ವಿಳಾಸ:— ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

GLAXO:- FRESH STOCK. NEW BRAND. *a food for infants and invalids.*

Kalmegh :- *Well-tried remedy in Liver complaints especially of children.*

Syrup of Vasaka :- *Highly efficacious in cold, cough, crough and bronchitis.*

Besides we have in stock other patent medicines, Thermometres, Glycerine Syringes etc.,

Orders will be executed by V. P. P.

The New Emporium
Honavar. (N. Kanara.)

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. (ರಿಜಿಸ್ಟರ್ಡ)

ಮೃದುವಾದ ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವದೆಂದರೆ:

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ತೊಡೆದುಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ಕಡಿಮೆಯಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಕೂಡಿಯೇ ತೊಡೆದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು. ಅದಲ್ಲದೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ಕಳೆಯಿಸಿ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇ ಒಂದು ಬಾರಿ ಈ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಇದಕ್ಕೆ ಮೈಸೂರು ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ನೂರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ — ಸೀಸೆಗೆ ರೂಪಾಯಿ 1 0 0, ಸೀಸೆ 3ಕ್ಕೆ ರೂಪಾಯಿ 2 10 0, ವಿ.ಪಿ. ಖರ್ಚ 0-14 0

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಪರಿಮಳ ಶಾಸ್ತ್ರ ಚತುರರಾದ ಪರಿಣತರು ಅತ್ಯುತ್ತಮವಾಗಿ ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ತಯಾರಿಸಿದ ವಾಸನೆಯು ಇದರಲ್ಲಿ ಮರಿದಿದೆ. (ಆಲ್ಕೋಹೋಲ್) ಇಲ್ಲದಿರುವ ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ವಸ್ತ್ರವು ಸ್ವರ್ಗೀಯವಾದ ಸುಗಂಧದಿಂದ ದಿನವೆಲ್ಲಾ ಪರಿಮಳಿತವಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋ-ದಿಲ್ ಬಹಾರ ಸುಗಂಧದ ಆವೆಲ್ಲವುಗಳನ್ನು ಮೀರಿ ಮನಸ್ಸನ್ನು ಪ್ರಫುಲ್ಲಿತಗೊಳಿಸುವದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆ 1 ಕ್ಕೆ 0-8 0 1 ಡ್ರಾಮಿನ (ಒಂದು) ಸೀಸೆ 1 ಕ್ಕೆ 0-12-0 ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2 0-0 ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0

Address **The Anglo Indian Drug & Chemical Co,**
16 Market, **BOMBAY. 2**

ಒಪ್ಪಿಗೆ ಮ್ಯಾಲು ಹಣ ಕೊಡಿರಿ ಹರಿಗ್ಗಯಿರಿ

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳೆಸಿ ಪುರುಷರಿಗೆ ಸ್ತ್ರೀ ವಿಷಯವಾಗಿಯೂ ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷಯುಕ್ತ ಶಕ್ತಿಯನ್ನು ಉಂಟುಮಾಡಿ ದೀರ್ಘ ದಿನಗಳ ಜಡತನವನ್ನೂ ರೋಗಗಳನ್ನೂ ದೂರಪಡಿಸಿ ಆಯುರ್ದೋಷವನ್ನೂ ರತಿಸುಖ ಪ್ರಗಳಿಸಾದ ಸಂತೋಷಫಲವನ್ನು ದೊರಕಿಸುವ ಕ್ರೀಡಾ ಶಕ್ತಿಯ ಉತ್ಸಾಹವನ್ನೂ ಸಂಭೋಗದಲ್ಲಿ ತೃಪ್ತಿಯನ್ನು, ಸೌಖ್ಯವನ್ನೂ ಕೊಟ್ಟು ಮನಸ್ಸಿನ ದೃಢತೆಯನ್ನೂ ಯೌವನದ ಕಳೆಯನ್ನೂ ದೊರಕಿಸಿ ಮುದಿತನವನ್ನು ನೀಗಿ ಬಲವನ್ನು ಉಂಟುಮಾಡುವವು. ಮೃತ್ಯುವನ್ನು ನಿರಾಕರಿಸಿ ಒಗಟಿಗೆಯ ರೋಗಗಳನ್ನು ನಾಶಮಾಡುವವು. ಜೀರ್ಣಜ್ವರ ಮಂದಾಗ್ನಿ ಶುಕ್ಲಸ್ರಾವ ಮೊದಲಾದ ಇವುಗಳನ್ನು ಬಿಡದೇ ನಾಶಮಾಡುವವು. ಇವು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, ದೇಶಕಾಲಗಳಿಂದಲೂ, ಆಹಾರಗಳಿಂದಲೂ ಸ್ತ್ರೀಯರಿಂದಲೂ ದೇಹಪ್ರಕೃತಿಯಿಂದಲೂ ಚಿಕ್ಕವಯಸ್ಸಿನಲ್ಲಿ ನಡಿಸುವ ಬಲಾತ್ಕಾರದ ಹಸ್ತಘರ್ಷಣದಿಂದಲೂ ಅತಿವಿಷಯೋಪಭೋಗದಿಂದಲೂ ಇಂದ್ರಿಯ ಶಿಥಿಲವೂ, ತೆಳುವೂ, ನಿಸ್ತೇಜವೂ ಆಗಿ ಯತ್ನವಿಲ್ಲದೆ ಸ್ಖಲನವಾಗುವದು. ಒಂದೊಂದು ಸಾರಿ ಮೂತ್ರದಲ್ಲಿಯೂ ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತೆ ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈಬಿಸುವು ನಿದ್ರೆಯಲ್ಲಿ ಬೀಕರವಾದ ಸ್ವಪ್ನ, ಅರಿವು, ಮರುವು ಮತ್ತು ಶರೀರದ ಹಾಂಗೂ ಮನಸ್ಸಿನ ಚೇತನ ಕುಂದಿ ಹೋಗುವದು, ಇವೆಲ್ಲವುಗಳಮೇಲೆ ರಾಮಬಾಣದಂತಿರುವದು. ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ ೧॥ ನಂ ೧ ನಂ ೨ ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಂತ ೬೦ ಗುಳಿಗೆಗಳುಳ್ಳ ಸೀಸೆಗಳಿಗೆ ರೂ ೩ ಪೋಸ್ಟೇಜ ಬೇರೆ

ಎಸ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ್,
ಕೆಕೇರಿ (ಕೆನರಾ)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧ ರಾಗದ ಕೈಪೆಟ್ಟಿಗೆ ಕಿಂ ೨೦ ೪೦ ೬೫ ೫೦ ೬೦

೨ „ ಕಾಲು ಪೆಟಿಗೆ ಕಿಂ ೬೫ ೭೫, ೧೪೦ ೬೦

೩ ತಬಲೆ ಜೋಡಿ ಕಿಂ ೧೩ ೧೫ ೧೮ ೨೦

೪ ಹ ಮೋನಿಯಂ ಗ್ಯಾರಿ ಕಿಂ ೧೧ ತಬಲೆ ಗ್ರಂಥ ಕಿಂ ೧೨ ೮

ವಿಶೇಷ ಮಾಹಿತಿ ಬಗ್ಗೆ ಸಚಿತ್ರ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ – ಗೋಪಾಳ ಸಖಾರಾಮ ಆಣಿ ಕಂಪನಿ, ನಂ ೬೬೩

ಕಾಳಬಾದೇವಿ ರೋಡ, ಮುಂಬಯಿ

ನೋಟೀಸು.

ಕೆಳಗೆ ಸಹಿ ಮಾಡುವವರ ಕಡೆಯಿಂದಾ—

ಗದಿಗೆಪ್ಪ ಗೌಡಾ ವ ಕಲ್ಲನ ಗೌಡಾ ತಂದೆ ಶಿವನ ಗೌಡಾ ಪಾಟೀಲ ಸಾ॥ ಕಾಕೂರ ಇವರಿಗೆ ತಿಳಿಯುಬೇಕಲ್ಲಾ - ನೀವು ನನ್ನ ದಾಯಾದ್ಯರಿದ್ದು, ಈ ವರೆಗ ನಮ್ಮ ಘರಾಣೆ ಏಕತ್ರ ಅದೆ, ಎಂದೂ ವಿಭಕ್ತ ಆಗಲಿಲ್ಲಾ ಈ ಆಸ್ತಿಯಲ್ಲಿ ಸಮ ಅರ್ಧ ಹಿಸೆಕ್ಕೆ ನನ್ನ ಮಾಲ್ಕಿ ಅದೆ ನನ್ನ ತಾಯಿ—ತಂದೆಗಳು ಅಪ್ರಾಯಸ್ತಪಣದಲ್ಲಿ ಅವಿಭಕ್ತರಾಗಿಯೇ ಮೃತರಾದ್ದರಿಂದ ಆಸ್ತಿ ವಹಿವಾಟ ವ ನನಗೆ ಬರದೆ ಉಳಿಯಿತ ನನಗೆ ಈಗ ಪ್ರಾಯ ಬಂದಿದ್ದು, ಈ ವರೆಗೆ ಲಗ್ನ ಆಗಲಿಲ್ಲಾ ಆಸ್ತಿಯ ಫಾಯದೇ ಏನೂ ನನಗೆ ಸಿಕ್ಕಿಲ್ಲಾ ಹಿಗಿರತಾ ನೀವು ನನ್ನನ್ನು ಮುಳುಗಿಸುವ ಇರಾದೆಯಿಂದ ಲೋಕರ ಸಾಲಾ ಬೆಳಿಸಿ, ಆಸ್ತಿ ಪರಾಧೀನ ಮಾಡುವಿರಾಗಿ ಕೇಳಿದ್ದೆನೆ ಆಸ್ತಿಯ ಉತ್ಪನ್ನ ಬಾರೀ ಇದ್ದು, ಸಾಲಾ ಮಾಡಲಿಕ್ಕೆ ಕಾರಣ ಇಲ್ಲಾ ಅದ್ದರಿಂದ ಈ ಸಾಲಕ್ಕೆ ವ ಯಾವ ತರದ ಬೋಜಾಕ್ಕೆ ನಾನು ಜವಾಬದಾರನಲ್ಲಾ ಜದ ವಿರುದ್ಧ ವರ್ತನೂಕ ಆದರೆ ಕಾಯಿದೇ ಪ್ರಕಾರ ಇಲಾಜು ಆಗೀತು ಈ ನೋಟೀಸು ಮುಟ್ಟಿದ ೮ ದಿವಸಗಳಲ್ಲಿ ನನ್ನ ಪಾಲಿನ ಸ್ಥಾವರ— ಜಂಗಮ ಆಸ್ತಿ ವ ದೇಶ ರಿವಾಜ ಪ್ರಕಾರ ನನ್ನ ಲಗ್ನದ ಖರ್ಚು ಕೊಟ್ಟು, ಹಿಸೇದ ಯಾವತ್ತೂ ಕೆಲಸ ಮುಗಿಸಿಬಿಡಬೇಕು ತಪ್ಪಿದರೆ ಕಾಯಿದೇಶೀರ ಇಲಾಜ ಮಾಡಲಾಗುವದು

ಯಾವತ್ತೂ ಜನರಿಗೆ ತಿಳಿಯಬೆಕಲ್ಲಾ - ಮೇಲಿನ ನೋಟೀಸು ಮುಟ್ಟಿಕೊಂಡು ತಿಳಿದು, ಸದರಿಯವರು ಮಾಡುವ ವ್ಯವಹಾರಕ್ಕೆ ಯಾರೂ ಒಪ್ಪತಕ್ಕದ್ದಲ್ಲಾ ಜರ ವ್ಯವಹಾರ ಮಾಡಿದ್ದರೆ ಅದಕ್ಕೆ ನನ್ನ ಜವಾಬದಾರಿಯಿಲ್ಲಾ ತಿಳಿಯುವದು ಈ ನೋಟೀಸಿನ ಖರ್ಚು ವ ಕಾಯಿದೇಶೀರ ಇಲಾಜ ಮಾಡಬೇಕಾದ ಪ್ರಸಂಗ ಬಿದ್ದಲ್ಲಿ ಆ ಖರ್ಚು ಗದಿಗೆಪ್ಪ ಗೌಡಾ ವ ಕಲ್ಲನ ಗೌಡಾ ಇವರ ತಲೆ ಮೇಲೆ ಅದೆ ತಿಳಿಯುವದು.

(ಸಹಿ) ಒಸವನ ಗೌಡಾ ತಂದೆ ಶಿವಲಿಂಗಪ್ಪ ಗೌಡಾ

ಸುಧಾಂಜನ.

ಅಂಜನುಗಳಿಗೆಲ್ಲ ಅರಸು.

ತಲೆಶೂಲಿ, ವಾತ ವೇದನೆ, ಕೆಮ್ಮು, ಹಲ್ಲು ನೋವು ಇತ್ಯಾದಿಗಳಿಗೆ ಕ್ಷಿಪ್ರ ಗುಣಕಾರಿ ಮದ್ದು ಬೆಲೆ ೭ ಆಣೆ ಮಾತ್ರ ವ್ಯಾಪಾರಿಗಳಿಗೆ ವಿಶೇಷ ಸವಲತು ಹೆಚ್ಚಿನ ಮಾಹಿತಿ ಏಜಂಟರಿಂದ

ಏಜಂಟ್ಸ್ — **ನಾಗಕೇಟ್ಟಿ ಬ್ರದರ್ಸ್,**

ಕುಮಟಾ. (ಜಿಲ್ಲಾ ಕಾರವಾರ)

ಒಂದು ಸಂಭಾಷಣೆ.

ದೇಶಭಕ್ತ ರಾಜಗೋಪಾಲಾಚಾರ್ಯರು ಈ ಕೆಳಗಿನ ನಿಜವಾದ ಸಂಭಾಷಣೆಯನ್ನು ಯಂಗ್ ಇಂಡಿಯಾ ಪತ್ರದಲ್ಲಿ ಕೊಟ್ಟಿರುವರು —

ಮಿತ್ರ— ದೇಶಬಂಧು ದಾಸರ ಕಾರ್ಯಕ್ರಮವೇ ಸರಿಯಾದುದೆಂದು ನನಗೆ ತೋರುತ್ತದೆ. ಅದನ್ನು ನಿಮ್ಮೊಡನೆ ಚರ್ಚಿಸಬೇಕೆಂದು ನನಗೆ ಮನಸ್ಸಿದೆ.

ನಾನು— ನನಗೆ ದೇ॥ ದಾಸರ ಕಾರ್ಯಕ್ರಮವು ಸರಿಯಾಗಿ ಅರ್ಥವಾಗಲಿಲ್ಲ ನಿಮ್ಮ ಹತ್ತಿರ ಕೆಲವು ಪ್ರಶ್ನೆಗಳನ್ನು ಕೇಳಲೋ ?

ಮಿತ್ರ— ಆಗಬಹುದು

ನಾನು— ನಮ್ಮಲ್ಲಿ ಕೆಲವರು ಮಾತ್ರ ಕೌನ್ಸಿಲುಗಳಿಗೆ ಹೋಗಿ ಇತರರು ಹಳೇ ಕಾರ್ಯಕ್ರಮದಲ್ಲಿ ನಂಬಿಗೆಯುಳ್ಳವರಾಗಿರುವದು ನಿಮಗೆ ಯೋಗ್ಯವೆಂದು ತೋರುತ್ತದೋ, ದೇ॥ ದಾಸರ ಕಾರ್ಯಕ್ರಮವನ್ನೇ ಪ್ರತಿಯೊಬ್ಬರೂ ಅಂಗೀಕರಿಸಬೇಕೆಂದು ತೋರುತ್ತದೋ ?

ಮಿತ್ರ— ಎಲ್ಲರೂ — ಇಡೀ ರಾಷ್ಟ್ರೀಯ ಸಭೆಯು — ಕೌನ್ಸಿಲು ಕಾರ್ಯಕ್ರಮವನ್ನು ಸ್ವೀಕರಿಸಬೇಕೆಂದು ನನ್ನ ಅಭಿಪ್ರಾಯ.

ನಾನು— ನಮ್ಮೆಲ್ಲರ ಪರವಾಗಿ ದೇ॥ ದಾಸರು ಕೆಲವು ಹಕ್ಕುಗಳನ್ನು ಕೇಳುವರೆಂದು ನಿಮಗೆ ಗೊತ್ತಿರಬಹುದು ರಾಷ್ಟ್ರೀಯ ಸಭೆಯು ಯಾವ ಉದ್ದೇಶಗಳನ್ನು ಈಗ ಇಟ್ಟುಕೊಂಡಿದೆಯೋ (ಸ್ವರಾಜ್ಯ ಮತ್ತು ಖಿಲಾಫತ್ತು) ಆ ಉದ್ದೇಶಗಳಿಗಾಗಿ ಅವರು ಕಾದಾಡುವರೋ, ಅಥವಾ ಇದಕ್ಕಿಂತ ಕಡಿಮೆಯಿಂದಲೇ ತೃಪ್ತರಾಗುವರೋ ?

ಮಿತ್ರ— ಕೆಲವಂಶಗಳಲ್ಲಿ ಕಡಿಮೆಯಾಗಬಹುದು.

ನಾನು— ಈಗ ಸ್ವರಾಜ್ಯದ ಪ್ರಶ್ನೆಯನ್ನು ವಿಚಾರಿಸುವ ರಾಷ್ಟ್ರೀಯ ಸಭೆಯು ಸಂಪೂರ್ಣ ಸ್ವರಾಜ್ಯವನ್ನು ಕೇಳುತ್ತಿದೆ ಈ ವಿಷಯದಲ್ಲಿ ದೇ॥ ದಾಸರ ಕಾರ್ಯಕ್ರಮದಲ್ಲಿ ಯಾವ ಬದಲಾವಣೆಯಿರಬಹುದು ?

— ಸಂಪೂರ್ಣ ಸ್ವರಾಜ್ಯವನ್ನು ನಾವು ಕೇಳಲಿಕ್ಕಿಲ್ಲ. ಬಹುಶಃ ಪ್ರಾಂತಿಕ ಸ್ವಾತಂತ್ರ್ಯ ಸೈನ್ಯ ಮತ್ತು ಪರದೇಶಗಳೊಡನೆ ಸಂಬಂಧ ಇವುಗಳಲ್ಲದೆ ಬೇರೆ ವಿಷಯಗಳಲ್ಲಿ ಪೂರ್ಣ ಸರಕಾರಕ್ಕೆ ಸ್ವತಂತ್ರ ಅಧಿಕಾರ—ಇವನ್ನು ಕೊಟ್ಟು ಇನ್ನು ಮುಂದಿನ ಅಭಿವೃದ್ಧಿಯ ಕುರಿತು ನಿಶ್ಚಿತ ಅವಧಿಯನ್ನು ಸೂಚಿಸಿದರೆ ನಾವು ತೃಪ್ತರಾಗಬೇಕಾಗುವದು

ನಾನು— ಖಿಲಾಫತ್ತಿನ ವಿಚಾರದಲ್ಲಿ ಹೇಗೆ ?

ಮಿತ್ರ— ಬಹುಶಃ ಅದನ್ನು ನಾವು ಬಿಟ್ಟುಬಿಡಬೇಕಾಗುವದು.

ನಾನು— ಸ್ವರಾಜ್ಯಕ್ಕಾಗಿ ಮಾಡುವ ಈ ಕೇಳಿಕೆಯು ಪಾರ್ಲಿಮೆಂಟಿನ ವರೆಗೆ ಹೋಗಬೇಕಲ್ಲವೇ?

ಮಿತ್ರ— ಹೌದು ವ್ಹೈಸರಾಯರ ಮತ್ತು ಸ್ಟೇಟು ಸೆಕ್ರೆಟರಿಯವರ ಮೂಲಕ ಹೋಗುವದು ಎಂದಿನ ಕ್ರಮ

ನಾನು— ಪ್ರತಿಯೊಬ್ಬರು ಅವಸರಮಾಡಿದರೂ ಈ ಉತ್ತರ ಬರಲಿಕ್ಕೆ ಸಮಯ ತಾಗುವುದು

ಮಿತ್ರ— ಹೌದು ಅದಕ್ಕೆ ಮೂರು ವರುಷಗಳು— ಅಂದರೆ ಹೊಸ ಎಸೆಂಬ್ಲಿಯ ಸಂಪೂರ್ಣ ಅವಧಿಯು, ತಾಗುವದೆಂದು ತೋರುತ್ತದೆ

ನಾನು— ಅಷ್ಟರವರೆಗೆ ಆರಿಸಿದ ಮೆಂಬರೆಲ್ಲರೂ ಕೌನ್ಸಿಲುಗಳಲ್ಲಿರಬೇಕೆಂದು ದೇ॥ ದಾಸರ ಕಾರ್ಯಕ್ರಮದಲ್ಲಿದೆಯಲ್ಲವೇ?

ಮಿತ್ರ— ಹೌದು.

ನಾನು— ಹೊಸತೊಂದು ಕೇಳಿಕೆಯನ್ನು ನಾವು ಮಾಡಿರುವಾಗ ನಾವು ಅದರ ಫಲಕ್ಕಾಗಿ ಕಾಯಬೇಕಲ್ಲದೆ, ಅದನ್ನು ನಿರಾಕರಿಸುವರೆಂದು ನಾವು ತಿಳಿಯುವುದು ಸರಿಯಾಗಲಾರದಲ್ಲವೇ?

ಮಿತ್ರ— ಹೌದು ಅದೇ ನನ್ನ ಅಭಿಪ್ರಾಯ

ನಾನು— ಅಷ್ಟರವರೆಗೆ ಎಸೆಂಬ್ಲಿಯಲ್ಲಿ ಮತ್ತು ಕೌನ್ಸಿಲಿನಲ್ಲಿ ನಿಮ್ಮ ಕಾರ್ಯಕ್ರಮವೇನು? ಒಳ್ಳೇ ಸೂಚನೆಗಳನ್ನು ಸಮರ್ಥಿಸಿಯೂ, ಕೆಟ್ಟ ಸೂಚನೆಗಳನ್ನು ವಿರೋಧಿಸಿಯೂ ನೀವು ಮುಂದುವರಿಯುವಿರೋ?

ಮಿತ್ರ— ಹೌದು.

ನಾನು— ಅಂದರೆ ಎಲ್ಲಾ ವಿಷಯಗಳಲ್ಲಿಯೂ, ನಾವು ಎಸೆಂಬ್ಲಿ ಮತ್ತು ಪ್ರಾಂತಿಕ ಕೌನ್ಸಿಲುಗಳಲ್ಲಿ ಭಾಗಿಗಳಾಗಬೇಕೆಂದು ನಿಮ್ಮ ಕೋರಿಕೆಯೆಂದು ತೋರುತ್ತದೆ.

ಮಿತ್ರ - ಹೌದು. ಆದರೆ ನಮ್ಮ ವರ್ತನವು ವ್ಹೈಸರಾಯರ ಮತ್ತು ಸರಕಾರದ ಭಾವದಮೇಲೆ ಹೊಂದಿರುವದು ಅವರು ನಮ್ಮ ಕಡೆಗಿರುವದಾದರೆ ನಾವು ಸರಿಯಾಗಿ ನಡೆಯುವೆವು. ಅವರು ನಮ್ಮನ್ನು ವಿರೋಧಿಸಿದರೆ ನಾವು ನಮ್ಮ ಮಾರ್ಗವನ್ನು ಬದಲಾಯಿಸುವೆವು.

ನಾನು— ವ್ಹೈಸರಾಯರೂ ಅವರ ಸರಕಾರವೂ ನಮ್ಮ ಕೇಳಿಕೆಯನ್ನು ಮುಂದಕ್ಕೆ ಕಳುಹಿಸಿ ತಮ್ಮ ಅಭಿಪ್ರಾಯಗಳನ್ನೂ, ಸೂಚನೆಗಳನ್ನೂ ತಿಳಿಸದೆ ಇದ್ದರೆ, ಪಾರ್ಲಿಮೆಂಟಿನವರು ನಮ್ಮ ವಿಜ್ಞಾಪನೆಯ ಇತ್ಯರ್ಥ ಮಾಡುವವರೆಗೆ ನಾವು ಕೌನ್ಸಿಲುಗಳ ಕಾರ್ಯಭಾರವನ್ನು ನಡೆಸುತ್ತಿರಬೇಕಲ್ಲವೇ?

ಮಿತ್ರ— ಹೌದು.

ನಾನು— ಇದಕ್ಕೂ, ಲಿಬರಲ್ ಪಕ್ಷದವರ ಕಾರ್ಯಕ್ರಮಕ್ಕೂ ಭೇದವೇನಾಯಿತು?

ಮಿತ್ರ— ಇಲ್ಲ ಭೇದವಿಲ್ಲ ಆದರೆ ಅವರಿಗೆ ಬ್ರಿಟಿಷ್ ಸರಕಾರದಲ್ಲಿ ನಂಬಿಗೆಯಿದೆ ನಮಗೆ ಇಲ್ಲ

ನಾನು— ಹಾಗಾದರೆ ನಮ್ಮ ಕೇಳಿಕೆಯನ್ನು ನಿರಾಕರಿಸಲಾಗುವದೆಂದು ಗೊತ್ತಿದ್ದೇ ಅದನ್ನು ಕಳುಹಿಸಬೇಕೆನ್ನುವಿರಾ? ಆದರೂ ಅದರ ಫಲವೇನಾಗಬಹುದೆಂದು ತಿಳಿಯುವವರೆ ಹಾಗೆ, ೩ ವರುಷಗಳವರೆಗೆ ಕಾದಿರಬೇಕು!

ಮಿತ್ರ— ಹೌದು, ನನಗೆ ಹಾಗೆ ತೋರುತ್ತದೆ.

ನಾನು— ಮೂರು ವರುಷಗಳ ವರೆಗೆ ಹೀಗೆ ಕಾಯುವದರ ಪ್ರಯೋಜನವಾದರೂ ಏನು?

ಮಿತ್ರ— ಅದರಿಂದ ನಮಗೆ ರಾಷ್ಟ್ರವನ್ನು ಬಲಪಡಿಸಲು ಸಮಯ ದೊರೆಯುವದು

ನಾನು— ಇದು ಮುಖ್ಯವಿರುತ್ತದೆ. ಈ ಕಾರ್ಯಕ್ರಮವನ್ನು ಮುಂದಿಡುವಾಗ ರಾಷ್ಟ್ರವನ್ನು ಬಲಪಡಿಸಲು ಸಮಯ ದೊರೆಯಬೇಕೆಂಬುದೇ ನಿಮ್ಮ ಮುಖ್ಯ ಉದ್ದೇಶವೋ?

ಮಿತ್ರ— ಹೌದು.

ನಾನು— ವಿಜ್ಞಾಪನೆಯನ್ನು ಕಳುಹಿಸಿ ಅದಕ್ಕೆ ಯಾವ ಉತ್ತರ ಬರುವದೆಂದು ಕಾಯುವದರಿಂದಲೂ, ಕಾಂಗ್ರೆಸ್ಸ್ ಪಕ್ಷದವರಂತೆಯೇ ಕೌನ್ಸಿಲುಗಳಲ್ಲಿ ಕೆಲಸ ಮಾಡುತ್ತಿರುವದರಿಂದಲೂ, ಜನರಲ್ಲಿ ಅದರಿಂದ ಏನಾದರೂ ದೊರೆಯುವುದೆಂಬ ನಂಬಿಗೆಯನ್ನುಂಟುಮಾಡಿದಂತಾಗುವದಿಲ್ಲವೇ ?

ಮಿತ್ರ— ಹೌದು

ನಾನು— ಜನರನ್ನು ಅವರ ಈಗಿನ ಚಳವಳಿಯಿಂದ ತಿರುಗಿಸಿ, ನ್ಯಾಯವಿಧಾಯಕ ಸಭೆಯ ಮೂಲಕ ಸಿಕ್ಕಬಹುದಾದ ಹಕ್ಕುಗಳನ್ನು ಆಶಿಸುವಂತೆ ಮಾಡುವದರಿಂದ ಅವರ ಸ್ವಾವಲಂಬನದಿಂದಲೇ ನಡೆಯುವ ಪ್ರಯತ್ನಗಳು ಹಿಂದೆ ಬೀಳುವವು

ಮಿತ್ರ— ಆದರೆ ಸರಕಾರಕ್ಕೂ, ನ್ಯಾಯವಿಧಾಯಕ ಸಭೆಯ ಸದಸ್ಯರಿಗೂ ನಡೆಯುವ ಯುದ್ಧಗಳ ಕಡೆಗೆ ದೃಷ್ಟಿಯಿಡುವದರಿಂದ ಅವರಿಗೆ ರಾಜಕೀಯ ಶಿಕ್ಷಣವು ದೊರೆಯುವದು

ನನಗೆ ನಗೆ ಬಂತು. ಆದರೆ ಮುಂದೆ ಕೇಳಿದೆನು

ನಾನು— ರಾಷ್ಟ್ರೀಯ ಶಾಲೆಗಳ ವಿಷಯದಲ್ಲಿ ನಮ್ಮ ಪ್ರತಿನಿಧಿಗಳೇನು ಮಾಡುವರೆಂದು ನಿಮ್ಮ ಅಭಿಪ್ರಾಯ ?

ಮಿತ್ರ— ಅವುಗಳಿಗೆ ಬೇಕಾದ ಗ್ರಾಂಟು (ಸಹಾಯ ದ್ರವ್ಯ) ಗಳನ್ನು ಕೊಡಿಸಿ, ಶಾಲೆಗಳಿಗೆ ಮಂಜೂರಾತಿಯನ್ನು ಪಡೆಯುವರು.

ನಾನು— ಆಗ ಅವು ಸರಕಾರಿ ಶಾಲೆಗಳಲ್ಲಿಯೇ ಸೇರಿ ಹೋಗುವವು

ಮಿತ್ರ— ಅದರಿಂದ ನಷ್ಟವೇನು ?

ನಾನು— ಹಾಗಾದರೆ ಕೌನ್ಸಿಲುಗಳ ಒಳ್ಳೇ ಉಪಯೋಗವನ್ನು ಮಾತ್ರ ಮಾಡಿಕೊಳ್ಳಬೇಕಾಗಿ ಪ್ರಯತ್ನಪಡುವದರಿಂದ ಮತ್ತು ಸ್ವಾರ್ಥತ್ಯಾಗದಿಂದ ಮಾತ್ರ ನಾವು ಇಷ್ಟವನ್ನು ಪ್ರಯೋಜನಗೊಳಿಸಬಹುದೆಂದು ನನ್ನ ಅಭಿಪ್ರಾಯ ನಿಮ್ಮ ಮತವಾದರೂ ಹೇಗೆ?

ಮಿತ್ರ— ಹೌದು, ಸ್ವಾರ್ಥತ್ಯಾಗವು ಅತೀ ಅಗತ್ಯ.

ನಾನು— ಜಯಾಪಜಯಗಳನ್ನು ಲೆಕ್ಕಿಸದೆ ನಾವು ನಮ್ಮ ಸ್ವಾತಂತ್ರ್ಯ ಯುದ್ಧದಲ್ಲಿ ಮುಂದರಿದರೆ ತರುಣರಿಗೆ ನ್ಯಾಯಮಾರ್ಗದಿಂದ ಬಲವು ಬರುವಂತೆ ಜನಾಂಗಕ್ಕೆ ಬಲವು ಪ್ರಾಪ್ತವಾಗುವದು. ನಾವು ಈ ಯುದ್ಧವನ್ನು ಬಿಟ್ಟು ನಮಗೆ ಶಿಕ್ಷೆಯ ಸಂಭವವಿಲ್ಲವೆಂದು ನಮಗೆ ಗೊತ್ತೇ ಇರುವ ಹಕ್ಕುಗಳನ್ನು ಕೌನ್ಸಿಲುಗಳ ಮೂಲಕ ಕೇಳುವದರಿಂದ ಜನರ ಶಕ್ತಿಯು ಕಡಿಮೆಯಾಗುತ್ತ ಹೋಗುವದು.

ಮಿತ್ರ— ಜನರ ಮೂರು ವರ್ಷಗಳ ದ ಅವಧಿಗು ಳ್ಳಿ ಅವರು ಪ್ರಬಲರಾಗುವರು

ಇದು ನನ್ನ ಮಿತ್ರನ ಖಂಡಿತ ಅಭಿಪ್ರಾಯವಾಗಿತ್ತು. ನಾನು ಪ್ರಬಲರಾಗುವದು ಹೇಗೆಂದು ಕೇಳಿದಾಗಲೆಲ್ಲ ಅವರು ಸ್ವಾಭಾವಿಕ ರಚನಾತ್ಮಕ ಕಾರ್ಯಗಳಿಂದ ಅವರಿಗೆ ಶಕ್ತಿಯು ಬರುವುದೆಂದು ಮಾತ್ರ ಉತ್ತರ ಕೊಟ್ಟರು. —ಸತ್ಯಾಗ್ರಹಿ

ಬಾಯಿ ಅಮ್ಮಾ.

ಅಲ್ಲೀ ಬಂಧುಗಳ ಮಾತೋಶ್ರೀ ಯವರಗೂಡ ಸಂಭಾಷಣ.

ಸಿಂಹಲದ್ವೀಪದ ಪತ್ರಿಕಾಕರ್ತರೊಬ್ಬರು ಪ್ರಖ್ಯಾತ ಅಲ್ಲೀ ಬಂಧುಗಳ ಮಾತೋಶ್ರೀಯವರಾದ ಬಾಯಿ ಅಮ್ಮಾರವರಗೂಡ ಮಾಡಿದ ಸಂಭಾಷಣವನ್ನು ಪ್ರಕಟಿಸಿರುವರು. ಬಾಯಿ ಅಮ್ಮಾರವರಿಗೆ ಹಿಂದೀ ಸ್ತ್ರೀಸಮಾಜದೊಳಗಿನ ಗುಣಸಮುಚ್ಚಯದ ಅವತಾರವೆಂದು ಅವರು ಸಂಬೋಧಿಸಿದ್ದಾರೆ. ಪ್ರತ್ಯಕ್ಷದರ್ಶಿ ಬರೆದಿದ ಮುದುವನ್ನೂ ಹಕಾಂಕತಾವಾಸದಲ್ಲಿ ಪುನಃ ಪ್ರವಂತಿಸುವ ಬದಲು, ಅಮ್ಮಾರವರು ಹಿಂದೀ ರಾಜಕಾರಣದ ಕೋಲಾಹಲದಲ್ಲಿ ಬಿದ್ದಿರುವದನ್ನು ನೋಡಿ, ಪತ್ರಕರ್ತರು ಆನಂದಾಶ್ಚರ್ಯಗಳನ್ನು ಪ್ರದರ್ಶಿಸುತ್ತಾರೆ. ಪತ್ರಕರ್ತರು ನುಡಿಯುವದೇನಂದರೆ — "ಅಮ್ಮಾರವರು ಮದರಾಸಿಗೆ ಹೋಗುತ್ತಿರುವಾಗ ಬಿಂಡಿಗಲ್ ಸ್ಟೇಶನ ಮೇಲೆ ಜನಸಂದಣಿಯು ನೆರೆದಿತ್ತು. ಉಗಿಬಂಡಿಯು ಸ್ಟೇಶನವನ್ನು ಸೇರಿದ ಕೂಡಲೆ, ಜನಸಂದಣಿಯೊಳಗಿಂದ ಕ್ಷೋಭಪಡೆಯುತ್ತ ಹೆಂಗಸರಿಬ್ಬರ ಧ್ವನಿಯು ನನ್ನ ಕಿವಿಯ ಮೇಲೆ ಅಪ್ಪಳಿಸಿತು. ಯಾರಿವರು ? ಎಂದು ಅರಿತುಕೊಳ್ಳಲು ಕುತೂಹಲಪಟ್ಟವನಾಗಿ ನಾನು ನನ್ನ ಡಬ್ಬೆಯಿಂದ ಇಳಿದು ನೋಡಿದೆನು. ವಯೋವೃದ್ಧ, ದಡೂತಿ ಸ್ತ್ರೀಯೊಬ್ಬಳು ನನ್ನ ದೃಷ್ಟಿಗೆ ಬಿದ್ದಳು. ಅವಳು ಅನೇಕ ಪುಷ್ಪಮಾಲೆಗಳಿಂದ ಅಲಂಕೃತಳಾಗಿದ್ದಳು. ನೆರೆದವರಿಗೆ ಅವಳು ಭಾಷಣ ಕೊಡುತ್ತಿದ್ದಳು. 'ಗಾಂಧಿ', 'ಸ್ವರಾಜ್ಯ' ಎಂಬ ಎರಡು ಶಬ್ದಗಳು ಮಾತ್ರ ನಾನು ಬಲ್ಲವನಾಗಿದ್ದೆ. ಯಾಕಂದರೆ, ಭಾಷಣವೆಲ್ಲ ಉರ್ದು ಭಾಷೆಯಲ್ಲಿ ನಡೆದಿತ್ತು. ಅವಳ್ಯಾರು ? ಎಂದು ನಾನು ಒಬ್ಬನನ್ನು ಕೇಳಲು, ಮಹಮ್ಮದ ಅಲ್ಲೀ, ಶೌಕತ ಅಲ್ಲೀಯವರ ಮಾತೋಶ್ರೀಯವರೆಂದು ನನಗೆ ಉತ್ತರ ದೊರಕಿತು. ಅವರಗೂಡ ಮಾತಾಡಬೇಕೆಂದು ನಾನು ನಿರ್ಧರಿಸಿಕೊಂಡೆ. ಸಂಭಾಷಣ ಮಾಡುವದೊಂದು ಸುಪ್ರಸಂಗವೆಂದೂ ನನಗನಿಸಿತು. ಬಿಂಡಿಗಲ್ಲಿನ ಸ್ಟೇಶನು ದಾಟಿ, ಉಗಿಬಂಡಿಯು ಇನ್ನೊಂದು ಸ್ಟೇಶನಕ್ಕೆ ಬಂದ ಕೂಡಲೆ, ನಾನು ಅವರೆಡೆಗೆ ಹೋದೆನು. ಅವರ ಜೊತೆಗಿದ್ದ ಗೃಹಸ್ಥರೊಬ್ಬರು ನನ್ನ ಉದ್ದೇಶವನ್ನು ಅಮ್ಮಾರವರಿಗೆ ತಿಳಿಸಿದ್ದಲ್ಲದೆ, ನನ್ನ ಅಂಬೋಣವನ್ನು ಅವರಿಗೆ, ಅವರ ಅಂಬೋಣವನ್ನು ನನಗೆ ಭಾಷಾಂತರಿಸಿ ಹೇಳಲೂ ಒಪ್ಪಿಕೊಂಡರು. ಅಮ್ಮಾರವರು ಖಾದಿ ನಿಲುವಂಗಿಗಳನ್ನು ಧರಿಸಿದ್ದರು. ಅವರನ್ನು ನೋಡಿದೊಡನೆ ಎಲ್ಲರೂ ಮಾನ್ಯತೆ ಕೊಡಲೇಬೇಕು. ಕೂಡಲೆ, ವಂದನೆಗಳನ್ನರ್ಪಿಸಲು, ನಾನು ಬಗ್ಗುವದರಲ್ಲಿ ಅವರು "ಈಗ ನಾವು ಮಾತಾಡುವ" ಎಂದರು. "ಇಂದಿಗೆ ನಾಗಂದಿರು ಸೆರೆಯಲ್ಲಿರುವರೆಂದು ನಿಮಗೆ ವ್ಯಸನವಾಗುತ್ತದೇನು ?" ಎಂದು ನಾನು ಕೇಳಿದೆನು. ಬಾಯಿ ಅಮ್ಮಾರವರು ಸ್ವಲ್ಪ ಸಿಟ್ಟಿಗೆದ್ದಂತೆ "ವ್ಯಸನ" ಎಂದು ಉದ್ಗರಿಸಿ, ಮುಂದೆ ಸಮಾಧಾನದಿಂದ ನುಡಿದದ್ದೇನಂದರೆ — "ವೈಯಕ್ತಿಕ ದುಃಖಗಳ ಬಗ್ಗೆ ವ್ಯಸನಪಡುವವರು ದೇಶಸೇವೆ ಮಾಡಲು ಅನರ್ಹರು. ನನ್ನ ಮಗಂದಿರು ಕರ್ತವ್ಯವಿಮುಖರಾಗಲಿಲ್ಲೆಂದು ನೋಡಿ ನನಗೆ ಆನಂದವಾಗುತ್ತದೆ." ಅಮ್ಮಾರವರ ಮುಖಕಮಲವು ಆನಂದಾತಿಶಯದಿಂದ ಹೊಳೆಯುತ್ತಿತು. "ನಿಯಮಿತ (reasonable) ಅವಧಿಯಲ್ಲಿ ಸ್ವರಾಜ್ಯವು ಹಿಂದುಸ್ಥಾನಕ್ಕೆ ಲಭಿಸುವದೆಂದು ತಮಗೆ ತೋರುತ್ತದೇನ ?" ಎಂದು ಪ್ರಶ್ನಿಸಿದೆನು. "ಅದಕ್ಕೆ ನೀವೇ ಜವಾಬುದಾರರು. ಪರಮಾತ್ಮನ ಮೇಲೆ ವಿಶ್ವಾಸವಿಟ್ಟು, ನಾವು ಸ್ವದೇಶ ಸೇವೆಗಾಗಿ ಅಖಿಲ ಪ್ರಯತ್ನಗಳನ್ನೂ ಮಾಡಬೇಕು" ಎಂದು ಅಮ್ಮಾರವರು ಕೂಡಲೇ ಪ್ರತ್ಯುತ್ತರವಿತ್ತರು. "ವರ್ಣಭೇದಗಳಿವೆ, ವರ್ಣಭೇದಗಳಿವೆ. ಅದರಿಂದ ಹಿಂದುಸ್ಥಾನದ ರಾಜಕೀಯ ಪ್ರಗತಿಗೆ ಅಡಿಯಾಗ್ತದೆಂದು ಅನೇಕರು ನಿಂದಿಸುತ್ತಾರೆ. ತಮ್ಮ ಮತವೇನು ?" "ನಾವು ಉದಾರಮನಸ್ಕರಾಗಿದ್ದರೆ ಹಿಂದೂಗಳಿರಲಿ, ಮುಸಲ್ಮಾನರಿರಲಿ, ಪಾರಸಿಗಳಿರಲಿ, ಬೌದ್ಧರಿರಲಿ, ಜೈನರಿರಲಿ, ಕ್ರಿಶ್ಚನರಿರಲಿ, ನಾವೆಲ್ಲರೂ ಒಂದೇ ತಾಯಿಯ ಮಕ್ಕಳು. ಅವಳ ವಿಮೋಚನೆಗಾಗಿ ಒಮ್ಮನಸಿನಿಂದ ದುಡಿಯುವದು ನಮ್ಮೆಲ್ಲರ ಕರ್ತವ್ಯವು. ಹಿಂದುಮುಸಲ್ಮಾನರ ಐಕ್ಯವೇ ಬಾಳುವದೇ ... ಮುಸಲ್ಮಾನರ ಸಂಗಡ ಹಿಂದೂಗಳಾಗಿರಲಿ ... ತನ್ನ ... ಕರ್ತವ್ಯವು ಇದೇ. ಈ ಸಂಕೇತವನ್ನು ಹೀಗೆ ಮಾಡದೆ ಅವರು ಒಡದಾಡಿದರೆ, ಬಂದು ... ಗ ರಿಯುಗುವದು". ಆ ವೇಳೆ ನಾನು ... ಅಲ್ಲೀ ಬಂದು ... ಅಹಿಂಸಾತ್ಮಕ ಯುದ್ಧದಿಂದ ಸ್ವರಾಜ್ಯ ದೊರೆಯಬಹುದೆ ಎಂದು ಪ್ರಶ್ನಿಸಲು, "ಸುಂದರರಾದ ರಾಷ್ಟ್ರೀಯ ಚಳವಳಿಗೆ ಅವರು ಹೊಸ ಹರಪ್ಪ ಬಂದಿದೆಂದರೆ ಒಬ್ಬರೇ ... ಸಾವಿರ ಮಂದಿಗಳು ... ಕೋಟಿ ಮಂದಿಗಳು ಸಂಚರಿಸುವದು, ಹಿಂದ ಮಾತೆಯ ವಿಮೋಚನದ ಕಾರ್ಯವನ್ನು ನಡೆಸಲು ಎಂದೂ ಶಸ್ತ್ರಾಸ್ತ್ರಗಳ ಕೊರತೆಯಾಗಲಿಕ್ಕಿಲ್ಲ. ಅಹಿಂಸಾಯುಕ್ತ ಮೇಲೆ ನಾವು ಪೂರ್ಣವಾಗಿ ಅವಲಂಬಿಸಿರಬೇಕು. ಅವರು ಸೆರೆಯಾಳುಗಳಾದರೆ, ಅವರ ಸ್ಥಳವನ್ನು ಇತರರು ಆಕ್ರಮಿಸಬೇಕು." ಮುಂದಿನ ಸ್ಟೇಶನ ಸಮೀಪಿಸಿತು. ನಾನು ಅಮ್ಮನವರಿಗೆ ವಂದಿಸಿ ಅಪ್ಪಣೆ ಕೊಳ್ಳುವಾಗ, ಅವರು ನುಡಿದದ್ದೇನಂದರೆ — "ಹಿಂದುಸ್ಥಾನಕ್ಕೆ ಸ್ವರಾಜ್ಯವು ಶೀಘ್ರವೇ ದೊರಕುವದು. ಆಗ ಸಿಂಹಲ ದ್ವೀಪವು ಮಹಾ-ಭಾರತ ಹಿಂದೀ ರಾಷ್ಟ್ರದ ಒಂದು ಭಾಗವಾಗುವದೆಂದು ನಾನು ಕೋರುತ್ತೇನೆ." ಮಧುರೆಯಲ್ಲಿ ಜನಸಂದಣಿಯು ವಿಶೇಷ ನೆರೆದಿತ್ತು. ಹಿಂದೂ-ಮುಸಲ್ಮಾನರು ದಟ್ಟವಾಗಿ ನೆರೆದಿದ್ದರು. ಹಿಂದುಗಳೇ ಅಮ್ಮಾರವರನ್ನು ದರ್ಶನವಾದ ಕೂಡಲೇ ಜಯಘೋಷಗಳಿಂದ ಸತ್ಕರಿಸಿದರು. ಮಕ್ಕಳು ತಾಯಿಯ ಆಗಮನವನ್ನು ನಿರೀಕ್ಷಿಸುವಂತೆ, ಜನಸಂದಣಿಯೆಲ್ಲ ಅಮ್ಮಾರವರ ದರ್ಶನ ಪಡೆಯಲು ಹಾತೊರೆಯುತ್ತಿದ್ದರು. ಅವಳ ಮೇಲೆ ಪುಷ್ಪವೃಷ್ಟಿಯಾಯಿತು. ಅಸಂಖ್ಯ ಪುಷ್ಪಮಾಲೆಗಳ ಅರ್ಪಣವಾಯಿತು. ಅಮ್ಮಾರವರಿಗೆ ವಾದ್ಯಘೋಷದೊಡನೆ ಮೇಲಿಂದಮೇಲೆ ಪಲ್ಲಕ್ಕಿಯಲ್ಲಿರಿಸಿ ಎತ್ತಿಕೊಂಡು, ಜನತೆಯು ತನ್ನ ಭಕ್ತಿಯನ್ನು ಪ್ರದರ್ಶಿಸಿತು ಇದನ್ನು ನೋಡಿ, ಅಮ್ಮಾರವರು, ಹಿಂದೂ-ಮುಸಲ್ಮಾನರ ಐಕ್ಯದ ಸಾಕ್ಷಾತ್ಕಾರವೆಂದು ನನಗನಿಸಿತು.

— ಪಂಜಾಬದೊಳಗಿನ ಹಿಂದೂ, ಮುಸಲ್ಮಾನ, ಸೀಖರೊಳಗೆ ಉಂಟಾದ ಅಂತಃಕಲಹದ ಕಾರಣಗಳನ್ನು ನಿವರ್ತಿಲಿಸುವರೆ ಪಂಡಿತ ಮದನಮೋಹನ ಮಾಲವೀಯರವರು ಪಂಜಾಬ ಪ್ರಾಂತಕ್ಕೆ ಗಮಿಸುವವರಿದ್ದಾರೆ.

— ಹಿಂದುಸ್ಥಾನದಲ್ಲಿ ೮೦ ಲಕ್ಷ ಹಟ್ಟಿ ಕಲ್ಲೆಣ್ಣೆಯು ಹುಟ್ಟುತ್ತದೆ

— ಡಾ ಹರ್ಡೀಕರರು ಕರ್ನಾಟಕ ವಿಭಾಗದ ಸ್ವಯಂಸೇವಕರನ್ನು ತಕ್ಕೊಂಡು, ಗುರುವಾರ ನಾಗಪುರಕ್ಕೆ ಹೊರಡುವಾಗ ಹುಬ್ಬಳ್ಳಿಯ ಸ್ಟೇಶನಿನಲ್ಲಿ ಜನರು ಫಲ-ಪುಷ್ಪಗಳಿಂದ ಸ್ವಯಂಸೇವಕರನ್ನು ಆದರಿಸಿದರು.

— ಮೊರಿಶಸ್ ನಡುಗಡ್ಡೆಯಲ್ಲಿ ಕೂಲಿಗಾಗಿ ಹಿಂದೀ ಜನರನ್ನು ಒಯ್ಯುವರೆ ಹಿಂದುಸ್ಥಾನ ಸರಕಾರವು ಅಪ್ಪಣೆಯನ್ನಿತ್ತಿದೆ. ಅದರಿಂದ ೧೫೦೦ ಕೂಲಿಯಾಳುಗಳು ಅಲ್ಲಿಗೆ ರವಾನೆಯಾದರು.

BOOK-SELLERS,

We supply all kinds of School books, novels and books on other Subjects in English, Kanarese Marathi etc, and all kinds of Stationery at the lowest prices.

The Modern Trading Bureau,

Gowallia Tank Road, Cumballa Hill, **BOMBAY.**

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ್, ಮುಂಬಯಿ

ವಿವಿಧ ಸಂಗ್ರಹ.

ಹಣ ಹುಟ್ಟಿಸುವ ಹೊಸ ಹಂಚಿಕೆ.

ಕಾಯಿದೆ ಕೌನ್ಸಿಲುಗಳ ಚುನಾವಣೆಯು ಸಮೀಪಿಸುತ್ತಿದೆ. ಹೊಸ ಚುನಾವಣೆಯ ಹೊಸ ನಿಯಮಗಳು ಪ್ರಕಟವಾಗಿವೆ. ಅವುಗಳೊಳಗೆ ದ್ರವ್ಯೋತ್ಪಾದನದ ನಿಯಮಗಳೂ ಇವೆ. ಕೌನ್ಸಿಲ ಆಫ್ ಸ್ಟೇಟ್, ಅಂದರೆ, ಹಿರಿಯರ ಸಭೆಗೆ ಉಮೇದವಾರರಾಗಿ ನಿಲ್ಲುವವರು ರೂಪಾಯಿ ೫೦೦ ನ್ನು ಠೇವು ಇಡಬೇಕು. ವರಿಷ್ಠ ಕಾಯಿದೆ ಕೌನ್ಸಿಲು, ಸ್ಥಾನಿಕ ಕಾಯಿದೆ ಕೌನ್ಸಿಲುಗಳಿಗೆ ನಿಲ್ಲುವ ಉಮೇದವಾರರು ರೂಪಾಯಿ ೨೫೦ ನ್ನು ಠೇವು ಇಡಬೇಕು. ಈ ಠೇವು ಕಟ್ಟದ ಹೊರತು ಯಾರೂ ಉಮೇದವಾರರ ಪಟ್ಟಿಯಲ್ಲಿ ದಾಖಲಾಗರು. ಈ ಠೇವನ್ನು ಮರಳಿ ಪಡೆಯಬೇಕಾದರೆ, ಉಮೇದವಾರರಾಗಿ ನಿಂತವರು ಚುನಾವಣೆಯಲ್ಲಿ ವೋಟು ಕೊಟ್ಟವರ ಪೈಕಿ ಕನಿಷ್ಠ ಪಕ್ಷಕ್ಕೆ ಆರರಲ್ಲಿ ೧ ಪಾಲು ಮತಗಳನ್ನಾದರೂ ಪಡೆಯಬೇಕು. ಇದಕ್ಕಿಂತ ಕಡಿಮೆ ಮತ ಸಿಕ್ಕಿದ ಉಮೇದವಾರರ ಠೇವಿನ ರಕಮು ಸರಕಾರಕ್ಕೆ ಜಪ್ತ ಆಗುತ್ತದೆ. ಉಮೇದವಾರರಿಗೆ ಮುಂಬರಿಯೂ ಇಲ್ಲ; ಠೇವೂ ಇಲ್ಲ. ಸೋತವರ ಉಳಿದ ಉಮೇದವಾರರ ಠೇವುಗಳು ಚುನಾವಣೆ ಮುಗಿದ ಮೇಲೆ ಮರಳಿ ಸಿಗುತ್ತವೆ. ಗೆದ್ದ ಉಮೇದವಾರರ ಠೇವು ಮರಳಿ ಸಿಗಬೇಕಾದರೆ, ಅವರು ಕೌನ್ಸಿಲಿನಲ್ಲಿ ರಾಜನಿಷ್ಠೆಯ ಪ್ರತಿಜ್ಞೆಯನ್ನು ಕೊಂಡು, ಸೇರಬೇಕು. ಆ ಮೇಲೆ ಅವರ ಹಣ ಮರಳಿ ದೊರೆಯುವದು. ಉಮೇದವಾರರು ಹುಡುಗಾಟಿಕೆ ಮಾಡಬಾರದೆಂದು ಈ ಠೇವಿನ ಹೊಸ ಹಂಚಿಕೆಯನ್ನು ಸರಕಾರವು ನಿರ್ಮಿಸಿದೆಂದು ಮುಂಬಯಿಯ 'ಟ್ಯೈಮ್ಸ್'ದ ವಾರ್ತೇದಾರರು ಉದ್ಗರಿಸುತ್ತಾರೆ. ಇದಲ್ಲದೆ, ವಿಲಾಯತಿಯಲ್ಲಿ ಪಾರ್ಲಿಮೆಂಟಿನ ಸದಸ್ಯತ್ವಕ್ಕೆ ಉಮೇದವಾರರಾಗುವವರಿಗೆ ಠೇವಿನ ಪ್ರಘಾತವು ಇದೆಂತಲೂ, ಹಿಂದುಸ್ಥಾನದಲ್ಲಿ 'ಪಾರ್ಲಿಮೆಂಟು' ನಿರ್ಮಿಸಿರುವದರಿಂದ, ಇಲ್ಲಿಯೂ ಅದೇ ಪ್ರಘಾತವನ್ನು ಈಗ ಹೊಸದಾಗಿ ಲಾಗು ಮಾಡಿರುವರಂತೆ. ಈ ಬಗ್ಗೆ ಪಾರ್ಲಿಮೆಂಟಿನಲ್ಲಿ ಭಾರತ ಮಂತ್ರಿಗಳಾದ ವಿಂಟರಟನ್ ದೊರೆಗಳಿಗೆ ಪ್ರಶ್ನಿಸಲು, ಹಿಂದುಸ್ಥಾನದ ವಾತಾವರಣವು ಭಿನ್ನವಿರುವದರಿಂದ, ವಿಲಾಯತಿಯಲ್ಲಿ ಚಾಲು ಇರುವ ಠೇವಿನ ಪದ್ಧತಿಯನ್ನು ನಿರ್ಮಿಸುವದು ವಿಹಿತವಲ್ಲೆಂಬ ತಮ್ಮ ಮತ ಕೊಟ್ಟರೂ. ಈ ಬಗ್ಗೆ ಹಿಂದುಸ್ಥಾನ ಸರಕಾರದವರು ನಿರ್ಮಿಸಿದ ಹೊಸ ನಿಯಮಗಳನ್ನು ರದ್ದುಪಡಿಸಲು ತಾವು ತಯಾರಿಲ್ಲೆಂದು ನುಡಿದು ಸುಮ್ಮಗಾದರು. ಹಿಂದುಸ್ಥಾನ ಸರಕಾರವು ನಿರ್ಮಿಸಿದ ಹಣ ಹುಟ್ಟಿಸುವ ಹೊಸ ಹಂಚಿಕೆಯು ಈಗ ಕಾಯಂ ಆಯಿತು.

***

ಭ್ರಮಿಷ್ಟ ನೌಕರ.

ಕಂಸ ರಾಕ್ಷಸನಿಗೆ ಎಲ್ಲಿ ನೋಡಿದಲ್ಲಿ ಶ್ಯಾಮಲ ಕೃಷ್ಣಮೂರ್ತಿಯೇ ತೋರುತ್ತಿತ್ತಂತೆ! ಮಹಾತ್ಮರ ಅಸಹಯೋಗದ ಹೊಸ ವಾತಾವರಣದಲ್ಲಿ ನೌಕರಶಾಹಿಗೆ ಪ್ರತಿಯೊಂದು ಕಡೆಯಲ್ಲಿ ಅಸಹಯೋಗಿಗಳೇ ಕಾಣುತ್ತಾರೆ. ಬಾದಶಹರ ಜನ್ಮ ದಿನಕ್ಕೆ ಅಲಹಾಬಾದಿನಲ್ಲಿ ಒಂದು ವಿನೋದಪ್ರದ ಕಥೆಯು ಸಂಭವಿಸಿತು. ಪಂಚಮ ಜಾರ್ಜರ ಜಯಂತಿಯನ್ನು ವಿಶೇಷ ರೀತಿಯಿಂದ ಸಮಾಚರಿಸಿ, ತಮ್ಮ ರಾಜನಿಷ್ಠೆಯನ್ನು ಪ್ರಕಾಶಗೊಳಿಸುವರೆ ಕೆಲವು ರಾಜನಿಷ್ಠರು ಯೋಚಿಸಿದರು. ಅಂದಿಗೆ ಒಂದು ದೊಡ್ಡ ಮೆರವಣಿಗೆಯನ್ನು ಹೊರಡಿಸಬೇಕೆಂದೂ ಗೊತ್ತಾಯಿತು. ಗೊತ್ತಾದಂತೆ, ಮೆರವಣಿಗೆಯು ಹೊರಟಿತು, ಸಂಚರಿಸುತ್ತ, ಸಂಚರಿಸುತ್ತ ರಾಜನಿಷ್ಠರು ಜಿಲ್ಹಾಧಿಪರ ಕಂಪೌಂಡಿನ ವರೆಗೆ ಬಂದು ಮುಟ್ಟಿದರು. ಜಿಲ್ಹಾಧಿಪರು ತಮ್ಮ ರಾಜನಿಷ್ಠೆಯ ಪ್ರದರ್ಶನವನ್ನು ಕಂಡು, ಆನಂದಭರಿತರಾಗಿ ತಮ್ಮನ್ನು ಸತ್ಕರಿಸುವರೆಂದು ರಾಜನಿಷ್ಠರು ಕಲ್ಪನಾಸೃಷ್ಟಿಯಲ್ಲಿ ತೇಲಾಡುತ್ತಿದ್ದರು. ಅಷ್ಟರಲ್ಲಿ ಏನಾಯಿತು ಬಲ್ಲಿರಾ? ಸಾಹೇಬರು ಹೊರಬಂದು ಸಿಟ್ಟುಮಾಡಿ, ಮೆರವಣಿಗೆಯನ್ನೇ ಚದರಿಸಿಬಿಟ್ಟರು. ಇದೇನು ಚೋದ್ಯ? ಸಾಹೇಬರು ಅಸಹಕಾರಿಗಳಾದರೇನು? ಎಂದು ರಾಜನಿಷ್ಠರೆಲ್ಲ ಚಿಂತಾಕ್ರಾಂತರಾಗಿರಲು, ಮರುದಿವಸ ಸಾಹೇಬರ ಪಶ್ಚಾತ್ತಾಪನಿದರ್ಶಕ ಪತ್ರವು ವೃತ್ತಪತ್ರಿಕೆಯಲ್ಲಿ ಕಂಗೊಳಿಸಿತು. ಅದರಲ್ಲಿ ರಾಜನಿಷ್ಠರ ಮೆರವಣಿಗೆಯು ಅಸಹಯೋಗಿಗಳದೆಂದೂ, ಬಾದಶಹರ ಜಯಂತ್ಯುತ್ಸವದ ಶುಭ ದಿನಕ್ಕೆ ನಮಗೆ ಅಪಶಕುನ ಮಾಡಲು, ಬೇಕೆಂದು, ಈ ಉತ್ಸಹವನ್ನು ಹೊರಡಿಸಿರುವರೆಂದು ಭಾವಿಸಿ, ಮೆರವಣಿಗೆಯನ್ನು ಚದರಿಸಿದೆವೆಂತಲೂ, ಈ ಬಗ್ಗೆ ತಮಗೆ ಪಶ್ಚಾತ್ತಾಪವಾಗಿದೆಂತಲೂ ಮೊದಲಾದ ಪುರಾಣವನ್ನು ಬರೆದಿದ್ದರು. ಭ್ರಾಂತಿಯೆಂಬುದು ಇದೇ. ಶ್ರೀ ಶಂಕರಾಚಾರ್ಯರು ಹಗ್ಗಕ್ಕೆ ಕತ್ತಲೆಯಲ್ಲಿ ಸರ್ಪವೆಂದು ಭಾವಿಸುವಷ್ಟು, ಸಂಸಾರವು ಮಾಯೆಯೆಂದು ಪ್ರತಿಪಾದಿಸಿರುವರು. ರಾಜನಿಷ್ಠೆಯಲ್ಲಿ ಅಸಹಯೋಗದ ಭಾಸವಾಗಿ ಸಾಹೇಬರು ವಿವೇಕಶೂನ್ಯರಾಗಿ ಆಚರಿಸುವ ಅನಾಚಾರದ ಮಾದರಿಯಿದು. ನೌಕರಶಾಹಿಯ ಸ್ಥಿತಿಯು ಕಂಸನ ಸ್ಥಿತಿಯಂತೆ ತೀರ ಇಕ್ಕಟ್ಟಿನದಾಗಿದೆಂಬುದಕ್ಕೆ ಇದೊಂದು ಉದಾಹರಣೆಯು.

***

ವೃತ್ತಪತ್ರಗಳ ಮೇಲಿನ ಗಂಡಾಂತರ.

೧೯೧೦ರಲ್ಲಿ ಪಾಸಾದ ವೃತ್ತಪತ್ರಗಳ ಕಾಯಿದೆಯು ವೃತ್ತಪತ್ರಗಳ ಜೀವನವನ್ನು ಬಹಳೇ ಗಂಡಾಂತರಕ್ಕೊಳಮಾಡಿತ್ತು. ಸವಯುಗದಲ್ಲಿ ಈ ಕಾಯಿದೆಯು ರದ್ದಾಗಿ, ಹೊಸ ಕಾಯಿದೆಯು ನಿರ್ಮಾಣವಾಯಿತು. ಆಕ್ಷೇಪಾರ್ಹ ಕಲಮುಗಳು, ಟಪಾಲ ಕಾಯಿದೆ, ಕಸ್ಟಮ್ ಕಾಯಿದೆಗಳಲ್ಲಿ ಸೇರಿಸಲ್ಪಟ್ಟಿವೆ. ಹೊಸ ಕಾಯಿದೆಯಲ್ಲಿ ಸರಕಾರಕ್ಕೆ ವೃತ್ತಪತ್ರದ ಎರಡು ಪ್ರತಿಗಳನ್ನು ಉಚಿತವಾಗಿ ಪೂರೈಸಬೇಕೆಂಬದೊಂದು ಸಣ್ಣ ಕಲಮಿದೆ. ಪ್ರತಿಗಳನ್ನು ಕಳಿಸದಿದ್ದರೆ, ಅಪರಾಧಿಯು ರೂಪಾಯಿ ೫೦ರ ವರೆಗೆ ದಂಡಕ್ಕೆ ಗುರಿಯಾಗುವನೆಂತಲೂ ಕಾಯಿದೆಯಿದೆ. ಈ ಕಾಯಿದೆಯ ಅಮಲಬಜಾವಣಿ ಮಾಡಿ, ವೃತ್ತಪತ್ರಕಾರರಿಗೆ ದಂಡ ವಿಧಿಸಿದ ಮೊದಲನೇ ಸಂಗತಿಯು ದಿಲ್ಲಿಯಲ್ಲಿ ಸಂಭವಿಸಿದೆ. ಅಲ್ಲಿಯ 'ತೇಜ' ಪತ್ರಿಕೆಯ ೨ ಸಂಚಿಕೆಗಳ ಪ್ರತಿಗಳು ಸರಕಾರಕ್ಕೆ ಸಿಗಲಿಲ್ಲ. ಆದರಿಂದ ಸಿ. ಆಯ್. ಡಿ. ಇನ್ಸಪೆಕ್ಟರರು ಸಂಪಾದಕ-ಪ್ರಕಾಶಕರವರ ಮೇಲೆ ಫಿರ್ಯಾದನ್ನು ದಾಖಲ ಮಾಡಿದರು. ಪತ್ರಿಕಾಕರ್ತರು ಪತ್ರದ ೫೦—೬೦ ಸಂಚಿಕೆಗಳು ನಿಯಮಿತವಾಗಿ ಸರಕಾರದ ಕೈಸೇರಿರುವಾಗ, ೨ ಸಂಚಿಕೆಗಳ ಪ್ರತಿಗಳು ಕೈಸೇರದಿದ್ದದ್ದು ದೊಡ್ಡ ಮಾತಲ್ಲ. ಟಪಾಲಿಯಲ್ಲೇ ಏನಾದರೂ ತಪ್ಪಿರಬಹುದೆಂದು ಕೋರ್ಟಿಗೆ ನಿವೇದಿಸಿದರು. ಆದರೂ, ಕಾಯಿದೆಯಂತೆ ಸಂಪಾದಕ-ಪ್ರಕಾಶಕರು ಅಪರಾಧಿಗಳೆಂದು ನಿರ್ಣಯಿಸಿ, ಆರೋಪಿಗಳಿಗೆ ೫ ರೂಪಾಯಿ ದಂಡ ಮಾಡಿದರು. ಇದು ಅಖಿಲ ಭರತಖಂಡದಲ್ಲಿ ಈ ಕಲಮಿನಂತೆ ನಡೆದ ಮೊದಲನೇ ಖಟ್ಲೆಯೆಂದು ಹೇಳುತ್ತಾರೆ.

***

ಹಲ್ಲುಗಳ ಅದ್ಭುತ ಸಾಮರ್ಥ್ಯ.

ಬ್ರೇಟ ಬಾರ್ಟ ಎಂಬ ಯಹುದೀ ಜಾತಿಯ ಜಟ್ಟಿಯೊಬ್ಬನು ವಿಲಾಯತಿಯಲ್ಲಿ ತನ್ನ ಹಲ್ಲುಗಳಿಂದ ಅದ್ಭುತ ಪ್ರಯೋಗಗಳನ್ನು ಮಾಡಿ ತೋರಿಸಿದನು. ಈ ಪ್ರಯೋಗಗಳ ಪರೀಕ್ಷಣೆ ಮಾಡಲು, ಡಾಕ್ಟರ, ಇಂಜನಿಯರ, ಕಮ್ಮಾರ, ಜಟ್ಟಿ ಮೊದಲಾದವರ ಒಂದು ಮಂಡಳವು ನೇಮಿಸಲ್ಪಟ್ಟಿತ್ತು. ಆವನು ತನ್ನ ಹಲ್ಲುಗಳಿಂದ $\frac{3}{8}$ ಇಂಚು ದಪ್ಪವಿರುವ ಕಬ್ಬಿಣ ಹಾಗು ಉಕ್ಕಿನ ಸರಳುಗಳನ್ನು ಕಡಿದನು. ಅರ್ಧ ಇಂಚು ದಪ್ಪವಿರುವ ಕಬ್ಬಿಣದ ಸರಳನ್ನು ಹಲ್ಲುಗಳಿಂದಲೇ ಬಗ್ಗಿಸಿ, ಅದರ ಬಳೆ ಮಾಡಿದನು. ಒಂದು ಕಬ್ಬಿಣ ಮೊಳೆಯ ತಲೆಯನ್ನು ಹಲ್ಲುಗಳಿಂದ ಹಾರಿಸಿ, ಅದನ್ನು ಹಲ್ಲುಗಳಿಂದ ಒಂದೇ ಸಾರೆ ಒತ್ತಿ ಹಲಗೆಗೆ ಜಡಿದನು. ಆ ಮೊಳೆ ಒಂದು ಇಂಚು ತಗ್ಗು ಹೋಗಿತ್ತು. ಮಂಡಳವು ಈ ಪ್ರಯೋಗಗಳನ್ನು ನೋಡಿ, ಇವುಗಳೊಳಗೆ ಜಾದು ಆಗಲಿ, ಹಸ್ತಕೌಶಲ್ಯವಾಗಲಿ ಇಲ್ಲೆಂದು ಅಭಿಪ್ರಾಯಪಟ್ಟರಂತೆ. ಸ್ನಾಯುಗಳ ಸಾಮರ್ಥ್ಯವನ್ನು ಬೆಳಿಸಿಕೊಂಡಿದ್ದರಿಂದಲೂ, ಅವುಗಳನ್ನು ಉಪಯೋಗಿಸುವ ಶಾಸ್ತ್ರೀಯ ಜ್ಞಾನವಿದ್ದದರಿಂದಲೂ ಇಂಥ ಅದ್ಭುತ ಚಮತ್ಕಾರಗಳನ್ನು ಮಾಡಲು ಸಮರ್ಥರಾಗುತ್ತಾರೆಂದು ಆವರ ಮತವಾಯಿತು.

***

ಶೇಟ ಜಮನಾಲಾಲ ಬಜಾಜಜೀಯವರ ಅಲ್ಪ ಪರಿಚಯ

ಶೇಟ ಜಮನಾಲಾಲ ಬಜಾಜಜೀಯವರು ಮಧ್ಯಪ್ರಾಂತದ ಪೈಕಿ ವರ್ಧಾ ಜಿಲ್ಹೆಯವರು, ಅವರು ಉಚ್ಚ ಮಾರವಾಡಿ ಕುಲದವರು, ವೈಶ್ಯರು. ಇವರ ವೃತ್ತಿಯು ಸಾತ್ತ್ವಿಕವಿದ್ದು, ಪರೋಪಕಾರ, ದಾನ-ಧರ್ಮಗಳಿಂದ ಇವರು ಕೀರ್ತಿಯನ್ನು ಸಂಪಾದಿಸಿರುವರು. ರಾಜಕಾರಣದ ರಂಗಸ್ಥಳದಲ್ಲಿ ಇವರು ಪ್ರಾಮುಖ್ಯವಾಗಿ ಬಂದದ್ದು ೧೯೨೦ ನೇ ಸಾಲಿನ ಡಿಸೆಂಬರದಲ್ಲಿ. ನಾಗಪುರದ ರಾಷ್ಟ್ರೀಯ ಸಭೆಯ ಸ್ವಾಗತ ಮಂಡಳಿಯ ಅಧ್ಯಕ್ಷರಾಗುವ ಮಾನವು ಇವರ ಪಾಲಿಗೆ ಬಂದಿತ್ತು. ಅಂದಿನಿಂದ ಶೇಟಜೀಯವರು ಮಹಾತ್ಮರ ಅಸಹಯೋಗದ ಕಾರ್ಯಕ್ರಮದಲ್ಲಿ ಆಸ್ಥೆಯಿಂದ ದುಡಿದಿರುವರು. ವಕೀಲಿಯನ್ನು ತ್ಯಜಿಸಿ, ರಾಷ್ಟ್ರಸೇವೆಯನ್ನು ಕೈಕೊಂಡವರಿಗೆ ಸಹಾಯ ಮಾಡಬೇಕೆಂದು ಶೇಟಜೀಯವರು ೧ ಲಕ್ಷ ರೂಪಾಯಿಗಳನ್ನು ರಾಷ್ಟ್ರೀಯ ಸಭೆಗೆ ಒಪ್ಪಿಸಿದ್ದರು. ಇದಲ್ಲದೆ, ಅಸಹಯೋಗ ಪ್ರಚಾರಕ್ಕಾಗಿ ಅಖಿಲ ಭಾರತ ಖಂಡದಲ್ಲಿ ಎಡೆಬಿಡದೆ ಇವರು ಸಂಚರಿಸುತ್ತಿದ್ದರು. ಬರ್ಸಾ ಪ್ರಾಂತದಲ್ಲಿ ಶ್ರೀ ವಲ್ಲಭಭಾಯಿ ಪಟೇಲರವರಗೂಡ ಶೇಟಜೀಯವರು ಅಲ್ಲಿಗೆ ಹೋಗಿದ್ದರು. ಅಲ್ಲಿ ಶೇಟಜೀ-ಪಟೇಲರವರು ಹುಟ್ಟಿಸಿದ ಜಾಗೃತಿಯೂ, ಸಾಧಿಸಿದ ರಾಷ್ಟ್ರಕಾರ್ಯವೂ ವಾಚಕರಿಗೆ ವಿದಿತವಿದೆ. ಲಕ್ಷ್ಮೀಪುತ್ರರಿದ್ದರೂ, ಶೇಟಜೀಯವರು ಲಕ್ಷ್ಮೀಮದದಿಂದ ಯುಕ್ತರಾಗಿರದೆ, ಎಲ್ಲ ವಿಲಾಸಗಳನ್ನು ತ್ಯಜಿಸಿ, ರಾಷ್ಟ್ರಕಾರ್ಯದಲ್ಲಿ ಏಕನಿಷ್ಠೆಯಿಂದ ಸೇರಿಕೊಂಡರು. ಮಹಾತ್ಮರನ್ನು ಸೆರೆ ಹಿಡಿದಂದಿನಿಂದಂತೂ ಶೇಟಜೀಯವರಿಗೆ ಹೊಸ ಹುರುಪು ಬಂದಂತಾಗಿ, ಅಸಹಯೋಗ ಪ್ರಚಾರಕ್ಕಾಗಿ ಎಡೆಬಿಡದೆ ಅವಿಶ್ರಾಂತ ದುಡಿದರು. ಕೌನ್ಸಿಲು ಪ್ರವೇಶಕ್ಕೆ ಶೇಟಜೀಯವರು ತೀರ ವಿರುದ್ಧರಿದ್ದರು. ಶ್ರೀ ರಾಜಗೋಪಾಲಾಚಾರ್ಯರ ಸಂಗಡ ಕಾಂಗ್ರೆಸ ಕಾರ್ಯಕಾರಿ ಮಂಡಳದ ಸದಸ್ಯತ್ವದ ರಾಜಿನಾಮೆ ಕೊಟ್ಟವರಲ್ಲಿ ಇವರೊಬ್ಬರು. ರಾಜಿನಾಮೆ ಕೊಡುವವರೆಗೆ ಕೋಶಾಧ್ಯಕ್ಷರೂ ಇವರೇ. ಇನ್ನೂ ೨-೩ ಲಕ್ಷ ರೂಪಾಯಿಗಳನ್ನು ಅರ್ಪಿಸಿ, ಗಾಂಧಿ ತತ್ತ್ವ ಪ್ರಚಾರಕ್ಕಾಗಿ "ಗಾಂಧಿ ಸೇವಾ ಸಂಘ"ವೊಂದನ್ನು ಸ್ಥಾಪಿಸಬೇಕಾಗಿ ಇವರ ಮಾನಸವಿತ್ತು. ಇವರಿಗೆ ಸೆರೆಹಿಡಿದ ಸುದ್ದಿಯು ಮುಂಬಯಿಗೆ ಬಂದಕೂಡಲೆ, ಮುಂಬಯಿಯ ಅರಳೆಯ ದಲಾಲರೂ, ವ್ಯಾಪಾರಿಗಳೂ ಒಂದು ದಿನದ ವರೆಗೆ ತಮ್ಮ ಆಫೀಸುಗಳನ್ನು ಮುಚ್ಚಿದರು. ಮಾರವಾಡೀ ಸಮ್ಮೇಲನದ ವಿದ್ಯಮಾನ ಶ್ರೀ ಹನುಮಾನ ಪ್ರಸಾದ ಪೋದಾರರವರ ಅಧ್ಯಕ್ಷತೆಯಲ್ಲಿ ಪ್ರಚಂಡ ಸಭೆಗೂಡಿ, ಶೇಟಜೀಯವರಿಗೆ ಅಭಿನಂದನ ಮಾಡಲ್ಪಟ್ಟಿತು. ಇದಲ್ಲದೆ, ಶ್ರೀ ವಿಶ್ವೇಶ್ವರಲಾಲ ಬಿರಲಾ, ಶ್ರೀನಿವಾಸ ಧೂತ, ದುರ್ಗಾದತ್ತ ಚೌಧರಿ, ಗೋವರ್ಧನ ಗೌಡ, ಭಗವಾನಸಿಂಗ ಹೀಗೆ ಐವರು ಸ್ವಯಂಸೇವಕರ ಪಟ್ಟಿಯಲ್ಲಿ ದಾಖಲಾಗಿರುವರು.

ಕಾನಡಾವೃತ್ತ.

ಗುರುವಾರ, ತಾರೀಖು ೨೮ ಮಾಹೆ ಜೂನ ೧೯೨೩.

ಕಾಯಿದೆಯ ಅಧಃಪಾತ!

ನಾಗಪುರದಲ್ಲಿ ಕಳೆದ ಮೇ ೧ನೇ ತಾರೀಖಿನಿಂದ ರಾಷ್ಟ್ರಧ್ವಜದ ಸಂಗ್ರಾಮವು ಶೇಟ ಜಮನಾಲಾಲ ಬಜಾಜರವರ ನೇತೃತ್ವದಲ್ಲಿ ಶಿಸ್ತಿನಿಂದ ನಡೆಯುತ್ತಿತ್ತು. ಇದನ್ನು ನಾವು ವಾಚಕರಿಗೆ ಈ ಮೊದಲೇ ಅರುಹಿರುವೆವು. ಸಂಗ್ರಾಮವನ್ನು ಶೇಟಜೀಯವರು ಎಷ್ಟು ಶಿಸ್ತಿನಿಂದ ನಡಿಸಿರುವರೆಂಬುದನ್ನು ಮಿ|| ಜೋರ್ಜ ಜೋಸೆಫರವರು "ಮುಂಬಯಿ ಕ್ರೊನಿಕಲ್"ಗೆ ನಿವೇದಿಸಿರುವರು. ನಾಗಪುರದೊಳಗಿನ ಸತ್ಯಾಗ್ರಹವು ನಿರ್ಮಲ ನಿಸ್ವಾರ್ಥತ್ಯಾಗವು. ನಿರಪರಾಧಿ ಆಡುಗಳು ವಧಸ್ಥಾನಕ್ಕೆ ಹೋಗು ಮಾಡಿದಂತೆ, ಸತ್ಯಾಗ್ರಹಿಗಳು ಪ್ರತಿಬಂಧಕ ಸ್ಥಳಕ್ಕೆ ರಾಷ್ಟ್ರಧ್ವಜವನ್ನು ಧರಿಸಿ ಗಮಿಸುತ್ತಾರೆ. ನಾಗಪುರದ ಸತ್ಯಾಗ್ರಹದ ಸ್ವರೂಪವನ್ನು ಮಿ|| ಜೋರ್ಜ ಜೋಸೆಫರವರು ಸಂಕ್ಷೇಪವಾಗಿ ತಿಳಿಸಿರುವರು. ಈ ಸಂಗ್ರಾಮದ ಶುದ್ಧ ಸ್ವರೂಪವನ್ನು ವಿಸ್ತರತಃ ಇಂದಿಗೆ ನಿವೇದಿಸಿ, ಅದರಿಂದ ಉಂಟಾದ ಹೊಸ ಪರಿಸ್ಥಿತಿಯನ್ನು ಇಂದಿಗೆ ಆಲೋಚಿಸಲಿಚ್ಛಿಸುವೆವು.

ರಾಷ್ಟ್ರಧ್ವಜದ ಸಂಗ್ರಾಮದಲ್ಲಿ ಮೊದಮೊದಲು ಒಬ್ಬ ಸತ್ಯಾಗ್ರಹಿಯು ರಾಷ್ಟ್ರಧ್ವಜವನ್ನು ಧರಿಸಿ, ಪ್ರತಿಬಂಧಕ ಸ್ಥಳದಲ್ಲಿ ಸೇರಿದರೂ, ಅವನನ್ನು ಸೆರೆಹಿಡಿಯುತ್ತಿದ್ದರು. ಒಬ್ಬನು ರಾಷ್ಟ್ರಧ್ವಜವನ್ನು ಧರಿಸಿ ನಡೆದರೆ ಅದೊಂದು ಮೆರವಣಿಗೆಯಾಗುತ್ತದೆಂದು ಸಾಮಾನ್ಯ ಬುದ್ಧಿಯುಳ್ಳವರು ಎಂದೂ ಗ್ರಹಿಸರು. ಶ್ರೀ|| ರಾಜಗೋಪಾಲಾಚಾರ್ಯರ ಮೊದಲಾದ ಮುಂದಾಳುಗಳು ನಾಗಪುರವನ್ನು ಸಂದರ್ಶಿಸಿದಾಗ, ಒಬ್ಬೊಬ್ಬರನ್ನು ಸೆರೆಹಿಡಿಯುವ ಕ್ರಮವು ಜ್ಯಾರಿಯಿಂದ ನಡೆದಿತ್ತು. ಇದನ್ನು ನೋಡಿ, ಶ್ರೀ|| ಆಚಾರ್ಯರು ಇದೊಂದು ಕಾಯಿದೆಯ ಅಧಃಪಾತವೆಂದು ಸಂಬೋಧಿಸಿದರು. ಅಧಿಕಾರಿಗಳಿಗೂ ನಾಚಿಕೆಗೇಡಾಯಿತು. ಒಬ್ಬರು ರಾಷ್ಟ್ರಧ್ವಜವನ್ನು ಧರಿಸಿ ನಡೆದಾಡಿದರೆ, ಅವರನ್ನು ಸೆರೆಹಿಡಿಯುವ ಧೋರಣವನ್ನು ಅವರು ತ್ಯಜಿಸಿದರು. ಮುಂದಾಳುಗಳ ನಿರೀಕ್ಷಣದಿಂದ, ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಠರಾವಿನಿಂದ, ರಾಷ್ಟ್ರಧ್ವಜ ಸಂಗ್ರಾಮಕ್ಕೆ ಭಾರತೀಯ ರಾಜಕಾರಣದಲ್ಲಿ ವಿಶೇಷ ಮಹತ್ವವು ಸಹಜವಾಗಿ ಪ್ರಾಪ್ತವಾಯಿತು. ಅಖಿಲ ಭರತಖಂಡದೊಳಗಿನ ರಾಷ್ಟ್ರಸಂಸ್ಥೆಗಳು ಸತ್ಯಾಗ್ರಹದ ಶಾಂತಿಯುದ್ಧದಲ್ಲಿ ಬಂಟರಂತೆ ನಾಗಪುರದವರಿಗೆ ನೆರವಾಗಲು ಟೊಂಕಕಟ್ಟಿದರು. "ನಾಗಪುರದಲ್ಲೇನು ನಡೆದಿದೆ?" ಎಂದರಿತುಕೊಳ್ಳಲು ಆತುರರಾದ ಭಾರತೀಯರಿಗೆ ಹಕೀಕತನ್ನು ನಿವೇದಿಸಲು ಬಾತ್ಮೀದಾರರೂ ನಾಗಪುರದಲ್ಲಿ ಕೇಂದ್ರರಾದರು. ಅಧಿಕಾರಿಗಳು ಬೆಂಡು ಅಡಗಿಸಲು, ಹೊಸ ಹೊಸ ಹುಕುಮುಗಳನ್ನು ಹೊರಡಿಸಿದರು. ಪತ್ರಕರ್ತರಿಗೆ ಕಳಿಸಲು ಕೊಟ್ಟ ತಂತಿಗಳನ್ನು ತಂತಿ ಖಾತೆಯು 'ಆಕ್ಷೇಪಾರ್ಹ'ವೆಂದು ಠರಾ ಹೊಡೆದು, ಮರಳ ಕೊಟ್ಟಿತು. ಪರಪ್ರಾಂತಗಳಿಂದ ಶೇಟಜೀ ಮೊದಲಾದ ಸತ್ಯಾಗ್ರಹದ ಸೇನಾಪತಿಗಳಿಗಾಗಿ ನಾಗಪುರಕ್ಕೆ ಬಂದ ತಂತಿಗಳೂ 'ಆಕ್ಷೇಪಾರ್ಹ'ವೆಂದು ಅವರಿಗೆ ಮುಟ್ಟಿಸದೆ, ಹಿಂತಿರುಗಿ ಆಯಾ ಪ್ರಾಂತಗಳಿಗೆ ಕಳಿಸಲ್ಪಟ್ಟವು. ತಂತಿ-ಟಪಾಲು ವ್ಯಾಪಾರೀ ಖಾತೆಗಳಿದ್ದು, ಅವನ್ನು ತನ್ನ ವರ್ಚಸ್ವ ಸ್ಥಿತಿ-ರಕ್ಷಣಾರ್ಥವಾಗಿ ನೌಕರಶಾಹಿಯು ಹೇಗೆ ಉಪಯೋಗಿಸಿಕೊಳ್ಳುತ್ತದೆ, ನೋಡಿರಿ. ಇನ್ನೊಂದು ಪ್ರಕಾರವೂ ತಲೆದೋರುತ್ತಿದೆ. ನಾಗಪುರಕ್ಕೆ ಬರ-ಹೋಗುವ ರಾಷ್ಟ್ರಸೇವಕರಿಗೆ ಸ್ಟೇಶನುಗಳಲ್ಲಿ ಟಿಕೀಟುಗಳನ್ನು ಕೊಡದೆ, ಅಷ್ಟಗಟ್ಟುವ ಹೊಸ ಕಾಯುಕ್ತಿಯೂ ನಡಿಸಲ್ಪಟ್ಟಿದೆ. ಇದಕ್ಕೆ ಪ್ರತೀಕಾರವೆಂದು ಮಹಾತ್ಮರ ಸುಪುತ್ರರಾದ ಶ್ರೀ|| ದೇವೀದಾಸ ಗಾಂಧಿಯವರು ನಾಗಪುರಕ್ಕೆ ಗುಜರಾಥದಿಂದ ಒಂದು ಸ್ವಯಂಸೇವಕರ ಮಂಡಲವನ್ನು ಕಾಲು ನಡಿಗೆಯಿಂದಲೇ ಒಯ್ಯುವ ನಿರ್ಧಾರ ಮಾಡಿ, ಕಳೆದ ತಾ. ೧೯ ನೇ ಮಂಗಳವಾರ ರಾತ್ರಿಗೆ ಅಹಮದಾಬಾದದಿಂದ ಹೊಂಟಿರುವರು. ಇವೆಲ್ಲ ಕಾಯಿದೆಯಂತೆ ಅಧಿಕಾರಿಗಳು ನಡಿಸಿದ ಕೃತ್ಯಗಳು. ಇಷ್ಟಾದರೂ, ಸತ್ಯಾಗ್ರಹದ ಸಂಗ್ರಾಮವನ್ನು ಅಧಿಕಾರಿಗಳು ನೀತಿಯಂತೆ ನಡೆಸಿದ್ದರೆಂದು ಬಾಹ್ಯತಃ ತೋರುತ್ತಿತ್ತು. ಡಿ|| ಮೆಜಿಸ್ಟ್ರೇಟರಾದ ಮಿ|| ಗೋವಾನರವರು ಸತ್ಯಾಗ್ರಹದ ಸೇನಾಪತಿಗಳಾದ ಶೇಟಜೀಯವರಗೂಡ ಆಗಿಂದಾಗ ಸಂಭಾಷಣಗಳನ್ನು ಮಾಡಿ ತಮ್ಮ ಜೂತರ ಅಪಕೃತ್ಯಗಳನ್ನು ಪರಿಹರಿಸಲು ಯತ್ನಿಸುತ್ತಿದ್ದರು. ಈ ಧೋರಣವು ಸುಮಾರು ಕಳೆದ ತಾ. ೧೪-೧೬ ನೇ ವರೆಗೆ ನಡೆಯಿತು.

ಸೋಮವಾರಕ್ಕೆ ೧೮ ನೇ ತಾರೀಖು; ಗಾಂಧೀದಿನ, ಅಂದು ಮಹಾತ್ಮರ ಸ್ಮರಣಾರ್ಥ ಶೇಟಜೀಯವರು ಸಂಸ್ಮರಣೀಯ ಸತ್ಯಾಗ್ರಹವನ್ನು ಹೂಡುವರೆಂದು ಗೊತ್ತಾಗಿತ್ತು. ಈ ಪುಣ್ಯ ಕೆಲಸಕ್ಕೆ ಅಖಿಲ ಭರತಖಂಡದೊಳಗಿಂದ ರಾಷ್ಟ್ರಸಂಸ್ಥೆಗಳು ಯಥಾಶಕ್ತಿ ಸ್ವಯಂಸೇವಕರನ್ನು ಕಳಿಸುವರೆಂತಲೂ ಜಾಹೀರಾಗಿತ್ತು. ಇದನ್ನು ಕೇಳಿ ನಾಗಪುರದ ಅಧಿಕಾರಿಗಳಿಗೆ ಈ ವರೆಗೆ ತಳೆದ ಸ್ಥೈರ್ಯವು ಪರಮಾವಧಿಯಾಯಿತೆಂದು ತೋರಿತು. ಈಗೇನು ಮಾಡುವದು? ಸತ್ಯಾಗ್ರಹವನ್ನು ಒಮ್ಮೆಲೇ ಬಯಲುಮಾಡುವ ಬಗೆ ಹೇಗೆ? ಎಂಬ ವಿವಂಚನೆಯಲ್ಲಿ ಅಧಿಕಾರಿಗಳು ಮಗ್ನರಾಗಿರಲು, ಕೆಲವರು 'ಸತ್ಯಾಗ್ರಹಿ ಸ್ವಯಂಸೇವಕರಿಂದ ತಮಗೆ ಉಪದ್ರವವಾಗುತ್ತದೆಂ'ದು ಮೆಜಿಸ್ಟ್ರೇಟರ ಕಡೆಗೆ ವರದಿ ಮುಟ್ಟಿಸಿದರು. ಮಿ|| ಗೋವಾನರವರು ಶೇಟಜೀಯವರನ್ನು ಕರತರಿಸಿ, ಸತ್ಯಾಗ್ರಹಿಗಳ ವಿರುದ್ಧ ದೂರು ಬಂದಿದೆಂದು ತಿಳಿಸಿ, ನಿಮ್ಮ ಅಂಬೋಣವೇನೆಂದು ಪ್ರಶ್ನಿಸಿದರು. ಶೇಟಜೀಯವರು "ವಿಶಿಷ್ಟ ದೂರುಗಳನ್ನೂ, ಆ ಮಂದಿಗಳನ್ನೂ ತೋರಿಸಿರಿ" ಎಂದು ಮಿ|| ಗೋವಾನರವರಿಗೆ ಆವ್ಹಾನ ಮಾಡಿದರು. ಸಾಹೇಬರು ಸುಮ್ಮಗಾದರು. ರವಿವಾರ ಸಂಜೆಗೆ ಶೇಟ ಜಮನಾಲಾಲಜೀಯವರನ್ನು ನಾಗಪುರದ ಜಿಲ್ಹಾ ಕೋರ್ಟಿನ ಇದಿರಿಗೆ ಸೆರೆಹಿಡಿದರು. ಶ್ರೀ|| ನೀಲಕಂಠರಾವ ದೇಶಮುಖರವರೂ ಅದೇ ಸಮಯಕ್ಕೆ ಸೆರೆಹಿಡಿಯಲ್ಪಟ್ಟರು.

ಗಾಂಧೀ ದಿನದ ಪ್ರಾತಃಕಾಲಕ್ಕೆ ಮಾತ್ರ ಕಾಯಿದೇಶೀರ ಅತ್ಯಾಚಾರದ ಪರಮಾವಧಿಯಾಯಿತು. ಅಂದು ಒಂದು ಜಾವ ರಾತ್ರಿ ಇರುವಾಗ, ನಾಗಪುರದ ಪೋಲೀಸರು ಸತ್ಯಾಗ್ರಹಕ್ಕಾಗಿ ನೆರೆದ ಸ್ವಯಂಸೇವಕರ ಬಿಡಾರುಗಳನ್ನು ಧಕ್ಕನೆ ಒಳಹೊಕ್ಕು, ೨೫೦ ಕ್ಕೆ ಮಿಕ್ಕಿ ಸ್ವಯಂಸೇವಕರ ಹಾಗು ಅಲ್ಲಿದ್ದ ಇತರ ಸುದೈವೀ ರಾಷ್ಟ್ರಸೇವಕರ ಹೆಡಮುರಿಗೆ ಕಟ್ಟಿದರು. ಕರ್ನಾಟಕ ಪ್ರಾಂತದ ಸ್ವಯಂಸೇವಕರ ಚಾಲಕರಾದ ಶ್ರೀ|| ನಾರಾಯಣರಾವ ಹರ್ಡೀಕರರವರೂ ಈ ಸಮಯಕ್ಕೆ ಬಂಧಿಸಲ್ಪಟ್ಟರು. ಬಂಧನವು 'ಕಾಯಿದೇಶೀರ' ಆಗಿದೆ. ಕ್ರಿಮಿನಲ್ ಪ್ರೊಸಿಜರ ಕೋಡ ಕಲಂ ೫೫ (ಬಿ), ೧೦೯ ಕಲಮುಗಳನ್ವಯ ಡಾ|| ಹರ್ಡೀಕರ ಮೊದಲಾದವರು ಸೆರೆಬಿದ್ದಿರುವರು. ೫೫ (ಬಿ) ಕಲಮಿನಂತೆ ಸೆರೆ ಹಿಡಿಯಬೇಕಾದರೆ, ಸೆರೆಬೀಳುವವನಿಗೆ ಜೀವನದ ಸಾಧನಗಳಿರಬಾರದು; ಅಥವಾ ಅವನ ಹಕೀಕತು ಸಂಶಯಾಸ್ಪದವಿರಬೇಕು. ೧೦೯ ಕಲಮಿನಂತೆ ಸೆರೆ ಹಿಡಿಯಬೇಕಾದರೆ, ಆರೋಪಿಯು ಅಪರಾಧಗಳನ್ನು ಆಚರಿಸಲು ಮುಂಜಾಗ್ರತೆಯನ್ನು ಪಡೆಯುವವನಿರಬೇಕು. ಹೀಗಲ್ಲ ಕಾಯಿದೆ. ಈ ಕಾಯಿದೆಯನ್ನು ಸತ್ಯಾಗ್ರಹಿ ಸ್ವಯಂಸೇವಕರಿಗೆ, ಡಾ|| ನಾನಾಸಾಹೇಬ ಹರ್ಡೀಕರರಂಥ ಮಾನ್ಯ ಮುಂದಾಳುಗಳಿಗೆ ಹಚ್ಚಿ, ಅಧಿಕಾರಿಗಳು ಗಾಂಧೀ ದಿನಕ್ಕೆ ಕಾಯಿದೆಯ ಖೂನಿ ಮಾಡಿದರು. ಡಾ|| ಹರ್ಡೀಕರ ಮೊದಲಾದವರು ಸೆರೆಮನೆಯನ್ನು ಸೇರಿ ಮಹಾತ್ಮರ ಕಾರ್ಯಕ್ರಮಕ್ಕೆ ಅತ್ಯವಶ್ಯವಿರುವ ನಿರ್ಮಲ ನಿಸ್ವಾರ್ಥತ್ಯಾಗವನ್ನು ಆಚರಿಸಿ, ಮಹಾತ್ಮರನ್ನು

ಸಂತೋಷಪಡಿಸಿರುವರು. ಶೇಟ ಜಮುನಾಲಾಲ ಬಜಾಜಜೀಯವರ ಪೂರ್ವಸಂಕೇತದಂತೆ ಗಾಂಧೀ ದಿನಕ್ಕೆ ರಾಷ್ಟ್ರಸೇವಕರ ಪ್ರಚಂಡ ಸಮುದಾಯವು ಅನಾಯಾಸದಿಂದ ಸೆರೆಮನೆಯನ್ನು ಸೇರಿ, ನೌಕರಶಾಹಿಯು ಹಿಂದುಸ್ಥಾನದಲ್ಲಿ ಆಚರಿಸುವ ರಾಜನೀತಿಯನ್ನು ಇಡೀ ಜಗತ್ತಿಗೆ ಜಾಹೀರು ಮಾಡಿದೆ. ರಾಷ್ಟ್ರಧ್ವಜದ ಸಂಗ್ರಾಮವು ಈಗ ರೊಚ್ಚಿಗೆ ಬಿತ್ತು. ರಾಷ್ಟ್ರಧ್ವಜದ ಮಾನವೆಂದರೆ, ರಾಷ್ಟ್ರದ ಮಾನವು. ಅದನ್ನು ಕಾಪಾಡುವದು ಅಖಿಲ ಭಾರತೀಯರ ಕರ್ತವ್ಯವು. ಹಿಂದೀ ರಾಷ್ಟ್ರದ ದ್ಯೋತಕವೂ ರಾಷ್ಟ್ರಧ್ವಜವೇ. ಆದದರಿಂದಲೇ ನೌಕರಶಾಹಿಯು ನಾಗಪುರದಲ್ಲಿ ಅದಕ್ಕೆ ವಿರೋಧವಾಗಿ ಯುದ್ಧ ಹೂಡಿದೆ. ಶೇಟ ಜಮುನಾಲಾಲ ಬಜಾಜ ಮೊದಲಾದ ಮುಂದಾಳುಗಳನ್ನು ಸೆರೆಹಿಡಿದದ್ದರಿಂದ, ಈ ಸಂಗ್ರಾಮಕ್ಕೆ ಹೊಸ ಸ್ವರೂಪವು ಪ್ರಾಪ್ತವಾಗಿದೆ. ನಾಗಪುರದಲ್ಲಿ ರಾಷ್ಟ್ರಧ್ವಜದ ಮಾನಕ್ಕಾಗಿ ಪರಮಾವಧಿಯ ಸ್ವಾರ್ಥತ್ಯಾಗ ಮಾಡಲು ತಯಾರಾಗಿ ಸ್ವಯಂಸೇವಕರ ಪಟದಲ್ಲಿ ನಾಗಪುರಸ್ಥರು ತಮ್ಮ ಹೆಸರುಗಳನ್ನು ಉತ್ಸಾಹದಿಂದ ನೋಂದಿಸುತ್ತಿರುವರು. ಮುಂದಾಳುಗಳನ್ನು ಸೆರೆ ಹಿಡಿದದ್ದರಿಂದ ಬಹುಜನಸಮಾಜವು ಯಾವದೇ ರೀತಿಯಿಂದ ಎದೆಗುಂದದೆ, ಸತ್ಯಾಗ್ರಹದ ಸಂಗ್ರಾಮವನ್ನು ದೃಢವಾಗಿ ಮುಂದರಿಸುತ್ತಲಿದೆ. ಈಗ ಉಂಟಾದ ಹೊಸ ಪರಿಸ್ಥಿತಿಯನ್ನು ಸಮಾಲೋಚಿಸಿ, ತಕ್ಕ ಯೋಜನೆಯನ್ನು ಕೈಕೊಳ್ಳುವರೆ, ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಅಧಿವೇಶನವು ನಾಗಪುರದಲ್ಲಿ ನೆರೆಯಬೇಕೆಂದು ಅಧ್ಯಕ್ಷರಾದ ಡಾ॥ ಅನ್‌ಸಾರಿಯವರು ಪ್ರಕಟಿಸುತ್ತಾರೆ. ನಾಗಪುರದಲ್ಲಿ ನೌಕರಶಾಹಿಯು ಆಚರಿಸುವ ಕಾಯಿದೆಯ ದುಷ್ಟಚೇಷ್ಟೆಗಳಿಗೆ ತಕ್ಕ ಪ್ರತೀಕಾರವನ್ನಿತ್ತು, ರಾಷ್ಟ್ರಧ್ವಜದ ಮೆರವಣಿಗೆಯು ಅಖಿಲ ಭರತಖಂಡದಲ್ಲಿ ನಿರಾತಂಕವಾಗಿ ನಡೆಯುವಂತೆ ನಮ್ಮ ಲೋಕನಾಯಕರು ವ್ಯವಸ್ಥೆ ಮಾಡುವರೆಂದು ನಾವು ನೆರೆನಂಬಿದ್ದೇವೆ.

ಸ್ಫುಟ ಸೂಚನೆಗಳು.

೧. ದೇಶಬಂಧು ದಾಸರು ಮದ್ರಾಸಿನ ಭಾಷಣದಲ್ಲಿ ಎಬ್ಬಿಸಿದ ಹಳೇ ವಾದವನ್ನು ಖಂಡಿಸುವಾಗ, ಶ್ರೀ॥ ಕೃಷ್ಣದಾಸರು ಕಲಕತ್ತೆಯ 'ಸರ್ವಂಟ' ಪತ್ರಿಕಾಕರ್ತರಾದ ಶ್ರೀ॥ ಶ್ಯಾಮಸುಂದರ ಚಕ್ರವರ್ತಿಯರಿಗೆ ಬರೆದ ಪತ್ರದಿಂದ ಪಂಡಿತ ಮದನಮೋಹನ ಮಾಲವೀಯಜೀಯವರ ಮೇಲೆ ದೊಡ್ಡ ಗಲಭೆ ಎದ್ದಿದೆ. ಈ ಬಗ್ಗೆ 'ಆಜ' ಪತ್ರಿಕೆಯ ಪ್ರತಿನಿಧಿಗಳೊಬ್ಬರು ಶ್ರೀ ಕಾಶೀ ಕ್ಷೇತ್ರದಲ್ಲಿ ಪಂಡಿತಜೀಯವರ ಭೆಟ್ಟಿ ಪಡೆದರು. ಸಂಭಾಷಣ ನಡೆಯಲು, ದೇಶಬಂಧುಗಳು ಮಹಾತ್ಮರನ್ನು ಆರೋಪಿಸಿ ಮಾಡಿದ ವಿಧಾನಗಳನ್ನು ನೋಡಿ, ತಮಗೆ ವ್ಯಸನವಾಗಿದೆಂದು ಪಂಡಿತಜೀಯವರು ಉದ್ಗರಿಸಿದರು. ಶ್ರೀ॥ ಕೃಷ್ಣದಾಸರ ಪತ್ರದೊಳಗಿನ ವಿಧಾನಗಳೂ, ಟೀಕೆಯೂ ಮತ್ತೂ ವಿಷಾದಕರವೆಂದು ಪಂಡಿತಜೀಯವರು ನುಡಿದರು. ಶ್ರೀ॥ ಕೃಷ್ಣದಾಸರಿಗೆ ಸಮಗ್ರ ವೃತ್ತಾಂತವು ಯಥಾರ್ಥ ತಿಳಿಯದ ಮೂಲಕ, ಅವರು ಮಾಡಿದ ಟೀಕೆಯು ಅಪ್ರಶಸ್ತ ಹಾಗು ವಿಪರ್ಯಸ್ತವೆಂದೂ ಪಂಡಿತಜೀಯವರು ಅಭಿಪ್ರಾಯ ಕೊಟ್ಟರು. ಮಹಾತ್ಮರು ಬಂಧನದಲ್ಲಿರುವಾಗ, ಈ ವಾದವಲ್ಲ ಸೇರಿಕೊಳ್ಳಲು ಮನೋದೇವತೆಯು ಒಪ್ಪದಿದ್ದರೂ, ಈ ಬಗ್ಗೆ ಒಂದು ಪ್ರಕಟನೆಯನ್ನು ವೃತ್ತಪತ್ರಗಳಿಗೆ ಕಳಿಸಿಕೊಡದಿರುವದು ಯೋಗ್ಯವಾಗಲಾರದೆಂದು ಅವರು ನುಡಿದರು. ಪಂಡಿತ ಮದನಮೋಹನ ಮಾಲವೀಯಜೀಯವರು ೧೯೨೧ನೇ ಡಿಶಂಬರದಲ್ಲಿ ಗಾಂಧಿ–ರೀಡಿಂಗರೊಳಗೆ ನಡೆದ ಮಾತುಕಥೆಯ ಮಧ್ಯಸ್ಥರು. ಅವರ ಹೇಳಿಕೆಯ ಹೊರತು ಈ ಪ್ರಕರಣದ ವಸ್ತುಸ್ಥಿತಿಯು ಪ್ರಜೆಗಳಿಗಾಗದು; ದೇಶಬಂಧುಗಳ ಆರೋಪದ ಅಯಥಾರ್ಥತೆಯೂ ಹೊಳೆಯದು. ಆದಕಾರಣ, ಪಂಡಿತಜೀಯವರ ಟಿಪ್ಪಣಿಯನ್ನು ನಾವು ನಿರೀಕ್ಷಿಸಬೇಕಾಗಿದೆ.

---

೨. ಕರ್ನಾಟಕದ ಸ್ವಯಂಸೇವಕರ ಸಂಗಡಿಗರಾದ ಶ್ರೀ॥ ನಾನಾಸಾಹೇಬ ಹರ್ಡೀಕರರವರಿಗೆ ನಾಗಪುರದಲ್ಲಿ ಗಾಂಧಿ ದಿನಕ್ಕೆ ಸೆರೆಹಿಡಿದರು. ಡಾ॥ ಹರ್ಡೀಕರರಿಗೆ ಕಾಕ–ಪೋಕರನ್ನು ಹಿಡಿಯುವ ಕಲಮುಗಳ ಆಧಾರದಿಂದ ಹಿಡಿಯಲಾಗಿದೆ. ಡಾ॥ ಹರ್ಡೀಕರರಂಥ ಮಾನ್ಯ ಮುಂದಾಳುಗಳಿಗೆ ಈ ಕಲಮುಗಳಲ್ಲಿ ಸೇರಿಸುವದು ಕಾಯಿದೆಯ ಅಧಃಪಾತವೆಂದು ನಾವು ಅನ್ಯೋದೆಡೆಯಲ್ಲಿ ವಿಮರ್ಶಿಸಿರುವೆವು. ಡಾ॥ ಹರ್ಡೀಕರರು ಸತ್ಯಾಗ್ರಹಕ್ಕಾಗಿ ನಾಗಪುರಕ್ಕೆ ಹೋದವರಲ್ಲ. ನಾಗಪುರದ ಪರಿಸ್ಥಿತಿಯನ್ನು ಅಭ್ಯಾಸಿಸುವದೆ ಕರ್ನಾಟಕ ಕಮಿಟಿಯು ಅವರನ್ನು ಅಲ್ಲಿಗೆ ಕಳಿಸಿತ್ತು. ಸ್ವಯಂಸೇವಕರ ಚಾಲಕರು ಅವರಿದ್ದಿಲ್ಲ. ಬರೇ ಸ್ವಯಂಸೇವಕರ ಜೊತೆಯಲ್ಲಿದ್ದರು. ಈ ಹಕೀಕತನ್ನು ಗುರುವಾರ ತಾ. ೨೧ ಕ್ಕೆ ತನಖಿ ನಡೆದಾಗ ನ್ಯಾಯಾಸನಕ್ಕೆ ನಾರಾಯಣರಾಯರು ನಿವೇದಿಸಿದರು. ನ್ಯಾಯಮೂರ್ತಿಗಳು "ನೀವು ಕೌನ್ಸಿಲು ಪ್ರವೇಶವನ್ನು ವಿರೋಧಿಸುವ ಪಕ್ಷದವರಲ್ಲೇನು ?" ಎಂದು ಪ್ರಶ್ನಿಸಲು, "ಪಕ್ಷವನ್ನು ನಾನರಿಯೆ. ರಾಷ್ಟ್ರೀಯ ಸಭೆಯನ್ನು ನಿಷ್ಠೆಯಿಂದ ನಾನು ಹಿಂಬಾಲಿಸುವವನು." ಎಂದು ಹರ್ಡೀಕರರು ಉತ್ತರಿಸಿದರು. ನ್ಯಾಯಮೂರ್ತಿಗಳು ಒಂದು ದಿವಸ ವಿಚಾರ ಮಾಡಿ ಶುಕ್ರವಾರ ಮುಂಜಾವಿನ ೮ ಘಂಟೆಗೆ ನಾರಾಯಣರಾಯರಿಗೆ ಇತರರಂತೆ ಕ್ರಿ. ಪ್ರೊ. ಕೋ. ೧೦೯ (ಬಿ) ಕಲಮಿನನ್ವಯ ಅಪರಾಧಿಯೆಂದು ಠರಾಯಿಸಿ, ರೂಪಾಯಿ ೫೦೦ ರ ಸದ್ವರ್ತನದ ಜಾಮೀನು ಕರಾರು ಹಾಗು ರೂಪಾಯಿ ೫೦೦ರ ಇಬ್ಬ ಜಾಮೀನದಾರರು, ಹೀಗೆ ಜಾಮೀನು ಕೊಡಬೇಕೆಂದು ವಿಧಿಸಿದರು. ಜಾಮೀನು ಕೊಡದಿದ್ದವರಿಗೆ ೧ ವರ್ಷದ ವರೆಗೆ ಸಕ್ರಮ ಶಿಕ್ಷೆಯು ವಿಧಿಸಲಾಯಿತು. ಡಾ॥ ಹರ್ಡೀಕರರು ಜಾಮೀನು ಕೊಡದೆ, ಸೆರೆಮನೆಯನ್ನು ಸೇರಿದರು. ಡಾ॥ ನಾರಾಯಣರಾಯರು ಅಮೇರಿಕೆಯಲ್ಲಿದ್ದಾಗ ಪಂಜಾಬದ ಲಾಲಾ ಲಜಪತರಾಯರ ಕೈಕೆಳಗೆ ಬೆಲೆಯುಳ್ಳ ದೇಶಸೇವೆಯನ್ನು ಮಾಡಿ, ೧೯೨೧ ನೇ ಡಿಶಂಬರದಲ್ಲಿ ಕರ್ನಾಟಕಕ್ಕೆ ಬಂದು, ಸ್ವಾರ್ಥತ್ಯಾಗಪೂರ್ವಕ, ದೇಶಸೇವೆಯ ಸಂಕಟಮಯ ಕಂಕಣವನ್ನು ಧರಿಸಿದರು. ಅವರ ಪ್ರವೇಶದಿಂದ ಕರ್ನಾಟಕದಲ್ಲಿ ವಿಶೇಷ ಚೈತನ್ಯವುಂಟಾಗಿ ಕರ್ನಾಟಕವು ಜಾಗೃತಗೊಂಡಿತು. ಸ್ವಯಂಸೇವಕರನ್ನು ಒಟ್ಟುಗೂಡಿಸಲು ನಾರಾಯಣರಾಯರು ನಿಮಿತ್ತಕಳಗೆ ಪ್ರವಾಸಮಾಡಿದ್ದು, ಇನ್ನೂ ಎಲ್ಲರ ಸ್ಮರಣೆಯಲ್ಲಿರಬೇಕು. ಹುಬ್ಬಳ್ಳಿಯಲ್ಲಿ ವಾರ್ತಾಪ್ರಸಾರಕ ಸಂಘವನ್ನು ಸ್ಥಾಪಿಸಿದವರೂ ಅವರೇ. ಅದರ ವಿಸ್ತಾರವಾದ ಮಾಹಿತಿಯ ಕನ್ನಡ ದೈನಿಕವನ್ನು ಹೊರಡಿಸುವದು ಅವರ ಮಹತ್ವಾಕಾಂಕ್ಷೆಯಿತ್ತು. ಇಂಥ ಸಾತ್ವಿಕ ದೇಶಸೇವಕರನ್ನು ಕರ್ನಾಟಕ ಮಾತೆಯು ಗಾಂಧಿ ದಿನದ ಶುಭ ಸಮಯದಲ್ಲಿ ಸೆರೆಮನೆಗೆ ಕಳುಹಿಸಿ, ಮಹಾತ್ಮರನ್ನು ಪ್ರಸನ್ನಗೊಳಿಸಿದೆ. ಡಾ॥ ನಾರಾಯಣರಾಯರ ಬಂಧನದಿಂದ ಕರ್ನಾಟಕವು ರಾಷ್ಟ್ರಧ್ವಜದ ಸಂಗ್ರಾಮವನ್ನು ವಿಶೇಷ ಉತ್ಸಾಹದಿಂದ ನಡಿಸಲುದ್ಯುಕ್ತವಾಗಲೆಂದು ನಾವು ಮನಃಪೂರ್ವಕ ಬಯಸುತ್ತೇವೆ.

---

೩. ಕಳೆದ ಮೇ ತಾ. ೨೦ ನೇಗೆ ಧಾರಿಯಾಲವಾಲಾ ಎಂಬ ಹಳ್ಳಿಯಲ್ಲಿ ಪೋಲೀಸರಿಗೂ ಹಳ್ಳಿಗರಿಗೂ ಬಡದಾಟ ಬಿದ್ದು, ಪೋಲೀಸರು ಗುಂಡು ಹಾರಿಸಿದರು. ಸ್ಥಾನಿಕ ಪೋಲೀಸರಿಗೆ ಹಳ್ಳಿಗರು ಸೋಲಿಸಿದ್ದರಿಂದ ಟಿಸ್ಸಾ, ಮುಜಫರನಗರ, ಬಿಜನೂರುಗಳಿಂದ ಪೋಲೀಸ ದಳಗಳು ಧಾರಿಯಾಲವಾಕ್ಕೆ ರವಾನೆಯಾದವು. ಈ ದಳಗಳು ಹಳ್ಳಿಗರನ್ನು ಅಂಕೆಯಲ್ಲಿ ತಂದವು. ಅನೇಕರಿಗೆ ಸೆರೆಹಿಡಿದು, ಈಗ ತನಖಿ ನಡೆದದೆ. ಈ ಅನರ್ಥದ ಸಮಗ್ರ ವೃತ್ತಾಂತವನ್ನು ಚೌಕಶಿ ಮಾಡಲು ಸಂಯುಕ್ತ ಪ್ರಾಂತಿಕ ಕೌನ್ಸಿಲಿನ ಮೆಂಬರರಾದ ಪಂಡಿತ ಹೃದಯನಾಥ ಕುಂಝ್ರು-ರಾಯ ಬಹಾದ್ದೂರ ಸೀತಾರಾಮರವರೂ, ರಾ॥ ಬಿಷಂಭರ ದಯಾಳರವರೂ ಮುಝಫರನಗರ, ಧಾರಿಯಾಲವಾಲಾಗಳನ್ನು ಸಂದರ್ಶಿಸಿ, ಹಳ್ಳಿಗರಿಂದ ಪುರಾವೆಯನ್ನು ಸಂಗ್ರಹಿಸಿ, ಒಂದು ಟಿಪ್ಪಣಿಯನ್ನು ಪ್ರಕಟಿಸಿರುವರು. ಪೋಲೀಸರಗೂಡ ಕಲಹವು ಏಕೆ ಎದ್ದಿತು? ಜನಸಂದಣಿಯ ಮೇಲೆ ಪೋಲೀಸರು ಗುಂಡು ಹಾರಿಸುವಷ್ಟು ಪರಿಸ್ಥಿತಿಯು ಇಕ್ಕಟ್ಟಿನದ್ದಾಗಿತ್ತೇನು? ಎಂಬ ಪ್ರಶ್ನೆಗಳನ್ನು ನ್ಯಾಯಮೂರ್ತಿಗಳು ತನಖಿನಡಿಸುವಾಗ ಚರ್ಚಿಸದೇ ಕಾದ್ದರಿಂದ, ಅದನ್ನು ಕುಂಝ್ರು ಮೊದಲಾದವರು ಚರ್ಚಿಸಲಿಲ್ಲ. ಆದರೆ, ಧಾರಿಯಾಲವಾಲಾ ಪೋಲೀಸರ ಸಹಾಯಕ್ಕೆ ಹೋದ ಪೋಲೀಸ ದಳಗಳು ಅಲ್ಲಿ ಆಚರಿಸಿದ ಅತ್ಯಾಚಾರಗಳನ್ನು ಪಂಡಿತ ಕುಂಝ್ರುರವರು ಪುರಾವೆಯನ್ನು ಸಂಗ್ರಹಿಸಿ ಪ್ರಕಟಿಸಿರುವರು. ಟಿಸ್ಸಾದಿಂದ ಹೋದ ಪೋಲೀಸ ದಳದ ಸೇನಾಪತಿಗಳು ಡೆಪ್ಯುಟಿ ಸುಪರಿಂಟೆಂಡೆಂಟರಾದ ಗುಲಾಮ ಹುಸೇನರವರು. ಇವರು ತಮ್ಮೊಡನೆ ಸುಮಾರು ೫೦೦ ಮಂದ ಕಾಕ–ಪೋಕರನ್ನು ಕರಕೊಂಡು ಧಾರಿಯಾಲವಾಲಾಕ್ಕೆ ಕೂಚು ಮಾಡಿದರು. ಇವರು ಪ್ರಾಮುಖ್ಯವಾಗಿ ಚಮ್ಹಾಣರ ಮನೆಗಳನ್ನೇ ಲೂಟಿ ಮಾಡಿದರು. ಯಾಕಂದರೆ, ಅವರೇ ಸ್ಥಾನಿಕ ಪೋಲೀಸರನ್ನು ಬಡೆದಿದ್ದರೆಂದು ಗ್ರಹಿಕೆಯಾಗಿತ್ತು. ಇದೆಲ್ಲ ಪೋಲೀಸರ ತಿಳುವಳಿಕೆಯಿಂದಲೇ ಆಗಿರಬೇಕೆಂದು ಕುಂಝ್ರು ಮೊದಲಾದವರ ಮತವಿದೆ. ಇನ್ನೊಂದು ಸಂಗತಿಯನ್ನೂ ಕುಂಝ್ರುರವರು ನಮೂದಿಸಿರುವರು. ಪೋಲೀಸರ ಸಂಗಡ ಹೋದ ಬದಮಾಶರು ಸ್ತ್ರೀಯರ ಮೇಲೆ ಸಹ ಅತ್ಯಾಚಾರಗಳನ್ನು ಆಚರಿಸಿದರೆಂದು ಅವರು ಚೌಕಶಿ ಮಾಡಿ ನಮೂದಿಸಿರುವರು. ಇಷ್ಟು ಭಯಪ್ರದ ಸ್ಥಿತಿಯಾದರೂ, ಡಿ॥

ಮೆಜಿಸ್ಟ್ರೇಟರಿಗೆ ಪ್ರಜೆಗಳ ವಿಪನ್ನಾವಸ್ಥೆಯನ್ನು ಚೌಕಶಿ ಮಾಡಲು ಒಂದು ದಿವಸದ ಪುರಸತ್ತು ಸಹ ಸಿಗಲಿಲ್ಲ. ಧಾರಿಯಾಬಾಲಾ ಹಳ್ಳಿಯಲ್ಲಿ ಬ್ರಾಹ್ಮಣ, ಚವ್ಹಾಣ (ರಜಪೂತ), ವೈಶ್ಯ, ಜೋಗಿ ಮೊದಲಾದ ೧೭೦೦ ವರೆಗೆ ಜನಸಂಖ್ಯೆಯಿದೆ. ಚವ್ಹಾಣ-ರಜಪೂತರೇ ಈ ಗ್ರಾಮದ ಮುಖ್ಯ ನಿವಾಸಿಗಳು. ಈ ಗ್ರಾಮದ ಉತ್ಪನ್ನವು ಸುಮಾರು ಅರ್ಧ ಲಕ್ಷವಿದ್ದು, ಜನರು ಸಮೃದ್ಧರೆಂದೆನ್ನಲಡ್ಡಿಯಿಲ್ಲ. ಇಂಥ ಸಂಪನ್ನ ಗ್ರಾಮವು ಈಗ ನಿರ್ಜನವಾಗಿದೆಂದು ಕುಂಝುರು ಮೊದಲಾದವರು ನಮೂದಿಸುತ್ತಾರೆ. ಈ ಪ್ರಕರಣವನ್ನು ವಿಶೇಷ ಚೌಕಶಿಯಿಂದ, ಸೂಕ್ಷ್ಮವಾಗಿ ವಿಚಾರಿಸಲು, ದಿಲ್ಲಿಯ ಪ್ರಾಂತಿಕ ಕಾಂಗ್ರೆಸ ಕಮಿಟಿಯು ಚೌಕಶಿ ಮಂಡಳವನ್ನು ನೇಮಿಸಿದೆ. ಅದರ ವರದಿಯು ಪ್ರಕಟಗೊಂಡ ಮೇಲೆ ನಾವು ಈ ಬಗ್ಗೆ ವಿಸ್ತರಶಃ ಸಮಾಲೋಚಿಸುವೆವು.

---

೬. ಶಿರ್ಶಿ ತಾಲೂಕ ಪೈಕಿ ಬಕ್ಕಳದ ಪೋಲೀಸ ಪಟೇಲರಾದ ರಾ। ತಿಮ್ಮಣ ಭಟ್ಟ ವೆಂಕಭಟ್ಟರು ಸಧ್ಯಕ್ಕೆ ಸರಕಾರಿ ಸೇವಾಶೃಂಖಲೆಯಿಂದ ಮುಕ್ತ ಮಾಡಲ್ಪಟ್ಟಿರುವರು. ಇವರು ಅಧಿಕಾರಾರೂಢರಾಗಿರುವಾಗ ಮಾಡಿದ ಭಯಂಕರ ಅಪರಾಧಗಳ ಬಗ್ಗೆ ಅವರಿಗೆ ನಿವೃತ್ತ ಮಾಡಿರುವರೆಂದು ತಿಳಿಯುತ್ತದೆ. ಇವರು ಶಿರ್ಶಿಯ ೬ ನೇ ವರ್ಗದ ಮಾಮಲೇದಾರರ ಮುಂದೆ ತಾ ೧೯—೬—೧೯೨೩ ನೇಗೆ ಕೊಟ್ಟ ಜಬಾನಿಯು ವಿಶೇಷ ಮಹತ್ವದ್ದಿದೆ. ಈ ಜಬಾನಿಯಲ್ಲಿ ಸರ್ಕಲ್ ಇನಸ್ಪೆಕ್ಟರರ ಬಗ್ಗೆ ೩ ಆಣೆ, ಶ್ಯಾನಭೋಗರ ಬಗ್ಗೆ ೫ ಆಣೆ ಪ್ರಜೆಗಳಿಂದ ವಸೂಲ ಮಾಡಿದ್ದು ಯಾವ ಬಗ್ಗೆಂದು ತಮಗೆ ಗೊತ್ತಿಲ್ಲೆಂತಲೂ, ಆ ರಕಮುಗಳನ್ನು ಜನರು ಖುಷಿಯಿಂದ ಕೊಟ್ಟಿರಬಹುದೆಂತಲೂ ಹೇಳಿ, ಸರ್ಕಲ್ ಇನಸ್ಪೆಕ್ಟರ ರಾ। ಸಣ್ಣಪ್ಪ ನಾಯಕ, ಶ್ಯಾನಭೋಗ ರಾ। ವಿಷ್ಣು ನಾರಾಯಣ ಇವರಿಗೆ ಸದರಿ ಹಣವನ್ನು ತಾವು ಸಲ್ಲಿಸಿದ್ದೇವೆಂತಲೂ ಉತ್ತರವನ್ನಿತ್ತಿರು. ಪಟೇಲರು ಹಳ್ಳಿಗಳಲ್ಲಿ ಪ್ರಜೆಗಳಿಗೆ ಯಾವ ಪರಿಯಿಂದ ಸುಲಿಯುತ್ತಾರೆಂಬುದಕ್ಕೆ ಪಟೇಲ ತಿಮ್ಮಣ ಭಟ್ಟರು ಉದಾಹರಣೆಯಿಂದ ಸ್ಪಷ್ಟೀಕರಿಸಿರುವರು. ಕೆಳ ನೌಕರರು ಪ್ರಜೆಗಳನ್ನು ಹೇಗೆ ಸುಲಿಯುತ್ತಾರೆಂಬುದಕ್ಕೆ ಇದೊಂದು ಮಾದರಿಯು. ಈ ಸುಲಿಗೆಯ ಬಗ್ಗೆ ಕೇವಲ ಕೆಳ ನೌಕರರೇ ಜವಾಬದಾರರೆಂದು ಯಾರೂ ಹೇಳಲಾರರು. ಯಾಕೆಂದರೆ, ನೌಕರಶಾಹಿಯಲ್ಲಿ ಕೆಳ ನೌಕರರ ಸ್ಥಿತಿಯು ತೀರ ಇಕ್ಕಟ್ಟಿನಲ್ಲಿದೆ. ಅವರಿಗೆ ಹೊಟ್ಟೆಗೆ ಸಾಲುವಷ್ಟು, ಅಧಿಕಾರ ಸ್ಥಾನದ ಮರ್ಯಾದೆಯಿಂದ ಕಾಪಾಡುವಷ್ಟು, ಸಂಬಳ ಸಹ ದೊರಕುವದಿಲ್ಲ. ಸರಕಾರವು ದೊಡ್ಡ ನೌಕರರ ಸಂಬಳವನ್ನು ಏರಿಸುವದರಲ್ಲಿ ವಿಶೇಷ ಜಾಗರೂಕತೆಯನ್ನು ಕೈಕೊಳ್ಳುತ್ತದೆ. ಹೊರತು, ಶ್ಯಾನಭೋಗ ಮೊದಲಾದ ಕೆಳ ನೌಕರರ ದುಃಸ್ಥಿತಿಯನ್ನು ವಿಚಾರಿಸುವದಿಲ್ಲ. ಅದರಿಂದಲೇ ಅವರು ಅಡ್ಡ ಹಾದಿಯನ್ನು ಹಿಡಿಯುತ್ತಾರೆ. ಸರಕಾರವು ಈ ಬಗ್ಗೆ ತಕ್ಕ ಯೋಜನೆಯನ್ನು ಕೈಕೊಂಡು, ಕೆಳ ನೌಕರರಿಗೆ ಹೊಟ್ಟೆಗೆ ಹಾಗು ಯೋಗ್ಯತೆಗೆ ಸಾಲುವಷ್ಟು ಸಂಬಳವನ್ನು ಕೊಟ್ಟ ಹೊರತು, ಇಂಥ ಪ್ರಕಾರಗಳು ಅಳಿಯಲಿಕ್ಕಿಲ್ಲ. ಕೊಟ್ಟ ಸಂಬಳವು ಹೊಟ್ಟೆಗೆ ಸಾಲದ್ದರಿಂದ, ಬಡ ಪ್ರಜೆಗಳು ಕೆಳ ನೌಕರರ ಅಧಿಕಾರದರ್ಪಕ್ಕೆ ಬಲಿಬಿದ್ದು, ಸುಲಿಯಲ್ಪಡುತ್ತಾರೆ. ಕಾಯಿದೇಶೀರ ರೀತಿಯಿಂದ ತೆರುವ ಕರದ ಹೊರೆ ಬೇರೆ; ಕೆಳ ನೌಕರರ ಸುಲಿಗೆಯ ಹೊರೆ ಬೇರೆ, ಹೀಗೆ ಕಾಯಿದೇಶೀರ ಬೇ-ಕಾಯಿದೇಶೀರ ಕರಗಳಿಂದ ಪ್ರಜೆಗಳು ನೊಂದುಹೋಗಿರುವರು. ಈ ಪ್ರಕರಣದ ಮೇಲಿಂದ ಅಪರಾಧಿಗಳನ್ನು ದಂಡಿಸುವಾಗ, ಸರಕಾರವು ಅಪರಾಧದ ಮೂಲ ಕಾರಣವನ್ನು ಪರಿಶೋಧಿಸಿ, ಅದನ್ನೇ ತಿದ್ದಲು ತಕ್ಕ ಉಪಾಯಗಳನ್ನು ಕೈಕೊಳ್ಳಬೇಕೆಂದು ನಮ್ಮ ಸೂಚನೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆಗಾಲವು ಈ ವರ್ಷ ಚಲೋ ರೀತಿಯಿಂದ ಹಿಡಿಸಹತ್ತಿದೆ. ವೈಶಾಖ ಮಾಸದ ಸೆಕೆ, ಬಿಸಿಲು, ರಾತ್ರಿಗೆ ಸ್ವಚ್ಛ ಬೆಳದಿಂಗಳು, ಗಾಳಿಯು ಸುಳಿದಾಟದಿಂದ ಬಂದ ಬಂದ ಮೋಡಗಳೆಲ್ಲ ಬಯಲಾಗಿ, ಮುಗಿಲು ನಿರಭ್ರವಾಗುತ್ತಿದ್ದ, ರೈತರು ಗದ್ದೆಗಳಲ್ಲಿ ಜಲಸಂಚಯವಿಲ್ಲದೆ, ಬಹಳೇ ಪೇಚಾಡುತ್ತಿದ್ದರು. ಶನಿವಾರ ರಾತ್ರಿ ವೃಷ್ಟಿಯಾಯಿತು. ರವಿವಾರಕ್ಕೂ ಸ್ವಲ್ಪ ಮಳೆಯಾಯಿತು ಪುನಃ ಬಿರುಗಾಳಿಯುಬ್ಬಿ ಮೋಡಗಳು ಪಾರಾದವು. ಮೊನ್ನೆಯಿಂದ ಪುನಃ ಮಳೆಗಾಲದ ಭಾಸವಾಗುತ್ತಿದೆ. ಅಹೋರಾತ್ರಿ ವೃಷ್ಟಿಯಾಯಿತು. ನಿನ್ನೆಯೂ ಸಾಧಾರಣ ಮಳೆಬಿತ್ತು. ನಿನ್ನೆ ರಾತ್ರಿ ಚಲೋ ಗಾಳಿ ಮಳೆ ಬಿತ್ತು. ಇಂದೂ ಮಳೆಬೀಳುವ ಸುಚಿನ್ಹಗಳು ತೋರುತ್ತಿವೆ. ಈಗ ರೈತರು ನೆಟ್ಟಿಯ ಕೆಲಸಕ್ಕೆ ತೊಡಗಲುದ್ಯುಕ್ತರಾಗಿರುವರು. ಈ ವಾರದಲ್ಲಿ ೪-೩೩ ಇಂಚು ಮಳೆ ಬಿತ್ತು.

ಚಂದಾವರ ಸೀಮೆಯ ಶ್ರೀ ಮುಖ್ಯಪ್ರಾಣ ಹನುಮಂತ ದೇವರು ಕಳೆದ ಶನಿವಾರಕ್ಕೆ ಇಲ್ಲಿ ಆಗಮಿಸಿದರು. ಭಕ್ತ ಜನರ ಸತ್ಕಾರಗಳನ್ನು ಸ್ವೀಕರಿಸಿ, ಶ್ರೀ ದೇವರ ಸ್ವಾರಿಯು ಮನ್ನಳ್ಳಿ ಗ್ರಾಮಕ್ಕೆ ನಿನ್ನೆ ಸಾಯಂಕಾಲ ತೆರಳಿತು.

ಇಲ್ಲಿಯ ರಾ। ಸುಬ್ರಾಯ ಲಕ್ಷ್ಮಣ ಕಾಮತ (ಸುಬ್ರಾಯ ಮಾಮಾ) ಇವರು ಕಳೆದ ಶನಿವಾರ ಸಾಯಂಕಾಲ ಅಕಲ್ಪಿತ ರೀತಿಯಿಂದ ತೀರಿಕೊಂಡರು. ವಾಡಿಕೆಯಂತೆ ತಮ್ಮ ಕೆಲಸವನ್ನೆಲ್ಲ ತೀರಿಸಿಕೊಂಡು, 'ಮೈ ಉರಿಯುತ್ತದೆ, ತಣ್ಣೀರಿನ ಜಳಕ ಮಾಡುತ್ತೇನೆ' ದು ಬಾವಿಗೆ ಹೋಗಿ ಜಳಕ ಮಾಡುತ್ತ, ಮಾಡುತ್ತ ಪ್ರಾಣ ಬಿಟ್ಟರು. ಪುಣ್ಯ ಪುರುಷರು.'

ಹೊಸ ಮಾಮಲೇದಾರರಾದ ರಾ। ಗಣಪತ ಶಿವರಾಮ ಹೆಗಡೆಯವರು ತಾ. ೨೬ ನೇ ಮಂಗಳವಾರಕ್ಕೆ ಚಾರ್ಜು ವಹಿಸಿಕೊಂಡಿರುತ್ತಾರೆ.

ಪಿ. ಜೆ. ಮೆಂಟಾರ ಸರ್ವಿಸಿನ ಮೋಟಾರ ಬಂಡಿಯು ಕಳೆದ ಗುರುವಾರ ಮಧ್ಯಾನ್ಹಕ್ಕೆ ಒಂದು ಗೋವಿನ ಮೇಲಿಂದ ಹಾದುಹೋಗಿ, ಆಕಳ ಟೊಂಕಕ್ಕೆ ಚಲೋ ದುಖಾಪತು ಮಾಡಿದೆ. ಬಡ ಗೋವು ನರಳುತ್ತಿದೆ.

ಸಾಭಾರ ಸ್ವೀಕಾರ.

ತರುಣ ಭಾರತ— (ಮರಾಠಿ ಮಾಸಿಕ) ಮೇ ತಿಂಗಳಿನ ಸಂಚಿಕೆ. ಸಂಪಾದಕ-ಪ್ರಕಾಶಕ— ಶ್ರೀ। ಧೋಂಡೋ ರಾಜಾರಾಮ ಠಾಕೂರ, ಬೆಳಗಾಂವ. ವಾರ್ಷಿಕ ಚಂದಾ ರೂಪಾಯಿ ೨-೬-೦; ವಿದ್ಯಾರ್ಥಿಗಳಿಗೆ ರೂ ೨-೨-೦.

ಸಿದ್ದಾಪುರ— ತಾ. ೧೮ನೇ ಗಾಂಧಿ ದಿನಕ್ಕೆ ಈ ಮೊದಲಿನಂತೆ ಮಹಾತ್ಮರ ಭಾವ ಚಿತ್ರದೊಂದಿಗೆ ಊರೆಲ್ಲ ಭಜನೆ ಮೇಲಿಂದ ತಿರುಗಿ ರಾಷ್ಟ್ರೀಯ ಕಾರ್ಯಾಧ್ಯಕ್ಷರೂ, ಕಾಂಗ್ರೆಸ ಪುಢಾರಿಗಳೂ ೫—೦—೦ ರೂಪಾಯಿ ಟಿ. ಸ್ವ. ಫಂಡು ವಸೂಲಮಾಡಿದರು.

ಈ ಮೊದಲೇ ಗ್ರಾಮ ಕಾಂಗ್ರೆಸ ಕಮಿಟಿಗಳಿಗೆ ತಿಳಿಸಿದ ಪ್ರಕಾರ, ತಾ. ೨೧ನೇ ಗುರುವಾರ ತಾಲೂಕಾ ಕಮಿಟಿಯು ರಾಷ್ಟ್ರೀಯ ಶಾಲೆಯಲ್ಲಿ ಕೂಡಿತ್ತು. ಅಜಮಾಸ ಕಮಿಟಿಗೆ ೪೦ ಮಂದಿ ಜನರಿದ್ದರು. ಶ್ರೀ। ದೇವ ಇವರು ತಾಲೂಕಾ ಕಮಿಟಿಯನ್ನು ಕೂಡಿಸಿದ ಉದ್ದೇಶವನ್ನು, ಈ ವರೆಗಿನ ಕಾಂಗ್ರೆಸದ ಸಂಕ್ಷಿಪ್ತ ಇತಿಹಾಸವನ್ನೂ ತಿಳಿಸಿಹೇಳಿದರು. ನಂತರ ನಾಗಪುರದ ಸತ್ಯಾಗ್ರಹಕ್ಕೆ ಇಲ್ಲಿಂದ ನಾಲ್ಕು ಜನರನ್ನು ಈಗ ತುರ್ತ ಕಳುಹಿಸುವಂತೆ ವ್ಯವಸ್ಥೆ ಮಾಡಲಾಯಿತು.

ತಾ. ೨೩ನೇ ಶನಿವಾರ ಮುಷ್ಟಿ ಫಂಡು ಅಕ್ಕಿ ಗಿದ್ದ ೧೨ ನಗದಿ ೦—೭—೪ ಬಂದಿರುತ್ತದೆ. ಅದರ ಸದಿ ದಿವಸವೇ ಊರಲ್ಲಿ ಅಜಮಾಸ ರೂಪಾಯಿ ೨೦—೦—೦ ಟಿ. ಸ್ವ. ಫಂಡು ವಸೂಲ ಆಗಿರುತ್ತದೆ.

ತಾ. ೨೪ನೇ ರವಿವಾರ ಅಧ್ಯಕ್ಷ ಶ್ರೀ। ಚಂದ್ರಶೆಟ್ಟಿ ಹರಿಯಪ್ಪ ಮೊದಲಾದವರು ಕಾಂಗ್ರೆಸ ಪ್ರಚಾರಕ ಕೆಲಸಕ್ಕೆ ಬೇಡ್ಕಣಿಗೆ ಹೋಗಿದ್ದಾರೆ.

ಕಳೆದ ವರ್ಷ ಊರೊಳಗಿನ ಕಾಲುವೆಗಳ ನೀರು ಸರಿಯಾಗಿ ಹೋಗುವಂತೆ ಲೋಕಲ್ ಬೋರ್ಡದವರು ತೆಗೆಸಿದ್ದರು. ಆದರೆ ಈ ವರ್ಷ ಕಾಲುವೆಗಳ ಕೆಸರನ್ನು ತೆಗೆಯದ್ದರಿಂದ ನೀರು ಸರಿಯಾಗಿ ಕಾಲುವೆಯಲ್ಲಿ ಹೋಗುವದು ಬಿಟ್ಟು, ರಸ್ತೆಯ ಮೇಲೆ ನಿಂತು ಬಹಳ ಕಸರಾಗಿದೆ. ಇತ್ತ ಲೋಕಲ್ ಬೋರ್ಡದವರು ಲಕ್ಷ ಕೊಡುವರೋ?

ಕಳೆದ ಅಜಮಾಸ ಒಂದು ತಿಂಗಳ ಹಿಂದೆ ಜಿಲ್ಹಾಧಿಪತಿಗಳು ಥಕ್ಕನೆ ಬಂದು, ತಾಲೂಕ ಕಚೇರಿಯ ಗೇಟ ತಪಾಸ ಮಾಡಿದ ಕಾರ್ಯದಲ್ಲಿ ಒಬ್ಬ ಸಿಪಾಯಿಯ ಹೆಸರು ಟಪ್ಪಣಮಾಡಿಕೊಂಡು ಹೋಗಿದ್ದರಷ್ಟೇ! ಅವನಿಗ ಈಗ ಡಿಗ್ರೇಡ ಮಾಡಿದ್ದಾರಾಗಿ ತಿಳಿಯುತ್ತದೆ.

ಸದಾಶಿವಗಡ— ಕಾಸನಾ ಜೆಟ್ಟಿಯಲ್ಲಿ ನಮ್ಮ ಜಿಲ್ಹಾ ಬೋರ್ಡಿನವರು ಲೋಕಲ ಫಂಡ ದರವನ್ನು ೧ ಆಣೆಯಿಂದ ೧॥ ಆಣೆಯನ್ನು ಠರಾಯಿಸಿದ ಲಾಗಾಯ್ತು ಜನರಲ್ಲೆಲ್ಲ ತೀವ್ರ ಅಸಂತೋಷವು ದೃಷ್ಟಿಗೆ ಬೀಳಹತ್ತಿದೆ. ಇದನ್ನು ಜಾಹೀರವಾಗಿ ವ್ಯಕ್ತಪಡಿಸಿ ಆ ಠರಾವನ್ನು ನಿಷೇಧಿಸುವ ದೆಸೆಯಿಂದ ಇಲ್ಲಿ ತಾ. ೨೩ನೇ ದಿವಸ ಸಾಯಂಕಾಲ ಯಾವತ್ತೂ ಅಂದಾಯ ತೆರುವವರದೊಂದು ದೊಡ್ಡ ಸಭೆಯು ಶ್ರೀ। ಸುಬ್ರಾಯ ಅನಂತ ವರ್ಟೀ ಇವರ ಅಧ್ಯಕ್ಷತೆಯ ಕೆಳಗೆ ನೆರೆಯಿತು. ಸಭೆಯಲ್ಲಿ ಕೆಲ ಪ್ರಮುಖರು, ಸರಕಾರದ ಈ ಅನ್ಯಾಯದ ಹಾಗೂ ಗರಿಬ ಲೋಕರ ನಾಶಗಳನ್ನುಂಟುಮಾಡುವ ವಿಚಾರದ ಬಗ್ಗೆಯೂ ನಿಷೇಧಪರ ಭಾಷಣಗಳಾದವು. ಕಟ್ಟಕಡೆಗೆ ನಿಷೇಧವನ್ನು ಪ್ರದರ್ಶಿಸುವ ಠರಾವನ್ನು ಸರ್ವಾನುಮತದಿಂದ ಪಾಸ ಮಾಡಿ, ಅದನ್ನು ನಮ್ಮ ಜಿಲ್ಹಾ ಪ್ರೆಸಿಡೆಂಟರಿಗೂ ಮೇ। ಕಲೆಕ್ಟರರಿಗೂ ಕಳಿಸಬೇಕೆಂದು ಠರಾಯಿಸಿದ ಮೇಲೆ ಸಭೆಯು ಮುಗಿಯಿತು. ಇದೇ ರೀತಿ ಈ ವಾರದಲ್ಲಿ ಸುಂಕೇರಿ, ಬಾಡ, ಹಳಗೆ, ಅಂಗಡಿ, ಮಲ್ಲಾಪೂರ, ವಗೈರೆ ಕಡೆಗಳಲ್ಲಿ ಸಭೆಗಳಾದವು.

ಮುಂಡಗೋಡ— ಮಳೆ ಏನೂ ಇಲ್ಲ. ಹೊಂಡ-ಬಾವಿಗಳೆಲ್ಲ ಬತ್ತಿ ಹೋಗಿವೆ. ಅವುಗಳಲ್ಲಿಯ ಕೆಸರು ತೆಗೆಯುವ ಕೆಲಸವು ನಡೆದಿದೆ. ಹವಾಮಾನ ನೆಟ್ಟಗಿದೆ.

ಇಲ್ಲಿಯ ಶಿರಸ್ತೇದಾರ ರಾ। ಎಮ್. ಎಸ್. ಮುಶಭಟ್ಲು ಕಳರವರು ಧರ್ಮಶಾಲೆಯಲ್ಲಿ ಬಿಡಾರ ಮಾಡಿರುವರು ೮-೯ ತಿಂಗಳುಗಳಾದರೂ, ಬಿಡಾರ ಸಿಗದಿದ್ದ ಮೂಲಕ ಧರ್ಮಶಾಲೆಯಲ್ಲಿಯೇ ಉಳಕೊಂಡಿರುವರಂತೆ

— ಪುನಃ ಸರ್ವಾಧಿಪತಿಗಳು ರಾಜನಾಮೆ ಕೊಡುವದರಿದ್ದಾರೆಂದು ವಿಲಾಯತಿಯಲ್ಲಿ ಸುದ್ದಿ ಎದ್ದಿದೆ. ಡ್ಯೂಕ ಆಫ್ ಡಿವೊನ್‌ಶಾಯರರವರಾಗ ಸರ್ವಾಧಿಪತಿಗಳಾಗಿ ನೇಮಿಸುವರೆಂತಲೂ ಸುದ್ದಿ. ಈ ಸುದ್ದಿಯನ್ನು ಕೇಳಿ ಸಿಮಲಾದಲ್ಲಿ ಅಧಿಕಾರಿಗಳೆಲ್ಲ ನಗೆ ಮಾಡುತ್ತಾರೆ.

ವೃತ್ತಸಾರ.

— ಎಟನಾ ಪರ್ವತದಲ್ಲಿ ಕಳೆದ ಸೋಮವಾರ ತಾ. ೧೮ ನೇಗೆ ಜ್ವಾಲಾಸ್ಫೋಟವಾಗಿ ಅನೇಕ ಗ್ರಾಮಗಳು ಉಧ್ವಸ್ತವಾದವು. ಸ್ಫೋಟದ ಮೊದಲು ೫ ಸರ್ತಿ ಭಯಂಕರ ಅಬ್ಬರವಾಯಿತು. ಜನರೆಲ್ಲರೂ ಭೀತಿಯಿಂದ ಪಲಾಯನ ಮಾಡಿದರು. ಕೂಡಲೆ, ತಪ್ತ ಲಾವಾರಸವು ಹೊರಬಿದ್ದ, ಹಳ್ಳಿಗಳನ್ನೆಲ್ಲ ಭಸ್ಮಗೊಳಿಸಿತು. ೧೦ ಮೈಲುಗಳ ಪರಿಘದಲ್ಲಿಯ ಗ್ರಾಮಗಳೆಲ್ಲ ಸುಟ್ಟು ಬೂದಿಯಾಗಿವೆ. ಪರ್ವತ ಮುಖದೊಳಗಿಂದ ಉರಿಯುವ ಕಲ್ಲುಗಳ ವೃಷ್ಟಿಯಾಯಿತು. ಕಪ್ಪು ಧೂಳಿ, ಹೊಗೆ, ಉಗಿ ಇವುಗಳಿಂದ ಈ ಪ್ರದೇಶವೆಲ್ಲ ವ್ಯಾಪ್ತವಾಗಿದೆ. ಈಗ ಲಾವಾರಸದ ಪ್ರಗತಿಯು ಕುಂಠಿತವಾಯಿತು. ಜ್ವಾಲಾ ಸ್ಫೋಟವು ಈಗ ಶಾಂತಹೊಂದಿತೆನ್ನಲಡ್ಡಿಯಿಲ್ಲ. ಇದರಿಂದ ೨೦,೦೦೦ ಜನರು ಮನೆಮಾರುಗಳಿಲ್ಲದೆ ಪೇಚಾಡುತ್ತಿರುವರು.

— ಪ್ರಾಥಮಿಕ ಶಿಕ್ಷಕರ ದೂರುಗಳನ್ನು ದಿವಾಣರಿಗೆ ತಿಳಿಸುವರೆ ಮುಂಬಯಿ ಇಲಾಖಾ ಪ್ರಾಥಮಿಕ ಶಿಕ್ಷಕ ಸಂಘದ ಅಧ್ಯಕ್ಷರಾದ ಪ್ರೊ|| ವಾಮನರಾವ ಕಾಳೆಯವರು ಶಿಕ್ಷಣ ಮಂತ್ರಿಗಳಾದ ನಾಮದಾರ ರಘುನಾಥರಾವ ಪರಾಂಜಪೇಯವರ ಭೆಟ್ಟಿಯನ್ನು ಇಂದಿಗೆ ಪಡೆಯುವವರಿದ್ದಾರೆ.

— ರಾವಸಾಹೇಬ ಡಾ|| ಗೋಪಾಲಕೃಷ್ಣನಾಯಡುರವರು ಅಕ್ಕಲಕೋಟ ಮಹಾರಾಜರಿಗೆ ವಿಷಪ್ರಯೋಗ ಮಾಡಿದ ಪ್ರಕರಣದಲ್ಲಿ ಅವರಿಗಾದ ಶಿಕ್ಷೆಯ ತೀರ್ಪಿನ ಮೇಲೆ ಪುಣೆಯ ಸೇಶನ್ಸ ಜಡ್ಜರಗೂಡ ಮಾಡಿದ ಅಪೀಲ ತನಿಖೆಯು ಕಳೆದ ಗುರುವಾರ ತಾ ೨೧ ಕ್ಕೆ ನಡೆದು, ಅಪೀಲು ತೆಗೆದು ಹಾಕಲಾಯಿತು. ಶಿಕ್ಷೆಯು ಕಾಯಂ.

— ಮುಂಬಯಿಯ ಅಕ್ಕಿಯ ಹಾಗು ಕಟ್ಟಿಗೆಯ ವ್ಯಾಪಾರಿಗಳಾದ ಶ್ರೀ|| ರಣಛೋಡದಾಸ ಗಾಂಧೀಯವರು ಮಾಹೂನಾದಲ್ಲಿ ವನಿತಾವಿಶ್ರಾಮಸಂಸ್ಥೆಯನ್ನು ಸ್ಥಾಪಿಸುವರೆ ಸಾಲಿಯಾನ ೩,೦೦೦ ಬಡ್ಡಿ ಬರುವಷ್ಟು ರಕಮನ್ನು ದಾನ ಮಾಡಿರುವರು. ಇಲ್ಲಿ ಸ್ತ್ರೀಯರಿಗೆ ಔದ್ಯೋಗಿಕ ಶಿಕ್ಷಣವು ಕೊಡಲ್ಪಡುವದು. ಈ ರಕಮಿನಿಂದ ಸ್ತ್ರೀ ಹಾಗು ಶಿಶುಗಳಿಗೆ ಚಿಕಿತ್ಸೆ ಮಾಡುವರೆ, ಒಂದು ಔಷಧಾಲಯವನ್ನು ನಿರ್ಮಿಸಬೇಕೆಂದೂ ಗೊತ್ತಾಗಿದೆ.

— ಕಲ್ಲಿಕೋಟೆಯಲ್ಲಿ ಈಗ ಮಾಪಿಳೆಯರ ದಂಗೆಯ ಕಾಲದಲ್ಲಿ ಅಧಿಕಾರಿಗಳು ಪ್ರಜೆಗಳಿಂದ ಲಂಚ ಪಡೆದ ಬಗ್ಗೆ ಪ್ರಕರಣಗಳಾಗಿ ಖಟ್ಲೆಗಳೆದ್ದಿವೆ.

— ಕೊಲ್ಹಾಪುರದಲ್ಲಿ ರಾ|| ಸಾಮಂತರವರ ಅಧ್ಯಕ್ಷತೆಯಲ್ಲಿ ಸಭೆಸೇರಿ, ಮದ್ರಾಸ ಕೌನ್ಸಿಲಿನಲ್ಲಿ ಮಂಜೂರಾದ ಹಿಂದೂ ದೇವಾಲಯಗಳ ಕಾಯಿದೆಯ ನಿಷೇಧವಾಯಿತು. ಸಭೆಗೆ ಬ್ರಾಹ್ಮಣರೂ, ಬ್ರಾಹ್ಮಣೇತರರೂ ನೆರೆದಿದ್ದರು.

— ರಂಗೂನಿನಲ್ಲಿ ಬೌದ್ಧ ಧರ್ಮದ ಸನ್ಯಾಸಿಗಳಾದ ಶ್ರೀ|| ಯು. ತಿಲೋಕರವರ ತನಿಖೆಯಾಗಿ, ರಾಜದ್ರೋಹದ ಆರೋಪದ ಮೇಲೆ ಅವರಿಗೆ ೧೮ ತಿಂಗಳ ಕಠಿಣ ಶಿಕ್ಷೆ ವಿಧಿಸಲ್ಪಟ್ಟಿದೆ. ಆರೋಪಿಗಳು ಸಭೆ ಸೇರಿಸಿ, ಅಧಿಕಾರಿಗಳಿಗೆ ಹೆದರಬಾರದೆಂದೂ, ಭೂಮಿ ಕಂದಾಯವನ್ನು ತೆರಬಾರದೆಂದೂ, ಪಟೇಲರು ಕಂದಾಯ ಕೇಳಿದರೆ, ಕಾಲುಮುರಿದು ಅವರನ್ನು ಹೊಳೆಯಲ್ಲಿ ಮುಳುಗಿಸಿಬಿಡಿರೆಂದೂ ಭಾಷಣ ಕೊಟ್ಟರಂತೆ. ಶ್ರೀ|| ತಿಲೋಕರವರು ಆರೋಪಿತ ಶಬ್ದಗಳನ್ನು ತಾವು ಉಚ್ಚರಿಸಲಿಲ್ಲವೆಂದು ನ್ಯಾಯಾಸನಕ್ಕೆ ನಿವೇದಿಸಿದರು. ಸೇಶನ್ಸ ಜಡ್ಜರಿಗೆ ಸಹಾಯ ಮಾಡಲು ನೇಮಿಸಿದ ಎಸ್ಸೆಸರದ್ವಯರೂ ಸನ್ಯಾಸಿಗಳು ನಿರಪರಾಧಿಗಳೆಂದು ಹೇಳಿದರು. ಆದರೂ, ನ್ಯಾಯಮೂರ್ತಿಗಳು ಬೌದ್ಧ ಸನ್ಯಾಸಿಗಳು ರಾಜಕೀಯ ಕ್ಷೇತ್ರದಲ್ಲಿ ಪ್ರವೇಶಗೊಳ್ಳದಂತೆ ಭೀತಿ ಹಾಕುವದಕ್ಕಾಗಿ ಇಷ್ಟು ಕಠಿಣ ಶಿಕ್ಷೆಯನ್ನು ತಾವು ವಿಧಿಸಿದೆವೆಂತಲೂ, ಎಸ್ಸೆಸರದ್ವಯರೂ ಬೌದ್ಧ ಧರ್ಮದವರಿರುವದರಿಂದ ತಮ್ಮ ಧರ್ಮದ ಸನ್ಯಾಸಿಗಳ ತರ್ಫಿನ ಪುರಾವೆಯನ್ನು ಗ್ರಾಹ್ಯಮಾಡಿ ಸನ್ಯಾಸಿಗಳು ನಿರಪರಾಧಿ ಎಂದು ಮತ ಕೊಟ್ಟರೆಂತಲೂ ಶರಾಹೊಡೆದಿರುವರು.

— ತುರ್ಕಸ್ತಾನದಲ್ಲಿ ತಾರೀಖು ೧೬ ರಿಂದ ಮಾದಕ ದ್ರವ್ಯಗಳ ನಿಷೇಧಪರ ಕಾಯಿದೆಯನ್ನು ಅಮಲಬಜಾವಣಿ ಮಾಡುವರೆಂದು ಅಲ್ಲಿಯ ಗವ್ಹರ್ನರರು ಪ್ರಕಟಿಸಿರುವರು. ವ್ಯಾಪಾರಸ್ಥರಿಗೆ ಮಾತ್ರ ೬ ತಿಂಗಳ ಅವಧಿಯು ಕೊಡಲ್ಪಟ್ಟಿದೆ. ಸುಮಾರು ಇದರಿಂದ ೨-೩|| ಸಾವಿರ ಮದ್ಯದಂಗಡಿಗಳ ಆವರಣ ನಮಾರಂಭವು ಜರಗುವದೆಂದು ಹೇಳುತ್ತಾರೆ.

— ಸಿನೋಯಿಯಲ್ಲಿ ನಾಗಪುರಕ್ಕೆ ಹೋಗುವ ರೇಲ್ವೆ ಟಿಕೀಟುಗಳು ಸಿಗಬೇಕಾದರೆ, ಪೋಲೀಸರಿಂದ ಸರ್ಟಿಫಿಕೇಟು ಪಡೆಯಬೇಕೆಂದು ಹುಕಮಾಗಿದೆ. ಆದರಿಂದ ೩೩ ಮಂದಿ ಸ್ವಯಂಸೇವಕರು ೮೦ ಮೈಲು ಪ್ರವಾಸ ಮಾಡಿ ನಾಗಪುರಕ್ಕೆ ಮುಟ್ಟಿದರು.

— ಲಾಲಾ ಲಜಪತರಾಯರ ಪ್ರಕೃತಿಯ ಅಸ್ವಸ್ಥತೆಯ ಬಗ್ಗೆ ಮಿ|| ಸಕಲಾತವಾಲಾರವರು ಪಾರ್ಲಿಮೆಂಟಿನಲ್ಲಿ ಪ್ರಶ್ನಿಸಲು, ಭಾರತ ಮಂತ್ರಿಗಳಾದ ವಿಂಟರಟನ್‌ರವರು ಈ ಬಗ್ಗೆ ಹಿಂದುಸ್ಥಾನ ಸರಕಾರದೊಡನೆ ಚೌಕಸಿ ಮಾಡುವದು ಅಗತ್ಯ ತೋರುವದಿಲ್ಲೆಂದೂ, ಅದು ಹಿಂದುಸ್ಥಾನ ಸರಕಾರದ ಅಧಿಕಾರ ಕಕ್ಷೆಯೊಳಗಿನದೆಂದೂ ಉತ್ತರವನ್ನಿತ್ತರು.

— ಸರಕಾರಿ ಗ್ರೆಂಟು ಪಡೆಯುವ ಶಾಲೆಗಳಲ್ಲಿ ಅಸ್ಪೃಶ್ಯರಿಗೆ ಪ್ರವೇಶಗೊಡದಿದ್ದರೆ, ಸರಕಾರವು ಅವರ ಗ್ರೆಂಟನ್ನು ತಹಕೂಬ ಮಾಡುವದೆಂದು ಮುಂಬಯಿ ಸರಕಾರವು ಮುದ್ರಣಲೇಖವನ್ನು ಹೊರಡಿಸಿದೆ.

— ಧಾರವಾಡ ಗೋಳೀಬಾರ ಖಟ್ಲೆಯಲ್ಲಿ ಒಂದು ವರ್ಷದ ಶಿಕ್ಷೆಯನ್ನನುಭವಿಸಿ, ಮರಳಿಬಂದ ಶ್ರೀ|| ಮಧ್ವರಾವ ಕಮಲಾಪೂರರವರ ಮೇಲೆ ಕ್ರಿ. ಪ್ರೊ. ಕೋ. ೧೧೮ ಕಲಮಿನನ್ವಯ ಜಾಮೀನು ಯಾಕೆ ತೆಗೆದುಕೊಳ್ಳಬಾರದೆಂಬ ಬಗ್ಗೆ ಹುಕುಮು ಹೊರಟಿದೆ.

— ದೇಶಬಂಧು ದಾಸರು ಮದ್ರಾಸ ಭಾಷಣದಲ್ಲಿ ಮಾಡಿದ ಅಚಾತುರ್ಯದ ಆರೋಪವು ಮಹಾತ್ಮರಿಗೆ ಲಾಗು ಇರುವದಿಲ್ಲೆಂತಲೂ, ಅದನ್ನು ತಾವು ಶ್ರೋತೃಮಂಡಳಿಗಳಾದ ಪ್ರಜೆಗಳಿಗೆ ಸಂಬಂಧಿಸಿ ಆಡಿದ್ದೆವೆಂತಲೂ ಸ್ಪಷ್ಟೀಕರಿಸಿರುವರು. ಹೀಗಿದ್ದರೂ, ಅವು ಮಹಾತ್ಮರಿಗೆ ಸಂಬಂಧಿಸಿದುವವೆಂದು ಯಾರಿಗಾದರೂ ತೋರಿದರೆ, ಆ ಬಗ್ಗೆ ತಾವು ಸದರಿ ವಿಧಾನಗಳನ್ನು ಹಿಂತೆಗೆದುಕೊಳ್ಳುವೆವೆಂತಲೂ ಸೇಲಮದಲ್ಲಿ ಜಾಹೀರ ಮಾಡಿದರು. ಆದರೂ, ಪರಿಷತ್ತಿಗೆ ಮಹಾತ್ಮರು ಒಪ್ಪಿಗೆಯನ್ನೀಯದಿದ್ದದ್ದು ಅವರ ತಪ್ಪೆಂತಲೂ ದೃಢವಾಗಿ ಹೇಳಿದರು.

— ಲೌಸೇನದೊಳಗಿನ ತಹಪರಿಷತ್ತಿನಲ್ಲಿ ಇಸ್ಮಿಥ ಪಾಶಾರವರಿಗೂ, ಮಿತ್ರಪಕ್ಷದವರಿಗೂ ಕೂಡಿಬರುವದು ತೋರುವದಿಲ್ಲ. ಶನಿವಾರ ತಾ. ೨೩ ನೇಗೆ ತುರ್ಕರಿಗೂ, ಮಿತ್ರರಿಗೂ ೩-೩|| ತಾಸುಗಳ ವರೆಗೆ ಸಂಭಾಷಣ ನಡೆಯಿತು. ತುರ್ಕಸ್ತಾನದೊಳಗಿಂದ ಮಿತ್ರಪಕ್ಷದವರು ಕಾಲ್ತೆಗೆಯಬೇಕಾದರೆ, ವಾದಗ್ರಸ್ತ ಮುದ್ದೆಗಳೆಲ್ಲ ನಿಕಾಲಿಯಾಗಬೇಕೆಂದು ಮಿತ್ರರು ಹೇಳಿದರು. ಮೋಸಲ ಪ್ರಶ್ನೆಯನ್ನು ೯ ತಿಂಗಳುಗಳ ವರೆಗೆ ಹಾಗೆಯೇ ಕಾದಿಡಬೇಕೆಂದು ಠರಾವಾಯಿತು. ಮಿತ್ರಪಕ್ಷದವರಿಗೆ ಕೊಡುವ ಸವಲತುಗಳ ಬಗ್ಗೆ ಅಂಗೋರಾ ಸರಕಾರವು ಸಮಾಧಾನಕರ ಉತ್ತರವನ್ನೀಯದ ಮೂಲಕ, ತಹನಾಮೆಯಲ್ಲಿಯೇ ಮಿತ್ರಪಕ್ಷದ ಕಂಪನಿಗಳ ಹಕ್ಕುಗಳ ಹೊಣೆಗಳೆಯಾಗಬೇಕೆಂದು ಮಿತ್ರರು ನುಡಿದರು. ತುರ್ಕಸ್ತಾನದೊಳಗಿಂದ ಮಿತ್ರರು ಕಾಲ್ತೆಗೆದ ಹೊರತು, ಅವರು ತರುವ ಸಾಲದ ಬಗ್ಗೆ ಸಮಾಧಾನಕರ ವ್ಯವಸ್ಥೆ ಮಾಡಿದ ಹೊರತು ಸವಲತ್ತುಗಳನ್ನು ವಿಚಾರ ಮಾಡಲಾರೆವೆಂದು ಇಸ್ಮಿಥ ಪಾಶಾರವರು ಖಂಡಿತ ಹೇಳಿಬಿಟ್ಟರು. ಲೌಸೇನದಲ್ಲಿ ನಡೆದ ೨ನೇ ತಹಪರಿಷತ್ತಿನ ಇತ್ಯರ್ಥವಿದು.

— ಅಮೇರಿಕೆಯೊಳಗಿನ ಸಂಯುಕ್ತ ಸಂಸ್ಥಾನಗಳ ಸರಕಾರವು ಮದ್ಯಪಾನ ಪ್ರತಿಬಂಧಕ ಕಾಯಿದೆಗಳನ್ನು ಮಂಜೂರು ಮಾಡಿದೆ. ಇದರಂತೆ ೩ ಮೈಲುಗಳ ವರೆಗಿನ ಸಮುದ್ರದಲ್ಲಿರುವ ಪರದೇಶ ಹಡಗುಗಳನ್ನು ಶೋಧ ತಪಾಸ ಮಾಡಿ, ಅವುಗಳೊಳಗಿರುವ ಮದ್ಯವನ್ನು [illegible]ಬೇಕೆಂದು ಕಾಯಿದೆಯಾಗಿದೆ. ಶನಿವಾರ ತಾ. ೨೩ ನೇಗೆ 'ಬಾಲ್ಟಿಕ್' ಎಂಬ ಬ್ರಿಟಿಶ ಹಡಗವನ್ನು ಅಮೇರಿಕನ್ ಅಧಿಕಾರಿಗಳು ಹತ್ತಿ, ಅಲ್ಲಿದ್ದ ಮದ್ಯವನ್ನೆಲ್ಲ ಜಪ್ತ ಮಾಡಿಕೊಳ್ಳುತ್ತಿರುವರು. ಫ್ರಾನ್ಸ ದೇಶದಲ್ಲಿ ಖಲಾಸಿಗಳಿಗೆಲ್ಲ ಮದ್ಯವನ್ನು ಪೂರೈಸಬೇಕೆಂದು ಕಾಯಿದೆಯಿದೆ. ಅಮೇರಿಕೆಯ ಸಮುದ್ರದಲ್ಲಿ ಪ್ರವೇಶಗೊಂಡರೆ, ಮದ್ಯವನ್ನು ಜಪ್ತ ಮಾಡಬೇಕೆಂಬ ಅಮೇರಿಕನ್ ಕಾಯಿದೆಯಿದೆ. 'ಪ್ಯಾರಿಸ' ಎಂಬ ಫ್ರೆಂಚ ಹಡಗವು ಸದ್ಯಕ್ಕೆ ಅಮೇರಿಕೆಗೆ ಹೋಗುವದಿದೆ. ಫ್ರೆಂಚ-ಅಮೇರಿಕನ್ ಕಾಯಿದೆಗಳ ಬಿಕಟಾಟ ಹೇಗಾಗುತ್ತದೆಂದು ನೋಡುವ.

— ಕೊಚ್ಚಿಯ ಡೆಪ್ಯುಟಿ ಕಲೆಕ್ಟರರಾಗಿದ್ದ ರಾ|| ನಾರಾಯಣ ಶಿಣಿಯವರು ತಮ್ಮ ಮಗಳ ಮದುವೆಯನ್ನು ಮುಗಿಸಿ, ಮಂಗಳೂರಿನಿಂದ ಹಿಂತಿರುಗಿ ಎರಣಾಕುಳದಿಂದ ಕೊಚ್ಚಿಗೆ ಬೋಟಿಯಲ್ಲಿ ಪ್ರವಾಸ ಮಾಡುತ್ತಿದ್ದಾಗ, ಥಟ್ಕನೆ ಬೋಟಿಯು ಕವಚಿ, ಅವರು ಪತ್ನಿ ಸಹಿತ ಮೃತಪಟ್ಟರು.

— ವಿಲಾಯತಿಯಲ್ಲಿ ವಿಮಾನುಗಳ ಕರ್ಯತ್ತು ನಡೆದದೆ. ಬ್ರಿಸ್ಟಲಿನ ವಿಮಾನಕ್ಕೆ ಬೆಂಕಿ ಬಿದ್ದು, ಚಾಲಕ ಮೇಜರ ಫ್ಲೂಟರವರ ಸಹಿತ ಸುಟ್ಟು ಬೂದಿಯಾಯಿತು.

— ಮಧ್ಯಪ್ರಾಂತದ ಗವ್ಹರ್ನರರವರೂ, ಗೃಹಮಂತ್ರಿಗಳಾದ ಸರ್ ಜೋಶಿಯವರೂ ಕಳೆದ ಶನಿವಾರಕ್ಕೆ ನಾಗಪುರಕ್ಕೆ ಗಮಿಸಿದರು. ಸ್ಥಾನಿಕ ಗೃಹಸ್ಥರಗೂಡ ಸಂಭಾಷಣ ನಡೆಯಿತು. ಮುಂದಿನ ಸರಕಾರಿ ಧೋರಣವು ಠರಾಯಿಸಲ್ಪಟ್ಟಿತಂತೆ. ತಪಶೀಲು ಹೊರಬೀಳಲಿಲ್ಲ.

— ವರಿಷ್ಠ ಕಾಯಿದೆ ಕೌನ್ಸಿಲಿನ ಮೆಂಬರರಾದ ಮಿ|| ಮೂನಶೀ ಈಶ್ವರ [illegible]ರವರು ತಮ್ಮ ಸದಸ್ಯತ್ವಕ್ಕೆ [illegible]ರಾಜೀನಾಮೆ ಕೊಟ್ಟರು.

— ದಿಲ್ಲಿ ಕೋಂಗ್ರೆಸ ಕಮಿಟಿಯು ಬೆರಿಸ್ಟರ ಆಸಫ್ ಅಲ್ಲಿಯವರನ್ನು ತಮ್ಮ ಕಮಿಟಿಯ ಅಧ್ಯಕ್ಷರನ್ನಾಗಿ ಆರಿಸಿತು. ದಿಲ್ಲಿ ಜಿಲ್ಲಾ ಪರಿಷತ್ತನ್ನು ಬಕರೀದ ಹಬ್ಬಕ್ಕೆ ಮುಂಚಿತವಾಗಿಯೇ ಕೂಡಿಸಬೇಕೆಂದು ಗೊತ್ತಾಗಿದೆ. ಬಕರೀದ ಹಬ್ಬದ ಸಮಯಕ್ಕೆ ಹಿಂದೂ-ಮುಹಮ್ಮದೀಯರಲ್ಲಿ ವಿಕಲ್ಪವಾಗಬಾರದೆಂದು ಒಂದು ಐಕ್ಯ, ಶಾಂತಿ ಪ್ರಚಾರಕ ಮಂಡಳವು ಸ್ಥಾಪನಗೊಂಡಿದೆ. ಈ ಮಂಡಳಕ್ಕೆ ಸಹಾಯವನ್ನೀಯುವರೆ, ದಿಲ್ಲಿ ಕೋಂಗ್ರೆಸ ಕಮಿಟಿಯು ಕೆಲ ರಕಮನ್ನು ಮಂಜೂರು ಮಾಡಿದೆ.

ಅಗಿಯ ಹುಣ್ಣಿವೆಯ (೭ನೇ) ಹೆಜ್ಜೆ.

ಧಾರವಾಡದಲ್ಲಿ ಹುಣ್ಣಿವೆಗೊಮ್ಮೆ ಹೊರಡುವ,

"ಜಯಕರ್ನಾಟಕ"

ಎಂಬ

ಸಚಿತ್ರ ಮೌಲ್ಯತರದ ಮಾಸಪತ್ರಿಕೆ.

ಸಂಪಾದಕರು —ಆಲೂರ ವೆಂಕಟರಾಯರು ಬಿ. ಎ., ಎಲ್ ಎಲ್ ಬಿ.,

ಇದರಲ್ಲಿ ಅಖಿಲ ಕರ್ನಾಟಕದ ಲೇಖಕರ ಲೇಖಗಳೂ ಬರುತ್ತಾವೆ ಮೊಡರ್ನ ರಿವ್ಯೂ' ಆಕಾರದ ೮೦ ಪುಟಗಳುಳ್ಳ ದೊಡ್ಡ ಮಾಸಪತ್ರಿಕೆಯಿದೊಂದೇ

ಕರ್ನಾಟಕದ ಸಂದಿಗೊಂದಿಗಳಲ್ಲಿಯೂ ಇದರ ಹಬ್ಬುಗೆ. ಚಂದಾದಾರರಿಗೆ ಹೆಚ್ಚಿನ ಲಾಭ ಹೊಸದಾಗಿ ಆಗುವ ಚಂದಾದಾರರು ಹೊಸ ಸಂಚಿಕೆಯಿಂದಲೇ ಪ್ರಾರಂಭಿಸಬೇಕು ಹಿಂದಿನ ಸಂಚಿಕೆಗಳು ತೀರಿದ್ದರಿಂದ ಅವುಗಳನ್ನು ಮುಟ್ಟಿಸುವ ಹೊಣೆಯನ್ನು ಹೊರಲಾರೆವು ಯಾರಾದರೂ ಹಿಂದಿನ ಸಂಚಿಕೆಗಳನ್ನು ಕಳಿಸಿದರೆ ಬೆಲೆ ಕೊಟ್ಟು ಕೊಳ್ಳುವೆವು.

೭ನೇ ಹೆಜ್ಜೆಯ ಲೇಖಗಳು

೧ ಶ್ರೀ ಬಸವೇಶ್ವರರೂ, ಅವರ ತತ್ತ್ವಜ್ಞಾನವೂ ಶ್ರೀ ಸಿದ್ಧರಾಮಪ್ಪ ಮುಂಡಪ್ಪಾ ಪಾವಟೆ ಬಿ ಎ, ಎಲ್ ಎಲ್ ಬಿ
೨, ನಮ್ಮ ಆಶೆ ಶ್ರೀ ಗಣೇಶ ರಾಮ ಯಾಜಿ ಕುಮಟಾ ಹುಬ್ಬಳ್ಳಿ
೩ ಹೊನ್ನಿನ ನಾಣ್ಯಗಳು ಹೊರಟು ಹೋದವು ಶ್ರೀ ಗುರುರಾವ ಕೃಷ್ಣರಾವ ವಾಳ್ವೇಕರ ಬಿ ಎ ಎಲ್ ಎಲ್ ಬಿ
೪ ಮದುವೆಯ ವಿಷಸ ಹರಟೆಯ ಮಲ್ಲ ಮೈಸೂರ ಹುಬ್ಬಳ್ಳಿ
೫ ಕಳವಿನ ಕೊಳಲು (ಕಥೆ) ಶ್ರೀ ಶಂಕರರಾವ ಕುಲಕರ್ಣಿ ಗಜೇಂದ್ರಗಡ
೬ ಆರ್ಯ ಸಂಸ್ಕೃತಿಯೂ, ಸ್ತ್ರೀ ಶಿಕ್ಷಣವೂ ಶ್ರೀ ಹನುಮಂತರಾವ ಕೊಣ್ಣೂರ, ಬಿ ಎಸ್ ಸಿ ವಿಜಾಪುರ
೭ ಸ್ತ್ರೀ ವಿದ್ಯಾಭ್ಯಾಸ ಶ್ರೀಮತಿ ರಾಜಮ್ಮನವರು ಬೆಂಗಳೂರ
೮ ಭರತ ವರ್ಷದ ಇತಿಹಾಸ ಅಗಸ್ತ್ಯಭ್ರಾತಾ
೯ ರಾಷ್ಟ್ರೀಯ ಶಿಕ್ಷಣವೂ, ವಿಜ್ಞಾನವೂ ಶ್ರೀ ರಾ ರಾ ರಾಮಯ್ಯ ಬಿ ಎಸ್ ಸಿ, ಮದ್ರಾಸು
೧೦ ಪೃಥ್ವೀರಾಜನ ದೆಹಲಿಯ ಲಾಭ (ಕಥಾನಕ) ಎಂ ವೆಂಕಟಾದ್ರಿ ಶಾಸ್ತ್ರಿ ಬೆಂಗಳೂರ

ಇವಲ್ಲದೆ ಅನೇಕ ವಿದ್ವಾಂಸರ ಲೇಖಗಳೂ ಹೊಸ ಯುಗದ ಕವಿಗಳ ರಸಗವಿತೆಗಳೂ ಪ್ರಪಂಚ ಪರಿಚಯ ಜೇನಹುಟ್ಟು ಬಿಡಿನುಡಿಗಳೂ ಇರುವವು

ಇದರಲ್ಲಿ ಚಾಲುಕ್ಯ ವಿಕ್ರಮನ ಮತ್ತು ಮಹಾತ್ಮಾ ಗಾಂಧಿಯವರ ... ಚಿತ್ರ ... ನೋಡಿ ಸಂತೋಷಪಡಿರಿ'

ವಾರ್ಷಿಕ ವರ್ಗಣಿ ೫—೮—೦ ಮಾತ್ರ ಮನಿಯಾರ್ಡರ ಮಾಡಬೇಕು ವ್ಹಿ ಪಿ ಯಿಂದ ಕಳಿಸಲಾಗ ವದಿಲ್ಲ

ಕಾರ್ಯದರ್ಶಿ, ಜಯ ಕರ್ನಾಟಕ, ಸಾಧನಕೇರಿ, ಧಾರವಾಡ.

ಮನೆ ಕಟ್ಟುವವರಿಗೆ ಸುಸಂಧಿಯು.



ಮೇಲಂತಸ್ತಿಗೆ ಶೋಭೆ ಬರುವದಕ್ಕೆ ನಾನಾ ತಲ ನಕ್ಷೀ ಕೊರೆಯಲ್ಪಟ್ಟ ಬೀಡಿನ ಕಟಾಂಜನಗಳೂ, ಹೂದೋಟ, ಬಳಂಗಳ, ಉಪ್ಪರಿಗೆ, ದಿವಾನಖಾನೆ ಮೊದಲಾದ ಸ್ಥಳಗಳಲ್ಲಿ ವಿಶ್ರಾಂತಿಗೊಳ್ಳುವದಕ್ಕೆ ತಕ್ಕ ಬಾಕುಗಳೂ ಕಿರ್ಲೋಸ್ಕರ ಕಾರಖಾನೆಯಲ್ಲಿ ಸೌಕರ್ಯದಿಂದ ದೊರೆಯುತ್ತವೆ ಪತ್ರ ಬರೆದು 'ಚಿ' ಕ್ಯಾಟಲಾಗು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ)

ತ್ವರೆ ಮಾಡಿರಿ! ತ್ವರೆ ಮಾಡಿರಿ!!

ವಿದ್ವಜ್ಜನಪರಿಶೋಧಿತ ಯಜುರ್ವೇದೀಯ

ಬ್ರಹ್ಮಕರ್ಮಸಮುಚ್ಚಯ

ಪುಸ್ತಕ.

ಬೌಧಾಯನೀಯ ಸ್ವರಸಹಿತ ಸನಿರ್ಣಯ ಗೃಹ್ಯಕರ್ಮಸಮುಚ್ಚಯವೆಂಬ ಪ್ರಯೋಗ ಪುಸ್ತಕವು ಬರುವ ವರ್ಷಪ್ರತಿಪದೆಗೆ (೧) ಸಂಪುಟವು ಮಾರಾಟಕ್ಕೆ ಸಿದ್ಧವಾಗುವದು ಪೂರ್ಣ ಪುಸ್ತಕದ ಕ್ರಯ ರೂಪಾಯಿ ೧೩—೦—೦ ಬೇಕಾದವರು ೧—೧—೧೯೩೨ ರ ಒಳಗೆ ಎಡ್ವಾನ್ಸ ರೂಪಾಯಿ ೩—೦—೦ ಕಳಿಸಿ ಹೆಸರು ದಾಖಲ ಮಾಡಿಸಿದ್ದಲ್ಲಿ ಅಂಥವರಿಗೆ ಪುಸ್ತಕವು ೧೨ ರೂಪಾಯಿ ಕಿಮ್ಮತಿಗೆ ದೊರೆಯುವದು ಗ್ರಾಹಕರು ತ್ವರೆ ಮಾಡಬೇಕು

ಪತ್ತೆ —**ಗ್ರಂಥ ಪ್ರಚಾರಕ ಸಂಘ,**

ಶ್ರೀ ಕ್ಷೇತ್ರ ಗೋಕರ್ಣ

ಜಿಲ್ಲಾ— ಉತ್ತರ ಕಾನಡಾ

ದೇಶಿ ಸೆಂಟೋನಾಯಿನ್.

(ಜಂತುವಿನ ಪುಡಿ.)

ಅಪಾಯಕರವಿಲ್ಲದೆ ಗುಣ ಕೊಡುವಂಥಾದ್ದು ಪ್ರಪಂಚದಲ್ಲಿ ಪ್ರಖ್ಯಾತ ಔಷಧ

ಔನ್ಸಿನ ಶಿಸೆ 2 ರೂ ೮ ಆಣೆ

ವಿಳಾಸ — ಎಮ್ ಜಿ ಭಾಗ್ವತ್,

ಆಯುರ್ವೇದಿಕ್ ಕೆಮಿಸ್ಟ, ಕರ್ಕಿ (ಕೆನರಾ)

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಪತ್ರ ಬರೆದು ತಿಳಕೊಳ್ಳುವದು

ಪುರುಷೋತ್ತಮ ಲಕ್ಷ್ಮಣಯ್ಯ ಶ್ಯಾನಭಾಗ

ಹೆಗಡೇಕರ, ದುಕಾನ, ಕುಮಟಾ.

ಶುದ್ಧ ಖಾದಿ

ವಿಕ್ರಿಗೆ ತಯಾರ.

ಹೊನ್ನಾವರ ತಾಲೂಕಾ ಕೊಂಗ್ರೆಸ ಕಮಿಟಿಯಿಂದ ಸ್ವಮಗ್ಗದ್ದು ಕೆರಾಟೆಯ ಶುದ್ಧ ನೂಲಿನ ಖಾದಿ ಮಾರಾಟಕ್ಕೆ ಕೊಂಗ್ರೆಸ ಆಫೀಸಿನಲ್ಲಿ ಸಿಗುವದು

ಹೊನ್ನಾವರ, } ಸೆಕ್ರೆಟರಿ,
೧೦—೧೨—೩೦ } ತಾ ಕಾ ಕಮಿಟಿ, ಹೊನ್ನಾವರ

ಮೂರ್ತಿಗಳು ಬೇಕೋ?

ನಮ್ಮಲ್ಲಿ ಭಂಗಾರ, ಬೆಳ್ಳಿ, ಪಂಚಧಾತು ಹಿತ್ತಾಳೆ, ತಾಮ್ರ ವ ಕರೇಶಿಲೆಯ ಮೂರ್ತಿಗಳೂ, ಇದಲ್ಲದೆ ದಾಣಪೀಠಗಳೂ, ಪ್ರಭಾವಳಿಗಳೂ, ಈಶ್ವರ ವ ... ಟಿಗಳೂ, ನಾಗಾಭರಣಗಳೂ, ಕವಚ ಗಳೂ ವ ಯಾವದೇ ತರಹ ಪ್ರತಿಮೆಗಳೂ ನಮ್ಮಲ್ಲಿ ಯೋಗ್ಯ ದರಕ್ಕೆ ವ ಯೋಗ್ಯ ಹೊತ್ತಿಗೆ ಮಾಡಿ ಕೊಡಲ್ಪಡುವವು ಬೇಕಾದವರು ಪ್ರತ್ಯಕ್ಷ ವ್ಯವಹಾರ ಮಾಡಿ ಯಾ ಸಮಕ್ಷ ಬಂದು ದರವಾರ ತಿಳಕೊಳ್ಳಬಹುದು

ಪತ್ತೆ —**ನಾರಾಯಣ ಹುವಯ್ಯ ಶೇಟ,**

ಗುಡಗಾರ, ಗುಜರಗಲ್ಲಿ, ಕುಮಟಾ

(ಉ ಕಾನಡಾ)

ರ. No. B 1270

Thursday, 5th Ju

ವರ್ಷ ೭.

ಸಂಚಿಕೆ ೩೮.

ಕಾನಡಾವೃತ್ತ.

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेंद्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ವರ್ಗಣಿ.-

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಮನೆಯಾರ್ಡರಿಯಿಂದ ರೂ. 3-0-0
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1 0

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಸ್ಮಾಲ ಪೈಕಿನ (೧೫ ಎವರ್ಉಡ್ಡ) ೪ ಸಾಲುಗಳ ವರೆಗೆ ರೂ. 1-0-0
ಅನಂತರ ಪ್ರತಿ ಸಾಲಿಗೆ 0-2-0.
ಹಿಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅದು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

(ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖ ೫ ಮಾಹೆ ಜುಲಾಯಿ ಸನ್ ೧೯೨೩ ನೇ ಇಸವಿ.)

हिंदुस्थानातील रहिवाशांस त्याप्रमाण हिंदुस्थानची हवा त्याप्रमाणांच हें औषध हिंदुस्थानातील लोकास ज्यास्त फायदेशीर आहे.

द्राक्षासव-
{ दीड रतलची किंमत २ रुपये.

रामबाण औषधे

सर्दि घालविणारें,
भूक वाढविणारें,
शौच्यास साफ करणारें,
झोप आणणारें,
शक्ति देणारें,
तेजस्वीपणा आणणारे,

पिण्यांस रुचिकर.

क्याटलाग मागवा,

हिंदु फार्मास्युटिकल वर्क्स लिमिटेड, मुंबई नं. १३

CLAXO:- FRESH STOCK NEW BRAND a *food for infants and invalids.*

Kalmegh :- *Well-tried remedy in Liver complaints especially of children*

Syrup of Vasaka :- *Highly efficacious in cold, cough, crough and bronchitis.*

Besides we have in stock other patent medicines, Thermometres, Glycerine Syringes etc.,

Orders will be executed by V.P.P.

The New Emporium

Honavar. (N Kanara.)

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ವಿಷಯಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ

ವಾ. ವರ್ಗಣಿ ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ.

(೧) ಗ್ರೀಸ ದೇಶದ ಗಾಂಧಿ ೧ನೇ ಭಾಗ ಬೆಲೆ ೦-೬-೦ (೨) ಸದರ ೨ನೇ ಭಾಗ ೦-೫-೦ (೩) ಸ್ವಾತಂತ್ರ್ಯಸಾಧನೆ ೦-೫-೦ (೪) ಗುರು-ಹಿರಿಯರೂ, ಬಂಧುಭಗಿನಿಯರೂ ೦ ೫-೦

ವಾ ಅ. ಹೊದ್ಕೆ,
ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ.

ಸಾಧನ.

ಧಾರ್ಮಿಕ, ನೈತಿಕ, ರಾಜಕೀಯ ವಿಷಯಗಳನ್ನೂ, ಸುಂದರವಾದ ನಾಟಕ ಕಾದಂಬರಿಗಳನ್ನೂ ಒಳಗೊಂಡಿರುವ ಸಾಧನ ಮಾಸಪತ್ರಿಕೆಯು ಬರುವ ಪ್ರತಿ ತಿಂಗಳಲ್ಲಿ ತಪ್ಪದೆ ಪ್ರಕಟವಾಗುವದು ವಾರ್ಷಿಕ ವರ್ಗಣಿ ಅಂಚೆವೆಚ್ಚ ಸೇರಿ ೨ ರೂಪಾಯಿ. ವಿಳಾಸ ಚಂದಾದಾರರಾಗಲಿಚ್ಛಿಸುವವರು ಕೆಳಗಿನ ಪತ್ತೆಗೆ ಕಾಗದ ಬರೆಯತಕ್ಕದ್ದು.

ಗಣಪತಿ ಶಂಕರ ಭಟ್ಟ,
ಸಂಪಾದಕ— "ಸಾಧನಪತ್ರಿಕಾ,"
ಪೋಸ್ಟ ಕರ್ಕಿ (ಜಿ ಕಾರವಾರ)

ಸವಲತ್ತು.

ನಮ್ಮಲ್ಲಿ ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಗಳಿಂದ ಸಣ್ಣ-ದೊಡ್ಡ ಪುಸ್ತಕಗಳೂ, ಕೆಟಲಾಗುಗಳೂ, ಜಾಹೀರಾತುಗಳೂ, ಲಗ್ನಪತ್ರಿಕೆಗಳೂ ವ ಇತರೇ ಕಾಗದ-ಪತ್ರಗಳೂ, ಬಹಳೇ ಸವಲತ್ತಿಯ ದರಗಳಿಂದ ಬೇಕಾದ ಬಣ್ಣಗಳಿಂದ ಸ್ವಚ್ಛವಾಗಿಯೂ, ಅಂದವಾಗಿಯೂ ಛಾಪಿಸಿ ಕೊಡಲ್ಪಡುವವು. ಬೇಕಾದವರು ಕೆಳಗಿನ ಪತ್ತೆಯ ಮೇಲೆ ದರವಾರ ತಿಳುಕೊಳ್ಳಬಹುದು.

ಪತ್ತೆ:— **ಕೃಷ್ಣಾ ಕೇಶವ ಶಾನಭಾಗ,**
ಮಾಲಕ,
ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ.

ಎಲ್ಲ ತರದ ಜ್ವರಗಳಮೇಲೆ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ, ಶೈತ್ಯ, ಬಂಗಲಿ, ಅಥವಾ ದೂಷಿತ ಹವೆಯಿಂದ ಬರುವ ಸಾದಾ ವಿಷಾರೀ ಅಥವಾ ಇತರ ಜ್ವರಗಳೂ, ಇನಫ್ಲ್ಯುಎಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನ್ಯಾಯ ದುಷ್ಪರಿಣಾಮರಹಿತ ಕೇವಲ ವನಸ್ಪತಿಯು ಈ ಮದ್ದು ಸೇವಿಸಿದರೆ ಅಶಕ್ತತೆಯಾಗದೆ, ಬೆವರು ಬಂದು ಜ್ವರ ಇಳಿಯುತ್ತದೆ ಹಾಗು ರೋಗಿಯು ತರಿತ ವಾಸಿಯಾಗುತ್ತಾನೆ

೪ ಔಂಸ ಬಾಟ್ಲಿ ಕಿಂಮತ ರೂ ೧-೦-೦.

ಇದರ ಹೊರತು ಇನ್ನೂ ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ, ಉಚ್ಚ ಪ್ರತಿಯ ಕೋಲನ ವೊಟರ, ಲವೆಂಡರ ಇತ್ಯಾದಿ ಸಾಮಗ್ರಿಗಳು ಅಲೆಂಬಿಕದ ಕಾರಖಾನೆಯಲ್ಲಿ ತಯಾರಾಗುತ್ತವೆ ಮಾಹಿತಿ ಕೆಟಲಾಗು ತರಿಸಿರಿ

ಅಲೆಂಬಿಕ್ ಕೆಮಿಕಲ್ ವರ್ಕ್ಸ್,
ಕಂಪನಿ, ಲಿಮಿಟೆಡ್.
ನಂ ೫೦, ಪ್ರಿನ್ಸೆಸ್‌ಸ್ಟ್ರೀಟ, ಮುಂಬಯಿ.

अलेंबिक केमिकल वर्क्स कं० लि०
नं. ५० प्रिन्सेस स्ट्रीट मुंबई.

ಶುದ್ಧ ಖದ್ದರ್ ರೇಶ್ಮಿ ಮಡಿಗಳು.

ಸುಲಭ ಕ್ರಯಕ್ಕೆ ಖಾತ್ರಿಯಾದ ಎಲ್ಲಾ ರಂಗುಗಳಲ್ಲಿಯೂ ಈ ಕೆಳಗೆ ಬರದ ಕ್ರಯಕ್ಕೆ ದೊರೆಯುವದು

೧೮ ಮೊಳ ಉದ್ದ ೨॥ ಅಗಲ ರೂ ೨೩ ರಿಂದ ೨೫ ವರೆಗೆ
೧೬ " " ೨॥ " ೨೦ — ೩೦ "
೮ " " ೨॥ " " ೯ — ೧೫ "
೬ " ೨॥ " " ೭ — ೧೧ "



SUNCO BENARES CITY

ಅಂಗಿ ಬಟ್ಟೆಗಳು ೧೮ ಮೊಳ × ೨ ಮೊಳ ರೂಪಾಯಿ ೧೮ ರಿಂದ ೩೦ ವರೆಗೆ
ಪೇಟ ೧೨ ಮೊಳ × ೧॥ ಮೊಳ ಅಗಲ ರೂಪಾಯಿ ೧೦ ರಿಂದ ೧೫ ವರೆಗೆ
ಜೀನ್‌ಥಾನ್ ೧೪ ಮೊಳ × ೨ ಮೊಳ ರೂ ೨೪ ರಿಂದ ೩೫ ವರೆಗೆ

ಇವುಗಳಲ್ಲದೆ ಕಾಶೀ ಪೀತಾಂಬರ ಕ್ಯಾಮೀರ್ ಶಾಲು, ರುದ್ರಾಕ್ಷಿ, ಜಾಗಂಟೆ, ತಾಳ, ಪನ್ನೀರ್ ದಾನಿ, ಆಟದ ಸಾಮಾನುಗಳು, ದೇವರ ಮತ್ತು ಗಾಂಧಿ ಮುಂತಾದವರ ಪಟಗಳಿರುವ ಉಂಗುರಗಳ ಮತ್ತು ಇನ್ನೂ ಅನೇಕ ಸಾಮಾನುಗಳ ಕ್ಯಾಟಲಾಗ್ ಇನಾಂ

ವಿಳಾಸ — ಎಸ್. ಯು ನಾರಾಯಣಾಚಾರ್ಯ.
ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ!

ಕಾಮಿನಿಯಾ ತೈಲ. (ರಿಜಿಸ್ಟರ್ಡ)

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾದ ಉಪಕರಣವಾದರೋ.

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ ಈ ಆಯಿಲ್ ತೊಡೆದುಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿಟ್ಟು ಹೋಗಲಾರವು, ಅದರೆ, ಅವು ದಟ್ಟವಾಗಿ ಬೆಳೆದು ಸಮೃದುವಾಗುವವು ಇದರ ಸುಗಂಧವಾದರೂ ಮಧುರವೂ ಮೋಹಕವೂ ಆಗಿರುವುದು

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆಯಸಿ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ “ಕಾಮಿನಿಯಾ ಆಯಿಲ್” ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ ‘ಸರ್ಟಿಫಿಕೇಟ ಒಫ್ ಮೆರಿಟ’ ಅಥವಾ ಯೋಗ್ಯತಾಪತ್ರವೂ, ಇತರ ಹುವಿದಾರ ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ —ಶಿಸಗೆ ರೂಪಾಯಿ 1 0 0,. ಸೀಸ 3ಕ್ಕೆ. ರೂಪಾಯಿ 2-10-0, ವಿಪಿ ಖರ್ಚು 0 14 0.

ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್!! (ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಪರಮ ಕೋಮಲ ಚಿರಸ್ಥಾಯಿ ಮತ್ತು ಅತ್ಯುತ್ತಮವು ಚನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ದಸಿದ ಪಾದುದು ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಹನಿ ನಿಮ್ಮ ಕೈ ಕಟ್ಟಿಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಆವಿರ್ಭವಿಸಿದಂತಾಗುವುದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಸುಗಂಧವು ಅವೆಲ್ಲವುಗಳನ್ನು ಮೀರಿ ವ ನನ್ನನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸ 1 ಕ್ಕೆ 0-8-0, 1 ಡ್ರಾಮಿನ (ಮಿಡಿಯಂ) ಸೀಸ 1 ಕ್ಕೆ 0 12 0 ½ ಔನ್ಸಿನ ದೊಡ್ಡ ಸೀಸ 1 ಕ್ಕೆ 2-0 0 ಅಂಚೆಯಸ್ವೆಚ್ಚ ಬೇರೆ 0-4-0

ಒಟ್ಟೋ ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0.

Address - **The Anglo Indian Drug & Chemical Co,**
16, Market, **BOMBAY. 2.**

ಖರೇ ವಸ್ತು! ತಾಜಾ ಶಕ್ತಿ! ತ್ವರೆ ಗೊಳ್ಳಿರಿ

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳೆಸಿ, ಪರ ಪುರುಷರಿಗೆ ಸ್ತ್ರೀ ವಿಷಯವಾಗಿಯೂ, ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷದ ಶಕ್ತಿಯನ್ನು ಉಂಟುಮಾಡಿ, ದಿನೇ ದಿನೇ ಶರೀರದ ಜರತನವನ್ನೂ ರೋಗಗಳನ್ನೂ ದೂರಪಡಿಸಿ ಆಯುರಾರೋಗ್ಯವನ್ನೂ, ರತಿಯಲ್ಲಿ ಹೆಗ್ಗಳವಾದ ಕುತೂಹಲವನ್ನು ತೋರಿಸುವ ಕ್ರೀಡಾ ಶಕ್ತಿಯ ಉತ್ಸಾಹವನ್ನೂ, ಸಂಭೋಗದಲ್ಲಿ ತೃಪ್ತಿಯನ್ನೂ, ಸೌಖ್ಯವನ್ನೂ ಕೊಟ್ಟು, ಮನಸ್ಸಿನ ದೃಢತೆಯನ್ನೂ ಯೌವನದ ಕಳೆಯನ್ನೂ ದೂರಿಸಿ ಮುದಿತನವನ್ನುನೀಗಿ ಬಲವನ್ನು ಉಂಟುಮಾಡುವದು. ಮೃತ್ಯುವನ್ನು ನಿರಾಕರಿಸಿ, ಬಗೆಬಗೆಯ ರೋಗಗಳನ್ನು ನಾಶಮಾಡುವದು ಜೀರ್ಣಜ್ವರ, ಮಂದಾಗ್ನಿ, ಶುಕ್ಲಸ್ರಾವ, ಪ್ರಮೇಹ ಇವುಗಳನ್ನು ಬೇಗನೇ ನಾಶಮಾಡುವದು ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, ದೇಶಕಾಲಗಳಿಂದಲೂ, ಅತ್ಯಾಹಾರಗಳಿಂದಲೂ, ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡಿಸುವ ಬಲಾತ್ಕಾರದ ಹಸ್ತಘರ್ಷಣದಿಂದಲೂ, ಅತಿವಿಷಯೋಪಭೋಗದಿಂದಲೂ, ಇಂದ್ರಿಯ ಶಿಥಿಲವೂ, ತೆಳುವೂ, ನಿಸ್ತೇಜವೂ ಆಗಿ ಯತ್ನವಿಲ್ಲದೆ ಸ್ಖಲನವಾಗುವದು ಒಂದೊಂದು ಸಾರಿ ಮೂತ್ರದಲ್ಲಿಯೂ ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತೆ, ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈಬಿಸುವು, ನಿದ್ರೆಯಲ್ಲಿ ಬೀಕರವಾದ ಸ್ವಪ್ನ ಅರಿವು, ಮರುವು ಮತ್ತು ಶರೀರದ ಹಾಗೂ ಮನಸ್ಸಿನ ಚೇತನ ಕುಂದಿ ಹೋಗುವದು, ಇವೆಲ್ಲವುಗಳಮೇಲೆ ರಾಮಬಾಣದಂತಿರುವದು ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ ೧॥ ಸಂ ೧ ನಂ ೨ ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಅಂತು ೬೦ ಗುಳಿಗೆಗಳುಳ್ಳ ಸೀಸೆಗಳಿಗೆ ರೂ. ೩. ಪೋಸ್ಟೇಜ ಬೇರೆ

ಎಸ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ,
ಕಕೇ. (ಕೆನರಾ.)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧. ರಾಗದ ಕೈಪೆಟ್ಟಿಗೆ ಕಿಂ, ೩೦, ೪೦, ೪೫, ೫೦, ೬೦
೨. „ ಕಾಲುಪೆಟಿಗೆ ಕಿಂ ೬೫, ೭೫, ೧೪೦, ೧೬೦
೩ ತಬಲೆ ಜೋಡಿ ಕಿಂ. ೧೨, ೧೫ ೧೮ ೨೦,
೪ ಹಾರ್ಮೋನಿಯಮ ಗ್ಯಾಡ ಕಿಂ ೧॥, ತಬಲೆ ಗ್ಯಾಡ ಕಿಂ ೧೨ ೮

ವಿಶೇಷ ಮಾಹಿತಿ ಬಗ್ಗೆ ನಮ್ಮ ಕ್ಯಾಟಲಾಗ ಪುಕ್ಕಟೆ ಕೊಡುವೆವು

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು

ಪತ್ತೆ – **ಗೋಪಾಳ ಸಖಾರಾಮ ಮತ್ತು ಕಂಪನಿ, ನಂ ೨೬೨**
ಕಾಳಬಾದೇವಿ ರೋಡ, ಮುಂಬಯಿ

ಶಿರ್ಸಿ ಮ್ಯುನಿಸಿಪಾಲಿಟಿಯಲ್ಲಿ ಗೊಂದಲ!

ಕಳೆದ ತಿಂಗಳ ೨೯ ನೇ ತಾರೀಖಿನ ದಿವಸ ಸಾಯಂಕಾಲದಲ್ಲಿ ಮುನಿಸಿಪಲ್ ಕಚೇರಿ ಗಾಡಿಯ ಹೊಲೆಯನು ನಿತ್ಯದಂತೆ ತನ್ನ ಕೆಲಸ ತೀರಿಸಿಕೊಂಡು ಆಫೀಸಿನಲ್ಲಿ ಹಾಜರಾಗಲು, ಸ್ಯಾನಿಟರಿ ಇನಸ್ಪೇಕ್ಟರರು, ತಾವು ಹೊತ್ತಿನ ಪೂರ್ವದಲ್ಲಿ ಬಂದು ಸತ್ತಂಥ ದನಗಳ ಅಂತ್ಯಕ್ರಿಯೆಯನ್ನು ಮಾಡಿದ ಬಗ್ಗೆ ಜವಾಬ ಕೊಡೆಂದು ಒಬ್ಬ ಹೊಲೆಯನಿಗೆ ಹುಕುಂ ಮಾಡಿದರಂತೆ. ಅದಕ್ಕೆ ಅವನು ಅದು ತನ್ನ ಡ್ಯೂಟಿ ಮುಗಿದ ಮೇಲೆ ಮಾಡಿದ ಕೆಲಸವಾಗಿದ್ದು, ತನ್ನಿಂದ ಯಾವದೇ ತರದಿಂದ ತಪ್ಪು ಆಗದೇ ಇರುವದರಿಂದ ತಾನು ಜವಾಬು ಕೊಡುವ ಕಾರಣವಿಲ್ಲವೆಂದು ಹೇಳಲು, ಇನ್‌ಸ್ಪೇಕ್ಟರ ಸಾಹೇಬರು ಸಿಟ್ಟಿಗೆದ್ದು ಅವನನ್ನು ದಂಡಿಸುವದಕ್ಕಾಗಿ ತನ್ನ ಕೈಗೆಳಗೇ ಹುಕುಂ ಮಾಡಿದ್ದರಂತೆ. ಇದನ್ನು ಕಂಡು ಸಬ್ ಓವರಸೀಯರವರು ಶಾಬ್ದಿಕ ಸಹಾನುಭೂತಿಯನ್ನು ತೋರಿಸುತ್ತಿರಲು, ಚೀಫ ಆಫೀಸರರು ಹೊರಗೆ ಬಂದು ಇನ್ಸ್ಪೇಕ್ಟರ ಸಾಹೇಬರ ಕಾಲಿಗೆ ಉತ್ತೇಜನ ಕೊಟ್ಟದ್ದಲ್ಲದೆ, ತಮ್ಮ ಕೈಕಾಲುಗಳಿಗೂ ಹುಕುಂ ಕೊಟ್ಟು, ಶಾಬ್ದಿಕ ಅಷ್ಟೇ ಅಲ್ಲ, ಶಾರೀರಿಕ ಸಹಾನುಭೂತಿಯನ್ನೂ ತೋರಿಸಿದರಂತೆ. ಇದನ್ನೆಲ್ಲ ಕಂಡು ಪ್ರಾಯಬಂದ ಮುದಿ ಮೋಕಾದಮನೊಬ್ಬನು ತನ್ನ ಕೈಲಾದಷ್ಟು ಸಾಹಸವನ್ನು ಮಾಡಿದನಂತೆ. ಈ ರೀತಿಯಲ್ಲಿ ಹಣ್ಣಾದ ಹೊಲೆಯನನ್ನು ಕಂಡು ಅವನ ಸಂಗಡಿಗರೆಲ್ಲ ಕೂಡಿ ದೊಡ್ಡ ಕೋಲಾಹಲವನ್ನೆಬ್ಬಿಸುತ್ತ ಊರೆಲ್ಲ ತಿರುಗಹತ್ತಿದರು. ಮರುದಿವಸ ಅವರೆಲ್ಲ ಸಂಪು ಮಾಡಿ ಒಬ್ಬರೂ ಕೆಲಸಕ್ಕೆ ಬರಲಿಲ್ಲ. ಮ್ಯಾಜಿಸ್ಟ್ರೇಟರವರಲ್ಲಿ ಫಿರ್ಯಾದಿಯೂ ದಾಖಲಾಯಿತಂತೆ. ಇದನ್ನೆಲ್ಲ ಕಂಡು ಮೆಂಬರ ಮಹಾಶಯರು ದಿಗಿಲುಬಿದ್ದು, ಕುಲಕರ್ಣಿ ಫೌಜದಾರರ ನೆನಪಾಗಿ ನಾಚಿಕೊಂಡು ಸಮಾಧಾನದ ಸಂಧಾನವನ್ನು ನಡಿಸಿದರು. ಆ ದಿನ ಹೊಲೆಯರು ಕೇಳದೇ ಹೋಗಲು, ಮಾಗುಡರೆ ತಾವು ರಾಜಿನಾಮೆಯನ್ನು ಕೊಡುತ್ತೇವೆಂದ ಹೇಳಿ ಹೊರಡಲು ಅವರು ಒಪ್ಪಿದರಂತೆ. ಮತ್ತು ಆ ಖಾಸಗೀ ಒಪ್ಪಂದದ ಕರಾರಿನಂತೆ ಪೂಜೆ ಮಾಡಿದವರಿಂದ ಪೂಜೆ ಮಾಡಿಸಿಕೊಂಡವನಿಗೆ ಮೇಲಾಗಿ ರೂ ೨೦ ರ ದಕ್ಷಿಣೆ ಕೊಡಿಸಿದರಂತೆ! ಈ ರೀತಿಯಲ್ಲಿ ಅಧಿಕಾರಿಗಳ ಅವಾಳಿಗೆ ಬಲಿಬಿದ್ದ ಹೊಲೆಯರು ೧ ದಿವಸ ಸಂಪು ಮಾಡಿ ಮರುದಿವಸ ಹಾಜರಾಗಿರುವರು! ಇದು ಮೊದಲನೇ ಗೊಂದಲವಾಯಿತು.

ಇನ್ನು ಎರಡನೇ ಗೊಂದಲವೆಂದರೆ ತಾರೀಖು ೩೦ ನೇ ದಿವಸ ಕೂಡಿದ ಜನರಲ್ ಕಮೀಟಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಸ್ವತಃ ವಹಿಸಿಕೊಳ್ಳಬೇಕೋ, ಬ್ಯಾಡೋ ಎಂಬ ಬಗ್ಗೆ ವಾದ-ವಿವಾದವಾಗಿ ಅದನ್ನು ಲೋಕಲ್ ಬೋರ್ಡಿಗೆ ವಹಿಸುವ ನಿರ್ಣಯವಾಯಿತು. ಒಂದೇ ತಿಂಗಳ ಪೂರ್ವದಲ್ಲಿ ಇಂಗ್ಲೀಷ ೧—೨—೩ ನೇ ಇಯತ್ತೆಗಳನ್ನು ಕನ್ನಡ ೫-೬-೭ನೇ ಇಯತ್ತೆಗಳಿಗೆ ಜೋಡಿಸುವ ಠರಾವು ಮಾಡಿ ಅಲ್ಲಿ ಇಂಗ್ಲೀಷ ಕಲಿಸಲು ಒಬ್ಬ ಶಿಕ್ಷಕನ ನೇಮಣೂಕಿಯಾಯಿತು. ಹಂಗಾಮಿ ಇದ್ದ ಮಾಸ್ತರನೊಬ್ಬನಿಗೆ ಮನೆಗೆ ಕಳಿಸಿ ಆಯಿತು. ಮುದುಕನಾದ ಇನ್ನೊಬ್ಬನಿಗೆ ಗ್ರ್ಯಾಚ್ಯುಯಿಟಿ ತೆಗೆದುಕೊಂಡು ಹೋಗುವಿಯೋ ಎಂದ ಕೇಳಿ ಆಯಿತು. ಉಳಿದವನಿಗೆ ಕನ್ನಡ ಶಾಲೆಯ ಅಸಿಸ್ಟಂಟ ಆಗುತ್ತೀಯೋ ಎಂದ ಕೇಳಿ ಆಯಿತು. ಆದರೆ ಮೇಲಿನ ನಿರ್ಣಯವನ್ನು ನೋಡಿದರೆ, ಎಲ್ಲವೂ ಗೋಂದಲಿಬುವಾನ ಗೊಂದಲವೇ ಆಗಿದ್ದು, ಜನ ಸಹಕಾರವನ್ನು ಇಚ್ಛಿಸಿ ಬಂದಿದ್ದ ಇಂಗ್ಲೀಷಕ್ಕೆ ೩ ಇಯತ್ತೆಗಳ ಕೂಡ ಕನ್ನಡವು ಪುನಃ ಅಸಹಕಾರ ಮಾಡುವದೆಂತ ಕಾಣುತ್ತದೆ. 'ಶುಭಸ್ಯ ಶೀಘ್ರಂ.' ಯಾಕೆಂದರೆ ಮೊದಲನೆ ಇಯತ್ತೆಯ ಹುಡುಗರ ಸಂಖೆಯು ೪೦ ಕ್ಕೆ ಮಿಕ್ಕಿಹೋಗಿದ್ದು, "ಬೂದೋ ಕಂಬ ಊದಿಬಿಡು ದಾಸನ ಸೇವೆ ಮುಗಿಯಿತು" ಎಂಬಂತೆ ಅಲ್ಲಿಯ ಶಿಕ್ಷಕನ ಸ್ಥಿತಿಯಾಗಿದೆ. ಪ್ರೌಢ ವಿದ್ಯಾರ್ಥಿಗಳಿಗೆ ಕಲಿಸುವದು ಅಷ್ಟು ಕಠಿಣವಲ್ಲ. ಅವರಿಗೆ ಒಮ್ಮೆ ಹೇಳಿದರೆ ತಿಳಿಯುತ್ತಿದ್ದು, ಅವರು ತಮ್ಮ ಜವಾಬದಾರಿಯನ್ನಾದರೂ ಅರಿತಿರುವರು. ಕೆಳಗಿನ ಇಯತ್ತೆಗಳ ಚಿಕ್ಕ ವಿದ್ಯಾರ್ಥಿಗಳ ಮಾತು ಹಾಗಲ್ಲ. ಪ್ರಾರಂಭದಲ್ಲಿ ಶಿಕ್ಷಕನು ಪ್ರತಿ ಒಬ್ಬನ ಕಡೆಯಿಂದ ಕೆಲಸಮಾಡಿಸಿ ಅವನ ಕಡೆಗೆ ಲಕ್ಷ ಕೊಡಬೇಕಾಗುತ್ತದೆ. ಹುಡುಗರ ಸಂಖೆಯು ೪೦ ಕ್ಕೆ ಮೀರಿದಂಥ ವರ್ಗದಲ್ಲಿ, ಅದೂ ೧ ನೇ ಇಯತ್ತೆಯಲ್ಲಿ ೪೫ ಮಿನಿಟುಗಳ ಅಲ್ಪಾವಧಿಯಲ್ಲಿ, ಕನ್ನಡ ಶಾಲೆಯ ಚಿಕ್ಕ ಬಾಲಕರ ಕೂಗಿನ ಕಾಟದಲ್ಲಿ ಇಂಗ್ಲೀಷದಂಥ ಕಠಿಣವಿಷಯವನ್ನು ಕಲಿಸುವದು ಕಠಿಣವೇ ಸರಿ. ಎಲ್ಲ ವಿಷಯಗಳೂ ಒಬ್ಬ ಶಿಕ್ಷಕನ ಹಸ್ತದಲ್ಲಿಯೇ ಇದ್ದರೆ, ಇಂಗ್ಲೀಷ ಶಬ್ದಗಳು ಪದೇಪದೇ ಕೇಳಬರುತ್ತಿರುವದಲ್ಲದೆ ಸುಲಭವಾದ ವಿಷಯಗಳು ಮುಗಿದು, ಉಳಿದ ವೇಳೆಯನ್ನು ಇಂಗ್ಲೀಷದ ಕಡೆಗೆ ಹಾಕಲು ಅವಕಾಶವಿರುತ್ತದೆ. ಹೀಗಾಗಿ ಒಂದು ತಿಂಗಳಾದರೂ A B C D ಗಳನ್ನು ಕಲಿಯದ ಎಷ್ಟೋ ಹುಡುಗರು ಕುಂತು ಬಿಡುತ್ತಾರೆ.

ಇನ್ನು ಮೂರನೇ ಗೊಂದಲವೆಂದರೆ ಹ್ಯಾಸ್ಕೂಲಿನದು. ೩ ಇಯತ್ತೆಗಳನ್ನು ಕನ್ನಡಶಾಲೆಗೆ ಜೋಡಿಸಿದ್ದರಿಂದ ಸುಮಾರು ರೂ ೭೦೦ ರ ಉಳಿತಾಯವಾಗುತ್ತಿತ್ತು ಮತ್ತು ಹ್ಯಾಸ್ಕೂಲಿನ ಇಮಾರತಿಗೂ ಕಡಿಮೆ ಖರ್ಚು ಬರುತ್ತಿತ್ತು. ಆದರೆ ಸಧ್ಯ ಇಯತ್ತೆಗಳನ್ನು ಪುನಃ ತೆಗೆದುಕೊಂಡರೆ ಉಳಿತಾಯ ವ್ಯರ್ಥ ಹೋಗಲಾಗಿ, ಇಮಾರತಿನ ಖರ್ಚು ಇಮ್ಮಡಿಯಾಗುತ್ತದಲ್ಲಾ ಎಂದ ಮೆಂಬರರು ದೊಡ್ಡ ಗೊಂದಲದಲ್ಲಿ ಬಿದ್ದರು. ಆದರೆ ಮುಂದಿಟ್ಟ ಹೆಜ್ಜೆಯನ್ನು ಈ ವಿಷಯದಲ್ಲಿ ಹಿಂದೆ ತೆಗೆದುಕೊಳ್ಳುವದು ಭೂಷಣವಲ್ಲವೆಂದ ಗೊಣಗುಟ್ಟುತ್ತ, ಮೇಲೆ ಕೆಳಗೆ ನೋಡುತ್ತ ಅದೇ ದಿವಸ ಹ್ಯಾಸ್ಕೂಲಿನ ಕಮೀಟಿ ಮ್ಯುನಿಸಿಪಾಲಿಟಿಯಲ್ಲಿ ಮಂಜೂರಾಯಿತು.

ನಾಗರಿಕ.

ಕನ್ನಡ ದೈನಿಕ.

ಕರ್ನಾಟಕವೃತ್ತ ಮತ್ತು ಧನಂಜಯದ ಸಂಪಾದಕರಾದ ಶ್ರೀ ಕೃಷ್ಣಾಜಿ ಹಣಮಂತ ಮುದವೇಡಕರ, ಧಾರವಾಡದವರು ಕರ್ನಾಟಕಕ್ಕೆ ಒಂದು "ದೊಡ್ಡ ಕನ್ನಡ ದೈನಿಕ ಬೇಕು" ಎಂಬ ಸದರಿನಲ್ಲಿ ಎಲ್ಲ ಕರ್ನಾಟಕ ಬಾಂಧವರಿಗೆ ಸವಿನಯ ವಿನಂತಿಯನ್ನು ಪ್ರಕಟಿಸಿರುವರು. ಅದರ ಮುಖ್ಯ ಸಾರಾಂಶವೇನೆಂದರೆ.— ಈ ಪತ್ರದಲ್ಲಿ ಸ್ವದೇಶ-ಪರದೇಶಗಳೊಳಗೆ ಸ್ವ-ಪರ ಪ್ರಾಂತಗಳಲ್ಲಿ ದಿನೇದಿನೇ ಸಂಭವಿಸುವ ಎಲ್ಲ ಮಹತ್ವದ ಸುದ್ದಿಗಳು ಪ್ರಕಟವಾಗುವವು. ೨೪ ತಾಸುಗಳಲ್ಲಿ ಇಡೀ ಕರ್ನಾಟಕದಲ್ಲಿ ದೈನಿಕ ಪತ್ರವು ಸಂಚರಿಸುವಂತೆ ವ್ಯವಸ್ಥೆ ಮಾಡಲಾದೀತು. ಕರ್ನಾಟಕದ ಪ್ರಮುಖ ಪಟ್ಟಣಗಳಲ್ಲಿ ವಿಶ್ವಸನೀಯ ಸ್ವಂತ ಸುದ್ದಿಗಾರರನ್ನಿಟ್ಟು, ಕರ್ನಾಟಕಗಳಲ್ಲಿ ಸಂಭವಿಸುವ ಎಲ್ಲ ಮಹತ್ವದ ಸಂಗತಿಗಳನ್ನು ಸಂಕಲಿತ ಮಾಡುವರು. ಲೇಖನಕಲೆಯಲ್ಲಿ ನಿರತ, ಅನುಭವವುಳ್ಳ ಲೇಖಕರನ್ನು ನೇಮಿಸಿಕೊಂಡು ಅವರ ಸಹಾನುಭೂತಿಯಿಂದಲೂ, ಸಹಕಾರಿತೆಯಿಂದಲೂ ದೈನಿಕ ಪತ್ರಿಕೆಯನ್ನು ಅಂದವಾಗಿ ಪ್ರಕಟಿಸಲ್ಪಡುವದು. ಇದಕ್ಕೆ ಪ್ರಾಥಮಿಕ ಭಾಂಡವಲು ೫೦,೦೦೦ ರೂಪಾಯಿಗಳು ತಗಲಬಹುದು. ಚಾಲು ಖರ್ಚಿನ ಬಾಬತು ಪ್ರತಿ ತಿಂಗಳಿಗೆ ಸುಮಾರು ೪,೦೦೦ ರೂಪಾಯಿಗಳಾದಾವು. ವರ್ಗಣಿಯ ವಾರ್ಷಿಕ ದರವನ್ನು ೧೫ ರೂಪಾಯಿಗಳಂತೆ ಹಿಡಿದರೂ, ೨-೩ ಸಾವಿರ ವರ್ಗಣಿದಾರರು ಬೇಕು. ಪ್ರಕಟಣೆಗಳಿಂದ ಸುಮಾರು ೪ ಸಾವಿರ ರೂಪಾಯಿಗಳು ಉತ್ಪನ್ನವಾದಾವು. ಈ ಕಾರ್ಯಕ್ಕೆ ತಗಲುವ ಭಾಂಡವಲು ಸುದ್ದಿಗಾರ, ಲೇಖಕ ವರ್ಗ ಮೊದಲಾದವುಗಳ ಬಗ್ಗೆ ಕರ್ನಾಟಕಸ್ಥರು ತಮ್ಮ ತಮ್ಮ ಅಭಿಪ್ರಾಯವನ್ನು ಬೇಗನೆ ತಿಳಿಸಬೇಕೆಂದು ಮುದವೇಡಕರರವರು ಬಯಸುತ್ತಾರೆ. ಇದೇ ಬರುವ ವಿಜಯಾ ದಶಮಿಯ ಸುಮುಹೂರ್ತದಲ್ಲಿ ಈ ದೈನಿಕ ಪತ್ರಿಕೆಯನ್ನು ಹೊರಡಿಸುವ ಇರಾದೆಯಿದ್ದದರಿಂದ, ಅಲ್ಲಲ್ಲಿಯ ಕರ್ನಾಟಕಸ್ಥರು ತಮ್ಮ ತಮ್ಮ ಮತಗಳನ್ನು ಶೀಘ್ರವೇ ಅರುಹಿದರೆ, ಪತ್ರಿಕೆಯ ಚಾಲಕರಿಗೆ ಅವನ್ನು ಅಮಲಿನಲ್ಲಿ ತರಲು ಅನುಕೂಲವಾಗುವದು. ಈ ಪ್ರಶ್ನೆಗಳು ಯಾವವೆಂದರೆ —

೧. ಪತ್ರಕ್ಕೆ ಬೇಕಾಗುವ ಮೂಲ ಧನ (ಭಾಂಡವಾಳ)ವನ್ನು ಹೇಗೆ ಕೂಡಿಸಬೇಕು ಕಂಪನಿ ಮಾಡಿಯೋ, ಅಥವಾ ಕಾಣಿಕೆಯ ರೂಪದಿಂದಲೋ?

೨ ಕಂಪನಿ ಮಾಡುವದಾದರೆ ಎಷ್ಟು ಭಾಂಡವಲಿನ ಕಂಪನಿಯನ್ನು ಮಾಡಬೇಕು ಮತ್ತು ಪ್ರತಿ ಒಂದು ಶೇರಿನ ಕ್ರಯವೆಷ್ಟಿರಬೇಕು.

೩ ಕಂಪನಿಯ ಮುಖ್ಯ ಕಾರ್ಯಾಲಯವು ಎಲ್ಲಿರಬೇಕು

೪. ತಮ್ಮ ತಮ್ಮ ಪರಿಚಯಸ್ಥರಲ್ಲಿ ಎಷ್ಟು ಭಾಂಡವಲವನ್ನು ಹಾಗು ಎಷ್ಟು ಜನ ಚಂದಾದಾರರನ್ನು ಕೂಡಿಸಿಕೊಡಬಹುದು.

೫. ಈ ಪತ್ರದ ವ್ಯವಸ್ಥೆಯಲ್ಲಿ ಲೇಖಕರೆಂದಾಗಲೀ ವ್ಯವಸ್ಥಾಪಕರೆಂದಾಗಲೀ ಪತ್ರ ಹೊರಡುವ ಸ್ಥಳಕ್ಕೆ ತಮ್ಮಲ್ಲಿಂದ ಬಂದು ನಿಂತು ಸಹಾಯಮಾಡಲಿಕ್ಕೆ ಎಷ್ಟು ಜನರು ಸಿಗಬಹುದು? ಹಾಗು ತಮ್ಮ ಸ್ಥಳದಲ್ಲಿಯೇ ನಿಂತು ಉಪಸಂಪಾದಕ, ಲೇಖಕ, ಸುದ್ದಿಗಾರ, ಏಜಂಟ ಮೊದಲಾದ ಯಾವದಾದರೂ ಕೆಲಸವನ್ನು ಅಂಗೀಕರಿಸಿ ಪತ್ರಕ್ಕೆ ಸಹಾಯಮಾಡಲು ಎಷ್ಟು ಜನರು ತಮ್ಮಲ್ಲಿ ಸಿಗಬಹುದು?

— ಲೌಸೇನ ಪರಿಷತ್ತಿನ ಕೆಲಸವಾದ ಬಳಿಕ ಕರ್ಝನ ದೊರೆಗಳು ಪರರಾಷ್ಟ್ರೀಯ ಮಂತ್ರಿಪದವನ್ನು ತ್ಯಜಿಸಿ, ವಿಶ್ರಮಿಸುವರೆಂದು ಸುದ್ದಿ ಎಬ್ಬಿದೆ ಮುಖ್ಯ ಪ್ರಧಾನಪದವನ್ನು ಮಿ। ಬೋಲ್ಡವಿನ್‌ರವರಿಗೆ ಕೊಟ್ಟದ್ದರಿಂದ ಕರ್ಝನ ದೊರೆಗಳಿಗೆ ಮನಸ್ಸು ಶಾಂತವಿಲ್ಲೆಂದು ಈ ವಿಶ್ರಾಂತಿಯ ಆಲೋಚನೆಯಾಗಿದೆಂದು ಅನೇಕರು ತರ್ಕಿಸುತ್ತಾರೆ.

— ಅಮೇರಿಕೆಯಲ್ಲಿ ಬಿಸಿಲು ತಾಪದಿಂದ ಶಿಕಾಗೋ ಪಟ್ಟಣದಲ್ಲಿ ೮ ದಿನಗಳಲ್ಲಿ ೧೭ ಮಂದಿಗಳು ಮೃತಪಟ್ಟರಂತೆ

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು ಕಿಮ್ಮತು ೧೦ ಆಣೆ. ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೊ, ಫೋರ್ಟ, ಮುಂಬಯಿ.

ವಿವಿಧ ಸಂಗ್ರಹ.

ಅಖಿಲ ಭಾರತೀಯ ರಾಷ್ಟ್ರಧ್ವಜೋತ್ಸಹ.

ಅಖಿಲ ಭಾರತೀಯ ಕೊಂಗ್ರೆಸ ಹಾಗು ಸೆಂಟ್ರಲ ಖಿಲಾಫತ ಕಮಿಟಿಗಳ ಸಭಾಪತಿಗಳಾದ ಡಾ। ಎಮ್. ಎ. ಅನ್‌ಸಾರಿಯವರು ದಿಲ್ಲಿಯಿಂದ ಜೂನ ೨೯ ನೇ ತಾರೀಖಿಗೆ ತಂತಿಯಿಂದ ಹೊರಡಿಸಿದ ಪ್ರಕಟಣೆಯೇನಂದರೆ — ನಮ್ಮ ರಾಷ್ಟ್ರಧ್ವಜದ ಮಾನ ರಕ್ಷಣಕ್ಕಾಗಿ ಮಧ್ಯಪ್ರಾಂತಸ್ಥರೂ, ನಾಗಪುರಸ್ಥರೂ ಧೈರ್ಯವನ್ನು ತೋರಿಸುವರು. ಈ ಯುದ್ಧವು ಈಗೇನು ಸ್ಥಾನಿಕವಲ್ಲ. ಈಗ ಅದಕ್ಕೆ ಅಖಿಲ ಭಾರತೀಯ ಮಹತ್ವವು ಪ್ರಾಪ್ತವಾಗಿದೆ. ಅನೇಕ ಪ್ರಾಂತಗಳಿಂದ ಬಹಳೇ ಸ್ವಯಂಸೇವಕರು ಈ ಕಾದಾಟವನ್ನು ನಡಿಸಲು ನಾಗಪುರಸ್ಥರಿಗೆ ನೆರವಾಗಲು ಹೋಗಿರುವರು. ಮೆರವಣಿಗೆಯನ್ನು ಪ್ರತಿಬಂಧಿಸುವ ನೆವಮಾಡಿ, ಸರಕಾರವು ನಮ್ಮ ಧ್ವಜದ ಮಾನಭಂಗ ಮಾಡಿ, ರಾಷ್ಟ್ರೀಯ ಸ್ವಾಧೀನತೆಯನ್ನು ಭಂಗಿಸುವದು ಸರಕಾರದ ಧ್ಯೇಯವಿದೆ. ನಾಗಪುರ ಮೊದಲಾದವುಗಳಲ್ಲಿ ನಡೆಯುವ ಧ್ವಜದ ಸಂಗ್ರಾಮದಲ್ಲಿ ಪ್ರತಿಯೊಂದು ಪ್ರಾಂತವು ಸ್ವಯಂಸೇವಕರನ್ನು ದಾಖಲ ಮಾಡಿಕೊಂಡು ತನ್ನ ಪಾಲಿನ ಸಹಾಯ ಮಾಡಬೇಕು. ಎಲ್ಲ ಕೊಂಗ್ರೆಸ ಕಮಿಟಿಗಳೂ, ರಾಷ್ಟ್ರಧ್ವಜವನ್ನು ಆದರಿಸುವವರೆಲ್ಲರೂ ಈ ಧ್ವಜವನ್ನು ಕೈಕೊಂಡು ಗ್ರಾಮಪ್ರದಕ್ಷಿಣೆ ಮಾಡಬೇಕೆಂದು ನನ್ನ ಸೂಚನೆಯಿದೆ. ಜುಲೈ ೮ ನೇ ತಾರೀಖಿಗೆ ನಾಗಪುರ ದಿನವಿದೆ. ಅಂದು ದೇಶದಲ್ಲೆಲ್ಲ ಧ್ವಜವನ್ನು ಮೆರೆಸಿ, ಅಖಿಲ ಭಾರತೀಯ ರಾಷ್ಟ್ರಧ್ವಜದ ಉತ್ಸವವನ್ನು ಮಾಡುವದು ಯೋಗ್ಯವಿದೆ. ಅಂದು ರಾಷ್ಟ್ರದ ಮಾನದ ಹಾಗು ಸ್ವಾಧೀನತೆಯ ಚಿಹ್ನವನ್ನು ಭಾರತೀಯರು ಮೆರೆಸಬೇಕು, ಹಾಗು ಸರ್ವ ಅತಿ ಶ್ರೇಷ್ಠ ನಾಗಪುರದ ಲೋಕನಾಯಕರ ಬಂಧನವನ್ನು ಯೋಗ್ಯ ಪ್ರಕಾರದಿಂದ ಸನ್ಮಾನಿಸಿದಂತಾಗುವದು.

***

ಸಾಧುಗಳ ಪರಿತ್ರಾಣಕ್ಕಾಗಿ

ಬೆಳಗಾಂವ ಜಿಲ್ಲಾ ಸಂಪಗಾಂವ ತಾಲೂಕ ಬೇಲವಡಿ ಗ್ರಾಮದಲ್ಲಿ ಜೂನ ೧೭ ನೇ ತಾರೀಖಿನ ಸುಮಾರಿಗೆ ಒಂದು ಸಂಗತಿಯು ಘಟಿಸಿತು. ಅಲ್ಲಿ ವೇ। ನರಸಿಂಹ ಭಟ್ಟರೆಂಬೊಬ್ಬ ಸಂತರಿದ್ದರು. ಅವರ ಮಗಳು ಪ್ರಾಯಸ್ಥಳಾದವಳು. ಇವರು ಸಾಧಾರಣ ಸ್ಥಿತಿಯವರು. ಹೆಂಗಸರಿಗೆ ಚಿನ್ನವೆಂದರೆ ಆಶೆ. ಮಂದಿಗಳಿಂದ ಹುಡುಗಿಯ ಅಲಂಕಾರಾರ್ಥವಾಗಿ ಸಾವಿರಾರು ರೂಪಾಯಿ ಬೆಲೆಬಾಳುವ ಚಿನ್ನವನ್ನು ತಂದರು. ಸಮಾರಂಭವು ಮುಗಿದ ಬಳಿಕ, ಹುಡುಗಿಯು ಚಿನ್ನವನ್ನೆಲ್ಲ ಮೈಮೇಲಿಂದ ತೆಗೆದು, ಗಂಟು ಕಟ್ಟಿ ಗೂಟಕ್ಕೆ ತೂಗಹಾಕಿ ಮಲಗಿದ್ದಳು. ವೇ। ಗಳ ಸೌಭಾಗ್ಯವತಿಯು ಮುಂಜಾನೆ ಎಂದಿನಂತೆ ಹಿತ್ತಲಿನಲ್ಲಿ ಹೋಗಲು, ಅಲ್ಲಿ ಒಂದು ವಸ್ತ್ರ ಕಾಣಿಸಿತು. ಕೂಡಲೆ, ಅವಳಿಗೆ ಮನೆಯೊಳಗಿನ ಚಿನ್ನದ ನೆನಪಾಗಿ ಒಳಗೆ ಬಂದು ಗಂಟನ್ನು ಹುಡುಕಿದಳು. ಗಂಟಿನ ಪತ್ತೆಯೇ ಇಲ್ಲ. ಚಿನ್ನವನ್ನು ಯಾರು ಕದ್ದೊಯ್ದರು? ಎಂದು ಸಂಶಯಗೊಳ್ಳಲು ಆಸ್ಪದವಿದ್ದಿಲ್ಲ, ಕೇಳುವದೂ ಕಠಿಣವೇ. ಯಾಕಂದರೆ ಮನೆಯಲ್ಲಿ ಮಲಗಿದ್ದವರೆಲ್ಲರೂ ಆಪ್ತರು, ನೆಂಟರು, ಇಷ್ಟರು, ಮಿತ್ರರು. ಕಳವಿನ ಸುದ್ದಿಯು ಸಂತ ನರಸಿಂಹ ಭಟ್ಟರಿಗಾಯಿತು. 'ಸಂಪತ್ತೌ ವಿಪತ್ತೌ ಚ ಮಹತಾಮೇಕರೂಪತಾ' ಎಂಬಂತೆ ಸಂತ ನರಸಿಂಹ ಭಟ್ಟರು "ನಮ್ಮವಿದ್ದರೆ, ಸಿಕ್ಕಾವು" ಎಂದು ಉದ್ಗರಿಸಿ, ನಿತ್ಯದಂತೆ ತುಲಸಿದಲ, ಪುಷ್ಪಸಂಗ್ರಹಕ್ಕೆ ತೆರಳಿದರು. ಮನೆಯಲ್ಲಿಯೂ, ಊರಲ್ಲಿಯೂ ಗೊಂದಲ, ಕೋಲಾಹಲ. ವೇ। ಗಳ ವೃತ್ತಿಯಿಂದ, ಕಳವು ಆದದ್ದೇ ಸುಳ್ಳೆಂದು ಅನೇಕರು ಗ್ರಹಿಕೆ ಮಾಡಿಕೊಂಡು, ಹೆರವರಿಗೆ ಮೋಸಹಾಕುವ ಹಂಚಿಕೆಯೆಂದು ಸಹ ತಿಳುವಳಿಕೆ ಮಾಡಿಕೊಂಡರು. ಆದರೂ ಶೋಧವು ನಡೆದಿತ್ತು. ಮನೆಯ ಆಳುಮಗನ ಸೌಭಾಗ್ಯವತಿಯು ನಿತ್ಯರಾತ್ರಿಗೆ ದೀಪದ ಕಡ್ಡಿಗಾಗಿ ಬಂದಿದ್ದಳು. ಶೋಧ ಮಾಡಲು, ಅವಳೇ ಗಂಟು ತೆಗೆದುಕೊಂಡು ಹೂಳಿಟ್ಟಳೆಂತಲೂ, ಮುಂದೆ ಸಂಶಯ ಬರದೆಂದು ನತ್ತೊಂದನ್ನು ಹಿತ್ತಲಿನಲ್ಲಿ ಒಗೆದಿದ್ದಳೆಂತಲೂ ಪತ್ತೆಯಾಯಿತು. ಬಾನಗಿತ್ತಿಯು ದೀಪದ ಕಡ್ಡಿಗಳನ್ನು ಒಯ್ಯುವಾಗ ಬಾಗಿಲನ್ನು ಗಟ್ಟಿಯಾಗಿ ಹಚ್ಚಿಕೊಳ್ಳಿ ಎಂದು ಎಚ್ಚರಿಕೆ ಕೊಟ್ಟು ಹೋಗಿದ್ದಳಾಕೆ. ನೆವವೊಂದು ಅವಳ ಮೇಲೆ ಯಾರಿಗೂ ಸಂಶಯ ಬರಲಿಲ್ಲ. ಆಳುಮಗನು ನಂಬಿಗಸ್ತನು. ಅವನ ಹೆಂಡತಿ ಇಂಥ ಕೃತ್ಯ ಮಾಡಲಿಕ್ಕಿಲ್ಲೆಂದು ಎಲ್ಲರದೂ ಶ್ರದ್ಧೆ. ಪಾಪವು ಹೊರಬಿದ್ದ, ಅವಳಿಗೆ ೬ ತಿಂಗಳ ಶಿಕ್ಷೆಯಾಯಿತು. ಸಂತ ನರಸಿಂಹ ಭಟ್ಟರ ವಚನದಂತೆ ಅವರ ದೈವತವು ಅವರ ಒಡವೆಗಳನ್ನು ತರಿಸಿಕೊಟ್ಟಿತು. ಸಾಧುಗಳ ಪರಿತ್ರಾಣದ ಕೆಲಸವು ಶ್ರೀ ಪರಮಾತ್ಮನದೇ.

***

ಸಾಮ್ರಾಜ್ಯನಾಶದ ಲಕ್ಷಣ.

ಅಮೃತಸರದಲ್ಲಿ ಈಗ ಒಂದು ಅಪೂರ್ವ ಕಾರ್ಯವು ಜರಗುತ್ತಲಿದೆ. ಸುವರ್ಣ ಮಂದಿರದ ಕೆರೆಯ ಹೂಳನ್ನು ತೆಗೆದು, ದುರುಸ್ತಿ ಮಾಡುವ ಕೆಲಸವನ್ನು ಗುರುದ್ವಾರ ಪ್ರಬಂಧಕ ಕಮಿಟಿಯವರು ಕೈಕೊಂಡಿರುವರು. ಈ ಕಾರ್ಯವು ಕಳೆದ ಜೂನ ೧೭ ನೇ ತಾರೀಖಿಗೆ ಪ್ರಾರಂಭಿಸಲ್ಪಡುವದೆಂದೂ, ಅದಕ್ಕೆ ಎಲ್ಲ ಶೀಖ ಪಂಥದವರು ಆಗಮಿಸಬೇಕೆಂದೂ ಪ್ರಬಂಧಕ ಕಮಿಟಿಯ ಚಾಲಕರು ಪ್ರಕಟಣೆಗಳನ್ನು ಹೊರಡಿಸಿದ್ದರು. ಕೂಡಲೆ, ಅಖಿಲ ಭರತ ಖಂಡದೊಳಗಿಂದಲೂ, ಪಂಜಾಬದೊಳಗಿನ ಹಳ್ಳಿಹಳ್ಳಿಗಳಿಂದಲೂ ಈ ಧರ್ಮಕಾರ್ಯಕ್ಕಾಗಿ ನೆರೆದರು. ಈ ಕಾರ್ಯಕ್ಕೆ 'ಕರಸೇವಾ' ಎಂದು ಹೆಸರಿದೆ. ಇದೊಂದು ಧಾರ್ಮಿಕ ಕೃತ್ಯವೆಂತಲೂ ಅಖಿಲ ಪಂಥವು ಭಾವಿಸುತ್ತದೆ. ೫೦–೬೦ ಸಾವಿರ ಶೀಖರು ಈ ಕೆರೆಯನ್ನು ಸ್ವಚ್ಛಮಾಡಲಿಕ್ಕೆ ಬೇಕಾದ ಸಹಾಯವನ್ನು ಉಚಿತವಾಗಿ ಅರ್ಪಿಸಲು ತತ್ಪರರಾಗಿ ಅಮೃತಸರದಲ್ಲಿ ನೆರೆದಿರುವರು. ಪ್ರಾಥಮಿಕ ವಿಧಿಯು ಮುಗಿದ ಬಳಿಕ, ಪಟಿಯಾಲಾ ಸಂಸ್ಥಾನದ ಮಹಾರಾಜರು ಸ್ವತಃ ಕೆರೆಯೊಳಗಿಂದ ಕೆಸರನ್ನು ತೆಗೆಯಲು ಮುಂದಾದರು. ಈಗ ೫೦–೬೦ ಸಾವಿರ ಜನ ಶೀಖರು ಹಗಲಿರುಳು ಕೆರೆಯನ್ನು ಬರಿದು ಮಾಡಲು ತೊಡಗಿರುವರು. ಕೆರೆಯ ದುರುಸ್ತಿಯೂ ನಡೆದದೆ. ಈ ಕೆಲಸಕ್ಕಾಗಿ ಒಂದು ಪೈ ಸಹ ಖರ್ಚಾಗುವದಿಲ್ಲ. ಕೆಲಸ ಮಾಡುವವರಿಗೆ ಪುಕ್ಕಟೆಯಾಗಿ ಊಟ ಬಡಿಸುವ ವ್ಯವಸ್ಥೆಯು ಮಾಡಲ್ಪಟ್ಟಿದೆ. ಇದಕ್ಕೂ ಖರ್ಚಿಲ್ಲ. ನೆರೆಯ ಜಮೀನದಾರರೂ, ಹಳ್ಳಿಗರೂ ತಗಲುವ ಸಾಮಗ್ರಿಯನ್ನೆಲ್ಲ ಉಚಿತವಾಗಿ ಪೂರೈಸಿರುವರು. ೫೦–೬೦ ಸಾವಿರ ಗಂಡಸರೂ, ಹೆಂಗಸರೂ ಕೆರೆಯ ಕೆಲಸ ಮಾಡಿ ಅಡಿಗೆ ಮನೆಯಲ್ಲಿ ತಿಂದುಣ್ಣುತ್ತಿರುವರು. ಈ ಅಚ್ಚುಕಟ್ಟಾದ ವ್ಯವಸ್ಥೆಯನ್ನು ನೋಡಿ, ಯಾರು ಬೆರಗಾಗಲಿಕ್ಕಿಲ್ಲ? ಈ ಕೆಲಸ ಮಾಡಲಿಕ್ಕೆ ಸರಕಾರಿ ಕಂಟ್ರಾಕ್ಟದಾರರಿಗೆ ಕೊಟ್ಟಿದ್ದರೆ ೭-೮ ತಿಂಗಳುಗಳು ಸಹಜವಾಗಿ ತಗಲುತ್ತಿದ್ದವು. ಅದನ್ನು ಶೀಖರು ಬರೇ ೨೦ ದಿನಗಳಲ್ಲಿ ಕೊನೆಗಾಣಿಸಿರುವರು. ಮೊದಲನೇ ದಿನ ೧–೧॥ ಲಕ್ಷ ಶೀಖರು ಕಪ್ಪು ಖಾದಿಯನ್ನು ಧರಿಸಿಕೊಂಡು ಕೆರೆಯ ಬದಿಗೆ ಶಿಸ್ತಿನಿಂದ ಕೂಡು ಮಾಡುವದನ್ನು ನೋಡಿ, ಯಾರು ಪ್ರಶಂಸೆಯನ್ನು ಪ್ರದರ್ಶಿಸದಿರಲಿಕ್ಕಿಲ್ಲ! ಅಷ್ಟು ಸುಸಂಘಟಿತವಾಗಿ, ಅಚ್ಚುಕಟ್ಟಾಗಿ ಈ ಕಾರ್ಯವು ನಡೆದದೆ. ಈ ಕೆರೆಯ ಪುನರುಜ್ಜೀವನದ ಕಥೆಯೊಂದಿದೆ. ಕೆರೆಯನ್ನು ಪುನರುಜ್ಜೀವನ ಮಾಡುವ ಸಮಯದಲ್ಲಿ ಸಾಮ್ರಾಜ್ಯವು ನಾಶಹೊಂದುತ್ತದೆಂದು ಆಖ್ಯಾಯಿಕೆಯಿದೆ. ಮೊದಲನೇ ಸರತಿ ಈ ಕೆರೆಯನ್ನು ಬರಿದು ಮಾಡಲು, ಮೋಘಲರ ಬಾದಶಾಹಿಯು ಅಳಿದು ಹೋಯಿತಂತೆ! ಎರಡನೆ ಸಾರೆ ಕೆರೆಯು ಬರಿದಾಗಲು, ಪಂಜಾಬದೊಳಗಿನ ಶೀಖರ ಆಳಿಕೆಯು ಸಮಾಪ್ತಿಹೊಂದಿತು. ಈಗ ಕೆಸರು ತೆಗೆಯುವದು ಮೂರನೇ ಬಾರಿ. ಆಖ್ಯಾಯಿಕೆಯಂತೆ ಯಾರ ಸಾಮ್ರಾಜ್ಯವು, ಎಲ್ಲಿ ನಾಶಹೊಂದುತ್ತದೋ ನೋಡಬೇಕು.

***

ಸ್ವರಾಜ್ಯದೊಳಗೆ ಪರರಾಜ್ಯ.

ಮ್ಯುನಿಸಿಪಾಲಿಟಿ, ಲೋಕಲ್‌ಬೋರ್ಡುಗಳು ನೌಕರಶಾಹಿಯ ಆಶ್ರಯದೊಳಗಿನ ಸ್ವರಾಜ್ಯ ಸಂಸ್ಥೆಗಳು. ಇವುಗಳಿಗೆ ಸ್ವಾತಂತ್ರ್ಯವೆಷ್ಟಿದೆಂಬುದು ಅನೇಕಾವರ್ತಿ ದೃಗ್ಗೋಚರವಾಗಿದೆ. ಈಗ ಲಖನೌ ಮ್ಯುನಿಸಿಪಾಲಿಟಿಗೂ, ಸಂಯುಕ್ತ ಪ್ರಾಂತಿಕ ಸರಕಾರಕ್ಕೂ ಮಾನಪತ್ರ ಅರ್ಪಣದ ಪ್ರಶ್ನೆಯ ಮೇಲೆ ಬಡದಾಟವೆದ್ದಿದೆ. ಮ್ಯುನಿಸಿಪಾಲಿಟಿಯು "ಶಿಕ್ಕ ಶಿಕ್ಕವರಿಗೆ" ಮಾನಪತ್ರಗಳನ್ನರ್ಪಿಸಿದರೆ, ಅದನ್ನು ಸರಕಾರವು ಮಂಜೂರು ಮಾಡಲಿಕ್ಕಿಲ್ಲ. ಮಾನಪತ್ರಗಳನ್ನರ್ಪಿಸುವ ಸಮಾರಂಭವನ್ನು ಸರ್ವಾಧಿಪತಿಗಳ ಅಥವಾ ಪ್ರಾಂತಾಧಿಪತಿಗಳ ಸತ್ಕಾರಕ್ಕಾಗಿಯೇ ಕೈಕೊಳ್ಳಬೇಕು ಎಂದು ಸರಕಾರಿ ಪ್ರಕಟಣೆಯು ಹೊರಟಿದೆ. ಈ ಬಗ್ಗೆ ಕಳೆದ ಶುಕ್ರವಾರ ತಾ. ೨೯ ನೇಗೆ ಲಖನೌ ಮ್ಯುನಿಸಿಪಾಲಿಟಿಯ ಸಭೆಯಾಗಿ ನಿಷೇಧಪ್ರದರ್ಶನವಾಯಿತು. "ಪ್ರಾಂತಿಕ ಹಾಗು ಮಧ್ಯವರ್ತಿ ಸರಕಾರಗಳು ರಾಷ್ಟ್ರೀಯ ಬೇಡಿಕೆಗಳ ಬಗ್ಗೆ ಗರ್ಹಣೀಯ ಧೋರಣವನ್ನನುಸರಿಸಿ, ಭಾರತೀಯರ ಆದರಸತ್ಕಾರಗಳಿಗೆ ಅನರ್ಹವಾಗಿರುವವು. ಆದರಿಂದ ಅವುಗಳ ಅಧಿಪತಿಗಳ ಸತ್ಕಾರಾರ್ಥವಾಗಿ ಮ್ಯುನಿಸಿಪಾಲಿಟಿಯು ಯಾವದೇ ಸಮಾರಂಭವನ್ನು, ಸರಕಾರವು ಲೋಕಮತಕ್ಕೆ ಗ್ರಾಹ್ಯವಾಗುವವರೆಗೆ ಕೈಕೊಳ್ಳಕೂಡದು" ಎಂದು ಬಹುಮತದಿಂದ ಠರಾವನ್ನು ಪಾಸು ಮಾಡಿರುವರು. ಈ ಠರಾವನ್ನು ಮೂವರು ಮಾತ್ರ ವಿರೋಧಿಸಿದರು. ಇದಲ್ಲದೆ, ಇನ್ನು ೩ ಠರಾವುಗಳು ಸೂಚಿಸಲ್ಪಟ್ಟಿವೆ. ಈ ತಿಂಗಳಿನಲ್ಲಿ ಪಂಡಿತ ಮೋತೀಲಾಲ ನೆಹರು ಮಹಾಶಯರು ಲಖನೌ ಪಟ್ಟಣಕ್ಕೆ ಗಮಿಸುವರು. ಆಗ ಅವರಿಗೆ ಮಾನಪತ್ರ ಕೊಡಲು, ಮ್ಯುನಿಸಿಪಾಲಿಟಿಯು ೧ ಆಣೆಯನ್ನು ಮಂಜೂರು ಮಾಡಿದೆ.

ಉಳಿದ ದಿನವನ್ನು ವ್ಯಕ್ತಿಶಃ ಮತಿಗೆಯಿಂದ ಕಳೆಯಿಸುವ ಆಲೋಚನೆಯಿದೆ. ಸಾಮ್ರಾಜ್ಯದಲ್ಲಿ ಭಾರತೀಯರಿಗೆ ಏನೂ ಮಾನವಿಲ್ಲದ್ದರಿಂದ, ಮ್ಯುನಿಸಿಪಾಲಿಟಿಯು ಸಾಮ್ರಾಜ್ಯ ದಿನವನ್ನು ಪಾಲಿಸಬಾರದೆಂಬುದು ಎರಡನೇ ಠರಾವು. ಲೋಕಮಾನ್ಯರ ಪುಣ್ಯತಿಥಿ, ಮಹಾತ್ಮರ ಜಯಂತಿಗಳಿಗೆ ಮ್ಯುನಿಸಿಪಾಲಿಟಿಯು ಶಾಲೆಗಳಿಗೆ ರಜೆ ಕೊಡಬೇಕೆಂತಲೂ, ಶಕ್ಯವಿದ್ದರೆ, ಪ್ರತಿ ೧೮ನೇ ತಾರೀಖಿನ ಗಾಂಧಿ ದಿನಕ್ಕೆ ಶನಿವಾರದ ಬದಲು ರಜೆ ಕೊಡಬೇಕೆಂತಲೂ ಮೂರನೇ ಠರಾವು. ಈ ಮೂರೂ ಠರಾವುಗಳು ಮೊನ್ನೆ ಮಂಗಳವಾರಕ್ಕೆ ಚರ್ಚೆಯಾಗುವವಿದ್ದವು.

***

ಉಪ್ಪಿನ ಮಹತ್ವ.

ಉಪ್ಪಿನ ಬಗ್ಗೆ ಡಾ। ಕೆ. ಕುಪ್ಪಿ ಕನ್ನಾನ ಎಮ್. ಎ., ಪಿ. ಎಚ್. ಡಿ., ಎಫ್. ಈ. ಎಸ್., ರವರು ಬರೆಯುವದೇನಂದರೆ:— ಉಪ್ಪು ಶ್ರೀಮಂತರಿಗೂ, ಬಡವರಿಗೂ ಸರಿಯಾಗಿ ಅವಶ್ಯವುಳ್ಳದ್ದೆಂದು ಹೇಳಲ್ಪಡುತ್ತದೆ. ಅನೇಕರಿಗೆ ಇದರ ಕಾರಣವೇನೆಂದು ಗೊತ್ತಿಲ್ಲ. ಮಾಂಸಾಹಾರಿಗಳಿಗೆ ಉಪ್ಪು ಕಡಿಮೆ ಇದ್ದರೆ ಸಾಗುತ್ತದೆ. ವನಸ್ಪತ್ಯಾಹಾರಿಗಳಿಗೆ ಉಪ್ಪಿನ ಅವಶ್ಯಕತೆಯೇ ವಿಶೇಷ. ಆಹಾರ ಭೇದಗಳಿಂದ ಉಪ್ಪಿನ ಅವಶ್ಯಕತೆಯು ಹೇಗೆ ಭಿನ್ನವಾಗುತ್ತದೆ ಎಂಬದನ್ನೂ ಅನೇಕರು ಅರಿತಿರುವದಿಲ್ಲ. ನಾವು ತಿಂದ ಉಪ್ಪೆಲ್ಲ ಮೂತ್ರರೂಪದಿಂದ ಹೊರಬೀಳುತ್ತದೆ. ಅನೇಕರು, ಹಾಗಾದರೆ, ಉಪ್ಪು ಅವಶ್ಯವಿಲ್ಲೆಂದು ತರ್ಕಿಸಬಹುದು. ಇದು ತೀರ ತಪ್ಪು. ಮೂತ್ರಾಶಯದೊಳಗಿಂದ ದಿನೇ ದಿನೇ ಬಡಿವಾಗುವ ಉಪ್ಪಿನ ಅಂಶವನ್ನು ನಾವು ಉಪ್ಪು ತಿಂದು ಪೂರೈಸದಿದ್ದರೆ, ದೇಹದ ವ್ಯಾಪಾರಗಳು ಥಟ್ಟನೆ ನಿಲ್ಲುವ ಸಂಭವವಿದೆ. ಆಹಾರ ಭೇದದಂತೆ ಉಪ್ಪಿನ ಅವಶ್ಯಕತೆಯು ಹೆಚ್ಚುಕಡಿಮೆಯಾಗುತ್ತದೆ. ಜಿಗರಿಗಳು ವನಸ್ಪತ್ಯಾಹಾರಿಗಳು, ಅವು ಉಪ್ಪಿನ ಮಣ್ಣು ನೆಕ್ಕುವದನ್ನೂ, ಹೊಂಡಗಳಿಂದ ಉಪ್ಪು ನೀರು ಕುಡಿಯುವದನ್ನೂ ಕೇಳಿರಬಹುದು; ನೋಡಿರಬಹುದು. ವನಸ್ಪತ್ಯಾಹಾರಿ ಮಾನವರಲ್ಲಿಯೂ ಇದೇ ಪ್ರಕಾರದ ಉಪ್ಪಿನ ಕಾಂಕ್ಷೆಯು ತಲೆದೋರುತ್ತಿದೆ. ಆಫ್ರಿಕಾ ಖಂಡದ ಶೋಧಕರಾದ ವಿಖ್ಯಾತ ಮಂಗೋ ಪಾರ್ಕರವರು ತಿಳಿಸುವದೇನಂದರೆ:— ಈ ಖಂಡದ ಒಳಭಾಗಗಳಲ್ಲಿ ಉಪ್ಪು ಒಂದು ಅತಿ ಶ್ರೇಷ್ಠ ಮಿಷ್ಟಾನ್ನವೆಂದು ತಿಳಿಯಲ್ಪಡುತ್ತದೆ. ಸಕ್ಕರೆಯನ್ನು ಜಗಿಯುವಂತೆ, ಉಪ್ಪಿನ ತುಂಡನ್ನು ಸಣ್ಣ ಸಣ್ಣ ಶಿಶುಗಳು ನೆಕ್ಕುತ್ತವೆ. ಸ್ವತಃ ಮಂಗೋ ಪಾರ್ಕರಿಗೂ ಉಪ್ಪಿಲ್ಲದೆ, ಬಹಳೇ ಕಷ್ಟವಾಯಿತು. ವನಸ್ಪತ್ಯಾಹಾರದಿಂದ ಅವರಿಗೆ ತೀವ್ರ ಉಪ್ಪಿನ ಕಾಂಕ್ಷೆಯಾಯಿತು. ಸಿರಾಲಿಯೋನ ದಂಡೆಯ ಮೇಲಿನ ನಿಗ್ರೋ ಜನರು ಉಪ್ಪು ಪಡೆಯುವದಕ್ಕಾಗಿ ಹೆಂಡರು-ಮಕ್ಕಳನ್ನು ಸಹ ಕೊಟ್ಟರೆಂದು ಪಾರ್ಕರವರು ಬರೆಯುತ್ತಾರೆ. ಮಾಂಸಾಹಾರಿ ಪ್ರಾಣಿಗಳು ಉಪ್ಪಿಗಾಗಿ ಹೀಗೆ ಹಾತೊರೆಯುವದಿಲ್ಲ. ಅಷ್ಟು ಯಾಕೆ? ವನಸ್ಪತ್ಯಾಹಾರಿ ಹಿಂದೀಯಗಿಂತ ಮಾಂಸಾಹಾರಿ ಯುರೋಪಿಯನ್‌ನಿಗೆ ಕಡಿಮೆ ಉಪ್ಪು ತಗಲುತ್ತದೆ.

***

ಇದರ ಕಾರಣ.

ಮಾಂಸ, ವನಸ್ಪತಿಗಳಲ್ಲಿ ಉಪ್ಪಿದೆ. ಆದರೆ ಪ್ರಮಾಣವು ಮಾತ್ರ ಹೆಚ್ಚು-ಕಡಿಮೆ. ವನಸ್ಪತಿಗಳಲ್ಲಿರುವ ಉಪ್ಪಿನ ಪ್ರಮಾಣವು ತೀರ ಕಡಿಮೆ. ಇದರಿಂದ ವನಸ್ಪತ್ಯಾಹಾರಿಗಳು ಹೆಚ್ಚು ಉಪ್ಪನ್ನು ತಿನ್ನಬೇಕಾಗುತ್ತದೆ. ವನಸ್ಪತಿಗಳಲ್ಲಿ ಉಪ್ಪು ಕಡಿಮೆಯಿದೆಂದು ಹೆಚ್ಚೆಚ್ಚು ವನಸ್ಪತಿಗಳನ್ನು ತಿಂದರೆ, ಉಪ್ಪಿನ ಕಾಂಕ್ಷೆಯು ಕಳೆಗುಂದುವ ಬದಲು ಮತ್ತಷ್ಟು ವೃದ್ಧಿ ಹೊಂದುತ್ತದೆ. ಯಾಕೆಂದರೆ, ವನಸ್ಪತಿಗಳಲ್ಲಿ ಉಪ್ಪಿಗಿಂತ ಇತರ ಅನಾವಶ್ಯಕ ಪದಾರ್ಥಗಳೂ ಇವೆ. ಇವು ರಕ್ತಶೋಷಕವಲ್ಲ. ಇವುಗಳ ಭಕ್ಷಣದಿಂದ ದೇಹದೊಳಗಿನ ರಕ್ತದಲ್ಲಿರುವ ಉಪ್ಪು ಬೇರೆಯಾಗಿ, ದೇಹಪೋಷಕವಲ್ಲದ ಅನೇಕ ಪದಾರ್ಥಗಳು ನಿರ್ಮಿತವಾಗುತ್ತವೆ. ಇದರಿಂದಲೇ ಉಪ್ಪನ್ನು ವನಸ್ಪತಿಗಳ ಸಂಗಡ ನಾವು ತಿನ್ನಬೇಕು. ವನಸ್ಪತಿಗಳಲ್ಲಿರುವ ಉಪ್ಪಿನ ಪ್ರಮಾಣವು ಕಡಿಮೆಯೆಂದು ಒಂದು ಪ್ರಕಾರದಿಂದ, ಹಾಗು ವನಸ್ಪತಿಗಳಲ್ಲಿರುವ ಇತರ ಪದಾರ್ಥಗಳು ರಕ್ತದೊಳಗಿನ ಉಪ್ಪನ್ನು ಅಪಹರಿಸಿ, ರಕ್ತ ಕೆಡಿಸದಂತೆ ಅವಕ್ಕೆ ತಗಲುವ ಉಪ್ಪು, ಹೀಗೆ ಎರಡು ಪ್ರಕಾರಗಳ ಮೂಲಕ ವನಸ್ಪತ್ಯಾಹಾರಿಗಳು ಹೆಚ್ಚು ಉಪ್ಪನ್ನು ಸ್ವೀಕರಿಸಬೇಕಾಗುತ್ತದೆ. ಮತ್ತೊಂದೂ ಕಾರಣವಿದೆ. ಉಪ್ಪು ತಿನ್ನದೆ, ವನಸ್ಪತಿಗಳನ್ನೇ ಹೆಚ್ಚೆಚ್ಚು ಭಕ್ಷಿಸಿದರೆ, ದೇಹದಲ್ಲಿ ತಯಾರಾಗುವ ಅನಾವಶ್ಯಕ ಸಾಮಗ್ರಿಗಳನ್ನು ಹೊರದೂಡಲು ಮೂತ್ರಾಶಯಗಳಿಗ ಬಹು ಕಷ್ಟವಾಗುತ್ತದೆ. ಇತರ ಅವಶ್ಯಕ ಕೆಲಸಗಳಿಗೆ ಬೇಕಾಗುವ ದೇಹದೊಳಗಿನ ಚೈತನ್ಯವು ಇದೊಂದೇ ಕೆಲಸಕ್ಕೆ ವೆಚ್ಚವಾಗಿ, ದೇಹವನ್ನು ಪುಷ್ಟೀಕರಿಸಲು ಸಾಕಷ್ಟು ಚೈತನ್ಯವು ಉಳಿಯುವದಿಲ್ಲ. ದನಗಳಿಗೆ ದಿನಾಲು ಒಂದು ಹಿಡಿ ಉಪ್ಪನ್ನು ಹಾಕಿ ತಿಂತಿ ಕೊಟ್ಟರೆ, ಅವು ವಿಶೇಷ ಪುಷ್ಟವಾಗುವ ಕಾರಣವು ಇದೇ. ಆದರಿಂದ ವನಸ್ಪತ್ಯಾಹಾರಿಗಳು ಹೆಚ್ಚೆಚ್ಚು ಉಪ್ಪನ್ನು ಗ್ರಹಿಸಿದ ಹೊರತು, ಅವರ ದೇಹಯಷ್ಟಿಯು ಪುಷ್ಟವಾಗಲಿಕ್ಕಿಲ್ಲ. ಭಾರತೀಯರು ಹೆಚ್ಚಾಗಿ ವನಸ್ಪತಿಗಳನ್ನೇ ಗ್ರಹಿಸುವವರಿದ್ದದರಿಂದ, ಅವರ ಪ್ರಕೃತಿಯು ಸುದೃಢವಾಗಬೇಕಾದರೆ, ಅವರು ಉಪ್ಪನ್ನು ವಿಶೇಷ ಪ್ರಮಾಣದಿಂದ ಉಪಯೋಗಿಸಬೇಕು.

ಸ್ಪಷ್ಟೀಕರಿಸುವಿರೇನು?

ಕರ್ನಾಟಕವೃತ್ತ ಸಂಪಾದಕರ ಬಳಿಗೆ:— ಇದನ್ನು ತಮ್ಮ ಪತ್ರದಲ್ಲಿ ಪ್ರಸಿದ್ಧಿಸಬೇಕಾಗಿ ವಿನಂತಿ'-

ಕನ್ನಡ ಧುರೀಣದ ತಾ. ೨೬-೬-೨೩ನೇ ಸಂಚಿಕೆಯಲ್ಲಿ ಬರೆದ ಅಗ್ರಲೇಖದಲ್ಲಿ ಮಾಡಿದ ವಿಷಯವಿವೇಚನೆಯು ನನ್ನಂಥ ಅಲ್ಪಮತಿಗೆ (ತಿಳುವಳಿಕೆ ಇಲ್ಲದವನಿಗೆ) ಅಪೂರ್ಣವೂ, ಅಸಂಬದ್ಧವೂ ಇದ್ದಂತೆ ತೋರುವದು. ಅದನ್ನು ಓದುವ ಹಳ್ಳಿಗಾಡ ಜನರ ಪಾಡೇನು! ಕಾರಣ ಕನ್ನಡ ಧುರೀಣದ ಸಂಪಾದಕರು ತಮ್ಮ ಮುಂದಿನ ಸಂಚಿಕೆಯಲ್ಲಿ ಈ ವಿಷಯವಾಗಿ ಹೆಚ್ಚು ಸ್ಪಷ್ಟ ಮಾಡುವರಾಗಿ ನಂಬಿದ್ದೇನೆ.

ಈ ಜಿಲ್ಹೆಯಲ್ಲಿ ಜಂಗಲ ಖಾತೆಯ ಕಾಯದೆಯಿಂದ ಮತ್ತು ಈಗ ಅಮಲಿನಲ್ಲಿರುವ ಅಮಲಬಜಾವಣಿಯ ಪದ್ಧತಿಯಿಂದ ಮತ್ತು ಬಂದೂಕುಗಳ ಕೊರತೆಯಿಂದ ಜನರಿಗೆ ತೊಂದರೆಯುಂಟಾಗುತ್ತಿರುವದು ಪ್ರತಿಯೊಬ್ಬರಿಗೆ ಅನುಭವಕ್ಕೆ ಬಂದ ಮಾತಾಗಿದೆ. ಈ ಬಗ್ಗೆ ನಮ್ಮ ಜಿಲ್ಹೆಯಲ್ಲಿ ಭಿನ್ನಾಭಿಪ್ರಾಯವಿರುವದು ಸಂಭವವಿಲ್ಲ. ಆದರೆ ರೈತರಿಗೆ ಸಮಾಧಾನಕರವಾಗುವಂತೆ ಏರ್ಪಾಟುಗಳನ್ನು ಮಾಡಿಕೊಳ್ಳುವದಕ್ಕೆ ಈಗ ಕಾಯದೇ ಕೌನ್ಸಿಲುಗಳೇ ಮುಖ್ಯ ಸಾಧನವಾಗಿರುತ್ತವೆಂಬದಕ್ಕೆ ಇದೀ ಅಗ್ರಲೇಖದಲ್ಲಿ ಒಂದು ಕಾರಣವನ್ನಾದರೂ ನಿರ್ದಿಷ್ಟ ಮಾಡಿರುವದಿಲ್ಲ. ಈ ಜಿಲ್ಹೆಯಲ್ಲಿ ಅನೇಕ ಜನರ ಬಂದೂಕ ಲಾಯಸನ್ಸಗಳು ಕಾಂಗ್ರೆಸ ಮೆಂಬರರಾದ್ದರಿಂದ ರದ್ದಾದದ್ದು ತಮಗೆ ಗೊತ್ತಿರಬಹುದು. ಕಾಂಗ್ರೆಸ ಮೆಂಬರರಾದರೆ ಲಾಯಸನ್ಸ ರದ್ದು ಮಾಡಬೇಕೆಂದು ಯಾವ ಕಾಯದೇಯಲ್ಲಿದ್ದದ್ದೂ ನನಗೆ ತೋರುವದಿಲ್ಲ. ಆದರೂ ಅಧಿಕಾರಿಗಳು ಅಂಥ ಜನರ ಬಂದೂಕ ಲಾಯಸನ್ಸ ರದ್ದು ಮಾಡಿದರು. ಇದರ ಬಗ್ಗೆ ಅಧಿಕಾರಿಗಳನ್ನು ಯಾವ ಕೌನ್ಸಿಲರವರೂ ವಿಚಾರಿಸಲಿಲ್ಲ. ಇದರಿಂದ ಅಧಿಕಾರಿಗಳ ಮೇಲೆ (executive officers) ಕೌನ್ಸಿಲದ ಅಧಿಕಾರವೇನೂ ನಡೆಯುವದಿಲ್ಲವೆಂದು ಜನರ ಭಾವನೆಯಾಗುವದಿಲ್ಲವೇ? ಇಂಥ ಉದಾಹರಣೆಗಳನ್ನು ಬಹಳ ಕೊಡಬಹುದು. ಈಗ ಇದ್ದ ರೂಲುಗಳ ವಿರುದ್ಧವಾಗಿಯೇ ಅಮಲಬಜಾವಣಿಯಾದ ಎಷ್ಟೋ ಸಂಗತಿಗಳು ಕನ್ನಡ ಧುರೀಣದಲ್ಲಿಯೇ ಈ ಮೊದಲು ಪ್ರಸಿದ್ಧಿಯಾಗಿರುತ್ತವೆಯಲ್ಲವೇ? ಅವುಗಳಿಂದ ಏನು ತಿಳಿಯುತ್ತದೆ? ಕೌನ್ಸಲುಗಳಿಂದಲೇ ನಮ್ಮ ದೂರುಗಳೆಲ್ಲ ಇಲ್ಲದಂತಾಗುವದು ಹೇಗೆಂಬದನ್ನು ಕಾರಣಸಹಿತ ಪ್ರತಿಪಾದಿಸದೇ ಬರೀ ತಮ್ಮ ಮತವನ್ನಷ್ಟೇ ಜನರ ಮುಂದೆ ಇಡುವದು ಹಿತಕರವೇ?

ಕನಡಾ ಲೀಡರ (ತಾ. ೨೬-೬-೨೩ನೇ) ಅಗ್ರಲೇಖದಲ್ಲಿ ಈಗ ಇದ್ದ ರಾಜಕೀಯ ಪಕ್ಷಗಳಲ್ಲಿ ೪ ಪಂಗಡದವರೂ ಕೌನ್ಸಿಲುಗಳಿಗೆ ಹೋಗಿ ನಮ್ಮ ಫೋರೆಸ್ಟ ವಗೈರೆ ಕಷ್ಟಗಳನ್ನು ದೂರಪಡಿಸಲು ಅಸಮರ್ಥರಿದ್ದಾರೆಂಬ ತಾತ್ಪರ್ಯವು ಭಾಸವಾಗುತ್ತದೆ. ಅಂದಮೇಲೆ ಕೌನ್ಸಿಲುಗಳಿಗೆ ಹೋಗಿ ನಮ್ಮ ಕಷ್ಟಗಳನ್ನು ದೂರಮಾಡಿಕೊಳ್ಳುವ ಬಗೆ ಹೇಗೆಂಬುದು ತಿಳಿಯುವದಿಲ್ಲ. ಈಗ ಫೋರೆಸ್ಟ ತಕರಾರುಗಳ ಬಗ್ಗೆ ಹೊಸ ಪಕ್ಷವನ್ನು ನಿರ್ಮಾಣಮಾಡಬೇಕೆಂದು ಅವರ ಅಭಿಪ್ರಾಯವೇ?

ಅಂಥ ಪಕ್ಷವನ್ನು ಈ ಜಿಲ್ಹೆಯಲ್ಲಿ ನಿರ್ಮಾಣಮಾಡಬಹುದೆಂದು ತಿಳಿದುಕೊಂಡರೂ, ಈ ಪಕ್ಷಕ್ಕೆ ಕೌನ್ಸಿಲುಗಳಲ್ಲಿ ಬಹುಮತವು ಸಿಗುವಂತೆ ಈ ಪಕ್ಷದ ಶಾಖೆಯನ್ನು ಎಲ್ಲ ಕಡೆಯಲ್ಲಿ ಸ್ಥಾಪನೆಮಾಡಬೇಕೆಂದು ಅವರ ಅಭಿಪ್ರಾಯವೋ? ಹೀನ, ದೀನ, ಅಜ್ಞಾನಿಗಳಾದ ರೈತನಂತಿರುವ ನನಗಂತೂ ಕಣ್ಣುಕಟ್ಟಿ ಅಡವಿಯಲ್ಲಿ ಬಿಟ್ಟಂತಾಗಿದೆ. ಇದನ್ನು ಹೆಚ್ಚು ಸ್ಪಷ್ಟಮಾಡಿ ಮುಂದಿನ ಸಂಚಿಕೆಯಲ್ಲಿ ಬರೆದಾರಾಗಿ ನಂಬಿದ್ದೇನೆ.

ಇನ್ನೊಂದು ವಿಷಯವಾಗಿ ನಾಲ್ಕು ಶಬ್ದಗಳು ಅವಶ್ಯವೆಂದು ನನ್ನ ಅಲ್ಪಮತಿಗೆ ತೋರುತ್ತದೆ. « ಕನಡಾ ಲೀಡರದಲ್ಲಿ ಹೀನ ದೀನ ಅಜ್ಞಾನಿಗಳಾದ ನಮ್ಮ ಜಿಲ್ಹೆಯ ರೈತರು ಇದಕ್ಕೆ (ಅಸಹಕಾರ ತತ್ವವನ್ನು ಪಾಲಿಸಲು) ಸಿದ್ಧರಾದಾರೆಂದು ತಿಳಿಯುವದು ನಮ್ಮ ಮೂರ್ಖತನವು" ಎಂದು ಬರೆದದೆ. ಹಾಗಾದರೆ ಅಸಹಕಾರ ತತ್ವವನ್ನು ಪಾಲಿಸುವದು ಅಸಾಧ್ಯವೇ? ಸಾಧ್ಯವಿದ್ದರೆ ಅದನ್ನು ಪಾಲಿಸಲಿಕ್ಕೆ ಯಾರು ಯೋಗ್ಯರು? ಇಲ್ಲಿಯ ರೈತರು ಅಯೋಗ್ಯರಿದ್ದರೆ, ಅವರನ್ನು ಯೋಗ್ಯರನ್ನಾಗಿ ಮಾಡಲಿಕ್ಕೆ ಮಾರ್ಗವಿಲ್ಲವೇ? ಯೋಗ್ಯರಾಗಲಿಕ್ಕೆ ಅವರಲ್ಲಿ ಯಾವ ತರದ ಗುಣ ಇರಬೇಕು? ಅಂಥ ಗುಣಗಳನ್ನು ಇಲ್ಲಿಯ ರೈತರು ಸಂಪಾದಿಸಲಿಕ್ಕೆ ಇರುವ ತೊಂದರೆಗಳಾವವು? ಈ ವಿಷಯವಾಗಿ ಅವರು ಸ್ಪಷ್ಟವಾಗಿ ಬರೆದರೆ, ರೈತರು ತಮ್ಮ ಮೇಲೆ ಬಂದ ಅಪವಾದವನ್ನು ದೂರಮಾಡಿಕೊಳ್ಳಲಿಕ್ಕೆ ಅನುಕೂಲವಾದೀತು. ಅವರು ಇಷ್ಟು ಕೃಪೆ ಮಾಡುವರೋ?

ಸಿದ್ದಾಪುರ. ತಾ. ೨-೭-೨೩. } ತಮ್ಮ ಜ್ಞಾನಾಭಿಲಾಷಿ, G. R. Dev.

ಕಾನಡಾವೃತ್ತ.

ಗುರುವಾರ, ತಾರೀಖು ೫ ಮಾಹೆ ಜುಲೈ ೧೯೨೩.

ಕುಟಿಲ ಭೇದನೀತಿ.

ನಾಗಪುರದೊಳಗಿನ ರಾಷ್ಟ್ರಧ್ವಜದ ಸಂಗ್ರಾಮವು ಸ್ಥಿರವಾಗಿ ಉತ್ಸಾಹದಿಂದ ಸಾಗುತ್ತಲಿದೆ. ಸತ್ಯಾಗ್ರಹವನ್ನು ನಡಿಸುವರೆ ನಾಲ್ಕೂ ದಿಕ್ಕುಗಳಿಂದ ಸ್ವಯಂಸೇವಕರು ಗುಂಪುಗುಂಪಾಗಿ ಹೋಗುತ್ತಿರುವರು. ಅಧಿಕಾರಿಗಳು ಸೊಟ್ಟೆಯನ್ನು ಆಶ್ರಯಿಸಿ, ಸತ್ಯಾಗ್ರಹವೃತ್ತಿಯನ್ನು ನಿರ್ಮೂಲಿಸಲು ವಿಶ್ವಪ್ರಯತ್ನ ಮಾಡುತ್ತಲಿರುವರು. ಸುವರ್ಣವು ಅಗ್ನಿಪ್ರವೇಶದಿಂದ ಹೊಳೆಯುವಂತೆ ನಾಗಪುರದೊಳಗಿನ ಸತ್ಯಾಗ್ರಹವು ದಂಡನೀತಿಯ ಹೊಡತಗಳಿಂದ ವಿಶೇಷ ಜಾಜ್ವಲ್ಯವಾಗಿ ಪ್ರಜ್ವಲಿಸಿತು. ಗುಜರಾಥ, ತಮಿಳನಾಡು, ಕರ್ನಾಟಕ, ಮುಂಬಯಿ ಮೊದಲಾದ ಪ್ರಾಂತಗಳಿಂದ ಸ್ವಯಂಸೇವಕರು ದಂಡನೀತಿಯ ಸತ್ವಪರೀಕ್ಷೆಗಾಗಿ ಟೊಂಕಕಟ್ಟಿ ಮುಂದಾದರು. ನಾಗಪುರದ ಸಂಗ್ರಾಮವು ಅಖಿಲ ಭರತಖಂಡವ್ಯಾಪ್ತಿಗೆ ಪರಿಣಮಿಸಿತು. ಐಕ್ಯವು ಹೀಗೆಯೇ ವೃದ್ಧಿಗೊಂಡು, ಸಂಗ್ರಾಮವು ಯಶಸ್ವಿಯಾದರೆ ನೌಕರಶಾಹಿಯು ಮೂಗು ಕಳಕೊಂಡ ... ಗಳಂತೆ, ನಾಚಿಕೆಗೇಡಾಗುವದೆಂದು ಮನಗಂಡು, ಈಗ ರಾಷ್ಟ್ರದಲ್ಲಿ ಭೇದವನ್ನುಂಟುಮಾಡುವ ಯತ್ನಗಳನ್ನು ಜ್ಯಾರಿಯಿಂದ ನಡಿಸುತ್ತಲಿದೆ. ಮುಂಬಯಿಯಲ್ಲಿ ಉದಾರ ಮತವಾದಿಯೆಂದು ಹೇಳಲ್ಪಡುವ 'ಟ್ಯಾಮ್ಸ್ ಆಫ್ ಇಂಡಿಯಾ' ಪತ್ರಿಕೆಯು ನಾಗಪುರದ ನೌಕರಶಾಹಿಯ ಪಕ್ಷವನ್ನು ಎತ್ತಿ ಹಿಡಿದು, ಸತ್ಯಾಗ್ರಹಿಗಳನ್ನು ನಿಂದಿಸಲು ನಿತ್ಯವೂ ಲೇಖಗಳನ್ನು ಪ್ರಕಟಿಸುತ್ತಲಿದೆ. ರಾಷ್ಟ್ರಧ್ವಜವನ್ನು ಮಾರ್ಗಗಳ ಮೇಲಿಂದ ಮೆರಿಸುವದೂ, ಮಸೀದಿಗಳೆದುರಲ್ಲಿ ವಾದ್ಯ ಬಾರಿಸುವದೂ ಒಂದೇ ಎಂದು ವಿದ್ವಾನ್ ಪತ್ರಿಕಾಕರ್ತರು ತರ್ಕ ಮಾಡುತ್ತಾರೆ. ರಾಷ್ಟ್ರಧ್ವಜದ ಮೆರವಣಿಗೆ ಮಾಡುವ ಹೇತುವಿನ ಅವಿಷ್ಕರಣವನ್ನು "ಟ್ಯಾಮ್ಸ" ಕರ್ತರು ಹೊರಗೆಡಹಿರುವರು. ಅದೇನೆಂದು ಕೇಳಿರಿ. ನಾಗಪುರದ ಸತ್ಯಾಗ್ರಹದ ಅಂತರ್ಹೇತುವು ರಾಷ್ಟ್ರದ ಮಾನರಕ್ಷಣವಲ್ಲ. ಸರಕಾರವನ್ನು ಮಣ್ಣು ಪಾಲು ಮಾಡುವದು (Paralyse) ಸತ್ಯಾಗ್ರಹದ ಚಾಲಕರ ಮೂಲ ಹೇತುವು. ಆದ್ದರಿಂದ ಸರಕಾರದ ಭದ್ರತೆಯನ್ನು ಕಾಪಾಡಲಿಚ್ಛಿಸುವವರು ಸತ್ಯಾಗ್ರಹ ಯುದ್ಧಕ್ಕೆ ಎಂದೂ ನೆರವಾಗರು. "ಟ್ಯಾಮ್ಸ" ಕರ್ತರ ಶೋಧವಿದು. ಇದಕ್ಕಿಂತ ಮತ್ತೊಂದು ಭೇದನೀತಿಯ ಪ್ರಕಾರವು ಮಧ್ಯಪ್ರಾಂತದಲ್ಲೇ ಸಂಭವಿಸಿದೆ. ಅದು ಪ್ರಜೆಗಳಿಗಾಗಿ ಪ್ರಕಟಿಸಲ್ಪಟ್ಟದ್ದರಿಂದ ಅದನ್ನು ಭಾಷಾಂತರಿಸಿ ಕೊಡುವೆವು.

ಸಿಯೋನಿಯ ಡೆಪ್ಯುಟಿ ಕಮೀಶನರರಾದ ಮಿ| ಪಿ. ಎಲ್. ಹೊಯ್ಲರವರು ಪ್ರಜೆಗಳಿಗೆ ಕೊಟ್ಟ ನೋಟೀಸು ಏನೆಂದರೆ:—

" ಸಕಲ ಪ್ರಜೆಗಳಿಗೆ ನೋಟೀಸು:— ಹುರಿದುಂಬಿಸುವ ಸುಳ್ಳು ಸಂಗತಿಗಳನ್ನು ನಿಮಗೆ ಹೇಳಿ, ನಾಗಪುರದಲ್ಲಿ ನಿಮ್ಮನ್ನೊಯ್ಯುವ ಯತ್ನಗಳು ನಡೆದಿವೆ. ಅಲ್ಲಿ ನೀವು ರಾಷ್ಟ್ರಧ್ವಜವೆಂದು ಕರೆಯಲ್ಪಡುವ ಒಂದು ಪತಾಕೆಯನ್ನು ಸಿವ್ಹಿಲ ಸ್ಟೇಶನಿನ ಕೆಲ ಮಾರ್ಗಗಳ ಮೇಲಿಂದ ಒಯ್ಯಬೇಕಾಗಿದೆ. ಆ ಪತಾಕೆಯನ್ನು ಅಲ್ಲಿ ಒಯ್ಯಬಾರದೆಂದು ಕಾಯಿದೇಶೀರ ಪ್ರತಿಬಂಧಕ ಹುಕುಮು ಇದೆ. ಈ ಪತಾಕೆಯನ್ನು ಅಲ್ಲಿ ಒಯ್ದು, ನೀವು ಸೆರೆಯಲ್ಲಿ ಬೀಳಬೇಕು. ಹೀಗೆ ನಿಮಗೆ ಬೋಧಿಸುವವರು ಹೇಳುವದೇನೆಂದರೆ — " ಇದು ನಿಮ್ಮ ದೇಶದ ಧ್ವಜವು. ದೇಶದ ಮಾನ ರಕ್ಷಣೆಕ್ಕಾಗಿ ನೀವು ಇಷ್ಟು ದೊಡ್ಡ ಸ್ವಾರ್ಥತ್ಯಾಗ ಮಾಡಬೇಕು. " ಸತ್ಯಸ್ಥಿತಿಯೇನೆಂದು ವಿಚಾರಿಸಿರಿ. ಈ ಪತಾಕೆಯು ನಿಮ್ಮ ದೇಶದ್ದಲ್ಲ, ನಿಮ್ಮ ಪೂರ್ವಜರದೂ ಅಲ್ಲ. ಇಂಥ ಪತಾಕೆಯ ಸುದ್ದಿ ಸಹ ಅವರಿಗಿದ್ದಿಲ್ಲ. ಈ ಪತಾಕೆಗೂ, ದೇಶದ ಮಾನಕ್ಕೂ ಬಾದರಾಯಣ ಸಂಬಂಧ ಸಹ ಇಲ್ಲ. ಕೆಲ ತುಂಟರು (Baboos) ಇದೊಂದು ರಾಜಕೀಯ ಧ್ವಜವೆಂದು ೩-೪ ವರ್ಷಗಳೀಚೆಗೆ ಕಲ್ಪಿಸಿರುವರು. ರಾಷ್ಟ್ರೀಯ ಸಭೆಗೆ ಇರುವ ಸಂಬಂಧವನ್ನು ತೋರಿಸುವ ಪತಾಕೆಯಿದು. ಅಸಹಕಾರಿತೆಯ ಮುಂದಾಳುಗಳಿಗೆ ನೀವು ಸೆರೆಮನೆಗೆ ಹೋಗಬೇಕೆಂದು ಇಚ್ಛೆ. ದೇಶದ ಮಾನ ಕಾಯಲಿಕ್ಕೆಂದು ಅವರು ಹಂಬಲಿಸುವದಿಲ್ಲ. ಅವರ ಮುಖ್ಯ ಉದ್ದೇಶವು ಶುದ್ಧ ಸ್ವಾರ್ಥಸಾಧನೆಯು. ಸರಕಾರವು ಪ್ರಜಾಪೀಡಕವೆಂದು ಸಕಲ ಪ್ರಜೆಗಳಿಗೆ ಪ್ರದರ್ಶಿಸುವ ಪ್ರಸಂಗಗಳನ್ನೂ ಅವರು ಸಾಧಿಸುತ್ತಿರುವರು. ಇದೇ ನಿಜವಾದ ಕಾರಣವು. ಮುಂದಾಳುಗಳು ಇದೇ ಹೇತುವಿನಿಂದ ಪ್ರವೃತ್ತರಾಗಿರುವರು. ಅವರು ಸ್ವತಃ ಸೆರೆಮನೆಗೆ ಹೋಗುವದಿಲ್ಲ. ನಾಗಪುರದಲ್ಲಿ ಅವರು ಹಿಂದೆ ನಿಂತು, ಅಜ್ಞಾನಿ ಹಳ್ಳಿಗರನ್ನು ಕುರಿಮರಿಗಳಂತೆ ಮುಂದೊಡ್ಡುತ್ತಾರೆ. ಅವರನ್ನು ಸೆರೆಮನೆಗಟ್ಟಿದ ಮೇಲೆ ಪ್ರಮುಖರು ಸುಮ್ಮನೆ ತಮ್ಮ ತಮ್ಮ ಮನೆಗಳಿಗೆ ಹೋಗಿ, ಸುಖದಿಂದ ಉಳಕೊಳ್ಳುತ್ತಾರೆ. ಇಂಥ ಪ್ರಕಾರಗಳಿಗೆ ಮೋಸಹೋಗಬಾರದು. ರಾಷ್ಟ್ರಧ್ವಜವನ್ನು ಧರಿಸಿ, ಸೆರೆಮನೆಗೆ ಹೋಗಲು ಮುಂದಾಳುಗಳು ನಿಮಂತ್ರಿಸಿದಾಗ, ನೀವು ಅವರಿಗೆ ಈ ಕೆಳಗಿನಂತೆ ಪ್ರಶ್ನಿಸಬೇಕು.

(೧) ಇತರ ಮಾರ್ಗಗಳನ್ನು ಬಿಟ್ಟು ವಿಶಿಷ್ಟ (ಪ್ರತಿಬಂಧಕ) ಮಾರ್ಗದ ಮೇಲಿಂದಲೇ ಧ್ವಜವನ್ನು ಒಯ್ದರೆ, ನಮಗೂ, ನಮ್ಮ ದೇಶಕ್ಕೂ ಹೇಗೆ ಹಿತವಾಗುವದು? (೨) ನೀವು, ಮುಂದಾಳುಗಳು ನಮ್ಮ ಸಂಗಡ ಸೆರೆಮನೆಗೆ ಬರಲು ಸಿದ್ಧರಿರುವಿರೇನು? ಇಲ್ಲದಿದ್ದರೆ, ಈ ಬಗ್ಗೆ ಯೋಗ್ಯ ಕಾರಣಗಳನ್ನು ತೋರಿಸಿರಿ. ಹಾಗು ನೀವು ಸೆರೆಮನೆಗೆ ಹೋಗದೆ, ನಮ್ಮನ್ನೇ ಸೆರೆಮನೆಗಟ್ಟುವದರಿಂದ ಹೇಗೆ ದೇಶದ ಹಿತವಾಗುವದೆಂದು ನಮಗೆ ಮನಗಾಣಿಸಿರಿ. (೩) ನಮಗೆ ವಿಧಿಸಿದ ದಂಡದ ರಕಮನ್ನು ನೀವು ತೆರುತ್ತೀರೋ? ಇಲ್ಲದಿದ್ದರೆ ಯಾಕೆ? (೪) ನಾವು ಸೆರೆಮನೆಗೆ ಹೋದಬಳಿಕ ನಮ್ಮ ಹೊಲಮನೆಗಳನ್ನೆಲ್ಲ ಸಾಗಿಸುವಿರೋ? ಇಲ್ಲದಿದ್ದರೆ ಯಾಕೆ? (೫) ನಾವು ಸೆರೆಮನೆಯಲ್ಲಿರುವ ಸಮಯ ನಮ್ಮ ಹೆಂಡರು-ಮಕ್ಕಳನ್ನು ಪೋಷಿಸುವಿರೋ? ಇಲ್ಲದಿದ್ದರೆ ಯಾಕೆ?

ಈ ವರೆಗೆ ಸೆರೆಮನೆಗೆ ಹೋದವರೆಲ್ಲ ಅಜ್ಞಾನಿ ಒಕ್ಕಲಿಗರ ಮಕ್ಕಳೇ ಎಂದು ಚನ್ನಾಗಿ ನೆನಪಿನಲ್ಲಿಡಿರಿ. ಸಾವುಕಾರರಾಗಲಿ, ವ್ಯಾಪಾರಿಗಳಾಗಲಿ, ವಕೀಲರಾಗಲಿ, ಇತರ ಸಜ್ಞಾನಿಗಳಾಗಲಿ ತಮ್ಮ ಪುತ್ರರನ್ನು ಧ್ವಜದ ಮೆರವಣಿಗೆಗೆ ಕಳಿಸಲಿಲ್ಲ. ಇದರ ಕಾರಣವೇನೆಂದು ಬಲ್ಲಿರಾ! ಈ ಜನರು ಸುಶಿಕ್ಷಿತರು. ಈ ಚಳವಳಿಯು ಮೂರ್ಖತನದ್ದೆಂದು ಅವರರಿತಿರುವರು. ಅಶಿಕ್ಷಿತ ಹಾಗು ಸರಳ ಸ್ವಭಾವದ ಬಡ ಜನರು ಮುಂದಾಳುಗಳ ಸುಳ್ಳು ವಿಪರ್ಯಾಸಗಳಿಂದ ಮೋಸಹೋಗಿರುವರು."

ಹೊಯ್ಲ ಸಾಹೇಬರ ನೋಟೀಸನ್ನು ಯಥಾಪ್ರತಿ ಭಾಷಾಂತರಿಸಿರುವೆವು. ಸುಶಿಕ್ಷಿತರನ್ನೂ ಅಶಿಕ್ಷಿತರನ್ನೂ ಬೇರೆ ಬೇರೆ ಮಾಡುವ ನೌಕರಶಾಹಿಯ ಹಂಚಿಕೆ ನೋಡಿರಿ. ಮಹಾತ್ಮರ ಪ್ರವೇಶದಿಂದ ಕೊಂಗ್ರೆಸು ಅಖಿಲ ಜನತೆಯದಾಗಿ, ಸುಶಿಕ್ಷಿತರಿಗಿಂತ ಅಶಿಕ್ಷಿತರಿಗೇ ರಾಷ್ಟ್ರೀಯ ಸಭೆಯು ವಿಶೇಷ ಪ್ರಿಯವಾಗಿದೆ. ಹಳ್ಳಿಗಳ ಪುನರುಜ್ಜೀವನವು ರಾಷ್ಟ್ರೀಯ ಸಭೆಯ ಸಾಧ್ಯವಿದ್ದದರಿಂದ ಈಗ ಹಳ್ಳಿಗರಲ್ಲಿ ಬುದ್ಧಿಭೇದ ಮಾಡಹವಣಿಸುವದು ನಿರರ್ಥಕವು. ಮುಂದಾಳುಗಳು ಬೆನ್ನು ಹಿಂದೆ ನಿಂತು ಅಜ್ಞಾನಿ ಹಳ್ಳಿಗರನ್ನು ಸೆರೆಗಟ್ಟುತ್ತಾರೆಂಬ ಹೊಯ್ಲ ಸಾಹೇಬರ ವಿಧಾನವೇ ಸುಳ್ಳೆಂದು ಪರಿಸ್ಥಿತಿಯೇ ಹೇಳುತ್ತದೆ. ನೌಕರಶಾಹಿಯು ಪ್ರಜಾಕಲ್ಯಾಣಕ್ಕಾಗಿ ದಣಿಯುತ್ತದೆಂದು ಈಗ ಯಾರೂ ನಂಬುವದಿಲ್ಲ. ಮುಂದಾಳುಗಳು ಸುಖದಿಂದ ವಿಶ್ರಮಿಸುತ್ತಾರೆಂಬ ವಿಧಾನವು ಅಯಥಾರ್ಥವು. ಯಾಕಂದರೆ, ಲಕ್ಷ್ಮೀಪುತ್ರರಾದ ಶೇಟ ಜಮನಾಲಾಲ ಬಜಾಜರವ

ರು ಒಂದು ಕಂಬಳಿಯ ಮೇಲೆ ದಿನಗಳೆಯು ತ್ತಿದ್ದರೆಂದು ಖ್ಯಾತಿಯಿದೆ. ಹೀಗಿರಲು, ಮುಂದಾಳುಗಳಿಗೂ, ಅನುಯಾಯಿಗಳಿಗೂ ಬುದ್ಧಿಭೇದವಾಗುವದು ಅಶಕ್ಯವೆಂದು ಮಿ। ಹೊಯ್ಲರವರು ತಿಳಿದಿರಲಿ.

ರಾಷ್ಟ್ರಧ್ವಜವು ರಾಷ್ಟ್ರೀಯ ಸಭೆಯ ಅನುಯಾಯಿಗಳದು ಎಂದು ಮಿ। ಹೊಯ್ಲರವರು ಸಮೂದಿಸುತ್ತಾರೆ. ಇದನ್ನು ನೋಡಿ ನಮಗೆ ಆನಂದವಾಗಿದೆ. ರಾಷ್ಟ್ರಧ್ವಜವು ರಾಷ್ಟ್ರೀಯ ಸಭೆಯದೇ. ಅದರ ಮಾನವು ರಾಷ್ಟ್ರೀಯ ಸಭೆಯ ಮಾನವು; ಅದರ ಅಪಮಾನವು ರಾಷ್ಟ್ರೀಯ ಸಭೆಯ ಅಪಮಾನವು. ರಾಷ್ಟ್ರೀಯ ಸಭೆಯು ಅಖಿಲ ರಾಷ್ಟ್ರದ್ದಿರುವಾಗ, ರಾಷ್ಟ್ರಧ್ವಜದ ಅಪಮಾನವು ಮಾತ್ರ ರಾಷ್ಟ್ರಾಪಮಾನವಲ್ಲೆಂದು ಮಿ। ಹೊಯ್ಲರವರು ತರ್ಕಿಸಿದರೆ, ಅದಕ್ಕೆ ಪ್ರಜೆಗಳ್ಯಾರೂ ಒಪ್ಪರು. ಧ್ವಜದ ಸಂಗ್ರಾಮವನ್ನು ವಹಿಸಿಕೊಂಡ ನಾಗಪುರಸ್ಥರಂತು ಎಂದೂ ಕರ್ತವ್ಯಚ್ಯುತರಾಗರು. ನಾಗಪುರದೊಳಗಿನ ಪ್ರತಿಬಂಧಕ ಹುಕುಮುಗಳಿಗೆ ಪ್ರತೀಕಾರವೆಂದು ಅಖಿಲ ಭಾರತೀಯ ಕೊಂಗ್ರೆಸ ಹಾಗು ಸೆಂಟ್ರಲ ಖಿಲಾಫತ್ ಕಮಿಟಿಗಳ ಸಭಾಪತಿಗಳಾದ ಡಾ। ಅನ್‌ಸಾರಿಯವರು ಜೂನ್ ೨೫ ನೇ ತಾರೀಖಿಗೆ ಒಂದು ಪ್ರಕಟಣೆಯನ್ನು ಪ್ರಚುರಗೊಳಿಸಿ, ಜುಲೈ ತಾ. ೧೮ ನೇ ಗಾಂಧಿ ದಿನಕ್ಕೆ ಅಖಿಲ ರಾಷ್ಟ್ರದಲ್ಲಿ ಪ್ರಜೆಗಳೆಲ್ಲರೂ ರಾಷ್ಟ್ರಧ್ವಜವನ್ನು ಸಂಭ್ರಮದಿಂದ ಮೆರಿಸಿ, ರಾಷ್ಟ್ರಧ್ವಜದ ಪೂಜ್ಯತ್ವವನ್ನು ಪ್ರದರ್ಶಿಸಬೇಕೆಂದು ವಿಧಿಸಿರುವರು. ದೇಶಾಭಿಮಾನಿಗಳಾದ ಪ್ರಜೆಗಳೆಲ್ಲರೂ ರಾಷ್ಟ್ರಧ್ವಜವನ್ನು ಮೆರಿಸಿ, ತಮ್ಮ ದೇಶದ ಮಾನವನ್ನೂ, ರಾಷ್ಟ್ರಧ್ವಜದ ಪೂಜ್ಯತ್ವವನ್ನೂ, ನಾಗಪುರದ ಸತ್ಯಾಗ್ರಹವು ಯಶಸ್ವಿಯಾಗುವ ವರೆಗೆ ನಡಿಸುವ ನಿರ್ಧಾರವನ್ನೂ ಒಮ್ಮೆಲೇ ಪ್ರದರ್ಶಿಸುವರೆಂದು ನಾವು ನೆಚನಂಬಿದ್ದೇವೆ. ಅಖಿಲ ಭರತಖಂಡದಲ್ಲಿ ನೌಕರಶಾಹಿಯೂ, ಅದರ ಬೆನ್ನು ಬಡಿಯುವವರೂ ಎಬ್ಬಿಸಿದ ಕುಟಿಲ ಭೇದನೀತಿಗೆ ಪ್ರತ್ಯುತ್ತರವಾದರೂ ಇದೇ.

ಸ್ಫುಟ ಸೂಚನೆಗಳು.

೧. ನಾಗಪುರದೊಳಗಿನ ಸತ್ಯಾಗ್ರಹ ಸಂಗ್ರಾಮದ ಹಕೀಕತು ಈಗ ಅಖಿಲರಿಗೆ ವಿದಿತವಿದೆ. ರಾಷ್ಟ್ರದ ಮಾನ್ಯ ಮುಂದಾಳುಗಳಾದ ಶೇಟ ಜಮುನಾಲಾಲ ಬಜಾಜ, ಶ್ರೀ। ಭಗವಾನದಿನ, ದೇಶಮುಖ, ಮೊದಲಾದವರನ್ನು ಸೆರೆಹಿಡಿದದ್ದೂ, ಈಗ ಲೋಕವಿಖ್ಯಾತವಿದೆ. ರಾಷ್ಟ್ರಧ್ವಜವು ರಾಷ್ಟ್ರೀಯ ಸಭೆಯದ್ದೆಂದು ಡೆಪ್ಯುಟಿ ಕಮೀಶನರರಾದ ಮಿ। ಹೊಯ್ಲರವರೇ ಒಪ್ಪುತ್ತಾರೆ. ಹೀಗಿರಲು, ರಾಷ್ಟ್ರೀಯ ಸಭೆಯ ಆಶ್ರಯದಲ್ಲಿ ಸ್ಥಾಪನೆಹೊಂದಿದ ಸ್ವರಾಜ್ಯಪಕ್ಷದ ಧುರೀಣರು ಸ್ಥಾನಿಕ ಸರಕಾರದ ಕೃತ್ಯವನ್ನು ತೀರ ಬೇಕಾಯಿದೇಶೀರ ಹಾಗು ಅನ್ಯಾಯದ್ದೆಂಬ ಶಾಬ್ದಿಕ ನಿಷೇಧವನ್ನು ಪ್ರದರ್ಶಿಸಿ, ಸ್ತಬ್ಧರಾಗಿರುವರು. ಹೀಗೆ ತಾತ್ಸಾರ ಮಾಡುವ ಕಾರಣವೇನಿರಬಹುದು? ನೌಕರಶಾಹಿಗೆ ಶಿಕ್ಷ ಶಿಕ್ಷ ಕಡೆಯಿಂದ, ಎಲ್ಲ ಕಡೆಯಿಂದ ಪೆಟ್ಟು ಕೊಟ್ಟು ಹಣ್ಣಗೆ ತರಲು ಬದ್ಧಕಂಕಣವಾದ ಸ್ವರಾಜ್ಯ ಪಕ್ಷವು ನಾಗಪುರದಲ್ಲಿ ತಾನಾಗಿ ನಡೆದು ಬಂದ ನೌಕರಶಾಹಿಯ ಮಾನಭಂಗ ಮಾಡುವ ಸುಸಂಧಿಯನ್ನು ಏಕೆ ಉಪಯೋಗಿಸಿಕೊಳ್ಳುವದಿಲ್ಲ? ರಾಷ್ಟ್ರಧ್ವಜದ ಅಭಿಮಾನವು ಸ್ವರಾಜ್ಯ ಪಕ್ಷಕ್ಕೂ ಅಷ್ಟೇ ತೀವ್ರವಾಗಿರಬೇಕು. ಆದರೂ, ಈ ಬಗ್ಗೆ ಶಾಬ್ದಿಕ ಸಹಾನುಭೂತಿಯನ್ನು ಪ್ರದರ್ಶಿಸಿ, ಕೌನ್ಸಿಲು ಪ್ರವೇಶದ ತಯಾರಿಯಲ್ಲಿಯೇ ಏಕೆ ತೊಡಗಿರುವದು? ನೌಕರಶಾಹಿಯ ಕೂಡ ಬಡದಾಡಲು ಸಂಧಿಯಿಲ್ಲೆಂದು ಕೌನ್ಸಿಲು ಪ್ರವೇಶವನ್ನು ಕೈಕೊಂಡ ಸ್ವರಾಜ್ಯಪಕ್ಷವು, ಅವರಿಗೂ ಇಷ್ಟವಿದ್ದ ರಾಷ್ಟ್ರಧ್ವಜದ ಮಾನರಕ್ಷಣಕ್ಕಾಗಿ ಏಕೆ ಟೊಂಕಕಟ್ಟುವದಿಲ್ಲ? ಅಧ್ಯಕ್ಷರಾದ ದೇಶಬಂಧು ದಾಸರವರು ಈ ಬಗ್ಗೆ ತಮ್ಮ ಅನುಯಾಯಿಗಳಿಗೆ ಏನು ಭಡರ್ಮಾನು ಮಾಡಿರುವರೆಂದು ನಾವರಿಯೆವು. ಅದೇನೂ ಇರಲಿ. ನಾಗಪುರದ ಸಂಗ್ರಾಮವು ಅಖಿಲ ಭರತಖಂಡದ್ದು. ಅದನ್ನು ರಾಷ್ಟ್ರೀಯ ಸಭಾಭಿಮಾನಿಗಳೆಲ್ಲರೂ ಐಕ್ಯದಿಂದ ನಡಿಸಬೇಕು. ಅದ್ದರಿಂದ, ಸ್ವರಾಜ್ಯಪಕ್ಷದವರು ಕೌನ್ಸಿಲುಗಳಲ್ಲಿ ಮುಂದೆ ಯುದ್ಧ ಹೂಡಿ, ನೌಕರಶಾಹಿಯನ್ನು ನೆಲದ ಮೇಲೆ ಹೊರಳಿಸುವ ವೃಥಾ ಹವ್ಯಾಸಕ್ಕೆ ಬಲಿಬೀಳದೆ, ನಾಗಪುರದ ಸಂಗ್ರಾಮವನ್ನು ತನು-ಮನ-ಧನಗಳಿಂದ ಪುರಸ್ಕರಿಸಬೇಕೆಂದು ವಿನಂತಿ.

---

೨. ಚೌರಿಚೌರಾ ಪ್ರಕರಣದಲ್ಲಿ ಅಲಹಾಬಾದಿನ ನ್ಯಾಯಮೂರ್ತಿಗಳು ೧೯ ಅಪರಾಧಿಗಳಿಗೆ ದೇಹಾಂತ ಶಿಕ್ಷೆಯನ್ನು ವಿಧಿಸಿದ್ದರು. ಅವರು ಸರ್ವಾಧಿಪತಿ ರೀಡಿಂಗ ದೊರೆಗಳಿಗೆ ಮನವಿಯೊಂದನ್ನು ಸಾದರಪಡಿಸಿ, ದಯಾರ್ದ್ರರಾಗಿ ತಮ್ಮ ದೇಹಾಂತ ಶಿಕ್ಷೆಯನ್ನು ಜನ್ಮಕಾಪ್ಪುವಿನಲ್ಲಿ ರೂಪಾಂತರಿಸಬೇಕಾಗಿ ದೈನ್ಯಗೊಂಡು ಬೇಡಿಕೊಂಡರು. ಸರ್ವಾಧಿಪತಿಗಳು ಅರ್ಜಿಯನ್ನು ತಿರಸ್ಕರಿಸಿದು, ಅವರು ದೇಹಾಂತ ಶಿಕ್ಷೆಯನ್ನೇ ಅನುಭವಿಸಬೇಕೆಂದು, ಕಳೆದ ತಾ. ೨೬ ನೇ ಮಂಗಳವಾರಕ್ಕೆ ನಿರ್ಣಯಿಸಿರುವರು. ಇದನ್ನು ಕೇಳಿ ಅಖಿಲ ಭಾರತೀಯರಿಗೆ ವ್ಯಸನವಾಗದಿರದು. ಚೌರಿಚೌರಾ ಪ್ರಕರಣದ ಸಂಕ್ಷಿಪ್ತ ಕಥೆಯನ್ನು ಅರಿತವರಿಗೆ ರೀಡಿಂಗ ದೊರೆಗಳ ನ್ಯಾಯನಿಷ್ಠುರತೆಯು ತೀರ ಗುರುತಪ್ಪಿರುವದೆಂದು ಮತವಾಗುವದು. ಕೆಲವರಿಗೆ ಇದನ್ನು ಕೇಳಿ ವಿಖ್ಯಾತ ಆಂಗ್ಲ ಕವಿಗಳಾದ ಶೇಕ್ಸಪಿಯರರವರು ರಚಿಸಿದ 'ಮರ್ಚಂಟ ಆಫ್ ವೇನಿಸ' ದೊಳಗಿನ ರೀಡಿಂಗ ದೊರೆಗಳ ಜ್ಞಾತಿಬಾಂಧವ ದುಷ್ಟ ಚಿನಿವಾಲನಾದ, ಶ್ಯಾಲೋಕನ ಸ್ಮರಣೆಯಾಗದಿರದು. ಶ್ಯಾಲೋಕನಿಗೆ ಸಾಲದ ಬಗ್ಗೆ ಬೇಕಷ್ಟು ಹಣ ಕೊಳ್ಳೆಂದು ನ್ಯಾಯಮೂರ್ತಿಗಳೂ, ಸಾಲಗಾರನ ಮಿತ್ರರೂ, ಪರಿಪರಿಯಿಂದ ಬಿನ್ನೈಸಿದರೂ ಕೇಳದೆ, ಕಠಾರಿನಂತೆ "ಸಾಲಗಾರನ ದೇಹದ ರಕ್ತಲು ಮಾಂಸ ಬೇಕು; ಅದನ್ನಷ್ಟು ಮಾತ್ರ ಕೊಡಿಸಿರಿ" ಎಂದು ಅಗ್ರಹ ಹಿಡಿದಿದ್ದನಂತೆ! ರೀಡಿಂಗ ದೊರೆಗಳೂ ಇದೇ ಪರಿಯ ನೈಷ್ಠುರ್ಯತನವನ್ನು ಹಿಡಿದು, ಚೌರಿಚೌರಾ ಪ್ರಕರಣದ ಅಪರಾಧಿಗಳ ದೇಹಾಂತ ಶಿಕ್ಷೆಯನ್ನು ಸ್ಥಿರಪಡಿಸಿರುವರು. ಜಾತಿಲಕ್ಷಣವೆಂದು ಅನೇಕರು ಟೀಕಿಸಬಹುದು. ಸರ್ವಾಧಿಪತಿಗಳು ಕೃಪೆಯಿಂದ ಅದಕ್ಕೆ ಇಂಬುಗೊಟ್ಟಮೇಲೆ, ಅದನ್ನು ನಾವಾದರೂ ಹೇಗೆ ನಿರಾಧಾರವೆಂದು ಹೇಳುವದು?

---

೩. ದ್ವಾಪರಯುಗದಲ್ಲಿ ವ್ಯಾಸನೆಂಬ ರಾಕ್ಷಸ ರಾಜನು ತನ್ನ ರಾಜ್ಯದಲ್ಲಿ ಅಖಿಲ ಪ್ರಜೆಗಳು ಎಲ್ಲ ಧರ್ಮಕಾರ್ಯಗಳನ್ನು ಶ್ರೀ ಕೃಷ್ಣ ಪರಮಾತ್ಮನಿಗೆ ಅರ್ಪಿಸುವ ಬದಲು, 'ವ್ಯಾಸಾರ್ಪಣಮಸ್ತು' ಎಂದು ಸರ್ಕಲಾರನ್ನು ಹೊರಡಿಸಿದ್ದನೆಂದು ಕಥೆಯಿದೆ. ಇದೇ ಪ್ರಕಾರದ ಕಥೆಯು ಸಂಯುಕ್ತಪ್ರಾಂತದಲ್ಲಿ ಸಂಭವಿಸಿದೆ. ಈಗ ಮ್ಯುನಿಸಿಪಾಲಿಟಿ, ಲೋಕಲ್‌ಬೋರ್ಡ ಮುಂತಾದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಲೋಕಮಾನ್ಯ ಟಿಳಕ, ಮಹಾತ್ಮಾ ಗಾಂಧಿ, ಪಂಡಿತ ಮೋತೀಲಾಲ ನೆಹರು, ದೇಶಬಂಧು ದಾಸ, ಬಾಯಿ ಅಮ್ಮಾ, ಮೊದಲಾದ ಲೋಕ ನಾಯಕರಿಗೆ ತಮ್ಮಲ್ಲಿ ಆಗಮನವಾದಾಗ ಮಾನಪತ್ರಗಳನ್ನರ್ಪಿಸಿ ಸತ್ಕರಿಸುವ ಪ್ರಘಾತ ಬಿದ್ದಿದೆ. ಈ ಬಗ್ಗೆ ತಗಲಿದ ಖರ್ಚನ್ನು ಬೇಕಾಯಿದೇಶೀರ ಎಂದು ಆಕ್ಷೇಪಿಸಿದ್ದು ಅದನ್ನು ನೌಕರಶಾಹಿಯು ಈ ವರೆಗೆ ನಾಮಂಜೂರು ಮಾಡುತ್ತಿತ್ತು. ಸಂಯುಕ್ತಪ್ರಾಂತದ ನೌಕರಶಾಹಿಯು ಇಂಥ ಬಡದಾಟವು ಏಳದಂತೆ ಒಂದು ಪ್ರತಿಬಂಧಕ ಸರ್ಕಲಾರನ್ನು ಹೊರಡಿಸಿದೆ. ಅದರಂತೆ ಅಲ್ಲಿಯ ಮುನಿಸಿಪಾಲಿಟಿಯಾಗಲಿ, ಲೋಕಲ್ಬೋರ್ಡಾಗಲಿ, ಯಾರಿಗೂ ಮಾನಪತ್ರಗಳನ್ನು ಅರ್ಪಿಸಲಾಗದು. ಈ ನಿಯಮಕ್ಕೆ ೨ ಅಪವಾದಗಳಿವೆ. ಸರ್ವಾಧಿಪತಿಗಳಿಗೊಂದು, ಪ್ರಾಂತಿಕ ಗವ್ಹರ್ನರರಿಗೊಂದು. ಹೀಗೆ ಮಹನೀಯದ್ವಯರಿಗೆ ಮಾತ್ರ ಮಾನಪತ್ರಗಳನ್ನು ಅರ್ಪಿಸಿದರೆ, ಅವುಗಳಿಗೆ ತಗಲಿದ ಖರ್ಚನ್ನು ಕಾಯಿದೇಶೀರ ಎಂದು ಎಣಿಸಿ, ಆ ಬಗ್ಗೆ ಮುನಿಸಿಪಾಲಿಟಿಯವರನ್ನು ದಂಡಿಸಲಿಕ್ಕಿಲ್ಲ. ಈ ಸರ್ಕಲಾರದಂತೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಸ್ವತಃ ಬಾದಶಹರ ಅಪೂರ್ವ ಆಗಮನವಾದರೂ, ಅವರಿಗೆ ಸತ್ಕರಿಸಲು ಪ್ರತಿಬಂಧವೇ. ನೌಕರಶಾಹಿಯ ಒಣಹೆಮ್ಮೆ ನೋಡಿರಿ. ಇಡೀ ರಾಜ್ಯದಲ್ಲಿ ಮಾನನೀಯ ಗೃಹಸ್ಥರೆಂಬವರು ಈರ್ವ ಅಧಿಕಾರಿಗಳೇ. ಪ್ರಾಂತಿಕ ಗವ್ಹರ್ನರರು, ಸರ್ವಾಧಿಪತಿಗಳು. ಈ ಒಣಹೆಮ್ಮೆಗೆ ಲಖನೌ ಮುನಿಸಿಪಾಲಿಟಿಯವರು ತಕ್ಕ ಪ್ರತ್ಯುತ್ತರವನ್ನಿತ್ತು, ರಾಷ್ಟ್ರೀಯ ಬೇಡಿಕೆಗಳನ್ನು ಅಮಾನ್ಯಮಾಡಿದ ಸರಕಾರದ ಅಧಿಕಾರಿಗಳಿಗೆ ಮಾನಪತ್ರವನ್ನರ್ಪಿಸಲು, ತಾವು ತಯಾರಿಲ್ಲೆಂದು ಠರಾವು ಮಂಜೂರು ಮಾಡಿರುವರು. ಶಾಬ್ದಿಕ ನಿಷೇಧವನ್ನು ವ್ಯಕ್ತಪಡಿಸಿ ಸುಮ್ಮನಿರದೆ, ಪಂಡಿತ ಮೋತೀಲಾಲ ನೆಹರೂರವರಿಗೆ ಈ ತಿಂಗಳಲ್ಲಿ ಮಾನಪತ್ರವನ್ನರ್ಪಿಸುವ ಬಗ್ಗೆ ೧ ಆಣೆಯ ಮಂಜೂರಿಯು ಮೊನ್ನೆ ಆಗುವದಿತ್ತು. ಅಲಹಾಬಾದದ ಮುನಿಸಿಪಾಲಿಟಿಯೂ ಲಖನೌ ಮುನಿಸಿಪಾಲಿಟಿಯನ್ನು ಹಿಂಬಾಲಿಸಿ, ತನ್ನ ಸ್ವಾತಂತ್ರ್ಯವನ್ನು ಅಪಹರಿಸಿಕೊಳ್ಳಲು ತಯಾರಿಲ್ಲೆಂದು ಠರಾವು ಮಾಡಿದೆ. ಅಂತು ಸಂಯುಕ್ತಪ್ರಾಂತಿಕ ಸರಕಾರದ ವ್ಯಾಸಾರ್ಪಣ ಕುಯುಕ್ತಿಗೆ ಪ್ರತೀಕಾರ ಮಾಡಲು, ಲಖನೌ, ಅಲಹಾಬಾದಗಳೊಳಗಿನ ಮುನಿಸಿಪಾಲಿಟಿಗಳು ಟೊಂಕಕಟ್ಟಿದ ಬಗ್ಗೆ ಅವಕ್ಕೆ ಮನಃಪೂರ್ವಕ ಅಭಿನಂದನೆ ಮಾಡಿ, 'ವ್ಯಾಸಾರ್ಪಣ' ಸಮಾರಂಭವನ್ನು ನಿರ್ಮೂಲಿಸುವದರಲ್ಲಿ ಯಶಸ್ವಿಯಾಗಿ, ಸ್ವರಾಜ್ಯ ಸಂಸ್ಥೆ ಎಂಬ ಅಭಿದಾನವನ್ನು ಅವು ಸಾರ್ಥಕಮಾಡಲೆಂದು ಬಯಸುವೆವು.

೬ ಜಿಲ್ಲಾ ಬೋರ್ಡಿನ ಜಾವಾ ಅಧಿವೇಶನವು ಕಾರವಾರದಲ್ಲಿ ಕಳೆದ ತಾ. ೩ ನೇ ಸೋಮವಾರಕ್ಕೆ ಬೋರ್ಡಿನ ಆಫೀಸಿನಲ್ಲಿ ನೆರೆಯಿತು. ಸಭೆಗೆ ಸರಕಾರಿ ಹಾಗು ಬಿನ್‌ಸರಕಾರಿ ಎಲ್ಲ ಮೆಂಬರರು ಹಾಜರಾಗಿದ್ದರು. ಲೋಕಲ್ ಸ್ವ ಸನ ೧ ಆಣೆಯ ದರವನ್ನು ೧ ಆಣೆಗೆ ಏರಿಸಬೇಕೆಂಬ ಠರಾವನ್ನು ಕಾರವಾರದ ವಕೀಲರಾದ ಪಿ. ಶೆಟ್ಟಿಯವರು ಸೂಚಿಸಿದರು. ಅವನ್ನು ಕಾರವಾರದ ಪಿಟಾರಿ ಸರ್ಕಾರಾದ ಮಿ| ಆನಮ್ ನಾಡಕರ್ಣಿ ಅನುಮೋದಿಸಿದ ರ ಆಗ ಗೋಕರ್ಣದ ದಾ| ಮುಹಾಬಲೇಶ್ವರ ಜಪ್ಪ ಗೋಪಿಯವರು ಇದಕ್ಕೆ ಒಂದು ಉಪಸೂಚನೆಯನ್ನು ತಂದರು. ಹೊಸ ಲೋಕಲ್‌ಬೋರ್ಡ ಕಾಯಿದೆಯಂತೆ ಚುನಾವಣೆಯಾಗುವ ಜಿಲ್ಲಾ ಲೋಕಲ್ ಬೋರ್ಡ ವಿಶೇಷ ಪ್ರಾತಿನಿಧಿಕವಾಗುವದಿದ್ದುದರಿಂದ ಏರಿಕೆಯ ವಿಚಾರವನ್ನು ಹೊಸ ಜಿಲ್ಲಾ ಬೋರ್ಡಿಗೆ ಒಪ್ಪಿಸಬೇಕೆಂದು ದಾ| ಗೋಪಿಯವರ ಉಪಸೂಚನೆ ಇತ್ತು. ಹಳಿಯಾಳದ ದಾ| ವಡ್ಡಿ ಅವರು ಇದನ್ನು ಅನುಮೋದಿಸಿದರು. ಅಧ್ಯಕ್ಷ ಮಿ. ಶ್ಯಾ| ಲೋಹಿಯವರು ಠರಾವಿಗೆ ಇದು ಉಪಸೂಚನೆ ಆಗದ ಇದನ್ನು ತೆಗೆದುಕೊಳ್ಳಲು ಬರುವದಿಲ್ಲವೆಂದು ಹೇಳಿದರು. ಆದರೂ ದಾ| ಗೋಪಿ-ಶಿರಕರರವರು ಪಟ್ಟು ಹಿಡಿದು, ಉಪಸೂಚನೆಯನ್ನು ಚರ್ಚೆಗೆ ತರಲು ಒತ್ತಾಯಿಸಿದರು. ಠರಾವು ಹಾಗು ಉಪಸೂಚನೆಗಳ ಮೇಲೆ ಚರ್ಚೆಯು ಅನುಕೂಲ-ಪ್ರತಿಕೂಲ ಚರ್ಚೆಯಾಗಿ ಮತ ತೆಗೆದುಕೊಳ್ಳಲು ಮಿ| ಶೆಟ್ಟಿ ವಕೀಲರು ಸೂಚಿಸಿದಂತೆ, ದಾ| ಗೋಪಿಯವರು ಗೆದ್ದರೆಂದೂ ತೀರ್ಮಾನವಾಯಿತು. ಉಪಸೂಚನೆಗೆ ದಾ| ಗೋಪಿ-ಶಿರಕರರ ಹೊರತು ಶಿರಸಿಯ ಗಣೇಶ ಬೆಗಡೆ, ಶಿರಸಿಯ ಕಾಳೆ, ಕಾರವಾರ, ರಾಮಚಂದ್ರ ಗಣೇಶ ಶೆಣೈ, ಸಾವಂತ, ಕುಮಟೆಯ ಪ್ರಭುರವರು ಮತ ಕೊಟ್ಟರು. ಹೊನ್ನಾವರದ ದಾ| ಪಿ. ವಿ. ಶಿರಾಲಿ, ಯಲ್ಲಾಪುರದ ರಾವಸಾಹೇಬ ವ ಹಾ. ಹೆಗ್ಡೆ, ಕೃಷ್ಣ ಬೋರಕರರೂ ದಾ| ಗೋಪಿಯವರ ಉಪಸೂಚನೆಗೇ ಮತ ಕೊಟ್ಟರು. ಈ ಸಮೂದಿಸಿದ್ದು ಆನಂದವಾಗತ್ತದೆ. ಕಳೆದ ಜೂನ ತಾ. ೧೮ ನೇ ಸೋಮವಾರಕ್ಕೆ ನೆರೆದ ಜಿಲ್ಲಾ ಬೋರ್ಡಿನಲ್ಲಿ ಲೋಕಲ್ ಬೋರ್ಡಿನ ದರ ಏರಿಕೆಯ ಠರಾವು ಪೃಷ್ಟಿಯಾಗಿತ್ತು. ಕಪ್ಪಾಯಿತೆಂದು. ಅವರಿಗ ಸಮಾಧಾನವಾಯಿತು. ಅಂತು ಲೋಕಲ್ ಫಂಡಿನ ದರ ಏರಿಕೆಯ ಠರಾವಿಗೆ ಅವರ ವ್ಯಕ್ತಿಕೂಲ, ಈ ಮತ ಅನುಕೂಲ ಹೀಗೆ ಬಿದ್ದ, ಠರಾವು ನಾಮಂಜೂರಾಯಿತು. ಸದ್ಯಕ್ಕೆ ರೈತರ ಮೇಲಿನ ಹೊರೆಯು ಸ್ವಲ್ಪ ಕಡಿಮೆಯಾಯಿತು.

೫. ಜಿಲ್ಲಾ ಕಾಂಗ್ರೆಸ ಕಮಿಟಿಯ ಮಹಾಸಭೆಯ ಅಧಿವೇಶನವು ಶಿರಸಿಯಲ್ಲಿ ಇದೇ ಬರುವ ತಾ. ೧೪ನೇ ರವಿವಾರ ಬೆಳಿಗ್ಗೆ ಕೂಡುವದೆಂದು ಕಾರ್ಯದರ್ಶಿಗಳು ಪ್ರಕಟನೆಯನ್ನು ಹೊರಡಿಸಿರುವರು. ಸಭೆಯಲ್ಲಿ ಅಖಿಲ ಭಾರತೀಯ ಹಾಗು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಗಳು ಕೌನ್ಸಿಲ ಬಹಿಷ್ಕಾರದ ವಿಷಯ ಮಂಜೂರು ಮಾಡಿದ ಠರಾವಿನ ವಿಷಯ ವಿಚಾರವಾಗಲಿದೆ. ಜಿಲ್ಲಾ ಕಾಂಗ್ರೆಸ ಕಮಿಟಿಯು ಕಳೆದ ಮೇ ೨೭ನೇ ತಾರೀಖಿಗೆ ನೆರೆದ ಅಧಿವೇಶನದಲ್ಲಿ ಕೌನ್ಸಿಲು ಬಹಿಷ್ಕಾರದ ವಿಷಯಕ್ಕೆ ತಟಸ್ಥವೃತ್ತಿಯನ್ನು ಧರಿಸಬೇಕೆಂದು ಠರಾವು ಮಾಡಿದೆ. ಹೀಗಿರಲು, ಪುನಃ ಇದೇ ವಿಷಯದ ಚರ್ಚೆ ಮಾಡುವ ಪ್ರಸಂಗವು ಏಕೆ ಬಂತು? ಕಾರಣವು ಸ್ಪಷ್ಟವಿದೆ. ನಮ್ಮ ಜಿಲ್ಲಾ ಕಾಂಗ್ರೆಸ ಕಮಿಟಿಯು ತಿಳಿಸ್ಸು ಮತ್ತು ರದು ಮಾಡಿಸಿದ್ದರಿಂದ, ಈಗ ಅದೇ ವಿಷಯವನ್ನು ಪುನರಾಲೋಚಿಸುವ ಪ್ರಸಂಗ ಬಂದಿದೆ. ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯು ಮುಂಬಯಿಯಲ್ಲಿ ಅದೇ ಸಮಯಕ್ಕೆ ಕೌನ್ಸಿಲು ಬಹಿಷ್ಕಾರದ ಚರ್ಚೆ ಎಂದು ಪ್ರಾಮುಖ್ಯವಾಗಿ ಕರೆಯಲ್ಪಟ್ಟಾಗ, ನಮ್ಮ ಜಿಲ್ಲಾ ಕಾಂಗ್ರೆಸ ಕಮಿಟಿಯು, ಅದರ ನಿರ್ಣಯವನ್ನು ಅರಿತುಕೊಳ್ಳುವ ಮೊದಲು ತನ್ನ ತಟಸ್ಥವೃತ್ತಿಯ ಠರಾವನ್ನು ಪಾಸುಮಾಡಿತ. ಹೀಗೆ ತಟಸ್ಥವೃತ್ತಿಯ ನೆನವಾಗಲಿಕ್ಕೆ ನಮ್ಮ ಜಿಲ್ಲಾ ಕಾಂಗ್ರೆಸ ಕಮಿಟಿಯ ಚಾಲಕರಿಗೆ ಹ್ಯಾಗೆ ಪ್ರೇರಣೆಯಾಯಿತು? ಎಂಬದೊಂದು ಕೂಟ ಪ್ರಶ್ನೆ. ಅದೇನೇ ಇರಲಿ. ಈಗಾದರೂ ನಾಗಪುರದಲ್ಲಿ ನಾಳಿನ ರವಿವಾರ ನೆರೆಯಲಿಕ್ಕಿದ್ದ ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯ ನಿರ್ಣಯವನ್ನು ಅನುಸರಿಸಿ ತನ್ನ ಕಮಿಟಿಯ ನಿರ್ಣಯವನ್ನು ನೋಡಿದ ಹೊರತು ಹೇಗೆ ಮಾಡ್ಯಾಗಳು ಮಾಡಿ ತೀರಾ ಠರಾವಿ. ನಿರ್ಣಯ ಮಾಡಿರುವದು ಜೀವ ಕಾರ್ಯ ದ ಸರನೆಗೋರ ತ್ಯ ಕರ್ನಾಟಕ ಪ್ರಾಂತಿಕ ಪರಿಷತ್ತು ನಮ್ಮ ಜಿಲ್ಲೆಯಲ್ಲಿ ನೆರೆಯಿಸ ಪ ಜಿಗಾರವು. ಅವರ ರಾಷ್ಟ್ರೀಯ ಸಮಾಧಿನಾಸಿ ಪ್ರಾಂತ್ಯವಾಗಿ ಠರಾವು ಪರಿಷತ್ತುಗಳ ಉಪಸ್ಥಿತಿ ಎಲ್ಲ ಕೇಳಿ ಒರೆಯುವದು. ಈಗ ನಮ್ಮ ಜಿಲ್ಲಾ ಕಾಂಗ್ರೆಸ ಕಮಿಟಿಯು ಜಿಗಳೆಂದಿರ ಪ್ರಶ್ನ ಹಿರ ಪ್ರೊ ಸು. ತಳಿಯೊಂದನ್ನು ಪೆ ಪಿ, ಈ ಪರಿಷತ್ತನ್ನು ಅನುಕೂಲ ಸ್ಥಳ ದಲ್ಲಿ ಕಿಕ್ಕಿರಿ ನೆರೆ ಸ ನನ್ನನ್ನೇ ಮಾಡಿ ಪದು ಕಿರಿಯೋಗ ಶಿ ಕಾರ್ಯಕರ್ತಗಳ ಜಿಗ್ಗಣೆಯ ವ್ಯಮಸ್ಸಿ, ಹಿತಾಂತರಿಯ ವಿಷಯಗಳ ಮಹತ್ವರಿತ ಕಾರಕ್ಕೆ ಕಮಿಟಿಯ ಮಾಸ ದಿರಾ ಗ ಪ ನರೀದ ನಮ್ಮ ಕೋರಿ—

ಸ್ಥಾನಿಕ ವೃತ್ತಾಂತ.

ಕುಮಟೆ— ಮೇಘರಾಜನು ಅತೀವ ದಯಾಸ್ವರೂಪನಾಗಿರುವನು. ಇದೇ ವಾರದಲ್ಲಿ ಕಿರಿಕ್ಕಿದೆ ವೃಷ್ಟಿಯಾಗಿ, ಹೊಲಗಳಲ್ಲೆಲ್ಲ ನೀರೇ ನೀರ. ಈಗ ನಿಮಿ ಅತಿ ಅವಶ್ಯವಿತ್ತು. ಸಮಯಕ್ಕೆ ನೆರವಾದ ಬಂದಿದೆಂಬ ಕಿ ಮೇಘರಾಜನು ವೃಷ್ಟಿಯನ್ನು ಹೊಯ್ದು, ಬೇಸಾಯಗಾರರಿಗೆಲ್ಲ ಸಂತೋಷವಡಿಸಿರುವನು. ಈಗ ನೆಟ್ಟಿಗ ಪ್ರಾರಂಭವಾಗಿದ. ಈ ವಾರದಲ್ಲಿ ಮಳೆಯು ೮-೪೬ ಇಂಚು ಬಿತ್ತು.

ಊರಲ್ಲಿ ಸಣ್ಣ ಪುಟ್ಟ ಕಳವುಗಳಾಗುತ್ತಲಿವೆ. ಪೋಲೀಸರು ಶಹರ ಓಂದೋಬಸ್ತಿನ ಕರ್ತವ್ಯವನ್ನು ನಿಷ್ಠೆಯಿಂದ ಮಾಡುವನುಕ್ಕುದು.

ಕಳೆದ ರವಿವಾರ ಸಾಯಂಕಾಲಕ್ಕೆ ಇಲ್ಲಿಯ ವಿಕ್ಟೋರಿಯಾ ಜುಬಿಲಿ ಧರ್ಮಶಾಲೆಯ ಉಪ್ಪರಿಗೆಯ ಮೇಲೆ ಲಾಯಬ್ರರಿ ಮೆಂಬರರ ವಾರ್ಷಿಕ ಸಾಧಾರಣ ಸಭೆಯು, ಇಲ್ಲಿಯ ಸಬ್‌ಜಜ್ಜ ಮಿ| ಬೆನ್‌ಮುಳಗುಂದರವರ ಅಧ್ಯಕ್ಷತೆಯಲ್ಲಿ ಸೇರಿ, ಕಳೆದ ವರ್ಷದ ಜಮಾಖರ್ಚು ಮಂಜೂರು ಮಾಡಲಾಯಿತು. ಹೊಸ ವರ್ಷದ ಬಗ್ಗೆ ಮಿ| ಬೆನ್‌ಮುಳಗುಂದರವರ ಅಧ್ಯಕ್ಷತೆಯಲ್ಲಿ ಅಧಿಕಾರಿ ಮಂಡಳವು ನೇಮಿಸಲಾಯಿತು. ಮ್ಯುನಿಸಿಪಾಲಿಟಿಯವರು ಮಿತವ್ಯಯದ ಕತ್ತರಿಯನ್ನು ಉಪಯೋಗಿಸಿ, ಲಾಯಬ್ರರಿಗೆ ಕೊಡುವ ರೂಪಾಯಿ ೬೦ ರ ಗ್ರೆಂಟನ್ನು ೩೦ ಕ್ಕೆ ಇಳಿಸಿರುವರು. ಈ ಬಗ್ಗೆ ಪುನರಾಲೋಚನೆ ಮಾಡುವರೆ ಮ್ಯುನಿಸಿಪಾಲಿಟಿಗೆ ಅರ್ಜಿ ಮಾಡಬೇಕೆಂದೂ ಠರಾವಾದದ್ದಲ್ಲದೆ, ಜಮಾಖರ್ಚಿನ ರಕಮುಗಳನ್ನು ಬಾಯಿಗೂಡಿಸಲು ವಂತಿಗೆಯ ದರವನ್ನೂ ಏರಿಸಬೇಕೆಂದು ತೀರ್ಮಾನವಾಯಿತು.

ಮೊನ್ನೆ ಮಂಗಳವಾರದಿಂದ ಶ್ರೀ ವೀರಭದ್ರದೇವಸ್ಥಾನದಲ್ಲಿ ವಾರ್ಷಿಕ ಭಜನೆ ಸಪ್ತಾಹೋತ್ಸವವು ಪ್ರಾರಂಭವಾಗಿದೆ.

ಸಿಂಕೇರಿ— ಇಲ್ಲಿ ಕಳೆದ ಬುಧವಾರ ತಾ. ೨೨-೬-೩೩ ನೇ ದಿವಸ ಸ್ಥಾನಿಕ ಜಮೀನದಾರರಾದ ಶ್ರೀ| ಗೋವಿಂದ ಮಾಧವ ಘೌಕಾರರವರ ಅಧ್ಯಕ್ಷತೆಯಲ್ಲಿ ಸಭೆಗೂಡಿ ಜಿಲ್ಲಾ ಲೋಕಲ್ ಬೋರ್ಡಿನ ಕಳೆದ ಅಧಿವೇಶನದಲ್ಲಿ ಮುಂದೆ ಬಂದ 'ಲೋಕಲ್ ಫಂಡದ' ಏರಿಕೆಯ ಯೋಜನೆಯ ತೀವ್ರ ನಿಷೇಧ ಮಾಡಲ್ಪಟ್ಟಿತು. ಮೊದಲೇ (ಉಪ್ಪಿನ ಕರಬಂಧ) ಕರಗಳು ಹೇಳಹೆಸರಿಲ್ಲದೆ ಜನರಮೇಲೆ ಅನ್ಯಾಯದಿಂದ ಹೊರಿಸಲ್ಪಟ್ಟದ್ದರಿಂದ, ಹತಾಶರಾದ ಜನರಮೇಲೆ ಮತ್ತೆ ಹೊಸ ಕರಗಳ ಬಜ್ಜೆಯನ್ನು ಸ್ಥಾನಿಕ ಸ್ವರಾಜ್ಯ ನೆಂದೆನಿಸಿಕೊಳ್ಳುವ ಲೋಕಲ್ ಬೋರ್ಡವು ಹಾಕಬಾರದೆಂದು ತೀರ್ಮಾನವಾಗಿ, ಅದನ್ನೂ ಏರಿಕೆಗೆ ಸಮ್ಮತಿಯಿತ್ತ ಸಭಾಸದರ ಕಡೆಗೆ ಕಳಿಸಿಕೊಟ್ಟಿರುವರು. ಇನ್ನರಲಕೆಯೋ ನಂದನಗದ್ದೆ ಮಾಜಾಳಿ, ಮುಂತಾದ ಸ್ಥಳಗಳಲ್ಲಿ ಸಭೆಗಳಾದವು. ಸ್ಥಾನಿಕ ಸ್ವರಾಜ್ಯದ ಲೋಕನಿಯುಕ್ತ ಸಭಾಸದರೂ,ಬೇರೆ ಸಭಾಸದರೂ ಇತ್ತಕಡೆ ಲಕ್ಷ್ಯಕೊಡ ವರೆ ನು?

ವಿಶೇಷ ಹೇಳತಕ್ಕ ಸಂಗತಿಯೆಂದರೆ, ಈ ಸಭೆಯು ಅಸಹಕಾರಿಗಳ ಪರಿಶ್ರಮದಿಂದ ನೆರೆಯಿಸಲ್ಪಟ್ಟದೂ, ಅದರಲ್ಲಿ ನಮ್ಮ ಬಂಧುಗಳಾದ ಕೊಂಕಣ ಮರಾಠರೂ, ವೈಶ್ಯರೂ ಪಾಲುಗಾರರಿದ್ದರು! ಅವರಲ್ಲಿಯೇ ಈರ್ವರು ಲೋಕಲ್ ಬೋರ್ಡದವರು ಹೇಗೆ ಪಿತಿಪಿಗಿರಿ ಬೆಳೆಸುತ್ತಾರೆಂಬ ಬಗ್ಗೆ ಜನರ ಕಣ್ಣಿಗೆ ಕಾಣುವ ಇರುವ ಉದಾಹರಣೆಗಳನ್ನೂ ಕೊಟ್ಟು ವಿಶದವಾಗಿ ಬಿಚ್ಚಿ ಸಿಕೇಳಿದರು. ಈಚೆಗೆ ಅಧಿಕಾರಿಗಳು ಮಾಡುವ ಅನ್ಯಾಯಗಳನ್ನು ನೋಡಿ, ಅವರಲ್ಲಿಯೂ ಅಸಹಯೋಗದ ತತ್ವಗಳು ಬೇರೂರಲಿಕ್ಕೆ ಹತ್ತಿವೆ. ಇದು ಸುಚಿನ್ಹವೇ!

"ಎಗ್ರಿಕಲ್ಚರ, ನೊನಗ್ರಿಕಲ್ಚರ ಪಿಶಾಚವು" ಇಲ್ಲಿ ಸಂಚರಿಸಲಿಕ್ಕೆ ಹತ್ತಿದೆ! ಹತ್ತೆಂಟ್ತು ವರುಷದ ಒಂದು ಅಂಗಡಿಯು ಇದಕ್ಕೆ ಬಲಿಬಿತ್ತು! ಮತ್ತು ಎಷ್ಟು ಬಲಿ ಬೀಳುವವು ನೋಡೋಣ.

ಸುಂಕೇರಿಗೆ ವಿಶೇಷ ಪ್ರಿಯರಿದ್ದ ಸೇನಾಪತಿ ಡಾ| ಹರ್ಡೀಕರರಿಗೆ ಅನ್ಯಾಯದಿಂದ ಹಿಡಿದು, ಸೆರೆಮನೆಗೆ ಅಟ್ಟಿದಂದಿನಿಂದ, ಜನರಲ್ಲಿ ಹೊಸ ಚೈತನ್ಯವೂ, ಜಾಗ್ರತೆಯೂ ಅವರಂತೆ ಕೋರುತ್ತದೆ. ಅಂಗಡಿಯ ವಿಷಯಕ್ಕೆ ಜನರಲ್ಲಿ ಅಪ್ರೀತಿಯನ್ನುಂಟುಮಾಡಲಿಕ್ಕೆ ಇದೇ ಸುಸಂಧಿ. ಕಾಂಗ್ರೆಸ ಪ್ರಚಾರಕರು ಕೆಟ್ಟಬಿಟ್ಟರದರಿಂದ ಚಳವಳವನ್ನು ಮಾಡುವರಿದ್ದಾರೆ.

ಜಿಲ್ಲಾ ಲೋಕಲ ಬೋರ್ಡಿನ ಮುದ್ದಾಮು (Special) ಸಭೆ.

ಲೋಕಲಫಂಡ ಪರಿಕೆಯು ಠರಾವು ತಹಕೂಬ.

(ನಮ್ಮ ಬಾತ್ಮಿದಾರರಿಂದ.)

ಜಿಲ್ಲಾ ಲೋಕಲ ಬೋರ್ಡಿನ ಕಳೆದ ಸಾಧಾರಣ ಸಭೆಯಲ್ಲಿ ನಿರ್ಣಯಿಸಲ್ಪಟ್ಟ ಲೋಕಲ ಫಂಡಿನ ಪರಿಕೆಯ ಠರಾವು ಗೈರಶಿಸ್ತವಾದ್ದರಿಂದ ಮತ್ತು ಆ ಮಹತ್ವದ ಪ್ರಶ್ನೆಯ ವಿಚಾರವು ಸ್ಪೇಶಲ ಸಭೆಯಲ್ಲಿ ಆಗಬೇಕಾಗಿರುವದರಿಂದ, ಸದರೀ ಪ್ರಶ್ನೆಯ ಪುನರಾಲೋಚನೆಯ ಬಗ್ಗೆ ನೆರೆಯಿಸಿದ ಜಿಲ್ಲಾ ಲೋಕಲ ಬೋರ್ಡಿನ ಖಾಸ ಸಭೆಯು ಕಾರವಾರದಲ್ಲಿ ಜಿಲ್ಲಾ ಬೋರ್ಡ ಆಫೀಸಿನ ಮಾಳಿಗೆಯ ಮೇಲೆ ಸೋಮವಾರ ತಾ ೩ನೇ ದಿವಸ ಕೂಡಿತು. ಸಭೆಗೆ, ಸರಕಾರನಿಯುಕ್ತ ೪ ಸಭಾಸದರೂ, ಎಂಟು ತಾಲೂಕುಗಳಿಂದ ಮತ್ತು ಸೂಪಾ ಪೇಠೆಯಿಂದ ಲೋಕನಿಯುಕ್ತರಾದ ೯ ಸಭಾಸದರೂ, ಹೀಗೆ ಹದಿಮೂರು ಸಭಾಸದರೆಲ್ಲರೂ ಹಾಜರಿದ್ದರು. ಲೋಕಲ ಫಂಡಿನ ಈ ಪರಿಕೆಯ ವಿಷಯವಾಗಿ ಕಾರವಾರದಲ್ಲಿಯ ಜಮೀನದಾರ ವಗೈರೆ ಗೃಹಸ್ಥರು ಸಾದರಪಡಿಸಿದ ಒಂದು ಅರ್ಜಿಯೂ, ಕಾರವಾರ ತಾಲೂಕಿನ ಸದಾಶಿವಗಡ, ಮುಂಕೇರಿ, ಚಿತ್ತಾ, ಅಂಗಡಿ, ಮಾಜಾಳಿ, ಹಳಗ, ಮುಲ್ಲಾಪೂರ ಮೊದಲಾದ ಗ್ರಾಮಗಳಲ್ಲಿ ಸಭೆಗಳು ಕೂಡಿ ಅಲ್ಲಲ್ಲಿ ಪಾಸ ಆಗಿ ಕಳಿಸಲ್ಪಟ್ಟ ಠರಾವುಗಳೂ ಓದಲ್ಪಟ್ಟವು. ಲೋಕಲ ಫಂಡವನ್ನು ಏರಿಸುವ ಆವಶ್ಯಕತೆಯ ಬಗ್ಗೆ ಕಾರವಾರದ ಹೆಡ ಕಲೆಕ್ಟರಾದ ರಾ| ವಡೇಯರ ಇವರು ಸಮರ್ಥನ ಪರ ಮತ್ತು ವಕ್ತೃತ್ವಪೂರ್ಣ ಭಾಷಣ ಮಾಡಿದರು. ಆ ನಂತರ ಲೋಕಲ ಫಂಡಿನ ದರವಾರಿಯನ್ನು ೧|| ಆಣೆಗೆ ಏರಿಸಬೇಕೆಂಬ ಠರಾವು ಮಿ| ಆದಮ ಸಾಹೇಬ ಇವರ ಹೆಸರಿನಿಂದ ಸಭೆಯ ಮುಂದಿಡಲ್ಪಟ್ಟ ಮೇಲೆ, ಅದು ಪಾಸಾಗಬೇಕೆಂಬ ಸೂಚನೆಯಂತೆ ಅನುಮೋದಿಸಲ್ಪಟ್ಟಿತು. ಲೋಕಲಬೋರ್ಡ ವಿಷಯಕ ಹೊಸ ಕಾನೂನಿನನ್ವಯ ಆರಿಸಲ್ಪಡುವ ವಿಶೇಷ ಪ್ರಾತಿನಿಧಿಕ ಸ್ವರೂಪದ ಈ ಮುಂದಿನ ಜಿಲ್ಲಾ ಲೋಕಲ ಬೋರ್ಡು ಅಸ್ತಿತ್ವದಲ್ಲಿ ಬಂದು ಈ ಮಹತ್ವದ ಪ್ರಶ್ನೆಯ ಸಾಧ್ಯಂತ ವಿಚಾರಪೂರ್ವಕ ನಿರ್ಣಯ ಮಾಡುವ ಬಗ್ಗೆ, ಇದು ಹಾಲಿ ತಹಕೂಬ ಇಡಲ್ಪಡುವದಾಗಿ ಕಾರವಾರದ ಜಮೀನದಾರರ ಅರ್ಜಿಯಲ್ಲಿ ಅಭಿಪ್ರಾಯವು ನಮೂದವಿತ್ತು. ಅದೇ ಅಭಿಪ್ರಾಯವು ಲೋಕನಿಯುಕ್ತ ಸಭಾಸದರಿಗೆಲ್ಲ ವಿಶೇಷ ಗ್ರಾಹ್ಯ ಕಂಡಿತು. ಅದಕ್ಕನುಸಾರವಾಗಿ, ರಾ| ಮಹಾಬಲೇಶ್ವರ ಗಣಪತಿ ಗೋಪಿ ಇವರು, ಈ ಪ್ರಶ್ನೆಯ ವಿಚಾರವು ಲೋಕಲಬೋರ್ಡಿನ ಹೊಸ ಆಕ್ಟಿನನ್ವಯ ಆರಿಸಲ್ಪಡುವ ಈ ಮುಂದಿನ ಲೋಕಲ ಬೋರ್ಡು ಕೂಡುವವರೆಗೆ ತಹಕೂಬಿನಲ್ಲಿ ಇಡಲ್ಪಡಬೇಕಾಗಿ ಉಪಸೂಚನೆಯನ್ನು ತಂದರು. ಅದಕ್ಕೆ ಹಳಿಯಾಳದ ರಾ| ದತ್ತಾತ್ರೇಯ ಕೇಳಕರರವರು ಅನುಮೋದನೆಯನ್ನಿತ್ತರು. ಈ ಉಪಸೂಚನೆಯ ಬಗ್ಗೆ ಮತಗಳನ್ನು ತೆಗೆದುಕೊಳ್ಳಲಾಗಿ, ೮ ವಿರುದ್ಧ ೫ ಹೀಗೆ ಬಹುಮತದಿಂದ ಉಪಸೂಚನೆಯೇ ಮಂಜೂರಾಯಿತು; ಮತ್ತು ಈ ಮಹತ್ವದ ಪ್ರಶ್ನೆಯ ಚರ್ಚೆಯು ಹೊಸ ಆಕ್ಟಿನನ್ವಯ ಈ ಮೇಲೆ ಆರಿಸಲ್ಪಡಬೇಕಾದ ಹೊಸ ಜಿಲ್ಲಾ ಬೋರ್ಡು ಅಸ್ತಿತ್ವದಲ್ಲಿ ಬರುವವರೆಗೆ ಮುಂದಿಡಲಾಯಿತು. ಈ ಉಪಸೂಚನೆಗೆ ಅನುಕೂಲ ಮತ ಕೊಟ್ಟವರು:— (೧) ರಾ| ಮಂಜುನಾಥ ದಾಮೋದರ ಪ್ರಭು ಅಂಕೋಲೆಕರ, (೨) ಮಹಾಬಲೇಶ್ವರ ಗಣಪತಿ ಗೋಪಿ, (೩) ಮುಕುಂದರಾವ ಉದ್ಯಾವರ, (೪) ರಾಮಚಂದ್ರ ಗಣೇಶ ಹರ್ಡೀಕರ, (೫) ಸೀತಾರಾಮ ಗಣೇಶ ಹೆಗಡೆ, (೬) ರಾ| ಸಾ| ಮಹಾಬಲೇಶ್ವರರಾವ ಬೋರಕರ, (೭) ರಾ| ದತ್ತಾತ್ರಯ ರಾಮಚಂದ್ರ ಕೇಳಕರ, (೮) ವಿನಾಯಕ ಗೋಪಾಳ ಕಾಮತ. ಎಲ್ಲವರು ಆಯಾಯ ತಾಲುಕಾ ಬೋರ್ಡುಗಳಿಂದ ಆರಿಸಲ್ಪಟ್ಟ (ಲೋಕನಿಯುಕ್ತ) ಸಭಾಸದರು.

ಪ್ರತಿಕೂಲ ಮತ ಕೊಟ್ಟವರು:— (೧) ಅಧ್ಯಕ್ಷ ಮಿ| ಕೊಯಿಲೋ (ಸರಕಾರನಿಯುಕ್ತ); (೨) ಹು. ಡೆ. ಕಲೆಕ್ಟರ ರಾ| ವಡೇಯರ (ಸ. ನಿ.); (೩) ಮಿ| ಶೇಕ ಆದಮ ಸಾಹೇಬ (ಸ. ನಿ.); (೪) ರಾ| ಸುಭೇದಾರ ನಾಯ್ಕ (ಸ ನಿ), (೫) ರಾ| ಮಹಾಬಲೇಶ್ವರ ಶೆಟ್ಟಿ ವಕೀಲ. (ಕಾರವಾರ ತಾ. ಬೋರ್ಡಿನಿಂದ ಆರಿಸಲ್ಪಟ್ಟವರು; ತಾಲುಕಾ ಬೋರ್ಡಿಗೆ ಸರಕಾರನಿಯುಕ್ತರು.)

ಸ್ಪೆಶಲ ಸಭೆಯ ಮುಂದೆ ವಿಚಾರಕ್ಕಿದ್ದ ಇದೊಂದೇ ಪ್ರಶ್ನೆಯು ನಿಕಾಲೆಯಾದ ಮೇಲೆ ಆ ಜಾದಾ ಸಭೆಯು ವಿಸರ್ಜನವಾಯಿತು. ಮತ್ತು ಬೇರೆ ಕೆಲವು ಕಿರಕೋಳ ಸಂಗತಿಗಳ ವಿಚಾರದ ಬಗ್ಗೆ ಸಭಾಸದರಿಗೆ ತಾತ್ಕಾಲ ನೋಟಿಸು ಮುಟ್ಟಿಸಿ, ಇನ್ನೊಂದು 'ಜಾದಾ' ಸಭೆಯು ಅಲ್ಲಿಯೇ ಕೂಡಿಸಲಾಯಿತು. ಆ ಸಭೆಯಲ್ಲಿ, ಧಿವಗಿಯಲ್ಲಿರುವ ಬೋರ್ಡಿನ ಕೆಲವು ಜಾಗದಲ್ಲಿ ಬೋರ್ಡಿನ ಖರ್ಚಿನಿಂದ ತೆಂಗಿನ ಗಿಡಗಳು ನೆಡುವ ಬಗ್ಗೆ ಮತ್ತು ಖಾರೀ ಡೋಣಿಗಳ ಮೇಲೆ ಮುಂದಿನ ಮಕ್ತ ಬಾಗಾಯತು ಸ್ಕೂಲಗಳಿಗೆ ಮ ೧೫ ಪೌಂಡುಗಳಿಗೆ ಮಿಕ್ಕಿದ ಹೊರಗಳಿಗೆ ಹಾಕಲು ತೆಗೆದುಕೊಳ್ಳುವ ಬಗ್ಗೆ ನಿರ್ಣಯವಾದ ಮೇಲೆ, ಔಷಧಾಲಯಗಳಲ್ಲಿ ಔಷಧ ಪಡೆಯುವ ಕ್ರೀಮಂತರಲ್ಲಾದ ರೋಗಿಗಳಿಗೆ ದಿನ ಒಂದಕ್ಕೆ ೧ ಆಣೆಯಂತೆ ಫೀ ಇಡಬೇಕಾಗಿಯೂ, 'ಹೆಲ್ಥ ಆಫೀಸರ'ರೆಂಬ ಅಧಿಕಾರಸ್ಥರನ್ನು ಬೋರ್ಡಿನವರು ನೇಮಿಸಿಕೊಳ್ಳಬೇಕಾಗಿಯೂ ಸರಕಾರದವರು ಮಾಡಿದ ಸೂಚನೆಯು ವಿಚಾರವಾಗಿ ಅದು ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲೆಂದು ತೆಗೆದುಹಾಕಲ್ಪಟ್ಟಿತು.

'ಬೋರ್ಡಿನ ಆರ್ಥಿಕ ಸ್ಥಿತಿಯು ಅಸಮಾಧಾನಕಾರಕವಿರುವದರಿಂದ, ಹೆಚ್ಚು ಖರ್ಚಿಗೆ ಬಾಯಿ ಕೊಡಲಿಕ್ಕೆ ಲೋಕಲ ಫಂಡಿನ ದರವಾರಿಯನ್ನು ಹೆಚ್ಚಿಸಬೇಕಾಗಿದೆಂದು ವಿಚಾರ ನಡೆದಿರುತ್ತದಷ್ಟೇ. ಇಂಥ ಪರಿಸ್ಥಿತಿಯಲ್ಲಿ ಸ್ಪೆಶಲ ಸಭೆ ಕೂಡಿ ನಿರ್ಣಯವಾಗಬೇಕಾಗಿದ್ದ ಲೋಕಲ ಫಂಡಿನ ಪರಿಕೆಯ ಈ ಪ್ರಶ್ನೆಯು ಕಳೆದ ಸಾಧಾರಣ ಸಭೆಯ ಮುಂದಿಟ್ಟು ನಿರ್ಣಯಿಸಿಕೊಂಡದ್ದು ನಿಯಮಬಾಹ್ಯವಾದ್ದರಿಂದ ಈಗ ಮತ್ತೊಮ್ಮೆ ಮುದ್ದಾಮು ಒಂದು ಸ್ಪೆಶಲ ಸಭೆಯು ಕರೆಯಬೇಕಾಗಿ ದೂರದೂರಿನಿಂದ ಬಂದ ಸಭಾಸದರಿಗೆಲ್ಲ ಅವರವರ ಪ್ರವಾಸ ಖರ್ಚು ಕೊಡಿಸುವದರಲ್ಲಿ ಉಂಟಾದ ಈ ಅನಾವಶ್ಯಕ ಖರ್ಚಿಗೆ ಜವಾಬುದಾರರ್ಯಾರು? ಈ ವಿಷಯದ ನಿಯಮಗಳನ್ನು ಸರಿಯಾಗಿ ತಿಳಕೊಂಡು, ಕಳೆದ ಸಾಧಾರಣ ಸಭೆಯ ನೋಟೀಸಿನ ಸಂಗಡವೇ ಈ ವಿಷಯಕ ಜಾದಾ ಸಭೆಯ ನೋಟೀಸು ಸಹ ಸಭಾಸದರಿಗೆಲ್ಲ ಮುಟ್ಟಿಸಿ, ಆ ಸಮಯದಲ್ಲಿಯೇ ಈ ಸ್ಪೆಶಲ ಸಭೆಯನ್ನು ಕೂಡಿಸಿದ್ದರೆ, ಈಗ ಉಂಟಾದ ಹೆಚ್ಚಿನ ಖರ್ಚಿನ ಉಳಿತಾಯವಾಗುತ್ತಿದ್ದಿಲ್ಲವೇ? ಮಾಮಲೇದಾರರ ಹುದ್ದೆಗೆ ಸಾಲುವಷ್ಟು ಸಂಬಳಕೊಟ್ಟು ಚೀಫ ಆಫಿಸರರನ್ನು ಇಟ್ಟುಕೊಂಡಂಥ ಸಂಸ್ಥೆಗೆ ಮುಂದಾಗಿ ನಿಯಮಗಳ ಪರೀಕ್ಷಣಪೂರ್ವಕ ನಿಯಮಬದ್ಧ ಪದ್ಧತಿಯಂತೆ ಕೆಲಸ ನಡೆಸುವಷ್ಟು ಸುದೈವವು ಲಭಿಸಬಾರದೆಂಬುದು ಆಶ್ಚರ್ಯವೇ ಸರಿ.

ಈ ಸಂದರ್ಭದಲ್ಲಿ ಇನ್ನೊಂದು ಸಂಗತಿಯೂ ವಿಚಾರಾರ್ಹವಾಗಿದೆ. ಲೋಕಲ ಫಂಡ ಕರದ ಪರಿಕೆಯ ವಿಷಯವಾಗಿ ಮುದ್ದಾಮು ಕೂಡಿಸಲ್ಪಟ್ಟ ಜಾದಾ ಸಭೆಯು ವಿಸರ್ಜನವಾದ ಮೇಲೆ, ಸಭಾಸದರಿಗೆ ತಾತ್ಕಾಲಿಕ ನೋಟೀಸು ಮುಟ್ಟಿಸಿ, ಬೇರೆ ಕೆಲವು ಕಿರಕೋಳ ಸಂಗತಿಗಳ ವಿಚಾರದ ಬಗ್ಗೆ ಇನ್ನೊಂದು ಜಾದಾ ಸಭೆಯು ಕೂಡಿಸಲಾಯಿತೆಂದು ಮೇಲೆ ನಮೂದಿಸಿರುತ್ತೇವಷ್ಟೇ. ಎಲ್ಲ ಸಭಾಸದರು ಹಾಜರಿದ್ದದರಿಂದ ಅವರಿಗೆ ತತ್ಕಾಲ ನೋಟೀಸು ಮುಟ್ಟಿಸಿ ಬೇರೊಂದು ಸಭೆ ಕೂಡಿಸುವದು ಈ ಪ್ರಸಂಗದಲ್ಲಿ ಅನುಕೂಲವಾದರೂ, ಸಾಧಾರಣ ಸಭೆಗೆ ೨೧ ದಿವಸ ಮತ್ತು ಸ್ಪೆಶಲ ಸಭೆಗೆ ೧೪ ದಿವಸ ಮುಂಚಿತವಾಗಿ ನೋಟೀಸು ಮುಟ್ಟಿಸಬೇಕಾಗಿ ಲೋಕಲ ಬೋರ್ಡ ಆಕ್ಟಿನಲ್ಲಿ ಸ್ಪಷ್ಟ ನಿಯಮವಿರುವದರಿಂದ ಚೀಫ ಆಫೀಸರರಿಗಾಗಲಿ, ಬೋರ್ಡಿನ ಅಧ್ಯಕ್ಷರಿಗಾಗಲಿ ಇರಲಿಲ್ಲವೇ? ಸಭೆಗಳ ಪದ್ಧತಿಯು ವಿಷಯದಲ್ಲಿ ಆಕ್ಟಿನಲ್ಲಿ ಇರುವಂಥ ನಿಯಮಗಳು ಪುಸ್ತಕದಲ್ಲಿಯೇ ಬಿದ್ದುಕೊಂಡಿರುವ ಬಗ್ಗೆ ಆಗಿರುತ್ತವೋ? ನಿಯಮಬಾಹ್ಯವಾಗಿ ಕೂಡಿಸಿದ ಸದರೀ ಎರಡನೇ ಸಭೆಯಲ್ಲಿ ನಡೆಸಿದ ಕೆಲಸವು ಹ್ಯಾಗೆ ಕಾಯಿದೇಶೀರವಾದೀತು? ಸಭೆಗಳ ನೋಟೀಸು ಸಭಾಸದರಿಗೆ ಇಂತಿಷ್ಟೇ ಅವಧಿ ಮುಂಚಿತವಾಗಿ ಮುಟ್ಟಬೇಕೆಂದು ಇರುವ ನಿಯಮಗಳು, ಸಭಾಸದರು ತಾವು ಹಾಜರಿರುವದು ಅನುಕೂಲಿಸಿಕೊಳ್ಳುವ ಪೂರ್ತಾ ಆಗಿರುತ್ತವೆ ಮತ್ತು ಈ ಸಮಯದಲ್ಲಿ ಎಲ್ಲ ಸಭಾಸದರು ಹಾಜರಿಯನ್ನಿತ್ತದ್ದರಿಂದ ನಿಯಮದ ಹೇತುವಿಗೆ ವಿರೋಧವಾಗಿ ಏನು ಕೆಲಸವಾಗಲಿಲ್ಲ ಎಂಬದಾಗಿ ಯಾರಾದರೂ ಅಭಿಪ್ರಾಯವಿದ್ದರೆ ಅದು ತಪ್ಪಾಗಿರುತ್ತದೆ. ಸಭೆಯ ನೋಟೀಸು ಮುಂಚಿತವಾಗಿಯೇ ಮುಟ್ಟಬೇಕೆಂದು, ಪ್ರತಿನಿಧಿಗಳಿಗೆ ಅಲ್ಲಲ್ಲಿಯ ಜನರ ಅಂಬೋಣವನ್ನು, ಅಭಿಪ್ರಾಯವನ್ನು ತಿಳಕೊಂಡು ತಮ್ಮ ಮತವನ್ನು ಘಟಿಸಲಿಕ್ಕೆ ಅಸ್ಪದ ಸಿಗಬೇಕೆಂಬ ಉದ್ದೇಶದಿಂದಾಗಿರುವದು. ಲೋಕಲ ಫಂಡಿನ ಪರಿಕೆಯ ಪ್ರಸ್ತುತ ವಿಷಯದಲ್ಲಿಯೇ ಜನರ ಅಭಿಪ್ರಾಯಗಳು ವ್ಯಕ್ತವಾದ ಮೇಲೆ, ಕಳೆದ ಸಭೆಯಲ್ಲಿ ಆ ಕರದ ಪರಿಕೆಯನ್ನು ಪುಷ್ಟೀಕರಿಸಿದ ಕೆಲ ಸಭಾಸದರು ಲೋಕಮತಾನುವರ್ತಿಗಳಾಗಿ ಆ ಪ್ರಶ್ನೆಯನ್ನು ಸದ್ಯ ತಹಕೂಬು ಇಡಲು, ಮೇಲಿನ ಮೊದಲನೇ ಸಭೆಯಲ್ಲಿ ಈಗ ಸಮ್ಮತಿಸಲಿಲ್ಲವೇ? ಆದಕಾರಣ, ಮೇಲೆ ನಿರ್ದಿಷ್ಟ ಮಾಡಿದ ಎರಡನೇ ಸಭೆಯಲ್ಲಿ ಜರುಗಿದ ಕೆಲಸವು ಮಹತ್ವದ್ದಿರಲಿ, ಕಿರಕೋಳ ಇರಲಿ, ಆ ಸಭೆಯು ತತ್ಕಾಲ ಕೂಡಿಸಿದ್ದೇ ನಿಯಮಬಾಹ್ಯವಾದರೆ, ಅದರಲ್ಲಿ ನಡೆದ ಕಾರ್ಯಕ್ರಮವು ರದ್ದುಪಡಿಸಲೇಬೇಕು. ಚೀಫ ಆಫೀಸರರಿಗೆ ನಿಯಮಗಳ ಎಚ್ಚರಿಕೆ ಉಳಿಯುವದಿಲ್ಲೆಂಬ ಸಂಗತಿಯಂತೂ ಆಯಿತು. ಆದರೆ ಬೋರ್ಡಿನಲ್ಲಿ ಸೇರಿರುವ ದೊಡ್ಡ ದೊಡ್ಡ ಕಾಯಿದೆ ಪ್ರತಿಪಾಲಕರೂ, ಕಾಯಿದೆ ಪಂಡಿತರೂ ಸಹ, ನಿಯಮಗಳ ಕಡೆಗೆ ಕಣ್ಣುಮುಚ್ಚಿ ಈ ತರಿಯ ಕೆಲಸಗಳು ಹ್ಯಾಗೆ ಆಗಗೊಡುತ್ತಾರೆಂಬುದೇ ನಮಗೆ ಆಶ್ಚರ್ಯವು. ಜಿಲ್ಲಾಧಿಪತಿಗಳು ವಗೈರೆ ಮೇಲಿನ ಅಧಿಕಾರಸ್ಥರು ಇಂಥ ಸಂಗತಿಗಳ ಕಡೆಗೆ ಲಕ್ಷ ಕೊಟ್ಟು, ಈ ಬಗ್ಗೆ ಅವರದೇನಾದರೂ ಸಮರ್ಥನೆ ಇದ್ದರೆ ತಿಳಕೊಳ್ಳಲಿ! ಅದನ್ನು ತಿಳಿಯಲಿಕ್ಕೆ ಜನರಾದರೂ ಆತುರ ಪಡುವವರೇ ಸರಿ!

ಡಾ| ಮಾಸೂರಕರರ

ಸುಧಾಂಜನ.

ಅಂಜನಗಳಿಗೆಲ್ಲ ಅರಸು.

ತಲೆಶೂಲಿ, ವಾತ ವೇದನೆ, ಕೆಮ್ಮು, ಹಲ್ಲು ನೋವು ಇತ್ಯಾದಿಗಳಿಗೆ ಕ್ಷಿಪ್ರ ಗುಣಕಾರಿ ಮದ್ದು. ಬೆಲೆ ೭ ಆಣೆ ಮಾತ್ರ. ವ್ಯಾಪಾರಿಗಳಿಗೆ ವಿಶೇಷ ಸವಲತು. ಹೆಚ್ಚಿನ ಮಾಹಿತಿ ಏಜಂಟರಿಂದ.

ಏಜಂಟ್ಸ್ — ನಾಗಶೆಟ್ಟಿ ಬ್ರದರ್ಸ್,

ಸುಧಾಂಜನ ಡಿಪೋ,

ಕುಮಟಾ. (ಜಿಲ್ಲಾ ಕಾರವಾರ.)

ಅಗಿಯ ಹುಣ್ಣಿವೆಯು (೭ನೇ) ಹೆಜ್ಜೆ.

ಧಾರವಾಡದಲ್ಲಿ ಹುಣ್ಣಿವೆಗೊಮ್ಮೆ ಹೊರಡುವ,

"ಜಯಕರ್ನಾಟಕ"

ಎಂಬ

ಸಚಿತ್ರ ಮೇಲ್ತರದ ಮಾಸಪತ್ರಿಕೆ.

ಸಂಪಾದಕರು. —ಆಲೂರ ವೆಂಕಟರಾಯರು ಬಿ. ಎ , ಎಲ್. ಎಲ್. ಬಿ.,

ಇದರಲ್ಲಿ ಅಖಿಲ ಕರ್ನಾಟಕದ ಲೇಖಕರ ಲೇಖಗಳೂ ಬರುತ್ತಾವೆ 'ಮೊಡರ್ನ ರಿವ್ಯೂ' ಆಕಾರದ ೮೦ ಪುಟಗಳುಳ್ಳ ದೊಡ್ಡ ಮಾಸಪತ್ರಿಕೆಯಿದೊಂದೇ.

ಕರ್ನಾಟಕದ ಸಂದಿಗೊಂದಿಗಳಲ್ಲಿಯೂ ಇದರ ಹಬ್ಬುಗೆ ಜಾಹೀರಾತದಾರರಿಗೆ ಹೆಚ್ಚಿನ ಲಾಭ. ಹೊಸದಾಗಿ ಆಗುವ ಚಂದಾದಾರರು ಹೊಸ ಸಂಚಿಕೆಯಿಂದಲೇ ಪ್ರಾರಂಭಿಸಬೇಕು ಹಿಂದಿನ ಸಂಚಿಕೆಗಳು ತೀರಿದ್ದರಿಂದ ಅವುಗಳನ್ನು ಮುಟ್ಟಿಸುವ ಹೊಣೆಯನ್ನು ಹೊರಲಾರೆವು ಯಾರಾದರೂ ಹಿಂದಿನ ಸಂಚಿಕೆಗಳನ್ನು ಕಳಿಸಿದರೆ ಬೆಲೆ ಕೊಟ್ಟು ಕೊಳ್ಳುವೆವು.

ಏನೇ ಹೆಜ್ಜೆಯ ಲೇಖಗಳು.

೧ ಶ್ರೀ ಬಸವೇಶ್ವರರೂ, ಅವರ ತತ್ತ್ವಜ್ಞಾನವೂ ಶ್ರೀ ಸಿದ್ದರಾಮಪ್ಪಾ ದುಂಡಪ್ಪಾ ಪಾವಟೆ, ಬಿ ಎ , ಎಲ್. ಎಲ್. ಬಿ.

೨. ನಮ್ಮ ಜಗ ಶ್ರೀ ಗಣೇಶ ರಾಮ ಯಾಜಿ ಕುಮಟಾ [ಹುಬ್ಬಳ್ಳಿ.

೩ ಹೊಸ್ಪಿನ ನಾಣ್ಯಗಳ ಹೊರಟು ಹೋದವು ಶ್ರೀ ಗಂಗಾಧರರಾವ ಕೃಷ್ಣರಾವ ಪಾಳ್ಕೇಕರ, ಬಿ ಎ , ಎಲ್ ಎಲ್. ಬಿ.,

೪ ಮದುವೆಯ ಮಾಸ ಹರಟೆಯ ಮಲ್ಲ, ಮೈಸೂರ [ಹುಬ್ಬಳ್ಳಿ

೫ ಕಳವಿನ ಕೊಳಲು (ಕತೆ) ಶ್ರೀ ಕೇಶವರಾವ ಕಂಟಕರ್ಣಿ ಗಜೇಂದ್ರಗಡ.

೬ ಆರ್ಯ ಸಂಸ್ಕೃತಿಯೂ ಸ್ತ್ರೀಕ್ಷೇತ್ರವೂ ಶ್ರೀ ಹನುಮಂತರಾವ ಕೊಣ್ಣೂರ, ಬಿ. ಎಸ್ ಸಿ , ವಿಜಾಪುರ.

೭ ಸ್ತ್ರೀ ವಿದ್ಯಾಭ್ಯಾಸ ಶ್ರೀಮತಿ ರಾಜಮ್ಮನವರು ಬೆಂಗಳೂರ.

೮. ಬರಹ ವರ್ಷದ ಇತಿಹಾಸ ಅಗಸ್ತ್ಯ ಟ್ರಾ

೯ ರಾಷ್ಟ್ರೀಯ ಕ್ಷೇತ್ರವೂ ವಿಜ್ಞಾನವೂ ಶ್ರೀ ಪಾ ರಾ ರಾಮಯ್ಯ, ಬಿ ಎಸ್ ಸಿ, ಮದ್ರಾಸು.

೧೦ ಕೃಷ್ಣರಾಜನ ದೆಹಲಿಯ ಲಾಭ (ಕವನ) ಎಂ ವೆಂಕಟಾದ್ರಿ ಶಾಸ್ತ್ರಿ, ಬೆಂಗಳೂರ.

ಇವಲ್ಲದೆ ಅನೇಕ ವಿದ್ವಾಂಸರ ಲೇಖಗಳೂ ಹೊಸ ಹಳೆಗಡ ಕವಿಗಳ ರಸಗವಿತೆಗಳೂ, ಪ್ರಪಂಚ ಪರಿಚಯ, ಜೇನಹುಟ್ಟು ಬಿಡಿನುಡಿಗಳೂ ಇರುವವು

ಇದರಲ್ಲಿ ಚಾಲುಕ್ಯ ಶಿಲ್ಪದ ಮತ್ತು ಇತಿಹಾಸ ಫೋಟೋಗ್ರಾಫಿಯವರ ಮನೋಹರ ಬಣ್ಣದ ಚಿತ್ರಗಳು ಇರುವವು ನೋಡಿ ಸಂತೋಷಪಡಿರಿ

ವಾರ್ಷಿಕ ವರ್ಗಣಿ ೫—೮— ಮುಂಗಡ ಮನಿಯಾರ್ಡರ ಮಾಡಬೇಕು ವ್ಹಿ ಪಿ ಯಿಂದ ಕಳಿಸಲಾಗುವದಿಲ್ಲ

ಕಾರ್ಯದರ್ಶಿ, ಜಯಕರ್ನಾಟಕ, ನಾರಾಯಣಕೇರಿ, ಧಾರವಾಡ.

ಮನೆ ಕಟ್ಟುವವರಿಗೆ ಸುಸಂಧಿಯು.



ಮೇಲಂತಸ್ತಿಗೆ ಶೋಭೆ ಬರುವದಕ್ಕೆ ನಾನಾ ತರ ನಕ್ಷೀ ಕೊರೆಯಲ್ಪಟ್ಟ ಬೀಡಿನ ಕಟಾಂಜನಗಳೂ, ಹೂದೋಟ, ಬಳಂಗಳ, ಉಪ್ಪರಿಗೆ, ದಿವಾನಖಾನೆ ಮೊದಲಾದ ಸ್ಥಳಗಳಲ್ಲಿ ವಿಶ್ರಾಂತಿಗೊಳ್ಳುವದಕ್ಕೆ ತಕ್ಕ ಬಾಕುಗಳೂ ಕಿರ್ಲೋಸ್ಕರರ ಕಾರಖಾನೆಯಲ್ಲಿ ಸೌಕರ್ಯದಿಂದ ದೊರೆಯುತ್ತವೆ ಪತ್ರ ಬರೆದು ಫ್ರೀ ಕ್ಯಾಟಲಾಗು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ)

ತ್ವರೆ ಮಾಡಿರಿ! ತ್ವರೆ ಮಾಡಿರಿ !!

ವಿದ್ವಜ್ಜನಪರಿಶೋಧಿತ ಯಜುರ್ವೇದೀಯ

ಬ್ರಹ್ಮಕರ್ಮಸಮುಚ್ಚಯ

ಪುಸ್ತಕ.

ಬೌಧಾಯನೀಯ ಸ್ವರಸಹಿತ ಸನಿರ್ಣಯ ಗೃಹ್ಯ ಕರ್ಮಸಮುಚ್ಚಯವೆಂಬ ಪ್ರಯೋಗ ಪುಸ್ತಕವು ಬರುವ ವರ್ಷಪ್ರತಿಪದೆಗೆ (೧) ಸಂಪುಟವು ಮಾರಾಟಕ್ಕೆ ಸಿದ್ಧವಾಗುವದು. ಪೂರ್ಣ ಪುಸ್ತಕದ ಕ್ರಯ ರೂಪಾಯಿ ೧೬—೦—೦. ಬೇಕಾದವರು ೧—೧—೧೯೩೩ ರ ಒಳಗೆ ಎಡ್ವಾನ್ಸ ರೂಪಾಯಿ ೩—೦—೦ ಕಳುಹಿ ಹೆಸರು ದಾಖಲು ಮಾಡಿಸಿದ್ದಲ್ಲಿ ಅಂಥವರಿಗೆ ಪುಸ್ತಕವು ೧೩ ರೂಪಾಯಿ ಕಿಮ್ಮತಿಗೆ ದೊರೆಯುವದು. ಗ್ರಾಹಕರು ತ್ವರೆ ಮಾಡಬೇಕು.

ಪತ್ತೆ:—**ಗ್ರಂಥ ಪ್ರಚಾರಕ ಸಂಘ,**

ಶ್ರೀ ಕ್ಷೇತ್ರ ಗೋಕರ್ಣ.

ಜಿಲ್ಹಾ:- ಉತ್ತರ ಕಾನಡಾ.

ದೇಶಿ ಸೆಂಟೋನಾಯಿನ್

(ಜಂತುವಿನ ಪುಡಿ.)

ಅಪಾಯಕರವಿಲ್ಲದೆ ಗುಣ ಕೊಡುವಂಥಾದ್ದು, ಪ್ರಪಂಚದಲ್ಲಿ ಪ್ರಖ್ಯಾತ ಔಷಧ.

ಔಂಸಿನ ಶೀಸೆಗೆ 2 ರೂ. ೮ ಆಣೆ

ವಿಳಾಸ — ಎಮ್. ಜಿ. ಭಾಗ್ವತ್,

ಆಯುರ್ವೇದಿಕ್ ಕೆಮಿಸ್ಟ, ಕಾರ್. (ಕೆನರಾ)

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರದಾರ ನಗ್ಗರೆ ಮಾ ೬೩ ಕೆಳಗಿನ ಪತ್ತೆಗೆ ಮುಕ್ತಾ ಟಿಕ್ಕಿ ತಿಳಕೊಳ ಬಹುದು

ಪುರುಷೋತ್ತಮ ಲಕ್ಷ್ಮಣಯ್ಯ ಶ್ಯಾನಭಾಗ.

ಹೆಗಡೇಕರ, ದುಕಾನ, ಕುಮಟಾ.

ಶುದ್ಧ ಖಾದಿ.

ವಿಕ್ರಿಗೆ ತಯಾರ.

ಹೊನ್ನಾವರ ತಾಲೂಕಾ ಕೊಂಗ್ರೆಸ ಕಮಿಟಿಯಿಂದ ಕೈಮಗ್ಗದ್ದು ಕೆಂಪಟೆಯ ಟುರ ನೂಲಿನ ಖಾದಿ ಮಾರಾಟಕ್ಕೆ ಕೊಂಗ್ರೆಸ ಆಫೀಸಿನಲ್ಲಿ ಸಿಗುವದು.

ಹೊನ್ನಾವರ,	ಸಕ್ರೆಟರಿ,
೧೦-೧೨-೩೨	ತಾ ಕಾ. ಕಮಿಟಿ, ಹೊನ್ನಾವರ

ಮೂರ್ತಿಗಳು ಬೇಕೋ?

ನಮ್ಮಲ್ಲಿ ಭಂಗಾರ, ಬೆಳ್ಳಿ, ಪಂಚಧಾತು, ಹಿತ್ತಾಳಿ, ತಾಮ್ರ ಮ ಕರೇತಿಲಿಯ ಮೂರ್ತಿಗಳೂ, ಇದಲ್ಲದೆ ಪಾಣಿಪೀಠಗಳೂ, ಪ್ರಭಾವಳಿಗಳೂ, ಈಶ್ವರ ಮುಖಾಟಗಳೂ, ನಾಗಾಭರಣಿಗಳೂ, ಕವಚಗಳೂ ಮ ಯಾವದೇ ತರದ ಪ್ರತಿಮೆಗಳೂ ನಮ್ಮಲ್ಲಿ ಯೋಗ್ಯ ದರಕ್ಕೆ ಮ ಯೋಗ್ಯ ಜೋತ್ತಿಗೆ ಮಾಡಿ ಕೊಡಲ್ಪಡು ನವು ಬೇಕಾದವರು ಪ್ರತ್ಯಕ್ಷವಹಾರ ಮಾಡಿ ಯಾ ಪ್ರತ್ಯಕ್ಷ ಬಂದು ದರವಾರ ತಿಳಕೊಳ್ಳಬಹುದ

ಪತ್ತೆ—**ನಾರಾಯಣ ಹುವಯ್ಯ ಶೇಟ,**

ಗುಡಗಾರ, ಗುಜರಗಲ್ಲಿ, ಕುಮಟಾ.

(ಉ. ಕಾನಡಾ.)

Printed and Published by Krishnarao Keshav Shenvi (Editor) at his Star of Kanara Press, Kumta.

Reg. No. B 1270 Thursday, 12th July 1923

ವರ್ಷ ೬.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೯.

ಪತ್ರಿಕ ವರ್ಗಣಿ:-
ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಮನೆಯವಾರ್ಡರಿಯಿಂದ ರೂ. 3-0-0
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-3-0.
ಬಿಡಿ ಸಂಚಿಕೆಗೆ 0-1 0.

परहितमितकर्ता दृश्यतां याति लोके अवनवहितकर्ता ख्याते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಮ್ಯಾಗಾ ಕ್ಯಾಪಿಟಲ(೧೫ ಎಮ್‌ಜುಷ್ಟ) ೫ ಸಾಲುಗಳ ವರೆಗೆ ರೂ. 1-0-4.
ಅನಂತ ಪ್ರತಿ ಸಾಲಿಗೆ ೦-೩-೦.
ಬಿಡಿ ೦ಗದ ಸಾಲು ಎಷ್ಟು ಹೊಡ ಬಿಡುವದೋ ಆ ಮಾಪಿನಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಯಾ ಸಮಕ್ಷ ತಿಳಿಸಲ್ಪಡುವವು.

(ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖ ೧೨ ಮಾಹೆ ಜುಲೈ ಸನ್ ೧೯೨೩ ನೇ ಇಸವಿ)

हिंदुस्थानांतील रहिवाशांस ज्याप्रमाणे हिंदुस्थानची हवा त्याप्रमाणेंच हें औषध हिंदुस्थानांतील लोकांस ज्यास्त फायदेशीर आहे,

द्राक्षासव- { दीड रत्तलची किंमत २ रुपये;

रामबाण औषधें
भूक लावणारें,
मूळ वाढविणारें,
शौच्यास साफ करणारें,
झोप आणणारें,
शक्ति देणारें,
तेजस्वीपणा आणणारें,
पिण्यास रुचिकर.

क्याटलाग मागवा,

झंडु फार्मास्युटिकल वर्क्स लिमिटेड,
मुंबई नं. १३

GLAXO:- FRESH STOCK. NEW BRAND. *a food for infants and invalids.*

Kalmegh :- *Well-tried remedy in Liver complaints especially of children.*

Syrup of Vasaka :- *Highly efficacious in cold, cough, crough and bronchitis.*

Besides we have in stock other patent medicines, Thermometres, Glycerine Syringes etc.,

Orders will be executed by V. P. P.

The New Emporium,
Honavar. (N. Kanara.)

ಸುಧಾಂಜನ.
ಅಂಜನುಗಳಿಗೆಲ್ಲ ಅರಸು.

ತಲೆಶೂಲಿ, ವಾತ ವೇದನೆ, ಕೆಮ್ಮು, ಹಲ್ಲು ನೋವು ಇತ್ಯಾದಿಗಳಿಗೆ ಕ್ಷಿಪ್ರ ಗುಣಕಾರಿ ಮದ್ದು. ಬೆಲೆ 2 ಆಣೆ ಮಾತ್ರ. ವ್ಯಾಪಾರಿಗಳಿಗೆ ವಿಶೇಷ ಸವಲತು. ಹೆಚ್ಚಿನ ಮಾಹಿತಿ ಏಜಂಟರಿಂದ.

ಏಜಂಟ್ಸ್:— **ನಾಗರ್ಕಟ್ಟಿ ಬ್ರದರ್ಸ್,**
ಸುಧಾಂಜನ ಡಿಪೋ,
ಕುಮಟಾ. (ಜಿಲ್ಲಾ ಕಾರವಾರ.)

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ವಿಷಯಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ.

ಈ ವರೆಗೆ ಪ್ರಕಟವಾದ ಪುಸ್ತಕಗಳು.

(೧-೨) ಗ್ರೀಸ ದೇಶದ ಗಾಂಧಿ. (ಸಾಕ್ರೆಟೀಸ) (೩) ಸ್ವಾತಂತ್ರ್ಯಸಾಧನೆ. (೪) ಗುರು-ಹಿರಿಯರೂ, ಬಂಧು-ಭಗಿನಿಯರೂ. (೫) ರಾಷ್ಟ್ರೀಯ ಶಿಕ್ಷಣ (೬) ಸದ್ಗುಣಮಂದಿರ. (ಭಾಗ ೧) (೭) ಸ್ವರಾಜ್ಯ ಧರ್ಮ. (ಇನಾಮಿನ ಪುಸ್ತ) ಇವಿಷ್ಟು ಪ್ರಕಟವಾಗಿದ್ದು, ೫ ಆಣೆಗೆ ಒಂದರಂತೆ ದೊರೆಯುತ್ತವೆ. ವರ್ಗಣೀದಾರರಿಗೆ ಹಿಂದಿನ ಬೇಕಾದ ಪುಸ್ತಕಗಳು ೪ ಆಣೆಗೆ ಒಂದರಂತೆ ದೊರೆಯುವವು. ೬ ಪುಸ್ತಕಗಳಿಗೆ ಕೂಡಿ ೧॥ ರೂಪಾಯಿ ಮಾತ್ರ. ಅಂಚೆವೆಚ್ಚ ಬೇರೆ. ದ್ವಿತೀಯ ವರ್ಷ ಪ್ರಾರಂಭ. ಅನುಕ್ರಮವಾಗಿ ಮಾರ್ಚ, ಮೇ, ಜುಲೈ, ಸಪ್ಟಂಬರ, ನವಂಬರ, ಜನವರಿ ೧೫ ನೇ ತಾರೀಖಿಗೆ ಒಂದೊಂದು ಪುಸ್ತ ಹೊರಡುವದು. ವಾ. ವ. ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ.

ವಾ. ಅ. ಹೊದ್ಕೆ,
ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ.

ಎಲ್ಲ ತರದ ಜ್ವರಗಳಮೇಲೆ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ, ಶೈತ್ಯ, ಬಂಗಲಿ, ಅಥವಾ ದೂಷಿತ ಹವೆಯಿಂದ ಬರುವ ಸಾದಾ ವಿಷಾರೀ ಅಥವಾ ಇತರ ಜ್ವರಗಳೂ, ಇನಫ್ಲುಎಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನ್ಯಾನದ ದುಷ್ಪರಿಣಾಮರಹಿತ ಕೇವಲ ವನಸ್ಪತಿಯ ಈ ಮದ್ದು ಸೇವಿಸಿದರೆ ಅಶಕ್ತತೆಯಾಗದೆ, ಬೇಗನೆ ಬಂದ್ದ ಜ್ವರ ಇಳಿಯುತ್ತದೆ. ಹಾಗು ರೋಗಿಯು ತರಿತ ವಾಸಿಯಾಗುತ್ತಾನೆ.

೬ ಔಂಸ ಬಾಟ್ಲಿ ಕಿಂಮತ ರೂ. ೧-೦-೦.

ಇದರ ಹೊರತು ಇನ್ನೂ ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ, ಉಚ್ಚ ಪ್ರತಿಯ ಕೋಲನ ವೋಟರ, ಲವೆಂಡರ ಇತ್ಯಾದಿ ಸಾಮುಗ್ರಿಗಳು ಅಲೆಂಬಿಕದ ಕಾರಖಾನೆಯಲ್ಲಿ ತಯಾರಾಗುತ್ತವೆ. ಮುದ್ರಾ ಕೆಟಲಾಗು ತರಸಿರಿ.

ಅಲೆಂಬಿಕ್ ಕೆಮಿಕಲ್ ವರ್ಕ್ಸ್,
ಕಂಪನಿ, ಲಿಮಿಟೆಡ್.
ನಂ. ೫೦, ಪ್ರಿನ್ಸೆಸ್‌ಸ್ಟ್ರೀಟ, ಮುಂಬಯಿ.

अलेंबिक केमिकल वर्क्स कं० लि०
नं. ५० प्रिन्सेस स्ट्रीट मुंबई:

ಶುದ್ಧ ಖದ್ದರ್ ರೇಶ್ಮೆ ಮಡಿಗಳು.

ಸುಲಭ ಕ್ರಯಕ್ಕೆ ಖಾತ್ರಿಯಾದ ಎಲ್ಲಾ ರಂಗುಗಳಲ್ಲಿಯೂ ಈ ಕೆಳಗೆ ಬರದ ಕ್ರಯಕ್ಕೆ ದೊರೆಯುವದು.

೧೮ ಮೊಳ	ಉದ್ದ	೨॥	ಅಗಲ	ರೂ.	೨೬	ರಿಂದ	೨೫	ವರೆಗೆ
೧೬	,,	,,	೨॥	,,	,,	೨೦ — ೩೦		,,
೮	,,	,,	೨॥	,,	,,	೯ — ೧೫		,,
೬	,,	,,	೨॥	,,	,,	೭ — ೧೧		,,



S.U.N.&Co.
BENARES CITY.

ಅಂಗಿ ಬಟ್ಟೆಗಳು ೧೮ ಮೊಳ X ೨ ಮೊಳ ರೂಪಾಯಿ ೧೮ ರಿಂದ ೩೦ವರೆಗೆ. ಪೇಟ ೧೨ ಮೊಳ X ೧॥ ಮೊಳ ಅಗಲ ರೂಪಾಯಿ ೧೦ರಿಂದ ೧೫ವರೆಗೆ. ಜೀನ್‌ಹಾವ್ ೧೪ ಮೊಳ X ೨ ಮೊಳ ರೂ. ೨೪ ರಿಂದ ೩೫ ವರೆಗೆ. ಇವುಗಳಲ್ಲದೆ ಶಾಲ ಪೀತಾಂಬರ, ಕಾಶ್ಮೀರ್ ಶಾಲು, ರುದ್ರಾಕ್ಷಿ, ಜಾಗಂಟೆ, ತಾಳ, ಕಸ್ತೂರಿ ದಾನಿ, ಆಟದ ಸಾಮಾನುಗಳು, ದೇವರ ಮತ್ತು ಗಾಂಧಿ ಮುಂತಾದವರ ಪಟಗಳುಳ್ಳ ಉಂಗುರಗಳ ಮತ್ತು ಇನ್ನೂ ಅನೇಕ ಸಾಮಾನುಗಳ ಕ್ಯಾಟಲಾಗ್ ಇನಾಂ.

ವಿಳಾಸ:— ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ!

ಕಾಮಿನಿಯಾ ತೈಲ. (ರಿಜಿಸ್ಟರ್ಡ)

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ.

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಕೂಡಲು ತೊಡಗಿದ ಬಳಿಕ ಎಂದಿಗೂ ಹಗುರ ಬಿದ್ದು ಹೋಗುವದಿಲ್ಲ, ಅವರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆಯುವದು ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಅನೇಕ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ —ಸೀಸೆಗೆ ರೂಪಾಯಿ 1-0-0,. ಸೀಸೆ 3ಕ್ಕೆ. ರೂಪಾಯಿ 2-10-0, ವಿ.ಪಿ. ಖರ್ಚು 0-14-0.

ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್!! (ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಪರಮ ಮಧುರ ಕೋಮಲ ಚಿರಸ್ಥಾಯಿ ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ಲೇ ಇದೆ ನಾಮದು ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈ ಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರ್ ಇದರ ಸುಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸ 1 ಕ್ಕೆ 0-8-0 1 ಡ್ರಾಮಿನ (ಮಿಡಿಯಂ) ಸೀಸ 1 ಕ್ಕೆ 0-12-0, ¼ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ಖರ್ಚು ಬೇರೆ 0-4-0.

ಒಟ್ಟೋ ದಿಲ್ ಬಹಾರ್. ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12-0.

Address - **The Anglo Indian Drug & Chemical Co,**
16, Market, **BOMBAY. 2.**

ಸೀರೀಮ್ನಾಲು! ತಾಜಾ ಕಲ್ಮ!! ತ್ವರೆ ಗ್ನಯಿರಿ!!!

ಒಮ್ಮೆಗೆಲಾದರೂ ಅನುಭವ ತಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳೆಸಿ, ಪುರುಷರಿಗೆ ಸ್ತ್ರೀ ವಿಷಯವಾಗಿಯೂ ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷಯುಕ್ತ ಶಕ್ತಿಯನ್ನು ಉಂಟುಮಾಡಿ, ದಿನೇ ದಿನೇ ಶರೀರದ ಜರಠನವನ್ನು ರೋಗಗಳನ್ನು ದೂರಪಡಿಸಿ ಆಯುರಾರೋಗ್ಯವನ್ನು ರತಿಯಲ್ಲಿ ಪ್ರಬಲವಾದ ಕುತೂಹಲವನ್ನು ತೋರಿಸುವ ಕ್ರೀಡಾ ಶಕ್ತಿಯ ಉತ್ಸಾಹವನ್ನು, ಸಂಭೋಗದಲ್ಲಿ ತೃಪ್ತಿಯನ್ನು, ಸೌಖ್ಯವನ್ನು ಕೊಟ್ಟು ಮನಸ್ಸಿನ ಧೃಡತೆಯನ್ನು ಯೌವ್ವನದ ಕಳೆಯನ್ನು ದೊರಕಿಸಿ ಮುದಿತನವನ್ನುನೀಗಿ ಬಲವನ್ನು ಉಂಟುಮಾಡುವದು ಮೃತ್ಯುವನ್ನು ನಿರಾಕರಿಸಿ, ಬಗೆಬಗೆಯ ರೋಗಗಳನ್ನು ನಾಶಮಾಡುವದು ಜೀರ್ಣಜ್ವರ, ಮಂದಾಗ್ನಿ, ಶುಕ್ಲಸ್ರಾವ, ಧಮುಕಂಪ ಇವುಗಳನ್ನು ಬಿಡದೇ ನಾಶಮಾಡುವದು ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿದೆಯೂ, ದೇಶಕಾಲಗಳಿಂದಲೂ, ಅತ್ಯಾಚಾರಗಳಿಂದಲೂ, ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡಿಸುವ ಬಲಾತ್ಕಾರದ ಹಸ್ತಘರ್ಷಣದಿಂದಲೂ, ಅತಿವಿಷಯೋಪಭೋಗದಿಂದಲೂ, ಇಂದ್ರಿಯ ಶಿಥಿಲವೂ, ತೆಳುವೂ, ನಿಸ್ತೇಜವೂ ಆಗಿ ಯತ್ನವಿಲ್ಲದೆ ಸ್ಖಲನವಾಗುವದು ಒಂದೊಂದು ಸಾರಿ ಮೂತ್ರದಲ್ಲಿಯೂ ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತೆ, ಆಶಕ್ತಿ, ಅರುಚಿ, ದೃಷ್ಟಿಮಾಂದ್ಯ ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಕ್ಷೋಭಿಸುವು, ನಿದ್ರೆಯಲ್ಲಿ ಭೀಕರವಾದ ಸ್ವಪ್ನ, ಆದಿವು, ಮರುವು ಮತ್ತು ಶರೀರದ ಹಾಗೂ ಮನಸ್ಸಿನ ಚೇತನ ಕುಂದಿ ಹೋಗುವದು, ಇವೆಲ್ಲವುಗಳಮೇಲೆ ರಾಮಬಾಣದಂತಿರುವದು ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ ೧॥ ನಂ ೧. ನಂ ೨ ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಎರಡು ಗುಳಿಗೆಗಳುಳ್ಳ ಸೀಸೆಗಳಿಗೆ ರೂ. ೩. ಪೋಸ್ಟೇಜ ಬೇರೆ.

ಎಸ್. ಜಿ. ಭಂಡಾರಕರ್, ಆಯುರ್ವೇದಿಕ್ ಕೆಮಿಸ್ಟ,
ಕಾರವಾರ. (ಕೆನರಾ.)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು:



೧ ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೪೫, ೫೦, ೬೦
೨ „ ಕಾಲುಪೆಟ್ಟಿಗೆ ಕಿಂ. ೬೫, ೭೫, ೧೪೦, ೧೬೦.
೩ ತಬಲೆ ಜೋಡಿಗೆ ಕಿಂ. ೧೨, ೧೫, ೧೮ ೨೦.
೪ [illegible] ನಿಯಮ ಗ್ಯಾಡ ಕಿಂ ೧।, ತಬಲೆ ಗಾಡ ಕಿಂ ೧। [illegible]

ವಿಶೇಷ ಮಾಹಿತಿ ಬಗ್ಗೆ ನಮ್ಮ ಕ್ಯಾಟಲಾಗ ಪುಕ್ಕಟೆ ಕೊಡುವೆವು

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು

ಪತ್ತೆ :- ಗೋಪಾಳ ಸಖಾರಾಮ ಮಸ್ತಿ ಕಂಪನಿ, ನಂ ೩೬೨
ಕಾಳಬಾದೇವಿ ರೋಡ, ಮುಂಬಯಿ

ಶ್ರೀ। ಮಧ್ವರಾವ ಕಮಲಾಪೂರ.

ಧಾರವಾಡ ಗೋಳಿಬಾರ ಪ್ರಕರಣದಲ್ಲಿ ಶಿಕ್ಷೆಯನ್ನನುಭವಿಸಿ, ಮರಳಿ ಬಂದ ಶ್ರೀ। ಕಮಲಾಪೂರರ ಮೇಲೆ ಕ್ರಿಮಿನಲ ಪ್ರೊಸೀಜರ ಕೋಡ ೧೦೮ನೇ ಕಲಮಿನನ್ವಯ ಜಾಮೀನಕಿ ನೋಟೀಸು ಜಾರಿಯಾಯಿತು. ನೋಟೀಸಿನ ವಿಚಾರಣೆಯು ಮಿ। ಪಂಡಿತರವರ ಕೋರ್ಟಿನಲ್ಲಿ ತಾ. ೨೮ನೇ ಜೂನ ಮಂಗಳವಾರಕ್ಕೆ ಮುಂಜಾನೆ ೯। ಘಂಟೆಗೆ ಪ್ರಾರಂಭವಾಯಿತು. ಮಿ। ಅಣ್ಣಾಚಾರ್ಯ ಕಟ್ಟಿಯವರು ಸರಕಾರಿ ವಕೀಲಿಯನ್ನು ನಡಿಸಿದರು. ಡಾ। ಸಿಲ್ವಾ ಮೊದಲಾದ ೩-೪ ಮಂದಿಗಳ ಸಾಕ್ಷಿಗಳಾದವು. ಶ್ರೀ। ಮಧ್ವರಾಯರು ಕ್ರಾಸ ಸವಾಲು ಮಾಡಲಿಲ್ಲ. ೧೦ ಘಂಟೆಯೊಳಗೆ ವಿಚಾರಣೆಯು ಮುಗಿಯಿತು. ಜವಾಬು ಕೊಡಲಿಕ್ಕೆ ಮಧ್ವರಾಯರು ೮ ದಿವಸಗಳ ಅವಧಿ ಬೇಡಿದರು. ಆದರೆ, ಮಿ। ಪಂಡಿತರವರು ೩ ದಿವಸಗಳ ಅವಧಿ ಕೊಟ್ಟರು ಗುರುವಾರ ತಾ ೩೦ ನೆಗೆ ಶ್ರೀ। ಮಧ್ವರಾಯರು ಈ ಕೆಳಗಿನಂತೆ ಜವಾಬು ಸಾದರ ಪಡಿಸಿದರು

ಶ್ರೀ। ಮಧ್ವರಾಯರ ಜವಾಬು

೧೯೨೧ನೇ ಎಪ್ರಿಲ ತಿಂಗಳ ೨೨ನೇ ತಾರೀಖಿನ ದಿವಸ ಧಾರವಾಡದ ಡಿಸ್ಟ್ರಿಕ್ಟ ಕಾಂಗ್ರೆಸ ಕಮಿಟಿಯವರು. ಟಿಳಕ ಸ್ವರಾಜ್ಯ ಫಂಡನ್ನು ಕೂಡಿಸುವದಕ್ಕಾಗಿ ನನ್ನನ್ನು ಕಲಘಟಗಿ ತಾಲೂಕಿಗೆ ಕಳಿಸಿದರು ನಾನು ೨೫ನೇ ತಾರೀಖಿನ ದಿವಸ ಕಲಘಟಗಿ ಗ್ರಾಮಕ್ಕೆ ಹೋದೆನು ಅಲ್ಲಿಯ ಕೆಲವು ಜನಪ್ರಿಯರ ಕೂಡ ಆದಿನ ಸಾಯಂಕಾಲದಲ್ಲಿ ಫಂಡು ಕೂಡಿಸುವದಕ್ಕಾಗಿ ಮನೆ ಮನೆಗೆ ಹೋದೆವು. ಬಳಿಕ ಹಣಮಂತ ದೇವರ ಗುಡಿಯಲ್ಲಿ ಸಾಯಂಕಾಲದಲ್ಲಿ ಲಾವಣೀ ಹೇಳುವೆನೆಂದು ಊರೊಳಗೆ ಸುದ್ದೀ ಕಳಿಸಿದೆನ ಲೆಕ್ಚರವೆನ್ನುವಂಥ ಭಾಷಣವಾಗಲೇ ಇಲ್ಲ. ಗುಡಿಯಲ್ಲಿ ಬಹಳವೆಂದರೆ ೨೦-೨೫ ಜನರು ಕೂಡಿದ್ದರು ಆ ಊರಲ್ಲಿ ಎಲ್ಲ ಗಂಡಸರ ಸಂಖ್ಯೆಯು ನೂರಾಗುವದೇನೆಂದು ಸಂಶಯವಿರುತ್ತದೆ ಪೋಲೀಸ ಜಮಾದಾರ ಅಥವಾ ಪೋಲೀಸ ಶಿಪಾಯಿಯು ಇದ್ದಿಲ್ಲ ಪೋಲೀಸ ಪಾಟೀಲನು ಇದ್ದನು. ಈತನಾದರೂ ಪ್ರಾರಂಭದಿಂದ ಇದ್ದಿಲ್ಲ ನಡುವೆ ಬಂದನು ನನ್ನ ಶಬ್ದಗಳನ್ನು ಬರಕೊಳ್ಳುವದಕ್ಕಾಗಿ ಈತನು ಪೆನಸಿಲ ಅಥವಾ ಕಾಗದ ತಂದಿದ್ದಿಲ್ಲ. ಪಾಟೀಲನೂ, ಸಾಕ್ಷಿದಾರರೂ ತಮ್ಮ ಜವಾಬಿನಲ್ಲಿ ಹೇಳಿದ ಕೆಲವು ಸಂಗತಿಗಳು ಪೂರಾ ಸುಳ್ಳಿರುತ್ತವೆ.

ಪರದೇಶದ ಬಣ್ಣಗಳಲ್ಲಿ ಆಕಳ ಮತ್ತು ಹಂದಿಯ ರಕ್ತ ಕೂಡಿರುತ್ತದೆಂದು ಹೇಳಿದೆನೆಂಬ ಮಾತನ್ನು ನಾನು ಒಪ್ಪುತ್ತೇನೆ ಈ ಸಂಗತಿಯನ್ನು ವಿವರಿಸಿದ ಒಂದು ಹಸ್ತಪತ್ರಿಕೆಯು ಸೊಲ್ಲಾಪುರದ ಅರಗೋಡರು ಛಾಪಖಾನೆಯಲ್ಲಿ ಹಿಂದೀ ಭಾಷೆಯಲ್ಲಿ ಮುದ್ರಿತವಾಗಿದೆ. ಕೋರಬಾಲ ಮತ್ತು ಹ್ಯೂಮ ಕಂಪನಿಯವರು ಪ್ರಸಿದ್ಧ ಮಾಡಿದ ಪುಸ್ತಕದಲ್ಲಿ ಪಕ್ಕಾ ಬಣ್ಣದಲ್ಲಿ ನೂರಕ್ಕೆ ೩೦ ರಂತೆ ಆಕಳ ಮತ್ತು ಹಂದಿಯ ರಕ್ತ ಕೂಡುತ್ತದೆಂದು ಬರೆದಿರುತ್ತದೆ.

ಪಂಜಾಬದ ಬಗ್ಗೆ ನಾನೊಂದೂ ಸುಳ್ಳು ಹೇಳಿಲ್ಲ. ಹೇಳಿದ್ದಕ್ಕೆಲ್ಲ ಆಧಾರವುಂಟು. ಡಾಯರಶಾಹಿಯ ಗೋಲಿ ಮತ್ತು ಲಷ್ಕರೀ ಕಾಯದೆಯ ವಿಷಯವಾಗಿ ಮಾತಾಡಿದ್ದೇನೆ. ಹಂಟರ ಕಮಿಟಿ ಮತ್ತು ಕಾಂಗ್ರೆಸದ ರಿಪೋರ್ಟುಗಳೇ ನನಗೆ ಆಧಾರ. ಹಂಟರ ಕಮಿಟಿಯ ಪುಟ ೧೮೩-೧೮೪ರಲ್ಲಿ ನೋಡಬಹುದು ಮೌಲವಿ ಗುಲಾಮ ಜಿಲಾನಿಯಾ ಇವರ ಜವಾಬು ಓದಿರಿ.

ನಾನು ಅಸಹಕಾರದ ವ್ರತವನ್ನು ಧಾರಣಮಾಡಿದನಂತರ ಖಾಸಗಿ ಅಥವಾ ಸಾರ್ವಜನಿಕವಾಗಿ ಕೆಂಪು ಮೋರೆಯ ಪರಕೀಯರು ಹಿಂದುಸ್ಥಾನ ಬಿಟ್ಟು ಹೋದರೆ ನಷ್ಟಗಾಗುವದೆಂದು ಎಂದೂ ಮಾತಾಡಿಲ್ಲ. ನಾನು ಪ್ರಸಂಗಾನುಸಾರವಾಗಿ ಇವರ ಗುಣ, ಅಕಳಂಕ್ಯವಾದ ದೇಶಾಭಿಮಾನ ಮತ್ತು ಅಚಲವಾದ ಧೈರ್ಯದ ಸ್ತುತಿ ಮಾಡಿದ್ದೇನೆ. ಇಂಗ್ಲಿಷರು ಹಿಂದುಸ್ಥಾನದಲ್ಲಿರಬೇಕೆಂದು ನಾನು ಅಪೇಕ್ಷಿಸುತ್ತೇನೆ. (ಈಗಿನಂತೆ ಯಜಮಾನರಾಗದೆ,) ನಮ್ಮ ಸೇವಕರೂ, ಸ್ನೇಹಿತರೂ ಆಗಿರತಕ್ಕದ್ದು. ಇಂಗ್ಲಿಷರನ್ನು ಹಿಂದುಸ್ಥಾನದಿಂದ ಹೊರಗೆ ಹಾಕಿರೆಂದು ಹೇಳುವ ಹೊತ್ತು ಬಂದರೆ ನಾನು ಎಲ್ಲಕ್ಕೂ ಕಡೆಯ ಮನುಷ್ಯನಾಗುವೆನು (ಹೇಳತಕ್ಕವನಲ್ಲ)

ಉಪ್ಪಿನ ಕರವು ಅನ್ಯಾಯದ್ದಾಗಿರುತ್ತದೆಂದು ಇಂದು ಸಹ ತುಂಬಿದ ಕೋರ್ಟಿನಲ್ಲಿ ನಾನು ಹೇಳುತ್ತೇನೆ ಸರಕಾರ ಪಕ್ಷದ ವರ್ತಮಾನ ಪತ್ರಗಳು ಸಹ ಈ ಕರವು ಅಯೋಗ್ಯವಾದದ್ದೆಂದು ಅಭಿಪ್ರಾಯ ಪಟ್ಟಿರುತ್ತವೆ ಈ ಬಗ್ಗೆ ಪಾರ್ಲಿಮೆಂಟ ಸಭೆಯಲ್ಲಿ ಸಹ ವಾದವಿವಾದವಾಗಿದೆ ಅನ್ಯಾಯವಾಗಿ ಈ ಕರವನ್ನು ಹೆಚ್ಚಿಸಿದ್ದಾರೆಂದು ಇಂದಿಗೂ ಹಿಂದುಸ್ಥಾನ ಸರಕಾರಕ್ಕೆ ಜನರು ಸವಾಲು ಹಾಕುತ್ತಿದ್ದಾರೆ.

ನಾನು ಜನರಿಗೆ ಹುಲಬನ್ನಿಯನ್ನು ಕೊಡಬೇಡಿರೆಂದು ಹೇಳಲೇ ಇಲ್ಲ ಈ ಫೀಯು ಹಳ್ಳಿಗಳಲ್ಲಿ ದನಗಳ ಸಂಗೋಪನಕ್ಕೆ ಹಾನಿಕರವಾಗಿರುವದರಿಂದ ಇದನ್ನು ತೆಗೆದು ಹಾಕುವದಕ್ಕೆ ಸರಕಾರಕ್ಕೆ ಅರ್ಜಿಯನ್ನು ಮಾಡಿರೆಂದು ಹೇಳಿದ್ದೇನೆ ಧಾರವಾಡದ ಗೋಳಿಬಾರಿನ ವಿಷಯವಾಗಿ ನಾನೊಂದು ಅಕ್ಷರ ಸಹ ಹೇಳಲಿಲ್ಲ ಯಾಕಂದರೆ ಇದು ಪುನಃ ಪುನಃ ಹೇಳಕೂಡದಷ್ಟು ಪ್ರಸಿದ್ಧಿಯನ್ನು ಪಡೆದಿದೆ

ಸೃಷ್ಟಿಯ ಉದರದಲ್ಲಿ ಅಗಾಧವಾದ ಶಕ್ತಿಗಳಿದ್ದು, ಈ ಶಕ್ತಿಗಳು ನನಗೆ ಜಾಮೀನು ಕೊಡಬೇಡೆಂದು ಹೇಳುತ್ತವೆ ಕೂಸು ಹಾಲು ಕುಡಿಯುವಕ್ಕಾಗಿ ತಾಯಿಯನ್ನು ಅಪ್ಪಿಕೊಳ್ಳುವಂತೆ ಸತ್ಯ ಮತ್ತು ದೇಶಕಾರ್ಯಕ್ಕಾಗಿ ತುರಂಗವಾಸವನ್ನು ಅಂಗೀಕರಿಸುವಂತೆ ಈ ಶಕ್ತಿಗಳು ನನ್ನನ್ನು ಪ್ರೇರೇಪಿಸುತ್ತಿರುವವು ನಾಲಿಗೆಯು ದೇವರು ಕೊಟ್ಟಂಥ ದೇಣಗಿಯು ಸರಕಾರಕ್ಕೆ ಇದರ ಮೇಲೆ ಅಧಿಕಾರ ನಡಿಸುವ ಶಕ್ತಿ ಇರುವದಿಲ್ಲ. ಪ್ರತಿಯೊಬ್ಬನಿಗೆ ವಿಚಾರಸ್ವಾತಂತ್ರ್ಯವುಂಟು. ಈ ವಿಚಾರಕ್ಕನುಸರಿಸಿ ಆತನಿಗೆ ತನ್ನ ಅಭಿಪ್ರಾಯವನ್ನು ಹೇಳುವ ಹಕ್ಕು ಇರುತ್ತದೆ.

— ವಂದೇ ಮಾತರಂ —

ಮಧ್ವರಾಯರ ಜವಾಬು ಆದ ಮೇಲೆ ನ್ಯಾಯಮೂರ್ತಿ ಪಂಡಿತರು ತಮ್ಮ ತೀರ್ಪು ಹೇಳಿದರು. ಮಧ್ವರಾಯರ ವರ್ತನವು ಜಾಮೀನಾರ್ಹವೆಂದು ಅಭಿಪ್ರಾಯಪಟ್ಟು, ಆರೋಪಿಗಳು ಜಾಮೀನು ಯಾ ಒಂದು ವರ್ಷದ ವರೆಗೆ ಕಠಿಣ ಶಿಕ್ಷೆಯನ್ನನುಭವಿಸಬೇಕೆಂದು ಠರಾಯಿಸಿದರು. ಮಧ್ವರಾಯರು ಅಸಹಯೋಗದ ತತ್ವಕ್ಕನುಸರಿಸಿ, ಶಿಕ್ಷೆಯನ್ನೇ ಸಂತೋಷದಿಂದ ಅಂಗೀಕರಿಸಿದರು. ತೀರ್ಪಿನ ಸುಳಿವು ಜನರಿಗೆ ಮೊದಲೇ ಹತ್ತಿದ್ದರಿಂದ, ಧಾರವಾಡಕ್ಕರು ದೊಡ್ಡ ಜಾಹೀರ ಸಭೆ ಸೇರಿಸಿ, ಶ್ರೀ। ಮಧ್ವರಾಯರಿಗೆ ಪೂರ್ವ ರಾತ್ರಿಯಲ್ಲಿಯೇ ಅಭಿನಂದನ ಮಾಡಿ, ತಮ್ಮ ಪ್ರಶಂಸೆಯನ್ನೂ, ಆದರವನ್ನೂ ವ್ಯಕ್ತಗೊಳಿಸಿದ್ದರು. ಶ್ರೀ। ಮಧ್ವರಾಯರನ್ನು ಈಗ ವಿಜಾಪುರ ತುರಂಗದಲ್ಲಿ ಇಟ್ಟಿರುವರು.

ಚಮತ್ಕಾರಿಕ ಶೋಧ.

ಗೌರ ಕಾಯದವರ ಪೀಡನೆಯಿಂದ ಮುಕ್ತರಾಗಲಿಚ್ಛಿಸುವ ಕೃಷ್ಣ ಕಾಯದವರು ಆತ್ಮೋದ್ಧಾರಕ್ಕಾಗಿ ಬಲು ಹೆಣಗಾಡುತ್ತಿರುವರು. ಅವರಿಗೆ ಗೌರವರ್ಣದವರಾಗಬೇಕೆಂದು ಬಯಕೆ ಇವರಿಗಾಗಿ ಬ್ರೆಝಿಲದೊಳಗಿನ ಶೋಧಕರೊಬ್ಬರು ಒಂದು ಹಂಚಿಕೆಯನ್ನು ಹುಡುಕಿರುವರು. ಒಂದು ಪ್ರಕಾರದ ಪಕ್ಕಾ ಶುಭ್ರ ವರ್ಣವು ತಯಾರಿಸಲ್ಪಟ್ಟಿದೆ ಅದರ ಪ್ರಯೋಗದಿಂದ ಅಚ್ಚ ಕಪ್ಪು ನಿಗ್ರೋ ಬಾಂಧವನು ಸಹ ಬೆಳ್ಳಿಯಂತೆ ಶುಭ್ರವರ್ಣದಿಂದ ಹೊಳೆಯುವನು. ವರ್ಣಾಂತರ ಮಾಡುವ ಪ್ರಯೋಗವು ಮೊಟ್ಟಮೊದಲು ಇಲಿಗಳ ಮೇಲೆ ಮಾಡಲ್ಪಟ್ಟಿತು. ಇಲಿಯು ಶುಭ್ರ ಬೆಳ್ಳಿಯಂತೆ ಹೊಳಪಿನಿಂದ ಶೋಭಿಸಿತು. ಈಗ ಈ ಪ್ರಯೋಗವನ್ನು ಗೌರಕಾಯೇಚ್ಛು ಮಾನವರ ಮೇಲೆ ಮಾಡತೊಡಗಿರುವರು ಕಾಲೊಳಗಿಂದ ಅಥವಾ ಕೈಯೊಳಗಿಂದ ರಕ್ತವನ್ನು ರಬ್ಬರಿನ ನಳಿಗೆಯಲ್ಲಿ ಹೀರಿಕೊಂಡು, ಅದರಲ್ಲಿ ಒಂದು ಪ್ರಕಾರದ ರಸಿಗೆಯನ್ನು ಮಿಶ್ರಣ ಮಾಡಿ, ಅದನ್ನು ಮತ್ತೊಂದು ಕಾಲಿನಲ್ಲಿ ಅಥವಾ ಕೈಯಲ್ಲಿ ಬಿಡುತ್ತಾರೆ. ಈ ಪ್ರಯೋಗವು ಪೂರ್ಣವಾದ ಕೂಡಲೆ, ಪೌರ್ಣಿಮೆಯ ಚಂದ್ರನ ಕಲಾವೃದ್ಧಿ ಹೊಂದುವಂತೆ ದಿನೇ ದಿನೇ ಮಾನವನ ಕಾಂತಿಯು ಶುಭ್ರ ಹೊಂದುತ್ತ, ಹೊಂದುತ್ತ ತಿಂಗಳಾವಧಿಯಲ್ಲಿ ಅವನು ಅಚ್ಚ ಗೌರಕಾಯದವನಾಗುತ್ತಾನೆ ಅಷ್ಟು ಕ್ರಾಂತಿಕಾರಕ ಪ್ರಯೋಗವಿದು. ರಕ್ತದೊಳಗಿಂದ ಕೃಷ್ಣ ವರ್ಣಾತ್ಮಕ ಬೀಜಗಳನ್ನು ತೆಗೆದು, ಗೌರವರ್ಣಾತ್ಮಕ ಬೀಜಗಳನ್ನು ಅದು ಮಾಡಿದ್ದರಿಂದ, ಇಷ್ಟು ಸಂತೋಷಪ್ರದ ಸ್ಥಿತ್ಯಂತರವಾಗುತ್ತದೆಂದು ಹೇಳುತಾರೆ. ಈ ಪ್ರಯೋಗವು ಚಾಲು ಆದರೆ, ಅಖಿಲ ಜಗತ್ತಿನಲ್ಲೆಲ್ಲ ಗೌರಕಾಯದವರೇ ಪ್ರಾದುರ್ಭೂತರಾಗಿ, ಕೃಷ್ಣವರ್ಣವು ಅಪರೂಪವಾಗುವದು ಗೌರಕಾಯದವರು ತಮ್ಮ ಪೆಕ್ಕಿನ ಬಿಡಾರವನ್ನು ಪ್ರದರ್ಶಿಸಲು ಇನ್ನೊಂದು ಅಭಿದಾನವನ್ನು ತಳೆಯಬೇಕಾಗುವದು

***

ಇನ್ನೊಂದು ಶೋಧ. ಹೊಸದೊಂದು ಗಡಿಯಾರವು ನಿರ್ಮಾಣವಾಗಿದೆ. ಈ ಗಡಿಯಾರಕ್ಕೆ ಕೀಲಿ ಕೊಡುವ ಆವಶ್ಯಕತೆ ಇಲ್ಲ. ೧೦೦೦ ವರುಷಗಳ ವರೆಗೆ ಈ ಗಡಿಯಾರವು ಕೀಲಿಯ ಅವಶ್ಯಕತೆ ಇಲ್ಲದೆ, ನಡೆಯುವದು. ರೇಡಿಯಮ್ ಧಾತುವಿನಿಂದ ಈ ಗಡಿಯಾರವು ತಯಾರಿಸಲ್ಪಟ್ಟಿದ್ದರಿಂದ, ನೂರಾರು ವರ್ಷಗಳಾದರೂ, ಅದಕ್ಕೆ ಸವೆಯದೆ ನಡೆಯುವ ಸಾಮರ್ಥ್ಯವು ಪ್ರಾಪ್ತವಾಗಿರುವದಂತೆ. ಮಾನವನ ಆಯುಷ್ಯವು, ಪರಮಾವಧಿಯೆಂದರೆ ೧೦೦ ವರುಷ. ಅವನು ಮಾಡಿದ ಕೃತಿಯ ಆಯುಷ್ಯವು ೧೦೦೦ ವರುಷ. ನಾರಾಯಣನಿಗಿಂತ ನರನೇ ಶ್ರೇಷ್ಠನಲ್ಲವೇ?

‘ಹಿಂದೀಪಾರ್ಲಿಮೆಂಟು.’

ಕೆಲ ವಿಚಾರಗಳು.

ಮೊಂಟೆಗ್ಯೂ ಸ್ವರಾಜ್ಯದಿಂದ ಸ್ಥಾಪನೆಯಾದ ವರಿಷ್ಠ ಕಾಯಿದೆ ಕೌನ್ಸಿಲು ಹಾಗು ಕೌನ್ಸಿಲ್ ಆಫ್ ಸ್ಟೇಟ ಈ ಎರಡು ಸಂಸ್ಥೆಗಳನ್ನು ಮೊಂಟೆಗ್ಯೂ ಭಕ್ತರು ವಿಲಾಯತಿಯೊಳಗಿನ ಪಾರ್ಲಿಮೆಂಟಿನ ಅಂಗಗಳಾದ ಹೌಸ ಆಫ್ ಕಾಮನ್ಸ ಹಾಗು ಹೌಸ ಆಫ್ ಲಾರ್ಡ್ಸ ಈ ಸಂಸ್ಥೆಗಳಿಗೆ ಸರಿಹೋಲಿಸಿ, ಹಿಂದುಸ್ಥಾನದಲ್ಲಿನ ಬ್ರಿಟಿಶರು ಪಾರ್ಲಿಮೆಂಟನ್ನು ಸ್ಥಾಪಿಸಿ ಉಪಕರಿಸಿರುವರೆಂಬ ಬಡಿವಾರ ಹೊಡೆಯುತ್ತಾರೆ. ಪಾರ್ಲಿಮೆಂಟಿನ ಕಾರ್ಯಸಿದ್ಧಿಯನ್ನು ಪ್ರಜೆಗಳು ಆಗಾಗ್ಗೆ ಅರಿತಿದ್ದವರು. ಆದರೂ ಹೊಸ ಚುನಾವಣೆಯು ಸಮೀಪಿಸಿ ಬಂದದರಿಂದ, ಹಿಂದೀ ಪಾರ್ಲಿಮೆಂಟಿನ ಸ್ವರೂಪವನ್ನು ದಿಗ್ದರ್ಶನ ಮಾಡಬೇಕಾಗಿದೆ.

ಇದೆಂಥ ಪಾರ್ಲಿಮೆಂಟು ನೋಡಿರಿ. ಸಭಾಸದರು ಪ್ರಶ್ನೆಗಳನ್ನು ಕೇಳಿದರೆ, ಸಾರ್ವಜನಿಕ ಮಹತ್ವದ ಸಂಬಂಧ ಮೇಲೆ ಅವಕ್ಕೆ ಉತ್ತರಕೊಡಲಾಗವದಿಲ್ಲ. ನ ಮಹತ್ವದ ಪ್ರಶ್ನೆಗಳಿಗೆ ಉತ್ತರ ಕೊಡದಿರುವದೊಂದು ಹಿಂದೀ ಪಾರ್ಲಿಮೆಂಟಿನ ಲಕ್ಷಣ. ಬಿನ್ ಸರಕಾರಿ ಸಭಾಸದರ ಮಹತ್ವದ ಠರಾವುಗಳು ಪಾಸಾಗುವದೊಂದು ಅಪೂರ್ವಯೋಗ. ಸಹಕಾರಿಗಳು ಸ್ವೈರ್ಯವಾದಿ, ಒಮ್ಮನಸ್ಸಿನಿಂದ ಒಂದು ಠರಾವನ್ನು ಕೌನ್ಸಿಲಿನಲ್ಲಿ ಪಾಸು ಮಾಡಿದರೂ, ಅದು ಅಮಲಿನಲ್ಲಿ ಬಂದು, ಅವುಗಳ ಧೋರಣದಂತೆ ಆಲೋಚಿತವಾಗುವದು ಅಸಂಭವವೇ. ವಿಲಾಯತಿಯಲ್ಲಿಯ ಪಾರ್ಲಿಮೆಂಟಿನಲ್ಲಿ ವಿರೋಧಿಪಕ್ಷದವರು ತಂದ ನಿಂದಾತ್ಮದರ್ಶಕ ಠರಾವು ಪಾಸಾದ ಕೂಡಲೆ, ಮಂತ್ರಿಮಂಡಳವು ರಾಜೀನಾಮೆಯನ್ನಿತ್ತು, ರಾಜ್ಯಸೂತ್ರವನ್ನು ವಿರೋಧಕರಿಗೆ ಒಪ್ಪಿಸಲೇಬೇಕು. ಹಿಂದೀ ಪಾರ್ಲಿಮೆಂಟಿನಲ್ಲಿ ಮಂತ್ರಿಮಂಡಲಕ್ಕೆ ಒಮ್ಮೆ ಸೋಲು ಸಿಕ್ಕಿದರೂ, ಅವೇನು ಅಧಿಕಾರಚ್ಯುತವಾಗುವದಿಲ್ಲ, ವಿರೋಧಕರೂ ಅಧಿಕಾರಾರೂಢರಾಗುವದಿಲ್ಲ. ಬಾಯಿ ಬಡಕರಂತೆ ದನಿ ಬೀಳುವವರ ವಾತಾವರಣವೊಂದು ಅಧಿಕಾರವು ನಮ್ಮ ಪಾರ್ಲಿಮೆಂಟಿನ ಸಭಾಸದರಿಗಿದೆ. ವಿಲಾಯತಿಯೊಳಗಿನ ಹೌಸ ಆಫ್ ಕಾಮನ್ಸ ಸಭೆಯ ಸಭಾಪತಿಯು ಕಾಲಾಯಿಯನ್ನೂ, ನಿಲುವಂಗಿಯನ್ನೂ ಧರಿಸುತ್ತಾನೆ. ಹಿಂದೀ ಪಾರ್ಲಿಮೆಂಟಿನ ಅಧ್ಯಕ್ಷರೂ ಅವನ್ನೇ ತೊಟ್ಟುಕೊಳ್ಳುತ್ತಾರೆ. ಸಭಾಪತಿಯು ನಿಷ್ಪಕ್ಷಪಾತಿಯಾಗಿದ್ದರೆ, ನಮ್ಮ ಅಧ್ಯಕ್ಷರು ಸರಕಾರಿ ಪಕ್ಷವನ್ನು ಎತ್ತಿ ಹಿಡಿಯಲು ಯಾವಾಗಲೂ ತತ್ಪರರು. ಹೌಸ ಆಫ್ ಲಾರ್ಡ್ಸ ಸಭೆಯಲ್ಲಿ ವರಂಪರಾಗತ ಶ್ರೀಮಂತರಿದ್ದು, ಲೋಕಶಾಹಿಗೆ ಅಡ್ಡಗಟ್ಟುತ್ತಾರೆ. ಇಲ್ಲಿಯ ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ಅಂಥ ಪ್ರಕಾರವೇನಿಲ್ಲದಿದ್ದರೂ, ಲೋಕಶಾಹಿ ಚಳವಳಿಗೆ ಅಡ್ಡಗಟ್ಟುವ ಹವ್ಯಾಸವೇ ಹೆಚ್ಚು.

ಇನ್ನು ಕೆಲ ಸಂಗತಿಗಳನ್ನು ನಮೂದಿಸುವ. ವಿಲಾಯತಿಯಲ್ಲಿ ಇರುವಂತೆ ನಮ್ಮಲ್ಲಿಯ ಚುನಾವಣೆಯ ಕಾಯಿದೆಯನ್ನು ತಿದ್ದಿರಿ, ಲೋಕಶಾಹಿ ಚಳವಳಿಗಾಗಿ ಕಾದಾಡುವವರಿಗೆ ವ್ಯಥಾ ಕಾಡಬೇಡಿರಿ. ಎಂದು ಬೇಡಿದರೆ, ವಿಲಾಯತಿಯೊಳಗಿನ ಪರಿಸ್ಥಿತಿಯು ಬೇರೆ; ಹಿಂದುಸ್ಥಾನದೊಳಗಿನ ಪರಿಸ್ಥಿತಿಯು ಬೇರೆ ಎಂದು ನೆವ ಹೇಳಿ, ನೌಕರಶಾಹಿಯು ಸಭಾಸದರನ್ನು ಸುಮ್ಮಗೊಳಿಸುತ್ತದೆ. ಇತರ ದೇಶದೊಳಗಿನ ಹೋಲಿಕೆಯು ಭರತಖಂಡಕ್ಕೆ ಲಾಗು ಆಗುವದಿಲ್ಲೆಂತಲೂ ಹೇಳೋಣಾಗುತ್ತದೆ. ಉಗಿಬಂಡಿಗಳಿಂದ ಉತ್ಪನ್ನವಾದ ದೊಡ್ಡ ದೊಡ್ಡ ಮುನಾಫೆ ರಕಮುಗಳನ್ನು ಯುರೋಪಿಯನ್ ಕಂಪನಿಯವರಿಗೆ ಗಂಟು ಕಟ್ಟಿಕೊಳ್ಳಲು ಇಂಬುಗೊಡುವ ಬದಲು, ಹಿಂದುಸ್ಥಾನ ಸರಕಾರವು ಅವನ್ನು ವಹಿಸಿಕೊಂಡು ನಡಿಸಿರಿ ಎಂದು ನುಡಿದರೆ, ಏನು ಉತ್ತರ ಸಿಗುತ್ತದೆಂದು ಬಲ್ಲಿರಾ? ಎಲ್ಲ ದೇಶಗಳಲ್ಲಿ ಈ ಪ್ರಯೋಗ ಮಾಡಿ ನೋಡಾಯಿತು. ಅವು ಎಂದೂ ಕೊನೆಗಾಣಲಿಲ್ಲ. ಅದ್ದರಿಂದ, ಹಿಂದುಸ್ಥಾನದಲ್ಲಿಯೂ ಇದೇ ಹಾಡಾಗುವದು. ಈ ಯೋಜನೆಯು ಕೈಕೊಳ್ಳಲಾಗದು ಹಿಂದುಸ್ಥಾನದ ಸ್ಥಿತಿಯು, ಇತರ ದೇಶಗಳ ಸ್ಥಿತಿಯು ಭಿನ್ನಭಿನ್ನವಾಗಿರಲು, ಉಗಿಬಂಡಿಯ ಕಾರಭಾರವನ್ನು ಸರಕಾರವು ವಹಿಸಿಕೊಳ್ಳಲೇನಡ್ಡಿ? ಹಿಂದೀ ಸೈನ್ಯವನ್ನು ತಗ್ಗಿಸಿದರೆ, ಹಿಂದೀ ಪ್ರಜೆಗಳ ಗೋಳಾಗುವದೆಂತಲೂ ಮುಂತಾದ ಭಯಾನಕ ಕಥೆಯು ವಿವರಿಸಲ್ಪಡುತ್ತದೆ. ಹಿಂದೀ ಪ್ರಜೆಗಳಿಗೆ ಲಷ್ಕರಿ ಶಿಕ್ಷಣ ಕೊಡಿರಿ, ಅವರನ್ನು ಯುದ್ಧ ಹೂಡಲು ಸಿದ್ಧ ಮಾಡಿರಿ, ಎಂದು ಸಭಿಕರು ಅರುಹಿದರೆ, ನೌಕರಶಾಹಿಯು ಶಾಂತಿಪರ್ವದ ಕಥೆ ಹೇಳುತ್ತದೆ. ಕೇಳಿರಿ. ಜಗತ್ತಿನಲ್ಲಿ ಒಂದು ಪ್ರಕಾರದ ನೈತಿಕ ಬಲವು ಜನಿತವಾಗಿದೆ. ಲೀಗ ಆಫ್ ನೇಶನ್ಸ, ಯಾನೆ ರಾಷ್ಟ್ರಸಂಘದಿಂದ ಇಡೀ ಭೂಮಂಡಳದಲ್ಲಿ ವಿಲಕ್ಷಣ ಕ್ರಾಂತಿಯಾಗಿದೆ. ಯುದ್ಧ ಭೀತಿಯನ್ನು ಎಲ್ಲರೂ ತೊರೆಯುವ ಸುಪ್ರಸಂಗ ಬಂದಿದೆ. ಅಖಿಲ ರಾಷ್ಟ್ರಗಳು ಸೈನಿಕರಿಗೆ ಪದಚ್ಯುತಮಾಡಲು ತವಕಿಸುತ್ತಿರುವರು. ಇಂಥ ಶಾಂತಿಯುಗದಲ್ಲಿ ನಿಮಗೆ ಲಷ್ಕರಿ ಶಿಕ್ಷಣದ ಹವ್ಯಾಸವೇಕೆ? ಇಂಥ ಶುಭಸಮಯದಲ್ಲಿ ಲಷ್ಕರಿ ಶಿಕ್ಷಣದ ಮಾತು ತೆಗೆಯುವದು ಪಾಪಮಯವೆಂತಲೂ ಹೇಳೋಣಾಗುತ್ತದೆ. ನವಯುಗದಿಂದ ಹಿಂದುಸ್ಥಾನವು ಜವಾಬದಾರ ರಾಜ್ಯಪದ್ಧತಿಯ ಅನುಭವಗಳನ್ನು ಸಂಪಾದಿಸಿದೆ. ಕೊಟ್ಟ ಅಧಿಕಾರವು ಚಲೋ ರೀತಿಯಿಂದ ಉಪಯೋಗಿಸಲ್ಪಟ್ಟಿದೆ, ಮತ್ತೊಂದು ಹಪ್ತೆ ಸ್ವರಾಜ್ಯವನ್ನು ದಯಪಾಲಿಸಿರಿ, ಎಂದು ಭಾರತಮಂತ್ರಿಗಳಿಗೆ ಪ್ರಾರ್ಥಿಸಿದರೆ, ಪ್ರಸ್ತುತ ಯೋಜನೆಯು ಸಾಕಷ್ಟು ಅವಧಿಯ ವರೆಗೆ ಉಪಯೋಗಿಸಲ್ಪಡಲಿಲ್ಲ. ಇಷ್ಟು ಅಲ್ಪಾವಧಿಯ ಅನುಭವಗಳ ಮೇಲಿಂದ, ಮತ್ತೊಂದು ಹಪ್ತೆಗೆ ನೀವು ಯೋಗ್ಯರಾಗಿರುವಿರೆಂದು ನನಗೆ ತೋರುವದಿಲ್ಲೆಂದು ಸಭಿಕರ ಪ್ರಾರ್ಥನೆಯು ನಿರಾಕರಿಸಲ್ಪಡುತ್ತದೆ. ನೌಕರಶಾಹಿಯ ಆಧಾರಸ್ತಂಭಗಳಾದ ನೌಕರರ ಸ್ಥಿತಿಯನ್ನು ಪುನರಾಲೋಚಿಸಲಿಕ್ಕೆ ಪಬ್ಲಿಕ್ ಸರ್ವಿಸೆಸ್ ಕಮಿಶನ್ ನೇಮಿಸಬೇಕಾದರೆ, ಹೊಸ ಸ್ವರಾಜ್ಯದ ಕಾನೂನಿನ ಕಾರ್ಯದಿಂದ ಸಂಪಾದಿಸಿದ ಅನುಭವಗಳನ್ನು ಪ್ರಯೋಗಿಸುವ ಸಮಯವು ಪ್ರಾಪ್ತವಾಗಿದೆಂದು ತಕ್ಕ ಸೋಣಾಗುತ್ತದೆ. ಕಾಳುಕಡಿಗಳ ಧಾರಣೆಯು ಏರೇರಿದೆಂದು ಪ್ರಚಂಡ ಸಂಬಳ ತಿನ್ನುವ ಬಡೇ ನೌಕರರ ಪಗಾರವನ್ನು ಏರಿಸುತ್ತಾರೆ. ಉಪ್ಪಿನ ತೆರಿಗೆಯನ್ನು ಕಠಿಣ ಸಮಯದಲ್ಲಿ ಏರಿಸಿ, ಪ್ರಜೆಗಳನ್ನು ತೊಡಕಿನಲ್ಲಿ ಹಾಕಬೇಡಿರೆಂದು ಸಭಾಸದರು ಎಷ್ಟೆಷ್ಟು, ಉದ್ದುದ್ದ ಕಂಠಶೋಷ ಮಾಡಿದರೆ, ಉತ್ತರವೇನು ಕೇಳುವಿರಾ? ಕಾಳುಕಡಿಗಳ ಧಾರಣೆಯು ಇಳಿದದೆ. ಉಪ್ಪಿನ ತೆರಿಗೆಯನ್ನು ಇಮ್ಮಡಿಸಿದರೆ, ಅವರ ಸಂಸಾರಯಾತ್ರೆಯು ಕಷ್ಟಪ್ರದವಾಗದು. ನೌಕರಶಾಹಿಯ ವಾದ-ವಿವಾದದ ಚಮತ್ಕಾರ ನೋಡಿರಿ.

ಮತ್ತೊಂದು ಚಮತ್ಕಾರವಿದೆ. ನೌಕರಶಾಹಿಗೆ ಭಾರತೀಯ ಅಖಿಲ ರಾಜಕೀಯ ಉಚ್ಚ ಉಚ್ಚ ಆಕಾಂಕ್ಷೆಗಳು ಮಾನ್ಯವಿವೆ. ನಿಮಗೇನು ಬೇಕು? ಜವಾಬದಾರ ಸ್ವರಾಜ್ಯವೇ? ಹಿಂದೀ ನೌಕರಶಾಹಿಯ ಧ್ಯೇಯವೇ ಇದು. ಸೈನಿಕರೆಲ್ಲ ಹಿಂದಿಯರಿರಬೇಕೆಂಬ ನಿಮ್ಮ ಹವ್ಯಾಸರಲ್ಲವೇ? ಅದಕ್ಕೂ ನಮ್ಮ ಮಾನ್ಯತೆ. ನಾವೂ ಅದಕ್ಕೆ ಬಡದಾಡುತ್ತೇವೆ. ಆರ್ಥಿಕ ಸ್ವಾತಂತ್ರ್ಯವು ನಿಮಗೆ ಬೇಕಲ್ಲವೇ? ಅದನ್ನೇ ಪ್ರಸ್ಥಾಪಿಸಲು ನಾವು ಹೋರಾಡುತ್ತೇವೆ. ವರ್ಣಭೇದ ವಿರದೆ, ಅಖಿಲ ಭರತ ಖಂಡದಲ್ಲಿ ಯುರೋಪಿಯನ್, ಇಂಡಿಯನ್ ಎಂಬ ಭೇಧಭಾವವಿರಬಾರದೆಂದು ನಿಮ್ಮ ಅಪೇಕ್ಷೆಯಲ್ಲವೇ? ಅದು ನಮಗೆ ಇಷ್ಟವಾದ ಮಾತೇ ಸರಿ. ಹಿಂದುಸ್ಥಾನದಲ್ಲಿ ಎಲ್ಲರೂ ಸರಿಸರಾಗಿರಬೇಕೆಂದು ನಾವು ನಿತ್ಯವೂ ಬಯಸುತ್ತೇವೆ. ತತ್ವಗಳಲ್ಲಿ ನೌಕರಶಾಹಿಗೆ ಮುಂದಾಳುಗಳಂತೆ ಮಾನ್ಯ. ತತ್ವಗಳ ಮಾನ್ಯಾಮಾನ್ಯತೆಯಂತೆ ಭೇದವು ಎಳ್ಳಷ್ಟು ಇಲ್ಲ. ಮತಭೇದವಾಗುವದೆಲ್ಲ ಬಲ್ಲಿರೇನು? ತಪಶೀಲಿನಲ್ಲಿ. ಜವಾಬದಾರ ರಾಜ್ಯಪದ್ಧತಿಯನ್ನು ಸ್ಥಾಪಿಸುವ ಪೂರ್ವತಯಾರಿಯೆಂದು ಮೊಂಟೆಗ್ಯೂರವರು ಸ್ವರಾಜ್ಯ ಮಾಯೆಯ ಇಂದ್ರಜಾಲವನ್ನು ಪಸರಿಸಿರುವರು. ಸೈನ್ಯವನ್ನು ಹಿಂದೀಯದಾಗಿ ಮಾಡುವ ಪೂರ್ವಯೋಜನೆಯೆಂದು ೮ ಘಟಕಗಳನ್ನು ೩೦ ವರ್ಷಗಳಲ್ಲಿ ಪೂರ್ಣವಾಗಿ ಹಿಂದೀಯವನ್ನಾಗಿ ಮಾಡುವ ಯೋಜನೆ ನಡೆದದೆ. ಯೋಜನೆಯು ಸ್ವಾಭಿಮಾನಶೂನ್ಯವಾಗಿರುವದೆಂದು ಸ್ವಾಭಿಮಾನಿ ಹಿಂದೀಯರು ಇವುಗಳಲ್ಲಿ ಸೇರಲಿಚ್ಛಿಸುವದಿಲ್ಲ. ಆರ್ಥಿಕ ಸ್ವಾತಂತ್ರ್ಯ, ವರ್ಣಭೇಧ ನಿರ್ಮೂಲನಗಳ ಹಾಡೂ ಇದೇ.

ಹಿಂದೀ ಪಾರ್ಲಿಮೆಂಟಿನ ೩ ವರ್ಷಗಳ ಕಾರಭಾರದ ಸಮಾಲೋಚನೆಯಿಂದ ಉಂಟಾದ ವಿಚಾರಗಳಿವು. ಹಿಂದೀ ಪಾರ್ಲಿಮೆಂಟಿನ ಏರ್ಪಾಟಿನಿಂದ ರಾಜಕಾರಣಧುರಂಧರರೆಂದು ಮೆರೆಯುವ ಸಹಕಾರಿಗಳನ್ನು ರಾಜಕಾರಣಪಟು ನೌಕರಶಾಹಿಯು ಹೇಗೆ, ಹೇಗೆ ಸೋಲಿಸುತ್ತದೆ, ತನ್ನ ಏಕತಂತ್ರಿ ಕಾರಭಾರಕ್ಕೆ ಅವರ ಮೂಲಕ ಪ್ರಾತಿನಿಧಿಕ ರಾಜ್ಯಪದ್ಧತಿಯ ಬಾಹ್ಯರೂಪ ಕೊಟ್ಟು, ಇಡೀ ಜಗತ್ತನ್ನೇ ಹೇಗೆ ಮೋಸಗೊಳಿಸುತ್ತದೆ? ಎಂಬುದು ವಿಶದವಾಗುತ್ತದೆ. ಹಿಂದೀ ಪಾರ್ಲಿಮೆಂಟಿನ ಬಾಹ್ಯ ಮೋಹಪಾಶಗಳಿಗೆ ಬಲಿಬಿದ್ದು, ಸಹಕಾರಿಗಳು ಆತ್ಮವಂಚನೆ ಮಾಡಿಕೊಂಡದ್ದಲ್ಲದೆ, ಸ್ವರಾಜ್ಯದ ವ್ಯಥಾ ಕೋಲಾಹಲವನ್ನೆಬ್ಬಿಸಿ, ಭಾರತೀಯರನ್ನೂ ವಂಚಿಸಲು ತವಕಿಸಿದರು. ಆದರೆ ಮಹಾತ್ಮರು ಈ ಯೋಜನೆಯನ್ನು ಒರೆಕಲ್ಲಿಗೆ ಹಚ್ಚಿ, ಇದರಲ್ಲಿ ಪ್ರಜಾನುಕೂಲವಾಗಿ ಪರಿಣಮಿಸುವ ಚೈತನ್ಯವೆಷ್ಟಿದೆಂಬ ಸತ್ವಪರೀಕ್ಷೆ ಮಾಡಲು,! ಅದರಲ್ಲಿ ಮೊಂಟೆಗ್ಯೂ ಸ್ವರಾಜ್ಯದ ಪ್ರಚಂಡ ಇಮಾರತು ಬುಡಮೇಲಾಗಿ ನೆಲಕ್ಕುರುಳಿತು. ಹಿಂದೀ ಪಾರ್ಲಿಮೆಂಟು ಮಾಯೆಯೆಂದು ಹೇಳಲಿಕ್ಕೆ ಮತ್ತೇನು ಪುರಾವೆ ಬೇಕು.

———(೦*೦)———

ನಾಗಪುರದ ಸಭ್ರಣೆ.

ಶೇಟ ಜಮನಾಲಾಲಜಿಯವರ ಖಟ್ಲೆ ಸುನಾವಣಿಯು ತಾ. ೩೦ ನೇ ಜೂನ ದಿವಸ ಮುಗಿಯಿತು. ಮೊನ್ನೆ ಮಂಗಳವಾರ ತಾ. ೧೦ ನೇಗೆ ಕೋರ್ಟು ತೀರ್ಪು ಕೊಡುವದೆಂದು ಜಾಹೀರಾಗಿದೆ. ಅಖಿಲ ಭಾರತೀಯ ಕೊಂಗ್ರೆಸ ಕಮೀಟಿಯೂ, ಸೆಂಟ್ರಲ ಖಿಲಾಫತ ಕಮೀಟಿಯೂ ರವಿವಾರ ತಾ. ೮ ನೇಗೆ ಕೂಡುವದಿದ್ದದರಿಂದ, ಅವು ಪಾಸ ಮಾಡುವ ಠರಾವುಗಳ ಧೋರಣ ನೋಡಿ, ತೀರ್ಪು ಕೊಡಲು ಕಾಯ್ದಿಟ್ಟಿದ್ದಾರೆಂದು ಅನೇಕರ ಊಹೆ.

***

ಡಾ| ಚಂದುಲಾಲ ದೇಸಾಯಿಯವರ ಖಟ್ಲೆ ಸುನಾವಣಿಯು ಮಿ| ಮೋಹಸಿನ್ ಹುಸೇನರವರ ಮುಂದೆ ನಡೆಯಿತು. ಡಾ| ರ ಸುನಾವಣಿಯಾಗುವವರೆಗೆ ಜೈಲಿನಲ್ಲಿದ್ದರು. ಅವರಿಗೆ ಭೆಟ್ಟಿಯಾಗಲು ಬೆರಿಸ್ಟರ ಅಭ್ಯಂಕರ ಹಾಗು ದೇಶಮುಖರವರು ಹೋಗಿದ್ದರು. ಮಾತುಕಥೆ ನಡೆಯುತ್ತಿರುವಾಗ, ಒಂದು ಸತ್ಯ ವಿಧಾನವ್ರ ಮಾಡಲ್ಪಟ್ಟಿತು. ಇದೀ ಮಧ್ಯ ಪ್ರಾಂತದಲ್ಲಿ ದಂತ-ವೈದ್ಯಶಾಸ್ತ್ರದಲ್ಲಿ ನಿಷ್ಣಾತರಿದ್ದವರೊಬ್ಬರೊಂಟಿಗರೇ ಅವರು ಈಗ ಜೈಲಿನಲ್ಲಿರುವರು. ಈ ವಿಧಾನವು ಡಾ| ಚಂದುಲಾಲ ಮಹಾಶಯರಿಗೆ ಸಂಬಂಧಿಸಿ, ಮಾತೋಣಾಗಿದ್ದರಿಂದಲು, ಲ್ಲರೂ ನಕ್ಕರು.

***

ಶೇಟ ಜಮನಾಲಾಲಜಿಯವರ ತನಿಖಿಯು ಮಿ| ಸ್ಲೆನಲೀ ಇವರ ಮುಂದೆ ನಡೆಯಿತು. ತೀರ್ಪನ್ನು ಜುಲೈ ೧೦ನೇ ತಾರೀಖಿಗೆ ಮುಂದರಿಸಲು ಶೇಟಜೀ ಮೊದಲಾದ ಮುಂದಾಳುಗಳನ್ನುದ್ದೇಶಿಸಿ, ಸ್ಲೆನಲೀಯವರು 'ನೀವು ಮನಸಿದ್ದರೆ, ಜಾಮೀನಿನ ಮೇಲೆ ಅವತ ವರೆಗೆ ಹೋಗಬಹುದು' ಎಂದು ನುಡಿಯಲು, ಶೇಟಜಿಯವರು ತಾ. ೧೦ನೇಗೆ ಹಾಜರಾಗುತ್ತೇವೆಂದು ವಚನಕೊಟ್ಟರೆ, ಆಗೀತೇನು? ಎಂದು ಪ್ರಶ್ನಿಸಿದರು. ವಿಚಾರಮಾಡಿ ಹೇಳುತ್ತೇನೆಂದು ಮೆಜಿಸ್ಟ್ರೇಟರು ನುಡಿದು, ಅದೇ ದಿನ, ಬಾಯಿ ಮಾತು ಜಾಮೀನು ಎಂದು ಹಿಡಿಯಲಾರೆವೆಂದೂ, ಇಂದರೂ ಪಾಯಿಗಳ ಜಾಮೀನು ಕೊಟ್ಟರೆ ಬಿಡುಗಡೆಮಾಡುತ್ತೇವೆಂತಲೂ ಹೇಳಿ ಕಳುಹಿದರಂತೆ! ಶೇಟಜಿಯವರು ಜೈಲಿನಲ್ಲೇ ಕಾಲಕ್ಷೇಪ ಮಾಡುತ್ತಿರುವರು.

***

ವರ್ಧಾ ಜಿಲ್ಲೆಯ ಶ್ರೀಮಂತ ಜೈನರಾದ ಶೇಟ ಚಿರಂಜಿಲಾಲರವರು ಜೂನ ತಾ. ೩೦ನೇಗೆ ಬಿಡುಗಡೆಯಾದರು. ಇವರಿಗೂ, ಮಿ|| ಸ್ಲೇನಲೀಯವರಿಗೂ ಬಿಡುಗಡೆಯಾದ ಮೇಲೆ, ಸಂಭಾಷಣ ನಡೆಯಿತೆಂದು ಶೇಟಜೀಯವರು ನುಡಿಯುತ್ತಾರೆ. ಸ್ಲೇನಲೀಯವರು ನುಡಿದದ್ದೇನಂದರೆ:-"ನೀವು ಪ್ರತಿಷ್ಠಿತ ಗೃಹಸ್ಥರು. ಈ ಚಳವಳಿಯಲ್ಲಿ ಯಾಕೆ ಸೇರಿರುವಿರಿ? ಇದೆಲ್ಲ ಮೂರ್ಖತನವು. ಚಳವಳಿಯು ದಿನೇ ದಿನೇ ಕ್ಷೀಣ ಹೊಂದುತ್ತಲಿದೆ. ಹಿಂದೀಯರಿಗಿಂತ ಇಂಗ್ಲೀಷರೇ ಹೆಚ್ಚು ಶ್ರೇಯಸ್ಕರರೆಂದು ನಿಮಗೆ ಕಂಡು ಬರುವದು" ಶೇಟಜೀಯವರು ಉತ್ತರಿಸಿದ್ದೇನಂದರೆ:— ಒಬ್ಬೊಂಟಿಗನು ಅಸಹಯೋಗಿಯು ಇರುವವರೆಗೆ ಚಳವಳಿಯು ಎಂದೂ ಸಾಯಲಾರದು. ವರ್ಧಾ ಜಿಲ್ಲೆಯಿಂದಲೇ ನಾನು ಸಾವಿರ ಸ್ವಯಂಸೇವಕರನ್ನು ಪೂರೈಸಬಲ್ಲೆನು. ಈ ಚಳವಳಿಗಾಗಿ ನನ್ನ ಸ್ಥಿರಚರ ಸೊತ್ತು ಕಳಕೊಳ್ಳಲು ಸಹ ತಯಾರಿದ್ದೇನೆ.

***

ನಾಗಪುರದಲ್ಲಿ ನಾಮಧಾರಿ ಗವರ್ನರರು ಸಭೆ ಸೇರಿಸಿದ್ದರು. ಮೊಟ್ಟಮೊದಲು, ಸಭೆ ಕರೆದ ಹೇತುವು ಮತಪ್ರದರ್ಶನಕ್ಕೆ ಮಾತ್ರವೆಂದು ಖಂಡಿತ ಹೇಳಿದರು. ಸಭೆಯಲ್ಲಿ ಪ್ರದರ್ಶನ ಮಾಡಿದ ಮತಗಳಿಂದ ತಾವೇನು ಬದ್ಧರೆನಿಸಿಕೊಳ್ಳುವದಿಲ್ಲವೆಂದು ಸ್ಪಷ್ಟೀಕರಿಸಿದರು. ಅಧಿಕಾರಿಗಳು ಯಾವದೇ ಬದಿಯಿಂದ ಮಾತಾಡದೆ, ಪ್ರೇಕ್ಷಕವೃತ್ತಿಯನ್ನೇ ಧರಿಸಿಕೊಂಡಿದ್ದರು. ಸರ್ ಗಂಗಾಧರರಾವ ಚಿಟಣೀಸ, ಸರ್ ಬಿಪಿನ ಬೋಸ, ರಾವಬಹಾದ್ದೂರ ಪಂಡಿತ, ಶ್ರೀ|| ಪ್ರವಿಡ, ಮಂಗಲಮೂರ್ತಿ ಮೊದಲಾದವರು ಹುಕುಮನ್ನು ಹಿಂತೆಗೆದುಕೊಳ್ಳಲು ವಾದಿಸಿದರು. ಡಾ| ಗೌರರು ಹುಕುಮನ್ನು ಈಗ ಹಿಂತೆಗೆದುಕೊಳ್ಳಬಹುದೆಂತಲೂ, ಇನ್ನು ಮುಂದೆ ಅಸಹಕಾರಿಗಳು ಕಾಯಿದೆಯನ್ನು ಮುರಿದು, ಸರಕಾರವನ್ನು ಇನ್ನೂ ಗಂಡಾಂತರಕ್ಕೀಡು ಮಾಡಿದರೆ, ಅಧಿಕಾರಿಗಳು ಬಿಗಿಯಾದ ಧೋರಣವನ್ನು ಅನುಸರಿಸಬಹುದೆಂದೂ ಮತಕೊಟ್ಟರು. ರಾ| ಎಸ್. ಬಿ. ಗೋಖಲೆಯವರು ಕಡು ನೇಮಸ್ತರು. ಹುಕುಮನ್ನು ಹಿಂತೆಗೆದುಕೊಳ್ಳಬಾರದೆಂದು ಅವರು ಮತ ಕೊಟ್ಟದ್ದಲ್ಲದೆ, ಕೊಂಗ್ರೆಸ ಕಮೀಟಿಯನ್ನು ನಾಗಪುರದಲ್ಲಿ ನೆರೆಯಗೊಡಬಾರದೆಂದು ವಾದಿಸಿದರು. ಆದರೆ, ಕೊಂಗ್ರೆಸ ಕಮೀಟಿಯ ಅಧಿವೇಶನವನ್ನು ಪ್ರತಿಬಂಧಿಸುವ ರಾ| ಗೋಖಲೆಯವರ ಸೂಚನೆಯು ಗವರ್ನರ ದೊರೆಗಳಿಗೂ ಗ್ರಾಹ್ಯವಾಗಲಿಲ್ಲಂತೆ!

***

ನಾಗಪುರದ ನೇಮಸ್ತರು ಈಗೀಗ ಸಾವಧಾನಚಿತ್ತರಾಗುತ್ತ ನಡೆದಿರುವರು. ಪ್ರತಿಬಂಧಕ ಹುಕುಮನ್ನು ಕೂಡಲೆ ರದ್ದುಪಡಿಸಬೇಕೆಂದು ಅವರ ದೇಡಿಕೆಯಿದೆಯಂತೆ. ಸರ್ ಗಂಗಾಧರರಾವ ಚಿಟಣೀಸ, ಸರ್ ಬಿಪಿನ ಬೋಸ ಮೊದಲಾದವರು ಒಂದು ಮನವಿಯನ್ನು ಈ ಬಗ್ಗೆ ಸಾದರಪಡಿಸುವ ಯೋಜನೆ ಮಾಡಿದರು. ಕೆಲವರು ಇದನ್ನು ಹಿಂದೀ ಹಾಗು ಯುರೋಪಿಯನ್‌ರ ಸಹಿನಿಗಿ ಕಳಿಸಬೇಕೆಂದು ಸೂಚಿಸಲು, ಚಾಲಕರು ಯುರೋಪಿಯನ್‌ರ ಸಹಿಗಳನ್ನು ಪಡೆಯಲು ಯತ್ನಿಸಿದರು. ಆದರೆ, ಅದಕ್ಕೆ ಸಹಿ ಮಾಡುವ ಮೊದಲು, ಅರ್ಜಿಯಲ್ಲಿ ಅಧಿಕಾರಿಗಳು ಈ ವರೆಗೆ ಅನುಸರಿಸಿದ ಧೋರಣವನ್ನು ಮಾನ್ಯಮಾಡಬೇಕೆಂದು ಯುರೋಪಿಯನ್‌ರು ಹಟ ಹಿಡಿದರಂತೆ. ಅದರಿಂದ ಹಿಂದೀ ಗೃಹಸ್ಥರು ಸ್ವತಃ ಸರಕಾರಕ್ಕೆ ಪ್ರಾರ್ಥಿಸಿಕೊಂಡಿರುವರಂತೆ.

***

ಜುಲೈ ೪ನೇ ತಾರೀಖಿಗೆ ಮೂವ ಸತ್ಯಾಗ್ರಹಿಗಳನ್ನು ಸೆರೆಹಿಡಿದರು. ಖಟ್ಲೆ ಸುನಾವಣೆಗಾಗಿ ಅವರನ್ನು ೧ನೇ ವರ್ಗದ ಮೆಜಿಸ್ಟ್ರೇಟರಾದ ಮಿ| ಭೋಜೇಲಾಲರವರ ಮುಂದೆ ಒಯ್ದರು. ಹೆಸರು, ತಂದೆಯ ಹೆಸರು ಮೊದಲಾದವುಗಳ ಬಗ್ಗೆ ಅವರನ್ನು ಪ್ರಶ್ನಿಸಲು, ಅವರು ಉತ್ತರವನ್ನೀಯಲಿಕ್ಕೆ ಒಲ್ಲಗೆಳೆದರು. ಮೆಜಿಸ್ಟ್ರೇಟರಾದ ಮಿ| ಭೋಜೇಲಾಲರವರು ಈ ಬಗ್ಗೆ ಸ್ವತಃ ಪ್ರಶ್ನಿಸಲು, ಅವರು ತಮ್ಮ ಹೆಸರುಗಳು ಅಸಹಯೋಗವೆಂತಲೂ, ತಾವು ಮಹಾತ್ಮಾ ಗಾಂಧಿಯವರ ಪುತ್ರರೆಂತಲೂ ನುಡಿದರಂತೆ!

***

ಡಿ| ಮೆಜಿಸ್ಟ್ರೇಟರ ಪ್ರತಿಬಂಧಕ ಹುಕುಮನ್ನು ಮುರಿದವರಿಗೆ ೫ ತಿಂಗಳ ಕಠಿಣ ಸಜೆ; ೧ ತಿಂಗಳ ಸಾದಾ ಸಜೆ, ಹೀಗೆ ೭ ತಿಂಗಳ ಶಿಕ್ಷೆಯಾಗುತ್ತದೆ. ಹುಕುಮನ್ನು ಮುರಿಯುವರೆಂಬ ಸಂಶಯದ ಮೇಲೆ ಸೆರೆಹಿಡಿದವರಿಗೆ ೧ ವರ್ಷದ ಕಠಿಣ ಸಜೆಯಾಗುತ್ತದೆ.

***

ನಾಗಪುರದ ಟಪಾಲ ಹಾಗು ತಂತಿ ಆಫೀಸುಗಳಲ್ಲಿ ಎರಡು ಪೋಸ್ಟ ಶಾಖೆಗಳು ನಿರ್ಮಾಣವಾಗಿವೆ. ಹೆಸರು ಸತ್ಯಾಗ್ರಹ ಶಾಖೆ. ಈ ಶಾಖೆಗಳಲ್ಲಿ ಕೊಂಗ್ರೆಸ ಅಥವಾ ಅವರ ಅಧಿಕಾರ ಮಂಡಳದವರ ವಿಳಾಸಿಗೆ ಬಂದ ತಂತಿ ಹಾಗು ಪತ್ರಗಳನ್ನು ಬಟ್ಟುಮಾಡಿ ಅವನ್ನು ತಪಾಸಿಗಾಗಿ ಕಳಿಸುತ್ತಾರೆ.

***

ನಾಗಪುರದ ಪ್ರಾಂತಿಕ ಕೊಂಗ್ರೆಸ ಕಮೀಟಿಯ ಕಾರ್ಯದರ್ಶಿಗಳೊಬ್ಬರಾದ ಮಿ| ಅಬದಲ್ಲಿ ಶಿರಾಝಿಯವರಿಗೆ ನಾಗಪುರದಿಂದ ಸಿಂಧ ಪ್ರಾಂತಕ್ಕೆ ಹೋಗಬೇಕಾಗಿತ್ತು. ಉಗಿಬಂಡಿಯ ಟಿಕೇಟ ಮಾಸ್ತರರು ಅವರು ಅಸಹಯೋಗಿಗಳೆಂದು ಟಿಕೇಟು ಕೊಡಲು ಒಲ್ಲಗೆಳೆದರು. ಶಿರಾಝಿಯವರು ಗಾರ್ಡರ ಕೂಡ ದೂರು ಒಯ್ದರು. ಗಾರ್ಡರು ಶಿರಾಝಿಯವರ ದೂರಿಗೆ ಕಿವಿಗೊಡದೆ, ಸಿಳ್ಳು ಹೊಡೆದರು. ಗಾಡಿಯು ಹೊರಟಿತು. ಶಿರಾಝಿಯವರು ಗಾಡಿ ಹತ್ತಿಬಿಟ್ಟರು. ಕೂಡಲೆ, ಗಾಡಿ ನಿಂತಿತು. ಶಿರಾಝಿಯವರಿಗೆ ಟಿಕೇಟು ತಪಾಸಕರೂ, ಅಸಿಸ್ಟಂಟ ಸ್ಟೇಶನ ಮಾಸ್ತರರೂ ಬಂಡಿಯೊಳಗಿಂದ ಇಳಿಯಲು ಆಜ್ಞಾಪಿಸಿದರು. ಇಮ್ಮಡಿ, ಮುಮ್ಮಡಿ ಹಾಸಲು ಕೊಡುತ್ತೇನೆ. ನಾನು ಈ ಗಾಡಿಯಿಂದಲೇ ಹೋಗಬೇಕು ಎಂದು ಅಬದಲ್ಲಿಯವರು ಖಂಡಿತ ಹೇಳಿದರು. ಗಾರ್ಡರಿಗೆ ಬೆಟ್ಟ ಕೊಡಿರೆಂದು ಅವರ ಅಪ್ಪಣೆಯಾಗಲು, ಅಬದಲ್ಲಿಯವರು ಇಳಿದರು. ಕೂಡಲೇ ಗಾಡಿಯು ಹೊರಟಿತು. ಅಬದಲ್ಲಿಯವರು ಪುನಃ ಗಾಡಿಯಮೇಲೆ! ಗಾಡಿಯು ನಿಂತಿತು, ಗಾಡಿಯೊಳಗಿಂದ ಇಳಿಯಲು ಎಚ್ಚರಿಕೆ ಕೊಟ್ಟರು. ಗಾಡಿ ಬಿಟ್ಟು ಹೋಗಲಾರೆನೆಂದು ಅಬದಲ್ಲಿಯವರು ಖಂಡಿತ ಹೇಳಿಬಿಟ್ಟರು. ಬೇಕಾದ ವರ್ಗದ ಟಿಕೇಟು ತೆಗೆಯುತ್ತೇನೆ, ನನ್ನನ್ನು ಹೋಗಗೊಡಿರಿ ಎಂದು ಅಬದಲ್ಲಿಯವರು ಬಿನ್ನೈಸಿದರು. ಸ್ಟೇಶನ ಮಾಸ್ತರರು ಗಾಡಿಯ ಹತ್ತರ ಬಂದು, ಪುನಃ ಎಚ್ಚರಿಕೆ ಕೊಟ್ಟರು. ಆದರೂ, ಅಬದಲ್ಲಿಯವರು ಅದಕ್ಕೆ ಸೊಪ್ಪು ಹಾಕಲಿಲ್ಲ. ಕಟ್ಟಕಡೆಗೆ, ಉಗಿಬಂಡಿಯು ಅಬದಲ್ಲಿಯವರನ್ನು ಒಯ್ಯಿಸಿಕೊಂಡು ಕೂಚು ಮಾಡಿತು. ಕಡೆಗೆ, ಇಳಿದ ಸ್ಟೇಶನಿನಲ್ಲಿ ಅಲ್ಲಿಯ ಸ್ಟೇಶನ ಮಾಸ್ತರರು ಎರಡನೇ ವರ್ಗದ ಇಮ್ಮಡಿ ಹಾಸಲನ್ನು ಅಬದಲ್ಲಿಯವರಿಂದ ವಸೂಲ ಮಾಡಿದರು. ಅಬದಲ್ಲಿಯವರು ಅಸಹಯೋಗಿಗಳೆಂದು ಅವರಿಗೆ ಇಷ್ಟೆಲ್ಲ ಉಪದ್ರವ ಕೊಡೋಣಾಯಿತು.

— ಪಂಜಾಬ ಕೊಂಗ್ರೆಸ ಕಮೀಟಿಯು ವಿಧಿಸಿದಂತೆ, ಜುಲೈ ತಾ. ೯ ನೇ ಸೋಮವಾರಕ್ಕೆ ಪಂಜಾಬದಲ್ಲೆಲ್ಲ ಲಾಲಾ ಲಜಪತರಾಯರ ಆಯುರಾರೋಗ್ಯ ಚಿಂತನೆಯ ಬಗ್ಗೆ ಪ್ರಾರ್ಥನೆಗಳು ನಡೆದವು.

ಕಾನಡಾವೃತ್ತ.

ಗುರುವಾರ, ತಾರೀಖು ೧೨ ಮಾಹೆ ಜುಲ್ಯಾ ೧೯೨೩.

ನಾಳಿನ ಗಾಂಧೀ ದಿನ.

ನಾಳಿನ ಬುಧವಾರಕ್ಕೆ ರಾಷ್ಟ್ರಾಜ್ಞೆಯಂತೆ ಅಖಿಲ ಭರತ ಖಂಡವು ಮಹಾತ್ಮರ ಸ್ವರಾಜ್ಯಕ್ರಮ ಪ್ರವೇಶದ ಪುಣ್ಯ ದಿನವನ್ನು ವಿಶೇಷ ಉತ್ಸಾಹದಿಂದ ಪಾಲಿಸುವದು ಅಂದು ಡಾ| ಅನ್‌ಸಾರಿಯವರ ಅಪ್ಪಣೆಯಾದಂತೆ, ಅಖಿಲ ಭರತ ಖಂಡದೊಳಗಿನ ಕೋಂಗ್ರೆಸ ಸಂಸ್ಥೆಗಳೂ, ರಾಷ್ಟ್ರೀಯ ಸಭಾಭಿಮಾನಿಗಳೂ ರಾಷ್ಟ್ರಧ್ವಜವನ್ನು ಆನಂದದಿಂದ, ಸ್ವಾಭಿಮಾನಪೂರ್ವಕ ಮೆರಿಸಿ, ರಾಷ್ಟ್ರೀಯ ಐಕ್ಯವನ್ನು ಅಖಿಲ ಜಗತ್ತಿಗೆ ಪ್ರದರ್ಶಿಸುವರು

ಗಾಂಧೀ ದಿನಕ್ಕೆ ರಾಷ್ಟ್ರಧ್ವಜೋತ್ಸವವನ್ನು ಮೆರಿಸುವದರಲ್ಲಿ ವಿಶೇಷ ವೈಚಿತ್ರ್ಯವಿದೆ. ಯಾಕಂದರೆ, ರಾಷ್ಟ್ರಧ್ವಜದ ಕಲ್ಪನೆಯು ಮಹಾತ್ಮರದು. ಅದನ್ನು ಇಂಥ, ಇಂಥ ಪ್ರಕಾರಗಳಿಂದ ರಚಿಸಬೇಕೆಂದು ಹೇಳಿದವರೂ ಮಹಾತ್ಮರೇ. ಹಿಂದೂ, ಮುಸಲ್ಮಾನ, ಕ್ರಿಶ್ಚನ್, ಪಾರ್ಸಿ ಮೊದಲಾದವರು ಹಿಂದುಸ್ಥಾನವನ್ನು ತಮ್ಮ ಮಾತೃದೇಶವೆಂದು ಎಣಿಸುತ್ತಿರುವರು. ಇಂಥ ಸಮಾಜಗಳಿಗೆಲ್ಲ ಸಾಮಾನ್ಯವಿರುವ ಧ್ವಜವೊಂದನ್ನು ಸ್ವೀಕರಿಸುವದು ಅವಶ್ಯವು. ಈ ಧ್ವಜದ ಮಾನರಕ್ಷಣೆಗಾಗಿ ಎಲ್ಲ ಸಮಾಜದವರು ಭೇದಬುದ್ಧಿ ಹಿಡಿಯದೆ, ಪ್ರಸಂಗ ಬಂದರೆ, ಶಿರಸ್ಸನ್ನು ಸಹ ಅರ್ಪಿಸಲು ಸಿದ್ಧರಿರಬೇಕು ಈ ಧ್ವಜದ ಮೇಲೆ ಕೈರಾಟಿಯಿದೆ. ಕೈರಾಟಿಯ ಹಿಂಬದಿಗೆ ಧ್ವಜವು ಮೂರು ಬಣ್ಣಗಳಿಂದ ಶೋಭಿಸುತ್ತದೆ ಈ ಬಣ್ಣಗಳ ಅರ್ಥವನ್ನು ಮಹಾತ್ಮರೇ ನಿರೂಪಿಸಿರುವರು. ಶುಭ್ರ ವರ್ಣವು ಹಿಂದೂ-ಮಹಮ್ಮದೀಯರ ಹೊರತು, ಇತರ ಸಮಾಜಗಳನ್ನು ದಿಗ್ದರ್ಶನ ಮಾಡುತ್ತದೆ. ಅಲ್ಪ ಸಂಖ್ಯಾಕರಿಗೆ ಮಹಾತ್ಮರು ಮೊದಲನೇ ಸ್ಥಾನವನ್ನು ಸಮರ್ಪಿಸಿರುವರು. ದ್ವಿತೀಯ ಸ್ಥಾನದ ಹಸುರು ಬಣ್ಣವು ಮಹಮ್ಮದೀಯರ ದ್ಯೋತಕವಿದೆ. ಹಿಂದೂ ಸಮಾಜವು ಬಹುಸಂಖ್ಯಾಕವು. ಅದಕ್ಕೆ ಕೆಂಪು ಬಣ್ಣದ ತೃತೀಯ ಸ್ಥಾನವು ಕೊಡಲ್ಪಟ್ಟಿದೆ. ಅಲ್ಪ ಸಂಖ್ಯಾಕರಿಗೆ ಪ್ರಥಮ ಸ್ಥಾನ. ಬಹುಸಂಖ್ಯಾಕರಿಗೆ ಅಖೈರ ಸ್ಥಾನ ಕೊಡುವ ಕಾರಣವನ್ನು ಮಹಾತ್ಮರೇ ಸ್ಪಷ್ಟೀಕರಿಸಿರುವರು. ಬಹುಸಂಖ್ಯಾಕರ ಧರ್ಮವು ಅಲ್ಪ ಸಂಖ್ಯಾಕರನ್ನು ರಕ್ಷಿಸುವದು. ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಸಬಲರು ದುರ್ಬಲರನ್ನು ಬದಿಗೊತ್ತಿ, ಮುಂದೆ ಬರುವ ತತ್ವವಿದೆ. (Survival of the fittest) ಜಗತ್ತಿನೊಳಗಿಂದ ಅಯೋಗ್ಯ ಮಂದಿಗಳನ್ನು ನಿರ್ಮೂಲಿಸಿ, ಜಗತ್ತನ್ನು ಉದ್ಧರಿಸುವದು ಪಾಶ್ಚಾತ್ಯರ ತತ್ವವು. ಮಹಾತ್ಮರ ತತ್ವವು, ಪೌರ್ವಾತ್ಯರ ಧೋರಣವು ದುರ್ಬಲರಿಗೆ ಸಬಲರು ರಕ್ಷಿಸುವದು. ಇದೇ ಸಂಸ್ಕೃತಿಯು ರಾಷ್ಟ್ರಧ್ವಜದಲ್ಲಿ ರೇಖಾಂಕಿತವಾಗಿದೆ.

ರಾಷ್ಟ್ರಧ್ವಜವು ಇಷ್ಟು ಪವಿತ್ರ ಭಾವನೆಯಿಂದ ಪೂರಿತವಾಗಿರಲು, ಇದನ್ನು ಮೆರಿಸುವದರಲ್ಲಿ ಸತ್ಯಾಗ್ರಹಿಗಳು ಎಂಗ್ಲೋ-ಇಂಡಿಯನ್ ಬಾಂಧವರ ಮನಸ್ಸನ್ನು ನೋಯಿಸಲು ಎಂದೂ ಕಾರಣರಾಗರು. ಇದು ಸ್ಪಷ್ಟವಿದೆ. ಮುಂಬಯಿಯ 'ಟೈಮ್ಸ್' ಕರ್ತರೂ, ಮಧ್ಯಪ್ರಾಂತದ ಸರಕಾರವೂ ಸತ್ಯಾಗ್ರಹಕ್ಕೆ ಹೆದರಿಡಲು ನಾಗಪೂರಸ್ಥರು ಇತರ ಸಮಾಜಗಳ ಮನೋವಿಕಾರಗಳನ್ನು ಪ್ರಜ್ವಲಿಸಬೇಕೆಂದು ರಾಷ್ಟ್ರಧ್ವಜದ ಉತ್ಸವವನ್ನು ಕೈಕೊಂಡಿರುವರೆಂದು ವೃಥಾ ಕೋಲಾಹಲವನ್ನೆಬ್ಬಿಸಿ, ಸತ್ಯಾಗ್ರಹ ಕಾದಾಟದಿಂದ ಪ್ರಜೆಗಳನ್ನು ಪರಾವೃತ್ತ ಮಾಡಲು ಹವಣಿಸುತ್ತಿರುವರು. ಸತ್ಯಾಗ್ರಹದ ಸೇನಾಪತಿಗಳಾದ ಶೇಟ ಜಮನಾಲಾಲಜಿಯವರು "ಯುರೋಪಿಯನ್‌ರಿಗೆ ರಾಷ್ಟ್ರಧ್ವಜದ ಮೆರವಣಿಗೆಯಿಂದ ಉಪದ್ರವವಾಗುತ್ತಿದ್ದರೆ, ಸತ್ಯಾಗ್ರಹಿಗಳು ಅದನ್ನು ಮೆರಿಸುವರು" ಎಂದು ಹೇಳಿದರೆಂದು ಸರಕಾರಿ ಪ್ರಕಟಣೆಯು ಸಾರುತ್ತದೆ. ಎಂಗ್ಲೋ-ಇಂಡಿಯನ್ ಪತ್ರಕರ್ತರು ಮತ್ತೂ ಮುಂದಾಗಿ ಯುರೋಪಿಯನ್‌ರ ಚಿತ್ತಪ್ರಕೋಪ ಮಾಡುವ ದೆಸೆಯಿಂದಲೇ ಸತ್ಯಾಗ್ರಹವು ಎದ್ದಿದೆಂದು ನಿತ್ಯವೂ ವಾಚಕರಿಗೆ ಆಶ್ವಾಸಿಸುತ್ತಿರುವರು. ನ್ಯಾಯಾನ್ಯಾಯ, ಸತ್ಯಾಸತ್ಯಗಳ ಪರಿವೆಯಿಲ್ಲದ ಪುಣ್ಯಾತ್ಮರು ರಾಷ್ಟ್ರಧ್ವಜವು ಬ್ರಿಟಿಶರ ಯೂನಿಯನ್ ಜೆಕ್ ಪತಾಕೆಗೆ ಪ್ರತಿಸ್ಪರ್ಧಿಯಾಗಿ ನಿರ್ಮಾಣವಾಗಿರುವದೆಂತಲೂ ಬೋಧಿಸಿ, ದೇಶಾಭಿಮಾನಿ ಬ್ರಿಟಿಶರಿಗೆ ಚೇತಿಸಿ, ಸತ್ಯಾಗ್ರಹವನ್ನು ಮುರಿಯಲು ಹೊಂಚುಹಾಕುತ್ತಿರುವರು. ಯೂನಿಯನ್ ಜೆಕ್ ಎಂದ ಕೂಡಲೆ, ನಮ್ಮ ನೇಮಸ್ತ ಬಾಂಧವರಿಗೆ ಒಮ್ಮೆಲೇ ಆಘಾತವಾಗುತ್ತದೆ. ಸತ್ಯಾಗ್ರಹದ ಚಾಲಕರು ರಾಷ್ಟ್ರಧ್ವಜವು ಯೂನಿಯನ್ ಜೆಕ್ ನಿಶಾನೆಯ ಪ್ರತಿಸ್ಪರ್ಧಿಯಾಗಿ ಅವತರಿಸಲಿಲ್ಲೆಂದು ಜಾಹೀರು ಮಾಡಬೇಕು ಎಂದು ಈ ಬ್ರಿಟಿಶ ಸಾಮ್ರಾಜ್ಯಾಭಿಮಾನಿಗಳು ನುಡಿಯಲಾರಂಭಿಸಿರುವರು. ಪುಣ್ಯನಗರಿಯ 'ಸರ್ವಂಟ ಆಫ್ ಇಂಡಿಯಾ' ಪತ್ರಿಕೆಯೂ ಇದೇ ಪರಿಯಿಂದ ಉದ್ಗರಿಸಿದೆ. ನಾಗಪುರದೊಳಗಿನ ಸರ್ ಮಾಣಿಕಜಿ ದಾದಾಭಾಯಿ, ಸರ್ ಗಂಗಾಧರರಾವ ಚಿಟಣೀಸ ಮೊದಲಾದವರೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಶೇಟ ಜಮನಾಲಾಲಜಿಯವರು ಮಧ್ಯಪ್ರಾಂತ ಸರಕಾರದ ದಿವಾಣರಾದ ನಾಮದಾರ ಕೇಳಕರರವರಗೂಡ ಜೈಲಿನಲ್ಲಿ ಸಂಭಾಷಣ ನಡಿಸಿದಾಗ, ರಾಷ್ಟ್ರಧ್ವಜದ ನಿರೂಪಣವನ್ನು ಮಹಾತ್ಮರೇ ಮಾಡಿರುವರೆಂತಲೂ, ಅದರೊಳಗೆ ಎಳ್ಳಷ್ಟು ದ್ವೇಷಬುದ್ಧಿಯನ್ನು ತಳೆಯಲು ಇಂಬಿಲ್ಲೆಂತಲೂ, ಸಾರ್ವಜನಿಕ ಹಣವನ್ನು ವೆಚ್ಚಮಾಡಿ, ಕಟ್ಟಿದ ರಾಜರಸ್ತೆಗಳ ಮೇಲಿಂದ ರಾಷ್ಟ್ರಧ್ವಜವನ್ನು ಮೆರಿಸುವ ಹಕ್ಕನ್ನು ಪ್ರಸ್ಥಾಪಿಸಲು ಸತ್ಯಾಗ್ರಹಿಗಳು ಕಾದಾಡುತ್ತಾರೆಂತಲೂ ಸ್ಪಷ್ಟವಾಗಿ ಹೇಳಿದರು. ಸರಕಾರಕ್ಕಾಗಲಿ, ನೇಮಸ್ತರಿಗಾಗಲಿ ಇನ್ನು ನೆವವೇನಿರಲಿಕ್ಕಿಲ್ಲ.

ಸತ್ಯಾಗ್ರಹಿಗಳ ಸಾತ್ವಿಕ ಕಾದಾಟದಿಂದ, ಶೇಟಜೀಯವರ ವಿವರಣೆಯಿಂದ ಮಧ್ಯಪ್ರಾಂತದಲ್ಲಿ ವಿಚಾರಕ್ರಾಂತಿಯಾಗಹತ್ತಿದೆ. ರಾಷ್ಟ್ರಧ್ವಜವು ಬ್ರಿಟಿಶ ಧ್ವಜಕ್ಕೆ ಪ್ರತಿಸ್ಪರ್ಧಿಯಾಗಿರದಿದ್ದರೆ, ಪ್ರತಿಬಂಧಕ ಹುಕುಮನ್ನು ಪ್ರಚುರಗೊಳಿಸುವದು ಅನ್ಯಾಯವೆಂದು ನೇಮಸ್ತರು ಸಹ ನುಡಿಯುತ್ತಿರುವರು. ಮಧ್ಯಪ್ರಾಂತದ ಗವ್ಹರ್ನರರು ಪ್ರಾಂತದೊಳಗಿನ ನೇಮಸ್ತರ ಮತವನ್ನು ಅರಿತುಕೊಳ್ಳುವರೆ, ಒಂದು ಸಭೆಯನ್ನು ನೆರಿಸಿದ್ದರು. ಸಭೆಯೊಳಗಿನ ನೇಮಸ್ತರೆಲ್ಲ ಪ್ರತಿಬಂಧಕ ಹುಕುಮನ್ನು ರದ್ದುಪಡಿಸಬೇಕೆಂದು ಮತ ಕೊಟ್ಟರಂತೆ. ದಿವಾಣರಾದ ನಾಮದಾರ ಕೇಳಕರರವರು ಹುಕುಮನ್ನು ರದ್ದುಪಡಿಸಬೇಕೆಂಬ ಮತವುಳ್ಳವರೆಂತಲೂ ಹೇಳುತ್ತಾರೆ. ಆದರೆ, ಗೃಹಮಂತ್ರಿಗಳಾದ ನಾಮದಾರ ಜೋಶಿಯವರು ಒಮ್ಮೆ ಹುಕುಮನ್ನು ಹೊರಡಿಸಿದ ಮೇಲೆ ಅದನ್ನು ರದ್ದುಪಡಿಸುವದೆಂದರೆ, ಗೌರವಹಾನಿಯಾಗಬಹುದೆಂದು ಭೀತಿಗೊಳ್ಳುತ್ತಾರೆ. ಹುಕುಮನ್ನು ಮುಂದರಿಸುವದೂ ಅವರಿಗೆ ಇಷ್ಟವಿಲ್ಲ; ಹಿಂತೆಗೆದುಕೊಳ್ಳುವದೂ ಅನಿಷ್ಟವೆಂದು ಅವರ ಭಾವನೆ. ನಾಮದಾರ ಜೋಶಿಯವರ ಕರುಣಾಜನಕ ಸ್ಥಿತಿಯಿದು. ಗವ್ಹರ್ನರ ದೊರೆಗಳು ಹುಕುಮನ್ನು ಮುಂದರಿಸಲು ಒಪ್ಪುವದಿಲ್ಲವೆಂದು ಹೇಳುತ್ತಾರೆ. ಗವ್ಹರ್ನರರೂ, ನಾಮದಾರ ಜೋಶಿಯವರೂ ಸರ್ವಾಧಿಪತಿಗಳಿಗೆ ಸಿಮ್ಲಾದಲ್ಲಿ ಹೋಗಿ ಭೆಟ್ಟಿಯಾಗಿ, ನಾಗಪುರಕ್ಕೆ ಮರಳಿರುವರು. ಮುಂದಿನ ಧೋರಣದ ಬಗ್ಗೆ ಏನು ವಿಚಾರವಾಯಿತೆಂದು ಇನ್ನೂ ಗುಪ್ತವೇ ಇದೆ. ಪ್ರಚಲಿತ ಧೋರಣವು ಮುಂದೆ ನಡೆಯದೆಂದು ಅನೇಕರು ಹೇಳುತ್ತಾರೆ. ಅದೇನೂ ಇರಲಿ. ನಾಗಪುರದ ಸಾತ್ವಿಕ ಸಂಗ್ರಾಮದಿಂದ ನೌಕರಶಾಹಿಯನ್ನು ಸಮರ್ಥಿಸುವವರೆಲ್ಲರೂ ಏನು ಮಾಡಬೇಕೆಂದು ತೋಚದೆ, ದಿಙ್ಮೂಢರಾಗಿರುವರು. ನಾಗಪುರದ ಕಾಯಿದೆ ಪಂಡಿತರೆಲ್ಲರೂ ಸರಕಾರವು

ಕೊಟ್ಟ ಶಿಕ್ಷೆಗಳು ಬೇಕಾಯಿದೇಶೀರ ಎಂದು ಮನಗಂಡಿರುವರು. ಆದರೆ, ಇನ್ನೂ ಕಾಯಿದೆಪಂಡಿತರ ಸಂಘವು ಈ ಬಗ್ಗೆ ಮತ ಪ್ರದರ್ಶನವನ್ನೇನು ಮಾಡಲಿಲ್ಲ. ಇದನ್ನು ನೋಡಿ ನಾಗಪುರದೊಳಗಿನ ಪ್ರತಿಷ್ಠಿತರೊಬ್ಬರು ವಿಸ್ಮಿತರಾದರಂತೆ !

ನಾಗಪುರದ ರಾಷ್ಟ್ರಧ್ವಜದ ಶಾಂತಿಯುದ್ಧದಿಂದ ಎಷ್ಟು ಚಮತ್ಕಾರಗಳು ಸಂಭವಿಸಿವೆ ನೋಡಿರಿ. ಮಹಾತ್ಮರು ಹೇಳುವಂತೆ, ನಮ್ಮ ಸಂಗ್ರಾಮವು ಶುದ್ಧ ಹಾಗು ಸಾತ್ವಿಕವಿದ್ದರೆ, ನಮಗೆ ನೈತಿಕ ಬಲ ದೊರಕುವದಲ್ಲದೆ, ದೇಶಹಿತೇಚ್ಛು ಅಖಿಲ ಪ್ರಜೆಗಳೂ ನಮ್ಮನ್ನು ಹಿಂಬಾಲಿಸುವರು. ನೌಕರಶಾಹಿಯು ಅನ್ಯಾಯಗಳಿಗೆ ಹೇಸುವಂತೆ ದೇಶದಲ್ಲಿ ಪರಿಸ್ಥಿತಿಯನ್ನುಂಟುಮಾಡುವದು ಅಸಹಯೋಗಿಗಳ ಕರ್ತವ್ಯವು. ಪ್ರಜಾ ಸಮ್ಮತಿಯನ್ನು ಕ್ರಮವಾಗಿ ನೌಕರಶಾಹಿಯು ಕಾರಭಾರದಿಂದ ಪರಾವೃತ್ತ ಮಾಡುವದಕ್ಕೆ ಅಸಹಯೋಗವು ಜನ್ಮವಿತ್ತಿದೆ. ರಾಷ್ಟ್ರಧ್ವಜವು ಮಹಾತ್ಮರು ನಿರೂಪಿಸಿದಂತೆ, ಅಖಿಲ ಪ್ರಜೆಗಳದು. ಇಷ್ಟು ಸರ್ವಸಾಮಾನ್ಯ ಕಾರಣವು ಅಖಿಲ ಭಾರತೀಯರಿಗೆ ದೊರೆತದ್ದು ನಮ್ಮ ಸುದೈವವೆಂತಲೇ ಎಣಿಸಬೇಕು. ನಾಗಪುರದ ನೌಕರಶಾಹಿಯು ನಡಿಸಿದ ರಾಷ್ಟ್ರಾಪಮಾನದ ಹುಕುಮುಗಳನ್ನು ಕೃತಿಯಿಂದ ಮುರಿಯುವ ಸಂದರ್ಭವು ನಾಳಿನ ಗಾಂಧೀ ದಿನವೇ. ಅಂದು ಅಖಿಲ ಭಾರತೀಯರು ರಾಷ್ಟ್ರಧ್ವಜವನ್ನು ಉತ್ಸಾಹದಿಂದ ಮೆರಿಸಿ, ರಾಷ್ಟ್ರೈಕ್ಯವನ್ನೂ, ದೇಶದ ಮಾನವನ್ನೂ ಅನ್ಯಾಯದ ಹುಕುಮುಗಳನ್ನು ಮುರಿಯುವ ತಯಾರಿಯನ್ನೂ ಒಮ್ಮೆಲೇ ಪ್ರದರ್ಶಿಸಿ, ರಾಷ್ಟ್ರೀಯ ಸಭೆಯ ಅಧಿಪತಿಗಳಾದ ಡಾ| ಅನ್ಸಾರಿಯವರ ಅಪ್ಪಣೆಯನ್ನು ಶಿರಸಾ ಮನ್ನಿಸುವರೆಂದು ನಾವು ಮನಃಪೂರ್ವಕ ಹಾರೈಸುತ್ತೇವೆ.

ಸ್ಫುಟ ಸೂಚನೆಗಳು.

೧. ಮುಂಬಯಿಯಿಂದ ನಾಗಪುರಕ್ಕೆ ಸತ್ಯಾಗ್ರಹಕ್ಕಾಗಿ ೩ನೇ ಸರ್ತಿ ಕಳಿಸಿದ ಸತ್ಯಾಗ್ರಹಿ ಸ್ವಯಂಸೇವಕರ ಅಧಿಪತಿಗಳು ಶ್ರೀ| ಪಿ. ವ್ಹಿ. ಪಿ ಶಿವಂರವರಿದ್ದರು. ನಾಗಪುರದೊಳಗಿನ ಸತ್ಯಾಗ್ರಹದ ಪ್ರಕಾರವನ್ನು ಸ್ವತಃ ನೋಡಿ, ಅವರು ಈ ಪ್ರಕಾರ ಬರೆಯುತ್ತಾರೆ:- " ಈ ಹೊತ್ತು ಸಾಯಂಕಾಲಕ್ಕೆ ಸತ್ಯಾಗ್ರಹವನ್ನು ನಾನು ಸ್ವತಃ ಸಂದರ್ಶಿಸಿದೆನು. ಕಾಂಗ್ರೆಸ ಅಧಿಕಾರಿಯೊಬ್ಬರನ್ನು ಸಂಗಡ ಕರಕೊಂಡು, ೧ ತಾಸು ಮುಂಚೆ ಸತ್ಯಾಗ್ರಹ ಕ್ಷೇತ್ರವಾದ ಉಗಿಬಂಡಿಯ ಸಂಕಕ್ಕೆ ಗಮಿಸಿದೆನು. ಸಂಕದ ತುದಿಗೆ ಸಿವ್ಹಿಲ ಲ್ಯಾನುಗಳಿಗೆ ತಾಗಿ, ಹತ್ತಿಪ್ಪತ್ತು ಪೋಲೀಸರು ಸಜ್ಜರಾಗಿ ನಿಂತಿದ್ದರು. ಇವರ ಕೈಯಲ್ಲಿ ೬ ಪೂಟು ಉದ್ದ ಸೊಟ್ಟೆಗಳಿದ್ದವು. ಇವರ ದಂಬಲಕ್ಕಾಗಿ ಅಶ್ವಾರೂಢರಾದ ಪೋಲೀಸರೂ ಅತ್ತಿತ್ತ ಓಡಾಡುತ್ತಿದ್ದರು. ಒಬ್ಬ ಪೋಲೀಸ ಅಮಲದಾರರೂ, ಮೆಜಿಸ್ಟ್ರೇಟರೂ ಸಂಕದ ಹತ್ತರ ಸಾಯಂಕಾಲದವರೆಗೆ ತಮ್ಮ ಕರ್ತವ್ಯ ಮಾಡಲು ನಿರೀಕ್ಷಿಸುತ್ತ ನಿಂತಿದ್ದರು. ಸರತಿಗೆ ಮೂವರ ಸ್ವಯಂಸೇವಕರು ಒಟ್ಟುಗೂಡಿ ಪ್ರತಿಬಂಧಕ ಸ್ಥಳದಲ್ಲಿ ಮುಂದರಿಯುವ ವಹಿವಾಟಿದೆ. ಈ ಮೂವರ ಮಂಡಳದ ಪ್ರಮುಖನ ಕೈಯಲ್ಲಿ ಧ್ವಜವಿರುತ್ತದೆ. ಸಂಕದ ತುದಿಗೆ ಸ್ವಯಂಸೇವಕರು ಮುಟ್ಟಿದ ಕೂಡಲೆ, ಅಧಿಕಾರಿಗಳು ಅವರನ್ನು ತಡೆಯಲು ಆಜ್ಞಾಪಿಸುತ್ತಾರೆ. ಪ್ರತಿಬಂಧಕ ಹುಕುಮನ್ನು ನೀವರಿತಿರುವಿರೇನು ? ಎಂಬ ಪ್ರಶ್ನೆಯೂ ಮಾಡಲ್ಪಡುತ್ತದೆ. ಸ್ವಯಂಸೇವಕರು 'ಅಹುದು,' ಎಂದು ಉತ್ತರಿಸಿದ ಕೂಡಲೆ, ಅಧಿಕಾರಿಗಳು 'ನೀವು ಸೆರೆಯಾಳಾದಿರಿ,' ಎಂದು ಹೇಳುತ್ತಾರೆ. ಇಷ್ಟಕ್ಕೆ ಎಲ್ಲ ವಿಧಿ ಮುಗಿಯಿತು. ಅವರನ್ನು ಹಿಂಬಾಲಿಸಿ ಬಂದ ಜನಸಮೂಹವೆಲ್ಲ ಅಲ್ಲಲ್ಲೆ ತಡೆದು, ಚದರಿಹೋಗುತ್ತದೆ. ಧ್ವಜವನ್ನು ಹಾರಿಸುತ್ತ ಬಂದ ಸ್ವಯಂಸೇವಕರನ್ನು ಇಬ್ಬ ಪೋಲೀಸರು ಹಿಂದೆಡೆಗೆ ಒಯ್ದು ನಿಲ್ಲಿಸಿ, ಎಲ್ಲ ಸತ್ಯಾಗ್ರಹಿಗಳನ್ನು ಕೈದು ಮಾಡಿದ ಮೇಲೆ, ಅವರನ್ನು ಪೋಲೀಸ ಸ್ಟೇಶನಿಗೆ ಒಯ್ಯುತ್ತಾರೆ."

ಶೇಟ ಜಮನಾಲಾಲಜಿ, ಶ್ರೀ| ಭಗವಾನದಿನ, ಮಿ| ಅವಾರಿ, ಮೊದಲಾದವರು ಏರ್ಪಡಿಸಿದ ಸತ್ಯಾಗ್ರಹ ಸಂಗ್ರಾಮದ ಸಾತ್ವಿಕ ಸ್ವರೂಪವಿದು. ಇಂಥ ಸಾತ್ವಿಕ ರೂಪವಿರುವದರಿಂದಲೇ ರಾಷ್ಟ್ರಧ್ವಜದ ಸತ್ಯಾಗ್ರಹದಿಂದ ಅಖಿಲ ಭರತಖಂಡದಲ್ಲಿ, ವಿಶೇಷವಾಗಿ ಮಧ್ಯಪ್ರಾಂತದಲ್ಲಿ ಅಧಿಕಾರಿಗಳು ಮಾನದಿಂದ, ಗೌರವದಿಂದ ಹೇಗೆ ಪಾರಾಗುವದೆಂಬ ವಿವಂಚನೆಯಲ್ಲಿ ಬಿದ್ದಿರುವರು. ವಿಚಾರಿ ನೇಮಸ್ತರಿಗೆ ನೌಕರಶಾಹಿಯ ಅನ್ಯಾಯವನ್ನು ಪ್ರಾಮುಖ್ಯವಾಗಿ ಪ್ರದರ್ಶಿಸಿದ್ದಾದರೂ, ಸತ್ಯಾಗ್ರಹದ ಈ ಸಾತ್ವಿಕ ಸ್ವರೂಪವೇ.

---

೨. ರಾಷ್ಟ್ರಧ್ವಜದ ಮೆರವಣಿಗೆಯಿಂದ ನಾಗಪುರದ ಸಿವ್ಹಿಲ ಲ್ಯಾನುಗಳಲ್ಲಿ ವಾಸಮಾಡಿಕೊಂಡಿರುವ ಎಂಗ್ಲೋ-ಇಂಡಿಯನ್ನರಿಗೆ ಚಿತ್ತಪ್ರಕೋಪವಾಗಿ ಶಾಂತತಾಭಂಗವಾಗಬಹುದೆಂದು ಡಿ| ಮೆಜಿಸ್ಟ್ರೇಟರು ಕ್ರಿ. ಪ್ರೊ. ಕೋ. ೧೪೪ ರನ್ವಯ ಪ್ರತಿಬಂಧಕ ಹುಕುಮನ್ನು ಹೊರಡಿಸಿರುವರು. ಇಂಥ ಒಂದು ಪ್ರಕಾರವು ಬೆಝುಂಟ ಅಮ್ಮನವರ ಹೋಮರೂಲ ಚಳವಳಿಯಲ್ಲಿ ಸಂಭವಿಸಿತ್ತು. ಮದ್ರಾಸ ಇಲಾಖೆಯ ಎರೋಡಿನ ಶ್ರೀ| ಎಸ್. ವ್ಹಿ. ಅಯ್ಯರರವರ ಮೇಲೆ ಹೋಮರೂಲ ಪತಾಕೆಯನ್ನು ಹಾರಿಸಬಾರದೆಂದು ಕ್ರಿ. ಪ್ರೊ. ಕೋ. ೧೪೪ ಕಲಮಿನನ್ವಯ ಹುಕುಮು ಹೊರಟಿತು. ಶ್ರೀ| ಅಯ್ಯರರು ಅದನ್ನು ಮುರಿದು, ಹೋಮರೂಲ ಪತಾಕೆಯನ್ನು ಮೆರಿಸಿದರು. ಕೂಡಲೆ, ತಪಶೀಯಾಗಿ, ಅವರಿಗೆ ಶಿಕ್ಷೆಯಾಯಿತು. ಆಗಿನ ಕಾಲವು, ಕೋರ್ಟು ಬಹಿಷ್ಕಾರದ್ದಲ್ಲ. ಶ್ರೀ| ಅಯ್ಯರರು ಹ್ಯಾಕೋರ್ಟಿಗೆ ರಿವ್ಹಿಜನ್ ಅರ್ಜಿಯನ್ನು ದಾಖಲ ಮಾಡಿದರು. ನ್ಯಾಯಮೂರ್ತಿ ಸದಾಶಿವ ಅಯ್ಯರರು ಶ್ರೀ| ಅಯ್ಯರರ ಪ್ರಕರಣವನ್ನು ಕೇಳಿಕೊಂಡು, ಶಿಕ್ಷೆಯನ್ನು ರದ್ದುಪಡಿಸಿದರು. ಆ ತೀರ್ಪಿನಲ್ಲಿ ಧ್ವಜದ ಮೆರವಣಿಗೆಯ ಬಗ್ಗೆ ನ್ಯಾಯ ಮೂರ್ತಿಗಳು ನುಡಿದ ನುಡಿಗಳು ಸರ್ವಮಾನ್ಯವಾಗುವವು. ನ್ಯಾಯಮೂರ್ತಿಗಳು ನುಡಿಯುವದೇನಂದರೆ:— "ಹೋಮರೂಲ ಧ್ವಜವನ್ನು ಮೆರಿಸುವದು ಪೂರ್ಣವಾಗಿ ಕಾಯಿದೇಶೀರ ಕೃತ್ಯವದೆ. ಆದಷ್ಟು ಯತ್ನಮಾಡಿ, ಕಾಯಿದೇಶೀರ ಕೃತ್ಯಗಳನ್ನೆಲ್ಲ ಪುರಸ್ಕಾರ ಮಾಡುವದು ಮೆಜಿಸ್ಟ್ರೇಟರ ಕರ್ತವ್ಯವು. ತಲೆತಿರುಕ ಮಂದಿಗಳು ಶಾಂತತಾಭಂಗವನ್ನು ಮಾಡಲು ಹವಣಿಸಿದರೆ, ಅದೊಂದು ಅವತ್ಕಾಲವೆಂದು ಮೆಜಿಸ್ಟ್ರೇಟರು ಎಣಿಸಲಾಗದು. ತತ್ಕಾಲಕ್ಕೆ ಒದಗುವ ಶಾಂತತಾಭಂಗವನ್ನು ನಿರ್ಬಂಧಿಸುವಷ್ಟು ಪೋಲೀಸರಿಲ್ಲದಿದ್ದರೆ, ಹಾಗು ಶಾಂತತಾಭಂಗವನ್ನು ಮಾಡಲಿಚ್ಛಿಸುವವರನ್ನು ಕಂಡುಹಿಡಿದು, ಅವರಿಂದ ಅಥವಾ ಅವರ ಗೌಡರಿಂದ ಶಾಂತತಾರಕ್ಷಕ ಜಾಮೀನು ತೆಗೆದುಕೊಳ್ಳುವಷ್ಟು ಅವಕಾಶವಿಲ್ಲದಿದ್ದರೆ, ಮೆಜಿಸ್ಟ್ರೇಟರು ಕಾಯಿದೇಶೀರ ಕೃತ್ಯಗಳನ್ನು ಪ್ರತಿಬಂಧಿಸಬಹುದು. ಆರೋಪಿಗಳ ಅಂಬೋಣ ಕೇಳಿಕೊಳ್ಳದೆ, ೧೪೪ ಕಲಮಿನನ್ವಯ ಹೊರಡಿಸಿದ ಹುಕುಮಿನಲ್ಲಿ ಆಧಾರಭೂತ ಕಾರಣಗಳನ್ನು ನಮೂದಿಸುವಾಗ, ಶಾಂತತಾಭಂಗ ಮಾಡಲಿಚ್ಛಿಸುವ ತಲೆತಿರುಕರಿಗೆ ಪ್ರತಿಬಂಧಿಸಲು ತತ್ಕಾಲಕ್ಕೆ ಮೆಜಿಸ್ಟ್ರೇಟರು ಅಸಮರ್ಥರಾದ ಪರಿಸ್ಥಿತಿಯನ್ನೂ ನಮೂದಿಸಬೇಕು." ನ್ಯಾಯಮೂರ್ತಿ ಸದಾಶಿವ ಅಯ್ಯರರು ಸರಕಾರಿ ನ್ಯಾಯಾಸನದಿಂದ ವ್ಯಕ್ತಪಡಿಸಿದ ವಿಚಾರಗಳಿವು. ಹೋಮರೂಲ ಧ್ವಜದ ಮೆರವಣಿಗೆಯೂ, ರಾಷ್ಟ್ರಧ್ವಜದ ಮೆರವಣಿಗೆಯೂ ಒಂದೇ ತರಗತಿಯೊಳಗಿನವು. ನಾಗಪುರದ ನೌಕರಶಾಹಿಗೆ ತತ್ಕಾಲಕ್ಕೆ ಒದಗುವ ಶಾಂತತಾಭಂಗವನ್ನು ವಾರಿಸಲು ಎಪ್ರಿಲ ತಾ. ೧೩ ನೇಗೆ ಸಾಮರ್ಥ್ಯವಿದ್ದಿಲ್ಲೆಂದು ಹುಕುಮು ಹೊರಡಿಸಬೇಕಾಯಿತೆಂದು ಒಮ್ಮೆ ಗೃಹೀತ ಹಿಡಿದರೂ, ಮೇ ತಾ. ೧ನೇ ವರೆಗೆ ಪೋಲೀಸ, ಸೈನಿಕ ಮೊದಲಾದವರನ್ನು ಕರತರಿಸಿ, ರಾಷ್ಟ್ರಧ್ವಜದ ಮೆರವಣಿಗೆಯಿಂದ ಶಾಂತತಾಭಂಗ ಮಾಡುವಷ್ಟು ಪ್ರಕ್ಷುಬ್ಧ ಮಂದಿಗಳಿಗೆ ಅಡ್ಡಗಟ್ಟಿ, ರಾಷ್ಟ್ರಧ್ವಜವನ್ನು ಮೆರೆಯಗೊಡಲು ಸಾಕಷ್ಟು ಅವಧಿಯಿತ್ತು. ಆದರೂ, ಹಾಗೆ ಮಾಡದೆ, ಪುನಃ ಸತ್ಯಾಗ್ರಹಿಗಳನ್ನೇ ದಂಡಿಸುವದನ್ನು ನೋಡಿ, ಸನ್ಯಾಸಿಗೆ ಶೂಲಕ್ಕೇರಿಸಿದ ಪುರಾತನ ಸಂಸ್ಥಾನದ ನೆನಪು ಅನೇಕರಿಗಾದರೆ, ಅದೇನು ಆಶ್ಚರ್ಯದ ಮಾತಲ್ಲ. ನೌಕರಶಾಹಿಯು ತಾನೆ ಸ್ಥಾಪಿಸಿದ ನ್ಯಾಯಕೋರ್ಟುಗಳ ದೊಡ್ಡ ಗೌರವ ಮಾಡುತ್ತದೆ. ಅದೇ ಈಗ ತನ್ನ ನ್ಯಾಯಾಸನವು ಕೊಟ್ಟ ನಿರ್ಣಯಗಳನ್ನು ಎಷ್ಟರಮಟ್ಟಿಗೆ ಆದರಿಸುತ್ತದೆ ನೋಡಿರಿ.

---

೩. ೧೯೨೧ ನೇ ಇಸವಿಯ ಡಿಶಂಬರದ ಹಳೇವಾದದ ಮೇಲೆ ಪಂಡಿತ ಮಾಲವೀಯಜೀಯವರು ತಮ್ಮ ಖುಲಾಸೆಯನ್ನು ಪ್ರಕಟಿಸಿರುವರು. ರಾಜಪುತ್ರರ ಆಗಮನವನ್ನು ಪುರಸ್ಕರಿಸುವ ಮೂಲ ಹೇತುವು ಸರಕಾರ ಹಾಗು ಪ್ರಜೆಗಳೊಳಗೆ ಉಂಟಾಗಿರುವ ವೈಮನಸ್ಸನ್ನು ದೂರಪಡಿಸಬೇಕೆಂದು ಪಂಡಿತಜೀಯವರ ಇಚ್ಛೆಯಿತ್ತು. ಯುವರಾಜರನ್ನು ಹಿಂದೀ ಪ್ರಜೆಗಳು ಸಂತೋಷದಿಂದ ಸ್ವಾಗತೀಕರಿಸಬೇಕೆಂಬ ಇರಾದೆಯು ಸರಕಾರಕ್ಕೂ ಇರಬೇಕಾದ ಮೂಲಕ, ಪಂಜಾಬ-ಖಿಲಾಫತ ಬೇಡಿಕೆಗಳನ್ನು ಪ್ರಜಾಮತಕ್ಕನುಸರಿಸಿ, ಸರಕಾರವು ದೂರಪಡಿಸುವದೆಂದು ಪಂಡಿತಜೀಯವರ ಅಂದಾಜಿತ್ತು. ಈ ಅಂದಾಜುಗಳಂತೆ ಸರಕಾರವು ತಕ್ಕ ಉಪಾಯಗಳನ್ನು ಕೈಕೊಳ್ಳಲಿಲ್ಲೆಂದು ಪಂಡಿತಜೀಯವರೇ ಒಪ್ಪುತ್ತಾರೆ. ಶಿಷ್ಟಮಂಡಳ ಕಳಿಸುವ ಸೂಚನೆಯು ಸರ್ವಾಧಿಪತಿಗಳಿಂದ ಉಪಸ್ಥಿತವಾಗಿದ್ದಿಲ್ಲ. ತಮ್ಮ ಒಬ್ಬ ಮಿತ್ರರಿಂದಲೇ ಎಂದು ಪಂಡಿತಜೀಯವರು ಅಶ್ವಾಸಿಸುತ್ತಾರೆ.

ಪಂಡಿತಜೀಯವರ ದೇಶಸೇವೆಯನ್ನು ಅರಿತವರಿಗೆ ಅವರು ಎಂದೂ ಸರಕಾರಿ ಪಕ್ಷವನ್ನು ವಹಿಸಿಕೊಂಡು, ಪ್ರಜಾದ್ರೋಹ ಮಾಡಲಾರರೆಂದು ಹೇಳಬೇಕಾಗಿಲ್ಲ. ಪರಿಷತ್ತನ್ನು ನೆರೆಯಿಸುವ ವಿಚಾರವು ಸಹ ಸರ್ವಾಧಿಪತಿಗಳಿಗೆ ಗ್ರಾಹ್ಯವಿದ್ದಿಲ್ಲ. ಅವರು ಮಾಡಿದ ಸೂಚನೆಗಳಿಗೂ ಸರ್ವಾಧಿಪತಿಗಳು ಮೊದಲು ಒಪ್ಪಲಿಲ್ಲ. ಮೂರು ಸರ್ತಿ ಪಂಡಿತಜೀಯವರು ಈ ಯೋಜನೆಯಿಂದ ದೇಶಹಿತವಾಗುವದೆಂದು ಮನವೊಲಿಸಿದ ಮೇಲೆ, ಸರ್ವಾಧಿಪತಿಗಳು ಶಿಷ್ಟಮಂಡಳದ ಹೇಳಿಕೆಯನ್ನು ಕೇಳಿಕೊಳ್ಳಲು ಒಪ್ಪಿಕೊಂಡರು. ಆದರೆ, ಪರಿಷತ್ತಿನ ಸ್ಥಲ, ಕಾಲಗಳು ನಿರ್ದಿಷ್ಟವಾಗದ ಮೂಲಕ, ಪಂಡಿತಜೀಯವರ ಒಪ್ಪಂದದ ಮಾತುಕತೆಯು ಬಿದ್ದುಹೋಯಿತು. ಮಹಾತ್ಮರ ತಪ್ಪಿನಿಂದ ಈ ಸುಯೋಗವು ವಾಸ್ತವ್ಯ ಕಳಕೊಂಡಿತೆಂಬ ದೇಶಬಂಧುಗಳ ಪಿಧಾನವು ವಸ್ತುಸ್ಥಿತಿನಿದರ್ಶಕವಲ್ಲೆಂದು ಇನ್ನು ಪ್ರಜೆಗಳು ತಿಳಿಯಲೇನೂ ಅಡ್ಡಿ ಇಲ್ಲ.

---

೪. ಯರವಡಾ ಜೈಲಿನಲ್ಲಿ ಮುಳಸಿ ಸತ್ಯಾಗ್ರಹಿಗಳನ್ನು ಪ್ರತಿಬಂಧಿಸಿರುವರು. ಅವರ ಪೈಕಿ ಡಾ। ದೇವ ಮೊದಲಾದ ಆರು ಮಂದಿಗಳಿಗೆ ಗುರುವಾರ ತಾ ೨೮ ನೇಗೆ ಇಪ್ಪತ್ತು ಬೆತ್ತ ಪ್ರಹಾರ ಮಾಡಿದರೆಂಬ ಸುದ್ದಿಯನ್ನು ಅದೇ ಜೈಲಿನೊಳಗಿಂದ ಬಿಡುಗಡೆ ಹೊಂದಿದ ಶ್ರೀ। ಕಾಳೆಕರರವರು ಪ್ರಕಟಿಸಿರುವರು. ಶಂಕರರಾವ ದೇವರು, ಮಹಾರಾಷ್ಟ್ರ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಕಾರ್ಯದರ್ಶಿಗಳೂ, ಸತ್ಯಾಗ್ರಹ ಮಂಡಳದ ಚಿಟಣೀಸರೂ ಇದ್ದು, ಮುಳಸಿಯಲ್ಲಿ ಸತ್ಯಾಗ್ರಹ ಮಾಡಿ ನೆರೆಮನೆಯನ್ನು ಸೇರಿದ ದೇಶಸೇವಕರು. ಓರ್ವ ಮಂಜಾಂಗದಂತೆ, ಜೂನ ತಾ ೨೪ ನೇ ರವಿವಾರಕ್ಕೆ ಆಷಾಢ ಏಕಾದಶಿ ಉಪೋಷಣವನ್ನು ಅಂದಿಗೆ ಅವರು ಪಾಲಿಸಿದ್ದರು. ಸೋಮವಾರಕ್ಕೆ ಇಪ್ಪತ್ತೈದು ರತ್ತಲು ಧಾನ್ಯವನ್ನು ಬೀಸಿಕೊಡುವ ಬದಲು, ಇಪ್ಪತ್ತೇ ರತ್ತಲು ಬೀಸಿದರಂತೆ. ಕಡಿಮೆ ಕೆಲಸ ಮಾಡಿದ ಬಗ್ಗೆ ೪ ದಿನಗಳ ವರೆಗೆ ಇರುಳಿನಲ್ಲಿ ಕೈಬೇಡಿ ಹಾಕಬೇಕೆಂದು ಹುಕುಮು ಆಯಿತು. ಸಾಮರ್ಥ್ಯವಿದ್ದಷ್ಟು ಕೆಲಸವನ್ನು ಪ್ರಾಮಾಣಿಕತನದಿಂದ ಮಾಡಿದರೂ, ಅಧಿಕಾರಿಗಳು ಅನ್ಯಾಯದಿಂದ ಶಿಕ್ಷೆ ಕೊಟ್ಟದ್ದರಿಂದ, ಆ ಶಿಕ್ಷೆಯನ್ನನುಭವಿಸಲು ಶ್ರೀ। ಶಂಕರರಾಯರು ಒಪ್ಪಲಿಲ್ಲ. ಬಲಾತ್ಕಾರದಿಂದ ಸೋಮವಾರ ರಾತ್ರೆ ಬೇಡಿಗಳು ಹಾಕಲ್ಪಟ್ಟವು. ನಿಷೇಧವೆಂದು, ಶ್ರೀ। ದೇವರು ಮಂಗಳವಾರಕ್ಕೆ ಅನ್ನತ್ಯಾಗ ಮಾಡಿದರು. ಬುಧವಾರಕ್ಕೆ ಮತ್ತೊಂದು ಶಿಕ್ಷೆಯೆಂದು ಜೇಲದ ಅಂಗಿಗಳನ್ನು ಧರಿಸಲು ಅಪ್ಪಣೆಯಾಯಿತು. ಶಂಕರರಾಯರು ಒಪ್ಪದಿದ್ದರೂ, ಜೈಲರರು ಬಲಾತ್ಕಾರದಿಂದ ಅರಿವೆಗಳನ್ನು ತೊಡಿಸಿದರು. ಗುರುವಾರಕ್ಕೆ ಅನ್ನತ್ಯಾಗ ಮಾಡಿದ್ದಲ್ಲದೆ, ಕೆಲಸವನ್ನೂ ಮಾಡಲು ಶ್ರೀ। ದೇವರು ಒಪ್ಪಲಿಲ್ಲ. ಅವರಿಗೆ ೩೦ ಬೆತ್ತ ಪ್ರಹಾರಗಳಾದವು. ಇದೇ ಶಿಕ್ಷೆಯು ಇತರ ಐವರಿಗೂ ಆಯಿತು. ಬೆತ್ತಪ್ರಹಾರದ ಸುದ್ದಿಯು ಜೈಲಿನಲ್ಲಿ ಹಬ್ಬಿದ ಕೂಡಲೆ, ಶ್ರೀ। ಅಣ್ಣಾಸಾಹೇಬ ದಾಸ್ತಾನೆ ಮೊದಲಾದ ೩೩ ಸತ್ಯಾಗ್ರಹಿಗಳು ಸಹಾನುಭೂತಿಯಿಂದ ಕೆಲಸವನ್ನು ಇನಕಾರ ಮಾಡಿದರು. ಕೆಲವರು ಅನ್ನತ್ಯಾಗವನ್ನೂ ಮಾಡಿರುವರು. ಈಗ ಇವರಿಗೆಲ್ಲರಿಗೆ ಬೇರೆ ಬೇರೆಯಾಗಿ, ಭಿನ್ನ, ಭಿನ್ನ ಕೋಣೆಗಳಲ್ಲಿ ಪ್ರತಿಬಂಧಿಸಿರುವರು.

---

೫. ಸತ್ಯಾಗ್ರಹಿಗಳಂಥ ಮಾನ್ಯ ದೇಶಸೇವಕರಿಗೆ ಬೆತ್ತಪ್ರಹಾರ ಮಾಡುವ ಕಾರಣವನ್ನರಿತುಕೊಳ್ಳಲು ಮಹಾರಾಷ್ಟ್ರ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಪ್ರಸಿದ್ಧಿ ಖಾತೆಯ ಕಾರ್ಯದರ್ಶಿಗಳು ಜೈಲರರಿಗೆ ಸಂದರ್ಶಿಸಿ ಪೃಚ್ಛಿಸಿದರು. ಜೈಲಿನಲ್ಲಿ ಸದರ ಕೈದಿಗಳು ಒಳಸಂಚು ಮಾಡಿಕೊಂಡು, ಬಂಡಾಯ ಎಬ್ಬಿಸಿದ್ದರಿಂದ, ಬೆತ್ತಪ್ರಹಾರ ಮಾಡಬೇಕಾಯಿತೆಂದು ಜೈಲರರು ಖುಲಾಸೆ ಮಾಡಿದರು. ಒಳಸಂಚು, ಬಂಡಾಯದ ಸ್ವರೂಪವನ್ನು ನಾವು ಮೇಲೆ ವಿವರಿಸಿರುವೆವು. ಆದರ ಮೇಲಿಂದ ಜೈಲರರಿಗೆ ತಾರತಮ್ಯ ಭಾವವು ಸಹ ಇಲ್ಲೆಂದು ವ್ಯಕ್ತವಾಗುತ್ತದೆ. ಬೆತ್ತಪ್ರಹಾರ ಮಾಡುವ ಪದ್ಧತಿಯು ತೀರ ಕಾಡು ಯುಗದ್ದೆಂದು ಅನೇಕರು ಅಭಿಪ್ರಾಯಪಟ್ಟಿರುವರು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅತಿ ನಿಂದ್ಯ, ನೈತಿಕ ಅಧಃಪಾತದ ಅಪರಾಧಿಗಳಿಗೆ ಮಾತ್ರ, ಈ ಶಿಕ್ಷೆಯನ್ನು ಕೊಡಬೇಕೆಂದು ನಿರ್ಬಂಧವಿದೆ. ಹಿಂದುಸ್ಥಾನದಲ್ಲಿ ಯುರೋಪಿಯನ್‌ರಿಗೆ ಈ ಶಿಕ್ಷೆಯನ್ನು ಕೊಡಲಾಗದೆಂದು ಸ್ಪಷ್ಟವಾಗಿ ನಿರ್ದೇಶಿಸಿರುವರು. ನೌಕರಶಾಹಿಯು ವರ್ಣಭೇದನಿರ್ಮೂಲನೆಗಾಗಿ ನೇಮಿಸಿದ ಕಮಿಟಿಯು ಸಹ ಈ ಪಕ್ಷಪಾತವನ್ನು ಅಳಿಯಲು ಸಮರ್ಥವಾಗಲಿಲ್ಲ. ಸತ್ಯಾಗ್ರಹಿಗಳಂಥ ಮಾನ್ಯ ದೇಶಸೇವಕರಿಗೆ, ಸುಸಂಸ್ಕೃತರೆಂದು ಮೆರೆಯುವ ಅಧಿಕಾರಿಗಳು ಬೆತ್ತಪ್ರಹಾರದಂಥ ಕಾಡು ಶಿಕ್ಷೆಯನ್ನು ಕೊಡಲು ನಾಚುವದಿಲ್ಲ. ವರ್ಣಭೇದ ನಿರ್ಮೂಲನೆಗಾಗಿ ನೌಕರಶಾಹಿಯು ಪೇಚಾಡುತ್ತಿದೆಂದು ಬಾಯಿಯಿಂದ ಹೇಳುವದೇ ಹೊರತು, ಕೃತಿಯಿಂದ ಮುಂದರಿಯಲು ಬಹಳೇ ಹಿಂದೆ ಮುಂದೆ ನೋಡುತ್ತದೆ. ಸತ್ಯಾಗ್ರಹಿಗಳು, ಕೊಟ್ಟ ಶಿಕ್ಷೆಯನ್ನು ಸಂತೋಷದಿಂದ ಅನುಭವಿಸಿ, ನೌಕರಶಾಹಿಯ ಅನೀತಿಯನ್ನು ಹೊರಗೆಡಹಲು ಟೊಂಕಕಟ್ಟಿದ ಶೂರ ಶಿಪಾಯಿಗಳು. ಅವರ ಶಿಕ್ಷೆಯಿಂದ, ಪೀಡನೆಯಿಂದ ನೌಕರಶಾಹಿಯು ತನ್ನ ಗೋರಿಯನ್ನೇ ಅಗಿಯುತ್ತಿದೆಂದು ಯಾರಾದರೂ ಉದ್ಗರಿಸಿದರೆ, ಅದು ಅಯಥಾರ್ಥವಾಗುವದೇನು ?

---

೬. ಧಾರವಾಡದ ವಿಖ್ಯಾತ ಗೋಳೀಬಾರ ಖಟ್ಲೆಯಲ್ಲಿ ಶಿಕ್ಷೆಯನ್ನನುಭವಿಸಿ, ಶ್ರೀ। ಮಧ್ವರಾಯರು ಪುನಃ ಕರ್ನಾಟಕಕ್ಕೆ ಬಂದು ೧ ವರ್ಷವು ಸಹ ಮುಗಿಯಲಿಲ್ಲ. ಅಷ್ಟರೊಳಗೆ ಧಾರವಾಡದ ಅಧಿಕಾರಿಗಳು, ಮಾನ-ಧನ ಅಸಹಯೋಗಿಗಳು ಜಾಮೀನು ಕೊಡುವದಿಲ್ಲೆಂಬುದನ್ನರಿತು ಕ್ರಿ. ಪ್ರೊ. ಕೋ. ೧೦೮ ನೇ ಕಲಮಿನನ್ವಯ ನೋಟೀಸು ಹೊರಡಿಸಿ, ಅವರನ್ನು ಪುನಃ ವಿಜಾಪುರದ ಸ್ವರಾಜ್ಯಾಶ್ರಮಕ್ಕೆ ಕಳಿಸಿರುವರು. ಹಳ್ಳಿಗಳಲ್ಲಿದ್ದು, ಶಾಂತರೀತಿಯಿಂದ, ಸ್ವೋದಾಹರಣದಿಂದ ಹಳ್ಳಿಗರ ಸ್ಥಿತಿಯನ್ನು ಸುಧಾರಿಸುವದು ಅವರ ಧ್ಯೇಯವಿತ್ತು. ಅದಕ್ಕಾಗಿ ಅವರು ನೇಯುವ ಕಲೆಯನ್ನು ಕಲಿತುಕೊಂಡು, ತಡಸಾಳಕ್ಕೆ ವಾಸ್ತವ್ಯ ಮಾಡಲು ಹೋಗಿದ್ದರು. ಮಧ್ವರಾಯರಿಗೆ ಇಷ್ಟ-ಮಿತ್ರರು ಜಾಮೀನು ಕೊಟ್ಟು ಪಾರಾಗಿರೆಂದು ಬಹು ಪರಿಯಿಂದ ಬೋಧಿಸಿದರು. ಪುತ್ರವಿರಹವನ್ನು ಸಹಿಸಲಾರದ ವೃದ್ಧ ಪಿತನು ನೀನು ಸೆರೆಯಾಳಾಗಬೇಡೆಂದು ಪುತ್ರನಾದ ಮಧ್ವನಿಗೆ ಸಹಜ ಪ್ರೇಮದಿಂದ ಬೇಡಿಕೊಂಡನು. ಮಧ್ವರಾಯರು ಎಲ್ಲ ಮಾಯಾಪಾಶಗಳನ್ನು ದೂರ ಸಾರಿ, ಅಸಹಯೋಗಿಗಳಿಗುಚಿತವಾದ ಮಾನ-ಧನ ದೇಶಾಭಿಮಾನಿಗಳಿಗೆ ಯೋಗ್ಯವಾದ ವರ್ತನವನ್ನು ಅನುಸರಿಸಿ ಸೆರೆಮನೆಯ ಕಷ್ಟವನ್ನೇ ಅಂಗೀಕರಿಸಿದರು. ದೇಶಸೇವೆಗಾಗಿ ಬದ್ಧಕಂಕಣರಾದವರಿಗೆ ಸೆರೆಮನೆಯ ಭೀತಿಯು ಎಳ್ಳಷ್ಟು ಸಹ ಇಲ್ಲ. ಸಾವಿರಾರು ಮಂದಿಗಳಿಗಿರುವ ಮಾಯಾಪಾಶಗಳನ್ನು ಸಹ ದೇಶ ಸೇವೆಗೆ ಅಡ್ಡ ಬರದಂತೆ ಒಮ್ಮೆಲೇ ಕತ್ತರಿಸಿ, ಅಸಹಯೋಗ ವ್ರತವನ್ನು ನಿಷ್ಕಲಂಕ ಕಾಪಾಡಲು ಟೊಂಕಕಟ್ಟಿದ, ನಿರ್ಧಾರವೃತ್ತಿಯ ಮಂದಿಗಳಿಗೆ ಬಂಧಿಸುವದರಿಂದ ಅಧಿಕಾರಿಗಳ ಅನ್ಯಾಯದ ಪ್ರದರ್ಶನವಾಗುತ್ತದೆ ಹೊರತು, ವೃತ್ತಿಯು ಅಳಿಯುವದಿಲ್ಲೆಂಬುದನ್ನು ಶ್ರೀ। ಮಧ್ವರಾಯರು ಕೃತಿಯಿಂದ ಸಿದ್ಧಪಡಿಸಿರುವರು. ಇಂಥ ದೃಢಮನಸ್ಕ ದೇಶಸೇವಕರನ್ನು ನಿರ್ಮಿಸುವ ಭರತಖಂಡದ ಉದ್ಧಾರವು ಶೀಘ್ರವೇ ಕೊನೆಗಾಣುವದೆಂದು ಪ್ರತ್ಯೇಕ ಹೇಳಬೇಕೇನು ?

---

೭. ಗೋಕರ್ಣದಲ್ಲಿ ಕಳೆದ ಫೇಬ್ರುವರಿ ತಿಂಗಳಿನಲ್ಲಿ ಹೊಸದಾಗಿ ಮ್ಯುನಿಸಿಪಾಲಿಟಿಯಿಂದ ಏರ್ಪಡಿಸಿದ ಔಷಧಾಲಯವು ಸ್ಥಾಪಿತವಾಗಿ, ಡಾ। ಲೋಕೂರರವರು ಅಲ್ಲಿ ನೇಮಿಸಲ್ಪಟ್ಟಿದ್ದರು. ಡಾಕ್ಟರರು ಗೋಕರ್ಣದಲ್ಲಿ ಅಲ್ಪಾವಧಿಯಲ್ಲಿಯೇ ತಮ್ಮ ರೋಗ ಚಿಕಿತ್ಸೆಯಿಂದ ಲೋಕಪ್ರಿಯರಾಗಿದ್ದರು. ಇವರ ಸ್ವಭಾವವು ಸಹ ಚಿತ್ತಾಕರ್ಷಕವಿತ್ತು. ಇಂಥ ಡಾಕ್ಟರರನ್ನು ೫-೬ ತಿಂಗಳುಗಳಲ್ಲೇ ವರ್ಗಾಯಿಸಲ್ಪಟ್ಟದ್ದರಿಂದ, ಅವರು ಗೋಕರ್ಣ ಕ್ಷೇತ್ರವನ್ನು ತ್ಯಜಿಸಬೇಕಾಯಿತೆಂದು ತಿಳಿಯುತ್ತದೆ. ಡಾ। ಲೋಕೂರರವರಿಗೆ ವರ್ಗವಾದ ಸುದ್ದಿ ಕೇಳಿದೊಡನೆ, ಗೋಕರ್ಣಸ್ಥರು ವರಿಷ್ಠಾಧಿಕಾರಿಗಳಿಗೆ ಮನವಿಗಳನು ಸಾದರಪಡಿಸಿದ್ದಲ್ಲದೆ, ತಂತಿಮಾಡಿ, "ಸದ್ಯಕ್ಕೆ ಡಾಕ್ಟರರನ್ನು ಸ್ಥಲಾಂತರ ಮಾಡಬೇಡಿರಿ. ಅರ್ಜಿಗಳನ್ನು ವಿಚಾರಿಸಿರಿ" ಎಂದು ಪ್ರಾರ್ಥಿಸಿದರು. ಆದರೆ, ಅದೇನೂ ಕೇಳದೆ, ಡಾ। ಲೋಕೂರರವರನ್ನು ವರ್ಗ ಮಾಡಿದ ಹುಕುಮನ್ನು ಸ್ಥಿರಪಡಿಸಿದರು. ಅಸ್ಪತ್ರಿಯು ಹೊಸದಿದ್ದು, ಅದನ್ನು ಲೋಕೂರರಂಥ ಲೋಕಪ್ರಿಯ ಡಾಕ್ಟರರಿಗೇ ವಹಿಸಿದ್ದರೆ, ಅದು ವಿಶೇಷ ಭದ್ರವಾಗುತ್ತಿತ್ತು. ಮಳೆಗಾಲದಲ್ಲಿ ಥಕ್ಕನೆ ವರ್ಗ ಮಾಡಿದ್ದನ್ನು ನೋಡಿ, ಅಖಿಲ ಗೋಕರ್ಣಸ್ಥರು ಚಕಿತರಾಗಿರುವರು. ಅರ್ಜಿಗಳನ್ನು ಅಖಿಲ ಗೋಕರ್ಣಸ್ಥರು ಒಮ್ಮನಸ್ಸಿನಿಂದ ಮಾಡಿದರೂ, ಅವರ ವರ್ಗವನ್ನು ಸದ್ಯಕ್ಕೆ ತಹಕೂಬ ಇಡದಿದ್ದರ ಮೇಲಿಂದ ಅಧಿಕಾರಿಗಳು ಇಷ್ಟು ಸಾಮಾನ್ಯ ಕೆಲಸಗಳಲ್ಲಿ ಸಹ, ಲೋಕಮತವನ್ನು ಬದಿಗೊತ್ತುತ್ತಾರೆಂದು ಮನವರಿಕೆಯಾಗಿ, ನೌಕರಶಾಹಿಯ ಏಕತಂತ್ರಿ ಕಾರಭಾರದ ಇದೊಂದು ಉದಾಹರಣೆಯೆಂದು ಹೇಳತೊಡಗಿದರೇನು ಆಶ್ಚರ್ಯ ?

ಸ್ಥಾನಿಕ ವೃತ್ತಾಂತ.

ಕುಮಟಾ—ಮೇಘರಾಜನು ಸಾಕು ಬೇಕು ಮಾಡಿಬಿಟ್ಟನು. ನೀರಿಲ್ಲೆಂದು ಕೆಲ ದಿವಸಗಳ ಹಿಂದೆ ಬಳಲುವವರಿಗೆಲ್ಲ ನೀರಿನಲ್ಲಿ ತೇಲಿಸಿಬಿಟ್ಟನು. ಶನಿವಾರದಿಂದ ಮಂಗಳವಾರ ರಾತ್ರೆವರೆಗೆ ಏಕಸಮನೆ ಬೇಸರಬಿಡದೆ, ಮೇಘರಾಜನು ವರುಣಾಸ್ತ್ರವನ್ನು ಹೂಡಿ, ಊರಲ್ಲೆಲ್ಲ

ಜಲರಾಶಿಯನ್ನುಂಟುಮಾಡಿದನು. ಕೆರೆ, ಬಾವಿಗಳೆಲ್ಲ ತುಂಬಿ ತುಳುಕುತ್ತಿರುವವು. ಹೊಳೆ, ಹಳ್ಳಗಳಿಗೆಲ್ಲ ನೆರೆ ತುಂಬಿ ಹೋಗಿದೆ. ನೆರೆಯ ಅಘನಾಶಿನೀ ನದಿಗೆ ಮಣಕಿ ಹಾರಿಯಲ್ಲಿ ೧-೧॥ ಆಳು ನೀರೇರಿ, ಬಹಳೇ ಪೇಚಾಟವಾಯಿತು. ೧೯೧೧ ರಲ್ಲಿ ಬಂದ ನೆರೆಯ ಪುನರ್ದರ್ಶನವು ಈ ವರ್ಷ ಸಂಭವಿಸಿತೆಂದು ಅನೇಕರು ಹೇಳುತ್ತಾರೆ. ರವಿವಾರಕ್ಕೆ ಏರಲಾರಂಭಿಸಿದ ನೀರು ಸೋಮವಾರ ಮುಂಜಾವಿನೊಳಗೆ ನೆರೆಹೊರೆಯಲ್ಲಿದ್ದ ಬಡವರ ಮನೆಗಳನ್ನು ಸೇರಿ, ಗೊಂದಲವೆಬ್ಬಿಸಿತು. ಹೆಂಡರು-ಮಕ್ಕಳನ್ನು ಪರಮೇಶ್ವರನ ರಕ್ಷಣೆಗೆ ಬಿಟ್ಟುಕೊಟ್ಟು, ಗಂಡಸರು ದೋಣಿ ಹತ್ತಿ ತಮ್ಮ ತಮ್ಮ ಮನೆಗಳನ್ನು ಕಾಯುತ್ತಿದ್ದರು. ಕೆಲ ಸಾಹಸಿಗರು ಹೊಳೆಯಲ್ಲಿ ತೇಲಿ ಬಂದ ದೊಡ್ಡ ದೊಡ್ಡ ಕಟ್ಟಿಗೆಯ, ನಾಟುಗಳನ್ನು ಹಿಡಿಯುತ್ತಿದ್ದರು. ಮನೆಗಳ ಛಪ್ಪರ, ಕಿಡಿಕಿ-ಬಾಗಿಲುಜೋಡು, ಕಟ್ಟಿಗೆ ಮೊದಲಾದವುಗಳೆಲ್ಲ ಜೋರು ಜೋರಿನಿಂದ ಹೋಗುತ್ತಿದ್ದವು. ಸೋಮವಾರ ಸಾಯಂಕಾಲದೊಳಗೆ ನೀರು ಮತ್ತೂ ಏರಿತು. ಕೆಲ ಮನೆಗಳು ನೀರಿನ ಜೋರು ತಾಳಲಾರದೆ, ಹೊಳೆಯ ಹರತಕ್ಕೆ ಬಲಿಬಿದ್ದವು. ಮಂಗಳವಾರ ಮಧ್ಯರಾತ್ರಿ ಸುಮಾರಿಗೆ ಮೇಘರಾಜನು ಕರುಣೆಯಿಂದ ಅಸ್ತ್ರವನ್ನು ಒರೆಯಲ್ಲಿ ಹಾಕಿದನೇಬಂತೆ ಭಾಸವಾಯಿತು. ನೀರು ಇಳಿಯುತ್ತ, ಇಳಿಯುತ್ತ ನಿನ್ನೆ ಮುಂಜಾವಿಗೆ ನೀರು ನಿಯಂತ್ರಿತ ಪಾತ್ರದೊಳಗಿಂದ ಹರಿಯಹತ್ತಿತು. ಗದ್ದೆಗಳಲ್ಲೆಲ್ಲ ಮೊಣಕಾಲು ಪರ್ಯಂತ ರಾಡಿಯೇ ರಾಡಿ. ಬೀಜ, ಸಸಿಗಳೆಲ್ಲ ಹುಗಿದು, ಮಣ್ಣುಪಾಲಾಗಿವೆ. ಈಗ ಪುನಃ ಬೀಜ ಬಿತ್ತುವ ಎಂದರೆ, ಯಾರಿಗೂ ಸಂಚಯವಿಲ್ಲ. ಏನು ಮಾಡುವದು ಎಂಬುದು ದೇಸಾಯಿಗಾರರೆಲ್ಲರ ವಿವಂಚನೆ. ಇತ್ತ ಮನೆಮಾರು ಬಳದು ಹೋಯಿತು. ಮುಂದೆ ಉಣ್ಣುವ ಕಥೆಯೆಂಬುದು ಇದೇ. ರವಿವಾರ ಒಂದು ತುತ್ತು ಉಂಡು, ಮನೆಯನ್ನು ಕಾಯಹತ್ತಿದವರು ನಿನ್ನೆ ಕೂಳು ತಿಂದರು. ಹೆಂಡರು ಮಕ್ಕಳ ಅವಸ್ಥೆಯು ಶ್ರೀದೇವರಿಗೇ ಗೋಚರ ! ದೀವಗಿಯೊಳಗಿನ ಸರಕಾರಿ ಡಿಪೋದೊಳಗಿಂದ ೫೦-೬೦ ನಾಟುಗಳು ಬಳದು ಹೋಗಿವೆಯಂತೆ. ಫಾರೆಸ್ಟ ಆಫೀಸರರು ಗಂಟು ಕಟ್ಟಿಕೊಂಡು ನಾಟುಗಳ ನಂಬರುಗಳನ್ನು ಹುಡುಕಲು ವ್ಯಗ್ರರಾಗಿರುವರು. ಐಗಳಕುರ್ವೆಯಲ್ಲಂತು ಜನರು ಈ ೨-೩ ದಿನಗಳ ವರೆಗೆ ಮೊಣಕಾಲು ನೀರಿನಲ್ಲಿ ನಿಂತು, ಕಾಲಕ್ಷೇಪ ಮಾಡಬೇಕಾಯಿತಂತೆ. ಅಷ್ಟು ಕರುಣಾಸ್ಪದ ಸ್ಥಿತಿಯು ಅವರದಾಗಿತ್ತು. ಉಪ್ಪಿನಪಟ್ಟಣದಲ್ಲಿ ೩ ಆಳು ನೀರೇರಿತ್ತಂತೆ. ಧಕ್ಕೆಯ ಮೇಲಿದ್ದ ೭-೮ ಅಂಗಡಿಗಳು ಬಳದು ಹೋದವು. ಟಪಾಲಿನ ದುರವಸ್ಥೆ. ಸೋಮವಾರ ಸಾಯಂಕಾಲಕ್ಕೆ ಬರುವ ಕಾರವಾರ-ಶಿರ್ಸಿ ಟಪಾಲುಗಳು ಮಂಗಳವಾರ ಪ್ರಾತಃಕಾಲಕ್ಕೆ ಬಂದವು. ಮಂಗಳವಾರ ಸಂಜೆಗೆ ಬರುವ ಟಪಾಲು ನಿನ್ನೆ ಬೆಳಿಗ್ಗೆ ೮-೯ ಘಂಟೆಗೆ ಬಂತು. ಹೊನ್ನಾವರದ ಟಪಾಲಿನ ಹಾಡೂ ಇದೆ. ಅಂತು ಮೇಘರಾಜನು ೪-೫ ದಿನಗಳಲ್ಲಿ ನೀರು ಬೇಕೆನ್ನುವವರಿಗೆ, ಇನ್ನು ಬೇಡ, ಒಮ್ಮೆ ಕೈ ಬಿಗಿ ಹಿಡಿ, ಇಷ್ಟು ಹೇಳಿಸಿಬಿಟ್ಟನು. ಹೊಲಗೆಲಸಗಳೆಲ್ಲ ಹಾಗೆಯೇ ಬಿದ್ದಿವೆಯೆಂದು ಪ್ರತ್ಯೇಕ ಹೇಳಬೇಕಾದವಶ್ಯವಿಲ್ಲ. ಈ ವಾರದಲ್ಲಿ ಬಿದ್ದ ಮಳೆಯ ವಿವರ:— ಶುಕ್ರವಾರ ೧-೪೬. ಶನಿವಾರ ೩-೪೨. ಆದಿತ್ಯವಾರ ೬-೮೧. ಸೋಮವಾರ ೧೦-೮೩. ಮಂಗಳವಾರ ೫-೬೬. ಬುಧವಾರ ೬-೪೨, ಗುರುವಾರ ೨-೧೭ ಇಂಚು, ಅಂತು ಈ ತಿಂಗಳಲ್ಲಿ ೪೨-೭೪ ಇಂಚು ಮಳೆ ಬಿತ್ತು. ಒಟ್ಟು ಮಳೆಯು ೬೭-೪೨ ಇಂಚಾಯಿತು.

ಶ್ರೀ ವಿಠೋಬ ದೇವಸ್ಥಾನದ ಭಜನೆ ಸಪ್ತಾಹದ ಮಂಗಲೋತ್ಸವವು ಮೊನ್ನೆ ಮಂಗಳವಾರಕ್ಕೆ ಸಾಂಗವಾಗಿ ನೆರವೇರಿತು.

ಸಾಭಾರ ಸ್ವೀಕಾರ.

ಶ್ರೀಕೃಷ್ಣ ಸಂದೇಶ— ಕಾರಹುಣ್ಣಿವೆಯ ಸಂಚಿಕೆ. ಸಂಪಾದಕ— ಶ್ರೀ॥ ಶ್ರೀನಿವಾಸಾಚಾರ್ಯ ಬುಲಿಗ್ರಾ, ಬಾಗಲಕೋಟ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ. ೩—೪—೦.

ಮಾತೃಭೂಮಿ— ಕಾರಹುಣ್ಣಿವೆಯ ಸಂಚಿಕೆ. ಸಂಪಾದಕ ಕವಿಭೂಷಣ ಕೃ॰ ಶ್ರೀ. ಬೆಟಗೇರಿ ಹನುಮಾನ ಬೀದಿ, ಬೆಳಗಾಂವ, ವಾರ್ಷಿಕ ಚಂದಾ ರೂ. ೩—೮—೦.

ಕಾರವಾರ— ಮಳೆಯ ಜೋರು. ೫-೬ ದಿನಗಳಿಂದ ತೆರಪಿಲ್ಲದೆ ಮಳೆ ಸುರಿಯುತ್ತದೆ. ನಿತ್ಯವೂ ೮-೯ ಇಂಚು ಮಳೆ ಸುರಿಯಿತು. ಇಲ್ಲಿಯ ಕಾಲುವೆಗಳೆಲ್ಲ ತುಂಬಿ ತುಳುಕುತ್ತಿವೆ. ಸೋಮವಾರಕ್ಕೆ ಒಂದೆಡೆಯಲ್ಲಿ ಮಾರ್ಗದ ಬದಿಗಿರುವ ಮನೆಯ ಗೋಡೆಯು ಬಿದ್ದು, ಕಾಲುವೆಗಳ ನೀರನ್ನು ಅಡ್ಡಗಟ್ಟಿತು. ಬಡ ಕ್ರಿಶ್ಚನರ ಮನೆಯಲ್ಲಿ ಜಲಪ್ರವೇಶವಾಯಿತು. ಕೂಡಲೆ, ಅಸಿಸ್ಟಂಟ ಕಲೆಕ್ಟರರು ಸ್ಥಳಕ್ಕೆ ಹೋಗಿ ನೀರಿನ ಪ್ರವಾಹಕ್ಕೆ ದಾರಿ ಮಾಡಿಕೊಟ್ಟು, ಬಡವರ ಮನೆಗಳನ್ನು ರಕ್ಷಿಸಿದರು.

ಉಪ್ಪಿನ ಸಾವುಕಾರರ ಸೋಸಾಯಟಿಯು ಸಂಘವು ಉಪ್ಪಿನ ದರವನ್ನು ೨ ಬಿಲ್ಲಿಯಿಂದ ಏರಿಸಿದೆ. ಈಗ ಉಪ್ಪಿನ ಮಣಕ್ಕೆ ರೂ. ೩—೬—೬ ಬೆಲೆ ಬೀಳುತ್ತದೆ. ಕಲೆಕ್ಟರರ ಮಧ್ಯಸ್ಥಿಕೆಯ ಪರಿಣಾಮವೇನಿದು ?

ರವಿವಾರಕ್ಕೆ ಇಲ್ಲಿಯ ಸಹಕಾರಿ ಸಂಘದ ವಾರ್ಷಿಕ ಸಾಧಾರಣ ಸಭೆಯು ನೆರೆದು, ಜಮಾಖರ್ಚ ಪತ್ರಕವು ಮಂಜೂರು ಮಾಡಲ್ಪಟ್ಟಿತು. ಕಾರಕೂನರ ಸಂಬಳ ಏರಿಕೆಯಾದದ್ದಲ್ಲದೆ, ಮೂರನೇ ಕಾರಕೂನನೊಬ್ಬನು ನೇಮಿಸಲ್ಪಟ್ಟನು. ಕಾರ್ಯಕಾರಿ ಕಮಿಟಿಯಲ್ಲಿ ಮೂವ ಸಭಾಸದರು ಹೆಚ್ಚಿಸಲ್ಪಟ್ಟರು.

ಹೊನ್ನಾವರ— ಈ ವಾರದಲ್ಲಿ ಮಳೆಯು ತೆರಪಿಲ್ಲದೆ ಜೋರು ಬಿತ್ತು. ನಿನ್ನೆ ತಾ. ೯ಕ್ಕೆ ಒಂದೇ ದಿವಸ ೯ ಇಂಚು ಮಳೆ ಬಿತ್ತಂತೆ.

ರಸ್ತೆಯ ಗಟಾರಗಳು ಸ್ವಚ್ಛ ಮಾಡದೆ ಇರುವದರಿಂದ, ಆಡದಾಂಚೆಗಳು ಹಾಕದೆ ಇದ್ದದರಿಂದ ಮಾರ್ಗದಲ್ಲಿ ಬಹಳ ಕಡೆಯಲ್ಲಿ ದೊಡ್ಡ ದೊಡ್ಡ ಕೊರಕಲು ಬಿದ್ದಿವೆ.

ಕಳೆದ ತಾ. ೧ ನೇಯಿಂದ ತಾಲೂಕಾ ಕಾಂಗ್ರೆಸ ಕಮಿಟಿಯವರು ಕೈರಾಟ ನೂಲನ್ನು ಕೊಳ್ಳಲಿಕ್ಕೆ ಶುರು ಮಾಡಿರುತ್ತಾರೆ. ಹತ್ತಿಯು ಶ್ರೀ ಶಿವಾನಂದ ಟ್ರೇಡಿಂಗ ಯೂನಿಯನ್ ಅವರಲ್ಲಿ ಸಿಗುವದು. ನೂಲು ಸಹ ಅವರೇ ಕೊಳ್ಳಬೇಕಾಗಿ ಠರಾಯಿಸಿರುತ್ತಾರೆ. ನೂಲು ರತ್ಲ ೧ಕ್ಕೆ ರೂ. ೧-೦-೦ ರಂತೆ ಕೊಳ್ಳುವರು.

ಕಳೆದ ವಾರದ ಬಾತ್ಮಿಗಳು.

ಅಂಕೋಲಾ— ದಿನೇ ದಿನೇ ಮೋಟಾರಗಳ ಸುಳಿದಾಟವು ಹೆಚ್ಚಾಗುತ್ತ ನಡೆದದೆ. ರಸ್ತೆಯ ಮೇಲೆ ಮೋಟಾರಗಳು ಕಾಯಂ ನಿಂತಿರುತ್ತವೆ. ಬಡ ಗಾಡಿಕಾರನು ರಸ್ತೆಯ ಮೇಲೆ ಸಾಮಾನು ತುಂಬಲಿಕ್ಕೆ ತನ್ನ ಗಾಡಿಯನ್ನು ೫ ಮಿನಿಟು ಬಿಟ್ಟರೆ ಸರ್ರಿ ಗಾಡಿ ಬಗ್ಗೆ ಪಂಚನಾಮೆ ಮಾಡುತ್ತೇನೆಂದು ಬೆದರಿಸುವ ಪೋಲೀಸನಿಗೆ, ರಸ್ತೆಯ ಮೇಲೆ ೨೪ ತಾಸು ನಿಂತಿರುವ, ರಾತ್ರೆ ವೇಳ್ಯಕ್ಕೆ ದೀಪದ ವಗೈರೆ ಇಲ್ಲದೆ ಇರುವ ಮೋಟಾರಗಳು ಕಾಣಿಸದ ಅಂಗಿಕವೇನು ?

ನಮ್ಮಲ್ಲಿಯ ಅರ್ಬನ್ ಕೋಆಪರೇಟಿವ್ ಸೊಸೈಟಿಯ ವಾರ್ಷಿಕ ಜನರಲ್ ಸಭೆಯು ಇದೇ ಕಳೆದ ತಾರೀಖು ೧ನೇ ಜುಲೈಗೆ ನೆರೆದು, ಹಳೇ ಮೆಂಬರರೇ ಹೊಸ ಮೆಂಬರರಾಗಿ ಚುನಾಯಿಸಲ್ಪಟ್ಟರು. ಒಬ್ಬರು ಹಾಜರಿಲ್ಲದರಿಂದ ಸದ್ರಿಯವರ ಜಾಗೆಯ ಮೇಲೆ ಅವರ ದಾಯಾದ್ಯರೊಬ್ಬರು ನೇಮಿಸಲ್ಪಟ್ಟರು.

ಹೊನ್ನಾವರ— ತಾ. ೧೧-೬-೨೩ ನೇಯಿಂದ ತಾ. ೩-೭-೨೩ ನೇ ವರೆಗೆ ಮಳೆ ೨೮ ಇಂಚು ಬಿತ್ತು. ಒಕ್ಕಲಿಗರ ಗದ್ದೆನಟ್ಟಿಗೆ ಶುರುವಾಗಿಯದೆ.

ಮಾವಿನಗುಂಡಿಯಿಂದ ಮಲ್ಲಿಮನೆ ವರೆಗೆ ೪-೫ ಮೈಲು ಮಾರ್ಗದ ಮೇಲೆ ಮರಗಳು, ಗುಡ್ಡಗಳು ಕುಸಿದು ಬಿದ್ದು, ರಹದಾರಿಯಲ್ಲ ಬಂದ ಬಿದ್ದಿದೆ. ಸಾಗರ, ಶಿವಮೊಗ್ಗೆ ಬದಿಯಿಂದ ಬಂದ ಬಂದ ಗಾಡಿಗಳೆಲ್ಲ ಗೆರಸಪ್ಪೆಗೆ ಸಾಗಿಹೋಗಲು ಅಸಮರ್ಥವಾಗಿ ಹಿಂತಿರುಗಿ ಹೋದವು.

ಫಾರೆಸ್ಟ ಕಂಟ್ರಾಕ್ಟದಾರ ಮಲ್ಲಗಿರಿ ಗಣಪತ ಕಾಮತ ಇವರ ನಾಟುಗಳು ಜೋರು ಮಳೆಯ ನೀರಿನಿಂದ ಬಳದು ಹೋದವು. ಮಾಲಕರಿಗೆ ೮೦೦ ರೂಪಾಯಿ ತನಕ ಲುಕ್ಸಾನ ಆಗಿರಬಹುದಾಗಿ ತೋರುತ್ತದೆ.

ಸಿದ್ದಾಪುರ— ತಾ. ೨೪—೬—೨೩ನೇ ರವಿವಾರ ಮಳೆ ಅತಿಶಯ ಬಿದ್ದು ಕೆಲವು ಕಡೆಗಂತೂ ಅತಿಶಯ ಹಾನಿಯಾಗಿದೆ. ಗೇರಸೊಪ್ಪ ರಸ್ತೆಯಲ್ಲಿಯಂತೂ ಗಾಡಿಗಳು, ಮನುಷ್ಯರೂ ಸಹ ಓಡಾಡಲಿಕ್ಕೆ ಬಾರದಂತೆ ಮರಗಳೂ, ವ ಬಂಡೆಗಳೂ, ಗುಡ್ಡೆಯೂ ಕಡಕೊಂಡು ಬಿದ್ದಿವೆ.

ತಾ. ೨೮—೬—೨೩ನೇ ಗುರುವಾರ ವಟಸಾವಿತ್ರಿ ಕಥೆಯ ಮೇಲೆ ಶ್ರೀ॥ ವೇ॥ ಪುತ್ರಭಟ್ಟರು ಸರಸವಾದ ಕೀರ್ತನೆಯನ್ನು ರಾತ್ರಿಯ ಶಾಲೆಯಲ್ಲಿ ಮಾಡಿದರು. ಕೀರ್ತನೆಗೆ ಭಗಿನೀವರ್ಗವು ಸಾಧಾರಣ ೨೦೦ರ ಮೇಲ್ಪಟ್ಟು ಇತ್ತು. ಪುರುಷರೂ ಅಜಮಾಸ ಅಷ್ಟೇ ನೆರೆದಿದ್ದರು.

ನಾಗಪೂರ ಸತ್ಯಾಗ್ರಹಕ್ಕೆ ಮೊದಲನೇ ತಂಡಿಗೆ ೪ ಜನರನ್ನೂ ವ ೨ನೇ ತಂಡಿಗೆ ಅಷ್ಟೇ ಜನರನ್ನೂ ಮತ್ತು ಮೂರನೇ ತಂಡನ್ನೂ ಕೊಡಲು ಸಿದ್ದಾಪುರ ತಾಲೂಕ ಕಾಂಗ್ರೆಸ ಕಮಿಟಿಯವರು ಸ್ವಯಂಸೇವಕರನ್ನು ಸಿದ್ಧಮಾಡಿಟ್ಟಿದ್ದಾರೆ.

ಹಳಿಯಾಳ— ನಮಗೆ ತಿಳಿಸಲಿಕ್ಕೆ ಅತ್ಯಂತ ವಿಷಾದವೆನಿಸುತ್ತದಲ್ಲಾ:— ಮೊನ್ನೆ ರವಿವಾರ ತಾ. ೧—೭—೧೯೨೩ ನೇ ದಿವಸ ಬೆಳಿಗ್ಗೆ ೮ ಘಂಟೆಗೆ ಇಲ್ಲಿಯ ಉದಾರ ಮತ್ತು ಸನ್ಮಾನನೀಯರಾದಂಥ ಶ್ರೀಮಂತ ದತ್ತೋಬರಾವ ದೇಶಪಾಂಡೆ ಇವರು ಕಾಲಾಧೀನರಾದರು. ಅವರು ತಮ್ಮ ಉದಾತ್ತ ಮತ್ತು ಅಂತಃಕರಣಯುಕ್ತ ಸ್ವಭಾವದಿಂದ ಎಲ್ಲರ ಪ್ರೇಮವನ್ನು ಗಳಿಸಿದ್ದರು. ಅವರು ಅಗರ್ಭಶ್ರೀಮಂತರಿದ್ದಾಗ್ಯೂ, ಬಡವರ ಗೋಳನ್ನೂ ಅರಿತವರಿದ್ದರು. ದೇವರು ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ.

ವೈ॥ ವಾ॥ ಶ್ರೀಮಂತರ ಅಕಾಲ ನಿಧನದ ಬಗ್ಗೆ ದುಃಖ ವ್ಯಕ್ತ ಮಾಡುವದಕ್ಕೆ ಅದೇ ದಿವಸ ಹಳಿಯಾಳ ನಾಗರಿಕರ ಸಭೆಯು ಡಾ॥ ಚಿತಂಬರ ಗೋವಿಂದಪ್ಪಾ ಅನೇಗುಂದಿ ಇವರ ಅಧ್ಯಕ್ಷತೆಯ ಕೆಳಗೆ ಕೂಡಿ, ಅದರಲ್ಲಿ ನಾಗರಿಕರ ಪತಿಯಿಂದಲೂ, ಇಂಗ್ಲಿಷ ಸ್ಕೂಲ ಕಮಿಟಿಯ ಪತಿಯಿಂದಲೂ ದುಃಖಪ್ರದರ್ಶನಪರ ಠರಾವುಗಳು ಸರ್ವಾನುಮತದಿಂದ ಪಾಸಮಾಡಲ್ಪಟ್ಟವು.

ಹತ್ತು ಹನ್ನೆರಡು ದಿವಸಗಳಿಂದ ಮಳೆಯಿಲ್ಲದ್ದರಿಂದ ರೈತರು ಅದರ ಹಾದಿಯನ್ನು ಚಾತಕ ಪಕ್ಷಿಯಂತೆ ನೋಡುತ್ತಿದ್ದರು. ಈಗ ಎರಡು ದಿವಸಗಳಿಂದ ಮಳೆಯಾಗಿ ಎಲ್ಲರಿಗೆ ಹರ್ಷವುಂಟುಮಾಡಿರುತ್ತದೆ. ಹವೆಯು ಇನ್ನೂ ದೂಷಿತವಿದ್ದು, ಪ್ಲೇಗರಾಜನು ಇನ್ನೂ ಕಾಲುತೆಗೆಯಲಿಲ್ಲ.

ವಿವಿಧ ಸಂಗ್ರಹ.

ಲಾಲಾಜೀಯವರಗೂಡ ಮುಲಾಖತಿನ ನಿರಾಕರಣೆ

ಪಂಡಿತ ಮದನ ಮೋಹನ ಮಾಲವೀಯಜೀಯವರು ಪಂಜಾಬ ಸರಕಾರದ ಚೀಫ ಸೆಕ್ರೆಟರಿಗಳಿಗೆ ಲಾಲಾಲಜಪತರಾಯರನ್ನು ಜೈಲಿನಲ್ಲಿ ಸಂದರ್ಶಿಸಲು ಅವಕಾಶ ಕೊಡಬೇಕೆಂದು ಬೇಡಿದರು. ಆದರೆ, ಈ ಮುಲಾಖತಿನ ಸುಪ್ರಸಂಗವು ಒದಗಿಬರಲಿಲ್ಲ. ಸರಕಾರವು ಮುಲಾಖತನ್ನು ಕೊಳ್ಳಲು ಅಪ್ಪಣೆಯನ್ನೀಯಬೇಕಾದರೆ, ನಾಲ್ಕು ಶರ್ತುಗಳನ್ನು ಮಾಲವೀಯಜೀಯವರೂ, ಲಾಲಾಜೀಯವರೂ ಪಾಲಿಸಬೇಕೆಂದರು. ಅವು ಯಾವವೆಂದರೆ — (೧) ಮುಲಾಖತು ನಡೆಯುವವರೆಗೆ ಜೈಲು ಸುಪರಿಂಟೆಂಡೆಂಟರು ಹಾಜರಿರುವರು. (೨) ಸಂಭಾಷಣವು ಆಕ್ಷೇಪಾರ್ಹವೆಂದು ಅವರಿಗೆ ಕಂಡು ಬಂದಲ್ಲಿ, ಮುಲಾಖತನ್ನು ಅಲ್ಲಿಂದಲ್ಲೇ ನಿಲ್ಲಿಸುವ ಅಧಿಕಾರವು ಅವರಿಗಿರುವದು. (೩) ಈ ಮುಲಾಖತು ಕೈದಿಗಳಿಗೆ ಕೊಡುವ ಮಾಸಿಕ ಮುಲಾಖತು ಎಂದು ಎಣಿಸಲ್ಪಡುವದು. ಜುಲೈ ತಿಂಗಳಲ್ಲಿ ಕೈದಿಯ ಆಪ್ತೇಷ್ಟರಿಗೆ ಬೇರೆ ಮುಲಾಖತು ಸಿಗಲಿಕ್ಕಿಲ್ಲ. (೪) ಮುಲಾಖತಿನ ನಡೆದ ಮಾತುಕತೆಯನ್ನು ವೃತ್ತಪತ್ರಗಳಲ್ಲಿ ಪ್ರಕಟಿಸಕೂಡದು. ಇದನ್ನು ಮೀರಿ, ಪ್ರಕಟಿಸಿದ್ದಲ್ಲಿ, ಕೈದಿಗೆ ೬ ತಿಂಗಳ ೧೯ ವರೆಗೆ ಬೆಟ್ಟಿಯಾಗಲು ಅಸ್ಪದ ಕೊಡಲಿಕ್ಕಿಲ್ಲ. ಈ ಶರ್ತುಗಳು ಅವಮಾನಕಾರಕವೆಂದು ಲಾಲಾಜೀಯವರು ಪಂಡಿತಜೀಯವರ ದರ್ಶನ ಪಡೆಯಲು ಒಲ್ಲೆಗಳೆದರು. ಪಂಡಿತಜೀಯವರು ಇಂಥ ಶರ್ತುಗಳಿಗೊಳಗಾಗಿ ಲಾಲಾಜೀಯವರನ್ನು ಬೆಟ್ಟಿಯಾಗಲು ಒಲ್ಲಲಿಲ್ಲ.

* *

ಕೌನ್ಸಿಲು ಪ್ರವೇಶದ ಚೇಷ್ಟೆ

ಮಲಬಾರದಲ್ಲಿ ಜಮೀನದಾರ-ಸಾವಕಾರರಿಗೂ, ಒಕ್ಕಲಿಗರಿಗೂ ಬಹು ದೊಡ್ಡ ಹಗೆ. ಸಾವುಕಾರರಿಗೆ ಜೆನ್ಮಿ ಎಂದು ಹೆಸರು. ಒಕ್ಕಲಿಗರಿಗೆ 'ಕುಟಿಯನ್' ಎನ್ನುವರು. ಜೆನ್ಮಿಯವರ ಹಿಂಸೆಯನ್ನು ತಾಳಲಾರದೆ, ಕುಟಿಯನ್‌ರು ದಂಗೆಯನ್ನು ಸಹ ಎಬ್ಬಿಸ್ಸಿ ಮಾಡಲು ಪ್ರವೃತ್ತರಾಗುತ್ತಾರೆ. ಮಲಬಾರದ ದಂಗೆಯ ಮೂಲ ಕಾರಣವು ಜೆನ್ಮಿ-ಕುಟಿಯನ್‌ರೊಳಗಿನ ಹಗೆಯೇ ಎಂದು ಒಬ್ಬರು ಹೇಳುವರು. ಹೀಗಿರಲು, ಕೌನ್ಸಿಲು ಪ್ರವೇಶದ ಈ ಸಮಯದಲ್ಲಿ ಬಗದು ಚಮತ್ಕಾರವು ಸಂಭವಿಸಿದೆ. ಎಲ್ಲ ಉಮೇದವಾರರೂ ಈಗ ಕುಟಿಯನ್‌ರ ಕಷ್ಟನಿವಾರಣೆ ಮಾಡುವದಕ್ಕಾಗಿ ತಾವು ಕೌನ್ಸಿಲ ಪ್ರವೇಶಿಸುತ್ತೇವೆಂದು ನುಡಿದು, ತಮಗೆ ಮತ ಕೊಡಿರೆಂದು ಅಜ್ಞ ಕುಟಿಯನ್‌ರಿಗೆ ಪ್ರಮಗೊಳಿಸುತ್ತಿರುವರು. ಎರಡು ಸಭಾಸದರನ್ನು ಕಳಿಸುವ ಹಕ್ಕು ಮಲಬಾರಕ್ಕಿದೆ. ಈ ಜಾಗಗಳಿಗಾಗಿ ೧೦ ಮಂದಿ ಉಮೇದವಾರರು ಮುಂದಾಗಿ ಬಂದಿರುವರು. ಇದರಲ್ಲಿ ಕುಟಿಯನ್‌ರಿಂದ ವೋಟು ಪಡೆದು, ನಾಯಕರಾಗಲು ಕೆಲ ಜೆನ್ಮಿ-ಸಾವುಕಾರರು ಇರುವರು. ಇವರು ಈಗ ಉದಾತ್ತ ವಿಚಾರಗಳನ್ನೇ ಪ್ರದರ್ಶಿಸಿ, ಕುಟಿಯನ್‌ರ ಉದ್ಧಾರಕ್ಕಾಗಿ ಟೊಂಕಕಟ್ಟಿರುವರು, ಬೆಕ್ಕು ಇಲಿಯ ಪ್ರಾಣರಕ್ಷಣಕ್ಕಾಗಿ ಪೇಚಾಡುವಂತಾಯಿತು.

* *

ಅಂಧ ಬಾಲಗಣಿತ ಶಾಸ್ತ್ರಜ್ಞ.

ಪಾಲಂಕೋಟಾದಿಂದ 'ಮುಂಬಯಿ ಕ್ರೊನಿಕಲಿ'ಗೆ ಹಬ್ಬ ಬಾತ್ಮೀದಾರರು ತಿಳಿಸುವದೇನಂದರೆ:— "ಇಲ್ಲಿ ಎರಡೂ ಕಣ್ಣು ಕುರುಡಾದ ಒಬ್ಬ ಹುಡುಗನಿರುವನು. ಇವನ ಪ್ರಾಯವು ೧೫ ವರುಷ. ಆದರೆ, ಬೇರಿಜು, ವಜಾಬಾಕಿ, ಗುಣಾಕಾರ, ಭಾಗಾಕಾರ ಇವುಗಳ ಬಗ್ಗೆ ಯಾವ ನಮೂನೆಯ ಪ್ರಶ್ನೆ ಹಾಕಿದರೂ, ಅವನು ಮನಸ್ಸಿನಲ್ಲಿಯೇ ಅವನ್ನು ಬಿಡಿಸಿ, ಸರಿಯಾದ ಉತ್ತರಗಳನ್ನು ಕೊಡುತ್ತಾನೆ. ಒಂದು ವಾರ ಮೊದಲು, ಶಿನವೆಲ್ಲಿನ ಡಿಪ್ಟಿ ಜನಲ್ ಆಫೀಸರರು ಇಲ್ಲಿ ಆಗಮಿಸಿದ್ದರು. ಅವರು ೫-೬ ಪ್ರಶ್ನೆಗಳನ್ನು ಈ ಹುಡುಗನಿಗೆ ಕೇಳಿದರು. ಹುಡುಗನಿಗೆ ಕೇಳುವ ಮೊದಲು, ಆ ಲೆಕ್ಕಗಳನ್ನು ಸಾಹೇಬರು ಸ್ವತಃ ಪರಿಶ್ರಮಬಟ್ಟು ಮಾಡಿ ನೋಡಿದ್ದರು. ಸರಿ ಉತ್ತರಗಳನ್ನು ಕೇಳಿದೊಡನೆ, ಅವರು ವಿಸ್ಮಿತರಾದರು." ಮದ್ರಾಸು ಗಣಿತ ಶಾಸ್ತ್ರಜ್ಞರ ಜನ್ಮಭೂಮಿಯೆಂಬಂತೆ ಭಾಸವಾಗುತ್ತದೆ.

* *

ಒಂದೇ ವ್ಹೋಟು.

ವರಿಷ್ಠ ಕಾಯಿದೆ ಕೌನ್ಸಿಲಿನ ಸಭಾಸದರಾದ ಡಾ। ಚೌಧರಿಯವರು ತಮ್ಮ ಸಭಾಸದತ್ವಕ್ಕೆ ರಾಜಿನಾಮೆ ಕೊಟ್ಟಿದ್ದರು. ಆಗ ಆ ಬಗ್ಗೆ ಜೂನ ತಾ. ೨೨ ರಲ್ಲಿ ಒಂದು ಒಳಚುನಾವಣೆಯಾಯಿತು. ಚಾಂದಪುರದಲ್ಲಿ ಒಬ್ಬೊಂಟಿಗರೇ ಮತ ಕೊಟ್ಟರೆಂದು ಜಾಹೀರಆಗಿದೆ. ಕೌನ್ಸಿಲು ಪ್ರವೇಶವನ್ನು ಬಹುಜನಸಮಾಜವು ಪುರಸ್ಕರಿಸದೆಂಬದಕ್ಕೆ ಇದೊಂದು ಉದಾಹರಣೆಯು.

* *

ಬರ್ಮಾದಲ್ಲಿಯೂ ಇದೇ ಕಥೆ.

ಇಲ್ಲಿಯ ಕೌನ್ಸಿಲ ಆಫ್ ಸ್ಟೇಟಿಗೆ ನಾಮದಾರರನ್ನು ಆರಿಸುವದಕ್ಕಾಗಿ ಒಂದು ಒಳಚುನಾವಣೆಯು ಆಯಿತು. ೧೬ ಸಾವಿರ ಮಂದಿಗಳಿಗೆ ಮತಕೊಡುವ ಹಕ್ಕಿತ್ತು. ಚುನಾವಣೆಯಲ್ಲಿ ಭಾಗ ತೆಗೆದುಕೊಂಡವರು ಒರೇ ೬೫೪ ಮಂದಿಗಳು. ಇವರಲ್ಲಿ ೩೭ ಮಂದಿಗಳಿಗೆ ಮತದಾನದ ಅಧಿಕಾರವಿದ್ದಿಲ್ಲೆಂದು ಠರಾವಾಗಿದೆ. ಇದೇ ಪ್ರಾಂತದಲ್ಲಿ ೬೩೦ ಮಂದಿಗಳು ನಾಮದಾರರನ್ನು ಆರಿಸಿದರು. ಅನೇಕ ಪೋಲಿಂಗ ಸ್ಟೇಶನುಗಳಲ್ಲಿ ಒಬ್ಬರೂ ಮತಕೊಡಲಿಲ್ಲ. ಕೆಲವೆಡೆಗಳಲ್ಲಿ ಒಂದೊಂದೇ ಮತವು ಬಿತ್ತು. ಮುಂದಲೇ ಬದಿಯ ಅಂದರೆ, ಉತ್ತರ ಬರ್ಮಾ ಪ್ರಾಂತದವರು ಈ ಕೌನ್ಸಿಲು ಚುನಾವಣೆಯಲ್ಲಿ ತೀರ ಉಪೇಕ್ಷೆ ಮಾಡಿದರು.

* *

ಸೀತಾವಿಲಾಸಂ ಸಹಕಾರಿ ಸಂಘ.

ತ್ರಾವಣಕೋರಿನೊಳಗಿನ ಮನ್ನರ ಎಂಬ ಊರಿನಲ್ಲಿ ಸ್ತ್ರೀಯರು ನಡಿಸುವ ಒಂದು ಸಹಕಾರಿ ಸಂಘವಿದೆ. ಇದರ ಚಾಲಕರೆಲ್ಲ ಸ್ತ್ರೀಯರೇ. ನಾಯರ ಸ್ತ್ರೀಯರಿಗೆ ಉಪಯುಕ್ತ ಉದ್ದಿಮೆಗಳನ್ನು ಕೈಕೊಳ್ಳುವರೆ, ಉತ್ತೇಜನವನ್ನೀಯಲು ಈ ಸಂಸ್ಥೆಯು ಸ್ಥಾಪನ ಹೊಂದಿದೆ. ಇದರ ಮೊದಲನೇ ವಾರ್ಷಿಕ ಸಭೆಯು ಕಳೆದ ಜೂನ ತಿಂಗಳಿನಲ್ಲಿ ಜರುಗಿತು. ನಾಯರ ಸ್ತ್ರೀಯರಿಗೆ ಸಮಾಜದಲ್ಲಿ ನಡೆದಾಡಲು ವಿಶೇಷ ಸ್ವಾತಂತ್ರ್ಯವಿರುವದರಿಂದ, ಇಂಥ ಸಾಹಸವನ್ನು ಕೈಕೊಳ್ಳಲು ಅವರು ಸಮರ್ಥರಾದರು.

* *

ಭಗೂರ ನಿವಾಸಿಕರ ಹರತಾಳದ ಫಲ.

ಕಟ್ಟಕಡೆಗೆ, ಭಗೂರ ನಿವಾಸಿಗಳ ಕಷ್ಟಗಳು ಪರಿಹಾರವಾದವು. ಭಗೂರ ಹಳ್ಳಿಯನ್ನು ಸೈನ್ಯಖಾತೆಯ ಅಧಿಕಾರದಿಂದ ತಪ್ಪಿಸಲು ಹಿಂದೀ ಸೈನ್ಯಖಾತೆಯು ಒಪ್ಪಿಕೊಂಡಿದೆ. ಆದರೆ, ಈ ಹಳ್ಳಿಯಲ್ಲಿರುವ ಸೈನಿಕರ ಆರೋಗ್ಯಹಾನಿಯಾಗುವಂಥ ಯಾವದೇ ಪ್ರಕಾರದ ಹೊಲಸು ಸಂಚಯವಾಗಗೊಡದಂತೆ ಮುಂಬಯಿ ಸರಕಾರವು ವಚನವನ್ನೀಯಬೇಕು ಎಂದು ಹಿಂದುಸ್ಥಾನ ಸರಕಾರದ ಸೈನ್ಯ ಖಾತೆಯ ಅಪ್ಪಣೆಯಾಗಿದೆ. ಮುಂಬಯಿ ಸರಕಾರವು ಭಗೂರ ಹಳ್ಳಿಗರ ಪಕ್ಷವನ್ನು ಎತ್ತಿ ಹಿಡಿದು, ವರಿಷ್ಠರಗೂಡ ಸಮರ್ಥನ ಮಾಡಿದ್ದರಿಂದ, ಅವರು ಅವಶ್ಯವುಳ್ಳ ಆಶ್ವಾಸನವನ್ನೀಯುವರು. ಒಟ್ಟಿಗೆ, ಭಗೂರಿನ ಹಳ್ಳಿಗರು ನಿರ್ಧಾರದಿಂದ ಹರತಾಳ ಮಾಡಿದ್ದರ ಸಾರ್ಥಕವಾಯಿತು.

* *

ಅನಾಥರ ಕರುಣ ಕಥೆ.

ಕಲಕತ್ತೆಯಲ್ಲಿ ಅನಾಥ ಬಾಲಕರ ಜೋಪಾನ ಮಾಡುವ ಒಂದು ಸಂಸ್ಥೆಯಿದೆ. ಅಲ್ಲಿ ೩೪೯ ಬಾಲಕರಿರುವರು. ಈ ಸಂಸ್ಥೆಯ ಇಮಾರತಿನ ಒಂದು ಭಾಗವು ಕಳೆದ ಜೂನ ತಾ. ೨೬ ನೇ ಮಂಗಳವಾರಕ್ಕೆ ಕುಸಿದು ಬಿತ್ತು. ಮೊದಲು ಸಣ್ಣ ಗರ್ಜನೆಯಾಯಾಯಿತಂತೆ. ನೆರೆಹೊರೆಯ ಜನರು ನೆರೆದರು. ನೋಡುವದೇನು? ಕಟ್ಟಡವು ಕುಸಿದು ಬಿದ್ದಿತ್ತು. ಅನೇಕ ಹುಡುಗರ ಕಲ್ಲು ಮಣ್ಣಿನೊಳಗೆ ಬಿದ್ದಿದ್ದರು. ಕೆಲವರು ತಪ್ಪಿಸಿಕೊಳ್ಳಲು ಪೇಚಾಡುತ್ತಿದ್ದರು. ಕೆಲ ಹುಡುಗರು ಇಹಲೋಕದ ಯಾತ್ರೆಯನ್ನು ಥಟ್ಕನೆ ಮುಗಿಸಿ, ನಡೆದಿದ್ದರು. ಒಬ್ಬ ಕೂಲಿಯಂತು ನೆಲಸಮವಾಗಿ ಹೋಗಿದ್ದನು. ಕೂಡಲೇ ಜನರು ಮುಂಬಾಗಿ ಹುಡುಗರನ್ನು ಬದುಕಿಸುವ ಪುಣ್ಯ ಕಾರ್ಯವನ್ನು ಕೈಕೊಂಡರು. ಘಾಯಪಟ್ಟ ಹುಡುಗರು ಆಸ್ಪತ್ರೆಗೆ ಕಳಿಸಲ್ಪಟ್ಟರು. ೫-೫ ಮಿನಿಟುಗಳಿಗೊಮ್ಮೆ ಅನಾಥ ಬಾಲಕನ ಶವವು ದೃಗ್ಗೋಚರವಾಗುತ್ತಿತ್ತು. ಹೀಗೆ ೩೮ ಶವಗಳು ಅಲ್ಲಿ ದೊರೆತವು. ಹುಡುಗರನ್ನು ಕರೆದು, ಮೃತ ಬಾಲಕರ ಹೆಸರು ಕೇಳುವ ವಿಧಿಯು ನಡೆದಾಗ, ಯಾರಿಗೆ ಕಣ್ಣೀರು ಸುರಿಸದು? ಕಟ್ಟಡವು ಅಷ್ಟೇನು ಜೀರ್ಣವಾಗಿದ್ದಿಲ್ಲವಂತೆ. ಮಳೆಯಿಂದ ತೊಯ್ದು, ಥಟ್ಕನೆ ಅಪಘಾತ ಸಂಭವಿಸಿತಂತೆ. ಈ ಬಗ್ಗೆ ಕಲಕತ್ತಾ ನಗರಿಯ ತಜ್ಞರಾದ ಮಿ। ಹಾಥವೇಯವರು ಕಟ್ಟಡವನ್ನು ಪರೀಕ್ಷಿಸಿ, ಚಾಲಕರು ಈ ಕಟ್ಟಡವನ್ನು ವಿಸ್ತರಿಸುವಾಗ, ಭದ್ರತೆಯ ಬಗ್ಗೆ ಸಾಕಷ್ಟು ಜಾಗ್ರತೆಯನ್ನು ಕೈಕೊಳ್ಳಲಿಲ್ಲೆಂತಲೂ, ಕಟ್ಟಿದ ಸುಣ್ಣವು ಹೀನ ಪ್ರತಿಯದಿದ್ದದರಿಂದ ಅಪಘಾತ ಸಂಭವಿಸಿತೆಂತಲೂ ಅಭಿಪ್ರಾಯಪಟ್ಟಿರುವರು. ಒಟ್ಟಿಗೆ, ತಾಯಿ-ತಂದೆಯಿಲ್ಲದ ಅನಾಥರು ಥಟ್ಕನೆ ಪರಲೋಕವಾಸಿಯಾದ ಬಗ್ಗೆ ಎಲ್ಲರೂ ಮರುಗುತ್ತಿರುವರು.

ಅದ್ಭುತ ಶೋಧ.

ಅಮೇರಿಕಾ ಖಂಡದ ವೈದ್ಯ ಶಾಸ್ತ್ರಜ್ಞರು ಅದ್ಭುತವಾದ ಕೆಲಸವನ್ನು ಮಾಡುತ್ತಲಿರುವರು. ಚಿಕಾಗೋ ಪಟ್ಟಣದಲ್ಲಿ ಒಂದು ವೈದ್ಯಕ ಸಂಘವಿರುವುದು. ಈ ಸಂಘದಲ್ಲಿ ಕೆಲವು ಶಾಸ್ತ್ರಜ್ಞರು ಬದುಕಿರತಕ್ಕವರ ಶರೀರದಲ್ಲಿರತಕ್ಕ ಆಡ್ರೀನಲ್ ಗ್ಲ್ಯಾಂಡ್ಸ್ ಎಂಬ ಗ್ರಂಥಿಗಳ ರಸವನ್ನು ತೆಗೆದು ದೇಹವನ್ನು ಬಿಟ್ಟವರ ಶರೀರಕ್ಕೆ ಇನಾಕ್ಯುಲೇಶನ್ ಮಾಡಿ ಅವರನ್ನು ಬದುಕಿಸುವದಕ್ಕೆ ಉಪಕ್ರಮಿಸಿದ್ದಾರೆ. ಡಾಕ್ಟರ್ ಕ್ರಿಲ್‌ರವರು ದೇಹವನ್ನು ಬಿಟ್ಟ ಅನೇಕರನ್ನು ಈ ರೀತಿಯಲ್ಲಿ ಬದುಕಿಸಿರುತ್ತಾರೆ. ಉತ್ಕೃಷ್ಟ ವಯಸ್ಸಿನಲ್ಲಿರತಕ್ಕ ಅನೇಕ ಜನಗಳು ಬದುಕಿಸಲ್ಪಟ್ಟಿರುವರು. ಈ ಆಡ್ರೀನಲ್ ಚಿಕಿತ್ಸೆಯು ಬಹಳ ಪ್ರಸಿದ್ಧಿಗೆ ಬರುತ್ತಲಿರುವದು. ಸತ್ತವರು ಬದುಕುವದು ಮಾತ್ರವೇ ಅಲ್ಲದೆ ಈ ಚಿಕಿತ್ಸಕರು ಹೇಡಿಗಳನ್ನು ಶೂರರಾಗುವಂತೆಯೂ, ಗೊಡ್ಡಿಗಳನ್ನು ಪುತ್ರವಂತರಾಗುವಂತೆಯೂ ನಪುಂಸಕರನ್ನು ಪುಸ್ತ್ವಯುಳ್ಳವರಾಗುವಂತೆಯೂ, ಪುಕ್ಕಲರು ಶೂರರಾಗುವಂತೆಯೂ, ಅಡ್ರೀನಲ್ ಚಿಕಿತ್ಸೆಯಿಂದ ಮಾಡುತ್ತಾರೆಂಬದಾಗಿ ತಿಳಿಯಬರುತ್ತದೆ. ವಿದ್ಯುಚ್ಛಕ್ತಿಯ ಏಟಿನಿಂದ ಸತ್ತವರು ಬದುಕಿಸಲ್ಪಟ್ಟಿರುವರು ಘೂನಿ ಮಾಡಲ್ಪಟ್ಟವರು ಮತ್ತು ಗಲ್ಲಿಗೆ ಹಾಕಲ್ಪಟ್ಟವರು ಬದುಕಿಸಲ್ಪಡಬಹುದಾಗಿರುವರು. ಗಲ್ಲಿಗೆ ಹಾಕಲ್ಪಟ್ಟವರನ್ನು ಅವರು ಸತ್ತ ಕೂಡಲೇ ಈ ಡಾಕ್ಟರುಗಳಿಗೆ ಒಪ್ಪಿಸಿದರೆ, ಆಡ್ರೀನಲ್ ಇನ್‌ಜಕ್ಷನ್‌ನಿಂದಲೂ ಗ್ಯಾಲವಾನಿಕ್ ಬ್ಯಾಟರಿಯಿಂದಲೂ ಬದುಕಿಸಿಕೊಳ್ಳಬರೆಂದು ತಿಳಿಯಬರುತ್ತದೆ. —ಸಾಧ್ವೀ.

BOMBAY LODGING.

ದಿ ಮೊಡರ್ನ್ ಹಿಂದೂ ಹೊಟೆಲ್

ಗೋವಾಲಿಯಾ ಟೆಂಕ್ ರೋಡ,

ಮುಂಬಯಿ.

ಮುಂಬಾಯಿಯ ಬಹಳ ಆರೋಗ್ಯಕರವಾದ ಭಾಗದಲ್ಲಿದೆ. ವಿದ್ಯಾರ್ಥಿಗಳಿಗೆ ನಿಲ್ಲುವುದಕ್ಕೂ, ಪರಸ್ಥಳಿಕರಿಗೆ ಇಳಿಯುವುದಕ್ಕೂ ಬಹಳ ಅನುಕೂಲವಾ . ನಮಗೆ ಮೊದಲೇ ತಿಳಿಸಿದ್ದಲ್ಲಿ, ಪರಸ್ಥಳಿಕರಿಗೆ ಬಂದರ ವ ರೇಲ್ವೇಸ್ಟೇಶನ್ ಮೇಲಿಂದ ಕರತರುವ ಮತ್ತು ಮುಂಬಾಯಿ ಊರಿನ ಸರ್ವ ಮಾಹಿತಿಯನ್ನು ಕೊಡುವ ಏರ್ಪಾಟುಗಳನ್ನು ಮಾಡಲಾದೀತು.

ತ್ವರೆ ಮಾಡಿರಿ ! ತ್ವರೆ ಮಾಡಿರಿ !!

ವಿಪ್ವಜ್ಜನಪರಿಶೋಧಿತ ಯಜುರ್ವೇದೀಯ

ಬ್ರಹ್ಮಕರ್ಮಸಮುಚ್ಚಯ

ಪುಸ್ತಕ.

ಬೌಧಾಯನೀಯ ಸ್ವರಸಹಿತ ಸನಿರ್ಣಯ ಗೃಹ್ಯಕರ್ಮಸಮುಚ್ಚಯವೆಂಬ ಪ್ರಯೋಗ ಪುಸ್ತಕವು ಬರುವ ವರ್ಷಪ್ರತಿಪದೆಗೆ (೧) ಸಂಪುಟವು ಮಾರಾಟಕ್ಕೆ ಸಿದ್ಧವಾಗುವದು. ಪೂರ್ಣ ಪುಸ್ತಕದ ಕ್ರಯ ರೂಪಾಯಿ ೧೩-೦-೦. ಬೇಕಾದವರು ೧-೧-೧೯೩೩ ರ ಒಳಗೆ ಎಡ್ವಾನ್ಸ ರೂಪಾಯಿ ೩-೦-೦ ಕಳುಹಿ ಹೆಸರು ದಾಖಲ ಮಾಡಿಸಿದ್ದಲ್ಲಿ ಅಂಥವರಿಗೆ ಪುಸ್ತಕವು ೧೨ ರೂಪಾಯಿ ಕಿಮ್ಮತಿಗೆ ದೊರೆಯುವದು. ಗ್ರಾಹಕರು ತ್ವರೆ ಮಾಡಬೇಕು.

ಪತ್ತೆ:—**ಗ್ರಂಥ ಪ್ರಚಾರಕ ಸಂಘ,**

ಶ್ರೀ ಕ್ಷೇತ್ರ ಗೋಕರ್ಣ.

ಜಿಲ್ಲಾ:- ಉತ್ತರ ಕಾನಡಾ.

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ. ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ,

ಮುಂಬಯಿ.

ದೇಶಿ ಸೆಂಟೋನಾಯಿನ್.

(ಜಂತುವಿನ ಪುಡಿ.)

ಅಪಾಯಕರವಿಲ್ಲದೆ ಗುಣ ಕೊಡುವಂಥಾದ್ದು, ಪ್ರಪಂಚದಲ್ಲಿ ಪ್ರಖ್ಯಾತ ಔಷಧ.

ಔಂಸಿನ ಶೀಸೆಗೆ 2 ರೂ. ೮ ಆಣೆ.

ವಿಳಾಸ:— ಎಮ್. ಜಿ. ಭಾಗ್ವತ್,

ಆಯುರ್ವೇದಿಕ್ ಕೆಮಿಸ್ಟ, ಕಾರ್. (ಕೆನರಾ)

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಮುಕ್ತಾ ಚಿಕ್ಕಿ ತಿಳಕೊಳಬಹುದು

ಪುರುಷೋತ್ತಮ ಲಕ್ಷ್ಮುಮಯ್ಯ ಶ್ಯಾನಭಾಗ.

ಹೆಗಡೇಕರ, ದುಕಾನ, ಕುಮಟಾ.

ಮನೆ ಕಟ್ಟುವವರಿಗೆ ಸುಸಂಧಿಯು.





ಮೋಲಂತಸ್ಥಿಗೆ ಶೋಭೆ ಬರುವದಕ್ಕೆ ನಾನಾ ತರ ನಕ್ಷೀ ಕೊರೆಯಲ್ಪಟ್ಟ ಬೀಡಿನ ಕಟಾಂಜನಗಳೂ, ಹೂದೋಟ, ಬಳಂಗಳ, ಉಪ್ಪರಿಗೆ, ದಿವಾನಖಾನೆ ಮೊದಲಾದ ಸ್ಥಳಗಳಲ್ಲಿ ವಿಶ್ರಾಂತಿಗೊಳ್ಳುವದಕ್ಕೆ ತಕ್ಕ ಬಾಕುಗಳೂ ಕಿರ್ಲೋಸ್ಕರ್‌ಕಾರಖಾನೆಯಲ್ಲಿ ಸೌಕರ್ಯದಿಂದ ದೊರೆಯುತ್ತವೆ. ಪತ್ರ ಬರೆದು 'ಜಿ' ಕ್ಯಾಟಲಾಗು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ.)

ಶುದ್ಧ ಖಾದಿ

ವಿಕ್ರಿಗೆ ತಯಾರ.

ಹೊನ್ನಾವರ ತಾಲೂಕಾ ಕೋಂಗ್ರೆಸ ಕಮಿಟಿಯಿಂದ ಕ್ಯಮಗ್ಗದ ಕೆರಾಟೆಯ ಶುದ್ಧ ನೂಲಿನ ಖಾದಿ ಮಾರಾಟಕ್ಕೆ ಕೋಂಗ್ರೆಸ ಆಫೀಸಿನಲ್ಲಿ ಸಿಗುವದು.

ಹೊನ್ನಾವರ, } ಸೆಕ್ರೆಟರಿ,
೧೦-೧೨-೨೨. } ತಾ. ಕಾ. ಕಮಿಟಿ, ಹೊನ್ನಾವರ.

ಮೂರ್ತಿಗಳು ಬೇಕೋ?

ನಮ್ಮಲ್ಲಿ ಭಂಗಾರ, ಬೆಳ್ಳಿ, ಪಂಚಧಾತು, ಹಿತ್ತಾಳಿ, ತಾಮ್ರ ವ ಕರೇಶಿಲೆಯ ಮೂರ್ತಿಗಳೂ, ಇದಲ್ಲದೆ ಬಾಣಪೀಠಗಳೂ, ಪ್ರಭಾವಳಿಗಳೂ, ಈಶ್ವರ ಮುಖವಾಟಗಳೂ, ನಾಗಾಭರಣಗಳೂ, ಕವಚುಗಳೂ ವ ಯಾವದೇ ತರದ ಪ್ರತಿಮೆಗಳೂ ನಮ್ಮಲ್ಲಿ ಯೋಗ್ಯ ದರಕ್ಕೆ ವ ಯೋಗ್ಯ ಹೊತ್ತಿಗೆ ಮಾಡಿ ಕೊಡಲ್ಪಡುವವು. ಬೇಕಾದವರು ಪತ್ರವ್ಯವಹಾರ ಮಾಡಿ ಯಾ ಸಮಕ್ಷ ಬಂದು ದರವಾರ ತಿಳಕೊಳ್ಳಬಹುದ.

ಪತ್ತೆ:—**ನಾರಾಯಣ ಹುವಯ್ಯ ಶೇಟ,**

ಗುಡಗಾರ, ಗುಜಿರಗಲ್ಲಿ, ಕುಮಟಾ.

(ಉ. ಕಾನಡಾ.)

Printed and Published by Krishnarao Keshav Shenvi (Editor) at his Star of Kanara Press, Kumta

ಲೋಕಾನುಕೂಲತೆಯಾಗಬೇಕೆಂದು, लोकानुकूलता व्हावी म्हणून,

ನಮ್ಮ 'ಸ್ಟಾರ ಆಫ್ ಕೆನರಾ' ಮುದ್ರಣಾಲಯದಲ್ಲಿ

आमच्या 'स्टॉर ऑफ केनरा' मुद्रणालयांत

નવીન વ્યવસ્થા !! ಹೊಸ ಏರ್ಪಾಟು !! नवीन व्यवस्था !!

'STAR OF KANARA' PRESS, KUMTA.

ನಮ್ಮ ಮುದ್ರಣಾಲಯದಲ್ಲಿ ಲೋಕಾನುಕೂಲತೆಗಾಗಿ ಮಾಡಿದ ಹೊಸ ಮಾರ್ಪಾಟುಗಳ ವಿವರ:—

ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಗಳಲ್ಲಿ

೧. ಮನೋಹರ ಮುದ್ರಣ, ೨. ಸಕಾಲ ಮುದ್ರಣ. ೩. ಸುಲಭ ದರ.

ಸಂಕ್ಷೇಪತಃ ಹೇಳಬೇಕಾದರೆ —

ಅಗ್ಗ ಅಚ್ಚು ! ಅಂದ ಅಚ್ಚು !! ಅಚ್ಚ ಅಚ್ಚು !!!

ತರತರದ ಬಣ್ಣಗಳಿಂದ ಸುಶೋಭಿತವಾಗಿ ಮುದ್ರಣ ಮಾಡಿಕೊಡುವದಲ್ಲದೆ, ಫೋಟೋ-ಬ್ಲೋಕುಗಳನ್ನೂ ಮುದ್ರಿಸುವ ಏರ್ಪಾಟು ಮಾಡಲಾಗಿದೆ.

ಜರೂರಾಯಿತಿ ಜನರಿಗಾಗಿ—

ಬೇಕಾದ ಛಾಪೆ ಕೆಲಸವನ್ನು ನಮೂನೆಯ ಸಂಗಡ ಟಪಾಲದ್ವಾರಾ ಎಡ್‌ವ್ಹಾನ್ಸ ಸಹಿತ ಕಳಿಸಿದ್ದಲ್ಲಿ, ಯಥಾಪ್ರತಿ ಮುದ್ರಣ ಮಾಡಿ ೧-೨ ದಿವಸಗಳಲ್ಲಿಯೇ ವ್ಹಿ. ಪಿ. ಯಿಂದ ಕಳಿಸುವ ವ್ಯವಸ್ಥೆಯೂ ಮಾಡಲ್ಪಟ್ಟಿದೆ. ಬ್ಯಾಂಡಿಂಗ ಕೆಲಸವೂ ಅಚ್ಚುಕಟ್ಟಾಗಿ ಮಾಡಿ ಕೊಡಲ್ಪಡುವದು. ಒಮ್ಮೆ ಆರ್ಡರು ಕಳುಹಿಸಿ, ನೋಡಬಹುದಲ್ಲವೇ?

ಇದಲ್ಲದೆ, ನಮ್ಮಲ್ಲಿ ಗ್ರಂಥ, ಪುಸ್ತಕ, ಮಾಸಪತ್ರಿಕೆ, ಪಂಚಾಂಗ ಮುಂತಾದ ವಿವಿಧ ಮುದ್ರಣ ಕೆಲಸವು ಸುಲಭ ದರದಿಂದ, ತಕ್ಕ ಹೊತ್ತಿಗೆ ತಯಾರಿಸಿ ಕೊಡಲ್ಪಡುವದು.

ಮಾರಾಟಕ್ಕೆ ಸಿದ್ಧ.

ಕೋರ್ಟು ಕಚೇರಿಗಳಲ್ಲಿ ವಕೀಲರಿಗೆ ಬೇಕಾಗುವ ವಕಾಲತ ಅಮಲಜಾರಿ, ಸಾಕ್ಷಿಪಟ್ಟಿ, ಯಾದಿ, ನಕಲು ಅರ್ಜಿ, ದಸ್ತೈವಜು ಪರತ ಬೇಡುವ ಅರ್ಜಿ, ಜ್ಯಾಹಿರಿ ಮುಂತಾದ ಎಲ್ಲ ತರದ ಫಾರ್ಮುಗಳೂ, ಶಿಪ್ಪಿಂಗ ಬಿಲು, ಸತಮಿ, ಬಿಲ್ ಅಫ್ ಎಂಟ್ರಿ ಮೊದಲಾದ ಕಸ್ಟಮ್ ಫಾರ್ಮುಗಳೂ ಮಾರಾಟಕ್ಕೆ ದೊರೆಯುತ್ತವೆ.

ವಿಶೇಷ ಮಾಹಿತಿ ಪತ್ರದ್ವಾರಾ ಯಾ ಮೊಕ್ತಾ.

ಪತ್ರೆ:— ಕೃಷ್ಣರಾವ ಕೇಶವ ಶೇಣವಿ, ಹೆಗಡೇಕರ,
ಮಾಲಕ,
'ಸ್ಟಾರ ಆಫ್ ಕೆನರಾ' ಪ್ರೆಸ್, ಕುಮಟಾ.
(ಉ. ಕಾನಡಾ.)

Reg. No. B 1270 Thursday, 19th July 1923

ವರ್ಷ ೭. ಸಂಚಿಕೆ ೪೦.

ಕಾನಡಾವೃತ್ತ.

THE KANARA NEWS.

ಪತ್ರಿಕೆಯ ವರ್ಗಣಿ:-

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನೆಯವಾರ್ಗರಿಯಿಂದ
ರೂ. 3-0-0
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1 0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ವ್ಯಾಪಾ ಮ್ಯಾಪಿಸ(೧೫ ಎಮ್‌ಉದ್ದ) ೬ ಸಾಲುಗಳ ವರೆಗೆ ರೂ. 1-0-0.
ಅನಂತರ ಪ್ರತಿ ಸಾಲಿಗೆ 0-2-0.
ಹೆಚ್ಚಿಗೆ ಸಾಲು ಎಷ್ಟು ಹೊಳ ಬಿಡುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಖಾಯಮ್ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ದ್ವಾರಾ ಗೊತ್ತು ಮಾಡಲ್ಪಡುವವು

-(ಕುಮಟಾ— ಕಾನಡಾವೃತ್ತ, ಗುರುವಾರ, ತಾರೀಖು ೧೯ ನೇ ಜುಲೈ ಸನ್ ೧೯೨೩ ನೇ ಇಸವಿ)-

हिंदुस्थानांतील रहिवाशांस ज्याप्रमाणे हिंदुस्थानची हवा त्याप्रमाणेच हें औषध हिंदुस्थानांतील लोकांस ज्यास्त फायदेशीर आहे,

द्राक्षासव- { दीड रतलची किंमत २ रुपये;

रामबाण औषधें

सर्दि घालविणारें,
मूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

पिण्यास रुचिकर.

क्याटलाग मागवा,

झंडु फार्मास्युटिकल वर्क्स लिमिटेड,
मुंबई नं. १३

GLAXO:- FRESH STOCK. NEW BRAND. *a food for infants and invalids.*

Kalmegh :- *Well-tried remedy in Liver complaints especially of children.*

Syrup of Vasaka :- *Highly efficacious in cold, cough, crough and bronchitis.*

Besides we have in stock other patent medicines, Thermometres, Glycerine Syringes etc.,

Orders will be executed by V. P. P.

The New Emporium
Honavar. (N. Kanara.)

ಡಾ॥ ವಾಸೂರಕರರ

ಸುಧಾಂಜನ.

ಅಂಜನುಗಳಿಗೆಲ್ಲ ಅರಸು.



ತಲೆಶೂಲಿ, ವಾತ ವೇದನೆ, ಕೆಮ್ಮು, ಹಲ್ಲು ನೋವು ಇತ್ಯಾದಿಗಳಿಗೆ ಕ್ಷಿಪ್ರ ಗುಣಕಾರಿ ಮದ್ದು ಬೆಲೆ 2 ಆಣೆ ಮಾತ್ರ. ವ್ಯಾಪಾರಿಗಳಿಗೆ ವಿಶೇಷ ಸವಲತು ಹೆಚ್ಚಿನ ಮಾಹಿತಿ ಏಜಂಟರಿಂದ.

ಏಜಂಟ್ಸ್ — **ನಾಗರ್ಕಟ್ಟೆ ಬ್ರದರ್ಸ್,**
ಸುಧಾಂಜನ ಡಿಪೋ,
ಕುಮಟಾ. (ಜಿಲ್ಲಾ ಕಾರವಾರ.)

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ವಿಷಯಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ.

ಈ ವರೆಗೆ ಪ್ರಕಟವಾದ ಪುಸ್ತಕಗಳು.

(೧-೨) ಗ್ರೀಸ ದೇಶದ ಗಾಂಧಿ. (ಸಾಕ್ರೆಟೀಸ) (೩) ಸ್ವಾತಂತ್ರ್ಯಸಾಧನೆ. (೪) ಗುರು-ಹಿರಿಯರೂ, ಬಂಧು-ಭಗಿನಿಯರೂ. (೫) ರಾಷ್ಟ್ರೀಯ ಶಿಕ್ಷಣ. (೬) ಸದ್ಗುಣಮಂದಿರ. (ಭಾಗ ೧) (2) ಸ್ವರಾಜ್ಯ ಧರ್ಮ. (ಅನಾಮಿನ ಪುಷ್ಪ) ಇವಿಷ್ಟು ಪ್ರಕಟವಾಗಿದ್ದು, ೫ ಆಣೆಗೆ ಒಂದರಂತೆ ದೊರೆಯುತ್ತವೆ. ವರ್ಗಣೀದಾರರಿಗೆ ಹಿಂದಿನ ಬೇಕಾದ ಪುಸ್ತಕಗಳು ೪ ಆಣೆಗೆ ಒಂದರಂತೆ ದೊರೆಯುವವು. ೬ ಪುಸ್ತಕಗಳಿಗೆ ಕೂಡಿ ೧॥ ರೂಪಾಯಿ ಮಾತ್ರ. ಅಂಚೆವೆಚ್ಚ ಬೇರೆ. ದ್ವಿತೀಯ ವರ್ಷ ಪ್ರಾರಂಭ. ಅನುಕ್ರಮವಾಗಿ ಮಾರ್ಚ, ಮೇ, ಜುಲೈ, ಸಪ್ಟಂಬರ, ನವಂಬರ, ಜನವರಿ ೧೫ ನೇ ತಾರೀಖಿಗೆ ಒಂದೊಂದು ಪುಷ್ಪ ಹೊರಡುವದು. ವಾ. ವ. ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ.

ವಾ. ಅ. ಹೊದ್ಕೆ,
ರಾಷ್ಟ್ರೀಯ ಶಾಲಾಧ್ಯಾಪಕ, ಶಿರಸಿ.

ಎಲ್ಲ ತರದ ಜ್ವರಗಳಮೇಲೆ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ, ಶೈತ್ಯ, ಬಂಗಲಿ, ಅಥವಾ ದೂಷಿತ ಹವೆಯಿಂದ ಬರುವ ಸಾದಾ ವಿಷಾರೀ ಅಥವಾ ಇತರ ಜ್ವರಗಳೂ, ಇನಫ್ಲುಎಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನ್ಯಾಯ ಮತ್ತು ಪರಿಣಾಮರಹಿತ ಕೇವಲ ವನಸ್ಪತಿಯ ಈ ಮದ್ದು ಸೇವಿಸಿದರೆ ಅಶಕ್ತತೆಯಾಗದೆ, ಬೆವರು ಬಂದು ಜ್ವರ ಇಳಿಯುತ್ತದೆ. ಹಾಗು ರೋಗಿಯು ತರಿತ ವಾಸಿಯಾಗುತ್ತಾನೆ.

೪ ಔನ್ಸ ಬಾಟ್ಲಿ ಕಿಂಮತ್ತು-ರೂ. ೧-೦-೦.

ಇದರ ಹೊರತು ಇನ್ನೂ ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ, ಉಚ್ಚ ಪ್ರತಿಯ ಕೋಲನ ವಾಟರ, ಲವೆಂಡರ ಇತ್ಯಾದಿ ಸಾಮಗ್ರಿಗಳು ಅಲೆಂಬಿಕದ ಕಾರಖಾನೆಯಲ್ಲಿ ತಯಾರಾಗುತ್ತವೆ. ಮರಾಠಿ ಕೆಟಲಾಗು ತರಿಸಿರಿ.

ಅಲೆಂಬಿಕ್ ಕೆಮಿಕಲ್ ವರ್ಕ್ಸ್,
ಕಂಪನಿ, ಲಿಮಿಟೆಡ್.
ನಂ. ೫೦, ಪ್ರಿನ್ಸೆಸ್‌ಸ್ಟ್ರೀಟ, ಮುಂಬಯಿ.

अलेंबिक केमिकल वर्क्स कं० लि०
नं. ५० प्रिन्सेस स्ट्रीट मुंबई.

ಶುದ್ಧ ಖದ್ದರ್ ರೇಶ್ಮೆ ಮಡಿಗಳು.

ಸುಲಭ ಕ್ರಯಕ್ಕೆ ಖಾತ್ರಿಯಾದ ಎಲ್ಲಾ ರಂಗುಗಳಲ್ಲಿಯೂ ಈ ಕೆಳಗೆ ತರದ ಕ್ರಯಕ್ಕೆ ದೊರೆಯುವವು.

೧೮ ಮೊಳ ಉದ್ದ ೨॥ ಅಗಲ ರೂ. ೨೩ ರಿಂದ ೨೫ ವರೆಗೆ
೧೬ ,, ,, ೨॥ ,, ,, ೨೦ — ೩೦ ,,
೮ ,, ,, ೨॥ ,, ,, ೯ — ೧೫ ,,
೬ ,, ,, ೨॥ ,, ,, ೬ — ೧೧ ,,



ಅಂಗಿ ಬಟ್ಟೆಗಳು ೧೮ ಮೊಳ × ೨ ಮೊಳ ರೂಪಾಯಿ ೧೮ ರಿಂದ ೩೦ ವರೆಗೆ. ಪೇಟ ೧೨ ಮೊಳ × ೧॥ ಮೊಳ ಅಗಲ ರೂಪಾಯಿ ೧೦ ರಿಂದ ೧೫ ವರೆಗೆ ಜೇಪ್‌ಹಾನ್ ೧೪ ಮೊಳ × ೨ ಮೊಳ ರೂ. ೨೪ ರಿಂದ ೩೫ ವರೆಗೆ ಇವುಗಳಲ್ಲದೆ ಶಾಲು ಪೀತಾಂಬರ, ಕ್ಯಾಷ್ಮೀರ್ ಶಾಲು, ರುದ್ರಾಕ್ಷಿ, ಜಾಗಂಟೆ, ಶಾಳ, ಪನ್ನೀರ್ ದಾನಿ, ಆಟದ ಸಾಮಾನುಗಳು, ದೇವರ ಮತ್ತು ಗಾಂಧಿ ಮುಂತಾದವರ ಪಟಗಳಿರುವ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ಕ್ಯಾಟಲಾಗ್ ಇನಾಂ.

ವಿಳಾಸ:— ಎಸ್. ಯಮ. ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ!

ಕಾಮಿನಿಯಾ ತೈಲ. (ರಿಜಿಸ್ಟರ್ಡ)

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶಕಲಾಪವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವದೋ.

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಕದ ನೆತ್ತಿಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹಚ್ಚಿಯ ಹೊತ್ತಿಗೆ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಅದರ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆಯುವ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಸಲ ಈ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ಕಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ:—ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ. ರೂಪಾಯಿ 2-10-0, ವಿ.ಪಿ. ಖರ್ಚ 0-14-0.

ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್!! (ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು. ಚನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ಲೇ ಇದ ಮಾಡುದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು, ಒಂದೇ ಒಂದು ಸಲ ನಿಮ್ಮ ಕೈ ಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪ್ರಫುಲ್ಲತೆಯು ಅರಳಿದಂತಾಗುವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರದ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊಳ್ಳುವದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆ 1 ಕ್ಕೆ 0-8-0, 1 ಡ್ರ್ಯಾಮಿನ (ಮಧ್ಯಮ) ಸೀಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0.

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12-0.

Address.- **The Anglo Indian Drug & Chemical Co,**
16, Market, **BOMBAY. 2.**

ಒಳ್ಳೇ ವಸ್ತು! ಖರೇ ಕಲ್ಪ!! ಖಚಿತ ಗುಣ!!!

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳೆಸಿ, ಪುರುಷರಿಗೆ ಸ್ತ್ರೀ ವಿಷಯವಾಗಿಯೂ, ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷಯುಕ್ತ ಕಾಮವನ್ನು ಉಂಟುಮಾಡಿ, ದಿನೇ ದಿನೇ ಶರೀರದ ಜಡತ್ವವನ್ನೂ ರೋಗಗಳನ್ನೂ ದೂರಪಡಿಸಿ ಆಯುರಾರೋಗ್ಯವನ್ನೂ, ರತಿಯಲ್ಲಿ ಪಗ್ಗಳವಾದ ಉತ್ಸಾಹಬಲವನ್ನು ತೋರಿಸುವ ಕ್ರೀಡಾ ಶಕ್ತಿಯ ಉತ್ಸಾಹವನ್ನೂ, ಸಂಭೋಗದಲ್ಲಿ ತೃಪ್ತಿಯನ್ನೂ, ಸೌಖ್ಯವನ್ನೂ ಕೊಟ್ಟು, ಮನಸ್ಸಿನ ದೃಢತೆಯನ್ನೂ ಯೌವನದ ಕಳೆಯನ್ನೂ ತೋರಿಸಿ ಮುದಿತನವನ್ನು ನೀಗಿ ಬಲವನ್ನು ಉಂಟುಮಾಡುವದು. ಮೃತ್ಯುವನ್ನು ನಿರಾಕರಿಸಿ, ಬಗೆಬಗೆಯ ರೋಗಗಳನ್ನು ನಾಶಮಾಡುವದು. ಜೀರ್ಣಜ್ವರ, ಮಂದಾಗ್ನಿ, ಶುಕ್ಲಸ್ರಾವ, ರಕ್ತಕಂಪ ಇವುಗಳನ್ನು ಬಿಡದೇ ನಾಶಮಾಡುವದು ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, ದೇಶಕಾಲಗಳಿಂದಲೂ, ಅತ್ಯಾಹಾರಗಳಿಂದಲೂ, ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡಿಸುವ ಬಲಾತ್ಕಾರದ ಹಸ್ತಘರ್ಷಣದಿಂದಲೂ, ಅತಿವಿಷಯೋಪಭೋಗದಿಂದಲೂ, ಇಂದ್ರಿಯ ಶಿಥಿಲವೂ, ತೆಳುವೂ, ನಿಸ್ತೇಜವೂ ಆಗಿ ಮುಷ್ಕವಿಲ್ಲದೆ ಸ್ಖಲನವಾಗುವದು. ಒಂದೊಂದು ಸಾರಿ ಮೂತ್ರದಲ್ಲಿಯೂ ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತೆ, ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈದಣಿವು, ನಿದ್ರೆಯಲ್ಲಿ ಭೀಕರವಾದ ಸ್ವಪ್ನ, ಅರಿವು, ಮರುವು ಮತ್ತು ಶರೀರದ ಹಾಗೂ ಮನಸ್ಸಿನ ಚೇತನ ಕಾಂತಿ ಹೋಗುವದು, ಇವೆಲ್ಲವುಗಳ ಮೇಲೆ ರಾಮಬಾಣದಂತಿರುವದು. ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ. ೧॥. ನಂ ೧. ನಂ ೨. ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಂತು ೬೦ ಗುಳಿಗೆಗಳುಳ್ಳ ಸೀಸೆಗಳಿಗೆ ರೂ. ೩. ಪೋಸ್ಟೇಜ ಬೇರೆ.

ಎಮ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ,
ಕಕೀ. (ಕೆನರಾ.)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧. ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೪೫, ೫೦, ೬೦.
೨. „ ಕಾಲುಪೆಟ್ಟಿಗೆ ಕಿಂ. ೬೫, ೭೫, ೧೪೦, ೧೬೦
೩. ತಬಲೆ ಜೋಡಿಗೆ ಕಿಂ. ೧೩, ೧೫, ೧೮ ೨೦.
೪. ಹಾರ್ಮೋನಿಯಮ ಗ್ಯಾಡ ಕಿಂ. ೧।, ತಬಲೆ ಗಾಡ ಕಿಂ. ೧೨ ಆ.

ವಿಶೇಷ ಮಾಹಿತಿ ಬಗೆಗೆ ನಮ್ಮ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ:— ಗೋಪಾಳ ಸಖಾರಾಮ ಮುಕ್ತ ಕಂಪನಿ, ನಂ ೨೬೨
ಕಾಳಬಾದೇವಿ ರೋಡ, ಮುಂಬಯಿ

ನಾಗಪುರದ ಸತ್ಯಾಗ್ರಹ ಸಂಗ್ರಾಮವನ್ನು ಕೊನೆತನಕ ನಡಿಸುವ ನಿರ್ಧಾರ!

ಮುಂದಿನ ಮಾಸದಲ್ಲಿ ಮುಂಬಯಿಯಲ್ಲಿ ಜಾದಾ ಕೊಂಗ್ರೆಸು.

ಅಧ್ಯಕ್ಷ:— ಮೌಲಾನಾ ಅಬ್ದುಲ ಕಲಮು ಅಝಾದ.

ಮುಂಬಯಿಯ ಮಧ್ಯಸ್ಥಿಕೆಯ ಠರಾವು ಕಾಯಮು.

ಶಿಸ್ತುಸಂರಕ್ಷಕ ಠರಾವು ನಾಮಂಜೂರು; ಕಾರ್ಯಕಾರಿ ಕಮಿಟಿಯ ರಾಜಿನಾಮೆ.

ನಾಗಪುರದಲ್ಲಿ ನಡೆದ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಹಕಿ

ಸತ್ಯಾಗ್ರಹದ ರಣಕ್ಷೇತ್ರವಾದ ನಾಗಪುರದಲ್ಲಿ ಕಳೆದ ತಾ. ೮ ನೇ ರವಿವಾರಕ್ಕೆ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಅಧಿವೇಶನವು ಜರುಗಿತು. ಅಧಿವೇಶನಕ್ಕಾಗಿ ಅಖಿಲ ಭರತಖಂಡದೊಳಗಿಂದ ಸುಮಾರು ೧೫೦ ಸಭಾಸದರು ಆಗಮಿಸಿದ್ದರು. ಅಧ್ಯಕ್ಷರಾದ ಡಾ॥ ಅನ್‌ಸಾರಿ, ಸರೋಜಿನಿ ನಾಯುಡು, ದೇ॥ ದಾಸ, ಮೌಲಾನಾ ಅಬ್ದುಲ ಕಲಮು ಆಝಾದ ಶ್ರೀ॥ ನರಸೋಪಂತ ಕೇಳಕರ, ರಾಜಗೋಪಾಲಾಚಾರಿ, ವಲ್ಲಭಭಾಯಿ ಪಟೇಲ, ಉಮರ ಸೋಭಾನಿ, ಉಸ್ಮಾನ ಸೋಭಾನಿ, ವಿಠ್ಠಲಭಾಯಿ ಪಟೇಲ, ಟಿ. ಪ್ರಕಾಶಂ, ಜವಾಹರಲಾಲ ನೆಹರು, ಪಂಡಿತ ಸಂತಾನಂ, ರಂಗಸ್ವಾಮಿ ಅಯ್ಯಂಗಾರ, ಸತ್ಯಮೂರ್ತಿ ಮೊದಲಾದ ಪ್ರಮುಖ ದೇಶಸೇವಕರು ಶನಿವಾರವೇ ನಾಗಪುರಕ್ಕೆ ಚಿತ್ತೈಸಿದ್ದರು. ಕೊಂಗ್ರೆಸ ಕಾರ್ಯಕಾರಿ ಕಮಿಟಿಯ ಆಲೋಚನೆಯು ಶನಿವಾರಕ್ಕೆ ನಡೆಯಿತು. ರವಿವಾರ ಮುಂಜಾವಿನಿಂದ ಮಧ್ಯಾಹ್ನದವರೆಗೂ ನಡೆಯಿತು. ಕಮಿಟಿಯು ರಾಷ್ಟ್ರೀಯ ಸಭೆಯೊಳಗಿನ ಪಕ್ಷಭೇದಗಳನ್ನು ನಿರ್ಮೂಲಿಸಿ, ನೌಕರಶಾಹಿಗೆ ಅಖಿಲ ರಾಷ್ಟ್ರವು ಒಮ್ಮನಸ್ಸಿನಿಂದ ಇದಿರಾಗುವಂತೆ ಉಪಾಯಗಳನ್ನು ಶೋಧಿಸಲು ಉತ್ತಂಡಗಳ ನಾಯಕರ ಮಾತುಕಥೆಯೂ ನಡೆಯಿತು. ಶ್ರೀ॥ ರಾಜಗೋಪಾಲಾಚಾರಿ, ವಲ್ಲಭಭಾಯಿ ಪಟೇಲ, ದೇಶಬಂಧು ದಾಸ, ಈ ತ್ರಿಮೂರ್ತಿಗಳ ವಿಚಾರ ವಿನಿಮಯವೂ ಆಯಿತು. ಆದರೆ, ಇದರಿಂದ ನಿಷ್ಪನ್ನವೇನೂ ಆಗಲಿಲ್ಲ. ವಿರೋಧವು ವೃದ್ಧಿಹೊಂದಿತು ಹೊರತು, ಕಳೆಗುಂದಲಿಲ್ಲೆಂದು ಹೇಳುತ್ತಾರೆ.

ಸರಿಯಾಗಿ ೩॥ ಘಂಟೆಗೆ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಅಧಿವೇಶನಕ್ಕೆ ಪ್ರಾರಂಭವಾಯಿತು. ಅಧ್ಯಕ್ಷಸ್ಥಾನವನ್ನು ಡಾ॥ ಅನ್‌ಸಾರಿಯವರು ಮಂಡಿಸಿದ್ದರು. ಮೊಟ್ಟಮೊದಲು, ೧೫ ಸಭಾಸದರು ಬೇಡಿದಂತೆ, ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಅಧಿವೇಶನವನ್ನು ತಾವು ನಿಮಂತ್ರಿಸಿದ್ದೇವೆಂದು ಅಧ್ಯಕ್ಷರು ಸ್ಪಷ್ಟೀಕರಿಸಿದರು. ನಾಗಪುರದಲ್ಲಿ ನೆರೆಯಿಸಲು ಕೆಲ ಮೆಂಬರರು ವಿರೋಧಿಸಿದರೂ, ಸ್ಥಲಾನುಕೂಲತೆಯ ಮೂಲಕ, ಇಲ್ಲೇ ನೆರೆಯಿಸಬೇಕಾಯಿತೆಂದು ನುಡಿದರು. ಬಳಿಕ, ಬಂಗಾಲದ ಶ್ರೀ॥ ಹರದಯಾಲ ನಾಗರವರ ಠರಾವು ಚರ್ಚೆಗೆ ಬಂತು. ಠರಾವು ಅಕ್ರಮವೆಂದು ದೂರ ಸಾರುವ ಅಧಿಕಾರವು ತಮಗಿದ್ದರೂ, ಡಾ॥ ಅನ್‌ಸಾರಿಯವರು ಲೋಕಮತವನ್ನರಿತುಕೊಳ್ಳುವರೆ ಈ ಠರಾವನ್ನು ಚರ್ಚಿಸಗೊಡುತ್ತೇವೆಂದು ಉದ್ಗರಿಸಿದರು. ಶ್ರೀ॥ ಹರದಯಾಲರವರು ತಮ್ಮ ಠರಾವನ್ನು ಸೂಚಿಸಿದರು. "ಗಯಾ ಕೊಂಗ್ರೆಸು ಮಂಜೂರು ಮಾಡಿದ ಕೌನ್ಸಿಲು ಬಹಿಷ್ಕಾರದ ಠರಾವಿನ ಬಗ್ಗೆ ಮುಂಬಯಿಯಲ್ಲಿ ನೆರೆದ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ಮೇ ೨೭. ೨೬ನೇಗೆ ಮಂಜೂರು ಮಾಡಿದ ತಹಕೂಬಿಯ ಠರಾವು ಅಧಿಕಾರಾತಿಕ್ರಮಣದ್ದಿರುವದರಿಂದ, ಈ ಕಮಿಟಿಯು ಅದನ್ನು ಪುನರಾಲೋಚಿಸಿ, ರದ್ದುಪಡಿಸುತ್ತದೆ." ಶ್ರೀ॥ ಹರದಯಾಲರವರು ಈ ಠರಾವಿನ ಸಮರ್ಥನೆಗಾಗಿ ಭಾಷಣ ಮಾಡಲಿಲ್ಲ. ಶ್ರೀ॥ ವೆಂಕಟರಾಮರವರು ಈ ಠರಾವಿಗೆ ಅನುಮೋದನವನ್ನಿತ್ತರು. ಬಳಿಕ, ಅಧ್ಯಕ್ಷರ ಅಪ್ಪಣೆ ಮೇರೆಗೆ ಪಂಡಿತ ಜವಾಹರಲಾಲರವರು ಕೊಂಗ್ರೆಸ ಕಾರ್ಯಕಾರಿ ಮಂಡಳದ ಠರಾವುಗಳನ್ನು ಓದಿ ಹೇಳಿದರು. ಆ ಮೇಲೆ ಶ್ರೀ॥ ನಾಗರವರ ಠರಾವಿನ ಮೇಲೆ ಸಭಾಸದರಲ್ಲಿ ಚರ್ಚೆ ನಡೆಯಿತು. ಶ್ರೀ॥ ವಲ್ಲಭಭಾಯಿ ಪಟೇಲರವರು ಠರಾವು ನಿಯಮಕ್ಕನುಸಾರವಾಗಿ ಸೂಚನೆಯಾಗಿದೆಯೋ ಹೇಗೆ ಎಂದು ಪ್ರಶ್ನಿಸಿದರು. ಹಾಗಿದ್ದರೆ ಮಾತ್ರ, ಅದರ ಮೇಲೆ ಮತ ಕೊಡಬೇಕೆಂದು ಅವರ ಅಭಿಪ್ರಾಯವಾಯಿತು. ಅಧ್ಯಕ್ಷರು ಠರಾವಿನ ಕ್ರಮಾಕ್ರಮಗಳ ಪ್ರಶ್ನೆಯನ್ನು ಚರ್ಚಿಸದೆ, ಅದನ್ನು ಕಮಿಟಿಗೆ ಒಪ್ಪಿಸಬಹುದೆಂತಲೂ ಹಲವರು, ಅದನ್ನು ಅವರು ನಿಶ್ಚಯಿಸಿ ಅದನ್ನು ನಿಯಮದಂತಿದ್ದರೆ ಮಾತ್ರ ಚರ್ಚಿಸಗೊಡಬೇಕೆಂತಲೂ ಕೆಲವರು ವಾದಿಸಿದರು. ಹೀಗೆಲ್ಲ ಮೇಲಿಂದಮೇಲೆ ಸಭಾಸದರು ಏಳುವದು, ಏನಾದರೂ ಶರಾ ಹೊಡೆಯುವದು ಇಂಥ ಪ್ರಕಾರಗಳಿಂದಲೇ ಬಹಳ ಹೊತ್ತು ಸಾಗಿಹೋಯಿತು. ಅಧ್ಯಕ್ಷರು ರಾಷ್ಟ್ರೀಯ ಸಭೆಯ ಘಟನೆಯೊಳಗಿನ ೩ಗನೇ ನಿಯಮವನ್ನು ತಿಳಿಸಿಹೇಳಲು ಬಿನ್ನೈಸಿದರು. ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ಈ ನಿಯಮದಂತೆ ರಾಷ್ಟ್ರೀಯ ಸಭೆಯ ಕಾರ್ಯಕಾರಿ ಕಮಿಟಿಯಾಗಿರುವದೆಂತಲೂ, ರಾಷ್ಟ್ರೀಯ ಅಧಿವೇಶನಗಳ ಮಧ್ಯಕಾಲದಲ್ಲಿ ಉಂಟಾಗುವ "ಹೊಸ" ಪರಿಸ್ಥಿತಿಗೆ ಇದಿರಾಗಲು ತಕ್ಕ ಉಪಾಯ ಕೈಕೊಳ್ಳುವ ಅಧಿಕಾರವು ಈ ಕಮಿಟಿಗಿರುವದೆಂತಲೂ, ರಾಷ್ಟ್ರೀಯ ಸಭೆಯ ಠರಾವುಗಳನ್ನಾಯ ಉಪನಿಯಮಗಳನ್ನು ಮಾಡುವ ತೃತೀಯ ಅಧಿಕಾರವೂ ಈ ಕಮಿಟಿಗಿರುವದೆಂತಲೂ ದೇಶಬಂಧುಗಳು ಪ್ರತಿಪಾದಿಸಿದರು. ದೇಶಬಂಧುಗಳ ವಿವರಣೆಗೆ ಅನೇಕರು ಆಕ್ಷೇಪ ತೆಗೆದುಕೊಂಡರು. ಆದರೆ, ಅಧ್ಯಕ್ಷರು ಯಾರಿಗೂ ಭಾಷಣ ಮಾಡಗೊಡಲಿಲ್ಲ. ಶ್ರೀ॥ ಹರದಯಾಲರವರು ತಾವು ಮಾಡಿದ ಠರಾವನ್ನು ಪುನರಾಲೋಚಿಸುವ ಅಧಿಕಾರವು ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಗಿರುವದೆಂದು ನುಡಿದರು. ಠರಾವಿನ ಮೇಲೆ ಮತ ಕೊಳ್ಳಲ್ಪಟ್ಟವು. ಆಗ, ೬೩ ಅನುಕೂಲ, ೮೨ ಪ್ರತಿಕೂಲ ಮತಗಳು ಬಿದ್ದು, ಶ್ರೀ॥ ಹರದಯಾಲರವರ ಠರಾವು ನಾಮಂಜೂರಾಯಿತು. ಇಷ್ಟಕ್ಕೆ ೫ ಬಡಿದು ಹೋದವು. ಅಂದಿನ ಸಭೆಯು ವಿಸರ್ಜನವಾಯಿತು. ಬಳಿಕ ಸಭಾಸದರು ಸತ್ಯಾಗ್ರಹದ ಶಾಂತಿಯುದ್ಧವನ್ನು ಸಂದರ್ಶಿಸಲು ರಣಕ್ಷೇತ್ರಕ್ಕೆ ಗಮಿಸಿದರು.

ಸೋಮವಾರಕ್ಕೆ ಪುನಃ ಕಮಿಟಿಯು ಪ್ರಾತಃಕಾಲ ೮॥ ಘಂಟೆಗೆ ನೆರೆಯಿತು. ಡಾ॥ ಅನ್‌ಸಾರಿಯವರು ಗೈರ ಹಾಜರ ಇದ್ದದರಿಂದ, ಶ್ರೀ॥ ಸರೋಜಿನಿ ದೇವಿಯವರು ಅಧ್ಯಕ್ಷಸ್ಥಾನದಲ್ಲಿ ವಿರಾಜಮಾನರಾಗಿದ್ದರು. ಮೊಟ್ಟಮೊದಲು, ಅವರು ಪಂಡಿತ ಮದನ ಮೋಹನ ಮಾಲವೀಯಜೀಯವರಿಂದ ಬಂದ ತಂತಿಯನ್ನು ಓದಿದರು. "ಪಂಜಾಬದೊಳಗೆ ಹಿಂದೂ-ಮುಸಲ್ಮಾನರೊಳಗಿನ ಮತಭೇದಗಳನ್ನು ಅಳಿಯಲು ಲಾಹೋರಿನಲ್ಲಿ ತಾವಿರಬೇಕಾಗಿರುವದೆಂತಲೂ, ಮುಂಬಯಿಯೊಳಗಿನ ಮಧ್ಯಸ್ಥಿಕೆಯ ಠರಾವನ್ನು ತಿತ್ತೊಗೆಯಬಾರದೆಂದೂ, ಪಂಡಿತಜೀಯವರು ಪ್ರಾರ್ಥಿಸಿದ್ದರು. ಅನೇಕ ರಾಷ್ಟ್ರೀಯ ಸಭಾಧಿವೇಶನಿಗರಿಗೆ ಕೌನ್ಸಿಲು ಬಹಿಷ್ಕಾರವು ಅನಿಷ್ಟವೆಂದು ತೋರಿದರೂ, ನಿರ್ಭಯ ಪ್ರಜಾಪ್ರತಿನಿಧಿಗಳು ಕೌನ್ಸಿಲುಗಳಲ್ಲಿ ಸೇರಿಕೊಂಡರೆ ದೇಶಹಿತವಾಗುವದೆಂಬ ಇತರ ರಾಷ್ಟ್ರೀಯ ಸಭಾಧಿವೇಶನಿಗಳ ಮತವನ್ನೂ ಇತರ ದೇಶಬಾಂಧವರು ಆದರಿಸಬೇಕೆಂ"ದು ಪಂಡಿತಜೀಯವರು ಪ್ರತಿಪಾದಿಸಿದ್ದರು. ಬಳಿಕ, ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಸಭಾಸದತ್ವವನ್ನು ತ್ಯಜಿಸಿದ ೧೦-೧೫ ಸಭಾಸದರ ಹೆಸರುಗಳನ್ನು ಅಧ್ಯಕ್ಷರು ಅರುಹಿದರು. ಸೋಮವಾರವು ಲಾಲಾ ಲಜಪತರಾಯರ ದಿನವೆಂದು ಪಂಜಾಬದ ಕೊಂಗ್ರೆಸ ಕಮಿಟಿಯವರು ಠರಾಯಿಸಿ, ಅಂದು ಅಖಿಲ ಪಂಜಾಬದಲ್ಲಿ ಲಾಲಾಜಿಯವರ ಆಯುರಾರೋಗ್ಯಚಿಂತನ ಮಾಡಬೇಕೆಂದು ವಿಧಿಸಿದ್ದರು. ಪಂಜಾಬದಲ್ಲಿ ನಡೆಯುವ ಅಂದಿನ ಪ್ರಾರ್ಥನಾವಿನಕ್ಕೆ ಪುಷ್ಟಿಯನ್ನೀಯುವ ಠರಾವನ್ನು ಶ್ರೀ॥ ಮೂರ್ತಿಯವರು ಅಧ್ಯಕ್ಷಸ್ಥಾನದಿಂದ ಸೂಚಿಸಿ, ಮಂಜೂರು ಮಾಡಿಕೊಂಡ ಬಳಿಕ, ನಾಗಪುರದ ಸತ್ಯಾಗ್ರಹಕ್ಕೆ ಮನ್ನಣೆಯನ್ನೀಯುವ ಠರಾವನ್ನು ಶ್ರೀ॥ ಸರೋಜಿನಿ ದೇವಿಯವರು ಸೂಚಿಸಿ, ಸಭೆಯಲ್ಲಿ ಚರ್ಚೆ ಮಾಡಗೊಡಬೇಕಾದ್ದರಿಂದ, ಶ್ರೀ॥ ಪ್ರಕಾಶಂರವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಬೇಕೆಂದರು. ದೇಶಬಂಧುಗಳು ನಾಗಪುರ ಸತ್ಯಾಗ್ರಹದ ಠರಾವನ್ನು ಮೊಟ್ಟಮೊದಲು ಚರ್ಚಿಸಗೊಡುವದು ಸಯುಕ್ತಿಕವಲ್ಲೆಂದು ನುಡಿದರು. ಅಷ್ಟರಲ್ಲಿ ಡಾ॥ ಅನ್‌ಸಾರಿಯವರು ಸಭಾಸ್ಥಾನಕ್ಕೆ ಬಂದು ತಲ್ಪಿದರು. ಅವರು ಅಧ್ಯಕ್ಷಸ್ಥಾನವನ್ನು ಆಕ್ರಮಿಸಿದ ಮೇಲೆ, ದೇಶಬಂಧುಗಳು ಪುನಃ ತಮ್ಮ ಆಕ್ಷೇಪವನ್ನು ವಿವರಿಸಿದರು. ಅಧ್ಯಕ್ಷರು ನಾಗಪುರ ಸತ್ಯಾಗ್ರಹ ಪ್ರಶ್ನೆಯು ಈ ಸಭೆಯನ್ನು ಕರೆಯಲಿಕ್ಕೆ ಕಾರಣವಾದ ಅರ್ಜಿಯಲ್ಲಿಯೇ ನಮೂದಿಸಿತ್ತೆಂತ

ಲೂ, ಸಭೆಯ ಕಾರ್ಯಕ್ರಮ ಪತ್ರಿಕೆಯಲ್ಲಿ ಸಹ ಈ ಬಾಬು ಕಾರ್ಯದರ್ಶಿಗಳು ನಮೂದಿಸಿದ್ದರೆಂತಲೂ ಅಧ್ಯಕ್ಷರು ನುಡಿದರು. ಈ ಪ್ರಶ್ನೆಯ ಮೇಲೆ ದೇಶಬಂಧು ದಾಸ ಮೊದಲಾದ ಅನೇಕ ಸಭಾಸದರು ಎಷ್ಟೆಷ್ಟೊ ಶಂಕೆ-ಕುಶಂಕೆಗಳನ್ನು ತೆಗೆದರು. ಅವರನ್ನೆಲ್ಲ ಸುಮ್ಮನಿರಿಸಿದ ಬಳಿಕ, ಶ್ರೀ॥ ಸರೋಜಿನಿ ದೇವಿಯವರು ನಾಗಪುರದ ಸತ್ಯಾಗ್ರಹ ಠರಾವನ್ನು ಸಭಿಕರ ಮುಂದಿಟ್ಟರು.

ಸತ್ಯಾಗ್ರಹ ಠರಾವು.

ನಾಗಪುರದಲ್ಲಿ ರಾಷ್ಟ್ರಧ್ವಜದ ರಕ್ಷಣೆಕ್ಕಾಗಿ ಕೂಡ ಸತ್ಯಾಗ್ರಹಿಗಳು ಹೂಡಿದ ಸ್ಥಿರ ಹಾಗು ದೃಢ ವಿರೋಧವನ್ನು ಈ ಕಮಿಟಿಯು ವಿಶೇಷ ಪ್ರಶಂಸಾಪೂರ್ವಕ ನಮೂದಿಸುತ್ತದೆ. ಮಧ್ಯಪ್ರಾಂತಸ್ಥರೂ, ಇತರ ಪ್ರಾಂತದವರೂ ಆದರಣೀಯ ಪ್ರತೀಕಾರವನ್ನು ಮಾಡಿದ ಬಗ್ಗೆ ಈ ಕಮಿಟಿಯು ಅವರನ್ನು ಅಭಿನಂದಿಸುವದಲ್ಲದೆ, ಈ ಸಂಗ್ರಾಮವನ್ನು ಯಶಸ್ವಿಯಾಗುವವರೆಗೆ ನಡಿಸಲು, ತಕ್ಕ ಉಪಾಯಗಳನ್ನು ಕೈಕೊಳ್ಳಲು ನಾಗಪುರದ ಕಮಿಟಿಗೆ ಕೊಂಗ್ರೆಸ ಕಾರ್ಯಕಾರಿ ಕಮಿಟಿಯು ತಕ್ಕ ಸಹಾಯ ಸಲ್ಲಿಸಬೇಕು. ಮುಂದಿನ ಗಾಂಧೀ ದಿನವನ್ನು ಧ್ವಜೋತ್ಸವವೆಂದು ಸಕಲ ದೇಶಾಭಿಮಾನಿಗಳು ಪಾಲಿಸಬೇಕೆಂದು ಈ ಕಮಿಟಿಯು ಆಗ್ರಹಪಡುತ್ತದೆ. ಎಲ್ಲ ಪ್ರಾಂತಿಕ ಕಮಿಟಿಗಳೂ ಧ್ವಜದ ಮೆರವಣಿಗೆಗಳನ್ನು ಹೊರಡಿಸಿ, ಪ್ರಜೆಗಳು ರಾಷ್ಟ್ರಧ್ವಜವನ್ನು ಪ್ರದರ್ಶಿಸುವಂತೆ ವ್ಯವಸ್ಥೆ ಮಾಡಬೇಕು.

ಶ್ರೀ॥ ಸರೋಜಿನಿ ದೇವಿಯವರು ಈ ಠರಾವನ್ನು ಸೂಚಿಸುವಾಗ, ಮಾಡಿದ ಭಾಷಣವು ಬಹಳೇ ಭವ್ಯವಾಯಿತು. ಶ್ರೀಮತಿಯವರು ನಾಗಪುರ ಸತ್ಯಾಗ್ರಹದ ಸಂಗ್ರಾಮವು ಸ್ವಾರ್ಥತ್ಯಾಗದ ಹೋರಾಟವಾಗಿರುವದೆಂತಲೂ, ಅದಕ್ಕೆ ನೈತಿಕ ಪುಷ್ಟಿ ಸಲ್ಲಿಸುವದು ನಮ್ಮೆಲ್ಲರ ಪ್ರಥಮ ಕರ್ತವ್ಯವಿರುವದೆಂತಲೂ, ಸ್ಥಾನಿಕ ಮೊಗಗಳೇನೂ ಇರಲಿ, ಸತ್ಯಾಗ್ರಹದ ಸಂಗ್ರಾಮವು ಅಖಿಲ ರಾಷ್ಟ್ರವನ್ನೇ ವ್ಯಾಪಿಸಿರುವದೆಂತಲೂ, ರಾಷ್ಟ್ರೀಯ ಮಾನರಕ್ಷಣ ಮಾಡುವವರೆಲ್ಲರೂ ಸತ್ಯಾಗ್ರಹಿಗಳನ್ನು ಅಭಿನಂದಿಸಬೇಕೆಂತಲೂ ದೇವಿಯವರು ನುಡಿದರು. ಸತ್ಯಾಗ್ರಹದ ಕಾರಣವು ಕಾಣಲಿಕ್ಕೆ ಅಲ್ಪವು; ಮಹತ್ವಶೂನ್ಯವು. ಆದರೆ, ಮಾನಾಪಮಾನದ ಪ್ರಶ್ನೆಯಾಗಿದ್ದದರಿಂದ, ನೌಕರಶಾಹಿಯೊಡನೆ ಯುದ್ಧ ಹೂಡುವ ನಿರ್ಧಾರವನ್ನು ಪ್ರದರ್ಶಿಸುವ ಸಂಧಿಯು ಇದೇ ಎಂದು ಶ್ರೀಮತಿಯವರು ಉದ್ಗರಿಸಿದರು. ಈ ಸಂಗ್ರಾಮದಲ್ಲಿ ಎಳೆ ಮುದಿಗಳಿಗೊತ್ತ ಮುದುಕರೂ ಸೇರಿರುವರು. ಇಬ್ಬರೂ ನಾ ಮುಂದೆ, ನೀ ಮುಂದೆ ಎಂದು ನೌಕರಶಾಹಿಯೊಡನೆ ಇದಿರಾಡುತ್ತಿರುವರು. ನಿತ್ಯವೂ ಸತ್ಯಾಗ್ರಹ ಹೂಡುವ ಸೈನಿಕರ ಸಂಖ್ಯೆಯೇನು ಮಹತ್ವದ್ದಲ್ಲ. "ನಮಗೇನು ಒಮ್ಮೆಲೇ ಪ್ರದರ್ಶನ ಮಾಡುವದಿಲ್ಲ. ಜಲಬಿಂದುವಿನಾಘಾತದಿಂದ ಬಂಡೆಗಲ್ಲು ಒಡೆದು ಹೋಗುವಂತೆ, ಈ ಸ್ಥಿರ ಸತ್ಯಾಗ್ರಹದಿಂದ ನೌಕರಶಾಹಿಯನ್ನು ಹಣ್ಣಿಗೆ ತರುವದು ನಮ್ಮ ಸಾಧ್ಯವಿದೆ. ಪ್ರದರ್ಶನವನ್ನು ಮಾಡುವದು ಸತ್ಯಾಗ್ರಹದ ಧ್ಯೇಯವಲ್ಲ. ನೈತಿಕ ಬಲವನ್ನು ವೃದ್ಧಿಪಡಿಸುವದು ನಮ್ಮ ಧ್ಯೇಯವಿದೆ. ಸುಸಂಘಟಿತವಾಗಿ ನೌಕರಶಾಹಿಯೊಡನೆ ಸ್ಥಿರ ಭಾವನೆಯಿಂದ ಹೋರಾಡುವದೇ ನಮ್ಮ ಉದ್ದೇಶವದೆ. ರಾಷ್ಟ್ರಧ್ವಜವು ದೇಶದ ಮಾನದ ದ್ಯೋತಕವು, ರಾಷ್ಟ್ರಾತ್ಮವೂ ಅದೇ" ಎಂದು ಶ್ರೀ॥ ಸರೋಜಿನಿ ದೇವಿಯವರು ಕಾವ್ಯಮಯ ವಾಣಿಯಿಂದ ಬಣ್ಣಿಸಿ, ಕಮಿಟಿಯನ್ನು ಕೆಲ ಕಾಲದ ವರೆಗೆ ತನ್ಮಯ ಮಾಡಿದರು. ಮಿ॥ ಮಹಮ್ಮದ ಶಫೀಯವರು ಠರಾವಿಗೆ ಅನುಮೋದನವನ್ನಿತ್ತು, ಸತ್ಯಾಗ್ರಹ ಚಳವಳಿಯನ್ನು ಆದರಿಸುವರೆ ದೇಶಬಂಧುಗಳಿಗೆ ಆಗ್ರಹಪೂರ್ವಕ ಬಿನ್ನೈಸಿದರು. ಈಗ ವೃತ್ತಪತ್ರಗಳ ಸುದ್ದಿಗಾರರನ್ನು ಹೊರಹೊರಡಿಸಬೇಕೆಂದು ಸೂಚನೆ ಬಂತು. ಆದರೆ, ಅದು ನಾಮಂಜೂರಾಯಿತು. ಬಳಿಕ, ಶ್ರೀ॥ ರಾಜಗೋಪಾಲಾಚಾರ್ಯ, ಗೊಪಾಲಕೃಷ್ಣ, ಮಿ॥ ಶ್ಯಾಮಸುದ್ದೀನ ಮೊದಲಾದವರು ಉಪಸೂಚನೆಗಳನ್ನು ತಂದರು. ಮಿ॥ ಜವಾಹರಲಾಲ ನೆಹರೂರವರು ಶಿಕ್ಕ ಶಿಕ್ಕ ಹಾಗೆ ಉಪಸೂಚನೆಗಳನ್ನು ಸೂಚಿಸದೆ, ಕೊಂಗ್ರೆಸ ಕಾರ್ಯಕಾರಿ ಕಮಿಟಿಗೆ ಈ ಕಾರ್ಯವನ್ನ ವಹಿಸಬೇಕೆಂದು ವಾದಿಸಿದ ಮೇಲೆ, ಎಲ್ಲ ಉಪಸೂಚನೆಗಳು ಮರತ ಕೊಳ್ಳಲ್ಪಟ್ಟವು.

ದೇಶಬಂಧು ದಾಸರವರು ತಮ್ಮ ಮತವನ್ನು ಅರುಹಿದರು. ನಾಗಪುರದ ಸತ್ಯಾಗ್ರಹವು ತಮಗೆ ಸರಿದೋರುವದಿಲ್ಲೆಂದು ದೇಶಬಂಧುಗಳು ನುಡಿದರು. "ನಾವು ಒಕ್ಕಟ್ಟಾಗಿ ಮತಭೇದಗಳನ್ನು ಅಳಿಸಿದ ಹೊರತು, ದೇಶವು ಪ್ರಗತಿ ಮಾಡಲಿಕ್ಕಿಲ್ಲ. ನೀವೆಲ್ಲರೂ ಒಕ್ಕಟ್ಟಾಗಿ, ಸತ್ಯಾಗ್ರಹ ಧುರೆಯನ್ನು ಈಗ ನಾನು ವಹಿಸಿಕೊಳ್ಳದಿದ್ದರೆ, ನನ್ನನ್ನು ಬೇಕಾದಷ್ಟು ದೂರಿರಿ" ದೇಶಬಂಧುಗಳು ಸರೆಮನೆಯನ್ನು ಸೇರಿದವರಿಗೆಲ್ಲ ಅಭಿನಂದಿಸುವಾಗ, ಈ ಸಂಗ್ರಾಮದಲ್ಲಿ ದೇಶದೊಳಗುಂಟಾದ ನಿರುತ್ಸಾಹ ಪರಿಸ್ಥಿತಿಯಲ್ಲಿ ಸೆರೆಕೊಳ್ಳಲು ತಮಗೆ ಪ್ರೇರಣೆಯಾಗುವದಿಲ್ಲೆಂದರು. ಇಷ್ಟಾದ ಬಳಿಕ, ಅಧ್ಯಕ್ಷರು ಮತಗಳನ್ನೆಣಿಸಲಾರಂಭಿಸಿದರು. ಸ್ವರಾಜ್ಯ ಪಕ್ಷವು ತಟಸ್ಥ ವೃತ್ತಿಯನ್ನು ಅಂಗೀಕರಿಸಿತು. ಉಳಿದವರೆಲ್ಲರೂ ಮತಕೊಟ್ಟರು. ಒಬ್ಬರು ವಿರೋಧಿಸಿದರು. ಠರಾವು ಮಂಜೂರಾಯಿತು.

ಜಾದಾ ಕೊಂಗ್ರೆಸು.

ಕೌನ್ಸಿಲು ಬಹಿಷ್ಕಾರವನ್ನು ವಿಚಾರಿಸುವರೆ ಜಾದಾ ಕೊಂಗ್ರೆಸನ್ನು ನೆರೆಯಿಸಬೇಕೆಂದು ಅನೇಕ ಪ್ರಾಂತಗಳ ಮತವಿದೆ. ದೇಶದಲ್ಲಿ, ರಾಷ್ಟ್ರೀಯ ಸಭಾಭಿಮಾನಿಗಳಲ್ಲಿ ಪಕ್ಷಭೇದಗಳುಂಟಾಗಿವೆ. ಆದಕಾರಣ, ಅಗಸ್ಟ ತಿಂಗಳಿನ ಮಧ್ಯ ಕಾಲದಲ್ಲಿ ಮುಂಬಯಿಯಲ್ಲಿ ಜಾದಾ ಕೊಂಗ್ರೆಸನ್ನು ನೆರೆಯಿಸಬೇಕೆಂದು ಈ ಕಮಿಟಿಯ ಮತವಿದೆ. ಈ ಬಗ್ಗೆ ಯೋಗ್ಯ ವ್ಯವಸ್ಥೆ ಮಾಡುವದರೆ ಕೊಂಗ್ರೆಸ ಕಾರ್ಯಕಾರಿ ಕಮಿಟಿಗೆ ಅಧಿಕಾರ ಕೊಡಲ್ಪಟ್ಟಿದೆ.

ಈ ಠರಾವನ್ನು ಶ್ರೀ॥ ಪ್ರಕಾಶಂರವರು ಸೂಚಿಸಿದರು. ಕೆಲವರು ಜಾದಾ ಕೊಂಗ್ರೆಸಿನ ವಿಚಾರವು ಮುಂಬಯಿಯಲ್ಲಿ ತ್ಯಜಿಸಲ್ಪಟ್ಟಿದ್ದರಿಂದ, ಅದೇ ವಿಷಯವನ್ನು ಪುನಃ ವಿಚಾರಿಸುವದು ಯುಕ್ತವಲ್ಲೆಂದು ಉದ್ಗರಿಸಿದರು. ಡಾ॥ ಸಯ್ಯದ ಮಹಮೂದರವರು ಅನುಮೋದಿಸಿದರು. ಠರಾವಿನ ಮೇಲೆ ತೀಕ್ಷ್ಣ ವಾದವಿವಾದವಾಯಿತು. ಜಾದಾ ಕೊಂಗ್ರೆಸನ್ನು ನೆರೆಯಿಸಿದರೆ ಅಹಿಂಸಾಪ್ರಧಾನ ಅಸಹಕಾರಿತೆಯು ನಾಮಶೇಷವಾಗಿ, ಬಂಗಾಲದಲ್ಲೆಲ್ಲ ಕ್ರಾಂತಿಕಾರರು ತಲೆದೋರುವರೆಂದು ಶ್ರೀ॥ ಸುಭಾಷಚಂದ್ರ ಬೋಸರವರು ಎಚ್ಚರಿಕೆ ಕೊಟ್ಟರು. ಶ್ರೀ॥ ಸತ್ಯಮೂರ್ತಿಯವರು ಮತಭೇದವು ಮತ್ತೂ ತೀವ್ರವಾಗುವದೆಂದು ನುಡಿದರು. ಶ್ರೀ॥ ಗೋಪಾಲಕೃಷ್ಣರವರು ಠರಾವನ್ನು ಪುಷ್ಟೀಕರಿಸಿದರು. ಶ್ರೀ॥ ಬಂಕೋಪಾಧ್ಯಾಯರವರು ಕೌನ್ಸಿಲು ಬಹಿಷ್ಕಾರದ ಪಕ್ಷದವರು ವಿಧಾಯಕ ಕಾರ್ಯಕ್ರಮವನ್ನು ಆಚರಿಸಲಿ, ಕೌನ್ಸಿಲು ಪಕ್ಷವು ಕೌನ್ಸಿಲುಗಳನ್ನು ಸಾಗಿಸಲಿ, ಮಧ್ಯಸ್ಥರು ರಾಷ್ಟ್ರೀಯ ಸಭೆಯನ್ನು ನಡಿಸಲಿ ಎಂದು ನುಡಿದರು. ಒಂದು ಪಕ್ಷದವರು ಪರ ಪಕ್ಷದ ಮೇಲೆ ಟೀಕೆಯನ್ನು ಮಾಡಿ ವಾದದ ತೀಕ್ಷ್ಣತೆಯನ್ನೂ ಬೆಳಿಸಿದರು. ಪಂಡಿತ ಜವಾಹರಲಾಲರವರು ಅಂದದ್ದು:— "ರಾಷ್ಟ್ರೀಯ ಸಭೆಯ ಸಂಘಟಣೆಯನ್ನು ಕಾಪಾಡುವ ಮಾರ್ಗವು ಜಾದಾ ಕೊಂಗ್ರೆಸು ನೆರೆಯಿಸುವದೇ. ದಂಗೆಯನ್ನು ಎಬ್ಬಿಸಿ, ಸುಮ್ಮನೆ ಕೂಡ್ರುವದು ವಿಹಿತವಲ್ಲ." ಶ್ರೀ॥ ರಾಜಗೋಪಾಲಾಚಾರ್ಯರು ಜಾದಾ ಕೊಂಗ್ರೆಸ ಠರಾವನ್ನು ಅನುಮೋದಿಸಿದರು 'ಜಾದಾ ಕೊಂಗ್ರೆಸು ಕೌನ್ಸಿಲು ಪ್ರವೇಶವನ್ನು ಪುರಸ್ಕರಿಸಿದರೆ, ನೀವು ಕೌನ್ಸಿಲು ಪ್ರವೇಶಕ್ಕೆ ಅನುಕೂಲರಾಗುವಿರೇನು?' ಎಂದು ಸಭಾಸದರೊಬ್ಬರು ಪ್ರಶ್ನಿಸಲು, ದೇಶದ ಮತಕ್ಕೆ ವಿರೋಧವಾಗಿ ನಡಕೊಳ್ಳುವದು ನಿರರ್ಥಕವೆಂದು ಶ್ರೀ॥ ಆಚಾರ್ಯರು ಸ್ಪಷ್ಟೀಕರಿಸಿದರು. ದೇಶಬಂಧುಗಳು ಜಾದಾ ಕೊಂಗ್ರೆಸಿನ ಅವಶ್ಯಕತೆಯಿಲ್ಲವೆಂತಲೂ, ಮತಭೇದಗಳನ್ನು ಈಗಲೇ ನಿರ್ಮೂಲಿಸಬಹುದೆಂತಲೂ ಉದ್ಗರಿಸಿ, "ನೀವಿಷ್ಟು ಬಿಡಿರಿ, ನಾನಿಷ್ಟು ಬಿಡುತ್ತೇನೆ. ಅಂತು ನಾವು ರಾಜಿಯಾಗುವ ಹಾಗು ನೌಕರಶಾಹಿಯೊಡನೆ ಏಕಭಾವನೆಯಿಂದ ಹೋರಾಡುವ" ಎಂದರು. ಈಗ ಜಾದಾ ಕೊಂಗ್ರೆಸನ್ನು ತಮ್ಮ ಮೇಲೆ ಹೊರಿಸುವದು ಅನುಚಿತವೆಂತಲೂ ದೇಶಬಂಧುಗಳು ಪ್ರತಿಪಾದಿಸಿದರು. ಶ್ರೀ॥ ಪ್ರಕಾಶಂರವರು ವಾದಕ್ಕೆ ಉತ್ತರ ಸಲ್ಲಿಸುವಾಗ, ಜಾದಾ ಕೊಂಗ್ರೆಸಿನ ಅಧಿವೇಶನದಿಂದ ಸ್ವರಾಜ್ಯ ಪಕ್ಷದ ಕೌನ್ಸಿಲು ಪ್ರವೇಶ ಚಳವಳಿಗೆ ಬಾಧೆಯಾಗಲಾರದೆಂದೂ, ಕೌನ್ಸಿಲು ಚುನಾವಣೆಯು ಅಕ್ಟೋಬರದಿಂದ ಪ್ರಾರಂಭವಾಗುವದಿದ್ದದರಿಂದ, ಕೌನ್ಸಿಲು ಪ್ರವೇಶಕರಿಗೆ ಬೇಕಷ್ಟು ಅವಕಾಶವಿರುವದೆಂತಲೂ ತಾವು ಸ್ವರಾಜ್ಯ ಪಕ್ಷದವರಿದ್ದಿದ್ದರೆ, ಕೊಂಗ್ರೆಸಿನ ಅನುಜ್ಞೆಯನ್ನು ಪಡಕೊಳ್ಳಲು ಇಚ್ಛಿಸುತ್ತಿದ್ದೆನೆಂತಲೂ ನುಡಿದದ್ದಲ್ಲದೆ, ಕಾರ್ಯಕಾರಿ ಕಮಿಟಿಯು ಅಂತಃಕರಣಪೂರ್ವಕ ಮತಭೇದಗಳನ್ನು ಅಳಿಸುವ ಬಗ್ಗೆ ಯತ್ನಿಸುತ್ತದೆಂತಲೂ ನುಡಿದರು. ಮತ ಎಣಿಸಲು, ೮೦ ಅನುಕೂಲ, ೬೭ ಪ್ರತಿಕೂಲ ಮತಗಳು ಬಿದ್ದು, ಠರಾವು ಮಂಜೂರಾಯಿತು.

ಶಿಸ್ತು ಸಂರಕ್ಷಣದ ಠರಾವು ನಾಪಾಸು.

ರಾತ್ರಿ ೮॥ ಘಂಟೆಗೆ ಪುನಃ ಕಮಿಟಿಯ ಅಧಿವೇಶನವಾಯಿತು. ಮೊಟ್ಟಮೊದಲು ಮುಂಬಯಿಯಲ್ಲಿ ನೆರೆಯಲಿಕ್ಕಿದ್ದ ಜಾದಾ ಕೊಂಗ್ರೆಸಿಗೆ ಸಭಿಕರು ಅಧ್ಯಕ್ಷರನ್ನಾರಿಸಿದರು. ಮತ ಎಣಿಸಲು, ಮೌಲಾನಾ ಅಬ್ದುಲ್ ಕಲಮ ಆಝಾದರವರು ಬಹುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟದ್ದರೆಂದು ಡಾ॥ ಅನ್ಸಾರಿಯವರು ಜಾಹೀರು ಮಾಡಿದರು.

ಕೆಲ ಪ್ರಾಂತಿಕ ಕೊಂಗ್ರೆಸ ಕಮಿಟಿಗಳು ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಅಧಿಕಾರವನ್ನು ವಿರೋಧಿಸಿದ್ದು ನೋಡಿ, ಈ ಕಮಿಟಿಗೆ ವ್ಯಸನವಾಗುತ್ತದೆ. ಇದರಿಂದ ಶಿಸ್ತುಭಂಗವಾಗುವದಲ್ಲದೆ, ರಾಷ್ಟ್ರ ಸಂಸ್ಥೆಗಳೆಲ್ಲ ಚದರಿಹೋಗುವವು. ಈ ವೃತ್ತಿಯನ್ನು ತ್ಯಜಿಸದಿದ್ದರೆ, ಕಮಿಟಿಯು ಶಿಸ್ತು

ಸಂರಕ್ಷಣಕ್ಕಾಗಿ ಉಪಾಯ ಕೈಕೊಳ್ಳಬೇಕಾದೀತು ಈ ಠರಾವನ್ನು ಪಂಡಿತ ಜವಾಹರಲಾಲ ನೆಹರುರವರು ಸೂಚಿಸಿದರು. "ಹೀಗೆ, ಬೆದರಿಸ್ತು ಉಂಟಾದರೆ, ಕೆಲಸವು ಪ್ರಗತಿ ಹೊಂದಲಿಕ್ಕಿಲ್ಲ. ಇದೇನು ವ್ಯಕ್ತಿಗಳ ಮೇಲಿ ಆರೋಪವಲ್ಲ. ತಕ್ಕಷ್ಟು ವಿವರಣೆಯು ಎಂದು ಪಂಡಿತಜೀಯವರು ನುಡಿದರು. ಪಂಡಿತ-ಸಂತಾನಂರವರು ಶಿಸ್ತು ಪ್ರತಿಯೊಂದು ಸಂಘಟನೆಯ ಮೂಲಾಧಾರವೆಂದು ಪ್ರತಿಪಾದಿಸಿ, ಈ ಠರಾವನ್ನು ಮಂಜೂರು ಮಾಡಬೇಕೆಂದರು. ಕೆಲವರು ಇದೊಂದು ನಿಂದಾವ್ಯಂಜಕ ಠರಾವೆಂದೂ, ಕೆಲವರು ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ಗಯಾ ಠರಾವನ್ನು ಉಲ್ಲಂಘಿಸಿದ್ದರಿಂದ ಈ ಪರಿಸ್ಥಿತಿಯುಂಟಾಯಿತೆಂದೂ, ಹಲವರು ಇದು ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಮಾನದ ಪ್ರಶ್ನೆಯೆಂದೂ ಪ್ರಕೃತಿ ಭೇದದಂತೆ ನುಡಿದು, ಠರಾವಿಗೆ ವಿರೋಧ-ಅನುಮೋದನಗಳನ್ನಿತ್ತರು. ದೇಶಬಂಧುಗಳು ದಂಗೆ ಮಾಡಿದ ಪ್ರಾಂತಿಕ ಕಮಿಟಿಗಳನ್ನು ನಿಷೇಧಿಸಬೇಕೆಂದು ಉಪ್ಪರಿಸಿದರು. ಶ್ರೀ। ರಾಜಗೋಪಾಲಾಚಾರ್ಯರು ಪ್ರಾಂತಿಕ ಕಮಿಟಿಗಳು ಅಖಿಲ ಭಾರತೀಯ ಕೊಂಗ್ರೆಸಕಮಿಟಿಯ ಅಧಿಕಾರಕ್ಕೆ ಪ್ರತ್ಯಕ್ಷ ಒಳಪಟ್ಟ ಕಮಿಟಿಗಳಲ್ಲವೆಂತಲೂ, ಅವು ಪ್ರಾಂತಿಕ ಕಮಿಟಿಯ ಮೆಂಬರರಿಗೆ ಜವಾಬದಾರವಿರುವವೆಂತಲೂ, ತಮ್ಮ ಮೆಂಬರರ ಇಚ್ಛಾನುಸಾರ ವರ್ತಿಸುವದು ಕಮಿಟಿಗಳ ವಿಶೇಷ ಕರ್ತವ್ಯವೆಂತಲೂ ನುಡಿದರು. ಬಳಿಕ, ಪಂಡಿತ ಜವಾಹರಲಾಲ ನೆಹರುರವರು ತಮ್ಮ ಠರಾವಿನ ಸಮರ್ಥನೆ ಮಾಡಿದ ಮೇಲೆ, ಮತಎಣಿಸಲು, ೬೩ ಅನುಕೂಲ, ೬೫ ಪ್ರತಿಕೂಲ ಮತಗಳು ಬಿದ್ದು, ಠರಾವು ನಾಪಾಸಾಯಿತು. ಇಷ್ಟಾಗಲಿಕ್ಕೆ ರಾತ್ರಿ ೧೧॥ ಬಡಿದವು.

ಮರುದಿವಸವೇ ಕೊಂಗ್ರೆಸ ಕಾರ್ಯಕಾರಿ ಕಮಿಟಿಯ ಸಭಾಸದರಾದ ಪಂಡಿತ ಜವಾಹರಲಾಲ ನೆಹರು, ಶ್ರೀ। ಪ್ರಕಾಶಂ, ಡಾ। ಸಯ್ಯದ ಮಹಮೂದ, ಮೌ। ಅಬ್ದುಲ ಕಲಾಮ ಆಝಾದ, ಶ್ರೀಮತಿ ಸರೋಜಿನಿ ನಾಯಡು ಮೊದಲಾದ ಸಭೆಗೆ ಬಂದ ಕೊಂಗ್ರೆಸ ಕಾರ್ಯಕಾರಿ ಕಮಿಟಿಯ ಸಭಾಸದರೆಲ್ಲರು ರಾಜಿನಾಮೆಯನ್ನಿತ್ತರು. ಮಂಗಳವಾರ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ದೇಶಬಂಧುಗಳ ಸಭಾಪತಿತ್ವದಲ್ಲಿ ನೆರೆಯಿತು. ಶ್ರೀ। ವಿಠ್ಠಲಭಾಯಿ ಪಟೇಲರವರು, ಕಾರ್ಯಕಾರಿ ಕಮಿಟಿಯ ಮೆಂಬರರು ರಾಜಿನಾಮೆಯನ್ನು ಪರತ ತೆಗೆದುಕೊಳ್ಳುವಂತೆ ಒಂದು ಠರಾವನ್ನು ತಂದರು. ಆದರೆ, ಸಭಾಸದರು ರಾಜಿನಾಮೆಯನ್ನು ಹಿಂತೆಗೆದುಕೊಳ್ಳಲು ಒಪ್ಪದ್ದರಿಂದ, ಪಟೇಲರು ತಮ್ಮ ಠರಾವನ್ನು ಹಿಂತೆಗೆದುಕೊಂಡರು. ರಾಜಿನಾಮೆಗಳು ಮಂಜೂರಾದವು. ಮುಂದೆ ಹೊಸ ಅಧಿಕಾರಿ ಮಂಡಳವನ್ನು ಚುನಾಯಿಸುವ ಪ್ರಶ್ನೆ ಬಂತು. ರಾಜಿನಾಮೆ ಕೊಟ್ಟ ಕಮಿಟಿಯನ್ನೇ ಪುನಃ ಚುನಾಯಿಸಬೇಕೆಂದು ಶ್ರೀ। ಸೇನಗುಪ್ತರು ಸೂಚಿಸಿದರು. ಈ ಠರಾವನ್ನು ವಿಚಾರಿಸಲು, ಕಾರ್ಯಕಾರಿ ಕಮಿಟಿಗೆ ಅವಕಾಶ ಕೊಡುವರೆ, ಸಭೆಯು ವಿಸರ್ಜನಹೊಂದಿತು.

ಪುನಃ ಸಂಜೆ ೫ ಘಂಟೆಗೆ ಕಮಿಟಿಯು ನೆರೆಯಿತು. ಪ್ರಾಂತಿಕ ಕಮಿಟಿಗಳಿಗೆ ಕೊಡುವ ಗ್ರಾಂಟುಗಳ ಬಗ್ಗೆ ಒಂದು ಠರಾವಾಯಿತು. ಶೇಟ ಜಮನಾಲಾಲಜಿಯವರನ್ನು ಅಭಿನಂದಿಸುವ ಠರಾವೂ ಸರ್ವಾನುಮತದಿಂದ ಪಾಸಾಯಿತು. ರಾಜಿನಾಮೆಯನ್ನಿತ್ತ ಕಮಿಟಿಯ ಸಭಾಸದರು ಇಕ್ಕಟ್ಟಿನಲ್ಲಿ ಇತ್ತಂಡಗಳಿಗೆ ರಾಜಿಯಾಗುವಂತೆ ತಾವು ಕೆಲಸ ಮಾಡಬೇಕಾಯಿತೆಂತಲೂ, ಮುಂಬಯಿ ಠರಾವು ಹಿಂದೂ-ಮುಸಲ್ಮಾನರ ಐಕ್ಯಸಂವರ್ಧನಕ್ಕೆ ಬಹಳೇ ಅನುಕೂಲವಾಯಿತೆಂತಲೂ, ಕಮಿಟಿಯವರು ಪುನಃ ಅಧಿಕಾರಾರೂಢರಾಗಲಿಚ್ಛಿಸುವದಿಲ್ಲವೆಂತಲೂ ನುಡಿದು, ನಿಮಗೆ ವಿಶ್ವಾಸವಿದ್ದವರನ್ನು ಆರಿಸಿರೆಂದು ಶ್ರೀಮತಿ ಸರೋಜಿನಿದೇವಿಯವರು ಕಾರ್ಯಕಾರಿ ಕಮಿಟಿಯ ಪರವಾಗಿ ನುಡಿದರು. ಬಳಿಕ ಅಧಿಕಾರಿ ಮಂಡಳವನ್ನು ಚುನಾಯಿಸುವ ಕೆಲಸವು ನಡೆದು, ಈ ಕೆಳಗಿನಂತೆ ನೇಮಣೂಕಿಗಳಾದವು:— ಅಧ್ಯಕ್ಷ:— ಶ್ರೀ। ಕೊಂಡ ವೆಂಕಟಪ್ಪಯ್ಯಾ; ಕಾರ್ಯದರ್ಶಿ:— ಬಾಬು ರಾಜೇಂದ್ರ ಪ್ರಸಾದ, ಮಿ। ಶಿರವಾಣಿ; ಕಾರ್ಯಕಾರಿ ಕಮಿಟಿಯ ಕಾರ್ಯದರ್ಶಿ:— ಶ್ರೀ। ಗೋಪಾಲಕೃಷ್ಣಯ್ಯ; ಕೋಶಪಾಲಕ:— ಶ್ರೀ। ರೇವಾಶಂಕರ ಜಗಜೀವನ ಜವೇರಿ; ಸಭಾಸದರು:— ಶ್ರೀ। ಗಂಗಾಧರರಾವ ದೇಶಪಾಂಡೆ, ವಲ್ಲಭಭಾಯಿ ಪಟೇಲ, ರಾಜಗೋಪಾಲಾಚಾರ್ಯ, ಡಾ। ವರದರಾಜಲು ನಾಯಡು, ಮಿ। ಜೋರ್ಜ ಜೋಸೆಫ್, ಮಿ। ಮಹಮ್ಮದ ಶಫೀ. ಇಷ್ಟಾಗಲಿಕ್ಕೆ ರಾತ್ರಿ ೧೧ ಬಡಿದವು. ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಅಧಿವೇಶನವು ಸಮಾಪ್ತವಾಯಿತು.

ಇತರ ಸಂಗತಿಗಳು.

ಕೊಂಗ್ರೆಸ ಕಾರ್ಯಕಾರಿ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ। ಗೋಪಾಲಕೃಷ್ಣಯ್ಯನವರು ಮುಂಬಯಿಗೆ ಖಾಸಾ ಕೊಂಗ್ರೆಸಿನ ಬಗ್ಗೆ ವ್ಯವಸ್ಥೆ ಮಾಡಲು ಹೋಗಿರುವರು.

ಖಾಸಾ ಕೊಂಗ್ರೆಸನ್ನು ಕಲಕತ್ತೆಯಲ್ಲಿ ನೆರೆಯಿಸಬೇಕಾಗಿ ಬಂಗಾಲದವರು ನಾಗಪುರದಲ್ಲಿದ್ದ ತಮ್ಮ ಕೊಂಗ್ರೆಸ ಕಮಿಟಿಯ ಕಾರ್ಯದರ್ಶಿಗಳ ಮುಖಾಂತರ ಕೇಳಿಕೊಂಡರು. ಆದರೆ, ಅವರ ವಿನಂತಿಯು ಮನ್ನಿಸಲಾಗಲಿಲ್ಲ.

ಮದ್ರಾಸ, ಬಿಹಾರ, ಬಂಗಾಲ, ಸಂಯುಕ್ತಪ್ರಾಂತ, ಪಂಜಾಬ ಮೊದಲಾದವುಗಳೊಳಗಿನ ೩೧ ಮಂದಿ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಸಭಾಸದರು ಖಾಸಾ ಕೊಂಗ್ರೆಸಿನ ಠರಾವಿನ ಚರ್ಚೆಯು ಗಡಿಬಿಡಿಯಿಂದ ಒದಗಿತೆಂತಲೂ, ಅದನ್ನು ಪುನರಾಲೋಚಿಸುವರೆ ಇನ್ನೊಮ್ಮೆ ಕಮಿಟಿಯನ್ನು ನೆರೆಯಿಸಬೇಕೆಂತಲೂ ಅರ್ಜಿ ಮಾಡಿರುವರು. ಖಾಸಾ ಕೊಂಗ್ರೆಸಿನ ಠರಾವು ಕಾರ್ಯಕ್ರಮ ಪತ್ರಿಕೆಯಲ್ಲಿದ್ದಿಲ್ಲವೆಂತಲೂ ಅವರ ಅಂಬೋಣ.

ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯಲ್ಲಿ ಶ್ರೀ। ರಾಜಗೋಪಾಲಾಚಾರ್ಯರ ವರ್ತನವು ಆಕ್ಷೇಪಾರ್ಹವಾಯಿತಂತೆ. ಶ್ರೀ। ಪ್ರಕಾಶಂರವರು ಆ ಬಗ್ಗೆ ತಮ್ಮ ನಿಷೇಧವನ್ನೂ ಪ್ರದರ್ಶಿಸಿದರು.

ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯಲ್ಲಿ ೩ ಸರ್ತಿ ವೃತ್ತಪತ್ರಗಳ ಸುದ್ದಿಗಾರರನ್ನು ಹೊರದೂಡಬೇಕೆಂದು ಸೂಚನೆಗಳಾದವು. ಶ್ರೀ। ರಾಜಗೋಪಾಲಾಚಾರ್ಯರು ವೃತ್ತಪತ್ರಗಳಲ್ಲಿ ನಗೆ ಮಾತುಗಳು ಸಹ ಬರುತ್ತವೆಂದು ಟೀಕಿಸಿ, ಅವರನ್ನೂ ಹೊರಗೆ ಹಾಕುವದು ಯುಕ್ತವೆಂದು ಪ್ರತಿಪಾದಿಸಿದರು. ಎರಡೂ ಸರ್ತಿ ದಿವಾಭೀತ ಸೂಚನೆಗಳು ಬಿದ್ದು ಹೋದವು.

ಭತ್ತೆ ತಕ್ಕೊಳ್ಳದ, ಮೊದಲಿನ ಹಾಗೆಯೇ (Honorary) ಜನರು ದೇಶಸೇವೆ ಮಾಡಿದರೆ ಬಡ ಜನರ ಮೇಲೆ ಬಹಳೇ ಉಪಕಾರವಾದೀತು.

ಅಂಕೋಲಾ. ತಾ. ೧೩-೭-೧೯೨೩. } ಒಬ್ಬ ಬಡ ಲೋಕಲ್‌ಫಂಡು ಕೊಡುವ ನಾಗರಿಕ.

ಜಿಲ್ಹಾ ಲೋಕಲ್ಬೋರ್ಡಿನ ಅಧ್ಯಕ್ಷರು ಮಾಹಿತಿ ಪ್ರೂರೈಸಬೇಕು.

ಈಗ ಒಂದೆರಡು ತಿಂಗಳಗಳಾಗಾಯಿತು ನಮ್ಮ ಕಾನಡಾ ಜಿಲ್ಹೆಯ ಲೋಕಲಫಂಡ ತೆರಿಗೆಯು ೧॥-೨ ಪಟ್ಟು ಆಗಬೇಕೆಂತಲೂ ಮತ್ತು ೮-೧೦ ಲೋ। ಬೋ। ದವಾಖಾನೆಗಳು ಇಡಬೇಕೆಂತಲೂ ಜಿಲ್ಹಾ ಕಮಿಟಿಯಲ್ಲಿ ಠರಾವುಗಳು ಬಂದಿರುತ್ತವೆ. ಇದರ ಕಾರಣಗಳೇನಂದರೆ, ನಮ್ಮ ಜಿಲ್ಹೆಯ ಲೋ। ಬೋ। ಉತ್ಪನ್ನವು ತೀರ ಕಡಿಮೆ ಇದ್ದು, ಖರ್ಚು ಬಹಳ ಆಗುತ್ತದೆಂತಾ ಹೇಳುತ್ತಾರೆ. ಆದರೆ ಖರ್ಚಿನಸಂಗತಿಯ ಬಗ್ಗೆ ನಮ್ಮ ಜಿಲ್ಹೆಯ ಜಮಾ ಖರ್ಚಿನ ಸವಿಸ್ತರ ಮಾಹಿತಿಯು ಈ ಫಂಡ ಕೊಡುವ ಸಾವಿರಾರು ಜನರಿಗೆ ಗೊತ್ತಿಲ್ಲ. ಆದ್ದರಿಂದ, ನಮ್ಮ ಜಿಲ್ಹೆಯ ಲೋ। ಬೋ। ದ ಪ್ರೆಸಿಡೆಂಟ ಸಾಹೇಬರು ನಮ್ಮ ಜಿಲ್ಹೆಯ ವರ್ತಮಾನ ಪತ್ರಗಳಲ್ಲಿ ಎಲ್ಲಾ ಸಂಗತಿಗಳನ್ನು ಜಾಹಿರ ಮಾಡುವರೆಂತಾ ನಂಬುತ್ತೇನೆ.

ನಮಗೆ ಸರಕಾರದವರು ಲೋಕಲಬೋರ್ಡು ಎಂಬ ಸ್ವರಾಜ್ಯವನ್ನು ಮತ್ತು ಮೆಂಬರ ಪ್ರೆಸಿಡೆಂಟರಿಗೆ ಚಲೋ ಭತ್ತೆ ಎಂಬ ಆಮಿಷವನ್ನು ಕೊಟ್ಟಂದಿನಿಂದ, ಸದ್ರಿ ಜಾಗೆಗಳ ಸಲುವಾಗಿ ಬಹಳೇ ಜನರು ಯತ್ನಿಸುತ್ತಾರೆ. ಇದರ ಮುಂಚೆ "ಲೋ. ಬೋ. ಮೆಂಬರ" ಎಂಬ ಶಬ್ದಗಳು ಕೇಳಲಿಕ್ಕೆ ಬಹಳೇ ಅಪರೂಪವಾಗಿದ್ದವು. ಈಗಿನ ಭತ್ತೆ ತಕ್ಕೊಂಡು ಮಾಡಿದ ಕೆಲಸಕ್ಕಿಂತ ಮೊದಲು ಸ್ವಾರ್ಥತ್ಯಾಗದಿಂದ ಮಾಡಿದ ಮೆಂಬರರ ಕೆಲಸವು ಬಹಳೇ ಚಲೋದು ಇತ್ತು. ಆದರೆ ಬರಿ ಕಡೆಗೆ ನೋಡಿದಲ್ಲಿ, ಲೋ। ಬೋ। ದ ಹೆಸರಿನ ಗೋಳಾಟವು. ಮುಂಚಿನ ಚಲೋ ರಸ್ತೆಗಳು ಈಗ ನೀರು ಹೋಗುವ ಕಾಲುವೆಗಳು ಆಗಿದ್ದಾವೆ. ದವಾಖಾನೆಯಲ್ಲಿ ಔಷಧದ ಕೊರತೆಯು. ಬಡ ಶಾಲಾ ಮಾಸ್ತರರಿಗೆ ತಿಂಗಳ ಆಖೇರಿಗೆ ಪಗಾರ ಸಿಗದೆ ಅವರ ಹಾಲ. ಆದರೆ ಕಾರಭಾರದಲ್ಲಿ ಲೋ। ಬೋ। ಆಫೀಸಿನ ದೊಡ್ಡ ಇಮಾರತಿಯು, ಪ್ರೆಸಿಡೆಂಟ, ಚೇರಮನ ಆಫೀಸರ ಎಂಬ ಹೆಸರುಗಳು, ಭತ್ತೆಯ ಸಲುವಾಗಿ ಜಗಳಗಳು ಮಾತ್ರ ಕೇಳುತ್ತೇವೆ. ನಮ್ಮ ಜಿಲ್ಹಾ ಪ್ರೆಸಿಡೆಂಟರಿಗೆ ಕಮಿಶನರ ಸಾಹೇಬರ ಭತ್ತೆಯು, ತಾಲೂಕ ಪ್ರೆಸಿಡೆಂಟರಿಗೆ ಕಲೆಕ್ಟರ ಸಾಹೇಬರ ಭತ್ತೆಯು ಇರುತ್ತದೆಂತಾ ಕೇಳುತ್ತೇವೆ. ಇವರ ವಾರ್ಷಿಕ ಭತ್ತೆಗಳು ಎಷ್ಟು ರೂಪಾಯಿಗಳು ಆಗುತ್ತವೆಯೋ ಪ್ರಭುವಿಗೆ ಗೊತ್ತು!

ನಮ್ಮ ಮುಂಬಯಿ ಸರಕಾರದ ಕೌನ್ಸಿಲಿನಲ್ಲಿ ಸತತ ಖರ್ಚಿಯಮೇಲೆ ಕೂತುಕೊಂಡು ಭತ್ತೆ ಭಕ್ಷಿಸುವ ಮೆಂಬರರು ಇದ್ದಾರಂತೆ! ಆ ಮೆಂಬರರು ಪ್ರೆಸಿಡೆಂಟ ಸಾಹೇಬರು ಕಲೆದೂಗಿದ್ದಕ್ಕೆ ತಮ್ಮ ಮತವೆಂತ ಹೇಳುತ್ತಾರಂತೆ! ಅದರಂತೆ ನಮ್ಮ ಜಿಲ್ಹಾ ಲೋಕಲ್ ಬೋರ್ಡ ಮೆಂಬರರು ಕೇವಲ ತಮ್ಮ ಭತ್ತೆಯ ಸಲುವಾಗಿ ಆತ್ಮಹಿತ ಮಾಡಿಕೊಳ್ಳಲಿಕ್ಕೆ ಇದ್ದಾರೊ ಯಾ ಸಾರ್ವಜನಿಕ ಲೋಕೋಪಯೋಗದ ಕೆಲಸ ಮಾಡಲಿಕ್ಕೆ ಇದ್ದಾರೋ ಏನೋ ತಿಳಿಯುವದಿಲ್ಲ. ಆದ್ದರಿಂದ ನಮ್ಮ ಜಿಲ್ಹೆಯ ಲೋಕಲ್ ಬೋರ್ಡಿನ ಜಮಾ-ಖರ್ಚುಗಳನ್ನು ಅಂದರೆ ಭತ್ತೆ ಶುರು ಆಗುವ ಮೊದಲಿನ ವರ್ಷದ್ದು ಮತ್ತು ಕಳೆದ ವರ್ಷದ್ದು (ಅಂದರೆ ೧೯೧೮ ಮತ್ತು ೧೯೨೨ನೇ ಸಾಲಿನ) ಸವಿಸ್ತರ (ಶಾಳಾ, ದವಾಖಾನಾ, ರಸ್ತೆ, ಭತ್ತೆ ವಗೈರೆ) ಜಮಾಖರ್ಚಿನ ಮಾಹಿತಿಗಳನ್ನು ಜನರಿಗೆ ಜಾಹೀರ ಮಾಡಿದ್ದಲ್ಲಿ ಬಹಳೇ ಉಪಕಾರವಾದೀತು.

ಸದ್ಯದ ಮಂಗಾಯಿಯು, ಸರಕಾರದವರು ಏರಿಸಿದ ಉಪ್ಪಿನ ಮತ್ತು ಎಷ್ಟೋ ತೆರಿಗೆಗಳಿಂದ ಬಡ ಜನರು ಬಹಳೇ ತ್ರಾಸಪಟ್ಟಿದ್ದಿರುವದರಿಂದ, ಈಗ ಲೋ। ಫಂ। ಟೆಕ್ಸದ ಏರಿಕೆಯೂ, ದವಾಖಾನೆಗಳೂ ದೊಡ್ಡ ಭೀಮಸೇನನ ಗದೆಯಂತೆ ಬಡ ಜನರ ಮೇಲೆ ಬಿದ್ದಂತಾಯಿತು. ಈ ಎಲ್ಲಾ ಸಂಗತಿಗಳ ಮೇಲಿಂದ ನಾನು ಸೂಚಿಸುವದೇನಂದರೆ:— ಬೋರ ನಾಕೆಗಳು ಮತ್ತು ಒಂದು ಆಣೆ ಇದ್ದದ್ದು ಎರಡು ಆಣೆ ಮಾಡಿ ಬಡ ಜನರ ಮೇಲೆ ಹೊಸ ತೆರಿಗೆಯ ಒಜ್ಜೆ ಹಾಕುವದಕ್ಕಿಂತ, ಎಲ್ಲಾ ಪ್ರೆಸಿಡೆಂಟರು, ಮೆಂಬರರು ಜನರ ಹಿತಕ್ಕಾಗಿ ಸ್ವಾರ್ಥತ್ಯಾಗಮಾಡಿ

(ಏಳನೆ ೬ನೇ ಕಲಮಿನಲ್ಲಿ ನೋಡಿರಿ.)

ಕಾನಡಾವೃತ್ತ.

ಗುರುವಾರ, ತಾರೀಖು ೧೯ ಮಾಹೆ ಜುಲೈ ೧೯೨೩

ಸಿಂಹಾವಲೋಕನ.

ಸತ್ಯಾಗ್ರಹದ ಸಂಗ್ರಾಮದಿಂದ ಪವಿತ್ರವಾದ ನಾಗಪುರದ ರಣಕ್ಷೇತ್ರದಲ್ಲಿ ರವಿವಾರ ತಾ ಜುಲೈ ೮ನೇ ನೆರೆದ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ವೃತ್ತಾಂತವನ್ನು ಇನ್ನೊಂದೆಡೆಯಲ್ಲಿ ನಿವೇದಿಸಿರುವೆವು. ಆದರ ಮೇಲಿಂದ ನಾಗಪುರದಲ್ಲಿ ರಾಷ್ಟ್ರೀಯ ಮುಂದಾಳುಗಳು ಮಾಡಿದ ತೀರ್ಮಾನಗಳು ವಾಚಕರಿಗೆ ಅವಗತವಾಗುವವು. ನಾಗಪುರದ ಹಕೀಕತನ್ನು ವಿಮರ್ಶಿಸಿದರೆ, ಅನೇಕ ವಿಚಾರತರಂಗಗಳು ಮನೋಭೂಮಿಯ ಮೇಲೆ ಉಂಟಾಗುತ್ತವೆ. ಅವನ್ನೇ ಇಂದಿಗೆ ಸಂಕ್ಷೇಪತಃ ನಿವೇದಿಸಬಿಚ್ಛಿಸುವೆವು.

ಮೊಟ್ಟಮೊದಲು, ರಾಷ್ಟ್ರಧ್ವಜ ಸಂಗ್ರಾಮವನ್ನು ಉತ್ಸಾಹದಿಂದ, ಧೈರ್ಯದಿಂದ, ಸತ್ಯಾಗ್ರಹ ವೃತ್ತಿಯಿಂದ, ಶಿಸ್ತಿನಿಂದ ನಡಿಸಿದ ಬಗ್ಗೆ ನಾಗಪುರಸ್ಥರನ್ನು ಅಭಿನಂದಿಸಿದ್ದು ಯಥಾಯೋಗ್ಯವಾಯಿತು. ಶ್ರೀಮತಿ ಸರೋಜಿನೀ ದೇವಿಯವರಂಥ ಭರತಖಂಡದ ಕವಿಗಳು ಪ್ರಾಸಾದಿಕ ವಾಣಿಯಿಂದ ನಾಗಪುರಸ್ಥರ ಪ್ರಶಂಸೆ ಮಾಡಿದ ಭಾಷಣವನ್ನು ಕೇಳುವ ಸುಪ್ರಸಂಗವು ಪ್ರಾಪ್ತವಾದ ಬಗ್ಗೆ, ಕವಿಗಳಿಗೆ ಭಾವನಾಪ್ರದ ವಿಷಯವನ್ನು ಒದಗಿಸಿಕೊಟ್ಟು ವಾಙ್ಮಯ ಸೇವೆ ಮಾಡಲು ಪ್ರೇರಿಸಿದ ಬಗ್ಗೆ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಸಭಾಸದರೆಲ್ಲರೂ ನಾಗಪುರಸ್ಥರಿಗೆ ಮತ್ತೊಮ್ಮೆ ಅಭಿನಂದಿಸುವರು. ಅನೇಕ ಸಭಾಸದರು ಸತ್ಯಾಗ್ರಹವನ್ನು ಯಶಸ್ವಿ ಮಾಡಿ, ನೌಕರಶಾಹಿಯ ಅನ್ಯಾಯವನ್ನು ಹೊರಗೆಡಹುವರೆ, ಉಪಾಯ ಯೋಜನೆಗಳನ್ನು ಕೈಕೊಳ್ಳುವರೆ ಕಾರ್ಯಕಾರಿ ಕಮಿಟಿಗೆ ಅಧಿಕಾರವನ್ನಿತ್ತು, ರಾಷ್ಟ್ರೀಯ ನಿರ್ಧಾರವನ್ನು ವ್ಯಕ್ತಪಡಿಸಿರುವರು. ನಾಗಪುರದ ನೌಕರಶಾಹಿಗೆ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ಚೊಕ್ಕ ಉತ್ತರವನ್ನಿತ್ತದ್ದನ್ನು ನೋಡಿ, ನಮಗೆ ಸಂತೋಷವಾಗುತ್ತದೆ. ಇದೇ ನಿರ್ಧಾರವನ್ನು ಸ್ವರಾಜ್ಯ ಪಕ್ಷದ ಮುಖಂಡರಾದ ದೇಶಬಂಧು ಚಿತ್ತರಂಜನ ದಾಸರವರು ಪ್ರದರ್ಶಿಸಿದ್ದರೆ, ನಮ್ಮ ಆನಂದವು ದ್ವಿಗುಣಿತವಾಗುತ್ತಿತ್ತು, ರಾಷ್ಟ್ರಧ್ವಜವನ್ನು ಆಶ್ರಯಿಸಿ, ರಾಷ್ಟ್ರೀಯ ಸಭೆಯ ಅಂಕೆಯಲ್ಲಿಯೇ ಸ್ವರಾಜ್ಯ ಪಕ್ಷವನ್ನು ಏರ್ಪಡಿಸಿದ್ದೇವೆಂಬ ದೇಶಬಂಧುಗಳ ಪ್ರತಿಪಾದನೆಯೂ ಸಾರ್ಥಕವಾಗುತ್ತಿತ್ತು. ಆದರೆ, ದೇಶಬಂಧುಗಳು ಧ್ವಜಸಂಗ್ರಾಮದಲ್ಲಿ ದೇಶಬಾಂಧವರ ಪಾಲುಗಾರರಾಗಲು ಒಪ್ಪಲಿಲ್ಲ. ತಮಗೆ ಪ್ರೇರಣೆಯೂ ಆಗುವದಿಲ್ಲೆಂದು ಕಮಿಟಿಯಲ್ಲಿ ದೇಶಬಂಧುಗಳು ಉದ್ಗರಿಸಿದರು. ಇದರಿಂದ ಸ್ವರಾಜ್ಯ ಪಕ್ಷವು ಈ ಬಗ್ಗೆ ಯಾವದೇ ಬದಿಯಿಂದ ಮತ ಕೊಡದೆ, ತಟಸ್ಥ ವೃತ್ತಿಯನ್ನೇ ಸ್ವೀಕರಿಸಬೇಕಾಯಿತು. ನಿಜವಾಗಿ, ಇದು ಶೋಚನೀಯವು. ನೌಕರಶಾಹಿಗೆ ಕೌನ್ಸಿಲುಗಳ ಅಂತರ್ಬಾಹ್ಯ ಪ್ರತೀಕಾರವನ್ನೀಯಲು ಟೊಂಕ ಕಟ್ಟಿದ ದಾಸಪಕ್ಷವು, ತಾನಾಗಿ ನಡೆದು ಬಂದ, ಅಖಿಲ ರಾಷ್ಟ್ರೀಯ ಸಭಾಭಿಮಾನಿಗಳು ಒಮ್ಮನಸ್ಸಿನಿಂದ ಪ್ರತೀಕಾರ ಮಾಡಬಹುದಾದ ಶುಭಸಂಧಿಯನ್ನು, ಕೌನ್ಸಿಲು ಪ್ರವೇಶದ ಮೃಗಜಲದ ಹವ್ಯಾಸಕ್ಕೆ ಬಿದ್ದು ತಿರಸ್ಕರಿಸಿದ್ದನ್ನು ನೋಡಿ, ಯಾವ ದೇಶಾಭಿಮಾನಿಗೆ ವ್ಯಸನವಾಗದಿರದು? ಸಕಲರಿಗೂ ಸಾಮಾನ್ಯವಾದ ಪ್ರಶ್ನೆಯ ಮೇಲೆ, ಅಖಿಲ ರಾಷ್ಟ್ರಾಭಿಮಾನಿಗಳು ಪಕ್ಷಭೇದವನ್ನು ತೊರೆದು ಟೊಂಕ ಕಟ್ಟಿದ್ದರೆ, ನೌಕರಶಾಹಿಯು ಶೀಘ್ರವೇ ಹಣ್ಣಿಗೆ ಬರುತ್ತಿತ್ತು, ಭರತಭೂಮಿಯ ಉದ್ಧಾರವೂ ತ್ವರ್ಯವೇ ಕೊನೆಗಾಣುತ್ತಿತ್ತು.

ಜಾದಾ ಕೊಂಗ್ರೆಸಿನ ಠರಾವು ವಿಶೇಷ ಮಹತ್ವದ್ದಿದೆ. ಮುಂಬಯಿಯ ಮಧ್ಯಸ್ಥಿಕೆಯ ಠರಾವನ್ನು ಮುರಿದು, ಶ್ರೀ। ರಾಜಗೋಪಾಲಾಚಾರ್ಯರು ದೇಶದಲ್ಲಿ ಎಬ್ಬಿಸಿದ ಗೊಂದಲವನ್ನು ಪರಿಹರಿಸುವರೆ, ಜಾದಾ ಕೊಂಗ್ರೆಸು ನಿಮಂತ್ರಿಸುವ ಅವಶ್ಯಕತೆಯುಂಟಾಯಿತು. ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಠರಾವು ಬೇರೆ, ಗಯಾ ಕೊಂಗ್ರೆಸಿನ ಠರಾವು ಬೇರೆ, ಒಂದಕ್ಕೊಂದು ವಿರೋಧವಾಗಿರುವ ಠರಾವುಗಳಲ್ಲಿ ಗಯಾ ಕೊಂಗ್ರೆಸಿನ ಠರಾವನ್ನು ನಾವು ಮನ್ನಿಸುತ್ತೇವೆಂದು ಶ್ರೀ। ಆಚಾರ್ಯ ಮೊದಲಾದವರು ರಾಷ್ಟ್ರಸಂಸ್ಥೆಗಳಲ್ಲಿ ದುರವಸ್ಥೆಯನ್ನುಂಟುಮಾಡಿದರು. ರಾಷ್ಟ್ರೀಯ ಸಭೆಯ ಘಟನೆಯಂತೆ ಹೊಸ ಪಂಕ್ತಿಯಲ್ಲಿ ಹೊಸ ಠರಾವುಗಳನ್ನು ಉಂಟುಮಾಡುವ ಅಧಿಕಾರವು ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಗಿರುವದೆಂತಲೂ, ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಠರಾವು ಅಧಿಕಾರಾತಿಕ್ರಮವುಳ್ಳದ್ದೆಂದು ನಿರ್ಣಯಿಸುವ ಹಕ್ಕು ಪ್ರಾಂತಿಕ ಕಮಿಟಿಗಳಿಗಿಲ್ಲವೆಂತಲೂ ದೇಶಬಂಧುಗಳು ವಾದಿಸಿದರು. ಈ ಕೂಟಪ್ರಶ್ನೆಗಳನ್ನೆಲ್ಲ ಜಾದಾ ಕೊಂಗ್ರೆಸಿನಲ್ಲಿಯೇ ತೀರ್ಮಾನ ಮಾಡಿಕೊಳ್ಳುವದು ಯೋಗ್ಯವು. ಯಾರ ವರ್ತನವು ನಿಯಮಬಾಹ್ಯವಿದೆ, ಯಾರು ರೀತಿಯಂತೆ ವರ್ತಿಸಿದರು, ಎಂಬ ನಿರ್ಣಯವು ಜಾದಾ ಕೊಂಗ್ರೆಸಿನಲ್ಲಾಗುವದು. ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ದೇಶವು ಯಾವ ಮಾರ್ಗವನ್ನು ಆಕ್ರಮಿಸಬೇಕು ಎಂಬದನ್ನು ಜಾದಾ ಕೊಂಗ್ರೆಸು ದಿಗ್ದರ್ಶಿತ ಮಾಡುವದು. ಶ್ರೀ। ಸತ್ಯಮೂರ್ತಿಗಳು ನುಡಿದಂತೆ, ದೇಶದಲ್ಲಿ ಪುನಃ ವಾದ ಎಬ್ಬಿ, ಇತ್ತಂಡಗಳೊಳಗಿನ ವೈಮನಸ್ಯವು ವಿಶೇಷ ವೃದ್ಧಿಯಾಗುವದೆಂಬ ಮಾತನ್ನು ನಾವು ಒಪ್ಪುತ್ತೇವೆ. ಆದರೆ, ಗೊಂದಲದಲ್ಲಿ ಸ್ಪಷ್ಟ ದಾರಿಯನ್ನು ಪ್ರಜೆಗಳಿಗೆ ತೋರಿಸುವ ಅವಶ್ಯಕತೆಯು ಈಗ ತೀರ ಅಗತ್ಯವಿದೆ. ಆದರಿಂದ, ಜಾದಾ ಕೊಂಗ್ರೆಸನ್ನು ನೆರೆಯಿಸುವದೇ ಉತ್ತಮ ಪಕ್ಷವೆಂದು ನಮಗೆ ತೋರುತ್ತದೆ. ಈ ನಿರ್ಣಯವನ್ನು ದೇಶಬಂಧುಗಳು ಪುರಸ್ಕರಿಸಲಿಲ್ಲ. ಕೌನ್ಸಿಲು ಚುನಾವಣಿಯ ಸಮಯವು ಇನ್ನು ೩ ತಿಂಗಳು ದೂರವಿರುವಾಗ, ಸ್ವರಾಜ್ಯ ಪಕ್ಷವು ತನ್ನ ಮತದಂತೆ ಪ್ರಜಾಮತವನ್ನು ತನ್ನೆಡೆಗೆ ಆಕರ್ಷಿಸಿಕೊಳ್ಳಲು ಹಗಲಿರುಳು ದುಡಿದಿರುವಾಗ, ಕೊಂಗ್ರೆಸಿನ ನಿರ್ಣಯವನ್ನು ತನಗನುಕೂಲವಾಗುವಂತೆ ಮಾಡಿಕೊಳ್ಳುವ ಜಾದಾ ಕೊಂಗ್ರೆಸಿನ ಸುಸಂಧಿಯನ್ನು ಹೋಗಲಾಡಿಸಲಿಕ್ಕಿಲ್ಲೆಂದು ನಮ್ಮ ಅಂದಾಜಿತ್ತು. ಪಂಡಿತ ಜವಾಹರಲಾಲ, ಶ್ರೀ। ಪ್ರಕಾಶಂರವರೂ ಇದೇ ರೀತಿ ಪ್ರತಿಪಾದಿಸಿದರು. ಆದರೂ, ದೇಶಬಂಧುಗಳು ಒಪ್ಪಲಿಲ್ಲ. ಜಾದಾ ಕೊಂಗ್ರೆಸಿನ ಠರಾವು ನಾಮಂಜೂರಾಯಿತು.

ಮುಂಬಯಿಯ ಮಧ್ಯಸ್ಥಿಕೆಯ ಠರಾವನ್ನು ಪುನರಾಲೋಚಿಸಿ, ಕಿತ್ತೊಗೆಯುವರೆ, ಬಂಗಾಲದ ಶ್ರೀ। ಹರದಯಾಲ ನಾಗರವರು ಬಹುಪರಿಯಿಂದ ಹೋರಾಡಿದರು. ಆದರೆ, ಅವರ ಠರಾವು ಸಭಿಕರಿಗೆ ಮಾನ್ಯವಾಗಲಿಲ್ಲ. ಮಧ್ಯಸ್ಥಿಕೆಯ ಠರಾವು ಸ್ಥಾನಭ್ರಷ್ಟವಾಗದಿರುವಾಗ, ಕೆಲ ಪ್ರಾಂತಿಕ ಕೊಂಗ್ರೆಸ ಕಮಿಟಿಗಳು ಆ ಠರಾವನ್ನು ಉಲ್ಲಂಘಿಸಿದ ಬಗ್ಗೆ ನಿಷೇಧವನ್ನು ಪ್ರದರ್ಶಿಸಿ, ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ತನ್ನ ಗೌರವವನ್ನು ಕಾಪಾಡಿಕೊಳ್ಳುವದೆಂದು ಯಾರೂ ಹೇಳುವರು. ರಾಷ್ಟ್ರಸಂಸ್ಥೆಗಳು ಅನುಸರಿಸಿದ ಉಲ್ಲಂಘನ ವೃತ್ತಿಗೆ ತಡೆ ಹಾಕಿ, ಅವುಗಳಿಗೆ ಎಚ್ಚರಿಕೆ ಕೊಡುವ ಸಮಯವಾದರೂ ಇದೇ. ಕಾರ್ಯಕಾರಿ ಕಮಿಟಿಯವರು ರಾಷ್ಟ್ರಸಂಸ್ಥೆಗಳಲ್ಲಿ ಗೊಂದಲವೆದ್ದು, ರಾಷ್ಟ್ರಸಂಘಟನೆಯು ಶಿಥಿಲವಾಗಬಾರದೆಂದು ಇಂಥ ಶಿಸ್ತುಸಂರಕ್ಷಕ ಠರಾವೊಂದನ್ನು ಸೂಚಿಸಿದ್ದರು. ಇದೇನು ವ್ಯಕ್ತಿಗಳ ಮಾನಾಪಮಾನದ ಪ್ರಶ್ನೆಯುಲ್ಲವೆಂದು ಪಂಡಿತ ಜವಾಹರಲಾಲರವರು ಮುದ್ದಾಂ ಸೂಚಿಸಿದ್ದರು. ಆದರೆ, ಕೇಳುವವರಾರು? ಪ್ರತಿಯೊಂದು ಪಕ್ಷದವರು ಮೂಲತತ್ವವನ್ನು ಮರೆತು, ಶಿಕ್ಕ ಶಿಕ್ಕಂತೆ ವಾದಿಸಿ, ಠರಾವನ್ನು ಕಿತ್ತು ಹಾಕಿ ಬಿಟ್ಟರು. ಪರಿಣಾಮವು ಮಾತ್ರ ತೀರ ಕೆಡಕಾಯಿತು. ಮಧ್ಯ

ಸ್ಥಿರ ಸ್ಥಿತಿಯು ಯಾವಾಗಲೂ ಚಿಂತಾಪ್ರದವೇ. ಯಾರೂ ಅವರನ್ನು ಪೂರ್ಣವಾಗಿ ನಂಬುವದಿಲ್ಲ. ಪಂಡಿತ ಜವಾಹರಲಾಲ ಮೊದಲಾದ ಮಧ್ಯಸ್ಥರು ಕೇವಲ ದೇಶಸೇವೆಗಾಗಿ ರಾಷ್ಟ್ರಸೂತ್ರಗಳನ್ನು ವಹಿಸಿಕೊಂಡಿದ್ದರು. ಶಿಸ್ತುಸಂರಕ್ಷಕ ಠರಾವನ್ನು ಕಿತ್ತೊಗೆದ ಕೂಡಲೆ, ಅವರು ರಾಜಿನಾಮೆಯನ್ನಿತ್ತು, ಬಿಡುಗಡೆ ಹೊಂದಿದರು. ಮಾರನೇ ದಿನ ಶ್ರೀ|| ವಿಠ್ಠಲಭಾಯಿ ಪಟೇಲ ಮೊದಲಾದವರು ಅವರ ಮನವೊಲಿಸುವದಕ್ಕೆ ಯತ್ನಿಸಿದರು. ಅವರನ್ನೇ ಪುನಃ ನೇಮಿಸಬೇಕೆಂಬ ಠರಾವೂ ಬಂತು. ಆದರೆ, ಅವರು ತಮ್ಮ ರಾಜಿನಾಮೆಗಳನ್ನು ಹಿಂತೆಗೆದುಕೊಳ್ಳಲೊಪ್ಪಲಿಲ್ಲ. ಶ್ರೀ|| ಕೊಂಡ ವೆಂಕಟಪ್ಪಯ್ಯನವರ ನೇತೃತ್ವದಲ್ಲಿ ಹೊಸ ಕಾರ್ಯಕಾರಿ ಕಮಿಟಿಯು ನೇಮಿಸಲ್ಪಟ್ಟಿತು. ಶಿಸ್ತುಸಂರಕ್ಷಕ ಠರಾವನ್ನು ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ಕಿತ್ತೊಗೆದದ್ದು ತೀರ ಅಪ್ರಶಸ್ತವು; ಸಂಕಟಪ್ರದವೆಂದು ಹೇಳಿದರೂ ಹೇಳಬಹುದು. ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಗೆ ತನ್ನ ಗೌರವದ ಅರಿವಿಲ್ಲದಿದ್ದರೆ, ಅದರ ಸೇವೆಯನ್ನು ಮಾಡಲಿಕ್ಕೆ ಸ್ವಾಭಿಮಾನೀ ಪುರುಷರು ದೊರಕುವದು ದುರ್ಲಭವಾಗುವದು. ಡಾ|| ಅನ್‌ಸಾರಿಯವರ ನೇತೃತ್ವದಲ್ಲಿ ಅಧಿಕಾರಾರೂಢವಾದ ಕಾರ್ಯಕಾರಿ ಕಮಿಟಿಯು ಠರಾವುಗಳಿಗೆಲ್ಲ ಮನ್ನಣೆಯನ್ನಿತ್ತ ಬಳಿಕ, ಅವರ ಅಧಿಕಾರತ್ಯಾಗ ಮಾಡುವಷ್ಟು ಇಕ್ಕಟ್ಟಿನ ಪರಿಸ್ಥಿತಿಯನ್ನು ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ಉಂಟುಮಾಡಬಾರದಿತ್ತು. ವಿಶೇಷವಾಗಿ, ಅಸಹಯೋಗದ ಆಧಾರಸ್ತಂಭವಾದ ಶಿಸ್ತನ್ನು ಯಾವಾಗಲೂ ಸಂರಕ್ಷಿಸುವದು ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಕರ್ತವ್ಯವಿತ್ತು. ಮಧ್ಯಸ್ಥರಿಗೆ ತಮ್ಮ ಠರಾವುಗಳನ್ನು ಜ್ಯಾರಿ ಮಾಡಲು ಕಮಿಟಿಯು ಸಂಧಿ ಕೊಡಬೇಕಾಗಿತ್ತು. ಹೀಗಿರಲು, ಶಿಸ್ತುಸಂರಕ್ಷಕ ಠರಾವನ್ನು ಕಿತ್ತೊಗೆದು, ಕಮಿಟಿಯು ರಾಷ್ಟ್ರೀಯ ಸಂಘಟನೆಯನ್ನು ಗಂಡಾಂತರಕ್ಕೀಡುಮಾಡಿದೆಂದು ನಮಗೆ ಹೇಳಬೇಕಾಗಿದೆ.

ಸ್ಫುಟ ಸೂಚನೆಗಳು.

ಲೌಸೇನದೊಳಗಿನ ದ್ವಿತೀಯ ತಹಪರಿಷತ್ತು ಎಲ್ಲಿ ಮುಟ್ಟಿತು? ಮಿತ್ರಪಕ್ಷದವರ ಕಾರಸ್ಥಾನವು ಹೇಗೆ ನಡೆದವೆ? ತುರ್ಕರ ಕಾದಾಟವು ಯಶಸ್ವಿಯಾಯಿತೇನು? ಎಂದು ವಾಚಕರು ಕೇಳಬಹುದು. ಕಳೆದ ತಾ. ೯ ನೇ ಸೋಮವಾರಕ್ಕೆ ಲೌಸೇನದಲ್ಲಿ ತುರ್ಕರಿಗೂ, ಮಿತ್ರರಿಗೂ ತಹನಾಮೆಯಾಯಿತೆಂದು ಸುದ್ದಿ ಬಂದಿದೆ. ತುರ್ಕಸ್ತಾನದ ಪ್ರತಿನಿಧಿಗಳಾದ ಮಿ|| ಇಸ್ಮಥ ಪಾಶಾರವರು ಲೌಸೇನದಲ್ಲಿ ನೆರೆದ ವೃತ್ತಪತ್ರದ ಸುದ್ದಿಗಾರರಿಗೆಲ್ಲ "ನಮಗೆ ಒಪ್ಪಂದವಾಯಿತು" ಎಂದು ನುಡಿದರು. ೮ ತಿಂಗಳುಗಳ ವರೆಗೆ ಮಿತ್ರಪಕ್ಷದ ಕಾರಸ್ಥಾನಿ ರಾಜಕಾರಣಧುರಂಧರರ ಗೂಢ ದೃಢ ನಿಶ್ಚಯದಿಂದ, ಸ್ವಾಭಿಮಾನದಿಂದ ಹೋರಾಡಿ, ಅವರ ಬೇಡಿಕೆಗಳ ಅನ್ಯಾಯವನ್ನು ಹೊರಪಡಿಸಿ, ತಮ್ಮ ನ್ಯಾಯ್ಯ ಬೇಡಿಕೆಗಳನ್ನು ಮಾನ್ಯ ಮಾಡುವಷ್ಟು ಮಿತ್ರಪಕ್ಷದ ಪ್ರತಿನಿಧಿಗಳಿಗೆ ವಿಚಾರಕ್ರಾಂತಿ ಮಾಡಿದ ಬಗ್ಗೆ ಅಖಿಲ ಮಹಮ್ಮದೀಯರು ಇಸ್ಮಥ ಪಾಶಾರವರನ್ನು ಅಭಿನಂದಿಸುವರು. ಪುನಃ ಪುನಃ ಕಲಹಕಾರಣವಾದ ತುರ್ಕೀ ಪ್ರಶ್ನೆಯನ್ನು ಇತ್ತಂಡಗಳಿಗೆ ಮಾನ್ಯವಾಗುವಂತೆ ಬಿಡಿಸಿ, ಜಗತ್ತಿನಲ್ಲಿ ಶಾಂತತೆಯನ್ನು ಪ್ರಸ್ಥಾಪಿಸಿದ ಬಗ್ಗೆ ಅಖಿಲ ಮಾನವ ಜಾತಿಯೂ ಇಸ್ಮಥರವರನ್ನು ಕೃತಜ್ಞತೆಯಿಂದ ಸತ್ಕರಿಸುವದು. ೮ ತಿಂಗಳುಗಳ ಹೋರಾಟದಿಂದ ಇಸ್ಮಥ ಪಾಶಾರವರು ಗಳಿಸಿದ್ದೇನಂದರೆ:— "ಎನೆಟೋಲಿಯಾ ಪ್ರಾಂತದೊಳಗಿಂದ ಗ್ರೀಕರನ್ನು ಹೊರದೂಡಿ, ಆ ಪ್ರಾಂತವನ್ನು ತುರ್ಕಸ್ಥಾನಕ್ಕೆ ಸೇರಿಸಿಕೊಂಡಿರುವರು. ಕಾನ್ಸ್ಟಾಂಟಿನೋಪಲಿನ ಮೇಲೆ, ತಮ್ಮ ಕೈ ಇರಬೇಕೆಂದು ಮಿತ್ರಪಕ್ಷದವರು ಅನೇಕ ಯುಕ್ತಿ-ಕುಯುಕ್ತಿಗಳನ್ನು ಮಾಡಿದರು. ಮೊಟ್ಟಮೊದಲು, ರಶಿಯಾ ದೇಶದ ಅಧಿಪತಿಗಳಿದ್ದ ಝಾರ ಬಾದಶಹರಿಗೆ ಅದನ್ನು ಒಪ್ಪಿಸಬೇಕೆಂದು ಮಿತ್ರಪಕ್ಷದವರ ಇರಾದೆಯಿತ್ತು. ಝಾರ ಬಾದಶಾಹಿಯು ನಿರ್ಮೂಲಹೊಂದಿದ ಮೇಲೆ, ಈ ಪಟ್ಟಣವನ್ನು ಅಂತಃರಾಷ್ಟ್ರೀಯದಾಗಿ ಮಾಡಿ; ತಮ್ಮ ಅಂಕೆಯಲ್ಲಿಡಬೇಕೆಂಬ ಕುಯುಕ್ತಿಯಾಯಿತು. ಕಾನ್ಸ್ಟಾಂಟಿನೋಪಲ ಶಹರವು ಬಹಳ ಮಹತ್ವದ ನಗರವಿದ್ದು, ಇಸ್ಲಾಮ ಸಂಸ್ಕೃತಿಯ ದ್ಯೋತಕವೆಂದರೂ ಅನ್ನಬಹುದು. ಈ ಪಟ್ಟಣವನ್ನು ಪಾಶಾರವರು ತಮ್ಮೊಡನೆ ಸೆಳೆಕೊಂಡಿರುವರು. ಅಡ್ರಿಯಾನೋಪಲ್ ಎಂಬ ಮುಖ್ಯ ಬಂದರದ ಮೇಲೆ ಮಿತ್ರಪಕ್ಷದವರ ಕಾಕದೃಷ್ಟಿ ಇತ್ತು. ಅದನ್ನು ನಿವಾರಿಸಿ, ಇಸ್ಮಥರವರು ಅಡ್ರಿಯಾನೋಪಲ ಬಂದರವನ್ನು ತುರ್ಕಸ್ಥಾನಕ್ಕೆ ಸೇರಿಸಿರುವರು. ತುರ್ಕಸ್ಥಾನದವರು ಮಿತ್ರಪಕ್ಷದವರಿಗೆ ಕೊಡತಕ್ಕ ಸಾಲಗಳ ಭದ್ರತೆಯ ಬಗ್ಗೆ ಕೆಲ ಪ್ರದೇಶವನ್ನು ಮಿತ್ರಪಕ್ಷದವರ ವಶಕ್ಕಿಡಬೇಕೆಂದು 'ಮಿತ್ರರ' ರ ಪ್ರತಿನಿಧಿಗಳು ಹೋರಾಡಿದರು. ಸ್ವಾಭಿಮಾನಿ ರಾಷ್ಟ್ರಕ್ಕೆ ಇದು ಅಯೋಗ್ಯವೆಂದು ಈ ಕರಾರಿಗೆ ಪಾಶಾರವರು ಒಪ್ಪಲಿಲ್ಲ. ಕಟ್ಟಕಡೆಗೆ, ಮಿತ್ರರು ತಮ್ಮ ದುರಾಗ್ರಹವನ್ನು ತ್ಯಜಿಸಬೇಕಾಯಿತು. ಲೌಸೇನದಲ್ಲಿ ತುರ್ಕಸ್ಥಾನವು ಗಳಿಸಿದ ಒಪ್ಪಂದದ ಕರಾರುಗಳಿವು.

---

೨. ಇಸ್ಮಥ ಪಾಶಾರವರು ಒಪ್ಪಂದವಾಯಿತೆಂದು ಸಾರಿದ ಮರುದಿನವೇ ತಹನಾಮೆಗಳನ್ನು ಅಮಲಬಜಾವಣೆ ಮಾಡುವಾಗ ಇತ್ತಟ್ಟಿನಲ್ಲಿ ಮತಭೇದವುಂಟಾಯಿತೆಂದು ತಿಳಿದುಬರುತ್ತದೆ. ಕಾನ್ಸ್ಟಾಂಟಿನೋಪಲ, ಅಡ್ರಿಯಾನೋಪಲದೊಳಗಿದ್ದ ಸೈನ್ಯವನ್ನು ಹಿಂತೆಗೆದುಕೊಂಡು, ಕರಾರನಾಮೆಯೊಳಗಿನ ಪ್ರದೇಶವನ್ನು ಖಾಲಿಮಾಡಿಕೊಡುವದರ 'ಮಿತ್ರ' ರು ಒಪ್ಪಿರುವರು. ಆದರೊಡನೆಯೇ ಕಪ್ಪು ಸಮುದ್ರ, ಭಾಸ್ಫೋರಸ ಸಾಮುದ್ರಧುನಿಗಳೊಳಗಿಂದ ನೌಕಾಬಲವನ್ನು ಹಿಂಗರೆಯಗೊಡದೇಕೆಂಬದು ಪಾಶಾರವರ ಹೇಳಿಕೆ. ಇದು ಅಯೋಗ್ಯವೆಂದು ಯಾರೂ ಹೇಳಲಾರರು. ಆದರೆ, 'ಮಿತ್ರ'ರು ಹಡಗುಗಳೆರಡನ್ನು ಸಾಮುದ್ರಧುನಿಯಲ್ಲಿಟ್ಟು, ಉಳಿದವುಗಳನ್ನೆಲ್ಲ ಆಯಾ ದೇಶಗಳಿಗೆ ಕಳುಹಿಕೊಡುತ್ತೇವೆಂದರು. ಇಂಥ ವಚನಗಳಿಗೆ ಬಲಿಬಿದ್ದು, ಮೂಲ ಪ್ರಶ್ನೆಯನ್ನು ಬದಿಗೊತ್ತುವವರು ಪಾಶಾರವರಲ್ಲ. ಪರ ರಾಷ್ಟ್ರಗಳ ಯುದ್ಧನೌಕೆಗಳೆಲ್ಲ ತಮ್ಮ ಸಮುದ್ರ, ಸಾಮುದ್ರಧುನಿಗಳಲ್ಲಿ ಇಡಗೊಡಬಾರದೆಂದು ಪಾಶಾರವರ ದೃಢನಿಶ್ಚಯ. ತುರ್ಕರು ಸುಮ್ಮನೆ ಕಟಿಪಿಟಿ ಮಾಡುತ್ತಾರೆಂದು ಮಿತ್ರ ಪಕ್ಷದವರ ಹೇಳಿಕೆ. ಆದರಿಂದ ಭೀತಿಗೊಳ್ಳುವ ಕಾರಣವೇನಿಲ್ಲೆಂದು ರೊಯ್ಟರ ಬಾತ್ಮೀದಾರರು ನಮಗೆ ಆಶ್ವಾಸಿಸುತ್ತಾರೆ. ಅವರ ಆಶ್ವಾಸನೆಯು ಫಲದಾಯಕವಾಗಿ, ಅಗಸ್ಟ ೧ನೇ ತಾರೀಖಿಗೆ ಅಂಗೋರಾದಲ್ಲಿ ನೆರೆಯುವ ನೇಶನಲ್ ಎಸೆಂಬ್ಲಿಯಲ್ಲಿ ತಹನಾಮೆಯು ಮಾನ್ಯವಾಗುವಂತೆ, ಅಷ್ಟರೊಳಗೆ ಎಲ್ಲ ರಾಷ್ಟ್ರ ಪ್ರತಿನಿಧಿಗಳ ಸಹಿ-ಶಿಕ್ಕೆಗಳಾಗಲೆಂದು ನಮ್ಮ ಬಯಕೆ.

---

೩. ಈ ತಹನಾಮೆಯಿಂದ ತುರ್ಕೀ ಪ್ರಶ್ನೆಯು ಪೂರ್ಣವಾಗಿ ಇತ್ಯರ್ಥವಾಗಲಿಲ್ಲ. ಇನ್ನೂ ಮಹತ್ವದ ಬಾಬುಗಳು ಚರ್ಚೆಯಾಗತಕ್ಕದ್ದಿವೆ. ಇಸ್ಲಾಮ ಧರ್ಮದ ಪರಿಪಾಲಕರಾದ ಖಲೀಫಾರವರ ಅಧಿಕಾರ ಕಕ್ಷೆಯು ಇನ್ನೂ ನಿಶ್ಚಿತವಾಗಬೇಕು. ಮಹಮ್ಮದೀಯರಿಗೆ ಅತಿ ಪವಿತ್ರವಾದ ಜಝೀರಾತ-ಅಲ್-ಅರಾಬ ಪ್ರದೇಶವು ಖಲೀಫಾರವರಿಗೆ ಬಿಟ್ಟುಕೊಡಲೇಬೇಕು. ಬ್ರಿಟಿಶರು ಅರಬಸ್ತಾನಕ್ಕೆ ಸ್ವಾತಂತ್ರ್ಯ ಕೊಟ್ಟಿದ್ದೇವೆಂಬ ಬಣ ವಚನವನ್ನು ಪಾಲಿಸಬೇಕೆಂದು ಆ ಪ್ರದೇಶವನ್ನು ಪಾಲು ಮಾಡಲು ಹವಣಿಸುತ್ತಿರುವರು. ಅರಬರಿಗೆ ಕೌನ್ಸಿಲುಗಳ ಮಾಯಾಜಾಲದಲ್ಲಿ ಸಿಲುಕಿ ಹಾಕಬೇಕೆಂಬ ಯತ್ನಗಳೂ ನಡೆದವು. ಆದರೆ, ಅರಬರು ಅವನ್ನು ಒಮ್ಮನಸ್ಸಿನಿಂದ ಬಹಿಷ್ಕರಿಸಿ, ತಮ್ಮ ಸತ್ವವನ್ನೂ, ನಿಶ್ಚಯವನ್ನೂ ಬ್ರಿಟಿಶರಿಗೆ ಮನಗಾಣಿಸಿರುವರು. ಪಾಲೆಸ್ಟೈನ ಪ್ರದೇಶವನ್ನು ವಿಂಗಡಿಸುವ ಕುಯುಕ್ತಿಯೂ ನಡೆದದೆ. ಜಝೀರಾತ-ಅಲ್-ಅರಾಬ ಪ್ರದೇಶವನ್ನು ೪ ವರುಷಗಳಲ್ಲಿ ಬ್ರಿಟಿಶರ ಅಂಕೆಯಿಂದ ವಿಮೋಚಿಸಿ, ತುರ್ಕರ ಸ್ವಾಧೀನ ಮಾಡುತ್ತೇವೆಂದು ಪಾರ್ಲಿಮೆಂಟಿನಲ್ಲಿಯೂ ಜಾಹೀರ ಮಾಡಲಾಯಿತು. ವಚನಭಂಗದಿಂದ ಜಾಗೃತವಾದ ಮಹಮ್ಮದೀಯ ಬಾಂಧವರು ಇಂಥ ಹುಸಿ ಸುದ್ದಿಗಳಿಗೆ ಬಲಿಬಿದ್ದು, ಸಂತೋಷಪಡುವರೆಂದು ಬ್ರಿಟಿಶರ ಗ್ರಹಿಕೆಯಿದ್ದರೆ, ಅದು ಅಯಥಾರ್ಥವೆಂದು ಇನ್ನಾದರೂ ಅವರು ತಿಳಿಯಲಿ. ಯಾಕೆಂದರೆ, ನಾಗಪುರದಲ್ಲಿ ನೆರೆದ ಸೆಂಟ್ರಲ ಖಿಲಾಫತ ಕಮಿಟಿಯು ಜಝೀರಾತ-ಅಲ್-ಅರಾಬ ಪ್ರದೇಶದ ಮೇಲಿನ ಇಸ್ಲಾಮೇತರರ ಅಂಕೆಯನ್ನು ದೂರಪಡಿಸಿ, ಅದನ್ನು ಖಲೀಫಾರವರಿಗೆ ಪೂರ್ಣವಾಗಿ ವಹಿಸಿದ ಹೊರತು, ತಮ್ಮ ಸಮಾಧಾನವಾಗದೆಂದು ಸ್ಪಷ್ಟವಾಗಿ ಜಾಹೀರುಮಾಡಿರುವದು. ಇನ್ನು 'ಮಿತ್ರ' ರು ಈ ಬಗ್ಗೆ ವಿಶೇಷ ಹೆಣಗಾಡದೆ, ಖಲೀಫಾರವರಿಗೆ ಇಸ್ಲಾಮು ಧರ್ಮದ ಪಾಲನೆಗೆ ಅವಶ್ಯವುಳ್ಳ ಪ್ರದೇಶವನ್ನು ಒಪ್ಪಿಸಿ, ಜಗತ್ತಿನಲ್ಲಿ ಶಾಂತತೆಯನ್ನು ಪ್ರಸ್ಥಾಪಿಸುವರೆಂದು ನಾವು ನೆರೆ ನಂಬಿದ್ದೇವೆ.

---

೪. ವರಿಷ್ಠ ಕಾಯಿದೆ ಕೌನ್ಸಿಲಿನ ಅಧಿವೇಶನವು ಸಿಮುಲಾಪಟ್ಟಣದಲ್ಲಿ ಈ ತಿಂಗಳ ೨ನೇ ತಾರೀಖಿಗೆ ಪ್ರಾರಂಭವಾಯಿತು. ಉಪ್ಪಿನ ತೆರಿಗೆಯ ಇಮ್ಮಡಿಕೆಯಿಂದ ಸಂತಾಪವನ್ನೈದಿದ ನಮ್ಮ ಸಹಕಾರಿ ದೇಶಬಾಂಧವರು ಕೌನ್ಸಿಲಿನಲ್ಲಿ ಹಾವಳಿ ಹಾಕಿ,

ನೌಕರಶಾಹಿಗೆ ಸಾಕಷ್ಟು ಮಾತ್ರದಿಂದು ಅನೇಕ ಅಪ್ಪರ ತಿಳುವಳಿಕೆಯಾಗಿರಬಹುದು. ಆದರೆ, ಇಂಥ ಪ್ರಕಾರಗಳೇನು ಸಂಭವಿಸದೆ, ಕೌನ್ಸಿಲಿನ ಅಧಿವೇಶನವು ಯಥಾಸಾಂಗ ನಡೆದಿದೆ. ಸಹಕಾರಿಗಳು, ಉಪ್ಪಿನ ತೆರಿಗೆಯನ್ನು ಬಾದಶಾಹಿ ಅಧಿಕಾರದಿಂದ ಇಮ್ಮಡಿಸಿದ ಬಗ್ಗೆ ಸರಕಾರಕ್ಕೆ ಯಾವ ಪರಿಯ ವಿರೋಧವನ್ನು ಪ್ರದರ್ಶಿಸಬೇಕೆಂದು ವಿಚಾರ ಮಾಡುವ ಬಗ್ಗೆ ಗುಪ್ತ ಬೈಠಕಿಯನ್ನು ನಡಿಸಿದರು. ಆದರೆ, ಅದರಿಂದ ನಿಷ್ಪನ್ನವಾದದ್ದೇನೂ ಇಲ್ಲ. ಜನರಲ್ ಸ್ಟಾಂಪ ಡ್ಯೂಟಿಯನ್ನು ಏರಿಸುವ ಕಾಯಿದೆಯ ವಾಚನವಾಯಿತು. ಅದಕ್ಕೆ ಪ್ರಜಾಪ್ರತಿನಿಧಿಗಳೆಂದು ಬಡಿವಾರ ಒಡಿಯುವ ಡೆಮೊಕ್ರೆಟಿಕ್ ಪಕ್ಷದ ಸಹಕಾರಿಗಳು ಮತವನ್ನಿತ್ತರು. ಕೊನೆಯಾದೊಳಗಿನ ಹಿಂದೀ ದೇಶಬಾಂಧವರ ಸಮಾಲೋಚನಕ್ಕಾಗಿ ತಂದ ಠರಾವಿನ ಗತಿಯೂ ಇದೇ ಪರಿಯಾದ ಸಂಭವಿಸಿತು. ಸರಕಾರಿ ಕಾಯಿದೆಗಳ ವಾಚನಗಳೆಲ್ಲ ನಿರ್ವಿಘ್ನತೆಯಿಂದ ಪಾರಗಂಡವು. ಡಾ। ನಂದುಲಾಲರವರು ಮಂಗಳವಾರ ತಾ. ೧೦ ನೇ ಸರ್ವಾಧಿಪತಿಗಳ ಬಾದಶಾಹಿ ಅಧಿಕಾರದ ಕಲಮನ್ನು ಹಸ್ತೆ ಬಂದಿ ಸ್ವರಾಜ್ಯದ ಕಾಯಿದೆಯೊಳಗಿಂದ ತೆಗೆದು ಬಿಡಬೇಕೆಂದರು. ಅದಕ್ಕೆ ಡಾ। ಬಸೂರವರು ಆ ಕಲಮಿನೊಳಗಿಂದ 'ಆಸ್ಥಾ ಹಿತಗಳು' (or interests) ಎಂಬೆರಡು ಶಬ್ದಗಳನ್ನು ಮಾತ್ರ ಲೋಪ ಮಾಡಬೇಕೆಂದರು. ವಾಸ್ತವಿಕ, ಡಾ ಬಸೂರವರ ನೇಮಸ್ತ ಉಪಸೂಚನೆಯೂ ಮಂಜೂರಾಯಿತು. ಈ ಉಪಸೂಚನೆಯಿಂದ, ಹಿಂದುಸ್ಥಾನದ ಹಿತದ ಸಲುವಾಗಿ ಮೇಲೆ ಬಾದಶಾಹಿ ಅಧಿಕಾರವನ್ನು ಉಪಯೋಗಿಸಲು ಸರ್ವಾಧಿಪತಿಗಳಿಗೆ ಇದ್ದ ದೊರೆಯುವಂತಾದ. "ಆಪತ್ಕಾಲ" ಹಾಗು "ಬ್ರಿಟಿಶ ಹಿಂದುಸ್ಥಾನದ ಶಾಂತತಾ ಸಂರಕ್ಷಣೆ" ಎಂಬ ಸಬಬುಗಳ ಮೇಲೆ ಇನ್ನೂ ಬಾದಶಾಹಿ ಅಧಿಕಾರವನ್ನು ಉಪಯೋಗಿಸುವ ಹಕ್ಕು ಸರ್ವಾಧಿಪತಿಗಳಿಗಿದೆ. ಅಸಹಕಾರರಿಗೆ ಶಬ್ದಲೋಪ ಮಾಡಿಸಿ ಶ್ರೇಯಸ್ಸನ್ನು ದೊರಕಿತು. ಅಧಿಕಾರವೇನು ಲೋಪವಾಗಲಿಲ್ಲ. ಉಪ್ಪಿನ ತೆರಿಗೆಯು ಇಮ್ಮಡಿ ಮಾಡುವ ಕಾರಣವು ಆಪತ್ಕಾಲವೆಂದು ಸರ್ವಾಧಿಪತಿಗಳೇ ನಮೂದಿಸಿರುವರಷ್ಟೇ?

---

೫. ಮಹಾತ್ಮಾ ಗಾಂಧಿ, ಮೌ। ಹಜರತ್ ಮೋಹಾನಿ, ಅಲ್ಲೀ ಬಂಧು ಮೊದಲಾದ ಕರಾಚಿ ಕೈದಿಗಳನ್ನು ವಿಮೋಚಿಸುವರೆ ಚಿತಗಾಂಗದ ಮಿ। ಮುನಶಿ ಅಬ್ದುಲ ರಹಿಮಾನರವರು ಠರಾವು ಕಳಿಸಿದ್ದರು. ಅವರಿಗೆ ಇಂಗ್ಲೀಷ ಭಾಷೆಯು ಜ್ಞಾನವಿಲ್ಲ. ತಮ್ಮ ಠರಾವು ಚರ್ಚೆಗೆ ಬರುವ ಅಧಿವೇಶನದಲ್ಲಿ ಇವರು ಗೈರ ಹಾಜರ ಇದ್ದರು. ಇಷ್ಟು ಉತ್ಸಾಹದಿಂದ ಬಂದ ಠರಾವನ್ನು ಮದ್ರಾಸಿನ ಶ್ರೀ। ಶೇಷಗಿರಿ ಅಯ್ಯರರವರು ಸೂಚಿಸಿದರು. ಶ್ರೀ। ಅಯ್ಯರರ ಸಮರ್ಥನಪರ ಭಾಷಣವಾದ ಮೇಲೆ, ಗೃಹಮಂತ್ರಿಗಳಾದ ಸರ್ ಮಾಲ್ಕಮ್ ಹೇಲೀರವರು ವಿರೋಧಪರ ಭಾಷಣವನ್ನು ಮಾಡಿದರು. 'ಮಹಾತ್ಮರು ಸಾಧುಗಳಿರಲಿ, ಇರದಿರಲಿ, ಅದರ ಗೊಡವೆ ನಮಗಿಲ್ಲ. ಅವರ ಚಳವಳಿಯು ಶಕ್ಯ ಮಾರ್ಗದಿಂದ ನಡೆಯುವದಿಲ್ಲ. ದೇಶದಲ್ಲೆಲ್ಲ ಅಶಾಂತತೆಯನ್ನೇ ಹಬ್ಬಿಸಿ, ಗೊಂದಲವನ್ನೆಬ್ಬಿಸಿದ ಜವಾಬದಾರಿಯು ಅವರದೇ. ಅವರು ಸದ್ಗುಣಸಂಪನ್ನರಿದ್ದರೂ, ಅವರಿಗೆ ಅಧಿಕಾರಲೋಭವಿದೆ. ತಮ್ಮ ಧ್ಯೇಯಸಾಧನೆಗಾಗಿ ಅನ್ಯಾಯ ಮಾರ್ಗವನ್ನು ಸಹ ಅವಲಂಬಿಸಲು ಅವರು ಹಿಂಜರಿಯರು. ಇಂಥವರನ್ನು ಬಿನ್‌ಶರ್ತ ಬಿಡುಗಡೆ ಮಾಡುವದು ದೇಶಹಿತವಲ್ಲ. ಅಲ್ಲೀ ಬಂಧುಧ್ವಯರ ಚಳವಳಿಯು ಬ್ರಿಟಿಶ ಸರಕಾರದ ವಿಘಾತಕವೇ. ಅಫಘಾಣಿಸ್ಥಾನದ ಅಮೀರರಿಗೆ ಬ್ರಿಟನ್‌ದಗೂಡ ಸಂಧಿ ಮಾಡಬಾರದೆಂದು ೧೯೨೦ ರಲ್ಲಿ ಬೋಧಿಸಿದವರು ಮಿ। ಶೌಕತ ಅಲ್ಲಿಯವರು. ಅಸಹಯೋಗವು ವಿಫಲವಾದರೆ, ದೇಶದಲ್ಲಿ ರಕ್ತಪಾತವನ್ನೆಬ್ಬಿಸುವೆವೆಂದು ಭೀತಿ ಹಾಕಿದವರು ಮಿ। ಮಹಮ್ಮದ ಅಲ್ಲಿಯವರು. ಇವರಿಗೆಲ್ಲ ನ್ಯಾಯಾಸನವು ವಿಚಾರಪೂರ್ವಕ ಶಿಕ್ಷೆಯನ್ನಿತ್ತಿದೆ. ಅನ್ಯಾಯವಾದರೆ, ಅವರು ಅಪೀಲು ಮಾಡಬೇಕು. ನ್ಯಾಯಾಸನದ ಕಾರಭಾರದಲ್ಲಿ ಕೈಹಾಕುವದು ನಮಗೆ ಇಷ್ಟವಿಲ್ಲ.' ಮಿ। ಗ್ವಾನರವರು ಮೌ। ಹಜರತ್ ಮೋಹಾನಿಯವರ ದೋಷಾವಿಷ್ಕರಣ ಮಾಡಿದರು. ಕರಾಚಿ ಕೈದಿಗಳ ಹೆಸರುಗಳನ್ನು ಠರಾವಿನೊಳಗಿಂದ ಲೋಪ ಮಾಡಬೇಕೆಂದು ಮೌಲವಿ ಮಿಯಾನ ಅಸ್‌ಜಾದುಲ್ಲಾರವರು ಸೂಚಿಸಿ, ಮಂಜೂರು ಮಾಡಿಕೊಂಡರು. ಲಜಪತರಾಯರ ಹೆಸರನ್ನು ಈ ಠರಾವಿನಲ್ಲಿ ಸೇರಿಸಬೇಕೆಂದು ರಾ। ಭಾರ್ಗವರವರು ಸೂಚಿಸಿದರು. ಈ ಉಪಸೂಚನೆಯು ಚರ್ಚೆಯಾಗಿ ಬಿದ್ದು ಹೋಯಿತು. ಗಾಂಧಿ, ಮೋಹಾನಿ ಕೈದಿಗಳಿಂದ ಅರ್ಜಿ ಬಂದಲ್ಲಿ ಅವರನ್ನು ಬಿಟ್ಟುಗೊಡದೇ ಹೇಗೆ ರಾವಬಹಾದ್ದೂರ ಸುಬ್ರಹ್ಮಣ್ಯರವರು ಸೂಚಿಸಿದರು. ಕೈದಿಗಳು ಬೇಡದೆ, ಅವರನ್ನು ಬಿಡುಗಡೆ ಮಾಡಿದರೆ, 'ನಾ ಒಲ್ಲೆ' ಎಂದು ಅವರು ಬಿಡುಗಡೆಯಾಗಲು ನಿರಾಕರಿಸಬಹುದೆಂದು ಅವರಿಗೆ ಭೀತಿಯಾಯಿತು. ಗೃಹಮಂತ್ರಿಗಳ ವಿರೋಧದ ಮೂಲಕ, ಈ ನೇಮಸ್ತ ಉಪಸೂಚನೆಯೂ ನಾಮಂಜೂರಾಯಿತು. ಶ್ರೀ। ಅಯ್ಯರರ ಠರಾವಿನ ಮೇಲೆ ಮತಕೊಳ್ಳಲು, ೪೦ ಪ್ರತಿಕೂಲ, ೨೨ ಅನುಕೂಲ ಮತಗಳು ಬಿದ್ದು, ಠರಾವು ನಾಮಂಜೂರಾಯಿತು. ವರಿಷ್ಠ ಕಾಯಿದೆ ಕೌನ್ಸಿಲಿನ ಸಹಕಾರಿ ದೇಶಬಾಂಧವರ ಉತ್ಸಾಹ ನೋಡಿರಿ. ಈ ವಾದದಲ್ಲಿ ರಾಷ್ಟ್ರದ ಮಾನ್ಯ ಮಂದಾಳುಗಳನ್ನು ನಿಂದಿಸಲು ಸರಕಾರಕ್ಕೊಂದು ಒಳ್ಳೆ ಸಂಧಿಯು ದೊರಕಿತು. ಸರಕಾರಿ ಸಭಾಸದರು ಮಾನ್ಯ ಮುಂದಾಳುಗಳ ಮೇಲೆ ಹೊರಿಸಿದ ಆರೋಪಗಳ ಬಗ್ಗೆ ನಿಷೇಧವನ್ನು ಪ್ರಕಟಿಸುವಷ್ಟು ಸಹ ಔದಾರ್ಯಬುದ್ಧಿಯನ್ನು ಪ್ರದರ್ಶಿಸಲಿಲ್ಲ ಇದರ ಮೇಲಿಂದ ಅನೇಕರು, ಹೊಸ ಕೌನ್ಸಿಲು ಚುನಾವಣೆಯ ಸಮಯದಲ್ಲಿ ಮತಗಳನ್ನು ತಮ್ಮೆಡೆಗೆ ಎಳಕೊಳ್ಳುವ ಮೆಂಬರರ ಸಾಧನವಿದೆಂದು ಊಹಿಸುತ್ತಾರೆ. ಚರ್ಚೆಯನ್ನು ಸಮಾಲೋಚಿಸಿದರೆ, ಇದೇನು ಅಯಥಾರ್ಥವೆಂದು ಎಣಿಸಲಾಗದು.

---

೬. ಕಳೆದ ರವಿವಾರ ತಾ. ಜುಲೈ ೧೫ನೇಗೆ ಶಿರ್ಶಿಯಲ್ಲಿ ನೆರೆಯಲಿಕ್ಕಿದ್ದ ಜಿಲ್ಹಾ ಕೊಂಗ್ರೆಸ ಕಮಿಟಿಯ ಅಧಿವೇಶನವು, ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ಮಂಜೂರು ಮಾಡಿದ ಡಾದಾ ಕೊಂಗ್ರೆಸಿನ ಠರಾವಿನ ಮೂಲಕ, ತಹಕೂಬ ಇಡಬೇಕಾಯಿತೆಂದು ಕಾರ್ಯದರ್ಶಿಗಳು ತಾರೀಖು ೧೩–೭–೨೩ ನೇಗೆ ನಮಗೆ ತಿಳಿಸುತ್ತಾರೆ. ನಮ್ಮ ಜಿಲ್ಹಾ ಕೊಂಗ್ರೆಸ ಕಮಿಟಿಯು ಕಾರಭಾರದ ಬಗ್ಗೆ ನಾವು ಹಿಂದೊಮ್ಮೆ ಟೀಕಿಸಿದ್ದೆವು. ಅದೇ ಟೀಕೆಯನ್ನು ಪುನಃ ಮಾಡಬೇಕಾಗಿದೆ. ನಾಗಪುರದಲ್ಲಿ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ನೆರೆಯುವದಿದೆಂದು ತಿಳಿದು, ಅದರ ನಿರ್ಣಯಗಳನ್ನು ಅರಿತುಕೊಳ್ಳುವ ಮೊದಲು, ಕೊಂಗ್ರೆಸ ಕಮಿಟಿಯನ್ನು ನಿಮಂತ್ರಿಸಿದ್ದು ಮೊದಲನೇ ತಪ್ಪು. ಜಿಲ್ಹಾ ಕೊಂಗ್ರೆಸ ಕಮಿಟಿಯು ಮೇ ತಾ. ೨೫ನೇಗೆ ಮಾಡಿದ ಚರ್ಚೆಯು ನಮ್ಮ ಪ್ರಾಂತಿಕ ಕೊಂಗ್ರೆಸ ಕಮಿಟಿಯ ನಿರ್ಣಯಕ್ಕೆ ವಿರೋಧವಾಗಿರುವ ಪ್ರಸಕ್ತಿಯು ಬಂದೊದಗಿರುವಾಗ, ಪ್ರಾಂತಿಕ ಕಮಿಟಿಯ ನಿರ್ಣಯವನ್ನು ಅರಿತುಕೊಳ್ಳದೆ, ಕಮಿಟಿಯನ್ನು ನಿಮಂತ್ರಿಸಿದ್ದು ಎರಡನೇ ತಪ್ಪು; ಕೊಂಗ್ರೆಸ ಕಾರಭಾರಿಗಳ ಅನಾಸ್ಥೆಯಿಂದ ಇಂಥ ಪ್ರಕಾರಗಳು ಒದಗುತ್ತವೆ. ಇಂಥ ಪ್ರಸಂಗದಲ್ಲಿ ಕಮಿಟಿಯನ್ನು ಕರೆಯಲು ಒದಗಿದ ಅನಾವಶ್ಯಕ ಖರ್ಚಿನ ಬಗ್ಗೆ ಜವಾಬದಾರರ್ಯಾರು! ಈ ರೀತಿಯಿಂದ ರಾಷ್ಟ್ರನಿಧಿಯು ಅಪವ್ಯಯವಾದದ್ದಲ್ಲದೆ, ಕಮಿಟಿಯ ಗೌರವವೂ ಕಡಿಮೆಯಾಗುತ್ತದೆ. ಆದ ಕಾರಣ, ಕಮೀಟಿಯವರು ಅಖಿಲ ಭರತ ಖಂಡಕ್ಕೆ ಯಾ ಕರ್ನಾಟಕ ಪ್ರಾಂತಕ್ಕೆ ಸಂಬಂಧಿಸಿದುವ ಪ್ರಶ್ನೆಯನ್ನು ಸಮಾಲೋಚಿಸುವ ಪ್ರಸಂಗ ಒದಗಿದಾಗ, ತಮ್ಮ ವರಿಷ್ಠ ಕಮೀಟಿಗಳ ಅನುಜ್ಞೆಯಾದ ಹೊರತು, ಮುಂದರಿಸಬಾರದೆಂದು ನಮ್ಮ ಅರಿಕೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಮೇಘರಾಜನು ಸಮಾಧಾನ ವೃತ್ತಿಯನ್ನು ಸ್ವೀಕರಿಸಿದ್ದಾನೆ. ಸೂರ್ಯನಾರಾಯಣನು ಮೋಡಗಳೊಳಗಿಂದ ಒಮ್ಮೊಮ್ಮೆ ದೃಷ್ಟಿಗೋಚರನಾಗುತ್ತಾನೆ; ಚಳಿಯೋ ಬಿಸಿಲೂ ಬೀಳುತ್ತದೆ. ವೃಷ್ಟಿ ಬಂದರೆ, ಜೋರಿನಿಂದ ಬರುತ್ತದೆ. ಪುನಃ ನೀರು ಏರುತ್ತದೋ ಏನೋ, ಎಂಬ ಸಂಶಯ. ದೇಸಾಯಿಗಾರರೆಲ್ಲರೂ ನೆಟ್ಟಿಯ ಕೆಲಸದಲ್ಲಿ ಮಗ್ನರಾಗಿರುವರು. ಗಝನಿ ಭೂಮಿಗಳೆಲ್ಲ ನೆರೆಯ ಮೂಲಕ ಶೀರ ಕೆಟ್ಟು ಹೋಗಿವೆ. ಈ ವಾರದಲ್ಲಿ ಮಳೆಯು ೧೪–೧೦ ಇಂಚು ಬಿತ್ತು. ಇಂದು ಮೇಘರಾಜನು ಉಗ್ರ ಸ್ವರೂಪವನ್ನು ತಳೆದಿದ್ದಾನೆ.

ಹಗಡಯೊಳಗಿನ ಮುಕ್ತ ಶಾಲೆಯಲ್ಲಿ ವಿದ್ಯಾರ್ಥಿಗಳೆಲ್ಲರೂ ನಿತ್ಯವೂ ಗೈರ ಹಾಜರ ಇರುತ್ತಾರಂತೆ! ಮಾಸ್ತರರು ಬಂದು ಶಾಲೆಯನ್ನು ಸಂದರ್ಶಿಸಿ, ಹೋಗುತ್ತಾರಂತೆ! ತಾಲುಕಾ ಲೋಕಲ್‌ಬೋರ್ಡಿನ ಅಧ್ಯಕ್ಷರ ನಿವಾಸಸ್ಥಾನವು ನೆರೆಯಲ್ಲಿಯೇ ಇದ್ದು, ಇಂಥ ದುರವಸ್ಥೆಯು ಹೇಗೆ ಒದಗುತ್ತದೆ!

ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಆಜ್ಞೆಗನುಸರಿಸಿ ರಾಷ್ಟ್ರಧ್ವಜದ ಮೆರವಣಿಗೆಯು ನಿನ್ನೆ ಮುಂಜಾವಿಗೆ ವಿಜೃಂಭಣೆಯಿಂದ ನೆರವೇರಿತು. ಮೆರವಣಿಗೆಯು ಮುಗಿದ ಬಳಿಕ, ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಸಭೆಸೇರಿ, ಧ್ವಜದ ಜನ್ಮ, ವರ್ಣಗಳ ಮಹತ್ವ, ರಹಸ್ಯ, ಉದ್ದೇಶ, ಕೈರಾಟಿಯಿಡುವ ಅವಶ್ಯಕತೆಗಳ ಕುರಿತು ೪–೫ ಗೃಹಸ್ಥರು ನೆರೆದ ಶ್ರೋತೃವೃಂದಕ್ಕೆ ಚನ್ನಾಗಿ ತಿಳಿಸಿಹೇಳಿದರು. ಸಂಜೆಗೆ ಪುನಃ ಸಭೆಯಾಗಿ, ಲಾಲಾ ಲಜಪತರಾಯ, ಗಾಂಧಿಯವರ ಆಯುರಾರೋಗ್ಯಚಿಂತನದ ಪ್ರಾರ್ಥನೆಗಳು ನಡೆದವು.

ಸಾಣೇಕಟ್ಟೆಯ ಉಪ್ಪಿನ ಪಜಿಯೊಳಗಿನ ರಾಶಿಗಳಲ್ಲಿ ವಿಪರೀತ ವೃಷ್ಟಿಯ ಮೂಲಕ ನೀರು ಸೇರಿ, ಸಾವುಕಾರರಿಗೆ ೬–೭ ಸಾವಿರ ರೂಪಾಯಿಗಳ ಹಾನಿಯಾಗಿರಬಹುದೆಂದು ತಿಳಿಯುತ್ತದೆ.

ಇಲ್ಲಿಂದ ಹೊನ್ನಾವರಕ್ಕೆ ಗ್ಯಾರೇಜಿಂದೇ ಮೋಟಾರ ಸರ್ವಿಸು ಕಳೆದ ೧೫ ನೇ ತಾರೀಖಿನಿಂದ ಪ್ರಾರಂಭವಾಗಿದೆ.

ಶಿರ್ಶಿ ಡಿವ್ಹಿಜನದ ಪ್ರಾಂತಾಧಿಕಾರಿಗಳೂ, ಡೆಪ್ಯುಟಿ ಪೋಲೀಸ ಸುಪರಿಂಟೆಂಡೆಂಟರೂ ಕಾರವಾರದಿಂದ ಮೋಟಾರಾರೂಢರಾಗಿ ಮೊನ್ನೆ ಭಕ್ಕಳ ಇಲ್ಲಿಗೆ ಬಿಜ್ಜೈಸಿ, ಹೊನ್ನಾವರಕ್ಕೆ ಹೋದರು. ಕಾರಣವೇನು?

ಸಾಭಾರ ಸ್ವೀಕಾರ.

ಸಾಧುಸಮಾಗಮ— ಆತ್ಮೋದ್ಧಾರ ಗ್ರಂಥಮಾಲೆಯ ೩ನೇ ವರ್ಷದ ೩ನೇ ಪುಷ್ಪ. ಸಂಪಾದಕ:— ವಾಮನ ಅನಂತ ಹೊನ್ನೆ, ರಾಷ್ಟ್ರೀಯ ಶಾಲಾಧ್ಯಾಪಕ, ಶಿರ್ಶಿ. ಬೆಲೆ ರೂ. ೦-೫-೦.

ಜಯ ಕರ್ನಾಟಕ— ಕಾರ ಹುಣ್ಣಿಮೆಯ ಸಂಚಿಕೆ. ಸಂಪಾದಕ:— ವೆಂಕಟರಾವ ಆಲೂರ, ಬಿ. ಎ., ಎಲ್. ಎಲ್. ಬಿ., ಸಾಧನಕೇರಿ, ಧಾರವಾಡ. ವಾರ್ಷಿಕ ವರ್ಗಣಿ ರೂ. ೫-೮-೦ ಮಾತ್ರ.

ತರುಣ ಭಾರತ— ಮರಾಠಿ ಮಾಸಿಕ, ಜೂನ ತಿಂಗಳ ಸಂಚಿಕೆ. ಸಂಪಾದಕ:— ಧೋಂಡೋ ರಾಮಾರಾವ ಠಾಕೂರ, ಸಮಾದೇವಿಗಲ್ಲಿ, ಬೆಳಗಾಂವ. ವಾರ್ಷಿಕ ವರ್ಗಣಿ ರೂ. ೨—೬—೦; ವಿದ್ಯಾರ್ಥಿಗಳಿಗೆ ರೂ. ೨—೨—೦.

The Health— Monthly. June issue. Edited by Dr. U. Rama Rau, M.L.C, 323, Thambu Chetty street, Madras. Annual subscription Rs 1—8—0 only.

ಹೊನ್ನಾವರ— ತಾ. ೧೮ನೇಗೆ ಗಾಂಧಿ ಡೇ ಇದ್ದು ಆ ದಿವಸ ಎಲ್ಲಾ ಕಡೆಯಲ್ಲಿಯೂ ರಾಷ್ಟ್ರೀಯ ನಿಶಾನೆಯ ಮೆರವಣಿಗೆ ತೆಗೆಯಬೇಕೆಂದು ಆಲ ಇಂಡಿಯಾ ಕಾಂಗ್ರೆಸ ಕಮಿಟಿಯಿಂದ ಜಾಹೀರಾದಂತೆ ನಮ್ಮ ಹೊನ್ನಾವರ ನಾಗರಿಕರ ಮೆರವಣಿಗೆಯು ಆ ದಿವಸ ಬೆಳಿಗ್ಗೆ ೮ ಘಂಟೆಗೆ ಶ್ರೀ ವೆಂಕಟರಮಣ ದೇವಸ್ಥಾನದಿಂದ ರಾಷ್ಟ್ರೀಯ ನಿಶಾನೆಗಳನ್ನು ಹಿಡಕೊಂಡು, ಬೇಂಡವಾದ್ಯದೊಡನೆ ಜಯಜಯಕಾರದಿಂದ ಹೊರಟು, ಮೇಲಿನ ಪೇಟೆ ಮಾರ್ಗವಾಗಿ ಟಪ್ಪರ ಹೊಲದಿಂದ ಬಂದರಕ್ಕೆ ಬಂದು ಅಲ್ಲಿಂದ ದುರ್ಗಾಕೇರಿಗೆ ಹೋಗಿ, ಪುನಃ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಬಂದು ಅಲ್ಲಿ ನಿಶಾನೆ ಕುರಿತು ಶ್ರೀಯುತ ಶಾಸ್ತ್ರೀ, ನಾಡಕರ್ಣಿ, ಅನಂತ ಪೈ, ಇವರ ಭಾಷಣಗಳಾದ ಬಳಿಕ, ಮೆರವಣಿಗೆಯ ಕೆಲಸವು ಮುಗಿಯಿತು. ಮೆರವಣಿಗೆಗೆ ೧೦೦—೧೫೦ ಜನರು ಕೂಡಿದ್ದರು. ಗುಲ್ಲಿಲ್ಲದ ಮೆರವಣಿಗೆಯು ಶಾಂತರೀತಿಯಿಂದ ಕೊನೆಗಾಣಿತು. ಬಜಾರದಲ್ಲಿ ಎಲ್ಲಾ ಅಂಗಡಿಕಾರರು ತಮ್ಮ ತಮ್ಮ ಅಂಗಡಿಗೆ ರಾಷ್ಟ್ರೀಯ ನಿಶಾನೆಗಳನ್ನು ಹಚ್ಚಿದ್ದರು.

ಬರುವ ಕೌನ್ಸಿಲ ಚುನಾವಣೆಯಲ್ಲಿ ನಮ್ಮ ಕಾನಡಾ ಜಿಲ್ಲೆಗೆ ಶ್ರೀಯುತ ಎಸ್. ಡಿ. ಕರ್ಕಿಯವರು ಉಮೇದ್ವಾರರಾಗಿ ನಿಲ್ಲುತ್ತಾರಾಗಿ ದಟ್ಟ ವದಂತಿಯಿದೆ.

ಕಾಡಿನ ಕ್ರೂರತನ.

ಸಿದ್ದಾಪುರದೊಳಗಿನ ಒಂದು ಕಥೆ.

ಐಗೋಡಕಟ್ಟೆಯೆಂಬುದು ಬ್ರಿಟಿಶ ಪ್ರದೇಶದೊಳಗಿನ ಹಳ್ಳಿಯು. ಅಲ್ಲಿ ಶೇಷಪ್ಪಾ ಮುಂಡಪ್ಪಾ ಎಂಬ ಗೃಹಸ್ಥರು ಮನೆ ಮಾಡಿಕೊಂಡಿರುವರು. ಮೈಸೂರ ಹದ್ದಿಗೆ ಸೇರಿದ ನೆರೆಯ ಕಡಬಾಯಿ ಎಂಬ ಊರಲ್ಲಿ ಇವರಿಗೆ ಕೆಲ ಆಸ್ತಿಯಿದೆ. ಅಲ್ಲಿಂದ ಇವರು ೧೯೧೯ನೇ ಇಸವಿಯ ಎಪ್ರಿಲ ತಿಂಗಳಲ್ಲಿ ೪೧ ನಾಟುಗಳನ್ನು ಮನೆಗೆ ತಂದರು. ರೀತಿಯುಕ್ತ ಸೊರಾಬಿನ ಅಮಲದಾರರಿಂದ ಪಾಸು ಪಡೆದಿದ್ದರು. ಐಗೋಡಕಟ್ಟೆಗೆ ಅವುಗಳನ್ನು ತರಲು, ಮೈಸೂರಿನ ಅಧಿಕಾರಿಯ ಪರವಾನೆಯೂ ಇತ್ತು. ಬ್ರಿಟಿಶ ಪ್ರದೇಶದಲ್ಲಿ ಅವನ್ನು ಒಯ್ಯುವಾಗ ನಿಡಗೋಡ ನಾಕೆಯಲ್ಲಿ ಬ್ರಿಟಿಶರಿಂದ ನೇಮಕಹೊಂದಿದ ವನದೇವಿಯ ದ್ವಾರಪಾಲಕರು ತಪಾಸ ಮಾಡಿದರು, ಪಾಸಿನಮೇಲೆ ಸಹಿಯನ್ನೂ ಕೊಟ್ಟರು. ನಾಟುಗಳನ್ನು ಐಗೋಡಕಟ್ಟೆಯಲ್ಲಿ ಒಂದು ಸಣ್ಣ ಗುಡಿ ಕಟ್ಟಿ ರಾ। ಶೇಷಪ್ಪನವರು ಸಂಗ್ರಹಿಸಿದ್ದರು. ಗುಡಿಯು ಮಾರ್ಗದ ಸಮೀಪವೇ ಇತ್ತು. ಅತ್ತಿತ್ತ ನಡೆದಾಡುವವರಿಗೆ ಸಹ ಗುಡಿಯೊಳಗಿನ ನಾಟುಗಳು ಕಾಣುತ್ತಿದ್ದವು. ೪ ವರುಷಗಳು ಹೀಗೆಯೇ ಕಳೆದು ಹೋದವು. ೧೯೨೩ನೇ ಇಸವಿಯ ಎಪ್ರಿಲ ತಿಂಗಳು ಬಂತು. ಶೇಷಪ್ಪನವರ ಮೇಲೆ ಕಾಡು ಖಾತೆಯ ಕಾಕದೃಷ್ಟಿ ಬಿತ್ತು. ಶೇಷಪ್ಪನವರು ಕಾದಿಟ್ಟ ಕಾಡಿನೊಳಗಿಂದ ಗುಪ್ತರೀತಿಯಿಂದ ಇಮಾರತಿನ ಕಟ್ಟಿಗೆಯನ್ನು ತಂದರೆಂಬ ಆರೋಪವನ್ನು ಅವರ ಮೇಲೆ ಜಂಗಲ ಖಾತೆಯು ಹೊರಿಸಿತು. ಮತ್ತೊಂದು ಆರೋಪವೂ ಅವರಮೇಲೆ ಬಂತು. ಸರಕಾರವು ಮಂಜೂರು ಮಾಡಿದ ಆಮದು ರಫ್ತುಗಳ ನಿಯಮಗಳಿಗನುಸರಿಸಿ, ಅವರು ವರ್ತಿಸಲಿಲ್ಲೆಂದು ಇನ್ನೊಂದು ಕಲಮು ಜೋಡಿಸಲ್ಪಟ್ಟಿತು.

ಆಗ ಸಿದ್ದಾಪುರದಲ್ಲಿ ಶಂಕರ ನಾಗರಕಟ್ಟೆಯವರು ೨ ನೇ ವರ್ಗದ ಮೆಜಿಸ್ಟ್ರೇಟರಿದ್ದರು. ಅವರ ಮುಂದೆ ತನಿಖಿ ನಡೆಯಿತು. ನಾಟುಗಳು ಆರೋಪಿಯ ಕಡಬಾಯಿಯ ಮಾಲ್ಕಿ ಕಾಡಿನಿಂದ ತರಲ್ಪಟ್ಟದ್ದವೆಂಬ ಅಭಿಪ್ರಾಯವನ್ನಿತ್ತದ್ದರು. ಆದರೆ, ಜಂಗಲ ಕಾಯಿದೆಯ ೪೧ ನೇ ಕಲಮಿನನ್ವಯ ೭ ನೇ ನಿಯಮವನ್ನು ಆರೋಪಿಯವರು ಉಲ್ಲಂಘಿಸಿದರೆಂದು ತೀರ್ಪು ಕೊಟ್ಟರು. ಈ ನಿಯಮದಂತೆ ಪರಪ್ರಾಂತಗಳಿಂದ ತಂದ ಪಾಸಿನ ಮೇಲೆ ಸೊರಾಬಿನ ರೇಂಜರರ ಸಹಿ ಇರಬೇಕಾಗಿತ್ತು. ಹಾಗು ನಾಟುಗಳ ಮೇಲೆ ಪರಪ್ರಾಂತದಿಂದ ತಂದದ್ದೆಂಬುವಕ್ಕೆ ವಿಶಿಷ್ಟ ಚಿನ್ಹವಿರಬೇಕಿತ್ತು. ಶೇಷಪ್ಪನವರು ಕಾಯದೆಯ ಇಷ್ಟು ಸೂಕ್ಷ್ಮಜ್ಞಾನವು ತಮಗಿಲ್ಲೆಂದು ಮೆಜಿಸ್ಟ್ರೇಟರಿಗೆ ನಿವೇದಿಸಿದರು. ಸೊರಾಬಿನ ಅಮಲದಾರರಾಗಲಿ, ಬ್ರಿಟಿಶ ಗಾರ್ಡರಾಗಲಿ, ಕಾಯಿದೆಯ ನಿಯಮಗಳನ್ನು ತಮಗೆ ತಿಳಿಸಿದ್ದಿಲ್ಲೆಂತಲೂ ನುಡಿದರು. ನಿಯಮದ ಉಲ್ಲಂಘನವಾಯಿತು. ಆರೋಪಿಯು ೭ ನೇ ನಿಯಮದಂತೆ ಅಪರಾಧಿಯಾಗುತ್ತಾನೆ ಎಂದು ಮೆಜಿಸ್ಟ್ರೇಟರು ತೀರ್ಮಾನ ಮಾಡಿ, ೫೦ ರೂಪಾಯಿಗಳ ದಂಡ ವಿಧಿಸಿದರು, ಹಾಗು ಜಂಗಲ ಕಾಯಿದೆಯ ೫೫ನೇ ಕಲಮಿನನ್ವಯ ೪೧ ನಾಟುಗಳನ್ನು ಸರಕಾರ ಜಪ್ತ ಮಾಡಲು ಫರ್ಮಾಯಿಸಿದರು. ಶೇಷಪ್ಪನವರು ಪ್ರಾಂತಾಧಿಕಾರಿ ರಾವಬಹಾದ್ದೂರ ಕೊಯಿಮತ್ತೂರರವರಿಗೆ ಅಪೀಲು ದಾಖಲ ಮಾಡಿದರು. ಅವರು ದಂಡವನ್ನು ಕಾಯಂ ಮಾಡಿದರು. ಆದರೆ, ನಾಟುಗಳನ್ನು ಶೇಷಪ್ಪನವರಿಗೆ ಬಿಟ್ಟುಕೊಟ್ಟರು. ಧೈರ್ಯ ಬಂದು, ಶೇಷಪ್ಪನವರು ಹೈಕೋರ್ಟಿನ ಮೆಟ್ಟು ಏರಿದರು. ನ್ಯಾಯಮೂರ್ತಿಗಳು ಸರ್ ಲಲುಭಾಯಿ ಶಹಾ, ಕೋಯಾಜಿ ಇವರಿದ್ದರು. ಇವರು ರಾವಬಹಾದ್ದೂರರ ಹುಕುಮನ್ನು ರದ್ದಿ, ನುಡಿದದ್ದೇನಂದರೆ:— "ನಾಟುಗಳು ಆರೋಪಿಯ ಮಾಲ್ಕಿಯದೆಂದು ಕಂಡು ಬಂದ ಕಾರಣ, ಇದೇ ಖಟ್ಲೆಯನ್ನೇ ಬಿಟ್ಟು ಕೊಡಬೇಕಾಗಿತ್ತು. ನಿಯಮವನ್ನು ಉಲ್ಲಂಘಿಸಿದ ಮಾತು ಆರೋಪಿಗಳು ಒಪ್ಪುತ್ತಾರೆ. ಆದ್ದರಿಂದ ನಾವು ಕಾಟ್‌ಪೂರ್ತ ಒಂದು ರೂಪಾಯಿ ದಂಡ ವಿಧಿಸುತ್ತೇವೆ." ಸರಕಾರಿ ತರ್ಫೆನಿಂದ ವಕೀಲರು ಹಾಜರ ಇದ್ದಿಲ್ಲ. ಇಷ್ಟಾಗಲಿಕ್ಕೆ ೧೯೨೩ನೇ ಇಸವಿಯ ಜೂನ ತಿಂಗಳು ಕಳೆದು, ಜುಲೈ ತಿಂಗಳು ಬೆಳಕಿತು.

ನಾಗಪುರದ ಸಂಗ್ರಾಮ.

ಶೇಟ ಜಮನಾಲಾಲ ಮೊದಲಾದ ಮುಖಂಡರಿಗೆ ಶಿಕ್ಷೆ.

ಸಿಟಿ ಮೆಜಿಸ್ಟ್ರೇಟ ಮಿ। ಸ್ಟೇನಿಯವರು ಜುಲೈ ತಾ. ೧೦ ನೇಗೆ ಸತ್ಯಾಗ್ರಹ ಮುಖಂಡರ ಪ್ರಕರಣದಲ್ಲಿ ತೀರ್ಪು ಕೊಟ್ಟರು. ಸತ್ಯಾಗ್ರಹ ಸಂಗ್ರಾಮದ ಚಾಲಕರಾದ ಶೇಟ ಜಮನಾಲಾಲ ಬಜಾಜರವರಿಗೆ ೧೮ ತಿಂಗಳ ಕಠಿಣ ಸಜೆ; ೩೦೦೦ ರೂಪಾಯಿ ದಂಡ. ಪ್ರಚಾರಕ ಅಧಿಕಾರಿಗಳಾದ ಶ್ರೀ। ನೀಲಕಂಠರಾವ ದೇಶಮುಖರವರಿಗೆ ಅದೇ ಶಿಕ್ಷೆ. ದಂಡ ಮಾತ್ರ ೧೫೦೦ ರೂಪಾಯಿ. ಕಾರ್ಯದರ್ಶಿ ಮಿ। ಅವಧಾನ್ಯಯವರಿಗೂ ಅದೇ ಶಿಕ್ಷೆ. ದಂಡದ ರಕಮು ೧೫೦ ರೂಪಾಯಿ. ಶ್ರೀ। ಭಗವಾನದಿನರವರಿಗೂ ಅದೇ ಶಿಕ್ಷೆ; ದಂಡ ಮಾತ್ರ ೭೫ ರೂಪಾಯಿ; ದೇಶಬಂಧು ದಾಸ, ಶ್ರೀ। ಫೂಕನ್, ಶ್ರೀಮತಿ ಉರ್ಮಿಲಾ ದೇವಿಯವರು, ನ್ಯಾಯಮೂರ್ತಿಗಳು ತೀರ್ಪು ಕೊಡುವಾಗ, ಕೋರ್ಟಿನಲ್ಲಿ ಹಾಜರಿದ್ದರು. ತೀರ್ಪು ಕೊಟ್ಟ ಬಳಿಕ, ಶೇಟಜೀಯವರಗೂಡ ಅವರು ಮಾತುಕಥೆ ನಡಿಸಿದರು.

ನಾಗಪುರ ಮ್ಯುನಿಸಿಪಾಲಿಟಿಯು ದೇಶಬಂಧುಗಳಿಗೆ ಸ್ವಾಗತಪರ ಮಾನಪತ್ರವನ್ನು ಜುಲೈ ತಾ. ೧೦ನೇ ಮಂಗಳವಾರ ಮುಂಜಾವಿಗೆ ಸಮರ್ಪಿಸಿತು. ಅಂದು ಮ್ಯುನಿಸಿಪಲ್ ಇಮಾರತಿಯ ಮೇಲೆ ರಾಷ್ಟ್ರಧ್ವಜಗಳಿಲ್ಲ ಹಾರ್ಯಾಡುತ್ತಿದ್ದವು. ಶ್ರೀ। ರಾಜಗೋಪಾಲಾಚಾರ್ಯ, ಪಂಡಿತ ಜವಾಹರಲಾಲ ನೆಹರು, ಶ್ರೀ। ಕೇಳಕರ, ಬಾಬು ರಾಜೇಂದ್ರ ಪ್ರಸಾದ ಮೊದಲಾದವರು ಹಾಜರಿದ್ದರು. ನಾಗಪುರದಲ್ಲಿ ಮಾರನೇ ದಿನ ಬುಧವಾರ ತಾ. ೧೧ನೇಗೆ ಶೇಟಜೀಯವರಿಗೆ ಕಾರಾಗೃಹವಾಸವಾದ ಬಗ್ಗೆ ಹರತಾಳವು ಆಚರಿಸಲ್ಪಟ್ಟಿತು. ಅಮರಾವತಿ, ಅಕೋಲಾ ಮೊದಲಾದ ಪಟ್ಟಣಗಳಲ್ಲಿಯೂ ಹರತಾಳವು ಅದೇ ದಿನ ಆಚರಿಸಲ್ಪಟ್ಟಿತು. ಶೇಟ ಜಮನಾಲಾಲ, ಮೊದಲಾದವರಿಗೆ ಜೈಲಿನಲ್ಲಿ ವಿಶೇಷ ಸವಲತುಗಳನ್ನು ಕೊಡಬೇಕೆಂದು ಅಧಿಕಾರಿಗಳು ಶಿಫಾರಸು ಮಾಡಿದ್ದರು. ಶೇಟ ಜಮನಾಲಾಲ ಹಾಗು ಶ್ರೀ। ದೇಶಮುಖರವರು ಈ ಸವಲತುಗಳನ್ನು ನಿರಾಕರಿಸಿರುವರು. ನಿತ್ಯವೂ ನಾಗಪುರದಲ್ಲಿ ಸತ್ಯಾಗ್ರಹವು ರಭಸದಿಂದ ನಡೆಯುತ್ತಲಿದೆ. ಗುಂಟೂರ, ಆರವಿ, ರಾಜಪುತಾನಾ, ಕರ್ನಾಟಕ ಮೊದಲಾದ ಸ್ಥಳಗಳಿಂದ ನಾಗಪುರಕ್ಕೆ ಸತ್ಯಾಗ್ರಹಿಗಳ ತಂಡಗಳು ಹೋಗುತ್ತಿವೆ.

ರತ್ನಾಗಿರಿಯಲ್ಲಿಯೂ ಸತ್ಯಾಗ್ರಹದ ಬೀಜಾರೋಪಣವಾಗಿದೆ. ಕಳೆದ ತಾ ೪ಕ್ಕೆ ಟಿಳಕ ಪಂಚಾಂಗದಂತೆ ಲೋಕಮಾನ್ಯರ ಜಯಂತಿ ತಿಥಿಯು. ಅಂದು ರಾಷ್ಟ್ರಧ್ವಜವನ್ನು ಧರಿಸಿ, ಲೋಕಮಾನ್ಯರ ಭಾವಚಿತ್ರದ ಮೆರವಣಿಗೆ ತೆಗೆಯಬೇಕೆಂದು ಗೊತ್ತಾಗಿತ್ತು. ಅಂದು ಡಿ। ಪೋಲೀಸ ಸುಪರಿಂಟೆಂಡೆಂಟರು ಪೋಲೀಸ ಆಕ್ಟಿನ ೬೮ ನೇ ಕಲಮಿನನ್ವಯ ಮೆರವಣಿಗೆಯನ್ನು ಸರಕಾರಿ ಕಚೇರಿ ಹಾಗು ನೆರಿಮನೆಯ ಹತ್ತರದಿಂದ ತೆಗೆಯಬಾರದೆಂದು ಜಾಹೀರನಾಮೆಯನ್ನು ಪ್ರಕಟಿಸಿದರು. ಶ್ರೀ। ಸೀತಾರಾಮ ಪಟವರ್ಧನ, ವಿಷ್ಣುಪಂತ ಆಪಟೆ ಮೊದಲಾದವರು ಹುಕುಮನ್ನು ಮುರಿದು, ಪ್ರತಿಬಂಧಕ ಮಾರ್ಗಗಳ ಮೇಲಿಂದ ಮೆರವಣಿಗೆಯನ್ನೊಯ್ದರು. ಕೂಡಲೆ, ಅವರಿಗೆ ಅಡ್ಡಿ ಮಾಡಿ, ರಾಷ್ಟ್ರಧ್ವಜ ಹಾಗು ಲೋಕಮಾನ್ಯರ ಭಾವಚಿತ್ರಗಳನ್ನು ಜಪ್ತ ಮಾಡಿದರು. ಅವರ ಖಟ್ಲೆ ಸುನಾವಣಿಯಾಗಿ, ಪ್ರತಿ ಒಬ್ಬೊಬ್ಬರಿಗೆ ೫೦-೫೦ ರೂಪಾಯಿ ದಂಡ ವಿಧಿಸಲಾಯಿತು.

ಶಿರ್ಸಿಯ ಮುಖಂಡರ ಅನಾಸ್ಥೆ.

ರಾಷ್ಟ್ರೀಯ ಶಾಲಾಧ್ಯಾಪಕರ ರಾಜಿನಾಮೆ.

ಶಿರ್ಸಿ ತಾಲೂಕ ಕೊಂಗ್ರೆಸ ಕಮಿಟಿಯವರ ಸನ್ನಿಧಾನಕ್ಕೆ—

ಶಿರ್ಸಿ ರಾಷ್ಟ್ರೀಯ ಶಾಲಾ ಶಿಕ್ಷಕರು ಬರೆಕೊಂಡ ರಾಜಿನಾಮೆಯೇನಂದರೆ —

ರಾಷ್ಟ್ರೀಯ ಶಾಲೆಯ ಈಗಿನ ಸ್ಥಿತಿಯು ಮೇಲಿಂದ ಅಂದರೆ ಪ್ರಮುಖತಃ (೧) ರಾಷ್ಟ್ರೀಯ ಶಾಲೆಗೆ ಆರ್ಥಿಕ (ಮುಷ್ಟಿಫಂಡ ಕೂಡಾ) ಸಹಾಯ ಮಾಡುವದು ಕೊಂಗ್ರೆಸದ ಅನುಯಾಯಿಗಳಲ್ಲಿ ಬಹು ಜನರಿಗೆ ಭಾರವೆನಿಸುತ್ತದೆಂಬುದು ನಮ್ಮ ಅನುಭವಕ್ಕೆ ಬಂದದ್ದರಿಂದಲೂ, (೨) ಕೊಂಗ್ರೆಸ ಚಳವಳಿಯ ನಾಯಕ ಮುಖಂಡರೆನಿಸಿಕೊಳ್ಳುವವರೇ ರಾಷ್ಟ್ರೀಯ ಶಾಲೆಗೆ ಬಹಿಷ್ಕಾರ ಹಾಕಿ, ತಮ್ಮ ಹುಡುಗರಿಗೆ ಸರಕಾರೀ ಶಾಲೆಗೆ ಹಾಕಿ ಸಾಮಾನ್ಯ ಜನರಿಗೆ ಮೇಲ್ಪಂಕ್ತಿ ಹಾಕಿಕೊಟ್ಟದ್ದರಿಂದಲೂ, (೩) ಕೊಂಗ್ರೆಸದ ಅನುಯಾಯಿಗಳಾದ ಈಗಿನ ಮುನಿಸಿಪಲ್ ಮೆಂಬರರಲ್ಲಿ ಕೆಲವರು ಜವಾಬ್ದಾರ ಕೊಂಗ್ರೆಸ ಪ್ರತಿನಿಧಿಗಳೇ, ರಾಷ್ಟ್ರೀಯ ಶಿಕ್ಷಣದ ತತ್ವಕ್ಕೆ ವಿರೋಧವಾದ ವ್ಯಾಸಂಗ ಹೊರಡಿಸುವ ಕಾರ್ಯಕ್ಕೆ ಟೊಂಕಕಟ್ಟಿ ನಿಂತಿದ್ದಾರಾದ್ದರಿಂದಲೂ, (೪) ರಾಷ್ಟ್ರೀಯ ಶಾಲೆಯ ವಿಷಯವಾಗಿ ಊರಿನ ಜನರ ಸಾಮಾನ್ಯ ವರ್ತನದಿಂದಲೂ ನಾವು ತಿಳಿದುಕೊಂಡದ್ದೇನಂದರೆ, ಮೊದಲು ರಾಷ್ಟ್ರೀಯ ಶಾಲೆಗೆ ಪ್ರೋತ್ಸಾಹನ, ಸಹಾನುಭೂತಿ ಕೊಡುವವರಲ್ಲಿಯೇ ಬಹುತೇಕ ಜನರಲ್ಲಿ ಈಗ ರಾಷ್ಟ್ರೀಯ ಶಾಲೆಯ ಬಗ್ಗೆ ಆಸ್ಥೆ ಕಂಡುಬರುವದಿಲ್ಲದೆ, ಅವರಿಗೆ ರಾಷ್ಟ್ರೀಯ ಶಾಲೆಯು ಹಾವಾಡಿಯೋ ತಮ್ಮ ಮೇಲೆ ಹಾಕಿಕೊಂಡ ಭಾರವೆಂತ ತೋರಹತ್ತಿದೆ ಆದ್ದರಿಂದ, ನಾವು ಈ ತರದ ಕೊಂಗ್ರೆಸ ಕಮಿಟಿಯ ಅಧೀನದ ಈಗಿನ ರಾಷ್ಟ್ರೀಯ ಶಾಲೆಯ ನವಕರಿಗೆ ರಾಜಿನಾಮೆ ಕೊಟ್ಟಿದ್ದೇವೆ. ಈ ರಾಜಿನಾಮೆಯು ಬರುವ ತಾ ೧೫—೭—೧೯೩೩ರ ಒಳಗೆ ಮಂಜೂರಾಗದಿದ್ದ ಪಕ್ಷದಲ್ಲಿ ತಾ ೧೮—೭—೩೩ರಿಂದ ನಾವು ನಮ್ಮ ನವಕರಿಯಿಂದ ಸ್ವತಂತ್ರರೆಂದು ಈಗಲೇ ತಿಳಿಯಪಡಿಸುತ್ತೇವೆ.

ಶಿರ್ಸಿ ರಾಷ್ಟ್ರೀಯ ಶಾಲಾ,	೧ ಎ. ಶ್ರೀ. ನಾಯಕ
	೨ ಎಸ್. ಆ. ಹೆಗಡೆ
	೩ ನಾ. ಕೃ. ಪಟವಾರಿ
	೪ ಜ. ರಾ. ಕಾಮತ.
ತಾ ೧೨—೭—೩೩.	೫ ಪ್ರ. ಪ್ರ. ಪ್ರಭು.
	೬ ನ. ನಾ. ಜೋಶಿ
	೭ ನಾ. ಗ. ಗಂಗೆ

ಹೊಸ ಶಾಲೆಯ ಏರ್ಪಾಟು

ಶಿರ್ಸಿ ತಾಲೂಕಿನ ಸಾಮಾನ್ಯ ಜನತೆಗೆ ಉಪಯುಕ್ತ ರಾಜಿನಾಮೆ ಕೊಟ್ಟ ರಾಷ್ಟ್ರೀಯ ಶಾಲೆಯ ಶಿಕ್ಷಕರ ವಿನಂತಿ —

ಬರುವ ತಾರೀಖು ೧೮—೭—೩೩ ರಿಂದ ನಮ್ಮಲ್ಲಿ ಕೆಲವರು ಕೂಡಿ ಶಿರ್ಸಿಯಲ್ಲಿ ಎಲ್ಲ ಅಪಮಾನಕಾರಕ ಪರಾವಲಂಬನರಹಿತವಾದ ರಾಷ್ಟ್ರೀಯ ಶಾಲೆಯನ್ನು, ನಿಜವಾಗಿ ರಾಷ್ಟ್ರೀಯ ಶಾಲೆಗೇ ಬರಬೇಕೆಂಬ ಬುದ್ಧಿಯಿದ್ದ ವಿದ್ಯಾರ್ಥಿಗಳ ಬಗ್ಗೆ ಸಣ್ಣ ಪ್ರಮಾಣದ ಮೇಲಾದರೂ ಹೊರಡಿಸುವದನ್ನು ನಿಶ್ಚಯಿಸಿದ್ದೇವೆ. ಶಿಕ್ಷಕರಿಗೆ ಅತ್ಯಂತ ಅವಶ್ಯವಿದ್ದ ಅಲ್ಪ ವೇತನ (Starvation wages) ಪೂರೈಸುವ ಬಗ್ಗೆ ವಿದ್ಯಾರ್ಥಿಗಳ ಮೇಲೆ ತುಲನಾತ್ಮಕವಾಗಿ ಅತ್ಯಂತ ಕಡಿಮೆ ಫೀ ಇಡುವದನ್ನು ನಿಶ್ಚಯಿಸಿದ್ದೇವೆ. ನಿಜವಾದ ರಾಷ್ಟ್ರೀಯ ಶಿಕ್ಷಣೇಚ್ಛುಗಳಾದ ಬಡ ವಿದ್ಯಾರ್ಥಿಗಳಿಗೆ ಅರ್ಧ ಅಥವಾ ಪೂರ್ಣ ಮಾಫಿಯ ಕೆಲವು ಸ್ಥಳಗಳು ಕೊಡಲ್ಪಡುವವು.

ಪ್ರಾಥಮಿಕ ೪ನೇ ಮತ್ತು ಮಾಧ್ಯಮಿಕ ೫ ಇಯತ್ತೆಗಳನ್ನು (ಮೆಟ್ರಿಕ ವರೆಗೆ) ಈ ಪ್ರಕಾರ ಹೊರಡಿಸುವ ವ್ಯವಸ್ಥೆಯು ನಿಶ್ಚಯವಾಗಿರುತ್ತದೆ. ಬಾಕಿ ಪ್ರಾಥಮಿಕ ಬಿನ್ ಮತ್ತು ೧-೨-೩ ಇಯತ್ತೆಗಳು ರಾಷ್ಟ್ರೀಯ ಶಾಲೆಯಲ್ಲಿ ಇರಬೇಕೆಂದು ಉತ್ಕಟೇಚ್ಛೆ ಇದ್ದವರು ಇನ್ನೆರಡು ಶಿಕ್ಷಕರಿಗೆ ಸಾಕಾಗುವಷ್ಟು ವೇತನವನ್ನು ಕೂಡಿಸಿ ಕೊಡುವ ವ್ಯವಸ್ಥೆ ಮಾಡಬಹುದು. ಯಾಕಂದರೆ, Starvation wages ದ ಮೇಲೆ ಕೆಲಸ ಮಾಡುವ ಶಿಕ್ಷಕರು ಬೇಕಾದಷ್ಟು ಇಲ್ಲ. ವಿಶೇಷ ಮಾಹಿತಿ ಬಗ್ಗೆ ಸಮಕ್ಷ ಅಥವಾ ಪತ್ರವ್ಯವಹಾರ

ಈ ಶಾಲೆಯ ಸಂಬಂಧವು ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಮಿತಿಯ ಸಂಗಡ ಮಾತ್ರ ಇರುವದು.

ಫೀ ದರಗಳು.

ಪ್ರಾಥಮಿಕ	೪ನೇ ಯತ್ತೆ	೦—೮—೦
ಮಾಧ್ಯಮಿಕ	೧-೨ನೇ ಯತ್ತೆ	೧—೦—೦
,,	೩ ,,	೧—೮—೦
,,	೪-೫ ,,	೨—೦—೦

ವೃತ್ತಸಾರ.

— ಮಧುರೆಯಲ್ಲಿ ಕಳೆದ ಜುಲೈ ತಾ. ೨ನೇಯಿಂದ ಮದ್ಯದ ಅಂಗಡಿಗಳ ಮೇಲೆ ಪಿಕೆಟಿಂಗು ಪ್ರಾರಂಭವಾಗಿದೆ. ಜುಲೈ ೭ನೇ ತಾರೀಖಿಗೆ ಪೋಲೀಸ ಡೆಪ್ಯುಟಿ ಸುಪರಿಂಟೆಂಡೆಂಟರು ಗೌರಿಪಾಳ್ಯಂ ಸರೆ ಅಂಗಡಿಯಿಂದ ೨೦೦ ಯಾರ್ಡು ಸರಿದು ನಿಲ್ಲಲು ಕಾವಲುಗಾರ ಸ್ವಯಂಸೇವಕರಿಗೆ ಆಜ್ಞಾಪಿಸಿದರು. ಪೋಲೀಸರಿಗೆ ಆಜ್ಞಾಧಾರಕರಾಗಲು ಸ್ವಯಂಸೇವಕರು ಒಪ್ಪಲಿಲ್ಲ ಕಡೆಗೆ, ಕಪ್ತಾನರು ಅಷ್ಟೇ ದೂರ ಸರಿಯಲು ಆಜ್ಞಾಪಿಸಿದ ಬಳಿಕ, ಸ್ವಯಂಸೇವಕರು ಹಿಂದೆ ಸರಿದರು. ಕಡೆಗೆ, ಡಿ। ಮ್ಯಾಜಿಸ್ಟ್ರೇಟರು ಅಶ್ವಾರೂಢರಾಗಿ ಬಂದು, ಜನಸಂದಣಿಯನ್ನೆಲ್ಲ ಚದರಿಸಿದರು. ೧೨ ಮಂದಿ ಸ್ವಯಂಸೇವಕರನ್ನು ಸೆರೆಹಿಡಿದರು. ೬ ಮಂದಿಗಳು ಪಿಕೆಟಿಂಗ ಮಾಡಿದರು. ಅವರನ್ನೂ ಸೆರೆ ಹಿಡಿದರು. ತಾ ೧ನೇ ಸೋಮವಾರಕ್ಕೆ ಅವರ ತನಿಖೆಯಾಗಿ ೬-೮ ದಿವಸಗಳ ಕಠಿಣ ಶಿಕ್ಷೆಯಾಯಿತು. ಪಿಕೆಟಿಂಗವು ಇನ್ನೂ ನಡೆದಿದೆ ಅಲ್ಲಿಯ ಪೋಸಾವಲಂ ಸರೆ ಅಂಗಡಿಯ ಮುಂದೆ ಜುಲೈ ತಾ ೧೩ ನೇ ಶುಕ್ರವಾರಕ್ಕೆ ಪಿಕೆಟಿಂಗ ಮಾಡುವಾಗ, ಏನೋ ಒಂದು ಕೊಂಪರೆಯುಬ್ಬಿ, ೩ ಮ್ಯುನಿಸಿಪಲ್ ಕಂದೀಲುಗಳು ಒಡೆದು ಚೂರಾದವು. ಒಂದು ಮನೆಗೆ ಸ್ವಲ್ಪ ಧಕ್ಕೆ ತಗಲಿತು. ೪೨ ಮಂದಿಗಳನ್ನು ಸೆರೆ ಹಿಡಿದಿರುವರು.

— ಮುಂಬಯಿಯೊಳಗಿನ 'ಖಿಲಾಫತ ಡೇಲಿ' ಪತ್ರಿಕೆಯ ಸಂಪಾದಕರಾದ ಮಿ। ಅಬ್ದುಲ ಖಾಜಿಯವರ ಮೇಲೆ ಗುರುವಾರ ತಾ ೧೩ನೇಗೆ ಕ್ರಿ. ಪ್ರೊ. ಕೋ. ೧೦೮ ಕಲಮಿನನ್ವಯ ೧೦೦೦ ರೂಪಾಯಿಗಳ ಜಾಮೀನಕಿ ನೋಟೀಸು ಹೊರಡಿಸಲ್ಪಟ್ಟಿದೆ. ಪತ್ರಿಕೆಯಲ್ಲಿ 'ಹಿಂದುಸ್ಥಾನವೂ ಪ್ಲೇಗು ಬೇನೆಯೂ' ಎಂಬ ಲೇಖ ಬರೆದು, ಸರಕಾರವನ್ನು ಅಪ್ರೀತಿಗೊಳಮಾಡಿದ್ದರಂತೆ. ವಿಚಾರಣೆಯು ನಿನ್ನೆ ಇತ್ತು.

— ಮುಳಸೀ ಸತ್ಯಾಗ್ರಹಿಗಳು ೧೮ ದಿವಸಗಳ ವರೆಗೆ ಉಪೋಷಣ ಮಾಡಿ, ಶನಿವಾರ ತಾ ೧೪ಕ್ಕೆ ಅನ್ನಗ್ರಹಣ ಮಾಡಿದ ಸುದ್ದಿ ಬಂದಿದೆ. ಮುಳಸಿ ಸತ್ಯಾಗ್ರಹಿಗಳನ್ನು ತಕ್ಕ ರೀತಿಯಿಂದ ನಡಿಸದಿದ್ದರೆ, ತಾವೂ ಉಪೋಷಣ ಮಾಡುತ್ತೇವೆಂದು ಮಹಾತ್ಮರು ತಿಳಿಸಿದ್ದರಂತೆ

— ವಿಜಾಪುರದಲ್ಲಿ ನೆರೆದ ಮುಂಬಯಿ ಇಲಾಖಾ ಪರಿಷತ್ತಿನ ಅಧ್ಯಕ್ಷರಾದ ಪ್ರೊ। ವಾಮನರಾವ ಕಾಳೆಯವರ ಶಿಷ್ಟಮಂಡಳವು ನಾಮದಾರ ಪರಾಂಜಪೆಯವರ ಬೆಟ್ಟಿಯನ್ನು ತಾ ೭ನೇಗೆ ಪುಣ್ಯಪಟ್ಟಣದಲ್ಲಿ ಪಡೆಯಿತು. ದಿವಾನರು ಶಿಕ್ಷಕರ ಮಾಗಣಿಗಳೆಲ್ಲ ಸಹಾನುಭೂತಿಪೂರ್ವಕ ಕೇಳಿಕೊಂಡು, ಉತ್ತೇಜನಪರ ಉತ್ತರಗಳನ್ನಿತ್ತರಂತೆ. ಸಕ್ತಿಯ ಶಿಕ್ಷಣದ ಕಾಯಿದೆಯನ್ವಯ ತಯಾರಾಗುವ ನಿಯಮಗಳಲ್ಲಿ ತಮ್ಮ ಯೋಜನೆಯನ್ನು ಸೇರಿಸುತ್ತೇವೆಂದರು. ಪ್ರಾಥಮಿಕ ಶಿಕ್ಷಕರ ಪಗಾರುಮಾಡಿಯನ್ನು ನಿಶ್ಚಯಿಸುವ ವೇಳೆ, ಟೀಕೆ ಮಾಡಲು ಶಿಕ್ಷಕರಿಗೆ ಅವಕಾಶ ಕೊಡಲ್ಪಡುವದೆಂತಲೂ ದಿವಾನರು ನುಡಿದರು.

— ಕಲಕತ್ತೆಯ 'ಸರ್ವೆಂಟ' ಪತ್ರಿಕೆಯಲ್ಲಿ ಒಂದು ಇಂಗ್ಲೀಷ ಲೇಖವು ಪ್ರಕಟವಾಗಿತ್ತು. ಅದರ ಭಾಷಾಂತರವನ್ನು 'ದಲವಾಹಿದ' ಪತ್ರಿಕೆಯು ಪ್ರಕಟಿಸಿತು. ಆ ಬಗ್ಗೆ ತನಿಖೆಯಾಗಿ, ಸಂಪಾದಕರಿಗೆ ೪ ವರುಷಗಳ ಶಿಕ್ಷೆಯನ್ನು ವಿಧಿಸಲಾಯಿತು. ಮುಂಬಯಿ ಸರಕಾರವು ದಯಾರ್ದ್ರವಾಗಿ, ಆ ಶಿಕ್ಷೆಯನ್ನು ೧ ವರ್ಷಕ್ಕೆ ಇಳಿಸಿತು. ರಂಗೂನದೊಳಗಿನ 'ಮೇಲ' ಪತ್ರಿಕೆಯ ಸಂಪಾದಕರಾದ ಶ್ರೀ। ಸದಾನಂದರವರು ತಮ್ಮ ಪತ್ರಿಕೆಯಲ್ಲಿ ಕಲಕತ್ತೆಯ 'ಸರ್ವೆಂಟ' ಪತ್ರಿಕೆಯೊಳಗಿಂದ ಇದೇ ಲೇಖವನ್ನು ನಕಲು ಮಾಡಿದ್ದರು. ಈ ಬಗ್ಗೆ ತನಿಖೆಯಾಗಿ, ಶ್ರೀ। ಸದಾನಂದರವರಿಗೆ ೨ ವರುಷಗಳ ಸಾದಾ ಶಿಕ್ಷೆಯಾಯಿತು. ಮೂಲ ಲೇಖ ಪ್ರಕಟಿಸಿದ ಕಲಕತ್ತೆಯ 'ಸರ್ವೆಂಟ' ಪತ್ರಿಕಾಕಾರರಿಗೆ ಏನೂ ಶಿಕ್ಷೆ ಇಲ್ಲ. ಇದೆಂಥ ರಾಜದ್ರೋಹ?

— ಉಡುಪಿಯೊಳಗಿನ ದೇವಸ್ಥಾನ ಪರಿಷತ್ತಿನಿಂದ ನೇಮಕಹೊಂದಿದ ಶಿಷ್ಟಮಂಡಳವು ಸರ್ವಾಧಿಪತಿಗಳನ್ನು ಸಂದರ್ಶಿಸಲು, ತಾ. ೧೩ ನೇ ಶುಕ್ರವಾರಕ್ಕೆ ಬೆಂಗಳೂರಿನಿಂದ ಹೊರಟಿತು. ಬೆಟ್ಟಿಯು ಸೋಮ ತಾ. ೨೦ ನೇಗೆ ಸಿಮಲಾದಲ್ಲಿ ಒದಗುವದು. ಶ್ರೀ। ಕರ್ನೂರ ಶ್ರೀನಿವಾಸ ರಾಯರು ಶಿಷ್ಟಮಂಡಳ ತರ್ಫೆನಿಂದ ಮಾತಾಡುವರು. ಹೊಸಕೊಪ್ಪ ಕೃಷ್ಣರಾಯ, ಮಧುರೆಯ ಶ್ರೀ। ಶೇಷಯ್ಯಂಗಾರರವರೂ ಶ್ರೀನಿವಾಸರಾಯರೊಡನೆ ಹೋಗಿರುವರು.

— ಜಾದು ಕೊಂಗ್ರೆಸಿನ ಬಗ್ಗೆ ತಕ್ಕ ವ್ಯವಸ್ಥೆ ಮಾಡುವರೆ ಮುಂಬಯಿಯಲ್ಲಿ ಶ್ರೀ। ಲಕ್ಷ್ಮೀದಾಸ ರಾವಜಿ ಟಸೀರ, ಮಥುರಾದಾಸರವರನ್ನು ಕಾರ್ಯದರ್ಶಿಗಳಾಗಿ ನೇಮಿಸಿರುವರು. ಅಖಿಲ ಭಾರತೀಯ ಹಿಂದೂ ಮಹಾಸಭೆಯ ಗೋರಕ್ಷಣ ಕಮಿಟಿಯ ಕಾರ್ಯದರ್ಶಿಗಳಾದ ಪಂಡಿತ ನೇಕೀರಾಮ ಶರ್ಮಾರವರು ಜಾದು ಕೊಂಗ್ರೆಸಿನ ಮುಂಬಯಿ ಅಧಿವೇಶನದ ಸಮಯವೂ, ಹಿಂದೂ ಮಹಾಸಭೆಯ ಕಾಶಿಯೊಳಗಿನ ಅಧಿವೇಶನವೂ ಏಕಕಾಲಕ್ಕೆ ಸಂಭವಿಸುವದಿದ್ದದರಿಂದ ಕೊಂಗ್ರೆಸಿನ ತಾರೀಖುಗಳನ್ನು ಮುಂದೆ ಹಾಕಬೇಕೆಂದು ಕೊಂಗ್ರೆಸಿನ ಅಧ್ಯಕ್ಷರಿಗೆ ಬಿನ್ನೈಸಿದರು.

— ಮುಂಬಯಿಯೊಳಗಿನ ಸೆಂಟ್ರಲ್ ಬೇಂಕ ಆಫ್ ಇಂಡಿಯಾ, ಟಾಟಾ ಇಂಡಸ್ಟ್ರಿಯಲ್ ಬೇಂಕ್, ಯೂನಿಯನ್ ಬೇಂಕ ಆಫ್ ಇಂಡಿಯಾ ಹೀಗೆ ಹಿಂದೀ ಆಡಳಿತೆಯೊಳಗಿನ ಈ ಮೂರೂ ಬೇಂಕುಗಳು ಈಗ ಏಕತ್ರಿತವಾಗುವವೆಂದು ಸುದ್ದಿ ಇದೆ. ಸದ್ಯಕ್ಕೆ ಸೆಂಟ್ರಲ್ ಬೇಂಕ ಹಾಗು ಟಾಟಾ ಬೇಂಕ ಈ ಎರಡು ಬೇಂಕುಗಳು ಒಕ್ಕಟ್ಟಾಗಿವೆ. ಈ ಒಕ್ಕಟ್ಟು ಬೇಂಕಿನ ಭಾಂಡವಲು ರೂಪಾಯಿ ೩॥ ಕೋಟಿಯೆಂದು ಠರಾಯಿಸಲ್ಪಟ್ಟಿದೆ. ಸೆಂಟ್ರಲ್ ಬೇಂಕಿನ ಶೇರು ೧ಕ್ಕೆ ಟಾಟಾ ಬೇಂಕಿನ ಶೇರುಗಳು ೨ ಎಂದು ಪ್ರಮಾಣ ಹಿಡಿಯಲ್ಪಟ್ಟಿದೆ.

ದೇಶಿ ಸೆಂಟೋನಾಯಿನ್
(ಜಂತುವಿನ ಪುಡಿ.)

ಅಪಾಯಕರವಿಲ್ಲದೆ ಗುಣ ಕೊಡುವಂಥಾದ್ದು. ಪ್ರಪಂಚದಲ್ಲಿ ಪ್ರಖ್ಯಾತ ಔಷಧ.

ಔಂಸಿನ ಶೀಸೆಗೆ ೭ ರೂ. ೮ ಆಣೆ.

ವಿಳಾಸ.— ಎಸ್. ಜಿ. ಭಾಗ್ವತ್,
ಆಯುರ್ವೇದಿಕ್ ಕೆಮಿಸ್ಟ, ಶಿರ್ಸಿ. (ಕೆನರಾ)

ಗ್ಯಾಸ ದೀಪಗಳು
ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಮುಟ್ಟಿ ತಿಳಿಕೊಳ್ಳಬಹುದು

ಪುರುಷೋತ್ತಮ ಲಕ್ಷುಮಯ್ಯ ಶ್ಯಾನಭಾಗ
ಹೆಗಡೇಕರ, ದುಕಾನ, ಕುಮಟಾ.

ಲಾಲಾ ಲಜಪತರಾಯರ ಆರೋಗ್ಯ.

ಪಂಡಿತ ಮದನಮೋಹನ ಮಾಲವೀಯರವರು ಲಾಲಾ ಲಜಪತರಾಯರ ಆರೋಗ್ಯ ಸ್ಥಿತಿಯ ಬಗ್ಗೆ ತಾ ೯ ನೇ ಸೋಮವಾರದ ಲಾಹೋರಿನ 'ಟ್ರಿಬ್ಯೂನ' ಪತ್ರಿಕೆಯಲ್ಲಿ ಬರೆಯುವದೇನಂದರೆ.— ಅವರು ಕ್ಷಯ ವಿಕಾರದಿಂದ ನರಳುತ್ತಿರಬೇಕೆಂದು ಅನೇಕರ ಊಹೆ ಇದೆ. ಈಗ ೨ ತಿಂಗಳುಗಳ ಲಾಗಾಯಿತು, ನಿತ್ಯವೂ ಅವರಿಗೆ ಸಣ್ಣ ಜ್ವರ ಬರುತ್ತದೆ. ಜ್ವರ ಇಳಿಯುವಾಗ ಬೆವರಿನ ರಾಶಿ. ಪುಪ್ಪುಸಗಳು ವಿಕೃತವಾಗಿವೆ. ನಿತ್ಯವೂ ವಿಕೃತಿಯು ವೃದ್ಧಿ ಹೊಂದುತ್ತಿದೆ. ಈ ಸಂಗತಿಗಳನ್ನು ಯಾರೂ ಅಲ್ಲಗಳೆಯರು. ಲಜಪತರಾಯರ ಕುಟುಂಬದಲ್ಲಿ ಅನೇಕರು ಕ್ಷಯವಿಕಾರದಿಂದ ಮೃತಹೊಂದಿರುವರು. ಇವರ ರೋಗದಿಂದ ಇದೇ ಬೇನೆಯಿಂದ ಲಾಲಾಜಿಯವರು ಹಾಸಿಗೆ ಹಿಡಿದಿರುವರೆಂಬುದಕ್ಕೆ ಸಂದೇಹವಿಲ್ಲ. ನನ್ನ ಪ್ರಿಯ ಮಗಳ ಕಥೆಯೂ ಹೀಗೆಯೇ ಆಯಿತು. ಲಾಲಾಜಿಯವರನ್ನು ಕೂಡಲೇ ವಿಮೋಚಿಸಿ, ಶೀತಲ ಪ್ರದೇಶಕ್ಕೆ ಒಯ್ದು, ಜಾಗ್ರತೆಯಿಂದ ಉಪಚಾರ ನಡಿಸಿದ ಹೊರತು, ಅವರ ತರಣೋಪಾಯವಿಲ್ಲ. ಸೆಂಟ್ರಲ ಜೈಲಿನ ಸೂಪರಿಂಟೆಂಡೆಂಟರು ಜೈಲಿನಲ್ಲಿ ಬೇಕಾದ ಅನುಕೂಲತೆಗಳನ್ನು ಲಾಲಾಜಿಯವರಿಗೆ ಪೂರೈಸುತ್ತಾರೆಂಬ ಮಾತು ನಾನು ಒಪ್ಪುತ್ತೇನೆ. ಆದರೆ, ಮಾನವನಿಗೆ ಅಶಕ್ಯವಾದ ಮಾತನ್ನು ಅವರೇನು ಸಾಧಿಸಲಾರರು. ಲಾಹೋರಿನಂಥ ಉಷ್ಣ ಪ್ರದೇಶದಲ್ಲಿ, ಹಿಮಾಲಯ ಪರ್ವತದ ಶೀತಲ ವಾಯುವು ಸಂಚರಿಸುವದು ಅವರಿಗೆ ಶಕ್ಯವಿಲ್ಲ. ಲಜಪತರಾಯರ ಮಾನಸಿಕ ಉಪದ್ರವಗಳನ್ನು ಪರಿಹರಿಸುವದೂ ಅವರಿಗೆ ಅಸಾಧ್ಯವೇ. ಸ್ವತಂತ್ರವಿರಬೇಕಾದಾಗ ತಾನು ಸೆರೆಮನೆಯಲ್ಲಿ ನರಳುತ್ತೇನೆಂಬ ಭಾವನೆಯು ಲಾಲಾಜಿಯವರು ಸೆರೆಮನೆಯಲ್ಲಿರುವ ವರೆಗೆ ನಾಮಶೇಷವಾಗಲಾರದು. ಲಜಪತರಾಯರು ಜೈಲಿನಲ್ಲಿಯೇ ಅಕಾಲಕ್ಕೆ ಮೃತ್ಯುವಿಗೆ ತುತ್ತಾಗಬೇಕೆಂದು ಪಂಜಾಬ ಸರಕಾರವು ಇಚ್ಛಿಸಲಿಕ್ಕಿಲ್ಲ. ಆದರೆ, ಅವರನ್ನು ಹೀಗೆಯೇ ಇರಗೊಟ್ಟರೆ, ಲಾಲಾಜಿಯವರು ಜೈಲುಖಾನೆಯಲ್ಲಿಯೇ ದೇಹವನ್ನಿಡುವರೆಂದು ನನಗೆ ತೋರುತ್ತದೆ. ಈ ರೀತಿ ಅವರ ಜೀವನವು ಪರಿಸಮಾಪ್ತಿಗೈದರೆ, ಇಡೀ ದೇಶವೇ ಶೋಕಸಾಗರದಲ್ಲಿ ಮುಳುಗುವದು. ಸರಕಾರದ ವಿಷಯಕ ಪ್ರಜೆಗಳಲ್ಲಿರುವ ಅಸಂತೋಷವು ಮತ್ತೂ ತೀಕ್ಷ್ಣವಾಗುವದು. ಪಂಜಾಬ ಸರಕಾರವು ಇಂಥ ಶೋಚನೀಯ ಪ್ರಕಾರವು ಒದಗದಂತೆ ಸಕಾಲದಲ್ಲಿ ಯೋಗ್ಯ ನಿರ್ಣಯವನ್ನು ಕೈಕೊಳ್ಳುವದೆಂದು ನಾನು ನೆರೆನಂಬಿದ್ದೇನೆ."

ಉಡುಪಿಯಲ್ಲಿ ನೆರೆಯ ಹಾವಳಿ.

ಉಡುಪಿಯ ಸತ್ಯಾಗ್ರಹಿಗಳು ಅಲ್ಲಿ ಒದಗಿದ ನೆರೆಯ ಬಗ್ಗೆ ಗುರುವಾರ ತಾ ೧೨ನೇ ಸಾಜಿಕೆಯಲ್ಲಿ ಬರೆಯುವದೇನಂದರೆ.—

ನಾಲ್ಕೈದು ದಿನಗಳಿಂದ ಬರುತ್ತಿದ್ದ ವಿಪರೀತ ಮಳೆಯಿಂದ ಉಡುಪಿ ತಾಲೂಕಿನ ಹೊಳೆಗಳು ನೆರೆಯಿಂದ ತುಂಬಿ, ಅವುಗಳ ದಡದಲ್ಲಿರುವ ನೂರಾರು ಮನೆಗಳು ನಾಶವಾದವು, ನೂರಾರು ಜಾನುವಾರುಗಳು ಪ್ರವಾಹದಲ್ಲಿ ತೇಲಿಹೋದವು. ನಷ್ಟದ ಸರಿಯಾದ ಲೆಕ್ಕವು ಇನ್ನೂ ಸಿಕ್ಕಲಿಲ್ಲ. ಆದರೆ ಸುಮಾರು ೩೦೦೦ ಮನೆಗಳು ನಾಶವಾಗಿರಬಹುದೆಂದೂ, ಸುಮಾರು ೧೦ ಸಾವಿರ ಜನರು ಮನೆಗಳಿಲ್ಲದೆಯೂ, ಬಟ್ಟೆ ಆಹಾರಗಳಿಲ್ಲದೆಯೂ ನರಳುತ್ತಿರುವರೆಂದು ಅಂದಾಜು ಮಾಡಲ್ಪಟ್ಟಿದೆ. ಮುಖ್ಯವಾಗಿ, ಉದ್ಯಾವರ, ಮಟ್ಟು, ಕೋಟ್ನೆ, ಉಪ್ಪೂರು, ಬಾರಕೂರು, ಬೆಣ್ಣೆಕುದುರು, ಪುತ್ತಿಗೆ, ಮಣೂರು— ಮುಂತಾದ ಕಡೆಗಳಲ್ಲಿ ವಿಶೇಷ ನಷ್ಟ ಸಂಭವಿಸಿದೆಯೆಂದು ತಿಳಿದುಬರುತ್ತದೆ.

ಉಡುಪಿ ಮುಂದಾಳುಗಳಲ್ಲಿ ಕೆಲವರು ತಾ. ೧೦ಕ್ಕೆ ಸೇರಿ, ಒಂದು ರಿಲೀಫ ಕಮಿಟಿಯನ್ನು ಏರ್ಪಡಿಸಿ, ಅಸಹಾಯ ಸ್ಥಿತಿಯಲ್ಲಿರುವವರ ಸಹಾಯಾರ್ಥವಾಗಿ ಸುಮಾರು ೨೦೦ ಮುಡಿ ಅಕ್ಕಿಯನ್ನು ಸಂಗ್ರಹಿಸಿರುವರು. ಉಡುಪಿ ತಾಲೂಕ ಕಾಂಗ್ರೆಸ ಕಮಿಟಿಯ ಕಾರ್ಯಕಾರೀ ಮಂಡಳಿಯವರೂ, ಊರಿನ ಸಾಹುಕಾರರಲ್ಲಿ ಕೆಲವರೂ ನಿನ್ನೆ ಸಭೆಸೇರಿ ಒಂದು ರಿಲೀಫ ಕಮಿಟಿಯನ್ನು ಸ್ಥಾಪಿಸಿದರು. ಈ ಕಮಿಟಿಗೆ ಶ್ರೀ ದೇಜ್ಜಿ ಕಲ್ಯಾಣಶೇಟರು ಅಧ್ಯಕ್ಷರಾಗಿಯೂ, ಶ್ರೀ ಬೈಲೂರು ನರಸಿಂಹ ಶೆಣೈಯರು ಉಪಾಧ್ಯಕ್ಷರಾಗಿಯೂ, ಶ್ರೀ ಉ. ವಾಸುದೇವ ಪಡಿಯಾರ ಮತ್ತು ವ ಭೀಮರಾಯರು ಕಾರ್ಯದರ್ಶಿಯರಾಗಿಯೂ, ಚುನಾಯಿಸಲ್ಪಟ್ಟರು. ನಿನ್ನೆ ಉಡುಪಿ ಬ್ರಾಹ್ಮೀಯ ವಿದ್ಯಾಮಂದಿರದ ವಿದ್ಯಾರ್ಥಿಗಳು ಪಟ್ಟಣದ ಮನೆಗಳಿಂದ ಅನೇಕ ವಸ್ತ್ರಗಳನ್ನು ಸಂಗ್ರಹಿಸಿರುವರು. ಈಹೊತ್ತು ಸ್ವಯಂಸೇವಕರ ಬೇರೆ ಬೇರೆ ತಂಡಗಳು ನೆರೆಯಿಂದ ಕಷ್ಟಪಟ್ಟ ಸ್ಥಳಗಳಿಗೆ ಹೋಗಿರುವುವು. ಅಲ್ಲದೆ ಕಮಿಟಿಯವರು ಉಡುಪಿಯಲ್ಲೂ, ಇತರ ಕಡೆಗಳಲ್ಲೂ ಸಹಾಯವನ್ನು ಕೇಳಲು ಹೋಗುವರು.

ದೀನಬಂಧು ಸಿ. ಎಫ್. ಎಂಡ್ರ್ಯೂಸರಿಗೆ ಅಲ್ಲಿಗೆ ಬರಬೇಕೆಂದು ರಿಲೀಫ್ ಕಮಿಟಿಯವರು ತಂತಿಮೂಲಕ ಕೇಳಿಕೊಂಡಿರುವರು. ಅಲ್ಲದೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯವರಿಗೆ ಧನಸಹಾಯವನ್ನು ಕೇಳಿ ತಂತಿಯು ಕೊಡಲಾಗಿದೆ.

ಶುದ್ಧ ಖಾದಿ
ವಿಕ್ರಿಗೆ ತಯಾರ.

ಹೊನ್ನಾವರ ತಾಲೂಕಾ ಕಾಂಗ್ರೆಸ ಕಮಿಟಿಯಿಂದ ಕೈಮಗ್ಗದ ಕಮಿಟಿಯ ಕುದೆ ನೂಲಿನ ಖಾದಿ ಮಾರಾಟಕ್ಕೆ ಕಾಂಗ್ರೆಸ ಆಫೀಸಿನಲ್ಲಿ ಸಿಗುವದು.

ಹೊನ್ನಾವರ, ೧೦-೧೨-೨೨ } ಸೆಕ್ರೆಟರಿ, ತಾ. ಕಾ. ಕಮಿಟಿ, ಹೊನ್ನಾವರ

ಮೂರ್ತಿಗಳು ಬೇಕೋ?

ನಮ್ಮಲ್ಲಿ ಬಂಗಾರ, ಬೆಳ್ಳಿ, ಪಂಚಧಾತು, ಹಿತ್ತಾಳಿ, ತಾಮ್ರ ಮತ್ತು ಕರೇಶಿಲೆಯ ಮೂರ್ತಿಗಳೂ, ಇದಲ್ಲದೆ ಪಾಣಿಪೀಠಗಳೂ, ಪ್ರಭಾವಳಿಗಳೂ, ಈಶ್ವರ ಮುಖವಾಟಗಳೂ, ನಾಗಾಭರಣಗಳೂ, ಕವಚಗಳೂ ಮತ್ತು ಯಾವದೇ ತರದ ಪ್ರತಿಮೆಗಳೂ ನಮ್ಮಲ್ಲಿ ಯೋಗ್ಯ ದರಕ್ಕೆ ಮತ್ತು ಯೋಗ್ಯ ಹೊತ್ತಿಗೆ ಮಾಡಿ ಕೊಡಲ್ಪಡುವವು. ಬೇಕಾದವರು ಪ್ರತ್ಯವಹಾರ ಮಾಡಿ ಯಾ ಸಮಕ್ಷ ಬಂದು ದರವಾರ ತಿಳಕೊಳ್ಳಬಹುದು.

ಪತ್ತಾ:— **ನಾರಾಯಣ ಹುವಯ್ಯ ಶೇಟ,**
ಗುಡಗಾರ, ಗುಜರಗಲ್ಲಿ, ಕುಮಟಾ.
(ಉ. ಕಾನಡಾ.)

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ತೃಪ್ತಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ. ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ್,
ಮುಂಬಯಿ.

ಮನೆ ಕಟ್ಟುವವರಿಗೆ ಸುಸಂಧಿಯು.



ಮೇಲಂತಸ್ತಿಗೆ ಶೋಭೆ ಬರುವದಕ್ಕೆ ನಾನಾ ತರ ನಕ್ಷೀ ಕೊರೆಯಲ್ಪಟ್ಟ ಬೀಡಿನ ಕಟಾಂಜನಗಳೂ, ಹೂದೋಟ, ಬಳಂಗಳ, ಉಪ್ಪರಿಗೆ, ದಿವಾನಖಾನೆ ಮೊದಲಾದ ಸ್ಥಳಗಳಲ್ಲಿ ವಿಶ್ರಾಂತಿಗೊಳ್ಳುವದಕ್ಕೆ ತಕ್ಕ ಬಾಕುಗಳೂ ಕಿರ್ಲೋಸ್ಕರ್ ಕಾರಖಾನೆಯಲ್ಲಿ ಸೌಕರ್ಯದಿಂದ ದೊರೆಯುತ್ತವೆ. ಪತ್ರ ಬರೆದು 'ಜಿ' ಕ್ಯಾಟಲಾಗು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ.)

ಲೋಕಾನುಕೂಲತೆಯಾಗಬೇಕೆಂದು, लोकानुकूलता व्हावी म्हणून,

ನಮ್ಮ 'ಸ್ಟಾರ ಆಫ್ ಕೆನರಾ' ಮುದ್ರಣಾಲಯದಲ್ಲಿ

आमच्या 'स्टॉर ऑफ केनरा' मुद्रणालयांत

નવીન વ્યવસ્થા !! ಹೊಸ ಏರ್ಪಾಟು !! नवीन व्यवस्था !!

'STAR OF KANARA' PRESS, KUMTA.

ನಮ್ಮ ಮುದ್ರಣಾಲಯದಲ್ಲಿ ಲೋಕಾನುಕೂಲತೆಗಾಗಿ ಮಾಡಿದ ಹೊಸ ಮಾರ್ಪಾಟುಗಳ ವಿವರ:—

ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಗಳಲ್ಲಿ

೧. ಮನೋಹರ ಮುದ್ರಣ. ೨. ಸಕಾಲ ಮುದ್ರಣ. ೩. ಸುಲಭ ದರ.

ಸಂಕ್ಷೇಪತಃ ಹೇಳಬೇಕಾದರೆ.—

ಅಗ್ಗ ಅಚ್ಚು! ಅಂದ ಅಚ್ಚು!! ಅಚ್ಚ ಅಚ್ಚು!!!

ತರತರದ ಬಣ್ಣಗಳಿಂದ ಸುಶೋಭಿತವಾಗಿ ಮುದ್ರಣ ಮಾಕೊಡುವದಲ್ಲದೆ, ಫೋಟೋ-ಬ್ಲೋಕುಗಳನ್ನೂ ಮುದ್ರಿಸುವ ಏರ್ಪಾಟು ಮಾಡಲಾಗಿದೆ.

ಜರೂರಾಯಿತಿ ಜನರಿಗಾಗಿ—

ಬೇಕಾದ ಛಾಪೆ ಕೆಲಸವನ್ನು ನಮೂನೆಯ ಸಂಗಡ ಟಪಾಲದ್ವಾರಾ ಎಡ್‌ವ್ಹಾನ್ಸ ಸಹಿತ ಕಳಿಸಿದ್ದಲ್ಲಿ, ಯಥಾಪ್ರತಿ ಮುದ್ರಣ ಮಾಡಿ ೧–೨ ದಿವಸಗಳಲ್ಲಿಯೇ ವ್ಹಿ. ಪಿ. ಯಿಂದ ಕಳಿಸುವ ವ್ಯವಸ್ಥೆಯೂ ಮಾಡಲ್ಪಟ್ಟಿದೆ. ಬ್ಯಾಂಡಿಂಗ ಕೆಲಸವೂ ಅಚ್ಚುಕಟ್ಟಾಗಿ ಮಾಡಿ ಕೊಡಲ್ಪಡುವದು. ಒಮ್ಮೆ ಆರ್ಡರು ಕಳುಹಿಸಿ, ನೋಡಬಹುದಲ್ಲವೇ?

ಇದಲ್ಲದೆ, ನಮ್ಮಲ್ಲಿ ಗ್ರಂಥ, ಪುಸ್ತಕ, ಮಾಸಪತ್ರಿಕೆ, ಪಂಚಾಂಗ ಮುಂತಾದ ವಿವಿಧ ಮುದ್ರಣ ಕೆಲಸವು ಸುಲಭ ದರದಿಂದ, ತಕ್ಕ ಹೊತ್ತಿಗೆ ತಯಾರಿಸಿ ಕೊಡಲ್ಪಡುವದು.

ಮಾರಾಟಕ್ಕೆ ಸಿದ್ಧ.

ಕೋರ್ಟು ಕಚೇರಿಗಳಲ್ಲಿ ವಕೀಲರಿಗೆ ಬೇಕಾಗುವ ವಕಾಲತ ಅಮುಲಜಾರಿ, ಸಾಕ್ಷಿಪಟ್ಟಿ, ಯಾದಿ, ನಕಲು ಅರ್ಜಿ, ದಸ್ತೈವಜು ಪರತ ಬೇಡುವ ಅರ್ಜಿ, ಜ್ಯಾಹಿರಿ ಮುಂತಾದ ಎಲ್ಲ ತರದ ಫಾರ್ಮುಗಳೂ, ಪ್ಸಿಂಗ ಬೀಲು, ಸಾಪಿ, ಬಿಲ್ ಆಫ್ ಎಂಟ್ರಿ ಮೊದಲಾದ ಕಸ್ಟಮ್ ಫಾರ್ಮುಗಳೂ ಮಾರಾಟಕ್ಕೆ ದೊರೆಯುತ್ತವೆ.

ವಿಶೇಷ ಮಾಹಿತಿ ಪತ್ರದ್ವಾರಾ ಯಾ ಮೊಕ್ತಾ.

ಪತ್ತೆ:— ಕೃಷ್ಣರಾವ ಕೇಶವ ಶೇಣವಿ, ಹೆಗಡೇಕರ,
ಮಾಲಕ,
'ಸ್ಟಾರ ಆಫ್ ಕೆನರಾ' ಪ್ರೆಸ್, ಕುಮಟಾ.
(ಉ. ಕಾನಡಾ.)

Printed and Published by Krishnarao Keshav Shenvi (Editor) at his Star of Kanara Press, Kumta.

Reg. No. B-1270 | Thursday, 26th July 1923

ವರ್ಷ ೬. | ಸಂಚಿಕೆ ೪೧.

ಕಾನಡಾವೃತ್ತ.

THE KANARA NEWS.

ಪತ್ರಿಕೆಯ ವರ್ಗಣಿ:-
ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನೆಯಾರ್ಧರಿಯಿಂದ
ರೂ. 3-0-0
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಸ್ಮಾಲ್ ಪ್ಯಾಯಿಕ(೧೫ ಎಂಮ್‌ಉದ್ದ) ೫ ಸಾಲುಗಳ ವರೆಗೆ ರೂ. 1-0-0
ಅನಂತ್ರ ಪ್ರತಿ ಸಾಲಿಗೆ 0-2-0.
ಹೆಚ್ಚಿಗೆ ಸಾಲು ಎಷ್ಟು ಹೊಕ್ಕಿರುವದೋ ಆ ಮಾಪ ದಿಂದ ಅವು ಸಾಲುಗಳು ಎಣಿ ಸಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ದ್ವಾರಾ ಠರಾಯಿಸಲ್ಪಡುವವು.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೨೬ ಮಾಹೆ ಜುಲೈ ಸನ್ ೧೯೨೩ ನೇ ಇಸವಿ)—

हिंदुस्थानांतील रहिवाश्यांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानांतील लोकांस ज्यास्त फायदेशीर आहे,

द्राक्षासव- { दीड रतलची किंमत २ रुपये;

रामबाण औषधें —
सर्दि घालविणारें,
भूक वाढविणारें;
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,
— पिण्यांस रुचिकर.

क्याटलाग मागवा,

झंडु फार्मास्युटिकल वर्क्स लिमिटेड,
मुंबई नं. १३

GLAXO:- FRESH STOCK. NEW BRAND. *a food for infants and invalids.*

Kalmegh :- *Well-tried remedy in Liver complaints especially of children.*

Syrup of Vasaka :- *Highly efficacious in cold, cough, crough and bronchitis.*

Besides we have in stock other patent medicines, Thermometres, Glycerine Syringes etc.,

Orders will be executed by V. P. P.

The New Emporium
Honavar. (N. Kanara.)

ಡಾ|| ಮಾಸೂರಕರರ

ಸುಧಾಂಜನ.

ಅಂಜನುಗಳಿಗೆಲ್ಲ ಅರಸು.

ತಲೆಶೂಲಿ, ವಾತ ವೇದನೆ, ಕೆಮ್ಮು, ಹಲ್ಲು ನೋವು ಇತ್ಯಾದಿಗಳಿಗೆ ಕ್ಷಿಪ್ರ ಗುಣಕಾರಿ ಮದ್ದು. ಬೆಲೆ 2 ಆಣೆ ಮಾತ್ರ. ವ್ಯಾಪಾರಿಗಳಿಗೆ ವಿಶೇಷ ಸವಲತು. ಹೆಚ್ಚಿನ ಮಾಹಿತಿ ಏಜಂಟರಿಂದ.

ಏಜಂಟ್ಸ್:— **ನಾಗರ್ಕಟ್ಟಿ ಬ್ರದರ್ಸ್,**
ಸುಧಾಂಜನ ಡಿಪೋ,
ಕುಮಟಾ. (ಜಿಲ್ಲಾ ಕಾರವಾರ.)

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ವಿಷಯುಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ.

ಈ ವರೆಗೆ ಪ್ರಕಟವಾದ ಪುಸ್ತಕಗಳು.

(೧-೨) ಗ್ರೀಸ ದೇಶದ ಗಾಂಧಿ. (ಸಾಕ್ರೆಟೀಸ) (೩) ಸ್ವಾತಂತ್ರ್ಯಸಾಧನೆ. (೪) ಗುರು-ಹಿರಿಯರೂ, ಬಂಧು-ಭಗಿನಿಯರೂ. (೫) ರಾಷ್ಟ್ರೀಯ ಶಿಕ್ಷಣ. (೬) ಸದ್ಗುಣಮಂದಿರ. (ಭಾಗ ೧.) (೭) ಸ್ವರಾಜ್ಯ ಧರ್ಮ. (ಅನಾಮಿನ ಪುಷ್ಪ) ಇವಿಷ್ಟು ಪ್ರಕಟವಾಗಿದ್ದು, ೫ ಆಣೆಗೆ ಒಂದರಂತೆ ದೊರೆಯುತ್ತವೆ. ವರ್ಗಣೀದಾರರಿಗೆ ಹಿಂದಿನ ಬೇಕಾದ ಪುಸ್ತಕಗಳು ೪ ಆಣೆಗೆ ಒಂದರಂತೆ ದೊರೆಯುವವು. ೬ ಪುಸ್ತಕಗಳಿಗೆ ಕೂಡಿ ೧|| ರೂಪಾಯಿ ಮಾತ್ರ. ಅಂಚೆವೆಚ್ಚ ಬೇರೆ. ದ್ವಿತೀಯ ವರ್ಷ ಪ್ರಾರಂಭ. ಅನುಕ್ರಮವಾಗಿ ಮಾರ್ಚ, ಮೇ, ಜುಲೈ, ಸಪ್ಟಂಬರ, ನವಂಬರ, ಜನವರಿ ೧೮ ನೇ ತಾರೀಖಿಗೆ ಒಂದೊಂದು ಪುಷ್ಪ ಹೊರಡುವದು. ವಾ. ವ. ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ.

ವಾ. ಅ. ಹೊದ್ಕೆ,
ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ.

ಎಲ್ಲ ತರದ ಜ್ವರಗಳಮೇಲೆ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ, ಶೈತ್ಯ, ಬಂಗಲಿ, ಅಥವಾ ದೂಷಿತ ಹವೆಯಿಂದ ಬರುವ ಸಾದಾ ವಿಷಾರೀ ಅಥವಾ ಇತರ ಜ್ವರಗಳೂ, ಇನಪ್ಲುಎಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನ್ಯಾವದ ದುಷ್ಪರಿಣಾಮರಹಿತ ಕೇವಲ ವನಸ್ಪತಿಯ ಈ ಮದ್ದು ಸೇವಿಸಿದರೆ ಅಶಕ್ತತೆಯಾಗದೆ, ಬೆವರು ಬಂದು ಜ್ವರ ಇಳಿಯುತ್ತದೆ. ಹಾಗು ರೋಗಿಯು ತರಿತ ವಾಸಿಯಾಗುತ್ತಾನೆ.

೩ ಔಂಸ ಬಾಟ್ಲಿ ಕಿಂಮತ ರೂ. ೧-೦-೦.
ಇದರ ಹೊರತು ಇನ್ನೂ ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ, ಉಚ್ಚ ಪ್ರತಿಯ ಕೋಲನ ವಾಟರ, ಲವೆಂಡರ ಇತ್ಯಾದಿ ಸಾಮುಗ್ರಿಗಳು ಅಲೆಂಬಿಕದ ಕಾರಖಾನೆಯಲ್ಲಿ ತಯಾರಾಗುತ್ತವೆ. ಮುದ್ದಾಂ ಕೇಳಬೇಕು ಕಾಗದ ಬರೆಯಿರಿ.

ಅಲೆಂಬಿಕ್ ಕೆಮಿಕಲ್ ವರ್ಕ್ಸ್,
ಕಂಪನಿ, ಲಿಮಿಟೆಡ್.
ನಂ. ೫೦, ಪ್ರಿನ್ಸೆಸ್‌ಸ್ಟ್ರೀಟ, ಮುಂಬಯಿ.

अलेंबिक केमिकल वर्क्स कं० लिं०
नं. ५० प्रिन्सेस स्ट्रीट मुंबई.

ಶುದ್ಧ ಖದ್ದರ್ ರೇಶ್ಮಿ ಮುಡಿಗಳು.

ಸುಲಭ ಕ್ರಯಕ್ಕೆ ಖಾತ್ರಿಯಾದ ಎಲ್ಲಾ ರಂಗುಗಳ ಪ್ಲೆಯಿನ್ ಹಾಗು ಕೆಳಗೆ ಬರೆದ ಕ್ರಯಕ್ಕೆ ದೊರೆಯುವವು.

೧೮ ಮೊಳ	ಉದ್ದ	೨||	ಅಗಲ	ರೂ.	೨೭ ರಿಂದ	೨೫	ವರೆಗೆ
೧೬	,,	,,	೨||	,,	,,	೨೦ — ೩೦	,,
೮	,,	,,	೨||	,,	,,	೯ — ೧೫	,,
೬	,,	,,	೨||	,,	,,	೬ — ೧೧	,,

S.U.N & CO.
BENARES CITY.

ಅಂಗಿ ಬಟ್ಟೆಗಳು ೧೮ ಮೊಳ × ೨ ಮೊಳ ರೂಪ್ಯಾ ೧೮ ರಿಂದ ೩೦ವರೆಗೆ. ಕೋಟ ೧೨ ಮೊಳ ×೧|| ಮೊಳ ಅಗಲ ರೂಪ್ಯಾ ೧೦ ರಿಂದ ೧೫ ವರೆಗೆ ಜನ್‌ಖಾನ್. ೧೪ ಮೊಳ × ೨ ಮೊಳ ರೂ. ೨೪ ರಿಂದ ೩೫ ವರೆಗೆ ಇವುಗಳಲ್ಲದೆ ಶಾಲೀ ಪೀತಾಂಬರ, ಕಾಶ್ಮೀರ್ ಶಾಲು, ರುದ್ರಾಕ್ಷಿ, ಜಾಗಂಟೆ, ತಾಳ, ಪಶ್ಮೀರ್ ದಾನಿ, ಆಟದ ಸಾಮಾನುಗಳು, ದೇವರ ಮತ್ತು ಗಾಂಧಿ ಮುಂತಾದವರ ಪಟಗಳಿರುವ ಉಂಗುರಗಳ ಮತ್ತು ಇನ್ನೂ ಅನೇಕ ಸಾಮಾನುಗಳ ಕ್ಯಾಟಲಾಗ್ ಇನಾಂ.

ವಿಳಾಸ:— ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ !

ಕಾಮಿನಿಯಾ ತೈಲ. (ರಿಜಿಸ್ಟರ್ಡ)

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶಭಾರವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವದರೋ.

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅತ್ಯಾವಶ್ಯಕವಾದ ಸಹಕಾರಿಯಾಗಿರುತ್ತದೆ. ಈ ಆಯಿಲ್ ತೊಡೆದುಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆಯುವಷ್ಟು ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಸೊಂದು ಬಾರಿ ಈ " ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ " ಸರ್ಟಿಫಿಕೇಟ್ ಆಫ್ ಮೆರಿಟ್ " ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ.— ಸೀಸಗೆ ರೂಪಾಯಿ 1-0-0, ಸೀಸೆ 3ಕ್ಕೆ. ರೂಪಾಯಿ 2-10-0, ವಿ.ಪಿ. ಖರ್ಚ 0-14-0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ.)

ಈ ಸುಗಂಧದ ದ್ರವ್ಯವು ನಾನಾ ತರದ ಅತ್ಯುತ್ತಮವು ಚನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡಿದ್ದು. ಇದರಲ್ಲಿ ಮದಿರೆಯು (ಆಲ್ಕೊಹೋಲ್) ಇರುವದಿಲ್ಲವಾದ್ದರಿಂದ ಒಂದೇ ಒಂದು ಸಲ ನಿಮ್ಮ ಕೈ ಒಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವರ್ಗೀಯವಾದ ಸುಗಂಧ ಪರಿಮಳ ಆವರಿಸಿದಂತಾಗುವದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರ್ ದ ಸುಗಂಧವು ಬಹಳ ದಿವಸಗಳವರೆಗೆ ತನ್ನ ಶಕ್ತಿಯಿಂದ ಸೆಳೆಕೊಳ್ಳುವದು. ಇಂದೇ ಒಂದು ಸೀಸೆಯನ್ನು ತರಿಸಿ ಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0 1 ...) ಸೀಸೆ 1 ಕ್ಕೆ 0-12-0; ಬಿಪ್ಪಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ. ವೆಚ್ಚ ಬೇರೆ 0-4-0.

ಒಟ್ಟೋದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12-0.

Address - **The Anglo Indian Drug & Chemical Co,**
16, Market, **BOMBAY. 2.**

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳೆಸಿ, ಪುರುಷರಿಗೆ ಸ್ತ್ರೀ ವಿಷಯವಾಗಿಯೂ, ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷಯುಕ್ತ ಶಕ್ತಿಯನ್ನು ಉಂಟುಮಾಡಿ, ದಿನೇ ದಿನೇ ಶರೀರದ ಜರಠತನವನ್ನೂ ರೋಗಗಳನ್ನೂ ದೂರಪಡಿಸಿ ಆಯುರಾರೋಗ್ಯವನ್ನೂ, ರತಿಯಲ್ಲಿ ಹಿಗ್ಗಳವಾದ ಕುತೂಹಲವನ್ನು ತೋರಿಸುವ ಕ್ರೀಡಾ ಶಕ್ತಿಯ ಉತ್ಸಾಹವನ್ನೂ, ಸಂಭೋಗದಲ್ಲಿ ತೃಪ್ತಿಯನ್ನೂ, ಸೌಖ್ಯವನ್ನೂ ಕೊಟ್ಟು, ಮನಸ್ಸಿನ ಧೃಢತೆಯನ್ನೂ ಯೌವ್ವನದ ಕಳೆಯನ್ನೂ ದೊರಕಿಸಿ ಮುರಿತವನ್ನು ನೀಗಿ ಬಲವನ್ನು ಉಂಟುಮಾಡುವದು. ಮೃತ್ಯುವನ್ನು ನಿವಾರಿಸಿ, ಒಗರುಗೆಯ ರೋಗಗಳನ್ನು ನಾಶಮಾಡುವದು. ಜೀರ್ಣಜ್ವರ, ಮಂದಾಗ್ನಿ, ಶುಕ್ಲಸ್ರಾವ, ಪ್ರಮೇಹ ಇವುಗಳನ್ನು ಬಿಡದೇ ನಾಶಮಾಡುವದು ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, ದೇಶಕಾಲಗಳಿಂದಲೂ, ಅತ್ಯಾಚಾರಗಳಿಂದಲೂ, ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡೆಸುವ ಬಲಾತ್ಕಾರದ ಹಸ್ತಮೈಥುನದಿಂದಲೂ, ಅತಿವಿಷಯೋಪಭೋಗದಿಂದಲೂ, ಇಂದ್ರಿಯ ಸಡಿಲವೂ, ತೆಳುವೂ, ನಿಸ್ತೇಜವೂ ಆಗಿ ಯತ್ನವಿಲ್ಲದೆ ಸ್ಖಲನವಾಗುವದು ಒಂದೊಂದು ಸಾರಿ ಮೂತ್ರದಲ್ಲಿಯೂ ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತೆ, ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈಬಿಸುವು, ನಿದ್ರೆಯಲ್ಲಿ ಭೀಕರವಾದ ಸ್ವಪ್ನ ಆರಿಫ, ಮರುಪು ಮತ್ತು ಶರೀರದ ಹಾಗೂ ಮನಸ್ಸಿನ ಚೇತನ ಕುಂದಿ ಹೋಗುವದು, ಇವೆಲ್ಲವುಗಳಮೇಲೆ ರಾಮಬಾಣದಂತಿರುವದು. ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ. ೧॥ ನಂ ೧. ನಂ ೨. ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಂತು ೬೦ಗುಳಿಗೆಗಳುಳ್ಳ ಸೀಸೆಗಳಿಗೆ ರೂ ೩. ಪೋಸ್ಟೇಜ ಬೇರೆ

ಎಮ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ,
ಕರ್ಕಿ. (ಕೆನರಾ.)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧. ರಾಗದ ಕೈಪೆಟ್ಟಿಗೆ ಕಿಂ ೩೦, ೪೦, ೬೫, ೫೦, ೭೦
೨. „ ಕಾಲುಪೆಟ್ಟಿಗೆ ಕಿಂ. ೭೫, ೭೫, ೧೪೦, ೧೬೦
೩. ತಬಲೆ ಜೋಡಿ ಕಿಂ. ೧೨, ೧೫, ೧೮ ೨೦,
೪. ಹಾರ್ಮೋನಿಯಮ ಗ್ಯಾಡ ಕಿಂ ೧, ತಬಲೆ ... ಡ ಕಿಂ. ೧೨ ೮.

ವಿಶೇಷ ಮಾಹಿತಿಗೆ ನಮ್ಮ ಕ್ಯಾಟಲಾಗ ಪುಕ್ಕಟೆ ಕೊಡುವೆವು

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ — ಗೋಪಾಳ ಸಖಾರಾಮ ಮಾನೆ ಕಂಪನಿ, ನಂ ೩೬೨
ಕಾಳಬಾದೇವಿ ರೋಡ, ಮುಂಬಯಿ

ಲೂಟಿಗಾರರ ತಂಟೆ!

ಸಂಪಾದಕರ ಮಹಾಶಯರಿಗೆ, ಸಾಣೀಕಟ್ಟೆಯ ಉಪ್ಪಿನ ಸಾವುಕಾರರನ್ನು ತಾವು ಬಲ್ಲಿರಿ. ನಿರಾಧಾರಿಗಳಿಗೆ, ಕೃಪಣರಾದ ನಿರಾಧಾರಿಗಳಿಗೆ ಒಗ್ಗಟ್ಟು ಮಾಡಿಕೊಂಡು ಅವರನ್ನುದ್ಧರಿಸಲು ಬನ್ನವೆತ್ತಿದ ಸರಕಾರವನ್ನು, ಸಧನ ಸಾವುಕಾರರು ಆಶ್ರಯಿಸಿ ಎಬ್ಬಿಸಿದ ಹಾವಳಿಯನ್ನು ನಾವೆಲ್ಲರೂ ಸ್ವಾನುಭವದಿಂದ ಅರಿತಿರುವರು. ಈ ಸಾವುಕಾರರ ಒಗ್ಗಟ್ಟನ್ನು ಪ್ರಜೆಗಳ ಹಿತಕ್ಕಾಗಿ ಕಣಗಾಡುತ್ತದೆಂದು ಬಹಿವಾರ ಹೊಡೆಯುವ ನೌಕರಶಾಹಿಯು ಸಾವುಕಾರರಿಗೆ ಆಶ್ರಯವನ್ನಿತ್ತು ಹೇಗೆ ಪೋಷಿಸಿತು? ಎಂಬುದೊಂದು ಗೂಢವೇ. ಜಿಲ್ಹಾಧಿಪ ಮಿ। ಪಿ. ಬಿ. ಹೇಗರವರು ಮಾಲೀಕರ ದರ್ಶನ ಪಡೆದು, ಉಪ್ಪಿನ ದರವನ್ನು ಇಳಿಸಲು ಯತ್ನಿಸುತ್ತೇವೆಂದು ಕಾರವಾರದ ಶಿಷ್ಟಮಂಡಳಕ್ಕೆ ಆಶ್ವಾಸನವನ್ನಿತ್ತಿದ್ದರು. ಅವರಂತೆ ಸಾಹೇಬರು ಸಾವುಕಾರರನ್ನು ಸಂಪರ್ಕಿಸಿ, ಮರಳಿದರೆಂತಲೂ ತಾವೇ ಪ್ರಕಟಿಸಿದ್ದಿರಿ. ಈಗ ಕಾರವಾರದಲ್ಲಿ ಉಪ್ಪಿನ ಮಣಕ್ಕೆ ॥ ಆಣೆಯು ಏರಿತು. ಹೇಗರವರ ಮಧ್ಯಸ್ಥಿಕೆಯು ಹೀಗೆ ವಿಪರೀತವಾಗಿ ಪರಿಣಮಿಸಿತೇಕೆ? ಸಾವುಕಾರರ ಒಕ್ಕಟ್ಟು ಕಲೆಕ್ಟರರಿಗೆ ತಿರಸ್ಕರಿಸುವಷ್ಟು ಪ್ರಬಲವಾಯಿತೆಂದು ಸರಕಾರಕ್ಕೆ ತಿಳಿದರೆ, ಅದೇ ಒಂದು ದೊಡ್ಡ ಉಪಕಾರ

ಪ್ರಸ್ತಾವನೆಗೇ ಬಹಳ ಹೊತ್ತು ತೆಗೆದುಕೊಂಡೆ. ಲೂಟಿಗಾರರ ತಂಟೆಯ ಶುಭ ಸುದ್ದಿಯನ್ನು ಈಗ ಹೇಳಿಬಿಡುತ್ತೇನೆ. ಸಾಣೀಕಟ್ಟೆಯಲ್ಲಿ ಕಳೆದ ೧೦-೧೫ ದಿನಗಳಲ್ಲಿ ಅನರ್ಥವೊಂದು ಸಂಭವಿಸಿತು. ಮಳೆನೀರು ನದಿಯಲ್ಲಿ ಹರಿದು ಹೋಗುವರೆ ಮಾರ್ಗದ ಕೆಳಗೆ ಜಂತ್ರಡಿಯನ್ನು ಕಟ್ಟಿರುವರು. ಭರತಕ್ಕೆ ಬಾಗಿಲು ಮುಚ್ಚುವದು, ಇಳತಕ್ಕೆ ಬಾಗಿಲುಗಳನ್ನು ತೆರೆದು, ಹೊಳೆಯಲ್ಲಿ ನೀರು ಹೋಗಗೊಡುವದು. ಈ ಕ್ರಮವು ಅಲ್ಲಿ ನಡೆವದೆ. ಅಲ್ಲಿ ಏನೋ ಒಂದು ಕಾರಣದಿಂದ ಜಂತ್ರಡಿಯ ಬಾಗಿಲುಗಳು ನಾದುರುಸ್ತಾಗಿ ನೀರು ಸಾಗಿ ಹೋಗದೆ, ಉಪ್ಪಿನ ರಾಶಿ ಹಾಕಿದ ಪ್ಲೆಟಫೊರ್ಮುಗಳಲ್ಲಿ ಸೇರಿಕೊಂಡಿತು. ನೀರಿನ ಸಂಯೋಗವಾದ ಕೂಡಲೆ, ಉಪ್ಪು ನೀರಾಗಿ ಪರಿಣಮಿಸಿತು. ಸಾವುಕಾರರ ಗಂಟು ಕರಗಿ ನೀರಾಯಿತು. ಪೆಟ್ಟು ಬಿದ್ದದ್ದು ಬಹಳ ಮಾಡಿ ದೊಡ್ಡ ದೊಡ್ಡ ರಾಯರಿಗಂತೆ. ಉಪ್ಪಿನ ಸಣ್ಣ ಪುಟ್ಟ ಸಾವುಕಾರರು ತಮ್ಮ ಉಪ್ಪನ್ನು ಮೂತ ದೂರದ ರಾಶಿ ಹೂಡಿದ್ದರಿಂದ ಅವರ ರಾಶಿಗಳು ಸುರಕ್ಷಿತವಿವೆ. ಈಗ ರಾಯರಿಗೆ ಒಂದು ಚಿಂತೆ ಬಿದ್ದಿದೆ. ತಮ್ಮ ಉಪ್ಪಂತೂ ಬಳೆದು ಹೋಯಿತು. ಇದ್ದ ಉಪ್ಪನ್ನು ಉಪ್ಪಿನ ಮಾಲೀಕರೆಲ್ಲರೂ ತಮ್ಮ ಚಿಟ್ಟೆಯ ಪ್ರಮಾಣದಂತೆ ಹಂಚಿಕೊಳ್ಳಬೇಕೆಂದು ದೊಡ್ಡ ಸಾವುಕಾರರು ಹೊಂಚುಹಾಕುತ್ತಿರುವರು. ಉಪ್ಪಿನ ರಾಶಿಗಳು ಪ್ರತ್ಯೇಕ ಇರುವಾಗ, ಈ ಸಮಾನತೆಯ ತತ್ವವು ಸಾಣೀಕಟ್ಟೆಯ ಲೂಟಿಗಾರರಿಗೆ ತೋಚಲಿಲ್ಲ. ಈಗ ಸಣ್ಣ ಸಾವುಕಾರರು ತಮಗೆ ಅಕಲ್ಪಿತವಾಗಿ ಪ್ರಾಪ್ತವಾದ ಸುಯೋಗವನ್ನು, ಪಾಲುಮಾಡಿಕೊಂಡು ಕಳಕೊಳ್ಳಲು ಒಪ್ಪುವದಿಲ್ಲವಂತೆ. ಇದೊಂದು ಲೂಟಿಗಾರರ ತಂಟೆಯು.

ತಮ್ಮ ವಿಧೇಯ,
ಸುದ್ದಿಗಾರ.

ಹುಬ್ಬಳ್ಳಿಯಲ್ಲಿ ಗಾಂಧೀ ದಿನ.

(ವಾರ್ತಾಪ್ರಸಾರಕ ಸಂಘ, ಹುಬ್ಬಳ್ಳಿ.)

ಜುಲೈ ೧೮ ನೇ ತಾರೀಖಿನ ದಿವಸವನ್ನು "ನಿಶಾನಿಯ ದಿನ" ವೆಂದು ಪಾಲಿಸಲಿಕ್ಕೆ ರಾಷ್ಟ್ರೀಯ ಕಾರ್ಯಕಾರೀ ಸಭೆಯು ಆಜ್ಞೆಯನ್ನು ಕೊಟ್ಟಿದ್ದು, ಸರಕಾರದ್ದೂ, ನಮ್ಮದೂ ಕೂಡಿಯೇ ಪರೀಕ್ಷೆಯ ಸಮಯವಾಗಿತ್ತು. ನಾಗಪೂರ ಸತ್ಯಾಗ್ರಹಕ್ಕೆ ಇಂಥಿಂಥ ಪ್ರಾಂತಗಳಿಂದ, ಇಷ್ಟಿಷ್ಟು ಜನರು ಸಿದ್ಧರಿರುವರೆಂಬ ಸುದ್ದಿಯೇ ದಿನಾಲು ವೃತ್ತಪತ್ರಗಳಲ್ಲಿ ಪ್ರಸಿದ್ಧವಾಗಹತ್ತಿದ್ದರಿಂದ, ಮೆರವಣಿಗೆಯ ಬಂದೀ ಹುಕುಮನ್ನು ತೆಗೆದು ಈ ಜನರ ಧೈರ್ಯವು ಎಷ್ಟರಮಟ್ಟಿಗೆ ಇರುತ್ತದೆಂದು ನೋಡಿಕೊಳ್ಳಲಿಕ್ಕೆ ಸರಕಾರದ ಧೋರಣೆಗೆ ಒಳ್ಳೇ ಸುಸಮಯವಾಗಿತ್ತು. ದೇಶದಲ್ಲಿ ಉತ್ಸಾಹವೇ ತೋರುವದಿಲ್ಲವೆಂದು ಕೂಗುತ್ತ ತಿರುಗುವವರ ಕಲ್ಪನೆಯೂ ಎಷ್ಟರಮಟ್ಟಿಗೆ ನಿಜವಿರುತ್ತದೆಂಬದನ್ನು ಪರೀಕ್ಷಿಸಲಿಕ್ಕೆ ಆ ದಿವಸ ಸರಕಾರದವರು ಮೆರವಣಿಗೆಯ ಬಂದೀ ಆಜ್ಞೆಯನ್ನು ಕೊಟ್ಟರೂ, ಅನಾತ್ಯಾಚಾರವನ್ನು ಪೂರ್ಣ ಕಾಯ್ದುಕೊಂಡು ಅದನ್ನು ಅಗತ್ಯವಾಗಿ ಮುರಿಯಬೇಕೆಂದು ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯು ಠರಾವಿನ ಮುಖಾಂತರ (೧೭ ನೇ ತಾರೀಖಿನ 'ಸ್ವರಾಜ್ಯ'ದಲ್ಲಿ) ಕೊಟ್ಟ ಆಜ್ಞೆಯಾದರೂ ಸಮಯೋಚಿತವೆಂದೇ ಹೇಳಬಹುದು.

ಹುಬ್ಬಳ್ಳಿಯಲ್ಲಿ ೧೮ ನೇ ತಾರೀಖಿನ ಮೆರವಣಿಗೆಗೆ ಸರಕಾರದಿಂದ ಬಂದೀ ಹುಕುಮು ಬರುತ್ತದೆಂದು ೨-೩ ದಿವಸ ಮುಂಚಿತವಾಗಿಯೇ ದಟ್ಟ ವಾರ್ತೆ ಇತ್ತು. ೧೮ ನೇ ತಾರೀಖು ಬಂದುಬಿಟ್ಟಿತು. ಶಹರದಲ್ಲೆಲ್ಲ ರಾಷ್ಟ್ರೀಯ ಧ್ವಜಾರೋಪಣದ ಸಮಾರಂಭವು ಸಡಗರದಿಂದ ನಡೆಯಹತ್ತಿತು. ಮುಂಜಾವಿನಲ್ಲಿ ಕೆಲವು ಸ್ವಯಂಸೇವಕರು ಊರಲ್ಲಿ ನಿಶಾನಿಗಳ ಮಾರಾಟ ಮಾಡಿದರು. ಮಧ್ಯಾಹ್ನ ೩-೪ ಘಂಟೆಯವರೆಗಾದರೂ ಎಲ್ಲಿಯೂ ಬಂದೀ ಹುಕುಮು ಬಂದಂತೇನೂ ತೋರಲಿಲ್ಲ. ನಾಲ್ಕುವರೆ ಘಂಟೆಯಾಯಿತು. ಫೌಜದಾರ, ಮಾಮಲೇದಾರ ಸಹಿತ ಪೋಲೀಸ ಪಾರ್ಟಿಯು ಮೆರವಣಿಗೆಯು ಹೊರಡುವ ಸ್ಥಳಕ್ಕೆ ಬಂದು ನಿಂತಿತು. ರಾಷ್ಟ್ರೀಯ ನಿಶಾನೆಗೆ ಬಂದೀ ಹುಕುಮು ಕೊಟ್ಟರು, ಶಾಂತ ರೀತಿಯಿಂದ ಕಾಯಿದೇ ಭಂಗ ಮಾಡಿ ಮೆರವಣಿಗೆಯನ್ನು ತೆಗೆಯಬೇಕೆಂಬ ಕುತೂಹಲಪೂರ್ಣ ಐದು ಜನ ಸತ್ಯಾಗ್ರಹೀ ವೀರರ ಹೆಸರುಗಳನ್ನು ಸಬ್ ಇನಸ್ಪೆಕ್ಟರರು ಬರೆದುಕೊಳ್ಳುವದಾಯಿತು. ೪॥ ಘಂಟೆಗೆ ಪ್ರಚಂಡವಾದ ಜನಸಮುದಾಯದ ಮೆರವಣಿಗೆಯು ಹೊರಟಿತು. ಇಲ್ಲಿಯ ಖಿಲಾಫತ ಕಮಿಟಿಯವರು ಈ ಮೆರವಣಿಗೆಗೆ ಒಳ್ಳೇ ಸಹಾಯ ಮಾಡಿ ಸತ್ಯಾಗ್ರಹಕ್ಕಾಗಿ ತಮ್ಮ ಇಬ್ಬರು ಸ್ವಯಂಸೇವಕರನ್ನು ತಯಾರಿಸಿದ್ದರು. ಮೆರವಣಿಯು ಹೊರಟ ಮಾರ್ಗದ ಎರಡೂ ಬದಿಗಳಲ್ಲಿಯ ಮನೆಗಳ ಮೇಲೆ ಸಂದಟಿತವಾಗಿ ನೆರೆದ ಪ್ರೇಕ್ಷಕರ ಆಶೀರ್ವಚನಗಳೂ, ಮೇಘರಾಜನ ಹುರಿದುಂಬಿಸುವ ಪರ್ಜನ್ಯತುಷಾರಗಳೂ, ಕಳವಳಗೊಂಡ ಸರಕಾರದ ಕಣ್ಣಿನ ಕೆಂಗಿಡಿಗಳೂ ಪತಾಕೆಗಳೊಡನೆ ನಡೆದಿದ್ದ ಪಂಚ ಸತ್ಯಾಗ್ರಹಿಗಳ ಮೇಲೆ ಎಡೆಬಿಡದೆ ಸುರಿಯುತ್ತಿದ್ದವು. ಬಂದೀ ಹುಕುಮನ್ನು ಎಲ್ಲರೂ ಪ್ರತಿ ಕ್ಷಣಕ್ಕೂ, ಅಪೇಕ್ಷಿಸುತ್ತಿದ್ದರೂ ಮೆರವಣಿಗೆಯು ಶಹರದ ಮುಖ್ಯ ಮುಖ್ಯ ರಸ್ತೆಗಳೊಳಗಿಂದ ಹಾಯ್ದು, ಪುನಃ ಮೊದಲಿನ ಸ್ಥಳಕ್ಕೆ ಬಂದರೂ ಪೋಲೀಸರ ಸುಳಿದಾಟವೇ ತೋರಲಿಲ್ಲ. ಆ ಮೇಲೆ ಸಂಜೆಯ ೬ ಘಂಟೆಗೆ ಪೋಲೀಸ ಅಮಲದಾರರು ಆ ವೇಳೆಯ ಐವರು ಸತ್ಯಾಗ್ರಹಿಗಳ ಮೇಲೆ "ನೀವು ರಾಷ್ಟ್ರೀಯ ನಿಶಾನಿಯ ಮೆರವಣಿಗೆಯನ್ನು ತೆಗೆಯಕೂಡದೆಂದು ಮೂರನೇ ವರ್ಗ ಮ್ಯಾಜಿಸ್ಟ್ರೇಟರಿಂದ ಬಂದ ನೋಟೀಸನ್ನು ಜಾರಿ ಮಾಡಿದರು. ಆಶ್ಚರ್ಯವೂ, ಕೌತುಕವೂ, ವಿಸ್ಮಯವೂ, ಪೋಲೀಸರ ಅಜ್ಞಾನದ ಬಗ್ಗೆ ಹಳಹಳಿಯೂ ಎಲ್ಲರನ್ನು ಒಂದೇ ಕಾಲಕ್ಕೆ ಆವರಿಸಿಕೊಂಡವು."

"ನೀನೂ, ಇತರ ಕೆಲವು ಹುಡುಗರೂ ಮತ್ತು ನಿನ್ನ ಮಿತ್ರರೂ ಕೂಡಿ ರಾಷ್ಟ್ರೀಯ ಧ್ವಜದ ಮೆರವಣಿಗೆಯನ್ನು ತೆಗೆಯುತ್ತೀರೆಂದು ನನಗೆ ತಿಳಿದು ಬಂದದ್ದರಿಂದ, ಇಂಥ ಮೆರವಣಿಗೆಯಿಂದ ಶಹರದಲ್ಲಿ ದಂಗೆ ಧೋಪೆ ಆಗುವ ಸಂಭವವಿದ್ದದರಿಂದ ನೀನು ಈ ಮೆರವಣಿಗೆಯಲ್ಲಿ ಭಾಗ ತೆಗೆದುಕೊಳ್ಳಬಾರದೆಂದು ಕ್ರಿ. ಪ್ರೊ. ಕೋಡ ೧೪೪ ನೇ ಕಲಮಿನ ಪ್ರಕಾರ ನಿನಗೆ ಸಕ್ತ ತಾಕೀದ ಮಾಡಿರುತ್ತೇನೆ" ಎಂಬರ್ಥದ ನೋಟೀಸುಗಳು ಅವರಿಗೆ ತೋರಿಸಲ್ಪಟ್ಟವು. ಮೆರವಣಿಗೆಯು ಮುಗಿದ ಮೇಲೆ ನಮಗೆ ನೋಟೀಸು ಮುಟ್ಟಿರುತ್ತದೆಂದು ಎಲ್ಲ ಸತ್ಯಾಗ್ರಹಿಗಳು ಸಹಿ ಮಾಡಿ ಕೊಟ್ಟರು.

ಆಮೇಲೆ ಜಾಹೀರ ಸಭೆ ಕೂಡಿ, ಇಲ್ಲಿಯ ವ್ಯಾಪಾರಸ್ಥರಾದ ಶ್ರೀ। ಪಿಸಂಜಿಸೇಠ ಇವರ ಅಧ್ಯಕ್ಷತೆಯ ಕೆಳಗೆ ನಾಗಪೂರ ಸತ್ಯಾಗ್ರಹ ಈ ವಿಷಯದ ಮೇಲೆ ಧಾರವಾಡದ ಶ್ರೀ। ವಿಠ್ಠಲರಾವ ಜೋಶಿ ಇವರ ಭಾಷಣವಾಯಿತು. ಇದೇ ಸಭೆಯಲ್ಲಿಯೇ ಶ್ರೀ। ಜಮುನಾಲಾಲ ಬಜಾಜ, ಶ್ರೀ। ನೀಲಕಂಠರಾವ ದೇಶಮುಖ ಶ್ರೀ। ಭಗವಾನದೀನ ಮುಂತಾದ ವೀರರಿಗೆ ಶಿಕ್ಷೆಯಾದ್ದರಿಂದ, ಅವರ ಅಭಿನಂದನಪರ ಠರಾವು ಪಾಸಾದವು. ಸಭೆಯು ವಿಸರ್ಜನವಾದನಂತರ ಮ್ಯಾಜಿಸ್ಟ್ರೇಟರು ಭಾಷಣಗಳ ಸಾರಾಂಶವನ್ನು ತೆಗೆದುಕೊಳ್ಳಬೇಕೆಂದು ಸಭೆಯು ನೆರೆದಲ್ಲಿಗೆ ಬಂದು ನೋಡುತ್ತಾರೆ, ಅಲ್ಲಿ ಏನು ಇದೆ......?

ಶ್ರೀ। ಜಮುನಾಲಾಲ ಬಜಾಜರಿಗೆ ಶಿಕ್ಷೆಯಾದದ್ದಕ್ಕಾಗಿ (ಕಾಟನ ಮಾರ್ಕೇಟ) ಅರ್ಧವೇಳೆಗೆ ಸೂಟಿಯಾಯಿತ್ತು.

ದೇಶಿ ಸೆಂಟೋನಾಯಿನ್.

(ಜಂತುವಿನ ದಿವ್ಯ.)

ಅಪಾಯಕರವಿಲ್ಲದೆ ಗುಣ ಕೊಡುವಂಥಾದ್ದು. ಪ್ರಪಂಚದಲ್ಲಿ ಪ್ರಖ್ಯಾತ ಔಷಧ.

ಔಂಸಿನ ಶೀಸೆಗೆ ೭ ರೂ. ೮ ಆಣೆ.

ವಿಳಾಸ— ಎಮ್. ಜಿ. ಭಾಗ್ವತ್,
ಆಯುರ್ವೇದಿಕ್ ಕೆಮಿಸ್ಟ, ಶಿರ್ಸಿ. (ಕೆನರಾ)

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಮುದ್ದಾಂ ಚಿಠಿ ತಿಳಕೊಳ್ಳಬಹುದು.

ಪುರುಷೋತ್ತಮ ಲಕ್ಷುಮಯ್ಯ ಜ್ಞಾನಭಾಗ.

ಹೆಗಡೇಕರ, ದುಕಾನ, ಕುಮಟಾ.

ನಾಗಪುರದ ವನವಾಸ.

ವರ್ಧಾ ಜಿಲ್ಲೆಯ ಶ್ರೀಮಂತ ಶೇಟ ಚಿರಂಜೀಲಾಲರವರು ನಾಗಪುರದ ಸತ್ಯಾಗ್ರಹ ಸಂಗ್ರಾಮದಲ್ಲಿ ಮೊಟ್ಟಮೊದಲು ಸೇರಿಕೊಂಡ ಪುಣ್ಯಾತ್ಮರು. ಅವರಿಗೆ ೧೨ ತಿಂಗಳ ಸಾದಾ ಶಿಕ್ಷೆಯಾಗಿತ್ತು. ಶೇಟಜೀಯವರ ಪ್ರಾಯವು ೩೦ ವರುಷ, ಅವರು ತಾ. ೩೦ ನೇ ಜೂನಕ್ಕೆ ಬಿಡುಗಡೆ ಹೊಂದಿದರು. ನಾಗಪುರದ ಕಾರಾಗೃಹವಾಸದ ಸಂಬಂಧ ಅವರು ನುಡಿದದ್ದೇನಂದರೆ:—

ಕಾರಾಗೃಹವಾಸವನ್ನು ನಾನು ಈ ಮೊದಲು ಎಂದೂ ಅನುಭವಿಸಿದ್ದಿಲ್ಲ. ಜೈಲಿನಲ್ಲಿ ಕೈದಿಗಳಿಗೆ, ವಿಶೇಷವಾಗಿ, ಧ್ವಜಸಂಗ್ರಾಮದೊಳಗಿನ ಸತ್ಯಾಗ್ರಹಿಗಳಿಗೆ ಉಪದ್ರವ ಕೊಟ್ಟಿದ್ದನ್ನು ನೋಡಿ, ನನಗೆ ಆಶ್ಚರ್ಯವಾಯಿತು. ಸೆರೆಮನೆಯಲ್ಲಿ ನಡೆಯುವ ಕೃತ್ಯಗಳನ್ನು ನೋಡಿದರೆ, ಸಾವಧಾನಿಗಳು ಸಹ ಪ್ರಕ್ಷುಬ್ಧರಾಗುವರು. ಅಷ್ಟು ಜೈಲಿನೊಳಗಿನ ನಡಾವಳಿಯು ತೀಕ್ಷ್ಣವಿದೆ. ನಾನು ಅಹಮದಾಬಾದದೊಳಗಿನ ಪ್ರತಿಜ್ಞಾಲೇಖವನ್ನು ಸಹಿ ಮಾಡಿದ್ದೆನು. ಅಹಿಂಸೆಯನ್ನು ಕಾಪಾಡುವ ಮಹತ್ವದ ಜವಾಬದಾರಿಯು ನನ್ನ ಮೇಲಿತ್ತು. ಅದರೊಳಗೂ ನಾನು ಜೈನ ಧರ್ಮೀಯನು. ಅಹಿಂಸಾ ತತ್ವವನ್ನು ಪುರಸ್ಕರಿಸಬೇಕೆಂಬುದು ನನ್ನ ಧರ್ಮಾಜ್ಞೆಯು. ಆದದರಿಂದಲೇ ಜೈಲಿನೊಳಗಿನ ಸಣ್ಣ ಪುಟ್ಟ ಅಧಿಕಾರಿಗಳು ಕೈದಿಗಳ ಕೂಡ ನಡಿಸುವ ಅಸಭ್ಯ ವರ್ತನವನ್ನು ನೋಡಿ, ಅದನ್ನು ಸಾವಧಾನ ಚಿತ್ತದಿಂದ ಸಹಿಸಿಕೊಳ್ಳುವದು ನನಗೆ ಬಹಳ ಕಠಿಣವೆನಿಸಲಿಲ್ಲ. ಒಂದು ದಿನ ಕೆಲ ಸತ್ಯಾಗ್ರಹಿ ಕೈದಿಗಳೊಡನೆ ನಾನು ಸರ್ಕಲಿನೊಳಗಿಂದ ಕೋಣೆಯ ಕಡೆಗೆ ಹೋಗುತ್ತಿದ್ದೆನು. ಆ ಸರ್ಕಲಿನಲ್ಲಿ ಒಬ್ಬ ಯುರೋಪಿಯನ್ ಸರ್ಕಲ ಆಫೀಸರನ ಮುಕ್ಕಾಮಿದೆ. ಅವನಿಗೆ ಹಿಂದೀ ಭಾಷೆಯಾಗಲಿ, ಮರಾಠಿ ಭಾಷೆಯಾಗಲಿ ಆಡಬರುವದಿಲ್ಲ. ಆಡಿದರೂ ತಿಳಿಯುವದಿಲ್ಲ. ತನ್ನ ಹುಕುಮುಗಳನ್ನು ಕೈದಿಗಳಿಗೆ ಹೇಳುವದು ಕಡೆಗೆ, ಬಯ್ಯುವದು ಮಾತ್ರ ಬಲ್ಲ. ಇಂಥ ಪಾಷಾಣ ಹೃದಯದ ಪ್ರಾಣಿಗಳಿರುವರು. ನಮ್ಮ ಕೋಣೆಗೆ ಸೇರಿಕೊಳ್ಳುವ ಸೂಚನೆಯು ನಮಗೇನ ಗೊತ್ತಿದ್ದಿಲ್ಲ. ನಾವು ಬೇರೆ ಒಳಗಿನ ಬದಿಗೆ ಹೋದೆವು. ನನ್ನ ಮುಂದೆ ಇತರ ಕೈದಿಗಳಿದ್ದರು. ಸರ್ಕಲ ಆಫೀಸರನು ಕೈದಿಗಳನ್ನು ಪ್ರೇಕ್ಷಿಸಿ, "ಮೂರ್ಖಧವರೇ" ಮುಂತಾದ ಹೊಲಸು ಶಬ್ದಗಳನ್ನು ಗಟ್ಟಿಯಾಗಿ ಬಯ್ದನು. ನಾನು ಹಿಂದೆ ಇದ್ದೆ. ಅವನಿಗೆ ನುಡಿದದ್ದೇನಂದರೆ, ‘ದೇಶಭಕ್ತ ಇವರಿಗೆ ಯಾಕೆ ಅಣಕಿಸುತ್ತೀರಿ? ಸಭ್ಯ ಮಾತುಗಳಿಂದ ನಿಮ್ಮ ಉದ್ದೇಶವನ್ನು ಕೊನೆಗಾಣಿಸಬಹುದು.’ ಆಗ ಆಫೀಸರನು ನನ್ನನ್ನೂ ಅಸಭ್ಯ ಮಾತಿನಿಂದ ಬಯ್ದನು. "ನಿನಗೂ, ‘ಮೂರ್ಖಧವ’ ನೆಂದು ಸಂಭೋಧಿಸುತ್ತೇನೆ. ನೀನೇನು ಮಾಡುವಿ?" ಅದಕ್ಕೆ ನಾನು ಅಂದದ್ದು:— "ನಾವು ಅಸಹಯೋಗಿಗಳು. ದೂರುವದು ನಮಗೆ ಸೇರುವದಿಲ್ಲ. ಆದರೂ ನಿಮ್ಮ ವರ್ತನೆಯನ್ನು ಸುಪರಿಂಟೆಂಡೆಂಟರಿಗೆ ನನಗೆ ಅರುಹಬೇಕಾಗಿದೆ." ಯುರೋಪಿಯನ್ ಆಫೀಸರನು ರೇಗಿಗೆದ್ದು, ಹಿಂದೀ ಭಾಷೆಯಲ್ಲಿ ಪ್ರತಿಯಾಗಿ ನುಡಿದದ್ದೇನಂದರೆ— "ಸುಪರಿಂಟೆಂಡೆಂಟರಿಗೆ ಯಾರು ಕೇಳುತ್ತಾರೆ? ನೀನು ಬೇಕಾದ ರಿಪೋರ್ಟ ಮಾಡಬಹುದು. ನನಗೆ ಎಳ್ಳಷ್ಟು ಭಯವಿಲ್ಲ." ನನ್ನೊಡನೆ ಇದ್ದ ಕೈದಿಯೊಬ್ಬನು ನನಗೆ ಆಫೀಸರನು ಅವಮಾನ ಮಾಡುತ್ತಾನೆಂದು ಗ್ರಹಿಸಿ, "ಸಭ್ಯ ಗೃಹಸ್ಥರಿಗೆ ಹೀಗೆ ಯಾಕೆ ಸಂಭೋಧಿಸುತ್ತೀರಿ?" ಎಂದು ನುಡಿಯಲು, ಆಫೀಸರನು ಮತ್ತೂ ಪ್ರಕ್ಷುಬ್ಧನಾದನು. "ಒಂದಲ್ಲ, ಎರಡಲ್ಲ, ನೂರಾರು ಸರ್ತಿ ಅವನಿಗೆ ‘ಮೂರ್ಖಧವ’ನೆಂದು ಕರೆಯುತ್ತೇನೆ" ಎಂದು ಉದ್ಗರಿಸಿದನು. ಮರುದಿನ ನಿತ್ಯಕ್ರಮದಂತೆ, ಸುಪರಿಂಟೆಂಡೆಂಟರು ನಮ್ಮ ಕೋಣೆಗೆ ಬಂದರು. ಮುಂಚಿನ ದಿನ ನಡೆದ ಯುರೋಪಿಯನ್ ಆಫೀಸರನ ವರ್ತನವನ್ನು ಸುಪರಿಂಟೆಂಡೆಂಟರಿಗೆ ಅರುಹಲು ನಾನು ಜೊತೆಗಾರ ಕೈದಿಗೆ ಹೇಳಿದೆನು. ನಾನು ಹೇಳಿದಂತೆ, ಮುಂಚಿನ ದಿನ ಸಂಭವಿಸಿದ ಹಕೀಕತನ್ನೆಲ್ಲ ಅವನು ಸುಪರಿಂಟೆಂಡೆಂಟರಿಗೆ ನಿವೇದಿಸಿದನು. ಸುಪರಿಂಟೆಂಡೆಂಟರು ಹಿಂದೀಯರು. ನಮ್ಮ ದೂರನ್ನು ಚೌಕಶಿ ಮಾಡುವದು ಒತ್ತಟ್ಟಿಗಿರಲಿ, ಫಿರ್ಯಾದಿಗೆ ಶಿಕ್ಷೆಯೆಂದು ಏಕಾಂತವಾಸದ ಕೋಠಡಿಯಲ್ಲಿ ಇಡಬೇಕೆಂದು ಕೂಡಲೇ ಆಜ್ಞಾಪಿಸಿದರು. ಈ ರೀತಿ ಅವನಿಗೆ ಶಿಕ್ಷೆಯಾದದ್ದನ್ನು ನೋಡಿ, ನಾನು ಎದ್ದು ನಿಂತು, ಸುಪರಿಂಟೆಂಡೆಂಟರಿಗೆ "ಆ ಯುರೋಪಿಯನ್ ಸರ್ಕಲ ಆಫೀಸರನು ನನಗೆ ಅವಮಾನ ಮಾಡುತ್ತಾನೆ. ‘ಮೂರ್ಖಧವ’ ನೆಂದು ಬಯ್ಯುತ್ತಾನೆ." ಎಂದು ಆದರದಿಂದ ನಿವೇದಿಸಿದೆನು. ಸುಪರಿಂಟೆಂಡೆಂಟರು ಉತ್ತರಿಸಿದ್ದೇನಂದರೆ— "ಬೆಳಿಗ್ಗೆ ನಿನಗೆ ಪತ್ರ ಬರೆದುಕೊಡೆಂದು ನಾನು ಹೇಳಿದಾಗ, ನೀನು ಯಾಕೆ ಬರೆಯಲಿಲ್ಲ? ನನಗೆ ಈಗ ಪುರಸತ್ತಿಲ್ಲ." "ಆ ಸಂಗಾತಿ ಕೈದಿಗಳಿಗೆ ಒತ್ತಟ್ಟಿಗೆ ನಡೆದು, ಪ್ರಾರ್ಥನೆ ಮಾಡತಕ್ಕದ್ದಿಲ್ಲ. ಮುಕಾದಮ ಕೈದಿಗಳೂ, ವಾರ್ಡರರೂ ನಿತ್ಯವೂ ವರ್ತಮಾನ ಎಬ್ಬಿಸುತ್ತಾರೆ. "ಇಂದು ೫೦ ಕೈದಿಗಳು ಮಾಫಿ ಬೇಡಿದರು, ಇಂದು ೧೦೦ ಕೈದಿಗಳು ಮಾಫಿಯಾಗಿ ಅರ್ಜ ಮಾಡಿದರು" ಮುಂತಾದ ವದಂತಿಗಳು ನಿತ್ಯವೂ ಹಬ್ಬುತ್ತವೆ. ನನ್ನ ಜೊತೆಯ ಕೈದಿಯೊಬ್ಬನು ಬೇನೆ ಬಿದ್ದು, ಆಸ್ಪತ್ರೆಯಲ್ಲಿ ಉಪಚಾರ ಹೊಂದುತ್ತಿದ್ದನು. ಡಾಕ್ಟರರು ಅವನಿಗೆ ನುಡಿದದ್ದೇನಂದರೆ— "ಏ, ಗಂವಾರಾ, (fellow) ನೀನು ಯಾಕೆ ಮಾಫಿ ಬೇಡುವದಿಲ್ಲ ಇಲ್ಲೆ ನೀನು ಸಾಯುವಿ" ರೋಗಿಯು ಅಂದದ್ದು:— "ಮಾಫಿಯನ್ನು ಬೇಡಲು ಇಚ್ಛೆಯೇನೂ ಇಲ್ಲದ ನನ್ನಂಥವನ ಮುಂದೆ ಮಾಫಿಯ ಸುದ್ದಿ ಯಾಕೆ ತೆಗೆಯುತ್ತೀರಿ?" ಗಂಗಾರಾಮ ಎಂಬ ಸತ್ಯಾಗ್ರಹಿಗೆ ಮೊದಲು ಬೀಸುವ ಕೆಲಸ ಕೊಟ್ಟರು. ಅವನಿಗೆ ಬೀಸುವ ಅಭ್ಯಾಸವಿಲ್ಲದ್ದರಿಂದ, ಆ ಕೆಲಸವು ಯೋಗ್ಯ ರೀತಿಯಿಂದ ನೆರವೇರಲಿಲ್ಲ. ಕಡೆಗೆ ಅವನಿಗೆ ‘ಕೋಲು’ ಕೆಲಸ ಕೊಟ್ಟರು. ಅದೂ ಅವನಿಗೆ ಸಾಧಿಸಲಿಲ್ಲ. ಅದರಿಂದ ಅವನಿಗೆ ಒದೆದರು. ಒಬ್ಬ ಸತ್ಯಾಗ್ರಹಿ ಕೈದಿಯು ತನಗೆ ಮೂತ್ರವಿಸರ್ಜನೆ ಮಾಡಬೇಕಾಗಿದೆಂದು ಜೊತೆಗಾರನಕೂಡ ಹೇಳಿದನು. ಸರ್ಕಲ ಆಫೀಸರರು ಅದನ್ನು ಕೇಳಿ, "ಏನು ಲುಚ್ಚಾ, ಸುಮ್ಮನೆ ಇರಲಿಕ್ಕೆ ಆಗುವದಿಲ್ಲ ಮೋ!" ಎಂದು ನುಡಿದು, ಮುಕಾದಮನನ್ನುದ್ದೇಶಿಸಿ, "ಈ ಗುಲಾಮನಿಗೆ ಪಾದರಕ್ಷೆಯಿಂದ ಹೊಡಿ" ಎಂದು ಆಜ್ಞಾಪಿಸಿದರು. ಡಾ। ಹರ್ಡೀಕರರಿಗೆ ‘ಕ್ವಿನೈನ್’ ಗುಳಿಗೆಗಳನ್ನು ಮಾಡುವ ಕೆಲಸ ಹಚ್ಚಿದ್ದರೆ.

ನಾಗಪುರದಲ್ಲಿ ಡಾ। ಹರ್ಡೀಕರರು.

(ವಾರ್ತಾಪ್ರಸಾರಕ ಸಂಘ, ಹುಬ್ಬಳ್ಳಿ.)

ನಾಗಪೂರ ಸತ್ಯಾಗ್ರಹದಲ್ಲಿ ೧೨ ತಿಂಗಳ ವರೆಗೆ ಶಿಕ್ಷೆಯನ್ನು ಅನುಭವಿಸಿ, ಮೊನ್ನೆ ಮೊನ್ನೆ ಹೊರಗೆ ಬಂದ ಶ್ರೀ। ಮಾಧವ ದಾಜೀಬಾ ಶ್ರವಣೆ ಎಂಬುವರು ನಮ್ಮ ಕಡೆಗೆ ಒಂದು ಪತ್ರವನ್ನು ಕಳಹಿದ್ದಾರೆ. ನಾಗಪೂರ ಜೇಲಿನಲ್ಲಿ ಸತ್ಯಾಗ್ರಹಿಗಳಿಗೆ ಬಹಳೇ ಅಮಾನುಷ ರೀತಿಯಿಂದ ನಡೆಸಿಕೊಳ್ಳುವರೆಂದೂ, ಊಟ, ನೀರು, ಶೌಚ ಇವುಗಳ ವಿಷಯಕ್ಕೆ ಬಹಳೇ ಕೆಟ್ಟ ವ್ಯವಸ್ಥೆಯಿರುತ್ತದೆಂದೂ ಅವರು ಬರೆದಿದ್ದಾರೆ.

ತುರಂಗಕ್ಕೆ ಬಂದ ೧೦ ದಿವಸಗಳಲ್ಲಿಯೇ ಡಾ। ಹರ್ಡೀಕರ ಇವರ ತೂಕವು ೭ ಪೌಂಡು ಇಳಿದಿದೆ. ಊಟ-ಉಡಿಗೆಗಳ ಬಗ್ಗೆ ಸುಧಾರಣೆಯಾಗಬೇಕಾದಲ್ಲಿ ಮೇಲಧಿಕಾರಿಗಳಿಗೆ ಅರ್ಜಿ ಮಾಡಿದರೆ, ಅದು ದೊರೆಯಬಹುದೆಂದು ತಿಳಿದರೂ, ಅದಕ್ಕೆ ಡಾ। ಹರ್ಡೀಕರರು ಸಮ್ಮತಿಸಲಿಲ್ಲ. ಆದರೆ ತಾವು "ಆರೋಗ್ಯ"ದ ವಿಷಯಕ್ಕೆ ಒಂದು ಪುಸ್ತಕವನ್ನು ಬರೆಯುವವರಿದ್ದೇವೆಂದೂ, ಅದಕ್ಕೆ ಪರವಾನಗಿ ದೊರೆತರೆ ವಿಶೇಷ ಸವಲತ್ತಿಗೆ (Special treatment) ಸಮ್ಮತಿಸುವೆನೆಂದೂ, ಅವರು ಬರೆದಂತೆ ತೋರುತ್ತದೆ. ಡಾಕ್ಟರರಿಗೆ ಕ್ವಿನಾಯಿನ ಗುಳಿಗೆಗಳನ್ನು ಮಾಡುವ ಕೆಲಸ ಕೊಟ್ಟಿದ್ದಾರೆ. ಅವರು ಯಾವಾಗಲೂ ಸುಪ್ರಸನ್ನರಿರುವರೆಂದೂ, ಶಾರೀರಿಕ, ಮಾನಸಿಕ ಶಕ್ತಿಯುಳ್ಳವರೇ ನಾಗಪೂರ ಸತ್ಯಾಗ್ರಹಕ್ಕೆ ತಯಾರಾಗಬೇಕೆಂದು ತಮ್ಮ ಕರ್ನಾಟಕ ಸ್ವಯಂಸೇವಕರಿಗೆ ಸಂದೇಶ ಕೊಟ್ಟಿರುವರೆಂದೂ, ಅವರು ತಮ್ಮ ಪತ್ರದಲ್ಲಿ ಬರೆದು ಕಳಿಸಿರುತ್ತಾರೆ.

ಲಾಲಾ ಲಜಪತರಾಯರು.

ಜುಲೈ ತಾ ೯ ನೇ ಸೋಮವಾರಕ್ಕೆ ಮದ್ರಾಸಿನಲ್ಲಿ ಲಜಪತರಾಯರ ಆರೋಗ್ಯಚಿಂತನಕ್ಕಾಗಿ ಜಾಹೀರ ಸಭೆಯಾಯಿತು. ದೀನಬಂಧು ಎಂಡ್ರ್ಯೂಸರವರು ಲಾಲಾಜಿಯವರ ಬಗ್ಗೆ ನುಡಿದದ್ದೇನಂದರೆ— ಮಹಾತ್ಮಾಗಾಂಧಿಯವರಿಗೆ ಸರಿಹೋಲುವ ಪುರುಷರು ಲಾಲಾಜಿಯವರು. ವೀರರಂತೆ ಅವರು ಸಾದಾವೃತ್ತಿಯವರು. ಅವರ ಧ್ಯೇಯವು ನಿರ್ಮಲವು. ಕರ್ತವ್ಯನಿಷ್ಠರೂ ಅವರೇ. ಇಂಗ್ಲಿಷರ ಶೀಲವನ್ನು ಲಾಲಾಜಿಯವರು ವಿಶೇಷವಾಗಿ ಪ್ರಶಂಸೆ ಮಾಡುತ್ತಿದ್ದರು. ಉಚ್ಚ ಶೀಲಕ್ಕಾಗಿ ಅವರನ್ನು ಆದರಿಸುವ ಅನೇಕ ಇಂಗ್ಲಿಷ ಗೃಹಸ್ಥರಿರುವರು. ಅವರು ದೇಶಭಕ್ತರ ಪ್ರಕೃತಿಯ ವಿಷಯಕ್ಕೆ, ದೀನಬಂಧುಗಳು ಲಂಡನಿನಲ್ಲಿದ್ದಾಗ, ಚೌಕಶಿ ಮಾಡಿದರು. ಕೈದುಖಾನೆಯಲ್ಲಿ ಅವರನ್ನಿಟ್ಟಿದ್ದಾರೆಂದರಿತು, ಅವರಿಗೆ ನಾಚಿಕೆಗೇಡಾಯಿತು. ಇಂಥ ಉಚ್ಚ ಶೀಲಯುಕ್ತ ಸತ್ಪುರುಷರನ್ನು ವರ್ಷಾವಧಿ ಸೆರೆಮನೆಯಲ್ಲಿಡುವದು ಬ್ರಿಟಿಶರ ಅಡಳತೆಯ ಸಾಮರ್ಥ್ಯಕ್ಕೆ ಲಾಂಛನಾಸ್ಪದವು. ರಾಷ್ಟ್ರೀಯ ಚಳವಳಿಯನ್ನು ದಬ್ಬಾಳಿಕೆಯಿಂದ, ಅಂದರೆ, ಸಾವಿರಾರು ಮಂದಿಗಳನ್ನು ಸೆರೆಮನೆಯಲ್ಲಿ ಹಾಕಿ, ಮುರಿಯತೊಡಗುವದರಿಂದ, ಹಿಂದೇ ಪರಿಣಾಮವಾಗುತ್ತದೆ. ಪರಕೀಯ ಸತ್ತೆಯ ನೊಗವು ಮತ್ತೂ ಅಸಹ್ಯವಾಗುತ್ತದೆ. ಬೇತಸೆಹೊಂದಿದ ಪ್ರಜೆಗಳು ಪ್ರಬಲರಾಗಿ ಮತ್ತಿಷ್ಟು ಅಜಿಂಕ್ಯರಾಗುತ್ತಾರೆ.

ವಿವಿಧ ಸಂಗ್ರಹ.

ಇವರ್‍ಯಾರು? ತಿರುಕರೋ! ತಿಂದುಂಬುವವರೋ?

ನಾಗಪುರದಲ್ಲಿ ಡಾ। ಹರ್ಡೀಕರ ಮೊದಲಾದ ರಾಷ್ಟ್ರಸೇವಕರನ್ನು ಕ್ರಿ.ಪ್ರೊ. ಕೋ. ೧೦೯ನೇ ಕಲಮಿನನ್ವಯ ತಿರುಕರೆಂದು ಅಟ್ಟ ಹಿಡಿದು, ಶಿಕ್ಷೆ ಕೊಟ್ಟರು. ಇವರು ನಾಗಪುರದಲ್ಲಿ ಪ್ರವೇಶಿಸಲಿಕ್ಕೆ ಮೆಜಿಸ್ಟ್ರೇಟರು ನಂಬಿಕೆ-ದಾಯಕ ಸಮಾಧಾನಕರ ಕಾರಣಗಳನ್ನು ತಿಳಿಸಲಿಲ್ಲೆಂದು ಅವರಿಗೆ ಶಿಕ್ಷೆಯಾಗಿದೆ. ಈ ಬಗ್ಗೆ 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಶ್ರೀ। ರಾಜಗೋಪಾಲಾಚಾರ್ಯರು ಒಂದು ಪುರಾತನ ಕಥೆಯನ್ನು ನಿವೇದಿಸಿರುವರು. ಕಥೆಯು ಶ್ರೀ। ರಾಜಗೋಪಾಲಾಚಾರ್ಯರು ವಕೀಲಿ ನಡಿಸುತ್ತಿದ್ದಾಗ ಸಂಭವಿಸಿತು. ಅದೇನಂದರೆ:– "ಬಹಳ ವರುಷಗಳ ಕೆಳಗೆ, ನಾನು ತಿಪ್ರಿಕೋಬಿ ಮೆಜಿಸ್ಟ್ರೇಟರ ಮುಂದೆ ಸಾಕ್ಷಿದಾರರ ಜಬಾನಿಯನ್ನು ಪಡೆಯುತ್ತಿದ್ದೆನು. ಮೆಜಿಸ್ಟ್ರೇಟಸಾಹೇಬರು ಕೂರುತ್ತಿದ್ದರು. ಈ ಮೆಜಿಸ್ಟ್ರೇಟರು ಈಗ ನಿಧನಹೊಂದಿರುವರು. ಸಾಹೇಬರ 'ಫೆಲ್ಟ್' ಟೊಪ್ಪಿಗೆಯು ಮೇಜಿನ ಮೇಲೆ ವಿರಾಜಮಾನವಾಗಿತ್ತು. ಹಸನಾಗಿ ಕ್ಷೌರ ಮಾಡಿದ ತಲೆಯ ಮೇಲೆ, ಮೇಲಿನ ಬೀಸಣಿಗೆಯ ಮಂದ ಮಾರುತನು ಸಂಚರಿಸುತ್ತಿದ್ದನು. ಥಟ್ಟನೆ, ಕೋರ್ಟಿನಲ್ಲಿ ಗಡಬಡಿಯಾಯಿತು. ಮೆಜಿಸ್ಟ್ರೇಟ ಸಾಹೇಬರು ನೆಟ್ಟಗೆ ಕೂತುಕೊಂಡರು. 'ಫೆಲ್ಟ್' ಟೊಪ್ಪಿಗೆಯನ್ನು ಧರಿಸಿಕೊಂಡರು. ಯಾರು ಬಂದರು? ಎಂದು ನೋಡಲು, ನಾನು ಬಾಗಿಲ ಕಡೆಗೆ ಮೋರೆ ತಿರುವಿದೆನು. ಒಬ್ಬ ಯುರೋಪಿಯನ್‌ನು ಕೈಯಲ್ಲಿ ಹ್ಯಾಟನ್ನು ಹಿಡಿದು ಒಳಸೇರಿದನು. ಮೆಜಿಸ್ಟ್ರೇಟರು ಒಬ್ಬ ಯುರೋಪಿಯನ್ ಗೃಹಸ್ಥರೆಂದು ಭಾವಿಸಿದರು. ಎಲ್ಲ ಯುರೋಪಿಯನ್ನರಿಗೆ, ಅವರು ಅಧಿಕಾರಿಗಳಿರಲಿ, ಇತರರಿರಲಿ, ಮಾನದಿಂದ ನಡಿಸಿಕೊಳ್ಳಲೇಬೇಕು. ಬಂದವರು ಆಫೀಸರರಿರಬಹುದು ಅಥವಾ ಆಫೀಸರರ ಮಿತ್ರರಿರಬಹುದು. ಯಾರೆಂದು ಹ್ಯಾಗೆ ಹೇಳುವದು? ಹೀಗೆ ಆಲೋಚಿಸುತ್ತಿರುವಷ್ಟರಲ್ಲಿ, ಬಂದವರು ಯುರೋಪಿಯನ್ ತಿರುಕರೆಂತಲೂ, ಕೆಲಸ ಹುಡುಕಲು ಅಡ್ಡಾಡುತ್ತಿರುವರೆಂತಲೂ ತಿಳಿಯಿತು. ಕೆಲಸ ಹುಡುಕಲು ಮುಂದಾಗಲು, ರೇಲ್ವೆ ಟಿಕೀಟಿನ ಹಣವನ್ನು ನ್ಯಾಯಮೂರ್ತಿಗಳ ಹತ್ತರ 'ಭಿಕ್ಷಾನ್ ದೇಹಿ ಭವಾನ್' ಮಾಡಲು ಅವನು ಕೋರ್ಟಿಗೆ ಬಂದಿದ್ದರು. ನಾನು, ಹ್ಯಾಕೋರ್ಟಿನ ವಕೀಲನು. ಅಲ್ಲದ್ದೆ. ಸಾಕ್ಷೀಗಾರರಿದ್ದರು. ಪೋಲೀಸರಿದ್ದರು. ಗಂಭೀರ ರೀತಿಯಿಂದ ಖಟ್ಲೆ ಸುನಾವಣಿ ನಡೆದಿತ್ತು. ಹೀಗಿರಲು, ನಮ್ಮೆಲ್ಲರಿಗೆ ಬೊಕ್ಕ ತಲೆಯಿಂದ ಕೈಕಾಲು ಬಾಚಿ ಕೂತುಕೊಳ್ಳುವದು ಅಸಭ್ಯ ವರ್ತನವೆಂದು ಅವರಿಗನಿಸಲಿಲ್ಲ. ಆದರೆ, ಸಾಧಾರಣ ಬೆಳ್ಳಗಿನ ಚರ್ಮವಿರುವ ತಿರುಕರ ದರ್ಶನವಾದಕೂಡಲೇ, ಮೆಜಿಸ್ಟ್ರೇಟ ಸಾಹೇಬರಿಗೆ ಒಮ್ಮೆಲೇ ಸಭ್ಯ ವರ್ತನದ ನೆನವರಿಕೆಯಾಯಿತು. ಕೆಲಸ ಹುಡುಕುವ ಇಂಥ ನಿರಾಧಾರಿ ತಿರುಕರಿಗೆ ಸಹಾಯ ಮಾಡುವ ಅಧಿಕಾರವು ಬ್ರಿಟಿಶ ಹಿಂದುಸ್ಥಾನದೊಳಗಿನ ಮೆಜಿಸ್ಟ್ರೇಟರಿಗೆ ಕೊಡಲ್ಪಟ್ಟಿದೆ. ಅದರಿಂದಲೇ ಈ ಕಥೆಯನ್ನು ನಿವೇದಿಸಿದ್ದೇನೆ. ಮೆಜಿಸ್ಟ್ರೇಟರು ರೇಲ್ವೆ ಟಿಕೀಟುಗಳನ್ನು ಕೊಂಡುಕೊಳ್ಳಲಿಕ್ಕೆ ಇಂಥ ಮಂದಿಗಳಿಗೆ ಸಾರ್ವಜನಿಕ ಕೋಶದೊಳಗಿಂದ ಹಣ ಕೊಡುವರು. ಇವರಿಗೆ ಜೀವನಕ್ಕೆ ಸಾಧನವೇನಿಲ್ಲ. ಆದರೂ, ಇವರಿಗೆ ಸಭ್ಯ ವರ್ತನದ ಕಲಮಿನನ್ವಯ ಜಾಮೀನು ಕೊಳ್ಳುವದು ಹತ್ತಟ್ಟಿಗಿರಲಿ, ರೇಲ್ವೆ ಟಿಕೀಟುಗಳನ್ನು ಕೊಟ್ಟು ದಿಕ್ಕುಸೇರಿಸಲು ಸರಕಾರವು ಸಹಾಯ ಮಾಡುತ್ತದೆ." ಕಾಯಿದೆಯ ಆಟ ನೋಡಿರಿ. ಪ್ರಜೆಗಳ ಅಭಾಗ್ಯವು ಹೇಗೆ ನಡೆವದೆಂದೂ ನೆನಿಸಿರಿ.

* * *

ಕಲಿಯುಗದ ದುರ್ಯೋಧನ.

ದುರ್ಯೋಧನನಿಗೆ ಕಣ್ಣಿಗೆ ಬಿದ್ದವರೆಲ್ಲರೂ ದುರ್ಜನರೆಯವರಾಗಿಯೇ ತೋರುತ್ತಿದ್ದರೆಂದು ಮಹಾಭಾರತದಲ್ಲಿ ಕಥೆಯಿದೆ. ಗೃಹ ಮಂತ್ರಿಗಳಾದ ಸರ್ ಮಾಲ್ಕಮ್ ಹೇಲೀಯವರು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಮಾಡಿದ ಮಹಾತ್ಮ, ಅಲ್ಲೀಬಂಧು ಮೊದಲಾದವರ ನಿಂದೆಯನ್ನು ನೋಡಿ, ದುರ್ಯೋಧನನ ಶಿಷ್ಟಿ ಬೆಳಿಸಿದ ಆವ್ಯಕ್ತಿಯು ಹೇಲೀ ಸಾಹೇಬರೆಂಬಂತೆ ಭಾಸವಾಗುತ್ತದೆ. ಅವರು ಅಂತೆಂದರು:— "ಗಾಂಧಿಯವರ ಬಿಡುಗಡೆಯಿಂದ ಯಾವ ವರ್ಗಕ್ಕೆ ಸಹ ಹಿತವಾಗುವದೇನು? ಔದ್ಯೋಗಿಕ ವರ್ಗಕ್ಕೆ ಹಿತವಿದೆಯೋ? ಗಿರಣಿಗಳನ್ನು ತೆರೆಯಬಾರದೆಂದೂ, ಕೈನೂಲಿನ, ಕೈ ಮಗ್ಗದ ಮೇಲಿನ ಖಾದಿಯನ್ನೇ ಧರಿಸಬೇಕೆಂದೂ ಅವರು ಬೋಧಿಸಲಿಲ್ಲವೇ? ವಕೀಲ ವರ್ಗಕ್ಕೆ ಹಿತವಿದೇನು? ಹಿಂದೂ-ಮಹಮ್ಮದೀಯರ ಕಲಹವು ವಕೀಲರೇ ಎಬ್ಬಿಸುತ್ತಾರೆಂದು ಗಾಂಧಿಯವರೇ ಹೇಳುತ್ತಿದ್ದಿಲ್ಲವೇ? ವೈದ್ಯಕೀ ಧಂದೆಗೆ ಹಿತವಾಗುವದೇನು? ಆಸ್ಪತ್ರಿಗಳು ಪಿಶಾಚಗಳ ಸಾಧನಗಳೆಂದೂ, ವೈದ್ಯ ಶಾಸ್ತ್ರವು ಜಾದು ವಿದ್ಯೆಯ ಸಾರವೆಂದೂ, ಗಾಂಧಿಯವರು ಹೇಳುತ್ತಿದ್ದಿಲ್ಲವೇ? ಪ್ರಚಲಿತ ಸರಕಾರವನ್ನು ಕೆಡವಿಹಾಕಲು ಅಸಹಕಾರವು ಜನ್ಮವನ್ನೆತ್ತಿದೆ. ದೇಶದ ಪ್ರಾಂತದಲ್ಲಿಯೂ, ಇತರ ಕಡೆಯಲ್ಲಿಯೂ ಇವರ ಅಸಹಕಾರಿತೆಯ ಚಳವಳಿಯಿಂದ ದಂಗೆಗಳೆದ್ದು, ಖೂನಿಗಳಾದವು. ಕೊಂಗ್ರೆಸ-ಖಿಲಾಫತ ಸ್ವಯಂಸೇವಕರೇ ಚೌರಿಚೌರಾ ಅನರ್ಥಕ್ಕೆ ಕಾರಣರು. ಗಾಂಧಿಯವರು ಧಾರ್ಮಿಕ ಮರುಳರು. ಅವರ ಬುದ್ಧಿಯು ವಿಕೃತವಾಗಿದೆ. ಆದರೂ, ಇತಿಹಾಸವು ಅವರ ಬೋಧನೆಯಿಂದ ಉಂಟಾದ ಪರಿಣಾಮಗಳ ಬಗ್ಗೆ ನಿಃಸಂಶಯವಾಗಿ ಅವರನ್ನೇ ಜವಾಬದಾರ ಹಿಡಿಯುವದು. ಹಾಗು ಆ ಬೋಧನೆಗನುಸಾರವಾಗಿ, ಭಾವನಾಪ್ರಧಾನ ಅಜ್ಞ ಪ್ರಜೆಗಳೊಳಗೆ ದಂಗೆಯೆಬ್ಬಿಸುವದರಲ್ಲಿ ಪ್ರವೃತ್ತರಾದರೆಂದೂ ನಮೂದಿಸುವದು. ಅವರಲ್ಲಿ ಸದ್ಗುಣಗಳೆಷ್ಟೇ ಇರಲಿ, ಅವರು ಅಧಿಕಾರಲೋಭಿಗಳು. ತಮ್ಮ ಸಾಧ್ಯಸಾಧನೆಗಾಗಿ ಅವರು (ಪಾಪಪುಣ್ಯದ ವಿಚಾರವಿಲ್ಲದೆ) ಸಾಧನಗಳನ್ನು ಕೈಕೊಳ್ಳುವರು. ಹಿಂದುಸ್ಥಾನದ ಶಾಂತತಾಭಂಗ ಮಾಡಲು ಅವರಷ್ಟು ಇನ್ನಾರೂ ದುಡಿದಿಲ್ಲ. ರಾಜಕೀಯ ಪ್ರಗತಿಯನ್ನು ಪ್ರಾಮುಖ್ಯವಾಗಿ ಅಡ್ಡಗಟ್ಟಿದವರೂ ಇವರೇ. ಅವರ ಬಿಡುಗಡೆಯಿಂದ ದೇಶದಲ್ಲಿ ಕಾಯಿದೆ ಹಾಗು ಸುವ್ಯವಸ್ಥೆಗಳ ಪಾಲನೆಗೆ ಎಂದೂ ಸಹಾಯವಾಗಲಾರದು. ಕಾಯಿದೆ, ಸುವ್ಯವಸ್ಥೆಗಳ ರಕ್ಷಣೆಯು ಗಂಡಾಂತರಕ್ಕೀಡಾಗುವದು. ಈ ಬಿಡುಗಡೆಯ ಠರಾವನ್ನು ನೀವು ಮಂಜೂರು ಮಾಡಿದರೆ, ಅಸಹಯೋಗ ಚಳವಳಿಯಿಂದ ನಿವೃತ್ತನಾಗುವೆನೆಂದು ವಚನವನ್ನು ಪಡೆಯದೆ, ಸರಕಾರವು ಅವರನ್ನು ವಿಮೋಚಿಸಬೇಕಾಗುವದೆಂಬದನ್ನು ನೆನಪಿನಲ್ಲಿಡಿರಿ. ಮೌ। ಶೌಕತ-ಮಹಮ್ಮದ ಅಲ್ಲಿ, ಹಜರತ್ ಮೋಹಾನಿ ಮೊದಲಾದ ಇತರ ಕೈದಿಗಳೂ ಇದೇ ಪರಿಯಿಂದ ಹೋದ ಹೋದಲ್ಲಿ ಝುಂಝಾವಾತವನ್ನೇ ಎಬ್ಬಿಸಿ, ಹಾವಳಿ ಹಾಕಿದರು. ಅಫಘಾನ ಯುದ್ಧವಾದ ಕೂಡಲೆ, ಅಮೀರರಿಗೆ ವಿರೋಧವಾಗಿ ಹಿಂದೀಯರು ಎದುರಾಗುವದು ಅಧರ್ಮವೆಂದು ಅವರು ಪ್ರತಿಪಾದಿಸಿದರು. ೧೯೨೦ ನೇ ಇಸವಿಯಲ್ಲಿ ಅಮೀರರಗೂಡ ಬ್ರಿಟಿಶ ಸರಕಾರವು ತಹನಾಮೆ ಮಾಡುತ್ತಿರುವಾಗ ಒಂದು ಪರಿಷತ್ತಾಗಿತ್ತು. ಹಾಜರಿದ್ದ ಶೌಕತ ಅಲ್ಲಿಯವರು ಬ್ರಿಟನ್‌ರಗೂಡ ತಹನಾಮೆ ಮಾಡಬಾರದೆಂದು ಅಮೀರರಿಗೆ ಸೂಚಿಸಿದರು. ಅಲ್ಲೀಬಂಧುಗಳ ಅಪರಾಧವು ಅತಿ ದೊಡ್ಡದು. ಸೈನಿಕರೊಳಗಿನ ಸ್ವಾಮಿನಿಷ್ಠೆಯನ್ನು ಭಂಗಿಸಿದ ಮಹಾ ಅಪರಾಧಕ್ಕಾಗಿ ಅವರಿಗೆ ದಂಡನೆಯಾಗಿದೆ. ಇಂಥವರನ್ನು ವಿಮೋಚಿಸಿದರೆ, ದೇಶದಲ್ಲೆಲ್ಲ ಪುನಃ ಶಾಂತತಾಭಂಗವಾಗಿ, ದಂಗೆಗಳೇಳುವವು." ಮಹಾತ್ಮಾ ಗಾಂಧಿ, ಅಲ್ಲಿಬಂಧುಗಳಂಥ ಪುಣ್ಯ ಪುರುಷರು, ದೇಶೋದ್ಧಾರಕರು ಗೃಹಮಂತ್ರಿಗಳಿಗೆ ಹೇಗೆ ಕಾಣುತ್ತಾರೆಂದು ನೋಡಿರಿ. ಮಹಾತ್ಮರಂಥ ದೇಶೋದ್ಧಾರಕರನ್ನು ದೇಶಘಾತಕರೆಂದು ನಿಂದಿಸುವ ಗೃಹಮಂತ್ರಿಗಳು ಕಲಿಯುಗದ ದುರ್ಯೋಧನರಲ್ಲವೇ?

* * *

ಈ ಚಿತ್ರ ನೋಡಿರಿ.

ಮೇ ತಾ. ೨೮ನೇಗೆ ಲಂಡನಿನೊಳಗಿನ ಕೆಕ್ಸ್ಟನ್ ಹೊಲಿನಲ್ಲಿ ಎಂಗ್ಲೋ-ಇಂಡಿಯನ್ ಟೆಂಪರನ್ಸ ಎಸೋಸಿಯೇಶನ್ ಎಂಬ ಮದ್ಯಪಾನ ನಿಷೇಧ ಸಂಘದ ೩೫ನೇ ವಾರ್ಷಿಕ ಸಭೆಯು ಜರುಗಿತು. ಅಧ್ಯಕ್ಷಸ್ಥಾನವನ್ನು ಲಾರ್ಡ ಕ್ಲ್ವಿಡ್ಡರವರು ಅಲಂಕರಿಸಿದ್ದರು. ಮುಖ್ಯ ಭಾಷಣವನ್ನು ರೆವ್ಹರೆಂಡ ಹರ್ಬರ್ಟ ಎಂಡರಸನ್‌ರೆಂಬ ಪಾದ್ರಿ ಸಾಹೇಬರು ಮಾಡಿದರು. 'ಹಿಂದುಸ್ಥಾನದಲ್ಲಿ ಮದ್ಯಪಾನನಿವೃತ್ತಿಯ ಚಳವಳಿಗೆ ಕಾನೂನಿನ ಪುಷ್ಟಿ ದೊರಕಲು, ಕಾನೂನಿನ ಏರ್ಪಾಟಿಗಿಂತ ಇತರ ರೀತಿಯಿಂದ ಕಾರಣರಾದವರ್ಯಾರು? ಮಹಾತ್ಮಾ ಗಾಂಧಿಯವರ ಚಳವಳಿಯಿಂದ ಮದ್ಯಪಾನ ನಿಷೇಧ ಚಳವಳಿಯು ಜೋರಿನಿಂದ ಮುಂದರಿಯಿತು. ಮಹಾತ್ಮಾ ಗಾಂಧಿಯವರು ನಿರ್ದೇಶಿಸಿದ ರಾಜಕೀಯ ಕಾರ್ಯಕ್ರಮಕ್ಕೆ ನಮ್ಮ ಒಪ್ಪಿಗೆಯಿಲ್ಲ. ಅವರು ಮಾಡಿದ ಕೃತಿ, ಆಡಿದ ಮಾತುಗಳಲ್ಲಿ ಅಕ್ಷರಶಃ ನಾವು ಅನುಮೋದಿಸುವದಿಲ್ಲ. ಆದರೆ ಅವರು ಅಂತಃಕರಣಪೂರ್ವಕ ದಯಾಸಾಗರರಿರುವರೆಂತಲೂ, ಜನ್ಮಭೂಮಿಯನ್ನು ಪ್ರೀತಿಸುತ್ತಾರೆಂತಲೂ, ನಮ್ಮ ಒಪ್ಪಿಗೆಯಿದೆ' ಎಂದು ಎಂಡರಸನ್‌ರವರು ನುಡಿದು, ಮಹಾತ್ಮಾ ಗಾಂಧಿಯವರ ಲೇಖಸಂಗ್ರಹದೊಳಗಿಂದ ಮದ್ಯಪಾನದಿಂದುಂಟಾಗುವ ಕೇಡುಗಳನ್ನು ನಿರೂಪಿಸುವ ಲೇಖದೊಳಗಿಂದ ಅವತರಣವೊಂದನ್ನು ಓದಿ ಹೇಳಿ, ನುಡಿದದ್ದೇನಂದರೆ:— "ಈ ರೀತಿ ಮಾತಾಡುವ ಪುರುಷನು ಈ ಯುಗದ ಪ್ರಬಲ ಮಹಾರಾಜನು. ಅವರಿಗೆ ಸೆರೆಹಾಕಿದರೂ, ಅವರ ಇಷ್ಟ ಕಾರ್ಯವು ವಿಜಯಿಯಾಗಲೇಬೇಕು. ಇಲ್ಲಿ ನೆರೆದ ನಮಗೆಲ್ಲರಿಗೆ ಪ್ರಿಯವಾದ ಮದ್ಯಪಾನ ನಿಷೇಧ ಕಾರ್ಯಕ್ಕಾಗಿ ಅವರು ಬಹುಪರಿಯಿಂದ ದುಡಿದಿರುವರು." ಮಹಾತ್ಮಾ ಗಾಂಧಿಯವರ ಬಗ್ಗೆ ಗೃಹಮಂತ್ರಿಗಳ ಧರ್ಮೋಪಾಧ್ಯಾಯರಾದ ರೆವ್ಹರೆಂಡ ಎಂಡರಸನ್‌ರವರು ಆಡಿದ ನುಡಿಗಳನ್ನು ಅವರು ವಿಮರ್ಶಿಸಲಿ.

ಕಾನಡಾವೃತ್ತ.

ಗುರುವಾರ, ತಾರೀಖು ೨೬ ಮಾಹೆ ಜುಲೈ ೧೯೨೩

ಇಂದಿನ ಈದುಜ್ಜೋಹಾ!

ಪಂಚಾಂಗ ಲೆಖ್ಖದಂತೆ ಮಹಮ್ಮದೀಯ ಬಾಂಧವರ ಈದುಜ್ಜೋಹಾ ಯಾನೆ ಈದ ಮಹೋತ್ಸವವು ನಿನ್ನೆ ಜರಗುವದಿತ್ತು. ಆದರೆ, ಚಂದ್ರದರ್ಶನಕ್ಕೆ ೧ ದಿನ ತಡವಾದ್ದರಿಂದ ಮಹೋತ್ಸವವು ಇಂದು ಜರಗುವದು. ಈದ ಮಹೋತ್ಸವದ ಸಮಯದಲ್ಲಿ ಅಖಿಲ ಭರತಖಂಡದೊಳಗಿನ ಮಾನ್ಯ ಮುಂದಾಳುಗಳು ಚಿಂತಾವಿಷ್ಟರಾಗುವರು. ಅದೇಕೆ? ಈದ ಮಹೋತ್ಸವದಲ್ಲಿ ಮಹಮ್ಮದೀಯ ಬಾಂಧವರು ಧರ್ಮದ ಪವಿತ್ರ ಹೆಸರಿನಲ್ಲಿ ಗೋಹತ್ಯ ಮಾಡುವರು. ಹಿಂದೂ ಸಮಾಜಕ್ಕೆ ಗೋವು ಅತಿ ವಂದನೀಯ ದೇವತೆಯೆಂದರೂ ಅನ್ನಬಹುದು. ಹಿಂದೂ ಸಮಾಜದವರ ಮುಂದೆ ಗೋಹತ್ಯ ಮಾಡಿ, ಅವರನ್ನು ಕೆಣಕಿಸಿ, ಬೇಜವಾಬದಾರ ಮಹಮ್ಮದೀಯರು ಕಲಹವನ್ನೆಬ್ಬಿಸಿ, ಕಟ್ಟಕಡೆಗೆ, ದಂಗೆಗಳನ್ನೆಬ್ಬಿಸುತ್ತಾರೆ. ಇತ್ತಂಡಗಳಲ್ಲಿಯೂ ಪ್ರಾಣಹಾನಿಯೂ ಸಂಭವಿಸುತ್ತದೆ. ಬಟ್ಟೆ ಸುನಾವಣೆ ಮಾಡಲಾದ ಪ್ರಕಾರಗಳು ನಡೆದು, ಬಹು ಮಂದಿಗಳು ಕಷ್ಟಹೊಂದುವರು. ಈದ ಬಂದ ಕೂಡಲೆ, ದೇಶಹಿತಚಿಂತಕ ರಾಷ್ಟ್ರಮುಂದಾಳುಗಳ ಮನೋಪಟವಿಯ ಮೇಲೆ ಉಂಟಾಗುವ ಚಿತ್ರವಿದು. ಒಂದು ಸರತಿ ಈ ವಾರ್ಷಿಕ ಮಹೋತ್ಸವವು ಸುರಕ್ಷಿತ ದಾಟಿದರೆ ಸಾಕು, ಎಂದು ಅವರು ಪರಮಾತ್ಮನ ಹತ್ತರ ಪ್ರಾರ್ಥಿಸುತ್ತಾರೆ. ಹಿಂದೂ-ಮಹಮ್ಮದೀಯರೊಳಗಿನ ವೈಮನಸ್ಸಿನಿಂದ ತಮ್ಮ ಅಂಕೆಯನ್ನು ಸ್ಥಿರಪಡಿಸಲು ಹೊಂಚುಹಾಕಿ ಕೂತುಕೊಂಡ ನೌಕರಶಾಹಿಗೆ ರಾಷ್ಟ್ರದ ಮುಂದಾಳುಗಳನ್ನು ನಿಂದಿಸಲು ಇದೊಂದು ಸುಯೋಗವಾಗುತ್ತದೆ. ಇದೆಲ್ಲ ಹಿಂದಿನ ಕಥೆಯು. ಈ ವರುಷದ, ಅಂದರೆ, ಇಂದಿನ ಈದುಜ್ಜೋಹಾ ಮಹೋತ್ಸವಕ್ಕೆ ವಿಶೇಷ ಮಹತ್ವವು ಪ್ರಾಪ್ತವಾಗಿದೆ. ಅದನ್ನೇ ಇಂದಿಗೆ ನಾವು ನಿವೇದಿಸಬಿಚ್ಛಿಸುವೆವು.

ಲೌಸೇನ ತಹಪರಿಷತ್ತಿನಲ್ಲಿ ೫-೬ ತಿಂಗಳುಗಳ ವರೆಗೆ ರಾಜಕಾರಣಧುರಂಧರ ಇಸ್ಮೆಥ್ ಪಾಶಾರವರು ಹೋರಾಡಿ, ತುರ್ಕಸ್ಥಾನದ ಗೌರವಕ್ಕನುರೂಪವಾದ ಸಂಧಿ ಕರಾರುಗಳನ್ನು ಸೆಳಕೊಂಡಿರುವರು. 'ಮಿತ್ರ'ರು ಕರಾರುಗಳನ್ನು ಕೃತಿಯಲ್ಲಿ ರೂಪಾಂತರಿಸಲು ಹಿಂದೆ ಮುಂದೆ ನೋಡಿದರೂ, ಇಸ್ಮೆಥ ಪಾಶಾರವರ ದೃಢ ನಿಶ್ಚಯದ ಮುಂದೆ ಅವರ ಕಾಟವೇನೂ ಸಾಗದೆ, ಅಖೈರಿಗೆ ಜುಲೈ ತಾ. ೧೭ನೇ ಮಂಗಳವಾರಕ್ಕೆ ಪ್ರತಿನಿಧಿಗಳ ಪರಿಷತ್ತಾಗಿ, ಇತ್ತಂಡಗಳಲ್ಲಿಯೂ ಶರ್ತುಗಳು ನಿರ್ಣಯವಾಗಿ, ಮೊನ್ನೆ ತಾ. ೨೪ನೇ ಮಂಗಳವಾರಕ್ಕೆ ಒಪ್ಪಂದದ ಮೇಲೆ ಸಹಿ ಮಾಡಬೇಕೆಂದು ನಿಶ್ಚಯವಾಗಿದೆ. ಪಾಶಾರವರು ಗಳಿಸಿದ ಶರ್ತುಗಳನ್ನು ಕಳೆದ ಸಂಚಿಕೆಯಲ್ಲಿಯೇ ನಾವು ವಿವರಿಸಿರುವೆವು. ಈ ಕರಾರುನಾಮೆಯಿಂದ ತುರ್ಕಸ್ಥಾನವನ್ನು ತುಂಡು ತುಂಡು ಮಾಡಿ, ನಾಮಶೇಷ ಮಾಡಬೇಕೆಂಬ 'ಮಿತ್ರ'ರ ಉದ್ದೇಶವು ತೀರ ಬಯಲಾಯಿತು. ಘಾಝಿ ಮುಸ್ತಫಾ ಕೆಮಾಲ ಪಾಶಾರವರ ಖಡ್ಗಬಲದಿಂದ, ಮಹಾತ್ಮಾ ಗಾಂಧಿ, ಮೌಲಾನಾ ಶೌಕತ-ಮಹಮ್ಮದ ಅಲ್ಲೀ ಮೊದಲಾದ ಹಿಂದೂ-ಮಹಮ್ಮದೀಯರ ದ್ರವ್ಯಸಹಾಯದಿಂದ, ಚಳವಳಿಯಿಂದ, ಇಸ್ಮೆಥ ಪಾಶಾರವರ ದೃಢ ನಿಶ್ಚಯದ ಹೋರಾಟದಿಂದ ತುರ್ಕಸ್ಥಾನವು ಯುರೋಪಖಂಡದಲ್ಲಿ ರಾಷ್ಟ್ರವೆಂದು ಅಖಿಲ 'ಮಿತ್ರ'ರೂ ಒಪ್ಪಬೇಕಾಯಿತು. ರಾಷ್ಟ್ರಕ್ಕನುಗುಣವಾಗಿಯೇ ಕರಾರನಾಮೆಯನ್ನು ಏರ್ಪಡಿಸಬೇಕಾಯಿತು. ಲೌಸೇನದೊಳಗಿನ ದ್ವಿತೀಯ ತಹಪರಿಷತ್ತಿನಲ್ಲಿ ಘಾಝಿ ಮುಸ್ತಫಾ ಕೆಮಾಲ ಪಾಶಾ ಹಾಗು ಹಿಂದೀಯರ ಬೆಂಬಲದಿಂದ ಇಸ್ಮೆಥ ಪಾಶಾರವರು ತುರ್ಕಸ್ಥಾನದ ರಾಷ್ಟ್ರವನ್ನು ಬದುಕಿಸಿಕೊಂಡರು. ಇದೊಂದು ತುರ್ಕಸ್ಥಾನದ ವಿಜಯವು ಖಿಲಾಫತ ಬೇಡಿಕೆಯನ್ನು ರಾಷ್ಟ್ರೀಯ ಬೇಡಿಕೆಗಳ ಮಾಲಿಕೆಯಲ್ಲಿ ಸೇರಿಸಿದ ಹಿಂದೀಯರ ವಿಜಯವು ಸಹ ಇದೇ.

ಡಾ| ಅನ್ಸಾರಿಪ್ರಭೃತಿ ಭಾರತ ಮಾತೆಯ ವರಪುತ್ರರು ತುರ್ಕಸ್ಥಾನದ ವಿಜಯವನ್ನು ಈದ ಹಬ್ಬದಲ್ಲಿ ವಿಶೇಷ ವಿಜೃಂಭಣೆಯಿಂದ, ಉತ್ಸಾಹದಿಂದ ನೆರವೇರಿಸಬೇಕೆಂದು ಅಖಿಲ ಭಾರತೀಯರಿಗೆ ಆಜ್ಞಾಪತ್ರವನ್ನು ಹೊರಡಿಸಿರುವರು. ಲೌಸೇನದ ತಹನಾಮೆಯಿಂದ ಮಹಮ್ಮದೀಯರ ಖಿಲಾಫತ ಬೇಡಿಕೆಯು ಅರ್ಧದಷ್ಟು ಸಿದ್ಧಿಗೈದಿತು. ಇಷ್ಟು ಕಾರ್ಯಸಿದ್ಧಿಗೆ, ತುರ್ಕರಂತೆ ಹಿಂದೀಯರೂ ಸಹಾಯವನ್ನಿತ್ತಿರುವರು. ರಾಷ್ಟ್ರೀಯ ಕಾರ್ಯಸಿದ್ಧಿಯ ಇದೊಂದು ಶುಭ ಸೂಚನೆಯೆನ್ನಲು ಅಡ್ಡಿಯೇನಿಲ್ಲ. ರಾಷ್ಟ್ರೀಯ ಕಾರ್ಯಸಿದ್ಧಿಯಾದ ಬಗ್ಗೆ ಅಖಿಲ ಪ್ರಜೆಗಳೂ ತಹನಾಮೆಯಾದ ಸಂದರ್ಭದಲ್ಲಿ ಈ ಮಹೋತ್ಸವವನ್ನು ಆನಂದದಿಂದ ಪಾಲಿಸತಕ್ಕದ್ದು. ಯಾಕಂದರೆ, ಇದೊಂದು ಅಖಿಲ ಪ್ರಜೆಗಳ ರಾಷ್ಟ್ರೋದ್ಧಾರಕ ಯತ್ನಗಳ ಫಲವಲ್ಲವೇ!

ಈ ಸಮಯದಲ್ಲಿ ಹಿಂದೂ, ಮುಸಲ್ಮಾನ, ಪಾರ್ಸಿ, ಕ್ರಿಶ್ಚನ್‌ರು ನೆರೆದು, ತುರ್ಕಸ್ಥಾನದ ಒಪ್ಪಂದದ ಮಹೋತ್ಸವವನ್ನು ಸಂತೋಷದಿಂದ ಸಾದರಪಡಿಸಬೇಕು. ಖಿಲಾಫತ ಸಂರಕ್ಷಣಕ್ಕಾಗಿ ಮಹಮ್ಮದೀಯರೆಲ್ಲರೂ ಭಕ್ತಿಯಿಂದ, ಏಕಚಿತ್ತದಿಂದ ಇದಗಾದಲ್ಲಿ ಪ್ರಾರ್ಥಿಸಬೇಕು. ಮಹಮ್ಮದೀಯೇತರರು ತಮ್ಮ ಬಾಂಧವರ ಆನಂದದಲ್ಲಿ ತಮ್ಮ ಗೌರವಕ್ಕನುರೂಪವಾಗಿ ಪಾಲುಗಾರರಾಗಬೇಕು. ಮೂರನೇ ದಿನ ಅಖಿಲ ಸಮಾಜದವರು ರಾಷ್ಟ್ರಧ್ವಜ-ಖಿಲಾಫತ ಧ್ವಜಯುಕ್ತ ಮೆರವಣಿಗೆಯನ್ನು ಹೊರಡಿಸಿ, ಪ್ರಚಂಡ ಜಾಹೀರ ಸಭೆಗಳನ್ನು ನೆರಿಸಿ, ಖಲೀಫಾ ಹಾಗು ಘಾಝಿ ಮುಸ್ತಫಾ ಕೆಮಾಲ ಪಾಶಾರವರ ಅಭಿನಂದನ, ಜಝೀರತ-ಅಲ್-ಅರಾಬ ಪ್ರದೇಶದ ಪೂರ್ಣ ಸ್ವಾತಂತ್ರ್ಯ, ಸ್ವರಾಜ್ಯಸಾಧನೆಗಾಗಿ ಹಿಂದೂ, ಮುಸಲ್ಮಾನ, ಶೀಖ, ಪಾರ್ಸೀ, ಕ್ರಿಶ್ಚನ್‌ರೆಲ್ಲರೂ ಐಕ್ಯದಿಂದ ನಡಕೊಳ್ಳುವ ನಿರ್ಧಾರಪ್ರದರ್ಶನ, ಹೀಗೆ ೩ ಠರಾವುಗಳನ್ನು ಮಂಜೂರು ಮಾಡಬೇಕು. ರಾತ್ರೆ ದೀಪೋತ್ಸವ ಮಾಡತಕ್ಕದ್ದು. ಹಾಗು ಈದ ಮಹೋತ್ಸವದ ದಿನತ್ರಯದಲ್ಲಿ ಖಿಲಾಫತ ಫಂಡನ್ನು ಕೂಡಿಸಬೇಕು.

ಇಂದಿನ ಈದ ಮಹೋತ್ಸವದಲ್ಲಿ ಭರತಖಂಡದ ಸಂದಿಗೊಂದಿಗಳಲ್ಲಿ ಅಖಿಲ ಪ್ರಜೆಗಳು ಆನಂದದಿಂದಿರುವರು. ವಿಶೇಷವಾಗಿ, ಹಿಂದೂ-ಮಹಮ್ಮದೀಯರು ಬಂಧುಪ್ರೇಮದಿಂದ ಈ ಮಹೋತ್ಸವವನ್ನು ಸಾದರಪಡಿಸುವರು. ಹಿಂದೂ-ಮಹಮ್ಮದೀಯರ ಜಗಳಗಂಟತನವು ಇಂದಿಗೆ ಪೂರ್ಣವಾಗಿ ಲುಪ್ತವಾಯಿತು. ಬಾಂಧವರ ಸಹಾಯದಿಂದ ಧರ್ಮರಕ್ಷಣೆಯನ್ನು ಸಿದ್ಧಿಗೈದ ಮಹಮ್ಮದೀಯರು, ಇನ್ನು ಮುಂದೆ ಹಿಂದೂ ಬಾಂಧವರು ಪವಿತ್ರವೆಂದೆಣಿಸುವ ಬಡ ಗೋವನ್ನು ಕುರ್ಬಾನಿಗಾಗಿ ಎಂದು ಸಂಹರಿಸಿ, ಅವರ ಮನಸ್ಸನ್ನು ನೊಂದಿಸಲಿಕ್ಕಿಲ್ಲ. ಕುರ್ಬಾನಿ ಎಂದರೆ, ಆತ್ಮತ್ಯಾಗದ ಚಿನ್ಹವೆಂದು ಹಕೀಮ ಅಜಮುಲಖಾನರವರು ಅನ್ನುತ್ತಾರೆ. ಕುರ್ಬಾನಿ, ಈ ಶಬ್ದದಲ್ಲಿ ಉಚ್ಚ, ಉಚ್ಚ ಕಲ್ಪನೆಗಳಿವೆ. ತಾಳ್ಮೆಯು, ಸಾವಧಾನ ಚಿತ್ತವು, ಸಾಂಸಾರಿಕ ಬಂಧಮುಕ್ತತೆಯು, ಇಸ್ಲಾಮ ಧರ್ಮದ ಸಂಸ್ಥಾಪಕರಂತೆ ಭಗವದಿಚ್ಛೆಗೆ ಶರಣು ಹೋಗುವದು, ಇವೆಲ್ಲ ಕುರ್ಬಾನಿಯ ಲಕ್ಷಣಗಳು. ಆತ್ಮಶುದ್ಧಿಯ ಕಲ್ಪನೆಯನ್ನು ಪ್ರತಿವರುಷ ಪುನರುಜ್ಜೀವನ ಮಾಡಿ, ಮಾನವನನ್ನು ಉದ್ಧರಿಸುವದು ಕುರ್ಬಾನಿಯ ಅದ್ಯ ಹೇತುವು. ಅದಕ್ಕೆ ಗೋಹತ್ಯ ಮಾಡುವ ಅಗತ್ಯವಿಲ್ಲ. ಹಕೀಮಜಿಯವರು ಧರ್ಮಶಾಸ್ತ್ರದಂತೆ ಮಾಡಿದ ನಿರೂಪಣೆಯನ್ನು ಅಖಿಲ ಮಹಮ್ಮದೀಯರೂ ಗ್ರಹಿಸಿ, ಈ ಧಾರ್ಮಿಕ ಮಹೋತ್ಸವದಲ್ಲಿ ಗೋಹತ್ಯಕ್ಕೆ ಪ್ರವೃತ್ತರಾಗಲಾರರೆಂದು ನಮಗೆ ಪೂರ್ಣ ಖಾತ್ರಿಯಿದೆ.

ಮುಂದಾಳುಗಳು ನುಡಿಯುವಂತೆ, ಜನ್ಮ
... ಮಹನ್ನ

ದಾಖಲು ಮಾಡಿ, ಕಾಯಿದೆಯಂತೆ ಶಾಲೆಗೆ ಕಳಿಸ
ದ ಪಾಲಕನನ್ನ ದಂಡಿಸಬಹುದು. ಈ ಕಾನೂನಿ

ಸ್ಟೇಟ ಮಿ॥ ನಾಗರಕಟ್ಟೆಯವರ ನ್ಯಾಯಾಸನದ ಮುಂದೆ ಎಳತಂದು, ಕಳವಿನ ಆರೋಪದ ಮೇಲೆ ತನಿಖಿ ನಡಿಸಲು ಬಾಹ್ಯ ಕಾರಣಕ್ಕಿಂತ ಏನಾದರೂ ...ಕೆಂದು ತೋರುತ್ತದೆ. ಮಿ॥ ಶಂ ...ಮವರ ತೀರ್ಪು ನೋಡಿಯಂತು ... ಅಧಿಕಾರಿಗಳು ಅತಿಕ್ರಮ ಮಾ ...ಮುಗಳ ಬಗ್ಗೆ ಮೂಲಕ ಜವಾಬ ...ಕಾರಿಗಳೇ. ನ್ಯಾಯಮೂರ್ತಿಗಳು ...ಒಂದು ನಿಯಮದ ಉಲ್ಲಂಘನವೆಂ ...ವಿಸಿವರೂ, ಅದಕ್ಕಾಗಿ ೫೦ ರೂ ...ಡ ವಿಧಿಸಿ, ಮುದಾರು ೪-೬ ಸಾ ...ಟಲೆ ಬಾಳುವ ೬೧ ನಾಟುಗಳನ್ನು ... ಭಯಂಕರವೆಂದು ಯಾರೂ ... ...ವಬಹಾದ್ದೂರ ಕೊಯಿಮತ್ತೂರರು ... ತಿದ್ದಿದ್ದರ ಮೇಲಿಂದ ಮಿ॥ ನಾಗರಕ ...ಯನಿಷ್ಠುರತೆಯು ಸ್ಪಷ್ಟವಾಗಿ ತೂ ... ಜಂಗಲಖಾತೆಯು ನಿರಂಕುಶ ರೀತಿ ...ವಳಿ ಹಾಕದಂತೆ ಮೆಜಿಸ್ಟ್ರೇಟರು ...ರಕ್ಷಿಸುವದು ಅವರ ಕರ್ತವ್ಯವು. ಮಿ॥ ...ವರ್ತಂತೆ ಎಲ್ಲ ಮೆಜಿಸ್ಟ್ರೇಟರು ನ್ಯಾ ...ದರೆ ನಮ್ಮಲ್ಲಿಯ ಪ್ರಜೆಗಳು ಗಂ ...ಟ್ಟಿ ದೇಶಾಂತರಕ್ಕೆ ಹೋಗದೇಕಾಗು ... ಮೂರ್ತಿ ಶಹಾ-ಕೋಯಾಜಿರವರು ...ಗೆ ೧ ರೂಪಾಯಿಯ ದಂಡ ವಿಧಿಸಿ, ...ನೆಯನ್ನು ಎಲ್ಲ ಮೆಜಿಸ್ಟ್ರೇಟರಿಗೆ ಕೊಟ್ಟ ...ದನ್ನು ನಮ್ಮ ಜಿಲ್ಹೆಯೊಳಗಿನ ಮೆಜಿಸ್ಟ್ರೇ ...ಲಿಸುವರೆಂದು ಕೋರಿಕೆ.

ಪುರವಣಿ— ಕಾನಡಾವೃತ್ತ- ತಾ. ೬ ನೆಯ ಸಪ್ಟಂಬರ ೧೯೨೩ ನೇ ಇಸವಿ.

ಕುಮಟಾ ಗೌಡ ಸಾರಸ್ವತ ಬ್ರಹ್ಮವೃಂದದ ಹತ್ತುಸಮಸ್ಥರ ಸನ್ನಿಧಾನಕ್ಕೆ—

ರುಧಿರೋದ್ಗಾರಿ ಸಂವತ್ಸರದ ಶ್ರಾವಣ ಶುದ್ಧ ೧೪ ಯ ಶನಿವಾರ ತಾರೀಖು ೨೫–೮–೨೩ ನೇ ದಿವಸ ಹೆರವಟ್ಟಾ ಅನಂತ ವಿಠೋಬ ಪ್ರಭು ಆದ ನಾನು ಇದರ ಮೂಲಕ ತಿಳಿಯಪಡಿಸುವದೇನಂದರೆ —

ಇದೇ ಶ್ರಾವಣ ಶುದ್ಧ ೧೨ ಯ ಗುರುವಾರ ದಿವಸ ರಾತ್ರೆ ೯ ಘಂಟೆಯ ಸಮಯಕ್ಕೆ ಇಲ್ಲಿಯ ರಘು ಯಾನೆ ಶ್ರೀನಿವಾಸ ಜನಾರ್ಧನ ಶಾನಭಾಗರ ಬಾಜಾರ ಅಂಗಡಿಯ ಮಾಳಿಗೆಯ ಮೇಲೆ ಈ ಕೆಳಗೆ ಕಾಣಿಸಿದ ಗೃಹಸ್ಥರು ಬಹಿಷ್ಕಾರ ಮಾಡಿದ ಅಚ್ಯುತ ತಿಮ್ಮಪ್ಪ ಭಟ್ಟ ಹೆರವಟ್ಟಾ ಇವರ ಕಡೆಯಿಂದ ಬಡಿಸಿ ಕೊಂಡು, ಊಟಾ ಮಾಡಿರುತ್ತಾರೆ. ಆದ್ದರಿಂದ, ಇಂಥಾ ಕೆಲಸ ನಮ್ಮ ಧರ್ಮಕ್ಕೆ ವಿರುದ್ಧ ಆದ್ದರಿಂದ, ಇವರ ಯೋಗ್ಯ ವಿಚಾರಣೆ ಆಗಿ ಸದ್ರೀಯವರಿಗೆ ಧರ್ಮದ ಆಜ್ಞೆಯಂತೆ ಶಾಸನ ಆಗಬೇಕಾಗಿ ಅಪೇಕ್ಷಿಸುತ್ತೇನೆ.

೧. ಕಾಗಾಲ ಗೋಪಾಳ ಅನಂತ ಪೈ ಹೆರವಟ್ಟಾ.
೨. ಕಾಗಾಲ ಪುರುಷೋತ್ತಮ ಅನಂತ ಪೈ. „
೩. ಕಾಗಾಲ ಮಾಧವ ವಾಮನ ಪೈ. „
೪. ಯೇಶ್ವಂತ ನಾಗಪ್ಪ ಶಾನಭಾಗ ಚಿತ್ರಗಿ.
೫. ಗೋವಿಂದ ಶೇಷಗಿರಿ ಶಾನಭಾಗ ಹರ್ಕಮಕ್ಕಿ.
೬. ನಾಗೇಶ ದಾಸ ಶಾನಭಾಗ ಕುಮಟಾ.
೭. ನರಸಿಂಹ ನಾಗಪ್ಪ ಶಾನಭಾಗ ಗೋಳಿ, ಹೆರವಟ್ಟಾ.
೮. ನಾರಾಯಣ ಕೇಶವ ನಾಯ್ಕ ಹೆರವಟ್ಟಾ.
೯. ಗೋಪಾಳ ಕೃಷ್ಣ ಶಾನಭಾಗ. „
೧೦. ತಿಮ್ಮಪ್ಪಾ ದಾಸ ಶಾನಭಾಗ ಗೋಳಿ ಹೆರವಟ್ಟಾ
೧೧. ರಘು ಯಾನೆ ಶ್ರೀನಿವಾಸ ಜನಾರ್ಧನ ಶಾನಭಾಗ ಹೆರವಟ್ಟಾ.
೧೨. ಗಣಪತಿ ರಘು ಶಾನಭಾಗ ಹೆರವಟ್ಟಾ.
೧೩. ದಾಮೋಧರ ಕೃಷ್ಣ ಶಾನಭಾಗ, ಗುಡೇಅಂಗಡಿ ಹೆರವಟ್ಟಾ
೧೪. ಸುಬ್ರಾಯ ತಮ್ಮ ಪ್ರಭು ಹೆರವಟ್ಟಾ.
೧೫. ಕೃಷ್ಣಾ ಪುಂಡ್ಲಿಕ ನಾಯ್ಕ. „
೧೬. ರಾಮಾ ಕೇಶವ ನಾಯ್ಕ. „
೧೭. ಗೋಪಾಳ ಶಿವಪ್ಪ ನಾಯ್ಕ ಕುಮಟಾ.
೧೮. ಅಚ್ಯುತ ತಿಮ್ಮಪ್ಪಾ ಭಟ್ಟ ಹೆರವಟ್ಟಾ

ಈ ಬಗ್ಗೆ ಸಾಕ್ಷಿಗಳು.

೧ ಅನಂತ ಸುಬ್ರಾಯ ಶಾನಭಾಗ ಕಾಸರಕೋಡ
೨. ಸುಂಕೇರಿ ಗೋವಿಂದ ನಾಗೇಶ ನಾಯ್ಕ
೩ ಕಾಗಾಲ ಶಂಕರ ನಾರಾಯಣ ಪೈ ಕುಮಟಾ.

ಸದ್ರೀ ಆರೋಪಿರು ಕಬೂಲ ಆಗದೇ ಇದ್ದ ಪಕ್ಷಕ್ಕೆ, ಇದರ ಹೊರ್ತು ಇನ್ನೂ ಸಾಕ್ಷಿ ಪುರಾವೆಗಳುಂಟು. ಬೇಕಾದರೆ ಹಾಜರಪಡಿಸಲಿಕ್ಕೆ ನನ್ನ ಹರಕತ್ತು ಇರುವದಿಲ್ಲ.

ಅನಂತ ವಿಠೋಬ ಪ್ರಭು

ಸದ್ರೀ ಮೇಲಿನ ಅರ್ಜಿಯನ್ನು ಟಪಾಲಿನಿಂದಾ ಮೇಲೆ ಬರೆದ ಪತ್ತೆಗೆ ತಾ. ೨೭-೮-೨೩ ನೇಗೆ ಕಳಿಸಿತ್ತು. 'ಮಾಲೀಕರು ಇನಕಾರ ಮಾಡಿರುತ್ತಾರೆ' ಎಂತಾ ಶರಾ ಹೊಡೆದು, ತಾ. ೧-೯-೨೩ನೇ ದಿವಸ ನನಗೆ ವಾಪಾಸ ಬಂದಿರುತ್ತದೆ. ಈ ಅರ್ಜಿಯ ವಿಚಾರ ಆಗದೇ ಇದ್ದದರಿಂದ, ಬಹಿಷ್ಕೃತ ಅಚ್ಯುತ ಭಟ್ಟರ ಪಂಕ್ತೀ ಭೋಜನ ಮಾಡಿದ್ದಕ್ಕೆ ಕುಮಟೆಯ ಹತ್ತುಸಮಸ್ಥರು ಬಹಿಷ್ಕರಿಸಿದ ೧ ಗೋಪಾಳ ಕೃಷ್ಣ ಶಾನಭಾಗ, ೨ ಮಾಧವ ವಾಮನ ಪೈ ಇವರಿಗೆ ಸಂಪರ್ಕ ಮಾಡಿಕೊಂಡು, ಈ ಕೆಳಗೆ ಕಾಣಿಸಿದ ಗೃಹಸ್ಥರು ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಉಪಾಕರ್ಮ ಹೋಮ ಮಾಡಿದರು. ಮಿತಿ ಇದೇ ಶ್ರಾವಣ ಶುದ್ಧ ೧೪ ಯ ಶನಿವಾರ ತಾ. ೨೫-೮-೨೩.

೧. ವೈಕುಂಟ ಅನಂತ ಭಟ್ಟ ಕುಮಟಾ.
೨. ಅನಂತ ವೈಕುಂಟ ಭಟ್ಟ. „
೩. ಶ್ರೀನಿವಾಸ ವೈಕುಂಟ ಭಟ್ಟ. „
೪ ಹರಿ ಯಾನೆ ಕೇಶವ ವಾಸ್ತೇವ ಭಟ್ಟ ಕುಮಟಾ
೫. ಲಕ್ಷುಮಣ ಗೋವಿಂದ ಭಟ್ಟ. „

...ನಮ್ಮಲ್ಲಿ ಕರ್ನಾಟಕ ಪ್ರಾಂತಿಕ ಪರಿಷತ್ತು ...ವಿಚಾರ ನಡೆದದೆ. ಪರಿಷತ್ತುಗಳ ಉದ ...ಟು ಈಗ ವಿಶೇಷವಿದೆ. ಪ್ರಾಂತಿಕ ಪರಿಷ ...ಯಿಸುವ ವಿಚಾರವನ್ನು ನಾವು ಈ ಮೊ ...ಗತೀಕರಿಸಿರುವೆವು. ಪ್ರತಿಷ್ಠಿತ ಹಿತಚಿಂತಕ ...ನಮ್ಮಲ್ಲಿ ಜಿಲ್ಹಾ ಪರಿಷತ್ತನ್ನು ನೆರೆಯಿಸ ...ಸೂಚಿಸುತ್ತಾರೆ. ಕೈ॥ ವಾ॥ ಸರ್ ನಾರಾ ...ವ ಚಂದಾವರಕರರ ನೇತೃತ್ವದಲ್ಲಿ ೧೯೧೯ ...ಯಲ್ಲಿ ಜರುಗಿದ ಕಾರವಾರ ಜಿಲ್ಹಾ ಪರಿ ...ಧಿವೇಶನವು ಪ್ರಥಮವು. ಶಿರ್ಸಿಯ ಮುಖಂ ...ತೀಯ ಪರಿಷತ್ತನ್ನು ನೆರೆಯಿಸುವ ವಚನವ ...ಕಾಂತರಗಳಿಂದ ಪಾಲಿಸಲು ಶಕ್ತರಾಗಲಿಲ್ಲ. ...ದು ನಮ್ಮ ದುರ್ದೈವವು. ಈಗ ಜಂಗಲಖಾ ...ಷ್ಟ ಪರಿಹಾರಗಳ ಬಗ್ಗೆ ಸರಕಾರವು ಪ್ರಕಟ ...ಪ್ರಣ ಲೇಖವು ಪ್ರಜೆಗಳಿಗೇನು ಸಂತೋಷ ...ಲ್ಲ. ನೌಕರಶಾಹಿಯು ಕಾನಡಾ ಜಿಲ್ಹಾ ...ಗಳ ಜಂಗಲ ದೂರು, ತಮ್ಮ ಮುದ್ರಣ ಲೇಖ ...ಯಿಂದ ನಿವಾರಣೆ ಹೊಂದಿತೆಂದು ಡಂಗುರ ...ವದು. ಇಂಥ ಪ್ರಸಕ್ತಿಯಲ್ಲಿ ನಮ್ಮ ಜಂಗಲ ...ಗಳ ಬಗ್ಗೆ ಸರಕಾರವು ಕೈಕೊಂಡ ಯೋಜನೆ ...ಮುಕ್ತಾಯುಕ್ತತೆಯ ಬಗ್ಗೆ ವಿಚಾರ ಮಾಡು ...ಸಹಜವಾಗ್ಯವು. ಜಂಗಲ ಪ್ರಶ್ನೆಯು ನಮ್ಮ ...ತಿಕ ಪ್ರಶ್ನೆಯಾಗಿರುವದರಿಂದ, ಆ ಬಗ್ಗೆ ...ರೂ ಒಕ್ಕಟ್ಟಾಗಿ ನೆರೆದು, ನಮ್ಮ ವಿಚಾರಗಳ ...ಕೇಂದ್ರೀಕರಿಸುವದು ಯೋಗ್ಯವೆಂದು ನಮಗೂ ತೋರುತ್ತದೆ. ಮುಂಬಯಿಯೊಳಗಿನ ಕಾನಡಾ ಜಿಲ್ಹೆಯ ನಾಗರಿಕರ ಸಂಘದೊಳಗಿನ ಮುಖಂಡರು ತಮ್ಮ ಜನ್ಮಭೂಮಿಯ ಉದ್ಧಾರದ ಪವಿತ್ರ ಕಾರ್ಯ

ಮಾಡಲ್ಪಟ್ಟಿದೆ. ಈ ಕಾಯಿದೆಯಂತೆ ...
ಕ್ಷೇತ್ರದೊಳಗಿನ ವಿದ್ಯಾರ್ಥಿಪ್ರಾಯದ ಹುಡುಗ-ಹುಡುಗಿಯರೆಲ್ಲರೂ ಸರಕಾರದಿಂದ ಮನ್ನಣೆ ಹೊಂದಿದ ಶಾಲೆಯಲ್ಲಿರಬೇಕು. ಇಲ್ಲದಿದ್ದರೆ, ಸ್ಕೂಲ ಕಮಿಟಿಯವರು ಮೆಜಿಸ್ಟ್ರೇಟರ ಮುಂದೆ ಫಿರ್ಯಾದು

ದಾಗಗೊಟ್ಟ ಬಳಿಕ, ಜಂಗಲ ಖಾತೆಯು ಮೃತಿ ಹೊಂದಿತ್ತೆಂದು ಯಾರಾದರೂ ತರ್ಕಿಸುವದು ಸಹಜವು. ಜಂಗಲ ಖಾತೆಯ ಅನುಭವವಿದ್ದ ನಮಗೆಲ್ಲರಿಗೆ ಕೇಸಪ್ಪನವರನ್ನು ೪ ವರುಷಗಳ ಮೇಲೆ ಮೆಚಿ

ಕಾನಡಾವೃತ್ತ.

ಗುರುವಾರ, ತಾರೀಖು ೨೬ ನೆಯ ಜುಲೈ

ಇಂದಿನ ಈದುರ್ಝೋ

ಪಂಚಾಂಗ ಲೆಖ್ಖದಂತೆ ಮಹ ಬಾಂಧವರ ಈದುರ್ಝೋಹಾ ಯ ಮಹೋತ್ಸವವು ನಿನ್ನೆ ಜರಗುವದಿತ್ತು ಚಂದ್ರದರ್ಶನಕ್ಕೆ ೧ ದಿನ ತಡವಾ ಮಹೋತ್ಸವವು ಇಂದು ಜರಗುವದು ಮಹೋತ್ಸವದ ಯದಲ್ಲಿ ಅಖಿ ಖಂಡದೊಳಗಿನ ಮಾನ್ಯ ಮುಂದ ಚಿಂತಾವಿಷ್ಟರಾಗುವರು. ಅದೇಕೆ? ಮಹೋತ್ಸವದಲ್ಲಿ ಮಹಮ್ಮದೀಯ ವರು ಧರ್ಮದ ಪವಿತ್ರ ಹೆಸರಿನಲ್ಲಿ ಮಾಡುವರು. ಹಿಂದೂ ಸಮಾಜಕ್ಕೆ ಅತಿ ವಂದನೀಯ ದೇವತೆಯೆಂದರ ಹುದು. ಹಿಂದೂ ಸಮಾಜದವರ ಗೋಹತ್ಯ ಮಾಡಿ, ಅವರನ್ನು ಕೆ ಜವಾಬದಾರ ಮಹಮ್ಮದೀಯರು ಕ ಪ್ಪಿಸಿ, ಕಟ್ಟಕಡೆಗೆ, ದಂಗೆಗಳನ್ನೆಬ್ಬಿ ಇತ್ತಂಡಗಳಲ್ಲಿಯೂ ಪ್ರಾಣಹಾನಿ ಭವಿಸುತ್ತದೆ. ಬಿಟ್ಟಿ ಸುನಾವಣಿ ವ ಪ್ರಕಾರಗಳು ನಡೆದು, ಬಹು ಪ ಕಷ್ಟಹೊಂದುವರು. ಈದ ಎಂದ ದೇಶಹಿತಚಿಂತಕ ರಾಷ್ಟ್ರಮುಂದಾಳ ನೋಭೂಮಿಯ ಮೇಲೆ ಉ ಚಿತ್ರವಿದು. ಒಂದು ಸರತಿ ಈ ಮ ಹೋತ್ಸವವು ಸುರಕ್ಷಿತ ದಾಟಿದರೆ ಎಂದು ಅವರು ಪರಮಾತ್ಮನ ಹತ್ತ ಸುತ್ತಾರೆ. ಹಿಂದೂ-ಮಹಮ್ಮದೀಯ ವೈಮನಸ್ಸಿನಿಂದ ತಮ್ಮ ಅಂಕೆಯ ಪಡಿಸಲು ಹೊಂಚು ಹಾಕಿ ಕೂತುಕೆ. ಕರಕಾಹಿಗೆ ರಾಷ್ಟ್ರದ ಮುಂದಾ ನಿಂದಿಸಲು ಇದೊಂದು ಸುಯೋಗವ ಇದೆಲ್ಲ ಹಿಂದಿನ ಕಥೆಯು. ಈ ಅಂದರೆ, ಇಂದಿನ ಈದುರ್ಝೋಹಾ ತ್ಸವಕ್ಕೆ ವಿಶೇಷ ಮಹತ್ವವು ಪ್ರಾ ಅದನ್ನೇ ಇಂದಿಗೆ ನಾವು ನಿವೇದಿಸಲಿ

ಲಾಸೇನ ತಹಪರಿಷತ್ತಿನಲ್ಲಿ ೫-೬ ತಿಂಗ ಳುಗಳ ವರೆಗೆ ರಾಜಕಾರಣಧುರಂಧರ ಇಸ್ಮೆ ಥ್ ಪಾಶಾರವರು ಹೋರಾಡಿ, ತುರ್ಕಸ್ಥಾನದ ಗೌರವಕ್ಕನುರೂಪವಾದ ಸಂಧಿ ಕರಾರುಗ ಳನ್ನು ಸೆಳಕೊಂಡಿರುವರು. 'ಮಿತ್ರ'ರು ಕರಾ ರುಗಳನ್ನು ಕೃತಿಯಲ್ಲಿ ರೂಪಾಂತರಿಸಲು

ಯಾದ ಸಂದರ್ಭದಲ್ಲಿ ಈ ಮಹೋತ್ಸವನ ನ್ನು ಆನಂದದಿಂದ ಪಾಲಿಸತಕ್ಕದ್ದು. ಯಾಕಂ ದರೆ, ಇದೊಂದು ಅಖಿಲ ಪ್ರಜೆಗಳ ರಾಷ್ಟ್ರೋ ದ್ಧಾರಕ ಯತ್ನಗಳ ಫಲವಲ್ಲವೇ!

ಈ ಸಮಯದಲ್ಲಿ ಹಿಂದೂ, ಮುಸಲ್ಮಾನ,

ತ್ಯವಿಲ್ಲ. ಹಕೀಮಜಿಯವರು ಧರ್ಮಶಾಸ್ತ್ರ ದಂತೆ ಮಾಡಿದ ನಿರೂಪಣೆಯನ್ನು ಅಖಿಲ ಮಹಮ್ಮದೀಯರೂ ಗ್ರಹಿಸಿ, ಈ ಧಾರ್ಮಿಕ ಮಹೋತ್ಸವದಲ್ಲಿ ಗೋಹತ್ಯಕ್ಕೆ ಪ್ರವೃತ್ತರಾ ಗಲಾರರೆಂದು ನಮಗೆ ಪೂರ್ಣ ಖಾತ್ರಿಯಿದೆ.

೬. ನರಹರಿ ತಿಮ್ಮಪ್ಪ ಭಟ್ಟ ಹೆರವಟ್ಟಾ.
೭. ನಾರಾಯಣ ವ್ಯಾಕರಣ ಭಟ್ಟ ಕುಮಟಾ.
೮. ಅಪ್ಪಣ್ಣಾ ಗೋವಿಂದ ಭಟ್ಟ. ,,
೯. ನರಹರಿ ಅಚ್ಯುತ ಭಟ್ಟ. ,,
೧೦. ಅನಂತ ಉಪೇಂದ್ರ ಭಟ್ಟ ಕಲಭಾಗ.
೧೧. ಗೋಕರ್ಣ ಭಿಕ್ಕು ನಾರಾಯಣ ಭಟ್ಟ ಕುಮಟಾ
೧೨. ಗೋಕರ್ಣ ಮಾಧವ ಮಹಾಲೆ ಭಟ್ಟ. ,,
೧೩. ಕ್ಯಾಬಿಯಣ್ಣಾ ವೆಂಕಟನಾರಾಣಪ್ಪ ಶಾನಭಾಗ, ಚಿತ್ರಿಗಿ.
೧೪. ವಿಠಲ ಕೇಶವ ಶಾನಭಾಗ ಹೊನ್ನಮಾಂವ.
೧೫. ರಾಮಪ್ಪಾ ಗಂಗಾಧರ ಶಾನಭಾಗ. ,,
೧೬. ರಾಘವೇಂದ್ರ ಮಾಧವ ಶಾನಭಾಗ ,,
೧೭. ಗಣಪಯ್ಯಾ ಕೃಷ್ಣಪ್ಪ ಕಿಣಿ.
೧೮. ಮಾಧವ ಕೃಷ್ಣಪ್ಪ ಕಿಣಿ.
೧೯. ವಿಠಲ ಅಚ್ಯುತ ಕಿಣಿ.
೨೦. ವಾಸು ರಾಮ ಕಿಣಿ.
೨೧. ನಾರಾಯಣ ನಾಗಪ್ಪ ಶಾನಭಾಗ.
೨೨. ಅನಂತ ನಾರಾಯಣ ಶಾನಭಾಗ.
೨೩. ಕಾಗಾಲ ಪುರುಷೋತ್ತಮ ಅನಂತ ಪೈ, ಹೆರವಟ್ಟಾ.
೨೪. ಗೋವಿಂದ ಮಂಜುನಾಥ ನಾಯ್ಕ ಹೊನ್ನಮಾಂವ.

ಇವಲ್ಲದೇ, ಹೆರವಟ್ಟಾ ರಾಜಶ್ರೀ ಕಾಗಾಲ ಗೋವಿಂದ ಅನಂತ ಪೈರವರ ಮನೆಯಲ್ಲಿ ತಾ. ೧೯-೫-೨೩ನೇ ಶನಿವಾರ ದಿವಸ ಬಹಿಷ್ಕರಿಸಿದಂಥ ಅಚ್ಯುತ ಭಟ್ಟ ವಗೈರೆ ಕಡೆಯಿಂದಾ ಬಡಿಸಿಕೊಂಡು, ದೊಡ್ಡ ಸಂತರ್ಪಣೆ ಮಾಡಿದರು. ಇದೆಲ್ಲಾ ಸಂಗತಿಗಳು ವಿಚಾರ ಆಗುವ ಕಾಲಕ್ಕೆ ಸಾಕ್ಷೀ ಪುರಾವೆ ಸಹಿ ರುಜು ಮಾಡಿಕೊಡಲಿಕ್ಕೆ ನಾನು ತಯಾರಿದ್ದೇನೆ. ಹತ್ತು ಸಮಸ್ಥರು ಅನಂತ ವ್ರತದ ಸಮಯದಲ್ಲಿ ಈ ಗೃಹಸ್ಥರ ಸಂಪರ್ಕವಾಗದಂತೆ ಬೇಗನೇ ಇಲಾಜು ಮಾಡಬೇಕಾಗಿ ನನ್ನ ಪ್ರಾರ್ಥನೆ ಅದೆ.

ಕುಮಟಾ. ತಾ.೫-೬-೨೩. } ಅನಂತ ವಿಠೋಬ ಪ್ರಭು.

ಪತ್ರಸ್ವೀಕಾರ.

"ಕರ್ಮವೀರ"- "ಶಿವರ ಉದಾರಮತವಾದಿ - ಸ್ಥಳೀಯ ಸಂಕೀರ್ಣ ಸ್ವರ ಕಾರದ ಸಂಚಿಕೆಯು

ವೃತ್ತಸಾರ.

— ಶ್ರೀ ರತ್ನಾಗಿರಂತ ಮುದಲಿಯವರ ಮೇಲೆ ವಾ ಹೊರಟಿರುವದೆಂದು ತಿಳಿಯುತ್ತದೆ. ಇನ್ನೂ ಗಿರಫ ದಾಖಿದ ಸುದ್ದಿಯಿಲ್ಲ.

— ಲಖನೌದಲ್ಲಿ ಕನಿಯಾ ಸರಕಾರವನ್ನು ಅಟ ಬೇಕೆಂದು ಹಸ್ತಪತ್ರಿಕೆಗಳನ್ನು ಹಂಚಿದ ಬಗ್ಗೆ ಗ್ರಹ ಕಮಿಟಿಯ ಕಾರ್ಯದರ್ಶಿಗಳಾದ ಬಾಬು ನಲಾಲ ಸಗ್ಗಿನಾರ ಮೇಲೆ ಕಟ್ಲೆ ನಡೆದು, ಗೋಸಲ ಅಕ್ಟ, ಕಲಮು ನ್ನಯ ಸಾಹೇಬ, ಬಾಬು ಸಾಹೇಬರಿಗೆ ೫ ದಿನಗಳ ಸಾದಾ ಶಿಕ್ಷೆ ವಿಧಿಸಲ್ಪಟ್ಟಿತು. ಕಾಲರವರು ಕೈದುಖಾನೆಗೆ ಹೋದರು. ಕಮಿಟಿಯ ಕಾರ್ಯದರ್ಶಿಗಳ ಮೇಲೂ, ಇದೇ ನಡೆಯುವದಿದೆಂದು ಸುದ್ದಿ.

— ಕೊಂಗ್ರೆಸ ಕಾರ್ಯಕಾರಿ ಕಮಿಟಿಯು ದಿಲ್ಲೀ ಮುಂದಿನ ಬುಧವಾರ, ಗುರುವಾರ, ತಾರೀಖು ೧೨-ನೇಗೆ ನೆರೆಯುವದು.

— ಸಿಂಧದೊಳಗಿನ ಮುಂದಾಳುಗಳಾದ ಎಂ. ಭಾರ್ಗವರು ರಾಷ್ಟ್ರೀಯ ಸಭೆಯ ಸಭಾಸದರಾದರು. ಕೊಂಗ್ರೆಸಿಗೆ ಅವರನ್ನು ಪ್ರತಿನಿಧಿಯಾಗಿ ಆರಿಸಿದರು.

— ಮದ್ರಾಸಿನ ಎಲ್ಲ ರಾಷ್ಟ್ರೀಯ ಸಭೆಯ ಪಕ್ಷದ ದಳಗಳು ದಿಲ್ಲಿಯಲ್ಲಿ ತಾರೀಖು ೧೧ ನೇಗೆ ಪ್ರಚಲಿತ ಸ್ಥಿತಿಯ ಮೇಲೆ ವಿವೇಚನ ಮಾಡಿ, ಸಾಮಾನ್ಯ ಕಾರ್ಯಕ್ರಮವನ್ನು ನಿರ್ಣಯಿಸುವ ದ್ದಾರೆಂದು ಸುದ್ದಿ.

— ಡಾ. ಅನ್ಸಾರಿ ಯವರಿಗೆ ಮುದ್ರಾಸ ನ್ಯಾಯ ತೀಗಳು ೧ ವರುಷದ ವರೆಗೆ ವಕೀಲಿ ನಡೆಸಬಾರದೆಂ ಮನಾಯಿ ಮಾಡಿರುವರು.

ಮುಂದಾಳುಗಳು ನುಡಿಯುವಂತೆ, ಜಝಿರಾತ್-ಅಲ್-ಅರಾಬ ಪ್ರದೇಶವನ್ನು ಮಹಮ್ಮದೀಯೇತರರ ಅಂಕೆಯಿಂದ ವಿಮೋಚಿಸುವದು ಈಗ ನಮ್ಮ ಮುಂದಿನ ಕಾರ್ಯವು. ಪಾಲೆಸ್ಟೈನ, ಮೆಸೊಪೊಟೆಮಿಯಾ ಪ್ರದೇಶದ ಮೇಲಿನ ಪರರಾಷ್ಟ್ರಗಳ ಅಂಕೆಯನ್ನೂ, ಹೆಜ್‌ಜಾಝು ಪ್ರದೇಶದ ದುರವಸ್ಥೆಯನ್ನೂ ಹೋಗಲಾಡಿಸಿದ ಹೊರತು, ಜಝಿರಾತ್-ಅಲ್-ಅರಾಬ ಪ್ರದೇಶವು ನಿರಂಕುಶವಾಗಲಾರದು. ಅದನ್ನು ಸಾಧಿಸಬೇಕಾದರೆ, ಹಿಂದುಸ್ಥಾನವು ಪರರಾಷ್ಟ್ರ ಧೋರಣದ ಸೂತ್ರಗಳನ್ನು ವಹಿಸಿಕೊಳ್ಳಬೇಕು. ಅದಕ್ಕೆ ಸ್ವರಾಜ್ಯವು ಅತ್ಯವಶ್ಯವು. ಸ್ವರಾಜ್ಯಪ್ರಾಪ್ತಿಯು, ಹಿಂದೂ-ಮಹಮ್ಮದೀಯ ಮೊದಲಾದ ಬೇರೆ ಬೇರೆ ಪಂಥದವರು ಸಾಹಚರ್ಯದಿಂದ, ಏಕಮನಸ್ಸಿನಿಂದ ದುಡಿದ ಹೊರತು, ಸಾಧ್ಯವಾಗಲಾರದು. ಅಖಿಲ ಭಾರತೀಯ ಈದ ಮಹೋತ್ಸಹದಿಂದ ಹಿಂದೂ, ಮಹಮ್ಮದೀಯ ಮೊದಲಾದ ಅಖಿಲ ಪ್ರಜೆಗಳು ಒತ್ತಟ್ಟಾಗಿ ತಮ್ಮ ದೇಶೋದ್ಧಾರದ ಮಾರ್ಗಚಿಂತನದಲ್ಲಿ ನಿಮಗ್ನರಾಗುವರು. ಸಂಯುಕ್ತ ಈಶಪ್ರಾರ್ಥನೆಯಿಂದ ನಮ್ಮನಮ್ಮೊಳಗೆ ನೆಲೆಗೊಂಡ ಕ್ಷುದ್ರ ಕಲಹಬೀಜವು ಮರುಭೂಮಿಯಲ್ಲಿ ಬಿದ್ದಂತೆ ಸುಟ್ಟು ಬೂದಿಯಾಗುವದು. ಅಖಿಲ ಪ್ರಜೆಗಳಿಗೂ ತಾವು ಐಕ್ಯದಿಂದ ಸಾಧಿಸಿದ ವಿಜಯದ ಅರಿವುಂಟಾಗಿ, ಮುಂದಿನ ಕಾರ್ಯ ಕೈಕೊಳ್ಳಲು ಮತ್ತೂ ಹುರುಪು ಬರುವದು. ಈದ ಮಹೋತ್ಸಹದಿಂದ ಈ ವರೆಗೆ ಒದಗಿದ ಅನರ್ಥಗಳೆಲ್ಲ ಬಯಲಾಗಿ, ಈದ ಮಹೋತ್ಸಹವೆಂದರೆ, ಅದೊಂದು ಅಖಿಲ ಹಿಂದೀಯರು ತಮ್ಮ ಮೇಲೆ ಮಾಡಿದ ಉಪಕಾರಸ್ಮರಣೆಯ ದಿನವೆಂದೂ ಮಹಮ್ಮದೀಯರು ಎಣಿಸಿ, ಧಾರ್ಮಿಕ ಆಚಾರದಲ್ಲಿ ಅನ್ಯ ಸಮಾಜದ ಧರ್ಮಬುದ್ಧಿಗೆ ಬಾಧಕವಾಗುವಂಥ ಯಾವದೇ ಅನುಚಿತ ಕೃತಿಯನ್ನು ಅವರು ಆಚರಿಸಲಿಕ್ಕಿಲ್ಲ. ಇಷ್ಟು ಮಹತ್ವದ ಸ್ಥಿತ್ಯಂತರವು ಇಂದಿನಿಂದ ಪ್ರಾರಂಭವಾಗುವದು. ಇಂದಿನ ಈದ ಮಹೋತ್ಸಹದ ರಾಷ್ಟ್ರೀಯ ಮಹತ್ವವು ಇದೇ.

ಸ್ಫುಟ ಸೂಚನೆಗಳು.

೧. ಕಳೆದ ವಾರದಲ್ಲಿ ಮುಂಬಯಿ ಹೈಕೋರ್ಟಿನ ನ್ಯಾಯಮೂರ್ತಿಗಳಾದ ಸರ್ ಲಲ್ಲುಭಾಯಿ ಆಶಾರಾಮ ಶಹಾ, ಮಿ। ಕೋಯಾಜಿರವರು ಒಂದು ಮಹತ್ವದ ತೀರ್ಪು ಕೊಟ್ಟರು. ಸುರತ ಮ್ಯುನಿಸಿಪಲ್ ಕ್ಷೇತ್ರದಲ್ಲಿ ಸಕ್ತಿಯ ಪ್ರಾಥಮಿಕ ಶಿಕ್ಷಣದ ಕಾಯಿದೆಯು ೧೯೨೦ನೇ ಇಸವಿಯಿಂದ ಲಾಗು ಮಾಡಲ್ಪಟ್ಟಿದೆ. ಆ ಕಾಯಿದೆಯಂತೆ ಮ್ಯುನಿಸಿಪಲ್ ಕ್ಷೇತ್ರದೊಳಗಿನ ವಿದ್ಯಾರ್ಥಿಪ್ರಾಯದ ಹುಡುಗ-ಹುಡುಗಿಯರೆಲ್ಲರೂ ಸರಕಾರದಿಂದ ಮನ್ನಣೆ ಹೊಂದಿದ ಶಾಲೆಯಲ್ಲಿರಬೇಕು. ಇಲ್ಲದಿದ್ದರೆ, ಸ್ಕೂಲ ಕಮಿಟಿಯವರು ಮೆಜಿಸ್ಟ್ರೇಟರ ಮುಂದೆ ಫಿರ್ಯಾದು ದಾಖಲು ಮಾಡಿ, ಕಾಯಿದೆಯಂತೆ ಶಾಲೆಗೆ ಕಳಿಸದ ಪಾಲಕನನ್ನು ದಂಡಿಸಬಹುದು. ಈ ಕಾನೂನಿನನ್ವಯ ಸುರತದೊಳಗಿನ ಶ್ರೀ॥ ನೇಮಚಂದ ನಾಥಾರವರು ತಮ್ಮ ಹುಡುಗಿ ಬಾಯಿ ಶರ್ಮನಿಯನ್ನು ಶಾಲೆಗೆ ಕಳಿಸಲಿಲ್ಲೆಂದು ಅವರ ಮೇಲೆ ಮಿ॥ ಎಚ್. ಎಸ್. ಆಯುಕರ, ಸಬ್ ಡಿವ್ಹಿಜನಲ್ ಮೆಜಿಸ್ಟ್ರೇಟರವರ ಮುಂದೆ ತನಖಿ ನಡೆಯಿತು. ಶ್ರೀ॥ ನೇಮಚಂದರವರು ತಮ್ಮ ಹುಡುಗಿಯನ್ನು ಸುರತದೊಳಗಿನ ರಾಷ್ಟ್ರೀಯ ಕೇಳವಣಿ ಮಂಡಳದ ಕುಮಾರಿ ಶಾಲೆಗೆ ಕಳಿಸುತ್ತೇವೆಂತಲೂ, ಕಾಯಿದೆಯಂತೆ ಹುಡುಗಿಗೆ ತಾವು ಶಿಕ್ಷಣ ಕೊಡುತ್ತೇವೆಂತಲೂ ನುಡಿದರು, ಅವರೂ, ರಾಷ್ಟ್ರೀಯ ಕೇಳವಣಿ ಮಂಡಳದ ವಿದ್ಯಾದಾನವು ಎಷ್ಟರಮಟ್ಟಿಗೆ ಕಾರ್ಯಕ್ಷಮವದೆ ಎಂಬದನ್ನು ವಿಚಾರಿಸದೆ, ಮೆಜಿಸ್ಟ್ರೇಟರು ಶ್ರೀ॥ ನೇಮಚಂದರವರಿಗೆ ೧ ರೂಪಾಯಿ ದಂಡ ವಿಧಿಸಿದರು. ದಂಡದ ರಕಮು ಕೋರಿಕೆಗೆ ಕ್ಷುದ್ರವಿದ್ದರೂ, ಅದೊಂದು ರಾಷ್ಟ್ರೀಯ ಶಿಕ್ಷಣದ ಮೇಲೆ ಎಸೆದ ಶಸ್ತ್ರವೇ. ಶ್ರೀ॥ ನೇಮಚಂದರವರು ಇದೇ ಪರಿಯಿಂದ ಗ್ರಹಿಸಿದರು. ಪ್ರಜಾಕಲ್ಯಾಣ ಮಾಡುವ ನೆವದಿಂದ ಪ್ರವರ್ತಿಸಿದ ಸಕ್ತಿಯ ಶಿಕ್ಷಣದ ಕಾಯಿದೆಯನ್ನು ರಾಷ್ಟ್ರೀಯ ಶಿಕ್ಷಣದ ಸಂಹಾರಕ್ಕೆ ಉಪಯೋಗಿಸಿದ್ದನ್ನು ನೋಡಿ, ಇದರ ಆಖೈರ ನಿರ್ಣಯ ಮಾಡಿಕೊಳ್ಳುವರೆ ಹೈಕೋರ್ಟಿಗೆ ಅಪೀಲು ಮಾಡಿದರು. ನ್ಯಾಯಮೂರ್ತಿಗಳು ಸಕ್ತಿಯ ಪ್ರಾಥಮಿಕ ಶಿಕ್ಷಣದ ಕಾಯಿದೆಯಂತೆ ಹುಡುಗರನ್ನು ಸರಕಾರಿ ಮಾನ್ಯತೆ ಪಡೆದ ಶಾಲೆಯಲ್ಲಿಯೇ ಇಡುವ ಅವಶ್ಯಕತೆಯಿಲ್ಲೆಂತಲೂ, ಇತರ ಶಾಲೆಗಳಲ್ಲಿ ವಿದ್ಯಾರ್ಥಿಗೆ ಕೊಡುವ ಶಿಕ್ಷಣದ ಯುಕ್ತಾಯುಕ್ತತೆಯನ್ನು ಮೆಜಿಸ್ಟ್ರೇಟರು ವಿಚಾರಿಸಿ, ಆರೋಪಿ ಪಾಲಕರಿಗೆ ಶಿಕ್ಷೆಯನ್ನೀಯಬೇಕೆಂತಲೂ ನ್ಯಾಯಮೂರ್ತಿಗಳು ತೀರ್ಮಾನಿಸಿರುವರು. ಪ್ರಕೃತ ಪ್ರಕರಣದಲ್ಲಿ ಮೆಜಿಸ್ಟ್ರೇಟರು ವಿಚಾರ ಮಾಡದೆ, ಶಿಕ್ಷೆಯನ್ನಿತ್ತಿದ್ದರಿಂದ, ತಾವು ಶಿಕ್ಷೆಯನ್ನು ರದ್ದುಪಡಿಸುತ್ತೇವೆಂದು ನುಡಿದು, ಶ್ರೀ॥ ನೇಮಚಂದ ನಾಥಾರವರಿಗೆ ವಿಧಿಸಿದ ದಂಡವನ್ನು ತಿರುಗಿಕೊಡಲು ಫರ್ಮಾಯಿಸಿದರು. ಪ್ರಜಾಕಲ್ಯಾಣದ ವೇಷದಿಂದ ರಾಷ್ಟ್ರೀಯ ಶಿಕ್ಷಣವನ್ನು ದೇಶಾಯಿದೇಶೀರ ಮಾಡುವ ನೌಕರಶಾಹಿಯ ಹೊಂಚು ನ್ಯಾಯಮೂರ್ತಿಗಳ ನಿರ್ಣಯದಿಂದ ನಿರರ್ಥಕವಾಯಿತು.

---

೨. ಶಿದ್ದಾಪುರದ ಶೇಷಪ್ಪನವರ ಖಟ್ಲೆಯ ತೀರ್ಪಿನ ಹಕೀಕತನ್ನು ಕಳೆದ ಸಂಚಿಕೆಯಲ್ಲಿ ವಿಸ್ತರಶಃ ಕೊಟ್ಟಿರುವೆವು. ಅದು ಅನೇಕ ಪರಿಯಿಂದ ಬೋಧಪ್ರದವಿದೆ. ಜಂಗಲ ಖಾತೆಯವರ ದೃಷ್ಟಿಯು ಕಾಕ ದೃಷ್ಟಿಯಂತೆ ಪ್ರಜೆಗಳು ಒಯ್ಯುವ ಕಟ್ಟಿಗೆಯ ಮೇಲಿರಲು, ೪ ವರುಷಗಳ ವರೆಗೆ ಶೇಷಪ್ಪನವರು ರಾಜಮಾರ್ಗದ ಬದಿಗೆ ಸಂಗ್ರಹಿಸಿಟ್ಟ ಕೊಡೆಗಳ ರಾಶಿಯು ಈ ಕಾವಲುಗಾರರ ದೃಷ್ಟಿಯಿಂದ ಹೇಗೆ ಪಾರಾಯಿತು ? ಜಂಗಲಖಾತೆಯವರು ಪ್ರತಿಪಾದಿಸಿದಂತೆ ೪ ವರುಷಗಳ ವರೆಗೆ ೪೧ ನಾಟುಗಳೆಂದರೆ ಸಾಧಾರಣ ೩೦೦ ಖಂಡಿ ಕಟ್ಟಿಗೆಯು ಕಣ್ಣು ತಪ್ಪಿ ಕರಗಾಗಗೊಟ್ಟ ಬಳಿಕ, ಜಂಗಲ ಖಾತೆಯು ಮೃತ ಹೊಂದಿತ್ತೆಂದು ಯಾರಾದರೂ ತರ್ಕಿಸುವದು ಸಹಜವು. ಜಂಗಲ ಖಾತೆಯ ಅನುಭವವಿದ್ದ ನಮಗೆಲ್ಲರಿಗೆ ಶೇಷಪ್ಪನವರನ್ನು ೪ ವರುಷಗಳ ಮೇಲೆ ಮೆಜಿಸ್ಟ್ರೇಟ ಮಿ॥ ನಾಗರಕಟ್ಟಿಯವರ ನ್ಯಾಯಾಸನದ ಮುಂದೆ ಎಳತಂದು, ಕಳವಿನ ಆರೋಪದ ಮೇಲೆ ತನಖಿ ನಡಿಸಲು ಬಾಹ್ಯ ಕಾರಣಕ್ಕಿಂತ ಏನಾದರೂ ಅಂತಃಕಲಹವಿರಬೇಕೆಂದು ತೋರುತ್ತದೆ. ಮಿ॥ ಶಂಕರ ನಾಗರಕಟ್ಟಿಯವರ ತೀರ್ಪು ನೋಡಿಯಂತು ನಾವು ಬೆರಗಾದೆವು. ಅಧಿಕಾರಿಗಳು ಅತಿಕ್ರಮ ಮಾಡಿಕೊಟ್ಟ ಹುಕುಮುಗಳ ಬಗ್ಗೆ ಮೂಲತಃ ಜವಾಬದಾರರು ಅಧಿಕಾರಿಗಳೇ. ನ್ಯಾಯಮೂರ್ತಿಗಳು ಹೇಳುವಂತೆ ಅದೊಂದು ನಿಯಮದ ಉಲ್ಲಂಘನವೆಂದು ಒಮ್ಮೆ ಭಾವಿಸಿದರೂ, ಅದಕ್ಕಾಗಿ ೫೦ ರೂಪಾಯಿಗಳ ದಂಡ ವಿಧಿಸಿ, ಸುಮಾರು ೫-೬ ಸಾವಿರ ರೂಪಾಯಿ ಬೆಲೆ ಬಾಳುವ ೪೧ ನಾಟುಗಳನ್ನು ಜಪ್ತ ಮಾಡಿದ್ದು ಭಯಂಕರವೆಂದು ಯಾರೂ ಹೇಳ್ವರು. ರಾವಬಹಾದ್ದೂರ ಕೊಯಿಮತ್ತೂರರು ಈ ಹುಕುಮನ್ನು ರದ್ದಿದ್ದರ ಮೇಲಿಂದ ಮಿ। ನಾಗರಕಟ್ಟಿಯವರ ನ್ಯಾಯನಿಷ್ಠುರತೆಯು ಸ್ಪಷ್ಟವಾಗಿ ಹೊಳೆಯುತ್ತದೆ. ಜಂಗಲಖಾತೆಯು ನಿರಂಕುಶ ರೀತಿಯಿಂದ ಹಾವಳಿ ಹಾಕದಂತೆ ಮೆಜಿಸ್ಟ್ರೇಟರು ಪ್ರಜೆಗಳನ್ನು ರಕ್ಷಿಸುವದು ಅವರ ಕರ್ತವ್ಯವು. ಮಿ। ನಾಗರಕಟ್ಟಿಯವರಂತೆ ಎಲ್ಲ ಮೆಜಿಸ್ಟ್ರೇಟರು ನ್ಯಾಯನಿಷ್ಠುರರಾದರೆ ನಮ್ಮಲ್ಲಿಯ ಪ್ರಜೆಗಳು ಗಂಟುಮೂಟೆ ಕಟ್ಟಿ ದೇಶಾಂತರಕ್ಕೆ ಹೋಗಬೇಕಾಗುವದು. ನ್ಯಾಯಮೂರ್ತಿ ಶಹಾ-ಕೋಯಾಜಿರವರು ಶೇಷಪ್ಪನವರಿಗೆ ೧ ರೂಪಾಯಿಯ ದಂಡ ವಿಧಿಸಿ, ಇದೇ ಸೂಚನೆಯನ್ನು ಎಲ್ಲ ಮೆಜಿಸ್ಟ್ರೇಟರಿಗೆ ಕೊಟ್ಟಿರುವರು. ಅದನ್ನು ನಮ್ಮ ಜಿಲ್ಹೆಯೊಳಗಿನ ಮೆಜಿಸ್ಟ್ರೇಟರೆಲ್ಲರೂ ಪಾಲಿಸುವರೆಂದು ಕೋರಿಕೆ.

---

೩. ನಮ್ಮಲ್ಲಿ ಕರ್ನಾಟಕ ಪ್ರಾಂತಿಕ ಪರಿಷತ್ತು ನೆರೆಯಿಸುವ ವಿಚಾರ ನಡೆದಿದೆ. ಪರಿಷತ್ತುಗಳ ಉಪಯುಕ್ತತೆಯು ಈಗ ವಿಶೇಷವಿದೆ. ಪ್ರಾಂತಿಕ ಪರಿಷತ್ತನ್ನು ನೆರೆಯಿಸುವ ವಿಚಾರವನ್ನು ನಾವು ಈ ಮೊದಲೇ ಸ್ವಾಗತೀಕರಿಸಿರುವೆವು. ಪ್ರತಿಷ್ಠಿತ ಹಿತಚಿಂತಕರೊಬ್ಬರು ನಮ್ಮಲ್ಲಿ ಜಿಲ್ಹಾ ಪರಿಷತ್ತನ್ನು ನೆರೆಯಿಸಬೇಕೆಂದು ಸೂಚಿಸುತ್ತಾರೆ. ಕೈ। ವಾ। ಸರ್ ನಾರಾಯಣರಾವ ಚಂದಾವರಕರರ ನೇತೃತ್ವದಲ್ಲಿ ೧೯೧೯ ನೇ ಇಸವಿಯಲ್ಲಿ ಜರುಗಿದ ಕಾರವಾರ ಜಿಲ್ಹಾ ಪರಿಷತ್ತಿನ ಅಧಿವೇಶನವು ಪ್ರಥಮವು. ಶಿರ್ಸಿಯ ಮುಖಂಡರು ದ್ವಿತೀಯ ಪರಿಷತ್ತನ್ನು ನೆರೆಯಿಸುವ ವಚನವನ್ನು ಕಾರಣಾಂತರಗಳಿಂದ ಪಾಲಿಸಲು ಶಕ್ತರಾಗಲಿಲ್ಲ. ಅದೊಂದು ನಮ್ಮ ದುರ್ದೈವವು. ಈಗ ಜಂಗಲಖಾತೆಯ ಕಷ್ಟ ಪರಿಹಾರಗಳ ಬಗ್ಗೆ ಸರಕಾರವು ಪ್ರಕಟಿಸಿದ ಮುದ್ರಣ ಲೇಖವು ಪ್ರಜೆಗಳಿಗೇನು ಸಂತೋಷಪಡಿಸಲಿಲ್ಲ. ನೌಕರಶಾಹಿಯು ಕಾನಡಾ ಜಿಲ್ಹಾ ನಿವಾಸಿಗಳ ಜಂಗಲ ದೂರು, ತಮ್ಮ ಮುದ್ರಣ ಲೇಖ ಪ್ರಕಟಣೆಯಿಂದ ನಿವಾರಣೆ ಹೊಂದಿತೆಂದು ಡಂಗುರ ಸಾರಿರುವದು. ಇಂಥ ಪ್ರಸಕ್ತಿಯಲ್ಲಿ ನಮ್ಮ ಜಂಗಲ ದೂರುಗಳ ಬಗ್ಗೆ ಸರಕಾರವು ಕೈಕೊಂಡ ಯೋಜನೆಯ ಯುಕ್ತಾಯುಕ್ತತೆಯ ಬಗ್ಗೆ ವಿಚಾರ ಮಾಡುವದು ಸಹಜಪ್ರಾಪ್ತವು. ಜಂಗಲ ಪ್ರಶ್ನೆಯು ನಮ್ಮ ವೈಯಕ್ತಿಕ ಪ್ರಶ್ನೆಯಾಗಿರುವದರಿಂದ, ಆ ಬಗ್ಗೆ ನಾವೆಲ್ಲರೂ ಒತ್ತಟ್ಟಾಗಿ ನೆರೆದು, ನಮ್ಮ ವಿಚಾರಗಳೆಲ್ಲ ಕೇಂದ್ರೀಕರಿಸುವದು ಯೋಗ್ಯವೆಂದು ನಮಗೂ ತೋರುತ್ತದೆ. ಮುಂಬಯಿಯೊಳಗಿನ ಕಾನಡಾ ಜಿಲ್ಹೆಯ ನಾಗರಿಕರ ಸಂಘದೊಳಗಿನ ಮುಖಂಡರು ತಮ್ಮ ಜನ್ಮಭೂಮಿಯ ಉದ್ಧಾರದ ಪವಿತ್ರ ಕಾರ್ಯ

ವಲ್ಲಿ ನೇತೃತ್ವವನ್ನು ಸ್ವೀಕರಿಸಬೇಕೆಂದು ನಮ್ಮ ಅರಿಕೆಯದೆ. ಜಿಲ್ಹಾ ಪರಿಷತ್ತೆಂದರೆ, ಅವಕ್ಕೆ ಧನಸಹಾಯವು ಬೇಕೇ ಬೇಕು. ಅಲ್ಲಿಯ ಸುಶಿಕ್ಷಿತ ಜಿಲ್ಹಾ ನಿವಾಸಿಕರ ಬೆಂಬಲವೂ, ನೇತೃತ್ವವೂ ಮತ್ತೂ ಅತ್ಯವಶ್ಯವುಳ್ಳವು. ಸಂಘದವರು ಈ ಬಗ್ಗೆ ವ್ಯವಸ್ಥೆ ಮಾಡಿ, ಜಿಲ್ಹೆಯೊಳಗಿನ ಮುಖಂಡರನ್ನು ಆಲೋಚಿಸಿ, ಮಳೆಗಾಲ ಮುಗಿದ ಕೂಡಲೆ, ಪರಿಷತ್ತನ್ನು ಎಲ್ಲ ಜಿಲ್ಹಾ ನಿವಾಸಿಕರಿಗೆ ಅನುಕೂಲವಾದ ಮಧ್ಯಸ್ಥಳದಲ್ಲಿ ನೆರೆಯಿಸಬೇಕಾಗಿ ನಮ್ಮ ಸೂಚನೆಯಿದೆ.

---

೪. ನಾಗಪುರದಲ್ಲಿ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಮೆಂಬರರು ಸಾದರಪಡಿಸಿದ ಅರ್ಜಿಯಂತೆ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಅಧಿವೇಶನವು ಅಗಸ್ಟ ತಾ. ೩ನೇ ಶುಕ್ರವಾರಕ್ಕೆ ವಿಝಗಪಟ್ಟಣದಲ್ಲಿ ನೆರೆಯುವದು. ಜನಕ ವರೆಗೆ ಜಾವಾ ಕೊಂಗ್ರೆಸಿನ ತಯಾರಿಯನ್ನು ಕೈಕೊಳ್ಳಬಾರದೆಂದು ಕಾರ್ಯದರ್ಶಿಗಳಾದ ಶ್ರೀ ಗೋಪಾಲಕೃಷ್ಣಯ್ಯನವರು ಮು...ಯ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಅಧ್ಯಕ್ಷರಾದ ಶ್ರೀಮತಿ ಸರೋಜಿನಿ ನಾಯುಡುಗಳವರಿಗೆ ತಿಳಿಸಿರುವರು.

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವರ್ಷದಲ್ಲಿ ಮೇಘರಾಜನು ಬಲು ಚಂಚಲಮನಸ್ಕನಾಗಿರುವನು. ನಂಬಿದವರು ಕೆಟ್ಟರು. ಜೋರಿನ ವೃಷ್ಟಿಯಿಂದ ಹೊಲಗದ್ದೆಗಳೆಲ್ಲ ಜಲಮಯವಾಗಿವೆ. ನೀರು ಆರಲೊಲ್ಲದು. ನೆಟ್ಟಿಯು ಸಾಗಲೊಲ್ಲದು. ಅಘನಾಶಿನಿ ಹೊಳೆಗೆ ಪುನಃ ೮-೧೦ ದಿವಸಗಳಿಂದ ನೆರೆ ಕಟ್ಟಿದೆ. ನೀರು ಇಳಿದಂತೆ ತೋರುತ್ತದೆ. ಘಳಿಗೆಯೊಳಗೆ ಪುನಃ ಏರುತ್ತದೆ. ನೆರೆಹೊರೆಯ ಗದ್ದೆ-ಗಯ್ಯುಗಳೆಲ್ಲ ಕೊಳೆತುಹೋದವು. ಅಗೆ ಸಸಿಗಳ ಬುಡ ಕೊಳೆತು, ಸಸಿಗಳು ತೇಲಿಹೋದವು. ಒಂದೆಡೆಯಲ್ಲಿ ಮಣ್ಣಿನ ರಾಶಿ, ಇನ್ನೊಂದೆಡೆಯಲ್ಲಿ ದೊಡ್ಡ ಕೊರಕಲು ಹೀಗೆಲ್ಲ ಗದ್ದೆ-ಭೂಮಿಗಳ ದುರವಸ್ಥೆ. ಬೀಜ ಬಿತ್ತುವದು, ನೆಡುವದು, ಫಲ ತರುವದು ಮುಂತಾದ್ದು ಕೈಗೂಡುವ ಕೆಲಸವಲ್ಲ. ಬೇಸಾಯಗಾರರು ಚಿಂತಾತುರರಾಗಿರುವರು. ಇಂಥ ಚಂಚಲ ವೃಷ್ಟಿಯನ್ನು ಹಿಂದೆಂದೂ ನೋಡಿದ್ದಿಲ್ಲವೆಂತ ಅನೇಕರು ಉದ್ಗರಿಸುತ್ತಾರೆ. ಇಷ್ಟು ಚಮತ್ಕಾರವನ್ನು ಈ ವರ್ಷ ಮೇಘರಾಜನು ಅಡಿತೋರಿಸಿಬಿಟ್ಟನು. ಈ ವಾರದಲ್ಲಿ ಮಳೆಯು ೯—೪೧ ಇಂಚು ಬಿತ್ತು. ಈ ವರೆಗೆ ೯೭—೭೯ ಪ.ಸೆಯು ಇಂಚು ಬಿತ್ತು.

ಸಬ್ ಡಿವಿಜನಲ್ ಆಫೀಸರರಾದ ರಾ| ಬಾ| ಕೊಯಿಮತ್ತೂರರು ಮೋಟಾರುರೂಢರಾಗಿ ಹೊನ್ನಾವರದಿಂದ ತಿರುಗಿ ಬರುವಾಗ, ಮೋಟಾರು ನಾದುರಸ್ತಾಯಿತು ಕರ್ಕಿಯಿಂದ ಕಾಲುನಡಿಗೆಯಿಂದಲೇ ಬರಬೇಕಾಯಿತಂತೆ. ರಾಜಮಾರ್ಗದ ಇಬ್ಬದಿಯ ಗದ್ದೆಗಳು ರಾವಬಹಾದ್ದೂರರ ದೃಷ್ಟಿಗೆ ಸಹಜವಾಗಿ ಬಿದ್ದವು. ಅದರ ಮೇಲಿಂದ ರಾವಬಹಾದ್ದೂರರು ಅತಿ ವೃಷ್ಟಿಯಾದರೂ, ಬೆಳೆಯೇನು ಕೆಡಲಿಲ್ಲೆಂದು ಅಭಿಪ್ರಾಯಪಟ್ಟರುವರೆಂದು ತಿಳಿಯುತ್ತದೆ. ಆದರೆ, ಹೀಗೆ ತಪ್ಪು ಗ್ರಹಿಕೆ ಮಾಡಿಕೊಳ್ಳದೆ, ತಮ್ಮ ಡಿವ್ಹಿಜನವನ್ನು ಪರೀಕ್ಷಿಸಬೇಕಾಗಿ ಸಂದರ್ಭವದೆಯೆಂದು ಅರಿಕೆ.

ಹೊನ್ನಾವರದಲ್ಲಿ ಕರಗಿ ನೀರಾದ ಉಪ್ಪಿನ ರಕಮು ೧೪,೦೦೦ ಮಣಗಳೆಂದು ಸರಕಾರಿ ಅಧಿಕಾರಿಗಳು ಅಂದಾಜು ಮಾಡಿರುವರೆಂದೂ, ಸುಮಾರು ೬೦೦೦ ರೂಪಾಯಿ ಲುಕ್ಸಾನಾಗಿರಬೇಕೆಂತಲೂ ಅಧಿಕಾರಿಗಳೇ ಅಂದಾಜು ಮಾಡಿರುವರು.

ಮುಂಬಯಿಯ ರಾ| ಕಾಶೀರಾಮಪಂತ ಪಟ್ಟಿಯವರು ಮುಂಬಯಿಯ ಕಾಯಿದೆ ಕೌನ್ಸಿಲಿನ ಚುನಾವಣೆಗೆ ತಾವು ನಿಲ್ಲುವದಿಲ್ಲೆಂದು ಜಾಹೀರುಪಡಿಸಲು ನಮಗೆ ತಿಳಿಸುತ್ತಾರೆ. ಅವರ ಉಮೇದವಾರಿಯನ್ನು ಸ್ವೀಕರಿಸಿದ ಅಲ್ಲಲ್ಲಿಯ ಮತದಾರರಿಗೆ ತಾವು ಆಭಾರಿಯಾಗಿರುವರೆಂತಲೂ ತಿಳಿಸುತ್ತಾರೆ.

ಮುಂಬಯಿಯಲ್ಲಿ ಕೂಡಲಿಕ್ಕಿರುವ ಜಾದಾ ಕೊಂಗ್ರೆಸಿಗೆ ಪ್ರತಿನಿಧಿಗಳನ್ನಾರಿಸುವರೆ ಜಿಲ್ಹಾ ಕಮಿಟಿಯ ಜಾದಾ ಸಭೆಯು ತಾ. ೨೯ ನೇ ರವಿವಾರ ಸಾಯಂಕಾಲ ೩ ಘಂಟೆಗೆ ಇಲ್ಲಿಯ ತಾಲೂಕಾ ಕೊಂಗ್ರೆಸ ಕಮಿಟಿಯ ಆಫೀಸಿನಲ್ಲಿ ಕೂಡುವರದೆಂತಲೂ, ಕೋರಂ ಆಗದಿದ್ದಲ್ಲಿ, ಮುಂದರಿಸಿದ ಸಭೆಯು ಅದೇ ದಿನ ಸಾಯಂಕಾಲ ೫ ಘಂಟೆಗೆ ಅಲ್ಲಿಯೇ ಸೇರುವದೆಂತಲೂ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಡಾ| ಅನ್ಸಾರಿ ಮೊದಲಾದ ಮುಖಂಡರ ಆಜ್ಞಾಪತ್ರದಂತೆ ಇಂದು ಇಲ್ಲಿ ಮೆರವಣಿಗೆ, ಜಾಹೀರು ಸಭೆ, ಪ್ರಾರ್ಥನೆ ಮೊದಲಾದವುಗಳು ನಡೆಯುವವು.

ಸಾಭಾರ ಸ್ವೀಕಾರ.

ಪೆರಡೂರು **ರಘುರಾಮ ಮಲ್ಯರಿಂದ** ರಚಿತವಾದ **ಪದ್ಯಗಳು—** ಉಡುಪಿಯ ಸತ್ಯಾಗ್ರಹೀ ಪ್ರಬಂಧ ರತ್ನಮಾಲೆಯ ರತ್ನ ೨. ಪ್ರಕಾಶಕ:- ಉ. ರಾಂಚಂದ್ರಾನಂದರಾಯರು. ಬೆಲೆ ರೂ. ೦-೨-೦.

ಸಂಕೇರಿ— ಅ ಇ ಕಾ. ಕಮಿಟಿಯ ನಾಗಪುರದ ನಿರ್ಣಯಕ್ಕನುಸರಿಸಿ, ಇಲ್ಲಿ ಕಳೆದ ೧೮ ನೇ ತಾರೀಖಿಗೆ ಗಾಂಧಿ ದಿನದ ಬೆಳಿಗ್ಗೆ ೮ ಘಂಟೆಗೆ 'ರಾಷ್ಟ್ರಧ್ವಜ' ಮೆರವಣಿಗೆಯನ್ನು ತೆಗೆದರು. ನಾಗಪುರದಲ್ಲಿ ಮಾಡಿದ್ದಂತೆ ಇಲ್ಲಿ ಸಹ 'ಮನಾಯಿ ಹುಕುಮ' ಕೊಟ್ಟರೆ, ಆ ಕಟ್ಟಳೆಯನ್ನು ಮುರಿದು, ಆ ದಿವಸದ ಮೆರವಣಿಗೆಯ ಕೆಲಸವನ್ನು ನೆರವೇರಿಸಲಿಕ್ಕೆ ಇಲ್ಲಿಯ ಕೆಲವು ಸ್ವಯಂಸೇವಕರು ಟೊಂಕ ಕಟ್ಟಿದ್ದರು' ಸ್ವಯಂಸ್ಫೂರ್ತಿಯಿಂದಲೋ ಏನೋ ಬೇರೆ ಹಲವು ಜನರು ಇದರಲ್ಲಿ ಕೂಡಿಕೊಳ್ಳಲಿಕ್ಕೆ ತಾವಾಗಿ ಮುಂದೆ ಬಂದರು. ಮೆರವಣಿಗೆಯು ಇಲ್ಲಿಯ ಶ್ರೀ ಮಠದಿಂದ ಹೊರಟು, ರಾಷ್ಟ್ರಧ್ವಜದ ಜಯಜಯಕಾರದಲ್ಲಿಯೂ, ರಾಷ್ಟ್ರೀಯ ಹಾಡುಗಳನ್ನು ಹಾಡುತ್ತಲೂ, ಇಲ್ಲಿಯ ಕಾಂ. ಕಮಿಟಿಯ ಸೀಮೆಯಲ್ಲೆಲ್ಲಾ ತಿರುಗಿತು. ಜನರಲ್ಲಿ ಬಳ್ಳೆ ಹುರುಪು ನೆಲೆಗೊಂಡಂತೆ ಕಾಣುತ್ತಿತ್ತು.

ಸ್ವಯಂಸೇವಕರ ಮೆರವಣಿಗೆಯು ಕಾರವಾರದ ಕಡೆಗೆ ನಡೆದಾಗ, ಕೈಯಲ್ಲಿ ಕೊಡಪಾನವನ್ನು ತಕ್ಕೊಂಡು ಹೋಗುವ ಒಕ್ಕಲಗಿತ್ತಿಯಾಬ್ಬಳು ಕೊಡಪಾನವನ್ನು ಕೆಳಗಿಟ್ಟು, ಪ-ರಾತ್ಮರ ಕಸಬೀರಗೆ ಪೂಜ್ಯ ಭಾವದಿಂದ ವಂದನೆಗಳನ್ನಿತ್ತಳು' ಕಾರವಾರದಲ್ಲಿ ಮುಟ್ಟಲು, ಅಲ್ಲಿಯ ಕಮಿಟಿಯ ಉಪಾಧ್ಯಕ್ಷರಾದ ಶ್ರೀ| ಗಣಪತರಾವ ನಾಡಕರ್ಣಿ, ಕಾರ್ಯದರ್ಶಿಗಳಾದ ಶ್ರೀ| ಹಳದೀಪೂರ ಕೃಷ್ಣರಾಯರೂ, ಶ್ರೀ| ಎಮ್. ಎನ್. ಶ್ಯಾನಭಾಗರೂ ಇದರಲ್ಲಿ ಕೂಡಿಕೊಂಡರು. ಮೆರವಣಿಗೆಯು ಮಾರುತೀ ದೇವಸ್ಥಾನದಲ್ಲಿ ತಲ್ಪಿದ ಕೂಡಲೇ, ಅಲ್ಲಿ ಶ್ರೀ| ಕೃಷ್ಣರಾಯರು ವಿದ್ವತ್ತಾಪೂರ್ಣ ವ್ಯಾಖ್ಯಾನವನ್ನು ಕೊಟ್ಟು, ನಾಗಪೂರ ಸತ್ಯಾಗ್ರಹದ ಸಮಗ್ರ ಇತಿಹಾಸವನ್ನು ವಿವೇಚಿಸಿ ಹೇಳಿ, ಸರಕಾರವು ಕಾಯಿದೆಯ ದುರುಪಯೋಗವನ್ನು ಹೇಗೆ ಮಾಡುತ್ತದೆಂದು ಜನರ ಮೇಲೆ ಚೆನ್ನಾಗಿ ಬಿಂಬಿಸುವಂತೆ ಹೇಳಿದರು. ಆ ಮೇಲೆ ಶ್ರೀ| ಗಣಪತರಾವ ನಾಡಕರ್ಣಿಯವರು, ಯಾವಾಗಲೂ ಸ್ವತಂತ್ರವೆಂದು ಎಣಿಸಲ್ಪಟ್ಟ ವ್ಯಾಪಾರೀ ವರ್ಗಕ್ಕೆ ತಮ್ಮ ಬಾಧ್ಯತೆ (Right) ಗಳ ಅರಿವು ಮಾಡಿಕೊಟ್ಟು, ಅವರು ತಮ್ಮ ಅಂಗಡಿಯ ಮುಂದೆ, ಬೇರೆ ಜನರು ತಮ್ಮ ತಮ್ಮ ಮನೆಗಳಲ್ಲಿ, ಹಾಗೂ ಪ್ರತಿಯೊಬ್ಬನು ತನ್ನ ಅಂಗಿಯ ಮೇಲೆ ರಾಷ್ಟ್ರಧ್ವಜವನ್ನು ಹಚ್ಚಿ, ಅದರ ಬಗ್ಗೆ ಎಲ್ಲರಲ್ಲಿಯೂ ಪೂಜ್ಯವಾದ ಭಾವನೆಯು ಅದೆ ಎಂದು ತೋರ್ಪಡಿಸಬೇಕೆಂದು ಹೇಳಿದರು. ಅವರ ಉಪನ್ಯಾಸವು ಭಾವನಾಪ್ರಧಾನವಾಗಿತ್ತು. ಅಲ್ಲಿಂದ ಮುಂದೆ, ಮೆರವಣಿಗೆಯು ವಿಸರ್ಜನೆಯಾಯಿತು.

ಶಿರಸಿ— ೧೮ ನೇ ತಾರೀಖಿನ ದಿವಸ ನೂತನ ರಾಷ್ಟ್ರೀಯ ಶಾಲೆಯ ಪ್ರವೇಶೋತ್ಸವವು ಅತ್ಯಂತ ಉತ್ಸಾಹದಿಂದ ನೆರವೇರಿತು. ಸುಖ, ಸಂಪತ್ತು, ವಿದ್ವತ್ತು, ಕೀರ್ತಿಗಳನ್ನಪೇಕ್ಷಿಸುವ ಸ್ವಾರ್ಥ ಜನರಿಗೆ ರಾಷ್ಟ್ರೀಯ ಶಾಲೆಯಿಂದ ಲಾಭವಿಲ್ಲೆಂತಲೂ, ಕೇವಲ ಸ್ವಾರ್ಥತ್ಯಾಗ ಮಾಡಿ ಆತ್ಮೋನ್ನತಿ, ದೇಶೋನ್ನತಿಗಳನ್ನೇ ಬಯಸಲಿಚ್ಛಿಸುವವರಿಗೆ ಮಾತ್ರ ರಾಷ್ಟ್ರೀಯ ಶಾಲೆಯಲ್ಲಿ ಸೇರತಕ್ಕದ್ದೆಂತಲೂ, ಶ್ರೀ| ನಾಯಕರು ವಿಶದೀಕರಿಸಿದರು. ಆ ಮೇಲೆ ಶಾಲೆಯಲ್ಲಿ ಸೇರಲಿಚ್ಛಿಸುವವರ ಹೆಸರಿನ ನೋಂದಣಿಯಾಯಿತು. ಮಾಧ್ಯಮಿಕ ವರ್ಗಗಳಲ್ಲಿ ಎಳ್ಳಷ್ಟು ಹೆಚ್ಚು ಕಡಿಮೆಯಾಗದ ವ್ಯವಸ್ಥೆಯಿಂದ ಶಾಲೆಯು ನಡೆಯುತ್ತಿರುವದು.

ಅದೇ ದಿನ ರಾ. ಶಾಲೆಯಿಂದ ರಾಷ್ಟ್ರೀಯ ನಿಶಾನೆಯ ಮೆರವಣಿಗೆಯನ್ನು ಹೊರಡಿಸಿ, ಊರೆಲ್ಲ ತಿರುಗಿ ಬಂದ ಬಳಿಕ, ಮಾರೀ ಗುಡಿಯಲ್ಲಿ ಭಾಷಣಗಳಾದವು. ಮೆರವಣಿಗೆಯಲ್ಲಿ ಹಲವು ಊರ ಜನರೂ ಸೇರಿದ್ದರು. ಕೆಲಕೆಲವು ಮನೆಗಳಲ್ಲಿ ರಾಷ್ಟ್ರೀಯ ನಿಶಾನೆಯನ್ನು ನಿಲ್ಲಿಸಿದ್ದರು.

ಮೇಘರಾಜನು ತೆರಪಿಲ್ಲದೆ ಮಳೆಯ ವೃಷ್ಟಿಯನ್ನು ಆರಂಭಿಸಿರುತ್ತಾನೆ. ಜನರ ಹಾನಿಯಾದದ್ದು ಲೆಕ್ಕವಿಲ್ಲ.

ಸಿದ್ದಾಪುರ— ತಾರೀಖು ೧೮ ನೇ ಗಾಂಧಿಪರ್ವತ ದಿವಸದ ರಾಷ್ಟ್ರಧ್ವಜದ ಮೆರವಣಿಗೆಯು ಭಜನೆ ಮೇಲಿಂದ ಹೊರಟು, ಊರ ಸುತ್ತುವರಿದು ರಾಷ್ಟ್ರೀಯ ಶಾಲೆಗೆ ಬಂತು. ಆ ದಿವಸ ಟಿಳಕ ಸ್ವರಾಜ್ಯ ಫಂಡಿಗೆ ರೂ. ೯-೧೧-೦ ಕೂಡಿರುತ್ತದೆ.

ತಾ. ೨೧—೭—೨೩ ನೇ ಶನಿವಾರ ಮುಷ್ಟಿ ಫಂಡ. ಅಕ್ಕಿ ೧೨ ಗಿದ್ನೆ ಬಂದಿರುತ್ತದೆ. ಇಲ್ಲಿಂದ ನಾಗಪೂರ ಸತ್ಯಾಗ್ರಹಕ್ಕೆ ಸಧ್ಯದಲ್ಲೇ ಸ್ವಯಂಸೇವಕರು ಹೊರಡುವವರಿದ್ದಾರೆ.

ಮಳೆಯು ಅತಿಶಯ ಬೀಳುತ್ತದೆ. ಒಂದು ದಿವಸ ಸಿರ್ಸಿಯ ಟಪಾಲು ಹೋಗದೆ, ಹಾಗೇ ಮರಳಿ ಬಂತು. ಕಬ್ಬುನೀರ ಹೊಳೆ ಮೋರಿಯು ಕಿತ್ತುಬಿದ್ದಿದೆಯಂತೆ!

ಗೇರಸಪ್ಪೆಯ ರಸ್ತೆಯು ಸಾಧಾರಣ ದುರುಸ್ತು ಆಗಿ, ಗಾಡಿಗಳು ಓಡಾಡುತ್ತವೆ.

ವೃತ್ತಸಾರ.

— ಫಿಜೀ ಸರಕಾರವು ಹಿಂದೀಯರ ಮೇಲೆ ವರ್ಷಕ್ಕೆ ೧ ಪವನು ಜಿಝಿಯಾ ಕರವನ್ನು ಹೊರಿಸಿದೆ. ಹಿಂದೀಯರು ಸೇನಾಧಿಪತಿಗಳಿಗೂ, ಡ್ಯೂಕ ಆಫ್ ಡಿವೊನ್ ಶಾಯರರಿಗೂ ಅರ್ಜಿ ಮಾಡಿದರೂ, ಫಲನಿಷ್ಪತ್ತಿಯೇನಾಗಲಿಲ್ಲ.

— ಮಾಜಿ ಭಾರತ ಮಂತ್ರಿಗಳಾದ ಮಿ| ಮೊಂಟೆಗ್ಯೂರವರು ಸಪತ್ನೀಕರಾಗಿ ಜನವರಿ ತಿಂಗಳಲ್ಲಿ ಮುಂಬಯಿಯಲ್ಲಿ ಇಳಿಯುವರು. ಹಿಂದುಸ್ಥಾನದಲ್ಲಿ ೨ ತಿಂಗಳು ಪ್ರವಾಸಮಾಡುವರೆಂದು ಹೇಳುತ್ತಾರೆ.

— ನಾಭಾ ಸಂಸ್ಥಾನದ ಮಹಾರಾಜರನ್ನು ಹಿಂದುಸ್ಥಾನ ಸರಕಾರವು ಪದಚ್ಯುತ ಮಾಡಿದ ಬಗ್ಗೆ ಮುಂಬಯಿಯಲ್ಲಿ ಶ್ರೀಮತಿ ಸರೋಜಿನಿ ದೇವಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ನಿಷೇಧಪ್ರದರ್ಶನವಾಯಿತು. ಮಹಾರಾಜರವರಿಗೆ ಪುನಃ ರಾಜ್ಯಪದವು ಪ್ರಾಪ್ತವಾಗಲೆಂತಲೂ ಪ್ರಾರ್ಥನೆ ಮಾಡಲಾಯಿತು. ಲಾಹೋರಿನ ಗುರುದ್ವಾರ ಪ್ರಬಂಧಕ ಕಮಿಟಿಯವರು ತಮ್ಮ ಜ್ಞಾತಿಯ ಮಹಾರಾಜರಿಗೆ ಗಾದಿಯು ಪುನಃ ಪ್ರಾಪ್ತವಾಗುವ ಬಗ್ಗೆ ನಾಳಿನ ತಾ. ೨೯ ನೇ ರವಿವಾರಕ್ಕೆ ಪಂಥದವರು ಪ್ರಾರ್ಥನೆ ಮಾಡಬೇಕೆಂದು ವಿಧಿಸಿರುವರು.

— ನಾಗಪುರದಲ್ಲಿ ಸೆರೆಹಿಡಿದ ಸತ್ಯಾಗ್ರಹಿಗಳ ಸಂಖ್ಯೆಯು ಜುಲೈ ತಾ. ೧೯ನೇ ವರೆಗೆ ೧೨೪೫ ಆಗಿರುತ್ತದೆ.

— ಶ್ರೀ| ಕಸ್ತೂರಿಬಾಯಿ ಗಾಂಧಿಯವರು ಮಹಾತ್ಮರ ಭೆಟ್ಟಿಯನ್ನು ಕಳೆದ ವಾರ ಪಡೆಕೊಂಡರು. ಮಹಾತ್ಮರಿಗೆ ಹೊಟ್ಟೆಕೂಲಿಯಿದ್ದದರಿಂದ, ಅವರು ಹಾಲು, ಮಾವಿನ ಹಣ್ಣುಗಳ ಮೇಲೆ ಇರುತ್ತಾರೆ. ರಾಷ್ಟ್ರಧ್ವಜ ರಕ್ಷಣಕ್ಕಾಗಿ ಶೇಟ ಜಮನಾಲಾಲಜಿಯವರು ಕಾರಾಗ್ರಹವಾಸವನ್ನು ಸೇರಿದ ಸುದ್ದಿ ಕೇಳಿ, ಅವರಿಗೆ ಆನಂದವಾಯಿತು.

ಶ್ರೀ ಶ್ರೀಪಾದರಾವ ದೇಶಪಾಂಡೆಯವರಿಗೆ ವಿನಂತಿ.

“ ಸನ್ ೧೯೩೧ ನೇ ಇಸವಿಯಲ್ಲಿ ನಿಧನಹೊಂದಿದ ಶ್ರೀ ವಾಮನರಾವ ದೇಶಪಾಂಡೆ ಇವರ ಸ್ಮಾರಕವೆಂದು ಅವರ ಚಿರಂಜೀವಿಗಳಾದ ಶ್ರೀ ದತ್ತಾತ್ರಯ ಮತ್ತು ಕೇಶವರಾವ ಇವರು ಒಂದು ಗೋಶಾಲೆಯನ್ನು ಕಟ್ಟಿಸಿ, ಗೋರಕ್ಷಣೆಯ ಸಂಸ್ಥೆಗೆ ಕೊಡುತ್ತೇವೆಂದು ಅಭಿವಚನವಿತ್ತು, ಅದರಂತೆ ಕಟ್ಟಿಸಹತ್ತಿದ್ದು, ಈಗ ಆ ಕಟ್ಟಡವು ಮುಗಿಯುತ್ತ ಬಂದಿದೆ. ಅದರಂತೆ ಮೊನ್ನೆ ತೀರಿಕೊಂಡ ಶ್ರೀ ದತ್ತೋಬರಾವ ದೇಶಪಾಂಡೆ ಇವರ ಪುಣ್ಯ ಸ್ಮಾರಕವೊಂದನ್ನು ಮಾಡಿಡಬೇಕೆಂದು ಅವರ ಬಿ ಶ್ರೀ ಶ್ರೀಪಾದರಾವ ದೇಶಪಾಂಡೆ ಇವರು ಎಣಿಸಿರುತ್ತಾರೆಂದು ಕೇಳುತ್ತೇನೆ. ಇದು ನಿಜವಿದ್ದರೆ, ಅವರು ಇಲ್ಲಿ ಒಂದು ದತ್ತೋ “ಟೌನ ಹಾಲಂ”ಬ ಒಂದು ಸಾರ್ವಜನಿಕ ಇಮಾರತನ್ನು ಕಟ್ಟಿಸಿ, ಸಾರ್ವಜನಿಕ ಉಪಯೋಗಕ್ಕೆ ಕೊಟ್ಟು, ಕೀರ್ತಿ ಪಡೆಯಬೇಕಾಗಿ ವಿನಂತಿಯಿದೆ. ಯಾಕಂದರೆ ಸಮಾಜ ಮತ್ತು ದೇಶಗಳ ಉನ್ನತಿಗೂ, ಬಾಲ, ತರುಣ, ವೃದ್ಧರ ನೈತಿಕ, ಧಾರ್ಮಿಕ ವಿಚಾರಗಳ ಸುಧಾರಣೆಗಳಿಗೂ, ಬೇರೆ ಬೇರೆ ಜನಾಂಗಗಳಲ್ಲಿರಬೇಕಾದ ಒಕ್ಕಟ್ಟಿನ ಮಂತ್ರವನ್ನು ಚೆನ್ನಾಗಿ ಅರಿತು, ಕಾರ್ಯ ಮಾಡುವದಕ್ಕೂ, ಆಬಾಲವೃದ್ಧರ ಒಂದು ಕಡೆಗೆ ಮೇಳಿಂದ ಮೇಲೆ ಮಿಲನವಾಗುವದು ಪ್ರಾಪ್ತವದೆ. ಇಂಥ ಸಂಘಟನೆಗಳಿಂದ ಅವರು ತಮ್ಮ ತಮ್ಮ ವಿಚಾರಗಳನ್ನು ಅದಲು ಬದಲು ಮಾಡಿ, ತಾವು ನಿಜವಾದ ಮಾರ್ಗವನ್ನು ಹಿಡಿಯುವದಕ್ಕೆ ಸಹಾಯವಾಗುತ್ತದೆ. ಇಂಥ ಕಟ್ಟಡಗಳು ಸುಧಾರಿಸಿದ ಪ್ರತಿಯೊಂದು ದೇಶದಲ್ಲಿ, ಪ್ರಾಂತದಲ್ಲಿ, ಊರಿನಲ್ಲಿ ಇರುತ್ತವೆ. ಹಾಗೆಯೇ ಅಂಥಾದ್ದೊಂದು ಇಮಾರತು ಇಲ್ಲಿ ಅತಿ ಅವಶ್ಯವಾಗಿ ಬೇಕಾಗಿರುತ್ತದೆ. ಕಾರಣ ಸದರಿ ಶ್ರೀಮಂತ ಶ್ರೀಪಾದರಾವ ದೇಶಪಾಂಡೆ ಇವರು ತಮ್ಮ ತಂದೆಯವರ ಸ್ಮಾರಕವನ್ನು ಇಂಥ ಒಂದು ಕಟ್ಟಡದ ರೂಪದಿಂದ ಮಾಡಿಸಿ, ಮೃತರ ಹೆಸರು ಅಜರಾಮರ ಮಾಡಿ, ತಾವು ಸಮಾಜದ ಹಿತೈಷಿಗಳೆಂದು ಕೀರ್ತಿ ಪಡೆಯುವಿರಾಗಿ ಆಶಿಸುತ್ತೇನೆ.”

ಓರ್ವ ನಿವಾಸಿ.

ಗೌಡ ಸಾರಸ್ವತ ಬ್ರಾಹ್ಮಣ

ಸ್ಕಾಲರಶಿಪ್ ಲೀಗ, ಮುಂಬಯಿ.

ಈ ಸಂಸ್ಥೆಯ ೯ನೇ ವಾರ್ಷಿಕ ಸಾಧಾರಣ ಸಭೆಯು ಇದೇ ಬರುವ ತಾ. ೩೯ ನೇ ರವಿವಾರ ಅಪರಾಹ್ನ ೪ ಘಂಟೆಗೆ ಲೀಗ ಆಫೀಸಿನಲ್ಲಿ (ಗಿರಗಾಂವ ತ್ರಿಭುವನ ರೋಡದ ಮೋತೀಲಾಲ ಲಾಲ ಹೌಸ ನಂ. ೨, ೩ನೇ ಮಾಳಗಿಯ ದಿವಾಣಖಾನೆಯಲ್ಲಿ ಕೂಡುವದು. ಆಗ ಈ ಕೆಳಗಿನ ವಿಷಯಗಳ ಚರ್ಚೆಯಾಗತಕ್ಕದ್ದಿದೆ.

(೧) ೧೯೩೨-೩೩ ವರ್ಷದ ಸಂಸ್ಥೆಯ ರಿಪೋರ್ಟು ಮಂಜೂರ ಮಾಡುವದು.

(೨) ೧೯೩೨-೧೯೩೩ ವರ್ಷದ ಜಮಾ ಖರ್ಚಿನ ಪಟ್ಟಿಯನ್ನು ಮಂಜೂರ ಮಾಡುವದು. (ಇದರ ಒಂದೊಂದು ಪ್ರತಿಯು ಸಭಾಸದರ ಮಾಹಿತಿಗಾಗಿ ಆಯಾ ಸ್ಥಾನಿಕ ಪ್ರತಿನಿಧಿಯವರ ಕಡೆಗೆ ಇಟ್ಟಿರುತ್ತದೆ.)

(೩) ಚಾಲು ವರ್ಷದ ಅಧಿಕಾರ ಮಂಡಳವನ್ನು ಚುನಾಯಿಸುವದು.

(೪) ಸಂಸ್ಥೆಯನ್ನು ರಜಿಸ್ಟರ ಮಾಡುವ ಪ್ರಶ್ನೆಯನ್ನು ವಿಚಾರಮಾಡುವದು.

(೫) ಇಮುಂದೆ ಗೃಹಸ್ಥರ ಒಂದು ಕಾಯಮ್ ಟ್ರಸ್ಟಿಗಳ ಬೋರ್ಡನ್ನು ನೇಮಿಸಿ, ಸಂಸ್ಥೆಯ ರಿಝರ್ವ ಫಂಡನ್ನು ಈ ಬೋರ್ಡಿನ ವಶ ಇಡುವ ವಿಷಯವನ್ನು ಚರ್ಚಿಸುವದು, ಇತ್ಯಾದಿ.

ಎಲ್ಲ ಸಭಾಸದರು ನೇಮಕ ಹೊತ್ತಿಗೆ ಬರಬೇಕೆಂದು ವಿನಂತಿ.

ಕೇಶವ ಉಪೇಂದ್ರ ಭಟ್ಟ.
ಕೃಷ್ಣ ಪದ್ಮನಾಭ ಪ್ರಭು.
ಜಿಟ್ಟಿಸ್.

— ಕ್ಯಾಕೊಟೆ ನಲ್ಲಿ ಕಳೆದ ಸೋಮವಾರ ತಾ. ೧೬ ರಿಂದ ಮಾಳೆಗಾಂವ ದಂಗೆಯ ಮೂಲಕ ಬದಗಿದ ಲಕ್ಷ್ನಿ ಭರಪಾಯಿಯನ್ನು ವಸೂಲ ಮಾಡಿಕೊಳ್ಳಲು ಸರಕಾರವು ಕೈಕೊಂಡ ಯೋಜನೆಯು ಬೇಕಾಯಿದೇಶೀರ ಎಂದು ಅಪೀಲು ನಡೆದರೆ ಅಪೀಲಾಂಟರ ತರ್ಫೆನಿಂದ ತರ್ಫೆನಿಂದ ಸರ್ ಚಿಮಣಲಾಲ ಸೆಟಲವಾಡರವರು ಕೆಲಸ ನಡಿಸುತ್ತಾರೆ

ಶುದ್ಧ ಖಾದಿ

ವಿಕ್ರಿಗೆ ತಯಾರ.

ಹೊನ್ನಾವರ ತಾಲೂಕಾ ಕೊಂಗ್ರೆಸ ಕಮಿಟಿಯಿಂದ ಕೈಮಗ್ಗದ್ದ ಕೆಯಟಿಯ ಶುದ್ಧ ನೂಲಿನ ಖಾದಿ ಮಾರಾಟಕ್ಕೆ ಕೊಂಗ್ರೆಸ ಆಫೀಸಿನಲ್ಲಿ ಸಿಗುವದು.

ಹೊನ್ನಾವರ, ೧೦-೧೨-೩೩. } ಸೆಕ್ರೆಟರಿ, ತಾ. ಕಾ. ಕಮಿಟಿ. ಹೊನ್ನಾವರ.

ಮೂರ್ತಿಗಳು ಬೇಕೋ?

ನಮ್ಮಲ್ಲಿ ಭಂಗಾರ, ಬೆಳ್ಳಿ, ಪಂಚಧಾತು, ಹಿತ್ತಾಳೆ, ತಾಮ್ರ ವ ಕರೇಶಿಲೆಯ ಮೂರ್ತಿಗಳೂ, ಇದಲ್ಲದೆ ಬಾಣಪೀಠಗಳೂ, ಪ್ರಭಾವಳಿಗಳೂ, ಈಶ್ವರ ಮುಖಾಟಿಗಳೂ, ನಾಗಾಭರಣಗಳೂ, ಕವಚುಗಳೂ ವ ಯಾವದೇ ತರದ ಪ್ರತಿಮೆಗಳೂ ನಮ್ಮಲ್ಲಿ ಯೋಗ್ಯ ದರಕ್ಕೆ ವ ಯೋಗ್ಯ ಹೊತ್ತಿಗೆ ಮಾಡಿ ಕೊಡಲ್ಪಡುವವು. ಬೇಕಾದವರು ಪತ್ರವ್ಯವಹಾರ ಮಾಡಿ ಯಾ ಸಮಕ್ಷ ಬಂದು ದರವಾರ ತಿಳಕೊಳ್ಳಬಹುದ.

ಪತ್ತೆ:—ನಾರಾಯಣ ಹುವಯ್ಯ ಶೇಟ,
ಗುಡಗಾರ, ಗುಜರಗಲ್ಲಿ, ಕುಮಟಾ.
(ಉ. ಕಾನಡಾ.)

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು, ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ, ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೊ, ಫೋರ್ಟ,
ಮುಂಬಯಿ.

ಮನೆ ಕಟ್ಟುವವರಿಗೆ ಸುಸಂಧಿಯು.





ಮೇಲಂತಸ್ತಿಗೆ ಶೋಭೆ ಬರುವದಕ್ಕೆ ನಾನಾ ತರ ನಕ್ಷೀ ಕೊರೆಯಲ್ಪಟ್ಟ ಬೀಡಿನ ಕಟಾಂಜನಗಳೂ, ಹೂದೋಟ, ಒಳಂಗಳ, ಉಪ್ಪರಿಗೆ, ದಿವಾನಖಾನೆ ಮೊದಲಾದ ಸ್ಥಳಗಳಲ್ಲಿ ವಿಶ್ರಾಂತಿಗೊಳ್ಳುವದಕ್ಕೆ ತಕ್ಕ ಬಾಕುಗಳೂ ಕಿರ್ಲೋಸ್ಕರ ಕಾರಖಾನೆಯಲ್ಲಿ ಸೌಕರ್ಯದಿಂದ ದೊರೆಯುತ್ತವೆ. ಪತ್ರ ಬರೆದು ‘ಚಿ’ ಕ್ಯಾಟಲಾಗು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ.)

ಲೋಕಾನುಕೂಲತೆಯಾಗಬೇಕೆಂದು, लोकानुकूलता व्हावी ह्मणून,

ನಮ್ಮ 'ಸ್ಟಾರ ಆಫ್ ಕೆನರಾ' ಮುದ್ರಣಾಲಯದಲ್ಲಿ

आमच्या 'स्टॉर ऑफ केनरा' मुद्रणालयांत

नवीन व्यवस्था !! ಹೊಸ ಏರ್ಪಾಟು !! नवीन व्यवस्था !!

'STAR OF KANARA' PRESS, ;KUMTA.

ನಮ್ಮ ಮುದ್ರಣಾಲಯದಲ್ಲಿ ಲೋಕಾನುಕೂಲತೆಗಾಗಿ ಮಾಡಿದ ಹೊಸ ಏರ್ಪಾಟುಗಳ ವಿವರ:—

ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಗಳಲ್ಲಿ

೧. ಮನೋಹರ ಮುದ್ರಣ. ೨. ಸಕಾಲ ಮುದ್ರಣ. ೩. ಸುಲಭ ದರ.

ಸಂಕ್ಷೇಪತಃ ಹೇಳಬೇಕಾದರೆ —

ಅಗ್ಗ ಅಚ್ಚು! ಅಂದ ಅಚ್ಚು!! ಅಚ್ಛ ಅಚ್ಚು!!!

ತರತರದ ಬಣ್ಣಗಳಿಂದ ಸುಶೋಭಿತವಾಗಿ ಮುದ್ರಣ ಮಾಡಿಕೊಡುವದಲ್ಲದೆ, ಫೋಟೋ-ಬ್ಲೋಕುಗಳನ್ನು ಮುದ್ರಿಸುವ ಏರ್ಪಾಟು ಮಾಡಲಾಗಿದೆ.

ಜರೂರಾಯಿತಿ ಜನರಿಗಾಗಿ—

ಬೇಕಾದ ಛಾಪೆ ಕೆಲಸದ ನಮೂನೆಯನ್ನು ಟಪಾಲದ್ವಾರಾ ಎಡ್ವಾನ್ಸ ಸಹಿತ ಕಳಿಸಿದಲ್ಲಿ, ಯಥಾಪ್ರತಿ ಮುದ್ರಣ ಮಾಡಿ ೧-೨ ದಿವಸಗಳಲ್ಲಿಯೇ ವ್ಹಿ. ಪಿ. ಯಿಂದ ಕಳಿಸುವ ವ್ಯವಸ್ಥೆಯೂ ಮಾಡಲ್ಪಟ್ಟಿದೆ. ಬ್ಯಾಂಡಿಂಗ ಕೆಲಸವೂ ಅಚ್ಚುಕಟ್ಟಾಗಿ ಮಾಡಿ ಕೊಡಲ್ಪಡುವದು. ಒಮ್ಮೆ ಆರ್ಡರು ಕಳುಹಿಸಿ, ನೋಡಬಹುದಲ್ಲವೇ?

ಇದಲ್ಲದೆ, ನಮ್ಮಲ್ಲಿ ಗ್ರಂಥ. ಪುಸ್ತಕ, ಮಾಸಪತ್ರಿಕೆ, ಪಂಚಾಂಗ ಮುಂತಾದ ವಿವಿಧ ಮುದ್ರಣ ಕೆಲಸವು ಸುಲಭ ದರದಿಂದ, ತಕ್ಕ ಹೊತ್ತಿಗೆ ತಯಾರಿಸಿ ಕೊಡಲ್ಪಡುವದು.

ಮಾರಾಟಕ್ಕೆ ಸಿದ್ಧ.

ಕೋರ್ಟು ಕಚೇರಿಗಳಲ್ಲಿ ವಕೀಲರಿಗೆ ಬೇಕಾಗುವ ವಕಾಲತ ಅನುಲಜಾರಿ ಸಾಕ್ಷಿಪಟ್ಟಿ ಯಾದಿ, ನಕಲು ಅರ್ಜಿ, ದಸ್ತೈವಜು ಪರತ ಬೇಡುವ ಅರ್ಜಿ, ಜ್ಯಾಹಿರಿ ಮುಂತಾದ ಎಲ್ಲ ತರದ ಫಾರ್ಮುಗಳೂ, ಶಿಪ್ಪಿಂಗ ಬಿಲು, ಸತಮಿ, ಬಿಲ್ ಆಫ್ ಎಂಟ್ರಿ ಮೊದಲಾದ ಕಸ್ಟಮ್ ಫಾರ್ಮುಗಳೂ ಮಾರಾಟಕ್ಕೆ ದೊರೆಯುತ್ತವೆ.

ವಿಶೇಷ ಮಾಹಿತಿ ಪತ್ರದ್ವಾರಾ ಯಾ ಮೊಕ್ತಾ.

ಪತ್ತೆ:— ಕೃಷ್ಣರಾವ ಕೇಶವ ಶೇಣವಿ, ಹೆಗಡೇಕರ,
ಮಾಲಕ,
'ಸ್ಟಾರ ಆಫ್ ಕೆನರಾ' ಪ್ರೆಸ್, ಕುಮಟಾ.
(ಉ. ಕಾನಡಾ.)

Printed and Published by Krishnarao Keshav Shenvi (Editor) at his Star of Kanara Press, Kumta

Reg. No. B 1270

Thursday,2thAugust 1923

ವರ್ಷ ೭.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೩.

ಪತ್ರಿಕಾ ವರ್ಗಣಿ:-

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮುಫಸ್ಸಲದಾರರಿಯಿಂದ
ರೂ. 3-0-0
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

[illegible]
[illegible]

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಪ್ರಕಾಶ್ಯ ಜಾಹಿರಾತು(೧೫ ಓಳಿಗಳವರೆಗೆ) ಆ ಸಾಲುಗಳ ವರೆಗೆ ರೂ. ೧-೦-೦. ಅನಂತ ಪ್ರತಿ ಸಾಲಿಗೆ ೦-೨-೦.
ಮೇಲೆ ಇಂಗಿತ ಸಾಲು ಎಷ್ಟು ಹೊತ ಬರುವದೋ ಆ ಮಾನ ದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಯಾ ಸಮಕ್ಷ ತಿಳಿಸಲ್ಪಡುವವು

-(ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖ ೨ ಮಾಹೆ ಅಗಸ್ಟ ಸನ್ ೧೯೨೩ ನೇ ಇಸವಿ)-

हिंदुस्थानांतील रहिवाशांस ज्याप्रमाणे हिंदुस्थानची हवा त्याप्रमाणेंच हें औषध हिंदुस्थानांतील लोकांस ज्यास्त फायदेशीर आहे,

द्राक्षासव- { दीड रतलची किंमत १ रुपये;

रामबाण औषधें

सर्दी घालविणारें,
मूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

पिण्यास रुचिकर.

क्यॅटलॉग मागवा,

झंडु फार्मास्युटिकल वर्क्स लिमिटेड,
मुंबई नं. १३

CLAXO:- FRESH STOCK. NEW BRAND. *a food for infants and invalids.*

Kalmegh :- *Well-tried remedy in Liver complaints especially of children.*

Syrup of Vasaka :- *Highly efficacious in cold, cough, crough and bronchitis.*

Besides we have in stock other patent medicines, Thermometres, Glycerine Syringes etc.,

Orders will be executed by V. P. P.

The New Emporium
Honavar. (N. Kanara.)

ಡಾ॥ ವಾಸೂರಕರರ

ಸುಧಾಂಜನ.

ಅಂಜನುಗಳಿಗೆಲ್ಲ ಅರಸು.



ತಲೆಶೂಲಿ, ವಾತ ವೇದನೆ, ಕೆಮ್ಮು, ಹಲ್ಲು ನೋವು ಇತ್ಯಾದಿಗಳಿಗೆ ಕ್ಷಿಪ್ರ ಗುಣಕಾರಿ ಮದ್ದು. ಬೆಲೆ ೭ ಆಣೆ ಮಾತ್ರ. ವ್ಯಾಪಾರಿಗಳಿಗೆ ವಿಶೇಷ ಸವಲತು ಹೆಚ್ಚಿನ ಮಾಹಿತಿ ಏಜಂಟರಿಂದ.

ಏಜಂಟ್ಸ್:— **ನಾಗರ್ಕೇಟ್ಟಿ ಬ್ರದರ್ಸ್,**
ಸುಧಾಂಜನ ಡಿಪೋ,
ಕುಮಟಾ. (ಜಿಲ್ಹಾ ಕಾರವಾರ.)

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ವಿಷಯುಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿ ಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ.

ಈ ವರೆಗೆ ಪ್ರಕಟವಾದ ಪುಸ್ತಕಗಳು.

(೧-೨) ಗ್ರೀಸ ದೇಶದ ಗಾಂಧಿ. (ಸಾಕ್ರೆಟೀಸ) (೩) ಸ್ವಾತಂತ್ರ್ಯಸಾಧನೆ. (೪) ಗುರು-ಹಿರಿಯರೂ, ಬಂಧು-ಭಗಿನಿಯರೂ. (೫) ರಾಷ್ಟ್ರೀಯ ಶಿಕ್ಷಣ. (೬) ಸದ್ಗುಣಮಂದಿರ. (ಭಾಗ ೧.) (೭) ಸ್ವರಾಜ್ಯ ಧರ್ಮ. (ಅನಾಮಿಕ ಪುಷ್ಪ) ಇವಿಷ್ಟು ಪ್ರಕಟವಾಗಿದ್ದು, ೫ ಆಣೆಗೆ ಒಂದರಂತೆ ದೊರೆಯುತ್ತವೆ. ವರ್ಗಣೀದಾರರಿಗೆ ಹಿಂದಿನ ಬೇಕಾದ ಪುಸ್ತಕಗಳು ೪ ಆಣೆಗೆ ಒಂದರಂತೆ ದೊರೆಯುವವು. ೬ ಪುಸ್ತಕಗಳಿಗೆ ಕೂಡಿ ೧॥ ರೂಪಾಯಿ ಮಾತ್ರ. ಅಂಚೆವೆಚ್ಚ ಬೇರೆ. ದ್ವಿತೀಯ ವರ್ಷ ಪ್ರಾರಂಭ. ಅನುಕ್ರಮವಾಗಿ ಮಾರ್ಚ, ಮೇ, ಜುಲೈ, ಸಪ್ಟಂಬರ, ನವಂಬರ, ಜನವರಿ ೧೮ ನೇ ತಾರೀಖಿಗೆ ಒಂದೊಂದು ಪುಸ್ತಕ ಹೊರಡುವದು. ವಾ. ವ. ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ.

ವಾ. ಅ. ಹೊದ್ಕೆ,
ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ.

ಎಲ್ಲ ತರದ ಜ್ವರಗಳಮೇಲೆ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ, ಶೈತ್ಯ, ಬಂಗಲಿ, ಅಥವಾ ದೂಷಿತ ಹವೆಯಿಂದ ಬರುವ ಸಾದಾ ವಿಷಾರೀ ಅಥವಾ ಇತರ ಜ್ವರಗಳೂ, ಇನಪ್ಲುಎಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನ್ಯಾವದ ದುಷ್ಪರಿಣಾಮರಹಿತ ಕೇವಲ ವನಸ್ಪತಿಯ ಈ ಮದ್ದು ಸೇವಿಸಿದರೆ ಅಶಕ್ತತೆಯಾಗದೆ, ದಿವಸು ಬಂದು ಜ್ವರ ಇಳಿಯುತ್ತದೆ. ಹಾಗು ರೋಗಿಯು ಶರಿತ ವಾಸಿಯಾಗುತ್ತಾನೆ.

೩ ಔಂಸ ಬಾಟ್ಲಿ ಕಿಂಮತ ರೂ. ೧-೦-೦.

ಇದರ ಹೊರತು ಇನ್ನೂ ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ, ಉತ್ಕೃಷ್ಟ ಪ್ರತಿಯ ಕೋಲನ ವಾಟರ, ಲವೆಂಡರ ಇತ್ಯಾದಿ ಸಾಮಗ್ರಿಗಳು ಅಲೆಂಬಿಕದ ಕಾರಖಾನೆಯಲ್ಲಿ ತಯಾರಾಗುತ್ತವೆ. ಸುರಾಖ ಕೆಟಲಾಗು ತರಿಸಿರಿ.

ಅಲೆಂಬಿಕ್ ಕೆಮಿಕಲ್ ವರ್ಕ್ಸ್,
ಕಂಪನಿ, ಲಿಮಿಟೆಡ್.
ನಂ. ೫೦, ಪ್ರಿನ್ಸೆಸ್‌ಸ್ಟ್ರೀಟ, ಮುಂಬಯಿ.

अलेंबिक केमिकल वर्क्स कं० लि०
नं. ५० प्रिन्सेस स्ट्रीट मुंबई.

ಶುದ್ಧ ಖದ್ದರ್ ರೇಶ್ಮಿ ಮಡಿಗಳು.

ಸುಲಭ ಕ್ರಯಕ್ಕೆ ಖಾತ್ರಿಯಾದ ಎಲ್ಲಾ ರಂಗುಗಳಲ್ಲಿಯೂ ಈ ಕೆಳಗೆ ಬರೆದ ಕ್ರಯಕ್ಕೆ ದೊರೆಯುವದು.

೧೮ ಮೊಳ	ಉದ್ದ	೨॥	ಅಗಲ	ರೂ.	೨೩	ರಿಂದ	೨೫	ವರೆಗೆ
೧೬	,,	,,	೨॥	,,	,,	೨೦ — ೨೦	,,
೮	,,	,,	೨॥	,,	,,	೯ — ೧೫	,,
೬	,,	,,	೨॥	,,	,,	೭ — ೧೧	,,

S U K. & CO.
BENARES CITY

ಅಂಗಿ ಬಟ್ಟೆಗಳು ೧೮ ಮೊಳ ×೨ ಮೊಳ ರೂಪ್ಯಾ ೧೮ ರಿಂದ ೩೦ವರೆಗೆ. ಶೇಲು ೧೨ ಮೊಳ ×೧॥ ಮೊಳ ಅಗಲ ರೂಪ್ಯಾ ೧೦ ರಿಂದ ೧೫ ವರೆಗೆ ಜೀನ್‌ಶಾಪ್ ೧೪ ಮೊಳ ×೨ ಮೊಳ ರೂ. ೨೪ ರಿಂದ ೩೫ ವರೆಗೆ ಇವುಗಳಲ್ಲದೆ ಶಾಲೀ ಪೀತಾಂಬರ, ಕಾಶ್ಮೀರ್ ಶಾಲು, ರುದ್ರಾಕ್ಷಿ, ಜಾಗಂಟೆ, ಶಾಳ, ಕಾಶ್ಮೀರ್ ಶಾವಿ, ಆಟಿಕ ಸಾಮಾನುಗಳು, ದೇವರ ಮತ್ತು ಗಾಂಧಿ ಮಹಾತ್ಮರ ಚಿತ್ರಗಳಿರುವ ಉಂಗುರಗಳ ಮತ್ತು ಇನ್ನು ಅನೇಕ ಸಾಮಾನುಗಳ ಕ್ಯಾಟಲಾಗ್ ಉಚಿತ.

ವಿಳಾಸ:— ಎಸ್. ಯು. ನಾರಾಯಣದಾಸಜೀ ಮತ್ತು ಕಂಪನಿ, ಚೌಕಂಬಾ, ಕಾಶಿಕ್ಷೇತ್ರ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. (ರಿಜಿಸ್ಟರ್ಡ)

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶಕಲಾಪವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವದೋ.

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅತ್ಯಾವಶ್ಯಕದ ಸಹಕಾರಿಯಾಗಿರುತ್ತದೆ ಈ ಆಯಿಲ್ ಹೊಡೆದುಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ಹಚ್ಚಿದ ರೂಢಿಗಿದ ಒಳಿಕ ಎಂದಿಗೂ ಜಗುರಿ ಬಿದ್ದು ಹೋಗಲಾರವು, ಅವರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ಕಳೆಯುವದು ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ "ಸರ್ಟಿಫಿಕೇಟ ಒಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗ್ರಾಹಕರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ — ಸೀಸೆ ರೂಪಾಯಿ 1 0 0, ಸೀಸೆ 3ಕ್ಕೆ. ರೂಪಾಯಿ 2-10-0, ವಿಪಿ ಖರ್ಚು 0 11-0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಚನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ದುಸಿದವಾದುದು. ಇದರಲ್ಲಿ ಮರಿಸೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವರ್ಗೀಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಸುಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0; 1 ಡ್ರಾಮಿನ (ವಿ ಡಿಯಂ) ಸೀಸೆ 1 ಕ್ಕೆ 0 12-0 ; ಬೆಸ್ಟಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0.

ಒಟ್ಟೋ ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0.

Address.- **The Anglo Indian Drug & Chemical Co,**
16 Market, **BOMBAY. 2.**

ಖರೇ ಮಾಲು ! ತಾಜಾ ಕಲ್ಮು !' ಕ್ವರೆ ಗ್ಯಾಯಿರಿ!!!

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳೆಸಿ, ಪುರುಷರಿಗೆ ಸ್ತ್ರೀ ವಿಷಯವಾಗಿಯೂ, ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷಯುಕ್ತ ಶಕ್ತಿಯನ್ನು ಉಂಟುಮಾಡಿ, ದಿನೇ ದಿನೇ ಶರೀರದ ಜಡತನವನ್ನೂ ರೋಗಗಳನ್ನೂ ದೂರಪಡಿಸಿ ಆಯುರಾರೋಗ್ಯವನ್ನೂ, ರತಿಯಲ್ಲಿ ಹಗ್ಗಳವಾದ ಕುತೂಹಲವನ್ನು ತೋರಿಸುವ ಕ್ರೀಡಾ ಶಕ್ತಿಯ ಉತ್ಸಾಹವನ್ನೂ ಸಂಭೋಗದಲ್ಲಿ ತೃಪ್ತಿಯನ್ನೂ, ಸೌಖ್ಯವನ್ನೂ ಕೊಟ್ಟು, ಮನಸ್ಸಿನ ದೃಢತೆಯನ್ನೂ ಯೌವನದ ಬಲೆಯನ್ನೂ ದೊರಕಿಸಿ ಮುದಿತನವನ್ನುನೀಗಿ ಬಲವನ್ನು ಉಂಟುಮಾಡುವದು. ಮೃತ್ಯುವನ್ನು ನಿವಾರಿಸಿ, ಬಗೆಬಗೆಯ ರೋಗಗಳನ್ನು ನಾಶಮಾಡುವದು ಜೀರ್ಣಜ್ವರ, ಮಂದಾಗ್ನಿ, ಶುಕ್ಲಸ್ರಾವ, ಆಮಶಂಕೆ ಇವುಗಳನ್ನು ಬೇಗನೇ ನಾಶಮಾಡುವದು ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, ದೇಶಕಾಲಗಳಿಂದಲೂ, ಅತ್ಯಾಹಾರಗಳಿಂದಲೂ, ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡಿಸುವ ಬಲತ್ಕಾರದ ಹಸ್ತಘರ್ಷಣದಿಂದಲೂ, ಅತಿವಿಷಯೋಪಭೋಗದಿಂದಲೂ, ಇಂದ್ರಿಯ ಶಿಥಿಲವೂ, ತೆಳುವೂ, ನಿಸ್ತೇಜವೂ ಆಗಿ ಯತ್ನವಿಲ್ಲದೆ ಸ್ಖಲನವಾಗುವದು. ಒಂದೊಂದು ಸಾರಿ ಮೂತ್ರದಲ್ಲಿಯೂ ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತೆ, ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈಬಿಸುವು, ನಿದ್ರೆಯಲ್ಲಿ ಭೀಕರವಾದ ಸ್ವಪ್ನ, ಅರಿಕೆ, ಮರುವು ಮತ್ತು ಶರೀರದ ಹಾಗೂ ಮನಸ್ಸಿನ ಚೇತನ ಕುಂದಿ ಹೋಗುವದು, ಇವೆಲ್ಲವುಗಳಮೇಲೆ ರಾಮಬಾಣದಂತಿರುವದು ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ. ೧॥ ನಂ ೧ ನಂ ೨ ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತವೆ ಅಂತು ೬೦ಗುಳಿಗೆಗಳುಳ ಸೀಸೆಗಳಿಗೆ ರೂ. ೩ ಪೋಸ್ಟೇಜ ಬೇರೆ.

ಎಮ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ,
ಕರ್ಕಿ. (ಕೆನರಾ.)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧ ರಾಗದ ಕೈಪೆಟ್ಟಿಗೆ ಕಿಂ. ೨೦, ೪೦, ೪೫ ೫೦, ೬೦

೨ „ ಕಾಲು ಪೆಟಿಗೆ ಕಿಂ. ೩೫, ೭೫, ೧೪೦, ೧೬೦.

೩ ತಬಲೆ ಜೋಡಿ ಕಿಂ. ೧೩, ೧೫, ೧೮ ೨೦.

೪ ಹಾರ್ಮೋನಿಯಮ ಗ್ಯಾಡ ಕಿಂ. ೧॥, ತಬಲೆ ಗಾಡ ಕಿಂ ೧॥ ೫

ವಿಶೇಷ ಮಾಹಿತಿ ಬಗ್ಗೆ ನಮ್ಮ ಕ್ಯಾಟಲಾಗ ಪುಕ್ಕಟೆ ಕೊಡುವೆವು

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ :– **ಗೋಪಾಳ ಸಖಾರಾಮ ಮಾಕ ಕಂಪನಿ, ನಂ ೬೩,**
ಕಾಳಬಾದೇವಿ ರೋಡ, ಮುಂಬಯಿ

ಜಿ. ಕಾ. ಕ. ಯ ಮಹಾಸಭೆಯ ಠರಾವುಗಳು.

ತಾ. ೨೯-೭ ೨೩ನೇಗೆ ಕುಮಟೆಯಲ್ಲಿ ಕೂಡಿದ ಮಹಾಸಭೆಯ ಅನ್ವಯಗಳು.

೧. ತಾ. ೨೨-೭-೨೩ನೇಗೆ ಹೊನ್ನಾವರದಲ್ಲಿ ಕೂಡಿದ ಕಾರ್ಯಕಾರಿ ಮಂಡಳದ ಠರಾವುಗಳುಓದಿ ಮಂಜೂರ ಮಾಡಲ್ಪಟ್ಟವು.

೨. ತಾಲೂಕಾ ಕಮೀಟಿಗಳಿಂದ ಬಂದ ಪತ್ರಗಳು ಓದಿ ನೋಡಲ್ಪಟ್ಟವು. ಈ ಕೆಳಗಿನ ೮ ಜನರನ್ನು ಜಾದಾ ಕಾಂಗ್ರೆಸಿಗೆ ಹೋಗುವರ ಪ್ರತಿನಿಧಿಗಳನ್ನಾಗಿ ಆರಿಸಲ್ಪಟ್ಟರು (೧) ಶ್ರೀ ಕೃಷ್ಣರಾವ ಹಳದೀಪುರ, ಕಾರವಾರ. (೨) ಶ್ರೀ ಸ್ಯಯದ ಅಹಮದ ಸಾಹೇಬ. (೩) ಶ್ರೀ ಗಣಪತರಾವ ಪಾಸಾರಕರ, ಕುಮಟಾ (೪) ಶ್ರೀ ಮಂಜುನಾಥ ಭಟ್ಟ ಕರ್ಕಿ, ಹೊನ್ನಾವರ. (೫) ಶ್ರೀ ವಿಠ್ಠಲ ಪರ್ವತಪ್ಪ ಮಹಾಲೆ, ಹೊನ್ನಾವರ. (೬) ಶ್ರೀ ವಾಸುದೇವರಾವ ಕೊಪ್ಪೀಕರ (೭) ಶ್ರೀ ಗುಲ್ವಾಡಿ ಶಂಕರರಾವ ಶಿರ. (೮) ಶ್ರೀ ಗೋಪಾಲರಾವ ದೇವ, ಸಿದ್ದಾಪೂರ.

ಮತ್ತು ಈ ಕೆಳಗಿನ ಜನರುಗಳನ್ನು ಶಿಫಾರಸ ಮಾಡಿರುತ್ತದೆ.

(೧) ಶ್ರೀ ಗೋಪಾಳ ಸದಾಶಿವ ನಾತಕರ್ಣಿ, ಕಾರವಾರ (೨) ಶ್ರೀ ಮಹಾಬಲೇಶ್ವರ ವೆಂಕಟರಾವ ಗಂಗೊಳ್ಳಿ, ಕಾರವಾರ. (೩) ಶ್ರೀ ಕೃಷ್ಣ ವಾಸುದೇವರಾವ, ಹೊನ್ನಾವರ. (೪) ಶ್ರೀ ಶಿವರಾವ ಶಾಸ್ತ್ರಿ, ಹೊನ್ನಾವರ (೫) ಶ್ರೀ ಅಕ್ಕದಾಸ ಗಣಪತಿ ಭಟ್ಟ, ಶಿರ.

ಈ ವಕ್ತ ಟಪಾಲ ಬರಲಿಲ್ಲವಾದ್ದರಿಂದ, ನಾಳೆ ಟಪಾಲ ನೋಡಿ ಶಿರಸಿಯಿಂದ ಹೋಗುವ ಪ್ರತಿನಿಧಿಗಳ ಹೆಸರುಗಳನ್ನು ಶಿಫಾರಸ ಮಾಡುವರೇ ಅಧ್ಯಕ್ಷರಿಗೆ ಅಧಿಕಾರ ಕೊಟ್ಟಿದೆ.

೩. ನಮ್ಮ ಜಿಲ್ಹೆಯಲ್ಲಿ ಪ್ರಾಂತಿಕ ಪರಿಷತ್ತು ಕೂಡಿಸುವದಕ್ಕೆ ಮತ್ತು ಅ. ಭಾ. ಕಾ. ಕ. ಯ ಪ್ರಾ. ಕಾ. ಕ. ಯ ಅಧಿವೇಶನಗಳಿಗೆ ಹೋಗುವ ಮೆಂಬರುಗಳ ಪ್ರಯಾಣ ಖರ್ಚಿನ ಬಗ್ಗೆ ಪ್ರಾ. ಕಾ. ಕ ಯಿಂದ ಬರದು ಬಂದಂತೆ ಅವುಗಳ ವಿಚಾರ ಮಾಡುವ ಕುರಿತು ಇನ್ನೊಂದು ಸ್ಪೇಶಲ್ ಜಿಲ್ಹಾ ಸಭೆಯನ್ನು ಕರೆದು, ಅದರಲ್ಲಿ ಇವೇ ಮುಂತಾದ ವಿಷಯಗಳನ್ನು ಚರ್ಚಿಸಿ ಅಭಿಪ್ರಾಯ ಕೊಡಬೇಕಾಗಿ ಠರಾಯಿಸಿತು. ಸದ್ರಿ ಜಿಲ್ಹಾ ಸಭೆ ತಾ ೧೯-೮-೨೩ ನೇ ಭಾನುವಾರ ಇದ್ದು, ಅದು ಹಳದೀಪುರದಲ್ಲಿ ಸೇರಬೇಕೆಂದು ಠರಾಯಿಸಿತು.

೪. ನಮ್ಮ ಜಿಲ್ಹೆಯಿಂದ ನಾಗಪುರಕ್ಕೆ ಹೋಗಬಿಚ್ಛಿಸುವ ಸ್ವಯಂಸೇವಕರ ೨ ನೇ ಪಥಕದಲ್ಲಿ ಹೆಸರು ಕೊಡುವದಕ್ಕೆ ಯಾರ್ಯಾರು ಕಬೂಲ ಇದ್ದಾರೆಂಬ ಮಾಹಿತಿಯನ್ನು ಯಥಾವತ್ತ ತಾ. ಕಾಂ. ಕ. ಗಳಿಂದ ತರಿಸಿ, ಯೋಗ್ಯರಾದವರನ್ನು ಚುನಾಯಿಸಿ ಅವರನ್ನು ನಾಗಪುರಕ್ಕೆ ಕಳಿಸುವ ವ್ಯವಸ್ಥೆ ಮಾಡುವ ಅಧಿಕಾರವನ್ನು ಶ್ರೀ ದೇವಣ್ಣಾ ಕೊಪ್ಪೀಕರ ಇವರಿಗೆ ಕೊಟ್ಟಿರುತ್ತದೆ ಮತ್ತು ಅವರ ಪ್ರಯಾಣ ಖರ್ಚ ಬೀಲು ತಕ್ಕೊಂಡು ಮಂಜೂರ ಮಾಡತಕ್ಕದ್ದು.

೫. ಕರ್ನಾಟಕ ರಾ. ೬ ಸಮಿತಿ ವ್ಯವಸ್ಥಾಪಕರ ಕಡೆಯಿಂದಾ ಬಂದ ಪತ್ರಗಳು ಓದಿ ನೋಡಲಾಯಿತು. ಅದಕ್ಕೆ ನಮ್ಮ ಜಿಲ್ಹೆಯ ಆಹಣ ಸ್ಥಿತಿ ತಿಳಿಸಿ ಯೋಗ್ಯ ಉತ್ತರ ಕೊಡುವದಕ್ಕೆ ಅಧ್ಯಕ್ಷರಿಗೆ ವಿನಂತಿ ಮಾಡಿರುತ್ತದೆ.

೬. ಜಿ. ಕಾ. ಕ. ಕಾರ್ಯದರ್ಶಿಗಳಾದ ಶ್ರೀ ಕೊಪ್ಪೀಕರ ಇವರ ಗೈರ ಹಾಜರಿಯಲ್ಲಿ ೧-೯-೨೩ ರಿಂದ ೧೫-೯-೨೩ ರವರೆಗೆ ಅವರ ಕೆಲಸವನ್ನು ಶ್ರೀ ವಾಸುದೇವ ಕಾಮತ ಇವರು ಮಾಡಬೇಕೆಂತ ಹೇಳುತ್ತ ಮಾಡಿದ ಸದ್ರಿಯವರು ತಮ್ಮ ವಸಂದಿಯ ಒಂದು ಇಸಮ ಇಂಗ್ಲೀಷ ವಗೈರೆ ಬರೆಹದ ಕೆಲಸ ಮಾಡಿಸಿಕೊಳ್ಳುವದಕ್ಕೆ ತಿಂಗಳ ೧೮ ರಿಂದ ೨೦ ರ ವರೆಗೆ ಪಗಾರ ಕೊಟ್ಟು ಇಟ್ಟುಕೊಳ್ಳತಕ್ಕದು.

ವೃತ್ತಸಾರ.

— ತಮಿಳು ನಾಡು ಕಾಂಗ್ರೆಸು ಕಮಿಟಿಯವರು ತ್ರಿಚನಾಪಳ್ಳಿಯಲ್ಲಿ ಜುಲೈ ತಾ. ೨೪ನೇಗೆ ಸೇರಿದು, ಮಧುರಾದೊಳಗಿನ ಸರಿ ಅಂಗಡಿಗಳ ಪಿಕೆಟಿಂಗನ್ನು ತೆಗೆದು ಬಿಟ್ಟು, ನಾಗಪುರದ ಧ್ವಜಸಂಗ್ರಾಮಕ್ಕಾಗಿ ಸರ್ವ ಶಕ್ತಿಯನ್ನು ಕೇಂದ್ರೀಕರಿಸಬೇಕೆಂದು ಠರಾಯಿಸಿರುವರು.

— ಪಂಜಾಬದ ಲಾಲಾ ಹರಿಕಿಸನಲಾಲರವರ ಮಗಂದಿರರಾದ ಮಿ। ಕನ್ಹಯಾಲಾಲರವರು ಲಾಹೋರಿನ ಮಹಮ್ಮದೀಯ ಬೆರಿಸ್ಟರರ ಮಗಳನ್ನು ಸಿವ್ಹಿಲ ಮರೆಜ್ ಎಕ್ಟಿನನ್ವಯ ಮದುವೆ ಮಾಡಿಕೊಂಡರು.

— ಹಿಂದುಸ್ಥಾನದಲ್ಲಿ ತಂತಿಯಿಲ್ಲದ ಹಾಡಾಯಂತ್ರವನ್ನು ಏರ್ಪಡಿಸುವ ಬಗ್ಗೆ 'ಇಸ್ಟರ್ನ ಟೆಲಿಗ್ರಾಫ ಕಂಪನಿ'ಯು ಹಿಂದುಸ್ಥಾನ ಸರಕಾರಕ್ಕೆ ಅರ್ಜಿ ಮಾಡಿಕೊಂಡಿದೆ. ಸರಕಾರವು ಇನ್ನೂ ಆಲೋಚನೆಯಲ್ಲಿದೆ.

— ಆಫ್ರಿಕನ್ ಸರಕಾರವು ಏರ್ಪಡಿಸಿದ ಹಿಂದೀಯರಿಗೆ ಅನ್ಯಾಯಕರ ಇಮಿಗ್ರೇಶನ್ ಕಾಯಿದೆಯನ್ನು ಇದಿ ತನಕ ಬಿದ್ದು, ಅದು ಎಷ್ಟರಮಟ್ಟಿಗೆ ಕಾಯದೇಶೀರ ಇರುತ್ತದೆ ಎಂದು ನಿರ್ಣಯಿಸಿಕೊಳ್ಳಲು, ವಿಲಾಯತಿಯೊಳಗಿನ ಹೌಸ ಆಫ್ ಲೋರ್ಡ್ಸರಿಗೆ ಅಪೀಲು ಮಾಡುವದೆ ಆಫ್ರಿಕಾ ಖಂಡದೊಳಗಿನ ಹಿಂದೀ ಸಂಘಗಳು ನಿಶ್ಚಯ ಮಾಡಿರುವವು. ಈ ಬಗ್ಗೆ ಅಲ್ಲಿಯ ಪ್ರಾಯಕ್ಕೆ ಬಂದ ಪ್ರತಿಯೊಬ್ಬ ಹಿಂದೂ ಖಂಡದ ಗಂಡಸು ನಿಂಗಸಿಯು ಕಲೆಗೊಂಡು ಪವನು ವಂತಿಗೆ ಕೊಡಬೇಕೆಂತಲೂ ತೀರ್ಮಾನವಾಗಿದೆ.

— ಕರ್ನಾಟಕ ಪ್ರಾ. ಕಾಂ. ಕಮಿಟಿಯ ಉಪಾಧ್ಯಕ್ಷರಾದ ಶ್ರೀ ಶ್ರೀನಿವಾಸರಾವ ಕೌಜಲಗಿಯವರು ಈ ತಿಂಗಳೊಳಗೆ ಬಿಡುಗಡೆಯಾಗುವರೆಂದು ತಿಳಿಯುತ್ತದೆ.

— ಅಲಹಾಬಾದ ಮ್ಯುನಿಸಿಪಾಲಿಟಿಯವರು ಅಖಿಲ ಭಾರತೀಯ ಸ್ವರಾಜ್ಯೋತ್ಸವದ ಸಂಬಂಧ ಮ್ಯುನಿಸಿಪಲ್ ಶಾಲೆಗಳಿಗೂ, ಆಫೀಸಿಗೂ ಒಂದು ಹೊತ್ತು ಸೂಟಿ ಬಿಟ್ಟಿದ್ದರು.

— ಇರಾಣದಲ್ಲಿ ಭೂಕಂಪವಾಗಿ ಸಾವಿರ ಮಂದಿಗಳು ನಿಧನ ಹೊಂದಿದರೆಂತಲೂ, ೪೦೦-೫೦೦ ಮನೆಗಳು ಬಿದ್ದಿರುವದೆಂತಲೂ ತಿಳಿಯುತ್ತದೆ.

— ಅಜಮೀರದಲ್ಲಿ ಹಿಂದೂ-ಮಹಮ್ಮದೀಯರೊಳಗೆ ಕಳೆದ ಜುಲೈ ತಾ. ೨೨ ನೇ ಸಾಯಂಕಾಲಕ್ಕೆ ಕಲಹ ಎದ್ದಿತು. ನಾನಾಜಿ ದೇವರ ಉತ್ಸವದ ಮೆರವಣಿಗೆಯನ್ನು ಮಸೀದಿಯಿಂದ ಹಾದುಹೋಗಗೊಡಲಿಕ್ಕಿಲ್ಲೆಂದು ಮಹಮ್ಮದೀಯರು ನಿರ್ಧರಿಸಿ, ಬಡಿಗೆ, ದೊಣ್ಣೆಗಳನ್ನು ಧರಿಸಿ, ಸಿದ್ಧ ಮಾಡಿದರು. ಮೆರವಣಿಗೆಯು ಸೈನಿಕರ ಬಂದೋಬಸ್ತಿನಲ್ಲಿ ಅದೇ ಮಾರ್ಗದಿಂದ ಸಾಗುವಾಗ, ಯಾರೋ ಒಬ್ಬರು ಕಲ್ಲು ಒಗೆದಂತೆ, ಕೂಡಲೇ, ಮಹಮ್ಮದೀಯರು ಪ್ರತ್ಯಕ್ಷವಾಗಿ ಹಿಂದೂ ಬಾಂಧವರನ್ನು ಬಡಿದರು. ಅನೇಕರಿಗೆ ಗಾಯವಾಗಿವೆ. ೨ ದಿನಗಳಲ್ಲಿಯೇ ಹಿಂದೂ-ಮಹಮ್ಮದೀಯರೊಳಗೆ ರಾಜಿಯಾಗಿ, ಶಾಂತತೆಯು ಪ್ರಸ್ಥಾಪಿತವಾಗಿರುವದೆಂದು ತಿಳಿಯುತ್ತದೆ.

— ದೇಶಬಂಧು, ದಾಸರವರು ಸ್ವರಾಜ್ಯ ಪಕ್ಷದ ಕಾರ್ಯಕಾರಿ ಕಮಿಟಿಯ ಮೆಂಬರರ ಹೆಸರುಗಳನ್ನು ಜಾಹೀರು ಪಡಿಸಿರುವರು ಹಕೀಮ ಅಜಮಲಖಾನ, ಶ್ರೀ ಕೇಳಕರ, ವಿಠ್ಠಲಭಾಯಿ ಪಟೇಲ, ಘುನಿಆಂಡ, [illegible]ದ್ರರಾದ ರಂಗ ಸ್ವಾಮಿ ಅಯ್ಯಂಗಾರ, ಫೂಕನ್. ಅಧ್ಯಕ್ಷರಾದ ದೇಶಬಂಧುಗಳೂ, ಕಾರ್ಯದರ್ಶಿಗಳಾದ ಪಂಡಿತ ಮೋತಿಲಾಲ ನೆಹರೂರವರೂ ಅಧಿಕಾರವಿಶಿಷ್ಟತೆಯ ಮೂಲಕ ಸಭಾಸದರಿರುವರು.

— ಮುಂಬಯಿಯ ಗವರ್ನರರಾದ ಸರ್ ಜಾರ್ಜ ಲಾಯಿಡ್‌ರವರ ಅಧಿಕಾರದ ಮುದತ್ತು ಡಿಸೆಂಬರ ತಿಂಗಳಲ್ಲಿ ತೀರುತ್ತದೆ. ಅವರ ಸ್ಥಾನಕ್ಕೆ 'ಕರ್ನಲ್' ಲೆಸ್ಲೀ ವಿಲಸನ್‌ರವರು ನೇಮಕ ಮಾಡಲ್ಪಟ್ಟಿರುವರು. ಇವರು ರಾಜನೀತಿವಿಶಾರದರಿರುವರು.

— ಇರಾಣದಲ್ಲಿ ಬ್ರಿಟಿಶ ಸಾಮಗ್ರಿಯನ್ನು ಬಹಿಷ್ಕಾರ ಮಾಡುವ ಜಾಹೀರನಾಮೆಯು ಹೊರಟಿರುವದಂತೆ.

— ಶ್ರೀ ವರಸೋದಂತ ಕೇಳಕರರವರು ಸಾಂಗಲಿಯಲ್ಲಿ ರಾಷ್ಟ್ರೀಯ ಶಿಕ್ಷಣದ ಮೇಲೆ ಪ್ರವಚನವನ್ನಿತ್ತರು. ಟಿಳಕ ಮಹಾ ವಿದ್ಯಾಲಯಕ್ಕೆ ೧॥ ಸಾವಿರ ರೂಪಾಯಿ ವಂತಿಗೆ ಕೂಡಿತು.

— ಜರ್ಮನಿಯ ವಿಪನ್ನಾವಸ್ಥೆಯು ಕ್ರಮೇಣ ವೃದ್ಧಿಗೈಯುತ್ತಿದೆ. ಅಲ್ಲಿಯ ಮಾರ್ಕ ನಾಣ್ಯದ ಬೆಲೆಯು ಕುಗ್ಗಿತು. ಪವನಿಗೆ ಈಗ ೩೦ ಲಕ್ಷ ಮಾರ್ಕಗಳು ಆಗಿವೆ.

— ಪ್ರಾಮಿಸರಿ ನೋಟು ಕೊಡಲಾದವುಗಳಿಗೆ ಹಚ್ಚುವ ಸ್ಟ್ಯಾಂಪಿನ ದರವನ್ನು ದಾಷ್ಟ ಕಾಯಿದೆ ಕೌನ್ಸಿಲು ಏರಿಸಿತು. ೨೫೦ ರೂಪಾಯಿಗಳ ವರೆಗಿನ ಪ್ರಾಮಿಸರಿ ನೋಟುಗಳಿಗೆ ೧ ಆಣೆಯ ಸ್ಟಾಂಪು, ೨೫೦ ರೂಪಾಯಿಗಳಿಂದ ೧೦೦೦ ರೂಪಾಯಿಗಳ ವರೆಗಿನವುಗಳಿಗೆ ೨ ಆಣೆ, ೧೦೦೦ ರೂಪಾಯಿಗಳಿಗೆ ಮಿಕ್ಕಿದವುಗಳಿಗೆ ೪ ಆಣೆ, ಹೀಗೆ ದರವಾರಿಯು ನಿರ್ಣಯಿಸಲ್ಪಟ್ಟಿದೆ. ಈ ಠರಾವನ್ನು ಸಹಕಾರಿಗಳು ರಾಜಿಯಿಂದ ಒಪ್ಪಿಕೊಂಡರು.

— ಮುಂಬಯಿಯ 'ಖಿಲಾಫತ ಡೇಲಿ' ಪತ್ರಿಕೆಯ ಸಂಪಾದಕರಾದ ಅಬ್ದುಲ ಖಾನಯವರ ಮೇಲಿನ ಜಾಮೀನ ಪ್ರಕರಣವು ಜುಲೈ ತಾ. ೧೬ನೇ ಬುಧವಾರ ಹಾಗು ಶುಕ್ರವಾರಕ್ಕೆ ನಡೆಯಿತು. ಮಿ। ಖಾನಯವರು ತಾವು ಬರೆದ 'ಹಿಂದುಸ್ಥಾನವು, ಪ್ಲೇಗ ರೋಗವು' ಎಂಬ ಲೇಖವು ರಾಜದ್ರೋಹಾತ್ಮಕವಿರದೆ, ದೇಶಹಿತ ಸಂವರ್ಧಕವಿತ್ತೆಂದು ಪ್ರತಿಪಾದಿಸಿದರು. ಮೆಜಿಸ್ಟ್ರೇಟರು ತಾ. ೨೪ನೇಗೆ ತೀರ್ಪುಕೊಟ್ಟು, ಮಿ। ಅಬ್ದುಲ ಖಾನಯವರಿಗೆ ೧ ವರ್ಷದ ಸಾದಾ ಶಿಕ್ಷೆ ವಿಧಿಸಿದರು.

— ಅತಿ ವೃಷ್ಟಿಯ ಮೂಲಕ ಮುಂಬಯಿ-ಪೂನಾ ನಡುವಿನ ರೇಲ್ವೇ ಲೈನಿನ ಮೇಲೆ ಗುಡ್ಡಗಳು ಕುಸಿದು ಬಿದ್ದು, ಲೈನು ಉಗಿಬಂಡಿಗಳ ಓಡಾಟಕ್ಕೆ ಪ್ರತಿಬಂಧವಾಗಿದೆ. ಕ್ಯಾಸಲರೋಕ ಕಾರಂಝೋಲಗಳಲ್ಲಿಯೂ ಇದೇ ಸ್ಥಿತಿಯು ಸಂಭವಿಸಿರುವದೆಂದು ಮಿ। ಸುಪರಿಂಟೆಂಡೆಂಟರು ತಿಳಿಸುತ್ತಾರೆ ಹೀಗಾಗಿ, ಉಗಿಬಂಡಿಗಳು ಹೊತ್ತಿಗೆ ಸರಿಯಾಗಿ ನಡೆಯುವದಿಲ್ಲ.

— ಕಳೆದ ೧೮ನೇ ತಾರೀಖಿನ ಗಾಂಧಿ ದಿನಕ್ಕೆ ನಾಗಪುರದಲ್ಲಿ ಸತ್ಯಾಗ್ರಹವು ಮುಂಜಾವು ೧೦ ಘಂಟೆಯಿಂದ ಸಾಯಂಕಾಲ ೬॥ ಘಂಟೆಯ ವರೆಗೆ ನಡೆಯಿತು. ೨೦ ಸತ್ಯಾಗ್ರಹಿಗಳ ೯ ತಂಡಗಳು ಸೆರೆಹಿಡಿಯಲ್ಪಟ್ಟವು. ಸತ್ಯಾಗ್ರಹವು ಉತ್ಸಾಹದಿಂದ ನಡೆದದೆ. ರೇಲ್ವೆ ಸ್ಟೇಶನಿನಲ್ಲಿ ೨೬ ಮಂದಿಗಳನ್ನು ಹಿಡಿದರು. ಸಾಯಂಕಾಲಕ್ಕೆ ಇನ್ನಿಬ್ಬರು ರೇಲ್ವೆ ಸ್ಟೇಶನಿನಲ್ಲಿ ಸೆರೆಯಾಳಾದರು. ಅಂತು ೪೮ ಮಂದಿಗಳು ಅಂದು ಸೆರೆಮನೆಯನ್ನು ಸೇರಿದರು.

ದೇಶಿ ಸೆಂಟೋನಾಯಿನ್.
(ಜಂತುವಿನ ಪುಡಿ.)

ಅಪಾಯಕರವಿಲ್ಲದೆ ಗುಣ ಕೊಡುವಂಥಾದ್ದು.
ಪ್ರಪಂಚದಲ್ಲಿ ಪ್ರಖ್ಯಾತ ಔಷಧ.
ಡಬಿನ ಕೀಸೆಗೆ 2 ರೂ. ೮ ಆಣೆ.
ವಿಳಾಸ— ಎಮ್. ಜಿ. ಭಾಗ್ವತ್,
ಆಯುರ್ವೇದಿಕ್ ಕೆಮಿಸ್ಟ, ಶಿರ. (ಕೆನರಾ)

ಗ್ಯಾಸ ದೀಪಗಳು
ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ವಿಚಾರಿಸಿ ಕೆಳಗಿನ ಪತ್ತೆಗೆ ಮುಕ್ತಾ ಶಿಕ್ಕಿ ತಿಳಕೊಂಬಹುದು.

ಪುರುಷೋತ್ತಮ ಲಕ್ಷ್ಮಣಯ್ಯ ವ್ಯಾಸಭಾಗ.
ಹೆಗಡೇಕರ, ದುಕಾನ್, ಕುಮಟಾ.

ವಿವಿಧ ಸಂಗ್ರಹ.

ಚೀನದೊಳಗಿನ ಭೂಕಂಪ

ಚೀನ-ತಿಬೇಟ ಸರಹದ್ದಿನ ಮೇಲಿನ ಹೋರಡ್ರಾಂಗೂ ಎಂಬಲ್ಲಿ ಕಳೆದ ತಿಂಗಳಿನಲ್ಲಿ ಭಯಂಕರ ಭೂಕಂಪವು ಸಂಭವಿಸಿತು. ಅದರಿಂದ ಒದಗಿದ ಹಾನಿಯನ್ನು ಚೈನಾ ಇನ್‌ಲೆಂಡ ಮಿಶನಿನ್ ಮಿ। ಎಡ್ಗರರವರು ತಿಳಿಸಿರುವರು. ಒಂದು ಹಳ್ಳಿಯೊಳಗಿನ ಎಲ್ಲ ಮನೆಗಳು ನೆಲಸಮವಾಗಿವೆ. ದನಕರುಗಳೆಲ್ಲ ನಿಧನಹೊಂದಿವೆ. ಅರ್ಧ ಹಳ್ಳಿಗರು ಮಡಿದರು. ಭೂಕಂಪ ಒದಗಿದಾಗ ದನಕರುಗಳನ್ನು ದೊಡ್ಡಿಯಲ್ಲಿ ಕಟ್ಟಿದ್ದರು. ಹಳ್ಳಿಗರೆಲ್ಲರೂ ಭೋಜನ ಮಾಡುತ್ತಿದ್ದರು. ಅದರಿಂದ ಇಷ್ಟು ಪ್ರಚಂಡ ಹಾನಿಯು ತಕ್ಕನೆ ಸಂಭವಿಸಿತು. ಭೂಕಂಪವಾದ ಕ್ಷೇತ್ರದಲ್ಲಿ ೪೦ ಮೈಲುಗಳ ವರೆಗೆ ನೆಟ್ಟಗೆ ನಿಂತ ಇಮಾರತಾಗಲಿ, ಗಿಡಮರಗಳಾಗಲಿ ತಮ್ಮ ಕಣ್ಣಿಗೆ ಬೀಳಲಿಲ್ಲೆಂದು ಮಿ। ಎಡ್ಗರರವರು ಉದ್ಗರಿಸುತ್ತಾರೆ. ಕ್ಷಣಾರ್ಧದಲ್ಲಿ ತಿಬೇಟದೊಳಗಿನ ಗಟ್ಟಿ ಗಟ್ಟಿ ಮನೆಗಳೆಲ್ಲ ಸಮನಾದವು. ಗಟ್ಟಿ ಗಟ್ಟಿ ಮರಗಳೆಲ್ಲ ಚೂರು ಚೂರಾದವು. ಆ ಪ್ರದೇಶದಲ್ಲಿ ದೊಡ್ಡ ದೊಡ್ಡ ದರಿಗಳು ಬಿದ್ದಿದ್ದವು. ಗಡ್ಡೆಗಳೆಲ್ಲ ಕುಸಿದು ಬಿದ್ದು, ಚೂರು ಚೂರಾದವು. ಒಂದೆಡೆಯಲ್ಲಿ ಹಳ್ಳದ ಪಾತ್ರದಲ್ಲಿ ೫೦ ಶವಗಳು ಮಿ। ಎಡ್ಗರರವರಿಗೆ ಸಿಕ್ಕಿದವು. ಕೆಥೋಲಿಕ್ ಮಿಶನಿನ ಅಲರಿಕ್ ಎಂಬ ಫ್ರೆಂಚ ಉಪಾಧ್ಯಾಯರೂ, ೧೫ ಶಿಷ್ಯರೂ, ೩೦ ಸಭಾಸದರೂ ಭೂಕಂಪದಲ್ಲಿ ಆತ್ಮತ್ಯಾಗವನ್ನು ಮಾಡಿದರ. ಹೆಣಗಳ ದುರ್ವಾಸನೆಯಿಂದ ಇಡೀ ವಾತಾವರಣವು ತುಂಬಿಕೊಂಡಿತ್ತು. ಇಂಥ ಪ್ರಸಂಗದಲ್ಲಿ ತಿಬೇಟದೊಳಗಿನ ದರೋಡೆಖೋರರು ತಮ್ಮ ದುಷ್ಟ ವ್ಯಾಪಾರಕ್ಕೆ ಇದು ಒಳ್ಳೇ ಸಮಯವೆಂದು ಎಣಿಸಿ, ಮುಂದಾದರು. ಭೂಕಂಪದಲ್ಲಿ ಸಿಲುಕಿಕೊಂಡು ಬಳಲುವವರಿಗೆ ಸುಲಿಯುವದು ಹಾಗೂ ವಿರೋಧಿಸುವವರ ಕೊಲ್ಲುವದು ಈ ಪ್ರಕಾರದ ಪ್ರವ್ಯಾಪಾರಗಳನ್ನು ಅವರು ನಡಿಸಿದರು.

***

ವಾಯುದೇವರ ಕ್ಷೋಭ

ದಕ್ಷಿಣ ಕಾನಡಾ ಜಿಲ್ಹೆಯ ಉಳ್ಳಾಲದಲ್ಲಿ ಕಳೆದ ತಾ ೧೭ ನೇ ಮಂಗಳವಾರ ಮುಂಜಾವಿನ ೭ ತಾಸು ಹೊತ್ತಿಗೆ ಪ್ರಚಂಡ ಸುಂಟರಗಾಳಿ ಎದ್ದು, ಒದಗಿದ ಹಾನಿಯನ್ನು ಮಂಗಳೂರಿನ ತಾ ೨೪-೭ ೧೯೩೪ ರ ಕಾಂಗ್ರೆಸಿನ ವರದಿಗಾರನು ಈ ಪ್ರಕಾರ ಬಣ್ಣಿಸುತ್ತಾನೆ —

ಸೋಮೇಶ್ವರದ ಸಮೀಪದ ಆಕಾಶದಲ್ಲಿ ಕಪ್ಪು ಮೋಡ ಹುಟ್ಟಿ, ಅದು ಒಡೆದು ೨ ಭಾಗಗಳಾಗಿ ಅದರಿಂದ ಹೊಗೆಯು ಗಾಳಿ, ಆ ಗಾಳಿಯಿಂದ ವಿದ್ಯುಚ್ಛಕ್ತಿಯ ಉಂಡೆಗಳೂ ಆಗಿ, ನೀರಿಗೆ ಬಿದ್ದು, ಅಲ್ಲಿಂದ ಅದು ಹಾರಿ, ಭಯಂಕರ ಧ್ವನಿಯಿಂದ ಸುಂಟರಗಾಳಿಯು ಕರೆಗೆ ಬಂದು, ಅಲ್ಲಲ್ಲಿರುವ ೪ ಮೊಗವೀರರ ದೋಣಿಗಳನ್ನು ಸುಮಾರು ೭ ತೆಂಗಿನ ಮರದಷ್ಟು ಎತ್ತರಕ್ಕೆ ಹಾರಿಸಿ, ದೋಣಿಗಳನ್ನು ಚೂರು ಚೂರಾಗಿ ಮಾಡಿ, ಅರ್ಧ ಫರ್ಲಾಂಗು ದೂರಕ್ಕೂ ಕೆಲವು ತುಂಡುಗಳನ್ನು ರೇಲ್ವೆ ಮಾರ್ಗದ ಆಚೆ ಕೆರೆಯಲ್ಲಿಯೂ ಬಿಸಾಡಿರುತ್ತದೆ. ಆಗ ಅಲ್ಲಿದ್ದ ಮೊಗವೀರರು ದೂರದಿಂದ ಇದನ್ನು ಕಂಡು ಭಯಭ್ರಾಂತರಾಗಿ ಓಡಲಾರಂಭಿಸಿದರು. ಈ ಸುಂಟರಗಾಳಿಯು ಅಲ್ಲಿಂದ ಫಕೀರಗಟ್ಟೆ ಎಂಬವರ ಮನೆ ಸಮೀಪದಲ್ಲಿರುವ ಸುಮಾರು ೫೦೦ ಜಿಬುಕಿನ ಮರಗಳನ್ನು ಬೇರು ಸಮೇತ ಕಿತ್ತುಹಾಕಿ, ಸುಮಾರು ೧೪ ಗಜ ಅಗಲದಿಂದ ಸುಮಾರು ೧೨೫ ಗಜ ಉದ್ದದಲ್ಲಿ ಇರುವ ಪೂರಾ ಮರಗಳನ್ನು ಬೀಸಾಡಿ, ಅದೇ ಧ್ವನಿಯಿಂದ ಫಕೀರಗಟ್ಟೆಯ ಮನೆ ಬಾಗಲಿನಲ್ಲಿರುವ ದೊಡ್ಡ ಮಾವಿನ ಮರ ೧ ತೆಂಗಿನ ಮರಗಳು ೧೨, ಸುಮಾರು ೧೫೫ ರೂಪಾಯಿ ಕ್ರಯ ಬಾಳುವ ದೊಡ್ಡ ಹೊನ್ನೆ ಮರ ೧ ಕಸಿ ಮಾವಿನ ಮರಗಳ ಕೆಲವು, ಹಲವು ಹಲಸಿನ ಮರಗಳು, ಇನ್ನೂ ಕೆಲವು ಸಣ್ಣ ದೊಡ್ಡ ಮರಗಳು ಇವನ್ನು ಪೂರಾ ಬೇರು ಸಮೇತ ಕಿತ್ತು, ಬೀಸಾಡಿ, ಅಲ್ಲಿಂದ ಸಮೀಪದವರ ಮನೆಯ ಪೂರಾ ಮಾಡನ್ನು ಹಾರಿಸಿ, ಮೇಲೆ ಬಂದು ರಾಜಮಾರ್ಗದ ಬದಿಯಲ್ಲಿರುವ ೨ ಬಲಿ ಗಾಡಿಗಳನ್ನು ಎತ್ತಿಹಾಕಿ, ಅಲ್ಲಿಂದ ಮಾರ್ಗದ ಮಡಿಕೇರಿನಲ್ಲಿ ಇರುವ ಗದ್ದೆಗೆ ಹತ್ತಿ, ಅದರಲ್ಲಿ ದನ ಕರು ಹಸಿಗಳನ್ನು ನಾಶ ಮಾಡಿ ಸಿಡಿಲು ಮೂಡ ಪಾರ್ಶ್ವಕ್ಕೆ ಹೋಗಿರುತ್ತದೆ. ಫಕೀರಗಟ್ಟೆಯ ಹಿತ್ತಲಿನಿಂದ ಬರುವ ಧ್ವನಿಯ ರಭಸವನ್ನು ಕೇಳಿದ ಕೂಡಲೆ, ಆ ಮನೆಯವರು ಸಮುದ್ರವೇ ಉಕ್ಕಿ ತಮ್ಮ ಹಿತ್ತಲನ್ನು ಸೇರುವುದೆಂದು ಭಯಪಟ್ಟು ಅಲ್ಲಿರುವ ಗಾಡಿ ಎತ್ತು ದನಗಳ ಹಗ್ಗ ಕಡಿದು ಅವುಗಳನ್ನು ಹೊರಗೆ ಬಿಟ್ಟರು. ಅಷ್ಟರಲ್ಲಿ ಹಟ್ಟಿಯು ಬಿದ್ದು ಬಿತ್ತು. ಮನೆಯವರ ಹೆದರಿ ಕೂಗಾಟ ಕೇಳಿ ಪರ ಸ್ಮೃತಿ ತಪ್ಪಿ ಬಿದ್ದರು. ಆ ಹಟ್ಟಿಯ ಒಳಗೆ ಕೂಡಿಹೊಟ್ಟು ಪಕ್ಕದಲ್ಲಿ ಈ ಗಾಡಿಯ ಅನಾಮತ್ತು ಗಾಡಿಯನ್ನು ಎತ್ತಿಕೊಂಡು ಹೋಗುವಾಗ, ಎದುರಿನಲ್ಲಿ ದ ಕಾಲಗಿರ ಬರ ತಲೆ ಒಡ್ಡು ಸಿಕ್ಕಿ ಬಿದ್ದು ಅಗಿರುತ್ತದೆ. ಅದು ಸ್ಮೃತಿ ತಪ್ಪಿತ್ತು. ಆ ಬಳಿಯ ಬೇರೆ ಕಡೆಗೆ ಹಟ್ಟಿಯಲ್ಲಿರುವ ಒಂದು ಎತ್ತು ಅದರ ಮಾಡು ಬಿದ್ದು, ಎತ್ತಿಯು ಸತ್ತುಹೋಯಿತು. ಅನಂತರ ಈ ಪ್ರವಾತವು ಸಮುದ್ರದಲ್ಲಿ ಅದೇ ರೀತಿ ಹಾರಿ ಹೋದ ಹಾಗೆ ತೆರೆಯಾಗಿ ಹೋದುದನ್ನು ಅನೇಕರು ನೋಡಿದರು. ನಷ್ಟದ ಅಂದಾಜು ೪ ಸಾವಿರ ರೂಪಾಯಿ ನಷ್ಟ ಸಂಭವಿಸಿತೆಂದು ಅಂದಾಜಾಗಿದೆ. ಕಳೆದ ಮಂಗಳವಾರ ಬೆಳಿಗ್ಗೆ ಆ ಘಟನೆಯ ಸ್ಥಳದಲ್ಲಿ ಇದು ಸಂಭವಿಸಿತೆಂದು ಜನರು ಹೇಳುತ್ತಾರೆ. ಈ ವಿಷಯದಲ್ಲಿ ಸರಕಾರಕ್ಕೂ ವರದಿಯು ಬಂದಿದೆ.

***

ಕೆನಿಯಾದೊಳಗಿನ ಅನ್ಯಾಯ

ಕೆನಿಯಾ ವಸಾಹತಿನಲ್ಲಿ ವಾಸವಾಗಿರುವ ಹಿಂದೀಯರಿಗೆ ಯುರೋಪಿಯನ್‌ರು ಸರಿಸಮಾನರೆಂತೆ ಎಣಿಸಿ, ಅವರಿಗೆ ಯುರೋಪಿಯನ್‌ರಂತೆ ಅಧಿಕಾರಗಳನ್ನು ಕೊಡಬೇಕೆಂದು ಈಗ ೨-೩ ತಿಂಗಳುಗಳಿಂದ ವಿಲಾಯತಿಯಲ್ಲಿ ಒಡದಾಟ ನಡೆದಿದೆ. ಯುರೋಪಿಯನ್‌ರ ಶಿಷ್ಟಮಂಡಳವೊಂದು, ಹಿಂದೀಯರ ಶಿಷ್ಟಮಂಡಳವೊಂದು ಹೀಗೆ ೨ ಶಿಷ್ಟಮಂಡಳಗಳು ಬ್ರಿಟಿಶ ಪ್ರಧಾನ ಮಂಡಳದವರಿಗೆ ಬೆಟ್ಟಿಯಾಗಿ, ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು. ಬ್ರಿಟಿಶ ಪ್ರಧಾನ ಮಂಡಳವು ಅವನ್ನೆಲ್ಲ ಕೇಳಿಕೊಂಡು, ಕಳೆದ ಜುಲೈ ತಾ ೨೪ನೇ ಮಂಗಳವಾರ ಸಾಯಂಕಾಲಕ್ಕೆ ತನ್ನ ಯೋಜನೆಯನ್ನು ಜಾಹೀರು ಮಾಡಿತು. ಮೊಟ್ಟಮೊದಲು ಕೆನಿಯಾದಲ್ಲಿ ಹೋಗಿ ವಾಸವಾಗಿದ್ದವರಿಗಿಂತ ಅಲ್ಲಿಯ ಮೂಲ ನಿವಾಸಿಗಳ ಹಿತವನ್ನೇ ವಿಶೇಷವಾಗಿ ವಿಚಾರಿಸತಕ್ಕದ್ದೆಂದು ಪ್ರಧಾನ ಮಂಡಳವು ಸಾಮಾನ್ಯ ಸಿದ್ಧಾಂತವನ್ನು ನಮೂದಿಸಿರುವದು ಬಳಿಕ, ಈ ಬಗ್ಗೆ ನಿರ್ಣಯಿಸುವದೇನಂದರೆ —(೧) ಯುರೋಪಿಯನ್‌ರು ಕಾಯಿದೆ ಕೌನ್ಸಿಲಿನಲ್ಲಿ ಈಗಿನಂತೆ ೧೧ ಪ್ರತಿನಿಧಿಗಳನ್ನು ಆರಿಸಿ ಕಳಿಸಬೇಕು. ಹಿಂದೀಯರು ತಮ್ಮ ಸಮಾಜದೊಳಗಿಂದ ಐವರನ್ನು ಆರಿಸಬೇಕು. ಅರಬರು ಒಬ್ಬರನ್ನು ಆರಿಸಬೇಕು. ಇನ್ನೊಬ್ಬ ಅರಬ ಸಭಾಸದನನ್ನು ಸರಕಾರವು ನೇಮಿಸಬೇಕು. ಕೌನ್ಸಿಲಿನಲ್ಲಿ ಸರಕಾರಿ ಸಭಾಸದರ ಬಹುಮತವಿರಬೇಕು [ಹಿಂದೀಯರು ೩೯,೬೪೪, ಅರಬರು ೧೦,೧೦೨ ಯುರೋಪಿಯನ್‌ರು ೯,೩೫೧ ಮೂಲ ನಿವಾಸಿಕರು ೨೫ ಲಕ್ಷ] (೨) ಮೂಲ ನಿವಾಸಿಗಳ ಬಗ್ಗೆ ಸರಕಾರಕ್ಕೆ ಮಾಹಿತಿ ಪೂರೈಸುವರೆ ಕಾರ್ಯಕಾರಿ ಕೌನ್ಸಿಲಿನಲ್ಲಿ ಇನ್ನೊಬ್ಬ ಸಭಾಸದರನ್ನು ಸರಕಾರವು ನೇಮಿಸಬೇಕು. ಮಿಶನರಿ ಸಭಾಸದನನ್ನು ನೇಮಿಸುವದು ಶ್ರೇಯಸ್ಕರವೆಂದು ಪ್ರಧಾನ ಮಂಡಳದ ಅಭಿಪ್ರಾಯ. (೩) ಯುರೋಪಿಯನ್ ಹಾಗು ಏಶಿಯಾದ ನಿವಾಸಿಗಳನ್ನು ಪಟ್ಟಣಗಳಲ್ಲಿ ಪ್ರತ್ಯೇಕವಾಗಿಡುವ ಧೋರಣವನ್ನು ತ್ಯಜಿಸತಕ್ಕದ್ದು. (೪) ಎತ್ತರದ ಭೂಮಿಗಳನ್ನು ಯುರೋಪಿಯನ್‌ರಿಗಾಗಿಯೇ ಕಾಯ್ದಿಡುವ ಪದ್ಧತಿಯನ್ನು ಈಗಿನಂತೆ ಮುಂದೆಯೂ ನಡಿಸಬೇಕು. ತಗ್ಗು ಭೂಮಿಗಳಲ್ಲಿ ಬೆಸಾಯವನ್ನು ವೃದ್ಧಿಪಡಿಸುವ ಕರಾರಿನ ಮೇಲೆ ಹಿಂದೀಯರಿಗೆ ಕೆಲವು ಪ್ರಶ್ನೆಗಳವರೆಗೆ ಕೊಡತಕ್ಕದ್ದು. ಈ ಪ್ರಶ್ನೆಯನ್ನು ಮುಂದೆ ಪುನರಾಲೋಚಿಸತಕ್ಕದ್ದು. (೫) ಪರದೇಶಿಗಳಿಗೆ ಪ್ರವೇಶ ಕೊಡುವ ಈಗಿನ ಕಾನೂನುಗಳನ್ನೆಲ್ಲ ಹಾಗೆಯೇ ಕಾಯಂ ಇಡಬೇಕು. ಆದರೆ, ಮೂಲ ನಿವಾಸಿಗಳ ಉಚಿತತೆಗೆ ಅವಶ್ಯವಿದ್ದಲ್ಲಿ ಈ ಕಾನೂನುಗಳಲ್ಲಿ ತಿದ್ದುಪಡಿ ಮಾಡುವ ಸೂಚನೆಗಳನ್ನು ಗವ್ಹರ್ನರರು ವಸಾಹತು ಸಕ್ರೆಟರಿಯವರ ಕಡೆಗೆ ಅರುಹಿ, ಅವರ ಅನುಮತಿಯಿಂದ ಮಂಜೂರಮಾಡಿಕೊಳ್ಳತಕ್ಕದ್ದು.

***

ನಕ್ಷೆ ಶಿಕ್ಷಣ ಪದ್ಧತಿ.

ಮುಂಬಯಿಯೊಳಗಿನ ಶಿಕ್ಷಕರು 'ಶಿಕ್ಷಕರ ಪರಿಷತ್ ಸಂಸ್ಥೆ' (Teachers Colloquium) ಯ ವಿದ್ಯಮಾನ ನಡೆದ, ನಕ್ಷೆ (project) ಶಿಕ್ಷಣ ಪದ್ಧತಿಯ ಮೇಲೆ ಸಂಭಾಷಣ ಮಾಡಿದರು. ವಿಲ್ಸನ್ ಕಾಲೇಜಿನ ಪ್ರೊಫೆಸರ ಹೆನ್ಲೇಯವರು ಈ ಪದ್ಧತಿಯ ಮೇಲೆ ಚಿತ್ತವೇಧಕ ಉಪನ್ಯಾಸ ಮಾಡಿದರು. ಈ ಪದ್ಧತಿಯು ಮೊಟ್ಟಮೊದಲು ಅಮೇರಿಕೆಯಲ್ಲಿ ಜನಿಸಿತು. ಪ್ರಚಲಿತ ಶಿಕ್ಷಣ ಪದ್ಧತಿಯು, ಪ್ರಮುಖವಾಗಿ ವಾಙ್ಮಯ ವಿಷಯಕವು. ವ್ಯವಹಾರಕ್ಕೂ, ಶಿಕ್ಷಣಕ್ಕೂ ಬಾದರಾಯಣ ಸಂಬಂಧ ಕೂಡ ಇಲ್ಲ. ಇದನ್ನು ನೋಡಿ, ಅಲ್ಲಿಯ ವಿದ್ವಾಂಸರಿಗೆ ವ್ಯವಹಾರಿಕ ಜ್ಞಾನವಿಲ್ಲದ ಈ ವಾಙ್ಮಯ ಶಿಕ್ಷಣ ಪದ್ಧತಿಯನ್ನು ಸುಧಾರಿಸಬೇಕೆಂದು ತೋರಿ, ನಕ್ಷೆ ಶಿಕ್ಷಣ ಪದ್ಧತಿಯನ್ನು ಅವರು ಉಪಕ್ರಮಿಸಿದರು. ಈ ಪದ್ಧತಿಯಂತೆ ಹುಡುಗರು ಮನೆಗಳನ್ನೂ, ಶಾಲಾಗೃಹಗಳನ್ನೂ ಯೋಜನೆಯಂತೆ ಕಟ್ಟುತ್ತಾರೆ. ಅವರು ಶಾಲಾಗೃಹಕ್ಕೆ ಜೋಡಿಸಿರುವ ತೋಟದಲ್ಲಿ ತಮಗೆ ಹಂಚಿಕೊಟ್ಟ ಕ್ಷೇತ್ರವನ್ನು ಜೋಪಾನ ಮಾಡುತ್ತಾರೆ. ಇದರಿಂದ ಹುಡುಗರಿಗೆ ಗಣಿತ, ಭೂಮಿತಿ, ಕಸಬು ಮೊದಲಾದ ವಿಷಯಗಳ ಜ್ಞಾನವಾ

ಗುತ್ತದೆ. ಅವು ವ್ಯವಹಾರಿಕ ಸಾಧನಗಳಿಂದ ಕಲಿಸಲ್ಪಡುವದರಿಂದ ವಿದ್ಯಾರ್ಥಿಗಳಿಗೆ ಶಿಕ್ಷಣ ವ್ಯವಹಾರಗಳೊಳಗಿನ ಸಂಬಂಧದ ಅರಿವುಂಟಾಗಿ, ವಿದ್ಯಾರ್ಜನ ಮಾಡುವಾಗ ಪ್ರಯಾಸವಾಗುವದಿಲ್ಲ ಒಬ್ಬ ಮಿಶನರಿಯವರು ಈ ಪದ್ಧತಿಯನ್ನು ಪಂಜಾಬದಲ್ಲಿ ಉಪಕ್ರಮಿಸಿರುವರು. ಅಲ್ಲಿ ಹುಡುಗರು ಟಪಾಲ ಆಫೀಸನ್ನು ನಿರ್ವಹಿಸಿರುವರು. ಈ ಪದ್ಧತಿಯಂತೆ ಕಲಿತ ೧೬ ವರ್ಷ ಪ್ರಾಯದ ಮೇಲಿನ ವಿದ್ಯಾರ್ಥಿಗಳಿಗೆ ಈ ಪದ್ಧತಿಯಲ್ಲಿ ಪ್ರಾವೀಣ್ಯ ಸಂಪಾದಿಸಲು ಅನುಕೂಲವಾಗುವದೆ ಬಂದು ಟ್ರೇನಿಂಗ ಕಾಲೇಜೂ ಅಲ್ಲಿ ಸ್ಥಾಪಿಸಲ್ಪಟ್ಟಿದೆ ಪ್ರೋ॥ ಹೆಮ್ನೇಯವರು ಈ ಪದ್ಧತಿಯು ಹಿಂದುಸ್ಥಾನದಲ್ಲಿ ವೃದ್ಧಿಗೈಯುವದೆಂದು ಉದ್ಗರಿಸಿದರು.

***

ಅತಿ ವೃಷ್ಟಿಯ ವಿಲಾಸ.

ಅತಿ ವೃಷ್ಟಿಯಿಂದ ಅನೇಕ ಅನರ್ಥಗಳೊದಗಿವೆ. ದಕ್ಷಿಣ ಕನ್ನಡ ಜಿಲ್ಲೆಯ ಬಂಟವಾಳ, ಬ್ರಹ್ಮಾವರ, ಮಂಗಳೂರ, ಕುಂದಾಪುರ ಮೊದಲಾದವುಗಳಲ್ಲಿ ಸಾವಿರಾರು ರೂಪಾಯಿಗಳ ಅನರ್ಥ ಸಂಭವಿಸಿತು. ಪೈರೆಲ್ಲ ನಾಶವಾಯಿತು ಬೆಳೆದ ಕಬ್ಬು ಮೊದಲಾದವುಗಳೆಲ್ಲ ಹೊಳೆಯ ಹರಿಕಕ್ಕೆ ಕಿತ್ತುಹೋದವು ಅನೇಕ ಮನೆಗಳು ಕಿತ್ತುಬಿದ್ದು, ಲಕ್ಷಾವಧಿ ಪ್ರಜೆಗಳು ಮನೆಮಾರುಗಳಿಲ್ಲದೆ, ಗೋಳಿಡುತ್ತಿರುವರು ಧಾರವಾಡ, ಹಾನಗಲ್ಲ, ಖಂಡಾಳಾ, ಮುಂಬಯಿ ಮೊದಲಾದವುಗಳಲ್ಲಿಯೂ ಅತಿ ವೃಷ್ಟಿಯಾಗಿ, ಅನೇಕ ಚಮತ್ಕಾರಗಳು ಸಂಭವಿಸಿದವು ಹಾನಗಲ್ಲ ತಾಲೂಕಿನ ತಿಳವಳ್ಳಿಯಲ್ಲಿ ಈಗ ೭ ವರ್ಷಗಳಿಂದ ಅನಾವೃಷ್ಟಿಯಾಗಿ ಬರ, ಈ ವರ್ಷ ಅತಿವೃಷ್ಟಿಯಾಗಿ ಬರ, ಅಂತು ಬರ. ಶಿವಮೊಗ್ಗೆಯ ಹತ್ತರ ತುಂಗಭದ್ರಾ ನದಿಗೆ ಮಹಾ ನೆರೆ. ಸ್ಥೂಲದೇಹಿ ಆನೆಯೊಂದು ಹೊಳೆಗೆ ಬಿದ್ದು, ತೇಲಿಹೋಯಿತು. ೬ ಕೋಣಗಳ ಮೇಲೆ ನೀರಿನ ಪ್ರವಾಹವು ಎಳಕೊಂಡು ನಡೆಯಿತು. ಇದೊಂದು ಅದ್ಭುತ ಚಮತ್ಕಾರವು. ಖಂಡಾಳಾದಲ್ಲಿ ಅತಿವೃಷ್ಟಿಯಿಂದ ಗುಡ್ಡಗಳು ಕುಸಿದು ಬಿದ್ದಿವೆ. ಉಗಿಬಂಡಿ ಮಾರ್ಗವು ಕಟ್ಟಾಗಿದೆ. ಮುಂಬಯಿ-ಪುಣೆಯ ನಡುವೆ ಓಡ್ಯಾಡಲು ಆಸ್ಪದವಿಲ್ಲ. ಹೀಗಾಗಿ ಧೋಂಡ-ಮನಮಾಡದ ಮಾರ್ಗವಾಗಿ ಉಗಿಬಂಡಿಯು ಪುಣ್ಯ ಪಟ್ಟಣಕ್ಕೆ ಸೇರಿಕೊಳ್ಳುತ್ತದೆ. ಮೊದಲು ಮುಂಬಯಿ-ಪುಣೆಗಳ ಟಿಕೀಟಿನ ದರವು ರೂಪಾಯಿ ೫ ಇತ್ತು. ಈಗ ಅದು ೨೫ ರೂಪಾಯಿ ಮಾಡಲ್ಪಟ್ಟಿದೆ. ೫-೪ ತಾಸುಗಳಲ್ಲಿ ಪುಣೆಗೆ ಮುಟ್ಟುವ ರೈಲಿಗೆ ಈಗ ೧೦-೧೪ ತಾಸುಗಳು ತಗಲುತ್ತವೆ. ಅಕ್ಕಸಲ್‌ಕೋಟಿನಲ್ಲಿಯೂ ಇದೇ ಹಾಡು. ಧಾರವಾಡದಲ್ಲಿ ಅತಿವೃಷ್ಟಿಯಿಂದ ಮನೆಗಳಿಗೆಲ್ಲ ಜವುಳು ಎದ್ದಿದೆ. ಕೊಲ್ಹಾಪುರದಲ್ಲಿ ಪಂಚಗಂಗಾ ನದಿಗೆ ಮಹಾ ಪೂರ ಬಂತು. ೬-೭ ಮೈಲು ಅಚೆ ಈಚೆ ನೀರೇ ನೀರು. ಕೃಷ್ಣಾ-ಪಂಚಗಂಗಾ ನದಿಗಳ ಸಂಗಮ ಸ್ಥಾನವಾದ ಕುರುಂದವಾಡಿಗಳ ಹತ್ತರ ಏನು ಕೇಳುತ್ತೀರಿ ? ಘಟ್ಟದ ಬದಿಯವರಿಗೆ ಸಮುದ್ರದರ್ಶನವಾದ ಭಾಸವಾಯಿತು. ಭೇದವಿಷ್ಟೇ. ಸಮುದ್ರದ ನೀರುಉಪ್ಪು, ಈ ನೀರು ಸವಿ. ಕುಲಾಬಾ ಜಿಲ್ಲೆಯಲ್ಲಿ ಬಹಳೇ ಅನರ್ಥವು ಸಂಭವಿಸಿದೆ. ಪ್ರಾಣಹಾನಿಯೂ ಸಂಭವಿಸಿರುವದಂತೆ ! ಬುಲ್ಢಾ ತಾ. ೧೯ನೇ ಗುರುವಾರಕ್ಕೆ ಖಾಮಗಾಂವದಲ್ಲಿ ೧೫ ಇಂಚು ಮಳೆಯು ಸುರಿಯಿತು. ಥಳಕನೆ ನೆರೆ ಕಟ್ಟಿತು. ಭಾಮಿನೀ ಸಂಕದ ಹತ್ತರ ಹ್ಯಾಡ್ರೋ'ಇಲೆಕ್ಟ್ರಿಕ ಕಾರಖಾನೆಯಲ್ಲಿ ಕೆಲಸ ಮಾಡುವ ೮೦ ಕೂಲಿಯಾಳುಗಳು ತೇಲಿಹೋದರು. ಪೇಣ ಮಾರ್ಗದ ಮೇಲೆ ದೊಡ್ಡ ಬಂಡೆಗಲ್ಲು ಕುಸಿದು ಬಿದ್ದು, ರಹದಾರಿಯು ಕಟ್ಟಾಯಿತು. ನಾಗೋಠಣಾ-ರೋಹಿಗಳಲ್ಲಿಯೂ ನೆರೆಕಟ್ಟಿತು. ಪ್ರಾಣಹಾನಿಯೇನು ಒದಗದಿದ್ದರೂ, ೧ ಲಕ್ಷ ರೂಪಾಯಿಗಳ ವರೆಗಿನ ಹಾನಿಯಾಗಿರುವದಂತೆ. ಮಹಾಡದಲ್ಲಿ ಅದೇ ದಿನ ದೊಡ್ಡ ನೆರೆ ಕಟ್ಟಿ ಐದು ಹೆಂಗಸರು, ಮೂರು ಹುಡುಗರು ಮುಳುಗಿ ಮಡಿದರು. ಇದಲ್ಲದೆ ೬ ಲಕ್ಷ ರೂಪಾಯಿಗಳ ತನಕ ಹಾನಿಯೂ ಸಂಭವಿಸಿತಂತೆ. ದಕ್ಷಿಣ ಕನ್ನಡ ಜಿಲ್ಲೆಯ ಮೂರೂರಿನ ವೃದ್ಧರು ತಮ್ಮಲ್ಲಿಯ ನೆರೆ ನೋಡಿ, ತಾರಣ ಸಂವತ್ಸರದಲ್ಲಿ ಅಂದರೆ, ೧೮೮೪ ನೇ ಇಸವಿಯಲ್ಲಿ ಇಂಥ ಪ್ರಚಂಡ ಪ್ರವಾಹವು ಎದ್ದಿತ್ತೆಂದು ಉದ್ಗರಿಸಿದರಂತೆ. ಇಷ್ಟು ಪುರಾತನನೆರೆಯ ಪುನರ್ದರ್ಶನದ ಅಪೂರ್ವ ಯೋಗವು ಈ ವರ್ಷ ಸಂಭವಿಸಿತು.

***

ಡಾ॥ ವರದರಾಜುಲು ನಾಯುಡು.

ಡಾ॥ ವರದರಾಜುಲು ನಾಯುಡುರವರು ಸೇಲಮದೊಳಗಿನ ಬಲು ದೊಡ್ಡ ಸಾರ್ವಜನರು, ಮಹಾತ್ಮರ ಏಕನಿಷ್ಠ ಭಕ್ತರು; ಅಸಹಯೋಗಿಗಳು ಮಹಾತ್ಮರಿಗೆ ಕಾರಾಗೃಹವಾಸವಾದಂದಿನಿಂದ ಸರಕಾರಕ್ಕೆ ಯಾವದೇ ಕರವನ್ನು ತಾವಾಗಿ ತೆರಲಿಕ್ಕಿಲ್ಲೆಂದು ಅವರು ಭೀಷ್ಮ ಪ್ರತಿಜ್ಞೆ ಮಾಡಿರುವರು. ಅದರಂತೆ ಅವರು ಭೂಮಿ ಕಂದಾಯವನ್ನು ತೆರಲಿಲ್ಲ ಇನ್‌ಕಮ್ ಟೆಕ್ಸನ್ನೂ ತೆರಲಿಲ್ಲ. ಕೆಲ ಭೂಮಿಯು ಕಂದಾಯ ತೆರಲಿಲ್ಲೆಂದು ಜಪ್ತಾಯಿತು. ಇವರನ್ನು ಈಗ ಮದ್ರಾಸಿನ ನೌಕರಶಾಹಿಯು ಸೆರೆಹಾಕಿರುವದು ಕಳೆದ ತಾರೀಖು ೩೦ನೇಗೆ ಮಧುರೆಯ ಪಯಾಕುಲಮ್ ತಾಲುಕಾ ಪರಿಷತ್ತು ನೆರವೇರಿತು. ಸಭಾಧ್ಯಕ್ಷಸ್ಥಾನವನ್ನು ಡಾ॥ ವರದರಾಜುಲು ನಾಯುಡುರವರಿಗೆ ಸಮರ್ಪಿಸಿದ್ದರು. ಈ ಪರಿಷತ್ತಿಗಾಗಿ ಅವರು ಮೋಟಾರಾರೂಢರಾಗಿ ಹೋಗುತ್ತಿರುವಾಗ, ಮಾರ್ಗದ ಮೇಲೆ ಮೋಟಾರನ್ನು ನಿಲ್ಲಿಸಿ, ಅವರ ಮೇಲೆ ಕ್ರಿ ಪ್ರೊ ಕೋ. ೧೪೪ ಕಲಮಿನನ್ವಯ ನೋಟೀಸು ಜ್ಯಾರಿಯಾಯಿತು. ಆ ನೋಟೀಸಿನಲ್ಲಿ, ನೀವು ಪರಿಷತ್ತಿನಲ್ಲಿ ಮಾಡಲಿಕ್ಕಿದ್ದ ಭಾಷಣವು ರಾಜದ್ರೋಹ ಪ್ರಸಾರಕವಿರುವದೆಂದು ತಮಗೆ ಖಾತ್ರಿಯಿರುವದೆಂತಲೂ, ಡಾ॥ ರವರು ಯಾವದೇ ಸಭಾಧ್ಯಕ್ಷಸ್ಥಾನವನ್ನು ಸ್ವೀಕರಿಸಬಾರದೆಂತಲೂ, ಇದರಿಂದ ದಂಗೆ, ಅತ್ಯಾಚಾರಗಳು ಸಂಭವಿಸಬಹುದಾದ್ದರಿಂದ, ಈ ಹುಕುಮನ್ನು ಡಾ॥ ರವರ ಅಂದೋಣ ಕೇಳಿಕೊಳ್ಳದೆ ಹೊರಡಿಸಿದ್ದೇವೆಂತಲೂ, ಮಧುರೆಯ ಡಿ॥ ಮೆಜಿಸ್ಟ್ರೇಟರು ನಮೂದಿಸಿದ್ದರು. ಎಷ್ಟು ದಿವಸಗಳ ತನಕ ಈ ಹುಕುಮು ಜ್ಯಾರಿಯಲ್ಲಿರಬೇಕೆಂಬ ಕಾಲನಿರ್ದೇಶ ಮಾಡಿದ್ದಿಲ್ಲ. ಇಂಥ ಹುಕುಮನ್ನು ಡಾ॥ ವರದರಾಜುಲು ನಾಯುಡುರವರು ಅಮಾನ್ಯ ಮಾಡುವರೆ ನಿಶ್ಚಯಿಸಿ, ತಾಲುಕಾ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಅಲಂಕರಿಸಿ, ತಮ್ಮ ಭಾಷಣವನ್ನು ಓದಿ ಹೇಳಿದರು. ಅವರಿಗೆ ಈಗ ಅಂದರೆ, ಕಳೆದ ಶುಕ್ರವಾರ ತಾ. ೩೭ನೇಗೆ ೧೪೪ನೇ ಕಲಮಿನನ್ವಯ ಹೊರಡಿಸಿದ ಹುಕುಮನ್ನು ಅನಾದರಿಸಿದ ಬಗ್ಗೆ ೧೮೮ನೇ ಕಲಮಿನನ್ವಯ ಇನ್ನೊಂದು ಹುಕುಮನ್ನು ಹೊರಡಿಸಿ, ಸೆರೆಹಿಡಿದಿರುವರು. ವಿಚಾರಣೆಯು ಏನಾಯಿತೆಂದು ತಿಳಿಯಲಿಲ್ಲ.

***

ಸೇವಕರಲ್ಲಿಯೂ ಗೌರಕಾಯದವರಿಗೇ ಉತ್ತೇಜನ.

ಕಳೆದ ಸೋಮವಾರ ತಾ. ೩೦ನೇಯಿಂದ ಪುಣ್ಯ ಪಟ್ಟಣದೊಳಗಿನ ಕೌನ್ಸಿಲು ಹೊಲಿನಲ್ಲಿ ಮುಂಬಯಿ ಕಾಯಿದೆ ಕೌನ್ಸಿಲಿನ ಅಧಿವೇಶನಕ್ಕೆ ಪ್ರಾರಂಭವಾಗಿದೆ. ೨೪ ವರ್ಷಗಳ ವರೆಗೆ ಕಲೆಕ್ಟರರ ಹದ್ದೆಯನ್ನು ಆಕ್ರಮಿಸಿ, ಪೆನ್ಶನು ಪಡೆದ ಮಿ॥ ಜೆ. ಕೆ.ಎನ್. ಕಾಬ್ರಾಜಿಯವರಿಗೆ ಪೆನ್ಶನು ಕೆಳಮನ್ನು ನಿಶ್ಚಯಿಸುವಾಗ ಅನ್ಯಾಯವಾಗಿದೆಂದು ೪ ಮಂದಿ ಸಭಾಸದರು ಅದನ್ನು ತಿದ್ದುಪಡಿಸಲು ಠರಾವು ಸೂಚಿಸಿರುವರು. ಮಿ॥ ಕಾಬ್ರಾಜಿಯವರಿಗೆ ಸಿವ್ಹಿಲ ಸರ್ವಿಸ ರೆಗ್ಯುಲೇಶನ್ ೪೭೫ (ಅ) ಪ್ರಕಾರ ವಿಶೇಷ ಪೆನ್ಶನನ್ನೇ ಕೊಡಬೇಕಾಗಿತ್ತೆಂದು ಮಿ॥ ಕಾಬ್ರಾಜಿಯವರ ಹೇಳಿಕೆ. ನಾಮುಪಾರರೂ ಅದೇ ಅರ್ಥದ ಠರಾವುಗಳನ್ನೇ ಕೌನ್ಸಿಲಿನಲ್ಲಿ ಸೂಚಿಸಿರುವರು. ಸಿವ್ಹಿಲ ಸರ್ವಿಸ ಕಾನೂನಿನಂತೆ ಖಾದಾ ಪೆನ್ಶನನ್ನು ಪಡೆಯುವ ಶರ್ತುಗಳನ್ನ ಮಿ॥ ಕಾಬ್ರಾಜಿಯವರು ಪಾಲಿಸಲಿಲ್ಲೆಂದು ಗೃಹಮಂತ್ರಿಗಳಾದ ಮಿ॥ ಹೊರೆನ್ನರವರ ತಕರೀರು. ಈ ವರೆಗೆ ಈ ಕಾನೂನಿನಂತೆ ಖಾದಾ ಪೆನ್ಶನು ಸಿಕ್ಕಿದ ಸುದೈವಿಗಳ ಹೆಸರುಗಳನ್ನು ತಿಳಿಸಿರೆಂದು ಸಭಾಸದರು ಪ್ರಶ್ನಿಸಲು, ೧೦ ಮಂದಿಗಳ ಹೆಸರುಗಳು ಪ್ರಕಟವಾಗಿವೆ ನಾಲ್ವರು ಪೋಲೀಸ ಡೆಪ್ಯುಟಿ ಇನ್ಸಪೆಕ್ಟರ ಜನರಲ್ಲರು ಒಬ್ಬರು ಪೋಲೀಸ ಇನ್ಸಪೆಕ್ಟರ ಜನರಲ್‌ರು ಒಬ್ಬರು, ಪೋಲೀಸ ಕಮೀಶನರರು, ಇನ್ನೊಬ್ಬರು ಚೀಫ ಕನ್ಸರವ್ಹೇಟರರು, ಮತ್ತೊಬ್ಬರು ಕನ್ಸರವ್ಹೇಟರರು, ಸುಪರಿಂಟೆಂಡಿಂಗ ಇಂಜನಿಯರರೊಬ್ಬರು, ಕರಾಚಿ ಪೋರ್ಟ ಟ್ರಸ್ಟದ ಚೇರಮನರೊಬ್ಬರು; ಹೀಗೆ ೧೦ ಮಂದಿಗಳು ಇವರಲ್ಲಿ ಒಬ್ಬರೂ ಸಹ ಆಯಾ ಹುದ್ದೆಗಳನ್ನು ಆಕ್ರಮಿಸಿ, ಐದು ವರುಷಗಳ ವರೆಗೆ ಸಹ ಸರಕಾರಿ ಸೇವೆಯನ್ನು ಮಾಡಲಿಲ್ಲ. ಎಲ್ಲ ಪುಣ್ಯಾತ್ಮರೂ ಯುರೋಪಿಯನ್‌ರೇ. ಮಿ॥ ಕಾಬ್ರಾಜಿಯವರು ಏಕಸಮನೆ ೨೪ ವರುಷ ಕೆಲಸ ಮಾಡಿದರೂ, ಖಾದಾ ವೇತನಕ್ಕೆ ಅವರು ಅರ್ಹರಾಗುವದಿಲ್ಲ, ಯುರೋಪಿಯನ್ ಪುಣ್ಯಾತ್ಮರ ಐದು ವರುಷಗಳ ಸೇವೆಯು ಅಮೂಲ್ಯವೆಂದೆಣಿಸಿ, ಅವರಿಗೆ ಖಾದಾ ಪೆನ್ಶನು ಕೊಡೋಣಾಗುತ್ತದೆ. ನೌಕರಶಾಹಿಗೆ ಹಿಂದೀಯರು ಮಾಡಿದ ಸೇವೆಯು ಕೃಪಣ ಸೇವೆಯಂತೆ ವಿಫಲವಾಗುತ್ತದೆ. ಸೇವಕರಲ್ಲಿಯೂ ಗೌರ-ಕೃಷ್ಣ ವರ್ಣಗಳೆಂಬ ಭೇದಗಳಿವೆ

— ಮುಂಬಯಿ ಸರಕಾರದ ವಿದ್ಯಮಾನ ಪ್ರಸಿದ್ಧವಾಗುವ ಲೇಬರ ಗೆಝೀಟಿನಲ್ಲಿ ಮುಂಬಯಿಯೊಳಗಿನ ಕೂಲಿಕಾರ ವರ್ಗದ ಖರ್ಚಿನ ಅಂದಾಜು ಪತ್ರಕದಂತೆ ಪ್ರತಿ ಒಬ್ಬನಿಗೆ ವರ್ಷಕ್ಕೆ ೧೨ ಪೌಂಡು ಉಪ್ಪು ತಗಲುತ್ತದೆಂದು ಪ್ರಕಟವಾಗಿದೆ.

— ಬೆಳಗಾಂವ ಜಿಲ್ಹೆಯಲ್ಲಿ ಸಕ್ತಿಯ ಪ್ರಾಥಮಿಕ ಶಿಕ್ಷಣವನ್ನು ಪ್ರಾರಂಭಿಸುವರೆ ಲೋಕಲ ಬೋರ್ಡಿನ ಠರಾವಿಯನ್ನು ಇಮ್ಮಡಿ ಮಾಡಿರುವರು. ಈ ಠರಾವಿನ ವಿರುದ್ಧ ಕರವನ್ನೇರಿಸಲು ಸರಕಾರವು ಸಮ್ಮತಿ ಕೊಡಬಾರದೆಂದು ಬೆಳಗಾಂವದ ಬೇಸಾಯಗಾರರು ಸಭೆಸೇರಿ, ಠರಾವು ಮಾಡಿರುವರು.

ರಾಷ್ಟ್ರೀಯ ಅಪಮಾನದ ನಿಷೇಧವನ್ನು ವ್ಯಕ್ತಗೊಳಿಸುವರೆಂಬುದನ್ನು ನೋಡಬೇಕಾಗಿದೆ. ವರಿಷ್ಠ ಶಾಯಿದೆ ಕೌನ್ಸಿಲಿನ ಮೆಂಬರರು ಈ ಸುದ್ದಿ ಕೇಳಿ, ಕಳೆದ ೨೨ ನೇ ತಾರೀಖಿನ ಕೌನ್ಸಿಲಿನಲ್ಲಿ ಕೋಲಾಹಲವನ್ನೆಬ್ಬಿಸಿ, ಮಹಾಹಕಿನ ಸರಕಾರವು, ಹಿಂದೀಯರನ್ನು ನಡಿಸಿಕೊಳ್ಳುವಂತೆ, ಹಿಂದುಸ್ಥಾನ ಸರಕಾರವೂ ಅಲ್ಲಿಯ ಪ್ರಜೆಗಳನ್ನು ನಡಿಸಿಕೊಳ್ಳಬೇಕೆಂದು ಠರಾವು ಪಾಸುಮಾಡಿರುವರು ಆದರೆ, ನೌಕರಶಾಹಿಯೇ ಹಿಂದೀ ಲೋಕಮತಕ್ಕೆ ಪ್ರತಿಕೂಲವಾಗಿ ನಡೆಯುತ್ತಿರಲು, ಈ ಕಾಯಿದೆಯನ್ನು ಅವರು ಅನುಲಿನಲ್ಲಿ ತಂದು, ಹಿಂದೀಯರ ಮಾನಹಾನಿ ಮಾಡುವವರನ್ನು ದಂಡಿಸುವರೆಂದು ಕೋರುವದು ನಿಷ್ಪ್ರಯೋಜಕವಲ್ಲವೇ ?

---

೨ ಫಿಜಿ ದ್ವೀಪದೊಳಗೆ ವಾಸವಾಗಿರುವ ಬ್ರಿಟಿಶ ಪ್ರಜಾಜನರಿಂದ ತಲೆಗೊಂದು ಪವನಿನಂತೆ ಜಿಝಿಯಾ ತೆರಿಗೆಯನ್ನೆತ್ತಬೇಕೆಂಬ ಕಾಯಿದೆಯನ್ನು ಸುವಾ ಕಾಯಿದೆ ಕೌನ್ಸಿಲು ಮಂಜೂರು ಮಾಡಿದೆ. ಈ ಕಾಯಿದೆಯಲ್ಲಿ ತೋರಿಕೆಗೆ ವರ್ಣಭೇದವೇನೂ ಕಾಣುವದಿಲ್ಲ ವರ್ಣದ್ವೇಷವಂತು ಅವ್ಯಕ್ತವೇ. ಆದರೆ, ಫಿಜೀ ನಡುಗಡ್ಡೆಯಲ್ಲಿ ವಾಸವಾಗಿರುವ ಯುರೋಪಿಯನ್‌ರು ಶ್ರೀಮಂತರು. ಇವರೆಲ್ಲರೂ ದೊಡ್ಡ ದೊಡ್ಡ ತೋಟಗಳ ಸಾವುಕಾರರು ಒಬ್ಬೊಬ್ಬರ ವಾರ್ಷಿಕ ಉತ್ಪನ್ನವು ಕನಿಷ್ಠ ೨-೪ ಸಾವಿರ ರೂಪಾಯಿಗಳಿವೆ ಇವರಿಗೆ ಈ ತೆರಿಗೆಯಿಂದ ಅಷ್ಟೇನು ಬಾಧೆಯಾಗುವದಿಲ್ಲ. ಸುವಾ ಕಾಯಿದೆ ಕೌನ್ಸಿಲಿನಲ್ಲಿ ಒಬ್ಬೊಬ್ಬರೇ ಹಿಂದೀ ಸಭಾಸದರಿರುವರು ಯುರೋಪಿಯನ್‌ರಿಗೆ ಈ ತೆರಿಗೆಯಿಂದ ಕಷ್ಟವೊದಗುತ್ತಿದ್ದರೆ, ಈ ಕಾಯಿದೆಯು ಎಂದೂ ಮಂಜೂರಾಗುತ್ತಿದ್ದಿಲ್ಲ ತೋಟಗಳಲ್ಲಿ ಕೂಲಿ ಕಷ್ಟ ಮಾಡಿ, ಹೊಟ್ಟೆ ತುಂಬುವ ಬಡ ಹಿಂದೀಯರ ಸಂಸಾರಯಾತ್ರೆಯನ್ನು ಕಠಿಣ ಮಾಡಬೇಕೆಂಬ ದುರಾಲೋಚನೆಯಿಂದ ಈ ಕಾಯಿದೆಯನ್ನು ಯುರೋಪಿಯನ್ ಸಾವುಕಾರರು ಕಾಯಿದೆ ಕೌನ್ಸಿಲಿನಲ್ಲಿ ಮಂಜೂರು ಮಾಡಿಕೊಂಡಿರುವರು. ಹಿಂದೀಯರಿಗೆ ಸಾಮ್ರಾಜ್ಯದಲ್ಲಿ ಬಾಂಧವರಂತೆ ಸಮಾನ ಹಕ್ಕಿನಿಂದ ನಡಿಸಿಕೊಳ್ಳುವ ಯುರೋಪಿಯನ್‌ರ ಮನಸ್ಥಿತಿಯು ಮಾಹಾಯಿದು ಕಾಯಿದೆ ಕೌನ್ಸಿಲಿನಲ್ಲಿ ನೇಮಕ ಹೊಂದಿದ ಒಬ್ಬೊಬ್ಬರೇ ಹಿಂದೀ ಸಭಾಸದರು ಈ ಕಾಯಿದೆಯ ವಿರುದ್ಧ ಬಹುಪರಿಯಿಂದ ಹೋರಾಡಿದರು ಕಾಯಿದೆಯು ಮಂಜೂರಾದದ್ದನ್ನು ನೋಡಿ, ನಿಷೇಧವೆಂದು ಕೌನ್ಸಿಲು ಸಭಾಸದತ್ವಕ್ಕೆ ರಾಜಿನಾಮೆಯನ್ನಿತ್ತರು ಹಿಂದೀಯರ ಸಹಕಾರಿತೆಯೂ ಸಹಾಯವೂ ಯುರೋಪಿಯನ್‌ರಿಗೆ ಬೇಕೆಂಬುದು ಬರೇ ಸ್ವಾರ್ಥಕ್ಕಾಗಿ, ಹೊರತು, ಹಿಂದೀಯರ ಕಲ್ಯಾಣಕ್ಕಾಗಿ ಇರುವದಿಲ್ಲ

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ಮೇಘರಾಜನು ಸೂರ್ಯನಾರಾಯಣನ ಸಾಹಚರ್ಯ ಮಾಡಿ, ಪ್ರಜೆಗಳಿಗೆ ಉಪಕರಿಸಿದನು. ಬಿಸಿಲೂ ಬಿತ್ತು. ಮಳೆಯು ಅಲ್ಪ ಸ್ವಲ್ಪ ಬಿತ್ತು ಬೇಸಾಯಗಾರರ ನಟ್ಟಿಗೆಲಸವು ಭರದಿಂದ ಸಾಗಿತು. ಬೀಜ-ಸಸಿಗಳಿಲ್ಲದವರ ಗೋಳು ನಡೆಯ ಪ್ರಸಂಗವೂ ಇಳಿಯಿತು. ಅಲ್ಪ ಸ್ವಲ್ಪ ಕಳೆಯಾದರೂ, ಒಟ್ಟಿಗೆ ವಾತಾವರಣವು ಸುಖಾವಹವಾಗಿದೆ. ಈ ವಾರದಲ್ಲಿ ೮-೨೭ ಇಂಚು ಮಳೆಯು ಬಿತ್ತು.

ಡಾ॥ ಅನ್‌ಸಾರಿ ಪ್ರಭೃತಿಗಳ ಆಜ್ಞೆಯಂತೆ ಇಲ್ಲಿಯೂ ಕಳೆದ ಗುರುವಾರ ಅಪರಾಹ್ಣಕ್ಕೆ ರಾಷ್ಟ್ರಧ್ವಜ-ಖಿಲಾಫತ ಧ್ವಜಯುಕ್ತ ಪ್ರಚಂಡ ಮೆರವಣಿಗೆ ಹೊರಟು, ಪಟ್ಟಣದ ಮುಖ್ಯ ಮುಖ್ಯ ಮಾರ್ಗಗಳ ಮೇಲಿಂದ ಹಾದು, ಮಸೀದಿಯನ್ನು ಸೇರಿತು. ಮಸೀದಿಯು ಸಭಾಗೃಹವು ದೀಪ ಧ್ವಜಗಳಿಂದ ಶೃಂಗರಿಸಲ್ಪಟ್ಟಿತ್ತು ಅಖಿಲ ಪ್ರಜೆಗಳೂ ಮಸೀದಿಯನ್ನು ಸೇರಿಕೊಂಡು, ಠರಾವುಗಳನ್ನು ಪಾಸು ಮಾಡಿದರು ಮಿ॥ ಅಲ್ಲಸಾಹೇಬ ಹಾಗು ಶ್ರೀ ಶ್ರೀಪಾದರಾವ ಕಲ್ಯಾಣಪುರಕರರವರ ಚಿತ್ತವೇಧಕ, ಆನಂದಪ್ರದರ್ಶಕ ಉಪನ್ಯಾಸಗಳಾದವು. ಅಷ್ಟರಲ್ಲಿ ತಹನಾಮೆಗೆ ಪ್ರತಿನಿಧಿಗಳ ಸಹಿಯಾದ ಶುಭ ವರ್ತಮಾನವು ತಂತಿದ್ವಾರಾ ಬಂದು ಮುಟ್ಟಿತು ಇದನ್ನು ಕೇಳಿದೊಡನೆ, ಸಭೆಯಲ್ಲಿ ಉತ್ಸಾಹ ಉಕ್ಕೇರಿತು. ರಾತ್ರಿ ಮಸೀದಿಯಲ್ಲಿಯೂ, ಪೇಟೆಯಲ್ಲಿಯೂ ದೀಪೋತ್ಸವವು ಸಡಗರದಿಂದ ನೆರವೇರಿತು

ನಿನ್ನೆ ಲೋಕಮಾನ್ಯರ ಪುಣ್ಯತಿಥಿಯು ಅಂದು ಇಲ್ಲಿ ತಾಲೂಕಾ ಕೊಂಗ್ರೆಸ ಕಮಿಟಿಯು ವಿದ್ಯಮಾನ ಲೋಕಮಾನ್ಯರ ಭಾವಚಿತ್ರದ ಮೆರವಣಿಗೆಯಾಯಿತು ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಜಾಹೀರ ಸಭೆಯಾಗಿ, ಲೋಕಮಾನ್ಯರ ಗುಣವರ್ಣನದರ, ರಾಷ್ಟ್ರಕಾರ್ಯೋತ್ತೇಜಕ ಉಪನ್ಯಾಸಗಳಾದ ಬಳಿಕ, ಲೋಕಮಾನ್ಯ ಹಾಗು ಮಹಾತ್ಮಾ ಗಾಂಧಿಯವರ ಜಯಘೋಷದೊಡನೆ ಸಭೆಯು ವಿಸರ್ಜನವಾಯಿತು

ಶ್ರೀ ಶಾಂತೇರಿಕಾಮಾಕ್ಷಿ ದೇವಸ್ಥಾನದಲ್ಲಿ ವೇ। ಮಾಧವ ಶರ್ಮ ಭಟ್ಟ ಗೋಕರ್ಣಕರವರು ಭಾಗವತ ಗ್ರಂಥವನ್ನು ನಿರೂಪಿಸುತ್ತಾರೆ.

ಗೋಕರ್ಣ ಅತ್ತಕಡೆಯಲ್ಲಿ ಈ ವರ್ಷ ಪ್ಲೋನ್ ಬಾಂದ ಪಹಾಣಿ ನಡಿಸಿದ ಸರ್ಕಲ ಇನ್ಸಪೆಕ್ಟರರ ಮೇಲೆ ಲಂಚ ತಿಂದ ಆರೋಪ ಬಂದಿದೆಯೆಂತ ಚೌಕಸಿಯು ನಿರ್ಣಯವಾಗುವವರೆಗೆ ಅವರನ್ನು ಸಸ್ಪೆಂಡ ಮಾಡಿರುವರೆಂತಲೂ ತಿಳಿಯುತ್ತದೆ

ಇಲ್ಲಿಯ ಸಹಕಾರ ಸಂಘಕ್ಕೆ ಪ್ಲೀಡರ್ಕ್ಕ ಬಾಕಿ ಸಾಲಗಳನ್ನು ವಸೂಲ ಮಾಡಿಕೊಳ್ಳುವರೇ ಮೆನೇಜಿಂಗ ಕಮಿಟಿಯವರು ರಾ। ಶ್ರೀನಿವಾಸ ರಾಮಚಂದ್ರ ಜ್ಞಾನಭಾಗವತರನ್ನು ನೇಮಿಸಿದರು ಅವರ ಕಡೆಗೆ ಸಾಲಗಾರರು ತಮ್ಮ ತಮ್ಮ ಸಾಲಗಳನ್ನು ವಸೂಲು ಕೊಡಬೇಕಾಗಿ ಕಾರ್ಯದರ್ಶಿಗಳು ತಿಳಿಸುತ್ತಾರೆ

ಅಂಕೋಲಾ— ಖಿಲಾಫತ ಕಮಿಟಿಯ ಕಾರ್ಯದರ್ಶಿಗಳು ತಿಳಿಸುವದೇನಂದರೆ —

ಸೆಂಟ್ರಲ್ ಖಿಲಾಫತ ಕಮಿಟಿಯ ಅಧ್ಯಕ್ಷರಾದ ಡಾ॥ ಅನ್‌ಸಾರಿಯವರ ಜಾಹೀರ ಪತ್ರಿಕೆಯಂತೆ ತಾರೀಖು ೨೬-೭-೧೯೨೩ ನೇ ಗುರುವಾರ ದಿವಸ ಬಕರೀದ ಹಬ್ಬದ ನಂತರ ೪ ಘಂಟೆಗೆ ಮೊದಲೇ ಜಾಹೀರ ಮಾಡಿದ ಪ್ರಕಾರ ಒಬ್ರಹಾಮ ಸೈದ ಭಕ್ತುಲ್ಲಾಖ್ಯಾ ಖಾದ್ರಿ ಪಿರದಾರಿಯವರ ಮನೆಗಾದ ಹತ್ತರ ಎಲ್ಲಾ ಜನರು ಕೂಡಿ ಪ್ರಾರ್ಥನೆ ಮಾಡಿ ರಾಷ್ಟ್ರ ವ ಖಿಲಾಫತ ಝುಂಡೆ ಸಹಿತ ಮೆರವಣಿಗೆ ಹೊರಟು, ಅಂಕೋಲಾ ದೊಡ್ಡ ಬಾಜಾರ ಭಂಡಿ ಬಾಜಾರ ಮಾರ್ಗವಾಗಿ ಜುಮ್ಮಾ ಮಸೀದಿಗೆ ಬಂದು, ಸೈದ ಭದ್ರುದ್ದೀನ್ ಖ್ಯಾ ಖಾದ್ರಿಯವರ ಅಧ್ಯಕ್ಷತೆಯಲ್ಲಿ ಸಭೆಯು ಕೂಡಿ, ಸೈದ ಅಬ್ದುಲ್ ಹಸನ್ ಸೆಕ್ರೆಟರಿ ಖಿಲಾಫತ ಕಮಿಟಿ ಅಂಕೋಲಾರವರ ಸಮಯೋಚಿತ ಭಾಷಣವಾದ ನಂತರ ಖಿಲಾಫತ ಕಮಿಟಿಯವರು ತಂದೆ ಮೂರು ಠರಾವುಗಳು ಸಭೆಯಲ್ಲಿಡಲ್ಪಟ್ಟವು ಮತ್ತು ಅವು ಸರ್ವಾನುಮತದಿಂದ ಪಾಸಾದವು. ಸಾಯಂಕಾಲ ಪ್ರಾರ್ಥನೆ ವಗೈರೆ ಆದ ನಂತರ ಮಸೀದಿಯಲ್ಲಿ ರೋಷನಾಯಿ ಮಾಡಲ್ಪಟ್ಟಿತ್ತು ಮನೆಗಳಲ್ಲಿ ಸಹಾ ರೋಷನಾಯಿ ಮಾಡಲ್ಪಟ್ಟಿತ್ತು ಮೆರವಣಿಗೆ ಆಜ ಮಾಸು ಹಿಂದು ಮುಸಲ್ಮಾನ ಕೂಡಿ ೫೦೦ ಜನರಿದ್ದರು. ಸಭೆಯು ೮ ಘಂಟೆಗೆ ವಿಸರ್ಜಿತವಾಯಿತು.

— ಎಲ್ಲ ಕಡೆಯಲ್ಲಿ ಚಲೋ ವೃಷ್ಟಿಯಾದ ಸುದ್ದಿ ಕೇಳಿ ರಂಗೂನಿನವರು ಅಕ್ಕಿಯ ದರ ಇಳಿಸಿರುವರು

ಹೊನ್ನಾವರ— ಕುಮಟೆಯಲ್ಲಿ ಕೂಡಿದ ಜಿಲ್ಲಾ ಕೊಂಗ್ರೆಸ ಕಮಿಟಿಯ ಮಹಾ ಸಭೆಯು ಠರಾಯಿಸಿದಂತೆ, ಹಳದೀಪುರದ ಅಗ್ರಹಾರ ಗಣಪತಿ ದೇವಸ್ಥಾನದಲ್ಲಿ ತಾ ೧೯-೮ ೧೯೨೩ನೇ ರವಿವಾರ ಸಾಯಂಕಾಲ ೩ ಘಂಟೆ ಸಮಯಕ್ಕೆ ಜಿಲ್ಹಾ ಕೊಂಗ್ರೆಸ ಕಮಿಟಿಯ ಮಹಾ ಸಭೆಯು ಕೂಡುವದು. ನಮ್ಮ ಜಿಲ್ಹೆಯಲ್ಲಿ ಪ್ರಾಂತಿಕ ಪರಿಷತ್ತು ಕೂಡಿಸುವ ಬಗ್ಗೆ ನಿಶ್ಚಿತ ಅಭಿಪ್ರಾಯವನ್ನು ಪ್ರಾಂ ಕೊಂ ಕಮಿಟಿಗೆ ತಿಳಿಸುವ ವಿಷಯವೊಂದು, ಅ ಭಾ ಕೊಂ ಕಮಿಟಿಗೆ ಹಾಗು ಪ್ರಾಂ. ಕೊಂ ಕಮಿಟಿಗಳ ಅಧಿವೇಶನಗಳಿಗೆ ಹೋಗುವ ಸಭಾಸದರ ಪ್ರವಾಸ ಖರ್ಚಿನ ಬಗ್ಗೆ ಜಿಲ್ಹಾ ಕೊಂಗ್ರೆಸ ಕಮಿಟಿಗೆ ಎಷ್ಟರ ಮಟ್ಟಿಗೆ ವ್ಯವಸ್ಥೆ ಮಾಡಲಿಕ್ಕಾದೀತೆಂದು ವಿಚಾರಿಸಿ, ಗ್ರಾಮ ಕೊಂಗ್ರೆಸ ಕಮಿಟಿಗೆ ತಿಳಿಸುವ ವಿಷಯವು ಇನ್ನೊಂದು; ಹೀಗೆ ಆಲೋಚನೆ ನಡೆಯುವದೆಂತಲೂ ಕೋರಂ ಆಗದಿದ್ದಲ್ಲಿ ಮುಂದರಿಸಿದ ಸಭೆಯು ಸಾಯಂಕಾಲ ೫ ಘಂಟೆಗೆ ಅಲ್ಲಿಯೇ ನೆರೆಯುವದೆಂತಲೂ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಕಳೆದ ಗುರುವಾರಕ್ಕೆ ಇಲ್ಲಿ ರಾಷ್ಟ್ರಧ್ವಜ-ಖಿಲಾಫತ ಧ್ವಜಯುಕ್ತ ಊರ ತುಂಬ ಮೆರವಣಿಗೆಯಾಯಿತು. ಮಸೀದಿಯಲ್ಲಿ ಸಭೆಸೇರಿ, ಠರಾವುಗಳು ಮಂಜೂರಾದವು.

ಸಿದ್ದಾಪುರ— ಮಳೆಯು ಕಸುವಿನಿಂದ ಸುರಿಯುತ್ತದೆ ಇಷ್ಟರೊಳಗೆ ಕೊಳೆಯು ತೋಟಗಳಿಗೆ ೩ ರಲ್ಲಿ ೧ ಪಾಲು ಹಾನಿ ಮಾಡಿದೆ. ತಾ. ೨೯ ನೇ ವರೆಗೆ ಮಳೆಯು ೧೦೪-೧೮ ಇಂಚು ಬಿತ್ತು. ಕಳೆದ ತಿಂಗಳಿನಲ್ಲಿ ೮೫ ಇಂಚು ಬಿತ್ತು

ತಾ ೨೪ ೭ ೨೩ ನೇ ಮಂಗಳವಾರ ಏಕಾದಶಿ ಇದ್ದದರಿಂದ, ಭಗಿನೀ ಮಂಡಳದ ತರ್ಫೆನಿಂದ ಶ್ರೀ ಕೃಷ್ಣಭಟ್ಟರು ‹ರುಕ್ಮಾಂಗದ ಚರಿತ್ರ" ದ ಮೇಲೆ ಸರಸವಾದ ಕೀರ್ತನೆ ರಾಷ್ಟ್ರೀಯ ಶಾಲೆಯಲ್ಲಿ ಆಯಿತು ಇವರ ಸಮಾಲೋಚನ ಭಾಷಣದಲ್ಲಿ ತಾವು ಪ್ರತಿ ಏಕಾದಶಿಗೂ ಹೀಗೇ ಧಾರ್ಮಿಕ ವಿಷಯದ ಮೇಲೆ ಕೀರ್ತನೆ ಮಾಡಲಿಕ್ಕೆ ತಯಾರಿದ್ದೇವೆಂದು ಜಾಹೀರ ಮಾಡಿದರು

ನಂತರ ಶ್ರೀ॥ ದೇವ ಇವರು ತಾಲೂಕಾ ಕೊಂಗ್ರೆಸ ಕಮೀಟಿಯಿಂದ ಹಿಡಳ ಬಡವರಿಗೆ ರಾಟಿ ಮತ್ತು ಹತ್ತಿ ಪುಕ್ಕಟೆಯಾಗಿ ಕೊಡುತ್ತೇವೆ ಅವರು ಪದ್ರಿ ಕಮೀಟಿಗೆ ನೂಲು ಮಾತ್ರ ತಂದು ಕೊಟ್ಟರಾಯಿತು ಎಂತ ಹೇಳಿದರು. ಮತ್ತು ಇತರ ಜನರು ನೂಲುತ್ತಿಗೆವವರು, ನೂಲನ್ನು ಕೊಂಗ್ರೆಸ ಕಮೀಟಿಗೆ ಕೊಟ್ಟು ನೂಲಿನ ದುಪ್ಪಟ್ಟು ಹತ್ತಿ ಪಡೆಯಬಹುದೆಂತಲೂ ಜಾಹೀರ ಮಾಡಿದರು. ನಂತರ ಪ್ರಸಾದ ಹಂಚಿದ ಮೇಲೆ, ಅಂದಿನ ಕಾರ್ಯ ಸಮಾಪ್ತವಾಯಿತು

ನಂತರ ಮಾರನೇ ದಿವಸ ಅಂದರೆ ತಾ ೨೫-೭-೨೩ನೇ ಬುಧವಾರ ಮಧ್ಯಾಹ್ನ ಘಂಟೆ ೧೨ಕ್ಕೆ ಹಿಂದೂ ಮುಸಲ್ಮಾನ ಬಾಂಧವರು ಘಂಟೆ ಮಂತ್ರಘೋಷ ಕವಾಲ ಪಾಡುವವರ ಸಹಿತದೊಂದಿಗೆ ರಾಷ್ಟ್ರೀಯ ನಿಶಾನೆ ಮಂತ್ರಾವುಗಳನ್ನು ತೆಗೆದುಕೊಂಡು ಮೆರವಣಿಗೆಯಿಂದ ಭಜನೆಮಾಡಿಕೊಳ್ಳುತ್ತ ಊರೆಲ್ಲ ಅಡ್ಡಾಡಿ, ನಂತರ ರಾಷ್ಟ್ರೀಯ ಶಾಲೆಗೆ ಬಂದು ಜಾಹೀರ ಸಭೆ ಆಯಿತು ಸಭೆಯಲ್ಲಿ ಶ್ರೀ॥ ದೇವ ಇವರು ಖಿಲಾಫತದ ವಿಷಯವನ್ನೆಲ್ಲಾ ಚನ್ನಾಗಿ ತಿಳಿಸಿಕೊಟ್ಟ ನಂತರ ಡಾ॥ ಅನ್‌ಸಾರಿಯವರ ಪ್ರಭೃತಿ ಆಜ್ಞೆಯಂತೆ ಮೂರು ಠರಾವುಗಳು ಸರ್ವಾನುಮತದಿಂದ ಪಾಸ ಮಾಡಲಾದ .

ಇಷ್ಟಾದನಂತರ ಮಹಾತ್ಮರ ಮತ್ತು ಶೌಕತ ಅಲಿ ಮಹಮದಅಲಿ ಇವರ ಜಯಜಯ ಕಾರಗಳಿಂದ ಸಭಾ ವಿಸರ್ಜನೆ ಮಾಡಲ್ಪಟ್ಟಿತು

ತಾ ೨೮-೭-೨೩ ಕ್ಕೆ ಮುಪ್ಪಿಭಂಡು ೧೦ ಗಿದ್ದು ಬಂದವ ರಾಷ್ಟ್ರೀಯ ಶಾಲೆಯಲ್ಲಿ ಎರಡು ತಿಂಗಳಿಂದ ನೇಯ್ದ ಶುದ್ಧ ಖಾದಿ ವಾರ ೬ ಮಳೆಗಾಲದಲ್ಲಿ ಅಷ್ಟುಜೋರಿನಿಂದ ಕೆಲಸ ಸಾಗುವದಿಲ್ಲ.

ಕರ್ನಾಟಕದ ಸ್ವಯಂಸೇವಕರು.

(ವಾರ್ತಾಪ್ರಸಾರಕ ಸಂಘ, ಹುಬ್ಬಳ್ಳಿ.)

ಅಗಸ್ಟ ತಿಂಗಳಲ್ಲಿ ನಾಗಪೂರ ಸತ್ಯಾಗ್ರಹಕ್ಕಾಗಿ, ಸ್ವಯಂಸೇವಕರನ್ನು ಕಳಿಸುವ ಕಾರ್ಯಕ್ರಮವು ಕೆಳಗಿನಂತೆ—

ತಂಡಗಳು		ಸ್ಥಳ	ಹೊರಡುವ ತಾ.	
೧ ನೇ	ತಂಡ	ಬೆಳಗಾಂವ	೧ ನೇ	ಅಗಸ್ಟ
೨ ನೇ	,,	ವಿಜಾಪೂರ	೭	,,
೩ ನೇ	,,	ಧಾರವಾಡ	೧೩	,,
೪ ನೇ	,,	ಮಂಗಳೂರ	೨೨	,,
೫ ನೇ	,,	ಬೆಂಗಳೂರ	೨೪	,,
೬ ನೇ	,,	ಕಾರವಾರ	೨೬	,,

ಸ್ವಯಂಸೇವಕರಿಗೆ ಸೂಚನೆಗಳು

ನಾಗಪುರಕ್ಕೆ ಹೋಗುವ ಸ್ವಯಂಸೇವಕರು ಕೆಳಗಿನ ಸಂಗತಿಗಳನ್ನು ಲಕ್ಷ್ಯದಲ್ಲಿಡತಕ್ಕದ್ದು.

(ಅ) ಈ ಸ್ವಯಂಸೇವಕರನ್ನು ನಾಗಪೂರ ಸ್ಟೇಶನ್ನದ ಮೇಲೆಯಾಗಲೀ, ಅಥವಾ ಕ್ರಿ ಪ್ರೊ. ಕೋಡಿನ ೧೦೯ನೇ ಕಲಮಿನ ಪ್ರಕಾರ ನಾಗಪುರಕ್ಕೆ ಮುಟ್ಟುವ ಮುಂಚೆ ಯಾಗಲೀ, ಸರಕಾರದವರು ಸೆರೆ ಹಿಡಿದು ಮಾಡಬಹುದು. ತಾವು ಎಲ್ಲಿ ಹೋಗುವವರಿದ್ದೇವೆಂಬುದರ ವಿಷಯಕ್ಕೆ ಪೋಲೀಸರ ಮುಂದೆ ಸ್ವಯಂಸೇವಕರು ಸುಳ್ಳು ವರದಿಯನ್ನು ಕೊಡಬಾರದು. ನಿಶಾನಿಯ ಸತ್ಯಾಗ್ರಹಕ್ಕೆ ಹೋಗುವವರಿದ್ದೇವೆಂದು ಸರಳವಾಗಿ ಹೇಳತಕ್ಕದ್ದು.

(ಬ) ನಾಗಪುರಕ್ಕೆ ಹೋದ ಮೇಲೆ ಅಲ್ಲಿಯ ಕಾಂಗ್ರೆಸ ಕಮಿಟಿಯಲ್ಲಾಗಲೀ ಅಸಹಯೋಗ ಆಶ್ರಮದಲ್ಲಿಯಾಗಲೀ, ತಾವು ಬಂದದ್ದರ ವರದಿಯನ್ನು ಕೊಡತಕ್ಕದ್ದು. ಅಸಹಯೋಗ ಆಶ್ರಮದಲ್ಲಿಯೇ ಸ್ವಯಂಸೇವಕರಿಗೆ ಇರುವ ವ್ಯವಸ್ಥೆ ಮಾಡಲ್ಪಟ್ಟಿದೆ. ಸತ್ಯಾಗ್ರಹಕ್ಕಾಗಿ, ಬೇರೆ ಬೇರೆ ಸ್ವಯಂಸೇವಕರ ಗುಂಪುಗಳನ್ನು ಕಳುಹಿಸುವ ಅಧಿಕಾರವು, ಅಲ್ಲಿಯ ಜವಾಬದಾರ ಸಭ್ಯ ಗೃಹಸ್ಥರ ಕಡೆಗೆ ಕೊಡಲ್ಪಟ್ಟಿರುತ್ತದೆ. ಜೈಲಿಗೆ ಹೋಗುವ ಆತುರತೆಯಿಂದ ಅವರು ಮಾಡಿದ ವ್ಯವಸ್ಥೆಯನ್ನು ಯಾರೂ ಮುರಿಯಬಾರದು.

(ಕ) ಜೈಲಿಗೆ ಹೋದವರಲ್ಲಿ ಕೆಲವು ಸತ್ಯಾಗ್ರಹಿಗಳು ಕ್ಷಮೆ ಬೇಡುವದನ್ನೂ ಕೆಲವರು ಜಾಮೀನು ಕೊಟ್ಟಿರುವದನ್ನೂ ಕೇಳಿ, ನಮಗೆ ಕನಿಕರವೆನಿಸುತ್ತದೆ. ನಮ್ಮ ಕರ್ನಾಟಕದಿಂದ ಹೋದ ಯಾವ ಸ್ವಯಂಸೇವಕನೂ ಇನ್ನೂ ವರೆಗೆ ಅಂಥ ಕೆಲಸಗಳನ್ನು ಮಾಡಿರುವದಿಲ್ಲೆಂಬುದು ಆನಂದದ ಸುದ್ದಿಯು. ವೀರ ಕರ್ನಾಟಕದ ಧವಲ ಕೀರ್ತಿಗೆ ಇಂಥ ಹೇಡಿತನದ ಕೃತಿಗಳಿಂದ ಕಲಂಕವನ್ನು ತರಕೂಡದೆಂಬುದನ್ನು ಲಕ್ಷ್ಯದಲ್ಲಿಡತಕ್ಕದ್ದು. ಆಹಾರದ ವಿಷಯದಲ್ಲಿ ಮೊದಲು ಮೊದಲು ತ್ರಾಸವೆನಿಸಿದರೂ, ೮–೧೦ ದಿವಸಗಳ ನಂತರ ಅಲ್ಲಿ ಸಿಗುವ ರೊಟ್ಟಿ, ಗಂಜಿ ಮುಂತಾದವುಗಳಿಗೆ ಮನುಷ್ಯನು ಸಹಜವಾಗಿಯೇ ರೂಢನಾಗುವನು.

(ಡ) ಒಮ್ಮೆ ಶಿಕ್ಷೆಯಾದ ಮೇಲೆ ತೀರಿತು. ಅವರ ಅವಧಿಯು ಮುಗಿಯುವ ವರೆಗೂ ತಮಗೆ ಜೈಲಿನಲ್ಲಿಯೇ ಇರಬೇಕಾಗುವದೆಂಬುದನ್ನು ಯಾರೂ ಮರೆಯಕೂಡದು. ತಮ್ಮ ಕೂಡ ಶಿಕ್ಷೆಯಾದವರಲ್ಲಿ ಕೆಲವರು ಸರಕಾರದ ಬಂದಿಲ್ಲೊಂದು ಕರಾರಿಗೆ ಒಳಪಟ್ಟು, ಬಿಡುಗಡೆಯನ್ನು ಹೊಂದುವರು, ಎಂದು ಪೋಲೀಸರು ಹರಡುವ ಸುದ್ದಿಗಳಿಗೆ ಅವು ಸಟೆಯೇ ಇರಲಿ, ದಿಟವೇ ಇರಲಿ, ಕಿವಿಗೊಟ್ಟು ಸತ್ಯಾಗ್ರಹದ ಮುಖ್ಯ ತತ್ವಗಳಿಂದ ಯಾರೂ ಕದಲಬಾರದು.

(ಈ) ಉಪವಾಸ ಮಾಡುವದನ್ನು ಸತ್ಯಾಗ್ರಹಿಗಳು ಕೇವಲ ಕಡೆಯ ಶಸ್ತ್ರವೆಂದೇ ಉಪಯೋಗಿಸತಕ್ಕದ್ದು. ಸಣ್ಣ ಪುಟ್ಟ ಮಾತುಗಳಿಗಾಗಿ ಉಪವಾಸ ಮಾಡಬಾರದು ತಮ್ಮ ಸಹಪರ್ತಿಗಳ ಬುದ್ಧಿಗೂ, ಧರ್ಮಕ್ಕೂ ವ್ಯಕ್ತಿಯ ಖಾಸ ವಿಷಯಗಳನ್ನುಳಿದು, ಇತರ ಯಾವದೇ ವಿಷಯದ ಸಲುವಾಗಿ ಉಪವಾಸ ಮಾಡುವದೆಂದರೆ, ಹುಚ್ಚುತನವೇ ಸರಿ.

(ಧ) ಸತ್ಯಾಗ್ರಹಿಗಳು ಜೈಲ ಸೇರಿದ ಬಳಿಕ ಹೊರಗೆ ಏನು ನಡೆಯುತ್ತದೆಂಬುದರ ಬಗ್ಗೆ ಯಾವ ತರದ ಚಿಂತೆಯನ್ನು ಮಾಡಕೂಡದು. ಅಸಹಕಾರ ಚಳವಳಿಯು ಗದಿಯುಗಿಹುದು ಅಥವಾ ಸದ್ಯಕ್ಕೆ ನಿಲ್ಲಬಹುದು. ಮಾತೃಭೂಮಿಯ ವಿಷಯಕ್ಕೆ ತನ್ನ ಕರ್ತವ್ಯವನ್ನು ತಾನು ತೀರಿಸಿರುವೆನೆಂಬ ಭಾವನೆಯಿಂದ ಸ್ವಸ್ಥಚಿತ್ತನಾಗಿರತಕ್ಕದ್ದು. ಹೊರಗೆ ನಡೆದ ಚಳವಳಿಯ ಕಡೆಗೆ ಲಕ್ಷ್ಯಗೊಟ್ಟು ತನ್ನ ತಪಶ್ಚರ್ಯವನ್ನು ಭಂಗಿಸಿಕೊಳ್ಳುವ ಕಾರಣವಿಲ್ಲ.

ಹುಬ್ಬಳ್ಳಿ.	ಹನುಮಂತರಾವ ಕೌಜಲಗಿ
	ಕರ್ನಾಟಕ ಸ್ವಯಂಸೇವಕರ
ತಾ. ೨೨–೭–೨೩	ಮಂಡಿನ ದಳಪತಿ.

— ಝಾಂಸಿಯ ಮ್ಯುನಿಸಿಪಾಲಿಟಿಯು ಕಟ್ಟಡದ ಮೇಲೆ ರಾಷ್ಟ್ರಧ್ವಜೋತ್ಸವದ ದಿವಸ ಹಚ್ಚಿದ ಧ್ವಜವನ್ನು ತೆಗೆಯಬೇಕೆಂದು ಪೋಲೀಸರು ಸ್ಪಷ್ಟ ಮಾಡಬೇಕೆಂಬ ಹೊರಡಿಸಿದ ಹುಕುಮನ್ನು ಅವರೇ ರದ್ದುಪಡಿಸಿದರಂತೆ.

ಶುದ್ಧ ಖಾದಿ

ವಿಕ್ರಿಗೆ ತಯಾರ.

ಹೊನ್ನಾವರ ತಾಲೂಕಾ ಕಾಂಗ್ರೆಸ ಕಮಿಟಿಯಿಂದ ಕೈಮಗ್ಗದ ಕೈಯಿಂದ ಶುದ್ಧ ನೂಲಿನ ಖಾದಿ ಮಾರಾಟಕ್ಕೆ ಕಾಂಗ್ರೆಸ ಆಫೀಸಿನಲ್ಲಿರುವದು.

ಹೊನ್ನಾವರ,	ಸೆಕ್ರೆಟರಿ,
೧೦–೧೨–೨೩.	ತಾ. ಕಾ. ಕಮಿಟಿ, ಹೊನ್ನಾವರ.

ಮೂರ್ತಿಗಳು ಬೇಕೋ?

ನಮ್ಮಲ್ಲಿ ಭಂಗಾರ, ಬೆಳ್ಳಿ, ಪಂಚಧಾತು, ಹಿತ್ತಾಳಿ, ಕಾಸ್ಯ ವ ಕರೇಶಿಲೆಯ ಮೂರ್ತಿಗಳೂ, ಇದಲ್ಲದೆ ಬಾಣಪೀಠಗಳೂ, ಪ್ರಭಾವಳಿಗಳೂ, ಈಶ್ವರ ಮುಖವಟಗಳೂ, ನಾಗಾಭರಣಗಳೂ, ಕವಚಗಳೂ ವ ಯಾವದೇ ತರದ ಪ್ರತಿಮೆಗಳೂ ನಮ್ಮಲ್ಲಿ ಯೋಗ್ಯ ದರಕ್ಕೆ ವ ಯೋಗ್ಯ ಹೊತ್ತಿಗೆ ಮಾಡಿ ಕೊಡಲ್ಪಡುವವು. ದೇಶಾಂತರದವರು ಪತ್ರವ್ಯವಹಾರ ಮಾಡಿ ಯಾ ಸಮಕ್ಷ ಬಂದು ದರವಾರ ತಿಳಕೊಳ್ಳಬಹುದು

ಪತ್ತೆ:—ನಾರಾಯಣ ಹುವಯ್ಯ ಶೇಟ,

ಗುಡಗಾರ, ಗುಜರಗಲ್ಲಿ, ಕುಮಟಾ.

(ಉ. ಕಾನಡಾ.)

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಇದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ. ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ,

ಮುಂಬಯಿ.

ಮನೆ ಕಟ್ಟುವವರಿಗೆ ಸುಸಂಧಿಯು.



ಮೇಲಂತಸ್ತಿಗೆ ಶೋಭೆ ಬರುವದಕ್ಕೆ ನಾನಾ ತರ ನಕ್ಷೀ ಕೊರೆಯಲ್ಪಟ್ಟ ಬೀಡಿನ ಕಟಾಂಜನಗಳೂ, ಹೂದೋಟ, ಬಳಂಗಳ, ಉಪ್ಪರಿಗೆ, ದಿವಾನಖಾನೆ ಮೊದಲಾದ ಸ್ಥಳಗಳಲ್ಲಿ ವಿಶ್ರಾಂತಿಗೊಳ್ಳುವದಕ್ಕೆ ತಕ್ಕ ಬಾಕುಗಳೂ ಕಿರ್ಲೋಸ್ಕರ ಕಾರಖಾನೆಯಲ್ಲಿ ಸೌಕರ್ಯದಿಂದ ದೊರೆಯುತ್ತವೆ. ಪತ್ರ ಬರೆದು 'ಚಿ' ಕ್ಯಾಟಲಾಗು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ.)

ಲೋಕಾನುಕೂಲತೆಯಾಗಬೇಕೆಂದು, लोकानुकूलता व्हावी म्हणून,

ನಮ್ಮ 'ಸ್ಟಾರ ಆಫ್ ಕೆನರಾ' ಮುದ್ರಣಾಲಯದಲ್ಲಿ

आमच्या 'स्टॉर ऑफ केनरा' मुद्रणालयांत

नवीन व्यवस्था !! ಹೊಸ ಏರ್ಪಾಟು !! नवीन व्यवस्था !!

'STAR OF KANARA' PRESS, KUMTA.

ನಮ್ಮ ಮುದ್ರಣಾಲಯದಲ್ಲಿ ಲೋಕಾನುಕೂಲತೆಗಾಗಿ ಮಾಡಿದ ಹೊಸ ಏರ್ಪಾಟುಗಳ ವಿವರ:—

ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಗಳಲ್ಲಿ

೧. ಮನೋಹರ ಮುದ್ರಣ. ೨. ಸಕಾಲ ಮುದ್ರಣ. ೩. ಸುಲಭ ದರ.

ಸಂಕ್ಷೇಪತಃ ಹೇಳಬೇಕಾದರೆ —

ಅಗ್ಗ ಅಚ್ಚು ! ಅಂದ ಅಚ್ಚು !! ಅಚ್ಚ ಅಚ್ಚು !!!

ತರತರದ ಬಣ್ಣಗಳಿಂದ ಸುಶೋಭಿತವಾಗಿ ಮುದ್ರಣ ಮಾಡಿಕೊಡುವದಲ್ಲದೆ, ಫೋಟೋ-ಬ್ಲೋಕುಗಳನ್ನೂ ಮುದ್ರಿಸುವ ಏರ್ಪಾಟು ಮಾಡಲಾಗಿದೆ.

ಜರೂರಾಯಿತಿ ಜನರಿಗಾಗಿ—

ಬೇಕಾದ ಛಾಪೆ ಕೆಲಸದ ನಮೂನೆಯನ್ನು ಟಪಾಲದ್ವಾರಾ ಎಡ್ವಾನ್ಸ ಸಹಿತ ಕಳಿಸಿದ್ದಲ್ಲಿ, ಯಥಾಪ್ರತಿ ಮುದ್ರಣ ಮಾಡಿ ೧-೨ ದಿವಸಗಳಲ್ಲಿಯೇ ವ್ಹಿ. ಪಿ. ಯಿಂದ ಕಳಿಸುವ ವ್ಯವಸ್ಥೆಯೂ ಮಾಡಲ್ಪಟ್ಟಿದೆ. ಬ್ಯಾಂಡಿಂಗ ಕೆಲಸವೂ ಅಚ್ಚುಕಟ್ಟಾಗಿ ಮಾಡಿ ಕೊಡಲ್ಪಡುವದು. ಒಮ್ಮೆ ಆರ್ಡರು ಕಳುಹಿಸಿ, ನೋಡಬಹುದಲ್ಲವೇ?

ಇದಲ್ಲದೆ, ನಮ್ಮಲ್ಲಿ ಗ್ರಂಥ, ಪುಸ್ತಕ, ಮಾಸಪತ್ರಿಕೆ, ಪಂಚಾಂಗ ಮುಂತಾದ ವಿವಿಧ ಮುದ್ರಣ ಕೆಲಸವು ಸುಲಭ ದರದಿಂದ, ತಕ್ಕ ಹೊತ್ತಿಗೆ ತಯಾರಿಸಿ ಕೊಡಲ್ಪಡುವದು.

ಮಾರಾಟಕ್ಕೆ ಸಿದ್ಧ.

ಕೋರ್ಟು ಕಚೇರಿಗಳಲ್ಲಿ ವಕೀಲರಿಗೆ ಬೇಕಾಗುವ ವಕಾಲತ ಅಮುಲಜಾರಿ, ಸಾಕ್ಷಿಪಟ್ಟಿ, ಯಾದಿ, ನಕಲು ಅರ್ಜಿ, ದಸ್ತೈವಜು ಪರತ ಬೇಡುವ ಅರ್ಜಿ, ಜ್ಯಾಹಿರಿ ಮುಂತಾದ ಎಲ್ಲ ತರದ ಫಾರ್ಮುಗಳೂ, ಶಿಪ್ಪಿಂಗ ಬಿಲು, ಸತಮಿ, ಬಿಲ್ ಆಫ್ ಎಂಟ್ರಿ ಮೊದಲಾದ ಕಸ್ಟಮ್ ಫಾರ್ಮುಗಳೂ ಮಾರಾಟಕ್ಕೆ ದೊರೆಯುತ್ತವೆ.

ವಿಶೇಷ ಮಾಹಿತಿ ಪತ್ರದ್ವಾರಾ ಯಾ ಮೊಕ್ತಾ.

ಪತ್ತೆ:— ಕೃಷ್ಣರಾವ ಕೇಶವ ಶೇಣವಿ, ಹೆಗಡೇಕರ,
ಮಾಲಕ,
'ಸ್ಟಾರ ಆಫ್ ಕೆನರಾ' ಪ್ರೆಸ್, ಕುಮಟಾ.
(ಉ. ಕಾನಡಾ.)

Printed and Published by Krishnarao Keshav Shenvi (Editor) at his Star of Kanara Press, Kumta

Reg. No. B 1270 Thursday, 9th August 1923

ವರ್ಷ ೭. ಸಂಚಿಕೆ ೪೩.

ಕಾನಡಾವೃತ್ತ.

THE KANARA NEWS.

ವರ್ಷದ ವರ್ಗಣಿ:-
ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಮನೆಯಾರ್ಡರಿಯಿಂದ ರೂ. 3-0-0
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ವ್ಯಾಕಾ ಪ್ಯಾಯಿಕ(೧೫ ಎಡ್ಡಿಸ್ಟ) ೫ ಸಾಲುಗಳ ವರೆಗೆ ರೂ. 1-0-0.
ಅನಂತ ಪ್ರತಿ ಸಾಲಿಗೆ ೦-೨-೦.
ಹೆಚ್ಚಿ ಇಂಗದ ಸಾಲು ಎಷ್ಟು ಹೊಳ ದಿರುವದೋ ಆ ಮಾನ ದಿಂದ ಅಷ್ಟು ಸಾಲುಗಳು ಹಿಡಿ ಯಲ್ಪಡುವವು.
ಜಾಸ್ತಿ ಜಾಹಿರಾತುಗಳ ಬಗ್ಗೆ ಪತ್ರವ್ಯಾರ ಮಾ ಪಡುಚ್ಚೆ ತೀರಿಸಲ್ಪಡುವದು

(ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೯ ಮಾಹೆ ಅಗಸ್ಟ ಸನ್ ೧೯೨೩ ನೇ ಇಸವಿ)

हिंदुस्थानातील राहिवाशांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानांतील लोकास ज्यास्त फायदेशीर आहे,

द्राक्षासव- { पौंड रतलची किंमत २ रुपये;

रामबाण औषधें —

सर्दि घालविणारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

— पिण्यास रुचिकर.

क्याटलाग मागवा,

झंडु फार्मास्युटिकल वर्क्स लिमिटेड,
मुंबई नं. १३

GLAXO:- FRESH STOCK. NEW BRAND. *a food for infants and invalids.*

Kalmegh :- *Well-tried remedy in Liver complaints especially of children.*

Syrup of Vasaka :- *Highly efficacious in cold, cough, crough and bronchitis.*

Besides we have in stock other patent medicines, Thermometres, Glycerine Syringes etc.,

Orders will be executed by V. P. P.

The New Emporium
Honavar. (N. Kanara.)

ಡಾ|| ವಸಾಸೂರಕರರ

ಸುಧಾಂಜನ.

ಅಂಜನುಗಳಿಗೆಲ್ಲ ಅರಸು.

ತಲೆಶೂಲಿ, ವಾತ ವೇದನೆ, ಕಮ್ಮು, ಹಲ್ಲು ನೋವು ಇತ್ಯಾದಿಗಳಿಗೆ ಕ್ಷಿಪ್ರ ಗುಣಕಾರಿ ಮದ್ದು. ಡಬಿ 2 ಆಣೆ ಮಾತ್ರ. ವ್ಯಾಪಾರಿಗಳಿಗೆ ವಿಶೇಷ ಕಮಿಶನು ಹೆಚ್ಚಿನ ಮಾಹಿತಿ ಏರ್ಪಡಿಸಿದೆ.

ಏಜಂಟ್ಸ:— **ನಾಗರ್ಕಟ್ಟೆ ಬ್ರದರ್ಸ್,**
ಸುಧಾಂಜನ ಡಿಪೋ,
ಕುಮಟಾ. (ಜಿಲ್ಲಾ ಕಾರವಾರ.)

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ವಿಷಯುಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ.

ಈ ವರೆಗೆ ಪ್ರಕಟವಾದ ಪುಸ್ತಕಗಳು.

(೧-೨) ಗ್ರೀಸ ದೇಶದ ಗಾಂಧಿ. (ಸಾಕ್ರೆಟೀಸ) (೩) ಸ್ವಾತಂತ್ರ್ಯಸಾಧನೆ. (೪) ಗುರು-ಹಿರಿಯರೂ, ಬಂಧು-ಭಗಿನಿಯರೂ. (೫) ರಾಷ್ಟ್ರೀಯ ಶಿಕ್ಷಣ. (೬) ಸದ್ಗುಣಮಂದಿರ. (ಭಾಗ ೧.) (೭) ಸ್ವರಾಜ್ಯ ಧರ್ಮ. (ಅನಾಮಿಕನ ಪುಸ್ತ) ಇನಿಷ್ಟು ಪ್ರಕಟವಾಗಿಷ್ಟು, ೫ ಆಣೆಗೆ ಒಂದರಂತೆ ದೊರೆಯುತ್ತವೆ, ವರ್ಗಣೀದಾರರಿಗೆ ಹಿಂದಿನ ಬೇಕಾದ ಪುಸ್ತಕಗಳು ೪ ಆಣೆಗೆ ಒಂದರಂತೆ ದೊರೆಯುವವು. ೬ ಪುಸ್ತಕಗಳಿಗೆ ಕೂಡಿ ೧|| ರೂಪಾಯಿ ಮಾತ್ರ. ಅಂಚೆವೆಚ್ಚ ಬೇರೆ. ದ್ವಿತೀಯ ವರ್ಷ ಪ್ರಾರಂಭ. ಅನುಕ್ರಮವಾಗಿ ಮಾರ್ಚ, ಮೇ, ಜುಲೈ, ಸಪ್ಟಂಬರ, ನವಂಬರ, ಜನವರಿ ೧೮ ನೇ ತಾರೀಖಿಗೆ ಒಂದೊಂದು ಪುಸ್ತ ಹೊರಡುವದು. ವಾ. ವ. ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ.

ವಾ. ಅ. ಹೊದ್ಕೆ,
ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ

ಎಲ್ಲ ತರದ ಜ್ವರಗಳವೊಳಿ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ, ಕೃತ್ಯ, ಬಂಗಲಿ, ಅಥವಾ ದೂಷಿತ ಹವೆಯಿಂದ ಬರುವ ಸಾದಾ ವಿಷಾರೀ ಅಥವಾ ಇತರ ಜ್ವರಗಳೂ, ಇನಫ್ಲ್ಯುಎಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನ್ಯಾನದ ದುಷ್ಪರಿಣಾಮರಹಿತ ಕೇವಲ ವನಸ್ಪತಿಯ ಈ ಮದ್ದು ಸೇವಿಸಿದರೆ ಅಶಕ್ತತೆಯಾಗದೆ, ಬೆವರು ಬಂದು ಜ್ವರ ಇಳಿಯುತ್ತದೆ. ಹಾಗು ರೋಗಿಯು ತರಿತ ವಾಸಿಯಾಗುತ್ತಾನೆ.

೭ ಔಂಸ ಬಾಟ್ಲಿ ಕಿಂಮತ ರೂ. ೧-೦-೦.

ಇದರ ಹೊರತು ಇನ್ನು ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ, ಉಚ್ಚ ಪ್ರತಿಯ ಕೋಲನ ವೋಟರ, ಲವೆಂಡರ ಇತ್ಯಾದಿ ಸಾಮುಗ್ರಿಗಳು ಅಲೆಂಬಿಕದ ಕಾರಖಾನೆಯಲ್ಲಿ ತಯಾರಾಗುತ್ತವೆ. ಮಾಹಿತಿ ಕೇಟಲಾಗು ತರಿಸಿರಿ.

ಅಲೆಂಬಿಕ್ ಕೆಮಿಕಲ್ ವರ್ಕ್ಸ್,
ಕಂಪನಿ, ಲಿಮಿಟೆಡ್.
ನಂ. ೫೦, ಪ್ರಿನ್ಸೆಸ್‌ಸ್ಟ್ರೀಟ, ಮುಂಬಯಿ.

अलेंबिक केमिकल वर्क्स कं० लि०
नं. ५० प्रिन्सेस स्ट्रीट मुंबई.

ಶುದ್ಧ ಖದ್ದರ್ ರೇಶ್ಮೆ ಮಡಿಗಳು.

ಸುಲಭ ಕ್ರಯಕ್ಕೆ ಖಾತ್ರಿಯಾದ ಎಲ್ಲಾ ರಂಗುಗಳಲ್ಲಿಯೂ ಈ ಕೆಳಗೆ ಬರೆದ ಕ್ರಯಕ್ಕೆ ದೊರೆಯುವವು.

೧೮ ಮೊಳ	ಉದ್ದ	೨||	ಅಗಲ	ರೂ.	೨೩	ರಿಂದ ೩೫	ವರೆಗೆ
೧೬	,,	,,	೨||	,,	,,	೨೦ — ೩೦	,,
೮	,,	,,	೨||	,,	,,	೯ — ೧೫	,,
೬	,,	,,	೨||	,,	,,	೭ — ೧೧	,,

ಅಂಗಿ ಬಟ್ಟೆಗಳು ೧೮ ಮೊಳ × ೨ ಮೊಳ ರೂಪ್ಯಾ ೧೮ ರಿಂದ ೩೦ವರೆಗೆ. ಪೇಟ ೧೨ ಮೊಳ × ೧|| ಮೊಳ ಅಗಲ ರೂಪ್ಯಾ ೧೦ ರಿಂದ ೧೫ ವರೆಗೆ ಟೀನ್‌ಕಾನ್ ೧೪ ಮೊಳ × ೨ ಮೊಳ ರೂ. ೨೪ ರಿಂದ ೩೫ ವರೆಗೆ ಇವುಗಳಲ್ಲದೆ ಶಾಲ ಪೀತಾಂಬರ, ಕಾಶ್ಮೀರ್ ಶಾಲು, ರುದ್ರಾಕ್ಷಿ, ಜಾಗಂಟೆ, ತಾಳ, ಪಶ್ಮೀರ್ ದಾನಿ, ಆಟದ ಸಾಮಾನುಗಳು. ದೇವರ ಮತ್ತು ಗಾಂಧಿ ಮುಂತಾದವರ ಪಟಗಳಿರುವ ಉಂಗುರಗಳ ಮತ್ತು ಇನ್ನೂ ಅನೇಕ ಸಾಮಾನುಗಳ ಕ್ಯಾಟಲಾಗ್ ಇನಾಂ.

ವಿಳಾಸ:— ಎಸ್. ಯು. ನಾರಾಯಣಾಚಾರು. ಮತ್ತು ಕಂಪನಿ, ಡೌಕಂಬಾ, ಕಾಶಿಕ್ಷೇತ್ರ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. (ರಿಜಿಸ್ಟರ್)

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶ ರಾಶಿಯನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ.

ಕಾಮಿನಿಯಾ ಆಯಿಲ್. (ರಿಜಿಸ್ಟರ್)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತ್ತದೆ ಈ ಆಯಿಲ್ ತೀಡಿಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ಶಮನವಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹಚ್ಚತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ಕಳೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ " ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ — ಸೀಸೆಗೆ ರೂಪಾಯಿ 1-0-0, ಸೀಸೆ 3 ಕ್ಕೆ. ರೂಪಾಯಿ 2-10-0, ವಿ. ಪಿ. ಖರ್ಚು 0-14-0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್)

ಈ ಸುಗಂಧದ್ರವ್ಯವು ಮಧುರ ಕೋಮಲ ಚಿರಸ್ಥಾಯಿ ಮತ್ತು ಅತ್ಯುತ್ತಮವು ಚನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ಲೇ ಸಿದ್ಧಮಾಡಿದ್ದು ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು, ಒಂದೇ ಒಂದು ಸಲ ನಿಮ್ಮ ಕೈ ಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0, 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0, ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ ದಿಲ್ ಬಹಾರ್. ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12-0.

Address - **The Anglo Indian Drug & Chemical Co,**

16, Market, **BOMBAY. 2**

ಖರೇ ವಸ್ತು ! ಹಾಜ ಕೀರ್ತಿ ಶ್ವರ ಗ್ಯಾರಂಟಿ

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳೆಸಿ, ಪುರುಷರಿಗೆ ಸ್ತ್ರೀ ವಿಷಯವಾಗಿಯೂ, ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷಯುಕ್ತ ಶಕ್ತಿಯನ್ನು ಉಂಟುಮಾಡಿ, ದಿನೇ ದಿನೇ ಶರೀರದ ಜರಠತನವನ್ನೂ ರೋಗಗಳನ್ನೂ ದೂರಪಡಿಸಿ ಆರೋಗ್ಯವನ್ನೂ, ರತಿಯಲ್ಲಿ ಹೆಗ್ಗಳವಾದ ಕುತೂಹಲವನ್ನು ತೋರಿಸುವ ಕ್ರೀಡಾ ಶಕ್ತಿಯ ಉತ್ಸಾಹವನ್ನೂ ಸಂಭೋಗದಲ್ಲಿ ತೃಪ್ತಿಯನ್ನೂ ಸೌಖ್ಯವನ್ನೂ ಕೊಟ್ಟು, ಮನಸ್ಸಿನ ಧೃಢತೆಯನ್ನೂ ಯೌವ್ವನದ ಕಳೆಯನ್ನೂ ದೊರಕಿಸಿ ಮುದಿತನವನ್ನುನೀಗಿ ಬಲವನ್ನು ಉಂಟುಮಾಡುವದು ನ್ಯೂನತ್ವವನ್ನು ನಿರಾಕರಿಸಿ, ಬಗೆಬಗೆಯ ರೋಗಗಳನ್ನು ನಾಶಮಾಡುವದು ಜೀರ್ಣಜ್ವರ, ಮಂದಾಗ್ನಿ, ಶುಕ್ಲಸ್ರಾವ, ಧಮಕಂಪ ಇವುಗಳನ್ನು ಬಿಡದೇ ನಾಶಮಾಡುವದು ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, ದೇಶಕಾಲಗಳಿಂದಲೂ, ಆಹಾರಗಳಿಂದಲೂ, ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡಿಸುವ ಬಲಾತ್ಕಾರದ ಹಸ್ತಘರ್ಷಣದಿಂದಲೂ ಅತಿವಿಷಯೋಪಭೋಗದಿಂದಲೂ, ಇಂದ್ರಿಯ ಶಿಥಿಲವೂ, ತಿಳುವೂ, ನಿಸ್ತೇಜವೂ ಆಗಿ ಯತ್ನವಿಲ್ಲದೆ ಸ್ಖಲನವಾಗುವದು ಒಂದೊಂದು ಸಾರಿ ಮೂತ್ರದಲ್ಲಿಯೂ ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತ, ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈಬಿಸುವು, ನಿದ್ರೆಯಲ್ಲಿ ಭೀಕರವಾದ ಸ್ವಪ್ನ, ಅರಿವು, ಗುರುವು ಮತ್ತು ಶರೀರದ ಹಾಗೂ ಮನಸ್ಸಿನ ಚೇತನ ಕುಂದಿ ಹೋಗುವದು, ಇವೆಲ್ಲವುಗಳಮೇಲೆ ರಾಮಬಾಣವೆಂತಿರುವದು. ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ ೧||. ನಂ ೧ ನಂ ೨ ಹೀಗೆ ಎರಡು ಸೀಸೆಗಳನ್ನು ತೆಗದುಕೊಳ್ಳಬೇಕಾಗುತ್ತದೆ ಅಂತು ೬೦ಗುಳಿಗೆಗಳುಳ ಸೀಸೆಗಳಿಗೆ ರೂ ೩ ಪೋಸ್ಟೇಜ ಬೇರೆ

ಎಸ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ,

ಕರ್ಕಿ. (ಕೆನರಾ)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧. ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೪೫, ೫೦, ೬
೨ „ ಕಾಲು ಪೆಟ್ಟಿಗೆ ಕಿಂ ೬೫, ೭೫, ೧೪೦ ೧೬೦
೩. ತಬಲೆ ಜೋಡಿ ಕಿಂ ೧೩, ೧೫ ೧೮ ೨೦,
೪ ಹಾರ್ಮೋನಿಯಮ ಗ್ಯಾಡ ಕಿಂ ೧|, ತಬಲೆ ಗ್ಯಾಡ ಕಿಂ ೧೨ ೮.

ವಿಶೇಷ ಮಾಹಿತಿ ಬಗ್ಗೆ ನಮ್ಮ ಕನ್ನಡ ಭಾಗ ಪುಸ್ತಕ ಕೊಡುತ್ತೇವೆ

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು

ಪತ್ತೆ .— ಗೋಪಾಳ ಸಖಾರಾಮ ಮಾಣಿ ಕಂಪನಿ, ನಂ ೨೬

ಕಾಳಬಾದೇವಿ ರೋಡ, ಮುಂಬಯಿ

ಮುಂಬಯಿಯ ಗೌ॥ ಸಾ॥ ಬ್ರಾ॥ ಸ್ಕೂ॥ ಲೀಗದ ವಾರ್ಷಿಕ ಸಭೆ.

(ಒಬ್ಬ ಬಾತ್ಮೀದಾರರ ಕಡೆಯಿಂದ.)

ಜಾಹೀರಾದಂತೆ ಗೌಡ ಸಾರಸ್ವತ ಬ್ರಾಹ್ಮಣ ಸ್ಕೂಲರಶಿಪ್ ಲೀಗದ ೯ ನೇ ವಾರ್ಷಿಕ ಸಾಧಾರಣ ಸಭೆಯು ಕಳೆದ ರವಿವಾರ ತಾ ೨೯ಕ್ಕೆ ಮುಂಬಯಿಯಲ್ಲಿ ಲೀಗದ ದಿವಾಣಖಾನೆಯೊಳಗೆ ನೆರೆದಿತ್ತು. ಸಭೆಗೆ ಸುಮಾರು ೪೦ ಸಭಾಸದರು ಮತ್ತು ಕಲವು ಪ್ರೇಕ್ಷಕರು ಹಾಜರಿದ್ದರು ಅಧ್ಯಕ್ಷಸ್ಥಾನವನ್ನು ಡಾ॥ ಬಿ॥ ಅನಂತ ಕೃಷ್ಣ ಪೈ ಇವರು ಅಲಂಕರಿಸಿದ್ದರು ೧೯೨೨-೨೩ ನೇ ವರ್ಷದ ಲೀಗದ ಅಹವಾಲ ಮತ್ತು ಜಮಾಖರ್ಚಿನ ಆಢಾವೆ ಮಂಜೂರ ಮಾಡಲ್ಪಟ್ಟವು. ಅಹವಾಲದ ಮೇಲಿಂದ ಕಳೆದ ವರ್ಷ ೧೮ ಹುಡುಗರಿಗೆ ರೂ ೮೬೮ ಮದ್ದತ್ತು ಕೊಟ್ಟಿರುತ್ತದೆಂದು ತೋರುತ್ತದೆ ಕಾರವಾರದ ಸಭಾಸದ ಶ್ರೀ॥ ವೆಂಕಟರಾವ ಬಾಖರ ಆಕಾಲಿಕ ಮರಣದ ಬಗ್ಗೆ ದುಃಖಪ್ರದರ್ಶಕ ಸೂಚನೆಯು ಪಾಸಾಯಿತು. ಖಜಿನದಾರರು ಈ ವರುಷದ ಅಂದಾಜಪತ್ರಕವನ್ನು ಸಾದರಪಡಿಸಿದರು ಅಂದಾಜು ಉತ್ಪನ್ನವು ರೂ ೨೨೦೦ ಬರುವದೆಂತಲೂ ಖರ್ಚಿಗೆ ರೂ ೧೧೦೦ ಮಂಜೂರ ಮಾಡಬಹುದೆಂತಲೂ ಅವರು ಬಿಡಿಸಿಹೇಳಿದರು ಸಂಸ್ಥೆಯನ್ನು ರಜಿಸ್ಟರ ಮಾಡುವ ಪ್ರಶ್ನೆಯ ಮೇಲೂ ೫ ಸನ್ಮಾನ್ಯ ಸಭಾಸದರದೊಂದು ಕಾಯಂ ಕಮಿಟಿಯನ್ನು ನೇಮಿಸಿ, ಸಂಸ್ಥೆಯ ಕಾಯಂ ನಿಧಿಯನ್ನು ಆ ಕಮಿಟಿಯ ವಶ ಕೊಡುವ ಪ್ರಶ್ನೆಯ ಮೇಲೂ ಬಹಳ ವಾದವಿವಾದವಾಗಿ ಈ ಎರಡೂ ಪ್ರಶ್ನೆಗಳ ಸಾಧಕ-ಬಾಧಕ ಪೂರ್ಣ ಚರ್ಚೆ ಮಾಡಿ ರಿಪೋರ್ಟ ಮಾಡುವ, ಡಾ॥ ಆನಂದರಾವ ಕಾಮತರ ಅಧ್ಯಕ್ಷತೆಯ ಕೆಳಗೆ ೭ ಗೃಹಸ್ಥರ ಕಮಿಟಿಯೊಂದ ನೇಮಿಸಲ್ಪಟ್ಟಿತು ರಿಪೋರ್ಟು ಬರುವ ಸಪ್ಟಂಬರ ತಾ ೩೦ ರೊಳಗೆ ಬರತಕ್ಕದ್ದು ಆ ಮೇಲೆ ಈ ವರ್ಷದ ಅಧಿಕಾರಿ ಮಂಡಲದ ಚುನಾವಣೆಯಾಯಿತು ಡಾ॥ ಬಿ॥ ಪೈರು ಅಧ್ಯಕ್ಷರೂ, ಶ್ರೀ॥ ಆನಂದರಾವ ಕಾಮತರು ಉಪಾಧ್ಯಕ್ಷರಿರುತ್ತಾರೆ ಖಜಿನದಾರರ ಚುನಾವಣೆಯ ಕಾಲಕ್ಕೆ ಸಭೆಯಲ್ಲಿ ಬಹಳೇ ಗೊಂದಲವಾಯಿತು ಸಭಾಸದರ ಅಂಬೋಣ ಶ್ರೀ॥ ಗಾಯತೊಂಡೇ ಮತ್ತು ಶ್ರೀ॥ ಗುಡಾಳ ಇವರು ಖಜಿನದಾರರಾಗಬೇಕೆಂದು ಇತ್ತು ಆದರೆ, ಕೆಲವು ಬೇಜಬಾಬದಾರ ಟೀಕಾಕಾರರು ಹಿಂದುಗಡೆಗೆ ತಮ್ಮ ಮೇಲೆ ಮಿಥ್ಯಾ-ಆರೋಪಗಳನ್ನು ಹೊರಿಸುತ್ತಿರೆಂದು ಪ್ರಕ್ಷುಬ್ಧರಾಗಿ ಇವರೀರ್ವರೂ ಖಜಿನದಾರರಾಗಲಿಕ್ಕೆ ತಯಾರಾಗಲಿಲ್ಲ. ಬೇರೆ ಯಾರೂ ಈ ಅಧಿಕಾರಗಳನ್ನು ವಹಿಸಲಿಕ್ಕೆ ಸಿದ್ಧರಾಗಲಿಲ್ಲ ಹೀಗಾಗಿ ಸಭೆಯ ಕೆಲಸವು ಸುರಳಿತವಾಗಿ ಕೊನೆಗಾಣುತ್ತದೋ, ಇಲ್ಲವೆಂದು ಭೀತಿಯುಂಟಾಯಿತು. ಅನೇಕ ಸಭಾಸದರೆದ್ದು « ಗುಡಾಳ-ಗಾಯತೊಂಡೇಯವರ ಮೇಲೆ ನಮ್ಮ ಪೂರ್ಣ ವಿಶ್ವಾಸವುಂಟು, ಕಿಮ್ಮತ್ತಿಲ್ಲದ ಟೀಕೆಯ ಕಡೆಗೆ ದುರ್ಲಕ್ಷ ಮಾಡಿ ಅವರು ಸಭೆಯ ಇಚ್ಛೆಯನ್ನು ಮನ್ನಿಸಬೇಕೆಂ" ದು ಅತ್ಯಾಗ್ರಹ ಮಾಡಲಾಗಿ, ಅವರು ಖಜಿನದಾರರಾಗಲು ಒಪ್ಪಿದರು. ಬಾಕಿ ಚುನಾವಣೆಯ ಕೆಲಸವು ತೀರಿದ ನಂತರ, ಅಧ್ಯಕ್ಷರ ಸಮಯೋಚಿತ ಭಾಷಣವಾಯಿತು. ಮಧ್ಯದಲ್ಲಿ ಸ್ವಲ್ಪ ಗೊಂದಲವಾದರೂ, ಅಂತ್ಯದಲ್ಲಿ ಎಲ್ಲರೂ ಸಮಾಧಾನಪಟ್ಟು ಸಭೆಯ ಕೆಲಸವನ್ನು ಚೆಲ್ವಾಗಿ ಸಾಂಗಗೊಳಿಸಲು ಸಹಾಯ ಮಾಡಿದ ಬಗ್ಗೆ ಸಂತೋಷವನ್ನು ಪ್ರದರ್ಶಿಸಿ, ಕೆಲ ಕ್ಷುದ್ರ ಬುದ್ಧಿಯ ವೈಯಕ್ತಿಕ ಟೀಕೆಯಿಂದ ಬೇಸರಪಟ್ಟು, ಕಾರ್ಯಕಾರಿಗಳು ಕೈಕೊಂಡ ಸಾರ್ವಜನಿಕ ಹಿತದ ಕೆಲಸವನ್ನು ತ್ಯಜಿಸುವದು ಅನುಚಿತವೆಂದು ಅಭಿಪ್ರಾಯ ಕೊಟ್ಟರು. ಈ ವರೆಗೆ ಸಾರ್ವಜನಿಕ ಸೇವೆಯನ್ನು ಕೈಕೊಂಡ ಯಾವನು ಇಂಥ ಟೀಕೆಯಿಂದ ತಪ್ಪಿದ್ದಾನೆ? ಟೀಕಾಕಾರರಾದರೂ ತಮ್ಮ ಟೀಕೆಯ ಅನಿಷ್ಟ ಪರಿಣಾಮವೇನಾಗುತ್ತದೆಂದು ವಿಮರ್ಶಿಸದೆ, ಟೀಕೆ ಮಾಡುವದು ಯುಕ್ತವಲ್ಲ ಈ ಸಂಸ್ಥೆಯು ೧೯೧೩ ರಲ್ಲಿ ಬರೇ ೭ ಸಭಾಸದರಿಂದ ಪ್ರಾರಂಭವಾಗಿ, ಇಂದಿಗೆ ಹತ್ತು ವರ್ಷಗಳಲ್ಲಿ ೩ ಪಾಲಿಗಳು, ೧೩ ಆಜನ್ಮ ಸಭಾಸದರು, ೩೩೫ ಸಾ॥ ಸಭಾಸದರು ಆಗಿದ್ದಾರೆ. ಮತ್ತು ರೂ. ೯೬೦೦ ರಷ್ಟು ಶಿಲ್ಕು ಇರುತ್ತದೆ, ಇದೇನು ಸಾಧಾರಣ ಪ್ರಗತಿಯಲ್ಲ! ಇದರ ಮೇಲಿಂದ ಖಜಿನದಾರರೂ, ಇತರ ಕಾರ್ಯಕಾರಿಗಳೂ ಎಷ್ಟು ಉತ್ಸಾಹದಿಂದ ಕೆಲಸ ಮಾಡಿದ್ದಾರೆಂದು ವ್ಯಕ್ತವಾಗುತ್ತದೆ! ಲೀಗದ ಕಾರ್ಯದ ಬಗ್ಗೆ ಹೊರಗಿನ ಜನರಲ್ಲಿ ಎಷ್ಟು ಪ್ರೇಮ ಮತ್ತು ಆದರವುಂಟೆಂದು ಇಲ್ಲಿ ಕೂಡಿದ ಸಭಾಸದರಿಗೆ ಕಲ್ಪನೆಯಿಲ್ಲ ಈ ಮುಂದೆ ಸಹ ಕಾರ್ಯಕಾರಿ ಮಂಡಳವು ಕ್ಷುದ್ರ ಟೀಕೆಯನ್ನುಪೇಕ್ಷಿಸಿ, ಮೊದಲಿಗಿಂತ ಹೆಚ್ಚು ಉತ್ಸಾಹದಿಂದ ದುಡಿಯುವದೆಂದು ನಂಬಿ, ತನಗೆ ಅಧ್ಯಕ್ಷಸ್ಥಾನವನ್ನು ಅರ್ಪಿಸಿದ ಬಗ್ಗೆ ಸಭಿಕರ ಆಭಾರಗಳನ್ನು ಮನ್ನಿಸಿ, ಅಧ್ಯಕ್ಷರು ತಮ್ಮ ಚಿತ್ತವೇಧಕ ಭಾಷಣವನ್ನು ಮುಗಿಸಿದರು. ಆ ಮೇಲೆ ಹಳೇ ಅಧಿಕಾರೀ ಮಂಡಳದ ಮತ್ತು ಸಭಾಪತಿಗಳ ಆಭಾರ ಮನ್ನಣೆಯಾಗಿ ಮೂರು ಸಂಜೆಗೆ ಸಭೆಯು ವಿಸರ್ಜನೆಯಾಯಿತು.

೧೯೨೩-೨೪ ನೇ ವರ್ಷದ ಲೀಗದ ಅಧಿಕಾರೀ ಮಂಡಳವು.

ಅಧ್ಯಕ್ಷ — ಡಾ॥ ಬಿ॥ ಅನಂತ ಕೃಷ್ಣ ಪೈ, ಬಿ ಎ, ಉಪಾಧ್ಯಕ್ಷ — ಡಾ॥ ಆನಂದರಾವ ಪಿ ಕಾಮತ. ಕಾರ್ಯದರ್ಶಿಗಳು — (೧) ಡಾ॥ ಕೃಷ್ಣ ಪದ್ಮನಾಭ ಪ್ರಭು ಬಿ ಎ, (೨) ಡಾ॥ ರಾಮಚಂದ್ರ ಶ್ರೀಧರ ಗೋರೆ ಕೋಶಪಾಲಕರು — (೧) ಡಾ॥ ಮರ್ತು ದುರ್ಗಪ್ಪ ಗಾಯತೊಂಡೇ. (೨) ಡಾ॥ ಗೋವಿಂದ ಶ್ರೀನಿವಾಸ ಗುಡಾಳ

ಕಾ॥ ಮಂ॥ ದ ಸಾಧಾರಣ ಸಭಾಸದರು —

(೧) ರಾ॥ ಅನಂತ ನಾರಾಯಣ ಕಾಮತ, ಬಿ ಎ (೨) ರಾ॥ ಗಣಪತ ಎಮ್ ಶೆಣವಿ (೩) ರಾ॥ ರಾಮರಾವ ದಾಸ ಕ್ಯಾನಭಾಗ, ಎಮ್. ಬಿ. ಬಿ. ಎಸ್. (೪) ರಾ॥ ಶೇಷಗಿರಿ ಕೇ ಪ್ರಭು (೫) ರಾ॥ ವಿನಾಯಕ ಎಸ್. ಕಾಮತ ಲೆಕ್ಕ ತಪಾಸಕರು — (೧) ಶೇಷಗಿರಿ ವಾಸುದೇವ ಕಾಮತ, ಬಿ. ಕಾಮ್ (೨) ರಾ॥ ಮರ್ತು ಶೇಷಗಿರಿ ಕಾಮತ.

ಸ್ಥಾನಿಕ ಪ್ರತಿನಿಧಿಗಳು —

ಕಾರವಾರ:— ರಾ॥ ವಾಸುದೇವ ರಾಮಚಂದ್ರ ಹಳದೀಪೂರಕರ, ಬಿ ಎ, ರಾ॥ ಜನಾರ್ದನ ಪುರುಷೋತ್ತಮ ಶೆಣವಿ, ಸಾವಕಾರ

ಅಂಕೋಲಾ — ರಾ॥ ಎಮ್. ಡಿ ಪ್ರಭು ರಾ॥ ಅನಂತ ಎಚ್ ಮಹಾಲೆ. ರಾ॥ ಎಸ್ ಜೆ ಪೈ

ಕುಮಟಾ — ರಾ॥ ನರಸಿಂಹ ಗೋವಿಂದ ಕ್ಯಾನಭಾಗ, ಬಿ ಎ, ಎಲ್ ಎಲ್. ಬಿ, ರಾ॥ ಪುರುಷೋತ್ತಮ ಲಕ್ಷ್ಮಯ್ಯ ಕ್ಯಾನಭಾಗ. ರಾ॥ ಹರಿಹರ ರಾಮ ಕ್ಯಾನಭಾಗ, ಹೆಗಡೇಕರ.

ಹೊನ್ನಾವರ.— ರಾ॥ ಕೊಪ್ಪ ವಾಸುದೇವ ಪಾಂಡುರಂಗ ಕ್ಯಾನಭಾಗ. ರಾ॥ ವೆಂಕಟರಾವ ಸುಬ್ರಾವ ಮಹಾಲೆ.

ಕರ್ನಾಟಕ ಮಹಾವಿದ್ಯಾಲಯ, ಧಾರವಾಡ.

ಶಿಕ್ಷಣ ಪದ್ಧತಿಯಲ್ಲಿ ಸುಧಾರಣೆ.

ಮಾಧ್ಯಮಿಕ ೫ ವರ್ಗಗಳ ವಿಭಾಗಣೆಯನ್ನು ವಿಷಯದ ಪ್ರಕಾರ ಮಾಡಿರುತ್ತೇವೆ. ಪ್ರತಿಯೊಂದು ವಿಷಯಕ್ಕೆ ೫ ವರ್ಗಗಳು ವಿದ್ಯಾರ್ಥಿಯು ತನ್ನ ಯೋಗ್ಯತೆಯ ಪ್ರಕಾರ ಬೇರೆ ಬೇರೆ ವಿಷಯಗಳನ್ನು ಕಲಿಯಲಿಕ್ಕೆ ಬೇರೆ ಬೇರೆ ವರ್ಗಗಳಿಗೆ ಹೋಗಬಹುದು ಮುಲ್ಕೀ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ವಿದ್ಯಾರ್ಥಿಗಳು ಇಂಗ್ಲೀಷ-ಸಂಸ್ಕೃತಕ್ಕಾಗಿ ೧ನೇ ವರ್ಗಕ್ಕೆ, ಕನ್ನಡಕ್ಕಾಗಿ ೫ನೇ ವರ್ಗಕ್ಕೆ, ಹಿಂದೀ ೨ನೇವರ್ಗಕ್ಕೆ, ಇತಿಹಾಸ-ಭೂಗೋಲ-ಗಣಿತಗಳಿಗಾಗಿ ೪ ನೇ ವರ್ಗಕ್ಕೆ, ಹೀಗೆ ತನ್ನ ಯೋಗ್ಯತೆಯ ಪ್ರಕಾರ ಹೋಗಿ ಕಲಿಯಬಹುದು. ಕೇವಲ ಇಂಗ್ಲೀಷಿಗಾಗಿಯೇ ಉಳಿದ ವಿಷಯಗಳ ಹಾನಿ ಮಾಡಿಕೊಂಡು, ೧ನೇ ವರ್ಗದಲ್ಲಿಯೇ ಸಣ್ಣ ಹುಡುಗರ ಕೂಡ ಶಕ್ತಿ-ವೇಳೆಯನ್ನು ಹಾಳು ಮಾಡುತ್ತ ಕೂಡ್ರುವ ಕಾರಣವಿಲ್ಲ ಒಂದು ವೇಳೆಗೆ ಎಲ್ಲ ವರ್ಗಗಳಲ್ಲಿಯೂ ಒಂದೇ ವಿಷಯದ ಅಭ್ಯಾಸವು ನಡೆಯುವಂತೆ ವಿಚಾರಡು ಮಾಡಿರುವದರಿಂದ, ವಿದ್ಯಾರ್ಥಿಗಳಿಗೆ ಈ ತರದ ಅನುಕೂಲತೆಯಾಗಿರುತ್ತದೆ. ಬೇರೆ ಬೇರೆ ವಿಷಯಗಳಂತೆ, ವಿದ್ಯಾರ್ಥಿಗಳ ಯೋಗ್ಯತೆಯಿದ್ದಂತೆ ಬೇರೆ ಬೇರೆ ವರ್ಗಗಳಲ್ಲಿ ಹಾಕುತ್ತೇವೆ ಈಗ ನಮ್ಮ ವಿದ್ಯಾರ್ಥಿಗೆ ಅವನ ವರ್ಗವಾವುದೆಂದು ಕೇಳಿದರೆ, 'ಯಾವ ವಿಷಯದಲ್ಲಿ?,' ಎಂದು ಪ್ರಶ್ನೆ ಮಾಡುವನು ವಾರ್ಷಿಕ ಪರೀಕ್ಷೆಯಲ್ಲಿ ಒಂದೆರಡು ವಿಷಯದಲ್ಲಿ ನಾಪಾಸಾದರೆ, ಆ ವಿಷಯಗಳಲ್ಲಿ ಕೆಳಗಿನ ವರ್ಗಗಳಲ್ಲಿಟ್ಟು, ಉಳಿದ ವಿಷಯಗಳಲ್ಲಿ ಮೇಲಿನ ವರ್ಗಕ್ಕೆ ಹಾಕುತ್ತೇವೆ ಯಾವನಾದರೊಬ್ಬ ವಿದ್ಯಾರ್ಥಿಯು ಉಳಿದವರಿಗಿಂತ ತೀಕ್ಷ್ಣ ಬುದ್ಧಿಯವನಿದ್ದು, ಒಂದು ವಿಷಯದಲ್ಲಿ ಹೆಚ್ಚು ಪ್ರಗತಿಯನ್ನು ಹೊಂದಿದರೆ, ಅಥವಾ ಮನೆಯಲ್ಲಿ ಹೆಚ್ಚು ಅಭ್ಯಾಸ ಮಾಡಿ, ಹೆಚ್ಚು ಪ್ರವೀಣನಾದರೆ ವರ್ಷದ ಮಧ್ಯದಲ್ಲಿಯೂ ಕೂಡ ಅವನನ್ನು ಆ ವಿಷಯದಲ್ಲಿ ಮೇಲಿನ ವರ್ಗಕ್ಕೆ ಹಾಕುತ್ತೇವೆ ಹೀಗೆ ಈ ಪದ್ಧತಿಯಿಂದ ಚುರುಕು ಬುದ್ಧಿಯವರಿಗೆ ಉತ್ತೇಜನ, ಮೇಲಾಟಕ್ಕೆ ಪ್ರೋತ್ಸಾಹನ, ಶಕ್ತಿ-ವೇಳೆಗಳ ಸದುಪಯೋಗ ಮುಂತಾದ ಅನೇಕ ಲಾಭಗಳು ಕಂಡುಬರುತ್ತಿವೆ ಜರ್ಮನಿ, ಅಮೇರಿಕಾ ಮುಂತಾದ ಸುಧಾರಿಸಿದ ರಾಷ್ಟ್ರಗಳಲ್ಲಿ ಈ ಪದ್ಧತಿಯು ಪ್ರಚಾರದಲ್ಲಿದೆಯಂತೆ. ಎಲ್ಲ ರಾಷ್ಟ್ರೀಯ ಶಾಲೆಗಳೂ, ಸರಕಾರೀ ಶಾಲೆಗಳೂ ಇದರ ಅನುಕರಣ ಮಾಡಿದರೆ ದೇಶಕ್ಕೆ ಕಲ್ಯಾಣವಾಗುವದು ಇಂಥ ಇನ್ನೂ ಕೆಲವು ಸುಧಾರಣೆಗಳನ್ನು ಮಾಡಿರುವೆವು ಮುಂದಿನ ಸಾರೆ ತಿಳಿಸುವೆವು ವಿಶೇಷ ಮಾಹಿತಿಗಾಗಿ ಬರೆಯಬೇಕು.

ಬಿ. ರಾ. ಕೌಜಲಗಿ,
ಶಿಕ್ಷಕ, ಕರ್ನಾಟಕ ಮಹಾವಿದ್ಯಾಲಯ, ಧಾರವಾಡ.

— ಅಮೇರಿಕೆಯಲ್ಲಿ ಕಳೆದ ವರ್ಷ ೧ ಲಕ್ಷ ೨೦ ಸಾವಿರ ಜನರು ಆತ್ಮಹತ್ಯೆಯನ್ನು ಮಾಡಿಕೊಂಡರು

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರಪಾರ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಮುಕ್ತಾ ಶಿಕ್ಕಿ ತಿಳಕೊಳ್ಳಬಹುದು

ಪುರುಷೋತ್ತಮ ಲಕ್ಷ್ಮಯ್ಯ ಕ್ಯಾನಭಾಗ

ಹೆಗಡೇಕರ, ದುಕಾನ, ಕುಮಟಾ.

ದೇಶಿ ಸೆಂಟೋನಾಯಿನ್.

(ಜಂತುವಿನ ಪುಡಿ.)

ಅಪಾಯಕರವಿಲ್ಲದೆ ಗುಣ ಕೊಡುವಂಥಾದ್ದು. ಪ್ರಪಂಚದಲ್ಲಿ ಪ್ರಖ್ಯಾತ ಔಷಧ

ಔಂಸಿನ ಶೀಸೆಗೆ ೭ ರೂ ೮ ಅಣೆ

ವಿಳಾಸ — ಎಮ್. ಜಿ ಭಾಗ್ವತ್,
ಆಯುರ್ವೇದಿಕ್ ಕೆಮಿಸ್ಟ, ಶಿರ್ಸಿ. (ಕೆನರಾ)

ದಕ್ಷಿಣ ಕನ್ನಡಜಿಲ್ಲಾ ನೆರೆ ಹಾವಳಿ ಸಹಾಯಕ ಕಮಿಟಿ, ಉಡ್ಪಿ.

ದಕ್ಷಿಣ ಕನ್ನಡ ಜಿಲ್ಲೆಯ ನದಿಗಳಲ್ಲಿ [illegible] ತ್ತ ೧೧ ರಲ್ಲಿ ಬಂದ ಘೋರ ನೆರೆಯು ದೆಸೆಯಿಂದ ಉಂಟಾದ ಹಾವಳಿಯನ್ನು ವರ್ಣಿಸ [illegible] ಅಸಾಧ್ಯವಾಗಿದೆ. ಬೇರೆ ಬೇರೆ ತಾಲೂಕುಗಳ ನದಿಗಳ [illegible] ಯಿಂದ ಉಕ್ಕಿ ಅ [illegible] ಗಳ ದಡಗಳಲ್ಲಿರುವ ಸಮಾನ್ಯ ಎಲ್ಲಾ ಮನೆಗಳು [illegible] ಪಾಲಾದವು ಇಲ್ಲವೆ ಬಿದ್ದು ಹೋದವು ಇದರಿಂದ [illegible] ದ ಸಂಕಷ್ಟವು ನಿವಾರಣೆಯಾಗಬೇಕಾದರೆ ಕೆಲವು ವರ್ಷಗಳಾದರೂ ಬೇಕಾಗಬಹುದು. ದಕ್ಷಿಣ ಕನ್ನಡದ ಮಂಗಳೂರು [illegible] ಕುಂದಾಪುರ ತಾಲೂಕುಗಳಲ್ಲಿ [illegible] ಮುಖ್ಯವಾಗಿ ಬಹಳ ಹಾವಳಿಯಾಗಿದೆ [illegible] ಹಾವಳಿಯಾದ ಸ್ಥಳಗಳಲ್ಲಿ [illegible] ಯಿಂದ [illegible] ಗ [illegible] ಹಾನಿ [illegible] ಕೆಲಸ ಮಾಡ [illegible] ಭವಗಳು [illegible] ಸರ್ವರೂ [illegible] ತಕ್ಕದಾಗಿದೆ [illegible] ಸಂಕಷ್ಟಗಳನ್ನು [illegible] ಕಷ್ಟಗಳ [illegible] ಬಿಂದ [illegible] ಸರ್ವಥಾ ಸಾಧ್ಯ [illegible] ಬಟ್ಟೆಗಳಿಲ್ಲದೆ [illegible] ಸ್ಥಳ [illegible] ಸಂಕಷ್ಟ [illegible] ಸಂಕಷ್ಟ [illegible] ಕರೆಗೆ [illegible] ಕರಗಬೇಕಲ್ಲವೆ [illegible] ಪರಿಹಾರ [illegible] ಸಂಘ [illegible] [illegible] ಆಗಲಿಲ್ಲವೆ [illegible] ಅದರ [illegible] ಜನರ [illegible] ಅವರ ಈಗಿನ ಪರಿಸ್ಥಿತಿಯನ್ನು ಅವರಿಗೆ ಆವಶ್ಯಕ [illegible] ಅವರ [illegible] ಮಾತ್ರ [illegible] ಎಲ್ಲಾ [illegible] ನಷ್ಟ ನಿವಾರಣೆ [illegible] ಕಷ್ಟಗಳ ಸಂಕ್ಷೇಪ ಪಟ್ಟಿಯನ್ನು ಪ್ರಕಟಿಸಲಾಗಿದೆ.

[illegible] ವರೆಗೆ [illegible] ಕುಂಬಳೆ, ಕಸ್ಬಾ, ಕೋಟೆ [illegible] ಹೂಡೆ [illegible] ಬೈಕಾಡಿ [illegible] ಸ್ಥಳಗಳಲ್ಲಿ ಬಿದ್ದು ಹೋದ ೫೦೦ ಮನೆಗಳು [illegible] ಕಟ್ಟೋಣಗಳಿಂದ ೧೨೪೦೦ ರೂಪಾಯಿಗಳು ನಷ್ಟವಾಗಿವೆ [illegible] ಬಂದಿದೆ ಕಲ್ಯಾಣಪುರ [illegible] ಅಕ್ಕಿಯ ರಾಶಿಗಳು ತೇಲುಬಿಟ್ಟವೆ [illegible] ವರೆಗೆ ಕಳೆಗೊಂಡ [illegible] ೧೧೨೫ ಮಂದಿ ಸ್ತ್ರೀ ಬಾಲ ವೃದ್ಧರಿಗೂ, ಕೆಲವು ಮಂದಿ ಅಶಕ್ತ ಗಂಡಸರಿಗೂ ರೋಗಪೀಡಿತರಾದವರಿಗೂ ಅಕ್ಕಿ ಸಹಾಯವು ಕೊಡಲ್ಪಡುತ್ತದೆ.

ಆನಂತರ ಇನ್ನೂ ಕೆಲವು ಸಂಖ್ಯೆಗಳು ಸಿಕ್ಕಿವೆ. ಕಸ್ಬಾ ಉಡುಪಿ, ಬಾಳಕುದ್ರು, [illegible] ಕೋಡಿಕಂಬಳ, ತಿಮ್ಮಣ್ಣಕುದ್ರು ಇವುಗಳಲ್ಲಿ ೧೩೯ ಮನೆಗಳು ನೀರು ಪಾಲಾಗಿವೆ. ಕಟ್ಟೋಣಗಳಿಂದ [illegible] ರೂಪಾಯಿಗಳು ಚರಸೊತ್ತುಗಳಿಂದ [illegible] ರೂಪಾಯಿಗಳೂ ನಷ್ಟವಾಗಿವೆ. ದುಡಿದು ಸಂಪಾದಿಸುವವರನ್ನು ಬಿಟ್ಟು ಈ ಸ್ಥಳಗಳಲ್ಲಿ ೧೪೦ ಮಂದಿಗೆ ಅಕ್ಕಿ ಬಟ್ಟೆ ಸಹಾಯವು ಅಗತ್ಯವಿದೆಯೆಂದು ತಿಳಿದು ಬರುತ್ತದೆ. ಅಲ್ಲದೆ ಉಗ್ಗೆಲ್ಬೆಟ್ಟು, ಪೆರ್ಡೂರು, ಆರೂರು ಹಾವಂಜೆ, ಪರಾರಿ ಮುಂತಾದ ಸ್ಥಳಗಳಲ್ಲಿ, ೧೫೬ ಮನೆಗಳು ನೀರುಪಾಲಾದವು. [illegible] ಜನರು ಮನೆಮಾರಿಲ್ಲದೆ ಅಲೆದಾಡುತ್ತಿರುವರು. ಕಟ್ಟೋಣಗಳಿಂದ ೧೩,೯೮೬ ರೂಪಾಯಿಗಳೂ, ಚರಸೊತ್ತುಗಳಿಂದ ೩೦೪೦ ರೂಪಾಯಿಗಳೂ ನಷ್ಟವಾಗಿವೆ. ಆರೂರಿನಲ್ಲಿ ನೆರೆ ಬಂದು ಕೆಲವು ದಿನಗಳವರೆಗೆ ಅಡಿಗೆ ಮಾಡಲು ಕಟ್ಟಿಗೆಯಿಲ್ಲವೆ ಅಕ್ಕಿಯನ್ನು ನೀರಿನಲ್ಲಿ ನೆನಸಿ ತಿಂದು ಹೊಟ್ಟೆ ತುಂಬಿಸಿಕೊಂಡ ಕೆಲವರು ಅತಿಸಾರದಿಂದ ಸಂಕಷ್ಟ ಪಡಬೇಕಾಯಿತು. ಇಲ್ಲಿಯ ಜಾನುವಾರುಗಳ ಸಂಕಷ್ಟವನ್ನು ಹೇಳಿ ತೀರದು. ಅವುಗಳಿಗೆ ತಿನ್ನುವದಕ್ಕೆ ಗ್ರಾಸವಿಲ್ಲದೆ ಎದ್ದು ತಿರುಗುವಷ್ಟು ಸಾಮರ್ಥ್ಯವಿಲ್ಲದಿರುವವೆಂದು ತಿಳಿಸಬಂದಿದೆ. ಆಹಾರವಿಲ್ಲದೆ ಕೆಲವು ಜಾನುವಾರುಗಳು ಮಡಿದವೆಂದು ತಿಳಿದು ಬಂದಿದೆ. ಇಲ್ಲಿ ಇರುವತ್ತು ಜನರ ೧೪ ಕುಟುಂಬಗಳು ಬಟ್ಟೆ ಸಹಾಯ ನಿರೀಕ್ಷಣೆಯಲ್ಲಿರುತ್ತಾರೆ. ಪ್ರತ್ಯೇಕ ಕಲ್ಯಾಣಪುರ ಕಸ್ಬಾಗಳು ಬೈಕಾಡಿ, ಬಾರಕೂರು, ಕೊಳಲಗಿರಿ ಮುಂತಾದ ಹಳ್ಳಿಗಳಲ್ಲಿ ರಾಶಿಗಳು ತೆರೆಯಲ್ಪಟ್ಟವೆ. ದಿನಂಪ್ರತಿ ೨೧೦೦ ಜನರಿಗೆ ಅಕ್ಕಿಯು ಸಲ್ಲುತ್ತದೆ. ದಿನಂಪ್ರತಿ ಸುಮಾರು [illegible] ಮುಡಿ ಅಕ್ಕಿಯು ಬೇಕಾಗುವದು.

ಜಿಲ್ಲೆಯ ಇತರ ಸ್ಥಳಗಳಿಗೆ ಹೋಗಿದ್ದ ದೇಶಭಕ್ತ ಕಾರ್ನಾಡ ಸದಾಶಿವರಾಯರ ಖಾನೇಷುಮಾರಿಯನ್ನು ಅವರು ಈ ಮೊದಲೇ ಪ್ರಕಟಿಸಿದುದರಿಂದ ಅದನ್ನು ಇಲ್ಲಿ ಪುನಃ ಕೊಡುವ ಅಗತ್ಯವಿಲ್ಲ. ರಿಲೀಫ್ ಕಮಿಟಿಗಳ ಕೆಲಸವು ತೃಪ್ತಿಕರವಾಗಿ ಸಾಗಬೇಕಾದರೆ ಜನಬಲವೂ, ದ್ರವ್ಯಬಲವೂ ಇಲ್ಲದೆ ಸಾಧ್ಯವಿಲ್ಲ. ಸ್ವಯಂಸೇವಕರಾಗಿ ಈ ಪುಣ್ಯಕಾರ್ಯವನ್ನು ಮಾಡಲು ಇದಕ್ಕಿಂತಲೂ ಉತ್ತಮ ಸಂದರ್ಭವು ಸಿಕ್ಕುವಂತಿಲ್ಲ. ಆದುದರಿಂದ ಮಾನವಸೇವೆ ಮಾಡಲು ಮನಸ್ಸುಳ್ಳವರು ಹೆಸರುಗಳನ್ನು ಕಾರ್ಯದರ್ಶಿಗಳಿಗೆ ತಿಳುಹಿಸಬೇಕಾಗಿ ವಿನಂತಿ. ದ್ರವ್ಯ ಸಹಾಯವಂತೂ ಬೇಕೇಬೇಕು. ಕೆಲವು ಲಕ್ಷ ರೂಪಾಯಿಗಳಾದರೂ ಸಂಗ್ರಹವಾಗದಿದ್ದರೆ ನಿರಾಶ್ರಿತರಿಗೆ ಬಾಳ್ವೆ ಕೊಡುವದಕ್ಕೆ ಗುಡಿಸಲುಗಳನ್ನಾದರೂ [illegible] ಸಾಧ್ಯವೇ ಇಲ್ಲ. ಸ್ವಲ್ಪವಿದ್ದ ಸಹಾಯವನ್ನಾದರೂ ಅವರಿಗೆ ಕೊಡುವಂತೆ ಸರ್ವರೂ ತಮ್ಮ ಭಾಗವನ್ನು ಕೊಟ್ಟು ಪುಣ್ಯ ಪಡೆಯಬೇಕಾಗಿ ನಿರ್ಗತಿಕರ ಪರವಾಗಿ ಕೇಳುತ್ತೇವೆ. ನಿರಾಶ್ರಿತರಿಗೆ ಹಣದ ಸಹಾಯವನ್ನೂ, ಬಟ್ಟೆಯ ಸಹಾಯವನ್ನೂ ಮಾಡುವ ಧರ್ಮಬುದ್ಧಿಯು ಭಗವಂತನು ಪ್ರತಿ ಒಬ್ಬರಿಗೂ ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ. ಹೆಚ್ಚಿನ ಸಂಖ್ಯೆಗಳನ್ನು ಆಗಾಗ ಪ್ರಕಟಿಸುತ್ತೇವೆ.

ಪ. ಭೀಮರಾವ
ಎಚ್. ನಾರಾಯಣರಾವ
ಜತೆಕಾರ್ಯದರ್ಶಿಗಳು

ಮುನಿಸಿಪಾಲಿಟಿಯ ಝಟಾಪಟಿ! ಊರವರ ಲಟಾಪಟಿ!! ವಿದ್ಯಾರ್ಥಿಗಳ ಫಟ್‌ಫಜೀತಿ!!!

ಕಳೆದ ಜೂನ ತಿಂಗಳಲ್ಲಿ ನಮ್ಮ ಊರ ಮುನಿಸಿಪಾಲಿಟಿಯ ಚಾಲಕರು ಆರ್ಥಿಕ ದೃಷ್ಟಿಯಿಂದ ವಿಚಾರ ಮಾಡಿ ೩೦-೩೫ ವರ್ಷಗಳಿಂದ ಸುಸೂತ್ರವಾಗಿ ನಡೆದು ಬಂದ ಇಂಗ್ಲೀಷ ಶಾಲೆಯಲ್ಲಿ ಒಡಕು ಹುಟ್ಟಿಸಿ, ಅದರ ಮೊದಲಿನ ೩ ಇಯತ್ತೆಗಳನ್ನು ಕನ್ನಡದ ಶಾಲೆಯ ಮೂರು ಇಯತ್ತೆಗಳಿಗೆ ಜೋಡಿಸಿ, ಇಂಗ್ಲೀಷ ಕ್ಲಾಸಗಳನ್ನು ಕನ್ನಡ ಶಾಲೆಯು ಆಟ್ಟಿಕ್ಕೊಂಡಿಸುವರಷ್ಟೇ ಇವರಿಂದ ಶಾಲೆಗಳ ಇತಿಹಾಸದಲ್ಲಿ ನೂತನವಾದ ದೊಡ್ಡದೊಂದು ಕ್ರಾಂತಿಯಾದದ್ದನ್ನು ಕಂಡು ಚಕಿತರಾದ ಹುಡುಗರು ತಮ್ಮ ಭಾಗ್ಯೋದಯವಾಯಿತೆಂತಲೇ ತಿಳಿದು ಥೈಥೈ ಕುಣಿಯಹತ್ತಿದ್ದರಿಂದ, ಇಂಗ್ಲೀಷ ಶಾಲೆಯತಕ್ಕ ವಿದ್ಯಾರ್ಥಿಗಳ ಸಂಖ್ಯೆಯು ಭರ್ರನೆ ಏರಿತು. ಊರವರಾದರೂ ತಮ್ಮ ಪ್ರತಿನಿಧಿಗಳ ವಿಚಿತ್ರವಾದ ಮಂಗಲಾಚರಣಕ್ಕಾಗಿ ತಲೆದೂಗಹತ್ತಿದರು.

ಆದರೆ ಇದರ ದುಷ್ಪರಿಣಾಮವು ಮಾತ್ರ ಕ್ರಮೇಣ ಕಾಣಿಸಹತ್ತಿತು. ಯಾಕೆಂದರೆ ಇಡೀ ಒಂದು ತಿಂಗಳ ಅವಧಿಯು ಅಕ್ಷರಗಳ ಅಭ್ಯಾಸಕ್ಕೇ ಸಾಲದಾಗಲು ಸಂಕಟಗೊಂಡು, ಸ್ವಾಂತರವೂ, ಶಿಕ್ಷಕಾಂತರವೂ ಕೂಡಿಯೇ ಪ್ರಾಪ್ತವಾಯಿತು. ಇದರಿಂದಾದರೂ ಎರಡು ತಿಂಗಳಲ್ಲಿ ವಿದ್ಯಾರ್ಥಿಗಳ ಅಭ್ಯಾಸದಲ್ಲಿ ತಕ್ಕಷ್ಟು ಪ್ರಗತಿಯಾಗುವದೆಂದು ಪಾಲಕರು ಮನಸ್ಸಿನಲ್ಲಿಯೇ ಮಂಡಿಗೆ ತಿನ್ನಹತ್ತಿದರು. ಆದರೆ ಇದು ಮುನಿಸಿಪಾಲಿಟಿಯ ಅಗ್ಗ ಕಟ್ಟೆ, ಮುಗ್ಗು ಜೋಳ ವೆಂಬುದು ಕೂಡಲೆ ಅವರ ಲಕ್ಷಕ್ಕೆ ಬಂದಿತು. ಅದಲ್ಲದೆ, ಈ ನೂತನ ವ್ಯವಸ್ಥೆಯಿಂದ ವಿದ್ಯಾರ್ಥಿಗಳ ಸ್ಥಿತಿಯು ಮಾತ್ರ ತೀರ ಕರುಣಾಜನಕವಾಯಿತು. ಯಾಕೆಂದರೆ ಕನ್ನಡ ಮತ್ತು ಇಂಗ್ಲೀಷ ಶಿಕ್ಷಕರ ಪ್ರಗತಿಯ ಮಾರ್ಗಕ್ರಮದಲ್ಲಿ "ಕಲ್ಲಪ್ಪ ಗುಂಡಪ್ಪ ಕೂಡಿ ಹೊಲಸಪ್ಪನ ಹಾದಿ" ಎಂಬಂತೆ ಅವರ ಬಳಲಿ ಬೆಂಡಾದರು. ಹೀಗಾಗಿ ಎಷ್ಟೋ ಹುಡುಗರು ಇಂಗ್ಲೀಷಿಗೆ ಶರಣು ಹೊಡೆದು ಉಳಿದವರು ತಮ್ಮ ದುಃಸ್ಥಿತಿಯ ಅರಿವನ್ನು ಮುಖ್ಯಾಧ್ಯಾಪಕರಿಗೂ ಪಾಲಕರಿಗೂ ಮಾಡಿಕೊಟ್ಟರು. ಇದರಿಂದ ಊರಿನ ಸದ್ಗೃಹಸ್ಥರೂ ಪಾಲಕರೂ ಕೂಡಿ ೨ ತಿಂಗಳ ಅನುಭವದಿಂದ ನೂತನ ವ್ಯವಸ್ಥೆಯು ದೋಷಯುಕ್ತವೆಂತ ಕಂಡುಬಂದಿರುವದರಿಂದಲೂ ಮಂತ್ರಕ್ಕಿಂತ ಉಗುಳೇ ಹೆಚ್ಚು ಎಂಬಂತೆ ವಿದ್ಯಾರ್ಥಿಗಳ ಸ್ಥಿತಿಯು ಮಾತ್ರ ಕಠಿಣತ್ತ ನಡೆದಿರುವದರಿಂದಲೂ ಇಂಗ್ಲೀಷ ಶಾಲೆಯನ್ನು ಬೇಗನೆ ಮೂಲಸ್ಥಿತಿಗೆ ತಂದು ಮುಟ್ಟಿಸಬೇಕಾಗಿ ಮುನಿಸಿಪಾಲಿಟಿಗೆ ವಿನಂತಿ ಅರ್ಜಿಯನ್ನು ಮಾಡಿಕೊಂಡಿರುವರು. ಸದರ ಅರ್ಜಿಯಂತೆ ಹುಡುಗರನ್ನು ದಂಡಿಸುವ ವಿಷಯದಲ್ಲಿ ಮಾತ್ರ ಶಿಕ್ಷಕರು ಸೇವಾ ದಿಂದಿರಬೇಕಾಗಿ ಮುನಿಸಿಪಾಲಿಟಿಯವರು ಹುಕುಂ ಮಾಡಿರುತ್ತಾರಂತೆ. ಆದರೆ ಶಾಲೆಯನ್ನು ಪೂರ್ವದ ಸ್ಥಿತಿಗೆ ತರುವಲ್ಲಿ ಮಾತ್ರ ಅವರು ತಯಾರಿದ್ದಂತೆ ತೋರುವದಿಲ್ಲ.

ವಿಚಾರ ಮಾಡಿ ನೋಡಿದರೆ ಮುನಿಸಿಪಾಲಿಟಿಯವರು ಇಂಥ ಗೊಂದಲವನ್ನೆಬ್ಬಿಸುವ ಕಾರಣವೇ ಇದ್ದಿಲ್ಲ. ಯಾಕೆಂದರೆ ಈ ನೂತನ ವ್ಯವಸ್ಥೆಯು ನಿಪ್ಪಾಣಿಯಂತೆ ಮೂಲತಃ ಇಂಗ್ಲೀಷ ಶಾಲೆ ಇಲ್ಲದಂಥ ಊರಲ್ಲಿ ಮಾತ್ರ ಪರೀಕ್ಷಾರ್ಥವಾಗಿ ಆಗಿರುವದಲ್ಲದೆ, ಇದ್ದ ಶಾಲೆಯನ್ನು ಮುರಿದು ಕನ್ನಡ ಶಾಲೆಗೆ ಕೂಡಿಸುವದು ಜಾಣತನವಾಗಲಾರದು. ಇದಲ್ಲದೆ, ಇದರಿಂದ ಖರ್ಚಿನಲ್ಲಾದ ಉಳಿತಾಯವು ಕಂಡು ಬರುವದಿಲ್ಲ. ಯಾಕೆಂದರೆ ಇಂಗ್ಲೀಷ ಶಾಲೆಗೆ ಹೋಗುವ ಹುಡುಗರು ಕನ್ನಡ ಶಾಲೆಯಲ್ಲಿಯೇ ಉಳಿದು ಆಯಾ ವರ್ಗಗಳ ಹುಡುಗರ ಸಂಖ್ಯೆಯು ಸಹಜವಾಗಿ ಏರಿದ್ದರಿಂದ ಒಂದು ಶಾಲೆಯ ಶಿಕ್ಷಕರ ಸಂಬಳವನ್ನು ಉಳಿಸಿ ಅವನ್ನು ಇನ್ನೊಂದು ಶಾಲೆಯಲ್ಲಿ ಹೆಚ್ಚಿಗೆ ಶಿಕ್ಷಕರನ್ನು ನೇಮಿಸುವದರಲ್ಲಿ ಉಪಯೋಗಿಸಬೇಕಾಗುವದು. ಮತ್ತು ಈ ಪ್ರಕ್ರಿಯೇ ಸದ್ಯಕ್ಕೆ ಮುನಿಸಿಪಾಲಿಟಿಯವರ ವಿಚಾರಕ್ಕೊಳಗಾಗಿದೆ. ಇಷ್ಟೇ ಅಲ್ಲದೆ ಇಂಗ್ಲೀಷ ತೆಗೆದುಕೊಂಡ ಹುಡುಗರು ಪ್ರತ್ಯೇಕವಾದ ಇಂಗ್ಲೀಷ ಶಾಲೆಯಲ್ಲಿರುವದಕ್ಕಿಂತ ಕನ್ನಡ ಶಾಲೆಯಲ್ಲಿದ್ದರೆ ನಿಯಮಾನುಸಾರವಾಗಿ ಅವರು ಎಷ್ಟೋ ಹೆಚ್ಚಿನ ವಿಷಯಗಳನ್ನು ಕಲಿಯಬೇಕಾಗುವದು. ಇಂಗ್ಲೀಷದಂಥ ಕಠಿಣ ವಿಷಯವನ್ನು ಕಲಿಯುತಕ್ಕ ಒಕ್ಕಲಿಗರ ತಲೆಯಲ್ಲಿ ಅನಾವಶ್ಯಕವಾದ ಹೆಚ್ಚಿನ ವಿಷಯಗಳನ್ನು ತುಂಬುವದೆಂದರೆ ಅವರ ತಲೆಯ ಮೇಲೆ ಹೊರಲಾರದಷ್ಟು ಹೊರೆಯನ್ನು ಹೊರಿಸುವದೇ ಸರಿ. ಸ್ಟ್ಯಾಂಡರ್ಡ ಪತ್ರಿಕೆಯಂತೆ ಆಯಾ ಇಯತ್ತೆಗಳ ಹೆಚ್ಚಿನ ವಿಷಯಗಳು ಯಾವದೆಂದರೆ —

ಇಂಗ್ಲೀಷ I (ಕನ್ನಡ V) ಗಣಿತ- ಚಕ್ರಬಡ್ಡಿ, ದಶಾಂಶ, ಆವರ್ತ ದಶಾಂಶ, ಬಾಯಿಲೆಕ್ಕ ಕನ್ನಡ ಕವಿತೆ- ೧೦೦ ಸಾಲು ಬಾಯಿಪಾಠ

II (ಕನ್ನಡ VI) ಗಣಿತ- ಮುರಕೊಳ್ಳುವ ಬಡ್ಡಿ ಲಾಭ ಲುಕ್ಸಾನು, ಸರಕು ತಾಮಟಿಗೆ, ಮತ್ತು ವರ್ಗಮೂಲ ಕನ್ನಡ ಕವಿತೆ- ೨೦೦ ಸಾಲು ಬಾಯಿಪಾಠ

„ III (ಕನ್ನಡ VII) ಗಣಿತ- ರೇಖಾಗಣಿತ, ಕ್ಷೇತ್ರಮಾಪನ, ಅಂಕಗಣಿತ ಸಂಪೂರ್ಣ ಉಪಪತ್ತಿ ಸಹಿತ ಅಂದರೆ ಇಂಗ್ಲೀಷ ೭ನೇ ಇಯತ್ತೆಗೆ (ಮ್ಯಾಟ್ರಿಕಕ್ಕೆ) ಆಗುವಷ್ಟು

ಇದಲ್ಲದೆ ಕನ್ನಡ ವಾಚನ, ವ್ಯಾಕರಣವು ಪ್ರತಿ ೧ ಇಯತ್ತೆಗೆ ಸರಿಯಾಗಿ ಇವ್ಯಾಗಿಗೆ ಮೀರಿ ಆದ ಇತಿಹಾಸದ ವಿಷಯವಾಗಿ ಇಂಗ್ಲೀಷ ಶಾಲೆಯಲ್ಲಿ ಕನ್ನಡ ೫ ೬ ೭ ನೇ ಪುಸ್ತಕಗಳೊಳಗಿನ ಐತಿಹಾಸಿಕ ಪಾಠಗಳೇ ಸಾಕಾದರೆ, ಕನ್ನಡ ಶಾಲೆಯಲ್ಲಿ ಪ್ರತ್ಯೇಕವಾದ ದೊಡ್ಡದೊಂದು ಇತಿಹಾಸವೇ ಬೇಕು

ಇನ್ನು ನೂತನ ವ್ಯವಸ್ಥೆಯನ್ನು ಸಫಲ ಮಾಡಿ ತೋರಿಸಲಿಚ್ಛಿಸುವ ಮುನಿಸಿಪಾಲಿಟಿಯ ಎದುರಿಗೆ ಪೆ ಕಾಚಾ ತ್ಯಾರಾ ನಾಸೆ ಶಿಷ್ಟ ಎಂಬಂತೆ ವಿದ್ಯಾರ್ಥಿಗಳ ಗೋಳು, ಪಾಲಕರ ಕಳವಳ, ಶಿಕ್ಷಕರ ದೂರು ಸ್ಥಳದ ಅನಾನುಕೂಲತೆ ಕಾಲದ ಅನಾನುಕೂಲತೆ, ಹೀಗೆ ಒಂದಲ್ಲ ಎರಡಲ್ಲ ಎಷ್ಟೋ ವಿಷಯಗಳು ಬರಹತ್ತಿವೆ ಇದಲ್ಲದೆ ಶಿಕ್ಷಕರೊಬ್ಬನು ಕಾರಣಾಂತರದಿಂದ ರಜೆ ತಗೆದುಕೊಂಡರೆ ಕಡೆಯಲ್ಲಿಯ ಆ ಕಲಿಸುವ ದುರ್ಧರ್ಷ ಇಂಥ ರಗಳೆಯನ್ನು ಲೋಕಲ್ ಬೋರ್ಡಿನವರು ಹ್ಯಾಗೆ ಹಾಕಿಕೊಂಡಾರು? ಮುನಿಸಿಪಾಲಿಟಿಯವರು ಇಂಗ್ಲೀಷ ಕಲಿಸಲಿಕ್ಕೆ ಒಬ್ಬ ಶಿಕ್ಷಕನ ವೇತನವನ್ನು ನಾವು ಸಹಿಸುತ್ತೇವೆಂತ ಹೇಳಿದರೂ, ಅದರಿಂದ ಹೆಚ್ಚಿಗೆ ಬೇಕಾಗುವ ಕನ್ನಡ ಶಿಕ್ಷಕರ ವೇತನವನ್ನು ಹೊರುವಷ್ಟು ಅವರು ಇಚ್ಛಿಸಲಿಕ್ಕಿಲ್ಲ

ಆದ್ದರಿಂದ ಶಹರ ಪಿತೃಗಳು ಮತದಾರರ ಮಾತಿಗೆ ಮಾನಕೊಟ್ಟು, ತಪ್ಪುದೇ ಹಟಹಿಡಿಯದೆ, ವಿದ್ಯಾರ್ಥಿಗಳ ಹಿತದ ಕಡೆಗೆ ಲಕ್ಷ ಕೊಟ್ಟು ಇಂಗ್ಲೀಷ ಶಾಲೆಯನ್ನು ಮೂಲರೂಪಕ್ಕೆ ಮುಟ್ಟಿಸುವದೇ ವಿಹಿತವಲ್ಲವೇ?

ಶಿರ್ಸಿ } ಓರ್ವ ಮತದಾರ
ತಾ. ೩-೮-೧೯೩೩ }

ವಿಮರ್ಶೆ.

ಜಯಕರ್ನಾಟಕ— ಶ್ರೀ ಆಲೂರ ವೆಂಕಟರಾಯರಿಂದ ಸಂಗ್ರಹಿಸಲ್ಪಡುವ ಕಥೆಗಳ ಕಟ್ಟಿನ ಹುಣ್ಣಿವೆಯ ಸಂಚಿಕೆಯನ್ನು ಸಾಭಾರ, ಸಾನಂದ ಸ್ವೀಕರಿಸಿರುವೆವು ಈ ಸಂಚಿಕೆಯು ವಾಚನೀಯ ಲೇಖಗಳಿಂದ ತುಂಬಿತುಳುಕುತ್ತಿದೆ ಶ್ರೀ ಶ್ರೀನಿವಾಸನು ಬರೆದ 'ಕೃಷ್ಣಮೂರ್ತಿಯ ಜಯಂತಿ"ಯ ಕಥೆಯು ಚಿತ್ತವೇಧಕವಿದೆ ಟಿ. ರಾಘವಾಚಾರ್ಯರು "ಬ್ರಹ್ಮಚರ್ಯ"ವನ್ನು ಸೋದಾಹರಣ ಪ್ರತಿಪಾದಿಸಿರುವರು. ಶೇಕ್ಸಪಿಯರನ ನಾಟಕಗಳೊಳಗಿನ ನಾಯಕರನ್ನೂ, ನಮ್ಮ ಪುರಾಣಗಳೊಳಗಿನ ಭೀಷ್ಮ ಮೊದಲಾದವರನ್ನೂ ಉದಾಹರಿಸಿ, 'ಬ್ರಹ್ಮಚರ್ಯ ಸಿದ್ಧಿಯನ್ನು ಪಡೆಯದಿದ್ದರೆ, ನಾವು ವಿದ್ಯೆ ಕಲಿತು ಫಲವೇನು' ಎಂದು ಸವಾಲು ಮಾಡಿರುವರು. ಶ್ರೀ ಕಾನಳ್ಳಿ ಕ್ಯಾಮಣ್ಣನವರು ಬೌದ್ಧಮತದ ತತ್ವಗಳನ್ನು ವಿಶದಪಡಿಸಿರುವರು ಭಗವಾನ್ ಬುದ್ಧದೇವರ ಧ್ಯಾನಸ್ಥ ಚಿತ್ರವು ಚಿತ್ತವೇಧಕವಿದೆ ವಿದ್ಯಾಭೂಷಣ ಈ ದತ್ತಾತ್ರಯ ಭಾವಪ್ಯಾಜರವರು ಮೂರು ಉದಾಹರಣೆಗಳಿಂದ ಬ್ರಿಟಿಷರ ಆಗಮನವಾದಂದಿನಿಂದ ಭಾರತೀಯರ ಅವಂತಿಯಾಯಿತೆಂಬ ಸಿದ್ಧಾಂತವನ್ನು ಹೊಗಳಿಸಿರುವರು. ಹಿಂದುಸ್ಥಾನ ಸರಕಾರವು ಪರತ ಹುಂಡಿಗಳನ್ನು ವಿಕ್ರಯಿಸಿ, ಭಾರತೀಯ ಕೋಶದೊಳಗಿಂದ ೩೫ ಕೋಟಿ ರೂಪಾಯಿಗಳನ್ನು ಕಟ್ಟಳೆಯ ಬೆಂಬಲದಿಂದ ಸುಲಿದ ವಿವೇಚನವನ್ನು ಹುಬ್ಬಳ್ಳಿಯ ಶ್ರೀ ಗುರುರಾವ ವಾಳವೇಕರರು ಪ್ರತಿಪಾದಿಸಿರುವರು. ವಾಣೀವಿಲಾಸಸಾಗರವೆಂಬ ಕರ್ನಾಟಕದೊಳಗಿನ ಮನೋಹರ ಸರೋವರದ ವರ್ಣನೆಯನ್ನು ಚಿತ್ರದುರ್ಗದ ಶ್ರೀ ಹೊಳ್ಳೂರ ಶ್ರೀನಿವಾಸ ಜೋಯಿಸರವರು ಮಾಡಿ ಕೊಟ್ಟಿರುವರು ಇದಲ್ಲದೆ, ಬಿಡಿನುಡಿ, ಪ್ರಪಂಚ ವಾರ್ತೆಯು ಮೊದಲಾದ ವಿವಿಧ ಸಣ್ಣ ಸಣ್ಣ ಲೇಖಗಳಿವೆ. ಲೋಕಮಾನ್ಯ ದೇಶಭಕ್ತ ಲಾಲಾ ಲಜಪತರಾಯ, ಕೀರ್ತಿಶೇಷ ಮಾಲವ ಮಹಾರಾಜರವರ ವಾಣೀವಿಲಾಸಸಾಗರ ಸರೋವರದ ಚಿತ್ರಗಳೂ ಕೊಡಲ್ಪಟ್ಟಿವೆ. ಇಂಥ ಮಾಸಪತ್ರಿಕೆಯನ್ನು ಕನ್ನಡ ಭಾಷಾಭಿಮಾನಿಗಳೆಲ್ಲರೂ ಪ್ರೋತ್ಸಾಹಿಸಬೇಕಾಗಿ ವಿನಂತಿ

ಶ್ರೀಕೃಷ್ಣಸಂದೇಶ— ಕಥೆಗಳ ಕಟ್ಟಿನ ಸಂಚಿಕೆಯಲ್ಲಿ ಕವಿಭೂಷಣ ಶ್ರೀ ರಾಮಾಚಾರ್ಯ ಗಲಗಲಿಯವರು ಗುರುಕುಲದ ವಿಷಯದ ಪ್ರಸ್ತಾಪವನ್ನು ಮುಂದರಿಸಿರುವರು ಬಾಗಲಕೋಟೆಯ ವೇದಾಧ್ಯಯನ ಪಾಠಶಾಲೆಯ ಅಧ್ಯಾಪಕರಾದ ಶ್ರೀ ಬುರ್ಲಿ ಗೋಪಾಲಾಚಾರ್ಯರು ಸಂಧ್ಯಾವಂದನದ ಕಾಲ-ಸ್ಥಲಗಳನ್ನು ವಿವರಿಸಿ ಅವುಗಳ ಮಹತ್ವವನ್ನು ವಿಶದೀಕರಿಸಿರುವರು ಸಂಧ್ಯಾವಂದನ ಮಾಡದವರಿಗೆ ಪುರಾಣದಲ್ಲಿ ವಿಧಿಸಿದ ದಂಡನೆಯನ್ನೂ ಬುರ್ಲಿಯವರು ನಿವೇದಿಸಿ, ಧರ್ಮಾಭಿಮಾನಿಗಳಿಗೆಲ್ಲ ಸಂಧ್ಯಾವಂದನ ಮಾಡಲು ಪ್ರೋತ್ಸಾಹಿಸಿರುವರು ಶ್ರೀ ಶಾಸ್ತ್ರಿಗಳು ಭೃಗುವಂಶದೊಳಗಿನ 'ಸುಕನ್ಯಾಪರಿಣಯ'ವನ್ನು ನಿವೇದಿಸಿರುವರು ಧರ್ಮಪ್ರಚುರ ಮಾಹಿತಿಯನ್ನು ಪಸರಿಸುವ ಶ್ರೀಕೃಷ್ಣಸಂದೇಶಕ್ಕೆ ತಕ್ಕ ಸಹಾಯವನ್ನೀಯುವದು ಕರ್ನಾಟಕದೊಳಗಿನ ಧರ್ಮಾಭಿಮಾನಿಗಳ ಕರ್ತವ್ಯವು

ಮಾತೃಭೂಮಿ— ಕವಿಭೂಷಣ ಶ್ರೀ ಬೆಟಗೇರಿಯವರಿಂದ ಸಂಗ್ರಹಿಸಲ್ಪಡುವ ಕಥೆಗಳ ಕಟ್ಟಿನ ಹುಣ್ಣಿವೆಯ ಸಂಚಿಕೆ ಈ ಸಂಚಿಕೆಯಲ್ಲಿ ಧಾರವಾಡದ ರಾಷ್ಟ್ರೀಯ ಶಾಲೆಯ ಶಿಕ್ಷಕರಾದ ಶ್ರೀ ತೌಜಲಗಿಯವರು ರಾಷ್ಟ್ರೀಯ ಶಿಕ್ಷಣದ ವಿವೇಚನ ಮಾಡಿರುವರು ಮಹಾಕವಿ ಪಂಪನ ಉಚಿತಪದತ್ವವನ್ನು ಶ್ರೀ ಹುರೇಷವಾಡರವರು ಚರ್ಚಿಸಿರುವರು ಸಾಧ್ವೀಹೃದಯ ಕಾದಂಬರಿಯು ಮುಂದರಿದಿದೆ ಮಹಾಕವಿ ಭಾಸನಿಂದ ಸಂಸ್ಕೃತದಲ್ಲಿ ವಿರಚಿತವಾದ 'ಮಧ್ಯಮ-ವ್ಯಾಯೋಗ'ವೆಂಬ ನಾಟಕವನ್ನು ಕವಿಭೂಷಣರು ರೂಪಾಂತರಿಸಿ, ಮಾತೃಭೂಮಿ ಗ್ರಂಥದ ಪುರವಣಿ ಎಂದು ಸಂಚಿರುವರು ಕವಿಗಳ ರೂಪಾಂತರವು ಮನೋಹರವಿದೆ, ಉತ್ತೇಜನಪ್ರದವಿದೆ

ಸಾಧುಸಮಾಗಮ— ಈಯ ರಾಷ್ಟ್ರೀಯ ಶಾಲಾಧ್ಯಾಪಕರಾದ ಶ್ರೀ ವಾಮನ ಅನಂತ ಹೊದ್ಕೆಯವರು ಜುಲೈ ೧೫ನೇ ತಾರೀಖಿಗೆ ಪ್ರಕಟಿಸಿದ ಚರಿತ್ರ ಸಂಗ್ರಹವಿದು ಶೀಖ ಪಂಥದ ಸಂಸ್ಥಾಪಕರಾದ ಗುರುನಾನಕ, ವಿಖ್ಯಾತ ಸ್ವಾಮಿ ರಾಮತೀರ್ಥ, ಅಭಂಗಗಳನ್ನು ಬರೆದು ಕೀರ್ತಿಪಡೆದ ತುಕಾರಾಮಮಹಾರಾಜ, ಈ ಮೂವ ಮಹನೀಯರ ಚರಿತ್ರಗಳನ್ನು ಶ್ರೀ ಹೊದ್ಕೆಯವರು ಸರಸವಾಗಿ ನಿವೇದಿಸಿರುವರು ಹೊದ್ಕೆಯವರ ಕನ್ನಡ ಶೈಲಿಯ ಬಗ್ಗೆ ಈಗ ವಿಶೇಷ ಬರೆಯುವದು ಅವಶ್ಯವಿಲ್ಲ ಮೂವ ಮಹನೀಯರೂ ಭರತಭೂಮಾತೆಯ ಪುತ್ರರತ್ನಗಳು ಪುಣ್ಯಪುರುಷರ ಚರಿತ್ರಗಳನ್ನು ಪ್ರತಿ ಒಬ್ಬನು ಪಠಣ ಮಾಡಲೇಬೇಕು. ಮುಖಪೃಷ್ಠದ ಮೇಲೆ ಸಾಧುಗಳ ಫೋಟೋದಲ್ಲಿ ಈಗಿನ ಸಾಧುಶ್ರೇಷ್ಠರಾದ ಮಹಾತ್ಮರ ಭಾವಚಿತ್ರವು ಕಂಗೊಳಿಸುತ್ತದೆ ಅಷ್ಟರಿಂಗ ಮಕ್ಕಳಿಗಾಗಿಯೆನೆಯ ಶ್ರೀ ಮಂಜುನಾಥ ದೇವರ ಹೆಗಡೆಯವರ 'ಭಾರತೀ ದೇವಿಯ ವಿಲಾಪ'ವೆಂಬ ಸಣ್ಣ ಕಾವ್ಯವು ಕೊಡಲ್ಪಟ್ಟಿದೆ ಶೈಲಿಯು ಸುಲಭವಿದೆ ಅರ್ಥಬೋಧಕ್ಕೆ ಪ್ರಯಾಸವಾಗುವದಿಲ್ಲ ಅಂತು ಆತ್ಮೋದ್ಧಾರ ಗ್ರಂಥವಾಲಿಯ ದ್ವಿತೀಯ ವರ್ಷದ ದ್ವಿತೀಯ ಪುಷ್ಪವು ಚಿತ್ತಾಕರ್ಷಕವಾಗಿದೆ

ವೃತ್ತಸಾರ.

— ಬರುವ ಡಿಸೆಂಬರ ತಿಂಗಳಿನಲ್ಲಿ ಕೋಕೋನಾಡದಲ್ಲಿ ಸೇರಲಿಕ್ಕಿದ್ದ ರಾಷ್ಟ್ರೀಯ ಸಭೆಯ ಸ್ವಾಗತಾಧ್ಯಕ್ಷರು ಶ್ರೀ ಕೊಂಡವೆಂಕಟಪ್ಪಯ್ಯನವರು. ಅಧ್ಯಕ್ಷಸ್ಥಾನವನ್ನು ಸದ್ಯಕ್ಕೆ ಬಿಡುಗಡೆ ಹೊಂದಲಿಕ್ಕಿದ್ದ ಮೌ| ಮಹಮ್ಮದ ಅಲ್ಲಯವರಿಗೆ ಅರ್ಪಿಸುವ ಸುಚನ್ನವು ಕೇಳುತ್ತಿದೆ

— ಧಾರವಾಡದ ಸುಪ್ರಸಿದ್ಧ ಗೋಳೀಬಾರ ಪ್ರಕರಣದಲ್ಲಿ ೩ ವರ್ಷಗಳ ಶಿಕ್ಷೆ ಹೊಂದಿದ ಶ್ರೀ ಅನಂತರಾವ ಪಾಟೀಲರವರು ಬಿಡುಗಡೆ ಹೊಂದಿ, ಕಳೆದ ತಾ. ೩೦ನೇಗೆ ಹುಬ್ಬಳ್ಳಿಯಲ್ಲಿ 'ಸೆರೆಮನೆಯ ಅನುಭವ' ವೆಂಬ ವಿಷಯದ ಮೇಲೆ ಬೋಧಪ್ರದ ಉಪನ್ಯಾಸವನ್ನಿತ್ತರು

— ಹುಬ್ಬಳ್ಳಿಯ ರಾಷ್ಟ್ರೀಯ ಶಾಲಾಧ್ಯಾಪಕರು ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗಬೇಕೆಂದು ರಾಷ್ಟ್ರೀಯ ಶಾಲೆಗೆ ಜೋಡಿಸಿ, ಒಂದು ಸೇವಾಶ್ರಮವನ್ನು ತೆಗೆದಿರುವರು ಬಡ ವಿದ್ಯಾರ್ಥಿಗಳು ಲಾಭ ಹೊಂದಬಹುದು

— ಮುಂಬಯಿ ಸರಕಾರಕ್ಕೆ ದಿವಾಣಿ ಕೋರ್ಟುಖಾತೆಯಿಂದ ೧೯೩೧-೧೯೩೨ರಲ್ಲಿ ೩೬ ಲಕ್ಷ ರೂಪಾಯಿಗಳ ಉತ್ಪನ್ನ, ೬೧ ಲಕ್ಷ ರೂಪಾಯಿಗಳ ವೆಚ್ಚ ನ್ಯಾಯದಾನದಿಂದ ಏನು ಮುನಾಫೆ ೧೫ ಲಕ್ಷ

— ಬಾಗಲಕೋಟೆಯಲ್ಲಿ ಈದ ಮಹೋತ್ಸವವು ಸಡಗರದಿಂದ ನೆರವೇರಿಸಲ್ಪಟ್ಟಿತು ಒಬ್ಬ ಲಿಂಗಾಯತ ಸಿರಿವಂತರು ೧೦೦ ರೂಪಾಯಿಗಳನ್ನು ಉರ್ದು ಕಲಿಯುವ ವಿದ್ಯಾರ್ಥಿಗಳಿಗೆ ಉತ್ತೇಜನವನ್ನೀಯಲು ಅರ್ಪಿಸಿದರು

— ಬೆಂಗಳೂರಿನ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾದ ಬೆಳ್ಳಾವೆ ವೆಂಕಟನಾರಣಪ್ಪನವರು ಶ್ರೀ ಆಚಾರ್ಯರಿಗೂ, ತಮಗೂ ಕ್ರೋಧವಾಗಲಿ, ಮತ್ಸರವಾಗಲಿ ಇಲ್ಲೆಂತಲೂ ಇದರಿಂದ ಅವರ ಚುನಾವಣೆಯನ್ನು ತಾವು ವಿರೋಧಿಸಲಿಲ್ಲೆಂತಲೂ, ಜಯಕರ್ನಾಟಕದ ಕಥೆಗಳ ಕಟ್ಟಿನ ಹುಣ್ಣಿವೆಯ ಸಂಚಿಕೆಯಲ್ಲಿ ಪ್ರಕಟಿಸಿರುವರು. ಸಾಹಿತ್ಯ ಸಮ್ಮೇಲನವು ವಿಜಾಪುರದಲ್ಲಿ ಇನ್ನಾದರೂ ಬೇಗನೆ ಕೂಡಲೆಂದು ಸಾಹಿತ್ಯಸೇವಕರೆಲ್ಲರೂ ಬಯಸುತ್ತಿರುವರು

— ಕಾನಪುರದಲ್ಲಿ ಗವ್ಹರ್ನರರ ಆಗಮನವಾಯಿತು ಮ್ಯುನಿಸಿಪಾಲಿಟಿಯವರು ಮಾನಪತ್ರವನ್ನರ್ಪಿಸಿದರು ನಿಷೇಧವೆಂದು ಕಾನಪುರಸ್ಥರೆಲ್ಲರೂ ವ್ಯವಹಾರವನ್ನೆಲ್ಲ ತಡಕೊಟ್ಟು ಇಟ್ಟು, ಅಂದು ಸಂಪೂರ್ಣ ಹರತಾಳವನ್ನು ಆಚರಿಸಿದರು

— ಬೇಳಗಾವಿ ಮ್ಯುನಿಸಿಪಾಲಿಟಿಯವರು ತಮ್ಮ ಹದ್ದಿನಲ್ಲಿ ಮದ್ಯವಿಕ್ರಯ ಮಾಡಲಾಗದೆಂದು ಪ್ರತಿಬಂಧಕ ಹುಕುಮುಗಳನ್ನು ಹೊರಡಿಸಿರುವರು

— ಗುಜರಾಥದಲ್ಲಿ ಹಾವಳಿ ಎಬ್ಬಿಸಿದ ಮೀರಖಾನ ಎಂಬ ಕಳ್ಳನಿಗೆ ಹಿಡಿಯಲು ಮುಂಬಯಿ ಸರಕಾರವು ೩ ವರ್ಷಗಳಿಂದ ಯತ್ನಿಸಿ, ಕಳೆದ ವಾರದಲ್ಲಿ ಅವನನ್ನು ಸೆರೆಹಿಡಿಯಿತು ಅವನ ಕಥೆಯು ಮನೋರಮವಿದೆಯಂತೆ' ಅವನನ್ನು ಹಿಡಿಯಲಿಕ್ಕೆ ಸರಕಾರಕ್ಕೆ ೧ ಲಕ್ಷ ರೂಪಾಯಿಗಳು ತಗಲಿದವು

— ಹಿಂದೂ ಮಹಾಸಭೆಯ ೩ನೇ ಅಧಿವೇಶನವು ಕಾಶೀಕ್ಷೇತ್ರದೊಳಗಿನ ಕಾಶಿ ನರೇಶಮಂದಿರದಲ್ಲಿ ಇದೇ ಬರುವ ತಾ. ೧೯-೩೦ನೇಗೆ ನೆರೆಯುವದು ಸ್ವಾಗತ ಮಂಡಳವು ಪ್ರತಿನಿಧಿಗಳಿಗೆಲ್ಲ ಉಳಕೊಳ್ಳುವ ವ್ಯವಸ್ಥೆಯನ್ನು ಪುಕ್ಕಟೆಯಾಗಿ ಮಾಡುವದು

ಕಾನಡಾವೃತ್ತ.

ಗುರುವಾರ, ತಾರೀಖು ೯ ಮಾಹೆ ಅಗಸ್ಟ ೧೯೨೩

ಚಿತ್ತವೇಧಕ ಕಥೆ.

ಈಗ ಚಾತುರ್ಮಾಸ, ಹಳ್ಳಿಹಳ್ಳಿಗಳಲ್ಲಿ ಪುರಾತನ ಸಾಂಪ್ರದಾಯದವರು ರಾಮಾಯಣ, ಮಹಾಭಾರತ ಮೊದಲಾದ ಪುರಾತನ ಗ್ರಂಥಗಳ ಶ್ರವಣ ಮಾಡಿಕೊಂಡು, ಪೂರ್ವಜರ ಗುಣಸಂಕೀರ್ತನದಲ್ಲಿ ತೊಡಗಿರುವರು. ಅವುಗಳ ಶ್ರವಣದಿಂದ ತಕ್ಕ ಬೋಧವನ್ನೂ ಪಡೆದು, ತಮ್ಮ ಜೀವನಕ್ರಮದಲ್ಲಿ ಇಷ್ಟ ಸುಧಾರಣೆಯನ್ನು ಸಹ ಮಾಡುವ ವಿಚಾರದಲ್ಲೇ ಅವರು ನಿಮಗ್ನರಾಗುವ ಸಮಯವಿದು. ಇಂಥ ಅನುಕೂಲ ಸಂದರ್ಭದಲ್ಲಿ ನಮ್ಮ ವಾಚಕ ಮಹಾಶಯರಿಗೆ ಒಂದು ಕಥೆಯನ್ನು ನಿವೇದಿಸಲಿಚ್ಛಿಸುವೆವು. ಕಥೆಯ ರಮ್ಯತೆಯು ಪಠಣದ ಹೊರತು ಅವರಿಗೆ ಗೋಚರವಾಗದು. ಆದ ಕಾರಣ, ವಾಚಕ ಮಹಾಶಯರೆಲ್ಲರೂ ಈ ಕಥೆಯನ್ನು ಓದಿ, ತಕ್ಕ ಬೋಧ ಪಡೆಯಬೇಕಾಗಿ ನಮ್ಮ ಪ್ರಾಸ್ತಾವಿಕ ವಿನ್ನಹ.

ಅನ್ವರುದ್ದೀನ ಎಂಬವರೊಬ್ಬರು ಮದ್ರಾಸ ಇಲಾಖೆಯಲ್ಲಿ ಮಹಮ್ಮದೀಯ ಬಾಂಧವರಿರುವರು. ಅವರು ವಿಲಾಯತಿಗೆ ಹೋಗಿ, ಬೆರಿಸ್ಟರ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ವಿಲಾಯತಿಯಲ್ಲಿ ಇವರಿಗೆ ಬೆರಿಸ್ಟರಿ ನಡಿಸುವ ಸನದು ದೊರಕಿತು. ಮದ್ರಾಸಿನಲ್ಲಿ ಅವರು ಅದೇ ಸನದನ್ನು ಆದರಿಸಿ, ಎಡ್ವೋಕೇಟರ ಪಟದಲ್ಲಿ ತಮ್ಮ ಹೆಸರನ್ನು ದಾಖಲ ಮಾಡಿಕೊಂಡರು. ಅನ್ವರುದ್ದೀನರವರು ಕಾಯಿದೆಯ 'ಡಾಕ್ಟರ ಆಫ್ ಲಾಸ' ಎಂಬ ಕಾಯಿದೆಯ ವಾತಂಗತ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಹೆಸರಾದ ಕಾಯಿದೆಯ ಪಂಡಿತರಾದರು. ವಿಲಾಯತಿಯಲ್ಲಿ ಸುಖದಿಂದ ಸಂಸಾರ ಮಾಡಬೇಕೆಂದು ಡಾಕ್ಟರ ಮಹಾಶಯರಿಗೆ ಅನಿಸಿತು. ಸಂಸಾರವೆಂಬ ರಥಕ್ಕೆ ೨ ಚಕ್ರಗಳು. ಸ್ತ್ರೀ-ಚಕ್ರವನ್ನು ಸಂಪಾದಿಸಿದ ಹೊರತು, ಸಂಸಾರಸುಖಾಸ್ವಾದವನ್ನು ಹೊಂದುವ ಬಗೆ ಹೇಗೆ! ಇಂಗ್ಲೀಷ ಸುವಾಸಿನಿಯರು ಸರ್ವಶ್ರೇಷ್ಠರು. ಅವರನ್ನೊಬ್ಬಳನ್ನು ಸಂಪಾದಿಸಬೇಕು ಅಂದರೆ, "ನನ್ನ ಸಂಸಾರವು ಸುಸೂತ್ರವಾಗುವದು; ಸುಖಮಯವಾಗುವದು" ಎಂದು ಡಾಕ್ಟರರ ಕಲ್ಪನೆ. ರುಬಿ ಫೂಲಿಸ ಹುಕ್ ಎಂಬ ಒಬ್ಬ ಸುವಾಸಿನಿಗೂ, ಡಾಕ್ಟರರಿಗೂ ೧೯೧೩ ನೇ ಇಸವಿಯ ಅವಿಯಲ್ಲಿ ಅಲ್ಪ ಪರಿಚಯವಾಯಿತು. ಪರಿಚಯವಾಗುವಷ್ಟರೊಳಗೆ, ಪರಸ್ಪರರೊಳಗೆ ಪ್ರೇಮವುಂಟಾಯಿತು. ಮಾರ್ಚ ತಾ. ೧೮ ನೇಗೆ ಫ್ರೆಂಡ್ಸವರ್ಥ ಎಂಬಲ್ಲಿ ಇಬ್ಬರಿಗೂ ಮದುವೆಯಾಯಿತು. ಕಾಯಿದೆಯಂತೆ ಈವರ್ರ ವಿವಾಹವನ್ನು ಸುಪರಿಂಟೆಂಡೆಂಟ ರಿಜಿಸ್ಟ್ರಾರರವರು ರಿಜಿಸ್ಟರ ಮಾಡಿದರು. ಗಂಡ-ಹೆಂಡರು ಎಪ್ರಿಲ ತಾ. ೧ನೇಯಿಂದ ಪ್ರೇಮಾನಂದದಲ್ಲಿ ನಿಮಗ್ನರಾದರು.

ಎಪ್ರಿಲ ತಾ ೨೮ ನೇಗೆ ರುಬಿಯ ಪ್ರೇಮವು ಸ್ಥಲಾಂತರ ಹೊಂದಿತು. "ನನ್ನ ತಂದೆಯು ಬಹಳ ಅಡಚಣಿಯಲ್ಲಿ ಸಿಲುಕಿಕೊಂಡಿರುವನು. ಧನಸಹಾಯವು ಅವನಿಗೆ ಬೇಕಾಗಿದೆ." ಎಂದು ರುಬಿಯು ಪತಿ ಮಹಾರಾಜರ ಕೂಡ ನುಡಿದಳು "ನನ್ನೊಡನೆ ಹಣವೇನಿಲ್ಲ. ವಕೀಲಿ ಸಹಾಯವನ್ನು ನಿನ್ನ ತಂದೆಗಾಗಿ ಉಚಿತವಾಗಿ ಮಾಡುವೆನು" ಎಂದು ಅನ್ವರುದ್ದೀನರವರು ರುಬಿ ಪ್ರೇಮರತ್ನಕ್ಕೆ ನುಡಿದರು. ಹಾಗಾದರೆ, ನಾನೊಬ್ಬ ಜರ್ಮನ್ ಸಾವುಕಾರರನ್ನು ಮದುವೆಯಾಗುತ್ತೇನೆ. ನಾನು ಪತ್ನಿಯಾದರೆ, ಅವರು ನನ್ನ ತಂದೆಗೆ ಬೇಕಷ್ಟು ದ್ರವ್ಯಸಹಾಯ ಮಾಡಲೊಪ್ಪಿರುವರು. ಅವರ ಹೆಸರು ಡಾ। ವೊಲ್ಬರ ವಾಲ" ಎಂದು ರುಬಿಯು ನುಡಿದು, ಥಕ್ಕನೆ ಡಾಕ್ಟರ ಅನ್ವರುದ್ದೀನರವರ ಗೃಹತ್ಯಾಗ ಮಾಡಿ ನಡೆದಳು. ಸಾಯಂಕಾಲಕ್ಕೆ ಡಾಕ್ಟರರ ಮಾವಂದಿರು ಅಳಿಯಂದಿರಿಗೆ ಚೆಟ್ಟಿಯನ್ನಿತ್ತರು. ತಮ್ಮ ಮಗಳು ಕಾಣೆಯಾಗಿರುವಳೆಂದೂ, ಡಾಕ್ಟರರೇ ಅವಳನ್ನು ಕೊಂದುಹಾಕಿರಬೇಕೆಂದೂ ಮಾವಂದಿರು ಅಳಿಯ ಡಾ। ಅನ್ವರುದ್ದೀನರ ಮೇಲೆ ಆರೋಪ ಹೊರಿಸಿದರು. ಪೋಲೀಸ ಸ್ಟೇಶನಿಗೆ ವರದಿ ಕೊಟ್ಟು, ಡಾಕ್ಟರರು ಮಾವನ ಮನೆಗೆ ಲಗಬಗೆಯಿಂದ ಶೋಧ ಮಾಡಿದರು. ಅಲ್ಲಿ ಅವರ ಸೌಭಾಗ್ಯವತಿಯು ಸುರಕ್ಷಿತಳಿದ್ದಳು. ತನ್ನೊಡನೆ ಅವಳಿಗೆ ಡಾ। ರರು ಬರಹೇಳಲು, ಅವಳು ಒಪ್ಪಿದಳು. ಆದರೆ, ತಾಯಿ-ತಂದೆಗಳ ಒತ್ತಾಯದಿಂದ ರುಬಿಯು ಅಲ್ಲಿಯೇ ಉಳಿದಳು.

ಮೇ ತಾ. ೨೨ ನೇಗೆ ರುಬಿಯನ್ನು ಕ್ರೂರತನದಿಂದ ನಡಿಸಿದ ಆರೋಪವನ್ನು ಡಾಕ್ಟರರ ಮೇಲೆ ಹೊರಿಸಿ, ಫಿರ್ಯಾದಾಯಿತು. ನ್ಯಾಯಮೂರ್ತಿಗಳು ಬಟ್ಲೆ ಕೇಳಿ, ಗಂಡ-ಹೆಂಡರಿಗೆ ಪ್ರತ್ಯೇಕ ಮಾಡಿ, ಖುಕ್ತಾಂಶವನ್ನು ಕೊಡಲು ಡಾಕ್ಟರರಿಗೆ ಫರ್ಮಾಯಿಸಿದರು. ಹ್ಯಾಕೋರ್ಟನಲ್ಲಿ ಅಪೀಲಾಯಿತು. ಅಲ್ಲಿ ಕೆಳ ಕೋರ್ಟಿನ ತೀರ್ಮಾನವು ರದ್ದಾಯಿತು. ಬಳಿಕ ಮದ್ರಾಸ ಸಿಟಿ ಸಿವ್ಹಿಲ್ ಕೋರ್ಟಿನಲ್ಲಿ ರುಬಿಯು ತಮ್ಮೊಡನೆ ವಾಸವಾಗಿರುವಂತೆ ಆಜ್ಞಾಪಿಸಲು ಡಾಕ್ಟರರು ದಾವೆ ತಂದರು. ದಾವೆಯಂತೆ ಫೈಸಲೆಯಾದರೂ, ರುಬಿಯ ಸಹವಾಸವು ಡಾಕ್ಟರರಿಗೆ ದೊರಕದೆ ಹೋಯಿತು. ೧೯೧೫ ನೇ ಮೇ ತಿಂಗಳಿನಲ್ಲಿ ರುಬಿಯು ಸಹವಾಸ ಮಾಡುವದಿಲ್ಲೆಂದು, ಗಂಡ-ಹೆಂಡರ ಸಂಬಂಧವನ್ನು ಕಾಯಿದೆಯಂತೆ ನಿರ್ಮೂಲಿಸಲು ಡಾ। ರರು ವಿಲಾಯತಿಯಲ್ಲಿ ದಾವೆ ಮಾಡಿದರು. ಆದರೆ, ಡಾಕ್ಟರರು ಬ್ರಿಟಿಶ ನಿವಾಸಿಗಳಲ್ಲದ ಮೂಲಕ, ದಾವೆಗೆ ಕೋರ್ಟಿನಲ್ಲಿ ಪ್ರವೇಶವೇ ದೊರಕಲಿಲ್ಲ. ಅಗಸ್ಟ ತಾ. ೨೭ ನೇಗೆ ಮಹಮ್ಮದೀಯ ಧರ್ಮಶಾಸ್ತ್ರದಂತೆ ತಲಕನಾಮೆಯಿಂದ ಅನ್ವರುದ್ದೀನ-ರುಬಿಗಳ ಪ್ರೇಮರಜ್ಜುವು ಹರಿದು ಹೋಯಿತು. ಕಥೆಯ ಪ್ರಥಮಾಧ್ಯಾಯವು ಇಲ್ಲಿ ಸಮಾಪ್ತಿಹೊಂದಿತು.

೧೯೧೬ ನೇ ಇಸವಿಯ ಮಾರ್ಚ ತಿಂಗಳಿನಲ್ಲಿ ಡಾ। ರರಿಗೆ ವ್ಯಾಲೆಟ್ ಲೌಸಾ ಲಿಂಗ ಎಂಬ ಸುಕುಮಾರಿಯ ದರ್ಶನವಾಯಿತು. ಪೂರ್ವಕಥೆಯನ್ನೆಲ್ಲ ಡಾಕ್ಟರರು ವ್ಯಾಲೆಟಳಿಗೆ ತಿಳಿಸಿದರು. ಮತ್ತು ಮುಸಲ್ಮಾನ ಕಾಯಿದೆಯಂತೆ ಅವಳನ್ನು ಮದುವೆ ಮಾಡಿಕೊಂಡರು. ೧೧ ತಿಂಗಳೊಳಗೆ ಅಂದರೆ, ೧೯೧೭ ನೇ ಫೇಬ್ರುವರಿ ತಾ. ೧೩ ನೇಗೆ ವ್ಯಾಲೆಟಳು ಪುತ್ರರತ್ನಕ್ಕೆ ಜನ್ಮವನ್ನಿತ್ತಳು. ಡಾಕ್ಟರರು ಕಾಯಿದೆಯಂತೆ ತಮ್ಮ ಪುತ್ರಜನನವನ್ನು ಮದ್ರಾಸಿನಲ್ಲಿ ರಿಜಿಸ್ಟರ ಮಾಡಿದರು. ಹಾಗು ಮದ್ರಾಸಿನೊಳಗಿನ 'ಮೇಲ' ಎಂಬ ಎಂಗ್ಲೋ ಇಂಡಿಯನ್ ಪತ್ರಿಕೆಯಲ್ಲಿ ಪುತ್ರ ಜನನವನ್ನು ಅಖಿಲ ಭೂಮಂಡಲಕ್ಕೆ ಜಾಹೀರುಪಡಿಸಿದರು.

ಇತ್ತ ಏನಾಯಿತೆಂದು ಸಾವಧಾನ ಚಿತ್ತದಿಂದ ಕೇಳಿರಿ. ಪ್ರಥಮ ಸಂಬಂಧದ ರುಬಿಯು ವಿಲಾಯತಿಯೊಳಗಿನ "ಜೊನ ಬುಲ್" ಎಂಬ ವಾರಪತ್ರಿಕೆಯ ಆಫೀಸಿನಲ್ಲಿ ನೌಕರಿಯನ್ನು ಸಂಪಾದಿಸಿದಳು. ಪತ್ರಿಕಾಕರ್ತರು ಹೊರೇಶ್ಯೋ ಬೊಟಮ್ಲೀ ಎಂಬವರು, ಪಾರ್ಲಿಮೆಂಟಿನ ಸಭಾಸದರು. ಡಾಕ್ಟರರು ರುಬಿ ಪತ್ನಿಯನ್ನು ಕ್ರೂರತನದಿಂದ ನಡಿಸಿದರೆಂತಲೂ, ಡಾಕ್ಟರರ ವಕೀಲಿಯು ಸಹ ಅಪ್ರಾಮಾಣಿಕವಿದೆಂತಲೂ ಮೊದಲಾದ ಮಿಥ್ಯಾರೋಪಗಳನ್ನು ಹೊರಿಸಿ, ಅವರು "ಜೊನ ಬುಲ್"ದಲ್ಲಿ ತಮ್ಮ ಲೇಖಮಾಲೆಯನ್ನೇ ಪ್ರಾರಂಭಿಸಿದರು. ಅನ್ವರುದ್ದೀನರವರು ಬೊಟಮ್ಲೀಯವರ ಮೇಲೆ ಅಬ್ರುಲುಕ್ಸಾನಿಯ ದಾವೆ ಮಾಡಿದರು. ಸುನಾವಣಿಯು ನ್ಯಾಯಮೂರ್ತಿ ಡಾರ್ಲಿಂಗ ಹಾಗು ಇಂಗ್ಲೀಷ ಪಂಚರ (Jury) ಮುಂದೆ ನಡೆಯಿತು. ಆಗ ಬೊಟಮ್ಲೀಯವರು ಅಡ್ಡಸವಾಲಿನಲ್ಲಿ ಒಂದು ಕಾಗದ ತೋರಿಸಿ, ಅ ಬಗ್ಗೆ ಡಾಕ್ಟರರಿಗೆ ಖುಲಾಸೆ ಕೇಳಿದರು. ಕಾಯಿದೆಯಂತೆ ಈ ಖುಲಾಸೆಯನ್ನು ಕೇಳುವದು ಉಚಿತವಲ್ಲೆಂದು ಡಾಕ್ಟರರು ತಕರಾರಿಸಿದರು. ಆದರೂ, ನ್ಯಾಯಮೂರ್ತಿಗಳು ಡಾಕ್ಟರರ ವಿರುದ್ಧ ನಿಕಾಲೆ ಮಾಡಿ ಸವಾಲಿಗೆ ಉತ್ತರ

ವನ್ನೀಯಬೇಕೆಂದರು. ತಪಾಸು ಮಾಡಿ, ಡಾಕ್ಟರರು ಆ ಕಾಗದದ ಮೇಲಿನ ಸಹಿಯು ತಮ್ಮದಲ್ಲವೆಂದು ನುಡಿದರು. ಬೊಟಮ್ಲೀಯವರು ಇನ್ನೊಂದು ಕಾಗದವನ್ನು ಹೊರಿಸಿದರು. ಆ ಬಗ್ಗೆ ಖುಲಾಸೆ ಮಾಡಲು ಡಾಕ್ಟರರು ಒಪ್ಪಲಿಲ್ಲ. ನ್ಯಾಯಮೂರ್ತಿಗಳು ಡಾಕ್ಟರರ ವಿರುದ್ಧ ನಿಬಾಲೆ ಕೊಟ್ಟರು. ಆಗ ಡಾಕ್ಟರರು ಕಾಗದವನ್ನು ತಪಾಸ ಮಾಡಿದರು. ನೋಡಲು, ಅದೊಂದು ಕೂಸಿನ ಜನನದ ಸರ್ಟಿಫಿಕೇಟು ಆಗಿತ್ತು. ಅದರೊಳಗೆ ನಮೂದಿಸಿದ ಕೂಸು ತಮ್ಮದಲ್ಲೆಂದು ಡಾಕ್ಟರರು ನುಡಿದರು. ಜನನ ಸರ್ಟಿಫಿಕೇಟು ಫೋರ್ಜರಿಯೆಂತಲೂ ನ್ಯಾಯಾಸನಕ್ಕೆ ನಿವೇದಿಸಿ, ಅದನ್ನು ಜಪ್ತ ಮಾಡಲು ವಿನ್ನೈಸಿದರು. "ಅದೇನು ದಾವೆಯ ವಿಷಯಕ್ಕೆ ಸಂಬಂಧಿಸಿದವುಗಳಲ್ಲವೆಂದು ನ್ಯಾಯಮೂರ್ತಿಗಳು ತೀರ್ಮಾನಿಸಿ, ಡಾಕ್ಟರರ ಬೇಡಿಕೆಯನ್ನು ಅಲ್ಲಗಳೆದರು. ಸುನಾವಣಿ ಕಾಲಕ್ಕೆ ನ್ಯಾಯಾಸನದ ವರ್ತನವು ತೀರ ಪಕ್ಷಪಾತದ್ದೆಂದು ತೋರಿ, ಡಾಕ್ಟರರು ದಾವೆಯನ್ನು ಬಿಟ್ಟು, ಕೋರ್ಟಿನಿಂದ ಎದ್ದು ನಡೆದರು. ಮೂರನೇ ದಿನ ಪ್ರತಿವಾದಿ ಬೊಟಮ್ಲೀಯವರು ಕೋರ್ಟಿನಲ್ಲಿ ಡಾಕ್ಟರರ ಪರೋಕ್ಷ, ದೊಡ್ಡ ಭಾಷಣವನ್ನಿತ್ತರು. ಇಂಗ್ಲೀಷ ಹೆಂಗಸರಿಗೆ ಡಾಕ್ಟರರು ಚಲುವೆಯಿಂದ ಕೆಡಿಸುತ್ತಾರೆಂತಲೂ, ಇಂಥವರಿಗೆ 'ಪಶು' ಎಂದು ಸಂಬೋಧಿಸುವದು ಪಶುಕೋಟಿಗೆ ಸಹ ಅಪಮಾನಾಸ್ಪದವೆಂತಲೂ ನುಡಿದರಂತೆ. ನ್ಯಾಯಮೂರ್ತಿಗಳು ದಾವೆಯನ್ನು ಕಿತ್ತುಹಾಕಿಬಿಟ್ಟರು. ಇಲ್ಲಿಗೆ ದ್ವಿತೀಯಾಧ್ಯಾಯವು ಪರಿಸಮಾಪ್ತಿಗೈದಿತು.

ಮೂರನೇ ಅಧ್ಯಾಯಕ್ಕೆ ಈಗ ಪ್ರಾರಂಭವಾಯಿತು. ವಾಚಕ ಮಹಾಶಯರು ಏಕಾಗ್ರ ಚಿತ್ತದಿಂದ ಶ್ರವಣಮಾಡಬೇಕಾಗಿ ಪುನರ್ವಿನ್ನಣೆ ಮಾಡುವೆವು. ದಾವೆಯ ನಿಬಾಲೆಯಾಗಿ ೩ ತಿಂಗಳುಗಳು ಸಾಗಿದವು. ಡಾ|| ಅನ್ಸರುದ್ದೀನರವರಿಗೆ ವಾರಂಟಿನ ಮೇಲೆ ಹಿಡಿದರು. ಅಬ್ಯುಲುಕಾಸ್ಸಿನು ದಾವೆಯಲ್ಲಿ ಜಬಾನಿ ಕೊಡುವಾಗ, ನ್ಯಾಯಾಸನದ ಮುಂದೆ ಪ್ರತಿಜ್ಞೆಯು ಕೊಂಡು ಸುಳ್ಳಾಡಿದ ಆರೋಪವು ಡಾಕ್ಟರರ ಮೇಲೆ ಬಂತು. ಸುನಾವಣಿ ನಡೆಯಿತು. ರುಬಿಯೂ, ಅವಳ ತಾಯಿಯೂ ತಮ್ಮ ಮುಂದೆ ಡಾಕ್ಟರರು ಸಹಿ ಮಾಡಿದ್ದರೆಂದು ಜಬಾನಿ ಕೊಟ್ಟರು. ಡಾಕ್ಟರರು ಕಾಯಿದೆ ಪಂಡಿತರು. ಸ್ವತಃ ಅವರ ಮೇಲೆ ಒದಗಿದ ಕಷ್ಟ. ಪರಮಾವಧಿಯ ಯತ್ನ ನಡಿಸಿ, ರುಬಿಯನ್ನೂ, ಅವಳ ತಾಯಿಯನ್ನೂ ಅಡ್ಡಸವಾಲಿನಲ್ಲಿ ಕೆಡಿವಿ, ತಮ್ಮ ಅಂಬೋಣವನ್ನು ದೃಢಪಡಿಸಿಕೊಂಡರು. ಇನ್ನೊಂದು ಆರೋಪವು ಅವರ ಬೆನ್ನುಹತ್ತಿತು. ದಾವೆಯ ಕಾಲಕ್ಕೆ ಬೊಟಮ್ಲೀಯವರು ಹೊರಿಸಿದ ಜನನ ಸರ್ಟಿಫಿಕೇಟನ್ನು ನಿರಾಕರಿಸಿ, ಡಾಕ್ಟರರಿಗೆ ಎರಡನೇ ಹೆಂಡತಿಯಿಂದ ಹುಟ್ಟಿದ ಮಗನು ತಮ್ಮದಲ್ಲೆಂದು ಅವರು ನುಡಿದರೆಂದು ವಿಚಾರವಾಯಿತು. ಡಾಕ್ಟರರು ಇಂಗ್ಲೀಷ ಬೆರಿಸ್ಟರರ ಬಂಗಲೆಗಳಿಗೆ ಎಡತಾಕಿದರು. ಯಾರೂ ಒಪ್ಪಲಿಲ್ಲ. 'ಬೇಕಾದಷ್ಟು ರುಸುಮು ಕೊಳ್ಳಿರಿ; ನನ್ನ ತರ್ಫೆನಿಂದ ಹೋರಾಡಿರಿ' ಎಂದು ಡಾಕ್ಟರರು ಬಹು ಪರಿಯಿಂದ ಹೇಳಿಕೊಂಡರೂ, ಒಬ್ಬರೂ ಒಪ್ಪಲಿಲ್ಲ. ಮಿ|| ಥೊರ್ನ್ ಡ್ರ್ರಿರವರು ರುಸುಮನ್ನು ಕೊಂಡರು. ಡಾಕ್ಟರರಿಗೆ ಆರೆ ಹುಟ್ಟಿತು ಮೂರನೇ ದಿನ ರುಸುಮಿನ ರಕಮು ಹಿಂತಿರುಗಿತು. ಕಟ್ಟಕಡೆಗೆ, ಮಿ|| ಅಬಿಂಜರರವರು ವಕಾಲತನ್ನು ಸ್ವೀಕರಿಸಿದರು. ಬೊಟಮ್ಲೀ ತರ್ಫೆನಿಂದ ಬಂದ ಲಘು ಲೇಖಕರಿಗೆ ಅಡ್ಡ ಸವಾಲುಗಳನ್ನು ಡಾಕ್ಟರರು ಕೇಳಹೇಳಿದರೂ, ಅವರು ಕೇಳದೆ, ಡಾಕ್ಟರರಿಗೇ ಸಮಾಧಾನ ಹೇಳಹತ್ತಿದರು. ನ್ಯಾಯಮೂರ್ತಿಗಳು ಏಕ ತರ್ಫೆನಿಂದ ಸುನಾವಣಿ ಕಾಲಕ್ಕೆ ನೆರೆದ ಬ್ರಿಟಿಶ ಪಂಚರಿಗೆ ಸಮಜೂತಿ ಕೊಟ್ಟರು. ಡಾಕ್ಟರರಿಗೆ ೬ ತಿಂಗಳ ಶಿಕ್ಷೆಯಾಯಿತು. ಈ ಹುಕುಮಿನ ಮೇಲೆ ಅಪೀಲಾಯಿತು. ಅಪೀಲು ಸುನಾವಣಿಯು ನ್ಯಾಯಮೂರ್ತಿಗಳು ವಿಖ್ಯಾತ ರೌಲೆಟ್ ಸಾಹೇಬರು. ಇವರು ಡಾಕ್ಟರರ ಅಪೀಲನ್ನು ಕಿತ್ತೊಗೆಯುವಾಗ, ಡಾ|| ಅನ್ಸರುದ್ದೀನರವರ ಪ್ರಕರಣದಿಂದ ಇಂಗ್ಲೀಷ ಕುಮಾರಿಯರಗೊದವೆಗ ಹಿಂದೀಯರ್ಯಾರೂ ಇನ್ನು ತೋಗರೆಂದು ನಮೂದಿಸಿರುವರು.' ಬಳಿಕ, ಡಾಕ್ಟರರ ಬಿಡುಗಡೆಯ ಬಗ್ಗೆ ಹಿಂದೀ ದೇಶಬಾಂಧವರು ಬ್ರಿಟಿಶ ಪ್ರಧಾನ ಮಂಡಳಕ್ಕೆ ಅರ್ಜಿ ಮಾಡಲು, ಅವರಿಗೆ ಬಿಡುಗಡೆಯಾಯಿತು.

ಶಿಕ್ಷೆ ಹೊಂದಿದ ಡಾಕ್ಟರರ ಅವಸ್ಥೆಯೇನು! ಎಂಬ ಬಗ್ಗೆ ವಿಲಾಯತಿಯಲ್ಲಿ ಚರ್ಚೆಯಾಯಿತು. ಬ್ರಿಟಿಶ ಪಂಚರೂ, ಬ್ರಿಟಿಶ ನ್ಯಾಯಾಸನವೂ ಕೊಟ್ಟ ತೀರ್ಪು ತಮಗೆ ಮಾನ್ಯವೆಂದು ಅಲ್ಲಿಯ ಬೆರಿಸ್ಟರ ಸಂಘವು ನುಡಿಯಿತು. ನ್ಯಾಯಾಸನದ ನಿಬಾಲೆಯು ಏಕತರ್ಫೆಯದೆಂದೂ ಡಾಕ್ಟರರು ಬಹು ಪರಿಯಿಂದ ತಮ್ಮ ಸಂಘಕ್ಕೆ ತಿಳಿಸಿಹೇಳಿದರು. ತಾವು ಪ್ರತಿಜ್ಞೆಯಮೇಲೆ ಎಂದೂ ಸುಳ್ಳಾಡಲಿಲ್ಲೆಂದೂ, ಎರಡನೇ ಹೆಂಡತಿಯಿಂದ ಹುಟ್ಟಿದ ಮಗನು ಈಗಲೂ ತಮ್ಮ ಪರಮ ಪ್ರೀತಿಯವನೆಂದೂ, ಬೊಟಮ್ಲೀಯವರು ಫೋರ್ಜರಿ ಮಾಡಿದ ಜನನ ಸರ್ಟಿಫಿಕೇಟನ್ನು ಮಾತ್ರ ತಾವು ಅಲ್ಲಗಳೆದಿರುವೆವೆಂದೂ, ಈ ವರೆಗಿನ ತಮ್ಮ ವರ್ತನವು ಸಭ್ಯಗೃಹಸ್ಥರಿಗುಚಿತವಾಗಿರುವದೆಂದೂ, ಅದಕ್ಕೆ ತಿಪಿಗೊಡದೆ, ತಮ್ಮ ಬೆರಿಸ್ಟರಿಯನ್ನು ತೆಗೆದರೆ ಹೆಂಡರು-ಮಕ್ಕಳ ಹೊಟ್ಟೆಯು ಗೋಳಾಗುವದೆಂದೂ ಡಾಕ್ಟರರು ವಾದಿಸಿದರು. ವಿಲಾಯತಿಯೊಳಗಿನ ಬೆರಿಸ್ಟರ ಸಂಘವು ಡಾಕ್ಟರರ ಹೆಸರನ್ನು ಪಟದ ಮೇಲಿಂದ ಕಿತ್ತುಹಾಕಿತು.

ಬಳಿಕ ಡಾಕ್ಟರರ ಹೆಸರನ್ನು ಮದ್ರಾಸ ಹೈಕೋರ್ಟಿನ ಬೆರಿಸ್ಟರರ ಪಟದೊಳಗಿಂದ ಯಾಕೆ ಕಿತ್ತುಹಾಕಬಾರದೆಂದು ಮದ್ರಾಸ ಹೈಕೋರ್ಟಿನವರು ಡಾಕ್ಟರರ ಮೇಲೆ ನೋಟೀಸು ಹೊರಡಿಸಿದರು. ಜುಲೈ ೨೩ ನೇ ತಾರೀಖಿಗೆ ಕಾರಣಗಳನ್ನು ನಾದರಪಡಿಸುವಾಗ ಡಾಕ್ಟರರು ಆಮೂಲಾಗ್ರ ಆತ್ಮವೃತ್ತವನ್ನು ನಿವೇದಿಸಿದರು. "ಬ್ರಿಟಿಶ ನ್ಯಾಯಾಸನವು ನನಗೆ ಅನ್ಯಾಯ ಮಾಡಿದೆ. ಬೊಟಮ್ಲೀಯವರು ನನ್ನ ವೈರಿಗಳು. ಬ್ರಿಟಿಶ ನ್ಯಾಯದೇವತೆಯು ನಿಷ್ಪಕ್ಷಪಾತಳು ಎಂದು ನಂಬಿ, ಬೊಟಮ್ಲೀಯವರ ಮೇಲೆ ದಾವೆ ಮಾಡಿದೆ. ಇಂಗ್ಲೀಷ ಸ್ತ್ರೀಯರನ್ನು ಮದುವೆ ಮಾಡಿಕೊಂಡರೆ, ನನ್ನ ಕಲ್ಯಾಣವಾಗುವದೆಂದು ಭಾವಿಸಿದೆ. ನನಗೆ ಈಗ ಪಶ್ಚಾತ್ತಾಪವಾಗಿದೆ. ಭಾರತೀಯರ್ಯಾರೂ ಬರೆಗಣ್ಣಿನಿಂದ ಸಹ ಇಂಗ್ಲೀಷ ಹೆಂಗಸಿನ ಕಡೆಗೆ ದೃಷ್ಟಿಕ್ಷೇಪ ಮಾಡಬಾರದೆಂದು ಅಖಿಲ ಭಾರತೀಯರಿಗೆ ನನ್ನ ಬೋಧನೆಯಿದೆ. ನನ್ನ ಸ್ಥಿತಿ ನೋಡಿರಿ. ನಾನು ಪಡೆದ ಯೋಗ್ಯತಾಪತ್ರಿಕೆಗಳನ್ನು ಒಮ್ಮೆ ಸಂದರ್ಶಿಸಿರಿ. ನಾನು ಎಂದೂ ಸುಳ್ಳಾಡುವವನಲ್ಲ; ಅನೀತಿಗೆ ಕೈಹಾಕುವವನೂ ಅಲ್ಲ. ಬ್ರಿಟಿಶ ಕೋರ್ಟಿನಲ್ಲಿ ನನಗೆ ಅನ್ಯಾಯವಾಗಿದೆ. ವಿಲಾಯತಿಯೊಳಗಿನ ತೀರ್ಪಿನಿಂದ ನಿಮಗೆ, ಮದ್ರಾಸ ಕೋರ್ಟಿಗೆ ಕೈಕಟ್ಟಿ ಹೋಗಲಿಲ್ಲ. ಬೇಕಾದವರನ್ನು ನಿಮ್ಮ ಅಧಿಕಾರಕಕ್ಷೆಯಲ್ಲಿ ವಕೀಲರನ್ನಾಗಿ ನೇಮಿಸಿಕೊಳ್ಳುವ ಅಧಿಕಾರವು, ಸ್ವಾತಂತ್ರ್ಯವು ನಿಮ್ಮದೇ. ನನ್ನ ಅರ್ಜಿಯನ್ನು ವಿಚಾರಿಸಿರಿ. ನಿರ್ಮಲ ಚಿತ್ತದಿಂದ, ನಿಃಪಕ್ಷಪಾತ ಬುದ್ಧಿಯಿಂದ ಇಡೀ ಪ್ರಕರಣವನ್ನು ಪುನರಾಲೋಚಿಸಿರಿ. ಹಣ್ಣು, ಕತ್ತಿ ನಿಮಗರ್ಪಿಸುತ್ತೇನೆ. ನೀವು ದಯಾರ್ದ್ರರಾಗಿರಿ; ಮತ್ತು ನನ್ನನ್ನೂ, ಹೆಂಡರು-ಮಕ್ಕಳನ್ನೂ ಬದುಕಿಸಿರಿ. ನನ್ನ ಭವಿಷ್ಯವೆಲ್ಲ ನಿಮ್ಮ ಸ್ವಾಧೀನವಿದೆ." ಎಂದು ಡಾ|| ಅನ್ಸರುದ್ದೀನರವರು ನ್ಯಾಯಮೂರ್ತಿಗಳಿಗೆ ಶೋಕರಸಪೂರ್ಣವಾಗಿ ನುಡಿದು, ಸ್ವಸ್ಥಾನಾಪನ್ನರಾದರು. ನ್ಯಾಯಮೂರ್ತಿಗಳ ತೀರ್ಪು ಇನ್ನೂ ಹೊರಬೀಳಲಿಲ್ಲ. ಅದೇನೂ ಇರಲಿ, ಡಾ|| ಅನ್ಸರುದ್ದೀನಮಹಾಶಯರು ನಿವೇದಿಸಿದ ಆತ್ಮವೃತ್ತವು ಪ್ರತಿ ಒಬ್ಬ ಭಾರತೀಯನಿಗ ಚಿತ್ತವೇಧಕವಿರುವದಲ್ಲವೇ ?

ಸ್ಫುಟ ಸೂಚನೆಗಳು.

೧ ವಿಶಾಖಪಟ್ಟಣದಲ್ಲಿ ನೆರೆದ ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯ ವೃತ್ತಾಂತವನ್ನು ಇನ್ನೊಂದೆಡೆಗೆ ಕೊಟ್ಟಿರುವೆವು. ಅದರ ಮೇಲಿಂದ ಮಹಾತ್ಮರು ಸಂವರ್ಧಿಸಿದ ರಾಷ್ಟ್ರೀಯ ಸಭೆಯ ಮನೋಹರ ವೃಕ್ಷವು ಪಕ್ಷಭೇದದ ಭೂತಬಾಧೆಯಿಂದ ಹೇಗೆ ರೂಪಾಂತರಿಸಲ್ಪಟ್ಟಿದೆಂದು ವಾಚಕರಿಗೆ ವಿದಿತವಾಗುವದು. ಜಾದಾ ಕಮಿಟಿಯನ್ನು ನೆರಿಸಲು ಕಾರಣರಾದ ಸ್ವರಾಜ್ಯ ಪಕ್ಷವಾದಿಗಳು ಸ್ಥಳಾಂತರದ ಮೂಲಕ ಹಾಜರಾಗಲಿಲ್ಲ. ಅವರು ಸ್ವೈರ ಹಾಜರಿದ್ದವರಿಂದ, ಸಭೆಯು ಮುಂದೆ ಹೊಸ ಕೆಲಸವೇನೂ ಇಲ್ಲದ್ದರಿಂದ, ಸಭೆಯನ್ನು ವಿಸರ್ಜಿಸುವದು ಉತ್ತಮ ಉಪಾಯವಿತ್ತು. ಶ್ರೀ ರಾಜಗೋಪಾಲಾಚಾರ್ಯರು ಶ್ರೀಮತಿ ಸರೋಜಿನಿ ದೇವಿಯವರು ಉಪಸ್ಥಿತರಾಗುವ ವರೆಗೆ ಮುಂಬಯಿಯಲ್ಲಿಯೇ ಜಾದಾ ಅಧಿವೇಶನವನ್ನು ನೆರೆಯಿಸಬೇಕೆಂದು ಆಗ್ರಹ ಹಿಡಿದದ್ದು ದುರಾಗ್ರಹವಲ್ಲೆಂದು ಯಾರು ಹೇಳರು? ಶ್ರೀಮತಿಯವರಿಗೆ ಪಕ್ಷಭೇದ ವಿಷಯವಿ ಸ್ವಸ್ಪರ್ಶವಿಲ್ಲ. ಐಕ್ಯಸ್ಥಾಪನೆಗಾಗಿ, ಸಂಪರ್ಕದಲ್ಲಾಗಿ ಅವರು ಯಾವಾಗಲೂ ಯತ್ನಿಸುತ್ತಿರುವರು. ಇಂಥ ದುರ್ಲಭ, ನಿರಪೇಕ್ಷ ದೇಶಸೇವಕರ ಮೇಲೆ "ನೀವು ಹೊರಪಡಿದವರೂ, ನಾವು ಹೇಳುವ ನಿಷ್ಠೆಯ ನವನೆ ಬಹು ಅನುಕೂಲ ನಮಗೆ ನೀವು ಅದರಾತಿಥ್ಯವನ್ನು ಸ್ವೀಕರಿಸಬೇಕು" ಎಂದು ಹೇಳುವದು ಸಭ್ಯ ಗೃಹಸ್ಥರಿಗೆ ಉಚಿತವಾದದ್ದಲ್ಲೆಂದು ನಮ್ಮ ಮತವು. ಸರೋಜಿನಿದೇವಿಯವರು ನುಡಿಯಂತೆ ಜಾದಾ ಕಾಂಗ್ರೆಸಿನ ಅಧಿವೇಶನವನ್ನು ಸ್ವಲ್ಪ ಕಾಲದ ಅವಧಿ ವರೆಗೆ ದೂಡುವದು ನ್ಯಾಯವಲ್ಲವೆ. ದೂ ನಮ್ಮ ಮತವು ಯಾಕೆಂದರೆ, ಈ ಘನ ಕೃಷ್ಣ ಕಾರಸ್ಥಾನಗಳಿಂದ ಸ್ವರಾಜ್ಯಪಕ್ಷದ ದೇಶಬಾಂಧವರಿಗೆ ಮೋಸ ಹಾಕುವದು ರಾಷ್ಟ್ರೀಯ ಸಭಾಭಿಮಾನಿಗಳ ಧರ್ಮವಲ್ಲ. ಜಾದಾ ಕಾಂಗ್ರೆಸಿನ ಅಧಿವೇಶನದೊಳಗಿನ ನಿರ್ಣಯಗಳು ಕೌನ್ಸಿಲು ಪ್ರವೇಶಕರಿಗೆ ಅನುಕೂಲವಾದಲ್ಲಿ, ಅವನ್ನು ಅವ ಲಕ್ಷಿಸುವದೆ ಮಾತ್ರಲು ಅವರಿಗೆ ಸಾಕಷ್ಟು ಇಂಬಿಟ್ಟು, ಜಾದಾ ಕಾಂಗ್ರೆಸನ್ನು ನೆರಿಸುವದು ಹಿತವು. ಪಂಡಿತ ಜವಾಹರಲಾಲ ನೆಹರು ಮೊದಲಾದ ಮಧ್ಯಸ್ಥರು ಇದೇ ಧೋರಣದಿಂದ ಜಾದಾ ಕಾಂಗ್ರೆಸನ್ನು ನೆರಿಸಬೇಕೆಂದು ಆಲೋಚಿಸಿದ್ದರು. ಭಾರತೀಯರ ಪ ದೈವದಿಂದ ನಾಗಪುರದಲ್ಲಿ ನೆರೆದ ಕಮಿಟಿಯು, ಅವರನ್ನು ಅಧಿಕಾರಚ್ಯುತ ಮಾಡಿತು. ಮುಂಬಯಿಯ ಮಧ್ಯಸ್ಥಿಕೆಯ ಅಧಿಕಾರತ್ಯಾಗ ಮಾಡಿದ ಶ್ರೀ ರಾಜಗೋಪಾಲಾಚಾರ್ಯ, ದೇಶಪಾಂಡೆ ಮೊದಲಾದವರು ಆ ಪದವು ಕಾಯಂ ಇರುವಾಗ, ಅಧಿಕಾರಾರೂಢರಾಗಿ ರಾಷ್ಟ್ರೀಯ ಕಾರ್ಯಕ್ಕಿಂತ ಸ್ವರಾಜ್ಯ ಪಕ್ಷದ ಕಾರ್ಯವನ್ನು ನಷ್ಟಪಡಿಸುವ ದೂರಾಲೋಚನೆಯಿಂದ ಪ್ರೇರಿತರಾಗಿ, ರಾಷ್ಟ್ರೀಯ ಸಂಸ್ಥೆಗಳಲ್ಲಿ ಗೊಂದಲವನ್ನೆಬ್ಬಿಸುತ್ತಿರುವರು. ಇದು ನಿಜವಾಗಿ ಶೋಚನೀಯವು, ರಾಷ್ಟ್ರಹಿತವಿಘಾತಕವು. ದಿನ ಹೋದ ಹಾಗೆ ರಾಷ್ಟ್ರೀಯ ಸಭೆಯು ಹೊಸ ಹೊಸ ಮುಂದಾಳುಗಳನ್ನು ತನ್ನಲ್ಲಿ ಸೇರಿಸಿ ಕೊಳ್ಳುವ ಬದಲು ಶ್ರೀ ಸರೋಜಿನಿದೇವಿ, ಪಂಡಿತ ಜವಾಹರಲಾಲ ನೆಹರು, ಪಂಡಿತ ಸಂತಾನಂ ಮೊದಲಾದ ನಿಷ್ಠಾವಂತ ದೇಶಸೇವಕರನ್ನು ಹೊರದೂಡುತ್ತದೆ. ಶ್ರೀ ಆಚಾರ್ಯ ಮೊದಲಾದ ರಾಷ್ಟ್ರೀಯ ಸಭೆಯ ಸೂತ್ರಚಾಲಕರು ಈಗಿನ ಇಕ್ಕಟ್ಟಿನ ಪರಿಸ್ಥಿತಿಯನ್ನು ಲಕ್ಷ್ಯಕ್ಕೆ ತಂದು, ಕೇವಲ ದೇಶಹಿತಬುದ್ಧಿಯಿಂದಲೇ ನಡೆಯಬೇಕಾಗಿ ನಮ್ಮ ವಿನಯಪೂರ್ವಕ ಬಿನ್ನಹವಿದೆ.

---

೨ ಕೆನಿಯಾ ವಸಾಹತಿನ ಪ್ರಶ್ನೆಯನ್ನು ಹಿಂದೀಯರಿಗೆ ವಿರೋಧವಾಗಿ ನಿರ್ಣಯಿಸಿ, ಭರತ ಖಂಡಕ್ಕೆ ಮಾಡಿದ ಅಪೂರ್ವ ರಾಷ್ಟ್ರೀಯ ಅಪಮಾನದ ಬಗ್ಗೆ ಸಹಕಾರಿಗಳು ವಿಶೇಷವಾಗಿ ಚಟಪಟಿಸುತ್ತಿರುವರು. ಕಳೆದ ವಾರದಲ್ಲಿ ಪ್ರಕಟಗೊಂಡ ಹಕೀಕತಿನ ಮೇಲಿಂದ ಸಹಕಾರ ಚಳವಳಿಯ ಉಪಾಸಕರು ಅಗ್ನಿಪರೀಕ್ಷೆಯನ್ನು ಮಾಡಹತ್ತಿರುವರೆಂದು ವರಿಷ್ಠ ಕಾಯಿದೆ ಕೌನ್ಸಿಲಿನ ೪೪ ಮಂದಿ ಸಭಾಸದರು ಜಾಹೀರನಾಮೆಯನ್ನು ತೆಗೆದು, ತಮ್ಮ ನಿಷೇಧವನ್ನು ಪ್ರಕಟಿಸಿರುವರು. ಕಾಯಿದೆ ಕೌನ್ಸಿಲಿನ ಸಭಾಸದರಾದ ರಾ। ಬಾಲಜಿ ನಾರಾಯಣಜಿಯವರ ವರಿಷ್ಠ ಕೌನ್ಸಿಲಿನ ಅಧಿವೇಶನವನ್ನು ಈ ಪ್ರಶ್ನೆಯ ವಿಚಾರಕ್ಕಾಗಿ ತಹಕೂಬ ಇಡುವದರ ಸಲುವಾಗಿ ತಾ ೨೨ ನೇಗೆ ಸೂಚನೆಯನ್ನು ತಂದರು. ಅದು ಸರಕಾರ ಪಕ್ಷನಿಂದ ದರವು ಬರುವದು. ಆಗ್ರಾಸನೆ ಸಿಕ್ಕಿತು. ರಾ। ಬಾಲಜಿಯವರು ತಮ್ಮ ದರಾವನ್ನು ಅಂದು ಸೂಚಿಸಲಿಲ್ಲ. ಮಾರನೇ ದಿನ ಸರಕಾರಿ ದರಾವು ಒದಲಿಲ್ಲ. ಅದರಿಂದ, ಬಾಲಜಿಯವರು ತಹಕೂಬಿಯ ಸೂಚನೆಯನ್ನು ಮುಂದಕ್ಕೆ ಹಾಕಿದರು. ಇದರ ಸಾಮ್ರಾಜ್ಯವಿಷಯಕವಿದ್ದು, ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಸೂಚಿಸಬೇಕಾದ್ದರಿಂದ ಪ್ರಾಂತಿಕ ಕೌನ್ಸಿಲಿನಲ್ಲಿ ಸೂಚಿಸಲಿಕ್ಕೆ ಗವ್ಹರ್ನರರು ಒಪ್ಪಿಗೆಯನ್ನೀಯದ್ದರಿಂದ ತಹಕೂಬಿಯ ದರಾವು ಇಷ್ಟಕ್ಕೇ ತಹಕೂಬಾಯಿತು. ಕೌನ್ಸಿಲಿನೊಳಗಿನ ಸಹಕಾರಿಗಳ ನಿಷೇಧವು ಇಷ್ಟಕ್ಕೆ ಸಮಾಪ್ತ. ಮಿ। ಸ್ರೀನಿವಾಸ ಶಾಸ್ತ್ರಿ, ಮನಮೋಹನದಾಸ ರಾಮಜಿ ಮೊದಲಾದ ಇತರ ಸಹಕಾರಿಗಳು ಹಿಂದುಸ್ಥಾನ ಸರಕಾರದಲ್ಲಿ ಕಾರ್ಯಕಾರಿ ಸಭಾಸದತ್ವವನ್ನು ಪಡಿಸಿಕೊಂಡ ಹಿಂದೀ ಶ್ರೀಮಂತರು ರಾಜಿನಾಮೆಯನ್ನೀಯಬೇಕೆಂದು ಅಭಿಪ್ರಾಯ ಬಡುತ್ತಾರೆ. ನೇಕ ನಾಮದಾರ ಶಾಸ್ತ್ರಿಗಳು ಸಾಮ್ರಾಜ್ಯ ಪರಿಷತ್ತಿನ ಹಿಂದೀ ಸಭಾಸದರಾದ ಡಾ। ತೆ ಜ ಬಹಾದ್ದೂರ ಸಪ್ರುರವರು ರಾಜಿನಾಮೆಯನ್ನೀಯಬೇಕೆಂದು ಸೂಚಿಸಿರುವರು. ಕಳೆದ ಗುರುವಾರ ತಾ ೩ ನೇಗೆ ಲಂಡನಿನಲ್ಲಿ ಸರ್ ಅಲಿ ಇಮಾಮರವರ ನಾಮದಾರ ಶಾಸ್ತ್ರಿಗಳು ಹಿಂದುಸ್ಥಾನಕ್ಕೆ ಹೊರಡುವವರಿದ್ದಾರೆಂದು ಅವರಿಗೊಂದು ಮೇಜವಾನಿಯನ್ನಿತ್ತರು. ಶಾಸ್ತ್ರಿಗಳು ಕೆನಿಯಾ ವಸಾಹತಿನ ಬಗ್ಗೆ ಬ್ರಿಟಿಶ ಪ್ರಧಾನ ಮಂಡಳವು ಹೊರಡಿಸಿದ ಜಾಹೀರನಾಮೆಯೊಳಗಿನ ಅನ್ಯಾಯವನ್ನು ಕ್ರಮವಾಗಿ ವಿವರಿಸಿ, ಹಿಂದುಸ್ಥಾನದೊಳಗಿನ ಮಿತ್ರರಗೂಡ ಸಮಾಲೋಚಿಸಿ, ಮುಂದಿನ ದಾರಿಯನ್ನು ಆಕ್ರಮಿಸಬೇಕಾಗಿದೆಂದು ನುಡಿದರು. ಔತಣಕ್ಕೆ ಡಾ। ಸಪ್ರು ಮಹಾಶಯರೂ ಹಾಜರಿದ್ದರು. ಅವರು ರೀಡಿಂಗ ದೊರೆಗಳ ಗುಣಸಂಕೀರ್ತನ ಮಾಡಿ, ಸಾಮ್ರಾಜ್ಯ ಸರಕಾರವು ಭಾರತೀಯರನ್ನು ಕಾಯಲಸಮರ್ಥವಾದರೆ, ಹಿಂದುಸ್ಥಾನವು ಶೀಘ್ರವೇ ಪೂರ್ಣ ಜವಾಬದಾರ ಸ್ವರಾಜ್ಯ ಪಸ್ಥಿತಿಯನ್ನು ಸಂಪಾದಿಸುವದೊಂದೇ ಉಪಾಯ ಉಳಿದಿದೆಂದು ನುಡಿದರು. ಅಂತು ರಾಜಿನಾಮೆ ಕೊಡಲು ಸಪ್ರುಮಹಾಶಯರಿಗೆ ಇಷ್ಟವಿಲ್ಲ. ಸ್ವರಾಜ್ಯದ ಹೊರತು ಹಿಂದೀಯರಿಗೆ ತರಣೋಪಾಯವಿಲ್ಲೆಂದು ಸಪ್ರು ಮಹಾಶಯರ ಭಾಷಣದಿಂದಲೇ ಸ್ಪಷ್ಟವಿದೆ. ಅದನ್ನು ಸಂಪಾದಿಸಲು ಯತ್ನಿಸುವ ರಾಷ್ಟ್ರೀಯ ಸಭಾಭಿಮಾನಿ ದೇಶಬಾಂಧವರಿಗೆ ಸಹಕಾರಿ ದೇಶಬಾಂಧವರು ಕೂಡಿಕೊಂಡು, ಐಕ್ಯದಿಂದ ದೇಶಸೇವೆಯನ್ನು ಜರುಗಿಸುವದು ಅವರ ಕರ್ತವ್ಯವಲ್ಲವೇ?

---

೩ ಮುಂಬಯಿಯ ಕಾಯಿದೆ ಕೌನ್ಸಿಲಿನಲ್ಲಿ ಮಹಾತ್ಮರ ಬಗ್ಗೆ ಡಾ। ಜಿ ಬಿ. ತ್ರಿವೇದಿಯವರು ಕೆಲ ಪ್ರಶ್ನೆಗಳನ್ನು ಕೇಳಿದರು. ಚಿಕ್ಕ ಹುಡುಗರ ಹೆಸರುಗಳನ್ನು ಮುಂದಾಗಿ ತಿಳಿಸದ್ದರಿಂದ, ಅವರನ್ನು ಮಹಾತ್ಮರಿಗೆ ಭೆಟ್ಟಿಯಾಗಗೊಡಲಿಲ್ಲ. ಮಹಾತ್ಮರಿಗೆ ಸಾಮಾನ್ಯ ಕೈದಿಗಳಂತೆ ನಡಿಸಿಕೊಳ್ಳುತ್ತಾರೆ. ಹಕೀಮ ಅಜಮಲ ಖಾನ, ಪಂಡಿತ ಮೋತೀಲಾಲ ನೆಹರುರವರಿಗೆ ಮಹಾತ್ಮರನ್ನು ಸಂದರ್ಶಿಸಲು ಪ್ರತಿಬಂಧಿಸಿದ ಕಾರಣವನ್ನು ಸರಕಾರವು ಸ್ಪಷ್ಟೀಕರಿಸಲು ಒಪ್ಪಲಿಲ್ಲ. ಈ ಬಗ್ಗೆ ಮಹಾತ್ಮರಿಗೂ, ಸರಕಾರಕ್ಕೂ ಪತ್ರವ್ಯವಹಾರವಾಯಿತು. "ಆ ಪತ್ರವ್ಯವಹಾರವನ್ನು ಕೌನ್ಸಿಲಿಗೆ ತೋರಿಸಿರಿ ಅಥವಾ ಅದರ ಸಾರಾಂಶವನ್ನಾದರೂ ತಿಳಿಸಿರಿ" ಎಂದು ರಾ। ತ್ರಿವೇದಿಯವರು ಕೇಳಲು, ಅದಕ್ಕೂ ಸರಕಾರವು ಒಪ್ಪಲಿಲ್ಲ. ಮುಳಶಿ ಪೇಟೆಯ ಸತ್ಯಾಗ್ರಹಿ ಕೈದಿಗಳ, ನೇಮಿಸಿದ ಕೆಲಸವನ್ನು ಹಟದಿಂದ ಮಾಡಲೊಲ್ಲದ್ದರಿಂದ, ಸರಕಾರವು ನಿರುಪಾಯವಾಗಿ ಅವರಿಗೆ ಬೆತ್ತ ಪ್ರಹಾರ ಕೊಡಬೇಕಾಯಿತೆಂದು ಸರಕಾರವು ನುಡಿಯಿತು. ಮಹಾತ್ಮರು ಈ ಬಗ್ಗೆ ತಮ್ಮ ಗೆಳೆಯ ಕೈದಿಗಳ ಗೂಡ ಮಾತಾಡಗೊಟ್ಟರೆ, ಜೈಲಿನ ನಿಯಮಗಳನ್ನು ಪಾಲಿಸಲು ಮನವೊಲಿಸುತ್ತೇವೆಂದು ನುಡಿದರೂ, ಮಧ್ಯಸ್ಥರ ಸಹಾಯವನ್ನು ಪಡೆಯುವದು ಇಷ್ಟವಲ್ಲೆಂದು ತೋರಿದ್ದರಿಂದ, ಮಹಾತ್ಮರ ಅಭಾರಪ್ರದರ್ಶನ ಮಾತ್ರ ಮಾಡಿ, ಅವರ ಬಿನ್ನಹವನ್ನು ನಿರಾಕರಿಸಿತು. ಮೌ। ಶೌಕತ ಅಲ್ಲಿಯವರ ವಿಷಯಕ್ಕೂ ಡಾ। ತ್ರಿವೇದಿಯವರು ಪ್ರಶ್ನಿಸಿದರು. ವೃದ್ಧ ಬಾಯಿ ಅಮ್ಮಾ ಮೊದಲಾದ ಮೌಲಾನಾರವರ ಆಪ್ತರು ರಾಜಕೋಟೆಗೆ ಹೋಗಿ, ಮೌಲಾನಾರವರ ಭೆಟ್ಟಿ ಪಡೆಯಲಿಚ್ಛಿಸಿದರು. ಯಾವ ಬಗ್ಗೆ? ಎಂಬ ಸರಕಾರಿ ಪ್ರಶ್ನೆಯಾಯಿತು. ಅದಕ್ಕೆ ಉತ್ತರವನ್ನಿತ್ತು, ಸರಕಾರಿ ಹುಕುಮು ನಿರೀಕ್ಷಣ ಮಾಡದೆ, ಆಪ್ತರು ರಾಜಕೋಟವನ್ನು ಬಿಟ್ಟು ನಡೆದರು. ಮೌಲಾನಾರವರು ಜೈಲಿನಲ್ಲಿ ಕೆಲಸ ಮಾಡಲೊಪ್ಪದ್ದರಿಂದ, ಭೆಟ್ಟಿಯನ್ನು ಪಡೆಯುವ ಹಾಗು ಆಪ್ತೇಷ್ಟರಿಗೆ ಪತ್ರ ಬರೆಯುವ ಅವರ ಹಕ್ಕುಗಳು ಸೆಳೆಕೊಳ್ಳಲ್ಪಟ್ಟಿವೆ. ಹೊಸ ಜೈಲು ನಿಯಮಗಳಂತೆ ಅವರಿಗೆ ಅನುಕೂಲತೆ ಮಾಡಿಕೊಡುವದು ಸರಕಾರದ ವಿಚಾರವಿಲ್ಲೆಂದು ಸರ್ ಮೌರಿಸ ಹೇವರ್ತರವರು ನುಡಿದರು. ಮೌಲಾನಾರವರು ಇನ್ನೂ ಕೆಲಸ ಮಾಡಲೊಪ್ಪದಿದ್ದಿಲ್ಲೆಂದೂ, ಕೆಲಸ ಮಾಡದಿರುವವರೆಗೆ ಅವರಿಗೆ ಆಪ್ತೇಷ್ಟರನ್ನು ಭೆಟ್ಟಿಯಾಗಲು ಅಥವಾ ಅವರಿಗೆ ಪತ್ರ ಬರೆಯಲು ಸರಕಾರವು ಅಪ್ಪಣೆಯನ್ನೀಯದೆಂದೂ ಸರ್ ಹೇವರ್ತರವರು ಪುರವಣಿ ಪ್ರಶ್ನೆಗೆ ಉತ್ತರವನ್ನಿತ್ತರು. ಮುಳಶಿ ಕೈದಿಗಳಂತೆ ಅವರಿಗೆ ಬೆತ್ತ

ವ್ರಹಾರವನ್ನಿಡುವದಿಲ್ಲೇನು? ಎಂದು ರಾ। ತ್ರಿವೇದಿಯವರು ಉದ್ಗರಿಸಲು, ಸರ್ ಹೇವರ್ಡರವರು 'ಇನ್ನೂ ಇಲ್ಲ' ಎಂಬ ದುಷ್ಟ ಉತ್ತರವನ್ನಿತ್ತರು. ಮಹಾತ್ಮಾ ಗಾಂಧಿ, ಮೌಲಾನಾಅವರಂಥ ಭಾರತೀಯ ಲೋಕೋತ್ತರ ಪುರುಷರನ್ನು ನೌಕರಶಾಹಿಯು ಹೇಗೆ ನಡಿಸಿಕೊಳ್ಳುತ್ತದೆ ವಿಚಾರಿಸಿರಿ. ಇದೊಂದು ಅಪೂರ್ವ ರಾಷ್ಟ್ರೀಯ ಅವಮಾನವಲ್ಲವೇ?

---

೪. ಕಾನಡಾ ಜಿಲ್ಲೆಯೊಳಗಿನ ಸಂಪ್ರಗಾರ ಶ್ಯಾನಭೋಗರ ಬಗ್ಗೆ ರಾ। ಕುರ್ಡೆಯವರು ಕೇಳಿದ ಕಾಯಿದೆ ಕೌನ್ಸಿಲಿನಲ್ಲಿ ಪುನಃ ಪ್ರಶ್ನಿಸಿದರು. ನಮ್ಮಲ್ಲಿಯ ಸಂಪ್ರಗಾರ ಶ್ಯಾನಭೋಗರಿಗೂ, ಇಲಾಖೆಯೊಳಗಿನ ಶ್ಯಾನಭೋಗರಿಗೂ ಒಂದೇ ರೀತಿಯಿಂದ ನಡಿಸಿಕೊಳ್ಳುವ ಬಗ್ಗೆ ಸರಕಾರವು ಕೈಕೊಂಡ ನಿರ್ಣಯವೇನು? ನಿರ್ಣಯವಾಗುವವರೆಗೆ ಜಿಲ್ಲಾಧಿಪತಿಗಳು ಅಫೀಸು ಮಂಡಳಿಯನ್ನು ಕಡಿಮೆ ಮಾಡುವ ನೆವದಿಂದ ಸಂಬಳ ಮೂಲಕ ಸ್ಥಾನತ್ಯಾಗ ಮಾಡಿದ ಹಾಗು ಪುನರ್ನೇಮಣೂಕಿ ಹೊಂದಿದ ಶ್ಯಾನಭೋಗರನ್ನಷ್ಟೇ ಕೆಲಸದಿಂದ ನಿವೃತ್ತ ಮಾಡಿರುವದು ನಿಜವಿರುವದೇನು? ಈ ಪ್ರಕಾರವು ಒದಗಿದ್ದಿದ್ದರೆ, ಅವರ ಬಗ್ಗೆ ಸರಕಾರವು ಏನು ವ್ಯವಸ್ಥೆ ಮಾಡಬೇಕೆಂದಿದೆ? ಕಾನಡಾ ಜಿಲ್ಲೆಯಲ್ಲಿ ಶ್ಯಾನಭೋಗರಿಗೆ ಅಧಿಕಾರಚ್ಯುತ ಮಾಡುವಾಗ ಅವರ ಯೋಗ್ಯತೆಗಳನ್ನು ಲಕ್ಷಿಸದೆ, ಸಂಪ್ರಗಾರರನ್ನೇ ಸ್ಥಾನತ್ಯಾಗ ಮಾಡಲು ಹುಕುಮಾಗಿರುವದಲ್ಲವೇ? ಇಲಾಖೆಯೊಳಗಿನ ಶ್ಯಾನಭೋಗರನ್ನೆಲ್ಲ ಒಂದೇ ರೀತಿಯಿಂದ ನಡಿಸಿಕೊಳ್ಳಬೇಕೆಂದು ಸರಕಾರಿ ನಿರ್ಣಯವಾದ ಮೇಲೆ ಎಷ್ಟು ಮಂದಿ ಶ್ಯಾನಭೋಗರಿಗೆ ಸಂಪ್ರಗಾರ ಪುನರ್ನೇಮಣೂಕಿಯಾಗುವವರೆಗಿನ ಅವಧಿಯನ್ನು ಬಿನ ಪಗಾರಿ ರಜೆಯೆಂದು ಎಣಿಸಲಾಯಿತು? ಎಷ್ಟು ಮಂದಿಗಳಿಗೆ ಮುಂಚಿನ ಅಧಿಕಾರವನ್ನು ಕೊಟ್ಟರು? ಎಷ್ಟು ಮಂದಿಗಳಿಗೆ ಸಿವ್ಹಿಲ ಸರ್ವಿಸ ರೆಗ್ಯುಲೇಶನ ೪೭೪ ದಿಂದ ೪೮೧ ವರೆಗಿನ ಕಲಮುಗಳನ್ವಯ ಗ್ರಚ್ಯುಯಿಟಿಯನ್ನಾಗಲಿ, ಪೆನ್ಶನನ್ನಾಗಲಿ ಕೊಟ್ಟಾಯಿತು? ಈ ಪ್ರಶ್ನೆಗಳಿಗೆಲ್ಲ ನಾ। ಮೇಧಾರವರು ಮಾಹಿತಿಗೊಡಿಸಿ, ಉತ್ತರ ಕೊಡುವೆವೆಂದರು. ಧಾರವಾಡದ ರಾ। ಕಂಬಳಿಯವರು ಪೋಲೀಸರ ಪಗಾರವಾರಿಯನ್ನು ಸುಧಾರಿಸುವ ಪ್ರಶ್ನೆ ಕೇಳಲು, ನಾ। ಹೇವರ್ಡರವರು ಅವರ ಪಗಾರವಾರಿಯ ಸುಧಾರಣೆಯ ವಿಚಾರವು ನಡೆದಿದೆಂತಲೂ, ಶೀಘ್ರವೇ ಹುಕುಮುಗಳನ್ನು ಹೊರಡಿಸಲು ಯತ್ನ ಮಾಡುತ್ತೇವೆಂತಲೂ ನುಡಿದರು.

---

೫. ಮುಂಬಯಿ ಸರಕಾರಿ ಗೆಝೀಟಿನಲ್ಲಿ ವಾರವಾರಕ್ಕೆ ಜಿಲ್ಲಾನಿಹಾಯ ಮಳೆ-ಬೆಳೆ ಸ್ಥಿತಿಯ ರಿಪೋರ್ಟುಗಳು (Season reports) ಪ್ರಕಟವಾಗುತ್ತವೆ. ಈಗ ಸಾಧಾರಣ ೧ ತಿಂಗಳಿನಿಂದ ನಮ್ಮಿತ್ತಕಡೆಗೆ ಅತಿವೃಷ್ಟಿಯಾಯಿತು. ನೆರೆ ಬಂದು ನೆಟ್ಟ ಕೆಸಿಗಳಲ್ಲಿ ಮಣ್ಣು ಕಾಲಾದವು. ಆದರೆ, ಸರಕಾರಿ ರಿಪೋರ್ಟುಗಳಲ್ಲಿ ಈ ಬಗ್ಗೆ ವಿಶೇಷವೇನೂ ಬರೆಯಲಿಲ್ಲ. ತಾ ೧೨ನೇ ಜುಲಾಯಿಗೆ ಅಂತ್ಯವಾದ ವಾರದಲ್ಲಿ ನಮ್ಮ ಜಿಲ್ಲೆಯಲ್ಲಿ ಬಿದ್ದ ಮಳೆಯು ಸಾರ್ವತ್ರಿಕವೆಂತಲೂ, ಹಿತಪ್ರದವೆಂತಲೂ ಬರೆದಿದೆ, ಬಿತ್ತಿಗೆಯು ನಡೆದಿದೆ, ನೆಟ್ಟಿಯು ಪ್ರಗತಿ ಮಾಡುತ್ತಿದೆ; ಕಬ್ಬು ಹಾಗು ಇತರ ತೋಟದ ಪೈರು ಚಲೋ ಸ್ಥಿತಿಯಲ್ಲಿದೆ. ತಾ ೧೯ನೇ ಜುಲಾಯಿಗೆ ಅಂತ್ಯವಾದ ವಾರದ ರಿಪೋರ್ಟಿನಲ್ಲಿಯೂ ಇದೇ ರೀತಿ ಬರೆದದೆ. ತಾ. ೨೬ನೇಗೆ ಅಂತ್ಯವಾದ ವಾರದಲ್ಲಿ ಇದೇ ರೀತಿ ಬರೆದದೆ. ಆದರೆ, ಮಳೆ ಕಡೆಯುವದು ಅವಶ್ಯವಿದೆ. ಎಂದು ಪ್ರಕಟವಾಗಿದೆ. ನಿಂತ ಪೈರು (standing crops) ಚಲೋ ಸ್ಥಿತಿಯಲ್ಲಿರುವದಂತೆ! ಕಬ್ಬು, ತೋಟದ ಬೆಳೆಯ ನಿರ್ದೇಶವಿಲ್ಲ. ತಾ. ೩೧ನೇ ಜುಲಾಯಿಗೆ ಅಂತ್ಯವಾಗುವ ವಾರದಲ್ಲಿ ಕುಮಟಾ-ಹೊನ್ನಾವರ-ಶಿರಸಿ-ಸಿದ್ಧಾಪುರ-ಯಲ್ಲಾಪುರ ತಾಲೂಕುಗಳಲ್ಲಿ ನೆರೆಯಿಂದ ಕೆಲ ಹಾನಿಯಾದದ್ದನ್ನು ಬಿಟ್ಟರೆ, ಪೈರು ಚಲೋ ಸ್ಥಿತಿಯಲ್ಲಿದೆಂದು ಸರಕಾರಿ ರಿಪೋರ್ಟು ಸಾರುತ್ತದೆ. ಮಳೆಯಿಂದ ತೋಟದಲ್ಲಿಲ್ಲ ಕೊಳೆ ಬಂದು ಅಡಿಕೆಯ ಪೈರು ಇಷ್ಟರಿಂದಿಗೆ ೮ ಆಣೆ ನಷ್ಟ ಹೊಂದಿದೆಬೇಕ.. ಗದ್ದೆ-ಭೂಮಿಗಳಲ್ಲೆಲ್ಲ ನೆರೆಯ ಮೂಲಕ ಪುನಃ ಪುನಃ ನೆಟ್ಟರೂ, ಸಸಿಯು ತಿರಿ ಎಷ್ಟುವದು ಬತ್ತಟ್ಟಿಗಿರಲಿ, ಹರಡಿಕ್ಕೆ ಹಂದು ಹೋಗುತ್ತದೆ ಹಳ್ಳ-ನದಿಗಳ ದಡ ವಾಸವಾಗುವ ಬಡವರ ಹೊಟ್ಟೆಯ ಗೋಳನ್ನು ವರ್ಣಿಸಲು ಅಳವು. ಇಂಥ ಕರುಣಾಸ್ಪದ ಸ್ಥಿತಿಯೊದಗಿದೆ. ಸರಕಾರಿ ರಿಪೋರ್ಟನ್ನು ಓದಿದರೆ ಈ ಸ್ಥಿತಿಯ ನೆನಪರಿಕೆಯಾಗುತ್ತದೇನು? ಇಂಥ ನಿರ್ಜೀವ ರಿಪೋರ್ಟುಗಳನ್ನು ಬರೆಯುವ ಹೇತುವೇನಿರಬಹುದು?

ಸ್ಥಾನಿಕ ವೃತ್ತಾಂತ.

ಕುಮಟಾ— ಪುನಃ ಮೇಘರಾಜನು ಉಗ್ರಸ್ವರೂಪವನ್ನು ತಳೆದಿರುವನು. ಬೇಸಾಯಗಾರರೆಲ್ಲರೂ ವೇಗದಿಂದ ಜನ ಸಮಾಧಾನವೃತ್ತಿಯಿಂದ, ಉಲ್ಲಸಿತಮನಸ್ಕರಾಗಿ ನೆಟ್ಟಿಯನ್ನು ಸಾಗಿಸಿಕೊಂಡರು. ಸಸಿಗಳ ಸಂಪಾದನೆಗಾಗಿ ಬಹು ದೂರದಿಂದ ಗೋಳಾಡಿದರು. ಇಮ್ಮಡಿ-ಮುಮ್ಮಡಿ ಕ್ರಯ ಕೊಟ್ಟು ಸಸಿಗಳನ್ನು ಸಂಪಾದಿಸಿ, ಗದ್ದೆಗಳನ್ನು ಹಾಳುಗೆಡಹಬಾರದೆಂದು ಒಕ್ಕಲಿಗರು ಎರಡೆರಡು ಸಾರೆ ತಮ್ಮ ಗದ್ದೆಗಳ ನೆಟ್ಟಿ ಮಾಡಿಕೊಂಡು ಮರಳುವಷ್ಟರಲ್ಲಿ, ಮೇಘರಾಜನು ಪುನಃ ವರುಣಾಸ್ತ್ರವನ್ನು ಹೂಡಿ, ಹಾವಳಿಯೆಬ್ಬಿಸಿರುವನು. ಸೋಮವಾರ ರಾತ್ರಿಯಿಂದ ಮಳೆಗರೆಯಲಾರಂಭಿಸಿತು. ಮಂಗಳವಾರಕ್ಕೇ ನೆರೆ ಕಟ್ಟಿತು. ಪುನಃ ಗದ್ದೆಗಳಲ್ಲೆಲ್ಲ ನೀರೇ ನೀರು. ಇಷ್ಟು ದಿವಸಗಳಿಂದ ಮಾಡಿದ್ದ ಶ್ರಮವೆಲ್ಲ, ಗೋಳೆಲ್ಲ, ಪೇಚಾಟವೆಲ್ಲ ಪ್ರತ್ಯಕ್ಷ ಹೊಳೆಯಲ್ಲಿ ಹಾಕಿದಂತಾದವು. ಮೊನ್ನೆಯಿಂದ ಪೇಟೆಯಲ್ಲಿ ಕಟ್ಟಿದ ನೆರೆಯು ಕಳೆದ ನೆರೆಗಿಂತ ೧-೨ ಫೂಟು ಹಿರಿದು. ಮೊದಲಿನ ನೆರೆಗಳಲ್ಲಿ ಬಿಡುಗಡೆ ಅಂಗಡಿ-ಮನೆಗಳು ಈಗ ನೆರೆಯ ಹುಸ್ತಾಗುತ್ತಿವೆ. ಇಡೀ ದೀವಗಿ ಹಳ್ಳಿಯೇ ನೀರಿನಲ್ಲಿ ಮುಳುಗಿದೆ. ಹೆಗಡೆಯಲ್ಲಿಯೂ ವಿಶೇಷ ನೆರೆ ಕಟ್ಟಿತು. ನೀರು ಮತ್ತೂ ಊರೊಳಗೆ ಸೇರಿತು. ಇಷ್ಟು ದೊಡ್ಡ ನೆರೆಯು ಈಕ್ಕತ ಸಂವತ್ಸರದಲ್ಲಿ ಅಂದರೆ, ಸುಮಾರು ೪೦ ವರ್ಷಗಳ ಪೂರ್ವದಲ್ಲಿ ಕಟ್ಟಿತ್ತೆಂದು ನೆನಪಿದ್ದ ವೃದ್ಧರು ಉದ್ಗರಿಸುತ್ತಾರಂತೆ. ಅಲ್ಲಿಯ ಇಡೀ ಬೈಲು ನೀರಿನಲ್ಲಿ ಮುಳುಗಿಕೊಂಡಿದೆ. ಬಗೆಗಳಕುರ್ವೆಯಲ್ಲಂತು ಬಹು ಪೇಚಾಟ. ಜನ-ಜಾನುವಾರುಗಳ ಅವರ್ಣನೀಯ ಗೋಳು. ಗದ್ದೆಗಳು ಹಾಳು ಬಿದ್ದಮೇಲೆ ಮುಂದೇನು? ಎಂಬುದೊಂದು ಚಿಂತೆ. ಹೀಗೆಯೇ ನೆರೆಕಟ್ಟಿದರೆ, ಹೇಗೆ ಹೊಟ್ಟೆ ಹೊರಬೇಕೆಂಬುದೊಂದು ಚಿಂತೆ. ಊರ ಅಕ್ಕಿ ತಿನ್ನುವ ಸುಯೋಗವು ಈಗ ತೀರ ಕಡಿಮೆ. ರಂಗೂನ ಅಕ್ಕಿಯನ್ನೇ ಆಮದುಮಾಡಿ ಉಣ್ಣುವ ಕಠಿಣ ಪ್ರಸಂಗವು ಈಗ ಬಂದಿದೆ. ತೋಟಿಗರ ಅವಸ್ಥೆಯು ಈಗ ಮತ್ತೂ ಕರುಣಾಸ್ಪದವಾಯಿತು. ಅಕ್ಲೀಮಾ ಮಳೆಯ ಹನಿ ಹಾಗಬಾರದೆಂದು ಅಡಿಕೆ ಮರಗಳಿಗೆ ಕಟ್ಟಿದ ಮೊಟ್ಟೆಗಳೊಳಗಿಂದ ನೀರು ಸೇರಿಕೊಂಡು, ಅಡಿಕೆಯಲ್ಲ ಮರದ ಬುಡದಲ್ಲಿ ಈಗ ರಾಶಿಯಾಗುತ್ತಿದೆ. ಎಂಥ ಅನರ್ಥವಿದು! ಹೀಗೆಲ್ಲ ಬೇಸಾಯಗಾರರ ವಿಪನ್ನಾವಸ್ಥೆ. ಈ ವಾರದಲ್ಲಿ ಮಳೆಯು ೩೦-೪೦ ಇಂಚು ಬಿತ್ತು. ಸೋಮವಾರ ೬-೬೫ ಇಂಚು ಮಳೆ, ಮಂಗಳವಾರ ೧೬-೧೯ ಇಂಚು ಮಳೆ, ಬುಧವಾರ ೩-೩೫ ಇಂಚು ಮಳೆ.

ಕಳೆದ ತಾ ೩೧ನೇ ಮಂಗಳವಾರಕ್ಕೆ ಕಿರಗುಂಜಿಯಲ್ಲಿ ಒಂದು ಹುಲಿಯು ಒಂದು ಗೋವಿನ ಆಹುತಿ ಪಡೆಯಿತು. ಹೀಗೆಯೇ ಅತ್ತ ಕಡೆಗೆ ಗೋವುಗಳನ್ನು ಹಿಡಿದು ಅದು ಹಾವಳಿ ಎಬ್ಬಿಸಿರುವದೆಂದು ತಿಳಿಯುತ್ತದೆ.

ಕಾರವಾರ— ಅತಿಶಯ ಮಳೆ. ಸಾಧಾರಣ ಅರ್ಧಊರು ಜಲಸಮಾಧಿಯಲ್ಲಿದೆ. ನದಿಗೆ ನೆರೆ. ಕೋಡಿಬಾಗ ಸದಾಶಿವಗಡ ತಾರಿ ರಹದಾರಿ ತಡೆಯಾಯಿತು. ರಾಷ್ಟ್ರೀಯ ಶಾಲೆಗೆ ವಂತಿಗೆ ಕೂಡಿಸಲು ಶ್ರೀ। ಕಲ್ಯಾಣಪೂರಕರ ಮೊದಲಾದವರು ಅಲ್ಲಿ ಆಗಮಿಸಿರುವರು. ಮಿ। ಹೇಗರವರು ಪುನಃ ಚಾರ್ಜು ವಹಿಸಿಕೊಂಡರು.

ಭಟಕಳ— ಮಳೆ ಅತಿಶಯ. ಗದ್ದೆ ಪೈರು, ಅಡಿಕೆ ಪೈರು ಕೊಳೆತು, ಅಮಿತ ಹಾನಿ. ಬೇಸಾಯವು ಹಾಳು ಬೀಳುವ ಲಕ್ಷಣ.

ಕುಂಟ್ವಾಣಿ ಗ್ರಾಮದಲ್ಲಿ ಮಂಜು ಎಂಬ ಗೌಡನ ಮನೆಯಲ್ಲಿ ನಾಯಿಯ ಆಹುತಿ ಪಡೆಯಲು ಹೋದ ಹುಲಿರಾಜನು ಚೌಕಿಯ ವರೆಗೆ ಪ್ರವೇಶಿಸಿದನು. ಗೌಡನು ದೊಣ್ಣೆಯಿಂದ ಸೊಂಟದ ಮೇಲೆ ಚಲೋ ಪೆಟ್ಟು ಹೊಡದು, ಹುಲಿಯನ್ನು ಬಾಗಿಲು ತೆಗೆದು ಹೊರಗಟ್ಟಿದನು.

ನಾಗಪುರದ ಧ್ವಜಸಂಗ್ರಾಮ.

ನಾಗಪುರದಲ್ಲಿ ರಾಷ್ಟ್ರಧ್ವಜದ ಸಂಗ್ರಾಮವು ಸ್ಥಿರವಾಗಿ ನಡೆಯುತ್ತಲಿದೆ. ಗುಜರಾಥ ಪ್ರಾಂತದ ವಿಠ್ಠಲಭಾಯಿ ಪಟೇಲ, ವಲ್ಲಭಭಾಯಿ ಪಟೇಲರವರು ಸತ್ಯಾಗ್ರಹದ ಸೂತ್ರ ಚಾಲಕತ್ವವನ್ನು ವಹಿಸಿಕೊಂಡಿರುವರು. ಮುಂಬಯಿ, ಮದ್ರಾಸ, ಗುಜರಾಥ, ಕರ್ನಾಟಕ ಮೊದಲಾದ ಪ್ರಾಂತಗಳಿಂದ ಸ್ವಯಂಸೇವಕರು ನಿತ್ಯವೂ ಸತ್ಯಾಗ್ರಹ ಹೂಡುತ್ತಿರುವರು. ಮತ್ತು ಸ್ವಯಂಸೇವಕರು ಗುಂಪುಗುಂಪಾಗಿ ಬರುತ್ತಿರುವರು. ಇಷ್ಟರಿಂದಿಗೆ ಸೆರೆ ಬಿದ್ದವರ ಸಂಖ್ಯೆಯು ಸುಮಾರು ೧೫೦೦ಕ್ಕೆ ಮುಟ್ಟಿದೆ. ಈಗಿನ ಸಂಗ್ರಾಮದೊಳಗಿನ ಒಂದು ಚಮತ್ಕಾರವು ಯಾವದೆಂದರೆ ಪಟೇಲ ಬಂಧುಗಳ ಚಾಲಕತ್ವವು. ವಿಠ್ಠಲಭಾಯಿಗಳು ಕೌನ್ಸಿಲ ಪ್ರವೇಶವಾದಿಗಳು. ವಲ್ಲಭಭಾಯಿಯವರು ಕೌನ್ಸಿಲು ಬಹಿಷ್ಕಾರ ವಾದಿಗಳು. ಇಬ್ಬರೂ ಧ್ವಜಸಂಗ್ರಾಮವನ್ನು ನಿಷ್ಠೆಯಿಂದ ನಡಿಸುತ್ತಿರುವದನ್ನು ನೋಡಿ ಆನಂದವಾಗುತ್ತಿದೆ. ವರ್ಧಾ ಪ್ರಾಂತದಲ್ಲಿ ಶೇಟ ಜಮನಾಲಾಲ ಬಜಾಜರವರ ಜಪ್ತ ಮಾಡಿದ ಮೋಟಾರ ಬಂಡಿ ಹಾಗು ಕುದುರೆ ಗಾಡಿಗಳು ಲಿಲಾಂವಿಗೆ ಹಚ್ಚಲ್ಪಟ್ಟವು. ಮೋಟಾರು ಬಂಡಿಯನ್ನು ೧೦೦ ರೂಪಾಯಿಗಳಿಗೆ ಕೊಳ್ಳೆಂದರೂ ಯಾರೂ ಕೊಳ್ಳಲಿಲ್ಲ. ಕುದುರೆ ಗಾಡಿಯು ೧೦ ರೂಪಾಯಿಗಳಿಗೆ ಸಹ ಕೊಳ್ಳುವವರಿಲ್ಲ. ಲಿಲಾಂವಿನ ಫಜೀತಿ!

ತಮಿಳನಾಡು ಕಾಂಗ್ರೆಸ ಕಮಿಟಿಯು ಧ್ವಜಸಂಗ್ರಾಮಕ್ಕಾಗಿ ವಾರ ವಾರಕ್ಕೆ ೨೦-೩೦ ಸ್ವಯಂಸೇವಕರ ಒಂದೊಂದು ಸೇನೆಯನ್ನು ಕಳುಹಿಸುವ ನಿರ್ಣಯ ಮಾಡಿದೆ. ಈ ತಿಂಗಳಿನಲ್ಲಿ ನೆರೆಯುವ ಮಧ್ಯಪ್ರಾಂತದ ಕಾಯಿದೆ ಕೌನ್ಸಿಲಿನಲ್ಲಿ ರಾವಬಹಾದ್ದೂರ [illegible]ಯವರು ರಾಷ್ಟ್ರಧ್ವಜದ ಮೆರವಣಿಗೆಯನ್ನು ಪ್ರತಿಬಂಧಿಸುವ ಕ್ರಿ. ಪ್ರೊ. ಕೋ. ೧೪೪ನೇ ಕಲಮಿನನ್ವಯ ಹೊರಡಿಸಿದ ಹುಕುಮನ್ನು ಕೂಡಲೇ ರದ್ದುಪಡಿಸಬೇಕೆಂತಲೂ, ಈ ಹುಕುಮನ್ನು ಮುರಿದು, ಸೆರೆಯಾಳಾದವರನ್ನೆಲ್ಲ ಬಿಡುಗಡೆ ಮಾಡಬೇಕೆಂತಲೂ ಠರಾವನ್ನು ಸೂಚಿಸುವವರಿದ್ದಾರೆ.

ಧ್ವಜಸಂಗ್ರಾಮದಲ್ಲಿ ಅಧಿಕಾರಿಗಳು ಕೈಕೊಂಡ ಉಪಾಯಗಳ ಕಾಯಿದೇಶೀರತನದ ಬಗ್ಗೆ ಅವರು ಒಂದು ಪ್ರಶ್ನೆ ಪತ್ರಿಕೆಯನ್ನೇ ಕೇಳುವವರಿದ್ದಾರೆಂತಲೂ ತಿಳಿಯುತ್ತದೆ.

ಜಾದಾ ಕೊಂಗ್ರೆಸಿನ ಗೊಂದಲ!

ಪೂರ್ವಸಂಕೇತದಂತೆ [illegible] ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಜಾದಾ ಅಧಿವೇಶನವು ತಾರೀಖು [illegible] ಶುಕ್ರವಾರ [illegible] ನೇ ಸಾಯಂಕಾಲ [illegible] ನಗರ ಭವನದಲ್ಲಿ ನೆರೆಯಿತು. ಅಧ್ಯಕ್ಷಸ್ಥಾನವನ್ನು ಶ್ರೀ ಕೊಂಡ ವೆಂಕಟಪ್ಪಯ್ಯನವರು ಅಲಂಕರಿಸಿದ್ದರು. ಒಟ್ಟು [illegible] ಸಭಾಸದರು ಹಾಜರಿದ್ದರು. ಸಭೆಯನ್ನು ನಿಯಂತ್ರಿಸಲು ಅರ್ಜಿಯನ್ನು ಸಾದರಪಡಿಸಿದ ಸಭಾಸದರೆಲ್ಲರ [illegible] ನಮೂದಿಸಿ [illegible] ಕಮಿಟಿಯ [illegible] ಕರೆಯಲ್ಪಡದು ಉದ್ವೇಗ [illegible] ಕಾರಣವಾಗಲಿಲ್ಲ. ಅಧ್ಯಕ್ಷರು, ಸಭಾಸ್ಥಾನದ [illegible] ಸುವ ಅಧಿಕಾರವು ತಮಗಿದೆಂದು ಸಭೆಗೆ ನಿವೇದಿಸಿದರು. ಕಾರ್ಯದರ್ಶಿಗಳ [illegible] ಬಗ್ಗೆ ೧೮೦೦ ಹಂತಿಗಳ [illegible] ಅರ್ಜಿದಾರರ [illegible] ಸಭೆಗೆ [illegible] ತರುವಾಗಲಿಲ್ಲ. ಶ್ರೀ [illegible] ಚಾರ್ಯರು ಜಾದಾ ಕೊಂಗ್ರೆಸ ಅಧಿವೇಶನದ ತಾರೀಖನ್ನು [illegible] ಅಗತ್ಯವಿದ್ದ [illegible] ಒಂದು [illegible] ಸೂಚಿಸಿದರು. ಅಧಿವೇಶನವನ್ನು [illegible] ತಿಂಗಳಿನಲ್ಲಿ [illegible] ಮುಂಬಯಿಯಲ್ಲಿ ನೆರೆಯಿಸ [illegible] ಸಭಾಸ್ಥಾನವನ್ನು [illegible] ಅಧ್ಯಕ್ಷರಿಗೆ [illegible] ಶ್ರೀ [illegible] ನುಡಿದರು. ಈ [illegible] ಬಹಳ [illegible] ದಿಲ್ಲಿ [illegible] ಅಲ್ಲಿಯವರ ಜಾದಾ ಅಧಿವೇಶನವನ್ನು [illegible] ದಲ್ಲಿ ದಿಲ್ಲಿಯಲ್ಲಿ [illegible] ಮಾಡುತ್ತೇನೆ [illegible] ಸರೋಜಿನೀ [illegible] ಸಭೆಯಲ್ಲಿ ಇದೇ [illegible] ಶ್ರೀ [illegible] ಸಂಧಿಯ [illegible] ಕಮಿಟಿಯು [illegible] ಒಟ್ಟಾಗಿ [illegible] ಶ್ರೀ [illegible] ಜಾದಾ ಕೊಂಗ್ರೆಸನ್ನು [illegible] ಬೇಕೆಂದು [illegible] ತಮ್ಮ [illegible] ವಾಗಿ [illegible] ನಡೆದ, ಜಾದಾ ಕೊಂಗ್ರೆಸನ್ನು ನಿಮಂತ್ರಿಸಿದೆ, ಈ [illegible] ಅಧ್ಯಕ್ಷರನ್ನು [illegible] ಶ್ರೀ [illegible] ಉದ್ಗರಿಸಿದರು. ಶ್ರೀ [illegible] ದಿಲ್ಲಿಯ [illegible] ಮಂತ್ರಣವನ್ನು ಸ್ವೀಕರಿಸಬೇಕೆಂದು ಪ್ರತಿಪಾದಿಸಿದರು. ಶ್ರೀ ಗೌರಿಶಂಕರ [illegible] ಇದೇ ಸೂಚನೆಯನ್ನು ಪುಷ್ಟೀಕರಿಸಿದರು. [illegible] ಶ್ರೀ [illegible] ಮುಂಬಯಿಗೆ [illegible] ಮನಿಗೆ [illegible] ದಿಲ್ಲಿಯ ನಿಮಂತ್ರಣೆಯನ್ನು [illegible] ರಿಗೆ ಸ್ವೀಕರಿಸಬೇಕೆಂದ ಶ್ರೀ [illegible] ಚಾರ್ಯರು [illegible] ಹಟಹಿಡಿದಂತೆ ಮುಂಬಯಿಯು ಮಧ್ಯವರ್ತಿ ಸ್ಥಳವೆಂತಲೂ, ಅಲ್ಲಿ ಬರಲಿಕ್ಕೆ ಎಲ್ಲ ಪ್ರಾಂತದವರಿಗೂ ಅನುಕೂಲವಿದೆ ದೂ ಪ್ರತಿಪಾದಿಸಿ, ಅಲ್ಲಿಯೇ ಅಧಿವೇಶನವನ್ನು ನೆರೆಯಿಸಬೇಕೆಂದು ಪರಾಗ್ರಹ ಹಿಡಿದರು. ಮಾತ ಕೊಳ್ಳಲು, ಅವರ ಠರಾವು ಮಂಜೂರಾಯಿತು. ಶ್ರೀ [illegible] ವರು ಉದ್ವೇಗಗೊಂಡು, ' ಮುಂಬಯಿಯ [illegible] ಅಧಿವೇಶನವನ್ನು ನೆರೆಯಿಸುವದಿಲ್ಲ. ಒಂದು ಪಕ್ಷವು ಮುಂಬಯಿಯಲ್ಲಿ, ಇನ್ನೊಂದು ಪಕ್ಷವು ದಿಲ್ಲಿಯಲ್ಲಿ, ಜಾದಾ ಅಧಿವೇಶನವನ್ನು ನೆರಿಸಬೇಕೆಂದು ಕಾರಸ್ಥಾನ ಹೂಡಿದೆ. ಇಂಥ ಕಲ್ಪನೆಯನ್ನು ನಾನು ಪುರಸ್ಕರಿಸಲಾರೆನು ” ಎಂದು ಆಶ್ಚರ್ಯರಿಗೆ ಉದ್ಗರಿಸಿದರು. ಅಧ್ಯಕ್ಷರು ಸಮಾರೋಪ ಮಾಡುವಾಗ ಐಕ್ಯದಿಂದಿರಬೇಕೆಂದು ನುಡಿದರು. ಇಷ್ಟಾದ ಬಳಿಕ, ವಿಶಾಖಪಟ್ಟಣದೊಳಗಿನ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಅಧಿವೇಶನವು ಮುಗಿಯಿತು.

— ಮುಂಬಯಿ ಸರಕಾರವು ನ್ಯಾಯ ಹಾಗು ಅಮಲಬಜಾವಣಿ ಖಾತೆಗಳನ್ನು ಬೇರ್ಪಡಿಸಲು ಆಲೋಚಿಸುತ್ತಿದೆಂದ. ಕಳೆದ ಶನಿವಾರ ತಾ ೫ ನೇಗೆ ನಾಮದಾರ ಹೇವರ್ಡರವರ ಖುಲಾಸೆ ಮಾಡಿದರು.

— ಲೋಕಮಾನ್ಯರ ಪುಣ್ಯ ತಿಥಿಯು ಕಳೆದ ಬುಧವಾರ ತಾರೀಖ ೧ನೇಗೆ ಅಖಿಲ ಭರತಖಂಡದಲ್ಲಿ ಜಾಹೀರು ಸಭೆ ಮೆರವಣಿಗೆ ಮೊದಲಾದವುಗಳಿಂದ ಸಮಾಚರಿಸಲ್ಪಟ್ಟಿತು.

ಅಲಿಗಡದಲ್ಲಿ ಅಸ್ಪೃಶ್ಯವರ್ಗದವರಿಗೆ ಸಾರ್ವಜನಿಕ ಬಾವಿಗಳಿಂದ ನೀರು ಸೇದಲು ಸಮಾಜದವರು ಒಪ್ಪಿರುವರು. ಪುರಾಣಮತವಾದಿ ಕೆಲ ಹಿಂದೂ ಬಾಂಧವರೇ ಈ ಪುಣ್ಯಕಾರ್ಯದಲ್ಲಿ ಮುಂದಾದದ್ದು ಅಭಿನಂದನೀಯವು.

Mr V V. Kalyanpurker's
Electoral Manifesto

To

The Electors of the Kanara
District.

Gentlemen,

At the suggestion of several of the leading gentlemen amongst you, I intend to stand as a Candidate for the Bombay Legislative Council, in the Non-Mahomedan rural Constituency of your district at the forth coming general election, which, I am proud to say, is also mine. I therefore seek through the medium of this communication the support of all of you Having served as a judicial officer, for some years in each and almost all the districts of this presidency, I have on retirement returned to my native district to spend the days of my retirement here Should you be pleased to vote for me and return me as your trusted representative to the Council, I shall be glad to keep my whole time at your disposal and my work in the Council will lie in the direction of advancing the general prosperity of this district My principal aim will be to work wholeheartedly for the improvement of agriculture which is the mainstay of your district. I am aware that the maintenance of your agriculture, nay even your very existence is entirely dependent on the exercise of your Forest Privileges which you have been enjoying from ancient times I have also known in the course of my recent studies regarding the agricultural conditions of the district that for some time past you have met with impediments — often serious ones — in the exercise of *these privileges and suffered consider*ably I have also observed that in some cases you have felt the rigour of the Land Revenue Laws too It will therefore be my chief concern to strive to secure to you a free and unhampered exercise of your ancient Forest Privileges and also to get removed the odious and inequitable features of the Land Revenue Laws

Let me also assure you that I am equally cognizant of the claims of education in general and of Primary education in particular and of Sanitation of the district And it shall also be my duty to secure improvements in the means of communication without which the agriculture of the district cannot be paying or even selfsupporting

I make no distinction between Brahmins and Non Brahmins And I believe that no Indian worth the name should make any such distinction so far as politics at any rate are concernd. It is the bounden duty of the advanced classes to extend their sympathy and support to the so called backward classes in their efforts towards their advancement

If you ask, which you have a right to do, to what political party I belong, I may at once tell you *that I stand for those principles* which are associated with National Liberalism having abiding faith in the efficacy of constitutional agitation in the potency of the Councils to secure the much-needed reforms And I would particularly wish you to note that Cooperation in my opinion does not mean to a slavish acquiescence in all that the Government does or wants to do, but only taking part in the administration of the country as reasonable and self respecting beings responsible for the welfare of the public and winning the Government to your side by constitutional methods with the strength of reason and moral force which are always at the back of a good Cause

KUMTA }
1 8 1923 }

Vishweshwar Venkatesh
Kalyanpurkar,
RETIRED JUDGE
(Small Causes Court)

ಕಾನಡಾ ಜಿಲ್ಲೆಯ ಮತದಾರರಿಗೆ–

ಕಾನಡಾ ವೃತ್ತಪತ್ರಕರ್ತರ ಬಳಿಗೆ—

ಮಂಜನಾಥ ದೇವರ ಭಟ್ಟ ಕರ್ಕಿ ವಕೀಲ, ಇವರ ಕಡೆಯಿಂದ ವಿನಂತಿ ಸಾ ಪ್ರತ—

ಈ ಕೆಳಗಿನ ಸಂಗತಿಗಳನ್ನು ತಮ್ಮ ಲೋಕಪ್ರಿಯ ವೃತ್ತಪತ್ರದಲ್ಲಿ ನಮ್ಮ ಕಾನಡಾಜಿಲ್ಲೆಯ ಮತದಾರ ಬಂಧು-ಭಗಿನಿಯರ ತಿಳುವಳಿಕೆ ಬಗ್ಗೆ ಮುದ್ರಿಸಬೇಕಾಗಿ ಅಪೇಕ್ಷಿಸುತ್ತೇನೆ

"ಮುಂಬಯಿ ಕಾಯಿದೇ ಕೌನ್ಸಿಲಕ್ಕೆ ಒಬ್ಬ ಮೇಂಬರನನ್ನು ಆರಿಸಿಕೊಡುವ ಕೆಲಸ ಈ ವರ್ಷ ಮತದಾರರ ಮೇಲೆ ಬಿದ್ದದೆ. ಆ ಮೇಂಬರಿ ಜಾಗಾದ ಸಲುವಾಗಿ ನಾನು ಉಮೇದ್ವಾರನಾಗಿ ನಿಲ್ಲಬೇಕೆಂದು ಕಾನಡಾ ಜಿಲ್ಲೆಯ ಹಿತೇಚ್ಛು ಮುಂದಾಳುಗಳಲ್ಲಿ ಕೆಲವರು ಕೊಟ್ಟ ಸೂಚನೆಯು, ಈ ಜಿಲ್ಲೆಯ ಪರಿಸ್ಥಿತಿಯನ್ನು ಲಕ್ಷಿಸಿ ಉಚಿತ ನನಗೆ ಯುಕ್ತವೆಂತ ತೋರಿದ್ದರಿಂದ, ಅವರ ಸೂಚನೆಯನ್ನು ಮಾನ್ಯಮಾಡಿ ಬರುವ ಆರಿಸುವಿಕೆಯಲ್ಲಿ ಉಮೇದವಾರನಾಗಿ ನಿಲ್ಲಬೇಕೆಂತ ನಿಶ್ಚಯಿಸಿದ್ದೇನೆ

ರಾಷ್ಟ್ರೀಯ ಸಭೆಯ ವಿಧಾಯಕ ಕಾರ್ಯಕ್ರಮವನ್ನು ಪುಷ್ಟೀಕರಿಸುವದು, ವನದುಃಖದಿಂದ ನರಳುವ ಕಾನಡಾ ಜಿಲ್ಲೆಯ ರೈತ ವರ್ಗದ ಪಕ್ಷವನ್ನು ಎತ್ತಿ ಹಿಡಿದು ಆ ದುಃಖವನ್ನು ನೀಗಲಾಡಿಸುವದಕ್ಕೆ ಶಕ್ಯವಿದ್ದಷ್ಟರ ಮಟ್ಟಿಗೆ ಪ್ರಯತ್ನ ನಡಿಸುವದು, ಕಾನಡಿಗರ ಬೇಸಾಯ ವಿಷಯಕ, ಸಾಮಾಜಿಕ, ವ್ಯವಹಾರಿಕ, ಔದ್ಯೋಗಿಕ, ಆರೋಗ್ಯವಿಷಯಕ ಮತ್ತು ಸಂಗತಿಗಳಲ್ಲಿ ಎಷ್ಟು ಪ್ರಯತ್ನ ಮಾಡಲು ಸಾಧ್ಯವಿರುವದೋ ಅಷ್ಟು ಪ್ರಯತ್ನವನ್ನು ನಡಿಸುವದು, ಜಿಲ್ಲಾ ಕಾರಭಾರದಲ್ಲಿ ನೌಕರಶಾಹಿಯ ಮನಸ್ವಿ ನಡೆದಲ್ಲಿ ಅದನ್ನು ಬೈಲಿಗೆ ತರುವದು, ಇವೇ ಮೊದಲಾದವು ನನ್ನ ಕಾರ್ಯಕ್ರಮದ ಬಂಧಿತ ಧೋರಣದ ಸೂತ್ರಗಳು

ಪರೋಪಕಾರದಲ್ಲಿ ಆದಷ್ಟು ದಿವಸ ಕಳೆಯಬೇಕೆಂಬ ಉತ್ಕಟವಾದ ಕಾಂಕ್ಷೆಯೇ ಈ ಮೇಂಬರಿ ಕೆಲಸಕ್ಕೆ ನನ್ನನ್ನು ಹುರಿದುಂಬಿಸಿದ್ದು ಇರುತ್ತದೆ ಕಾನಡಾ ಜಿಲ್ಲೆಯ ವತಿಯಿಂದ ನಾನು ಮೇಂಬರನಾದರೆ ಕಾನಡಿಗರ ಸೇವೆಯು ನನ್ನಿಂದ ಆದೀತೆಂಬ ಭರವಸೆಯು ಮತದಾರ ಬಂಧು-ಭಗಿನಿಯರಿಗೆ ಇದ್ದರೆ, ಅವರು ಬರುವ ಆರಿಸುವಿಕೆಯಲ್ಲಿ ನನ್ನನ್ನು ಆರಿಸಿ, ಕಳುಹಿಸಿಕೊಡುವದರಲ್ಲಿ ತಮ್ಮ ಸಹಾನುಭೂತಿಯನ್ನು ತೋರಿಸ್ಯಾರೆಂತ ನನ್ನ ಪೂರ್ಣ ನಂಬಿಗೆ ಇದೆ.

ಮತದಾರರಿಗೆ ತಮ್ಮ ಮತವನ್ನು ತಮ್ಮ ಮನಸ್ಸಿಗೆ ಬಂದಂತೆ ಕೊಡಲಿಕ್ಕೆ ಪೂರ್ಣ ಸ್ವಾತಂತ್ರ್ಯವುಂಟು. ಅಂಥ ಸ್ವತಂತ್ರ ಹಕ್ಕಿನ ಸದುಪಯೋಗವನ್ನು ಮಾಡದೆ, ಸುಮ್ಮನೇ ಕೂತ್ರಲಿಕ್ಕಲ್ಲೆಂದು ಕೋರುತ್ತೇನೆ"

ಇತಿ

ಹೊನ್ನಾವರ. ತಾ. ೩-೮-೨೩	ತಮ್ಮ ಸೇವಕ, ಮಂಜನಾಥ ದೇವರ ಭಟ್ಟ, ಕರ್ಕಿ, ವಕೀಲ ಹೊನ್ನಾವರ.

ಮ। ರಾ। ಕಾನಡಾವೃತ್ತಪತ್ರಕರ್ತರ ಬಳಿಗೆ—

ತಮ್ಮ ತಾ ೧-೭-೨೩ನೇ ಸಂಚಿಕೆಯಲ್ಲಿ ನಿಮ್ಮ ಬಾತ್ಮಿದಾರರು "ಪ್ರತಿಷ್ಠಿತರು ಲಾಯಬ್ರರಿಗೆ ಅಂತಿಷ್ಟೇ, ತಮ್ಮ ಕೊಡುವ ಕಡೆನ ಮೇಲೆ ಜೂಜಾಡುತ್ತಿರುವರು. ಮತ್ತು ಗಡಗಡೆಯ ಆಟದ ಲಾಭದಿಂದ ವಾಚನಾಲಯವನ್ನು ನಡಿಸುವದು, ಕೀಂದಿ-ಕರಾಬ ಉತ್ಪನ್ನದಿಂದ ಶಾಲಾಖಾತೆಯನ್ನು ನಡಿಸುವ ನೌಕರಶಾಹಿಯ ಪ್ರಜೆಗಳಿಗೆ ಶೋಭಿಸುವಂಥಾದ್ದೇ" ಎಂದು ಬಾತ್ಮಿ ತಿಳಿಸಿರುವರು. ಆದರೆ ಲಾಯಬ್ರರಿಗಳೆಂದರೆ ಜನರ ಜ್ಞಾನವನ್ನು ಹೆಚ್ಚಿಸಿ, ಅವರನ್ನು ಬೆಳಕಿಗೆ ತರುವಂಥ ಸಂಸ್ಥೆಗಳಾಗಿರುವವು ಅಂತಹ ಸಂಸ್ಥೆಗಳು ಗಡಗಡೆಯಂತಹ ಜೂಜಾಟದ ಟಿಕ್ಕೆ ಉತ್ತೇಜನ ಕೊಟ್ಟು, ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಲೆಂಬುದು ವ್ಯವಹಾರವಿರುದ್ಧವಾದ ಮಾತು. ಇದರಿಂದ ಸದರ ಬಾತ್ಮೀದಾರರು ವ್ಯವಹಾರಜ್ಞಾನಶೂನ್ಯರೆಂಬುದು ಸಹಜ ತಿಳಿಯುವದು. ಅದಲ್ಲದೆ ವಾಚನಾಲಯವು ಯಾವ ರೀತಿಯಿಂದ ನಡೆಯುತ್ತಿರುವದೆಂಬುದು ಬಾತ್ಮಿದಾರರಿಗೆ ಏನೂ ಗೊತ್ತಿಲ್ಲ; ಅವರು ಸುಶಿಕ್ಷಿತರಿದ್ದು, ತಮ್ಮ ಊರಿನ ಸಂಬಂಧ ಇಷ್ಟು ಅಜ್ಞಾನಿಗಳಿದ್ದದ್ದು ನೋಡಿ, ಸಖೇದಾಶ್ಚರ್ಯವಾಗುತ್ತದೆ. ಇದರಿಂದ "ದೀಪದ ಬುಡಕ್ಕೆ ಕತ್ತಲೆ" ಎಂಬ ಸಾಮ್ಯಣಿಯು ನಿಜವಿದೆ. ಇರಲಿ

Sunkeri, 25-7-23	J P Saokar, Honorary Secretary, of Sunkeri Library.

— ಶುದ್ಧಿ ಕಾರ್ಯಕ್ಕಾಗಿ ಸ್ವಾಮಿ ಶ್ರೀ ಶ್ರದ್ಧಾನಂದಜೀಯವರು ಮ ರಾದಾಬಾದಕ್ಕೆ ಹೋಗಿದ್ದರು. ಹಿಂದೂ-ಮುಸಲ್ಮಾನರಲ್ಲಿ ಐಕ್ಯವಿದ್ದಂತೆ ನವರ ಮೇಲೆ ಶ್ರೀ ಪ್ರಕಾ. ೧೪೪ನೇ ಕಲಮಿನನ್ವಯ ನೋಟೀಸು ಹೊರಡಿಸಿ, ಆ ಶಹರನಲ್ಲಿಯೂ ನೆರೆಹೊರೆಯ ೫ ಮೈಲುಗಳೊಳಗೂ ಭಾಷಣ ಮಾಡಬಾರದಾಗಿಯೂ ಹುಕುಮಾಗಿದೆ.

— ಹಿಂದುಸ್ಥಾನ ಸರಕಾರದ ಮಿತವ್ಯಯದ ಕತ್ತರಿಯಿಂದ ಅನೇಕ ಎಂಗ್ಲೋ-ಇಂಡಿಯನರು ನಿರುದ್ಯೋಗಿಗಳಾಗಿರುವರು ಪ್ರಚಂಡ ಸಂಬಳ ತಿಂದು ನೊಣ ಝಾಡಿಸುತ್ತ ಆಫೀಸುಗಳಲ್ಲಿ ಕಾಲಹರಣ ಮಾಡುವ ಪ್ರಸ್ನ್ಯಾಸ್ತರ ಮೇಲೆ ಭಾರತೀಯ ಕೋಪವು ಬಿದ್ದದ್ದರಿಂದ, ಹೊಟ್ಟೆ ಹೊರಕೊಳ್ಳುವದು ದುಸ್ತರವಾಗಿದೆ' ಪಾಪ!!

ಶುದ್ಧ ಖಾದಿ

ವಿಕ್ರಿಗೆ ತಯಾರ.

ಹೊನ್ನಾವರ ತಾಲೂಕಾ ಕೊಂಗ್ರೆಸ ಕಮಿಟಿಯಿಂದ ಕೈಮಗ್ಗದ ಕೈರಾಟಿಯ ಶುದ್ಧ ನೂಲಿನ ಖಾದಿ ದುಕಾನುಕ್ಕೆ ಕೊಂಗ್ರೆಸ ಆಫೀಸಿನಲ್ಲಿ ಸಿಗುವದು

ಹೊನ್ನಾವರ, ೧೦-೧೫-೨೩	ಸಕ್ರೆಟರಿ, ತಾ. ಕಾ. ಕಮಿಟಿ, ಹೊನ್ನಾವರ.

ಮೂರ್ತಿಗಳು ಬೇಕೋ?

ನಮ್ಮಲ್ಲಿ ಭಂಗಾರ, ಬೆಳ್ಳಿ, ಪಂಚಧಾತು, ಹಿತ್ತಾಳಿ, ಕಾಮ್ರ ವ ಕರೇಕಲ್ಲಿಯ ಮೂರ್ತಿಗಳೂ, ಇದಲ್ಲದೆ ಬಾಣಪೀಠಗಳೂ, ಪ್ರಭಾವಳಿಗಳೂ, ಈಶ್ವರ ಮುಖಾಟಗಳೂ, ನಾಗಾಭರಣಗಳೂ, ಕವಚುಗಳೂ ವ ಯಾವದೇ ತರದ ಪ್ರತಿಮೆಗಳೂ ನಮ್ಮಲ್ಲಿ ಯೋಗ್ಯ ದರಕ್ಕೆ ವ ಯೋಗ್ಯ ಹೊತ್ತಿಗೆ ಮಾಡಿ ಕೊಡಲ್ಪಡುವವು. ಬೇಕಾದವರು ಪತ್ರವ್ಯವಹಾರ ಮಾಡಿ ಯಾ ಸಮಕ್ಷ ಬಂದು ದರವಾರ ತಿಳಕೊಳ್ಳಬಹುದ

ಪತ್ತೆ—ನಾರಾಯಣ ಹುವಯ್ಯ ಶೇಟ,

ಗುಡಗಾರ, ಗುಜಿರಗಲ್ಲಿ, ಕುಮಟಾ.

(ಉ ಕಾನಡಾ.)

ಅಮೃತಾಂಜನ.



ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೇಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ. ವ್ಹಿ ಪಿ ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ,

ಮುಂಬಯಿ.

ಮನೆ ಕಟ್ಟುವವರಿಗೆ ಸುಸಂಧಿಯು.





ಮೇಲಂತಸ್ತಿಗೆ ಶೋಭೆ ಬರುವದಕ್ಕೆ ನಾನಾ ತರ ನಕ್ಷೀ ಕೊರೆಯಲ್ಪಟ್ಟ ಬೀಡಿನ ಕಟಾಂಜನಗಳೂ, ಹೂದೋಟ, ಬಳಂಗಳ, ಉಪ್ಪರಿಗೆ, ದಿವಾನಖಾನೆ ಮೊದಲಾದ್ದ ಸ್ಥಳಗಳಲ್ಲಿ ವಿಶ್ರಾಂತಿಗೊಳ್ಳುವದಕ್ಕೆ ತಕ್ಕ ಬಾಕುಗಳೂ ಕಿರ್ಲೋಸ್ಕರ ಕಾರಖಾನೆಯಲ್ಲಿ ಸೌಕರ್ಯದಿಂದ ದೊರೆಯುತ್ತವೆ. ಪತ್ರ ಬರೆದು 'ಬಿ' ಕ್ಯಾಟಲಾಗು ತರಿಸಿಕೊಳ್ಳಿರಿ!

ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ.)

ಲೋಕಾನುಕೂಲತೆಯಾಗಬೇಕೆಂದು, लोकानुकूलता व्हावी म्हणून,

ನಮ್ಮ 'ಸ್ಟಾರ ಆಫ್ ಕೆನರಾ' ಮುದ್ರಣಾಲಯದಲ್ಲಿ

आमच्या 'स्टॉर ऑफ केनरा' मुद्रणालयांत

નવીન વ્યવસ્થા !! ಹೊಸ ಏರ್ಪಾಟು !! नवीन व्यवस्था !!

'STAR OF KANARA' PRESS, KUMTA.

ನಮ್ಮ ಮುದ್ರಣಾಲಯದಲ್ಲಿ ಲೋಕಾನುಕೂಲತೆಗಾಗಿ ಮಾಡಿದ ಹೊಸ ಮಾರ್ಪಾಟುಗಳ ವಿವರ:—

ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಗಳಲ್ಲಿ

೧. ಮನೋಹರ ಮುದ್ರಣ. ೨. ಸಕಾಲ ಮುದ್ರಣ. ೩. ಸುಲಭ ದರ.

ಸಂಕ್ಷೇಪತಃ ಹೇಳಬೇಕಾದರೆ —

ಅಗ್ಗ ಅಚ್ಚು! ಅಂದ ಅಚ್ಚು!! ಅಚ್ಚುಕಟ್ಟು ಅಚ್ಚು!!!

ತರತರದ ಬಣ್ಣಗಳಿಂದ ಸುಶೋಭಿತವಾಗಿ ಮುದ್ರಣ ಮಾಡಿಕೊಡುವದಲ್ಲದೆ, ಫೋಟೋ-ಬ್ಲೋಕುಗಳನ್ನೂ ಮುದ್ರಿಸುವ ಏರ್ಪಾಟು ಮಾಡಲಾಗಿದೆ.

ಜರೂರಾಯಿತಿ ಜನರಿಗಾಗಿ—

ಬೇಕಾದ ಛಾಪೆ ಕೆಲಸದ ನಮೂನೆಯನ್ನು ಟಪಾಲದ್ವಾರಾ ಎಡ್ವಾನ್ಸ ಸಹಿತ ಕಳಿಸಿದ್ದಲ್ಲಿ, ಯಥಾಸ್ತುತಿ ಮುದ್ರಣ ಮಾಡಿ ೧–೨ ದಿವಸಗಳಲ್ಲಿಯೇ ವ್ಹಿ. ಪಿ. ಯಿಂದ ಕಳಿಸುವ ವ್ಯವಸ್ಥೆಯೂ ಮಾಡಲ್ಪಟ್ಟಿದೆ. ಬ್ಯಾಂಡಿಂಗ ಕೆಲಸವೂ ಅಚ್ಚುಕಟ್ಟಾಗಿ ಮಾಡಿ ಕೊಡಲ್ಪಡುವದು. ಒಮ್ಮೆ ಆರ್ಡರು ಕಳುಹಿಸಿ, ನೋಡಬಹುದಲ್ಲವೇ?

ಇದಲ್ಲದೆ, ನಮ್ಮಲ್ಲಿ ಗ್ರಂಥ, ಪುಸ್ತಕ, ಮಾಸಪತ್ರಿಕೆ, ಪಂಚಾಂಗ ಮುಂತಾದ ವಿವಿಧ ಮುದ್ರಣ ಕೆಲಸವು ಸುಲಭ ದರದಿಂದ, ತಕ್ಕ ಹೊತ್ತಿಗೆ ತಯಾರಿಸಿ ಕೊಡಲ್ಪಡುವದು.

ಮಾರಾಟಕ್ಕೆ ಸಿದ್ಧ.

ಕೋರ್ಟು ಕಚೇರಿಗಳಲ್ಲಿ ವಕೀಲರಿಗೆ ಬೇಕಾಗುವ ವಕಾಲತ ಅಮುಲಜಾರಿ ಸಾಕ್ಷಿಪಟ್ಟಿ, ಯಾದಿ, ನಕಲು ಅರ್ಜಿ, ದಸ್ತೈವಜು ಪರತ ಬೇಡುವ ಅರ್ಜಿ, ಜ್ಯಾಹಿರ ಮುಂತಾದ ಎಲ್ಲ ತರದ ಫಾರ್ಮುಗಳೂ, ಶಿಪ್ಪಿಂಗ ಬಿಲು, ಸತಮಿ, ಬಿಲ್ ಆಫ್ ಎಂಟ್ರಿ ಮೊದಲಾದ ಕಸ್ಟಮ್ ಫಾರ್ಮುಗಳೂ ಮಾರಾಟಕ್ಕೆ ದೊರೆಯುತ್ತವೆ.

ವಿಶೇಷ ಮಾಹಿತಿ ಪತ್ರದ್ವಾರಾ ಯಾ ಮೊಕ್ತಾ.

ಪತ್ತೆ:— ಕೃಷ್ಣರಾವ ಕೇಶವ ಶೇಣವಿ, ಹೆಗಡೇಕರ,

ಮಾಲಕ,

'ಸ್ಟಾರ ಆಫ್ ಕೆನರಾ' ಪ್ರೆಸ್, ಕುಮಟಾ.

(ಉ. ಕಾನಡಾ.)

Printed and Published by Krishnarao Keshav Shenvi (Editor) at his Star of Kanara Press, Kumta

eg. No. E 1270 Thursday, 16th August 1923

ವರ್ಷ ೭. ಸಂಚಿಕೆ ೪೪.

ಕಾನಡಾವೃತ್ತ.

THE KANARA NEWS.

ಪತ್ರದ ವರ್ಗಣಿ:-
ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಮುನೆಯಾರ್ಧರಿಯಿಂದ ರೂ. 3-0-0
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1 0.

स्वल्पनिहितकर्ता ह्रेष्यतां याति लोके जनपदहितकर्ता त्यज्यते पार्थिवेंद्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಮ್ಯಾಳ್ ಟೈಪಿನ(೧೫ ಎಮ್ ಉದ್ದ) ೮ ಸಾಲುಗಳ ವರೆಗೆ ರೂ. 1-0-0
ಆಮೇಲೆ ಪ್ರತಿ ಸಾಲಿಗೆ 0-2-0.
ಹದಿಂಗಳ ಸಾಲು ಎಷ್ಟು ಹೊತದಿರುವದೋ ಆ ಮಾಪ ದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಖಾಸ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

-(ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖ ೧೬ ಮಾಹೆ ಅಗಸ್ಟ ಸನ್ ೧೯೨೩ ನೇ ಇಸವಿ)-

हिंदुस्थानातील रहिवाशांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानातील लोकास ज्यास्त फायदेशीर आहे,

द्राक्षासव- { दीड रत्तलची किंमत २ रुपये;

रामबाण औषधें

सर्दि घालविणारें,
भूक वाढविणारें;
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

पिण्यास रुचिकर.

क्याटलाग मागवा,

झंडु फार्मास्युटिकल वर्क्स लिमिटेड,
मुंबई नं. १३

CLAXO:- FRESH STOCK. NEW BRAND. a *food for infants and invalids.*

Kalmegh :- *Well-tried remedy in "Liver" complaints especially of children.*

Syrup of Vasaka :- *Highly efficacious in cold, cough, crough and bronchitis.*

Besides we have in stock other patent medicines, Thermometres, Glycerine Syringes etc.,

Orders will be executed by V. P. P.

The New Emporium
Honavar. (N. Kanara.)

ಡಾ|| ಮಾಸೂರಕರರ

ಸುಧಾಂಜನ.

ಅಂಜನಗಳಿಗೆಲ್ಲ ಅರಸು.

ತಲೆಶೂಲಿ, ವಾತ ವೇದನೆ, ಕೆಮ್ಮು, ಹಲ್ಲು ನೋವು ಇತ್ಯಾದಿಗಳಿಗೆ ಕ್ಷಿಪ್ರ ಗುಣಕಾರಿ ವಸ್ತು. ಬೆಲೆ ೭ ಆಣೆ ಮಾತ್ರ. ವ್ಯಾಪಾರಿಗಳಿಗೆ ವಿಶೇಷ ಸವಲತು. ಹೆಚ್ಚಿನ ಮಾಹಿತಿ ಏಜಂಟರಿಂದ.

ಏಜಂಟ್ಸ್.— **ನಾಗರ್ಕಟ್ಟಿ ಬ್ರದರ್ಸ್,**
ಸುಧಾಂಜನ ಡಿಪೋ,
ಕುಮಟಾ. (ಜಿಲ್ಲಾ ಕಾರವಾರ.)

ಎಲ್ಲ ತರದ ಜ್ವರಗಳಮೇಲೆ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ, ಸೀತ, ಬಂಗಲಿ, ಅಥವಾ ದೂಷಿತ ಹವೆಯಿಂದ ಬರುವ ಸಾದಾ ವಿಷಾರೀ ಅಥವಾ ಇತರ ಜ್ವರಗಳೂ, ಇನಪ್ಲುಎಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನ್ಯಾನದ ದುಷ್ಪರಿಣಾಮರಹಿತ ಕೇವಲ ವನಸ್ಪತಿಯ ಈ ಮದ್ದು ಸೇವಿಸಿದರೆ ಅಶಕ್ತತೆಯಾಗದೆ, ಬೆವರು ಬಂದು ಜ್ವರ ಇಳಿಯುತ್ತದೆ. ಹಾಗು ರೋಗಿಯು ತರಿತ ವಾಸಿಯಾಗುತ್ತಾನೆ.

೩ ಔಂಸ ಬಾಟ್ಲಿ ಕಿಂಮತ ರೂ. ೧-೦-೦.

ಇದರ ಹೊರತು ಇನ್ನೂ ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ, ಉಚ್ಚ ಪ್ರತಿಯ ಕೊಲನ ವೊಟರ, ಲವಂಡರ ಇತ್ಯಾದಿ ಸಾಮಗ್ರಿಗಳು ಅಲೆಂಬಿಕದ ಕಾರಖಾನೆಯಲ್ಲಿ ತಯಾರಾಗುತ್ತವೆ. ಮಾದರಿ ಕಟಲಾಗು ತರಿಸಿರಿ.

ಅಲೆಂಬಿಕ್ ಕೆಮಿಕಲ್ ವರ್ಕ್ಸ,
ಕಂಪನಿ, ಲಿಮಿಟೆಡ್.
ನಂ. ೫೦, ಪ್ರಿನ್ಸೆಸ್‌ಸ್ಟ್ರೀಟ, ಮುಂಬಯಿ.

अलेंबिक केमिकल वर्क्स कं० लि०
नं. ५० प्रिन्सेस स्ट्रीट मुंबई.

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ವಿಷಯಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ.

ಈ ವರೆಗೆ ಪ್ರಕಟವಾದ ಪುಸ್ತಕಗಳು.

(೧-೨) ಗ್ರೀಸ ದೇಶದ ಗಾಂಧಿ. (ಸಾಕ್ರೆಟೀಸ) (೩) ಸ್ವಾತಂತ್ರ್ಯಸಾಧನೆ. (೪) ಗುರು-ಹಿರಿಯರೂ, ಬಂಧು-ಭಗಿನಿಯರೂ. (೫) ರಾಷ್ಟ್ರೀಯ ಶಿಕ್ಷಣ. (೬) ಸದ್ಗುಣಮಂದಿರ. (ಭಾಗ ೧.) (೭) ಸ್ವರಾಜ್ಯಧರ್ಮ. (ಅನಾಮಿನ ಪುಷ್ಪ) ಇವಿಷ್ಟು ಪ್ರಕಟವಾಗಿದ್ದು, ೫ ಆಣೆಗೆ ಒಂದರಂತೆ ದೊರೆಯುತ್ತವೆ. ವರ್ಗಣೀದಾರರಿಗೆ ಹಿಂದಿನ ಬೇಕಾದ ಪುಸ್ತಕಗಳು ೪ ಆಣೆಗೆ ಒಂದರಂತೆ ದೊರೆಯುವವು. ೬ ಪುಸ್ತಕಗಳಿಗೆ ಕೂಡಿ ೧|| ರೂಪಾಯಿ ಮಾತ್ರ. ಅಂಚೆವೆಚ್ಚ ಬೇರೆ. ದ್ವಿತೀಯ ವರ್ಷ ಪ್ರಾರಂಭ, ಅನುಕ್ರಮವಾಗಿ ಮಾರ್ಚ, ಮೇ, ಜುಲೈ, ಸಪ್ಟಂಬರ, ನವಂಬರ, ಜನವರಿ ೧ನೇ ತಾರೀಖಿಗೆ ಒಂದೊಂದು ಪುಸ್ತಕ ಹೊರಡುವದು. ವಾ. ವ ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ.

ವಾ. ಅ. ಹೊದ್ಯೆ,
ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ,

ಶುದ್ಧ ಖದ್ದರ್ ರೇಶ್ಮಿ ಮಡಿಗಳು.

ಸುಲಭ ಕ್ರಯಕ್ಕೆ ಖಾತ್ರಿಯಾದ ಎಲ್ಲಾ ರಂಗುಗಳಲ್ಲಿಯೂ ಈ ಕೆಳಗೆ ಬರೆದ ಕ್ರಯಕ್ಕೆ ದೊರೆಯುವವು.

೧೮ ಮಾರ ಉದ್ದ ೨|| ಅಗಲ ರೂ ೨೩ ರಿಂದ ೨೫ ವರೆಗೆ
೧೬ „ „ ೨|| „ „ ೨೦ — ೩೦ „
೮ „ „ ೨|| „ „ ೯ — ೧೫ „
೬ „ „ ೨|| „ „ ೭ — ೧೧ „



ಪಿ. ಎನ್. & CO. BENARES CITY

ಅಂಗಿ ಬಟ್ಟೆಗಳು ೧೮ ಮಾರ × ೨ ಮಾರ ರೂಪ್ಯಾ ೧೮ ರಿಂದ ೩೦ವರೆಗೆ. ಕೋಟ ೧೨ ಮಾರ ×೧|| ಮಾರ ಅಗಲ ರೂಪ್ಯಾ ೧೦ರಿಂದ ೧೫ವರೆಗೆ. ಪೀನ್‌ತಾನ್ ೧೪ ಮಾರ × ೨ ಮಾರ ರೂ. ೨೪ ರಿಂದ ೩೫ ವರೆಗೆ ಇವುಗಳಲ್ಲದೆ ಕಾಶೀ ಪೀತಾಂಬರ, ಕಾಶ್ಮೀರ್ ಶಾಲು, ರುದ್ರಾಕ್ಷಿ, ಜಾಗಂಟೆ, ತಾಳ, ಪಸ್ಮೀರ್ ದಾನಿ, ಚಿಟಿದ ಸಾಮಾನುಗಳು, ದೇವರ ಮತ್ತು ಗಾಂಧಿ ಮುಂತಾದವರ ಪಟಗಳಿರುವ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳ ಕ್ಯಾಟಲಾಗ್ ಇನಾಂ.

ವಿಳಾಸ:—'ಎಸ್. ಯಮ. ನಾರಾಯಣಾಚಾರ್ಯ, ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.!

ಕಾಮಿನಿಯಾ ತೈಲ. (ರಿಜಿಸ್ಟರ್ಡ)

ಮೃದುವಾದ, ಗುಂಗರ ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದುವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ.

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹ ಕಾರಿಯಾಗಿರುತ್ತದೆ ಈ ಆಯಿಲ್ ತೊಡಿಸುಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ತೊಡೆಯ ತೊಡಗಿದ ಒಳಿಕ ಎಂದಿಗೂ ಉಗುರಿ ಬಿದ್ದು ಹೋಗಲಾರವು, ಆದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ ಸರ್ಟಿಫಿಕೇಟು ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ — ಸೀಸೆ 1 ರೂಪಾಯಿ 1 0 0, ಸೀಸ 3ಕ್ಕೆ. ರೂಪಾಯಿ 2 10-0, ವಿ.ಪಿ. ಖರ್ಚು 0 14-0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸಾಯಿ ಮತ್ತು ಅತ್ಯುತ್ತಮವು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ಲಸಿದ ವಾದುದು ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು, ಒಂದೇ ಒಂದು ಸಲ ನಿಮ್ಮ ಕೈ ಒಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0, 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0 12 0 ½ ಔನ್ಸಿನ ದೊಡ್ಡ ಸೀಸ 1 ಕ್ಕೆ 2-0 0. ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0.

Address - **The Anglo Indian Drug & Chemical Co,**
16 Market, **BOMBAY. 2**

ಖರೇ ಮಾಲು ! ತಾಜಾ ಕಲ್ಯು !! ಶ್ವರ ಗ್ಯಾಯಿರಿ '

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳಿಸಿ, ಪುರುಷರಿಗೆ ಸ್ತ್ರೀ ವಿಷಯವಾಗಿಯೂ, ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷಯುಕ್ತ ಶಕ್ತಿಯನ್ನು ಉಂಟುಮಾಡಿ, ದಿನೇ ದಿನೇ ಶರೀರದ ಜರಠತನವನ್ನೂ ರೋಗಗಳನ್ನೂ ದೂರಪಡಿಸಿ ಆರೋಗ್ಯವನ್ನೂ, ರತಿಯಲ್ಲಿ ಹಿಗ್ಗಿಳಸಾದ ಕುತೂಹಲವನ್ನು ತೋರಿಸುವ ಕ್ರೀಡಾ ಶಕ್ತಿಯ ಉತ್ಸಾಹವನ್ನೂ, ಸಂಭೋಗದಲ್ಲಿ ತೃಪ್ತಿಯನ್ನೂ, ಸೌಖ್ಯವನ್ನೂ ಕೊಟ್ಟು, ಮನಸ್ಸಿನ ದೃಢತೆಯನ್ನೂ ಯೌವ್ವನದ ಕಳೆಯನ್ನೂ ದೊರಕಿಸಿ ಮುದಿತನವನ್ನುನೀಗಿ ಬಲವನ್ನು ಉಂಟುಮಾಡುವದು ಮೃತ್ಯುವನ್ನು ನಿರಾಕರಿಸಿ, ಬಗೆಬಗೆಯ ರೋಗಗಳನ್ನು ನಾಶಮಾಡುವದು ಜೀರ್ಣಜ್ವರ, ಮಂದಾಗ್ನಿ, ಶುಕ್ಲಸ್ರಾವ, ಆಮಶಂಕೆ ಇವುಗಳನ್ನು ಬಿಡದೇ ನಾಶಮಾಡುವದು ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, ದೇಶಕಾಲಗಳಿಂದಲೂ, ಅತ್ಯಾಹಾರಗಳಿಂದಲೂ, ಸ್ತ್ರೀಯರಿಂದಲೂ ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡಿಸುವ ಬಲತ್ಕಾರದ ಹಸ್ತಸ್ಪರ್ಶನದಿಂದಲೂ ಅತಿವಿಷಯೋಪಭೋಗದಿಂದಲೂ, ಇಂದ್ರಿಯ ಶಿಥಿಲವೂ, ತಿಳುವೂ, ನಿಸ್ತೇಜವೂ ಆಗಿ ಯತ್ನವಿಲ್ಲದೆ ಸ್ಖಲನವಾಗುವದು. ಒಂದೊಂದು ಸಾರಿ ಮೂತ್ರದಲ್ಲಿಯೂ ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತ, ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈಬಿಸುವು, ನಿದ್ರೆಯಲ್ಲಿ ಬೀಕರವಾದ ಸ್ವಪ್ನ, ಅರಿವು, ಮರುವು ಮತ್ತು ಶರೀರದ ಹಾಗೂ ಮನಸ್ಸಿನ ಚೇತನ ಕುಂದಿ ಹೋಗುವದು, ಇವೆಲ್ಲವುಗಳಮೇಲೆ ರಾಮಬಾಣದಂತಿರುವದು ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ ೧|||. ನಂ ೧ ನಂ ೨. ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಂತು ೬೦ಗುಳಿಗೆಗಳುಳ ಸೀಸೆಗಳಿಗೆ ರೂ. ೩. ಪೋಸ್ಟೇಜ ಬೇರೆ

ಎಮ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ,
ಕರ್ಕಿ. (ಕೆನರಾ)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧ ರಾಗದ ಕೈಪೆಟ್ಟಿಗೆ ಕಿಂ. ೨೦, ೪೦, ೪೫, ೫೦ ೬.
೨ „ ಕಾಲು ಪೆಟ್ಟಿಗೆ ಕಿಂ. ೬೫, ೭೫, ೧೪೦, ೧೬೭.
೩ ತಬಲೆ ಜೋಡಿ ಕಿಂ ೧೩, ೧೫, ೧೮ ೨೦.
೪ ಹಾರ್ಮೋನಿಯಮು ಗ್ರ್ಯಾಡ ಕಿಂ ೧|, ತಬಲೆ ಗ್ರ್ಯಾಡ ಕಿಂ ೧೨ ಆ

ವಿಶೇಷ ಮಾಹಿತಿ ಬಗೆ ನಮ್ಮ ಕ್ಯಾಟಲಾಗ ನೋಡ್ಕಿ ಕೊಡುವೆವು

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು

ಪತ್ತೆ - **ಗೋಪಾಳ ಸಖಾರಾಮ ಮತ್ತು ಕಂಪನಿ,** ನಂ ೨೬೧
ಕಾಳಬಾದೇವಿರೋಡ, ಮುಂಬಯಿ

ಸ್ವರಾಜ್ಯಕಾಂಕ್ಷಿಗಳೂ, ಅವರ ಆಚರಣೆಗಳೂ.

(ಲೇಖಕ — ಎಸ್. ಎಸ್. ಹೆಗಡೆ ಕಲ್ಲಕೊಪ್ಪ.)

ಜಗತ್ತಿನಲ್ಲಿರುವ ಯಾವತ್ತು ಜನರುಗಳಿಗೂ, ಸ್ವಾತಂತ್ರ್ಯವೂ, ಸ್ವೇಚ್ಛೆಯೂ ಬೇಕಲ್ಲವೇ? ಆದರೆ ಪ್ರಕೃತದ ಸ್ವಾತಂತ್ರ್ಯವೂ, ಸ್ವೇಚ್ಛೆಯೂ, ಯಾವದೊಂಬದನ್ನು ಸ್ವಲ್ಪ ಮಟ್ಟಿಗೆ ವಿಚಾರಿಸುವಾ. ಸತ್ಯದ ಸ್ವಾತಂತ್ರ್ಯ, ಸ್ವೇಚ್ಛೆಗಳೆಂದರೆ, ಸ್ವರಾಜ್ಯ ಸ್ವಾತಂತ್ರ್ಯವೆಂದರೆ, ನಿರಂಕುಶಪ್ರವರ್ತನವೆಂದು ದೊಡ್ಡದಾಗಿ ಹೇಳಬೇಕಾಗಿಲ್ಲ. ಆದರೆ, ನಿರಂಕುಶ ಪ್ರವರ್ತನದಲ್ಲಿ ಮುಳುಗಿದ್ದ ನಮಗೆ ಸ್ವಾತಂತ್ರ್ಯ, ಸ್ವೇಚ್ಛೆಗಳನ್ನು ಗಳಿಸ ಬೇಕಾದರೂ ದುಸ್ತರವೇ. ಯಾಕೆಂದರೆ, ಲೋಕದಲ್ಲಿ ಸರ್ವರೂ ಸುಖಿಗಳಾಗಿರಲಿ ಎಂಬುದಾಗಿಯೂ, ಸತ್ಯವೂ, ಧರ್ಮವೂ, ಉಲ್ಲಂಘಿಸಲ್ಪಡತಕ್ಕದ್ದೇ ಇರಲಿಯೆಂಬುದಾಗಿಯೂ, ಅದರಂತೆ ಆಚರಣೆಯಲ್ಲಿ ತರುವದಾದರೂ ಕಷ್ಟವೇ. ವಾಚಕರೇ, ಸತ್ಯವನ್ನೂ, ಧರ್ಮವನ್ನೂ ಕಾಪಾಡಬೇಕೆಂದು ಅವಿಶ್ರಾಂತ ದಣಿದಿರುವಂಥಾ ಮಹಾ ಮಹಾ ವಿಭೂತಿಗಳ ಪಂಕ್ತಿಯವರಾದರೂ ತಮಗಿರಬಹುದಷ್ಟೇ? ಮಹಾತ್ಮನಾದ ಧ್ರುನೋ ಎಂಬವನು ಜೀವ ಸಹಿತ ಚಿತೆಗೆ ಹಾಕಿ, ಸುಡಲ್ಪಟ್ಟನು. ಬ್ರಿಟಿಶ ರಾಜ್ಯದಲ್ಲಿ ನಿರಂಕುಶಪ್ರವರ್ತನವನ್ನು ದೂರ ಮಾಡಬೇಕೆಂದು ಸ್ವಾಮಿ ದಿ ವಾ-ಟಿಘರ್ನು ಘೋರವಾದ ಸಂಗ್ರಾಮ ಮಾಡಿ, ತನ್ನ ಪರಾಕ್ರಮವನ್ನು ತೋರಿಸಿ, ವೀರ ಸ್ವರ್ಗವನ್ನು ಪಡೆದನು. ಮತ್ತು ಲೋಕಮಾನ್ಯರೆಂದು ಬಿರುದು ಪಡೆದ ತಿಲಕ ಮಹಾರಾಯರು ೬-೭ ವರ್ಷ ಕಾರಾಗೃಹವಾಸವನ್ನು ಕಳೆದರು. ಸರ್ವ ಪ್ರಪಂಚದಲ್ಲಿಯೂ ಅತಿ ಖ್ಯಾತಿವಂತರಾಗಿದ್ದು, ಸಕಲ ಜನಗಳಿಗೂ ಮಹಾತ್ಮರೆಂದು ಭಾವನೆಯಿದ್ದ ಮತ್ತು ಕೃತಿಯಲ್ಲಿಯೂ ಮಾಡಿತೋರಿಸಿ, ಸ್ವರಾಜ್ಯಕ್ರಮವನ್ನು ಪಡೆದ ಮಹಾತ್ಮಾ ಮೋಹನದಾಸ ಕರಮಚಂದ ಗಾಂಧಿಯವರ ಗುರುತಾದರೂ ತಮಗಿರಬಹುದು. ಇದಲ್ಲದೆ, ಪರಸ್ವಾಧೀನದಲ್ಲಿ ಬಳಲುತ್ತಿರುವ ಪುಣ್ಯಭೂಮಿಯಾದ ನಮ್ಮ ಆರ್ಯಾವರ್ತವನ್ನು ತಿರುಗಿ ಪಡೆಯಬೇಕೆಂಬ ಈ ಅಭಿನಿವೇಶದಿಂದ ಸರಕಾರದಿಂದ ಕಷ್ಟಪಟ್ಟು, ಇದಲ್ಲದೆ, ಸ್ವಾರ್ಥತ್ಯಾಗಿಗಳಾಗಿ, ಲೇಶವೂ ಸುಖಪಡದೆ, ಅಹೋರಾತ್ರಿ ದಣಿದು, ಕಾರಾಗೃಹವನ್ನು ಪಡೆದಿದ್ದ ದೇಶಬಂಧು ದಾಸರೂ, ಮತ್ತು ತಿಲಕರ ಪ್ರಿಯಶಿಷ್ಯರಾದ ಲಾಲಾಜಿಯವರೂ ಮೊದಲಾದ ಅನೇಕರು ಬಂದಿಖಾನೆಗೆ ಹೋಗಿದ್ದು, ಮತ್ತೂ ಹೋಗುತ್ತಿರುವರು. ಇದೆಲ್ಲ ತಮ್ಮ ದೃಷ್ಟಿಪಥಕ್ಕೆ ಪ್ರತ್ಯಕ್ಷ ಕಂಡ ವಿಷಯವಾಗಿದೆ. ಇಷ್ಟೇ ಅಲ್ಲದೆ, ಸ್ವರಾಜ್ಯಕ್ರಮವನ್ನು ಪಡೆದಿದ್ದ ಸ್ವರಾಜ್ಯಕಾಂಕ್ಷಿಗಳ ಗೋಳಾದರೂ ತಮಗೆ ಗೊತ್ತಿರಬಹುದು. ಸಾರಾಸಾರ ವಿಚಾರಶಕ್ತಿಯುಳ್ಳದೇ, ಪ್ರತಿಭಟಿಸುವ ನೌಕರರು ಮಹಾಧಿಕಾರವನ್ನು ಪಡೆದರೂ ಹೀಗಿದೆ. (उपशम एव त्यागि द्वन्द्वदर्शिनस्तो वेदान्तस्वैरपहास्यत गिरिकूटगतानवत.) ಎಂಬಂತೆಯೋ ಆಗುತ್ತಾರೆ. ಯಾಕೆಂದರೆ ಸಾಮ, ದಾನದಿಂದ ದುಷ್ಟರಾದರೂ, ಹತೋಟಿಗೆ ಬರಬಹುದು. ಇವು ನಿಷ್ಫಲಯೋಜನಗಳಾದರೆ ಸಾಮ, ದಾನ ಭೇದ, ದಂಡಗಳ ಪೈಕಿ, ನಾಲ್ಕನೇದಾದ ದಂಡೋಪಾಯವನ್ನು ಪರಿಗ್ರಹಿಸಬಹುದು. ಇಷ್ಟೆಲ್ಲಾ ಬರೆದದ್ದು, ಸ್ವಾತಂತ್ರ್ಯ ಪಡೆಯಲಿಕ್ಕೆ ಧರ್ಮವನ್ನು ಅನುಷ್ಠಾನದಲ್ಲಿ ತರಲಿಕ್ಕೆ ಅವಿಶ್ರಾಂತ ದಣಿದಿರುವ ಮಹಾತ್ಮರ ವರ್ಣನಾಪರವಾಯಿತು. ಇರಲಿ. ಇನ್ನು ಎಷ್ಟೋ ಜನರು ಪೂರ್ಣ ತಯಾರಾಗಲಿಲ್ಲ ಯಾಕೆ ಎಂಬ ಬಗ್ಗೆ ಸ್ವಲ್ಪ ಉದ್ಘಾಟಿಸುವಾ.

ಯಾಕೆಂದರೆ, ಪುರಾಣವೇ ಮೊದಲಾದವುಗಳಿಂದ ಸಿದ್ಧಾಂತವಾದ ಮತಗಳು ನಾಲ್ಕು. ಬ್ರಾಹ್ಮ, ಕ್ಷತ್ರಿಯ, ವೈಶ್ಯ, ಶೂದ್ರ, ಎಂಬವುಗಳು. ನಾಲ್ಕು ಜಾತಿಗಳಿಗೆ ನಾಲ್ಕು ಸಾವಿರ ಜಾತಿಗಳಾಗಿವೆ. ಮತ್ತು ನಾಲ್ವತ್ತು ಸಾವಿರ ಕೋಮುಗಳಾಗಿ, ಪರಿಣಮಿಸಿವೆ. ಇಷ್ಟೇ ಅಲ್ಲ, ಜಾತಿಭೇದದಿಂದ ಪರಸ್ಪರರಲ್ಲಿ ಪ್ರೀತಿಯು ಕಡಿಮೆಯಾಗಿದೆ. ಇದರ ಪೈಕಿ ನಾವಂತೂ ಬಲು ಕಡಿಮೆ ದರಗತಿಯಲ್ಲಿರುತ್ತೇವೆ. ಪರಸ್ಪರರಲ್ಲಿ, ಸೌಹಾರ್ದವಿಲ್ಲದ ನಮಗೆ ಸ್ವಾತಂತ್ರ್ಯವೆಲ್ಲಿ, ಸ್ವೇಚ್ಛೆಯಲ್ಲಿ ತಾನೇ ಸ್ವರಾಜ್ಯವೆಲ್ಲಿಯದು. ಯುದ್ಧ ಮಾಡಿ, ಸ್ವರಾಜ್ಯ ಗಳಿಸಲಿಕ್ಕೆ ಯುದ್ಧಕಲೆಯಾದರೂ ಬರುವದೇ? ತೋಫು-ಬಂದೂಕಿಗಳಾದರೂ ಇರುವವೇ? ಭಾರತೀಯರಾದ ನಾವು ನಿಶ್ಶಸ್ತ್ರರು. ಆದರೆ, ವಾಚಕರೇ, ನೀವು ಹೀಗೆ ಶಂಕಿಸಬಹುದು. ಸತ್ಯ, ಧರ್ಮ ಇವೇ ಮೊದಲಾದ ಸಾಧನಗಳಿಂದ ಸ್ವಾತಂತ್ರ್ಯ ಗಳಿಸಬಹುದೆಂದು ತಿಳಿಯಬಹುದು. ಆದರೆ ಎಷ್ಟೋ ಜನರು ಇನ್ನೂ ಪೂರ್ಣ ಸ್ವಾರ್ಥತ್ಯಾಗ ಮಾಡಲಿಕ್ಕೂ, ಸ್ವರಾಜ್ಯಕ್ರಮ ಪಡೆಯಲಿಕ್ಕೂ ತಯಾರಾಗಲಿಲ್ಲ. ಹೀಗಿರುವಲ್ಲಿ ನಾವು ಸ್ವಾತಂತ್ರ್ಯ ಪಡೆಯಲಿಕ್ಕೆ ಅರ್ಹರಾಗಲಿಲ್ಲ. ನಾವು ರಾಗದ್ವೇಷಾದಿ ಅಂತರಂಗ ದೋಷಗಳಿಂದ ವ್ಯಾಪ್ತನಿವಿಷ್ಟರಾಗಿ, ಮನೆಗೆ ಮಾರಿ, ಪರರಿಗೆ ಉಪಕಾರಿಗಳಂತೆ ಇದ್ದೇವೆ. ಜಗದೀಶ್ವರನೇ ತಾಯಿ ತಂದೆಯೆಂದು ಭಾವಿಸಿ, ನಾವು ಎಲ್ಲರೂ ರಾಮ ಲಕ್ಷ್ಮಣರಂತೆ ಪರಸ್ಪರರಲ್ಲಿ ಪ್ರೀತಿಯುಳ್ಳವರಾದರೆ, ಇಚ್ಛಿಸಿದ್ದು ಸಿಕ್ಕುವದರಲ್ಲಿ ಸಂಶಯವಿಲ್ಲ. ಮತ್ತು (परोपकार पुण्याय पापाय परपीडन) ಎಂಬುವದು ನಮಗೆ ಯಥಾರ್ಥವಾಗಿ ತಿಳಿದ ಹೊರತು, ಸ್ವಾತಂತ್ರ್ಯವಿಲ್ಲ. ಮಹಾತ್ಮರು ನಮ್ಮಲ್ಲಿ ಪರಸ್ಪರ ಪ್ರೀತಿಯಾಗಬಹುದೆಂದು ತಿಳಿದು, ಶಾಂತಗರ್ಭಿತವಾದ ಅಸಹಕಾರವೆಂಬ ಬ್ರಹ್ಮಾಸ್ತ್ರವನ್ನು ತಯಾರಿಸಿ, ಇದರಿಂದ ಸ್ವರಾಜ್ಯಗಳಿಸಬಹುದೆಂದು ಯೋಚಿಸಿದ್ದರು. ಆದರೆ ಭಾರತೀಯರಾದ ನಮಗೆ ಶ್ರುತಿ, ಸ್ಮೃತಿ, ಪುರಾಣ, ಇತಿಹಾಸ ಮುಂತಾದ್ದರಲ್ಲಿಯೂ, ದೇವರು, ಗುರುಹಿರಿಯರು ಇವರಲ್ಲಿಯೂ ಪೂರ್ಣ ಭಕ್ತಿಯಿಲ್ಲ. ಭಾರತೀಯರಾದ ನಾವು ಇನ್ನೂ ಬಾಲ್ಯಾವಸ್ಥೆಯಲ್ಲಿಯೇ ಇದ್ದೇವೆ. ಆದರೆ, ಬಾಲ್ಯಾವಸ್ಥೆಯಲ್ಲಿದ್ದ ನಮಗೆ ಬಾಲ್ಯಾವಸ್ಥೆಯೇ ಸ್ಥಿರವಲ್ಲ. ಮುಂದಿನ ಯೌವನ, ಕೌಮಾರ, ವಾರ್ಧಕ್ಯ ಈ ಮೂರು ಅವಸ್ಥೆಯನ್ನಾದರೂ ಪ್ರಾಯಃ ಕಳೆಯಬೇಕಾಗುತ್ತದೆ. ಬಾಲಕರ ಪಾಲಕ, ಪಾಲಕರು ಹ್ಯಾಗೆ ತಮ್ಮ ಮಕ್ಕಳು ವಿದ್ಯಾವಿಶಾರದರೂ, ಬುದ್ಧಿವಂತರೂ, ರಾಜನಿಷ್ಠರೂ, ಸತ್ಪಕ್ಷಪಾತಿಗಳೂ ಆಗಬೇಕೆಂಬ ಮಹತ್ವಾಕಾಂಕ್ಷೆಯಿಂದ ಯೋಗ್ಯ ವೇಳೆಗೆ ಆಗತಕ್ಕ ವಿದ್ಯಾಬುದ್ಧಿಯೇ ಮೊದಲಾದವುಗಳನ್ನು ಕಲಿಸಲಿಕ್ಕೆ ಪ್ರಯತ್ನ ಪಡುವರೋ, ತದ್ವತ್ ಭಾರತೀಯರಾದ ನಮಗೆ ಪಿತೃಪ್ರಾಯರಾದ ಮಹಾತ್ಮಾಜೀಯವರು ಸ್ವಾತಂತ್ರ್ಯವೆಂಬ ವಿದ್ಯೆಗಲಿಸುವದರಲ್ಲಿ ಪ್ರಯತ್ನಪಟ್ಟರು. ಭಾರತೀ ಪುತ್ರರೇ, ಇನ್ನಾದರೂ ನಿಮ್ಮೊಳಗೆ ಇರುವ ಭಿನ್ನ ಮತವನ್ನು ಪರಿತ್ಯಜಿಸಿ, ಧರ್ಮವನ್ನೂ, ಸತ್ಯವನ್ನೂ, ರಾಷ್ಟ್ರಸೇವೆಯನ್ನೂ ಮಾಡುವದರಲ್ಲಿ ತತ್ಪರರಾಗಿರಿ ಮತ್ತು (अहिंसा परमो धर्म) ಎಂಬ ಉಕ್ತಿಗನುಸರಿಸಿ, ಕಾಯಾ, ವಾಚಾ ಮನಸ್ಸಿನಿಂದ, ಹಿಂಸೆಯನ್ನು ಬಿಟ್ಟು, ಸ್ವಾತಂತ್ರ್ಯ ಗಳಿಸುವದರಲ್ಲಿ ದಕ್ಷರಾಗಿರಿ ಇಷ್ಟೇ ಬರೆದು, ಈ ಸಣ್ಣ ಲೇಖವನ್ನು ಸಂಪೂರ್ಣಗೊಳಿಸುತ್ತೇನೆ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಬರೆದು ತಿಳಕೊಳ್ಳಬಹುದು.

ಪುರುಷೋತ್ತಮ ಲಕ್ಷ್ಮಯ್ಯ ಜ್ಞಾನಭಾಗ

ಹೆಗಡೇಕರ, ದುಕಾನ, ಕುಮಟಾ.

ಬೇಂಚ ಮೆಜಿಸ್ಟ್ರೇಟರು.

———o———

ಕಳೆದ ೩ನೇ ತಾರೀಖಿನಿಂದ ಪುಣೆಯಲ್ಲಿ ನೆರೆದ ಮುಂಬಯಿ ಕಾಯದೆ ಕೌನ್ಸಿಲಿನ ಅಧಿವೇಶದಲ್ಲಿ ಸೊಲ್ಲಾಪುರ ಪಟ್ಟಣದ ಪ್ರತಿನಿಧಿಗಳಾದ ರಾ| ಸಲಗರರವರು ಬೇಂಚ ಮೆಜಿಸ್ಟ್ರೇಟರ ಬಗ್ಗೆ ಕೆಲ ಸವಾಲುಗಳನ್ನು ಕೇಳಿದರು ಅವುಗಳಿಗೆ ನಾಮದಾರ ಸರ್ ಮೋರಿಸ ಹೇವರ್ಡರವರು ಉತ್ತರವನ್ನಿತ್ತಿದ್ದೇನಂದರೆ — ಸರಕಾರವು ಬೇಂಚ ಮೆಜಿಸ್ಟ್ರೇಟರ ಅಧಿಕಾರವನ್ನು ಕೊಡುವಾಗ ೩ ಗುಣಗಳನ್ನು ವಿಚಾರಿಸುತ್ತದೆ ಅವು ಯಾವವೆಂದರೆ, (೧) ಸಾಮಾನ್ಯ ಬುದ್ಧಿ, (೨) ಪ್ರಾಮಾಣಿಕತನ, (೩) ಲೋಕೋಪಕಾರ ಬುದ್ಧಿ ಬೇಂಚ ಕೋರ್ಟಿನ ಕೆಲಸ ನಡಿಸುವದಕ್ಕಾಗಿ ಸರಕಾರವು ಕೆಲ ಮಾದರಿಯ ನಿಯಮಗಳನ್ನು ಮಾಡಿದೆ ಅವುಗಳಲ್ಲಿ ಮುಖ್ಯವಾದವುಗಳು ಯಾವವೆಂದರೆ — (೧) ಬೆಂಚು ಕೋರ್ಟು, ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ನಿರ್ಣಯಿಸಿದ ದಿನಗಳಲ್ಲಿ ನಿರ್ಣಯಿಸಿದ ಹೊತ್ತಿಗೆ ನ್ಯಾಯದಾನಕ್ಕಾಗಿ ಕೂಡಬೇಕು ರವಿವಾರ ಹಾಗೂ ಇತರ ಹಬ್ಬದ ದಿನಗಳಲ್ಲಿ ರಜೆ (೨) ಬೇಂಚಿನ ಸಭಾಪತಿಯು ಇತರ ಸಹಕಾರಿಗಳ ಆಲೋಚನೆ ಪಡೆದು, ಕೋರ್ಟು ಕೆಲಸದ ಹೊತ್ತನ್ನು ನಿರ್ಣಯಿಸಬೇಕು ಪ್ರತಿ ಸೋಮವಾರಕ್ಕೆ ಮುಂದಿನ ಸೋಮವಾರದಿಂದ ಪ್ರಾರಂಭವಾಗುವ ಹಪ್ತೆಯಲ್ಲಿ ನಡೆಯತಕ್ಕ ವಿಚಾರಣೆಯನ್ನು ನೇಮಿಸತಕ್ಕದ್ದು ಮತ್ತು ಅವನು ಬಿಟ್ಟು ಇದ್ದ ದಿವಸವೇ ವಿಚಾರಣೆ ಮುಗಿಯುವಂತಹಾಗಲಿ, ಸುನಾವಣಿಯು ಮುಗಿಯುವ ವರೆಗೆ ವಿಚಾರಣೆಯು ನಿತ್ಯವೂ ನಡೆಯುವಂತೆಯಾಗಲಿ ಅದಷ್ಟು ವ್ಯವಸ್ಥೆ ಮಾಡಬೇಕು. ವಾರವಾರದ ಕೆಲಸವನ್ನು ಆಗಿಂದಾಗ ಇತರ ಜೊತೆಗಾರರಿಗೆ ತಿಳಿಸತಕ್ಕದ್ದು

***

ಬೊಮ್ಮನಳ್ಳಿಯ ಸಂಕ.

ಕಾಳೀ ನದಿಗೆ ಬೊಮ್ಮನಳ್ಳಿಯಲ್ಲಿ ಕಟ್ಟಿದ ಸಂಕದ ಬಗ್ಗೆ ಧಾರವಾಡ ಜಿಲ್ಲೆಯ ರಾ| ಹುಲಕೋಟಿಯವರು ಪ್ರಶ್ನಿಸಿದರು. ಅದಕ್ಕೆ ಖಾನ ಬಹಾದ್ದೂರ ಶೇಕ ಗುಲಾಮ ಹುಸೇನರವರು ಸರಕಾರ ತರ್ಫೆನಿಂದ ಉತ್ತರವನ್ನಿತ್ತಿದ್ದೇನಂದರೆ, ಬೊಮ್ಮನಳ್ಳಿಯಲ್ಲಿ ಕಾಳೀ ನದಿಗೆ ಕಲ್ಲು ಕೆಲಸದಿಂದ ಒಂದು ಸಂಕ ಮಾಡಿರುವರು. ಇದಕ್ಕೆ ಮೊದಲು ೪೫ ಸಾವಿರ ರೂಪಾಯಿ ಖರ್ಚ ತಗಲೀತೆಂದು ಅಂದಾಜು ಮಾಡಿ, ಅದರಂತೆ ೧೯೧೯—೨೦ನೇ ಸಾಲಿನ ಅಂದಾಜು ಪತ್ರಕದಲ್ಲಿ ಅಷ್ಟರ ಬಗ್ಗೆ ಮಂಜೂರಿಕೊಳ್ಳಲ್ಪಟ್ಟಿತ್ತು. ಚೀಫ ಕನ್ಸರ್ವೇಟರರೂ ಈ ಯೋಜನೆಗೆ ಸಮ್ಮತಿಯನ್ನಿತ್ತರು ಈ ವರೆಗೆ ಈ ಸಂಕದ ಬಗ್ಗೆ ೬೫ ಸಾವಿರ ರೂಪಾಯಿಗಳು ಖರ್ಚಾಗಿವೆ ಇನ್ನೂ ೧೦ ಸಾವಿರ ರೂಪಾಯಿಗಳು ಅವಶ್ಯಬೇಕು ಬೊಮ್ಮನಳ್ಳಿ ಅತ್ತಕಡೆ ಇರುವ ಜಂಗಲನ್ನು ಕಡಿಯಬೇಕೆಂದು ಈ ಸಂಕವು ಕಟ್ಟಲ್ಪಟ್ಟಿದೆ ಬೊಮ್ಮನಳ್ಳಿಯಲ್ಲಿ ಕಟ್ಟಿಗೆ ಕೊಯ್ಯುವ ಗಿರಣಿಯನ್ನು ವ್ಯವಸ್ಥೆ ಮಾಡುವ ವಿಚಾರವಿದೆ ಕಾಡಿನೊಳಗಿನ ಕಟ್ಟಿಗೆಯನ್ನು ಕಡಿದು, ಲಾಭಹೊಂದಬೇಕಾದರೆ, ಹೊಸ ರಹದಾರಿಗಳನ್ನು ನಿರ್ಮಾಣ ಮಾಡಬೇಕು. ಬೊಮ್ಮನಳ್ಳಿಯಲ್ಲಿ ಕಟ್ಟಿಗೆಯನ್ನು ನದಿಯ ಮೇಲಿಂದ ಒಯ್ಯಲಿಕ್ಕೆ ಮಾಡಲೊಂದು ಹಂಗಾಮಿ ಸಂಕವಿತ್ತು ಆದರೆ, ಅದರಿಂದ ಸರಕಾರಕ್ಕೂ, ಕಂಟ್ರಾಕ್ಟದಾರರಿಗೂ ಬಹಳೇ ಹಾನಿಯು ಸಂಭವಿಸಿದೆ. ದೊಡ್ಡ ನೆರೆಬಂದಾಗ್ಗೆ ಹೊಸ ಕಲ್ಲು ಸಂಕದ ಮೇಲೆ ೧೫ ಫೂಟು ಅಂದರೆ, ೨-೩ ಆಳು ನೀರು ತುಂಬಿನಿಲ್ಲುತ್ತದೆ ಮಳೆಗಾಲದಲ್ಲಿ ಒಂದು ಘಂಟೆಯ ವರೆಗೆ ಈ ಸಂಕದ ಮೇಲೆ ನೀರು ನಿಲ್ಲುತ್ತದೆ

ಧ್ವಜಸಂಗ್ರಾಮ.

ನಾಗಪುರದ ಸಹಕಾರಿಗಳ ದ್ವೇಷ.

ಮಧ್ಯಪ್ರಾಂತದ ಕಾಯಿದೆ ಕೌನ್ಸಿಲಿನಲ್ಲಿ ಆಗಸ್ಟ ೭ ನೇ ಮಂಗಳವಾರದಿಂದ ಬಿನ್‌ಸರಕಾರಿ ಸಾಮುದಾರರು ಸೂಚಿಸಿದ ಸಾರ್ವಜನಿಕ ಮಹತ್ವದ ಠರಾವುಗಳ ಚರ್ಚೆಯು ನಡೆದಿದೆ. ಮಂಗಳವಾರಕ್ಕೆ ಸತ್ಯಾಗ್ರಹ ಸಂಗ್ರಾಮದ ಬಗ್ಗೆ ಠರಾವು ಚರ್ಚೆಗೆ ಬರುವದೆಂದು ಜಾಹೀರಾಗಿತ್ತು. ಸಭಾಸ್ಥಾನವೆಲ್ಲ ಪ್ರೇಕ್ಷಕರಿಂದ ತುಂಬಿಹೋಗಿತ್ತು. ಮುಂಬಯಿಯಿಂದ ಸಂಗ್ರಾಮಕ್ಕಾಗಿ ನಾಗಪುರಕ್ಕೆ ಗಮಿಸಿದ ಶ್ರೀ ವಿಠ್ಠಲಭಾಯಿ ಪಟೇಲರವರೂ ಪ್ರೇಕ್ಷಕವರ್ಗದಲ್ಲಿ ಸೇರಿದ್ದರು. ಅನೇಕ ಯುರೋಪಿಯನ್ ಹೆಂಗಸರೂ, ಸತ್ಯಾಗ್ರಹಿಗಳ ದೇಶಬಾಂಧವರು ಏನ ಮಾಡುತ್ತಾರೆಂದು ನಿರೀಕ್ಷಿಸಲು ನೆರೆದಿದ್ದರು. ಪ್ರಶ್ನೋತ್ತರಗಳು ಮುಗಿದ ಬಳಿಕ, ಕೇಟ ಶಿವಲಾಲರವರು ತಮ್ಮ ಠರಾವನ್ನು ಸೂಚಿಸಿದರು. ನಾಗಪುರದ ಡಿ| ಮೆಜಿಸ್ಟ್ರೇಟರವರು ಕ್ರಿ ಪ್ರೊ ಕೋ ೧೪೪ ನೇ ಕಲಮಿನನ್ವಯ ಹೊರಡಿಸಿದ ಹುಕುಮನ್ನು ರದ್ದು ಮಾಡಬೇಕೆಂದು ಕೇಟಜೀಯವರು ಸೂಚಿಸಿದರು. ಠರಾವಿಗೆ ಪುಷ್ಟೀಯನ್ನೀಯಲು ಕೇಟಜೀಯವರು ಹಿಂದೀ ಭಾಷೆಯಲ್ಲಿ ಉಪನ್ಯಾಸವನ್ನಿತ್ತರು. ಧ್ವಜಸಂಗ್ರಾಮದ ಪೂರ್ವೇತಿಹಾಸವನ್ನು ನಿವೇದಿಸಿ, ಸತ್ಯಾಗ್ರಹಿಗಳ ಉದ್ದೇಶವನ್ನು ನಿರ್ಣಯಿಸಿಕೊಳ್ಳಲು ಹುಕುಮು ಹೊರಡಿಸುವ ಪೂರ್ವದಲ್ಲಿ ಪ್ರಜಾಪ್ರತಿನಿಧಿಗಳ ಆಲೋಚನೆ ಪಡೆಯಬೇಕಾಗಿತ್ತೆಂತಲೂ ನುಡಿದರು. 'ಯುರೋಪಿಯನ್ ನಿವಾಸಿಗರಿಗೆ ಚಿತ್ತಕ್ಷೋಭವಾಗುತ್ತದೆಂಬ ನೆವವು ಆವರು ನಿರಾಧಾರವಿರುತ್ತದೆಂದರು. ಯಾಕೆಂದರೆ, ಜುಲೈ ತಾ ೧೮ನೇ ಗಾಂಧೀದಿನಕ್ಕೆ ಅಖಿಲ ಬಿರಾರ ಹಿಂದದಲ್ಲಿ ರಾಷ್ಟ್ರಧ್ವಜೋತ್ಸವವು ಜರುಗಿದರೂ, ಅವರಿಗೆ ಚಿತ್ತಕ್ಷೋಭವಾದ ಸುದ್ದಿಯೇನಿಲ್ಲ. ಹುಕುಮೂ ಕಟ್ಟಳೆಗಳೂ ಬರೇ ಅನ್ಯಾಯವಷ್ಟೆ. ಸರಕಾರವು ಅಸಮರ್ಥನೀಯ ಕೃತಿಗಳನ್ನು ಎಸಗಿ ಪ್ರಜೆಗಳಿಗೆ ಉಪದ್ರವ ಕೊಡುತ್ತದೆ. ಡಿಸ್ಟ್ರಿಕ್ಟ ಮೆಜಿಸ್ಟ್ರೇಟ ಮೊದಲಾದ ಅಧಿಕಾರಿಗಳ ಚೇಷ್ಟೆಯನ್ನು ದೂರಮಾಡಲು ತಾವು ಈ ಠರಾವನ್ನು ಸೂಚಿಸಿದ್ದೇವೆಂದರು. ಬಳಿಕ, ಈ ಠರಾವಿನ ಮೇಲೆ ಅನುಕೂಲ ಪ್ರತಿಕೂಲ ಉಪನ್ಯಾಸಗಳಾದವು. ಮಹಾರ ಜ್ಞಾತಿಯ ಪ್ರತಿನಿಧಿಗಳಾದ ರಾ| ಗವಯಿಯವರು ಈ ಹುಕುಮನ್ನು ರದ್ದುಪಡಿಸುವದು ಸರಕಾರದ ಅಪಜಯದ ದ್ಯೋತಕವೆಂದು ಉದ್ಗರಿಸಿದರು. ಸರಕಾರದ ಇಂಥ ಕೃತಿಯ ಬಲ ಅದಕ್ಕೆ ಸರ್ವಜನರಿಂದ ಬೆಂಬಲವನ್ನಿತ್ತವರೆಲ್ಲರೂ ಈಗ ಪಶ್ಚಾತ್ತಾಪಹೊಂದುತ್ತಿರಬಹುದು ನುಡಿದರು. ಗೃಹಮಂತ್ರಿಗಳಾದ ಸಾಮುದಾರ ಸರ್ ಜೋಶಿಯವರು ಸರಕಾರ ಪಕ್ಷವನ್ನು ಮಂಡಿಸಿದರು. ಸರಕಾರವು ಯಾವಾಗಲೂ ಸಹನಶೀಲತೆಯುಳ್ಳದ್ದೆಂತಲೂ, ಇದೇ ಪ್ರಾಂತದಲ್ಲೇ ಧ್ವಜವನ್ನು ಮೆರವಣಿಗೆ ಮಾಡುತ್ತಿರುವಾಗ ನಾಗಪುರದಲ್ಲಿ ಮಾತ್ರ ಅದಕ್ಕೆ ಪ್ರತಿಬಂಧಿಸಲು ಕಾರಣವಿರಬೇಕೆಂದೂ, ಡಿ| ಮೆಜಿಸ್ಟ್ರೇಟರ ಅಧಿಕಾರವನ್ನು ಅಲ್ಲಗಳೆಯದ್ದರಿಂದಲೇ ಈ ಹುಕುಮನ್ನು ಹೊರಡಿಸಬೇಕಾಯಿತೆಂತಲೂ ನುಡಿದರು. ಹುಕುಮು ಕಾಯಿದೆಶೀರ ಅದೆ, ನ್ಯಾಯಯುಕ್ತವಿದೆ. ಬೇಕಾಯಿದೇಶೀರ ಎಂದು ತಿಳಕೊಂಡರೂ, ಅದನ್ನು ಹಿಂತಿರುಗಿಸಲು ಸತ್ಯಾಗ್ರಹವನ್ನೇ ಕೈಕೊಳ್ಳಬೇಕೇನು? ಡಿ| ಮೆಜಿಸ್ಟ್ರೇಟರ ಹುಕುಮು ಅಗಸ್ಟ ತಾ. ೧೭ ನೇಗೆ ತಾನಾಗಿಯೇ ರದ್ದು ಹೊಂದುತ್ತದೆ. ಆಗ ಶಾಂತತಾಭಂಗದ ಭೀತಿಯಿಲ್ಲದಿದ್ದರೆ, ಡಿ| ಮೆಜಿಸ್ಟ್ರೇಟರ ಹುಕುಮನ್ನು ಪಡೆದು, ಧ್ವಜದ ಮೆರವಣಿಗೆಯನ್ನು ಸ್ವಯಂಸೇವಕರು ಹೊರಡಿಸಿದರೆ, ಅದಕ್ಕೆ ತಮ್ಮದೇನು ಅಡ್ಡಿ ಇಲ್ಲ ಎಂತಲೂ ಗೃಹಮಂತ್ರಿಗಳು ವಾದಿಸಿ, ಕೇಟ ಶಿವಲಾಲರ ಠರಾವನ್ನು ಹಿಂತೆಗೆಯಬೇಕೆಂದು ಕೌನ್ಸಿಲಿಗೆ ಬಿನ್ನೈಸಿದರು. ಚರ್ಚೆಯು ಮಾರನೇ ದಿನ ನಡೆಯಿತು. ಆಖೈರಿಗೆ ಮತ ಎಣಿಸಲು, ೩೧ ಮತ ಅನುಕೂಲ, ೨೬ ಮತ ಪ್ರತಿಕೂಲ ಬಿದ್ದು, ಪ್ರತಿಬಂಧಕ ಹುಕುಮನ್ನು ರದ್ದುಪಡಿಸುವ ಕೇಟ ಶಿವಲಾಲರ ಠರಾವು ಮಂಜೂರಾಯಿತು. ಮಾರನೇ ದಿನ ಅಂದರೆ, ಗುರುವಾರ ತಾ ೯ ನೇಗೆ ಪುನಃ ಕೌನ್ಸಿಲು ನೆರೆಯಿತು. ಹೋಶಂಗಾಬಾದದ ರಾ| ಜಯಸವಾಲರವರು ಸತ್ಯಾಗ್ರಹದ ಮೂಲಕ ಕಟ್ಟಿಗೀಡಾದವರನ್ನೆಲ್ಲ ಬಿಟ್ಟುಕೊಡಬೇಕೆಂತಲೂ, ನಾಗಪುರಕ್ಕೆ ಪ್ರವಾಸ ಮಾಡಲಿಚ್ಛಿಸುವ ಯಾವನೊಬ್ಬನಿಗೂ ಪ್ರತಿಬಂಧ ಮಾಡತಕ್ಕದ್ದಾಗಿಯೂ ಕೂಡಲೇ ಹುಕುಮನ್ನು ಹೊರಡಿಸಬೇಕೆಂತಲೂ ಸೂಚಿಸಿದರು. ರಾ| ಜಯಸವಾಲರವರು ನಾಗಪುರಕ್ಕೆ ಹೋಗಬಿಚ್ಛಿಸುವವರಿಗೆ ಟಿಕೇಟುಗಳನ್ನು ಕೊಡದಿರುವದು ಬೇಕಾಯಿದೇಶೀರ ಎಂತಲೂ, ಅವರ ಸತ್ಯಾಗ್ರಹದ ಉದ್ದೇಶವನ್ನು ಮುಂದಾಗಿ ತಿಳಿದುಕೊಂಡು, ಅವರಿಗೆ ನೆರವಾಗುವದು ವಿಹಿತವಲ್ಲೆಂತಲೂ ನುಡಿದರು. ಇಂಥ ಠರಾವುಗಳನು ವಿರೋಧಿಸಿ, ಕೌನ್ಸಿಲು ಸಭಾಸದರು ಅಸಹಕಾರಿತೆಗೆ ತಮ್ಮ ಮನ್ನಣೆಯನ್ನೀಯುತ್ತಾರೆಂದು ಗೃಹಮಂತ್ರಿಗಳು ನುಡಿದು, ಡಿ| ಮೇಜಿಸ್ಟ್ರೇಟರು ಹೊರಡಿಸಿದ ಹುಕುಮನ್ನು ರದ್ದುಪಡಿಸುವ ಅಧಿಕಾರವು ಸ್ಥಾನಿಕ ಸರಕಾರಕ್ಕಿಲ್ಲೆಂತಲೂ, ನುಡಿದು ಗೃಹಮಂತ್ರಿಗಳು ಸ್ವಸ್ಥಾನ ಸ್ವೀಕರಿಸಿದರು. ರಾವಬಹಾದ್ದೂರ ಮಹಾಜನಿಯವರು ಗೃಹಮಂತ್ರಿಗಳಿಗೆ ಚೊಕ್ಕ ಉತ್ತರವನ್ನಿತ್ತರು. ಅಧಿಕಾರಿಗಳ ಹುಕುಮುಗಳಿಂದ ನಾಗಪುರಕ್ಕೆ ಗಮಿಸಲಿಚ್ಛಿಸುವ ಪ್ರಯಾಣಿಕರ ಉದ್ದೇಶವನ್ನು ಕಂಡುಹಿಡಿಯುವ ಅಧಿಕಾರವೆಲ್ಲ ಸ್ಟೇಶನ್ ಮಾಸ್ತರರ ಕೈಯಲ್ಲಿ ಕೇಂದ್ರವಾಗಿದೆಂತಲೂ, ಡಿ| ಮೆಜಿಸ್ಟ್ರೇಟರ ಹುಕುಮುಗಳನ್ನು ರದ್ದುಪಡಿಸುವ ಅಧಿಕಾರವು ಸ್ಥಾನಿಕ ಸರಕಾರಕ್ಕಿಲ್ಲದಿದ್ದರೆ, ಇನ್ನು ಡಿ| ಮೆಜಿಸ್ಟ್ರೇಟರ ಕಾಲಕೀರ್ದಿಯು ಪ್ರಾರಂಭವಾಯಿತೆಂತಲೂ, ಸ್ಥಾನಿಕ ಸರಕಾರದ ಅಹರ್ತೆಯು ಆಳಿಯಿತೆಂತಲೂ, ರಾವಬಹಾದೂರರು ಪ್ರತಿಪಾದಿಸಿದರು. ಈ ಬಗ್ಗೆ ಅನುಕೂಲ-ಪ್ರತಿಕೂಲ ಭಾಷಣಗಳಾದ ಬಳಿಕ, ಮತ ಎಣಿಸಲು, ೨೭ ಅನುಕೂಲ, ೨೩ ಪ್ರತಿಕೂಲ ಮತಗಳು ಬಿದ್ದು ಠರಾವು ಮಂಜೂರಾಯಿತು.

ಕೇಟ ಶಿವಲಾಲರು ಮತ್ತೊಂದು ಠರಾವನ್ನು ಸೂಚಿಸಿದರು. ಧ್ವಜಸಂಗ್ರಾಮದಲ್ಲಿ ಸ್ವಯಂಸೇವಕರನ್ನೂ, ರಾಷ್ಟ್ರಸೇವಕರನ್ನೂ ಬಿನ್‌ಶರ್ತ ಮುಕ್ತ ಮಾಡಬೇಕೆಂದು ಕೇಟಜೀಯವರು ಸೂಚಿಸಿದರು. ಹುಕುಮು ಬೇಕಾಯಿದೇಶೀರು. ಕಟ್ಟಳೆಗಳು ಅನ್ಯಾಯದವು. ಇಂಥ ಹುಕುಮುಗಳನ್ನು ಉಲ್ಲಂಘಿಸುವದು ದೇಶಸೇವಕರ ಕರ್ತವ್ಯವಲ್ಲ. ಕ್ಷಮೆಯನ್ನೀಯಲು ತಮ್ಮ ಬೇಡಿಕೆಯಿಲ್ಲ. ಯಾಕಂದರೆ, ಕ್ಷಮೆ ಬೇಡಿ ಅನೇಕ ದುರ್ಬಲಚಿತ್ತದವರು ತಮ್ಮ ಮುಕ್ತಿಯನ್ನು ಪಡೆದಿರುವರು. ಈ ಕಾಯಿದೆಯನ್ನು ಉಲ್ಲಂಘಿಸಿದವರು ಕೇವಲ ದೇಶಾಭಿಮಾನದಿಂದ ಪ್ರೇರಿತರಾಗಿ ಸೆರೆಯಾಳಾಗಿರುವರು. ಅಸಹಯೋಗಿಗಳ ಆತ್ಮಕ್ಲೇಶದಿಂದ ಪ್ರಜೆಗಳೆಲ್ಲರೂ ಅವರೆಡೆಗೆ ಸಹಾನುಭೂತಿಯಿಂದ ಪ್ರೇರಿತರಾಗಿರುವರು, ಇಂಥ ಪ್ರಸಕ್ತಿಯಲ್ಲಿ ಸರಕಾರವು ಬಿನ್‌ಶರ್ತವಾಗಿ ಅವರನ್ನು ವಿಮೋಚಿಸದಿದ್ದರೆ ದೇಶದಲ್ಲೆಲ್ಲ ಅಸಂತೋಷವು ಹಬ್ಬುವದು. ಜೈಲುಖಾನೆಯಲ್ಲಿ ಹಾವಿದಾರು ರೂಪಾಯಿಗಳ ದಂಡವನ್ನು ವಸೂಲ ಮಾಡಲು ಸರಕಾರವೇ ಜವಾಬುದಾರವಿದೆ' ಎಂದು ಶಿವಲಾಲರು ಉಪನ್ಯಾಸವನ್ನಿತ್ತ ಬಳಿಕ, ಅನೇಕ ಸಭಾಸದರು ಈ ಠರಾವಿಗೆ ಪುಷ್ಟಿಯನ್ನಿತ್ತರು. ಗೃಹಮಂತ್ರಿಗಳು ಮತ್ತೊಂದು ಉದ್ದ ಭಾಷಣವನ್ನಿತ್ತರು. ಸತ್ಯಾಗ್ರಹಪ್ರವೃತ್ತಿಯು ನಾಮಶೇಷವಾಗದ ವರೆಗೆ ಸತ್ಯಾಗ್ರಹಿ ಕೈದಿಗಳನ್ನು ವಿಮೋಚಿಸುವದು ಯುಕ್ತವಲ್ಲೆಂತ ಪ್ರತಿಪಾದಿಸಿ, ಠರಾವನ್ನು ಹಿಂತೆಗೆಯಲು, ಸಭಿಕರಿಗೆ ವಿಜ್ಞಾಪಿಸಿದರು. ಬಳಿಕ ಮತ ಎಣಿಸಲು, ೩೧ ಅನುಕೂಲ, ೨೭ ಪ್ರತಿಕೂಲ ಹೀಗೆ ಮತಗಳು ಬಿದ್ದು, ಠರಾವು ಮಂಜೂರಾಯಿತು. ೩ ದಿವಸಗಳಲ್ಲಿ ಮಧ್ಯಪ್ರಾಂತದ ಸರಕಾರಕ್ಕೆ ೩ ಸರತಿ ಸಹಕಾರಿಗಳು ಸೋಲಿಸಿದರು.

ಹೀಗೆ ಮಂಜೂರಾದ ೩ ಠರಾವುಗಳು ಮಧ್ಯಪ್ರಾಂತದ ಸರಕಾರವು ಹೇಗೆ ಅಮಲಿನಲ್ಲಿ ತರುತ್ತದೆಂದು ನೋಡಲು ಅಖಿಲರೂ ನಿರೀಕ್ಷಿಸುತ್ತಿರುವರು. ಮಾರನೇ ದಿನ ಅಂದರೆ, ತಾ ೧೦ನೇ ಶುಕ್ರವಾರಕ್ಕೆ ಕೌನ್ಸಿಲು ನೆರೆಯಲು, ರಾ| ಜಯಸವಾಲರವರು ಈ ೩ ಠರಾವುಗಳನ್ನು ಅಮಲಬಜಾವಣಿ ಮಾಡಲು ಸರಕಾರವು ಏನು ವಿಚಾರ ಮಾಡಿದೆ? ಎಂದು ಪ್ರಶ್ನಿಸಲು, ಗೃಹಮಂತ್ರಿಗಳು ಸರಕಾರದ ಮಂತ್ರಿಮಂಡಳಕ್ಕೆ ಆಲೋಚನೆ ಮಾಡಲು, ಸಾಕಷ್ಟು ಅವಕಾಶ ದೊರೆಯಲಿಲ್ಲೆಂತಲೂ, ಅಧಿವೇಶನವು ವಿಸರ್ಜನಹೊಂದಿದ ಮೇಲೆ ಈ ಬಗ್ಗೆ ವಿಚಾರ ಮಾಡಲಾಗುವದೆಂತಲೂ ನುಡಿದರು. ಸತ್ಯಾಗ್ರಹಿ ಕೈದಿಗಳಿಗೆ ಕೆಟ್ಟರೀತಿಯಿಂದ ನಡಿಸುತ್ತಾರೆಂಬ ವಿಷಯವನ್ನು ಚೌಕಶಿ ಮಾಡುವದಕ್ಕೊಂದು ಕಮಿಟಿಯನ್ನು ನೇಮಿಸಬೇಕೆಂಬ ಠರಾವನ್ನು ಕೇಟ ಭದ್ರಿಪ್ರಸಾದರವರು ಸೂಚಿಸಿದರು. ರಾವಬಹಾದ್ದೂರ ಮಹಾಜನಿಯವರು ಕಮಿಟಿ ನೇಮಣೂಕಿಯಿಂದ ಬರಿಯೇ ಖರ್ಚು ತಗಲುವದೆಂತಲೂ, ಕೈದುಖಾನೆಗಳನ್ನು ಸಂದರ್ಶಿಸಲು ಬಿನ್‌ಸರಕಾರಿ ಗೃಹಸ್ಥರಿದ್ದದರಿಂದ, ಅವರು ಈ ಬಗ್ಗೆ ಹೆಚ್ಚು ಕಡಿಮೆಯಿದ್ದಲ್ಲಿ, ಸರಕಾರಕ್ಕೆ ತಿಳಿಸುತ್ತಾರೆಂತಲೂ ನುಡಿದು, ಠರಾವನ್ನು ವಿರೋಧಿಸಿದರು. ಗೃಹಮಂತ್ರಿಗಳೂ ವೃತ್ತಪತ್ರಗಳಲ್ಲಿ ಪ್ರಕಟಗೊಂಡ ಹಕೀಕತು ಸಾಧಾರವಿಲ್ಲೆಂದು ನುಡಿಯಲು, ತಮ್ಮ ಠರಾವನ್ನು ಕೇಟ ಭದ್ರಿಪ್ರಸಾದರವರು ಹಿಂದಕ್ಕೆ ಪಡಕೊಂಡರು.

ಇತರ ಹಕೀಕತು.

ಸತ್ಯಾಗ್ರಹವು ಸ್ಥಿರವಾಗಿ ನಡೆದಿದೆ. ನಿತ್ಯವೂ ಸರಕಾರವು ಸತ್ಯಾಗ್ರಹಿಗಳನ್ನು ಸೆರೆಹಿಡಿಯುತ್ತದೆ. ಕೊಂಗ್ರೆಸು ಕಾರ್ಯಕಾರಿ ಮಂಡಳವು ೬ನೇ ತಾರೀಖಿನಿಂದ ಅಲ್ಲಿಯೇ ಠಾಣ್ಯ ಹೂಡಿ, ಸತ್ಯಾಗ್ರಹದ ಸಂಗ್ರಾಮವನ್ನು ಚೈತನ್ಯದಿಂದ ನಡಿಸುತ್ತದೆ. ಶ್ರೀಮತಿ ಕಸ್ತೂರಬಾಯಿ ಗಾಂಧಿಯವರು ಸ್ತ್ರೀ-ಸ್ವಯಂಸೇವಕ ಪಥಕವನ್ನೊಂದು ಕೂಡಿಸಿ, ನಾಳಿನ ಗಾಂಧೀ ದಿನಕ್ಕೆ ನಾಗಪುರಕ್ಕೆ ಹೋಗಿ ಸತ್ಯಾಗ್ರಹ ಹೂಡಲು ವ್ಯವಸ್ಥೆ ಮಾಡುತ್ತಿರುವರು. ಕಾಲು ನಡಿಗೆಯಿಂದಲೇ ಅಹಮದಾಬಾದದ ಸತ್ಯಾಗ್ರಹಿಗಳ ಪಥಕವೊಂದು ನಾಗಪುರಕ್ಕೆ ಗಮಿಸಿದೆ. ೬ನೇ ತಾರೀಖಿಗೆ ಅಂತು ೧೪ ಸತ್ಯಾಗ್ರಹಿಗಳಿಗೆ ಕೈದು ಮಾಡಿದರು. ಅದರಲ್ಲಿ ಕಾರವಾರದ ಮಿ| ಅಬ್ದುಲ ಸಹಾಬರವರಿಗೂ ಬಂದಿವಾಸವು ಪ್ರಾಪ್ತವಾಗಿದೆ. ಲೋಕಮಾನ್ಯರ ಪುಣ್ಯತಿಥಿಯ ಪುಣ್ಯ ದಿನಕ್ಕೆ ವರ್ಧಾದೊಳಗಿನ ಜವಳೀ ವ್ಯಾಪಾರಸ್ಥರು ನೆರೆದು, ಕೇಟ ಜಮುನಾಲಾಲಜೀಯವರು ಬಂದಿವಾಸದಲ್ಲಿರುವ ವರೆಗೆ ಪರದೇಶಿ ಅರಿವೆಯನ್ನು ಕ್ರಯ-ವಿಕ್ರಯ ಮಾಡಬಾರದೆಂದು ನಿರ್ಧರಿಸಿರುವರು. ಆಗಸ್ಟ ೬ ನೇ ತಾರೀಖಿಗೆ ಡಾ| ದೇಶಮುಖರವರ ವೃದ್ಧ ತಂದೆಯವರೂ, ಪತ್ನಿಯವರೂ, ಕೇಟ ಬಜಾಜರ ಪತ್ನಿಯವರೂ ಕೆಲ ಮಿತ್ರರಿಂದೊಡಗೂಡಿ, ಕೇಟಜೀಯವರಿಗೂ, ಡಾ| ದೇಶಮುಖರವರಿಗೂ ಭೆಟ್ಟಿಯನ್ನಿತ್ತರು. ಕೇಟಜೀಯವರಿಗೆ ಕೆಲ ದಿನಗಳ ಪೂರ್ವದಲ್ಲಿಯೇ ಚಳಿಜ್ವರವೂ, ಅತಿಸಾರಬೇನೆಯೂ ಆಗಿತ್ತು. ಅದರಿಂದ ಅವರು ಅಶಕ್ತರಾಗಿದ್ದರು. ಡಾ| ನೀಲಕಂಠರಾಯರು ನಿರೋಗಿಗಳಾಗಿ, ಉಲ್ಲಸಿತಮನಸ್ಕರೂ ಇದ್ದರು. ಜುಲೈ ತಾ. ೩೧ ನೇಗೆ ಡಾ| ದೇಶಮುಖರವರಿಗೆ ವಿಧಿಸಿದ ೧೫೦೦ ರೂಪಾಯಿಗಳ ದಂಡದ ರಕಮನ್ನು ವಸೂಲ ಮಾಡಿಕೊಳ್ಳಲು ಪ್ರಾರಂಭವಾಯಿತು. ಅವರ ಮನೆಯಲ್ಲಿದ್ದ ಒಂದು ಪೆಟ್ಟಿಗೆಯನ್ನು ಜಪ್ತು ಮಾಡಿದರು. ಅದರೊಳಗೆ ೧೫೨೫ ರೂಪಾಯಿಗಳ ಕರನ್ಸಿ ನೋಟುಗಳೂ, ೫ ರೂಪಾಯಿ ನಗದು, ಒಂದು ಗಡಿಯಾರ ಮೊದಲಾದ ಕೆಲ ಸಾಮಾನುಗಳೂ ಇದ್ದವು. ಜಪ್ತೀದಾರರು ದಂಡದ

ರಕಮನ್ನು ಮುಕ್ತ ಪಡೆಕೊಂಡು, ಉಳಿದವುಗಳನ್ನೆಲ್ಲ ಪರತಮಾಡಿದರು. ಈ ವರೆಗೆ, ಅಂದರೆ, ತಾ. ೬ನೇ ಅಗಸ್ಟ ವರೆಗೆ ಸತ್ಯಾಗ್ರಹಿಗಳಿಗೆ ವಿಧಿಸಿದ ದಂಡದ ರಕಮು ರೂ ೩೬,೩೬೮ ಅವುಗಳಲ್ಲಿ ರೂ. ೪,೪೩೩ ವಸೂಲಾಗಿವೆ. ೩೫೫ ಮಂದಿಗಳ ಮೇಲೆ ವಾರಂಟುಗಳು ಹೊರಟಿವೆ. ಕ್ಷಮೆ ಬೇಡಿ, ಜೈಲುಖಾನೆಯಿಂದ ಮುಕ್ತಹೊಂದಿದ ದುರ್ಬಲಮನಸ್ಕರ ಸಂಖ್ಯೆಯು ೧೩೪. ಜಾಮೀನು ಕೊಡಾರು ಕೊಟ್ಟು, ಹೊರಬಂದವರು ೧೫೩. ಮತ್ತು ಶಿಕ್ಷೆಯನ್ನನುಭವಿಸಿ, ಸೆರೆಮನೆಯಿಂದ ಬಿಡುಗಡೆ ಹೊಂದಿದವರು ೩೧೩. ಕ್ಷಮೆ ಬೇಡಿ, ಜಾಮೀನ-ಕೊಟ್ಟು, ಮುಕ್ತಹೊಂದಿದವರ ಬಗ್ಗೆ ಪುಣ್ಯಪಟ್ಟಣದ 'ಸ್ವರಾಜ್ಯ' ಪತ್ರಿಕೆಯು ಬರೆಯುವದೇನಂದರೆ:— ಅವರನ್ನು ನಿಜವಾದ ಸತ್ಯಾಗ್ರಹಿಗಳ ಪಥಕದಲ್ಲಿ ಮುದ್ದಾಮು ಸೇರಿಸಿ, ಇವರು ಕ್ಷಮೆ ಬೇಡಿದರು, ಇವರು ಜಾಮೀನು ಕೊಟ್ಟರು ಎಂದು ಪ್ರಕಟಿಸಿ, ಸತ್ಯಾಗ್ರಹಸಂಗ್ರಾಮಕ್ಕೆ ಹೆಸರು ಇಡುವರೆ ದುಷ್ಟರು ಕಾರಸ್ಥಾನ ಹೂಡಿರುವರೆಂಬ ಒಂದು ಸುದ್ದಿಯು ಪ್ರಕಟವಾಗಿದೆ. ಇದು ಯಥಾರ್ಥವಿದ್ದರೆ, ಸತ್ಯಾಗ್ರಹಸಂಗ್ರಾಮದ ಶಿಸ್ತನ್ನು, ನಿರ್ಧಾರವನ್ನು ಕೊಂಡಾಡಿದಷ್ಟು ಕಡಿಮೆ.

ನನ್ನ ಮತದಾರ ಬಾಂಧವರಿಗೆ—

ಕಾನಡಿಗ ದೇಶಬಾಂಧವರೇ,

ಈ ವರ್ಷ ನೀವೆಲ್ಲರೂ ನಮ್ಮ ಜಿಲ್ಲೆಯ ಕಡೆಯಿಂದ ನಮ್ಮ ಪ್ರಾಂತಿಕ ಮುಂಬಯಿ ಕಾಯಿದೆ ಕೌನ್ಸಿಲಿಗೆ ಒಬ್ಬ ಪ್ರತಿನಿಧಿಯನ್ನು ಆರಿಸಿಕೊಡಬೇಕಾಗಿದೆ. ಈ ಮಹತ್ವದ ಕರ್ತವ್ಯವನ್ನು ಜರುಗಿಸುವ ಸಮಯವು ಇನ್ನು ೩-೪ ತಿಂಗಳುಗಳೊಳಗೆ ನಿಮಗೆ ಪ್ರಾಪ್ತವಾಗುವದು. ನಮ್ಮ ಜಿಲ್ಲೆಯೊಳಗಿನ ಕೆಲ ಮುಂದಾಳುಗಳೂ, ಮತದಾರರೂ ನಾನು ಈ ಸಭಾಸದತ್ವವನ್ನು ಅಂಗೀಕರಿಸಿ, ಕೌನ್ಸಿಲು ಮುಖಾಂತರ ಲೋಕಸೇವೆಯನ್ನು ನಡಿಸಬೇಕೆಂದು ಮೇಲಿಂದಮೇಲೆ ಸೂಚಿಸಿದರು. ಆದ್ದರಿಂದ, ನಾನು ಅವರ ಸೂಚನೆಯನ್ನು ಆದರಿಸಿ, ಕೌನ್ಸಿಲು ಸಭಾಸದತ್ವಕ್ಕೆ ಉಮೇದವಾರನಾಗಿ ನಿಲ್ಲಬೇಕೆಂದು ಅಪೇಕ್ಷಿಸಿದ್ದೇನೆ.

ಸರ್ವದಾ ನಿರಪೇಕ್ಷಬುದ್ಧಿಯಿಂದ ಲೋಕಸೇವೆಯನ್ನು ಯಥಾಶಕ್ತಿ ಮಾಡುತ್ತಿರಬೇಕೆಂದು ನನ್ನ ಅಪೇಕ್ಷೆಯು. ನಾನು ಬಿ. ಎ. ಪರೀಕ್ಷೆಯನ್ನು ಉತ್ತೀರ್ಣಹೊಂದಿದ ಸಮಯದಲ್ಲಿ, ಸರಕಾರಿ ನೌಕರಿಯ ಸುವರ್ಣಶೃಂಖಲೆಯಿಂದ ಕೈಕಟ್ಟಿಕೊಳ್ಳುವದು ಆಗ ಸುಲಭಸಾಧ್ಯವಿತ್ತು. ಆದರೂ, ಅದನ್ನು ನಿರ್ಧಾರದಿಂದ ನಿರಾಕರಿಸಿ, ಈಗ ೧೦-೧೫ ವರ್ಷಗಳಿಂದ ರಾಷ್ಟ್ರೀಯ ತತ್ವಗಳಿಗೆ ಅನುಸರಿಸಿ, ಕೈಲಾದಷ್ಟು ಲೋಕಸೇವೆಯನ್ನು ನಡಿಸುತ್ತಿರುವೆನು. ಅಲ್ಪ ವೇತನದ ಮೇಲೆ ಕುಮಟೆಯ ಗಿಬ್ ಹೈಸ್ಕೂಲಿನ ಮುಖ್ಯಾಧ್ಯಾಪಕತ್ವವನ್ನು ವಹಿಸಿಕೊಂಡಿದ್ದೆನು. ವೇತನವಿಲ್ಲದೆ, ಕೇವಲ ಸ್ವಯಂಸೇವಕ ಬುದ್ಧಿಯಿಂದ ೭ ವರ್ಷಗಳ ತನಕ ವೃತ್ತಪತ್ರದ ಸೇವೆಯನ್ನು ನಡಿಸಿದೆನು. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ಸಭಾಸದತ್ವವನ್ನು ವಹಿಸಿಕೊಂಡು, ಕೆಲಸ ಮಾಡಿರುವೆನು. ಇಂಥ ಸಾರ್ವಜನಿಕ ಕೆಲಸಗಳನ್ನೆಲ್ಲ ದಿಟ್ಟತನದಿಂದ, ಕರ್ತವ್ಯನಿಷ್ಠತೆಯಿಂದ ನೆರವೇರಿಸುತ್ತ ಬಂದಿರುವೆನೆಂದು ನಿಮ್ಮೊಳಗಿನ ಅನೇಕ ಮತದಾರ ಬಾಂಧವರಿಗೆ ಗೊತ್ತಿದ್ದ ಸಂಗತಿಯೇ ಸರಿ. ಜಿಲ್ಲೆಯೊಳಗಿನ ಮುಖ್ಯ ಪಟ್ಟಣವಾದ ಕಾರವಾರ ನಗರಿಯಲ್ಲಿ ಸೇರಿದ ಕಾನಡಾ ಜಿಲ್ಲೆಯ ರಾಜಕೀಯ ಪರಿಷತ್ತಿನ ಅಧಿವೇಶನದಲ್ಲಿ ಔದ್ಯೋಗಿಕ, ರಾಜಕೀಯ ವಿದ್ಯಾವಿಷಯಗಳ ಮೇಲೆ ಭಾಷಣಗಳನ್ನು ಕೊಟ್ಟು, ನನ್ನ ಮತಗಳನ್ನೆಲ್ಲ ಜಾಹೀರ ರೀತಿಯಿಂದ ನನ್ನ ಕಾನಡಿಗ ಬಾಂಧವರಿಗೆ ಅರುಹಿರುವೆನು. ಇತರ ಸಾರ್ವಜನಿಕ ಸಣ್ಣ ದೊಡ್ಡ ಕಾರ್ಯಗಳಲ್ಲಿಯೂ ನಾನು ಆಗಿಂದಾಗ ಪ್ರವೇಶಿಸಿ, ಅದಕ್ಕನುಗುಣವಾದ ಸೇವೆಯನ್ನು ನೆರವೇರಿಸಿರುವೆನು.

ಪ್ರಚಲಿತ ರಾಜಕಾರಣದೊಳಗಿನ ರಾಷ್ಟ್ರೀಯ ಸಭೆಯ ಧ್ಯೇಯವು ನನಗೆ ಮಾನ್ಯವಿದೆ. ಎಲ್ಲ ಶಾಂತ ಹಾಗು ಯೋಗ್ಯ ಸಾಧನಗಳಿಂದ ಪೂರ್ತಿ ಸ್ವರಾಜ್ಯವನ್ನು ಪಡೆಯಬೇಕೆಂಬ ಮತದವನು ನಾನಿರುವೆನು. ರಾಷ್ಟ್ರೀಯ ಸಭೆಯು ವಿಧಿಸಿದ ವಿಧಾಯಕ ಕಾರ್ಯಕ್ರಮವು ರಾಷ್ಟ್ರದ ಸರ್ವಾಂಗೋನ್ನತಿಗೆ ಆವಶ್ಯವಿದೆಂತಲೂ ನನ್ನ ಮತವಿದೆ. ರಾಜಕೀಯ ಬಣಗಳ ಗೊಂದಲದಿಂದ ರಾಷ್ಟ್ರೈಕ್ಯವು ಭಂಗವಾಗಿ ದೇಶದ ಪ್ರಗತಿಯು ಕುಂಠಿತವಾಗಿದೆಂತಲೂ ನನ್ನ ಅಭಿಪ್ರಾಯ. ಇಷ್ಟಕ್ಕೆ ನಾನು ರಾಷ್ಟ್ರೀಯ ಸಭೆಯ ನಿಸ್ಸಹಕಾರಿಯು. ಆದರೂ, ಸ್ವತಂತ್ರ ಸ್ವರಾಜ್ಯವಾದಿ ಉಮೇದವಾರನಾಗಿ ನಿಂತಿರುವೆನು. ಈಗಿನ ರಾಜಕಾರಣದೊಳಗೆ ಪಕ್ಷ-ಪ್ರತಿಪಕ್ಷಗಳ ಗೊಂದಲವೆಬ್ಬಿದೆ; ಯಾರು, ಯಾರೆಂದು ತಿಳಿಯುವದು ದುಸ್ತರವಾಗಿದೆ. ಮತದಾರರಂತು ಶಬ್ದಜಾಲಗಳಲ್ಲಿ ಏನೂ ಬೋಧ ದೊರೆಯದೆ, ದಿಙ್ಮೂಢರಾದರೆ, ಅದೇನು ಆಶ್ಚರ್ಯವಲ್ಲ. ಇಂಥವರೆಲ್ಲರು "ನೀವು ಯಾವ ಪಕ್ಷದವರು?" ಎಂದು ನನಗೆ ಕೇಳುವದು ಸಹಜವು. ಇಂಥವರಿಗೆಲ್ಲರಿಗೆ "ನಾನು ಲೋಕಪಕ್ಷದವನು" ಎಂಬ ಸಾದಾ, ಸರಳ ಉತ್ತರವನ್ನು ಕೊಡುತ್ತೇನೆ.

ಕಾನಡಾ ಜಿಲ್ಲೆಯ ಬೇಸಾಯದ ಏಳಿಗೆಗಾಗಿ ತಕ್ಕ ಕಾಯಿದೆ ಕಾನೂನುಗಳನ್ನು ನಿರ್ಮಿಸುವದೂ, ಜನದುಃಖನಿವಾರಣೆಗಾಗಿ ಲಕ್ಷ್ಯವಿಟ್ಟು ಪ್ರಶ್ನೆಗಳನ್ನೆತ್ತುವದೂ, ಸಾಮಾಜಿಕ, ವ್ಯಾಪಾರಿಕ, ಔದ್ಯೋಗಿಕ, ಆರೋಗ್ಯ ವಿಷಯಕ ಸುಧಾರಣೆಗಾಗಿ ದುಡಿಯುವದೂ, ಶಿಕ್ಷಣದ ವಿಸ್ತಾರಕ್ಕಾಗಿ ಪ್ರಯತ್ನ ನಡಿಸುವದೂ, ಸ್ಥಾನಿಕ ದೂರುಗಳನ್ನು ಕೌನ್ಸಿಲದ ಮುಂದಿಟ್ಟು, ಅವುಗಳನ್ನು ದೂರ ಮಾಡಿಸಿಕೊಳ್ಳಲು ಕಾದಾಡುವದೂ, ಇವೇ ಮೊದಲಾದ ಕಾರ್ಯಗಳನ್ನು ಕೌನ್ಸಿಲು ಮುಖಾಂತರ ನೆರವೇರಿಸಿಕೊಳ್ಳಲು ನಿಷ್ಠೆಯಿಂದ ಯತ್ನಿಸುತ್ತಿರುವದೂ, ನನ್ನ ಕರ್ತವ್ಯವಾಗಿರುವದೆಂದು ನಾನು ಯಾವಾಗಲೂ ತಿಳಿದಿರುವೆನು. ಯಾವದೇ ವಿಧದ ಹೊಸ ತೆರಿಗೆಗಳಿಗೆ ಈಗಿನ ನಮ್ಮ ಆರ್ಥಿಕ ಸ್ಥಿತಿಯಲ್ಲಿ ಸಮ್ಮತಿಸುವದು ನಮ್ಮ ಬಡತನಕ್ಕೆ ಮತ್ತಿಷ್ಟು ಹೆಚ್ಚಿನ ಕಾರಣವಾಗುವದೆಂದು, ನನ್ನ ಮತವಿದೆ. ಉತ್ಪನ್ನವನ್ನು ಹೆಚ್ಚಿಸುವದಕ್ಕಿಂತ ವೆಚ್ಚವನ್ನು ದಿನೇದಿನೇ ತಗ್ಗಿಸಬೇಕೆಂಬ ಆರ್ಥಿಕ ಧೋರಣವನ್ನು ನಾನು ಯಾವಾಗಲೂ ಪುರಸ್ಕರಿಸುವೆನು. ಕಾನಡಾ ಜಿಲ್ಲೆಯ ಪ್ರತಿನಿಧಿಯಾಗಿ ತಕ್ಕ ಕರ್ತವ್ಯಗಳನ್ನು ದೇಶಬಾಂಧವರಿಗೆ ಹಿತಕರವಾಗುವಂತೆ ಜರುಗಿಸಲಿಕ್ಕೆ ನಾನು ಪಾತ್ರನಿದ್ದೇನೆಂದು ನನ್ನ ಮತಾವಿಷ್ಕರಣದಿಂದ ಬಾಂಧವರಿಗೆ ನಂಬಿಗೆ ಇದ್ದರೆ, ಅವರು ನನಗೆ ತಮ್ಮ ಪೂರ್ಣ ಸಹಾನುಭೂತಿಯನ್ನು ತೋರಿಸುವರೆಂದು ನಾನು ಕೋರುವೆನು. ಮತದಾರರಿಗೆ ತಮ್ಮ ಮತವನ್ನು ತಮಗೆ ಯೋಗ್ಯ ಕಂಡ ಉಮೇದವಾರರಿಗೆ ಕೊಡುವ ಪೂರ್ಣ ಸ್ವಾತಂತ್ರ್ಯವದೆ. ಅದನ್ನು ಅವರು ಜಿಲ್ಲೆಯ ಹಿತವನ್ನು ಸ್ಮರಿಸಿ, ಉಪಯೋಗಿಸುವರೆಂದು ನಾನು ನೆರೆನಂಬಿದ್ದೇನೆ.

ಅಂಕೋಲಾ. ತಾ. ೮-೮-೨೩. } ತಮ್ಮ ನಮ್ರ ಸೇವಕ,
ವಿಶ್ವನಾಥ ಪಾಂಡುರಂಗ
ಪ್ರಭು ಬಿ. ಎ.

ದೇಶಿ ಸೆಂಟೋನಾಯಿನ್.

(ಜಂತುವಿನ ಪುಡಿ.)

ಅಪಾಯಕರವಿಲ್ಲದೆ ಗುಣ ಕೊಡುವಂಥಾದ್ದು. ಪ್ರಪಂಚದಲ್ಲಿ ಪ್ರಖ್ಯಾತ ಔಷಧ.

ಔಂಸಿನ ಶೀಸೆಗೆ ೭ ರೂ. ೮ ಆಣೆ.

ವಿಳಾಸ.— ಎಮ್. ಜಿ. ಭಾಗ್ವತ್,
ಆಯುರ್ವೇದಿಕ್ ಕೆಮಿಸ್ಟ, ಕಟಿ. (ಕೆನರಾ)

ವೃತ್ತಸಾರ.

— ಶನಿವಾರದ ಮುಂಬಯಿ ಕಾಯಿದೆ ಕೌನ್ಸಿಲಿನ ಅಧಿವೇಶನದಲ್ಲಿ ಚಿತ್ರಪ್ರಹಾರ ಘಾತುಕ ಶಿಕ್ಷೆಯನ್ನು ತೊಗೆಯಬೇಕೆಂದು ಡಾ| ತ್ರಿವೇದಿಯವರು ತಂದ ಠರಾವಿನ ಚರ್ಚೆಯಾಯಿತು. ಸರಕಾರ ಪಕ್ಷದಿಂದ, ಸಹಕಾರಿಗಳ ಪಕ್ಷದಿಂದ ಅನುಕೂಲ ಪ್ರತಿಕೂಲ ತೀಕ್ಷ್ಣ ಭಾಷಣಗಳಾದವು. ಕಟ್ಟಕಡೆಗೆ ಡಾ| ತ್ರಿವೇದಿಯವರ ಠರಾವು ನಾಪಾಸಾಯಿತು. ಮತಕೊಟ್ಟವರು ೨೩ ಮಂದಿಗಳು; ವಿರೋಧಿಸಿದವರು ೪೬ ಮಂದಿಗಳು.

— ಅಮೇರಿಕೆಯ ಅಧ್ಯಕ್ಷರಾದ ಹಾರ್ಡಿಂಜರವರು ಕಳೆದ ಶುಕ್ರವಾರ ತಾ. ೩ನೇಗೆ ಸಾಯಂಕಾಲ ೭॥ ಘಂಟೆಗೆ ಕ್ಷಿಪ್ರಸನ್ನಿವಿಕಾರದಿಂದ ಥಟ್ಟನೆ ತೀರಿಕೊಂಡರು. ಮರಣ ಸಮಯದಲ್ಲಿ ಹೆಂಡರು ಮಕ್ಕಳಗೂಡ ಮಾತಾಡುತ್ತ ಕುಳಿತಿದ್ದರಂತೆ.

— ಮಲಬಾರದಲ್ಲಿ ನಿರಾಶ್ರಿತರಿಗೆ ಸಹಾಯವನ್ನೀಯಲು ನಿಜಾಮ ಸಾಹೇಬರು ಪುಣ್ಯನಗರಿಯೊಳಗಿನ ಜಮಾಯತ್-ಉಲೇಮಾ-ತೋಟಾಬ್ಲೀಗ್-ಇಸ್ಲಾಮು ಸಂಸ್ಥೆಗೆ ಅರ್ಧಲಕ್ಷ ರೂಪಾಯಿಗಳನ್ನು ಸಮರ್ಪಿಸಿರುವರು. ಈ ಜಮಾಯತು ೧೯೨೩ನೇ ಇಸವಿಯ ಜನವರಿ ತಿಂಗಳಿನಿಂದ ಮಲಬಾರಿನಲ್ಲಿ ನಿರಾಶ್ರಿತರಿಗೆ ಸಹಾಯ ಮಾಡುತ್ತಿರುವದು. ೨೨ ಸಾವಿರಕ್ಕೆ ಮಿಕ್ಕಿ ಮಾಪಿಳೇಯರಿಗೆ, ಹಿಂದೂಗಳಿಗೆ ಈ ಸಂಸ್ಥೆಯು ಸಹಾಯವನ್ನಿತ್ತಿದೆ.

— ಕಳೆದ ಗುರುವಾರ ತಾ. ೨ನೇಗೆ ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ಠರಾವಿನ ಚರ್ಚೆ ನಡೆಯುತ್ತಿರುವಾಗ, ಪುಣ್ಯನಗರಿಯ ಪ್ರತಿನಿಧಿಗಳಾದ ಡಾ| ವಾಸುದೇವರಾವ ಗುಪ್ತೇಯವರು ಥಟ್ಟನೆ ಮೂರ್ಛೆಗೊಂಡು ನೆಲಕ್ಕುರುಳಿದರು. ಕೂಡಲೇ, ಕೌನ್ಸಿಲಿನಲ್ಲಿ ಗೊಂದಲವೆದ್ದಿತು. ಅವರನ್ನು ಕೆಲ ಸಭಾಸದರು ಸಭಾಸ್ಥಾನದಿಂದ ಹೊರತಂದು ಮನೆಗೆ ಕಳುಹಿದರು. ಅದೇ ದಿನ ಮಧ್ಯರಾತ್ರಿಗೆ ಡಾ| ಗುಪ್ತೇಯವರು ಇಹಲೋಕದ ಯಾತ್ರೆಯನ್ನು ಮುಗಿಸಿದರು. ದಿವಾನ ಬಹಾದ್ದೂರ ಗೋಡಬೋಲೆಯವರು ಮಾರನೇದಿನದ ಕೌನ್ಸಿಲಿನಲ್ಲಿ ದುಃಖಪ್ರದರ್ಶಕ ಠರಾವನ್ನು ತಂದು, ಪಾಸುಮಾಡಿಕೊಂಡರು.

— ಕಳೆದ ಶುಕ್ರವಾರ ತಾ. ೩ ನೇ ಅಪರಾಹ್ನ ೩ ಘಂಟೆ ಸಮಯಕ್ಕೆ ಕಲಕತ್ತೆಯ ಶಂಕರಿ ಟೋಲಾ ಟಪಾಲ ಆಫೀಸಿನಲ್ಲಿ ಒಂದು ದರೋಡೆಯಾಯಿತು. ಸಭ್ಯಗೃಹಸ್ಥರಂತೆ ಉಡುಪು ಧರಿಸಿ, ನಾಲ್ವರು ೧ ಆಫೀಸಿಗೆ ಬಂದರು. ಮೂವರು ಕಾವಲು ಮಾಡುತ್ತ ಹೊರಗೆ ನಿಂತರು. ಒಬ್ಬನು ಒಳಪ್ರವೇಶಿಸಿ, ಟಪಾಲ ಮಾಸ್ತರರಗೂಡ ಆ ದಿನದ ಶಿಲಕು ಹಣವನ್ನು ಬೇಡಿದನು. ಮಾಸ್ತರರು ಒಪ್ಪದಿರಲು, ಅವರನ್ನು ಗುಂಡುಹಾಕಿ ಅಲ್ಲಿಯೇ ಕೊಂದನು. ಅವರ ಹತ್ತರ ಇದ್ದ ೧೦,೨೭ ರೂಪಾಯಿಗಳನ್ನು ಕೊಂಡು, ನಾಲ್ವರೂ ಪಾರಾದರು. ಹಾದಿಕಾರರೊಬ್ಬರು ಅವರನ್ನು ಬೆನ್ನಟ್ಟಿ ಹೋಗಿ, ಅವರಲ್ಲೊಬ್ಬನನ್ನು ಹಿಡಿದರು.

— ೧೪೪ನೇ ಕಲಮಿನಂತೆ ಹೊರಡಿಸಿದ ಹುಕುಮನ್ನು ಅವಮಾನ್ಯ ಮಾಡಿದ ಬಗ್ಗೆ ಡಾ| ವರದರಾಜಲು ನಾಯುಡುರವರ ಚೌಕಸಿಯು ನಡೆದು, ಅವರಿಗೆ ೬ ತಿಂಗಳ ಕಠಿಣ ಸಜೆ, ೩೦೦ ರೂಪಾಯಿಗಳ ದಂಡ ವಿಧಿಸಲಾಯಿತು.

— ಕೆನಿಯಾ ವಸಾಹತಿನ ನಿರ್ಣಯವನ್ನು ಹಿಂದೀಯರಿಗೆ ವಿರೋಧವಾಗಿ ನಿರ್ಣಯಿಸಿದ ಮೂಲಕ, ಪೂರ್ವ ಆಫ್ರಿಕಾದಲ್ಲಿ ಬರುವ ತಾ. ೨೬ ನೇಗೆ ಹರತಾಳವನ್ನು ಆಚರಿಸುವದಲ್ಲದೆ, ನಾಮದಾರ ಗವ್ಹರ್ನರರ ಆಗಮನವಾದಾಗ, ಅವರನ್ನು ಕಪ್ಪು ಪತಾಕೆಗಳಿಂದ ಸತ್ಕರಿಸಬೇಕೆಂತಲೂ ಅಲ್ಲಿಯ ಹಿಂದೀಯರು ನಿರ್ಣಯಿಸಿರುವರು. ಅಖಿಲ ಭಾರತಖಂಡದಲ್ಲಿಯೂ ಈ ಬಗ್ಗೆ ಅದೇ ದಿವಸ ಹರತಾಳವನ್ನು ಆಚರಿಸಬೇಕೆಂದು ಕೊಂಗ್ರೆಸ ಕಾರ್ಯಕಾರಿ ಮಂಡಳವು ಆಜ್ಞಾಪತ್ರವನ್ನು ಹೊರಡಿಸಿದೆ.

ಕಾನಡಾವೃತ್ತ.

ಗುರುವಾರ, ತಾರೀಖು ೧೬ ಮಾಹೆ ಅಗಸ್ಟ ೧೯೨೩.

ಜಾದಾ ಕೊಂಗ್ರೆಸು.

ಜಾದಾ ಕೊಂಗ್ರೆಸು ಗೊಂದಲದ ಮುಸುಕಿನಿಂದ ನಿವಾರಣಹೊಂದಿತೆಂದು ತಿಳಿಸಲು ನಮಗೆ ಸಂತೋಷವೆನಿಸುತ್ತದೆ. ವಿಶಾಖಪಟ್ಟಣದಲ್ಲಿ ನೆರೆದ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ಜಾದಾ ಕೊಂಗ್ರೆಸಿನ ಅಧಿವೇಶನವನ್ನು ಮುಂಬಯಿಯಲ್ಲಾಗಲೀ, ಇತರ ಕಡೆಯಲ್ಲಾಗಲಿ ನೆರಿಸುವ ಅಧಿಕಾರವನ್ನು ಅಧ್ಯಕ್ಷರಾದ ಶ್ರೀ| ಕೊಂಡವೆಂಕಟಪ್ಪಯ್ಯನವರಿಗೆ ಒಪ್ಪಿಸಿ, ವಿಸರ್ಜನ ಹೊಂದಿದ ಸಂಗತಿಯು ವಾಚಕ ಮಹಾಶಯರಿಗೆ ಈ ಮೊದಲೇ ನಾವು ಅರುಹಿರುವೆವು. ಶ್ರೀಮತಿ ಸರೋಜಿನೀ ದೇವಿಯವರು ಮುಂಬಯಿಯಲ್ಲಿ ಜಾದಾ ಅಧಿವೇಶನವನ್ನು ನೆರಿಸುವರೆ, ನಾವು ಅಸಮರ್ಥರಿರುವೆವೆಂದು ಪ್ರತಿಪಾದಿಸಿದ್ದಲ್ಲದೆ, ಮುಂಬಯಿಯ ಕೇಂದ್ರವನ್ನು ಆರಿಸುವದರಲ್ಲಿ ಶ್ರೀ| ರಾಜಗೋಪಾಲಾಚಾರ್ಯರು ಪಕ್ಷಭೇದದಿಂದ ಪ್ರವೃತ್ತರಾಗಿರುವರೆಂತಲೂ ನಿವೇದಿಸಿ, ತಾವು ಇಂಥ ಪ್ರಸಕ್ತಿಯಲ್ಲಿ ಜಾದಾ ಕೊಂಗ್ರೆಸನ್ನು ನೆರಿಸಲೊಲ್ಲೆವೆಂದು ಖಂಡಿತ ಹೇಳಿಬಿಟ್ಟರು. ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ವಿಸರ್ಜನ ಹೊಂದಿದ ಬಳಿಕ, ಅಧ್ಯಕ್ಷರಾದ ಶ್ರೀ| ಕೊಂಡವೆಂಕಟಪ್ಪಯ್ಯನವರಿಗೂ, ಶ್ರೀಮತಿ ಸರೋಜಿನಿ ದೇವಿಯವರಿಗೂ ಈ ವಿಷಯದಲ್ಲಿ ಖಾಸಗಿ ಚರ್ಚೆಯೂ ನಡೆಯಿತು. ಕೊಂಡವೆಂಕಟಪ್ಪಯ್ಯನವರು ಶ್ರೀಮತಿಯವರಿಗೆ ವಿರೋಧವಾಗಿ ಜಾದಾ ರಾಷ್ಟ್ರೀಯ ಸಭೆಯನ್ನು ಮುಂಬಯಿಯಲ್ಲಿ ನೆರಿಸುವದು ವಿಹಿತವಲ್ಲೆಂದು ಮನಗಂಡು, ಬೆರಿಸ್ಟರ ಅಸಫ್ ಅಲ್ಲಿಯವರ ದಿಲ್ಲಿಯ ನಿಮಂತ್ರಣೆಯನ್ನು ಸ್ವೀಕರಿಸಿ, ದಿಲ್ಲಿ ನಗರಿಯಲ್ಲಿ ಜಾದಾ ಕೊಂಗ್ರೆಸು ನೆರೆಯಬೇಕೆಂದು ಪ್ರಕಟಣೆಯನ್ನು ಹೊರಡಿಸಿರುವರು. ಅಧಿವೇಶನದ ತಾರೀಖು ಸಪ್ಟಂಬರ ತಾ. ೧೫ ನೇ ಶನಿವಾರವೆಂದೂ ನಿಶ್ಚಯಿಸೋಣಾಗಿದೆ. ಅಂತು ಜಾದಾ ಕೊಂಗ್ರೆಸು ಗೊಂದಲದಿಂದ ಮುಕ್ತವಾಯಿತೆಂದು ನೋಡಿ, ಭಾರತೀಯ ಪ್ರಜೆಗಳಿಗೆಲ್ಲ ಆನಂದವಾಗದಿರದು.

ಜಾದಾ ಕೊಂಗ್ರೆಸಿನ ಅಧಿವೇಶನದ ಯುಕ್ತಾಯುಕ್ತತೆಯ ಬಗ್ಗೆ ಈಗ ವಿಶೇಷ ಬರೆಯಬೇಕಾಗಿಲ್ಲ. ಪಂಡಿತ ಮೋತೀಲಾಲ ನೆಹರುರವರು ನುಡಿದಂತೆ, ಅಧಿವೇಶನವು ನೆರೆಯಿಸಬೇಕೆಂದು ಗೊತ್ತಾದ ಬಳಿಕ, ಇಂಥ ಚರ್ಚೆಗೆ ವ್ಯವಹಾರಿಕ ದೃಷ್ಟಿಯಿಂದ ಮಹತ್ವವೂ ಇಲ್ಲ. ಭಾರತೀಯ ರಾಜಕಾರಣದಲ್ಲಿ ಉಂಟಾದ ಗೊಂದಲದೊಳಗಿಂದ ಮುಂದಿನ ದಾರಿಯನ್ನು ತೋರಗೊಡಲು ಜಾದಾ ಕೊಂಗ್ರೆಸು ಅನುಕೂಲ ಸಾಧನವು. ಪಕ್ಷಭೇದದ ಕಾಡಿನೊಳಗಿಂದ ರಾಷ್ಟ್ರಹಿತದ ಗಾರಿಯನ್ನು ಆಕ್ರಮಿಸಲು ಪ್ರಜೆಗಳಿಗೆ ಜಾದಾ ಅಧಿವೇಶನದಿಂದ ಬಲು ಅನುಕೂಲವಾಗುವದೆಂತಲೂ ನಮ್ಮ ಮತವಿದೆ. ಶ್ರೀ| ರಾಜಗೋಪಾಲಾಚಾರ್ಯರು ತಮ್ಮ ಮತವು, ರಾಷ್ಟ್ರಮತವು; ದೇಶಬಂಧುಗಳು ತಮ್ಮ ಮತವು— ರಾಷ್ಟ್ರಮತವು; ಎಂದು ಒಂದೇ ರಾಷ್ಟ್ರಮತದ ನೆವ ಹೇಳಿ, ಇಬ್ಬರೂ ಗುದ್ದಾಡುವಾಗ, ನಿಜವಾದ ರಾಷ್ಟ್ರಮತವೇನಿರುವದೆಂಬದನ್ನು ಅರಿತುಕೊಳ್ಳುವರೆ, ಜಾದಾ ಕೊಂಗ್ರೆಸಿನ ಅಧಿವೇಶನವೇ ನಮಗೆ ಉಪಲಬ್ಧವಿದ್ದ ಒಂದು ಸಾಧನವು. ‘ಅದನ್ನೇ ನೆರಿಸಿರಿ; ಹಾಗು ನಿಮ್ಮ, ನಿಮ್ಮ ಯೋಜನೆಗಳನ್ನು ರಾಷ್ಟ್ರೀಯ ಸಭೆಯ ಸಹಿಷ್ಣುತೆಯಿಂದ ಭದ್ರಪಡಿಸಿಕೊಳ್ಳಿರಿ’ ಎಂದು ಸ್ವರಾಜ್ಯ ಪಕ್ಷದವರಿಗೆ ಪರಿಪರಿಯಿಂದ ಹೇಳೋಣಾಯಿತು. ಆದರೂ, ದೇಶಬಂಧುಗಳ ದುರಾಗ್ರಹದ ಮೂಲಕ ಈ ವರೆಗೆ ಅದು ಕೊನೆಗಾಣಲಿಲ್ಲ. ಸ್ವರಾಜ್ಯ ಪಕ್ಷದ ಪ್ರಮುಖ ನಾಯಕರೊಬ್ಬರಾದ ಪಂಡಿತ ಮೋತೀಲಾಲ ನೆಹರುರವರು ಜಾದಾ ಕೊಂಗ್ರೆಸಿನ ಅಧಿವೇಶನವನ್ನು ಸ್ವಾಗತೀಕರಿಸಿ, ಅಖಿಲ ಪ್ರಜೆಗಳಿಗೆ ರಾಷ್ಟ್ರೀಯ ಸಭೆಯ ಗೌರವವನ್ನು ಕಾಯುವರೆ, ದಿಲ್ಲಿ ನಗರಿಯಲ್ಲಿ ಆಗಮಿಸಲು ಆಗ್ರಹದ ವಿನಂತಿ ಮಾಡಿಕೊಂಡಿರುವರು. ಪಂಡಿತಜೀಯವರು ನೈನಿತಾಲದಲ್ಲಿ ಅಸ್ವಸ್ಥತೆಯ ಮೂಲಕ ಉಳಕೊಂಡಿದ್ದರು. ಅಲ್ಲಿಂದ ತಾವು ಪುನಃ ಸ್ವಸ್ಥರಾಗಿರುವೆವೆಂತಲೂ, ರಾಷ್ಟ್ರೀಯ ಸಭೆಯ ಬಗ್ಗೆ ಪುನಃ ಚಳವಳಿಯನ್ನು ಕೈಕೊಳ್ಳಲು ಸಮರ್ಥರಾಗಿರುವೆವೆಂತಲೂ, ಪಂಡಿತಜೀಯವರು ಪ್ರಕಟಣೆಯಲ್ಲಿ ಸಮಾದಿಸುತ್ತಾರೆ. ಅಖಿಲ ಪ್ರಜೆಗಳೂ ದಿಲ್ಲಿ ನಗರಿಯಲ್ಲಿ ಯಾವದೇ ಪ್ರಕಾರದ ಪೂರ್ವಗ್ರಹ ಹಿಡಿಯದೆ, ಸಕಲ ಪಕ್ಷಗಳಿಗೂ ತಮ್ಮ ತಮ್ಮ ಇಚ್ಛೆಯಂತೆ ರಾಷ್ಟ್ರಕಾರ್ಯ ಮಾಡಲು ಇಂಬುಗೊಡಬೇಕೆಂತಲೂ ಉದ್ಗರಿಸಿರುವರು. ಪಂಡಿತಜೀಯವರ ದೇಶಸೇವೆಯನ್ನೂ, ಸ್ವಾರ್ಥತ್ಯಾಗವನ್ನೂ ಅರಿತವರಿಗೆಲ್ಲ ಅವರ ಬಿನ್ನಹದ ಅರಿವುಂಟಾಗುವದು. ರಾಷ್ಟ್ರಹಿತವು ನಮ್ಮ ಮುಖ್ಯ ಸಾಧ್ಯವು. ಪಕ್ಷಗಳ, ಕೂಟಗಳು, ಒಳಕೂಟಗಳು, ಇವೆಲ್ಲ ಸಾಧನಗಳು. ಸಾಧ್ಯಕ್ಕೆ ಯಾವದೇ ರೀತಿಯಿಂದ ಬಾಧೆಯಾಗದಂತೆ ಇಷ್ಟೇ ಅಲ್ಲ, ರಾಷ್ಟ್ರಹಿತವು ವೃದ್ಧಿಯಾಗುವಂತೆ ನಮ್ಮ, ನಮ್ಮ ಯೋಜನೆಗಳನ್ನು ನಿರ್ಮಲ ಚಿತ್ತದಿಂದ ಅನುಲಬಜಾವಣೆ ಮಾಡುವದು ನಮ್ಮ ಕರ್ತವ್ಯವು. ಅದನ್ನಷ್ಟು ಮಾಡಿರಿ ಎಂದು ಪಂಡಿತಜೀಯವರ ಹೇಳಿಕೆ. ಅಖಿಲರಿಗೂ ಈ ಹೇಳಿಕೆಯು ದೇಶಬಂಧುಗಳು ಕಳೆದ ಶುಕ್ರವಾರಕ್ಕೆ ಪ್ರಕಟಣೆಯನ್ನು ಹೊರಡಿಸಿ, ಎಲ್ಲ ರಾಷ್ಟ್ರೀಯ ಸಭಾಭಿಮಾನಿಗಳಿಗೆ ಒಕ್ಕಟ್ಟಾಗಿ ದಿಲ್ಲಿಯಲ್ಲಿ ನೆರೆಯಲು ವಿಜ್ಞಾಪಿಸಿರುವರು. ದಾಸ-ನೆಹರು ಮಹಾಶಯರ ಆಗ್ರಹದಂತೆ ಪಕ್ಷಭೇದಗಳನ್ನೆಲ್ಲ ಮರೆತು, ದೇಶಬಾಂಧವರೆಲ್ಲರೂ ದಿಲ್ಲಿಯಲ್ಲಿ ನೆರೆಯುವರೆಂದು ನಾವು ನೆರನಂಬಿದ್ದೇವೆ.

ಜಾದಾ ಕೊಂಗ್ರೆಸಿನ ಅಧ್ಯಕ್ಷರು ಮೌಲಾನಾ ಅಬುಲ್ ಕಲಮ್ ಆಝಾದರವರು. ಮೌಲಾನಾರವರ ಪರಿಚಯವು ಸಕಲ ದೇಶಬಾಂಧವರಿಗಿದೆ. ಯುವಲಾಜರ ಆಗಮನವಾದಾಗ, ಕಲಕತ್ತೆಯಲ್ಲಿ ಹರತಾಳಿಗೆ ಪ್ರತೀಕಾರವೆಂದು ಸರಕಾರವು ಎಸೆದ ಸಭಾಬಂದಿ ಮೊದಲಾದ ಟೊಣ್ಣೆಶಾಹಿಯ ಕಾಯಿದೆಗಳನ್ನೆಲ್ಲ ದೇಶಬಂಧುಗಳೊಂದಿಗೆ ಸೆರೆಯಾಳಾದ ಪುಣ್ಯಾತ್ಮರಿವರು; ಹಿಂದೂ-ಮಹಮ್ಮದೀಯರ ಐಕ್ಯಸಂವರ್ಧನೆಗಾಗಿ ಹಗಲಿರುಳು ಯತ್ನಮಾಡುವ ಮಹಾ ದೇಶಸೇವಕರಿವರು. ಪ್ರಜೆಗಳಿಗೆ ಮಾನ್ಯವಿದ್ದ, ಅಖಿಲ ಸಮಾಜಗಳಲ್ಲಿ ಆದರವನ್ನು ಸಂಪಾದಿಸಿದ ಭರತಭೂಮಾತೆಯ ವರಪುತ್ರರನ್ನು ಅಧ್ಯಕ್ಷಸ್ಥಾನದಲ್ಲಿ ನೇಮಿಸಿ, ನಾಗಪುರದಲ್ಲಿ ನೆರೆದ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ಗುಣಗ್ರಾಹಕತೆಯನ್ನೂ, ದೇಶಹಿತವನ್ನೂ ಒಮ್ಮೆಲೇ ಸಾಧಿಸಿರುತ್ತದೆ. ಜಾದಾ ಕೊಂಗ್ರೆಸಿನ ಸ್ವಾಗತ ಮಂಡಳವು ಕಳೆದ ತಾ. ೮ ನೇಗೆ ದಿಲ್ಲಿಯಲ್ಲಿ ಸಭೆಸೇರಿತು. ಡಾ| ಅನ್‌ಸಾರಿಯವರು ಅಧ್ಯಕ್ಷರಾಗಿಯೂ, ಬೆರಿಸ್ಟರ ಅಸಫ್ ಅಲ್ಲಿಯವರು ಕಾರ್ಯದರ್ಶಿಗಳಾಗಿಯೂ ನೇಮಿಸಲ್ಪಟ್ಟಿರುವರು. ಡಾ| ಅನ್‌ಸಾರಿಯವರು ಮುಂಬಯಿಯಲ್ಲಿ ನೇಮಕಹೊಂದಿದ ಹೊಸ ಕೊಂಗ್ರೆಸ ಕಾರ್ಯಕಾರಿ ಮಂಡಳದ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿದ್ದರು. ರಾಷ್ಟ್ರದಲ್ಲಿ ಮತ್ತೈಕ್ಯ ಮಾಡಿಕೊಂಡು, ನಡೆಯಬೇಕೆಂಬ ಪಕ್ಷದವರು ಡಾ| ಅನ್‌ಸಾರಿಯವರು. ಸೆಂಟ್ರಲ ಖಿಲಾಫತ ಕಮಿಟಿಯ ಈಗಿನ ಅಧ್ಯಕ್ಷರೂ ಇವರೇ. ಇಂಥ ನಿಷ್ಪಕ್ಷಪಾತ ಬುದ್ಧಿಯ ದೇಶಸೇವಕರು ಸ್ವಾಗತಾಧ್ಯಕ್ಷಸ್ಥಾನವನ್ನು ಆಕ್ರಮಿಸಿದ್ದನ್ನು ನೋಡಿ, ಎಲ್ಲರಿಗೂ ಸಂತೋಷವಾಗುವದು. ಬೆರಿಸ್ಟರ ಅಸಫ್ ಅಲ್ಲಿಯವರ ಬಗ್ಗೆ ವಿಶೇಷವೇನು ಹೇಳಬೇಕು! ಮಹಾತ್ಮರ ಅಸಹಯೋಗದ ಗಂಗಾಪ್ರವಾಹದಲ್ಲಿ ಸ್ನಾನ ಮಾಡಿ, ಇವರು ಪಾವನವಾಗಿರುವರು. ಸೆರೆಮನೆಯಿಂದ ಸದ್ಯಕ್ಕೇ ಬಿಡುಗಡೆ ಹೊಂದಿ ಬಂದಿರ

ವರು. ದಿಲ್ಲಿಯಲ್ಲಿ ಜಾದಾ ಕೊಂಗ್ರೆಸನ್ನು ನಿಮಂತ್ರಿಸಲಿಕ್ಕೂ ಪ್ರಾಮುಖ್ಯವಾಗಿ ಇವರೇ ಕಾರಣರು. ಸೆರೆಮನೆಯ ಪೀಡನೆಯಿಂದ ದೇಶಸೇವಕರು ಎದೆಗುಂದುವದು ಒತ್ತಟ್ಟಿಗಿರಲಿ, ಹೊಸ ಹುರುಪಿನಿಂದ, ನವ ಚೈತನ್ಯದಿಂದ ರಾಷ್ಟ್ರಕಾರ್ಯರತರಾಗುತ್ತಾರೆಂದು ಡೊಸ್ತರ ಆಸಫ್ ಅಲ್ಲಿಯವರು ಕೃತಿಯಿಂದ ಸಿದ್ಧಪಡಿಸಿರುವರು. ಇಂಥ ಮಾನ್ಯ ಮುಂದಾಳುಗಳ ನೇತೃತ್ವದಲ್ಲಿ ಸ್ವಾಗತ ಮಂಡಳವು ರಾಷ್ಟ್ರದ ಪ್ರತಿನಿಧಿಗಳನ್ನು ಸ್ವಾಗತೀಕರಿಸುವದು.

ಜಾದಾ ಕೊಂಗ್ರೆಸಿನ ಸಮಯವೂ ತೀರ ಅನುಕೂಲವಿದೆ. ಪಂಜಾಬ-ಖಿಲಾಫತ ಬೇಡಿಕೆಗಳ ಮಾಲಿಕೆಯಲ್ಲಿ ಕೆನಿಯಾ ಮಸಾಹತಿನ ಪ್ರಶ್ನೆಯು ಈಗ ಸೇರಿಕೊಳ್ಳುವದು. ಬ್ರಿಟಿಶ ಸಾಮ್ರಾಜ್ಯದ ಮೇಲೆ ತುಂಬಾ ವಿಶ್ವಾಸವನ್ನಿಟ್ಟ, ಅರ್ಜಿ, ಜಾಹೀರ ಸಭೆ, ಶಿಷ್ಟಮಂಡಲ ಮೊದಲಾದ ಪುರಾತನ ಸಾಧನಗಳಿಂದ ತಮಗನುಕೂಲವಾಗುವಂತೆ ಬ್ರಿಟಿಶರ ಮತಾಂತರ ಮಾಡಲು ಹವಣಿಸಿದ ಹಾಗು ಹವಣಿಸುವ ಸಹಕಾರಿಗಳ ಭ್ರಾಂತಿನಿರಸನವು ಬ್ರಿಟಿಶ ಪ್ರಧಾನ ಮಂಡಳದ ನಿರ್ಣಯದಿಂದ ಈಗ ಬಬಗಿಬಂದಿದೆ. ನಾ| ಶಾಸ್ತ್ರಿ ಮೊದಲಾದ ಸಹಕಾರಿ ಧುರೀಣರು ಈಗ ದಿಕ್ಕು ತಪ್ಪಿಬಿದ್ದಂತೆ ಮುಂದೇನು ಮಾಡಬೇಕು! ಎಂದು ಯೋಚಿಸುತ್ತಿರುವರು. ಕೆನಿಯಾ ಮಸಾಹತಿನ ಪ್ರತಿಕೂಲ ನಿರ್ಣಯದಿಂದ ಪುರಾತನ ಸನದಶೀರ ಚಳವಳಿಯು ದಿವಾಳಿಯಾಯಿತೆಂದು ಹೇಳಲು ಅಡ್ಡಿಯೇನಿಲ್ಲ. ಸರ್ ಅಲಿ ಇಮಾಮ, ಡಾ| ತೇಜಬಹಾದ್ದೂರ ಸಪ್ರು ಮೊದಲಾದ ಅತಿರಥಿ, ಮಹಾರಥಿಗಳಿಗೆ ಸಹ, ಹಿಂದುಸ್ಥಾನದಲ್ಲಿ ಸ್ವರಾಜ್ಯಸ್ಥಾಪನೆಯಾದಲ್ಲಿ, ಇಂಥ ಅನ್ಯಾಯವು ಜರಗದೆಂದು ಈಗೀಗ ಹೊಳೆಯಹತ್ತಿದೆ. ಹಿಂದುಸ್ಥಾನದೊಳಗಿನ ಸಹಕಾರಿಗಳೂ ಜಾಗೃತಹೊಂದಿರುವರು ಈಗ ಲೋಕಮತವನ್ನು ಜಾಗೃತ ಮಾಡಿಕೊಂಡು, ನಮ್ಮ ಅಪಮಾನವನ್ನು ತೊಳೆದುಕೊಳ್ಳಲು ಉಪಾಯ ಯೋಜಿಸಬೇಕೆನ್ನುತ್ತಿರುವರು. ಕೊಂಗ್ರೆಸ ಸಂಸ್ಥೆಯನ್ನು ಭದ್ರಪಡಿಸಿಕೊಂಡು, ಅದನ್ನೇ ರಾಷ್ಟ್ರವಿಮೋಚನೆಗಾಗಿ ಉಪಯೋಗಿಸಿಕೊಳ್ಳಬೇಕೆಂದು ಅನೇಕ ರಾಷ್ಟ್ರಹಿತಚಿಂತಕರ ಅಂಬೋಣವಿದೆ. ರಾಷ್ಟ್ರೀಯ ಸಭೆಯೊಳಗಿನ ಪಕ್ಷಭೇದಗಳ ಕೋಲಾಹಲದಿಂದ ಒದಗಿದ ವಿಪನ್ನಾವಸ್ಥೆಯನ್ನು ದೂರಪಡಿಸಲು ಹಲವರು ನಿಮಗ್ನರಾಗಿರುವರು. ಪಕ್ಷಭೇದಗಳ ಮೂಲಕ, ರಾಷ್ಟ್ರಚೈತನ್ಯವು ಕಳೆಗುಂದಿದ್ದರಿಂದಲೇ, ಕೆನಿಯಾ ನಿರ್ಣಯವು ಹಿಂದೀಯರಿಗೆ ವಿರೋಧವಾಗಿ ಪರಿಣಮಿಸಿತೆಂದು ಸಹಕಾರಿ ಧುರೀಣರಲ್ಲೊಬ್ಬರಾದ ಶ್ರೀ| ಶೇಷಗಿರಿ ಅಯ್ಯರರು ನುಡಿಯುತ್ತಾರೆ. ಸರಕಾರದ ವಿರೋಧಕರು, ಅಂದರೆ, ಅಸಹಕಾರಿಗಳು ಐಕ್ಯಮತ್ಯದಿಂದ ಸರಕಾರಕ್ಕೆ ಎದುರಾಗಿರುವಾಗ, ತಮ್ಮಂಥ ಸಹಕಾರಿಗಳ ಸಂತೋಷಕ್ಕಾಗಿ ಸರಕಾರವು ಯತ್ನಿಸಿತೆಂತಲೂ, ಪಕ್ಷಭೇದದ ಮೂಲಕ ರಾಷ್ಟ್ರೀಯ ಸಭೆಯು ದುರ್ಬಲವಾದದ್ದರಿಂದಲೇ ತಮಗೆ ಕೇಳುವವರ್‍ಯಾರಿಲ್ಲೆಂತಲೂ ಶ್ರೀ| ಶೇಷಗಿರಿ ಅಯ್ಯರರು ಉದ್ಗರಿಸುತ್ತಾರೆ. ರಾಷ್ಟ್ರೀಯ ಸಭೆಯನ್ನು ವೃದ್ಧಿಪಡಿಸುವ, ಕಾರ್ಯಕ್ರಮ ಮಾಡುವ ಅವಶ್ಯಕತೆಯು ಈಗ ಎಲ್ಲ ಪಕ್ಷಗಳಿಗೆ ಹೊಳೆಯಿತೆಂದು ಹೇಳಬಹುದು. ಇಂಥ ಸುಸಂಧಿಯಲ್ಲಿ ಜಾದಾ ರಾಷ್ಟ್ರೀಯ ಸಭೆಯು ನೆರೆಯುತ್ತದೆ. ಘಟನೆಯಂತೆ, ರಾಷ್ಟ್ರೀಯ ಸಭೆಯಲ್ಲಿ ಎಲ್ಲ ದೇಶಬಾಂಧವರಿಗೆ ಪ್ರವೇಶವಿದೆ. ಇಂಥ ಸರ್ವಸಾಮಾನ್ಯ, ಸರ್ವಮಾನ್ಯ ಸಭೆಯಲ್ಲಿ ಅಖಿಲ ಭರತಪುತ್ರರು ಸೇರಿಕೊಂಡು, ತಮ್ಮ ದೇಶಮಾತೆಯ ಉದ್ಧಾರದ ಯೋಜನೆಗಳನ್ನು ಕೈಕೊಳ್ಳಲು ಸ್ವಯಂಸ್ಫೂರ್ತಿಯಿಂದ ಆಗಮಿಸುವರೆಂದು ಕೋರಿದರೆ, ಅದು ಅಯಥಾರ್ಥವಾಗುವದೇನು !

ಸ್ಫುಟ ಸೂಚನೆಗಳು.

೧. ನೌಕರಶಾಹಿಯ ಅನ್ಯಾಯದ ಕೃತ್ಯಗಳಿಂದ ಸಹಕಾರಿಗಳೂ ಉದ್ವೇಗಗೊಂಡಿರುವರು. ನಾಗಪುರದ ಧ್ವಜಸಂಗ್ರಾಮದಲ್ಲಿ ಡಿ| ಮೆಜಿಸ್ಟ್ರೇಟರ ವಿದ್ಯಮಾನ ಮಧ್ಯಪ್ರಾಂತದ ಸರಕಾರವು ಆಚರಿಸಿದ ಅನಾಚಾರ, ದುರಾಚಾರಗಳಿಂದ ಅಲ್ಲಿಯ ಸಹಕಾರಿಗಳು ಉದ್ವೇಗಗೊಂಡು, ಸರಕಾರಕ್ಕೆ ದ್ವೇಷವನ್ನು ಪ್ರದರ್ಶಿಸಿದ ಹಕೀಕತನ್ನು ಬೇರೊಂದೆಡೆಯಲ್ಲಿ ವಿವರಿಸಿರುವೆವು. ಅಸಹಯೋಗಿಗಳ ಶಿಸ್ತಿನ ಸ್ವಾರ್ಥತ್ಯಾಗದಿಂದ, ಆತ್ಮಕ್ಲೇಶದಿಂದ ಉಂಟಾದ ವಿಚಾರಕ್ರಾಂತಿಯಿಂದ, ನೌಕರಶಾಹಿಯ ಬಗ್ಗೆ ದೇಶದಲ್ಲಿರುವ ಆದರವನ್ನು ಸ್ಥಿರವಾಗಿ, ಕ್ರಮವಾಗಿ ಅಳಿಸುವದು ಅಸಹಯೋಗಿಗಳ ಮುಖ್ಯ ಕರ್ತವ್ಯವು. ಕೆನಿಯಾ ಮಸಾಹತಿನ ನಿರ್ಣಯದಿಂದ ದೇಶದೊಳಗಿನ ಅಸಂತೋಷವು ವಿಶೇಷ ವೃದ್ಧಿಹೊಂದಿದೆ. ನೌಕರಶಾಹಿಯು ಮಾನ್ಯತೆ ಪಡೆಯಲು ಹಾತೊರೆಯುವಾಗ, ನಾಲ್ಕೂ ಬದಿಗಳಿಂದ ಅದನ್ನು ಅಪಮಾನ ಮಾಡಿದ ಸುದ್ದಿಗಳು ಇತ್ತಲಾಗಿ ಮೇಲಿಂದ ಮೇಲೆ ಬರುತ್ತಿವೆ. ಮ್ಯುನಿಸಿಪಾಲಿಟಿ, ಲೋಕಲ್‌ಬೋರ್ಡುಗಳು ಪ್ರಾಂತಾಧಿಪರಿಗೆ, ಸರ್ವಾಧಿಪತಿಗಳಿಗೆ ಮಾತ್ರ ಮಾನಪತ್ರವನ್ನರ್ಪಿಸಬೇಕೆಂಬ ಹುಕುಮುಗಳನ್ನು ಹೊರಡಿಸುವಷ್ಟರಲ್ಲಿ, ಲಖನೌ, ಅಲಹಾಬಾದ ಮೊದಲಾದ ಮ್ಯುನಿಸಿಪಾಲಿಟಿಗಳು ಹುಕುಮನ್ನು ಉಲ್ಲಂಘಿಸಿಬಿಟ್ಟರು. ಕಾನಪುರದ ಮ್ಯುನಿಸಿಪಾಲಿಟಿಯವರು ಲೋಕಮತವನ್ನು ಧಿಕ್ಕರಿಸಿ, ಪ್ರಾಂತಾಧಿಪತಿಗಳಿಗೆ ಮಾನಪತ್ರವನ್ನಿತ್ತ ಬಗ್ಗೆ ಅದೇ ದಿವಸ ಇಡೀ ನಗರದಲ್ಲಿ ಹರತಾಳ ಆಚರಣೆಯಾಯಿತು. ಮದ್ರಾಸಿಗೆ ಇದೇ ಬರುವ ಡಿಸಂಬರದಲ್ಲಿ ಸರ್ವಾಧಿಪತಿಗಳ ಆಗಮನವಾಗುವಾಗ ಹ್ಯಾಕೋರ್ಟ ವಕೀಲರ ಸಂಘವು ಅವರಿಗೊಂದು ಔತಣ ಸಮಾರಂಭವನ್ನೀಯಬೇಕೆಂಬ ಅಲ್ಲಿ ಸೂಚನೆಯಾಯಿತು. ಈ ಬಗ್ಗೆ ವಕೀಲರ ಸಭೆಯು ಗುರುವಾರ ತಾ. ೯ಕ್ಕೆ ನೆರೆದು, ಈ ಸೂಚನೆಯನ್ನು ಪ್ರಚಂಡ ಬಹುಮತದಿಂದ ಸಂಘವು ನಿರಾಕರಿಸಿಬಿಟ್ಟಿತು. ಬರ್ಮಾದಲ್ಲಿಯೂ ಸರ್ವಾಧಿಪತಿಗಳ ಆಗಮನವಾಗುವದಿದೆ. ಅಲ್ಲಿ ಆ ಬಗ್ಗೆ ಖರ್ಚಿನ ರಕಮೂ ಮಂಜೂರಾಗಿದೆ. ಆದರೆ, ೯ ಮಂದಿ ಬರ್ಮೀ ಸಭಾಸದರು ತಾವು ಸ್ವಾಗತ ಸಮಾರಂಭದಲ್ಲಿ ಸೇರಿಕೊಳ್ಳಲಾರೆವೆಂದು ತಿಳಿಸಿರುವರು. ಭಾರತೀಯ ನೌಕರಶಾಹಿಯ ಅಧಿಪತಿಗಳಾದ ಭಾರತಮಂತ್ರಿ ವಿಂಟರಟನ್ ದೊರೆಗಳೂ, ನಾಮದಾರ ಶಾಸ್ತ್ರಿಗಳ ಕೆನಿಯಾ ನಿರ್ಣಯದ ಮೇಲಿನ ನಿಷೇಧಪರ ಭಾಷಣವನ್ನು ಬಕಾಲವೆಂದು ಕಳೆದ ಗುರುವಾರಕ್ಕೆ ವಿಲಾಯತಿಯಲ್ಲಿ ಶರಾಹೊಡೆದರು. ಸಹಕಾರಿಗಳಿಗೂ ನೌಕರಶಾಹಿಯನ್ನು ಪ್ರಸನ್ನಗೊಳಿಸುವದು ಅಸಿಧಾರಾವ್ರತದಷ್ಟು ದುಸ್ಸಾಧ್ಯವೆಂದು ಈಗ ಯಾರು ಹೇಳರು ?

---

೨. ಮುಂಬಯಿಯಲ್ಲಿ ವಾಸವಾಗಿರುವ ನಮ್ಮ ಜಿಲ್ಹೆಯ ಕೆಲ ನಿವಾಸಿಗಳು ಗಾಮದೇವಿಯೊಳಗಿನ ಸಾರಸ್ವತ ಬಿಲ್ಡಿಂಗಿನಲ್ಲಿ ಕಳೆದ ತಾ. ೫ನೇ ರವಿವಾರಕ್ಕೆ ನೆರೆದು, ನಮ್ಮಲ್ಲಿಯ ಕಾಡಿನ ಉಪದ್ರವಗಳ ಕುರಿತು ಆಲೋಚನೆ ಮಾಡಿದರು. ರಾ| ಶಾಂತಾರಾಮಪಂತ ವರ್ಟಿಯವರು ಅಧ್ಯಕ್ಷಸ್ಥಾನವನ್ನು ಮಂಡಿಸಿದ್ದರು. ಸಭೆಯಲ್ಲಿ ಚರ್ಚಿಸಲಾಗಿ ೨ ಠರಾವುಗಳು ಪಾಸಾದವು. ಮಿ| ಕೊಲಿನ್ಸರವರ ಸೂಚನೆಯಂತೆ ಘರ್ಡಿಸಿದ ಜಂಗಲ ಯೋಜನೆಯು ಜಿಲ್ಲಾ ನಿವಾಸಿಕರಿಗೆ ಮಾನ್ಯವಿಲ್ಲೆಂದು ಸ್ಥಾನಿಕ ವೃತ್ತಪತ್ರಗಳ ಮೇಲಿಂದ ತಿಳಿಯುತ್ತದೆ. ಈ ಬಗ್ಗೆ ಒಂದು ಪ್ರಾತಿನಿಧಿಕ ಪರಿಷತ್ತನ್ನು ನೆರೆಯಿಸಿ, ಜಂಗಲ ದೂರುಗಳ ನಿವಾರಣೆಯ ಬಗ್ಗೆ ಒಂದು ಯೋಜನೆಯನ್ನು ನಿರ್ಣಯಿಸಬೇಕೆಂದು ಈ ಸಭೆಯು ಶಿಫಾರಸು ಮಾಡಿ, ಅದನ್ನು ಕುಮಟೆಯಂಥ ಮಧ್ಯವರ್ತಿ ಸ್ಥಳದಲ್ಲಿ ಸೇರಿಸಬೇಕೆಂತಲೂ ಠರಾಯಿಸಿತು. ಜಿಲ್ಹೆಯೊಳಗಿನ ಎಲ್ಲ ಪಕ್ಷದವರಿಗೆ ಸಭೆಯಲ್ಲಿ ಹಾಜರಾಗಲು ಅನುಕೂಲವಾಗಬೇಕೆಂತಲೂ, ಅವರ ಸಹಾನುಭೂತಿಯನ್ನೂ ದೊರಕಿಸಬೇಕೆಂತಲೂ, ಈ ಪರಿಷತ್ತಿನಲ್ಲಿ ಜಂಗಲ ದೂರುಗಳನ್ನಷ್ಟೇ ವಿಚಾರಿಸಬೇಕೆಂದು ಈ ಸಭೆಯು ೨ನೇ ಠರಾವು ಮಾಡಿತು. ಎರಡೂ ಠರಾವುಗಳು ಎಲ್ಲರಿಗೂ ಸಮ್ಮತವಾಗುವವು. ನಮ್ಮಲ್ಲಿ ಇತರ ಪ್ರಚಲಿತ ರಾಜಕೀಯ ಪ್ರಶ್ನೆಗಳ ಬಗ್ಗೆ ಮತಭೇದವಿದ್ದರೂ, ಜಂಗಲ ದೂರು ನಿವಾರಣೆಯ ಬಗ್ಗೆ ಎಲ್ಲರೂ ಏಕಮತದವರಿರುವರು. ಕಾಡಿನ ಉಪದ್ರವವು ಎಲ್ಲರಿಗೂ ಸರಿಯಾಗಿ ಬಾಧಿಸುತ್ತದೆ. ನಮ್ಮ ಜಿಲ್ಹಾ ಕೊಂಗ್ರೆಸ ಕಮಿಟಿಯೂ ಈ ಬಗ್ಗೆ ಒಂದು ಯೋಜನೆಯನ್ನು ಈ ಮೊದಲೇ ತಯಾರು ಮಾಡಿದೆ. ಅದನ್ನು ಬೆಂಬಲಕ್ಕಿಟ್ಟುಕೊಂಡು, ಮಿ| ಕೊಲಿನ್ಸರವರ ಯೋಜನೆಯಿಂದ ಜಿಲ್ಹಾನಿವಾಸಿಕರಿಗುಂಟಾದ ಲಾಭಾಲಾಭಗಳನ್ನು ವಿಚಾರಿಸಿ, ಹೊಸ ಯೋಜನೆಯನ್ನು ಸರ್ವಾನುಮತದಿಂದ ತಯಾರಿಸುವದು ಪ್ರಜೆಗಳಿಗೆ ಅವಶ್ಯವಿದೆ. ಇದರಿಂದ ನಮಗೇನು ಬೇಕು? ನಮ್ಮ ತೊಂದರೆಗಳೇನಿವೆ? ಎಂಬುದು ಸಕಲರಿಗೂ ತಿಳಿದು, ಐಕ್ಯಮತ್ಯದಿಂದ ಅವುಗಳನ್ನು ಪಡೆಕೊಳ್ಳುವರೆ ಚಳವಳಿ ಮಾಡಲು ನಮಗನುಕೂಲವಾಗುವದು. ಪ್ರಾತಿನಿಧಿಕ ಪರಿಷತ್ತಿನ ಚರ್ಚೆಯ ವಿಷಯವನ್ನು ಜಂಗಲ ದೂರುಗಳಿಗೆ ಮಾತ್ರ ನಿಯಂತ್ರಿಸಿದ್ದರಿಂದ, ಈ ಪರಿಷತ್ತಿಗೆ ಹಾಜರಿಯನ್ನೀಯಲು ಯಾರೂ ಸಂಕೋಚಪಡುವ ಕಾರ

ಣವಿಲ್ಲ. ಈ ಪರಿಸ್ಥಿತಿಯನ್ನು ಶೀಘ್ರವೇ ನೆರಿಸುವ ವ್ಯವಸ್ಥೆಯನ್ನು ಕೈಕೊಳ್ಳಬೇಕಾಗಿ ರಾ। ವರ್ಟ ಮೊದಲಾದ ಮುಂಬಯಿಯ ಕಾನಡಿಗ ಬಾಂಧವರಿಗೆ ನಾವು ಸೂಚಿಸುವೆವು.

೩. ನೌಕರಶಾಹಿಯು ಹಣ ಹುಟ್ಟಿಸುವ ಹಂಚಿಕೆಗಳು ಅನೇಕವಿವೆ. ಅಪರಾಧಿಗಳಿಗೆ ಶಿಕ್ಷೆಗಿಂತ ದಂಡವನ್ನು ವಿಧಿಸಿ, ಸಾವಿರಾರು ರೂಪಾಯಿಗಳನ್ನು ಅವರು ಸಂಪಾದಿಸುತ್ತಿರುವರು. ನಾಗಪುರದ ಸತ್ಯಾಗ್ರಹ ಸಂಗ್ರಾಮದಿಂದ ಸರಕಾರಕ್ಕೆ ೨೫ ಸಾವಿರ ರೂಪಾಯಿಗಳಿಗೆ ಮಿಕ್ಕಿ, ಉತ್ಪನ್ನನಾಯಿತೆಂದು ತಿಳಿಯುತ್ತದೆ ಇದರಂತೆ ನಮ್ಮಿತ್ತ ಕಡೆಗೆ ಶೇತಕಿ-ಬಿನ್‌ಶೇತಕಿ ಎಂಬ ಎರಡು ಶಬ್ದಗಳಿಂದ ಸಾವಿರಾರು ರೂಪಾಯಿಗಳನ್ನು ಎತ್ತುತ್ತಿರುವರು. ಶೇತಕಿಗೆಂದು ಕೊಂಡ ಭೂಮಿಯನ್ನು ಬಿನ್‌ಶೇತಕಿ ಕೆಲಸಕ್ಕೆ ಉಪಯೋಗಿಸಬೇಕಾದರೆ, ಕಾಯಿದೆಯಂತೆ ಕಲೆಕ್ಟರರ ಹುಕುಮು ಪಡೆಯಲಿಲ್ಲೆಂಬ ನೆವಮಾಡಿ, ಬಡ ರೈತರಿಗೆ ನೂರಾರು ರೂಪಾಯಿಗಳ ದಂಡ ವಿಧಿಸುತ್ತಿರುವರು. ಜಂಗಲಿಸೊಳಗಿನ ಶೇತಕಿ ಭೂಮಿಯಲ್ಲಿ ಸಾಟುಗಳನ್ನು ಹಟ್ಟಿ ಮಾಡುವದೂ, ಹಳ್ಳಿಗಳಲ್ಲಿ ವೀಳ್ಯದ ಬುಟ್ಟಿಗಳನ್ನು ಇಡುವದೂ, ಮನೆಗಳನ್ನು ಕಟ್ಟುವದೂ, ಮನೆಗಳಲ್ಲಿ ಕಿರಾಣಿ ಮಾಲಿನ ಬುಟ್ಟಿಗಳನ್ನಿಟ್ಟು ದುಡ್ಡು ದಮಡಿಯ ವ್ಯಾಪಾರ ಮಾಡುವದೂ ಇವೆಲ್ಲ ಬಿನ್‌ಶೇತಕಿ ಕೆಲಸಗಳು ಈಗ ಬಹುಕಾಲದಿಂದ ನಡೆದು ಬಂದಿವೆ. ಈ ವರೆಗೆ ಈ ಬಗ್ಗೆ ಯಾರೂ, ಏನೂ ತಕರಾರು ಮಾಡಿಲ್ಲ, ಉಪದ್ರವ ಕೊಡಲಿಲ್ಲ ಆದರೆ, ಈಗ ಇವುಗಳ ಬಗ್ಗೆ ಪಟೇಲ-ಗ್ರಾಮಸ್ಥರು ಪ್ರಕರಣಗಳನ್ನು ನಡಿಸಿ, ಬಡ ಪ್ರಜೆಗಳಿಗೆ ಭೂಮಿಯ ಬೆಲೆಗೆ ಮಿಕ್ಕಿ ಸಹ, ದಂಡವನ್ನು ವಿಧಿಸುತ್ತಿರುವರು ಇದು ನಿಜವಾಗಿ ನಿಂದ್ಯವು. ಕಾಯಿದೆಯ ಸೂಕ್ಷ್ಮ ಭೇದವನ್ನರಿಯದೆ, ಸರಕಾರಕ್ಕೆ ನಷ್ಟವಿಸುವ ಯಾವದೇ ಪರಿಯ ಇರಾದೆಯಿಲ್ಲದ ಪ್ರೀತಿಕರಾಗಿ, 'ತಮ್ಮ ಭೂಮಿ'ಯೆಂಬ ತಿಳುವಳಿಕೆಯಿಂದ ಅದನ್ನು ಉಪಭೋಗಿಸುವ ನಿರಪರಾಧಿಗಳಿಗೆ ಈ ಪರಿಯಿಂದ ದಂಡಿಸುವದು ಅನ್ಯಾಯವಲ್ಲೆಂದ ಯಾರು ಹೇಳರು? ಬಿನ್‌ಶೇತಕಿಯ ಕಾಯಿದೆಗೆ ಅನೇಕ ಮನೆಗಳು ಈಗ ಬಲಿಬಿದ್ದ ಸುದ್ದಿ ಇದೆ. ಈ ಪ್ರಸಂಗದಲ್ಲಿ ಅತಿ ಅಕ್ಷೇಪಾರ್ಹವು ಬಿನ್‌ಶೇತಕಿ ಕೆಲಸಕ್ಕೆ ಶೇತಕಿ ಭೂಮಿಯನ್ನು ಉಪಯೋಗಿಸಿದ್ದು ಕಂಡು ಬಂದಲ್ಲಿ, ಅಧಿಕಾರಿಗಳು ಆ ಬಗ್ಗೆ, ಹೆಚ್ಚೆಂದರೆ, ಕಂದಾಯದ ಹಣವನ್ನು ಏರಿಸುವದು ಯುಕ್ತವು ಹೊರತು, ಹೀಗೆ ಪ್ರಜೆಗಳ ಮನೆಗಳನ್ನು ಕೆಡಹುವದು ಹಿತಕರವಲ್ಲೆಂದು ನಮ್ಮ ಮತವು.

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ಅಲ್ಪ ಸ್ವಲ್ಪ ಬಿಸಿಲು ತೋರಿಯಿದೆ. ಆದರೂ ಮಳೆಯ ಪ್ರತಾಪವೂ ಏನೂ ಕಳೆಗುಂದಲಿಲ್ಲ. ವೃಷ್ಟಿಯು ಜೋರಿನಿಂದ ಸುರಿಯುತ್ತಿದೆ. ಅಘನಾಶಿನಿ ನದಿಗೆ ಬಂದ ನೆರೆಯು ಸಂಪೂರ್ಣವಾಗಿ ಇಳಿದು ಹೋಗಲು ಒಪ್ಪುವದಿಲ್ಲ. ನೀರು ಅಲ್ಲಲ್ಲಿ ತಟೆಯುತ್ತದೆ ಕಳೆದ ನೆರೆಯಿಂದ ಅನೇಕ ಬಗೆಯ ಹಾನಿಯು ಅನೇಕರಿಗೆ ಸಂಭವಿಸಿತು. ಗದ್ದೆ-ಗಝನಿ-ತೋಟಗಳ ಕಥೆಯು ತೀರ ಕರುಣಾಸ್ಪದವು. ಬೇಸಾಯಗಾರರು ತೀರ ನಿರಾಶರಾಗಿ ಶ್ರೀ ದೇವರ ಮೇಲೆ ಎಲ್ಲ ಭಾರವನ್ನು ವಹಿಸಿ, ಚಿಂತಾಮಗ್ನರಾಗಿರುವರು ಬಾಡ ಹೊಲನಗದ್ದೆ ಮೊದಲಾದ ಊರುಗಳು ಪ್ರದೇಶಗಳ ಹತ್ತಲುಗಳೊಳಗಿನ ದೊಡ್ಡ ದೊಡ್ಡ ತೆಂಗಿನ ಮರಗಳು ಹುಡಿದುಬಿದ್ದವು ೩೦೦ ೪೦೦ ಮರಗಳು ಬುಡ ಮೇಲಾಗಿರಬೇಕೆಂದು ಸುದ್ದಿಯಿದೆ ನಿಶ್ಚಿತ ಲುಕ್ಸಾನನ್ನು ತಿಳಿದುಕೊಳ್ಳಲು ಮತ್ತೂ ಅವಕಾಶ ಬೇಕು ಜಿಲ್ಹಾಧಿಕಾರಿಗಳು ಸ್ವಲ್ಪ ಜಾಗೃತ ಹೊಂದಿ ಕಂದಾಯ ತೆರುವ ಪ್ರಜೆಗಳ ಅವಸ್ಥೆಯ ಚೌಕಶಿ ಮಾಡುವದು ಅವರ ಕರ್ತವ್ಯವು ೧೫-೪೪ ಇಂಚು ಮಳೆ, ಈ ವರೆಗೆ ೧೪೬-೧೮ ಇಂಚು ಮಳೆ

ಜಿಲ್ಹಾಧಿಪರು ಹೊನ್ನಾವರಕ್ಕೆ ಹೋಗುವಾಗ ನಿನ್ನೆ ರಥಬೀದಿಯೊಳಗಿಂದ ಮೋಟಾರು ಹೊಡೆದುಕೊಂಡು ಸಾಗಿಹೋದರಂತೆ ಈ ಮಾರ್ಗದ ಮೇಲಿಂದ ಮೋಟಾರ ನಡಿಸಬಾರದೆಂದು ಮಾರ್ಗದ ಮೇಲೆ ಬೋರ್ಡು ಹಚ್ಚಿದ್ದರ ಈ ನಿಯಮವನ್ನು ಜಿಲ್ಹಾಧಿಪರು ಉಲ್ಲಂಘಿಸಿದ ಬಗೆ ಅವರಿಗೆ ಶಾಸನವೇನಿದೆಂದ ಕುಂಭಾಪುರ ಸರ್ಕಲ್ ದ ಪ್ರಕ್ಕ ಡಿ। ಮೆಜಿಸ್ಟ್ರೇಟ ಮಿ। ಹೇಗರೆ ಇದಕ್ಕೆ ಉತ್ತರ ಕೊಡಬೇಕು

ನೆರೆಯ ಹಾವಳಿಯಿಂದ ನಿರಾಶ್ರಿತರಾದವರಿಗೆ ಸಹಾಯ ದನ್ನೀಯುವ ವಿಚಾರವಾಗಿ ಇಲ್ಲಿಯ ಮಾಮಲೇದಾರರ ಇಂದೆ ಮಧ್ಯಾಹ್ನ ೮ ಘಂಟೆಗೆ ತಾಲೂಕ ಕಚೇರಿಯಲ್ಲಿ ಒಂದ ಆಲೋಚನಾ ಸಭೆಯ ನ ನಿಮಂತ್ರಿಸಿರುವರು

ಸಾಭಾರ ಸ್ವೀಕಾರ

The Health— Monthly July issue. Edited by Dr. U. Rama Rau, M. L. C. 323 Thambu Chetty Street, Madras. Annual subscription Rs. 1—8—0 only.

ಹಳದೀಪುರ— ಶರಾವತಿ ನದಿಯೂ ಕಳೆದ ನೆರೆಯಲ್ಲಿ ಅನೇಕ ನಿವಾಸಿಗಳನ್ನು ಅನಾಥರನ್ನಾಗಿ ಮಾಡಿತು ಏನ ಹೇಳುವದು ಈ ನೆರೆಯ ಚಮತ್ಕಾರ! ೭ನೇ ತಾರೀಖಿಗೆ ತೆರಪಿಲ್ಲದೆ ಮಳೆ ಎಲ್ಲರೂ ಚಳಿಯಿಂದ ನಡುಗುತ್ತ ತಮ್ಮ ತಮ್ಮ ಮನೆಗಳಲ್ಲಿಯೇ ಸೇರಿಕೊಂಡಿದ್ದರು ಹೊತ್ತೇರಿದ ಹಾಗೆ ನೀರೂ ಏರಿತು ಆದರೂ, ಈಗ ಇಳಿದು ಹೋಗುವದು, ಇನ್ನೇರಲಿಕ್ಕಿಲ್ಲ ಎಂದು ಅನೇಕರು ಕಲ್ಪಿಸಿ ಎಂದಿನಂತೆ ಅಂದಿನ ರಾತ್ರಿ ಊಟವನ್ನು ತೀರಿಸಿಕೊಂಡು ನಿದ್ರಿತರಾದರು. ರಾತ್ರಿಗೆ ನೀರು ಮತ್ತೂ ಏರಿತು. ಏರೇರುತ್ತ ನೆರೆಹೊರೆಯಲ್ಲಿದ್ದ ಗೃಹಗಳಲ್ಲಿ ಪ್ರವೇಶಿಸಿತು ಎಲ್ಲರೂ ನಿದ್ರಾಸಕ್ತರು ನೆರೆಯು ಒಳಹೊಕ್ಕು, ಅವರನ್ನೆಲ್ಲ ಎಬ್ಬಿಸಿ, ತನ್ನ ಆಗಮನದ ಸುದ್ದಿಯನ್ನಿತ್ತಿತು ಎಲ್ಲರೂ ಭಯಾಭೀತರಾದರು ಈಗ ತಾವು ತೆಪ್ಪಗೆ ಏನು ಮಾಡುವದೆಂದು ಎಲ್ಲರೂ ಯೋಚಿಸುತ್ತಿರುವಷ್ಟರಲ್ಲಿ, ಇವರ ಕೇಳುಕರದಿಂದ ಎಚ್ಚತ್ತ ಶ್ರೀ। ಅಗ್ರಹಾರ ಸಭಾಹಿತ, ಬಡಗಣಿ ರಾಮಹೆಗಡೆ ಮೊದಲಾದ ಗೃಹಸ್ಥರು ದೋಣಿಗಳನ್ನು ಅವರಿದ್ದಲ್ಲಿಗೆ ಒಯ್ದು, ನೆರೆಯಿಂದ ಬಳಲುವವರನ್ನೆಲ್ಲ ಸುರಕ್ಷಿತ ಸ್ಥಳದಲ್ಲಿ ಇಳಿಸಿಕೊಂಡರು ಮನೆಯೊಳಗಿದ್ದ ಅನ್ನ ಸಾಮುಗ್ರಿಗಳೆಲ್ಲ ನೀರುಪಾಲಾಗಿ, ಎಲ್ಲವೂ ನಷ್ಟವಾಯಿತು ರಾತ್ರಿ ಬೆಳಗಾಗುವದರೊಳಗೆ ಮನೆಗಳು ನೆರೆಯ ಹೊಡತವನ್ನು ಸಹಿಸಲಾರದೆ, ನೆಲಕ್ಕುರುಳಿದವು ನೋಡ ನೋಡುತ್ತ ಒಂದರ ಹಿಂದೊಂದು ಬಡ ಜನರ ಸಂಸಾರ ಸಾಗ್ರಿಯವು ಜಲಸಮಾಧಿ ಹೊಂದುವದನ್ನು ನೋಡಿ, ಯಾರಿಗೆ ತಾನೇ ಕಣ್ಣೀರು ಸುರಿಸದು? ದೋಣಿಗಳ ಸಹಾಯವಿದ್ದದರಿಂದ ಪ್ರಾಣಹಾನಿಯೊಂದು ಸಂಭವಿಸಲಿಲ್ಲ ಸುಮಾರು ೧೩೫ ಮನೆಗಳು ಜಲಸಮಾಧಿ ಹೊಂದಿದವು. ಗಂಡಸರು, ಹೆಂಗಸರು, ಹುಡುಗರು ಕೂಡಿ, ಸುಮಾರು ೧೨೦೦ ಜನರು ಅನಾಥರಾಗಿರುವರು ಅವರಿಗೆ ಇಲ್ಲಿಯ ಶ್ರೀ। ಅಗ್ರಹಾರ ಸಭಾಹಿತ ಮೊದಲಾದ ದಿದಾರ್ಯವಂತರು ಅನಾಥರಿಗೆ ಅಕ್ಕಿ ಮೊದಲಾದವುಗಳನ್ನು ಹಂಚಿ, ಈಗೆ ೩-೮ ದಿನಗಳಿಂದ ಅವರ ವ್ಯವಸ್ಥೆ ಮಾಡುತ್ತಿರುವರು. ಡಿಸ್ಟ್ರಿಕ್ಟ ಜನರಲ್ ಆಫೀಸರರಾದ ರಾ। ಬ। ಕೊಯಿಮತ್ತೂರ ಸಾಹೇಬರು ತಾ. ೧೩ನೇ ರವಿವಾರ ಬೆಳಗ್ಗೆ ಇಲ್ಲಿ ಬಂದು ನೆಟ್ಟಗೆ ಹೊನ್ನಾವರಕ್ಕೆ ಹೋಗಿ, ಪುನಃ ಮಧ್ಯಾಹ್ನಕ್ಕೆ ಇಲ್ಲಿಗೆ ಬಂದರು ಗುಡೇಕಟ್ಟದ ವರೆಗೆ ಪ್ರವಾಸ ಮಾಡಿ, ಅಲ್ಲಿಯ ಮನೆಮಾರು ಕಳಕೊಂಡವರಿಗೆ ಸರಕಾರವು ಸಹಾಯ ಮಾಡಲು ಸಿದ್ಧವಿರುವದೆಂದು ಹೇಳಿದ್ದಲ್ಲದೆ, "ನಿಮಗೆ ೨೫-೨೫ ರೂಪಾಯಿ ತಗಾವಿ ಕೊಡಿಸುತ್ತೇನೆ, ನಿಮ್ಮ ನಿಮ್ಮ ಒಡೆಯರ ಜಾಮೀನು ಕೊಡಿರಿ" ಎಂದು ಬಹು ಉದಾರಮನಸ್ಕರಾಗಿ ನುಡಿದರೆಂತಲೂ ಸುದ್ದಿ ಇದೆ! ಸಾಯಂಕಾಲಕ್ಕೆ ರಾವಬಹಾದ್ದೂರರು ಬಡಗಣಿ ಬದಿಗೆ ಪ್ರವಾಸ ಮಾಡಿ ಇಲ್ಲಿ ಬಂದರು ಬಡವರ ಗೋಳಾಟ ನೋಡಿ, ರಾವಬಹಾದ್ದೂರರ ಹೃದಯವೂ ಕರಗಿ ನೀರಾಯಿತು! ನೆರೆಯ ಆಗಡಿಯೊಳಗಿಂದ ೬ ಕೊಳಗ ೧ ಸೇರು ಅಕ್ಕಿಯನ್ನು ೨ ರೂ ೧೪॥ ಆಣೆಗಳಿಗೆ ಕೊಂಡು, ಬಡವರಿಗೆ ಧರ್ಮ ಮಾಡಿಬಿಟ್ಟರು! ಇಲ್ಲಿಯ ಸ್ಥಿತಿಯು ತೀರ ಕರುಣಾಸ್ಪದವಿರುವದೆಂಬ ಬಗ್ಗೆ ಮತ್ತೇನು ಸಾಕ್ಷಿ ಬೇಕು? ಕಲೆಕ್ಟರ ಮಿ। ಹೇಗರವರೂ ಇಲ್ಲಿ ಆಗಮಿಸುವವರಿದ್ದಾರೆಂದು ಸುದ್ದಿ ಇದೆ ಊರವರು ಶ್ರೀ। ವಿಷ್ಣು ಗಣಪತಿ ಸಭಾಹಿತ ಇವರ ಅಧ್ಯಕ್ಷತೆಯ ಕೆಳಗೆ ನಿರಾಶ್ರಿತರ ದುಃಖನಿವಾರಣೆಗಾಗಿ ಒಂದು ಹಂಗಾಮಿ ರಿಲೀಫ ಕಮಿಟಿಯನ್ನು ಸ್ಥಾಪಿಸಿರುವರು ಕಮಿಟಿಯ ವಿನಂತಿ ಪತ್ರಿಕೆಯನ್ನು ಇದರಡಿಗೆ ಕೊಟ್ಟಿರುವೆವು.

ವಿನಂತಿ ಪತ್ರಿಕೆ

ಕಳೆದ ೭ ನೇ ತಾರೀಖಿನ ದಿವಸ ನೆರೆ ಹಾವಳಿಯಿಂದ ಈ ನಮ್ಮ ಹಳದೀಪುರ ಗ್ರಾಮದಲ್ಲಿ ಅಜಮಾಸ ೧೩೫-೨೦೦ ಮನೆಗಳು ನಷ್ಟವಾಗಿ ಸುಮಾರು ೧೨೦೦ ಜನರಿಗೆ ಉಳಿಯಲಿಕ್ಕೆ ಮನೆಯಿಲ್ಲದಂತೆ ಆಗಿ ಎಷ್ಟೋ ಜನರಿಗೆ ಅನ್ನವಸ್ತ್ರಗಳು ಸಹ ಇಲ್ಲದೆ ಕಷ್ಟಪಡುತ್ತಿರುವದರಿಂದ ಜನರಿಗೆ ಸಹಾಯ ಮಾಡುವ ಉದ್ದೇಶದಿಂದ ಕಳೆದ ೧೨ ನೇ ತಾರೀಖಿನ ದಿವಸ ಇಲ್ಲಿ ಕೂಡಿ ಒಂದು ರಿಲೀಫ ಕಮಿಟಿ ನೇಮಿಸಿಕೊಂಡು ಕೆಲಸಕ್ಕೆ ಆರಂಭ ಮಾಡಿರುತ್ತಾರೆ

ಈ ದಿವಸ ಕಮಿಟಿಯು ಕೂಡಿ (೧) ಕೆಲಸ ಮಾಡುವ ಎಲ್ಲಾ ಜನರಿಗೂ ಗಂಡು ಆಳಿಗೆ ರೂಪಾಯಿ ೦-೩-೬, ಹೆಣ್ಣು ಆಳಿಗೆ ರೂಪಾಯಿ ೦-೨-೬, ಹುಡುಗರಿಗೆ ರೂಪಾಯಿ ೦-೨-೦ ಪಗಾರದ ಮೇಲೆ ರಿಲೀಫ ಕೆಲಸ ಕೊಡುವದು ನಿಶ್ಚಯಿಸಿ, ಅದರಂತೆ ಸರ್ವ ಜನರಿಗೆ ತಿಳಿಸಿ, ಘಾಯಿಸ ಮಾಡಿರುತ್ತಾರೆ

(೨) ಕೂಲಿ ಕೆಲಸ ಮಾಡಲಿಕ್ಕೆ ಹೋಗುವರೆ ಅನುಕೂಲವಿಲ್ಲದೆ, ಗದ್ದೆ ಸಾಗುವಳಿ ವಗೈರೆ ಕೆಲಸದ ಮೇಲೆ ಅವಲಂಬಿಸಿ ಇರುವ ಜನರಲ್ಲಿ ಅತಿ ಬಡವರಾಗಿ ಇರುವವರಿಗೆ ಈದಿವಸದ ಲಂಗಾಯಿತು ಅಕ್ಕಿ ರಾಗಿ. ಕೂಡಿ ಆಳು ಮಂದರ ದಿನ ಮಂದಕ್ಕೆ ಸೇರೆ ೩ ಸ್ಟ ಪ್ರಮಾಣದಂತೆ ಕೊಡಿಸುವ ವ್ಯವಸ್ಥೆ ಮಾಡಿರುತ್ತಾರೆ

(೩) ಅಡಿಗೆ ಮಾಡಿಕೊಳ್ಳಲಿಕ್ಕೆ ಗಡಿಗೆಗಳನ್ನು, ಅರಿವೆ ಕಂಬಳಿ ಇಲ್ಲದವರಿಗೆ ಅರಿವೆ, ಕಂಬಳಿ ಸಹ ಕೊಡಿಸುವ ಬಗ್ಗೆ ವಿಚಾರ ನಡೆದದೆ

(೪) ಖರ್ಚ ಹಂಗಾಮಿ ಬಿಡಾರ ಕಟ್ಟಿಕೊಳ್ಳುವ ಜನರಿಗೆ ನಮ್ಮಿಂದ ಆಗುವ ಸಹಾಯ ಕೊಡಿಸುವದೆ ನಿಶ್ಚಯಿಸಿ ಅದೆ. ಬಾಕಿ ಎಲ್ಲಾ ಸಂಗ್ತಿ ಇದೇ ತಿಂಗಳ ೧೯ ನೇ ತಾರೀಖಿನ ದಿವಸ ಇಲ್ಲಿ ಜಿಲ್ಲಾ ಕೊಂಗ್ರೆಸ ಕಮಿಟಿ ಸಹ ಕೂಡತಕ್ಕದ್ದು ಅದೆ ಮುಖಂಡರ ಸಹಾಯದ ಅನುಮತಿ ತೆಗೆದುಕೊಂಡು ನಿರ್ಣಯಿಸಿ, ಕಾರ್ಯಕ್ರಮ ನಡಿಸಲಾದೀತು ತಾ ೧೫-೮ ೧೯೩೩

ವಿಷ್ಣು ಗಣಪತಿ ಸಭಾಹಿತ,

ಅಧ್ಯಕ್ಷ, ರಿಲಿಫ ಕಮಿಟಿ-ಹಳದೀಪುರ.

(ಮುಂದೆ ೮ A ಪಾನು ನೋಡಿರಿ)

ಹೊನ್ನಾವರ— ತಾ ೩-೪ನೇಗೆ ಇಲ್ಲಿ ವಿಪರೀತ ಮಳೆ ಸುರಿಯಿತು. ಹೊಳೆ-ಹಳ್ಳಗಳೆಲ್ಲ ತುಂಬಿ ತುಳುಕಿದವು. ಕರ್ಕಿ, ಹೊಸ್ಪಟ್ಟಣ, ಮುಗ್ವ, ಭಾಸ್ಕೇರಿ ಈ ಹಳ್ಳಿಗಳಲ್ಲಿ ಮನೆಗಳೂ, ಕೊಟ್ಟಿಗೆಗಳೂ ನೆರೆಯಪಾಲಾದವು. ನೂರಾರು ಮಂದಿಗಳು ಮನೆಮಾರು ಕಳಕೊಂಡು, ನಿರಾಶ್ರಿತರಾಗಿರುವರು. ಅನೇಕರು ಧರ್ಮಶಾಲೆಗಳಲ್ಲಿ ಸೇರಿಕೊಂಡು ದಿನಹರಣ ಮಾಡುತ್ತಿರುವರು. ಗೇರಸಪ್ಪ, ಗಂಡಬಾಳ ಬದಿಗಳಲ್ಲಿಯೂ, ಇದೇ ಹಾಳು. 'ದೇವೋ ದುರ್ಬಲಘಾತಕಃ' ಎಂಬಂತೆ ಹೊಳೆಯಂಚಿಗಿದ್ದ ಬಡವರ ಮಣ್ಣಿನ ಮನೆಗಳೆಲ್ಲ ನೆಲಕ್ಕುರುಳಿ, ಅಮಿತ ಹಾನಿ, ಅನರ್ಥವೀಯು ಗೋಳು ದಾ| ಟಾ| ಕೊಯಿಮುತ್ತೂರರು ಇಲ್ಲಿಗೆ ಬಂದಿರುವರು. ನೆರೆಯಿಂದ ಬಳಲುವವರ ಬಗ್ಗೆ ಏನು ವ್ಯವಸ್ಥೆಯಾಯಿತೆಂದು ತಿಳಿಯಲಿಲ್ಲ. ನೆರೆಯಿಂದ ಒದಗಿದ ಲುಕ್ಸಾನಿಯನ್ನು ಅಂದಾಜು ಮಾಡುವ ಕೆಲಸವು ನಡೆದದೆ. ಅಳ್ಳಂಕಿ, ಕಳ್ಳಿಗೆ, ಹೈಗುಂದ, ಸಂಶಿ ಅಕ್ಕಸಾಲೆಯ ಕಬ್ಬಿನ ಪೈರು ನೆರೆಯ ಕುತ್ತಾಯಿತು. ನಿರಾಶ್ರಿತರ ದುಃಖನಿವಾರಣಾರ್ಥವಾಗಿ ೭ ಜನ ಸದ್ಗೃಹಸ್ಥರದೊಂದು ತಂಗಾಮಿ ಕಮಿಟಿಯ ಸ್ಥಾಪನೆಯಾಗಿದೆ. ಈ ಕಮಿಟಿಯ ಈ ವರೆಗೆ ೬೫ ರೂಪಾಯಿ ವಂತಿಗೆ ಕೂಡಿಸಿದೆ. ಕಮಿಟಿಯ ವಿದ್ಯಮಾನ ಹೊರಟ ವಿನಂತಿ ಪತ್ರವನ್ನು ಇದರಡಿಗೆ ಕೊಟ್ಟಿರುವೆವು.

ಗುಡಿಗಟ್ಟ ಬಳದ ಹೋಗಿ ನಿರಾಶ್ರಿತರಾದವಗೆ ಅಧಿಕಾರಿಗಳು ಸಾಲಕೋಡ ಜಂಗಲದಿಂದ ೫ ಸಾಲೇ ಮರ, ಎಳೆ, ಕಂಬಗಳನ್ನು ಬಿನ್‌ಕಾಗಲಿನಿಂದ ಕಡುವರೆ ಅಪ್ಪಣೆ ಯನ್ನಿತ್ತಿರುವರಂತೆ. ಹೊಟ್ಟೆ ತುಂಬಿಕೊಂಡು ಬದುಕುಳಿದ ಬಳಿಕ, ಮನೆ ಕಟ್ಟುವ ಸುದ್ದಿ. ಈ ವಂಚ್ಯ ಪ್ರಶ್ನೆಯ ಬಗ್ಗೆ, ದಯಾಳು ಅಧಿಕಾರಿಗಳು ಮಾಡಿದ ವ್ಯವಸ್ಥೆಯು ಇನ್ನೂ ತಿಳಿದಿಲ್ಲ.

ವಿನಂತಿ ಪತ್ರ.

ಇದೇ ತಿಂಗಳ ತಾರೀಖು ೭ ನೇಯಿಂದ ಧಾರಾಳವಾಗಿ ಸುರಿದ ಮಳೆಯ ಮೂಲಕ ಹೊನ್ನಾವರ ತಾಲೂಕಿನಲ್ಲಿ ಅಪೂರ್ವವಾದ ನೆರೆ ಬಂದು, ತಗ್ಗಿನ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದ ಬಡ ಬೇಸಾಯಗಾರರ ಮತ್ತು ಕೂಲಿಕಾರರ ಮನೆಗಳು ಅವುಗಳಲ್ಲಿರುವ ಸರಕು-ಸಾಹಿತ್ಯಗಳು ಸಮೇತ ಮುಳುಗಿ ನಾಶವಾಗಿ, ಆ ಜನರು ಮನೆಮಾರು ಇಲ್ಲದೆ, ಬಹು ಅಂಗಾಲ ಸ್ಥಿತಿಗೆ ಬಂದಿರುತ್ತಾರೆ. ಉದರನಿರ್ವಾಹಕ್ಕೂ, ವಾಸ ಮಾಡಿ ಇರಲಿಕ್ಕೂ ಆಸ್ಪದವಿಲ್ಲದೆ ಬಳಲುವ ಜನರ ದುಃಖಶಮನಾರ್ಥವಾಗಿ ಒಂದು ದ್ರವ್ಯನಿಧಿಯನ್ನು ನಿರ್ಮಾಣ ಮಾಡಿ, ಆ ಬಡ ಜನರಿಗೆ ಸಹಾಯ ಮಾಡುವ ಉದ್ದೇಶದಿಂದ ಕಳೆದ ಕೂಡಿಸಿದ ಕೆಲವು ಸದ್ಗೃಹಸ್ಥರದೊಂದು ಕಮಿಟಿಯನ್ನು ತಾತ್ಕಾಲಿಕವಾಗಿ ಸ್ಥಾಪಿಸಿ, ಆ ಕಮಿಟಿಯ ಮುಖಾಂತರ ಹಣ ಕೂಡಿಸಿ, ಅದರ ಸದುಪಯೋಗ ಮಾಡಬೇಕೆಂತ ನಿಶ್ಚಯಿಸಿದಂತೆ, ಆ ಪ್ರಕಾರ ಒಂದು ಕಮಿಟಿ ಸ್ಥಾಪಿಸಿಯದೆ. ಆ ಕಮಿಟಿಯ ಸಭಾಸದರ್ಯಾರೆಂದರೆ—

೧ ಶ್ರೀಯುತ ಮಾಧವ ಅನಂತ ಶೆಣೈ, ೨ ಮಂಜುನಾಥ ದೇವರ ಭಟ್ಟ ಕರ್ಕಿ, ೩ ಉಪೇಂದ್ರ ವಿಠೋಬ ನಾಯ್ಕ, ೪ ವಾಸುದೇವ ಪಾಂಡುರಂಗ ಶ್ಯಾನಭಾಗ, ೫ ಎಸ್. ಎಫ್. ಗೋನಸಾಲ್ವೇಸ, ೬ ಮಂಜುನಾಥ ಬಾಬಾ ಹೊನ್ನಾವರ, ೭ ಮಾದಪ್ಪ ಗಣಪ ಹೆಗಡೆ, ಕರ್ಕಿ.

ಇವರಲ್ಲಿ ೨ ನೇಯವರು ಆ ಕಮಿಟಿಯ ಅಧ್ಯಕ್ಷರು, ೬ ನೇಯವರು ಕೋಶಾಧ್ಯಕ್ಷರು ೫ ನೇಯವರು ಕಾರ್ಯದರ್ಶಿಗಳು ಇರುತ್ತಾರೆ. ಈ ಕಮಿಟಿಯು ಸೂಚನೆ ಪ್ರಕಾರ ಹಣ ಕೂಡಿಸುವ ಬಗ್ಗೆ ಈ ವಿನಂತಿ ಪತ್ರವನ್ನು ಬರಕೊಂಡಿರುತ್ತದೆ. ಆದ್ದರಿಂದ ದಯಾರ್ದ್ರ ಹೃದಯರಾದ ಸ್ತ್ರೀ-ಪುರುಷರು ಬಡವರಿಗೊದಗಿದ ಆಪತ್ಕಾಲದಲ್ಲಿ ಅವರ ದುಃಖಶಮನಾರ್ಥವಾಗಿ ತಮ್ಮ ಶಕ್ತಿ ಮೀರಿ ದ್ರವ್ಯಸಹಾಯ ಮಾಡಬೇಕಾಗಿ ಪ್ರಾರ್ಥನೆ.

ಹೊನ್ನಾವರ, 12-8-23 } ಮಂಜುನಾಥ ದೇವರ ಭಟ್ಟ ಕರ್ಕಿ, ಅಧ್ಯಕ್ಷ, ರಿಲೀಫ್ ಕಮಿಟಿ, ಹೊನ್ನಾವರ.

ಕುಮಟಾ— ಕಳೆದ ತಾ ೩-೪-೫ನೇಗೆ ಸುರಿದ ಅಪರಿಮಿತ ಮಳೆಯಿಂದ ಹೊನ್ನಾವರದಲ್ಲಿಯ ಕಡುಪತಿ, ಬಡಗಣಿ ವಗೈರೆ ನದಿ—ಹೊಳೆಗಳಿಗೆ ದೊಡ್ಡ ನೆರೆ ಬಂದು, ಅಲ್ಲಿಯ ಹಾವಿನಕುರ್ವೆ, ಹೊಸಾಡ ಕರ್ಕಿ, ಹಳದೀಪುರ ಮೊದಲಾದ ಊರುಗಳಲ್ಲಿ ಬಡಜನರ ಅನೇಕ ಮನೆ-ಗುಡಿಸಲುಗಳು ನೀರಿನಲ್ಲಿ ಬಳೆದು ಹೋಗಿ, ಹಜ್ಜೆನ ವಿಪನ್ನಾವಸ್ಥೆಯು ಉಂಟಾಗಿರುವದಾಗಿ, ಸುದ್ದಿ ತಿಳಿದುಬಂದದರಿಂದ, ಆ ಬಗ್ಗೆ ವಿಚಾರಮಾಡಿ, ವಿಪದ್ಗ್ರಸ್ತರ ಸಹಾಯಾರ್ಥವಾಗಿ, ಫಂಡು ಕೂಡಿಸುವ ಆಲೋಚನೆ ಮಾಡುವ ದೆಶೆಯಿಂದ ಇಲ್ಲಿಯ ಎಲ್ಲ ನಾಗರಿಕರ ಜಾಹೀರ ಸಭೆಯು ಮಂಗಳವಾರ ತಾ ೧೪ನೇ ದಿವಸ ಸಾಯಂಕಾಲ ೬ ಘಂಟೆಗೆ ವಿತ್ರ ಸಮಾಜದ ಸಭಾಗೃಹದಲ್ಲಿ ಜಿಲ್ಹಾಧಿಪತಿ ಮಿ| ಹೇಗ ಅವರ ಅಧ್ಯಕ್ಷತೆಯಲ್ಲಿ ನೆರೆದಿತ್ತು. ಎಲ್ಲ ವರ್ಗಗಳ ಜನರು ಹಾಜರಿದ್ದರು. ಅಧ್ಯಕ್ಷರು ಹೊನ್ನಾವರದ ಮಾಮಲೇದಾರರ ಕಡೆಯಿಂದ ತಮಗೆ ತಿಳಿದುಬಂತಷ್ಟರ ಮಟ್ಟಿಗೆ ಅಲ್ಲಿಯ ಅನಾಹತದ ವೃತ್ತಾಂತವನ್ನು ನಿವೇದಿಸಿ, ಇತರ ತಾಲೂಕುಗಳಲ್ಲಿಯೂ ಫಂಡು ಕೂಡಿಸುವಂತೆ ಪ್ರಯತ್ನಗಳು ನಡಿಸುತ್ತವೆಂದೂ, ಮುಂಬಯಿಯ ಪಾರಿಯಾ-ದಾನ ಧರ್ಮ ಫಂಡಿನಿಂದ ಸಹಾಯದ ಅಪೇಕ್ಷೆಯನ್ನು ಮಾಡಿರುವೆವಾಗಿಯೂ ಹೇಳಿದರು. ಮಿ| ಹೇಗರವರು ಯುರೋಪಿಯನ ಅಧಿಕಾರಸ್ಥರಿಂದ ಹಾಕಿಸಿಕೊಂಡು ಬಂದ ಅಂಕಡೆಗಳ ರಕಮು ರೂ. ೪೨೫ ಮತ್ತು ಸಭೆಯಲ್ಲಿಯ ಸಭಿಕರು ಅಲ್ಲಿಯೇ ಹಾಕಿದ ಅಂಕಡೆಗಳಿಂದ ಕೂಡಿದ ರಕಮು ಸುಮಾರು ರೂ ೪೫೦, ಹೀಗೆ ಒಟ್ಟು ರೂಪಾಯಿ ೯೦೦ ಸುಮಾರು, ಅದೇ ದಿವಸ ಕೂಡಿದಂತಾಯಿತು. ಊರಿನಲ್ಲಿ ಇತರ ಜನರಿಂದ ಫಂಡು ಕೂಡಿಸಲಿಕ್ಕೆ ಒಂದು ಕಮಿಟಿಯು ನೇಮಿಸೋಣಾಯಿತು. ಫಂಡು ಕೂಡಿಸುವ ಎಲ್ಲ ಕೆಲಸವು ಶೀಘ್ರವಾಗಿ, ಇದೇ ತಿಂಗಳ ಅಖೇರಿಗೆ ಒಳಗೆ ಆಗುವದು ಅತ್ಯವಶ್ಯವೆಂದು ಅಧ್ಯಕ್ಷರು ತಿಳಿಸಿಹೇಳಿದ ಮೇಲೆ, ಪರಸ್ಪರ ಔಪಚಾರಿಕ ಆಭಾರಮನ್ನಣೆಯಾಗಿ ಸಭಾವಿಸರ್ಜನವಾಯಿತು.

ಇಲ್ಲಿಯೂ ಮಳೆಯು ಅತಿಶಯ ಬಿತ್ತು. ೩ ದಿವಸಗಳ ವರೆಗೆ ಕಾರವಾರ-ಮಾಜಾಳಿಯಲ್ಲಿ ಟಪಾಲು ದಾಟಿಸಲು ಅಶಕ್ಯವಾಯಿತು. ಹೀಗೆ ರವಿವಾರಕ್ಕೆ ೩ ದಿನಗಳ ಮುಂಬಯಿ ಟಪಾಲು ಒಮ್ಮೆಲೇ ಇಲ್ಲಿಯವರ ಕೈಸೇರಿತು. ಅಷ್ಟು ವಿಪರೀತ ನೆರೆ; ಅಪರಿಮಿತ ಮಳೆ.

ಲೋಕಮಾನ್ಯರ ಪುಣ್ಯತಿಥಿಯು ಇಲ್ಲಿ ಉತ್ಸಾಹದಿಂದ ನೆರವೇರಿತು. ಶ್ರೀ| ಕೃಷ್ಣ ನಾಯಕ ಮತ್ತು ಸುಬ್ರಾಯ ಶಿರಾಲೀಪುರಕರರವರು, ಲೋಕಮಾನ್ಯರ ಗುಣವರ್ಣನಪರ ಭಾಷಣಗಳನ್ನಿತ್ತರು.

ಸಿಂಕೇರಿ— ಇಲ್ಲಿ ತಾ ೨೫ನೇ ದಿವಸ ಸ್ಥಾನಿಕ ಕಾ. ಕ ತರ್ಫೆನಿಂದ ಲೋ. ಟಿಲಕ ಜಯಂತಿಯನ್ನು ಹರುಷದಿ, ಭಕ್ತಿಯಿಂದಲೂ, ಉತ್ಸಾಹದಿಂದಲೂ ಸಾಂಗವಾಗಿ ನೆರವೇರಿಸಿದರು. ಜನಸಮುದಾಯವು ವಿಶೇಷತಃ ವಿದ್ಯಾರ್ಥಿಗಳದೇ ಇದ್ದದರಿಂದ, ಶ್ರೀ. ಕೃಷ್ಣನಾಯಕರು 'ಲೋಕಮಾನ್ಯರ ವಿದ್ಯಾರ್ಥಿದಶೆಯು' ಬಗ್ಗೆ ಹುಡುಗರಿಗೆ ಚನ್ನಾಗಿ ತಿಳಿಸಿಹೇಳಿದರು. ಅಧ್ಯಕ್ಷರಾದ ಶ್ರೀ| ಅನಂತ ಭಟ್ಟರು 'ನಿಜವಾದ ಲೋಕನಾಯಕರ್ಯಾರು?' ಈ ವಿಷಯದ ಮೇಲೆ ಚಲೋ ಉಪನ್ಯಾಸವನ್ನು ಕೊಟ್ಟರು. "स्वराज्य माझा जन्मसिद्ध हक्क आहे, आणि तो मी मिळविणारच" ಈ ಲೋಕಮಾನ್ಯರ ಉದ್ಗಾರದಲ್ಲಿ ಸಭೆಯು ಮುಕ್ತಾಯವಾಯಿತು. ಹಾಗೂ ತಾ. ೨೫ನೇ ದಿವಸ ಕೊಪರೇ ಇಡೀ ಹಿಂದುಸ್ಥಾನದಲ್ಲಿ ಜಾಹೀರು ಆದಂತೆ ತುರ್ಕರ ವಿಜಯೋತ್ಸವದ ಬಗ್ಗೆ ಕಾರವಾರ ತಾಲೂಕಿನ ಹಿಂದು ಮುಸಲ್ಮಾನರ ಒಂದು ಪ್ರಚಂಡ ಸಭೆಯು ಅಲ್ಲಿಯ ಶ್ರೀ ವೆಂಕಟೇಶ ಮಠದಲ್ಲಿ ನೆರೆದಿತ್ತು. ಕಾರವಾರದಿಂದ ಬಂದ ಮೆರವಣಿಗೆಯು ಸುಂಕೇರಿಯಿಂದ ಅವರನ್ನು ಕರತರಲುಹೋದ ಕೇವಲ ಬಾಲಕರು ಹಾಗೂ ರಾಷ್ಟ್ರಧ್ವಜಗಳಿಂದ ಅಂಗೊಳಿಸುವ ಮೆರವಣಿಗೆಯೊಂದಿಗೆ ಬೆಂಡ ವಾದ್ಯದ ನಿನಾದದೊಡನೆ, ರಾಷ್ಟ್ರಗೀತಗಳ ಮಂಜುಲ ಸ್ವರದಿಂದೊಡಗೂಡಿ, ೪೦೦-೫೦೦ ಜನರ ಈ ದೊಡ್ಡ ಮೆರವಣಿಗೆಯು ಮಠಕ್ಕೆ ೫ ಘಂಟೆಗೆ ಬಂದು ಮುಟ್ಟಿದ ಮೇಲೆ, ಶ್ರೀ| ಗಣಪತ ನಾಡಕರ್ಣಿಯವರ ಅಧ್ಯಕ್ಷತೆಯಲ್ಲಿ ಸಭೆಯ ಕೆಲಸವು ಪ್ರಾರಂಭವಾಯಿತು. ಡಾ| ಅನ್ಸಾರಿ ಪ್ರಭೃತಿಯವರ ಆಜ್ಞಾಪತ್ರದಲ್ಲಿಯ ೩ ಠರಾವುಗಳನ್ನು, ಪಂಜಾಬ ಕೇಸರೀ ಲಾಲಾಜಿಯವರ ಆಯುರಾರೋಗ್ಯಾಭಿವೃದ್ಧಿ ಹಾಗು ನಾಗಪುರ ಸತ್ಯಾಗ್ರಹಕ್ಕೆ ಬಲಿಬಿದ್ದ ಡಾ| ಹರ್ಡೀಕರಪ್ರಭೃತಿಗಳ ಅಭಿನಂದನ ಹೀಗೆ ೫ ಠರಾವುಗಳನ್ನೂ ಸರ್ವಾನುಮತದಿಂದ ಪಾಸುಮಾಡಿದರ. ಕಾರವಾರದ ಶ್ರೀ| ಹಳದೀಪುರ ಬಂಧುಸ್ವಯರು "ತುರ್ಕರ ವಿಜಯವು ಒರೇ ಅವರದೇ ಅಲ್ಲದೆ, ಪಾಶ್ಚಿಮಾತ್ಯ ಬಂಡವಲಶಾಹಿ ಹಾಗು ಪೌರ್ವಾತ್ಯ ಆಧ್ಯಾತ್ಮಿಕ ಬಲ ಇವುಗಳೊಳಗಿನ ಬಡದಾಟದ ವಿಜಯವು. ಈ ಖಿಲಾಫತಿನ ಅಂಶತಃ ವಿಜಯದಿಂದ ಮುಸಲಮಾನರು ಉಬ್ಬಿ ಹೋಗದೆ, ಈ ಪರಿಗಿನ ತ್ರಿಗುಣಾತ್ಮಕವಾದ ಪಂಜಾಬ, ಖಿಲಾಫತ, ಸ್ವರಾಜ್ಯ, ಚಳವಳವನ್ನು ಮೊದಲಿಗಿಂತಲೂ ಹೆಚು ಹುರುಪಿನಿಂದ ನಡಿಸಿದರೇನೇ ನಮ್ಮ ಧ್ಯೇಯವು ಕೈಗೂಡುವದು. 'ಸಹಿಷ್ಣುತಾ ಬಾರೀ ತೋಡಿರ ಖಡಿಯುಕ್ತ ರಹ್ಯ ಧರ್ಮಪ್ರ' ಹಾದಿಯಿಂದಲೇ ಸ್ವರಾಜ್ಯವು ಎಂಬ ಮಹಾತ್ಮರ ಮಂತ್ರದಂತೆ ನಡಿಯಿರಿ. "ಸ್ವರಾಜ್ಯ ಸಿಗುವ ವರೆಗೆ ದೃಢವಾಗಿ ಚಲವಲವನ್ನು ನಡಿಸಿರಿ. ಯಾಕಂದರೆ, ಆವಾಗಲೇ ನಮಗೆ ಯಾವ ಸೈನಿಕರನ್ನು ಎಷ್ಟು, ಯಾವಾಗ, ಯಾಕೆ, ಯಾರ ಮೇಲೆ ಕಳಿಸುವ ಹಕ್ಕು ನಮ್ಮ ಕೈಯಲ್ಲೇ ಇರುವದು" ಎಂಬರ್ಥದ ಭಾಷಣಗಳಾದ ಮೇಲೆ, ಅಧ್यक्षರು ಸಮಾರೋಪಿಸುವಾಗ "निश्चयाचे बळ, तुकाम्हणे तेचि फळ", ನಿಶ್ಚಯ ಮಾಡಿರಿ. ಅಂದರೆ ಈ ಕ್ರಿಯೆಯನ್ನು 'ದತ್' ಎಂತ ನಮ್ಮೆಡೆಗೆ ಬಂದು ನಿಲ್ಲುವದು ನಮ್ಮ ಒಕ್ಕಟ್ಟೇ ನಮ್ಮ ಮುಖ್ಯ ಸ್ವಭಾವದ ನೌಕರಶಾಹಿಯ ಹೆಡಮುರಿಗೆ ಕಟ್ಟುವದು ಎಂಬುದನ್ನು ತಿಳಿಯಿರಿ. ನಮ್ಮ ಸ್ವಂತ ಅಹಿಂಸಾತ್ಮಕ ಸ್ವಾರ್ಥತ್ಯಾಗದ, ಆತ್ಮಶುದ್ಧಿಯ ಚಲವಲದಿಂದ ನಮ್ಮ ನೌಕರಶಾಹಿಗೆ ಶಾಂಭವಗೊಳಿಸುವಾ ಭಾಗೆಳಿಸುವಾ ಮಂತಾದ ಭಾಷಣವಾದ ಮೇಲೆ ಸಭೆಯ ಕೆಲಸವು ಪೂರ್ಣತೆಹೊಂದಿತು.

ಶಿರಸಿ— ಮಳೆಯು ತೆರಪಿಲ್ಲದೆ ಸುರಿಯುತ್ತಿದೆ. ಇಷ್ಟರೊಂದಿಗೆ ೧೨೦ ಇಂಚಿಗೆ ಮಿಕ್ಕಿ ಸುರಿಯಿತು. ಅಡಿಕೆ ತೋಟಗಳಲ್ಲೆಲ್ಲ ಕೊಳೆ ಬಂದು ಮರಗಳ ಬುಡದಲ್ಲಿ ಅಡಿಕೆಯ ರಾಶಿ. ತೋಟ ಕಟ್ಟುವವರು ದುರ್ಬಲರಾಗಿರುವರು.

ಕಳೆದ ೧೧ ನೇ ತಾರೀಖಿನ ದಿವಸ ನಾಗಪುರದ ಸತ್ಯಾಗ್ರಹಕ್ಕೆ ಕಾಲ್ನಡಿಗೆಯಿಂದ ಹೊರಟ ನಮ್ಮ ಜಿಲ್ಲೆಯ ಸ್ವಯಂಸೇವಕರನ್ನು ಸಮಾರಂಭವಾದ ಊರಲ್ಲೆಲ್ಲ ಮೆರವಣಿಗೆ ಮಾಡಿ ಉತ್ಸವದಿಂದ ಊರ ಹೊರವಟ್ಟಿಗೆ ಕಳಿಸಿಕೊಡುವದರಲ್ಲಿ ಬಂತು. ಆ ಸಮಯಕ್ಕೊಂದು ಚಮತ್ಕಾರವಾಯಿತು. ಮೆರವಣಿಗೆ ಹೊರಟ ಅಲ್ಪ ಕಾಲದಲ್ಲಿಯೇ ಎಲ್ಲಿಂದಲೋ ಬಂದು ಕರಿಯ ಒಂದು ಮುಂಭಾಗದಲ್ಲಿದ್ದ ಸತ್ಯಾಗ್ರಹಿ ಸ್ವಯಂಸೇವಕರನ್ನು ಹಿಂಬಾಲಿಸಿ ನಡೆಯುತ್ತಿತ್ತು. ಮೆರವಣಿಗೆಯೊಂದಿಗೆ ಅದು ಊರಲ್ಲೆಲ್ಲ ತಿರುಗುವದು ನೋಡಿ, ಎಷ್ಟೋ ಜನರು ಚಕಿತರಾಗಿದ್ದರು. ಕೊನೆಗೆ ಸತ್ಯಾಗ್ರಹಿಗಳನ್ನು ಕಳಿಸಿ, ಜನರು ಹಿಂದಿರುಗಿದರೂ ಕರಿಯು ಮಾತ್ರ ಹಿಂದಿರುಗದು. ಎಷ್ಟು ಅಡ್ಡಗಟ್ಟಿದರೂ ಕೇಳದ ಸತ್ಯಾಗ್ರಹಿಗಳನ್ನೇ ಬೆನ್ನುಹತ್ತುತ್ತಿತ್ತು. ಆದ್ದರಿಂದ ಹೇಗಾದರೂ ಅ ಕರಿಯ ದೃಷ್ಟಿ ತಪ್ಪಿಸಿ, ಹಿಂತಿರುಗಿಸಬೇಕಾದರೆ, ಆರ್ಥಾಸು ಬೇಕಾಯಿತು. ರಗ ಕೆಲವು ಮನುಷ್ಯರಲ್ಲಿ ಪಶುಗಳ ಲಕ್ಷಣಗಳಿರುವಂತೆ ಕೆಲವು ಪಶುಗಳಲ್ಲಾದರೂ, ಮನುಷ್ಯಲಕ್ಷಣಗಳಿರುತ್ತವೆಂದು ನನೆವಾಯಿತು. !!

ಸಿದ್ದಾಪುರ— ಮಳೆಯು ಮತ್ತೆ ವಿಪರೀತ ಬೀಳಲು ಪ್ರಾರಂಭವಾಗಿದೆ. ಈ ವರೆಗೆ ಅಂದರೆ ತಾ ೧೨-೮-

೨೩ರ ವರೆಗೆ ಬಿದ್ದ ಮಳೆ ೧೩೨-೯೮ ಇಂಚು ಆಗಿದೆ.

ಇಲ್ಲಿಯ ರಾಷ್ಟ್ರೀಯ ಬಾಲ ಬಾಲಿಕಿಯರು ಉಡುಪಿಯ ನೆರೆಯ ಹಾವಳಿಯ ನಿವಾರಣಾ ನಿಧಿಗೆ ಹಣ ಕೂಡಿಸಹತ್ತಿದ್ದಾರೆ. ಹುಡುಗಿಯರೇ ಭಕ್ತ ಭಗಿನೀ ವರ್ಗದಿಂದ ಈ ವರೆಗೆ ರೂ. ೮—೦—೦ ಕೂಡಿಸಿದ್ದಾರೆ. ಹುಡುಗರು ೨೫-೧೨-೩. ಕೂಡಿಸಿದ್ದಾರೆ. ಅಂತು ರೂ. ೩೩-೧೨-೩ ತಾ. ೧೨-೮-೨೮ರ ವರೆಗೆ ಕೂಡಿದೆ.

— ನೇಕ ನಾಮದಾರ ಶಾಸ್ತ್ರಿಗಳು ಕೆನಿಯಾ ವಸಾಹತಿನ ಬಗ್ಗೆ ತೀಕ್ಷ್ಣ ಭಾಷಣ ಮಾಡಿದರೆಂದು ಬಾರತೀಯ ಅಂತರ ನೆಕ್ರೆಟರಿಗಳಾದ ವಿಂಟರಟನ್ ದೊರೆಗಳು ರೇಗಿದ್ದು, ನಾಮದಾರರು ಭರತಭೂಮಿಗೆ ಮರಳುವಾಗ, ದೊರೆಗಳನ್ನು ಸಂದರ್ಶಿಸಹೋಗಲು, ಅವರಿಗೆ ದರ್ಶನ ಲಾಭ ಕೊಡಲು ಒಪ್ಪಲಿಲ್ಲ. ಕಡೆಗೆ, ಪತ್ರ ದ್ವಾರವಾಯಿತೋ, ವಿನೋ, ಇನ್ನೊಮ್ಮೆ ಭೆಟ್ಟಿಗೆ ಬಂದರೆ, ತಾವೆ ದರ್ಶನವನ್ನೀಯುವೆವೆಂದು ತಿಳಿಸಿದರಂತೆ. ಈ ಹಕೀಕತು. ಕಳೆದ ತಾ ೩ನೇಗೆ ವಿಲಾಯತಿಯಲ್ಲಿ ಸಂಭವಿಸಿತು.

— ಪಂಜಾಬದ ವಿಖ್ಯಾತ ರಾಮಭಜದತ್ತ ಚೌಧರಿಯವರು ಸೋಮವಾರ ತಾ. ೬ ನೇಗೆ ಹೃದಯವಿಕಾರದ ಮೂಲಕ ಮಡಿದರು. ಇವರು ರಾಷ್ಟ್ರೀಯ ಸಭಾಭಿಮಾನಿಗಳಿದ್ದು, ಪಂಜಾಬದ ಪ್ರಾಂತಿಕ ಸಭೆಯಲ್ಲಿ ಇವರಿಗೆ ಶಾಖಾನಿದು ಕ್ಷೇತ್ರಯಾಗಿತ್ತು. ಇತರ ಕೃತಿಗಳೊಡನೆ ಅಮೃತಸರ ಕಾಂಗ್ರೆಸಿನ ಸಮಯದಲ್ಲಿ ಇವರು ಮುಖ್ಯ ಹೊಂದಿದ್ದರು. ಇಂಥ ದೇಶಸೇವಕರು ಮಡಿದದರಿಂದ ಪಂಜಾಬಿಗೂ, ಅಖಿಲ ಭರತಖಂಡಕ್ಕೂ ಬಹಳೇ ಹಾನಿ.

— ಮದ್ರಾಸಿನ ಜನಾಬ ಯಾಕೂಬ ಹಸನರವರು ಸೋಮವಾರ ತಾ. ೬ನೇಗೆ ಕಾಡಲೂರ ಜೈಲಿನಿಂದ ಬಿಡುಗಡೆ ಹೊಂದಿದರು. ಜನಾಬರವರ ಆಗಮನವು ಮದ್ರಾಸಿನ್ನು ಮರುದಿವಸವೇ ಸಂಭವಿಸಿತು. ಅಲ್ಲಿ ಅವರಿಗೆ ಪ್ರಚಂಡ ಸ್ವಾಗತವಾಯಿತು.

— ವಿಖ್ಯಾತ ಕರಾಚಿ ಖಟ್ಲೆಯಲ್ಲಿ ಶಿಕ್ಷೆ ಹೊಂದಿದ ಡಾ। ಸೈಫ ಉದ್ದೀನ ಕಿಚಲೂರವರು ಸೆರೆಮನೆಯ ವಾಸವನ್ನು ಅನುಭವಿಸಿ, ಕಳೆದ ತಾ. ೧೧ನೇಗೆ ಅಮೃತಸರ ಜೈಲಿನೊಳಗಿಂದ ಬಿಡುಗಡೆ ಹೊಂದಿದರು. ಅಮೃತಸರದೊಳಗಿನ ಪಟ್ಟಣಿಗರೆಲ್ಲ ಅವರನ್ನು ಸಂಭ್ರಮದಿಂದ ಒಯ್ದು, ತಮ್ಮ ತಮ್ಮ ಸತ್ಕಾರಗಳನ್ನು ಸಮರ್ಪಿಸಿದರು. ನಿನ್ನೆ ತಾ. ೧೫ನೇಗೆ ಅವರ ಆಗಮನವು ಮುಂಬಯಿಯಲ್ಲಾಗುವದಿತ್ತು.

ದಕ್ಷಿಣ ಕನ್ನಡ ಜಿಲ್ಲೆಯೊಳಗಿನ ಪ್ರಚಂಡ ಜಲಪ್ರಳಯ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ನದಿಗಳಿವೆ. ಉತ್ತರದಲ್ಲಿ ಕುಂದಾಪೂರ ಬಳಿಯ ಕೊಲ್ಲೂರ ಹೊಳೆ, ಮುದೂರ ಹೊಳೆ, ಚಕ್ರ ಹೊಳೆ, ಹಾಲಾಡಿ ಹೊಳೆಗಳು. ಉಡಪಿ ತಾಲೂಕಿನಲ್ಲಿ ಸೀತಾ ನದಿ, ಗಂಗಾಮೂಲ ನದಿ; ದಕ್ಷಿಣದಲ್ಲಿ ಫಲ್ಗುಣಿ ನದಿ, ನೇತ್ರಾವತಿ ನದಿ; ಕುಮಾರಧಾರಿ ನದಿ; ಮತ್ತು ದಕ್ಷಿಣದಲ್ಲಿ ಪಯಸ್ವಿನಿ ಚರ್ಮಕಸ್ತೂರು ನದಿಗಳು, ಹೀಗಲ್ಲದೆ ಮತ್ತೂ ಅನೇಕ ಸಣ್ಣ ಸಣ್ಣ ಹೊಳೆಗಳಿವೆ. ಇವುಗಳೆಲ್ಲ ಒಮ್ಮೆ ತುಂಬಿ ಪ್ರಜೆಗಳಿಗೆ ಒದಗಿದ ಕಷ್ಟಗಳ ನಿವಾರಣಾರ್ಥವಾಗಿ ಅಲ್ಲಲ್ಲಿ ಯತ್ನಗಳು ನಡೆಯುವಷ್ಟರಲ್ಲಿ, ಕಳೆದ ೬-೭ ನೇ ತಾರೀಖುಗಳಿಂದ ಪುನಃ ಗಾಳಿ-ಮಳೆಗೆ ಪ್ರಾರಂಭವಾಯಿತು. ನದಿಗಳು ಅಲ್ಲಲ್ಲಿ ಉಕ್ಕೇರಿ, ಪಟ್ಟಣಗಳನ್ನು ಸುತ್ತಿಕೊಂಡವು. ಸದ್ಯಕ್ಕೆ ಅಪೂರ್ವ ನೆರೆ ಬಂದುಹೋಗಿದೆ; ಇನ್ನು ನೆರೆ ತುಂಬಲಿಕ್ಕಿಲ್ಲ; ಎಂದು ಅಲ್ಲಿ ಪ್ರಜೆಗಳು ಭಾವಿಸಿ, ಸಮಾಧಾನಪಡುವಷ್ಟರಲ್ಲಿ, ನೀರು ನೋಡನೋಡುತ್ತ, ಏರುತ್ತ ಹೋಗಿ, ಹಿಂದಿನ ನೆರೆಯ ಅಪೂರ್ವತೆಯನ್ನು ಮರೆವಿಸಿ, ತಾನು ಮುಂದಾಯಿತು. ಮಂಗಳೂರಿನಲ್ಲಿ ತಾ. ೭ ನೇ ಮಂಗಳವಾರ ಮುಂಜಾವಿನಿಂದ ನೀರೇರಿ, ಜೋಳೂರ, ಬೊಕ್ಕಪಟ್ಟಣ ಕುದ್ರೋಳಿ, ಮಂಗಳೂರು ಬಂದರ, ಹೊಯಿಗೆ ಬಜಾರು, ಜೋಳಾರು, ಬಪ್ಪು ಪ್ರದೇಶಗಳಲ್ಲೆಲ್ಲ ನೀರು ತುಂಬಿ ಸೂಸುತ್ತಿತ್ತು. ರೇಲ್ವೆ ಗುಡ್ಸ ಶೆಡ್ಡಗಳ ವರೆಗೆ ನೆರೆ ತುಂಬಿತ್ತು. ಕುದ್ರೋಳಿಯಲ್ಲಿ ವಿಪರೀತ ನೆರೆಯಿಂದ ಮಾರ್ಗಗಳೆಲ್ಲ ಕುಸಿದು ಬಿದ್ದವು. ಮಂಗಳೂರ ಬಂದರಪಕ್ಕದ ಭಂಡಶಾಲೆಗಳಲ್ಲಿಯೂ ನೀರು ಪ್ರವೇಶಿಸಿತು. ನೆರೆಗೆ ಕುತ್ತಾಗಲು ಸಿದ್ಧವಿದ್ದ ಮನೆಸಾರು, ಅಂಗಡಿ-ಕೊಟ್ಟಿಗೆಗಳೊಳಗಿಂದ ಜೀವ ಬಿಡಿಸಿಕೊಳ್ಳಲು ಹೋರಾಡುವ ಗಂಡಸರು-ಹೆಂಗಸರು- ಶಿಶು- ರೋಗಿ, ವೃದ್ಧರನ್ನೂ, ಮೂಕ ದನಕರುಗಳನ್ನೂ ನೋಡಿ ಸಕಲರೂ ಮರುಗಿದರು. ನೆರೆ ತುಂಬಿದ ಕೊಟ್ಟಿಗೆಗಳೊಳಗಿಂದ ದನಕರುಗಳನ್ನು ಬಿಟ್ಟ ಕ್ಷಣಕ್ಕೆ ಮೂಕ ಪ್ರಾಣಿಗಳು 'ಭೊ' ಎಂದು ಒದರುತ್ತ ತಮ್ಮ ಮನೆಯವರನ್ನು ಶೋಧಿಸುವ ದೈನ್ಯಾವಸ್ಥೆಯನ್ನು ನೋಡಿಯಂತು ಕಲ್ಲೆದೆಯೂ ಕರಗಿ ನೀರಾಗುವದು. ಈ ಪ್ರದೇಶದಲ್ಲಿದ್ದ ಮೊಗವೀರರ ಹಾಗು ಬೇಸಾಯಗಾರರ ಗುಡಿಸಲುಗಳು ಜಲಸಮಾಧಿ ಹೊಂದಿದ್ದಲ್ಲದೆ, ಹಂಚು ಛಾವಣಿಯ ಮನೆಗಳೂ, ಅಂಗಡಿಗಳೂ ಕುಸಿದು ಬಿದ್ದವು. ನೆರೆಯನ್ನು ನೋಡಲು ಅನೇಕರು ಹೋಗಿದ್ದರು. ಪ್ರವಾಹದಲ್ಲಿ ಉಪ್ಪಿನಂಗಡಿ ಮಹಾಲಿಂಗೇಶ್ವರದ ಕಡೇಶ್ವಾಲ್ಯದ, ಬಂಟವಾಳ ಅತ್ತಕಡೆಯ ನಾವೂರು ಅಗ್ರಹಾರದ ದೇವಸ್ಥಾನಗಳ ೩ ರಥಗಳು ನೆರೆಯ ಪ್ರವಾಹದಲ್ಲಿ ಹರಿದುಬಂದಿದ್ದವು. ಮರ, ಮಂಚ, ಹಾಸಿಗೆ, ಕವಾಟು ನಾನಾವಿಧ ಆಕಾರದ ಪಾತ್ರೆಗಳೂ, ಮೇಕ್ಕೆ ತಗರುಗಳೂ, ನಾಯಿ, ದನಕರುಗಳೂ ತೇಲಿ ಹೋಗುತ್ತಿದ್ದವು. ಮಂಗಳೂರಿನ ಆಜುಬಾಜು ಸ್ಥಳಗಳಲ್ಲಿ ಮತ್ತೂ ವಿಶೇಷ ಹಾನಿಯಾಗಿದೆ. ವಕ್ಕಲಿಗಳಿಗೆ ಉಳಕೊಳ್ಳಲು ಮನೆಯಿಲ್ಲ; ತೊಟ್ಟುಕೊಳ್ಳಲು ಬಟ್ಟೆಯಿಲ್ಲ; ಉಣ್ಣಲು ಅಕ್ಕಿಯಿಲ್ಲ. ದನಕರುಗಳಿಗಾಗಿ ಸಂಗ್ರಹಿಸಿಟ್ಟ ಬೈಹುಲ್ಲಿನ ಹೊರೆಗಳು ಪ್ರವಾಹದಲ್ಲಿ ತೇಲಿಹೋದದ್ದರಿಂದ, ಮೂಕ ಪ್ರಾಣಿಗಳು ಕಣ್ಣುಂದೆ ಉಪವಾಸ ಬಿಡುವ ಪ್ರಸಂಗವು ಒದಗಿದೆ. ನರೆಹೊರೆಯೊಳಗಿನ ಕೆಲ ಸಂಕಗಳು ಒಡೆದು ಹೋದ್ದರಿಂದ, ಇಲ್ಲಿ ಪ್ರವಾಸ ಮಾಡುವದು ಕಠಿಣವಾಗಿದೆ. ಬಂಟವಾಳದ ಕಥೆಯು ತೀರ ಕರುಣಾಸ್ಪದವು. ಬಂಟವಾಳವೆಂದರೆ, ದಕ್ಷಿಣ ಕನ್ನಡ ಜಿಲ್ಲೆಯೊಳಗಿನ ೨ನೇ ಪಟ್ಟಣವು. ಮಂಗಳೂರಿನ ವ್ಯಾಪಾರಸ್ಥರ ಸಂಗ್ರಹವೆಲ್ಲ ಬಂಟವಾಳದಲ್ಲಿ. ಇಂಥ ದೊಡ್ಡ ಪಟ್ಟಣವನ್ನು ಈ ನೆರೆಯು ನಾಮಮಾತ್ರದಿಂದ ಉಳಿಸಿದೆ. ೪-೬ ಮನೆಮಠಗಳು, ೨ ದೇವಸ್ಥಾನಗಳು, ೧-೨ ಭಂಡಶಾಲೆಗಳು, ೩ ೪ ಸರಕಾರಿ ಕಟ್ಟಡಗಳು ಇಷ್ಟೇ ಈಗಿನ ಬಂಟವಾಳವು. ೬ನೇ ತಾರೀಖಿನ ರಾತ್ರಿ ೯ ಘಂಟೆಗೆ ರಭಸದಿಂದ ನೀರು ಏರಲಾರಂಭಿಸಿದ್ದು ಮರುದಿನ ಮುಂಜಾವಿನ ೯ ರ ವರೆಗೆ ಏರಿ, ಬಂಟವಾಳದೊಳಗಿನ ಭಂಡಸಾಲೆ-ಮನೆಗಳೆಲ್ಲ ವ್ಯಾಪಿಸಿತು. ದನಕರುಗಳನ್ನು ಕೊಟ್ಟಿಗೆಗಳೊಳಗಿಂದ ಬಿಡಲಿಕ್ಕೆ ಸಹ ಜನರಿಗೆ ಅವಕಾಶ ಸಿಗಲಿಲ್ಲ ಅಷ್ಟು ಅಕಲ್ಪಿತ ರಭಸದಿಂದ ನೀರು ಏರುತ್ತಿತ್ತು. ಜನರು ಸಾಧ್ಯವಿದ್ದಷ್ಟು ದನಕರುಗಳನ್ನು ವಿಮೋಚಿಸಿ, ಬಂಗಲೆಯಲ್ಲಿಯೂ, ಗುಡ್ಡದಲ್ಲಿಯೂ, ದೇವಸ್ಥಾನಗಳಲ್ಲಿಯೂ, ಉನ್ನತ ಪ್ರದೇಶಗಳಲ್ಲಿಯೂ ನಿಂತುಕೊಂಡು ರಾತ್ರಿ ಹಗಲು ಮಾಡಿದರು. ಕಲೆಕ್ಟರರು ಅಲ್ಲಿ ಬಂಗಲೆಯಲ್ಲಿ ವಾಸವಾಗಿದ್ದರು. ಪ್ರಜೆಗಳ ವಿಪನ್ನಾವಸ್ಥೆಯನ್ನು ನೋಡಿ, ಬಂಗಲೆಯೊಳಗಿನ ಮೀಯುವ ಕೋಣೆಯಲ್ಲಿ ತಾವು ಉಳಿದುಕೊಂಡು, ಇಡೀ ಬಂಗಲೆಯನ್ನು ಜನರಿಗೆ ಬಿಟ್ಟುಕೊಟ್ಟರು. ಅಡಿಗೆ ಬೇಯಿಸಿ ಉಣ್ಣಲು, ಸ್ಥಳವಿದ್ದಿಲ್ಲ. ದೇವಸ್ಥಾನಗಳಲ್ಲಿಯೇ ಗಂಜಿ ಬೇಯಿಸಿ, ಅನಾಥರು ಹೊಟ್ಟೆಯ ಗೋಳನ್ನು ಪರಿಹರಿಸಿಕೊಂಡರು, ಇಡೀ ಪೇಟೆಯೇ ಜಲಸಮಾಧಿಯಲ್ಲಿದ್ದದ್ದರಿಂದ, ಮಂಗಳೂರ ಬಂದರದಿಂದ ಆಹಾರ ಸಾಮಗ್ರಿಗಳನ್ನು ಪರಪ್ರಾಂತಗಳಿಗೆ ರಫ್ತು ಮಾಡುವ ಬಂಟವಾಳದಲ್ಲಿ ಈಗ ಕಾಳುಕಡಿಗಳ ತೊಂದರೆಯಾಯಿತು. ಗಂಜಿಗೆ ಉಪ್ಪು ಸಿಗಲೊಲ್ಲದು. ಅಕ್ಕಿ ಮೊದಲಾದ ಆಹಾರದ ಜಿನಸುಗಳೆಲ್ಲ ಕೊಳೆತು, ನೆರೆಹೊರೆಯಲ್ಲಿ ದುರ್ಗಂಧವು ವ್ಯಾಪಿಸಿತ್ತು. ಇಲ್ಲಿಯ ಟಪಾಲ ಆಫೀಸೂ, ತಂತೀ ಆಫೀಸೂ ನುಚ್ಚುನೂರಾದವು. ೧೦೦ಕ್ಕೆ ೯೯ ಜನರು ನಿರಾಶ್ರಿತರಾಗಿರುವರೆಂದು ಕಲೆಕ್ಟರ ದೊರೆಗಳು ಮದ್ರಾಸ ಸರಕಾರಕ್ಕೆ ತಂತಿಮೂಲಕ ತಿಳಿಸಿರುವರು. ಪಾಣೆಮಂಗಳೂರು, ಉಪ್ಪಿನಂಗಡಿಗಳಲ್ಲಿ ಬಂಟವಾಳದ ಕಥೆಯೇ. ಕೆಲ ದೇವಸ್ಥಾನಗಳ ಗರ್ಭಗುಡಿಗಳು ೧-೨ ಮನೆಗಳು ಇಷ್ಟೇ ಈ ಎರಡು ಊರುಗಳಲ್ಲಿ ಉಳಿದಿವೆ. ಈ ನೆರೆಯಿಂದ ಬಂಟವಾಳ, ಪಾಣೆಮಂಗಳೂರು, ಉಪ್ಪಿನಂಗಡಿ ಈ ಹೆಸರುಗಳ ನಾಮ ಮಾತ್ರ ಶೇಷರೂಪದಿಂದ ಉಳಿದಿದೆ. ಈ ನೆರೆಯಲ್ಲಿ ಸುಮಾರು ೩೦-೪೦ ಫೂಟು ನೀರು ಏರಿತ್ತು. ಪ್ರತಿಯೊಂದು ನದಿಯ ಆಚೆ ಈಚೆ ೨-೩ ಮೈಲಿನ ಪ್ರದೇಶವೆಲ್ಲ ಜಲಮಯವಾಗಿ ಹೋಗಿತ್ತು. ಮಂಗಳೂರಿನಲ್ಲಿ ಪೋಲೀಸರು ಬಹಳೇ ಸಹಾಯ ಮಾಡಿದರಂತೆ. ಕಾಂಗ್ರೆಸ ಕಮೀಟಿಯವರು ಸ್ವಯಂಸೇವಕರ ಮುಖಾಂತರ ಪ್ರಜೆಗಳ ಕಷ್ಟ ನಿವಾರಣಾರ್ಥವಾಗಿ ಹಗಲಿರುಳು ದುಡಿಯುತ್ತಿರುವರು. ಮಂಗಳೂರು ತಾಲೂಕಿನಲ್ಲಿ ೪ ಡಿಪೋಗಳನ್ನು ತೆರೆದಿರುವರು. ಉಡಪಿ ತಾಲೂಕಿನಲ್ಲಿ ೬ ಡಿಪೋಗಳು; ಕುಂದಾಪುರ-ಬೆಳ್ತಂಗಡಿಗಳಲ್ಲಿ ೧-೧ ಡಿಪೋ; ಹೀಗೆ ೧೨ ಡಿಪೋಗಳು ಉಡುಪಿ ಸೆಂಟ್ರಲ್ ರಿಲೀಫ ಕಮೀಟಿಯ ವಿದ್ಯಮಾನ ತೆರೆಯಲ್ಪಟ್ಟಿವೆ. ಈ ಡಿಪೋಗಳಿಂದ ಸುಮಾರು ೫ ಸಾವಿರ ಮಂದಿಗಳು ಸಹಾಯ ಹೊಂದುತ್ತಿರುವರು. ಒಟ್ಟಿಗೆ, ೧೨ ಸಾವಿರ ಮನೆಗಳು ಬಿದ್ದು ಹೋಗಿರಬೇಕೆಂದು ಹೇಳುತ್ತಾರೆ. ತಂತಿ-ಟಪಾಲು ವ್ಯವಹಾರವು ಕಟ್ಟಾದ ಮೂಲಕ, ನಿಶ್ಚಿತ ಲುಕ್ಸಾನನ್ನು ಹೇಳುವದಶಕ್ಯವು. ಮಂಗಳೂರಿನ ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸ ಕಮೀಟಿಯ ಕಾರ್ಯದರ್ಶಿಗಳು ದಿನಾಲು ಒಂದು ಸಾವಿರ ರೂಪಾಯಿಗಳು ತಗಲುವವೆಂದು ಅಂದಾಜು ಮಾಡಿರುವರು. ಜಿಲ್ಹಾ ಕಾಂಗ್ರೆಸ ಕಮೀಟಿಯು ಅ. ಭಾ. ಕಾಂ. ಕಮೀಟಿಗೆ ೨೫ ಸಾವಿರ ರೂಪಾಯಿಗಳನ್ನು ತಮ್ಮಲ್ಲಿಯ ನಿರಾಶ್ರಿತರ ಕಷ್ಟನಿವಾರಣಾರ್ಥವಾಗಿ ಮಂಜೂರು ಮಾಡಿರೆಂದು ಬೇಡಿಕೊಂಡಿರುವರು. ಮಂಗಳೂರಿನ ಸಾವುಕಾರರೂ, ಇತರರೂ ಯಥಾಶಕ್ತಿ ನಿರಾಶ್ರಿತ ಬಾಂಧವರಿಗೆ ಸಹಾಯ ಮಾಡುತ್ತಿರುವರು. ಮುಂಬಯಿಯಲ್ಲಿ ಈ ಬಗ್ಗೆ ಒಂದು ಕಮೀಟಿಯು ಏರ್ಪಟ್ಟಾಗಿ ವಂತಿಗೆ ಕೂಡಿಸುತ್ತಿರುವರು.

ಕಾನಡಾ ಜಿಲ್ಹೆಯ ಮತದಾರರಿಗೆ—

ಸದ್‌ಗೃಹಸ್ಥರೇ,

ಬರುವ ಮುಂಬಯಿ ಕಾಯಿದೆ ಕೌನ್ಸಿಲಿನ ಚುನಾವಣೆಯಲ್ಲಿ ಕಾನಡಾ ಜಿಲ್ಹೆಯ ಪತಿಯಿಂದ ನಾನು ಉಮೇದವಾರನಾಗಿ ನಿಲ್ಲಬೇಕೆಂತ ನಿಶ್ಚಯಿಸಿದ್ದೇನೆ. ನನ್ನ ಪರಿಚಯವು ತಮಗೆ ಸಾಕಷ್ಟರ ಮಟ್ಟಿಗೆ ಉಂಟೆಂತ ನಾನು ನಂಬುತ್ತೇನೆ. ಆದುದರಿಂದ, ನಾನು ಈ ವರೆಗೆ ಸಾರ್ವಜನಿಕ ಬಾಬುಗಳಲ್ಲಿ ಮಾಡಿದ ಯಾವತ್ತು ಕೆಲಸಗಳನ್ನು ಇಲ್ಲಿ ಕಾಣಿಸುವ ಅವಶ್ಯಕತೆಯು ನನಗೆ ತೋರುವದಿಲ್ಲ. ಈಗ ಅನೇಕ ವರುಷಗಳಿಂದ ನಾನು ಸುಮಾರು ಸಾರ್ವಜನಿಕ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಬಂದಿದ್ದೇನೆ. ಮತ್ತು ಕಾನಡಾ ಜಿಲ್ಹೆಯ ನೈತಿಕ ಮತ್ತು ಆರ್ಥಿಕ ಪ್ರಗತಿಯ ಬಗ್ಗೆ ವಿಶೇಷ ಮನಸ್ಸು ಹಾಕಿದ್ದೇನೆ. ಈ ರೀತಿ ಕೆಲಸ ಮಾಡುವಾಗ್ಗೆ ಈ ಜಿಲ್ಹೆಯ ಅರ್ಧಕ್ಕಿಂತ ಹೆಚ್ಚು ಭಾಗದ ಜನರ ಸಂಗಡ ನನಗೆ ದಳಣ ವಳಣ ಮಾಡಬೇಕಾಗಿರುವದರಿಂದ, ಅವರ ಅಡಚಣಿಗಳು, ಅವರ ಕೊರತೆಗಳು ಮತ್ತು ಅವರ ದೂರುಗಳನ್ನು ಕಣ್ಣಾರೆ ನೋಡಿ ತಿಳಕೊಳ್ಳಲಿಕ್ಕೆ ನನಗೆ ಸಂಧಿಗಳು ಸಿಗುತ್ತವೆ. ಮುಂದಿನ ಕೌನ್ಸಿಲಿನಲ್ಲಿ ನನಗೆ ತಮ್ಮ ಪ್ರತಿನಿಧಿಯಾಗಿ ಆರಿಸಲಿಕ್ಕೆ ತಾವು ಖುಷಿಕಟ್ಟರೆ, ನನ್ನಿಂದಾದಷ್ಟರ ಮಟ್ಟಿಗೆ ಈ ಜಿಲ್ಹೆಯ ಸೇವೆಯನ್ನು ಮಾಡಲಿಕ್ಕೆ ನಾನು ಪ್ರಯತ್ನಿಸುವೆನು.

ಆದುದರಿಂದ, ಮೆಂಬರ ನಾತೆಯಿಂದ ನಾನು ಮಾಡತಕ್ಕ ಕರ್ತವ್ಯಗಳನ್ನು ಬಜಾಯಿಸಲಿಕ್ಕೆ ನಾನು ಯೋಗ್ಯನಿದ್ದೇನೆಂತ ತಮ್ಮ ಅಭಿಪ್ರಾಯವಿದ್ದರೆ, ನಾನು ಮೆಂಬರನಾಗುವ ಬಗ್ಗೆ ತಾವು ಸಹಾಯ ಮಾಡಬೇಕಾಗಿಯೂ, ತಮ್ಮ ಮತವನ್ನ ನನ್ನ ಬಗ್ಗೆ ಕೊಡಬೇಕಾಗಿಯೂ ತಮಗೆ ವಿನಂತಿ ಮಾಡುವೆನು.

ಶಿರಶಿ, 11-8-23. } ತಮ್ಮ ವಿಧೇಯ, ಶೇಷಗಿರಿ ನಾರಾಯಣರಾವ ಕೇಶವೈನ.

ಅರವಿಂದ ಬಾಬುಗಳ ಮುಲಾಖತ.

(ವಾರ್ತಾಪ್ರಸಾರಕ ಸಂಘ, ಹುಬ್ಬಳ್ಳಿ.)

ಬಾಬು ಅರವಿಂದ ಘೋಷರವರನ್ನು ಭೆಟ್ಟಿಯಾಗಿ ಬಂದಂಥ ಗುಜರಾಥದ ಶ್ರೀ. ದೀವಜೀಶೇಟ ಅವರ ಮುಲಾಖತನ್ನು 'ವಾರ್ತಾಪ್ರಸಾರಕ ಸಂಘ'ದ ಪ್ರತಿನಿಧಿಗಳು ತಗೆದುಕೊಂಡರು. ಬಾಬುಗಳ ವಿಷಯಕ್ಕೆ ದೀವಜೀಶೇಟರು ಹೇಳಿದ್ದೇನಂದರೆ:—

ನನ್ನದೂ ಮತ್ತು ಅರವಿಂದ ಘೋಷರವರದೂ ಮೊದಲಿನಿಂದಲೂ ಪರಿಚಯವಿದ್ದದರಿಂದ, ಅವರ ದರ್ಶನವನ್ನು ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ನಾನು ಪಾಂಡೀಚೇರಿಗೆ ಹೋಗಿದ್ದೆನು. ದರ್ಶನಲಾಭವು ನನಗೆ ಸಿಕ್ಕಿತು. ಬಾಬುಗಳ ಸನ್ನಿಧಿಯಲ್ಲಿ ಹಿಂದುಸ್ಥಾನದ ಬೇರೆ ಬೇರೆ ಭಾಗಗಳಿಂದ ಬಂದ ೧೬ ಜನ ಶಿಷ್ಯರಿರುತ್ತಾರೆ. ಪ್ರಾತಃಕಾಲದ ೯ ರಿಂದ ೧೦ ಘಂಟೆಯವರೆಗೆ ಮಾತ್ರ ಮುಲಾಖತಿನ ಸಮಯವು. ಆ ಮೇಲೆ ಅರ್ಧತಾಸಿನ ವರೆಗೆ ವೃತ್ತಪತ್ರಗಳನ್ನು ಓದುವರು. ಸಂಜೇ ಕಾಲಿಗೆ ಬಂದು ತಾಸು ಶಿಷ್ಯರ ಕೂಡ ಚರ್ಚೆಯಲ್ಲಿ ವೇಳೆಯನ್ನು ಗಮನಿಸುವರು. ಉಳಿದ ವೇಳೆಯೆಲ್ಲ ಧ್ಯಾನದಲ್ಲಿಯೇ ಹೋಗುವದು.

ದರ್ಶನವನ್ನು ತೆಗೆದುಕೊಳ್ಳಲಿಚ್ಛಿಸುವವರು ಮೊದಲು ಪತ್ರದ್ವಾರ ಪರವಾನಗಿಯನ್ನು ಕರಿಸಬೇಕಾಗುತ್ತದೆ. ಆ ಮೇಲೆ ತಮ್ಮ ಛಾಯಾಪಟ (ಫೋಟೊ) ವನ್ನು ಕಳಿಸಬೇಕಾಗುತ್ತದೆ. ಇಷ್ಟಾದ ಮೇಲೆ ಬಾಬುಗಳ ಮನಸ್ಸಿಗೆ ಬಂದರೆ, ಅರ್ಧತಾಸಿನ ವರೆಗೆ ಮುಲಾಖತ ತಗೆದುಕೊಳ್ಳುವರು.

ಘೋಷ ಬಾಬುಗಳಿಗೆ ದೇಶದ ಸದ್ಯಸ್ಥಿತಿಯ ಪೂರ್ಣ ಮಾಹಿತಿ ಅದೆ. « ಚಳವಳಿಯ ವಿಷಯಕ್ಕೆ ೧೯೦೫ನೇ ಇಸವಿಯಲ್ಲಿ ಇದ್ದ ತಮ್ಮ ವಿಚಾರಗಳಲ್ಲಿಯೂ, ಈಗಿನ ತಮ್ಮ ವಿಚಾರಗಳಲ್ಲಿಯೂ ಏನಾದರೂ ಅಂತರವಿದೆಯೋ?" ಎಂದು ನಾನು ಕೇಳಿದ್ದಕ್ಕೆ, « ಕಿಂಚಿತ್ತಾದರೂ ಇಲ್ಲ" ಎಂದು ಕಟ್ಟನೆ ಅವರು ಉತ್ತರವನ್ನು ಕೊಟ್ಟರು. « ಬಹಿರಂಗಕ್ಕೆ ಬಂದು, ರಾಜಕಾರಣಧುರೀಣತ್ವವನ್ನು ಎಂದು ಸ್ವೀಕರಿಸುವಿರಿ?" ಎಂಬ ನನ್ನ ಪ್ರಶ್ನೆಕ್ಕೆ « ಇನ್ನು ಎರಡು ವರ್ಷಗಳ ವರೆಗಂತೂ ನಾನು ಬರಲಾರೆನು. ನಾನು ಸದ್ಯಕ್ಕೆ ಸ್ಥೂಲ ದೇಹದಿಂದ ದೇಶಸೇವಾ ಮಾಡದಿದ್ದರೂ, ಆತ್ಮೀಯ ಬಲದಿಂದ ಮಾಡುತ್ತಲೇ ಇದ್ದೇನೆ. ದೇವರ ಇಚ್ಛೆ ಇದ್ದರೆ, ಎರಡು ವರ್ಷಗಳ ಒಳಗಾದರೂ ಹೊರಬೀಳಬಹುದು." ಎಂದು ಉತ್ತರವನ್ನು ಕೊಟ್ಟರು. « ಹೊರಗೆ ಬಂದ ಮೇಲೆ ತಾವು ಅಂಗೀಕಾರ ಮಾಡುವ ಚಳವಳಿಯ ಸ್ವರೂಪವು ಯಾವದಾಗುವದು?" ಎಂದು ಕೇಳಲು « ಅದೆಲ್ಲ ಈಶ್ವರೇಚ್ಛೆಯು. ಈಗಲೇ ನಿರ್ಧರಿಸಲಿಕ್ಕಾಗದು" ಎಂದು ಅವರು ಉದ್ಗಾರಗಳನ್ನು ತೆಗೆದರು.

— ಮಹಾಯುದ್ಧದ ಮೂಲಕ ಇಡೀ ಜಗತ್ತಿನಲ್ಲಿ ೧ ಕೋಟಿ ಜನರು ಗಾಯಹೊಂದಿ ಊನಶರೀರರುಳ್ಳವರಾಗಿರುವರು. ಅವರೊಳಗೆ ೩೧ ಲಕ್ಷ, ೫ ಸಾವಿರ ಮಂದಿಗಳಿಗೆ ಪೆನ್ಶನ ಸಿಗುತ್ತದೆ.

ಶುದ್ಧ ಖಾದಿ

ವಿಕ್ರಿಗೆ ತಯಾರ.

ಹೊನ್ನಾವರ ತಾಲೂಕಾ ಕೊಂಗ್ರೆಸ ಕಮೀಟಿಯಿಂದ ಕೈಮಗ್ಗದ ಕೈನೂಲಿನ ಶುದ್ಧ ಖಾದಿ ಮಾರಾಟಕ್ಕೆ ಕೊಂಗ್ರೆಸ ಆಫೀಸಿನಲ್ಲಿ ಸಿಗುವದು.

ಹೊನ್ನಾವರ, ೧೦-೧೨-೨೨. } ಸೆಕ್ರೆಟರಿ, ತಾ. ಕಾ. ಕಮಿಟಿ, ಹೊನ್ನಾವರ.

ಮೂರ್ತಿಗಳು ಬೇಕೋ?

ನಮ್ಮಲ್ಲಿ ಭಂಗಾರ, ಬೆಳ್ಳಿ, ಪಂಚಧಾತು, ಹಿತ್ತಾಳಿ, ತಾಮ್ರ ಈ ಕರೆಕಲೆಯ ಮೂರ್ತಿಗಳೂ, ಇದಲ್ಲದೆ ಪ್ರಾಣಪೀಠಗಳೂ, ಪ್ರಭಾವಳಿಗಳೂ, ಈಶ್ವರ ಮುಖವಟಗಳೂ, ನಾಗಾಭರಣಗಳೂ, ಕವಚಗಳೂ ಈ ಮುಂತಾದ ಯಾವದೇ ತರದ ಪ್ರತಿಮೆಗಳೂ ನಮ್ಮಲ್ಲಿ ಯೋಗ್ಯ ದರಕ್ಕೆ ವ ಯೋಗ್ಯ ಹೊತ್ತಿಗೆ ಮಾಡಿ ಕೊಡಲ್ಪಡುವವು. ದೇಶಾವರದವರು ಪತ್ರವ್ಯವಹಾರ ಮಾಡಿ ಯಾ ಸಮಕ್ಷ ಬಂದು ದರವಾರ ತಿಳಕೊಳ್ಳಬಹುದು.

ಪತ್ತೆ:— **ನಾರಾಯಣ ಹುವಯ್ಯಾ ಶೇಟ್,**
ಗುಡಗಾರ, ಗುಜರಗಲ್ಲಿ, ಕುಮಟಾ.
(ಉ. ಕಾನಡಾ.)

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ. ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೊ, ಫೋರ್ಟ, ಮುಂಬಯಿ.

ಮನೆ ಕಟ್ಟುವವರಿಗೆ ಸುಸಂಧಿಯು.



ಮೇಲಂತಸ್ತಿಗೆ ಶೋಭೆ ಬರುವದಕ್ಕೆ ನಾನಾ ತರ ನಕ್ಷೀ ಕೊರೆಯಲ್ಪಟ್ಟ ಬೀಡಿನ ಕಟಾಂಜನಗಳೂ, ಹೂಗೋಟು, ಒಳಂಗಳ, ಉಪ್ಪರಿಗೆ, ದಿವಾನಖಾನೆ ಮೊದಲಾದ ಸ್ಥಳಗಳಲ್ಲಿ ವಿಶ್ರಾಂತಿಗೊಳ್ಳುವದಕ್ಕೆ ತಕ್ಕ ಬಾಕುಗಳೂ ಕಿರ್ಲೋಸ್ಕರ ಕಾರಖಾನೆಯಲ್ಲಿ ಸೌಕರ್ಯದಿಂದ ದೊರೆಯುತ್ತವೆ. ಪತ್ರ ಬರೆದು 'ಜೆ' ಕ್ಯಾಟಲಾಗು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ.)

ಲೋಕಾನುಕೂಲತೆಯಾಗಬೇಕೆಂದು, लोकानुकूलता व्हावी म्हणून,

ನಮ್ಮ 'ಸ್ಟಾರ ಆಫ್ ಕೆನರಾ' ಮುದ್ರಣಾಲಯದಲ್ಲಿ

आमच्या 'स्टॉर ऑफ केनरा' मुद्रणालयांत

નવીન વ્યવસ્થા !! ಹೊಸ ಏರ್ಪಾಟು !! नवीन व्यवस्था !!

'STAR OF KANARA' PRESS, KUMTA.

ನಮ್ಮ ಮುದ್ರಣಾಲಯದಲ್ಲಿ **ಲೋಕಾನುಕೂಲತೆಗಾಗಿ ಮಾಡಿದ ಹೊಸ** ಮಾರ್ಪಾಟುಗಳ ವಿವರ:—

ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಗಳಲ್ಲಿ

೧. ಮನೋಹರ ಮುದ್ರಣ. ೨. **ಸಕಾಲ ಮುದ್ರಣ. ೩. ಸುಲಭ ದರ.**

ಸಂಕ್ಷೇಪತಃ ಹೇಳಬೇಕಾದರೆ —

ಅಗ್ಗ ಅಚ್ಚು! ಅಂದ ಅಚ್ಚು!! ಅಚ್ಚ ಅಚ್ಚು!!!

ತರತರದ ಬಣ್ಣಗಳಿಂದ ಸುಶೋಭಿತವಾಗಿ **ಮುದ್ರಣ ಮಾಡಿಕೊಡುವದಲ್ಲದೆ, ಫೋಟೋ-ಬ್ಲೋಕುಗಳನ್ನೂ ಮುದ್ರಿಸುವ ಏರ್ಪಾಟು ಮಾಡಲಾಗಿದೆ.**

ಜರೂರಾಯಿತಿ ಜನರಿಗಾಗಿ—

ಬೇಕಾದ ಛಾಪೆ ಕೆಲಸದ ನಮೂನೆಯನ್ನು **ಟಪಾಲದ್ವಾರಾ ಎಡ್ವಾನ್ಸ** ಸಹಿತ ಕಳಿಸಿದ್ದಲ್ಲಿ, ಯಥಾಪ್ರತಿ ಮುದ್ರಣ ಮಾಡಿ ೧-೨ **ದಿವಸಗಳಲ್ಲಿಯೇ ವ್ಹಿ. ಪಿ.** ಯಿಂದ ಕಳಿಸುವ ವ್ಯವಸ್ಥೆಯೂ ಮಾಡಲ್ಪಟ್ಟಿದೆ. **ಬ್ಯಾಂಡಿಂಗ ಕೆಲಸವೂ ಅಚ್ಚುಕಟ್ಟಾಗಿ** ಮಾಡಿ ಕೊಡಲ್ಪಡುವದು. ಒಮ್ಮೆ ಆರ್ಡರು **ಕಳುಹಿಸಿ, ನೋಡಬಹುದಲ್ಲವೇ?**

ಇದಲ್ಲದೆ, ನಮ್ಮಲ್ಲಿ ಗ್ರಂಥ, ಪುಸ್ತಕ, **ಮಾಸಪತ್ರಿಕೆ, ಪಂಚಾಂಗ ಮುಂತಾದ** ವಿವಿಧ ಮುದ್ರಣ ಕೆಲಸವು ಸುಲಭ ದರದಿಂದ, **ತಕ್ಕ ಹೊತ್ತಿಗೆ ತಯಾರಿಸಿ ಕೊಡಲ್ಪಡುವದು.**

ಮಾರಾಟಕ್ಕೆ ಸಿದ್ಧ.

ಕೋರ್ಟು ಕಚೇರಿಗಳಲ್ಲಿ ವಕೀಲರಿಗೆ ಬೇಕಾಗುವ ವಕಾಲತ ಅಮುಲಜಾರಿ ಸಾಕ್ಷಿಪಟ್ಟಿ ಯಾದಿ, ನಕಲು ಅರ್ಜಿ, ದಸ್ತೈವಜು ಪರತ ಬೇಡುವ ಅರ್ಜಿ, ಜ್ಯಾಹಿರಿ ಮುಂತಾದ ಎಲ್ಲ ತರದ ಫಾರ್ಮುಗಳೂ, ಶಿಪ್ಪಿಂಗ ಬಿಲು, ಸತಮಿ, ಬಿಲ್ ಅಫ್ ಎಂಟ್ರಿ ಮೊದಲಾದ ಕಸ್ಟಮ್ ಫಾರ್ಮುಗಳೂ ಮಾರಾಟಕ್ಕೆ ದೊರೆಯುತ್ತವೆ.

ವಿಶೇಷ ಮಾಹಿತಿ ಪತ್ರದ್ವಾರಾ ಯಾ ಮೊಕ್ತಾ.

ಪತ್ತೆ:— ಕೃಷ್ಣರಾವ ಕೇಶವ ಶೇಣವಿ, ಹೆಗಡೇಕರ,

ಮಾಲಕ,

'ಸ್ಟಾರ ಆಫ್ ಕೆನರಾ' ಪ್ರೆಸ್, ಕುಮಟಾ.

(ಉ. ಕಾನಡಾ.)

Printed and Published by Krishnarao Keshav Shenvi (Editor) at his Star of Kanara Press, Kumta

eg. No. B 1270

Thursday, 23th August 1923

ವರ್ಷ ೭.

ಕಾನಡಾವೃತ್ತ:

THE KANARA NEWS.

ಸಂಚಿಕೆ ೪೫.

ಪತ್ರದ ವರ್ಗಣಿ.-

ಕುಮಟೆಯಲ್ಲಿ ಬಗಾವು ರೂಪಾಯಿ 2-4-0.

ಪುನೆರಗಾವರಿಯಿಂದ ರೂ. 3-0-0

ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1 0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಮ್ಯಾ ಟ್ಟಿನ(೧೪ ಎಮ್‌ಬ್ಸ್) ೫ ಸಾಲುಗಳ ವರೆಗೆ ರೂ. 1-0-0 ಅನಂತ್ರ ಪ್ರತಿ ಸಾಲಿಗೆ 0-2-0.

ಹೆಚ್ಚಿಗೆ ಸಾಲು ಎಷ್ಟು ಹೊತ ದಿಫ್ತರದೊಳ ಅ ದರದ ಬಿಂದ ಅಪ್ಪು ಸಾಲುಗಳು ಕಡಿ ಯಲ್ಪಡುವವು.

ಖಾಸ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

-(ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖ ೨೩ ಮಾಹ ಅಗಸ್ಟ ಸನ್ ೧೯೨೩ ನೇ ಇಸವಿ.)-

हिंदुस्थानांतील रहिवाशांसी ज्याप्रमाणें हिंदुस्थानची हवा मानवते त्याप्रमाणेंच हें औषध हिंदुस्थानांतील लोकास ज्यास्त फायदेशीर आहे,

द्राक्षासव- { दीड रतलची किंमत १ रुपये;

रामबाण औषधें

सर्दि घालविणारें,
भूक वाढविणारें;
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

पिण्यास रुचिकर.

क्याटलाग मागवा,

झंडु फार्मास्युटिकल वर्क्स लिमिटेड,
मुंबई नं. १३

CLAXO:- FRESH STOCK. NEW BRAND. *a food for infants and invalids.*

Kalmegh :- *Well-tried remedy in "Liver" complaints especially of children.*

Syrup of Vasaka :- *Highly efficacious in cold, cough, crough and bronchitis.*

Besides we have in stock other patent medicines, Thermometres, Glycerine Syringes etc.,

Orders will be executed by V. P. P.

The New Emporium
Honavar. (N. Kanara.)

ಡಾ। ವಾಸುರಕರರ

ಸುಧಾಂಜನ.

ಅಂಜನುಗಳಿಗೆಲ್ಲ ಅರಸು.

ತಲೆಶೂಲಿ, ವಾತ ವೇದನೆ, ಕೆಮ್ಮು, ಹಲ್ಲು ನೋವು ಇತ್ಯಾದಿಗಳಿಗೆ ಕ್ಷಿಪ್ರ ಗುಣಕಾರಿ ಮದ್ದು. ಬೆಲೆ ೭ ಆಣೆ ಮಾತ್ರ. ವ್ಯಾಪಾರಿಗಳಿಗೆ ವಿಶೇಷ ಸವಲತು. ಹೆಚ್ಚಿನ ಮಾಹಿತಿ ಏಜಂಟರಿಂದ.

ಏಜಂಟ್ಸ್:— **ನಾಗರ್ಕಟ್ಟಿ ಬ್ರದರ್ಸ್,**
ಸುಧಾಂಜನ ಡಿಪೋ.
ಕುಮಟಾ. (ಜಿಲ್ಲಾ ಕಾರವಾರ.)

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ವಿಷಯುಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ.

ಈ ವರೆಗೆ ಪ್ರಕಟವಾದ ಪುಸ್ತಕಗಳು.

(೧-೨) ಗ್ರೀಸ ದೇಶದ ಗಾಂಧಿ. (ಸಾಕ್ರೆಟೀಸ) (೩) ಸ್ವಾತಂತ್ರ್ಯಸಾಧನೆ. (೪) ಗುರು-ಹಿರಿಯರೂ, ಬಂಧು-ಭಗಿನಿಯರೂ. (೫) ರಾಷ್ಟ್ರೀಯ ಶಿಕ್ಷಣ. (೬) ಸದ್ಗುಣಮಂದಿರ. (ಭಾಗ ೧.) (೭) ಸ್ವರಾಜ್ಯ ಧರ್ಮ. (ಅನಾಮಿಕ ಪುಸ್ತ) ಇವಿಷ್ಟು ಪ್ರಕಟವಾಗಿದ್ದು, ೫ ಆಣೆಗೆ ಒಂದರಂತೆ ದೊರೆಯುತ್ತವೆ. ವರ್ಗಣೀದಾರರಿಗೆ ಹಿಂದಿನ ದೇಶಾದ ಪುಸ್ತಕಗಳು ೪ ಆಣೆಗೆ ಒಂದರಂತೆ ದೊರೆಯುವವು. ೬ ಪುಸ್ತಕಗಳಿಗೆ ಕೂಡಿ ೧॥ ರೂಪಾಯಿ ಮಾತ್ರ. ಅಂಚೆವೆಚ್ಚ ಬೇರೆ. ದ್ವಿತೀಯ ವರ್ಷ ಪ್ರಾರಂಭ. ಅನುಕ್ರಮವಾಗಿ ಮಾರ್ಚ, ಮೇ, ಜುಲೈ, ಸಪ್ಟಂಬರ, ನವಂಬರ, ಜನವರಿ ೧೮ ನೇ ತಾರೀಖಿಗೆ ಒಂದೊಂದು ಪುಸ್ತ ಹೊರಡುವದು. ವಾ. ವ. ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ.

ವಾ. ಅ. ಹೊದ್ಯೆ,
ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ.

ಎಲ್ಲ ತರದ ಜ್ವರಗಳಮೇಲೆ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ, ಶೈತ್ಯ, ಬಂಗಲಿ, ಅಥವಾ ದೂಷಿತ ಹವೆಯಿಂದ ಬರುವ ಸಾದಾ ವಿಷಾರೀ ಅಥವಾ ಇತರ ಜ್ವರಗಳೂ, ಇನಫ್ಲುಎಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನ್ಯಾವದ ದುಷ್ಪರಿಣಾಮರಹಿತ ಕೇವಲ ವನಸ್ಪತಿಯ ಈ ಮದ್ದು ಸೇವಿಸಿದರೆ ಅಶಕ್ತತೆಯಾಗದೆ, ಬೆವರು ಬಂದು ಜ್ವರ ಇಳಿಯುತ್ತದೆ. ಹಾಗು ರೋಗಿಯು ತರಿತ ನಾಶಿಸಾಗುತ್ತಾನೆ.

೪ ಔಂಸ ಬಾಟ್ಲಿ ಕಿಂಮತ ರೂ. ೧-೦-೦.

ಇದರ ಹೊರತು ಇನ್ನೂ ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ, ಉಚ್ಚ ಪ್ರತಿಯ ಕೋಲನ ವೊಟರ, ಲವೆಂಡರ ಇತ್ಯಾದಿ ಸಾಮಗ್ರಿಗಳು ಅಲೆಂಬಿಕದ ಕಾರಖಾನೆಯಲ್ಲಿ ತಯಾರಾಗುತ್ತವೆ. ಮಾದರಿ ಕೇಟಲಾಗು ಕರಿಸಿರಿ.

ಅಲೆಂಬಿಕ್ ಕೆಮಿಕಲ್ ವರ್ಕ್ಸ್,
ಕಂಪನಿ, ಲಿಮಿಟೆಡ್.
ನಂ. ೫೦, ಪ್ರಿನ್ಸೆಸ್‌ಸ್ಟ್ರೀಟ, ಮುಂಬಯಿ.

अलेंबिक केमिकल वर्क्स कं० लि०
नं. ५० प्रिन्सेस स्ट्रीट मुंबई.

ಶುದ್ಧ ಖದ್ದರ್ ರೇಶ್ಮೆ ಮಡಿಗಳು.

ಸುಲಭ ಕ್ರಯಕ್ಕೆ ಖಾತ್ರಿಯಾದ ಎಲ್ಲಾ ರಂಗುಗಳ ಲ್ಲಿಯೂ ಈ ಕೆಳಗೆ ಬರೆದ ಕ್ರಯಕ್ಕೆ ದೊರೆಯುವವು.

೧೮ ಮೊಳ	ಉದ್ದ	೨॥	ಅಗಲ	ರೂ.	೨೩	ರಿಂದ	೨೫	ವರೆಗೆ
೧೬	,,	೨॥	,,	,,	೨೦	—	೩೦	,,
೮	,,	೨॥	,,	,,	೯	—	೧೫	,,
೬	,,	೨॥	,,	,,	೭	—	೧೧	,,

SUN & CO.
BENARES CITY

ಅಂಗಿ ಬಟ್ಟೆಗಳು ೧೮ ಮೊಳ ×೨ ಮೊಳ ರೂಪ್ಯಾ ೧೮ ರಿಂದ ೩೦ವರೆಗೆ. ಶೇಲ ೧೨ ಮೊಳ ×೧॥ ಮೊಳ ಅಗಲ ರೂಪ್ಯಾ ೧೦ರಿಂದ ೧೫ವರೆಗೆ ಜೀನ್‌ಖಾನ್ ೧೪ ಮೊಳ ×೨ ಮೊಳ ರೂ. ೨೪ ರಿಂದ ೩೫ ವರೆಗೆ ಇವುಗಳಲ್ಲದೆ ಶಾಲ ಪೀತಾಂಬರ ಕಾಶ್ಮೀರ್ ಶಾಲು, ರುದ್ರಾಕ್ಷಿ, ಜಾಗಂಟೆ, ತಾಳ, ಪನ್ನೀರ್ ದಾನಿ, ಆಟದ ಸಾಮಾನುಗಳು, ದೇವರ ಮತ್ತು ಗಾಂಧಿ ಮುಂತಾದವರ ಚಿತ್ರಗಳಿರುವ ಉಂಗುರಗಳ ಮುತ್ತು ಇನ್ನ ಅನೇಕ ಸಾಮಾನುಗಳ ಕ್ಯಾಟಲಾಗ್ ಇನಾಂ.

ವಿಳಾಸ:—ಎಸ್. ಡಬು. ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಸ್ತ್ರೀಯರಿಗ್ಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. (ರಿಜಿಸ್ಟರ್ಡ)

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶ ಕಲಾಪವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ.

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿರುವದೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತ್ತದೆ ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆಯುವ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ “ ಕಾಮಿನಿಯಾ ಆಯಿಲ್” ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ “ ಸರ್ಟಿಫಿಕೇಟ ಆಫ್ ಮೆರಿಟ ” ಅಥವಾ ಯೋಗ್ಯತಾಪತ್ರವೂ, ಹಾಗು ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ — ಸೀಸೆಗೆ ರೂಪಾಯಿ 1-0 0, ಸೀಸೆ 3ಕ್ಕೆ ರೂಪಾಯಿ 2-10-0, ವಿಪಿ ಖರ್ಚ 0 14 0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ ಕೋಮಲ ಚಿರಸ್ಥಾಯಿ ಮತ್ತು ಅತ್ಯುತ್ತಮವು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಇದು ತಯಾರಾದ ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈ ಒಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಆರಂಭವಾಗುವುದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರ್ದ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಕಡೆಯ ಸೆಳೆಕೊಳ್ಳುವುದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0 1 ಡ್ರಾಮಿನ (ವಿ ಪಿ ಸಿ) ಸೀಸೆ 1 ಕ್ಕೆ 0-12-0, ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0.

Address - **The Anglo Indian Drug & Chemical Co,**
16, Market, **BOMBAY. 2.**

ಖರೇ ಮಾತು ! ತಾಜಾ ಕಲ್ಪ !! ಖರೆ ಗ್ಯಾರಿಂಟಿ !

ಒಮ್ಮೆಗೆಲ್ಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳೆಸಿ ಪುರುಷರಿಗೆ ಸ್ತ್ರೀ ವಿಷಯವಾಗಿಯೂ, ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷಯುಕ್ತ ಶಕ್ತಿಯನ್ನು ಉಂಟುಮಾಡಿ, ದಿನೇ ದಿನೇ ಶರೀರದ ಜರಠತನವನ್ನೂ ರೋಗಗಳನ್ನೂ ದೂರಪಡಿಸಿ ಆಯುರಾರೋಗ್ಯವನ್ನೂ, ರತಿಯಲ್ಲಿ ಪಗ್ಗಳವಾದ ಕುತೂಹಲವನ್ನು ತೋರಿಸುವ ಕ್ರೀಡಾ ಶಕ್ತಿಯ ಉತ್ಸಾಹವನ್ನೂ, ಸಂಭೋಗದಲ್ಲಿ ತೃಪ್ತಿಯನ್ನೂ, ಸೌಖ್ಯವನ್ನೂ ಕೊಟ್ಟು ಮನಸ್ಸಿನ ಧೃಢತೆಯನ್ನೂ ಯೌವನದ ಕಳೆಯನ್ನೂ ದೊರಕಿಸಿ ಮುದಿತನವನ್ನುನೀಗಿ ಬಲವನ್ನು ಉಂಟುಮಾಡುವದು ಮೃತ್ಯುವನ್ನು ನಿರಾಕರಿಸಿ, ಬಗೆಬಗೆಯ ರೋಗಗಳನ್ನು ನಾಶಮಾಡುವದು ಜೀರ್ಣಜ್ವರ, ಮಂದಾಗ್ನಿ, ಶುಕ್ಲಸ್ರಾವ, ಆಮಶಂಕ ಇವುಗಳನ್ನು ಬಿಡದೇ ನಾಶಮಾಡುವದು ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, ದೇಶಕಾಲಗಳಿಂದಲೂ, ಅತ್ಯಾಚಾರಗಳಿಂದಲೂ, ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡೆಸುವ ಬಲತ್ಕಾರದ ಹಸ್ತಘರ್ಷಣದಿಂದಲೂ ಅತಿವಿಷಯೋಪಭೋಗದಿಂದಲೂ, ಇಂದ್ರಿಯ ಶಿಥಿಲವೂ, ತೆಳುವೂ, ನಿಸ್ತೇಜವೂ ಆಗಿ ಯತ್ನವಿಲ್ಲದೆ ಸ್ಖಲನವಾಗುವದು ಒಂದೊಂದು ಸಾರಿ ಮೂತ್ರದಲ್ಲಿಯೂ ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತೆ, ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈ ಬಿಸುವು, ನಿದ್ರೆಯಲ್ಲಿ ಭೀಕರವಾದ ಸ್ವಪ್ನ, ಅರಿವು, ಮರುವು ಮತ್ತು ಶರೀರದ ಹಾಗೂ ಮನಸ್ಸಿನ ಚೇತನ ಕುಂದಿ ಹೋಗುವದು, ಇವೆಲ್ಲವುಗಳಮೇಲೆ ರಾಮಬಾಣದಂತಿರುವದು ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ ೧॥ ನಂ ೧ ನಂ ೨ ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ೮೦ ಗುಳಿಗೆಗಳುಳ್ಳ ಸೀಸೆಗೆ ರೂ. ೩. ಪೋಸ್ಟೇಜ ಬೇರೆ

ಎಮ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ,
ಶಿರ್ಶಿ (ಕೆನರಾ.)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧। ರಾಗದ ಕೈಪೆಟ್ಟಿಗೆ ಕಿಂ ೩೧, ೪೦, ೪೫, ೫೦, ೬೦
೨ „ ಕಾಲು ಪೆಟ್ಟಿಗೆ ಕಿಂ ೬೫, ೭೫, ೧೪೦, ೧೬೦
೩ ತಬಲೆ ಜೋಡಿ ಕಿಂ. ೧೩, ೧೫, ೧೮ ೨೦
೪ ಹಾರ್ಮೋನಿಯಮ ಗ್ಯಾಡ ಕಿಂ ೧।, ತಬಲೆ ಗ್ಯಾಡ ಕಿಂ. ೧೨ ಆ

ಪಿಶೇಷ ಮಾಹಿತಿ ಬಗೆ ನಮ್ಮ ಕ್ಯಾಟಲಾಗ ಪುಕ್ಕಟೆ ಕೊಡುವೆವು

ಪತ್ರವ್ಯವಹಾರ ಮರಾಠಿಯಿಂದ ಇದ್ದವೆ ಇಂಗ್ರಜಿಯಿಂದ ಮಾಡಬೇಕು

ಪತ್ತೆ — **ಗೋಪಾಳ ಸಖಾರಾಮ ದಾಕ್ಷೆ ಕಂಪನಿ, ನಂ ೨೬೨**
ಕಾಳಬಾದೇವಿ ರೋಡ, ಮುಂಬಯಿ

ಬಂಟವಾಳದ ಭಯಂಕರ ಜಲಪ್ರಳಯ.

ನಾನು ಈ ೧-೮-೨೩ನೇ ದಿವಸ ಹೊನ್ನಾವರದಿಂದ ಹೊರಟು, ಕುಂದಾಪುರ, ಉಡುಪಿ ಈ ತಾಲೂಕಿನಲ್ಲಿ ಈ ವರ್ಷದ ಭಯಂಕರ ಮಳೆಯ ನೆರೆಯಿಂದ ನಿರಾಶ್ರಿತರಾದವರಿಗೆ ಅಲ್ಲಲ್ಲಿ ಹರಿಕೀರ್ತನೆ ವ್ಯಾಖ್ಯಾನ, ಭಿಕ್ಷೆ ಇವುಗಳ ದ್ವಾರಾ ಆದಷ್ಟು ಅನ್ನ, ವಸ್ತ್ರ ಸಂಪಾದಿಸಿ, ಸಹಾಯ ಮಾಡಬೇಕೆಂಬ ಹೇತುವಿನಿಂದ ಕುಂದಾಪುರ, ಉಡುಪಿ ತಾಲೂಕಿನಲ್ಲಿ ಊರ ಸ್ಥಿತಿ ಸಾಧಾರಣವಾಗಿ ಪ್ರತ್ಯಕ್ಷ ನೋಡಿ ತಾ ೬-೮-೨೩ನೇ ದಿವಸ ಇಲ್ಲಿ ಬಂದು ತಲ್ಪಿದೆನು. ಇಲ್ಲಿ ಅದೇ ದಿವಸ ಮಧ್ಯಾಹ್ನ ಮೊದಲುಗೊಂಡು ವಿಪರೀತ ಗಾಳಿ-ಮಳೆಯಾಗಿ, ನೇತ್ರಾವತಿ ನದಿಗೆ ವಿಪರೀತ ನೆರೆನೀರು ಪ್ರವೇಶವಾಯಿತು. ಬೆಳಗಾಗುವ ತನಕ ನೀರು ವಿಷವೇರಿದಂತೆ ಏರಿ, ಮನುಷ್ಯರು ಮಾತ್ರ ತಮ್ಮ ಹೆಂಡರು ಮಕ್ಕಳ ಜೀವ ಬದುಕಿಸಿಕೊಳ್ಳುವದು ದುಸ್ಸಾಧ್ಯವಾಯಿತು. ಸ್ತ್ರೀ-ಪುರುಷರು ಉಟ್ಟ ವಸ್ತ್ರ- ಅದೂ ಸಹ ಒದ್ದೆ- ಸಹಿತ ಕಂಠಪ್ರಮಾಣದಿಂದ ನೀರಿನಿಂದ ಹಾದು, ದೋಣಿಯಿಂದ ಆ ನೀರಿಲ್ಲದ ಜಾಗದಲ್ಲಿ ಬರಬೇಕಾದರೆ, ಅತಿ ಕಷ್ಟವಾಯಿತು. ಈ ಕಷ್ಟ ಉಂಟಾಗಬೇಕಾದರೆ, ಬಂಟವಾಳ ಊರಿನಿಂದ ಗುಡ್ಡದ ಬದಿ ಅಥವಾ ನೆರೆಯ ಬಾಧೆಯಿಲ್ಲದ ಊರುಗಳಿಗೆ ಹೋಗಲಿಕ್ಕೆ - ಅಥವಾ ಹೋಗಿ ಜೀವ ಬದುಕಿಸಿಕೊಳ್ಳಲಿಕ್ಕೆ - ಮಾರ್ಗವಾಗಲೀ ಅಥವಾ ಬೇರೆ ಸಾಧನಗಳಾಗಲೀ ಇಲ್ಲದ ಮೂಲಕ, ನೆರೆಯ ನೀರು ಇಳಿಯಲಿಕ್ಕೆ ಪ್ರಾರಂಭವಾಗುವ ವರೆಗೆ ಜನರು - ನಾನು ಸಹ - ಜೀವದ ಆಶೆ ತೊರೆದು ಇರಬೇಕಾಯಿತು.

ತಾ ೬-೮-೨೩ನೇ ರಾತ್ರಿ ಏರಲಿಕ್ಕೆ ಪ್ರಾರಂಭವಾದ ನೆರೆಯ ನೀರು ತಾ ೭-೮-೨೩ನೇ ಸಾಯಂಕಾಲ ೩॥ ಘಂಟೆಯ ವರೆಗೆ ಏರುತ್ತಾ ಇದ್ದು, ಇಲ್ಲಿಯ ಪೋಸ್ಟ ಕಚೇರಿಯಿರುವ ಜಾಗ, ಮತ್ತು ಬಂಗ್ಲೆಯಿರುವ ಜಾಗ ಇವು ಮಾತ್ರ ಸ್ವಲ್ಪ ಎತ್ತರವಾದ ಸ್ಥಳದಲ್ಲಿ ಇರುವದರಿಂದ, ೪-೫ ಸಾವಿರ ಜನರು ಇಲ್ಲಿ ಒದ್ದೆ ವಸ್ತ್ರ ಸಹಿತ ಮಳೆಯಲ್ಲಿಯೂ, ಕಚೇರಿಯಲ್ಲಿಯೂ, ಬಂಗ್ಲೆಯಲ್ಲಿಯೂ ಛಳಿಯಿಂದ ನಡುಗುತ್ತ ಆ ರಾತ್ರಿ ಕಳೆದರು. ನೀರು ಸಾಯಂಕಾಲ ೩॥ ಘಂಟೆಯ ವರೆಗೆ ಏರಿ ನಿಂತದ್ದು ಹಾಗೆಯೇ ಇದ್ದು, ೫॥ ಘಂಟೆಯ ನಂತರ ಇಳಿಯಲಿಕ್ಕೆ ಪ್ರಾರಂಭವಾಗಿ, ಬೆಳಗಾಗುವದರೊಳಗಾಗಿ ಬಂಟವಾಳ ಪೇಟೆಯು ಕೆಳಗೆ ಹೋಯಿತು. ತಾ ೭ನೇ ದಿವಸ ನೆರೆನೀರು ತುಂಬಿದ್ದಾಗ, ಬಂಟವಾಳ ಶಹರದೊಳಗಿನ ದೊಡ್ಡ ದೊಡ್ಡ ಕಟ್ಟೋಣಗಳು ಮುರಿದು ಬೀಳುವಾಗ ಉಂಟಾದ ಭಯಂಕರ ಶಬ್ದವು ಇನ್ನೂ ಹೃದಯವನ್ನು ನಡುಗಿಸುತ್ತದೆ.

ತಾ ೮-೮-೨೩ನೇಗೆ ನಾನು ಇಲ್ಲಿಯ ಇನ್ನಿಬ್ಬರು ಸಭ್ಯಗೃಹಸ್ಥರೊಡನೆ ಈ ಊರಿನ ದೀನ- ಭಯಂಕರವಾದ ಕಂಗಾಲ- ಸ್ಥಿತಿ ಕಣ್ಣಾರೆ ನೋಡುವ ಉದ್ದೇಶದಿಂದ ಹೊರಟೆವು. ಮೊದಲು ಈ ಊರು ನೋಡಲಿಕ್ಕೆ ಸಾಧಾರಣ ಆರು ಘಂಟೆ ಸಾಕಾಗುವಲ್ಲಿ, ಈ ಭಯಂಕರ ನೆರೆನೀರಿನಿಂದ ಕಟ್ಟೋಣಗಳು, ಕಟ್ಟೋಣದ ಒಳಗೆ ಇದ್ದ ಅನೇಕ ತರತರದ ಸಾಮಗ್ರಿಗಳು, ಮಣ್ಣಿನ, ನೀರಿನ ರಾಶಿಯಾಗಿ ಮಾರ್ಗದ ಮೇಲೆ ಬಿದ್ದಿರುವದರಿಂದ, ನಡೆಯಲಿಕ್ಕೆ ಬಹು ಕಷ್ಟವಾಗಿ, ಬೆಳಗ್ಗಿನ ೮ ಘಂಟೆಯಿಂದ ಮಧ್ಯಾಹ್ನ ೧॥ ಘಂಟೆಯ ತನಕ, ಮಾರ್ಗದ ಮೇಲೆ ಬಿದ್ದಿರುವ ಕಟ್ಟೋಣಗಳ ಮೇಲಿಂದಲೂ, ಅಕ್ಕಿಮುಡಿ ಮೊದಲಾದ ಅನೇಕ ತರದ ಜಿನಸುಗಳ ಮೇಲಿಂದಲೂ, ಹತ್ತುತ್ತ, ಇಳಿಯುತ್ತ ನಡೆದು ನೋಡಿ ಬರಬೇಕಾದರೆ, ಬಹು ಕಷ್ಟವಾಯಿತು. ಊರು, ಊರಿನ ಮಾರ್ಗಗಳು ಇಷ್ಟು ಭಯಂಕರ ಸ್ಥಿತಿಯಲ್ಲಿವೆ.

ನಾನು ಪ್ರತ್ಯಕ್ಷ ಕಣ್ಣಾರೆ ನೋಡಿದ ಸ್ಥಿತಿ — ಈ ಊರು ಸಾಧಾರಣ ೫ ಸಾವಿರ ಜನರು ವಾಸ್ತವ್ಯ ಮಾಡುವಂಥಾದ್ದಿದ್ದು, ಸುಮಾರು ಎರಡು ಸಾವಿರ ತನಕ ಇಲ್ಲಿ ಮನೆಗಳಿದ್ದವು. ಈ ಭಯಂಕರ ನೆರೆಯ ನೀರಿನಿಂದ ಸುಮಾರು ೩೦-೩೫ ಮನೆಗಳು ಮಾತ್ರ ಇದ್ದು, ಬಾಕಿ ಎಲ್ಲಾ- ಒಂದು, ಎರಡು ಮಾಳಿಗೆಯಿರುವ ಮನೆಗಳು ಸಹ- ಬಿದ್ದು, ಸರ್ವನಾಶವಾಗಿದೆ. ಇಲ್ಲಿ ವ್ಯಾಪಾರಸ್ಥರಲ್ಲಿ ಸಾಧಾರಣ ೬೫-೭೦ ಸಾವಿರ ಅಕ್ಕಿ ಮುಡಿಗಳು ದಾಸ್ತಾನು ಇದ್ದು, ಇದಕ್ಕೆ ಯುಕ್ತವಾಗಿ ಇತರೇ ಧಾನ್ಯ, ವಸ್ತ್ರ, ಕಟ್ಟಿಗೆ ಇತ್ಯಾದಿ ಸಾಮಾನು ಇತ್ತು. ಇದೆಲ್ಲಾ ನೀರಿನ ಮತ್ತು ಮಣ್ಣಿನ ಪಾಲಾಗಿ ನಾಶವಾಗಿದೆ. ಇಲ್ಲಿಯ ಪೋಸ್ಟ ಆಫೀಸು, ಘಟ್ಟಿಯಾದ ದೇವಸ್ಥಾನದ ಕಟ್ಟೋಣದ ಕೆಲ ಭಾಗ ಇದು ಸಹ ನೆಲಸಮವಾಗಿದೆ. ದುರಿಯ ಮೇಲೆ ಬಿದ್ದ ಮನೆಯ ಮೇಲುಮಾಡುಗಳ ಒಳಗಿದ್ದ ಸಾಮಾನೂ, ಪಾತ್ರೆ, ಹಿತ್ತಾಳೆಯ ಪಾತ್ರೆ ಇವುಗಳನ್ನೆಲ್ಲ ನೋಡಿ, ಅಸಹನೀಯ ದುಃಖವಾಯಿತು. ಇದರ ಹೊರತು ಸರಕಾರದಿಂದ ಮಂಜೂರಿ ಪಡೆದು, ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನದಿಂದ ಸುಮಾರು ೩೦ ಸಾವಿರ ರೂಪಾಯಿ ಖರ್ಚು ಮುಟ್ಟಿಸಿ, ಕಟ್ಟಿಸಿದ ಬೋರ್ಡ ಸೆಕಂಡರಿ ಶಾಲೆಯ ಎರಡು ದೊಡ್ಡ ಕಟ್ಟೋಣಗಳೂ, ಮತ್ತು ಮಿಶನ್ ಎಲಿಮೆಂಟರಿ ಶಾಲೆಯ ಕಟ್ಟೋಣ, ಇವುಗಳೊಳಗಿರುವ ಎಲ್ಲ ಸಾಮಾನು ಸಹಿತ ನಾಶವಾಗಿದೆ. ಆದರಿಂದ ಮುಂದಿನ ಶಿಕ್ಷಣಕ್ಕೆ ಸಹ ಕಷ್ಟವಾಯಿತು.

ಇಲ್ಲಿಯ ಈಗಿನ ಸ್ಥಿತಿ.— ತಾ ೬-೮-೨೩ನೇ ಸಾಯಂಕಾಲ ತನಕ ಸಾಧಾರಣ ೨೫ ಸಾವಿರದ ಯಜಮಾನರಿದ್ದವರು, ತಾ ೭-೮-೨೩ನೇ ಸಾಯಂಕಾಲ ೧೦ ರೂಪಾಯಿ ಸಹ ಇಲ್ಲದೇ ಇರುವ ಬಡವರಾದರು. ಅಕ್ಕಿ, ಧಾನ್ಯ, ವಸ್ತ್ರ ಇವುಗಳೆಲ್ಲಾ ನೆರೆಯ ಪಾಲಾದ್ದರಿಂದ, ಎಲ್ಲರೂ ಬಡವರಾದರು. ಅಡಿಗೆ ಮಾಡಲಿಕ್ಕೆ ಧಾನ್ಯ, ಪಾತ್ರೆಗಳಿಲ್ಲದೇ, ಉಡಲಿಕ್ಕೆ ಬೇರೆ ವಸ್ತ್ರವಿಲ್ಲಾ, ಉಣ್ಣಲಿಕ್ಕೆ ಅನ್ನವಿಲ್ಲಾ, ಇರಲಿಕ್ಕೆ ಜಾಗವಿಲ್ಲಾ, ಕೊಟ್ಟಿಗೆಯಲ್ಲಿ ಕಟ್ಟಿದ ದನಕರುಗಳೆಲ್ಲಾ ಮನೆಗಳು ಬಿದ್ದು ಸತ್ತು, ಊರಲ್ಲಿ ದುರ್ಗಂಧಿಯುಂಟಾಗಿದೆ. ಬೇರೆ ಊರಿಗೆ ಈ ವಾರ್ತೆ ತಂತಿದ್ವಾರಾ ತಿಳಿಸಲಿಕ್ಕೆ ತಂತಿ ಹರಿದು ಹೋಗಿದೆ. ಟಪಾಲಕಚೇರಿಯು ನಾಶವಾಗಿದೆ. ನಡೆದು ಹೋಗಲಿಕ್ಕೆ ಮಾರ್ಗ ಕೆಟ್ಟಿದೆ. ದೋಣಿಯಿಂದ ಹೋಗಲಿಕ್ಕೆ ಹೊಳೆಗೆ ನೆರೆನೀರು. ಮೋಟಾರು ವಾಹನಗಳು ಮಾರ್ಗ ಬಂದಾದದ್ದರಿಂದ, ಬಹಳ ಅಸಾಧ್ಯ. ಗರ್ಭಿಣಿಯರು ಜೀವ ಬದುಕಿಸಿಕೊಳ್ಳಲಿಕ್ಕೆ ಗುಡ್ಡದ ಕಡೆಗೆ ಹೋದವರು ಮಳೆಯಲ್ಲಿ ಪ್ರಸವವಾಗಿ ಅವರ ವ್ಯವಸ್ಥೆ ನೋಡುವವರಿಲ್ಲಾ. ಎಲ್ಲರೂ ಬಡವರಾದ್ದರಿಂದ ಅನ್ನ, ವಸ್ತ್ರ ಕೊಡುವವರಿಲ್ಲ. ನೆರೆಯಲ್ಲಿ ಬಿದ್ದ ಆವಾರಗಳ ಒಳಗೆ ಸಿಕ್ಕಿಬಿದ್ದು ಸತ್ತ ಜಾನುವಾರಗಳು ಕೊಳೆತು, ಊರಲ್ಲಿ ದುರ್ಗಂಧಿಯುಂಟಾಗಿದೆ. ಅದರಿಂದ ಕಾಲರಾ ವಗೈರೆ ಅಂಟುರೋಗಗಳ ಭೀತಿಯುಂಟಾಗಿದೆ. ಇತ್ಯಾದಿ ಬರೆಯಲಿಕ್ಕೆ ಅಸಾಧ್ಯವಾದ ದುಃಸ್ಥಿತಿ. ಇಲ್ಲಿ ಸಾಧಾರಣ ಒಂದು ಕೋಟಿ ರೂಪಾಯಿಗಳಿಕ್ಕಿಂತಲೂ, ಜಾಸ್ತಿ ಲುಕ್ಸಾನು ಆಗಿರಬೇಕಾಗಿ ಅಂದಾಜು ಅದೆ. ಇದರ ಹೊರತು ಈ ನೆರೆಯಲ್ಲಿ- ನೆರೆಯ ನೀರಿನಲ್ಲಿ ಬಿದ್ದು ಬದುಕಿಸುವವರಿಲ್ಲದೇ- ನಾಲ್ಕು ಜನರು ಸತ್ತದ್ದು ತಿಳಿದು ಬಂದಿದೆ. ಬಾಕಿ ಎಷ್ಟು ಮಂದಿ ಸತ್ತಿರುವರೆಂಬುದು ಇನ್ನೂ ತಿಳಿಯಲಿಲ್ಲ.

ಮೊದಲು ಇಲ್ಲಿ ತಾ ೧೦-೭-೨೩ಕ್ಕೆ ಬಂದ ನೆರೆಯ ನೀರಿನಿಂದ ಜನರಿಗೆ ಉಂಟಾದ ಲುಕ್ಸಾನಿನ ಅಂದಾಜು ಮಾಡಲಿಕ್ಕೆ ಬಂದ ದಕ್ಷಿಣ ಕಾನಡಾ ಕರ್ತಾಧಿಕಾರಿಗಳು ಈ ಎರಡನೇ ಭಯಂಕರ ಪ್ರಳಯಕಾಲದಲ್ಲಿ ಇಲ್ಲಿ ಇದ್ದು, ಇಲ್ಲಿ ಉಂಟಾದ ದುಃಸ್ಥಿತಿ ಕಣ್ಣಾರೆ ನೋಡಿರುತ್ತಾರೆ. ಇನ್ನು ಮುಂದೆ ಅವರು- ಸರಕಾರದವರು ನಿರಾಧಾರಿಗಳಾದ ನಮ್ಮ ಈ ಬಡತನಕ್ಕೆ ಬಂದ ಪ್ರಜೆಗಳಿಗೆ ಯಾವ ತರದ ಸಹಾಯ ಮಾಡುತ್ತಾರೆಂಬುದು ನೋಡತಕ್ಕದ್ದಿದೆ.

ಭೂಕಂಪ, ಜ್ವಾಲಾಮುಖಿ ಮೊದಲಾದದ್ದು ಇಲ್ಲದೇ, ಯಾವಾಗಲೂ ಸುಸ್ಥಿತಿಯಲ್ಲಿ ಇರತಕ್ಕ ಈ ಪರಶುರಾಮ ಸೃಷ್ಟಿಯಲ್ಲಿ ಈ ವರ್ಷದ ಮಳೆಯಿಂದ ಉಂಟಾದ ಈ ಭಯಂಕರ ಅನರ್ಥದ ವಿಚಾರ ಮಾಡಿದರೆ, ಇದು ಪ್ರಳಯಕಾಲವೆಂದು ಅನ್ನಲಿಕ್ಕೆ ಅಡ್ಡಿಯಿಲ್ಲ.

ಇದೇ ಪ್ರಕಾರ ಈ ತಾಲೂಕಿನ ಪಾಣೆಮಂಗಳೂರ, ಉಪ್ಪಿನಂಗಡಿ ಈ ಊರುಗಳ ನಾಶವಾದ ದುಃಸ್ಥಿತಿಯ ವಾರ್ತೆ ಆಪ್ತಜನರಿಂದ ಬಂದ ಮನುಷ್ಯರ ಮುಖಾಂತರ ತಿಳಿದು ಬರುತ್ತದೆ. ಇದರ ಹೊರತು ಜಿಲ್ಲಾ ಬೋರ್ಡಿನಿಂದ ಕಟ್ಟಿಸಲ್ಪಟ್ಟ- ಮದ್ರಾಸ ಇಲಾಖೆಯಲ್ಲಿ ಮೊದಲನೆಯದಾದ ಮುಂಬರಿ ಕ್ಕೆ ಒಂದೇ ಸಹಿಸಿಕೊಳ್ಳಲಿಕ್ಕೆ ಸಾಮರ್ಥ್ಯ ಕೊಟ್ಟು ಕಟ್ಟಿಸಿದ ಪಾಣೆಮಂಗಳೂರ ಸಂಕದ ಕೆಲಭಾಗ ಕೆಟ್ಟು, ರಹದಾರಿಗೆ ಯೋಗ್ಯವಾಗದೇ ಇರುವ ಸ್ಥಿತಿಯಲ್ಲಿದ್ದದ್ದು ನೋಡಿ, ಹೃದಯಕಂಪಿತವಾಯಿತು.

ಈಗ ಈ ಪತ್ರದ್ವಾರಾ ಎಲ್ಲಾ ರಾಷ್ಟ್ರಕ್ಕೆ, ಸರಕಾರಕ್ಕೆ ಇಲ್ಲಿಯ ಜನಾಂಗದ ಪತಿಯಿಂದಾ- ದೀನರಕ್ಷಣೆ ಸಂಬಂಧ- ಜಾಹೀರ ಪ್ರಾರ್ಥನೆ ಮಾಡಿಕೊಳ್ಳುವದೇನಂದರೆ — ಬೆಳ್ಗಾವು, ದಿಲ್ಲಿ, ಬಂಗಾಲ ಮುಂತಾದ ಕಡೆಯ ದುಃಸ್ಥಿತಿಯ ಕಾಲದಲ್ಲಿ ಬಂಧುಪ್ರೇಮದಿಂದ ಸಹಾಯ ಮಾಡಿದ ಮಹಾನ್ ಮತ್ತು ಉದಾರ ಮನಸ್ಸುಳ್ಳ ಮಹನೀಯರು ದಕ್ಷಿಣ ಕಾನಡಾ ಜಿಲ್ಲೆಯಲ್ಲಿ ಕಂಗಾಲರಾದ ಸಾವಿರಗಟ್ಟಲೆ ಈ ದೀನ ಬಂಧು-ಭಗಿನಿ, ಪ್ರಜೆಗಳ ಕಡೆಗೆ ದಯಾದೃಷ್ಟಿಯಿಂದ ನೋಡಿ, ಮುಂದಿನ ವ್ಯವಸ್ಥೆ ಶೀಘ್ರವಾಗಿ ಕೈಕೊಳ್ಳಬೇಕಾಗಿ ಪ್ರಾರ್ಥಿಸಿ, ಬೆಳೆದ ಈ ದುಃಸ್ಥಿತಿಯ ವರ್ಣನೆಯನ್ನು ಇಲ್ಲಿ ಮುಗಿಸುವೆನು.

ಬಂಟವಾಳ. ತಾ ೯-೮-೨೩. } ರಾಮಭಾವು ಭಜನೀ

ಆರೋಗ್ಯಚಂದ್ರಿಕೆ.

ಈ ಪತ್ರಿಕೆಯು ಸಂಪಾದಕರು ಮದ್ರಾಸಿನ ಡಾಕ್ಟರ್ ಯು ರಾಮರಾವ್, ಎಸ್. ಎಲ್. ಸಿ. ಯವರು. ಈ ಆರೋಗ್ಯ ಮತ್ತು ಚಿಕಿತ್ಸದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೂ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ

ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಾಗ್ಗೆ ಪ್ರಕಟವಾಗುವವು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯು ಸ್ವೀಕರಿಸಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸುವದಾಗಿ ನಿರ್ಧರಿಸಲಾಗಿದೆ. ಇದರ ಪ್ರಥಮ ಸಂಚಿಕೆಯು ಬರುವ ಆಗೋಸ್ತು ತಿಂಗಳಲ್ಲಿ ಪ್ರಕಟವಾಗುವದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂಪಾಯಿ ೧-೮-೦. ಬಿಡಿ ಪತ್ರಿಕೆ ಒಂದಕ್ಕೆ ೦-೨-೦.

ಇದಕ್ಕೆ ಚಂದಾದಾರರಾಗಿ ಸೇರತಕ್ಕವರ ಹೆಸರುಗಳು ಈಗಿನಿಂದಲೇ ರಿಜಿಸ್ಟರ್ ಮಾಡಲಾಗುವದು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವದರಿಂದಲೂ ಹಣವನ್ನು ಮುಂಗಡವಾಗಿ ಕಳುಹುವದು ಲಾಭಕರ.

ಕನ್ನಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರ ವಿಳಾಸ —

ಮೆನೇಜರ್,

'ಹೆಲ್ತ್' ಅಥವಾ

'ಆರೋಗ್ಯಚಂದ್ರಿಕೆ' ಆಫೀಸು.

೩೨೩, ತಂಬುಚೆಟ್ಟಿ ಬೀದಿ, ಮದರಾಸ್.

ನೆರೆಯ ಹಾವಳಿ.

ಕಳೆದ ವಾರದಲ್ಲಿ ನಮ್ಮ ಕೈಸೇರಿದ ವೃತ್ತಪತ್ರಗಳಲ್ಲೆಲ್ಲ ಮೇಘರಾಜನು ಎಬ್ಬಿಸಿದ ನೆರೆಯಿಂದಾದಗಿದ ವಿಪನ್ನಾವಸ್ಥೆಯು ವರ್ಣಿತವಾಗಿದೆ. ಹೊಳೆ-ಹಳ್ಳಗಳೊಳಗಿನ ಪ್ರವಾಹವು ಉಕ್ಕೇರಿ, ನೆರೆಹೊರೆಯ ಹಳ್ಳಿಗಳು, ಪಟ್ಟಣಗಳು ನಿರ್ನಾಮವಾಗಿವೆ. ಜನರೆಲ್ಲರೂ ಮನೆ ಮಾರು ಕಳಕೊಂಡು, ಗೋಳಿಡುತ್ತಿರುವರು. ಮೊದಲು, ಬದುಕಿದರೆ ಸಾಕಾಯಿತು, ಈಗ ನೆರೆಯಲ್ಲಿ ಮಡಿದರೆ ಸಂಸಾರಯಾತನೆಗಳಿಂದ ತಾವು ಒಮ್ಮೆಲೇ ಮುಕ್ತರಾಗುತ್ತಿದ್ದೆವೆಂದು ಅನೇಕರಿಗೆ ಅನಿಸಹತ್ತಿದೆ. ಕಾಶೀ ಕ್ಷೇತ್ರದಲ್ಲಿ ಭಾಗೀರಥಿಯು ಉಕ್ಕೇರಿ, ಬಹಳೇ ಹಾನಿಯಾಯಿತು. ಶ್ರೀ| ಶಿವಪ್ರಸಾದ ಗುಪ್ತರವರ ಭವ್ಯ ಭವನವು ದ್ವೀಪವಾಗಿ ಪರಿಣಮಿಸಿತು. ದಶಾಶ್ವಮೇಧಘಾಟಿನ ರಂಗಸ್ಥಳವು ನೀರಿನಲ್ಲಿ ಮುಳುಗಿತ್ತು. ಚಂಬಲ ಹಾಗು ಯಮುನಾ ನದಿಗಳೂ ತಮ್ಮ ಪ್ರತಾಪವನ್ನು ತೋರಿಸಿಬಿಟ್ಟವು. ಸಾವಿರಾರು ಪ್ರಜೆಗಳು ನಿರಾಶ್ರಿತರಾಗಿರುವರು. ದನಕರುಗಳು ತೇಲಿ ಹೋಗುತ್ತಿದ್ದವು. ಜೀವ ಹೇಗೆ ಬದುಕಿಸಿಕೊಳ್ಳುವದು? ಎಂಬ ಒಂದೇ ವಿವಂಚನೆಯು ಪ್ರತಿಯೊಬ್ಬರಿಗೆ ಬಾಧಿಸುತ್ತಿತ್ತು. ಹರಿದು ಹೋಗುವಾಗ, ವೃಕ್ಷ ಮರದ ತುಂಡು, ಕಟ್ಟಿಗೆಯ ತುಂಡು ಇವುಗಳ ಆಶ್ರಯದಿಂದ ಬದುಕಲು ಅನೇಕರು ಹೆಣಗುತ್ತಿದ್ದರು. ಅಜಮಾ ಪಟ್ಟಣದಲ್ಲಿ ಈಗ ೪೦-೫೦ ವರುಷಗಳಿಂದ ಇಷ್ಟು ದೊಡ್ಡ ನೆರೆ ಕಟ್ಟಿದ್ದಿಲ್ಲವಂತೆ. ಈಗಿನ ನೆರೆಯಿಂದ ಎತ್ತರದ ಪ್ರದೇಶದಲ್ಲಿದ್ದ 'ಸಂಸ್ಕೃತ ಪುಸ್ತಕೋನ್ನತಿ ಸಭೆ' ಎಂಬ ಸಂಸ್ಥೆಯಲ್ಲಿದ್ದ ದುರ್ಲಭ ಗ್ರಂಥಗಳೂ, ಹಸ್ತಪತ್ರಿಕೆಗಳೂ ಜಲಪ್ರಾಶನವನ್ನು ಮಾಡಿದವು. ಕಾಶೀ ಕ್ಷೇತ್ರದೊಳಗಿನ ಹಿಂದೂ ವಿಶ್ವ ವಿದ್ಯಾಲಯದ ಇಂಜನಿಯರಿಂಗ ಕೊಲೇಜಿನ ಮೇಸ್ತ್ರಿಯೊಬ್ಬರಾದ ರಾ| ಮಿಶ್ರರು ಜಲಾಶಯದ ಮೇಲಿಂದ ಸ್ನಾನಕ್ಕಾಗಿ ಹೋಗುತ್ತಿರುವಾಗ, ಕಾಲುವೆಯಲ್ಲಿ ತಪ್ಪಿಬಿದ್ದರು. ವಿದ್ಯಾರ್ಥಿಗಳು ನೀರಿನಲ್ಲಿ ಕೂಡಲೇ ದುಮುಕಿ ಹುಡುಕಿದರೂ ಸ್ನಾನದ ಪತ್ತೆ ಮಾತ್ರ ಸಿಕ್ಕಲಿಲ್ಲ. ಮೇಸ್ತ್ರಿಯರ ಪತ್ತೆ ಹತ್ತಲಿಲ್ಲ. ಮಾರನೇ ದಿನ, ಶವವು ಸಿಕ್ಕಿತು. ನೀರು ಇಳಿಯುವ ವರೆಗೆ ವಿಶ್ವವಿದ್ಯಾಲಯಕ್ಕೆ ರಜೆ ಕೊಡಲಾಗಿದೆ. ಪ್ರಯಾಗವೆಂದರೆ ಗಂಗಾ-ಯಮುನಾ ನದಿಗಳ ಸಂಗಮಸ್ಥಾನವು. ಇಲ್ಲಿ ನೀರೇರಿ, ಇಡೀ ಪಟ್ಟಣವೆಲ್ಲ ನಡುಗಡ್ಡೆಯಾಯಿತು. ಪ್ರವಾಹದಲ್ಲಿ ಮಡಿದ ಮನುಷ್ಯರೂ, ದನಕರುಗಳೂ ತೇಲಿ ಬರುತ್ತಿದ್ದವು. ಬಿಹಾರದೊಳಗಿನ ಇರಾವತಿ ನದಿಗೆ ಇದೇ ಸಮಯಕ್ಕೆ ಉಬ್ಬು ಬಂದು, ಪ್ರವಾಹವೇರಿ, ತೀರಗಳ ಮೇಲಿನ ೫೦ ಸಾವಿರ ಜನರು ನಿರಾಶ್ರಿತರಾಗಿರುವರು. ಇಲ್ಲಿಯು ಒಂದು ರೇಲ್ವೆ ಸೇತುವೆ ನಾಶಹೊಂದಿದೆ. ಕೊಚ್ಚಿ-ಮಲಬಾರ ಪ್ರಾಂತಗಳಲ್ಲಿಯೂ ನೆರೆ ತುಂಬಿ, ಬಹಳೇ ಹಾನಿಯಾಗಿದೆ. ಅಮೇರಿಕಾ ಖಂಡದೊಳಗಿನ ಬಾಲ್ಟಿಮೋರ ಎಂಬಲ್ಲಿಯು ಪಾಟಪಸ್ಕೊ ನದಿಯ ಪ್ರವಾಹವೇರಿ, ಅನೇಕ ಮನೆಗಳೂ, ಸಂಕಗಳೂ ನಷ್ಟವಾಗಿವೆ. ಕೋರಿಯಾದೊಳಗೆ ಉತ್ತರ ಪ್ಯಾಸಿಫಿಕ ದಂಡೆಯ ಮೇಲೆ ಸಮುದ್ರದ ಸಾವಿರಾರು ತೆರೆಗಳು ಉಕ್ಕೇರಿ ಬಂದು, ನೂರಾರು ಮನೆಗಳು ನಾಶವಾಗಿವೆ. ಮೈಸೂರ ಪ್ರಾಂತದಲ್ಲಿಯೂ ನೆರೆಯಿಂದ ಅನೇಕರು ಬಳಲುತ್ತಿರುವರು. ಬಂಟವಾಳದೊಳಗಿನ ಕರೆಯ ತೀರ ಕಡೆಯಾಗಿದ್ದವು. ಅದನ್ನು 'ಸ್ವದೇಶಾಭಿಮಾನಿ'ಯೊಳಗಿಂದ ಇಲ್ಲಿ ಉದ್ಧರಿಸಿರುವೆವು.

"ನೆರೆಯ ದಿನದ ರಾತ್ರಿಯನ್ನು ಜನರು ಪಳ್ಳಿ ಗುಡ್ಡೆಯಲ್ಲಿಯೂ ಬಂಗ್ಲೆ ಗುಡ್ಡೆಯಲ್ಲಿಯೂ, ಡಿಸ್ಟ್ರಿಕ್ಟ ಮೆಜಿಸ್ಟ್ರೇಟರ ಕಚೇರಿಯಲ್ಲಿಯೂ ಕಳೆದರು. ಬಂಗ್ಲೆಯಲ್ಲಿದ್ದ ಜನರಿಗೆ ಕಲೆಕ್ಟರ್ ದೊರೆಗಳು ತಾನು ಮಲಗುವ ಒಂದು ಮಂಚವಲ್ಲದೆ, ಬೇರೆ ಎಲ್ಲಾ ಸ್ಥಳವನ್ನು ಬಿಟ್ಟುಕೊಟ್ಟದ್ದರು. ತನ್ನ ಮೋಟಾರಕಾರನ್ನು ಕಿಡ್ಕಿಯಿಂದ ತೆಗೆದು ಹೊರಗೆ ನಿಲ್ಲಿಸಿ, ಅದನ್ನು ಜನರಿಗೆ ಉಳಕೊಳ್ಳುವದಕ್ಕೆ ಬಿಟ್ಟರು. ತನ್ನ ಲೆಕ್ಕಕ್ಕೆ ೨ ಮುಡಿ ಅಕ್ಕಿಯ ಗಂಜಿ ಮಾಡಿಸಿದರು. ಜನರೆಲ್ಲರೂ ಸಾಗ್ವಾನಿ ಎಲೆಯ ಮೇಲೆ ಒಂದೊಂದು ಸೌಟು ಗಂಜಿಯನ್ನು, ಉಪ್ಪು ಸಹ ಇಲ್ಲದೆ, ಊಟಮಾಡಿದರು. ಆದರೆ, ಈ ಗಂಜಿಯು ಕಾಲುಪಾಲು ಜನರಿಗೆ ಸಹ ಸಾಕಾಗಲಿಲ್ಲ. ಆಸ್ಪತ್ರೆಯಲ್ಲಿದ್ದ ಅಸ್ವಸ್ಥರನ್ನು ಕಲೆಕ್ಟರರು ತಾನೇ ಆಸ್ಪತ್ರೆಯಿಂದ ಬಂಗ್ಲೆಗೆ ಒಯ್ದರು. ಕಲೆಕ್ಟರ್ ದೊರೆಗಳು ಜನರಿಗಾಗಿ ಪಟ್ಟ ಕಷ್ಟವನ್ನು ಬಂಟವಾಳದವರು ಯಾವಾಗಲೂ ಮರೆಯಲಾರರು. ಕಚೇರಿಯಲ್ಲಿದ್ದವರೂ, ಪಳ್ಳಿಗುಡ್ಡೆಯಲ್ಲಿದ್ದವರೂ ರಾತ್ರಿಯಲ್ಲಿ ಉಪವಾಸಮಾಡಿದರು. ರಾತ್ರಿ ೮ ಗಂಟೆಯನಂತರ ನೀರು ಸ್ವಲ್ಪ ಇಳಿಯಲಾರಂಭಿಸಿತು. ಬೆಳಗ್ಗೆ ನೀರು ಪೇಟೆಯನ್ನು ಬಿಟ್ಟುಹೋಗಿತ್ತು. ಆದರೆ, ಅಲ್ಲಲ್ಲಿ ನೀರು ತುಂಬಿಕೊಂಡಿತ್ತು. ಮರುದಿನ ಬೆಳಗ್ಗೆ ಕಚೇರಿ ಬಂಗ್ಲೆಯಲ್ಲಿದ್ದ ತುಳು ಜನರೆಲ್ಲಾ ಗಂಜಿ ಮಾಡಲಿಕ್ಕೆ ರಾ| ಗುರ್ಪೂರ ವೆಂಕಟ್ರಾಯ ಪ್ರಭುಗಳು ೨ ಮುಡಿ ಅಕ್ಕಿಯನ್ನು ಹಂಚಿದರು. ಕಚೇರಿ ಬಂಗ್ಲೆ, ರಿಜಿಸ್ತ್ರಿ ಆಫೀಸು, ಕಚೇರಿ ಎಲ್ಲವೂ ಅಡಿಗೆ ಕೋಣೆಗಳೇ ಆದವು. ಗೌಡಸಾರಸ್ವತರಿಗೆಲ್ಲಾ ಶ್ರೀ ತಿರುಮಲ ದೇವಸ್ಥಾನದಲ್ಲಿ ಗಂಜಿಮಾಡಿ ಬಡಿಸಿದರು. ಸಾರಸ್ವತರು ಅವರ ದೇವಸ್ಥಾನದಲ್ಲಿ ಅಡಿಗೆ ಮಾಡಿದರು. ಬೇಗ್ಗೆ ಜನರು ತಮ್ಮ ತಮ್ಮ ಮನೆಗಳನ್ನು ನೋಡಲಿಕ್ಕೆ ಹೋಗಲಾರಂಭಿಸಿದರು. ಮಾಪಿಳ್ಳೆ ಪೇಟೆಯಲ್ಲಿ ಎರಡು ಪಳ್ಳಿಗಳು, ಒಂದು ಶಿನರಿ, ಪೋಲೀಸ್ ಠಾಣ್ ಇಷ್ಟು ಮಾತ್ರವೇ ಉಳಿದಿವೆ. ಕಚೇರಿ ಬಾಗಿಲಿನಿಂದ ಭಾಕದ ಹಿತ್ತಲ ವರೆಗೆ ಕಟ್ಟೋಣಗಳು ಉಳಿದಿದೆ. ಮಧ್ಯಪೇಟೆ ಕಾಟ್ರು ಮನೆಗಂಡಿಯಲ್ಲಿ ೩-೪ ಕಟ್ಟೋಣಗಳು ಉಳಿದಿವೆ. ಹೊಸಪೇಟೆಯಲ್ಲಿ ೬ ಕಟ್ಟೋಣಗಳು ಮಾತ್ರವೆ ಉಳಿದಿವೆ. ವಿಠೋಬಕೇರಿ, ಬಸ್ತಿಕಟ್ಟೆ, ಚಕ್ರಬೆಟ್ಟು, ಕಂಚಿಗಾರಪೇಟೆ, ಪಯ್ಯನ್ನಾಯ್ಕರ ಬೀದಿ ಸಂಪೂರ್ಣವಾಗಿ ನಾಶವಾಗಿದೆ. ಬಾಸೆಲ್ಮಿಶನ್ ಒಟ್ಟು ಸುಮಾರು ೩೨ ಸಾವಿರ ಅಕ್ಕಿ ಮುಡಿಗಳಲ್ಲಿ ಸುಮಾರು ೫೦ ಸಾವಿರ ಮುಡಿಗಳು ಹಾಳಾದವು. ಇದಲ್ಲದೆ ಬತ್ತ ರಾಗಿ, ಉದ್ದು, ಹೆಸರು, ಹುರುಳಿ, ಎಳ್ಳು, ಗೇರುಬೀಜ, ರಾಮಪತ್ರೆ, ಕಾಸರಕನಬೀಜ ಎಲ್ಲವೂ ಹಾಳಾಗಿವೆ. ಇವೆಲ್ಲವು ಸುಮಾರು ೧ ಲಕ್ಷ ರೂಪಾಯಿ ಕ್ರಯ ಬಾಳುವಂಥದ್ದು ನಷ್ಟವಾಯಿತು. ತಾಮ್ರದ ಪಾತ್ರೆಗಳು, ಚಿನ್ನಾಭರಣಗಳು ಸುಮಾರು ೫೦ ೦೦೦ದಷ್ಟು ನಷ್ಟವಾಗಿದೆ. ಸುಮಾರು ೩೦೦ ದನಕರುಗಳು ಸತ್ತುಹೋದವು. ಕಲೆಕ್ಟರ್ ದೊರೆಗಳು ಬಂಟವಾಳದಲ್ಲೇ ಇದ್ದು, ಎಲ್ಲಾ ತರದ ಜಾಗ್ರತೆ ತೆಗೆದುಕೊಳ್ಳುತ್ತಿದ್ದರು. ತಿರುಮಲ ದೇವಸ್ಥಾನದಿಂದ ಹೆಂಗಸರು-ಗಂಡಸರಿಗೂ ಒಂದು ಪಾವಿನ ಪ್ರಕಾರವೂ, ಮಕ್ಕಳಿಗೆ ಅರ್ಧ ಪಾವಿನ ಪ್ರಕಾರವೂ ಧರ್ಮ ಕೊಡುತ್ತ ಇದ್ದಾರೆ. ಕಾರ್ಕಳದಿಂದ ೫೦ ಮುಡಿ ಸ್ವಯಂಸೇವಕರು ಸುಮಾರು ೨-೩ ಸಾವಿರ ರೂಪಾಯಿಯ ವಸ್ತ್ರ, ಆಹಾರ ಜೀನಸುಗಳನ್ನು ತಂದು ಹಂಚಿದರು. ಮಂಗಳೂರು ಸಾಹುಕಾರರು ಸ್ವಲ್ಪ ಸಾಮಾನುಗಳನ್ನು ತಂದು ಹಂಚಿದರು. ಅನಂತರ ಮನೆಗೆ ಇಬ್ಬರ ಪ್ರಕಾರ ಮಾತ್ರವಲ್ಲದೆ, ಬೇರೆ ಎಲ್ಲರೂ ಪಟ್ಟಣ ಬಿಡಬೇಕೆಂದು ಕಲೆಕ್ಟರ್ ದೊರೆಗಳು ಅಪ್ಪಣೆ ಕೊಟ್ಟರು. ಮೋಟಾರು ಕಂಪನಿಯವರು ಧರ್ಮಾರ್ಥವಾಗಿ ಜನರನ್ನು ಮಂಗಳೂರಿಗೆ ಒಯ್ದರು. ಕೆಲವರು ಪುತ್ತೂರಿಗೂ, ಕೆಲವರು ತಮ್ಮ ತಮ್ಮ ಭೂಮಿಮನೆಗಳಿಗೂ ಹೋದರು. ಇತರರು ಅಂದರೆ, ಬಡವರು ಊರಿನ ಸುತ್ತಮುತ್ತಲೂ ಇದ್ದಾರೆ. ಇವರಿಗೆಲ್ಲಾ ಅನ್ನವಸ್ತ್ರದ ಸಹಾಯವು ಅಗತ್ಯವಿದೆ. ಈಗ ಕೊಡದೆ ಇದ್ದರೆ, ಇನ್ನು ಸ್ವಲ್ಪ ಸಮಯದಲ್ಲಿ ಹೊಟ್ಟೆಗೆ ಇಲ್ಲದೆ ಸಾಯುವ ಸಂಭವವು ಬರುವದು. ಹೆಲ್ತ್ ಆಫೀಸರರು ಬಂಟವಾಳದಲ್ಲಿಯೇ ಇದ್ದು, ಪಟ್ಟಣವನ್ನು ಸ್ವಚ್ಛ ಮಾಡಿಸುತ್ತಿದ್ದಾರೆ. ಲೋಕಲ್ ಫಂಡು, ಇಂಜನಿಯರಿಂಗ ಡಿಪಾರ್ಟಮೇಂಟಿನವರು ಮಾರ್ಗವನ್ನು ಸರಿಮಾಡುತ್ತಿದ್ದಾರೆ. ಟೆಲಿಗ್ರಾಫ್ ಇಲಾಖೆಯವರು ತಂತಿ ಕಂಬಗಳನ್ನು ಸರಿಮಾಡುತ್ತಿದ್ದಾರೆ. ಇಲ್ಲಿಯ ಪೋಸ್ಟಾಫೀಸನ್ನು ಇಲ್ಲಿಯ ಸಬ್ ಜೈಲಿನ ಒಂದು ಕೋಣೆಗೆ ಒಯ್ದಿದೆ."

(ಉ. ೧೩-೮-೧೯೨೪.)

ಮಂಜೇಶ್ವರದಿಂದ ಪೂರ್ವಕ್ಕೆ ೩ ಮೈಲು ದೂರ ಕೋಳಿಯೂರು, ಎಂಬ ಗ್ರಾಮವಿದೆ. ಇಲ್ಲಿ ಮೇಘರಾಜನು ಬಹು ಶೋಚನೀಯ ಚಮತ್ಕಾರಗಳನ್ನುಂಟುಮಾಡಿದನು. ವಿಪರೀತ ಮಳೆಯಿಂದ ಪಕ್ಕದಲ್ಲಿದ್ದ ದಿನ್ನೆಯು ಥಕ್ಕನೆ ಕುಸಿದು ಬಿತ್ತು. ಅಲ್ಲಿಯೇ ಪಟೇಲರ ಮನೆ. ಕ್ಷಣಾರ್ಧದಲ್ಲಿ ಮನೆಯು ನುಚ್ಚುನೂರು. ಒಳಗಿದ್ದ ಪಟೇಲರೂ, ಅವರ ಹೆಂಡರುಮಕ್ಕಳೂ ತೀರಿಕೊಂಡರು. ಪಟೇಲರ ವೃದ್ಧ ತಂದೆಯವರೊಬ್ಬರೇ ಬದುಕಿದರು. ಈಗ ಮುದಿಪ್ರಾಯದಲ್ಲಿ ಅವರಿಗೆ ಪುತ್ರಶೋಕದಿಂದ ಭ್ರಾಂತರಾಗುವ ಕಷ್ಟಕಾಲ ಬಂದೊದಗಿದೆ.

ಮೂರ್ತಿಗಳು ಬೇಕೋ?

ನಮ್ಮಲ್ಲಿ ಭಂಗಾರ, ಬೆಳ್ಳಿ, ಪಂಚಧಾತು, ಹಿತ್ತಾಳಿ, ತಾಮ್ರ ಈ ಕರೇಕಲೆಯ ಮೂರ್ತಿಗಳೂ, ಇವಲ್ಲದೆ ಪಾಣಿಪೀಠಗಳೂ, ಪ್ರಭಾವಳಿಗಳೂ, ಈಶ್ವರ ಮುಖವಟಿಗಳೂ, ನಾಗಾಭರಣಗಳೂ, ಕವಚಗಳೂ ಈ ಯಾವದೇ ತರದ ಪ್ರತಿಮೆಗಳೂ ನಮ್ಮಲ್ಲಿ ಯೋಗ್ಯ ದರಕ್ಕೆ ಈ ಯೋಗ್ಯ ಹೊತ್ತಿಗೆ ಮಾಡಿ ಕೊಡಲ್ಪಡುವವು. ಬೇಕಾದವರು ಪತ್ರವ್ಯವಹಾರ ಮಾಡಿ ಯಾ ಸಮಕ್ಷ ಬಂದು ದರವಾರ ತಿಳಕೊಳ್ಳಬಹುದ

ಪತ್ತೆ — **ನಾರಾಯಣ ಹುವಣ್ಣ ಶೇಟ,**

ಗುಡಗಾರ, ಗುಜರಗಲ್ಲಿ, ಕುಮಟಾ

(ಉ. ಕಾನಡಾ.)

ಶುದ್ಧ ಖಾದಿ

ವಿಕ್ರಿಗೆ ತಯಾರ.

ಹೊನ್ನಾವರ ತಾಲೂಕಾ ಕೊಂಗ್ರೆಸ ಕಮಿಟಿಯಿಂದ ಕೈಮಗ್ಗದ ಕೈರಾಟೆಯ ಶುದ್ಧ ನೂಲಿನ ಖಾದಿ ಮಾರಾಟಕ್ಕೆ ಕೊಂಗ್ರೆಸ ಆಫೀಸಿನಲ್ಲಿ ಸಿಗುವದು.

ಹೊನ್ನಾವರ, ೧೦-೧೨-೨೩. } ಸೆಕ್ರೆಟರಿ, ತಾ. ಕಾ. ಕಮಿಟಿ, ಹೊನ್ನಾವರ.

ದೇಶಿ ಸೆಂಟೋನಾಯಿನ್.

(ಜಂತುವಿನ ಪುಡಿ.)

ಅಪಾಯಕರವಿಲ್ಲದೆ ಗುಣ ಕೊಡುವಂಥಾದ್ದು.

ಪ್ರಪಂಚದಲ್ಲಿ ಪ್ರಖ್ಯಾತ ಔಷಧ

ಔಂಸಿನ ಶೀಸೆಗೆ 2 ರೂ. ೮ ಆಣೆ

ವಿಳಾಸ:— ಎಮ್ ಜಿ ಭಾಗ್ವತ್,

ಆಯುರ್ವೇದಿಕ್ ಕೆಮಿಸ್ಟ, ಕಾರವಾರ. (ಕೆನರಾ)

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಸಹಾ ೬೩ ಕೆಳಗಿನ ಪತ್ತೆಗೆ ಮುಕ್ತಾ ಶಿಕ್ಕ ತಿಳಕೊಳ್ಳಬಹುದು.

ಪುರುಷೋತ್ತಮ ಲಕ್ಷ್ಮಣಯ್ಯ ಶ್ಯಾನಭಾಗ

ಹೆಗಡೇಕರ, ದುಕಾನ, ಕುಮಟಾ.

ಲಾಲಾಜಿಯವರಿಗೆ
ಬಿಡುಗಡೆ ಮಾಡಿದರು.

ಪಂಜಾಬದ ಸಿಂಹರಾದ, ಭರತ ಭೂಮಿಯ ಮಾನ್ಯ ವರಪುತ್ರರಾದ ದೇಶಭಕ್ತ ಲಾಲಾ ಲಜಪತರಾಯರಿಗೆ ಕಳೆದ ಗುರುವಾರ ತಾ. ೧೬ನೇ ಸಾಯಂಕಾಲ ೬ ಘಂಟೆಯ ಸುಮಾರಿಗೆ ಪಂಜಾಬದ ನೌಕರಶಾಹಿಯು ಲಾಹೋರಿನೊಳಗಿನ ಸೆಂಟ್ರಲ ಜೈಲಿನಿಂದ ಬಿಡುಗಡೆ ಮಾಡಿತು. ಲಾಲಾಜಿಯವರು ಮೋಟಾರಾರೂಢರಾಗಿ ನೆಟ್ಟಗೆ ತಮ್ಮ ಮನೆಗೆ ಬಂದರು. ಅಲ್ಲಿ ಅನೇಕರು ಲಾಲಾಜಿಯವರ ದರ್ಶನೋತ್ಸುಕರಾಗಿ ನೆರೆದಿದ್ದರು. ಬಾಹ್ಯತಃ ಲಜಪತರಾಯರು ಅಷ್ಟು ಕುಗ್ಗಿದಂತೆ ತೋರಲಿಲ್ಲ. ಅವರ ಮೈ ಮೇಲೆ ಸಣ್ಣ ಜ್ವರವಿತ್ತು. ಡಿಗ್ರಿಯನ್ನು ಹಚ್ಚಿ ನೋಡಲು, ಜ್ವರವು ೯೯-೪ ಡಿಗ್ರಿಯಿತ್ತು. ಲಾಲಾಜಿಯವರ ಮನೆಗೆ ಈಗ ಅನೇಕರು ಅವರ ದರ್ಶನ ಪಡೆಯಲು ಹೋಗುತ್ತಿದ್ದಾರೆ. ಕಳೆದ ಗುರುವಾರದಿಂದ ಗುಂಪುಗುಂಪಾಗಿ, ಎಡೆಬಿಡದೆ, ಜನರು ಹೋಗುತ್ತಿದ್ದರು. ಮರುದಿನ ಶುಕ್ರವಾರದ ಬೆಳಿಗ್ಗೆ ಜ್ವರದ ಮಾನವು ಕುಗ್ಗಿ, ೯೯ ಡಿಗ್ರಿ ಆಗಿತ್ತು. ಎಸೋಸಿಯೇಟಿಡ್ ಪ್ರೆಸ್ ಸಂಸ್ಥೆಯ ಸುದ್ದಿಗಾರರು ಲಜಪತರಾಯರಿಗೆ ಭೆಟ್ಟಿಯನ್ನಿತ್ತು, ಪ್ರಚಲಿತ ರಾಜಕಾರಣದ ಮೇಲೆ ಅವರ ಮತ ಕೇಳಿದರು. ತಾವು ಇನ್ನೂ ಸದ್ಯದ ರಾಜಕಾರಣದಲ್ಲಿ ಸೇರಿಕೊಂಡ ಪ್ರಶ್ನೆಗಳನ್ನು ವಿಚಾರಿಸದಿದ್ದ ಮೂಲಕ, ಈ ಬಗ್ಗೆ ಏನೊಂದೂ ಅಭಿಪ್ರಾಯವನ್ನು ವ್ಯಕ್ತಪಡಿಸಲು ತಾವು ಸಿದ್ಧರಾಗಿಲ್ಲವೆಂದರು. ಆದರೂ, ಹಿಂದೂ-ಮುಹಮ್ಮದೀಯರ ಮನಸ್ತಾಪಗಳನ್ನೂ, ಮತಭೇದಗಳನ್ನೂ ನೋಡಿ, ತಮಗೆ ತೀರ ವ್ಯಸನವಾಗಿದೆಂದು ಉದ್ಗರಿಸಿದರು. ಜೈಲಿನಲ್ಲಿ ನಿಮಗೆ ಹೇಗೆ ನಡಿಸಿಕೊಂಡರು? ಎಂಬದನ್ನು ಸುದ್ದಿಗಾರರು ಕೇಳಲು, ಲಾಲಾಜಿಯವರು ಜೈಲು ಸುಪರಿಂಟೆಂಡೆಂಟರ ಹಾಗು ಅಲ್ಲಿಯ ಕೆಳನೌಕರರು ತಮಗೆ ಆದರದಿಂದ, ಲಕ್ಷಗೊಟ್ಟು ಉಪಚರಿಸಿದರೆಂದು ನುಡಿದರು.

ಲಾಲಾ ಲಜಪತರಾಯರ ಕುಟುಂಬದ ಡಾಕ್ಟರದ್ವಯರು ಲಾಲಾಜಿಯವರ ಚಿಕಿತ್ಸೆ ಮಾಡಿ, ಪ್ರಕಟಿಸಿರುವದೇನಂದರೆ— "ಲಾಲಾ ಲಜಪತರಾಯರಿಗೆ ನಾವು ನಿನ್ನೆ (ಗುರುವಾರ) ಸಾಯಂಕಾಲಕ್ಕೆ ಹಾಗು ಇಂದು (ಶುಕ್ರವಾರ) ಬೆಳಿಗ್ಗೆ ಚಿಕಿತ್ಸೆ ಮಾಡಿದೆವು. ಅವರ ಮೇಲಿಂದ ಅವರು ಪುಪ್ಪುಸಗಳ ವಿಕಾರದಿಂದ ಅಸ್ವಸ್ಥರಿರುವರೆಂದು ನಾವು ಅವರು ಜೈಲಿನಲ್ಲಿದ್ದಾಗ ಮಾಡಿದ ಅನುಮಾನವು ನಿಜವೆಂದು ಕಾಣುತ್ತದೆ. ಪಚನಶಕ್ತಿಯು ದುರ್ಬಲವಾಗಿದೆ. ಅತಿಸಾರದ ಲಕ್ಷಣಗಳು ತೋರುತ್ತಿವೆ. ಹೃದಯಕ್ರಿಯೆಯು ಏಕಸಮನೆ ನಡೆಯುವದಿಲ್ಲ. ನಾಡಿಯ ಮಾನವು ತೀವ್ರವಿದೆ. ದಿನಾಲು ಮುಂಜಾವಿಗೆ ಅವರು ಜ್ವರಗ್ರಸ್ತರಾಗುತ್ತಾರೆ. ಈಗಿನ ಪ್ರಕೃತಿಯ ಮಾನದಿಂದ ಅವರಿಗೆ ಕಾಯಿಕ ಹಾಗು ಮಾನಸಿಕ ವಿಶ್ರಾಂತಿಯು ಪೂರ್ಣವಾಗಿ ದೊರೆಯಗೊಡುವದು ಅತ್ಯವಶ್ಯವು. ಅವರಿಗೆ ಗೆಳೆಯರು ಆಗಿಂದಾಗ ಭೆಟ್ಟಿಯನ್ನಿತ್ತು, ಹಾಗು ಅವರ ಹತ್ತರ ಯಾವದೇ ವಿಷಯದ ಬಗ್ಗೆ ಚೌಕಶಿ ನಡಿಸಿ, ಉಪದ್ರವ ಕೊಡಬಾರದು. ಈಗ ಅವರನ್ನು ರಾಜಕೀಯ ಹಾಗು ವಾದಗ್ರಸ್ತ ವಿಷಯಗಳಿಂದ ಪೂರ್ಣವಾಗಿ ಅಲಿಪ್ತರಿಡಬೇಕು. ಅವರ ಪ್ರಾಣರಕ್ಷಣಕ್ಕಾಗಿ ಮಿತ್ರರೂ, ಪ್ರಶಂಸಕರೂ, ಪ್ರಜೆಗಳೂ, ನಮ್ಮ ಸೂಚನೆಗಳನ್ನು ಅಮಲಬಜಾವಣಿ ಮಾಡಿ, ನಮಗೆ ನೆರವಾಗುವರೆಂದು ಕೋರುತ್ತೇವೆ. ಅವರನ್ನು ಸದ್ಯಕ್ಕೆ ಉನ್ನತ ಪ್ರದೇಶಕ್ಕೆ ಒಯ್ಯುವ ವ್ಯವಸ್ಥೆ ನಡೆದದೆ. ಪಂಜಾಬ ಸರಕಾರವು ಶುಕ್ರವಾರಕ್ಕೆ ಒಂದು ಪ್ರಕಟಣೆಯನ್ನು ಪ್ರಕಟಿಸಿ, ಲಾಲಾ ಲಜಪತರಾಯರ ಬಿಡುಗಡೆಯ ಕಾರಣವನ್ನು ಸ್ಪಷ್ಟೀಕರಿಸಿರುವರು. ಲಜಪತರಾಯರ ಆರೋಗ್ಯದ ಬಗ್ಗೆ ಕಳೆದ ಮೇ ತಿಂಗಳಿನಿಂದ ತಾವು ಕೈಕೊಂಡ ವ್ಯವಸ್ಥೆಯನ್ನೆಲ್ಲ ನಮೂದಿಸಿ, ಕ್ಷಯ ವಿಕಾರದ ಬಾಧೆಯಾಗಿರಬೇಕೆಂದು ಲಾಹೋರಿನ ಸರ್ಜನರ ಚಿಕಿತ್ಸೆಯಲ್ಲಿ ತೋರಿದ್ದರಿಂದ, ಲಜಪತರಾಯರ ಕುಟುಂಬದ ಇತಿಹಾಸವನ್ನು ನೆನಿಸಿ, ಪಂಜಾಬದ ಸರಕಾರವು, ಬಾಕಿ ಉಳಿದ ಶಿಕ್ಷೆಯನ್ನು ಸೂಟ ಬಿಟ್ಟು, ಅವರನ್ನು ಬಂಧಮುಕ್ತ ಮಾಡಿತೆಂದು ಪ್ರಕಟಿಸಿದೆ.

ಕೇಳತಕ್ಕಂಥ ಸಂಗತಿ.

ಮುಂಬಯಿ ಕಾಯಿದೆ ಕೌನ್ಸಿಲಿನ ಕಳೆದ ಅಧಿವೇಶನದಲ್ಲಿ ಒಂದು ಹಕೀಕತು ಸಂಭವಿಸಿತು. ಅದನ್ನು ಪುಣ್ಯಪಟ್ಟಣದ ನೇಮಸ್ತರೊಬ್ಬರು 'ಮುಂಬಯಿ ಕ್ರೋನಿಕಲ್' ಗೆ ತಿಳಿಸಿರುವರು. ಮುಂಬಯಿಯ ಗಿರಣಿ ಸಾವುಕಾರ ಸಂಘದ ತರ್ಫೆನಿಂದ ಕಾಯಿದೇ ಕೌನ್ಸಿಲಿನಲ್ಲಿ ರಾ। ಜಾಹಂಗೀರ ಬೊಮನಜಿ ಪೆಟಿಟರವರು ಮೆಂಬರರಿರುವರು. ಮುಂಬಯಿಯಲ್ಲಿ ಸಂಭವಿಸಿದ ಡಾ। ಕಾಪಾಡಿಯಾರವರ ಖಟ್ಲೆಯಲ್ಲಿ ಡಾಕ್ಟರರನ್ನು ಪೋಲೀಸರು ಶಾಸನಾರ್ಹ ರೀತಿಯಿಂದ ನಡಿಸಿದರೆಂದು ಸುಪರಿಂಟೆಂಡೆಂಟ ಕಾರ್ಟರರವರ ಮೇಲೆ ಮೆಜಿಸ್ಟ್ರೇಟರು ತರಾ ಹೊಡೆದರು. ಕಾರ್ಟರರು ಯುರೋಪಿಯನ್ನರು. ಅವರಿಗೆ ಶಾಸನಮಾಡಲು ನೌಕರಶಾಹಿಯ ಮನಸ್ಸು ಒಪ್ಪುವದಿಲ್ಲ. ಡಾ। ಕಾಪಾಡಿಯಾರವರು ರಾ। ಪೆಟಿಟರವರ ಜ್ಞಾತಿಬಾಂಧವರು. ಅಂದರೆ ಇಬ್ಬರೂ ಪಾರ್ಸಿ ಜಾತಿಯವರು. ಡಾ। ಕಾಪಾಡಿಯಾರವರಿಗೆ ಕೆಟ್ಟ ರೀತಿಯಿಂದ ನಡಿಸಿದ ಬಗ್ಗೆ ಸುಪರಿಂಟೆಂಡೆಂಟ ಕಾರ್ಟರರವರನ್ನು ತಕ್ಕ ರೀತಿಯಿಂದ ದಂಡಿಸಬೇಕಾಗಿ ರಾ। ಪೆಟಿಟರವರು ಮುಂಬಯಿ ಕಾಯಿದೆ ಕೌನ್ಸಿಲಿನ ಮಾರ್ಚ ತಿಂಗಳಲ್ಲಿ ನೆರೆದ ಅಧಿವೇಶನದಲ್ಲಿ ಠರಾವನ್ನು ತಂದರು. ಸರಕಾರಿ ಪಕ್ಷವು ಅಂದರೆ, ನೌಕರಶಾಹಿಯು ಆ ಠರಾವನ್ನು ತೀವ್ರವಾಗಿ ವಿರೋಧಿಸಿತು. ರಾ। ಪೆಟಿಟರವರು ಬಲು ತೀಕ್ಷ್ಣ ಭಾಷಣಮಾಡಿ, ಸುಪರಿಂಟೆಂಡೆಂಟ ಕಾರ್ಟರರವರ ಬೆಂಡು ಬೈಲಿಗೆ ತಂದರು. ಅನೇಕ ಬಿನ್‌ಸರಕಾರಿ ಸಭಾಸದರು ವಾದದಲ್ಲಿ ಪ್ರವೇಶಿಸಿ, ರಾ। ಪೆಟಿಟರವರಿಗೆ ಪುಷ್ಟಿಯನ್ನಿತ್ತರು. ಅಖೈರಗೆ ಸರಕಾರಿ ಮೆಂಬರರ ವಿರೋಧಕ್ಕೆ ಬಲಿಬೀಳದೆ, ರಾ। ಪೆಟಿಟರವರ ಠರಾವು ಮಂಜೂರಾಯಿತು. ಈ ಠರಾವಿನ ಮಂಡನೆಗಾಗಿ ರಾ। ಪೆಟಿಟರವರು ಮಾಡಿದ ಭಾಷಣವು ಸುಪರಿಂಟೆಂಡೆಂಟ ಕಾರ್ಟರರವರಿಗೆ ಅಪಮಾನಾಸ್ಪದವಾಯಿತಂತೆ! ಸುಪರಿಂಟೆಂಡೆಂಟ ಸಾಹೇಬರು, "ಕಾಯಿದೆ ಕೌನ್ಸಿಲಿನಲ್ಲಿ ನುಡಿದ ನುಡಿಗಳನ್ನು ಪುನಃ ಆಡಿರಿ. ನಿಮ್ಮ ಮೇಲೆ ನಾನು ಕಾಯಿದೇಶೀರ ಇಲಾಜು ನಡಿಸುತ್ತೇನೆ" ಎಂದು ಪತ್ರ ಬರೆದು ರಾ। ಪೆಟಿಟರವರಿಗೆ ತಿಳಿಸಿದರು. ಯಾಕಂದರೆ, ಕಾಯಿದೆ ಕೌನ್ಸಿಲಿನಲ್ಲಿ ಆಡಿದ ನುಡಿಗಳ ಬಗ್ಗೆ ಯಾವದೇ ಪ್ರಕಾರದ ಇಲಾಜು ಕೈಕೊಳ್ಳಲಿಕ್ಕಾಗುವದಿಲ್ಲ. ರಾ। ಪೆಟಿಟರು ಸಾಹೇಬರಿಗೆ ಉತ್ತರವನ್ನೀಯದೆ, ಸುಮ್ಮಗುಳಿದರು. 'ಇಲ್ಲದಿದ್ದರೆ ನೀವು ಮಾಡಿದ ಆರೋಪಗಳನ್ನು ಹಿಂತೆಗೆದುಕೊಳ್ಳಿರಿ' ಎಂತಲೂ ಸಾಹೇಬರು ಬರೆದಿದ್ದರು. ಅದರಂತೆ ತಾವು ಮಾಡಿದ ಆಕ್ಷೇಪಾರ್ಹ ವಿಧಾನಗಳನ್ನು ಹಿಂತೆಗೆದುಕೊಳ್ಳಲಿಲ್ಲ. ಕಳೆದ ಕಾಯಿದೆ ಕೌನ್ಸಿಲಿನಲ್ಲಿ ರಾ। ಪೆಟಿಟರವರ ಈ ವರ್ತನದ ಬಗ್ಗೆ ಯುರೋಪಿಯನ್ ಮೆಂಬರರಿಗೆಲ್ಲ ಬಲು ಸಂತಾಪವಾಯಿತೆಂದು ಕಂಡುಬಂತು. ಬೆತ್ತಪ್ರಹಾರದ ಶಿಕ್ಷೆಯನ್ನು ಇನ್ನು ಮುಂದೆ ಯಾರಿಗೂ ಕೊಡಬಾರದೆಂಬ ಠರಾವನ್ನು ರಾ। ತ್ರಿವೇದಿಯವರು ಕಳೆದ ಅಗಸ್ಟ ತಾರೀಖು ೭ನೇಗೆ ಕಾಯಿದೆ ಕೌನ್ಸಿಲಿನಲ್ಲಿ ಚರ್ಚೆಗೆ ತಂದಿದ್ದರು. ಈ ಠರಾವಿಗೆ ಪುಷ್ಟಿಯನ್ನೀಯಲು, ರಾ। ಪೆಟಿಟರು ಎದ್ದು ನಿಂತರು. ಕೂಡಲೆ, ಯುರೋಪಿಯನ್ ಸಭಾಸದರಲ್ಲಿ ಗೊಂದಲವೆಬ್ಬಿತು. ಒಬ್ಬರ ಹಿಂದೊಬ್ಬರು ಸಭಾಸ್ಥಾನದಿಂದ ಎದ್ದು ಹೊರಟುಹೋದರು. ನಾಲ್ವರೇನೋ ಒಳಗುಳಿದಿದ್ದರಂತೆ. ಅವರನ್ನೂ ಕರೆಕಳುಹಿಸಿ, ಹೊರಗೆ ಬರಮಾಡಿಕೊಂಡರು. ವಿದ್ಯಾಖಾತೆಯ ಡೈರೆಕ್ಟರರಿಗೆ ಮಾತ್ರ ಕೆಲವು ಕಾಗದಪತ್ರಗಳಿಗೆ ಸಹಿ ಹಾಕುವ ಕೆಲಸವಿದ್ದದರಿಂದ, ಅವರಿಗೆ ಒಳಗುಳಿಯಬೇಕಾಯಿತಂತೆ. ಗೃಹಮಂತ್ರಿಗಳಾದ ಮಿ। ಹೇವರ್ಡರವರು ಈ ಇಡೀ ವಾದಕ್ಕೆ ಸರಕಾರದ ತರ್ಫೆನಿಂದ ಉತ್ತರವನ್ನೀಯಲು ಬದ್ಧರಾಗಿದ್ದರು. ಅವರಿಗೆ ಮಿ। ಪೆಟಿಟರ ಭಾಷಣವನ್ನು ಕೇಳಿಕೊಳ್ಳುವದು ಅಗತ್ಯವಿತ್ತು. ಅವರೂ ಅವರೂ ಎದ್ದು ನಡೆದು, ಸಭಾಮಂದಿರದೊಳಗಿನ ನಾಮದಾರ ಗವ್ಹರ್ನರರ ಆಸನದ ಪರದೆಯ ಹಿಂದೆ ನಿಂತುಕೊಂಡು, ರಾ। ಪೆಟಿಟರವರ ಅಂದೋಣದ ಟಿಪ್ಪಣೆಗಳನ್ನು ಕೊಳ್ಳುತ್ತಿದ್ದರು. ಸುಪರಿಂಟೆಂಡೆಂಟ ಮಿ। ಕಾರ್ಟರರವರು ಶಾಸನಾರ್ಹರಿದ್ದು, ಅವರ ಬಗ್ಗೆ ಕಟೂಕ್ತಿಗಳನ್ನು ರಾ। ಪೆಟಿಟರು ಆಡಿದ ಬಗ್ಗೆ ಜವಾಬದಾರ ಅಧಿಕಾರಸ್ಥಾನದಲ್ಲಿ ವಿರಾಜಮಾನರಾದ ನೌಕರಶಾಹಿಯವರು ವರ್ಣಭೇದದ ದುರಭಿಮಾನದಿಂದ ಮಾಡುವ ಕೃತಿಗಳನ್ನು ನೆನಿಸಿರಿ, ಮತ್ತು ಮಹಾತ್ಮರಂಥ ಲೋಕೋತ್ತರ ಪುರುಷರಿಗೆ ಬಂಧವಿಮೋಚನೆ ಮಾಡುವ ಠರಾವಿನ ಚರ್ಚೆಯಾದಾಗ ಮಿ। ಹೇಲೀ ಸಾಹೇಬರ ನಿಷ್ಠುರ ವಚನಗಳನ್ನು ಕೇಳಿಕೊಂಡಷ್ಟಲ್ಲದೆ, ಠರಾವಿಗೆ ಪ್ರತಿಕೂಲ ಮತವನ್ನಿತ್ತ ನಮ್ಮ ಸರಕಾರಿ ದೇಶಬಾಂಧವರ ವರ್ತನವನ್ನೂ ನೆನಿಸಿರಿ, ಅಂದರೆ, ನಮ್ಮಲ್ಲಿ ಐಕ್ಯಭಾವವು ಎಷ್ಟರಮಟ್ಟಿಗಿರುವದೆಂಬದು ಹೊಳೆಯುವದು. ಸಹಕಾರಿಗಳಾದರೂ ಈ ಸಂಗತಿಯಿಂದ ತಕ್ಕ ಬೋಧ ಪಡೆಯಲಾರರೇನು?

— ಶ್ರೀಮಂತ ಅತುಲ ಬಿಹಾರಿ ಮಿತ್ರರವರಿಗೆ ನಾಡಿಯಾದ ಜಿಲ್ಲೆಯಲ್ಲಿ ಸುಮಾರು ೧॥ ಲಕ್ಷ ರೂಪಾಯಿಗಳ ಆಸ್ತಿಯಿತ್ತು. ಅದನ್ನು ಅವರು ಔದ್ಯೋಗಿಕ ಶಿಕ್ಷಣದ ಪ್ರಸಾರಕ್ಕಾಗಿ ಕಲಕತ್ತ ವಿಶ್ವವಿದ್ಯಾಲಯದ ಸ್ವಾಧೀನ ಮಾಡಿರುವರು.

— ಶ್ರೀ। ನಾರಾಯಣರಾವ ಬಾಮುಣಗಾಂವಕರರವರ ರಾಜಕೀಯ ಮತಗಳು ಭಯಂಕರವಿರುವವೆಂದು ನಾಗಪುರದೊಳಗಿನ ಮೆಜಿಸ್ಟ್ರೇಟರು ತರಾ ಹೊಡೆದದ್ದರಿಂದ ಜೈಲಿನಲ್ಲಿ ಅವರಿಗಿತ್ತ ವಿಶೇಷ ಸವಲತ್ತು ರದ್ದು ಮಾಡಲ್ಪಟ್ಟಿದೆ.

ಕಾನಡಾವೃತ್ತ.

ಗುರುವಾರ, ತಾರೀಖು ೨೪ ಮಾಹೆ ಅಗಸ್ಟ ೧೯೩೩

ನೆರೆಯ ಲೀಲೆ.

ನಮ್ಮಿತ್ತಕಡೆಯ ಪ್ರಚಲಿತ ವಿಷಯವೆಂದರೆ, ನೆರೆಯು ಹಾಗು ಅದು ಉಂಟುಮಾಡಿದ ಹಾವಳಿಯು. ಈ ವರುಷದಲ್ಲಿ ಮೇಘರಾಜನು ಎಡೆಬಿಡದೆ, ವರುಣಾಸ್ತ್ರವನ್ನು ಹೂಡಿ, ಪ್ರಜೆಗಳಿಗೆಲ್ಲ ಜಲಾಶಯದಲ್ಲಿ ತೋಯಿಸಿಬಿಟ್ಟನು, ಕೆಲವೆಡೆಯಲ್ಲಿ ತೇಲಿಸಿಬಿಟ್ಟನು. ಈ ವರುಷ ವೈಶಾಖ ಮಾಸದ ಬಿಸಿಲು ತಾಪದಿಂದ ಜನರಿಗೆಲ್ಲರಿಗೆ ಒಂದು ಸಲ ಮೇಘರಾಜನ ಕೃಪೆಯಾದರೆ ಸಾಕಾಗಿತ್ತು, ಮೇಘರಾಜನು ಒಮ್ಮೆ ಅಸ್ತ್ರವನ್ನು ಹೂಡಿ, ಪುನಃ ಪುನಃ ಹೊಳೆ-ಹಳ್ಳಗಳಿಗೆಲ್ಲ ನೆರೆ ತುಂಬಿಸಿ 'ನೀರು, ನೀರು' ಎಂದು ಬಳಲುವವರಿಗೆಲ್ಲ ನೀರಿನಲ್ಲಿ ತೋಯಿಸಿಬಿಟ್ಟನು. ಈ ವರುಷ ವಿಪರೀತ ಮಳೆ, ವಿಪರೀತ ನೆರೆ. ಒಮ್ಮೆ ನೆರೆ ಬಂದು ಹೋದ ಮೇಲೆ ಪುನಃ ನೆರೆ ಕಟ್ಟುವದು ಅಪರೂಪ. ಈ ವರ್ಷ ಎರಡನೇ ನೆರೆಯೂ ಕಟ್ಟಿತು. ಪುನಃ ಮೇಘರಾಜನು ಹೊಯ್ಯಲಾರಂಭಿಸಿದನು. ಎಷ್ಟು ಹೊಯ್ದರೂ, ಇನ್ನು ನೆರೆ ಕಟ್ಟಲಾರದು, ಎಂದು ಭಾವಿಕರಂತೆ, ಜನರೆಲ್ಲರು ಭಾವಿಸಿ, ಸುರಕ್ಷಿತವಿದ್ದೇವೆಂದು ತಿಳುಕೊಳ್ಳುವಷ್ಟರಲ್ಲಿ, ಮೂರನೇ ನೆರೆ ಕಟ್ಟಿತು. ಈ ನೆರೆಯಿಂದ ನದಿ, ಹೊಳೆ, ಹಳ್ಳಗಳೆಲ್ಲ ಉಕ್ಕೇರಿ, ಅಪರಿಮಿತ ಹಾನಿಯಾಯಿತು. ಸಾವಿರಾರು ಮನೆಮಾರುಗಳು ಜಲಸಮಾಧಿಯನ್ನೈದಿದವು, ಅನೇಕರು ಜಲಪ್ರವಾಹದಲ್ಲಿ ಫಕ್ಕನೆ ಸಿಲುಕಿಕೊಂಡು, ಅಪಮೃತ್ಯುವನ್ನೈದಿದರು. ದನಕರುಗಳ ಕರುಣ ಸ್ವರವನ್ನು ಕೇಳಿ, ಅನೇಕರಿಗೆ ಪುರಾಣಪ್ರಸಿದ್ಧ ಕಾರ್ತಿಕೇಯನು ಋಷಿವರ್ಯ ಜಮದಗ್ನಿಯರ ಆಶ್ರಮದಿಂದ ಕೇವಲ ಬಲಾತ್ಕಾರದಿಂದ ಎಳೆದೊಯ್ಯುವ ಕಾಮಧೇನುವಿನ ಆರ್ತನಾದದ ನೆನಪಾಯಿತು. ದಕ್ಷಿಣ ಕನ್ನಡದೊಳಗಿನ ಬಂಟವಾಳ ಮೊದಲಾದ ಪಟ್ಟಣಗಳಲ್ಲಿ ಅತಿ ಕರುಣಾಸ್ಪದ ಸ್ಥಿತಿಯು ಆ ಮೂಕ ಪ್ರಾಣಿಗಳಿಗೊದಗಿತು. ಹಲವು, ಬಂಧನದಲ್ಲೇ ಪ್ರಾಣೋತ್ಕ್ರಮಣ ಮಾಡಿದವು. ಪ್ರಾಣಭೀತಿಯಿಂದ ನೀರಿನಲ್ಲಿ ಓಡಾಡುತ್ತ, ಓಡಾಡುತ್ತ ಕೇವಲ ಭ್ರಾಂತ ಹೊಂದಿ, ಅನೇಕ ದನಕರುಗಳು ಜೀವ ಕಳಕೊಂಡವು. ಸಾಮಗ್ರಿ ನಾಶವಂತೂ ಹೇಳಲಾಸಲ್ಲ. ಜೀವ ಉಳಿಸಿಕೊಳ್ಳಲು ಮನೆಮಾರು ತೊರೆದು, ಪಲಾಯನ ಮಾಡುವಾಗ, ಗಂಟುಮೊಟ್ಟೆಯ ಅರಿವು ಯಾರಿಗದು? ಅದು ಬರುವುದಾದರೂ ಎಂತು! ಪರಮಪ್ರಿಯ ವಸ್ತುವಾದ ಜೀವವೇ ಗಂಡಾಂತರದಲ್ಲಿ ಸಿಲುಕಿಕೊಂಡಿರುವಾಗ, ಅದನ್ನು ಜೋಪಾನ ಮಾಡುವ ಸಾಧನಗಳ ಸಂರಕ್ಷಣೆಗಾಗಿ ಯಾರು ಪೇಚಾಡುವರು? ಹೀಗಾಗಿ, ಫಕ್ಕನೆ, ನೆರೆಯು ಉಕ್ಕೇರಿ, ಒಮ್ಮೆಲೇ ಸುತ್ತುಮುತ್ತಿದ್ದರಿಂದ, ಅನ್ನಸಾಮಗ್ರಿಯೆಲ್ಲ ನೆರೆಗೆ ತುತ್ತಾದವು. ಅಕ್ಕಿ, ಕಾಳು-ಕಡಿ ಮುಂತಾದ ಸಾಮಗ್ರಿಗಳಲ್ಲಿ ನೀರು ಸೇರಿಕೊಂಡು, ಇವೆಲ್ಲ ಕ್ಷಣಾರ್ಧದಲ್ಲಿ ಮಾನವನಿಗೆ ನಿರರ್ಥಕವಾದವು. ತೊಯ್ದ ಅಕ್ಕಿಯನ್ನು ಹೇಗಾದರೂ ಮಾಡಿ ಒಮ್ಮೆ ಒಣಗಿಸಿಕೊಂಡು, ಹೊಟ್ಟೆಯ ಗೋಳನ್ನು ಪರಿಹರಿಸಿಕೊಳ್ಳಲು ಕಾದಿಡುವಾ ಅಂದರೆ, ಅದಕ್ಕೂ ಉಪಾಯವಿಲ್ಲ. ಯಾಕಂದರೆ, ಭಗವಾನ್ ಶ್ರೀ ಕೃಷ್ಣನು ಜನ್ಮವನ್ನೆತ್ತುವ ಸಂದರ್ಭವೆಂಬಂತೆ, ಮೇಘರಾಜನು ಪಕಸವನೆ, ತೆರಪಿಲ್ಲದೆ ಮಳೆಗರೆಯುತ್ತಿದ್ದನು. ಹೀಗಾಗಿ, ಶ್ರೀಮಂತ-ಮಧ್ಯಮ ಬಡವ ಎಂಬ ಭೇದಭಾವ ಹಿಡಿಯದೆ, ಎಲ್ಲರ ಸಂಸಾರಸಾಮಗ್ರಿಗಳು ನೀರಿನ, ಮಣ್ಣಿನ, ಪಾಲಾದವು. ಯಾಕಂದರೆ, ಮೇಘರಾಜನ ದರಬಾರಿನಲ್ಲಿ ಇಹಲೋಕದೊಳಗಿನ ಕೃತ್ರಿಮ ಭೇದಭಾವವುಂಟೇ! ನೆರೆಯ ಮುಂಚೆ ಸಾವುಕಾರರೆಂದು ಮೆರೆಯುವ ಗರ್ಭಶ್ರೀಮಂತರು ಈಗ ಹೊಟ್ಟೆ ಹೊರಕೊಳ್ಳಲು ಪೇಚಾಡುತ್ತಿರುವರು. ಇಂಥ ವಿಚಿತ್ರ ಪರಿಸ್ಥಿತಿಯು ಈಗ ಒದಗಿದೆ. ಮಾನವನ ಸಂಸಾರವು ನೀರಿನ ಮೇಲಿನ ಗುಳ್ಳೆಯೆಂದು ನೆರೆಯು ವಿಶದೀಕರಿಸಿದೆ. ಇದು ನೆರೆಯ ಲೀಲೆಯು.

ನೆರೆಯಿಂದೊದಗಿದ ಈ ಹಾನಿಗಿಂತ ವಿಶೇಷ ಹಾವಳಿಯು ಈಗ ಉಂಟಾಗಿದೆ. ನೆರೆಯು ಬಂತ, ೩-೪ ದಿವಸ ಕಟ್ಟಿತು, ಬಳಿಕ, ಹರಿದುಹೋಯಿತ, ಅದರ ಹಾವಳಿಯು ಮಾತ್ರ ಅಷ್ಟಕ್ಕೇ ಮುಗಿಯಲಿಲ್ಲ. ನೆರೆ ಬಂದಾಗ ಮುಖ್ಯ ಪ್ರಶ್ನೆಯು ಪ್ರಾಣರಕ್ಷಣೆಯು. ಈಗ, ಬದುಕಿದ ಮಾನವರನ್ನು ಜೋಪಾನ ಮಾಡುವ ಮಹತ್ವದ ಜವಾಬದಾರಿಯು ದೇಶಬಾಂಧವರ ಮೇಲೆ ಬಂದೊದಗಿದೆ. ಹೊಟ್ಟೆಯ ಗುಂಡಿಯನ್ನು ತುಂಬಲು ಅನೇಕರು ಅನೇಕ ಪರಿಯಿಂದ ಗೋಳಾಡುತ್ತಿರುವರು. ಹೊಟ್ಟೆಯುರಿಯನ್ನು ತಾಳಲಾರದೆ, ಅನೇಕರು ಮಾನವೀ ಜೀವನಕ್ಕೆ ನಿರರ್ಥಕವಾದ ಕಾಳು-ಕಡಿಗಳನ್ನು ತಿಂದುಂಡು, ರೋಗಗ್ರಸ್ತರಾಗುವ ಭೀತಿಯು ವಿಶೇಷವಿದೆ. ನಿರಾಶ್ರಿತರಿಗೆ ಮಳೆಗಾಲದಲ್ಲಿ ತಕ್ಕ ಅರಿವೆ ಅಂಚಡಿಗಳ ಪೂರೈಕೆಯಾಗದೆ, ಅವರು ಬಳಲುವರು. ನೆರೆಗೆ ತುತ್ತಾದ ಪಟ್ಟಣಗಳಲ್ಲಿ, ಕೊಳೆತ ಪದಾರ್ಥಗಳ ಮೂಲಕ, ವಾತಾವರಣವು ಕೆಟ್ಟು, ಸೋಂಕು ರೋಗವು ಅಂಕುರಿಸಿದರೂ, ಆಶ್ಚರ್ಯವೇನಿಲ್ಲ. ತಮ್ಮ ಮನೆಮಾರುಗಳೆಂದು ಪ್ರೀತಿಯಿಂದ ಅಲ್ಲಿ ಹೋಗಿ ವಾಸವಾಗುವವರಿಗೆ ಬಹಳೇ ಗಂಡಾಂತರವಿದೆ. ನೆರೆಯಲ್ಲಿ ಬದುಕಿಕೊಂಡ ಜೀವವು ಸುರಕ್ಷಿತವೆಂದು ನಾವು ಎಣಿಸಲು, ಮತ್ತೂ ಅವಕಾಶ ಬೇಕು. ನೆರೆಯು ಬಂದು ನಿಂತ ಹೊತ್ತಿಗಿಂತ ಈಗ ವಿಶೇಷ ಚಿಂತಾಜನಕ ಪರಿಸ್ಥಿತಿಯುಂಟಾಗಿದೆ. ಇದೆಲ್ಲ ನೆರೆಯ ಲೀಲೆಯ ವರ್ಣನೆಯು.

ಈ ಪರಿಸ್ಥಿತಿಯಲ್ಲಿ ನಾವು ಹತಾಶರಾಗಿ, ಕೈಕಟ್ಟಿಕೊಳ್ಳುವದು ಉಚಿತವಲ್ಲ. ಸ್ಮಶಾನವೈರಾಗ್ಯ ಹಿಡಿದು, "ಓಹೋ! ಸಂಸಾರವು ಅನಿತ್ಯವು" ಎಂದು ಭಾಷಿಸಿ, ಸೋಮಾರಿಗಳಾದರೆ, ನಮ್ಮಷ್ಟು ಪಾಪಿಷ್ಠರು ನಾವೇ. ನೆರೆಯಿಂದ ನರಳುವವರಿಗೆ ದೇಹ ರಕ್ಷಣೆಯ ಸಾಹಿತ್ಯವನ್ನು ಪೂರೈಸಿ, ಅವರಿಗೆ ಬದುಕಿಸಿಕೊಳ್ಳುವದು ನಮ್ಮ ಪ್ರಥಮ ಕರ್ತವ್ಯವು, ಪರಮಪವಿತ್ರ ಧರ್ಮವೂ ಅದೇ. ಅನ್ನ ಬೇಕಾದವರಿಗೆ ಅನ್ನವನ್ನು ಪೂರೈಸಲು, ಅರಿವೆ-ಅಂಚಡಿಗಳಿಲ್ಲೆಂದು ಬಳಲುವವರಿಗೆ ಉಡಿಗೆ ತೊಡಿಗೆಗಳನ್ನಿತ್ತು ಕಾಪಾಡಲು, ಅದಕ್ಕಾಗಿ ತಕ್ಕ ವ್ಯವಸ್ಥೆಯನ್ನು ಮಾಡಲು ನಾವೆಲ್ಲರೂ ಬದ್ಧೀಕೃತರಿದ್ದೇವೆ. 'ಅವರ ಮೇಲಿನ ಆಪತ್ತು, ನಾವೇಕೆ ಬಡದಾಡಬೇಕು!' ಎಂದು ಸ್ವಸ್ಥಚಿತ್ತದಿಂದ ಕೂತುಕೊಳ್ಳುವದು ದೇಶಹಿತವಿಘಾತಕವು. ಎಲ್ಲ ದೇಶಬಾಂಧವರು ಒಂದೇ ಮಾತೆಯ ಮಕ್ಕಳು ಎಂಬ ಪವಿತ್ರ ಭಾವನೆಯಿಂದ ಪ್ರೇರಿತರಾಗಿ, ತಮ್ಮ ಬಾಂಧವರ ಮೇಲೆಯೇ ಈ ಆಕಸ್ಮಿಕ ವಿಪತ್ತು ಒದಗಿದೆಂದು ಭಾವಿಸಿ, ಶಕ್ತಿ ಮೀರಿ ಅವರ ದುಃಖ ನಿವಾರಣೆಕ್ಕಾಗಿ ನಾವೆಲ್ಲರೂ ನೆರವಾಗಬೇಕು. ಇಂದು ದೇಶಬಾಂಧವರಿಗೆ ನೆರವಾಗಿ, ನಮ್ಮ ಐಕ್ಯಮತ್ಯವನ್ನೂ, ಒಮ್ಮನಸ್ಸನ್ನೂ ವ್ಯಕ್ತಪಡಿಸಲು ಶುಭ ಸಂಧಿಯು ಪ್ರಾಪ್ತವಾಗಿದೆ. ಇಲ್ಲದಿದ್ದರೆ ದಕ್ಷಿಣ ಕನ್ನಡ ಜಿಲ್ಲೆಯೆಲ್ಲಿ! ಮುಂಬಯಿಯೆಲ್ಲಿ! ಮುಂಬಯಿಗೂ, ದಕ್ಷಿಣ ಕನ್ನಡ ಜಿಲ್ಲೆಗೂ ಏನೂ ಸಂಬಂಧವಿಲ್ಲ. ಆದರೂ, ಮುಂಬಯಿಯ ಪ್ರಾಂತಿಕ ಕಾಂಗ್ರೆಸ ಕಮಿಟಿಯು ೫ ಸಾವಿರ ರೂಪಾಯಿಗಳನ್ನು ದಕ್ಷಿಣ ಕನ್ನಡ ಜಿಲ್ಲೆಯೊಳಗಿನ ನಿರಾಶ್ರಿತರಿಗಾಗಿ ಅರ್ಪಿಸಿ ತನ್ನ ಬಂಧುಭಾವವನ್ನು ಪ್ರದರ್ಶಿಸಿದೆ. ಆದ್ದರಿಂದ, ನಮ್ಮ ಜಿಲ್ಲೆಯೊಳಗಿನ ಸಾಮರ್ಥ್ಯವಂತರು ನಿರಾಶ್ರಿತರ ಮೇಲೆ ಮೇಘರಾಜನ ಕ್ಷೋಭದಿಂದ ಒದಗಿದ ಈ ಆಕಸ್ಮಿಕ ವಿಪನ್ನಾವಸ್ಥೆಯನ್ನು ದೂರಪಡಿಸಲು ಟೊಂಕಕಟ್ಟಿ ಸಿದ್ಧರಾಗಬೇಕೆಂದು ನಮ್ಮ ಆಗ್ರಹಪೂರ್ವಕ ಬಿನ್ನಹ

ಯಿದೆ, ನಮ್ಮ ಮೇಲೆ ಸಹ ಯಾವ ಪ್ರಕಾರದ ದೈವೀ ಆಪತ್ತು ಒದಗಿ, ನಮ್ಮ ಸ್ಥಿತಿಯು ಯಾವಾಗ, ಯಾವ ಪ್ರಕಾರದ್ದಾಗಿ ಪರಿಣಮಿಸುವದು ಎಂದು ಯಾರೂ ಹೇಳಲಾರದು ಹೀಗಿರುವಾಗ ಹೇಗೆ? ಮನೆಯಲ್ಲಿ ಅಕ್ಕಿ ಮುಡಿಗಳಿವೆ, ನಮಗೇನು ಹೊಟ್ಟೆಯ ಚಿಂತೆಯಿಲ್ಲ, ಎಂದು ನಿಶ್ಚಿಂತ ಮನಸ್ಸಿನಿಂದ ನಿದ್ರಾದೇವಿಯ ಸುಖಾಸ್ವಾದವನ್ನು ಹೊಂದುತ್ತಿದ್ದವರೆಲ್ಲರೂ ಮಧ್ಯರಾತ್ರಿಯಲ್ಲೇ ಜೀವಪ್ರಾಣ ಉಳಿದರೆ ಸಾಕು, ಎಂದು ಬೇಡಾಡುವ ಪ್ರಸಂಗ ಒಂದೆಂದು ನೆರೆಯೇ ಪ್ರತ್ಯಕ್ಷ ಕಲಿಸಿರುವಾಗ, ನಮ್ಮ ಸಂಸಾರವು ಈಗಿನಂತೆ, ಮುಂದೆಯೂ ನಡೆಯುವದು, ಎಂದು ಮದಾಂಧರಂತೆ ನಾವು ಭಾವಿಸುವದು ನಿರರ್ಥಕವಲ್ಲವೇ! ದೇವರ ಲೀಲೆಯು ಅಗಾಧವು. ಅವನ ಮನಸ್ಸಿನೊಳಗಿನ್ನೇನಿ ತವರಾರು? ಅವನಿಗೇ ಮರೆಹೊಕ್ಕು, ಅವನನ್ನೇ ನೆನಸಿ, ದೇಶಬಾಂಧವರನ್ನು ನೀನೇ ಕಾಯಬೇಕು, ಎಂದು ಅವನನ್ನೇ ಪ್ರಾರ್ಥಿಸಿ, ನಮ್ಮ ಅಂತಃಕರಣದ ಚಿಹ್ನವೆಂದು ನಾವು ನಿರಾಶ್ರಿತರ ದುಃಖನಿವಾರಣಕ್ಕಾಗಿ ಶಕ್ತ್ಯನುಸಾರ ಸಹಾಯವನ್ನೀಯಬೇಕು. ನಮಗೆ ಪ್ರತ್ಯಕ್ಷ ನೆರವಾಗಲು ಅವಸರ ದೊರೆಯದಿದ್ದಲ್ಲಿ, ಹಳ್ಳಿ ಹಳ್ಳಿಗಳಲ್ಲಿ ಅಡ್ಡಾಡಿ, ನಿರಾಶ್ರಿತರನ್ನು ಜೋಪಾನ ಮಾಡುವ ದುಃಖನಿವಾರಣೆಯ ಮಂಡಳಕ್ಕೆ ಸಹಾಯವನ್ನೀಯಲಿಕ್ಕಾದರೂ, ಎಲ್ಲರೂ ಸಮರ್ಥರೇ. ಆದ ಕಾರಣ, ನಮ್ಮ ಕಾನಡಿಗ ಬಾಂಧವರೆಲ್ಲರೂ ತಮ್ಮ ತಮ್ಮ ಸಾಮರ್ಥ್ಯಕ್ಕನುಗುಣವಾಗಿ ಸಹಾಯವನ್ನಿತ್ತು, ನಿರಾಶ್ರಿತ ದೇಶಬಾಂಧವರನ್ನು ಕಾಪಾಡಿಕೊಂಡು, ಭಾರತಮಾತೆಯ ಪುತ್ರಶೋಕವನ್ನು ಪರಿಹರಿಸುವರೆಂದು ನಾವು ಅಂತಃಕರಣಪೂರ್ವಕ ಕೋರುವೆವು

ಸ್ಫುಟ ಸೂಚನೆಗಳು.

೧. ನೌಕರಶಾಹಿಯು ವಿಶ್ವಾಮಿತ್ರನಂತೆ ಸಹಕಾರಿಗಳಿಗೆ ಕಾಡುತ್ತಿದೆ ಸಹಕಾರಿಗಳು 'ಕಾಳಿದವ, ಬಾಳಿದ' ಎಂದು ಬಂದ, ಬಂದ ಅಪಮಾನಗಳನ್ನೆಲ್ಲ ಔದಾರ್ಯ ಬುದ್ಧಿಯಿಂದ ಸೈರಿಸಿ, ನೌಕರಶಾಹಿಗೆ ಪುನಃ ಪುನಃ ನೆರವಾಗಲು ಯತ್ನಿಸುತ್ತಿರುವರು. ಆದರೂ, ನೌಕರಶಾಹಿಯೇನು ಅವರ ಯತ್ನಗಳ ಪರಾಮರಿಕೆ ಮಾಡುವದಿಲ್ಲ. ಮೊನ್ನೆ ಕೆನಿಯಾ ವಸಾಹತಿನ ನಿರ್ಣಯವು ಹಿಂದೀಯರಿಗೆ ವಿರೋಧವಾಗಿ ಪರಿಣಮಿಸಿತು. ಬ್ರಿಟಿಶ ಪ್ರಧಾನ ಮಂಡಳವು ಮಧ್ಯಸ್ಥವೆಂದು ಭಾವಿಸಿ, ಹಿಂದೀಯರು ಮಾಡಿದ ಯತ್ನಗಳೆಲ್ಲ ನೀರಿನಲ್ಲಿ ಮಾಡಿದ ಹೋಮದಂತೆ ವಿಫಲವಾದವು. ನಾಮದಾರ ಶಾಸ್ತ್ರಿಗಳು ಕೆನಿಯಾ ವಸಾಹತಿನೊಳಗಿನ ದೇಶಬಾಂಧವರ ಉದ್ಧಾರಕ್ಕಾಗಿ, ಅಂತಃಕರಣಪೂರ್ವಕ ದುಡಿದರು. ದೀನಬಂಧು ಎಂಡ್ರ್ಯೂಜರವರು ನಾಮದಾರ ಶಾಸ್ತ್ರಿಗಳ ದುಡಿತವನ್ನೂ ಕಣ್ಣಾರೆ ಕಂಡು, ಈ ಬಗ್ಗೆ ತಮ್ಮ ಪ್ರಶಂಸೆಯನ್ನು ಪ್ರದರ್ಶಿಸಿರುವರು. ಇಂಥ ಏಕನಿಷ್ಠೆಯಿಂದ ಬ್ರಿಟಿಶ ಪ್ರಧಾನರ ಮೇಲೆ ಶ್ರದ್ಧೆಯಿಟ್ಟು ಅರ್ಪಿಸಿದ ಸೇವೆಯು, ಥಟ್ಟನೆ ನಿರರ್ಥಕವಾಯಿತೆಂದು ತಿಳಿದ ಕೂಡಲೆ, ನಾಮದಾರ ಶಾಸ್ತ್ರಿಗಳಿಗೆ ಉದ್ವೇಗವುಂಟಾಗುವದೂ, ಕ್ಲೇಶವುಂಟಾಗುವದೂ ಸಹಜವು. ಆ ಬಗ್ಗೆ ಅವರು ಕೆಲ ಕಟೂಕ್ತಿಗಳನ್ನು ಉದ್ಗರಿಸಿದರೇನು ಆಶ್ಚರ್ಯವಲ್ಲ. ನಾಮದಾರ ಶಾಸ್ತ್ರಿಗಳು ವಿಲಾಯತಿಯೊಳಗಿನ ಕಾರ್ಯ ಮುಗಿಸಿ, ನಾತಮ ಶನಿವಾರ ತಾ. ೨೫ನೇಗೆ ಮುಂಬಯಿಯಲ್ಲಿ ಬಂದಿಳಿಯುವರು. ವಿಲಾಯತಿಯೊಳಗಿಂದ ಹೊರಡುವ ಮೊದಲು, ಭಾರತ ಮಂತ್ರಿಗಳಾದ ಪೀಲ ದೊರೆಗಳಿಗೆ ಕಾಣಲಪೇಕ್ಷಿಸುತ್ತೇವೆಂದು ೨-೩ ದಿನ ಮುಂಚಿತವಾಗಿಯೇ ತಿಳಿಸಿದ್ದರಂತೆ. ಅದರಂತೆ, ಅವರು ಅಗಸ್ಟ ತಾ ೭ನೇ ಮಂಗಳವಾರಕ್ಕೆ ಇಂಡಿಯಾ ಆಫೀಸಿಗೆ ಹೋದರು. ಪೀಲ ದೊರೆಗಳು ಅಲ್ಲಿದ್ದಿಲ್ಲ. ಮದ್ದತ ಭಾರತ ಮಂತ್ರಿಗಳಾದ ವಿಂಟರಟನ್‌ರ ದರ್ಶನವನ್ನಾದರೂ ಪಡೆದು ತೆರಳುವ, ಎಂದು ನೆನಸಿ, ನಾಮದಾರರು ಅವರ ದರ್ಶನ ಕೊಳ್ಳಲಪೇಕ್ಷಿಸಿದರು ಶಾಸ್ತ್ರಿಗಳು ಭೆಟ್ಟಿಯನ್ನೀಯುವರೆಂದು ಪೀಲ ದೊರೆಗಳು ತಿಳಿದಿದ್ದಿಲ್ಲೆಂತಲೂ, ಅವರ ಗೈರಹಾಜರಿಯಲ್ಲಿ ಶಾಸ್ತ್ರಿಗಳಿಗೆ ಕಾಣುವದು ಪ್ರಶಸ್ತವಲ್ಲೆಂತಲೂ ವಿಂಟರಟನ್ ದೊರೆಗಳು ನುಡಿದು, ಶಾಸ್ತ್ರಿಗಳಿಗೆ ದರ್ಶನವನ್ನೀಯದೆ, ಮರಳಿ ಕಳಿಸಿದರು ನಾಮದಾರ ಶಾಸ್ತ್ರಿಗಳೆಂದರೆ, ನಮ್ಮ ಹಿಂದೀ ನೌಕರಶಾಹಿಯ ಮುದ್ದಿನ ಹುಡುಗನು. ಇಂಥವರಿಗ ದರ್ಶನಲಾಭವು ಯಾಕೊದಗಲಿಲ್ಲ? ಕೆನಿಯಾ ನಿರ್ಣಯದ ಬಗ್ಗೆ ಶಾಸ್ತ್ರಿಗಳು ಆಡಿದ ಕಟೂಕ್ತಿಗಳು ನೌಕರಶಾಹಿಗೆ ಸಹನವಾಗಲಿಲ್ಲ ಆದ್ದರಿಂದಲೇ ವಿಂಟರಟನ್ ದೊರೆಗಳು ಅವರ ಭೆಟ್ಟಿಯನ್ನು ಕೊಳ್ಳಲು, ಪೀಲ ದೊರೆಗಳ ಆಲೋಚನೆ ಪಡೆಯದೆ ಒಪ್ಪಲಿಲ್ಲಂತೆ! ಭೆಟ್ಟಿಯಿಂದ ಶಾಸ್ತ್ರಿಗಳ ಮತಗಳಿಗೆ ಪುಷ್ಟಿ ಕೊಟ್ಟಂತಾಗುತ್ತದೇನು? ಈ ತತ್ವವನ್ನು ವಿಂಟರಟನ್ ದೊರೆಗಳಿಂದಲೇ ಕಲಿಯಬೇಕಾಗಿದೆ. ಇಂಡಿಯಾ ಆಫೀಸಿಗೆ ಹಿಂದೀಯರ ಅಭಿಮಾನವಿರಬೇಕು. ಅದು ಒತ್ತಟ್ಟಿಗೇ ಬಿದ್ದು, ನಾಮದಾರ ಶಾಸ್ತ್ರಿಗಳ ನಿಷೇಧವು ತೀಕ್ಷ್ಣವಾಯಿತೆಂದು ಆ ಬಗ್ಗೆ ಅವರಿಗೆ ಪ್ರತಿಬಂಧಿಸುವ ಮನೂನೆಯನ್ನು ನೋಡಿ, ನೌಕರಶಾಹಿಯು ಹಿಂದುಸ್ಥಾನದ ಮಾನರಕ್ಷಣೆಯ ಬಗ್ಗೆ ದುಡಿಯುವದಿಲ್ಲೆಂಬದು ಸ್ಪಷ್ಟವಾಗುತ್ತದೆ ಸಹಕಾರಿಗಳ ಮಾನ್ಯ ಧುರೀಣರಾದ ಶಾಸ್ತ್ರಿಗಳಿಗೆ, ಆ ಬಳಿಕ, ಕರತಂದು ಭಾರತ ಮಂತ್ರಿಗಳು ಸ್ನೇಹಪರ ಪತ್ರವ್ಯವಹಾರ ನಡಿಸಿದರೆಂದು ಪ್ರಕಟವಾಗಿದೆ. ಇದರಿಂದ ಮುಖ್ಯ ಸಂಗತಿಯು ಮರೆಯಾಗಲಾರದು. ಯಾಕಂದರೆ, "ಬುಂದಸೇ ಗಯೀ, ತೋ ಹೌದಸೇ ಆತೀ ನಹಿ" ಎಂಬ ಗಾದೆಮಾತ ಇರುವದಲ್ಲವೇ?

---

೨. ಪಂಜಾಬ ಸರಕಾರವು ದೊಡ್ಡ ಮನಸ್ಸು ಮಾಡಿ, ಲಾಲಾ ಲಜಪತರಾಯರ ಬಾಕಿ ಶಿಕ್ಷೆಯನ್ನು ಸೂಟ ಬಿಟ್ಟು, ಅವರನ್ನು ಕಳೆದ ತಾ. ೧೬ ನೇ ಗುರುವಾರ ಸಾಯಂಕಾಲಕ್ಕೆ ಬಿಡುಗಡೆ ಮಾಡಿತೆಂದು ಪ್ರಕಟಿಸಿದೆ. ಲಜಪತರಾಯರ ಬಂಧನದ ಕಥೆಯೇ ಪಂಜಾಬದ ನೌಕರಶಾಹಿಯ ದುಷ್ಟತನದ ಸಾಕ್ಷಿಯಾಗಿದೆ. ಲಜಪತರಾಯರನ್ನು ಮೊದಲು ೧೯೨೧ ನೇ ಇಸವಿಯ ಡಿಸೆಂಬರ ೩ನೇ ತಾರೀಖಿಗೆ ಸಭಾಬಂದಿ ಕಾಯಿದೆಯನ್ವಯ ಹಿಡಿದು, ಫೆಬ್ರುವರಿ ತಿಂಗಳ ವರೆಗೆ ಅವರನ್ನು ಕೈದಿಯಲ್ಲಿಟ್ಟರು. ಬಳಿಕ, ಅವರಿಗೆ ಸೆರೆ ಹಿಡಿದದ್ದೂ, ಶಿಕ್ಷೆ ವಿಧಿಸಿದ್ದೂ ಬೇಕಾಯಿದೇಶೀರ ಎಂದು ಅರಿತು, ಸರಕಾರವು ಅವರನ್ನು ಬಿಟ್ಟುಕೊಟ್ಟಿತು. ಕೈದುಖಾನೆಯ ಹೊರ ಬರುವಷ್ಟರಲ್ಲಿ, ಇನ್ನೊಂದು ವಾರಂಟು ತಯಾರು. ಅವರನ್ನು ಪುನಃ ಹಿಡಿದು, ತನಖಿ ನಡಿಸಿದರು, ಮತ್ತು ಮಾರ್ಚ ತಾ. ೯ ನೆಗೆ ಅವರನ್ನು ಸಭಾಬಂದಿ ಕಾಯಿದೆಯನ್ವಯ ೨ ವರುಷಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು. ಈ ಶಿಕ್ಷೆಯನ್ನು ಎರಡು ಅಪರಾಧಗಳ ಮೂಲಕ, ಲಜಪತರಾಯರು ಅನುಭವಿಸಬೇಕೆಂದು ವಿಧಿಸಲಾಗಿತ್ತು. ಎರಡನೇ ಅಪರಾಧದ ಬಗ್ಗೆ ಶಿಕ್ಷೆ ಕೊಡಬೇಕೆಂದು ಸರಕಾರಿ ವಕೀಲರು ಸಹ ಆತುರರಾಗಿದ್ದಿಲ್ಲ. ಆದರೂ, ಅವರಿಗೆ ಶಿಕ್ಷೆಯಾಯಿತು. ಹೀಗೆ ಲಜಪತರಾಯರಿಗೆ ಪಂಜಾಬದ ನೌಕರಶಾಹಿಯು ಕಾಡಿತು. ಕಾಯಿದೆಯ ಆಧಾರವಿಲ್ಲದಿದ್ದರೂ, ನೌಕರಶಾಹಿಯು ಅವರನ್ನು ಕೇವಲ ಬಲಾತ್ಕಾರದಿಂದ, ಬಂಧನದಲ್ಲಿಟ್ಟು, ಪೀಡಿಸಿತು. ಅನೇಕ ಕಾರಣಗಳ ಮೂಲಕ, ಕ್ಷಯವಿಕಾರವು ಲಜಪತರಾಯರ ದೇಹವನ್ನು ಸೇರಿಕೊಂಡಿತು. ಪಂಜಾಬದ ಕಾಯಿದೆ ಕೌನ್ಸಿಲಿನಲ್ಲಿ ಮೂರರಲ್ಲಿ ೨ ಪಾಲು ಶಿಕ್ಷೆಯನ್ನನುಭವಿಸಿದ ರಾಜಕೀಯ ಕೈದಿಗಳನ್ನು ಬಿಟ್ಟುಕೊಡಬೇಕೆಂಬ ಠರಾವು ಆದರೂ, ಅದರ ಫಾಯಿದೆಯನ್ನು ಪಂಜಾಬದ ನೌಕರಶಾಹಿಯು ಲಜಪತರಾಯರಿಗೆ ಕೊಡಲಿಲ್ಲ. ಲಜಪತರಾಯರು ನೌಕರಶಾಹಿಯಗೂಡ ಏನೂ ಬೇಡುವವರಲ್ಲ ಬಾಧಪಿಮೋಚನವು ಅವರ ಸಾಧ್ಯವಲ್ಲ ಆದರೆ, ಇದರಿಂದ ಔದಾರ್ಯವಂತ ಜನರೆಂದು ಮೆರೆಯುವ ನೌಕರಶಾಹಿಯ ಅಂತಃಕರಣವು ಯಾವ ಪರಿಯದ್ದಿದೆಂಬದು ಸ್ಪಷ್ಟವಾಗುತ್ತದೆ. ದುಷ್ಟರೋಗವು ಲಜಪತರಾಯರನ್ನು ಕಾಡುತ್ತದೆ. ಅದರ ಕಾಟ ಸಹಿಸುವ ಸಾಮರ್ಥ್ಯವು ತಮಗಿಲ್ಲವೆಂಬುವನ್ನು ಅರಿತು, ನೌಕರಶಾಹಿಯು ಅವರನ್ನು ಈಗ ಬಿಡುಗಡೆ ಮಾಡಿದೆ. ಇದರೊಳಗೆ ದಯೆಯೂ ಇಲ್ಲ; ಮಾಯೆಯೂ ಇಲ್ಲ ಲಜಪತರಾಯರು ಅಸ್ವಸ್ಥತೆಯ ಮೂಲಕ ನಮ್ಮಿಂದ ಅಲಿಪ್ತರಾಗಿರಬೇಕಾಗಿದೆಂಬದು ನಮ್ಮ ದುರ್ದೈವವು. ಮಹಾತ್ಮಾ ಗಾಂಧೀ, ಲೋಕಮಾನ್ಯ ಟಿಳಕ ಮೊದಲಾದ ಮಹಾ ದೇಶಸೇವಕರೊಡನೆ ಸರಿಸರಾಗಿ ಕೆಲಸ ಮಾಡಿದ ಲಜಪತರಾಯರ ನೇತೃತ್ವವು ಭಾರತೀಯರಿಗೆ ಈಗ ಲಭಿಸಿದ್ದರೆ, ಅವರಿಗೆ ಬಹಳೇ ಲಾಭವಾಗುತ್ತಿತ್ತು; ದೇಶಕ್ಕೂ ಹಿತವಾಗುತ್ತಿತ್ತು. ಇಂಥ ಮಹಾಪುರುಷರಿಗೆ ದಯಾಘನ ಪರಮಾತ್ಮನು ಆಯುರಾರೋಗ್ಯವನ್ನಿತ್ತು, ದೇಶಸೇವೆಯನ್ನು ಅರ್ಪಿಸಲು ದೇಹಪುಷ್ಟಿ ಚೈತನ್ಯವನ್ನು ಶೀಘ್ರವೇ ದಯಪಾಲಿಸಿ, ನಮ್ಮನ್ನು ಉಪಕರಿಸಬೇಕಾಗಿ ಅಂತಃಕರಣಪೂರ್ವಕ ಪ್ರಾರ್ಥಿಸುವೆವು.

---

೩ ನಾಳಿನ ಸೋಮವಾರಕ್ಕೆ ೨೭ನೇ ತಾರೀಖು. ಅಂದು ಇಡೀ ಭರತಖಂಡವು ಕೆನಿಯಾ ವಸಾಹತಿನ ನಿರ್ಣಯದಿಂದ ಭಾರತೀಯರಿಗುಂಟಾದ ಉದ್ವೇಗವನ್ನು ವ್ಯಕ್ತಪಡಿಸಲು, ಅಖಿಲ ಭಾರತೀಯರು ಹರತಾಳವನ್ನಾಚರಿಸಬೇಕೆಂದು ಕೊಂಗ್ರೆಸ ಕಾರ್ಯಕಾರಿ ಮಂಡಳವು ವಿಧಿಸಿರುವದು. ಕೆನಿಯಾ ವಸಾಹ

ತಿನ ನಿರ್ಣಯದ ಮರ್ಮವನ್ನು ನಮ್ಮ ವಾಚಕ ಮಹಾಶಯರೆಲ್ಲರೂ ಅರಿತಿರುವರು. ಕಾಂಗ್ರೆಸ ಕಾರ್ಯಕಾರಿ ಮಂಡಳವು ಹೇಳಿದಂತೆ, ಇದೊಂದು ಭಾರತೀಯರ ಮೇಲಿನ ಕಳಂಕವು. ಬ್ರಿಟಿಶ ನ್ಯಾಯವನ್ನು ನಂಬಿ, ಸಾಮ್ರಾಜ್ಯದಲ್ಲಿ ಭರತಖಂಡಕ್ಕೆ ಗೌರವಸ್ಥಾನವು ಪ್ರಾಪ್ತವಾಗವದೆಂದು ಯಾರಾದರೂ ಆಶೆ ಹಿಡಿದಿದ್ದರೆ, ಅದು ತೀರ ನಿರಾಧಾರವೆಂದು ಈ ನಿರ್ಣಯದಿಂದ ಸ್ಪಷ್ಟವಾಗಿದೆ. ಬ್ರಿಟಿಶ ಸಾಮ್ರಾಜ್ಯದ ಸ್ತುತಿ ಮಾಡುವದರಲ್ಲಿ ಅಭಿಮಾನ ಹೊಂದುವ ಸಾ। ಶಾಸ್ತ್ರಿಗಳಿಗೆ ಸಹ ಆಶಾಭಂಗವಾದ ಮೇಲೆ, ಇನ್ನಾರು ಈ ಸಾಮ್ರಾಜ್ಯಶಕರನ್ನು ನಂಬಿ ತಣ್ಣಗೆ ಉಳಿಯುವರು? ಸಾಮ್ರಾಜ್ಯದಲ್ಲಿ ಸಮಗೊಳಿಸಲಾಗದೆಂಬುದನ್ನು ಬ್ರಿಟಿಶ ಪ್ರಧಾನ ಮಂಡಳವು ಕೃತಿಯಿಂದ ಸಿದ್ಧಪಡಿಸಿದೆ. ನಾವು ಈ ನಿರ್ಣಯವನ್ನು ನಿಷೇಧಿಸಿ, ಕೆನಿಯಾದೊಳಗಿನ ದೇಶಬಾಂಧವರ ಹೀನ ಸ್ಥಿತಿಯ ಬಗ್ಗೆ ನಮ್ಮ ಸಹತಾಪವನ್ನು ಪ್ರದರ್ಶಿಸಿ, ಇಕ್ಕಡದೆ ಇವನ್ನು ಪ್ರಾಪ್ತವಾದಿತೆಂದು ಕ್ಷ್ಯವರೆ ನಾವೂ ನೆರವಾಗಬೇಕು. ಪ್ರದರ್ಶಿಸುವ ಪ್ರಸಂಗವು ನಾಳಿನ ಸೋಮವಾರ. ಪರದೇಶಗಳಲ್ಲಿ ಕಾರಣಾಂತರದಿಂದ ವಾಸವಾಗಿರುವ ದೇಶಬಾಂಧವರ ರಾಷ್ಟ್ರೀಯ ಹಕ್ಕುಗಳ ಬಗ್ಗೆ ಈಗ ಜಾಗ್ರತೆಯನ್ನು ತಳೆದ ಕೊಳ್ಳುವದು ನಮ್ಮ ಕರ್ತವ್ಯವು. ಯಾಕಂದರೆ ಅವರ ಮಾನವೂ, ನಮ್ಮ ಮಾನವೂ ನಿಗಡಿತವಾಗಿವೆ. ಇದಕ್ಕಾಗಿ ನಾಡಿನ ಪ್ರಾಯಃ ಸಾವಿರಾರು ಶಾಸ್ತ್ರಿಗಳು ಸಹಿತವಾಗಿ, ಅಪೂರ್ವ ರಾಷ್ಟ್ರೀಯ ಆಂದೋಲನವೆಂದು ಸಹಕಾರಿಗಳೂ, ಅಸಹಕಾರಿಗಳೂ ಕೂಡಿ ಕಾಂಗ್ರೆಸ ಕಾರ್ಯಕಾರಿ ಕಮಿಟಿಯ ಆಜ್ಞೆಯಂತೆ ಅವನ್ನು ಆಚ್ಛ ತೋರಿಸುವ ನಿರ್ಧಾರ ಮಾಡಿ ನಾಳಿನ ಸೋಮವಾರಕ್ಕೆ ಹರತಾಳವನ್ನಾಚರಿಸಬೇಕೆಂದು ವಾಚಕ ಮಹಾಶಯರಿಗೆ ಬಿನ್ನೈಸುವೆವು.

ಈ ನಾಗಪುರದ ಸತ್ಯಾಗ್ರಹ ಸಂಗ್ರಾಮವು ಕಳೆದ ಗಾಂಧೀ ದಿನದ ದಿವಸದಲ್ಲಿ ಪ್ರಜೆಗಳಿಗೆ ವಿಜಯವಾಗಿ ಪರಿಣಮಿಸಿರುವದೆಂದು ಶ್ರೀ। ವಲ್ಲಭಭಾಯಿ ಪಟೇಲರವರು ಪ್ರಕಟಿಸಿರುವರು. ಕ್ರಿ. ಪ್ರೊ. ಕೋ. ೧೪೪ ನೇ ಕಲಮಿನನ್ವಯ ಹೊರಡಿಸಿದ ಹುಕುಮಿನ ಅವಧಿಯು ಕಳೆದ ಗುರುವಾರ ತಾ ೧೭ ನೇದಕ್ಕೆ ಮುಗಿಯಿತು. ಮರುದಿವಸವೇ ಪೋಲೀಸ ಆಕ್ಟಿನ ೩೦ ನೇ ಕಲಮಿನನ್ವಯ ಡಿ. ಪೋಲೀಸ ಸುಪರಿಂಟೆಂಡೆಂಟರು ಮೆರವಣಿಗೆಯನ್ನು ತಮ್ಮ ಅಪ್ಪಣೆ ಪಡೆದ ಹೊರತ, ಹೊರಡಿಸಬಾರದೆಂದು ಪ್ರಕಟಣೆಯನ್ನು ಹೊರಡಿಸಿದರು. ಕಾಂಗ್ರೆಸ ಕಾರ್ಯಕಾರಿ ಮಂಡಳದ ಕಡೆಯಿಂದ ಸತ್ಯಾಗ್ರಹದ ಚಾಲಕರಾದ ಶ್ರೀ। ವಲ್ಲಭಭಾಯಿ ಪಟೇಲರವರು ತಾ ೧೮ ನೇ ಗಾಂಧೀ ದಿನಕ್ಕೆ ಪ್ರತಿಬಂಧಕ ಕ್ಷೇತ್ರದೊಳಗಿಂದ ೧೦೦ ಸತ್ಯಾಗ್ರಹಿಗಳೊಂದಿಗೆ ಮೆರವಣಿಗೆಯನ್ನು ಹೊರಡಿಸಿದರು. ಈ ಕಾರ್ಯಕ್ರಮದ ಪತ್ರಿಕೆಯೊಂದನ್ನು ಪೋಲೀಸ ಸುಪರಿಂಟೆಂಡೆಂಟರಿಗೂ ಕಳಿಸಿದ್ದರು. ಮೆರವಣಿಗೆಯು ರೇಲ್ವೆ ಸಂಕವನ್ನು ದಾಟಿ, ಝಾಂಡಾ ಚೌಕ, ಹ್ಯಾಕೋರ್ಟ, ಪ್ರಾಂತಿಕ ಸರಕಾರದ ಕಚೇರಿ, ಕಮೀಶನರರ ಆಫೀಸು, ಇವುಗಳ ಹಾದಿಯಿಂದ ಸದರಬಜಾರಿಗೆ ಬಂದಿತು. ಪೋಲೀಸರು ಅಲ್ಲಿ ಕಾದಿದ್ದರೂ, ಸತ್ಯಾಗ್ರಹಿಗಳನ್ನು ಎಲ್ಲಿಯೂ ಪ್ರತಿಬಂಧಿಸಲಿಲ್ಲ. ಹೀಗೆ ರಾಷ್ಟ್ರಧ್ವಜದ ಸಂಗ್ರಾಮವು ಪ್ರಜೆಗಳ ನಿರ್ಧಾರದಿಂದ ವಿಜಯಿಯಾಯಿತು. ರಾಷ್ಟ್ರಧ್ವಜವನ್ನು ಇನ್ನು ನಾವು ಬೇಕಾದಲ್ಲಿ, ಬೇಕಾದ ಹಾಗೆ ಮೆರಿಸಬಹುದು. ಅದಕ್ಕೆ ಇನ್ನು ನೌಕರಶಾಹಿಯು ಯಾವ ಪ್ರಕಾರದಿಂದಲೂ ಪ್ರತಿಬಂಧಿಸಲಾರದು. ರಾಷ್ಟ್ರಧ್ವಜದ ಮಾನ ರಕ್ಷಣಕ್ಕಾಗಿ ಕೈಕೊಂಡ ಧ್ವಜಸಂಗ್ರಾಮವು ಕಳೆದ ಗಾಂಧೀ ದಿನಕ್ಕೆ ಯಶಸ್ವೀ ರೀತಿಯಿಂದ ಕೊನೆಗಂಡಿತು. ಅಲ್ಲಿಯ ಸಂಗ್ರಾಮವು ಇನ್ನು ಪರಿಸಮಾಪ್ತಿಗೈದಿತು. ಇದೊಂದು ಸತ್ಯದ, ಅಹಿಂಸೆಯ, ಆತ್ಮಕ್ಲೇಶದ ವಿಜಯವೆಂದು ಶ್ರೀ। ವಲ್ಲಭಭಾಯಿಯವರು ಉದ್ಗರಿಸುತ್ತಾರೆ. ಇದಕ್ಕೆ ಎಲ್ಲರೂ ಪುಷ್ಟಿ ಕೊಟ್ಟು, ರಾಷ್ಟ್ರದ ಕಾದಾಟಗಳನ್ನೆಲ್ಲ ಇದೇ ಪರಿಯ ನಿರ್ಧಾರದಿಂದ, ಶಿಸ್ತಿನಿಂದ ನಡಿಸುವರೆಂದು ಕೋರುವೆವು.

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ೫-೧೩ ಇಂಚು ಮಳೆ ಬಿತ್ತು. ಅಂತು ಈ ವರೆಗೆ ಮಳೆ ೧೫೩-೩೪ ಇಂಚು ಆಯಿತು. ಈ ವಾರದಲ್ಲಿ ಮಳೆಯ ಕಸುವು ಅಷ್ಟೇನಿಲ್ಲ. ಹಗಲಿಗೆ ಚಲೋ ಬಿಸಿಲು ಬಿತ್ತು. ಮಘಾ ನಕ್ಷತ್ರದ ಮಳೆಯು ಏನು ಮಾಡುತ್ತದೆಯೋ ಏನೋ, ಎಂದು ಕೆಲವರಿಗೆ ಚಿಂತೆಯಾಗಿತ್ತು. ಆದರೆ, ಸಮಾಧಾನದಿಂದ ಮಳೆ ಸುರಿಯುತ್ತಿದೆ. ಹೀಗೆ ನಡಿಸಿದರೆ, ಇಷ್ಟು ದಿನಗಳ ವರೆಗೆ ಬದುಕಿ ಉಳಿದ ಪೈರು ರೈತರ ಕೈಸೇರುವದು.

ಕಳೆದ ಗುರುವಾರ ತಾ ೧೭ನೇ ಮುಂಜಾವಿಗೆ ತಾಲೂಕ ಕಚೇರಿಯಲ್ಲಿ ಮಾಮಲೇದಾರರ ನಿಮಂತ್ರಣದ ಮೇರೆಗೆ ನಿರಾಶ್ರಿತರ ದುಃಖನಿವಾರಣಕ್ಕಾಗಿ ಕೂಡಿದ ಸಭೆಯಲ್ಲಿಯೇ ಸುಮಾರು ೩೫೦ ರೂಪಾಯಿಗಳ ಅಂಕಣಿಗಳು ಬಿದ್ದವು. ಇನ್ನೂ ವಸೂಲಿ ಕ್ರಮವು ನಡೆದದೆ. ಮಾಮಲೇದಾರರು ಊರಕೇರಿ ಅತ್ತಕಡೆಗೆ ಮುಕ್ಕಾಮು ಮಾಡಿ, ಮರಳಿರುವರು. ವಸೂಲಿಯ ಬಗ್ಗೆ ಊರವರ ಒಂದು ಕಮಿಟಿಯನ್ನು ನೇಮಿಸಿರುವರು.

ಕಳೆದ ೧೮ನೇ ತಾರೀಖಿಗೆ ಕಾಂಗ್ರೆಸ ಕಮಿಟಿಯ ತರ್ಫೆನಿಂದ ನಿರಾಶ್ರಿತರ ದುಃಖನಿವಾರಣ ದುಂಡಳವು ಸ್ಥಾಪಿತವಾಗಿದೆ. ಅಕ್ಕಿ ನಗದಿಯಿಂದ ಸುಮಾರು ೧೦೦ ರೂಪಾಯಿ ವಸೂಲಾಗಿವೆ. ದೀವಗಿಯಲ್ಲಿ ನಿರಾಶ್ರಿತರಾದ ಕೆಲವರಿಗೆ ಈಗ ದಿನಾ ೧ ಪಡಿಯಂತೆ ಅಕ್ಕಿ ಹಂಚುವ ವ್ಯವಸ್ಥೆ ಆಗಿದೆಯಂತೆ.

ದೀವಗಿ ಗ್ರಾಮದಲ್ಲಿ ಮನೆಮಾರು ಕಳಕೊಂಡವರ ಸಂಖ್ಯೆ ೪೯, ಮಾಣಕೋಣ ಗ್ರಾಮದಲ್ಲಿ ೫೧. ಇವರಿಗೆ ೨ ತಿಂಗಳ ತನಕ ಸಂರಕ್ಷಿಸುವದು ಅಗತ್ಯವಿರುವದೆಂತಲೂ, ಅದರ ಬಗ್ಗೆ ೧೪೦೦ ರೂಪಾಯಿ ತಗಲುವದೆಂತಲೂ, ಮನೆಗಳ ತಿದ್ದುಪಡಿಗೆ ೫೦೦ ಹಿಡಿದರೆ, ಅಂತು ೧೯೦೦ ರೂಪಾಯಿ ಅವಶ್ಯವಿರುವದೆಂತಲೂ ಕಾಂಗ್ರೆಸ ಕಮಿಟಿಯಿಂದ ತಿಳಿದುಬರುತ್ತದೆ. ಹೆಗಡೆಯಲ್ಲಿಯೂ ೧೫-೨೦ ಮನೆಗಳು ನೆರೆಯ ಪಾಲಾದವು. ಅಲ್ಲಿಯೂ ಒಂದು ಸ್ಥಾನಿಕ ದುಃಖನಿವಾರಣ ಮಂಡಳದ ಏರ್ಪಾಟಾಗಿದೆ.

ಕರ್ನಾಟಕ ಪ್ರಾಂತಿಕ ಪರಿಷತ್ತನ್ನು ೧೯೨೪ ನೇ ಇಸವಿಯ ಫೆಬ್ರುವರಿ ತಿಂಗಳಿನಲ್ಲಿ ನೆರಿಸುವದಿದ್ದರೆ, ಇಲ್ಲಿ ಪರಿಷತ್ತಿನ ವ್ಯವಸ್ಥೆ ಮಾಡಲು ತಾವು ತಯಾರಿದ್ದೇವೆಂದು ಇಲ್ಲಿಯ ತಾ। ಕಾಂ। ಕಮಿಟಿಯವರು ಜಿಲ್ಹಾ ಕಾಂಗ್ರೆಸ ಕಮಿಟಿಗೆ ತಿಳಿಸಿರುವರು.

ಗೋಕರ್ಣದಲ್ಲಿ ಬೆಂಚು ಕೋರ್ಟಿನ ಧಟಿಸ್ಥಾಪನೆ ಮಾಡಲು ದಿವಬಹಾದ್ದೂರ ಕೊಡುಕುತ್ತೂರರವರು ಶಿಫಾರಸು ಮಾಡಿರುವರೆಂದು ತಿಳಿಯುತ್ತದೆ. ಕಾಯಂ ಮ್ಯುನಿಸಿಪಾಲಿಟಿಯ ಸ್ಥಾಪನೆಯ ಆಪತ್ತಿನಿಂದ ಬಳಲುವ ಗೋಕರ್ಣಸ್ಥರ ಮೇಲೆ ಇನ್ನೊಂದು ಆಪತ್ತು ಬರುವ ಲಕ್ಷಣಗಳು ತೋರುತ್ತಿವೆ.

ಗೋಕರ್ಣದೊಳಗಿನ ಪೋಲೀಸರು ಉದ್ಯೋಗಿಗಳಾಗಿರುವರು. ಮಾರ್ಗದ ಮೇಲೆ ಅಡ್ಡಾಡುವ ದನಕರುಗಳನ್ನು ದೊಡ್ಡಿಯಲ್ಲಿ ಹಾಕಿ, ಅವನ್ನು ಬಿಡಿಸಿಕೊಂಡು ಹೋದ ಮೇಲೆ, ಮಾಲೀಕರಿಗೆ ಪೋಲೀಸ ಆಕ್ಟಿನನ್ವಯ ಬಟ್ಟೆ ಮಾಡಿಕೊಟ್ಟಿರುವರು. ಹಿಡಿಗೇಡಿ ಪೋಲೀಸರಿಗೆ ಏನಾದರೂ ಧಂದೆ ಬೇಕು.

ಸಾಭಾರ ಸ್ವೀಕಾರ.

ಸುಧಾರಕ— ತ್ರೈಮಾಸಿಕ. ಜುಲೈ ತಿಂಗಳಿನ ಸಂಚಿಕೆ. ಸಂಪಾದಕ — ಆರ್. ಕೇ. ನಾಯಕ ಬಿ. ಎ., ಪ್ರಕಾಶಕ — ವೆಂಕಟರಮಣ ಪರಮೇಶ್ವರ ಗಾಂವಕರ. ವಾರ್ಷಿಕ ವರ್ಗಣಿ ಅಂಚೆ ವೆಚ್ಚ ಸೇರಿ ರೂ. ೧-೬-೦.

ವಿಂಧ್ಯಾಚಲ— ಪ್ರಥಮ ಖಂಡ. ಲೇಖಕ.— ಗೋ. ಪ. ಹೊಸೂರ, ಸಂಪಾದಕ ಮತ್ತು ಪ್ರಕಾಶಕ — ನಾರಾಯಣರಾವ ಹೊಸೂರ, ವಿದ್ಯಾರಣ್ಯ ಗ್ರಂಥಮಾಲೆ, ಆನಂದವನ,-ಅಗಡಿ. ಬೆಲೆ ೧೨ ಆಣೆ.

ಕಾರವಾರ— ಮಘಾ ಮಳೆಯು ಚಲೋ ರೀತಿಯಿಂದ ಸುರಿಯುತ್ತಿದೆ. ಇಷ್ಟರಿಂದಿಗೆ ಸುಮಾರು ೧೧೦ ಇಂಚು ಮಳೆಯಾಯಿತು.

ಇಲ್ಲಿ ಹೊನ್ನಾವರ ಅತ್ತಕಡೆಯ ನಿರಾಶ್ರಿತರ ದುಃಖನಿವಾರಣಕ್ಕಾಗಿ ಒಂದು ಕಮಿಟಿಯನ್ನು ಏರ್ಪಡಿಸಿ, ನಿಧಿಯನ್ನು ಕೂಡಿಸುವ ಕ್ರಮ ನಡೆದದೆ. ಪೇಟೆಯಲ್ಲಿ ಸುಮಾರು ೪೫೦ ರೂಪಾಯಿಗಳು ಕೂಡಿದವು. ಕೋಡೀಬಾಗ-ನಂದನಗದ್ದೆಯಲ್ಲಿ ೧೫೦ ರೂಪಾಯಿಗಳು ಕೂಡಿದವು. ಹ್ಯಾಸ್ಕೂಲಿನ ವಿದ್ಯಾರ್ಥಿಗಳೂ, ಶಿಕ್ಷಕರೂ ಅಷ್ಟೇ ರಕಮನ್ನು ಕೂಡಿಸಿದರು. ಹಿಂದೂ ಶಾಳೆಯವರು ೩೦ ರೂಪಾಯಿಗಳನ್ನು ಕೂಡಿಸಿರುವರು. ಮುಂಬಯಿಯಿಂದ ಗುಜರಾಥಿ ಗೃಹಸ್ಥರೊಬ್ಬರು ೧೦೧ ರೂಪಾಯಿಗಳನ್ನು ತಂತಿದ್ವಾರಾ ರವಾನಿಸಿರುವರು. ಇತ್ತ ಸ್ತ್ರೀಯರೂ ಸ್ವತಂತ್ರವಾಗಿ ವಂತಿಗೆಯನ್ನು ಕೂಡಿಸುತ್ತಿರುವರು. ಬಡಬಿಯೊಳಗಿನ ಕಷ್ಟನಿವಾರಣಾನಿಧಿಗೂ ೨೫ ರೂಪಾಯಿಗಳು ಕೂಡಿದವು. ಸ್ತ್ರೀಯಳೊಬ್ಬಳು ೨೫ ರೂಪಾಯಿಗಳನ್ನು ಅಲ್ಲಿ ರವಾನಿಸಿರುವಳೆಂದು ಸುದ್ದಿಯಿದೆ. ಅಂತು ಹೊನ್ನಾವರ ತಾಲೂಕಿನೊಳಗಿನ ನಿರಾಶ್ರಿತರ ದುಃಖನಿವಾರಣಕ್ಕಾಗಿ ಕಾರವಾರ ತಾಲೂಕಿನಲ್ಲಿ ಇಷ್ಟರಿಂದಿಗೆ ೨೦೦೦ ರೂಪಾಯಿಗಳು ಕೂಡಿರುತ್ತವೆ.

ಸುಂಕೇರಿ— ವಾಡಿಕೆಯಂತೆ ಅಲ್ಲಿ ತಾ ೧೮ ನೇ ಸಾಯಂಕಾಲ ಹಿಂದೂ-ಮುಸಲಮಾನರು ಕೂಡಿ ರಾಷ್ಟ್ರಗೀತ, ಪುರಸ್ಕಾರ ಸ್ತುತಿ ಇವುಗಳಿಂದ ಯುಕ್ತವಾದ ಭಜನೆ ಮಾಡಿ, ಗಾಂಧೀ ದಿನವನ್ನು ನೆರವೇರಿಸಿದರು. ನಂತರ ನಮ್ಮ ತಾಲೂಕಾ ಖಾದೀ ಬೋರ್ಡಿನ ಮಾರ್ಗದಿಂದ ಸುಂಕೇರಿ ಆಧಿಯಾಗಿ ಹಳ್ಳಿಗಳಲ್ಲಿ ಹೊಸದಾಗಿ ದೊಡ್ಡ ಪ್ರಮಾಣದ ಮೇಲೆ ಕೈಮಗ್ಗಗಳ ಪ್ರಸಾರವನ್ನು ಸುವ್ಯವಸ್ಥಿತವಾಗಿ ಮಾಡುವದನ್ನು ನಿಶ್ಚಯಿಸಿ, ಮೊದಲು ಈ ಕೆಲಸವನ್ನು ಸುಂಕೇರಿಯಲ್ಲಿಯೇ ಆದಷ್ಟು ಬೇಗನೇ ಪ್ರಾರಂಭಿಸಬೇಕೆಂತ ಠರಾಯಿಸಲಾಯಿತು.

— ತಾ। ಪರದ ಇಕಲು ನಾಯಕರವರಿಗೆ ಮದರಾಜೈಲಿನಲ್ಲಿಟ್ಟಿರುವರು. ಅವರಿಗೆ ಜೈಲಿನಲ್ಲಿ ಹಲವು ಗೋದಿಗಳನ್ನು ಪೂರೈಸದೇ ಕಾಡುತ್ತಿರುವರು. ಡಾಕ್ಟರರಿಗೆ ಒಂದು ವಾರದಿಂದ ರಾಗಿ ಬೀಸಲು ಹಚ್ಚಿರುವರು. ನಾಲ್ಕು ದಿನಗಳ ವರೆಗೆ ಅವರು ಉಪವಾಸವಿದ್ದರೆಂದು ಕೇಳುವದರಿಂದ ೧೮ನೇ ತಾರೀಖಿಗೆ ಬಂದ ತಂತಿ ಮೇಲಿಂದ ತಿಳಿಯುತ್ತದೆ. ಅವರಿಗೆ ಬೊಲಸು ಅರಿವೆಗಳನ್ನು ಕೊಟ್ಟಿದ್ದಾರೆ. ವಾರಕ್ಕೊಮ್ಮೆ ಅವನ್ನು ತೊಳೆಯಬೇಕಂತೆ! ಈ ಪ್ರಕಾರ ಡಾಕ್ಟರರಿಗೆ ಪಾಡನ್ನು ಬೇಡಹೆಚ್ಚಲು ಜೈಲು ಅಧಿಕಾರಿಗಳು ಹವಣಿಸುತ್ತಾರೆ. ಡಾಕ್ಟರರ ಪತ್ನಿಯವರು ಜೈಲಿನ ಇನ್ಸಪೆಕ್ಟರ ಜನರಲ್‌ರಿಗೆ ತಂತಿ ಮಾಡಿ, ಈ ಪಂಡು ನಡತೆಯಿಂದ ಗಂಡಾಂತರ ಒದಗಿದರೆ, ಸರಕಾರವು ಜವಾಬುದಾರವಾಗುವದೆಂದು ಸರಕಾರಕ್ಕೆ ಎಚ್ಚರಿಕೆ ಕೊಟ್ಟಿರುವರು.

ದುಃಖನಿವಾರಣಾ ಕಮಿಟಿಗಳು.

(ಲೇಖಕ— ಪ್ರೇಕ್ಷಕ.)

ನಮ್ಮ ಜಿಲ್ಲೆಯಲ್ಲಿ ನೆರೆಯ ಹಾವಳಿಗೆ ಸಿಲಿಕಿದ್ದು, ನಿರಾಶ್ರಿತರಾದವರ ಬಗ್ಗೆ ಜಿಲ್ಹಾ ಕಾಂಗ್ರೆಸ ಕಮೀಟಿಯವರೂ, ಜಿಲ್ಹಾಧಿಕಾರಿಗಳೂ ಯತ್ನ ಮಾಡುತ್ತಿರುವದನ್ನು ನೋಡಿ, ನನಗೆ ಸಂತೋಷವಾಗುತ್ತದೆ. ಜಿಲ್ಹಾ ಕಾಂಗ್ರೆಸ ಕಮೀಟಿಯವರು ತಮ್ಮ ತಮ್ಮ ತಾಲೂಕಾ-ಗ್ರಾಮ ಕಮೀಟಿಗಳ ಮುಖ್ಯಸ್ಥಾನ ನಿರಾಶ್ರಿತರಾದವರ ಚೌಕಶಿ ನಡಿಸಿ, ಅವರಿಗೆ ತಗಲಿದ ಕಷ್ಟ-ನಷ್ಟಗಳ ಯಾದಿಯನ್ನು ತಯಾರು ಮಾಡುತ್ತಿರುವರು. ಹೊನ್ನಾವರ ಅಷ್ಟ ಕಡೆಯಲ್ಲಿ ೫೦೦–೬೦೦ ವರೆಗೆ ಮನೆಗಳು ಪೂರ್ಣವಾಗಿ ನಾಶವಾಗಿರುವವೆಂತಲೂ, ಇನ್ನು ೬೦೦ ಮನೆಗಳು ಅರ್ಧ ನಾಶಹೊಂದಿರುವವೆಂತಲೂ ತಿಳಿಯುತ್ತದೆ. ಲುಕ್ಸಾನಿನ ರಕಮು ಸುಮಾರು ಅರ್ಧ ಲಕ್ಷವಾದೀತೆಂದು ಅಂದಾಜಾಗಿದೆ. ಈ ತಾಲೂಕಿನ ಊರಕೇರಿ, ಗೋಕರ್ಣ, ಮಾವಿನಕುರ್ವೆ(?), ಹೆಗಡೆ, ಉಪ್ಪಿನಪಟ್ಟಣ, ಮೊದಲಾದ ಗ್ರಾಮಗಳಲ್ಲಿ ವಿಶೇಷ ಹಾನಿಯಾದ ಸುದ್ದಿಗಳಿವೆ. ಇನ್ನು ನಿಶ್ಚಿತ ಲುಕ್ಸಾನು ಪೂರ್ಣ ತಿಳಿಯಲಿಲ್ಲ. ನೆರೆಯಿಂದ ಧಕ್ಕೆ ಪಡೆದವರು ಕಲಕೊಂಡು ನಿರಾಶ್ರಿತರಾದವರ ಚೌಕಶಿ ಮಾಡಿ, ಅವರಿಗೆ ಸಹಾಯವನ್ನೀಯುವದು ಈ ಕಮೀಟಿಗಳ ಚಾಲಕರ ಪ್ರಮುಖ ಕರ್ತವ್ಯವು. ಎರಡು ಮಂಡಳಗಳ ಮಿಶ್ರವಾದ ನಿವಾರಣೆಯ ಕಲಸವು ನಡೆಯುವದರಿಂದ, ಒಂದು ಮಂಡಳದಿಂದ ಸಹಾಯ ಸಿಕ್ಕಿದವರಿಗೇ ಇನ್ನೊಂದು ಮಂಡಳದಿಂದ ಸಹಾಯ ಸಿಗುವ ಭೀತಿಯಿದೆಂದು ಅನೇಕರು ತಿಳಿಯಬಹುದಾಗಿದೆ. ಈ ಭೀತಿಯು ನಿರಾಧಾರವಿದೆ ಯಾಕೆಂದರೆ, ಸಹಾಯವನ್ನೀಡುವವರು ಯಾವದೆ ಮಂಡಳದವರಿರಲಿ, ಅವರು ಸ್ಥಾನಿಕ ಗೃಹಸ್ಥರಿರುವದರಿಂದ, ಸಹಾಯ ಸಿಕ್ಕಿದವರಿಗೇ ಪುನಃ ಎರಡನೇ ಮಂಡಳದಿಂದ ಮದ್ದತ್ತು ಸಿಗಲಾರದು. ಸಿಗುವ ಸಂಭವವು ತೀರ ಕಡಿಮೆ ಮತ್ತು ಎರಡೂ ಮಂಡಳಗಳು ಎಷ್ಟು ನಿಧಿಯನ್ನು ಕೂಡಿ ಹಂಚಿದರೂ, ಅದು ನಿರಾಶ್ರಿತರ ದುಃಖವಿಮೋಚನವನ್ನು ಪೂರ್ಣವಾಗಿ ಪರಿಹರಿಸಲು ಸಮರ್ಥವಾಗಲಾರವು ಎರಡು ಮಂಡಳಗಳಿರುವದರಿಂದ, ಸ್ಪರ್ಧೆ ಹುಟ್ಟಿ, ನಿರಾಶ್ರಿತರಿಗೆ ಹೆಚ್ಚು ಆಶ್ರಯ ಸಿಗುವ ಸಂಭವವಿದೆ. ಆದರಿಂದ, ನಮ್ಮಲ್ಲಿಯ ಮುಂದಾಳುಗಳು ಮಧ್ಯವರ್ತಿ ಕಮಿಟಿಯ ಗೋಜಿಗೆ ಹೋಗದೆ, ತಮ್ಮ ಪಕ್ಷಕ್ಕೆ ನಿರಾಶ್ರಿತರಿಗೆ ಸಹಾಯವನ್ನೀಯಲು ದುಡಿಯತಕ್ಕದ್ದು. ಈಗ ಬೇಗನೇ ಸಹಾಯವನ್ನೀಯುವದು ಅವಶ್ಯವು. ಮಧ್ಯವರ್ತಿ ಮಂಡಳದ ಏರ್ಪಾಟಿನಲ್ಲಿ ಕಾಲಹರಣವಾದರೆ, ನಿರಾಶ್ರಿತರು ಬಳಲುವರು. ನಾಗರಿಕರೆಲ್ಲರೂ ಆಯಾ ನಿಧಿಗಳಿಗೆ ಶಕ್ತಿಮೀರಿ, ಶೀಘ್ರವೇ ಸಹಾಯವನ್ನೀಡಿ, ದೇಶಬಾಂಧವರಿಗೆ ಸಲಹಿದ ಪುಣ್ಯ ಸಂಪಾದಿಸಬೇಕಾಗಿ ವಿಜ್ಞಾಪಿಸುವೆನು.

— ಬಂಗಾಲ ಪ್ರಾಂತದಲ್ಲಿ ೨ ಲಕ್ಷ ೨೩ ಸಾವಿರ ಎಕರೆ ಭತ್ತದ ಗದ್ದೆಗಳು ನೆರೆ ಬಂದು ನಾಶವಾದವು. ಒಂದು ಪಟ್ಟಣದಲ್ಲಿ ೯,೨೦೦ ಮನೆಗಳಿದ್ದವು. ಅದರಲ್ಲಿ ೪,೨೦೦ ಮನೆಗಳು ನಾಮಶೇಷವಾದವು. ಅನೇಕ ಮನೆಗಳು ನೀರು ತುಂಬಿ ಜರ್ಜರಿತವಾಗಿವೆ. ೧॥ ಲಕ್ಷ ಜನರಿಗೆ ಸಹಾಯ ಸಿಗುವ ವ್ಯವಸ್ಥೆಯಾಗಿದೆ.

“ಹಳದೀಪುರ ಮಹಾಪೂರಿನಿಂದ ಶ್ರೀಷ್ಠತ್ವ ಗಳಿಸುವ ಬಗೆ.”

ಇದೇ ತಿಂಗಳ ೬, ೮ನೇ ತಾರೀಖುಗಳಲ್ಲಿ ಈ ಊರಲ್ಲಿ ಮಹಾಪೂರು ಬಂದು, ನೂರಾರು ಮನೆಗಳು ನೆಲಸಮವಾಗಿ ಸಾವಿರಾರು ರೂಪಾಯಿಗಳ ಲುಕ್ಸಾನು ಸಂಭವಿಸಿ, ಸಾವಿರಗಟ್ಲೆ ಜನರು ನಿರಾಶ್ರಿತರಾದ ಸಂಗತಿ ತಾವೆಲ್ಲರು ಈ ಮೊದಲೇ ಓದಿರುವಿರಷ್ಟೇ. ಈ ಮಹಾಪೂರಿನಿಂದ ಈ ಊರೊಳಗಿನ ಕಲ್ಲಕಟ್ಟು, ಬಡಗಣಿ, ಅಗ್ರಹಾರ, ಜೋಗ್ರಕೆ, ಚಿಟ್ಟೆಗಜನಿ, ಕಾಲಮನಿ, ಸೋಮನ ಬೆಟ್ಟ, ಆರಮನೆಕೇರಿ, ತಾರಿಬಾಗಿಲ ಇತ್ಯಾದಿ ವಾಡೆಯೊಳಗಿನ ಒಕ್ಕಲತನದಿಂದ ಜೀವಿಸುವ ಹಾಲಕ್ಕಿ ಒಕ್ಕಲ, ನಾಡಧಾರಿ ಹಾಗು ಕೂಲಿಕಷ್ಟ ಮಾಡುವ ಮುಕ್ರಿಜಾತಿಗಳ ಮನೆಮಾರುಗಳು ವಿಶೇಷವಾಗಿ ನಾಶವಾಗಿರುವವು. ಮೊದಲಿನ ಮೂರು ವಾಡೆಗಳ ಜನರಿಗೆ, ಎತ್ತರವಾದ ಸ್ಥಳ. ದಾಜವರ್ಗ ಸಹ ಲಗತವಿದ್ದದರಿಂದ, ಮಹಾಪೂರು ಬಂದ ಕೂಡಲೆ, ತಾರಿಯ ಹಾಗು ಬಡಗಣಿ ದಾಮ ಹೆಗಡೆಯವರ ದೋಣಿಗಳ ಸಹಾಯ ದೊರೆತದ್ದರಿಂದ, ವಿಶೇಷ ಆಯಾಸವಿಲ್ಲದೆ, ಸಂಕಟದಿಂದ ಪಾರಾದರು. ಇವರೊಳಗೆ ಅಗ್ರಹಾರ ಮಿ. ವಿಷ್ಣು ಗೋಪಾಲ ಸಭಾಹಿತರ ಭೂಮಿ ಸಾಗುವಳಿ ಮಾಡುವ ರೈತರು, ಹಿತ್ತಲಲ್ಲಿ ವಾಸಿಸುವ ಒಕ್ಕಲು, ಹೊಲದಲ್ಲಿ ಕೂಲಿ ಮಾಡುವ ಜನರೇ ವಿಶೇಷವಾಗಿದ್ದರು. ಕಾರಣ ಅವರಿಗೆ ತಮ್ಮ ಪರಿಯಿಂದ ಗತ್ಯಂತರವಿಲ್ಲದೆ ಸಹಾಯ ಮಾಡುವ ಪ್ರಸಂಗ ಬಂತು

ಆದರೆ, ಉಳಿದ ವಾಡೆಗಳೊಳಗಿನ ಮನೆಮಾರುಗಳು ಎತ್ತರವಾದ ಸ್ಥಳದಿಂದ ದೂರ ಇದ್ದವು. ಇಷ್ಟೇ ಅಲ್ಲ, ಮಹಾಪೂರಿನಿಂದ ಪೀಡಿತರಾದ ಜನರ ಎರಡು ಮೂರಾಂಶ ಜನರು ಇವೇ ವಾಡೆಗಳಲ್ಲಿದ್ದರು. ಮಹಾಪೂರಿನಿಂದ ಸಂಕಟಪಟ್ಟಿದ್ದ ಈ ಜನರ ಕಣ್ಣೀರು ಊರೊಳಗೆ ಹಬ್ಬಲು, ಪಾಟೀಲರು, ಹಾಗು ಮಿ. ಹನುಮಂತ ಪದ್ಮನಾಭ ಶ್ಯಾ, ಮಿ. ನರಸಿಂಹ ಪಟ್ಟಾಭಿರಾಮ ಭಟ್ಟ, ಮಿ. ಮೂಡಲಗಿರಿ ಗೋಪಾಲ ಕಾಮತ, ಮಿ. ದೇವಪ್ಪಾ ಅಚ್ಯುತ ಪ್ರಭು, ಮಿ. ನಾರಾಯಣ ಅಣ್ಣಾ ಶ್ಯಾ, ಮಿ ಅಚ್ಯುತ ರಾಮ ಶ್ಯಾ, ಮಿ ಹನುಮಂತ ಸುಬ್ರಾಯ ಶೆಟ್ಟಿ, ಮಿ ಸುಬ್ರಾಯ ರಾಮಣ್ಣ ನಾಯ್ಕ, ಮಿ ಮಹಮ್ಮದ ಸಾಲ್ಯಾವ, ಮಹಮ್ಮದ ಸುಲೇಮಾನ, ಮಿ. ಅಬ್ದುಲ್ ರಹಿಮಾನ, ಮಿ. ಮುಬಾರಖಾನ ಹಾಗು ಮಿಕನ್ ಸಾಬ ಹ ಮಾಸ್ತರ ಇತ್ಯಾದಿ ಸದ್ಗೃಹಸ್ಥರು ದೋಣಿಗಳನ್ನು ತಕ್ಕೊಂಡು ಈ ಜನರಿದ್ದೆಡೆಗೆ ಹೋಗಿ, ಅವರನ್ನು ತಂದು ಸುರಕ್ಷಿತವಾದ ಸ್ಥಳಕ್ಕೆ ಇಳಿಸಿದ್ದಲ್ಲದೆ, ಅವರ ಸಾಮಾನುಗಳಲ್ಲವಾದರೂ ಕೆಲವಷ್ಟಿಗೆ ಬಚಾವ ಮಾಡಿದರು. ಊರೊಳಗಿನ ಎಷ್ಟೋ ಜನರು ನಿರಾಶ್ರಿತರಾದ ಈ ಜನರಿಗೆ ತಮ್ಮ ಮನೆಯಲ್ಲಿ ಆಶ್ರಯ ಕೊಟ್ಟದ್ದಲ್ಲದೆ, ಒಂದೆರಡು ದಿವಸ ಹೊಟ್ಟೆಗೆ ಸಹ ಹಾಕಿರುವರು

ವಸ್ತುಸ್ಥಿತಿಯು ಹೀಗಿರುತ್ತ, ವೃತ್ತಪತ್ರದಲ್ಲಿ ಈ ಜನರ ಜೀವವನ್ನು ಉಳಿಸಿದವರೂ, ಸಹಾಯ ಮಾಡಿದವರೂ, ಮಿ. ವಿಷ್ಣು ಸಭಾಹಿತ, ಮಿ ರಾಮ ಹೆಗಡೆ. ಮಿ ಪಟೇಲ ಸಭಾಹಿತ ಈ ತ್ರಿಮೂರ್ತಿಗಳೇ ಎಂದು ಉಲ್ಲೇಖವುಂಟು. ಇದರಲ್ಲಿ ಮೊದಲಿನ ಈರ್ವರು ಕಾಂಗ್ರೆಸ ಕಮಿಟಿಯ ಚೇರಮನ್, ಸೆಕ್ರೆಟರಿಗಳಿರುವದರಿಂದ ಕಾಂಗ್ರೆಸ ಕಮಿಟಿಯಿಂದ ಸಿಗುವ ಮದ್ದತು ಸಹ ಬಂದನೇ ಕಲಮಿನಲ್ಲಿ ನಮೂದ ಮಾಡಿದ ಹಾಲಕ್ಕಿ ಒಕ್ಕಲ ಜನರಿಗೆ ಬಹುತರವಾಗಿ ದೊರೆಯಿತು.

ಇಷ್ಟೇ ಅಲ್ಲ, ನಿನ್ನೆ ೧೯ನೇ ತಾರೀಖಿನ ದಿವಸ, ಮಹಾಪೂರಿನಿಂದ ಕಷ್ಟಪಟ್ಟ ಜನರ ಭಾವಚಿತ್ರಗಳನ್ನು ತಕ್ಕೊಳ್ಳುವಾಗ ಸಹ, ಈ ವಾಡೆಗಳೊಳಗಿನ ಜನರೇ ಇದ್ದರು ಇಂಥ ಕಾಲದಲ್ಲಿ ದೋಣಿಗಳನ್ನು ತೆಗೆದು ಸಾಹಸ ಮಾಡಿದ ಜನರ ಫೋಟೋಗಳನ್ನು ತಕ್ಕೊಳ್ಳುವಾಗ ಸಹ ಕೇವಲ ಈ ವಾಡೆಯ ಜನರನ್ನು ಮಾತ್ರ ಕರಸಿದ್ದರು. ವ್ಯಾಖ್ಯಾನ ಕೊಡುವಾಗ ವ್ಯಾಖ್ಯಾತರು ಸಹ ಸಭಾಹಿತ-ಹೆಗಡೆಯವರ ವರ್ಣನೆಯನ್ನು ಮಾಡಿದ್ದರು

ಆದ್ದರಿಂದ, ಇನ್ನು ಮುಂದೆ ಇದೇ ರೀತಿ ಪಕ್ಷಪಾತವಾಗದಂತೆ, ಶ್ರೀ ಅಗ್ರಹಾರ ಗಜಾನನು ಇವರಿಗೆ ಬುದ್ಧಿಯನ್ನೀಯಲೆಂದು ಪ್ರಾರ್ಥಿಸುವೆವು.

ಈ ಸಂಗತಿಯನ್ನು ಕುರಿತು ಅಗ್ರಹಾರದಲ್ಲಿ ಕೂಡಿದ ಡಿ। ಕಾಂಗ್ರೆಸ ಕಮಿಟಿಯವರಿಗೆ ಅರ್ಜಿದ್ವಾರಾ ವಿನಂತಿಸಿರುವೆವು

ಹಳದೀಪುರ. ತಾ ೨೦-೮-೩೩ } ಸತ್ಯಪಕ್ಷಪಾತಿಗಳು.

[*.* ಸತ್ಯಪಕ್ಷಪಾತಿಗಳಿಗೆ, ಸತ್ಯನಿವೇದನೆಗೆ ಇಂಬು ಗೊಡಬೇಕೆಂದು ಅವರ ಪತ್ರವನ್ನು ಇದ್ದಕ್ಕಿದ್ದ ಹಾಗೆಯೇ ಮೇಲೆ ಪ್ರಕಟಿಸಿರುವೆವು. ಅಗ್ರಹಾರದ ಶ್ರೀ ಸಭಾಹಿತರೂ, ಬಡಗಣಿ ರಾಮ ಹೆಗಡೆಯವರೂ ತಮ್ಮ ಕೈ ತರಾಗಸೊಲ್ಲರೇಕೆ ? ಅವರನ್ನು ಬದುಕಿಸಲು ಯತ್ನಿಸಿದರೆಂಬುದಕ್ಕೆ ಸತ್ಯಪಕ್ಷಪಾತಿಗಳ ಒಪ್ಪಿಗೆಯಿದೆ. ಪಟೇಲ, ಶ್ರೀ ಹನುಮಂತ ಶ್ಯಾ ಮೊದಲಾದವರು ಈ ಬಗ್ಗೆ ನಿರಪೇಕ್ಷ ಬುದ್ಧಿಯಿಂದ ಸಾಹಸ ಮಾಡಿ, ಹಲವರನ್ನು ಬದುಕಿಸಿದ ಬಗ್ಗೆ ಅಖಿಲ ಹಳದೀಪುರಸ್ಥರೂ ಋಣಿಗಳಾಗಿರುವರು. ಅವರ ಉಲ್ಲೇಖವನ್ನು ಕಾಂಗ್ರೆಸಿನ ಚಾಲಕರು ಮಾಡಿ, ಅವರ ಉಪಕಾರ ಎಣಿಸುವದೂ ವಿಹಿತವಿತ್ತು. ಆದರೆ, ಅವರ ನಾಮನಿರ್ದೇಶಮಾಗದ್ದರಿಂದ, ಅವರು ಮಾಡಿದ ಸೇವೆಯೇನು ನಿರರ್ಥಕವಾಗದು. ವೃತ್ತಪತ್ರಗಳ ಜಾಹೀರಾತಿಗಾಗಿ, ಜಾಹೀರ ಸಭೆಯೊಳಗಿನ ಉಲ್ಲೇಖಕ್ಕಾಗಿ ಅವರೇನು ದುಡಿದಿಲ್ಲವೆಂದು ಸತ್ಯಪಕ್ಷಪಾತಿಗಳೇ ಒಪ್ಪಬೇಕು. ಅಂದ ಮೇಲೆ, ಆ ಬಗ್ಗೆ ಚರ್ಚೆ ಏಕೆ?

ಸಂಪಾದಕ, ಕಾ ವೃ.]

ವೃತ್ತಸಾರ.

— ವಿಜಾಪುರದ ರಾಷ್ಟ್ರಸೇವಕರಾದ ಶ್ರೀ ನಾರಾಯಣರಾವ ಕಳದ ರವಿವಾರ ತಾ. ೧೮ನೇ ರಾತ್ರಿ ನಿಧನ ಹೊಂದಿದರು. ಕೈಲಾಸವಾಸಿಗಳು ಶ್ರೀಮಂತ ಗುರ್ಜರ ಕುಟುಂಬಸ್ಥರಿದ್ದು, ವಿದ್ಯಾರ್ಥಿಸಂಘರೆಂದು ಖ್ಯಾತಿಗೊಂಡವರು ಇವರು ೫೦ ವರ್ಷಕ್ಕೆ ಮೀರಿದ ಮುದುಕರಾಗಿದ್ದರೂ, ಕಾಂಗ್ರೆಸ ಸ್ವಯಂಸೇವಕರ ಪಟದಲ್ಲಿ ಹೆಸರನ್ನು ದಾಖಲ ಮಾಡಿಕೊಂಡವರಲ್ಲಿ ಇವರು ಮೊದಲನೇಯವರು ಶ್ರೀ ಶ್ರೀನಿವಾಸರಾವ ಕೌಜಲಗಿಯವರ ಗೈರಹಾಜರಿಯಲ್ಲಿ ಕಾಂಗ್ರೆಸ ಕಾರ್ಯವನ್ನು ಇವರು ನಿಷ್ಠೆಯಿಂದ ನಡಿಸಿದರು ಶ್ರೀನಿವಾಸರಾಯರು ಬಿಡುಗಡೆ ಹೊಂದಿದ ಬಳಿಕ ಅವರಿಗೆ ಕಾಂಗ್ರೆಸ ಕಾರ್ಯವನ್ನು ವಹಿಸಬೇಕೆಂದು ಅವರ ಕಾಂಕ್ಷೆಯಿತ್ತು ಕೌಜಲಗಿಯವರು ನಾಳೆ ೨೪ನೇ ಶುಕ್ರವಾರಕ್ಕೆ ಬಿಡುಗಡೆ ಹೊಂದುವರು ೫ದಿವಸ ಮುಂಚಿತವಾಗಿಯೇ ಅವರು ಪರಲೋಕವಾಸಿಯಾದದ್ದು ಶೋಚನೀಯವು.

— ಪಂಡಿತ ಮದನ ಮೋಹನ ಮಾಲವೀಯರ ಅಧ್ಯಕ್ಷತೆಯಲ್ಲಿ ಸೋಮವಾರ ತಾ ೨೧ನೇಯಿಂದ ಹಿಂದೂ ಮಹಾಸಭೆಯು ಕಾಶೀ ಕ್ಷೇತ್ರದಲ್ಲಿ ಪ್ರಾರಂಭವಾಗಿದೆ. ಈ ಸಭೆಯ ಧ್ಯೇಯವು ಹಿಂದೂ ಸಮಾಜವನ್ನು ಸುಸಂಘಟಿತ ಮಾಡಲು ಯಾವ, ಯಾವ ಯೋಜನೆಗಳನ್ನು ಕೈಕೊಳ್ಳಬೇಕೆಂಬುದನ್ನು ಚರ್ಚಿಸುವದು. ೫ ಸಾವಿರ ಪ್ರತಿನಿಧಿಗಳಿಗೆ ಸಾಕಾಗುವಷ್ಟು ಪ್ರಚಂಡ ಸಭಾಮಂಟಪವನ್ನು ನಿರ್ಮಿಸಿರುವರು. ಅಖಿಲ ಹಿಂದುಸ್ಥಾನದೊಳಗಿಂದ ಸಮಾಜದ ಮಹಾನುಭಾವರು ಕಾಶೀಕ್ಷೇತ್ರದಲ್ಲಿ ಏಕತ್ರಿತರಾಗಿರುವರು.

— ಬಾಳಿನ ಸೋಮವಾರಕ್ಕೆ ಅಲಹಾಬಾದದ ಮ್ಯುನಸಿಪಾಲಿಟಿಯು ರಾಷ್ಟ್ರೀಯ ಝಂಡಾ ಹಚ್ಚೆಯನ್ನು ಹಾರಿಸಿ, ಮುನಿಸಿಪಲ್ ಆಫೀಸಿಗೂ, ಶಾಲೆಗಳಿಗೂ ರಜೆ ಕೊಡುವರೆಂದು ಜಾಹೀರಾಗಿದೆ.

☞ ಈಹೊತ್ತಿನ ಪುರವಣಿ ನೋಡಿರಿ.

ಜಿಲ್ಲಾ ಕೊಂಗ್ರೆಸ್ ಕಮೀಟಿಯ ಠರಾವುಗಳು.

ತಾ ೧೯-೮-೨೩ನೇಗೆ ಸಾಯಂಕಾಲ ೫ ಕ್ಕೆ ಹಳಿಯಾಳದಲ್ಲಿ ಕೂಡಿದ ಮುಂದರಿಸಿದ ಜಿಲ್ಲಾ ಸಭೆಯ ಠರಾವುಗಳು —

ಒಟ್ಟಿಗೆ ೧೪ ಮಂದಿ ಮೆಂಬರರು ಹಾಜರಿದ್ದರು

(೧) ತಾಲುಕಾ ಕಮೀಟಿಗಳಿಂದ ಪ್ರಾಂತಿಕ ಪರಿಷತ್ತಿನ ವಿಷಯವಾಗಿ ಬಂದ ಪತ್ರಗಳನ್ನು ಓದಲಾಯಿತು ಈ ವರ್ಷ ಮಳೆ, ಸರಿಗಳ ಸಾವಳಿಯ ದ ಖಲಕ ಡಿಶಂಬರ ತಿಂಗಳ ಮೊದಲು ನಮ್ಮ ಜಿಲ್ಹೆಯಲ್ಲಿ ಎಲ್ಲಿಯೂ ಪ್ರಾಂತಿಕ ಪರಿಷತ್ತು ಕೂಡಿಸುವದು ಸಾಧ್ಯವಿಲ್ಲಾದ್ದರಿಂದ ಅದನ್ನು ಕುಮಟೆಯಲ್ಲಿ ಫೇಬ್ರುವರಿ ತಿಂಗಳಲ್ಲಿ ಕೂಡಿಸುವದಕ್ಕೆ ತಯಾರಿದ್ದೇವಾಗಿ ಕುಮಟಾ ತಾಲೂಕಾ ಕೊಂಗ್ರೆಸ್ ಕಮೀಟಿಯವರ ಆಮಂತ್ರಣವನ್ನು ಸ್ವೀಕರಿಸಲಾಯಿತು

(೨) ಅಖಿಲ ಭಾರತೀಯ ಕೊಂಗ್ರೆಸ್ ಕಮೀಟಿಯ ಮತ್ತು ಪ್ರಾಂತಿಕ ಕೊಂಗ್ರೆಸ್ ಕಮೀಟಿಯ ಸಭೆಗಳಿಗೆ ಹೋಗುವ ಮೆಂಬರುಗಳ ಪ್ರವಾಸದ ಖರ್ಚು ಕೊಂಗ್ರೆಸ್ ಕಮೀಟಿಯ ಫಂಡಿನಿಂದ ಕೊಡುವದು ಯೋಗ್ಯವಲ್ಲೆಂತ ಈ ಸಭೆಯ ಅಭಿಪ್ರಾಯವಿದೆ

(೩) ಈ ಜಿಲ್ಹೆಯಲ್ಲಿ ನೆರೆಯ ಹಾವಳಿಯಿಂದ ನಿರಾಶ್ರಿತರಾದ ಬಡ ಜನರಿಗೆ ಸಹಾಯ ಮಾಡುವ ಬಗ್ಗೆ ಧನ ಸಹಾಯ ಅಪೇಕ್ಷಿಸಿ ಜಾಹೀರ ವಿನಂತಿಪತ್ರಿಕೆ ಹೊರಡಿಸುವ ಕುರಿತು ಮತ್ತು ಅದರಿಂದ ಬಂದ ಹಣವನ್ನು ಯೋಗ್ಯ ರೀತಿಯಿಂದ ವಿನಿಯೋಗ ಮಾಡುವ ಕುರಿತು ಈ ಕೆಳಗಿನ ಮೆಂಬರುಗಳುಳ್ಳ ಒಂದು ಜಿಲ್ಹಾ ಪೋಟ ಕಮಿಟಿ ನೇಮಿಸಿರುತ್ತದೆ

೧ ಶ್ರೀ ಗೋಪಾಲರಾವ ಮಾಸೂರ ಅಧ್ಯಕ್ಷ
೨ „ ಮಂಜನಾಥ ಭಟ್ಟ ಕರ್ಕಿ
೩ „ ಕೃಷ್ಣ ವಾಸುದೇವ ಶ್ಯಾನಭಾಗ ಕೋಶಾಧ್ಯಕ್ಷ
೪ „ ಮಹಾಬಳೇಶ್ವರ ಪಾಂಡುರಂಗ ನಾಡಕರ್ಣಿ,
೫ „ ಶ್ರೀಪಾದರಾವ ಕಲ್ಯಾಣಪುರಕರ
೬ „ ಮಾಧವ ರಾಮ ಶ್ಯಾನಭಾಗ ಕಲಬಾಗ
೭ „ ಶಿವರಾವ ಶಿವರಾಮ ಶಾಸ್ತ್ರಿ ಕಾರವಾರ

(೫) ಹಳಿಯಾಳದಲ್ಲಿ ನೆರೆಬಂದ ವೇಳೆ ವಿಶೇಷ ಶ್ರಮಪಟ್ಟು, ತಮ್ಮ ಬಂಧುಗಳ ಜೀವವನ್ನು ಬದುಕಿಸಿದ ಬಗ್ಗೆ ಈ ಕೆಳಗಿನ ಜನರಿಗೆ ಅವರ ಕೆಲಸದ ಸ್ಮರಣಾರ್ಥವಾಗಿ ಅವರಲ್ಲಿ ಒಬ್ಬೊಬ್ಬನಿಗೆ ಬೆಳ್ಳಿಯ ಕಡಗ ೧ ಉಳಿದವರಿಗೆ ಒಂದೊಂದು ಕಂಬಳಿಯನ್ನು ಪಾರಿತೋಷಕವಾಗಿ ಕೊಡಬೇಕೆಂತಲೂ, ಆ ಬಗ್ಗೆ ರೂಪಾಯಿ ೩೦ನ್ನು ಜಿಲ್ಹಾ ಕಮೀಟಿಯ ಫಂಡಿನಿಂದ ಖರ್ಚು ಹಾಕಿ ಕೊಡಬೇಕೆಂತಲೂ ಠರಾಯಿಸಿತು.

೧ ಬಡೇ ಗೌಡಾ ಹನುಮಂತ ಗೌಡಾ (ಕಡಗ)
೨. ಶಿವು ಬಿನ್ ಶಿವ ಗೌಡಾ (ಕಂಬಳಿ)
೩ ದೇವು ನಾಗಪ್ಪ ಗೌಡಾ „
೪. ದೇವು ಬಿನ್ ಶಿವ ಮುಕ್ರಿ. „
೫ ಮಾಸ್ತಿ ದೇವು ಗೌಡಾ „
೬ ಶಿವು ಬಿನ್ ಮಾರು ಮುಕ್ರಿ „
೭. ದೇವು ಹನುಮಂತ ಗೌಡಾ „
೮ ತಿಮ್ಮು ಬೋಳ ಗೌಡಾ „

ಈ ಪಾರಿತೋಷಕಗಳನ್ನು ಹಳಿಯಾಳ ಕಮೀಟಿಯವರು ಸಭೆ ಕೂಡಿಸಿ ಕೊಡಬೇಕು

(೬) ನೆರೆಹಾವಳಿಯ ಸಂಬಂಧ ಜಿಲ್ಹಾಧ್ಯಕ್ಷರು ಕಾಂಗ್ರೆಸ ಫಂಡಿನಿಂದ ಮಾಡಿದ ರೂಪಾಯಿ ಹತ್ತು, ನಾಲ್ಕು ಆಣೆಯ ಖರ್ಚು ಮಂಜೂರ ಮಾಡಿರುತ್ತದೆ. ಅದನ್ನು ಜಿಲ್ಹಾ ಕೊಂಗ್ರೆಸ ರಿಲೀಫ ಕಮೀಟಿಯು ಫಂಡಿನಿಂದ ಭರಿಸಿಕೊಂಡು ಜಮಾ ಮಾಡಬೇಕು ಮತ್ತು ಈ ಸಂಬಂಧ ಇನ್ನು ಮುಂದೆ ಆಗುವ ಖರ್ಚು ಮುಂಗಡವಾಗಿ ಜಿಲ್ಹಾ ಕೊಂಗ್ರೆಸ ಫಂಡಿನಿಂದ ಮಾಡಿ ಅದನ್ನು ರಿಲೀಫ ಫಂಡಿನಿಂದ ಭರ್ತಿ ಮಾಡಿಕೊಳ್ಳತಕ್ಕದ್ದು

ಮೌಲಾನಾ ಮಹಮ್ಮದ ಅಲ್ಲೀ!

ವಿಜಾಪೂರ ಜೈಲಿನಲ್ಲಿ ಕಾರಾಗೃಹವಾಸವನ್ನನುಭವಿಸುತ್ತಿದ್ದ ಮೌ|ಮಹಮ್ಮದ ಅಲ್ಲೀಯವರಿಗೆ ಕಳೆದ ತಾ ೧೮ ನೇ ಶನಿವಾರ ಮಧ್ಯರಾತ್ರಿಗೆ ವಿಮೋಚಿಸುವವರಿದ್ದಾರೆಂಬ ಸುದ್ದಿ ಪಟ್ಟಣದಲ್ಲಿ ಹಬ್ಬಿತ್ತು ಸಾವಿರಾರು ಜನರು ಮೌ| ರವರ ದರ್ಶನ ಪಡೆಯಲು ಇಡೀ ರಾತ್ರಿ ಜೈಲಿನ ಮುಂದೆ ಕಾದುಕೊಂಡಿದ್ದರು ರಾತ್ರೆ ಬೆಳಗಾದರೂ, ಅವರ ವಿಮೋಚನವಾಗಲಿಲ್ಲ ಎಂದು ವಿಮೋಚನವಾಗುವದು ? ಎಂಬದನ್ನೂ ಅಧಿಕಾರಿಗಳು ತಿಳಿಸಲಿಲ್ಲ ಮುಂಬಯಿಯಲ್ಲಿ ಮೌ| ರವರು ಈ ವಾರದಲ್ಲಿ ಬಿಡುಗಡೆ ಹೊಂದುವರೆಂದು ಅವರಿಗೆ ಸ್ವಾಗತವನ್ನೀಯುವದರ ಬಗ್ಗೆ ಮುಂಬಯಿಯ ಖಿಲಾಫತ ಮಂಡಳವು ವ್ಯವಸ್ಥೆ ಮಾಡಿದೆ. ಮೌ|ರವರ ಮೆರವಣಿಗೆಯನ್ನು ಹೊರಡಿಸಿ, ಛೋಟಾ ಕಬರಸ್ತಾನದ ಹತ್ತರ ಸಭೆ ಸೇರಿಸಿ ಮುಂಬಯಿಯ ಮಹಮ್ಮದೀಯರು ಮಾನಪತ್ರವನ್ನು ಸಮರ್ಪಿಸುವವರಿದ್ದಾರೆ

ದಿವಾಣರ ಪ್ರಕೃತಿಭೇದ !

ಕೆನಿಯಾ ವಸಾಹತಿನ ನಿರ್ಣಯದ ಬಗ್ಗೆ ನೇಕ ನಾಮದಾರ ಶ್ರೀನಿವಾಸ ಶಾಸ್ತ್ರಿಗಳಂಥ ಸಮತೋಲ ಬುದ್ಧಿಯವರೆಂದು ಖ್ಯಾತಿಗೊಂಡವರಿಗೆ ಸಹ, ತ್ವೇಷ ಬಂದು, ಬ್ರಿಟಿಶ ಸಾಮ್ರಾಜ್ಯಕ್ಕೆ ಸಂಬಂಧಪಟ್ಟ ಯಾವದೇ ಕೆಲಸದಲ್ಲಿ ನಾವು ಪ್ರವೇಶಿಸಲಾಗದೆಂದು ಅವರು ನುಡಿದದ್ದಲ್ಲದೆ ಸದ್ಯಕ್ಕೆ ಸಾಮ್ರಾಜ್ಯಪ್ರದರ್ಶನದ ಸಮಾರಂಭದಿಂದ ನಾವು ಅಲಿಪ್ತರಿರಬೇಕೆಂದು ಸೂಚಿಸಿರುವರು ಈ ಬಗ್ಗೆ ಮದ್ರಾಸಿನ ಡೆಪ್ಯುಲೇಶನ್ ಮಂಟು ಖಾತೆಯ ದಿವಾಣರಾದ ಸರ್ ಕೇ ವೆಂಕಟರೆಡ್ಡಿ ನಾಯುಡುರವರಿಂದ ಮುಲಾಖತು ತೆಗೆದುಕೊಳ್ಳಲಾಯಿತು. ದಿವಾಣ ಸಾಹೇಬರೂ, ಕೆನಿಯಾ ವಸಾಹತಿನ ನಿರ್ಣಯದಿಂದ ಉದ್ವೇಗಗೊಂಡಿರುವರಂತೆ! ಕೆನಿಯಾ ನಿರ್ಣಯವನ್ನು ರದ್ದುಪಡಿಸಿಕೊಳ್ಳಲು ನಾವೆಲ್ಲಾ ಸಸದೀರ ಚಳವಳಿ ಮಾಡಬೇಕೆಂತಲೂ ದಿವಾಣ ಸಾಹೇಬರ ಮತವಿದೆ « ಸಾಮ್ರಾಜ್ಯ ಪ್ರದರ್ಶನವು ಹಿಂದ ಸ್ಥಾನದ ಕಲ್ಯಾಣವನ್ನು ಸಾಮ್ರಾಜ್ಯಕ್ಕೆ ಜಾಹೀರು ಪಡಿಸುವದೆ ಒಂದು ಸಾಧನವು ಪ್ರದರ್ಶನದಲ್ಲಿ ಪ್ರವೇಶಗೊಂಡರೆ ಹಿಂದುಸ್ಥಾನಕ್ಕೆ ಬಹಳೇ ಲಾಭವಾಗುವದು. ಸಾಮ್ರಾಜ್ಯ ಪ್ರದರ್ಶನದಲ್ಲಿ ಪಾಲುಗಾರರಾಗುವದು ಕೇವಲ ಔದ್ಯೋಗಿಕ ಉನ್ನತಿಗಾಗಿಯೇ » ಅಂತ ಮೇಲೆ ಹೇಳ ಸಿಗುತ್ತಿದ್ದರೆ, ನಮ್ಮ ದಿವಾಣ ರೆಡ್ಡಿ ಸಾಹೇಬರಿಗೆ ರಾಷ್ಟ್ರೀಯ ಅಪಮಾನದ ಒಂದೆಯೇನೂ ತಟ್ಟುವದಿಲ್ಲ ಅಷ್ಟು ದಿವಾಣ ಸಾಹೇಬರ ಬುದ್ಧಿಯು ಕಲುಷಿತವಾಗಿದೆ ಮದ್ರಾಸ ಸರಕಾರದವರು ದಿವಾಣಪದವನ್ನು ಹೊಂದಿದ್ದರ ಮೇಲಿಂದ ಈ ವಿಕೃತಿಯಾಗಿರಬಹುದೇನು ? ನಮ್ಮ ಮುಂಬಯಿ ಇಲಾಖೆಯ ದಿವಾಣರಾದ ನಾಮದಾರ ಪರಾಂಜಪೇಯವರಿಗೂ ಸಾಮ್ರಾಜ್ಯ ಪ್ರದರ್ಶನವೆಂದರೆ, ಬಲು ಪ್ರೀತಿ ಆ ಬಗ್ಗೆ ಕಾಯಿದೆ ಕೌನ್ಸಿಲಿನ ಸಭಾಸದರು ಕೆನಿಯಾ ನಿರ್ಣಯದ ಮೂಲಕ ಉಂಟಾದ ಹೊಸ ಪರಿಸ್ಥಿತಿಯಲ್ಲಿ ಠರಾವನ್ನು ಸೂಚಿಸುವವರಿದ್ದರು ನಾಮದಾರ ಸಾಹೇಬರು ಸಾಕಷ್ಟು ಮುಂಚಿತವಾಗಿ ಠರಾವಿನ ನೋಟೀಸು ತಮಗೆ ಸಿಗಲಿಲ್ಲೆಂದು ನೆವ ಹೇಳಿ ಸಾಮ್ರಾಜ್ಯ ಪ್ರದರ್ಶನದ ಮೇಲಿನ ಗಂಡಾಂತರವನ್ನು ಪರಿಹರಿಸಿಕೊಂಡರು ಗುರು ಗೋಖಲೆಯವರ ಆಸನದಲ್ಲಿ ವಿರಾಜಮಾನರಾದ ನಾಮದಾರ ಶಾಸ್ತ್ರಿಗಳ ಆಜ್ಞೆಯನ್ನು ಪಾಲಿಸುವ ಸುಯೋಗವನ್ನೂ ಅವರು ಕಳಕೊಂಡಂತಾಯಿತು. ದೇಶಬಾಂಧವರ ಬಗ್ಗೆ ನಾ| ಪರಾಂಜಪೇಯವರಿಗಿದ್ದ ಅಭಿಮಾನವನ್ನು ನೋಡಿರಿ ಬಂಗಾಲದ ದಿವಾಣ ಸರ್ ಸುರೇಂದ್ರನಾಥ ಬ್ಯಾನರ್ಜಿಯವರ ವಿಚಾರಗಳು ಮತ್ತೂ ಭಿನ್ನವಿವೆ. ಅವರು ಕೆನಿಯಾ ವಸಾಹತಿನ ನಿರ್ಣಯದ ಬಗ್ಗೆ ಕಲಕತ್ತೆಯಲ್ಲಾದ ಜಾಹೀರು ಸಭೆಯಲ್ಲಿ ಅಗ್ರೇಸರತ್ವವನ್ನು ವಹಿಸಿಕೊಂಡು, ಬ್ರಿಟಿಶ ಪ್ರಧಾನ ಮಂಡಳದ ಕಾರಸ್ಥಾನವನ್ನು ಮರೆಮಾಚದೆ ಟೀಕಿಸಿದರು ಪ್ರಧಾನಮಂಡಳವು ಎರಡೂ ಪಕ್ಷಗಳಿಗೆ ಸಮ್ಮತವಾಗುವಂತೆ ಮಧ್ಯಸ್ಥಿಕೆಯನ್ನು ಮಾಡಿತೆಂಬ ವಿಚಾರವು ಅವರಿಗೆ ಸರಿದೋರಲಿಲ್ಲ ದೀನಬಂಧುಗಳು ನುಡಿದಂತೆ, ಇದೊಂದು ಸಾಮ್ರಾಜ್ಯಕರ್ತರ ವಿಶ್ವಾಸಘಾತವೆಂದೂ ಪ್ರತಿಪಾದಿಸಿದರು. ಹೀಗೆಲ್ಲ ಒಂದೇ ನಿರ್ಣಯದ ಬಗ್ಗೆ ನಮ್ಮ ದಿವಾಣರಲ್ಲಿ ಪ್ರಕೃತಿಭೇದದಂತೆ ಮತಭೇದಗಳು ಉಂಟಾಗಿವೆ

ಉಡುಪಿಯ ಕಷ್ಟನಿವಾರಣ ನಿಧಿ.

———೦✽೦———

(ವಾ. ಪ್ರ. ಸಂಘ, ಹುಬ್ಬಳ್ಳಿ.)

ಈ ಮೊದಲೇ ಸ್ಥಾಪನವಾದ ಉಡುಪಿ ಫ್ಲಡ್ ರಿಲೀಫ್ ಕಮಿಟಿಯ ವತಿಯಿಂದ ಹೋದ ಆದಿತ್ಯವಾರ ೧೨-೮-೨೩ ನೇ ತಾರೀಖಿನಿಂದ ಕೆಲಸ ನಡೆದದೆ ೧೨ ನೇ ಅಗಸ್ಟ ದಿವಸ «ನ್ಯೂ ಇಂಗ್ಲೀಷ ಸ್ಕೂಲ» ಮತ್ತು «ಲ್ಯಾಮಿಂಗ್ಟನ್ ಹಾಯಸ್ಕೂಲ» ಗಳಿಂದ ಕೂಡಿ ಸುಮಾರು ೧೫೦ ವಿದ್ಯಾರ್ಥಿಗಳು ಸ್ವಯಂಸೇವಕರಾಗಿ ಶಹರದಲ್ಲೇ ಭಿಕ್ಷೆಯನ್ನು ಬೇಡಿದರು ಶ್ರೀ ಕೊಪ್ಪೀಕರ, ಶ್ರೀ ಸಾಲೀಮಠ ಮತ್ತು ಶ್ರೀ ಸೀಲಗಾರ ಈ ಮೂವರು ಸ್ಕೌಟ ಮಾಸ್ತರರು. ಮೇಲಿನ ೧೫೦ ಸ್ವಯಂಸೇವಕರನ್ನು ಸುವ್ಯವಸ್ಥಿತಗೊಳಿಸಿ, ಅವರಲ್ಲಿ, ೧೪ ತಂಡಗಳನ್ನು ಮಾಡಿದ್ದರು ಆ ತಂಡಗಳ ನಾಯಕರ ಹೆಸರುಗಳು —

೧ ಶ್ರೀ ದೇಸಾಯಿ ಬಿ ಎಸ್	೮ ಶ್ರೀ ಕೊಲ್ಹಟಕರ
೨ „ ಇಂಗಳಗಿ	೯ „ ನಾಡಕರ್ಣಿ.
೩ „ ಜೋಶಿ ಪಿ ವ್ಹಿ	೧೦ „ ಭದ್ರಾಪೂರ
೪ „ ಲೋಕರೆ ಬಿ. ಕೆ	೧೧ „ ಲಕ್ಕುಂಡಿ.
೫ „ ಗೋಖಲೆ ಟಿ ಕೆ	೧೨ „ ಕುಕ್ನೂರ
೬ „ ಕುಮಟಾ ಡಿ ಎಮ್	೧೩ „ ಶೀಲವಂತ.
೭ „ ಸಾಲೀ ಮಾಸ್ತರ	೧೪ „ ನಾಡಕರ್ಣಿ ವ್ಹಿ ಎಲ್

ಮೊದಲಿನ ದಿವಸವೇ ಹದಿನಾಲ್ಕು ತಂಡಗಳಿಂದ ಕೂಡಿ ಧಾನ್ಯ, ಬಟ್ಟೆಗಳ ಹೊರ್ತು, ೧೩೪ ರೂಪಾಯಿ ೨ ಆಣೆ ೭ ಪೈಗಳು ರೋಖು ಕೂಡಿದವು ಫಂಡು ಕೂಡಿಸುವ ಕೆಲಸವು ಇನ್ನೂ ಹಾಗೇ ನಡೆದದೆ ಇಂದಿನ ವರೆಗೆ ಒಟ್ಟು ೨೭೪-೯-೧ ರೂಪಾಯಿಗಳು ಕೂಡಿವೆ ಶ್ರೀ ಹುಬ್ಬಳ್ಳಿ ಮಹಾವೀರ ಮಾರವಾಡಿ ಜೈನ ಕಮಿಟಿ ಇವರು ಉದಾರ ಮನಸ್ಸಿನಿಂದ ಕೊಟ್ಟ ೧೦೧ ರೂಪಾಯಿಯು ದೇಣಿಗೆಯಾದರೂ ಇದರಲ್ಲೇ ಇರುತ್ತದೆ ಸಾರಸ್ವತರಲ್ಲಿ ಶ್ರೀ ಆತ್ಮಾರಾಮ ವಿಠ್ಠಲ ಗಂಗೊಳ್ಳಿಯವರು ಒಳ್ಳೇ ಉತ್ಸಾಹದಿಂದ ಕೆಲಸ ನಡಿಸಿದ್ದಾರೆ. ಈ ಕಮಿಟಿಯ ಕೋಶಾಧೀಶರು ಮೊದಲನೇ ಹಪ್ತೆಯೆಂದು ೨೫೦ ರೂಪಾಯಿಗಳನ್ನು ಉಡುಪಿ ಫ್ಲಡ್ ರಿಲೀಫ ಕಮಿಟಿಯ ಕಡೆಗೆ ನಿನ್ನಿನ ದಿವಸ ಕಳುಹಿಸಿದ್ದಾರೆ ಈ ಫಂಡಿಗಾಗಿ ದೊಡ್ಡ ದೊಡ್ಡ ವ್ಯಾಪಾರಸ್ಥರ ಅಂಕೆಗಳು ಇನ್ನೂ ಬೀಳತಕ್ಕವುಗಳಿವೆ

ಹವಾಮಾನ

ಈಗ ಸುಮಾರು ಎರಡು ತಿಂಗಳ ಲಾಗಾಯ್ತ ಬಾಂದಳದಲ್ಲಿ ಕಾರ್ಮುಗಿಲು ಮುಸುಕಿಟ್ಟು, ದಿನಕರನ ದರುಶನಾಭಾವವಾದರೂ, ಜನಗಳಿಗೆ ನೀರಿನ ಜಾಡ್ಯಯ ವೇನು ಹಿಮ್ಮೆಟ್ಟಿದಂತೆ ತೋರುವದಿಲ್ಲ ಅದತೆ, ಆ ತಾಪಭಾವದಿಂದ ಶಹರದಲ್ಲಿ ಹವೆಯು ಮಾತ್ರ ಕೆಟ್ಟು, ಪ್ಲೇಗ, ಇನ್‌ಫ್ಲ್ಯುಯಂಜಾ, ಕಾಲರಾ ಮುಂತಾದ ಸಾಂಸರ್ಗಿಕ ರೋಗಗಳು ತಲೆದೋರಹತ್ತಿವೆ ಮರಣದ ಸಂಖ್ಯೆಯು ದಿನಾಲು ೧೫-೨೦ರ ವರೆಗೆ ಇರುತ್ತದೆ ಸ್ಥಾನಿಕ ಸ್ವರಾಜ್ಯಾಧಿಕಾರಿಗಳಾದರೂ ಸುಮ್ಮನೆ ಕೂತ್ತಿದೆ, ವೈದ್ಯರ ಮುಖಾಂತರ ಮೈಲೀ ಚುಚ್ಚಿಸುವ ಕಾರ್ಯವನ್ನು ಜೋರದಿಂದ ನಡೆಯಿಸಿದ್ದಲ್ಲದೆ, ನೀರನ್ನು ಕಾಸಿ, ಸೋಸಿ ಕುಡಿಯಬೇಕೆಂಬದಾಗಿಯೂ ತಂಗಳ ಅನ್ನವನ್ನು ಸ್ವೀಕರಿಸಬಾರದೆಂಬದಾಗಿಯೂ ಶಹರದೊಳಗೆ ಡಂಗುರವನ್ನು ಸಾರಿಸಿದ್ದಾರೆ (ತಾ. ೧೮ ೮-೧೯೨೩)

WANTED— A competent Gymnast for the Gibb-High School, Kumta Intending Candidates may apply with testimonials, stating terms Kumta, 22 8 1923

Superintendent.

कोणी एवढी मेहरबानी करील ?

(१) मी गेल्या गुरुवारीं कांहीं कामाकरितां बाजारात गेलो. मुनिसिपालिटीजवळ आल्यावर पाहतो मी कशाकरितां आलों हेच विसरून गेलो. आठवण करतां आठवण होईना. आतां काय करावें या अशा विचारांत मी तेथेंच उभा असतां, माझे मित्र मि. निर्भीड हे सहज सहल करीत आले व मला त्यांनीं बळेंच जवळ असलेल्या मुनिसिपल् फर्स्ट ग्रेड व्हर्न्याक्युलर शाळेंत नेलें. तेथें दहा एक मिनिटें फिरतांच प्रत्येक खोलींत कोंडलेल्या गुराची संख्या पाहतां– "ओहो! कोंडवाड्यात आमची गाय कोंडली आहे कीं पहायाला मी घरून निघालों होतों" ह्मणून मला आठवण झाली. या शाळेच्या निमित्तानें मला माझ्या कामाची आठवण झाल्याबद्दल मी मनांत मुनिसिपालिटीचे पुष्कळपणें आभार मानिले. त्या वेळीं तिथें मुलांना शिकवणें चाललें होतें. प्रत्येक शिक्षक आपआपल्या कामांत चूर होता नसणार तरी कसा? एकएका शिक्षकाच्या ताब्यांत ३९ ४० भर मुलें. इतक्यांस शिकवतांना त्या बिचाऱ्यास शिकायाला सुद्धां वेळ मिळत नसेल. पण मुळांत शिक्षणाच्या नांवानें भोपळ्या एवढं कारण एका खोलींत दोन दोन, तीन तीन इयत्ते. (वरच्या महत्त्वाच्या वर्गांची सुद्धां हीच गत) या सगळ्या इयत्तेतल्या मुलांच्या एकवटलेल्या आरडाओरडींत, जवळच्या मुलांजवळ बोलायाचें ह्मटलें तरी शिक्षकाला शंख फुकावा लागतो. आतां तर काय— इंग्रजी वर्ग जोडावयाच्या निमित्तानें— इंग्रजी शाळेस जावयाच्या चाळीस एक मुलांना येथेंच ठेऊन घेऊन, इंग्रजी शाळेंतल्या २०–२२ मुलांना इथें आणून कोंबले आहेत त्यांची इंग्रजी व्यवस्था दुसऱ्या एका इमारतींत केली आहे ह्मणे. कसली ताळतंत्र नसलेली व्यवस्था ही! तिकडे ज्याण्या-येण्यातच प्रति तासीं मुलांचीं १९–२० मिनिटें फुकट मोडतात. उरलेल्या वेळांत मुलें किती शिकतात देव जाणे.

(२) दुसरी एक गोष्ट माझ्या मित्रांनी मला दाखविली. एका वरच्या वर्गांत २०–२१ मोठ्या मुलांबरोबर १४–१९ लहान मुलें बसली होतीं हें पाहून आह्मांला आश्चर्य वाटलें. चवकशी करतां कळलें— पाचव्या वर्गाच्या मास्तराच्या ताब्यांत त्या वर्गांतल्या २० मुलां बरोबर इन्फंट क्लासातलीं १९ मुलें दिलीं आहेत तसेंच चवथ्याच्या मास्तराच्या ताब्यांत २ऱ्या इयत्तेंतलीं कांहीं मुलें. हे दोघे शिक्षक कोण तर पहिले वर्षाचे ट्रेंड दोन क्लास कसे चालवतात पाहतो कोण? विद्याखातेच्या शिफारशीवरून असें दिसतें कीं– व्हर्न्याक्युलर शाळेंत इन्फंट-चवथा-पांचवा-सहावा-सातवा या सगळ्या वर्गांस थर्ड यीअर ट्रेंड शिक्षक हवे. पण येथें या सगळ्या शाळेंत दोनच तिसरे वर्षाचे शिक्षक आहेत. पैकीं एक हेड मास्तर – दुसरी की तिसरी इयत्ता घेऊन बसले आहेत. व दुसरे पांचव्या इयत्तेंतल्या ४० मुलांना शिकवीत– नव्हे, राखीत ह्मणणेंच जास्त शोभेल – बसले आहेत. असें असून हेड मास्तर छातीला हात लाऊन ह्मणतात — दोनच नव्हे प्रसंगीं तीन तीन वर्गांचीं मुलें एका शिक्षकास द्यावयाला हरकत नाहीं (मात्र शिकवायचें नसेल, नुसतें राखावयाचें असेल). मास्तरांच्या या शब्दांवरून, ते आपल्या पोळीवर कांहीं तरी तूप ओढायाला पाहतात कीं काय असा संशय येतो.

(३) असल्या अव्यवस्थित शाळा चालवणें शिक्षण, मीमांसा, अध्ययन केलेल्या हल्लींच्या शिर्शी मुनिसिपल् व्यवहारज्ञानपटु अष्टपैलू मेंबरानाच शोभतें व त्यानांच असल्या शिक्षण-खिचडीची गोडी कळणार. ही खिचडी खाण्याला ह्या शाळेंतलीं मुलें पुरत नाहींत ह्मणूनच कीं काय— इंग्लिश स्कूलातले पहिले तीन वर्ग येथें आणून जोडून त्या मुलांनाही ही शिक्षण-खिचडी चारतात– असें दिसतें.

(४) ह्या शिक्षण खिचडीचा प्रभाव काय सांगावा? ही मुलांनीं खाल्ल्यानें मुलांना तर अजीर्ण होणारच पण मुलांना ती खाल्ल्यानें पालकांना सुद्धां अजीर्ण होणार. यावर मुनिसिपालिटीला औषध देऊन पालकांना बरे करणाऱ्या वैद्य वैदू-डाक्टर-हकीमजीस कोणी तरी आणून देईल काय?

(५) कोणी एवढी मेहरबानी करील?

शिर्शी,
ता. १८-८ १९२३. } स्पष्टवक्ता.

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ ಪಿ ಖರ್ಚ ಬೇರೆ.

ಅಮೃತಾಂಜನ ಡಿಪೋ, ಫೋರ್ಟ,
ಮುಂಬಯಿ.

ಮನೆ ಕಟ್ಟುವವರಿಗೆ ಸುಸಂಧಿಯು.



ಮೇಲಂತಸ್ತಿಗೆ ಶೋಭೆ ಬರುವದಕ್ಕೆ ನಾನಾ ತರ ನಕ್ಷೀ ಕೊರೆಯಲ್ಪಟ್ಟ ಬೀಡಿನ ಕಟಾಂಜನಗಳೂ, ಹೂದೋಟ, ಬಂಗಲೆ, ಉಪ್ಪರಿಗೆ, ದಿವಾನಖಾನೆ ಮೊದಲಾದ ಸ್ಥಳಗಳಲ್ಲಿ ವಿಶ್ರಾಂತಿಗೊಳ್ಳುವದಕ್ಕೆ ತಕ್ಕ ಬಾಕುಗಳೂ ಕಿರ್ಲೋಸ್ಕರ ಕಾರಖಾನೆಯಲ್ಲಿ ಸೌಕರ್ಯದಿಂದ ದೊರೆಯುತ್ತವೆ. ಪತ್ರ ಬರೆದು 'ಟಿ' ಕ್ಯಾಟಲಾಗು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ.)

ಲೋಕಾನುಕೂಲತೆಯಾಗಬೇಕೆಂದು, लोकानुकूलता व्हावी म्हणून,

ನಮ್ಮ 'ಸ್ಟಾರ ಆಫ್ ಕೆನರಾ' ಮುದ್ರಣಾಲಯದಲ್ಲಿ

आमच्या 'स्टॉर ऑफ केनरा' मुद्रणालयांत

ನವೀನ વ્યવસ્થા !! ಹೊಸ ಏರ್ಪಾಟು !! नवीन व्यवस्था !!

'STAR OF KANARA' PRESS, KUMTA.

ನಮ್ಮ ಮುದ್ರಣಾಲಯದಲ್ಲಿ ಲೋಕಾನುಕೂಲತೆಗಾಗಿ ಮಾಡಿದ ಹೊಸ ಮಾರ್ಪಾಟುಗಳ ವಿವರ:—

ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಗಳಲ್ಲಿ

೧. ಮನೋಹರ ಮುದ್ರಣ. ೨. ಸಕಾಲ ಮುದ್ರಣ. ೩. ಸುಲಭ ದರ.

ಸಂಕ್ಷೇಪತಃ ಹೇಳಬೇಕಾದರೆ —

ಅಗ್ಗ ಅಚ್ಚು! ಅಂದ ಅಚ್ಚು!! ಅಚ್ಚ ಅಚ್ಚು!!!

ತರತರದ ಬಣ್ಣಗಳಿಂದ ಸುಶೋಭಿತವಾಗಿ ಮುದ್ರಣ ಮಾಡಿಕೊಡುವದಲ್ಲದೆ, ಫೋಟೋ-ಬ್ಲೋಕುಗಳನ್ನೂ ಮುದ್ರಿಸುವ ಏರ್ಪಾಟು ಮಾಡಲಾಗಿದೆ.

ಜರೂರಾಯಿತಿ ಜನರಿಗಾಗಿ—

ಬೇಕಾದ ಭಾಷೆ ಕೆಲಸದ ನಮೂನೆಯನ್ನು ಟಪಾಲದ್ವಾರಾ ಎಡ್ವಾನ್ಸ ಸಹಿತ ಕಳಿಸಿದ್ದಲ್ಲಿ, ಯಥಾಪ್ರತಿ ಮುದ್ರಣ ಮಾಡಿ ೧-೨ ದಿವಸಗಳಲ್ಲಿಯೇ ವ್ಹಿ. ಪಿ. ಯಿಂದ ಕಳಿಸುವ ವ್ಯವಸ್ಥೆಯೂ ಮಾಡಲ್ಪಟ್ಟಿದೆ. ಬ್ಯಾಂಡಿಂಗ ಕೆಲಸವೂ ಅಚ್ಚುಕಟ್ಟಾಗಿ ಮಾಡಿ ಕೊಡಲ್ಪಡುವದು. ಒಮ್ಮೆ ಆರ್ಡರು ಕಳುಹಿಸಿ, ನೋಡಬಹುದಲ್ಲವೇ?

ಇದಲ್ಲದೆ, ನಮ್ಮಲ್ಲಿ ಗ್ರಂಥ, ಪುಸ್ತಕ, ಮಾಸಪತ್ರಿಕೆ, ಪಂಚಾಂಗ ಮುಂತಾದ ವಿವಿಧ ಮುದ್ರಣ ಕೆಲಸವು ಸುಲಭ ದರದಿಂದ, ತಕ್ಕ ಹೊತ್ತಿಗೆ ತಯಾರಿಸಿ ಕೊಡಲ್ಪಡುವದು.

ಮಾರಾಟಕ್ಕೆ ಸಿದ್ಧ.

ಕೋರ್ಟು ಕಚೇರಿಗಳಲ್ಲಿ ವಕೀಲರಿಗೆ ಬೇಕಾಗುವ ವಕಾಲತ ಅಮುಲಜಾರಿ, ಸಾಕ್ಷಿಸಮ್ಸ. ಯಾದಿ, ನಕಲು ಅರ್ಜಿ, ದಸ್ತೈವಜು ಪರತ ಬೇಡುವ ಅರ್ಜಿ, ಜ್ಯಾಹಿರ ಮುಂತಾದ ಎಲ್ಲ ತರದ ಫಾರ್ಮುಗಳೂ, ಶಿಪ್ಪಿಂಗ ಬಿಲು, ಸಹಾಮಿ, ಬಿಲ್ ಆಫ್ ಎಂಟ್ರ ಮೊದಲಾದ ಕಸ್ಟಮ್ ಫಾರ್ಮುಗಳೂ ಮಾರಾಟಕ್ಕೆ ದೊರೆಯುತ್ತವೆ

ವಿಶೇಷ ಮಾಹಿತಿ ಪತ್ರದ್ವಾರಾ ಯಾ ಮೊಕ್ತಾ.

ಪತ್ತೆ:— ಕೃಷ್ಣರಾವ ಕೇಶವ ಶೇಣವಿ, ಹೆಗಡೇಕರ,
ಮಾಲಕ,
'ಸ್ಟಾರ ಆಫ್ ಕೆನರಾ' ಪ್ರೆಸ್, ಕುಮಟಾ.

(೮೮ ಕಾವೆತಾ.)

Printed and Published by Krishnarao Keshav Shenvi (Editor) at his Star of Kanara Press, Kumta

Reg. No. B 1270 | Thursday, 30th August 1923

ವರ್ಷ ೭. | ಸಂಚಿಕೆ ೪೬.

ಕಾನಡಾವೃತ್ತ.

THE KANARA NEWS.

ಪತ್ರಿಕ ವರ್ಗಣಿ:-
ಕುಮುಟೆಯಲ್ಲಿ ಅಗಾವು ರೂಪಾಯಿ 2-4-0.
ಮನೆಯಾರ್ಡರಿಯಿಂದ ರೂ. 3-0-0
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

ನರಪತिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಮ್ಯಾಗ ಟೈಪಿನ (೧೫ ಎರ್ಮಾಉಷ್ಟ) ೫ ಸಾಲುಗಳ ವರೆಗೆ ರೂ. 1-0-0
ಅಧಿಕವಾದ ಪ್ರತಿ ಸಾಲಿಗೆ 0-2-0
ಜಾಹಿರಾತಿನ ಸಾಲು ಎಷ್ಟು ಜಾಗ ಹಿಡಿಯುವದೋ ಅ ಮಾನದಿಂದ ಅವುಗಳ ಸಾಲುಗಳು ಎಣಿಸಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

-(ಕುಮುಟಾ— ಕಾನಡಾವೃತ್ತ ಗುರುವಾರ, ತಾರೀಖ ೩೦ ಮಾಹೆ ಅಗಸ್ಟ ಸನ್ ೧೯೨೩ ನೇ ಇಸವಿ.)—

हिंदुस्थानातील रहिवाशांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानांतील लोकास ज्यास्त फायदे[illegible] आहे,

द्राक्षासव- { दीड रत्तलची किंमत २ रुपये;

रामबाण औषधें —

सर्दि घालविणारें,
भूक वाढविणारें,
शौच्यास साफ करणारें,
[illegible]प आणणारें,
शक्ति देणारें,
तेजस्वीपणा आणणारें,

— पिण्यास रुचिकर.

कॅटलाग मागवा,

झंडु फार्मास्युटिकल वर्क्स लिमिटेड,
मुंबई नं. १२

GLAXO:- FRESH STOCK. NEW BRAND. a *food for infants and invalids.*

Kalmegh :- *Well-tried remedy in "Liver" complaints especially of children.*

Syrup of Vasaka :- *Highly efficacious in cold, cough, crough and bronchitis.*

Besides we have in stock other Patent medicines, Thermometres, Glycerine Syringes etc.,

Orders will be executed by V. P. P.

The New Emporium
Honavar. (N. Kanara.)

ಡಾ|| ನಾಸೂರಕರರ

ಸುಧಾಂಜನ.

ಅಂಜನಗಳಿಗೆಲ್ಲ ಅರಸು.

ತಲೆಶೂಲಿ, ವಾತ ಪೀಡನೆ, ಕೆಮ್ಮು, ಹಲ್ಲು ನೋವು ಇತ್ಯಾದಿಗಳಿಗೆ ಕ್ಷಿಪ್ರ ಗುಣಕಾರಿ ಮದ್ದು ಬೆಲೆ 2 ಆಣೆ ಮಾತ್ರ. ವ್ಯಾಪಾರಿಗಳಿಗೆ ವಿಶೇಷ ಸವಲತು. ಹೆಚ್ಚಿನ ಮಾಹಿತಿ ಏಜಂಟರಿಂದ.

ಏಜಂಟ್ಸ್:— **ನಾಗರ್ಕಟ್ಟಿ ಬ್ರದರ್ಸ್,**
ಸುಧಾಂಜನ ಡಿಪೋ,
ಕುಮುಟಾ. (ಜಿಲ್ಲಾ ಕಾನಡಾ.)

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ವಿಷಯಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ.

ಈ ವರೆಗೆ ಪ್ರಕಟವಾದ ಪುಸ್ತಕಗಳು.

(೧-೨) ಗ್ರೀಸ ದೇಶದ ಗಾಂಧಿ. (ಸಾಕ್ರೆಟೀಸ) (೩) ಸ್ವಾತಂತ್ರ್ಯಸಾಧನೆ. (೪) ಗುರು-ಹಿರಿಯರೂ, ಬಂಧು-ಭಗಿನಿಯರೂ. (೫) ರಾಷ್ಟ್ರೀಯ ಶಿಕ್ಷಣ. (೬) ಸದ್ಗುಣಮಂದಿರ. (ಭಾಗ ೧.) (೭) ಸ್ವರಾಜ್ಯ ಧರ್ಮ. (ಅನಾಮಿಕ ಪುಷ್ಪ) ಇವಿಷ್ಟು ಪ್ರಕಟವಾಗಿದ್ದು, ೫ ಆಣೆಗೆ ಒಂದರಂತೆ ದೊರೆಯುತ್ತವೆ. ವರ್ಗಣೀದಾರರಿಗೆ ಹಿಂದಿನ ಬೇಕಾದ ಪುಸ್ತಕಗಳು ೪ ಆಣೆಗೆ ಒಂದರಂತೆ ದೊರೆಯುವವು. ೬ ಪುಸ್ತಕಗಳಿಗೆ ಕೂಡಿ ೧|| ರೂಪಾಯಿ ಮಾತ್ರ. ಅಂಚೆವೆಚ್ಚ ಬೇರೆ. ದ್ವಿತೀಯ ವರ್ಷ ಪ್ರಾರಂಭ. ಅನುಕ್ರಮವಾಗಿ ಮಾರ್ಚ, ಮೇ, ಜುಲೈ, ಸಪ್ಟಂಬರ, ನವಂಬರ, ಜನವರಿ ೧೫ ನೇ ತಾರೀಖಿಗೆ ಒಂದೊಂದು ಪುಸ್ತ ಹೊರಡುವದು. ವಾ. ವ. ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ.

ವಾ. ಅ. ಹೊಡ್ಕೆ,
ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ.

ಎಲ್ಲ ತರದ ಜ್ವರಗಳಮೇಲೆ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ, ಕೈಕ್ಕ, ಜಂಗಲಿ, ಅಥವಾ ದೂಷಿತ ಹವೆಯಿಂದ ಬರುವ ಸಾದಾ ವಿಷಾರೀ ಅಥವಾ ಇತರ ಜ್ವರಗಳೂ, ಇನಪ್ಲುಎಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನ್ಯಾನದ ದುಷ್ಪರಿಣಾಮರಹಿತ ಕೇವಲ ವನಸ್ಪತಿಯ ಈ ಮದ್ದು ಸೇವಿಸಿದರೆ ಅಶಕ್ತತೆಯಾಗದೆ, ಬೆವರು ಬಂದು ಜ್ವರ ಇಳಿಯುತ್ತದೆ. ಹಾಗು ರೋಗಿಯು ತರಿತ ವ್ಯಾಸಿಮಾಗುತ್ತಾನೆ.

೩ ಔಂಸ ಬಾಟ್ಲಿ ಕಿಂಮತ ರೂ. ೧-೦-೦. ಇದರ ಹೊರತು ಇನ್ನೂ ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ, ಉಚ್ಚ ಪ್ರತಿಯ ಕೋಲನ ವೋಟರ, ಲವೆಂಡರ ಇತ್ಯಾದಿ ಸಾಮಗ್ರಿಗಳು ಅಲೆಂಬಿಕದ ಕಾರಖಾನೆಯಲ್ಲಿ ತಯಾರಾಗುತ್ತವೆ. ಮಾಹಿತಿ ಕೆಟಲಾಗು ತರಿಸಿರಿ.

ಅಲೆಂಬಿಕ್ ಕೆಮಿಕಲ್ ವರ್ಕ್ಸ್,
ಕಂಪನಿ, ಲಿಮಿಟೆಡ್.
ನಂ. ೫೦, ಪ್ರಿನ್ಸೆಸ್‌ಸ್ಟ್ರೀಟ, ಮುಂಬಯಿ.

अलेंबिक केमिकल वर्क्स कं० लि०
नं. ५० प्रिन्सेस स्ट्रीट मुंबई.

ಶುದ್ಧ ಖದ್ದರ್ ರೇಶ್ಮೆ ಮಡಿಗಳು.

ಸುಲಭ ಕ್ರಯಕ್ಕೆ ಖಾತ್ರಿಯಾದ ಎಲ್ಲಾ ರಂಗುಗಳಲ್ಲಿಯೂ ಈ ಕೆಳಗೆ ಒದರ ಕ್ರಯಕ್ಕೆ ದೊರೆಯುವದು.

೧೮ ಮೊಳ	ಉದ್ದ	೨||	ಅಗಲ	ರೂ.	೨೩ ರಿಂದ	೨೫	ವರೆಗೆ
೧೬	,,	,,	೨||	,,	,,	೨೦ —	೩೦ ,,
೮	,,	,,	೨||	,,	,,	೯ —	೧೫ ,,
೬	,,	,,	೨||	,,	,,	೭ —	೧೧ ,,



ಅಂಗಿ ಬಟ್ಟೆಗಳು ೧೮ ಮೊಳ × ೨ ಮೊಳ ರೂಪ್ಯಾ ೧೮ ರಿಂದ ೩೦ವರೆಗೆ. ಶಟು ೧೨ ಮೊಳ ×೧|| ಮೊಳ ಅಗಲ ರೂಪ್ಯಾ ೧೦ ರಿಂದ ೧೫ ವರೆಗೆ ಜೇನ್‌ಖಾನ್ ೧೪ ಮೊಳ × ೨ ಮೊಳ ರೂ. ೨೪ ರಿಂದ ೩೫ ವರೆಗೆ ಇವುಗಳಲ್ಲದೆ ಕಾಶೀ ಪೀತಾಂಬರ ಕಾಶ್ಮೀರ್ ಶಾಲು, ರುದ್ರಾಕ್ಷಿ, ಜಾಗಂಟೆ, ಶಾಳ, ಪನ್ನೀರ್ ದಾನಿ, ಆಟದ ಸಾಮಾನುಗಳು, ದೇವರ ಮತ್ತು ಗಾಂಧಿ ಮುಂತಾದವರ ಪಟಗಳಿರುವ ಉಂಗುರಗಳ ಮತ್ತು ಇನ್ನೂ ಅನೇಕ ಸಾಮಾನುಗಳ ಕ್ಯಾಟಲಾಗ್ ಇನಾಂ.

ವಿಳಾಸ:— ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಸ್ತ್ರೀಯರಿಗ್ಯಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. (ರಿಜಿಸ್ಟರ್ಡ

ಮೃದುವಾದ ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶ ಮುವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ.

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಬೇಗ ಕೊಡುತ್ತಿದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ ಈ ಆಯಿಲ್ ಹೊಡೆದುಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ಹಣ್ಣಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು, ಆದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆಯನಲು ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಸಲ ಒಂದು ಬಾರಿ ಈ “ ಕಾಮಿನಿಯಾ ಆಯಿಲ್” ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ ಸರ್ಟಿಫಿಕೇಟು ಒ[illegible]ಟು ” ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮ[illegible] ಮಾನಪತ್ರಗಳೂ ದೊರಕಿವೆ.

ಕ್ರಯ — ಸೀಸಗೆ ರೂಪಾಯಿ 1 0 0, ಸೀಸೆ ೩ಕ್ಕೆ ರೂಪಾಯಿ 2 10-0, ವಿ.ಪಿ. ಪಾರ್ಸಲ್ [illegible]14 0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ವ ಧುರ ಕೋಮಲ ಚಿರಸ್ಥಾಯಿ ಮತ್ತು ಅತ್ಯುತ್ತಮವು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ಮಸಿದ ವಾದುದು ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕ ವಿಲ್ಲ ಒಂದೇ ಒಂದು ಸಲ ನಿಮ್ಮ ಕೈ ಒಟ್ಟೆ[illegible]ಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ನೈಸರ್ಗಿಕವಾದ ದು ವಸಂತ ವಾದಿಸಯ ಆವಿರ್ಭವಿಸಿದಂತಾಗುವುದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒ[illegible]ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನ ತನ್ನ ಶಕ್ತಿಯಿಂದ ಸೆಳೆಕೊಳ್ಳುವದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸ 1 ಕ್ಕೆ 0-8 0 1 ಡ್ರಾಮಿನ (ವಿ ಶಿಯ) ಸೀಸೆ 1 ಕ್ಕೆ 0-12-0 ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0 0 ಅಂಚೆಯ ವೆಚ್ಚ ಬೇರೆ 0 4-0

ಒಟ್ಟೋ ದಿಲ್ ಬಹಾರ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0.

Ad lress - **The Anglo Indian Drug & Chemical Co,**

16, Market, **BOMBAY. 2**

ಖರೇ ಮಾಲು ! ರಾಜ ಕಾಲ ಕ್ಷರೆ ಗ್ಯಾರಿ !

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳಸಿ ಪುರುಷರಿಗೆ ಸ್ತ್ರೀ ವಿಷಯವಾಗಿಯೂ ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷವ ಶಕ್ತಿಯನ್ನು ಉಂಟುಮಾಡಿ ದಿನೇ ದಿನೇ ಶರೀರದ ಜರಠತನವನ್ನೂ ರೋಗಗಳನ್ನೂ ದೂರಪಡಿಸಿ ಆಯುರಾರೋಗ್ಯವನ್ನೂ ರತಿಯಲ್ಲಿ [illegible]ಗಳವಾದ [illegible] ತೂಹಲವನ್ನು ತೋರಿಸುವ ಕ್ರೀಡಾ ಶಕ್ತಿಯ ಉತ್ಸಾಹವನ್ನೂ ಸಂಭೋಗದಲ್ಲಿ ತೃಪ್ತಿಯನ್ನೂ ಸೌಖ್ಯವನ್ನೂ ಕೊಟ್ಟು ಮನಸ್ಸಿನ ಧೈರ್ಯವನ್ನೂ ಯೌವನದ ಕಳೆಯನ್ನೂ ದೊರಕಿಸಿ ಮುದಿತನವನ್ನು ನೀಗಿ ಬಲವನ್ನು ಉಂಟುಮಾಡುವದು ಮೃತ್ಯುವನ್ನು ನಿರಾಕರಿಸಿ ಬಗೆಬಗೆಯ ರೋಗಗಳನ್ನು ನಾಶಮಾಡುವದು. ಜೀರ್ಣಜ್ವರ, ಮಂದಾಗ್ನಿ, ಶುಕ್ಲಸ್ರಾವ, ಆಮಶಂಕೆ ಇವುಗಳನ್ನು ಬಿಡದೇ ನಾಶಮಾಡುವದು ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ ದೇಶಕಾಲಗಳಿಂದಲೂ, ಅತ್ಯಾಹಾರಗಳಿಂದಲೂ ಸ್ತ್ರೀಯರಿಂದಲೂ ದೇಹಪ್ರಕೃತಿಯಿಂದಲೂ ಚಿಕ್ಕವಯಸ್ಸಿನಲ್ಲಿ ನಡಿಸುವ ಬಲತ್ಕಾರದ ಹಸ್ತಸ್ಪರ್ಶನದಿಂದಲೂ ಅತಿವಿಷಯೋಪಭೋಗದಿಂದಲೂ ಇಂದ್ರಿಯ ಶಿಥಿಲವೂ, ತಿಳುವೂ, ನಿಸ್ತೇಜವೂ ಆಗಿ ಯತ್ನವಿಲ್ಲದೆ ಸ್ಖಲನವಾಗುವದು ಒಂದೊಂದು ಸಾರಿ ಮೂತ್ರದಲ್ಲಿಯೂ ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತೆ, ಆಶಕ್ತಿ, ಅರುಚಿ ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈಬಿಸುವು ನಿದ್ರೆಯಲ್ಲಿ ಬೆಚ್ಚಿಬೀಳುವ ಸ್ವಪ್ನ [illegible], ಬುರುವು ಮತ್ತು ಶರೀರದ ಹಾಂಗೂ ಮನಸ್ಸಿನ ಚೇತನ ಕುಂದಿ ಹೋಗುವದ , ಇವೆಲ್ಲವುಗಳ ಮೇಲೆ ರಾಮಬಾಣದಂತಿರುವದು ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ ೧॥ ೨೦ ೧ ನಂ ೩ ಹೀಗೆ ಎರಡು ಸೀಸೆಗಳನ್ನು ತಗೆದು ಕೊಳ್ಳಬೇಕಾಗುತ್ತದೆ ಅಂಚು ೬೦ ಗುಳಿಗೆಗಳುಳ ಸೀಸೆಗಳಿಗೆ ರೂ ೩ ಪೋಸ್ಟೇಜ ಬೇರೆ

ಎಸ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ,

ಕಾರವಾರ (ಕೆನರಾ)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧ ರಾಗದ ಪೆಟ್ಟಿಗೆ ಕಿಂ ೩೦, ೪೦ ೬೦, ೯೦, [illegible]

೨ „ ಕಾಲು ಪೆಟ್ಟಿಗೆ ಕಿಂ ೩೫, ೭೫, ೧೩೦ [illegible]

೩ ತಬಲೆ ಜೋಡಿ ಕಿಂ ೧೨ ೧೫ ೮ ೩೦

೪ ಡಿ. ಮೋ[illegible] [illegible] ಕಿಂ ೧, ತಬಲೆ ಗ್ರ ಪ ಕಿಂ ೧೨ ೮

ವಿಶೇಷ ಮಾಹಿತಿ[illegible] ನಮ್ಮ ಕ್ಯಾಟಲಾಗ ಪುಕ್ಕಟೆ ಕೊಡುತ್ತೇವೆ

ಪತ್ರವ್ಯವಹಾರ ಮರಾಠಿಯ[illegible] ದ ಇಲ್ಲವೆ ೧೦ ಗ್ರಜಿಯ[illegible] ಮಾಡಬೇಕು.

ಪತ್ತೆ – ಗೋಪಾಳ ಸಖಾರಾಮ ಮು[illegible]

ಕಂಪನಿ, ನಂ ೩೬೦

ಕಾಳಬಾದೇವಿ ರೋಡ್, ಮುಂಬಯಿ.

ಬೆಳಗಿ ಪೋಸ್ಟಿನ ಮೇಲೆ ಗದಾಪ್ರಹಾರ.

ಬೆಳಗಿ ಪೋಸ್ಟನ್ನು ತೆಗೆಯುವ ಯೋಜನೆ ಇದ್ದಷ್ಟು ತೋರುತ್ತದೆ. ಹುಬ್ಬಳ್ಳಿ ಅಂಚೆ ಖಾತೆಯ ಮೇಲಧಿಕಾರಿಗಳಿಂದ ಬೆಳಗಿ ಪೋಸ್ಟ ಮಾಸ್ತರರ ಕಡೆಗೆ ಒಂದು ಹುಕುಮು ಬಂದಿದ್ದು, ಅದರ ನಕಲು ಜನರಲ್ಲಿ ಹಾಯುತ್ತಿರುವದು. ಬೆಳಗಿ ಪೋಸ್ಟಿನಲ್ಲಿ ಉತ್ಪನ್ನಕ್ಕಿಂತಾ ಖರ್ಚು ಹೆಚ್ಚಿರುವದರಿಂದ, ಒಂದು ವರ್ಷದ ಖರ್ಚು ಜನರು ಸಹಿಸಿಕೊಂಡರೆ, ಪೋಸ್ಟ ಇಡುವ ಕಾರಣವುಂಟು.

ಬೆಳಗಿ ಪೋಸ್ಟಿನ ಜಮಾಖರ್ಚನ್ನು ಅಧಿಕಾರಿಗಳು ಹೇಗೆ ತೆಗೆದರು? ಕಾರ್ಡು, ಕವರು, ಟಿಕೀಟು ಇವುಗಳ ಮಾರಾಟದಿಂದ ಬರುವ ಉತ್ಪನ್ನದಿಂದ ಕಲ್ಪಿಸಬಹುದು. ಇದರ ಮಾನದ ಮೇಲಿಂದ ಇಲ್ಲಿಯ ಉತ್ಪನ್ನವು ಕಡಿಮೆಯೆಂತಾ ಊಹಿಸಬಹುದು. ಆದರೆ ಇಲ್ಲಿಂದ ಎಷ್ಟು ಪತ್ರಗಳು ಹೋಗುತ್ತವೆಯೋ ಅದ[ಕ್ಕಿಂತ] ಎಷ್ಟೋ ಪಟ್ಟು ಹೆಚ್ಚು ಪತ್ರಗಳು ಪರಸ್ಥಳದಿಂದ ಇಲ್ಲಿಗೆ ಬರುತ್ತವೆ. ಬರುವ ಪತ್ರಗಳಲ್ಲಿ ಇನಸೂರುಗಳೂ ಬಂಗಿಗಳೂ ವರ್ತಮಾನಪತ್ರಗಳೂ ಇವೂ ವಿಶೇಷವಿರುತ್ತವೆ. ಇಲ್ಲಿಂದ ವ್ಯಾಪಾರಿ, ಈ ಮುಂತಾದ ಕಡೆ ಮಾಲು ಹೆಚ್ಚು ಮಾರಾಟಕ್ಕೆ ಹೋಗುತ್ತಿದ್ದು, ಅಲ್ಲಿಂದ ಹಣವು ಇನಸೂರು ರೂಪದಿಂದ ಇಲ್ಲಿಗೆ ಬರುತ್ತದೆ. ಪರಸ್ಥಳದಿಂದ ಇಲ್ಲಿಗೆ ಬರುವ ಪತ್ರ ಇನಸೂರು ಮುಂತಾದವುಗಳಿಗಾದರೂ ಅಲ್ಲಿ ಖರ್ಚು ಕೊಟ್ಟಿರುವದರಿಂದ ಆದರ ಉತ್ಪನ್ನದಲ್ಲಿ ಕೆಲವಂಶ ಇಲ್ಲಿಯ ಪೋಸ್ಟಿನಲ್ಲಿ ಜಮಾ ಮಾಡಿಕೊಳ್ಳಲಿಕ್ಕೆ ಅಡ್ಡಿಯೇನ? ಆ ಪತ್ರಗಳನ್ನು ವ್ಯಾಳ್ಯಕ್ಕೆ ಮಾಲಿಕರಿಗೆ ಮುಟ್ಟಿಸುವ ಭಾರವಾದರೂ ಟಪಾಲಖಾತೆಯದೇ ಇರುತ್ತದಲ್ಲ. ಅಂದರೆ ಇಲ್ಲಿ ಪೋಸ್ಟ ಇರುವದು, ಇಲ್ಲಿಂದ ಹೊರಡುವ ಪತ್ರ ಒಯ್ಯಲಿಕ್ಕೆ ಮಾತ್ರ ಇಷ್ಟೇ ಅಲ್ಲದೆ ಪರಸ್ಥಳಗಳಿಂದಲೂ ಬರುವ ಪತ್ರಗಳನ್ನು ಮಾಲಿಕರಿಗೆ ಮುಟ್ಟಿಸುವ ಕೆಲಸ ಸಹ ಇರುತ್ತದೆ. ಇಲ್ಲಿಯ ಪೋಸ್ಟ ತೆಗೆದರೆ ಹಂಗಾಮಿಯಲ್ಲಿ ರೈತ ಜನರಿಗೆ ತಮ್ಮ ಹೆಸರಿನಲ್ಲಿ ಬಂದಿರುವ ಇನಸೂರು ಮುಂತಾದದ್ದು ಹನ್ನೆರಡು ಇಪ್ಪತ್ತು ಮೈಲು ದೂರ ಹೋಗಿ ತರುವದಾದರೂ ಹೇಗೆ? ಅಂಥ ಸಂದರ್ಭದಲ್ಲಿ ಪೋಸ್ಟಿನ ಗೈರಸೋಯಿಯಿಂದ ಜನರು ಇನಸೂರು ಮುಂತಾದದ್ದು ಕಳಿಸುವದೇ ಕಡಿಮೆ ಮಾಡುವ ಪ್ರಸಂಗ ಬರಬಹುದು. ಅಂಥ ಸಂದರ್ಭದಲ್ಲಿ ಟಪಾಲಖಾತೆಗೂ ಲುಕ್ಸಾನ ಆಗಿ ಜನರಿಗೆ ಬಹಳ ಗೈರಸೋಯಿ ಆಗಬಹುದು.

ಈಗಿನ ಟಪಾಲಖಾತೆಯು ಜನರ ಹಿತಕ್ಕೆ ಇದ್ದದ್ದೋ, ತನ್ನ ಲಾಭಕ್ಕೆ ಇದ್ದದ್ದೋ ಎನ್ನುವದು ಇದರ ಮೇಲಿಂದ ವ್ಯಕ್ತವಾಗುತ್ತದೆ. ಯಾವುದಾದರೂ ಸರಕಾರಿ ಮುಖ್ಯ ಕಚೇರಿ ಮುಂತಾದ್ದು ಈ ಕಡೆ ಇದ್ದಿದ್ದರೆ, ಈ ಪೋಸ್ಟ ತೆಗೆಯುವ ಯೋಜನೆ ಬರುತ್ತಿದ್ದಿಲ್ಲ. ಬಡ ರೈತ, ಜನರ ಅಡಚಣಿ ಕೇಳುವವರ್‍ಯಾರು? ನಮ್ಮ ಪ್ರಾಂತವು ಗುಡ್ಡಬೆಟ್ಟಗಳಲ್ಲಿಯೂ ಅಲ್ಲಲ್ಲಿ ಹರಿಯುವ ಹೊಳೆಗಳ ಮಧ್ಯದಲ್ಲಿ ಹರಡಿಕೊಂಡಿದೆ. ಮತ್ತು ಪರಪ್ರಾಂತದವರ ಕೂಡಾ ವ್ಯವಹಾರ ನಡಿಸಲಿಕ್ಕೆ ರೇಲ್ವೆ, ರಸ್ತೆ ಮುಂತಾದ ತಕ್ಕ ಸಾಧನವೂ ಇಲ್ಲ. ಹೀಗಾಗಿ, ಇದೇ ಒಂದು ಕೋಣೆಯಲ್ಲಿ ಕೂತಂತೆ, ಅನ್ಯೋನ್ಯರ ಸಹವಾಸವಿಲ್ಲದೇ ಇರುತ್ತಿದ್ದು, ಅದಕ್ಕೆ ತಕ್ಕಂತೆ ಇರುವ ಒಂದು ಪೋಸ್ಟು ಸಹ ಇಲ್ಲದಂತೆಯಾದರೆ ಕೇಳುವದೇನು? ಇಲ್ಲಿಂದ ಹಟ್ಟಿಗೆ ಅಂದಕಾರದ ಪ್ರದೇಶಕ್ಕೆ ಗುಳೆ ಕಟ್ಟಿಕೊಂಡು ಹೋಗುವದೊಳ್ಳೆಯದು.

ಐನಕೈ ತಾ ೪-೮ ೨೩ } ವೆಂಕಟ ಸುಬ್ಬರಾಯ ಐನಕೈ

ಹುಬ್ಬಳ್ಳಿಯ ವರ್ತಮಾನಸಂಗ್ರಹ

(ವಾರ್ತಾಪ್ರಸಾರಕ ಸಭೆ, ಹುಬ್ಬಳ್ಳಿ)

ಡಾ॥ ಗುಲ್‌ಬಾಯಿ ಇಂಜಿನೀಯರ.

ಸುಪ್ರಸಿದ್ಧ ಸ್ತ್ರೀ-ವೈದ್ಯೆ ಕುಮಾರಿ ಗುಲ್‌ಬಾಯಿ ಇವರು ಇಲ್ಲಿಯ ಇಂಜನೀಯರ ಶ್ರೀ॥ ವಲ್ಲಭಭಾಯಿ ಇವರ ಮಕ್ಕಳು. ಗುಲ್‌ಬಾಯಿಯ ವರ ತಾಯಿಯಾದ ಶ್ರೀ॥ ಲಾತಬಾಯಿ ಇವರು ಸೂತಿಶಾಸ್ತ್ರದಲ್ಲಿ ನಿಷ್ಣಾತರಿದ್ದು, ಮರಣಕಾಲದಲ್ಲಿ ತಮ್ಮ ಮೂರು ಮಂದಿ ಹೆಣ್ಣುಮಕ್ಕಳಲ್ಲಿ, ಒಬ್ಬಾದರೂ ಅದೇ ವಿದ್ಯೆಯಲ್ಲಿ ಪ್ರವೀಣರಾಗಬೇಕೆಂದು, ಇಚ್ಛೆಯನ್ನು ವ್ಯಕ್ತಪಡಿಸಿದರು. ಕುಮಾರಿ ಗುಲ್‌ಬಾಯಿ ಇವರು ಮ್ಯಾಟ್ರಿಕ್ಯುಲೇಶನ್ನದ ವರೆಗೆ ಅಭ್ಯಾಸ ಮಾಡಿ, ತಾಯಿಯ ಇಚ್ಛೆಯನ್ನು ಕೊನೆಗಾಣಿಸುವದಕ್ಕೋಸ್ಕರ ಮುಂಬಯಿ ಜಿ. ಜಿ. ಮೆಡಿಕಲ್ ಕಾಲೇಜನ್ನು ಪ್ರವೇಶಿಸಿದರು.

ಇವರು ಸ್ವಭಾವತಃ ಚತುರ ಬುದ್ಧಿಯುಳ್ಳವರೂ ಉದ್ಯೋಗಶೀಲರೂ ಇದ್ದದರಿಂದ ಸ್ವಲ್ಪ ದಿವಸಗಳಲ್ಲಿಯೇ ಇವರು ತಮ್ಮ ವರ್ಗದಲ್ಲಿ ಅಗ್ರಸ್ಥಾನವನ್ನು ಸಂಪಾದಿಸಿ ವೈದ್ಯವಿಷಯದ ಅಂಗಗಳಾದ ಮೆಡಿಸಿನ್ ಸರ್ಜರಿ, ಮೆಡಿಕಲ್, ಜುರಿಸ್ಪ್ರುಡನ್ಸ ಮುಂತಾದವುಗಳಲ್ಲಿ ಅನೇಕ ಇನಾಮುಗಳನ್ನು ದೊರಕಿಸಿದ್ದಲ್ಲದೆ, "ಮೆಂತ್ಯ" ಪಾರಿತೋಷಕವನ್ನಾದರೂ ಪಡೆದಿರುವರು. ಕೊನೆಯ ಪರೀಕ್ಷೆಯಲ್ಲಂತೂ ಮೊದಲನೇ ತರಗತಿಯಲ್ಲಿ ಉತ್ತೀರ್ಣರಾಗಿರುವರು. ಈ ವಾರ್ತೆಯನ್ನು ತಿಳಿಸಿ ದೊಡನೆಯೇ, ಡಾಕ್ಟರ ಟಕರೆ ಮತ್ತು ಶ್ರೀ॥ ದೇವಧರ ಇವರು ಈ ಕುಮಾರಿಯವರ ವಿಷಯಕ್ಕೆ ತೋರಿಸಿದ ಉಚ್ಚತಮವಾದ ಅಭಿಪ್ರಾಯವನ್ನು ನೋಡಿದರೆ ಇವರ ನಿಜವಾದ ವಿದ್ವತ್ತೆಯು ತಿಳಿಯುತ್ತದೆ.

ಕುಮಾರಿ ಗುಲ್‌ಬಾಯಿ ಇವರು ತಮ್ಮ ಉಳಿದ ಆಯುಷ್ಯವನ್ನೆಲ್ಲ ಹೆಣ್ಣುಮಕ್ಕಳ, ವಿಶೇಷತಃ ಬಾಲ-ಬಾಲಕಿಯರ ಶುಶ್ರೂಷೆಯಲ್ಲಿಯೇ ಕಳೆಯತಕ್ಕವರಿದ್ದಾರೆ. ಇವರ ವೈದ್ಯಾಲಯವಾದರೂ ತೀವ್ರವೇ ಹುಬ್ಬಳ್ಳಿಯಲ್ಲಿ ತೊಂದತಕ್ಕದ್ದಿದೆ. ಕರ್ನಾಟಕದಲ್ಲಿ ಇಂಥ ಉಚ್ಚತರವಾದ ಶಿಕ್ಷಣವನ್ನು ಹೊಂದಿ ಲೋಕಸೇವೆಗೆ ಕಂಕಣಬದ್ಧರಾದ ವಿದುಷಿಯರಲ್ಲಿ ಕುಮಾರೀ ಗುಲ್‌ಬಾಯಿಯವರೇ ಮೊದಲನೆಯವರೆಂದನ್ನಲಿಕ್ಕೆ ಏನೂ ಬಾಧೆಯಿಲ್ಲ. ಇವರು ಕೈಕೊಂಡ ಕಾರ್ಯದಲ್ಲಿ ದೇವರು ಯಶಸ್ಸನ್ನು ದಯಪಾಲಿಸಲೆಂದೂ, ಇವರ ವಿದ್ಯೆಯ ಅನುಕರಣವನ್ನು ಕರ್ನಾಟಕ ಭಗಿನಿಯರು ಮಾಡಲೆಂದೂ ನಾವು ಒಲವಾಗಿ ಇಚ್ಛಿಸುತ್ತೇವೆ.

ದೇಶಿ ಸೆಂಟೋನಾಯಿನ್.
(ಜಂತುವಿನ ಪುಡಿ.)

ಅಪಾಯಕರವಿಲ್ಲದೆ ಗುಣ ಕೊಡುವಂಥಾದ್ದು ತ್ರಿಸಂಚದಲ್ಲಿ ಪ್ರಖ್ಯಾತ ಔಷಧ

ಔನ್ಸಿನ ಶೀಸೆಗೆ ೭ ರೂ ೮ ಆಣೆ

ವಿಳಾಸ — ಎಮ್ ಜಿ ಭಾಗ್ವತ್,
ಆಯುರ್ವೇದಿಕ್ ಕೆಮಿಸ್ಟ, ಕಾರವಾರ (ಕೆನರಾ)

ಗ್ಯಾಸ ದೀಪಗಳು
ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಬರೆದು ತಿಳಕೊಳ್ಳಬಹುದು

ಪುರುಷೋತ್ತಮ ಲಕ್ಷ್ಮಣಯ್ಯ ಗ್ಯಾಸಭಾಗ

ಹೆಗಡೇಕರ, ದುಕಾನ, ಕುಮಟಾ.

ನ್ಯೂ ಇಂಗ್ಲಿಷ ಸ್ಕೂಲ ಹಳಿಯಾಳ.

ಹಳಿಯಾಳ ನ್ಯೂ ಇಂಗ್ಲಿಷ ಸ್ಕೂಲ ಕಮಿಟಿ ಕಾರ್ಯದರ್ಶಿಗಳ ಕಡೆಯಿಂದ — ಕರ್ನಾಟಕವೃತ್ತ ಪತ್ರಕರ್ತರಿಗೆ— ದಯಮಾಡಿ ಈ ಕೆಳಗಿನ ಮಜಕೂರಿಗೆ ತಮ್ಮ ಪತ್ರದಲ್ಲಿ ಸ್ಥಳ ದೊರಯುವದಾಗಿ ಆಶಿಸುತ್ತೇನೆ.

ಇಲ್ಲಿಯ ಇಂಗ್ಲಿಷ ಸ್ಕೂಲ ಸಂಬಂಧದ ಕಾಯಂ ಫಂಡು ಕೂಡಿಸುವ ಕೆಲಸವು ಇನ್ನು ವರೆಗೆ ಅಪೂರ್ಣವಾಗಿಯೇ ಬಿದ್ದದ್ದು ಇದನ್ನು ಪೂರ್ಣಗೊಳಿಸಿ ಅದರ ವ್ಯವಸ್ಥೆ ಮಾಡಿ ಶಾಲೆಯನ್ನು ಚಿರಸ್ಥಾಯಿಯಾಗಿ ಮಾಡುವ ಉದ್ದೇಶದಿಂದ ತಾ ೮-೮ ೧೯೨೩ನೇ ದಿವಸ ಶ್ರೀ॥ ಉಡಚವ್ವನ ದೇವಸ್ಥಾನದಲ್ಲಿ ಶ್ರೀ॥ ಶ್ರೀಪಾದ ದತ್ತಾತ್ರೇಯರಾವ ದೇಶಪಾಂಡೆ ಇವರ ಅಧ್ಯಕ್ಷತೆಯ ಕೆಳಗೆ ಫಂಡಿಗೆ ಮದತ್ತು ಮಾಡುವವರ ಹಿತೈಷಿಗಳ ಸಭೆ ಕೂಡಿ, ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸಾದವು

೧ ಸದರಿ ಫಂಡಿಗೆ ಮದತ್ತು ಮಾಡಿದ ಶ್ರೀ॥ ಕೈ ವಾಮನರಾವ ದೇಶಪಾಂಡೆ, ದತ್ತಾತ್ರೇಯರಾವ ದೇಶಪಾಂಡೆ, ಮುಕುಂದ ಅನಂತ ಗಿರಿ ಪಂಪಣ್ಣಾ ಗೋವಿಂದಪ್ಪಾ ಅಸೇಗುಂದಿ, ಕೃಷ್ಣಾಜಿ ನಾಗೇಶರಾವ ಮಹಾಜನ, ಫಕೀರಪ್ಪಾ ಭೀಮಪ್ಪಾ ದಾಟನಾಳ ವ ಮಹಾದೇವ ಅಣ್ಣಪ್ಪಾ ಮುಳೆ ಇವರ ನಿಧನದ ಬಗ್ಗೆ ಈ ಸಭೆಯು ತಮ್ಮ ದುಃಖವನ್ನು ವ್ಯಕ್ತಪಡಿಸುತ್ತದೆ.

೨ ಸದರಿ ಫಂಡಿನ ಸಂಬಂಧ ವಸೂಲಾದದ್ದರ ತಪಶೀಲು

ಕೈ ಶ್ರೀ॥ ವಾಮನರಾವ ದೇಶಪಾಂಡೆ ೮೦೦ ದತ್ತಾತ್ರೇಯರಾವ ದೇಶಪಾಂಡೆ ೩೫೧, ಶ್ರೀ॥ ಮಹಾದೇವ ಮಂಗೇಶರಾವ ತೇರಗಾಂವಕರ ೩೦೦, ಕಾಂತಾರಾಮ ನರಸಿಂಹ ಹುಲ್ಯಾಳಕ ೩೦೦, ಕೈ ಶ್ರೀ॥ ಮುಕುಂದ ಅನಂತ ಗಿರಿ ೨೦೦, ಶ್ರೀ॥ ಗಂಗಾಧರ ಅಣ್ಣಪ್ಪಾ ಅಥಣಿ ೧೨೫, ನಾರಾಯಣ ಗೋವಿಂದರಾವ ಭಟ್ರಿ, ೧೦೦ ಬಾಳಕೃಷ್ಣ ನಾರಾಯಣ ಬಾಪಟರ ೧೦೦, ಸಿ ಎಮ್ ಪಟೇಲ ಅಲ್ನಾವರ ೧೦೦, ಕೈ ಶ್ರೀ॥ ಪಂಪಣ್ಣಾ ಗೋವಿಂದಪ್ಪಾ ಅಸೇಗುಂದಿ ೧೦೦ ಕೃಷ್ಣಾಜಿ ನಾಗೇಶ ಮಹಾಜನ ೧೦೦, ಶ್ರೀ॥ ತ್ರಿಮಲ ಪುರುಷೋತ್ತಮ ಶೇಟ ವಾರವಾಡಿ ೧೦೦, ಬಸಪ್ಪಾ ಅಣ್ಣಾ ಗುಗ್ಗರಿ ಸಾಂಬ್ರಾಣಿ ೫೦, ರಾಮರಾವ ದೇಸಾಯಿ ೫೦, ಶ್ರೀ॥ ಗೋವಿಂದ ಅನಂತ ಗಿರಿ ೫೦, ಕಲ್ಲಪ್ಪಾ ಅಣ್ಣಾ ಪಾಟೀಲ ಹವಗಿ ೨೫, ನಾಗಪ್ಪಾ ಪಾಟೀಲಕರ ತೇರಗಾಂವ ೨೫, ವಾಮನ ಯೋಗ್ಯಂತರಾವ ಹುಣಸವಾಡಕರ ೨೫, ಗೋವಿಂದ ಕೃಷ್ಣ ಬೀಡಿ ೨೫ ಕೃಷ್ಣಾಜಿ ಶಂಕರ ಕೊಪ್ಪಳ ೨೫, ಯೋಗ್ಯಂತ ಗೋಪಾಳಪ್ಪಾ ಭಾಂಡಗೆ ೨೫ ಗೋವಿಂದ ಲಕ್ಷ್ಮಣರಾವ ಹುಣಸವಾಡಕರ ೧೫, ವಾಸುದೇವ ಮೊದಪ್ಪಾ ಮುಳೆ ೧೨, ದತ್ತಾತ್ರೇಯ ಪಂತ ಘಾಟಪಕ್ಕೀರ ತೇರಗಾಂವ ೧೦, ಕಲ್ಲಪ್ಪಾ ಬಾಳೆಕುಂದ್ರಿ, ತೇರಗಾಂವ ೧೦, ಗಂಗಪ್ಪಾ ಭರಮಪ್ಪಾ ದೇಸಾಯಿ ೧೦, ಕೈ ಫಕೀರಪ್ಪಾ ಭೀಮಪ್ಪಾ ದಾಟನಾಳ ೧೦, ವಾಸುದೇವರಾವ ರಾಣ ತೇರಗಾಂವ ೧೦, ಸಾಂಬಾರಾವ ಮಾನಗಿ ತೇರಗಾಂವ ೧೦, ವಾಮನರಾವ ರಾಣ ತೇರಗಾಂವ ೧೦, ಯೋಗ್ಯಂತರಾವ ಮಾನಗಿ ದಾಟನಾಳ ೧೦, ಶಂಕರ ನಾರಾಯಣ ಗುಂಜೀಕರ ೧೦, ಯೋಗ್ಯಂತರಾವ ರಾಮಚಂದ್ರ ಸಾಂಬ್ರಾಣಿ ೧೦ ಕೈ ಶ್ರೀ॥ ಮಹಾದೇವ ಅಣ್ಣಪ್ಪಾ ಮುಳೆ ೫, ಬಾಬು ದುಂಡಪ್ಪಾ ಬುಲಬುಲೆ ೫, ಶ್ರೀನಿವಾಸ ವೈಕುಂಠ ಪ್ರಭು ೫ ಗುಂಡೋಪಂತ ಮುಂಡಗೋಡಕರ ೫, ಮಂಗೇಶ ಕೃಷ್ಣ ರಾಣ ತೇರಗಾಂವ ೫, ರಾಮಲಿಂಗ ನಾಗಪ್ಪಾ ರಾವುತ ಅಳನಾವರ ೨ ಗಣಪತರಾವ ದೇಶಪಾಂಡೆ ೨ ಒಟ್ಟು ರೂಪಾಯಿ ೩,೪೨೨

ಈ ಪ್ರಕಾರ ೩,೫೨೨ ರೂಪಾಯಿಗಳು ಆದದ್ದರ ಬಾಬು ಈ ವರೆಗೆ ಬಡ್ಡಿ ತರಹ ಜಮಾ ಆದ ರೂಪಾಯಿ ೪೭೮ ಕೂಡಿ ४,೦೦೦ ರೂಪಾಯಿ ಕೂಡಿದಲ್ಲಿಗೆ ೫,೦೦೦ ರೂಪಾಯಿಗಳ ಭರ್ತಿಗೆ ೧,೦೦೦ ರೂಪಾಯಿ ಕಡಿಮೆ ಬಿದ್ದದ್ದರಿಂದ, ಸದರಿ ಫಂಡಿಗೆ ಬಿದ್ದ ರಕಮನ್ನು

ಕೂಡಿಸುವ ಕೆಲಸವನ್ನು ಇನ್ನು ಮುಂದೆ ಅತಿಗೊತಡೆ ಈ ಹೊತ್ತೇ ಸದರಿ ಫಂಡು ಕೂಡಿಸುವ ಕಾರ್ಯವನ್ನು ಕೊನೆಗಾಣಿಸುವ ನಿಶ್ಚಯವಾದ್ದರಿಂದ, ಈ ಕೆಳಗಿನ ಸದ್ಗೃಹಸ್ಥರು ಸದರಿ ಕಾರ್ಯಕ್ಕೆ ಈ ಮೊದಲು ಯಥಾಶಕ್ತಿ ಮದ್ದತ್ತು ಮಾಡಿದ್ದಲ್ಲದೆ, ಈ ಕೆಳಗಿನ ತ ಪುನಃ ಹೆಚ್ಚಿಗೆ ರಕಮು ಕೊಟ್ಟು ಫಂಡು ಭರ್ತಿ ಮಾಡಿರುತ್ತಾರೆ ಇದರ ತಪಶೀಲು:—

ಶ್ರೀ॥ ದತ್ತಾತ್ರಯ ವಾಮನರಾವ ದೇಶಪಾಂಡೆ ೪೫೦, ನಿಂಗಪ್ಪ ಅಣ್ಣಾ ಹಳ್ಳಿಕೇರಿ ೨೦೫, ಶ್ರೀಪಾದರಾವ ದೇಶಪಾಂಡೆ ೧೫೦, ಶಾಮರಾವ ಗೋವಿಂದರಾವ ಜಿರ್ಲಿ ೧೦೦, ಚಿದಂಬರಪ್ಪ ಅನೇಗುಂದಿ ೧೦೦ ಜುಮ್ಲಾ ರೂ ೧೦೦೫

ಈ ಪ್ರಕಾರ ಇಹೊತ್ತು ಹೆಚ್ಚಿಗೆ ವಸೂಲಾದ ರಕಮು ಸಹಿತ ಒಟ್ಟಿಗೆ ೫೦೦೫ ರೂಪಾಯಿ ಫಂಡು ಜಮಾ ಆಗಿದ್ದು ಸದರಿ ಫಂಡಿಗೆ ಮದ್ದತ್ತು ಮಾಡಿದವರೆಲ್ಲ ಸದ್ಗೃಹಸ್ಥರ ಕೃತಜ್ಞತಾಪೂರ್ವಕ ಅಭಾರ ಮನ್ನಿಸುತ್ತದೆ. ಸದರಿ ರಕಮು ಶ್ರೀ॥ ದತ್ತಾತ್ರಯ ವಾಮನರಾವ ದೇಶಪಾಂಡೆ ಇವರ ವಶಕ್ಕೆ ಇದ್ದು, ಅವರು ಅದರ ಮೇಲೆ ದರವರ್ಷ ದರ ಶೇಕಡಾ ೦ ೯-೦ ಒಂಬತ್ತಾಣೆಯಂತೆ ಬಡ್ಡಿ ಕೊಡಲೊಪ್ಪಿದ್ದಾರೆ

೩ ಸದರ ಇಂಗ್ಲಿಷ ಸ್ಕೂಲಕ್ಕಾಗಿ ಸ್ವಂತ ಖರ್ಚಿನಿಂದ ಒಂದು ಇಮಾರತು ಕಟ್ಟಿಸಿಕೊಡ ತಕ್ಕಂತ ಶ್ರೀ॥ ನಿಂಗಪ್ಪ ಫಕೀರಪ್ಪ ಹಳ್ಳಿಕೇರಿ ಇವರು ಕೊಟ್ಟ ವಚನದ ಸಲುವಾಗಿ ಈ ಸಭೆಯು ಅವರ ವಿಶೇಷ ಅಭಾರವನ್ನು ಮನ್ನಿಸುತ್ತದೆ.

೪ ಇಂಗ್ಲಿಷ ಶಾಲೆಯು ಈ ಊರಲ್ಲಿ ಚಿರಕಾಲ ವ್ಯವಸ್ಥಿತ ರೀತಿಯಿಂದ ನಡೆಯಬೇಕೆಂಬುದರ ಸಲುವಾಗಿ ಯೋಗ್ಯ ತಜವೀಜು ಮಾಡುವದಕ್ಕೋಸ್ಕರ ಈ ಕೆಳಗಿನ ಹತ್ತು ಮಂದಿ ಸಭಾಸದರ ಕಾರ್ಯಕಾರಿ ಕಮಿಟಿಯನ್ನು ನೇಮಿಸಿರುತ್ತದೆ

೧ ಶ್ರೀ॥ ದತ್ತಾತ್ರಯ ವಾಮನರಾವ ದೇಶಪಾಂಡೆ, ಅಧ್ಯಕ್ಷ ಮ ಖಜಿನದಾರ, ೨ ಶ್ರೀಪಾದ ದತ್ತೋಬಾರಾವ ದೇಶಪಾಂಡೆ, ೩ ನಿಂಗಪ್ಪ ಫಕೀರಪ್ಪ ಹಳ್ಳಿಕೇರಿ ೪. ಮಹಾದೇವ ಮಂಗೇಶರಾವ ತೀರಗಾಂವಕರ, ೫ ಶಾಂತಾರಾಮ ಸದಾಶಿವರಾವ ಹುಲ್ಲನಾಡಕರ, ೬ ರಾಮರಾವ ಗೋವಿಂದರಾವ ಭಾನ್ವಿ, ೭ ಚಿದಂಬರ ಗೋವಿಂದಪ್ಪ ಅನೇಗುಂದಿ, ೮. ಗಂಗಾಧರ ಅಣ್ಣಪ್ಪ ಅಥಣಿ, ೯ ಮಹಮ್ಮದ ಅಕಬರಖಾ ಮೌಲವಿ, ೧೦ ದತ್ತಾತ್ರಯ ರಾಮಚಂದ್ರ ಕೇಳಕರ. ಕಾರ್ಯದರ್ಶಿ

ಸದರಿ ಫಂಡಿಗೆ ಮದ್ದತ್ತು ಮಾಡಿದ ಮೇಲ್ಕಾಣಿಸಿದ ಸದ್ಗೃಹಸ್ಥರ ಶಿವಾ ಮದ್ದತ್ತು ಮಾಡುತ್ತೇವೆಂದು ಅಭಿವಚನವಿತ್ತ ಇತರ ಸದ್ಗೃಹಸ್ಥರು, ತಮ್ಮ ತಮ್ಮ ವಚನದ ಪ್ರಕಾರ ರಕಮುಗಳನ್ನು ಕಾರ್ಯಕಾರಿ ಕಮಿಟಿಯ ಅಧ್ಯಕ್ಷರ ಬಳಿಗೆ ತೀವ್ರವಾಗಿ ಜಮಾ ಮಾಡಬೇಕಾಗಿ ಅವರಿಗೆ ಈ ಸಭೆಯು ವಿನಂತಿಯದು. ಇದರಂತೆಯೇ ಬೇರೆ ಜನರೂ ಸದರಿ ಫಂಡಿಗೆ ಮದ್ದತ್ತು ಮಾಡಲಿಚ್ಛಿಸುವವರು ತಮ್ಮ ಮದ್ದತ್ತಿನ ಹಣವನ್ನು ತೀವ್ರವಾಗಿ ಅಧ್ಯಕ್ಷರ ಬಳಿಗೆ ಜಮಾ ಮಾಡತಕ್ಕದ್ದು.

ತಾ.೧೨-೮-೧೯೨೩ } **D. R. Kelkar.**

ಶುದ್ಧ ಖಾದಿ

ವಿಕ್ರಿಗೆ ತಯಾರ.

ಹೊನ್ನಾವರ ತಾಲೂಕಾ ಕೊಂಗ್ರೆಸ ಕಮಿಟಿಯಿಂದ ಕೈಮಗ್ಗದ ಕೈರಾಟೆಯ ಶುದ್ಧ ನೂಲಿನ ಖಾದಿ ಮಾರಾಟಕ್ಕೆ ಕೊಂಗ್ರೆಸ ಆಫೀಸಿನಲ್ಲಿ ಸಿಗುವದು.

ಹೊನ್ನಾವರ, } ಸಕ್ರೆಟರಿ,
೧೦-೧೨-೨೩ } ತಾ ಕಾ. ಕಮಿಟಿ, ಹೊನ್ನಾವರ

ಹಿಂದೂಸಮಾಜೋದ್ಧಾರ

ಪಂ॥ ಮಾಲವೀಯರ ಭಾಷಣ.

ಕಾಶೀ ಕ್ಷೇತ್ರದಲ್ಲಿ ಕಳೆದ ತಾ. ೨೦ನೇ ರವಿವಾರಕ್ಕೆ ನೆರೆದ ಹಿಂದೂ ಮಹಾಸಭೆಯ ಅಧ್ಯಕ್ಷರಾದ ಪಂಡಿತ ಮದನಮೋಹನ ಮಾಲವೀಯರವರು ಮಾಡಿದ ಭಾಷಣದ ಸಾರಾಂಶ:—

ಪಂಡಿತಜೀಯವರು ವೇದಪಾಠ ಹೇಳಿ, ತಮ್ಮನ್ನು ಅಧ್ಯಕ್ಷರನ್ನಾಗಿ ನೇಮಿಸಿದ ಬಗ್ಗೆ ಶ್ರೋತೃವೃಂದದ ಅಭಾರ ಎಣಿಸಿದರು. ಹಿಂದೂ ಸಂಸ್ಕೃತಿಯ ಪುರಾತನತ್ವವನ್ನು ಕೊಂಡಾಡಿ, ಚಾತುರ್ವರ್ಣ್ಯ ವ್ಯವಸ್ಥೆಯನ್ನೂ, ಚತುರಾಶ್ರಮದ ಪದ್ಧತಿಯನ್ನೂ ವಿಶದೀಕರಿಸಿದರು. ಭಗವಾನ್ ಬುದ್ಧನು ಮಾನವ ಜಾತಿಯ ಪರಮ ಕಲ್ಯಾಣಕರ್ತನೆಂದು ವಂದನೆ ಮಾಡಿದರು. ಭಗವಾನ್ ಬುದ್ಧನ ೧೦ ಆಜ್ಞೆಗಳೂ, ಮನುಋಷಿಯ ಆಚಾರದ ನಿಯಮಗಳೂ ಒಂದೆಯೆಂದು ಪ್ರತಿಪಾದಿಸಿ, ಹಿಂದೂಗಳಿಗೂ, ಬೌದ್ಧಮತದವರಿಗೂ ಭೇದವೇನಿಲ್ಲೆಂದರು. ಹಿಂದೂ ಸಮಾಜದ ಆಶ್ರಮವ್ಯವಸ್ಥೆಯು ಸರ್ವಾಂಗಪರಿಪೂರ್ಣವಿದ್ದು, ಅದಕ್ಕೆ ಸಮಾನವಾದ ಇನ್ನೊಂದು ವ್ಯವಸ್ಥೆಯು ದೊರಕುವದು ದುರ್ಲಭವೆಂದರು. ಈ ವ್ಯವಸ್ಥೆಯಂತೆ ಮಾನವನ ಜೀವಿತದ ನಾಲ್ಕು ಭಾಗಗಳಾಗುತ್ತವೆ.— ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ. ರಾಮ, ಕೃಷ್ಣ, ಭೀಷ್ಮ, ಯುಧಿಷ್ಠಿರ, ಅರ್ಜುನ, ವಸಿಷ್ಠ, ಗೌತಮ ಮೊದಲಾದ ಮಹಾಪುರುಷರೂ, ಋಷಿವರ್ಯರೂ ಹಿಂದೂ ಸಂಸ್ಕೃತಿಯ ಭವಿಷ್ಯದ್ವಾದಿಗಳು. ಹಿಂದೂ ಸಮಾಜವು ಕ್ಷಮಾಶೀಲವೂ, ಪರಮಸಹನಶೀಲವೂ ಇರುತ್ತದೆ. ಪೃಥ್ವಿರಾಜನು ಮಹಮ್ಮದ ಘೋರಿಯನ್ನು ಸೆರೆಹಿಡಿದರೂ, ಅವನನ್ನು ಬಿಟ್ಟುಕೊಟ್ಟ ಹಕೀಕತು ಆಧುನಿಕ ಕಾಲದಲ್ಲೇ ಸಂಭವಿಸಿತು. ಖಡ್ಗ ತೆಗೆದು ಪರರ ಮೈಮೇಲೆ ಬೀಳುವದ, ಅವರನ್ನು ನೋಯಿಸುವದು ಹಿಂದೂ ಸಮಾಜದ ಧ್ಯೇಯವಲ್ಲ. ಅದರಂತೆಯೇ ಪರರೂ ತಮ್ಮ ಗೊಡವೆಗೆ ಬರದೆ, ತಮಗೆ ಅಹಿತ ಮಾಡಬಾರದೆಂದು ಹಿಂದೂಗಳ ಇಚ್ಛೆ.

ಹಿಂದೂ ಜನರು ರಾಜ್ಯಕ್ಕಾಗಿ ಅಷ್ಟು ಚಿಂತಿಸಲಿಲ್ಲ. ಧರ್ಮರಕ್ಷಣೆಗಾಗಿ ಅವರು ಯಾವಾಗಲೂ ಯತ್ನಿಸುತ್ತಾರೆ. ಬ್ರಿಟಿಶರ ಆಗಮನವಾಗುವ ಮೊದಲು, ಹಿಂದುಸ್ಥಾನದಲ್ಲಿ ಅರಾಜಕತೆಯೂ, ಅವ್ಯವಸ್ಥೆಯೂ ನೆಲೆಗೊಂಡಿದ್ದವು. ಹಿಂದೂ-ಮಹಮ್ಮದೀಯರ ಸಮಾಜಗಳೆರಡೂ ಅವನತಿಯನ್ನು ಹೊಂದಿದ್ದವು. ಇಬ್ಬರೂ ತಮ್ಮ ತಮ್ಮೊಳಗೆ ಬಡಿದಾಡುತ್ತಿದ್ದರು. ಬ್ರಿಟಿಶರು ಹಿಂದುಸ್ಥಾನದಲ್ಲಿ ಆಗಮಿಸಿ, ಸಾಜ್ಯದಾತರತೆಯನ್ನು ವಹಿಸಿಕೊಂಡರು. ಬ್ರಿಟಿಶರು ಬಂದದ್ದು, ಸ್ವಾರ್ಥಪ್ರೇರಿತರಾಗಿ ಸ್ವಾರ್ಥಸಾಧನೆಗೆಂದು ಎಲ್ಲರಿಗೂ ವಿದಿತವಿದ್ದದ್ದೇ. ಆದರೂ, ಇದರಿಂದ ನಮಗೆ ಕೆಲ ಸರ್ವಸಾಮಾನ್ಯ ಲಾಭಗಳಾಗಿವೆ. ದೂರ ದೂರದ, ಭಿನ್ನ ಭಿನ್ನ ಪ್ರದೇಶಗಳಲ್ಲಿ ವಾಸಿಸುವ ಜನರು ಉಗಿಬಂಡಿ-ತಂತಿಗಳ ಮೂಲಕ ನೆರೆಹೊರೆಯವರಾಗಿರುವರು. ಭಾಷೆಯೂ, ಕಾಯಿದೆಗಳೂ ಒಂದೇಯಾದ್ದರಿಂದ, ನಮ್ಮ ಅನ್ಯೋನ್ಯ ಸಂಬಂಧಗಳೂ ಮಿಗಿಲಾಗಿವೆ. ಒಕ್ಕಟ್ಟಾಗಿ ವಿಚಾರಿಸಲು, ನಮಗೆ ಬೇಕಷ್ಟು ಸೌಕರ್ಯವಿದೆ. ೧೮೮೫ ರಿಂದ ೧೯೧೫ ರ ವರೆಗೆ ಭರತಖಂಡದ ಉದ್ಧಾರಕ್ಕಾಗಿ ರಾಷ್ಟ್ರೀಯ ಸಭೆಯು ಶಕ್ತಿಮೀರಿ ದುಡಿಯಿತು. ಮಹಮ್ಮದೀಯ ಸಮಾಜವು ಈ ಸಭೆಯಿಂದ ಅಲಿಪ್ತವುಳಿಯಿತು. ೧೯೧೬ರಲ್ಲಿ ಎಲ್ಲರೂ ಏಕತ್ರರಾಗಿ ನಾವೊಂದು ಸುಧಾರಣೆಯ ಯೋಜನೆಯನ್ನು ತಯಾರಿಸಿದೆವು. ಅಲ್ಪ ದಾನವಾಯಿತು. ಆದರೆ, ಅದು ಅಪೂರ್ಣವಿದ್ದು, ನಮಗೆ ಸಾಕಾಗಲಿಲ್ಲ. ಅಂದಿನಿಂದ ನಮ್ಮ ಸ್ಥಿತಿಯು ಮತ್ತಷ್ಟು ಕೆಂಗೆಟ್ಟಿತು. ಲೋಕೋತ್ತರ ಹಿಂದೀ ಪುರುಷರಾದ, ಭೂಮಂಡಲದ ಸಾಧುಪುರುಷರಾದ ಮಹಾತ್ಮಾ ಗಾಂಧಿಯವರನ್ನು ಕೇವಲ ಅನ್ಯಾಯದಿಂದ ಸರಕಾರವು ಸೆರೆಹಾಕಿತು. ಅವರನ್ನು ವಿಮೋಚಿಸಲು ಇನ್ನೂ ನಾವು ಸಮರ್ಥರಾಗಿಲ್ಲ. ನಾವು ದುರ್ಬಲರಿದ್ದೇವೆ; ನಿರಾಧಾರಿಗಳಿದ್ದೇವೆ ಎಂಬ ಬಗ್ಗೆ ಇನ್ನೇನು ಸಾಕ್ಷಿ ಬೇಕು? ಈ ಸರಕಾರಿ ಧೋರಣದಿಂದ ಇಡೀ ಭರತಖಂಡವು ಮರುಗುತ್ತದೆ. ಅಸಂತುಷ್ಟ[illegible] ಮನುಷ್ಯ ಕೆರಳಿಸುವ ಆಲೋಚನೆಯಿಂದ ಸಾಧನಗಳನ್ನು ಒಟ್ಟುಗೂಡಿಸುತ್ತಿರುವರು. ಇದರಿಂದ ಗಂಡಾಂತರವು ಒಂದು ದಿನ ಸಂಭವಿಸದಿರದು. ಇದಲ್ಲದೆ, ನಮ್ಮ ವ್ಯಾಪಾರ-ಉದ್ದಿಮೆಗಳು ನಾಮಶೇಷವಾಗಿವೆ. ಸಣ್ಣ ದೊಡ್ಡ ವ್ಯಾಪಾರಿಗಳಲ್ಲಿ ಚೈತನ್ಯಹೀನರಾಗಿರುವರು. ಸರಕಾರವೋ ತೆರಿಗೆಯ ಮಾನವನ್ನು ಏರಿಸುತ್ತಿದೆ. ನಮ್ಮ ಸ್ಥಿತಿಯೂ, ದರ್ಜೆಯೂ ತೀರ ಕರುಣಾಸ್ಪದವಾಗಿವೆ. ಮೊದಲು ಸರಕಾರಕ್ಕೆ ಕೆಲಮಟ್ಟಿಗೆ ನಮ್ಮ ಭೀತಿ ಇತ್ತು. ಮಹಾತ್ಮಾಗಾಂಧಿಯವರ ಅಹಿಂಸಾ ಪ್ರಚಾರದಿಂದ ಸರಕಾರಿ ಧೋರಣವು ಪೂರ್ಣವಾಗಿ ಬದಲಾಗಿದೆ. ಪ್ರಚಲಿತ ಸಮಯದಲ್ಲಿ ನಮ್ಮ ಕರ್ತವ್ಯವೇನು? ಸರಕಾರದಗೂಡ ನಾವು ಹೇಗೆ ವರ್ತಿಸಬೇಕು? ಮಹಮ್ಮದೀಯ-ಫಾರ್ಸಿ ಮೊದಲಾದ ಹಿಂದುಸ್ಥಾನದೊಳಗಿನ ಜ್ಞಾತಿಭಾಂಧವರಗೂಡ ನಮ್ಮ ಸಂಬಂಧವು ಹೇಗಿರಬೇಕು? ಎಂಬ ಪ್ರಶ್ನೆಗಳನ್ನು ನಾವೀಗ ವಿಚಾರಿಸಬೇಕಾಗಿದೆ.

ಮಹಮ್ಮದೀಯರ ವಿಷಯಕ್ಕೆ ವಿಚಾರ ಮಾಡಹೋದರೆ, ಅದೊಂದು ದುಃಖಕಾರಕ ಕಥೆಯೇ. ಹಿಂದೂ-ಮಹಮ್ಮದೀಯರ ನಡತೆಯು ಬೇಕಷ್ಟು ಅಂತಃಕರಣಪೂರ್ವಕವಿಲ್ಲ. ವಂಗಭಂಗದ ದಿನಗಳಲ್ಲಿ ಮಹಮ್ಮದೀಯರು ಸರಕಾರದ ಮರಾಲೋಚನೆಗೆ ಬಲಿಬಿದ್ದು, ಹಿಂದೂ ಬಾಂಧವರ ಮೈಮೇಲೆ ಬಿದ್ದರು. ೧೯೦೭ನೇ ಸಾಲಿನಲ್ಲಿ ಪೂರ್ವ ಬಂಗಾಲ ಪ್ರಾಂತದ ಹಿಂದೂಗಳ ಮೇಲೆ ಅಮಾನುಷ, ಅವರ್ಣನೀಯ ಅತ್ಯಾಚಾರಗಳು ಸಂಭವಿಸಿದವು. ಧರ್ಮಾಂಧ ಮಹಮ್ಮದೀಯರು ಹಿಂದೂ ಸ್ತ್ರೀಯರ ಪಾವಿತ್ರ್ಯಭ್ರಷ್ಟ ಮಾಡಿದರು. ಅನೇಕ ಭಗಿನಿಯರು ತಮ್ಮ ಪಾವಿತ್ರ್ಯರಕ್ಷಣಕ್ಕಾಗಿ ನದಿಗಳಲ್ಲಿಯೂ, ಕೆರೆಗಳಲ್ಲಿಯೂ ಸೇರಿಕೊಂಡರು. ೧೯೧೭ರಲ್ಲಿ ಸರಹದ್ದಿನ ಹಳ್ಳಿಗಳಲ್ಲಿ, ವಿಶೇಷವಾಗಿ, ಮುಜಾಫರ ನಗರದಲ್ಲಿ ಹಿಂದೂ ಮನೆಗಳ ಲೂಟಿಯಾಯಿತು. ಸ್ತ್ರೀಯರ ಮಾನಭಂಗವಾಯಿತು. ಆದರೂ, ಹಿಂದೀ ದೇಶಾಭಿಮಾನಿಗಳು ಐಕ್ಯತೆ ಲಕ್ಷಕೊಡಬೇಕೆಂದು ಬೋಧಿಸಿದರು, ಮಹಾತ್ಮಾ ಗಾಂಧಿಯವರ ಉಪದೇಶವನ್ನು ಅನುಸರಿಸಿ, ಹಿಂದೂಗಳು ಮಹಮ್ಮದೀಯರಿಗೆ ನೆರವಾಗಿ, ಖಿಲಾಫತ್ ಚಳವಳಿಯಲ್ಲಿ ದುಡಿದರು. ಇವರೊಳಗೆ ಹಿಂದೂ ಸಮಾಜವು ಪ್ರತಿಫಲ

ನನ್ನೇನು ಅಪೇಕ್ಷಿಸಲಿಲ್ಲ. ರಾಷ್ಟ್ರಕ್ಕೆ ಸ್ವಾತಂತ್ರ್ಯ ಸಿಗಬೇಕು ಎಂಬ ಇಚ್ಛೆಯಿಂದಲೇ ಮಹಮ್ಮದೀಯ ಬಾಂಧವರ ಬಗ್ಗೆ ಸಹಾನುಭೂತಿ ಇರುವದರಿಂದಲೇ ಅವರು ಕೆಲಸ ಮಾಡಿದರು. ಸದ್ಭಾವ, ಸಾಧುವೃತ್ತಿಯ ಮಹಮ್ಮದೀಯರು ಈ ಅಮಾನುಷ ದುರಾಚಾರಗಳನ್ನು ಆಚರಿಸಿದರೆಂದು ತನ್ನ ಅಂದೋಲನವಿಲ್ಲೆಂದು ಪಂಡಿತಜೀಯವರು ಸ್ಪಷ್ಟೀಕರಿಸಿದರು. ಮಹಮ್ಮದೀಯ ಸಮಾಜದೊಳಗಿನ ತಸ್ಕರರೂ, ಪುಂಡರೂ ಇಂಥ ದುರಾಚಾರಗಳಿಗೆ ಪ್ರವೃತ್ತರಾಗುತ್ತಾರೆ. ೧೯೨೧ರಲ್ಲಿ ಮಲಬಾರದೊಳಗಿನ ಮಾಪಿಳ್ಳೆಯರು ಮಿತಿಮೀರಿ ಅತ್ಯಾಚಾರಗಳನ್ನು ಆಚರಿಸಿ, ಹಿಂದೂಗಳಿಗೆ ಕಾಡಿದರು. ಇಸ್ಲಾಮು ಧರ್ಮವನ್ನು ಅಂಗೀಕರಿಸಲು ನಿರಾಕರಿಸಿದವರೆಂದು ಹಿಂದೂ ಮನೆಗಳ ಲೂಟಿಯಾಯಿತು; ಸ್ತ್ರೀಯರ ಮಾನಭಂಗವಾಯಿತು; ಅತಿ ಕ್ರೂರತನದಿಂದ ಸ್ತ್ರೀ-ಪುರುಷರ ಕೊಲೆಯಾಯಿತು. ಅನೇಕರಿಗೆ ಖಡ್ಗದಿಂದ ಇರಿದು ಕೊಲ್ಲುತ್ತೇವೆಂದು ಬೆದರಿಸಿ, ಇಸ್ಲಾಮು ಧರ್ಮಕ್ಕೆ ಸೇರಿಸಿಕೊಂಡರು. ಇಂಥ ಪ್ರಸಂಗದಲ್ಲಿ ಸೋಲಿಗಿಂತ ನಿಧನವೇ ಶ್ರೇಯಸ್ಕರವು. ಪ್ರತಿಯೊಂದೆಡೆಯಲ್ಲಿ ನಿಧನಹೊಂದುವದೇ ಯೋಗ್ಯವು. ನಮ್ಮ ಸಹನಶೀಲತೆಯಿಂದ ಇವನ್ನೆಲ್ಲ ನಾವು ಸೈರಿಸಿದೆವು. ಸಮಾಜಗಳಲ್ಲಿ ವಿತುಷ್ಟವಾಗಬಾರದೆಂದು ನಾವಿದನ್ನು ತಾಳಿಕೊಂಡೆವು. ಮುಲ್ತಾನಿನಲ್ಲಿಯೂ ಇದೇ ಕಥೆ. ದೇವಾಲಯಗಳು ಸುಡಲ್ಪಟ್ಟವು. ಭಗವದ್ಗೀತಾ ಹಾಗು ಗ್ರಂಥಸಾಹೇಬ ಗ್ರಂಥಗಳಿಗೆ ಬೆಂಕಿ ಹಾಕಲ್ಪಟ್ಟಿತು. ಬಕರೀದ ಸಮಾರಂಭದ ಕಾಲದಲ್ಲಿ ಐಕ್ಯರಕ್ಷಣಕ್ಕಾಗಿ ಬಿನ್ನೈಸಿಕೊಂಡರೂ, ಹಲವು ಕಡೆಯಲ್ಲಿ ದಂಗೆಗಳಾದವು. ನಿರೀಕ್ಷಣೆಯಷ್ಟು ಒದಗಲಿಲ್ಲೆಂಬ ಮಾತು ನಿಜ. ಹಿಂದೂ ಸ್ತ್ರೀಯರು ೫೦ ವರುಷಗಳ ಮುಂಚಿನಷ್ಟು ತಾವು ಸುರಕ್ಷಿತರಿದ್ದೇವೆಂದು ಈಗ ತಿಳಿಯರು. ಅಮೃತಸರದಲ್ಲಿ ಹಿಂದೂ ಸ್ತ್ರೀಯರು ಮೊದಲಿನಂತೆ ಈಗ ಮನೆಯ ಹೊರಗೆ ಬೀಳುವದಿಲ್ಲ. ಎಲ್ಲಿ ಮಾನಭಂಗವಾಗುತ್ತದೋ, ಎಂದು ಅವರು ಯಾವಾಗಲೂ ಹೆದರುತ್ತಾರೆ. ಖಾಣವತ್, ಅಜಮೀರಗಳಲ್ಲಿ ದೇವಾಲಯಗಳನ್ನು ಚೂರು ಚೂರು ಮಾಡಿ, ಅವುಗಳಿಗೆ ಬೆಂಕಿ ಕೊಟ್ಟದ್ದೂ, ಮೂರ್ತಿಗಳನ್ನು ನಾಶಮಾಡಿಸಿದ್ದೂ ನಿಮಗೆ ಗೊತ್ತಿದೆ.

ಇಂಥ ಪ್ರಸಕ್ತಿಯಲ್ಲಿ ನಮ್ಮ ಸಾಮರ್ಥ್ಯವನ್ನು ಬೆಳೆಸುವದು, ವ್ಯಕ್ತಿಗಳ ಹಾಗು ಸಮಾಜದ ಕರ್ತವ್ಯವಾಗಿದೆ. ಮಹಮ್ಮದೀಯರೊಡನೆ ಪ್ರೀತಿಯಿಂದ ಸದಿಚ್ಛಾಪ್ರೇರಿತರಾಗಿ ನಡೆಕೊಳ್ಳಲೂ ನಾವು ಬದ್ಧಕಂಕಣರಿದ್ದೇವೆ. ಪರದೇಶದಿಂದ ಬಂದ ಕೇವಲ ಅಲ್ಪಸಂಖ್ಯಾಕರು ನಮ್ಮನ್ನಾಳತೊಡಗುವಷ್ಟು ನಮ್ಮ ಹಿಂದೂ ಸಮಾಜವು ದುರ್ಬಲವಾದದ್ದು ವ್ಯಸನಕರವು. ದೇಗುಲಗಳ ನಾಶವಾಗುವಾಗ, ಸ್ತ್ರೀಯರ ಮಾನಭಂಗವಾಗುವಾಗ ನೋಡಿ, ಬದುಕಿ ಉಳಿಯುವ ಹಿಂದೂ ಧರ್ಮೀಯನಿಗೆ ಧಿಕ್ಕಾರವಿರಲಿ. ಮಿಸ್ ಎಲಿಸ್‌ಳ ಅಪಹರಣವಾದ ಕೂಡಲೆ, ಇಡೀ ಬ್ರಿಟಿಶ ಸಾಮ್ರಾಜ್ಯದಲ್ಲಿ ಕಲ್ಲೋಲವೆದ್ದಿತು. ಇಂಗ್ಲೀಷ ಹುಡುಗಿಯರಿಗೂ, ಹೆಂಗಸರಿಗೂ ಬೇಕಾದಲ್ಲಿ ಸಂರಕ್ಷಿಸಲು ರಾಷ್ಟ್ರೀಯ ಸಾಮರ್ಥ್ಯವಿದೆ. ಮಹಮ್ಮದೀಯ ಸ್ತ್ರೀಯರಿಗೂ, ಇದೇ ಆಧಾರವಿದೆ. ಹಿಂದೂ ಸ್ತ್ರೀಯರ ರಕ್ಷಣಕ್ಕಾಗಿಯಾದರೂ, ಇಂಥ ರಾಷ್ಟ್ರೀಯ ಸಾಮರ್ಥ್ಯವು ಮೊದಲಿತ್ತು. ಇಂಥ ಸಾಮರ್ಥ್ಯವನ್ನು ಸಂಪಾದಿಸಿದ ಹೊರತು, ನಾವು ಜಗತ್ತಿನೊಳಗಿನ ಸಾಮರ್ಥ್ಯವಂತ ರಾಷ್ಟ್ರದಲ್ಲಿ ನಡೆಯಲಾರೆವು. ಯಾವದೇ ಮಾರ್ಗವನ್ನು ನಾವು ಅವಲಂಬಿಸುವದಿರಲಿ, ಪರರನ್ನು ನೋಯಿಸದಂತೆ, ರಾಷ್ಟ್ರೀಯ ಒಕ್ಕಟ್ಟಿಗೆ ಅಡ್ಡಿಯಾಗದಂತೆ ನಾವು ಜಾಗರೂಕರಾಗಬೇಕು. ಹಿಂದೂ ಸಮಾಜವು ದುರ್ಬಲವಿದೆ, ಧರ್ಮ ಹಾಗು ಸ್ತ್ರೀಯರಿಗೆ ರಕ್ಷಿಸಲು ಅಸಮರ್ಥವಿದೆ, ಎಂಬ ಕಾರಣಗಳ ಮೂಲಿಂದಲೇ ನಮ್ಮ ನಮ್ಮೊಳಗೆ ಬಡದಾಟವೇಳುತ್ತದೆ. ಐಕ್ಯವೂ, ಪ್ರೀತಿಯೂ ನೆಲೆಗೊಳ್ಳಬೇಕಾದರೆ, ಎರಡೂ ಸಮಾಜಗಳ ಸಾಮರ್ಥ್ಯವು ಸಮಾನವಾಗಿರಬೇಕು. ಹಿಂದೂ ಸಮಾಜವು ಸ್ವತಃ ತಿದ್ದಿಕೊಳ್ಳುವಷ್ಟು ಸಾಮರ್ಥ್ಯವುಳ್ಳದ್ದೆಂಬ ಅರಿವು ಮಹಮ್ಮದೀಯ ಸಮಾಜದೊಳಗಿನ ಪುಂಡರಿಗೆ ಹುಟ್ಟಿದರೆ, ಅವರು ನಮಗೆಂದೂ ಉಪದ್ರವ ಕೊಡರು. ಶ್ರೀ ಪರಮಾತ್ಮನನ್ನು ನೆನಿಸಿ, ಪಂಡಿತಜೀಯವರು ನುಡಿದದ್ದೇನಂದರೆ:— ಮಹಮ್ಮದೀಯ ಸಮಾಜಕ್ಕೆ ಅಪಕಾರ ಮಾಡಬೇಕೆಂದು ನನ್ನ ಇಚ್ಛೆಯಿಲ್ಲ. ಮಹಮ್ಮದೀಯರ ಮೇಲೆ ಹಿಂದೂಗಳ ವರ್ಚಸ್ವವಿರಬೇಕೆಂತಲೂ ನನ್ನ ಇಚ್ಛೆಯಿಲ್ಲ. ಈ ಇಚ್ಛೆಯನ್ನು ಹಿಡಿದು, ನಾನು ಈ ಮಾತುಗಳನ್ನಾಡಿದರೆ, ಶ್ರೀ ದೇವರು ನನಗೆ ಪರಮಾವಧಿಯ ಶಿಕ್ಷೆಯನ್ನೀಯಲಿ. ನನ್ನ ಹಿಂದೂ ಬಾಂಧವರಿಗೆ ತಮ್ಮ ಭಗಿನಿ-ಕುಮಾರಿ ಮೊದಲಾದವರನ್ನು ಸಂರಕ್ಷಿಸಲು, ಧರ್ಮದ ಮಾನ ಕಾಪಾಡಲು ಸಾಮರ್ಥ್ಯವಿಲ್ಲದಿದ್ದರೆ, ಅವರು ಈ ಜಗತ್ತಿನೊಳಗಿಂದ ನಾಮಶೇಷವಾಗುವದು ನನಗೆ ಇಷ್ಟವಿದೆ. ನಮ್ಮ ದುರ್ಬಲತೆಗೆ ನಾವೇ ಕಾರಣರು; ಕರ್ತವ್ಯಪರಾಙ್ಮುಖರೂ ನಾವೇ. ಹಿಂದೂ, ಎಂದು ಕರೆದರೆ, ನಾಚಿಕೆಹೊಂದಬೇಡಿರಿ. ಹಿಂದೂಗಳ ಹಿತವನ್ನೆಯಾದಾಗ ಮಹಮ್ಮದೀಯ ಮುಂದಾಳುಗಳೆಡೆಗೆ ನಾವು ಹೋಗಿ, ನಮ್ಮ ಕಲಹಗಳನ್ನು ನಿವಾರಿಸಿಕೊಳ್ಳಲೆತ್ನಿಸಬೇಕು. ದಂಗೆಗಳಾದಾಗ ಎರಡೂ ಸಮಾಜಗಳ ಲೋಕನಾಯಕರ ಸಾಹಚರ್ಯ ಪಡೆದು, ವಾದಗ್ರಸ್ತ ಪ್ರಶ್ನೆಗಳನ್ನು ನಿರ್ಣಯಿಸಬೇಕು.

ಬಳಿಕ, ಪಂಡಿತಜೀಯವರು ಹುಡುಗಿಯರ ಶಿಕ್ಷಣದ ಮೇಲೆ ನಾಲ್ಕು ಮಾತಾಡಿದರು. ಬ್ರಹ್ಮಚರ್ಯ ಪಾಲನೆಯ ಆವಶ್ಯಕತೆಯನ್ನೂ, ಮಹತ್ವವನ್ನೂ ವಿಶೇಷವಾಗಿ ನುಡಿದು, ಪ್ರತಿಯೊಂದು ನಗರದಲ್ಲಿ, ಹಳ್ಳಿಯಲ್ಲಿ ಕಾಯಿಕ ಸಾಮರ್ಥ್ಯದ ಬೆಳವಣಿಗೆಗಾಗಿ ವ್ಯಾಯಾಮ ಶಾಲೆಗಳನ್ನು ಏರ್ಪಡಿಸಬೇಕೆಂದರು. ಮದುವೆ-ಮುಂಜಿ ಮೊದಲಾದ ಸಾಮಾಜಿಕ ಕಾರ್ಯಗಳಲ್ಲಿ ಮಿತಿಯಿಂದ ವೆಚ್ಚಮಾಡಬೇಕೆಂದರು. ವರದಕ್ಷಿಣೆಯನ್ನು ಬೇಡುವ ಪದ್ಧತಿಯನ್ನು ಅಮೂಲಾಗ್ರ ಕಿತ್ತೊಗೆಯಬೇಕೆಂದರು. ಅಸ್ಪೃಶ್ಯರ ಬಗ್ಗೆ ಪಂಡಿತಜೀಯವರು ಮಾತಾಡಹತ್ತಿದರು. ಆಗ, ಅವರ ಕಣ್ಣೊಳಗಿಂದ ಬಾಷ್ಪಗಳು ಪಳಪಳನೆ ಸುರಿಯುತ್ತಿದ್ದವು. “ಹಿಂದೂ ಸಭೆಯಲ್ಲಿ ಎಲ್ಲ ಜಾತಿಗಳ ಸಮಾವೇಶವಿದೆ. ನಮ್ಮ ಅಸ್ಪೃಶ್ಯರು ಹಿಂದೂ ಧರ್ಮವನ್ನು ಅನುಸರಿಸುತ್ತಾರೆ. ರಾಮ, ಕೃಷ್ಣ ಮೊದಲಾದ ಹಿಂದೂ ದೈವತಗಳನ್ನು ಭಜಿಸುತ್ತಾರೆ, ಜಪತಪ ಮಾಡಿ, ಭಜನ ಮಾಡುತ್ತಾರೆ. ಶ್ರೀಮಂತರಿದ್ದರೆ, ದೇವಾಲಯಗಳನ್ನು ಸಹ ಕಟ್ಟುತ್ತಾರೆ.” ಇಷ್ಟರಲ್ಲಿ ಸ್ವಾಮೀ ಶ್ರದ್ಧಾನಂದರವರು ಉದ್ಗರಿಸಿದ್ದೇನಂದರೆ :— “ಆದರೆ, ಅವರಿಗೆ ಅವೇ ದೇವಾಲಯಗಳಲ್ಲಿ ಪ್ರವೇಶವಿಲ್ಲ; ಪೂಜಿಸಲೂ ಇಂಬಿಲ್ಲ.” ಪಂಡಿತಜೀಯವರಿಗೆ ಬಹಳೇ ದುಃಖವಾಯಿತು. ಕಣ್ಣೀರು ಸುರಿಯಹತ್ತಿತು. ತಲೆಯ ಮೇಲಿನ ರುಮಾಲನ್ನು ತೆಗೆದುಕೊಂಡು ನುಡಿದದ್ದೇನಂದರೆ:— “ಹಿಂದೂ ಧರ್ಮವನ್ನು ಹಿಂಬಾಲಿಸುವ ನನ್ನ ಅಸ್ಪೃಶ್ಯ ಬಾಂಧವರ ಚರಣಗಳಿಗೆ ಈ ನನ್ನ ರುಮಾಲನ್ನು ನಾನು ಏಕೆ ಅರ್ಪಿಸಬಾರದು? ದೇಗುಲದಲ್ಲಿ ದೇವದರ್ಶನ ಪಡೆಯಲು ಅಸ್ಪೃಶ್ಯ ಬಾಂಧವನನ್ನು ಅಪ್ಪಣೆಯನ್ನೀಯದ ಕಾರಣವೇನು? ನಾನು ಪಾಪಕರ್ಮದಿಂದ ತುಂಬಿ ತುಳುಕುತ್ತೇನೆ. ದೇವಾಲಯಗಳನ್ನು ಪ್ರವೇಶಿಸಲು ನನ್ನ ಅಸ್ಪೃಶ್ಯ ಬಾಂಧವರಿಗೆ ಪ್ರತಿಬಂಧಿಸುವ ಹಕ್ಕು ನನಗೆ ಹೇಗೆ ಪ್ರಾಪ್ತವಾಯಿತು?” ಸಭೆಯಲ್ಲಿ ನೆರೆದ ಧರ್ಮಿಷ್ಠರಿಗೆ ಕರಜೋಡಿಸಿ, ಪಂಡಿತಜೀಯವರು ಪ್ರಾರ್ಥಿಸಿಕೊಂಡಿದ್ದೇನಂದರೆ.— “ವಿದ್ವದ್ವರ್ಯ ಪಂಡಿತರೇ, ದೇವರ ದರ್ಶನ ಪಡೆಯಲು ಈ ಬಾಂಧವರನ್ನು ಪ್ರತಿಬಂಧಿಸಬೇಡಿರಿ. ಶ್ರೀ ದೇವರು ನಿಮಗೆ ಕಲ್ಯಾಣ ಮಾಡುವನು.”

ಬಾವಿಗಳಿಂದ ನೀರು ಸೇದಲು ನಮ್ಮ ಅಸ್ಪೃಶ್ಯರಿಗೆ ಪ್ರತಿಬಂಧವು. ಅವರು ಮಹಮ್ಮದೀಯರಾದರೆ, ಕ್ರಿಶ್ಚನ್ನರಾದರೆ ಅವರಿಗೆ ಈ ಪರಿಯಿಂದ ಅಪಮಾನವಾಗುವದಿಲ್ಲ; ಪ್ರತಿಬಂಧವೂ ಆಗುವದಿಲ್ಲ. ಅದರಿಂದ ಮಹಮ್ಮದೀಯರೂ, ಕ್ರಿಶ್ಚನ್ನರೂ ಅವರಿಗೆ ಧರ್ಮಾಂತರ ಹೊಂದಲು ಉಪದೇಶಿಸುತ್ತಾರೆ. ಖಾಣವತ್‌ದಲ್ಲಿ ಇದೇ ಪರಿಯ ಹಕೀಕತು ಸಂಭವಿಸಿತು. ಖಾಣವತ್‌ದೊಳಗಿನ ಹಿಂದೂ ದೇವಾಲಯದ ಮೇಲೆ ಮಹಮ್ಮದೀಯರು ಸಾಗಿ ಹೋದಾಗ, ಅದರ ರಕ್ಷಣಕ್ಕಾಗಿ ಮೊಟ್ಟಮೊದಲು ಓಡಿ ಹೋದವರು ಈ ಅಸ್ಪೃಶ್ಯ ಬಾಂಧವರೇ. ರಂತಿದೇವ ಅರಸರದೊಂದು ಕಥೆಯಿದೆ. ಈ ಅರಸರಿಗೆ ಒಮ್ಮೆ ೪೮ ದಿನಗಳ ವರೆಗೆ ಉಪವಾಸ ಬೀಳುವ ಪ್ರಸಂಗ ಬಂತು. ಆ ಬಳಿಕ, ಕೆಲ ತಿನಸುಗಳು ಸಿಕ್ಕಿದವು. ಒಬ್ಬ ಬ್ರಾಹ್ಮಣ ಭಿಕ್ಷುಕನು ಅವರೆಡೆಗೆ ಹೋದನು. ಆ ತಿನಸುಗಳನ್ನೂ ಅರಸರು ಅವನಿಗೇ ಕೊಟ್ಟರು. ಕೂಡಲೆ, ಇಬ್ಬ ಅಸ್ಪೃಶ್ಯ ಭಿಕ್ಷುಕರು ನಾಯಿಗಳ ಸಹಿತ ಅರಸರಿದ್ದಲ್ಲಿ ಹೋದರು. ಅವರಿಗೆ ಅತ್ಯಾದರದಿಂದ, ಪ್ರೀತಿಯಿಂದ ರಂತಿ ದೇವರು ತಮ್ಮ ಹತ್ತರ ಇದ್ದ ಸರ್ವಸ್ವವನ್ನರ್ಪಿಸಿದರು. ಅಸ್ಪೃಶ್ಯನೊಬ್ಬನು ಬಿಸಿಲು ಕಾವದಲ್ಲಿ ನಿಮ್ಮ ಕೆಲಸಮಾಡಿ, ದಣಿದು ತೃಷೆಯಿಂದ ನಿಮ್ಮೆಡೆಗೆ ಬರುತ್ತಾನೆ. ಇಂಥ ಅಸ್ಪೃಶ್ಯರಿಗೆ ಬಾವಿಗಳಿಂದ ನೀರು ಸೇದಿಕೊಳ್ಳಲು ಪ್ರತಿಬಂಧಿಸುವಷ್ಟು ಕ್ರೂರಹೃದಯಿ ಹಿಂದೂ ಧರ್ಮೀಯನು ಯಾರಿರುವನು? ಅಸ್ಪೃಶ್ಯರ ಕೆಲಸವಿದ್ದಾಗ ಮನೆಯಲ್ಲಿ ಅವರನ್ನು ಬರ ಮಾಡಿಕೊಳ್ಳಲಿಕ್ಕೆ ಹಿಂದೂಗಳ ಅಡ್ಡಿಯಿರುವದಿಲ್ಲ. ಅವರಿಗೆ ಸ್ವಚ್ಛವಿರಲು ಕಲಿಸಿರಿ. ಉಗಿಬಂಡಿಯಲ್ಲಿ ನಮ್ಮೊಡನೆ ಪ್ರವಾಸ ಮಾಡಲು ಅವರಿಗೆ ನಮ್ಮ ಅಡ್ಡಿಯಿಲ್ಲ. ಶಾಲೆಗಳಲ್ಲಿ ನಮ್ಮೊಡನೆ ಕೂತುಕೊಂಡು ಕಲಿಯಲೂ ನಮ್ಮ ಆತಂಕವಿಲ್ಲ. ಇದೇಕೆ? ಸರಕಾರವು ಇದನ್ನು ವಿಧಿಸಿದ್ದರಿಂದಲ್ಲವೇ?

ಪಂಡಿತಜೀಯವರು ಧರ್ಮಾಂತರ ಹೊಂದಿದ ಹಿಂದೂ ಧರ್ಮಾಭಿಮಾನಿಗಳಿಗೆ ಹಿಂದೂ ಸಮಾಜದಲ್ಲಿ ಪ್ರಾಯಶ್ಚಿತ್ತ ವಿಧಿಯಿಂದ ಪುನಃ ಸೇರಿಸಿಕೊಳ್ಳುವದು ನಮ್ಮೆಲ್ಲರ ಕರ್ತವ್ಯವೆಂತಲೂ ಪ್ರತಿಪಾದಿಸಿದರು. ಮಹಮ್ಮದೀಯರ ಧರ್ಮವು ಹಿಂದೂ

ಸಮಾಜದೊಳಗಿಂದ ಲಕ್ಷಾವಧಿ ಮಂದಿಗಳನ್ನು ತನ್ನೊಳಗೆ ಸೇರಿಸಿಕೊಳ್ಳುತ್ತಿರುವಾಗ, ನಮ್ಮ ಧರ್ಮದ ಬಾಗಿಲನ್ನು ಮುಚ್ಚಿ ನಾವು ಕುಳಿತರೆ, ನಮ್ಮ ಸಮಾಜವು ದಿನೇ ದಿನೇ ಕ್ಷೀಣವಾಗುವದು. ಕಾರಣಾಂತರಗಳಿಂದ ಪರಧರ್ಮಕ್ಕೆ ಸೇರಿದ ಹಿಂದೂ ಧರ್ಮಾಭಿಮಾನಿಗೆ ಪ್ರಾಯಶ್ಚಿತ್ತ ವಿಧಿಯನ್ನಿತ್ತು, ಸ್ವೀಕರಿಸಿಕೊಳ್ಳುವದು ನಮ್ಮ ಧರ್ಮಶಾಸ್ತ್ರಕ್ಕೂ ಸಮ್ಮತವಿದೆ. ಬಲಾತ್ಕಾರದಿಂದ ಅಥವಾ ಸ್ವಸಂತೋಷದಿಂದ ಧರ್ಮಾಂತರ ಹೊಂದಿದವರಿಗೆ, ಅವರ ಇಚ್ಛೆಯಿದ್ದರೆ, ಹಿಂದೂ ಧರ್ಮದಲ್ಲಿ ಸೇರಿಸಿಕೊಳ್ಳಬಹುದೆಂದು ಮಹಾಪ್ರಭಾಗದಲ್ಲಿ ಹಜನವಿದೆ. ಕಳೆದ ೩ ವರುಷಗಳಲ್ಲಿ ೧ ಲಕ್ಷ ಹಿಂದೂಗಳಿಗೆ ಖೋಜಾ ಮುಸಲ್ಮಾನರು ತಮ್ಮ ದೀಕ್ಷೆಯನ್ನಿತ್ತರು. ಅವರೆಲ್ಲರು ಹಿಂದೂ ಧರ್ಮವನ್ನು ಸೇರಲಿಚ್ಛಿಸುತ್ತಿದ್ದರೆ, ಆ ಬಗ್ಗೆ ತಕ್ಕ ವ್ಯವಸ್ಥೆಯನ್ನು ಏರ್ಪಡಿಸುವದು ಹಿಂದೂ ಸಮಾಜೋದ್ಧಾರಕರ ಕರ್ತವ್ಯವು. ಇದೇ ದೃಷ್ಟಿಯಿಂದ ತಾವು ಶುದ್ಧಿ ಚಳವಳಿಯನ್ನು ಪುರಸ್ಕರಿಸುತ್ತೇವೆಂದು ಪಂಡಿತಜೀಯವರು ನುಡಿದರು.

ಕಾನಡಾವೃತ್ತ.

ಗುರುವಾರ, ತಾರೀಖು ೩೦ ನೆಯ ಅಗಸ್ಟ ೧೯೨೮

ರಿಪುದಮನಸಿಂಗಜಿ.

ಇನ್ನೊಂದು ಚಿತ್ರವೇಧಕ ಕಥೆ.

ಪಂಜಾಬ ಪ್ರಾಂತದಲ್ಲಿ ನಾಭಾ ಎಂಬ ದೊಡ್ಡ ಸಂಸ್ಥಾನವಿದೆ. ಈ ಸಂಸ್ಥಾನದ ಕ್ಷೇತ್ರಫಲವು ಸುಮಾರು ೧ ಸಾವಿರ ಚೌರಸ ಮೈಲು. ಜನಸಂಖ್ಯೆಯು ೪ ಲಕ್ಷ. ಈ ಸಂಸ್ಥಾನದ ಅರಸರು ಶ್ರೀ ಮಹಾರಾಜಾ ರಿಪುದಮನಸಿಂಗಜಿ ಮಾಳವೇಂದ್ರ ಬಹಾದೂರರು. ಇವರು ರಾಜನಿಷ್ಠ ಸಂಸ್ಥಾನಿಕರು. ಮಹಾಯುದ್ಧದಲ್ಲಿ ಸಾಮ್ರಾಜ್ಯ ಸರಕಾರಕ್ಕೆ ಅರ್ಧ ಕೋಟಿ ರೂಪಾಯಿಗಳಿಗೆ ಮಿಕ್ಕಿ ಸಹಾಯ ಮಾಡಿರುವರು. ಮೆಸೊಪೊಟೆಮಿಯಾದಲ್ಲಿ ರೋಗಗ್ರಸ್ತರ ಶುಶ್ರೂಷೆಗಾಗಿ ಒಂದು ಹಡಗವನ್ನೂ ಅರ್ಪಿಸಿದ್ದರು. ಮಹಾರಾಜರು ಪ್ರಜಾನಿಷ್ಠರೂ ಇರುವರು. ಹಿಂದುಸ್ಥಾನದ ಸುಸಂಸ್ಕೃತ ಸಂಸ್ಥಾನಿಕರಲ್ಲೊಬ್ಬರಿವರು. ಪ್ರಜಾಪ್ರಾತಿನಿಧಿಕ ಸಂಸ್ಥೆಗಳಿಗೆ ಇವರ ಮನಃಪೂರ್ವಕ ಸಹಾನುಭೂತಿಯಿದೆ. ಭರತಖಂಡದಲ್ಲಿ ನಡೆಯುವ ರಾಷ್ಟ್ರೀಯ ಚಳವಳಿಗೆ ಇವರ ಮನಃಪೂರ್ವಕ ಪುಷ್ಟಿಯಿದೆ. ೧೯೨೧ ರಲ್ಲಿ ಮಸೂರಿ ನಗರದಲ್ಲಿ ಲೋಕಮಾನ್ಯರ ಸ್ಮಾರಕ ಸಂಸ್ಥೆಯ ಅನಾವರಣ ಸಮಾರಂಭವು ಜರುಗಿತು. ಮಹಾರಾಜರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿ, ಅಸ್ಥೆಯಿಂದ ಲೋಕಮಾನ್ಯರ ಗುಣವರ್ಣನಪರ ಉಪನ್ಯಾಸವನ್ನಿತ್ತರು. ಸ್ಮಾರಕ ಸಂಸ್ಥೆಯ ವಾಚನಾಲಯಕ್ಕೆ ೫ ಸಾವಿರ ರೂಪಾಯಿಗಳನ್ನು ಅರ್ಪಿಸಿದರು. ಮಹಾರಾಜರ ಸ್ವಭಾವವು ಯಾವಾಗಲೂ ಸ್ವತಂತ್ರವು. ಸಂಸ್ಥಾನದಲ್ಲಿದ್ದ ಬ್ರಿಟಿಶ್ ಪೊಲಿಟಿಕಲ್ ಏಜಂಟರಿಗೂ, ಮಹಾರಾಜರಿಗೂ ಚಲೋ ಸೇರಿಬರುತ್ತಿದ್ದಿಲ್ಲ. ಸಿಮಲಾದೊಳಗಿನ ಅಧಿಕಾರಿಗಳಿಗೂ, ಇವರಿಗೂ ಸೇರಿಬರುತ್ತಿದ್ದಿಲ್ಲ. ಸರಕಾರಿ ನೌಕರರು ತಕ್ಕಂತೆ ನಡೆಯದಿದ್ದರೆ, ತಮ್ಮ ಮಾಲಕಿಯ ಬಂಗಲೆಗಳನ್ನು ಖಾಲಿಮಾಡಿ ನಡೆಯಿರಿ ಎಂದು ಇವರು ಸಹ ದೊಡ್ಡ ದೊಡ್ಡ ಅಧಿಕಾರಿಗಳಿಗೆ ನೋಟೀಸು ಕೊಡುತ್ತಿದ್ದರು. ಇಂಥ ಸ್ವತಂತ್ರ ವೃತ್ತಿಯ ಮಹಾರಾಜರಾದ ರಿಪುದಮನಸಿಂಗಜಿ ಬಹಾದೂರರವರು ವಿಪರೀತ ಗ್ರಹಗತಿಗೆ ಕಾಲವಶಾತ್ ಒಳಗಾದರು.

ಕೂಡಲೆ, ಒಂದು ಮುಸಲವು ಉತ್ಪನ್ನವಾಯಿತು. ನೆರೆಯ ಪತಿಯಾಲಾ ಸಂಸ್ಥಾನಿಕರಿಗೂ, ಮಹಾರಾಜರಿಗೂ, ಹಗೆಯಿತ್ತು. ಮಹಾರಾಜರು ತಮ್ಮ ಹಗೆಯನ್ನು ಸಾಧಿಸಲು ನ್ಯಾಯಖಾತೆಯ ದ್ವಾರಾ ಪತಿಯಾಲಾ ಸಂಸ್ಥಾನದ ಪ್ರಜೆಗಳ ಮೇಲೆ ಅನೇಕ ಪರಿಯ ಕಾಟೋದ್ಯೋಗಗಳನ್ನು ರಚಿಸಿ, ನಿರಪರಾಧಿಗಳನ್ನು ದಂಡಿಸುತ್ತಾರೆಂಬ ಆರೋಪವು ಹೊರಟಿತು. ನ್ಯಾಯಾಸನಗಳದ್ವಾರಾ, ಪೋಲೀಸರದ್ವಾರಾ ಮಹಾರಾಜರು ನೆರೆಯ ಸಂಸ್ಥಾನದ ಬಡ ಪ್ರಜೆಗಳನ್ನು ಪೀಡಿಸುತ್ತಾರೆಂತಲೂ ಸುದ್ದಿ ಎಬ್ಬಿತು. ಹಿಂದುಸ್ಥಾನ ಸರಕಾರವು ಯಾವಾಗಲೂ ನ್ಯಾಯಪ್ರಿಯವು. ನ್ಯಾಯದಾನವು ಬ್ರಿಟಿಶರ ಮುಖ್ಯ ಲಕ್ಷಣವು. ನ್ಯಾಯಾಸನಗಳ ದ್ವಾರಾ ಬಲಾತ್ಕಾರದಿಂದ ಪರರ ಪ್ರಜೆಗಳನ್ನು ಕಾಡುವದು ನಮ್ಮ ಸರಕಾರಕ್ಕೆ ಸೇರಲಿಲ್ಲ. ಪತಿಯಾಲಾ ಸಂಸ್ಥಾನಿಕರು, ಮಹಾರಾಜರ ಮೇಲೆ ಹೊರಿಸಿದ ಆರೋಪಗಳ ಇತ್ಯರ್ಥ ನಡಿಸಲು, ಹಿಂದುಸ್ಥಾನ ಸರಕಾರವು ಮಿ| ಸ್ಟುವರ್ಟ ಎಂಬ ನ್ಯಾಯಮೂರ್ತಿಗಳನ್ನು ನೇಮಿಸಿತು. ನ್ಯಾಯಮೂರ್ತಿ ಸ್ಟುವರ್ಟರು ಪುರಾವೆಯನ್ನು ಸಂಗ್ರಹಿಸಿ, ಮಹಾರಾಜರು ತಮ್ಮ ಕೈಕೆಳಗಿನ ನೌಕರರ ಮುಖಾಂತರ ಪತಿಯಾಲಾ ಸಂಸ್ಥಾನದ ವಿರುದ್ಧ ಪದ್ಧತಶೀರದೌಡನ್ನೇ ನಡಿಸಿದರೆಂದು ತಮ್ಮ ಅಭಿಪ್ರಾಯವನ್ನು ಕೊಟ್ಟರು. ಮಹಾರಾಜರು ಮಾಡಿದ ದುರಾಚಾರಗಳ ನಾಮನಿರ್ದೇಶವು ಇನ್ನೂ ಜಾಹೀರಾಗಲಿಲ್ಲ. ನ್ಯಾಯಮೂರ್ತಿಗಳ ರಿಪೋರ್ಟನ್ನು ವಿಚಾರಿಸಿ, ಈ ಬಗ್ಗೆ ಮಹಾರಾಜರಿಗೆ ಯಾವ ಪ್ರಕಾರದ ಶಾಸನ ವಿಧಿಸಬೇಕು ಎಂದು ಹಿಂದುಸ್ಥಾನ ಸರಕಾರವು ಆಲೋಚಿಸುತ್ತಿರುವಷ್ಟರಲ್ಲಿ, ಒಂದು ಅನಪೇಕ್ಷಿತ ಚಮತ್ಕಾರವು ಸಂಭವಿಸಿತು. ರಿಪುದಮನಸಿಂಗಜಿಯವರ ಎದೆ ಹಾರಿತು. ಮಹಾರಾಜರು ಸಾಮ್ರಾಜ್ಯ ಸರಕಾರದ ಪ್ರತಿನಿಧಿಗಳಾದ ಪೊಲಿಟಿಕಲ್ ಏಜಂಟರಾದ ಕ| ಮಿಂಚಿನ್‌ರವರ ದರ್ಶನ ಪಡೆದರು. ತಾವಾಗಿ ದರ್ಶನ ಪಡೆದರು. "ರಾಜ್ಯವನ್ನೇ ತ್ಯಜಿಸುತ್ತೇನೆ. ನನ್ನನ್ನು ಬದುಕಿಸಿರಿ" ಎಂದು ಅವರಿಗೆ ಹೇಳಿದರಂತೆ! ಹಿಂದುಸ್ಥಾನ ಸರಕಾರವು ಮಹಾರಾಜರ ಪ್ರಾರ್ಥನೆಯನ್ನು ಮನ್ನಿಸಲು ಮೊದಲು ಒಪ್ಪಲಿಲ್ಲಂತೆ! ಆದರೆ, ಕಟ್ಟಕಡೆಗೆ, ರಾಜ್ಯತ್ಯಾಗಕ್ಕೆ ಸಮ್ಮತಿಸಿ, ಮಹಾರಾಜರಿಗೆ ಬಿಡುಗಡೆ ಮಾಡಬೇಕಾಯಿತಂತೆ! ರಾಜ್ಯತ್ಯಾಗದ ಮಹತ್ವದ ಶರ್ತುಗಳು ಯಾವವೆಂದರೆ.— ರಾಜ್ಯದಾಡಳಿತೆಯನ್ನು ಹಿಂದುಸ್ಥಾನ ಸರಕಾರವು ಮಹಾರಾಜರ ೪ ವರ್ಷ ಪ್ರಾಯದ ಅಪ್ರಾಯಸ್ಥ ಮಗನು ಪ್ರಾಯ ಬರುವ ವರೆಗೆ ನಡಿಸಬೇಕು. ಮಹಾರಾಜರು ಸಂಸ್ಥಾನದ ಹೊರಗೆ ವಾಸಮಾಡಿಕೊಂಡಿರಬೇಕು. ಸಂಸ್ಥಾನದ ಹದ್ದಿನಲ್ಲಿ ಪ್ರವೇಶಿಸಬೇಕಾದರೆ, ಹಿಂದುಸ್ಥಾನ ಸರಕಾರದ ಅಪ್ಪಣೆಯನ್ನು ಮುಂದಾಗಿ ಪಡೆಯಬೇಕು. ಮಹಾರಾಜರು ದೊರಕಿಸಿದ ಬಿರುದಾವಳಿಗೆ ಈ ರಾಜ್ಯತ್ಯಾಗದಿಂದ ಅಪಾಯವೇನಿಲ್ಲ. ಸಂಸ್ಥಾನದಿಂದ ಮಹಾರಾಜರಿಗೆ ಜೀವಮಾನವಿರುವ ವರೆಗೆ ಭುಕ್ತ್ಯಾಂಶವು ದೊರೆಯುವದು.

ಈ ರಾಜ್ಯತ್ಯಾಗದ ಕಥೆಯು ಪಂಜಾಬದಲ್ಲಿ ಜಾಹೀರಾದ ಕೂಡಲೆ, ಪಂಜಾಬ ಪ್ರಾಂತದಲ್ಲೆಲ್ಲ ಒಂದು ಪ್ರಕಾರದ ಶೋಕನೆಬ್ಬಿತು. ಮಹಾರಾಜರ ಜ್ಞಾತಿಬಾಂಧವರಾದ ಶೀಖರಿಗಂತು ಅವರ್ಣನೀಯ ದುಃಖವಾಯಿತು. ಇದೆಂಥ ರಾಜ್ಯತ್ಯಾಗದ ಚಮತ್ಕಾರ! ಎಂದು ಅನೇಕರು ಹೇಳಹತ್ತಿದರು. ರಿಪುದಮನಸಿಂಗರಂಥ ಧೈರ್ಯಶಾಲಿಗಳು ಹೇಗೆ ಪುಕ್ಕರಾದರು? ಎಂದು ಚೌಕಶಿ ನಡೆಯಿತು. ಆಗ ಶಿಕ್ಕಿದ ವಿಶ್ವಸನೀಯ ಸುದ್ದಿಯನ್ನು ವಾಚಕ ಮಹಾಶಯರಿಗೆ ನಿವೇದಿಸುವೆವು. ಮಹಾರಾಜರಿಗೆ ರಾಜ್ಯತ್ಯಾಗ ಮಾಡಿಸಲು ಅನೇಕ ಕಾರಸ್ಥಾನಗಳು ನಡೆದವು. ಪೊಲಿಟಿಕಲ್ ಏಜಂಟರಾದ ಕರ್ನಲ ಮಿಂಚಿನ್‌ರವರು ಮಹಾರಾಜರಿಗೆ ಬೆಟ್ಟಿಯನ್ನಿತ್ತು, ಅವರಿಗೆ ಗಾದಿಯನ್ನು ತ್ಯಜಿಸ ಹೇಳಿದರು. ಮಹಾರಾಜರು ಉತ್ತರವನ್ನೀಯಲಿಲ್ಲ. ೨-೩ ದಿನಗಳಲ್ಲಿ ಮುಖ್ಯ ಪ್ರಧಾನರಾದ ಮಿ| ನರಸಿಂಗರಾವರವರು ಕರ್ನಲ ಮಿಂಚಿನ್‌ರವರ ದರ್ಶನ ಪಡೆದರು. ಬಳಿಕ, ಅವರು ಮಹಾರಾಜರಿಗೆ ಬೆಟ್ಟಿಯಾಗಿ, ನೀವು ರಾಜ್ಯತ್ಯಾಗ ಮಾಡದಿದ್ದರೆ, ನೀವು ಪದಚ್ಯುತರಾಗಬೇಕಾಗುವದೆಂತಲೂ ಹೆದರಿಸಿದರು. ಮಹಾರಾಜರ ಮೇಲೆ ಖಟ್ಲೆ ಸಹ ಆಗಬಹುದೆಂತಲೂ ನುಡಿದರಂತೆ! ಮತ್ತು ಜೂನ ತಾ. ೮ನೇಗೆ ರಾಜ್ಯತ್ಯಾಗದ ಪತ್ರವನ್ನು ಮಹಾರಾಜರಿಂದ ಪಡೆಕೊಂಡು, ಹಿಂದುಸ್ಥಾನ

ಸರಕಾರಕ್ಕೆ ಕಳಿಸಿದರು. ರಾಜ್ಯತ್ಯಾಗದ ಶರ್ತುಗಳ ಚರ್ಚೆಯಾಗಿ ಆಖೈರಿಗೆ ಜುಲೈ ೩೦ನೇಗೆ ಮಹಾರಾಜರು ಖಂಡಿತ ರಾಜ್ಯತ್ಯಾಗದ ಪತ್ರ ಕಳಿಸಿದರು. ಕೂಡಲೆ, ಮಹಾರಾಜರು 'ನನ್ನ ಪತ್ರ ಕೊಡಿರಿ; ನಾನು ರಾಜ್ಯತ್ಯಾಗ ಮಾಡಲಿಚ್ಛಿಸುವದಿಲ್ಲೆಂ'ದು ವಿ| ನರಸಿಂಗರಾಯ ಮೊದಲಾದ ತಮ್ಮ ಮಂತ್ರಿಗಳಿಗೆ ನುಡಿದರು. ಆದರೆ, ನರಸಿಂಗರಾಯರು ಈಗ ಸದರ ಪತ್ರವನ್ನು ತಿರುಗಿ ಪಡೆಯುವದು ಅಶಕ್ಯವೆಂತಲೂ, ರಾಜ್ಯತ್ಯಾಗ ಮಾಡಿದ್ದೇ ಶ್ರೇಯಸ್ಕರವೆಂತಲೂ, ಮಹಾರಾಜರಿಗೆ ಸಮಜೂತಿ ಕೊಟ್ಟರು. ಮಹಾರಾಜರು ಶೋಕಸಾಗರದಲ್ಲಿ ಮುಳುಗಿಬಿಟ್ಟರು; ಭ್ರಮಿಷ್ಟರಂತೆ ವರ್ತಿಸಹತ್ತಿದರು; ತಲೆಯ ಕೂದಲುಗಳನ್ನು ಕಿತ್ತಿಗೆಯಹತ್ತಿದರು. ತಮ್ಮ ಪತ್ರವನ್ನು ತಮಗೆ ಪರತ ತರಿಸಿಕೊಡಿರಿ, ಎಂದು ಮಹಾರಾಜರು ಪುನಃ ಪುನಃ ಉದ್ಗರಿಸುತ್ತಿದ್ದರಂತೆ! ತಮ್ಮ ನಂಬಿಗೆಯ ಸೇವಕರ ಮಾತಿನ ಮೇಲೆ ತಾವು ಈ ಪತ್ರ ಬರೆದೆವೆಂತಲೂ, ಅವರು ಉದ್ಗರಿಸುತ್ತಿದ್ದರು.

ಜುಲೈ ತಾ. ೮ನೇ ರವಿವಾರ ಮುಂಜಾವು ೬|| ಘಂಟೆಗೆ ಬ್ರಿಟಿಶ ಅಧಿಕಾರಿಗಳು, ೨೫೦ ಸೈನಿಕರು, ೩ ತೋಫುಗಳು, ಈ ಸರಂಜಾಮಿನೊಡನೆ ಪೊಲಿಟಿಕಲ್ ಏಜಂಟರು ಮಹಾರಾಜರ ಹಿರಾಮಹಾಲ ಮಂದಿರವನ್ನು ಸೇರಿಕೊಂಡರು. ಕಾವಲುಗಾರರು ಅಡ್ಡಿ ಮಾಡಿದರೂ ಕೇಳಲಿಲ್ಲ. ಸೈನಿಕರು ಅರಮನೆಯನ್ನು ಮುತ್ತಿದ್ದರು. ೭ ಘಂಟೆಗೆ ಪೊಲಿಟಿಕಲ್ ಏಜಂಟರು ೧೦೦ ರೂಪಾಯಿಗಳಿಗಿಂತ ಹೆಚ್ಚು ಸಂಬಳ ಪಡೆಯುವ ಮಹಾರಾಜರ ನೌಕರರದೊಂದು ದರಬಾರನ್ನು ನೆರೆಯಿಸಿ, ಮಹಾರಾಜಾ ರಿಪುದಮನಸಿಂಗರ ಆಡಳಿತೆಯು ಅಂತ್ಯವಾಯಿತೆಂತಲೂ ನುಡಿದರು. ನಾಭಾ ಮಹಾರಾಜರಿಗೂ, ಮಹಾರಾಣಿಯವರಿಗೂ ೯|| ಘಂಟೆಗೆ ಮೋಟಾರ ಬಂಡಿಯಲ್ಲಿ ಕುಳ್ಳಿರಿಸಿ, ಡೇರಾಡನ್ ಪಟ್ಟಣಕ್ಕೆ ಒಯ್ದರು. ಮಹಾರಾಜರು ಅರಮನೆಯನ್ನು ತೊರೆಯುವಾಗ ಕಣ್ಣೀರು ಸುರಿಸಿದರು. ಸರದಾರ ಕಾಳಾಸಿಂಗ, ಸರದಾರ ಫತೇಸಿಂಗರಂಥ ಸಂಸ್ಥಾನದ ಪೋಲೀಸ ಆಫೀಸರರಿಗೆ ಹೊಸ ಕಾರಾಗೃಹದಲ್ಲಿ ಬಂಧನವು ಪ್ರಾಪ್ತವಾಗಿದೆ. ನಾಭಾ ಸಂಸ್ಥಾನದ ಮಹಾರಾಜ ರಿಪುದಮನಸಿಂಗಜಿ ಮಾಲವೇಂದ್ರ, ಬಹಾದೂರರಂಥ ಸ್ವತಂತ್ರ ವೃತ್ತಿಯ ಮಹಾರಾಜರ ವಿಪನ್ನಾವಸ್ಥೆಯನ್ನು ನೋಡಿರಿ.

ಪೊಲಿಟಿಕಲ ಏಜಂಟರಾದ ಕರ್ನಲ ಮಿಂಚಿನ್‌ರವರ ಸೂತ್ರಗೊಂಬೆಯಾಗಲು ಮಹಾರಾಜರು ಒಪ್ಪದ್ದರಿಂದ, ಈ ಅವಸ್ಥೆಯು ಅವರಿಗೆ ಪ್ರಾಪ್ತವಾಯಿತೆಂದು ಶೀಖರ ಮತವಾಗಿದೆ. ಅಮೃತಸರ, ಲಾಹೋರ, ಸಿಮಲಾ ಮೊದಲಾದ ಪಟ್ಟಣಗಳಲ್ಲಿ ಶೀಖರು ಸಭೆಸೇರಿ, ಮಹಾರಾಜರ ರಾಜ್ಯತ್ಯಾಗದ ಬಗ್ಗೆ ದುಃಖಪ್ರದರ್ಶನ ಮಾಡುತ್ತಿರುವರು. ಅವರಿಗೆ ಪುನಃ ರಾಜ್ಯಪ್ರಾಪ್ತಿಯಾಗುವ ವರೆಗೆ ಶಿರೋಮಣಿ ಗುರುದ್ವಾರ ಪ್ರಬಂಧಕ ಕಮಿಟಿಯು ಸ್ಥಿರವಾಗಿ ಚಳವಳಿ ನಡಿಸುವದೆಂತಲೂ ಜಾಹೀರಾಗಿದೆ.

ಸ್ಫುಟ ಸೂಚನೆಗಳು.

೧. ನೇಕ ನಾಮದಾರ ಶ್ರೀನಿವಾಸ ಶಾಸ್ತ್ರಿಗಳು ವಿಲಾಯತಿಯೊಳಗಿನ ಪ್ರವಾಸ ಮುಗಿಸಿ, ಕಳೆದ ತಾ. ೨೪ನೇ ಶುಕ್ರವಾರಕ್ಕೆ ಮುಂಬಾಪುರಿಯಲ್ಲಿ ಬಂದಿಳಿದರು. ಕೆನಿಯಾ ವಸಾಹತಿನೊಳಗಿನ ದೇಶಬಾಂಧವರ ಬಗ್ಗೆ ಅಂತಃಕರಣಪೂರ್ವಕ ದುಡಿದು, ಮರಳಿ ಬಂದ ನಾಮದಾರರಿಗೆ ಸಂದರ್ಶಿಸಲು ಅನೇಕ ಮಿತ್ರರು ಹೋಗಿದ್ದರು. "ಮುಂಬಯಿ ಕ್ರೊನಿಕಲಿ"ನ ಪ್ರತಿನಿಧಿಗಳು ನಾಮದಾರ ಶಾಸ್ತ್ರಿಗಳ ದರ್ಶನ ಪಡೆದು, ವಿಲಾಯತಿಯೊಳಗಿನ ಶಿಷ್ಟಾಯಿಯ ಬಗ್ಗೆ ಮತವನ್ನರಹಲು ನಾಮದಾರರಿಗೆ ವಿಜ್ಞಾಪಿಸಿದರು. ಈ ಬಗ್ಗೆ ಮಾತಾಡಲು ನಾಮದಾರರ ಮರ್ಜಿಯಾಗಲಿಲ್ಲ. ಸಾಮ್ರಾಜ್ಯ ಪ್ರದರ್ಶನ, ಸಾಮ್ರಾಜ್ಯ ಪರಿಷತ್ತು ಇವುಗಳಲ್ಲಿ ಪ್ರವೇಶಗೊಳ್ಳಬಾರದೆಂಬ ಬಗ್ಗೆ ವಿಶೇಷವೇನಾದರೂ ಅರುಹಹೇಳಲು, ಆ ಬಗ್ಗೆ ತಾವು ಈ ಮೊದಲೇ ಅಭಿಪ್ರಾಯವನ್ನರುಹಿರುವೆವೆಂತಲೂ, ಮತ್ತು ಪುನಃ ಅದೇ ವಿಷಯ ಮತ ಪ್ರದರ್ಶಿಸಲು ತಾವೊಪ್ಪುವದಿಲ್ಲೆಂತಲೂ ನುಡಿದರು. ವಿಂಟರಟನ್ ದೊರೆಗಳ ದರ್ಶನನಿರಾಕರಣೆಯ ಬಗ್ಗೆ ನಾಮದಾರರಿಗೆ ಪ್ರಶ್ನೆಯಾಯಿತು. ಭೆಟ್ಟಿ ನಿರಾಕರಣೆಯಾದ ಬಳಿಕ, ನಾಮದಾರರು ಪತ್ರದ್ವಾರಾ ಪೀಲ, ವಿಂಟರಟನ್‌ರವರಿಗೆ ಆಖೈರ ಸಲಾಮು ಹೊಡೆದು, ವ್ಯಕ್ತಿಶಃ ತಮಗೆ ತೋರಿಸಿದ ಆದರದ ಬಗ್ಗೆ ಆಭಾರ ಮನ್ನಿಸಿದರು. ದೊಡ್ಡ, ದೊಡ್ಡ ಪುರುಷರ ಭೆಟ್ಟಿಯನ್ನು ಕೊಳ್ಳಲು ಸಹಾಯ ಮಾಡಿದ ಬಗ್ಗೆ ಪೀಲ ದೊರೆಗಳಿಗೆ ಕೃತಜ್ಞತೆಯನ್ನೂ ನಾಮದಾರರು ಪ್ರದರ್ಶಿಸಿದರು. ನಾಮದಾರ ಶಾಸ್ತ್ರಿಗಳಿಗೆ ಭೆಟ್ಟಿ ಕೊಡದಿರುವದು ವಿಂಟರಟನ್ ದೊರೆಗಳ ಮನಸ್ಸಿನಲ್ಲಿದ್ದಿಲ್ಲೆಂದು ಪೀಲ ದೊರೆಗಳು ಸ್ಪಷ್ಟೀಕರಿಸುತ್ತಾರೆ, ಆಫೀಸಿನಲ್ಲಿದ್ದರೆ, ತಾವು ಸಹ ನಾಮದಾರರಿಗೆ ದರ್ಶನ ಕೊಡುತ್ತಿದ್ದೆವೆಂತಲೂ, ಅವರ ಅಂಬೋಣ. ಆದರೆ, ವಿಂಟರಟನ್ ದೊರೆಗಳು ಕಳಿಸಿದ ಉತ್ತರದಲ್ಲಿ ಈ ಬಗ್ಗೆ ಖುಲಾಸೆಯೇನಿಲ್ಲ. ಕೆನಿಯಾ ನಿರ್ಣಯದ ಬಗ್ಗೆ ಮತಭೇದವುಂಟಾದರೆ, ತಾವು ದೊರೆಗಳ ಗೂಡ ಆ ಸುದ್ದಿಯೇನು ತೆಗೆಯುತ್ತಿದ್ದಿಲ್ಲವೆಂದು ನಾಮದಾರ ಶಾಸ್ತ್ರಿಗಳು ನುಡಿಯುತ್ತಾರೆ. ಇಂಡಿಯಾ ಆಫೀಸಿನಿಂದ ಈ ದರ್ಶನ ನಿರಾಕರಣೆಯ ಬಗ್ಗೆ ಒಂದು ಖುಲಾಸೆಯೂ ಪ್ರಸಿದ್ಧವಾಗಿದೆ. ಅದರೊಳಗೆ ವಿಂಟರಟನ್ ದೊರೆಗಳು ಕೈಕೊಂಡ ಧೋರಣವು, ಅಂದರೆ, ಭೆಟ್ಟಿ ನಿರಾಕರಣೆಯು ಪೀಲ ದೊರೆಗಳಿಗೆ ಸಮ್ಮತವಾಯಿತೆಂದು ಪ್ರಕಟಿಸಲ್ಪಟ್ಟಿದೆ. ನಾಮದಾರ ಶಾಸ್ತ್ರಿಗಳಿಗೆ ಪ್ರಶಂಸಾಪೂರ್ವಕ ಭೆಟ್ಟಿಯನ್ನೀಯಲು ತತ್ಪರರಿದ್ದ ಪೀಲ ದೊರೆಗಳಿಗೆ ವಿಂಟರಟನ್‌ರ ಕೃತ್ಯವು ಸಮ್ಮತವಾಗುವ ಬಗೆ ಹೇಗೆ? ಇದೊಂದು ಕೂಟ ಪ್ರಶ್ನೆಯೆಂದು ನಾವು ಒಪ್ಪುವೆವು. ಶಾಸ್ತ್ರಿಗಳಿಗೆ ಬರೆದ ಖಾಸಗಿ ಪತ್ರದಲ್ಲಿ 'ನಿಮ್ಮನ್ನು ಕಾಣದಿರುವದು ವಿಂಟರಟನ್‌ರ ಆಲೋಚನೆಯಿದ್ದಿಲ್ಲೆಂತಲೂ, ತಾವು ಸಹ ಆಫೀಸಿನಲ್ಲಿದ್ದಿದ್ದರೆ, ಕಾಣುತ್ತಿದ್ದೆವೆಂತಲೂ' ಬರೆಯುವ ಪೀಲ ದೊರೆಗಳಿಗೆ ವಿಂಟರಟನ್ ದೊರೆಗಳ ಕೃತ್ಯವು ಮಾನ್ಯವಾಯಿತೆಂದು ಅವರ ಇಂಡಿಯಾ ಆಫೀಸೇ ಪ್ರಕಟಿಸುವದನ್ನು ನೋಡಿ, ಯಾರು ಬೆರಗಾಗದಿರರು? ಅಂತು ಶಾಸ್ತ್ರಿಗಳ ವರ್ತನವು, ಸ್ವತಂತ್ರ ವೃತ್ತಿಯು ಸಾಹೇಬರಿಗೆ ಮಾನ್ಯವಾಗಲಿಲ್ಲ. ಆ ಬಗ್ಗೆ ನಾಮದಾರರಿಗೆ ತಕ್ಕ ಎಚ್ಚರಿಕೆ ಕೊಟ್ಟು, ಇನ್ನು ಮುಂದೆ, ಜಾಗ್ರತರಾಗಿರಲು ಇದೊಂದು ಹಂಚಿಕೆ ತೆಗೆದಿರುವರೆಂದು ಯಾರಾದರೂ ಎಣಿಸಿದರೆ, ಅದೇನು ಅಯಥಾರ್ಥವಾಗದು. ಶಾಸ್ತ್ರಿಗಳು 'ಮುಂಬಯಿ ಕ್ರೊನಿಕಲಿ'ನ ಪ್ರತಿನಿಧಿಗಳಿಗೆ ಕೆನಿಯಾ ನಿರ್ಣಯವನ್ನು ರದ್ದು ಪಡಿಸಿಕೊಳ್ಳಲು ದೇಶಬಾಂಧವರು ಕೈಕೊಳ್ಳುವ ಯೋಜನೆಯ ಬಗ್ಗೆ ಸ್ಪಷ್ಟೀಕರಿಸಹೇಳಲು, ಮೌನವ್ರತ ಧರಿಸಿದ ಕಾರಣವು ಈ ದರ್ಶನನಿರಾಕರಣೆಯ ಪರಿಣಾಮವಾಗಿರಬಹುದೇನು?

---

೨. ತೆಂಗಿನ ಮರಗಳಿಂದ ಸೀಂದಿಯನ್ನು ತೆಗೆದು, ಅದರಿಂದ ಬೆಲ್ಲ ಮಾಡಿ, ಅನೇಕರು ಹೊಟ್ಟೆ ಹೊರಕೊಳ್ಳುತ್ತಾರೆ. ಈ ಧಂದೆಯು ಬಡವರದು. ಪುರಸತ್ತು ಸಿಕ್ಕಿದಾಗ ಈ ಧಂದೆಯನ್ನು ಮಾಡಿ, ಅವರು ಜೀವಿಸುವರು. ಇದರಂತೆ, ನಮ್ಮಲ್ಲಿಯೂ ಅನೇಕರು ಈ ಉದ್ಯೋಗವನ್ನು ಕೈಕೊಂಡು, ತಮ್ಮ ಉಪಜೀವನ ಸಾಗಿಸುತ್ತಿದ್ದರು. ೩೦ ವರ್ಷಗಳಿಂದ ಮುಂಬಯಿ ನೌಕರಶಾಹಿಯ ಕಾಕದೃಷ್ಟಿಯು ಈ ಉದ್ಯೋಗದ ಮೇಲೆ ಬಿತ್ತು. ಅಬಕಾರಿ ಕಾಯಿದೆಯಲ್ಲಿ ಈ ಸೀಂದಿ ತೆಗೆಯುವ ಪದ್ಧತಿಯನ್ನು ನೌಕರಶಾಹಿಯು ಸೇರಿಸಿ, ಆ ಬಗ್ಗೆ ನಿಯಮ-ಪೋಟ ನಿಯಮಗಳನ್ನೇರ್ಪಡಿಸಿದರು. ಅಂದಿನಿಂದ ಈ ಉದ್ಯೋಗವು ಕಳೆಗುಂದುತ್ತ ನಡೆದಿದೆ. ಕಳೆದ ಮಾರ್ಚ ತಿಂಗಳಲ್ಲಿ ಈ ಉದ್ಯೋಗದ ಬಗ್ಗೆ ಸದ್ದಿ ಬೆಳಿಸಿದ ಹೊಸ ನಿಯಮಗಳಾದವು. ಇವುಗಳಂತೆ ಈ ಉದ್ಯೋಗವನ್ನು ಈಗ ಕಾರಖಾನೆಯಲ್ಲಿ ಕಲೆಕ್ಟರರು ನೇಮಿಸಿದ ಸ್ಥಳದಲ್ಲಿ ನಡಿಸಬೇಕೆಂದು ಗೊತ್ತಾಗಿದೆ. ಜಿಲ್ಹೆಯಲ್ಲಿ ಇಕ್ಕಮಿಕ್ಕ ಕಾರಖಾನೆಗಳಿರವು. ೫೦೦ಕ್ಕಿಂತ ಕಡಿಮೆಯಾಗದಷ್ಟು ಮರಗಳಿಗೆ ಪ್ರತಿಯೊಬ್ಬ ಲೈಸನ್ಸದಾರನು ಲೈಸನ್ಸು ಪಡೆಯಬೇಕು. ಕಾರಖಾನೆಯ ಎರಡು ಮೈಲು ಅಚೆ-ಈಚೆ ಇರುವ ಮರಗಳನ್ನು ಮಾತ್ರ ಲೈಸನ್ಸದಾರರು ಕೊಳ್ಳತಕ್ಕದ್ದು. ಇದರಿಂದ ಸಣ್ಣ ಉದ್ಯೋಗವು ಕಾರಖಾನೆಯಲ್ಲಿ ಪರಿಣಮಿಸಿತು. ೧೦-೧೨ ಮರಗಳನ್ನು ಸಾವುಕಾರರಿಗೆ ಪ್ರಾರ್ಥಿಸಿ, ಪಡೆದು, ಬೆಲ್ಲ ಮಾಡಿ, ಜೀವಿಸುವ ಬಡವರ ಹೊಟ್ಟೆಯ ಮೇಲೆ ಇದೊಂದು ಹೊಡತ! ಕಾರಖಾನೆಯಲ್ಲಿ ಹೋಗಿ, ಬೆಲ್ಲ ಮಾಡುವ, ಅಂದರೆ, ಅದಕ್ಕೂ ಅವರಿಗೆ ಉಪಾಯವಿಲ್ಲ. ಯಾಕೆಂದರೆ, ೫೦೦ ಮರಗಳ ಲೈಸನ್ಸು ಒಮ್ಮೆಲೇ ಪಡೆಯಬೇಕು. ಅವನ್ನು ಸಹ ೨ ಮೈಲು ಅಚೆ ಈಚೆ ಪಡೆಯಬೇಕು. ಹಳ್ಳಿಹಳ್ಳಿಗಳಲ್ಲಿ ತಮ್ಮ ಅನುಕೂಲತೆಯಂತೆ ಕೆಲಸ ಮಾಡುವ ಉದ್ಯೋಗವು ಈಗ ನಮ್ಮ ಮುಂಬಯಿ ಇಲಾಖೆಯಲ್ಲಿ ನಾಮಶೇಷವಾಯಿತೆನ್ನಲಡ್ಡಿಯಿಲ್ಲ. ಮೊದಲೇ ಬರಗಾಲದ ದಿನಗಳು. ದಿನ ಹೋದ ಹಾಗೆ ಹೊಟ್ಟೆ ಹೊರಕೊಳ್ಳುವದು ದುಸ್ತರವಾಗಿದೆ. ಬಡ ಹಳ್ಳಿಗರಿಗೆ ಹೊಸ ಹೊಸ

ಉದ್ಯೋಗಗಳನ್ನು ತೋರಿಸಿಕೊಡುವದು ಪ್ರತಿ ಒಬ್ಬರ ಕರ್ತವ್ಯವು. ಧೈತರ ಕಲ್ಯಾಣಕರ್ತರೆಂದು ಮೆರೆಯುವ ನೌಕರಶಾಹಿಯಂತು ಅದನ್ನು ಅವುಲಿನಲ್ಲಿ ತರಲು ಬದ್ಧೀಕೃತವಿದೆ. ಅದನ್ನು ಬಿಟ್ಟು, ಹೀಗೆ ಇದ್ದ ಉದ್ಯೋಗಗಳನ್ನು ನಾಮಶೇಷ ಮಾಡುವದನ್ನು ನೋಡಿ, ನೌಕರಶಾಹಿಯು ಪ್ರಜಾಕಲ್ಯಾಣಕ್ಕಾಗಿ ದುಡಿಯುವದಿಲ್ಲೆಂಬುದು ಸ್ಪಷ್ಟವಾಗುತ್ತದೆ. ಮಹಾತ್ಮರು ನುಡಿಯುವಂತೆ, ಈ ರಾಜ್ಯಪದ್ಧತಿಯನ್ನು ಬದಲಿಸಿದ ಹೊರತು, ನಮ್ಮ ತರಣೋಪಾಯವಿಲ್ಲ. ಅದಕ್ಕಾಗಿಯೇ ನಮಗೆ ಸ್ವರಾಜ್ಯವು ಅವಶ್ಯವಿದೆ.

— —

೩. ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಬಹುಮಾನ್ಯ ಉಪಾಧ್ಯಕ್ಷರಾದ ಶ್ರೀ| ಶ್ರೀನಿವಾಸರಾವ ಕೌಜಲಗಿಯವರು ಕಳೆದ ತಾ ೨೯ ನೇ ಶುಕ್ರವಾರ ಮುಂಜಾವಿಗೆ ವಿಜಾಪೂರ ಜೈಲಿನೊಳಗಿಂದ ಬಿಡುಗಡೆ ಹೊಂದಿ, ಪುನಃ ನಮ್ಮನ್ನು ಸೇರಿಕೊಂಡಿರುವರೆಂದು ತಿಳಿಸಲು ಸಂತೋಷವಾಗುತ್ತದೆ. ರಾಜದ್ರೋಹದ ಭಾಷಣ ಮಾಡಿದರೆಂದು ಶ್ರೀನಿವಾಸರಾಯರ ಮೇಲೆ ತಾಮೀನಕೀ ಪ್ರಕರಣ ನಡೆದು, ಅವರಿಗೆ ೧ ವರ್ಷದ ಕಠಿಣ ಶಿಕ್ಷೆಯಾದದ್ದು ಎಲ್ಲರಿಗೆ ವಿದಿತವಿದ್ದದ್ದೆ. ಶ್ರೀನಿವಾಸರಾಯರು ಮಹಾತ್ಮರ ಸನ್ನಿಧಾನವಾಗಿದ್ದ ಯರೋಡಾ ಜೈಲಿನಲ್ಲಿ ಅಸಹಯೋಗಿಗಳಿಗೆ ಉಚಿತವಾದ ವಿಶ್ರಾಂತಿಯನ್ನು ಪಡೆದು, ಈ ಸಂಧಿಕಾಲದಲ್ಲಿ ನಮ್ಮನ್ನು ಕೂಡಿಕೊಂಡಿರುವರು. ಬಾಡೋಲಿ-ದಿಲ್ಲಿ ಠರಾವುಗಳ ತತ್ವವನ್ನು ಪ್ರಚಾರಮಾಡಿದ್ದರಿಂದ, ಶ್ರೀಯುತರಿಗೆ ಶಿಕ್ಷೆಯಾಗಿತ್ತು. ಅಖಿಲ ಭರತಖಂಡದಲ್ಲಿ, ವಿಶೇಷವಾಗಿ ಕರ್ನಾಟಕದಲ್ಲಿ, ಮುಂದಾಳುಗಳ ನೇತೃತ್ವವು ಅವಶ್ಯವಿದೆ. ಜಾದಾ ಕೊಂಗ್ರೆಸು ಇನ್ನೊಂದು ಪಕ್ಷದಲ್ಲಿ ದಿಲ್ಲಿ ನಗರಿಯಲ್ಲಿ ಸೇರುವದು. ಅಲ್ಲಿ ಕರ್ನಾಟಕದ ತರ್ಫೆನಿಂದ ಮುಂದಾಳುಗಳು ಹಾಜರಾಗಿ, ತಮ್ಮ ಅಂದೋಲಣ ತಿಳಿಸಿ, ಕರ್ನಾಟಕಕ್ಕೂ, ಅಖಿಲ ಭರತಖಂಡಕ್ಕೂ ತಕ್ಕ ದಾರಿಯನ್ನು ಆಕ್ರಮಿಸಲು ಸಹಾಯ ಮಾಡಬೇಕು. ಇಂಥ ಪರಿಸ್ಥಿತಿಯಲ್ಲಿ, ಮಹಾತ್ಮರ ಕೈಕೆಳಗೆ ರಾಷ್ಟ್ರಸೇವೆಯನ್ನು ನಡಿಸಿದ ಹಾಗು ವಿಶ್ರಾಂತಿಕಾಲವನ್ನು ಮಹಾತ್ಮರ ಸನ್ನಿಧಾನದ ಯರೋಡಾ ಜೈಲಿನಲ್ಲಿ ಕಳೆದ ಶ್ರೀ| ಶ್ರೀನಿವಾಸರಾವ ಕೌಜಲಗಿಯವರು ಬಿಡುಗಡೆ ಹೊಂದಿದ್ದು ಕರ್ನಾಟಕದ ಸುದೈವವು.

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ಮಳೆ-ಬಿಸಿಲು ಎರಡೂ ಇವೆ. ಮಘಾ ಮಳೆಯು ಒಟ್ಟಿಗೆ ಚಲೋರಿತಿಯಿಂದ ನಡಿಸಿತು. ಈ ವಾರದಲ್ಲಿ ೨-೯೯ ಇಂಚು ಮಳೆ ಬಿತ್ತು. ಈ ವರೆಗೆ ೧೫೫-೮೩ ಇಂಚು ಮಳೆ ಬಿತ್ತು.

ರಾಷ್ಟ್ರೀಯ ಸಭೆಯ ಆಜ್ಞೆಯಂತೆ, ಕಳೆದ ಸೋಮವಾರಕ್ಕೆ ಕಸಿಬಾ ನಿರ್ಣಯದ ಬಗ್ಗೆ ನಿಷೇಧ ವ್ಯಕ್ತಗೊಳಿಸುವರೆ ಹರತಾಳ ಆಚರಣೆಯಾಯಿತು. ಕೆಲ ಉಪದ್ವ್ಯಾಪಿಗಳ ದುರಾಲೋಚನೆಯಿಂದ ೫-೬ ಅಂಗಡಿಗಳು ತೆರೆಯಲ್ಪಟ್ಟಿದ್ದವು. ಆದರೆ, ಕಡೆಗೆ ಸ್ವಲ್ಪ ಹೊತ್ತಿನವರೆಗೆ, ಅಂಗಡಿಕಾರರು ಬಾಗಿಲು ಮುಚ್ಚಿ ನಿಷೇಧಪ್ರದರ್ಶನದಲ್ಲಿ ಸೇರಿಕೊಂಡರು. ಗುರ್ಜರ ಬಾಂಧವರಿಗೂ, ರಾಷ್ಟ್ರಾಜ್ಞೆಯನ್ನು ಉಲ್ಲಂಘಿಸಲು ಪ್ರಶಿಷ್ಟರು ಯತ್ನಿಸಿದ್ದರಂತೆ. ಆದರೆ, ಅವರು ಒಪ್ಪಲಿಲ್ಲ. ಅಂತು ಇಲ್ಲಿಯ ಹರತಾಳವು ಪೂರ್ಣವಾಯಿತು.

ಮುಹಮ್ಮದೀಯ ಬಾಂಧವರ ಮೊಹರಮ್ ಉತ್ಸವು ಕಳೆದ ಶುಕ್ರವಾರಕ್ಕೆ ಉತ್ಸಾಹದಿಂದ ನೆರವೇರಿತು.

ಇಲ್ಲಿಯ ಸುಜ್ಞರಾದ ಈ ತಾಲೂಕ ಒಂಕಿಕೋಡ್ಲ ನಿವಾಸಿಗಳಾದ ರಾ| ಶಂಕರರಾವ ಕಲ್ಯಾಣಪುರಕರರವರು ಅಸ್ವಸ್ಥತೆಯ ಮೂಲಕ ದಣೆಕೊಂಡು ಹೋದವರು ಮುಂಬಯಿಯಲ್ಲಿ ಪುಪ್ಪುಸ ವಿಕಾರದಿಂದ ಅನಪೇಕ್ಷಿತವಾಗಿ ದೇಹಾಂತ ಹೊಂದಿದರೆಂದು ತಿಳಿಸಲು ಅತ್ಯಂತ ವ್ಯಸನವಾಗಿರುತ್ತದೆ. ರಾ| ರಾ| ಗಳ ವಯಸ್ಸು ಬರೇ ೩೬. ಅಕಾಲಿಕ ನಿಧನದಿಂದ ಇವರ ಆಪ್ತೇಷ್ಟರಿಗೂ, ಜ್ಞಾತಿಬಾಂಧವರಿಗೂ ವ್ಯಸನವಾಗುವದು ಸಹಜವು. ಆದರೆ, ಕಾಲಚಕ್ರದ ಕಡೆಗೆ ದೃಷ್ಟಿಯನ್ನಿಟ್ಟು, ಅವರು ತಮ್ಮ ಮನಃಶಮನಮಾಡಿಕೊಳ್ಳಬೇಕಾಗಿದೆ.

ಹೊನ್ನಾವರ— ಆಫ್ರಿಕಾಖಂಡದ ಭಾಗವಾದ ಕೆನಿಯಾ ಎಂಬ ಬ್ರಿಟಿಶ ವಸಾಹತಿನಲ್ಲಿ ಯುರೋಪಿಯನ ಮತ್ತು ಇಂಡಿಯನರಿಗೆ ವರ್ಣಭೇದ ಮೂಲಕ ಜಗಳ ಉಂಟಾಗಿ ಅದರಲ್ಲಿ ಬ್ರಿಟಿಶ ಮಂತ್ರಿಮಂಡಳದವರ ಯುರೋಪಿಯನ್ನರ ಒಳಿತಿಗೆ ಅನ್ಯಾಯವಾಗಿ ಕೊಟ್ಟ ನಿರ್ಣಯವನ್ನು ನಿಷೇಧಿಸುವ ಬಗ್ಗೆ ನಾಳೆ ಸೋಮವಾರ ತಾ ೨೭ ನೇ ದಿವಸ ಪೇಟೆ ವ್ಯವಹಾರಗಳನ್ನಾಚರಿಸಬಾರದಾಗಿ ಜಿಲ್ಹಾ ಕಾಂಗ್ರೆಸ ಕಮಿಟಿಯಿಂದ ಹುಕುಮು. ಒಂದಂತೆ ನಿನ್ನೆ ತಾ ೨೭ ಕ್ಕೆ ಬಾಜಾರ ಬಂದಿಟ್ಟು, ಪೂರ್ಣ ಹರತಾಳವನ್ನಾಚರಿಸಿದರು.

ಶ್ರೀ ಹತ್ತುಜನರ ವಿಠಲ ಕಾಮತರಕೋಡ ಹನುಮಂತ ಮಾಸ್ತರ ಇವರು, ಕಳೆದ ಶನಿವಾರದಿಂದ ಕೃಷ್ಣಜನ್ಮ, ನಳದಮಯಂತಿ, ಕೀರ್ತನೆಗಳಾದವು. ನಾಳೆ ಶನಿವಾರದಿಂದ ಪದ್ಮಾವತಿ ಪರಿಣಯ ಅಥವಾ ಬೇರೆ ಯಾವದಾದರೂ ಸದ್ಗೃಹಸ್ಥರ ಹೇಳಿಕೆ ಪ್ರಕಾರ ಇನ್ನು ಕೀರ್ತನೆಗಳಾಗುವವು. ಕೀರ್ತನೆಯ ಅರ್ಥವು ಕೊಂಕಣಿ ಭಾಷೆಯಿಂದಲೇ ಹೇಳುವದರಿಂದ, ಶ್ರೋತೃಸಮುದಾಯವು ಬಹಳ ನೆರೆಯುತ್ತದೆ.

ಪ್ರತಿ ವರ್ಷ ಆಗುವಂತೆ ಮುಸಲ್ಮಾನ ಬಾಂಧವರ ಮೊಹರಮ್ಮ ಹಬ್ಬವು ಬಹಳ ಉತ್ಸಾಹದಿಂದ ನೆರವೇರಿತು

ಹಳದೀಪುರದಲ್ಲಿ ನೆರೆಹಾವಳಿ ಕಮಿಟಿಯವರ ತಾ. ೧೬-೮-೩೦ ರಿಂದ ತಾ ೩೦-೮-೩೦ ರ ವರೆಗ ೫ ದಿನಗಳ ಬಾಬತ ಇಸಮಿಗೆ ಅರ್ಧೀದ್ದ ಅಕ್ಕಿ, ಅರ್ಧ ಕಿದರಾಗಿಯಂತೆ ಹಂಚಿ, ರೂ ೧೩-೧೪-೦ನ್ನು ಖರ್ಚು ಮಾಡಿದ್ದಾರೆ.

ಈ ವರೆಗೆ ಜಿಲ್ಹಾ ಕೊಂಗ್ರೆಸ ಕಮಿಟಿಯು ನೇಮಿಸಿದ ನೆರೆ ಹಾವಳಿ ಸಹಾಯಕ ಕಮಿಟಿಗೆ ಹೊನ್ನಾವರದಲ್ಲಿ ರೂ ೩೨೫, ಹಳದೀಪುರದಲ್ಲಿ ರೂ. ೧೪೩-೨-೦, ಮುಂಬಯಿಯಿಂದ ರೂ. ೩೦೦ ಹೀಗೆ ಒಟ್ಟು ರೂ. ೭೬೨-೨-೦ ಕೂಡಿದೆ

ಕಾರವಾರ— ಕಳೆದ ವಾರದಲ್ಲಿ ಮಳೆಯು ವಿಶೇಷವಿಲ್ಲ. ಕಳೆದ ತಾ ೨೫ನೇ ಸೋಮವಾರ ಕೊಂಗ್ರೆಸ ಕಮಿಟಿಯ ಆಜ್ಞೆಯಂತೆ ಇಲ್ಲಿ ಹರತಾಳಾಚರಣೆಯಾಯಿತು. ಪೇಟೆಯೊಳಗೆ ಅಂಗಡಿಗಳೆಲ್ಲ ಮುಚ್ಚಿಕೊಂಡಿದ್ದವು. ಕೆಲ್ಲು ಅಂಗಡಿಕಾರರು ಮಾತ್ರ ತಾವು ರಾಷ್ಟ್ರೀಯ ಸಭಾಭಿಮಾನಿಗಳಲ್ಲವೆಂದು ಪ್ರದರ್ಶಿಸಲೋ ಏನೋ, ತಮ್ಮ ದುಕಾನುಗಳನ್ನು ತೆರೆದಿಟ್ಟಿದ್ದರು

ಹೊನ್ನಾವರ ನಿರಾಶ್ರಿತರ ಕಮಿಟಿಗೆ ರಾ| ರಾವರ. ೨೦೦ ರೂಪಾಯಿ, ಮುಂಬಯಿಯ ರಿಲೀಫ ಕಮಿಟಿಯು ೨೫೦, ನಾಮಧಾರಿ ಗವರ್ನರರು ೧೦೦೦, ಹೀಗೆ ವಂತಿಗೆ ರಕಮುಗಳು ಕೂಡಿರುವವು.

ದಕ್ಷಿಣ ಕನ್ನಡ ಜಿಲ್ಹೆಯೊಳಗಿನ ನಿರಾಶ್ರಿತರಿಗಾಗಿ ಶ್ರೀ| ಕೃಷ್ಣರಾವ ಹಳದೀಪುರಕರ, ಮಾಧವ ಕಾನಭಾಗ, ವಕೀಲ, ಇವರು ವಂತಿಗೆಯನ್ನು ಈ ವಾರದಲ್ಲಿಯೂ ಕಳುಹಿಸಿದರು. ಈ ವಾರದ ವಂತಿಗೆಯ ರಕಮು ರೂ. ೨೦ ಉಡುಪಿ ನಿರಾಶ್ರಿತರಿಗೆ ಸಹಾಯ ಮಾಡಲಿಚ್ಛಿಸುವವರು ವಂತಿಗೆಯನ್ನು ಇವರಿಗೆ ಕಳಿಸಬೇಕು.

ದಿವಾಣ ನಾ| ಪರಾಂಜಪೇಯವರು ಮತ ಕೂಡಿಸಲು ಇಲ್ಲಿ ಬರುವವರಿದ್ದಾರಾಗಿ ತಿಳಿಯುತ್ತದೆ. ಇಲ್ಲಿಯ ಕೌನ್ಸಿಲು ಸಭಾಸದತ್ವಕ್ಕೆ ಉಮೇದವಾರರಾಗಿ ನಿಂತಿದ್ದ ರಾ| ವ್ಹಿ. ವ್ಹಿ. ಕಲ್ಯಾಣಪುರಕರರವರು ಇಲ್ಲಿ ಬಂದು ಮತ ಕೂಡಿಸುತ್ತಿರುವರು.

ಸದಾಶಿವಗಡ— ಇಲ್ಲಿ ಆ| ಭಾ| ಕೊಂ| ಕಮಿಟಿಯ ಆಜ್ಞೆಯಂತೆ ತಾ. ೨೫ನೇ ಸಾಯಂಕಾಲ ೫ ಘಂಟೆಗೆ ಒಂದು ವಿಸ್ತಾರವಾದ ಬೈಲಿನಲ್ಲಿ (ಮಳೆ ಇಲ್ಲದೇ ಇದ್ದದರಿಂದ) ಶ್ರೀ| ಭವಾನಿಶಂಕರ ವಾಘ ಇವರ ಅಧ್ಯಕ್ಷತೆಯ ಕೆಳಗೆ ಶ್ರೀ| ಗಣಪತ ನಾಡಕರ್ಣಿಯವರ ಸವಾರು ೨ ತಾಸುಗಳ ವರೆಗೆ ಸುಶ್ರಾವ್ಯ, ಸ್ಫೂರ್ತಿದಾಯಕ ಮತ್ತು ಅಸ್ಖಲಿತವಾದ ಭಾಷಣವು ಕೊಂಕಣಿ ಭಾಷೆಯಲ್ಲಿ ನೆರೆದ ಸುಮಾರು ೨೦೦ ಜನರೆಲ್ಲರಿಗೂ ತಿಳಿಯುವಂತೆ ಆಯಿತು. ಅವರು ಇಡೀ ಹಿಂದುಸ್ಥಾನದಲ್ಲಿ ಈ ಹೊತ್ತು ಸೂತಕದ ದಿನದಂತೆ ಶಾಂತಮಯವಾದ ಹರತಾಳವನ್ನು ಆಚರಿಸುವದಕ್ಕೆ ಕೊಂಗ್ರೆಸಿನ ಯಾಕೆ ಆಜ್ಞೆಯಾಗಿದೆ, ಕೆನಿಯಾ ಪ್ರಕರಣವೆಂದರೇನು, ಹಿಂದೀಯರು ಅಲ್ಲಿ ಹ್ಯಾಗೆ, ಯಾವಾಗ ವಸಾಹತು ಮಾಡಿದರೆ. ಮಹಾತ್ಮರು ಆಫ್ರಿಕಾದಲ್ಲಿ ಪ್ರಥಮತಃ ಹ್ಯಾಗೆ ತಮ್ಮ ಅಮೋಘ ಸತ್ಯಾಗ್ರಹಾಸ್ತ್ರವನ್ನು ಹೂಡಿದರು. ಈಗ ಹಿಂದೀಯರಿಗೆ ಎಂಥೆಂಥ ತರದ ಕಾಯಿಕಯಾತನೆ, ಮಾನಸಿಕ ವೇದನೆ ಮತ್ತು ನೈತಿಕ ಅಪಮಾನ ವಗೈರೆ "ಗೋರಾ" ಜನರ ಕಾಯಿದೆ ಮೂಲಕ ಸಹಿಸಬೇಕಾಗುತ್ತದೆ ಇತ್ಯಾದಿ ಸಾದ್ಯಂತ ಹಕೀಕತನ್ನು ನಿವೇದಿಸಿ, ಇದಲ್ಲದಕ್ಕೂ ರಾಮಬಾಣ ಔಷಧವು ನಮ್ಮ ಹಿಂದುಸ್ಥಾನದ ಸ್ವತಂತ್ರತೆಯೇ. ಆ ಔಷಧದ ಕ್ರಮವು ಮಹಾತ್ಮರು ಉಪದೇಶಿಸಿದ ಶಾಂತಮಯ ವಿಧಾಯಕ ಕಾರ್ಯಕ್ರಮಯುಕ್ತವಾದ ಅಸಹಕಾರವು. ಅದಕ್ಕೆ ಜನರು ದಿನೇ ದಿನೇ ಹ್ಯಾಗೆ ತಯಾರಾಗುತ್ತಲಿದ್ದಾರೆ ಎಂಬುದನ್ನು ಹಿಂದಿನ ಅಕಾಲಿಯರ ಮತ್ತು ಸದ್ಯದ ನಾಗಪುರದ ಸತ್ಯಾಗ್ರಹದ ವಿಜಯದಮೇಲಿಂದ ತೋರಿಸಿ ಕೊಟ್ಟ ಮೇಲೆ, ಮಹಾತ್ಮರ ವಗೈರೆ ಜಯಘೋಷದೊಡನೆ ಸಭೆಯು ಕೊನೆಗಂಡಿತು

ಇಲ್ಲಿ ತಾ ೨೫ನೇ ದಿವಸ ಮಧ್ಯಾನ್ಹದಿಂದ ಯಾವತ್ತೂ ಕಡೆ ಹರತಾಳವು ಆಚರಿಸಲ್ಪಟ್ಟಿತು.

ಇಲ್ಲಿಂದ ಬೇಗನೇ ಉಡುಪಿ, ಕುಮಟಾ, ಹೊನ್ನಾವರ ತಾಲೂಕಿನ ನಿರಾಶ್ರಿತ ಜನರಿಗಾಗಿ ವಂತಿಗೆಯನ್ನು ಕೂಡಿಸಿ ಕಳಿಸುವವರಿದ್ದಾರೆ

ಕುಮಟಾ, ವಗೈರೆ ಕಡೆಯಲ್ಲಿ ರಿಲೀಫ ಕೆಲಸಕ್ಕೆ ಸ್ವಯಂಸೇವಕರ ಗರಜು ಆದರೆ ಹ್ಯಾಗ, ಇದ್ದರೆ ಕಳಿಸಲಿಕ್ಕೆ ತಯಾರಿದ್ದೇವೆ ಎಂಬದಾಗಿ ಇಲ್ಲಿಯ ಕೊಂ. ಕ. ಯಿಂದ ಕುಮಟೆಗೆ ಪತ್ರ ಬರೆದಂತೆ ತಿಳಿಯುತ್ತದೆ.

— ಸಿಂಧದ ಪ್ರಾಂ ಕೊಂ. ಕ. ಯ ಅಧ್ಯಕ್ಷರಾದ, 'ಹಿಂದೂ' ಪತ್ರಿಕೆಯ ಸಂಪಾದಕರಾದ ಡಾ| ಚೊಯ್ತರಾಮರವರು ೧೮ ತಿಂಗಳ ಕಠಿಣ ಶಿಕ್ಷೆಯನ್ನನುಭವಿಸಿ, ಸದ್ಯಕ್ಕೆ ಬಿಡುಗಡೆ ಹೊಂದಿದರು. ಅವರಿಗೆ ಹೈದರಾಬಾದಸ್ಥರು ಜಾಹೀರಸಭೆ ನೆರೆಯಿಸಿ, ಸ್ವಾಗತವನ್ನಿತ್ತಿದ್ದಲ್ಲದೆ, ೫ ಸಾವಿರ ರೂಪಾಯಿಗಳ ಥೈಲಿಯನ್ನು ಸಮರ್ಪಿಸಿದರು. ಡಾ| ಮಹಾಶಯರು ಸಮಾಜಗಳೊಳಗಿನ ಧಾರ್ಮಿಕ ಕಲಹವನ್ನು ಅಂತ್ಯಪಡಿಸಲಿಕ್ಕೂ, ಅಖಿಲರ ಕಲ್ಯಾಣಕ್ಕಾಗಿ ಐಕ್ಯಮತ್ಯದಿಂದ ದುಡಿಯಲಿಕ್ಕೂ ಶ್ರೋತೃವೃಂದಕ್ಕೆ ಬೋಧಿಸಿದರು. ಪುನಃ ಡಾಕ್ಟರರ ಮೇಲೆ ೨ ವರ್ಷಗಳ ಹಿಂದೆ ದಾಖಲ ಮಾಡಿದ ಅಭ್ಯಿಯೋಗದ ನಿಮಿತ್ತ ಸರ್ಕಾರದವರು ಬಿಡಿ ಖಟ್ಲೆ ನಡಿಸುವವರಿದ್ದಾರೆಂದು ಹೈದರಾಬಾದಿನಲ್ಲಿ ದಟ್ಟ ವದಂತಿ ಹಬ್ಬಿದೆ

ವೃತ್ತ ಸಾರ.

— ಕೌನ್ಸಿಲು ನಿರ್ಣಯದ ಬಗ್ಗೆ ನಿಷೇಧವನ್ನು ಯಾವ ಬಗೆಯಿಂದ ವ್ಯಕ್ತಪಡಿಸಬೇಕೆಂಬ ಬಗ್ಗೆ ವಿಚಾರಿಸಲು ಕಳೆದ ಶನಿವಾರ ತಾ. ೨೫ನೇಗೆ ಒಂದು ಪ್ರಾತಿನಿಧಿಕ ಸ್ವರೂಪದ ಸಭೆಯು ಮುಂಬಯಿಯಲ್ಲಿ ನೆರೆಯಿತು. ಸಭೆಯಲ್ಲಿ ಮಿಸೆಸ್ ಪಂತುಲು, ನಾ। ಶಾಸ್ತ್ರಿ, ಜಿನ್ನಾ, ಬೆರಿಸ್ಟರ ಜಯಕರ, ಸರ್ ಪುರುಷೋತ್ತಮ ದಾಸ, ಮಿ। ಜಮುನಾದಾಸ ಮೆಹತಾ ಮೊದಲಾದ ಹಿರಿಯಂದಿರು ಹಾಜರಿದ್ದರು. ನಾಳೆ ಶುಕ್ರವಾರ ತಾ ೩೧ ನೇಗೆ ನಡೆಯಲಿಕ್ಕಿದ್ದ ಜಾಹೀರ ಸಭೆಯಲ್ಲಿ ಯಾವ ಪ್ರಕಾರದ ಠರಾವು ತರಬೇಕೆಂಬ ಬಗ್ಗೆ ವಾದ ನಡೆಯಿತು. ಇನ್ನೂ ಠರಾವಿನ ಸ್ವರೂಪವು ನಿರ್ಣಯವಾಗಲಿಲ್ಲ.

— ಲಾಲಾ ಲಜಪತರಾಯರು ಈಗ ಸೋಲನ್‌ನಿನಲ್ಲಿ ಹವೆ ಬದಲಾವಣೆಗಾಗಿ ಹೋಗಿರುವರು. ಈಗ ಅವರ ಪ್ರಕೃತಿಯು ಸುಧಾರಿಸಹತ್ತಿದೆ. ಜ್ವರದ ಮಾನವು ಈಗ ೯೯ ಡಿಗ್ರಿ ಇದೆ. ಲಾಲಾಜಿಯವರು ಪ್ರಚಲಿತ ರಾಜಕಾರಣದ ಮೇಲಿನ ತಮ್ಮ ವಿಚಾರಗಳನ್ನು ಸದ್ಯದಲ್ಲಿ ಪ್ರಕಟಿಸುವವರಿದ್ದಾರೆಂದು ಸುದ್ದಿ.

— ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ। ದತ್ತೋಪಂತ ಮಜಲಿಯವರು ಹವೆ ಬದಲಾವಣೆಗಾಗಿ ಗದಗಿಗೆ ಹೋಗಿದ್ದರು. ಅಲ್ಲಿ ಭಾಷಣ ಮಾಡುವ ಇರಾದೆಯು ಅವರಿಗಿದ್ದಿಲ್ಲ. ಆದರೆ, ಕ್ರಿ. ಪ್ರೊ. ಕೋ. ೧೪೪ ನೇ ಕಲಮಿನನ್ವಯ ಅವರ ಮೇಲೆ ಪ್ರತಿಬಂಧಕ ಹುಕುಮು ಜ್ಯಾರಿಯಾಯಿತು. ಮಜಲಿಯವರು ಪೂರ್ವಸಂಕೇತವನ್ನು ಒಪ್ಪಲಿಸಿ, ನಿಷೇಧವೆಂದು ತಾಲೂಕಿನ ಮುಂದೆ ಒಂದು ತಾಸಿನವರೆಗೆ ಭಾಷಣವನ್ನಿತ್ತರು. ಸೆರೆ ಹಾಕಿದ ಸುದ್ದಿಯು ಇನ್ನೂ ಕೈಸೇರಲಿಲ್ಲ.

— ಶ್ರೀ। ಶ್ರೀನಿವಾಸರಾವ ಕೌಜಲಗಿಯವರಿಗೆ ಶನಿವಾರ ತಾ ೨೫ನೇ ಸಾಯಂಕಾಲಕ್ಕೆ ವಿಜಾಪುರ ನಗರದಲ್ಲೆಲ್ಲ ಮೆರವಣಿಗೆಯನ್ನು ತೆಗೆದು, ಪ್ರಚಂಡ ಸಭೆಯಾಯಿತು. ಶ್ರೀ। ಗಂಗಾಧರರಾವ ದೇಶಪಾಂಡೆಯವರು ಶ್ರೀ। ಕೌಜಲಗಿಯವರಿಗೆ ಮನಃಪೂರ್ವಕ ಸ್ವಾಗತೀಕರಿಸಿದರು. ಶ್ರೀ। ರಿಗೆ ಸಂಸ್ಥೆ ಹಾಗು ಸಮಾಜಗಳ ವಿದ್ಯಮಾನ ಮಾನಪತ್ರಗಳ ಸಮರ್ಪಣೆಯಾಯಿತು. ತಾವು ಇನ್ನು ಮುಂದೆ ಪೂರ್ಣವಾಗಿ ದೇಶಮಾತೆಯ ಉದ್ಧಾರಕ್ಕಾಗಿಯೇ ದುಡಿಯುವೆವೆಂತಲೂ, ಮುಂದೆ ಹಾಕಿದ ಹೆಜ್ಜೆಯನ್ನು ಎಂದೂ ಹಿಂತೆಗೆದುಕೊಳ್ಳಲಿಕ್ಕಿಲ್ಲೆಂತಲೂ ನುಡಿದರು. ಸಭೆಯು ಮಹಾತ್ಮರ ಜಯಘೋಷದೊಡನೆ ವಿಸರ್ಜನವಾಯಿತು.

— ಮೊಹರಮ್ ಹಬ್ಬದ ಪ್ರಸಂಗದಲ್ಲಿ ಸಂಯುಕ್ತ ಪ್ರಾಂತದ ಸಹರಾನಪುರ ಜಿಲ್ಲೆಯಲ್ಲಿ ಹಿಂದೂ-ಮಹಮ್ಮದೀಯರೊಳಗೆ ಕಲಹವುಂಟಾಯಿತು. ಕಲೆಕ್ಟರ, ಸಬ್ ಡಿವಿಜನಲ್ ಆಫೀಸರ, ಕೋತವಾಲರವರಿಗೆ ಅಧಮರು ಕಲ್ಲುಗಳನ್ನೆಸೆದರು. ಅಧಿಕಾರಿಗಳು ಗುಂಡು ಹೊಡೆದರು. ೬ ಮಂದಿಗಳು ನಿಧನಹೊಂದಿದರು; ೧೬೫ ಮಂದಿಗೆ ಗಾಯವಾಗಿದೆ.

— ಮುಂಬಯಿ ಸರಕಾರವು ಪ್ರಾಂತಿಕ ಕಾಯದೆ ಕೌನ್ಸಿಲನ್ನು ವಿಸರ್ಜಿಸಿತು. ಹೊಸ ಕಾಯಿದೆ ಕೌನ್ಸಿಲಿಗೆ ಉಮೇದವಾರರಾಗಬಿಚ್ಛಿಸುವವರು ಬರುವ ಸೋಮವಾರ ತಾ. ೪ ನೇ ಒಳಗೆ ತಮ್ಮ ಹೆಸರುಗಳನ್ನು ತಿಳಿಸಬೇಕೆಂತಲೂ, ಚುನಾವಣೆಯು ನವಂಬರ ೧ನೇ ತಾರೀಖಿಗೆ ನಡೆಯುವದೆಂತಲೂ ಪ್ರಕಟಿಸಿದೆ. ಚುನಾವಣೆಯ ತಾರೀಖಿಗೂ, ಉಮೇದವಾರರ ಹೆಸರು ದಾಖಲ ಮಾಡಿಕೊಳ್ಳುವ ತಾರೀಖಿಗೂ ೧ ತಿಂಗಳು ಅಂತರವಿರಬೇಕೆಂಬ ವಹಿವಾಟಿದೆ. ಮದ್ರಾಸ ಸರಕಾರವು ಇದೇ ವಹಿವಾಟನ್ನು ಅನುಸರಿಸಿದೆ. ಹೀಗಿದ್ದು, ಮುಂಬಯಿ ಸರಕಾರವು ಸಪ್ಟಂಬರ ೪ ನೇ ತಾರೀಖಿಗೆ ಉಮೇದವಾರರ ಹೆಸರನ್ನು ದಾಖಲ ಮಾಡಲಿಕ್ಕೆ ಏಕೆ ವಿಧಿಸಿದೆ? ದಿಲ್ಲಿ ಕಾಂಗ್ರೆಸಿನ ನಿರ್ಣಯದ ನಿರೀಕ್ಷಣೆಯ ಮೇಲೆ ಕೌನ್ಸಿಲು ಪ್ರವೇಶವನ್ನು ಪುರಸ್ಕರಿಸುವ ದೇಶಾಭಿಮಾನಿಗಳಿಗೆ ಕೋಟಲೆಯಲ್ಲಿ ಹಾಕುವ ಮಂತ್ರ ಇದಾದೆ ಇರಬಹುದೇನು ?

— ಯರೋಡಾ ಜೈಲಿನಲ್ಲಿದ್ದ ಮೌ। ಹಜರತ್ ಮೋಹಾನಿಯವರ ಮೇಲೆ ಜೈಲಿನೊಳಗಿನ ನಿಯಮಗಳನ್ನು ಉಲ್ಲಂಘಿಸಿ, ವೃತ್ತ ಪತ್ರ ಮೊದಲಾದ ಸಾಹಿತ್ಯಗಳನ್ನು ಮಾರ್ಗದ ಕಡೆಯಿಂದ ಸಂಪಾದಿಸಿಕೊಂಡ ಬಗ್ಗೆ ಜೈಲಿನಲ್ಲಿಯೇ ತನಿಖೆ ನಡೆದದೆ.

— ಮೌಲಾನಾ ಮಹಮ್ಮದ ಅಲ್ಲಿಯವರಿಗೆ ಕಳೆದ ರವಿವಾರ ತಾ. ೨೬ನೇ ಮುಂಜಾವು ೪ ಘಂಟೆಗೆ ಹುಟಗಿ ಮಾರ್ಗವಾಗಿ ಝಾಂಸಿ ಕಡೆಗೆ ಸ್ಪೆಶಲ ಬಂಡಿಯಿಂದ ಒಯ್ದರು. ಎಲ್ಲಿಗೆ ಒಯ್ದರೆಂಬುದು ಇನ್ನು ಗೊತ್ತಾಗಲಿಲ್ಲ.

ಉತ್ತರ ಕನ್ನಡ ಜಿಲ್ಲೆಯ ನೆರೆಹಾವಳಿ ಮತ್ತು ಅದರ ನಿವಾರಣೆ ಕೆಲಸದ ವೃತ್ತಾಂತ ಸಾರ.

(ಜಿಲ್ಲಾ ಕಾಂಗ್ರೆಸ ಕಮಿಟಿಯಿಂದ.)

ಇದೇ ತಿಂಗಳ ತಾರೀಖು ೩ನೇ ದಿವಸ ಅದ್ಭುತ ನೆರೆಯಿಂದ ಹೊನ್ನಾವರ ಮತ್ತು ಕುಮಟಾ ತಾಲೂಕುಗಳಲ್ಲಿ ಆದ ಅನಾಹುತವನ್ನು ಎಲ್ಲರೂ ಕೇಳಿಯೇ ಇರುವರು. ಈ ನೆರೆಯಿಂದ ಹೊನ್ನಾವರ ತಾಲೂಕಿನಲ್ಲಿ ಸರಕಾರಿ ಲೆಕ್ಕದಂತೆ ೫೨೭ ಮನೆಗಳು ಸಂಪೂರ್ಣವಾಗಿ ನಾಶವಾಗಿವೆ. ೫೯೬ ಮನೆಗಳು ಅಂಶತಃ ನಾಶವಾಗಿವೆ. ಇವುಗಳಲ್ಲಾದರೂ ವಾಸ್ತವ್ಯ ಮಾಡಿರುವದಕ್ಕೆ ಅಯೋಗ್ಯ. ಹೀಗಾಗಿ, ಒಟ್ಟು ೧೧೨೩ ಮನೆಗಳಲ್ಲಿರುವ ಜನರು ನಿರಾಶ್ರಿತರಾಗಿದ್ದಾರೆ. ಈ ಜನರಿಗೆ ಉಂಟಾದ ಹಾನಿಯು ಕಡಿಮೆ ಪ್ರಮಾಣದಲ್ಲಿ ಹಿಡಿದರೂ ಅರ್ಧ ಲಕ್ಷದಷ್ಟು ಆಗಿರುವದಕ್ಕೆ ಸಂದೇಹವಿಲ್ಲ. ಹಟ್ಟಿಗುಡಿಸಲು, ಭದ್ರವಾದ ಮನೆಗಳು ಸಹಾ ನೆರೆಗೆ ಒಳಬಿದ್ದಿದ್ದಾವೆ. ಒಟ್ಟು ೪೩ ಹಳ್ಳಿಗಳಲ್ಲಿ ಈ ಪ್ರಕಾರವಾಗಿ ಅನಾಹುತ ಸಂಭವಿಸಿರುತ್ತದೆ. ಇಂಥ ಅನಾಹುತದಲ್ಲಿ ಪ್ರಾಣ ಉಳಿಸಿಕೊಳ್ಳುವದೇ ಅತಿ ಪ್ರಯಾಸವಾದರೂ, ಪ್ರಾಣಹಾನಿಯು ವಿಶೇಷವಾಗಿ ಆಗಿರುವದಿಲ್ಲ. ೩ ಹೆಣಗಳು ತೇಲಿ ಹೋಗುವದನ್ನು ಹಳದೀಪುರದಲ್ಲಿ ಕೆಲವರು ನೋಡಿದ್ದಾರೆ.

ಇಂಥ ಪ್ರಸಂಗದಲ್ಲಿ ನಮ್ಮ 'ಮಾಬಾಪ' ಸರಕಾರದವರು ಜನರಿಗೆ ತತ್ಕಾಲದಲ್ಲಿ ಏನೂ ಸಹಾಯ ಮಾಡಿದ್ದು ಕಂಡು ಬರಲಿಲ್ಲ. ಆದರೆ, ಇದು ಅಧಿಕಾರಿಗಳ ತಪ್ಪೆಂದು ತಿಳಿಯುವುದಕ್ಕೆ ಬರಲಾರದು. ಯಾಕೆಂದರೆ, ಸರಕಾರೀ ಆಡಳಿತೆಯ ಪದ್ಧತಿಯೇ ಕಾಷ್ಠರೂಪವಾಗಿರುತ್ತದೆ. ಸ್ಥಾನಿಕ ಅಧಿಕಾರಿಗಳಿಗೆ ಇಂಥ ಆಕಸ್ಮಿಕ ಸಂಗತಿಗಳಲ್ಲಿ ತಮ್ಮ ವಿವೇಕಾನುಸಾರವಾಗಿ ಸರಕಾರಿ ಬೊಕ್ಕಸದಿಂದ ಹಣ ವೆಚ್ಚ ಮಾಡುವದಕ್ಕೆ ಅಧಿಕಾರವೇ ಇಲ್ಲ. ಅಧಿಕಾರಿಗಳು ಈ ಅನಾಹುತದ ವರ್ತಮಾನ ಕೇಳಿದ ಕೂಡಲೆ, ಮೊದಲಿಗೆ ಮಾಡಿದ್ದೆಂದರೆ 'ಬರೇ ಲೆಕ್ಕ' ಜನರ ಕಲ್ಯಾಣದ ಕೆಲಸ ವಹಿಸಿಕೊಂಡ ಸರಕಾರದ ಸ್ಥಿತಿಯು ಹೀಗಿರಲು, ನಿರಾಶ್ರಿತ ಜನರಿಗೆ ಆಯಾಯ ಊರಿನ ಜನರು ತಂತಮ್ಮ ಶಕ್ತ್ಯನುಸಾರ ಸಹಾಯ ಮಾಡಿದ್ದರಿಂದ ನಿರಾಶ್ರಿತರ ಜೀವ ಉಳಿಯಿತು.

ತಾ ೧೩ನೇ ದಿವಸ ನಿರಾಶ್ರಿತರ ಸಹಾಯಾರ್ಥವಾಗಿ, ಪ್ರಥಮ ಹೊನ್ನಾವರದಲ್ಲಿ ೭ ಜನರದೊಂದು ತಾತ್ಕಾಲಿಕ ಕಮಿಟಿಯು ಘಟನೆಯಾಗಿ, ಹಣ ಕೂಡಿಸುವದಕ್ಕೆ ಆರಂಭವಾಯಿತು. ಅಷ್ಟರಲ್ಲಿ ಹಳದೀಪುರ ಕಾಂಗ್ರೆಸ ಕಮಿಟಿಯ ಮುಖಂಡರಲ್ಲಿ ಕೆಲವರು ಅಲ್ಲಿಯ ನಿರಾಶ್ರಿತರಿಗೆ ಸಹಾಯವಾಗುವದನ್ನು ಕುರಿತು, ಒಂದು ಕಮಿಟಿಯನ್ನು ಸ್ಥಾಪಿಸಬೇಕೆಂದು ಹೊನ್ನಾವರ ತಾಲೂಕ ಕಾಂಗ್ರೆಸ ಕಮಿಟಿಯಲ್ಲಿ ಕೆಲವರಿಗೆ ಸೂಚಿಸಿದಂತೆ, ಅವರು ತಾ. ೧೩ನೇ ದಿವಸ ಹಳದೀಪುರಕ್ಕೆ ಹೋಗಿ, ಒಂದು ನೆರೆ ಸಹಾಯಕ ಕಮಿಟಿಯನ್ನು ಸ್ಥಾಪಿಸಿದರು; ಮರುದಿವಸ ಕುಮಟೆಯಿಂದಲೂ ಕೆಲವು ಕಾಂಗ್ರೆಸಭಕ್ತರು ಹಳದೀಪುರಕ್ಕೆ ಬಂದು, ನಿಜಸ್ಥಿತಿಯನ್ನು ಕಣ್ಣಾರೆ ಕಂಡು ವೃತ್ತಪತ್ರದಲ್ಲಿ ಪ್ರಕಟಿಸಿದರು. ನಂತರ ಜಿಲ್ಲಾ ಕಾಂಗ್ರೆಸ ಕಮಿಟಿಯ ಅಧ್ಯಕ್ಷರು ಮುಂಬಯಿಯಲ್ಲಿ ಮೊದಲೇ ಸ್ಥಾಪಿತವಾದ ನೆರೆ ಸಹಾಯಕ ಕಮಿಟಿಗೂ, ಕರ್ನಾಟಕ ಪ್ರಾಂತಿಕ ಕಮಿಟಿಯ ಕಡೆಗೂ ಈ ವರದಿಯನ್ನು ಕಳಿಸಿಕೊಟ್ಟರು. ಮತ್ತು ನೆರೆಯಿಂದ ಪೀಡಿತ ಜನರಿಗೆ ತಾತ್ಕಾಲಿಕ ಸಹಾಯವು ಖಾಸಗಿ ಜನರಿಂದಲೂ, ಸಂಸ್ಥೆಗಳಿಂದಲೂ ಈ ರೀತಿಯಾಗಿ ದೊರೆಯುವದಕ್ಕೆ ಪ್ರಾರಂಭವಾಯಿತು. ಇಷ್ಟರ ಮೇಲೆ, ಸ್ಥಾನಿಕ ಅಧಿಕಾರಿಗಳ ವರದಿಯಿಂದ ಮನ ಕರಗಿದ ಜಿಲ್ಹಾಧಿಪರು ಕಾರವಾರದಲ್ಲಿ ತಾ. ೧೪ನೇ ದಿವಸ ನಾಗರಿಕರ ಸಭೆಯನ್ನು ಕೂಡಿಸಿ, ವಂತಿಗೆಯನ್ನೆತ್ತಿ ಹಣಗಳನ್ನು ತಗೊಂಡು ಹೊನ್ನಾವರಕ್ಕೆ ಬಂದರು.

ಈ ಮಧ್ಯೆ ಕುಮಟಾ ಕಾಂಗ್ರೆಸ ಕಮಿಟಿಯವರು ತಮ್ಮ ತಾಲೂಕಿನ ಬಗ್ಗೆ ಹಣ ಮತ್ತು ಜೀನಸುಗಳನ್ನು ಕೂಡಿಸಲಾರಂಭಿಸಿ, ದಿವಗಿಯಲ್ಲಿ ನಿರಾಶ್ರಿತರಿಗೆ ಸಹಾಯ ಮಾಡುವದಕ್ಕೆ ಗುರುಮಾಡಿ ಹೆಗಡೆ ಊರಲ್ಲಿ ಒಂದು ಕಮಿಟಿಯನ್ನು ರಚಿಸಿದರು. ಮತ್ತು ಅಕ್ಕಿ ವಗೈರೆ ಅವಶ್ಯಕ ಪದಾರ್ಥಗಳನ್ನು ನಿರಾಶ್ರಿತರಿಗೆ ಕೊಟ್ಟು, ಕೆಲಸಮಾಡಲಾರಂಭಿಸಿದರು. ಇತ್ತಕಡೆ ಹೊನ್ನಾವರ ಶಹರದಲ್ಲಿ ಸಹ ತಾತ್ಕಾಲಿಕವಾಗಿ ಏರ್ಪಡಿಸಿದ ಕಮಿಟಿಯು ಸನದೀರ ಮಹಾಸಭೆಯಲ್ಲಿ ಚುನಾಯಿಸಿದ ಮೆಂಬರುಗಳುಳ್ಳ ಎರಡನೇ ಕಮಿಟಿಯಲ್ಲಿ ಲೀನವಾಗಿ ತಾ. ೧೫ ನೇ ಯಿಂದ ಹಣ ಕೂಡಿಸುವದಕ್ಕೆ ಪ್ರಾರಂಭವಾಯಿತು. ಅಷ್ಟರಲ್ಲಿ ಕಾರವಾರದಿಂದ ಜಿಲ್ಹಾಧಿಪರು ಹೊನ್ನಾವರಕ್ಕೆ ಬರುವಾಗ ಮಾರ್ಗದಲ್ಲಿ ಹಳದೀಪುರ ಮತ್ತು ಕರ್ಕಿ ಗ್ರಾಮಗಳ ನಿರಾಶ್ರಿತ ಜನರಿಗೆ ಸಹಾಯಾರ್ಥವಾಗಿ ನೂರು ರೂಪಾಯಿಗಳಂತೆ ಕಾರವಾರದಿಂದ ಒಟ್ಟುಗೂಡಿಸಿ ತಂದ ಹಣದೊಳಗಿಂದ ಆಯಾ ಗ್ರಾಮಗಳ ಪಟೇಲರ ಕೂಡೆ ಕೊಟ್ಟರು. ಜಿಲ್ಹಾಧಿಪರು ಕಾಂಗ್ರೆಸ ಕಮಿಟಿಯಂಥ ಖಾಸಗೀ ಸಂಸ್ಥೆಗಳ ಕೂಡ ಸಹಕಾರಿತೆಯಿಂದ ಕೆಲಸಮಾಡುವದಕ್ಕೆ ಅಡ್ಡಿಯಿಲ್ಲೆಂಬ ಅಭಿಪ್ರಾಯಪಟ್ಟಿದ್ದಾರೆಂಬ ಸುದ್ದಿ ಬಂದ ಮೇರೆಗೆ, ಹೊನ್ನಾವರದಲ್ಲಿ ಸ್ಥಾಪಿತವಾದ ನೆರೆ ಸಹಾಯಕ ಮಧ್ಯವರ್ತಿ ಕಮಿಟಿಯಲ್ಲಿ, ಪ್ರತ್ಯಕ್ಷವಾಗಿ ಸರಕಾರೀ ನೌಕರರನ್ನು ಸೇರಿಸಿಕೊಳ್ಳದಿದ್ದರೂ ಅಧಿಕಾರಿಗಳ ಸಹಕಾರಿತೆಯಿಂದ ಕೆಲಸ ಮಾಡುವದಕ್ಕೆ ಕಮಿಟಿಯವರು ಸಮ್ಮತಿಪಟ್ಟಿದ್ದರು. ಆದರೆ, ಮೂರನೇಯ ದಿನ ಕಮಿಟಿಯ ಸಭಾಸದರು ಜಿಲ್ಹಾಧಿಪರೊಡನೆ ಹೊನ್ನಾವರ ಮುನಸೀಪಲ್ ಕಚೇರಿಯಲ್ಲಿ ಮಾಡಿದ ಸಂಭಾಷಣೆಯಲ್ಲಿ ಕಮಿಟಿಯವರು ನೆರೆ ದುಃಖ ನಿವಾರಣೆಗಾಗಿ ತಯಾರಿಸಿದ ಯೋಜನೆಗೆ ಜಿಲ್ಹಾಧಿಪರು ಮನ್ನಣೆ ಕೊಟ್ಟು, ಅದರಂತೆ ಗ್ರಾಮಗಳಲ್ಲಿ ಅಮಲು ತಂದಾಗ್ಯೂ, ಕೆಲವು ತಾತ್ವಿಕ ಸಂಗತಿಗಳ ಬಗ್ಗೆ ಕಮಿಟಿಯವರಿಗೂ, ಜಿಲ್ಹಾಧಿಪರಿಗೂ ಸೇರಬಾರದೆ, ಕೊನೆಯಲ್ಲಿ ಅಧಿಕಾರಿಗಳು ಕಮಿಟಿಯ ಸಹಕಾರಿತೆಗೆ ಪರಾಙ್ಮುಖರಾದರು. ಹೀಗಾದ್ದರಿಂದ, ಕಮಿಟಿಯ ಉತ್ಸಾಹಭಂಗವಾಗಿ ಹಣ ಕೂಡಿಸುವ ಕೆಲಸ ಹಿಂದೆ ಬಿದ್ದಿತು

ತಾ ೧೯ನೇಯ ದಿವಸ ಹಳದೀಪುರದಲ್ಲಿ ನಿಶ್ಚಿತವಾದಂತೆ, ಜಿಲ್ಹಾ ಕಾಂಗ್ರೆಸ ಕಮಿಟಿಯ ಮಹಾ ಸಭೆ ಸೇರಿ, ಅದರಲ್ಲಿ ನೆರೆಹಾವಳಿ ಬಗ್ಗೆ ಒಂದು ೭ ಜನ ಮೆಂಬರುಗಳ ಪೋಟ ಕಮಿಟಿ ಸ್ಥಾಪನೆಯಾಯಿತು. ಮತ್ತು ಅಧಿಕಾರಿಗಳ ಸಹಕಾರಿತೆಯನ್ನು ತಾತ್ವಿಕಭೇದಗಳ ಮೂಲಕ ಬಿಟ್ಟುಕೊಟ್ಟ, ಹೊನ್ನಾವರದ ಕೇಂದ್ರ ಮಧ್ಯವರ್ತಿ ಕಮಿಟಿಯವರು ತಾವು ಕೂಡಿಸಿದ ಹಣದ ಸದ್ವ್ಯಯವಾಗಬೇಕಾದರೆ ಸರಕಾರೀ ಮತ್ತು ಬಿನ್‌ಸರಕಾರೀ ಜನರ ಸಹಕಾರಿತೆಯು ಅವಶ್ಯಕವಿದ್ದು, ಅದನ್ನು ಮಾಡುವದಕ್ಕೆ ಜಿಲ್ಹಾಧಿಪರು ಒಪ್ಪದಿರುವದರಿಂದ, ಎರಡೂ ಸಂಸ್ಥೆಗಳು ಪ್ರತ್ ಪ್ರತ್ಯೇಕವಾಗಿ ಕೆಲಸ ಮಾಡಿದ್ದಾದರೆ, ಅನೇಕ ತೊಂದರೆಗಳುಂಟಾಗುವ ಸಂಭವ ತೋರುತ್ತಿರುವದರಿಂದಲೂ, ಜಿಲ್ಹಾ ಕಾಂಗ್ರೆಸ ಕಮಿಟಿಯವರು ಮುಂದಾಗಿ ಸ್ವತಂತ್ರ ಕಮಿಟಿ ನೇಮಿಸಿದ್ದರಿಂದಲೂ, ತಮ್ಮ ಕಮಿಟಿಯನ್ನು ಬರಖಾಸ್ತ ಮಾಡಿ ಕೂಡಿಸಿದ ಹಣಗಳನ್ನು ಆಯಾ ಜನರಿಗೆ ವಾಪಸಕೊಟ್ಟರು. ಆದರೆ,

ಕೊಂಗ್ರೆಸ ಸಬ್ ಕಮಿಟಿಯವರೇ ತಮ್ಮ ಕರ್ತವ್ಯವನ್ನು ಸ್ಮರಿಸಿ ಮಾಡಿಸಕೊಟ್ಟವರ ಹಣಗಳನ್ನು ಅವರಿಂದ ಪುನಃ ದೊರಕಿಸಿ, ಹಣಕೂಡಿಸುವ ಕೆಲಸವನ್ನು ಜಾರಿಯಿಂದ ನಡಿಸುತ್ತಲಿದ್ದಾರೆ. ಇದಲ್ಲದೆ ಈ ಸಬ್ ಕಮಿಟಿಯವರು ಭೂಕಂಪಯಾತ್ಮಕವಾದ ಈ ಕೆಲಸದಲ್ಲಿ ಭೇದವಿಡದೆ, ಸರಕಾರೀ ಅಧಿಕಾರಿಗಳ ಜತೆಯಲ್ಲಿ ನಿರಾಶ್ರಿತರಾದ ಜನರ ಕೊರತೆಗಳನ್ನೂ, ದುಃಖಗಳನ್ನೂ ನಿವಾರಣೆ ಮಾಡುವದೇ ತಮ್ಮ ಮುಖ್ಯೋದ್ದೇಶವೆಂದು ತಿಳಿದುಕೊಂಡಿದ್ದಾರೆ. ತಮ್ಮ ಕಡೆಗಿದ್ದ ಹಣವನ್ನು ಸದುಪಯೋಗ ಮಾಡುವದಕ್ಕೆ ಹೆಚ್ಚು ಲಕ್ಷ್ಯ ಕೊಡುತ್ತಿದ್ದಾರೆ. ಹೊನ್ನಾವರ ಪಾಮುಲೇದಾರ ಸಾಹೇಬರೂ ಪೇಟೆಗಳಲ್ಲಿ ಕಮಿಟಿಗಳನ್ನು ಮಾಡಿ, ಸ್ಥಳೀಕ ಮುಖಂಡರ ಸಹಾಯದಿಂದ ಅವರ ಒಳಗೆ ಇದ್ದ ಹಣವನ್ನು ಜಾಗ್ರತೆಯಿಂದ ಉಪಯೋಗಮಾಡುತ್ತಿದ್ದಾರೆಂದು ತಿಳಿದದೆ.

ಜಿಲ್ಲಾ ಕೊಂಗ್ರೆಸ ಕಮಿಟಿಯವರು ಹಳದೀಪುರದಲ್ಲಿ ಮಧ್ಯರಾತ್ರಿಕಾಲದಲ್ಲಿ ನೆರೆ ನೀರು ಒಮ್ಮೆಲೆ ವಿಶೇಷ ಕ್ರಮಬಿಟ್ಟು ತಮ್ಮ ಬಂಧುಗಳ ಜೀವವನ್ನು ಬದುಕಿಸಿದ ಆ ಜನರಿಗೆ ಅವರ ಶ್ರಮದ ಸ್ಮರಣಾರ್ಥವಾಗಿ ಕೆಲವು ಪಾರಿತೋಷಿಕ-ಬಹುಮಾನವನ್ನು ಕೊಡಬೇಕೆಂದು ನಿಶ್ಚಯಿಸಿದ್ದಾರೆ. ಹಳದೀಪುರದ ನೆರೆ ದಿವಸ ಶ್ರಮ ಬಿಟ್ಟವರಲ್ಲಿ ಕೆಲವರ ನಾಮನಿರ್ದೇಶಗಳು ಹೆಚ್ಚಾಗಿ ಪ್ರಸಿದ್ಧಿಯಾದಾಗ್ಯೂ, ಉಳಿದವರೂ ಅನೇಕ ಜನರು ಕೈಲಾದಷ್ಟು ಸಹಾಯಮಾಡಿದ್ದು ಕಂಡುಬರುತ್ತದಾದ್ದರಿಂದ ಅವರೆಲ್ಲರ ಶ್ರಮದ ಬಗ್ಗೆ ಉಪಕಾರ ಸ್ಮರಣೆಯು ಈ ಪ್ರಭಾವತ' ನಡದ ವೃತ್ತಾಂತವು ಹೀಗಿದೆ ಹಾಗೆ ... 'ಕೆನ್ರಾಸಕಲಿ' ನಲ್ಲಿ ಕಾನಡಿಗನೊಬ್ಬನೆ ಬರೆಸಿದ ಪ್ರಸಿದ್ಧವಾದ ಪತ್ರದಲ್ಲಿ ಹಿಸೂ ... 'ಲ್ಲಂಬಿದು ಹೆಸ್ರು ಗರೆ ಇರಲಾರದು. ಆ ಕಾನಡಿಗನಿಗೆ ಬರೆ ಇದನೀ ಬಿಲ್ಲ. ಇರಲಿ. ಇಷ್ಟರಲ್ಲಿ ಕಾನಡಾವೃತ್ತದ ೨೩ನೇ ತಾರೀಕಿನ ಸಂಚಿಕೆಯಲ್ಲಿ ಮುದ್ರೆಬಿಟ್ಟ ಗುಪ್ತ ಪತ್ರಪತ್ರಕರ್ತ ಪ್ರಕಟನಾಗಿದ್ದನ. ಆವನ ತಿಳಿವ ಕಡೆಂತೂ ಕೇವಲ ತಪ್ಪಾಗಿದೆ.

ಭಟ್ಕಳ ಮುನಿಸಿಪಾಲಿಟಿಯು ಶಿಕ್ಷಕರ ಗೋಳು.

ಭಟ್ಕಳ ಮುನಿಸಿಪಾಲಿಟಿಯು ಖರ್ಚು ಕಡಿಮೆ ಮಾಡಿಕೊಳ್ಳುವ ಸಲುವಾಗಿ ಕಡಿಮೆ ಪಗಾರಿನ ಮಾಸ್ತರ ಜನರನ್ನು ಬೆಳಿಸು ಅದಕ್ಕೆ ತಕ್ಕಂತೆ ದೊಡ್ಡ ಪಗಾರಿನ ೫ ಮಂದಿ ಮಾಸ್ತರ ಜನರಿಗೆ ವರ್ಗವಾಯಿತು ವರ್ಗವಣೆ ಹುಕುಮು ೩ ೮-೮-೩೩ ಕ್ಕೆ ಬಂತು. ಈ ಸಂಗತಿಯು ಮೊದಲೇ ತಿಳಿದ ಮೂಲಕ ಶಸ್ತ್ರ ಶಾಲೆಯ ಹೆ| ಮಾ| ವಿ| ಭಟ್ಕಳ ಇವರು ಬಾಕಿ ಇರುವ ಮೇ-ಜೂನ- ಜುಲೈ ೧೯೩೩ ತಿಂಗಳುಗಳ ಪಗಾರ 'ಪೇಡ' ಆಗದಿದ್ದರೆ, ಚಾರ್ಜ ಕೊಡಲಿಕ್ಕಿಲ್ಲ ಎಂಬ ಅಭಿಪ್ರಾಯದ ರಿಪೋರ್ಟ ತಾ. ೬-೮-೩೩ ಕ್ಕೆ ಮುನಿಸಿಪಾಲಿಟಿಗೂ, ಡಿ| ಎ| ಇನಸ್ಪೇಕ್ಟರರ ಕಡೆಗೂ ತಿಳಿಸಿದರು. ತಾ. ೧೪-೮-೩೩ ಕ್ಕೆ ಹೆ| ಮಾಸ್ತರ ಚಾರ್ಜ ತಕ್ಕೊಳ್ಳುವವರು ಬಂದೇ ಬಿಟ್ಟರು. ಪರಂತು ಚಾರ್ಜ ಸಿಗಲಿಲ್ಲ. ಪ್ರಕರಣ ನಡೆಯಿತು. ಚೇರಮನ್ನ ಸಾ| ರು ಕೈ ಬಿಟ್ಟರು. ಪ್ರೆಸಿಡೆಂಟರ ಕಡೆಗೆ ಫಿರ್ಯಾದು ಹೋಯಿತು. ಅವರು ತಮ್ಮ ಸಾಮೋಪಾಯವನ್ನು ಖರ್ಚು ಮಾಡಿ, ಇಷ್ಟು ಕಡೆಗೆ ಮನಸ್ಸಿಂದ ಮಾಡಿ ಚಾರ್ಜ ತಕ್ಕೊಳ್ಳುವದರಲ್ಲಿ ಬಂದೀತೆಂತಲೂ, ದೂರ ವರ್ಗವಾದ ಮಾಸ್ತರರಿಗೆ ಪಗಾರ ವ್ಯವಸ್ಥೆ ಮಾಡುತ್ತೇನಾಗಿಯೂ, ಹೆಡ್ ಮಾಸ್ತರರು ಸವಿನಯ ಅಂದರೆ, ೪ ಮೈಲಿನ ಅಂತರಕ್ಕೆ ವರ್ಗವಾದ್ದು, ದೊಡ್ಡ ಪಗಾರಿನವರಾದ ಕಾರಣ, ಕೂಡಲೆ ಚಾರ್ಜ ಕೊಡಬೇಕೆಂ"ದಲೂ ಹುಕುಂ ಕೊಟ್ಟರು. ಆಗ ಹೆ| ಮಾ| ರು ಡೆ|| ಎ| ಇನಸ್ಪೇಕ್ಟರ ಸಾ| ದಕ್ಷಿಣಭಾಗ ಇವರ ಕಡೆಗೆ ತಾರು ಮಾಡಿದರು ಪರಂತು ಉತ್ತರವೇ ಇಲ್ಲ. ಹೆಡ್ ಮಾಸ್ತರರಿಗೂ, ಪ್ರೆಸಿಡೆಂಟರಿಗೂ ಅನೇಕ ಜನರ ಮುಖಾಂತರ ಗುಪ್ತವಾಗಿ ಸಂಧಾನದ ಮಾತು ಕಥೆಗಳು ನಡೆದವಂತೆ! ಪ್ರೆಸಿಡೆಂಟರ ವ್ಯಕ್ತಿಕೆಯೂ ನಡೆಯಿತಂತೆ! ಹೆಡ್ ಮಾಸ್ತರಿಗೆ ಅಂತರಂಗದಿಂದ ಪಗಾರಿನಷ್ಟು ರಕಮನ್ನು ಮುಂಗಡ ಕೈಸ್ತಾಂತು "ಪೇಡ" ಮಾಡಿಯೂ ಬಿಟ್ಟರಂತೆ! ಆದರಿಂದಲೇ ಹೆಡ್ ಮಾಸ್ತರರು ತಾ. ೧೮—೮—೩೩ ನೇ ಪೂರ್ವಾಹ್ನಕ್ಕೆ ಅ|| ರನ್ನು ಬಿಡುಗಡೆ ಮಾಡಿ, ಚಾರ್ಜು ಕೊಟ್ಟೂ ಬಿಟ್ಟರು. ಹೆಡ್ ಮಾಸ್ತರರು ಅದೇ ಊರವರು. ದೊಡ್ಡ ಪಗಾರದವರು. ಅಂತರಂಗದಿಂದ ತೃಪ್ತಿಯೂ ಆಯಿತು. ಅಂದಮೇಲೆ ಬಡಸ್ಥಿತಿಕರಾದ ಸಣ್ಣ ಪಗಾರಿನ ಅ| ರ ಗೊಡವೆ ಅವರಿಗೇಕೆ? ಪಾಪ! ಅ| ರ ಗೋಳು. ಅ| ರ ಪಗಾರಿನ ವ್ಯವಸ್ಥೆಯು ಕಾಗದದ ಮೇಲೇ ಉಳಿಯಿತು. ಆವರಿಗೆ ವರ್ಗವಾದವರಿಗಾದರೂ, ಏನಾದರೂ ವ್ಯವಸ್ಥೆ ಮಾಡಬಹುದಾಗಿತ್ತು. ಅವರಿಗೆ ಕನಿಷ್ಟ ದಾರಿಯ ಖರ್ಚಿಗೇ ೫೦ ರೂಪಾಯಿ ಬೇಕು. ಆವರ ಕಂಗಾಲ ಸ್ಥಿತಿಯನ್ನು ನೋಡಿ, ಆವರ ಮಿತ್ರಮಂಡಳಿಯು ಅವರಿಗೆ ಸಹಾಯ ಮಾಡಿ, ಅವರು ಪಗಾರಿನ ಆಶೆ ಬಿಟ್ಟು ಹೊರಟು ಹೋಗಿಬಿಟ್ಟರು.

ಈ ಸಂಗತಿಗಳಿಂದ ಹೊರಡುವ ಈ ಕೆಳಗೆ ಕಾಣಿಸುವ ಕೆಲವು ಆಕ್ಷೇಪಗಳನ್ನು ಸಂಬಂಧಪಟ್ಟವರು ಖುಲಾಸೆ ಮಾಡ್ಯಾರೆಂತ ತಿಳಿಯುತ್ತೇನೆ.

೧ ಈ ವರ್ಷದ ಮಳೆಗಾಲವು ಬಹು ಬೀಕರವಾದದ್ದು. ಪ್ರವಾಹಹಾನಿ, ಗೃಹನಾಶ, ರಹದಾರಿ ಬಂದ, ಟಪಾಲ ಬಂದ ಮೊದಲಾದ ಹೃದಯದ್ರಾವಕ ವಾರ್ತೆಗಳು ಪ್ರತಿಕ್ಷಣಕ್ಕೆ ಕೇಳಬರುತ್ತವೆ. ಇಂಥ ಕಾಲದಲ್ಲಿ ವರ್ಗಾವರ್ಗಿ ಮಾಡತಕ್ಕದ್ದು ನ್ಯಾಯವೋ?

೨ ಸರಕಾರೀ ದೋರಣದಿಂದ ಅದು ನ್ಯಾಯವೇ ಆಗಿದ್ದರೆ, ಸರಕಾರೀ ನೌಕರರಿಗೆ ವರ್ಗವಾದರೆ, ೧ ತಿಂಗಳ ಪಗಾರ ಮತ್ತು ಸರಕಾರೀ ಅಂದಾಜಿಗೆ ತಕ್ಕಷ್ಟು ಪ್ರವಾಸ ಭತ್ತೆಗಳನ್ನು ಮುಂಗಡ ಕೊಡಬೇಕೆಂತ ಆದ ಸರಕಾರೀ ರೂಲು ಮಾಸ್ತರ ಜನರಿಗೆ ಲಾಗೂ ಇಲ್ಲವೋ? ಯಾಕೆ ಲಾಗೂ ಇಲ್ಲ?

೩ ರೂಲು ಲಾಗೂ ಇಲ್ಲದಿದ್ದರೂ- ಪ್ರತಿ ತಿಂಗಳ ಪಗಾರು ಮಾರನೇ ತಿಂಗಳ ೧೦ ನೇ ತಾರೀಖಿನೊಳಗಾಗಿ 'ಪೇಡ' ಆಗಬೇಕೆಂತ ಮುನಿಸಿಪಾಲಿಟಿಗೆ ಡಿಪಾರ್ಟಮೆಂಟಲ್ ಹುಕುಮು ಆದೆ. ಹೀಗಿದ್ದರೂ, ೩ ತಿಂಗಳ ಪಗಾರು ಬಾಕಿ ಇಟ್ಟುಕೊಳ್ಳುವದೂ, ಬಾಕಿ ಇರುವಾಗಲೇ ವರ್ಗಾವರ್ಗಿಯನ್ನು ಅಮಲಿನಲ್ಲಿ ತರುವದೂ ರೀತಿಯೋ? ವರ್ಗವಾದ ಮಾಸ್ತರರು ಕೊಡತಕ್ಕವರಿಗೆ ಏನು ಹೇಳಬೇಕು? ಪ್ರವಾಸದ ಖರ್ಚು ಹೇಗೆ ಪೂರೈಸಬೇಕು? ಜವಾಬದಾರ ಅಮಲದಾರರು ಸ್ವಲ್ಪ ಹೊತ್ತು ತಾವೇ ಈ ಸ್ಥಿತಿಯಲ್ಲಿದ್ದೇವೆಂತ ಕಲ್ಪಿಸಿ, ಈ ಪ್ರಶ್ನೆಯ ಖುಲಾಸಾ ಮಾಡ್ಯಾರೋ?

೪. ಪಗಾರು ಮುಳುಗತಕ್ಕದ್ದಲ್ಲ ನಿಜ. ಆದರೆ, ಪಗಾರ ಮನಿಆರ್ಡರ, ಕೊಡತಕ್ಕವರಿಗೆ ತಿರುಗಿ ಮನಿಯಾರ್ಡರ, ಹೀಗೆ ಎರಡು ವಿಧದ ಪೋಸ್ಟ ಖರ್ಚು ಯಾರು ಸಹಿಸುವರು? ಯಾವ ಅಪರಾಧಕ್ಕೆ ಈ ದಂಡವು?

೫. ಹೆ| ಮಾ| ರು ಅಂತರಂಗದಲ್ಲಿ ತೃಪ್ತಿ ಹೊಂದಿದ್ದು ಹೌದಾದರೆ, ಈ ಪರಿಯಿಂದ ತಮ್ಮ ಅ| ರನ್ನು ವಂಚಿಸಿ ವರ್ತಿಸಿದ್ದು ಅನುಚಿತವಲ್ಲವೋ?

೬ ಮಾಸ್ತರ ಜನರ ಹೊರ್ತಾದ ನೌಕರಿಯೋ ಆದಿಯಾದ ಮುನಿಸಿಪಾಲಿಟಿಯ ಇತರ ನೌಕರರಿಗೆ ಮೇ, ಜೂನ ತಿಂಗಳುಗಳ ಪಗಾರ ಪೂರಾ 'ಪೇಡ' ಆಗಿದೆ. ಎಲ್ಲರನ್ನೂ ಸಮದೃಷ್ಟಿಯಿಂದ ನೋಡುವ ಉದಾರ ಬುದ್ಧಿಯ ಪ್ರೆಸಿಡೆಂಟ ಸಾ| ರು ಶಿಕ್ಷಕರಿಗೆ ಮೇ ತಿಂಗಳ ಪಗಾರ ಬಾಕಿ ಇರುತ್ತಾ, ಉಳಿದವರಿಗೆ ಜೂನದ ಪಗಾರ ಯಾಕೆ ಕೊಟ್ಟರು? ಇಂಥ ಪಕ್ಷಪಾತವೇಕೆ? ಆಸಿಸ್ಟಂಟರ ಪಗಾರ ವ್ಯವಸ್ಥೆ ಮಾಡುತ್ತೇನೆಂತ ಹುಕುಮು ಕೊಟ್ಟವರು ಅವರಂತೆ ಯಾಕೆ ನಡಿಯಲಿಲ್ಲ?

೭ ಮುನಿಸಿಪಾಲಿಟಿಯು ಶಿಕ್ಷಕರಿಗೆ ಈ ರೀತಿ ಒತ್ತಾಯ-ಪಕ್ಷಪಾತಗಳು ಆಗುತ್ತಿರುವದನ್ನು ಖಾತೆಯ ಅಮಲದಾರರು ಯಾಕೆ ತಪ್ಪಿಸುವರು? ಅವರೇನು ಅಭಿಮಾನಕೊಳ್ಳರೋ

ಟೀಪು:— ಇನ್ನೂ ಕೆಲವು ಮಹತ್ವದ ಚರ್ಚೆ ಇನ್ನೊಂದು ಲೇಖದಲ್ಲಿ ಪ್ರಕಟಿಸುವೆನು.

ನಾಗ

ಆರೋಗ್ಯಚಂದ್ರಿಕೆ

ಈ ಪತ್ರಿಕೆಯ ಸಂಪಾದಕರು ಮು ಡಾಕ್ಟರ್ ಯು. ರಾಮರಾವ್. ಎಲ್. ಸಿ. ಯಮವರು. ಈ ಆರೋ ದ ವಿಷಯದಲ್ಲಿ ಸಾಮಾನ ಶಿಕ್ಷಣ ದೊರೆಯುವದು ಬಂದು ಸಚಿತ್ರ ಪ

ಈ ಮಾಸಪತ್ರಿಕೆಯು 'ಹೇ ಯ ಕನ್ನಡ ಪ್ರತಿಯಾಗಿದೆ.

ಆರೋಗ್ಯಚಂದ್ರಿಕೆಯಲ್ಲಿ ಪ ಮತ್ತು ಆಯುರ್ವೇದ ಪಂಡಿ ದಾಗ್ಗೆ ಪ್ರಕಟವಾಗುವವು.

'ಹೆಲ್ತ್' ಎಂಬ ನಮ್ಮ ಇಂ ನ್ನೋದಿ ಸಂತೋಷಿಸಿದ ಆ ಪ್ರೋತ್ಸಾಹದ ಮೇಲೆ ಈ ಕ ಪಡಿಸುವದಾಗಿ ನಿರ್ಧರಿಸಲಾ ಚಿಕೆಯು ಬರುವ ಆಗೋ ವಾಗುವದು

ಅಂಚೆಯ ವೆಚ್ಚ ಸೇರಿ ಈ ಲಗು ವರ್ಷಕ್ಕೆ ರೂಪಾಯಿ ಬಂದಕ್ಕೆ ೦—೩—೦.

ಇದಕ್ಕೆ ಚಂದಾದಾರರಾಗಿ ಈಗಿನಿಂದಲೇ ರಿಜಿಸ್ಟರ್ ಮಾ ಚಂದಾದಾರರಾಗುವವರು ಕೊಳ್ಳುವದರಿಂದಲೂ ಹಣ ಹುವದು ಲಾಭಕರ.

ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿ ನ್ಯಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬ ಪತ್ರವ್ಯವಹಾರ ವಿಳಾಸ:—

ಮೆನೇಜರ

'ಹೆಲ್ತ್' ಅಥ

'ಆರೋಗ್ಯಚಂದ್ರಿಕೆ

೩೩೩, ತಂಬುಚೆಟ್ಟಿ ಬೀ

ಮೂರ್ತಿಗೇ

ನಮ್ಮಲ್ಲಿ ಭಂಗಾರ, ಬೆಳ್ಳಿ ತಾಮ್ರ ದ ಕರೇಶಿಲೆಯ ನಾಣಪೀಠಗಳೂ, ಪ್ರಭಾವಳಿ ಟಿಗಳೂ, ನಾಗಾಭರಣಗ ಯಾವದೇ ತರದ ಪ್ರತಿಮೆ ವರಕ್ಕೆ ವ ಯೋಗ್ಯ ಬೆಲೆ ವವು. ಬೇಕಾದವರು ಪತ್ರ ಸಮಕ್ಷ ಬಂದು ವ್ಯವಹಾರ

ಪತ್ರ:—ನಾರಾಯಣ

ಗುಡಿಗಾರ, ಗೋ

ಶಿರ್ಶಿ ಮುನಿಸಿಪಾಲಿಟಿಯಲ್ಲಿ ಅನ್ಯಾಯದ ಆಡಳಿತೆಯು.

ಈ ಊರ ಮುನಿಸಿಪಾಲಿಟಿಯವರು ಊರವರ ಸಮ್ಮತಿಯನ್ನು ಪಡೆಯದೆ, ಕಳೆದ ೩೦-೩೫ ವರ್ಷಗಳಿಂದ ನಡೆದು ಬಂದಂಥ ಇಂಗ್ಲೀಷ ಶಾಲೆಯ ಮೊದಲನೇ ೧-೨-೩ ವರ್ಗಗಳನ್ನು ಕನ್ನಡ ಶಾಲೆಗೆ ಜೋಡಿಸಿ ಊರವರ ಸಂಗಡ ಜಗಳಾಡುವ ಪ್ರಸಂಗ ತಂದುಕೊಂಡದ್ದು ನೋಡಿ, ಎಲ್ಲರಿಗೂ ಆಶ್ಚರ್ಯವಾಗುವದು ಸಹಜ. ನಿಜವಾಗಿ ನೋಡಿದರೆ, ಯಾವದಾದರೊಂದು ಮಹತ್ವದ ಸಾರ್ವಜನಿಕ ಕೆಲಸವನ್ನು ಮಾಡಬೇಕಾದರೆ ಊರವರಿಗೆ ನೋಟೀಸು ಕೊಟ್ಟು, ಅವರ ಮೇಲೆ ಯಾವದೇ ತರದ ತಕರಾರು ಬರದಂತೆ ಊರವರಿಂದ ಆರಿಸಲ್ಪಟ್ಟ ಮೆಂಬರರು ನೋಡಿಕೊಳ್ಳುವದು ಅವರ ಕರ್ತವ್ಯವು. ಮೇಲ್ಕಂಡ ಬದಲಾವಣೆಯು ತಮಗೆ ಇಷ್ಟವಿಲ್ಲೆಂದು ಊರ ಮುನಿಸಿಪಾಲಿಟಿಗೆ ಅರ್ಜಿಮಾಡಿದರೆ, ಪ್ರಸಿಡೇಂಟರು ಅವರ ಮೇಲೆ ಮುಖಾಮುಖಿ ಧಮಕಾಯಿಸಿ ನೀವು ಮಾಡಿದ ಅರ್ಜಿಗೆ ಬೆಲೆಯಿಲ್ಲ. ನಾವು ಮಾಡಿದ್ದು ಕಾಯಿದೆಗೆ ಸರಿಯಾಗಿದೆ ಎಂಬ ದುರಾಗ್ರಹದ ನೋಕರಶಾಹಿಯ ಉತ್ತರವನ್ನು ಕೊಟ್ಟರು. ತಮ್ಮ ಮತವನ್ನು ಸಮರ್ಥಿಸುವದರ ಬಸೆಯಿಂದ ಶಾಲೆಗೆ ಸಂಬಂಧಿಸಿದ ಮ್ಯುನಿಸಿಪಾಲಿಟಿಯ ಎಲ್ಲ ಲೆಕ್ಕಪತ್ರಗಳನ್ನು ಊರವರು ನೋಡಬಹುದೆಂದು ಹೇಳಿದರು. ಅವುಗಳನ್ನು ನೋಡಲಿಕ್ಕೆ ಹೋದಾಗ ಮಾತ್ರ, ಅವನ್ನು ಬೇಗ ಕೊಡಲಿಲ್ಲ. ಕೊಟ್ಟಾಗ ತದ್ವಿಷಯಕ ಎಲ್ಲ ಪತ್ರಗಳನ್ನು ತೋರಿಸಲಿಕ್ಕೆ ಒಪ್ಪಲಿಲ್ಲ. ಊರವರ ಅರ್ಜಿಪ್ರಕಾರ ವಿಚಾರಣೆಯನ್ನು ಈ ವರೆಗೂ ಮಾಡಲಿಲ್ಲ. ತನ್ಮಧ್ಯೆಯೇ ವಿಚಾರಿಸಿ ಸುವ್ಯವಸ್ಥೆಯನ್ನು ಮಾಡಿ ತಿಳಿಸುವೆವೆಂದು ಹೇಳಿ, ತಿಂಗಳಾಗುತ್ತಾ ಬಂದರೂ ನಿಕಾಲೆಯು ಸುದ್ದಿಯೇ ಇಲ್ಲ. ಊರವರು ಹೀಗೇಕೆಂದು ಕೇಳಲು ಮೇಲಿನವರಿಗೆ ಬರೆದು ಕೇಳುತ್ತೇವೆಂದೂ ಮತ್ತು ಅನೇಕ ವಿಧವಾಗಿ ಮನಸ್ಸಿಗೆ ಬಂದಂತೆ ಉತ್ತರ ಕೊಡಹತ್ತಿದ್ದಾರೆ. ಪಾಲಕರ ತಕರಾರುಗಳಿಗೆ ಈ ಮೆಂಬರರು ಕಿಮ್ಮತ್ತು ಕೊಡದ್ದರಿಂದ, ಮೆಂಬರರ ಕೃತಘ್ನತೆಯು ಆರಿಸಿ ಕೊಟ್ಟವರ ಮೇಲೆ ಯಾವ ತರದ್ದು ಇರುತ್ತದೆಂಬದು ಎದ್ದು ಕಾಣುತ್ತದೆ.

ಚುನಾವಣೆಯ ಮೊದಲು ನಾವು ನಿಮ್ಮ ಸೇವಕರಾಗಲು ಟೊಂಕ ಕಟ್ಟಿದ್ದೇವೆಂದು ಹೇಳಿದವರು, ಈಗ ಹುಕುಮು ಧಮಕಾಯಿಸಲಿಕ್ಕೆ ಹಿಂಜರಿಯಲಿಲ್ಲ. ಮೊದಲಿನ ಮೆಂಬರರು ಮವಾಳರು, ನಾವು ಅಸಹಕಾರವಾದಿಗಳಾದ್ದರಿಂದ ಊರೊಳಗಿನ ಸರಾಯಿ ಅಂಗಡಿಯನ್ನು ಹೊರಗೆ ಹಾಕುವೆವೆಂದೂ, ಶಾಲೆಗಳಲ್ಲಿ ನೂಲುವ, ನೇಯುವ ವಗೈರೆ ಉದ್ಯೋಗ-ಧಂದೆ ಶಿಕ್ಷಣದ ವಿರ್ಮಾಣ ಮಾಡುವೆವೆಂತಲೂ, ವಸ್ತ್ರ ತಾಯರ್ಗಳನ್ನು ಕೈಕೊಳ್ಳುವೆವೆಂತಲೂ, ಜಾದಿಗೆ ಸುಂಕವನ್ನು ಕಡಿಮೆ ಮಾಡುವೆವೆಂತಲೂ, ಅಂಬ ಒದೆದು ಯಾವ ಕಾರ್ಯವನ್ನೂ ಮಾಡಲಿಲ್ಲ. ಹೊಸದಾಗಿ ನೇಮಿಸಲ್ಪಟ್ಟ ನಿಷ್ಪ್ರಯೋಜಕ ಮತ್ತು ಖರ್ಚಿನ ಹುದ್ದೆಗಳನ್ನು ಕಡಿಮೆ ಮಾಡುವದೂ ಮತ್ತು ಗೌರವಾರ್ಥವಾಗಿ ಮನೆ ಕೆಲಸಕ್ಕೆ ನೇಮಿಸಿಕೊಳ್ಳುವ ಪಟ್ಟೇವಾಲರನ್ನು ಕಡಿಮೆ ಮಾಡುವದೂ, ಮತ್ತು ಹೀಗೆ ಮಾಡಿ ಉಳಿದ ಹಣವನ್ನು ಊರಲ್ಲಿ ಉಚ್ಚ ತರದ ಶಿಕ್ಷಣದ ನಿರ್ಮಾಣ ಮಾಡುವದರ ದೆಸೆಯಿಂದ ಖರ್ಚು ಮಾಡುವದು ಇರುತ್ತದೆಂಬ ಮಹತ್ವಾಕಾಂಕ್ಷೆಯನ್ನು ತೋರಿಸಿದವರು ಚೀಫ ಆಫೀಸರನೆಂಬ ಖರ್ಚಿನ ಮತ್ತು ಅನಾವಶ್ಯಕ ಹುದ್ದೆಯನ್ನು ಕಾಯಂ ಇಟ್ಟು, ಅವನಿಗೆ ಸಹಾಯಾರ್ಥವಾಗಿ ಒಬ್ಬ ಪಟ್ಟೇವಾಲನು ಮುಂತಾದ ಸರಂಜಾಮುಗಳನ್ನು ಬೆಳಸಿದರು. ಸ್ಯಾನಿಟರಿ ಇನಸ್ಪೇಕ್ಟರ ವಗೈರೆ ಜನನ್ನು ನೋಡಿಕೊಳ್ಳುವ ಕೆಲಸಕ್ಕೆ ಅರವತ್ತು ರೂಪಾಯಿಗಳ ಪಗಾರದ ಅನನುಭವಿಕ ಸಬ್ ಓವರ್ಸೀಯರನನ್ನು ಊರಲ್ಲಿ ಯಾರಿಗೂ ಇಷ್ಟವಿಲ್ಲದಿದ್ದರೂ, ನೇಮಿಸಿಕೊಂಡು ಬಿಟ್ಟಿದ್ದಾರೆ. ಅದರಿಂದ ಊರವರ ಮೇಲೆ ಕಾರಣವಿಲ್ಲದೆ ಕರಭಾರವನ್ನು ಹೇರಿದ್ದಾರೆ. ಈ ಖರ್ಚಿನ ನೌಕರರ ಸಹಾಯವಿಲ್ಲದೆ, ಈಗಿನ ಮೆಂಬರರ ಬೇಳೆ ಬೆಯ್ಯುವಂತೆ ತೋರುವದಿಲ್ಲ. ನಾಲ್ಕೈದು ವರ್ಷಗಳ ಹಿಂದೆ ಸಕ್ರೆಟರಿ, ಸ್ಯಾನಿಟರಿ ಇನಸ್ಪೇಕ್ಟರ ಇವರು ಸ್ವಲ್ಪ ಖರ್ಚಿನಿಂದ, ಊರಲ್ಲಿ ಯಾವದೇ ತಕರಾರುಗಳು ಹುಟ್ಟದಂತೆ ಈ ಕೆಲಸ ಮಾಡಿರುವದುಂಟು. ಮೇಲೆ ಹೇಳಿದ ಅನ್ಯಾಯದ ಖರ್ಚನ್ನು ಮುಚ್ಚುವದರ ದೆಸೆಯಿಂದ ೩೦-೩೫ ವರ್ಷಗಳಿಂದ ನಡೆದು ಬಂದಂಥ ಶಾಲೆಯಲ್ಲಿ ವಿಭಾಗವಾಡಿ ಕ.ಮುಂ ನೌಕರರಾದಂಥ ೨ ಶಿಕ್ಷಕರಿಗೆ ಅಪ್ಪಣೆ ಕೊಟ್ಟು, ವರ್ಷಕ್ಕೆ ಏಳನೂರು ಇಪ್ಪತ್ತು ರೂಪಾಯಿ ಖರ್ಚು ಉಳಿಸಲಿಕ್ಕೆ ಪ್ರಯತ್ನ ಮಾಡಿದರು. ಆದರೆ, ಮೂಗಿನಕಿಂತ ಮೂಗುತಿಯೇ ಭಾರವೆಂಬಂತೆ ಇಬ್ಬರು ಹೊಸ ೩ನೇ ವರ್ಷದ ಟ್ರೇಂಡರನು ನೇಮಿಸುವ ಪ್ರಸಂಗ ಬರುವ ಲಕ್ಷಣವು ತೋರುತ್ತದೆ. ಇದರಿಂದ ವರ್ಷಕ್ಕೆ ೯೬೦ ರೂಪಾಯಿ ಖರ್ಚು ಬರುತ್ತದೆ. ಹೀಗಿರುವ ಈ ವ್ಯವಸ್ಥೆಯು 'ಮಳೆನೀರನ್ನು ಬಿಟ್ಟು, ಮಂಜಿನನೀರಿಗೆ ಕೈ ಒಡ್ಡು' ಎಂಬ ನ್ಯಾಯವನ್ನು ಅನುಸರಿಸಿರುತ್ತದೆ. ಅದು ಗ್ಯಾದರೂ, ತಾವು ಮಾಡಿದ ವ್ಯವಸ್ಥೆಯು ಒಳ್ಳೇದು, ಸರಕಾರವು ಇದಕ್ಕೆ ಸಮ್ಮತಿಸಿರುತ್ತದೆಂಬ ಕುಂಟ ನೆವವನ್ನು ಹೇಳಿ, ತಮ್ಮ ತಪ್ಪನ್ನು ಮುಚ್ಚಿಕೊಳ್ಳುವದು ಎಲ್ಲಿಯ ನ್ಯಾಯವು? ಲೋಕಲ್ ಬೋರ್ಡಿನವರು ಕನ್ನಡ ನಾಲ್ಕನೇ ಇಯತ್ತೆ ಮೇಲಿನ ಸಕ್ತೀ ಶಿಕ್ಷಣದ ಜವಾಬದಾರಿಯನ್ನು ಹೊತ್ತುಕೊಳ್ಳಲಿಕ್ಕೆ ತಯಾರಿಲ್ಲ. ವಿದ್ಯಾಖಾತೆಯ ಮಂತ್ರಿಗಳು ಆಯಾ ಜನರ ಅಭಿಪ್ರಾಯದ ಅನುಕೂಲತೆಗನುಸರಿಸಿ ಇಂಗ್ಲೀಷ ಶಿಕ್ಷಣದ ವ್ಯವಸ್ಥೆಯನ್ನು ಇಡಬೇಕೆಂದು ಜಾಹೀರ ಮಾಡಿದ್ದರೂ, ತಾವು ಮೇಲಧಿಕಾರವನ್ನು ಕೇಳುತ್ತೇವೆಂದು ಹೇಳುವದು ಬರೇ ಕಾಲಹರಣವನ್ನು ಮಾಡುವದಿರುತ್ತದೆ. ಶಾಲೆಯು ಹಾಳಾಗುತ್ತಾ ನಡೆದದೆ. ಪಾಲಕರ ತಕರಾರುಗಳು ಬೆಳೆಯಹತ್ತಿವೆ.

ಇದು ವರೆಗೆ ಸಾರ್ವಜನಿಕ ಹಿತಾರ್ಥವಾಗಿ ಮಾಡಿದ, ಸಮಾಧಾನಕರವಾದ, ಕೀರ್ತಿಯನ್ನು ಪಡೆಕೊಳ್ಳುವ, ಮತ್ತು ನ್ಯಾಯವಾದ, ಕೆಲಸಗಳು ಈ ಮೆಂಬರರಿಂದ ಯಾವವೂ ಆಗಿಲ್ಲೆಂಬ ಅನುಭವವು ಈಗಾಗಲೇ ಬಹಳ ಸಾರೆ ಪ್ರತಿಯೊಬ್ಬನಿಗೆ ಬಂದು ಹೋಗಿದೆ. ಅವುಗಳ ಚರ್ಚೆಯನ್ನು ಬೆಳಸುವ ಹೊತ್ತು ಇದಲ್ಲ. ಪವಿತ್ರವಾದ ವಿದ್ಯೆಯ ಬಾಬಿನಲ್ಲಿಯೂ ಅದೇ ತರದ ಅನ್ಯಾಯವಾದದ್ದರಿಂದ ಊರಲ್ಲಿ ಕ್ಷೋಭವೆದ್ದದ್ದನ್ನು ನೋಡಿ ನಿಜ-ಅನ್ಯಾಯಗಳನ್ನು ಪ್ರಕಟಿಸಲು ಉಚಿತವಾಗಿ ತೋರಿದ್ದರಿಂದ, ಮೇಲಿನ ಕೆಲವು ಸಂಗತಿಗಳನ್ನು ಕಾಣಿಸುವ ಪ್ರಸಂಗ ಒದಗಿತು.

ಶಿರ್ಶಿ, ತಾ. ೨೭-೮ ೧೯೩೩. } ಓರ್ವ ನಾಗರಿಕ.

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ. ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ,
ಮುಂಬಯಿ.

ಮನೆ ಕಟ್ಟುವವರಿಗೆ ಸುಸಂಧಿಯು.





ಮೇಲಂತಸ್ತಿಗೆ ಶೋಭೆ ಬರುವದಕ್ಕೆ ನಾನಾ ತರ ನಕ್ಷೀ ಕೊರೆಯಲ್ಪಟ್ಟ ಬೀಡಿನ ಕಟಾಂಜನಗಳೂ, ಹೂದೋಟ, ಬಳಂಗಳ, ಉಪ್ಪರಿಗೆ, ದಿವಾನಖಾನೆ ಮೊದಲಾದ ಸ್ಥಳಗಳಲ್ಲಿ ವಿಶ್ರಾಂತಿಗೊಳ್ಳುವದಕ್ಕೆ ತಕ್ಕ ಬಾಕುಗಳೂ ಕಿರ್ಲೋಸ್ಕರ ಕಾರಖಾನೆಯಲ್ಲಿ ಸೌಕರ್ಯದಿಂದ ದೊರೆಯುತ್ತವೆ. ಪತ್ರ ಬರೆದು 'ಜಿ' ಕ್ಯಾಟಲಾಗು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ.)

ಲೋಕಾನುಕೂಲತೆಯಾಗಬೇಕೆಂದು, लोकानुकूलता व्हावी म्हणून.

ನಮ್ಮ 'ಸ್ಟಾರ ಆಫ್ ಕೆನರಾ' ಮುದ್ರಣಾಲಯದಲ್ಲಿ

आमच्या 'स्टॉर ऑफ केनरा' मुद्रणालयांत

નવીન વ્યવસ્થા !! ಹೊಸ ಏರ್ಪಾಟು !! नवीन व्यवस्था !!

'STAR OF KANARA' PRESS, KUMTA.

ನಮ್ಮ ಮುದ್ರಣಾಲಯದಲ್ಲಿ ಲೋಕಾನುಕೂಲತೆಗಾಗಿ ಮಾಡಿದ ಹೊಸ ಏರ್ಪಾಟುಗಳ ವಿವರ:—

ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಗಳಲ್ಲಿ

೧. ಮನೋಹರ ಮುದ್ರಣ. ೨. ಸಕಾಲ ಮುದ್ರಣ. ೩. ಸುಲಭ ದರ.

ಸಂಕ್ಷೇಪತಃ ಹೇಳಬೇಕಾದರೆ —

ಅಗ್ಗ ಅಚ್ಚು! ಅಂದ ಅಚ್ಚು!! ಅಚ್ಚ ಅಚ್ಚು!!!

ತರತರದ ಬಣ್ಣಗಳಿಂದ ಸುಶೋಭಿತವಾಗಿ ಮುದ್ರಣ ಮಾಡಿಕೊಡುವದಲ್ಲದೆ, ಫೋಟೋ-ಬ್ಲೋಕುಗಳನ್ನೂ ಮುದ್ರಿಸುವ ಏರ್ಪಾಟು ಮಾಡಲಾಗಿದೆ.

ಜರೂರಾಯಿತಿ ಜನರಿಗಾಗಿ—

ಬೇಕಾದ ಛಾಪೆ ಕೆಲಸದ ನಮೂನೆಯನ್ನು ಟಪಾಲದ್ವಾರಾ ಎಡ್‌ವ್ಹಾನ್ಸ ಸಹಿತ ಕಳಿಸಿದ್ದಲ್ಲಿ, ಯಥಾಪ್ರತಿ ಮುದ್ರಣ ಮಾಡಿ ೧-೨ ದಿವಸಗಳಲ್ಲಿಯೇ ವ್ಹಿ. ಪಿ. ಯಿಂದ ಕಳಿಸುವ ವ್ಯವಸ್ಥೆಯೂ ಮಾಡಲ್ಪಟ್ಟಿದೆ. ಬ್ಯಾಂಡಿಂಗ ಕೆಲಸವೂ ಅಚ್ಚುಕಟ್ಟಾಗಿ ಮಾಡಿ ಕೊಡಲ್ಪಡುವದು. ಒಮ್ಮೆ ಆರ್ಡರು ಕಳುಹಿಸಿ, ನೋಡಬಹುದಲ್ಲವೇ?

ಇದಲ್ಲದೆ, ನಮ್ಮಲ್ಲಿ ಗ್ರಂಥ, ಪುಸ್ತಕ, ಮಾಸಪತ್ರಿಕೆ, ಪಂಚಾಂಗ ಮುಂತಾದ ವಿವಿಧ ಮುದ್ರಣ ಕೆಲಸವು ಸುಲಭ ದರದಿಂದ, ತಕ್ಕ ಹೊತ್ತಿಗೆ ತಯಾರಿಸಿ ಕೊಡಲ್ಪಡುವದು.

ಮಾರಾಟಕ್ಕೆ ಸಿದ್ಧ.

ಕೋರ್ಟ ಕಚೇರಿಗಳಲ್ಲಿ ವಕೀಲರಿಗೆ ಬೇಕಾಗುವ ವಕಾಲತ ಅಮುಲಜಾರಿ ಸಾಕ್ಷಿಪಟ್ಟಿ ಯಾದಿ, ನಕಲು ಅರ್ಜಿ ದಸ್ತೈವಜು ಪರತ ಬೇಡುವ ಅರ್ಜಿ, ಜ್ಯಾಹಿರಿ ಮುಂತಾದ ಎಲ್ಲ ತರದ ಫಾರ್ಮುಗಳೂ ಕಿಷ್ಟಂಗ ಬೀಲು, ಸತಮಿ, ಬಿಲ್ ಆಫ್ ಎಂಟ್ರಿ ಮೊದಲಾದ ಕಸ್ಟಮ್ ಫಾರ್ಮುಗಳೂ ಮಾರಾಟಕ್ಕೆ ದೊರೆಯುತ್ತವೆ

ವಿಶೇಷ ಮಾಹಿತಿ ಪತ್ರದ್ವಾರಾ ಯಾ ನೋಡು.

ಪತ್ತೆ:— ಕೃಷ್ಣರಾವ ಕೇಶವ ಶೇಣವಿ, ಹೆಗಡೇಕರ,
ಮಾಲಕ,
'ಸ್ಟಾರ ಆಫ್ ಕೆನರಾ' ಪ್ರೆಸ್, ಕುಮಟಾ.
(ಉ ಕಾನಡಾ.)

Printed and Published by Krishnarao Keshav Shen·i (Editor) at his Star o Kanara Press, Kumta.

Regd. No. B 1270 Thursday, 6th September 1923

ವರ್ಷ ೭. ಸಂಚಿಕೆ ೪೭.

ಕಾನಡಾವೃತ್ತ.

THE KANARA NEWS.

ನರಪತಿಹಿತಕರ್ತಾ ದ್ವೇಷ್ಯತಾಂ ಯಾತಿ ಲೋಕೇ ಜನಪದಹಿತಕರ್ತಾ ತ್ಯಜ್ಯತೇ ಪಾರ್ಥಿವೇಂದ್ರೈಃ ।
ಇತಿ ಮಹತಿ ವಿರೋಧೇ ವರ್ತಮಾನೇ ಸಮಾನೇ ನೃಪತಿಜನಪದಾನಾಂ ದುರ್ಲಭಃ ಕಾರ್ಯಕರ್ತಾ ॥

(Devanagari as printed: नरपतिहितकर्ता द्वेष्यतां याति लोके जनपदहितकर्ता त्यज्यते पार्थिवेंद्रैः । इति महति विरोधे वर्तमाने समाने नृपतिजनपदानां दुर्लभः कार्यकर्ता ॥)

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ:-

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.

ಮನೆಯಾರ್ಡರಿಯಿಂದ ರೂ. 3-0-0

ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಪ್ರಾಕಾಶ್ಯಾಟಿನ(೧೫ ಎಮ್‌ಉದ್ದ) ೮ ಸಾಲುಗಳ ವರೆಗೆ ರೂ. 1-0-0

ಅನಂತರ ಪ್ರತಿ ಸಾಲಿಗೆ 0-2-0.

೫೦ ಇಂಗದ ಸಾಲು ಎಷ್ಟು ಕೊಡಬಹುದೋ ಆ ಪ್ರಮಾಣದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಮಾ ಸಮಕ್ಷ ತೀರಿಸಲ್ಪಡುವವು.

(ಕುಮಟಾ— ಕಾನಡಾವೃತ್ತ, ಗುರುವಾರ, ತಾರೀಖ ೬ ಮಾಹೆ ಸಪ್ಟಂಬರ ಸನ್ ೧೯೨೩ ನೇ ಇಸವಿ.)

हिंदुस्थानांतील रहिवाशांस ज्याप्रमाणे हिंदुस्थानची हवा त्याप्रमाणेच हें औषध हिंदुस्थानांतील लोकांस ज्यास्त फायदेशीर आहे.

द्राक्षासव- { दीड रतलची किंमत २ रुपये;

रामबाण औषधें

सर्दि घालविणारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

पिण्यास रुचिकर.

कॅटलॉग मागवा,

बेंगॉल ? फार्मास्युटिकल वर्क्स लिमिटेड, मुंबई नं. १३

CLAXO:- FRESH STOCK. NEW BRAND. *a food for infants and invalids.*

Kalmegh :- *Well-tried remedy in "Liver" complaints especially of children.*

Syrup of Vasaka :- *Highly efficacious in cold, cough, crough and bronchitis.*

Besides we have in stock other patent medicines, Thermometres, Glycerine Syringes etc.,

Orders will be executed by V. P. P.

The New Emporium

Honavar. (N. Kanara.)

ಡಾ॥ ಮಾಸೂರಕರರ

ಸುಧಾಂಜನ.

ಅಂಜನಗಳಿಗೆಲ್ಲ ಅರಸು.



ತಲೆಶೂಲಿ, ವಾತ ವೇದನೆ, ಕೆಮ್ಮು, ಹಲ್ಲು ನೋವು ಇತ್ಯಾದಿಗಳಿಗೆ ಕ್ಷಿಪ್ರ ಗುಣಕಾರಿ ಸಿದ್ಧ. ಬೆಲೆ ೭ ಆಣೆ ಮಾತ್ರ. ವ್ಯಾಪಾರಿಗಳಿಗೆ ವಿಶೇಷ ಸವಲತು ಹೆಚ್ಚಿನ ಮಾಹಿತಿ ವಿಚಾರಿಸಿರಿ.

ಏಜಂಟ್ಸ್:— ನಾಗರಶೆಟ್ಟಿ ಬ್ರದರ್ಸ್, ಸುಧಾಂಜನ ಡಿಪೋ, ಕುಮಟಾ. (ಜಿಲ್ಹಾ ಕಾರವಾರ.)

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ವಿಷಯಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಅಣೆ ಬೆಲೆಯ ೩ ಪುಸ್ತಕಗಳು ಹೊರಡುತ್ತವೆ.

ಈ ವರೆಗೆ ಪ್ರಕಟವಾದ ಪುಸ್ತಕಗಳು.

(೧-೨) ಗ್ರೀಸ ದೇಶದ ಗಾಂಧಿ. (ಸಾಕ್ರೆಟೀಸ) (೩) ಸ್ವಾತಂತ್ರ್ಯಸಾಧನೆ. (೪) ಗುರು-ಹಿರಿಯರೂ, ಬಂಧು-ಭಗಿನಿಯರೂ. (೫) ರಾಷ್ಟ್ರೀಯ ಶಿಕ್ಷಣ. (೬) ಸದ್ಗುಣಮಂದಿರ. (ಭಾಗ ೧.) (೭) ಸ್ವರಾಜ್ಯ ಧರ್ಮ. (ಅನಾಮಿಕ ಪುಷ್ಪ) ಇವಿಷ್ಟು ಪ್ರಕಟವಾಗಿದ್ದು, ೫ ಆಣೆಗೆ ಒಂದರಂತೆ ದೊರೆಯುತ್ತವೆ. ವರ್ಗಣೀದಾರರಿಗೆ ಹಿಂದಿನ ಬೇಕಾದ ಪುಸ್ತಕಗಳು ೪ ಆಣೆಗೆ ಒಂದರಂತೆ ದೊರೆಯುವವು. ೬ ಪುಸ್ತಕಗಳಿಗೆ ಕೂಡಿ ೧॥ ರೂಪಾಯಿ ಮಾತ್ರ. ಅಂಚೆವೆಚ್ಚ ಬೇರೆ. ದ್ವಿತೀಯ ವರ್ಷ ಪ್ರಾರಂಭ. ಅನುಕ್ರಮವಾಗಿ ಮಾರ್ಚ, ಮೇ, ಜುಲೈ, ಸಪ್ಟಂಬರ, ನವಂಬರ, ಜನವರಿ ೧೫ ನೇ ತಾರೀಖಿಗೆ ಒಂದೊಂದು ಪುಷ್ಪ ಹೊರಡುವದು. ವಾ. ವ. ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ.

ವಾ. ಅ. ಹೊದ್ಕೆ,
ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ.

ಎಲ್ಲ ತರದ ಜ್ವರಗಳಮೇಲೆ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ, ಶೈತ್ಯ, ಬಂಗಲಿ, ಅಥವಾ ದೂಷಿತ ಹವೆಯಿಂದ ಬರುವ ಸಾದಾ ವಿಷಾರಿ; ಅಥವಾ ಇತರ ಜ್ವರಗಳೂ, ಇನಫ್ಲುಎಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನ್ಯಾನದ ದುಷ್ಪರಿಣಾಮರಹಿತ ಕೇವಲ ವನಸ್ಪತಿಯ ಈ ಮದ್ದು ಸೇವಿಸಿದರೆ ಅಶಕ್ತತೆಯಾಗದೆ, ಬೆವರು ಬಂದು ಜ್ವರ ಇಳಿಯುತ್ತದೆ. ಹಾಗು ರೋಗಿಯು ಶರೀರ ವಾಸಿಯಾಗುತ್ತಾನೆ.

೭ ಔಂಸ ಬಾಟ್ಲಿ ಕಿಂಮತ ರೂ. ೧-೦-೦.

ಇದರ ಹೊರತು ಇನ್ನೂ ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ, ಉಚ್ಚ ಪ್ರತಿಯ ಕೋಲನ ವಾಟರ, ಲವೆಂಡರ ಇತ್ಯಾದಿ ಸಾಮುಗ್ರಿಗಳು ಅಲೆಂಬಿಕದ ಕಾರಖಾನೆಯಲ್ಲಿ ತಯಾರಾಗುತ್ತವೆ. ಮಾದರಿ ಕೇಟಲಾಗು ತರಿಸಿರಿ.

ಅಲೆಂಬಿಕ್ ಕೆಮಿಕಲ್ ವರ್ಕ್ಸ,
ಕಂಪನಿ, ಲಿಮಿಟೆಡ್.
ನಂ. ೫೦, ಪ್ರಿನ್ಸೆಸ್‌ಸ್ಟ್ರೀಟ, ಮುಂಬಯಿ.

अलेंबिक केमिकल वर्क्स कं० लि० नं. ५० प्रिन्सेस स्ट्रीट मुंबई.

ಶುದ್ಧ ಖದ್ದರ್ ರೇಶ್ಮೆ ಮಡಿಗಳು.

ಸುಲಭ ಕ್ರಯಕ್ಕೆ ಖಾತ್ರಿಯಾದ ಎಲ್ಲಾ ರಂಗುಗಳ ಪ್ಲಿಯೂ ಈ ಕೆಳಗೆ ಬರೆದ ಕ್ರಯಕ್ಕೆ ದೊರೆಯುವವು.

೧೮ ಮೊಳ ಉದ್ದ	೨॥ ಅಗಲ	ರೂ.	೨೩ ರಿಂದ	೭೫	ವರೆ	
೧೬ ,,	,,	೨॥ ,,	,,	೨೦ —	೩೦	,,
೦ ,,	,,	೨॥ ,,	,,	೯ —	೧೫	,,
೬ ,,	,,	೨॥ ,,	,,	೩ —	೧೧	,,

ಅಂಗಿ ಬಟ್ಟೆಗಳು ೧೮ ಮೊಳ ×೨ ಮೊಳ ರೂಪಾಯಿ ೧೮ ರಿಂದ ೩೦ವರೆಗೆ. ಪೇಟ ೧೨ ಮೊಳ ×೧॥ ಮೊಳ ಅಗಲ ರೂಪಾಯಿ ೧೧ರಿಂದ ೧೫ ವರೆಗೆ. ಜೀನ್‌ಖಾನ್ ೧೮ ಮೊಳ ×೨ ಮೊಳ ರೂ. ೨೪ ರಿಂದ ೩೫ ವರೆಗೆ. ಇವುಗಳಲ್ಲದೆ ಶಾಲೀ ಪೀತಾಂಬರ ಕಾಶ್ಮೀರ್ ಶಾಲು, ರುದ್ರಾಕ್ಷಿ, ಜಾಗಂಟೆ, ತಾಳ, ಪನ್ನೀರ್ ದಾನಿ, ಆಟದ ಸಾಮಾನುಗಳು, ದೇವರ ಮತ್ತು ಗಾಂಧಿ ಮುಂತಾದವರ ಪಡಗಳಿರುವ ಉಂಗುರಗಳ ಮತ್ತು ಇನ್ನೂ ಅನೇಕ ಸಾಮಾನುಗಳ ಕ್ಯಾಟಲಾಗ್ ಇದೆ.

ವಿಳಾಸ:— ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. (ರಿಜಿಸ್ಟರ್ಡ

ಮೃದುವಾದ ಗುಂಗುರು ಗುಂಗುರಾಗಿರುವ ನೀಲಿಮೆಯಿಂದ ನಿಬಿಡವಾದ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತ್ತದೆ ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ತಣ್ಣಗಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ಹಚ್ಚತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು, ಆದರೆ, ಅವು ಘನವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ " ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ — ಸಿಸೆಗೆ ರೂಪಾಯಿ 1 0 0, ಸೀಸ 3ಕ್ಕೆ ರೂಪಾಯಿ 2 10-0 ವಿಪಿ ಖರ್ಚ 0 14 0

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ ಕೋಮಲ ಪರಿಮಳ ಮತ್ತು ಆಹ್ಲಾದವು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಪಡಿಸಿದ್ದು ಇದರಲ್ಲಿ ಮದಿರೆಯ (ಆಲ್ಕೋಹೋಲ) ಸಂಪರ್ಕವಿಲ್ಲವು ಒಂದೇ ಒಂದು ಸಾರಿ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ವಾತಾವರಣವು ಆವರಿಸುವುದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರ್ ಗಂಧವು ಅವೆಲ್ಲವುಗಳನ್ನು ಮೀರಿ [illegible] ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8 0 1 ಡ್ರಾಮಿನ (ಮಧ್ಯಮ) ಸೀಸೆ 1 ಕ್ಕೆ 0 12 0 4 ಡ್ರಾಮಿನ ದೊಡ್ಡ ಸೀಸೆ 1 ಕ್ಕೆ 2-0 0 ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ ದಿಲ್ ಬಹಾರ್ ಪರಿಮಳ ಕಾಗದಗಳು ಡಜನ್ 1 ಕ್ಕೆ 0 12 0.

Address - **The Anglo Indian Drug & Chemical Co,**

16, Market, **BOMBAY. 2**

ಖರೇ ಮಾತು ! ಒಳ್ಳೆ ಕಲ್ಪ ! [illegible]

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೆ

ತಾರುಣ್ಯ ಸಂಜೀವನಿ ಗುಳಿಗೆಗಳು.

ಖುಲ್ಲ ಧಾತುವನ್ನು ಬೆಳಸಿ ಪುರುಷರಿಗೆ ಸ್ತ್ರೀ ವಿಷಯವಾಗಿಯೂ ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ [illegible] ಯುಕ್ತ ಶಕ್ತಿಯನ್ನು ಉಂಟುಮಾಡಿ ದಿನೇ ದಿನೇ ಶರೀರದ ಜರಠತನವನ್ನೂ ರೋಗಗಳನ್ನೂ ದೂರಪಡಿಸಿ ಆಯುರಾರೋಗ್ಯವನ್ನೂ [illegible] ಶಕ್ತಿಯ ಉತ್ಸಾಹವನ್ನೂ ಸಂಭೋಗದಲ್ಲಿ ತೃಪ್ತಿಯನ್ನೂ, ಸೌಖ್ಯವನ್ನೂ ಕೊಟ್ಟು ಮನಸ್ಸಿನ ದೃಢತೆಯನ್ನೂ ಯೌವನದ ಕಳೆಯನ್ನೂ ದೊರಕಿಸಿ ಮುದಿತನವನ್ನು ನೀಗಿ ಬಲವನ್ನು ಉಂಟುಮಾಡುವದು ಮೃತ್ಯುವನ್ನು ನಿವಾರಿಸಿ ಬಗೆಬಗೆಯ ರೋಗಗಳನ್ನು ನಾಶಮಾಡುವದು ಜೀರ್ಣಜ್ವರ ಮಂದಾಗ್ನಿ ಶುಕ್ಲಸ್ರಾವ ಆಮಶಂಕೆ ಇವುಗಳನ್ನು ಬಿಡದೇ ನಾಶಮಾಡುವದು ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, ದೇಶಕಾಲಗಳಿಂದಲೂ, ಆಹಾರಗಳಿಂದಲೂ ಸ್ತ್ರೀಯರಿಂದಲೂ ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡೆಸುವ ಬಲಾತ್ಕಾರದ ಹಸ್ತಸ್ಪರ್ಶನದಿಂದಲೂ ಅತಿವಿಷಯೋಪಭೋಗದಿಂದಲೂ ಇಂದ್ರಿಯ ಶಿಥಿಲವೂ, ತಿಳುವೂ ನಿಸ್ತೇಜವೂ ಆಗಿ ಯತ್ನವಿಲ್ಲದೆ ಸ್ಖಲನವಾಗುವದು ಒಂದೊಂದು ಸಾರಿ ಮೂತ್ರದಲ್ಲಿಯೂ ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತೆ, ಅಶಕ್ತಿ, ಅರುಚಿ ದೃಷ್ಟಿಮಾಂದ್ಯ ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈಬಿಸುವು ನಿದ್ರೆಯಲ್ಲಿ ಭೀಕರವಾದ ಸ್ವಪ್ನ, ಅರಿವು, ಮರುವು ಮತ್ತು ಶರೀರದ ನಾಂಗೂ ಮನಸ್ಸಿನ ಚೇತನ ಕುಂದಿ ಹೋಗುವದು ಇವೆಲ್ಲವುಗಳ ಮೇಲೆ ರಾಮಬಾಣವಾಗಿರುವದು [illegible] ಗುಳಿಗೆಗಳುಳ್ಳ ಸೀಸೆ [illegible] ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ [illegible] ಗುಳಿಗೆಗಳುಳ್ಳ ಸೀಸೆಗೆ ರೂ ೧ ಪೋಸ್ಟೇಜ ಬೇರೆ

ಎನ್. ಜಿ. ಭಾಗ್ವತ್, ಆಯುರ್ವೇದಿಕ ಕೆಮಿಸ್ಟ,

ಕಾರ್ಕಳ (ಕೆನರಾ)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧ ರಾಗದ ಕೈಪೆಟ್ಟಿಗೆ ಕಿಂ [illegible]
೨ [illegible] ಕಾಲು ಪೆಟ್ಟಿಗೆ ಕಿಂ [illegible]
೩ ತಬಲೆ ಜೋಡಿ ಕಿಂ [illegible]
೪ ಹಾರ್ಮೋನಿಯಮ ಗ್ರಂಥ ಕಿಂ [illegible], ತಬಲೆ ಗ್ರಂಥ ಕಿಂ [illegible]

ಹೆಚ್ಚಿನ ಮಾಹಿತಿ ಬಗೆ ನಮ್ಮ [illegible] ಪುಸ್ತಕ ನೋಡಬೇಕು

ವ್ಯಾಪಾರ [illegible] ಇಲ್ಲದ [illegible] ಗ್ರಾಹಕರು [illegible] ಬರೆಯಬೇಕು

ಪತ್ತೆ — **ಗೋಪಾಳ ಸಖಾರಾಮ ಮತ್ತು ಕಂಪನಿ,** ನಂ [illegible]

ಕಾಳಬಾದೇವಿ ರೋಡ, ಮುಂಬಯಿ

ಜಮೀನು ಕ್ರಯಕ್ಕೆ ಕೊಡುವದುಂಟು.

ಹೊನ್ನಾವರ ಕಸಬಾ ಸರ್ವೆ ನಂಬರ ೧೫೫ ಯಕ್ಕೆ ೩ ೪೯, ಆಕಾರ ರೂಪಾಯಿ ೩-೨- ರ ಸ್ಥಳಕ್ಕೆ ಪೂರ್ವ ಪಶ್ಚಿಮ ಉತ್ತರ ದಕ್ಷಿಣ ಬಿಟ್ಟು ವಸ್ತಿವಾಸ ಬಾಗಾಯತ ಶರೀ ಜಮೀನು ಇದಕ್ಕೆ ನಿಶ್ಚಿತ ಉತ್ಪನ್ನ ಕಟ್ಟಿ ಅಕ್ಕಿ ಖ ೩ ೬ ವ ೧ ಗಿನಾಳಾಯಿ ೧೫೦ ಇರುವ ಭಾಗವು ಕ್ರಯಕ್ಕೆ ಕೊಡುವದುಂಟು ಕ್ರಯಕ್ಕೆ ಅಪೇಕ್ಷಿಸುವವರು ಈ ತಿಂಗಳ ಅಖ್ಯೇರಿನೊಳಗೆ ಈ ಕೆಳಗೆ ಸಹಿ ಮಾಡುವವರ ಹತ್ತರ ಪತ್ರದ್ವಾರಾ ಯಾ ಸಮಕ್ಷ ಕ್ರಯದ ಶರ್ತುಗಳು ಗೊತ್ತ ಮಾಡಿ ಕ್ರಯಕ್ಕೆ ತಕ್ಕೊಳ್ಳಬಹುದು

ಹೊನ್ನಾವರ ತಾ ೩-೯ ೧೯೩೨ | ಶಿವರಾವ ರಾಮರಾವ ಮುಶೇರ್ಕರ, ವಕೀಲ, ಹೊನ್ನಾವರ

ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯ ವಿಶೇಷ ಸಭೆಯಲ್ಲಿ ಪಾಸಾದ ಠರಾವುಗಳು.

೧ ಶ್ರೀ ನಾರಾಯಣದಾಸ ಬಿದಾರ ಇವರ ಆಕಾಲಿಕ ಮರಣದಿಂದ ನಮ್ಮ ಪ್ರಾಂತಕ್ಕೆ ಅತ್ಯಂತ ಹಾನಿಯಾಗಿರುತ್ತದೆಂದು ಈ ಕಮಿಟಿಯು ಭಾವಿಸುತ್ತದೆ ಹಾಗೂ ಇವರ ಕುಟುಂಬದವರ ದುಃಖದ ವಿಷಯದಲ್ಲಿ ಈ ಕಮಿಟಿಯು ಸಹಾನುಭೂತಿಯನ್ನು ತೋರಿಸುತ್ತದೆ ಈ ಠರಾವನ್ನು ಅವರ ಕುಟುಂಬದವರ ಕಡೆಗೆ ಕಳಿಸಬೇಕು

೨ ಈ ಕಮಿಟಿಯು ಅತ್ಯಂತ ಅಂತಃಕರಣಪೂರ್ವಕವಾಗಿಯೂ ಮನಃಪೂರ್ವಕವಾಗಿಯೂ ಸೆರೆಮನೆಯಿಂದ ಇದೇ ಈಗ ಬಂದ ಶ್ರೀ ಕೌಜಲಗಿಯವರ ಸ್ವಾಗತ ಮಾಡುತ್ತದೆ ಹಾಗೂ ಇವರು ಕರ್ನಾಟಕದಲ್ಲಿಯ ಕೊಂಗ್ರೆಸ ಚಳವಳಿಯನ್ನು ಪುನಃ ಜೋರಿನಿಂದ ನಡಿಸಿ ಮುಂದುವರಿಸುವರೆಂದು ವಿಶ್ವಾಸಿಸುತ್ತದೆ

೩ ಈ ಕಮಿಟಿಯು ಇತ್ತಿತ್ತ ಬಿಟ್ಟುಬಂದ ದೇಶಭಕ್ತ ಬಾಲಾಜಿ, ಸೈಫುದ್ದೀನ ಕಿಚಲೂ ಯಾಕೂಬ ಹುಸೇನ ಡಾ। ಜೋಯಿ ಥಾಮಸ ಮುಂತಾದವರನ್ನು ಅಂತಃಕರಣಪೂರ್ವಕವಾಗಿ ಅಭಿನಂದಿಸುತ್ತದೆ

೪ ಈ ಕಮಿಟಿಯು ನೀಗೆಶ್ವರ ಸತ್ಯಾಗ್ರಹದಲ್ಲಿ ಭಾಗ ತಕ್ಕೊಂಡು ಅದನ್ನು ಯಶಸ್ವಿಯಾಗಿ ಮಾಡಿದ ದೇಶಭಕ್ತರನ್ನೂ ಸ್ವಯಂಸೇವಕರನ್ನೂ ಅಭಿನಂದಿಸುತ್ತದೆ ಹಾಗೂ ಈ ಕಾರ್ಯದಲ್ಲಿ ಜಯವು ದೊರಕಿದ್ದಕ್ಕಾಗಿ ಈ ಕಮಿಟಿಯು ತನ್ನ ಸಮಾಧಾನವನ್ನು ವ್ಯಕ್ತ ಮಾಡುತ್ತದೆ

೫ ಸ್ವಾಭಿಮಾನಕ್ಕೆ ಹಾನಿ ಮಾಡುವಂಥ ಧಾರವಾಡ ಮ್ಯಾಜಿಸ್ಟ್ರೇಟನ ಬಾಯಿಗೆ ಧಡಿಗಾಗುವ ಹುಕುಮನ್ನು ಶ್ರೀ ಹುಬಲಿಯವರು ಗದಗಿನಲ್ಲಿ ಜಾಹೀರ ಭಾಷಣ ಮಾಡಿ ಮುರಿದದ್ದಕ್ಕಾಗಿ ಈ ಕಮಿಟಿಯು ಅವರನ್ನು ಅಭಿನಂದಿಸುತ್ತದೆ

೬ ಮೌಲಾನಾ ಮಹಮ್ಮದ ಅಲ್ಲಿಯವರನ್ನು ಈ ಕಮಿಟಿಯು ಕೋಕೋನಾಡಾ ಕೊಂಗ್ರೆಸ್ಸಿಗೆ ಅಧ್ಯಕ್ಷರನ್ನಾಗಿ ಚುನಾಯಿಸುತ್ತದೆ

೭ ಶ್ರೀ ಗಂಗಾಧರರಾಯರ ಬಿನ್ನಹಕ್ಕೆ ಮಾನ ಕೊಟ್ಟು, ಮುಂಬೈ ಪ್ರಾಂತಿಕ ಕಮಿಟಿಯವರು ದಕ್ಷಿಣ ಕಾನಡಾ ಜಿಲ್ಹೆಗೆ ರೂ. ೫೦೦೦ ಕೊಟ್ಟಿದ್ದಕ್ಕೆ ಈ ಕಮಿಟಿಯುವರ ಅಭಾರಗಳನ್ನು ಈ ಕಮಿಟಿಯು ಮನ್ನಿಸುತ್ತದೆ

೮ ಜಿಲ್ಹೆಗಳಿಂದ ಬಂದ ಪ್ರತಿನಿಧಿಗಳನ್ನು ಈ ಕಮಿಟಿಯು ಸೂಚಿಸುತ್ತದೆ

೯ ಶ್ರೀ ಇಂದುಮತಿಬಾಯಿ ನಾಯಿಕ, ಶ್ರೀ ದಾಮೋದರ ಕೇಶವ ಶ್ರೀ ಶ್ರೀನಿವಾಸರಾವ ಕೌಜಲಗಿಯವರನ್ನು ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಗೆ ಈ ಕಮಿಟಿಯು ಚುನಾಯಿಸುತ್ತದೆ

೧೦ ಉತ್ತರ ಹಾಗೂ ದಕ್ಷಿಣ ಕಾನಡಾ ಜಿಲ್ಹೆಗಳಲ್ಲಿಯ ನೆರೆ ಹಾವಳಿಯಿಂದ ಆದ ಹಾನಿಯನ್ನು ತುಂಬಲಿಕ್ಕೆ ಎಲ್ಲರೂ ಹೆಚ್ಚು ಸಹಾಯ ಮಾಡಬೇಕೆಂದು ಈ ಕಮಿಟಿಯು ಬಿನ್ನಹ ಮಾಡಿಕೊಳ್ಳುತ್ತದೆ

೧೧ ಪ್ರಾಂತಿಕ ಪರಿಷತ್ತಿನ ಪ್ರಶ್ನೆಯನ್ನು ಕಮಿಟಿಯ ಕಾರ್ಯಕಾರಿ ಮಂಡಲದವರು ನಿರ್ಣಯಿಸತಕ್ಕದ್ದೆಂದು ಈ ಕಮಿಟಿಯು ನಿರ್ಣಯಿಸುತ್ತದೆ

೧೨ ಶ್ರೀ ಗಂಗಾಧರರಾವ ದೇಶಪಾಂಡೆ, ಪ್ರಕೃತಿಯು ವಿಷಯಕ್ಕೆ ಈ ಕಮಿಟಿಯು ಸಹಾನುಭೂತಿಪಡುತ್ತದೆ ಆದರೆ, ಅವರ ರಾಜೀನಾಮೆಗೆ ಒಪ್ಪಲಾರದು ಹಾಗೂ ಅವರ ಧುರೀಣತ್ವವನ್ನು ಕಳಕೊಳ್ಳಲಿಕ್ಕೆ ಈ ಕಮಿಟಿಯು ಸಿದ್ಧವಿಲ್ಲ

೧೩ (೧) ಈ ಕಮಿಟಿಯು ಗಯೆಯಲ್ಲಿ ಪಾಸಾದ ಬಹಿಷ್ಕಾರದ ಠರಾವಿನಲ್ಲಿಯ ತನ್ನ ವಿಶ್ವಾಸವನ್ನು ಪುನಃ ಸ್ಪಷ್ಟವಾಗಿ ಹೇಳುತ್ತದೆ ಆದರೆ ದಿಲ್ಲಿಯಲ್ಲಿ ಪಾಸಾದ ಠರಾವುಗಳಕ್ಕೆ ಈ ವಿಷಯವನ್ನು ಅನುಸರಿಸಲಿಕ್ಕೆ ಸಿದ್ಧವಿದೆ

(೨) ರಾಷ್ಟ್ರದ ಸದ್ಯದ ಸಂಕಟ ಸ್ಥಿತಿಯಲ್ಲಿ ದೇಶಭಕ್ತ ಕೊಂಗ್ರೆಸದವರು ತಮ್ಮ ಎಲ್ಲ ಭೇದಭಾವಗಳನ್ನು ಬಿಟ್ಟು ಒಕ್ಕಟ್ಟಿನಿಂದ ನಡಕೊಳ್ಳಬೇಕೆಂದು ಈ ಕಮಿಟಿಯು ಆಗ್ರಹಪೂರ್ವಕವಾಗಿ ಬಿನ್ನಹ ಮಾಡಿಕೊಳ್ಳುತ್ತದೆ ಹಾಗೂ ಈ ವಿಷಯವನ್ನು ಲಕ್ಷದಲ್ಲಿಟ್ಟುಕೊಂಡು, ಈ ಕಮಿಟಿಯ ಸೂಚನೆ ಏನಂದರೆ ಎಲ್ಲ ಪ್ರಾಂತಗಳ ರಾಷ್ಟ್ರೀಯ ಸಭೆಯು ಮುಂದಿನ ಸಂಗತಿಗಳ ವಿಚಾರಕ್ಕಾಗಿ ಸಭೆಯನ್ನು ಕೂಡಿಸಿ ಸರ್ವಸಾಮಾನ್ಯವಾದ ಕಾರ್ಯಕ್ರಮವನ್ನು ಗೊತ್ತುಪಡಿಸಬೇಕೆಂದು ಅಪೇಕ್ಷಿಸುತ್ತದೆ ನಿಜವಾದ ಒಕ್ಕಟ್ಟಿನ ಸಲುವಾಗಿ ಈ ಕಮಿಟಿಯು ಶಕ್ಯವಿದ್ದಷ್ಟು ಪ್ರಯತ್ನವನ್ನು ಮಾಡಲಿಕ್ಕೆ ಸಿದ್ಧವಿರುತ್ತದೆಂಬುದನ್ನು ಉಲ್ಲೇಖಿಸುತ್ತದೆ

೧೪ ಕೌನ್ಸಿಲ ಬಹಿಷ್ಕಾರದ ವಿಷಯಕ ಮುಂಬಯಿ ಠರಾವಿನ ಬಗ್ಗೆ ಪ್ರಾಂತಿಕ ಕಮಿಟಿಯವರು ೩ನೇ ಜೂನಕ್ಕೆ ಮಾಡಿದ ಠರಾವಿನ ಬಗ್ಗೆ ತಮ್ಮ ಈ ನಿರ್ಣಯದ ಕಾರಣ ಮೊದಲಾದವುಗಳನ್ನು ಸ್ಪಷ್ಟೀಕರಿಸಲಿಕ್ಕೆ ಅವಕಾಶವನ್ನು ಸಹ ಕೊಡದೆ, ನಾಗಪುರದಲ್ಲಿ ತಾ. ೯ನೇ ಜುಲೈ ದಿವಸ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯವರು ಮಾಡಿದ ಠರಾವನ್ನು ಈ ಕಮಿಟಿಯು ನಿಷೇಧಿಸುತ್ತದೆ

—ಕರ್ಮವೀರ

ದೇಶಿ ಸೆಂಟೋನಾಯಿನ್.

(ಜಂತುವಿನ ಪುಡಿ.)

ಅಪಾಯಕರವಿಲ್ಲದೆ ಗುಣ ಕೊಡುವಂಥಾದ್ದು ಪ್ರಪಂಚದಲ್ಲಿ ಪ್ರಖ್ಯಾತ ಔಷಧ

ಔಂಸಿನ ಶೀಸೆಗೆ 2 ರೂ ೮ ಆಣೆ

ವಿಳಾಸ — ಎಮ್. ಜಿ ಭಾಗ್ವತ್,

ಆಯುರ್ವೇದಿಕ್ ಕೆಮಿಸ್ಟ, ಕುಮಟಾ (ಕೆನರಾ)

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ಪತ್ರಕ್ಕೆ ಕೆಳಗಿನ ಪತ್ತೆಗೆ ಮುಕ್ತಾ ತಿಳಿದು ತಿಳಕೊಳ್ಳಬಹುದು.

ಪುರುಷೋತ್ತಮ ಲಕ್ಷುಮಯ್ಯ ಕ್ಯಾನಭಾಗ

ಹೆಗಡೇಕರ, ದುಕಾನ್, ಕುಮಟಾ.

ನಮ್ಮ ಉಪ್ಪಿನ ಸಾವುಕಾರರಿಗೆ—

ಆಯ್ಯಾ ಮಹಾರಾಯರೆ,

ನಮ್ಮ ಸಂಕಟ ಕಾಲದಲ್ಲಿ ತಮ್ಮಂಥ ಸುಬುದ್ಧಿವಂತರುಳ್ಳವರಗೊಡ ನಾವು ಮಾತಾಡಬೇಕೆನ್ನುತ್ತೇವೆ ನೋಡಿರಿ ಉಪ್ಪಿನ ಆಗರ ಗಳು ನಮ್ಮ ಜಿಲ್ಹೆಗಳಲ್ಲಿ ಉಪ್ಪನ್ನು ಪೂರೈಸುತ್ತವೆ ತಾವು ಆ ಆಗರಗಳ ಒಡೆಯರು ನಮ್ಮ ಸರಕಾರವು ಒಡವರಿಗೆ ಸಹಾಯ ಮಾಡುತ್ತಲಿರುತ್ತದೆ ಸಾವುಕಾರರು ಬಡ ಪ್ರಜೆಗಳಿಗೆ ಸುಲಿಯುತ್ತಾರೆಂದು ಮನಗಂಡ ಅವರ ಉದ್ಧಾರಾರ್ಥವಾಗಿ ಪರಸ್ಪರ ಸಹಕಾರಿ ತತ್ವವನ್ನು ಅದು ಪ್ರಚಾರಗೊಳಿಸಿತು ತಮಗೆ ಸರಕಾರ ಉಪ್ಪಿನ ಕಾಯಿದೆಯಿಂದ ಏಕಪ್ರಕಾರದ ಅನುಕೂಲ ಪರಿಸ್ಥಿತಿಯು ಪ್ರಾಪ್ತವಾಗಿದೆ ಅದಕೊಂದಿಗೆ ಸಹಕಾರಿ ಕಾಯಿದೆಯನ್ನು ಆಶ್ರಯಿಸಿ, ತಾವು ಒಂದು ಅಚ್ಚುಕಟ್ಟಾದ ಸಂಘವನ್ನು ಏರ್ಪಡಿಸಿಕೊಂಡಿರುವದು ತಮ್ಮ ಜಾಣತನವು ನಿಜವಾಗಿ ಪ್ರಶಂಸನೀಯವು

ಸಂಘದ ಏರ್ಪಾಟಿಂದ ತಮಗೆ ಪ್ರಾಪ್ತವಾದ ಒಕ್ಕಟ್ಟನ್ನು ತಾವು ಸ್ವಾರ್ಥಸಾಧನೆಗಾಗಿ ಉಪಯೋಗಿಸಿ, ಸ್ವಾರ್ಥವನ್ನು ಸಾಧಿಸಿಕೊಂಡಿರಿ ೩-೪ ಆಣೆ ಖರ್ಚಿನಿಂದ ಹುಟ್ಟುವ ೧ ಮಣ ಉಪ್ಪನ್ನು ತಾವು ರೂಪಾಯಿಗೆ ಮಿಕ್ಕಿ ಮಾರುತ್ತಿರುವಿರಿ ವ್ಯಾಪಾರದಲ್ಲಿ ಪೋಟಾಟವಾಗಬಾರದೆಂದು ಅಲ್ಲಲ್ಲಿ ಡಿಪೋಗಳನ್ನು ಏರ್ಪಡಿಸಿರುವಿರಿ ಆದರಿಂದ ಉಪ್ಪಿನ ವ್ಯಾಪಾರಿಗಳೂ ತಾವೇ, ಉಪ್ಪಿನ ಹುಟ್ಟುವಳಿ ಮಾಡುವವರೂ ತಾವೇ ತಾವು ಕೊಟ್ಟಷ್ಟು ದರದಿಂದ ತಿಕ್ಕಿದಷ್ಟು ಉಪ್ಪನ್ನು ಜಿಲ್ಹೆಯೊಳಗಿನವರೆಲ್ಲರೂ ಒಯ್ದು ಸಂಸಾರ ಮಾಡಬೇಕಾಗಿದೆ ಈ ಏರ್ಪಾಟಿನಿಂದ ತಾವು ಸಾವಿರಾರು ರೂಪಾಯಿಗಳನ್ನು ಬಡ ಪ್ರಜೆಗಳೊಳಗಿಂದ ಪ್ರತಿ ವರ್ಷ ಸುಲಿಯುತ್ತಿರುವಿರಿ ನಾವು ಈ ಸುಲಿಗೆಯೊಳಗಿಂದ, ನಮಗೆ ಈ ಸಂಕಟಕಾಲದಲ್ಲಿ ಸಹಾಯ ಮಾಡಹೇಳಿದರೆ, ತಾವಾಗಿ ಸ್ವಯಂಸ್ಫೂರ್ತಿಯಿಂದ ಸಹಾಯ ಮಾಡುವರೆಂದು ನಮ್ಮ ನಂಬಿಗೆ ತಮ್ಮೊಳಗಿನ ಅನೇಕರು ಈ ಪತ್ರಪ್ರಕಟಣೆಯ ಮೊದಲೇ ತಮ್ಮ ತಮ್ಮ ಶಕ್ತ್ಯಾನುಸಾರ ನಮಗೆ ಸಹಾಯ ಮಾಡಿರಬೇಕು ಯಾಕೆಂದರೆ, ತಾವು ಬಲು ಉದಾರ ಸಾವುಕಾರರು ಸಂಘದ ಏಜಂಟರಿಗೆ ಮಗಳ ಮದುವೆಯ ಬಗ್ಗೆ ೧,೦೦೦ ರೂಪಾಯಿಗಳ ವರೆಗೆ ಜಾಸ್ತಿ ಬೋನಸವನ್ನು ಮಂಜೂರು ಮಾಡಿರುವಿರಿ ಇಂಥ ಔದಾರ್ಯವಂತರು ನಮ್ಮಂಥ ನಿರಾಶ್ರಿತರ ಬಗ್ಗೆ ಉದಾರ ಬುದ್ಧಿಯಿಂದ ಸಹಾಯ ಮಾಡಲಿಕ್ಕಿಲ್ಲೇನು ?

ಆದರೆ, ನಾನು ಈ ಪತ್ರ ಬರೆಯುವ ಮೂಲ ಉದ್ದೇಶವು ಬೇರೆಯಿದೆ ಕಳೆದ ವರುಷ ಅಂದರೆ, ೧೯೩೨ ನೇ ಮಾರ್ಚ ತಿಂಗಳಿನಲ್ಲಿ ಉಪ್ಪಿನ ಡ್ಯೂಟಿಯು ಇಮ್ಮಡಿಯಾಗಿ, ಹಿಂದೆ, ವರಿಷ್ಠ ಕಾಯಿದೆ ಕೌನ್ಸಿಲವು ಅದನ್ನು ಮಂಜೂರು ಮಾಡಲಿಕ್ಕಿಲ್ಲವೆ, ಏರಿಕೆಯಿಂದ ವಸೂಲು ಮಾಡಿದ ಡ್ಯೂಟಿಯನ್ನು ಸರಕಾರವು ತಿರುಗಿ ಕೊಟ್ಟಿತು ಈ ರೀತಿಯ ಹಣವನ್ನು ಹಂಚಲು ಸರಕಾರವು ತಮ್ಮ ಸಂಘದವರಿಗೆ ೮ ಸಾವಿರ ರೂಪಾಯಿಗಳನ್ನು ಕಳಿಸಿತು ಈ ಹಣವು ನಿಮ್ಮಿಂದ ಅಥವಾ ಜಿಲ್ಹೆಯೊಳಗಿನ ಲ್ಯಾಸನ್ಸದಾರರಿಂದ ಉಪ್ಪು ಖರೇದಿ ಮಾಡಿ ತಿಂದ ಅಸಂಖ್ಯ ಪ್ರಜೆಗಳದು ಈ ಬಗ್ಗೆ ತಾವೇನು ಮಾಡಿದಿಲ್ಲ ಲ್ಯಾಸನ್ಸದಾರರೂ ಮಾಡಿದಿಲ್ಲ ಡ್ಯೂಟಿಯು ತಿರಬೇಕೆಂದು ತಮ್ಮ ಅಪೇಕ್ಷೆ ಇದ್ದಿಲ್ಲ ರಿಫಂಡು ಸಿಗುವದೆಂದು ತಾವೆಂದೂ ಯೋಚಿಸಿದ್ದಿಲ್ಲ ಹೀಗೆ ಅಕಲ್ಪಿತ, ಅನಪೇಕ್ಷಿತ ರೀತಿಯಿಂದ ತಮ್ಮ ಕಡೆಗೆ ಅನಾಯಾಸದಿಂದ ಪ್ರಾಪ್ತವಾದ ಪ್ರಜೆಗಳ ಹಣವಿದು ಈ ಹಣವು ನಮ್ಮೆಲ್ಲರ ಹಕ್ಕಿನದು. ಯಾಕೆಂದರೆ, ಡ್ಯೂಟಿಯು ಏರಿದಾಗ, ಹುಟ್ಟಿ ಉಪ್ಪು ತಿಂದವರು ನಾವಲ್ಲವೇ ? ಈ ಹಣವನ್ನು ತಾವು ಈಗಲೂ ಇಟ್ಟುಕೊಂಡಿರುವಿರಿ ಇದನ್ನು ಅಖಿಲ ಪ್ರಜೆಗಳಿಗೆ ಮುಟ್ಟಿಸುವ ಜವಾಬದಾರಿಯು ನಿಮ್ಮದು ಉಪ್ಪು ತಿಂದವರು

ಅನೇಕರಿರುವದರಿಂದ ಇದನ್ನು ಅವರವರಿಗೆ ಹಂಚಿಕೊಡುವದು ಕಷ್ಟಸಾಧ್ಯವೆಂದು ನಾವು ಈ ಹಣವನ್ನು ಹಾಗೇ ಇಟ್ಟುಕೊಂಡಿರುವೆವೆಂದು ನಮ್ಮ ತಿಳುವಳಿಕೆಯಿದೆ. ಈಗ ನಾವೆಲ್ಲರೂ ಹಿಂದೆ ನೆರೆಯ ಮೂಲಕ ಮನೆಮಾರು ಕಳಕೊಂಡು ನಿರಾಶ್ರಿತರಾಗಿರುವೆವು. ಇಂಥ ಪ್ರಸಂಗದಲ್ಲಿ ಈ ಹಣವನ್ನು ನಮಗೆ ದಾನ ಮಾಡಿದರೆ ದುಡ್ಡು-ದಂಡಿ ಕೊಟ್ಟ ನಮ್ಮ ಕಾನಡಿಗ ಬಾಂಧವನ್ನಾರೂ ದೂಷಿಸಲಾರರು. ನಾವು ಕೊಟ್ಟ ಹಣವು ಸತ್ಪಾತ್ರದಲ್ಲಿ ದಾನ ಎನಿಸಿದ ಮೂಲಕ, ತಮ್ಮ ಔದಾರ್ಯವನ್ನು [illegible] ವರು. ಈಗ ತಮ್ಮ ಸಂಘದ ನೇತೃತ್ವವನ್ನು ಡಾ. ವಿಶ್ವೇಶ್ವರರಾವ ಕಲ್ಯಾಣಪುರಕರರವರು ಸ್ವೀಕರಿಸಿರುವರು. ಡಾ. ಕಲ್ಯಾಣಪುರಕರ ವಕೀಲರು [illegible] ನೀಡಿ [illegible] ಸೇವೆ ನಡಿಸಿ [illegible] ಮಾಡುವ [illegible] ಉದ್ದೇಶವಾದ [illegible] ವರು ಇಂಥ ದೇಶಸೇವಾ [illegible] ನಮ್ಮ [illegible] ಗಳಿಗನುಗುಣವಾಗಿರುವದೆಂದು [illegible]. ನಮ್ಮ ಸಂಕಟವನ್ನು [illegible] ಹೇಗೆ [illegible] ಈ ಕಠಿಣ ಪ್ರಸಂಗದಲ್ಲಿ ನಮ್ಮನ್ನು ಯಾರು ಸಂರಕ್ಷಿಸುವರು? [illegible] ಚಿಂತಾಶೀಲ ನಮ್ಮ [illegible] ಈ [illegible] ರೂಪಾಯಿಗಳನ್ನು ನಾವು [illegible] ನಾವು [illegible] ಬೇರೆ ವಿಧ? ನಾವು [illegible]

ತಾ ೨-೯-೩೨ } ತಮ್ಮ ಕೃಪಾಭಿಲಾಷಿಗಳ
ಕಾನಡಿ ನಿರಾಶ್ರಿತರು.

ಮಿಷನಗರ ಧೂರ್ತತನ.

(ಶ್ರೀ - ರಾಷ್ಟ್ರೀಯ ಸ್ವರಾಜ್ಯಾಭಿಮಾನಿ [illegible])

ನಿಸ್ತ್ರ ಜಿಲ್ಹಾಧಿಕಾರಿಯವರು [illegible] ಪತ್ರಿಕೆಯ [illegible] ಪತ್ರವನ್ನು ಪ್ರಕಟಿಸಿದರು. ಆ ಪತ್ರದಲ್ಲಿ [illegible] ನೆರೆಯಿಂದ [illegible] ಗ್ರಾಮಗಳಿಗೆ [illegible] ಜಿಲ್ಹಾಧಿಕಾರಿ [illegible] ಹೊಂದಿದವರು ವಿಶೇಷವಾಗಿ [illegible] ಕ್ರಿಶ್ಚನ್ ಜಾತಿಯವರೆಂತ [illegible] ಹೊಂದಿದವರು [illegible] ಕೂಲಿ [illegible] ಜಿಲ್ಹಾಧಿಕಾರಿ [illegible] ಹೊಟ್ಟೆ [illegible] ಅವರ [illegible] ನಮ್ಮ [illegible] ಹೊಸ [illegible] ಮಾಡಲು [illegible] ಕೆಲಸವನ್ನು [illegible] ಹೇಳಿದರೆ [illegible] ನಿರಾಶ್ರಿತರ [illegible] ತಮ್ಮ [illegible] ಶಕ್ತಿ [illegible] ಜಂಗಲ ಕೆಲಸಕ್ಕಾಗಿ [illegible]

[illegible] ನಿರಾಶ್ರಿತರಾದವರಿಗೆ ಉದಕ [illegible] ಹಣ ಬಿಡಿವಾರ. ನಮ್ಮ [illegible] ಕೂಲಿಕಾರರೆಂದು ಪ್ರಕಟಿಸಿ, ಸಾಹೇಬರ [illegible] ಮಾಫಿ ಕೊಡಬಾರ [illegible] ಜಿಲ್ಹೆಯಲ್ಲಿ [illegible]

[illegible] ನಿರಾಶ್ರಿತರ ಸಹಾಯಕ್ಕಾಗಿ ತಮ್ಮ ನೇತೃತ್ವದಲ್ಲಿ ನೇಮಿಸಿದ ಕಮಿಟಿಯ [illegible] ಲೋಕಮತ [illegible] ಇಂಥ ರಾಜ್ಯ [illegible] ಪ್ರಜೆಗಳ [illegible] ರಕ್ಷಿಸ [illegible] ಕಾಂಗ್ರೆಸ ಕಮಿಟಿಯು [illegible] ನಮ್ಮ [illegible] ರಕ್ಷಿಸಿಕೊಳ್ಳ [illegible] ಹೇಗೆ [illegible] ಪ್ರತಿನಿಧಿಗಳ [illegible] ಗರಜಿಲ್ಲ. ಈ [illegible] ನೌಕರ [illegible] ನೌಕರಶಾಹಿ [illegible] ಕೊಟ್ಟಿ [illegible] ಜಿಲ್ಹಾ [illegible] ಹೇಗೆ ಸಾಹೇ [illegible] ಪ್ರಜೆಗಳ [illegible] ಸ್ವಷ್ಟವಾಗಿ [illegible] ವರ್ಷಂಪ್ರತಿ ಕೋಟ್ಯವಧಿ [illegible] ಕಾರಭಾರಿಗಳ [illegible] ನಿರಾಶ್ರಿತರು, [illegible] ಪ್ರಜೆಗಳ [illegible] ನಾವು [illegible] ಈ ಸುಧಾರಿಸಿದ ರಾಜ್ಯ [illegible] ಪ್ರಜೆಗಳಿಗೆ [illegible] ಮಾಡಿ [illegible] ಧರ್ಮ [illegible] ಸಹಾಯ [illegible]. ಅಂದ ಮೇಲೆ, ಈ ಕಾರಭಾರಿಗಳು ಒಲೇ [illegible], ಅಧಿಕಾರ [illegible] ಮಾತ್ರ [illegible]' ನೌಕರಶಾಹಿಯಿಂದ [illegible] ರೀತಿಯಿಂದ [illegible] 'ಮುಂಬಯಿ ಕ್ರಾನಿಕಲ' ದಂಥ ಪತ್ರಿಕೆಯಲ್ಲಿ ನೌಕರಶಾಹಿಯ ಪ್ರತಿನಿಧಿಗಳೇ [illegible] ಹೇಗ [illegible] ತಮ್ಮ [illegible] ಅವರೊಳಗೆ [illegible] ಉದಾರ [illegible] ಅವರ ಧೂರ್ತತನದ ಇನ್ನೊಂದು ಲಕ್ಷಣವೆಂದು ಯಾರು ಹೇಳರು?

ಶುದ್ಧ ಖಾದಿ

ವಿಕ್ರಿಗೆ ತಯಾರ.

ಹೊನ್ನಾವರ ತಾಲೂಕಾ ಕಾಂಗ್ರೆಸ ಕಮಿಟಿಯಿಂದ ಕೈಮಗ್ಗದ ಕೈರಾಟದ ಶುದ್ಧ ನೂಲಿನ ಖಾದಿ ಮಾರಾಟಕ್ಕೆ ಕಾಂಗ್ರೆಸ ಆಫೀಸಿನಲ್ಲಿ ಸಿಗುವದು.

ಹೊನ್ನಾವರ, } ಸೆಕ್ರೆಟರಿ,
೧೧-೮-೩೨ } ತಾ. ಕಾ. ಕಮಿಟಿ, ಹೊನ್ನಾವರ

ವಿವಿಧ ಸಂಗ್ರಹ.

ಅದ್ಭುತ ಚಮತ್ಕಾರ.

ತ್ರಾವಣಕೋರದ ಗುಡ್ಡಗಾಡು ಪ್ರದೇಶದಲ್ಲಿ ಉದುಂಬಂಚೋಲಾ ಎಂಬದೊಂದು ಗ್ರಾಮವಿದೆ. ಕಳೆದ ವಾರದಲ್ಲಿ ಅಲ್ಲಿ ಒಂದು ಅದ್ಭುತ ಚಮತ್ಕಾರ ಸಂಭವಿಸಿತು. ಆ ಗ್ರಾಮದೊಳಗಿನ ಒಂದು ಮನೆಯಲ್ಲಿ ೧೦ ಮಂದಿಗಳಿದ್ದರು. ಅವರೆಲ್ಲರು ರಾತ್ರಿಯ ಊಟ ಮುಗಿಸಿ, ನಿದ್ರಾಸಕ್ತರಾಗಿದ್ದರು. ಥಟ್ಕನೆ, ಒಂದು ಸಿಡಿಲಿನಂಥ ಭಯಂಕರ ಸಪ್ಪಳವಾಯಿತು, ದೊಡ್ಡ ತೋಫು ಹೊಡೆದಂತಾಯಿತು. ಮನೆಯ ಪಂಚಾಂಗದ ನಡುಮಧ್ಯದಲ್ಲಿ ಬಾಯಿತೆರೆಯಿತು. ಅದರೊಳಗಿಂದ ಕೆಸರು, ಉಸುಬು, ನೀರು, ಹೀಗೆ ಎದ್ದುಬಂದು ಮನೆಯೆಲ್ಲ ತುಂಬಿಹೋಯಿತು. ಮಲಗಿದವರು ಎಚ್ಚರಾಗುವಷ್ಟರಲ್ಲಿ ಇಷ್ಟು ಅದ್ಭುತ ಚಮತ್ಕಾರವಾಯಿತು. ಅವರಿಗೆ ಓಡಿಹೋಗಲು ಸಹ ಅವಕಾಶ ದೊರೆಯಲಿಲ್ಲ. ಅಷ್ಟು ಶೀಘ್ರವಾಗಿ ಕೆಸರು, ಉಸುಬುಗಳು ರಾಶಿಯಾದವು. ಎಲ್ಲರೂ ಕೆಸರು-ಉಸುಬಿನಲ್ಲಿ ಹೊರಳಾಡುತ್ತಿದ್ದರು. ನೆರೆಹೊರೆಯವರು ಅಲ್ಲಿ ಬಂದು ಮನೆಯವರನ್ನು ಜೀವಂತರಾಗಿ ಕೆಸರಿನ ರಾಶಿಯೊಳಗಿಂದ ತೆಗೆದರು. ಉಳಿದ ೮ ಮಂದಿಗಳಿಗೆ ಎಚ್ಚರ ತಪ್ಪಿಹೋಗಿತ್ತು. ಇದೆಂಥ ವಿಲಕ್ಷಣ ಚಮತ್ಕಾರ!

* * *

ಹಣದ ಹೆಬ್ಬಾವು.

ಈಗ ನೌಕರಶಾಹಿಗೆ ಹಣದ ಹೆಬ್ಬಾವು ಹುಟ್ಟಿದೆ. ನಾಲ್ಕೂ ಬದಿಯಿಂದ ಹಣ ಒಂದುವದು. ಅದರ ವಿಚಾರ ತಂತಿ ಫಾರ್ಮುಗಳ ಮೇಲೆ ಖಾಲಿ ಇರುವ ಜಾಗವನ್ನು ಜಾಹಿರಾತುದಾರರಿಗೆ ಬಾಡಿಗೆ ಕೊಡುವ ಹೊಸ ಯೋಜನೆಯಾಗಿದೆ. ವರ್ಷಕ್ಕೆ ೨ ಕೋಟಿ ಫಾರ್ಮುಗಳು ಖರ್ಚಾಗುತ್ತವಂತೆ. ತಂತಿ ಕೊಟ್ಟವರಿಗೆ ರಸೀದಿಗಳು ಕೊಡಲ್ಪಡುತ್ತವೆ. ಅವುಗಳ ಹಿಂಬದಿಗೆ ಖಾಲಿ ಜಾಗವಿದೆ. ಅದನ್ನೂ ಜಾಹೀರಾತುದಾರರಿಗೆ ನೌಕರಶಾಹಿಯು ಅರ್ಪಿಸಿದೆ. ಈ ಫಾರ್ಮುಗಳೂ ವರ್ಷಕ್ಕೆ ೨ ಕೋಟಿ ಖರ್ಚಾಗುತ್ತವಂತೆ. ಜಾಹಿರಾತುಗಳಲ್ಲ ಫಾರ್ಮುಗಳ ಹಿಂಬದಿಗೆ ಕೊಟ್ಟರೂ, ಅವು ತಂತಿ ಕೊಡುವವರ ಲಕ್ಷ್ಯ ಸೆಳೆಯಬೇಕೆಂದು, ತಂತಿ ಕೊಡುವವರಿಗೆ ಹಿಂಬದಿಗೇನೇ ಸಹಿ ಮಾಡುವ ವ್ಯವಸ್ಥೆಟು ಮಾಡಲ್ಪಡುವದು. ತಂತಿ ಹಾಕುವ ಲಖೋಟೆಗಳ ಮೇಲೂ ಖಾಲಿ ಜಾಗವಿದೆ. ಅದೂ ಜಾಹಿರಾತಿಗಾಗಿ, ಉಪಯೋಗಿಸುವರು. ಚಹಾ, ಮೋಟಾರ ಗಾಡಿ, ಮದ್ದು, ಸಿಗರೇಟು, ಬೇಂಕು ಮೊದಲಾದ ಜಾಹೀರಾತುಗಳು ಈ ಫಾರ್ಮುಗಳಲ್ಲಿ ಪ್ರಕಟವಾಗುವವು. ಫಾರ್ಮುಗಳ ಮೇಲೆ ಖಾಲಿ ಬಿದ್ದ ಜಾಗಗಳನ್ನು ಬಾಡಿಗೆ ಕೊಟ್ಟಲಿಕ್ಕೆ ಒಬ್ಬ ಯುರೋಪಿಯನ ತಜ್ಞರ ನೇತೃತ್ವದಲ್ಲಿ ಒಂದು ಜಾಹೀರಾತು ಆಫೀಸಿನ ವ್ಯವಸ್ಥೆಯಾಗುವದು. ಅವರಿಗೆ ಸಂಬಳ. ಸಮುದ್ರ ದಾಟಿ ಬಂದ ಬಗ್ಗೆ ಎಲಾವನ್ಸ್, ಭತ್ತೆ, ಕಾರಕೂನರ ಸಂಬಳ, ಖಾಸಗಿ ಸೆಕ್ರೆಟರಿಗಳದ್ದೆ, ಅವರ ಸಂಬಳ, ಆಫೀಸಿನ ಬಾಡಿಗೆ ಇವೆಲ್ಲ ಸರಂಜಾಮು ಬೇಕು. ಇವುಗಳ ಖರ್ಚು ತೆಗೆದು ಉಳಿದರೆ ಲಾಭ, ಈ ಲಾಭದಿಂದ ತಂತಿ ಖಾತೆಗೆ ಉಳಿತಾಯವಾಗುವದೆಂದು ತಿಳಿದಿದ್ದೇ ಇದೆ. ಎಷ್ಟೆಂದರೂ, ನೆಸೆಗೂ ಗಂಟು. ಒಂದಾವರ್ತಿ ಲಕ್ಷ ರೂಪಾಯಿಗಳು ಉಳಿಯುತೆಂದು ಭಾವಿಸುವ ಕೋಟ್ಯವಧಿ ರೂಪಾಯಿಗಳನ್ನು ಲಷ್ಕರ ಖಾತೆಯು ತಿಂದು ಭಸ್ಮ ಮಾಡುತ್ತದೆ. ಆ ಬಗ್ಗೆ ಅಲ್ಪ ಪ್ರಯಾಸ ತೆಗೆದುಕೊಂಡರೆ ಕೋಟ್ಯವಧಿ ರೂಪಾಯಿಗಳ ಮುನಾಫೆಯಾಗ ಬಹುದು. ನೌಕರಶಾಹಿಗೆ ಅದರ ಗೊತ್ತಯಿಲ್ಲವೆ? ಅವರಿಗೆ ಬೇಕಾದದ್ದು ನಿಜವಾದ ಉಳಿತಾಯವಲ್ಲ; ತಾವು ಉಳಿತಾಯ ಮಾಡುತ್ತೇವೆಂಬ ಪ್ರದರ್ಶನ ಬೇಕು.

[illegible]

ಚಹದ ಸ್ವಾತಂತ್ರ್ಯ

[illegible]

ಬ್ರಿಟಿಶ ನ್ಯಾಯದೇವಿಯ ಪುತ್ರಪ್ರೇಮ.

[illegible]

"NO PENALTY"!

To,

The Editor 'Kanara News'

Kumta

Sir,

It is only during last year that I have been on the members' roll of the Karwar General Library, and it was my first occasion of attending the Annual General Meeting of the Library held on Friday the 31st of August. The occasion afforded me a splendid opportunity for studying the interesting mentality of various sets of people. However I shall only narrate a brief incident for the edification of your readers!

After the Hon Secretary's report was read, a member who appeared to me to have an intimate knowledge of the affairs connected with the library, questioned whether the number of members of the out-going Managing committee mentioned in the report formed the full body of the Managing Committee The Hon Secretary at first appeared to answer in the affirmative, but he promptly recollected himself and added that that there was a vacancy created by the demise of the late Mr. V V. Wagh which had not been filled up When it was being said, by way of an explanation, that it was the General Meeting that had to elect members to the Managing Committee, the Member who had interpellated promptly referred the President to a rule (No 10, if I remember right) which, when read out to the meeting, was seen to clearly lay down that any vacancies occurring during the course of the year should be filled up by the Managing Committee at its periodical meetings When the member, rightly viewing the functions of the Annual General Meeting which should be, to review, revise and supervise the work of the Managing Committee, brought the matter to the notice of the General Body, I naturally expected that the President, who was no less a personage than the Collector Mr. Haigh, would have the grace to befittingly close the matter by remarking that what had been pointed out had really been a mistake and that he would ask the Managing Committee to pay greater regard in future to the due observance of rules But to my great surprise I found that the President, as if bent on not taking any proper note of the matter pointed out, (for reasons best known to himself) lightly ejaculated with a rather undignified laughter, that a mistake had been pointed out, but that *no penalty had been laid down* in the rule for the non-observance of the provisions of the rule. I, a dispassionate observer, was indeed not prepared to see the president of the dignity of a Collector indulge in such light-hearted humour, not quite appreciable in a responsible gentleman of the position of a member of the Legislative Assembly. As far as we could discern, we could not discover in the tone of the member who broached the question any desire or hint that the Managing Committee should be chastised for this mistake, but he appeared to deem it his duty to point out before the General Meeting the default of the Managing Committee, and that is probably why, this done, he did not care to pursue the matter further However, I wonder if Mr. Haigh while voicing forth the above careless remark, realized the full import of the principle he had enunciated. I believe, it is not usual in the rules regulating the work of local boards, Municipalities, Co-operative Socieeties and other like institutions, to lay down penalty for the non observance of the various rules Will Mr. Haigh whose duty it is expected to be, as Collector, to supervise the working of the Municipalities, Local boards etc., be similarly inclined to do nothing more than pass over all breaches of rules and regulations by those bodies, for the splendid reason that there is no penalty provided for? Here I find it! It was reported in your news columns some days ago that Mr. Haigh recently on his way to Honavar, drove in his motor car through the car-street of Kumta which is closed to motor traffic by the notice boards put up by the side of the road. Your correspondent will now easily understand that the guardian of 'Law and Order' Mr. Haigh chose so lightly to break that rule, probably of his own making; evidently because, there is no penalty laid down on the board, for breach of the rule!

Karwar, 2-9-1923.

Yours etc.,

Fairplay.

ಕಾನಡಾವೃತ್ತ.

ಗುರುವಾರ, ತಾರೀಖು ೬ ಮಾಹೆ ಸಪ್ಟಂಬರ ೧೯೨೩.

ಮುಂದಿನ ದಾರಿ.

ಇನ್ನೊಂದು ವಾರದಲ್ಲಿ, ಅಂದರೆ ಇದೇ ಬರುವ ತಾ. ೧೫ ನೇ ಶನಿವಾರಕ್ಕೆ ದಿಲ್ಲೀ ನಗರಿಯಲ್ಲಿ ಜಾದಾ ರಾಷ್ಟ್ರೀಯ ಸಭೆಯು ನೆರೆಯುವದು. ಸಭೆಯು ಸಮಯವು ಸಮೀಪಿಸಿದಂತೆ ರಾಷ್ಟ್ರದೊಳಗಿನ ಮುಂದಾಳುಗಳು ಏನು ಮಾಡುವರು? ನಮ್ಮ ಪಾರತಂತ್ರ್ಯವನ್ನು ಹೋಗಲಾಡಿಸಲು ಅವರು ಯಾವ ಉಪಾಯಯೋಜನೆಯನ್ನು ಕೈಕೊಳ್ಳುವರು? ದೇಶದೊಳಗುಂಟಾದ ಮತಭೇದವನ್ನು ಅಳಿದು, ರಾಷ್ಟ್ರೀಯ ಚೈತನ್ಯವನ್ನು ಹೇಗೆ ಕಾರ್ಯಕ್ಷಮ ಮಾಡುವರು? ನಮ್ಮ ಮುಂದಿನ ಕರ್ತವ್ಯವೇನು? ಪ್ರಜೆಗಳು ಯಾವ ಪ್ರಕಾರದಿಂದ ನಡೆಯತಕ್ಕದ್ದು? ಎಂಬ ಅನೇಕ ಪ್ರಶ್ನೆಗಳು ದೇಶಹಿತಚಿಂತಕ ದೇಶಾಭಿಮಾನಿಗಳಿಗೆ ಒದಗಿದಿರವು. ಪ್ರತಿಯೊಬ್ಬ ಭರತಪುತ್ರನು ಮುಂದಿನ ದಾರಿ ಯಾವದು? ಎಂಬ ವಿವಂಚನೆಯಲ್ಲಿಯೇ ಈಗೀಗ ಕಾಲಕ್ಷೇಪ ಮಾಡುತ್ತಿರುವನು. ಮಹಾತ್ಮರಂಥ ಮಹಾಪುರುಷರ ಅಭಾವದಲ್ಲಿ ಉಂಟಾದ ಪಕ್ಷಭೇದಗಳಿಂದ, ಹಿಂದೂ-ಮುಸಲ್ಮಾನರೊಳಗೆ ಜನಿತವಾದ ಕಲಹಗಳಿಂದ, ರಾಷ್ಟ್ರೀಯ ಚಳವಳಿಯು ವಿಶೇಷ ಸಂಕಟಕ್ಕೊಳಗಾಗಿದೆ. ಇಂಥ ಪ್ರಸಂಗದಲ್ಲಿ ದಿಲ್ಲಿಯಲ್ಲಿ ನೆರೆಯಲಿಕ್ಕಿದ್ದ ರಾಷ್ಟ್ರೀಯ ಸಭೆಯು ಪ್ರಜೆಗಳಿಗೆ ಮುಂದಿನ ದಾರಿಯ ದಿಗ್ದರ್ಶನ ಮಾಡುವದಲ್ಲದೇ, ಅದರ ಅವಲಂಬನೆಗಾಗಿ ಮುಂದಾಳುಗಳ ದೃಢನಿಶ್ಚಯವನ್ನು ಸಹ ತಯಾರಿಸಬೇಕು. ಇಲ್ಲದಿದ್ದರೆ, ಮುಂದಾಳುಗಳಿಗೆ ಬೇಕಾದ ಕಾರ್ಯಕ್ರಮವೊಂದು, ರಾಷ್ಟ್ರೀಯ ಸಭೆಯು ಮಂಜೂರು ಮಾಡುವ ಕಾರ್ಯಕ್ರಮವು ಇನ್ನೊಂದು, ಹೀಗೆ ಗೊಂದಲವೆಬ್ಬಿ ಪುನಃ ರಾಷ್ಟ್ರವು ದಿಙ್ಮೂಢವಾಗುವದು.

ಜಾದಾ ರಾಷ್ಟ್ರೀಯ ಸಭೆಯಲ್ಲಿ, ಗಯಾ ಕೊಂಗ್ರೆಸಿನಲ್ಲಿ ಒದಗಿದಂತೆ, ಎರಡು ಪಕ್ಷಗಳು ಪ್ರಮುಖ್ಯವಾಗಿ ತೋರಬರುವವು. ಕಾನ್ಸಿಲು ಪ್ರವೇಶವನ್ನು ಪುರಸ್ಕರಿಸುವ ದಾಸ-ನೆಹರು-ಅಜಮಲಖಾನರ ನೇತೃತ್ವದೊಳಗಿನ ಸ್ವರಾಜ್ಯ ಪಕ್ಷವು ಒಂದು ಬದಿಗೆ, ಶ್ರೀ। ರಾಜಗೋಪಾಲಾಚಾರ್ಯರ್, ದೇಶಪಾಂಡೇ, ವಲ್ಲಭಭಾಯಿ ಪಟೇಲ ಮೊದಲಾದವರ ನೇತೃತ್ವದೊಳಗಿನ ಕಾನ್ಸಿಲ ಬಹಿಷ್ಕಾರವಾದಿ ಪಕ್ಷವು ಇನ್ನೊಂದು ಬದಿಗೆ, ಹೀಗೆ ಎರಡು ಪಕ್ಷಗಳು ತಮ್ಮ ಮತ ಪುರಸ್ಕಾರಾರ್ಥವಾಗಿ ದುಡಿಯುವವು. ಈ ಎರಡು ಪಕ್ಷಗಳಲ್ಲಿ ಮಧ್ಯಸ್ಥಿಕೆ ಮಾಡಲು ಸತತೋದ್ಯೋಗ ನಡಿಸುವ ಶ್ರೀಮತಿ ಸರೋಜಿನಿ ದೇವಿಯರ ನೇತೃತ್ವದೊಳಗಿನ ಮಧ್ಯಸ್ಥಿಕೆಯ ಮೂರನೇ ಪಕ್ಷವೂ ದಿಲ್ಲಿಯಲ್ಲಿ ತಲೆದೋರುವದು. ಕಾನ್ಸಿಲು ಪ್ರವೇಶ-ಬಹಿಷ್ಕಾರಗಳ ಯುಕ್ತಾಯುಕ್ತತೆಯನ್ನು ಚರ್ಚಿಸುವ ಸಮಯವು ಈಗ ಹಿಂದಾಯಿತು. ಪ್ರಸ್ತುತ ಈ ಎರಡೂ ಪಕ್ಷಗಳು ಅಸ್ತಿತ್ವದಲ್ಲಿರುವವೆಂದು ಎಣಿಸಿ, ಮುಂದರಿಯಬೇಕಾಗಿದೆ. ಕಾನ್ಸಿಲು ಪ್ರವೇಶವು ಅನಿಷ್ಟವಿದೆಂದು ಎಣಿಸುವವರು ಸಹ, ಕಾನ್ಸಿಲು ಪ್ರವೇಶಕರ ಮೇಲೆ ಜುಲುಮೆ ಮಾಡಲೆಳಸದೆ, ಅವರನ್ನೂ ಸಮಾಧಾನಪಡಿಸಿ, ಅವರ ಕಾರ್ಯವನ್ನು ಶಕ್ಯವಿದ್ದಷ್ಟು ದೇಶಕ್ಕೆ ಹಿತವಾಗುವಂತೆ ಪರಿಣಮಿಸುವಂತೆ ಮಾಡಿಸಬೇಕು.

ಪ್ರಾಮುಖ್ಯವಾಗಿ, ಈಗ ನಮಗೆ ಬೇಕಾದದ್ದು ರಾಷ್ಟ್ರೀಯ ಐಕ್ಯವು. ಕೆಲ ಮುಂದಾಳುಗಳು ಪೂರ್ವಕ್ಕೆ, ಹಲವರು ಪಶ್ಚಿಮಕ್ಕೆ; ಇನ್ನು ಕೆಲವರು ದಕ್ಷಿಣಕ್ಕೆ, ಹೀಗೆ ಕೇವಲ ತಮ್ಮ ತಮ್ಮ ಮತವನ್ನೇ ರಾಷ್ಟ್ರವು ಅನುಸರಿಸಿದರೆ, ದೇಶಕ್ಕೆ ಹಿತವಾಗುವದೆಂದು ದುರಾಗ್ರಹ ಹಿಡಿಯುವ ದಿನಗಳು ಕಳೆದು ಹೋದವು. ಯಾವದೇ ಒಂದು ಪ್ರಾಮಾಣಿಕ ಮತವನ್ನು— ಆ ಮತವು ಜಹಾಲವಿರಲಿ, ನೇಮಸ್ತವಿರಲಿ— ಒಮ್ಮನಸ್ಸಿನಿಂದ, ದೃಢನಿಶ್ಚಯದಿಂದ ರಾಷ್ಟ್ರಪುರುಷನು ಹಿಂಬಾಲಿಸಿದರೆ ರಾಷ್ಟ್ರಕ್ಕೆ ವಿಜಯವಾಗಲೇ ಬೇಕು. ರಾಷ್ಟ್ರೀಯ ಐಕ್ಯವು ಪ್ರಾಮುಖ್ಯ ಸಾಧನವು, ಒಂದೇ ಒಂದು ಸಾಧನವೆಂದರೂ ಅನ್ನಬಹುದು. ಮಹಾತ್ಮರು ಪಂಜಾಬದ ಅತ್ಯಾಚಾರಗಳ ಚೌಕಶಿ ನಡಿಸಿ, ರಿಪೋರ್ಟ ಬರೆದು ಶಿಫಾರಸು ಮಾಡುವಾಗ್, ದಾಸ, ಜಯಕರ ಮೊದಲಾದ ತಮ್ಮ ಸಹಕಾರಿಗಳಿಗೆ ‘ ಈ ಅತ್ಯಾಚಾರಗಳ ನಿವೃತ್ತಿಗಾಗಿ ಇಷ್ಟು ಶಿಫಾರಸುಗಳನ್ನು ನಾನು ಮಾಡುತ್ತೇನೆ. ಇವುಗಳಲ್ಲಿ ಹೆಚ್ಚು ಕಡಿಮೆಯಾದರೆ ನೀವು ತಿಳಿಸಿರಿ. ನಮ್ಮ ಶಿಫಾರಸುಗಳು ಹೆಚ್ಚಿರಬೇಕೆಂದು ಆಗ್ರಹವಿಲ್ಲ. ನಾವು ಮಾಡಿದ ಶಿಫಾರಸುಗಳನ್ನು ದೃಢನಿಶ್ಚಯದಿಂದ ಪುರಸ್ಕರಿಸುವದಲ್ಲದೆ, ಅಷ್ಟು ಶಿಫಾರಸುಗಳು ಮಾನ್ಯವಾಗದ ವರೆಗೆ ಪಂಜಾಬ ಅತ್ಯಾಚಾರದ ಕಲಂಕದಿಂದ ನಾವು ನೌಕರಶಾಹಿಯನ್ನು ವಿಮೋಚಿಸಲಾಗದು. ನಮ್ಮ ಸಹಕಾರಿತೆಯನ್ನೂ ಅವರಿಗೆ ಕೊಡಲಾಗದು.’ ಎಂದು ಸೂಚಿಸಿದ್ದರಂತೆ. ಈ ಸೂಚನೆಯು ಮರ್ಮವು ಸ್ಪಷ್ಟವಿದೆ. ನಮ್ಮ ಬೇಡಿಕೆಗಳು ಹೆಚ್ಚು ಇರಲಿ, ಕಡಿಮೆ ಇರಲಿ, ಅವುಗಳನ್ನು ಪ್ರಾಪ್ತಮಾಡಿಕೊಳ್ಳಲು ರಾಷ್ಟ್ರೀಯ ಐಕ್ಯವು ನಮಗೆ ಅತ್ಯವಶ್ಯವಿದೆ. ಧರ್ಮ, ಪಂಥ, ಜಾತಿ ಮೊದಲಾದವುಗಳನ್ನೊಳಗೊಂಡಿರುವ ಭರತಖಂಡದಲ್ಲಿ ಈ ಐಕ್ಯಸಾಧನೆಯು ಮತ್ತೂ ವಿಶೇಷ ಅಗತ್ಯವಿದೆ. ಮಹಾತ್ಮರು ರಾಷ್ಟ್ರೀಯ ಸಭೆಯ ಧ್ಯೇಯವನ್ನು ಸಹ ತಿದ್ದುಪಡಿಸುವ ಕಾರಣವಾದರೂ ಇದೇ. ಐಕ್ಯವೇ ನಮ್ಮ ಸ್ವಾತಂತ್ರ್ಯಪ್ರಾಪ್ತಿಯ ಪ್ರಥಮ ಸೋಪಾನವು.

ದಿಲ್ಲಿಯಲ್ಲಿ ನೆರೆಯಲಿಕ್ಕಿದ್ದ ಜಾದಾ ರಾಷ್ಟ್ರೀಯ ಸಭೆಯು ಈ ಸೋಪಾನವನ್ನು ಭದ್ರಪಡಿಸಿಕೊಂಡು, ಮುಂದಿನ ದಾರಿಯನ್ನು ನಿರ್ಣಯಿಸತಕ್ಕದ್ದು. ಪಕ್ಷಭೇದಗಳಲ್ಲಿ ಐಕ್ಯಮತ್ಯವನ್ನು ಜನಿಸುವದು ರಾಷ್ಟ್ರೀಯ ಸಭೆಯ ಪ್ರಥಮ ಕರ್ತವ್ಯವು. ಐಕ್ಯಮತ್ಯವು ರಾಷ್ಟ್ರಹಿತವರ್ಧಕವಾಗಬೇಕೆಂಬ ಮೂಲ ತತ್ವವು ಇದ್ದೇ ಇದೆ. ರಾಷ್ಟ್ರೀಯ ಮುಂದಾಳುಗಳು ಮಾಡುವ ಐಕ್ಯಮತ್ಯದ ಯೋಜನೆಯು ಎಂದೂ ರಾಷ್ಟ್ರಹಿತಘಾತಕವಾಗಲಾರದು. ಕಾನ್ಸಿಲು ಪ್ರವೇಶ-ಬಹಿಷ್ಕಾರ ಪಕ್ಷಗಳನ್ನು ಒಂದೆಡೆಯಲ್ಲಿ ಎಳತರುವ ಬಗ್ಗೆ ಅನೇಕರು ಅನೇಕ ಪರಿಯಿಂದ ಯತ್ನಿಸುತ್ತಿರುವರು. ಮುಂಬಯಿಯ ಪ್ರಾಂತಿಕ ಕೊಂಗ್ರೆಸ ಕಮಿಟಿಯು ಕಳೆದ ತಾ. ೨೧ನೇ ಮಂಗಳವಾರಕ್ಕೆ ಶ್ರೀಮತಿ ಸರೋಜಿನಿ ದೇವಿಯರ ಅಧ್ಯಕ್ಷತೆಯಲ್ಲಿ ನೆರೆಯಿತು. “ಕಾನ್ಸಿಲು ಪ್ರವೇಶ ಮಾಡುವ ಉಮೇದವಾರರ್ಯಾರೂ ಸರಕಾರಿ ಹುದ್ದೆಯನ್ನು ಸ್ವೀಕರಿಸಬಾರದು. ಕೊಂಗ್ರೆಸ ಕಾರ್ಯಕಾರಿ ಮಂಡಳವು ತಯಾರಿಸಿದ ಯೋಜನೆಯನ್ನು ಕಾನ್ಸಿಲುಗಳಲ್ಲಿ ಮಂಜೂರಿಗಿಡಬೇಕು. ಬಳಿಕ, ಕಮಿಟಿಯವರ ಅಜ್ಞೆಯಂತೆ, ವರ್ತಿಸತಕ್ಕದ್ದು” ಎಂಬ ಠರಾವನ್ನು ಶ್ರೀ। ದೇಸಾಯಿಯವರು ಸಭಿಕರ ಮುಂದಿಟ್ಟರು. ಇದರ ಮೇಲೆ ಅನುಕೂಲ-ಪ್ರತಿಕೂಲ ಭಾಷಣಗಳಾಗಿ, ಠರಾವು ಬಹುಮತದಿಂದ ಮಂಜೂರಾಯಿತು.

ಲಾಲಾಜಿಯವರು ಸೋಲನ್‌ನಿನಲ್ಲಿ ಆರೋಗ್ಯಾರ್ಥ ಉಳಿದಿರುವರು. ಅಲ್ಲಿ ಅವರು ಅಗಸ್ಟ ತಾ. ೨೮ ನೇ ಮಂಗಳವಾರಕ್ಕೆ ಒಂದು ಪ್ರಕಟಣೆಯನ್ನು ಪ್ರಕಟಿಸಿ, ರಾಷ್ಟ್ರೀಯ ಸಭಾಭಿಮಾನಿಗಳಲ್ಲಿ ಮತಭೇದಗಳ ಮೂಲಕ ಉಂಟಾದ ಪರಿಸ್ಥಿತಿಯನ್ನು ಸಮಾಲೋಚಿಸಿರುವರು. ಲಾಲಾಜಿಯವರು ಇತ್ತಂಡಗಳ ಸೇವೆಯಿಂದ ರಾಷ್ಟ್ರಹಿತವನ್ನು ಸಾಧಿಸಿಕೊಳ್ಳುವದೇ ನಮ್ಮ ಈಗಿನ ಪ್ರಶ್ನೆಯೆಂದು ಅಭಿಪ್ರಾಯಪಡುತ್ತಾರೆ. ಲಾಲಾಜಿಯವರು ರಾಷ್ಟ್ರದ ಮುಂದಿನ ದಾರಿಯ ರಹಸ್ಯವನ್ನೇ ಹೊರಗಡಹಿರುವರಲ್ಲವೇ! ಪಕ್ಷಗಳು-ಪ್ರತಿಪಕ್ಷಗಳು ಉಂಟಾಗುವದು ಈ ಅಪಾರ ದೇಶದಲ್ಲಿ ಅವಶ್ಯವು. ಅವುಗಳನ್ನು ಕಾರ್ಯಕ್ಷಮ ಮಾಡಿಕೊಳ್ಳುವದು ದೇಶಹಿತಚಿಂತಕ ಮುಂದಾಳುಗಳ ಕರ್ತವ್ಯವು. ಲಾಲಾಜಿಯವರು ಇದೇ

ಉದ್ದೇಶದಿಂದ ಪ್ರೇರಿತರಾಗಿ ಉಪಾಯಗಳನ್ನು ಸೂಚಿಸಿರುವರು. ಕೌನ್ಸಿಲುಗಳ ಮೇಲಿನ ಬಹಿಷ್ಕಾರವನ್ನು ರಾಷ್ಟ್ರೀಯ ಸಭೆಯು ತ್ಯಜಿಸಿ, ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ವಿಧಿಸಿದಂತೆ, ಕೌನ್ಸಿಲುಗಳನ್ನು ನಡಿಸುವದು; ಇಲ್ಲವೆ, ಜಾದಾ ರಾಷ್ಟ್ರೀಯ ಸಭೆಯು ಕರ್ತೃ ಹಾಕಿ, ರಾಷ್ಟ್ರೀಯ ಸಭಾಭಿಮಾನಿಗಳಿಗೆ ಕೌನ್ಸಿಲು ಸಭಾಸದರಾಗಗೊಡುವದು; ಹೀಗೆ, ಐಕ್ಯಸಾಧನೆಯ ಯತ್ನಗಳು ದೇಶದಲ್ಲಿ ನಡೆದಿವೆ.

ಲಾಲಾಜಿಯವರ ಪ್ರಕಟಣೆಯಲ್ಲಿ ಮಹತ್ವದ ಒಂದು ಮಾತಿದೆ. ಅವರು ಕೌನ್ಸಿಲು ಪ್ರವೇಶ ಮಾಡಲಿಚ್ಛಿಸುವದಿಲ್ಲ. ಕೌನ್ಸಿಲು ಪ್ರವೇಶದಿಂದ ದೇಶವು ಪ್ರಗತಿಹೊಂದುವದೆಂದೂ ಅವರ ತಿಳುವಳಿಕೆಯಿಲ್ಲ. ಕೌನ್ಸಿಲುಗಳು ನೌಕರಶಾಹಿಯು ನಿರ್ಮಿಸಿದ ಮೋಹನಾಸ್ತ್ರಗಳೆಂದು ತಿಳಿಯಲು ಸಹ ಅವರು ತಯಾರಿದ್ದಾರೆ. ಕೌನ್ಸಿಲು ಪ್ರವೇಶಕರು ಆತ್ಮಪ್ರತಿಷ್ಠೆಗಾಗಿ ಈ ಪರಿಯಿಂದ ರಾಷ್ಟ್ರೀಯ ಸಭೆಯಲ್ಲಿ ಗೊಂದಲ ಹಾಕುತ್ತಾರೆಂದು ಹೇಳಿದರೆ, ಅದಕ್ಕೆ ಲಾಲಾಜಿಯವರ ಮಾನ್ಯತೆ ಇಲ್ಲ. ಹಕೀಮ ಅಜಮಲಖಾನ, ದೇಶಬಂಧು ದಾಸ, ಪಂಡಿತ ಮೋತೀಲಾಲ ನೆಹರುರವರಂಥ ದೇಶಸೇವಾತತ್ಪರರ ನೇತೃತ್ವದಲ್ಲಿ ಸ್ಥಾಪನೆ ಹೊಂದಿದ ಸ್ವರಾಜ್ಯ ಪಕ್ಷವು, ಕೌನ್ಸಿಲು ಪಕ್ಷವನ್ನು ಪುರಸ್ಕರಿಸುವದರಲ್ಲಿ ಸ್ವಾರ್ಥಪ್ರೇರಿತವಾಗಿರದೆ, ರಾಷ್ಟ್ರಹಿತಕ್ಕಾಗಿಯೇ ದುಡಿಯುತ್ತದೆಂದು ಅವರ ಅಂತಃಕರಣಪೂರ್ವಕ ನಿಷ್ಠೆ. ಆದದರಿಂದಲೇ ಈ ಪಕ್ಷದ ಯೋಜನೆಯಿಂದ ರಾಷ್ಟ್ರಹಿತ ಸಾಧಿಸುವಂತೆ ರಾಷ್ಟ್ರೀಯ ಸಭೆಯು ಅವರಿಗೆ ಸಹಾಯವನ್ನೀಯಬೇಕು. ರಾಷ್ಟ್ರೀಯ ಸಭೆಯು ರಾಷ್ಟ್ರಹಿತಕ್ಕಾಗಿ ಹಾಕಿದ ಕರ್ತೃಗಳನ್ನು ಅವರೆಂದೂ ನಿರಾಕರಿಸರೆಂದು ಅವರಿಗೆ ನಂಬಿಗೆಯಿದೆ. ಲಾಲಾಜಿಯವರ ಹಾಗು ಮುಂಬಯಿಯ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಸೂಚನೆಗಳನ್ನು ವಿಮರ್ಶಿಸಿದರೆ, ಕೌನ್ಸಿಲುಗಳೊಳಗಿನ ರಾಷ್ಟ್ರೀಯ ಪ್ರತಿನಿಧಿಗಳ ಸೂತ್ರಧಾರರು ರಾಷ್ಟ್ರೀಯ ಸಭೆಯವರಾಗುವರು. ಒಂದು ಕಡೆಯಿಂದ ನೌಕರಶಾಹಿಯು; ಇನ್ನೊಂದು ಕಡೆಯಿಂದ ರಾಷ್ಟ್ರೀಯ ಸಭೆಯು; ಹೀಗೆ ಸೂತ್ರಧಾರರೀರ್ವರು ಕೌನ್ಸಿಲು ರಂಗಸ್ಥಳದಲ್ಲಿ ತಮ್ಮ ತಮ್ಮ ಬೇದೆಗಳನ್ನಿಟ್ಟು, ಜಗಿದಾಡುವರು. ನೋಟವು ಪ್ರೇಕ್ಷಣೀಯವಾಗುವದು.

ಅದೇನೂ ಇರಲಿ, ಲಾಲಾಜಿಯವರು ನುಡಿದಂತೆ, ನಮಗೆ ಈಗ ಬೇಕಾದದ್ದು ರಾಷ್ಟ್ರೀಯ ಐಕ್ಯವು. ಪಕ್ಷಭೇದಗಳ ಗೊಂದಲವು ಇನ್ನು ಸಾಕು. ಅದರಿಂದ ಎಂದೂ ನಮ್ಮ ಪ್ರಗತಿಯಾಗದು. ಅಂತಃಕಲಹದಿಂದ ನಮ್ಮ ಸಾಮರ್ಥ್ಯವು ಕ್ಷೀಣವಾಗುವದಲ್ಲದೆ, ವಿಪಕ್ಷದ ವರ್ಚಸ್ವಸಾಧನೆಗೆ ಬಲಿಬಿದ್ದು, ನಾವು ರಾಷ್ಟ್ರಕಾರ್ಯವಿಮುಖರಾಗುವ ಸಂಭವವೂ ಸಹ ಇದೆ. ಪಕ್ಷವಾದಿ ದುರಾಗ್ರಹಿಗಳ ಕಲಹದಿಂದ, ನಿಃಪಕ್ಷಪಾತ ಬುದ್ಧಿಯಿಂದ ದೇಶಸೇವೆ ಮಾಡುವವರಿಗೆ ಬಹಳೇ ತೊಂದರೆಯಾಗುತ್ತದೆ. ಲಾಲಾಜಿಯವರು ಕೌನ್ಸಿಲು ಬಹಿಷ್ಕಾರವು ಅನಿಷ್ಟವೆಂದು ಪ್ರತಿಪಾದಿಸುವವರಿದ್ದರೂ, ಜಾದಾ ರಾಷ್ಟ್ರೀಯ ಸಭೆಯಲ್ಲಿ ಇತ್ತಂಡಗಳು ಸಂಧಿ ಮಾಡಿಕೊಳ್ಳದಿದ್ದರೆ, ತಾವು ರಾಷ್ಟ್ರೀಯ ಸಭೆಯಲ್ಲಿ ಸೇರಿಕೊಂಡು ಕೆಲಸ ಮಾಡಲಾರರೆಂದು ಖಂಡಿತ ಹೇಳಿಬಿಟ್ಟಿರುವರು. ದೇಶಬಾಂಧವರಿಗೆ, ಏನೂ ಮಾಡಿರಿ, ಐಕ್ಯವನ್ನು ಸಾಧಿಸಿರಿ, ಎಂದು ಲಾಲಾಜಿಯವರು ಅಂತಃಕರಣಪೂರ್ವಕವಾಗಿ ಸಾರಿ ಹೇಳಿರುವರು. ಜಾದಾ ರಾಷ್ಟ್ರೀಯ ಸಭೆಯ ಮುಖ್ಯ ಕಾರ್ಯವು ಐಕ್ಯಸ್ಥಾಪನೆಯು. ಅದರ ಹೊರತು, ಮುಂದಿನ ದಾರಿಯನ್ನು ರಾಷ್ಟ್ರಕ್ಕೆ ವಿಧಿಸುವದು ನಿಷ್ಪ್ರಯೋಜಕವು. ಇದನ್ನು ರಾಷ್ಟ್ರೀಯ ಪ್ರತಿನಿಧಿಗಳೆಲ್ಲರೂ ಒಳಿತಾಗಿ ನೆನಿಸಿ, ಸಭೆಯ ಕಾರ್ಯವನ್ನು ಸಾಂಗಗೊಳಿಸಬೇಕಾಗಿ ನಮ್ಮ ಅಂತಃಕರಣಪೂರ್ವಕ ಪ್ರಾರ್ಥನೆ.

ಸ್ಫುಟ ಸೂಚನೆಗಳು.

೧. ವಿಖ್ಯಾತ ಕರಾಚಿ ಖಟ್ಲೆಯಲ್ಲಿ ಶಿಕ್ಷೆ ಹೊಂದಿದ ಮೌ॥ ಮಹಮ್ಮದ ಅಲ್ಲಿಯವರು ಕಳೆದ ತಾ. ೨೯ನೇ ಬುಧವಾರ ಮುಂಜಾವಿಗೆ ಝಾಂಸಿಯಲ್ಲಿ ಬಿಡುಗಡೆ ಹೊಂದಿದರು. ಮೌಲಾನಾರವರನ್ನು ಅಖಿಲ ಭರತ ಖಂಡವು ಪ್ರೇಮಪುರಃಸರ ಸ್ವಾಗತೀಕರಿಸುವದು. ಬಿಡುಗಡೆ ಹೊಂದಿದಕೂಡಲೆ, ಮೌಲಾನಾರವರು ಮಹಾತ್ಮರ ಧರ್ಮಪತ್ನಿಗಳಾದ ಸೌ॥ ಕಸ್ತುರಬಾಯಿ ಗಾಂಧಿಯವರಿಗೆ "ನಾನು ಇಂದು ಬಿಡುಗಡೆಯಾದೆನು; ಯರೋಡಾ ಜೈಲಿನ ಕೀಲಿಕೈಯನ್ನು ಹುಡುಕುತ್ತಿದ್ದೇನೆ. ಪರಮಾತ್ಮನನ್ನೂ, ದೇಶಬಾಂಧವರನ್ನೂ ನಂಬಿರಿ." ಎಂದು ತಂತಿ ಮಾಡಿರುವರು. ಮೌಲಾನಾರವರ ತಂತಿಯು ಅರ್ಥಪೂರ್ಣವಿದೆ. ಯರೋಡಾ ಜೈಲಿನಲ್ಲಿ ಕಾಲಹರಣ ಮಾಡುತ್ತಿದ್ದ ಭಾರತಮಾತೆಯ ವರಪುತ್ರರನ್ನು ವಿಮೋಚಿಸುವದಕ್ಕೆ ಮಹಮ್ಮದ ಅಲ್ಲಿಯವರು ಎಂದಿನಂತೆ ಹೋರಾಡುವರು. ಯರೋಡಾ ಜೈಲಿನ ಕೀಲಿಯನ್ನು ಹುಡುಕುತ್ತಿದ್ದೇನೆಂಬದರ ಅರ್ಥವು ಇದೇ. 'ಎಸೋಸಿಯೇಟೆಡ್ ಪ್ರೆಸ್' ಸಂಸ್ಥೆಯ ಬಾತಮೀದಾರರು ಮೌ॥ ರವರ ಮುಲಾಖತನ್ನು ಪಡೆದರು. ಮೌ॥ ರವರು ತಮ್ಮ ಮತಗಳು ಬದಲಾಗಿಲ್ಲವೆಂತಲೂ, ಮೊದಲಿನಂತೆ ತಾವು ಚಳವಳಿ ಮಾಡುವೆವೆಂತಲೂ ಜೈಲನ್ನು ಪುನಃ ಸೇರಿಕೊಳ್ಳಲು ತಯಾರಿರುವೆವೆಂತಲೂ, ಯರೋಡಾ ಜೈಲಿನ ಕೀಲಿಯನ್ನು ಸಂಪಾದಿಸಿ, ಮಹಾತ್ಮರನ್ನು ಬಿಡುಗಡೆ ಮಾಡಿದ ಹೊರತು ವಿಶ್ರಾಂತಿಪಡೆಯಲಾರೆವೆಂದೂ ಖಂಡಿತ ಹೇಳಿಬಿಟ್ಟಿರುವರು. ದೇಶದಲ್ಲಿ ಐಕ್ಯಸ್ಥಾಪನೆಗಾಗಿ ತಾವು ಮನಃಪೂರ್ವಕವಾಗಿ ದುಡಿಯುವೆವೆಂತಲೂ, ಮೌ॥ ರವರು ನುಡಿದಿರುವರು. ಕೌನ್ಸಿಲ ಆಫ್ ಸ್ಟೇಟಿನ ನಾಮದಾರರಾದ ಸಯ್ಯದ ರೇಝಾ ಅಲ್ಲಿಯವರು ಮೌ॥ ರವರಿಗೆ ಅಭಿನಂದನಪರ ತಂತಿ ಕಳಿಸುವಾಗ ಕೌನ್ಸಿಲು ಬಹಿಷ್ಕಾರದ ಮತವನ್ನು ರದ್ದುಪಡಿಸಲು ಮೌ॥ ರವರಿಗೆ ವಿಜ್ಞಾಪಿಸಿದರು. ಅದಕ್ಕೆ ಮೌ॥ ರವರು ೨ ವರುಷಗಳ ಮೊದಲು ಮಹಮ್ಮದೀಯ ಧರ್ಮದಂತೆ ಸಹಕಾರಿತೆಯು 'ಹರಾಮ' ಇದ್ದದ್ದು, ಈಗ 'ಹಲಾಲ' ಆಗುವಷ್ಟು ಪರಿಸ್ಥಿತಿಯು ಬದಲಾಗಲಿಲ್ಲೆಂದು ಸ್ಪಷ್ಟವಾಗಿ ಹೇಳಿರುವರು. ಜಝಿರಾತ-ಅಲ್-ಅರಾಬ ಪ್ರದೇಶವು ಪೂರ್ಣವಾಗಿ ಸ್ವತಂತ್ರವಾದ ಹೊರತು, ಖಿಲಾಫತ ಸಂಸ್ಥೆಯು ಧರ್ಮಶಾಸ್ತ್ರದಂತೆ ಬಂಧವಿಮೋಚನವಾದ ಹೊರತು ಮಹಮ್ಮದೀಯರು ಬ್ರಿಟಿಶ ಸರಕಾರದಗೂಡ ಸಹಕಾರಿತೆ ಮಾಡಲಾರರೆಂದು ನಾಮದಾರ ರೇಝಾ ಅಲ್ಲಿಯವರಿಗೆ ತಿಳಿಸಿರುವರು. ಮೌ॥ ರವರು ದಿಲ್ಲಿಗೆ ಹೋಗಿ, ಹಕೀಮ ಅಜಮಲಖಾನ, ಪಂಡಿತ ಮೋತೀಲಾಲ ನೆಹರ, ಡಾ॥ ಅನ್ಸಾರಿ ಮೊದಲಾದ ಸಹಕಾರಿ ಮಿತ್ರರಿಗೆ ಭೆಟ್ಟಿಯನ್ನಿತ್ತು, ಮಾತುಕಥೆ ನಡಿಸಿದರು. ಮೌ॥ ಮಹಮ್ಮದ ಅಲ್ಲಿಯವರ ಬಿಡುಗಡೆಯಿಂದ ಭಾರತೀಯ ರಾಜಕಾರಣದಲ್ಲಿ ಹೊಸ ತೇಜಸ್ಸು ಪ್ರಾದುರ್ಭೂತವಾಗಿದೆ. ಜಾದಾ ರಾಷ್ಟ್ರೀಯ ಸಭೆಯಲ್ಲಿ ಅವರು ಹಾಜರಾಗಿ, ಮುಂದಿನ ದಾರಿಯನ್ನು ರೇಖಾಂಕಿತ ಮಾಡುವರೆ ರಾಷ್ಟ್ರಕ್ಕೆ ಸಹಾಯಮಾಡುವರು. ಮೌ॥ ರವರೂ ಐಕ್ಯವನ್ನೇ ಪ್ರತಿಪಾದಿಸುವ ಹಾಗು ಅದಕ್ಕಾಗಿ ತನು-ಮನ-ಧನದಿಂದ ದುಡಿಯುವ ವೀರ ಪುರುಷರು, ಇಂಥ ಮಹನೀಯರು ಈ ಪರಿಸ್ಥಿತಿಯಲ್ಲಿ ವಿಮೋಚನೆ ಹೊಂದಿದ್ದು ಅಖಿಲ ಭಾರತೀಯರ ಸುದೈವವೆಂತಲೇ ಎಣಿಸಬೇಕು. ಮೌಲಾನಾ ಮಹಮ್ಮದ ಅಲ್ಲಿಯವರಿಗೆ ಅಂತಃಕರಣಪೂರ್ವಕ ಸ್ವಾಗತವನ್ನಿತ್ತು, ಯರೋಡಾ ಜೈಲಿನ ಕೀಲಿಶೋಧದ ಕಾರ್ಯದಲ್ಲಿ ಅವರು ಯಶಸ್ವಿಯಾಗಿ, ಮಹಾತ್ಮರು ಬಿಡುಗಡೆ ಹೊಂದಿ, ಭಾರತಮಾತೆಯು ಉದ್ಧಾರವಾಗಲೆಂದು ಮನಃಪೂರ್ವಕ ಹಾರೈಸುವೆವು.

---

೨. ಕಾಶೀ ಕ್ಷೇತ್ರದಲ್ಲಿ ಅಗಸ್ಟ ತಾ. ೨೦ನೇಯಿಂದ ಹಿಂದೂ ಮಹಾಸಭೆಯು ಪಂಡಿತ ಮದನಮೋಹನ ಮಾಲವೀಯಜೀಯವರ ನೇತೃತ್ವದಲ್ಲಿ ಯಶಸ್ವೀ ರೀತಿಯಿಂದ ನೆರವೇರಿತು. ಪಂಡಿತಜೀಯವರ ಉಪನ್ಯಾಸವು ವಿಚಾರಣೀಯವಿತ್ತು. ಅದರ ಸಾರಾಂಶವನ್ನು ಕಳೆದ ಸಂಚಿಕೆಯಲ್ಲಿ ನಾವು ಪ್ರಕಟಿಸಿರುವೆವು. ಹಿಂದೂ ಸಮಾಜೋದ್ಧಾರಾರ್ಥವಾಗಿ ಹಿಂದೂ ಧರ್ಮಾಭಿಮಾನಿಗಳು ಯಾವ ಪರಿಯಿಂದ ದುಡಿಯತಕ್ಕದ್ದೆಂಬುದು ಅದರ ವಾಚನದಿಂದ ಗ್ರಹಿಕೆಯಾಗುವದು. ಹಿಂದೂಗಳ ದೌರ್ಬಲ್ಯದಿಂದಲೇ ಪ್ರಾಮುಖ್ಯವಾಗಿ ಹಿಂದೂ-ಮಹಮ್ಮದೀಯರ ಕಲಹವುಂಟಾಗುತ್ತದೆಂಬ ಮಾತು ಎಲ್ಲರೂ ಒಪ್ಪತಕ್ಕಂಥಾದ್ದು. ನಾವು ಸಾಮರ್ಥ್ಯವಂತರಿದ್ದರೆ, ನಮ್ಮ ಗೊಡವೆಗೆ ಬರಬೇಕಾದರೆ, ವಿಶೇಷವಾಗಿ ಯಾರೂ ವಿಚಾರಮಾಡುವರು. ಹಿಂದೂ ಧರ್ಮೀಯರು ವೇದಾಂತಿಗಳಾಗಿ ಸ್ವರಕ್ಷಣದ ಯೋಜನೆಗಳನ್ನು ತ್ಯಜಿಸಿದ್ದರಿಂದಲೇ ಇಷ್ಟು ಅನರ್ಥಗಳುಂಟಾಗುತ್ತವೆ. ಈ ಅನರ್ಥಗಳಿಗೆ ಮುಕ್ತಿಯೆಂದು ಕಾರಣವಿರುತ್ತದೆಂದು ನಮಗೆ ತೋರುತ್ತದೆ. ಹಿಂದೂ ಆಗಲಿ, ಮಹಮ್ಮದಿಯನಾಗಲಿ, ವ್ಯಕ್ತಿಶಃ ಜಗಳಾಡಹತ್ತಿದಾಗ ಉಭಯ

ರೊಳಗಿನ ಕಲಹಕಾರಣಗಳನ್ನು ಪರಿಶೋಧಿಸಿ, ನ್ಯಾಯಾನ್ಯಾಯಗಳನ್ನು ನಿರ್ಣಯಿಸುವ ಮೊದಲು, ಸಾಮಾನ್ಯ ಹಿಂದೂ-ಮಹಮ್ಮದೀಯರು ವ್ಯಕ್ತಿಕ ಕಲಹವನ್ನು ಜ್ಞಾತಿಕಲಹವೆಂದು ಪರಿಣಮಿಸಿ, ತಮ್ಮತಮ್ಮೊಳಗೆ ಜಗಳಾಡುತ್ತಾರೆ. ಈ ಮನೋವೃತ್ತಿಯು ಅನರ್ಥಗಳ ಇನ್ನೊಂದು ಕಾರಣವು. ಪಂಡಿತಜೀಯವರು ನುಡಿದಂತೆ, ನಾವು ಸಬಲರಿದ್ದರೆ, ಮಹಮ್ಮದೀಯರು ಸಮಾನಸ್ಕಂಧರೆಂದು ಎಣಿಸಿ, ನಮ್ಮ ಗೊಡವೆಗೆ ಬರಲಾರರು. ನ್ಯಾಯಾನ್ಯಾಯಗಳ ವಿಚಾರಣೆಗೂ ನಮ್ಮ ಕಾಯಿಕ ಬಲವು ಅನುಕೂಲವಾಗುವದು. ಅಸ್ಪೃಶ್ಯತೆಯ ಕಲಂಕವನ್ನು ಹೋಗಲಾಡಿಸಲು ಸನಾತನ ಧರ್ಮಾಭಿಮಾನಿಗಳು ಮನಃಪೂರ್ವಕ ದುಡಿಯತಕ್ಕದ್ದೆಂದು ನಮ್ಮದ ಮತವಿದೆ. ಅಸ್ಪೃಶ್ಯರು ಇಸ್ಲಾಮು ಅಥವಾ ಕ್ರಿಸ್ತಿಮತವನ್ನು ಹಿಂಬಾಲಿಸಿದರೆ, ಅವರಿಗೆ ನಾವು ಅಸ್ಪೃಶ್ಯರೆಂದು ಎಣಿಸುವದಿಲ್ಲ. ಭಕ್ತಿಯಿಂದ ಹಿಂದೂ ಧರ್ಮವನ್ನು ಅನುಸರಿಸುವವರಿಗೆ ಅಸ್ಪೃಶ್ಯರೆಂದು ನಾವು ಹೊರಗಿಟ್ಟು, ಧರ್ಮಾಂತರ ಹೊಂದಿದ ಚಂಚಲ ಮನಸ್ಕರಿಗೆ ಸ್ಪೃಶ್ಯರೆಂದು ಎಣಿಸುವದು ವಿಲಕ್ಷಣ, ವಿಪರೀತ ಮನೋವೃತ್ತಿಯಲ್ಲವೇ! ಇವರೊಳಗೂ ಮತ್ತೊಂದು ಭೇದವಿದೆ ಸರಕಾರವು ಕಾಯಿದೆಗಳನ್ನು ಏರ್ಪಡಿಸಿದರೆ, ಅಷ್ಟರ ಪೂರ್ತ ಅಸ್ಪೃಶ್ಯರ ಅಸ್ಪೃಶ್ಯತೆಯನ್ನು ದೂರಪಡಿಸಲು ನಾವು ತಯಾರಾಗುತ್ತೇವೆ ಇದು ನಿಜವಾಗಿ ಶೋಚನೀಯವು. ಅಸ್ಪೃಶ್ಯ ಬಾಂಧವರನ್ನು ಈ ಪರಿಯಿಂದ ಕಾಪಿದರೂ, ಅವರು ಹಿಂದೂ ಧರ್ಮವನ್ನೇ ಶ್ರದ್ಧೆಯಿಂದ ಹಿಂಬಾಲಿಸುತ್ತಾರೆಂದು ನೀತಿ ಯಾರಿಗೆ. ತಾನೇ ಅಸ್ಪೃಶ್ಯರಾಗದಿರದು! ಇಂಥ ಶ್ರದ್ಧೆಯುಳ್ಳ ಬಾಂಧವರನ್ನು ಕೃತ್ರಿಮ ಬಂಧನಗಳಿಂದ ವಿಮೋಚಿಸಿ, ಅವರಿಗೂ ನಮ್ಮಲ್ಲಿ ಬೆರಮಾಡಿಕೊಳ್ಳುವದು ಹಿಂದೂ ಧರ್ಮದ ಉದ್ಧಾರಕ್ಕೆ ತೀರ ಅವಶ್ಯವಿರುವದಲ್ಲವೇ? ಶುದ್ಧಿ ಚಳವಳಿಯನ್ನು ಪುರಸ್ಕರಿಸುವ ಮೂಲ ಹೇತುವು ಹಿಂದೂ ಧರ್ಮೀಯರ ಸಂಖ್ಯಾಬಲವನ್ನು ಮಿಗಿಲು ಮಾಡುವದಕ್ಕಲ್ಲ ಹಿಂದೂ ಧರ್ಮದ ಕೋಣೆಯಲ್ಲಿ, ಕಾರಣಾಂತರದಿಂದ ಬಹಿಷ್ಕೃತರಾದವರಿಗೆ, ಅವರ ಇಚ್ಛೆಯಿದ್ದಲ್ಲಿ, ಸೇರಿಸಿಕೊಳ್ಳುವ ಉಪಾಯವಿದು ಪಂಡಿತಜೀಯವರು ನುಡಿದಂತೆ, ಹಿಂದೂ ಧರ್ಮದ ಧ್ಯೇಯವು ಯಾವಾಗಲೂ ಪರಮತಸಹನಶೀಲವು. ಪರಧರ್ಮೀಯರಿಗೆ, ಪರಮತಸ್ಥರಿಗೆ ಯಾವದೇ ಪರಿಯಿಂದ ನೋಯಿಸುವದು ಅದಕ್ಕೆ ಇಷ್ಟವಿಲ್ಲ. ನಮ್ಮ ಸಮಾಜೋದ್ಧಾರದ ಚಳವಳಿಗಳನ್ನೆಲ್ಲ ಇದೇ ಧೋರಣದಿಂದ ಪರಧರ್ಮೀಯರ, ಪರಮತಸ್ಥರ ಸಹಾನುಭೂತಿಯಿಂದ ನಡಿಸಬೇಕೆಂದು ಪಂಡಿತಜೀಯವರ ಪ್ರಾರ್ಥನೆ. ಹಿಂದೂ ಮಹಾಸಭೆಯು ಸಹ, ಮಹಮ್ಮದೀಯ, ಕ್ರಿಸ್ತ ಧರ್ಮಾನುಯಾಯಿಗಳೊಂದಿಗೆ ಪೂರ್ಣ ಸಹಾನುಭೂತಿಯನ್ನು ಪ್ರಕಟಿಸುವ ಠರಾವನ್ನು ಏರ್ಪಡಿಸಿ, ಅವರೆಲ್ಲರ ಭೀತಿಯನ್ನು ಅಧಿಕಾರಯುಕ್ತ ರೀತಿಯಿಂದ ನಿರಾಕರಿಸಿದೆ. ಸಭೆಯಲ್ಲಿ ಹಾಜರಿದ್ದ ಬೌದ್ಧ ಮತದ ಶ್ರೀ. ಅಂಗಾರಿಕ ಧರ್ಮಪಾಲರವರು ಹಿಂದೂ ಮಹಾಸಭೆಗೆ ಒಂದು ಸಾವಿರ ರೂಪಾಯಿಗಳನ್ನು ಅರ್ಪಿಸಿ, ಮಹಾಸಭೆಯ ಉದ್ದೇಶಗಳಿಗೆ ತಮ್ಮ ಸಹಾನುಭೂತಿಯನ್ನು ಪ್ರದರ್ಶಿಸಿದರು. ಮಹಾಸಭೆಯ ಉದ್ದೇಶವು ಆತ್ಮೋದ್ಧಾರವೇ ಹೊರತು, ಪರಪೀಡನೆಯಲ್ಲವೆಂತಲೂ ಇದರಿಂದ ತಿಳಿಯುವದಾಗಿದೆ. ಮಹಾಸಭೆಯು ಇದೇ ಧೋರಣದಿಂದ ನಡೆದು, ಅನೇಕ ಪರಿಯಿಂದ, ಅನೇಕ ಕಾರಣಗಳ ಮೂಲಕ ಅವನತಿ ಹೊಂದಿದ ಹಿಂದೂ ಸಮಾಜವನ್ನು ಉದ್ಧರಿಸಿ, ರಾಷ್ಟ್ರಹಿತವನ್ನು ಸಾಧಿಸುವದೆಂದು ನಾವು ನೆರನಂಬಿದ್ದೇವೆ.

ವಿಖ್ಯಾತ ನೆಪೋಲಿಯನ ಚಕ್ರವರ್ತಿಗಳು ಬ್ರಿಟಿಷ ರಾಷ್ಟ್ರಕ್ಕೆ ಅಂಗಡಿಕಾರರ ರಾಷ್ಟ್ರವೆಂದು ಸಂಬೋಧಿಸುತ್ತಿದ್ದರು. ಸಾರ್ವಭೌಮ ಅರಸರಲ್ಲಿ ಕಂಡುಬರುವ ಔದಾರ್ಯ ಬುದ್ಧಿಯು ಬ್ರಿಟಿಶರಲ್ಲಿಲ್ಲೆಂದು ಇವರ ಅರ್ಥ. ಕಳೆದ ಸಂಚಿಕೆಯಲ್ಲಿ ಪ್ರಸಿದ್ಧವಾದ ಶ್ರೀ| ವೆಂಕಟಸುಬ್ಬಯ್ಯ ಐನಕೈರವರ ಪತ್ರ ಓದಿ, ಬ್ರಿಟಿಷರ ಕ್ಷುದ್ರ ಅಂಗಡಿಕಾರವೃತ್ತಿಯು ನೆನಪಾಗುತ್ತದೆ ಬೆಳಗಿಯಲ್ಲಿ ಇರುವ ಟಪಾಲ ಆಫೀಸಿನ ಜಮಾ-ಖರ್ಚು ತೆಗೆದು, ಬೆಳಗಿ ಪ್ರೋವಿನ್ಸಿನಲ್ಲಿ ಆದಾಯಕ್ಕಿಂತ ವೆಚ್ಚವೇ ಮಿಗಿಲಾಗುತ್ತದೆಂದು ಖಾತೆಯ ವರಿಷ್ಠಾಧಿಕಾರಿಗಳು ಕಂಡು ಹಿಡಿದಿರುವರು, ಮತ್ತು ಈ ಟಪಾಲ ಆಫೀಸಿನಿಂದ ಒದಗುವ ಒಂದು ವರುಷದ ಖರ್ಚನ್ನು ಸಹಿಸಿಕೊಳ್ಳುವ ಶರ್ತಿನ ಮೇಲೆ, ಪ್ರೋವಿನ್ಸ ಇದ ಕ್ಷೇಮೋತಲೂ ಜಾಹೀರ ಮಾಡಿರುವರಂತೆ! ಟಪಾಲ ಆಫೀಸಿನ ಪ್ರತಿ ಒಂದು ಶಾಖೆ-ಉಪಶಾಖೆಗಳಲ್ಲಿ ಜಮಾ-ಖರ್ಚಿನ ಬಾಕೀಗೂಡಿಸಲಿಕ್ಕೆ ಹೋದದು ಅವ್ಯವಹಾರಿಕವೆಂದು ಯಾರೂ ಹೇಳುವರು. ಒಂದು ಶಾಖೆಯಲ್ಲಿ ಲಾಭವಾಗುತ್ತದೆ ಇನ್ನೊಂದು ಶಾಖೆಯಲ್ಲಿ ಹಾನಿಯಾಗುತ್ತದೆ. ಇಡೀ ಟಪಾಲ ಖಾತೆಯಿಂದ ಲಾಭವಾದರೆ ತೀರಿತು, ಶ್ರೀ| ಐನಕೈಯವರು ನುಡಿದಂತೆ, ಲಾಭ-ಹಾನಿಗಳ ಲೆಕ್ಕ ಮಾಡುವಾಗ, ಆಯಾತ-ನಿರ್ಗತ ಪತ್ರಗಳ ಲೆಕ್ಕವನ್ನು ಸಹ ಹಿಡಿಯ[illegible] ಬೇಕಾಗುತ್ತದೆ, ಬೆಳಗಿಯಲ್ಲಿ ಟಪಾಲ ಆಫೀಸಿನ, ಪತ್ರಗಳ ವಿಂಗಡಣೆಯು ಸರಿಯಾಗಿ ಆಗತಕ್ಕದ್ದರಿಂದ, ಪತ್ರವ್ಯವಹಾರವು ವಿಶೇಷವಾಗಿ ನಡೆಯುತ್ತದೆ ಟಪಾಲಖಾತೆಯನ್ನು ಪ್ರಜೆಗಳ ಸೌಕರ್ಯಕ್ಕಾಗಿ ಸರಕಾರವು ಏರ್ಪಡಿಸಿದೆ. ಸುಸಂಸ್ಕೃತ, ಸುಧಾರಿಸಿದ ಬ್ರಿಟಿಶರ ಆತುರತೆಯಿಂದ ಜರ್ಮ ಖಂಡಕ್ಕೆ ಒದಗಿದ ಮಹತ್ವದ ಲಾಭದಲ್ಲಿ ಟಪಾಲಿನ ಸೌಕರ್ಯವು ಸಮಾವೇಶವಾಗಿದೆ. ಟಪಾಲ ಖಾತೆಯನ್ನು ನಿರ್ಮಿಸಿದ ಮುಖ್ಯ ಕಾರಣವು ಪ್ರಜೆಗಳಿಗೆ ವ್ಯವಹಾರ ನಡಿಸಲು ಅನುಕೂಲವಾಗಬೇಕೆಂದು ಹೇಳಲ್ಪಡುತ್ತದೆ. ಇಂಥ ಪ್ರಜಾಕಲ್ಯಾಣಕರ ಏರ್ಪಾಟಿನಲ್ಲಿ ಸರಕಾರಕ್ಕೆ ಅಲ್ಪ ಹಾನಿ ತಟ್ಟಿದರೆ, ಅದನ್ನು ಹಳ್ಳಿಗರು ತೆರುವ ಇತರ ಕರಗಳಿಂದ ಭರ್ತಿಮಾಡಿಕೊಳ್ಳಬಹುದು. ಬ್ರಿಟಿಶರ ಆಮದಾನಿಯಿಂದ ಹಳ್ಳಿಗರಿಗೆ ಪ್ರಾಪ್ತಿಯಾದದ್ದೆಂಬುದು ಶೂನ್ಯವೆಂದು ಪ್ರೊ| ಜಿ. ಟಿ ಗೆರೆಟ್‌ರವರು ಮಾಡಿದ ಸಿದ್ಧಾಂತವನ್ನು ನಾವು ತಾ. ೧೫-೭-೨೬ನೇ ಸಂಚಿಕೆಯಲ್ಲಿ ವಾಚಕರಿಗೆ ಅರುಹಿರುವೆವು. ಸರಕಾರವು ಪದ್ಧತಶೀರ ರೀತಿಯಿಂದ ಬಡ ಒಕ್ಕಲಿಗರನ್ನು ಸುಲಿಗೆ ಮಾಡಿದೆಂಬ ಪ್ರೊ| ಗೆರೆಟ್‌ರವರ ವಿಧಾನವನ್ನು ಟಪಾಲ ಆಫೀಸಿನ ವರಿಷ್ಠಾಧಿಕಾರಿಗಳು ಕೃತಿಯಿಂದ ಪುಷ್ಟೀಕರಿಸಿರುವರು. ಇಲ್ಲದಿದ್ದರೆ, ಬೆಳಗಿಯಲ್ಲಿ ಟಪಾಲ ಇರದೇ ಹೋದರೆ, ಅದರ ಖರ್ಚು ತೀರಿತೆಂದು ಅವರು ಪ್ರಜೆಗಳಿಗೆ ಅಜ್ಞಾಪಿಸುತ್ತಿದ್ದರೇನು? ಪ್ರತಿಯೊಂದು ಕೆಲಸಕ್ಕಾಗಿ ಪ್ರತ್ಯೇಕ ಹಣ ತೆರಬೇಕಾದರೆ, ಭೂಮಿ ಕಂದಾಯ ಮೊದಲಾದ ಕರಗಳನ್ನು ತೆರುವದು ಗಂಟು ಕಟ್ಟಲಿಕ್ಕೇನು? ಟಪಾಲ ಆಫೀಸಿನ ವರಿಷ್ಠಾಧಿಕಾರಿಗಳು ಈ ಪ್ರಶ್ನೆಗಳನ್ನು ಉತ್ತರಿಸಿ, ಮುಂದರಿಯಲಿ.

ಕೌನ್ಸಿಲ ಚುನಾವಣೆ.

ದಾಖಲ ಆದ ಉಮೇದವಾರರು

ಕಾರವಾರದಲ್ಲಿ ತಾ. ೪-೯-೧೯೨೬ನೇ ದಿವಸ ಆದ ಕೌನ್ಸಿಲ ಚುನಾವಣೆಯ ಸಂಬಂಧದ "ನೋಮಿನೇಶನ" ದಲ್ಲಿ ಈ ಕೆಳಗಿನ ಮೂರು ಗೃಹಸ್ಥರು ನಮ್ಮ ಜಿಲ್ಲೆಯ ಪರಿಯಿಂದ ಉಮೇದವಾರರಾಗಿ ನಿಂತಿರುತ್ತಾರೆ:—

ರಾ| ರಾ| ವಿಶ್ವೇಶ್ವರ ವೆಂಕಟೇಶ ಕಲ್ಯಾಣಪುರಕರ, (ನೇಮಸ್ತ)

ಶ್ರೀ| ಶೇಷಗಿರಿ ನಾರಾಯಣ ಕೇಶವೈನ, (ಬಿನ್ ಪಕ್ಷ)

ದೇ| ಸೇ| ಪಂಜನಾದ ದೇವರ ಭಟ್ಟ, ಕರ್ಕಿ, (ರಾಷ್ಟ್ರೀಯ)

ಇವರ ಉಮೇದವಾರಿ ಪತ್ರಿಕೆಗಳ ತಪಾಸಣೆಯು ಈ ಹೊತ್ತು (ತಾ ೬ ರಿಗೆ) ಕಾರವಾರದಲ್ಲಿ ಆಗುವದಿರುತ್ತದೆ.

ಪರಾವೃತ್ತರಾದ ಉಮೇದವಾರರು.

ಶ್ರೀ| ವಿಶ್ವನಾಥ ಪಾಂಡುರಂಗ ಪ್ರಭು, ಅಂಕೋಲಾ ಇವರು ತಿಳಿಸುವದೇನಂದರೆ.—

ಉಮೇದವಾರಿ ಪತ್ರಿಕೆಯನ್ನು ದಾಖಲ ಮಾಡುವ ತಾರೀಖು ಅತಿಶಯ ಸಮೀಪವಾಗಿ ಇಟ್ಟಿದ್ದರಿಂದ, ಜಿಲ್ಲೆಯೊಳಗಿನ ನಿಜವಾದ ಲೋಕಮತವನ್ನು ಅರಿತುಕೊಳ್ಳುವರೆ ಸಾಕಷ್ಟು ಅವಕಾಶ ಸಿಗಲಿಲ್ಲವಾದ್ದರಿಂದಲೂ, ನಮ್ಮ ಜಿಲ್ಲೆಯ ಪಾಲಿಗೆ ಬಂದಿರುವ ಒಂದೇ ಒಂದು ಜಾಗಕ್ಕಾಗಿ ನಾಲ್ಕು ಮಂದಿ ಉಮೇದವಾರರು ಬಿದ್ದಿದ್ದರೆ, ನಿಜವಾದ ಪ್ರತಿನಿಧಿಗಳಿಗೆ ಆರಿಸಲಿಕ್ಕೆ ಆಸ್ಪದ ಸಿಗದೆ, ಮತದಾರ ಸಂಘಕ್ಕೆ ಅನ್ಯಾಯವಾಗುವ ಸಂಭವವಿದ್ದುದರಿಂದಲೂ ತಾವು ತಮ್ಮ ಉಮೇದವಾರಿಯನ್ನು ಬಿಟ್ಟುಕೊಟ್ಟಿರುತ್ತೇವೆ. ಮತ್ತು ಅಲ್ಪಾವಧಿಯಲ್ಲಿ, ತಮಗೆ ಮತದಾನದ ಸಹಾಯವನ್ನೀಯಲು ಆಶ್ವಾಸನ ಕೊಟ್ಟ ಎಲ್ಲ ಕಡೆಯ ಮತದಾರರಿಗೆ ಬಹಳೇ ಆಭಾರಿಯಾಗಿದ್ದೇವೆ, ಅವರು ತಮಗೆ ಕೊಡ ಮಾಡಿದ ಮತಗಳನ್ನೆಲ್ಲ ಲೋಕಪಕ್ಷದ ಉಮೇದವಾರನಿಗೆ ಕೊಡಬೇಕೆಂದು ಅವರು ಮತದಾರರಿಗೆ ವಿನಂತಿಸುತ್ತಾರೆ

ಸ್ಥಾನಿಕ ವೃತ್ತಾಂತ.

ಕುಮಟಾ— ಮೇಘರಾಜನು ಸಾಕು, ಸಾಕು ಹೇಳುವವರಿಗೆಲ್ಲ ಬೇಕು, ಬೇಕು ಹೇಳುವ ದುರ್ಧರ ಪ್ರಸಂಗದಲ್ಲಿ ಸಿಲುಕಿಹಾಕಿರುವನು. ಕಳೆದ ೮-೧೦ ದಿನಗಳಿಂದ ಮಳೆಯ ಮೋರೆಯೇ ಇಲ್ಲ. ಹಗಲು ಬಿಸಿಲು, ರಾತ್ರಿಗೆ ಮಂಜು. ಮೇಘರಾಜನು ಅಸ್ಪೃಶ್ಯನಾದನೆಂದು ಹಲವರ ತರ್ಕ. ರೈತರು ಚಿಂತಾಕ್ರಾಂತರಾಗಿರುವರು. ಮೂರು-ಮೂರು ಸರ್ತಿ ನೆರೆಯಿಂದ ಗದ್ದೆಗಳು ಒಳದು ಹೋದರೂ, ಸಸಿಗಳನ್ನು ಸಂಪಾದಿಸಿ, ನೆಟ್ಟಿದ್ದೆಲ್ಲ ಈಗ ಬಿಸಿಲು ತಾಪದಿಂದ ಕಂಗೆಟ್ಟಿದೆ. ಅತಿವೃಷ್ಟಿಯಲ್ಲಿ ಉತ್ಸಾಹದಿಂದ ಬೆಳೆದ ಮಕ್ಕಿ ಗದ್ದೆಗಳಲ್ಲಿ ಈಗ ಚಿನ್ನಾಗುತ್ತಲಿವೆ ಕೊಡಂದ ಗದ್ದೆಗಳು ಹೀಗೆಯೇ ಬಿಸಿಲು ಬಿದ್ದರೆ, ಸ್ವಲ್ಪ ದಿನಗಳಲ್ಲಿಯೇ ಹುಲ್ಲಾಗುವವು. ಗಝನಿಗಳು ಮೊದಲೇ ಒಳದು ಹೋಗಿವೆ ಈ ವರ್ಷದ ಕೇಳಿಯು ಮಾನವಿದು. ಮೊದಲು ಅತಿವೃಷ್ಟಿಯಿಂದ ಗೋಳು, ಈಗ ಅನಾವೃಷ್ಟಿಯಿಂದ ಗೋಳು. ಅಂತು ಗೋಳೇ ಗೋಳು! ಈ ವಾರದಲ್ಲಿ ೮-೩೯ ಸೆಂಟು, ಅಂದರೆ, ಸಾಧಾರಣ ಅರ್ಧ ಇಂಚು ಮಳೆ ಬಿತ್ತು.

ಕಾರವಾರ— ಕಳೆದ ವಾರದಲ್ಲಿ ಮೇಘರಾಜನು ಪೂರ್ಣ ವಿಶ್ರಾಂತಿ ಕೊಳ್ಳುತ್ತಿರುವನು. ಬಹಳ ದಿವಸದ್ದರಿಂದಲೋ ಏನೋ! ಸೆಕೆಯು ತಾಪ ವಿಶೇಷ

ಜಿಲ್ಹೆಯ ಕೇಂಬ್ರೆಜ್! ೨.೯.ರ ಟೌನಿನ ಮಂದಿರದಲ್ಲಿ ತಾ. ೨ನೇ ರವಿವಾರ ಸಾಯಂಕಾಲ ೫ ಘಂಟೆಗೆ ಒಂದು ಸಭೆ ಕೂಡಿತು. ಅಧ್ಯಕ್ಷಸ್ಥಾನವನ್ನು ಸರಕಾರಿ ವಕೀಲ ಮಿ| ಫುಟಿಸಡೋರವರು ಅಲಂಕರಿಸಿದ್ದರು. ಸಾಧಾರಣ ೫೦-೬೦ ಮಂದಿಗಳು ನೆರೆದಿದ್ದರು. ಮುಂಬಯಿ ಕಾಯಿದೆ ಕೌನ್ಸಿಲಿನ ಸಭಾಸದತ್ವಕ್ಕೆ ಉಮೇದವಾರರಾಗಿ ನಿಂತರ ಡಾ| ವಿಶ್ವೇಶ್ವರರಾವ ಕಲ್ಯಾಣಪೂರಕರರವರು 'ಮತದಾರರ ಕರ್ತವ್ಯ' ಎಂಬ ವಿಷಯದ ಮೇಲೆ ಉಪನ್ಯಾಸವನ್ನಿತ್ತರು. ಉಪನ್ಯಾಸವು ಕೊಂಕಣಿ ಭಾಷೆಯಲ್ಲಿ ನಡೆಯಿತು. ಅವರಿಗೆ ಹಿಂದುಸ್ಥಾನಕ್ಕೆ ಸ್ವರಾಜ್ಯ ಸಿಗಬೇಕೆಂಬ ಇಚ್ಛೆಯಿದೆ. ಈ ಇಚ್ಛೆಯು ಬೇರೆಯವರಿಗಿಂತ ಅವರಿಗೆ ಕಡಿಮೆ ಇಲ್ಲ. ಅವರು ಅಹಮದಾಬಾದದಲ್ಲಿರುವಾಗ ಪೂರ್ಣವಾಗಿ ಖಾದಿಯ ಪೋಷಾಖನ್ನು ಧರಿಸುತ್ತಿದ್ದರಂತೆ. ಈಗ ಮೈಮೇಲೆ ಖಾದೀ ಪೋಷಾಖು ಕಾಣುವ ಕಾರಣವು ಮುಪ್ಪಿನ ಕಾಲದಲ್ಲಿ, ಈ ಪ್ರಾಯದಲ್ಲಿ ಅವಶ್ಯವಿದೆಂದು. ಖಾದಿಯಿಂದ ಸ್ವರಾಜ್ಯ ಪ್ರಾಪ್ತವಾಗಲು ಸ್ವಲ್ಪ ಅನುಕೂಲವಾಗುವದೆಂದು ಅವರ ಮತ. ಆದರೆ, ಅದೊಂದನ್ನೇ ನಂಬಿಕೊಂಡಿರುವದು ಮೂಢತನವು. ಬಳಿಕ, ಅವರು ಹಿಂದುಸ್ಥಾನದಲ್ಲಿ ೧೮೫೮ನೇ ಇಸವಿಯಿಂದ ೧೯೧೯ನೇ ಇಸವಿಯ ವರೆಗೆ ಹಿಂದುಸ್ಥಾನದಲ್ಲುಂಟಾದ ರಾಜಕಾರಣದ ಜಾಗೃತಿಯ ಇತಿಹಾಸವನ್ನು ವಿವೇಚಿಸಿದರು. ಸುಧಾರಣಾ ಯೋಜನೆಯು ಸಾಕಷ್ಟಿಲ್ಲೆಂದು ಅವರ ಮತ. ಆದರೂ, ಅವುಗಳನ್ನು ನಾವು ಅನುಭವ ಪದ್ಧತಿಯಲ್ಲಿ ತರಬೇಕು. ಅಸಹಯೋಗವನ್ನು ಆಕ್ಷೇಪಿಸಿ, ಕಳೆದ ಸರತಿ ಯೋಗ್ಯ ಪ್ರತಿನಿಧಿಯನ್ನು ಕಳಿಸಿಕೊಡದಿದ್ದದ್ದು ನಮ್ಮ ತಪ್ಪು. ನಮ್ಮ ಪ್ರತಿನಿಧಿಯು ಕನಿಷ್ಠ, ಅಮ್ಯುನಿಸರ ಮೊದಲಾದ ಪ್ರಶ್ನೆಗಳಿಗಿಂತ ಜಂಗಲ ದೂರು ಮೊದಲಾದ ನಮ್ಮ ಸ್ಥಾನಿಕ ಪ್ರಶ್ನೆಗಳನ್ನೇ ವಿಚಾರಿಸಬೇಕೆಂದರು. ನನಗೆ ಆರಿಸಿಕೊಟ್ಟರೆ, ನಾವು ಹಾಗೆಯೇ ಮಾಡುವೆವೆಂದು ಅವರು ನುಡಿದರು. ಈ ಸಾರೆಯಾದರೂ, ಕೌನ್ಸಿಲಿಗೆ ಚಲೋ ಗೃಹಸ್ಥರನ್ನು ಕಳಿಸಿಕೊಡಲು ಅವರು ಆಗ್ರಹ ಮಾಡಿದರು. ಇಲ್ಲದಿದ್ದರೆ, ಜಂಗಲ ದೂರು ಪೂರ್ಣವಾಗಿ ನಮ್ಮ ವಿರುದ್ಧ ಸಿಖಾಲೆಯಾಗುವದೆಂತಲೂ ಅವರು ಸೂಚಿಸಿದರು. ನಾವು ಸುಧಾರಣಾ ಕಾಯಿದೆಯ ಮುಂಚಿನ ರಾಷ್ಟ್ರೀಯ ಸಭೆಯ ಭಕ್ತರಿರುವೆವೆಂತಲೂ, ಅಸಹಕಾರಿತೆಯು ನಮಗೆ ಮಾನ್ಯವಿಲ್ಲೆಂತಲೂ ನುಡಿದು, ಸ್ವಸ್ಥಾನಾಪನ್ನರಾದರು. ಅವರ ಭಾಷಣವಾದ ಬಳಿಕ, ಮತ್ತ್ಯಾರಿಗೂ ಮಾತಾಡಹೇಳಲಿಲ್ಲ. ಬಳಿಕ, ಡಾ| ಕಲ್ಯಾಣಪುರಕರರವರು ಶ್ರೋತೃವೃಂದಕ್ಕೆ ಪ್ರಶ್ನೆ ಕೇಳಹೇಳಿದರು. ಖಾದಿಯನ್ನು ನೀವು ಯಾಕೆ ಉಪಯೋಗಿಸುವದಿಲ್ಲವೆಂಬ ಬಗ್ಗೆ ಒಬ್ಬರು ಸಯುಕ್ತಿಕ ಕಾರಣಗಳನ್ನು ಕೊಡಹೇಳಲು, ರಾಜೇಶ್ರೀಯವರು ಈ ಕೂಡಲೇ ಅದರ ಉತ್ತರವನ್ನಿತ್ತಿದ್ದೇವೆಂದರು. ಕೌನ್ಸಿಲಿನಲ್ಲಿ ಯಾವ ಪಕ್ಷದ ಬದಿಗೆ ತಾವು ಸೇರಲಿಚ್ಛಿಸಿದ್ದೀರೆಂದು ಇನ್ನೊಬ್ಬರು ಪ್ರಶ್ನಿಸಿದರು. ಯಾವ ಪಕ್ಷಕ್ಕೆ ಸೇರಬೇಕೆಂಬ ಬಗ್ಗೆ ನಮಗೆ ಮತಸ್ವಾತಂತ್ರ್ಯವಿರಬೇಕೆಂದರು. ತಾವು ಜಂಗಲ ಪ್ರಶ್ನೆಯ ಮೇಲೆ ತಮ್ಮ ಲಕ್ಷವನ್ನೆಲ್ಲ ಕೇಂದ್ರೀಕರಿಸುವೆವೆಂತಲೂ ನುಡಿದರು. ಕೌನ್ಸಿಲಿನೊಳಗಿನ ಠರಾವುಗಳಿಂದ ಜಂಗಲ ದೂರುಗಳನ್ನು ನಿವಾರಿಸಲು ಅಸಮರ್ಥರಾದರೆ, ನೀವೇನು ಮಾಡುವಿರಿ? ಎಂದು ಮತ್ತೊಬ್ಬರ ಪ್ರಶ್ನೆ. ತಾನು ಸರಕಾರಕ್ಕೆ ಖರ್ಚಿನ ಹಣ ಮಂಜೂರು ಮಾಡಲಿಕ್ಕಿಲ್ಲ ಎಂದು ಅವರ ಉತ್ತರವಾಯಿತು. ತಿಜೋರಿಯ ಕೀಲಿಕೈಯು ನಿಮ್ಮಲ್ಲಿರದಿದ್ದರೆ, ನೀವೇನು ಮಾಡುವಿರಿ? ಎಂದು ಇನ್ನೊಬ್ಬರು ಪ್ರಶ್ನಿಸಿದರು. ಅದಕ್ಕೆ ಸಮಾಧಾನಕರ ಉತ್ತರ ಸಿಗಲಿಲ್ಲವಂತೆ! ಅಷ್ಟರಲ್ಲಿ, ಅಧ್ಯಕ್ಷರು ವಾದ ಮುಗಿಸಹೇಳಿ, ಸಭೆಯನ್ನು ವಿಸರ್ಜಿಸಿದರು.

ಮೌ| ಮಹಮ್ಮದ ಅಲ್ಲಿ.

ಯರೋಡಾ ಜೈಲಿನ ಕೀಲಿಕೈಯನ್ನು ಹುಡುಕುತ್ತಿದ್ದೇನೆ.

—o*o—

ಮೌ| ಮಹಮ್ಮದ ಅಲ್ಲಿಯವರು ಕಳೆದ ತಾ. ೨೯ನೇ ಬುಧವಾರ ಮುಂಜಾವಿಗೆ ಝಾಂಸಿಯಲ್ಲಿ ಬಿಡುಗಡೆ ಹೊಂದಿದರು. ಕೈದುಖಾನೆಯ ಹೆಬ್ಬಾಗಿಲಿನಲ್ಲಿ ಪ್ರಾಂತಿಕ ಖಿಲಾಫತ ಕಮಿಟಿಯ ಕಾರ್ಯದರ್ಶಿಗಳಾದ ಮಿ| ಅಬ್ದುಲ್ಲ ಅಹಮ್ಮದ, ಮಿ| ಹಯಾತ, ಖಿಲಾಫತ ಕಾಂಗ್ರೆಸ ಕಮಿಟಿಯ ಪ್ರಮುಖ ಸಭಾಸದ ಮೊದಲಾದ ಅನೇಕರು ಮೌ| ರವರ ಬಿಡುಗಡೆಯನ್ನು ನಿರೀಕ್ಷಿಸುತ್ತಿದ್ದರು. ಮುಂಚಿನ ದಿನ ರಾತ್ರಿಗೆ ಮೌ| ರವರು ಬಿಡುಗಡೆಹೊಂದುವವರಿದ್ದರೆಂದು ಊರಲ್ಲಿ ಸುದ್ದಿ ಹಬ್ಬಿ, ಪ್ರಚಂಡ ಜನಸ್ತೋಮವು ಇಡೀ ರಾತ್ರಿ ಕಾದುಕೊಂಡಿತ್ತು. ಬಂಧವಿಮೋಚನವಾದಕೂಡಲೆ, ಮೌ| ರವರು ಜೈಲ ಸುಪರಿಂಟೆಂಡೆಂಟರನ್ನೂ, ಇತರ ಜೈಲ ಅಧಿಕಾರಿಗಳನ್ನೂ ಆಲಿಂಗಿಸಿದರು. ಮತ್ತು ಅಂಗಳದಲ್ಲಿ ಬಂದು, ಇಸ್ಲಾಮ ಧರ್ಮವನ್ನೂ, ಭಾರತಮಾತೆಯನ್ನೂ ಸಕಲ ಗಂಡಾಂತರಗಳಿಂದ ರಕ್ಷಿಸಲು ಪರಮೇಶನಿಗೆ ಪ್ರಾರ್ಥಿಸಿದರು. ನೆರೆದ ಜನಸ್ತೋಮವೆಲ್ಲ ಆನಂದಾಶ್ರುಗಳಿಂದ ಪೂರಿತವಾಯಿತು. ಸಕಲರೂ ಮೌ| ರವರ ಪ್ರಾರ್ಥನೆಗೆ ತಲೆಬಾಗಿದರು. ಬಳಿಕ, ಮೌ| ರವರು ಶೃಂಗರಿಸಿದ ಮೋಟಾರ ಬಂಡಿಯಲ್ಲಿ ಕಾಲಿಟ್ಟರು. ಕೂಡಲೆ, ನಾಲ್ಕೂ ಬದಿಯಿಂದ 'ಅಲ್ಲಾಹೋ ಅಕಬರ', 'ಮಹಾತ್ಮಾಜೀಕೀ ಜೈ', 'ಮೌಲಾನಾ ಮಹಮ್ಮದ ಅಲ್ಲೀಕೀ ಜೈ' ಮುಂತಾದ ಜಯಘೋಷಗಳಿಂದ ಇಡೀ ವಾತಾವರಣವು ದುಮುದುಮಿಸಿತು. ಆ ಮೇಲೆ ಮೆರವಣಿಗೆಯಾಯಿತು. ಸಾಯಂಕಾಲಕ್ಕೆ ಜಾಹೀರ ಸಭೆಯಾಯಿತು. ಮೌ| ರವರು ವೀರರಸೋತ್ಪಾದಕ ಭಾಷಣವನ್ನಿತ್ತರು. ಕಾರಾಗೃಹವಿಮೋಚನದಿಂದ ತಮ್ಮ ಮೇಲಿನ ಜವಾಬದಾರಿಯು ವಿಶೇಷವಾಗಿರುವದೆಂತಲೂ, ಮಹಾತ್ಮರಂಥ ರಾಷ್ಟ್ರಸೂತ್ರಧಾರರ ಅಭಾವದಲ್ಲಿ ದೇಶ-ಧರ್ಮಗಳನ್ನು ಸಂರಕ್ಷಿಸುವ ಮಹಾಕಾರ್ಯವು ತಮ್ಮ ಮೇಲೊದಗಿದೆಂತಲೂ ಮೌ| ರವರು ನುಡಿದರು. ಶೌಕತ ಅಲ್ಲಿಯವರಿಗಿಂತ ಮಹಾತ್ಮರೇ ತಮಗೆ ವಿಶೇಷ ಪ್ರೀತಿಯವರೆಂದೂ ಅವರು ಉದ್ಗರಿಸಿದರು. ತಮಗೆ ಈಗ ಸಣ್ಣ ಕೈದುಖಾನೆಯೊಳಗಿಂದ ದೊಡ್ಡ ಕೈದುಖಾನೆಯಲ್ಲಿ ಬಂದಂತೆ ಭಾಸವಾಗುತ್ತದೆಂದರು. ಹಿಂದುಸ್ಥಾನದ ಆತ್ಮವನ್ನು ಬಂಧಿಸಿದ ಯರೋಡಾ ಜೈಲನ್ನು ತೆರೆಯುವದಕ್ಕಾಗಿ ಸ್ವರಾಜ್ಯ ಕೀಲಿಕೈಯನ್ನು ಸಂಪಾದಿಸುವದು ತಮ್ಮ ಪ್ರಥಮ ಕರ್ತವ್ಯವೆಂತಲೂ ಅವರು ನುಡಿದರು. ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯ ಪ್ರತಿಯೊಬ್ಬ ಸಭಾಸದರು ರಾಷ್ಟ್ರವಿಮೋಚನೆಗಾಗಿ ಆತ್ಮಾರ್ಪಣೆ ಮಾಡಲು ಸಹ ತಯಾರಿದ್ದಾರೆಂಬ ಪ್ರತಿಜ್ಞಾಪತ್ರಕವನ್ನು ಬರಕೊಡುವಂತೆ ಜಾದಾ ರಾಷ್ಟ್ರೀಯ ಸಭೆಯಲ್ಲಿ ತಾವು ಪರಿಶ್ರಮ ಮಾಡುವೆವಾಗಿ ಮೌ| ರವರು ನುಡಿದರು. ತುರ್ಕಸ್ಥಾನದ ವಿಜಯದಿಂದ ತಕ್ಕ ಬೋಧ ಪಡೆದು, ಹಿಂದುಸ್ಥಾನವು ಒಕ್ಕಟ್ಟಾಗಿ, ಒಮ್ಮನಸ್ಸಿನಿಂದ ಸ್ವರಾಜ್ಯ ಸಾಧನೆಗಾಗಿ ಬೇಕಾದ ಸ್ವಾರ್ಥತ್ಯಾಗ ಮಾಡಲು ಸಿದ್ಧವಿರಬೇಕೆಂದು ನುಡಿದ ಬಳಿಕ, ಸಭೆಯು ವಿಸರ್ಜನವಾಯಿತು. ಮೌಲಾನಾರವರು ಮಾರನೇ ದಿನವೇ ದಿಲ್ಲಿಗೆ ಹೋಗಿ, ಹಕೀಮ ಅಜಮುಲಖಾನ, ಡಾ| ಅನ್‌ಸಾರಿ, ಕಿಚಲೂ ಮೊದಲಾದ ಮುಂದಾಳುಗಳಿಗೆ ಭೆಟ್ಟಿಯನ್ನಿತ್ತರು. 'ಎಸೋಸಿಯೇಟೆಡ್ ಪ್ರೆಸ್ಸಿ'ನ ಬಾತ್ಮೀದಾರರು ಮೌ| ರವರ ಮುಲಾಖತನ್ನು ಪಡೆದರು. ತಾವು ಅಹಿಂಸಾ ಪ್ರಧಾನ ಅಸಹಕಾರಿತೆಯ ಪುರಸ್ಕರ್ತರು ಎಂದಿನಂತೆ ಇರುವೆವೆಂತಲೂ, ಹಿಂದೂ—ಮುಸಲ್ಮಾನರ ಐಕ್ಯಕ್ಕಾಗಿ ತಾವು ದುಡಿಯುವೆವೆಂತಲೂ ನುಡಿದರು. ಮೌ| ರವರಿಗೆ ಅಲಿಘರ, ಅಲಹಾಬಾದ ಮ್ಯುನಿಸಿಪಲ್ ಕಮಿಟಿಗಳಲ್ಲಿ ಮಾನಪತ್ರ ಕೊಡುವ ಠರಾವಾಗಿದೆ. ಝಾಂಸಿ ಮ್ಯುನಿಸಿಪಾಲಿಟಿಯೂ ಇದೇ ಪ್ರಕಾರದ ಠರಾವನ್ನು ಮಂಜೂರ ಮಾಡಿರುವದು. ಲಾಹೋರ ಮ್ಯುನಿಸಿಪಲ್ ಕಮಿಟಿಯಲ್ಲಿ ಮೌ| ರವರನ್ನು ಪಂಜಾಬಿಗೂ, ಲಾಹೋರಿಗೂ ಕರತರಬೇಕೆಂತಲೂ, ಲಾಹೋರ ಮ್ಯುನಿಸಿಪಾಲಿಟಿಯವರು ಮಾನಪತ್ರ ಕೊಡಬೇಕೆಂತಲೂ ನಿರ್ಣಯಿಸಿ, ಆ ಬಗ್ಗೆ ೩,೦೦೦ ರೂಪಾಯಿಗಳನ್ನು ಮಂಜೂರ ಮಾಡಬೇಕೆಂತಲೂ ಮಹಮ್ಮದೀಯ ಸಭಾಸದರೊಬ್ಬರು ಠರಾವು ಸೂಚಿಸುವವರಿದ್ದಾರೆ.

ಯುದ್ಧವಾಗುವದೇನು?

ಇಟಾಲಿ ಗ್ರೀಕರೊಳಗಿನ ಕಲಹ.

ಯುರೋಪಿಯನ್ ರಾಜಕಾರಣದಲ್ಲಿ ಹೊಸದೊಂದು ಭೂತವಬ್ಬಿದೆ. ಕಳೆದ ತಾರೀಖು ೨೮ನೇ ಸುಮಾರಿಗೆ ಆಲ್ಬೇನಿಯದೊಳಗಿನ ಇಟಾಲಿ ದೇಶದ ರಾಯಭಾರಿಗಳನ್ನು ಗ್ರೀಕರು ದಟ್ಟ ಕಾಡಿನೊಳಗಿಂದ ಪ್ರವಾಸಮಾಡುವಾಗ ಅವರನ್ನು ಕೊಂದು, ಹಾಕಿದರು. ಇದು ರಾಜಕೀಯ ಕೊಲೆಯೆಂದು ತಿಳಿದು, ಇಟಾಲಿಯ ಮಂತ್ರಿಗಳಾದ ಸಾಯುನರ ಮುಸೊಲಿನಿಯವರು ಈ ಬಗ್ಗೆ ಇಟಾಲಿ ರಾಷ್ಟ್ರವು ಕ್ಷಮಿಸಬೇಕಾದರೆ, ಗ್ರೀಸ ದೇಶವು ಇಟಾಲಿ ರಾಷ್ಟ್ರಧ್ವಜಕ್ಕೆ ಮಾನವನ್ನೀಯುವದಲ್ಲದೆ ಅದನ್ನು ಗ್ರೀಕ ಹಡಗಗಳ ಮೇಲೆ ಹಚ್ಚಬೇಕೆಂತಲೂ, ೫ ಕೋಟಿ ಲಾಯರ ನಾಣ್ಯವನ್ನು ಲುಕ್ಸಾನುಭರಪಾಯಿಗಾಗಿ ಕೊಡಬೇಕೆಂತಲೂ, ಮುಂತಾದ ಶರ್ತುಗಳನ್ನು ಹಾಕಿ, ಗ್ರೀಕರಿಗೆ ತಿಳಿಸಿದರು. ಗ್ರೀಕರು ಕೊಟ್ಟ ಉತ್ತರವು ಸರಿಯಿಲ್ಲವೆಂದು ನಿರ್ಣಯಿಸಿ, ಇಟಾಲಿಯವರು ಗ್ರೀಸ ದೇಶದೊಳಗಿನ ಕೊರಫ್ಯೂ, ಪೆಕ್ಸೊಸ ಪಟ್ಟಣಗಳಿಗೆ ಸೈನ್ಯ ಕಳುಹಿಸಿ, ಪಟ್ಟಣಗಳ ಮೇಲೆ ಗುಂಡು ಹಾರಿಸಿ, ಅವುಗಳನ್ನು ಹಸ್ತಗತ ಮಾಡಿಕೊಂಡಿರುವರು. ಗ್ರೀಕರು ರಾಷ್ಟ್ರಸಂಘಕ್ಕೆ ಈ ಬಗ್ಗೆ ಬಿನ್ನೈಸಿಕೊಂಡರು. ರಾಷ್ಟ್ರಸಂಘವು ಇಟಾಲಿಯ ಧೋರಣದ ಮೇಲಿಂದ ನೋಡಿದರೆ, ಅದು ಯುದ್ಧಕ್ಕೆ ಪ್ರವೃತ್ತವಾಗಿದೆಂದು ತನಗೆ ತೋರುವದಿಲ್ಲವೆಂದು ಠರಾ ಹೊಡೆದು, ತಟಸ್ಥವೃತ್ತಿಯನ್ನು ಸ್ವೀಕರಿಸಿದೆ. ರಾಷ್ಟ್ರಸಂಘಕ್ಕೆ ಇಲ್ಲಿ ಕೈ ಹಾಕುವ ಅಧಿಕಾರವಿಲ್ಲೆಂದು ಇಟಾಲಿಯವರ ಹೇಳಿಕೆ. ಲಂಡನಿನಲ್ಲಿ ಈ ಬಗ್ಗೆ ಗಡಬಡಿಯುಂಟಾಗಿದೆ. ರಾಷ್ಟ್ರಸಂಘವು ಈ ಪ್ರಶ್ನೆಯನ್ನು ನಿರ್ಣಯಿಸಬೇಕೆಂದು ಅವರ ಮತ. ಲೌಸೇನ ತಹದಿಂದ ಬಾಲ್ಕನ್ ಪ್ರದೇಶದೊಳಗಿನ ಸಣ್ಣಪುಟ್ಟ ರಾಷ್ಟ್ರಗಳು ಇನ್ನೂ ಸಮಾಧಾನಪಡೆಯುತ್ತಿರುವಾಗ, ಈ ಹೊಸ ಬೆಂಕಿಯು ಅಲ್ಲಲ್ಲಿ ಪಸರಿಸಿ, ಕಳೆದ ಯುದ್ಧದಂತೆ ಬಾಲ್ಕನ್ ಪ್ರದೇಶದೊಳಗಿನ ಜ್ವಾಲೆಗಳಿಂದಲೇ ಪುನಃ ಜಗತ್ತು ಮಹಾ ಯುದ್ಧದಲ್ಲಿ ಸಿಲುಕಿಕೊಳ್ಳಬಹುದೆಂತಲೂ ಬ್ರಿಟಿಶರ ಅಂಜಿಕೆ. ಇಷ್ಟ.

☞ ಈಹೊತ್ತಿನ ಪುರವಣಿ ನೋಡಿರಿ.

ಜಪಾನದಲ್ಲಿ ಅದ್ಭುತ ಅಗ್ನಿ.

ಕಳೆದ ಶುಕ್ರವಾರ ತಾ. ೩೧ನೇಗೆ ಜಪಾನದಲ್ಲಿ ಭೂಕಂಪವಾಗಿ, ಮುಖ್ಯ ಪಟ್ಟಣಗಳಾದ ಟೋಕಿಯೋ ಹಾಗು ಯೋಕೋಹಾಮಾಗಳು ಜ್ವಾಲಾಗ್ರಸ್ತವಾಗಿವೆ. ಅಲ್ಲಿಯ ತಂತಿ, ರೇಲ್ವೆ ಮೊದಲಾದವುಗಳೆಲ್ಲ ೧೦೦ ಮೈಲು ಅಚೆ-ಈಚೆ ಮುರಿದು ಹೋಗಿವೆ. ಟೋಕಿಯೋ ಪಟ್ಟಣಾಭಿಮುಖವಾಗಿ ಓಡುತ್ತಿದ್ದ ಉಗಿಬಂಡಿಗಳೆಲ್ಲ ನುಚ್ಚುನೂರಾಗಿವೆ. ಸುದ್ದಿ ಬರುವ ಸಾಧನಗಳೇ ಕೆಟ್ಟಿದ್ದರಿಂದ, ಅಲ್ಲಿ ಒದಗಿದ ಅನರ್ಥಗಳ ಅಂದಾಜು ಸಹ ವ್ಯಕ್ತಪಡಿಸುವದು ಕಠಿಣ. ಪಟ್ಟಣಗಳು ಅಗ್ನಿನಾರಾಯಣನ ವಶವಾಗಿರುವಾಗ, ಜಲಾಶಯದ ನಳಗಳೆಲ್ಲ ಕಟ್ಟಿ ಹೋಗಿವೆ. ಹೀಗಾಗಿ, ಜ್ವಾಲೆಗಳನ್ನು ನಂದಿಸಲು ಸಹ ಅವಕಾಶವಿಲ್ಲ. ಟೋಕಿಯೋದೊಳಗಿನ ಅರಮನೆಯಿದ್ದು ಸಹ ಅಗ್ನಿನಾರಾಯಣನಿಗೆ ತುತ್ತಾಯಿತು. ಆದರೆ, ಅರಮನೆಯೊಳಗಿನ ಜನರೆಲ್ಲ ಸುರಕ್ಷಿತರಿರುವರೆಂದು ಸುದ್ದಿ. ಟೋಕಿಯೋ ಪಟ್ಟಣದೊಳಗಿನ ಬೀದಿಗಳೆಲ್ಲ ಹೆಣಗಳಿಂದ ತುಂಬಿವೆ. ಅಸಕಾಸ ಎಂಬ ಗೋಪುರವು ಮುರಕೊಂಡು ಬಿತ್ತು. ಕೂಡಲೇ ೭೦೦ ಮಂದಿಗಳು ಅದರ ಬುಡಕ್ಕಾಗಿ ನಿಧನ ಹೊಂದಿದರು. ಯೋಕೋಹಾಮಾ ಪಟ್ಟಣದಲ್ಲಿ ಇನ್ನೊಂದು ನಮೂನೆಯಾಗಿದೆ. ಪಟ್ಟಣಕ್ಕೆ ಬೆಂಕಿ ಬಿತ್ತೆಂದು ಜನರು ದೋಣಿಗಳನ್ನು ಆಶ್ರಯಿಸಿದರು. ಅಲ್ಲಿ ತುಫಾನು ಎದ್ದು, ಬೋಟಿ, ದೋಣಿಗಳೆಲ್ಲ ಜಲಸಮಾಧಿ ಹೊಂದಿದವು. ಹೀಗೆ ಜಪಾನದೊಳಗಿನ ಟೋಕಿಯೋ, ಯೋಕೋಹಾಮಾ ಮುಖ್ಯ ಪಟ್ಟಣಗಳು ವಿಪರೀತ ಕಾಲಚಕ್ರದಲ್ಲಿ ಸಿಲುಕಿಕೊಂಡಿವೆ.

ವೃತ್ತಸಾರ.

— ಪೆ॥ ಮಹಮ್ಮದ ಅಲ್ಲಿಯವರು ಕರ್ನಾಟಕಕ್ಕೆ ಸಧ್ಯಕ್ಕೆ ಬರುವವರಿದ್ದಾರೆಂದು ಧಾರವಾಡದ “ಕರ್ಮವೀರ” ಪತ್ರಿಕೆಯು ಪ್ರಕಟಿಸಿದೆ.

— ಕೆನಿಯಾ ನಿರ್ಣಯದ ಬಗ್ಗೆ ನಿಷೇಧನೆಂದು ಮದ್ರಾಸ ಮ್ಯುನಿಸಿಪಾಲಿಟಿಯು ವಸಾಹತಿನಲ್ಲಿ ಜನ್ಮ ತಾಳಿದ ಗೌರಕಾಯನಿಗೆ ತಮ್ಮಲ್ಲಿ ಅಧಿಕಾರಸ್ಥಾನವನ್ನು ಇನ್ನು ಮುಂದೆ ಕೊಡಲಾಗದೆಂದೂ, ಅಥವಾ ಸವಲತ್ತುಗಳನ್ನು ಅರ್ಪಿಸಲಾಗದೆಂದೂ ಠರಾವು ಮಾಡಿದೆ.

— ಮುಂಬಯಿ ಮ್ಯುನಿಸಿಪಾಲಿಟಿಯವರು ೮ ವರುಷ ಪ್ರಾಯದಾಗಿನ ದನ-ಕರುಗಳ ವಧ ಮಾಡಲಾಗದೆಂದು ಠರಾವು ಮಾಡಿರುವರು. ಈ ಬಗ್ಗೆ ಮಹಮ್ಮದೀಯರು ಕಳೆದ ರವಿವಾರ ತಾ. ೨ನೇಗೆ ಮಿರ್ಜಾ ಅಲ್ಲಿ, ಮಹಮ್ಮದ ಖಾನರವರ ನೇತೃತ್ವದಲ್ಲಿ ಸಭೆಸೇರಿ, ನಿಷೇಧ ಪ್ರದರ್ಶಿಸಿದರು.

— ಮುಂಬಯಿಯ ಹೊಸ ಗವರ್ನರರಾದ ನೆ. ಕ. ನಾಮದಾರ ಲೆಸ್ಲೀ ವಿಲ್ಸನ್ನರವರ ಆಗಮನವಾದಾಗ, ಅವರಿಗೊಂದು ಮಾನಪತ್ರವನ್ನು ಸಮರ್ಪಿಸಬೇಕೆಂದು ಡಾ॥ ಸುಬಿಯಾರವರು ಮುಂಬಯಿ ಮ್ಯುನಿಸಿಪಾಲಿಟಿಯ ಕಳೆದ ಗುರುವಾರ ತಾ. ೩೦ನೇ ಅಧಿವೇಶನದಲ್ಲಿ ಸೂಚಿಸಿದರು. ಶ್ರೀ ವಿಠ್ಠಲಭಾಯಿ ಪಟೇಲ, ಮಿ॥ ಖುರ್ಶೇದ ನರಿಮಾನ ಮೊದಲಾದ ರಾಷ್ಟ್ರೀಯ ಪಕ್ಷದವರು ವಿರೋಧಿಸಿದರು. ಕಟ್ಟಕಡೆಗೆ, ಮತ ಕೊಳ್ಳಲು, ೪೮ ಮತ ಅನುಕೂಲ, ೩೦ ಪ್ರತಿಕೂಲ, ಹೀಗೆ ಮತಗಳು ಬಿದ್ದು, ಠರಾವು ಮಂಜೂರಾಯಿತು.

— ಜಾದು ರಾಷ್ಟ್ರೀಯ ಸಭೆಯ ಸ್ವಾಗತ ಕಮೀಟಿಯ ಕಾರ್ಯದರ್ಶಿಗಳಾದ ಬೆರಿಸ್ಟರ ಆಸಫ್ ಅಲ್ಲಿಯವರು ಅಸ್ವಸ್ಥರಾಗಿರುವರು. ವೈದ್ಯರು ಬೆಸ್ಟರ ಸಾಹೇಬರಿಗೆ ಪೂರ್ಣವಾಗಿ ವಿಶ್ರಾಂತಿ ಪಡೆಯಬೇಕೆಂದು ಆಜ್ಞಾಪಿಸಿರುವರಂತೆ.

— ವಿಲಾಯತಿಯೊಳಗಿನ “ಮಾರ್ನಿಂಗ ಪೋಸ್ಟ” ಪತ್ರಿಕೆಯು ಕೆನಿಯಾ ವಸಾಹತಿನ ನಿಷೇಧಪರ ಹರತಾಳವು ಬ್ರಿಟಿಶ ಸಾಮ್ರಾಜ್ಯ ನಾಶಕ್ಕಾಗಿ ಏರ್ಪಡಿಸಲ್ಪಟ್ಟಿದೆಂದು ಅಭಿಪ್ರಾಯಪಟ್ಟು, ನೇ॥ ನಾಮದಾರ ಶ್ರೀನಿವಾಸ ಶಾಸ್ತ್ರಿಗಳೇ ಈ ಚಳವಳಿಯ ಚಾಲಕರೆಂದೂ, ಅವರು ಈ ಚಳವಳಿಯಲ್ಲಿ ಪ್ರವೇಶಗೊಂಡದ್ದರಿಂದ, ಅವರ ನೇ॥ ನಾಮದಾರ ಪದವಿಯನ್ನು ರದ್ದುಪಡಿಸುವದು ಹಿತವೆಂದೂ ಸೂಚಿಸಿದೆ. ನಾಮದಾರರು ತಾವಾಗಿ ಪದವಿಯನ್ನು ಸಾಮ್ರಾಜ್ಯ ಸರಕಾರಕ್ಕೆ ಒಪ್ಪಿಸಿಬಿಟ್ಟರೆ, ಒಳ ಬೆದರಿಕೆಯು ತಾನಾಗಿಯೇ ದೂರವಾಗುವದು.

— ನೆರೆಯಿಂದ ಮಲಬಾರದಲ್ಲಿ ಸುಮಾರು ೬೦ ಸಾವಿರಕ್ಕೆ ಮಿಕ್ಕಿ ನಿರಾಶ್ರಿತರಾಗಿರುವರು. ಬಿಹಾರ ಪ್ರಾಂತದಲ್ಲಿಯೂ ವಿಶೇಷ ಹಾನಿಯಾಗಿದೆ. ಶಾಹಾಬಾದ ಜಿಲ್ಲೆಯಲ್ಲಿ ೩೦೦ ಚೌಕ ಮೈಲು; ಸಾರನ್ ಜಿಲ್ಲೆಯಲ್ಲಿ ೬೦೦ ಚೌಕ ಮೈಲು, ಸೋನ ನದಿಯ ಪೂರ್ವದಿಕ್ಕಿನ ಪ್ರದೇಶ; ಇವೆಲ್ಲ ಜಲಮಯವಾಗಿದ್ದವು. ಗಯಾ ಜಿಲ್ಲೆಯ ಮುಕ್ಕಾಲುಪಾಲು ಪ್ರದೇಶವು ೩-೪ ದಿವಸಗಳ ವರೆಗೆ ಆಳ ನೀರಿನಲ್ಲಿ ಮುಳುಗಿತ್ತು.

— ಲಾಹೋರ ಮ್ಯುನಿಸಿಪಲ್ ಕಮೀಟಿಯವರು ಲಾಲಾ ಲಜಪತರಾಯ ಹಾಗು ಡಾ॥ ಕಿಚಲೂರವರಿಗೆ ಸ್ವಾಗತವನ್ನಿತ್ತು, ರಾಷ್ಟ್ರಸೇವೆ ನಡಿಸುವಷ್ಟು ಲಾಲಾಜಿಯವರಿಗೆ ಆರೋಗ್ಯಪ್ರಾಪ್ತಿಯಾಗಲೆಂದು ಬಯಸಿರುವರು.

— ಕೆನಿಯಾ ನಿರ್ಣಯದ ಬಗ್ಗೆ ನಿಷೇಧವೆಂದು ಡಾ॥ ಜಮನಾದಾಸ ದ್ವಾರಕಾದಾಸರವರು ಸಾಮ್ರಾಜ್ಯ ಸರಕಾರದ ಕಮಿಟಿಗಳೊಳಗಿಂದ ತಮ್ಮ ಮೈ ತಗೆದುಕೊಂಡರು.

— ಸಂಯುಕ್ತಪ್ರಾಂತದ ನೇಮುಸ್ತರು ಪರಿಷತ್ತು ನೆರೆಯಿಸಿ, ಸರ್ ನರಸಿಂಹ ಶರ್ಮಾ, ಮಿ॥ ಶಫೀ, ಮಿ॥ ಚತ್ತರಜೀ, ಹೀಗೆ ವರಿಷ್ಠ ಕಾರ್ಯಕಾರಿ ಕೌನ್ಸಿಲಿನ ೩ ಸಭಾಸದರಿಗೆ ಕೆನಿಯಾ ನಿರ್ಣಯದ ಮೂಲಕ ತಮ್ಮ ಸಭಾಸದತ್ವಕ್ಕೆ ರಾಜೀನಾಮೆ ಕೊಡಲು ವಿಜ್ಞಾಪಿಸಿರುವರು.

— ಹಿಂದೂ ಧರ್ಮದಾನ ಕಾಯಿದೆಯಲ್ಲಿ ಸರ್ವಾಧಿಪತಿಗಳು ಕೆಲ ಸೂಚನೆಗಳನ್ನು ಸೂಚಿಸಿ, ಅವುಗಳನ್ನು ಕಾಯಿದೆಯಲ್ಲಿ ಸೇರಿಸಿದ ಹೊರತು, ಕಾಯಿದೆಗೆ ತಮ್ಮ ಸಮ್ಮತಿಯನ್ನು ಕೊಡಲಾರೆವೆಂದು ಹೇಳಿರುವರೆಂದು ಒಂದು ಸುದ್ದಿ ಎದ್ದಿದೆ.

— ಮಂಗಳೂರಿನ ಭಾರತ ಸೇವಾ ಸಮಿತಿಯವರು ನೆರೆಯ ಹಾವಳಿಯಿಂದ ಅನಾಥರಾದ ಹಿಂದೂ ಮಕ್ಕಳಿಗಾಗಿ, ‘ಹಿಂದೂ ಅನಾಥ ಬಾಲಕಾಶ್ರಮ’ವನ್ನು ತೆರೆದು, ಅದರೊಳಗೆ ವಿದ್ಯಾಭ್ಯಾಸ ಹಾಗು ಧಾರ್ಮಿಕ ಶಿಕ್ಷಣಗಳನ್ನು ಕೊಡುವ ವ್ಯವಸ್ಥೆ ಮಾಡುವವರಿದ್ದಾರೆಂಗಿ ತಿಳಿಯುತ್ತದೆ.

— ಫ್ರಾನ್ಸ ದೇಶದಲ್ಲಿ ರಿವೇರ ಎಂಬ ಮನೋಹರ ಪ್ರದೇಶವಿದೆ. ಅಲ್ಲಿ ದಾವಾನಲವೆದ್ದು, ೬೦ ಮೈಲು ಅಚೆ-ಈಚೆಗಿರುವ ಪ್ರದೇಶವೆಲ್ಲ ಸುಟ್ಟು ಬೂದಿ. ೧೫೦೦೦ ಮಂದಿಗಳು ಅನಾಥರಾದರು.

— ಆಫ್ರಿಕಾ ದೇಶವು ಸಿಂಹಗಳ ಬಗ್ಗೆ ಹೆಸರಾಗಿದ್ದು, ಮೃಗೇಂದ್ರನಿಗೆ ಯುದ್ಧ ಸಮಯದಲ್ಲಿ ಪ್ರಾಪ್ತವಾದ ಮನುಷ್ಯ ರಕ್ತದ ರುಚಿ ಹತ್ತಿತು. ಈಗ ಅವು ಗ್ರಾಮಗಳನ್ನು ಹೊಕ್ಕು ಮಾನವರನ್ನು ಕಚ್ಚಿಕೊಂಡು ಜಗಿದು ಹೋಗುತ್ತವೆ. ಇಬೋರ ಎಂಬ ಒಂದು ಜಿಲ್ಲೆಯಲ್ಲಿಯೇ ೬೩ ಮಂದಿಗಳು ಮೃಗರಾಜನಿಗೆ ತುತ್ತಾದರು. ಹಿಂಸ್ರ ಪಶುಗಳನ್ನು ಕೊಂದವರಿಗೆ ಇನಾಮು ಹಂಚುವ ವ್ಯವಸ್ಥೆಯಾಗಿದೆ. ಇಷ್ಟರಿಂದಿಗೆ ೩೦೮ ಸಿಂಹಗಳೂ, ೮೦೮ ವ್ಯಾಘ್ರಗಳೂ ಕೊಲ್ಲಲ್ಪಟ್ಟವು.

— ವರಿಷ್ಠ ಕಾರ್ಯಕಾರಿ ಕೌನ್ಸಿಲಿನ ಮೆಂಬರರಾದ ಮಿ॥ ಸಿ. ವಿ. ಇನ್ನಸರವರು ಅಸ್ವಸ್ಥತೆಯ ಮೂಲಕ ರಜೆ ಪಡೆದು, ವಿಲಾಯತಿಯಲ್ಲಿದ್ದರು. ಈಗ ಸಾಹೇಬರು ವಾಪಸಾಗಿರುವರಂತೆ. ಆದರೂ, ರಜೆ ಮುಗಿಯುವ ವರೆಗೆ ವಿಲಾಯತಿಯೊಳಗಿನ ವಿಶ್ರಾಂತಿಯು ಅವಶ್ಯವಿರುವದರಿಂದ, ವಿಲಾಯತಿಯಲ್ಲಿ ಕೆಲಸ ಮಾಡುವಷ್ಟು ಚೈತನ್ಯವು ಪ್ರಾಪ್ತವಾದ್ದರಿಂದ, ಹಿಂದುಸ್ಥಾನ ಸರಕಾರವು ಅವರನ್ನು ಸಾಮ್ರಾಜ್ಯದ ಆರ್ಥಿಕ ಪರಿಷತ್ತಿನಲ್ಲಿ ಜೊತೆಗಾರ ಪ್ರತಿನಿಧಿಯಾಗಿ ನೇಮಿಸಿರುವರು. ಮಿತವ್ಯಯ ಮಾಡುವ ಈಗಿನ ದಿನಗಳಲ್ಲಿ, ಮಿ॥ ಪಟೇಲರು ಭಾರತ ಮಂತ್ರಿಗಳ ಬೆಂಬಲಕ್ಕಿರುವಾಗ, ಮಿ॥ ಇನ್ನಸರ ಗರಜೇನು? ವಿಶ್ರಾಂತಿ ಕಾಲದಲ್ಲಿ ಅವರೇನು ಕೆಲಸ ಮಾಡುವರು? ರಜಾ ಕಾಲದಲ್ಲಿ ಪೂರ್ಣ ಪಗಾರು ಪಡೆಯುವ ಯೋಜನೆಯೊಂದು ಕೆಲವರ ತರ್ಕ.

ಆರೋಗ್ಯಚಂದ್ರಿಕೆ.

ಈ ಪತ್ರಿಕೆಯ ಸಂಪಾದಕರು ಮದ್ರಾಸಿನ ಡಾಕ್ಟರ್ ಯು. ರಾಮರಾವ್, ಎಮ್. ಎಲ್. ಸಿ. ಯವರು. ಈ ಆರೋಗ್ಯ ಮತ್ತೂ ಚಿಕಿತ್ಸದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೂ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ

ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು ‘ಹೆಲ್ತ್’ ಎಂಬ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು.

‘ಹೆಲ್ತ್’ ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯ ನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸುವದಾಗಿ ನಿರ್ಧರಿಸಲಾಗಿದೆ. ಇದರ ಪ್ರಥಮ ಸಂಚಿಕೆಯು ಬರುವ ಆಗೋಸ್ತು ತಿಂಗಳಲ್ಲಿ ಪ್ರಕಟವಾಗುವದು.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂಪಾಯಿ ೧—೮—೦. ಬಿಡಿ ಪತ್ರಿಕೆ ಒಂದಕ್ಕೆ ೦—೨—೦.

ಇದಕ್ಕೆ ಚಂದಾದಾರರಾಗಿ ಸೇರತಕ್ಕವರ ಹೆಸರುಗಳು ಈಗಿನಿಂದಲೇ ರಿಜಿಸ್ಟರ್ ಮಾಡಲಾಗುವದು.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವದರಿಂದಲೂ ಹಣವನ್ನು ಮುಂಗಡವಾಗಿ ಕಳುಹುವದು ಲಾಭಕರ.

ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು ‘ಆರೋಗ್ಯಚಂದ್ರಿಕೆ’ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರ ವಿಳಾಸ:—

ಮೆನೇಜರ್,

‘ಹೆಲ್ತ್’ ಅಥವಾ

‘ಆರೋಗ್ಯಚಂದ್ರಿಕೆ’ ಆಫೀಸು.

೩೨೩, ತಂಬುಚೆಟ್ಟಿ ಬೀದಿ, ಮದರಾಸ್.

ಮೂರ್ತಿಗಳು ಬೇಕೋ?

ನಮ್ಮಲ್ಲಿ ಭಂಗಾರ, ಬೆಳ್ಳಿ, ಪಂಚಧಾತು, ಹಿತ್ತಾಳಿ, ತಾಮ್ರ ವ ಕರೇಶಿಲೆಯ ಮೂರ್ತಿಗಳೂ, ಇದಲ್ಲದೆ ದಾಣಪೀಠಗಳೂ, ಪ್ರಭಾವಳಿಗಳೂ, ಈಶ್ವರ ಮುಖಟಗಳೂ, ನಾಗಾಭರಣಗಳೂ, ಕವಚುಗಳೂ ವ ಯಾವದೇ ತರದ ಪ್ರತಿಮೆಗಳೂ ನಮ್ಮಲ್ಲಿ ಯೋಗ್ಯ ದರಕ್ಕೆ ವ ಯೋಗ್ಯ ಹೊತ್ತಿಗೆ ಮಾಡಿ ಕೊಡಲ್ಪಡುವವು. ಬೇಕಾದವರು ಪತ್ರವ್ಯವಹಾರ ಮಾಡಿ ಯಾ ಸಮಕ್ಷ ಬಂದು ದರವಾರ ತಿಳಕೊಳ್ಳಬಹುದು.

ಪತ್ತೆ:—ನಾರಾಯಣ ಹುವಯ್ಯಾ ಶೇಟ,

ಗುಡಗಾರ, ಗುಜರಿಗಲ್ಲಿ, ಕುಮಟಾ.

(೮ ಕಾನಡಾ)

ಕಾನಡಾ ಗೌಡಸಾರಸ್ವತ ಬ್ರಾಹ್ಮಣ ಮಂಡಳ, ಮುಂಬಯಿ.

ಯಶಸ್ವಿ ವಿದ್ಯಾರ್ಥಿಯರ ಅಭಿನಂದನ ಸಮಾರಂಭ.

ಈ ಮೊದಲು ಜಾಹೀರ ಮಾಡಿದ ಮೇರೆಗೆ, ಈ ವರ್ಷ ಯುನಿವರ್ಸಿಟಿ ಪರೀಕ್ಷೆಗಳಲ್ಲಿ ಯಶಸ್ಸನ್ನು ಪಡೆದ ಗೌ। ಸಾ। ಬ್ರಾ। ಜ್ಞಾತಿಯ ವಿದ್ಯಾರ್ಥಿಯರ ಅಭಿನಂದನಪರ ಸಮಾರಂಭವು ಕಳೆದ ತಿಂಗಳ ತಾ. ೨೬ರಲ್ಲು ಡಾ। ಬಿ। ಅನಂತ ಕೃಷ್ಣ ಪೈ ಬಿ. ಏ. ಇವರ ಅಧ್ಯಕ್ಷತೆಯಲ್ಲಿ ಗಿರಗಾಂವ ಮುನಿಸಿಪಲ ಮರಾಠೀ ಶಾಲೆಯಲ್ಲಿ ಸಾಯಂಕಾಲಕ್ಕೆ ನೆರವೇರಿಸಲ್ಪಟ್ಟಿತು. ಸಭೆಗೆ ಜ್ಞಾತಿಯ ಸ್ತ್ರೀ-ಪುರುಷರು ೫೦-೬೦ರಕ್ಕಿಂತ ಹೆಚ್ಚು ಮಂದಿ ಹಾಜರಿದ್ದರು. ಮೊದಲಿಗೆ ಸಭೆಯ ಆಮಂತ್ರಣ ಪತ್ರಿಕೆಯನ್ನು ಓದಿ ಹೇಳಿ, ಕೂಡಿದ ಜನರಿಗೆ ಆ ದಿವಸದ ಸಮಾರಂಭದ ಉದ್ದೇಶವನ್ನೂ, ಮಹತ್ವವನ್ನೂ ಸೆಕ್ರೆಟರಿಯವರು ಅರುಹಿದ ಮೇಲೆ, ಅಧ್ಯಕ್ಷರು ಶ್ರೀಯುತ ಬಂಟವಾಳ ವಸಂತ ವರ್ಟಿ, ಎಮ್. ಏ. ಇವರಿಗೆ ಹಾಜರಿದ್ದ ವಿದ್ಯಾರ್ಥಿಯರನ್ನುದ್ದೇಶಿಸಿ, ನಾಲ್ಕು ಉಪದೇಶದ ಸಂಗತಿಗಳನ್ನು ಹೇಳುವರೆ ವಿನಂತಿ ಮಾಡಿದ ಮೇರೆಗೆ, ಶ್ರೀ ವರ್ಟಿಯವರು ತಮ್ಮ ವಿದ್ವತ್ತಾಪ್ರಚುರ ಭಾಷಣದಲ್ಲಿ ಸದ್ಯದ ಕಾಲಮಾನಕ್ಕನುಸರಿಸಿ, ವಿದ್ಯಾರ್ಥಿಯರು ತಮ್ಮ ಮುಂದೆ ಯಾವ ಉಚ್ಚ ಧ್ಯೇಯಗಳನ್ನು ಇಡುವದು ಯುಕ್ತವೆಂತಲೂ, ಸ್ವಾರ್ಥ ಮತ್ತು ಪರಾರ್ಥ ಇವೆರಡನ್ನೂ ಸಾಧಿಸಿಕೊಳ್ಳುವರೇ ಅವರು ಯಾವ ಉದ್ಯೋಗಗಳನ್ನು ಕೈಕೊಳ್ಳಬಹುದೆಂಬದನ್ನೂ ಬಹು ವಿಶದವಾಗಿಯೂ, ಸರಸವಾಗಿಯೂ, ತಿಳಿಸಿಹೇಳಿದರು. ಪ್ರಸಂಗಕ್ಕೆ ಅನುಸಾರವಾಗಿ ಡಾ। ಭಿಕ್ಕು ಅನಂತ ಪಂಡಿತ, ಡಾ। ಮಂಗೇಶ ಮಾಧವ ಹಳದೀಪೂರ ವ ಡಾ। ಕೇ. ಜೀ. ವರ್ಟಿ ಇವರ ಭಾಷಣಗಳೂ ಆದವು. ಅವುಗಳಲ್ಲಿ ಇವರು ಪಾಸಾದ ಹಲವು ವಿದ್ಯಾರ್ಥಿಯರಲ್ಲಿ ತಮ್ಮ ಮಾಹಿತಿಯ ಮೇರೆಗೆ ಯಾವ ಯಾವ ಬಡ ಸ್ಥಿತಿಯ ವಿದ್ಯಾರ್ಥಿಯರು ಏನೇನು ಕಷ್ಟಗಳನ್ನು ಸಹಿಸಿ, ಯಶಸ್ಸನ್ನು ಸಂಪಾದಿಸಿರುವರೆಂತಲೂ, ನಮ್ಮ ಜ್ಞಾತಿಯಲ್ಲಿ ವಿದ್ಯಾಪ್ರಸಾರವು ಮತ್ತೂ ಆಗುವದು ಅವಶ್ಯ ಉಂಟೆಂತಲೂ, ಆದಕ್ಕೆ ನಮ್ಮಲ್ಲಿಯ ಧನಿಕ ಜ್ಞಾತಿ ಗೃಹಸ್ಥರು ಉದಾರ ಮನಸ್ಸಿನಿಂದ ವಿದ್ಯಾದಾನದ ಕೆಲಸಕ್ಕೆ ಮದತು ಮಾಡುವದು ಅವಶ್ಯವಿರುವದೆಂತಲೂ ಪ್ರತಿಪಾದಿಸಿದರು. ಆ ಮೇಲೆ ಅಭಿನಂದನಕ್ಕೆ ಉತ್ತರ ಕೊಟ್ಟವರಲ್ಲಿ ಡಾ। ಸುಂದರರಾವ ಪಂಡಿತ (ಇವರು ಬಿ.ಏ., ಎಲ್. ಎಲ್. ಬಿ., ಪರೀಕ್ಷೆಯಲ್ಲಿ ಈ ವರ್ಷ ಪಾಸಾಗಿರುವರು.) ವ ಕುಮಾರಿ ಸುಶೀಲಾಬಾಯಿ ಪೈ (ಮೆಟ್ರಿಕ ಪಾಸ) ಇವರು ತಮ್ಮನ್ನು ಮಂಡಳದವರು ಗೌರವಿಸಿದ ಬಗ್ಗೆ ಬಹು ಶಾಲೀನತೆಯಿಂದ ಉಪಕಾರವೆಣಿಸಿದರು.

ಇಷ್ಟಾದ ಮೇಲೆ, ಅಧ್ಯಕ್ಷರು ಸಮಾರಂಭದ ಉಪಯುಕ್ತತೆಯನ್ನೂ, ಪ್ರಚಲಿತ ಶಿಕ್ಷಣದ ಏಕಾಂಗಿತ್ವವನ್ನೂ ಸಭಿಕರ ಮನಸ್ಸಿನ ಮೇಲೆ ಬಿಂಬಿಸಿ, ಪುಸ್ತಕೀ ಜ್ಞಾನವಷ್ಟೇ ಸಂಸಾರದಲ್ಲಿ ಉಪಯೋಗಕ್ಕೆ ಬೀಳಲಿಕ್ಕಿಲ್ಲವೆಂತಲೂ, ತಮ್ಮ ದೇಶಕ್ಕೆ ವ ಸಮಾಜಕ್ಕೆ ಉಪಯುಕ್ತವಾದ ಔದ್ಯೋಗಿಕ ವ ಶಾರೀರಿಕ ಶಿಕ್ಷಣದ ಕಡೆಗೆ ನಮ್ಮೊಳಗಿನ ಅನೇಕರು ಲಕ್ಷಪೂರ್ವಕ ಕೊಡಬೇಕಾಗಿಯೂ ಸೂಚಿಸಿದರು. ಕಟ್ಟಕಡೆಗೆ, ಎಲ್ಲಾ ಪಾಸಾದ ವಿದ್ಯಾರ್ಥಿಯರಿಗೆ ಅಭಿನಂದನ ಪತ್ರಿಕೆಗಳು ಹಂಚಲ್ಪಟ್ಟಮೇಲೆ, ನೆರೆದ ಜನರ ಮನರಂಜನಾರ್ಥವಾಗಿ ಗಾಯನ ಸಮಾರಂಭವೂ ಆಯಿತು. ಫಲಾಹಾರ ವ ಕಾಫೀಪಾನವು ಕೂಡಾ ಆದಮೇಲೆ, ಸಮಾರಂಭವು ಯಶಸ್ವೀ ರೀತಿಯಿಂದ ಸಮಾಪ್ತಿ ಹೊಂದಿತು.

ವರ್ತಮಾನಸಂಗ್ರಹ.

(ವಾರ್ತಾಪ್ರಸಾರಕ ಸಂಘ, ಹುಬ್ಬಳ್ಳಿ.)

ಪುಢಾರಿಗಳ ಅಭಿನಂದನ.

ಬಂಧಮುಕ್ತರಾದ ಶ್ರೀ ಉಕ್ಕಲಜವತರಾಯ(?), ಡಾ। ಕಿಚಲು, ಮೌಲಾನಾ ಯಾಕೂಬ ಹುಸೇನ, ಶ್ರೀ ಕೌಜಲಗಿ, ಮೌಲಾನಾ ಮಹಮ್ಮದ ಅಲ್ಲಿ ಮುಂತಾದ ಸುಪ್ರಸಿದ್ಧ ಪುಢಾರಿಗಳ ಅಭಿನಂದನಾರ್ಥವಾಗಿ ತಾರೀಖು ೩೧-೮-೩೬ ನೇ ದಿವಸ ಕರ್ನಾಟಕ ಪ್ರೆಸ್ಸಿನಲ್ಲಿ ಧಾರವಾಡದ ಡೇ। ಪಾ। ಗುತ್ತಲ ಇವರ ಅಧ್ಯಕ್ಷತೆಯ ಕೆಳಗೆ ಪ್ರಚಂಡವಾದ ಜಾಹೀರ ಸಭೆಯು ಕೂಡಿತ್ತು. ಶ್ರೀ ಮುಳೇಬಿನ್ನೂರ, ಶ್ರೀ ಗುಲವಾಡಿ, ಇವರ ಸ್ಫೂರ್ತಿದಾಯಕ ಮತ್ತು ಸುಶ್ರಾವ್ಯ ವ್ಯಾಖ್ಯಾನಗಳಾಗಿ, ಮೇಲಿನ ಪುಢಾರಿಗಳ ಅಭಿನಂದನ ಠರಾವು ಸರ್ವಾನುಮತದಿಂದ ಪಾಸಾಯಿತು. ಕಡೆಗೆ, ಅಧ್ಯಕ್ಷರು ಅಸ್ಖಲಿತ ವಾಣಿಯಿಂದ ಅರ್ಧ ತಾಸಿನ ವರೆಗೆ ಸಮಯೋಚಿತ ಭಾಷಣ ಮಾಡಿ ಸಭೆಯ ಕಾರ್ಯವನ್ನು ಮುಗಿಸಿದರು.

ಉಡುಪಿ ಕಷ್ಟನಿವಾರಣ ನಿಧಿ

ಉಡುಪಿ ಕಷ್ಟನಿವಾರಣನಿಧಿಯನ್ನು ಕೂಡಿಸುವ ಕೆಲಸವು ಇನ್ನೂ ನಡೆದೇ ಇದೆ. ಇಂದಿನ ವರೆಗೆ ಅಕ್ಕಿ ಬತ್ತಗಳನ್ನು ಬಿಟ್ಟು, ೧೧೯--೧೪--೦ ರೋಖು ರೂಪಾಯಿ ಕೂಡಿವೆ.

ಅಸ್ಪೃಶ್ಯತಾನಿವಾರಣ.

ಅಸ್ಪೃಶ್ಯತಾ ನಿವಾರಣಾರ್ಥವಾಗಿ, ವಿದ್ಯಾರ್ಥಿಗಳು ಮಾಡತಕ್ಕ ಕರ್ತವ್ಯವಾವುದೆಂಬುದನ್ನು ಚರ್ಚಿಸಲಿಕ್ಕಾಗಿ, ಇಲ್ಲಿಯ ನ್ಯೂ ಇಂಗ್ಲೀಷ ಸ್ಕೂಲ ಮತ್ತು ಲ್ಯಾಮಿಂಗ್ಟನ್ ಹಾಯಸ್ಕೂಲ ವಿದ್ಯಾರ್ಥಿಗಳ ಸಭೆಯು ತಾರೀಖು ೩೦-೮-೩೬ನೇ ದಿವಸ ಕರ್ನಾಟಕ ಪ್ರೆಸ್ಸಿನಲ್ಲಿ ಕೂಡಿತ್ತು. ಶ್ರೀ ಮುಳೇಬಿನ್ನೂರ, ಶ್ರೀ ಐತಾಳ(?) ಇವರ ವ್ಯಾಖ್ಯಾನಗಳಾದವು. ಸಭೆಗೆ ಪ್ರೊ। ಗೋಕುಲೆಯವರೂ ಬಂದಿದ್ದರು.

ಮುರಗೋಡ.

ಕೆನಿಯಾ ಪ್ರಶ್ನದ ಸಂಬಂಧಿ ನಿಷೇಧಪ್ರದರ್ಶನ ಮಾಡಲಿಕ್ಕೆ ತಾ. ೨೭ನೇ ಆಗಸ್ಟ ದಿವಸ ಮುರಗೋಡದಲ್ಲಿ ಶ್ರೀ ಶಿವಬಸಪ್ಪಾ ಅಣ್ಣಾ ಇವರ ಅಧ್ಯಕ್ಷತೆಯ ಕೆಳಗೆ ಜಾಹೀರ ಸಭೆಯಾಯಿತು. ಊರಲ್ಲಿಯ ಹರತಾಳ ಸಾದರೂ ಪ್ರೇಕ್ಷಣೀಯವಾಗಿತ್ತು.

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೇಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ. ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೊ, ಫೋರ್ಟ,
ಮುಂಬಯಿ.

ಮನೆ ಕಟ್ಟುವವರಿಗೆ ಸುಸಂಧಿಯು.







ಮೇಲಂತಸ್ತಿಗೆ ಶೋಭೆ ಬರುವದಕ್ಕೆ ನಾನಾ ತರ ನಕ್ಷೀ ಕೊರೆಯಲ್ಪಟ್ಟ ಬೀಡಿನ ಕಟಾಂಜನಗಳೂ, ಹೂದೋಟ, ಬಳಂಗಳ, ಉಪ್ಪರಿಗೆ, ದಿವಾನಖಾನೆ ಮೊದಲಾದ ಸ್ಥಳಗಳಲ್ಲಿ ವಿಶ್ರಾಂತಿಗೊಳ್ಳುವದಕ್ಕೆ ತಕ್ಕ ಬಾಕುಗಳೂ ಕಿರ್ಲೋಸ್ಕರ ಕಾರಖಾನೆಯಲ್ಲಿ ಸೌಕರ್ಯದಿಂದ ದೊರೆಯುತ್ತವೆ. ಪತ್ರ ಬರೆದು 'ಚಿ' ಕ್ಯಾಟಲಾಗು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ.)

ಲೋಕಾನುಕೂಲತೆಯಾಗಬೇಕೆಂದು, लोकानुकूलता व्हावी म्हणून,

ನಮ್ಮ 'ಸ್ಟಾರ ಆಫ್ ಕೆನರಾ' ಮುದ್ರಣಾಲಯದಲ್ಲಿ

आमच्या 'स्टॉर ऑफ केनरा' मुद्रणालयांत

ನವೀನ ವ್ಯವಸ್ಥಾ !! ಹೊಸ ಏರ್ಪಾಟು !! नवीन व्यवस्था !!

'STAR OF KANARA' PRESS, KUMTA.

ನಮ್ಮ ಮುದ್ರಣಾಲಯದಲ್ಲಿ ಲೋಕಾನುಕೂಲತೆಗಾಗಿ ಮಾಡಿದ ಹೊಸ ಏರ್ಪಾಟುಗಳ ವಿವರ:—

ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಗಳಲ್ಲಿ

೧. ಮನೋಹರ ಮುದ್ರಣ. ೨. ಸಕಾಲ ಮುದ್ರಣ. ೩. ಸುಲಭ ದರ.

ಸಂಕ್ಷೇಪತಃ ಹೇಳಬೇಕಾದರೆ:—

"ಅಗ್ಗ ಅಚ್ಚು! ಅಂದ ಅಚ್ಚು!! ಅಚ್ಚ ಅಚ್ಚು!!!

ತರತರದ ಬಣ್ಣಗಳಿಂದ ಸುಶೋಭಿತವಾಗಿ ಮುದ್ರಣ ಮಾಡಿಕೊಡುವದಲ್ಲದೆ, ಫೋಟೋ-ಬ್ಲೋಕುಗಳನ್ನೂ ಮುದ್ರಿಸುವ ಏರ್ಪಾಟು ಮಾಡಲಾಗಿದೆ.

ಜರೂರಾಯಿತಿ ಜನರಿಗಾಗಿ—

ಬೇಕಾದ ಛಾಪೆ ಕೆಲಸದ ನಮೂನೆಯನ್ನು ಟಪಾಲದ್ವಾರಾ ಎಡ್ವಾನ್ಸ ಸಹಿತ ಕಳಿಸಿದ್ದಲ್ಲಿ, ಯಥಾಪ್ರತಿ ಮುದ್ರಣ ಮಾಡಿ ೧-೨ ದಿವಸಗಳಲ್ಲಿಯೇ ವ್ಹಿ. ಪಿ. ಯಿಂದ ಕಳಿಸುವ ವ್ಯವಸ್ಥೆಯೂ ಮಾಡಲ್ಪಟ್ಟಿದೆ. ಬ್ಯಾಂಡಿಂಗ ಕೆಲಸವೂ ಅಚ್ಚುಕಟ್ಟಾಗಿ ಮಾಡಿ ಕೊಡಲ್ಪಡುವದು. ಒಮ್ಮೆ ಆರ್ಡರು ಕಳುಹಿಸಿ, ನೋಡಬಹುದಲ್ಲವೇ?

ಇದಲ್ಲದೆ, ನಮ್ಮಲ್ಲಿ ಗ್ರಂಥ, ಪುಸ್ತಕ, ಮಾಸಪತ್ರಿಕೆ, ಪಂಚಾಂಗ ಮುಂತಾದ ವಿವಿಧ ಮುದ್ರಣ ಕೆಲಸವು ಸುಲಭ ದರದಿಂದ, ತಕ್ಕ ಹೊತ್ತಿಗೆ ತಯಾರಿಸಿ ಕೊಡಲ್ಪಡುವದು.

ಮಾರಾಟಕ್ಕೆ ಸಿದ್ಧ.

ಕೋರ್ಟು ಕಚೇರಿಗಳಲ್ಲಿ ವಕೀಲರಿಗೆ ಬೇಕಾಗುವ ವಖಾಲತ ಅಮುಲಜಾರಿ, ಸಾಕ್ಷಿಪಟ್ಟಿ, ಯಾದಿ, ನಕಲು ಅರ್ಜಿ, ಐನ್ಸೈವಜು ಪರತ ಬೇಡುವ ಅರ್ಜಿ, ಜ್ಯಾಹಿರಿ ಮುಂತಾದ ಎಲ್ಲ ತರದ ಫಾರ್ಮುಗಳೂ, ಶಿಪ್ಪಿಂಗ ಬೀಲು, ಸತಮಿ, ಬಿಲ್ ಆಫ್ ಎಂಟ್ರಿ ಮೊದಲಾದ ಕಸ್ಟಮ್ ಫಾರ್ಮುಗಳೂ ಮಾರಾಟಕ್ಕೆ ದೊರೆಯುತ್ತವೆ.

ವಿಶೇಷ ಮಾಹಿತಿ ಪತ್ರದ್ವಾರಾ ಯಾ ಪೊಕ್ತಾ.

ಪತ್ತೆ:— ಕೃಷ್ಣರಾವ ಕೇಶವ ಶೇಣವಿ, ಹೆಗಡೇಕರ,
ಮಾಲಕ,
'ಸ್ಟಾರ ಆಫ್ ಕೆನರಾ' ಪ್ರೆಸ್, ಕುಮಟಾ.
(ಉ. ಕಾನಡಾ.)

Printed and Published by Krishnarao Keshav Shenvi (Editor) at his Star of Kanara Press, Kumta

Reg. No. B 4270 | Thursday, 13th Septembre 1923

ವರ್ಷ ೭. | ಸಂಚಿಕೆ ೪೮.

ಕಾನಡಾವೃತ್ತ.

THE KANARA NEWS.

ಪತ್ರದ ವರ್ಗಣೆ —
ಕುಮಟೆಯಲ್ಲಿ ಅಗಾವು ರೂಪಾಯಿ 2-4-0,
ಪ್ರನೆಯಾಡ್ರೆಸಿಯಿಂದ ರೂ. 3-0-0
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.
ಒಂದು ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಮ್ಯಾಟ ಟೈಪಿನ (೧೫ ಎಮ್ ಹಾಡ್ದ) ೫ ಸಾಲುಗಳ ವರೆಗೆ ರೂ. 1-0-0 ಅನಂತರ ಪ್ರತಿ ಸಾಲಿಗೆ 0-2-0. ಹೆಚ್ಚಿಗೆ ಸಾಲು ಎಷ್ಟು ಹೊಂದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖ ೧೩ ಮಾಹೆ ಸಪ್ಟಂಬರ ಸನ್ ೧೯೨೩ ನೇ ಇಸವಿ.)—

हिंदुस्थानातील राहणाऱ्यास ज्याप्रमाणे हिंदुस्थानची हवा त्याप्रमाणेंच हें औषध हिंदुस्थानांतील लोकास ज्यास्त फायदेशीर आहे.

द्राक्षासव – { दीड रत्तलची किंमत २ रुपये;

रामबाण औषधें —

सर्दी घालविणारें,
मूळव्याध घालविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

—— पिण्यास रुचिकर.

कॅटलॉग मागवा,

झंडु फार्मास्युटिकल वर्क्स लिमिटेड,
मुंबई नं. १३

GLAXO:- FRESH STOCK. NEW BRAND. *a food for infants and invalids.*

Kalmegh :- *Well-tried remedy in Liver complaints especially of children.*

Syrup of Vasaka :- *Highly efficacious in cold, cough, crough and bronchitis.*

Besides we have in stock other patent medicines, Thermometres, Glycerine Syringes etc.,

Orders will be executed by V. P. P.

The New Emporium
Honavar. (N. Kanara.)

ಡಾ॥ ಮಾಸೂರಕರರ

ಸುಧಾಂಜನ.

ಅಂಜನಗಳಿಗೆಲ್ಲ ಅರಸು.

ತಲೆಶೂಲಿ, ವಾತ ವೇದನೆ, ಕೆಮ್ಮು, ಹಲ್ಲು ನೋವು ಇತ್ಯಾದಿಗಳಿಗೆ ಕ್ಷಿಪ್ರ ಗುಣಕಾರಿ ಮದ್ದು. ಬೆಲೆ ೭ ಆಣೆ ಮಾತ್ರ. ವ್ಯಾಪಾರಿಗಳಿಗೆ ವಿಶೇಷ ಸವಲತು. ಹೆಚ್ಚಿನ ಮಾಹಿತಿ ಏಜಂಟರಿಂದ.

ಏಜಂಟ್ಸ್:— **ನಾಗರ್ಕಟ್ಟಿ ಬ್ರದರ್ಸ್,**
ಸುಧಾಂಜನ ಡಿಪೋ,
ಕುಮಟಾ. (ಜಿಲ್ಲಾ ಕಾರವಾರ.)

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ವಿಷಯಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ.

ಈ ವರೆಗೆ ಪ್ರಕಟವಾದ ಪುಸ್ತಕಗಳು.

(೧-೨) ಗ್ರೀಸ ದೇಶದ ಗಾಂಧಿ. (ಸಾಕ್ರೆಟೀಸ) (೩) ಸ್ವಾತಂತ್ರ್ಯಸಾಧನೆ. (೪) ಗುರು-ಹಿರಿಯರೂ, ಬಂಧು-ಭಗಿನಿಯರೂ. (೫) ರಾಷ್ಟ್ರೀಯ ಶಿಕ್ಷಣ. (೬) ಸದ್ಗುಣಮಂದಿರ. (ಭಾಗ ೧.) (೭) ಸ್ವರಾಜ್ಯ ಧರ್ಮ. (ಇನಾಮಿನ ಪುಸ್ತಕ) ಇವಿಷ್ಟು ಪ್ರಕಟವಾಗಿದ್ದು, ೫ ಆಣೆಗೆ ಒಂದರಂತೆ ದೊರೆಯುತ್ತವೆ. ವರ್ಗಣೇದಾರರಿಗೆ ಹಿಂದಿನ ಬೇಕಾದ ಪುಸ್ತಕಗಳು ೪ ಆಣೆಗೆ ಒಂದರಂತೆ ದೊರೆಯುವವು. ೬ ಪುಸ್ತಕಗಳಿಗೆ ಕೂಡಿ ೧॥ ರೂಪಾಯಿ ಮಾತ್ರ. ಅಂಚೆವೆಚ್ಚ ಬೇರೆ. ದ್ವಿತೀಯ ವರ್ಷ ಪ್ರಾರಂಭ. ಅನುಕ್ರಮವಾಗಿ ಮಾರ್ಚ, ಮೇ, ಜುಲೈ, ಸಪ್ಟಂಬರ, ನವಂಬರ, ಜನವರಿ ೧೫ ನೇ ತಾರೀಖಿಗೆ ಒಂದೊಂದು ಪುಸ್ತಕ ಹೊರಡುವದು. ವಾ. ವ. ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ.

ವಾ. ಅ. ಹೊದ್ಕೆ,
ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ.

ಎಲ್ಲ ತರದ ಜ್ವರಗಳಮೇಲೆ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ, ಪೈತ್ಯ, ಬಂಗಲಿ, ಅಥವಾ ದೂಷಿತ ಹವೆಯಿಂದ ಬರುವ ಸಾದಾ ವಿಷಾರಿ; ಅಥವಾ ಇತರ ಜ್ವರಗಳೂ, ಇನಫ್ಲ್ಯುಎಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನ್ಯಾನದ ದುಷ್ಪರಿಣಾಮರಹಿತ ಕೇವಲ ವನಸ್ಪತಿಯ ಈ ಮದ್ದು ಸೇವಿಸಿದರೆ ಅಶಕ್ತತೆಯಾಗದೆ, ಬೆವರು ಬಂದು ಜ್ವರ ಇಳಿಯುತ್ತದೆ. ಹಾಗು ರೋಗಿಯು ತರಿತ ವಾಸಿಯಾಗುತ್ತಾನೆ.

೩ ಔಂಸ ಬಾಟ್ಲ ಕಿಂಮತ ರೂ. ೧-೦-೦.

ಇದರ ಹೊರತು ಇನ್ನೂ ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ, ಉತ್ಕೃಷ್ಟ ಪ್ರತಿಯ ಕೋಲನ ವೋಟರ, ಲವೆಂಡರ ಇತ್ಯಾದಿ ಸಾಮುಗ್ರಿಗಳು ಅಲೆಂಬಿಕದ ಕಾರಖಾನೆಯಲ್ಲಿ ತಯಾರಾಗುತ್ತವೆ. ಮಾಹಿತಿ ಕೇಟಲಾಗು ತರಿಸಿರಿ.

ಅಲೆಂಬಿಕ್ ಕೆಮಿಕಲ್ ವರ್ಕ್ಸ್,
ಕಂಪನಿ, ಲಿಮಿಟೆಡ್.
ನಂ. ೫೦, ಪ್ರಿನ್ಸೆಸ್‌ಸ್ಟ್ರೀಟ, ಮುಂಬಯಿ.

अलेंबिक केमिकल वर्क्स कं० लि०
नं. ५० प्रिन्सेस स्ट्रीट मुंबई.

ಶುದ್ಧ ಖದ್ದರ್ ರೇಶ್ಮಿ ಮಡಿಗಳು.

ಸುಲಭ ಕ್ರಯಕ್ಕೆ ಖಾತ್ರಿಯಾದ ಎಲ್ಲಾ ರಂಗುಗಳಲ್ಲಿಯೂ ಈ ಕೆಳಗೆ ಬರೆದ ಕ್ರಯಕ್ಕೆ ದೊರೆಯುವವು.

೧೮ ಮೊಳ	ಉದ್ದ	೨॥	ಅಗಲ	ರೂ.	೨೩	ರಿಂದ	೨೫	ವರೆಗೆ	
೧೬	,,	,,	೨॥	,,	,,	೨೦	—	೩೦	,,
೮	,,	,,	೨॥	,,	,,	೯	—	೧೫	,,
೬	,,	,,	೨॥	,,	,,	೭	—	೧೧	,,


S.U.N. & CO.
BENARES CITY.

ಅಂಗಿ ಬಟ್ಟೆಗಳು ೧೮ ಮೊಳ × ೨ ಮೊಳ ರೂಪಾಯಿ ೧೮ ರಿಂದ ೩೦ ವರೆಗೆ. ಶೇಲು ೧೨ ಮೊಳ × ೧॥ ಮೊಳ ಅಗಲ ರೂಪಾಯಿ ೧೦ ರಿಂದ ೧೫ ವರೆಗೆ. ಜೇನ್‌ಕಾನ್ ೧೪ ಮೊಳ × ೨ ಮೊಳ ರೂ. ೨೪ ರಿಂದ ೩೫ ವರೆಗೆ. ಇವುಗಳಲ್ಲದೆ ಕಾಶೀ ಪೀತಾಂಬರ, ಕಾಶ್ಮೀರ ಶಾಲು, ರುದ್ರಾಕ್ಷಿ, ಜಾಗಂಟೆ, ತಾಳ, ಪಶ್ಮೀರ್ ದಾಸಿ, ಆಟಿದ ಸಾಮಾನುಗಳು, ದೇವರ ಮತ್ತು ಗಾಂಧಿ ಮುಂತಾದವರ ಪಟಗಳಿರುವ ಉಂಗುರಗಳ ಮತ್ತು ಇನ್ನೂ ಅನೇಕ ಸಾಮಾನುಗಳ ಕೆಟಲಾಗ್ ಇನಾಂ.

ವಿಳಾಸ:— ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. (ರಿಜಿಸ್ಟರ್ಡ

ಮೃದುವಾದ ಗುಂಗುರು ಗುಂಗುರಾಗಿರುವ ನೀಲಿಮೆಯಿಂದ ನಿಬಿಡವಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ! ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ,

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೆ ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತ್ತದೆ ಈ ಆಯಿಲ್ ತೊಡೆದುಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ತಣ್ಣಗಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ಕೂಡೆಯು ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು

ಕೀಳ ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ಕೂದಲನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ 'ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ ಸರ್ಟಿಫಿಕೇಟು ಆಫ್ ಮೆರಿಟ್ " ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗ್ರಾಹಕರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ — ಸೀಸೆಗೆ ರೂಪಾಯಿ 1 0 0 ಸೀಸೆ 3ಕ್ಕೆ ರೂಪಾಯಿ 2 10-0, ವಿಪಿ ಖರ್ಚು 0 14 0

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ ಕೋಮಲ ಚಿರಸ್ಥಾಯಿ ಮತ್ತು ಅತ್ಯುತ್ತಮವು ಚನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ಸಿದ್ಧ ಪಡಿಸಿದ್ದು ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಹೊಸ ವಾಸನೆಯು ಆವರಿಸಿದಂತಾಗುವುದು ಬೇರೆ ಯಾವ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಸುಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0, 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0 ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2 0 0 ಅಂಚೆಯ ವೆಚ್ಚ ಬೇರೆ 0-4 0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0.

Address - **The Anglo Indian Drug & Chemical Co**

16 Market, **BOMBAY. 2**

ಖರೇ ಮಾಲು ! ತಾಜಾ ಕಲ್ಮು !! ತ್ವರೆ ಗೈಯಿರಿ !

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳಸಿ, ಪುರುಷರಿಗೆ ಸ್ತ್ರೀ ವಿಷಯವಾಗಿಯೂ, ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷಯುಕ್ತ ಶಕ್ತಿಯನ್ನು ಉಂಟುಮಾಡಿ, ದಿನೇ ದಿನೇ ಶರೀರದ ಜರಠತನವನ್ನೂ ರೋಗಗಳನ್ನೂ ದೂರಪಡಿಸಿ ಆಯುರಾರೋಗ್ಯವನ್ನೂ, ರತಿಯಲ್ಲಿ ಪ್ರಗಳವಾದ ಕುತೂಹಲವನ್ನು ತೋರಿಸುವ ಕ್ರೀಡಾ ಶಕ್ತಿಯ ಉತ್ಸಾಹವನ್ನೂ ಸಂಭೋಗದಲ್ಲಿ ತೃಪ್ತಿಯನ್ನೂ ಸೌಖ್ಯವನ್ನೂ ಕೊಟ್ಟು, ಮನಸ್ಸಿನ ಧೃಢತೆಯನ್ನೂ ಯೌವ್ವನದ ಕಳೆಯನ್ನೂ ದೊರಕಿಸಿ ಮುದಿತನವನ್ನುನೀಗಿ ಬಲವನ್ನು ಉಂಟುಮಾಡುವದು ಮೃತ್ಯುವನ್ನು ನಿವಾರಿಸಿ ಬಗೆಬಗೆಯ ರೋಗಗಳನ್ನು ನಾಶಮಾಡುವದು ಜೀರ್ಣಜ್ವರ, ಮಂದಾಗ್ನಿ, ಶುಕ್ಲಸ್ರಾವ, ಅಮಕಂಪ ಇವುಗಳನ್ನು ಬಿಡದೇ ನಾಶಮಾಡುವದು ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, ದೇಶಕಾಲಗಳಿಂದಲೂ, ಅತ್ಯಾಹಾರಗಳಿಂದಲೂ, ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡಿಸುವ ಬಲತ್ಕಾರದ ಹಸ್ತಘರ್ಷಣದಿಂದಲೂ, ಅತಿವಿಷಯೋಪಭೋಗದಿಂದಲೂ, ಇಂದ್ರಿಯ ಶಿಥಿಲವೂ, ತೆಳುವೂ, ನಿಸ್ತೇಜವೂ ಆಗಿ ಯತ್ನವಿಲ್ಲದೆ ಸ್ಖಲನವಾಗುವದು ಒಂದೊಂದು ಸಲ ಮೂತ್ರದಲ್ಲಿಯೂ ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತೆ ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈಬಿಸುವು, ನಿದ್ರೆಯಲ್ಲಿ ಭೀಕರವಾದ ಸ್ವಪ್ನ, ಆಲಸ್ಯ, ಪುರುಷತ್ವ ಮತ್ತು ಶರೀರದ ಕಾಂತಿಯೂ ಮನಸ್ಸಿನ ಚೇತನ ಕುಂದಿ ಹೋಗುವದು ಇವೆಲ್ಲವುಗಳಮೇಲೆ ರಾಮಬಾಣದಂತಿರುವದು ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ ೧।' ನಂ ೧ ನಂ ೨ ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದ ಅಂತು ೬೦ಗುಳಿಗೆಗಳುಳ ಸೀಸೆಗಳಿಗೆ ರೂ ೩ ಪೋಸ್ಟೇಜ ಬೇರೆ

ಎಮ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ,

ಕರ್ಕಿ (ಕೆನರಾ)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧. ರಾಗದ ಕೈಪೆಟ್ಟಿಗೆ ಕಿಂ ೩೦, ೪೦, ೪೫, ೫೦

೨ „ ಕಾಲು ಪೆಟಿಗೆ ಕಿಂ ೬೫, ೭೫, ೧೪೦, ೧

೩ ತಬಲೆ ಜೋಡಿ ಕಿಂ ೧೩, ೧೫, ೧೮ ೨೦

೪ ಹಾರ್ಮೋನಿಯಮ ಗ್ಯಾಡ ಕಿಂ ೧।, ತಬಲೆ ಗ್ಯಾಡ ಕಿಂ ೧॥ ಆ

ವಿಶೇಷ ಮಾಹಿತಿ ಬಗ್ಗೆ ನಮ್ಮ ಕ್ಯಾಟಲಾಗ ಉಚಿತ ಕೊಡುವೆವು

ಪತ್ರವ್ಯವಹಾರ ಮರಾಠಿಯಲ್ಲಿ ಇಲ್ಲವೆ ಗ್ರಜಿಯಲ್ಲಿ ಮಾಡಬೇಕು

ಪತ್ತೆ — ಗೋಪಾಳ ಸಖಾರಾಮ ಅಂಡ ಕಂಪನಿ, ನಂ ೨

ಕಾಳಬಾದೇವಿ ರೋಡ, ಮುಂಬಂ

ಜನಿಂಗನು ಶ್ರೀಯುಕ್ತ ಕೊಡುವ ಸಂಗತಿ.

[illegible]

ಹೊನ್ನಾವರ | ಶಿವರಾಮ ರಾಮರಾವ
[illegible]) ಪ ಹೇರ್ಳೆಕರ,
ವಕೀಲ ಹೊನ್ನಾವರ

शहाण्याला मार शब्दाचा !

—※—

(१) तेव्हाच एका दोघा अनुभाविक शिक्षकाना एका शाळेच्या दोन शाळा करून कानडी शाळेस जोडू नका, ही पालिसी काही ठीक नाहीं पुढें अनेक तऱ्हेच्या अडचणी येतील तुह्मी इंग्रजी वर्गांना एकच शिक्षक नेमणार, त्यानें रजाविजा घेतली तर विद्यार्थ्यांना सदा सणवारच दोन्ही शाळेच्या अभ्यास विषयाचा विचार करा" वगैरे सांगितले होते परंतु हम करेसो कायदा समजणारे शिर्शी मुनिसिपल् कौन्सिलरनी मनात, "आह्मी वरिष्ठ, या हाताखच्या नोकराचे जर ऐकले तर आमच्या इज्जतीला धक्का पोंचेल" असें कल्पून, "हो, हो अभ्यासाची तुलना करूनच आह्मी ही सुधारणा घडवीत आहो एथल्यापेक्षा कानडी शाळेत मुलाचा अभ्यास चागला होतो रजाविजेची आधींच अटकळ (anticipate) करूच नये" असें सांगून आणि "अशी व्यवस्था केल्याने हायस्कूल उभारण्याकरिता पैशाची व जागेची बचत होते" अशा सबबी पुढे करून एकदाची इंग्रजी शाळा विभागून कानडी शाळेस जोडण्याचा अश्वमेध तर साधला आता ह्या अश्वमेधाची फलश्रुतीकरिता त्याच्याच सबबींचा विचार करूं

(२) "पैशाची बचत":— ही सबब कशी फोल ठरली या बद्दल जास्त लिहणें नको तारीख २८ ८ २२ च्या कानडावृत्तात शिर्शीच्या एका नागरिकानीं या व्यवस्थेप्रमाणे केल्यास खर्च कसा जास्त येतो हें खुलासेवार दाखविलें आहे मे डायरेक्टरानी सुद्धा या जोडलेल्या इंग्रजी वर्गास इतरे विषय शिकविण्यास थर्ड यीअर ट्रेंड शिक्षकच चागले असा अभिप्राय दिलेला आहे. असा जास्त खर्च येत असून ही व्यवस्था जेव्हा केली तव्हा यालाच इळा मोडून लिळा करणे ह्मणतात

(३) 'अभ्यास जास्त चागला होतो':— एखाद्या हमालास घरी पोंचविण्याकरिता त्याच्या शक्तीच्या मानाने दुप्पट तिप्पट बोजे देऊन धावायाला लावलें तर सामान घरी लवकर पोंचणारच पण तो हमाल ओझ्याखालीं मरणार हे लक्ष्यात घ्यायला नको का? मुलांच्या मेंदूला या व्यवस्थेनें दुप्पट तिप्पट शीण पडते हे लक्ष्यात येऊनच शिर्शी गावकऱ्यानीं मुनिसीपालिटीस चोख अर्ज केला आहे तेव्हा या सबबीनेही ही सुधारणा इष्ट नाहीं

(४) 'जागेची बचत'— ही सबब ऐकून हसावे कीं काय करावें [illegible]न नाहीं हायस्कूलास जागेची टंचाई होऊ नये ह्मणून पहिल्यादा इंग्रजी तीन वर्गांना कानडी शाळेच्या माडीवर 'उच्चस्थानीं' नेण्यात आले तेथून त्याना काही दिवस खालीं ढकलण्यात येऊन, नतर पुन्हा इंग्रजी शाळेसच त्या वर्गांना वर्ग करण्यात आले "ठिकाण नाहीं लग्नाला, कोण देईल मुलाला" हायस्कूलाकरिता जागेच्या या घडामोडींत विद्यार्थ्यांना निवळ फायदाच होत गेलेला आहे !!

(५) "रजेविजेची अटकळ करूच नये":— का करूनये? एकदा तरुण एक उचशी इमारत बांधवित होता असे समजा त्यास गवड्यानें— "महाराज, उच हवेली बाधता, पाया इतका थोडा खणलेला पुरत नाहीं, उचीच्या मानाने जास्त खणून पाया बांधून घेतला पाहिजे, या कामी पैशाकडे पाहूनका, पुढें भिंती एका बाजूला कलतील, भेगाबिगा पडल" वगैरे सांगितले व त्यावर यजमानानीं अशी पुढील अटकळ (anticipate) करूंनको ह्मणून त्याला हटकलें तर त्या यजमानाच्या चपान आतून येऊन त्याच्या थोबाड्यात देईल कोणतीही नवीन सुधारणा करताना पुढला मागला सगळा विचार नको का करायाला? आताच पहाना प्रसंग कसा आला तो! परवा इंग्लिश क्लास टीचरनें आजारामुळें तीन—चार दिवसाची रजा घेतली बदली इसम कोण नेमावयाचा हा प्रश्न उभा राहिला. तीन दिवसास सोडून तीन—चार महिन्यास सुद्धा या शिर्शीत बदली इसम मिळणे मुष्किल अखेर त्या बदली जागेनें इंग्रजी शाळेच्या ड्राइंग मास्तरास माळ घातली. खाशी व्यवस्था !! ह्या बदली मास्तराना ड्राइंग शिवाय बाकी सर्व विषया बद्दल शारदा नाटकातील जयन्ताचा षडक्षरी मंत्र (नाहीं मला काहीं येत) !!!

(६) या प्रमाणें इकडे सर्व सबबींची इतिश्री झालेली—तिकडे गावचे लोक तर पाठीस लागलेले असें झाल्यानें मेंबराची तारांबळ उडाली आहे त्याना सुद्धा समजून चुकले आहे कीं या नव्या व्यवस्थेंत "सुख पाहता जवापाडें, दुःख पर्वता एवढें" पण हट्टास पेटल्यानें उमजत नाहीं एक दोघे मेंबर तर, "आह्मी कसे वागलो तरी टीका करणे सोडीत नाहींत मग सुधारून तरी का घ्या?" असे ह्मणतात ह्मणे वाहवा! तोंड न धुतल्याने वाण कोणास येते? आतून तर खूप धादल उडाली आहे व ती धादल लपविण्याकरिताच असेल, शिक्षकमंडळींना बोलावून "तुह्मी ही गावकऱ्याच्या चळवळींत पडूनका, तुमचें बरे होणार नाहीं" अशी धमकावणी देण्यात आली आहे ते तरी का भाग घेतील? त्याना फायदा काय त्यात?

(७) मेंबरानो, असे निर्दावत चालणे बरे नव्हे लोकप्रिय व्हा, तुमच्यात व गावच्या लोकात विळा भोपळा केव्हाही इष्ट नाहीं शहाण्यास शब्दाचा मार पुरतो. फुकट हट्टास पेटून लहान अर्भकाच्या विद्येची नासाडी करण्याचे पुण्य पदरीं बाधून घेऊ नका हीं उठाठेवच नका होती त्याप तितका सताप असावयाचाच हायस्कूल करण्यात लोक विघ्ना घालतात अशी खोटी समजुत करून घेऊ नका. असलेल्या इमारतीस कळस चढविताना तिच्या पायऱ्या तोडाव्या असें काहीं नाहीं एकदा घातलेली घडी जर नीट बसविता आलीनाही तर पुन्हा ती सोडविण्यात इज्जतीला काहीं धक्का पोंचत नाहीं किंवा नाकाचा शेंडा ही तुटून पडत नाहीं उलट असलेली इज्जत सुद्धा नसल्या सारखीच, जर आपण लोकांनवळ भाडला तर न्यायाचा धारवाडी काटा सदा गावकऱ्याच्या न्याय्य पक्षाकडेच झुकणार. तुमच्या आधींच तह्नक झोनयात ह्या चळवळीने खळबळ उडू देऊनका शांत मनाने विचार करा.

शिर्शि,)
ता १९ २२.) स्पष्टवक्ता

ಮೂರ್ತಿಗಳು ಬೇಕೋ?
ನಮ್ಮಲ್ಲಿ ಭಂಗಾರ, ಬೆಳ್ಳಿ, ಪಂಚಧಾತು, ಹಿತ್ತಾಳಿ, ಕಾಮ್ಯ, ವ ಕರೇಶಿಲೆಯ ಮೂರ್ತಿಗಳೂ, ಆದಲ್ಲದೆ ಬಾಣಮೀರಗಳೂ ಪ್ರಭಾವಳಿಗಳು, ಈಶ್ವರ ಮುಖಾ ಟಿಗಳೂ, ನಾಗಾಭರಣಗಳೂ, ಕವಚಗಳೂ ವ ಯಾವದೇ ತರದ ಪ್ರತಿಮೆಗಳೂ ನಮ್ಮಲ್ಲಿ ಯೋಗ್ಯ ದರಲ್ಲಿ ವ ಯೋಗ್ಯ ಹೊತ್ತಿಗ ಮಾಡಿ ಕೊಡಲ್ಪಡು ವವು ಬೇಕಾದವರು ಪತ್ರವ್ಯವಹಾರ ಮಾಡಿ ಯಾ ದಿನಸ್ಸು ಬಂದು ದರವಾರ ತಿಳಕೊಳ್ಳಬಹುದು
ಪತ್ತ.— ನಾರಾಯಣ ಹೂವಯ್ಯ ಶೇಟ,
ಗುಡಗಾರ, ಗುಡಿಗಲ್ಲಿ, ಕ. ಮುಂಬಾ.
(೮೮ ಬಾರಿಗಾ.)

ವಿಚಾರತರಂಗ.

ಲೇಖಕ:— ನಿರೀಕ್ಷಕ.

ಸೇವಾಧರ್ಮವು ಪರಮ ಗಹನವೆಂಬ ಋಷಿ ವಚನವು ಅರ್ಥಪೂರ್ಣವಿದೆ. ನೆ. ನಾಮದಾರ ಶಾಸ್ತ್ರಿಗಳು ದೇಶಬಾಂಧವರನ್ನು ಸಹ ತೊಲಗಿ, ಬ್ರಿಟಿಶ ಸಾಮ್ರಾಜ್ಯ ಕರ್ತರನ್ನು ಶ್ರದ್ಧೆಯಿಂದ ಸೇವಿಸಿದರು. ಸೇವೆಯಿಂದಲೇ ದೇಶಕ್ಕೆ ಹಿತವಾಗುವದೆಂದು ಅವರ ನೆರೆ ನಂಬಿಗೆ. ಸಾಮ್ರಾಜ್ಯಕರ್ತರು ಶಾಸ್ತ್ರಿಗಳ ಸೇವೆಗೆ ಪ್ರತಿಫಲವೆಂದು ದೊಡ್ಡ ದೊಡ್ಡ ಬಿರುದುಗಳನ್ನು ಅರ್ಪಿಸಿದರು. ಶಾಸ್ತ್ರಿಗಳಾದರೂ ಭರತಪುತ್ರರಲ್ಲರೇ? ಭರತಪುತ್ರರ ಕಲ್ಯಾಣಕ್ಕಾಗಿ ವಿಲಾಯತಿಯವರೆಗೆ ಪ್ರವಾಸ ಮಾಡಿದರು; ದನಿ ಬೀಳುವವರೆಗೆ ಉಪನ್ಯಾಸಗಳನ್ನಿತ್ತರು. ನಮ್ಮ ಗೋಳಿನ ತಿಳುವಳಿಕೆಯಾದ ಕೂಡಲೆ, ಒಡೆಯರು ಅದನ್ನು ಕೂಡಲೇ ಹೋಗಲಾಡಿಸುವರೆಂದು ಅವರ ಶ್ರದ್ಧೆ. ಮೂಢ ಭಕ್ತಿಯೆಂಬುದು ಇದೇ. ೩೫ ವರ್ಷಗಳಿಂದ ರಾಷ್ಟ್ರೀಯ ಸಭೆಯು ಚಳವಳಿ ನಡಿಸಿದರೂ, ಕಿವುಡರಂತೆ ವರ್ತಿಸುವ ಬ್ರಿಟಿಶರು ಶಾಸ್ತ್ರಿಗಳ ಹೇಳಿಕೆಗೆ ತಲೆದೂಗುವರೇನು? ಒಂದ ಹಾದಿಗೆ ಸುಂಕವಿಲ್ಲೆಂಬಂತೆ, ನೆ. ನಾಮದಾರ ಶಾಸ್ತ್ರಿಗಳು ಹಿಂತಿರುಗಿದರು. ಬಂಧು ಬಾಂಧವರನ್ನು ಹೇಗೆ ಕೊಲ್ಲಲಿ? ಎಂದು ಮೋಹಜಾಲದಲ್ಲಿ ಸಿಲುಕಿದ ಅರ್ಜುನನಿಗೆ ಭಗವಾನ್ ಶ್ರೀ ಕೃಷ್ಣನು ವಿಶ್ವರೂಪದ ದರ್ಶನ ಕೊಟ್ಟದ್ದನಂತೆ. ಭಾರತ ಯುದ್ಧವು ಕರ್ಮಭೂಮಿಯ ಮೇಲಾಗುವ ಮೊದಲೇ, ಕೌರವರೆಲ್ಲರೂ ವಿಶ್ವರೂಪದಲ್ಲಿ ಮಡಿದದ್ದನ್ನು ಭಕ್ತನಾದ ಅರ್ಜುನನು ಕಂಡನಂತೆ. ಅದೇ ಪರಿಯಿಂದ, ಶಾಸ್ತ್ರದಂತೆ ಬ್ರಿಟಿಶ ಪ್ರಧಾನ ಮಂಡಳವು ಕೆನಿಯಾ ವಸಾಹತಿನ ಪ್ರಶ್ನೆಯನ್ನು ನಿರ್ಣಯಿಸುವ ಮೊದಲೇ, ಅದರ ನಿರ್ಣಯವಾಗಿ ಹೋಗಿತ್ತು. ಶಿಷ್ಟಮಂಡಳದ ಹೇಳಿಕೆ ಕೇಳುವದು, ಆಲೋಚನೆ ಮಾಡುವದು, ವಿಚಾರಿಸುವದು ಇವೆಲ್ಲ ಭಾರತೀಯರ ಕಣ್ಣು ಕಟ್ಟಲಿಕ್ಕೆ. ಮಹಾತ್ಮರು ಬ್ರಿಟಿಶರ ಅಂತರ್ಯವನ್ನು ಪರೀಕ್ಷಿಸಿ, ಇವರಗೂಡ ನಾವು ಸಹಕಾರಿತೆ ಮಾಡುವದು ನಮ್ಮ ಕಾಲ ಮೇಲೆ ಕಲ್ಲು ಹಾಕಿಕೊಳ್ಳುವದೆಂದು ಅಭಿಪ್ರಾಯಪಟ್ಟಿರುವರು. ನಾಮದಾರ ಶಾಸ್ತ್ರಿಗಳಿಗೂ ಇದೇ ಅನುಭವವು ಈಗ ಬಂತು. ಈಗ ಅವರೇನು ಮಾಡುತ್ತಾರೆ ನೋಡುವದು.

* *

ಪಾಪಕರ್ಮವನ್ನಾಚರಿಸುವವರು ಯಾವಾಗಲೂ ಗುಪ್ತ ರೀತಿಯಿಂದ ಆಚರಿಸುತ್ತಾರೆ ಹೇತುವೇನೆಂದು ತಿಳಿಯಿತೇನು? ಪಾಪವನ್ನು ಆಚರಿಸಲು ಮನೋದೇವತೆಯು ಒಪ್ಪುವದಿಲ್ಲ. ಸ್ವಾರ್ಥಸಾಧನೆಯ ಪ್ರೇರಣೆಯು ಬಲವತ್ತರ ಆದದ್ದರಿಂದ, ಪಾಪಕರ್ಮದ ಆಚರಣೆಯಾಗುತ್ತದೆ. ಆದರೆ, ಪಾಪದ ಆವಿಷ್ಕರಣವು ಒಂದಿಲ್ಲೊಂದು ದಿನ ಆಗೇ ಆಗುತ್ತದೆ; ಚಮತ್ಕಾರಿಕ ರೀತಿಯಿಂದ ಹೊರಬೀಳುತ್ತದೆ. ಅನಪೇಕ್ಷಿತವಾಗಿ ಆವಿಷ್ಕರಣಗೊಳ್ಳುತ್ತವೆ. ನಾಗಪುರದ ಸತ್ಯಾಗ್ರಹದ ಕಥೆಯು ಎಲ್ಲರಿಗೂ ಗೊತ್ತಿದ್ದದ್ದೇ. ಸತ್ಯಾಗ್ರಹಿಗಳನ್ನು ನಿಂದಿಸುವರೆ ಅಧಿಕಾರಿಗಳು ಎಂಗ್ಲೋ-ಇಂಡಿಯನ್ ಪತ್ರಿಕಾಕರ್ತರ ಖಾಸ ಬಾತ್ಮೀದಾರರ ವೇಷವನ್ನು ಧರಿಸಿ, ತಮಗೆ ಬೇಕಾದಂತೆ ಸುದ್ದಿಗಳನ್ನು ಪ್ರಕಟಿಸಿದರು. ನಮ್ಮ ಸುಶಿಕ್ಷಿತ ಮಂದಿಗಳು ಎಂಗ್ಲೋ-ಇಂಡಿಯನ್ ಪತ್ರಕರ್ತರ ದೊಡ್ಡಸ್ತಿಕೆಯನ್ನೂ, ನಿಷ್ಪಕ್ಷಪಾತಿತ್ವವನ್ನು ಕೊಂಡಾಡಿ, ಅವರು ಕೊಟ್ಟ ಬಾತ್ಮಿಯನ್ನು ಆದರಿಸಿ, ಸತ್ಯಾಗ್ರಹ ಸಮರವನ್ನು ನಿಂದಿಸಹತ್ತಿದರು. ಈಗ ಈ ಬಾತ್ಮೀದಾರರ ನಿಜರೂಪವು ಥಟ್ಟನೆ ಪ್ರಕಟವಾಗಿದೆ. ಆಗಸ್ಟ ತಾ ೧೮ ನೇ [illegible] ಒಂದು ತಂತಿ ಬಾತ್ಮಿಯು ಕಲಕತ್ತೆಯ 'ಸ್ಟೇಟ್ಸಮನ' ಪತ್ರಿಕೆಯಲ್ಲಿ ಪ್ರಕಟವಾಯಿತು. ಅದೇ ಬಾತ್ಮಿಯು [illegible] ಮುಂಬಯಿಯ 'ಟೈಮ್ಸ' ಪತ್ರಿಕೆಯಲ್ಲಿಯೂ ಪ್ರಕಟವಾಯಿತು. 'ಸ್ಟೇಟ್ಸಮನ' ಪತ್ರಿಕೆಯ ಸುದ್ದಿಗಾರರು ನಾಗಪುರದ ಕಮೀಶನರ ಸಾಹೇಬರು; 'ಟೈಮ್ಸ' ಪತ್ರಿಕೆಯ ಬಾತ್ಮೀದಾರರು "ನಮ್ಮ ಖಾಸ ಬಾತ್ಮೀದಾರರು" ಅಂದ ಮೇಲೆ, ನಾಗಪುರದ ಕಮೀಶನರ ಸಾಹೇಬರು ಮುಂಬಯಿಯ 'ಟೈಮ್ಸ' ಪತ್ರಿಕೆಯ "ನಮ್ಮ ಖಾಸ ಬಾತ್ಮೀದಾರ"ರಾದರು. ಸರಕಾರದಿಂದ ಸಂಬಳ ತಿಂದು, ವೃತ್ತಪತ್ರದ ಸುದ್ದಿಗಾರರ ಕೆಲಸ ನಡಿಸುವದು ಹೇಗೆ ಸುಸಂಗತವೆಂದು ರಾಜಕೀಯ ಬಾಬುಗಳಲ್ಲಿ ತಟಸ್ಥವೃತ್ತಿಯನ್ನು ಪ್ರತಿಪಾದಿಸುವ ನೌಕರಶಾಹಿಗೇ ಗೊತ್ತು. ಅಂತು, ನೌಕರಶಾಹಿಯ ದೊಡ್ಡ ದೊಡ್ಡ ಅಧಿಕಾರಿಗಳು ಸ್ವಾರ್ಥಸಾಧನೆಗಾಗಿ ನೀಚ ಕೃತ್ಯಗಳಿಗೆ ಸಹ ಕೈಯೊತ್ತಲು ಹೇಸುವದಿಲ್ಲ. ಇಷ್ಟು ಅವರು ದಿನದ [illegible] ವರು.

* *

ಮತ್ತೊಂದು ಸಂಗತಿಯು ಪ್ರಕಟಗೊಂಡಿದೆ. ನಾಗಪುರದ ಶ[redacted]ರರ. ಮಾಡುವ ಕಟ್ಟಳೆಗಳನ್ನು ನಿಯಂತ್ರಿಸುವದು ಸರಕಾರದ ಕರ್ತವ್ಯವು. ಆದರೆ ಪ್ರಾಂತಿಕ ಸರಕಾರಕ್ಕೆ ಕಿಡಿಗೇಡಿ ಕಮೀಶನರ ಸಾಹೇಬರಿಗೆ ನಿಯಂತ್ರಿಸುವ ಸಾಮರ್ಥ್ಯವಿಲ್ಲ. ಆದೇಕೆ? [illegible] ಬಲಾತ್ಯ ಸರಕಾರವು [illegible] ಕಮೀಶನರನಿಗೆ ಶಾಸನ ವಿಧಿಸ [illegible] ತೇನು? [illegible] ಸಾಹೇಬರು ಮನೆಗೆ ಹೋಗಲಿ. ಇವನೊಬ್ಬನಿಲ್ಲದಿದ್ದರೆ, ರಾಜ್ಯವೇನು ಕೆಟ್ಟು ಹೋಗುವದಿಲ್ಲ ಎಂದು [illegible] ವಿಚಾರ. ಆದರೆ, ಕಮೀಶನರರು ಯುರೋಪಿಯನ್ನರು. [illegible] ಅವರನ್ನು ಹೇಗಾದರೂ ಸಮಾಧಾನ ಪಡಿಸಿಕೊಂಡು ರಾಜ್ಯಕಾರಭಾರವನ್ನು ನಡಿಸಬೇಕು. ಹಿಂದೀಯ ಪ್ರಸಿದ್ಧ [illegible] ಭೂಮಂಡಲದಲ್ಲಿ [illegible] ಕಮೀಶನರನು ಪರರ ಚೋರನಲ್ಲ. ನಿರಂಕುಶ, ತಟಸ್ಥವೃತ್ತಿ ಮೊದಲಾದ ದೊಡ್ಡ ದೊಡ್ಡ ತತ್ವಗಳನ್ನು ಪ್ರತಿಪಾದಿಸುವ ನಮ್ಮ ನೌಕರಶಾಹಿಯು ಪಕ್ಷಾಂಧತೆಯನ್ನೂ, ತನ್ನವರನ್ನು ಸಂರಕ್ಷಿಸುವ ಪ್ರಕಾರವನ್ನೂ ನೋಡಿರಿ.

* *

ನೌಕರಶಾಹಿಯ ಗೂಢ ಈಗ ಹೊರಬಿದ್ದಿದೆ. ದಿನೇ ದಿನೇ ಅದರ ದುಷ್ಕೃತ್ಯಗಳು ಬಯಲಿಗೆ ಬರುವದು ಒಳ್ಳೇ ಕೌತುಕವಾಗಿದೆ. ಏನಾದರೂ ಮಾಡಿ ಧನಸಂಚಯ ಮಾಡುವದು. ಈ ಕೆಲಸದಲ್ಲಿ ಎಲ್ಲ ಅಧಿಕಾರಿಗಳು ತೊಡಗಿರುವರು. ಹಣವನ್ನು ತೆರಿಗೆ ಬೆಳೆಸಿ, ಉತ್ಪನ್ನ ಮಾಡುತ್ತಿರುವರು. ಇವೆಲ್ಲ ಪ್ರತ್ಯಕ್ಷ ಉಪಾಯಗಳು. ಶಿಕ್ಷೆಗಿಂತ ದಂಡ ಹೆಚ್ಚು ವಿಧಿಸುವದು, ಕೇತಕೀ-ಬಿನ್ ಕೇತಕೀ ಮೊದಲಾದ ಪ್ರಕಾರಗಳನ್ನು ಎಬ್ಬಿಸಿ ಹಣ ಎತ್ತುವದು, ಇನ್‌ಕಮ್ ಟ್ಯಾಕ್ಸ ಆಕರಿಸುವದು ಇವೆಲ್ಲ ಅಪ್ರತ್ಯಕ್ಷ ಉಪಾಯಗಳು. ಹಣದ ಅಡಚಣಿಯು ಇಷ್ಟಾದರೂ, ಪ್ರಜೆಗಳಿಗೆ ಬೇಡಾದ ನೌಕರಶಾಹಿಯು ಹತ್ತರ ಬೇಕಾದಷ್ಟು ಧನಸಂಚಯವಿದೆ. ಶ್ರೀ ಮಣಿಲಾಲ ಡಾಕ್ಟರೆಂಬುವವರು ಬಿರುದ್ಧರಾದರು. ದಕ್ಷಿಣ ಆಫ್ರಿಕಾ ಖಂಡದಲ್ಲಿ ಅವರು [illegible] ಅಲ್ಲಿ ಅವರಿಗೆ [illegible] ನ್ಯೂಝಿಲಂಡಕ್ಕೆ ಹೋದರು. ಅಲ್ಲಿಯೂ ಅವರಿಗೆ ಪ್ರತಿಬಂಧ; ಅಲ್ಲಿಂದ ಅವರು ಸಿಂಹಲ ದ್ವೀಪಕ್ಕೆ ಬಂದರು. ಅಲ್ಲಿಯೂ ಅವರಿಗೆ ಆತಂಕ; ಕಟ್ಟಕಡೆಗೆ, ಅವರು ಮಾತೃಭೂಮಿಗೆ ಬಂದು, ಗಯಾ ಕ್ಷೇತ್ರದಲ್ಲಿ ವಾಸಮಾಡುತ್ತಿರುವರು. ಹಿಂದೀಯರಿಗೆ ಸಾಮ್ರಾಜ್ಯದಲ್ಲಿ ಸ್ವಾಭಿಮಾನದಿಂದ ಹೊಟ್ಟೆ ಹೊರಕೊಳ್ಳಲು ಆಸ್ಪದವಿಲ್ಲ. ಗಯಾ ಕ್ಷೇತ್ರದಲ್ಲಿ ಶ್ರೀ ಮಣಿಲಾಲರಿಗೆ ನೌಕರಶಾಹಿಯ ಕಾಟ [illegible] ತ್ತಿದೆ. ಸರ್ವಾಧಿಪತಿ ರೀಡಿಂಗ ದೊರೆಗಳಿಗೆ ಮಣಿಲಾಲರು ಒಂದು ಪತ್ರ ಬರೆದ, ತನ್ನ ಮೇಲೆ ಗುಪ್ತ ಪೋಲೀಸರು ಅನಾವಶ್ಯಕ ನಜರಿಟ್ಟು [illegible] ತಿಳಿಸಿದರು. [illegible] ವರು ತನ್ನ ಎಲ್ಲ ವ್ಯವಹಾರವು ಚೊಕ್ಕವಿದ್ದು, ತನ್ನ ಬೆನ್ನಿಗೆ ಪೋಲೀಸ ಅಧಿಕಾರಿಗಳನ್ನು ಗುಪ್ತ ಚೌಕಿಗಾಗಿ [illegible] ಸಾರ್ವಜನಿಕ ಹಣದ ಅಪವ್ಯಯವೆಂದು ಶ್ರೀ ಮಣಿಲಾಲರು ಸೂಚಿಸಿ, ಬಡ ಪ್ರಜೆಗಳಿಂದ ಎತ್ತಿದ ಹಣವನ್ನು ಈ ಪರಿಯಿಂದ ನಿರರ್ಥಕವಾಗಿ ಹಾಳುಗೆಡಹಬಾರದೆಂದು ಎಚ್ಚರಿಕೆ ಕೊಟ್ಟಿರುವರು. ಆದರೆ, ಬಡ ಒಕ್ಕಲಿಗರ ಹಣದ ಪಾಡೇನು? ನೌಕರಶಾಹಿಗೆ ಇದ್ದರೆ, ಮಹಾತ್ಮರಿಗೆ ಸ್ವರಾಜ್ಯಸಂಪಾದನೆಯ ಅವಶ್ಯಕತೆಯು ಇರುತ್ತಿದ್ದಿತ್ತೆ?

* *

ಪ್ರಸಿದ್ಧ ಸಯಾಜಿ ಮಹಾರಾಜ ಗಾಯಕವಾಡರವರಿಗೆ ಒಂದು ಅಪೂರ್ವ ಯೋಗವು ದೊಡ್ಡರ ಚಿತ್ರಗುಪ್ತನ ಲೀಲೆಯಿಂದ ಒದಗಿಬಂತು: ಸಂತ ತುಕಾರಾಮಬುವಾರವರ ಉಕ್ತಿಯಂತೆ, 'ಠಪಲೇಂ ಮರಣ ಪಾಹಿಲೇಂ ಮ್ಯಾ ಡೋಳಾಂ' ಎಂಬಂತೆ ತನ್ನ ಮರಣವನ್ನು ತಾನೇ ನೋಡುವ ಅಪೂರ್ವ ಯೋಗವು ಸಯಾಜಿರಾಯರಿಗೆ ಲಭಿಸಿತು. ಇದರಿಂದ ಗಾಯಕವಾಡ ಮಹಾರಾಜರಿಗೆ ತಮ್ಮ ಮಿತ್ರರು ಯಾರು? ಶತ್ರುಗಳ್ಯಾರು? ಎಂದು ತಿಳಿಕೊಳ್ಳುವ ಸುಸಂಧಿಯೊಂದು ಪ್ರಾಪ್ತವಾಯಿತು. ಮಹಾರಾಜರು ನಿಧನಹೊಂದಿದ ಸಮಯವನ್ನು ಸಾಧಿಸಿ ಬ್ರಿಟಿಶ ವೃತ್ತಪತ್ರಗಳು ತಮ್ಮ ವಿಷಾದ ಉದ್ಗಾರಗಳನ್ನು ಎಸೆದವು. ವಿಲಾಯತಿಯೊಳಗಿನ ವಿಖ್ಯಾತ 'ಟೈಮ್ಸ' ಪತ್ರಿಕೆಯು [illegible] ಮಹಾರಾಜರಿಗೂ, ಭರತಖಂಡದೊಳಗಿನ ರಾಜದ್ರೋಹಿಗಳಿಗೂ ಸಂಬಂಧವಿದೆಂದು ಬರೆಯುತ್ತದೆ. 'ಮೊರ್ನಿಂಗ್ ಪೋಸ್ಟ' ಪತ್ರಿಕೆಯು ವಾಚಕರಿಗೆ ಅನಾದರ ಮಾಡಿದ ಆರೋಪ ಹೊರಿಸಿ, ದೂಷಿಸುತ್ತದೆ. ಹೀಗೆಲ್ಲ ಬ್ರಿಟಿಶ ವೃತ್ತಪತ್ರಗಳು ಸ್ವತಂತ್ರ ವೃತ್ತಿಯ ಸಯಾಜಿರಾವ ಮಹಾರಾಜರನ್ನು ಆಲೋಚಿಸಿ, ನಿಧನ ವಾರ್ತೆಯನ್ನು ಸ್ವಾಗತೀಕರಿಸಿದವು. ಮಾರನೇ ದಿನ ಸಯಾಜಿರಾಯರು ಬದುಕಿದ ವರ್ತಮಾನ ಕೇಳಿ, ಪತ್ರಕಾರರಿಗೆಲ್ಲ [illegible] ಅಂತಃಕರಣವು ಆವಿಷ್ಕರಣ ಹೊಂದಿದ ಬಳಿಕ ಅವರು ಎಷ್ಟು ಮರುಗಿದರೋ ಏನೋ? ಚಿತ್ರಗುಪ್ತನನ್ನು ಇಂಥ ಮಹತ್ವದ ತಪ್ಪಿಗಾಗಿ ಎಷ್ಟು [illegible] ಏನೋ? ಈಗ ಏನೂ ಹೊಯ್ಕೊಂಡರೂ ಆಡಿದ ಮಾತುಗಳು, ಒಡೆದ ಮುತ್ತುಗಳಂತೆ ಕೈ ತಪ್ಪಿ ಹೋದವು. ಇದರಲ್ಲಿ ಸಂಶಯವೇನಿಲ್ಲ. ಮಹಾರಾಜ ಸಯಾಜಿರಾಯರಿಗೆ ಭಾರತೀಯರ ಕಲ್ಯಾಣಕ್ಕಾಗಿ ಟೊಂಕ ಕಟ್ಟಿದ ಬ್ರಿಟಿಶರ ಅಂತರ್ಯದ ಅರಿವು ಉಂಟಾಯಿತು.

* *

ಮೌಲಾನಾ ಶೌಕತ ಅಲ್ಲಿಯವರು ಜೈಲಿನೊಳಗಿನ ಕೆಲಸವನ್ನು ಮಾಡಲೊಪ್ಪದ್ದರಿಂದ, ಅಪ್ತೇಷ್ಟರಿಗೆ ಚಿಟ್ಟಿ ಕೊಡುವ ಪತ್ರ ಬರೆಯುವ ಅವರ ಹಕ್ಕನ್ನು ಸರಕಾರವು ಕಸಿದುಕೊಂಡಿರುವದೆಂದು ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ದಾ॥ ತ್ರಿವೇದಿಯವರಿಗೆ ಉತ್ತರ ಕೊಟ್ಟದ್ದು ವಾಚಕರಿಗೆ ನೆನಪಿರಬಹುದು. ಈ ಬಗ್ಗೆ ಚೌಕಶಿ ನಡಿಸಿ, ಸೆಂಟ್ರಲ ಖಿಲಾಫತ ಕಮಿಟಿಯವರು ಪ್ರಕಟಿಸುವದೇನಂದರೆ— ಮೌ॥ ಶೌಕತ ಅಲ್ಲಿಯವರು ಜೈಲಿನೊಳಗಿನ ಕೆಲಸ ಮಾಡಲೊಪ್ಪದ ಕಾರಣವು [illegible] ಗಿನ ಮಾನಸಿಕ ಪ್ರಕಾರಗಳು. [illegible] ದಿನಾ ಸಾಯಂಕಾಲಕ್ಕೆ [illegible] ಕೊಳ್ಳುವ [illegible] ಪರಿಪಾಠವಿದೆ. [illegible] ಅಲ್ಲೇ [illegible] ರವರೂ ಈ ಪದ್ಧತಿಯನ್ನು ನಿಷೇಧಿಸದ್ದರ [illegible] ಜೈಲಿನ ಸುಪರಿಂಟೆಂಡೆಂಟರು ೩ ತಿಂಗಳ [illegible] ಅದನ್ನು ಬಂದು ಮಾಡಿದರು. [illegible] ಈ ಪದ್ಧತಿಯನ್ನು ಬಂದು ಮಾಡಿದ [illegible] ಮೌ॥ ಶೌಕತ ಅಲ್ಲಿಯವರು ಜೈಲಿನೊಳಗಿನ ಕೆಲಸ ಮಾಡಲಿಕ್ಕೆ ಒಪ್ಪದೆ

ಕಾರಣವು ಈ ಘಾತಕಿಯ ಕಾಡು ಪದ್ಧತಿಯೇ ಹೊರತು, ಜೈಲಿನೊಳಗಿನ ಕೆಲಸ ಮಾಡಬಾರದೆಂದಲ್ಲ. ಮೌ|| ಶೌಕತ ಅಲ್ಲಿಯವರ ಕೆಲಸ ನಿರಾಕರಿಸುವ ಕಾರಣವನ್ನು ಮುಂಬಯಿ ಕಾಯಿದೇ ಕೌನ್ಸಿಲಿಗೆ ತಿಳಿಸಿದರೆ, ಜೈಲಿನೊಳಗೆ, ಸುಧಾರಿಸಿದ ಬ್ರಿಟಿಶ ರಾಜ್ಯಪದ್ಧತಿಯಲ್ಲಿ ನಡಿಯುವ ಕಾಡು ಪದ್ಧತಿಯ ಅರಿವು ನಮ್ಮ ಸಹಕಾರಿ ಬೇಕಬಾಂಧವರಿಗೆ ಉಂಟಾಗುತ್ತಿತ್ತು; ಬ್ರಿಟಿಶ ರಾಜ್ಯಪದ್ಧತಿಯು ಸುಧಾರಿಸಿರುವದೆಂದು ಅವರಿಗೂ ತಿಳುವಳಿಕೆಯಾಗುತ್ತಿತ್ತು; ಮೌ|| ಶೌಕತ ಅಲ್ಲಿಯವರ ಕಾದಾಟದ ಮರ್ಮವೂ ಹೊಳೆಯುತ್ತಿತ್ತು; ಜೈಲರರು ವಿಧಿಸಿದ ಶಿಕ್ಷೆಯ ಅನ್ಯಾಯವೂ ಪ್ರದರ್ಶನವಾಗುತ್ತಿತ್ತು. ಮುಖ್ಯ ಪ್ರಶ್ನೆಯನ್ನು ತಿಳಿಸದೆ, ಸರಕಾರವು ಮೌ|| ಶೌಕತ ಅಲ್ಲಿಯವರೇ ದುರಾಗ್ರಹಿಗಳೆಂದು ಪ್ರಕಟಗೊಳಿಸಿ, ತನ್ನ ಮಾತನ್ನು ನಂಬುವವರಿಗೆ ಎಚ್ಚರಿಕೆ ಕೊಟ್ಟಂತಾಗಿದೆ. ಸರಕಾರಿ ವಚನಗಳೆಂದರೆ, ಸತ್ಯವೆಂದು ಗ್ರಹಿಸುವವರು ತೀರ ಕಡಿಮೆ. ಸಹಕಾರಿಗಳು ಈಗ ಅವುಗಳನ್ನು ಎಚ್ಚರಿಕೆಯಿಂದ ಗ್ರಹಿಸಬೇಕೆಂದು ಅವರಿಗೆ ಹೇಳಿಯಿರರು.

* * *

ಹಿಂದೂ ಧರ್ಮಶಾಸ್ತ್ರಕಾರರು ಅನೇಕ ಕಟ್ಟಳೆಗಳನ್ನು ಮಾಡಿರುವರು. ಸಮಾಜವು ಈಗೀಗ ಅವನತಿಹೊಂದುತ್ತಿರುವಾಗ, ಧರ್ಮ ಶಾಸ್ತ್ರದ ಕಟ್ಟಳೆಗಳ ದುರುಪಯೋಗಮಾಡಿಕೊಂಡು, ಧರ್ಮಶಾಸ್ತ್ರದಂತೆ, ನ್ಯಾಯವಾದ ದರ್ಜೆಯಿಂದ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಿರುವರು. ವರದಕ್ಷಿಣೆಯ ಕಟ್ಟಳೆಯನ್ನೇ ಕೊಳ್ಳಿರಿ. ದಾನಮಾಡುವಾಗ ದಾನದ ವಸ್ತುವಿನೊಡನೆ ದಕ್ಷಿಣೆ ಕೊಡುವ ಪರಿಪಾಟ ಇರುವದು. ಅದರಂತೆ, ಕನ್ಯಾದಾನ ಮಾಡುವಾಗ ವರದಕ್ಷಿಣೆ ಕೊಡಬೇಕೆಂದು ಧರ್ಮಶಾಸ್ತ್ರದ ಕಟ್ಟಳೆ ಇದೆ. ಕನ್ಯೆಯು ಮುಖ್ಯದಾನವು; ವರದಕ್ಷಿಣೆಗೆ ಮಹತ್ವವೇನಿಲ್ಲ. ಆದರೆ, ಈಗ ವರದಕ್ಷಿಣೆಗೇ ಎಲ್ಲ ಮಹತ್ವವು ಪ್ರಾಪ್ತವಾಗಿದೆ. ಎಂಥ ಕನ್ಯೆಯಿದ್ದರೂ ಅಡ್ಡಿಯಿಲ್ಲ; ವರದಕ್ಷಿಣೆಯ ರಕಮು ದೊಡ್ಡದಿದ್ದರೆ, ಕನ್ಯೆಯ ದೋಷಗಳೆಲ್ಲ ಮುಚ್ಚಿಹೋಗುತ್ತವೆ. ಈ ಪದ್ಧತಿಯಿಂದ ಸಾಧಾರಣ ಮರ್ಯಾದೆಯಿಂದ ಸಂಸಾರ ಮಾಡುವ ಗೃಹಸ್ಥರಿಗೆ ಮಗಳ ಮದುವೆ ಮಾಡುವದು ಕಠಿಣವಾಗಿದೆ. ಬಹುಮಂದಿ ಮಗಳ ಮದುವೆ ಮಾಡಿದ ಕೂಡಲೆ, ನಿರಾಧಾರಿಯಾದ ಗೃಹಸ್ಥರ ಉದಾಹರಣೆಗಳು ಸಹ ಅನೇಕವಿವೆ. ಬಂಗಾಲದಲ್ಲಂತು ವರದಕ್ಷಿಣೆ ರಕಮು ಸಂಪಾದನೆಗಾಗಿ ಬೇಡಾಡುವ ತಂದೆಯ ಅವಸ್ಥೆಯನ್ನು ನೋಡಲಾರದೆ, ಬೆಂಕಿ ಸುಟ್ಟುಕೊಂಡು, ಆತ್ಮಹತ್ಯಮಾಡಿಕೊಂಡ ಉದಾಹರಣೆಗಳೂ ಇವೆ. ಈಗ ಕಲಕತ್ತೆಯಲ್ಲಿ 'ಎಂಟಿ-ಡೊವರಿ-ಎಸೋಸಿಯೇಶನ್' ಅಂದರೆ, ವರದಕ್ಷಿಣೆಯನ್ನು ವಿರೋಧಿಸುವ ಸಂಘವೊಂದು ಸ್ಥಾಪನಹೊಂದಿದೆ. ಇದರ ಉತ್ಪಾದಕರು ಬಂಗಾಲೀ ಯುವಕರೇ. ಈಗಿನ ಕಠಿಣ ದಿನಗಳಲ್ಲಿ ವರದಕ್ಷಿಣೆಯ ಮೂಲಕ ಬೇಡಾಡುವ ವಧೂಗಳ ತಾಯಿ-ತಂದೆಗಳ ಕಷ್ಟ ಪರಿಹಾರವಾಗಲು, ಈ ಸಂಘವು ಜನ್ಮವನ್ನೆತ್ತಿದೆ. ವರದಕ್ಷಿಣೆಯ ಪದ್ಧತಿಯನ್ನು ಬುಡಸಹಿತ ಕಿತ್ತೊಗೆಯುವದೇ ಈ ಸಂಘದ ಧ್ಯೇಯವು. ಈ ಬಗ್ಗೆ ಲೋಕಮತವನ್ನು ಜಾಗೃತಗೊಳಿಸಲು ಸಂಘದವರು ಚಳವಳಿ ಮಾಡುತ್ತಾರೆ. ತರುಣರು ಈ ಸಂಘದ ವಿದ್ಯಮಾನ ಚಳವಳಿ ನಡಿಸಿ, ವರದಕ್ಷಿಣೆಯ ಕಾಟವನ್ನು ಅಳಿಯಲು ಮಾಡಿದ ಯತ್ನಗಳು ಫಲಪ್ರದವಾಗುತ್ತಲಿವೆ. ಎಳೆ ಹುಡುಗರೂ ಸಂಘದ ಚಾಲಕರಿದ್ದದರಿಂದ, ಮತ್ತು ಈ ವಯಸ್ಸಿನಲ್ಲಿ ಸಾಂಸಾರಿಕ ಸ್ವಾರ್ಥಸಾಧನೆಯ ಅಷ್ಟು ಸ್ಪರ್ಶವಾಗದ್ದರಿಂದ, ಈ ಚಳವಳಿಯನ್ನು ತಮ್ಮ ಸಮಾನ ವಯಸ್ಸಿನ ಎಳೆ ಹುಡುಗರಲ್ಲಿ ಹಬ್ಬಿಸಲು ಅವರೇ ಯೋಗ್ಯರು. ಅವರಿಗೆ ಈ ಸತ್ಕಾರ್ಯದಲ್ಲಿ ಯಶಪ್ರಾಪ್ತಿಯಾಗಲಿ.

ಹಿಂದೂ ಮಹಾಸಭೆ.

ಕಾಶಿಯಲ್ಲಿ ನೆರೆದ ಹಿಂದೂ ಮಹಾ ಸಭೆಯಲ್ಲಿ ಪಾಸಾದ ಮಹತ್ವದ ಠರಾವುಗಳು.

(೧) ಭರತ ಖಂಡದಲ್ಲಿ ಎಲ್ಲರೂ ಸ್ನೇಹಭಾವದಿಂದ ನಡಕೊಳ್ಳುವದು ಅವಶ್ಯವಿದೆ. ಸ್ವರಾಜ್ಯ ಪ್ರಾಪ್ತಿಗೆ ಸಮಾಜಗಳೊಳಗಿನ ಸ್ನೇಹಭಾವವು ತೀರ ಅವಶ್ಯವಿದೆ. ಅದಕ್ಕಾಗಿ ಹಿಂದೂ ಸಭೆಯ ಶಾಖೆಗಳನ್ನು ಪ್ರತಿಯೊಂದೆಡೆಯಲ್ಲಿ ಸ್ಥಾಪಿಸುವದು ಇಷ್ಟವಿದೆ.

(೨) ಭರತಖಂಡದ ಉದ್ಧಾರಕ್ಕಾಗಿ, ಸ್ವಸಂರಕ್ಷಣಕ್ಕಾಗಿ ಭರತಖಂಡದ ನಾಲ್ಕಲ್ಲಿ ಸೇವಾಸಮಿತಿಗಳನ್ನು ಸ್ಥಾಪಿಸಬೇಕು. ಈ ಸೇವಾಸಮಿತಿಗಳಲ್ಲಿ ಇತರ ಜ್ಞಾತಿಗಳಗೂಡ ಸಹಕಾರಿತೆಯಿಂದ ವರ್ತಿಸತಕ್ಕದ್ದು.

(೩) ನಾಭಾ ಸಂಸ್ಥಾನದ ಮಹಾರಾಜರನ್ನು ಪದಚ್ಯುತ ಮಾಡಿದ ಬಗ್ಗೆ ಮಹಾ ಸಭೆಗೆ ದುಃಖವಾಗುತ್ತದೆ. ಮಹಾರಾಜರ ಪ್ರಕರಣವನ್ನು ಹಿಂದುಸ್ಥಾನದೊಳಗಿನ ಸಂಸ್ಥಾನಿಕರ ಮಂಡಳದ ಮುಂದೆ ನಿರ್ಣಯಕ್ಕಿಡಬೇಕೆಂದು ಆಗ್ರಹದ ವಿನಂತಿಯಿದೆ. ಸಾರ್ವಜನಿಕ ಚೌಕಶಿಯಾದ ಹೊರತು, ಸಂಸ್ಥಾನಿಕರನ್ನು ಪದಚ್ಯುತ ಮಾಡಬಾರದೆಂದು ಮಹಾಸಭೆಯು ಠರಾಯಿಸಿತು.

(೪) ಹುಡುಗರೂ, ಹುಡುಗಿಯರೂ ಬ್ರಹ್ಮಚರ್ಯವನ್ನು ಪಾಲಿಸತಕ್ಕದ್ದು. ಹಾಗು ಅವರೊಳಗೆ ಶಿಕ್ಷಣವನ್ನು ಪ್ರಸಾರ ಮಾಡತಕ್ಕದ್ದು.

(೫) ಹಿಂದೀ ಭಾಷೆಯು ಭರತಖಂಡದ ದೇಶಭಾಷೆಯಾಗಿರತಕ್ಕದ್ದು.

(೬) ಪ್ರಜೆಗಳೆಲ್ಲರೂ ದೇಶದಲ್ಲಿ ತಯಾರಾದ ಅರಿವೆಗಳನ್ನೇ ಉಪಯೋಗಿಸಬೇಕು. ಕೈಯಿಂದ ನೆಯ್ದ ಅರಿವೆಯನ್ನು ಉಪಯೋಗಿಸುವದು ಶ್ರೇಯಸ್ಕರವು.

(೭) ಗೋಪರಿಪಾಲನ ಮಾಡಬೇಕು. ಗೋಹತ್ಯವನ್ನು ಪ್ರತಿಬಂಧಿಸಬೇಕು. ಪ್ರಾಯದ ಆಕಳುಗಳನ್ನು ವಿಕ್ರಯಮಾಡಬಾರದು. ಕಾಡುಗಳಲ್ಲಿ ಬಿಟ್ಟು ಅವರನ್ನು ಸಂರಕ್ಷಿಸಬೇಕು.

(೮) ದೇಶೀ ಬ್ಯಾಂಕುಗಳಲ್ಲಿ ಜನಕರುಗಳು ಸಿಲುಕದಂತೆ ಮುತ್ತಲು ಬೇಲಿ ಹಾಕಬೇಕು.

(೯) ಸಮಾಜಗಳಲ್ಲಿ ಸಹಿಷ್ಣುತೆಯನ್ನು ಪಾಲಿಸಬೇಕೆಂದೂ ಸಭೆಯು ಆಗ್ರಹದಿಂದ ಹೇಳಿ, ಶಾಂತಿಪಕ್ಷದಲ್ಲಿ ಪ್ರಕ್ಷುಬ್ಧ ಪ್ರಸಂಗದಲ್ಲಿ ಸಹ, ತಾಳ್ಮೆಯಿಂದ ವರ್ತಿಸಿದ ಹಿಂದೂಗಳ ಅಭಿನಂದನೆಯಾಯಿತು. ನೆರೆಹೊರೆಯ ದೇಗುಲಗಳಲ್ಲಿಯೂ, ಮಶೀದಿಗಳಲ್ಲಿಯೂ ಪೂಜೆ ಹಾಗು ನಮಾಜಗಳನ್ನು ನಡಿಸುವಾಗ ಹಿಂದೂ-ಮಹಮ್ಮದೀಯರೊಳಗೆ ಕಲಹವಾಗದಂತೆ ಒಂದು ವ್ಯವಸ್ಥೆ ಮಾಡುವದು ಅವಶ್ಯವೆಂದು ಠರಾವಾಯಿತು.

(೧೦) ಮಹಮ್ಮದೀಯ-ಕ್ರೈಸ್ತ ಮತಗಳಲ್ಲಿ ಧರ್ಮಾಂತರ ಹೊಂದಿದ ಹಿಂದೂ ಧರ್ಮೀಯರನ್ನು ಪ್ರಾಯಶ್ಚಿತ್ತವನ್ನಿತ್ತು, ಪುನಃ ಹಿಂದೂ ಧರ್ಮದಲ್ಲಿ ಸೇರಿಸಿಕೊಳ್ಳುವರೆ ಪಂಡಿತರದೊಂದು ಸಭೆಸೇರಿಸಿ, ಅವರು ಈ ಬಗ್ಗೆ ವಿಚಾರಪೂರ್ವಕ ಅಭಿಪ್ರಾಯವನ್ನರುಹಬೇಕೆಂದರು.

— ಕಳೆದ ಗುರುವಾರ ತಾರೀಖು ೬ನೇಗೆ ಮುಂಬಯಿಯಲ್ಲಿ ನಾಗರಿಕರದೊಂದು ಜಾಹೀರ ಸಭೆಯು ಎಕ್ಸೆಲ್ಸಿಯರ್ ಥಿಯೇಟರಿನಲ್ಲಿ ಜರುಗಿತು. ಅಧ್ಯಕ್ಷಸ್ಥಾನವನ್ನು ಸರ್ ಜಮಶೇಟಜಿ ಜಿಜಿಭಾಯಿಯವರು ಅಲಂಕರಿಸಿದ್ದರು. ಭರತಖಂಡದಲ್ಲಿ ನೆರೆಯಿಂದ ನಿರಾಶ್ರಿತರಾದವರಿಗೆ ಸಹಾಯವನ್ನೀಯಲು ನಿಧಿಯನ್ನು ಕೂಡಿಸುವದಕ್ಕೆ ಸಭೆ ನೆರೆದಿತ್ತು. ನೆರೆಯಿಂದೊದಗಿದ ಅನರ್ಥವನ್ನು ಕ್ರೀ ಸರೋಜಿನಿದೇವಿ ಮೊದಲಾದ ಉಪನ್ಯಾಸಕರು ಬಣ್ಣಿಸಿದರು. ನಿರಾಶ್ರಿತರನ್ನು ಸಹಾಯ ಮಾಡಲು ಒಂದು ಕಮಿಟಿಯು ಅಧ್ಯಕ್ಷರ ನೇತೃತ್ವದಲ್ಲಿ ನೇಮಿಸಲ್ಪಟ್ಟಿತು. ಸಭೆಯಲ್ಲಿಯೇ ೧೧,೦೦೦ ರೂಪಾಯಿಗಳು ಒಟ್ಟುಗೂಡಿದವು.

ದೇಶಿ ಸೆಂಟೋನಾಯಿನ್.

(ಜಂತುವಿನ ಪುಡಿ.)

ಅಪಾಯಕರವಿಲ್ಲದೆ ಗುಣ ಕೊಡುವಂಥಾದ್ದು. ಪ್ರಪಂಚದಲ್ಲಿ ಪ್ರಖ್ಯಾತ ಔಷಧ.

ಔಂಸಿನ ಶೀಸೆಗೆ ೭ ರೂ. ೮ ಆಣೆ.

ವಿಳಾಸ:— ಎಮ್. ಜಿ. ಭಾಗ್ವತ್,

ಆಯುರ್ವೇದಿಕ್ ಕೆಮಿಸ್ಟ, ಕಠಿ. (ಕೆನರಾ)

ಶುದ್ಧ ಖಾದಿ

ವಿಕ್ರಿಗೆ ತಯಾರ.

ಹೊನ್ನಾವರ ತಾಲೂಕಾ ಕಾಂಗ್ರೆಸ ಕಮಿಟಿಯಿಂದ ಕೈಮಗ್ಗದ ಕೈರಾಟಿಯ ಶುದ್ಧ ನೂಲಿನ ಖಾದಿ ಮಾರಾಟಕ್ಕೆ ಕಾಂಗ್ರೆಸ ಆಫೀಸಿನಲ್ಲಿ ಸಿಗುವದು.

ಹೊನ್ನಾವರ, ೧೦-೧೨-೩೨. } ಸೆಕ್ರೆಟರಿ, ತಾ. ಕಾ. ಕಮಿಟಿ, ಹೊನ್ನಾವರ.

ಆರೋಗ್ಯಚಂದ್ರಿಕೆ.

ಈ ಪತ್ರಿಕೆಯ ಸಂಪಾದಕರು ಮದ್ರಾಸಿನ ಡಾಕ್ಟರ್ ಯು. ರಾಮರಾವ್, ಎಮ್. ಎಲ್. ಸಿ. ಯವರು. ಈ ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ

ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸಿ, ಪ್ರಥಮ ಸಂಚಿಕೆಯು ಈ ತಿಂಗಳಲ್ಲಿ ಪ್ರಕಟವಾಗಿಯದೆ.

ಅಂಚೆಯವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂಪಾಯಿ ೧—೮—೦. ಬಿಡಿ ಪತ್ರಿಕೆ ಒಂದಕ್ಕೆ ೦—೩—೦.

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವದರಿಂದಲೂ ಹಣವನ್ನು ಮುಂಗಡವಾಗಿ ಕಳುಹುವದು ಲಾಭಕರ.

ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು. ಪತ್ರವ್ಯವಹಾರದ ವಿಳಾಸ:—

ಮೆನೇಜರ್,

'ಹೆಲ್ತ್' ಅಥವಾ

'ಆರೋಗ್ಯಚಂದ್ರಿಕೆ' ಆಫೀಸು.

೩೨೩, ತಂಬುಶೆಟ್ಟಿ ಬೀದಿ, ಮದರಾಸ್.

ಕಾನಡಾವೃತ್ತ.

ಗುರುವಾರ, ತಾರೀಖು ೧೩ ಮಾಹೆ ಸಪ್ಟಂಬರ ೧೯೨೩

ಕಾಲಮಹಿಮೆ.

ಕಾಲಶಕ್ತಿಯ ಲೀಲೆಯನ್ನು ಬಲ್ಲಿಹರಾರು? ೨-೩ ತಿಂಗಳುಗಳಲ್ಲಿ ಕಾಲಚಕ್ರವು ಭೂಮಂಡಲದ ಮೇಲೆಲ್ಲ ಹಾವಳಿಯನ್ನೆಬ್ಬಿಸಿದೆ. ವಿಪರೀತ ಮಳೆಯಿಂದ ಅನೇಕ ಕಡೆಗಳಲ್ಲಿ ಅಮಿತ ಹಾನಿಯಾಯಿತು. ಭರತಖಂಡದಲ್ಲಿ ಒದಗಿದ ಹಾನಿಯನ್ನು ವಾಚಕರು ಅರಿತಿರುವರು. ರಶಿಯಾ ದೇಶದಲ್ಲಿ ನದಿಗಳು ಉಕ್ಕೇರಿ, ಅನೇಕ ಗ್ರಾಮಗಳು ನೆಲಸಮವಾದವು. ಇರಾಣದಲ್ಲಿಯೂ ಇದೇ ಕಥೆ. ನದಿಗಳು ಉಕ್ಕೇರುವದು, ಪ್ರಜೆಗಳ ಸೊತ್ತು ನಷ್ಟವಾಗುವದು, ಈ ಕ್ರಮವು ನಡೆಯಿತು. ಇಂಗ್ಲಂಡ ದೇಶದ ದಕ್ಷಿಣಕ್ಕಿರುವ ಇಂಗ್ಲೀಷ ಚೆನಲ್ ಎಂಬ ಸಾಮುದ್ರಧುನಿಯಲ್ಲಿ ಬಿರುಗಾಳಿಯೆಬ್ಬಿ, ಅನೇಕ ಹಡಗಗಳು ನೀರುಪಾಲಾದವು. ವರುಣದೇವರ ಕ್ಷೋಭವು ಶಾಂತವಾಗುವಷ್ಟರಲ್ಲಿ, ಅಗ್ನಿನಾರಾಯಣನು ರಂಗಸ್ಥಳದಲ್ಲಿ ಬಂದಿಳಿದನು. ಫ್ರಾನ್ಸ ದೇಶದಲ್ಲಿ ಸುಂದರ ಕಾಡಿಗೆ ಉರಿಹತ್ತಿ, ೧೫ ಮೈಲು ಅಚೆ-ಈಚೆ ಸುಟ್ಟು ಬೂದಿ. ರಶಿಯಾ ದೇಶದಲ್ಲಿಯೂ, ಇರಾಣ ದೇಶದಲ್ಲಿಯೂ ಭೂಕಂಪಗಳು ಪ್ರಜೆಗಳನ್ನೆಲ್ಲ ನಡುಗಿಸಿದವು. ಈ ರೀತಿಯ ಸಣ್ಣ ಸಣ್ಣ ವರ್ತಮಾನಗಳು ಬರುವಷ್ಟರಲ್ಲಿ, ಕಳೆದ ವಾರ ಜಪಾನ ದೇಶವು ಕಾಲಚಕ್ರದ ಸಂಧಿಯಲ್ಲಿ ಸಿಲುಕಿಕೊಂಡಿದೆಂಬ ಚಿಂತಾಕಾರಕ ಸುದ್ದಿಯು ಅಖಿಲ ಭೂಮಂಡಲದಲ್ಲಿ ಹಬ್ಬಿದೆ.

ಜಪಾನ ದೇಶವೆಂದರೆ, ಜಗತ್ತಿನೊಳಗಿನ ಒಂದು ಬಲಾಢ್ಯ ರಾಷ್ಟ್ರವು. ಮಹಾಯುದ್ಧದಿಂದ ಜಪಾನ ದೇಶವು ಭರಭರನೆ ಸಮೃದ್ಧಿ ಹೊಂದಿತು. ಮಹಾಯುದ್ಧದಿಂದ ಸಂಪನ್ನತೆಯನ್ನು ಸಂಪಾದಿಸಿದ ರಾಷ್ಟ್ರಗಳಲ್ಲಿ ಜಪಾನ ದೇಶವು ಪ್ರಮುಖವಿದೆ. ಇಂಥ ಸಂಪನ್ನ ದೇಶದ ಮೇಲೆ ಕಾಲಚಕ್ರದ ಕಠೋರ ಕಟಾಕ್ಷವಾಯಿತು ಏನು ಹೇಳುವದು? ಸಪ್ಟಂಬರ ೧-೨ ನೇ ತಾರೀಖಿಗೆ ಪೂರ್ವ ಸಂಧಿಯ ಮೇಲೆ ಸಾಧಾರಣ ೩೦ ಸಾವಿರ ಚಚ್ಚೌಕ ಮೈಲು ಪ್ರದೇಶದ ಮೇಲೆ ಭೂಕಂಪವೆದ್ದಿತು. ಭೂಕಂಪದ ಸಂಗಡ ನಾಲ್ಕೂ ಕಡೆಯಿಂದ, ನಾಲ್ಕೂ ಬದಿಗಳಿಂದ ಅಗ್ನಿನಾರಾಯಣನು ಟೋಕಿಯೋ, ಯಾಕೋಹಾಮಾ ಪಟ್ಟಣಗಳಲ್ಲಿ ಪ್ರಾದುರ್ಭೂತನಾದನು. ಟೋಕಿಯೋ ಪಟ್ಟಣವು ಜಪಾನದ ರಾಜಧಾನಿಯು. ಜಪಾನ ರಾಷ್ಟ್ರದ ರಾಜವೈಭವವೆಲ್ಲ ಇಲ್ಲಿ ಕೇಂದ್ರೀಕೃತವಾಗಿದೆ. ಯಾಕೋಹಾಮಾ ಪಟ್ಟಣವು ದೇಶದ ಪ್ರಮುಖ ಬಂದರವು. ಪರದೇಶಗಳಿಗೆ ನಡೆಯುವ ಆಮದು, ರಫ್ತು ವ್ಯವಹಾರವು ಈ ಬಂದರದೊಳಗಿಂದಲೇ ಸಾಗುತ್ತದೆ. ಇಂಥ ಮಹತ್ವದ ಪಟ್ಟಣಗಳಲ್ಲಿ ಬೆಂಕಿಯೆದ್ದ ಮೇಲೆ ಕೇಳುವದೇನದೆ? "ಸಬ್‌ಸೇ ಜಾನ್ ಪ್ಯಾರಾ", ಪ್ರಜೆಗಳೆಲ್ಲರೂ ಪ್ರಾಣರಕ್ಷಣೆಗಾಗಿ ದಿಕ್ಕುಪಾಲಾಗಿ ಓಡಹತ್ತಿದರು. ಓಡುವರೆಲ್ಲಿ? ನಾಲ್ಕೂ ಬದಿಯಿಂದ ಜ್ವಾಲೆಗಳು ಕಿಕ್ಕಿರಿದವರನ್ನು ಸಂಹರಿಸಲು ಹಾತೊರೆಯುತ್ತಿದ್ದವು. ಅನೇಕರು ಹೀಗಾಗಿ ಅಗ್ನಿನಾರಾಯಣನಿಗೆ ತುತ್ತಾದರು. ಜ್ವಾಲೆಗಳಿಂದ ನೆರೆಹೊರೆಯ ವಾತಾವರಣವೆಲ್ಲ ತಪ್ತವಾಯಿತು. ಅನೇಕರು ಈ ತಾಪಕ್ಕೆ ತುತ್ತಾದರು. ಇವುಗಳಿಂದ ಪಾರಾದವರು ಹೊಟ್ಟೆಯ ಗೋಳು ತಾಳಲಾರದೆ, ಹೊಳೆ ಹಳ್ಳಗಳಲ್ಲಿ ದುಮುಕಿ ಮೃತ್ಯುಪಥವನ್ನೈದಿದರು. ಯಾಕೋಹಾಮಾ ಪಟ್ಟಣವು ಪ್ರಮುಖ ಬಂದರವು. ಅಲ್ಲಿ ದಂಡೆಯಲ್ಲಿ ಅನೇಕ ಹಡಗುಪಡೆಗಳಿದ್ದವು. ಅಗ್ನಿನಾರಾಯಣನಿಗೂ, ವರುಣನಿಗೂ, ಇದ್ದ ಪಕ್ಷಪಕ್ಷಕವನ್ನು ನೆನಿಸಿ ಅನೇಕ ಪ್ರಜೆಗಳು ಹಡಗುಪಡೆಗಳನ್ನು ಆಶ್ರಯಿಸಿದರು. ಅಲ್ಲಿ ತಮ್ಮ ರಕ್ಷಣವಾಗುವದು ಎಂದು ಒಡವರ ಭಾವನೆ. ಅಷ್ಟರಲ್ಲಿ ಒಂದು ಚಮತ್ಕಾರವು ಸಂಭವಿಸಿತು. ಅಗ್ನಿನಾರಾಯಣನ ಮಿತ್ರನಾದ ವಾಯುದೇವನು ಬಿರುಗಾಳಿಯನ್ನುಂಟುಮಾಡಿ, ಹಡಗುಪಡೆಗಳನ್ನೆಲ್ಲ ನಾಶಮಾಡಿಬಿಟ್ಟನು. ಅನೇಕರು ಸಿಡ್‌ಜೂಕಾ ಎಂಬಲ್ಲಿ ಆಶ್ರಯಹೊಂದಿದರು. ಅಲ್ಲಿ ಪ್ರಚಂಡ ಮಳೆ ಬಿದ್ದು, ಅವರ ದುರವಸ್ಥೆಯನ್ನು ಬಣ್ಣಿಸಲಸದಳವು. ಒಂದೆರಡು ದಿನಗಳಲ್ಲಿ ಜಪಾನ ದೇಶದ ೩೦ ಸಾವಿರ ಚಚ್ಚೌಕ ಪ್ರದೇಶದ ಮೇಲೆ ಅನಪೇಕ್ಷಿತ, ಕಲ್ಪನಾತೀತ ನಾಶವಾಯಿತು.

ಈ ಆಪತ್ತಿನಲ್ಲಿ ಎಷ್ಟು ಹಾನಿಯಾಯಿತೆಂದು ಹೇಳುವದು, ಅಂದಾಜು ಮಾಡುವದು, ದುಸ್ತರವು. ಯಾಕಂದರೆ, ಇಡೀ ಪಟ್ಟಣಗಳೇ ಪ್ರಜ್ವಲಿಸುತ್ತಿರುವಾಗ ಯಾರು ಬದುಕಿದರು, ಯಾರ ಅವಸ್ಥೆಯು ಏನಾಯಿತು, ಎಂದು ತಿಳಕೊಳ್ಳುವದು ಬಲು ಕಠಿಣವಾಗಿದೆ. ವಾರ್ತಾವಾಹಕ ಸಾಧನಗಳು ಸಹ ಇನ್ನೂ ಕ್ರಮದಂತೆ ಚಾಲೂ ಆಗಲಿಲ್ಲ. ಆಚೆ-ಈಚೆಯ ರಾಜ್ಯಗಳಿಂದ ಬಂದ ಸುದ್ದಿಯ ಮೇಲೆಯೇ ನಾವು ಅವಲಂಬಿಸಿರಬೇಕಾಗಿದೆ. ಟೋಕಿಯೋ ಪಟ್ಟಣದೊಳಗಿನ ಅರಮನೆಯು ಸುರಕ್ಷಿತವಿದೆ. ಅರಮನೆಯವರೆಲ್ಲರೂ ಸುರಕ್ಷಿತರಿದ್ದಾರೆಂದು ಒಮ್ಮೆ ಸುದ್ದಿ ಬಂತು. ಬಳಿಕ, ಕೆಲವರು ಮೃತಪಟ್ಟರೆಂದು ಇನ್ನೊಂದು ಸುದ್ದಿ ಬಂತು. ಅಷ್ಟರಲ್ಲಿ, ಅವರ ಪೈಕಿ ಹಲವರು ಬದುಕಿರುವರೆಂದು ತಿದ್ದುಪಡಿಸಿದ ಬಾತ್ಮಿ ಮತ್ತೊಂದು. ಯಾಕೋಹಾಮಾ ಬಂದರವು ಪೂರ್ಣವಾಗಿ ನಾಶವನ್ನೈದಿತು. ಅಲ್ಲಿಯ ಲಕ್ಷಾಪತಿಗಳು, ಭಿಕ್ಷಾಪತಿಗಳಾದರು. ಟೋಕಿಯೋ ಪಟ್ಟಣದ ಎಂಟರಲ್ಲಿ ಏಳು ಪಾಲು ಭಾಗವು ಸುಟ್ಟು ಬೂದಿಯಾಗಿದೆ. ಇಲ್ಲಿ ಹತ್ತು ಸಾವಿರ ಮಂದಿಗಳು ಮೃತ ಹೊಂದಿದರಂತೆ. ಯಾಕೋಹಾಮಾ ಪಟ್ಟಣದಲ್ಲಿ ೧ ಲಕ್ಷ ಜನರು ಮಡಿದರಂತೆ! ಈ ಎರಡು ಪಟ್ಟಣಗಳಲ್ಲಿ ಒಟ್ಟುಗೂಡಿ ಸಾಧಾರಣ ಹತ್ತು ಲಕ್ಷ ಜನರು ಸತ್ತರೆಂದು "ಮುಂಬಯಿ ಕ್ರೊನಿಕಲ" ಪತ್ರಿಕೆಯ ಟೋಕಿಯೋ ಸುದ್ದಿಗಾರನ ಅಂದಾಜು. ಈ ಸುದ್ದಿಗಾರನು ಈ ಆಪತ್ಕಾಲದಲ್ಲಿ ಸ್ವತಃ ಹಾಜರಿದ್ದನಂತೆ! ಹೇಗಾದರೂ ಮಾಡಿ, ಸುದೈವದಿಂದ ಪಾರಾಗಿ, ಕೋಬ ಪಟ್ಟಣದಿಂದ ಶುಕ್ರವಾರ ತಾರೀಖು ೭ನೇಗೆ ತಂತಿಯಿಂದ ಜಪಾನ ದೇಶದ ಮೇಲೊದಗಿದ ಆಪತ್ತನ್ನು ತಿಳಿಸಿರುವನು. ರಾಜಕುಟುಂಬದ ಅನೇಕ ಜನರು ಮೃತಿಯನ್ನೈದಿದರು. ರಾಷ್ಟ್ರದ ಅನೇಕ ಪ್ರಮುಖ ಪುರುಷರೂ ಈ ಮಹಾಯಜ್ಞದಲ್ಲಿ ಸಿಲುಕಿಕೊಂಡರಂತೆ! ಮಾರ್ಗ-ಬೀದಿಗಳೆಲ್ಲ ಶವಗಳಿಂದ ತುಂಬಿಹೋಗಿವೆ. ಆಹಾರ ಸಿಗುವದು ದುಃಸಾಧ್ಯವಾದ್ದರಿಂದ ಅನೇಕರು ಆತ್ಮಹತ್ಯ ಮಾಡಿಕೊಂಡು ಕಠೋರ ಕಾಲನಿಗೆ ತೃಪ್ತಿಗೊಳಿಸಿದರು. ಲಕ್ಷಾವಧಿ ಜನರು ಮನೆಮಾರು ಕಳಕೊಂಡು, ಕೋಬ ಪಟ್ಟಣವನ್ನು ಸೇರಿಕೊಂಡಿರುವರು. ಜಪಾನ ದೇಶದ ಮೇಲೆ ಒದಗಿದ ಕಾಲಶಕ್ತಿಯ ಕಠೋರ, ಕಟಾಕ್ಷದ, ದಿಗ್ದರ್ಶನವಿದು.

ಈಗ ಜಪಾನ ದೇಶದಲ್ಲಿ ನಿರಾಶ್ರಿತರ ವ್ಯವಸ್ಥೆಗಾಗಿ, ಜಪಾನ ಸರಕಾರವು ಬಹು ಪರಿಯಿಂದ ದುಡಿಯುತ್ತಿದೆ. ದೇಶದೊಳಗೆ ಒದಗಿದ ಇಕ್ಕಟ್ಟಿನ ಪರಿಸ್ಥಿತಿಯನ್ನು ಅರಿಂಗಲು, ಜಪಾನದ ಮಂತ್ರಿಮಂಡಳವು ಲಷ್ಕರೀ ಕಾಯಿದೆಯ ಜಾಹೀರನಾಮೆಯನ್ನು ಪ್ರಕಟಿಸಿದೆ. ಇದರಂತೆ ಜಪಾನ ಸರಕಾರವು ರಾಷ್ಟ್ರೀಯ ಚೈತನ್ಯವನ್ನೆಲ್ಲ ನಿರಾಶ್ರಿತರ ದುಃಖನಿವಾರಣೆಗಾಗಿ ಉಪಯೋಗಿಸುವದು. ಲಕ್ಷಾಪತಿಗಳ ಮನೆಗಳಲ್ಲಿ ನಿರಾಶ್ರಿತರಿಗೆ ಆಶ್ರಯವನ್ನಿತ್ತು, ಅವರಿಗೆ ವ್ಯವಸ್ಥೆ ಮಾಡುವದು. ಅರಮಂದಿರದ ಬದಿಗೆ ಬಿಡಾರುಗಳನ್ನು ಹೊಡೆಯುವದು. ಸ್ವಸೇವಕರೆಲ್ಲ ನಿರಾಶ್ರಿತರ ದುಃಖನಿವಾರಣೆಗಾಗಿ ದುಡಿಯುವರು. ನಿರಾಶ್ರಿತರೊಳಗೆ ಶಾಂತಭಂಗವಾಗದಂತೆ ವ್ಯವಸ್ಥೆಯನ್ನು ಕಾಯುವರು. ಸೌಕಾಬಲವಿದ್ದ ಪರದೇಶಗಳಿಂದ ಅನ್ನಪಾನವು ಗ್ರಿಪಬ್ಬ ಉದ್ವಸ್ತ ಪ್ರದೇಶಗಳಲ್ಲಿಯೂ ನಿರಾ-

ಶ್ರಿತರಿಗೆ ಪೂರೈಸುವದು, ಮನೆಮಾರು ಕಟ್ಟಲಿಕ್ಕೆ ಅವಶ್ಯವಿರುವ ಸಾಮುಗ್ರಿಗಳನ್ನೆಲ್ಲ ಪೂರೈಸುವ ಕರ್ತವ್ಯವೂ ನೌಕಾಬಲಕ್ಕೇ ವಹಿಸಲ್ಪಟ್ಟದೆ. ದುಃಖನಿವಾರಣ ನಿಧಿಯೊಂದೂ ಏರ್ಪಾಟಾಗಿದೆ. ಅದಕ್ಕೆ ಹತ್ತು ಲಕ್ಷಯೇನು ನಾಣ್ಯಅಂದರೆ, ೫೦ ಲಕ್ಷ ರೂಪಾಯಿಗಳು ಒಟ್ಟುಗೂಡಿದವಂತೆ ರಾಷ್ಟ್ರೀಯ ಆಪತ್ತುನಿವಾರಣೆಗಾಗಿ ನಡಿಸಿದ ಜಪಾನ ದೇಶದವರ ಉಪಾಯಗಳಿವು.

ಜಪಾನ ದೇಶವು ಒಂದು ರಾಷ್ಟ್ರವು. ಆದ್ದರಿಂದ, ಪರರಾಷ್ಟ್ರಗಳೂ ಅದರ ದುಃಖನಿವಾರಣೆಗಾಗಿ ಮುಂದಾಗಿವೆ. ಅಮೇರಿಕಾ ದೇಶವು ಪೂರ್ವ ಸಮುದ್ರದೊಳಗೆ ಓಡಾಡುವ ಹಡಗು ಪಡೆಗಳನ್ನೆಲ್ಲ ಜಪಾನ ದೇಶಕ್ಕೆ ವಹಿಸಿದೆ. ಇದಲ್ಲದೆ, ಅಲ್ಲಿಯ ಕೆಂಪು ಬುರೀಖಿನ ಸಂಸ್ಥೆಯು ವಿದ್ಯಮಾನ ೫೦ ಲಕ್ಷ ಡಾಲರುಗಳನ್ನು, ಅಂದರೆ, ಒಂದುವರೆ ಕೋಟಿ ರೂಪಾಯಿಗಳ ನಿಧಿಯನ್ನ ಎತ್ತುವ ತಯಾರಿ ಮಾಡಿರುವದು. ಕೆಲಿಫೋರ್ನಿಯಾದೊಳಗೆ ಹುಟ್ಟಿದ ಅಕ್ಕಿಯನ್ನೆಲ್ಲ ಜಪಾನಕ್ಕೆ ಕಳಿಸುವ ನಿರ್ಣಯವಾಗಿದೆ. ಅಧ್ಯಕ್ಷರಾದ ಮಿ॥ ಕೂಲಿಜ್ಜರವರು ಭೂಕಂಪದಿಂದ ಅನಾವರಣದವರಿಗೆಲ್ಲ ತಕ್ಕ ಸಹಾಯ ಮಾಡುವರೆ ಜಪಾನ ದೇಶದ ಅಧಿಕಾರಿಗಳಿಗೆ ಬೆಂಬಲವನ್ನೀಯಲು ದೃಢನಿಶ್ಚಯ ಮಾಡಿರುವರು. ಅಮೇರಿಕಾ-ಜಪಾನ ದೇಶಗಳಲ್ಲಿರುವ ಸದ್ಯದ ಸಂಬಂಧಗಳನ್ನು ಸಮಾಲೋಚಿಸಿದರೆ, ಅಮೇರಿಕಾ-ದೇಶವು ಸಂಕಟ ಸಮಯಕ್ಕೆ ನೆರವಾಗಿ ತನ್ನ ಔದಾರ್ಯ ಬುದ್ಧಿಯನ್ನು ಪ್ರದರ್ಶಿಸಿರುವದೆಂದು ಯಾರು ಹೇಳರು? ಇಂಗ್ಲಂಡ ದೇಶದಲ್ಲಿಯೂ ಈ ಬಗ್ಗೆ ಒಂದು ನಿಧಿಯನ್ನು ಏರ್ಪಡಿಸಿರುವರು. ಅದಕ್ಕೆ ೩೦ ಸಾವಿರ ಪವನುಗಳು ಒಟ್ಟುಗೂಡಿದವಂತೆ. ಇದಲ್ಲದೆ, ೩-೪ ಹಡಗುಗಳು ಸಾಮುಗ್ರಿ ತುಂಬಿ ಯಾಕೋಹಾಮಾ, ಕೋಬ ಪಟ್ಟಣಗಳಿಗೆ ಕಳಿಸಲ್ಪಟ್ಟವೆ. ಆಸ್ಟ್ರೇಲಿಯಾ ದೇಶವು ೬೦ ಸಾವಿರ ಪವನುಗಳನ್ನು ನಿರಾಶ್ರಿತರಿಗಾಗಿ ಮಂಜೂರು ಮಾಡಿದ್ದಲ್ಲದೆ, ಅನ್ನಸಾಮುಗ್ರಿಗಳನ್ನು ತುಂಬಿ ಒಂದು ಹಡಗವನ್ನು ಕಳಿಸುವ ಏರ್ಪಾಟು ಮಾಡಿದೆ. ಹಿಂದುಸ್ಥಾನದಲ್ಲಿಯೂ ಸರ್ವಾಧಿಪತಿಗಳು "ಜ್ಯಾಪನೀಸರಾಯರ ರಿಲೀಫ ಫಂಡು" ಎಂಬ ಹೆಸರಿನಿಂದ ಒಂದು ನಿಧಿಯನ್ನು ಒಟ್ಟುಗೂಡಿಸಹತ್ತಿರುವರು. ಈ ನಿಧಿಗೆ ಸರ್ವಾಧಿಪತಿಗಳು ಐದು ಸಾವಿರ ರೂಪಾಯಿಗಳನ್ನು ಅರ್ಪಿಸಿರುವರು. ಜಪಾನ ದೇಶದ ಸಂಕಟ ಸಮಯದಲ್ಲಿ ನೆರವಾಗಲು ಅಖಿಲ ಭೂಮಂಡಲವು ಯತ್ನಿಸುತ್ತಿರುವದನ್ನು ನೋಡಿ, ಜಪಾನ ದೇಶವು ರಾಷ್ಟ್ರಗಳಿಗೆಲ್ಲ ಕೃತಜ್ಞತಾಪೂರ್ವಕ ವಂದನೆಗಳನ್ನು ಸಮರ್ಪಿಸುತ್ತದೆ. ಟೋಕಿಯೋ ಪಟ್ಟಣದಲ್ಲಿ ನಡೆಯುತ್ತಿದ್ದ, ದೊಡ್ಡದೊಡ್ಡ ವೃತ್ತಪತ್ರಗಳೆಲ್ಲ ಅಗ್ನಿನಾರಾಯಣನಿಗೆ ತುತ್ತಾದ್ದರಿಂದ, ಕೃತಜ್ಞತೆಯನ್ನು ಪ್ರದರ್ಶಿಸುವ ಆಧುನಿಕ ಸಾಧನೆಗಳು ಇಲ್ಲದಂತಾಗಿವೆ. ಜಪಾನ ದೇಶದ ಮೇಲೊದಗಿದ ಈ ಆಪತ್ತು ಅತಿ ಭಯಂಕರವು. ೯೦೩ ವರುಷಗಳ ಮೊದಲು, ಯೆನಸಿ ಭೂಕಂಪವಾದಾಗ ಈ ಪ್ರಕಾರದ ಹಾನಿಯಾಗಿತ್ತೆಂದು ಹೇಳುತ್ತಾರೆ. ಅಷ್ಟು ದುರ್ಧರ ಪ್ರಸಂಗವು ಈಗೊದಗಿರುತ್ತದೆ. ಈ ಆಪತ್ತಿನೊಳಗಿಂದ ಕಾಪಾಡುವದು ಕಾಲಶಕ್ತಿಯೇ ಹೊರತು, ಬೇರೊಂದಿಲ್ಲ. ಲಕ್ಷಾವಧಿ ನಿರಾಶ್ರಿತರನ್ನು ವ್ಯವಸ್ಥೆಯಿಂದ ಕಾಪಾಡಿಕೊಳ್ಳುವ ಅತಿ ಮಹತ್ವದ ಜವಾಬದಾರಿಯು ಜಪಾನ ಸರಕಾರದಮೇಲೆ ಬಂದೊದಗಿದೆ. ಅದನ್ನು ಶಿಸ್ತಿನಿಂದ, ವ್ಯವಸ್ಥೆಯಿಂದ, ಪಾರಗಾಣಿಸಲು ಅವಶ್ಯವಿರುವ ಸ್ಥೈರ್ಯವನ್ನೂ, ಧೈರ್ಯವನ್ನೂ, ಸಾಮರ್ಥ್ಯವನ್ನೂ ಕಾಲರೂಪಿ ಪರಮಾತ್ಮನೇ ಅದಕ್ಕೆ ದಯಪಾಲಿಸಲೆಂದು ನಾವು ಭಕ್ತಿಪೂರ್ವಕ ಪ್ರಾರ್ಥಿಸುವೆವು. ಯಾಕಂದರೆ ಕಾಲನು ಎಬ್ಬಿಸಿದ ಹಾವಳಿಯನ್ನು ಪರಿಹರಿಸುವ ಸಾಮರ್ಥ್ಯವು ಕಾಲನದೇ ಇರುವದಲ್ಲವೇ!

ಸ್ಫುಟ ಸೂಚನೆಗಳು.

೧ ಕಳೆದ 'ಗೋಕುಲಾಷ್ಟಮಿಯ ಸುಮುಹೂರ್ತದಲ್ಲಿ ನಾಗಪುರದ ಸತ್ಯಾಗ್ರಹವು ಪೂರ್ಣವಾಗಿ ವಿಜಯಹೊಂದಿತೆಂದು ತಿಳಿಸಲು ನಮಗೆ ಅತ್ಯಂತ ಆನಂದವಾಗುತ್ತದೆ. ಅಂದಿಗೆ ಮಧ್ಯಪ್ರಾಂತದ ಜೈಲುಗಳೊಳಗಿಂದ ಸತ್ಯಾಗ್ರಹಿಗಳು ಬಂಧಮುಕ್ತ ಮಾಡಲ್ಪಟ್ಟರು. ಸರಕಾರವು ಶಾಂತಿಯಿಂದ ಸತ್ಯಾಗ್ರಹಿಗಳನ್ನು ವಿಮೋಚಿಸಲು, ತಿಳಿಸಿದ್ದರಂತೆ. ಸತ್ಯಾಗ್ರಹದ ಸೂತ್ರಧಾರರಾದ ಶೇಟ ಜಮುನಾಲಾಲ ಬಜಾಜ, ಶ್ರೀ॥ ನೀಲಕಂಠರಾವ ದೇಶಮುಖ, ಮಹಾತ್ಮಾ ಭಗವಾನದೀನಜಿ, ಟಂಡುಲಾಲ ದೇಸಾಯಿ, ಡಾ॥ ನಾರಾಯಣರಾವ ಹರ್ಡೀಕರ, ಮೊದಲಾದ ಪ್ರಮುಖರೆಲ್ಲರೂ ನಾಗಪುರದ ಜೈಲಿನಿಂದ ಹೊರಬಿದ್ದರು. ಕೈದುಖಾನೆಯ ಹೆಬ್ಬಾಗಿಲಿನಲ್ಲಿ ವಿಜಯಿ ಸತ್ಯಾಗ್ರಹಿಗಳನ್ನು ಸ್ವಾಗತೀಕರಿಸುವರೆ, ಶ್ರೀ॥ ವಲ್ಲಭಭಾಯಿ ಪಟೇಲ, ಮೊದಲಾದ ರಾಷ್ಟ್ರೀಯ ಮುಖಂಡರು ಹೋಗಿದ್ದರು. 'ಮಹಾತ್ಮಾ ಗಾಂಧೀಕೀ ಜೈ' 'ವಂದೇ ಮಾತರಂ' ಜಯಘೋಷಗಳಿಂದ ಜನಸ್ತೋಮವೆಲ್ಲ ರಾಷ್ಟ್ರವೀರರನ್ನು ಸತ್ಕರಿಸಿತು. ಬಳಿಕ, ಅವರನ್ನೆಲ್ಲ ಕರಕೊಂಡು ಅವರ ಆಹಾರ ವ್ಯವಸ್ಥೆಯಲ್ಲಿ ಕೊಂಗ್ರೆಸ ಕಮಿಟಿಯು ವಿದ್ಯಮಾನ ನಡೆಯಿತು. ಮಾರನೇ ದಿನ ಸಾಯಂಕಾಲಕ್ಕೆ ನಾಗಪುರದಲ್ಲಿ ಪಂಡಿತ ಮಖನಲಾಲ ಚತುರ್ವೇದಿಯವರ ಅಧ್ಯಕ್ಷತೆಯಲ್ಲಿ ಪ್ರಚಂಡ ಸಭೆಯಾಯಿತು. ಶ್ರೀ॥ ವಲ್ಲಭಭಾಯಿ ಪಟೇಲರವರು ಸತ್ಯಾಗ್ರಹ ಸಂಗ್ರಾಮದ ಪೂರ್ಣಾಹುತಿಯು ಆಗಸ್ಟ ತಾ. ೧೮ನೇಗೆ ಹೇಗಾಯಿತು, ಆ ಬಗ್ಗೆ 'ಎಂಗ್ಲೋ-ಇಂಡಿಯನ್' ವೃತ್ತಪತ್ರಕರ್ತರು ಪ್ರಕಟಿಸಿದ ಬಾತ್ಮಿಯು ಎಷ್ಟು ಅಯಥಾರ್ಥವಿದೆ, ಎಂಬದನ್ನು ಸಾಂಗೋಪಾಂಗ ವಿವರಿಸಿದರು. ಅವರ ಖುಲಾಸೆಯಿಂದ ದೇಶದೊಳಗುಂಟಾದ ತಪ್ಪು ಗ್ರಹಿಕೆಗಳು ಇನ್ನಾದರೂ ನಷ್ಟವಾಗಲೆಂದು ನಮ್ಮ ಬಯಕೆ. ಆಗಸ್ಟ ತಾ ೧೮ನೇ ಗಾಂಧಿ ದಿನಕ್ಕೆ ಹೊರಡಿಸಿದ ಮೆರವಣಿಗೆಯು, ಪೋಲೀಸ ಸುಪರಿಂಟೆಂಡೆಂಟರು ಹೊರಡಿಸಿದ ಹುಕುಮನ್ನು ಉಲ್ಲಂಘಿಸದೇ ಕೇತಲೇ ಎಂದು ಸ್ಪಷ್ಟ ನಿರ್ದೇಶ ಮಾಡಲ್ಪಟ್ಟಿತ್ತು. ಹಸ್ತ ಪತ್ರಿಕೆಯಲ್ಲಿ ಸಹ ಇದೇ ವಿಧಾನವನ್ನು ಮಾಡಿ, ಪೋಲೀಸ ಸುಪರಿಂಟೆಂಡೆಂಟರಿಗೆ ಮಾಹಿತಿಗಾಗಿ ಕಳಿಸಿತ್ತು. ಸತ್ಯಾಗ್ರಹಿಗಳ ಕಾದಾಟದಲ್ಲಿ ಗೌಪ್ಯವೇನಿಲ್ಲ. ಪೋಲೀಸ ಸುಪರಿಂಟೆಂಡೆಂಟರಿಗೆ ಮೆರವಣಿಗೆಯ ಸುದ್ದಿ ತಿಳಿಯದೇ ಕಲ್ಲದೆ, ಅವರಿಗೆ ಪ್ರತಿಬಂಧಿಸುವ ಇರಾದೆ ಇದ್ದಲ್ಲಿ, ತಕ್ಕ ತಜವೀಜು ಕೈಕೊಳ್ಳಲು ಅನುವಾಗಬೇಕೆಂದು ಹಸ್ತಪತ್ರಿಕೆಯು ಪೋಲೀಸರಿಗೆ ಕಳಿಸಲ್ಪಟ್ಟಿತ್ತು. ಈ ಪತ್ರಿಕೆಯ ಹಿಂಬದಿಗೆ ಅಪ್ಪಣೆಯನ್ನು ದಯಪಾಲಿಸಿದ್ದೇವೆಂದು ಪೋಲೀಸ ಸುಪರಿಂಟೆಂಡೆಂಟರು ಶರಾ ಹೊಡೆದು, ಸಹಿ ಮಾಡಿದರೆ, ಅದಕ್ಕೆ ಶ್ರೀ॥ ವಲ್ಲಭಭಾಯಿಯವರು ಜವಾಬದಾರರಾಗಲಾರರು. ಸತ್ಯಾಗ್ರಹಿಗಳ ಕಾದಾಟವು ಯೋಗ್ಯವಿದ್ದು, ಅದನ್ನು ಪ್ರತಿಬಂಧಿಸಿ, ಪಡೆದ ನಾಚಿಕೆಗೇಡಿನಿಂದ ಪಾರಾಗಲು, ಇಜ್ಜತನ್ನು ಕಾಪಾಡಿಕೊಳ್ಳಲು, ಅಧಿಕಾರಿಗಳಿಗೆ ಒಂದು ನೆವ ಬೇಕಾಗಿತ್ತು. ಹಸ್ತ ಪತ್ರಿಕೆಯನ್ನು ಅರ್ಜಿಯಲ್ಲಿ ರೂಪಾಂತರಿಸಿ, ಸತ್ಯಾಗ್ರಹಿಗಳು ಅಪ್ಪಣೆ ಬೇಡಿದರೆಂದು ಜಗತ್ತಿಗೆ ಸಾರಿದರೆ, ಅದರಿಂದ ಪ್ರಯೋಜನವಾಗಲಾರದು. ಸತ್ಯಾಗ್ರಹ ಸಮರವು ನ್ಯಾಯ್ಯವಿದ್ದೆಂಬುದು ಇದರ ಮೇಲಿಂದ ಸ್ಪಷ್ಟವಾಗುತ್ತದೆ. ಸತ್ಯಾಗ್ರಹಿಗಳನ್ನೆಲ್ಲ ವಿಮೋಚಿಸಿ, ಮಧ್ಯಪ್ರಾಂತ ಸರಕಾರವು ಕೃತಕರ್ಮಗಳ ಪಶ್ಚಾತ್ತಾಪವನ್ನು ವ್ಯಕ್ತಪಡಿಸಿದೆ. ಲೋಕಮತವನ್ನು ಮನ್ನಿಸುವಷ್ಟು ಔದಾರ್ಯವನ್ನು ಪ್ರದರ್ಶಿಸಿದ ಬಗ್ಗೆ ನಾವು ಅದನ್ನು ಮನಃಪೂರ್ವಕ ಅಭಿನಂದಿಸುವೆವು. ಸತ್ಯಾಗ್ರಹದ ಸಮರದಲ್ಲಿ ಭಾರತೀಯರು ಮಹಾತ್ಮರ ಶಸ್ತ್ರದಿಂದ ವಿಜಯಿಯಾದ ಬಗ್ಗೆ ಅವರನ್ನೂ ಉತ್ಸಾಹಾನಂದದಿಂದ ಅಭಿನಂದಿಸಿ, ರಾಷ್ಟ್ರವನ್ನು ಇದೇ ಪ್ರಕಾರದ ಕಾದಾಟದಿಂದ ವಿಮೋಚಿಸಲು ಭಾರತೀಯರಿಗೆ ಸಾಮರ್ಥ್ಯವು ಪ್ರಾಪ್ತವಾಗಲೆಂದು ಪರಮಾತ್ಮನೆಡೆಗೆ ಪ್ರಾರ್ಥಿಸುವೆವು.

---

೨ ಮಧ್ಯಪ್ರಾಂತ ಸರಕಾರಕ್ಕೆ ಅಭಿನಂದಿಸುವಾಗ, ಒಂದು ಸಂಗತಿಯನ್ನು ಸೂಚಿಸಬೇಕಾಗಿದೆ. ಸತ್ಯಾಗ್ರಹಿಗಳನ್ನು ಬಂಧಮುಕ್ತ ಮಾಡುವ ಹುಕುಮುಗಳು ಪೂರ್ಣವಾಗಿ ವಿಸ್ತರಿಸಲ್ಪಡಲಿಲ್ಲ. ಸತ್ಯಾಗ್ರಹಿ ಕೈದಿಗಳಿಗೆ ಬಿನ್‌ಶರ್ತ ಮುಕ್ತ ಮಾಡಿರುವರೆಂಬದೂ ನಿಜ. ಆದರೆ, ಜೈಲುಖಾನೆಯಲ್ಲಿ ನಿಯಮದಂತೆ ವರ್ತಿಸಲಿಲ್ಲೆಂದು ಜೈಲುಖಾನೆಯ ಶಿಕ್ಷೆಯಾದ ಏಳು ಸತ್ಯಾಗ್ರಹಿಗಳು ಮಾತ್ರ ಇನ್ನೂ ಬಂಧನದಲ್ಲೇ ನರಳುತ್ತಿರುವರು. ಅವರನ್ನು ಬಂಧನದಲ್ಲಿಡುವ ನೀತಿಯು ಯಾವದೆಂದು ನಾವರಿಯೆವು. ಸತ್ಯಾಗ್ರಹದ ಕಾದಾಟವು ನ್ಯಾಯ್ಯವಿದ್ದೆಂದು ಒಪ್ಪಿದ ಮೇಲೆ, ಅದರಂತೆ ಶಿಕ್ಷೆಹೊಂದಿದ ಕೈದಿಗಳನ್ನೆಲ್ಲ ಬಂಧಮುಕ್ತ ಮಾಡಿದ ಮೇಲೆ, ಬಲಾತ್ಕಾರಕ್ಕೆ ಸೆರೆಬಿದ್ದವರು ಜೈಲುಖಾನೆಯ ನಿಯಮಗಳನ್ನು ಪಾಲಿಸದಿದ್ದರೆ, ಅದರ ತಪ್ಪೇನು? ಮೂಲ ಕಾರಾಗೃಹವಾಸವೇ ಅನ್ಯಾಯವಿದ್ದಿರುವಾಗ, ಈ ಜೈಲುಖಾನೆಯೊಳಗಿನ ಪೋಟ ಶಿಕ್ಷೆಯು ಹೇಗೆ ನ್ಯಾಯ್ಯವಿದ್ದಾಗುವದು? ಜೈಲುಖಾನೆಯಲ್ಲಿ ಪ್ರತಿಬಂಧಿಸಬಾರದಿದ್ದವರಿಗೆ ಅಲ್ಲಿ ಪ್ರತಿಬಂಧಿಸಿ, ಕಾರಣಾಂತರದಿಂದ, ಪ್ರಾಮಾಣಿಕ

ತನದಿಂದ ಅಲ್ಲಿ ಮಾನಹಾನಿಕರ ನಿಯಮಗಳನ್ನು ಉಲ್ಲಂಘಿಸಿದ ಬಗ್ಗೆ ಅವರನ್ನು ದಂಡಿಸುವದು ಕೇವಲ ಅನ್ಯಾಯವೆಂದು ಯಾರು ಹೇಳರು? ಪ್ರಾಂತಿಕ ಸರಕಾರವು ವೃಥಾ ಕ್ಷುದ್ರ ಬುದ್ಧಿಯನ್ನು ಪ್ರದರ್ಶಿಸಿರುವದೆಂದು ಅನೇಕರು ಉದ್ಗರಿಸದಿರಲಾರರು. ಸರಕಾರವು ನಿರುಪಾಯವಾಗಿ, ಅನಿವಾರ್ಯ ಪಕ್ಷವೆಂದು ಸತ್ಯಾಗ್ರಹಿಗಳನ್ನು ವಿಮೋಚಿಸಿರುವದೆಂದು ಸಹ ತರ್ಕಿಸಬಹುದು. ಪ್ರಾಂತಿಕ ಸರಕಾರವು ಈ ಸತ್ಯಾಗ್ರಹಿಗಳ ಪ್ರಶ್ನೆಯನ್ನು ಪುನಃ ವಿಚಾರಿಸಿ, ನ್ಯಾಯ-ನೀತಿಯಂತೆ, ಅವರಿಗೆ ವಿಮೋಚಿಸುವದಿಷ್ಟವಿದ್ದಲ್ಲಿ, ಬಿಣ ಗೌರವಕ್ಕೆ ಬಲಿಬೀಳದೆ, ಅವರನ್ನು ಬಂಧಮುಕ್ತ ಮಾಡಬೇಕೆಂಗಿ ಸೂಚಿಸುವೆವು.

---

೨ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿರಿ ನೆರೆಯಿಂದೊದಗಿದ ಅನರ್ಥವನ್ನು ವಾಚಕರು ಅರಿತಿರುವರು. ಅಪತ್ಕಾಲದಲ್ಲಿ ಕಲೆಕ್ಟರರಂಥ ಜಿಲ್ಹಾಧಿಪತಿಗಳು ಬಂಟವಾಳದಲ್ಲಿ ಪ್ರತ್ಯಕ್ಷ ಹಾಜರಿದ್ದು, ಅಲ್ಲಿಯ ಎಲ್ಲ ಪರಿಸ್ಥಿತಿಯನ್ನು ಕಣ್ಣಾರೆ ಕಂಡಿರುವರು. ಇದರಮೇಲಿಂದ, ಜಿಲ್ಲೆಯ ಒಡೆಯರು ಸರಕಾರಕ್ಕೆ ನಡೆದ ಹಕೀಕತನ್ನು ಯಥಾರ್ಥವಾಗಿ ತಿಳಿಸಿ ಜನರಿಗೆ ಶಿಗತಕ್ಕ ಸವಲತುಗಳನ್ನು ದಯಪಾಲಿಸುವರೆಂದು ಪ್ರಜೆಗಳೆಲ್ಲರೂ ಆತುರರಿದ್ದರು. ಅಷ್ಟರಲ್ಲಿ, ಜಿಲ್ಹಾಧಿಪತಿಗಳ ವರದಿಯು ಪ್ರಕಟವಾಯಿತು. ಪ್ರತ್ಯಕ್ಷ ಉಪವಾಸವು ಯಾರಿಗೂ ಬಿದಗಲಿಲ್ಲೆಂತಲೂ, ಗೌಡಸಾರಸ್ವತರ ದೇವಸ್ಥಾನದಲ್ಲಿ ಜನರಿಗೆ ಮೊದಲಿನಿಂದಲೇ ಧರ್ಮಾರ್ಥವಾಗಿ ಆಹಾರದ ವ್ಯವಸ್ಥೆಯಾಗಿತ್ತೆಂತಲೂ ಬರೆಯುತ್ತಾರೆ. ರಿಪೋರ್ಟನ್ನು ಓದಿದವರಿಗೆ ನೆರೆಯು ಮೊದಲೇ ತನ್ನ ಆಗಮನದ ನೋಟೀಸು ಕೊಟ್ಟಂತೆ, ಪ್ರಜೆಗಳಾದರೂ, ಆ ಬಗ್ಗೆ ಪೂರ್ವ ತಯಾರಿ ಮಾಡಿದ್ದಂತೆ ಭಾಸವಾಗುವದು ಸಹಜವು. ಬಂಟವಾಳದ ನೆರೆಯೇನು ವಿಶೇಷವಲ್ಲ. ನಿರೀಕ್ಷಣೆಯಂತೆ, ಬಂತು, ಹೋಯಿತು; ಇದರಿಂದ, ವಿಶೇಷ ಕಷ್ಟ ಸಹ ಒದಗಲಿಲ್ಲವೆಂದು ಮೇಲಧಿಕಾರಿಗಳು ಶರಾ ಬರೆದು, ರಿಪೋರ್ಟನ್ನು ದಪ್ತರದಲ್ಲಿ ಕಟ್ಟಿಟ್ಟ, ಪೂರ್ವದಂತೆ, ಮುಂದೆಯೂ ನಡೆದಂತಾಯಿತು. ನಷ್ಟದ ಮಾನವು ಸಹ ಕಲೆಕ್ಟರ ಸಾಹೇಬರು ೧೦ ಲಕ್ಷಕ್ಕೆ ಇಳಿಸಿರುವರು. ಇದೂ ಸಹ ಶಿರಸ್ತೇದಾರರ ಅಂದಾಜೆಂದು ನಮೂದಿಸಿ, ಅತಿಶಯೋಕ್ತಿಯದೆಂದು ಸೂಚಿಸಿರುವರು. ಪ್ರಜೆಗಳಿಗೆ ನಷ್ಟವೆಷ್ಟಾಯಿತು ಎಂದು ಸಾಹೇಬರು ಪ್ರತ್ಯಕ್ಷ ಹಾಜರಿದ್ದಾಗ, ಈ ಪರಿಯ ಕಥೆ. ಬ್ರಿಟಿಶರಿಗೆ ನಮ್ಮ ದುಃಖವಷ್ಟು ತಿಳಿದರೆ, ಅದನ್ನು ಪರಿಹಾರಮಾಡಲು ಅವರು ಒಗ್ಗಾಲಿನಿಂದ ಸಿದ್ಧರಿರುವರೆಂದು ಭಾವಿಸುವ ಭಕ್ತರಿಗೆ ಇದೊಂದು ಜಾಗ್ರತಿ. ಕಲೆಕ್ಟರರ ದೃಷ್ಟಿಕೋನವು ಹೀಗೇಕೆ ಬದಲಾಯಿತು? ಎಂದು ಅನೇಕರು ಕೇಳಬಹುದು. ಈ ಪ್ರಶ್ನೆಗೆ ಶ್ರೀ ಕಾರ್ನಾಡ ಸದಾಶಿವರಾಯರು ಉತ್ತರವನ್ನಿತ್ತಿರುವರು. ವರಿಷ್ಠಾಧಿಕಾರಿಗಳೇ ತಮ್ಮ ಕೈಕೆಳಗಿನ ಜಿಲ್ಹಾಧಿಕಾರಿಗಳಿಗೆ ನೆರೆಯ ಹಾವಳಿಯಿಂದುಂಟಾದ ಅನರ್ಥದ ಅಂದಾಜನ್ನು ಆದಷ್ಟು ಕಡಿಮೆಯೆನಿಸುವಂತೆ ತಿಳಿಸಲು ಗುಪ್ತ ಹುಕುಮು ಹೊರಡಿಸಿದ ಸಾಧಾರ ಸಿದ್ಧಿ. ಇದರ ಮೇಲಿಂದ ಪ್ರಜೆಗಳಿಗೆ ನೌಕರಶಾಹಿಯ ಆಡಳಿತೆಯಲ್ಲಿ ಸಂಕಟ ಸಮಯಕ್ಕೆ ನೆರವಾಗುವವರು, ನೆರವಾಗಬೇಕಾದವರು ದೇಶಬಾಂಧವರೇ ಹೊರತು, ಅನ್ಯರಲ್ಲೆಂದು ಎಲ್ಲರೂ ತಿಳಿದಿರಲಿ. ಈ ಸಂದರ್ಭದಲ್ಲಿ ನಮ್ಮ ಜಿಲ್ಹಾಧಿಪತಿಗಳಾದ ಮಿ ಹೇಗರವರು ಹಳದೀಪುರ ಆತ್ತಕಡೆಗೆ ಒದಗಿದ ಹಾನಿಯನ್ನು ೪೫ ಸಾವಿರವೆಂದು ಹೇಳುವಾಗ, ಕುಂದಾಪುರ ನಿರಾಶ್ರಿತರೇ ಕೊಟ್ಟದ್ದೆಂದು 'ಮುಂಬಯಿ ಕ್ರಾನಿಕಲ್' ಗೆ ಬರೆದಿರುವರು. ನಿರಾಶ್ರಿತರು ಕೊಟ್ಟದ್ದೆಂದ ಕೂಡಲೆ, ಹಾನಿಯು ಕಡಿಮೆಯಾಯಿತೆಂದು ಅವರ ತಿಳುವಳಿಕೆ ಇದ್ದರೆ, ಜಿಲ್ಲೆಯೊಳಗಿನ ತಮ್ಮ ಅಧಿಕಾರಿಗಳ ಮುಖಾಂತರ ನಿಕ್ಕಿ ಅಂದಾಜನ್ನು ಮಾಡಬಹುದಿತ್ತು. ನಿರಾಶ್ರಿತರು ತಮ್ಮ ನಷ್ಟದ ಅಂದಾಜನ್ನು ಹೆಚ್ಚು ಹೇಳುವದರಲ್ಲಿ ಸ್ವಾರ್ಥದಿಂದ ಪ್ರೇರಿತರಾಗಿಲ್ಲ ಯಾಕಂದರೆ, ನಿರಾಶ್ರಿತರಿಗೆ ಹೇಳಿದಷ್ಟು ರಕಮನ್ನು ಹಂಚಲಿಕ್ಕೆ ಮಿ। ಹೇಗರವರು ಸರಕಾರಿ ಕೋಶವನ್ನು ತೆಗೆದುಕೊಂಡು ಹಳದೀಪುರಕ್ಕೆ ಗಮಿಸಿದ್ದಿಲ್ಲ. ಹೀಗಿದ್ದು, ಸುಮ್ಮನೆ ಪ್ರಜೆಗಳಿಗೊದಗಿದ ಅನರ್ಥವನ್ನು ಕಡಿಮೆ ಮಾಡುವದರಲ್ಲಿ ಫಲವೇನಿದೆ? ಜವಾಬದಾರ ಅಧಿಕಾರಿಗಳು ಪ್ರಜೆಗಳಿಗೊದಗಿದ ಸಂಕಟದ ವ್ಯಾಪ್ತಿಯನ್ನು ನೆನೆಸಿ, ಅದರೊಳಗಿಂದ ಜನರನ್ನು ಪಾರಗಾಣಿಸುವರೆ ತಕ್ಕ ಇಲಾಜು ಕೈಕೊಳ್ಳಬೇಕು. ಇಷ್ಟು ಔದಾರ್ಯ ಬುದ್ಧಿಯು ನೌಕರಶಾಹಿಗಿದ್ದರೆ, ಸ್ವರಾಜ್ಯ ಚಳವಳಿಯನ್ನು ಪುರಸ್ಕರಿಸುವ ಅವಶ್ಯಕತೆಯು ಇನ್ನೊಂದು ಪ್ರಜೆಗಳಿಗೆ ತೋರುತ್ತಿದ್ದಿಲ್ಲ.

---

೪. ಇನ್ನೊಂದು ವಿಷಯ ಪ್ರಕಾರವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಯೋಜಿತವಾಗಿದೆ. ಮಾನವ ಜಾತಿಗೆ ಭವಸಾಗರದಿಂದ ಉದ್ಧಾರಮಾಡಲು ಟೊಂಕಕಟ್ಟಿದ ಪಾದ್ರಿ ಸಾಹೇಬರು ಪ್ರಜೆಗಳ ಸಂಕಟ ಸಮಯವನ್ನು ಸಾಧಿಸಿ, ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಿರುವರು. ಅನ್ನ ವಸ್ತ್ರಗಳಿಗಾಗಿ 'ಭಿಕ್ಷಾಂದೇಹಿ' ಮಾಡುವ ನಿರಾಶ್ರಿತರಿಗೆ ಕ್ರೈಸ್ತ ಧರ್ಮದ ಗುರುಗಳಾದ ಪಾದ್ರಿ ಸಾಹೇಬರು ಭಿಕ್ಷೆ ಹಾಕುವ ಮೊದಲು, ಧರ್ಮದೀಕ್ಷೆಯನ್ನು ಕೊಡುತ್ತಾರಂತೆ! ಧರ್ಮಪ್ರಸಾರಮಾಡುವದು ಪಾದ್ರಿಗಳ ಕಾರ್ಯವೆಂದು ನಾವೊಪ್ಪುವೆವು. ಧರ್ಮ ಪ್ರಸಾರದಂಥ ಪವಿತ್ರ ಕಾರ್ಯದಲ್ಲಿ ಅಧರ್ಮ ಕೃತ್ಯಗಳನ್ನು ಆಚರಿಸಬಾರದೆಂದು ಎಲ್ಲ ಧರ್ಮಾಭಿಮಾನಿಗಳು ಒಪ್ಪಬೇಕು. ಪಾದ್ರಿಸಾಹೇಬರೂ ಒಪ್ಪುವರೆಂದು ನಮ್ಮ ನಂಬಿಗೆ. ಧರ್ಮಾಂತರ ಮಾಡಬೇಕಾದರೆ, ಶಿಷ್ಯನ ಆತ್ಮಸಂತೋಷದಿಂದ ಈ ಕಾರ್ಯವನ್ನು ನೆರವೇರಿಸಬೇಕು. ಹೀಗಿದ್ದು, ಪ್ರಜೆಗಳ ಆಪತ್ಕಾಲವನ್ನು ಸಾಧಿಸಿ ಅವರ ಇಚ್ಛೆ ಇಲ್ಲದೆ, ಕ್ರೈಸ್ತ ಧರ್ಮದ ದೀಕ್ಷೆ ಕೊಡುವದು ಪಾತಕರವು; ನೀಚ ಕೃತ್ಯವೆಂದು ಸಹ ಹೇಳಲಡ್ಡಿಯಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯೊಳಗಿನ ಪಾದ್ರಿ ಸಾಹೇಬರು ಸುವಿಚಾರದಿಂದ ಈ ಅಧರ್ಮ ಕೃತ್ಯದಿಂದ ಪರಾವೃತ್ತರಾಗಬೇಕಾಗಿ ವಿನಯಪೂರ್ವಕ ಸೂಚಿಸುವೆವು

---

೫. ಈಗ ಸನ್ನಿಹಿತ ಕಡೆಯಲ್ಲೆಲ್ಲ ಅನಾವೃಷ್ಟಿಯ ಗೋಳು ಬೆಳೆ ಹೇಗೆ ಎಂದು ಯಾರಿಗೂ ಕೇಳಿರಿ; ಅವನು ಪುರಾಣ ಬಿಡಿಸುತ್ತಾನೆ. ನೆರೆಯಿಂದ ಬದುಕಿದ ಪೈರಿಗೆ ಬಿಸಿಲು ತಾಪದಲ್ಲಿ ಸಾವು ಪ್ರಾಪ್ತವಾಗಿದೆ. ಗದ್ದೆಗಳಲ್ಲಿ ಬಿಣಗಿ ಒಡೆದವು. ಅದರೆ, ಮುಂಬಯಿ ಸರಕಾರಿ ಗೆಝೇಟಿನೊಳಗಿನ ಬೆಳೆಯ ರಿಪೋರ್ಟನ್ನು ಓದಿ ನೋಡಿರಿ. ತಾ. ೪ನೇ ಸಪ್ಟಂಬರಕ್ಕೆ ಅಂತ್ಯವಾಗುವ ವಾರದೊಳಗಿನ ಬೆಳೆಯ ಸ್ಥಿತಿಯು ಕಳೆದ ೩ನೇ ಗುರುವಾರದ 'ಗೆಝೇಟ'ದಲ್ಲಿ ಪ್ರಸಿದ್ಧವಾಗಿದೆ – 'ವಾರದಲ್ಲಿ ಜಿಲ್ಹೆಯಲ್ಲಿ ಮಳೆಯು ಸಾಕಷ್ಟು ಇದೆ, ಪೈರು ಸಾಧಾರಣವಾಗಿ ಚೆಲೋ ಸ್ಥಿತಿಯಲ್ಲಿದೆ. ಗೋಚರವು, ನೀರುಗಳ ಪೂರೈಕೆಯು ಸಾಕಷ್ಟು ಇದೆ.'' ಬೆಳೆಯೆಲ್ಲ ಸುಟ್ಟು ಹೋಗುತ್ತದೆಂದು ಪ್ರಜೆಗಳು ಚಿಂತಾತುರರಾಗಿದ್ದಾಗ, ಜಿಲ್ಹೆ ಮಳೆಯು ಸಾಕೆಂದು ಸಾಹೇಬರ ತರ್ಕ, ಯಾಕಂದರೆ, ಮಳೆಯು ಸಾಕಷ್ಟು ಇಲ್ಲವೆಂದು ವರದಿ ಕೊಟ್ಟರೆ, ಎಲ್ಲಿ ಕಂದಾಯ ಮಾಫಿ-ತಹಕೂಬಿ ಕಾಡಬೇಕಾಗುತ್ತದೇನೋ ಎಂಬ ಚಿಂತೆ. ಅಧಿಕಾರಿಗಳ ಸಹಾನುಭೂತಿಯೆಂಬುದು ಕಾಗದಿಕವೇ ಎಂಬ ಸಿದ್ಧಾಂತಕ್ಕೆ ಇದೊಂದು ಸಣ್ಣ ಉದಾಹರಣೆಯು.

[redacted]

೬. ಇಲ್ಲಿಯ ಪ್ರಮುಖ ನಾಗರಿಕರಿಂದ ರಾವಸಾಹೇಬ ರಾಮಚಂದ್ರ ಅಣ್ಣ ಪೈಯವರು ನಿನ್ನೆ ಮುಂಜಾನೆ ಇಹಲೋಕದ ಯಾತ್ರೆಯನ್ನು ಮುಗಿಸಿ, ಪರಲೋಕವನ್ನೈದಿದರೆಂದು ತಿಳಿಸಲು, ತುಂಬಾ ವ್ಯಸನವಾಗುತ್ತದೆ. ಪರಲೋಕವಾಸಿಗಳು ಈಗ ಬಹುಕಾಲದಿಂದ ವ್ಯಾಧಿಗ್ರಸ್ತರಿದ್ದರೂ, ಇಷ್ಟು ಶೀಘ್ರವಾಗಿ ಕಾಲಾಧೀನರಾದಾರೆಂದು ಯಾರೂ ಎಣಿಸಿದ್ದಿಲ್ಲ. ಕಳೆದ ೬-೭ ದಿನಗಳಿಂದ ಜ್ವರದ ಮಾನವು ಏರಿ, ಫಕ್ಕನೆ ಮೊನ್ನೆ ರಾತ್ರೆ, ರಾವಸಾಹೇಬರಿಗೆ ಅನ್ನಗ್ರಹಣ ಮಾಡುವಷ್ಟು ಶಕ್ತಿ ಸಹ ಉಳಿಯದೆ, ಜಲಪಾನದ ಮೇಲೆಯೇ ರಾತ್ರೆಗಳೆದು, ಪ್ರಾತಃಕಾಲಕ್ಕೆ ದೇಹಾವಸಾನ ಹೊಂದಿದರು. ರಾವಸಾಹೇಬರು ಕುಂಭಾಪ್ರಿಯ ಪ್ರತಿಯೊಂದು ಚಳವಳಿಯಲ್ಲಿ ಅಗ್ರೇಸರತ್ವವನ್ನು ಹೊಂದಿದ ಪ್ರಮುಖ ಪುರುಷರು. ಇಲ್ಲಿಯ ಮ್ಯುನಿಸಿಪಾಲಿಟಿಯ ಅಧ್ಯಕ್ಷ-ಉಪಾಧ್ಯಕ್ಷರ ಪದ ಹುದ್ದೆಗಳನ್ನು ಆಕ್ರಮಿಸಿಕೊಂಡು, ಲೋಕಸೇವೆಯನ್ನು ಕಳೆದ ವರುಷದವರೆಗೆ ಜರುಗಿಸಿದ್ದರು. ಸಹಕಾರಿ ಸಂಘದ ಅಧ್ಯಕ್ಷಸ್ಥಾನವನ್ನು ಕಳೆದ ವರುಷದವರೆಗೆ ಅವರೇ ವಹಿಸಿದ್ದರು. ವೋರ ಲೋನ, ವೋರ ರಿಲೀಫ ಫಂಡ ಮೊದಲಾದವುಗಳಿಗಾಗಿ, ಅವರು ಮನಃಪೂರ್ವಕ ದುಡಿದು, ಸಾಮ್ರಾಜ್ಯಕ್ಕೆ ಸಹಾಯ ಮಾಡಿರುವರು. ಇಲ್ಲಿಯ ಕಾನಡಾ ಶಿಕ್ಷಣ ಸಂಘದ ಉಪಾಧ್ಯಕ್ಷರು ಇವರಿದ್ದಷ್ಟಲ್ಲದೆ, ಗವ್ಹರ್ನಿಂಗ ಬೋರ್ಡಿಯ ಚೇಅರಮನ್‌ರೂ ಇವರೇ. ಅಣ್ಣ ಧ್ಯೇಯವರಾದ ಪೈ। ಪಾಂಡುರಂಗ ಪೈಗಳ ತರುವಾಯ ಗಿಬ್ಬ ಹೈಸ್ಕೂಲಿನ ಚಾಲಕತ್ವವನ್ನು ವಹಿಸಿಕೊಂಡು, ಸಾಯುವವರೆಗೆ ಸೇವೆಯನ್ನು ನಡಿಸಿದರು. ಇಲ್ಲಿಯ ಗೌಡಸಾರಸ್ವತ ಸಮಾಜದ ಶ್ರೀ ವೆಂಕಟರಮಣ ದೇವಸ್ಥಾನದ ಹಾಗು ಶ್ರೀ ಗಣಪತಿದೇವಸ್ಥಾನದ ಆಡಳಿತೆಯನ್ನು ಪರಲೋಕವಾಸಿಗಳು ಜೀವಮಾನವಿರುವವರೆಗೆ ನಡಿಸಿ, ಶ್ರೀ ದೇವರ ಸೇವೆಯನ್ನು ಯಥಾಶಕ್ತಿ ನಡಿಸಿದರು. ಇತ್ತಿತ್ತ ಪರಲೋಕವಾಸಿಗಳು ವ್ಯಾಧಿಗ್ರಸ್ತಕಲೇವರದ ಅಸಾಮರ್ಥ್ಯದ ಮೂಲಕ ಮ್ಯುನಿಸಿಪಾಲಿಟಿ, ಸಹಕಾರಿ ಸಂಘ ಮೊದಲಾದವುಗಳೊಳಗಿಂದ ಪ್ರತ್ಯಕ್ಷ ಅಂಗವನ್ನು ತೆಗೆದುಕೊಂಡಿದ್ದರೂ, ಅವರ ಉಪದೇಶವು, ಅನುಭವವು ಬೇಕಾದವರಿಗೆ ಸಿಗುತ್ತಿತ್ತು. ಇಂಥ ಅನುಭವಶಾಲಿ ನಾಗರಿಕರು ಪರಲೋಕವಾಸಿಗಳಾದ ಬಗ್ಗೆ ಎಲ್ಲರಿಗೂ ವ್ಯಸನವಾಗುವದು ಸಹಜವು. ರಾವಸಾಹೇಬರ ಆಶ್ರಯ ಹೊಂದಿದ ಅನೇಕರಿಗೆ ನಿರಾಧಾರತ್ವದ ಭಾಸವು ಸಹ ಒದಗಿದರೆ ಆಶ್ಚರ್ಯವೇನಿಲ್ಲ. ಇವರ ಕುಟುಂಬದ ಮೇಲಂತೂ ದೊಡ್ಡ ಆಪತ್ತು ಬಂದೊದಗಿದೆ. ಈ ಆಪತ್ಕಾಲದಲ್ಲಿ ಅವರು ಕಾಲಚಕ್ರದ ಕಡೆಗೆ ದೃಷ್ಟಿಯನ್ನಿತ್ತು ತಮ್ಮ ಸಮಾಧಾನ ಮಾಡಿಕೊಳ್ಳಬೇಕಲ್ಲದೆ ಅನ್ಯ ಉಪಾ

ದವೃ ವಾಗುವವರಿಗಿರುತ್ತಾದಿತ್ತು, ಪರಲೋಕವಾಸಿ, ರಾವಸಾಹೇಬರ ಆಪ್ತೇಷ್ಟ ಬಂಧು-ಬಾಂಧವರೊಡನೆ ನಮ್ಮ ಸಹತಾಪವನ್ನು ವ್ಯಕ್ತಪಡಿಸಿ, ಮೃತರ ಆತ್ಮಕ್ಕೆ ಶ್ರೀ ಪರಮಾತ್ಮನು ಚಿರಶಾಂತಿಯನ್ನೀಯಲೆಂದು ಮನಃಪೂರ್ವಕ ಪ್ರಾರ್ಥಿಸಿ, ಈ ಚಿಕ್ಕ ಲೇಖನವನ್ನು ಮುಗಿಸುವೆವು

ಸ್ಥಾನಿಕ ವೃತ್ತಾಂತ.

ಕುಮಟಾ—ಬಿಸಿಲಿನ ತಾಪ; ಬೆಳೆಯು ಗೋಳು. ರವಿವಾರದಿಂದ ಸ್ವಲ್ಪ ಸ್ವಲ್ಪ ಮಳೆ ಹನಿಸಹತ್ತಿದೆ. ಹನಿಸುವದೇ ಹೊರತು, ವೃಷ್ಟಿಯಿಲ್ಲ. ಏಸಾ ವೃಷ್ಟಿಯಾದರೆ ಮಾತ್ರ, ಬೆಳೆಯು ಬಚಾವು. ಬೇಸಾಯಗಾರರೆಲ್ಲರೂ ಚಿಂತಾಮಗ್ನರಾಗಿರುವರು. ಈ ವಾರದಲ್ಲಿ ೦-೩೧ ಇಂಚು ಮಳೆ ಬಿತ್ತು.

ನಿನ್ನೆ ಮುಂಜಾನೆ ರಾವಸಾಹೇಬ ಪೈರ ನಿಧನ ವಾರ್ತೆ ಕೇಳಿದೊಡನೆ, ಇಲ್ಲಿಯ ಅಂಗಡಿಗಳೆಲ್ಲ ಮುಚ್ಚಲ್ಪಟ್ಟವು; ಕನ್ನಡ-ಮರಾಠಿ ಶಾಲೆಗಳಿಗೆ ರಜೆ ಕೊಡೋಣಾಯಿತು, ಮ್ಯುನಿಸಿಪಲ ಆಸ್ಪತ್ರೆಯು ಬಂದುಮಾಡಲ್ಪಟ್ಟಿತು; ಗಿಬ್ಬ ಹೈಸ್ಕೂಲಿಗೆ ಸೂಟಿ ಸಿಕ್ಕಿತು. ಹೀಗೆ ಎಲ್ಲರೂ ರಾವಸಾಹೇಬರ ಬಗ್ಗೆ ತಮ್ಮ ಪ್ರೀತ್ಯಾದರವನ್ನು ವ್ಯಕ್ತಪಡಿಸಿದರು. ಜ್ಞಾತಿ, ಪರಜ್ಞಾತಿಗಳ ಸದ್ಗೃಹಸ್ಥರು ರಾವಸಾಹೇಬರ ಗೃಹವನ್ನು ಸೇರಿಕೊಂಡು, ತಮ್ಮ ಆಖೈರ ವಂದನೆಗಳನ್ನು ಸಮರ್ಪಿಸಿದರು. ನೋಟವು ಶೋಕರಸಪೂರ್ಣವಿತ್ತು. ಸುಮಾರು ೧೦೦ಕ್ಕೆ ಮಿಕ್ಕಿ ಗೃಹಸ್ಥರು ಮೃತರನ್ನು ಸ್ಮಶಾನದ ವರೆಗೆ ಹಿಂಬಾಲಿಸಿದರು. ಎಲ್ಲರೂ ಹಳಹಳಿಸುವವರೇ.

ಇದೇ ಬರುವ ತಾ. ೧೮ನೇ ಸೋಮವಾರಕ್ಕೆ ಮುಂಬಯಿಯಿಂದ ಮೊದಲನೇ ಆಗಬೋಟಿಯು ಹೊರಟು, ಇಲ್ಲಿ ತಾ. ೧೯ನೇ ಬುಧವಾರಕ್ಕೆ ಬರುವದೆಂದು ಸುದ್ದಿ

ಕಳೆದ ರವಿವಾರಕ್ಕೆ ಇಲ್ಲಿಯ ತಾಲೂಕಾ ಕಚೇರಿಯಲ್ಲಿ ಮಾಮಲೇದಾರ ಮೊದಲಾದ ಅಧಿಕಾರಿಗಳ ಪಿಷ್ಯಮಾನ ಕೂಡಿಸಿದ ಪಾತಿಗೆ ರಕಮು ಸುಮಾರು ರೂಪಾಯಿ ೬೨೦ ರ ವಿನಿಯೋಗ ಮಾಡುವರೆ, ಸಬ್ ಜಜ್ ಮಿ। ಚಿನ್‌ಮುಳಗುಂದರವರ ಅಧ್ಯಕ್ಷತೆಯಲ್ಲಿ ಕಮೀಟಿ ನೆರೆದು, ೧೫ ದಿವಸಗಳೊಳಗೆ ಯಾವ ಯಾವ ನಿರಾಶ್ರಿತರಿಗೆ ಎಷ್ಟೆಷ್ಟು ಸಹಾಯ ಬೇಕು, ಎಂಬದನ್ನು ರಿಪೋರ್ಟ ತರಿಸಿ, ಬಳಿಕ, ನಿಧಿಯ ಪ್ರಮಾಣದಿಂದ, ಗರಜಿನ ಮಾನದಿಂದ ಸಹಾಯವನ್ನೀಯಬೇಕೆಂದು ಠರಾವಾಯಿತು. ಹೊಟ್ಟೆಗೆ ಇಲ್ಲೆಂದು ಬಳಲುವ ನಿರಾಶ್ರಿತರಿಗೆ ಆಪತ್ಕಾಲಪ್ರಸಂಗದಲ್ಲಿ, ಸಹಾಯವನ್ನೀಯುವ ಅಧಿಕಾರವು ಮಾಮಲೇದಾರರಿಗೆ ಕೊಡಲ್ಪಟ್ಟಿತು. ನಿನ್ನೆ ಬುಧವಾರಕ್ಕೆ ರಾ। ವಿಶ್ವೇಶ್ವರ ಕಲ್ಯಾಣಪುರಕರರ ಅಧ್ಯಕ್ಷತೆಯಲ್ಲಿ ಮತ್ತೊಮ್ಮೆ ಕಮೀಟಿಯಾಯಿತು. ರಾ। ಓ। ಕೊಯಿಮತ್ತೂರರು ಪ್ರತ್ಯಕ್ಷ ಹಾಜರಿದ್ದರು. ದೀವಗಿ ಅತ್ತಕಡೆಯಿಂದ ೫೦-೬೦ ಮಂದಿಗಳು ಬಂದಿದ್ದರು. ಅವರಿಗೆ ಕೆಲ ಹಣವನ್ನು ಹಂಚಬೇಕೆಂದು ರಾ। ಬ। ರರ ಮಾನಸವಾಯಿತು. ಅವರ ಗರಜು ನೋಡಿ, ೧೫ ದಿವಸಗಳಲ್ಲಿ ನಾವು ಹಂಚುತ್ತೇವೆಂದೂ, ಆ ಬಗ್ಗೆ ಈ ಮೊದಲೇ ಠರಾವಾಗಿದೆಂದೂ ಈ ಬಗ್ಗೆ ಘಾಬರಿಗೊಳ್ಳುವ ಪ್ರಸಂಗವು ಇಲ್ಲೆಂದು ಕಮೀಟಿಯಲ್ಲಿ ಹೇಳೋಣಾಯಿತು. ಆದರೆ, ಇದೊಂದು ತರಾಪಿನ ಸಬಬು 'ಶಾಸ್ತ್ರೀಯ' (technical) ಅಡ್ಡಿಯೆಂದು ರಾ। ಬ। ರರೂ, ಅಧ್ಯಕ್ಷರೂ ನುಡಿದು, ಬಂದವರಿಗೆ, ವಿಶೇಷ ವಿಚಾರ ಮಾಡದೆ, ಚೌಕಶಿ ಮಾಡದೆ, ೩-೪-೫ ರೂಪಾಯಿಗಳಂತೆ, ಅವಲಕ್ಕಿ ಹಂಚಿದರು. ವಂತಿಗೆ ರಕಮು ಕೊಡುವದು ಊರವರು; ಹಂಚುವ ಯಜಮಾನರು ರಾ। ಬ। ರರು; ಎಂದು ಅನೇಕರ ಅಸಂತೋಷ. ದೀವಗಿ ಅತ್ತಕಡೆಯಿಂದ ನಿರಾಶ್ರಿತರು ಬರುವ ವ್ಯವಸ್ಥೆಯು ಪೂರ್ವಸಂಕೇತದಂತೆ ನಡೆದಿರಬೇಕೆಂದು ಹಲವರ ತರ್ಕ

ಕುಮಟಾ-ಹೊನ್ನಾವರ ಮಾರ್ಗವು ಇನ್ನೂ ದುರಸ್ತಾಗಲಿಲ್ಲ ಇಂಜನಿಯರ ಖಾತೆಯವರು ಸ್ವಲ್ಪ ಜಾಗರೂಕರಾಗಿ ಅದನ್ನು ಕೂಡಲೇ ದುರುಸ್ತ ಮಾಡುವ ತಜವೀಜ ಮಾಡಬೇಕು.

ಗೋಕರ್ಣ— ಇದೇ ತಾ।। ೬। ೩೦ ಸ್ಯ ಸೋಮವಾರ ದಿವಸ ಶ್ರೀ ವೀರವಿಠ್ಠಲಾನುಗ್ರಹೀತ ಹನುಮನ್ನಿಧಿ, ಗೋಕರ್ಣದ ಮೂರನೇ ವಾರ್ಷಿಕ ಮಹಾಸಭೆಯು ಶ್ರೀಯುತ ದಶರಥ ರಾಮ ಶ್ಯಾನಭಾಗ ಕಲಬಾಗಕರ ಇವರ ಅಧ್ಯಕ್ಷತೆಯ ಕೆಳಗೆ ಜರುಗಿತು. ಶ್ರೋತೃವೃಂದವು ತಕ್ಕಮಟ್ಟಿಗೆ ನೆರೆದಿತ್ತು. ಸಭೆಯಲ್ಲಿ ತಕ್ಕಷ್ಟು ಚರ್ಚೆ ನಡೆದು, ಸರ್ವಾನುಮತದಿಂದ ಠರಾವುಗಳು ಪಾಸ ಮಾಡಲ್ಪಟ್ಟವು. ಅಧ್ಯಕ್ಷರು ತಮ್ಮ ಅನುಭವಜನ್ಯ ಹಲವು ಸಂಗತಿಗಳನ್ನು ವಿವರಿಸಿ, ನಿಧಿಗೆ ಪೂರ್ತ ಸ್ವರೂಪವನ್ನು ಒದಗಿಸಿಕೊಡಲಿಕ್ಕೆ ಅವಶ್ಯವಾದ ಅನೇಕ ಉಪದೇಶಗಳನ್ನು ಮಾಡಿದರು. ಮುಂದಿನ ಸಾಲಿನ ಬಗ್ಗೆ ಹೊಸ ಕಾರ್ಯಕಾರಿ ಮಂಡಳವು ನೇಮಿಸಲ್ಪಟ್ಟಿತು. ಅದೇ ದಿವಸ ರಾತ್ರಿ ಪುಷ್ಪಪೂಜೆಯ ಕಾಲಕ್ಕೆ ನಿಧಿಯ ಮೆಂಬರರಾಗಿದ್ದ ಶ್ರೀ। ಅನಂತ ವಿಠ್ಠಲ ಪ್ರಭು ಸ್ಕೂಲ ಮಾಸ್ತರ ಕುಮಟಾದವರು ಸುಶ್ರಾವ್ಯವಾಗಿಯೂ, ಬೋಧಪ್ರದವಾಗಿಯೂ ಭಕ್ತಿರಹಸ್ಯವನ್ನು ವಿಶದೀಕರಿಸಿ, ಚಂದ್ರಹಾಸ ಕೀರ್ತನೆಯನ್ನು ಮಾಡಿದರು. ಇದು ನಿಧಿಗೆ ಅಭಿನಂದನೀಯವು. ಈ ಪ್ರಕಾರ ಕಾರ್ಯದರ್ಶಿಯವರು ತಿಳಿಸುತ್ತಾರೆ

ಅಂಕೋಲಾ— ಇಷ್ಟು ದಿವಸ ಮಳೆಯಿಲ್ಲದ ಬಿಸಿಲಿನಿಂದ ಗದ್ದೆಗಳು ಬಳಲಿಹೋದವು. ಮೊನ್ನೆಯೇ ಇಲ್ಲಿಯ ಶ್ರೀ ಕದಂಬೇಶ್ವರ ದೇವಸ್ಥಾನದ ಇಡೀ ಗುಡಿಯಲ್ಲಿ ನೀರು ತುಂಬಿಸಿ ಮಹಾಭಿಷೇಕ ಮಾಡಲ್ಪಟ್ಟಿತ್ತು. ನಿನ್ನೆ ಲಾಗಾಯಿತು ಮೋಡಗಳಾಗಿ ಸ್ವಲ್ಪ ಮಳೆ ಬೀಳಹತ್ತಿದೆ.

ಮುಂಬಯಿ ಕಾಯಿದೆ ಕೌನ್ಸಿಲ ಚುನಾವಣೆಗೆ ಉಮೇದವಾರರಾಗಿ ನಿಂತ ಶ್ರೀ। ವಿಶ್ವೇಶ್ವರರಾವ ಕಲ್ಯಾಣಪುರಕರರು ಕಳೆದ ಆದಿತ್ಯವಾರ ಸಾಯಂಕಾಲ ಶ್ರೀ ಭೂಮಿದೇವತಾ ದೇವಸ್ಥಾನದಲ್ಲಿ ಭಾಷಣ ಮಾಡಿದರು. ಸಭೆಗೆ ೪೦-೫೦ ಜನರು ಬಂದಿದ್ದರು. ಅವರು ತಮ್ಮ ಭಾಷಣದಲ್ಲಿ, ಹೊಸ ಸುಧಾರಣೆಯಿಂದ ನಮಗೆ ಹೆಚ್ಚಿನ ಹಕ್ಕುಗಳು ಪ್ರಾಪ್ತವಾಗಿರುವವೆಂತಲೂ, ಅವುಗಳನ್ನು ಪೂರ್ಣ ಉಪಯೋಗಿಸಲೇಬೇಕೆಂತಲೂ ಮತದಾರರು ತಮ್ಮ ಮತಗಳ ಮಹತ್ವವನ್ನರಿತು ಪಕ್ಷ-ಜಾತಿಗಳೆಂಬ ಅಭಿಮಾನಕ್ಕೊಳಗಾಗದೆ, ವಿಚಾರ ಮಾಡಿ ಯೋಗ್ಯ ಕಂಡ ಉಮೇದವಾರನಿಗೇ ಚುನಾಯಿಸಬೇಕೆಂತಲೂ ವಗೈರೆ ಹೇಳಿದರು. ಅವರ ಇಲ್ಲಿಯ ಭಾಷಣವು ತಮ್ಮ ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಅವರ ಕಾರವಾರ ಭಾಷಣದ ಪುನರುಕ್ತಿಯೇ ಇತ್ತು. ಭಾಷಣ ಮುಗಿದ ಮೇಲೆ, ಅವರ ಪರವಾನಗಿಯಿಂದ ಶ್ರೀಯುತ ಶ್ಯಾಮರಾವ, ಶ್ರೀನಿವಾಸ ಪೈ ವಗೈರೆರು ಅವರಿಗೆ ಕೆಲವು ಪ್ರಶ್ನೆಗಳನ್ನು ಕೇಳಿದರು. ಖಾದಿಯ ಉಪಯುಕ್ತತೆಯ ಬಗ್ಗೆ ಮಾನ್ಯತೆಯನ್ನು ತೋರಿಸುತ್ತ, ನೀವು ಯಾಕೆ ಖಾದಿಯನ್ನು ಧರಿಸುವದಿಲ್ಲ ಎಂಬ ಪ್ರಶ್ನೆಗೆ ಕಾರವಾರದ್ದೇ ಜವಾಬು. ಮತ್ತೊಂದು ಕಾರಣ ಈಗಿನ ಕಠಿಣ ಜಂಗಲ ಖಾತೆಯ ಕಾಠಿನ್ಯವು ಕಡಿಮೆಯಾಗಗೊಡದೆ, ಲೋಕರಿಗೆ ಬೇಕಾದ ಜಂಗಲ ಸವಲತುಗಳನ್ನು ದೊರಕಿಸುವ ಪ್ರಯತ್ನ ಮಾಡುವರಂತೆ. ಉಮೇದವಾರರು ಮುಂದೆ ಮಾಡುವದೆಂತ ಹೇಳುವ ಭಾಷೆ ದೇಶಸೇವೆಗಿಂತ ಅವರ ಹಿಂದಿನ ದೇಶಸೇವೆಯ ಮೇಲಿಂದಲೇ ಅವರ ಲಾಯಖಿ ಠರಾಯಿಸುವದಿರುವದರಿಂದ. ನೀವು ಈ ವರೆಗೆ ಯಾವ್ಯಾವ ದೇಶಸೇವೆ ಮಾಡಿರುವಿರಿ? ಎಂಬ ಪ್ರಶ್ನೆಗೆ ತಾನು ಸರಕಾರಿ ನೌಕರಿ ಹೊರತಾಗಿ ಏನೂ ಮಾಡಿದ್ದಿರುವದಿಲ್ಲ. ಅದ್ದರಿಂದಲೇ ನಿಮ್ಮ ಅಭಿಪ್ರಾಯದ ಮೇರೆಗೆ ಲಾಯಖ ಕಂಡವರಿಗೇ ಮತ ಕೊಡಿರೆಂದು ತಾನು ಮೊದಲೇ ಹೇಳಿರುತ್ತೇನೆಂತ ಹೇಳಿದರು. ಆ ಮೇಲೆ ರಾ। ಶಂಕರರಾಯ ನಾಡಕರ್ಣಿಯವರು ಭಾಷಣಕಾರರ ಆಭಾರ ಮನ್ನಿಸಲಿಕ್ಕೆ ಎದ್ದು ನಿಂತು, ಅಂದದ್ದೇನಂದರೆ— "ತರುಣರು "ಗರಂ" ಸ್ವಭಾವದವರಿರುತ್ತಾರೆ ಪೆನಶನ್ ತಕ್ಕೊಂಡ ಮುದುಕರು ಶಾಂತ ಸ್ವಭಾವದವರಿರುತ್ತಾರೆ. ಕೌನ್ಸಿಲಿಗೆ ಹೋಗಿ ಸಾಮ, ದಾಮ, ದಂಡ, ಭೇದಗಳಿಂದ ನಮ್ಮ ಕೆಲಸಗಳನ್ನು ಮಾಡಿಕೊಳ್ಳಲಿಕ್ಕೆ ನಮಗೆ ಶಾಂತ ಸ್ವಭಾವದವರೇ ಬೇಕಾಗಿರುವದರಿಂದ, ಆ ಜಾಗಕ್ಕೆ ಶ್ರೀಯುತ ಕಲ್ಯಾಣಪುರಕರರೇ ಎಲ್ಲರಿಗಿಂತ ಹೆಚ್ಚು ಯೋಗ್ಯರಿರುತ್ತಾರೆ ಅದ್ದರಿಂದ ನೀವು ಅವರಿಗೇ ಮತ ಕೊಡಿರಿ." ಅವರೇ ಮೆಂಬರರಾಗಬೇಕೆಂಬದಕ್ಕೆ ಮತ್ತೊಂದು ಅವರ "ಲಾಯಖಿ" ಯಾವದೆಂದರೆ— "ಅವರು ಮುಂಬಯಿ ಇಲಾಖೆಯ ಬಹುತೇಕ ಜಿಲ್ಲೆಗಳಲ್ಲಿ ದೊಡ್ಡ ಹುದ್ದೆಯ ನೌಕರಿ ಮಾಡಿರುವದರಿಂದ, ಬೇರೆ ಜಿಲ್ಲೆಗಳಿಂದ ಕೌನ್ಸಿಲಿಗೆ ಬರುವ ಪ್ರತಿನಿಧಿಗಳು ಅವರ ಪರಿಚಯದವರೂ, ಗೆಳೆಯರೂ ಇರುವ ಸಂಭವವಿರುವದರಿಂದ, ಅಂಥವರ ಸಹಾಯವು ಕಲ್ಯಾಣಪುರರಿಗೆ ಕಳಿಸಿದರೆ ಮಾತ್ರ ಸಿಗುವದು" ಮತದಾರರು ಚುನಾವಣೆ ಮೊದಲಿನ ಈ ೧।। ತಿಂಗಳ ಮುದ್ದತಿಯಲ್ಲಿ ವಿಚಾರ ಮಾಡಿ, ಅವರ ಮತದಂತೆ ಯೋಗ್ಯ ಕಂಡವರಿಗೇ ಆರಿಸಬೇಕೆಂದು ಶ್ರೀ। ಕಲ್ಯಾಣಪುರಕರರು ಸ್ವತಃ ಹೇಳಿರುತ್ತ, ಶಂಕರರಾಯರು ಅವರಿಗೇ ಮತ ಕೊಡಬೇಕೆಂದು ಹೇಳಿದ್ದು, ಬಹುತೇಕ ಸಭಿಕರಿಗೆ ಮಾನ್ಯವಾಗದೆ, ಅವರು ಅಲ್ಲಿಯೇ ಅವರ ವರ್ತನವನ್ನು ನಿಷೇಧಿಸಿದರು. ಇಷ್ಟರಲ್ಲಿ ಸಭೆಯು ಮುಗಿಯಿತು

ಕಾರವಾರ— ೨ ದಿನಗಳಿಂದ ಅಲ್ಪಸ್ವಲ್ಪ ವೃಷ್ಟಿಯಾಗಹತ್ತಿದೆ

ಮುಂಬಯಿ ಕಾಯಿದೆ ಕೌನ್ಸಿಲು ಉಮೇದವಾರರಾದ ರಾ। ಕಲ್ಯಾಣಪುರಕರ, ಶ್ರೀ। ಕೇಶವೈನ, ದೇ। ಸೇ। ಕರ್ಕಿಯವರಿಗೆ ಅನುಕ್ರಮವಾಗಿ, ಕುದುರೆ, ಕೈ ಹಾಗು ಧ್ವಜ ಈ ಸಾಂಕೇತಿಕ ಚಿನ್ಹಗಳನ್ನು ರಿಟರ್ನಿಂಗ ಆಫೀಸರರು ಕೊಟ್ಟಿರುವರು. ದೇ। ಸೇ। ಕರ್ಕಿಯವರಿಗೆ ಧ್ವಜದ ಸಾಂಕೇತಿಕ ಚಿನ್ಹವು ಪ್ರಾಪ್ತವಾದದ್ದು ಸಾರ್ಥವಿದೆ.

ಅಲ್ಲಿಯ ಎಗ್ಜಿಕ್ಯೂಟಿವ್ ಇಂಜನಿಯರರ ಬಿಡಾರಿಗೆ ಯಾರೋ ಒಬ್ಬರು ಹಗೆಯಿಂದ ಬೆಂಕಿಕೊಟ್ಟರೆಂದು ತಿಳಿಯುತ್ತದೆ.

ದಕ್ಷಿಣಭಾಗದ ಮಹಮ್ಮದೀಯ ಮತದಾರರ ಸಂಘದ ಕಡೆಯಿಂದ ಉಮೇದವಾರರಲ್ಲಿ ನಮ್ಮ ಜಿಲ್ಲೆಯೊಳಗಿನ ಮಿ। ಶೇಖ ಅದಮ ಇವರೊಬ್ಬರಿರುವರು

ಮೊದಲೇ ಜಾಹೀರಾದಂತೆ, ಮುಂಬಯಿ ಸರಕಾರದ ಶಿಕ್ಷಣಮಂತ್ರಿಗಳಾದ ಮತ್ತು ಬರುವ ಚುನಾವಣೆಯಲ್ಲಿ ವಿಶ್ವವಿದ್ಯಾಲಯದ ಪದವೀಧರರ ಮತದಾರ ಸಂಘದಿಂದ ಆರಿಸಿ ಬರಲಿಕ್ಕೆ ಉಮೇದವಾರರಾಗಿರುವ ನಾ। ಡಾ। ರಘುನಾಥರಾವ ಪರಾಂಜಪೆಯವರು ಕಳೆದ ಗುರುವಾರ ತಾ. ೭ನೇ ದಿವಸ ಸಾಯಂಕಾಲಕ್ಕೆ ಹುಬ್ಬಳ್ಳಿಯಿಂದ ಮೋಟಾರ ಮೇಲಿಂದ ಇಲ್ಲಿಗೆ ಬಂದು ಮುಟ್ಟಿದರು. ಕೂಡಲೆ, ಅವರಿಗೆ ಸ್ವಾಗತಂ ಗೈಯ್ಯಲಿಕ್ಕೆ ಇಲ್ಲಿಯ ಸ್ಥಾನಿಕ 'ಧುರೀಣ'ರಲ್ಲಿ ಹಲವರು ಅವರು ಇಳುಕೊಂಡ ಸ್ಥಳದಲ್ಲಿ ನೆರೆದು ಅವರಿಗೆ ಭೆಟ್ಟಿಯನ್ನಿತ್ತರು. ಮರುದಿವಸ ಅವರ ವ್ಯಾಖ್ಯಾನಗಳಾಗುವವೆಂದು ಗೊತ್ತಾಗಿತ್ತು. ಇಲ್ಲಿಯ ಮಿತ್ರಸಮಾಜದ ಸಭಾ ಮಂದಿರದಲ್ಲಿ ಅವರದೊಂದು ರಾಜಕೀಯತ್ವದಿಂದ ಅಲಿಪ್ತವಾದ ಶುಚಿರ್ಭೂತ ವ್ಯಾಖ್ಯಾನವಾಗಬೇಕೆಂಬದರಿಂದ ದೀರ್ಘ ಕಾಲದ ವರೆಗೆ ಆಲೋಚನೆ, ವಿಚಾರವಿನಿಮಯ, ವಾದ-ವಿವಾದ ವಗೈರೆ

ರಗೆ ಶಿಕ್ಷಣ ಈ ವಿಷಯದ ವೇಲೆ ಅವರ ಮಿತ್ರಸ ಮಾಜದಲ್ಲಿ ಒಂದು ಬಹಿರಂಗ ಧಾರ್ಮಿಕ ವ್ಯಾಖ್ಯಾನ ಕೊಡಬೇಕಾಗಿ ಅವರಿಗೆ ಆಗ್ರಹ ಮಾಡೋಣವಾದ್ದರಿಂದ ಅದಕ್ಕೆ ಅವರು ಒಪ್ಪಿಕೊಂಡರು. ಅವರು ನಮ್ಮ ತತ್ವಗಳ ಬೆಂಬಲವಾದ ಒಂದು ರಾಜಕೀಯ ಉಪನ್ಯಾಸ ಮಾಡುವರು ಡಾ। ಪರಾಂಜಪೆಯವರ ಸಮೀಪದವರಾಗಿ ಕಂಡು ಬಂದದರಿಂದ ಮೇಲಿನ ವ್ಯಾಖ್ಯಾನದ ಪೂರ್ವದಲ್ಲಿ ಒಂದು ರಾಜಕೀಯ ವ್ಯಾಖ್ಯಾನವೂ ಆಗಬೇಕೆಂದು ಮರುದಿವಸ ಬೆಳಿಗೆ ಗೊತ್ತಾಯಿತು. ಆ ಪ್ರಕಾರ ಶುಕ್ರವಾರ ತಾ। ೩ನೇ ದಿವಸ ಸಂಜೆಯ ೫ ಘಂಟೆಗೆ ಇಲ್ಲಿಯ ತೇಲಿ ರಾಮಜೀವ ವರ ಬಂಗಲೆಯ ವಿಶಾಲ ಮಾಳಿಗೆಯ ಮೇಲೆ ಕೆಲವು ರಾಜಕೀಯ ವಿಚಾರಗಳ ಕುರಿತು ವಾಗ್ವಾದ ಆವರ ವ್ಯಾಖ್ಯಾನವಾಯಿತು. ಸಭೆಯು ಬಾಹೀರ ಮಂತ್ರಗಳ ಪತ್ರಿಕೆಯ ಮೇಲೆ ಸಹಿ ಮಾಡಿದ ಈರ್ವರ ... ಒಟ್ಟು ... ಹಾಜರಿಲ್ಲದ ... ಕರಲ್ಲವೆ ಕರ ಆಗಮಿಸಿದರು. ವ್ಯಾಖ್ಯಾನದಲ್ಲಿ ನಾಸ್ತಿಕ ವೇನ ಇದ್ದಿಲ್ಲ. ನೇವಸ್ತ ಪಕ್ಷದ ನಿತ್ಯದ ವಿಷಯದ ಯುಕ್ತಿ ವಾದವನ್ನೇ ಅವಲಂಬಿಸಿ ಅವರ ನೇವಸ್ತ ತತ್ವಗಳ ಮಂಡನವನ್ನು ಮಾಡಿದರು. ನವಶಿಕ್ಷಿತರನ್ನು ಕೊಡುವದು ಬ್ರಿಟಿಷ ಪಾರ್ಲಿಮೆಂಟಿನವರ ಮರ್ಜಿಯ ಮೇಲೆಯೇ ಅವಲಂಬಿಸಿರುವದೆಂದೂ ನೂರಾರು ವರ್ಷಗಳ ಅನುಭವದಿಂದ ತಳೆದ ಪಾರತಂತ್ರ್ಯದ ... ಅಲ್ಲಾದವರಿಗೆ ದೊರವಾಗುವದೆಂದೂ ... ಹೇಳಿ ವಿಶ್ವಾಸ ಇಡಬೇಕೆಂದೂ ಹೇಳಿ ... ಇವರು ನೇವಸ್ತ ಪತ್ರಗಳಲ್ಲಿ ಬರುವ ಪಕ್ಷ ನೇವಸ್ತ ಪಕ್ಷದವರ ಬಗೆ ಎಂದ ಕೇಳಿ ... ಸಂಗತಿಗಳೇ ವ್ಯಾಖ್ಯಾನ ಕೇಳಿದ ವೇಲೆ ... ಗಳ ಮೂಲವಾದ ರೂ ಪ್ರಶ್ನೆಗಳನ್ನು ಕೇಳಿಕೊಳ್ಳಬಹುದೆಂದು ಅಧ್ಯಕ್ಷರು ಹೇಳಿದರು. ಆದರೆ ಡಾ। ಪರಾಂಜಪೆಯವರೇಗೆ ಮತ್ತು ... ಒಂದನವು ಇನ್ನೂ ಆರ ವದದಿಂದಲೂ ಸ್ವಾತಂತ್ರ್ಯ ದ ... ಸ್ವತಂತ್ರ ವ್ಯಾಖ್ಯಾನದ ... ಪ್ರಶ್ನೆಗಳನ್ನು ಕೇಳಲಿಕ್ಕೆ ... ಪ್ರಸಂಗವಲ್ಲದ್ದರಿಂದ ... ಅವರಿಂದ ತೀರ ಸ್ವಲ್ಪವಿದ್ದದರಿಂದಲೂ ಯಾರೂ ಪ್ರಶ್ನೆಗಳನ್ನು ಕೇಳಲಿಕ್ಕೆ ಹವಣಿಸಲಿಲ್ಲ. ಆ ಮೇಲೆ ೭ ಘಂಟೆಗೆ ಮಿತ್ರಸಮಾಜದಲ್ಲಿ ಶಿಕ್ಷಣ ಈ ವಿಷಯದ ಮೇಲೆ ಅವರ ವ್ಯಾಖ್ಯಾನವಾಯಿತು. ಶಿಕ್ಷಣ ಈ ವಿಷಯದ ಮೇಲೆ ವ್ಯಾಖ್ಯಾನ ಕೊಡುವೆನೆಂದು ಹೇಳಿ, ಅವರು ತಮ್ಮ ಸದ್ಯದ ಪ್ರಾಥಮಿಕ ಶಿಕ್ಷಣದ ಕಾಯಿದೆಯ ಗುಣದೋಷಗಳನ್ನು ಶಕ್ತಿಯುಕ್ತವಾಗಿ ವಿವರಿಸಿ ಹೇಳಿಯೇ ಸಮಾಧಾನಪಡೆದರು. ಅಲ್ಲಿ ಸರ ಪ್ರಾಚ್ಯ ವಿಚಾರ ಶಿಕ್ಷಣದಾರಿಗಳನ್ನು ಪಡೆದ ಜೊತೆ ಭರತಖಂಡದ ಉನ್ನತಿಯು ಎಂದೂ ಆಗಲಾರದೆಂದು ಸಾರಿ ಹೇಳಿ ನೇವಸ್ತ ಮನೋವೃತ್ತಿಗೆ ಸಹಜವಾದ ಆತ್ಮವಿಶ್ವಾಸ ಶೂನ್ಯತೆ ಆರ್ಯಸಂಸ್ಕೃತಿಯ ಬಗೆ ಅಭಿಮಾನ ಶೂನ್ಯತೆಯನ್ನೂ ಹೊರಗೆಡಹಿದರು. ಡಾ। ಪರಾಂಜಪೆಯವರು ಬಹಳವಾಗಿ ಪರರನ್ನೇ ಜಪಿಸುವರೆಂದು ಕೆಲವರ ಹೇಳತೊಡಗಿದರು. ಆದರೂ, ರಾಷ್ಟ್ರೀಯ ಶಿಕ್ಷಣ ದ ... ಹೆಸರುಗಳಿಂದ ತಾವು ಜಿದಿಂದ ಹೊಂದು ವವರಲ್ಲೆಂದೂ ಸಕ್ತಿಯು ಕಾಯಿದೆಯ ಅಮಲಿನಲ್ಲಿ ಮಾಸ್ತ ಮಾಡಬೇಕಾದ ಶಾಲೆಗಳಲ್ಲಿ ವಾಚನ, ಲೇಖನ, ಗಣಿತ ಈ ಮೂರು ಆವಶ್ಯಕ ವಿಷಯಗಳ (three R's) ಯೋಗ್ಯ ವಿಧಾನ ಇದ್ದರೆ ಬಾಬಗಳು ಮಂಜೂರಾದ ಇತರ ವಿಷಯಗಳ ಸಮಾಲೋಚನಲಿಕ್ಕೆ ಏನು ಆತಂಕವಿರಲಾರದೆಂದೂ ಅವರು ಹೇಳಿದ್ದು ಕೇಳಿ, ಜನರಿಗೆ ಕುಶು ಸಮಾಧಾನವಾಯಿತು. ಪ್ರತ್ಯಕ್ಷ ಆನ ಭವ ಸ್ವಾಗಿ ಒರು ತ್ತಿದೇ ನೋಡಬೇಕು.

ಅದೇ ದಿವಸ ರಾತ್ರಿ ೮॥ ಘಂಟೆಗೆ, ಅವರು ಊಳ ಕೆಂಡದ ಮನೆಯಲ್ಲಿ ಪದನೀದರ ಮತದಾರರಿಗೂ, ಉಮೇದವಾರರಾದ ಅವರಿಗೂ ಪ್ರತ್ಯಕ್ಷ ಬೆಟ್ಟಿಯಾಗಿ ತಾಸ ಗಳ ವರೆಗೆ ಪರಸ್ಪರ ಸಂಭಾಷಣವಾಯಿತು. ಆ ಸಮಯದಲ್ಲಿ ನಡೆದ ಮಾತುಕಥೆಗಳ ಮೇಲಿಂದ, ಪ್ರಸ್ತುತ ಆಮಲಿನಲ್ಲಿರ ಮ ದ್ವಿದಲ ರಾಜ್ಯ ಪದ್ಧತಿಯಲ್ಲಿ ದಿವಾನರ ಕಾರ್ಯಕ್ಷೇತ್ರವು ಅಕ ಂಚಿತವಾಗಿರುವದರಿಂದಲೂ, ಧೈರ್ಯಸಚಾಯದ ಅನಾನುಕೂಲತೆಯು ಮತ್ತು ಅಲಕವೂ ಕಾಣ್ವ ವಿಶೇಷವೇನಾದರೂ ಮಾಡಲಿಕ್ಕೆ ಅಸಮರ್ಥರಾದೆವು ಇಷ್ಟೋಂದೇ ಕಲ್ಪನೆಯನ್ನು ಡಾ। ಪರಾಂಜಪೆಯವರು ತಮ್ಮ ಮತದಾರರಿಗೆ ಮಾಡಿಕೊಟ್ಟರಂತೆ. ಇದಲ್ಲದೆ, ತಮ್ಮ ವಿಶಿಷ್ಟ ಕಾರ್ಯತತ್ಪರಶಕ್ತಿಯು ಇಲ್ಲವೆ ಪ್ರಶಂಸನೀಯ ನಿರ್ಭೀಡತೆಯು ಒಂದಾದರೂ ಉದಾಹರಣೆಯ ಮುಕದಾರರ ಮುಂದಿಡಲಿಕ್ಕೆ ಅವರ ಬಳಿಯಲ್ಲಿರಲಿಲ್ಲವಂತೆ.

ಮರುದಿವಸ ಮುಂಜಾವಿನಲ್ಲಿ ಡಾ। ಪರಾಂಜಪೆಯವರು ಇಲ್ಲಿಂದ ಹುಬ್ಬಳ್ಳಿಗೆ ತೆರಳಿದರು.

ಇಲ್ಲಿನ ಹ್ಯಾಸ್ಕೂಲಿನ ವಿದ್ಯಾರ್ಥಿಗಳಾದ ಮಿ। ಅಚ್ಯುತ ಮಹಾಬಲ ಮಾರ್ಡೇಕರರವರು ೩ ಜಾದು ಆಟ ಮಾಡಿ, ಹುಟ್ಟಿದ ಉತ್ಪನ್ನ ನ ಮಾರು ೫೦ ರೂಪಾಯಿಗಳನ್ನು ಹೊನ್ನಾವರದ ನೆರೆ ನಿವಾರಣಾ ಕಮೀಟಿಗೆ ಅರ್ಪಿಸಿದರು.

ಶಿದ್ದಾಪುರ— ತಾರೀಖು ೮ ನೇ ಶುಕ್ರವಾರದವರೆಗೆ ೧೫೦ ೩೦ ಇಂಚು ಮಳೆ ಬಿತ್ತು. ಇತ ೧೦-೧೨ ದಿವಸಗಳಿಂದ ಮಳೆಯೇ ಇಲ್ಲ. ಮೇಘರಾಜನು ರೈತರ ಮೇಲೆ ಮುನಿದನೋ, ಇನೋ ಅಥವಾ ಸರ್ಯುನಾರಾಯಣನಿಗೆ ಚಾರ್ಜ ಒಪ್ಪಿಸಿ ಅಧ್ಯಕ್ಷನಾದನೋ ಏನೋ. ಆ ದಿನಗಳಲ್ಲಯೇ ಕಳೆ-ಕಾಲುವೆಗಳು ಬತ್ತಿಹೋಗಹತ್ತಿವೆ. ತಿಂಗಳವರೆ ತೆರೆಪಿಲ್ಲದೆ ಜೋಯ್ದು ಮೇಘರಾಜನು ತುಂಬಿದ ಕೆರೆ ಕಾಲುವೆಗಳನ್ನೆಲ್ಲ ಸೂರ್ಯನಾರಾಯಣನು ಅಲ್ಪಾವಕಾಶದಲ್ಲಿ ಬತ್ತಿಬಿಟ್ಟನು. ವಿಪರೀತ ಮಳೆಯಿಂದ ಇಲ್ಲಿ ನೂರಾರು ರೂಪಾಯಿಗಳ ಹಾನಿ ಯಾಯಿತು. ಅನೇಕ ಜಾಗೆಗಳಲ್ಲಿ ನೆರೆಯ ಗದ್ದೆಗಳು ಕೊಚ್ಚಿ ಹೋದವು. ತೋಟಗಳು ಹಾಳಾದವು. ಅಡಿಕೆ ಕೊಳೆ ಮತ್ತು ಅಲಕ ಅಡಕೆ ನೆಲೆಯು ಕ್ಷೀಣಿಸಿದರ ತೋಟಗಳ ಗಡ್ಡೆ.

ತಾರೀಖು ೪ ನೇ ಮಂಗಳವಾರಕ್ಕೆ ಶ್ರೀ ಕೃಷ್ಣ ಭಟ್ಟರ ಕೃಷ್ಣ ಜನ್ಮ ವಿಷಯದ ಮೇಲೆ ಕೀರ್ತನೆ ಮಾಡಿದರು. ಕೀರ್ತನೆಯು ರಸಭರಿತವಾಗಿ ಬಹಳೇ ಸಂದಿತ್ತು. ವೇದದ ಗತಿಗಳು ಕೀರ್ತನಗಳಲ್ಲಿ ದೊರಕಿದ ಹಣವೆಲ್ಲ ರಾಷ್ಟ್ರೀಯ ಶಾಲೆಗೆ ಅರ್ಪಿಸಲ್ಪಟ್ಟಿತು.

ಕಳೆದ ಶ್ರಾವಣ ಪೂರ್ಣಿಮೆಗೆ ರಾಷ್ಟ್ರೀಯ ಶಾಲೆಯು ಜನ್ಮ ತಾಳಿ ೩ ವರುಷಗಳು ಸಂಪೂರ್ಣವಾದವು. ಅಂದ ರಾಷ್ಟ್ರೀಯ ಶಾಲೆಯಲ್ಲಿ ವರ್ಧಂತ್ಯುತ್ಸವವು ಜರುಗಿತು. ಶಾಲಾ ಮಂದಿರವು ಅಂದು ತೋಳಿನಿಂದ ಶೃಂಗರಿಸಲ್ಪಟ್ಟಿತ್ತು. ಅವಸರದಲ್ಲಿ ಸುಮ್ಮ ಗಂಟೆಗೆ ಮಹಾತ್ಮರ ಭಾವಚಿತ್ರದೊಡನೆ ಶಿಕ್ಷಕರೂ ವಿದ್ಯಾರ್ಥಿಗಳೂ, ಊರ ಪ್ರಮುಖರೂ, ರಾಷ್ಟ್ರೀಯ ಪದ್ಯಗಳನ್ನು ಹಾಡುತ್ತ, ಊರೊಳಗಿನ ದೇವಸ್ಥಾನಗಳಲ್ಲಿ ಹಣ್ಣು, ಕಾಯಿ ಸಮರ್ಪಣೆ ಮಾಡಿ, ರಾಷ್ಟ್ರೀಯ ಶಾಲೆಯು ಇದೇ ಪ್ರಕಾರ ಅಭಿವೃದ್ಧಿ ಹೊಂದಲೆಂತಲೂ, ಭರತಖಂಡಕ್ಕೆ ಶೀಘ್ರವೇ ಸ್ವರಾಜ್ಯವು ಪ್ರಾಪ್ತಿಯಾಗಲೆಂತಲೂ ದೇವಾಲಯಗಳಲ್ಲಿ ಪ್ರಾರ್ಥನೆಗಳು ನಡೆದವು. ಅಂದು ಹಬ್ಬದಲ್ಲಿ ರೂ ೨-೩ ಆಣೆಗಳು ಕೂಡಿದವು. ಮರುದಿನ ಕಮೀಟಿ ಕೂಡಿ ಕಳೆದ ವರ್ಷದ ಆಢಾವೆ ಪತ್ರಕವೂ ವರ್ಷದಿಂದ ವರುಷದ ಅಂದಾಜ ಪತ್ರಿಕೆಯೂ, ಮಂಜೂರು ಮಾಡಲ್ಪಟ್ಟವು.

ಇಲ್ಲಿಂದ ದಿಲ್ಲಿಯ ಜಂಡಾ ರಾಷ್ಟ್ರೀಯ ಸಭೆಗೆ ಪ್ರತಿನಿಧಿಯಾಗಿ ನೇಮಿಸಿದ ಶ್ರೀ ಗೋಪಾಳರಾವ ದೇಸಾಯಿರವರು ಕಳೆದ ತಾರೀಖು ೭ ನೇ ಶುಕ್ರವಾರಕ್ಕೆ ದಿಲ್ಲಿಗೆ ಹೊರಟು ಹೋದರು.

ಇಲ್ಲಿಂದ ಉಡುಪಿಯ ನೆರೆಯ ದುರ್ಭಿಕ್ಷನಿವಾರಣಾ ಫಂಡಕ್ಕೆ ರೂಪಾಯಿ ೨೫ ಕಳಿಸಲ್ಪಟ್ಟಿದೆ. ಇದು ಮೊದಲನೇ ಕಂತು. ತಾರೀಖು ೮ ನೇ ಶನಿವಾರಕ್ಕೆ ಚಂದ್ರಗ್ರಹಣಕ್ಕೆ ೧೩ ಗಿದ್ದ ಆತ್ಮ ೪ ಬಣ ನಿರಿ ಹುಟ್ಟಿಗೊಂಡವು.

ಗೇರಸಪ್ಪಾ— ಕಳೆದ ತಾರೀಖು ೩೧-೮-೩೩ನೇ ಸಾಯಂಕಾಲಕ್ಕೆ ಇಲ್ಲಿಯ ಶಿವರಾಯ ಮಂಜಪ್ಪ ಶೆಟ್ಟಿ ಎಂಬ ವ್ಯಾಪಾರಸ್ಥರು ಉಪ್ಪಿನ ನಾಮದಾರ ಜನರಿಗೆ ಶಿ ಡಿಮೆ ತೂಕದಿಂದ ಮಾಲು ಪಡಾರಾಟ ಮಾಡಿದರೆಂದು ಗ್ರಾಮಸ್ಥರು ಜಾಹೀರ ಚೌಕಶಿ ನಡಿಸಿ ಪಂಚನಾಮೆ ಮಾಡಿ ಸಹಾ ಆನು ಕೈದಿಗೆ ೩-೪ ತೊಲೆ ಕಡಿಮೆ ಇರುವದೆಂದು ನಿರ್ಣಯಿಸಿದರು. ಆ ಬಗ್ಗೆ ಮುಂದೇನು ಆಜ್ಞೆ ವಿಚಾರ ಆಯಿತೆಂದು ಉಪ್ಪಿನ ಗ್ರಾಮದೊಳಗಿನ ನಾಮಧಾರಿಯರೊಬ್ಬರು ಪ್ರಶ್ನಿಸುತ್ತಾರೆ.

ವೃತ್ತಸಾರ.

— ಡಾ। ನಾರಾಯಣರಾವ ಹರ್ಡೀಕರರು ತಾ। ೮ ನೇ ಶನಿವಾರ ಮಧ್ಯಾಹ್ನ ೮ ಘಂಟೆಗೆ ಸಂಗಡಿಗರಿಂದ ೧೩ ಸತ್ಯಾಗ್ರಹಿಗಳೊಂದಿಗೆ ಹುಬ್ಬಳ್ಳಿಗೆ ತಲ್ಪಿದರು. ಸ್ಟೇಶನಿನ ಮೇಲೆ ಪ್ರಚಂಡ ಸ್ವಾಗತವಾಯಿತು. ಸಾಯಂಕಾಲ ೪॥ ಘಂಟೆಗೆ ರಾಷ್ಟ್ರಧ್ವಜವನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ನಾಗರಿಕರೆಲ್ಲರೂ ದೊಡ್ಡ ಮೆರವಣಿಗೆಯನ್ನು ಜರುಗಿಸಿದರು. ಬಳಿಕ ೬॥ ಘಂಟೆಗೆ ಜಾಹೀರ ಸಭೆಯಾಯಿತು. ಶ್ರೀ ವಿ ಸನಹಿ ಕೀರರವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಸಭೆಯಲ್ಲಿ ಸತ್ಯಾಗ್ರಹಿಗಳ ಸಮಯೋಚಿತ ಭಾಷಣಗಳಾದವು. ಜೈಲಿನಲ್ಲಿ ಅಧಿಕಾರಿಗಳು ಕ್ಷಮೆ ಬೇಡಿಸಲಿಕ್ಕೆ ಹೇಗೆ ಪ್ರಯತ್ನ ಪಟ್ಟರು' ಎಂಬದನ್ನು ಡಾ। ನಾರಾಯಣರಾಯರು ವಿವರಿಸಿದರು. ಹಿಂದುಸ್ಥಾನವನ್ನು ಸ್ವಯಂಸೇವಕರನ್ನು ಸುಸಂಘಟಿತವಾಗಿ ಮಾಡುವದೇ ತಮ್ಮ ಜೀವನದ ಧ್ಯೇಯವೆಂದು ನುಡಿದರು.

— ಗ್ರೀಕರು ಆಚರಿಸಿದ ಕೊಲೆಯ ಬಗ್ಗೆ ರಾಷ್ಟ್ರಗಳ ರಾಯಭಾರಿಗಳು ವಿಚಾರ ಮಾಡಿ ಕೊಲೆ ಬಗೆ ಗ್ರೀಕರು, ಬ್ರಿಟಿಷ, ಫ್ರಾನ್ಸ ಇಟಾಲಿಗಳ ಕೂಡ ಮಾಫಿ ಬೇಡಬೇಕೆಂದು ಠರಾಯಿಸಿರುವರು. ಹಾಗು ಜಪಾನದ ಪ್ರತಿನಿಧಿಗಳ ಅಧ್ಯಕ್ಷತೆಯಲ್ಲಿ ಒಂದು ಚೌಕಶೀ ಕಮೀಟಿಯನ್ನು ನೇಮಿಸಿ, ಕೊಲೆಗಡಕರನ್ನು ದಂಡಿಸಬೇಕೆಂದು ಠರಾಯಿಸಿದೆ. ಭಾರಿಗಳ ನಿರ್ಣಯವು ಇಟಾಲಿಗೆ ಮಾನ್ಯವಿದೆ. ಗ್ರೀಕರು ಇನ್ನೂ ಉತ್ತರ ಕೊಡಲಿಲ್ಲ.

— ದಿಲ್ಲಿಯಲ್ಲಿ ಜಂಡಾ ಕೊಂಗ್ರೆಸಿನ ತಯಾರಿಯು ಪೂರ್ಣವಾಗಿರುವದು. ೪ ೪ ಸಾವಿರ ಪ್ರೇಕ್ಷಕರಿಗೆ ವ್ಯವಸ್ಥೆಯಾಗಿದೆ. ಪ್ರತಿನಿಧಿ-ಪ್ರೇಕ್ಷಕರಿಗೆ ಊಟ-ಉಳಿಕೆಗಳ ವ್ಯವಸ್ಥೆ ಮಾಡಲಾಗಿದೆ. ಮೌ। ಮಹಮ್ಮದ ಅಲ್ಲಿ, ಡಾ। ಕಿಚಲೂರವರು ಕಳೆದ ರವಿವಾರಕ್ಕೇ ದಿಲ್ಲಿಗೆ ಮುಟ್ಟಿರುವರು.

— ಅಯೋಧ್ಯೆ ಗುರುದ್ವಾರ ಪ್ರಬಂಧಕ ಕಮೀಟಿಯ ಆಜ್ಞೆಯಂತೆ ನಾಭಾ ಮಹಾರಾಜರ ಪದಚ್ಯುತಿಯ ನಿಷೇಧದ ಬಗ್ಗೆ ನಿಷೇಧಪ್ರದರ್ಶನವೆಂದು ದಿಲ್ಲಿಯಲ್ಲಿ ಕಳೆದ ರವಿವಾರಕ್ಕೆ ಸಿಖ ಸಮಾಜದ ಮೆರವಣಿಗೆಯಾಯಿತು. ಹಿಂದೂ ಮಹಮ್ಮದೀಯ ಸ್ವಯಂಸೇವಕರೂ ಮೆರವಣಿಗೆಯಲ್ಲಿ ಸೇರಿಕೊಂಡಿದ್ದರು. ಮಹಾರಾಜರ ಬಗ್ಗೆ ಗುರುದ್ವಾರದಲ್ಲಿ ಪ್ರಾರ್ಥನೆಗಳೂ ನಡೆದವು.

— ಕನಿಯಾ ನಿರ್ಣಯದ ನಿಷೇಧದ ಬಗ್ಗೆ ಮುಂಬಯಿಯಲ್ಲಿ ಕಳೆದ ಮಂಗಳವಾರ ತಾ। ೧೧ ನೇಗೆ ಎಲ್ಲ ಪಕ್ಷಗಳ ಒಂದು ಜಾಹೀರ ಸಭೆಯು ಮುಂಬಯಿಯ ನಗರಭವನದಲ್ಲಿ ನಡೆಯುವದಿತ್ತು. ಅಧ್ಯಕ್ಷಸ್ಥಾನವನ್ನು ಸರ್ ಚಿನ ಲಾಲ ಸೆಟಲವಾಡರವರು ಅಲಂಕರಿಸುವವರಿದ್ದರು.

— ಪ್ರಜಾ ಮ್ಯುನಿಸಿಪಾಲಿಟಿಯು ಮೌಲಾನಾ ಮಹಮ್ಮದ ಅಲ್ಲಿಯವರಿಗೆ ಸ್ವಾಗತದ ಮಾನಪತ್ರವನ್ನು ಸಮರ್ಪಿಸುವ ಠರಾವು ಮಾಡಿ, ಆದಕ್ಕೆ ೫೦೦ರಿಂದ ೫೦೦೦ರ ವರೆಗೆ ಖರ್ಚ ಮಂಜೂರು ಮಾಡಿದೆ. ಮೌಲಾನಾರವರು ತಾ। ೨೩ನೇ ಸ ಮಾರಿಗೆ ಆಗಮಿಸುವವರೆಂದು ಸುದ್ದಿ.

— ಮುಂಬಯಿಯ ಮ್ಯುನಿಸಿಪಾಲಿಟಿಯು ಆಗಾಖಾನ ಗವರ್ನರರಿಗೆ ಮಾನಪತ್ರ ಕೊಡುವ ಬಗ್ಗೆ ಮಾಡಿದ ಠರಾವಿಗೆ ಮುಂಬಯಿಯ ಪತ್ರಗಳಲ್ಲೆಲ್ಲ ನಿಷೇಧಸಭೆಗಳಾಗುತ್ತವೆ.

ಗೊಂಬೆಗಳ ಆಟವು.

ಈ ಊರಲ್ಲಿ ಗೊಂಬೆಗಳ ಆಟವು ಶುರು ಆಗಿದೆ ಚೇಫ ಆಫೀಸರನು ಸೂತ್ರಧಾರನು. ಇವೆಲ್ಲ ಸಂಗತಿಗಳು ಕಾನಡಾ ಜಿಲ್ಲೆಯಲ್ಲಿಯ ನಿಜ ವರ್ತಮಾನವನ್ನು ಅರಿತ ಪ್ರತಿ ಒಬ್ಬ ವ್ಯಕ್ತಿಗೆ ಈ ಊರ ವಿಷಯಕ್ಕೆ ಈ ಮೊದಲೇ ತಿಳಿದಿರುತ್ತದೆ. ಈಗಿನ ಮುನಿಸಿಪಾಲಿಟಿಯು ಆಡಳಿತೆಯು ಬಹಳ ಚಮತ್ಕಾರಿಕ ಸ್ಥಿತಿಗೆ ಮುಟ್ಟಿರುತ್ತದೆಂದು ಯಾವದೇ ಸಮಂಜಸ ಮನುಷ್ಯನು ಒಪ್ಪಿಕೊಳ್ಳುವಂತೆ ಇರುತ್ತದೆ. ಈ ಊರ ಮುನಿಸಿಪಾಲಿಟಿಯು ಅನ್ಯಾಯದ ಆಡಳಿತೆಯಲ್ಲಿಯ ಕೆಲವು ಉದಾಹರಣೆಗಳು ಈ ಮೊದಲೇ ಕಾನಡಾವೃತ್ತವನ್ನು ಓದುವ ಪ್ರತಿ ಒಬ್ಬರಿಗೆ ಗೊತ್ತಿವೆ. ಅವುಗಳನ್ನು ಚರ್ಚಿಸುತ್ತಾ ಕೂಡ್ರುವದು ಈ ಲೇಖದ ಉದ್ದೇಶವಲ್ಲ. ಕಳೆದ ೧೦-೧೫ ದಿವಸಗಳಲ್ಲಿ ಚೇಫ ಆಫೀಸರರು ಊರೊಳಗಿನ ಅರ್ಜದಾರರನ್ನು ಕರೆಸಿ, ಅರ್ಜಿಗೆ ಅವರ ಸಮ್ಮತಿಯು ಇರುತ್ತದೋ, ಇಲ್ಲವೋ ಎಂಬ ಚವಕಶಿಯನ್ನು ನಡಿಸಿದರು. ಊರವರು ಅದಕ್ಕೆ ಯಾರೂ ಸೊಪ್ಪು ಹಾಕದ್ದನ್ನು ಕಂಡು, ಚೇಫ ಆಫೀಸರರು, ಸ್ಕೂಲ ಬೋರ್ಡ ಚೇರಮನ, ಪ್ರೆಸಿಡೆಂಟ ಇವರೆಲ್ಲರು ಕೂಡಿಕೊಂಡು ಒಳಸಂಚು ಮಾಡಿ ಇಂಗ್ಲೀಷ ಶಾಲೆಯ ಶಿಕ್ಷಕರು, ಸೋಮವಾರ (ತಾ ೪-೯ ೩೩) ಸಂಜೆ ೪ ಘಂಟೆಗೆ ಎಲ್ಲರೂ ಮುನಿಸಿಪಾಲಿಟಿಯಲ್ಲಿ ಹಾಜರಾಗಬೇಕೆಂಬ ಹುಕುಂ ಫರ್ಮಾಯಿಸಿದರು. ಆ ಪ್ರಕಾರ ಎಲ್ಲ ಶಿಕ್ಷಕರು ಹಾಜರ ಆದರು. ಹೆಡ್ ಮಾಸ್ತರರು ಬಂದ ಕೂಡಲೆ ಸಮ್ಮೇಲನದ ಕಾರ್ಯಕ್ರಮವು ಶುರು ಆಯಿತು. ಪ್ರೆಸಿಡೆಂಟರು ೪ ಶಬ್ದಗಳನ್ನು ಹೇಳುವಷ್ಟರಲ್ಲಿ ಚೇಫ ಆಫೀಸರರು ಎಷ್ಟು ಅಸಮಾಧಾನಕರವಾದ, ನೌಕರಶಾಹಿಯ, ಮತ್ತು ಅಪಮಾನಕರವಾದ ಸ್ವರದಿಂದ ಎಲ್ಲ ಶಿಕ್ಷಕರ ಮೇಲೆ ಒಂದು ಆರೋಪವನ್ನು ಹೇಳಿದರು. ಅದೇನೆಂದರೆ, "ಈ ಊರ ಜನರಿಗೆ ಶಿಕ್ಷಕರು ಹಿಂದೆ ನಿಂತು, ಮುನಿಸಿಪಾಲಿಟಿಯ ವಿರುದ್ಧ ಚಳವಳಿ ಎಬ್ಬಿಸಲಿಕ್ಕೆ ಹಚ್ಚಿ ಕೊಡುತ್ತಾರೆಂದು ಮುನಿಸಿಪಾಲಿಟಿಗೆ ಖಾತ್ರಿಯಾದ ಸುದ್ದಿ ಮುಟ್ಟಿದೆ. ಯಾವ ವ್ಯಕ್ತಿಗಳು ಇದರಲ್ಲಿ ಇರುತ್ತಾರೆಂಬುದು ಇನ್ನೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವದಿಲ್ಲ. ಇಂಥ ವ್ಯಕ್ತಿಗಳನ್ನು ಹುಡುಕಿತೆಗೆಯುವ ಚವಕಶಿಯನ್ನು ಮುನಿಸಿಪಾಲಿಟಿಯು ಈಗಾಗಲೇ ಶುರು ಮಾಡಿದೆ. ಇಂಥವನನ್ನು ಕಂಡು ಹಿಡಿದ ಮೇಲೆ ಯೋಗ್ಯ ವೇಳೆಯಲ್ಲಿ ಅವರಿಗೆ ಕಠಿಣ ಶಿಕ್ಷೆಯು ವಿಧಿಸಲ್ಪಡುವದು. ಇದನ್ನು ನಿಮಗೆ ತಿಳಿಸಿ, ಈ ಚಳವಳಿಯಲ್ಲಿ ಯಾವದೇ ತರದ ಭಾಗವನ್ನು ನೀವು ತೆಗೆದುಕೊಳ್ಳಕೂಡದೆಂದು ಯೋಗ್ಯ ವೇಳೆಯಲ್ಲಿ ತಿಳಿಸುವದರ ದೆಸೆಯಿಂದ ನಿಮ್ಮನ್ನು ಇಲ್ಲಿ ಕರಿಸಿರುತ್ತದೆ. ಇದನ್ನು ಕೇಳಿ, ಹೆಡ್ ಮಾಸ್ತರರು ವಿರೋಧಿಸಲಿಕ್ಕೆ ಪ್ರಯತ್ನ ಮಾಡಲು, ಪ್ರೆಸಿಡೆಂಟ ಸಾಹೇಬ ಬಹದ್ದೂರರು ಲೇಖಿ ಜವಾಬನ್ನು ಕೊಡಬೇಕೆಂದು ಹೇಳಿ ಅವರಿಗೆ ಬೆದರಿಸಲಿಕ್ಕೆ ಪ್ರಯತ್ನ ಮಾಡಲು, ಚೇಫ ಆಫೀಸರರು ಚಟ್ಟನೆ ಸಿಡಿಹೋಗಿ, ಕಾಗದ ಮುಂತಾದ ಸಾಮಾನುಗಳನ್ನು ಕಂಡು ಮಾಡುವ ತಮ್ಮ ಕರ್ತವ್ಯವನ್ನು ಚೆನ್ನಾಗಿ ನೋಡಿಕೊಂಡರು. ಕೂಡಲೇ, ಹೆಡ್ ಮಾಸ್ತರರು ನೀವು ಖಾಸಗೀ ರೀತಿಯಿಂದ ಕರೆದದ್ದರಿಂದ, ಲೇಖಿ ಜವಾಬ ಕೊಡುವದಿಲ್ಲೆಂಬ ಸ್ಪಷ್ಟ ಉತ್ತರವನ್ನು ಹೇಳಿದರು. ಶಿಕ್ಷಕರ ವಿದ್ಯೆಯು ಮತ್ತು ಯೋಗ್ಯತೆಯು ವಿಷಯಕ್ಕೆ ತಮಗೆ ಆದರವಿದ್ದದರಿಂದ, ಇಂಥವರು ಮುನಿಸಿಪಾಲಿಟಿಯ ವಿರುದ್ಧ ನಡೆಯುವ ಸಾರ್ವಜನಿಕ ಚಳವಳಿಯಲ್ಲಿ ಮುಖ್ಯ ಭಾಗವನ್ನು ತೆಗೆದುಕೊಳ್ಳುವವೆಂದರೆ, ಶಿಕ್ಷಕರಿಗೆ ಒಂದು ತರದ ಕುಂದು ತರತಕ್ಕದು ಇರುತ್ತದೆಂಬ ಅಭಿಪ್ರಾಯವನ್ನು ಪ್ರೆಸಿಡೆಂಟರು ವ್ಯಕ್ತಪಡಿಸಿದರು. ಇಷ್ಟಾದ ಮೇಲೆ, ಪ್ರೆಸಿಡೆಂಟರು ಮಾಸ್ತರ ಜನರಿಗೆ ಆಭಾರ ಮನ್ನಿಸಿದರು. ಹೆಡ್ ಮಾಸ್ತರರು ಅವರಿಗೂ ಪ್ರತಿಯಾಗಿ ಆಭಾರ ಮನ್ನಿಸಲು, ಕಾರ್ಯಕ್ರಮವು ಮುಗಿಯಿತು.

ಈ ಪ್ರಕಾರ ನಿರುಪದ್ರವಿಯಾದ ಶಿಕ್ಷಕರನ್ನು ಸಹ ಕೆಣಕಿ, ಮುನಿಸಿಪಾಲಿಟಿಯ ಮೆಂಬರರು ತಮ್ಮ ಅನ್ಯಾಯಗಳನ್ನು ಮುಚ್ಚುವ ಪ್ರಯತ್ನವನ್ನು ಮಾಡುವದಕ್ಕೆ ಹಿಂಜರಿಯುವದಿಲ್ಲ. ಆದರೆ, ಗೊಂಬೆಗಳು ಆದಂಥ ಈ ಮೆಂಬರ ಜನರಿಗೆ ಸ್ವತಂತ್ರ ವಿಚಾರವಿದ್ದರಷ್ಟೇ? ನೌಕರಶಾಹಿ ವರ್ತನದಿಂದ ಊರ ಜನರಿಗೆ ಸೇರದಂಥ ಮತ್ತು ಮುನಿಸಿಪಾಲಿಟಿಯ ಧಂಗೀ ಜನರಲ್ಲಿ ಸಹ ಅಪ್ರಿಯನಾದಂಥ ಚೇಫ ಆಫೀಸರನೇ ಇವರ ಸೂತ್ರಧಾರನು ಹೀಗೆ ಇರಲು, ಈ ಊರಲ್ಲಿ ಎದ್ದಂಥ ಚಳವಳಿಗೆ ಮೇಲೆ ಹೇಳಿದ ಶಿಕ್ಷಕರು ಜವಾಬದಾರರಿದ್ದ, ಚೇಫ ಆಫೀಸರನ ಈ ಕಳಾನಿ ನೀತಿಯೇ ಕಾರಣವೆಂಬುವದು ಊರವರು ಚೆನ್ನಾಗಿ ಬಲ್ಲರು. ಹಿಂದಕ್ಕೆ ಹಲಾಲಖೋರರ ಚಳವಳಿಯು ಜವಾಬದಾರಿಯಾರದು? ಊರಲ್ಲಿಯ ವಸ್ತಿಯು ಅವ್ಯವಸ್ಥಿತ ಬಗ್ಗೆ ಎದ್ದಂಥ ಕುತ್ತು ಸಹಸ್ರ ವಿಧವಾದ ಬೇರೆ ತಕ್ರಾರುಗಳನ್ನು ಉದ್ಭವಿಸಲಿಕ್ಕೆ ಕಾರಣರು ಯಾರು, ಊರೊಳಗಿನ ಶಿಕ್ಷಣವು ಕೆಟ್ಟು ಚಳವಳಿ ಎದ್ದರೆ, ಶಿಕ್ಷಕರನ್ನು ಹಿಡಿಯುವದು ಆಥವಾ ರೀತಿಯ ಆಡಳಿತೆಯು ಒಂದು ಮಾಸಲೆಯಿರುತ್ತದೆ ಎಂದು ಯಾರೂ ಹೇಳಬಹುದು. ಇಂಥ ಸಾಹಸಿಯಾದ ಮತ್ತು ಅನಾವಶ್ಯಕ ಸೂತ್ರಧಾರನನ್ನು ನೇಮಿಸಿಕೊಂಡು ಕುಣಿಯುವದು, ಸಾರ್ವಜನಿಕ ಹಣದ ಅಯೋಗ್ಯ ಚಲ್ಲಾಟವನ್ನು ಮಾಡಿ ಊರೊಳಗೆ ಆಗುವ ಎಲ್ಲ ತರದ ಅನ್ಯಾಯಗಳಿಗೆ ಕಣ್ಣು ಮುಚ್ಚಿಕೊಂಡು ಕೂಡ್ರುವದು ಇರುತ್ತದೆ. ಹೀಗಿನ ಈ ಮೆಂಬರ ಜನರು ಇನ್ನೂ ತಮ್ಮ ದುರ್ಭಾಗ್ಯತನವನ್ನು ಸಾಧಿಸುವದು "ವಿನಾಶಕಾಲೇ ವಿಪರೀತ ಬುದ್ಧಿಃ" ಎಂಬ ಗಾದೆಯನ್ನು ನೆನಪು ಮಾಡಿಕೊಡುವದು ಇರುತ್ತದೆ.

ಶಿರ್ಸಿ.
ತಾ ೭-೯ ೩೩ } "ಓರ್ವ ಉದಾರಮತವಾದಿ"

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಮುಕ್ತಾ ಶಿಕ್ಕಿ ತಿಳಕೊಳ್ಳಬಹುದು

ಪುರುಷೋತ್ತಮ ಲಕ್ಷ್ಮಣಯ್ಯ ಶ್ಯಾನಭಾಗ

ಹೆಗಡೇಕರ, ದುಕಾನ, ಕುಮಟಾ.

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ. ವ್ಹಿ ಪಿ ಖರ್ಚು ಬೇರೆ.

ಅಮೃತಾಂಜನ ಡಿಪೊ, ಫೋರ್ಟ,
ಮುಂಬಯಿ.

ಮನೆ ಕಟ್ಟುವವರಿಗೆ ಸುಸಂಧಿಯು.



ಮೇಲಂತಸ್ತಿಗೆ ಕೋಥೆ ಬರುವದಕ್ಕೆ ನಾನಾ ತರ ನಕ್ಷೀ ಕೊರೆಯಲ್ಪಟ್ಟ ಬೀಡಿನ ಕಟಾಂಜನಗಳೂ, ಹೂದೋಟ, ಬಳಂಗಳ, ಉಪ್ಪರಿಗೆ, ದಿವಾನಖಾನೆ ಮೊದಲಾದ ಸ್ಥಳಗಳಲ್ಲಿ ವಿಶ್ರಾಂತಿಗೊಳ್ಳುವದಕ್ಕೆ ತಕ್ಕ ಬಾಕುಗಳೂ ಕಿರ್ಲೋಸ್ಕರ ಕಾರಖಾನೆಯಲ್ಲಿ ಸೌಕರ್ಯದಿಂದ ದೊರೆಯುತ್ತವೆ. ಪತ್ರ ಬರೆದು 'ಚಿ' ಕ್ಯಾಟಲಾಗು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ.)

ಲೋಕಾನುಕೂಲತೆಯಾಗಬೇಕೆಂದು, लोकानुकूलता व्हावी म्हणून,

ನಮ್ಮ 'ಸ್ಟಾರ ಆಫ್ ಕೆನರಾ' ಮುದ್ರಣಾಲಯದಲ್ಲಿ

आमच्या 'स्टॉर ऑफ केनरा' मुद्रणालयांत

નવીન વ્યવસ્થા !! ಹೊಸ ಏರ್ಪಾಟು !! नवीन व्यवस्था !!

'STAR OF KANARA' PRESS, KUMTA.

ನಮ್ಮ ಮುದ್ರಣಾಲಯದಲ್ಲಿ ಲೋಕಾನುಕೂಲತೆಗಾಗಿ ಮಾಡಿದ ಹೊಸ ಏರ್ಪಾಟುಗಳ ವಿವರ:—

ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಗಳಲ್ಲಿ

೧. ಮನೋಹರ ಮುದ್ರಣ. ೨. ಸಕಾಲ ಮುದ್ರಣ. ೩. ಸುಲಭ ದರ.

ಸಂಕ್ಷೇಪತಃ ಹೇಳಬೇಕಾದರೆ —

ಅಗ್ಗ ಅಚ್ಚು! ಅಂದ ಅಚ್ಚು!! ಅಚ್ಚ ಅಚ್ಚು!!!

ತರತರದ ಬಣ್ಣಗಳಿಂದ ಸುಶೋಭಿತವಾಗಿ ಮುದ್ರಣ ಮಾಡಿಕೊಡುವದಲ್ಲದೆ, ಫೋಟೋ-ಬ್ಲೋಕುಗಳನ್ನೂ ಮುದ್ರಿಸುವ ಏರ್ಪಾಟು ಮಾಡಲಾಗಿದೆ.

ಜರೂರಾಯಿತಿ ಜನರಿಗಾಗಿ—

ಬೇಕಾದ ಛಾಪೆ ಕೆಲಸದ ನಮೂನೆಯನ್ನು ಟಪಾಲದ್ವಾರಾ ಎಡ್‌ವ್ಹಾನ್ಸ ಸಹಿತ ಕಳಿಸಿದ್ದಲ್ಲಿ, ಯಥಾಪ್ರತಿ ಮುದ್ರಣ ಮಾಡಿ ೧-೨ ದಿವಸಗಳಲ್ಲಿಯೇ ವ್ಹಿ. ಪಿ. ಯಿಂದ ಕಳಿಸುವ ವ್ಯವಸ್ಥೆಯೂ ಮಾಡಲ್ಪಟ್ಟಿದೆ. ಬ್ಯಾಂಡಿಂಗ ಕೆಲಸವೂ ಅಚ್ಚುಕಟ್ಟಾಗಿ ಮಾಡಿ ಕೊಡಲ್ಪಡುವದು. ಒಮ್ಮೆ ಆರ್ಡರು ಕಳುಹಿಸಿ, ನೋಡಬಹುದಲ್ಲವೇ?

ಇದಲ್ಲದೆ, ನಮ್ಮಲ್ಲಿ ಗ್ರಂಥ, ಪುಸ್ತಕ, ಮಾಸಪತ್ರಿಕೆ, ಪಂಚಾಂಗ ಮುಂತಾದ ವಿವಿಧ ಮುದ್ರಣ ಕೆಲಸವು ಸುಲಭ ದರದಿಂದ, ತಕ್ಕ ಹೊತ್ತಿಗೆ ತಯಾರಿಸಿ ಕೊಡಲ್ಪಡುವದು.

ಮಾರಾಟಕ್ಕೆ ಸಿದ್ಧ.

ಕೋರ್ಟು ಕಚೇರಿಗಳಲ್ಲಿ ವಕೀಲರಿಗೆ ಬೇಕಾಗುವ ವಕಾಲತ ಅಮಲಜಾರಿ, ಸಾಕ್ಷಿಪಟ್ಟಿ. ಯಾದಿ, ನಕಲು ಅರ್ಜಿ, ದಸ್ತೈವಜು ಪರತ ಬೇಡುವ ಅರ್ಜಿ, ಜ್ಯಾಹಿರಿ ಮುಂತಾದ ಎಲ್ಲ ತರದ ಫಾರ್ಮುಗಳೂ, ಶಿಪ್ಪಿಂಗ ಬಿಲು, ಸತಮಿ, ಬಿಲ್ ಆಫ್ ಎಂಟ್ರಿ ಮೊದಲಾದ ಕಸ್ಟಮ್ ಫಾರ್ಮುಗಳೂ ಮಾರಾಟಕ್ಕೆ ದೊರೆಯುತ್ತವೆ.

ವಿಶೇಷ ಮಾಹಿತಿ ಪತ್ರದ್ವಾರಾ ಯಾ ಮೊಕ್ತಾ.

ಪತ್ತೆ:— ಕೃಷ್ಣರಾವ ಕೇಶವ ಶೇಣವಿ, ಹೆಗಡೇಕರ,
ಮಾಲಕ,
'ಸ್ಟಾರ ಆಫ್ ಕೆನರಾ' ಪ್ರೆಸ್, ಕುಮಟಾ.
(ಉ. ಕಾನಡಾ.)

Printed and Published by Krishnarao Keshav Shenvi (Editor) at the Star of Kanara Press, Kumta

eg. No. B 1270 — Thursday, 20th Septembre 1923

ವರ್ಷ ೭. — ಸಂಚಿಕೆ ೪೯.

ಕಾನಡಾವೃತ್ತ.

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ವರ್ಷದ ವರ್ಗಣಿ.—
ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಮನೆಯವಾರ್ತೆರಿಯಿಂದ ರೂ. 3-0-0
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ವ್ಯಾಖ್ಯಾನ(೧೫ ಏಜಾಟ್ ಉದ್ದ) ೬ ಸಾಲುಗಳ ವರೆಗೆ ರೂ. 1-0-0
ಅವಾಂತ್ರ ಪ್ರತಿ ಸಾಲಿಗೆ 0-2-0.
ಹೆಚ್ಚಿಗೆ ಸಾಲು ಎಷ್ಟು ಹೆಚ್ಚಿರುವವೋ ಆ ಪ್ರಮಾಣದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

(ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖ ೨೦ ಮಾಹೆ ಸಪ್ಟಂಬರ ಸನ್ ೧೯೨೩ ನೇ ಇಸವಿ.)

हिंदुस्थानातील रहिवाश्यांस ज्याप्रमाणे हिंदुस्थानची हवा त्याप्रमाणेच हे औषध हिंदुस्थानातील लोकांस ज्यास्त फायदेशीर आहे.

द्राक्षासव- { दीड रतलची किंमत १ रुपये.

रामबाण औषधें —
सर्दि घालविणारें,
भूक वाढविणारें,
शौच्यास साफ करणारें,
झोप आणणारें,
शक्ति देणारें,
तेजस्वीपणा आणणारें,
पिण्यास रुचिकर.

कॅटलाग मागवा,

झंडु फार्मास्युटिकल वर्क्स लिमिटेड, मुंबई नं. १३

CLAXO:- FRESH STOCK. NEW BRAND. *a food for infants and invalids.*

Kalmegh :- *Well-tried remedy in Liver complaints especially of children.*

Syrup of Vasaka :- *Highly efficacious in cold, cough, crough and bronchitis.*

Besides we have in stock other patent medicines, Thermometres, Glycerine Syringes etc.,

Orders will be executed by V. P. P.

The New Emporium
Honavar. (N. Kanara.)

ಡಾ| ಮಾಸೂರಕರರ

ಸುಧಾಂಜನ.

ಅಂಜನುಗಳಿಗೆಲ್ಲ ಅರಸು.

ತಲೆಶೂಲಿ, ವಾತ ವೇದನೆ, ಕೆಮ್ಮು, ಹಲ್ಲು ನೋವು ಇತ್ಯಾದಿಗಳಿಗೆ ಕ್ಷಿಪ್ರ ಗುಣಕಾರಿ ಮದ್ದು. ಬೆಲೆ ೭ ಆಣೆ ಮಾತ್ರ. ವ್ಯಾಪಾರಿಗಳಿಗೆ ವಿಶೇಷ ಸವಲತು. ಹೆಚ್ಚಿನ ಮಾಹಿತಿ ಏಜಂಟರಿಂದ.

ಏಜಂಟ್ಸ್:— **ನಾಗರ್ಕಟ್ಟೆ ಬ್ರದರ್ಸ್,**
ಸುಧಾಂಜನ ಡಿಪೋ,
ಕುಮಟಾ. (ಜಿಲ್ಲಾ ಕಾರವಾರ.)

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ವಿಷಯುಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ.

ಈ ವರೆಗೆ ಪ್ರಕಟವಾದ ಪುಸ್ತಕಗಳು.

(೧-೨) ಗ್ರೀಸ ದೇಶದ ಗಾಂಧಿ. (ಸಾಕ್ರೆಟೀಸ) (೩) ಸ್ವಾತಂತ್ರ್ಯಸಾಧನೆ. (೪) ಗುರು-ಹಿರಿಯರೂ, ಬಂಧು-ಭಗಿನಿಯರೂ. (೫) ರಾಷ್ಟ್ರೀಯ ಶಿಕ್ಷಣ. (೬) ಸದ್ಗುಣಮಂದಿರ. (ಭಾಗ ೧.) (೭) ಸ್ವರಾಜ್ಯ ಧರ್ಮ. (ಅನಾಮಿನ ಪುಷ್ಪ) ಇವಿಷ್ಟು ಪ್ರಕಟವಾಗಿವೆ, ೫ ಆಣೆಗೆ ಒಂದರಂತೆ ದೊರೆಯುತ್ತವೆ. ವರ್ಗಣೀದಾರರಿಗೆ ಹಿಂದಿನ ಬೇಕಾದ ಪುಸ್ತಕಗಳು ೪ ಆಣೆಗೆ ಒಂದರಂತೆ ದೊರೆಯುವವು. ೬ ಪುಸ್ತಕಗಳಿಗೆ ಕೂಡಿ ೧॥ ರೂಪಾಯಿ ಮಾತ್ರ. ಅಂಚೆವೆಚ್ಚ ಬೇರೆ. ದ್ವಿತೀಯ ವರ್ಷ ಪ್ರಾರಂಭ. ಅನುಕ್ರಮವಾಗಿ ಮಾರ್ಚ, ಮೇ, ಜುಲೈ, ಸಪ್ಟಂಬರ, ನವಂಬರ, ಜನವರಿ ೧೫ ನೇ ತಾರೀಕುಗೆ ಒಂದೊಂದು ಪುಸ್ತ ಹೊರಡುವದು, ವಾ. ವ. ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ.

ವಾ. ಅ. ಹೊದ್ಕೆ,
ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ.

ಎಲ್ಲ ತರದ ಜ್ವರಗಳಮೇಲೆ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ, ಶೈತ್ಯ, ಜಂಗಲಿ, ಅಥವಾ ದೂಷಿತ ಹವೆಯಿಂದ ಬರುವ ಸಾದಾ ವಿಷಾರೀ ಅಥವಾ ಇತರ ಜ್ವರಗಳೂ, ಇನ್ಫ್ಲುಎಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನ್ಯಾನ ದುಷ್ಪರಿಣಾಮರಹಿತ ಕೇವಲ ವನಸ್ಪತಿಯ ಈ ಮದ್ದು ಸೇವಿಸಿದರೆ ಅಶಕ್ತತೆಯಾಗದೆ, ಬೆವರು ಬಂದು ಜ್ವರ ಇಳಿಯುತ್ತದೆ. ಹಾಗು ರೋಗಿಯು ತರಿತ ವಾಸಿಯಾಗುತ್ತಾನೆ.

೩ ಔಂಸ ಬಾಟ್ಲಿ ಕಿಂಮತ ರೂ. ೧-೮-೦.

ಇದರ ಹೊರತು ಇನ್ನೂ ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ, ಉಚ್ಚ ಪ್ರತಿಯ ಕೋಲನ ವೋಟರ, ಲವೆಂಡರ ಇತ್ಯಾದಿ ಸಾಮುಗ್ರಿಗಳು ಅಲೆಂಬಿಕದ ಕಾರಖಾನೆಯಲ್ಲಿ ತಯಾರಾಗುತ್ತವೆ. ಮರಾಠಿ ಕೆಟಲಾಗು ತರಿಸಿರಿ.

ಅಲೆಂಬಿಕ್ ಕೆಮಿಕಲ್ ವರ್ಕ್ಸ್,
ಕಂಪನಿ, ಲಿಮಿಟೆಡ್.
ನಂ. ೫೦, ಪ್ರಿನ್ಸೆಸ್‌ಸ್ಟ್ರೀಟ, ಮುಂಬಯಿ.

अलेंबिक केमिकल वर्क्स कं० लिं०
नं. ५० प्रिन्सेस स्ट्रीट मुंबई.

ಶುದ್ಧ ಖದ್ದರ್ ರೇಶ್ಮಿ ಮಡಿಗಳು.

ಸುಲಭ ಕ್ರಯಕ್ಕೆ ಖಾತ್ರಿಯಾದ ಎಲ್ಲಾ ರಂಗುಗಳಲ್ಲಿಯೂ ಈ ಕೆಳಗೆ ಬರೆದ ಕ್ರಯಕ್ಕೆ ದೊರೆಯುವವು.

೧೮ ಮೊಳ	ಉದ್ದ	೨॥	ಅಗಲ	ರೂ.	೨೩ ರಿಂದ ೨೫	ವರೆಗೆ
೧೬	,,	೨॥	,,	,,	೨೦ — ೩೦	,,
೮	,,	೨॥	,,	,,	೯ — ೧೫	,,
೬	,,	೨॥	,,	,,	೬ — ೧೧	,,

S.U.N. & Co. BENARES CITY

ಅಂಗಿ ಬಟ್ಟೆಗಳು ೧೮ ಮೊಳ X ೨ ಮೊಳ ರೂಪಾಯಿ ೧೮ ರಿಂದ ೩೦ ವರೆಗೆ. ಕೋಟು ೧೨ ಮೊಳ X ೧॥ ಮೊಳ ಅಗಲ ರೂಪಾಯಿ ೧೦ ರಿಂದ ೧೫ ವರೆಗೆ ಜೇನ್‌ಶನ್ ೧೪ ಮೊಳ X ೨ ಮೊಳ ರೂ. ೨೪ ರಿಂದ ೩೫ ವರೆಗೆ ಇವುಗಳಲ್ಲದೆ ಕಾಶೀ ಪೀತಾಂಬರ, ಕಾಶ್ಮೀರ್ ಶಾಲು, ರುದ್ರಾಕ್ಷಿ, ಜಾಗಂಟೆ, ತಾಳ, ಪನ್ನೀರ್ ದಾನಿ, ಲಟದ ಸಾಮಾನುಗಳು, ದೇವರ ಮತ್ತು ಗಾಂಧಿ ಮುಂತಾದವರ ಪಟಗಳಿರುವ ಉಂಗುರಗಳ ಮತ್ತು ಇನ್ನೂ ಅನೇಕ ಸಾಮಾನುಗಳ ಕ್ಯಾಟಲಾಗ್ ಇನಾಂ.

ವಿಳಾಸ:— ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. (ರಿಜಿಸ್ಟರ್ಡ್)

ಮೃದುವಾದ ಗುಂಗುರು ಗುಂಗುರಾಗಿರುವ ನೀಲಿಮೆಯಿಂದ ನಿಬಿಡವಾದ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾವುದೋ

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ್)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿರುವುದೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅತ್ಯಗತ್ಯವಾದ ಸಹಕಾರಿಯಾಗಿರುತ್ತದೆ ಈ ಆಯಿಲ್ ತೊಡೆದುಕೊಳ್ಳುವುದರಿಂದ ಮಸ್ತಿಷ್ಕದ ಬೇನೆಯು ಶಮನವಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಅದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆಯುವದು ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ ' ಕಾಮಿನಿಯಾ ಆಯಿಲ್ " ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ ಸರ್ಟಿಫಿಕೇಟ ಆಫ್ ಮೆರಿಟ " ಅರವಾ ಯೋಗ್ಯತಾಪತ್ರವೂ, ಅಲ್ಲದೆ ಅನೇಕರು ಗ್ರಾಹಕರ ಉತ್ತಮೋತ್ತಮವಾದ ಪ್ರಶಂಸಾಪತ್ರಗಳೂ ದೊರಕಿವೆ.

ಕ್ರಯ — ಸೀಸೆ ರೂಪಾಯಿ 1 0 0, ಸೀಸೆ 3ಕ್ಕೆ ರೂಪಾಯಿ 2 10-0, ವಿ.ಪಿ. ಖರ್ಚು 0 14 0

ಅತಿ ಮನೋಹರವಾದ ಸುರಭಿಯು !

ಒಟ್ಟೋ ದಿಲ್ ಬಹಾರ್ !! (ರಿಜಿಸ್ಟರ್ಡ್)

ಈ ಸುಗಂಧದ್ರವ್ಯವು ಮಧುರ, ಕೋಮಲ ಬಗೆಯ ಪುಷ್ಪಗಳ ಅತ್ಯುತ್ತಮ ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ಹೊರಟ ವಾದುದು ಇವರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವಾಭಾವಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಸುಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊಳ್ಳುವುದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0, 1 ಡ್ರಾಮಿನ (ಎ ತಿಯು) ಸೀಸೆ 1 ಕ್ಕೆ 0 12 0 1 ವಿಸ್ಸಿನ ದೊಡ್ಡ ಸೀಸೆ 1 ಕ್ಕೆ 2 0 0 ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0

Address **The Anglo Indian Drug & Chemical Co,**

16 Market, **BOMBAY. 2**

ಆರೋಗ್ಯಚಂದ್ರಿಕೆ.

ಈ ಪತ್ರಿಕೆಯ ಸಂಪಾದಕರು ಮದ್ರಾಸಿನ ಡಾಕ್ಟರ್ ಯು. ರಾಮರಾವ್, ಎಮ್ ಎಲ್ ಸಿ ಯವರು ಈ ಆರೋಗ್ಯ ಮತ್ತೂ ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೂ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ

ಒಂದು ಸಚಿತ್ರ ಮಾಸಪತ್ರಿಕೆ

ಈ ಮಾಸಪತ್ರಿಕೆಯು ' ಹೆಲ್ತ್ ' ಎಂಬ ಮಾಸದ ಕನ್ನಡ ಪ್ರತಿಯಾಗಿದೆ

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ ಪ್ರಕಟವಾಗುವವು

ಹೆಲ್ತ್ ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯ ಸ್ನೇಹಿತರ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸಿ ಪ್ರಥಮ ಸಂಚಿಕೆಯು ಈ ತಿಂಗಳಲ್ಲಿ ಪ್ರಕಟವಾಗಿದೆ

ಅಂಚೆಯವೆಚ್ಚ ಸೇರಿ ಈ ಪತ್ರಿಕೆಯ ಚಂದಾ ವರುಷಕ್ಕೆ ರೂಪಾಯಿ ೧—೮—೦ ಬಿಡಿ ಪತ್ರಿಕೆ ಒಂದಕ್ಕೆ ೦—೩—೦

ಚಂದಾದಾರರಾಗುವವರು ವಿ ಪಿ ಮೂಲಕವಾಗಿ ತರಿಸಿಕೊಳ್ಳುವದರಿಂದಲೂ ಹಣವನ್ನು ಮುಂಗಡವಾಗಿ ಕಳುಹುವದು ಲಾಭಕರ

ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು ಆರೋಗ್ಯಚಂದ್ರಿಕೆಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು

ಪತ್ರವ್ಯವಹಾರ ವಿಳಾಸ —

ಮೆನೇಜರ್,

' ಹೆಲ್ತ್ ' ಅಥವಾ

' ಆರೋಗ್ಯಚಂದ್ರಿಕೆ ' ಆಫೀಸ.

೩೩೩, ತಂಬುಶೆಟ್ಟಿ ಬೀದಿ ಮದರಾಸ್

ಮೂರ್ತಿಗಳು ಬೇಕೋ?

ನಮ್ಮಲ್ಲಿ ಭಂಗಾರ, ಬೆಳ್ಳಿ ಪಂಚಧಾತು ಹಿತ್ತಾಳಿ ತಾಮ್ರ ಈ ತರೆಹಿತಿಯ ಮೂರ್ತಿಗಳೂ, ಇವಲ್ಲದೆ ಪಾಣಪೀಠಗಳೂ, ಪ್ರಭಾವಳಿಗಳೂ ಈಶ್ವರ ಮುಖಟಗಳೂ, ನಾಗಾಭರಣಗಳೂ, ಕವಚುಗಳೂ ಯಾವದೇ ತರದ ಪ್ರತಿಮೆಗಳೂ ನಮ್ಮಲ್ಲಿ ಯೋಗ್ಯ ದರಕ್ಕೆ ಯೋಗ್ಯ ಹೊತ್ತಿಗೆ ಮಾಡಿ ಕೊಡಲ್ಪಡುವವು ಬೇಕಾದವರು ಪತ್ರವ್ಯವಹಾರ ಮಾಡಿ ಯಾ ಸಮಕ್ಷ ಬಂದು ದರವಾರ ತಿಳಕೊಳ್ಳಬಹುದು

ಪತ್ತೆ —ನಾರಾಯಣ ಹುವಪ್ಪ ಶೇಟ,

ಗುಡಗಾರ, ಗುಜರಗಲ್ಲಿ, ಕುಮಟಾ

(ಉ ಕಾನಡಾ)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧ ರಾಗದ ಪೆಟ್ಟಿಗೆ ಕಿಂ ೨೦, ೪೦, ೪೫, ೫೦, ೬

೨ „ ಕಾಲು ಪೆಟಿಗೆ ಕಿಂ ೬೫, ೭೫, ೧೪೦, ೧೬

೩ ತಬಲೆ ಜೋಡಿ ಕಿಂ ೧೨ ೧೫ ೧೮ ೩೦

೪ ಹಾರ್ಮೋನಿಯಮ ಗ್ಯಾಡ ಕಿಂ ೧, ತಬಲೆ ಗ್ಯಾಡ ಕಿಂ ೧॥ ೫

ವಿಶೇಷ ಮಾಹಿತಿ ಬಗ್ಗೆ ನಮ್ಮ ಕ್ಯಾಟಲಾಗ ಪ್ರುಕ್ಟ ಕೊಡುವೆವು

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು

ಪತ್ತೆ — ಗೋಪಾಳ ಸಖಾರಾಮ ವಾಸ್ಕರ

ಕಂಪನಿ, ನಂ ೩೩೭

ಕಾಳಬಾದೇವಿ ರೋಡ, ಮುಂಬಯಿ

ಡಾ। ಹರ್ಡೀಕರರ ಮುಲಾಖತ್ತು.

—— ❀✻❀ ——

(ವಾ. ಪ್ರ ಸಂಘ, ಹುಬ್ಬಳ್ಳಿ)

ಇದೇ ತಾ ೩ನೇ ದಿವಸ ನಾಗಪೂರ ಜೈಲಿನಿಂದ ಬಿಡುಗಡೆ ಹೊಂದಿ, ಇಲ್ಲಿಗೆ ತಾ ೭ಕ್ಕೆ ಬಂದ. ಕಾಲಕ್ಕೆ ಡಾ। ಹರ್ಡೀಕರರ ಮುಲಾಖತ್ತನ್ನು (interview) ವಾರ್ತಾಪ್ರಸಾರಕ ಸಂಘದ ಬಾತಮೀದಾರರು ತೆಗೆದುಕೊಂಡರು ಅದರೊಳಗೆ ನಡೆದ ಸಂಭಾಷಣೆಯು ಕೆಳಗಿನಂತೆ ಇದೆ

ಪ್ರಶ್ನೆ — ನಾಗಪೂರ ರಾಷ್ಟ್ರಧ್ವಜದ ಸತ್ಯಾಗ್ರಹವನ್ನು ಇಡೀ ರಾಷ್ಟ್ರದ ಚಳವಳಿಯನ್ನಾಗಿ ಮಾಡಿದ್ದರಿಂದ ಆದ ತಾತ್ಕಾಲಿಕ ಮತ್ತು ನಿತ್ಯ ಪ್ರಯೋಜನವೇನು?

ಉತ್ತರ — ನಾಗಪೂರ ಸತ್ಯಾಗ್ರಹವನ್ನು ಇಡೀ ರಾಷ್ಟ್ರದ ಚಳವಳಿಯನ್ನಾಗಿ ಮಾಡಿದ್ದರಿಂದ ಎಲ್ಲಾ ಪ್ರಾಂತಗಳವರು ಒಟ್ಟುಗೂಡುವದಕ್ಕೆ ಬಹಳ ಅನುಕೂಲವಾಯಿತು ಮಾತ್ರವಲ್ಲದೆ ಇಡೀ ಜಗತ್ತಿಗೆ, ಸರಕಾರಕ್ಕೆ ಮತ್ತು ಜನತೆಗೆ, ನಿಜವಾದ ರಾಷ್ಟ್ರಜಾಗೃತಿಯು ಈಗ ಸ್ಫೂರ್ತಿಗೊಂಡಿದ್ದು, ಬಹಳ ಜಾಗರೂಕತೆಯಿಂದ ಕೆಲಸ ನಡಿಸಿದರೆ ಈ ಸ್ವಾತಂತ್ರ್ಯ ಯುದ್ಧದಲ್ಲಿ ಮುಂದೆ ಬೇಕಾದಷ್ಟು ಒಕ್ಕಟ್ಟಿನ ಬಲವನ್ನು ಈಗ ಉತ್ಪನ್ನವಾಗಿರುವ ಈ ನವೀನ ಜಾಗೃತಿಯಿಂದಲೇ ಮುಂದೆ ಒಳಸಬಹುದೆಂದ ವ ನಡೆಟ್ಟು ಮಾಡಿಕೊಟ್ಟಿದೆ ಎಂದು ನನ್ನ ನಂಬಿಕೆ ಇದೆ ಈ ಚಳವಳಿಯನ್ನು ಮುಂದೆ ನಡೆಸುವದರಲ್ಲಿ ಮತ್ತು ಪರಿಣಾಮಕಾರಕವಾಗಿ ಮುಗಿಸುವದರಲ್ಲಿ ಸಹಾಯ ಮಾಡುವದಕ್ಕೆ ತಮ್ಮ ಉತ್ಸಾಹೀ ತರುಣ ಸ್ವಯಂಸೇವಕರನ್ನು ಕಳುಹಿಸಿ, ರಾಷ್ಟ್ರದ ಬೇಡಿಕೆಯನ್ನು ಪೂರ್ತಿಗೊಳಿಸಿದ, ಹನ್ನೊಂಭತ್ತು ಪ್ರಾಂತಗಳ ಇಪ್ಪತ್ತರಷ್ಟು ಜನಗಳೊಂದಿಗೆ ಕಲೆತು ಕೊಂಡಿದ್ದುದರಲ್ಲಿ ಮೇಲಿನ ನನ್ನ ನಂಬಿಕೆಯು ಮತ್ತಷ್ಟು ಬಲವಾಯಿತು

ಪ್ರಶ್ನೆ — ನಿಮಗೆ ನಾಗಪೂರ ಚಳವಳಿಯಲ್ಲಿ ಆದ ಅನುಭವದ ಮೇಲಿಂದ ಹೇಳುವದಾದರೆ, ಈಗ ರಾಷ್ಟ್ರವು ಕರ ಕೊಡುವದನ್ನು ನಿಲ್ಲಿಸಿ ಸತ್ಯಾಗ್ರಹದ ಕಡೆಯ ಮೆಟ್ಟಿಲನ್ನು ಹತ್ತುವದಕ್ಕೆ ತಯಾರಿದೆಯೋ ಹೇಗೆ?

ಉತ್ತರ — ನಾನು ಬೇರೆ ಪ್ರಾಂತಗಳ ಜನಗಳೊಡನೆ ಕಲೆತು ಮಾತನಾಡಿದ್ದೇನೆ ನನ್ನ ಅಭಿಪ್ರಾಯದ ಮೇರೆಗೆ ದೇಶವು ಕರಕೊಡುವದನ್ನು ನಿಲ್ಲಿಸಿ ಸರಕಾರಕ್ಕೆ ಕಡೆಯ ಪೆಟ್ಟನ್ನು ಹಾಕುವದಕ್ಕೆ ಇನ್ನೂ ಸಿದ್ಧವಾಗಿಲ್ಲ ನನ್ನ ತಿಳುವಳಿಕೆಯ ಮಟ್ಟಿಗೆ ಅದರ ಕಾರಣವು ಇಷ್ಟೇ ಜನರೂ, ಸ್ವಯಂಸೇವಕರೂ ಈ ಚಳವಳಿಯ ನಿಜವಾದ ಸ್ವರೂಪವನ್ನು ಇನ್ನೂ ಚನ್ನಾಗಿ ಅರಿತುಕೊಂಡಿಲ್ಲ ಮಾತ್ರವಲ್ಲ, ಆ ವಿಷಯದಲ್ಲಿ ತಕ್ಕ ಶಿಕ್ಷಣವೂ ಕೂಡ ಅವರಿಗೆ ದೊರೆತಿಲ್ಲ ಈ ಚಳವಳಿಯು ಒಂದು ತಂದ ಮನೋವಿಕಾರದಿಂದುಂಟಾದ ಒರೇ ಸ್ಫೂರ್ತಿ ಮಾತ್ರವಾಗಿತ್ತು ಯಾವ ಚಳವಳಿಯಾದರೂ ಮೊದಲಿಗೆ ಹಾಗೆ ಇರುವಂಥಾದ್ದೇ ಎಲ್ಲಾ ಚಳವಳಿಗಳಲ್ಲಿ ಸ್ಫೂರ್ತಿಯು ಆವಶ್ಯಕತೆಯು ಇದ್ದೇ ಇದೆ ಆದರೂ ಕೂಡ, ಅದು ಬಹಳ ಹೆಚ್ಚಾದರೆ ಎಲ್ಲವೂ ಕೆಟ್ಟುಹೋಗುವದು ದೇಶವು ಕ್ರಾಂತಿಕಾರಕವಲ್ಲದ, ಈ ಶಾಂತತೆಯ ಮಾರ್ಗದಿಂದ ಸ್ವಾತಂತ್ರ್ಯದ ಕಡೆಗೆ ಮುಂದರಿಸುತ್ತಿದೆ ಆದರೆ ಕ್ರಮವಾದ ಶಿಸ್ತಿನ ರೀತಿಯಲ್ಲಿ ಚಳವಳಿಯನ್ನು ಮುಂದರಿಸುವದಕ್ಕೆ, ನಮ್ಮ ತರುಣರಿಗೆ ತಕ್ಕ ಶಿಕ್ಷಣವು ಇನ್ನೂ ಅವಶ್ಯವಿದೆ ಸ್ವಾರ್ಥತ್ಯಾಗವಂತೂ ಬೇಕೇಬೇಕು ಆದರೂ ಕೂಡ ಶಿಸ್ತಿನ ಹೊರತು ಕೇವಲ ಸ್ವಾರ್ಥತ್ಯಾಗದಿಂದಲೇ ಹೆಚ್ಚಿನ ಪ್ರಯೋಜನವೇನೂ ಆಗಲಾರದು ಈಗ ಮಾತುಗಳು ಬಹಳ ನಡೆಯುತ್ತವೆ ಅವುಗಳಲ್ಲಿ ಕೆಲವು ಸ್ವಲ್ಪ ಮಟ್ಟಿಗೆ ಕಾರ್ಯದಲ್ಲಿಯೂ ಪರಿಣಮಿಸುತ್ತವೆ ಆದರೆ, ಅದು ಇನ್ನೂ ಸಮಾಧಾನಕಾರಕವಾಗಿಲ್ಲ ಆದ್ದರಿಂದ ನಾನು ಹೇಳುವದು ಇಷ್ಟೇ. ತಮ್ಮ ಮೇಲೆ ಜವಾಬದಾರಿಯನ್ನು ತೆಗೆದುಕೊಂಡು ಕೆಲಸ ಮಾಡುವ ಪುಢಾರಿಗಳು ನಮ್ಮ ತರುಣರನ್ನು ಶಿಸ್ತಿನಿಂದ ಕ್ರಮಪಡಿಸುತ್ತ ಕೆಲಸವನ್ನು ಕೈಕೊಳ್ಳಬೇಕಾಗಿದೆ ಮತ್ತು ಶಿಸ್ತಿನಿಂದ ಕೂಡಿದ ಸ್ವಾರ್ಥತ್ಯಾಗದ ಮಹತ್ವವನ್ನು ತಿಳಿಸಿ ಸರಕಾರದ ನಿರಂಕುಶ ಪ್ರವೃತ್ತಿಗೆ ಎದುರಾಗಿ ಶಿಸ್ತಿನಿಂದ ಕೂಡಿದ ಪ್ರತಿರೋಧ ಮಾಡುವದಕ್ಕೆ ತರುಣರನ್ನು ಸಜ್ಜುಗೊಳಿಸಬೇಕು

ಪ್ರಶ್ನೆ — ಸ್ವರಾಜ್ಯಕ್ಕೋಸ್ಕರ ಮಾಡುವ ಈ ನಮ್ಮ ಹೋರಾಟದಲ್ಲಿ ಈ ರೀತಿಯ ಚಳವಳಿಗಳು ಅಗತ್ಯವೆಂದು ನಿಮ್ಮ ಅಭಿಪ್ರಾಯವೋ? ಹಾಗಿದ್ದರೆ ಯಾವ ತರದ ಮಾನಸಿಕ ಹಾಗು ಶಾರೀರಿಕ ಪರಿಸ್ಥಿತಿಯುಳ್ಳ ಜನರು ಇಂಥಾ ಚಳವಳಿಗಳಲ್ಲಿ ಭಾಗ ತೆಗೆದುಕೊಳ್ಳಬೇಕೆಂದು ನಿಮ್ಮ ಅಭಿಪ್ರಾಯ?

ಉತ್ತರ — ದೇಶವು ಸ್ವಾತಂತ್ರ್ಯ ಯುದ್ಧದಲ್ಲಿ ಎಷ್ಟೆಷ್ಟು ಮುಂದರಿಸುತ್ತದೆ ಎಂಬುದನ್ನು ಆಗಿಂದಾಗ್ಗೆ ಪರೀಕ್ಷಿಸುವದಕ್ಕೆ ಸಂಘಟಿತ ರೀತಿಯಲ್ಲಿ ನಡಿಸಲ್ಪಟ್ಟ ಇಂಥಾ ಸಣ್ಣ ಸಣ್ಣ ಹೋರಾಟಗಳು ಅಗತ್ಯವಿದೆ ಇನ್ನೊಂದೇನೆಂದರೆ ಬೇರೆ ಬೇರೆ ಪ್ರಾಂತ್ಯಗಳ ಜನರಲ್ಲಿ ಕೆಲಸದ ಒಕ್ಕಟ್ಟನ್ನು ಉಂಟು ಮಾಡುವದಕ್ಕೆ ಇಂಥಾ ಹೋರಾಟಗಳು ಅತ್ಯಂತ ಸಹಕಾರಿಗಳಾಗಿವೆ ಇಂಥಾ ಚಳವಳಿಗಳಿಗೆ ಬರತಕ್ಕ ಜನರಾದರೂ ನಾನು ಈ ಮೊದಲೇ ಹೇಳಿದ ರೀತಿಯಲ್ಲಿ ಸುಶಿಕ್ಷಿತರಾದವರಿರಬೇಕು

ಪ್ರಶ್ನೆ — ಜನಾಂಗದ ಉನ್ನತಿಗೋಸ್ಕರ ಹೋರಾಡುವ ಮತ್ತು ಕಷ್ಟವನ್ನು ಸೋಸುವ ಜನಗಳ ಕಡೆಗೆ ಸರಕಾರದ ಹಾಗೂ ಅದರ ನೌಕರರ ಅಂತಃಕರಣದ ಭಾವನೆಯು ಬದಲಾಗಿದೆಯೋ ಹೇಗೆ? ಅವರು ನಿಮ್ಮನ್ನು ನಡಿಸಿಕೊಂಡ ರೀತಿಯನ್ನು ಸ್ವಲ್ಪ ತಿಳಿಸಬೇಕಾಗಿ ಪ್ರಾರ್ಥಿಸುತ್ತೇನೆ ಮತ್ತು ಸರಕಾರದ ಅಂತಃಕರಣದ ಭಾವನೆಯು ಸಧ್ಯದಲ್ಲೇ ಬದಲಾಗುವ ಸಂಭವವಾದರೂ ಇದೆಯೋ ಹೇಗೆ?

ಉತ್ತರ — ಸರಕಾರವು ತನ್ನ ಹೃದಯದ ಭಾವನೆಯನ್ನು ಬದಲಾಯಿಸಿದರಂತೆ ತೋರುವದಿಲ್ಲ ಹಾಗೆ ಬದಲಾಯಿಸುವ ಸಂಭವವಾದರೂ ಕಂಡು ಬರುವದಿಲ್ಲ ಸರಕಾರವು ಹಿಂದುಸ್ಥಾನದ ವಿಷಯದಲ್ಲಿ ಪರೋಪಕಾರ ದೃಷ್ಟಿಯಿಂದ ಕೆಲಸ ನಡಿಸುತ್ತಾ ಇಲ್ಲ ಬರೇ ಸ್ವಾರ್ಥಪರಾಯಣರಾದ ಇಂಗ್ರೇಜಿ ಜನರ ಹಿತಕ್ಕೋಸ್ಕರ ಮತ್ತು ನೈಸರ್ಗಿಕ ಉತ್ಪನ್ನಗಳ ಪೂರ್ಣ ಉಪಯೋಗ ಮಾಡಿಕೊಳ್ಳಲು ತಿಳಿಯದಿರುವ (underdeveloped) (ಉಪಯೋಗವನ್ನು ಮಾಡಿಕೊಳ್ಳುವದಕ್ಕೆ ನಿರೋಧ ಮಾಡಿ?) ಈ ದೇಶವನ್ನು ಸುಲಿಯುವದಕ್ಕೋಸ್ಕರ ಬದ್ಧಕಂಕಣವಾಗಿದೆ. ಎಂದಮೇಲೆ ಸರಕಾರದ ಅಂತಃಕರಣವು ಬದಲಾಯಿಸುವದೆಂಬ ಆಶೆಯನ್ನು ಇಟ್ಟುಕೊಳ್ಳುವದಾದರೂ ಹೇ!? ನನಗೆ ಜೈಲ ಅಧಿಕಾರಿಗಳ ಕೂಡ ಇದ್ದ ಸಂಬಂಧವೂ, ನಾನು ತಿಳಿದುಕೊಂಡಿರುವ ಮಟ್ಟಿನ ಸರಕಾರದ ಕೃತಿಗಳೂ ಈ ವಿಷಯದಲ್ಲಿ ಬಲವಾದ ಸಾಕ್ಷಿಗಳಾಗಿವೆ

ಪ್ರಶ್ನೆ — ನಿಮ್ಮ ಅಭಿಪ್ರಾಯದಲ್ಲಿ ಮಧ್ಯಪ್ರಾಂತ ಕಾಯದೇ ಕೌನ್ಸಿಲಿನ ಠರಾವು ಈ ಚಳವಳಿಯನ್ನು ಸಮಾಧಾನಕರವಾಗಿ ಮುಗಿಸುವದರಲ್ಲಿ ಏನಾದರೂ ಸಹಾಯವಾಗಿದೆಯೋ ಹೇಗೆ?

ಉತ್ತರ — ಇದ್ದರೂ ಇರಬಹುದು. ಆ ಕಾಯದೇ ಕೌನ್ಸಿಲಿನಲ್ಲಿ ನಡೆದ ಚರ್ಚೆಯನ್ನಾಗಲೀ, ಅದರ ಠರಾವನ್ನಾಗಲೀ ನಾನು ಇನ್ನೂ ಸರಿಯಾಗಿ ತಿಳಿದುಕೊಂಡಿಲ್ಲ ನನಗೆ ತೋರುವದೇನಂದರೆ, ಸರಕಾರವು ಈ ಚಳವಳಿಯ ನಿಜವಾದ ಬೆಲೆಯನ್ನು ತಿಳಿದುಕೊಂಡಿತು ಜನರನ್ನು ಇನ್ನೂ ರೇಗಿಸುವದು ಅದರ ಮನಸ್ಸಿಗೆ ಬರಲಿಲ್ಲ ತಮ್ಮ ಸಾಮ್ರಾಜ್ಯವನ್ನು ಹಿಂದುಸ್ಥಾನದಲ್ಲಿ ಸುರಕ್ಷಿತವಾಗಿ ಇಡುವದಕ್ಕೆ ಮತ್ತು ತಮ್ಮ ಅಧಿಕಾರವನ್ನು ಅದರ ಮೇಲೆ ಇಟ್ಟಿರುವದಕ್ಕೆ, ಮಾತಿನಿಂದ ಅಲ್ಲದಿದ್ದರೂ, ಕೃತಿಯಿಂದ ತಮ್ಮ ಸೋಲನ್ನು ಒಪ್ಪಿಕೊಂಡು, ಆಗೋಸ್ಟು ೧೭ನೇ ತಾರೀಖಿನ ದಿವಸ ಕ್ರಿ ಪ್ರೊ ಕೋ ೧೪೪ನೇ ಕಲಮಿನ ಪ್ರಕಾರ ತಾಕೀತನ್ನು ಮುಂದರಿಸದೆ ಇರಬೇಕಾಗಿ ಬಂದಾದು ಮಾತ್ರವಲ್ಲದೆ, ಎಲ್ಲಾ ಕೈದಿಗಳನ್ನು ಬಿಟ್ಟುಬಿಡಬೇಕಾಯಿತು.

ಪ್ರಶ್ನೆ — ಈ ಚಳವಳಿಯಲ್ಲಿ ನಿಮಗಾದ ಅನುಭವದ ಮೇಲಿಂದ ನೀವು, ಇನ್ನು ಮುಂದೆ ಏನು ಮಾಡಬೇಕೆಂದನ್ನುವಿರಿ?

ಉತ್ತರ — ಪರಿಣಾಮಕಾರಕವಾಗುವಂತೆ ದೇಶದ ಉನ್ನತಿಯನ್ನು ಸಾಧಿಸುವ ಪ್ರತಿಯೊಬ್ಬ ಹಿಂದಿ ತರುಣನು ತನ್ನನ್ನೇ ತಾನು ಅವಲಂಬಿಸಿರಬೇಕಾಗಿದೆ ಎಂದು ನನ್ನ ಮನಸ್ಸಿನಲ್ಲಿ ಮೊದಲಿಗಿಂತಲೂ ಹೆಚ್ಚಾಗಿ ಬಿಂಬಿಸಿರುತ್ತದೆ. ಕಾಂಗ್ರೆಸದೊಳಗೆ ಮತ್ತು ದೇಶದೊಳಗೆ ಇರುವ ಈಗಿನ ಇಬ್ಬಣಗಳಿಂದ ವ್ಯಕ್ತಿಶಃ ನನಗೆ, ಬಲು ಖೇದವಾಗಿದೆ. ಮತ್ತು ನನಗೆ ಹೀಗೆ ಅನಿಸುತ್ತದೆ, ನಾವು ನಮ್ಮ ನಮ್ಮೊಳಗಿನ ಜಗಳ ಮತ್ತು ಒಡಕುಗಳಿಂದ ನಮ್ಮ ತರುಣರನ್ನು ನಿಜವಾದ ಹೋರಾಟದಿಂದ ವಿಮುಖರನ್ನಾಗಿ ಮಾಡುತ್ತಿದ್ದೇವೆ ಈ ತರುಣರು ಈಗ ಮಾಡತಕ್ಕದ್ದು ಇಷ್ಟೇ ಹಳೇ ಪುಢಾರಿಗಳು ಅಂತ ಇರುವವರನ್ನೆಲ್ಲಾ ಅವರವರೊಳಗೆ ಜಗಳ ಹಚ್ಚಿರುವದಕ್ಕೆ ಬಿಟ್ಟುಬಿಟ್ಟು, ತಾವು ಅವರನ್ನು ಅವಲಂಬಿಸಿಕೊಂಡಿರದೆ ಜವಾಬದಾರಿಯ ಮತ್ತು ಪ್ರಯೋಜನಕಾರಿಗಳಾದ ಕೆಲಸಗಳನ್ನು ಮಾಡಲಿಕ್ಕೆ ತೊಡಗಬೇಕು ಮಹಾತ್ಮಾಜೀಯವರು ಹಾಕಿಕೊಟ್ಟ ದಾರಿಯಿಂದಲೇ ಸಂಪೂರ್ಣ ಸ್ವಾತಂತ್ರ್ಯಗಳಿಸುವದು ನನ್ನ ಧ್ಯೇಯವಾಗಿದೆ

ದೇವೀದಾಸ ಗಾಂಧಿಯವರ ಮುಲಾಖತ್ತು.

(ವಾ ಪ್ರ ಸಂಘ, ಹುಬ್ಬಳ್ಳಿ)

ಮಹಾತ್ಮರಿಗೆ ಭೆಟ್ಟಿಯಾಗಲಿಕ್ಕೆಂದು ಅವರ ಕನಿಷ್ಠ ಪುತ್ರರಾದ ಶ್ರೀಯುತ ದೇವೀದಾಸ ಗಾಂಧಿಯವರು ತಾರೀಖು ೧ನೇ ಸಪ್ಟಂಬರ ದಿವಸ ಪುಣೆಗೆ ಬಂದಾಗ್ಗೆ ನಮ್ಮ ಸಂಘದ ಪ್ರತಿನಿಧಿಗಳು ಅವರ ಮುಲಾಖತನ್ನು (interview) ತೆಗೆದುಕೊಂಡರು ಮಹಾತ್ಮರಿಗೆ ಜೇಲಿನಲ್ಲಿ ಎಲ್ಲಾ ತರದ ಸುಖ ಸೌಕರ್ಯಗಳು ಸಿಕ್ಕುತ್ತವೆಂದೂ ಇಡೀ ದಿವಸವೆಲ್ಲ ಸಂಸ್ಕೃತಾಧ್ಯಯನದಲ್ಲಿ ವಿಶೇಷತಃ ವೇದಾಧ್ಯಯನದಲ್ಲಿಯೂ ನೂಲುವದರಲ್ಲಿಯೂ ಕಳೆಯುತ್ತಿರುವರೆಂದೂ ಅವರು ತೆಗೆದ ನೂಲನ್ನು ಅಹಮ್ಮದಾಬಾದಕ್ಕೆ ಕಳಿಸಲಿಕ್ಕೆ ಪರವಾನಗಿ ಸಿಗದೆ, ಅವರ ಹತ್ತರವೇ ಸಂಗ್ರಹಿಸಲ್ಪಟ್ಟಿರುವದೆಂದೂ ಶ್ರೀ। ದೇವೀದಾಸ ಗಾಂಧಿಯವರು ಹೇಳಿದರು

ಶುದ್ಧ ಖಾದಿ

ವಿಕ್ರಿಗೆ ತಯಾರ.

ಹೊನ್ನಾವರ ತಾಲೂಕಾ ಕಾಂಗ್ರೆಸ ಕಮಿಟಿಯಿಂದ ಕೈಮಗ್ಗದ ಕೈರಾಟಿಯ ಶುದ್ಧ ನೂಲಿನ ಖಾದಿ ಮಾರಾಟಕ್ಕೆ ಕಾಂಗ್ರೆಸ ಆಫೀಸಿನಲ್ಲಿ ಸಿಗುವದು

ಹೊನ್ನಾವರ, } ಸೆಕ್ರೆಟರಿ,
೧೦-೧೨-೨೩ } ತಾ. ಕಾ ಕಮಿಟಿ, ಹೊನ್ನಾವರ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಮುದ್ದಾಂ ಶಿಕ್ಕೆ ತಿಳಕೊಳ್ಳಬಹುದು,

ಪುರುಷೋತ್ತಮ ಲಕ್ಷ್ಮಯ್ಯ ವ್ಯಾಸಭಾಗ.

ಹೆಗಡೇಕರ, ದುಕಾನ, ಕುಮಟಾ.

ಜಾಹೀರ ನೋಟೀಸು.

ಕೆಳಗೆ ಸಹಿ ಮಾಡಿದವರ ಕಡೆಯಿಂದ ಯಾವತ್ತು ಜನರಿಗೆ ತಿಳಿಯಪಡಿಸುವದೇನಂದರೆ — ಕಳೆದ ತಾ ೧೧—೮—೧೯೩೩ನೇ ದಿವಸ ರಾತ್ರಿ ನಮ್ಮ ಮನೆಯಲ್ಲಿ ಕಳವಾಗಿ, ನಮ್ಮ ಬಾಬತು ಮತ್ತು ನಮ್ಮಲ್ಲಿ ಇಟ್ಟಿರುತ್ತಿದ್ದ ರಾ॥ ವಿಟ್ಠಲ ಗೋಪಿಂಗ ಜಾಕ ಇವರ ಬಾಬತು ಕೂಡ ಅಜಮಾಸ 7497/ ರೂಪಾಯಿ ಕಿಮ್ಮತ್ತಿನ ಬೆಳ್ಳಿ-ಭಂಗಾರ ಮತ್ತು ಮುತ್ತಿನ ದಾಗಿನೆಗಳು ಕೂಡ ಕಳವಾಗಿರುತ್ತವೆ. ಈ ಸಂಬಂಧಿ ಪೋಲೀಸರಲ್ಲಿ ಫಿರ್ಯಾದಿ ಆಗಿ ತಪಾಸ ನಡೆದದೆ ಈ ಗುನೆಯ ಪತ್ತೆ ಆಗ... ಹಾಗೆ ಯಾರು ಬಾತಮಿ ಕೊಡುತ್ತಾರೋ ಅವರಿಗೆ ನಾವು 400 ನಾನೂರು ರೂಪಾಯಿಗಳ ಇನಾಮು ಕೊಡುವರೇ ಖುಶಿ ಇದ್ದೇವೆ ಅಂದರೆ, ಕಳವಾದ ಮಾಲು ಅರ್ಧಕ್ಕಿಂತ ಜಾಸ್ತಿ ಮಾಲು ಸಿಕ್ಕಲ್ಲಿ ನಾನೂರು ರೂ. ಇನಾಮು ಅರ್ಧಕ್ಕಿಂತ ಕಡಿಮೆ ಕಿಮ್ಮತ್ತಿನ ಮಾಲು ಸಿಕ್ಕಲ್ಲಿ ಇನ್ನೂರು ರೂಪಾಯಿಗಳು ಇನಾಮು ಕೊಡುವದು ನಾವು ಖುಶಿ ಇದ್ದೇವೆ ಸದರಿ ಗುನೆಯ ಪತ್ತೆ ಪೋಲೀಸರಾಗಲೀ ಅಥವಾ ಇತರೇ ಜನರಾಗಲೀ ಹಿಡಿದು ಕೊಟ್ಟಲ್ಲಿ, ಸದರಿ ಇನಾಮು ಕೊಡುತ್ತೇವೆ ತಾ ೧೨—೯—೧೯೩೩ನೇ ಇಸವಿ

ವೈಕುಂಠರಾವ ಮಂಗೇಶರಾವ ದೇಶಪಾಂಡೆ
ಮು. ಪೋ. ಹಳಿಯಾಳ ಜಿಲ್ಲಾ ಕಾರವಾರ

ವಿ। ಅಯ್ಯಂಗಾರರ 'ಪ್ರಾರಬ್ಧ'.

ಸಪ್ಟಂಬರ ತಾರೀಖು ೧೧—೯—೩೩ನೇ ದಿವಸ ಪಿ. ಡಬ್ಲ್ಯು. ಡಿ. ಇಂಜನಿಯರ ಸಾಹೇಬರಾದ ಅಯ್ಯಂಗಾರರವರ ದಸ್ತಾಬಿ ಬಂಗ್ಲೆಯಲ್ಲಿ ಇಳಕೊಂಡಾಗ ಅಲ್ಲಿಯ ನಿಜಸೀಮೆಯಲ್ಲಿದ್ದ ಟೋಲವಾಕೆಯುವರನ್ನು ಕರೆದು ಹಿಡದಂತೆ ಈ ಕೆಳಗಿನ ಪ್ರಶ್ನೋತ್ತರಗಳು ನಡೆದವಂತೆ—

ಸಾ। — ನೀವು ಕಲೆಕ್ಟರ ಸಾಹೇಬರಿಗೆ ಅರ್ಜಿ ಮಾಡಿದ್ದೀರೋ?

ನಾಕೆದಾರ — ಹೌದು

ಸಾ॥ — ಯಾಕೆ?

ನಾ — ಯಾವ ರಸ್ತೆಯಿಂದ ವಾಹನಗಳು ತಿರುಗಿದರೆ ನಾವು ಟೋಲ ವಸೂಲ ಮಾಡಬೇಕೋ ಅಂಥ ರಸ್ತೆಯು ಕೆಟ್ಟುಹೋಗಿ ವಾಹನಗಳ ತಿರುಗಾಟಕ್ಕೆ ನಿರುಪಯೋಗಿಯಾದ್ದರಿಂದ

ಸಾ॥ — ಅದಕ್ಕೆ ಯಾರೇನು ಮಾಡುವರು?

ನಾ — ತಾವೇ ತಿಳಕೊಳ್ಳಿರಿ

ಸಾ॥ — ಈಗ ಮೋಟಾರ ತಿರುಗುತ್ತದಲ್ಲ? ನಾನೂ ಮೋಟಾರ ತಂದಿರುತ್ತೇನಲ್ಲ?

ನಾ — ೧೫ ದಿವಸ ಸತತವಾಗಿ ಮಳೆಯಿಲ್ಲದೆ, ಬಿಸಿಲು ಬಿದ್ದಿರುವದರಿಂದ ಈಗ ಮೂರ-ನಾಲ್ಕು ದಿವಸಗಳಿಂದ ಬಹಳ ಪ್ರಯಾಸದಿಂದ ಕೆಲವು ವಾಹನಗಳು ತಿರುಗುತ್ತವೆ ಇದಲ್ಲದೇ ಈಗ ತಾವು ಬಂದ ರಸ್ತೆಯು ಹಳೇದಾಂಡೇಲಿ ಯಕ್ಕಂಬಿಯಿಂದ ೫೪ನೇಯ ಮೈಲಿನ ವರೆಗಿನ ರಸ್ತೆಯು ಯಾವ ಸ್ಥಿತಿಯಲ್ಲಿರುವದೆಂಬುದನ್ನು ಈಗಾದರೂ ನೋಡಿಕೊಳ್ಳಬಹುದು

ಸಾ। — ಅದು ನಿಮ್ಮ ಪ್ರಾರಬ್ಧ ಹೆಚ್ಚಾದರೆ, ಸರಕಾರಕ್ಕೆ ಕೊಡುತ್ತಿದ್ದರೋ? ನಾನು ಜೂನದಲ್ಲಿ ಬಂದಿದ್ದೆನು ಆಗೇನು ರಸ್ತೆ ಕೆಟ್ಟಿದ್ದಿಲ್ಲ ಈಗ ವಾಹನಗಳು ತಿರುಗುತ್ತವೆ ಹಾಗೆ ಹೀಗೆ (ಅಲ್ಲಿಂದ ನಾಕೆಯವರು ಹೊರಟು ಬಂದರಂತೆ)

ಸಾಹೇಬರ ಹೇಳಿದಂತೆ ಈ ವರ್ಷ ಮಳೆ ಹೆಚ್ಚಾಗಿ ರಸ್ತೆ ಕೆಟ್ಟದ್ದು ನಾಕೆಯುವರ ಪ್ರಾರಬ್ಧವಾಗಿದ್ದು ಆಗಿರಬಹುದು ಈಗೆರಡು ವರ್ಷದಿಂದ ಯಕ್ಕಂಬಿ ೫೪ನೇ ರಸ್ತೆಯು ಕೆಟ್ಟದ್ದು P. W. D ಯವರ ಕೃತ್ರಿಮ ಯೋಗವು ಆಗಿರಬಹುದು ಈ ಸಂಗತಿಯು ಪ್ರತಿಯೊಂದು ಮೋಟಾರ ಸರ್ವೀಸಿನವರಿಗೂ ಗಾಡಿಕಾರರಿಗೂ ಗೊತ್ತೇ ಉಂಟು ಇದೇ ಸಾಹೇಬರು ಆ ದಿವಸ ಮುಂಚಿತವಾಗಿ ಅಲ್ಲಿಗೆ ಬಂದಿದ್ದರೆ, ಸಾಹೇಬರ ಮೋಟಾರವನ್ನು ೪-೫ ಕಡೆಯಲ್ಲಿ ಆಡ್ಡ ಹಾಕಿ, ಕೂಲಿಯವರಿಂದ ಹೊಂಚಿ ಪಾರು ಮಾಡಬೇಕಾಗಿತ್ತು ಸಾಹೇಬರು ಬರುವರೆಂತ P. W. D ಖಾತೆಯ ಕೆಳ ನೌಕರರಿಗೆ ತಿಳಿದದ್ದರಿಂದಲೋ ಏನೋ, ಆ ದಿವಸ ಮುಂಚಿತವಾಗಿ ಭರತಿ ಮರದ ಆಡ್ಡಲಿಗಳನ್ನು ಹಾಕಿ ತಯಾರ ಮಾಡಿದ ರಸ್ತೆಯ ಮೇಲಿಂದ ಸಾಹೇಬರ ಮೋಟಾರು ಪಾರುಮಾಡಿಕೊಂಡು ಹೋದರು

ಇನ್ನು ಸಾಹೇಬರ ಹೇಳಿಕೆಯಂತೆ ನಾಕೆದಾರರಿಗೆ ಹೆಚ್ಚಾದ ಹಣವು ಸಿಕ್ಕಿದ್ದಲ್ಲಿ ಅವರು ಬಂದುವೇಳೆ ಸರಕಾರಕ್ಕೆ ಕೊಡುತ್ತಿದ್ದಿಲ್ಲೆಂಬ ಮಾತು ಖರೆ ಆದರೂ ಅವರು ಹಗಲೂ ರಾತ್ರೆ ನಿದ್ದೆಗೆಟ್ಟು ಎಂಥ ಲಾಭ ನೆಂತ ತೆಗೆದುಕೊಳ್ಳಬಹುದಿತ್ತು ಕಡಿಮೆಯಾದ್ದರಿಂದ ಹಗಲೂ ರಾತ್ರೆ ನಿದ್ದೆಗೆಟ್ಟು ವರ್ಷಾವಧಿಯ ಮೇಲೆ ಹಣ ತೆತ್ತು ಹೋಗಿ "ಲುಕ್ಸಾನಿನ ಪ್ರಸಂಗ ಬಂತಲ್ಲಾ" ಎಂತ ಜಿಲ್ಲಾಧಿಕಾರಿಗೆ ಅರ್ಜಿಮಾಡಿಕೊಂಡಲ್ಲಿ P. W. D ಸಾಹೇಬರಿಗೆ ಯಾಕೆ ಭಾರವೆನಿಸಿತು? ಟೋಲ ನಾಕೆಯುವರಿಗೆ ಸುಮ್ಮನೆ ಒಗಿಸಿ ತಮ್ಮ ಮೇಲಿನ ಜವಾಬದಾರಿಯನ್ನು ತಪ್ಪಿಸಿಕೊಳ್ಳಲಿಕ್ಕೆ ಈ ರೀತಿ ಮಾತಾಡಿದರೋ ಏನೆಂಬದನ್ನು ವಿಚಾರವಂತರು ವಿಚಾರಮಾಡಬಹುದು ಇದೇ ಕಾಲಕ್ಕೆ ಜಿಲ್ಲಾಧಿಕಾರಿಯಾದ ಕಲೆಕ್ಟರ ಸಾಹೇಬರು ಈ ರಸ್ತೆಯ ಮೇಲಿಂದ ಒಮ್ಮೆ ಮೋಟಾರ ಪ್ರಯಾಣ ಮಾಡಿದ್ದ ಟೋಲ ನಾಕೆಯವರಿಗೆ ಏನಾದರೂ ರಿಯಾಯತಿಯಾಗುತ್ತಿತ್ತೆಂಬದರಲ್ಲಿ ಸಂಶಯವಿದ್ದಿಲ್ಲ ನೇರಿಯಿಂದ ಪೀಡಿತರಾದವರಿಗೆ "ನಿಮ್ಮ ಪ್ರಾರಬ್ಧವೆಂತ ಆದರೇನು ಸಮಾಧಾನ ಕೊಡಲಿಲ್ಲ ಆದರಂತೆ P. W. D ಸಾಹೇಬರಾದರೂ ತಮ್ಮ ಮನೋದೇವತೆಯನ್ನು ಆಡಗಿಸಿದವ (ಈಗ ಒಡಿ ಹಾಕಿಸಿ ಲಗಬಗೆಯಿಂದ ಪದರಸ್ತೆ ಆಗುತ್ತಿದ್ದರೂ ಹಿಂದಿನ ನಿಜಸ್ಥಿತಿಯನ್ನು ಮುಂದಕ್ಕೆ ತರದೆ) ಸರಿಪ್ರಗೆ ಒಪ್ಪಿದರೆ ಟೋಲ ನಾಕೆಯುವರಿಗೆ ರಿಯಾಯತಿ ದಗಬಹುದು

ಜೂನ ಪ್ರಾರಂಭದಲ್ಲಿ ರಸ್ತೆ ಕೆಟ್ಟಿತು, ಸಪ್ಟಂಬರ ಮಧ್ಯಕ್ಕೆ ವಾಹನಗಳ ಚಾಲತಿ ಆದ ಎಂತ ಸಾಹೇಬರ ಸಮಜೂತಿ ಆದರೆ ಮಧ್ಯದ ಕಾಲಾವಧಿ ಎಷ್ಟು ಮಳೆ ಎಷ್ಟು ಎಂಬದನ್ನು ಸಾಹೇಬರು ವಿಚಾರಕ್ಕೆ ತರಬೇಕಲ್ಲದೇ ಮೋಟಾರ ಸರ್ವೀಸಿನವರು ತಮ್ಮ ಡ್ರಾಯ್ವರ ಜನರಿಗೆ ನೂರಗಟ್ಟಲೆ ತಿಂಗಳಿಗೆ ಪಗಾರ ತೆತ್ತು, ತಮ್ಮ ಭಾಂಡವಲದ ಬಗ್ಗೆ ಸಾವಿರಗಟ್ಲೆ ರೂಪಾಯಿ ಕೈಯಿಂದ ತೆತ್ತ ತಿಂಗಳಗಟ್ಲೆ ತಮ್ಮ ಮೋಟಾರ ಸರ್ವೀಸ ಬಂದ ಮಾಡಬಹುದೋ ಹ್ಯಾಗೆ, ಮತ್ತು ಆವರು ಎಷ್ಟು ತಿಂಗಳು ಬಂದಯಿಟ್ಟರ ಎಂಬದನ್ನು ಬೇಕಾದರೆ ದಾಖಲೆ ಬಗ್ಗೆ ಪಡಕೊಳ್ಳಬಹುದು ತಾ ೧೫—೯—೧೯೩೩

'ಸರ್ವ ಯಕ್ಕಂಬಿಕಾರ'

ನಿರಾಶ್ರಿತರ ಖಾತೆ.

ಕೆಲವು ದಿನಗಳ ಹಿಂದೆ ನೆರೆ ಬಂದು ಹಳ್ಳಿಗಳನ್ನೆಲ್ಲ ಮುಳುಗಿಸಿ, ಅಳರಸರ ನಷ್ಟತೆಯಿಂದ ಕಂಗೆಟ್ಟ ಎಷ್ಟೋ ಜನರನ್ನು ನಿರಾಶ್ರಿತರನ್ನಾಗಿ ಮಾಡಿದ ಸಂಗತಿಯು ಜನರಿಗೆ ವಿದಿತವಿದೆಯಷ್ಟೇ! ಈ ಬಡ ಜನರ ಸಹಾಯಕ್ಕಾಗಿ ದೇಶದ ಉದಾರ ಜನರು ತಮ್ಮ ಧನಗಳ ಕೊಡುತ್ತಿರುವದಂತೂ ಜನರಿಗೆ ಈ ಮೊದಲೇ ಗೊತ್ತುಂಟು ಅಂಥ ನಿರಾಶ್ರಿತರಿಗೆ ಸಹಾಯ ಮಾಡಲು ಕೊಂಗ್ರೆಸ ಕಮಿಟಿಯವರೂ, ಸರಕಾರದವರೂ ನಾನಾ ತರದಿಂದ ಸಹಾಯ ನಿಧಿಯನ್ನು ಕೂಡಿಸಹತ್ತಿದರು. ಮತ್ತು ಆಯಾ ಗ್ರಾಮದ ಪಾಟೀಲರ ಮುಖಾಂತರ ಸರಕಾರವು, ಮನೆಮಾರುಗಳಿಲ್ಲದೇ ಉಳಿಯುವ ಜನರ, ಹೆಚ್ಚು ಧಕ್ಕೆ ತಗಲಿದವರ, ಪುನಃ ಮೊದಲಿನ ವ್ಯವಸ್ಥೆಗೆ ಬರಲಾರದ ಜನರ ಹೆಸರುಗಳನ್ನೂ, ಅವರವರ ಹೆಸರುಗಳ ಸಂಗಡ ಅವರವರಿಗೆ ಆದ ಲುಕ್ಸಾನುಗಳ ವಿವರಗಳನ್ನೂ, ಅಂದರೆ, ನೆರೆಯಿಂದಾದ ಅನಾಹುತದ ವಿವರ (ಮಾಹಿತಿ) ಗಳನ್ನೂ ನೇಮದಂತೆ ಕೇಳಲಾಗಿ, ಪಾಟೀಲರು ತಮ್ಮ ಕರ್ತವ್ಯದಂತೆ ಬಿಸಿನೀರನ್ನು ತಮ್ಮಲ್ಲಿಗೆ ಬೆರಸಿ ಕೇವಲ ತಮ್ಮ ಆಪ್ತೇಷ್ಟರ ಮತ್ತು ಒಕ್ಕಲಿಗರ ಹೆಸರುಗಳನ್ನು ಮಾತ್ರ ಹೆಚ್ಚಾಗಿ ಕಳುಹಿಸಿದರು ಕೊಂಗ್ರೆಸ ಭಕ್ತರಾದರೂ, "ಆದು ಧರ್ಮದ ವಿಷಯ, ಈಶ್ವರ ಧ್ಯೇಯವೂ ಬಂದೇ ಪ್ರತ್ಯೇಕವಾದರೆ ಗೊಂದಲವಾದೀತು" ಯೆಂದು ತಿಳಿದು, ಸರಕಾರದವರ ಸಂಗಡ ಬೆರೆತು, ಸರಿಯಾದ ಮಾಹಿತಿಗಳನ್ನು ಪಾಟೀಲರ ಸರಕಾರಕ್ಕೆ ಮತ್ತು ತಮಗೆ ಕೊಡುವರೆಂಬ ಭರವಸೆಯಿಂದ ತಾವು ಸಹಾಯ ನಿಧಿ ಕೂಡಿಸುವದರಲ್ಲೇ ನಿರತರಾದರಲ್ಲದೇ, ಪ್ರತ್ಯೇಕವಾಗಿ ಆಷ್ಟು ವಿಲೇವಾರ ಮಾಹಿತಿಯನ್ನು ಅವರು ಅನ್ಯರೀತಿಯಿಂದ ಪಡೆಯಲು ಪ್ರಯತ್ನಿಸಲಿಲ್ಲ ಅವರು ಸರಕಾರದ ಚಾಕರಿದಾರರನ್ನು ಈ ರೀತಿ ನಂಬಿ ಮೋಸ ಹೋದರಲ್ಲದೇ, ಖರೇ ನಿರಾಶ್ರಿತರಿಗೆ ಸಹಾಯ ನೀಡಲು ಅವರಿಗೆ ಅನುವಾಗಲಿಲ್ಲ

ಇದರಂತೆ ಕರ್ಕಿ ಪಾಟೀಲಸಾಹೇಬರು ಸಹ ತಮ್ಮ ಪದ್ಧತಿಯಂತೆ ನಿಜವಾಗಿ ಧಕ್ಕೆ ತಗಲಿದವರ, ನಿಜವಾದ ನಿರಾಶ್ರಿತರ ಮತ್ತು ಸಹಾಯಕ್ಕೆ ಯೋಗ್ಯರಾದವರ ಹೆಸರುಗಳನ್ನು ರಿಪೋರ್ಟ ಮಾಡದೇ, ಸ್ವಲ್ಪ ಧಕ್ಕೆಯಾದವರ, (ಉದಾ — ಮನೆ ನೆಲ ಧಂಡಿಯಾದವರ ಮತ್ತು ಹಿತ್ತಲಿಗೆ ನೀರು ಹತ್ತಿದವರ), ನಿರಾಶ್ರಿತರಲ್ಲದ, ಲುಕ್ಸಾನ ಭರ್ತಿ ಮಾಡಿಕೊಳ್ಳಲಿಕ್ಕೆ ಶಕ್ತರಾದವರ ಹೆಸರುಗಳನ್ನು ಮಾತ್ರ ಕಳಿಸಿ, ಹಣ ಹಚ್ಚುವ ವೇಳೆಯಲ್ಲಿ, ಹಂಚುವ ಮನುಷ್ಯರು ಸಹಾಯ ಸ್ವೀಕರಿಸಲು ಕೈಯೊಡ್ಡಿದವರ ನಿಜಸ್ಥಿತಿಯನ್ನು ಕೇಳಲಾಗಿ ಸ್ವಸ್ಥಯೆಂದು ತಿಳಿದರೂ ಆಯೋಗ್ಯರಿಗೆ ಹಣ ಕೊಡಿಸಿದರು. ಇದರ ಮೂಲಕ ಅಯೋಗ್ಯರಾದವರಿಗೆ ಸಹಾಯವು ಕೊಡಲ್ಪಟ್ಟಿತು

ನಿರಾಧಾರ ನಿರಾಶ್ರಿತ ಜನರಿಗೆ ಸಹಾಯ ದೊರೆಯಲಿಲ್ಲ ಒಡಕಿನರಾದ ಮುಕ್ತಿಗಳಿಗೆ ಕೊಡಿಸದೇ ಹೆಚ್ಚಾಗಿ ಸಹಾಯಕ್ಕೆ ಅಯೋಗ್ಯರಾದ ಕೆಲವು ಹನೇಕರಿಗೆ ವೃಥಾ ರೂಪಾಯಿಗಳನ್ನು ಕೊಡಿಸಿದರು ಸಹಾಯ ಕಮಿಟಿಯು ಸರಕಾರದವರ ಮತ್ತು ಉದಾರ ಬಾಂಧವರ ಧ್ಯೇಯವು ನಿರಾಶ್ರಿತರಿಗೆ ಸಹಾಯ ಮಾಡಬೇಕೆಂತಲ್ಲವೇ? ಅದರೆ, ಶಕ್ತರಾದ ಮತ್ತು ವಿಶೇಷ ಲುಕ್ಸಾನು ಹೊಂದದೇ ಇರುವ ಕರ್ಕಿ ರಾ ರಾ. ಖಾರೀ ಕೇಶ ಹೆಗಡೆ, ರಾಮಗೊಂಡ ಪರಮ ಹೆಗಡೆ, ವೇದಮೂರ್ತಿ ರಾಂಭಟ್ಟರು, ವೇದಾಂತದ ನಿಜ ಮಾರ್ಗವನ್ನು ತಿಳಿದ ಖಾರೀ ಮಹಾಬಲೇಶ್ವರ ಭಟ್ಟರು, ಸಾವುಕಾರ ಗಡ್ಡ ಬೆಳ್ಳ ಭಟ್ಟರು ಆಯೀ ಮಾ ಈ ಕೆಂಚೂಡನ ಸತ್ಯ ಅಂಗಡಿ ಗಣೇಶ ವಿಠಲ ಕನಕನ ಕೇಶಭಟ್ಟರೇ ಮೊದಲಾದವರಿಂದ ೫೦ರ ವರೆಗೆ ಅಕ್ಕಿ ಸಂಸಾರದ ಖರ್ಚು ಕಳೆವರೆಗೆ ರೂಪಾಯಿಗಳನ್ನು ಪಾಟೀಲರ ರಿಪೋರ್ಟಿನ ಮದರಿಂದ ರೂಪಾಯಿಗಳು ಕೊನಿರಾಶ್ರಿತರಿಗೆ ಸಿಗುವ ಸಹಾಯ ನರಪ್ರತಿ ಕೆಲವರು. ಪಾಟೀಲದ ಅವರಿಗೆ ಸಹಾಯ ಸ್ವೀಕಾ

ಪಾಟೀಲರ ರಿಪೋರ್ಟಿನಲ್ಲಿರಿಗೆ ಈ ಳಗಳ ಹೆಸರ ಗಳು ರಾರು ಮತ್ತು ಅಯೋಗ್ಯರು ಸರಕಾರದವರ ಮತ್ತು ಕಾಂಗ್ರೆಸದವರಲ್ಲಿ ಬರುತ್ತಿತು ಆ ರಿಪೋರ್ಟಿನ ಮೇಲೆ ವಿಶ್ವಾಸವಿದ್ದ ಗಳು ಸಂಭವಿಸಿದವು

ಹಣ ಹಂಚುವ ದಿವಸ ಪಾಟೀಲರು ತಮ್ಮ ಅವಲೋಕನಕ್ಕೆ ಬಂದವರಿಗೆ ಮಾತ್ರ ಬಾ, ಅಂತ ಹೇಳಿದ್ದರು. ಅವರಿಗೇ ಹಣ ಕೊಡಲ್ಪಟ್ಟಿತು. ಯಾರ ಹೆಸರು ಪಾಟೀಲಸಾಹೇಬರ ರಿಪೋರ್ಟಿನಲ್ಲಿ ಇಲ್ಲವೋ, ಖರೇ ನಿರ್ಗತಿಕರಾದ ಅವರು, "ದೇಹೀ" ಯೆಂದು ಸದ್ಗ್ರಾಮದ ಗ್ರಾಮ ಚಾವಡಿಗೆ ಬಂದು ಬೇಡಲಾಗಿ, ದೀನಜನರ ನಿರದಕ್ಷಮಾತಿಗಳಾದ ಪಾಟೀಲಸಾಹೇಬರು, 'ಹೌದ್ರೀ' ಅವರಿಗೆ ಏನು ಧಕ್ಕೆ ತಾಗಲಿತ್ರಿ. ಸುಳ್ಳೇ ಬಂದು ಬೇಡಿಕೊಳ್ಳುತಾರ್ರೀ" ಯೆಂದು ಹೇಳಿ, ಅಂಥ ಜನರ ಆರ್ತ ಧ್ವನಿಯಿಂದ ಯೆದೆಯೊಡೆದ ಕಾಂಗ್ರೆಸ ಭಕ್ತರ "ಅವರಿಗೆ ಏನಾದರೂ ಕೊಡಬೇಕೆಂಬ" ಮನಸ್ಸನ್ನು ಸಹ ಹೆರಣ ಮಾಡಿಬಿಟ್ಟರ ಶಾಭಾಸ! ಅಧಿಕಾರಿಗಳ ಸೋಗೇ! ನಮಗೆ ಈ ಮಾಮಲೆದಾರರ ರಿಪೋರ್ಟಿನ ನಿಜಸ್ವರೂಪ ವಿಷಯು ಹಣ ಹಂಚಿದ ನಂತರ ತಿಳಿಯಿತು ಮಾಡುವದೇನ ?

ಹೀಗಾಗಿ, ಖರೇ ನಿರ್ಗತಿಕರಾದವರಿಗೆ ಸಹಾಯ ದೊರೆಯದೇ, ಇನ್ನೂ ನೆರೆಯ ಸಂಗತಿಯನ್ನು ಹಂಬಲಿಸುತ್ತ, ಪಾಟೀಲರನ್ನು ಅಪೇಕ್ಷಿಸುತ್ತ ಛಳಿ ಮಳೆ, ಬಿಸಿಲು ಹಸಿವೆ, ತೃಷೆ ಇವುಗಳ ಬಾಧೆಗೆ ಸಿಕ್ಕಿ ಸಾಯಿಂದು ಉದರವನ್ನು ಆಕಾಶಕ್ಕೆ ತೋರಿಸುತ್ತ ಗೋಳಿಡುತ್ತಿರುವರು.

ಪಾಟೀಲರನ್ನು ಈ ವಿಷಯವಾಗಿ ವಿಚಾರಿಸಲು, ಅಕ್ಷರ ಹೆಸರುಗಳ ಸಂಗತಿ ೨೦-೨೫ ರವರೆಗೆ ಅಕ್ಷರ ಹೆಸರುಗಳನ್ನು ಹೇಳಿದರು ನಿರಾಶ್ರಿತರ ಮನೆಯು ೧೦೦ಕ್ಕಿಂತ ಹೆಚ್ಚು ಅದೆಯೆಂತ ತಿಳಿದು ಬಂದಿದೆ. ಬಾಕೀಯವರು ಪಾಟೀಲರ ದೃಷ್ಟಿಯಲ್ಲಿ ಪರಲೋಕಕ್ಕೆ ತೆರಳಿದರೇ? ಇದರಲಿ ಈ ೨೦ ೨೫ ಜನರಿಗೆ ಸಹಾಯ ಮುಟ್ಟಿರುವದು ನಿಜ. ಆದರೆ, ಇವರಿಗೆ ಕೊಟ್ಟ ರೂಪಾಯಿಗಳಿಗಿಂತ ಪಾಟೀಲಸಾಹೇಬರು ಮನೋಹರಣ ಮಾಡಿ, ಅವರ ಪ್ರೀತಿಗೆ ಪಾತ್ರರಾದವರಿಗೆ ಕೊಟ್ಟ ರೂಪಾಯಿಗಳೇ ಹೆಚ್ಚು ಅಂದರೆ ಬಡವರಿಗೆ ಕಡಿಮೆ, ದೊಡ್ಡವರಿಗೆ ಹೆಚ್ಚು ದೊರಕಿತು ನಾವು ಹಿಂದಿನ "ದೊಡ್ಡವರಿಗೆ ದೊಡ್ಡ ಕಡುಬು" ಯೆಂಬ ಗಾದೆಯ ಅರ್ಥವನ್ನು ಈ ರೀತಿಯಲ್ಲಿ ಮಾಡಿದರೆ, ಹಣ ಹಂಚುವಿಕೆಯು ತಪ್ಪಾಗಲಿಕ್ಕಿಲ್ಲ. ಬಿದ್ದವರನ್ನು ಉದ್ಧಾರ ಮಾಡುವದು ಹೀಗೆಯೋ? ಅಯೋಗ್ಯರಿಗೆ ಕೊಟ್ಟ ಹಣವನ್ನು ಹಿಂದೆ ತೆಗೆದುಕೊಂಡು ಯೋಗ್ಯರಿಗೆ ಮುಖಂತರು ಕೊಡಿಸುವರೇ ಹಿತವಾಗುವದಿಲ್ಲವೇ? ಈ ಕಾರ್ಯ ಮಹಾಗ್ರಾಮದಂತೆ ಇನ್ನೆಷ್ಟು ಗ್ರಾಮಗಳಲ್ಲಿ ಆಗಿದೆಯೋ ದೇವರೇ ಬಲ್ಲ.

ಅನಾಹುತಗಳು ಈ ರೀತಿ ಸಂಭವಿಸುವದರಿಂದ ಸರಕಾರದವರು ಮತ್ತು ಉತ್ತಮ ಧ್ಯೇಯವುಳ್ಳ ಕಾಂಗ್ರೆಸ ಭಕ್ತರು ಖರೇ ಪಾಟೀಲರ ರಿಪೋರ್ಟನ್ನು ನಂಬದೇ, ಅನ್ಯ ರೀತಿಯಿಂದ ನಿಜ ಸ್ಥಿತಿಯನ್ನು ತಿಳಿಯಬೇಕು. ಇಲ್ಲದಿದ್ದರೆ, ದೇಶದ ಜನರ ಸ್ಥಿತಿಯೇ ಸ್ವಾರ್ಥಕ್ಕೆ ಬಲಿಬಿದ್ದು, ಹಿಂದಿನ ನೆರೆಯಿಂದ ನಿಜವಾಗಿ ಲುಕ್ಸಾನು ಆದವರಿಗೆ ಸಹಾಯ ಕಮಿಟಿಯವರ, ಸರಕಾರದವರ ಮತ್ತು ದೇಶಬಾಂಧವರ ಸಹಾಯವು ಸದ್ರೀ ಪಾಟೀಲಸಾಹೇಬರ ಉಪಕಾರ ಬುದ್ಧಿಯ ನಿಮಿತ್ತ ದೊರೆಯಲಿಲ್ಲ. ಹೇಗಾಗಿರಲಿ ನಾವು ಈ ಸಂಗತಿಯನ್ನು ನೆರೆಯಿಂದ ನಿರಾಶ್ರಿತರಾಗಿ ಸಹಾಯ ದೊರೆಯದೇ ಗೋಳಾಡುವವರನ್ನು ಕಂಡು ಮತ್ತು ಸ್ವಂತ ಅನುಭವದಿಂದ ಜಾಹೀರಿಗೆ ತಂದಿರುತ್ತೇವೆ

ತಾ, ೧೬-೯-೧೯೨೩ } ಕಕೇರ ನಿವಾಸಿಗಳು.

— ಉತ್ತರ ಮಲಬಾರದಲ್ಲಿ ನೆರೆಯಿಂದ ಮೂರುವರೆ ಸಾವಿರ ಮನೆಗಳು ಕುಸಿದು ಬಿದ್ದವು. ಸುಮಾರು ೨ ಸಾವಿರ ದನಕರುಗಳು ನಿಧನ ಹೊಂದಿದವು ೫ ಲಕ್ಷಕ್ಕೆ ಮಿಕ್ಕ ನಷ್ಟವಾಯಿತು. ೨೦ ಸಾವಿರ ಮಂದಿಗಳು ನಿರಾಶ್ರಿತರಾಗಿರುವರು.

— ಪೇಶಾವರದ ನೆರೆಯಲ್ಲಿ ಒಂದು ವಿಮಾನವು ಹಾರುತ್ತಿತ್ತು ಥಟ್ಟನೆ ನೆಲಕ್ಕುರುಳಿ ಮುರಿಯಿತು ವಿಮಾನ ನಡಿಸುವ ಇಬ್ಬರೂ ನಿಧನ ಹೊಂದಿದರು.

ವಿವಿಧ ಸಂಗ್ರಹ.

ಆಸಾಮದಲ್ಲಿ ಭೂಕಂಪ

ಆಸಾಮ-ಬಂಗಾಲ ಸರಹದ್ದಿನ ಮೇಲಿನ ಖಾಸೀ ಗುಡ್ಡಗಳಲ್ಲಿ ಕಳೆದ ತಾ. ೧೦ನೇ ಸೋಮವಾರ ಪ್ರಾತಃಕಾಲ ೪ ಘಂಟೆಗೆ ಭೂಕಂಪವಾಯಿತು. ಮೈಮನಸಿಂಗದಲ್ಲಿ ಒಂದು ಮಿನಿಟು ವರೆಗೆ ಭೂಮಿಯು ನಡುಗಿತು. ಅನೇಕ ಕಟ್ಟಡಗಳಿಗೆ ಪೆಟ್ಟು ತಗಲಿತು ಮೃತ್ಯುಂಜಯ ಶಾಲೆ ಹಾಗು ಕಾಲೇಜಿಗೆ ಹಲವು ಧಕ್ಕೆ ತಗಲಿವೆ. ಕಾಲೇಜಿನ ರಸಾಯನ ಮಂದಿರದಲ್ಲಿ ಬೆಂಕಿಯು ಪ್ರಜ್ವಲಿತವಾಗಿ ಬಹಳ ನಷ್ಟವಾಯಿತು. ಜಗಲಿ ಬಿದ್ದು ಒಬ್ಬನು ಮೃತಹೊಂದಿದನು ಇಬ್ಬರಿಗೆ ಪೆಟ್ಟಾಯಿತು ಅನೇಕ ಪಟ್ಟಣಗಳಿಗೂ ಪೆಟ್ಟು ತಗಲಿದ ಸುದ್ದಿಗಳಿವೆ ಮಧ್ಯಾಹ್ನ ೩ ಘಂಟೆ ವರೆಗೆ ಮತ್ತೆ ೩ ಸರತಿ ಭೂಮಿಯು ಮೈಮನಸಿಂಗದಲ್ಲಿ ಕಂಪಾಯಮಾನವಾಯಿತು. ಆದರೆ, ಆ ಕಂಪಗಳು ತೀವ್ರವಿದ್ದಿಲ್ಲ ಅಗರತಾಲಾ ಎಂಬಲ್ಲಿ ೨ ಮಿನುಟುಗಳ ವರೆಗೆ ಭೂಮಿಯು ನಡುಗಿತು ಕುಂಜಾಬು ಅರಮಂದಿರ ಹಾಗು ನ್ಯಾಯಾಲಯಗಳಲ್ಲಿ ಅಲ್ಪ ನಷ್ಟವಾಯಿತು ಈ ಕಂಪದಿಂದ ಢಾಕ್ಕಾ ಪಟ್ಟಣದೊಳಗಿನ ಪೂರ್ವ ಬಂಗಾಲ ಬ್ರಹ್ಮಸಮಾಜದ ಮುಖ್ಯ ಕಚೇರಿ ಮೊದಲಾದ ಇಮಾರತುಗಳಿಗೆ ಪೆಟ್ಟು ತಗಲಿದೆ ಕಲಕತ್ತೆಯಲ್ಲಿಯೂ ಈ ಕಂಪವಾಯಿತು ಆದರೆ, ಅಲ್ಲಿ ನಷ್ಟವೇನೂ ಆಗಲಿಲ್ಲ ಈ ಐನೇ ಜುಲೈ ೧೯೧೮ನೇ ಯಲ್ಲಿ ಒದಗಿದ ಭೂಕಂಪದ ಬಳಿಕ, ಒದಗಿದ ಕಂಪವು ಇದೇ ಎಂದು ಕಲಕತ್ತೆಯ ವಾಯುಶಾಸ್ತ್ರಜ್ಞರು ನುಡಿಯುತ್ತಾರೆ.

***

ಜಪಾನದ ಭೂಕಂಪ.

ಜಪಾನದಲ್ಲಿ ಒದಗಿದ ಅದ್ಭುತ ಭೂಕಂಪದ ಕಥೆಯು ಈಗೀಗ ತಿಳಿಯಹತ್ತಿದೆ. ನಷ್ಟವೆಷ್ಟಾಯಿತು? ಜೀವಿತಹಾನಿ ಎಷ್ಟು? ಎಂಬ ಅದಾಜು ಇನ್ನೂ ನಿಶ್ಚಿತವಾಗಿ ಹೇಳಲಾಗದು ಆದರೂ, ಯಾಕೋಹಾಮಾ, ಟೋಕಿಯೋ ಮುಂತಾದ ಪ್ರದೇಶಗಳಲ್ಲಿ ಒಟ್ಟುಗೂಡಿ ೧॥ ಲಕ್ಷ ಮಂದಿಗಳು ಮಡಿದಿರಬೇಕೆಂದು ಕೈಸೇರಿದ ವರ್ತಮಾನಗಳಿಂದ ಹೇಳಬಹುದು ಸುಮಾರು ೩ ಲಕ್ಷ ಜನರು ಘಾಯಹೊಂದಿರಬೇಕೆಂದು ಅಂದಾಜಿದೆ ಟೋಕಿಯೋ ಪಟ್ಟಣದಲ್ಲಿ ಶೇಕಡಾ ೬೭ ರಷ್ಟು ಜನರು ಅಂದರೆ, ೧೩ ಲಕ್ಷ, ೫೬ ಸಾವಿರ ಜನರು ಅನಾಥರಾಗಿರುವರು. ಯಾಕೋಹಾಮಾದಲ್ಲಿ ೪ ಲಕ್ಷ ಜನರು ನಿರಾಶ್ರಿತರಾಗಿರುವರು ಹೀಗೆ ಸುಮಾರು ೨೦ ಲಕ್ಷ ಮಂದಿಗಳು ನಿರ್ಗತಿಕರಾಗಿರಬೇಕು ಇಂಪೀರಿಯಲ್ ಹೊಟಲ್ ಎಂಬ ಒಂದೇ ಕಟ್ಟಡವು ಟೋಕಿಯೋದಲ್ಲಿ ಕಾಣಿಕೆ ಇದೆ ಉಳಿದ ಪ್ರದೇಶವೆಲ್ಲ ಹಾಳುಗೆಡವಿದಂತೆ ರಾಶಿಯಾಗಿ ಬಿದ್ದಿದೆ ಸೈನಿಕರ ಪೋಷಾಕನ್ನು ತಯಾರಿಸುವ ಗಿರಣಿಯಲ್ಲಿ ಕೆಲಸ ಮಾಡುವ ೩೫,೦೦೦ ಕೂಲಿಕಾರರು ಥಟ್ಟನೆ ಭೂಕಂಪಕ್ಕೆ ತುತ್ತಾದರು ಇದೊಂದು ಭೂಕಂಪದಿಂದ ಒದಗಿದ ಮಹಾ ಅನರ್ಥವೆಂದು ಎಲ್ಲರೂ ಮರುಗುತ್ತಾರೆ. ಟೋಕಿಯೋದಲ್ಲಿ ವಾಸವಾಗಿದ್ದ ಭಾರತೀಯರೆಲ್ಲರೂ ಸುರಕ್ಷಿತರಿದ್ದಾರೆಂತಲೂ, ಯಾಕೋಹಾಮಾದೊಳಗಿನ ಮೂರರಲ್ಲಿ ಒಂದು ಪಾಲು ಭಾರತೀಯರು ಮಡಿದಿರಬೇಕು, ಅಥವಾ ಘಾಯಹೊಂದಿದವರಿರಬೇಕೆಂದು 'ಮುಂಬಯಿ ಕ್ರಾನಿಕಲ್' ಪತ್ರಿಕೆಯ ಖಾಸ ಬಾತ್ಮೀದಾರರದೊಂದು ಸುದ್ದಿ. ಈ ಭೂಕಂಪದಿಂದ ಓಶಿಮಾ ಎಂಬ ದ್ವೀಪವು ೧೦ ಸಾವಿರ ಪ್ರಜೆಗಳೊಡನೆ ಜಲಸಮಾಧಿ ಹೊಂದಿತು ಇದರಿಂದ ದ್ವೀಪದ ಬಳಿಯಿಂದ ಸ್ವಲ್ಪ ಅಂತರದ ಮೇಲೆ ಹೊಸದೊಂದು ದ್ವೀಪವು ಉದ್ಭವಿಸಿತು. ಈಗ ಟೋಕಿಯೋದಲ್ಲಿ ಜ್ವರ ಬೇನೆಯು ಪ್ರವೇಶಿಸಿದೆ ವಿಮೆಯ ಕಂಪನಿಗಳೆಲ್ಲ ನಷ್ಟಹೊಂದಿದವಾಗಿ ದಿವಾಳಿ ತೆಗೆದು ಹೇಳದೆ, ಭೂಕಂಪದಿಂದ ಒದಗಿದ ಲುಕ್ಸಾನಿನ ಭರಪಾಯಿ ಮಾಡುತ್ತಿರುವವು. ಬ್ಯಾಂಕುಗಳೂ ಈಗ ಚಾಲು ಆಗಿವೆ. ಅವು ನಿರಾಶ್ರಿತರಿಗೆ ಸಹಾಯ ಮಾಡುತ್ತಿವೆ. ಜಪಾನ ಸರಕಾರದವರು ನಿರಾಶ್ರಿತರಿಗಾಗಿ ಸಹಯೋಗ ಉದ್ಯೋಗ ನಡಿಸಿರುವರು. ಅಮೇರಿಕನ್ ಸರಕಾರದ ನಿಧಿಯು ೧॥ ಕೋಟಿ ರೂಪಾಯಿಗಳಿಗೆ ಮಿಕ್ಕಿತು. ವಿಲಾಯತಿಯೊಳಗಿನದು ೮೦ ಸಾವಿರ ಪವನುಗಳಾದವಂತೆ ಟೋಕಿಯೋದಲ್ಲಿ ಭೂಕಂಪದ ಕಾಲಕ್ಕೆ ೫೫-೬೦ ಸಾವಿರ ಟನ್ನು ಅಕ್ಕಿ ದಾಸ್ತಾನ ಇತ್ತು ಅದರೊಳಗಿನ ೫೦ ಸಾವಿರ ಟನ್ನುಗಳು ನಾಶಹೊಂದಿದವು ಯಾಕೋಹಾಮಾ ಪಟ್ಟಣದಲ್ಲಿ ಅಕ್ಕಿಯ ಸಂಗ್ರಹವು ವಿಶೇಷವಿದ್ದಿಲ್ಲ ಇದರ ಮೇಲಿಂದ ಅಕ್ಕಿಯ ದರವು ಏರುವದೆಂದು ಪೇಟೆಯಲ್ಲಿ ಸುದ್ದಿ. ಆದರೆ, ಜಪಾನದೊಳಗಿನ ಅಕ್ಕಿಯ ಬೆಳೆಯು ಈ ವರ್ಷ ಸಾಧಾರಣ ೮೦-೯೦ ಸಾವಿರ ಟನ್ನು ಉತ್ಪನ್ನವಾಗಬಹುದೆಂದು ಈಗಿನ ಅಂದಾಜು ನವಂಬರದಲ್ಲಿ ಈ ಬೆಳೆಯು ಕೈಸೇರುವದು ಇಷ್ಟು ಬೆಳೆಯು ಕೈಸೇರಿದರೆ, ಹಾಗು ಈಗ ಇದ್ದ ಸಂಗ್ರಹದಿಂದಲೇ ಪರರಾಷ್ಟ್ರಗಳಿಂದ ಅಕ್ಕಿಯನ್ನು ವಿಶೇಷ ಆಮದು ಮಾಡದೆ, ಜಪಾನ ಸರಕಾರವು ನಿರಾಶ್ರಿತರ ವ್ಯವಸ್ಥೆ ಮಾಡಿದರೆ, ಅಕ್ಕಿಯ ದರವು ಈಗ ಏರದೇ ಇಳಿಯಲಿಕ್ಕಿಲ್ಲೆಂದು ಮತ್ತೊಂದು ತರ್ಕ

***

ಮದ್ಯಪಾನ ನಿಷೇಧ.

ಜಗತ್ತಿನಲ್ಲಿ ಮದ್ಯಪಾನ ನಿಷೇಧಕ್ಕಾಗಿ ನಡೆದ ಯತ್ನಗಳನ್ನೆಲ್ಲ ಬಿಹಾರದ ಮೆಥೋಡಿಸ್ಟ ಎಪಿಸ್ಕೋಪಲ್ ಸಂಸ್ಥೆಯ ಮದ್ಯಪಾನ ನಿಷೇಧ ಮಂಡಳದವರು ಹಸ್ತಪತ್ರಗಳ ದ್ವಾರಾ ಆಗಾಗ್ಗೆ ಪ್ರಕಟಿಸುತ್ತಿರುವರು. ಹಿಂದುಸ್ಥಾನದಲ್ಲಿ ನಡೆದ ಯತ್ನಗಳು ಯಾವವೆಂದರೆ — ಹಿಂದುಸ್ಥಾನದೊಳಗಿನ ಕ್ರೈಸ್ತ ಮತದ ಮಧ್ಯಪ್ರಾಂತದ ಮಂತ್ರಿಗಳೊಬ್ಬರು ಮದ್ಯಪಾನದ ನಿಷೇಧಕರು ಕಾಯಿದೆಯಿಂದ ಮದ್ಯಪಾನವನ್ನು ವಿರೋಧಿಸಬೇಕೆಂದು ಅವರ ಮತ ಅದೊಂದು ಈಶ ಸೇವೆಯೆಂತಲೂ ಅವರ ಅರಿವು. ಈ ಜೂನ ತಿಂಗಳ ವರೆಗೆ ಅವರು ೧೦ ಸಾವಿರ ಮಂದಿಗಳಿಗೆ ಮದ್ಯಪಾನದಿಂದ ನಿವೃತ್ತರಾಗಲು ಬೋಧಿಸಿದರು. ಮದ್ಯಪಾನವನ್ನು ತೊರೆಯುತ್ತೇವೆಂಬ ಪ್ರತಿಜ್ಞಾ ಪತ್ರದ ಮೇಲೆ ೧ ಸಾವಿರ ಸಹಿಗಳನ್ನು ಸಂಪಾದಿಸಿದರು. ಮತ್ತು ಹೆಂಡಗುಡುಕರನ್ನು ತಯಾರು ಮಾಡುವ ಉದ್ಯೋಗವನ್ನು ಬಿಟ್ಟುಬಿಡಿರೆಂದು ಗುತ್ತೇದಾರರಿಗೆ ಬೋಧಿಸಿ, ೧೨ ಮಂದಿಗಳನ್ನು ಈ ಉದ್ಯೋಗದಿಂದ ಪರಾಙ್ಮುಖರನ್ನಾಗಿಸಿದರು ಮದ್ಯಪಾನಕ್ಕೆ ೧೦ ವರುಷಗಳ ವರೆಗೆ ಬಲಿಬಿದ್ದ ಒಬ್ಬ ಚಮಗಾರನು ವ್ರತನಿಷ್ಠೆಯಿಂದ ಸರೆಗುಡುಕತನವನ್ನು ೫ ತಿಂಗಳುಗಳ ವರೆಗೆ ತೊರೆದನು ಆದರೆ, ಅವನು ಆ ಬಳಿಕ, ಪುನಃ ಮದ್ಯ ಸೇವಿಸಹತ್ತಿದನು ಸದ್ಯಕ್ಕೆ ಅವರದೊಂದು ಜಾತಿಯ ಕೂಟ ನಡೆಯಿತು ಅಲ್ಲಿ ಅವನು ಎದ್ದು ನುಡಿದದ್ದೇನಂದರೆ:— "ನಮ್ಮ ಮನೆಗಳ ಸಮೀಪ ಕೆಲ ಕೈಲುಗಳೊಳಗೆ ಸರೆಯ ವಿಕ್ರಿ ನಡೆಯುವಾಗ ನಮ್ಮೊಳಗಿನವನೊಬ್ಬನು ಮದ್ಯವನ್ನು ತೊರೆಯುವದು ನಿಷ್ಪ್ರಯೋಜಕವು ನಮ್ಮನ್ನು ಈ ವ್ಯಸನದಿಂದ ಕಾಪಾಡುವ ಜವಾಬದಾರಿಯು ಸರಕಾರದ್ದು ಸರಕಾರದವರು ಸರೆಯ ಅಂಗಡಿಗಳನ್ನು ಮುಚ್ಚಬೇಕು" ಒಂದು ಹಿಂದೀ ಸಂಸ್ಥಾನದ ಧಿವಾನರೊಬ್ಬರು ಮದ್ಯಪಾನ ಪರಾವೃತ್ತಿಯಿಂದ ಒದಗಿದ ಲಾಭಗಳನ್ನು ಕಲಕತ್ತೆಯ ಮದ್ಯನಿವೃತ್ತಿ ಸಂಘದ ಕಾರ್ಯದರ್ಶಿಗಳಾದ ರೆವ್ಹರೆಂಡ ಹರ್ಬರ್ಟ ಎಂಡರಸನ್‌ರವರಿಗೊರೆ ನುಡಿದದ್ದೇನಂದರೆ — "ನಮ್ಮ ಮದ್ಯಪರಾವೃತ್ತಿಯ ಕಾರ್ಯದಿಂದ ಸಂಸ್ಥಾನಕ್ಕೆ ಹಲವು ಲಾಭವಾಗಿದೆ. ಮೊದಲು ಕೆಲ ಬಾಬಿನ ರಂಗೆಗಳು ವಸೂಲಾಗುತ್ತಿದ್ದಿಲ್ಲ ಈಗ ಆ ಬಾಬುಗಳಿಂದ ಚಲೋ ಉತ್ಪನ್ನ ದೊರೆಯುತ್ತದೆ. ಕೂಲಿಕಾರರ ಕೆಲಸದ ಮಾನವು ಈಗ ಮೊದಲಿಗಿಂತ ಬಹಳೇ ಏರಿದೆ ವಿದ್ಯಾರ್ಥಿಗಳ ಯೋಗ್ಯತೆಯೂ ಮಿಗಿಲಾಗಿದೆ. ಇದರಿಂದ ಮುಂದೆ ಸಂಸ್ಥಾನಕ್ಕೆ ಬಹಳೇ ಲಾಭವಾಗುವದು". ... ಹೋದಾ ಸಂಸ್ಥಾನದಲ್ಲಿ ನವಸಾರಿ ಎಂಬುದೊಂದು ಪಟ್ಟಣವಿದೆ. ಅಲ್ಲಿ ಹಿಂದೂ-ಮುಸಲ್ಮಾನ-ಪಾರಸೀ ಸಮಾಜದ ಜನರಿರುವರು. ಜನಸಂಖ್ಯೆಯು ೨೦ ಸಾವಿರಕ್ಕೆ ಮಿಕ್ಕಿದೆ. ಕೆಲ ದಿವಸಗಳ ಮೊದಲು ಅಲ್ಲಿಯ ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಮ್ಯುನಿಸಿಪಲ್ ಹದ್ದಿನೊಳಗಿನ ಸರೆ ಅಂಗಡಿಗಳನ್ನು ತೆಗೆಯುವ ಬಗ್ಗೆ ಮ್ಯುನಿಸಿಪಲ್ ಮತದಾರರ ಮತ ಕೇಳಿದರು. ಮತದಾರರ ಸಂಖ್ಯೆಯು ೫,೨೨೫. ಅವರಲ್ಲಿ ೩,೫೩೧ ಮಂದಿಗಳು ಮತ ಕೊಟ್ಟರು. ೨೫೭೮ ಮತಗಳು ಸರೆ ಅಂಗಡಿಗಳನ್ನು ತೆಗೆಯಬೇಕೆಂತಲೂ, ೯೫೨ ಮತಗಳು ಅಂಗಡಿಗಳನ್ನು ಇಡಬೇಕೆಂತಲೂ ಮತಗಳನ್ನಿತ್ತರು.

ಕನ್ನಡವೃತ್ತ.

ಗುರುವಾರ, ತಾರೀಖು ೩೦ ಮಾಹೆ ಸಪ್ಟಂಬರ ೧೯೨೬

ಬೆಂಚಕೋರ್ಟಿನ ನ್ಯಾಯ

ಕೆಲ ವಿಚಾರಗಳು.

ಮುಂಬಯಿ ಕಾಯಿದೆ ಕೌನ್ಸಿಲಿನ ಕೊನೆಯ ಅಧಿವೇಶನವು ಕಳೆದ ಜುಲೈ ತಿಂಗಳಿನ ತಾರೀಖು ೧೦ನೇಯಿಂದ ಪುಣ್ಯ ಪಟ್ಟಣದ ಕೌನ್ಸಿಲು ಮಂದಿರದಲ್ಲಿ ನಡೆಯಿತು. ಆ ಅಧಿವೇಶನದಲ್ಲಿ ಸೊಲ್ಲಾಪುರ ಪಟ್ಟಣದ ಪ್ರತಿನಿಧಿಗಳಾದ ರಾ| ಸಲಗರರವರು ಬೆಂಚ ಕೋರ್ಟಿನ ಬಗ್ಗೆ ಕೆಲ ಪ್ರಶ್ನೆಗಳನ್ನು ಕೇಳಿದರು. ಆ ಪ್ರಶ್ನೆಗಳಿಗೆ ದೊರಕಿದ ಮಾಹಿತಿಯನ್ನು ನಾವು ತಾ. ೧೬—೮—೧೯೨೬ನೇ ಸಂಚಿಕೆಯಲ್ಲಿ ವಿವರಿಸಿರುವೆವು. ಇಂದಿಗೆ ಬೆಂಚ ಕೋರ್ಟಿನ ನ್ಯಾಯದ ಬಗ್ಗೆ ಕೆಲ ವಿಚಾರಗಳನ್ನು ವಾಚಕರ ಮುಂದಿಡುವದು ಅವಶ್ಯ ತೋರುತ್ತದೆ.

ಬೆಂಚ ಕೋರ್ಟಿನ ಮೇಲೆ ಮುಖ್ಯ ಆಕ್ಷೇಪವೆಂದರೆ — ಮೆಜಿಸ್ಟ್ರೇಟರು ಊರವರು, ಊರೊಳಗೆ ಹಿತಸಂಬಂಧವಿದ್ದವರು. ಇಂಥವರಿಗೆ ಈ ಅಧಿಕಾರ ಕೊಡುವದು ಸರಕಾರದ ಧೋರಣಕ್ಕೆ ವಿರುದ್ಧವಿದೆ. ಸರಕಾರಿ ನೌಕರರ ನಿಯಮದಂತೆ, ಜಿಲ್ಹೆಯಲ್ಲಿ ಸ್ಥಿರ ಸೊತ್ತು ಇದ್ದವರಿಗೆ ನೌಕರಿ ಕೊಡಬಾರದೆಂದು ನಿಯಮವಿದೆ. ಈ ನಿಯಮದಂತೆ, ಫೌಜದಾರಿ ಅಧಿಕಾರಗಳನ್ನು ಕೊಟ್ಟು, ಊರವರನ್ನು ಅಮಲದಾರರಾಗಿ ಮಾಡುವದು ಸರಕಾರಿ ಧೋರಣಕ್ಕೆ ವಿರೋಧಕವಾದದ್ದು. ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ರಾ| ಕೇವರ್ಡರವರು ನುಡಿದಂತೆ, ಬೆಂಚ ಮೆಜಿಸ್ಟ್ರೇಟರಿಗೆ ಸಾಮಾನ್ಯ ಬುದ್ಧಿ (common sense) ಇರುವದೆಂದು ಗೃಹೀತ ಹಿಡಿಯುವೆವು. ಅವರು ಪ್ರಾಮಾಣಿಕರೆಂದೂ ಒಪ್ಪಲು ನಾವು ತಯಾರು. ಅವರು ಲೋಕೋಪಕಾರ ಬುದ್ಧಿಯಿಂದ ಪ್ರೇರಿತರಾಗಿದ್ದಾರೆಂದೂ ತಿಳಿಯಲಿಕ್ಕೆ ಅಡ್ಡಿಯೇನಿಲ್ಲ. ಆದರೆ, ಈ ತ್ರಿಗುಣಗಳು ಬೆಂಚ ಮೆಜಿಸ್ಟ್ರೇಟರನ್ನು ಸ್ಥಾನಿಕ ವಾತಾವರಣದಿಂದ ವಿಮೋಚಿಸಲಾರವು. ಬೆಂಚ ಮೆಜಿಸ್ಟ್ರೇಟರಿಗೆ ಮಿತ್ರರಿದ್ದಂತೆ, ಶತ್ರುಗಳೂ ಇರುವರು. ಶತ್ರುಗಳು ನ್ಯಾಯಮೂರ್ತಿಗಳ ಮುಂದೆ ಕಾರಣಾಂತರದಿಂದ ಆರೋಪಿಗಳಾಗಿ ನಿಂತರೆ, ನ್ಯಾಯಮೂರ್ತಿಗಳ ಪ್ರಾಮಾಣಿಕತನವೂ, ಸಾಮಾನ್ಯ ಬುದ್ಧಿಯೂ, ಲೋಕೋಪಕಾರ ಬುದ್ಧಿಯೂ " ತಟ್ಟನೆ ಹಾರಿ ಹೋಗಿ, ನ್ಯಾಯಮೂರ್ತಿಗಳು ಯೋಕಶ್ಚಿತ್ ಪಾಮರನಂತೆ, ಶತ್ರುವನ್ನು ದಂಡಿಸಲು ಹಿಂಜರಿಯುವದಿಲ್ಲ. ಯಾಕಂದರೆ, ಬೆಂಚ ಮೆಜಿಸ್ಟ್ರೇಟರು, ರಾ| ಕೇವರ್ಡರವರ ಶಿಫಾರಸುಗಳನ್ನು ಲಕ್ಷಕ್ಕೆ ತಂದರೆ, ಅಸಾಮಾನ್ಯ ಲೋಕೋತ್ತರ ಪುರುಷರಲ್ಲೆಂದು ಯಾರೂ ಒಪ್ಪುವರು.

ಬೆಂಚ ಮೆಜಿಸ್ಟ್ರೇಟರ ನೇಮಣೂಕಿಯೂ ಆಕ್ಷೇಪಕರವು. ನೌಕರಶಾಹಿಯು ಸದ್ಯದ ರಾಜಕಾರಣದಲ್ಲಿ ವಿಶಿಷ್ಟ ಜ್ಞಾತಿಗಳ ಪ್ರಶ್ನೆಯೊಂದು ಪ್ರಾಮುಖ್ಯವಾಗಿ ಇತ್ತಿತ್ತ ಪ್ರಾದುರ್ಭೂತವಾಗಿದೆ. ಪ್ರತಿಯೊಂದು ಖಾತೆಯಲ್ಲಿಯೂ ಜ್ಞಾತಿಭೇದಕ್ಕೆ ವಿಶೇಷ ಇಂಬಿದೆ. ಪ್ರತಿಯೊಂದು ಸಂಸ್ಥೆಯಲ್ಲಿ ನಡೆಯುವಂತೆ, ಬೆಂಚ ಕೋರ್ಟುಗಳಲ್ಲಿಯೂ ಆದಷ್ಟು ಭಿನ್ನ ಭಿನ್ನ ಜಾತಿಗಳ ಗೃಹಸ್ಥರನ್ನೇ ನೇಮಿಸುವ ಧೋರಣವಿದೆ. ಇದರಿಂದ ಬೆಂಚ ಕೋರ್ಟುಗಳು ನ್ಯಾಯಾಸನಕ್ಕಿಂತ ಜ್ಞಾತಿಯ ಪ್ರದರ್ಶನಗಳು ಎಂಬಂತೆ, ಭಾಸವಾಗುತ್ತವೆ. ಅನೇಕ ಜ್ಞಾತಿಗಳ ಒಂದು ಕೂಟದಲ್ಲಿ ನ್ಯಾಯದೇವಿಯು ಆಯಾ ಜ್ಞಾತಿಗಳ ದುರಭಿಮಾನದಲ್ಲಿ ಸಿಲುಕಿಕೊಳ್ಳದೆ ಪಾರಾದರೆ, ಪ್ರಜೆಗಳಿಗೆ ಅನುಗ್ರಹ ಮಾಡುವದು. ಈ ಧೋರಣಕ್ಕೂ ಒಂದು ಆಕ್ಷೇಪವಿದೆ. ಸ್ಥಾನಿಕ ನೌಕರಶಾಹಿಯ ಕೃಪಾಪ್ರಸಾದಕ್ಕೊಳಗಾದ ಜ್ಞಾತಿಯವರೇ ಬೆಂಚ ಕೋರ್ಟುಗಳಲ್ಲಿ ವಿಶೇಷವಾಗಿ ನೇಮಣೂಕಿ ಹೊಂದುವಷ್ಟು ಭಾಗ್ಯವಂತರಿದ್ದರೆ, ಪರಜ್ಞಾತಿಗಳ ಪೀಡನೆಗೆ ಬೆಂಚ ಕೋರ್ಟು ಒಂದು ಸುಲಭ ಸಾಧನವಾಗುತ್ತದೆ. ಸ್ವಜ್ಞಾತಿಯ ವರ್ಚಸ್ವವನ್ನು ವೃದ್ಧಿಪಡಿಸಲಿಕ್ಕೂ ಬೆಂಚ ಕೋರ್ಟು ಒಂದು ಅನುಕೂಲ ಯಂತ್ರಸಾಮಗ್ರಿಯೇ.

ಬೆಂಚ ಮೆಜಿಸ್ಟ್ರೇಟರ ಗುಣದೋಷಗಳ ಚರ್ಚೆಯನ್ನು ಮಾಡಿದ ಬಳಿಕ, ಈ ನ್ಯಾಯಾಸನಗಳ ಕಾರ್ಯಕ್ರಮವನ್ನು ಆಲೋಚಿಸುವ. ಮೊಟ್ಟಮೊದಲು, ಬೆಂಚ ಮೆಜಿಸ್ಟ್ರೇಟರೆಲ್ಲರೂ ಸರಕಾರದಿಂದ ಸಂಬಳ ಪಡೆಯದೆ, ಉಚಿತವಾಗಿ ಲೋಕೋಪಕಾರ ಬುದ್ಧಿಯಿಂದ ಕೆಲಸ ಮಾಡುವ ಔದಾರ್ಯವಂತ ಮಹಾಶಯರೆಂದು ಎಲ್ಲರೂ ಲಕ್ಷದಲ್ಲಿಡತಕ್ಕದ್ದು. ರಾ| ಕೇವರ್ಡರವರ ಖುಲಾಸೆಯಂತೆ, ಬೆಂಚ ಮೆಜಿಸ್ಟ್ರೇಟರು ಪ್ರಕರಣಗಳ ವಿಚಾರವನ್ನು ಆದಷ್ಟು ಲೋಕಾನುಕೂಲತೆಯಾಗುವಂತೆ ನಡೆಸುವದಿರುತ್ತದೆ. ಫಿರ್ಯಾದಿಯ ವಿಚಾರವನ್ನು ಒಂದು ಸರ್ತಿ ಪ್ರಾರಂಭಿಸಿದ ಕೂಡಲೆ, ವಿಚಾರ ಮುಗಿಯುವ ವರೆಗೆ ನಿತ್ಯವೂ ಕೋರ್ಟು ನಡೆಯತಕ್ಕದ್ದು. ಆದರೆ, ಇದೊಂದು ನಿಯಮವು. ನಮ್ಮಲ್ಲಿಯ ಬೆಂಚ ಮೆಜಿಸ್ಟ್ರೇಟರು, ಇಂದು ಫಿರ್ಯಾದಿಯ ಜಬಾನಿ, ಇನ್ನು ಎಂಟು ದಿವಸಗಳ ಮೇಲೆ ಸಾಕ್ಷಿದಾರನ ಜಬಾನಿ, ಮತ್ತೊಂದು ವ್ಯಾದೆಗೆ ಮತ್ತೊಬ್ಬ ಸಾಕ್ಷಿಗಾರನ ಜಬಾನಿ; ಹೀಗೆಲ್ಲ ಮನದಣಿ ನಡೆಯುತ್ತಾರೆ. ಈ ಬಗ್ಗೆ ನ್ಯಾಯಮೂರ್ತಿಗಳಿಗೆ ದೂರಿ ಫಲವಿಲ್ಲ. ಯಾಕಂದರೆ, ಅವರು ಪರೋಪಕಾರ ಬುದ್ಧಿಯ ಸದ್ಗೃಹಸ್ಥರು; ಸರಕಾರಿ ನೌಕರರಲ್ಲ; ಸರಕಾರದಿಂದ ಅವರಿಗೆ ಸಂಬಳ ಸಿಗುವದಿಲ್ಲ; ಪ್ರಜೆಗಳೂ ಅವರಿಗೆ ಏನೂ ಕೊಡುವದಿಲ್ಲ. ಪುರಸತ್ತು ಸಿಕ್ಕಿದಾಗ ಲೋಕೋಪಕಾರ ಮಾಡಿ, ಪುಣ್ಯ ಗಳಿಸುವ ಪುಣ್ಯಾತ್ಮರವರು. ಇಂಥವರು ಹೊತ್ತಿಗೆ ಸರಿಯಾಗಿ ಬರಲಿಲ್ಲ; ನಿಯಮದಂತೆ ನಡೆಯಲಿಲ್ಲ; ಎಂದು ದೂರಿದರೆ, ಕೇಳುವವರಾರು? ಹೀಗಾಗಿ, ಅವರ ಮೇಲೆ ಸರಕಾರದ ಅಂಕೆಯಿರುವದಿಲ್ಲ; ಜನರದಂತೂ ಕೇಳಬೇಡಿರಿ. ಅಂದಮೇಲೆ, ಅವರು ಬಂದದ್ದೇ ಕೋರ್ಟು ಪ್ರಾರಂಭದ ಟ್ಯಾಮು; ಹೋದದ್ದು ಕೋರ್ಟ ಬರಖಾಸ್ತಿನ ಟ್ಯಾಮು. ಅಂತು ಪ್ರಜೆಗಳ ಅನಾನುಕೂಲತೆ ಮತ್ತು ಕಷ್ಟ.

ಬೆಂಚ ಕೋರ್ಟಿನ ವಿಸ್ತಾರದಿಂದ ಪೋಲೀಸರ ರಾಜ್ಯಕ್ಕೆ ಪುಷ್ಟಿ ದೊರಕುತ್ತದೆ. ಪೋಲೀಸ ಆಕ್ಟು, ಅಬಕಾರಿ ಆಕ್ಟು, ಸೋಲ್ಟ ಆಕ್ಟು, ಮೊದಲಾದ ಸಣ್ಣಪುಟ್ಟ ಕಾಯಿದೆಗಳನ್ನು ಉಲ್ಲಂಘಿಸಿದರೆಂದು ಪ್ರಜೆಗಳಿಗೆ ಕಾಡಲು ಅವರಿಗೆ ಬೇಕಾದಷ್ಟು ಅನುಕೂಲವಾಗುತ್ತದೆ. ಕಿಡಿಗೇಡಿ ಪೋಲೀಸರಿದ್ದರೆ, ಕೇಳುವದೇಬೇಡ. ಬೆಂಚ ಕೋರ್ಟಿನಲ್ಲಿ ಪೋಲೀಸರ ಖಟ್ಲೆಗಳೇ ಖಟ್ಲೆಗಳು, ಪ್ರಜೆಗಳಿಗೆ ಪೀಡನೆಯೋ ಪೀಡನೆಯು. ಸರಕಾರದಿಂದ ಸಂಬಳ ಪಡೆಯುವ ಮೆಜಿಸ್ಟ್ರೇಟರಿದ್ದರೆ, ಇಂಥ ಕ್ಷುದ್ರ ಖಟ್ಲೆಗಳನ್ನು ಅವರ ಮುಂದೆ ಒಯ್ಯಲು ಪೋಲೀಸರು ಧೈರ್ಯಪಡುವದಿಲ್ಲ. ಇದರಿಂದ ನೈತಿಕಕ್ಕಿಂತ ಕಾಯಿದೆಯ ಅಪರಾಧಗಳ ದಂಡನೆಯು ಬೆಂಚ ಕೋರ್ಟಿನ ವಿಸ್ತಾರದಿಂದ ವೃದ್ಧಿಗೈಯ್ಯುತ್ತದೆ.

ಬೆಂಚ ಕೋರ್ಟಿನಿಂದ ಪ್ರಜೆಗಳಿಗೊದಗಿದ, ಒದಗುವ ಲಾಭಗಳಿವು. ತಾ. ೨೨—೯—೨೬ನೇ ಸಂಚಿಕೆಯಲ್ಲಿ ಬೆಂಚ ಕೋರ್ಟಿನ ನ್ಯಾಯವೆಂಬ ಲೇಖವನ್ನು ಬರೆದು, ಸವಿಸ್ತರ ಕತೆಯು ಬೆಂಚ ಕೋರ್ಟಿನ ನ್ಯಾಯದ ಮಾದರಿಯನ್ನು ನಾವು ವಾಚಕರಿಗೆ ಅರುಹಿರುವೆವು. ಅದರೊಳಗಿನ ಹಕೀಕತಿನಿಂದ ನಾವು ಪ್ರದರ್ಶಿಸಿದ ವಿಚಾರಗಳು ಸಾಧಾರವಿವೆಂದು ವಾಚಕರಿಗೆ ತಿಳಿಯುವದಾಗಿದೆ. ಆ ಲೇಖದ ವಾಚನದಿಂದ ಮತ್ತೊಂದು ಸಂಗತಿಯೂ ದೃಗ್ಗೋಚರವಾಗುತ್ತದೆ. ಬೆಂಚ ಮೆಜಿಸ್ಟ್ರೇಟರಿಗೆ ಕಾಯಿದೆಯ ಜ್ಞಾನವು ತೀರ ಕಡಿಮೆ. ರಾ| ಕೇವರ್ಡರವರು ಕಾಯಿದೆಯ ಜ್ಞಾನವನ್ನು ಬೆಂಚ ಮೆಜಿಸ್ಟ್ರೇಟರ ಹುದ್ದೆಯ ಸಂಪಾದನೆಯಲ್ಲಿ ಸೇರಿಸದ್ದರಿಂದ,

ನ್ಯಾಯಮೂರ್ತಿಗಳಿಗೆ ಕಾಯಿದೆಯ ಜ್ಞಾನವಿದ್ದರೆ, ಅದೇನು ಆಶ್ಚರ್ಯದ ಸಂಗತಿಯಲ್ಲ. ಮೆಜಿಸ್ಟ್ರೇಟರ ವಿದ್ಯಾಭ್ಯಾಸ ನಿರ್ದಿಷ್ಟವಿಲ್ಲ. ಅದರಿಂದ ಆವಮಾನ್ಯ ಮುದುಕರು ಸಹ, ನೌಕರಶಾಹಿಯ ಅನುಗ್ರಹವಾದರೆ, ಬೆಂಚ ಕೋರ್ಟುಗಳ ಮೂಲಕ ನ್ಯಾಯದಾನವನ್ನು ಪ್ರಜೆಗಳಿಗೆ ಅರ್ಪಿಸಬಹುದು. ಹೀಗೆ, ಬೆಂಚ ಕೋರ್ಟುಗಳ ನಿರ್ಮಾಣದಿಂದ ಪೆನಶನ್ನು ತಿನ್ನುವ, ಪ್ರಾಯ ಕಳೆದ ಸರಕಾರಿ ಅಮಲದಾರರು ಅಧಿಕಾರಾರೂಢರಾಗುತ್ತಾರೆ. ಸರಕಾರದ ಕೆಲಸವನ್ನು ನಡಿಸಲು ಪ್ರಾಯ ಕಳೆದ ಮೂಲಕ ನಾಲಾಯಖ ಇದ್ದವರು ಬೆಂಚ ಮೆಜಿಸ್ಟ್ರೇಟಿಯಂಥ ಜವಾಬದಾರ ಹುದ್ದೆಯನ್ನು ನಡಿಸಲು ಹೇಗೆ ಸಮರ್ಥರಾಗುತ್ತಾರೆಂದು ನಾವರಿಯೆವು. ಇಂಥ ನಾಲಾಯಖ ಮಂದಿಗಳಿಗೆ ಬೆಂಚ ಮೆಜಿಸ್ಟ್ರೇಟಿಯನ್ನು ಕೊಡುವದು ಕೇವಲ ಅನ್ಯಾಯವು.

ಬೆಂಚ ಕೋರ್ಟಿನ ಬಗ್ಗೆ ಸೂಚಿಸಿದ ಕೆಲ ವಿಚಾರಗಳನ್ನು ಇಲ್ಲಿ ಗ್ರಥಿತ ಮಾಡಿರುವೆವು. ನ್ಯಾಯದಾನವು ಸರಕಾರದ ಒಂದು ಕರ್ತವ್ಯವು. ಕಾಯಿದೆ, ಸುವ್ಯವಸ್ಥೆಗಳ ಪಾಲನ ನಡಿಸುವ ನೌಕರಶಾಹಿಯು ಕಾಯಿದೆಯ ಆಧಾರಕ್ಕೆ ಅನುಕೂಲವಾಗಲು ತಕ್ಕ ನ್ಯಾಯಾಸನಗಳನ್ನು ನಿರ್ಮಿಸುವದು ಅದರ ಕರ್ತವ್ಯವು. ಹಣ ಖರ್ಚಾಗುತ್ತದೆಂದು, ಪರೋಪಕಾರ ಬುದ್ಧಿಯ ಗೃಹಸ್ಥರು ಸಿಗುತ್ತಾರೆಂದು ಅವರನ್ನು ನೇಮಿಸುವದು ತೀರ ತಪ್ಪು. ನ್ಯಾಯದಾನವು ಯೋಗ್ಯ ರೀತಿಯಿಂದ ನಡೆಯಬೇಕಾದರೆ, ನ್ಯಾಯಮೂರ್ತಿಗಳಿಗೆ ನ್ಯಾಯ ಯಾವದು, ಅನ್ಯಾಯ ಯಾವದು, ಕಾಯಿದೆ ಯಾವದು ಎಂಬ ಪ್ರಶ್ನೆಗಳ ಅರಿವು ಚನ್ನಾಗಿರತಕ್ಕದ್ದು. ನ್ಯಾಯಾನ್ಯಾಯಗಳ ಸೂಕ್ಷ್ಮ ಭೇದ ಮಾಡುವಷ್ಟು ವಿವೇಚಕ ಸಾಮರ್ಥ್ಯವೂ ಅವರಿಗಿರಬೇಕು. ಅವರ ಮೇಲೆ ಯಾವದೇ ಪ್ರಕಾರದ ಬಾಹ್ಯ ವಜನಿರಬಾರದು. ಇಂಥ ನ್ಯಾಯಮೂರ್ತಿಗಳು ಸ್ಥಾನಿಕ ಬೆಂಚ ಕೋರ್ಟುಗಳಂಥ ನ್ಯಾಯಾಸನಗಳಿಗೆ ದೊರಕುವದು ದುರ್ಲಭವು. ಸಾಮಾನ್ಯ ಬುದ್ಧಿಯ ಗೃಹಸ್ಥರು— ಬೇಕಾದಷ್ಟು ಪ್ರಾಮಾಣಿಕರಿರಲಿ— ಬೆಂಚ ಕೋರ್ಟುಗಳಲ್ಲಿ ನೇಮಣೂಕಿ ಹೊಂದಿದರೆ, ಸ್ಥಾನಿಕ ವಾತಾವರಣದ ದೋಷದಿಂದ ಎಂದೂ ಕಲುಷಿತರಾಗದಿರರು. ಸೂಕ್ಷ್ಮ ರೀತಿಯಿಂದ, ನಿಃಪಕ್ಷಪಾತದಿಂದ ವಿಚಾರ ಮಾಡಿದರೆ, ಬೆಂಚ ಕೋರ್ಟುಗಳ ನಿರ್ಮಾಣದಿಂದ ಪ್ರಜೆಗಳಿಗೆ ಪ್ರಾಪ್ತವಾದ ಅನುಕೂಲತೆಯೆಂಬುದು ಅನಾನುಕೂಲತೆಯೇ ಹೊರತು, ಮತ್ತೇನಿಲ್ಲ. ಆದ್ದರಿಂದ ಬೆಂಚ ಕೋರ್ಟು ಸಂಸ್ಥೆಯನ್ನು ತಿದ್ದುಪಡಿಸಲು ಹವಣಿಸದೆ, ನಮ್ಮ ಮುಂಬಯಿ ಸರಕಾರವು ಇದನ್ನು ಕಿತ್ತೊಗೆಯಬೇಕಾಗಿ ನಾವು ಆಗ್ರಹಪೂರ್ವಕ ಸೂಚಿಸುವೆವು.

ಸ್ಫುಟ ಸೂಚನೆಗಳು.

೧. ಯುರೋಪಖಂಡದ ಯುದ್ಧೋತ್ತರ ರಾಜಕಾರಣವು ದಿನೇ ದಿನೇ ಇಕ್ಕಟ್ಟಿನದಾಗುತ್ತ ನಡೆದದೆ. ಯುದ್ಧ ಮುಗಿಯಿತು; ಶಾಂತತೆಯಾಯಿತು. ಇವೆಲ್ಲ ಬಾಹ್ಯರೂಪವೇ. ಯುರೋಪಖಂಡದ ಅಂತಃಕರಣದಲ್ಲಿ ಅಶಾಂತತೆಯಿಂದ ಕಲ್ಲೋಲವೆದ್ದಿದೆ. ಪ್ರತ್ಯಕ್ಷ ಯುದ್ಧವು ತಹಕೂಬಿ ಹೊಂದಿದರೂ, ಯುದ್ಧಕಾಂಕ್ಷೆಯು ಇನ್ನೂ ಪ್ರಮುಖ ರಾಷ್ಟ್ರಗಳನ್ನು ಬಾಧಿಸುತ್ತಿದೆ. ಫ್ರಾನ್ಸ ದೇಶವು ಇನ್ನೂ ಜರ್ಮನಿಯ ರ್ಹ್ಯೂರ ಪ್ರದೇಶವನ್ನು ಆಕ್ರಮಿಸಿಕೊಂಡು ಕೂತುಕೊಂಡಿದೆ. ಅದನ್ನು ಬಿಡಬೇಕಾದರೆ, 'ಖಂಡಣೆಯನ್ನು ನಮಗೆ ಕೊಡಿರಿ' ಎಂದು ಫ್ರಾನ್ಸ ದೇಶದವರ ಆಗ್ರಹ. ಜರ್ಮನಿಯು ದಣಿದಿದ್ದದರಿಂದ, ನಿಶಸ್ತ್ರ ಪ್ರತೀಕಾರವನ್ನು ಕೈಕೊಂಡು ರ್ಹ್ಯೂರ ಪ್ರದೇಶವನ್ನು ಹಾಳುಗೆಡಹಿದೆ. ಹೀಗಾಗಿ, ಫ್ರಾನ್ಸ ದೇಶಕ್ಕೆ ರ್ಹ್ಯೂರ ಪ್ರದೇಶದ ದೌಡಿನಿಂದ ಲಾಭವೇನಿಲ್ಲ. ಇಷ್ಟರಲ್ಲಿ, ಇಟಾಲಿಯ ಪ್ರತಿನಿಧಿಗಳ ಬಂಗಲುಗಳಲ್ಲಿ ಕೊಲೆಯಾಯಿತೆಂದು ಇಟಾಲಿ-ಗ್ರೀಕರೊಳಗೆ ಯುದ್ಧವಾಗಿ, ಎಲ್ಲಿ ರಣದೇವತೆಯು ಪ್ರಕ್ಷುಬ್ಧಳಾಗುತ್ತದೋ, ಎಂದು ಅಂಜಿಕೆ ಉಂಟಾಗಿತ್ತು. ಜಗತ್ತಿನೊಳಗಿನ ರಾಷ್ಟ್ರ-ರಾಷ್ಟ್ರಗಳಲ್ಲಿ ಕಲಹವುಂಟಾದಾಗ ಅವುಗಳನ್ನು ನಿರ್ಣಯಿಸಲು, ನಿರ್ಮಿಸಿದ ರಾಷ್ಟ್ರಸಂಘವು ಈ ಪ್ರಶ್ನೆಯನ್ನು ಇತ್ಯರ್ಥ ಮಾಡಲು ಅಸಮರ್ಥವಾದ ಕೂಡಲೇ, ಪುನಃ ಯುದ್ಧವಾಗುವದೆಂದು ಎಲ್ಲರೂ ಹೆದರಿಕೊಂಡಿದ್ದರು. ಇಷ್ಟರಲ್ಲಿ, ರಾಯಭಾರಿಗಳ ಪರಿಷತ್ತು ನೆರೆದು, ಅವರು ನಿರ್ಣಯಿಸಿದ ತೀರ್ಪನ್ನು ಇತ್ತಟ್ಟಿನ ಇಟಾಲಿ-ಗ್ರೀಕ ರಾಷ್ಟ್ರಗಳು ಮಾನ್ಯ ಮಾಡಿದ್ದರಿಂದ, ಈ ಪ್ರಕರಣವು ಇಷ್ಟಕ್ಕೇ ತಡೆಯಿತು. ಈಗ ಮತ್ತೊಂದು ತುಫಾನು ಯುರೋಪಿಯನ್ ರಾಜಕಾರಣದಲ್ಲಿ ಉದ್ಭವಿಸಿದೆ. ಪೋರ್ಟೋಬಾರ್ಸ ಹಾಗು ಅಲ್ಲಿಯ ಜಲವೇಷ್ಟಿತ ಪ್ರದೇಶವು ಫ್ಯೂಮ ಎಂಬ ಇಟಾಲಿ ಪ್ರದೇಶಕ್ಕೆ ಒಪ್ಪಿಸಿದ್ದು, ಅದನ್ನು ಈ ಪ್ರದೇಶಕ್ಕೇ ಜೋಡಿಸಿ, ೯೯ ವರುಷಗಳ ವರೆಗೆ ಇಡಬೇಕೆಂದು ಇಟಾಲಿಯವರು ಯುಗೋಸ್ಲಾವ ಸರಕಾರಕ್ಕೆ ಚೀಟಿಯನ್ನು ರವಾನಿಸಿರುವರು. ಕಳೆದ ತಾ. ೧೫ನೇ ಸಪ್ಟಂಬರದೊಳಗೆ ಈ ಚೀಟಿಯ ಉತ್ತರವನ್ನು ರವಾನಿಸಬೇಕೆಂತಲೂ ಯುಗೋಸ್ಲಾವ ಸರಕಾರಕ್ಕೆ ತಾಕೀದು ಕೊಡಲಾಗಿತ್ತು. ಯುಗೋಸ್ಲಾವ ಸರಕಾರವು ವಾಯಿದೆಯ ತಾರೀಖನ್ನು ಮುಂದೊಡ್ಡಬೇಕೆಂತಲೂ, ಈ ಪ್ರಶ್ನೆಯನ್ನು ಸ್ವಿಝುರ್ಲ್ಯಾಂಡದಂಥ ತಟಸ್ಥ ರಾಷ್ಟ್ರವು ತೀರ್ಮಾನಿಸಿದಂತೆ, ಇತ್ತಟ್ಟಿನವರು ಒಪ್ಪಬೇಕೆಂತಲೂ ಇಟಾಲಿಗೆ ಉತ್ತರವನ್ನು ಕಳುಹಿದರು. ಇಟಾಲಿಗೆ ಸ್ವಿಝುರ್ಲ್ಯಾಂಡ ರಾಷ್ಟ್ರದ ಮಧ್ಯಸ್ಥಿಕೆಯು ಮಾನ್ಯವಿಲ್ಲ. ವಾಯಿದೆಯಂತು ಮುಗಿಯಿತು. ಇಟಾಲಿಯವರು ವಾದಗ್ರಸ್ತ ಪ್ರದೇಶವನ್ನು ಬಲಾತ್ಕಾರದಿಂದ ಆಕ್ರಮಿಸಿಕೊಂಡು, ಎಲ್ಲಿ ಜ್ವಾಲಾಗ್ನಿಯನ್ನು ಪ್ರಜ್ವಲಿಸುತ್ತಾರೆಂದು ವಿಲಾಯತಿಯಲ್ಲಿ ಗಡಿಬಿಡಿಯಾಗಿದೆ. ಫ್ರಾನ್ಸ ದೇಶದ ಬಲವು ಯುಗೋಸ್ಲಾವ ಮೊದಲಾದ ಚಿಕ್ಕ ರಾಷ್ಟ್ರ ಪಕ್ಷದ ಬದಿಗಿದ್ದದರಿಂದ, ಇಟಾಲಿ-ಫ್ರಾನ್ಸಗಳ ನಡುವೆ ಕಲಹವಾಗುತ್ತದೆಂದು ವಿಶೇಷ ಭೀತಿಯುಂಟಾಗಿದೆ. ಅಂಜುವ ಕಾರಣವೇನಿಲ್ಲೆಂದು ಖುಲಾಸೆಗಳೂ ಆಗುತ್ತಿವೆ. ಅಂತು ಯುರೋಪಿಯನ್ ರಾಜಕಾರಣದ ಪ್ರಕೃತಿಯು ದಿನೇ ದಿನೇ ಸೂಕ್ಷ್ಮವಾಗುತ್ತ ನಡೆದದೆ. ಯಾವಾಗ ಏನು ಸಂಭವಿಸೀತೆಂದು ಹೇಳುವದು ಬಲು ಕಠಿಣ. ಶಾಂತತೆ ಬೇಕೆಂದು ಸಾರಿ ಹೇಳುವದು, ಪರರ ಪ್ರದೇಶವನ್ನು ಅಪಹರಿಸಲೆತ್ನಿಸುವದು, ಈ ಎರಡೂ ಕ್ರಮಗಳು ಒಂದೇ ಸವನೆ ನಡೆದಿದ್ದದರಿಂದ, ಇಂಥ ಪರಿಸ್ಥಿತಿಯುಂಟಾಗಿದೆಂದು ಅನೇಕರು ಅನುಮಾನಿಸಿದರೆ, ಅದೇನು ಅಯಥಾರ್ಥವಾಗದು.

---

೨ ಅತಿ ನೆರೆಯು ನಮ್ಮಲ್ಲಿಯಂತೆ, ಮೈಸೂರಿನಲ್ಲಿಯೂ ಒದಗಿತು. ಅಲ್ಲಿಯ ಸರಕಾರವು ಈ ಅಪತ್ಕಾಲದಲ್ಲಿ ತತ್ಪರತೆಯಿಂದ ಪ್ರಜೆಗಳಿಗೆ ನೆರವಾಗಿದೆ. ಅಲ್ಲಿ ಒಟ್ಟು ೧೪೬ ಮನೆಗಳು, ೨೨೬ ಗುಡಿಸಲುಗಳು ನೆರೆಯಿಂದ ಬಿದ್ದು ಹೋದವು. ಕೆಲವೆಡೆಗಳಲ್ಲಿ ಗುಡ್ಡಗಳು ಕುಸಿದು ಬಿದ್ದು, ರಾಜರಸ್ತೆಗಳೂ, ಸಂಕಗಳೂ ಕೆಟ್ಟುಹೋದವು; ಪೈರು ನಾಶವಾಯಿತು. ದನಕರುಗಳೂ ನಿಧನಹೊಂದಿದವು. ಕೆಲ ದೇವಾಲಯಗಳಿಗೂ ಪೆಟ್ಟಾಗಿದೆ. ಪ್ರಜೆಗಳಿಗೊದಗಿದ ಸಂಕಟದ ವ್ಯಾಪ್ತಿಯನ್ನು ಅರಿತುಕೊಳ್ಳಲು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಯಿತು. ಅವರು ವರದಿ ಮಾಡಿದ ಕೂಡಲೆ, ಆ ಬಗ್ಗೆ ತಕ್ಕ ಯೋಜನೆಯನ್ನೂ ಸರಕಾರವು ಕೈಕೊಂಡಿತು. ೬೬,೫೦೦ ರೂಪಾಯಿಗಳೂ ತಗಾವಿ ಕೊಡಲು ಮಂಜೂರಾಗಿವೆ. ಜಂಗಲ ಖಾತೆಯಿಂದ ಗಳು, ಕಟ್ಟಿಗೆ, ಮೊದಲಾದ ಇಮಾರತಿಗೆ ಬೇಕಾಗುವ ಸಾಮುಗ್ರಿಗಳನ್ನು ಉಚಿತವಾಗಿ ಪೂರೈಸಬೇಕಲ್ಲದೆ, ಪ್ರಜೆಗಳಿಂದ ದೋಣಬಾಡಿಗೆಯನ್ನು ಸಹ ಕೊಳ್ಳದೆ ಅವನ್ನು ಪೂರೈಸಬೇಕೆಂದು ವಿಧಿಸಲಾಗಿದೆ. ನೆರೆಯ ಪೆಟ್ಟು ತಗಲಿದ ಭೂಮಿಗಳಿಗೆ ೧ ವರುಷದ ವರೆಗೆ ತೀರ್ವೆಯನ್ನು ಮಾಫ (ತಹಕೂಬಿಯಲ್ಲಿ) ಮಾಡಬೇಕೆಂದೂ ವಿಧಿಸಲಾಗಿದೆ. ನಮ್ಮಲ್ಲಿಯ ಬ್ರಿಟಿಶ ಸರಕಾರವು ಪ್ರಜೆಗಳಿಗೆ ಪೂರೈಸುವ ಅನುಕೂಲತೆಗಳನ್ನೂ, ಮೈಸೂರ ಸರಕಾರದ ಯೋಜನೆಯನ್ನೂ ವಾಚಕರು ತುಲನೆ ಮಾಡಲಿ.

---

೩. ನಮ್ಮ ಕುಮಟೆಯ ಬೆಂಚ ಮೆಜಿಸ್ಟ್ರೇಟರ ನ್ಯಾಯದ ಮಾದರಿಯನ್ನು ಇಂದಿಗೆ ವಾಚಕರಿಗೆ ನಿವೇದಿಸಲಿಚ್ಛಿಸುವೆವು. ರುಕ್ಮಿಣಿಬಾಯಿಯೆಂಬವಳು ತನ್ನ ಹಿತ್ತಲೊಳಗಿಂದ ಗಂಡಹೆಂಡರ ಕಾಯಿಗಿಡವನ್ನು (ಪೊಪ್ಪಾಯಿ) ಗೋವಿಂದ ರಾಮಪೈಯವರು ಕಡಿದದ್ದಲ್ಲದೆ, ತನ್ನ ಹಿತ್ತಲು ಬಾಗಿಲವನ್ನು ಬಲಾತ್ಕಾರದಿಂದ ಒಡೆದು ಕೆಡವಿದರೆಂದು ಕುಮಟೆಯ ಬೆಂಚ ಮೆಜಿಸ್ಟ್ರೇಟರಲ್ಲಿ ಫಿರ್ಯಾದು ಮಾಡಿದರು. ಫಿರ್ಯಾದಿಯು ಆರೋಪಿಯ ತಮ್ಮನನ್ನು ದತ್ತಕ ಮಾಡಿಕೊಂಡಿದ್ದಳು. ದತ್ತಕ ಮಗನು ಆರೋಪಿಯ ಸಂರಕ್ಷಣೆಯಲ್ಲಿದ್ದನು. ದತ್ತಕನ ಆಸ್ತಿಯ ಆಡಳಿತೆಯಲ್ಲಿ ಸರಕಾರದ ವಿದ್ಯಮಾನ ಡೆಪ್ಯೂಟಿ ನಾಝರರ ವಶದಲ್ಲಿದೆ. ವಾದಗ್ರಸ್ತ ಹಿತ್ತಲೂ ಡೆಪ್ಯೂಟಿ ನಾಝರರ ತಾಬೆಯಲ್ಲಿದೆ. ಇಷ್ಟೆಲ್ಲ ಸಂಗತಿಗಳು ವಿಚಾರಣೆ ಕಾಲಕ್ಕೆ ಹೊರಬಿದ್ದವು. ಆದರೂ, ನಮ್ಮ ಬೆಂಚ ಕೋರ್ಟಿನ ನ್ಯಾಯಮೂರ್ತಿಗಳು ಆರೋಪಿಗೆ ೧೦ ರೂಪಾಯಿ ದಂಡ ವಿಧಿಸಿ, ಫಿರ್ಯಾದನ್ನು ಶಾಬೀತ ಪಡಿಸಿದರು. ಆರೋಪಿಯು ಕಲೆಕ್ಟರರಿಗೆ ಅಪೀಲು ಮಾಡಿದನು. ಕಲೆಕ್ಟರರು ಪ್ರಕರಣದೊಳಗಿನ ಪುರಾವೆಯನ್ನೆಲ್ಲ ಗ್ರಹಿಸಿ, ಬೆಂಚ ಕೋರ್ಟಿನ ನ್ಯಾಯಮೂರ್ತಿಗಳು ವಿಧಿಸಿದ ಶಿಕ್ಷೆಯನ್ನು ಕಳೆದ ಅಗಸ್ಟ ತಾ. ೨೧ನೇಗೆ ರದ್ದು ಪಡಿಸಿದರು. ಈ ಪ್ರಕರಣದಲ್ಲಿ ನಮ್ಮ ಬೆಂಚ ಕೋರ್ಟು, ಆರೋಪಿಯು ಹೇಗೆ ಶಾಸನಾರ್ಹ

ನೆಂದು ನಿರ್ಣಯಿಸಿತು ಎಂದು ಎಷ್ಟು ವಿಚಾರಿಸಿದರೂ, ನಮಗೆ ತಿಳಿಯಲೊಲ್ಲದು ಫಿರ್ಯಾದಿಯ ದತ್ತಕ ಮಗನು ಆರೋಪಿಯ ಸಂರಕ್ಷಣೆಯಲ್ಲಿರುತ್ತ, ಆಸ್ತಿಯ ಆಡಳಿತೆಯೆಲ್ಲ ಡೆಪ್ಯುಟಿ ಸ ಯುರರಿಗೆ ವಹಿಸಿರುತ್ತ ಫಿರ್ಯಾದಿಗೆ ಈ ಫಿರ್ಯಾದು ಕೊಡಲು ಯಾವ ಅಧಿಕಾರವು ಪ್ರಾಪ್ತವಾಯಿತು? ಎಂದು ಬೆಂಚ ಮೆಜಿಸ್ಟ್ರೇಟರೇ ಹೇಳಬೇಕಲ್ಲದೆ ಸಾಮಾನ್ಯ ಬುದ್ಧಿಯಿದ್ದವರು ಫಿರ್ಯಾದು ನಾಪಾಸ್ ಆಗಿರ ಬೇಕೆಂದು ಅಭಿಪ್ರಾಯಪಡುವದೆಂದು ಯಾರೂ ತಿಳಿಯುವದಾಗಿದೆ ಹೀಗಿದ್ದು ಅನುಭವಜ್ಞ ನ್ಯಾಯ ಮೂರ್ತಿಗಳು ಇಂಥ ನಿರ್ಣಯ ಕೊಟ್ಟಿದ್ದನ್ನು ನೋಡಿ ನಮಗೆ ಆಶ್ಚರ್ಯವಾಗಿದೆ ಬೆಂಚ ಮೆಜಿಸ್ಟ್ರೇಟರು ಪ್ರಕರಣದೊಳಗಿನ ಸೂಕ್ಷ್ಮ ಭೇದವನ್ನು ತಿಳಿಯಲಸಮರ್ಥರಾಗಿ ಆಸ್ತಿಯು ಯಾರ ತಾಬೆಯಲ್ಲಿಯೂ ಇರಲಿ ದತ್ತಕ ಮಗನು ಯಾರ ಸಂರಕ್ಷಣೆಯಲ್ಲಿಯೂ ಇರಲಿ ದತ್ತಕ ಮಗನ ತಾಯಿಗೆ ಅವನ ಆಸ್ತಿಯಲ್ಲಿ ಪ್ರವೇಶಿಸುವದಕ್ಕೆ ದಾವೆ ಹೂಡುವ ಅಧಿಕಾರವಿದೆ ಎಂದು ಏನಾದರೂ ತಿಳಿದು ತೀರ್ಪು ನೀಡಿದರೋ ಏನೋ! ಅದೇನೂ ಇರಲಿ ನಮ್ಮಲ್ಲಿಯ ಬೆಂಚ ಕೋರ್ಟಿನ ಸಂಸ್ಥಾಪನೆಯ ಉದ್ದೇಶ ಸಾಧಿಸಲು ಸಣ್ಣ ಪುಟ್ಟ ಖಟ್ಲೆಗಳಲ್ಲಿ ಮೆಜಿಸ್ಟ್ರೇಟರು ಏನು ಗೊಂದಲ ಹಾಕುತ್ತಿರುವರೋ ತಿಳಿಯದಲ್ಲ! ಅಧಿಕಾರದ್ದರಿಂದ, ಆರೋಪಿಗೆ ನ್ಯಾಯ ಸಿಕ್ಕಲಿಲ್ಲವಾದ್ದರಿಂದ ಬೆಂಚ ಮೆಜಿಸ್ಟ್ರೇಟರ ನ್ಯಾಯದ ನಮೂನೆಯು ಹೊರಬೀಳಲು ಅನುಕೂಲವಾಯಿತು ಇನ್ನಾದರೂ ಸರಕಾರದ ಅಧಿಕಾರಿಗಳು ಬೆಂಚ ಮೆಜಿಸ್ಟ್ರೇಟರ ಯೋಗ್ಯಾಯೋಗ್ಯತೆಗಳನ್ನೂ ಬೆಂಚ ಕೋರ್ಟಿನ ಆವಶ್ಯಕತೆಗಳನ್ನೂ ವಿಚಾರಿಸಿ ಪರಿಸ್ಥಿತಿಗನುಸಾರವಾದ ಏರ್ಪಾಡು ಮಾಡಿಕೊಳ್ಳಲೆಂದು ಬಯಕೆ

* ರಾ| ಬಿ| ಕೊಯಿಮತ್ತೂರರ ಇಲ್ಲಿಯ ನಗರಸಿಂಧ ರಾಜಕೀಯ ಸಭೆಯಲ್ಲಿ ನಡೆದ ಕಾಳಗದ ಕಥೆಯು ಸಂಕ್ಷೇಪತಃ ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿದೆ ಮೂರು ದಿನಗಳ ಮೊದಲು ಕಮಿಟಿಯವರು ಮಾಡಿದ ನಿರ್ಣಯವನ್ನು ಕಮಿಟಿಯವರಿಂದಲೇ ರದ್ದುಪಡಿಸಿದ್ದನ್ನು ನೋಡಿ ರಾವ ಬಹಾದ್ದೂರರನ್ನು ಕೊಂಡಾಡಬೇಕೋ, ಕಮಿಟಿಯವರ ಸ್ವಾಭಿಮಾನಶೂನ್ಯತೆಯ ಬಗ್ಗೆ ವ್ಯಸನಪಡಬೇಕೋ, ಎಂಬುದೇ ನಮಗೆ ತಿಳಿಯದು ರಾ ಬ ಕೊಯಿಮತ್ತೂರರು ಡಿಸ್ಟ್ರಿಕ್ಟ ಬೋರ್ಡಿನ ಅಧಿಪತಿಗಳಿದ್ದರೂ ಇಲ್ಲಿಯ ನೆರೆಯ ಕಮಿಟಿಯಲ್ಲಿ ಅವರಿಗೆ ಸ್ಥಾನವೇನಿಲ್ಲ ಕಮಿಟಿಯಲ್ಲಿ ಇವರಿಗೆ ಯಾರೂ ನಿಮಂತ್ರಿಸಿದ್ದೂ ಕೇಳಬರಲಿಲ್ಲ ಹೀಗಿದ್ದು, ರಾ| ಬಿ| ರವರು ಕಮಿಟಿಯಲ್ಲಿ ಹೇಗೆ ಹೋದರು, ಎಂಬುದೇ ಒಂದು ಪ್ರಶ್ನೆ ಅಲ್ಲಿ ಅನುಗ್ರಹವಾದರೂ, ಹೀಗೇ ಮಾಡಬೇಕು, ಹಾಗೇ ಮಾಡಬೇಕು, ಎಂದು ಕಮಿಟಿಯವರಿಗೆ ವಿಧಿಸುವ ಅಧಿಕಾರವು ಇವರಿಗೆ ಎಲ್ಲಿಂದ ಪ್ರಾಪ್ತವಾಯಿತು" ಕಮಿಟಿಯವರೇನು ರಾ| ಬ ರರ ನೌಕರರಲ್ಲ ಪಟ್ಟಣದೊಳಗಿನ ಸನ್ಮಾನ್ಯ ಗೃಹಸ್ಥರು ಹೀಗಿದ್ದು, ಅವರಿಗೆ ಆಜ್ಞೆ ಮಾಡುವದು ರಾ| ಬ ರರಿಗೆ ಸರ್ವಥಾ ಅನುಚಿತವೆಂದು ಯಾರು ಹೇಳರು? ಕಮಿಟಿಯಲ್ಲಿ ರಾ| ಬಿ| ರರಿಗೆ ವಿರೋಧ ಮಾಡಿ, ತಮ್ಮ ಸ್ವತಂತ್ರತೆಯನ್ನು ಪ್ರದರ್ಶಿಸಿದ ಸಭಾಸದರಿಗೆ ನಾವು ಮನಃಪೂರ್ವಕ ಅಭಿನಂದಿಸುವೆವು ಅಧ್ಯಕ್ಷರಾದ ರಾ| ವಿಶ್ವೇಶ್ವರ ಕಲ್ಯಾಣಪುರಕರರ ರಾ| ಬ ಕೊಯಿಮತ್ತೂರರವರನ್ನೇ ಎತ್ತಿ ಹಿಡಿದದ್ದು ಖೇದಕರವು ೩ ದಿನಗಳ ಮೊದಲು ಕಮಿಟಿಯವರು ವಿಚಾರಪೂರ್ವಕ ಮಾಡಿದ ಠರಾವಿಗೆ ರಾ| ಬ| ರರ ದರ್ಶನದಿಂದ 'ಶಾಸ್ತ್ರೀಯ' ಎಂದು ಶರಾ ಹೊಡೆದು ಅವರು ಏಕೆ ಕಮಿಟಿಯ ದ್ರೋಹ ಮಾಡಿದರೆಂದು ತಿಳಿಯುವದು ಗೂಢವು ರಾ| ಬ| ರರಿಗೆ ವಿರೋಧಿಸುವಷ್ಟು ಧೈರ್ಯ ಸಾಲದ್ದರಿಂದ, ಅವರು ಸುಮ್ಮನಿರಿಸಿದರೆಂದು ತಿಳಿಯಲಿಕ್ಕೆ ಆಸ್ಪದವಿಲ್ಲ. ಯಾಕೆಂದರೆ ಅವರಿಗೆ ದೊಡ್ಡ ದೊಡ್ಡ ಅಧಿಕಾರಿಗಳ ಕೂಡ ಜಗಳಾಡಿ, ಪ್ರಜೆಗಳಿಗೆ ಜಂಗಲ ಹಕ್ಕು ಮೊದಲಾದವುಗಳನ್ನು ಸಂಪಾದಿಸಲು ಟೊಂಕ ಕಟ್ಟಿದವರ ಯಃಕಶ್ಚಿತ್ ಡಿ| ಡೆ| ಕಲೆಕ್ಟರರಂಥವರಿಗೆ ತಲೆ ಬಗ್ಗಿಸಿದರೆ, ಮುಂದೇನು ಮಾಡಬಲ್ಲರು? ನೆರೆ ನಿವಾರಣ ಕಮಿಟಿಗಳಂಥ ಸಣ್ಣ ಪುಟ್ಟ ಸಂಸ್ಥೆಗಳಲ್ಲಿ ಸಹ ನಮ್ಮ ನೌಕರಶಾಹಿಯು ತನ್ನ ದೊಡ್ಡಸ್ತಿಕೆಯನ್ನು ಮೆರಿಸಲು ಹೇಗೆ ಹಾತೊರೆಯುತ್ತಿದೆಯೆಂದು ಇದರಿಂದ ಸ್ಪಷ್ಟವಾಗುತ್ತದೆ ನೌಕರಶಾಹಿಯು ಗೂಡ ಸ್ವಾಭಿಮಾನ ಕಾಪಾಡಿಕೊಂಡು ಸಹಕಾರಿತೆ ಮಾಡುವದು ಅಶಕ್ಯವಾದ್ದರಿಂದಲೇ, ಮಹಾತ್ಮರು ಅಸಹಯೋಗವನ್ನು ಬೋಧಿಸಬೇಕಾಯಿತಲ್ಲವೇ?

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ಬೇಸಾಯಗಾರರು ಹೇಳುವ ಮಳೆಯೆಂದು ದೂರುತ್ತಿರುವರು ಈ ವರ್ಷ ಮೇಘರಾಜನು ಪ್ರಜಾಪೀಡನಕ್ಕೆ ಉದ್ಯುಕ್ತನಾಗಿರುವನೆಂಬಂತೆ ವರ್ತಿಸುತ್ತಿರುವನು ಹುಬ್ಬಾ ನಕ್ಷತ್ರಕ್ಕೆ ಮಳೆ ನಿಂತು ಬೀಳಬೇಕಾದರೆ ಪ್ರಯಾಸವಾಯಿತು ಈಗ ಉತ್ತರಾ ನಕ್ಷತ್ರಕ್ಕೆ ಮಳೆಯು ತೆರಪಿಲ್ಲದೆ ಸುರಿಯುತ್ತದೆ ಎರಡು ಮೂರು ದಿವಸ ಹಗಲಿಗೆ ಬಿಸಿಲು ಬಿತ್ತು ಈಗ ಮೇಘರಾಜನು ಸಂಚು ಮಾಡುವದುತ್ತಲಿದೆ ಈ ವಾರದಲ್ಲಿ ೧೦ ೩೪ ಇಂಚು ಮಳೆ ಬಿತ್ತು ಈ ವರೆಗೆ ೧೬೬-೮೩ ಇಂಚು ಮಳೆಯಾಯಿತು

ಕಳೆದ ತಾ ೧೬ನೇ ರವಿವಾರ ಸಾಯಂಕಾಲಕ್ಕೆ ಕನ್ನಡ ೧ನೇ ನಂಬರ ಶಾಲೆಯ ಉಪ್ಪರಿಗೆಯ ಮೇಲೆ ರಾವ ಸಾಹೇಬ ರಾಮಚಂದ್ರ ಪೈರ ನಿಧನದ ಬಗ್ಗೆ ದುಃಖಪ್ರದರ್ಶನ ಮಾಡುವರೆ ಊರವರದೊಂದು ಸಭೆಸೇರಿತು ಅಧ್ಯಕ್ಷಸ್ಥಾನವನ್ನು ರಾ| ವಿಶ್ವೇಶ್ವರ ಕಲ್ಯಾಣಪುರಕರರ ಆಕ್ರಮಿಸಿದ್ದರು ಗಿಬ್ಸ ಹೈಸ್ಕೂಲಿನ ಸುಪರಿಂಟೆಂಡೆಂಟರಾದ ರಾ| ನಾರಾಯಣ ಸುಬ್ರಾಯ ಕಾಮತರವರು ವಿಸ್ತಾರಪೂರ್ವಕ ಭಾಷಣವನ್ನಿತ್ತು ಪೈಕರ ಗುಣಗಳನ್ನು ಕುಟುಂಬವತ್ಸಲತೆ, ಅದರ ಹಿದರ ಮತ್ತು ಪರಲೋಕವಾಸಿಗಳನ್ನು ಸ್ವಾರ್ಥಕ್ಕೆ ವಿರೋಧ ಬಾರದಂತೆ ಪರಾರ್ಥ ಸಾಧಿಸುವವರೆಂದು ತಾತ್ಪರ್ಯ ತೆಗೆದು ಭತ್ತೃಹರಿ ಕವಿಯ ಸಾಮಾನ್ಯ ಮಂದಿಗಳ ವರ್ಗದಲ್ಲಿ ಸೇರಿಸಿದರು ರಾ| ಪಾಂಡುರಂಗ ಶಿವಗಿಕರರೂ ಒಂದು ಭಾಷಣವನ್ನು ಕೊಟ್ಟರು ಬಳಿಕ ವಾಡಿಕೆಯಂತೆ ದುಃಖಪ್ರದರ್ಶನದ ಠರಾವು ಮಂಜೂರಾಯಿತು ಅಧ್ಯಕ್ಷರು ಸಮಾರೋಪ ಮಾಡುವಾಗ, ಪೈ| ಪಾ| ಪಾಂಡುರಂಗ ಪೈಗಳ ಗುಣಾನುವಾದ ಮಾಡಿ, ಸಭೆಯನ್ನು ವಿಸರ್ಜಿಸಿದರು

ಮೊನ್ನೆ ತಾರೀಖು ೧೮ ನೇ ಮಂಗಳವಾರ ರಾತ್ರಿ ಹೊಸದಾಗಿ ಸ್ಥಾಪನೆಹೊಂದಿದ ಸತ್ಯೋತ್ತೇಜಕ ನಾಟಕ ಮಂಡಳಿಯವರು "ಹಿರಾ ಹರಪಲಾ" ಎಂಬ ನಾಟಕವನ್ನಾಡಿ ರೂಪಾಯಿ ೧೫೦ ಕ್ಕಿ ಮೇಲ್ಪಟ್ಟು ಹುಟ್ಟಿದ ಉತ್ಪನ್ನವನ್ನು ನೆರೆಯಿಂದ ನಿರಾಶ್ರಿತರಾದವರಿಗೆ ಅರ್ಪಿಸಿದರು

ಮುಂಬಯಿಯ ಸ್ಟೀಮ ನೆವಿಗೇಶನ ಕಂಪನಿಯು ಇದೀಗ ಬೋಟಿನ ಗಳಿಕೆಗಳು ನಿನ್ನೆ ಅಪರಾಹ್ನ ಸುಮಾರ ೨ ಘಂಟೆಗೆ ಇಲ್ಲಿ ಬಂದು ತಲ್ಪಿತು

ಇಂದು ಸಾಯಂಕಾಲ ೪|| ಘಂಟೆ ಸಮಯಕ್ಕೆ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ರಾ| ವಿಶ್ವೇಶ್ವರ ಕಲ್ಯಾಣಪುರಕರರವರು 'ಲೆಜಿಸ್ಲೇಟಿವ್ಹ ಕೌನ್ಸಿಲದ ಚುನಾವಣೆಯೂ, ಮತದಾರರ ಕರ್ತವ್ಯಗಳೂ' ವಿಷಯದ ಮೇಲೆ ಭಾಷಣ ಮಾಡುವವರಿದ್ದಾರೆ

ಸದಾಶಿವಗಡ— ಇಲ್ಲಿಯ ಕೆಲ ಇಂಗ್ಲಿಷ ಶಾಲೆಯ ಮಾಸ್ತರರು ಕುಚಲಾ-ಹೊನ್ನಾವರ-ಉಳುವಿ ಕಡೆಯ ನೆರೆಯ ಹಾವಳಿಯಿಂದ ನಿರಾಶ್ರಿತರಾದವರ ಬಗ್ಗೆ ದಲಿಯ ಫಂಡು ಕೂಡಿಸುವ ಬಗ್ಗೆ ಊರ ಜನರಲ್ಲಿ ತಿರುಗಾಡಿ ರೂ ೭೪ ಒಟ್ಟುಗೂಡಿಸಿ, ಮತ್ತು ಸುಮಾರು ಐದು ರೂಪಾಯಿಗಳ ಆಶ್ವಾಸನ ಪಡೆದಿರುವರು ಇಂಗ್ಲಿಷ ಶಾಲೆಯ ಹುಡುಗರೇ ತಮ್ಮ ತಮ್ಮ ಕರ್ತವ್ಯವೆಂದು ರೂ ೧೩ ೦-೬ಗಳನ್ನು ಮತ್ತು ಮಾಸ್ತರರು ರೂ ೩೦ ಗಳನ್ನು ಹೀಗೆ ಉದಾರ ಮನಸ್ಸಿನಿಂದ ಕೊಟ್ಟಿರುವರು ಶಾಲೆಯ ವಂತಿಗೆಯು ಸೈತಿ ರೂ ೩೦ ಮೆ| ಕಲೆಕ್ಟರರ ಮಾರ್ಫತ ಹೊನ್ನಾವರಕ್ಕೆ ಕಳಿಸಿರುತ್ತದೆ ರೂ ೫೧ ಮಂಗಳೂರಿಗೆ ಶ್ರೀ ಕಾರ್ನಾಡ ಸದಾಶಿವರಾವ, ಜೊಂಯಿಂಟ ಸೆಕ್ರೆಟರಿ, ರಿಲೀಫ ಕಮೀಟಿಯವರ ಹೆಸರಿನಲ್ಲಿ ರವಾನಿಸಿದೆ ಮನಿಯಾರ್ಡರ ವಗೈರೆ ಖರ್ಚು ತೆಗೆದು, ಉಳಿದ ಎಲ್ಲ ರಕಮು ಹೊನ್ನಾವರ ಫಂಡಿಗೇ ಕಳಿಸಲ್ಪಡುವದು

ಹಿಂದೆ ಇಲ್ಲಿಯ ಕಾಂಗ್ರೆಸ ಕಮೀಟಿಯಿಂದ ಬರೆದ ಪತ್ರಕ್ಕೆ ಸದ್ಯಕ್ಕೆ ಸ್ವಯಂಸೇವಕರ ಗರಜು ಇಲ್ಲೆಂತಲೂ, ಮುಂದೆ ಗರಜು ಕಂಡರೆ ಬರೆಯುವೆನೆಂತಲೂ ಉತ್ತರ ಬಂದಿರುವದು

ಮಳೆ ಚೆಲೋ ಬೀಳುತ್ತಿದ್ದರಿಂದ ಜನರು ಶ್ರೀ ಸಿದ್ಧಿವಿನಾಯಕನ ದಿವಸವನ್ನು ಬಹಳ ಹುರುಪಿನಿಂದಲೂ, ವೈಭವದಿಂದಲೂ ನೆರವೇರಿಸಿರುವರು

ಶಿರ್ಸಿ— ಕಳೆದ ವಾರದಲ್ಲಿ ಮಳೆ ಅಪರೂಪ

ಪ್ರತಿವರ್ಷದಂತೆ ಇಲ್ಲಿಯ ರಾಷ್ಟ್ರೀಯ ಶಾಲೆಯಲ್ಲಿ ಉತ್ಸವವು ಉತ್ಸಾಹದಿಂದ ನೆರವೇರಿಸಲ್ಪಟ್ಟಿದೆ ಗಜಾನನನೊಡನೆ ಲೋ| ಟಿಳಕ ಛತ್ರಪತಿ ಶಿವಾಜಿ, ಮಹಾತ್ಮಾ ಗಾಂಧಿಯವರ ಮೂರ್ತಿಗಳೂ ವಿರಾಜಿತವಾಗಿವೆ

ಈ ವರ್ಷದ ೮ನೇ (ನೂರನೆಯ) ಸಪ್ತಾಹವು ಅಪೂರ್ವ ಉತ್ಸಾಹದಿಂದ ನೆರವೇರುತ್ತ ಇದೆ. ನಿಯಮಿತ ಕಾರ್ಯಗಳನ್ನು ಮಾಡದೆ, ಪ್ರತಿಯೊಬ್ಬನು ಆದಷ್ಟು ಹೆಚ್ಚು ಹೊತ್ತು ನೂಲಬೇಕೆ ಬಿದನ್ನೇ ಧ್ಯೇಯವನ್ನಾಗಿ ಇಟ್ಟುಕೊಂಡು ನೂಲುತ್ತಲಿದ್ದಾನೆ

ರಾಷ್ಟ್ರೀಯ ಶಾಲೆಯು ಸ್ವತಂತ್ರವಾದಂದಿನಿಂದ, ಸ್ವಾವಲಂಬನದ ಕಡೆಗೆ ಎಲ್ಲರ ಲಕ್ಷ ಹೋಗಿದೆ ಶಾಲೆಯ ವೆಚ್ಚವೆಲ್ಲ ಹುಡುಗರ ಫೀಯಿಂದಲೇ ಸಾಗುತ್ತದೆ ರಾಷ್ಟ್ರೀಯ ಶಿಕ್ಷಣಕ್ಕೆ ಸಹಾನುಭೂತಿಯುಳ್ಳ ಜನರು ಕೊಡಮಾಡಿದ ಸಹಾಯವು ತಗೆದುಕೊಳ್ಳಲ್ಪಡುತ್ತದೆ ಆಯ ವ್ಯಯದ ಲೆಕ್ಕವೆಲ್ಲ ವಿದ್ಯಾರ್ಥಿಗಳೇ ಇಡುತ್ತಾರೆ ಶಾಲೆಯ ಬಹುತೇಕ ಎಲ್ಲ ಕೆಲಸಗಳನ್ನು ವಿದ್ಯಾರ್ಥಿಗಳೇ ಕೂಡಿ ನಡಿಸುತ್ತಾರೆ ಹೀಗೆ ಸ್ವಾತಂತ್ರ್ಯದ ಜೊತೆಗೆ ಜವಾಬದಾರಿಯೂ ಬಿದ್ದದರಿಂದ ಹುಡುಗರಲ್ಲಿ ಸ್ವಾಭಿಮಾನವೂ, ಐಕ್ಯಮತ್ಯವೂ, ಜಿಜ್ಞಾಸೆಯೂ ಹೆಚ್ಚಾಗಿ ಹಸ್ತಕುಶಲತೆ ಹಿಂದಿನಕ್ಕಿಂತ ಈಗಿನ ತಿಂಗಳಲ್ಲಿ ಶಾಲೆಯು ಎಷ್ಟೋ ಮುಂದುವರಿದಿರುತ್ತದೆನ್ನಲಿಕ್ಕೆ ಅಡ್ಡಿ ಇಲ್ಲ

ಪ್ರತಿಯೊಬ್ಬ ವಿದ್ಯಾರ್ಥಿಯು ಪ್ರತಿನಿತ್ಯ ಒಂದು ತಾಸು ನೂತೇ ನೂಲುತ್ತಾನೆ ಒಂದು ಮಗ್ಗವೂ ನಡೆಯುತ್ತಲಿದೆ 'ಬಾಲವೀರ' ಎಂಬ ಸಾಪ್ತಾಹಿಕವೂ ನಡೆಯ ಹತ್ತಿ ನಾಲ್ಕು ತಿಂಗಳಾದವು ಶಾಲೆಯಲ್ಲಿ ಸಾಧುಸಂತರ ಹಾಗೂ ರಾಷ್ಟ್ರಪುರುಷರ ಜಯಂತಿ ಪುಣ್ಯತಿಥಿಗಳು ತಪ್ಪದೇ ಆಗುತ್ತವೆ ಪ್ರತಿ ಏಕಾದಶೀ ದಿನ ಶಾಲೆಗೆ ರಜೆ ಇದ್ದು ಸಾಧುಸಂತರ ಚರಿತ್ರಶ್ರವಣ ನಡೆಯುತ್ತದೆ ದೈನಿಕ ಪ್ರಾರ್ಥನೆಯ ಮೂಲಕವೂ, ಅನ್ಯ ರೀತಿಯಿಂದಲೂ ಶಾಲೆಯ ವಾತಾವರಣವನ್ನು ಧಾರ್ಮಿಕವಾಗಿ ಮಾಡುವ ಪ್ರಯತ್ನ ನಡೆದಿರುತ್ತದೆ

ಇಲ್ಲಿಯ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಭಜನ ಸಪ್ತಾಹವು ನಡೆದಿರುತ್ತದೆ

ಮೌ। ಮಹಮ್ಮದ ಅಲ್ಲಿ ಯವರ ಚಾಲಕತ್ವ.

ಕೌನ್ಸಿಲು ಬಹಿಷ್ಕಾರವು ದೂರವಾಯಿತು

ಕಾಯಿದೇಭಂಗ ಕಮಿಟಿಯ ನೇಮಣೂಕಿ, ಸ್ವರಾಜ್ಯ ಪಕ್ಷದ ಬೆಂಬಲ

ಹಿಂದೂ ಮುಸಲ್ಮಾನರ ಐಕ್ಯಸ್ಥಾಪನೆ

ದಿಲ್ಲಿಯಲ್ಲಿ ಕೂಡಿದ ಜಾದಾ ಕಾಂಗ್ರೆಸಿನ ವರ್ತಮಾನ

ಜಾದಾ ರಾಷ್ಟ್ರೀಯ ಸಭೆಯ ಅಧಿವೇಶನವು ಶನಿವಾರ ತಾರೀಖು ೧೫ನೆ ಸಪ್ಟಂಬರದಲ್ಲಿ ಮುದ್ದಾಂ ಕಟ್ಟಿದ ಸಭಾಮಂಟಪದಲ್ಲಿ ಮಧ್ಯಾಹ್ನ ೧ ಘಂಟೆಗೆ ನೆರೆಯಿತು. ಅಧಿವೇಶನಕ್ಕೆ ಸುಮಾರು ೩೦೦೦ಕ್ಕೆ ಮಿಕ್ಕಿ ಪ್ರಾತಿನಿಧಿಕ ಪ್ರತಿನಿಧಿಗಳೂ ೫೦೦೦ಕ್ಕೆ ಮಿಕ್ಕಿ ಪ್ರೇಕ್ಷಕರೂ ಇದ್ದರು. ಮೌ। ಅಬುಲ್ ಕಲಮ್ ಅಝಾದ, ವಲ್ಲಭಭಾಯಿ ಪಟೇಲ, ಸೌ। ಕಸ್ತೂರಬಾಯಿ ಗಾಂಧೀ, ಡಾ। ಅನ್ಸಾರಿ, ಪಂಡಿತ ಮಾಲವೀಯ ಮೊದಲಾದ ಲೋಕನಾಯಕರು ಸಭಾಮಂಟಪವನ್ನು ಹೊಕ್ಕ ಕೂಡಲೆ, ಪ್ರೇಕ್ಷಕವೃಂದವೆಲ್ಲವೂ ಅವರನ್ನು ಉತ್ಸಾಹದಿಂದ ಸ್ವಾಗತೀಕರಿಸಿತು. 'ಮಹಾತ್ಮಾಗಾಂಧಿಯವರಿಗೆ ಬಿಡುಗಡೆ ಮಾಡುವದು ನಿಮ್ಮ ಕರ್ತವ್ಯವು' 'ಸ್ವಾರ್ಥತ್ಯಾಗವೇ ಸ್ವರಾಜ್ಯದ ಬೆಲೆ' ಎಂಬಂಥ ವಚನಗಳು ಸಭಾಮಂಟಪದಲ್ಲಿ ಗೋಚರಿಸುತ್ತಿದ್ದವು. ಬಳಿಕ, ರಾಷ್ಟ್ರೀಯ ಸಭೆಗೆ ಬರಲಾಗಲು ಅಸಮರ್ಥರಿದ್ದವರ ಸಂದೇಶಗಳು ಬಂದವು. ಪ॥ ಘ॥ ಲಾಲಾ ಲಜಪತರಾಯರು ರಾಷ್ಟ್ರೀಯ ಸಭೆಯಲ್ಲಿ ಐಕ್ಯವನ್ನು ಕಾಪಾಡುವದಕ್ಕೆ ಸಿದ್ಧರು. ಬಹುತೇಕ ಎಲ್ಲರೂ ಐಕ್ಯಸ್ಥಾಪನೆಗೆ ಪ್ರತಿನಿಧಿಗಳಿಗೆ ವಿಜ್ಞಾಪಿಸಿದ್ದರು. ಬಳಿಕ, ಸ್ವಾಗತಕಮಿಟಿಯ ಅಧ್ಯಕ್ಷರಾದ, ಡಾ। ಅನ್ಸಾರಿಯವರು "ಈಗ ದೇಶಬಾಂಧವರೆಲ್ಲರೂ ಐಕ್ಯದಿಂದ ನಡೆಯಬೇಕೆಂತಲೂ, ಕೆನಿಯಾ ನಿರ್ಣಯದಿಂದ ಸಾಮ್ರಾಜ್ಯ ಮರ್ಮದ ಅರಿವಾದರೂ, ನೇಮಸ್ತರು ರಾಷ್ಟ್ರೀಯ ಸಭೆಯಿಂದ ಅಲಿಪ್ತವಾಗಿ ಉಳಿದದ್ದು ಪರ್ಯಾಲೋಚನೀಯವೆಂತಲೂ, ನುಡಿದು, ನಾಗಪುರ ಸತ್ಯಾಗ್ರಹವನ್ನು ಯಶಸ್ವೀರೀತಿಯಿಂದ ಕೊನೆಗಾಣಿಸಿದ ಬಗ್ಗೆ ಅವರನ್ನು ಅಭಿನಂದಿಸಿ, ಸ್ವಸ್ಥಾನಾಪನ್ನರಾದರು. ಬಳಿಕ, ಅಧ್ಯಕ್ಷರ ಚುನಾವಣೆಯಾಯಿತು.

ಮೌ। ಅಬುಲ್ ಕಲಮ್ ಅಝಾದರವರು ಭಾಷಣವನ್ನು ಕೊಡಲು ಎದ್ದು ನಿಂತರು. ಕೂಡಲೆ, ಮಂಟಪವೆಲ್ಲ ಜಯಘೋಷದಿಂದ ದುಮುದುಮಿಸಿತು.

ಅಧ್ಯಕ್ಷರ ಭಾಷಣವು ಪ್ರಚಲಿತ ರಾಜಕಾರಣಸ್ಥಿತಿಯನ್ನು ಸೂಕ್ಷ್ಮ ರೀತಿಯಿಂದ ವಿವೇಚಿಸಿತು. ಮೂರು ಮುದ್ದೆಗಳು ಮುಖ್ಯವಿದ್ದವು. ಪ್ರಚಲಿತ ಸ್ಥಿತಿಯಲ್ಲಿ ಕೌನ್ಸಿಲುಗಳನ್ನು ಬಹಿಷ್ಕರಿಸಿ, ಬಿಡುವದು ನಿಷ್ಪ್ರಯೋಜಕವೆಂದು ಅಧ್ಯಕ್ಷರ ಮತವಾಯಿತು. ಜಾತಿ ಸಂಸ್ಥೆಗಳನ್ನು ಏರ್ಪಡಿಸುವದು, ದೇಶಹಿತವಿಘಾತಕವೆಂದು ಮೌ। ರವರು ಆಗ್ರಹದಿಂದ ಹೇಳಿದರು. ೧೯೧೯ನೇ ಇಸ್ವಿಯಲ್ಲಿ ಮಹಮ್ಮದೀಯ ಸಮಾಜದ ಚಳವಳಿ ಎದ್ದಾಗ, ತಾವು ಮಹಮ್ಮದೀಯರಿಗೆ ಎಚ್ಚರಿಕೆ ಕೊಟ್ಟಿದ್ದೆವೆಂತಲೂ, ಹಿಂದೂ ಸಂಘಟನೆಯನ್ನು ಏರ್ಪಡಿಸಲಿಚ್ಛಿಸುವ ಹಿಂದೂ ಬಾಂಧವರಿಗೆ ಅದೇ ಎಚ್ಚರಿಕೆಯನ್ನು ಈಗ ಕೊಡಬೇಕಾಗಿದೆಯೆಂತಲೂ ನುಡಿದರು. "ನಮಗೀಗ ಬೇಕಾದದ್ದು ಹಿಂದೂ ಸಂಘಟನೆಯಲ್ಲ, ಮಹಮ್ಮದೀಯ ಸಂಘಟನೆಯೂ ಅಲ್ಲ, 'ಭಾರತೀಯ ರಾಷ್ಟ್ರೀಯ ಸಭೆ' ಎಂಬ ಒಂದೇ ಒಂದು ಸಂಘಟನೆಯು ನಮಗೀಗ ಬೇಕಾಗಿದೆ. ಬಳಿಕ, ಅಧ್ಯಕ್ಷರು ಸಮಾಜದ ಚಳವಳಿಗೆ ಬಲಿಬಿದ್ದು, ರಾಷ್ಟ್ರೀಯ ಆಕಾಂಕ್ಷೆಗಳನ್ನು ನಷ್ಟಪಡಿಸಬೇಡಿರೆಂದು ಆಗ್ರಹಪೂರ್ವಕ ಬಿನ್ನಹಮಾಡಿದರು. 'ಶುದ್ಧಿ ಸಂಘಟನ ಚಳವಳಿಗಳನ್ನು ತೊಲಗಿರಿ ತಹಕೂಬಾದರೂ ಮಾಡಿರಿ' ಎಂದು ಅಧ್ಯಕ್ಷರು ಪ್ರತಿನಿಧಿಗಳಿಗೆ ಪ್ರಾರ್ಥಿಸಿದರು. ಹಿಂದೂ ಮುಸಲ್ಮಾನರ ಐಕ್ಯದ ಅಧ್ಯಕ್ಷರ ವಿವರಣೆಯು ಚಿತ್ತವೇಧಕವಾಯಿತು. 'ಹಿಂದೂ-ಮುಸಲ್ಮಾನರ ಐಕ್ಯ ಒಂದನ್ನು ಬಿಡಿರಿ, ನಿಮಗೆ ೨೪ ತಾಸುಗಳಲ್ಲಿ ಸ್ವರಾಜ್ಯದಾನ ಮಾಡುತ್ತೇನೆ' ಎಂದು ದೇವದೂತರೊಬ್ಬರು ಈ ಕುತುಬ್ ಮಿನಾರದಮೇಲೆ ಅವತೀರ್ಣ ಹೊಂದಿ ಹೇಳಿದರೆ, ನಾನು ಸ್ವರಾಜ್ಯವನ್ನು ತೊರೆದು, ಹಿಂದೂ-ಮುಸಲ್ಮಾನರ ಐಕ್ಯವನ್ನೇ ಬೇಡುವೆನು. ಈ ಸಮಯ, ಶ್ರೋತೃವೃಂದದಲ್ಲಿ ಆನಂದದ ಘೋಷವೆದ್ದರೆ, ಅದೇನು ಆಶ್ಚರ್ಯವಲ್ಲ. ಬಳಿಕ ಅಧ್ಯಕ್ಷರು ರಾಷ್ಟ್ರೀಯ ಕರಾರುನಾಮೆಯನ್ನು ಈಗ ಕೂಡಲೇ ತಯಾರಿಸಬೇಕೆಂದರು. ಅದರೊಳಗೆ ರಾಷ್ಟ್ರೀಯ ಧ್ಯೇಯದ ವ್ಯಾಖ್ಯೆ ಮಾಡಿ, ದೇಶದೊಳಗಿನ ಅನೇಕ ಜಾತಿಗಳ ಹಿತಸಂಬಂಧಗಳನ್ನೆಲ್ಲ ನಿರ್ಣಯಿಸಬೇಕೆಂತಲೂ. ಡಿಸೆಂಬರದ ರಾಷ್ಟ್ರೀಯ ಸಭೆಯೊಳಗೆ ತಜ್ಞರ ಒಂದು ಕಮಿಟಿ ನೇಮಿಸಿ, ಈ ಬಗ್ಗೆ ಒಂದು ಮಸೂದೆಯನ್ನೂ ತಯಾರಿಸಬೇಕೆಂದರು. ಬಳಿಕ, ನಮ್ಮ ನಮ್ಮ ರಾಷ್ಟ್ರೀಯ ಕಾರ್ಯವನ್ನು ಧೈರ್ಯದಿಂದಲೂ, ದೇಶಾಭಿಮಾನದಿಂದಲೂ ನಡಿಸಿ, ಯಶಸ್ಸು ಪಡೆಯಬೇಕೆಂದು ಉಸುರಿಸಿ, ತಮ್ಮ ಭಾಷಣವನ್ನು ಮುಗಿಸಿದರು. ಆಗ 'ಭಾರತಮಾತಾಕೀ ಜಯ' 'ಗಾಂಧೀ ಮಹಾರಾಜಕೀ ಜಯ' 'ಅಲ್ಲಾಹೋ ಅಕಬರ' ಮೊದಲಾದ ಜಯಘೋಷಗಳಿಂದ ಸಭಾಮಂಟಪವು ವ್ಯಾಪಿಸಿಹೋಯಿತು. ಮೌಲಾನಾರವರು ಅಂದಿನ ಅಧಿವೇಶನವನ್ನು ವಿಸರ್ಜಿಸುವ ಮೊದಲು, ನಾಗಪುರದ ಸತ್ಯಾಗ್ರಹಿಗಳನ್ನು ಅಭಿಮಾನಪೂರ್ವಕ, ಕೃತಜ್ಞತಾಪೂರ್ವಕ ಅಭಿನಂದಿಸಿ, ರಾಷ್ಟ್ರೀಯ ಧ್ವಜದ ಮಾನರಕ್ಷಣೆಗಾಗಿ ಅವರು ಕ್ಲೇಶವನ್ನೂ, ಸ್ವಾರ್ಥತ್ಯಾಗವನ್ನೂ ಸಹಿಸಿದ ಬಗ್ಗೆ ಸಂತೋಷವನ್ನು ಪ್ರಕಟಿಸಿದರು. ಇದಾದ ಬಳಿಕ, ಅಂದಿನ ಕಾರ್ಯಕ್ರಮವು ಮುಗಿಯಿತು.

ಮಾರನೇ ದಿನ, ರಾಷ್ಟ್ರೀಯ ಸಭೆಯು ೨ ಘಂಟೆಗೆ ನೆರೆಯಿತು. ವಾದ-ವಿವಾದವಾಗಿ, ಮೌ॥ ಮಹಮ್ಮದ ಅಲ್ಲಿಯವರ ಮುಖ್ಯ ಠರಾವು ಪಾಸಾಯಿತು. ಆ ಠರಾವು ಯಾವದೆಂದರೆ — ಅಹಿಂಸಾಪ್ರಧಾನ ಅಸಹಯೋಗದ ತತ್ವವನ್ನು ರಾಷ್ಟ್ರೀಯ ಸಭೆಯು ಪುರಸ್ಕರಿಸುತ್ತದೆ. ಆದರೆ, ಧಾರ್ಮಿಕ, ಮನಃಸಾಕ್ಷಿಯ ಮುಂತಾದ ಆತಂಕವಿಲ್ಲದ ರಾಷ್ಟ್ರೀಯ ಸಭಾಭಿಮಾನಿಗಳು ಕೌನ್ಸಿಲುಗಳನ್ನು ಪ್ರವೇಶಿಸಲು ಸ್ವತಂತ್ರರಿರುವರು. ಈ ಚುನಾವಣೆಯಲ್ಲಿ ಮತದಾನ ಮಾಡಲು ಸಹ ಇಂಥ ರಾಷ್ಟ್ರೀಯ ಸಭೆಯವರಿಗೆ ಅಡ್ಡಿಯೇನಿಲ್ಲ. ಅದ್ದರಿಂದ, ರಾಷ್ಟ್ರೀಯ ಸಭೆಯು ಕೌನ್ಸಿಲು ಬಹಿಷ್ಕಾರದ ಚಳವಳಿಯನ್ನು ತಹಕೂಬ ಮಾಡುತ್ತದೆ. ಹಾಗು ರಾಷ್ಟ್ರೀಯ ಸಭಾಭಿಮಾನಿಗಳೆಲ್ಲ ಲೋಕೋತ್ತರ ಲೋಕನಾಯಕರಾದ ಮಹಾತ್ಮಾ ಗಾಂಧಿಯವರು ವಿಧಿಸಿದ ವಿಧಾಯಕ ಕಾರ್ಯಕ್ರಮವನ್ನು ದ್ವಿಗುಣಿತ ಉತ್ಸಾಹದಿಂದ ಪುರಸ್ಕರಿಸಲೂ, ಐಕ್ಯಮತ್ಯದಿಂದ ಶೀಘ್ರವೇ ಸ್ವರಾಜ್ಯ ಸಂಪಾದಿಸಲೂ ರಾಷ್ಟ್ರೀಯ ಸಭೆಯು ಆಜ್ಞಾಪಿಸುತ್ತದೆ. ಈ ಠರಾವಿಗೆ ಕೌನ್ಸಿಲು ಬಹಿಷ್ಕಾರವನ್ನು ಪ್ರತಿಪಾದಿಸುವ ಪ್ರತಿನಿಧಿಗಳು ವಿರೋಧ ಮಾಡಲಿಲ್ಲ. ಶ್ರೀ॥ ವಲ್ಲಭಭಾಯಿ ಪಟೇಲ ಮೊದಲಾದ ಮಹಾತ್ಮರ ಏಕನಿಷ್ಠ ಭಕ್ತರು ಮೌ॥ ಮಹಮ್ಮದ ಅಲ್ಲಿಯವರಿಗೆ ಬೇಕಾದಹಾಗೆ ಈ ಪ್ರಶ್ನೆಯನ್ನು ನಿರ್ಣಯಿಸಿರೆಂದು ರಾಷ್ಟ್ರಧುರೆಯನ್ನೆಲ್ಲ ಅವರಿಗೆ ವಹಿಸಿದ್ದರಿಂದ, ಅವರು ಮಾಡಿದ ಠರಾವಿಗೆ ಬಹುಳವಾಗಿ ಎಲ್ಲರೂ ಒಪ್ಪಿಕೊಂಡರು. ತಮಿಳ ಪ್ರಾಂತದ ಪ್ರತಿನಿಧಿಗಳೂ ವಿರೋಧಿಸಲಿಲ್ಲ. ಯಾಕೆಂದರೆ, ಶ್ರೀ॥ ರಾಜಗೋಪಾಲಾಚಾರ್ಯರು ಶ್ರೀ॥ ವಲ್ಲಭಭಾಯಿಯವರಿಗೆ ತಂತಿ ಮಾಡಿ, ಮೌ॥ ಮಹಮ್ಮದ ಅಲ್ಲಿಯವರು ಮಾಡಿದ ನಿರ್ಣಯವನ್ನು ಎಲ್ಲರೂ ಶಿರಸಾ ಮನ್ನಿಸಬೇಕೆಂದು ತಿಳಿಸಿದ್ದರು. ಹೀಗೆ ಅನುಕೂಲ ವಾತಾವರಣವಿದ್ದ ಮೂಲಕ, ಮೌ॥ ಮಹಮ್ಮದ ಅಲ್ಲಿಯವರ ಠರಾವು ವಿಶೇಷ ವಿರೋಧವಿಲ್ಲದೆ, ಮಂಜೂರಾಯಿತು. ವಿಷಯನಿಯಾಮಕ ಕಮಿಟಿಯಲ್ಲಿ ನಾಭಾ ಸಂಸ್ಥಾನದ ಮಹಾರಾಜರಿಗೆ ರಾಜ್ಯತ್ಯಾಗ ಮಾಡಲು ಬಲಾತ್ಕಾರಪಡಿಸಿದ ಬಗ್ಗೆ ಹಿಂದುಸ್ಥಾನ ಸರಕಾರದ ನಿಂದಾಪ್ರದರ್ಶನ ಠರಾವೂ, ಜಪಾನಕ್ಕೆ ಈಗೊದಗಿದ ಭಯಂಕರ ಆಪತ್ತಿನ ಬಗ್ಗೆ ಸಹಾನುಭೂತಿ ಪ್ರದರ್ಶನ, ಕೆನಿಯಾ ನಿರ್ಣಯದ ಬಗ್ಗೆ ನಿಷೇಧಪ್ರದರ್ಶನ ಮೊದಲಾದ ಠರಾವುಗಳು ರವಿವಾರದ ವಿಷಯನಿಯಾಮಕ ಕಮಿಟಿಯಲ್ಲಿ ಚರ್ಚೆಯಾದವು

ತಂತಿಯಿಂದ ಬಂದ ಸುದ್ದಿ.

ಮಂಗಳವಾರದ ವರೆಗಿನ ಸುದ್ದಿಯು ನಿನ್ನೆ ನಮಗೆ ತಂತಿಯಿಂದ ಬಂದು ಮುಟ್ಟಿದೆ. ಅದರಿಂದ ತಿಳಿದು ಬರುವದೇನಂದರೆ —

ಕಾಯಿದೇಭಂಗವನ್ನು ಸಂಘಟಿಸಲು ಒಂದು ಕಮಿಟಿಯು ಏರ್ಪಾಡಾಗಿದೆ. ದೇಶಬಂಧುಗಳ ನೇತೃತ್ವದೊಳಗಿನ ಸ್ವರಾಜ್ಯ ಪಕ್ಷವೂ ಈ ಕಮಿಟಿಯ ಏರ್ಪಾಡನ್ನು ಉತ್ಸಾಹದಿಂದ ಆದರಿಸಿದೆ. ಬ್ರಿಟಿಶ ಸಾಮ್ರಾಜ್ಯದೊಳಗಿನ ಸಾಮಗ್ರಿಗಳನ್ನು ಬಹಿಷ್ಕರಿಸಬೇಕೆಂದು ಠರಾವು ಪಾಸಾಗಿದೆ. ಹಿಂದೂ ಸಮಾಜವು ಪುರಸ್ಕರಿಸುವ ಶುದ್ಧಿ-ಸಂಘಟನ ಚಳವಳಿಗಳನ್ನು ತಹಕೂಬಿಡುವ ಯೋಜನೆಯಾಗಿದೆ. ಹಿಂದೂ-ಮಹಮ್ಮದೀಯರ ಐಕ್ಯದ ಯೋಜನೆಯೂ ನೆರವೇರಿತು.

— ಮಹಾತ್ಮಾ ಗಾಂಧಿಯವರಿಗೆ ಯುರೋಪಿಯನ್ ರಾಷ್ಟ್ರಗಳ ಪ್ರತಿನಿಧಿಗಳು 'ನೋಬೆಲ್ ಪೀಸ ಪ್ರೈಝ್' ಎಂಬ ೩೦ ಸಾವಿರ ಪವನು ಬೆಲೆಯ ಒಂದು ಇನಾಮನ್ನು ಕೊಡುವವರಿದ್ದಾರಾಗಿಯೂ, ಮಹಾತ್ಮರಿಗೆ ಇದೇ ಕಳೆದ ತಾ. ೧೮ನೇಗೆ ಬಿಡುಗಡೆ ಮಾಡುವವರಿದ್ದಾರಾಗಿಯೂ ಸುದ್ದಿ ಎದ್ದಿತ್ತು. ಈ ವರೆಗೆ ವಿಮೋಚನ ಹೊಂದಿದ ಸುದ್ದಿಯೇನಿಲ್ಲ

— ಜಪಾನಿನ ಭೂಕಂಪದಲ್ಲಿ ಒದಗಿದ ಮಾನವಿ ಹಾನಿಯನ್ನು ಟೋಕಿಯೋ ಪೋಲೀಸರು ಪಟ್ಟಿ ಮಾಡಿ, ೩೩,೦೮೩ ಮಂದಿಗಳು ಮೃತಹೊಂದಿರುವರೆಂದೂ, ೧,೨೦,೦೫೦ ಮಂದಿಗಳು ಕಾಣೆಯಾಗಿರುವರೆಂದೂ ನಿಶ್ಚಯಿಸಿರುವರು

कारवारात डॉ. परांजपे

मुंबई सरकारचे शिक्षणमंत्री ना परांजपे कारवारास आले व एकदोन व्याख्याने देऊन परतहि गेले पण आपल्या नेमस्त पक्षाचीं तत्त्वे लोकांना पटविण्याच्या दृष्टीनें किंवा आपल्या उमेदवारीस अनुकूल असे मतदार मिळविण्याच्या दृष्टीने त्यांना काहीच साधता आले नाहीं असे एकदरींत दिसतें कारवार येथील तेली रामजीच्या माडीवर 'नेमस्त पक्षीयांचे काहीं राजकीय विचार' या विषयावर त्यांचें जे मराठी व्याख्यान झाले ते बहुतेक ठराविक नमुन्याचें व थोडेबहुत कंटाळवाणेंच झाले. त्यांचे भाषण संपल्यावर अध्यक्षांना काहींसा अप्रासंगिकपणा करून शक्याशक्यतेचा किंवा युक्तायुक्ततेचा फारसा विचार न करता राहिलल्या ५-७ मिनिटांत हवे ते प्रश्न विचारून घेण्यास श्रोतृवृंदास उदारपणाने मुबलक (!) संधि दिली पण प्रश्नमालिका सुरू झाल्यास प्रश्नोत्तरविधि आटपण्यास दीर्घकाल लागून पुढील दुसऱ्या व्याख्यानास हरकत होईल, हें जाणून व प्रश्न विचारण्याचा तो योग्य प्रसंग नसल्यानेहि कोणी प्रश्न विचारण्याची पर्वा केली नाहीं पण डॉ परांजपे यांचीं कित्येक फोल विधानें ऐकून लोकांस मोठीच गम्मत वाटली कारण कीं आतां लोक खरी वस्तुस्थिति न समजण्यासारखे दुधखुळे काहीं राहिले नाहींत

सुधारणा कायद्यामुळे उगवलेल्या नवयुगाचे स्तुतिस्तोत्र गातांना डा परांजप्यांनीं नवीन कौन्सिलाच्या कारकीर्दीत प्राप्त झालेले विजय ह्मणून काहीं गोष्टींचा ठासून उल्लेख केला लार्ड रिपन यांच्या कारकीर्दीत 'इल्बर्ट बिल' विषयीं झालेल्या जोराच्या विरोधक चळवळीशीं तुलना करून, सध्याच्या नवयुगात 'वर्णभेदनिरासक' बिलामुळे हिंदी-युरोपियनांमधील वैषम्यभाव कसा दूर झाला याचें त्यांनीं वर्णन केलें, सदर बिलामुळे पूर्वस्थितींत घडून आलेल्या फेरबदलाच्या गुणावगुणांचा विचार राहोच पण त्याचवेळीं, केनिया प्रकरणातील निकालामुळे साम्राज्यात हिंदी लोकांच्या कपाळीं कनिष्ट दर्जाचा छाप कायमचाच मारण्यात आला आहे या दुसऱ्या धडधडीत अपमानाच्या गोष्टीचा डाक्टर साहेबांना अशासमयीं अनुकूलपणे विसर पडावयास नको होता! लार्ड रिपन साहेबांच्या काळच्या जुन्या गोष्टींशीं आधुनिक स्थितीची तुलना करून समाधान पावण्यात किंवा लोकांची दिशाभूल करण्यात काहींच अर्थ नाहीं कालाबरोबरच देशाची व विचारांची सपाट्याने प्रगती व उत्क्रांति होत आहे व धूर्त नोकरशाहीहि अपरिहार्य गोष्टी चाणाक्षपणे ओळखून आपल्या मगरमिठींतून, नाखुषीनें का होईना, लोकांचे थोडे थोडे न्याय्य हक्क हळूच सोडून देत आहे पण कौन्सिलाच्या कर्तृत्वशक्तीची तरफदारी करतांना याप्रमाणें काहीं विशेष भरीव गोष्टी लोकांपुढे येण्याची लोक अपेक्षा करतात सरकार विरुद्ध असतांना देखील, कौन्सिलातील लोकपक्षीय बहुमतापुढे मान वाकवावी लागून सरकारास मान्य करणे भाग पडलेल्या कोणत्याहि विशेष गोष्टी असल्यास त्याचा पाढावाचा असा लोकांचा सवाल आहे प्रिन्सेस प्रोटेक्शन बिल, मिठावरील कर, केनिया प्रकरण यासारख्या महत्त्वाच्या गोष्टी तर राहोतच, पण रॉयल सर्व्हिस कमिशन सारख्या गोष्टींत देखील नेमस्त लोकांच्या जाराच्या निषेधास सरकारनें मुळीच भीक न घालतां सदर कमिशनची नेमणूक केलीच व त्याच्या खर्चाकरितां बजटांत समाविष्ट केलेली तीन लाखांची रकम लेजिस्लेटिव्ह असेंब्लीने नामंजूर केली असतां, व्हाइसरायांनीं लेखणीच्या एका फटक्यासरशीं ती रकम बजटांत पुनरपि कायम केली, ही दिल्लीची गोष्ट तर राहू द्याच कारण कीं "दिल्ली तो बहोत दूर है" पण आमच्या मुंबईच्या कौन्सिलचा गोष्ट घेतल्यासहि सुपरिंटेंडेट कार्टरसारख्या एका गोरक्याच अधिकाऱ्याच्या कसूरीच्या गैरवर्तनाबद्दल शासन व्हावें ह्मणून कौन्सिलनें पास केलेल्या ठरावाची एखादी प्रतहि त्या साहेबाकडे पाठविण्याची तसदी सरकारने न घेता त्या ठरावास कागदाच्या चिटोऱ्या इतकीच किंमत देऊन तो फेकून दिला व उलट, त्या ठरावावर भाषण केलेल्या मि पेटिट यांच्याविषयीं तिरस्कार प्रदर्शित करण्याकरितां दुसऱ्या एका प्रसंगीं त्यांचे भाषण चालू असतां सर्व युरोपियन सभासद, (कार्यकारी कौन्सिलर ना हेवर्ड सुद्धा) कौन्सिल हॉल सोडून चालते झाले नोकरशाहीची बेलगामी वृत्ति अशारीतिने चालू असतांना, कौन्सिलातून प्राप्त झालेले हक्क भरीव असल्याबद्दल डॉ परांजपे त्यांची तरफदारी करतात! कौन्सिले काबीज करण्याकरितां त्यांत घुसण्याची इष्टानिष्टता कशीहि असो, कौन्सिलाच्या कर्तृत्वशक्तीबद्दल तरी आजकाल कोणाचीहि दिशाभूल होणे शक्य नाहीं

डा परांजपे आणखी असेहि ह्मणाले कीं — "आमच्या देशांत एका पक्षाचे लोक दुसऱ्या पक्षाच्या लोकांवर भलभलते हेतू लादतात व 'देशबुडवे' 'देशविघातकी' अशीं परस्परांस नांवें ठेवतात पण पाश्चात्य राष्ट्रांत असे प्रकार मुळींच होत नसून, तेथे निरनिराळ्या पक्षाच्या लोकांमध्यें समंजसपणा व परस्पर सहिष्णुता फार असते" असे त्यांनीं पाश्चात्यांचे गोडवेहि गाइले पण राजकीय मोक्ष पावलेल्या इंग्लंडसारख्या देशांत देखील लिबरल्, कान्सर्व्हेटिव्ह, लेबर वगैरे पक्षाचे लोक पार्लमेंटसारख्या शिस्तीच्या व नियमबद्ध ठिकाणींहि परस्परांस उघड शिव्याशाप देऊन कसें भांडतात याचें ताजें उदाहरण थोड्याच दिवसांपूर्वीं आह्मी पाहिलें आहे स्वातंत्र्यपदास पोंचलेल्या इंग्लंडची गोष्ट कशीहि असो पण स्वातंत्र्योन्मुख किंवा स्वराज्योन्मुख इतर राष्ट्रांत, आपमतलबानें, ढोंगी देशभक्तीनें, किंवा आकुंचित दृष्टीमुळें, अथवा मनोवृत्तीच्या भिन्नतेमुळें एका पक्षाचे लोक जेव्हा त्यांच्यापेक्षा पुढें जाऊं इच्छिणाऱ्या दुसऱ्या पक्षाच्या दृष्टीनें देशहितास विघातक असे कोणतेहि कार्य करतात त्यावेळीं त्यास दुसऱ्या पक्षाच्या लोकांकडून 'देशबुडवे' 'देशविघातकी' वगैरे ह्मणण्यात येते हें मनुष्यस्वभावास साहजिक आहे पण असले प्रकार पाश्चात्य राष्ट्रांत होत नाहींत ह्मणून अप्रस्तुतपणें सांगतांना ना परांजप्यांनीं वस्तुस्थितीविषयीं जें अज्ञान प्रदर्शित केलें त्याबद्दल त्यांची कीव केली पाहिजे एका वर्षापूर्वीं आपल्या देशाच्या स्वातंत्र्याकरितां खांद्यास खांदा भिडवून लढलेल्या आयरिश पुढाऱ्यांमध्ये फ्रीस्टेटवाले व रिपब्लिकवाले असे दोन पक्ष होताच एका पक्षाचा नायक कॉलिन्स या तरुण कर्तृत्ववान पुढाऱ्यास दुसऱ्या पक्षाच्या लोकांनीं अविचाराने ठार मारण्यापर्यंत जेथ अनिष्ट प्रकार घडतात तेथ पक्षभेदाची भावना तीव्र नाहीं ह्मणून त्यांची तारीफ डॉ. परांजप्यांनीं करावी ज्या पक्षभेदाच्या तीव्रतेस कॉलिन्ससारखा मोहरा बळी पडला ती असहिष्णुतेची भयंकर परमावधीच होय हे कोणीहि कबूल करील हिंदी लोकांच्या सत्त्वशील स्वभावामुळे इकडील पक्षभेद या थरास पोचत नाहींत हे हिंदीराष्ट्राचें सुदैवच मानले पाहिजे अशा सर्व गोष्टींकडे डोळेझांक करून पाश्चात्यराष्ट्रें सर्व सद्गुणांचीं माहेरघरे असल्याप्रमाणे त्यांची अवास्तविक तारीफ करतांना हे लोक पाश्चात्यांच्या नादानेंच दिपून जातात कीं काय ते कळत नाहीं!

आपला,

'सभय हजर असलेला'

ವೃತ್ತಸಾರ.

— ವಿಹಾರ ಹಾಗು ಒರಿಸಾ ಪ್ರಾಂತದ ಕಾಯಿದೆ ಕೌನ್ಸಿಲಿನಲ್ಲಿ ಜಿಲ್ಲಾ ಪ್ರಸಾರದ [illegible] ಪಾಸಾಗಿದ್ದು ಗವರ್ನರರು [illegible] ಮಂಜೂರಿಯಿತ್ತರು.

— ಬೆಳಗಾಂವ ಮುನಸಿಪಾಲಿಟಿಯವರು ಮುಂಬಯಿ ಗವರ್ನರರ ಆಗಮನವಾದಾಗ ಮಾನಪತ್ರ ಕೊಡಬೇಕೆಂಬ ಠರಾವು ಬಹುಮತದಿಂದ ಮಂಜೂರಾಗಿತ್ತಷ್ಟೇ. ಕಮೀಟಿಯು ತಯಾರು ಮಾಡಿದ ಮಾನಪತ್ರದ ಚರ್ಚೆಯು ಕಳೆದ ಬುಧವಾರ ತಾರೀಖು ೫ ನೇ ನಡೆದು ಸಾಮುದಾಯಿಕ ಗವರ್ನರರ ಸಹಾನುಭೂತಿಯನ್ನೂ, ಸ್ಥೈರ್ಯವನ್ನೂ ಕೊಂಡಾಡುವ ವಾಕ್ಯವು ಲೋಪವಾಗಬೇಕೆಂದು ಹೇಳಲಾಯಿತು. [illegible] ಮಾನಪತ್ರವನ್ನು ಅರ್ಪಿಸಬಾರದೆಂದು ಒಂದೇ ಕೇಳುತಲ [illegible] ವಾಕ್ಯವನ್ನು ಲೋಪ ಮಾಡಿದ ಮಾನಪತ್ರವನ್ನು ನಾವು ಗವರ್ನರರು ಸ್ವೀಕರಿಸಲಿಕ್ಕಿಲ್ಲೆಂದು ಬಲ್ಲವರು ಹೇಳುತ್ತಾರೆ.

— ಮುಂಬಯಿಯ ಸ್ವತಂತ್ರ ವಿಚಾರಿಗಳು ಖ್ಯಾತಿ ಹೊಂದಿದ ಶ್ರೀ ನಟರಾಜನವರು ಕೆನಿಯಾ [illegible] ದಿಂದ ಉಂಟಾದ ಸಂತಾಪವನ್ನು ವ್ಯಕ್ತಗೊಳಿಸಿ, ಸರಕಾರವು ಕೊಟ್ಟ ಜೆ ಪಿ ಬಿರುದನ್ನು ಮುಂಬಯಿ ಸರಕಾರಕ್ಕೆ ಪರತ ಕಳಿಸಿರುವರು. ಸೇಲಮ ಮುನಿಸಿಪಾಲಿಟಿಯು ಸಾಮ್ರಾಜ್ಯ ದಿನವನ್ನು ಹಬ್ಬದ [illegible] ದಿನಗಳಿಂದ ತೆಗೆದಿರುವದು.

— ಮುಂಬಯಿಯ ಶ್ರೀ ಕರ್ನಾಟಕ [illegible] ನಾಟಕವನ್ನು ಕಳೆದ ಆಗಸ್ಟ [illegible] ಗೆ ಅಭಿನಯಿಸಿ, ೯೧೩ ರು. ೧೨ ಆಣೆಗಳನ್ನು ದಕ್ಷಿಣ ಕನ್ನಡ ಜಿಲ್ಲೆಯೊಳಗಿನ ನಿರಾಶ್ರಿತರಿಗೆ ಕಳುಹಿಸಿದರಲ್ಲದೆ ಸುಮಾರು [illegible] ೦ ರೂಪಾಯಿಗಳನ್ನೂ ಒಟ್ಟು [illegible] ಸಿದರು.

ಸಾಭಾರ ಸ್ವೀಕಾರ

ಜಯಕರ್ನಾಟಕ—[illegible] ಹುಣ್ಣಿವೆ ಸಂಚಿಕೆ ಸಂಪಾದಕ— [illegible] ವೆಂಕಟರಾಯರು, ಸಾಧನಕೇರಿ, ಧಾರವಾಡ. [illegible] ಅಂಚೆ ವೆಚ್ಚ ಸೇರಿ ರೂ ೫-೮-೦

ಶ್ರೀಕೃಷ್ಣಸಂದೇಶ ನೂಲು ಹುಣ್ಣಿವೆ ಸಂಚಿಕೆ ಸಂಪಾದಕ— [illegible] ಬಾಗಲಕೋಟೆ ವಾರ್ಷಿಕ [illegible] ಅಂಚೆ ವೆಚ್ಚ ಸೇರಿ ರೂ ೩-೬-೦

ಆರೋಗ್ಯಸಾರ— ಅನುವಾದಕ, [illegible] ರಾಮದಾಸ [illegible] ನರಸಿಂಹಯ್ಯ, ಪ್ರಕಾಶಕ, ಬಿ ವಿ ಪ್ರಿ [illegible] ಬೆಲೆ ೧೨ ಆಣೆ.

ಆರೋಗ್ಯ ಭಿಕ್ಷೆ— ಜುಲೈ ತಿಂಗಳಿನ ಸಂಚಿಕೆ ಸಂಪಾದಕ— [illegible] ರಾಮರಾವ, ಎಮ್ ಎಲ್ [illegible] ಶಂಕುಕಟ್ಟೆ ಬೀದಿ ಮದರಾಸು ವಾರ್ಷಿಕ ಅಂಚೆವೆಚ್ಚ ಸೇರಿ ರೂ ೧-೮-೦

ತರುಣಾಭ್ಯ— (ಮರಾಠಿ ಮಾಸಿಕ) [illegible] ಆಗಸ್ಟ [illegible] ಲೋಕಮಾನ್ಯರ ಸಂಚಿಕೆ ಸಂಪಾದಕ [illegible] ರಾಜಾರಾಮ [illegible] ಸಮಾದೇವಿ [illegible] ವಾರ್ಷಿಕ ಚಂದಾ ಅಂಚೆ ವೆಚ್ಚ [illegible] ೨-೬-೦, ವಿದ್ಯಾರ್ಥಿಗಳಿಗೆ [illegible] ರೂಪಾಯಿ.

The [illegible] **lth**—Monthly August issue [illegible] d by Dr U Rama Rau, M [illegible] 323, Thambu Chetty Stre[illegible] dras Annual subscription Rs [illegible] -0 only.

"ಸಂಶಯಾತ್ಮಾ ವಿನಶ್ಯತಿ."

ತಿಂಗಳಿಗೆ ರೂಪಾಯಿ ೧೦೦ರಿಂದ ೫೦೦ರ ವರೆಗೆ ಗಳಿಸಿರಿ.

ಬೇಕಾದಲ್ಲಿ ಸುಲಭವಾಗಿ ಗಳಿಸಿರಿ.

ರೂಪಾಯಿ ೧೯-೧೨-೦ ಖರ್ಚುಮಾಡಿರಿ ಮತ್ತು ಸ್ವತಂತ್ರರಾಗಿರಿ.

ಸಬಕಾರವು ಪ್ರತಿಯೊಬ್ಬ ಮಾನವನಿಗೆ ಅವಶ್ಯವಿದ್ದ ವಸ್ತುವು. ಅವನು ಬೇಕಾದರೆ, ಶ್ರೀಮಂತನಿರಲಿ, ಬಡವನಿರಲಿ, ಹಳ್ಳಿಗನಿರಲಿ, ಪಟ್ಟಣಿಗನಿರಲಿ, ಪಾಶ್ಚಾತ್ಯ ಮಾದರಿಯ ಸಬಕಾರವನ್ನು ತಯಾರಿಸುವ ನಮ್ಮ ಕ್ರಮವು ಅತಿ ಉತ್ತಮವೆಂದು ಖ್ಯಾತಿಹೊಂದಿದೆ. ಈ ಕ್ರಮದಿಂದ ಶ್ರೇಷ್ಠ, ಕನಿಷ್ಠ ಪ್ರತಿಯ, ಮೈಗೆ ಹಚ್ಚುವ ಯಾ ಅರಿವೆಗೆ ಹಾಕುವ, ಪರಿಮಳದ ಹಾಗು ಬಣ್ಣಗಳ ಸಬಕಾರವನ್ನು ಸುಲಭವಾಗಿ ಯಾರೂ ತಯಾರಿಸಬಹುದು. **ಈ ಕ್ರಮಕ್ಕೆ ಬೆಂಕಿಯ ಅವಶ್ಯಕತೆಯಿರುವದಿಲ್ಲ.** ನಮ್ಮ ವಿದ್ಯಾರ್ಥಿಗಳು ಯತ್ನಮಾಡುವಾಗ ನಾವು ಬಹು ಜಾಗ್ರತೆಯಿಂದ ಅವರನ್ನು ನಿರೀಕ್ಷಿಸಿ ಅವರಿಗೆ ಬೇಕಾದ ಮಾಹಿತಿಯನ್ನು ಪೂರೈಸುತ್ತೇವೆ. ಈ ಬಗೆ ನಮಗೆ ಅನೇಕರು ಶಿಫಾರಸು ಪತ್ರಗಳನ್ನು ಕಳುಹಿಸಿರುವರು. ಈ ಪೂರ್ಣ ಕ್ರಮವನ್ನು ರೂ ೧೯-೧೨-೦ಕ್ಕೆ ವ್ಹಿ ಪಿ ಪಿ ಮುಖಾಂತರ ಕಳಿಸುವೆವು. ಈ ಕ್ರಮವು ನಿಯಮಿತ ಮಂದಿಗಳಿಗೆ ಮಾತ್ರ ಕಳಿಸಲ್ಪಡುವದು.

ನಿರಾಶೆ ಹೊಂದಬಾರದೆಂದು ಇಚ್ಛೆ ಇದ್ದವರು ಕೆಳಗಿನ ವಿಳಾಸಕ್ಕೆ ಕೂಡಲೆ ಬರೆಯತಕ್ಕದ್ದು.

ಇಂಟರನೆಶನಲ್ ಬಿಝಿನೆಸ್ ಕೊರ್ಪೊರೇಶನ್,

(ಎಫ್) ಡಿಪಾರ್ಟಮೆಂಟ, ೫೩೫೭, ಗವಳಿಗುಡಾ, ಹೈದರಾಬಾದ

(ದಕ್ಷಿಣ ಹಿಂದುಸ್ಥಾನ)

International Business Corporation,
Dept. (F) *5357, Goualiguda,* **Hyderabad.** *(Dn.)*

ಮನೆ ಕಟ್ಟುವವರಿಗೆ ಸುಸಂಧಿಯು.



ಮೇಲಂತಸ್ತಿಗೆ ಹೋಗಿ ಬರುವದಕ್ಕೆ ನಾನಾ ತರ ನಕ್ಷೆ ಕೊರೆಯಲ್ಪಟ್ಟ ಬೀಡಿನ ಕಟಾಂಜನಗಳೂ, ಹೂದೋಟ, ಒಳಂಗಳ, ಉಪ್ಪರಿಗೆ, ದಿವಾನಖಾನೆ ಮೊದಲಾದ ಸ್ಥಳಗಳಲ್ಲಿ ವಿಶ್ರಾಂತಿಗೊಳ್ಳುವದಕ್ಕೆ ತಕ್ಕ ಬಾಕುಗಳೂ ಕಿರ್ಲೋಸ್ಕರ ಕಾರಖಾನೆಯಲ್ಲಿ ಸ್ವಸ್ತ ದರದಿಂದ ದೊರೆಯುತ್ತವೆ. ಪತ್ರ ಬರೆದು 'ಟಿ' ಕ್ಯಾಟಲಾಗು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ.)

ಲೋಕಾನುಕೂಲತೆಯಾಗಬೇಕೆಂದು, लोकानुकूलता व्हावी म्हणून,

ನಮ್ಮ 'ಸ್ಟಾರ ಆಫ್ ಕೆನರಾ' ಮುದ್ರಣಾಲಯದಲ್ಲಿ

आमच्या 'स्टॉर ऑफ केनरा' मुद्रणालयांत

ನವೀನ ವ್ಯವಸ್ಥಾ !! ಹೊಸ ಏರ್ಪಾಟು !! नवीन व्यवस्था !!

'STAR OF KANARA' PRESS, KUMTA.

ನಮ್ಮ ಮುದ್ರಣಾಲಯದಲ್ಲಿ ಲೋಕಾನುಕೂಲತೆಗಾಗಿ ಮಾಡಿದ ಹೊಸ ಮಾರ್ಪಾಟುಗಳ ವಿವರ:—

ಕನ್ನಡ, ಮರಾಠಿ, ಇಂಗ್ಲಿಷ, ಗುಜರಾಥಿ ಭಾಷೆಗಳಲ್ಲಿ

೧. ಮನೋಹರ ಮುದ್ರಣ. ೨. ಸಕಾಲ ಮುದ್ರಣ. ೩. ಸುಲಭ ದರ

ಸಂಕ್ಷೇಪತಃ ಹೇಳಬೇಕಾದರೆ —

ಅಗ್ಗ ಅಚ್ಚು! ಅಂದ ಅಚ್ಚು!! ಅಚ್ಚುಕಟ್ಟು ಅಚ್ಚು!!!

ತರತರದ ಬಣ್ಣಗಳಿಂದ ಸುಶೋಭಿತವಾಗಿ ಮುದ್ರಣ ಮಾಡಿಕೊಡುವದಲ್ಲದೆ, ಫೋಟೋ ಬ್ಲೋಕುಗಳನ್ನೂ ಮುದ್ರಿಸುವ ಏರ್ಪಾಟು ಮಾಡಲಾಗಿದೆ.

ಜರೂರಾಯಿತಿ ಜನರಿಗಾಗಿ—

ಬೇಕಾದ ಛಾಪೆ ಕೆಲಸದ ನಮೂನೆಯನ್ನು ಟಪಾಲದ್ವಾರಾ ಎಡ್ವಾನ್ಸ ಸಹಿತ ಕಳಿಸಿದ್ದಲ್ಲಿ, ಯಥಾಪ್ರತಿ ಮುದ್ರಣ ಮಾಡಿ ೧–೨ ದಿವಸಗಳಲ್ಲಿಯೇ ವ್ಹಿ. ಪಿ. ಯಿಂದ ಕಳಿಸುವ ವ್ಯವಸ್ಥೆಯೂ ಮಾಡಲ್ಪಟ್ಟಿದೆ. ಬ್ಯಾಂಡಿಂಗ ಕೆಲಸವೂ ಅಚ್ಚುಕಟ್ಟಾಗಿ ಮಾಡಿ ಕೊಡಲ್ಪಡುವದು. ಒಮ್ಮೆ ಆರ್ಡರು ಕಳುಹಿಸಿ, ನೋಡಬಹುದಲ್ಲವೇ?

ಇದಲ್ಲದೆ, ನಮ್ಮಲ್ಲಿ ಗ್ರಂಥ, ಪುಸ್ತಕ, ಮಾಸಪತ್ರಿಕೆ, ಪಂಚಾಂಗ ಮುಂತಾದ ವಿವಿಧ ಮುದ್ರಣ ಕೆಲಸವು ಸುಲಭ ದರದಿಂದ, ತಕ್ಕ ಹೊತ್ತಿಗೆ ತಯಾರಿಸಿ ಕೊಡಲ್ಪಡುವದು.

ಮಾರಾಟಕ್ಕೆ ಸಿದ್ಧ.

ಕೋರ್ಟು ಕಚೇರಿಗಳಲ್ಲಿ ವಕೀಲರಿಗೆ ಬೇಕಾಗುವ ವಕಾಲತ ಅಮುಲಜಾರಿ, ಸಾಕ್ಷಿಪಟ್ಟಿ, ಯಾದಿ, ನಕಲು ಅರ್ಜಿ, ದಸ್ತೈವಜು ಪರತ ಬೇಡುವ ಅರ್ಜಿ, ಜ್ಯಾಹಿರಿ ಮುಂತಾದ ಎಲ್ಲ ತರದ ಫಾರ್ಮುಗಳೂ ಶಿಪ್ಪಿಂಗ ಬಿಲು, ಸತಮಿ, ಬಿಲ್ ಆಫ್ ಎಂಟ್ರಿ ಮೊದಲಾದ ಕಸ್ಟಮ್ ಫಾರ್ಮುಗಳೂ ಮಾರಾಟಕ್ಕೆ ದೊರೆಯುತ್ತವೆ.

ವಿಶೇಷ ಮಾಹಿತಿ ಪತ್ರದ್ವಾರಾ ಯಾ ಮೊಕ್ತಾ.

ಪತ್ತೆ:— ಕೃಷ್ಣರಾವ ಕೇಶವ ಶೇಣವಿ, ಹೆಗಡೇಕರ,
ಮಾಲಕ,
'ಸ್ಟಾರ ಆಫ್ ಕೆನರಾ' ಪ್ರೆಸ್, ಕುಮಟಾ.
(ಉ. ಕಾನಡಾ.)

Printed and Published by Krishnarao Keshav Shenvi (Editor) at his Star of Kanara Press, Kumta

Reg. No. B 1270

Thursday, 27th September 1923.

ವರ್ಷ ೭.

ಕಾನಡಾವೃತ್ತ.

THE KANARA NEWS.

ಸಂಚಿಕೆ ೫೦.

ಪತ್ರಿಕಾ ವರ್ಗಣಿ:-

ಕುಮಟೆಯಲ್ಲಿ ಆಗಾವು ರೂಪಾಯಿ 3-4-0.

ಪ ನೆಯಾರ್ದರಿಯಿಂದ ರೂ. 3-0-0

ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಪ್ಯಾಕಾ ಟೈಪಿನ(೧೫ ಎಮ್‌ಅಷ್ಟು) ೮ ಸಾಲುಗಳ ವರೆಗೆ ರೂ. 1-0-0 ಅವಂತ್ಯ ಪ್ರತಿ ಸಾಲಿಗೆ 0-2-0 ಬೇಕಾಗಿಹ ಸಾಲು ಎಷ್ಟು ಕೂಡ ಇರುವದರ ಆ ಮೂನೆ ಹಿಂದೆ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಖಾಸ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಯಾ ಸಮಕ್ಷ ತಿಳಿಸಲ್ಪಡುವವು.

(ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖ ೨೭ ಮಾಹೆ ಸಪ್ಟಂಬರ ಸನ್ ೧೯೨೩ ನೇ ಇಸವಿ.)

हिंदुस्थानातील रहिवाशांस उपयोगी हिंदुस्थानची हवा त्यांममार्गीच हें औषध हिंदुस्थानातील लोकास ज्यास्त फायदेशीर आहे

द्राक्षासव- { दीड रत्तलची किंमत २ रुपये;

रामबाण औषधें —

सर्दि घालविणारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

— पिण्यास रुचिकर.

क्याटलाग मागवा,

...ड फार्मास्युटिकल वर्क्स लिमिटेड, मुंबई नं. १३

GLAXO:- FRESH STOCK. NEW BRAND. *a food for infants and invalids.*

almegh :- *Well-tried remedy in Liver complaints especially of children.*

yrup of Vasaka :- *Highly efficacious in cold, cough, crough and bronchitis.*

Besides we have in stock other ...ant medicines, Thermometres, ...cerine Syringes etc.,

...ders will be executed by V. P. P.

The New Emporium

Honavar. (N. Kanara.)

ಡಾ। ಮಾಸೂರಕರರ

ಸುಧಾಂಜನ.

ಅಂಜನುಗಳಿಗೆಲ್ಲ ಅರಸು.

ತಲೆಶೂಲಿ, ವಾತ ವೇದನೆ, ಕೆಮ್ಮು, ಹಲ್ಲು ನೋವು ಇತ್ಯಾದಿಗಳಿಗೆ ಕ್ಷಿಪ್ರ ಗುಣಕಾರಿ ವಸ್ತು. ಬೆಲೆ 2 ಆಣೆ ಮಾತ್ರ. ವ್ಯಾಪಾರಿಗಳಿಗೆ ವಿಶೇಷ ಸವಲತು ಹೆಚ್ಚಿನ ಮಾಹಿತಿ ಏಜಂಟರಿಂದ.

ಏಜಂಟ್ಸ್:— **ನಾಗಕೇಟ್ಟಿ ಬ್ರದರ್ಸ್,**
ಸುಧಾಂಜನ ಡಿಪೋ,
ಕುಮಟಾ. (ಜಿಲ್ಲಾ ಕಾನಡಾ)

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ವಿಷಯಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ.

ಈ ವರೆಗೆ ಪ್ರಕಟವಾದ ಪುಸ್ತಕಗಳು.

(೧-೨) ಗ್ರೀಸ ದೇಶದ ಗಾಂಧಿ. (ಸಾಕ್ರೆಟೀಸ) (೩) ಸ್ವಾತಂತ್ರ್ಯಸಾಧನೆ. (೪) ಗುರು-ಹಿರಿಯರೂ, ಬಂಧು-ಭಗಿನಿಯರೂ. (೫) ರಾಷ್ಟ್ರೀಯ ಶಿಕ್ಷಣ. (೬) ಸದ್ಗುಣಮಂದಿರ. (ಭಾಗ ೧.) (೭) ಸ್ವರಾಷ್ಟ್ರ ಧರ್ಮ. (ಅಸಾಮಿನ ಪ್ರಶ್ನೆ) ಇವಿಷ್ಟು ಪ್ರಕಟವಾಗಿದ್ದು, ೫ ಆಣೆಗೆ ೩ಂದರಂತೆ ದೊರೆಯುತ್ತವೆ. ವರ್ಗಣೀದಾರರಿಗೆ ಹಿಂದಿನ ಬೇಕಾದ ಪುಸ್ತಕಗಳು ೪ ಆಣೆಗೆ ೩ಂದರಂತೆ ದೊರೆಯುವವು. ೬ ಪುಸ್ತಕಗಳಿಗೆ ಕೂಡಿ ೧॥ ರೂಪಾಯಿ ಮಾತ್ರ. ಅಂಚೆವೆಚ್ಚ ಬೇರೆ. ದ್ವಿತೀಯ ವರ್ಷ ಪ್ರಾರಂಭ. ಅನುಕ್ರಮವಾಗಿ ಮಾರ್ಚ, ಮೇ, ಜುಲೈ, ಸಪ್ಟಂಬರ, ನವಂಬರ, ಜನವರಿ ೧೫ ನೇ ತಾರೀಖಿಗೆ ಒಂದೊಂದು ಪುಸ್ತಕ ಹೊರಡುವದು. ವಾ. ವ. ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ.

ವಾ. ಅ. ಹೊದ್ಕೆ,
ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ.

ಎಲ್ಲ ತರದ ಜ್ವರಗಳಮೇಲೆ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ, ಶೈತ್ಯ, ಬಂಗಲಿ, ಅಥವಾ ದೂಷಿತ ಹವೆಯಿಂದ ಬರುವ ಸಾದಾ ಬಿಮಾರೀ ಅಥವಾ ಇತರ ಜ್ವರಗಳೂ, ಇನಪ್ಲ್ಯುಎಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನ್ಯಾನದ ದುಷ್ಪರಿಣಾಮರಹಿತ ಕೇವಲ ವನಸ್ಪತಿಯ ಈ ಮದ್ದು ಸೇವಿಸಿದರೆ ಅಶಕ್ತತೆಯಾಗದೆ, ಬೆವರು ಬಂದು ಜ್ವರ ಇಳಿಯುತ್ತದೆ. ಹಾಗು ರೋಗಿಯು ತರಿತ ವಾಸಿಯಾಗುತ್ತಾನೆ.

೭ ಔಂಸ ಬಾಟ್ಲಿ ಕಿಂಮತ ರೂ. ೧-೦-೦.

ಇದರ ಹೊರತು ಇನ್ನೂ ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ, ಉಚ್ಚ ಪ್ರತಿಯ ಕೋಲನ ವಾಟರ, ಲವೆಂಡರ ಇತ್ಯಾದಿ ಸಾಮುಗ್ರಿಗಳು ಅಲೆಂಬಿಕದ ಕಾರಖಾನೆಯಲ್ಲಿ ತಯಾರಾಗುತ್ತವೆ. ಮರಾಠಿ ಕೆಟಲಾಗು ತರಿಸಿರಿ.

ಅಲೆಂಬಿಕ್ ಕೆಮಿಕಲ್ ವರ್ಕ್ಸ್,
ಕಂಪನಿ, ಲಿಮಿಟೆಡ್.
ನಂ. ೫೦, ಪ್ರಿನ್ಸೆಸ್‌ಸ್ಟ್ರೀಟ, ಮುಂಬಯಿ.

अलेंबिक केमिकल वर्क्स कं० लि०
नं. ५० प्रिन्सेस स्ट्रीट मुंबई.

ಶುದ್ಧ ಖದ್ದರ್ ರೇಶ್ಮೆ ಮಡಿಗಳು.

ಸುಲಭ ಕ್ರಯಕ್ಕೆ ಖಾತ್ರಿಯಾದ ಎಲ್ಲಾ ರಂಗುಗಳಲ್ಲಿಯೂ ಈ ಕೆಳಗೆ ಬರೆದ ಕ್ರಯಕ್ಕೆ ದೊರೆಯುವದು.

೧೮ ಮೊಳ ಉದ್ದ ೨॥ ಅಗಲ ರೂ. ೨೭ ರಿಂದ ೨೫ ವರೆಗೆ
೧೬ „ „ ೨॥ „ „ ೨೦ — ೩೦ „
೮ „ „ ೨॥ „ „ ೯ — ೧೫ „
೬ „ „ ೨॥ „ „ ೭ — ೧೧ „

S J N. & CO
BENARES CITY

ಅಂಗಿ ಬಟ್ಟೆಗಳು ೧೮ ಮೊಳ × ೨ ಮೊಳ ರೂಪ್ಯ ೧೮ ರಿಂದ ೩೦ವರೆಗೆ. ಕೋಟು ೧೨ ಮೊಳ ×೧॥ ಮೊಳ ಅಗಲ ರೂಪ್ಯ ೧೦ ರಿಂದ ೧೫ ವರೆಗೆ ಜೀನ್‌ಖಾನ್ ೧೪ ಮೊಳ × ೨ ಮೊಳ ರೂ. ೨೪ ರಿಂದ ೩೫ ವರೆಗೆ ಇವುಗಳಲ್ಲದೆ ಶಾಲ ಪೀತಾಂಬರ ಕಾಶ್ಮೀರ್ ಶಾಲು, ರುದ್ರಾಕ್ಷಿ, ಜಾಗಂಟೆ, ಶಾಳ, ಕಶ್ಮೀರ್ ದಾನಿ, ಆಟದ ಸಾಮಾನುಗಳು, ದೇವರ ಮತ್ತು ಗಾಂಧಿ ಮುಂತಾದವರ ಪಟಗಳಿರುವ ಉಂಗುರಗಳ ಮತ್ತು ಇನ್ನೂ ಅನೇಕ ಸಾಮಾನುಗಳ ಕ್ಯಾಟಲಾಗ್ ಇನಾಂ.

ವಿಳಾಸ:— ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. (ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾವುದೋ.

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅತ್ಯಾವಶ್ಯಕವಾದ ಸಹಕಾರಿಯಾಗಿರುತ್ತದೆ ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ಕಡಿಮೆಯಾಗಿ ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ಹಚ್ಚತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಹಲವಿಧ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ "ಸರ್ಟಿಫಿಕೇಟು ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ — ಸೀಸೆಗೆ ರೂಪಾಯಿ 1 0 0,. ಸೀಸೆ 3ಕ್ಕೆ ರೂಪಾಯಿ 2-10-0, ವಿ.ಪಿ. ಖರ್ಚ 0 14 0

ಅತಿ ಮನೋಹರವಾದ ಸುರಭಿಯು !

ಒಟ್ಟೋ ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ, ಕೋಮಲ ಪರಿಮಳವುಳ್ಳ ಅತ್ಯುತ್ತಮವು ಚನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ಭಟ್ಟಿಸಿದವಾದುದು ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕ ವಿಲ್ಲವು ಒಂದೇ ಒಂದು ಹನಿಯನ್ನು ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಆವಿರ್ಭವಿಸಿದಂತಾಗುವದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0 1 ಡ್ರಾಮಿನ (ನಡುವಿನ) ಸೀಸೆ 1 ಕ್ಕೆ 0-12-0 ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0 ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ ದಿಲ್ ಬಹಾರ್ ಪರಿಮಳದ ಕಡ್ಡಿಗಳು ಡಜನ್ 1 ಕ್ಕೆ 0 12 0

Address - **The Anglo Indian Drug & Chemical Co,**
16, Market, **BOMBAY. 2.**

ಆರೋಗ್ಯಚಂದ್ರಿಕೆ.

ಈ ಪತ್ರಿಕೆಯ ಸಂಪಾದಕರು ಮದ್ರಾಸಿನ ಡಾಕ್ಟರ್ ಯು ರಾಮರಾವ್, ಎಮ್ ಎಲ್ ಸಿ ಯವರು. ಈ ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಪ್ರಸಿದ್ಧಿಸಿದ

ಒಂದು ಸಚಿತ್ರ ಮಾಸಪತ್ರಿಕೆ

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ

ಆರೋಗ್ಯಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು

ಹೆಲ್ತ್ ಎಂಬ ನಮ್ಮ ಇಂಗ್ಲಿಷ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸಿ ಪ್ರಥಮ ಸಂಚಿಕೆಯು ಈ ತಿಂಗಳಲ್ಲಿ ಪ್ರಕಟವಾಗಿರುವದು

ಅಂಚೆಯವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂಪಾಯಿ ೧—೮—೦ ಬಿಡಿ ಪತ್ರಿಕೆ ಒಂದಕ್ಕೆ ೦—೩—೦

ಚಂದಾದಾರರಾಗುವವರು ವಿ ಪಿ ಮೂಲಕವಾಗಿ ತರಿಸಿಕೊಳ್ಳುವದರಿಂದಲೂ ಹಣವನ್ನು ಮುಂಗಡವಾಗಿ ಕಳುಹುವದು ಲಾಭಕರ

ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯಚಂದ್ರಿಕೆ' ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು ಪತ್ರವ್ಯವಹಾರದ ವಿಳಾಸ —

ಮೆನೇಜರ್,

'ಹೆಲ್ತ್' ಅಥವಾ

'ಆರೋಗ್ಯಚಂದ್ರಿಕೆ' ಆಫೀಸ.

೩೭೮, ತಂಬುಚೆಟ್ಟಿ ಬೀದಿ, ಮದರಾಸ್

ಮೂರ್ತಿಗಳು ಬೇಕೋ?

ನಮ್ಮಲ್ಲಿ ಬಂಗಾರ, ಬೆಳ್ಳಿ, ಪಂಚಧಾತು, ಹಿತ್ತಾಳಿ ತಾಮ್ರ ಮತ್ತು ಕರೆಕಲ್ಲಿನ ಮೂರ್ತಿಗಳೂ, ಇದಲ್ಲದೆ ಬಾಣಲೇರಗಳೂ, ಪ್ರಭಾವಳಿಗಳೂ ಈಶ್ವರ ಮುಖವಟಗಳೂ, ನಾಗಾಭರಣಗಳೂ, ಕವಚುಗಳೂ ಮತ್ತು ಯಾವದೇ ತರದ ಪ್ರತಿಮೆಗಳೂ ನಮ್ಮಲ್ಲಿ ಯೋಗ್ಯ ದರಕ್ಕೆ ಮ ಯೋಗ್ಯ ಹೊತ್ತಿಗೆ ಮಾಡಿ ಕೊಡಲ್ಪಡುವವು ಬೇಕಾದವರು ಪತ್ರವ್ಯವಹಾರ ಮಾಡಿ ಯಾ ಸಮಕ್ಷ ಬಂದು ದರವಾರ ತಿಳಕೊಳ್ಳಬಹುದು

ಪತ್ತೆ —**ನಾರಾಯಣ ಹನಮಯ್ಯ ಶೇಟ್,**

ಗುಡಗಾರ, ಗುಜರಗಲ್ಲಿ, ಕುಮಟಾ.

(ಉ ಕಾನಡಾ)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧ ರಾಗದ ಕೈಪೆಟ್ಟಿಗೆ ಕಿಂ ೩೮, ೪೦, ೪೫, ೫೦, ೬೦

೨ „ ಕಾಲು ಪೆಟ್ಟಿಗೆ ಕಿಂ ೩೫, ೭೫, ೧೪೦, ೧೭೫

೩ ತಬಲೆ ಜೋಡಿ ಕಿಂ ೧೩ ೧೫ ೧೮ ೩೦

೪ ಹಾರ್ಮೋನಿಯಮ ಗ್ಯಾಡ ಕಿಂ ೧, ತಬಲೆ ಗ್ಯಾಡ ಕಿಂ ೧॥ ೪

ವಿಶೇಷ ಮಾಹಿತಿ ಬಗ್ಗೆ ಸವಿಸ್ತರವಾಗಿ ಪ್ರಕಟಿಸಿ ಕೊಡುವೆವು

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡತಕ್ಕದ್ದು

ಪತ್ತೆ – **ಗೋಪಾಳ ಸಖಾರಾಮ ಆಣಿ ಕಂಪನಿ,** ನಂ ೩೬೦

ಕಾಳಬಾದೇವಿ ರೋಡ್, ಮುಂಬಯಿ.

AN EXPLANATION.

TO THE EDITOR OF THE 'KANARA NEWS.'

Sir,

I shall be thankful to you if you would kindly publish the following in your paper.

In offering myself as a Candidate for election to th Bombay Legislative Council at the suggestion of many respectable and leading gentlemen of various shades of opinion who are deeply and sincerely interested in the welfare of this district, I was solely actuated by a genuine desire to serve my district in the hope that I might spend my retirement and leisure in the service of its people. In wishing to go to the Council as the people's representative, I have no personal advancement to seek and no axe of my own to grind. And at this time of my life, I can have no other ambition than of leading a life of public usefulness I have been touring in the district and addressing the voters with the intention of educating the electorate regarding their duties and responsibilities Nowhere have I asked the voters to give their votes to me, having always asked them to exercise their independent judgment and choose a person whom they consider most fit to be their representative If their choice ultimately falls on me I shall of course strive my best to justify their confidence If, however, they choose any other Candidate as better fitted to be their representative, I shall very cheerfuly accept their decision — cheerfully, because I shall have the satisfaction of having done my duty by them.

What strikes me, however, as extremely unfair is that, attempts are made in certain quarters to prejudice my Candidature by unfounded allegations, ingenious insinuations and perhaps deliberate misrepresentation of facts. In several, almost successive issues of your paper, remarks after remarks appear in some shape or other, sometimes giving a distorted account of my speeches, sometimes imputing to me statements which I did not make and sometimes insinuating sarcasms which I do not deserve Of course, having come out into the public as a candidate, I do not deny that the public as well as the press are entitled to make fair and bonafide comments on my public speeches and actions No doubt in war everything is fair, but that is so because a war is between two enemies In the present case however, I do not think I have any enemies. Besides an election is not a war, nor even a scramble Each of the Candidates has to do his best to win the confidence of the electorate by all fair and legitimate means And it is for the electorate to judge and choose between them Indeed the press has also a right to guide the electors by voicing real public opinion. But it is a recognized principle that in doing so the press should not over step the bounds of fairness, otherwise, the dignity of journalism would be degraded

I have never made any secret of the circumstance that I am a retired Government Servant In fact even my first election manifesto made it sufficiently clear, whether by reason of my being a retired Government Servant, I am incapable of displaying independence and fighting in the Council for the people of my district, it is for the electorate to decide But whether it is fair to harp upon the same theme time and again and indulge in prejudicial insinuations upon facts which did not exist, I shall leave it to you and to the public to judge

I have not the least desire to enter into a long or repeated discussion regarding every little or trifling insinuation or misrepresentation emanating from quarters which find pleasure in them For I do not grudge them, such pleasure as I have patience enough to treat such matters as party politics But I cannot in fairness to myself, sit silent over the insinuation flung at me in the paragraph which appeared in the last issue of your paper referring to the meeting of the Flood Relief Committee held in the local Taluka Kuchery on the morning of 12th instant But even then I wish to strictly confine myself to a mere statement of bare facts concerning that meeting and leave it to your readers to draw their own inferences

The following are facts—

After an absence for over a fortnight I returned to Kumta on the evening of 11th inst. The same day late at night I received a call from the Mamlatdar to be present at the Taluka Kuchery the next morning at the distribution of money to some of the distressed. Accordingly, I went to the Taluka Kuchery the next morning. I found there already present some members of the Relief Committee and Rao Bahadur Coimbatore The principal chair was vacant. On my arrival there I was asked to occupy the chair which I did being the Chairman of the Relief Committee On my taking the chair, one of the members of the Committee drew my attention to the resolution passed at the meeting of the Relief Committee on the 9th inst. during my absence Under that resolution the Mamlatdar had been asked to "call for detailed reports immediately from the affected villages whether there are any immediate needs of the people which are not yet relieved, and that *he is empowered to distribute the money out of the funds collected for the relief of such emergent need*" The same meeting of the 9th inst. had also resolved that the reports called for from the Mamlatdar would be considered at the next meeting to be called after a fortnight After having come to know of these resolutions, I asked the Mamlatdar what he proposed to do that day Thereupon he stated that while his reports would be duly submitted in time he wished to make a distribution for immediate needs of some of the distressed under the authority vested in him by the resolution of the meeting of the Committee held on the 9th inst. A note was made to that effect, and the Mamlatdar determined the amount to be paid to each individual and asked me to make the actual payment myself which I did.

It will, I hope, be clear from the above facts whether the resolution of the 9th inst was cancelled on the 12th or whether the action taken by the Mamlatdar on the 12th was only in consonance with the terms of that resolution

KUMTA 23-9-23	*V. V. Kalyanpurkar,* RETIRED JUDGE, (Small Causes Court)

— ದಿಲ್ಲಿಯಲ್ಲಿ ಶ್ರೀ ನರಸೋಪಂತ ಕೇಳಕರರವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತೀಯ ಸಂಸ್ಥಾನಿಕರ ಪ್ರಜಾ ಪರಿಷತ್ತು ಕಳೆದ ತಾ ೧೬ ನೇ ಶನಿವಾರ ರಾತ್ರಿ ನೆರೆಯಿತು. ಶ್ರೀ ಕೇಳಕರರವರು ಹಿಂದೀ ಸಂಸ್ಥಾನಿಕರ ಅಧಿಕಾರಿಗಳಿಂದಾಗುವ ದೋಷಗಳನ್ನು ಚರ್ಚಿಸಿ, ಸಂಸ್ಥಾನಗಳಲ್ಲಿ ಜವಾಬದಾರ ಸ್ವರಾಜ್ಯ ಸ್ಥಾಪನೆಯ ಪ್ರಶ್ನೆಯ ಬಗ್ಗೆ ಚರ್ಚೆ ನಡೆಸಲು, ಅಖಿಲ ಭಾರತೀಯ ಸಂಸ್ಥೆಯೊಂದನ್ನು ನಿರ್ಮಿಸುವದು ಅವಶ್ಯವೆಂದು ಪ್ರತಿಪಾದಿಸಿದರು. ಅದರಂತೆ, ಸಭೆಯಲ್ಲಿ ಠರಾವಾಗಿ, ಪ್ರತಿ ವರ್ಷ ಈ ಸಂಸ್ಥೆಯ ವಿಸ್ತೃತವಾದ ಒಂದು ಅಧಿವೇಶನವನ್ನು ನೆರೆಯಿಸಬೇಕೆಂದು ಗೊತ್ತಾಗಿದೆ

— ಜಪಾನ ದೇಶದ ಟೋಕಿಯೋ ಪಟ್ಟಣದ ವಾಯುವ್ಯ ದಿಕ್ಕಿನ ೭೦ ಮೈಲುಗಳ ಮೇಲಿರುವ ಯೋಕೋಹಾಮಾ ಪಟ್ಟಣದಲ್ಲಿ ಬಿರುಗಾಳಿಯಿಂದ ನೆರೆ ಹೊಂಚಿ, ೫ ಸಾವಿರ ಮಂದಿಗಳ ಜೀವಹಾನಿಯಾಗಿದೆ

ಜಾದಾ ಕೊಂಗ್ರೆಸು.

ಪಾಸಾದ ಮಹತ್ವದ ಠರಾವುಗಳು.

ಕೌನ್ಸಿಲು ಪ್ರಶ್ನೆ.

ಅಹಿಂಸಾಪ್ರಧಾನ ಅಸಹಕಾರಿತೆಯ ತತ್ವಕ್ಕೆ ಪುಷ್ಟಿಯನ್ನೀಯುವಾಗ, ಕೌನ್ಸಿಲು ಪ್ರವೇಶಕ್ಕೆ ಧಾರ್ಮಿಕ, ಮನಃಸಾಕ್ಷಿ ಮೊದಲಾದ ಅಡ್ಡಿಯಿಲ್ಲದ, ರಾಷ್ಟ್ರೀಯ ಸಭಾಭಿಮಾನಿಗಳಿಗೆ ಉಮೇದವಾರರಾಗಿ ನಿಲ್ಲಲು ಈ ಕೊಂಗ್ರೆಸು ಸ್ವತಂತ್ರತೆಯನ್ನೀಯುತ್ತದೆ ಬರುವ ಚುನಾವಣೆಯಲ್ಲಿ ಮತದಾನದ ಅಧಿಕಾರವನ್ನು ಉಪಯೋಗಿಸಲು ಮತದಾರ ರಾಷ್ಟ್ರೀಯ ಸಭಾಭಿಮಾನಿಗಳಿಗೆ ಬಿಡುಗಡೆ ಮಾಡುತ್ತದೆ, ಮತ್ತು ಕೌನ್ಸಿಲು ಬಹಿಷ್ಕಾರದ ಚಳವಳಿಯನ್ನು ಈ ರಾಷ್ಟ್ರೀಯ ಸಭೆಯು ತಹಕೂಬ ಮಾಡುತ್ತದೆ ಇದಲ್ಲದೆ, ಶೀಘ್ರವೇ ಐಕ್ಯಮತದಿಂದ ಸ್ವರಾಜ್ಯಸಂಪಾದನೆಗಾಗಿ ಲೋಕೋತ್ತರ ಲೋಕನಾಯಕರಾದ ಮಹಾತ್ಮಾ ಗಾಂಧಿಯವರ ವಿಧಾಯಕ ಕಾರ್ಯಕ್ರಮವನ್ನು ದ್ವಿಗುಣಿತವಾಗಿ ನಡಿಯಬೇಕೆಂದು ಈ ಕೊಂಗ್ರೆಸು ಎಲ್ಲ ಕೊಂಗ್ರೆಸ ಪಕ್ಷದವರಿಗೆ ಆಜ್ಞಾಪಿಸುತ್ತದೆ.

ಪ್ರಚಂಡ ಬಹುಮತದಿಂದ ಪಾಸ

ಕೆನಿಯಾ ನಿರ್ಣಯ.

ಕೆನಿಯಾದಲ್ಲಿ ವಾಸವಾಗಿರುವ ಭಾರತೀಯ ದರ್ಜೆಯ ಬಗ್ಗೆ ಬ್ರಿಟಿಶ ಸರಕಾರವು ಕೈಕೊಂಡ ನಿರ್ಣಯವು ಹಿಂದುಸ್ಥಾನವನ್ನು ದಾಸ್ಯತ್ವದಲ್ಲಿಟ್ಟು ಆಳುವ ಇಂಗ್ಲಂಡ ದೇಶದ ನಿರ್ಧಾರದ ದ್ಯೋತಕವೆಂದು ಈ ಕೊಂಗ್ರೆಸಿನ ಮತವಾಗಿದೆ. ಆದ್ದರಿಂದ, ಶೀಘ್ರವೇ ಪಾರತಂತ್ರ್ಯದ ಕಲಂಕವನ್ನು ಹೋಗಲಾಡಿಸಲು ಪರಮಾವಧಿಯ ಯತ್ನ ಮಾಡಬೇಕೆಂದು ಭಾರತೀಯರಿಗೆ ಈ ಕೊಂಗ್ರೆಸು ಆಗ್ರಹಮಾಡುತ್ತದೆ

ಇದಲ್ಲದೆ, ವಸಾಹತುಗಳೊಳಗಿನ ಭಾರತೀಯರ ದರ್ಜೆಯ ಬಗ್ಗೆ ದೇಶದಲ್ಲಿ ಮತಪ್ರಸಾರ ಮಾಡಲಿಕ್ಕೂ, ವ್ಯವಹಾರಿಕ ಕಾರ್ಯಕ್ರಮದಲ್ಲಿ ಕೆನಿಯಾ ಭಾರತೀಯರಿಗೆ ಸಹಾಯ ಮಾಡಲಿಕ್ಕೂ ಈ ಕೊಂಗ್ರೆಸು ಕಾರ್ಯಕಾರಿ ಕಮಿಟಿಗೆ ಆಜ್ಞಾಪಿಸುತ್ತದೆ

ಬಹುಮತದಿಂದ ಪಾಸ.

ಕಾಯಿದೇಭಂಗ.

ಸ್ವರಾಜ್ಯವನ್ನು ಶೀಘ್ರವೇ ಸಂಪಾದಿಸಿ, ಮಹಾತ್ಮಾ ಗಾಂಧಿ ಮೊದಲಾದ ರಾಜಕೀಯ ಕೈದಿಗಳ ಬಿಡುಗಡೆ ಮಾಡಲು, ಜಝೀರಾತ-ಅಲ್-ಅರಾಬ ಪ್ರದೇಶವನ್ನು ಸ್ವತಂತ್ರ ಮಾಡಲು ಪಂಜಾಬದ ಅನ್ಯಾಯವನ್ನು ಸಮಾಧಾನವಾಗಿ ನಿರ್ಣಯಿಸಲು, ಕಾಯಿದೇಭಂಗವನ್ನು ಸಂಘಟಿಸಲು ಈ ಕೆಳಗಿನ ಸಭಾಸದರದೊಂದು ಕಮಿಟಿಯನ್ನು ಕೊಂಗ್ರೆಸು ನೇಮಿಸುತ್ತದೆ ಈ ಕಮಿಟಿಯು ದೇಶದಲ್ಲಿ ಕಾಯಿದೇಭಂಗವು ಕಾರ್ಯಕ್ಷಮವಾಗುವಂತೆ ಚಳವಳಿಯನ್ನು ನಡಿಸುವದು, ಈ ಬಗ್ಗೆ ತಕ್ಕ ಮಾಹಿತಿಯನ್ನಿತ್ತು, ಅದನ್ನು ನಿಯಂತ್ರಿಸುವದು. ಪ್ರಾಂತಿಕ ಹಾಗು ಸ್ಥಾನಿಕ ಕಾಯಿದೇಭಂಗದ ಚಳವಳಿಗಳನ್ನು ಸಂಘಟಿಸಲು ಪ್ರಾಂತಗಳಿಗೆ ತಕ್ಕ ಮಾಹಿತಿಯನ್ನಿತ್ತು, ಅವುಗಳ ಚಳವಳಿಯನ್ನು ನಿಯಮನ ಮಾಡುವದು.

ಕಮಿಟಿಯವರ ಹೆಸರುಗಳ — (೧) ಮೌ। ಮಹಮ್ಮದ ಅಲ್ಲಿ, (೨) ಡಾ। ಸೈಫುದ್ದೀನ ಕಿಚಲು, (೩) ದೇಶಬಂಧು ಚಿತ್ತರಂಜನ ದಾಸ, (೪) ಬಾಬು ರಾಜೇಂದ್ರ ಪ್ರಸಾದ, (೫) ಶ್ರೀ। ವಲ್ಲಭಭಾಯಿ ಪಟೇಲ, (೬) ಸರದಾರ ಸುರೇಂದ್ರಸಿಂಗ, (೭) ಪಂಡಿತ ಜವಾಹರಲಾಲ ನೆಹರು, (೮) ಶ್ರೀ। ವಿಠ್ಠಲಭಾಯಿ ಪಟೇಲ.

ಪ್ರಚಂಡ ಬಹುಮತದಿಂದ ಪಾಸ.

ಬ್ರಿಟಿಶ ಸರಕಿನ ಬಹಿಷ್ಕಾರ

(ಅ) ಸ್ವರಾಟಿಯ ಮೇಲೆ ತಯಾರು ಮಾಡಿದ, ಕೈಮಗ್ಗದ ಮೇಲೆ ನೆಯ್ದ ಖಾದಿಯನ್ನು ಪ್ರಚಂಡ ಪ್ರಮಾಣದ ಮೇಲೆ ತಯಾರಿಸುವದರಿಂದಲೂ, ಉಪಯೋಗಿಸುವದರಿಂದಲೂ ಹಿಂದುಸ್ಥಾನದ ಆರ್ಥಿಕ ಉನ್ನತಿಯಾಗುವದೆಂದು ಈ ಕೊಂಗ್ರೆಸಿನ ವಿಚಾರ ಪೂರ್ವಕ ಮತವಿದೆ ದೇಶದಲ್ಲಿ ನೂಲುವದನ್ನೂ ಖಾದಿಯ ಉಪಯೋಗವನ್ನೂ ಸಾರ್ವತ್ರಿಕವಾಗಿ ಮಾಡಲು ಮತ್ತೂ ಉತ್ತೇಜಿಸಿ ನಡಿಯಬೇಕೆಂದು ಭಾರತೀಯರಿಗೆ ಆಜ್ಞಾಪಿಸುತ್ತ, ಮತ್ತು ಈ ಪ್ರಕಾರದಿಂದ ಎಲ್ಲ ಪರದೇಶೀ ಬಟ್ಟೆಯ ಬಹಿಷ್ಕಾರವನ್ನು ಸಾಧಿಸಬೇಕೆಂದು ಈ ಕೊಂಗ್ರೆಸ ಆಜ್ಞಾಪಿಸುತ್ತದೆ

(ಬ) ಹಾಗೂ ಹಿಂದುಸ್ಥಾನದಲ್ಲಿ ತಯಾರಾಗುವ ಸರಕಿನ ಉತ್ಪನ್ನವು ಹೆಚ್ಚಾಗುವಂತೆ, ದೇಶದೊಳಗಿನ ಕೈಗಾರಿಕೆಗಳನ್ನೇ ಉತ್ತೇಜಿಸಲು, ಹಾಗೂ ಶಕ್ಯವಿದ್ದಲ್ಲಿ, ಪರದೇಶೀ ಸರಕಿನ ಖರೇದಿಯನ್ನೂ ಉಪಯೋಗವನ್ನೂ ಕಡಿಮೆ ಮಾಡಲು, ಪ್ರಜೆಗಳಿಗೆ ಆಜ್ಞಾಪಿಸುತ್ತದೆ

(ಕ) ಈಗ ಹಿಂದುಸ್ಥಾನವು ಸ್ವಾತಂತ್ರ್ಯದ ಕಾದಾಟವನ್ನು ನಡಿಸಿರುತ್ತದೆ ಇಂಗ್ಲಂಡ ದೇಶವು ಈ ದೇಶದ ಪ್ರಯತ್ನಗಳ ಅತಂಕವಡಿಸುತ್ತದೆ ಹಾಗೂ ಅದಕ್ಕೆ ಶಕ್ಯವಿದ್ದ ವಿಘ್ನಗಳನ್ನು ಉಪಸ್ಥಿತ ಮಾಡುತ್ತದೆ. ಭಾರತೀಯರನ್ನು ಬ್ರಿಟಿಶ ಹಕ್ಕುಗಳಲ್ಲಿ ಪಾತ್ರರನ್ನಾಗಿ ಮಾಡದೆ ಅವಮಾನ ಮಾಡುತ್ತದೆ. ಆದಕಾರಣ, ಗ್ರೇಟ ಬ್ರಿಟನ್ ಹಾಗೂ ಅದರ ಸಾಮ್ರಾಜ್ಯದ ಪ್ರದೇಶಗಳಲ್ಲಿ ತಯಾರಾಗುವ ಸಾಮಗ್ರಿಗಳ ಖರೇದಿ ಮಾಡದೆ, ಎಲ್ಲ ಬ್ರಿಟಿಶ ಸರಕುಗಳ ಬಹಿಷ್ಕಾರವನ್ನು ಪೂರ್ಣವಾಗಿ, ಸಾಧಿಸಬೇಕೆಂದು ಈ ರಾಷ್ಟ್ರೀಯ ಸಭೆಯು ಆಜ್ಞಾಪಿಸುತ್ತದೆ

(ಡ) ಈ ಠರಾವಿನ (ಬ), (ಕ), ಕಲಮುಗಳಲ್ಲಿ ಸೂಚಿಸಿರುವ ಕಾರ್ಯಕ್ರಮವನ್ನು ಅವಲಂಬಿಸುವದೆ, ಹಿಂದುಸ್ಥಾನದೊಳಗಿನ ಕೈಗಾರಿಕೆಗಳನ್ನೇ ಉತ್ತೇಜಿಸಲು ಬ್ರಿಟಿಶ ಸರಕುಗಳನ್ನು ಬಹಿಷ್ಕರಿಸಲು, ತಕ್ಕ ವ್ಯವಹಾರಿಕ ಯೋಜನೆಯನ್ನು ನಿರ್ಧರಿಸಲು, ಈ ರಾಷ್ಟ್ರೀಯ ಸಭೆಯು ಈ ಕೆಳಗಿನಂತೆ ಕಮಿಟಿಯನ್ನು ನೇಮಿಸಿ, ಈ ಬಗ್ಗೆ ಅವಶ್ಯವಿದ್ದ ಸೂಚನೆಗಳನ್ನು ಕೊಡಲು ಅಧಿಕಾರ ಕೊಡುತ್ತದೆ.

ಕಮಿಟಿಯವರ ಹೆಸರುಗಳು:— (೧) ಪಂಡಿತ ಮೋತೀಲಾಲ ನೆಹರು, (೨) ಮೌಲಾನಾ ಮಹಮ್ಮದ ಅಲ್ಲಿ, (೩) ಶ್ರೀ। ವಿಠ್ಠಲಭಾಯಿ ಪಟೇಲ, (೪) ಜಿಯಸುಖಲಾಲ ಮೆಹತಾ, (೫) ಸುಭಾಷಚಂದ್ರ ಬೋಸ, (೬) ಶೇಟ ಉಮರ ಸೋಬಾನಿ, (೭) ಡಾ। ಸೈಫುದ್ದೀನ ಕಿಚಲು, (೮) ಶ್ರೀ। ನರಸೋಪಂತ ಕೇಳಕರ (೯) ಗೋಪಾಲಕೃಷ್ಣಯ್ಯ.

ಅನುಕೂಲ ೮೪೨, ಪ್ರತಿಕೂಲ ೨೩೧

ಬಹುಮತದಿಂದ ಪಾಸು

ಸಮಾಜದೊಳಗಿನ ಐಕ್ಯ

ಕಳೆದ ೧ ವರುಷದ ಅವಧಿಯಲ್ಲಿ ಕೆಲ ಪಟ್ಟಣ ಹಾಗು ಶಹರುಗಳೊಳಗಿನ ನಿವಾಸಿಕರು, ಧಾರ್ಮಿಕ ಹಾಗು ಮಾನವ ಜಾತಿಯ ಕರ್ತವ್ಯಗಳನ್ನು ಧಿಕ್ಕರಿಸಿ, ನೆರೆಹೊರೆಯಲ್ಲಿರುವ ಜನರಿಗೂ, ಸೊತ್ತುಗಳಿಗೂ, ದೇವಾಲಯಗಳ ಮೇಲೆ ಹಲ್ಲೆಮಾಡಿ, ಲುಕ್ಸಾನು ಮಾಡಿದ ಬಗ್ಗೆ ಈ ರಾಷ್ಟ್ರೀಯ ಸಭೆಗೆ ಅತ್ಯಂತ ಖೇದವೆನಿಸುತ್ತದೆ ಇಂಥ ಪ್ರಕಾರಗಳನ್ನು ತೀವ್ರವಾಗಿ ನಿಷೇಧಿಸಬೇಕೆಂತಲೂ, ಈ ಸಭೆಯ ಮತವಿದೆ. ಆದ್ದರಿಂದ, ದಂಗೆ ಉದ್ಭವಿಸಿದ ಸ್ಥಳಗಳನ್ನು ಸಂದರ್ಶಿಸಿ, ಅತ್ಯಾಚಾರಗಳ ಬಗ್ಗೆ ಯಾರು ಜವಾಬದಾರರೆಂದು ಕಂಡುಹಿಡಿದು, ಇಂಥ ನಿಂದ್ಯ ಪ್ರಕಾರಗಳ ಬಗ್ಗೆ ಅಪರಾಧಿಗಳನ್ನು ಜಾಹೀರ ರೀತಿಯಿಂದ ನಿರ್ದೇಶಿಸಲು, ಕೆಳಗಿನಂತೆ ಒಂದು ಕಮಿಟಿಯನ್ನು ನೇಮಿಸುತ್ತದೆ

ಇದಲ್ಲದೆ, ಎಲ್ಲ ಸಮಾಜಗಳು ತಮ್ಮ ತಮ್ಮ ಧಾರ್ಮಿಕ ಆಚಾರಗಳನು, ಇತರ ಜಾತಿಗಳನ್ನು ನೋಯಿಸದಂತೆ ಆಚರಿಸಿ, ಅನ್ಯೋನ್ಯ ವಿಶ್ವಾಸದಿಂದಲೂ ಪ್ರೀತಿಯಿಂದಲೂ ರಾಷ್ಟ್ರೀಯ ಕಾರ್ಯಗಳಲ್ಲಿ ಸಹಕಾರ್ಯದಿಂದ ನಡಿಯುವದು, ಇಂಥ ಪ್ರಕಾರಗಳನ್ನು ಮುಂದೆ ಸಂಭವಿಸದಂತೆ ಯಾವ ಯೋಜನೆಯನ್ನು ಕೈಕೊಳ್ಳಬೇಕೆಂದು ಈ ಕಮಿಟಿಯು ಶಿಫಾರಸು ಮಾಡಬೇಕೆಂತಲೂ ಕೊಂಗ್ರೆಸಿನ ಠರಾವಿದೆ.

ಈ ಕಮಿಟಿಯ ಮೆಂಬರರು:— (೧) ಅಬ್ದುಲ ಕಲಾಮ ಆಝಾದ ಸಾಹೇಬ, (೨) ಟಿ. ಎ. ಕೆ. ಶೇರವಾಣಿ ಸಾಹೇಬ, (೩) ಬಾಬು ಭಗವಾನದಾಸ, (೪) ಬಾಬು ಪುರುಷೋತ್ತಮದಾಸ ಟಂಡನ್, (೫) ಮಾಸ್ತರ ಸುಂದರಸಿಂಗ ಲಾಯಲಪುರಿ, (೬) ಜೋರ್ಜ ಜೋಸೆಫ, (೭) ಬೊಮನಜಿ ಫ್ರಾಮಜಿ ಭರೂಚಾ ಇವರು ಇರತಕ್ಕದ್ದು.

ಮೇಲ್ಕಂಡ ಕಮಿಟಿಯು ಸತ್ವರಾದ ಪೂರದಿಂದ ತನ್ನ ಚೌಕಶಿಯನ್ನು ಪ್ರಾರಂಭಿಸಿ, ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಗೆ ೨ ತಿಂಗಳುಗಳಲ್ಲಿ ವರದಿಯನ್ನು ಸಾದರಪಡಿಸಬೇಕೆಂದು ಈ ಕೊಂಗ್ರೆಸು ಬಯಸುತ್ತದೆ

ಸರ್ವಾನುಮತದಿಂದ ಪಾಸು.

ರಾಷ್ಟ್ರೀಯ ಕರಾರುನಾಮೆ

ರಾಷ್ಟ್ರೀಯ ಕರಾರುನಾಮೆಯ ಮಸೂದೆಯನ್ನು ತಯಾರಿಸಿ, ದೇಶದೊಳಗಿನ ಬೇರೆ, ಬೇರೆ, ಜಾತಿಗಳ ಪ್ರಮುಖ ಪ್ರತಿನಿಧಿಗಳಿಗೂ, ವಿಚಾರವಂತ ಗೃಹಸ್ಥರಿಗೂ, ಅಭಿಪ್ರಾಯಾರ್ಥವಾಗಿ, ಅದನ್ನು ಕಳಿಸಿ, ಅವರ ಅಭಿಪ್ರಾಯವನ್ನು ಆಲೋಚಿಸಿ, ಕೋಕೋನಾಡದಲ್ಲಿ ಕೂಡುವ ಕೊಂಗ್ರೆಸಿಗೆ ಈ ಪ್ರಶ್ನೆಯ ಇತ್ಯರ್ಥ ಮಾಡುವಂತೆ, ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಗೆ ವರದಿಯನ್ನು ಸಾದರಪಡಿಸಲು, ಈ ಕೆಳಗಿನ ಗೃಹಸ್ಥರ, ಮಂಡಳವನ್ನು ಈ ಕೊಂಗ್ರೆಸು ನೇಮಿಸುತ್ತದೆ —

(೧) ಲಾಲಾ ಲಜಪತರಾಯ, [ಅಸ್ವಸ್ಥತೆಯ ಮೂಲಕ ಕಮಿಟಿಯಲ್ಲಿ ಕೆಲಸ ಮಾಡಲು ಅವರು ಅಸಮರ್ಥರಾದರೆ, ಪಂಡಿತ ಮದನಮೋಹನ ಮಾಲವೀಯ.] (೨) ಸರದಾರ ಮಂಗಲಸಿಂಗ, (೩) ಡಾ। ಎಮ್. ಎ. ಅನ್‌ಸಾರಿ, [ನಿಮಂತ್ರಕರು]

ಸರ್ವಾನುಮತದಿಂದ ಪಾಸು

ಐಕ್ಯವರ್ಧಕ ಮಂಡಳಗಳು.

ಪ್ರತಿಯೊಂದು ವಸ್ತಿಯ ಮುಖ್ಯ ಪಟ್ಟಣಗಳಲ್ಲಿ ಜಿಲ್ಹಾ ಕೊಂಗ್ರೆಸ ಕಮಿಟಿಗಳ ಮೇಲ್ವಿಚಾರಕತ್ವದಲ್ಲಿ ಮಿತ್ರ ಕಮಿಟಿಗಳನ್ನು ಸ್ಥಾಪಿಸಬೇಕೆಂದು ಈ ಕೊಂಗ್ರೆಸು ಠರಾಯಿಸುತ್ತದೆ. ಈ ಕಮಿಟಿಗಳನ್ನು ಖಿಲಾಫತ ಕಮಿಟಿ, ಹಿಂದೂ ಸಭೆ ಮೊದಲಾದ ಸ್ಥಾನಿಕ ಜವಾಬದಾರ ಸಂಘಗಳ ಆಲೋಚನೆ ಪಡೆದು ಸ್ಥಾಪಿಸತಕ್ಕದ್ದು. ಈ ಕಮಿಟಿಗಳು ಜಿಲ್ಹೆಗಳೊಳಗೆ ಸುರಕ್ಷಿತತೆಯನ್ನು ಕಾಪಾಡುವವು. ಶಾಂತತೆಯನ್ನೂ, ಸುರಕ್ಷಿತತೆಯನ್ನೂ ಭಂಗಿಸುವಂಥ ಪ್ರಕಾರಗಳು ಸಂಭವಿಸುವದಿದ್ದಲ್ಲಿ, ಅವುಗಳಿಂದ ಅನಿಷ್ಟ ಪ್ರಕಾರಗಳು ಅವಶ್ಯ ಕಡಿಮೆಯಾಗುವಂತೆ ಯತ್ನಿಸುವವು. ಹಾಗು ಶೀಘ್ರವೇ ಸಮಾಧಾನಕರ ಒಪ್ಪಂದವಾಗುವಂತೆ ಯೋಜಿಸುವವು. ಪ್ರಕ್ಷೋಭದ ಪ್ರಸಕ್ತಿಯಲ್ಲಿ ಪ್ರಜೆಗಳಿಗೆ ತಾಳ್ಮೆಯಿಂದ ವರ್ತಿಸಲು ಉತ್ತೇಜಿಸುವವು. ಹಾಗು ದೂರುಗಳ ನಿವಾರಣೆಯ ಬಗ್ಗೆ ಸ್ವತಃ ಪ್ರತೀಕಾರದ ಯೋಜನೆಗಳನ್ನು ಕೈಕೊಳ್ಳುವ ಬದಲು, ಈ ಮಿತ್ರ ಮಂಡಳಗಳಿಗೆ ಆ ದೂರುಗಳನ್ನು ಪರಿಹರಿಸಲು ಒಪ್ಪಿಸುವದು.

ಸರ್ವಾನುಮತದಿಂದ ಪಾಸು

ಜಪಾನದ ಮೇಲಿನ ಗಂಡಾಂತರ.

ಜಪಾನದ ಪ್ರಜೆಗಳ ಮೇಲೆ, ಒದಗಿದ ಭಯಂಕರ ಅಪಘಾತದ ಬಗ್ಗೆ ಭಾರತೀಯರ ಕಡುಶೋಕವನ್ನು ಈ ರಾಷ್ಟ್ರೀಯ ಸಭೆಯು ಪ್ರದರ್ಶಿಸುತ್ತದೆ. ಈ ಸಂಕಟಕಾಲದಲ್ಲಿ ಭಾರತೀಯರು ಅವರ ಬಗ್ಗೆ ಅತೀವ ಸಹಾನುಭೂತಿಯನ್ನು ಪ್ರದರ್ಶಿಸುತ್ತಾರೆ. ಧೀರ ಜಪಾನ ಪ್ರಜೆಗಳು ಈ ಆಪತ್ತಿನೊಳಗಿಂದ ಧೈರ್ಯದಿಂದ, ಶೀಘ್ರವೇ ವಿಮೋಚನವಾಗುವರೆಂದು ಈ ರಾಷ್ಟ್ರೀಯ ಸಭೆಗೆ ವಿಶ್ವಾಸವಿದೆ. ಅವರೂ, ಏಶಿಯಾ ದೇಶದ ಬಾಂಧವರ ಬಗ್ಗೆ ಭಾರತೀಯರಿಗಿರುವ ಸಹಾನುಭೂತಿಯ ದ್ಯೋತಕವೆಂದು, ಜಪಾನ ಜನರ ಪ್ರಸ್ತುತ ದುಃಖನಿವಾರಣಕ್ಕಾಗಿ, ಯಥಾಶಕ್ತಿ ಧನಸಹಾಯವನ್ನೀಯಲು, ಈ ರಾಷ್ಟ್ರೀಯ ಸಭೆಯು ವಿಜ್ಞಾಪಿಸುತ್ತದೆ.

ಸರ್ವಾನುಮತದಿಂದ ಪಾಸು.

ಶುದ್ಧಿ ಚಳವಳಿ.

ಈ ರಾಷ್ಟ್ರೀಯ ಸಭೆಯು (೧) ಸೀತಾರಾಮ, (೨) ನೇಕೀರಾಮ, (೩) ಮಹಮ್ಮದ ಶಫೀ, (೪) ಜುಲ್ಫೀಕರ ಅಲಿ ಕಬಿರುನ್ ಹಾಗು ಗುರುದ್ವಾರ ಕಮಿಟಿಯಿಂದ ನೇಮಕವಾಗುವ ಶೀಖ ಗೃಹಸ್ಥರೊಬ್ಬರು, ಹೀಗೆ ಐವರ ಕಮಿಟಿಯನ್ನು ನೇಮಿಸುತ್ತದೆ. ಈ ಕಮಿಟಿಯವರು, ಸ್ಥಾನಿಕ ಚೌಕಶಿ ನಡಿಸಿ, ಧರ್ಮಾಂತರ ಚಳವಳಿಯಲ್ಲಿ ಅನ್ಯಾಯದಿಂದ ಹಾಗು ಧರ್ಮದಂತೆ ವಿಧಿಸದಿರುವ ಆಚಾರಗಳನ್ನು ಯಾರು ಆಚರಿಸುತ್ತಾರೆಂಬದನ್ನು ನಿರ್ಣಯಿಸತಕ್ಕದ್ದು. ಹಾಗು ಇಂಥ ಪ್ರಕಾರಗಳು ಮುಂದೆ ಸಂಭವಿಸದಂತೆ ಕೈಕೊಳ್ಳಬೇಕಾದ ಉಪಾಯಗಳನ್ನು ಶಿಫಾರಸು ಮಾಡತಕ್ಕದ್ದು. ಡಿಶಂಬರ ೧೫ನೇ ತಾರೀಖಿನೊಳಗೆ ಸಂಪೂರ್ಣ ರಿಪೋರ್ಟನ್ನು, ಶಕ್ಯವಿಲ್ಲದಿದ್ದಲ್ಲಿ, ಹಂಗಾಮಿ ರಿಪೋರ್ಟನ್ನು ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಗೆ ಸಾದರಪಡಿಸತಕ್ಕದ್ದು. ನೀಚ ಪ್ರಕಾರಗಳನ್ನು ಕೈಕೊಳ್ಳುವ ಮಂದಿಗಳಿಗೆ ನಿಷೇಧಿಸತಕ್ಕದ್ದು.

ಸರ್ವಾನುಮತದಿಂದ ಪಾಸು.

ಶಾಂತತಾರಕ್ಷಕ ಕಾವಲುಗಾರ ಮಂಡಳಗಳು.

ಶಾಂತತೆ, ಸುವ್ಯವಸ್ಥೆಗಳನ್ನು ಕಾಪಾಡಲು ಹಾಗು ನಾಗರಿಕರ ಕರ್ತವ್ಯಗಳನ್ನು ನಡಿಸಲು ಶಾಂತತಾರಕ್ಷಕ ಕಾವಲುಗಾರ ಮಂಡಳವನ್ನು ಸ್ಥಾನಿಕ ಕೊಂಗ್ರೆಸ ಕಮಿಟಿಗಳು ಸ್ಥಾಪಿಸಿ, ಅವುಗಳ ಮೇಲ್ವಿಚಾರಕತ್ವವನ್ನೂ, ನಿಯಂತ್ರಣವನ್ನೂ ವಹಿಸಿಕೊಳ್ಳತಕ್ಕದ್ದು. ಈ ಮಂಡಳಗಳಲ್ಲಿ ಎಲ್ಲ ಭಾರತೀಯರಿಗೆ ಪ್ರವೇಶವಿರಬೇಕು. ಕೊಂಗ್ರೆಸ ಕಮಿಟಿಗಳು ಈ ಮಂಡಳಗಳ ಸಭಾಸದರ ಶಾರೀರಿಕ ಸಂಪತ್ತನ್ನು ವೃದ್ಧಿಪಡಿಸಿ ಅವರನ್ನು ಸಂರಕ್ಷಣಮಾಡಿಕೊಳ್ಳಲಿಕ್ಕೂ, ಸಮಾಜರಕ್ಷಣಮಾಡಿಕೊಳ್ಳಲಿಕ್ಕೂ ಸಾಮರ್ಥ್ಯವನ್ನು ಸಂಪಾದಿಸತಕ್ಕದ್ದು. ಕೊಂಗ್ರೆಸ ಕಾರ್ಯಕಾರಿ ಕಮಿಟಿಯು ಈ ಮಂಡಳಗಳ ಘಟನೆ-ಕಾರ್ಯಕ್ಷೇತ್ರಗಳ ಬಗ್ಗೆ ನಿಯಮಗಳನ್ನು ತಯಾರಿಸುವದು. ಖಿಲಾಫತ ಸೇನೆ ಮೊದಲಾದ ಸ್ಥಾನಿಕ ಮಂಡಳಗಳೆಲ್ಲ ಕೊಂಗ್ರೆಸ ಕಾವಲುಗಾರ ಮಂಡಳದ ಕೂಡ ಸಹಕಾರಿತೆಯಿಂದ ಕೆಲಸಮಾಡಬೇಕೆಂದು ರಾಷ್ಟ್ರೀಯ ಸಭೆಯು ವಿಜ್ಞಾಪನೆಯಿದೆ.

ಸರ್ವಾನುಮತದಿಂದ ಪಾಸು.

ಕೊಂಗ್ರೆಸು ವೃತ್ತ.

——0*0——

ರವಿವಾರದ ಹಕೀಕತು.

ರವಿವಾರ ತಾ. ೧೬ನೇ ೨ ಘಂಟೆಗೆ ಪುನಃ ರಾಷ್ಟ್ರೀಯ ಸಭೆಯು ಪ್ರಾರಂಭವಾಯಿತು. ಅಂದು ಪ್ರೇಕ್ಷಕ ಸಮುದಾಯವು ವಿಶೇಷ ನೆರೆದಿತ್ತು. ಕಾರ್ಯಕ್ರಮವು ಪತ್ರಿಕೆಯ ಮೇಲೆ ಮೌ। ಮಹಮ್ಮದ ಅಲ್ಲಿಯವರ ಕೌನ್ಸಿಲು ಪ್ರವೇಶದ ಒಂದು ಠರಾವು, ಅದಕ್ಕೆ ಶ್ರೀ। ವಲ್ಲಭಭಾಯಿ ಪಟೇಲರವರ ಉಪಸೂಚನೆ, ಹೀಗೆ ೨ ಠರಾವುಗಳಿದ್ದವು. ಕೊಂಗ್ರೆಸು, ಕಮಿಟಿಯನ್ನು ನೇಮಿಸಿ, ಕಾಯಿದೆ ಕೌನ್ಸಿಲುಗಳೊಳಗಿನ ರಾಷ್ಟ್ರೀಯ ಪ್ರತಿನಿಧಿಗಳ ನಡತೆಯನ್ನು ನಿಯಮಿಸಬೇಕೆಂತಲೂ, ಮತಕೊಡುವವನು ರಾಷ್ಟ್ರೀಯ ಸಭೆಯವರಿಗೇ ಮತದಾನಮಾಡಬೇಕೆಂತಲೂ ಶ್ರೀ। ಪಟೇಲರವರ ಉಪಸೂಚನೆಯಾಗಿತ್ತು. ಮುಖ್ಯ ಠರಾವಿನ ಮೇಲೆ ಮೌ। ಮಹಮ್ಮದ ಅಲ್ಲಿಯವರ ಭಾಷಣವಾಯಿತು. ಮಹಮ್ಮದ ಅಲ್ಲಿಯವರು ರಾಷ್ಟ್ರದಲ್ಲುಂಟಾದ ಮತಭೇದಗಳ ಗೊಂದಲದ ಬಗ್ಗೆ ದುಃಖಪ್ರದರ್ಶನ ಮಾಡಿದರು. ಕೌನ್ಸಿಲು ಪ್ರವೇಶದಿಂದ ಸ್ವರಾಜ್ಯ ಸಾಧ್ಯವಾಗದ ಮೇಲೆ ಕೌನ್ಸಿಲುಗಳಲ್ಲಿ ಸೇರುವ ರಾಷ್ಟ್ರೀಯ ಪ್ರತಿನಿಧಿಗಳ ಮೇಲೆ ಲಕ್ಷವಿಡುವದು ನಿರರ್ಥಕವು. ಹಿಂದುಸ್ಥಾನದ ಬಹುಜನ ಸಮಾಜವು ಸರಕಾರವನ್ನೇ ಹಿಂಬಾಲಿಸುತ್ತವೆಂದು ಸರಕಾರವು ಹೇಳುವ ಮಾತುಗಳು ಅಯಥಾರ್ಥವೆಂದು ಸಿದ್ಧಪಡಿಸಲು ಸ್ವರಾಜ್ಯ ಪಕ್ಷದವರಿಗೆ ಕೌನ್ಸಿಲುಗಳನ್ನು ಸೇರಗೊಡುತ್ತೇವೆ. ಮಹಾತ್ಮಾ ಗಾಂಧಿಯವರು ಈ ಪ್ರಸಂಗದಲ್ಲಿ ಹೀಗೆಯೇ ವ್ಯವಸ್ಥೆ ಮಾಡುತ್ತಿದ್ದರೆಂದು ಮಾನಸಿಕ ತಾರಾಯಂತ್ರದಿಂದ ನಾನು ಹೇಳಬಲ್ಲೆ. ಈ ಠರಾವಿನ ಜವಾಬದಾರಿಯೆಲ್ಲ ನನ್ನನೇ ಎಂದು ಮೌಲಾನಾರವರು ನುಡಿದರು. ಶ್ರೀ। ಪರದಾಚಾರಿಯವರು ಠರಾವನ್ನು ವಿರೋಧಿಸುವಾಗ, ಈ ಠರಾವು ಯಾರಿಗೂ ಅನುಕೂಲವಿಲ್ಲ. ಎಲ್ಲರೂ ಕೌನ್ಸಿಲುಗಳನ್ನು ಸೇರಬೇಕೆಂದು ಕೊಂಗ್ರೆಸು ವಿಧಿಸಿದ್ದರೆ, ಹೆಚ್ಚು ಶ್ರೇಯಸ್ಕರವಾಗುತ್ತಿತ್ತು, ಎಂದು ನುಡಿದರು. ಬಾಬು ರಾಜೇಂದ್ರ ಪ್ರಸಾದರವರೂ, ಶ್ರೀ। ವಲ್ಲಭಭಾಯಿ ಪಟೇಲರೂ ಇದೇ ಪರಿಯಿಂದ ಠರಾವನ್ನು ವಿರೋಧಿಸಿದರು. ಸ್ವರಾಜ್ಯಪಕ್ಷದವರು ಕೊಂಗ್ರೆಸ ಪ್ರತಿನಿಧಿಗಳೆಂದು ಕೌನ್ಸಿಲುಗಳಲ್ಲಿ ಯಾವದೇ ಪ್ರಕಾರದಿಂದ ಹೇಳಲಾಗದೆಂದು ಡಾ। ಕಿಚಲೂರವರು ನುಡಿದರು. ಆಚಾರ್ಯ ಗಿಡವಾನಿಯವರು ಮೌ। ಮಹಮ್ಮದ ಅಲ್ಲಿಯವರ ನೇತೃತ್ವವನ್ನು ಸಮ್ಮತಿಸಿ, ಅವರನ್ನೇ ಹಿಂಬಾಲಿಸಹೇಳಿದರು. ದೇಶಬಂಧುಗಳು ಠರಾವನ್ನು ಸ್ವೀಕರಿಸುವಾಗ, ತರ್ಕಶಾಸ್ತ್ರದಂತೆ, ಠರಾವು ಸದೋಷವಿರಬಹುದು; ಆದರೆ, ನಮ್ಮ ಜೀವಿತಕ್ರಮವು ತರ್ಕ ಶಾಸ್ತ್ರಕ್ಕಿಂತ ವಿಶೇಷ ಮಹತ್ವದ್ದಿದೆ. ಅಹಿಂಸಾಪ್ರಧಾನ ಅಸಹಕಾರಿತೆಯು ನಮಗೂ ಮಾನ್ಯವಿದೆ ಸ್ವರಾಜ್ಯ ಪಕ್ಷದವರು ಈ ತತ್ವವನ್ನು ಕೌನ್ಸಿಲುಗಳಲ್ಲಿ ಆಚರಿಸಿ, ಸುಧಾರಣೆಗಳನ್ನು ವಿಧ್ವಂಸಿಸುವರು. ಕೌನ್ಸಿಲುಗಳನ್ನು ಆಕ್ರಮಿಸಿಕೊಂಡು, ರಾಜ್ಯಶಕಟವನ್ನು ನಡಿಸಬಾರದೆಂದು ನಮ್ಮ ಉದ್ದೇಶವಿದೆ. ಸುಧಾರಣೆಗಳನ್ನು ವಿಧ್ವಸ್ತ ಮಾಡಲು ಬರದಿದ್ದರೆ, ನಾನು ಕೌನ್ಸಿಲುಗಳಲ್ಲಿ ಸೇರಲಿಕ್ಕಿಲ್ಲ. ವಿಧಾಯಕ ಕಾರ್ಯಕ್ರಮವೂ ನಮಗೆ ಪ್ರಿಯವಿದೆ. ಬೇಕಾದ ಸ್ವಾರ್ಥತ್ಯಾಗವನ್ನಾಚರಿಸಲು, ನಾನೀಗ ನಿಮ್ಮೆದುರಿಗೆ ತಯಾರಿರುವೆನು. ನಾವೆಲ್ಲರೂ ಒಟ್ಟಾಗುವಾ; ಪರಸ್ಪರರ ಬಗ್ಗೆ ಆದರದಿಂದ ವರ್ತಿಸಿಕೊಳ್ಳುವಾ; ಎಂದು ನುಡಿದು, ಸ್ವಸ್ಥಾನವನ್ನು ತಾಗಹೋಗುವಷ್ಟರಲ್ಲಿ, ಮಹಾರಾಷ್ಟ್ರೀಯ ಅನುಯಾಯಿಗಳು ನಿಮ್ಮ ಮತದವರಿರುವರೇನು ? ಎಂದು ಒಬ್ಬರು ಪ್ರಶ್ನಿಸಿದರು. ದೇಶಬಂಧುಗಳು, ಹೌದೆಂದು ಉತ್ತರಿಸಿದರು. ಶ್ರೀಮತಿ ಸರೋಜಿನಿ ದೇವಿಯವರು ಬಳಿಕ ಭಾಷಣ ಮಾಡಿದರು. ಮೌ। ಮಹಮ್ಮದ ಅಲ್ಲಿಯವರಗೂಡ ಅವರು ವಹಿಸಿಕೊಂಡ ರಾಷ್ಟ್ರಧುರೆಯ ಜವಾಬದಾರಿಯನ್ನು ಸರಿಅಂಶದಿಂದ ತಾವೂ ವಹಿಸಿಕೊಳ್ಳುತ್ತೇವೆಂದರು. ಪಟೇಲರವರು ತಮ್ಮ ಉಪಸೂಚನೆಯನ್ನು ಹಿಂತೆಗೆದುಕೊಂಡರು. ಮೌಲಾನಾರವರು ಖುಲಾಸೆ ಮಾಡುವಾಗ, ಮಹಾತ್ಮರು ಹೀಗೆ ವರ್ತಿಸುವರೆಂದು ತಿಳಿಯದಿದ್ದರೆ, ತಾವು ಈ ಠರಾವನ್ನು ಸೂಚಿಸುತ್ತಿದ್ದಿಲ್ಲವೆಂದರು. ಬಳಿಕ, ಪ್ರಚಂಡ ಬಹುಮತದಿಂದ ಠರಾವು ಮಂಜೂರಾಯಿತು. ಕೌನ್ಸಿಲು ಚಳವಳಿಗಾಗಿ, ಕೊಂಗ್ರೆಸ ಸಂಸ್ಥೆಗಳನ್ನಾಗಲಿ, ಕೊಂಗ್ರೆಸ ನಿಧಿಯನ್ನಾಗಲಿ ಸ್ವರಾಜ್ಯ ಪಕ್ಷದವರು ಉಪಯೋಗಿಸಲಿಕ್ಕಿಲ್ಲೆಂದು ಮೌ। ಮಹಮ್ಮದ ಅಲ್ಲಿಯವರು ಖುಲಾಸೆ ಮಾಡಿದ ಬಳಿಕ, ಅಂದಿನ ಕಾರ್ಯಕ್ರಮವು ಮುಗಿಯಿತು.

ಸೋಮವಾರದ ಹಕೀಕತು.

ಸೋಮವಾರ ತಾ. ೧೭ನೇ ಅಪರಾಹ್ನ ೨॥ ಘಂಟೆಗೆ ರಾಷ್ಟ್ರೀಯ ಸಭೆಯು ಪುನಃ ನೆರೆಯಿತು. ಪಂಡಿತ ರಾಮಭುಜದತ್ತ ಚೌಧರಿಯವರ ನಿಧನದ ಬಗ್ಗೆ ದುಃಖಪ್ರದರ್ಶನ ಹಾಗು ಜಪಾನದೇಶದ ಮೇಲೆ ಒದಗಿದ ಆಪತ್ತಿನ ಬಗ್ಗೆ ಸಹಾನುಭೂತಿಪರ ಠರಾವುಗಳನ್ನು ಅಧ್ಯಕ್ಷರು ಸೂಚಿಸಿ, ಮಂಜೂರು ಮಾಡಿಕೊಂಡರು. ಡಾ। ಕಿಚಲೂರವರು ತಮ್ಮ ಕಾಯಿದೇಭಂಗದ ಠರಾವನ್ನು ಸೂಚಿಸಿದರು. ಈ ಠರಾವಿನಿಂದ ಪ್ರಜೆಗಳ ಉತ್ಸಾಹವನ್ನು ದ್ವಿಗುಣಿತ ಮಾಡುವದಲ್ಲದೆ, ರಾಷ್ಟ್ರೀಯ ಸಭೆಯು ವರ್ಚಸ್ವವು ಪುನಃ ಪ್ರಸ್ಥಾಪನೆಯಾಗುವದೆಂದು ಡಾ। ಕಿಚಲೂರವರು ನುಡಿ

(ಮುಂದೆ ೧೦ ನೇ ಪಾನು ನೋಡಿರಿ.)

ನಮ್ಮ ವಾಚಕ ಮಹಾಶಯರಿಗೆ—

ಮಹನೀಯರೇ,

ಇದು 'ವೃತ್ತ'ದ ಸಪ್ತಮ ಸಂವತ್ಸರದ ಕಂನೇ ಸಂಚಿಕೆಯು. ಇನ್ನೆರಡು ಸಂಚಿಕೆಗಳನ್ನು ನಿಮಗರ್ಪಿಸಿದರೆ, 'ವೃತ್ತ'ವು ಅಷ್ಟಮ ವರುಷದಲ್ಲಿ ಪ್ರವೇಶಿಸುವದು. ಕಳೆದ ಏಳು ವರುಷಗಳಲ್ಲಿ 'ವೃತ್ತ' ಶಿಷ್ಟವು ಸಾಧಿಸಿದ ದೇಶಸೇವೆಯನ್ನು ತಾವೆಲ್ಲರೂ ಅರಿತವರಿದ್ದೀರಿ. ನೌಕರಶಾಹಿಯುಗೂಡ ಬಾಲ 'ವೃತ್ತ'ವು ಎಷ್ಟು ಧೈರ್ಯದಿಂದ, ಚಾತುರ್ಯದಿಂದ ದಿಟ್ಟತನದಿಂದ, ಮಾರಿನಾಟದೆ ಎದುರಾಗಿದೆಂಬುದೂ ತಾವು ಬಲ್ಲವರೇ. ಮಹಾತ್ಮರ ಅಹಿಂಸಾಪ್ರಧಾನ ಅಸಹಯೋಗದ ಕಾರ್ಯಕ್ರಮವನ್ನು ದೇಶದಲ್ಲಿ ಪ್ರಸಾರಿಸುವದೆ, 'ವೃತ್ತ'ವು ಯಥಾಮತಿ, ಯಥಾಶಕ್ತಿ, ದುಡಿದಿರುವದೆಂದು ತಾವಾಗಿ ಒಪ್ಪುವಿರಿ. ಜಿಲ್ಲೆಯೊಳಗಿನ ವಾತಾವರಣದ ಚಿತ್ರವನ್ನು ಕಾಪಾಡಲು, ಸ್ಥಾನಿಕ ವಿಷಯಗಳ ಮೇಲೆ ಸಹ, 'ವೃತ್ತ'ವು ದಾಕ್ಷಿಣ್ಯಕ್ಕೆ ಬಲಿಬೀಳದೆ, ನಿರ್ಭೀತದಿಂದ ಟೀಕಿಸಿ, ಕರ್ತವ್ಯದಕ್ಷತೆಯನ್ನು ಸಿದ್ಧಪಡಿಸಿದೆ. ವಾಚಕ ಮೋರೆದಾಖಲಾದ ತಾವೆಲ್ಲರೂ 'ವೃತ್ತ'ದ ಕಾರ್ಯಕ್ಷೇತ್ರದ ವ್ಯಾಪ್ತಿಯನ್ನೂ, ಜವಾಬದಾರಿಯನ್ನೂ ನೆನಿಸಿ ತಾವೆಲ್ಲರೂ ಹಿಂದಿನಂತೆ, ಮುಂದೆಯೂ ತಮ್ಮ ಸಹಾಯವನ್ನು ನಮಗರ್ಪಿಸುವರೆಂದು ನಂಬಿದ್ದೇವೆ, ಹೊಸ ಚಂದಾದಾರರನ್ನು ಸಹ ಒದಗಿ ಮಾಡಿ, 'ವೃತ್ತ' ಸಂಗೋಪನಕ್ಕೆ ಅನುಕೂಲತೆಯನ್ನೀಯುವ ಜವಾಬದಾರಿಯೂ ಸಹ ತಮ್ಮದೇ. ಒಬ್ಬೊಬ್ಬರ ಇನ್ನೊಬ್ಬೊಬ್ಬ ಚಂದಾದಾರರನ್ನು ಸಂಪಾದಿಸಿ ಕೊಟ್ಟರೆ, 'ವೃತ್ತ'ಕ್ಕೆ ದೇಶಸೇವೆಯನ್ನು ನಡಿಸಲು ವಿಶೇಷ ಚೈತನ್ಯವೂ, ಸ್ಫೂರ್ತಿಯೂ ಪ್ರಾಪ್ತವಾಗುವವು. ವರ್ಷಾರಂಭದ ಚಂದಾದಾರರೆಲ್ಲರೂ, ತಮ್ಮ ವರ್ಗಣಿ ರೂಪಾಯಿ ೩-ನ್ನು ವಿ. ಪಿ. ಧಿಕ್ಕಾರದ್ವಾರ ರವಾನಿಸಿದರೆ, ನಮಗೂ ಅನುಕೂಲವು, ತಮಗೂ ಅನುಕೂಲವೇ. ಯಾಕಂದರೆ, ವಿ. ಪಿ. ಒಗ್ಗ ತಗಲುವ ೩ ಆಣೆಗಳು ತಮಗೆ ಉಳಿಯುವವು.

ಇತಿ ಮೆನೇಜರ.

ಕಾನಡಾವೃತ್ತ.

ಗುರುವಾರ, ತಾರೀಖು ೨೭ ಮಾಹೆ ಸಪ್ಟಂಬರ ೧೯೨೩

ಐಕ್ಯರಾಗಿರಿ.

ದಿಲ್ಲಿ ಕೊಂಗ್ರೆಸಿನ ಸಂದೇಶ.

ಅಖಿಲ ಭಾರತೀಯ ಪ್ರಜೆಗಳು ಚಾತಕದೃಷ್ಟಿಯಿಂದ ಹಾರೈಸುತ್ತಿದ್ದ ಪುರಾಣ ಪ್ರಸಿದ್ಧ ಹಸ್ತಿನಾವತಿಯೊಳಗೆ ನೆರೆದ ರಾಷ್ಟ್ರೀಯ ಸಭೆಯ ಅಧಿವೇಶನವು ಯಶಸ್ವೀರೀತಿಯಿಂದ ಪಾರಗಂಡಿತೆಂದು ತಿಳಿಸಲು ನಮಗೆ ಸಂತೋಷವಾಗುತ್ತದೆ. ರಾಷ್ಟ್ರೀಯ ರಾಜಕಾರಣವು ಮತಭೇದಗಳ ಮುಸುಕಿನಲ್ಲಿ ಸಿಲುಕಿಕೊಂಡು, ಪ್ರಜೆಗಳಿಗೆ ದಿಗ್ಭ್ರಮೆಯನ್ನುಂಟುಮಾಡಿದಾಗ, ದಿಲ್ಲಿಯೊಳಗಿನ ಜಾದಾ ರಾಷ್ಟ್ರೀಯ ಸಭೆಯು, ರಾಷ್ಟ್ರೀಯ ಸಭಾಭಿಮಾನಿ ಪ್ರಜೆಗಳಿಗೆಲ್ಲ ಸ್ಪಷ್ಟವಾಗಿ ಮುಂದಿನ ದಾರಿಯನ್ನು ದಿಗ್ದರ್ಶನ ಮಾಡಿರುವದೆಂದು ಯಾರು ಒಪ್ಪದೇ ಇರರು. ಜಾದಾ ರಾಷ್ಟ್ರೀಯ ಸಭೆಯ ಅಧಿವೇಶನದಿಂದ ರಾಷ್ಟ್ರೀಯ ಐಕ್ಯಕ್ಕೆ ಸ್ವರಾಜ್ಯ ಸಂಪಾದನೆಗೆ ಅನುಕೂಲ ಪರಿಸ್ಥಿತಿಯುಂಟಾಗಿರುವದೆಂದು ನೋಡಿ, ಯಾವ ಭಾರತೀಯನಿಗೆ ಆಲ್ಹಾದವೆನಿಸದಿಂದು?

ಸ್ವಾಗತಾಧ್ಯಕ್ಷ ಡಾ|| ಅನ್‌ಸಾರಿಯವರ ಉಪನ್ಯಾಸವೂ, ರಾಷ್ಟ್ರೀಯ ಸಭಾಧ್ಯಕ್ಷ ಮೌ|| ಅಬುಲ್ ಕಲಮ ಆಝಾದರವರ ಭಾಷಣವೂ ರಾಷ್ಟ್ರೀಯ ಐಕ್ಯಬೋಧದಿಂದ ತುಂಬಿತುಳುಕುತ್ತಿದ್ದವು. ಡಾ|| ಅನ್‌ಸಾರಿಯವರು ನುಡಿದಂತೆ, ಕೆಸಿಯಾ ನಿರ್ಣಯದ ನಂತರ ಸಹ, ನೇಮಸ್ತರು, ರಾಷ್ಟ್ರೀಯ ಸಭೆಯೊಡನೆ ಸಹಕಾರ್ಯ ಮಾಡದಿರುವದನ್ನು ನೋಡಿ, ಅವರಿಗಾಗಿ ವ್ಯಸನವಾಗುವದು. ರಾಷ್ಟ್ರೀಯ ಸಭೆಯವರು ತಮ್ಮ ಬಾಂಧವರ ಸಹಕಾರ್ಯವನ್ನು ಹಾರೈಸುತ್ತಿದ್ದಾಗ, ಸಾಮ್ರಾಜ್ಯವು ನೇಮಸ್ತ ದೇಶಬಾಂಧವರನ್ನು ಮಿಮುಖ ಕಳಿಸಿರುವಾಗ, ನೇಮಸ್ತರು ರಾಷ್ಟ್ರೀಯ ದೇಶಬಾಂಧವರೊಡನೆ ರಾಷ್ಟ್ರೀಯ ಸಭಾಮಂಟಪದಲ್ಲಿ ದೇಶಮಾತೆಯ ಪಾರತಂತ್ರ್ಯಕಲಂಕವನ್ನು ತೊಳೆಯಲು ನೆರವಾಗಿದ್ದರೆ, ಅಖಿಲ ಭಾರತೀಯರಿಗೆಲ್ಲ ನೇಮಸ್ತರ ಪಾರಮಾರ್ಥಿಕ ದೇಶಸೇವೆಯು ಅರಿವುಂಟಾಗುತ್ತಿತ್ತು, ನೌಕರಶಾಹಿಗೂ ನೇಮಸ್ತರ ಬೆದರಿಕೆಯು ಸಾಧಾರವಿತ್ತೆಂದು ತಿಳಿಯಬರುವಾಗುತ್ತಿತ್ತು. ನೇಕ ನಾಮದಾರ ಶ್ರೀನಿವಾಸ ಶಾಸ್ತ್ರಿಗಳಿಗೆ ಇದೇ ಸಂದರ್ಭದಲ್ಲಿ ಅಸ್ವಸ್ಥತೆಯುಂಟಾದದ್ದು ನಮ್ಮೆಲ್ಲರ ದುರ್ದೈವವು. ರಾಷ್ಟ್ರೀಯ ಸಭಾಧ್ಯಕ್ಷರ ಭಾಷಣವು ಬಹಳೇ ಚಿತ್ತವೇಧಕವಾಯಿತು. ಹಿಂದೂ-ಮಹಮ್ಮದೀಯರ ಐಕ್ಯದ ಬಗ್ಗೆ ಮೌಲಾನಾರವರು ಆಡಿದ ನುಡಿಗಳನ್ನು ಎಲ್ಲರೂ ಮನನೀಯ ಮಾಡತಕ್ಕದ್ದು. ಮತಭೇದಗಳಿಂದ, ಜ್ಞಾತಿ ಕಲಹಗಳಿಂದ ದೇಶಸೇವೆಯನ್ನು ಜರುಗಿಸಲಿಚ್ಛಿಸುವವರು ಮೌಲಾನಾರವರ ಉಪನ್ಯಾಸಪಠಣದಿಂದ ಜಾಗೃತರಾಗಬೇಕೆಂದು ನಾವು ಮನಃಪೂರ್ವಕ ಬಯಸುವೆವು. ಹಿಂದೂ-ಮಹಮ್ಮದೀಯರ ಐಕ್ಯರಕ್ಷಣೆಕ್ಕಾಗಿ ಪ್ರತಿಯೊಬ್ಬ ಭಾರತೀಯನು ಯಾವ ವೃತ್ತಿಯನ್ನು ಧರಿಸಬೇಕು, ಎಂಬದನ್ನು ಮೌಲಾನಾರವರು ಸೋದಾಹರಣದಿಂದ ಪ್ರತಿಪಾದಿಸಿರುವರು. ಸ್ವರಾಜ್ಯಕ್ಕಿಂತ ಹಿಂದೂ_ಮುಸಲ್ಮಾನರ ಯಾನೆ ಅಖಿಲ ಸಮಾಜದವರ ಐಕ್ಯವು ಶ್ರೇಷ್ಠವಾದದ್ದು. ಸಾಮಾಜಿಕ ಐಕ್ಯವೇ ಭರತಖಂಡದ ಪೂರ್ಣಾವಸ್ಥೆಯು. ಈ ಮಾನದಿಂದ ನೋಡಿದರೆ, "ಸ್ವರಾಜ್ಯವನ್ನು ೨೪ ತಾಸುಗಳಲ್ಲಿ ಕೊಡುತ್ತೇನೆ ಹಿಂದೂ-ಮಹಮ್ಮದೀಯರ ಐಕ್ಯವನ್ನೊಂದು ತೊರೆಯಿರಿ." ಎಂದು ದೇವದೂತರು ಅವತೀರ್ಣಹೊಂದಿ ಕೇಳಿದರೆ, ಮೌಲಾನಾರವರು "ಹಿಂದೂ-ಮಹಮ್ಮದೀಯರ ಐಕ್ಯವನ್ನೇ ಕೊಡಿರಿ," ಎಂದು ಬೇಡುವದು ದೇಶೋದ್ಧಾರಕನ, ಮಾನವ ಜಾತಿಯ ಉದ್ಧಾರಕನ ಅಂತಃಕರಣದ ದ್ಯೋತಕವಲ್ಲವೇ! ಹಿಂದೂ_ಮುಸಲ್ಮಾನರ ಐಕ್ಯ ಒಂದಿದ್ದರೆ, ಭಾರತೀಯರು ಸ್ವರಾಜ್ಯವೇಕೆ? ಇಡೀ ಮಾನವ ಜಾತಿಯ ಉದ್ಧಾರವನ್ನೇ ಕ್ಷಣಾರ್ಧದಲ್ಲಿ ಸಂಪಾದಿಸಬಲ್ಲರು. ಅಷ್ಟು ಸಾಮರ್ಥ್ಯವು ಭಾರತೀಯರ ಐಕ್ಯದ ಮೇಲೆ ಅವಲಂಬಿಸಿದೆ. ಅಷ್ಟು ಮಹತ್ವವು ನಮ್ಮ ಐಕ್ಯಮತ್ಯಕ್ಕಿದೆ. ಇದೇ ದೃಷ್ಟಿಯನ್ನಿಟ್ಟು, ಪ್ರತಿಯೊಬ್ಬ ಭಾರತೀಯನು ದೇಶಸೇವೆಯನ್ನು, ಜ್ಞಾತಿಸೇವೆಯನ್ನು ಕೈಕೊಂಡಿದ್ದರೆ, ಇಂದು ಈ ದುರವಸ್ಥೆಯಲ್ಲಿ ನಾವು ನರಳುತ್ತಿದ್ದಿಲ್ಲ, ನರಳಬೇಕಾಗಿದ್ದಿಲ್ಲ. ಈ ಬಗ್ಗೆ ಮೌಲಾನಾ ಮಹಮ್ಮದ ಅಲ್ಲಿಯವರು ಭಾಷಣ ಮಾಡುವಾಗ ಪಂಜಾಬಿ ಪ್ರತಿನಿಧಿಗಳನ್ನುದ್ದೇಶಿಸಿ, "ನಿಮ್ಮ, ನಿಮ್ಮ ಫ್ರಾಂಟಿಯರ ಪ್ರಾಂತಗಳಿಗೆ ವಿಶ್ರಾಂತಿಗೊಡಿರಿ. ನಿಮ್ಮ ಜ್ಞಾತಿ ಕಲಹಗಳನ್ನು ನಾನು ಪರಿಹರಿಸುವೆನು" ಎಂದು ಆಹ್ವಾನ ಮಾಡಿದ್ದರ ತಾತ್ಪರ್ಯವಾದರೂ ಇದೇ. ಜ್ಞಾತಿಸೇವೆಯ ಸಂಕುಚಿತ ವಾತಾವರಣದಲ್ಲಿ ಕೆಲಸ ಮಾಡುವ ಸೇವಕರು ರಾಷ್ಟ್ರಸೇವೆಯ ವಿಸ್ತೀರ್ಣ ಬುದ್ಧಿಯನ್ನು ತಳೆಯಲಸಮರ್ಥರಾಗಿದ್ದದರಿಂದಲೇ ಪಂಜಾಬ_ಸಂಯುಕ್ತ ಪ್ರಾಂತಗಳಲ್ಲಿ ಹಿಂದೂ-ಮುಸಲ್ಮಾನರೊಳಗೆ ಕಲಹಗಳೆದ್ದು, ರಾಷ್ಟ್ರೀಯ ಪ್ರಗತಿಯು ಕುಂಠಿತವಾಗಿದೆ. ದೇಶಬಾಂಧವರೆಲ್ಲರೂ ರಾಷ್ಟ್ರೈಕ್ಯದ ಮಹತ್ವವನ್ನರಿತು, ಇನ್ನಾದರೂ ತಮ್ಮ ಸೇವೆಯನ್ನು ತಕ್ಕ ಮಾರ್ಗದಿಂದ ಆಕ್ರಮಿಸಬುದ್ಯುಕ್ತರಾಗಬೇಕೆಂದು ನಮ್ಮ ಮನಃಪೂರ್ವಕ ಪ್ರಾರ್ಥನೆಯಿದೆ.

ರಾಷ್ಟ್ರೀಯ ಸಭೆಯಲ್ಲಿ ಮಂಜೂರಾದ ಠರಾವುಗಳಲ್ಲಿ ಸಹ ಇದೇ ಧೋರಣವು ವ್ಯಕ್ತವಾಗಿದೆ. ರಾಷ್ಟ್ರೀಯ ಐಕ್ಯಸಾಧನಕ್ಕಾಗಿ, ಐಕ್ಯಸಂವರ್ಧನಕ್ಕಾಗಿ, ರಾಷ್ಟ್ರೀಯ ಸಭೆಯು ಕೈಕೊಂಡ ನಿರ್ಣಯಗಳನ್ನು ಪ್ರಜೆಗಳೆಲ್ಲರೂ ಪರಿಶೀಲಿಸಬೇಕೆಂದು ನಮ್ಮ ಬಿನ್ನಹವಿದೆ. ಕೌನ್ಸಿಲು ಬಹಿಷ್ಕಾರವನ್ನು ಶಿಥಿಲಮಾಡಿ ರಾಷ್ಟ್ರೀಯ ಸಭೆಯು ತನ್ನ ಅನುಯಾಯಿಗಳಲ್ಲಿ ಉದ್ಭವಿಸಿದ ಅಂತಃಕಲಹವನ್ನು ನಿರಿಸಿದೆ. ಮನೋದೇವತೆಗೆ ಅಥವಾ ನಿರ್ಣಯಕ್ಕೆ ಅನುಜ್ಞೆಗೆ ವಿರೋಧ ಬಾರದ ರಾಷ್ಟ್ರೀಯ ಸಭಾಭಿಮಾನಿಗಳಿಗೆ ಕಾಯಿದೆ ಕೌನ್ಸಿಲುಗಳ ಉಮೇದ್ವಾರರಾಗಿ ನಿಲ್ಲಲಿಕ್ಕೂ, ಚುನಾವಣೆಯಲ್ಲಿ ಮತದಾನ ಮಾಡಲಿಕ್ಕೂ ಅನುಮತಿಯನ್ನಿತ್ತು, ಸ್ವರಾಜ್ಯ ಪಕ್ಷದವರಿಗೆ ಐಕ್ಯಮ

ಹಾಗೆ, ಮಹಾತ್ಮರ ವಿಧಾಯಕ ಕಾರ್ಯಕ್ರಮದ ಮೇಲಿನ ನಿಷ್ಠೆಯನ್ನು ಪುನಃ ಜಾಹೀರು ಮಾಡಿ, ಅದೇ ಭಾರತೀಯರ ಮೋಕ್ಷ ಪ್ರಾಪ್ತಿಯ ಸಾಧನವೆಂದು ಠರಾಯಿಸಿದೆ. ಕೌನ್ಸಿಲು ಪ್ರವೇಶವನ್ನು ಕೊಂಗ್ರೆಸು ಪುರಸ್ಕರಿಸುವದಿಲ್ಲ. ಅದರಿಂದ ದೇಶವು ಪಾರತಂತ್ರ್ಯ ಶೃಂಖಲೆಯಿಂದ ವಿಮೋಚನ ಹೊಂದುವದೆಂದೂ ಅದರ ಅಭಿಪ್ರಾಯವಿಲ್ಲ. ಕೇವಲ ದೇಶಬಾಂಧವರಿಗೆ ತಮ್ಮ ಮತದಂತೆ ರಾಷ್ಟ್ರಸೇವೆಯನ್ನು ಜರುಗಿಸಲು ಇಂಬುಗೊಟ್ಟಿದೆ. ಕೌನ್ಸಿಲು ಬಹಿಷ್ಕಾರ ಚಳವಳಿಯನ್ನು ತಹಕೂಬ ಮಾಡುವ ಕಾರಣವಾದರೂ ಅಂತಃಕಲಹ ಪರಿಹಾರವೇ. ಮೌಲಾನಾ ಮಹಮ್ಮದ ಅಲ್ಲಿಯವರು ಎರಡೂ ಪಕ್ಷಗಳಿಗೆ ಸಮ್ಮತವಾದ ಯೋಜನೆಯನ್ನು ತಯಾರಿಸಿ, ರಾಷ್ಟ್ರೀಯ ಸಭೆಯ ಮೇಲಿನ ಆಪತ್ತನ್ನು ಪರಿಹರಿಸಿದ ಬಗ್ಗೆ ಅಖಿಲ ಭರತಖಂಡವು ಅವರಿಗೆ ಸದೈವ ಋಣಿಯಾಗಿರುವದು. ದೇಶಬಂಧುಗಳೂ, ಶ್ರೀ. ರಾಜಗೋಪಾಲಾಚಾರ್ಯರೂ ಮೌಲಾನಾ ಮಹಮ್ಮದಲ್ಲಿಯವರ ಯೋಜನೆಗೆ ಸಮ್ಮತಿಯನ್ನಿತ್ತು, ರಾಷ್ಟ್ರವನ್ನು ಉಪಕರಿಸಿರುವರು.

ಕಾಯಿದೇಭಂಗದ ಠರಾವು ಮಹತ್ವದ್ದಿದೆ. ನೌಕರಶಾಹಿಯುಗೂಡ ಕಾಯಿದೇಭಂಗ ಮಾಡಿ, ಮಲ್ಲಯುದ್ಧ ಮಾಡಲು, ರಾಷ್ಟ್ರವು ತಯಾರಾಗಿದೆ. ಮಹಾತ್ಮರ ಕಾರ್ಯಕ್ರಮದಿಂದ ಭಾರತೀಯರ ಆತ್ಮಕ್ಲೇಶ ಸಹಿಸುವ ಸಾಮರ್ಥ್ಯವು ವಿಶೇಷವಾಗಿ ವೃದ್ಧಿಗೈದಿದೆ. ಅದಕ್ಕೆ ಈಗ ಬೇಕಾದದ್ದು ತಕ್ಕ ನಿಯಂತ್ರಣವು, ಜಡಪಶಾಹಿಯ ಕಾನೂನುಗಳನ್ನು ರದ್ದುಪಡಿಸುವ ಅಮೋಘ ಶಸ್ತ್ರವು, ಕಾಯಿದೇ ಭಂಗವು. ಅದನ್ನು ಸಂಘಟಿಸಲು ರಾಷ್ಟ್ರೀಯ ಸಭೆಯು ಕಮಿಟಿಯನ್ನು ನೇಮಿಸಿ, ಸ್ವರಾಜ್ಯಸಂಪಾದನೆಯ ಕಾರ್ಯಕ್ಷಮ ಮಾರ್ಗವನ್ನು ಆಕ್ರಮಿಸಿದೆ. ಡಾ। ಸೈಫುದ್ದೀನ ಕಿಚಲುರವರು ಈ ಠರಾವಿನ ಬಗ್ಗೆ ತನು-ಮನ-ಧನ ದುಡಿದು, ನಮ್ಮೆಲ್ಲರನ್ನು ಉಪಕರಿಸಿರುವರು.

ಸಾಮಾಜಿಕ, ಐಕ್ಯ ಯೋಜನೆಗಾಗಿಯೂ ಒಂದು ಕಮಿಟಿಯು ನೇಮಕಹೊಂದಿದೆ. ಈ ಕಮಿಟಿಯು ಹಿಂದೂ-ಮಹಮ್ಮದೀಯ ಬಾಂಧವರ. ರಕ್ತಪಾತದಿಂದ ಕಲಂಕ ಹೊಂದಿದ ಪ್ರದೇಶಗಳನ್ನೆಲ್ಲ ಸಂದರ್ಶಿಸಿ, ಅಪರಾಧಿಗಳನ್ನು ಕಂಡುಹಿಡಿಯುವದು ಹಾಗು ನಿಷ್ಪಕ್ಷಪಾತದಿಂದ ಅವರವರ ಜಬಾಬದಾರಿಯನ್ನು ಗೊತ್ತುಪಡಿಸುವದು. ಈ ಕಮಿಟಿಯಿಂದ ಹಿಂದೂ-ಮಹಮ್ಮದೀಯರ ಐಕ್ಯಸಂವರ್ಧನಕ್ಕೆ ಬಹಳೇ ಅನುಕೂಲವಾಗುವದು. ಲಾಲಾ ಲಜಪತರಾಯ, ಸರದಾರ ಮೊಹತಬಸಿಂಗ, ಡಾ। ಅನ್‌ಸಾರಿಯವರಂಥ ಮಹಾ ದೇಶಸೇವಕರು ರಾಷ್ಟ್ರೀಯ, ಸಾಮಾಜಿಕ ಐಕ್ಯ ಯೋಜನೆಯನ್ನು ತಯಾರಿಸಿದ ಬಳಿಕ, ಅದರಲ್ಲಿ ಭರತಖಂಡದ ಉದ್ಧಾರದ ಉಪಾಯಗಳೇ ಪ್ರತಿಬಿಂಬಿತವಾಗುವವೆಂದರೆ ಅತಿಶಯೋಕ್ತಿಯಾಗದು. ಬ್ರಿಟಿಶ ಸಾಮಗ್ರಿಗಳ ಮೇಲಿನ ಬಹಿಷ್ಕಾರದ ಠರಾವು ಮಹಾತ್ಮರ ಸಾತ್ವಿಕ ಕಾದಾಟದ ವಿರೋಧವಾಗಿದ್ದರೂ, ಅದನ್ನು ನಾಡಿಯ ಪುರಸ್ಕರಣೆಯ ಅಡ್ಡ ಬಾರದಂತೆ ರಾಷ್ಟ್ರೀಯ ಸಭೆಯು ಚಾತುರ್ಯದಿಂದ ಯೋಜಿಸಿದೆ. ಬ್ರಿಟಿಶ ಸಾಮ್ರಾಜ್ಯದ ಅಂತಃಕರಣ ಭರತಖಂಡದ ಉದ್ಧಾರಕರಿಗೆ ವಿರೋಧಕವಾಗಿರುವದೆಂದು ಕೆನಿಯಾ ನಿರ್ಣಯವು ಸ್ಪಷ್ಟೀಕರಿಸಿದೆ. ರಾಷ್ಟ್ರೀಯ ಕಲಂಕವನ್ನು ಪರಿಹರಿಸಲು, ಕೊಂಗ್ರೆಸು ನಿರ್ಧರಿಸಿದೆ. ಶುದ್ಧಿ ಚಳವಳಿಯ ಔಚಿತ್ಯವನ್ನು ಭಂಗಿಸುವ ಆಚಾರಗಳ ವಿಚಾರ ಮಾಡುವರೆ ಹಿಂದೂ-ಮಹಮ್ಮದೀಯರ ಸಂಯುಕ್ತ ಕಮಿಟಿಯೊಂದನ್ನು ಕೊಂಗ್ರೆಸು ನೇಮಿಸಿ, ಶುದ್ಧಿ ಚಳವಳಿಯನ್ನು ನಿಯಮನ ಮಾಡಿದೆ, ದೇಶದಲ್ಲಿ ಶಾಂತತೆಯನ್ನು ಪ್ರಸ್ಥಾಪಿಸಲಿಕ್ಕೂ ಅಶಾಂತತೆಯ ಕಾಲದಲ್ಲಿ ನಾಗರಿಕರ ಸೊತ್ತು ಹಾಗು ಜೀವಿತ ರಕ್ಷಣಕ್ಕೂ ಕಾವಲುಗಾರಮಂಡಳಗಳನ್ನು ಏರ್ಪಡಿಸುವ ಠರಾವುಗಳು ದೇಶದಲ್ಲಿ ಶಾಂತತೆಯನ್ನೂ, ವ್ಯವಸ್ಥೆಯನ್ನೂ ಕಾಪಾಡಲಿಚ್ಛಿಸುವ ರಾಷ್ಟ್ರೀಯ ಸಭೆಗೆ ಅನುರೂಪವಾಗಿವೆ. ಶಾಂತತಾಭಂಗ ಪ್ರಸಂಗದಲ್ಲಿ ಕಲಹ ಬೀಜಗಳನ್ನು ಪರಿಶೋಧಿಸಿ, ಅವುಗಳನ್ನು ನಿವಾರಿಸಲು, ಮಿತ್ರ ಕಮಿಟಿಗಳನ್ನು ನೇಮಿಸಬೇಕೆಂದು ಮಾಡಿದ ಠರಾವಿನಿಂದ ಅಂತಃಕಲಹಗಳ ಪರಿಹಾರಕ್ಕೆ ಬಹಳೇ ಅನುಕೂಲವಾಗುವದು. ಕಾವಲುಗಾರ ಮಂಡಳಗಳು, ಮಿತ್ರ ಕಮಿಟಿಗಳು, ಅನ್ಯೋನ್ಯ ಸಹಾಯಕವಾಗಿ ದೇಶದೊಳಗಿನ ವಾತಾವರಣವು ದೂಷಿತವಾಗದಂತೆ ಎಚ್ಚರಿಕೆಯನ್ನು ಕೈಕೊಳ್ಳುವವು. ಮೌಲಾನಾ ಮಹಮ್ಮದ ಅಲ್ಲಿಯವರು ನುಡಿದಂತೆ, ಕೊಂಗ್ರೆಸ ಕಾವಲುಗಾರ ಮಂಡಳಗಳಲ್ಲಿ ಖಿಲಾಫತ ಮೊದಲಾದ ಎಲ್ಲ ಸ್ವಯಂಸೇವಕ ಪಥಕಗಳು ಪ್ರವೇಶಗೊಂಡರೆ, ಅದೊಂದು ರಾಷ್ಟ್ರೀಯ ಸಭೆಯ ಗೌರವದ ದೃಶ್ಯ ಚಿನ್ಹವಾಗುವದು.

ಜಾದಾ ರಾಷ್ಟ್ರೀಯ ಸಭೆಯ ಸಂಕ್ಷಿಪ್ತ ವಿವೇಚನವನ್ನು ಇಂದಿಗೆ ಮಾಡಿ, ಅದರಿಂದ ಸಾಧ್ಯವಾದ ಕಾರ್ಯದ ರೂಪ-ರೇಷೆಯನ್ನು ವಾಚಕರಿಗೆ ದಿಗ್ದರ್ಶನ ಮಾಡಿರುವೆವು. ಜಾದಾ ರಾಷ್ಟ್ರೀಯ ಸಭೆಯ ಮುಖ್ಯ ಸಂದೇಶವು 'ಐಕ್ಯರಾಗಿರಿ' 'ಐಕ್ಯರಾಗಿರಿ' ಎಂಬ ಸೂತ್ರರೂಪದಿಂದ ಹೇಳಬಹುದು. ಸದ್ಯದ ರಾಜಕಾರಣದಲ್ಲಿ ಭರತಖಂಡಕ್ಕೆ ಬೇಕಾದ ದಿವ್ಯ ಔಷಧವು ಇದೇ. ದಿಲ್ಲಿಯ ರಾಷ್ಟ್ರೀಯ ಸಭೆಯೂ ದೇಶದ ನಿದಾನವನ್ನು ಪರ್ಯಾಲೋಚಿಸಿ, ಅವಶ್ಯವಿರುವ ಉಪಾಯಯೋಜನೆಗಳನ್ನು ಕೈಕೊಂಡ ಬಗ್ಗೆ ಪುರಾಣಪ್ರಸಿದ್ಧ ಹಸ್ತಿನಾವತಿ ಪಟ್ಟಣದಲ್ಲಿ ಸೇರಿದ ಜಾದಾ ರಾಷ್ಟ್ರೀಯ ಸಭೆಗೆ ಅಖಿಲ ಭರತಖಂಡವು ಅಂತಃಕರಣಪೂರ್ವಕ ಋಣಿಯಾಗಿರುವದು. ಅಖಿಲ ಭರತಪುತ್ರರೆಲ್ಲರು ರಾಷ್ಟ್ರೀಯ ಸಭೆಯ ಠರಾವುಗಳಲ್ಲಿ ರೇಖಾಂಕಿತವಾದ ಮಾರ್ಗವನ್ನೇ ನಿಷ್ಠೆಯಿಂದ, ಭಕ್ತಿಯಿಂದ ಆಕ್ರಮಿಸಿ ದೇಶೋದ್ಧಾರವನ್ನೂ, ಮಾನವ ಜಾತಿಯ ಉದ್ಧಾರವನ್ನೂ, ಸಾಧಿಸಲೆಂದು ನಾವು ಮನಃಪೂರ್ವಕ ಹಾರೈಸುವೆವು.

ಸ್ಫುಟ ಸೂಚನೆಗಳು.

೧. ಭಾರತೀಯರ ಪಾರತಂತ್ರ್ಯದ ಉದಾಹರಣೆಯೊಂದು ಸದ್ಯಕ್ಕೆ ಸಂಭವಿಸಿತು. ಕರಾಚಿ ಬಂದರದಲ್ಲಿ ವಿಲಾಯತಿಯಿಂದ ಒಂದು ಹಡಗವು ಬಂದರ ಮಾಡಿತ್ತು. ಹಡಗಿನ ಮೇಲಿ ಸರಕನ್ನು ಹೇರುವಾಗ, ಹಿಂದೀ ಕೂಲಿಕಾರನೊಬ್ಬನು ಥಕ್ಕನೆ ನಿಧನಹೊಂದಿದನು. ಆ ಬಗ್ಗೆ ಚೌಕಶಿಯಾಗಿ, ಆ ಬ್ರಿಟಿಶ ಹಡಗದ ಕಪ್ತಾನರಿಗೆ ಸೆರೆಹಿಡಿದರು. ಈ ಬಗ್ಗೆ ವಿಲಾಯತಿಯೊಳಗಿನ 'ಇಂಪೀರಿಯಲ್ ಸರ್ವೀಸ ಗಿಲ್ಡ' ಎಂಬ ಸಂಸ್ಥೆಯು, ತೀವ್ರಾತಿತೀವ್ರ ನಿಷೇಧವನ್ನು ಪ್ರದರ್ಶಿಸಿ ಭಾರತ ಮಂತ್ರಿಗಳ ಇಂಡಿಯಾ ಆಫೀಸಿಗೆ ಕಳಿಸಿತು. ಮುಂಬಯಿ ಸರಕಾರವು ಈ ಬಗ್ಗೆ ಕೂತಲಿ ಚೌಕಶಿ ಮಾಡಿ, ಪೋಲೀಸರ ಕೃತ್ಯವನ್ನು ನಿಷೇಧಿಸಿದ್ದಲ್ಲದೆ, ಕಪ್ತಾನರಿಗೆ ಸೆರೆಹಾಕಿದ ಪೋಲೀಸ ಇನ್ಸಪೆಕ್ಟರರನ್ನು ಪದಚ್ಯುತ ಮಾಡಿತು. ಮುಂಬಯಿ ಸರಕಾರದ ಯೋಜನೆಯನ್ನು ಇಂಡಿಯಾ ಆಫೀಸು ಸದ್ರಿ ಗಿಲ್ಡ ಸಂಸ್ಥೆಯ ಚಾಲಕರಿಗೆ ಕಳುಹಿಸಿದೆ. ಪ್ರಕರಣವನ್ನು ತತ್ಪರತೆಯಿಂದ ಚೌಕಶಿ ಮಾಡಿ, ಶಾಸನಾರ್ಹರನ್ನು ದಂಡಿಸಿದ ಬಗ್ಗೆ ಮುಂಬಯಿ ಸರಕಾರಕ್ಕೆ ನಾವು ಮನಃಪೂರ್ವಕ ಅಭಿನಂದಿಸುವೆವು. ವಿಲಾಯತಿಯೊಳಗಿನ ಇಂಡಿಯಾ ಆಫೀಸೂ, ಗಿಲ್ಡ ಸಂಸ್ಥೆಯ ನಿಷೇಧವನ್ನು ಮನ್ನಿಸಿದ ಬಗ್ಗೆ ಅದನ್ನು ಅಭಿನಂದಿಸಬೇಕಾಗಿದೆ. ಅಪರೆ ನಮ್ಮ ಮುಂಬಯಿ ಕಾಯಿದೆ ಕೌನ್ಸಿಲು, ಡಾ। ಕಾಪಾಡಿಯಾರವನ್ನು ವೃಥಾ ಪೀಡಿಸಿದ ಬಗ್ಗೆ ಸುಪರಿಂಟೆಂಡೆಂಟ ಕಾರ್ಟರರವರ ಮೇಲೆ ನಿಂದಾವ್ಯಂಜಕ ಠರಾವನ್ನು ಪಾಸು ಮಾಡಿದರೂ, ಅವರನ್ನು ದಂಡಿಸಿರೆಂದು ಇಡೀ ಇಲಾಖೆಯಲ್ಲಿ ಕೋಲಾಹಲವೆದ್ದರೂ, ನಮ್ಮ ಪ್ರಾಂತಿಕ ಸರಕಾರವು ಗಟ್ಟಿಯಾಗಿ ಕೂತುಕೊಂಡಿದೆ. ಇಷ್ಟಕ್ಕೇ ತಡೆಯದೆ, ಕಾಯಿದೆ ಕೌನ್ಸಿಲಿನಲ್ಲಿ ಸುಪರಿಂಟೆಂಟ ಕಾರ್ಟರವರನ್ನು ದಿಟ್ಟತನದಿಂದ ಟೀಕಿಸಿದ ಬಗ್ಗೆ, ಮಿ। ಜಹಾಂಗೀರಜಿ ಪೆಟಿಟ್‌ರವರಗೂಡ ಕೌನ್ಸಿಲಿನ ಯುರೋಪಿಯನ ಸಭಾಸದರು, ಅಪ್ಪೈರೆ ಅಧಿವೇಶನದಲ್ಲಿ ಆದರಿಸಿದ ಅಸಹಕಾರಿತೆಯನ್ನು ನಾವು ವಾಚಕರಿಗೆ ಈ ಮೊದಲೇ ಅರುಹಿರುವೆವು. ಈ ಎರಡು ಸಂಗತಿಗಳಿಂದ ನಾವೇನು ಬೋಧ ಪಡೆಯಬೇಕು? 'ಸ್ವರಾಜ್ಯ'ವೆಂದು ಪ್ರಚಂಡ ಜಾಹೀರಾತು ಕೊಟ್ಟು ಬಲು ಔದಾರ್ಯ ಬುದ್ಧಿಯಿಂದ ತಮ್ಮ ಭಾರತೀಯ ಪ್ರಜೆಗಳಿಗೆ ಬ್ರಿಟಿಶ ಮಹಾರಾಜಾಧಿರಾಜರು ಅರ್ಪಿಸಿದ ಕೌನ್ಸಿಲುಗಳಿಗೆ, ವಿಲಾಯತಿಯೊಳಗಿನ ಖಾಸಗಿ ಸಂಸ್ಥೆಯಾದ 'ಇಂಪೀರಿಯಲ ಸರ್ವ್ಹಿ

ಸ ಗಿಲ್ಡಿನಷ್ಟು ಸಹ, ಅಧಿಕಾರವಿಲ್ಲೆಂದು ಸ್ಪಷ್ಟವಾಗುವದಿಲ್ಲೇನು ? ಗಿಲ್ಡಿನವರು ನಿಷೇಧಪ್ರದರ್ಶನವಮಾಡಿದ ಕೂಡಲೆ, ವಿಲಾಯತಿಯಿಂದ ಹಿಂದುಸ್ಥಾನದವರೆಗಿನ ನೌಕರಶಾಹಿ ರಾಜ್ಯದ ಯಂತ್ರಗಳೆಲ್ಲ ಗರಗರನೆ ತಿರುಗಿ, ಅವರ ಇಷ್ಟಕಾರ್ಯಸಾಧನೆಯಾಗುತ್ತದೆ. ಕಾಯಿದೆಯಂತೆ ಪ್ರಸ್ಥಾಪಿತವಾದ ಕೌನ್ಸಿಲುಗಳಲ್ಲಿ ಹೋರ್‍ಯಾಡಿ, ವರವರಾವಧಿಯ ಯತ್ನದಿಂದ, ಪಾಸು ಮಾಡಿಕೊಂಡ ಠರಾವುಗಳು ಕಸದ ಬುಟ್ಟಿಯಲ್ಲಿ ಬೀಳುತ್ತವೆ. ಅಂದಮೇಲೆ, ಮೊಂಟಿಗ್ಯೂವರ ಕಾಯಿದೆ ಕೌನ್ಸಿಲುಗಳು " ಬುದ್ಧನ ದಾಡಿಯಂತೆ " ನಿರರ್ಥಕವಾಗಿರುವವಲ್ಲವೇ ? ಇಂಥ ಕೌನ್ಸಿಲುಗಳು ನಮಗೆಂದಾದರೂ ಸ್ವರಾಜ್ಯದ ದಾರಿಯನ್ನು ತೋರಿಸುವವೇನು ?

---

೨ ಬೆಂಚಕೋರ್ಟಿನ ನ್ಯಾಯದ ಮೇಲೆ ಕೆಲ ವಿಚಾರಗಳನ್ನು ಪ್ರಕಟಿಸಿ, ಒಂದು ವಾರ ಮುಗಿಯುವಷ್ಟರಲ್ಲಿ, ನಮ್ಮ ಜಿಲ್ಹೆಯೊಳಗಿನ ಬೆಂಚಕೋರ್ಟುಗಳ ಅಧಿಕಾರಗಳನ್ನು ಸರಕಾರವು ಹಿಂತೆಗೆದುಕೊಂಡ ಶುಭ ಸುದ್ದಿಯನ್ನು ಜಾಹೀರ ಪಡಿಸುವ ಸುಯೋಗವು ನಮಗೆ ಪ್ರಾಪ್ತವಾಗಿದೆ. ಕಳೆದ ಮಂಗಳವಾರ ಸಾಯಂಕಾಲಕ್ಕೆ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರ ಕಡೆಯಿಂದ ಮಾಮಲೇದಾರರಿಗೆ ಬಂದು, ಆ ಬಾತ್ಮಿಯು ಕೋರ್ಟಿನ ನ್ಯಾಯಾಸನಕ್ಕೆ ಪಿಷ್ಟವಾಗಿರುವಾಗ, ಬೆಂಚಕೋರ್ಟಿಗೆ ತಿಳಿಸಲ್ಪಟ್ಟಿತು. ಕೂಡಲೆ, ಮೆಜಿಸ್ಟ್ರೇಟರು ಸ್ಥಾನತ್ಯಾಗ ಮಾಡಬೇಕಾಯಿತು. ಶಾಪವಾದವ ಬೆಂಚಕೋರ್ಟ ಈ ಯೋಜನೆಯಿಂದ ನಾಮಶೇಷವಾಗುವದು. ನಮ್ಮಲ್ಲಿಯ ಬೆಂಚಕೋರ್ಟ ಸಂಸ್ಥೆಯನ್ನು ತತ್ಪರತೆಯಿಂದ ನಿರ್ಮೂಲಿಸಿದ ಬಗ್ಗೆ, ಪ್ರಾಂತಿಕ ಸರಕಾರವನ್ನು ನಾವು ಮನಃಪೂರ್ವಕ ಅಭಿನಂದಿಸುವೆವು. ಆದರೆ, ಒಂದು ಮಾತನ್ನು ಮಾತ್ರ ಈ ಬಗ್ಗೆ ನುಡಿಯಬೇಕಾಗಿದೆ. ಬೆಂಚಕೋರ್ಟಗಳನ್ನು ಅಂತ್ಯಪಡಿಸುವದು ಇಷ್ಟವಿದ್ದರೂ, ಡಿ. ಮೆಜಿಸ್ಟ್ರೇಟರು ತಾಂತಿದ್ವಾರಾ ಬೆಂದು ಅಂತ್ಯಪಡಿಸುವಷ್ಟು ಗಾಬರಿ ಮಾಡಿದ್ದು, ಆರೋಗ್ಯವೆಂದು ನಮ್ಮ ಮತವು. ನಮ್ಮಲ್ಲಿಯ ಬೆಂಚಕೋರ್ಟ ವಿಚಾರಣೆ ನಡಿಸುತ್ತಿದ್ದಾಗ, ಅವರಿಗೆ ಕೋರ್ಟಿನಲ್ಲಿ ಈ ಸುದ್ದಿಯನ್ನು ತಿಳಿಸಿದ್ದೂ ಅನುಚಿತವೆಂದೂ ನಮ್ಮ ಮತವು. ಅಂತು ನಮ್ಮಲ್ಲಿಯ ಬೆಂಚಕೋರ್ಟಗಳು, ನಾಮಶೇಷವನ್ನೈದಿದ ಸಂಗತಿಯು ಎಲ್ಲರಿಗೂ ಸಂತೋಷವನ್ನುಂಟು ಮಾಡುವದು. ಮುಂಬಯಿ ಸರಕಾರವು ಈ ಸಂಸ್ಥೆಯನ್ನು ಪುನರುಜ್ಜೀವನ ಮಾಡಬಾರದೆಂದು ನಾವು ಸೂಚಿಸಿ, ಅವನ್ನು ನಿರ್ಮೂಲಿಸಿದ ಬಗ್ಗೆ ಮುಂಬಯಿ ಸರಕಾರಕ್ಕೆ ಪುನಃ ಅಭಿನಂದಿಸುವೆವು.

---

೩. ಕಳೆದ ತಾ ೧೨ನೇ ಬುಧವಾರಕ್ಕೆ ಇಲ್ಲಿಯ ತಾಲೂಕಾ ಕಚೇರಿಯಲ್ಲಿ ನೆರೆದ ನೆರೆ ನಿವಾರಣಾ ಕಮಿಟಿಯ ವಿಶ್ವಸನೀಯ ಹಕೀಕತನ್ನು ಇನ್ನೊಂದೆಡೆಯಲ್ಲಿ ಪ್ರಕಟಿಸಿರುವೆವು. ಈ ಬಗ್ಗೆ 'ಧುರೀಣ' ದಲ್ಲಿ ಪ್ರಕಟವಾದ ಸ್ಫುಟಲೇಖವನ್ನೂ, ಇಹವೃತ್ತವನ್ನೂ, ರಾ। ಮಾನೂರರ ಪತ್ರವನ್ನೂ ಅವಲೋಕಿಸಿರುವೆವು. ರಾ। ವಿಶ್ವೇಶ್ವರ ಕಲ್ಯಾಣಪುರಕರರವರು ನಮಗೆ ಕಳಿಸಿದ ಇಂಗ್ಲಿಷ ಪತ್ರವನ್ನೂ ಪ್ರಕಟಿಸಿರುವೆವು. ಮುಖ್ಯ ಪ್ರಶ್ನೆಯು ಬುಧವಾರದ ಕಮಿಟಿಯ ಸ್ವರೂಪವಿದ್ದು, ಆ ಬಗ್ಗೆ ವಿಶೇಷ ವಾದವೆಬ್ಬಿದೆ. ರಾ। ಕಲ್ಯಾಣಪುರಕರರ, ರಾ। ಮಾನೂರರ ಪತ್ರ ಹಾಗು ಕಳೆದ ತಾರೀಖು ೧೫ನೇ ಮಂಗಳವಾರದ 'ಧುರೀಣ'ದೊಳಗಿನ ಸ್ಫುಟಲೇಖವನ್ನು ಓದಿದರೆ, ಬುಧವಾರಕ್ಕೆ ತಾಲೂಕಾ ಕಚೇರಿಯಲ್ಲಿ ನೆರೆಯಿಂದ ನಿರಾಶ್ರಿತರಾದವರಿಗೆ ತಾತ್ಕಾಲಿಕ ಧನಸಹಾಯವನ್ನು ಹಂಚುವ ಸಮಾರಂಭವು ಅಧ್ಯಕ್ಷರಾದ ರಾ। ಕಲ್ಯಾಣಪುರಕರರ ಹಸ್ತದಿಂದ ನೆರವೇರಿಸಲ್ಪಟ್ಟಿತ್ತೆಂಬಂತೆ ಭಾಸವಾಗುತ್ತದೆ. ಈ ಲೇಖಗಳಲ್ಲಿ ಮಾಡಿದ ವಿಧಾನಗಳಂತೆ ಇನಾಮು ಹಂಚುವ ಸಮಾರಂಭವಿದ್ದರೆ, ನಮ್ಮದೇನೂ ಆಕ್ಷೇಪವಿದ್ದಿಲ್ಲ. ಆದರೆ, ಅಂದಿಗೆ ರಿಲೀಫ ಕಮಿಟಿಯ ಮೀಟಿಂಗು ಕೂಡಿತ್ತು. ಇದು ನಾವು ಕೊಟ್ಟ ವಿಶ್ವಸನೀಯ ಹಕೀಕತಿನ ಮೇಲಿಂದ ವಾಚಕರಿಗೆ ಬೋಧವಾಗುವಂತಿದೆ. ನಮ್ಮ ವ್ಯವಸಾಯ ಬಂಧುಗಳಾದ 'ಧುರೀಣ'ಕಾರರೂ ನಮ್ಮ ಅಂದೋಣವನ್ನೇ ಎತ್ತಿಹಿಡಿದಿರುವರು. ಕಳೆದ ೧೮ನೇ ತಾರೀಖಿನ 'ಧುರೀಣ'ದ ಇಹವೃತ್ತದಲ್ಲಿ 'ಕಳೆದ ಬುಧವಾರ ದಿವಸ ಇಲ್ಲಿಯ ತಾಲೂಕ ಕಚೇರಿಯಲ್ಲಿ ಶ್ರೀ। ವಿ. ವಿ. ಕಲ್ಯಾಣಪುರಕರರ ಅಧ್ಯಕ್ಷತೆಯಲ್ಲಿ ರಾ॥ ಬಿ॥ ಕೊಯಿಮತ್ತೂರ, ಸಬ್‌ಜಡ್, ಮಾಮಲೇದಾರ, ಶ್ರೀ ಮಾನೂರ, ಶ್ರೀ। ಜಿ. ಡಿ. ಶಾಸ್ತ್ರೀ, ಮಿ। ಫರ್ನಾಂಡೀಸ, ೯ವರದೊಂದು ಮೀಟಿಂಗು ರಿಲೀಫ ಫಂಡಿನ ವ್ಯವಸ್ಥೆ ಮಾಡುವ ಕುರಿತು ಕೂಡಿತ್ತು' ಎಂದು ಪ್ರಕಟವಾಗಿದೆ. ಅಂದಮೇಲೆ, ೧೮ನೇ ತಾರೀಖಿನ ವರೆಗೆ ರಿಲೀಫ ಕಮಿಟಿಯು ಮೀಟಿಂಗು ಬುಧವಾರಕ್ಕೆ ನೆರೆದಿತ್ತೆಂದು ಇತ್ತಟ್ಟವರಿಗೂ ಒಪ್ಪಿದ ಮಾತು ಇಲ್ಲದಿದ್ದರೆ, ಆಗಲೇ ರಾ। ಕಲ್ಯಾಣಪುರಕರರೂ, ರಾ। ಮಾನೂರರೂ ಈ ಬಗ್ಗೆ ನಿಷೇಧಪ್ರದರ್ಶನ ಮಾಡುತ್ತಿದ್ದರು. ೨೦ನೇ ತಾರೀಖಿಗೆ 'ವೃತ್ತ'ದಲ್ಲಿ ರಾ। ಕಲ್ಯಾಣಪುರಕರರ ವ್ಯಕ್ತಿಯ ಬಗ್ಗೆ ಟೀಕೆಯಾದ ಬಳಿಕ, ಈ ಇನಾಮು ಸಮಾರಂಭದ ಹಂಚಿಕೆಯನ್ನು ಹುಡುಕಿತೆಗೆದರೆಂದು ಇದರಿಂದ ಅನುಮಾನ ಹೊರತುವದಿಲ್ಲೇನು ?

---

೪. ಮುಖ್ಯ ಪ್ರಶ್ನೆಯು ಈ ರೀತಿ ನಿರ್ಣಯವಾದ ಬಳಿಕ, ರಾ। ಕಲ್ಯಾಣಪುರಕರರ ವರ್ತನದ ಬಗ್ಗೆ, ರಾ। ಬಿ। ಕೊಯಿಮತ್ತೂರರ ನಡತೆಯ ಬಗ್ಗೆ ನಾವು ನಾಲ್ಕು ಮಾತುಗಳನ್ನು ಬರೆಯಬೇಕಾಯಿತು. ವ್ಯಕ್ತಿಶಃ ರಾ। ಬಿ। ರರಾಗಲಿ, ರಾ। ಕಲ್ಯಾಣಪುರಕರರಾಗಲಿ ನಮಗೆ ಆದರಾರ್ಹ ಗೃಹಸ್ಥರೇ. ಇಂಥವರ ಸಾರ್ವಜನಿಕ ವರ್ತನದ ಬಗ್ಗೆ ಆಯಾ ಕಾಲಕ್ಕೆ ವೃತ್ತಪತ್ರಧರ್ಮಾನುಸಾರವಾಗಿ ನಾವು ಟೀಕೆಯನ್ನು ಮಾಡಬೇಕಾಗುತ್ತದೆ. 'ಧುರೀಣ'ಕಾರರಿಗೂ, ರಾ। ಮಾನೂರರಿಗೂ, ರಾ। ಕಲ್ಯಾಣಪುರಕರರಿಗೂ ಇದರಿಂದ ವಿಷಾದವೆನಿಸುವದು ಸಹಜವು; ರಾ। ಕಲ್ಯಾಣಪುರಕರರು ಅಂದಂತೆ, ಸಾರ್ವಜನಿಕ ಕೆಲಸ ಮಾಡುವ ಸದ್ಗೃಹಸ್ಥರ ಮೇಲೆ ಟೀಕೆ ಮಾಡತಕ್ಕದ್ದು ಅನಪೇಕ್ಷ್ಯದ ಸಂಗತಿಯಲ್ಲೆಂದು ನಾವು ಅವರಿಗೆ ಹೇಳಿಬಿಡುವೆವು. ಕೇವಲ ಕರ್ತವ್ಯವೆಂದು, ಸಂದರ್ಭಾನುಸಾರ, ಟೀಕೆ ಮಾಡಬೇಕಾಗುತ್ತದೆ. ರಾ। ಮಾನೂರರಿಗೆ ಸಂದರ್ಭಸಿಕ್ಕಿದೆ, ನಾವು ಟೀಕಿಸಿರುವೆವೆಂದು ತೋರಿದರೆ, ಅದು ರಾ। ಕಲ್ಯಾಣಪುರಕರರ ಬಗ್ಗೆ ಅವರಿಗೆ ಇರುವ ಪ್ರೇಮದ ದೋಷವು; ಹೊರತು, ನಮ್ಮದೋಷವಲ್ಲ. ಪರನಿಂದೆಗಾಗಿ ನಾವು ವೃತ್ತಪತ್ರವನ್ನು ನಡಿಸುವದಿಲ್ಲೆಂದು ಅವರಿಗೂ ಆಶ್ವಾಸಿಸುವೆವು. 'ಧುರೀಣ'ಕಾರರು ನುಡಿದಂತೆ, ಸುಶಿಕ್ಷಿತರು ರಾ। ಕಲ್ಯಾಣಪುರಕರರ ಯೋಗ್ಯಯೋಗ್ಯತೆಯನ್ನು ವಿಚಾರಿಸಿ, ಅವರಿಗೆ ಮತ ಕೊಡುವರೆಂಬದರಲ್ಲಿ ಸಂದೇಹವಿಲ್ಲ. ರಾಷ್ಟ್ರೀಯ ಸಭೆಯು ಕೌನ್ಸಿಲು ಪ್ರವೇಶದ ಬಗ್ಗೆ ತಟಸ್ಥವೃತ್ತಿಯನ್ನು ಸ್ವೀಕರಿಸಿದ್ದರಿಂದ, ಕೌನ್ಸಿಲು ಪ್ರವೇಶದಿಂದ ಸ್ವರಾಜ್ಯ ಸಂಪಾದನೆಯಾಗುವದೆಂದು ನಮಗೆ ತೋರದ್ದರಿಂದ, ಮೂವರ ಉಮೇದ್ವಾರರಲ್ಲಿ ಯಾರೂ ಯಶಸ್ವಿಯಾದರೂ, ನಮಗೊಂದೇ. ರಾ। ಕಲ್ಯಾಣಪುರಕರರು ಕಾರವಾರ–ಅಂಕೋಲೆಗಳಲ್ಲಿ ಮಾಡಿದ ಭಾಷಣಗಳನ್ನು ನಮ್ಮ ಬಾತ್ಮೀದಾರರು ಕಳಿಸಿಕೊಟ್ಟಂತೆ ನಾವು ಪ್ರಕಟಿಸಿರುವೆವು. ಅವುಗಳಲ್ಲಿ ತಪ್ಪು ವಿಧಾನಗಳಿದ್ದರೆ, ರಾ। ಕಲ್ಯಾಣಪುರಕರರಿಗೆ ಅವುಗಳನ್ನು ತಿದ್ದುಪಡಿಸುವ ಇಚ್ಛೆ ಇದ್ದಲ್ಲಿ, ನಾವು ಅವರಿಗೆ ವಿಷಯಕ್ಕನುರೂಪವಾಗಿ ಸ್ಥಳವನ್ನೀಯುವೆವು. ಅದೇನೂ ಇರಲಿ, ಈ ಪ್ರಕರಣದಲ್ಲಿ ರಾ। ಕಲ್ಯಾಣಪುರಕರರೂ, ರಾ। ಮಾನೂರರೂ ಸತ್ಯಾಪಲಾಪ ವಿಧಾನಗಳನ್ನು ಮಾಡಿದ್ದನ್ನು ನೋಡಿ, ನಮಗೆ ಅತೀವ ವ್ಯಸನವಾಗುತ್ತದೆ. ವ್ಯವಸಾಯ ಬಂಧುಗಳಾದ 'ಧುರೀಣ'ಕಾರರಿಗೆ ರಾ। ಕಲ್ಯಾಣಪುರಕರರ ವಕೀಲಿ ನಡಿಸುವ ಹವ್ಯಾಸದಲ್ಲಿ, 'ವೃತ್ತ'ಕಾರರಿಗೆ ನಿಂದಿಸುವ ಅತ್ಯುತ್ಸಾಹದಲ್ಲಿ, ತಮ್ಮ ೧೮ನೇ ತಾರೀಖಿನ ಸಂಚಿಕೆಯ ಇಹವೃತ್ತವನ್ನು ಓದಿ ನೋಡಲು ಸಹ ವಿಸ್ಮರಣೆಯಾದದ್ದು ವಿಶೇಷ ವಿಷಾದಕರವು. ಈ ಪ್ರಕರಣವನ್ನು ಸಮಾಲೋಚಿಸಿ, ಕಳೆದ ಸಂಚಿಕೆಯಲ್ಲಿ ನಾವು ಮಾಡಿದ ಟೀಕೆಯ ಸಾಧಾರ–ನಿರಾಧಾರತ್ವಗಳನ್ನು ನಿರ್ಣಯಿಸುವದು ವಾಚಕರ ಕೆಲಸವು.

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ಮಳೆಯು ವಿರಾಮ ಹೊಂದಿದೆ, ಖರೋ ಬಿಸಿಲು ಬೀಳುತ್ತಿದೆ; ಚಳಿಗೆ ಪ್ರಾರಂಭವಾಗಿದೆ. ಈ ವಾರದಲ್ಲಿ ೫-೬೬ ಮಳೆ, ಈ ವರೆಗೆ ೧೩೩-೫೯ ಮಳೆ.

ಕಳೆದ ಗುರುವಾರ ತಾ. ೨೦ನೇ ಸಾಯಂಕಾಲ ೬ ಘಂಟೆಯ ಸಮಯಕ್ಕೆ ಇಲ್ಲಿಯ ಶ್ರೀ। ವೆಂಕಟರಮಣ ದೇವಸ್ಥಾನದ ಹೊಲುಪ್ಪರಿಗೆಯ ಮೇಲೆ ರಾ। ವಿಶ್ವೇಶ್ವರ ಕಲ್ಯಾಣಪುರಕರರು 'ಮತದಾರರ ಕರ್ತವ್ಯ' ಈ ವಿಷಯದ ಮೇಲೆ ಉಪನ್ಯಾಸ ಕೊಟ್ಟರು.

ಕಳೆದ ವಾರದಲ್ಲಿ ಇಲ್ಲಿ ಒಂದು ಗೊಂದಲವೆಬ್ಬಿತ್ತು. ಗೌಡ ಸಾರಸ್ವತ ಬ್ರಾಹ್ಮಣರ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಅನಂತ ಚತುರ್ದಶೀವ್ರತದ ಸಮಾರಂಭದಲ್ಲಿ ಶಾಂತತಾಭಂಗವಾಗಬಹುದೆಂದು ಪೋಲೀಸರು ರಿಪೋರ್ಟ ಮಾಡಿದ್ದರಿಂದ, ಆನಿವಾರಕ್ಕೆ ಮೆಜಿಸ್ಟ್ರೇಟರು ೧೩ ಜ್ಞಾತಿ ಗೃಹಸ್ಥರ ಜಾಮೀನಿಗಳನ್ನು ಪಡೆದರು. ಬಹಿಷ್ಕೃತ ೬ ಮಂದಿಗಳು ಪ್ರವೇಶಿಸಿದ್ದಲ್ಲಿ ಶಾಂತತಾಭಂಗವಾಗಬಹುದೆಂದು ರಾ॥ ಸಾಂತಪ್ಪಾ ಪಾಂಡುರಂಗಪ್ಪ, ರಾ॥ ರಾಮಾ ಹನುಮಂತ ಪ್ರಸಭಾಗ ವಲವಾಗಳರ, ಈ ಪೋರ್ತೇಸರಲ್ಲಿಯು ಉದಾಹರಣ ಕೊಟ್ಟರು. ಜಾಮೀನಿಗಳಲ್ಲಿ ಬಹುಮತವು ಇದೇ ಉದಾಹರಣೆಯನ್ನು ಸ್ವೀಕರಿಸಿತು. ಆದ್ದರಿಂದ ಮೆಜಿಸ್ಟ್ರೇಟರು ೬ ಜನರ ಮೇಲೆ ೧೪೪ ಕಲಮಿನ ಪ್ರಕಾರ ನೋಟೀಸು ಕೊಟ್ಟು, ಬಹಿಷ್ಕೃತರು ದೇವಸ್ಥಾನದಲ್ಲಿ ಪ್ರವೇಶಿಸಬಾರದೆಂತಲೂ, ವ್ರತಸಮಾರಂಭಗಳಲ್ಲಿ ಪಾಲುಗೊಳ್ಳಬಾರದೆಂತಲೂ ಆಜ್ಞೆಯನ್ನು ಹೊರಡಿಸಿದರು. ಮಾರನೇ ದಿನ ರವಿವಾರಕ್ಕೆ ನಾಲ್ವರು ಪ್ರತಿಬಂಧಕ ಹುಕುಮನ್ನು ರದ್ದು ಪಡಿಸಲು ಮೆಜಿಸ್ಟ್ರೇಟರಿಗೆ ಅರ್ಜಿ ಮಾಡಿದರು. ಆಗ ಶ್ರೀ ಕ್ಷೇತ್ರಗೋಕರ್ಣ ಮಹಾಬಳೇಶ್ವರ ಮೇಲಿನ ಹುಕುಮನ್ನು ರದ್ದುಗೊಳಿಸಿದರು. ಮುಂದೆ ಶ್ರೀ ಕ್ಷೇತ್ರಗೋಕರ್ಣ ಮಹಾಬಳೇಶ್ವರ, ನಾಲ್ವರ ಮೇಲಿನ ಹುಕುಮನ್ನು ರದ್ದುಪಡಿಸಿತು. ಮುಜಸ್ಟ ಬರೂ, ಪೋರ್ತೇಸರ ರಾ। ಸಾಂತಪ್ಪ, ಕೃಷ್ಣ ಪ್ರಕರಣವನ್ನು ರವಿವಾರಕ್ಕೆ ಕಾಯ

ಅರಳಿಸಲು ಕಾರಣವಾದ ಯತ್ನಗಳು ಅಭಿನಂದನೀಯವಾಗಿವೆ. ಡಾ|| ಸೋಂಕರ್ಪ್ಪೈರು ಇದೇ ದೋರಣೆಯಿಂದ ನಡೆದು, ಜ್ಞಾತಿಯೊಳಗಿನ ಅಂತಃಕಲಹವನ್ನು ಇತ್ತಿತ್ತಲಿನ ಮುಖಂಡರ ಸಹಾಯದಿಂದ ನಿವಾರಿಸಬೇಕಾಗಿ ನಮ್ಮ ಪ್ರೇಮಪೂರ್ವಕ ಸೂಚನೆ.

ಶಿದ್ದಾಪುರ— ಹೋದ ವರ್ಷದಂತೆ ಈ ವರ್ಷವಾದರೂ ಸಾರ್ವಜನಿಕ ಗಣಪತಿಯನ್ನು ಮೆರವಣಿಗೆಯಿಂದ ತಂದು, ರಾಷ್ಟ್ರೀಯ ಶಾಲೆಯಲ್ಲಿ ಸ್ಥಾಪಿಸಿದ್ದರು. ಶ್ರೀ ಗಣಪತಿಯನ್ನು ಸ್ಥಾಪನೆ ಮಾಡಿದಂದಿನಿಂದ ಬಿಡುವವರೆಗೂ ಭಜನ, ಪ್ರವಚನ, ಕೀರ್ತನೆ, ಮೇಳಮುದ್ದೆ, (ಪ್ರಸಂಗ), ಗುಮಟೆಪಾಂಗ, ಗಾಯನ, ಭಾಷಣ ಮುಂತಾದವು ನಡೆದಿದ್ದವು. ಉತ್ಸವದಂದು ದಿನ ದಿನಕ್ಕೆ ವಿಮುಕ್ತ ನಡೆದಿತ್ತು. ಶ್ರೀ ಕಾನಗೋಡ ಸೀತಾರಾಮರಾಯರು 'ಗಣೇಶ ಗೀತ' ಎಂಬ ಪುರಾಣವನ್ನೂ, ಶ್ರೀ ಪುತ್ತುಭಟ್ಟರು "ಗಣೇಶ ಜನ್ಮ" ಎಂಬ ವಿಷಯದ ಮೇಲೆ ಕೀರ್ತನೆಯನ್ನೂ, ವ ಶ್ರೀ ಭಟ್ಟರ ಇವರು "ಅಸ್ಪೃಶ್ಯತೆಯ" ಬಗ್ಗೆ ಗಣಪತಿಯ ವಿಸರ್ಜನ ದಿವಸ ನಾಲ್ಕು ಮಾತಾಡಿದರು. ಸಾರ್ವಜನಿಕ ಕೆಲಸದಲ್ಲಿ ಎಲ್ಲರೂ ಸಹಾಯ ಮಾಡಿದರೆ, ಕೆಲಸವು ಎಷ್ಟು ಚಂದವೂ, ವ ಫಲಕಾರಿಯೂ ಆಗುವಂತಾದೀತು ಎಂಬುದು ಶ್ರೀ ಗಣಪತಿ ಉತ್ಸವದಿಂದ ಕಳೆದ ಎರಡು ವರ್ಷದಿಂದ ತಿಳಿದುಬಂತು. ಹೋದ ವರ್ಷಕ್ಕಿಂತ ಈ ವರ್ಷ ಜನರಲ್ಲಿ ಉತ್ಸಾಹವು ಬಹಳವಿತ್ತು. ಶ್ರೀ ಗಣಪತಿಯನ್ನು ಕಳೆದ ಬುಧವಾರ (ತಾ ೧೯-೯-೧೯೨೩) ನೇ ದಿವಸ ಆನೆಯ ಮೇಲೆ ಅಂಬಾರಿ ಇಟ್ಟು ಮೆರವಣಿಗೆಯಿಂದ ಕಳುಹಿಸಲಾಯಿತು. ದೇವರ ಸೇವೆಗೆಂತ ತಮ್ಮ ಸ್ವಯಂಸ್ಫೂರ್ತಿಯಿಂದ, ಕೋಂಡ್ಲಿ, ಬಾಳಕೊಪ್ಪ, ಕೊಳ್ಸ, ಕಾನಗೋಡ, ಅವಲಗುಪ್ಪೆ ಮುಂತಾದ ಊರಿನಿಂದ ಡೊಳ್ಳಿನ ವಾದ್ಯವೂ, ವ ಹೊಸೂರ ಊರಿನಿಂದ ಕಡ್ಡಿಗಡಿಗೆಯೂ ಬಂದಿದ್ದವು. ಜಾತಿಭೇದವಿಲ್ಲದೆ ಪಂಚಕಜ್ಜಾಯವು ಹಂಚಲ್ಪಟ್ಟಿತು. ಸಾರ್ವಜನಿಕ ಕಾರ್ಯದಲ್ಲಿ ಸಹಾಯ ಮಾಡಿದ ಬ್ರಾಹ್ಮಣರಿಂದ ಹೊಲೆಯರ ವರೆಗೆ ಮುಂತಾದ ಎಲ್ಲಾ ಜನರಿಗೆ ಉತ್ಸವ ಕಮಿಟಿಯು ಬಹಳ ಆಭಾರಿಯಾಗಿದೆ.

ಗಾಂಧಿ ಜೀ ಉತ್ಸವ (ತಾ. ೧೮-೯-೧೯೨೩) ರಿಂ. ೭-೧೦-೨೩ ಇಂದಿರುತ್ತದೆ.

ತಾ ೨೨-೯-೧೯೨೩ ಶನಿವಾರ ಶ್ರೀ ಪುತ್ತುಭಟ್ಟರು ಭಗಿನೀಮಂಡಳ ತರ್ಫೆನಿಂದ 'ವಟು ವಾಮನ" ಎಂಬ ವಿಷಯದ ಮೇಲೆ ಕೀರ್ತನೆಯನ್ನು ರಾಷ್ಟ್ರೀಯ ಶಾಲೆಯಲ್ಲಿ ಮಾಡಿದರು. ಕೋತ್ಸವಾಂದಿವು ಬಹಳವಿತ್ತು. ಆ ದಿವಸ ಆರತಿ ಬಟ್ಟಲಲ್ಲಿ ರೂ. ೧-೩-೬ ಬಂದಿರುತ್ತದೆ. ರಾಷ್ಟ್ರೀಯ ಶಾಲೆಗೇ ಜಮಾ ಆಗಿರುತ್ತದೆ.

ಮೊಹಜಾಳಿ— ಇಲ್ಲಿ ಕೆಲ ತಿಂಗಳ ಹಿಂದೆ ತೆರೆದ ಇಂಗ್ಲಿಷ ಶಾಲೆಯ ಆರ್ಥಿಕ ಸ್ಥಿತಿಯನ್ನು ಸುಧಾರಿಸಿ, ಊರ್ಜಿತಾವಸ್ಥೆಗೆ ಹ್ಯಾಗೆ ತರಬೇಕೆಂಬ ಬಗ್ಗೆ ವಿಚಾರ ಮಾಡಲಿಕ್ಕೆ ಊರ ಜನರದೊಂದು ಸಭೆಯು ತಾ. ೨೨ ನೇ ದಿವಸ ಸಾಯಂಕಾಲ ೪ ಘಂಟೆಗೆ ಕೂಡಿತ್ತು. ಸದಾಶಿವಗಡ ವಗೈರೆ ಸ್ಥಳಗಳಿಂದ ನಿಮಂತ್ರಿತ ಗೃಹಸ್ಥರು ಹಾಜರಿದ್ದರು. ಶ್ರೀ ಗಣಪತ ಸದಾಶಿವ ನಾಡಕರ್ಣಿಯವರ ಬಹಳ ಹೊತ್ತಿನವರೆಗೆ ಶಿಕ್ಷಣದ ಮೇಲೆ ಸುಶ್ರಾವ್ಯ ಹಾಗು ಪರಿಣಾಮಕಾರ ಉಪನ್ಯಾಸವಾಯಿತು. ಅವರಲ್ಲಿ ಅವರು ಯಾವ ಸಂಸ್ಥೆಗಳಾದರೂ ದುಡಿಯುವ ಕಾರ್ಯಕರ್ತರ ಮೇಲೆ ಹ್ಯಾಗೆ ಉದಯ ಹೊಂದಿ, ಅಂಥವರ ಮೇಲೆಯೇ ಹ್ಯಾಗೆ ಅವಲಂಬಿಸಿರುತ್ತವೆ ಎಂಬದನ್ನು ನಿವೇದಿಸುವಾಗ ಪುಣೆಯ ಡೆಕ್ಕನ ಎಜ್ಯುಕೇಶನಲ್ ಸೊಸೈಟಿ, ಅನಾಥ ವಿದ್ಯಾರ್ಥಿಗೃಹ, ಕುಮಟೆಯ ಗಿಬ್ಬ ಹೈಸ್ಕೂಲ, ಸದಾಶಿವಗಡದ ಇಂಗ್ಲಿಷಸ್ಕೂಲ ವಗೈರೆ ಸಂಸ್ಥೆಗಳ ಗೌರವಪೂರ್ಣ ಉಲ್ಲೇಖವನ್ನು ಮಾಡಿ, ಶಿಕ್ಷಣದ ಧ್ಯೇಯವು ವಿಶಾಲವಿದ್ದು ಹಾಗೂ ಕಾರಕೂನರನ್ನೇ ತಯಾರಿಸಬಾರದೆಂತಲೂ, ವಿದ್ಯಾರ್ಥಿಗಳಿಗೆ ಶಿಕ್ಷಣ ಮುಗಿದ ಮೇಲೆ ಒಡೇ ಹೊಟ್ಟೆಗಾಗಿ ಬಳಲುವ ಪ್ರಸಂಗವು ಎಂದೂ ಬರಬಾರದಂತೆ ಧಂದೆಯ ಶಿಕ್ಷಣವನ್ನು ಅವರಿಗೆ ಕೊಡಬೇಕೆಂತಲೂ, ಕವಿವರ್ಯ ಟಾಗೋರರ ವಿಶ್ವಭಾರತೀ ಸಂಸ್ಥೆಗೆ ಸಹ ಇಂಥ ವರ್ಗವನ್ನು ಜೋಡಿಸಿರುತ್ತಾರೆಂತಲೂ, ನಮ್ಮ ಧ್ಯೇಯಕ್ಕೆ ಒಂದು ಪರಿಯ ಸಹಾಯವು ಹೊರ್ತು ಅದೇ ನಮ್ಮ ಧ್ಯೇಯವೆಂತ ಇಂಗ್ಲಿಷ ಭಾಷೆಯನ್ನು ಕಲಿಯಬಾರದೆಂತಲೂ ಹೇಳಿದರು. ಕಡೆಗೆ ಅಧ್ಯಕ್ಷರಾದ ಹಂಗರಕದ ಇಂಗ್ಲಿಷ ಶಾಲೆಯ ಮಾಸ್ತರರಾದ ರಾ|| ಶಂಕರ ನಾಡಕರ್ಣಿಯವರು ಸ್ವಾವಲಂಬನದ ಮೇಲೆಯೇ ಇಂಥ ಸಂಸ್ಥೆಗಳು ಯಾವತ್ತೂ ದೇಶಗಳಲ್ಲಿ ಹ್ಯಾಗೆ ನಡೆಯುತ್ತವೆ, ಅದೇ ಧ್ಯೇಯವನ್ನು ಇದಕ್ಕೂ ಇಟ್ಟಿತು, ಹ್ಯಾಗೆ ಸಣ್ಣ ಹಳ್ಳಿಗಳಲ್ಲಿಯೂ ಇಂಥ ಶಾಲೆಗಳನ್ನು ತೆಗೆಸಿದರೆ ಸದಾಶಿವಗಡದ ಶಾಲೆಗೆ ಇವೆಲ್ಲವೂ ಹ್ಯಾಗೆ ಪೋಷಕಗಳಾಗಿ ಆ ಶಾಲೆಯನ್ನು ಹೈಸ್ಕೂಲದಲ್ಲಿ ರೂಪಾಂತರಿಸುವ ಕನ್ನಡ್ಯಾಪತ್ತೆ ಹ್ಯಾಗೆ ಕೈಗೂಡುವದೆಂಬದನು ಹೇಳಿದ ಮೇಲೆ ಧಂದೆಯ ಬಗ್ಗೆ ಕಮಿಟಿಯನ್ನು ನೇಮಿಸಿ ಸಭೆಯು ಮುಗಿಯಿತು.

ಅಂದಿನ ದಿವಸದ ಶ್ರೀ ಗೋಪಾಲರಾಯರ ಸುವಿಚಾರವನ್ನು ಕದರ ಚಿಕಿತ್ಸಕರಿಂದ, ಊರ ಜನರು ಶಿವಗೆ ರಾಷ್ಟ್ರೀಯ ವಿಷಯದ ಮೇಲೆ ಉಪದೇಶಿಸಬೇಕೆಂತ ಮಾಡಿದ ವಿನಂತಿಯ ಪ್ರಕಾರ ಪ್ರ. ತಾ ೨೩ನೇ ದಿವಸ ಅವರು ಕೆಂಕ್ರ ರಾಮಮಂದಿರ ವಗೈರೆ ಎಲ್ಲ ಜ್ಞಾತಿಗಳ ಜನರಿಂದ ಹಾಗೂ ಅನೇಕ ಸ್ತ್ರೀಯರಿಂದ ಯುಕ್ತವಾದ ದೊಡ್ಡ ಜನಸ್ತೋಮದ ಮುಂದೆ ಸುಮಾರು ೨|| ತಾಸುಗಳ ವರೆಗೆ ಅಸ್ಖಲಿತವಾಗಿಯೂ, ಎಲ್ಲರಿಗೂ ತಿಳಿದುಬರುವಂತೆಯೂ ಭಾಷಣ ಮಾಡಿದರು. "ನಮ್ಮ ಮೊದಲಿನ ರಾಮರಾಜ್ಯದ ಚಿತ್ರವನ್ನೂ, ಈಗಿನ "ಹಾಗಡೀ ಕೋಡಪ್ಪ" ಇಂಗ್ಲಿಷರ ರಾಜ್ಯದ ಚಿತ್ರವನ್ನೂ ಬಣ್ಣಿಸಿ, ಇಂಗ್ಲಿಷರ ರಾಜ್ಯ ಬೆಳೆದ ಬಗೆಗೆ ನಾವೇ ನಮ್ಮೊಳಗಿನ ಬಡಿದಾಟಗಳಿಂದಲೂ, ಹಣದಿಂದಲೂ, ಸ್ವಾರ್ಥದಿಂದಲೂ ಹ್ಯಾಗೆ ಬೆಂಬಲವನ್ನು ಈಯುತ್ತಿದ್ದು, ನಾವೇ ಅಪ್ರತ್ಯಕ್ಷವಾಗಿ ನಮ್ಮ ಅಧೋಗತಿಗೆ ಹ್ಯಾಗೆ ಕಾರಣರಾಗಿರುತ್ತೇವೆ ಎಂಬುದನ್ನು ಸ್ಪಷ್ಟೀಕರಿಸಿ, ಈಗಿನ ನಮ್ಮ ಹಿಂದುಸ್ಥಾನವನ್ನು ಪೃಥ್ವಿಯ ಮೇಲಿನ ಇತರೇ ರಾಷ್ಟ್ರಗಳ ಕೂಡ ಶಿಕ್ಷಣ ಸರಾಸರಿ ಪ್ರಮಾಣ, ಪ್ರತಿ ಒಬ್ಬನ ವಾರ್ಷಿಕ ಉತ್ಪನ್ನ, ಆಯುರ್ಮಾನ, ಸೈನ್ಯ ವಗೈರೆ ಸಂಗತಿಗಳಲ್ಲಿ ಆಧಾರ ಪ್ರಮಾಣಗಳಿಂದ ತುಲನೆಮಾಡಿ, 'ಗೋರಾ'ಜನರ ಆಳಿಕೆಯಲ್ಲಿ ನಮ್ಮ ಉತ್ತರೋತ್ತರ ಅವನತಿಯಾಗುತ್ತ ನಡೆದದೆಂಬುದನ್ನು ತೋರಿಸಿ, ಇದಲ್ಲದಕ್ಕೂ ಜನರಿಗೆ ಬೇಜಬಾಬದಾರ ಪರಕೀಯ ಸರಕಾರವೇ ಹ್ಯಾಗೆ ಕಾರಣವು, ಮಹಾತ್ಮರ ಸ್ವಾರ್ಥತ್ಯಾಗಪೂರಿತ ಅಹಿಂಸಾಯುಕ್ತ ಅಸಹಕಾರದ ಕೀಲಿಯೇ ನಮ್ಮನ್ನು ಪಂಜಾಬದ ಅಮಾನುಷ ಅಸಹ್ಯ ಅತ್ಯಾಚಾರ, ಖಿಲಾಫತ ಪ್ರಕರಣ ಪಾರತಂತ್ರ್ಯಗಳೊಳಗಿಂದ ನಮ್ಮನ್ನು ಹ್ಯಾಗೆ ಮುಕ್ತ ಮಾಡುವದು, ಸತ್ಯಾಗ್ರಹವೆಂದರೇನು, ಅದರ ಮಹಿಮೆ, ರಾಷ್ಟ್ರಧ್ವಜದ ಇಂಗಿತ ಅರ್ಥ, ನಾಗಪೂರ ರಾಷ್ಟ್ರಧ್ವಜ ಸಂಗ್ರಾಮದ ವಿಜಯ ಹ್ಯಾಗಾಯಿತು ವಗೈರೆ ಮಾಹಿತಿಯನ್ನು ತಮ್ಮ ರಸಭರಿತವಾಣಿಯಿಂದ ವರ್ಣಿಸಿದರು. ಎಲ್ಲಿ ಈ ವರೆಗೆ ಎಲ್ಲ ಜ್ಞಾತಿಯ ಜನರು ತಮ್ಮ ತಮ್ಮೊಳಗಿನ ಪಕ್ಷಭೇದ ಬಗ್ಗೆಯಿಂದ ಒತ್ತಟ್ಟಿಗೆ ಕೂಡಿದ್ದಿಲ್ಲವೋ, ಯಾವ ಊರಿನ ಜನರು ಯಾವದೇ ಭಾಷಣ ಕೇಳುವ ಪ್ರಸಂಗ ಬರದಷ್ಟು ಪುಣ್ಯಾತ್ಮರೋ ಅಂಥವರಲ್ಲಿ ಶ್ರೀ ಗೋಪಾಲರಾಯರು ಸ್ವರಾಜ್ಯದ ಕಲ್ಪನೆಗಳ ಬೀಜಾರೋಪಣವನ್ನು ಎಷ್ಟು ಯುಕ್ತಿಯಾಗಿ ಮಾಡಿದ್ದು ಅವರಿಗೆ ಬಹಳೇ ಅಭಿನಂದನೀಯವಿದ್ದು, ಊರವರಿಗೂ ಭೂಷಣವಲ್ಲವೇ? ಇದಾಗ್ಗೆ ತಮಗೆ ತಮ್ಮ ದರ್ಶನ ಲಾಭ ಕೊಟ್ಟು ಉಪದೇಶಾಮೃತದಿಂದ ಉಪಕರಿಸಬೇಕೆಂತ ಜನರೆಲ್ಲರು ವಿನಂತಿಸಿದ್ದಕ್ಕೆ ಶ್ರೀಯುತರು ಅನುಮತಿಸಿದ ಮೇಲೆ ಈ ಅಪೂರ್ವ ಸಭೆಯು ವಿಸರ್ಜನೆಹೊಂದಿತು.

ಉಡುಪಿಯ 'ಸತ್ಯಾಗ್ರಹೀ'ಯ ಮೇಲೆ ಆಪತ್ತು.

ಉಡುಪಿಯಲ್ಲಿ ಪ್ರಸಿದ್ಧವಾಗುವ 'ಸತ್ಯಾಗ್ರಹೀ' ಪತ್ರದ ಸಂಪಾದಕರಾದ ದೇಶಭಕ್ತ ಎಚ್. ರಾಮರಾಯ ಮಲ್ಯ ಮತ್ತು ಅದೇ ಪತ್ರದ ಮುದ್ರಕರೂ ಪ್ರಕಾಶಕರೂ ಆದ ದೇ. ಭ. ಎಚ್. ನಾರಾಯಣರಾವ ಇವರ ಮೇಲೆ ರಾಜದ್ರೋಹದ ಆರೋಪಣೆಯ ಮೇಲೆ ೧೨೪ನೇ (ಅ) ಕಲಮಿನ ಪ್ರಕಾರ ಸಮನ್ಸು ಹೊರಟಿರುತ್ತದೆ. ೩ ನೇ ಅಕ್ಟೋಬರ ದಿವಸ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಮುಂದೆ ಹಾಜರ ಆಗಬೇಕು. ಅವರ ಮೇಲೆ ಇಟ್ಟ ಆರೋಪದ ಉತ್ತರ ಕೊಡಬೇಕೆಂದು ಆ ಸಮನ್ಸದಲ್ಲಿ ಬರೆದಿರುವದು (ಮಾ. ತ. ಸಂ ಹುಬ್ಬಳ್ಳಿ)

ನಾಭಾದೊಳಗಿನ ಗೊಂದಲ.

ಜೈತು ಎಂಬಲ್ಲಿ ಸಿಖರು ತಮ್ಮ 'ದಿವಾಣ' ಎಂಬ ಸಭೆಯನ್ನು ಕೂಡಿಸಿ, ನಾಭಾ ಸಂಸ್ಥಾನಿಕರ ಪದಚ್ಯುತಿಯ ಬಗ್ಗೆ ತಮ್ಮ ನಿಷೇಧ ಪ್ರದರ್ಶನವನ್ನು ಮಾಡುತ್ತಿದ್ದರು. ಅಲ್ಲಿ ಹಿಂದುಸ್ಥಾನ ಸರಕಾರದಿಂದ ನೇಮಕ ಹೊಂದಿದ ಆಡಳಿತಗಾರರು ಅವರಿಗೆ ಹೊರ ಬರ-ಹೋಗಲಿಕ್ಕೆ ಸಹ ಅಡ್ಡಿ ಮಾಡಿದ ಸುದ್ದಿಯು ೧೩ನೇ ಪುಟದ ಮೇಲೆ ಪ್ರಕಟವಾಗಿದೆ. ಈ ಪ್ರಕರಣದ ಸತ್ಯಸ್ಥಿತಿಯನ್ನು ಕಣ್ಣಾರೆ ಕಾಣುವರೆ, ಪಂಡಿತ ಜವಾಹರಲಾಲ ನೆಹರು, ಸಂತಾನಂ, ಆಚಾರ್ಯ ಗಿಡವಾಣಿಯವರು ಜೈತು ಪಟ್ಟಣಕ್ಕೆ ಸಾಗಿಹೋಗಿದ್ದರು. ಹಾದಿಯ ಮೇಲೆಯೇ ಅವರಿಗೆ ಮುಂದೆ ಹೋಗಬಾರದೆಂದು ಪೋಲೀಸರ ಅಪ್ಪಣೆಯಾಯಿತು. ಮೂವರೂ ಲೇಖೀ ಹುಕುಮನ್ನು ತೋರಿಸಹೇಳಲು, ಪೋಲೀಸ ಅಧಿಕಾರಿಯು ಮೂವರಿಗೂ ಬೇಡಿಹಾಕಿ, ಕಳೆದ ತಾ ೨೨ನೇಗೆ ನಾಭಾ ಪಟ್ಟಣಕ್ಕೆ ತಂದರು. ಕ್ರಿ. ಪ್ರೊ. ಕೋ. ೧೪೪ನೇ ಕಲಮಿನನ್ವಯ ಅವರಿಗೆ ಸೆರೆ ಹಿಡಿಯಲಾಗಿದೆ. ಪಂಡಿತ ಮೋತೀಲಾಲರವರು ಮಗನಿಗೆ ಕಾಣಲು ತಾವು ನಾಭಾಕ್ಕೆ ಹೋಗುತ್ತೇವೆಂತಲೂ ಅಲ್ಲಿ ಅಕಾಲಿ ಚಳವಳಿಯಲ್ಲಿ ತಾವು ಪ್ರವೇಶಗೊಳ್ಳುವದಿಲ್ಲೆಂತಲೂ, ಸರ್ವಾಧಿಪತಿಗಳಿಗೂ, ಪಂಜಾಬದ ಗವ್ಹರ್ನರರಿಗೂ, ನಾಭಾ ಸಂಸ್ಥಾನದ ಕಾರಭಾರಿಗಳಿಗೂ, ಚೀಫ ಮೆಜಿಸ್ಟ್ರೇಟರಿಗೂ, ಪೋಲೀಸ ಸುಪರಿಂಟೆಂಡೆಂಡರಿಗೂ ತಂತಿ ಮಾಡಿ, ತಮಗೇನೂ ಉಪದ್ರವವಾಗಲಿಕ್ಕಿಲ್ಲೆಂದು ಬಯಸಿ, ನಾಭಾಕ್ಕೆ ಹೊರಟು ಹೋಗಿರುವರು.

ಕಳೆದ ತಾ. ೧೯ನೇ ಬುಧವಾರಕ್ಕೆ ಇಲ್ಲಿ ಕೂಡಿದ ರಿಲೀಫ ಕಮಿಟಿಯ

ವಿಶ್ವಸನೀಯ ಹಕೀಕತು.

ಈ ಕಮಿಟಿಯು ನಿರಾಶ್ರಿತರಿಗೆ ಹಣದ ವ್ಯವಸ್ಥೆ ಮಾಡುವ ಕುರಿತು ಬೆಳಿಗ್ಗೆ ನೆರೆದಿತ್ತು. ಈ ಕಮಿಟಿಯ ಅಧ್ಯಕ್ಷರು ರಾ|| ವ್ಹಿ. ವ್ಹಿ. ಕಲ್ಯಾಣಪೂರಕರರು ಇದ್ದರು. ಸಬ್‌ಜಜ್ಜ ರಾ|| ಚಿನ್ಮುಳಗುಂದ, ರಾ|| ಮಾಸೂರ ರಾ|| ಶಾಸ್ತ್ರೀ, ರಾ|| ದೀವಗಿ, ಮಿ|| ಫರ್ನಾಂಡೀಸ, ಮಾಮಲೇದಾರ ರಾ|| ಹೆಗಡೆ, ಇಷ್ಟು ಕಮಿಟಿಯ ಮೆಂಬರರು ಹಾಜರಿದ್ದರು. ರಾ|| ಬ|| ಕೋಯಿಮತ್ತೂರರೂ ಹಾಜರ ಇದ್ದರು. ಕಮಿಟಿಯಲ್ಲಿ ಇಂದು ಹಣ ಹಂಚುವ ಬಗ್ಗೆ ಚರ್ಚೆಯಾಯಿತು. ರಾ|| ಚಿನ್ಮುಳಗುಂದರವರೂ, ರಾ|| ಶಾಸ್ತ್ರಿಗಳೂ ಕಮಿಟಿಯು ೩ ದಿನಗಳ ಮುಂಚೆ ಪಾಸಾದ ಠರಾವನ್ನು ಕಮಿಟಿಯ ಮೆಂಬರರ ಲಕ್ಷಕ್ಕೆ ತಂದರು. ಈ ಠರಾವು ರಿಕಾರ್ಡಿನಲ್ಲಿ ಇದ್ದು, ಹಣ ಹಂಚಿದರೆ, (ultra vires) ಅಧಿಕಾರಾತಿಕ್ರಮವಾಗುವದೆಂದು ಹೇಳಲಾಯಿತು. ಈ ಠರಾವಿನಂತೆ, ಆಪತ್ಕಾಲವಿದ್ದಲ್ಲಿ, ಗರಜಿನ ಮಾನದಿಂದ ಹಣ ಹಂಚುವ ಅಧಿಕಾರವು ಮಾಮಲೇದಾರರಿಗೆ ಕೊಡಲ್ಪಟ್ಟದೆಂತಲೂ, ಗುಡಿಗಟ್ಟುಗಳಿಗೆ ಅವಶ್ಯವುಳ್ಳ ಹಣವನ್ನು ಇಷ್ಟು ೧೫ ದಿವಸಗಳಲ್ಲಿ ಗ್ರಾಮಸ್ಥರ ರಿಪೋರ್ಟು ಬಂದ ಬಳಿಕ, ಹಾಗು ಹಂಚುವದೆಂತಲೂ ಕಮಿಟಿಯಲ್ಲಿ ಸ್ಪಷ್ಟೀಕರಣವಾಯಿತು. ೩-೪-೫ ರೂಪಾಯಿಗಳನ್ನು ಈಗ ಹಂಚಿದರೆ, ಹೊನ್ನಾವರದಂತೆ,

ನಿರಾಶ್ರಿತರು (amply satisfied) ಅತ್ಯಂತ ಸಂತುಷ್ಟರಾಗುವರೆಂದು ರಾ| ಬ| ಕೊಯಿಮುತ್ತೂರರು ನುಡಿದರು. ಅದಕ್ಕೆ ರಾ| ಗಣಪತ ಮಾಸೂರರು ತಲೆದೂಗಿದರು. ರಾ| ಚೆನ್ನಮಳಗುಂದರವರು ಹೊನ್ನಾವರದ ಉದಾಹರಣೆಯನ್ನು ಹಿಂಬಾಲಿಸಲು ಎಷ್ಟುಕಷ್ಟು ಒಪ್ಪಲಿಲ್ಲ. ಇತ್ತ ರಾ| ಬ| ರರು 'I must see that the money is distributed on Wednesday' (ಈ ಹೊತ್ತು ಬುಧವಾರಕ್ಕೇ ಹಣ ಹಂಚಿದ್ದನ್ನು ನಾನು ಪ್ರತ್ಯಕ್ಷ ನೋಡಬೇಕು) ಎಂದು ಆಗಾಗ್ಗೆ ನುಡಿಯುತ್ತಿದ್ದರು. ೩-೪-೫ ರೂಪಾಯಿಗಳಿಂದ ಹೊನ್ನಾವರ ಅತ್ತ ಕಡೆಯ ನಿರಾಶ್ರಿತರಿಗೆ ಅತ್ಯಂತ ತೃಪ್ತಿಯಾಯಿತೆಂದು ರಾ| ಚೆನ್ನಮಳಗುಂದರವರಿಗೆ ತೋರಲಿಲ್ಲ. ರಾ| ಬ| ರರು ಗುಡಿಗಟ್ಟು ಕಟ್ಟುವ ಲೆಕ್ಕವನ್ನು ಕಮಿಟಿಗೆ ಹೇಳಿದರು. ಹ್ಯಾಗೂ ವಿಚಾರಿಸಿದರೂ, ಈಗ ಹಣ ಹಂಚುವದು ಯೋಗ್ಯವಲ್ಲೆಂದೂ, ಕಾಯಿದೇಶೀರ (ultra vires) ವಲ್ಲೆಂದೂ ರಾ| ಚೆನ್ನಮಳಗುಂದ – ಶಾಸ್ತ್ರಿಗಳ ಮತ ಬಿತ್ತು. ಇದಕ್ಕೆ ರಾ| ಬ| ರರು 'ಶಾಸ್ತ್ರೀಯ' (technical) ಆಕ್ಷೇಪ ಎಂದು ನುಡಿದರು. ಅಧ್ಯಕ್ಷರೂ ಅದಕ್ಕೆ ತಲೆ ದೂಗಿದರು. ರಾ| ಸಾ| ಶ್ಯಾನಭಾಗರು ಆಗಲೇ ನಿಧನ ಹೊಂದಿದ ಮೂಲಕ, ಅನೇಕ ಮೆಂಬರರು ಗೈರ ಹಾಜರಿದ್ದ ಮೂಲಕ, ಕಮೀಟಿಯ ವಿಚಾರವನ್ನು ಮುಂದೊತ್ತಿರೆಂದು ಸೂಚನೆಯಾಯಿತು. ಅದೂ ಮಾನ್ಯವಾಗಲಿಲ್ಲ. ಕಡೆಗೆ ಮಾತು ಕಥೆಯಾಗಿ, ಹಿಂದಿನ ಠರಾವಿಗೆ ವಿರೋಧಬಾರದಂತೆ, ಹಿಂದಿನ ಠರಾವಿನನ್ವಯ ಮಾಮಲೇದಾರರಿಗೆ ಪ್ರಾಪ್ತವಾದ ಅಧಿಕಾರದಂತೆ, ತಾತ್ಕಾಲಿಕ ಧನಸಹಾಯವೆಂದು ಈಗ ಹಣ ಹಂಚುತ್ತೇವೆಂದು ಕಮೀಟಿಯವರಿಗೆ ಸಮಾಧಾನ ಮಾಡೋಣಾಯಿತು, ರಾ| ಬ| ರರಿಗೂ ಸಮಾಧಾನ ಮಾಡೋಣಾಯಿತು. ಹಣ ಪಡೆದ ನಿರಾಶ್ರಿತರು ವಿಶೇಷವಾಗಿ, ದೀವಗಿ ಊರಕೇರಿ ಗ್ರಾಮದವರು ದೀವಗಿಯಲ್ಲಿ ಕೊಂಗ್ರೆಸ ಕಮೀಟಿಯು, ಊರಕೇರಿಯಲ್ಲಿ ಗ್ರಾಮದವರು ನಿರಾಶ್ರಿತರ ಬಗ್ಗೆ ವ್ಯವಸ್ಥೆ ಮಾಡುತ್ತಿದ್ದದರಿಂದ, ಅವರಿಗೆ ತಾತ್ಕಾಲಿಕ ಸಹಾಯವನ್ನೀಯುವ ಗರಜಿಲ್ಲೆಂದು ಹಿಂದಿನ ಕಮೀಟಿಯಲ್ಲಿ ಠರಾವಾಗಿತ್ತು.

'ಧುರೀಣ'ದ ವಕೀಲಿ!

ಕಾನಡಾವೃತ್ತಕಾರರು

ಶ್ರೀ| ಗಣಪತರಾವ ಮಾಸೂರ ಇವರು ಇನ್ನೊಂದೆಡೆಗೆ ಕೊಟ್ಟ ತಮ್ಮ ಪತ್ರದಲ್ಲಿ ಅಂದಂತೆ ೧೭ ನೇ ತಾರೀಖಿನ ದಿವಸ ಕರೆದದ್ದು ರಿಲೀಫ ಕಮಿಟಿಯ ಮೀಟಿಂಗಾಗಿದ್ದಿಲ್ಲ ಇದು ಆಮಂತ್ರಣ ಪತ್ರಿಕೆಯನ್ನೂ ನಡೆದ ಕಾರ್ಯಕ್ರಮವನ್ನೂ ವಿಮರ್ಶಿಸಿದರೆ ಸ್ಪಷ್ಟವಾಗುವಂತಿದ್ದು ನಮ್ಮ ವ್ಯವಸಾಯಬಂಧುಗಳಾದ ಕಾನಡಾವೃತ್ತಕಾರರು ಮಾಡಿದ ವಿಧಾನಕ್ಕೆ ಆಸ್ಪದವಿಲ್ಲ ಶ್ರೀ| ವಿಶ್ವೇಶ್ವರರಾಯರು ನಮ್ಮ ಕಡೆಗೆ ಕಳಿಸಿದ ಇಂಗ್ಲಿಷ ಪತ್ರವನ್ನು ಇನ್ನೊಂದೆಡೆಗೆ ಕೊಟ್ಟಿದ್ದು ಅವರೂ ಈ ಮುದ್ದೆಯನ್ನು ಸ್ಪಷ್ಟಗೊಳಿಸಿರುವರು. ಕಾನಡಾ ವೃತ್ತಕಾರರು ಇತ್ತ ಕೆಲ ದಿನಗಳಿಂದ ಶ್ರೀ| ವಿಶ್ವೇಶ್ವರರಾಯರ ಬೆನ್ನು ಹಿಡಿದಂತೆ ಕಾಣುತ್ತಿದೆ ಕಾರವಾರ ಅಂಕೋಲೆಗಳಲ್ಲಿ ಮಾಡಿದ ಅವರ ಭಾಷಣಕ್ಕೆ ವಿಪರೀತವಾಗಿ ಅರ್ಥ ಮಾಡಿದ್ದು ಅದಕ್ಕೆ ವೃತ್ತಕಾರರು ಆಶ್ರಯ ಕೊಟ್ಟಿರುವರೆಂದು ಶ್ರೀ| ವಿಶ್ವೇಶ್ವರರಾಯರು ಆಪೇಕ್ಷಿಸಿದ್ದಾರೆ. ಇನ್ನೂ ಕೆಲ ಪ್ರಸಂಗದಲ್ಲಿ ವೃತ್ತಕಾರರು ಅವರ ವಿಷಯವಾಗಿ ತಪ್ಪು ಕಲ್ಪನೆಯನ್ನುಂಟುಮಾಡಲು ಹವಣಿಸಿದ್ದು ಕಂಡು ಬರುತ್ತಿದೆ ಶ್ರೀ| ಕಲ್ಯಾಣಪುರಕರರು ಪಾರ್ಟಿಗತಿಕ ಪಕ್ಷವನ್ನು ಎತ್ತಿಹಿಡಿದಿದ್ದು ಅವರಿಗೂ ನಮಗೂ ತತ್ವತಃ ಮತಭೇದವಿದ್ದರೂ ಅವರ ವ್ಯಕ್ತಿತ್ವದ ವಿಷಯವಾಗಿ ವೃತ್ತಕಾರರು ಹೀಗೆ ತಪ್ಪು ವಿಧಾನ ಮಾಡುವದು ಉಚಿತವಲ್ಲವೆಂದು ನಮ್ಮ ಮತವಿದೆ. ಇತರರಂತೆ ಅವರೂ ಕೌನ್ಸಿಲು ಮೆಂಬರರು, ತಮಗೆ ಒಪ್ಪುವ ವಿಚಾರಗಳನ್ನು ಮುಂದಿಡುತ್ತಿರುವರು. ಅವರ ದೋಗ್ಯತೆಯನ್ನು ಗೊತ್ತುಪಡಿಸುವದು ಮತಕೊಡತಲೆಚ್ಚ ಸುವ ಮತದಾರರ ಕೆಲಸ ಹೀಗಿರುತ್ತ ಅವರು ನಮ್ಮಿಂದ ಭಿನ್ನಮತದವರಾಗಿದ್ದರೂ ವ್ಯಕ್ತೀಶಃ ಅವರ ಮೇಲೆ ಟೀಕೆ ಮಾಡಿ ಅವರ ಹೆಸರು ಕೆಡಿಸಲೆಣಿಸುವದು ಉಚಿತವಲ್ಲವೆಂದು ನಮಗೆ ತೋರುತ್ತಿದೆ ಅವರ ರಾಜಕೀಯ ಮತದ ಮೇಲೆ ಸರಳ ರೀತಿಯಿಂದ ಟೀಕೆಮಾಡಲು ಎಲ್ಲರಿಗೂ ಆಸ್ಪದವಿದ್ದೇ ಇರುವದು

ಸ್ಫುಟಲೇಖ (ಧುರೀಣ, ತಾ ೨೫-೯ ೧೯೩೦)

ರಾ| ಮಾಸೂರರ ಪತ್ರ

ಮ|| ರಾ|| 'ಧುರೀಣ' ಪತ್ರಿಕೆಯ ಸಂಪಾದಕರ ಬಳಿಗೆ — ಈ ಕೆಳಗಣ ನಾಲ್ಕು ಪಂಕ್ತಿಗಳಿಗೆ ನಿಮ್ಮ ಪತ್ರಿಕೆಯಲ್ಲಿ ಆಶ್ರಯ ದೊರೆಯಬೇಕಾಗಿ ಆಪೇಕ್ಷಿಸುತ್ತೇನೆ

ಕಳೆದ ೧೭ ನೇ ತಾರೀಖಿನ ದಿವಸ ಇಲ್ಲಿಯ ತಾಲೂಕ ಕಚೇರಿಯಲ್ಲಿ ರಿಲೀಫ ಹಣ ಹಂಚುವ ಬಗ್ಗೆ ನೆರೆದ ಸಭೆಯ ಕುರಿತು ಕಾನಡಾವೃತ್ತ ಪತ್ರಕರ್ತರು ೨೦ ನೇ ತಾರೀಖಿನ ಪತ್ರಿಕೆಯ ಸ್ಫುಟಲೇಖದಲ್ಲಿ ತಪ್ಪು ವಿಧಾನವನ್ನು ಮಾಡಿದ್ದು ನಿಜವಾದ ಸಂಗತಿ ಈ ಕೆಳಗಿನಂತೆ ಇರುತ್ತದೆ

ಕುಮಟಾ ತಾಲೂಕಾ ಮಾಮಲೇದಾರರ ಆ ಸಮಯಕ್ಕೆ ಇಲ್ಲಿಗೆ ಬಂದಿದ್ದ ಡಿ| ಡಿ|| ಕಲೆಕ್ಟರ ರಾ|| ಬ|| ಕೊಯಿಮತ್ತೂರರ ಮುಂದೆ ೧೫ ನೇ ತಾರೀಖಿಗೆ ತಾತ್ಕಾಲಿಕ ರಿಲೀಫಿನ ಅವಶ್ಯಕತೆಯುಳ್ಳ ನಿರಾಶ್ರಿತರಿಗೆ ಹಣ ಹಂಚುವ ದಕ್ಕಾಗಿ ಊರಿನ ಕೆಲ ಸಭ್ಯ ಗೃಹಸ್ಥರಿಗೆ ೧೭ನೇ ತಾರೀಖಿನ ದಿವಸ ಆಮಂತ್ರಣ ಕೊಟ್ಟಿದ್ದು, ಅವರಲ್ಲಿ ನನ್ನ ಹೆಸರೂ ಇತ್ತು ಆ ದಿವಸ ರಾ|| ಸಾ|| ರಾಮಚಂದ್ರ ಶ್ಯಾನಭಾಗರವರ ನಿಧನವಾದದರಿಂದ ನಾನು ಅವರಲ್ಲಿಗೆ ಹೋಗುತ್ತಿರ ಬೇಗ ಶ್ರೀ ವಿಶ್ವೇಶ್ವರರಾವ ಕಲ್ಯಾಣಪುರಕರರೂ ಭೆಟ್ಟಿಯಾದರು. ನಾವಿಬ್ಬರೂ ಮೃತರ ಮನೆಗೆ ಹೋಗಿ ತಿರುಗಿ ತಾಲೂಕ ಕಚೇರಿಗೆ ಬರುವಷ್ಟರಲ್ಲಿ ರಾ|| ಬ|| ಕೊಯಿಮುತ್ತೂರ ಶ್ರೀ| ಶಾಸ್ತ್ರಿ, ಶ್ರೀ| ದೀವಗಿ ಮಿ|| ಫರ್ನಾಂಡೀಸ ಇವರು ಬಂದಿದ್ದರು ಅಧ್ಯಕ್ಷತೆಯ ಸ್ಥಾನವು ಖಾಲಿಯಿತ್ತು ಶ್ರೀ| ವಿಶ್ವೇಶ್ವರರಾಯರು ರಿಲೀಫ ಕಮಿಟಿಯ ಅಧ್ಯಕ್ಷರಿದ್ದುದರಿಂದ ಅವರೇ ಆ ಸ್ಥಾನವನ್ನು ಅಲಂಕರಿಸಬೇಕೆಂದು ಸೂಚನೆಯಾಯಿತು ಮತ್ತು ಅವರು ಹಾಗೇ ಮಾಡಿದರು ೧೫ನೇ ತಾರೀಖಿನ ದಿವಸ ಕೂಡಿದ್ದು ಕಾನಡಾವೃತ್ತಕಾರರು ಅನ್ನುವಂತೆ ಮೀಟಿಂಗಾಗಿದ್ದಿಲ್ಲ ಆಮಂತ್ರಣ ಪತ್ರಿಕೆಯನ್ನು ನೋಡಿದರೆ ಕಂಡುಬರುವಂತಿದೆ. ಮತ್ತು ಆ ದಿವಸ ಹಿಂದೆ ಮೂರು ದಿನಗಳ ಮೊದಲಾದ ನಿರ್ಣಯವನ್ನು ರಾ|| ಬ|| ಕೊಯಿಮುತ್ತೂರರವರು ಕಮೀಟಿಯಿಂದ ರದ್ದುಪಡಿಸಿದ್ದಾಗಲೀ ಇಬ್ಬರು ಸಭಾಸದರು ರಾ|| ಬ|| ರನ್ನು ವಿರೋಧಿಸಿದ್ದಾಗಲೀ ಇರುವದಿಲ್ಲ ರಾ|| ಬ|| ಕೊಯಿಮುತ್ತೂರರು ಯಾವ ಕೆಲಸದಲ್ಲಿಯೂ ಕೈ ಹಾಕಲಿಲ್ಲ. ಕೇವಲ ಮಾಮಲೇದಾರರು ಹಿಂದೆ ಆದ ಠರಾವಿಗನುಸಾರವಾಗಿ ನೆರೆದ ಸಭ್ಯ ಗೃಹಸ್ಥರ ಮುಂದೆ ನಿರಾಶ್ರಿತರಿಗೆ ಹಣವನ್ನು ಅಧ್ಯಕ್ಷರದ್ವಾರಾ ಹಂಚಿಸಿದರು. ಇದು ನಿಜವಾಗಿ ನಡೆದ ಸಂಗತಿಯು. ಹೀಗಿರುವಾಗ ಕಾನಡಾವೃತ್ತಕಾರರು ಅನ್ನುವಂತೆ, ಶ್ರೀ| ಕಲ್ಯಾಣಪುರಕರರು ರಾ|| ಬ|| ಕೊಯಿಮುತ್ತೂರರವರನ್ನು ಎತ್ತಿ ಹಿಡಿಯುವ ಪ್ರಸಂಗವು ಬರಲೂ ಇಲ್ಲ ಅವರು ಕಮೀಟಿಗೆ ಯಾವದೂ ತರದಿಂದ ದ್ರೋಹಮಾಡಿದ್ದೂ ಇಲ್ಲ. ವೃತ್ತಕಾರರು ಶ್ರೀ| ಕಲ್ಯಾಣಪುರಕರರ ಹೆಸರನ್ನು ತಕ್ಕೊಂಡದ್ದು ಕೇವಲ ಅಪ್ರಸಂಗಿಕವು. ಮತ್ತು ನಿಜವಾದ ಸಂಗತಿಗಳನ್ನು ತಿಳಿದುಕೊಳ್ಳದೆ ಒಬ್ಬ ವ್ಯಕ್ತಿಯ ಮೇಲೆ ತಪ್ಪು ವಿಧಾನವನ್ನು ಹೊರಿಸುವದು ಪತ್ರಕಾರರಿಗೆ ಒಪ್ಪತಕ್ಕದ್ದಲ್ಲ ನಮ್ಮ ವೃತ್ತಕಾರರು ಸಂದರ್ಭವಿಲ್ಲದಿದ್ದರೂ ಶ್ರೀ| ವಿಶ್ವೇಶ್ವರರಾವ ಇವರ ಹೆಸರನ್ನು ಎಳೆಎಳೆದು ತಂದು ತಮ್ಮ ಲೆಕ್ಕಣಿಕೆಯ ಚಾಳಿಗೆ ಕೊಡುವದನ್ನು ನೋಡಿ ನನಗೆ ವಿಷಾದವಾಗುತ್ತಿದೆ. ೧೫ನೇ ತಾರೀಖಿನ ದಿನ ನಡೆದ ನಿಜಸ್ಥಿತಿಯನ್ನು ಈ ಮೇಲೆ ಇಟ್ಟಿರುತ್ತೇನೆ.

ತಾರೀಖು. ೨೩–೯–೩೦ } ಜಿ. ಆರ್ ಮಾಸೂರ. ಮೆಂಬರ ರಿಲೀಫ ಕಮಿಟಿ, ಕುಮಟಾ.

ಇಹವೃತ್ತ

ಕಳೆದ ಬುಧವಾರ ದಿವಸ ಇಲ್ಲಿಯ ತಾಲೂಕ ಕಚೇರಿಯಲ್ಲಿ ಶ್ರೀ| ವಿ. ವಿ. ಕಲ್ಯಾಣಪುರಕರರ ಅಧ್ಯಕ್ಷತೆಯಲ್ಲಿ ರಾ| ಬ| ಕೊಯಿಮುತ್ತೂರ, ಸಬಜಜ್ಜ, ಮಾಮಲೇದಾರ, ಶ್ರೀ| ಮಾಸೂರ, ಶ್ರೀ| ಜಿ ಜಿ. ಶಾಸ್ತ್ರಿ, ಮಿ| ಫರ್ನಾಂಡಿಸ ಇವರದೊಂದು ಮೀಟಿಂಗು ರಿಲೀಫ ಫಂಡಿನ ವ್ಯವಸೆ ಮಾಡುವ ಕುರಿತು ಕೂಡಿದ್ದಿತು ನಿರಾಶ್ರಿತರಾದ ಜನರ ಕುರಿತು ಅಲ್ಲಲ್ಲಿಯ ಗ್ರಾಮಸ್ಥರು ಮಾಹಿತಿಗಳನ್ನು ಕೊಟ್ಟ ಬಳಿಕ ನಿರಾಶ್ರಿತರ ಹಾನಿಯು ಮಾನದಂತೆ ೨ ರೂಪಾಯಿಂದ ೫ ರೂಪಾಯಿಗಳ ವರೆಗೆ ಹಣವನ್ನು ಹಂಚಲಾಯಿತು. ಈ ತಾಲೂಕಿನಲ್ಲಿ ಕಾಂಗ್ರೆಸ್ ಬಿನ್ ಕಾಂಗ್ರೆಸ್ ಕಮಿಟಿಗಳಿಂದ ಕೂಡಿ ೬೦೦ ರೂಪಾಯಿಗಳು ಕೂಡಿದ್ದು. ಅವುಗಳಲ್ಲಿ ೨೩೩ ರೂಪಾಯಿ ಖರ್ಚಾಗಿರುತ್ತವಾಗಿ ತಿಳಿಯುತ್ತದೆ ಉಳಿದ ಹಣದ ವ್ಯವಸ್ಥೆಯಾಗತಕ್ಕದ್ದಿದೆ

ಧುರೀಣ ತಾ ೧೮-೯-೧೯೩೦.

ಕೊಂಗ್ರೆಸು ವೃತ್ತ.

(೫ ನೇ ಪುಟದಿಂದ ಮುಂದರಿದದ್ದು.)

ದರು ಶ್ರೀ| ವಲ್ಲಭಭಾಯಿ ಪಟೇಲರವರು ಈಗ ಪ್ರಾಪ್ತವಾದ ಸಾಮರ್ಥ್ಯದ ಮೇಲಿಂದ, ಅನುಭವದ ಮೇಲಿಂದ ಮತ್ತು ಕಾಯಿದೇಭಂಗಕ್ಕೆ ಅನುಕೂಲವಾದ ವಾತಾವರಣವನ್ನು ನಿರೀಕ್ಷಿಸುವದು ಅಯೋಗ್ಯವೆಂದರು ಹಿಂದೂ–ಮುಸಲ್ಮಾನರ ಐಕ್ಯವರ್ಧನಕ್ಕೂ ಕಾಯಿದೇಭಂಗವು ಅನುಕೂಲವಾಗುವದೆಂದರು. ಪಂಜಾಬದಲ್ಲಿ ಅಂತಃಕಲಹಗಳಿದ್ದದರಿಂದ, ಹಿಂಸಾತ್ಮಕ ಚಳವಳಿಯು ಪ್ರಾಬಲ್ಯವಾದದ್ದರಿಂದ, ಕಾಯಿದೇಭಂಗವನ್ನು ಕೈಕೊಳ್ಳುವದು ತಪ್ಪಾಗುವದೆಂದು ಡಾ| ಸತ್ಯಪಾಲರವರು ಎಚ್ಚರಿಕೆ ಕೊಟ್ಟರು. ಕೊಂಗ್ರೆಸ-ಖಿಲಾಫತ ಸಂಸ್ಥೆಗಳ ಮುಂದಾಳುಗಳೇ ಪಂಜಾಬದೊಳಗಿನ ದುರವಸ್ಥೆಗೆ ಕಾರಣರೆಂದು ಮಿ| ಹಬೀಬುಲ್ ರಹಮಾನರವರು ನುಡಿದು, ಪಂಜಾಬದ ಪ್ರಜೆಗಳು ಕಾಯಿದೇಭಂಗಕ್ಕೆ ಸಿದ್ಧರಿರುವರೆಂದರು. ಮೌಲವಿ ಮಂಝೂರ ಅಲ್ಲಿ, ಶ್ರೀ| ಧುನಿಚಂದ, ಮಿ| ಕಫೋರವರು ಠರಾವನ್ನು ಪ್ರತಿರೋಧಿಸಿದರು. ಶ್ರೀ| ಚಮನಲಾಲರವರು ಗುಜರಾಥದ ಉದಾಹರಣೆಯನ್ನಿತ್ತು, ಪಂಜಾಬದಲ್ಲಿ ಕಾಯಿದೇಭಂಗವನ್ನು ಆಚರಿಸುವ ಆತಂಕವೇನಿಲ್ಲೆಂದರು ಸೆಂಟ್ರಲ್ ಸಿಕ್ ಲೀಗಿನ ಅಧ್ಯಕ್ಷರಾದ ಸರದಾರ ಮಂಗಲಸಿಂಗರವರ ಭಾಷಣವು ಸಭಿಕರಲ್ಲಿ ಆವೇಶವನ್ನು ಜನಿಸಿತು. ಕಾಯಿದೇ ಭಂಗಕ್ಕಾಗಿ ೫೦ ಸಾವಿರ ಶೀಖ ಬಾಂಧವರನ್ನು ತಾವು ಮುಂದೊಡ್ಡುತ್ತೇವೆಂದರು. ಆಗ ಸಭೆಯಲ್ಲೆಲ್ಲ ಚಪ್ಪಾಳೆಗಳ ಘೋಷವಾಯಿತು. ಶ್ರೀ| ಮಾಲಕಸಿಂಗರವರ ಭಾಷಣವಾದ ಬಳಿಕ, ಮೌಲಾನಾರವರು ಉತ್ಸಾಹಪೂರ್ಣ ಭಾಷಣವನ್ನಿತ್ತು, ಪಂಜಾಬದ ಮುಂದಾಳುಗಳಿಗೆ ತಮ್ಮ ತಮ್ಮ ಲೆಕ್ಕಣಿಕೆಗಳನ್ನು ಒರೆಯಲ್ಲಿ ಹಾಕಿರಿ: ನಾನು ನಿಮ್ಮೊಳಗಿನ ಜಗಳವನ್ನು ನಿವಾರಿಸುತ್ತೇನೆ, ಪಂಜಾಬದ ದುರ್ಬಲತೆಗಾಗಿ ಭರತಖಂಡವು ಕಾಯಿದೇಭಂಗವನ್ನು ತಡೆಕೊಟ್ಟು ಮಾಡಲಾರದು, ಎಂದು ಮೌಲಾನಾರವರು ಖಂಡಿತ ಹೇಳಿಬಿಟ್ಟರು. ಬಳಿಕ, ಡಾ|| ಗೋಪೀಚಂದ, ಶ್ರೀ| ವಿಠ್ಠಲಭಾಯಿ ಪಟೇಲ, ಡಾಕ್ಟರ ಅಸಫ್ ಅಲ್ಲಿಯವರ ಭಾಷಣಗಳಾದವು ಮೇಲೆ

ಬಂಧುಗಳು ಕಾಯಿದೇಭಂಗದ ಠರಾವನ್ನು ಸ್ವೀಕರಿಸಿ, ಸ್ವರಾಜ್ಯಸಂಪಾದನೆಗೆ ಕಾಯಿದೇಭಂಗದ ಒಂದೇ ಮಾರ್ಗವು ಉಳಿದಿದೆಂದು ನುಡಿದರು. ಶ್ರೀ। ಸರೋಜಿನಿ ದೇವಿಯವರೂ ಈ ಠರಾವನ್ನು ಪುಷ್ಟೀಕರಿಸಿದರು. ಪಂಡಿತ ಮದನಮೋಹನ ಮಾಲವಿಯವರು ಇಂಥ ಕಾರ್ಯಕ್ರಮವನ್ನು ಕೈಕೊಂಡು, ರಾಷ್ಟ್ರೀಯ ಸಭೆಯನ್ನು ವೃಥಾ ನಾಚಿಕೆಗೇಡಾಗಿ ಮಾಡಬೇಡಿರೆಂದು ಆಗ್ರಹಪೂರ್ವಕ ಸೂಚಿಸಿದರು. ಅದಷ್ಟು ತಾಳ್ಮೆಯಿಂದಲೇ ರಾಷ್ಟ್ರೀಯ ಸಭೆಯ ಕಾರ್ಯವನ್ನು ನಡಿಸಿರೆಂದು ಮಾಲವೀಯರು ಆಗ್ರಹಮಾಡಿ, ಠರಾವನ್ನು ವಿರೋಧಿಸಿದರು. ಮತ ಕೊಳ್ಳಲು, ಠರಾವು ಪ್ರಚಂಡ ಬಹುಮತದಿಂದ ಮಂಜೂರಾಯಿತು. ನಾಭಾ ಮಹಾರಾಜರನ್ನು ಬಲಾತ್ಕಾರದಿಂದ ಹಿಂದುಸ್ಥಾನ ಸರಕಾರವು ಪದಚ್ಯುತ ಮಾಡಿದ ಬಗ್ಗೆ ರಾಷ್ಟ್ರೀಯ ಸಭೆಯವರು ನಿಷೇಧಪ್ರದರ್ಶನ ಮಾಡಿ, ಮಹಾರಾಜರವರಗೂಡ ತನ್ನ ಸಹಾನುಭೂತಿಯನ್ನು ಪ್ರದರ್ಶಿಸುವ ಠರಾವು ಅಧ್ಯಕ್ಷರೇ ಮುಂದಿಟ್ಟು ಮಂಜೂರು ಮಾಡಿಕೊಂಡ ಬಳಿಕ, ಅಂದಿನ ಕಾರ್ಯವು ಮುಗಿಯಿತು.

ಮಂಗಳವಾರದ ಹಕೀಕತು.

ಮಂಗಳವಾರಕ್ಕೆ ರಾಷ್ಟ್ರೀಯ ಸಭೆಯ ಅಧಿವೇಶನವು ಪುನಃ ಪ್ರಾರಂಭವಾಯಿತು. ಅಧ್ಯಕ್ಷರು ಅಸ್ವಸ್ಥರಿದ್ದದರಿಂದ, ದೇಶಬಂಧುಗಳು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡಿದ್ದರು. ಬಿಹಾರ, ಕಾನಡಾ, ಬರ್ಮಾದೊಳಗಿನ ನೆರೆಯ ನಿರಾಶ್ರಿತರ ಬಗ್ಗೆ ಸಹಾನುಭೂತಿ ಪ್ರದರ್ಶನ, ರಾಷ್ಟ್ರೀಯ ಸಭೆಯ ಘಟನೆಯ ದುರುಸ್ತಿಯ ಬಗ್ಗೆ ಕಮೀಟಿಯ ನೇಮಣೂಕಿ, ಹಿಂದೂ-ಮಹಮ್ಮದೀಯರ ಐಕ್ಯರಕ್ಷಣೆ, ರಾಷ್ಟ್ರೀಯ ಯೋಜನೆಯ ಕಮೀಟಿ, ಹಿಂದೀ ವೃತ್ತಪತ್ರಕಾರರಿಗೆ ಸಾಮಾಜಿಕ ಕಲಹಗಳ ವೃತ್ತಾಂತವನ್ನು ನಿವೇದಿಸುವಾಗ ಜಾಗ್ರತೆ ಕೊಳ್ಳಲು ಹಾಗು ಪ್ರತಿ ಪ್ರಾಂತದಲ್ಲಿ ವೃತ್ತಪತ್ರಕಾರರಿಗೆ ತಕ್ಕ ಬೋಧ ಕೊಡುವರೆ ಕಮೀಟಿಗಳ ಏರ್ಪಾಟು, ಶಾಂತತೆಯ ಸ್ಥಾಪನೆಯ ಬಗ್ಗೆ ಮಿಶ್ರ ಕಮೀಟಿಗಳ ನೇಮಣೂಕಿ, ಹೀಗೆ, ಠರಾವುಗಳು ಅಧ್ಯಕ್ಷಸ್ಥಾನದಿಂದ ಮಂಜೂರಾದವು. ಬಳಿಕ, ಡಾ। ಅನ್‌ಸಾರಿಯವರು ಬ್ರಿಟಿಶ ಸರಕುಗಳ ಬಹಿಷ್ಕಾರದ ಠರಾವನ್ನು ಸೂಚಿಸಿದರು. ಶ್ರೀ। ವಿಠ್ಠಲಭಾಯಿ ಪಟೇಲರವರು ಅದಕ್ಕೆ ಅನುಮತಿಯನ್ನಿತ್ತರು. ಬಾಬು ರಾಜೇಂದ್ರ ಪ್ರಸಾದರವರು ಈ ಠರಾವನ್ನು ವಿರೋಧಿಸಿದರು. ಅಹಿಂಸಾಪ್ರಧಾನ ಅಸಹಕಾರಿತೆಯ ತತ್ವಕ್ಕೆ ಈ ಠರಾವು ವಿರೋಧವಾಗಿದೆಂದು ಅವರ ಮತ ಬಿತ್ತು. ಪಂಡಿತ ಮೋತೀಲಾಲ ನೆಹರು, ಜಯಸುಖಲಾಲ ಮೇಥಾರವರು ಬ್ರಿಟಿಶ ಸರಕಿನ ಬಹಿಷ್ಕಾರದ ಶಸ್ತ್ರವನ್ನು ಕೆನಿಯಾ ನಿರ್ಣಯದ ಪ್ರತೀಕಾರಾರ್ಥವಾಗಿ ಎಸೆಯಬೇಕೆಂದರು. ಬಳಿಕ, ಜಿತೇಂದ್ರಲಾಲ ಬಾನರ್ಜೀ, ಆಚಾರ್ಯ ಗಿಡವಾನಿ, ಮಿ। ಯಾಕೂಬ ಹಸನ ಮೊದಲಾದವರ ಭಾಷಣಗಳಾದವು. ಹೀಗೆಲ್ಲ ವಾದ-ವಿವಾದವಾಗಿ, ಠರಾವು ಬಹುಮತದಿಂದ ಪಾಸಾಯಿತು. ಇಷ್ಟಾದ ಬಳಿಕ, ಮಂಗಳವಾರವು ತಾ. ೧೮ನೇ ಗಾಂಧೀ ದಿನವಿದ್ದುದರಿಂದ, ಮಹಾತ್ಮರ ಸ್ಮರಣಾರ್ಥ ಇಡೀ ರಾಷ್ಟ್ರೀಯ ಸಭೆಯು ಕೆಲ ಹೊತ್ತು ಎದ್ದು ನಿಂತಿತು. ಸಭಾಮಂಟಪದಲ್ಲೆಲ್ಲ ' ಮಹಾತ್ಮಾ ಗಾಂಧೀಕೀ ಜಯ ' ಎಂಬ ಜಯಘೋಷದಿಂದ ದುಮುದುಮಿಸಿತು. ಅಂದಿನ ಕಾರ್ಯಕ್ರಮವು ಇಷ್ಟಕ್ಕೆ ಮುಗಿಯಿತು.

ಬುಧವಾರದ ಹಕೀಕತು.

ಇಂದು ರಾಷ್ಟ್ರೀಯ ಸಭೆಯು ಅಧಿವೇಶನವು ಬೆಳಗಿನ ೧೧ ಘಂಟೆಗೆ ನೆರೆಯಿತು. ಅಧಿವೇಶನವು ಅನಪೇಕ್ಷಿತವಾಗಿ ಮುಂದರಿದದರಿಂದ, ಅನೇಕ ಪ್ರತಿನಿಧಿಗಳು ಸ್ವಗೃಹಾಭಿಮುಖವಾಗಿ ತೆರಳಿದ್ದರು. ಶ್ರೀಮತಿ ಸರೋಜಿನಿ ದೇವಿಯವರು ನಾಗಪುರ ಧ್ವಜಸಂಗ್ರಾಮದ ಚಾಲಕರಿಗೆ, ಸ್ವಯಂಸೇವಕರಿಗೆ ಅಭಿನಂದನಪರ ಠರಾವನ್ನು ಸೂಚಿಸಿದರು. ಅವಕ್ಕೆ ಪಂಡಿತ ನೇಕೀರಾಮ, ಮಿ। ಮುಜರೂಮ ಅಲ್ಲಿ, ಶ್ರೀ। ಅರ್ಜುನಲಾಲ ಶೇಠಿ, ಹರಿಸರ್ವೋತ್ತಮರಾವ ಮೊದಲಾದವರು ಅನುಕೂಲ ಭಾಷಣ ಕೊಟ್ಟ ಬಳಿಕ, ಠರಾವು ಮಂಜೂರಾಯಿತು. ಬಳಿಕ ಶ್ರೀ। ಪುರುಷೋತ್ತಮದಾಸ ಟಂಡನ್‌ರವರು ಕೆನಿಯಾ ನಿರ್ಣಯದ ಠರಾವನ್ನು ಸೂಚಿಸಿದರು. ಕೆನಿಯಾ ನಿರ್ಣಯದಿಂದ ಭಾರತೀಯರಿಗೆ ಸಾಮ್ರಾಜ್ಯದಲ್ಲಿ ನ್ಯಾಯ ಸಿಗುವದು ಅಶಕ್ಯವಾದ ಮೂಲಕ, ಸಾಮ್ರಾಜ್ಯದಿಂದ ಹೊರಬರುವರೆ ಭಾರತೀಯರು ಆಲೋಚಿಸಬೇಕೆಂದು ನುಡಿದು, ಬ್ರಿಟಿಶ ಸಾಮ್ರಾಜ್ಯಾಂತರ್ಗತ ಸ್ವರಾಜ್ಯದ ಸಂಪಾದನೆಗಾಗಿ ನಾವು ಇನ್ನು ಮುಂದೆ ಯತ್ನಮಾಡಬಾರದೆಂದರು. ಶ್ರೀ। ಶ್ರೀಶಚಂದ್ರ ಚಟರ್ಜೀಯವರು ಇದಕ್ಕೆ ಅನುಮೋದಿಸಿದರು. ಆಚಾರ್ಯ ಗಿಡವಾನಿಯವರು ತಮ್ಮ ಉಪಸೂಚನೆಯನ್ನು ಮುಂದಿಟ್ಟರು. ಈ ಉಪಸೂಚನೆಯಂತೆ, ಪಾರತಂತ್ರ್ಯದ ಕಲಂಕವನ್ನು ಹೋಗಲಾಡಿಸಲು ಭಾರತೀಯರಿಗೆ ರಾಷ್ಟ್ರೀಯ ಸಭೆಯು ಆಜ್ಞಾಪಿಸಿದ್ದಲ್ಲದೆ, ಕೆನಿಯಾದೊಳಗಿನ ದೇಶಬಾಂಧವರಿಗೆ ವ್ಯವಹಾರಿಕ ಕಾರ್ಯಕ್ರಮದಲ್ಲಿ ನೆರವಾಗುವರೆ ಕೊಂಗ್ರೆಸ ಕಾರ್ಯಕಾರಿ ಮಂಡಳಕ್ಕೆ ಆಜ್ಞಾಪಿಸಿತು. ಮಿ। ಯಾಕೂಬ ಹಸನರವರು ಈ ಉಪಸೂಚನೆಯನ್ನು ಮನ್ನಿಸುವಾಗ, ಮುಖ್ಯ ಠರಾವು ಕೆನಿಯಾ ನಿರ್ಣಯದ ಮೊದಲು ಭಾರತೀಯರಿಗೆ ಬ್ರಿಟಿಶ ಸಾಮ್ರಾಜ್ಯದಲ್ಲಿ ಸಮಾನ ದರ್ಜೆ ಕೊಡುವದೆಂದು ಗೃಹೀತ ಹಿಡಿಯುತ್ತದೆಂದರು. ಶ್ರೀ। ವೆಂಕಟರಾಮರವರು ವಸಾಹತುಗಳ ಕೂಡ ಇರುವ ಆರ್ಥಿಕ, ವ್ಯಾಪಾರಿ ಸಂಬಂಧಗಳನ್ನೆಲ್ಲ ಬಿಟ್ಟು ಬಿಡಬೇಕೆಂದು ಉಪಸೂಚನೆಯನ್ನು ತಂದರು. ಶ್ರೀ। ಕೃಷ್ಣಸ್ವಾಮಿ ಅಯ್ಯರರು ಇದನ್ನು ಅನುಮೋದಿಸಿದರು. ಬೆರಿಸ್ಟರ ಅಸಫ್ ಅಲ್ಲಿಯವರೂ ಉಪನ್ಯಾಸ ಮಾಡಿ, ಸಾಮ್ರಾಜ್ಯ ಸಹವಾಸದ ಪ್ರಶ್ನೆಯನ್ನು ಪುನರಾಲೋಚಿಸಬೇಕೆಂದು ಮತ್ತೊಂದು ಉಪಸೂಚನೆಯನ್ನು ತಂದರು. ಬಳಿಕ, ಮೌ॥ ಮಹಮ್ಮದ ಅಲ್ಲಿಯವರು ಸಾಮ್ರಾಜ್ಯಬಹಿರ್ಗತ ಸ್ವರಾಜ್ಯದ ಮಾತುಗಳು ನಿರರ್ಥಕವೆಂದು ನುಡಿದು, ಇಂಥ ಬಣ ಬೆದರಿಕೆಯನ್ನು ಕೊಡಬಾರದೆಂದರು. ಪೂರ್ಣ ಸ್ವಾತಂತ್ರ್ಯದ ಬಣ ಮಾತುಗಳನ್ನು, ಸಾಕಷ್ಟು ತಯಾರಿ ಇಲ್ಲದೆ, ಆಡಬೇಡಿರೆಂದು ಅವರು ಎಚ್ಚರಿಕೆ ಕೊಟ್ಟು, ಆಚಾರ್ಯ ಗಿಡವಾನಿಯವರ ಉಪಸೂಚನೆಯನ್ನು ಸಮರ್ಥಿಸಿದರು. ಶ್ರೀ॥ ಹರಿಸರ್ವೋತ್ತಮರಾವ, ರಾಜೇಂದ್ರ ಪ್ರಸಾದ ಮೊದಲಾದವರು ಉಪಸೂಚನೆಯನ್ನು ಸಮರ್ಥಿಸಿದ ಬಳಿಕ, ಕೆನಿಯಾದೊಳಗಿನ ಹಿಂದೀ ಪ್ರತಿನಿಧಿಗಳಾದ ಶ್ರೀ। ಎಮ್. ಎ. ದೇಸಾಯಿ, ಶ್ರೀ। ಬಿ ಡಿ. ದೇಸಾಯಿಯವರು ಮೂಲ ಠರಾವನ್ನು ಪುಷ್ಟೀಕರಿಸಿದರು. ಶ್ರೀ। ಟಂಡನ್‌ರವರು ಉತ್ತರವನ್ನಿತ್ತ ಬಳಿಕ, ಮೂಲ ಠರಾವೂ ಶ್ರೀ। ವೆಂಕಟರಾಮ, ಬೆರಿಸ್ಟರ ಅಸಫ್ ಅಲ್ಲಿಯವರ ಉಪಸೂಚನೆಗಳೂ ನಾಮಂಜೂರಾಗಿ, ಆಚಾರ್ಯ ಗಿಡವಾನಿಯವರ ಉಪಸೂಚನೆಯು ಬಹುಮತದಿಂದ ಮಂಜೂರಾಯಿತು. ಬಳಿಕ, ಮೌ। ಮಹಮ್ಮದ ಅಲ್ಲಿ, ಲಾಲಾ ಲಜಪತರಾಯ ಮೊದಲಾದ ಬಂಧಮುಕ್ತ ರಾಜಕೀಯ ಕೈದಿಗಳ ಅಭಿನಂದನ, ಲೌಸೇನ ತಹನಾಮೆಯಲ್ಲಿ(?) ತುರ್ಕರು ಸಂಪಾದಿಸಿದ ವಿಜಯದ ಬಗ್ಗೆ ಅಭಿನಂದನ, ಶುದ್ಧಿ ಚಳವಳಿಯ ಬಗ್ಗೆ ಕಮೀಟಿಯ ನೇಮಣೂಕಿ, ಕಾವಲುಗಾರ ಮಂಡಳದ ಯೋಜನೆ, ಹೀಗೆ ಠರಾವುಗಳು ಮಂಜೂರಾದವು. ಮೌ॥ ಮಹಮ್ಮದ ಅಲ್ಲಿಯವರು, ಎಲ್ಲ ಸ್ವಯಂಸೇವಕರು ಈ ಕೊಂಗ್ರೆಸ ಕಾವಲುಗಾರ ಮಂಡಳಗಳಲ್ಲಿ ಸೇರಿಹೋಗುವದು ಉಪಯುಕ್ತವಾಗುವದೆಂದರು. ಹಿಂದುಸ್ಥಾನದೊಳಗಿನ ಎಲ್ಲ ಸಮಾಜಗಳ ಧಾರ್ಮಿಕ, ರಾಜಕೀಯ ಮುಂದಾಳುಗಳೂ, ಉಲೆಮಾ-ಪಂಡಿತರೂ, ಒಂದು ಜಾಹೀರನಾಮೆಯನ್ನು ಪ್ರಕಟಿಸಿ, ಜೀವಿತ-ಸೊತ್ತು-ಸ್ತ್ರೀ-ದೇವಾಲಯಗಳ ಮೇಲೆ ಹಲ್ಲೆ ಮಾಡುವದು ಪಾಪವೆಂದು ತಮ್ಮ ಸಮಾಜದವರಿಗೆ ತಿಳಿಸುವದಲ್ಲದೆ, ಹಲ್ಲೆ ಮಾಡುವವರು ಸಜಾತಿಯವರಿದ್ದರೂ, ಅವರಿಗೆ ವಿರುದ್ಧವಾಗಿ ನಿರಪರಾಧಿಗಳಿಗೆ ಸಹಾಯ ಮಾಡಬೇಕೆಂತಲೂ, ಇತರ ಧರ್ಮದವರಿಗೆ, ಮತಸ್ಥರಿಗೆ ಸಹಿಷ್ಣುತೆಯನ್ನೂ, ಆದರವನ್ನೂ ತೋರಿಸಲು ಸ್ವಪಸ್ತುರವಿಗೆ(?) ಆಜ್ಞಾಪಿಸುವರೆಂದು ಮೌ॥ ಮಹಮ್ಮದ ಅಲ್ಲಿಯವರು ಜಾಹೀರು ಮಾಡಿದರು.

ಪಂಡಿತ ಮದನ ಮೋಹನ ಮಾಲವೀಯಜೀಯವರು ತಮ್ಮ ಎಲ್ಲ ಪ್ರತಿನಿಧಿಗಳ ತರ್ಫೆನಿಂದ ಸಭೆಯ ಚಾಲಕರಿಗೆ ಆಭಾರ ಪ್ರದರ್ಶಿಸಿದರು. ಸಭಾಮಂಟಪವೆಲ್ಲ ಖಾದಿಮಯವಾಗಿದ್ದರೆ, ತಮಗೆ ವಿಶೇಷ ಆನಂದವಾಗುತ್ತಿತ್ತೆಂದು ನುಡಿಯಲು, ಕಾರ್ಯದರ್ಶಿಗಳಾದ ಬೆರಿಸ್ಟರ ಅಸಫ್ ಅಲ್ಲಿಯವರು ಪರಮಾವಧಿಯ ಯತ್ನಮಾಡಿದರೂ, ತಮಗೆ ಬೇಕಷ್ಟು ಖಾದಿಯು ಸಿಗಲಿಲ್ಲವೆಂತಲೂ, ಅರಿವೆಯೆಲ್ಲ ಹಿಂದುಸ್ಥಾನದಲ್ಲೇ ತಯಾರಾದದ್ದೆಂತಲೂ ಖುಲಾಸೆ ಮಾಡಿದರು. ಕೌನ್ಸಿಲು ಪ್ರವೇಶ, ಹಿಂದೂ-ಮುಹಮ್ಮದೀಯರ ಸಂಬಂಧದ ಠರಾವುಗಳ ಬಗ್ಗೆ ರಾಷ್ಟ್ರೀಯ ಸಭೆಯನ್ನು ಪಂಡಿತಜೀಯವರು ಅಭಿನಂದಿಸಿದರು. ಉಲೆಮಾ-ಪಂಡಿತರವರು ಹೊರಡಿಸುವ ಜಾಹೀರನಾಮೆಯಿಂದ ಹಿಂದೂ-ಮುಹಮ್ಮದೀಯ ಸಮಾಜಗಳೊಳಗಿನ ಪ್ರೇಮ-ಐಕ್ಯಗಳ ಘಟಸ್ಥಾಪನೆಯಾಗುವದೆಂದರು. ಕಾವಲುಗಾರ ಮಂಡಳಗಳ ಚಳವಳಿಯನ್ನು ಪ್ರಚುರಗೊಳಿಸಲು ಶೀಘ್ರವೇ ತಾವು ದಿಲ್ಲಿಯಲ್ಲಿ ನೆರೆಯಬೇಕೆಂದು ನುಡಿದು, ಸ್ವಸ್ಥಾನಾಪನ್ನರಾದರು. ಆಗ, ' ಹಿಂದೂ-ಮುಸಲ್ಮಾನಕೀ ಜಯ ', ' ಗಾಂಧೀಕೀ ಜಯ ' ಎಂಬ ಜಯಜಯಕಾರದಿಂದ ಸಭಾಮಂಟಪವೆಲ್ಲ ವ್ಯಾಪಿಸಿತು. ಮೌ। ಅಬುಲ್ ಕಲಮ್ ಆಝಾದರವರು ಐಕ್ಯಸ್ಥಾಪನೆಮಾಡಿದ ಬಗ್ಗೆ ದಿಲ್ಲೀ ನಗರಿಯನ್ನು ಅಭಿನಂದಿಸಿದರು. ಠರಾವುಗಳನ್ನು ಅಮಲಿನಲ್ಲಿ ತಂದು, ಐಕ್ಯವನ್ನು ಕಾರ್ಯದಲ್ಲಿ ರೂಪಾಂತರಿಸುವ ಜವಾಬದಾರಿಯು ಈಗ ಪ್ರಜೆಗಳ ಮೇಲಿದೆಂದು ನುಡಿದು, ಅಧ್ಯಕ್ಷರು ರಾಷ್ಟ್ರೀಯ ಸಭೆಯನ್ನು ಸಂಜೆ ೬ ಘಂಟೆಗೆ ವಿಸರ್ಜಿಸಿದರು. ಹೀಗೆ, ಜಾದಾ ಕೊಂಗ್ರೆಸಿನ ಅಧಿವೇಶನವು ಮಹತ್ವದ ರಾಷ್ಟ್ರೀಯ ಕಾರ್ಯವನ್ನು ನೆರವೇರಿಸಿ, ಯಶಸ್ವೀ ರೀತಿಯಿಂದ ಪಾರಗಂಡಿತು.

ವೃತ್ತಸಾರ.

— ನಾಭಾ ಸಂಸ್ಥಾನದ ಜೈತು ಎಂಬ ಗುರುದ್ವಾರದಲ್ಲಿ ಅಕಾಲಿ ಜನರ 'ದಿವಾನ' ಎಂಬ ಸಭೆಯನ್ನು ಸೇರಿಸಿರುವರು ಇಲ್ಲಿ ರಾಜದ್ರೋಹಾತ್ಮಕ ಭಾಷಣ ನಡೆಯುವದೆಂದು ನಾಭಾ ಸಂಸ್ಥಾನದ ಬ್ರಿಟಿಶ ಅಧಿಕಾರಿಯವರಿಂದ ಸಭಾಸ್ಥಾನ ಹಾಗು ಗುರುದ್ವಾರದ ಸುತ್ತಮುತ್ತಲೂ ಕಾವಲಿಡಲಾಗಿದೆ ಒಳಗೆ ಹೊರಗೆ ಅಡ್ಡಾಡಲು ಪ್ರತಿಬಂಧವಾಗಿದೆ ಸಭಾಸ್ಥಾನದಲ್ಲಿ ಆಗಲಿ, ಗುರುದ್ವಾರದಲ್ಲಿ ಆಗಲಿ ಸೇರಿಲ್ಲದ್ದರಿಂದ ಅಕಾಲಿಗಳಿಗೆ ಒಳಗೇ ಕಷ್ಟವಾಗಿದೆ ಅಕಾಲಿಗಳು ನೆಟ್ಟಗೆ ಒಳಗೆ ಹೋಗುತ್ತೇವೆಂದ ವಚನ ಕೊಟ್ಟರೆ, ಹೊರಗೆ ಬಿಡುತ್ತೇವೆಂದು ಅಲ್ಲಿಯ ಅಧಿಕಾರಿಗಳು ನುಡಿದು ಇತ್ತರೆ ಹೊರಗಿನಿಂದ ಒಳಪ್ರವೇಶಿಸಲು ಯಾರಿಗೂ ಬಿಡುವದಿಲ್ಲ ಫಿರೋಜಪುರದಿಂದ ಬಂದ ಬಂದ ಅಕಾಲಿ ಜಥಾದ ಮಂದಿಗಳು ಕಾವಲುಗಾರರನ್ನು ಒಡೆದ ದಿವಾನ ಸಭೆಗೆ ಹೋದಾರತು ೧೫ ನೇಗೆ ಹೋದರಂತೆ ಈಗ 'ದಿವಾನ' ಸಭೆಯ ಚಾಲಕರನ್ನು ಸೆರೆಹಿಡಿದಿರುವರು

— ಮುಂಬಯಿಯಲ್ಲಿ ಕಳೆದ ಮಂಗಳವಾರ ಗ್ರೇನ್ ಸಂಘ ... ಮುಂಬಯಿಯ ಪ್ರೆಸಿಡೆನ್ಸಿ ಎಸೋಸಿಯೇಶನ್ ಮರ್ಚಂಟ್ಸ್ ಚೇಂಬರ ಆಫ ಕಾಮರ್ಸ ಬ್ರಿಟಿಶ ಇಂಡಿಯನ ಕೋಲೋನಿಯಲ್ ಮರ್ಚಂಟ್ಸ್ ಎಸೋಸಿಯೇಶನ್ ಇಂಪೀರಿಯಲ್ ಇಂಡಿಯನ್ ಸಿಟಿಝನ್‌ಶಿಪ್ ಎಸೋಸಿಯೇಶನ್, ನೇಶನಲ್ ಹೋಮರೂಲ ಲೀಗ್ ಇಂಡಿಯನ ಪ್ರೋಗ್ರೆಸ್ಸಿವ್ ಎಸೋಸಿಯೇಶನ್ ಹೀಗೆ ೩ ಸಂಘಗಳ ... ವ್ಯವಸಾಯ ಸಭೆ ಸೇರಿ ಕೆನಿಯಾ ನಿರ್ಣಯದ ಬಗ್ಗೆ ಪ್ರತೀಕಾರವೆಂದು ಬ್ರಿಟಿಶ ಸಾಮುಗ್ರಿಗಳನ್ನೆಲ್ಲ ಬಹಿಷ್ಕರಿಸಬೇಕೆಂತಲೂ, ಸಾಮ್ರಾಜ್ಯಪ್ರದರ್ಶನ ಸಾಮ್ರಾಜ್ಯ ಪರಿಷತ್ತುಗಳನ್ನು ಬಹಿಷ್ಕರಿಸಬೇಕೆಂತಲೂ ಠರಾವುಗಳು ಪಾಸಾದವು ಅಧ್ಯಕ್ಷಸ್ಥಾನವನ್ನು ಸರ್ ಜಮುನಾಲಾಲ ಸೆಟಲ್‌ವಾಡರವರು ಅಲಂಕರಿಸಿದ್ದರು ಸರ್ ಪುರುಷೋತ್ತಮದಾಸ ಠಾಕೂರದಾಸ, ರಾ। ಬ। ಲಕ್ಷ್ಮಣ ಕಾಮತ ಮಿ। ಫಿರೋಜ ಸೇಟನಾ, ಶ್ರೀ। ವಸಂತರಾವ ಜಯಕರ ಶೇ। ನಟರಾಜನ, ಮಿ। ಲಲ್ಲೂಭಾಯಿ ಸಾಮಳದಾಸ ಜೆ. ಪೆಟಿಟ್ ರಾ। ಜಮುನಾದಾಸದ್ವಾರಕಾದಾಸ ಮಿ. ಮೋದಿ ಶ್ರೀ। ಟಿಳಕ ಮೊದಲಾದ ಎಲ್ಲ ಪಕ್ಷಗಳ ಪ್ರಮುಖರ ಭಾಷಣಗಳು ನಡೆದವು ಈ ಸಭೆಯು ಮುಂಬಯಿಯಲ್ಲಿ ಅಭೂತಪೂರ್ವವಾಯಿತು

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಕೆಳಗಿನ ಪತ್ತೆಗೆ ಮುಕ್ತಾ ಹೆಚ್ಚು ತಿಳಕೊಳ್ಳಬಹುದು

ಪುರುಷೋತ್ತಮ ಲಕ್ಷ್ಮಣಯ್ಯ ಶ್ಯಾನಭಾಗ,

ಹೆಗಡೇಕರ, ದುಕಾನ, ಕುಮಟಾ.

ಶುದ್ಧ ಖಾದಿ

ವಿಕ್ರಿಗೆ ತಯಾರ.

ಹೊನ್ನಾವರ ತಾಲೂಕಾ ಕೊಂಗ್ರೆಸ ಕಮಿಟಿಯಿಂದ ಕೈಮಗ್ಗದ ಕೈರಾಟಿಯ ಶುದ್ಧ ನೂಲಿನ ಖಾದಿ ಮಾರಾಟಕ್ಕೆ ಕೊಂಗ್ರೆಸ ಆಫೀಸಿನಲ್ಲಿ ಸಿಗುವದು.

ಹೊನ್ನಾವರ, ೧೨-೧೨-೩೩ } ಸೆಕ್ರೆಟರಿ, ತಾ. ಕಾ. ಕಮಿಟಿ, ಹೊನ್ನಾವರ

"ಸಂಶಯಾತ್ಮಾ ವಿನಶ್ಯತಿ."

ತಿಂಗಳಿಗೆ ರೂಪಾಯಿ ೧೦೦ರಿಂದ ೫೦೦ರ ವರೆಗೆ ಗಳಿಸಿರಿ.

ಬೇಕಾದಲ್ಲಿ ಸುಲಭವಾಗಿ ಗಳಿಸಿರಿ

ರೂಪಾಯಿ ೧೯-೧೨-೦ ಖರ್ಚುಮಾಡಿರಿ ಮತ್ತು ಸ್ವತಂತ್ರರಾಗಿರಿ.

ಸಬಕಾರವು ಪ್ರತಿಯೊಬ್ಬ ಮಾನವನಿಗ ಅವಶ್ಯವಿದ್ದ ವಸ್ತುವು. ಅವನು ಬೇಕಾದರೆ, ಶ್ರೀಮಂತನಿರಲಿ, ಬಡವನಿರಲಿ, ಹಳ್ಳಿಗನಿರಲಿ, ಪಟ್ಟಣಿಗನಿರಲಿ, ಪಾಶ್ಚಾತ್ಯ ಮಾದರಿಯ ಸಬಕಾರವನ್ನು ತಯಾರಿಸುವ ನಮ್ಮ ಕ್ರಮವು ಅತಿ ಉತ್ತಮವೆಂದು ಖ್ಯಾತಿಹೊಂದಿದೆ. ಈ ಕ್ರಮದಿಂದ ಶ್ರೇಷ್ಠ, ಕನಿಷ್ಠ ಪ್ರತಿಯೊಬ್ಬರಿಗೆ ಹಚ್ಚುವ ಯಾವ ಬಗೆಗೆ ಹಾಕುವ, ಪರಿಮಳದ ಹಾಗು ಬಣ್ಣಗಳ ಸಬಕಾರಗಳನ್ನು ಸುಲಭವಾಗಿ ಯಾರೂ ತಯಾರಿಸಬಹುದು. **ಈ ಕ್ರಮಕ್ಕೆ ಬೆಂಕಿಯ ಅವಶ್ಯಕತೆಯಿರುವದಿಲ್ಲ.** ನಮ್ಮ ವಿದ್ಯಾರ್ಥಿಗಳು ಯತ್ನಮಾಡುವಾಗ ನಾವು ಬಲು ... ಅವರನ್ನು ... ಅವರಿಗೆ ಬೇಕಾದ ಮಾಹಿತಿಯನ್ನು ಪೂರೈಸುತ್ತೇವೆ ಈ ... ಅನೇಕರು ... ಪತ್ರಗಳನ್ನು ಕಳುಹಿಸಿರುವರು ಈ ಪೂರ್ಣ ಕ್ರಮವನ್ನು ... ಮಾತ್ರ ಕಳಿಸುವೆವು. ಈ ಕ್ರಮವು ನಿಯಮಿತ ಮುದ್ದತಿಗೆ ಮಾತ್ರ ಕಳಿಸಲ್ಪಡುವದು.

... ಕೆಳಗಿನ ಪತ್ತೆಗೆ ಬರಕೊಳ್ಳತಕ್ಕದ್ದು

International Business Corporation,

Dept. (F) ... Goulaguda, Hyderabad. (Dn)

ಅಮೃತಾಂಜನ.



ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳ ಮೇಲೆ, ರಾಮಬಾಣದಂತಾಗಿರುವದು ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೇಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು ಕಿಮ್ಮತು ೧೦ ಆಣೆ, ಪೋ. ಖರ್ಚು ಬೇರೆ

ಅಮೃತಾಂಜನ ಡಿಪೋ, ಫೋರ್ಟ,

ಮುಂಬಯಿ.

ಮನೆ ಕಟ್ಟುವವರಿಗೆ ಸುಸಂಧಿಯು.



ಮೇಲಂತಸ್ತಿಗೆ ಶೋಭೆ ಬರುವದಕ್ಕೆ ನಾನಾ ತರ ನಕ್ಷೀ ಕೊರೆದು ಎರಕಹೊಯ್ದ ಕಂಬ ಕಟಾಂಜನಗಳೂ, ಹೂದೋಟ, ಬಂಗಲೆ, ಉಪ್ಪರಿಗೆ, ದಿವಾನಖಾನೆ ಮೊದಲಾದ ಸ್ಥಳಗಳಲ್ಲಿ ವಿಶ್ರಾಂತಿಗೊಳ್ಳುವದಕ್ಕೆ ತಕ್ಕ ಬಾಕುಗಳೂ ಕಿರ್ಲೋಸ್ಕರ ಕಾರಖಾನೆಯಲ್ಲಿ ನಾಜೂಕ ರೀತಿಯಿಂದ ದೊರೆಯುತ್ತವೆ ಪತ್ರ ಬರೆದು ಕೆಟ್ಯಾಲಾಗು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ)

Printed and Published by Krishnarao Keshav Shenvi (Editor) at his Star of Kanara Press, Kumta

Reg. No. B 1270

Thursday, 4th October 1923.

ವರ್ಷ ೭.

ಕಾನಡಾವೃತ್ತ.

THE KANARA NEWS.

ಸಂಚಿಕೆ ೫೧.

ವಾರ್ಷಿಕ ವರ್ಗಣಿ

ಮುಂಗಡ ... ರೂಪಾಯಿ 3-0-0

ಹಿ ಅಂಚೆವೆಚ್ಚ ಸೇರಿ ರೂಪಾಯಿ 3-2-0.

ಒಂದು ಸಂಚಿಕೆಗೆ 0-1-0.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ವ್ಯಾಪಾರ ಜಾಹಿರಾತು(೧೫ ಎಮ್‌ಲೈನ್) ೫ ಸಾಲುಗಳ ವರೆಗೆ ರೂ. 1-0-0 ಅವಂತ್ಯ ಪ್ರತಿ ಸಾಲಿಗೆ 0-2-0.

ಹೆಚ್ಚಿಗೆ ಸಾಲು ಎಷ್ಟು ಹೊತ ದಿರುವದೋ ಆ ಪ್ರಮಾಣದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸವಕ್ಷತೆ ಸಲ್ಪಡುವದು.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ, ಗುರುವಾರ, ತಾರೀಖು ೪ ಮಾಹೆ ಅಕ್ಟೋಬರ ಸನ್ ೧೯೨೩ ನೇ ಇಸವಿ.)—

हिंदुस्थानातील रहिवाशांस ज्याप्रमाणे हिंदुस्थानची हवा त्याप्रमाणेच हें औषध हिंदुस्थानातील लोकांस ज्यास्त फायदेशीर आहे,

द्राक्षासव-

{ दीड रतलची किंमत २ रुपये;

रामबाण औषधें

सर्दि घालविणारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

विण्यास रोचक.

क्याटलाग मागवा,

झंडु फार्मास्युटिकल वर्क्स लिमिटेड,
मुंबई नं. १३

CLAXO:- FRESH STOCK. NEW BRAND. *a food for infants and invalids.*

Kalmegh :- *Well-tried remedy in Liver complaints especially of children.*

Syrup of Vasaka :- *Highly efficacious in cold, cough, crough and bronchitis.*

Besides we have in stock other patent medicines, Thermometres, Glycerine Syringes etc.,

Orders will be executed by V. P. P.

The New Emporium
Honavar. (N. Kanara.)

ಡಾ॥ ವಾಸೂರಕರರ

ಸುಧಾಂಜನ.

ಅಂಜನುಗಳಿಗೆಲ್ಲ ಅರಸು.

ತಲೆಶೂಲಿ, ವಾತ ವೇದನೆ, ಕೆಮ್ಮು, ಹಲ್ಲು ನೋವು ಇತ್ಯಾದಿಗಳಿಗೆ ಶೀಘ್ರ ಗುಣಕಾರಿ ಮದ್ದು ಬೆಲೆ ೬ ಆಣೆ ಮಾತ್ರ. ವ್ಯಾಪಾರಿಗಳಿಗೆ ವಿಶೇಷ ಸವಲತು ಹೆಚ್ಚಿನ ಮಾಹಿತಿ ಏಜಂಟರಿಂದ.

ಏಜಂಟ್ಸ — **ನಾಗರ್ಕಟ್ಟಿ ಬ್ರದರ್ಸ್,**
ಸುಧಾಂಜನ ಡಿಪೋ,
ಕುಮಟಾ. (ಜಿಲ್ಲಾ ಕಾರವಾರ)

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ವಿಷಯಗಳನ್ನೂ, ಚರಿತ್ರ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನು ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ.

ಈ ವರೆಗೆ ಪ್ರಕಟವಾದ ಪುಸ್ತಕಗಳು.

(೧-೨) ಗ್ರೀಸ ದೇಶದ ಗಾಂಧಿ. (ಸಾಕ್ರೆಟೀಸ) (೩) ಸ್ವಾತಂತ್ರ್ಯಸಾಧನ. (೪) ಗುರು-ಹಿರಿಯರೂ, ಬಂಧು-ಭಗಿನಿಯರೂ. (೫) ರಾಷ್ಟ್ರೀಯ ಶಿಕ್ಷಣ. (೬) ಸದ್ಗುಣಮಂದಿರ. (ಭಾಗ ೧.) (೭) ಸ್ವರಾಜ್ಯ ಧರ್ಮ. (ಇನಾಮಿನ ಪುಸ್ತ) ಇವಿಷ್ಟು ಪ್ರಕಟವಾಗಿದ್ದು, ೫ ಆಣೆಗೆ ಒಂದರಂತೆ ದೊರೆಯುತ್ತವೆ. ವರ್ಗಣೀದಾರರಿಗೆ ಹಿಂದಿನ ದೇಕಾದ ಪುಸ್ತಕಗಳು ೪ ಆಣೆಗೆ ಒಂದರಂತೆ ದೊರೆಯುವವು. ೬ ಪುಸ್ತಕಗಳಿಗೆ ಕೂಡಿ ೧॥ ರೂಪಾಯಿ ಮಾತ್ರ. ಅಂಚೆವೆಚ್ಚ ಬೇರೆ. ದ್ವಿತೀಯ ವರ್ಷ ಪ್ರಾರಂಭ. ಅನುಕ್ರಮವಾಗಿ ಮಾರ್ಚ, ಮೇ, ಜುಲೈ, ಸಪ್ಟಂಬರ, ನವಂಬರ, ಜನವರಿ ೧೮ ನೇ ತಾರೀಖಿಗೆ ಒಂದೊಂದು ಪುಸ್ತ ಹೊರಡುವದು. ವಾ. ವ. ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ.

ವಾ. ಅ. ಜೋಶಿ,
ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ.

ಎಲ್ಲ ತರದ ಜ್ವರಗಳಮೇಲೆ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ, ಶೈತ್ಯ, ಬಂಗಲಿ, ಅಥವಾ ದೂಷಿತ ಹವೆಯಿಂದ ಬಗುವ ಸಾಧಾರಣ ವಿಷಾರೀ ಅಥವಾ ಇತರ ಜ್ವರಗಳು, ಇನಫ್ಲುಎಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನ್ಯಾಸದ ದುಷ್ಪರಿಣಾಮರಹಿತ ಕೇವಲ ವನಸ್ಪತಿಯ ಈ ಮದ್ದು ಸೇವಿಸಿದರೆ ಅಶಕ್ತತೆಯಾಗದೆ, ಬೇಗನೆ ಬಂದು ಜ್ವರ ಇಳಿಯುತ್ತದೆ. ಹಾಗು ರೋಗಿಯು ತರಿತ ವಾಸಿಯಾಗುತ್ತಾನೆ.

೪ ಔಂಸ ಬಾಟ್ಲಿ ಕಿಂಮತ್ತು-ರೂ. ೧-೦-೦.

ಇದರ ಹೊರತು ಇನ್ನೂ ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ, ಉಚ್ಚ ಪ್ರತಿಯ ಕಲೋನ ವೋಟರ, ಲವೆಂಡರ ಇತ್ಯಾದಿ ಸಾಮುಗ್ರಿಗಳು ಅಲೆಂಬಿಕದ ಕಾರಖಾನೆಯಲ್ಲಿ ತಯಾರಾಗುತ್ತವೆ. ಮರಾಠಿ ಕೆಟಲಾಗು ತರಿಸಿರಿ.

ಅಲೆಂಬಿಕ್ ಕೆಮಿಕಲ್ ವರ್ಕ್ಸ,
ಕಂಪನಿ, ಲಿಮಿಟೆಡ್.
ನಂ. ೫೦, ಪ್ರಿನ್ಸೆಸ್‌ಸ್ಟ್ರೀಟ್, ಮುಂಬಯಿ.

अलेंबिक केमिकल वर्क्स कं० लि०
नं. ५० प्रिन्सेस स्ट्रीट मुंबई.

ಶುದ್ಧ ಖದ್ದರ್ ರೇಶ್ಮಿ ಮಡಿಗಳು.

ಸುಲಭ ಕ್ರಯಕ್ಕೆ ಖಾತ್ರಿಯಾದ ಎಲ್ಲಾ ರಂಗುಗಳಲ್ಲಿಯೂ ಈ ಕೆಳಗೆ ಬರದ ಕ್ರಯಕ್ಕೆ ದೊರೆಯುವದು.

೧೮ ಮೊಳ ಉದ್ದ ೨॥ ಅಗಲ ರೂ. ೨೩ ರಿಂದ ೨೫ ವರೆಗೆ
೧೬ „ „ ೨॥ „ „ ೨೦ — ೩೦ „
೮ „ „ ೨॥ „ „ ೯ — ೧೫ „
೬ „ „ ೨॥ „ „ ೭ — ೧೧ „

SUN. & CO
BENARES CITY

ಅಂಗಿ ಬಟ್ಟೆಗಳು ೧೮ ಮೊಳ X ೨ ಮೊಳ ರೂಪಾಯಿ ೧೮ ರಿಂದ ೩೦ ವರೆಗೆ. ಶೇಲು ೧೨ ಮೊಳ X ೧॥ ಮೊಳ ಅಗಲ ರೂಪಾಯಿ ೧೦ ರಿಂದ ೧೫ ವರೆಗೆ ಜೀನ್‌ಜಾನ್ ೧೪ ಮೊಳ X ೨ ಮೊಳ ರೂ. ೨೪ ರಿಂದ ೩೫ ವರೆಗೆ ಇವುಗಳಲ್ಲದೆ ಕಾಶೀ ಪೀತಾಂಬರ, ಕಾಶ್ಮೀರ ಶಾಲು, ರುದ್ರಾಕ್ಷಿ, ಜಾಗಂಟೆ, ತಾಳ, ಪನ್ನೀರ ದಾನಿ, ಆಟದ ಸಾಮಾನುಗಳು, ದೇವರ ಮತ್ತು ಗಾಂಧಿ ಮುಂತಾದವರ ಪಟಗಳಿರುವ ಉಂಗುರಗಳ ಮತ್ತು ಇನ್ನೂ ಅನೇಕ ಸಾಮಾನುಗಳ ಕ್ಯಾಟಲಾಗ್ ಉಚಿತ.

ವಿಳಾಸ— ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. (ರಿಜಿಸ್ಟರ್ಡ)

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇದಕ್ಕೆ ... ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವದೋ.

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೆ, ವಿದ್ಯಾರ್ಥಿಗಳಿಗೂ ಅತ್ಯಾವಶ್ಯಕ ಸಹಕಾರಿಯಾಗಿರುತ್ತದೆ ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಿಷ್ಕದ ಬೆನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ಕೂಡಿಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತನ್ನ ಹಣವನ್ನು ಕಳೆಯನಷ್ಟ ಮಾಡಿಕೊಳ್ಳುವದಕ್ಕಿಂತ ಒಂದೇಸಲ ಒಂದು ಬಾರಿ ಈ ' ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ ಸರ್ಟಿಫಿಕೇಟ ಒಫ್ ಮೆರಿಟ " ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ

ಕ್ರಯ — ಸೀಸಗೆ ರೂಪಾಯಿ 1 0 0, ಸೀಸ 3ಕ್ಕೆ ರೂಪಾಯಿ 2 10-0 ವಿಪಿ ಖರ್ಚ 0 14 0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ ಕೋಮಲ ಚಿರಸ್ಥಾಯಿ ಮತ್ತು ಅತ್ಯುತ್ತಮವು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ಸಿದ್ಧವಾದುದು ಇದರಲ್ಲಿ ಮದಿರೆಯ (ಅಲ್ಕೊಹೋಲ್) ಸಂಪರ್ಕ ವಿಲ್ಲವು ಒಂದೇ ಒಂದು ಸಲ ನಿಮ್ಮ ಕೈ ಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪರಿಮಳವು ಅರಳಿದಂತಾಗುವದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ್ಸುಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0 1 ಡ್ರಾಮಿನ (ವಿ. ಡಿಯ) ಸೀಸ 1 ಕ್ಕೆ 0-12 0 ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0 ಅಂಚೆಯ ವೆಚ್ಚ ಬೇರೆ 0 4-0

ಒಟ್ಟೋ ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0

Address **The Anglo Indian Drug & Chemical Co,**
16, Market, **BOMBAY. 2**

ಆರೋಗ್ಯಚಂದ್ರಿಕೆ.

ಈ ಪತ್ರಿಕೆಯ ಸಂಪಾದಕರು ಮದ್ರಾಸಿನ ಡಾಕ್ಟರ್ ಯು ರಾಮರಾವ್ ಎಮ ಎಂ ಸಿ ಯವರು ಈ ಆರೋಗ್ಯ ಮತ್ತು ಶಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೂ ಶಿಕ್ಷಣ ದೊರೆಯುವದಕ್ಕಾಗಿ ಸ್ಥಾಪಿಸಿದ

ಒಂದು ಸಚಿತ್ರ ಮಾಸಪತ್ರಿಕೆ

ಈ ಮಾಸಪತ್ರಿಕೆಯು ಹೆಲ್ತ್ ಎಂಬ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ

ಆರೋಗ್ಯಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು

ಹೆಲ್ತ್ ಎಂಬ ನಮ್ಮ ಇಂಗ್ಲಿಷ ಮಾಸಪತ್ರಿಕೆಯು ವೈದ್ಯ ಸಂಪ್ರದಾಯದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸಿ ಪ್ರಥಮ ಸಂಚಿಕೆಯು ಈ ತಿಂಗಳಲ್ಲಿ ಪ್ರಕಟವಾಗಿದೆ

ಅಂಚೆಯವೆಚ್ಚ ಸೇರಿ ಈ ಪತ್ರಿಕೆಯ ಚಂದಾ ವೊಬ್ಬರಿಗೆ ವರ್ಷಕ್ಕೆ ರೂಪಾಯಿ ೧—೮—೦ ಬಿಡಿ ಪತ್ರಿಕೆ ಒಂದಕ್ಕೆ ೦—೨—೦

ಚಂದಾದಾರರಾಗುವವರು ವಿ ಪಿ ಮೂಲಕವಾಗಿ ತರಿಸಿಕೊಳ್ಳುವದರಿಂದಲೂ ಹಣವನ್ನು ಮನಿಯಾರ್ಡರ ಮೂಲಕ ಕಳುಹುವದು ಲಾಭಕರ

ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು ಆರೋಗ್ಯಚಂದ್ರಿಕೆಗೆ ಎಂದು ಸ್ಪಷ್ಟವಾಗಿ ಬರೆದು ಕಳಿಸಬೇಕು ಪತ್ರವ್ಯವಹಾರದ ವಿಳಾಸ —

ಮೆನೇಜರ್,
' ಹೆಲ್ತ್ ' ಅಥವಾ
'ಆರೋಗ್ಯಚಂದ್ರಿಕೆ ' ಆಫೀಸ
೩.೬೬, ತಂಬುಶೆಟ್ಟಿ ಬೀದಿ, ಮದರಾಸ್

ಮೂರ್ತಿಗಳು ಬೇಕೋ?

ನಮ್ಮಲ್ಲಿ ಭಂಗಾರ ಬೆಳ್ಳಿ, ಪಂಚಧಾತು ಹಿತ್ತಾಳಿ ತಾಮ್ರ ಈ ತರೇಹಿಯ ಮೂರ್ತಿಗಳೂ, ಇದಲ್ಲದೆ ಪಾಣಿಪೀಠಗಳೂ ಪ್ರಭಾವಳಿಗಳೂ, ಈಶ್ವರ ಮುಖವಟಗಳೂ, ನಾಗಾಭರಣಗಳೂ, ಕವಚುಗಳೂ ವಗೈರೆ ಯಾವದೇ ತರದ ಪ್ರತಿಮೆಗಳೂ ನಮ್ಮಲ್ಲಿ ಯೋಗ್ಯ ದರಕ್ಕೆ ವ ಯೋಗ್ಯ ಹೊತ್ತಿಗೆ ಮಾಡಿ ಕೊಡಲ್ಪಡುವವು ಬೇಕಾದವರು ಪತ್ರವ್ಯವಹಾರ ಮಾಡಿ ಯಾ ಸಮಕ್ಷ ಬಂದು ದರಪಾರ ತಿಳಕೊಳ್ಳಬಹುದು

ಪತ್ತೆ —ನಾರಾಯಣ ಹುವಯ್ಯ ಶೇಟ,
ಗುಡಗಾರ, ಗುಜರಗಲ್ಲಿ, ಕುಮಟಾ
(ಉ ಕಾನಡಾ)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧ ರಾಗದ ಕೈಪೆಟ್ಟಿಗೆ ಕಿಂ ೩೯ ೪೦,೪೫,೫೦ ೬
೨ „ ಕಾಲುಪೆಟಿಗೆ ಕಿಂ ೬೫,೭೫ ೧೪೦, ೫
೩ ತಬಲೆ ಜೋಡಿ ಕಿಂ ೧೩ ೧೫ ೧೮ ೨೧
೪ ಹಾರ್ಮೋನಿಯಮು ಗ್ಯಾಡ ಕಿಂ ೧॥, ತಬಲೆ ಗ್ಯಾಡ ಕಿಂ ೧೨ ೮
ವಿಶೇಷ ಮಾಹಿತಿಗೆ ನಮ್ಮ ಕ್ಯಾಟಲಾಗ ಧ್ರುತ್ರ ಕೊಡುವೆವು
ಪತ್ರವ್ಯವಹಾರ ಮರಾಠೀಯ ದ ಇಂಗ್ಲಿಷ ಗ್ರಹಿಯ ದ ಮಾಡಬೇಕು

ಪತ್ತೆ – ಗೋಪಾಳ ಸಖಾರಾಮ ವ ಕಂ
ಕಂಪನಿ, ನಂ ೨೬೨
ಕಾಳಬಾದೇವಿ ರೋಡ, ಮುಂಬಯಿ

कारवार जिल्ह्याच्या कौन्सिल उमेदवारांनां जाहीर प्रश्न.

१ काँग्रेस क्रीड मान्य असून फॉर्मवर सही करून काँग्रेस सभासद आपण आहां आहांत काय? नसल्यास होऊ इच्छिता काय?

२ दिल्ली काँग्रेसचे ठराव व काँग्रेसचा विधायक कार्यक्रम (निदान स्वराज्य पार्टी या मतानुरोधानें) आपणास मान्य आहे काय?

३ (अ) विधायक कार्यक्रमातील एखादें दुसरे तपशील तरी त्यांजकडून अमलांत आण विणे बद्दल आजपर्यंत यथाशक्त्यातरी आपण कष्ट खटपट केली आहे काय?

(ब) निदान गावोगाव हिंडून, व्याख्यानें देऊन उपदेश करून, सभा भरवून, संघ स्थापून अगर कोणत्याही सार्वजनीक संस्थेचे अधिकारी कार्यदर्शी वगैरे नात्यानें काम करून आजपर्यंत कधी सार्वजनीक हीत व लोकमता काहि केली आहे काय?

४ म्युनिसीपालटी, लोकलबोर्ड किंवा इतर सार्वजनीक प्रातिनिधीक संस्थांत काम किती दिवस करून अनुभव मिळविला आहे?

५ (अ) कारवार जिल्ह्याच्या गरीब रयतेच्या ज्या विशिष्ट अडचणी (ह्मणजे, जंगल खात्याचा जुलूम व त्रास, गेल्या ५० वर्षांत दर खानेसुमारीस वाढत्याप्रमाणानें कमी झालेली जनसंख्या वेचिराख खेड्याची व पडजमीन क्षेत्राचे सारखे वाढतें प्रमाण वगैरे) आहेत त्या समजून घेऊन अभ्यास केला आहे काय?

(ब) कौन्सिलर ह्मणून निवडून आल्यावर या जिल्ह्याच्या अडचणी कौन्सिलद्वारे दूर करणेंच्या प्रयत्नाची आपली दिशा कोणती? काहीं तपशीलवार कार्यक्रम योजिला असल्यास त्याचा खुलासा कराल?

६ प्रत्येक कौन्सिलच्या बैठकीस न चुकता हजर राहणें व कौन्सिलच्या कामासाठीं रोज किती वेळ खर्च करणेंची तयारी आहे? याचा खुलासा पाहिजे.

७ (अ) तालुक व जिल्हावार कौन्सिल मतदारसंघ स्थापन्न करणें, सर्व तालुक्याचे मिळून एक तज्ञाचे जिल्हा सल्लागार मंडळ नेमणे व प्रत्येक महत्वाच्या बाबीत सदर सल्लागार मंडळाचा सल्ला घेऊनच कौन्सिलांत ठराव आणणेचें वगैरे काम करणें, कौन्सिलच्या कामासाठीं एक कायमचें ऑफीस स्थापन्न करून त्याद्वारें सार्वजनीक तक्रारींची व अडचणींची चवकशी करून माहिती गोळा करणें त्यासाठीं २०-२५ चा एक कारकून, १२-१५ चा एक शिपाई, ३० ३५ चा एक पेड प्रचारक ठेऊन वर्षाकाठी साधारण एक हजार रुपये स्वत खर्च करणाची अगर लोकास आपलें काम पटवून प्रचारक द्वारे सदर रक्कम जनतेकडून जमविणेची तयारी असणें

(क) कौन्सिलची प्रत्येक बैठक झाल्यानंतर मतदाराना लागलच आपल्या कामाचा रिपोर्ट देणे

(ड) निदान लोकपक्षीय मेंबराचा तरी संघ स्थापणेचा प्रयत्न कसून करणे.

वरील सर्व गोष्टी अगर त्यांपकी किती गोष्टी करणेस आपला कबूली व तयारी आहे?

८ कौन्सिलच्या कामकाजाची मतदारास व लोकास माहिती करून देणे साठी आणी दर तालुक्याच्या तक्रारींची व अडचणींची स्वत स प्रत्यक्ष माहिती करून घेणें करिता वर्षातून निदान दानवेळातरी प्रत्येक तालुक्यातून फिरणेची कबूली व तयारी आहे काय?

सदर प्रश्नाची उत्तरें या जिल्ह्याकरिता राहलेल्या उमेदवारानीं जरूर द्यावी आणी सदर प्रश्नाची उत्तरें देऊन जो उमेदवार आपल्या पात्रतेचा खात्री पटवून देईल त्यास च निवडून द्यावे अशी सर्व मतदाराना अत्याग्रहपूर्वक सविनय विनती आहे

कळावे लोभ असावा

हलियाळ, ता २८ ९ २३ — आपला, दत्तात्रय रामचंद्र केळकर

आमच्या जिल्ह्याचे पुढारी इकडे लक्ष देतील काय?

"दु ख दुसऱ्याचें जाणावें। ऐकोन तरी वाटोन घ्यावें। बरे शब्दें बोलावें। समुदायाचें ॥१॥ श्री दासबोध

यंदाच्या अतिवृष्टीनें होणार—कुमठ्याकडे तर भयंकर कहर उडवून दिलाच शिवाय पुष्कळ ठिकाणीं बाग बागायतीची व शेती—भातीची बरीच नुकसानी केल्याचें कळते ह्मणजे यंदा आमच्या जिल्ह्यांत एक हि तालुका नसेल की जो अतिवृष्टीच्या तडाख्यातुन सुरक्षीत निसटला! हा झाला ईश्वरी क्षोभ आणि जर का यांत राजक्षोभाच भरती पडली ह्मणजे मग आमच्या आधींच हवालदिल झालेल्या गरीब जमीनदार व रयत लोकाचे दुर्दशा विचारणे नको. ईश्वरी क्षोभ टाळणें मानवी शक्तीच्या बाहेरचे काम होय पण राजक्षोभाचि बाबतसी नव्हे, पुढारी लोक जर किंचित् दक्षतापुर्वक आपल्या कर्तव्यास वेळींच जागतील तर निदान या बाबींत तरी राजक्षोभ टाळणे खचित अशक्य नव्हे असो

बिनशेतकी जागा हुडकून काढण्याचे कामीं ज्या ज्या तीक्ष्ण दृष्टीनें वाकदृष्टी लाही लाजविले अस आमचे (निर्?) दक्ष राजदूत उर्फ पाटील, शानभोग, सर्कल इन्स्पेक्टर आणि अधिकारी लवकरच शेताची पीकपहाणी करणेस बाहेर पडतील आणि आपल्या मामूल वहिवाटीस अनुसरुन मनमानेल तसे एक तर्फी आणेवारी रिपोर्ट आपल्या वरिष्ठाकडे पाठविणे संभव आहे. अशा प्रसंगीं जर त्या त्या गावचे पुढारी लोक सावध होवून "ग्रामस्थाकडून" त्यांच्या वरिष्ठाकडे वस्तुस्थिति विपर्यास केलेले रिपोर्ट सादर केले जाणार नाहीत अशी खबरदारी घेतील तर ते आपल्या कर्तव्यास जागले असे होईल इतकेंच नव्हे तर Land Revenue Code प्रमाणे ज्या काहीं तिर्वे सवलति मिळणे शक्य आहे, त्या गरीब प्रजेला मिळवून देवून त्याचे जीवन हल्लीच्या या कठिण कालात किंचित् हलकें केल्याचें श्रेय त्यांना मिळेल आणि ज्या ठिकाणीं आधीच वस्तुस्थिती बाह्य रिपोर्ट सादर करण्यात आले आहेत असे खात्रिपूर्वक समजेल अशा गावच्या पुढाऱ्यानीं तावडतोब सभा भरवून व वर्तमानपत्र द्वारा खरी स्थिती जगापुढे मांडणेचे कामीं कोचि ही कसूर करु नये. ह्मणजे याचा परिणाम होवो न होवो, निदान आपण आपल्या कर्तव्यास तरी जागल्याचे समाधान लाभेल हा काहीं थोडा लाभ नव्हे? बरें असो वरील सूचनाचा सर्व पुढाऱ्याकडून योग्य विचार होईल अशी आशा बाळगणारा,

सदाशिवगड, ता २४-९-२३ — सर्वांचा नम्र बांधव, गणपत सदाशिव नाडकर्णि

Wanted.

Wanted an Inspector for Co-operative Societies in Kanara Pay Rs 30/- and allowance Rs 10/- monthly with future prospects Candidates having good knowledge and experience of co-operative work will be preferred Applicants must send in their applications with testimonials before the 1st of November 1923

Sirsi, 27-9 1923 — P. N. Pandit, Managing Director, Kanara District Central Co operative Bank Ltd.

ಇತ್ತ ನೋಡಿರಿ !

ಅಯ್ಯಾ 'ಕಾನಡಾವೃತ್ತ' ಪತ್ರಕರ್ತರೇ,

ಕಾನಡಾ ಧುರೀಣದ ಕಳೆದ ತಾ ೨೫ ನೇಯ ಸಂಚಿಕೆಯಲ್ಲಿ ಸಹಜವಾಗಿ ಕಂಡುಬಂದ ಕೆಲವು ಸೋಜಿಗಗಳನ್ನು ನನ್ನಂತೆಯೇ ಇತರ ವಾಚಕರು ತಿಳಿದುಕೊಳ್ಳಬಹುದೆಂಬುದರಿಂದ ಇದರಡಿಯಲ್ಲಿ ಕೊಟ್ಟಿರುವೆನು

(೧) **ತಮ್ಮ ಪತ್ರದಲ್ಲಿ ಪ್ರಸಿದ್ಧವಾದ ಟೀಕೆಗೆ ಪ್ರತ್ಯುತ್ತರವಾಗಿ ರಾ। ಕಲ್ಯಾಣಪುರಕರರು ತಮಗೆ ಬರೆದ ಪತ್ರವನ್ನು ತಾವು ಪ್ರಸಿದ್ಧ ಮಾಡುತ್ತೀರೋ ಇಲ್ಲವೋ ಎಂಬುದನ್ನು ನೋಡುವ ಪೂರ್ವದಲ್ಲಿಯೇ ಮುಂದಾಗಿ ಅವರು ಅದನ್ನು 'ಧುರೀಣ' ಪತ್ರದಲ್ಲಿ ಪ್ರಕಟಿಸಿದ್ದು ಮೊದಲನೇ ಸೋಜಿಗವು' ಪ್ರಾಮುಖ್ಯದಿಂದ ಯಾರೊಬ್ಬ ಪತ್ರಕರ್ತರಿಗೆ ಬರೆದ ಪತ್ರವನ್ನು ಅವರಿಗೆ ಪ್ರಸಿದ್ಧಪಡಿಸಲು ಸಂಧಿ ಕೊಡುವವರ ಮುಂಚೆ ತಾನಾಗಿಯೇ ಇನ್ನೊಂದೆಡೆಯಲ್ಲಿ ಪ್ರಕಟಿಸಿಕೊಳ್ಳುವದು ವರ್ತಮಾನಪತ್ರಕರ್ತರ ಶಿಷ್ಟಸಾಂಪ್ರದಾಯಕ್ಕೆ ವಿರುದ್ಧವೆಂಬುದ ಅವರು ಹ್ಯಾಗೆ ಅರಿಯರೋ ತಿಳಿಯದ ಅದು ಒಂದುವೇಳೆ ಇನ್ನೊಂದೆಡೆಯಲ್ಲಿ ಪ್ರಸಿದ್ಧವಾದ ಮೇಲೆ ತಮ್ಮ ಪತ್ರದಲ್ಲಿ ಅದರ ಸ್ವಾರಸ್ಯವೇನು ತಿಳಿಯಲಿಲ್ಲ ಹೆಚ್ಚು ತ್ವರ್ಯವಾಗಿ ಪ್ರಸಿದ್ಧವಾಗಬೇಕೆಂಬುದರಿಂದ 'ಧುರೀಣ'ದ ಕಡೆಗೆ ಕಳಿಸಿರುವೆನೆಂದು ಅವರು ಬರೆದಿರುವರು. ಆದರೆ, ತಾ. ೨೭ ನೇಯ ಕಾನಡಾವೃತ್ತದಲ್ಲಿ ಪ್ರಸಿದ್ಧವಾಗಲಿಕ್ಕೆ ಕಳಿಸಿದ ಪತ್ರವು ಆ ಸಂಚಿಕೆಯಲ್ಲಿ ಪ್ರಸಿದ್ಧವಾಗುವ ಹಾದಿ ನೋಡದೆ, ಶಿಷ್ಟಸಾಂಪ್ರದಾಯಕ್ಕೆ ವಿರುದ್ಧವಾಗಿ ಬರೇ ಎರಡು ದಿವಸ ಪೂರ್ವದಲ್ಲಿ ಧುರೀಣದಲ್ಲಿ ಅದನ್ನು ಪ್ರಕಟಿಸಿಕೊಳ್ಳಲು ಹವಣಿಸಲಿಕ್ಕೆ, ಅಷ್ಟರಲ್ಲಿ ಯಾವ ಯೋಗವು ಕೈತಪ್ಪಿ ಹೋಗುವದಾಗಿತ್ತೋ ಅವರೇ ಬಲ್ಲರು'**

(೨) ರಾ। ಕಲ್ಯಾಣಪುರಕರರ ಸಮರ್ಥನಕ್ಕಾಗಿ ರಾ। ಮಾಸೂರರು ಬರೆದಿರುವ ಪತ್ರದಲ್ಲಿ ತಾ ೧೩ನೇಗೆ ಕೂಡಿದ ಸಭೆಯು ರಿಲೀಫ ಕಮಿಟಿಗೆ ಸಂಬಂಧಿಸಿದ್ದಿಲ್ಲೆಂದು ತೋರಿಸುವ ಬಗ್ಗೆಯೋ ಏನೋ, 'ಹಣ ಹಂಚುವದಕ್ಕಾಗಿ ಊರಿನ ಕೆಲ ಸಭ್ಯ ಗೃಹಸ್ಥರಿಗೆ ಆಮಂತ್ರಣ ಕೊಟ್ಟಿತ್ತು' ಎಂಬುದಾಗಿ ಚತುರತೆಯಿಂದ ಬರೆದಿರುವರು ಆದರೆ, ಇದೇ ವಿಷಯದಲ್ಲಿ ಅದೇ ಸಂಚಿಕೆಯಲ್ಲಿ ಅಧ್ಯಕ್ಷ ರಾ। ಕಲ್ಯಾಣಪುರಕರರು ಬರೆದಿರುವ ಅದೇ ತಾರೀಖಿನ ಪತ್ರದಲ್ಲಿ "I found there already present some Members of the Relief Committee " "One of the Members of the Committee drew my attention ....." ("ರಿಲೀಫ ಕಮಿಟಿಯ ಕೆಲ ಸಭಾಸದರು ಅಲ್ಲಿ ಮೊದಲೇ ಕೂಡಿದ್ದನ್ನು ನಾನು ಕಂಡೆನು" "ಕಮಿಟಿಯ ಒಬ್ಬ ಸಭಾಸದರು ನನಗೆ ಹೀಗೆ ತೋರಿಸಿಕೊಟ್ಟರು.") ಎಂಬುದಾಗಿ ವಗ್ಗರೆ ಸರಳತೆಯಿಂದ ಬರೆದುಹೋಗಿರುವರು 'ರಿಲೀಫ ಫಂಡಿನ ವ್ಯವಸ್ಥೆ ಮಾಡುವ ಕುರಿತು ಒಂದು ಮೀಟಿಂಗ ಕೂಡಿದ್ದಿತು ಎಂಬುದಾಗಿ ತಾ ೧೮ ನೆಯ ಧುರೀಣದ ಇಶ್ತಿಹಾರದೊಳಗಿಂದಲೇ ತಾವು ಅವರ ದನಿ ಕೊಟ್ಟಿದ್ದಂತೂ ಆಯಿತು ಆದರೆ ರಾ। ಕಲ್ಯಾಣಪುರಕರರ ಪತ್ರದೊಳಗಿನ ಮೇಲಿನ ವಾಕ್ಯಗಳ ಮೇಲಿಂದ ಸಹ, ಆ ದಿವಸ ಸಭೆಯ ಕೂಡಿದ್ದು ರಿಲೀಫ ಕಮಿಟಿಯ ಸಭಾಸದರದೇ ಆಗಿತ್ತೆಂಬುದು ಸಹಜವಾಗಿ ವ್ಯಕ್ತವಾಗುವದಿಲ್ಲವೋ?

(೩) '೧೩ ನೇ ತಾರೀಖಿನ ದಿವಸ ಕೂಡಿದ್ದು ಕಾನಡಾವೃತ್ತಕಾರರ ಅನ್ನುವಂತೆ ಮೀಟಿಂಗ ಇದ್ದಿಲ್ಲ' ಎಂದು ರಾ। ಮಾಸೂರರು ಅದೇ ಪತ್ರದಲ್ಲಿ ಇನ್ನೊಂದೆಡೆಯಲ್ಲಿ ಸಷ್ಟವಾಗಿ ನಿರಾಕರಿಸಿರುವರು ಆದರೆ ಅದರ ಮೊದಲಿನ ವಾಕ್ಯದಲ್ಲಿಯೇ, "ಅಧ್ಯಕ್ಷತೆಯ ಸ್ಥಾನವು ಖಾಲಿಯಿತ್ತು ಶ್ರೀ। ವಿಶ್ವೇಶ್ವರಯ್ಯರೇ ರಿಲೀಫ ಕಮಿಟಿಯ ಅಧ್ಯಕ್ಷರಿದ್ದುದರಿಂದ, ಅವರೇ ಆ ಸ್ಥಾನವನ್ನು ಅಲಂಕರಿಸಬೇಕೆಂದು ಸೂಚನೆಯಾಯಿತು. ಮತ್ತು ಅವರು ಹಾಗೆ ಮಾಡಿದರು' ಎಂದು ಅವರು ಹೇಳಿರುವರು ಆ ನೆರೆದ ಸಮೂಹವು ಮೀಟಿಂಗಾಗಿದ್ದಿಲ್ಲವಾದರೆ, ಅಧ್ಯಕ್ಷಸ್ಥಾನವಾದರೂ ಯಾಕೆ? ಮತ್ತು ಆ ಸ್ಥಾನಕ್ಕೆ ಯಾರಾದರೂ ನಿಯೋಜಿಸಲ್ಪಡಬೇಕಾದದ್ದೂ ಯಾಕೆ? ಮತ್ತು ಕೂಡಿದ ಸಭೆಯು ರಿಲೀಫ ಕಮಿಟಿಯ ಸಭೆಯಲ್ಲವಾದರೆ, 'ಶ್ರೀ। ವಿಶ್ವೇಶ್ವರಯ್ಯರೇ ರಿಲೀಫ ಕಮಿಟಿಯ ಅಧ್ಯಕ್ಷರಿದ್ದುದರಿಂದ ಅವರೇ ಆ ಸ್ಥಾನವನ್ನು ಅಲಂಕರಿಸಬೇಕೆಂದು ಸೂಚನೆಯಾಗಿ ಅವರು ಹಾಗೆ ಮಾಡಿದರ ಎಂಬುದರ ಯುಕ್ತತೆಯಾದರೂ ಏನು ಸಭೆಯ. ಅಲ್ಲದೇ ಏನಾದರೂ ಕೆಲಸವನ್ನು ಅವರ ಮುಂದೆ ಜರುಗಿಸಬೇಕೆಂಬುವದರಿಂದ ನಾಲ್ಕು ಗೃಹಸ್ಥರನ್ನು ಸಹಜವಾಗಿ ಆವಂತ್ರಣದಿಂದ ನೆರೆಸಿದ ಪ್ರಸಂಗದಲ್ಲಿ ಸಹ, ಅಧ್ಯಕ್ಷರನ್ನು ನೇಮಿಸುವ ಪದ್ಧತಿಯು ರಾ। ಮಾಸೂರರಲ್ಲಿ ಇರುವದೋ ಏನೋ'

(೪) ಸಮಯದಲ್ಲಿ ಆ ದಿವಸ ಹಣ ಹಂಚುವ ಯೋಜನೆಗೆ ಇಬ್ಬರು ಸಭಾಸದರು ವಿರೋಧಿಸಿದ ಸಂಗತಿಯನ್ನು ಅಲ್ಲಗಳೆಯುವಾಗ ರಾ। ಮಾಸೂರರು, ಸಮಯದಲ್ಲಿ ಸಭಾಸದರಲ್ಲೊಬ್ಬರು ಕಮಿಟಿಯ ಹಿಂದಿನ ಸಭೆಯಲ್ಲಿ ಪಾಸಾದ ಠರಾವನ್ನು ಅಧ್ಯಕ್ಷರಿಗೆ ಹಾಗೆ ಸಭಾಸದರಿಗೆ ತೋರಿಸಿಕೊಟ್ಟು ತಕರಾರು ಮಾಡಿದರೆಂಬ ಸಂಗತಿಯನ್ನು ಸಹ ಬಿಟ್ಟಿರುವರು ಆದರೆ ರಾ। ಕಲ್ಯಾಣಪುರಕರರೇ— "One of the Members of the Committee drew my attention to the resolution passed at the meeting of the Relief Committee on the 9th instant" ಎಂದು ಈ ಸಂಗತಿಯನ್ನು ಸ್ಪಷ್ಟವಾಗಿ ಒಪ್ಪಿಕೊಂಡಿರುವಾಗ ಮಾಸೂರರ ಮಾತಿಗೆ ಸಾಕ್ಷಿಗಾರರೇ ಹೆಚ್ಚು ಹಿನ್ನೆಲೆಯಿಟ್ಟಿರುವರು

(೫) ರಾ। ಕಲ್ಯಾಣಪುರಕರರು ತಾವು ಬರೆದ ಪತ್ರಕ್ಕೆ ಸಹಿ ಮಾಡುವಾಗ ಕೆಳಗೆ 'Retd Judge (Small Causes Court)'— 'ಸ್ವಲ್ಪ ಕಾರ್ಯದಲ್ಲಿ ಸ್ಮಾಲಕೋಜ ಕೋರ್ಟಿನ ಜಡ್ಜರಾಗಿ, ಈಗ ಪೆನಶನ ಪಡೆದವರು' ಎಂಬುದಾಗಿ ತಮ್ಮ ಬಿರುದನ್ನು ಹಾಕಲಿಕ್ಕೆ ಮರೆತಿರುವದಿಲ್ಲ, ಇದು ಇನ್ನೊಂದು ಸೋಜಿಗ ಅವರು ಆ ಪತ್ರವನ್ನು ಕೌನ್ಸಿಲ ಚುನಾವಣೆಗೆ ನಿಂತ ಉಮೇದವಾರ ನಾತೆಯಿಂದಾಗಲಿ, ಇಲ್ಲವೆ ೧೩ನೇ ತಾರೀಖಿನ ಸಭೆಗೆ ಅಧ್ಯಕ್ಷರಾಗಿದ್ದ ಕುಮಟಾ ರಿಲೀಫ ಕಮಿಟಿಯ ಅಧ್ಯಕ್ಷರ ನಾತೆಯಿಂದಾಗಲಿ ಬರೆದಿರುವರೆಂದು ಹೇಳಬಹುದು ಇಂಥ ಪತ್ರಕ್ಕೆ ಅವರ ಹಿಂದಿನ ಹುದ್ದೆಯ ಬಿರುದಾವಲಿಯು ಅಪ್ರಾಸಂಗಿಕ, ಅನಾವಶ್ಯಕ ನಿರರ್ಥಕವ್ಯಾಕೆ? ಅವರ ಸರಕಾರೀ ನೌಕರಿಯ ಬಿರುದು ಕಾಲಾಕಾಲದಲ್ಲಿ ಎಳೆದು ತಂದು ನಿರ್ದೇಶ ಮಾಡುವಷ್ಟು ಮಹತ್ವದ್ದಾಗಿ ಇನ್ನೂ ಅವರಿಗೆ ತೋರುತ್ತಿರುವದೋ?

(೬) 'ಧುರೀಣ' ಪತ್ರದಲ್ಲಿ ರಾ। ಕಲ್ಯಾಣಪುರಕರರ ಪಕ್ಷೀಯರು ಮಾಡಿ ಬರೆದಿರುವ ಸ್ಫುಟಲೇಖದಲ್ಲಿ "ಕಾರವಾರ ಅಂಕೋಲೆಗಳಲ್ಲಿ ಮಾಡಿದ ಅವರ ಭಾಷಣಕ್ಕೆ ವಿಪರೀತ ಅರ್ಥ ಮಾಡಿದ್ದು ಅದಕ್ಕೆ ವೃತ್ತಕಾರರು ಆಶ್ರಯ ಕೊಟ್ಟಿರುವರೆಂದು ಶ್ರೀ। ವಿಶ್ವೇಶ್ವರಯ್ಯರು ಆಕ್ಷೇಪಿಸಿದ್ದಾರೆ" ಎಂದು ಧುರೀಣಕಾರರು ಉದ್ಧರಿಸಿರುವರು ಆದರೆ, ರಾ। ಕಲ್ಯಾಣಪುರಕರರ ಪತ್ರವನ್ನು ಸಾದ್ಯಂತ ಓದಿನೋಡಿದರೂ, ಕಾರವಾರದ ಇಲ್ಲವೆ ಅಂಕೋಲೆಯ ಭಾಷಣದ ವಿಷಯವಾಗಿ ನಿರ್ದಿಷ್ಟ ಉಲ್ಲೇಖವನ್ನು ಅವರು ಎಲ್ಲಿಯೂ ಮಾಡಿದ್ದು ಕಂಡುಬರುವದಿಲ್ಲ. ಅವರ ಆ ಪತ್ರದ ಆಧಾರದ ಮೇಲಿಂದಲೇ ಸಂಪಾದಕರು ಬರೆದ ಈ ಸಂಪಾದಕೀಯ ಸ್ಫುಟದಲ್ಲಿ ಈ ಅನಧಿಕೃತ ಹೆಚ್ಚಿನ ಸ್ಪಷ್ಟೀಕರಣವು ಎಲ್ಲಿಂದ ಬಂತು, ಹ್ಯಾಗೆ ಬಂತು? ಅಂತರಂಗದ ತಾದಾತ್ಮ್ಯದಿಂದ ಧುರೀಣಕಾರರಿಗೆ ರಾ। ಕಲ್ಯಾಣಪುರಕರರ ಮನಸ್ಸಿನಲ್ಲಿಯ ವಿಚಾರಗಳ ಜ್ಞಾನವು ಸಹ ಆಗಿರಬಹುದೋ?

(೭) **ಕೊಂಗ್ರೆಸ ಸಭಾಸದತ್ವಕ್ಕೆ** ಪರಾಙ್ಮುಖರಾಗಿ ನೇಮಸ್ತ ಇಲ್ಲವೆ ಪ್ರಾಗತಿಕ ಪಕ್ಷದವರೆಂಬೆನಿಸಿಕೊಂಡು ಕೌನ್ಸಿಲ ಚುನಾವಣೆಗೆ ಉಮೇದವಾರರಾಗಿರುವ ರಾ। ವಿಶ್ವೇಶ್ವರರಾವ ಕಲ್ಯಾಣಪುರಕರರು ಮತದಾರರಿಗೆ ಉದ್ದೇಶಿಸಿ ಕವಡೆಯಲ್ಲಿ ಕೊಟ್ಟ ವ್ಯಾಖ್ಯಾನವು, ಕುಮಟಾ ತಾಲೂಕಾ ಕೊಂಗ್ರೆಸ ಕಮಿಟಿಯ ಅಧ್ಯಕ್ಷ ಶ್ರೀ। ಮಾಧವರಾವ ಶ್ಯಾನಭಾಗ ಇವರ ಅಧ್ಯಕ್ಷತೆಯಲ್ಲಿ ಆಯಿತೆಂದು ಕಂಡುಬರುತ್ತದೆ. ಕೌನ್ಸಿಲ ಪ್ರವೇಶದ ಬಗ್ಗೆ ರಾಷ್ಟ್ರೀಯ ಸಭೆಯು ತಟಸ್ಥವೃತ್ತಿಯನ್ನು ಸ್ವೀಕರಿಸಿರುವದೆಂಬುದು ನಿಜವಾದರೂ ಮತ್ತು ಕೊಂಗ್ರೆಸ ಕಮಿಟಿಯ ಅಧ್ಯಕ್ಷರಿಗೆ ಖಾಸಗಿ ವ್ಯಕ್ತಿನಾತೆಯಿಂದ ಬೇರೆ ಸಭೆಗಳಿಗೆ ಅಧ್ಯಕ್ಷರಾಗಲಿಕ್ಕೆ ಆತಂಕವಿರಬಾರದೆಂದು ಹೇಳಬಹುದಾದರೂ ವ್ಯಾಪಕ ಸ್ವರೂಪದ ಸರ್ವಸಮ್ಮತವಾದ ಕೊಂಗ್ರೆಸ ಧ್ಯೇಯವನ್ನು ಸ್ವೀಕರಿಸಿ, ಕೊಂಗ್ರೆಸ ಸಭಾಸದರಾಗುವದು ನೀತಿದೃಷ್ಟ್ಯಾಯೋಗ್ಯವಾಗಲಿ, ಲೋಕಮತಾನುವರ್ತಿತ್ವವಾಗಲಿ ತೋರಿಸದ ಉಮೇದವಾರರ ಉಮೇದವಾರಿಯ ಸಾಧಕವಾದ ವ್ಯಾಖ್ಯಾನಕ್ಕೆ ಕೊಂಗ್ರೆಸ ಕಮಿಟಿಯ ಪ್ರೆಸಿಡೆಂಟರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡ ನೋಟವು ನನಗೆ ಸಮರ್ಪಕವಲ್ಲವೆಂಬುದಾಗಿ ನನ್ನ ಪ್ರಾಮಾಣಿಕ ಮತವು ಸಮಾರೋಪದ ಭಾಷಣದಲ್ಲಿ ಆದರೂ, ಅಧ್ಯಕ್ಷರು ಉಮೇದವಾರರಿಗೆ ಅವರು ಕೊಂಗ್ರೆಸ ಸಭಾಸದರಾಗಿ ಜನರ ಮುಂದೆ ಬರಬೇಕಾಗಿ ಉಪದೇಶಿಸಿ, ತಮ್ಮ ಕರ್ತವ್ಯವನ್ನು ಜರುಗಿಸಿದರೋ ಏನೋ ತಿಳಿಯುವದಿಲ್ಲ

ಕುಮಟಾ ತಾ: ೨೮-೯-೩೬ } ತಮ್ಮ ಒಬ್ಬ ತ್ರಯಸ್ಥ ವಾಚಕ

ಅಧ್ಯಕ್ಷರು ರಾ। ಕಲ್ಯಾಣಪುರಕರರಿಗೆ ಕೊಂಗ್ರೆಸ ಸಭಾಸದರಾಗಿ ಮುಂದಾಗಲು ಉಪದೇಶಿಸಿಲ್ಲವು ತಿಳಿಯುತ್ತದೆ — ಸಂಪಾದಕ

ತದಡಿ ಬಂದರದಲ್ಲಿ ವ್ಯಾಪಾರ ಜನರು ಬಿಟ್ಟುಕೊಡಿಸಿದ ಧರ್ಮಾರ್ಥ ಫಂಡಿನ ಸಂಸ್ಥೆಗೆ

ತದಡಿ ಊರಲ್ಲಿಯ ಕನ್ನಡ ಶಾಲೆಯ ಹುಡುಗರ ವಿನಂತಿ—

ತದಡಿ ಶಾಲೆಯು ರಾಜಮಾರ್ಗದಿಂದ ಅಜಮಾಸ ೩೫೦ ಮಾರು ದೂರದ ಮೇಲೆ ಏರು ಸ್ಥಳದಲ್ಲಿ ಇರುತ್ತದೆ ಅದಕ್ಕೆ ಹೋಗಲು ದಾರಿಯು ಒಂದು ಹೊಳೆಯಂತೆ ೨। ಮಾರು ಹಾಸಿನದ, ಬಳಿಯ ಎರಡೂ ಬದಿಗೆ ಮನೆಗಳ ಹಿತ್ತಲುಗಳು ಎತ್ತರವಿದ್ದು, ನಡುವಿನ ಓಣಿಯು ತಗ್ಗು ಆಗಿ ನೀರು ನಿಂತು ಆ ಓಣಿಯು ಸಾರ್ವಜನಿಕ ಜನರು ಹೋಸಿಕೆ ವಗ್ಗರೆ ಮಾಡುವದರ, ಕಸ ಕಡ್ಡಿ ಬೀಳುವದು ಹೀಗಾಗಿ ನೀರು ಸಾಗದೇ ತುಂಬಿನಿಂತು ಕೊಳೆಯುತ್ತಿದ್ದು, ಅಸಹನೀಯ ದುರ್ಗಂಧತೆಯಿಂದ ಶಾಲೆಗೆ ಸಂಚು ತಿನ್ನುವದರಿಂದಲೂ ಅತೀಯ ಕ್ರಮದ ಹುತ್ತಿದೆ ಇದ ಕಾರಣ, ಓಣಿಯನ್ನು ಎತ್ತರ ಬದಿಯಲ್ಲಿ ಕಡಗಲ್ಲು ಕಟ್ಟಿಸಿ, ಮಳೆಯ ನೀರು ಹೊರಗೆ ವಗ್ಗರೆ ತೆಗೆದುಕೊಂಡು ಹೋಗುವಂತೆ ಕಾಲುವೆಗಳನ್ನು ಮಾಡಿ, ನಡುವಿನ ಭಾಗಕ್ಕೆ ಮಣ್ಣು ಹಾಕಿ ಎತ್ತರವಾಗುವ ಹಾಗೆ ದುರುಸ್ತಿಯು ಒಗ್ಗ ೨೦೦ ರೂಪಾಯಿ ಮತ್ತು ಸದರಿ ಶಾಲೆಯ ಇದಕ್ಕಾಂತಿನ ಕಂಪೌಂಡು ಕಟ್ಟಿಸುವ ಬಗ್ಗೆಯೂ, ಮಳೆಗಾಲದಲ್ಲಿ ಶಾಲೆಯಲ್ಲಿ ತಂಡಿ ಹಿಡಿದ ಹುಡುಗರಿಗೆ ಔಷಧಕ್ಕೆ ಒಂದು ಗ್ರಂಥಶಾಲೆಯ, ಆಗಿನ

ದರಿಂದ ಅದನ್ನು ನಿವಾರಣ ಮಾಡಲು ೬-೭ ಬೋರುಗಳು ಬೇಕಾದ್ದರಿಂದಲೂ ಆ ಬಗ್ಗೆ ಅಜಮಾಸ ೧೬೦ ರೂಪಾಯಿ, ಒಟ್ಟಿಗೆ ೩೦೦ ರೂಪಾಯಿಗಳು ಬೇಕಾಗುವವು. ಇದೇ ಊರಲ್ಲಿ ಧರ್ಮ ಕಟ್ಟಿಸುವ ಕೆಲಸ ನಡದಿದ್ದು, ಧರ್ಮಕ್ಕೆ ಹೋಗುವ ಮಾರ್ಗವನ್ನು ಬಾವಿಯ ನೀರಿಯಿಂದಲೇ ಒಯ್ಯುವದೆಂದು ವರಂತೆ ಇದ್ದದ್ದು, ಈಗ ಸದ್ರಿ ಮಾರ್ಗಾವೃತ್ತಿ ಸಮುದ್ರ ಪಂಡೆಯಿಂದ ಮಾಡುವದರಿಂದ ಮುಂಜೂರು ಮಾಡುವದಂತ ಕೇಳುತ್ತೇವೆ. ಇದರಿಂದ ದಯಾಳುಗಳಾದ ಇಲ್ಲಿಯ ವ್ಯಾಪಾರ, ಸಾರ್ವಜನಿಕ ಕೆಲಸಕ್ಕೆಂದು ಹೊರಗೆ ಬರ್‍ತ್ತಗುವ ಕೋರ್ಜ ೧೮, ಅಂದರೆ, ಅಕ್ಕಿಯ ಕೋರ್ಜ ೧೮ ೪ ಆಣೆಯಂತೆಯೂ ಆವುದು ಪರದ್ದಾಗುವ ೩ಟಂಗ ಬೇಲು ೧೮ ೧ ಆಣೆಯಂತೆ ಸನ್ ೧೯೧೩ನೇ ಇಸವಿಯಿಂದ ಈ ವರೆಗೆ ಕೂಡಿಸುತ್ತಿದ್ದ ರಖಮು ಅಜಮಾಸ ರೂಪಾಯಿ ೧೧೦೦ ಆಗಿರುವದಂತ ಕಂಡುಬರುವದು. ಬಡ ಹುಡುಗರಿಗೆ ಕಲ್ಯಾಣಮಾಡುವ ಕೆಲಸಕ್ಕಿಂತ ಹೆಚ್ಚಿನ ಸಾರ್ವಜನಿಕ ಕೆಲಸವು ಯಾವದೂ ಇಲ್ಲಾದ್ದರಿಂದ, ಇಲ್ಲಿಯ ಧನಿಕ ಹಾಗೂ ಉದಾರ ವ್ಯಾಪಾರಸ್ಥರು ಈಗಾಗಲೇ ಸಾರ್ವಜನಿಕ ಹಿತಕ್ಕೆಂದು ಕೂಡಿಸಿದ ೧೧೦೦ ರೂಪಾಯಿಗಳಲ್ಲಿ ಮೇಲೆ ತೋರಿಸಿದಂತೆ ೩೦೦ ರೂಪಾಯಿಗಳನ್ನು ಬದಿಯಿಟ್ಟು ನಮ್ಮ ಹಿತದ ಸಲುವಾಗಿ ಮುಂಜೂರು ಮಾಡಬೇಕೆಂದು ವ ಕ್ಯ ಸದ್ರಿ ಕೆಲಸವಾಡಿಸಿಕೊಡಬೇಕೆಂದು ಬೇಡಿಕೊಳ್ಳುತ್ತೇವೆ. (ತಾ. ೩೦-೮-೧೯೨೩)

ಕಾಶೀನಾಥ ಕೃಷ್ಣ ಪೈ. ಗೋಪಾಲಕೃಷ್ಣ ಉಪೇಂದ್ರ ನಾಯ್ಕ. ರಾಮಕೃಷ್ಣ ವಟಕುರ. ಶಿವಾ ತಿಪ್ಪನಾಯ್ಕ. ಸದಾಶಿವ ರಾಮಕೃಷ್ಣ ಶೇಟ. ರಾಘವದಾಸ ಪಾಂಡುರಂಗ ಶ್ಯಾನಭಾಗ. ಸಾವಿತ್ರಿಬಾಯಿ. ಸುಶೀಲಾಬಾಯಿ. ಗೋಪಾಳ ಯಶವಂತ ಶ್ಯಾನಭಾಗ. ಗಜಾನನ ನಾಬಯ್ಯ ಶೇಟ.

ವಿವಿಧ ಸಂಗ್ರಹ.

ಕಾಲಚಕ್ರದ ಮಹಿಮೆ.

ಕಾರ್ಕಳ ತಾಲೂಕು ಬೇಲೂರಿನಿಂದ ೩ ಮೈಲು ದೂರದ ನಿಟ್ಟೆಡೆ ಎಂಬ ಗ್ರಾಮದ ಮಧ್ಯ ಹರಿಯುವ ಹೊಳೆಯು ಕಾವೇರಿಯ ಕಾವಿನಷ್ಟು ಹೊಳೆಯಲ್ಲ ೬-೭ನೇ ತಾರೀಖಿನ ನೆರನೀರು ನಿಟ್ಟೆಡೆ ಗ್ರಾಮದಲ್ಲಿ ೧೩ ಮನೆಗಳನ್ನೂ, ಅನೇಕ ಮರಗಳನ್ನೂ ಕೊಚ್ಚಿಕೊಂಡು ಹೋಯಿತು. ಈ ಪ್ರವಾಹವು ರಾ। ಪರ್ವತ ಶೆಣೈಪ್ಪ ಸೆಟ್ಟಿ ಎಂಬ ಒಬ್ಬ ಜೈನರ ಮನೆಗೆ ಆ ದಿನ ರಾತ್ರಿ ೧೨ ಘಂಟೆಗೆ ದಾಳಿಯನ್ನು ನಡಿಸಿತು. ಆಗ ಆ ಮನೆಯಲ್ಲಿದ್ದ ೮ ಜನರಲ್ಲಿ ಯಜಮಾನಳಾದ ಮುದುಕಿಯೂ, ೩ ಮಂದಿ ಮಕ್ಕಳೂ ಮನೆಯ ಕೆಳಭಾಗದಲ್ಲಿಯೇ ಬಿದ್ದು ಮಣ್ಣುಪಾಲಾದರು. ಉಳಿದ ನಾಲ್ಕು ಜನರು, ನೀರು ಏರುತ್ತ, ಏರುತ್ತ, ತಪ್ಪಿಸಿಕೊಳ್ಳಲು ಸಾಧ್ಯವಿಲ್ಲದೆ, ಮನೆಯ ಮಾಡನ್ನು ಹತ್ತಿದರು. ಮಾಡು ನೀರಿನಲ್ಲಿ ತೇಲಾಡಿ ಪ್ರಯಾಣ ಮಾಡಲಾರಂಭಿಸಿದರು. ಅರ್ಧ ಫರ್ಲಾಂಗ ದೂರ ಹೋಗುತ್ತ ಅದು ಒಂದು ಮರಕ್ಕೆ ತಾಗಿತು. ಆಗ ಈ ನಾಡಿನಲ್ಲಿದ್ದ ಸೊಂತಿರಾಜ ಸೆಟ್ಟಿ ಎಂಬವನೂ, ೧೪ ವರುಷದ ಇನ್ನೊಬ್ಬ ಹುಡುಗನೂ ಈ ಮರವನ್ನು ಹತ್ತಿದರು. ಮಾಡಿನಲ್ಲಿದ್ದ ಇಬ್ಬರು ಹೆಂಗಸರಲ್ಲಿ ಒಬ್ಬ ಹೆಂಗಸು ಮರ ಹತ್ತಲು ಯತ್ನಿಸಿ, ಮರದ ಸಣ್ಣದಾದ ಒಂದು ಕೊಂಬೆ ಹಿಡಿದು ಜೋತಾಡತೊಡಗಲು ಮಾಡು ನಾಲ್ಕು ಮಾರು ದೂರ ಹೋಯಿತು. ಮರದ ಕೊಂಬೆ ಮುರಿದು ಬಿತ್ತು. ಆ ಹೆಂಗಸು ಈಜಾಡಬಲ್ಲಳು, ಆದ್ದರಿಂದ ಪುನಃ ಮಾಡನ್ನೇ ಹಿಡಿದಳು. ಆಗ್ಗೆ ಮಾಡು ಹೊಳೆಯ ನೀರಿನ ಸೆಳತಕ್ಕೆ ಸಿಕ್ಕಿ ರಭಸದಿಂದ ಮುಂದೆ ಹೋಗಲು ಪ್ರಾರಂಭಿಸಿದಾಗ, ಈ ಜನರೂ (ಮರದಲ್ಲಿ ಮತ್ತು ಮಾಡಿನಲ್ಲಿದ್ದವರು) ಗೋಳಾಡುತ್ತಿದ್ದರು. ಈ ಮಾಡಿನಲ್ಲಿದ್ದವರಲ್ಲಿ ಒಬ್ಬಳು ೭ ತಿಂಗಳ ಗರ್ಭಿಣಿ ಇನ್ನೊಬ್ಬಳು ೧೦ ವರುಷದ ಬಾಲೆ. ಮಾಡು ವೇಗವಾಗಿ ಹೋಗಿ ಒಂದು ಮರಕ್ಕೆ ತಾಗಿದಾಗ, ಈ ಚಿಕ್ಕ ಹುಡುಗಿಯು ಆ ಮರದ ಚಿಕ್ಕ ಗೆಲ್ಲನ್ನು ಹಿಡಕೊಂಡು, ನೀರಿನಲ್ಲಿ ತೇಲಾಡುತ್ತ ಕೂಗಹತ್ತಿದಳು. ಹುಡುಗಿಯ ಸ್ವರ ಕೂಡಾ ಬಿದ್ದಿತ್ತು. ಗರ್ಭಿಣಿ ಹೆಂಗಸಿಗೆ ಮರ ಹತ್ತಲಿಕ್ಕಾಗಲಿಲ್ಲ; ಆಕೆಯು ಮಾಡಿನಲ್ಲಿ ಮತ್ತೂ ಅರ್ಧ ಮೈಲು ಮಾರ ಹೋದಳು. ಆಗ ಅಲ್ಲಿಯೂ ಒಂದು ಮರಕ್ಕೆ ಮಾಡು ತಾಗಿ ಅದು ಮುಳುಗಿತು. ಆ ಹೆಂಗಸು ಮರದ ಒಂದು ಕೊಂಬೆಯನ್ನು ಹಿಡಕೊಂಡಳು. ದುರಾದೃಷ್ಟವಶಾತ್ ಇವಳು ಹಿಡಕೊಂಡಿದ್ದ ಕೊಂಬೆಯು, ಎಂದರೆ ಇದರ ಎಡಭಾಗದಲ್ಲಿ ದೊಡ್ಡದಾದ ಒಂದು ಕನಡಿಹಾವು (ಕಂಡೋಡಿ,) ಬಲಭಾಗದಲ್ಲಿ ಒಂದು ನಾಗರಹಾವು ಕೂಡಾ ಇದ್ದವು. ಭಯಾಕ್ರಾಂತಳಾಗಿ ಆವಳು ಚೀರುತ್ತಲೇ, ಕನಡಿಹಾವು ತಲೆ ಎತ್ತಿ, ಅದರ ಕಚ್ಚು ಮಾಡುವುದು. ಕನಡಿಹಾವಿನ ಕಚ್ಚ ಕೇಳುತ್ತಲೆ, ಸರ್ಪವು ಜೆಡೆಯತ್ತಿ, ಬುಸುಗುಟ್ಟುವುದು. ಆವಳು ಮರವನ್ನು ಹತ್ತಿದಾಗ ಪ್ರಾತಃಕಾಲ ೩ ಗಂಟೆಯಾಗಿತ್ತು. ಆಕೆಯ ಕಷ್ಟವು ಏನೆಂದು ವಿವರಿಸಲಿ! ಆಕೆಯ ಪ್ರಾಣ ಮಾತ್ರ ಉಳಿದಿತ್ತು. ಅದೃಷ್ಟವಶಾತ್ ಗುಂಡೂರಿ ಮುಂಜಪ್ಪಾಜರಿಗಳು ಹುಡುಗಿಯ ಬೊಬ್ಬೆ ಕೇಳಿ. ಪ್ರಥಮದಲ್ಲಿ ಆಕೆಯ ನ್ನೂ, ಅನಂತರ ಗರ್ಭಿಣಿಯಾದ ಆ ಹೆಂಗಸನ್ನೂ ಬಹಳ ಸಾಹಸದಿಂದ ಹುಡುಕಿ ರಕ್ಷಿಸಿ, ಇಬ್ಬರನ್ನು ಸಾಯಂಕಾಲ ತನ್ನ ಮನೆಗೆ ಕರತಂದು, ನಾಲ್ಕು ದಿವಸದ ವರೆಗೆ ಅವರ ಆರೈಕೆ ನೋಡಿ ಅವರನ್ನು ಅವರ ಊರಿಗೆ ಕಳುಹಿಸಿಕೊಟ್ಟರು. (ಸ್ವದೇಶಾಭಿಮಾನಿ)

***

ನೋಬೆಲ್ ಇನಾಮು.

ಮಹಾತ್ಮರಿಗೆ ‹ ನೋಬೆಲ್ ಪೀಸ ಪ್ರೈಝು › ಎಂಬ ಇನಾಮನ್ನು ನೋಬೆಲ್ ಪಾರಿತೋಷಿಕ ಸಂಸ್ಥೆಯವರು ಕೊಡುವವರಿದ್ದಾರೆಂದು ಅಲಹಾಬಾದಿನಲ್ಲಿ ಒಂದು ಸುದ್ದಿ ಹಬ್ಬಿತ್ತು. ಈ ಇನಾಮು ಸ್ವೀಡನ್ ರಾಷ್ಟ್ರದ ನಿವಾಸಿಕರಾದ ಡಾ। ಆಲ್ಫ್ರೆಡ್ ನೋಬೆಲ್‌ರವರ ಸ್ಮರಣಾರ್ಥ ಪ್ರತಿ ವರ್ಷ ಕೊಡಲ್ಪಡುತ್ತದೆ. ಡಾ। ಆಲ್ಫ್ರೆಡ್‌ರವರು ೧೮೩೩ನೇ ಇಸವಿಯಲ್ಲಿ ಜನ್ಮವನ್ನೆತ್ತಿ, ೧೮೯೬ನೇ ಇಸವಿಯಲ್ಲಿ ಕೈಲಾಸವಾಸಿಗಳಾದರು. ಇವರು ವಿಖ್ಯಾತ ಇಂಜನಿಯರರಿದ್ದರು. ರಸಾಯನ ಶಾಸ್ತ್ರದಲ್ಲಿಯೂ ಇವರು ಖ್ಯಾತಿಹೊಂದಿರುವರು. ‹ ಡಿನಾಮೈಟ › ಎಂಬ ತೀಕ್ಷ್ಣ ಸ್ಫೋಟಕ ದ್ರವ್ಯವನ್ನು ಶೋಧಿಸಿದ ಕಲ್ಪಕರೂ ಇವರೇ. ಡಾ। ಮಹಾಶಯರು ತಮ್ಮ ಬುದ್ಧಿ-ಸಾಮರ್ಥ್ಯದಿಂದ ದ್ರವ್ಯಸಂಗ್ರಹ ಮಾಡಿದರು. ಮತ್ತು ಒಂದು ಮರಣಶಾಸನವನ್ನು ಮಾಡಿ ಪ್ರತಿ ವರ್ಷಕ್ಕೆ ಆ ನಾಲಿರ ಪವನು ಬೆಲೆಯ ಇನಾಮನ್ನು ಮಾನವ ಜಾತಿಯ ಉದ್ಧಾರಾರ್ಥ ಮಹತ್ಕಾರ್ಯ ಮಾಡುವವರಿಗೆ ಈ ಇನಾಮನ್ನು ಹಂಚಬೇಕೆಂದು ಅವರು ವಿಧಿಸಿದರು. ಪದಾರ್ಥವಿಜ್ಞಾನ ಶಾಸ್ತ್ರ, ರಸಾಯನ ಶಾಸ್ತ್ರ, ವೈದ್ಯ ಶಾಸ್ತ್ರ, ವಾಙ್ಮಯ ಪ್ರಚಾರ, ಶಾಂತಿಪ್ರಸಾರ ಇವುಗಳಲ್ಲಿ ಪ್ರಾವೀಣ್ಯವನ್ನು ಸಂಪಾದಿಸುವವರೇ ಈ ಇನಾಮನ್ನು ಗಳಿಸುತ್ತಾರೆ. ‹ ಎಕ್ಸ ರೇಸ್ › ಅಂದರೆ, ಶರೀರಕ್ಕೆ ಹಚ್ಚಿದ್ದಲ್ಲಿ ಎಲುಬುಗಳ ಸ್ಥಿತಿಯನ್ನು ತೋರಿಸುವ ಕಿರಣಗಳನ್ನು ಹುಡುಕಿ ತೆಗೆದ ಡಾ। ರಾಂಜೆನ್‌ರವರಿಗೂ, ರೇಡಿಯಮ್ ಧಾತುವನ್ನು ಶೋಧಿಸಿದ ಡಾ। ಮ್ಯಾಡಮ ಕ್ಯೂರಿ, ಬಿನ್ ತಾರಾ ಯಂತ್ರವನ್ನು ಶೋಧಿಸಿದ ಮಾರ್ಕೋನೀರವರಿಗೂ, ಅಮೇರಿಕೆಯ ಶಾಂತಿ ಪ್ರಸಾರಕರಾದ, ಅಧ್ಯಕ್ಷರಾದ ಕ್ರಿಶ್ಚನವಾಸಿ ರುಝುವೆಲ್ಟರವರಿಗೂ, ಪದಾರ್ಥವಿಜ್ಞಾನ ಶಾಸ್ತ್ರಪಾರಂಗತರಾದ ಲೋರ್ಡ ರೇಲ್ಘ, ಪ್ರೊ। ಥೊಮಸನ್, ರಸಾಯನ ಶಾಸ್ತ್ರಜ್ಞರಾದ ಸರ್ ರೆಂಝೆ, ಪ್ರೊ। ರುಥರಫರ್ಡ ಇವರಿಗೂ, ವೈದ್ಯಶಾಸ್ತ್ರನಿಪುಣರಾದ ಸರ್ ರೊಬರ್ಟ ರೋಸ್‌ರವರಿಗೂ, ವಾಙ್ಮಯಕ್ಕಾಗಿ ರುಡಿಯಾರ್ಡ ಕಿಪ್ಲಿಂಗರವರಿಗೂ ಈ ಇನಾಮು ದೊರಕಿದೆ. ಶಾಂತಿ ಪ್ರಸಾರ ಮಾಡಿದ್ದಕ್ಕಾಗಿ ಜರ್ಮನಿಯ ವಿಖ್ಯಾತ ಕೈಸರ ಬಾದಶಹರವರಿಗೂ ಈ ಇನಾಮು ದೊರಕಿದೆ. ೧೯೧೩ರಲ್ಲಿ ಭರತಖಂಡದ ಕವಿವರ್ಯ ರವೀಂದ್ರನಾಥ ಟಾಗೋರರವರಿಗೆ ಗೀತಾಂಜಲಿ ಬರೆದದ್ದಕ್ಕಾಗಿ ಈ ಇನಾಮು ಕೊಡಲ್ಪಟ್ಟಿತ್ತು.

***

ಗೌರಕಾಯಿಯವನೊಬ್ಬನ ಅಧಮೃತನ.

ಕನಿಯಾಡದಲ್ಲಿ ಜೆಸ್ಟರ ಅಬ್ರಾಹಮ ಎಂಬ ಒಬ್ಬ ಗೌರಕಾಯದ ಸಾಹುಕಾರರಿರುವರು. ಅವರಲ್ಲಿ ಕಿತೋಕ ಎಂಬ ಒಬ್ಬ ಭಾರತೀಯ ಹುಡುಗನು ಕೆಲಸಕ್ಕಿದ್ದನು. ಅವನಿಗೆ ಮೊದಲೊಮ್ಮೆ ಅಬ್ರಾಹಮರವರು ಬಡಿದರೆಂದು ಕಳೆದ ಎಪ್ರಿಲ ತಿಂಗಳಲ್ಲಿ ಅವನು ಓಡಿಹೋಗಿದ್ದನು. ಅವನಿಗೆ ಕರತಂದು ಅಬ್ರಾಹಮರವರು ಪುನಃ ಚಾಕರಿಗೆ ಹಚ್ಚಿಕೊಂಡರು. ಒಂದು ದಿನ ಕಿತೋಕನು ಸಾಹುಕಾರನ ಹೆಣ್ಣು ಕುದುರೆಯನ್ನು ಸವಾರಿ ಮಾಡಿಕೊಂಡು ನಡೆದನು. ಅದರಾನ್ನ ೩ ಘಂಟೆಗೆ ನೆರೆಹೊರೆಯ ಗೌರಕಾಯ ಬಾಂಧವರಾದ ಅಬ್ರಾಹಮರವರಿಗೆ ಈ ಸುದ್ದಿ ತಿಳಿಯಿತು. ಸಾಯಂಕಾಲಕ್ಕೆ ಅಬ್ರಾಹಮರವರು ಕಿತೋಕನನ್ನು ಕರೆದರು. ಕುದುರೆಯ ಸವಾರಿ ಮಾಡಲಿಕ್ಕೆ ನಿನಗೆ ಯಾರು ಅಪ್ಪಣೆ ಕೊಟ್ಟಿದ್ದರು? ಎಂದು ಸಾಹುಕಾರರು ಕೇಳಿದರು. ಕಿತೋಕನು ಸುಮ್ಮನೆ ನಿಂತುಕೊಂಡನು. ಇದೇ ಪ್ರಶ್ನೆಯನ್ನು ಪುನಃ ಪುನಃ ಕಿತೋಕನಿಗೆ ಕೇಳಿದರು. ೨೦—೩೦ ಸಾರೆ ಕೇಳಿದರು. ಕಟ್ಟಕಡೆಗೆ, ಕಿತೋಕನು “ ನಾನೇನು ಕಳ್ಳನಲ್ಲ ” ಎಂದು ನುಡಿದನು. ಈ ಉತ್ತರವನ್ನು ಕೇಳಿದೊಡನೆ, ಅಬ್ರಾಹಮರವರು ಸಂತಾಪಗೊಂಡರು. ಹುಡುಗನ ಮೇಲೆ ಚೆತ್ತಪ್ರಹಾರವಾಗಲು ಪ್ರಾರಂಭವಾಯಿತು. ಒಂದು ಕೋಣೆಯಲ್ಲಿ ಕಿತೋಕನನ್ನು ನೂಕಿದರು. ಹೊಡೆಯಲಿಕ್ಕೆ ಕೊಡದಿದ್ದರೆ, ತಮಗೆ ಉಪದ್ರವವಾಗಬಹುದೆಂದು ಅವರು ಇವರಿಗೆ ಹುಡುಗನನ್ನು ಹಿಡಿಯಲು ಆಜ್ಞಾಪಿಸಿದರು. ಮತ್ತು ಚಬೋಕಾನನ್ನು ತಂದು ಹೊಡೆಯಲಾರಂಭಿಸಿದರು. ೧-೨ ಏಟು ಕೊಡುವದು, ‘ನಿನಗ್ಯಾರು ಅಪ್ಪಣೆ ಕೊಟ್ಟರು?’ ಎಂದು ಕೇಳುವದು; ಈ ಪ್ರಕಾರ ಬಹಳ ಹೊತ್ತು ಸಾಗಿತು. ಆದರೂ ಕಿತೋಕನು ಉತ್ತರವನ್ನೀಯಲಿಲ್ಲ. ಅಬ್ರಾಹಮ ಸಾಹುಕಾರರ ಕೈ ಸೋತುಹೋಯಿತು. ಆಗ ಅಲ್ಲಿ ಗೊಬ್ಬನಿಗೆ ಹೊಡೆಯಹೇಳಿದರು. ಅವನ ಪ್ರಹಾರಗಳು ತೀಕ್ಷ್ಣವಾಗುವದಿಲ್ಲೆಂದು ಮತ್ತೊಬ್ಬನನ್ನು ಹಚ್ಚಿದರು. ಆಗ ಕಿತೋಕನು ಮೂರ್ಛೆಹೊಂದುವ ವೇಷ ಮಾಡಿದನೆಂದು, ಅಬ್ರಾಹಮರವರು ನುಡಿಯುತ್ತಾರೆ! ಈ ವೇಷಕ್ಕೆ ಮತ್ತೊಂದು ಪ್ರಕಾರದ ಶಿಕ್ಷೆಯಂದು ಮೈಮೇಲೆ ನೀರನ್ನೆರೆದು, ಅದೇ ಪ್ರಶ್ನೆಯನ್ನು ಪುನಃ, ಪುನಃ ಕೇಳಹತ್ತಿದರು. ಅಷ್ಟರಲ್ಲಿ ರಾತ್ರಿಯ ಊಟದ ಹೊತ್ತಾಯಿತು. ಅಬ್ರಾಹಮರವರು ಕಿತೋಕನನ್ನತ್ತ ಉಗ್ರಾಣದಲ್ಲಿಟ್ಟು, ಕೀಲಿಗೆ ಕಟ್ಟಿಹಾಕಿದರು. ಅಬ್ರಾಹಮರವರು ಊಟ ತೀರಿಸಿ ಬಂದರು. ಕಿತೋಕನಿಗೆ ಉಪವಾಸವೇ. ಅಬ್ರಾಹಮರವರು ಕೋಣೆಯಲ್ಲಿ ಹೋಗಿ ನೋಡಿದರು. ಕಿತೋಕನಿಗೆ ಕಟ್ಟಿಹಾಕಿದ್ದು ಅವರಿಗೆ ಸರಿದೋರಲಿಲ್ಲ. ಅಲ್ಲಿಗೆ ಮತ್ತೆ ಕರೆದರು. ಹಿಂಬದಿಗೆ ಕೈ ಕಟ್ಟಿಹಾಕಿದರು. ಬಲಗಾಲನ್ನು ಮುಂದಿನ ಕಂಬಕ್ಕೆ ಕಟ್ಟಿದರು. ಮುಂಜಾವು ೪ ಘಂಟೆಗೆ ಕಿತೋಕನು ಈ ಐಹಿಕ ಬಂಧನದಿಂದ ಮುಕ್ತನಾದ ಸುದ್ದಿಯನ್ನು ಒಬ್ಬ ಆಳು ಸಾಹುಕಾರ ಅಬ್ರಾಹಮರಿಗೆ ತಿಳಿಸಿದನು. ಈ ಬಗ್ಗೆ ಅಬ್ರಾಹಮರ ಮೇಲೆ ಖಟ್ಲೆಯಾಯಿತು. ಡಾ। ಅರ್ಥರ ಜೋನ ಹೆಸ್ಟ್ಲೀಕ ಎಮ್. ಏ., ಎಮ್. ಡಿ., ಎಫ್. ಆರ್. ಸಿ. ಪಿ. ಈ ವೈದ್ಯ ರಾಜರು ಪಂಚನಿಕೊಟ್ಟು ನುಡಿದದ್ದೇನಂದರೆ:— ‹ ಅಬ್ರಾಹಮರವರು ಕೊಟ್ಟ ಪ್ರಹಾರಗಳು ಕಿತೋಕನ ಪ್ರಾಣೋತ್ಕ್ರಮಣ ಮಾಡುವಷ್ಟು ತೀಕ್ಷ್ಣವಿದ್ದಿಲ್ಲ. ಕಿತೋಕನು ಉಪವಾಸ ಬಿದ್ದಿದ್ದನು. ಅದಲ್ಲದೆ, ಕಿತೋಕನು ನಿದ್ರನಹೊಂದುವ ಮುಂಚೆ ಸಾಯಬೇಕೆಂದು ಬಯಸಿ, ಚಳಿ ಇದ್ದರೆ, ಅದರಿಂದ ಅರಿದುಕೊಳ್ಳುತ್ತಿದ್ದನು ಎಂದು ಉದ್ಗರಿಸಿದ್ದನು. ಚೆತ್ತಪ್ರಹಾರ, ಉಪವಾಸ, ಸಾಯುವ ಇಚ್ಛೆ, ಈ ಮೂರು ಸಂಗತಿಗಳು ಕಿತೋಕನ ಮರಣದ ಕಾರಣಗಳು ” ಅಬ್ರಾಹಮರವರಿಗೆ, ತೀಕ್ಷ್ಣ ಘಾಯವಾಡಿದ ಆರೋಪದ ಮೇಲೆ ನ್ಯಾಯಮೂರ್ತಿಗಳು ೩ ವರ್ಷಗಳ ಕಠಿಣ ಸಜೆಯನ್ನು ವಿಧಿಸಿದರು.

ನಮ್ಮ ವಾಚಕ ಮಹಾಶಯರಿಗೆ—

ಮಹನೀಯರೇ,

ಇದು 'ವೃತ್ತ'ದ ಸಪ್ತಮ ಸಂವತ್ಸರದ ೫೧ನೇ ಸಂಚಿಕೆಯು. ಇನ್ನೊಂದು ಸಂಚಿಕೆಯನ್ನು ನಿಮಗರ್ಪಿಸಿದರೆ, 'ವೃತ್ತ'ವು ಅಷ್ಟಮ ವರುಷದಲ್ಲಿ ಪ್ರವೇಶಿಸುವದು. ಕಳೆದ ಏಳು ವರುಷಗಳಲ್ಲಿ 'ವೃತ್ತ' ಶಿಶುವು ಸಾಧಿಸಿದ ದೇಶಸೇವೆಯನ್ನು ತಾವೆಲ್ಲರೂ ಅರಿತವರಿದ್ದೀರಿ. ನೌಕರಶಾಹಿಯಗೂಡ ಬಾಲ 'ವೃತ್ತ'ವು ಎಷ್ಟು ಧೈರ್ಯದಿಂದ, ಚಾತುರ್ಯದಿಂದ, ದಿಟ್ಟತನದಿಂದ, ಮರೆಮಾಚದೆ ಎದುರಾಗಿದೆಂಬುದೂ ತಾವು ಬಲ್ಲವರೇ. ಮಹಾತ್ಮರ ಅಹಿಂಸಾಪ್ರಧಾನ ಅಸಹಯೋಗದ ಕಾರ್ಯಕ್ರಮವನ್ನು ದೇಶದಲ್ಲಿ ಪುರಸ್ಕರಿಸುವರೆ, 'ವೃತ್ತ'ವು ಯಥಾಮತಿ, ಯಥಾಶಕ್ತಿ ದುಡಿದಿರುವದೆಂದು ತಾವಾಗಿ ಒಪ್ಪುವಿರಿ. ಜಿಲ್ಹೆಯೊಳಗಿನ ವಾತಾವರಣದ ಶುಚಿತ್ವವನ್ನು ಕಾಪಾಡಲು, ಸ್ಥಾನಿಕ ವಿಷಯಗಳ ಮೇಲೆ ಸಹ 'ವೃತ್ತ'ವು ದಾಕ್ಷಿಣ್ಯಕ್ಕೆ ಬಲಿಬೀಳದೆ, ನಿರ್ಧಾರದಿಂದ ಟೀಕಿಸಿ, ಕರ್ತವ್ಯದಕ್ಷತೆಯನ್ನು ಸಿದ್ಧಪಡಿಸಿದೆ. ವಿಷಯ ಮೇಲೆ ದಾಖಲಾದ ತಾವೆಲ್ಲರೂ 'ವೃತ್ತ'ದ ಕಾರ್ಯಕ್ಷೇತ್ರದ ವ್ಯಾಪ್ತಿಯನ್ನೂ, ಜವಾಬದಾರಿಯನ್ನೂ ನೆನೆಸಿ, ಹಿಂದಿನಂತೆ, ಮುಂದೆಯೂ ತಮ್ಮ ಸಹಾಯವನ್ನು ನಮಗೀಯುವರೆಂದು ಕೋರಿಕೆ. ಇದಲ್ಲದೆ, ಹೊಸ ಚಂದಾದಾರರನ್ನು ಸಹ ಒಟ್ಟು ಮಾಡಿ 'ವೃತ್ತ' ಸಂಗೋಪನಕ್ಕೆ ಅನುಕೂಲತೆಯನ್ನೀಯುವ ಜವಾಬದಾರಿಯು ಸಹ ತಮ್ಮದೇ. ಒಬ್ಬೊಬ್ಬರು, ಇನ್ನೊಬ್ಬೊಬ್ಬ ಚಂದಾದಾರರನ್ನು ಸಂಪಾದಿಸಿಕೊಟ್ಟರೆ, ವೃತ್ತಕ್ಕೆ ದೇಶಸೇವೆಯನ್ನು ನಡಿಸಲು ವಿಶೇಷ ಚೈತನ್ಯವೂ, ಸ್ಫೂರ್ತಿಯೂ ಪ್ರಾಪ್ತವಾಗುವವು. ವರ್ಷಾರಂಭದ ಚಂದಾದಾರರೆಲ್ಲರೂ, ತಮ್ಮ ವರ್ಗಣಿ ರೂಪಾಯಿ ೩/- ನ್ನು ಮನಿಆರ್ಡರದ್ವಾರಾ ರವಾನಿಸಿದರೆ, ನಮಗೂ ಅನುಕೂಲವು; ತಮಗೂ ಅನುಕೂಲವೇ. ಯಾಕೆಂದರೆ, ವ್ಹಿ. ಪಿ. ಬಗ್ಗೆ ತಗಲುವ ೪ ಆಣೆಗಳು ತಮಗೆ ಉಳಿಯುವವು.

ಇತಿ ಮೆನೇಜರ.

ಕಾನಡಾವೃತ್ತ.

ಗುರುವಾರ, ತಾರೀಖು ೪ ಮಾಹೆ ಅಕ್ಟೋಬರ ೧೯೨೮.

ಖಾದಿಯ ಮಹಿಮೆ.

ಒಂದು ಉದಾಹರಣೆ.

ಮಹಾತ್ಮಾ ಗಾಂಧಿಯವರ ಜಯಂತ್ಯುತ್ಸವು ಕಳೆದ ಮಂಗಳವಾರ ತಾ. ೨ನೇಗೆ ಅಖಿಲ ಭರತಖಂಡದಲ್ಲಿ ಉತ್ಸಾಹದಿಂದ ರಾಷ್ಟ್ರಪ್ರೇಮಪೂರ್ವಕ ನೆರವೇರಿಸಲ್ಪಟ್ಟಿತು. ಮಹಾತ್ಮರ ರಾಜಕಾರಣದ ರಹಸ್ಯವನ್ನು ಅಖಿಲ ಪ್ರಜೆಗಳೂ ಅರಿತಿರುವರು. ಆದರೂ, ಮಹಾತ್ಮರ ಜಯಂತ್ಯುತ್ಸವದ ಶುಭ ಸಮಯದಲ್ಲಿ ಅವರ ರಾಷ್ಟ್ರಸಂದೇಶವನ್ನು ಪುನಃ ವಾಚಕರಿಗರುಹುವದು ಪುನರುಕ್ತಿಯಾದರೂ, ರಾಷ್ಟ್ರೀಯ ಸ್ಫೂರ್ತಿವರ್ಧನಕ್ಕನುಕೂಲವಾಗುವದೆಂದು ನಂಬಿ, ಇಂದಿಗೆ ಖಾದಿಯ ವಿಷಯ ನಾಲ್ಕು ಮಾತು ಬರೆಯಬಿಚ್ಛಿಸುವೆವು. ಖಾದಿಯಿಂದ ಕೂಡಲೆ, ಪ್ರತಿಯೊಬ್ಬ ದೇಶಬಾಂಧವರಿಗೆ ಮಹಾತ್ಮರ ಸಂದೇಶದ ನೆನವರಿಕೆಯಾಗಲೇಬೇಕು, ಅಷ್ಟು ಮಹತ್ವವನ್ನು ಮಹಾತ್ಮರು ಖಾದಿಗೆ ಕೊಟ್ಟಿರುವರು; ಅಷ್ಟು ಕಷ್ಟದಿಂದ ಖಾದಿ ಪ್ರಸಾರಕ್ಕಾಗಿ ಅವರು ದುಡಿದಿರುವರು. 'ನೀವು ಖಾದಿ ಕೊಡಿರಿ; ನಿಮಗೆ ಸ್ವರಾಜ್ಯ ಕೊಡುತ್ತೇನೆ' ಎಂದು ಮಹಾತ್ಮರು ಶ್ರೀ ಕೃಷ್ಣಜನ್ಮಸ್ಥಾನವನ್ನು ಪ್ರವೇಶಿಸುವಾಗ ನುಡಿದದ್ದು ಅಖಿಲ ದೇಶಬಾಂಧವರಿಗೆ, ಇನ್ನೂ ಕಿವಿಯಲ್ಲಿ ಗುಣುಗುಟ್ಟುತ್ತಿರುವಷ್ಟು, ಜ್ಞಾಪಕದಲ್ಲಿರಬೇಕು. ಖಾದಿಗಾಗಿ ಮಹಾತ್ಮರು ತನು-ಮನ-ಧನ ದುಡಿದಿರುವರು. ಈಗಲೂ ಅವರ ಸಂದೇಶವು ಇದೇ. ಆದ್ದರಿಂದ, ಸತ್ಯಾಗ್ರಹಾಶ್ರಮದ ಖಾದಿ ಮಂಡಳದಿಂದ ಹೊರಟ ಪ್ರಕಟಣಾ ಪತ್ರಿಕೆಯಲ್ಲಿ ನಮೂದಿಸಿದ ಒಂದು ಉದಾಹರಣೆಯನ್ನು ಇಂದಿಗೆ ಅನುವಾದಿಸಬಿಚ್ಛಿಸುವೆವು. ವಾಚಕ ಮಹಾಶಯರೆಲ್ಲರೂ ಇದನ್ನು ವಿಚಾರಪೂರ್ವಕ ಪರಿಶೀಲಿಸಬೇಕಾಗಿ ನಮ್ಮ ಬಿನ್ನಹವಿದೆ.

ಗುಜರಾಥಿ ಗೃಹಸ್ಥರೊಬ್ಬರು ಬ್ರಹ್ಮದೇಶಕ್ಕೆ ದೇಶಾಂತರ ಮಾಡಿ, ಅಲ್ಲಿಯೇ ವಾಸವಾಗಿರುವರು. ಮಹಾತ್ಮರ ಅಸಹಯೋಗ ಸಂದೇಶವನ್ನು ಅವರು ಸ್ವೀಕರಿಸಿ, ಅದರಂತೆ ತಮ್ಮ ಸಂಸಾರಶಕಟವನ್ನು ಚಾಲೂ ಮಾಡಹತ್ತಿದರು. ಅದರಿಂದ ತಮಗುಂಟಾದ ಲಾಭಗಳನ್ನು ಅವರು ನಿವೇದಿಸುತ್ತಾರೆ. 'ನನ್ನ ಕುಟುಂಬದಲ್ಲಿ ನಾವು ಐವರಿದ್ದೇವೆ: ನಾನು, ನನ್ನ ಹೆಂಡತಿ, ಮೂವರು ಹುಡುಗರು. ನಾವು ಗಂಡ-ಹೆಂಡರು ಅದಮಾಸು ೩೦ ವರ್ಷ ಪ್ರಾಯದವರು, ಹುಡುಗರ ವಯಸ್ಸು ಅನುಕ್ರಮವಾಗಿ ೬, ೩½, ೧½, ಹೀಗಿದೆ. ನಮ್ಮ ಜನ್ಮಭೂಮಿಯು ಕಾಠೇವಾಡ ಕಡೆಯದು. ನಾವು ಔದೀಚ್ಯ ಬ್ರಾಹ್ಮಣರು. ನನ್ನ ಸ್ಥಿತಿಯು ಸಾಧಾರಣ ಮಧ್ಯಮ ವರ್ಗದ್ದೆಂದು ಹೇಳಬಹುದು. ನಾನೀಗ ಅಕ್ಕಿಯ ಗಿರಣಿಯಲ್ಲಿ ನೌಕರಿ ಮಾಡುತ್ತಿದ್ದೇನೆ. ತಲಾ ತಿಂಗಳಿಗೆ ೧೨೫ ರೂಪಾಯಿ. ಈ ಮೊದಲು ನನ್ನ ಉತ್ಪನ್ನವೆಲ್ಲ ಖರ್ಚಾಗುತ್ತಿತ್ತು. ಅದಲ್ಲದೆ, ವಿವಾಹಕ್ಕಾಗಿ ನಾನು ಸಾಲ ತೆಗೆಯಬೇಕಾಯಿತು. ಇನ್ನೂ ನಾನು ಋಣಮುಕ್ತನಾಗಲಿಲ್ಲ. ಬಡವನೆಂದರೂ ಹೇಳಬಹುದು.

೩ ವರ್ಷಗಳ ಮೊದಲಿನ ಕಥೆ ಹೇಳುತ್ತೇನೆ. ಆಗ ನಾವು ಮೂವರು ಇಷ್ಟು ಮಂದಿಗಳಿಗೆ ಸಾಲಿಯಾನ ೩೦೦ ರೂಪಾಯಿಗಳು ಅರಿವೆಗಾಗಿ ತಗಲುತ್ತಿದ್ದವು. ಖಾದಿಯನ್ನು ನಾವು ಸ್ವೀಕರಿಸಿದೆವು. ಕೂಡಲೆ, ನಮ್ಮ ಪೋಷಾಖಿನ ಖರ್ಚು ೨೦೦ ರೂಪಾಯಿಗಳಿಗಿಳಿಯಿತು. ಮರುವರ್ಷ ೧೦೦ ರೂಪಾಯಿಗಳು ತಗಲಿದವು. ಚಾಲೂ ಸಾಲವು ೩ನೇದು. ಈ ವರ್ಷ ೫೦ ರೂಪಾಯಿಗಳು ತಗಲಬಹುದು. ಈಗ ನಾವು ಐವರಿದ್ದೇವೆ. ಹಳೆ ಅರಿವೆಯು ಇನ್ನೂ ಸಂಪೂರ್ಣವಾಗಿ ಮನೆಯನ್ನು ತೊರೆದಿಲ್ಲ. ಅದರೊಳಗೆ ವಿದೇಶೀ ಅರಿವೆ, ಗಿರಣಿಯ ಅರಿವೆಗಳೂ ಇವೆ. ಆದರೆ, ಈಗ ನಾವು ಖಾದಿಯ ಹೊರತು, ಅನ್ಯ ಅರಿವೆಯನ್ನು ಖರೇದಿ ಮಾಡುವದಿಲ್ಲ. ಕಳೆದ ೩ ವರ್ಷಗಳಿಂದ ನಾವು ಗಂಡ ಹೆಂಡರು ನಿತ್ಯವೂ ನೇಮದಂತೆ ನೂಲುತ್ತೇವೆ. ನಮ್ಮ ನೂಲನ್ನು ಇಲ್ಲಿಯೇ ನೇಯುತ್ತೇವೆ. ನಾವು ಉಪಯೋಗಿಸುವ ಅರಿವೆಯು ಇದೇ. ಕಳೆದ ೧-೧½ ವರ್ಷದಿಂದ ಖಾದಿಯನ್ನು ಖರೇದಿ ಮಾಡುವ ಪ್ರಸಂಗ ಸಹ ನನಗೆ ಬರಲಿಲ್ಲ. ದಿನಾಲು ೩-೪ ತೊಲೆ ನೂಲು ಹುಟ್ಟುತ್ತದೆ. ತಿಂಗಳಿಗೆ ೧೦-೨೦ ವಾರು ಅರಿವೆ ತಯಾರಾಗುತ್ತದೆ. ನಮಗೆ ಇಷ್ಟು ಅರಿವೆ ಸಾಕು. ಇಷ್ಟೇ ಅಲ್ಲ; ಈಗೀಗ ೧೫-೨೦ ವಾರು ಅರಿವೆಯು ನಮ್ಮ ಸಂಗ್ರಹದಲ್ಲಿದೆ. ಗಾದಿ, ತಲೆಗಿಂಬು ಮೊದಲಾದವುಗಳನ್ನೆಲ್ಲ ಖಾದಿಯಿಂದಲೇ ಮಾಡಲು ನಾವು ಹವಣಿಸಿದ್ದೇವೆ.

ಬೇರೆ ಕೆಲಸವನ್ನು ಬಿಟ್ಟು ನೂಲುತ್ತೀರೇನು? ಎಂದು ಅನೇಕರು ಕೇಳಬಹುದು. ಇದನ್ನು ಕೇಳಿ, ನನಗೆ ನಗೆ ಬರುತ್ತಿದೆ. ನೂಲುಗೆಲಸಕ್ಕಾಗಿ ಬೇರೆ ಕೆಲಸವನ್ನು ತ್ಯಜಿಸಬೇಕಾಗಿಲ್ಲ. ಆದರೆ, ಸೋಮಾರಿತನವನ್ನು ಮಾತ್ರ ತೊರೆಯಬೇಕು. ನೂಲುಗೆಲಸದಿಂದ ನಾವೀಗ ಉದ್ಯೋಗಪ್ರಿಯರಾಗಿದ್ದೇವೆ. ಸತ್ಪ್ರವೃತ್ತಿಯೂ ಹೆಚ್ಚೆಚ್ಚು ತಲೆದೋರಹತ್ತಿದೆ. ಖಾದಿಯ ಸ್ವೀಕಾರದಿಂದ, ವಿದೇಶಿ ಅರಿವೆಯ ದಾಸ್ಯತ್ವದಿಂದ ಮುಕ್ತರಾದೆವು. ನಾವು ಸ್ವಾವಲಂಬಿಗಳಾಗಲು ಸಹ ಖಾದಿಯೇ ಕಾರಣವು. ಸ್ವಾರ್ಥತ್ಯಾಗವೇನು ಮಾಡಬೇಕಾಯಿತು? ಎಂದು ಕೇಳುವಿರಾ! ತ್ಯಾಗದ ಸುದ್ದಿ ತೆಗೆಯಬೇಡಿರಿ; ನನಗೆ ಪರಮ ಕಲ್ಯಾಣವಾಗಿದೆ.

ನಮ್ಮ ಕುಟುಂಬಕ್ಕೆ ಒಟ್ಟು ೧೨೦ ವಾರು ಅರಿವೆ ತಗಲುತ್ತದೆ. ನನಗೆ ೩೦ ವಾರು; ನನ್ನ ಹೆಂಡತಿಗೆ ೫೦ ವಾರು; ಇಬ್ಬ ಹುಡುಗರಿಗೆ ೩೦ ವಾರು; ಚಿಕ್ಕ ಹುಡುಗನಿಗೆ ೧೦ ವಾರು. ಇಷ್ಟೆಲ್ಲ ಅರಿವೆಯು ನಾವು ತೆಗೆಯುವ ನೂಲಿನಿಂದಲೇ ತಯಾರಾಗುತ್ತಿದೆ. ಖಾದಿಯ ಹುಟ್ಟುವಳಿಯಿಂದ ನಮಗುಂಟಾದ ಪ್ರತ್ಯಕ್ಷ ಲಾಭವಿದು. ಇತರ ಸಾಮಾನ್ಯ ಖರ್ಚಿನ ಮೇಲೆಯೂ ಈ ನಮ್ಮ ಪ್ರವೃತ್ತಿಯಿಂದ ವಿಲಕ್ಷಣ ಪರಿಣಾಮವಾಗಿದೆ. ಆಹಾರ-ವಿಹಾರ ಮೊದಲಾದವುಗಳ ಮೇಲಿನ ಖರ್ಚಿನ ಪ್ರಮಾಣವೂ ಬಹಳೇ ಕುಗ್ಗಿದೆ. ಸಾಲಿಯಾನ ೩೦೦ ರೂಪಾಯಿಗಳು

ಉಳಿಯಬಹುದೆಂದು ತೋರುತ್ತದೆ. ನಮ್ಮ ಅರಿವೆ-ಅಂಚಡಿಗಳನ್ನು ನಾವು ಈಗ ಮನೆಯಲ್ಲಿಯೇ ತೊಳೆಯಹತ್ತಿದ್ದೇವೆ. ಅಗಸನಿಗೆ ವರ್ಷಂಪ್ರತಿ ಕೊಡುವ ೩೦-೩೫ ರೂಪಾಯಿಗಳು ಉಳಿತಾಯವಾದವು. ಮತ್ತೊಂದು ಲಾಭವಿದೆ. ಮನೆಯಲ್ಲಿ ನಾವೇ ಒಗೆಯುವದರಿಂದ, ನಮ್ಮ ಉಡಿಗೆ-ತೊಡಿಗೆಗಳು ಸ್ವಚ್ಛವಾಗುವದಲ್ಲದೆ, ಅವುಗಳ ಬಾಳಿಕೆಯೂ ಮಿಗಿಲಾಗಿದೆ.

ಈ ಪ್ರಕಾರದಿಂದ ನನಗುಂಟಾದ ಉಳಿತಾಯದಿಂದ ಈಗ ನಾನು ಸಣ್ಣ ಪುಟ್ಟ ಕೌಟುಂಬಿಕ ಸುಖ-ಸೋಯಿಗಳ ಮೇಲೆ ಖರ್ಚ ಮಾಡಬಲ್ಲೆನು. ಕೆಲಮಟ್ಟಿಗೆ ಸಾಲವನ್ನೂ ತೀರಿಸಿದ್ದೇನೆ. ರಾಷ್ಟ್ರೀಯ ಸಭೆಯ ಅಜ್ಞಾನುಸಾರ ಟಿಳಕ ಸ್ವರಾಜ್ಯ ಫಂಡಿಗೆ ಶಕ್ತಿಮೀರಿ ಸಹಾಯ ಮಾಡಲಿಕ್ಕೆ ಸಹ, ಈ ಖಾದಿಸ್ವೀಕಾರದಿಂದಲೇ ನಾನು ಸಮರ್ಥನಾಗಿರುವೆನು. ಮೊದಲು ನಾನು ಡೌಲಿಗಾಗಿ ಅವಿಚಾರದಿಂದ, ನನ್ನ ಆಯದ ಮಾನ ನೋಡದೆ, ವ್ಯಯ ಮಾಡುತ್ತಿದ್ದೆ. ಖಾದಿಯ ಕೃಪಾಪ್ರಸಾದದಿಂದ ಈಗ ನಾನು ಋಣಮುಕ್ತನಾಗಹತ್ತಿದ್ದೇನೆ. ಆರ್ಥಿಕ ದೃಷ್ಟಿಯಿಂದ ಉಂಟಾದ ಕಲ್ಯಾಣದ ಮಾನಕ್ಕಿಂತ ನನಗೆ ಲಭಿಸಿದ ನೈತಿಕ ಉನ್ನತಿಯು ಉಚ್ಚ ತರಗತಿಯದು. ೨ ವರುಷಗಳ ಮೊದಲು, ನಾನು ವ್ಯಾಪಾರಿ ವರ್ಗಕ್ಕೆ ಸೇರಿದವನಿದ್ದು, ಅಲ್ಲಿ ನಡೆಯುವ ಸವ್ಯಾಪಸವ್ಯಗಳಲ್ಲಿ ಮಗ್ನನಾಗಿದ್ದೆ. ನಾನು ನೌಕರಖುಲ್ಲಿದ್ದೆ; ನೌಕರಿಯು ಹೋದರೆ, ಮುಂದೇನು? ಎಂದು ನನಗೆ ಆಗಾಗ್ಗೆ ಅನಿಸುತ್ತಿತ್ತು. ಆದರಿಂದ ವರಿಷ್ಠರ ಮರ್ಜಿ ಕಾಯುವದರಲ್ಲಿ ತೊಡಗಿದ್ದೆ. ಅವರ ಮರ್ಜಿ ಕಾಯಲು ಅವಶ್ಯವುಳ್ಳ ಕಪಟ ನಾಟಕಗಳನ್ನೂ ನನಗೆ ನಡಿಸಬೇಕಾಗುತ್ತಿತ್ತು. ಇಂಥ ಭೀತಿಯು ಈಗ ನನಗೇನಿಲ್ಲ; ನಾನೀಗ ಧೈರ್ಯವಂತನಾಗಿದ್ದೇನೆ. ಮಹಾತ್ಮರ ಕೈರಾಟಿಯ ಕೃಪೆಯಿಂದ ನನ್ನ ಆತ್ಮಶುದ್ಧಿಯು ಕ್ರಮವಾಗಿ ವೃದ್ಧಿ ಹೊಂದುತ್ತಲಿದೆ."

ಗುಜರಾಥಿ ಗೃಹಸ್ಥರಿಗುಂಟಾದ ಲಾಭದ ಕಥೆಯು ಪ್ರತಿಯೊಬ್ಬ ಭಾರತೀಯನಿಗೆ ಮನನೀಯವಿದೆ; ಬೋಧಪ್ರದವಿದೆ. ಮಹಾತ್ಮರು ಉಪದೇಶಿಸಿದ ಸಾದಾ ಕೈರಾಟಿಯು ದೇಶೋನ್ನತಿಯನ್ನು ಹೇಗೆ ಸಾಧಿಸಬಲ್ಲದು? ಪರದೇಶಿ ಅರಿವೆಯನ್ನು ಹೇಗೆ ಬಹಿಷ್ಕರಿಸಬಲ್ಲದು? ಪ್ರಜೆಗಳ ಜೀವನವನ್ನು ಹೇಗೆ ಸುಸೂತ್ರವಾಗಿ ನಡಿಸಬಲ್ಲದು? ಎಂಬದನ್ನು ವಕ್ತೃತ್ವಪೂರ್ಣವಾಗಿ ಬ್ರಹ್ಮದೇಶಕ್ಕೆ ದೇಶಾಂತರ ಮಾಡಿದ ಗುಜರಾಥಿ ಬಾಂಧವರು ವಿವರಿಸಿರುವರು. ವಿಖ್ಯಾತ ರಸಾಯನಶಾಸ್ತ್ರಜ್ಞರಾದ ಡಾ। ಪ್ರಫುಲ್ಲಚಂದ್ರ ರೋಯ್‌ರವರು ರಾಣೀನಗರ ಪೇಟದಲಾದ ಖಾದಿ ಕೇಂದ್ರಗಳಲ್ಲಿ ನಡೆಯುತ್ತಿರುವ ಖಾದಿಯ ಪ್ರದರ್ಶನವನ್ನೂ, ಅದರಿಂದುಂಟಾದ ಲೋಕಕಲ್ಯಾಣವನ್ನೂ ಕಣ್ಣಾರೆ ಕಂಡು, ಅಚ್ಚರಿಗೊಂಡು, ಸಂತೋಷಗೊಂಡು, "ಕೈರಾಟಿಯು ಮುದಿ ಪ್ರಾಯದಲ್ಲಿ ನನ್ನ ಆಧಾರವು" ಎಂದು ಉದ್ಗರಿಸಿದರು. ಮಹಾತ್ಮರ ಖಾದಿಯ ಸಂದೇಶದ ಮಹಿಮೆಯನ್ನು ಅಖಿಲರೂ ಪುನರಾಲೋಚಿಸಿ, ಖಾದಿಯನ್ನು ಸ್ವೀಕರಿಸಲಿಕ್ಕೂ, ಪ್ರಚಾರವನ್ನು ಮಾಡಲಿಕ್ಕೂ, ಪ್ರಸಾರ ಮಾಡಲಿಕ್ಕೂ ದೇಶಾಭಿಮಾನಿಗಳೆಲ್ಲರೂ ಮನಸದಣಿ ದುಡಿಯಬೇಕಾಗಿ ಮಹಾತ್ಮರ ವರ್ಧಂತ್ಯುತ್ಸವದ ಶುಭಸಮಯದಲ್ಲಿ ಸರ್ವರಿಗೂ ಪ್ರಾರ್ಥಿಸುವೆವು.

ಸ್ಫುಟ ಸೂಚನೆಗಳು.

೧. ಕಳೆದ ಸೋಮವಾರ-ಮಂಗಳವಾರ ತಾ. ೨೪-೨೫ರಲ್ಲಿ ಮುಂಬಯಿಯಲ್ಲಿ ಒಂದು ದೊಡ್ಡ ಗಲಭೆ. ಪ್ರಾಂತಾಧಿಪರಾದ ನಾಮದಾರ ಸರ್ ಜೋದಕ ಸೈಕ್ಸರವರು ತಮ್ಮ ಕಾರಕೀರ್ದಿಯನ್ನು ಮುಗಿಸಿ, ಇದೇ ಬರುವ ಡಿಸಂಬರ ತಿಂಗಳಿನಲ್ಲಿ ಸ್ವಗೃಹಕ್ಕೆ ತೆರಳುವರು. ಆಗ ಅವರಿಗೆ ಮುಂಬಯಿ ಮ್ಯುನಿಸಿಪಾಲಿಟಿಯ ವಿಸ್ತೃಪಾನ ಮಾನಪತ್ರವೊಂದನ್ನು ಅರ್ಪಿಸಬೇಕೆಂದು ಮ್ಯುನಿಸಿಪಾಲಿಟಿಯೊಳಗಿನ ರಾ। ವಸಂತರಾವ ದಾಭೋಳಕರ ಮೊದಲಾದ ಸ್ತುತಿಪಾಠಕ ಸಭಾಸದರ ಹೊಂಚು. ಶ್ರೀ। ವಿಠ್ಠಲಭಾಯಿ ಪಟೇಲರವರ ನೇತೃತ್ವದಲ್ಲಿ ಪ್ರಾಣಪ್ರತಿಷ್ಠೆ ಹೊಂದಿದ ಮ್ಯುನಿಸಿಪಲ್ ನೆಶನೆಲಿಸ್ಟ ಪಾರ್ಟಿಯ ಸಭಾಸದರು ಈ ಮಾನಪತ್ರವನ್ನು ಪಡೆಯುವ ಯೋಗ್ಯತೆಯು ನಾಮದಾರ ಗವ್ಹರ್ನರರಿಗೆ ಇರುವದಿಲ್ಲೆಂದು ಈ ಠರಾವನ್ನು ವಿರೋಧಿಸುವ ನಿಶ್ಚಯ ಮಾಡಿದ್ದರು. ಮುಂಬಾಪುರಸ್ಥರೂ ತಮ್ಮ ನಿಷೇಧವನ್ನು ವ್ಯಕ್ತಪಡಿಸುವರೆ ಸೋಮವಾರಕ್ಕೆ ಒಂದು ದೊಡ್ಡ ಮೆರವಣಿಗೆಯನ್ನು ತೆಗೆದು, ಮ್ಯುನಿಸಿಪಲ್ ಆಫೀಸಿನಲ್ಲಿ ಹಾಜರಾಗಿದ್ದರು. ಗದ್ದಲವಾಗುತ್ತದೆಂಬ ಸಬಬಿನಮೇಲೆ ಅವರನ್ನು ಹೊರದೂಡಲು ಅಧ್ಯಕ್ಷ ಮೊದಲಾದವರು ಬಹು ಪರಿಯಿಂದ ಯತ್ನಿಸಿದರು. ಆದರೂ, ಜನರು ಕಚೇರಿಯಲ್ಲಿ ಹಾಜರಾಗುವ ತಮ್ಮ ಹಕ್ಕನ್ನು ಕಳಕೊಳ್ಳಲೊಪ್ಪಲಿಲ್ಲ. ಜನಸ್ತೋಮವು ಸ್ತಬ್ಧ ಕುಳಿತುಕೊಂಡರೂ, ಅಧ್ಯಕ್ಷರು ಸಭೆಯ ಕೆಲಸವನ್ನು ಪ್ರಾರಂಭಿಸದ್ದರಿಂದ, ಶ್ರೀ। ವಿಠ್ಠಲಭಾಯಿಯವರು ಸಭೆಯನ್ನು ತಹಕೂಬ ಮಾಡುವ ಠರಾವನ್ನು ತಂದರು. ಅಧ್ಯಕ್ಷರು ಠರಾವು ನಾಮಂಜೂರಾಯಿತೆಂದು ಎತ್ತಿದ ಕೈಗಳ ಲೆಕ್ಕದ ಕೆಯಿಂದ ನಿರ್ಣಯಿಸಿದರು. ಸ್ತುತಿಪಾಠಕ ಸಭಾಸದರು ಮುಂಬಾಪುರಸ್ಥ ಪ್ರೇಕ್ಷಕರನ್ನು ಹೊರದೂಡುವ ಸಮಯವು ಇದೇ ಎಂದು, ಮತಗಳನ್ನು ಎಣಿಸಬೇಕೆಂದು ಹಟ ಹಿಡಿದರು. ಮತಗಳ ಎಣಿಕೆಗಾಗಿ ಕಚೇರಿಯೊಳಗಿಂದ ಜನರೆಲ್ಲರೂ ಹೊರಗೆ ಬಂದರು. ಮತಗಳ ಎಣಿಕೆಯಾಗಲು, ಶ್ರೀ। ಪಟೇಲರ ಠರಾವಿಗೆ ೩೫ ಅನುಕೂಲ, ೩೬ ಪ್ರತಿಕೂಲ, ಹೀಗೆ ಮತಗಳು ಬಿದ್ದು, ತಹಕೂಬಿಯ ಠರಾವು ನಾಮಂಜೂರಾಗಿ, ಸಭೆಯು ವಿಸರ್ಜನಹೊಂದಬೇಕಾಯಿತು. ಪಾಪಕ್ಕೆ ಪ್ರಾಯಶ್ಚಿತ್ತ ದೊರಕಿತು. ಮಾರನೇ ದಿನ ರಾತ್ರೆ ೮ ಘಂಟೆಗೆ ಪುನಃ ಇದೇ ವಿಷಯವು ಚರ್ಚೆಗೆ ಬರುವದಿದ್ದದರಿಂದ, ಸಭೆಯಲ್ಲಿ ಮುಂಬಾಪುರಸ್ಥ ನಾಗರಿಕರು ತುಂಬಿತುಳುಕುತ್ತಿದ್ದರು. ಮಾನಪತ್ರದ ವಿಷಯವನ್ನು ಚರ್ಚಿಸುವದು ಸಮಯೋಚಿತವಾಗಲಿಕ್ಕಿಲ್ಲೆಂತಲೋ ಏನೋ, ಶ್ರೀ। ಪಟೇಲ-ಅಧ್ಯಕ್ಷ ಮೊದಲಾದವರಲ್ಲಿ ಮಾತುಕಥೆ ನಡೆದು, ಮಾನಪತ್ರದ ಚರ್ಚೆಯನ್ನು ಮುಂದೆ ಹಾಕಬೇಕೆಂದು ಠರಾವಾಗಿ, ಅದರಂತೆ ಜಾಹೀರಾಗಲು, ಜನರೆಲ್ಲರೂ ತಮ್ಮ ತಮ್ಮ ಮನೆಗೆ ತೆರಳಿದರು. ಈಗ ಸ್ತುತಿಪಾಠಕರು ತಮ್ಮ ಕಡೆಯಿಂದ ಮಾನಪತ್ರ ಕೊಡುವವರಿದ್ದಾರೆಂದು ತಿಳಿಯುತ್ತದೆ. ಹೀಗಿದ್ದರೆ, ಮುಂಬಯಿ ಮ್ಯುನಿಸಿಪಾಲಿಟಿಯಲ್ಲಿ ಪುನಃ ಈ ಬಗ್ಗೆ ಚರ್ಚೆಯಾಗದಿರುವದು ಸಕಲರಿಗೂ ಇಷ್ಟವಲ್ಲವೇ?

---

೨. 'ವಿವಿಧ ಸಂಗ್ರಹ' ಸದರಿನಲ್ಲಿ ಕೊಟ್ಟ ಗೌರಕಾಯದ ಸಾವುಕಾರನ ಅಧಮತನದ ಕಥೆಯನ್ನು ಪ್ರತಿಯೊಬ್ಬ ದೇಶಬಾಂಧವನು ಮನನೀಯ ಮಾಡತಕ್ಕದ್ದು. ಕಿಶೋರನಂಥ ನಿರಪರಾಧಿ ದೇಶಬಾಂಧವನಿಗೆ ಸಣ್ಣ ಪುಟ್ಟ ನೆವ ಮಾಡಿ, ಹೇಗೆ ಕೊಲೆ ಮಾಡುತ್ತಾರೆ ಎಂಬುದು ವಾಚಕರಿಗೆ ನೆನಪಿರಿಕೆಯಾಗುವದು. ಬಾಲರಿಗೆ ಸಹಜವಾದ ಉತ್ಸಾಹದಿಂದ ಆಟವೆಂದು ಸಾವುಕಾರರ ಕುದುರೆಯನ್ನು ಸ್ವಾರಿ ಮಾಡಿದ ಬಗ್ಗೆ ರಾಕ್ಷಸನಂತೆ ಅಬ್ರಾಹಮರವರು ಕ್ರೂರತನದಿಂದ ಕಿಶೋರನ ಕೊಲೆ ಮಾಡಿದರು. 'ಯಾರ ಅಪ್ಪಣೆಯನ್ನು ಪಡೆದು, ನೀನು ಕುದುರೆಯ ಮೇಲೆ ಸವಾರಿ ಮಾಡಿದಿ?' ಎಂದು ಸಾವುಕಾರರು ಕೇಳಿದ್ದಕ್ಕೆ ಬಡ, ಬಾಲ ಕಿಶೋರನು ಏನು ಉತ್ತರ ಕೊಡಬಲ್ಲನು? ಪುನಃ ಪುನಃ ಅದೇ ಪ್ರಶ್ನೆಯನ್ನು ಕೇಳಿ, ಕಿಶೋರನು 'ನಾನೇನು ಕಳ್ಳನಲ್ಲ' ದು ಸಾವುಕಾರರಿಗೆ ಉತ್ತರವನ್ನಿತ್ತಿದ್ದು ಸಹಜವೆಂದು ಯಾರು ಹೇಳರು? ಈ ಉತ್ತರದ ಬಗ್ಗೆ ಪವರಿಗೆ ಕಿಶೋರನನ್ನು ಹಿಡಿಯಹೇಳುವದೂ, ಕೈಸೋಲುವವರೆಗೆ ಚಾಬೂಕಿನಿಂದ ಹೊಡೆಯುವದೂ, ಬಿಳಿ, ಇಬ್ಬ ಆಳುಗಳಿಂದ ಹೊಡಿಸುವದೂ, ಕಿಶೋರನು ಮೂರ್ಛೆಯ ವೇಷ ಮಾಡಿದವನೆಂದು ಹೇಳಿ ನೀರೆರೆದು ಹೊಸ ಶಿಕ್ಷೆ ಕೊಡುವದೂ, ರಾತ್ರಿಗೆ ಉಪವಾಸ ಹಾಕಿ, ಕೈಕಾಲು ಕಟ್ಟಿ ಹಾಕುವದೂ, ವಿಖ್ಯಾತ ಪದವೀಧರ ವೈದ್ಯರಾದರು ಹೊಡತವು ಮರಣಹೊಂದುವಷ್ಟು ತೀಕ್ಷ್ಣವಾಗಿದ್ದಿಲ್ಲೆಂದು ನುಡಿಯುವದೂ, ಕಿಶೋರನಿಗೆ ಸಾಯುವ ಇಚ್ಛೆಯಿತ್ತೆಂದು ಮತ ಕೊಡುವದೂ, ನ್ಯಾಯಮೂರ್ತಿಗಳು ಘಾಯದ ಸದರಿನಲ್ಲಿ ಕ್ರೂರ ಕೊಲೆಯನ್ನು ಸೇರಿಸಿ, ಸಾವುಕಾರರಿಗೆ ೨ ವರ್ಷಗಳ ಕಠಿಣ ಶಿಕ್ಷೆ ಕೊಡುವದೂ, ಇವೆಲ್ಲ ಆಧುನಿಕ ಸುಧಾರಣೆಯ ಶಿಖರವನ್ನೇರಿದ ಗೌರಕಾಯದವರಿಗೆ ಒಪ್ಪಿದ್ದೇ. ಪಾಶ್ಚಾತ್ಯ ಸುಧಾರಣೆಯ, ಅವರ ಸುಧಾರಿಸಿದ ಕಾರಭಾರದ, ನಿಃಪಕ್ಷಪಾತ ನ್ಯಾಯದೇವಿಯ ಇದೊಂದು ಮಾದರಿಯು. ಕೆನಿಯಾ ವಸಾಹತಿನಲ್ಲಿ ಭಾರತೀಯ ದೇಶಬಾಂಧವರನ್ನು ಹೇಗೆ ನಡಿಸಿಕೊಳ್ಳುತ್ತಾರೆಂಬದನ್ನೂ ಕಿಶೋರನು ಸ್ವೋದಾಹರಣದಿಂದ ಸಿದ್ಧಪಡಿಸಿರುವನು.

---

೩. ಗೌರೀಹುಣ್ಣಿಮೆಯ ಶುಭಸಮಯದಲ್ಲಿ ಧಾರವಾಡದಲ್ಲಿ ಜನ್ಮ ಹೊಂದಿದ 'ಜಯ ಕರ್ನಾಟಕ'ದ ಚಾಲಕರು ತಮ್ಮ ವಾಚಕರಿಗೆ ಮಾಡಿಕೊಂಡ ಬಿನ್ನಹವನ್ನು ನಾವು ೧೩ನೇ ಪುಟದ ಮೇಲೆ ಕೊಟ್ಟಿರುವೆವು. ಅದನ್ನು ಓದಿದರೆ, ಕರ್ನಾಟಕ ವಾಙ್ಮಯದ ಹೀನಾವಸ್ಥೆಗೆ ಕರ್ನಾಟಕಸ್ಥರೇ ಕಾರಣರೆಂದು ತಿಳಿಯುವದಾಗಿದೆ. ಶ್ರೀ। ಆಲೂರ ವೆಂಕಟರಾಯರು ಕರ್ನಾಟಕ ಸರಸ್ವತೀ ದೇವಿಯ ಸೇವಾತುರರಾಗಿ,

ಮೇಲ್ತರದ ಮಾಸಪತ್ರಿಕೆಯನ್ನು ಹೊರಡಿಸಿದರು. ಈ ವರೆಗೆ ಅವರು ಪ್ರಕಟಿಸಿದ ಸಂಚಿಕೆಗಳು ಮೇಲ್ತರದ್ದಿವೆಯೆಂದು ಯಾರೂ ಒಪ್ಪುವರು. ವಿವಿಧ ವಿಷಯಗಳು, ಅವುಗಳ ಮೇಲೆ ವಿದ್ವತ್ಪ್ರಚುರ ಲೇಖಗಳನ್ನು ಪ್ರಕಟಿಸಿ, ಕನ್ನಡಿಗ ಬಾಂಧವರಿಗೆ ಪ್ರಚಲಿತ ವಿಷಯಗಳನ್ನು ತಿಳಿಸಿಹೇಳುವ ಮಾಸಪತ್ರಿಕೆಯು ಇಡೀ ಕರ್ನಾಟಕದಲ್ಲಿ ಸದ್ಯಕ್ಕೆ 'ಜಯ ಕರ್ನಾಟಕ' ವೆಂದೇ ಹೇಳಿದರೆ, ಅತಿಶಯೋಕ್ತಿಯಾಗದು. ಈ ಬಗ್ಗೆ ಕನ್ನಡಿಗರೆಲ್ಲರೂ, ಅದಕ್ಕೆ ಚಂದಾದಾರರಾಗಿ, ಅದರಿಂದ ಬೋಧ ಪಡೆಯುವದೂ, ಅದಕ್ಕೆ ಸಹಾಯವನ್ನೀಯುವದೂ ಕರ್ತವ್ಯವೆಂದು ನಮ್ಮ ಮತವು. ತಕ್ಕ ಸಮಯದಲ್ಲಿ, ಅಪೇಕ್ಷೆಯಂತೆ ಸಹಾಯ ಸಿಗದಿದ್ದರೆ, ಕನ್ನಡಿಗರು ' ಜಯ ಕರ್ನಾಟಕ ' ದ ನಿರಪೇಕ್ಷ ಸೇವೆಗೆ ಎರವಾಗುವರು. ಯಾಕೆಂದರೆ, ವರ್ಷಕ್ಕೆ ೨–೩॥ ಸಾವಿರ ರೂಪಾಯಿಗಳ ಲುಕ್ಸಾನು ಸಹಿಸಿ, ಯಾವದೇ ಸಾಹಸವನ್ನು ಈ ಕಠಿಣ ದಿನಗಳಲ್ಲಿ ನಡಿಸುವದು ದುರಾಪಾಸ್ತವು. ಕನ್ನಡ ವಾಙ್ಮಯದ ಸೇವೆ ಮಾಡುವವರು ಅಪರೂಪವಿದ್ದಾಗ, ಶ್ರೀ। ಆಲೂರ ವೆಂಕಟರಾಯರಂಥವರು ನಡಿಸಿದ ' ಜಯ ಕರ್ನಾಟಕ ' ಕ್ಕೆ ನಿರುತ್ಸಾಹಪಡಿಸುವದು ಮಹದಪರಾಧವು. ಕನ್ನಡ ವೃತ್ತಪತ್ರಗಳ ಗತಿಯಾದರೂ, ಕನ್ನಡ ಭಾಷಾಭಿಜ್ಞ ಕರ್ನಾಟಕ ಬಾಂಧವರ ಅಸಾಹ್ಯದಿಂದ, ಇಷ್ಟಕ್ಕೇ ಬಂದೊದಗಿದೆ. ಇದರಿಂದಲೇ ಕರ್ನಾಟಕದಲ್ಲಿ ಉಚ್ಚ ಉಚ್ಚ ವಾಙ್ಮಯವು ಬಾಳಿಕೆಗೆ ಬರುವದಿಲ್ಲ. ಇದನ್ನರಿತು, ಕನ್ನಡ ವಾಙ್ಮಯಪ್ರಿಯರೆಲ್ಲರೂ ವಾಙ್ಮಯ ಸೇವೆ ಮಾಡುವ ಸರಸ್ವತೀ ಭಕ್ತರಿಗೆಲ್ಲ ಯಥಾಶಕ್ತಿ, ಏಕೆ, ಶಕ್ತಿಮೀರಿ ಸಹಾಯಮಾಡಿ, ಕರ್ನಾಟಕಸ್ಥರಿಗೆ ಸದ್ಗುಣಗಳ ಅರಿವಿದೆಂದು ಸಿದ್ಧಪಡಿಸುವರಾಗಿ ನಮ್ಮ ಅಪೇಕ್ಷೆಯಿದೆ.

---

೪. 'ಧುರೀಣ'ಕಾರರಿಗೊದಗಿದ ಪಶ್ಚಾತ್ತಾಪವನ್ನು ಇನ್ನೊಂದೆಡೆಯಲ್ಲಿ ಅವತರಿಸಿರುವೆವು. ಮಾಮಲೇದಾರರ ಆಮಂತ್ರಣ ಪತ್ರಿಕೆಯ ಹಿಂದೆ ರಿಲೀಫ ಕಮೀಟಿಯ ಮೀಟಿಂಗಿನಲ್ಲಿ ನಡೆದ ಹಕೀಕತನ್ನು ಬಚ್ಚಿಟ್ಟು, ಅವರು ರಾ। ಕಲ್ಯಾಣಪುರಕರರನ್ನು ಸಮರ್ಥಿಸಹೋಗಿರುವರು. 'ಮುಳುಗುವ ಮನುಷ್ಯನು ಕಸಕಡ್ಡಿಯನ್ನು ಹಿಡಿಯುವಂತೆ,' ಧುರೀಣಕಾರರ ಹೀನಾವಸ್ಥೆಯು ನ್ನನೊ ಡಿ, ಯಾರಿಗೂ ವ್ಯಸನವಾಗದಿರದು. ನಾವು ಕೊಟ್ಟ ವಿಶ್ವಸನೀಯ ಹಕೀಕತಿನಲ್ಲಿ ನಮೂದಿಸಿದ ವೃತ್ತಾಂತದ ಸತ್ಯಾಸತ್ಯತೆಯಬಗ್ಗೆ ಧುರೀಣರು ಆಕ್ಷೇಪಿಸುವದಿಲ್ಲ. ೧೮ನೇ ತಾರೀಖಿನ ಧುರೀಣದಲ್ಲಿ ' ಮೀಟಿಂಗ ' ಎಂಬ ಶಬ್ದವನ್ನು ಮಾತ್ರ ಉಪಯೋಗಿಸದೆ, ' ರಿಲೀಫ ಫಂಡಿನ ವ್ಯವಸ್ಥೆ ಮಾಡುವ ಕುರಿತು ಮೀಟಿಂಗು ಕೂಡಿಸಿತ್ತು ' ಎಂಬ ಸ್ಪಷ್ಟ ನಿರ್ದೇಶವಿದೆ. ' ಮೀಟಿಂಗು ಅಲ್ಲವೆಂದು ೨೫ನೇ ತಾರೀಖಿಗೆ ನಾವೇ ನಾಡಿಸಿದ ಬಳಿಕ, ವೃತ್ತಕಾರರು ಏಕೆ ಒಪ್ಪುವದಿಲ್ಲ ? ' ಎಂದು ಧುರೀಣರ ಸವಾಲು. ' ಇದು ಪಕ್ಷಾಂಧತೆಯೋ, ದುರಾಗ್ರಹವೋ ? ' ಎಂಬುದು ಧುರೀಣರ ಪ್ರಶ್ನೆ. ಅದಕ್ಕೆ ಉತ್ತರವಿಷ್ಟೇ. ೨೫ನೇ ತಾರೀಖಿಗೆ ಧುರೀಣರಿಗೆ ರಾ। ಕಲ್ಯಾಣಪುರಕರರ ವಕಾಲತು ಬಂತು. ಹಿಂದೇನು ಬರೆದೆವು? ಮುಂದೇನು ಬರೆಯುತ್ತೇವೆ ? ಎಂದು ಅವರಿಗೆ ತಿಳಿಯಲಿಲ್ಲ. ಸತ್ಯವನ್ನು ಮರೆಮಾಡಿ, ಸ್ವಾರ್ಥ ಸಾಧಿಸುವವರ ಗತಿಯೂ ಇದೇ. ಮಾಮಲೇದಾರರು ೧೬ ಮಂದಿಗಳನ್ನು ಕರೆಯುವ ಬದಲು ೧೧ ಮಂದಿಗಳನ್ನು ಕರೆದರೆಂದು, ಅಂದು ನಡೆದ ರಿಲೀಫ ಕಮೀಟಿಯ ಮೀಟಿಂಗಿನ ಸ್ವರೂಪವು ಬದಲಾಗುವದಿಲ್ಲ. ನಿಮಂತ್ರಿತ ೧೧ ಸಭ್ಯಗೃಹಸ್ಥರೂ ರಿಲೀಫ ಕಮೀಟಿಯ ಮೆಂಬರರೇ ಎಂದು ಧುರೀಣರು ಹೇಳಿದ ಬಳಿಕ, ಉಳಿದವರನ್ನು ಕಮೀಟಿಗೆ ಕರೆಯದಿದ್ದದ್ದು ಮಾಮಲೇದಾರರ ತಪ್ಪೆಂದು ಯಾರು ಹೇಳರು ? ಮಾಮಲೇದಾರರ ತಪ್ಪಿನಿಂದ ಕಮೀಟಿಯು, ಇನ್ನೂ ಹುಟ್ಟುವ ಸಮಾರಂಭವಾಗುವದಿಲ್ಲ. ಧುರೀಣದವರು ' ಶ್ರೀ। ಪಿಕ್ಳೆಸ್ಸರದಾಯರನ್ನಾಗಲಿ, ಶ್ರೀ। ಮಾಸೂರಕರನ್ನಾಗಲಿ ಮೆಚ್ಚಿಸಿಕೊಳ್ಳುವ ಅವಶ್ಯಕತೆ ನಮಗಿಲ್ಲೆಂದು ಒಪ್ಪಿ ಸಿಹೇ ಧಿಸಿದರೂ, ಧುರೀಣದ ಜನ್ಮವನ್ನೂ, ನಡಾವಳಿಯನ್ನೂ, ಸಾಧಿಸಿದ ಕಾರ್ಯವನ್ನು ಅರಿತವರಿಗೆ ಧುರೀಣದ ನಿಶ್ಪೇಧವು [illegible] ಅಜ್ಞ ವಾಚಕರಿಗೆ ಪ್ರದರ್ಶಿಸುವ ಕಪಟ ನಾಟಕವೆಂದೂ ಬಿಡುವರು ಒಲ್ಲರು. ಅದೇನು ಇರಲಿ, ಧುರೀಣದ ನಿರ್ಣಯವನ್ನು ಜಾಹೀರ ಮಾಡಿ, ತನ್ನ ಪಕ್ಷದ ನಿರಾಧಾರತ್ವವನ್ನು ತಾನಾಗಿ ಪ್ರದರ್ಶಿಸಿದ್ದರಿಂದ, ಈ ವಿಗೆ ನಾವು ಇಷ್ಟಕ್ಕೇ ಮುಗಿಸುವೆವು.

---

೫. ಇನ್ನೊಂದೆಡೆಯಲ್ಲಿ ಶಹರದ ಬಾಲಕರು ಅಲ್ಲಿಯ ಧರ್ಮ ಛಂಡಿಗೆ ಮಾಡಿದ ವಿನಂತಿಯನ್ನು ಪ್ರಕಟಿಸಿರುವೆವು. ಶಾಲೆಗೆ ಹೋಗುವ ಮಾರ್ಗವನ್ನು ಧರ್ಮಛಂಡಿಸಿಂದ ಸಡಿಸಿರೆಂದು ಬಾಲಕರು ತಮ್ಮ ಹಿರಿಯರಗೂಡ ಪ್ರಾರ್ಥಿಸುತ್ತಾರೆ. ಮುಗ್ಧ ಬಾಲಕರ ವಿನಂತಿಯನ್ನು ಹಿರಿಯರು ಪ್ರೇಮಪೂರ್ವಕ ಪಾಲಿಸುವರೆಂದು ನಮ್ಮ ನಂಬಿಗೆ. ಈವರೆಗೆ, ಬಾಲಕರು ವೃತ್ತಪತ್ರದ ಆಶ್ರಯಕೊಳ್ಳುವವರೆಗೆ ಮಾರ್ಗವು ದುರಸ್ತಿ ಆಗದೆ ಹೇಗೆ ಉಳಿಯಿತು ? ಎಂಬುದೇ ನಮಗೆ ತಿಳಿಯದು. ಲೋಕಲ್‌ಬೋರ್ಡಿನ ಅಧ್ಯಕ್ಷರೂ, ಉಪಾಧ್ಯಕ್ಷರೂ, ಶಾಲೆಯ ಇನ್ಸಪೆಕ್ಟರರೂ ವರ್ಷಕ್ಕೆ ೨–೪ ಸಾರೆಯಾದರೂ, ಈ ಶಾಲೆಯನ್ನು ಸಂದರ್ಶಿಸುತ್ತಿರಬೇಕು. ಹೀಗಿದ್ದು, ಈ ಮಾರ್ಗದ ದುರವಸ್ಥೆಯು ಹೇಗೆ ಇವರ ಲಕ್ಷಕ್ಕೆ ಬರಲಿಲ್ಲ ಎಂಬುದೊಂದು ಪ್ರಶ್ನೆ. ಚಿಕ್ಕ ಬಾಲಕರಿಗೆ ಅನುಕೂಲವಾಗುವಂತೆ ಈ ಮಾರ್ಗವನ್ನು ಇನ್ನಾದರೂ ಕಟ್ಟಿಸಬೇಕಾಗಿ ನಾವು ನಮ್ಮ ತಾಲೂಕಾ ಲೋಕಲ್ ಬೋರ್ಡಿನ ೧೩ ಲಕರಿಗೆ ಸೂಚಿಸುವೆವು.

---

೬. ಬೆಳಗಾಂವಿಯ ರಾಷ್ಟ್ರೀಯ ಚಳವಳಿಯ ಉತ್ಸಾಹಿ ಪುರಸ್ಕರ್ತರಾದ ಶ್ರೀ। ಗೋವಿಂದರಾವ ಯಾಳಗಿಯವರು ಕಳೆದ ಗುರುವಾರ ತಾ. ೨೭ನೇ ಮುಂಜಾವಿಗೆ ಪರಲೋಕವಾಸಿಗಳಾದರೆಂದು ತಿಳಿಸಲು ನಮಗೆ ಅತ್ಯಂತ ವ್ಯಸನವಾಗುತ್ತದೆ. ಬೆಳಗಾಂವಿ ಜಿಲ್ಲೆಯಲ್ಲಿ ರಾಷ್ಟ್ರೀಯ ಸಭೆಯ ಕಾರ್ಯವನ್ನು ಅಂತಃಕರಣಪೂರ್ವಕ ನಡಿಸಿದ ಶ್ರೇಯಸ್ಸು, ವಿಶೇಷವಾಗಿ, ಶ್ರೀ। ಗೋವಿಂದರಾಯರದೇ. ಇವರು ಕರ್ನಾಟಕ ಪ್ರಾಂ.ಕಾಂ. ಕಮೀಟಿ ಹಾಗು ಅಖಿಲ ಭಾರತೀಯ ಕಾಂ. ಕಮೀಟಿಗಳ ಸಭಾಸದರಿದ್ದರು. ಶ್ರೀ। ಯಾಳಗಿಯವರು ಸಧನರಿದ್ದು, ರಾಷ್ಟ್ರೀಯ ಕಾರ್ಯದಲ್ಲಿ ಸ್ವಾರ್ಥತ್ಯಾಗಪೂರ್ವಕ ಕೆಲಸಮಾಡಿದ್ದನ್ನು ನೋಡಿ ಅಖಿಲ ಕರ್ನಾಟಕಸ್ಥರಿಗೆ ವಿಶೇಷ್ರಕಾರದ ಸಂತೋಷವಾಗುತ್ತಿತ್ತು. ಇಂಥ ನಿರಪೇಕ್ಷ ಸೇವಕರು ಕರ್ನಾಟಕದ ಕರ್ಮಭೂಮಿಯನ್ನು ತೊರೆದದ್ದು, ನಮ್ಮಲ್ಲಿ ರ ದುರ್ದೈವವು. ಬೆಳಗಾಂವಿ ಜಿಲ್ಲೆಯ ಮೇಲಂತು ಮಹಾ ಆಪತ್ತು ಬಂದೊದಗಿದೆ. ಆದರೂ, ' ಮರಣಂ ಪ್ರಕೃತಿಃ ಶರೀರಿಣಾಂ ' ಎಂದು ಸಮಾಧಾನ ಮಾಡಿಕೊಂಡು, ಅವರು ಪ್ರಾರಂಭಿಸಿದ ರಾಷ್ಟ್ರೀಯ ಕಾರ್ಯವನ್ನು ಧೈರ್ಯದಿಂದ, ಅಪ್ರತಿಹತವಾಗಿ ನಡಿಸಬೇಕೆಂದು ಬೆಳಗಾಂವಿಯ ರಾಷ್ಟ್ರಸೇವಕರಿಗೆ ಬಿನ್ನೈಸಿ, ಶ್ರೀ। ಗೋವಿಂದರಾಯರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನೀಯಲೆಂದು ಬಯಸಿ, ಈ ಮೃತ್ಯುಲೇಖವನ್ನು ಮುಗಿಸುವೆವು.

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ಕೆಲ ಮಳೆ ಬಿತ್ತು. ಪುನಃ ಬಿಸಿಲು ಕಾಯುತ್ತಿದೆ; ಶಕೆ ಇದೆ. ಈ ವಾರದಲ್ಲಿ ೧–೮೭ ಮಳೆ; ಈ ವರೆಗೆ ೧೭೪-೭೦ ಮಳೆ. ಅತ್ಯಂತವು ಅತಿಕೆ ಬರಹತ್ತಿದೆ.

ಕಳೆದ ಶನಿವಾರಕ್ಕೆ ಸತ್ಯಾರ್ಯೋತ್ತೇಜಕ ನಾಟಕ ಮಂಡಳಿಯವರು ' ಹಿರಾ ಹರವಲಾ ' ಎಂಬ ನಾಟಕದ ಪ್ರಯೋಗವನ್ನು ಪುನಃ ಮಾಡಿ, ಹುಟ್ಟಿದ ರೂಪಾಯಿ ೫೦ನ್ನು ಇಲ್ಲಿಯ ರಾಷ್ಟ್ರೀಯ ಶಾಲೆಗೆ ಕೊಟ್ಟರು. ಸಜ್ಜನಾಶ್ರಿತ ಕುಂಭಾಪುರ ಸಂಗೀತ ನಾಟಕ ಮಂಡಳಿಯವರು ' ಮೃಚ್ಛಕಟಿಕ ' ನಾಟಕವನ್ನು ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಮೊನ್ನೆ ಮಂಗಳವಾರಕ್ಕೆ ಆಡಿ ತೋರಿಸಿದರು. ಶ್ರೀ ಪೆರಡೂರ ಅನಂತ ಪದ್ಮನಾಭ ಪ್ರಾಸಾದಿಕ ದಶಾವತಾರ ಮಂಡಳಿಯೂ ತನ್ನ ಆಟಗಳನ್ನಾಡಿ ಜನಮನರಂಜನ ಮಾಡುತ್ತಿರುವದು.

ಮೊನ್ನೆ ಮಂಗಳವಾರ ಮಹಾತ್ಮರ ಜಯಂತ್ಯುತ್ಸವ. ಮುಂಜಾನೆ ೮॥ ಘಂಟೆಗೆ ಮಹಾತ್ಮರ ಭಾವಚಿತ್ರದ ಮೆರವಣಿಗೆಯು ತೆಗೆಯಲಾಯಿತು. ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಮಹಾತ್ಮರ ಗುಣಾನುವಾದ ನಡೆದ ಬಳಿಕ, ಅವರಿಗೆ ಆಯುರಾರೋಗ್ಯವನ್ನೀಯುವರೆ ಈಶಪ್ರಾರ್ಥನೆ ನಡೆದು, ಜಯಜಯಕಾರದೊಡನೆ ಸಭೆಯು ಸಾಂಗವಾಯಿತು.

ಕಳೆದ ತಾರೀಖು ೨೪–೯–೩೬ ನೇಗೆ ಇಲ್ಲಿಯ ಬೆಂಚ ಮೆಜಿಸ್ಟ್ರೇಟರಾಗಿದ್ದ ರಾ। ವೆಂಕಟೇಶ ಕುಲಕರ್ಣಿಯವರಲ್ಲಿ ಮಂಜೂಟಿ ಹಾಗು ಬಿಲಕಂಬಿ ಜಾತಿಯ ೩ ಕಳವಿನ ನಾಟುಗಳು ಸಿಕ್ಕಿದವು. ಈ ಬಗ್ಗೆ ರೇಂಜರರವರು ಪಂಚನಾಮೆ ಮಾಡಿರುವರು. ಮ್ಯುನಿಸಿಪಲ್ ಟೋಲ ನಾಕೆಯಿಂದ ಈ ನಾಟುಗಳು ಹ್ಯಾಗೆ ಪಾರಾಗಿ ಬಂದವು? ಎಂದು ಕುಂಭಾಪುರಸ್ಥರೊಬ್ಬರ ಪ್ರಶ್ನೆ. ಈಗ ನಾಟುಗಳು ಜಪ್ತಾಗಿವೆ.

ಸಾಭಾರ ಸ್ವೀಕಾರ.

ಜಯಕರ್ನಾಟಕ:— ಅನಂತನ ಹುಣ್ಣಿವೆಯ ಸಂಚಿಕೆ. ಸಂಪಾದಕ ಶ್ರೀ। ಆಲೂರ ವೆಂಕಟರಾಯರು, ಸಾಧನಕೇರಿ, ಧಾರವಾಡ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂ. ೫–೮–೦.

ಶ್ರೀಕೃಷ್ಣಸಂದೇಶ:— ಅನಂತನ ಹುಣ್ಣಿವೆಯ ಸಂಚಿಕೆ. ಶ್ರೀ। ಶ್ರೀನಿವಾಸಾಚಾರ್ಯ ಓ.ಬಿ. ಬಾಗಲಕೋಟ. ವಾರ್ಷಿಕ ಚಂದಾ ರೂ. ೨–೬–೦.

ಸಂಸಾರಸುಖ:— ಆಕ್ಟೋಬರ ಗ್ರಂಥಮಾಲೆಯ ೩ನೇ ವರ್ಷದ ೩ನೇ ಪುಷ್ಪ. ಪ್ರಕಾಶಕ ವಾಮನ ಅನಂತ ಹೊದ್ದೆ, ರಾಷ್ಟ್ರೀಯ ಶಿಕ್ಷಕ, ಶಿರ್ಸಿ. ವಾರ್ಷಿಕ ವರ್ಗಣಿ ಅಂಚೆ ವೆಚ್ಚ ಸೇರಿ ರೂ ೧ ೧೨–೦ ಪ್ರತಿ ಒಂದಕ್ಕೆ ೫ ಆಣೆ.

ಹೊನ್ನಾವರ— ಮಳೆ ವಿಶೇಷವಿಲ್ಲ. ಮತ್ತೆ ಗದ್ದೆ ಪೈರೆಲ್ಲಾ ಬೆಳೆಯುತ್ತ ಬಂದಿದೆ. ಅಕ್ಕಿ ಮತ್ತು ಭತ್ತದ ಧಾರಣೆ ಸ್ವಲ್ಪ ಕಡಿಮೆಯಾಗಿದೆ.

ಮುಂಬಯಿಯಿಂದ ತಾ. ೧ ಕ್ಕೆ ಹೊರಡುವ ಬೋಟು ಯು ಇಲ್ಲಿ ಬಂದರ ಮಾಡುವದು.

ಬಹಳ ದಿವಸಗಳಿಂದ ಗದ್ದೆ ಪೈರು ತಿಂದು ಬೆಳೆದ ದೊಡ್ಡ ಕಾಡುಹಂದಿಯನ್ನು ವಡಗೆರೆಯಲ್ಲಿ ಶ್ರೀ ಅನಂತರಾವ ಬಸ್ರೂರ ಇವರು ತಮ್ಮ ಬಂದೂಕಿನಿಂದ ಹೊಡೆದು ಕೊಂದರು.

ಕರ್ಕಿ ಯಕ್ಷಗಾನ ದಶಾವತಾರ ಮಂಡಳಿಯವರು ಈ ವರೆಗೆ ೧೦ ಆಟಗಳನ್ನು ಆಡಿದರು. ಮೊನ್ನೆ ಆಡಿದ ಪ್ರಲ್ಹಾದ ಚರಿತ್ರ ಆಟವು ಬಹು ಮನೋರಂಜಕವಾಯಿತು. ಇಲ್ಲಿಯ ಮುನಿಸಿಪಾಲಿಟಿಯವರ ಹೇಳಿಕೆಯಂತೆ ಶ್ರೀ ರಾಮತೀರ್ಥ ಕೆರೆಯ ದುರುಸ್ತಿಯ ಸಹಾಯಾರ್ಥವಾಗಿ ಬರುವ ಶನಿವಾರ ೧ ಆಟ ಆಡುತ್ತಲಿದ್ದಾರೆ. ಈ ಸಾರ್ವಜನಿಕ ಕೆರೆಯ ದುರುಸ್ತಿಯ ಸಹಾಯದ ಕೆಲಸಕ್ಕೆ ಎಲ್ಲರೂ ಮನಸ್ಸುಟ್ಟು ಸಹಾಯ ಮಾಡಬೇಕಾಗಿ ವಿನಂತಿಯಿದೆ.

ಸಿದ್ದಾಪುರ— ಈಜುವ ಕ್ಲಾಸ ಚಾಲು ಆಗಿದೆ. ಶ್ರೀ|| ಚಂದ್ರಭಟ್ಟ ಹಬನುರ್ಬನವರೇ ಸ್ವತಃ ದೇಖರೇಖ ತೆಗೆದುಕೊಂಡು ಹುಡುಗ, ಹುಡುಗಿಯರಿಗೆ ಕಲಿಸುತ್ತಾರೆ. ಇದ್ದರಿಂದ ಕಲಿಯಬಿಚ್ಛಿಸುವವರೆಲ್ಲರೂ ಬರಬಹುದು. ಇನ್ನು ಎರಡು ತಿಂಗಳು ಚಾಲು ಇರುವದು. ಮಳೆಯು ಸಣ್ಣ ರೀತಿಯಿಂದ ಬೀಳುತ್ತಾ ಇದೆ. ಗದ್ದೆಯ ಬೆಳೆಗೆ ಚಲೋದು ಎಂತ ಹೇಳುತ್ತಾರೆ.

ಈ ವರೆಗೆ ಭಗಿನೀ ಮಂಡಳದ ತರ್ಫೆನಿಂದ ಆದ ಕೀರ್ತನೆಗಳು. ವೇ|| ಮೂ|| ಪುತ್ತುಭಟ್ಟರು ಮಾಡಿದ್ದು— ೧ ಪತಿಸಾವಿತ್ರಿ, ೨ ರುಕ್ಮಾಂಗದ, ೩ ಶಿಷ್ಯಶಿಷ್ಟಾಯ, ೪ ಮಂಗಳಗೌರಿ, ೫ ಗಣೇಶಜನ್ಮ, ೬ ವಟುವಾಮನ. ಸ್ತುತ್ಯ.

ಈ ವಾರದಲ್ಲಿ ಮುಷ್ಟಿಫಂಡಿಗೆ ೧೩ ಗಿದ್ನ ೫ ಸಿದ್ದೆ ಅಕ್ಕಿ ಬಂದಿದೆ.

ಎಮ್ಮೆ, ದನಕರುಗಳಿಗೆ ರೋಗವಾದದ್ದರಿಂದ, ಗಾಂಧಿ ಕಾಣಿಕೆ ರೂ. ೨ ಹೇಳಿಕೊಂಡದ್ದರಿಂದ. ಕೇಷಿ ಹಾಯಿವಿ ಹಾಸಿ ಎಂಬುವಳು ಗುಣವಾದದ್ದರಿಂದ ಸರ್ರಿ ಹಣ ಕಾಣಿಕೆ ಕೊಟ್ಟಿದೆ.

ರಸ್ತೆಯಲ್ಲಿ P. W. D. ಯವರು ಮಾರ್ಗದ ದುರುಸ್ತಿ ಬಗ್ಗೆಂತ ಕಲ್ಲು ಮಣ್ಣು ತಂದುಹಾಕಿ ಬಹಳ ದಿವಸವಾಯಿತು. ಅವುಗಳೆಲ್ಲಾ ಗುಡ್ಡ ಗುಡ್ಡೆಯಾಗಿ ಹಾಗೇ ಬಿದ್ದಿವೆ. ಕೃಷ್ಣಪಕ್ಷದ ರಾತ್ರಿಯಲ್ಲಿ ರಸ್ತೆಯ ಮೇಲೆ ತಿರುಗಾಡುವವರ ಅವಸ್ಥೆಯನ್ನು ಬಣ್ಣಿಸಿದರೂ ಸ್ವಲ್ಪವೇ ಸರಿ.

ಶ್ರೀ ಶಾರದೆಯನ್ನು ಕಳೆದ ವರ್ಷದಂತೆ ಈ ವರ್ಷವೂ ದರೂ ರಾಷ್ಟ್ರೀಯ ಶಾಲೆಯ ಹುಡುಗರು ತಮ್ಮ ಶಾಲೆಯಲ್ಲಿ ಇಡಬೇಕೆಂತ ಮಾಡಿದ್ದಾರೆ. ಶಾರದಾ ಉತ್ಸವದ ವೇಳೆಯಲ್ಲಿ ಕೀರ್ತನೆ, ಪುರಾಣ ಮುಂತಾದ ವಾಚನದಿಂದ ಸಹಾಯಮಾಡುವಂಥ ಸಿದ್ದಾಪುರ ತಾಲೂಕಿನ ಜನರು ಮುಂಚಿತವಾಗಿಯೇ ಉತ್ಸವ ಕಮಿಟಿಯ ಅಧ್ಯಕ್ಷರ ಬಳಿಗೆ ತಿಳಿಸಬೇಕಾಗಿ ಸದರಿ ಕಮಿಟಿಯ ಅಧ್ಯಕ್ಷರು ಸೂಚಿಸುತ್ತಾರೆ.

ರಾಷ್ಟ್ರೀಯ ಶಾಲೆಯಲ್ಲಿ ಇದ್ದ ಮಗ್ಗದಲ್ಲಿ ನೇಯಿಗೆ ಕಲಿಯಲಿಕ್ಕೆ ಇಚ್ಛಿಸುವವರು ಕಲಿಯಲಿಕ್ಕೆ ಬರಬಹುದಾಗಿ ರಾಷ್ಟ್ರೀಯ ಶಾಲಾ ಉಪಾಧ್ಯಾಯರು ತಿಳಿಸುತ್ತಾರೆ.

ಶ್ರೀ|| ಕರ್ಕಿಯವರು ತಮಗೆ ಪಾಠ ದೊರಕಿಸುವರೇ ಇಲ್ಲಿಗೆ ದಯಮಾಡಿಸಿರುವದಾಗಿ ತಿಳಿಯುತ್ತದೆ.

ಕಾರವಾರ— ಶುಕ್ರವಾರದಿಂದ ಪುನಃ ಮಳೆ ಬೀಳಹತ್ತಿದೆ. ಈಗ ಇಲ್ಲಿ ಮಳೆಯೇನೂ ಅವಶ್ಯವಿಲ್ಲ.

ಕಳೆದ ಮಂಗಳವಾರ ತಾರೀಖು ೨೫ನೇಗೆ ಇಲ್ಲಿಯ ಡಿಂಡುಕೋರ್ಟು ಘಟ್ಟನೆ ಅಸ್ತ ಹೊಂದಿತು. ಜನರಿಗೆಲ್ಲರಿಗೆ ಇದರಿಂದ ಸಂತೋಷವಾಗಿದೆ.

ಇಲ್ಲಿಯ ಸೆಶನ್ಸಿನಲ್ಲಿ ನಡೆಯುತ್ತಿದ್ದ ಹಳಿಯಾಳದ ಖೂನಿ ಖಟ್ಲೆಯ ನಿಕಾಲೆಯಾಗಿ ಮುಖ್ಯ ಆರೋಪಿಗೆ ಜೀವಾಂತ ಶಾಸನವೂ, ಅವನ ಜೊತೆಗಾರರಿಗೆ ಕಾರಾಗೃಹವಾಸದ ಶಿಕ್ಷೆಯೂ ವಿಧಿಸಲ್ಪಟ್ಟವು. ಈ ಖಟ್ಲೆಗೆ ಇಷ್ಟರ ಒಳಗು, ನಾಲ್ಕು 'ಪಂಚರು' (ಎಸೆಸ್ಸರ್) ಕೂಡಿ ಕೊಂಡಿದ್ದರು. ದುರುಸ್ತಿ ಕಾಯಿದೆಯಂತೆ ಇಲ್ಲಿಯ ಸೆಶನ್ಸ ಕೋರ್ಟಿನಲ್ಲಿ ನಡೆದ ಈ ಖಟ್ಲೆಯು ಮೊದಲನೇದು.

ಇಲ್ಲಿಯ ಬಾಯಿ ಕಾಪರ ಬಾಯಿ ಮರಾಠೀ ಶಾಲೆಯಲ್ಲಿ ಕಳೆದ ಗುರುವಾರ ತಾ. ೨೭ನೇ ದಿವಸ "ಶಾಂತಾಬಾಯಿ ಕ್ಯಾಶಿಕ" ಇನಾಮುಗಳನ್ನು ಹುಡುಗಿಯರಿಗೆ ಹಂಚುವ 'ಭಕ್ಷೀಸ ಸಮಾರಂಭ'ವು ಕಲೆಕ್ಟರ ಮಿ|| ಹೇಗೆರಡರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ನೆರವೇರಿತು. ಮಿಸೆಸ್ ಹೊನ್ನಾರ ಇವರು ತಮ್ಮ ತರ್ಫೆನಿಂದ ಮೂರು ಹೆಚ್ಚಿನ ಇನಾಮುಗಳನ್ನು ಕೊಟ್ಟಿದ್ದರು. ಮ್ಯುನಿಸಿಪಲ ಅಧ್ಯಕ್ಷರಾದ ಡಾ. ಕ್ಯಾಶಿಯವರು ತಮ್ಮ ಭಾಷಣದಲ್ಲಿ ಶಾಲೆಯ ಪೂರ್ವವೃತ್ತವನ್ನೆಲ್ಲ ನಿವೇದಿಸಿ, ಶಾಲೆಯ ಬಾಲ್ಯಾವಸ್ಥೆಯಲ್ಲಿ ಯುರೋಪಿಯನ ಅಧಿಕಾರಸ್ಥರೂ ಸ್ತ್ರೀಯರೂ ಸ್ತ್ರೀಶಿಕ್ಷಣದ ಬಗ್ಗೆ ಆಸ್ಥೆಯಿಂದ ವಿಶೇಷ ಸಹಾಯ ಮಾಡಿದಂತೆಯೇ ಈಗಲಾದರೂ, ಸುಶಿಕ್ಷಿತರಾಗಿರುವ ಯುರೋಪಿಯನ ಸ್ತ್ರೀಯರು ಶಾಲೆಗೆ ಮೇಲಿಂದ ಮೇಲೆ ಭೆಟ್ಟಿಯನ್ನಿತ್ತು ಲಕ್ಷ ಪೂರೈಸಿದರೆ ಶಾಲೆಯ ಉರ್ಜಿತಾವಸ್ಥೆಗೆ ಹೆಚ್ಚಿನ ಸಹಾಯವಾದೀತೆಂದು ಆಶಯನ್ನು ಪ್ರದರ್ಶಿಸಿದ್ದರು. ಮತ್ತು ಸಭಿಕರೆಗೆಲ್ಲ ಉದ್ದೇಶಿಸಿ, ಇಲ್ಲಿ ಹುಡುಗಿಯರ ಬಗ್ಗೆ ಒಂದು ಇಂಗ್ಲೀಷ ಶಾಲೆಯ ಅವಶ್ಯಕತೆಯನ್ನು ವಿವರಿಸಿ ಹೇಳಿ, ಇನ್ನು ಕೆಲ ಕಾಲದಲ್ಲಿ ಅಸ್ತಿತ್ವದಲ್ಲಿ ಬರಬಹುದಾದ ಶಿಕ್ಷಣ ಮಂಡಳವು (ಬೋರ್ಡ) ಇಂಥ ಇಂಗ್ಲೀಷ ಶಾಲೆಯೊಂದನ್ನು ಸ್ಥಾಪಿಸಬಹುದಾಗಿ ತಮ್ಮ ಆಶೆಯನ್ನು ವ್ಯಕ್ತಪಡಿಸಿದ್ದರು. ಅಧ್ಯಕ್ಷರು ತಮ್ಮ ಸಮಾರೋಪದ ಭಾಷಣದಲ್ಲಿ ಕಲೆಕ್ಟರ ನಾತೆಯಿಂದ ವ್ಯಕ್ತಿಶಃ ತಮಗೆ ಈ ವಿನಂತಿ ಇರುವಂತೆ ಬಾವಿಸಿ, "ಕಲೆಕ್ಟರರು ಶಿಕ್ಷಣಕಾರ್ಯದಲ್ಲಿ ಸಹಾಯ ಮಾಡಬೇಕಾಗುತ್ತಿದ್ದ ಹಿಂದಿನ ಕಾಲವು ಪೂರ್ಣವಾಗಿ ನಿಜಧಾಮಕ್ಕೆ ಹೋಗಿರುವದೆಂದೂ, ಈಗ ತಮ್ಮದೇನೂ ಸಂಬಂಧವಿಲ್ಲೆಂದೂ, ಪ್ರಸ್ತುತದಲ್ಲಿ ಲೋಕನಿಯುಕ್ತ ಶಿಕ್ಷಣ ಮಂತ್ರಿಯವರ ಕೈಯಲ್ಲಿಯೇ ಎಲ್ಲ ಕಾರಭಾರವಿರುವದೆಂದೂ, ಇನ್ನು ಕೆಲವು ದಿವಸಗಳಲ್ಲಿ ಜನರು ತಾವಾಗಿ ಆರಿಸುವ ಬೋರ್ಡುಗಳ ಕಡೆಗೆ ಆಯಾಯ ಜಿಲ್ಹೆಗಳಲ್ಲಿಯ ಶಿಕ್ಷಣದ ಆಡಳಿತೆಯು ಪೂರ್ಣವಾಗಿ ಹೋಗುವದೆಂದೂ, ಶಿಕ್ಷಣದಲ್ಲಿ ಬೇಕಾದ ಪ್ರಗತಿಯನ್ನು ಮಾಡಿಕೊಳ್ಳುವದು ಜನರ ಕೈಯಲ್ಲಿಯೇ ಇರುತ್ತದೆಂದೂ" ಸಾರ್ಥವಾದ ನುಡಿಗಳನ್ನು (ಆದರೆ ಸ್ವಲ್ಪ ಅಪ್ರಸಂಗಿಕವಾಗಿ) ಹೇಳಿಬಿಟ್ಟರು. ಹುಡುಗಿಯರಿಗೆ ಇನಾಮು ಹಂಚುವ ಇಂಥ ಪ್ರಸಂಗದಲ್ಲಿ ಅವರಿಗೆ ಉದ್ದೇಶಿಸಿ ನಾಲ್ಕು ಉಪದೇಶದ ಮಾತುಗಳನ್ನು ಹೇಳುವಂಥ ಏನೂ ವಿಚಾರಸು ಇಲ್ಲದ್ದು ಈ ಸಮಾರಂಭದ ಒಂದು ವೈಗುಣ್ಯವು. ಇನ್ನು ಮುಂದಾದರೂ, ಇಂಥ ಸಮಾರಂಭದಲ್ಲಿ ಪ್ರಸಂಗಕ್ಕೆ ತಕ್ಕವಾಗಿ ಶಾಲೆಯ ಎಳೆ ವಯಸ್ಸಿನ ಬಾಲಿಕೆಯರಿಗೆ ನಾಲ್ಕು ಉಪದೇಶದ ಮಾತುಗಳನ್ನು ಅವರಿಗೆ ತಿಳಿಯುವ ದೇಶೀ ಭಾಷೆಯಲ್ಲಿ ಹೇಳುವಂಥ ವ್ಯಾಖ್ಯಾತರ ಯೋಜನೆಯೂ ಆಗುವದು ಅತ್ಯಾವಶ್ಯಕವೆಂದು ಸೂಚಿಸಿದರೆ, ಅಪ್ರಾಸಂಗಿಕವಾಗಲಾರದು. ಬಾಲಿಕೆಯರ ಮೋಹಕ ಗಾನ-ನರ್ತನಗಳಿಂದ ಸಮಾರಂಭವು ನಮಗೆ ಮನೋರಂಜಕವಾದಂತಾಯಿತು. ಆದರೆ, ಅವರ ಶ್ರಮಗಳಿಗೆ ಪ್ರತಿಫಲವಾಗಿ ಹಿರಿಯರ ಅಧಿಕಾರಯುಕ್ತ ತಕ್ಕ ಉಪದೇಶದ ರೂಪದಿಂದ ನಾವು ಶಾಲೆಯ ಹುಡುಗಿಯರಿಗೆ ಏನು ಫಾಯದೆ ಮಾಡಿಕೊಟ್ಟಂತಾಗಲಿಲ್ಲ. ಇದರ ದುರುಸ್ತಿಯಾಗಲಿ!

ಅಂಕೋಲಾ— ಹವಾಮಾನವು ಮಧ್ಯಮವಿದೆ. ಥಂಡಿ, ಕೆಮ್ಮು, ಜ್ವರದಿಂದ ಸಣ್ಣ ಸಣ್ಣ ಬೇನೆ ಅಲ್ಲಲ್ಲಿ ಕಂಡುಬರುತ್ತದೆ. ಈ ವಾರ ಬಿದ್ದ ಒಂದು ದಿವಸದ ಮಳೆಯಿಂದ ಹೊಂಡದ ಪೈರಿಗೆ ಆಕಸ್ಮಿಕ ಹಾನಿಯಾಗುವದು.

ಇಲ್ಲಿ ಸ್ಥಾನಿಕ "ಲೋಕಸೇವಕ" ನಾಟಕ ಮಂಡಳಿಯ ಧರ್ಮಾರ್ಥ ನಾಟಕಗಳು ಇಂಗ್ಲಿಷ ಶಾಲೆಯಲ್ಲಿ ನಡೆದವು. ಪ್ರಯತ್ನವು ಸ್ತುತ್ಯವದೆ.

ಕೌನ್ಸಿಲ ಚುನಾವಣೆಯ ತಾರೀಖು ಸಮೀಪ ಬರುಬರುತ್ತ ಉಮೇದವಾರರ ಹಸ್ತಪತ್ರಿಕೆಗಳು ಅಲ್ಲಲ್ಲಿ ಹಂಚ್ಯಾಗುತ್ತವೆ; ಹಳ್ಳಿಗಳೊಳಗೂ ಸೇರಿದ್ದಾವೆ. ಗ್ರಾಮದ ಜನರು ಹೊರಿಯಾದರೂ ಗ್ರಾಮಸ್ಥರು ತಟಸ್ಥರಾಗಿರಬೇಕಾಗಿದೆ.

ಇಲ್ಲಿಯ ಮಾಮಲೇದಾರ ಮಿ|| ಕಡಕೋಳರವರಿಗೆ ವರ್ಗವಾಗಿ ಅವರು ನಿನ್ನೆ ಚಾರ್ಜ ಕೊಟ್ಟರು. ಅವರಿಗೆ ಬಹಳ ಕಡೆಯಲ್ಲಿ ಖಾಸಗೀ ಮತ್ತು ಸಾರ್ವಜನಿಕ ಸಂಸ್ಥೆಗಳಿಂದ ಮಾನಪತ್ರ ಪಾರ್ಟಿಗಳಾಗಿ, ಬಹಳೇ ಸತ್ಕಾರವಾಡಲ್ಪಟ್ಟಿತು. ಅವರು ತಮ್ಮ ಭಾಷಣಗಳಲ್ಲಿ ಜನರಿಗೆ ಸದುಪದೇಶಮಾಡಿ, ವಿನಯಶೀಲತೆಯಿಂದ "ತಮ್ಮಲ್ಲಿ ವಿಶೇಷ ಗುಣಗಳೇನಿಲ್ಲ ನಿಮ್ಮೆಲ್ಲರ ಆದರ-ಸತ್ಕಾರಗಳಿಗೆ ಪಾತ್ರನಾಗುವಷ್ಟು ಸೇವೆಯು ತನ್ನಿಂದೇನಾಗಿದೆಂದು" ಹೇಳಿ ಜನರ ಆಭಾರವನ್ನೆಣಿಸಿದರು. ಅಧಿಕಾರಿನಾತೆಯಿಂದ ಅವರು ಕರ್ತವ್ಯದಕ್ಷರೂ, ನ್ಯಾಯಪ್ರಿಯರೂ ಇದ್ದರು. ಗುನ್ಹೆಗಳ ಪೂರ್ಣ ತಪಾಸು ಮಾಡಿ ಸತ್ಯವನ್ನು ಹುಡುಕಿ ತೆಗೆಯಲಿಕ್ಕೆ ಬಹಳೇ ಆತುರ ಮತ್ತು ಕಾಯದೇಶೀರ ನ್ಯಾಯಾಧೀಶರೆಂದು ಅವರ ಖ್ಯಾತಿಯಾಗಿತ್ತು. ಬಡಗೇರಿ ಹಳ್ಳಿಯ ಅನಾಥ ಒಕ್ಕಲಿಗರಿಗೆ ಫಂಡು ಕೂಡಿಸಿ ಸಹಾಯ ಮಾಡಲಿಕ್ಕೂ, ಹೊನ್ನಾವರ ನಿರಾಶ್ರಿತರ ಫಂಡಿಗೆ ವಂತಿಗೆ ಕೂಡಿಸಲಿಕ್ಕೂ, ದಕ್ಷಿಣ ಕನ್ನಡದ ನಿರಾಶ್ರಿತರಿಗೂ ಮದತ ಮಾಡಲಿಕ್ಕೂ ಇವರು ಬಹಳೇ ದುಡಿದರು. ಇವರೊಬ್ಬ ದಯಾಳು, ನಿರ್ಮಲ ಶೀಲದ ಗೃಹಸ್ಥರಿದ್ದು ಎಲ್ಲರಿಗೂ ಪ್ರಿಯರಿದ್ದರು. ಸಾರ್ವಜನಿಕ ಕೆಲಸಗಳಲ್ಲಿ ಅವರ ಉಪದೇಶವು ಸರಳವೂ, ನಿರಪೇಕ್ಷವೂ, ವ್ಯವಹಾರಿಕವೂ ಆಗಿತ್ತು. ಅದರ ಫಾಯದೆಯನ್ನು ಜನರು ತಕ್ಕಷ್ಟು ತಕ್ಕೊಂಡರು. ಹೆಚ್ಚಾಗಿ ತಕ್ಕೊಳ್ಳದಿದ್ದ ಸ್ವಾರ್ಥಿಗಳು ದುರ್ದೈವಿಗಳು. ಅಂಕೋಲೆಯ ಉನ್ನತಿಯಾಗಬೇಕೆಂದು ಅವರ ಮನಃಪೂರ್ವಕ ಇಚ್ಛೆಯಿತ್ತೆಂದು ಅವರ ಕೃತಿಗಳೇ ಸಾಕ್ಷಿ. ಸ್ಥಾನಿಕ "Friends Union" ಸಂಘದ ಸಭಾಸದರು ಪುಷ್ಪಮಾಲೆ ಹಾಕಿ, ಎಲ್ಲ ಸಭಾಸದರೊಡನೆ ಅವರ ಫೋಟೋ ತೆಗಿಸಿ ಅವರಿಗೆ ಸತ್ಕರಿಸಿದರು. ಅವರಿಗೆ ಇಷ್ಟು ಬೇಗ ವರ್ಗವಾದದ್ದು, ಸ್ವತಃ ರಾ| ಕಡಕೋಳರವರಿಗೆ ಅನುಕೂಲವಾಗಿರಬಹುದಾದರೂ, ಜನರಿಗೆ ಹಾನಿಯಾಗಿದೆ.

ಕೌನ್ಸಿಲ ಉಮೇದವಾರ ರಾ| ಕಲ್ಯಾಣಪೂರಕರರ ಇಲ್ಲಿಯ ಭಾಷಣ-ಪ್ರಶ್ನೋತ್ತರಗಳ ಸಾದ್ಯಂತರೂಪ ಖಾತರಿಯಿಂದ ವೃಥಾ ಕೋಲಾಹಲವೆಬ್ಬಿಸಿದೆಂದು ನೋಡಿ, ಅವರ ಸಭೆಗೆ ಹಾಜರಿದ್ದವರಿಗಾದರೂ ನಗೆ ಬಾರದಿರದು. ಪೂರ್ಣ ವೃತ್ತಾಂತವು ಪ್ರಕಟಿಸಲ್ಪಟ್ಟದ್ದರೆ, ಆಕಾಶವು ಕುಸಿದು ಬೀಳುತ್ತಿತ್ತೋ ಏನೋ! ಕೋಲಾಹಲದಿಂದ ಸತ್ಯವನ್ನು ಅಡಗಿಸಲಿಕ್ಕಾಗುವದೋ? ಅವರಾಗಿ ತಮ್ಮ ಭಾಷಣ-ಪ್ರಶ್ನೋತ್ತರಗಳನ್ನು ಈಗಾದರೂ ಪ್ರಕಟಿಸಲಿ, ಅಂದರೆ, ಸತ್ಯವು ತಿಳಿಯುವದು. ನಿರಾಧಾರ ಬೊಬ್ಬೆಯಾಕೆ?

ಸ್ಪಷ್ಟ ಸವಾಲು.

ಶ್ರೀ|| ಕಾನಡಾವೃತ್ತ ಕರ್ತರಿಗೆ.

ಕುಮಟೆಯ ರಿಲೀಫ ಫಂಡಿನ ಸಭೆಯ ಕುರಿತು ತಮ್ಮ ಪತ್ರದಲ್ಲಿ ಕನ್ನಡದಲ್ಲಿ ಬರೆದ ಟೀಕೆಗೆ ಸಂಬಂಧಿಸಿ, ಶ್ರೀ|| ಕಲ್ಯಾಣಪುರಕರರು ಇಂಗ್ರೇಜಿಯಲ್ಲಿ (!) ಕೊಟ್ಟಿರುವ ವಿಸ್ತೃತ ಪತ್ರದಲ್ಲಿ, ಅವರು ತಮ್ಮ ವಿಷಯದಲ್ಲಿ ಆಧಾರವಿಲ್ಲದ ಮಿಥ್ಯಾರೋಪಗಳೂ (unfounded allegations), ನಡೆದ ಸಂಗತಿಗಳ ಹೇತುಪುರಸ್ಸರ ಮಾಡಿದ ವಿಪರ್ಯಾಸಗಳೂ (deliberate misrepresentation of facts) ನಡೆದಿರುತ್ತವೆಂದು ಹೇಳಿರುವರು; ಹಾಗು ತಮ್ಮ ವೃತ್ತಪತ್ರದಲ್ಲಿ ಒಂದರ ಹಿಂದೊಂದು ಸಂಚಿಕೆಯಲ್ಲಿ ಅವರ ಭಾಷಣಗಳ ವಿಕೃತ ಇಲ್ಲವೆ ವಿಪರ್ಯಸ್ತ ವೃತ್ತಾಂತವು ಕೊಡಲ್ಪಡುತ್ತದೆಂದೂ (giving a distorted account of of speeches) ಮತ್ತು ಕೆಲವು ಸಾರೆ ಅವರು ಮಾಡದೇ ಇದ್ದಂಥ ವಿಧಾನಗಳು ಅವರ ಮೇಲೆ ನಿಷ್ಠುರವಾಗಿ ಹೊರಿಸಲ್ಪಡುತ್ತವೆಂದೂ

(sometimes imputing to me statements which I did not make) ಅವರ ಆಕ್ಷೇಪವಿರುವದು ಇದರ ಮೇಲೆ ಸ್ವಲ್ಪ ಬುಲ್ಲಿನಾಥಿಯನ್ನು ನಡಿಸಿ 'ರುರೀಣ' ಕಾರರು, ಕ್ರೀ ಪಿಕ್ಕೇಶ್ವರರಾಯರು ಕಾರವಾರ ಅಂಕೋಲೆಗಳಲ್ಲಿ ಮಾಡಿದ ಅವರ ಭಾಷಣದ ವಿಪರೀತ ಅರ್ಥವನ್ನು ತಮ್ಮ ಪತ್ರದಲ್ಲಿ ಪ್ರಸಿದ್ಧವಾಗಿರುವದಾಗಿ ಆಕ್ಷೇಪಿಸಿದ್ದಾರೆಂದು ಸ್ಪಷ್ಟೀಕರಿಸಿರುವರು. ಕಾರವಾರದಲ್ಲಿ ಅವರು ಮಾಡಿದ ಸಭೆಗೆ ನಾನು ಸ್ವತಃ ಹಾಜರಿದ್ದು ಅವರ ಭಾಷಣವನ್ನು ಸಮಗ್ರವಾಗಿ ಲಕ್ಷಪೂರ್ವಕ ಕೇಳಿರುವೆನು. ತಮ್ಮ ಬಾತಮೀದಾರರು ಕೊಟ್ಟಿರುವ ವೃತ್ತಾಂತವನ್ನು ಓದಿರುವೆನು. ಅದು ಸ್ವಲ್ಪ ಸೌಮ್ಯ ಸ್ವರೂಪದ್ದೇ ಇರುವದಾಗಿ ನನ್ನ ಪ್ರಾಂಜಲಿ ಅಭಿಪ್ರಾಯವು. ಅದರಲ್ಲಿ ವಿಪರ್ಯಾಸವಾಗಲೀ, ಅಯಥಾರ್ಥ ವಿಧಾನಗಳಾಗಲಿ ನನಗೆ ಎಲ್ಲಿಯೂ ಕಂಡು ಬರಲಿಲ್ಲ. ಆದ ಕಾರಣ, ಆ ವೃತ್ತಾಂತವನ್ನು ಇನ್ನೊಮ್ಮೆ ನಿರ್ವಿಕಾರ ಮನಸ್ಸಿನಿಂದ ಓದಿ, ಕ್ರೀ ಪಿಕ್ಕೇಶ್ವರರಾಯರು ಏನೇನು ಹೇಳಿದ್ದರೆ ವ ತ್ತು ಅದುಗ್ಗ ಏನೇನು ವಿಪರ್ಯಾಸವಾಗಿರುತ್ತದೆಂಬದನ್ನು ಅವರು ಚನ್ನಾಗಿ ಸ್ಮರಣಪೂರ್ವಕ ನೋಡಿಕೊಂಡು ತಮ್ಮ ಪತ್ರದಲ್ಲಿ ಪ್ರಸಿದ್ಧ ಪಡಿಸಬೇಕಾಗಿ ಅವರಿಗೆ ನನ್ನ ಸ್ಪಷ್ಟ ಸವಾಲು. ಅವರೀಲೆ ವಸ್ತುಸ್ಥಿತಿಯ ಸಮರ್ಥನಾರ್ಥ ಅವಶ್ಯಕಂಡರೆ ನಾನು ಯ ಥಾವತಿ ಉತ್ತರ ಕೊಟ್ಟೇನ

ಸುಂಕೇರಿ ತಾ ೩೦-೯ ೧೯೨೩	ತಮ್ಮ "ಯಥಾರ್ಥವಾದಿ"

ನಾಭಾದೊಳಗಿನ ಹಕೀಕತು.

ಪಂಡಿತ ಮೋತೀಲಾಲ ನೆಹರುರವರು ನಾಭಾ ಪಟ್ಟಣಕ್ಕೆ ತಾ ೨೪ನೇ ಸೋಮವಾರ ಮುಂಜಾವಿಗೆ ಮುಟ್ಟಿದರು. ಅಲ್ಲಿ ಪೋಲೀಸ ಮುಖ್ಯಾಧಿಕಾರಿಯು ಪಂಡಿತಜೀಯವರನ್ನು ಎದುರುಗೊಂಡು, ಪಂಡಿತ ಜವಾರಲಾಲರವರು ಕ್ರಿ. ಪ್ರೊ. ಕೋ. ೧೪೪ನೇ ಕಲಮಿನನ್ವಯ ಕೂಡಲೇ ಹೊರಟುಹೋಗು ಮಾಡಿದ ಆಜ್ಞೆಯನ್ನ ಉಲ್ಲಂಘಿಸಿದ್ದರಿಂದ, ಅವರ ಮೇಲೆ ಖಟ್ಲೆಯಾಗಿದೆಂದು ತಿಳಿಸಿದರು ಮತ್ತು ಆಗಲೇ ಮಗನನ್ನು ಕಾಣಲು ಪಂಡಿತ ಜೀಯವರಿಗೆ ಅಪ್ಪಣೆ ದೊರೆಯಲಿಕ್ಕಿಲ್ಲೆಂತಲೂ, ಪುನಃ ಅರ್ಜಿ ಮಾಡಬೇಕೆಂತಲೂ, ಮಗನ ದರ್ಶನ ಕೊಂಡ ಕೂಡಲೆ ನಾಭಾ ಪಟ್ಟಣವನ್ನು ಬಿಟ್ಟುಹೋಗಬೇಕೆಂತಲೂ ಘ ಮ್ಮಾಯಿಸಿದರು. ಮೋತೀಲಾಲರು, ಆರೋಪಿಗಳ ಮುಲಾಖತು ಕೊಂಡು, ಆವಶ್ಯವುಳ್ಳ ಕಾಯಿದೆ ಬಲ್ಲಾದವರ ಸಹಾಯ ಪಡೆಯುವದು ಆರೋಪಿಗಳ ಹಕ್ಕಿದೆಂದು ವಾದಿಸಿದರು. ಕೂಡಲೆ, ೧೪೪ನೇ ಕಲಮಿನನ್ವಯ ನಾಭಾ ಪ್ರದೇಶವನ್ನು ಬಿಟ್ಟುಹೋಗಬೇಕೆಂದು ಪಂಡಿತಜೀಯವರ ಮೇಲೆಯೂ ಹುಕುಮು ಜ್ಯಾರಿಯಾಯಿತು. ಪಂಡಿತಜೀಯವರು ಅಂಬಾಲಾಕ್ಕೆ ಮರಳಬೇಕಾಯಿತು. ಜವಾರಲಾಲರವರು ಖಟ್ಲೆ ಸುನಾವಣಿಯಾಗದ ಆರೋಪಿಗಳಿದ್ದು ಅವರಿಗೆ ಬೇಕಾದ ಸಾಮಗ್ರಿಗಳನ್ನೂ ತಿನಸುಗಳನ್ನೂ ಅಪ್ಪೇಕ್ಷರಿಗೆ ಪೂರೈಸಗೊಡಬೇಕೆಂದು ಹೇಳಿದ್ದಕ್ಕೆ ಪೋಲೀಸ ಮುಖ್ಯಾಧಿಕಾರಿಗಳು ಒಪ್ಪಿದರು. ಮೋತೀಲಾಲರು ಪಂಡಿತ ಕಪಿಲದೇವ ಮಾಲವೀಯರೊಡಗೂಡಿ ಒಂದು ಬುಟ್ಟಿ ತುಂಬ ಹಣ್ಣು-ಹಂಪಲಗಳನ್ನೂ, ಸಾಬೂನವನ್ನೂ ಜವಾಹರಲಾಲರಿಗೆ ಕಳಿಸಿದರು. ಜವಾಹರಲಾಲರಿಗೆ ಇದನ್ನು ಮುಟ್ಟಿಸಲಿಕ್ಕೆ ಜೈಲಿನೊಳಗಿನ ಯಾವ ಅಧಿಕಾರಿಯೂ ಒಪ್ಪಲಿಲ್ಲ. ಒಟ್ಟೊಬ್ಬರು ಸುಪ್ರಿಂಟೆಂಡೆಂಟರಿಗೆ ತೋರಿಸಿ, ಕಪಿಲದೇವ ಮಾಲವೀಯರಿಗೆ ಒಪ್ಪಿಸಿದರು. ಕಟ್ಟಕಡೆಗೆ, ಬೇಸರಗೊಂಡು, ಜೈಲರರಗೂಡ ಬುಟ್ಟಿ ಕೊಟ್ಟ ಮಾಲವೀಯರು ಕೋರ್ಟಿಗೆ ಹೋದರು. ಶ್ರೀ ಜವಾಹರಲಾಲ, ಸಂತಾನಂ ಗಿಡವಾನಿಯವರ ಖಟ್ಲೆ ಸುನಾವಣಿ ನಡೆದಿತ್ತು. ಪ್ರವೇಶಕ್ಕೆ ಮನಾಯಿ. ಒಳಗೆ ಎಂಟು ಮಂದಿಗಳಿದ್ದರು. ೩ ಮಂದಿ ಆರೋಪಿಗಳು ನ್ಯಾಯಮೂರ್ತಿಗಳೊಬ್ಬರ

ಅವರ ಕಾರಕೂನರು, ಪಬ್ಲಿಕ್ ಪ್ರೊಸಿಕ್ಯೂಟರರು, ಕೋರ್ಟ ಇನ್ಸಪೆಕ್ಟರರು, ಪೋಲೀಸ ಸಾಕ್ಷಿಗಾರರು. ಮೆಜಿಸ್ಟ್ರೇಟರಿಗೆ ಇಂಗ್ಲೀಷ ಭಾಷೆ ಬರುವದಿಲ್ಲ. ಕೆಲ ಸುನಾವಣಿಯು ಇಂಗ್ಲೀಷಿನಲ್ಲೇ ನಡೆದಿತ್ತು. ಮೋತೀಲಾಲರವರು ಅಂಬಾಲಾದಿಂದ ಹಿಂದುಸ್ಥಾನ ಸರಕಾರಕ್ಕೆ ತಂತಿ ಮಾಡಿ ಸುನಾವಣಿ ಮುಗಿಯುವವರೆಗೆ ನಾಭಾ ಪ್ರದೇಶದಲ್ಲಿರಲು ಅಪ್ಪಣೆ ಪಡಕೊಂಡಿರುವರು. ಬಳಿಕ, ಅವರು ಮೋಟಾರಿನಿಂದ ನಾಭಾಕ್ಕೆ ಹೋಗಿ, ಮಗನ ದರ್ಶನ ಪಡೆದರು. ಜವಾಹರಲಾಲರವರು ಪ್ರಸನ್ನಮುಖರಿರುವರು. ಕಳೆದ ತಾ ೨೮ನೇಗೆ ಜವಾಹರಲಾಲರ ಕೈಫಿಯತು ಸಾದರವಾಯಿತ. ಬಳಿಕ ಪ್ರಕರಣವನ್ನು ಮುಂದೆ ಇಟ್ಟಿದ್ದರು.

कारवारात आयुर्वेदिक पाठविद्यालय

उघडण्यांत येणार.

सन १९२४ च्या जानेवारी महिन्या पासून कारवार येथे वरील पाठशाळा उघडण्यात येणार आहे. आयुर्वेदांतील प्रत्येक विषय प्रमाणपूर्वक व सशास्त्र शिकविण्यात येईल. पूर्ण आयुर्वेदिक शिक्षण तीन वर्षांत शिकविले जाईल. विद्यार्थी निदान मराठी पाच इयत्ता शिकलेला व थोडेफार संस्कृत तीन पुस्तके पढलेला असावा. त्याचे वय १८ ते २५ वर्षांपर्यंत व सक्षम सुदृढ असावी. सदर पाठशाळेचा वर्ग १ जानेवारी १९२४ पासून सुरू होतील. फीचे दर १ल्या वर्षास दरमहा ८ रुपये, दुसऱ्यास दरमहा १२ रुपये व तिसऱ्या वर्षास दरमहा १५ रुपये प्रमाणे ठरविला आहे. पहिल्या वर्षांत फक्त २५ विद्यार्थीच निवडण्यात येतील. विद्यार्थ्यांनी आपले अर्ज ता. १५ डिसेंबर च्या आत पाठविले पाहिजेत. अर्जाबरोबर प्रवेश फीचे ३ रुपये पाठविण्यात आले पाहिजेत. ज्याची निवड होणार नाही त्याची फी परत करण्यात येईल. पत्रव्यवहार मराठीत अगर कानडी मध्ये करावा.

प्रत्येक वर्षांत शिकविले जाणारे विषय खालील प्रमाणे —

पहिलें वर्ष

१. प्रत्येक वनस्पतीचे गुण धर्मपरिचय वर्णन संख्या आणि प्रत्येक औषधाचे अनेक भाषांतील नामाहि वगैरे.

२ निदान शास्त्र. त्यात प्रत्येक रोगाचे निदान (हेतु) ससमाण आणि खुलासेवार (परिक्षा करण्यास) शिकविले जाईल

३. सदर निदान शास्त्रात रोग गणनेत आलेले विषय औषधालयात समक्ष प्रयोग करून दाखविले जातील

दुसरें वर्ष.

१. प्रत्येक रोगावर निरनिराळ्या शास्त्रोक्त पद्धतीने चिकित्सा (उपचार) करण्यास शिकविलें जाईल.

२ प्रत्येक वस्तुद्रव्यादिचे गुणदोष व तत्वें विचार शिकविले जातील.

३ प्रत्येक रोगावर पथ्यापथ्य विषय शिकविले जातील.

तिसरें वर्ष

१ आर्य शरीर शास्त्र, कला, स्नायु, मज्जातंतु वाहिनी रक्तपिंड, रुधिराभिसरण चक्रादि प्रत्येक भागात होणाऱ्या निरनिराळ्या क्रिया प्रत्येक भागाचीं नावें, त्याच प्रमाणे प्रत्येक भाग चित्र रूपानें 'काढून घेणें व तेच विषय त्याना वर्णन करून स्पष्ट करून देणें' वगैरे

२ प्रत्येक रोगावरील हिमफाटकाद्या पासून रसायना पर्यंत तयार करण्याचे प्रयोग औषधालयात समक्ष करून दाखविले जातील.

३ रसायने व कुपित रसायने यांची संपूर्ण माहिती आणि प्रत्येक विषया विषयी शंकानिवृत्ति स्पष्ट रितीने करण्यात येईल.

विशेष माहिती— खालील पत्यावर पत्रद्वारें अगर समक्ष मिळेल

शिकविणारे— वैद्य जे एफ. फर्नांडिस.
आर्यौषधालय, कारवार

एडेस— व्यवस्थापक,
आयुर्वेदिक पाठविद्यालय, कारवार.

ಸ್ವಯಂಸೇವಕ ವ ಸತ್ಯಾಗ್ರಹಸ್ಥರಿಗೆ ವಿಂನತಿ.

ಪ್ರೀತಿಯಿಂದ ಮೈಮೇಲೆ ಭಾರವನ್ನು ಹೊತ್ತು, ಕಾಂಗ್ರೆಸದ ಕೆಲಸವನ್ನು ನಡಿಸುತ್ತಿದ್ದ ಶ್ರೀ ಯಾಳಗಿಯವರ ಆಕಸ್ಮಿಕ ನಿಧನದ ಬಗ್ಗೆ ಇದೇ ಬರುವ ತಾ ೮ ನೇ ದಿವಸ ದುಃಖಪ್ರದರ್ಶನಾರ್ಥ ಸಭೆಕೂಡಿಸಿ, ಅಲ್ಲಿ ಯಾವತ್ತು ಕರ್ನಾಟಕ ಸ್ವಯಂಸೇವಕರು ಅವರ ಬಗ್ಗೆ ತಮ್ಮ ಆದರವನ್ನು ವ್ಯಕ್ತಪಡಿಸಿ, ಸಹಾನುಭೂತಿಯನ್ನು ಸ್ಪಷ್ಟಪಡಿಸಬೇಕಾಗಿ ಪ್ರಾಂತಿಕ ಮಂಡಳದ ಠರಾವಿಗನುಸಾರವಾಗಿ, ಪ್ರತಿಯೊಬ್ಬ ಸ್ವಯಂಸೇವಕನು ಕನಿಷ್ಠ ೧-೦ರೂಪಾಯಿಯಂತೆ ವ ತ್ತು ಇತರೇ ಜನರು ಯಥಾಶಕ್ತಿ ವರ್ಗಣಿಯನ್ನು ತೆರಬೇಕಾಗಿ ಆದರ ಅಪೇಕ್ಷೆಯಿದೆ. ಈ ದುಃಖ ಪ್ರದರ್ಶನ ಬಗ್ಗೆ ಇದೇ ಒದು ವ ತಾ ೮ನೇ ಸೋಮವಾರ ನಿಶ್ಚಯಿಸಲ್ಪಟ್ಟಿದೆ. ಆ ದಿವಸ ಪ್ರತಿಯೊಬ್ಬ ಸ್ವಯಂಸೇವಕನು ಉಪೋಷಣ ಮಾಡತಕ್ಕದ್ದು. ಶ್ರೀ ಕಾಂತೇರಿ ಕಾವಮ್ಮ ದೇವಸ್ಥಾನದಲ್ಲಿ ರಥೋತ್ಸವ ಜರುಗಲಿ ಕಾಗಿ ಕೊಡಿಕೆ ಸ್ವಯಂಸೇವಕರಿಗೆ ಯಾಳಗಿಯವರ ಬಂದೊಂದು ಫೋಟೋ ಕೊಡವ ವಿಚಾರವಿದೆ. ಇರೀತಿ ಇಲ್ಲಿಯ ಕಚೇರಿಯಿಂದ ತಿಳಿಯುತ್ತದೆ.

Notice.

The Annual Social Gathering of students past and present of the Gibb High School, Kumta with the Prize giving ceremony will be held on 10th instant and following days under the presidency of **J. H. Chinmulgund** *Esquire* M A LL B Subordinate Judge, Kumta. All past students and friends of the institution are cordially invited.

Gibb High School Kumta 4-11-1923	N S KAMAT, *Superintedent*

ವೃತ್ತಸಾರ

— ಸೈನ್ಯದ ಖಂಡ ಪಂಜಾಬದಲ್ಲಿ ವೆಂಕಿ ಪಟ್ಟಿ ಗೆ ಮಾ ಕಾರಖಾನೆ ಮೊಂದು ಸರಕಾರ ಆಕ್ರಸ ದಿ ದ ನಡೆದ್ ಸುತ್ತಿದೆ ಪ

ಪಾನ ಮತ್ತು ಸ್ವೀಡನ್ ದೇಶಗಳಲ್ಲಿ ಈ ಉದ್ಯೋಗವನ್ನು ಕಲಿತು ಬಂದ ಒಬ್ಬ ಬಂಗಾಲಿಯುರೊಬ್ಬರು ಈ ಕಾರಖಾನೆಯನ್ನು ನಡಿಸುತ್ತಿರುವರು

— ಪಾಂಜಾಬ ಭಾರತ ಮಂತ್ರಿಗಳಾದ ಪೋಲ್ ದೊರೆಗಳು ಕಳೆದ ತಾ. ೨೪ನೇಗೆ ಮಡಿದರು. ಪೋಲ್ ದೊರೆಗಳ ಇಚ್ಛೆಯಂತೆ, ವಿಶೇಷ ಆಡಂಬರ ಇಲ್ಲದೆ, ಅವರ ಉತ್ತರ ಕ್ರಿಯೆಯು ಜರಗಿಸಲಾಯಿತು

— ಶ್ರೀ ದತ್ತಾತ್ರೇಯಂತ ವ ಜಲಿಯವರು ಕಳೆದ ಆಗಸ್ಟ ತಾ ೨೪ನೇಗೆ ಕ್ರಿ ಪ್ರೊ ಕೋ. ೧೪೪ನೇ ಕಲಮಿನನ್ವಯ ವಿಧಿಸಿದ ಹುಕುಮನ್ನು ಉಲ್ಲಂಘಿಸಿದ್ದರಷ್ಟೇ. ಈ ಬಗ್ಗೆ ದಾರವಾಡ ಸಬ್ ಡಿವಿಜನಲ್ ಕೋರ್ಟಿನಲ್ಲಿ ನಿನ್ನೆ ತಾ ೩ನೇಗೆ ಸುನಾವಣಿಯಾಗುವದಿತ್ತು

ಮುಂಬಯಿಯ ಹೊಸ ಗವ್ಹರ್ನರರಾದ ಕರ್ನಲ ಲೆಸ್ಲೀ ವಿಲಸನ್‌ರವರು ಭರತಖಂಡಾಭಿಮುಖರಾಗಿ ತಾ ೨೨ನೇ ನವಂಬರಕ್ಕೆ ತೆರಳುವವರಿದ್ದಾರೆ.

— ನಿಜಾಮ ರಾಜ್ಯದ ಮೋಹಬೂಬನಗರ ಜಿಲ್ಲೆಯಲ್ಲಿ ಕೆಲ ಸಶಸ್ತ್ರ ದರೋಡೆಖೋರರು ಒಬ್ಬ ಸಾವುಕಾರರ ಮನೆಯ ಮೇಲೆ ಹಲ್ಲೆ ಮಾಡಿ, ಅನೇಕರಿಗೆ ಘಾಯ ಮಾಡಿದರು. ಊರವರಿಗೂ, ದರೋಡೆಖೋರರಿಗೂ ದೊಡ್ಡ ಯುದ್ಧವಾಯಿತು ಅನೇಕರು ಘಾಯ ಹೊಂದಿದರು ದರೂ, ದರೋಡೆಖೋರರು ಪೋಲೀಸರ ಕೈವಶವಾಗಲಿಲ್ಲ

— ಹೋ ನದಿಗೆ ನೆರೆಬಂದು, ಕಣಾಬಾದ ಪಟ್ಟಣದ ನೆರೆಹೊರೆಯ ೩೦೦ ಚೌರಸ ಮೈಲು ಪ್ರದೇಶವು ಉಧ್ವಸ್ತವಾಗಿದೆ ಸಾವಿರಾರು ಮಂದಿಗಳು ನಿರಾಶ್ರಿತರಾಗಿರುವರು

— ಬೆಂಗಳೂರಿನಲ್ಲಿ ಕಳೆದ ತಾ ೧೮ನೇ ಸಪ್ಟಂಬರಕ್ಕೆ ಕಾಂಗ್ರೆಸ ಕಮಿಟಿಯ ಕಚೇರಿಯಲ್ಲಿ ಗಾಂಧೀ ದಿನವು ಆಚರಿಸಲ್ಪಟ್ಟಿತು ಜಾತಿ ರಾಷ್ಟ್ರೀಯ ಸಭೆಯಲ್ಲಿ ಇತ್ತಂಡಗಳಲ್ಲಿಯೂ ಸಂಧಾನ ಮಾಡಿದ ಬಗ್ಗೆ ಆನಂದ ಪ್ರದರ್ಶನವಾಯಿತು ಆಗ ಪೋಲೀಸ ಇನ್ಸಪೆಕ್ಟರರೂ ಸಬ್ ಇನ್ಸಪೇಕ್ಟರರೂ, ಕಾನ್ಸಟೇಬಲರೂ ಕಚೇರಿಗೆ ಮುತ್ತಿಗೆ ಹಾಕಿದ್ದರು.

— ಅಮೇರಿಕೆಯೊಳಗಿನ ಬರ್ಕಲೇಯಲ್ಲಿ ಬಂದು ದೊಡ್ಡ ಅಗ್ನಿಪ್ರಳಯವಾಗಿ ೬೦೦ ಕಟ್ಟಡಗಳು ನಾಶಹೊಂದಿದವು ಬೆಂಕಿ ಹಬ್ಬುವದರಿಂದ 'ಡಿನಾಮೈಟ' ಸ್ಫೋಟಕ ದ್ರವ್ಯವನ್ನು ಉಪಯೋಗಿಸಿ, ನೆರೆಹೊರೆಯ ಕಟ್ಟಡಗಳನ್ನು ಕೆಡವಿ, ಬೆಂಕಿಯನ್ನು ನಿಯಂತ್ರಿಸಬೇಕಾಯಿತು. ಸಾವಿರಾರು ಜನರು ನಿರಾಶ್ರಿತರಾಗಿರುವರು. ೪ ಕೋಟಿ ರೂಪಾಯಿಗಳ ಲುಕ್ಸಾನು ಆಗಿರಬೇಕು.

— ಜಪಾನದ ಅಗ್ನಿಪ್ರಳಯದಲ್ಲಿ ಟೋಕಿಯೋದೊಳ ೩,೯೮,೪೫೦ ಮನೆಗಳು ಸುಟ್ಟು ಬೂದಿ ೩೬,೧೫೬ ಮನೆಗಳು ಕುಸಿದು ಬಿದ್ದವು ೭೩,೬೦೦ ಮಂದಿಗಳು ಮರಣಪಟ್ಟರು ಜಪಾನ ಸರಕಾರವು ೩ ಅಬ್ಜ ರೂಪಾಯಿಗಳ ಸಾಲ ತೆಗೆಯುವ ವಿಚಾರದಲ್ಲಿರುವದು

— ಮಾಲ್ಟಾದಲ್ಲಿ ಭೂಕಂಪವಾಗಿ, ಅನೇಕ ಕಟ್ಟಡಗಳು ನಾಶವಾದವು. ಸಿಸಿಲಿಯಲ್ಲಿಯೂ ಸಣ್ಣ ಭೂಕಂಪವಾಯಿತು. ಇಟಲಿಯಲ್ಲಿಯೂ ಬುಜನರ್ ಎಂಬಲ್ಲಿ ಧರಣಿಕಂಪವಾಗಿ, ಅನೇಕ ಹಳ್ಳಿಗಳು ನಾಶವನ್ನೈದಿದವು

— ಬೆಂಗುಳೂರೊಳಗಿನ ಮ್ಯುನಿಸಿಪಾಲಿಟಿಯು ಲೋಕಮಾನ್ಯರ ಪುಣ್ಯತಿಥಿ, ಮಹಾತ್ಮರ ವರ್ಧಂತಿ, ಶ್ರೀ ಶಿವ ಜಯಂತ್ಯುತ್ಸವ, ಈ ಮೂರು ದಿನಗಳಲ್ಲಿ ಮ್ಯುನಿಸಿಪಲ್ ಶಾಲೆಗಳಿಗೂ, ಆಫೀಸುಗಳಿಗೂ ರಜೆ ಕೊಡಬೇಕೆಂದು ಠರಾಯಿಸಿರುವದು.

— ಮಹಾತ್ಮರ 'ಯಂಗ ಇಂಡಿಯಾ' ಪತ್ರಿಕೆಯ ಸಂಪಾದಕತ್ವವನ್ನು ಶ್ರೀ ಸಿ ರಾಜಗೋಪಾಲಾಚಾರ್ಯರು ಈ ವರೆಗೆ ನಡಿಸಿದ್ದರು. ಈಗ ವಿಶ್ರಾಂತಿಪಡೆಯಲಿಕ್ಕಾಗಿ ಅದನ್ನು ತ್ಯಜಿಸಿರುವರು. 'ಯಂಗ ಇಂಡಿಯಾ' ಪತ್ರಿಕೆಯ ಈಗಿನ ಸಂಪಾದಕರು ಮಿ। ಜೋರ್ಜ ಜೋಸಫರವರು.

— ಕಳೆದ ಸಪ್ಟಂಬರ ತಾ. ೨೦ನೇ ಗುರುವಾರ ಮಧ್ಯಾಹ್ನಕ್ಕೆ ೪ ತಾಸಿನೊಳಗೆ ಮುಂಬಯಿಯಲ್ಲಿ ೧೮ ಇಂಚು ಮಳೆ ಬಿತ್ತು. ಜನೀರ್ ರೋಡ, ಬೇಹವಾಡಿಗಳ ಪ್ರದೇಶದ ಮನೆಗಳೊಳಗೆ ನೀರು ಒಳಹೊಕ್ಕಿತ್ತು. ಪರೇಲದಿಂದ ದಾದರ ವರೆಗಿನ ಮಾರ್ಗಗಳ ಮೇಲೆ ಒಂದು ಮೊಳಕಾಲು ನೀರು ತುಂಬಿ ನಿಂತಿತ್ತು. ಕೆಲ ಮಾರ್ಗಗಳ ಮೇಲಂತು ೧ ಆಳು ನೀರು ನಿಂತಿತ್ತು. ಈ ಅತಿವೃಷ್ಟಿಯಿಂದ ವ್ಯಾಪಾರಿಗಳಿಗೆ ಬಹಳ ಲುಕ್ಸಾನು. ಉಗಿಬಂಡಿ, ಟ್ರಾಮ ಬಂಡಿಗಳ ಓಡಾಟವು ನಿಂತುಹೋಗಿತ್ತು. ಇಂಥ ವೃಷ್ಟಿಯು ೪೦ ವರ್ಷಗಳೀಚೆ ಹೊಯ್ದಿದ್ದಿಲ್ಲೆಂದು ಹೇಳುತ್ತಾರೆ.

'ಧುರೀಣ'ದ ಪಶ್ಚಾತ್ತಾಪ!

ವೃತ್ತಕಾರರ ಜಜ್ಜಮೆಂಟು.

ಸತ್ಯವನ್ನು ಎತ್ತಿಹಿಡಿಯುವದು ವಕೀಲಿಯೆಂದು ಕಾನಡಾ ವೃತ್ತಕಾರರು ಆಕ್ಷೇಪಿಸುವದಾದರೆ ನಮ್ಮದೇನೂ ಆಕ್ಷೇಪವಿಲ್ಲ. ಶ್ರೀ ಗಣಪತರಾವ ಮಾಸೂರಕರರ ಅಲ್ಲವೆ ಶ್ರೀ ಕಲ್ಯಾಣಪುರಕರರ ವಕೀಲಿ ಮಾಡುವ ಅವಶ್ಯಕತೆಯು ನಮಗಿಲ್ಲ. ಸಪ್ಟಂಬರ ೧೮ ನೇ ತಾರೀಖಿನ ನಮ್ಮ 'ಧುರೀಣ' ಸಂಚಿಕೆಯಲ್ಲಿ ಮಿಟಿಂಗು ಎಂಬ ಶಬ್ದವನ್ನು ಪ್ರಯೋಗಿಸಿದ್ದು ನಿಜ. ಆದರೆ, ಶ್ರೀ ಗಣಪತರಾವ ಮತ್ತು ಶ್ರೀ ವಿಶ್ವೇಶ್ವರರಾವ ಇವರ ಪತ್ರಗಳು ನಮ್ಮ ಕಡೆಗೆ ಬಂದ ಮೇಲೆ ನಿಜಸ್ಥಿತಿಯನ್ನು ತುಂಬ ಹಿಡಿಯಬೇಕಾಯಿತು ಅದಕ್ಕಾಗಿ ಸಪ್ಟಂಬರ ೧೨ ನೇ ತಾರೀಖಿನ ಬಗ್ಗೆ ತೆಗೆದ ಆಮಂತ್ರಣ ಪತ್ರಿಕೆಯನ್ನೂ, ನಡೆದ ಕಾರ್ಯಕ್ರಮವನ್ನೂ ಶೋಧಿಸಿ ನೋಡಿದೆವು. ಆಮಂತ್ರಣ ಪತ್ರಿಕೆಯಲ್ಲಿ ಇದ್ದದ್ದೇನೆಂದರೆ —

ಕೆಳಗೆ ಕಾಣಿಸಿದ ಸಭ್ಯ ಗೃಹಸ್ಥರಿಗೆ

ನಾಳೆ ಬೆಳಿಗ್ಗೆ ೮ ಘಂಟೆಗೆ ಕುಮಟಾ ತಾಲೂಕ ಕಚೇರಿಯಲ್ಲಿ ಇಲಾಖೆ ಮಹೇಲು ಬಹಾದ್ದೂರರ ಮುಂದೆ ನೆಗಸಿನಿಂದ ಲುಕ್ಸಾನುಪಟ್ಟ ಯೋಗ್ಯ ಜನರಿಗೆ ರಿಲೀಫ ಫಂಡು ಹಂಚುವದು ಇರುವದರಿಂದ ತಾವು ದಯಮಾಡಿ ಬರಬೇಕಾಗಿ ಇಚ್ಛಿಸುತ್ತೇವೆ ತಾ ೧೧-೯-೩೩.

Sd/ ಮಾಮಲೇದಾರ

ಈ ಆಮಂತ್ರಣ ಪತ್ರಿಕೆಯ ಮೇಲಿಂದಲೇ ೧೨ ನೇ ತಾರೀಖಿನ ದಿವಸ ಸೇರಿದ್ದು ರಿಲೀಫ ಕಮಿಟಿಯ ಮಿಟಿಂಗಾಗಿದ್ದಿಲ್ಲವೆಂಬುದು ಸ್ಪಷ್ಟವದೆ ಇಷ್ಟೇ ಅಲ್ಲದೆ, ರಿಲೀಫ ಕಮಿಟಿಯಲ್ಲಿ ಒಟ್ಟಿಗೆ ೧೬ ಮಂದಿ ಮೆಂಬರರಿದ್ದು ಅವರೆಲ್ಲರಿಗೂ ಆಮಂತ್ರಣ ಕೊಡದೆ ೧೬ ರಲ್ಲಿ ೧೧ ಮಂದಿಗೆ ಮಾತ್ರ ಆಮಂತ್ರಣ ಕೊಟ್ಟಿತ್ತು ಅದು ಹೋಗಲಿ ೧ ದಿವಸದ ಬಗ್ಗೆ ನಾಲ್ವರು ರಿಲೀಫ ಕಮಿಟಿಯ ಮೆಂಬರರಲ್ಲದ ಗೃಹಸ್ಥರನ್ನೂ ಆಮಂತ್ರಿಸಿದ್ದರು. ಇದರ ಮೇಲಿಂದ ೧೨ ನೇ ತಾರೀಖಿಗೆ ಕೂಡಿದ್ದು ರಿಲೀಫ ಕಮಿಟಿಯ ಮಿಟಿಂಗೇ ಎಂದು ವೃತ್ತಕಾರರು ಹೇಗೆ ಜಜ್ಜಮೆಂಟು ಕೊಡುವರು? ಮಾಮಲೇದಾರರು ರಿಲೀಫ ಹಂಚುವಕಾಲಕ್ಕೆ ಕೆಲ ಸಭ್ಯಗೃಹಸ್ಥರು ಹಾಜರಿರಬೇಕೆಂದು ಕೆಲವರಿಗೆ ಆಮಂತ್ರಣ ಕೊಟ್ಟಿದ್ದರೆಂದು ಸ್ಪಷ್ಟವಾಗುವದಿಲ್ಲವೇ? ಇಷ್ಟೆ ಅಲ್ಲದೆ ಸಪ್ಟಂಬರ ೯ ನೇ ತಾರೀಖಿಗಾದ ಕಮಿಟಿಯು ಠರಾವಿನಂತೆ ೧೫ ದಿವಸಗಳ ತರುವಾಯ ರಿಲೀಫ ಕಮಿಟಿಯ ಮಿಟಿಂಗು ಕೂಡಿಸಬೇಕೆಂದಿದ್ದು ಆ ಠರಾವನ್ನು ಮೀರಿ ಮಾಮಲೇದಾರರು ಮಿಟಿಂಗು ಕರೆಯುವ ಅವಶ್ಯಕತೆಯಾದರೂ ಇದೆಯೇ? ೯ ನೇ ತಾರೀಖಿನ ಠರಾವಿನಂತೆ ಮಾಮಲೇದಾರರಿಗೆ ಅಗತ್ಯ ರಿಲೀಫು ಹಂಚುವ ಅಧಿಕಾರ ಕೊಟ್ಟಿದ್ದು ಆ ಮೇರೆಗೆ ಅವರು ೧೨ ನೇ ತಾರೀಖಿಗೆ ತಮ್ಮ ಸಾಹೇಬರ ಮುಂದೆ ರಿಲೀಫು ಹಂಚಬೇಕೆಂದು ಕೆಲ ಗೃಹಸ್ಥರನ್ನು ಆಮಂತ್ರಣ ಮಾಡಿದ್ದು ಅದನ್ನೇ ರಿಲೀಫ ಕಮಿಟಿಯ ಮಿಟಿಂಗೆಂದು ಕಾನಡಾ ವೃತ್ತಕಾರರು ಇಷ್ಟೇಕೆ ಅಘಟಿತ ಘಟನಾಸಾಮರ್ಥ್ಯ ತೋರಿಸಬೇಕು? ೧೮ ನೇ ತಾರೀಖಿನ ಧುರೀಣ ಸಂಚಿಕೆಯಲ್ಲಿ ಉಪಯೋಗಿಸಿದ ಮಿಟಿಂಗ ಎಂಬ ಶಬ್ದವನ್ನು ವೃತ್ತಕಾರರು ಆಧಾರವಾಗಿಟ್ಟುಕೊಂಡು ತಮ್ಮ ಲೇಖನದಲ್ಲಿ ಉಪಯೋಗಿಸಿದ್ದರೂ ೨೫ ನೇ ತಾರೀಖಿಗೆ ನಾವು ಮಿಟಿಂಗು ಅಲ್ಲವೆಂದು ಸಾರಿಸಿದರೆ ಮಾತ್ರ ಅದನ್ನು ಒಪ್ಪಿಕೊಳ್ಳಲಿಕ್ಕೆ ವೃತ್ತಕಾರರ ಒಪ್ಪಿಗೆಯಿಲ್ಲದ ಮೇಲೆ ಪಕ್ಷಾಂಧತೆಯೋ ದುರಾಗ್ರಹವೋ? ವಾಚಕರೇ ಊಹಿಸಲಿ. ವೃತ್ತಕಾರರು ಅನ್ನುವಂತೆ ನಾವು ಕೋಯಮತ್ತೂರರನ್ನಾಗಲೀ ಶ್ರೀ ವಿಶ್ವೇಶ್ವರರಾಯರನ್ನಾಗಲೀ ಶ್ರೀ ಮಾಸೂರಕರರನ್ನಾಗಲೀ ಮೆಚ್ಚಿಸಿಕೊಳ್ಳುವ ಅವಶ್ಯಕತೆ ನಮಗಿಲ್ಲ. ೧೮ ನೇ ತಾರೀಖಿಗೆ ನಮ್ಮಿಂದಾದ ತಪ್ಪನ್ನು ೨೫ ನೇ ತಾರೀಖಿಗೆ ತಿದ್ದುವ ಗೋಜಿಗೆ ಹೋದುದೇ ವೃತ್ತಕಾರರನ್ನು ರೇಗಿಸುತ್ತಿದ್ದುದಾದರೆ ಕುಚೋದ್ಯದ ಮುಂದೆ ಸತ್ಯವನ್ನು ಮರೆಮಾಚಬೇಕಾಯಿತೆಂದು ನಾವು ತಿಳಿಯಬೇಕಾಯಿತಲ್ಲವೇ? ವೃತ್ತಕಾರರು ಏನೇ ಅಂದುಕೊಳ್ಳಲಿ ಈ ವಿಷಯವಾಗಿ ಇನ್ನು ಮುಂದೆ ಮಾತ್ರ ಏನೂ ಬರೆಯಲಿಚ್ಛಿಸುವದಿಲ್ಲ

ಜಾಹೀರ ವಿನಂತಿ.

ಕುಮಟಾ ತಾಲುಕಾ ಕಾಂಗ್ರೆಸ ಕಮಿಟಿಯಿಂದ— ಈ ತಾಲೂಕಿನ ಎಲ್ಲಾ ಕಾಂಗ್ರೆಸ ಸಭಾಸದರಿಗೆ ಇದರ ಮೂಲಕ ತಿಳಿಸುವದೇನಂದರೆ —

ಈ ಕೆಳಗಿನ ವಿಷಯಗಳನ್ನು ಕುರಿತು ಇದೇ ಆಕ್ಟೋಬರ ತಾ. ೨೩ನೇ ಸೋಮವಾರ ಮಧ್ಯಾಹ್ನ ೩ ಘಂಟೆಗೆ ಕುಮಟಾ ದಲಾಲ ಶ್ರೀ ಸೀತಾರಾಮ ಭಾಗವತರವರ ವಖಾರಿಯ ಮಾಳಿಗೆಯ ಮೇಲೆ ಕುಮಟಾ ತಾಲುಕಾ ಕಾಂಗ್ರೆಸ ಕಮಿಟಿಯ ಮಹಾಸಭೆಯನ್ನು ಕೂಡಬೇಕಾಗಿಯೂ, ಕೋರಂ ಆಗದಿದ್ದಲ್ಲಿ, ಮುಂದರಿಸಿದ ಸಭೆಯನ್ನು ಅದೇ ಸಾಯಂಕಾಲಕ್ಕೆ ಕೂಡುವದಾಗಿಯೂ ನಿಶ್ಚಯಿಸಿದೆ ಕಾರಣ ಈ ತಾಲೂಕಿನಲ್ಲಿರುವ ಕಾಂಗ್ರೆಸ ಸಭಾಸದರೆಲ್ಲರೂ ನಿಯಮಿತ ವೇಳೆಗೆ ಮುದ್ದಾಮು ಬರಬೇಕಾಗಿ ಸವಿನಯ ವಿನಂತಿಯದೆ

ವಿಷಯಗಳ ಯಾದಿ.

(೧) ಕಳೆದ ೧೯೩೨ನೇ ಆಕ್ಟೋಬರ ತಾ ೧ನೇಯಿಂದ ಇದೇ ಕಳೆದ ಸಪ್ಟಂಬರ ತಾ ೩೦ನೇಗೆ ಮುಗಿಯುವ ವರುಷದಲ್ಲಿ ನಡೆದ ಜಮಾ-ಖರ್ಚಿನ ಆಢಾವೆ ಪತ್ರಕವನ್ನು ಮಂಜೂರು ಮಾಡುವದು

(೨) ಮುಂದಿನ ವರುಷದ ಬಗ್ಗೆ ಕಾರ್ಯಕಾರಿ ಮಂಡಳ ನೇಮಿಸುವದು

(೩) ಜಿಲ್ಲಾ ಕಾಂಗ್ರೆಸ ಕಮಿಟಿಗೆ ವಗೈರೆ ನಮ್ಮ ತಾಲುಕಾ ಪತಿಯಿಂದ ಪ್ರತಿನಿಧಿಗಳನ್ನು ಆರಿಸುವದು.

(೪) ಅಧ್ಯಕ್ಷರ ಪರವಾನಗಿಯಿಂದ ಇತರ ವಿಷಯಗಳನ್ನು ವಿಚಾರಿಸುವದು.

ಕುಮಟಾ ತಾ ೨-೧೦-೩೩. } P S SHANBHAG ಸೆಕ್ರೆಟರಿ, ತಾ ಕಾಂ ಕಮಿಟಿ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಮುಕ್ತಾ ಶಿಕ್ಕಿ ತಿಳಕೊಳ್ಳಬಹುದು.

ಪುರುಷೋತ್ತಮ ಲಕ್ಷ್ಮಣಯ್ಯ ಕ್ಯಾಸಭಾಗ.

ಹೆಗಡೇಕರ, ದುಕಾನ, ಕುಮಟಾ.

ಶುದ್ಧ ಖಾದಿ

ವಿಕ್ರಿಗೆ ತಯಾರ.

ಹೊನ್ನಾವರ ತಾಲೂಕಾ ಕಾಂಗ್ರೆಸ ಕಮಿಟಿಯಿಂದ ಕೈಮಗ್ಗದ ಕೈರಾಟಿಯ ಶುದ್ಧ ನೂಲಿನ ಖಾದಿ ನಾರಾಟಕ್ಕೆ ಕಾಂಗ್ರೆಸ ಆಫೀಸಿನಲ್ಲಿ ಸಿಗುವದು.

ಹೊನ್ನಾವರ, ೧೦-೧೦-೩೩ } ಸೆಕ್ರೆಟರಿ, ತಾ. ಕಾ. ಕಮಿಟಿ, ಹೊನ್ನಾವರ.

ನಮ್ಮ ವಾಚಕರಲ್ಲಿ ಪ್ರೇಮದ ಪ್ರಾರ್ಥನೆ.

ಜಯಕರ್ನಾಟಕವು ಜಯವಂತವಾಗಹತ್ತಿದೆಯೆಂಬುದು ಕರ್ನಾಟಕದ ಜಾಗ್ರತೆಯ ಒಂದು ಲಕ್ಷಣ. ಕನ್ನಡಿಗರೆಲ್ಲರಿಗೂ ನಮ್ಮ ಪ್ರೇಮಪೂರ್ವಕ ವಂದನೆಗಳಿರಲಿ. ಆದರೂ ಚಂದಾದಾರರ ಸಂಖ್ಯೆಯು ೧೫೦೦ ಮಿಕ್ಕಿಲ್ಲ. ಪ್ರತಿಯೊಬ್ಬ ಚಂದಾದಾರನೂ ಕನಿಷ್ಠ ವರ್ಷಕ್ಕೆ ಇಬ್ಬರನ್ನು ಕೂಡಿಸಿದರೆ, ಜಯಕರ್ನಾಟಕಕ್ಕೆ ಎಷ್ಟೋ ಸಹಾಯ. ಈ ಸಹಾಯವನ್ನು ನಮ್ಮ ಕನ್ನಡಿಗರು ಮಾಡದೆ ಇರಲಿಕ್ಕಿಲ್ಲ.

ಇಂದಿಗೆ ನಮ್ಮ ಹನ್ನೊಂದು ಹೆಜ್ಜೆಗಳಾಗಿ ಹನ್ನೆರಡನೆಯದು ಹತ್ತಿತು. ಈಗ ನಮ್ಮ ವಾಚಕರಲ್ಲಿ ನಮ್ಮ ಪ್ರಾರ್ಥನೆಯಿಷ್ಟೇ.

ಈ ವರ್ಷ ೧ನೆಯ ಸಂಚಿಕೆಯಿಂದ ಪ್ರಾರಂಭಿಸಿದ ನಮ್ಮ ಎಲ್ಲ ಚಂದಾದಾರರಿಗೆ ೧೨ನೆಯ ಸಂಚಿಕೆಯನ್ನೇ ಮುಂದಿನ ಒಂದು ವರ್ಷದ ಚಂ. ರೂ. ೫—೧೦—೦ ಕ್ಕೆ ವ್ಹಿ. ಪಿ. ಯಿಂದ ಕಳಿಸುವ ಯೋಚನೆಯಿರುವದು.

ನಡುವನೆ ೨, ೩, ೪, ೫ ಮೊದಲಾದ ಸಂಚಿಕೆಗಳಿಂದ ಪ್ರಾರಂಭಿಸಿದವರಿಗೂ ಮುಂದಿನ ವರ್ಷ ಯಾವ ಸಂಚಿಕೆಗೆ ಅವರ ಹಣವು ಸಾಗಿಯುವದೋ ಆ ಸಂಚಿಕೆಯಿಂದ ೨ನೆಯ ವರ್ಷ ಮುಗಿಯಲಿಕ್ಕೆ ಎಷ್ಟು ಸಂಚಿಕೆಗಳು ಹತ್ತುತ್ತವೆಯೋ ಅಷ್ಟು ಸಂಚಿಕೆಗಳ ಹಣಕ್ಕೆ ೧೨ನೆಯ ಸಂಚಿಕೆಯನ್ನೇ ವ್ಹಿ. ಪಿ. ಯಿಂದ ಕಳಿಸುವೆವು. ವರ್ಷದ ಮೊದಲಿಗೇ ಎಲ್ಲವನ್ನೂ ಬಾಯಿಗೂಡಿಸಲಿಕ್ಕೆ ಅನುಕೂಲವಾಗಬೇಕೆಂದೇ ಈ ವ್ಯವಸ್ಥೆಯನ್ನು ಮಾಡುವವರಿದ್ದೇವೆ.

ಎಲ್ಲರೂ ಇದ ವರೆಗಿನಂತೆ ಮುಂದೆಯೂ ಉದಾರತೆಯು ಕೊಟ್ಟು ವ್ಹಿ. ಪಿ. ಯನ್ನು ಸ್ವೀಕರಿಸಬೇಕೆಂದು ೧೨ನೆಯ ಪ್ರಾರ್ಥನೆ ಸ್ವೀಕರಿಸಿಯೇ ಬಿಡುವರೆಂದು [illegible]

ಎಲ್ಲರೂ ಹೆಚ್ಚಿನ ವೆಚ್ಚ ಬೀಳುವ ವ್ಹಿ. ಪಿ. ಯನ್ನು ನಮಗೆ ಮಾಡಿಸಗೊಡದೆ, ತಮ್ಮ ತಮ್ಮ ಹಣವನ್ನು ೧೨ನೆಯ ಸಂಚಿಕೆಯು ಹೊರಡುವದರೊಳಗೇ ನಮಗೆ ಮುಟ್ಟುವಂತೆ ಮನಿಆರ್ಡರಿನಿಂದ ಕಳಿಸಿಬಿಡುವರೆಂದು ನಂಬಿದ್ದೇವೆ.

ತಮಗೆ ನಾವು ವ್ಹಿ. ಪಿ. ಮಾಡಬಾರದೆನ್ನುವವರೂ ಮುಂದಿನ ವರ್ಷ ಬೇಡಾದವರೂ ಈ ಪ್ರಾರ್ಥನೆಯನ್ನು ಕೇಳಿಕೊಂಡ ಕೂಡಲೇ ನಮಗೆ ಆ ಪ್ರಕಾರ ತಿಳಿಸಬೇಕು. ನಮ್ಮ ಜನರಲ್ಲಿ ಉದಾಸೀನತೆಯು ಸ್ವಭಾವಸಿದ್ಧವಾಗಿರುವದರಿಂದ ಇಷ್ಟು ಮೊದಲೇ ನೆನಪುಗೊಟ್ಟಿದ್ದೇವೆ. ಇಷ್ಟು ಮಾಡಿ ತಿಳಿಸದಿದ್ದವರೆಲ್ಲರೂ, ಹಣವನ್ನು ಕಳಿಸದಿದ್ದವರೆಲ್ಲರೂ ವ್ಹಿ. ಪಿ. ಯನ್ನು ತೆಗೆದುಕೊಳ್ಳುವವರೇ ಎಂದು ತಿಳಿದುಕೊಂಡು ಎಲ್ಲರಿಗೂ ೧೨ನೆಯ ಸಂಚಿಕೆಯನ್ನು ವ್ಹಿ. ಪಿ. ಯಿಂದ ಕಳಿಸಲಾಗುವದು.

ಈ ವರ್ಷ ನಮಗೂ, ಮುದ್ರಕರಿಗೂ [illegible] ಸಾವಿರ ರೂಪಾಯಿಗಳ ನಷ್ಟವು ಆಗಲಿರುತ್ತದೆ. ಚಂದಾದಾರರ ಸಂಖ್ಯೆಯು ಕನಿಷ್ಠ ಎರಡು ಸಾವಿರವಾದರೆ ಮಾತ್ರವೇ ಇಂಥ ದೊಡ್ಡ ಮಾಸಪತ್ರಿಕೆಯು ಖರ್ಚು ಬಾದ ಗೂಡಿ ಪತ್ರಿಕೆಯು ಹಾಗೂ ಹೀಗೂ ಜೀವ ಹಿಡಿಯುತ್ತದೆ. ಇಷ್ಟವಾದ ಸುಧಾರಣೆಗಳಾಗಲಿಕ್ಕೆ ೩೦೦೦ ಚಂದಾದಾರರು ಬೇಕೇ ಬೇಕು. ಈ ಪತ್ರಿಕೆಯು ದಿನ ದಿನಕ್ಕೆ ಹೆಚ್ಚು ಹೆಚ್ಚಿಗೆ ಲೋಕಾದರಕ್ಕೆ ಪಾತ್ರವಾಗುತ್ತಿರುವದರಿಂದ, ಶೀಘ್ರವೇ ಚಂದಾದಾರರ ಸಂಖ್ಯೆಯು ಬೆಳೆಯುವದೆಂಬ ಆಶೆಯಿಂದ ಮುಂದಿನ ವರ್ಷದ ಭಾರವನ್ನು ನಾವು ಕೈಕೊಂಡಿರುವೆವು. ಈ ಭಾರವನ್ನು ಹಗುರುಮಾಡುವದು ಪ್ರತಿಯೊಬ್ಬ ಕನ್ನಡಿಗನ ಕೈಯಲ್ಲಿ ಇದೆ.

ಸಂತೋಷದಿಂದ ಸ್ವೀಕರಿಸಿಬಿಡುವರೆಂದು ಅಪೇಕ್ಷಿಸುವ,

ಅನಂತನ ಹುಣ್ಣಿವೆ, ಶಕೆ ೧೮೫೮, ತಾ ೨೯-೯-೧೯೩೬ } ತಮ್ಮ ವಿಧೇಯ
—ಕಾರ್ಯದರ್ಶಿ,
ಜಯಕರ್ನಾಟಕ,
ಸಾಧನಕೇರಿ–ಧಾರವಾಡ

"ಸಂಶಯಾತ್ಮಾ ವಿನಶ್ಯತಿ."
ತಿಂಗಳಿಗೆ ರೂಪಾಯಿ ೧೦೦ರಿಂದ ೫೦೦ರ ವರೆಗೆ ಗಳಿಸಿರಿ.
ಬೇಕಾದಲ್ಲಿ ಸುಲಭವಾಗಿ ಗಳಿಸಿರಿ
ರೂಪಾಯಿ ೧೯-೧೨-೦ ಖರ್ಚುಮಾಡಿರಿ ಮತ್ತು ಸ್ವತಂತ್ರರಾಗಿರಿ.

ಸಬಕಾರವು ಪ್ರತಿಯೊಬ್ಬ ಮಾನವನಿಗೆ ಅವಶ್ಯವಿದ್ದ ವಸ್ತುವು ಅವನು ಬೇಕಾದರೆ, ಶ್ರೀಮಂತನಿರಲಿ, ಬಡವನಿರಲಿ, ಹಳ್ಳಿಗನಿರಲಿ, ಪಟ್ಟಣಿಗನಿರಲಿ, ಪಾಶ್ಚಾತ್ಯ ಮಾದರಿಯ ಸಬಕಾರವನ್ನು ತಯಾರಿಸುವ ನಮ್ಮ ಕ್ರಮವು ಅತಿ ಉತ್ತಮವೆಂದು ಖ್ಯಾತಿಹೊಂದಿದೆ. ಈ ಕ್ರಮದಿಂದ ಶ್ರೇಷ್ಠ, ಕನಿಷ್ಠ ಪ್ರತಿಯ, ಮೈಗೆ ಹಚ್ಚುವ ಯಾ ಅರಿವೆಗೆ ಹಾಕುವ, ಪರಿಮಳದ ಹಾಗು ಬಣ್ಣಗಳ ಸಬಕಾರವನ್ನು ಸುಲಭವಾಗಿ ಯಾರೂ ತಯಾರಿಸಬಲ್ಲರು **ಈ ಕ್ರಮಕ್ಕೆ ಬೆಂಕಿಯ ಅವಶ್ಯಕತೆಯಿರುವದಿಲ್ಲ.** ನಮ್ಮ ವಿದ್ಯಾರ್ಥಿಗಳು ಯತ್ನಮಾಡುವಾಗ ನಾವು ಬಲು ಜಾಗ್ರತೆಯಿಂದ ಅವರನ್ನು ಪರೀಕ್ಷಿಸಿ, ಅವರಿಗೆ ಬೇಕಾದ ಮಾಹಿತಿಯನ್ನು ಪೂರೈಸುತ್ತೇವೆ. ಈ [illegible] ನಮಗೆ ಅನೇಕರು ಶಿಫಾರಸು ಪತ್ರಗಳನ್ನು ಕಳುಹಿಸಿರುವರು. ಈ ಪೂರ್ಣ ಕ್ರಮವನ್ನು ರೂ ೧೯-೧೨-೦ಕ್ಕೆ ವ್ಹಿ. ಪಿ. ಮಾಡಿ ಕಳಿಸುವೆವು. ಈ ಕ್ರಮವು ನಿಯಮಿತ ಮಂದಿಗಳಿಗೆ ಮಾತ್ರ ಕಳಿಸಲ್ಪಡುವದು.
ಸಿಂಪಲ್ ಹೊ ದರಬಾರದಿಂದ. ಇಚ್ಛೆ ಇದ್ದವರು ಕೆಳಗಿನ ಪತ್ತೆಗೆ ಕೂಡಲೆ ಬರೆಕೊಳ್ಳತಕ್ಕದ್ದು
International Business Corporation,
Dept. (F) [illegible] *Goaliguda*, **Hyderabad.** (*Dn*)

ಅಮೃತಾಂಜನ.



ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ. ವ್ಹಿ. ಪಿ. ಖರ್ಚ ಬೇರೆ.

ಅಮೃತಾಂಜನ ಡಿಪೊ, ಫೋರ್ಟ,
ಮುಂಬಯಿ.

ಮನೆ ಕಟ್ಟುವವರಿಗೆ ಸುಸಂಧಿಯು.



ಮೇಲಂತಸ್ತಿಗೆ ಶೋಭೆ ಬರುವದಕ್ಕೆ ನಾನಾ ತರ ನಕ್ಷೀ ಕೊರೆಯಲ್ಪಟ್ಟ ಬೀಡಿನ ಕಟಾಂಜನಗಳೂ, ಹೂದೋಟ, ಬಳಂಗಳ, ಉಪ್ಪರಿಗೆ, ದಿವಾನಖಾನೆ ಮೊದಲಾದ ಸ್ಥಳಗಳಲ್ಲಿ ವಿಶ್ರಾಂತಿಗೊಳ್ಳುವದಕ್ಕೆ ತಕ್ಕ ಬಾಕುಗಳೂ ಕಿರ್ಲೋಸ್ಕರ ಕಾರಖಾನೆಯಲ್ಲಿ ಸೌಕರ್ಯದಿಂದ ದೊರೆಯುತ್ತವೆ. ಪತ್ರ ಬರೆದು ಕ್ಯಾಟಲಾಗು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್.
ಕಿರ್ಲೋಸ್ಕರವಾಡಿ. (ಸಾತಾರಾ)

Printed and Published by Krishnarao Keshav Shenvi (Editor) at his Star of Kanara Press Kumta

E 1270 Thursday, 11th October 1923.

ವರ್ಷ ೭.

ಕಾನಡಾವೃತ್ತ.

ಸಂಚಿಕೆ ೫೨.

THE KANARA NEWS.

ಪತ್ರದ ವರ್ಗಣಿ:-
ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಮನೆಯವರಿಂದ ರೂ. 3-0-0
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1 0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಪ್ಯಾರಾ ಗ್ರಾಫಿನ(೧೫ ಎಡ್ಜ್ಯಾಕ್ಟ್) ೮ ಸಾಲುಗಳ ವರೆಗೆ ರೂ. 1-0-0
ಅನಂತ್ರ ಪ್ರತಿ ಸಾಲಿಗೆ 0-2-0.
ಹಲವಿ ಅಂಗದ ಸಾಲು ಎಷ್ಟು ಹೊತ ಬಿರುತ್ತಾರೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುತ್ತವೆ.
ಬಹಳ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಯಾ ಸಮಕ್ಷ ತಿಳಿಸಲ್ಪಡುವದು

-(ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖ ೧೧ ಮಾಹೆ ಅಕ್ಟೋಬರ ಸನ್ ೧೯೨೩ ನೇ ಇಸವಿ.)-

हिंदुस्थानातील रहिवाशांस ज्याप्रमाणे हिंदुस्थानची हवा त्याप्रमाणेच हें औषध हिंदुस्थानातील लोकास ज्यास्त फायदेशीर आहे,

द्राक्षासव- { दीड रत्तलची किंमत २ रुपये;

रामबाण औषधें

सर्दि घालविणारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

पिण्यास रुचकर.

क्याटलाग मागवा,

झंडु फार्मास्युटिकल वर्क्स लिमिटेड,
मुंबई नं. १३

CLAXO:- FRESH STOCK. NEW BRAND. *a food for infants and invalids.*

Kalmegh :- *Well-tried remedy in Liver complaints especially of children.*

Syrup of Vasaka :- *Highly efficacious in cold, cough, crough and bronchitis.*

Besides we have in stock other patent medicines, Thermometres, Glycerine Syringes etc.,

Orders will be executed by V. P. P.

The New Emporium
Honavar. (N. Kanara.)

ಡಾ| ಮಾಸೂರಕರರ

ಸುಧಾಂಜನ.

ಅಂಜನುಗಳಿಗೆಲ್ಲ ಅರಸು.

ತಲೆಶೂಲಿ, ವಾತ ವೇದನೆ, ಕೆಮ್ಮು, ಹಲ್ಲು ನೋವು ಇತ್ಯಾದಿಗಳಿಗೆ ಕ್ಷಿಪ್ರ ಗುಣಕಾರಿ ಗುಳ್ಳು. ಡಬಿ 2 ಆಣೆ ಮಾತ್ರ. ವ್ಯಾಪಾರಿಗಳಿಗೆ ವಿಶೇಷ ಸವಲತ್ತು. ಹೆಚ್ಚಿನ ಮಾಹಿತಿ ಏಜಂಟರಿಂದ.

ಏಜಂಟ್ಸ್ — **ನಾಗರ್ಕಟ್ಟಿ ಬ್ರದರ್ಸ್,**
ಸುಧಾಂಜನ ಡಿಪೋ,
ಕುಮಟಾ. (ಜಿಲ್ಲಾ ಕಾರವಾರ.)

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ವಿಷಯಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ.

ಈ ವರೆಗೆ ಪ್ರಕಟವಾದ ಪುಸ್ತಕಗಳು.

(೧-೨) ಗ್ರೀಸ ದೇಶದ ಗಾಂಧಿ. (ಸಾಕ್ರೆಟೀಸ) (೩) ಸ್ವಾತಂತ್ರ್ಯಸಾಧನೆ. (೪) ಗುರು-ಹಿರಿಯರೂ, ಬಂಧು-ಭಗಿನಿಯರೂ. (೫) ರಾಷ್ಟ್ರೀಯ ಶಿಕ್ಷಣ (೬) ಸದ್ಗುಣಮಂದಿರ. (ಭಾಗ ೧.) (೭) ಸ್ವರಾಜ್ಯ ಧರ್ಮ. (ಅನಾಮಿನ ಪುಸ್ತ) ಅವಿಷ್ಟು ಪ್ರಕಟವಾಗಿದ್ದು, ೫ ಆಣೆಗೆ ಒಂದರಂತೆ ದೊರೆಯುತ್ತವೆ. ವರ್ಗಣೀದಾರರಿಗೆ ಹಿಂದಿನ ಬೇಕಾದ ಪುಸ್ತಕಗಳು ೪ ಆಣೆಗೆ ಒಂದರಂತೆ ದೊರೆಯುವವು. ೬ ಪುಸ್ತಕಗಳಿಗೆ ಕೂಡಿ ೧|| ರೂಪಾಯಿ ಮಾತ್ರ. ಅಂಚೆವೆಚ್ಚ ಬೇರೆ. ದ್ವಿತೀಯ ವರ್ಷ ಪ್ರಾರಂಭ. ಅನುಕ್ರಮವಾಗಿ ಮಾರ್ಚ, ಮೇ, ಜುಲೈ, ಸಪ್ಟಂಬರ, ನವಂಬರ, ಜನವರಿ ೧೫ ನೇ ತಾರೀಖಿಗೆ ಒಂದೊಂದು ಪುಸ್ತ ಹೊರಡುವದು, ವಾ. ವ. ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ.

ವಾ. ಅ. ಹೊದ್ಕೆ
ರಾಷ್ಟ್ರೀಯ ಶಾಲಾಧ್ಯಾಪಕರ ಶಿರಸಿ,

ಎಲ್ಲ ತರದ ಜ್ವರಗಳಮೇಲೆ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ, ಶೈತ್ಯ, ಬಂಗಲಿ, ಅಥವಾ ದೂಷಿತ ಹವೆಯಿಂದ ಬರುವ ಸಾದಾ ವಿಷಾರೀ ಅಥವಾ ಇತರ ಜ್ವರಗಳೂ, ಇನಫ್ಲುಎಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನ್ಯಾನದ ದುಷ್ಪರಿಣಾಮರಹಿತ ಕೇವಲ ವನಸ್ಪತಿಯ ಈ ಮದ್ದು ಸೇವಿಸಿದರೆ ಅಶಕ್ತತೆಯಾಗದೆ, ಬೆವರು ಬಂದು ಜ್ವರ ಇಳಿಯುತ್ತದೆ. ಹಾಗು ರೋಗಿಯು ತರಿತ ವಾಸಿಯಾಗುತ್ತಾನೆ.

೭ ಔಂಸ ಬಾಟ್ಲಿ ಕಿಂಮತ ರೂ. ೧-೦-೦.

ಇದರ ಹೊರತು ಇನ್ನೂ ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ, ಉತ್ಕೃಷ್ಟ ಪ್ರತಿಯ ಕೋಲನ ವೊಟರ, ಲವೆಂಡರ ಇತ್ಯಾದಿ ಸಾಮುಗ್ರಿಗಳು ಅಲೆಂಬಿಕ್‌ದ ಕಾರಖಾನೆಯಲ್ಲಿ ತಯಾರಾಗುತ್ತವೆ. ಮರಾಠಿ ಕೆಟಲಾಗು ತರಿಸಿರಿ.

ಅಲೆಂಬಿಕ್ ಕೆಮಿಕಲ್ ವರ್ಕ್ಸ್,
ಕಂಪನಿ, ಲಿಮಿಟೆಡ್.
ನಂ. ೫೦, ಪ್ರಿನ್ಸೆಸ್‌ಸ್ಟ್ರೀಟ, ಮುಂಬಯಿ.

अलेंबिक केमिकल वर्क्स कं० लि०
नं. ५० प्रिन्सेस स्ट्रीट मुंबई.

ಶುದ್ಧ ಖದ್ದರ್ ರೇಷ್ಮಿ ಮಡಿಗಳು.

ಸುಲಭ ಕ್ರಯಕ್ಕೆ ಖಾತ್ರಿಯಾದ ಎಲ್ಲಾ ರಂಗುಗಳಲ್ಲಿಯೂ ಈ ಕೆಳಗೆ ಬರೆದ ಕ್ರಯಕ್ಕೆ ದೊರೆಯುವದು.

೧೮ ಮೊಳ	ಉದ್ದ	೨||	ಅಗಲ	ರೂ	೨೭	ರಿಂದ	೨೫	ವರೆಗೆ
೧೬	,,	,,	೨||	,,	,,	೨೦	—	೩೦	,,
೮	,,	,,	೨||	,,	,,	೯	—	೧೫	,,
೬	,,	,,	೨||	,,	,,	೭	—	೧೧	,,

S U N. & CO
BENARES CITY

ಅಂಗಿ ಬಟ್ಟೆಗಳು ೧೮ ಮೊಳ × ೨ ಮೊಳ ರೂಪಾಯಿ ೧೮ ರಿಂದ ೩೦ ವರೆಗೆ. ಶೇಟ ೧೨ ಮೊಳ × ೧|| ಮೊಳ ಅಗಲ ರೂಪಾಯಿ ೧೦ ರಿಂದ ೧೫ ವರೆಗೆ ಚೀನ್‌ಕಾನ್ ೧೪ ಮೊಳ × ೨ ಮೊಳ ರೂ. ೨೪ ರಿಂದ ೩೫ ವರೆಗೆ ಇವುಗಳಲ್ಲದೆ ಕಾಶೀ ಪೀತಾಂಬರ ಕಾಶ್ಮೀರ್ ಶಾಲು, ರುದ್ರಾಕ್ಷಿ, ಜಾಗಂಟೆ, ಶಾಳ, ಕಸ್ಮೀರ್ ದಾನಿ, ಆಟದ ಸಾಮಾನುಗಳು, ದೇವರ ಮತ್ತು ಗಾಂಧಿ ಮುಂತಾದವರ ಪಟಗಳಿರುವ ಉಂಗುರಗಳ ಮತ್ತು ಇನ್ನೂ ಅನೇಕ ಸಾಮಾನುಗಳ ಕ್ಯಾಟಲಾಗ್ ಇನಾಂ.

ವಿಳಾಸ:— ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. (ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶರಾಶಿಯನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲು ಉಪಕರಣವಾದರೋ.

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ತೊಡೆದುಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ತಕ್ಕಾಗಿ, ನ ... ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹೂಡಿದ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡಿಕೊಳ್ಳುವದಕ್ಕಿಂತ ಒಂದೇ-ಯೊಂದು ಬಾರಿ ಈ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ನ್ಯೂಜಿಲ್ಯಾಂಡ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಅನೇಕ ಗೃಹಸ್ಥರ ಉತ್ಕೃಷ್ಟೋತ್ಕೃಷ್ಟವಾದ ಮಾನಪತ್ರಗಳೂ ದೊರಕಿವೆ.

ಕ್ರಯ — ಸೀಸೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0, ವಿ.ಪಿ. ಖರ್ಚ (1 1 0).

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಆಕರ್ಷಕವಾಗಿದೆ ಚನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ಲೇಸಿದ್ದವಾದುದು ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಸುಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆ 1 ಕ್ಕೆ 0-3-0, 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0, 4 ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0 ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12 0.

Address:- **The Anglo Indian Drug & Chemical Co,**
16, Market, **BOMBAY. 2.**

ಆರೋಗ್ಯಚಂದ್ರಿಕೆ.

ಈ ಪತ್ರಿಕೆಯ ಸಂಪಾದಕರು ಮದ್ರಾಸಿನ ಡಾಕ್ಟರ್ ಯು. ರಾಮರಾವ್, ಎಮ್. ಎಲ್. ಸಿ. ಯವರು. ಈ ಆರೋಗ್ಯ ಮತ್ತೂ ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೂ ಶಿಕ್ಷಣ ದೊರೆಯುವದಕ್ಕಾಗಿ ಪ್ರರ್ಕಟಿಸಿದ

ಒಂದು ಸಚಿತ್ರ ಮಾಸಪತ್ರಿಕೆ

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು.

'ಹೆಲ್ತ' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯು ನೋಡಿ ಸಂತೋಷಿಸಿಹ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸಿ, ಪ್ರಥಮ ಸಂಚಿಕೆಯು ಈ ತಿಂಗಳಲ್ಲಿ ಪ್ರಕಟವಾಗಿಯದೆ

ಅಂಚೆಯವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂಪಾಯಿ ೧—೮—೦. ಬಿಡಿ ಪತ್ರಿಕೆ ಒಂದಕ್ಕೆ ೦—೩—೦

ಚಂದಾದಾರರಾಗುವವರು ವಿ. ಪಿ. ಮುಖಾಂತರವಾಗಿ ತರಿಸಿಕೊಳ್ಳುವದರಿಂದಲೂ ಹಣವನ್ನು ಮುಂಗಡವಾಗಿ ಕಳುಹುವದು ಲಾಭಕರ

ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು "ಆರೋಗ್ಯಚಂದ್ರಿಕೆ"ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು

ಪತ್ರವ್ಯವಹಾರ ವಿಳಾಸ —

ಮೆನೇಜರ್,
'ಹೆಲ್ತ್' ಅಥವಾ
'ಆರೋಗ್ಯಚಂದ್ರಿಕೆ' ಆಫೀಸ.
೩೨೩, ತಂಬುಚೆಟ್ಟಿ ಬೀದಿ, ಮದರಾಸ್.

ಮೂರ್ತಿಗಳು ಬೇಕೋ?

ನಮ್ಮಲ್ಲಿ ಭಂಗಾರ, ಬೆಳ್ಳಿ, ಪಂಚಧಾತು, ಹಿತ್ತಾಳಿ ತಾಮ್ರ ಈ ತರೇಶಿಲೆಯ ಮೂರ್ತಿಗಳೂ, ಇದಲ್ಲದೆ ಬಾಣಪೀಠಗಳೂ, ಪ್ರಭಾವಳಿಗಳೂ, ಈಶ್ವರ ಮುಖವಟಿಗಳೂ, ನಾಗಾಭರಣಗಳೂ, ಕವಚುಗಳೂ ಯಾವದೇ ತರದ ಪ್ರತಿಮೆಗಳೂ ನಮ್ಮಲ್ಲಿ ಯೋಗ್ಯ ದರಕ್ಕೆ ಮಯೋಗ್ಯ ಹೊತ್ತಿಗೆ ಮಾಡಿ ಕೊಡಲ್ಪಡುವವು. ಬೇಕಾದವರು ಪತ್ರವ್ಯವಹಾರ ಮಾಡಿ ಯಾ ಸಮಕ್ಷ ಬಂದು ದರವಾರ ತಿಳಕೊಳ್ಳಬಹುದು

ಪತ್ತೆ —**ನಾರಾಯಣ ಹುವಯ್ಯ ಶೇಟ,**
ಗುಡಗಾರ, ಗುಜರಗಲ್ಲಿ, ಕುಮಟಾ
(ಉ. ಕಾನಡಾ.)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧. ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೪೫, ೫೦, ೬೦.
೨. ,, ಕಾಲು ಪೆಟಿಗೆ ಕಿಂ ೬೫, ೭೫, ೧೫೦, ೧...
೩. ತಬಲೆ ಜೋಡಿ ಕಿಂ ೧೩, ೧೫, ೧೮ ೨೦
೪. ಹಾರ್ಮೋನಿಯಮ ಗ್ರ್ಯಾಡ ಕಿಂ. ೧|, ತಬಲೆ ಗ್ರ್ಯಾಡ ಕಿಂ ೧೨ ಆ.

ಸಿಶೇಷ ಮಾಹಿತಿ ಬಗ್ಗೆ ನಮ್ಮ ಕ್ಯಾಟಲಾಗ ಪುಕ್ಕಟೆ ಕೊಡುವೆವು

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡತಕ್ಕದ್ದು

ಪತ್ತೆ :— **ಗೋಪಾಳ ಸಖಾರಾಂ ಮಾ ಮಾಸ್ತಿ ಕಂಪನಿ, ನಂ ೨೬೨**
ಕಾಳಬಾದೇವಿ ರೋಡ, ಮುಂಬಯಿ

Wanted.

Wanted an Inspector for Co-operative Societies in Kanara. Pay Rs 30/- and allowance Rs 10/- monthly with future prospects. Candidates having good knowledge and experience of co-operative work will be preferred. Applicants must send in their applications with testimonials before the 1st of November 1923.

Sirsi, 27 9 1923 } **P. N. Pandit,** Managing Director, Kanara District Central Co-operative Bank Ltd.

ನೋಟೀಸು.

ಸನ್ 1923 ನೇ ಇಸವಿ ಸಪ್ಟಂಬರ ತಿಂಗಳ ತಾರೀಕು 28 ರಲ್ಲು ಯಲ್ಲಾಪೂರ ತಾಲೂಕ ಇಡಗುಂದಿ ಗ್ರಾಮದ ಶ್ರೀ ರಾಮಲಿಂಗ ದೇವರ ಮೊಕ್ತೇಸರ ೧. ಶಂಕರ ಶೇಷಗಿರಿ ಹೆಗಡೆ ಸೂಳಗಾರ, ೨. ಸುಬ್ರಾಯ ಶಂಕರ ಭಟ್ಟಾ, ೩. ರಾಮಯ್ಯಾ ಕಣಿ, ೪. ಸುಬ್ರಾಯ ದೇವಪ್ಪಾ ಗಾಂವಕಾರ, ೫. ವೆಂಕಪ್ಪಾ ರಾಮಯ್ಯಾ ಕೆರೆಗದ್ದೆ, ಈ ಐವರಿಗೆ— ತಾಲೂಕ ಮಜಕೂರ ಇಡಗುಂದಿಯಲ್ಲಿರುವ ೧. ಸುಬ್ಬಯ್ಯಾ ರಾಮಯ್ಯಾ ಬಿದ್ರೆಮನೆ, ೨ ನಾಗಪ್ಪಾ ಕೃಷ್ಣಪ್ಪಾ ಸೂವರ್ಣ ಕೂಡಾ ನಾವು ಈ ಮೂಲಕ ಸವಿನಯವಾಗಿ ಪ್ರಕಟಿಸುವದೇನಂದರೆ— ತಾವು ತಾರೀಕು 7-9-23 ನೇ ದಿವಸ ವಕೀಲಪ್ಪಾ ರಾ ರಜಿಸ್ಟರನಿಂದ ನಮಗೆ ಕಳಿಸಿದ ನೋಟೀಸು ಮುಟ್ಟಿ ಮಜಕೂರ ತಿಳಿಯಿತು. ಆದರೆ, ಈ ನೋಟೀಸು ನ್ಯಾಯಕ್ಕೆ ನ ನೀತಿಗೆ ಸರಿಯಾಗಿ ಇಲ್ಲಾ. ಕೇವಲ ನಮ್ಮಂಥ ಬಡವರಿಗೆ ತ್ರಾಸಕೊಡಬೇಕೆಂಬ ಹೇತುವಿನಿಂದ ವ ನಿಮ್ಮ ಪೈಕಿ ಕೆಲ ಪ್ರಮುಖರು ತಮ್ಮ ಸ್ವಾರ್ಥ ಸಾಧಿಸಿಕೊಳ್ಳುವ ಹೇತುವಿನಿಂದ ಕೊಟ್ಟದ್ದಾಗಿದೆ ಸದರಿ ನೋಟೀಸಿನಲ್ಲಿ ಇರುವ ಮಜಕೂರಿನಂತೆಯೇ ವರ್ತಿಸುವರೇ ನಾವು ಬಾಧ್ಯರಲ್ಲಾ ಮತ್ತು ನಮಗಿರುವ ಇನಾಮುಗಳು ನಾವು ಅನಾದಿ ಕಾಲದಿಂದಲೂ ವಂಶಪರಂಪರೆಯಾಗಿ ಅನುಭವಿಸುತ್ತಾ ಬರುತ್ತಿರುತ್ತೇವೆ ಆದ್ದರಿಂದ, ಸದರಿ ಇನಾಮುಗಳು ತಪ್ಪಿಸುವರೇ ತಮಗೆ ಎಷ್ಟು ಮಾತ್ರಕ್ಕೂ ಅಧಿಕಾರ ವಿಲ್ಲೆಂತಾ ಬೇರೆಯಾಗಿ ಹೇಳುವ ಕಾರಣ ಉಳಿಯಲಿಲ್ಲಾ. ನಾವು ನಮ್ಮ ಪೂರ್ವಜರು ಶ್ರೀ ದೇವರಲ್ಲಿ ಮಾಡತಕ್ಕ ಸೇವಾದಿಗಳ ಕೆಲಸಗಳನ್ನು ಪೂರ್ವಾಚಾರ ನೇಮಕ್ಕೆ ಅನುಸಾರವಾಗಿ ಚ್ಯುತಿ ಆಗದಂತೆ ಈವರೆಗೂ ಭಕ್ತಿಪೂರ್ವಕವಾಗಿ ಮಾಡಿಕೊಂಡು ಬಂದಿರುತ್ತೇವೆ. ಇದೇ ಕಾರಣದಿಂದ ನಮ್ಮನ್ನು ರಕ್ಷಿಸುವ ಥರಿಥಾರವು ಆ ಪರಮಾತ್ಮನಿಗೇ ಕೂಡಿರುವ ಕಾರಣ, ತಮ್ಮ ದುರಾಲೋಚನೆಯ ಹೇತುಗಳಿಗೆ ನಾವು ಎಂದೂ ಬಲಿಬೀಳಲಿಕ್ಕಿಲ್ಲಾ ಎಂತಾ ನಮ್ಮ ಮನೋದೇವತೆಯು ಹೇಳುತ್ತಿರುತ್ತದೆ. ಆದ್ದರಿಂದ ಆ ಜಗದೊಡೆಯನು ತಮಗೆ ಕೊಟ್ಟಿರುವ ವಿಕಾರ ಮತ್ತು ವಿಚಾರ ಇವುಗಳಲ್ಲಿ ವಿಕಾರವನ್ನು ಮೂಲೆಗಿಟ್ಟು, ವಿಚಾರದಿಂದ ಯಾವದೊಂದು ಕೃತ್ಯದಲ್ಲಿ ತಮ್ಮ ಮನಸ್ಸು ವ ಬುದ್ಧಿ ಪ್ರವೃತ್ತಿಗೊಳ್ಳುವ ಹಾಗೆ ತಮಗೆ ಆ ಪರಮಾತ್ಮನು ಸದ್ಬುದ್ಧಿ ಕೊಟ್ಟು, ಕೀರ್ತಿಗೂ, ಯಶಸ್ಸಿಗೂ ಪಾತ್ರರಾಗುವ ಹಾಗೆ ಮಾಡಲೆಂದು ನಾವು ಪ್ರಾರ್ಥಿಸುತ್ತೇವೆ.

(ಸಹಿ) ಸುಬ್ಬಯ್ಯಾ ರಾಮಯ್ಯಾ ಬಿದ್ರೆಮನೆ.
ನಾಗಪ್ಪಾ ಕೃಷ್ಣಪ್ಪಾ ಸೂವರ್ಣ.

ಏನೂ ಉಪದ್ರವವಾಗದೆ
ಕೂದಲು ತೆಗೆಯುವ

ಬಾದಶಾಹೀ ಸಾಬೂನು.

ಈ ಸಾಬೂನವನ್ನು ಬೇಕಾದಲ್ಲಿ ಹಚ್ಚಿರಿ; ಅಲ್ಲಿಯ ಕೂದಲುಗಳು, ಚರ್ಮವನ್ನು ಯಾವದೇ ರೀತಿಯಿಂದ ಕಲಂಕಿಸದೆ, ಅತ್ಯಂತ ಸಫಾಯಿಯಿಂದ ಉದುರಿಹೋಗುತ್ತವೆ ಚರ್ಮವು ಮೃದುವಾಗುತ್ತದೆ. ೩ ಬಟ್ಟಿಗಳ ಪೆಟ್ಟಿಗೆ ೧ ರ ಬೆಲೆ ಖರೇ ೧ ರೂಪಾಯಿ ಟಪಾಲ ಹಾಸಲು ೪ ಆಣೆ ಒಂಟಿ ಬಟ್ಟಿಯನ್ನು ಕಳಿಸಲಾಗುವದಿಲ್ಲ. ೩-೩ ಬಟ್ಟಿಗಳುಳ್ಳ ೪ ಪೆಟ್ಟಿಗೆಗಳ ಕಿಮ್ಮತ್ತು ರೂಪಾಯಿ ೩/ ಅಂಚೆ ಹಾಸಲು ಮಾಫ ಬಾದಶಾಹೀ ಸಾಬೂನಿನ ಉತ್ಕೃಷ್ಟತೆಯ ಬಗ್ಗೆ ಕಲಕತ್ತಾ, ಕರಾಚಿಗಳ ಪ್ರದರ್ಶನಗಳಲ್ಲಿ ಸುವರ್ಣ ಪದಕಗಳು ಇನಾಮಾಗಿ ದೊರೆತಿವೆ.

ನಕಲೀ ಮಾಲಿನ ಬಗ್ಗೆ ಎಚ್ಚರಿಕೆ; ಮೋಸ ಹೋಗಬೇಡಿರಿ.

ರಜಿಸ್ಟರ ನಂ. ೫೨೫, ತಪ್ಪಾಸ ಮಾಡಿಕೊಂಡು ಖರೇದಿ ಮಾಡಿರಿ. ಅಲ್ಲಲ್ಲಿ ಏಜಂಟರು ಬೇಕು.

ಸಿ. ಸಿ. ಮಹಾಜನ ಎಂಡ್ ಕಂಪನಿ,
ಮುಂಬಯಿ ನಂ. ೪.

ಟೀಪು.— ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಯಾ ಹಿಂದಿನಲ್ಲಿ.

ಕಾರವಾರ ಜಿಲ್ಹಾ ಕೌನ್ಸಿಲ ಮತದಾರರಿಗೆ ವಿನಂತಿ.

ಬಾಂಧವರೇ,

ಈಗ ಮುಂಬಯಿ ಕಾಯಿದೆ ಕೌನ್ಸಿಲಕ್ಕೆ ಹೊಸದಾಗಿ ಮೆಂಬರರನ್ನು ಆರಿಸಿ ಕಳಿಸಿಕೊಡುವ ಸಂಸಧಿಯು ಹೋದ ೩ ವರ್ಷಗಳ ನಂತರ ಈಗ ಮತ್ತೊಮ್ಮೆ ಬಂದಿರುತ್ತದೆ ಇದರ ಬಗ್ಗೆ ನಮ್ಮ ಕಾರವಾರ ಜಿಲ್ಹೆಯ ಪತಿಯಿಂದ ಪ್ರಿಯ ಮಂಜನಾಥ ದೇವರ ಭಟ್ಟ ಶರ್ಮ ವಕೀಲ ಇವರು ಉಮೇದವಾರರಾಗಿ ನಿಂತಿದ್ದು, ಅವರು ವಿನಂತಿ ಪತ್ರಗಳದ್ವಾರಾ ಈ ಕೂಡಲೇ ತಮ್ಮೆಲ್ಲರಿಗೆ ಜಾಹೀರಪಡಿಸಿರುತ್ತಾರೆ.

ಸರಕಾರಕ್ಕೆ ಅರ್ಜಿ, ವಿನಂತಿಗಳನ್ನೂ, ಡೆಪ್ಯುಟೇಶನ್ ಗಳನ್ನೂ, ನಿಷೇಧ ಮಾಡುವಂಥ ಖರೇ ಠರಾವು ಗಳನ್ನೂ ಸರಕಾರದ ಕಡೆಗೆ ಕಳಿಸಿ ಅದರಿಂದೇನೂ ಲಾಭವಾಗುವದಿಲ್ಲೆಂಬುವದೂ ಈಗ ಎಲ್ಲರಿಗೂ ಗೊತ್ತಾಗಿರುವದು. ಕಾರಣ ಬರುವ ಕೌನ್ಸಿಲ ಚುನಾವಣೆಯಲ್ಲಿ ಆವುಗಳನ್ನು ಕಾಬೀಜುಮಾಡಿ ಅಲ್ಲಿ ನಮ್ಮ ದುಃಖಕಾರಕ ಪ್ರಗತಿಗಳನ್ನು ದೂರಪಡಿಸುವ ಠರಾವುಗಳನ್ನೂ ತಂದು ಅವನ್ನು ಪಾಸ ಮಾಡಿಕೊಂಡಲ್ಲಿ ನಮಗೆ ನಿಶ್ಚಯವಾಗಿ ಲಾಭವಾಗದೇ ಇರಲಾರದು. ಆದ್ದರಿಂದ, ಇಂಥ ಮಹತ್ವದ ಕೌನ್ಸಿಲ ಚುನಾವಣೆಯ ಕೆಲಸಕ್ಕೆ ನಮ್ಮ ದೇಶದ ಹಿತವನ್ನು ಚಿಂತಿಸುವವರೂ, ಬಡವರ ಗೋಳುಗಳನ್ನೂ, ಅವರ ಮೇಲೆ ಆಗುವ ಜುಲುಮುಗಳನ್ನೂ ದೂರ ಮಾಡಲಿಕ್ಕೆ ಖಟಪಟ ಮಾಡುವವರೂ ಲೋಕಮಾನ್ಯತೆ ಕಡೆಗೆ ಲಕ್ಷಗೊಟ್ಟು, ಸರಕಾರದ ಭೀತಿ-ಮುಲಾಜೆಗಳನ್ನು ಇಡದೆ, ತಮ್ಮ ಮತಗಳನ್ನು ನಿರ್ಭೀಡತನದಿಂದ ಕೊಡುವವರೂ ಆದ ಮೆಂಬರರನ್ನೇ ಆರಿಸಿ, ಕಳಿಸುವದು ನಮ್ಮ ಕರ್ತವ್ಯವಾಗಿರುತ್ತದೆ. ಮಹಾಜನ ಕಾಂಗ್ರೆಸ ಪಕ್ಷದ ಜನರಿಗೆ ಆರಿಸಿ ಕಳುಹಿಸುವದರಿಂದ ದೇಶಕ್ಕೆ, ಹಿತವಾಗುವಂಥ ಅತಿ ಸುಲಭವಾದ ಕೆಲಸಗಳು ಸಹ ಅವರಿಂದ ಮಾಡಲಿಕ್ಕೆ ಆಗುವದಿಲ್ಲೆಂಬುದು ಈ ಮೂರು ವರ್ಷಗಳ ಅನುಭವದಿಂದ ಎಲ್ಲರಿಗೂ ಪೂರ್ಣ ಗೊತ್ತಾಗಿರುತ್ತದೆ. ಉದಾಹರಣೆಗಾಗಿ ಮಹಾತ್ಮಾ ಗಾಂಧಿಯಂಥ ಜಗತ್ತಿನಲ್ಲಿ ಶ್ರೇಷ್ಠನೆನಿಸಿಕೊಳ್ಳುವಂಥ ಸಾಧುವಿಗೆ ಸಹ ವ್ಯರ್ಥವಾಗಿ ತುರಂಗವಾಸ ಅನುಭವಿಸಲಿಕ್ಕೆ ಹಚ್ಚಿದವರನ್ನೂ, ಮತ್ತು ದೇ. ಭ. ಅಲಿಬಂಧು, ಅಲ್ಲೀಬಂಧು ಮುಂತಾದ ಅಗ್ರಗಣ್ಯ ಪುಢಾರಿಗಳಿಗೆ ವಿವಿಧ ರೀತಿಯಿಂದ ಪೀಡಿಸುವವರನ್ನೂ, ದೂರಪಡಿಸುವ ಪ್ರಯತ್ನವೂ ಸಹ ಆವರ ಕಡೆಯಿಂದ ಎಳ್ಳಷ್ಟೂ ಆಗಲಿಲ್ಲ. ಅಷ್ಟೇ ಅಲ್ಲ, ಈ ಸನ್ಮಾನ್ಯ ಪುಢಾರಿಗಳಿಗೆ ತುರಂಗದಿಂದ ಬಿಡಬೇಕೆಂದು ಕೌನ್ಸಿಲದಲ್ಲಿ ಮೂನ್ಸೆ ಠರಾವು ಬಂದ ಪ್ರಸಂಗದಲ್ಲಿಯೂ ಸಹ, ಹೋದ ಕೌನ್ಸಿಲ ಚುನಾವಣೆಯಲ್ಲಿ ಆರಿಸಿ ಬಂದಂಥ ಮೆಂಬರ ಜನರು ತಮ್ಮ ಅನುಕೂಲ ಮತಗಳನ್ನು ಸಹ ಕೊಡದೆ, ಅವರಿಗೆ ಬಿಡುಗಡೆಯಾಗಿ ವಿರುದ್ಧ ಮತಗಳನ್ನು ಕೊಟ್ಟರು. ಕಾರಣ, ಈ ಸಾರೆ ಯಾವರೂ ಇಂಥ ನಿರುಪಯೋಗಿ ವ ದೇಶದ್ರೋಹಿ ಮಹಾಶ ಜನರಿಗೆ ಮತಗಳನ್ನು ಕೊಡದೆ, ಯಾರು ಖಾದಿ ಬಟ್ಟೆಗಳನ್ನು ಧರಿಸುವವರೂ ಕಾಂಗ್ರೆಸ ಕಮೀಟಿಯ ಮೆಂಬರರೂ, ಜನರ ವಿಶ್ವಾಸಕ್ಕೆ ಯೋಗ್ಯರೂ ಆಗಿ ವ ಜನರ ಅಡಚಣಿಗಳನ್ನು, ವಿಶೇಷವಾಗಿ ಜಂಗಲಖಾತೆಯಿಂದ ನಮಗಾಗುವ ತ್ರಾಸುಗಳನ್ನು ದೂರ ಮಾಡಲಿಕ್ಕೆ ಮನಃಪೂರ್ವಕವಾಗಿ ಯತ್ನಿಸುತ್ತೇವೆಂದು ವಚನವನ್ನು ಕೊಟ್ಟವರನ್ನೇ ಮೆಂಬರರಾಗಿ ಆರಿಸಿ ಕಳಿಸುವದು ಯೋಗ್ಯವಾಗಿರುವದು.

ಈ ಪ್ರಕಾರ ಕೆಲಸ ಮಾಡುವದಕ್ಕೆ ನಮ್ಮ ಜಿಲ್ಹೆಯಿಂದ ಮುಂದೆ ಬಂದಂಥ ಉಮೇದವಾರರಲ್ಲಿ ಹೊನ್ನಾವರದ ದೇ. ಭ. ಮಂಜನಾಥ ದೇವರ ಭಟ್ಟ ಶರ್ಮ ವಕೀಲ ಇವರೊಬ್ಬರಿದ್ದಾರೆ. ಅವರ ಈ ವರೆಗಿನ ಚರಿತ್ರೆಯ ಮೇಲಿಂದ; ಅವರು ಪ್ರಾಮಾಣಿಕರಾದ ವಕೀಲರೂ, ನಿರ್ಭೀಡತನದಿಂದ ತಮ್ಮ ಕೆಲಸವನ್ನೂ, ನಮ್ಮ ಜಿಲ್ಹೆಯ ಜನರ ಅಡಚಣಿಗಳನ್ನೂ, ಜಂಗಲಖಾತೆಯಿಂದಾಗುವ ತ್ರಾಸುಗಳನ್ನೂ ಚನ್ನಾಗಿ ತಿಳಕೊಂಡಂಥವರೂ ಆಗಿರುತ್ತಾರೆ. ಅದಲ್ಲದೆ, ಅವರು ಕೆಲವು ದಿವಸ ನಮ್ಮ ಜಿಲ್ಹಾ ಕಾಂಗ್ರೆಸ ಕಮೀಟಿಯ ಅಧ್ಯಕ್ಷರೂ, ಆಲ್ ಇಂಡಿಯಾ ಕಾಂಗ್ರೆಸ ಕಮೀಟಿಯ ಮೆಂಬರರೂ ಸಹ ಇದ್ದರು. ಜೊತೆಗೆ ಮುನಿಸಿಪಾಲಿಟಿ, ಲೋಕಲಬೋರ್ಡ ಮೊದಲಾದ ಪ್ರಾತಿನಿಧಿಕ ಸಂಸ್ಥೆಗಳಲ್ಲಿ ಬಹು ದಿವಸಗಳಿಂದ ಕೆಲಸ ಮಾಡಿದವರೂ ಇರುತ್ತಾರೆ. ಮೇಲಾಗಿ ಅವರು ಜನರ ಅಡಚಣಿಗಳನ್ನು ದೂರಪಡಿಸಲಿಕ್ಕೆ ಮನಃಪೂರ್ವಕವಾಗಿ ಯತ್ನಿಸುತ್ತೇವೆಂದು ವಚನವನ್ನು ಸಹ ಕೊಟ್ಟಿರುತ್ತಾರೆ.

ಆದ್ದರಿಂದ, ಸದರಿ ದೇ. ಭ. ಶರ್ಮ ವಕೀಲ ಇವರಿಗೇ ನೇ ತಾ. ೧ ನವಂಬರ ನೇ ದಿವಸ ಆಗುವ ಚುನಾವಣೆಯಲ್ಲಿ ನಿಮ್ಮ ಮತಗಳನ್ನು ಕೊಟ್ಟು, ನಿಮ್ಮ ಮೇಲೆ ಇದ್ದಂಥ ಮತಕೊಡುವ ಜವಾಬದಾರಿಯನ್ನು ಯೋಗ್ಯರೀತಿಯಿಂದ ಕೊನೆಗಾಣಿಸಬೇಕಾಗಿ ತಮ್ಮೆಲ್ಲರಿಗೆ ಆಗ್ರಹಪೂರ್ವಕ ವಿನಂತಿಯಿದೆ.

ಹಳಿಯಾಳ. } ಒಬ್ಬ ಮತದಾರ.
ತಾ. ೩-೧೦-೧೯೨೩.

— ಲಂಡನ ಪಟ್ಟಣದಲ್ಲಿ ಭೂಮಿಯ ಒಳಗಿಂದೊಳಗೆ ಉಗಿಬಂಡಿಗಳು ನಡಿಸುವ ವ್ಯವಸ್ಥೆಯು ಸದ್ಯಕಲ್ಲೇ ಆಗುವದಿದೆ. ಆವುಗಳಿಗೆ ಉಗಿಬಂಡಿಯ ಚಾಲಕನ, ಅಂದರೆ, ಡ್ರ್ಯಾಯ್ವರನ ಅವಶ್ಯಕತೆಯಿಲ್ಲ. ತಾಸಿಗೆ ೩೦ ಮೈಲು ಓಡುತ್ತವಂತೆ.

Notice.

NOTICE is hereby given to the public that our client Mr Shantaram Mangesh Kulkarni, has learnt that his son Jayavant Shantaram Kulkarni has started a partnership business of Commission Agents under the name and style of Jayavant Shantaram & Co

The said Jayavant is separate in food, worship, and estate from our client, and the property in the possession of our client except ng the ancestral immoveable property in Karwar District worth about Rs 600 - is his self acquired property and the said Jayavant Shantaram Kulkarni is in no way interested in the same The said Jayavant Shantaram Kulkarni is at present only entitled to 1 7 share in the ancestral property Any dealings of the said Jayavant Shantaram Kulkarni in the Commission Agents business carried on by him in partnership or in any other capacity will not be binding on our client and the property in the hands of our client, and the said Jayavant Shantaram and his partners will be solely responsible for the same Our client Mr Shantaram Mangesh Kulkarni is in no way concerned with the business carried on by the said Jayavant Shantaram with other partners under the name and style of Jayavant Shantaram and Co, Our client has been long since carrying on business under the name and style of Shantaram Mangesh & Co, in which the said Jayavant has no interest

Dated this 3rd day of October 1923

Dabholkar & Jeshtaram,

Attorneys for Mr. Shantaram Mangesh Kulkarni.

— ಮುಂಬಯಿಯಲ್ಲಿ ರಾಷ್ಟ್ರೀಯ ಸ್ತ್ರೀ ಸಭಾ-ಮಾಸೀಕ ರಾಜಕೀಯ ಸಭೆಗಳ ವತಿಯಿಂದ ಮಾರವಾಡಿ ವಿದ್ಯಾಲಯ ದಲ್ಲಿ ಮಹಾತ್ಮರ ವರ್ಧಂತ್ಯುತ್ಸವವನ್ನು ಸಾದರಪಡಿಸಲು ಕಳೆದ ರವಿವಾರ ತಾ. ೩೦ನೇಯಿಂದ ೩ ದಿನಗಳ ವರೆಗೆ ಖಾದಿ ಪ್ರದರ್ಶನವು ನಡೆಯಿತು ಪ್ರದರ್ಶನದಲ್ಲಿ ಚಿತ್ತಾಕರ್ಷಕ ಖಾದಿಯ ಅನೇಕ ನಮೂನೆಗಳಿದ್ದವು

— ಸರ್ ನಾರಾಯಣ ಚಂದಾವರಕರರ ಮುಂಬಯಿಯ ಸ್ಮಾರಕ ಫಂಡಿಗೆ ರೂಪಾಯಿ ೭,೪೫೭ ಬಟ್ಟಾಗಿವೆ

ಅಸಹಕಾರಿತೆಯೊಂದೇ ಉಪಾಯವು.

ಲಾಲಾಜಿಯವರ ಅಭಿಪ್ರಾಯ

(ವಾರ್ತಾ ಪ್ರಸಾರಕ ಸಂಘದ ಶ್ರೀ ರಂಗರಾವ ದಿವಾಕರ ಇವರು 'ಸೋಲನ'ದಲ್ಲಿ ತೆಗೆದುಕೊಂಡ ಲಾಲಾಜಿಯವರ ಮುಲಾಖತು)

ಲಾಲಾ ಲಜಪತರಾಯರು ಸದ್ಯಕ್ಕೆ ಸೋಲನದ ಏಕಾಂತ ಪ್ರದೇಶದಲ್ಲಿ ರಾಜಕೀಯ ಅಥವಾ ಯಾವದೇ ತರದ ಕಟಕಟ ಇಲ್ಲದಲೆ ನಿಶ್ಚಿಂತರಾಗಿ ಇರಹತ್ತಿದ್ದಾರೆ ಕಲ್ಕಾದಿಂದ ಸಿಮ್ಲಾಕ್ಕೆ ಹೋಗುವ ದಾರಿಯಲ್ಲಿ ಸಮುದ್ರ ಪ್ರದೇಶದಿಂದ ೪೯೦೦ ಫೂಟು ಎತ್ತರವಾದ 'ದಲ್ಲಿ "ಸೋಲನ"ವು ಇರುತ್ತದೆ ಅಲ್ಲಿಯ ಹವೆಯು ಅಲ್ಹಾದಕರವೂ, ಆರೋಗ್ಯಕರವೂ ಇರುತ್ತದೆ ಈಗ ಅಲ್ಲಿ ಚಳಿಗಾಲವು ಪ್ರಾರಂಭವಾಗಿದೆ ಸೋಲನದಲ್ಲಿ ಲಾಲಾ ಲಜಪತರಾಯರು ತಮ್ಮ ಮನೆಯವರ ಸಹಿತ ಇರುತ್ತಾರೆ ಅವರ ಪ್ರಕೃತಿಯು ಗುಣವಾಗಹತ್ತಿದ್ದು ಇನ್ನೂ ಸಂಪೂರ್ಣ ನೆಟ್ಟಗಾಗಿಲ್ಲ ಪ್ರತಿದಿವಸ ಸಂಜೆಯ ಕಡೆಗೆ ೧೦೦ ಅಂಶದವರೆಗೆ ಅವರಿಗೆ ಜ್ವರವು ಏರುತ್ತದೆ ಕೊಂಗ್ರೆಸದ ಜಾದಾ ಅಧಿವೇಶನದ ಕಾಲಕ್ಕೆ ಸೋಲನದಲ್ಲಿ ಎಲ್ಲ ಕಡೆಯ ಮುಂದಾಳುಗಳ ಗದ್ದಲವಾದದ್ದರಿಂದಲೂ ಅವರೆಲ್ಲರ ಕೂಡ ಲಾಲಾಜಿಯವರಿಗೆ ಬೇರೆ ಬೇರೆ ರೀತಿಯಿಂದ ಸಂಭಾಷಣ ಮಾಡಬೇಕಾದ್ದರಿಂದಲೂ ಅವರ ಮನಸ್ಸು ನೆಟ್ಟಗಾಗಲಿಕ್ಕೆ ಅವಕಾಶ ಸಿಕ್ಕಿದಂತೆ ತೋರುತ್ತದೆ ಅವರ ಒಳಗಿನ ಪ್ರಕೃತಿಯು ಇನ್ನೂ ನಿರ್ಬಲವಾಗಿರುವದಲ್ಲದೆ ಮತ್ತು ಅವರಿಗೆ ಬರುವ ಜ್ವರರೋಗದ ಬಾಧೆಯೂ ಇರುತ್ತದೆ 'ಇನ್ಸೋಮ್ನಿಯಾ' ರೋಗದ ಬಾಧೆಯಿಂದ ಕೆಲ ಕೆಲವು ರಾತ್ರಿಗಳನ್ನು ಅವರು ನಿದ್ರೆಯಿಲ್ಲದಲೇ ಕಳೆಯುತ್ತಾರೆ ಇದಾಗ್ಯೂ ಅವರ ಪ್ರಕೃತಿಯು ಬೇಗ ಸುಧಾರಿಸಲಾರದ್ದಕ್ಕೆ ಯಾವ ಕಾರಣವಿಲ್ಲ ಸದ್ಯಕ್ಕೆ ದೊರೆಯುವಂತೆ ಇನ್ನು ಮುಂದೆಯಾದರೂ ಅವರಿಗೆ ವಿಶ್ರಾಂತಿಯು ದೊರೆತರೆ, ಅವರಿಗೆ ಶೀಘ್ರವೇ ಗುಣವಾಗಬಹುದು. ಮತ್ತು ಅವರು ಕೋಕನಾಡಾ ರಾಷ್ಟ್ರೀಯ ಮಹಾಸಭೆಗೂ ಹಾಜರ ಆಗಬಹುದು

ಇತರ ಜನರಂತೆ, ನನಗಾದರೂ ಲಾಲಾಜಿಯವರ ರಾಜಕೀಯ ಮತಗಳನ್ನು ವಿಚಾರಿಸುವ ಕುತೂಹಲವು ಉತ್ಪನ್ನವಾಗಿ, ನನ್ನ, ಅವರ ಪ್ರಶ್ನೋತ್ತರಗಳು ಸಾರಾಂಶವಾಗಿ ಕೆಳಗಿನ ಪ್ರಕಾರ ಸಂಭವಿಸಿದವು

ಪ್ರಶ್ನೆ— ದೇಶವು ಕಾಯಿದೆ ಭಂಗಕ್ಕೆ ತಯಾರ ಆಗಿರುವದೋ? ದಿಲ್ಲೀ ಕಾಂಗ್ರೆಸಿನಲ್ಲಿ ನಿಯಮಿಸಲ್ಪಟ್ಟ ಸತ್ಯಾಗ್ರಹ ಕಮೀಟಿಯ ವಿಷಯಕ್ಕೆ ತಮ್ಮ ಮತವೇನಿದೆ?

ಉತ್ತರ— ಸಾಮುದಾಯಿಕ ಕಾಯಿದೆ ಭಂಗಕ್ಕೆ ದೇಶವು ಎಳ್ಳಷ್ಟೂ ತಯಾರ ಇರುವದಿಲ್ಲ ವೈಯ್ಯಕ್ತಿಕ ಕಾಯಿದೇ ಭಂಗವನ್ನು ಮಾಡಲಿಕ್ಕೆ ಎಲ್ಲರೂ ಸ್ವತಂತ್ರರೇ ಇರುತ್ತಾರೆ ಈ ಪ್ರಸಂಗದಲ್ಲಿ ಸತ್ಯಾಗ್ರಹ ಮಂಡಳವನ್ನು ಸ್ಥಾಪಿಸಿದ್ದು ಅಯೋಗ್ಯವೆಂದು ನನ್ನ ಮತವಿದೆ ಕಾಯಿದೇ ಭಂಗವನ್ನು ಪ್ರಾರಂಭಿಸಲಿಕ್ಕೆ ಎಂಥ ಕಠಿಣ ನೇಮಗಳನ್ನು ಮಹಾತ್ಮರು ಹಾಕಿದ್ದಾರೆಂಬುದನ್ನೂ, ಆಂಧ್ರದವರು ಕಾಯಿದೆ ಭಂಗಕ್ಕಾಗಿ ಸಿದ್ಧರೂ, ಆತುರರೂ ಇದ್ದಾಗ್ಯೂ ಕೂಡ, ಮಹಾತ್ಮರು ಅವರನ್ನು ಹೇಗೆ ಬಿಗಿಹಿಡಿದರೆಂಬುದನ್ನೂ ಎಲ್ಲರೂ ಬಲ್ಲವರಿದ್ದಾರೆ ಮತ್ತು ಕಾಯಿದೆ ಭಂಗವು ಒಮ್ಮೆ ಪ್ರಾರಂಭವಾಯಿತೆಂದರೆ, ಅದು ಶಾಂತವಾದ ವಿಧಾಯಕ ಕಾರ್ಯವನ್ನೆಲ್ಲ ಕೆಡಿಸಿಬಿಡುತ್ತದೆ ಆದ್ದರಿಂದ, ಒಳ್ಳೇ ಪೂರ್ವ ತಯಾರಿಯ ಹೊರತು ಸತ್ಯಾಗ್ರಹಕ್ಕೆ ಕೈ ಹಾಕಬಾರದೆಂದು ನನ್ನ ಮತವು

ಪ್ರಶ್ನೆ— ಶೀಘ್ರವಾಗಿ ಸ್ವರಾಜ್ಯವನ್ನು ಸ್ಥಾಪಿಸಲಿಕ್ಕೆ ಮಹಾತ್ಮರ ಕಾರ್ಯಕ್ರಮವೇ ಸರಿಯಾದದ್ದೋ? ಅಥವಾ ಅದರಲ್ಲಿ ಹೆಚ್ಚು ಕಡಿಮೆ ಮಾಡಬೇಕೋ?

ಉತ್ತರ— ಅಹಿಂಸಾತ್ಮಕ ಅಸಹಕಾರಿತೆಯೇ ಮುಖ್ಯ ವಾದ ಸಾಧನವು ಆದರೂ ಕೌನ್ಸಿಲುಗಳನ್ನು ಸೇರಿಯೂ ಕೂಡ ನಾವು ಸರಕಾರದವರ ಸಂಗಡ ಅಸಹಕಾರಿತೆಯನ್ನು ಬೆಳೆಸಬಹುದು

ಪ್ರಶ್ನೆ— ಮಹಾತ್ಮರಿಗೆ ಕೌನ್ಸಿಲ ಬಹಿಷ್ಕಾರದ ಉಪದೇಶವನ್ನು ತಾವೇ ಮಾಡಿದವರಲ್ಲವೇ? ಈಗೇಕೆ ಮತವನ್ನು ಬದಲಾಯಿಸಿದಿರಿ?

ಉತ್ತರ— ಸರಕಾರದವರು ಯಾವ ಪ್ರಕಾರ ತಮ್ಮ ಧೋರಣವನ್ನು ಬದಲಾಯಿಸುವರೋ, ಅದೇ ಪ್ರಕಾರ ನಮಗಾದರೂ ಧೋರಣವನ್ನು ಬದಲಾಯಿಸಬೇಕಾಗುವದು.

ಪ್ರಶ್ನೆ— "ನಾಭಾ" ಪ್ರಶ್ನದ ಬಗ್ಗೆ ತಮ್ಮ ಅಭಿಪ್ರಾಯವೇನಿದೆ?

ಉತ್ತರ— ಅದು ಶಿಕ್ಷರ ಪ್ರಶ್ನೆಯಾಗಿದೆ ಅಕಾಲಿ ಜನರು ಈ ಪ್ರಕರಣವನ್ನು ಎತ್ತಿಹಿಡಿದದ್ದು ನ್ಯಾಯವೇ ಸರಿ ಅವಶ್ಯ ಬಿದ್ದರೆ, ಹಿಂದೂ-ಮುಸಲ್ಮಾನರೂ ಶಕ್ಯವಿದ್ದಷ್ಟು ರೀತಿಯಿಂದ ಅಕಾಲಿಗಳಿಗೆ ಸಹಾಯ ಮಾಡತಕ್ಕದ್ದು.

ಪ್ರಶ್ನೆ— ತರುಣ ಜನರನ್ನು ತಯಾರಿಸುವದಕ್ಕಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಸ್ಥೆಯನ್ನು ಸ್ಥಾಪಿಸಲಿಕ್ಕೆ ತಾವು ಸಮ್ಮತಿಸುವಿರೇನು?

ಉತ್ತರ— ಅದಕ್ಕೆ ನನ್ನ ಪೂರ್ಣ ಬೆಂಬಲವಿದೆ ಆದರೆ ಇಂಥ ಸಂಸ್ಥೆಗಳು ಸ್ವತಂತ್ರವಾಗದೆ, ರಾಷ್ಟ್ರೀಯ ಸಭೆಯ ನೇತೃತ್ವದಲ್ಲಿಯೇ ಸ್ಥಾಪಿಸಲ್ಪಡತಕ್ಕದ್ದು ನಿಸ್ವಾರ್ಥ ಸ್ವಯಂಸೇವಕರನ್ನು ತಯಾರಿಸದೆ ಹೋದರೆ, ರಾಷ್ಟ್ರೀಯ ಸಭೆಯ ಮುಂದೆ ನಿಜವಾದ ಕಾರ್ಯವೇ ಯಾವದೂ ಉಳಿಯಲಿಕ್ಕಿಲ್ಲ ನನಗೆ ನೆಟ್ಟಗಾದ ಮೇಲೆ, ರಾಷ್ಟ್ರೀಯ ಸಭೆಗೆ ಪುನರುಜ್ಜೀವನ ತರುವದಕ್ಕಾಗಿ ಸ್ವಯಂಸೇವಕರ ಸಂಘಟನೆಯ ಕಾರ್ಯವನ್ನು ನಾನೇ ಸ್ವತಃ ನಡಿಸುವವನಿದ್ದೇನೆ

ಗೆರಸಪ್ಪೆಯ ಅಳತೆ.

ಮಾನ್ಯ ಪತ್ರಕರ್ತರೇ,

ಈ ಕೆಳಗೆ ಸಹಿ ಮಾಡುವವರ ಜಾಹೀರ ವಿನಂತಿಗೆ ನಿಮ್ಮ ಸನ್ಮಾನನೀಯ ಪತ್ರದಲ್ಲಿ ಸ್ಥಳ ದೊರೆಯಬಹುದೆಂಬ ಪೂರ್ಣ ನಂಬಿಗೆ ಇದೆ

ನಮ್ಮಲ್ಲಿಂದ ಗಿರಾಕಿಗಳು ಯಾವಾಗಲೂ ಭತ್ತವನ್ನು ತರುವ ಬಗ್ಗೆ ಗೆರಸಪ್ಪಾ ಬಂದರಕ್ಕೆ ನಿರಂತರ ಭತ್ತ ತರುವ ಬಗ್ಗೆ ಹೋಗುತ್ತಾರೆ ಅಲ್ಲಿಯ ಗೆರಸಪ್ಪೆಯ ವ್ಯಾಪಾರಸ್ಥರು ಕಡಿಮೆ ಅಳತೆಯಿಂದ ಭತ್ತವನ್ನು ಅಳೆದು ಕೊಡುತ್ತಾರೆ ಈ ಸಂಗತಿಯು ನಮ್ಮ ಸ್ವಂತ ವ್ಯಾಪಾರದ ಮೇಲಿಂದ, ಬೇರೆ ಜನರ ಗೋಳಾಟದ ಮೇಲಿಂದ ತಿಳಿಯುತ್ತದೆ ಅಲ್ಲಿಂದ ತಂದ ಭತ್ತ ಚೀಲ ೧ ಕ್ಕೆ ಕಳೆ ೬ ಕ್ಕೆ ೩೦ ಕೊಳಗ ಆಗುವದರ ಬದಲು, ೨೭-೨೭||-೨೮ ಆಗುತ್ತದೆ ಅದರ ಅದು ಗಿರಾಕಿಗಳ ಸುದೈವವೇ ಸರಿ ತೂಕದ ಕಲ್ಲುಗಳೂ ಸಹ ಕೆಲವರಲ್ಲಿ ಕಡಿಮೆ ಉಂಟು. ಈ ಕುರಿತು ಕೆಲವರ ಈ ಮುಂಚೆ ಅರ್ಜಿಗಳನ್ನು ಮಾಡಿದ್ದಾರಂತೆ ಈ ಬಗ್ಗೆ ಇದುವರೆಗೆ ಸರಕಾರ ತರ್ಫೇನ ತನಿಖಿ ನಡೆದದ್ದು ಇರುವದಿಲ್ಲ ಈಗಾದರೂ, ನಿಮ್ಮ ಪತ್ರದ್ವಾರಾ ಈ ನಮ್ಮ ಹೇಳಿಕೆ ಪ್ರಕಟವಾದ್ದರಿಂದ, ನಮಗೆ ಆಗುತ್ತಿರುವ ಲುಕ್ಸಾಣಿಯನ್ನು ಹೋಗಲಾಡಿಸಲು ಯತ್ನಿಸಬೇಕಾಗಿ ಸವಿನಯ ಪ್ರಾರ್ಥನೆ ಇದೆ ಹೊನ್ನಾವರ ತಾ. ೩ ೧೦-೧೯೨೩

೧ ರಾಮಚಂದ್ರ ಬಾಳು ಶ್ಯಾನಭಾಗ ೨ ವಿಠೋಬಾ ಮಂಜುನಾಥ ಶೈ ೩ ಅನಂತ ಮಂಜುನಾಥ ನಾಯ್ಕ ೪ ಶ್ರೀನಿವಾಸ ರಾಮಚಂದ್ರ, ಕಾಮತ ನಸ್ರಕಾರ, ೫ ಪಾಂಡುರಂಗ ಹರಿ ಶೈ ೬. ಪಾಂಡುರಂಗ ಮಂಜುನಾಥ ಶ್ಯಾನಭಾಗ, ೭ ಕೃಷ್ಣಪ್ಪ ತಿಮ್ಮಪ್ಪ ಹೊನ್ನಾವರ, ೮ ಸುಬ್ರಾಯ ಮಾಧವ ಕಾಮತ ೯ ಅಚ್ಯುತ ಕೃಷ್ಣ ಕಿಣಿ ೧ ಲಕ್ಕೋತ ೧೦ ಸುಬ್ರಾಯ ಜನಾರ್ಧನ ಹೆಗಡೆ ೧೧. ವಾಸುದೇವ ಶೆಷಗಿರಿ ಕಾಮತ, ೧೨ ನ್ಹಾ. ಜಿವ ಹಾವೇ ೧೩ ಶ್ರೀನಿವಾಸ ಶೇಷಗಿರಿ ಕಾಮತ ೧೪ ನಾರಾಯಣ ಕೃಷ್ಣ ಕಿಣಿ ಕಲಕೆರಾಜ, ೧೫ ಪದ್ಮನಾಭ ವೆಂಕಟೇಶ ದಗರಕರ

ವಿವಿಧ ಸಂಗ್ರಹ.

ಮಹಾತ್ಮರ ಬಿಡುಗಡೆಯ ಭವಿಷ್ಯ

ಮಹಾತ್ಮರ ಬಿಡುಗಡೆಯ ಬಗ್ಗೆ ಹೊಸ ಭವಿಷ್ಯವೊಂದು ಪ್ರಕಟವಾಗಿದೆ. ಬಿಹಾರ ಪ್ರಾಂತದೊಳಗಿನ ಸೌಗೋರ ಜಿಲ್ಲೆಯ ಖುಶ್ರುಪುರದಿಂದ ಬಾಬು ಗಯಾ ಪ್ರಸಾದ ಮಿಶ್ರರವರು ತಿಳಿಸುವದೇನಂದರೆ:— ಮಹಾತ್ಮಾ ಗಾಂಧೀಜೀಯವರ ಜಾತಕದ ಲೆಕ್ಕದ ಮೇಲಿಂದ, ಅಕ್ಟೋಬರ ೩೧ ೧೯ ನೇಯಿಂದ ಡಿಸೆಂಬರ ೩೧. ೩೪ ನೇ ವರೆಗಿನ ೩ ತಿಂಗಳುಗಳಲ್ಲಿ ಅವರು ಬಿಡುಗಡೆ ಹೊಂದುವ ಲಕ್ಷಣಗಳು ತೋರುತ್ತಿವೆ. ಚಂದ್ರನು ಉಚ್ಚಸ್ಥಾನದಲ್ಲಿದ್ದು, ಆ ಕಾಲದ ಅಧಿಪತಿಯಿರುವನು. ಚಂದ್ರನು ಲಾಭದಾಯಕನೂ ಇರುವನು. ಇದೇ ಸಮಯದಲ್ಲಿ 'ನೋಬೆಲ್ ಪಾರಿತೋಷಕವು' ಶಾಂತ ವ್ಯಕ್ತಿಯ ಬಗ್ಗೆ, ಶಾಂತ ವೃತ್ತಿಯನ್ನು ಪ್ರಚುರಗೊಳಿಸಿದ ಬಗ್ಗೆ ದೊರಕಾವ ಸುದ್ದಿ ಎಬ್ಬಿದೆ. ಲಾಭದಾಯಕ ಚಂದ್ರನ ಫಲದ ಪ್ರಸಾದ ಚೆನ್ನಿದಿಬೇನು?

***

ಜಂಬುಲಿಂಗಮನ ಶೌರ್ಯ.

ಜಂಬುಲಿಂಗಮನು ವಿಖ್ಯಾತ ದರೋಡೆಖೋರನು. ತ್ರಾವಣಕೋರ ಸಂಸ್ಥಾನ, ತಿನೆವೆಲ್ಲಿ ಮೊದಲಾದ ಪ್ರದೇಶಗಳಲ್ಲಿ ಅವನು ಕಳವು ಮಾಡಿ ಹಾವಳಿ ಎಬ್ಬಿಸುತ್ತಿದ್ದನು. ಜಂಬುಲಿಂಗಮನದೊಂದು ಕಳವು ಮಾಡುವ ಸಂಗಡವಿತ್ತು. ಸಂಗಡಿಗರೊಡನೆ ಹಳ್ಳಿಗಳನ್ನು ಸೇರಿಕೊಂಡು, ಪ್ರಜೆಗಳಿಂದ ಬಲಾತ್ಕಾರ ಮಾಡಿ, ಹಣದ ನ್ನೆತ್ತುತ್ತಿದ್ದನು. ವಿರೋಧಕರಿಗೆ ಕ್ರೂರತನದಿಂದ ಕೊಲೆ ಮಾಡಲಿಕ್ಕೆ ಅವನು ಹಿಂಜರಿದವನಲ್ಲ. ಇವನನ್ನು ಹಿಡಿಯಬೇಕೆಂದು ಪೋಲೀಸ ಬಹಾದ್ದೂರರು ಬಹಳ ಯತ್ನಿಸಿದರು. ಪೋಲೀಸರಿಗೆ ಆಶ್ಚರ್ಯವಾಗಿ, ಜಂಬುಲಿಂಗಮನು ತನ್ನ ಸುಲಿಗೆಯ ವ್ಯಾಪಾರವನ್ನು ಅಪ್ರತಿಹತವಾಗಿ ನಡೆಸಿದ್ದನು. ಕಳೆದ ಪಕ್ಷದಲ್ಲಿ ಅವನು ಒಂದು ಹಳ್ಳಿಯಲ್ಲಿ ಸೇರಿಕೊಂಡಿರುವನೆಂದು ಪೋಲೀಸರಿಗೆ ಸುದ್ದಿ ಹತ್ತಿತು. ಕೂಡಲೆ, ಪೋಲೀಸರು ಒಂದು ಪಾರ್ಟಿಯನ್ನು ಮಾಡಿಕೊಂಡು, ಆ ಹಳ್ಳಿಯನ್ನು ಮುತ್ತಿದರು. ಆದರೆ ಅವರಿಗೆ ಜಂಬುಲಿಂಗಮನಿದ್ದ ಮನೆಯ ಪತ್ತೆ ಹತ್ತಲಿಲ್ಲ. ಏನು ಮಾಡುವದು? ಹೇಗೆ ಪತ್ತೆ ಹಚ್ಚುವದು? ಎಂದು ಪೋಲೀಸರಿಗೆ ವಿವಂಚನೆಯಾಯಿತು. ಇತ್ತ ಜಂಬುಲಿಂಗಮನೂ, ಹೇಗೆ ಪಾರಾಗುವದು' ಎಂದು ಯೋಚಿಸುತ್ತಿದ್ದನು. ಅವನ ಹತ್ತರ ೫೦೦ ಕಾಡತೂಸುಗಳಿದ್ದವು. ಪೋಲೀಸರು, ಹೆಚ್ಚೆಂದರೆ, ೩೦ ೪೦ ಮಂದಿಗಳಿರಬಹುದು. ಅವರನ್ನು ತಾನು ಸುಲಭವಾಗಿ ಯಮಸದನಕ್ಕಟ್ಟಬಲ್ಲೆನು ಎಂದು ಭಾವಿಸಿ, ಗುಂಡು ಹೊಡೆಯಲಾರಂಭಿಸಿದನು. ಪೋಲೀಸರು ಹಳ್ಳಿಯ ಮುತ್ತಿಗೆಯನ್ನು ತೆಗೆದು, ಮನೆಗೆ ಮುತ್ತಿಗೆಹಾಕಿದರು. ಆಗ ಜಂಬುಲಿಂಗಮನಿಗೂ, ಪೋಲೀಸರಿಗೂ ಯುದ್ಧವಾಯಿತು. ಜಂಬುಲಿಂಗಮನ ಗುಂಡುಗಳಿಂದ ಅನೇಕ ಪೋಲೀಸರು ಘಾಯಹೊಂದಿ, ಬಿದ್ದರು. 'ಮತ್ತಷ್ಟು ಪೋಲೀಸರನ್ನು ಕಳಿಸಿರಿ' ಎಂದು ತಂತಿಗಳು ಮಾಡಲ್ಪಟ್ಟವು. ಸಹಾಯಾರ್ಥವಾಗಿ ಪೋಲೀಸರು ಮೋಟಾರುಗಳಿಂದ ಬರುವಷ್ಟರಲ್ಲಿ, ಇಲ್ಲಿ ಒಂದು ಚಮತ್ಕಾರವು ಸಂಭವಿಸಿತು. ಪೋಲೀಸರು ಜಂಬುಲಿಂಗಮನಿದ್ದ ಮನೆಗೆ ಬೆಂಕಿಹಚ್ಚಿಬಿಟ್ಟರು. ಜಂಬುಲಿಂಗಮನೂ, ಜತೆಗಾರರೂ ನೆರೆಯ ಮನೆಯನ್ನು ಸೇರಿಕೊಳ್ಳುವಾಗ, ಮನೆಯ ಯಜಮಾನನು ಅಡ್ಡಿಮಾಡಿದನು. ಅವನಿಗೆ ಹೊಡೆಯಲು ಗುರಿಹಿಡಿಯುವಷ್ಟರಲ್ಲಿ, ಘಾಬರಿಯಾಗಿ ಅವನು ಪಲಾಯನ ಮಾಡಿದನು. ಪೋಲೀಸರು ಮನೆಗೆ ಬೆಂಕಿಹಾಕಿ, ಜಂಬುಲಿಂಗಮನನ್ನು ಸಂಕಟಕ್ಕೀಡುಮಾಡಲು ಆ ಮನೆಯ ಯಜಮಾನನನ್ನು ಹುರಿದುಂಬಿಸಿದರು. ಯಜಮಾನನು ತನ್ನ ಕೈಯಿಂದ, ತನ್ನ ಮನೆಗ್ಗೆ ಬೆಂಕಿಹಚ್ಚಿದನು. ಮನೆಯು ಹುಲ್ಲಿನದಿದ್ದದರಿಂದ, ಕೂಡಲೆ, ಜ್ವಾಲ್ಯಬರಿಯಿಂದ ಅಗ್ನಿನಾರಾಯಣನು ಮನೆಯನ್ನು ಮುತ್ತಿಬಿಟ್ಟನು. ಜಂಬುಲಿಂಗಮನಿಗೂ, ಅವನ ಜತೆಗಾರರಿಗೂ ಈಗ ಎರಡೇ ಮಾರ್ಗಗಳು ಉಳಿದಿದ್ದವು. ಮನೆಯಲ್ಲುಳಿದು, ಸುಟ್ಟು ಬೂದಿಯಾಗುವದೊಂದು ಉಪಾಯ; ಹೊರಬಿದ್ದು, ತಪ್ಪುವಿನ ಕೂಡ ಹೋರಾಡಿ, ನಿಧನ ಹೊಂದುವದು ಎರಡನೇ ಉಪಾಯವು. 'ಕಾಳೀ' ಎಂಬ ಅವನ ಜೊತೆಗಾರನು ಮೊದಲು ಹೊರಬಿದ್ದನು. ಹಾದಿಯಲ್ಲಿಯೇ ಒಬ್ಬ ಪೋಲೀಸನು ನಿಂತಿದ್ದನು. ಅವನಿಗೆ ಗುಂಡುಹಾರಿಸಿ ಅವನು ಕೊಂದನು. ಅಷ್ಟರಲ್ಲಿ, ಜಂಬುಲಿಂಗಮನು ಅವನ ಬೆನ್ನಿಗೆ ಹೊರಬಿದ್ದನು. ಪೋಲೀಸರೆಲ್ಲರೂ ಅವನ ಬೆನ್ನುಹಿಂದ ಓಡಿದರು. ಕಟ್ಟಕಡೆಗೆ, ಅವನನ್ನು ಹಿಡಿದು, ಎಲ್ಲರೂ ಕೂಡಿ ಅವನೊಬ್ಬನನ್ನು ಕೊಂದರು. ಜಂಬುಲಿಂಗಮನ ಶೌರ್ಯ ನೋಡಿರಿ.

***

ವೇಶ್ಯಾ ಸ್ತ್ರೀಯರ ಪ್ರದರ್ಶನ.

ಸಾಮ್ರಾಜ್ಯ ಪ್ರದರ್ಶನದಲ್ಲಿ ಹಿಂದುಸ್ಥಾನದ ವಸ್ತುಗಳನ್ನು ಪ್ರದರ್ಶನ ಮಾಡುವ ಹಕ್ಕು ಹಿಂದುಸ್ಥಾನಕ್ಕೆ ದೊರೆತಿದೆ. ಮದ್ರಾಸ ಇಲಾಖೆಯ ಪ್ರದರ್ಶನದ ಚಾಲಕರು ಅಲ್ಲಿಂದ ವೇಶ್ಯಾ ಸ್ತ್ರೀಯರ ಒಂದು ತಂಡನ್ನು ಪ್ರದರ್ಶನಕ್ಕಾಗಿ ವಿಲಾಯತಿಗೆ ಕಳಿಸುವರೆ ಯೋಚಿಸಿರುವರು. ಇದನ್ನು ಕೇಳಿ ಮದ್ರಾಸ ಇಲಾಖೆಯಲ್ಲಿಯೂ ಕೋಲಾಹಲವೆಬ್ಬಿದೆ. ಮದ್ರಾಸಿನ 'ಸ್ವರಾಜ್ಯ' ಪತ್ರಿಕಾಕರ್ತರು ಕೆ. ರಾಜ ಜಿ. ಎಸ್. ಲೀಫ ಎಂಬ ಮದ್ರಾಸಿನವರ ಮುಲಾಖತನ್ನು ಪಡೆದರು. ಇಂಥ ಯೋಜನೆಗೆ ಯಾವದೇ ಸುಧಾರಿಸಿದ ಸರಕಾರವು ಎಂದೂ ಇಂಬುಗೊಡಬಾರದೆಂದು ಅವರ ಮತ. ಭಾರತೀಯ ಸ್ತ್ರೀಯರನ್ನು ಅಪಮಾನ ಮಾಡುವ ಯೋಜನೆಯಿದೆಂದು ಅನೇಕ ಪತ್ರಿಕಾಕರ್ತರು ಅಭಿಪ್ರಾಯಬಡುತ್ತಾರೆ. 'ಮುಂಬಯಿ ಕ್ರಾನಿಕಲ್' ಕರ್ತರು, ಪ್ರಾಂತಾಧಿಪರಾದ ವಿಲಿಂಗಡನ್ ದೊರೆಗಳು ಅನೇಕ ಮೂರ್ಖತನದ ಕೃತ್ಯಗಳನ್ನಾಚರಿಸಿದರೂ, ಈ ಕೃತ್ಯವು ಅವರ ಮೂರ್ಖತನದ ಪರಮಾವಧಿಯ ದ್ಯೋತಕವೆಂದು ಅಭಿಪ್ರಾಯಪಡುತ್ತಾರೆ.

***

ಮೌಲಾನಾ ಹಜರತ್ ಮೋಹಾನಿ

ಮೌಲಾನಾ ಹಜರತ್ ಮೋಹಾನಿಯವರ ಮೇಲೆ ವಾರ್ಡರರಿಗೆ ಲಂಚಕೊಟ್ಟು, ವೃತ್ತ ಪತ್ರಗಳನ್ನು ತರಿಸಿ ಓದಿದ ಬಗ್ಗೆ ಖಟ್ಲೆಯಾಗಿತ್ತು. ಈ ಖಟ್ಲೆಯಲ್ಲಿ ಆರೋಪಿಗಳಾದ ಮೌಲಾನಾರವರು ಬಚಾವಿಗಾಗಿ ಶ್ರೀ ಶ್ರೀನಿವಾಸರಾವ ಕೌಜಲಗಿ ಮೊದಲಾದವರನ್ನು ಸಾಕ್ಷಿಗೆ ಕರೆದಿದ್ದರು. ಮೆಜಿಸ್ಟ್ರೇಟರು ಯರೋಡಾ ಜೈಲಿನ ಹೊರಗಿರುವ ಸಾಕ್ಷಿಗಾರರನ್ನು ಕರೆಸಲು ಒಪ್ಪಲಿಲ್ಲ. ಮೌಲಾನಾರವರು ಹೈಕೋರ್ಟಿಗೆ ಅಪೀಲು ಮಾಡಿದರು. ಅದು ಮೌಲಾನಾರವರಿಗೆ ವಿರುದ್ಧವಾಗಿ ನಿರಾಕರಣೆಯಾಯಿತು. ಆದರಿಂದ ಮೌಲಾನಾರವರು ತಮ್ಮ ಬಚಾವು ಮಾಡಿಕೊಳ್ಳಲೊಪ್ಪದೆ, ಅಸಹಕಾರಿತೆಯನ್ನು ಆಶ್ರಯಿಸಿದರು. ಜೈಲಿನೊಳಗಿನ ಸುನಾವಣಿ ಮಾಡುವ ಕೋರ್ಟು ನ್ಯಾಯದಂತೆ ನಡೆಯುವದಿಲ್ಲೆಂದು ಜಾಹೀರು ಮಾಡಿ, ಅವರು, ವಾರನೇದ್ದಿನ, ಅಂದರೆ, ಅಕ್ಟೋಬರ ೧ನೇ ತಾರೀಖಿಗೆ ತಾವು ಹಾಜರಿರಲಿಕ್ಕಿಲ್ಲೆಂಬು ತಿಳಿಸಿದರು. ಮಾರನೇದಿನ ಕೋರ್ಟಿಗೆ ಬರಲೊಪ್ಪದ್ದರಿಂದ, ಸರ್ಜಂಟರು ಅವರನ್ನು ಬಲಾತ್ಕಾರದಿಂದ ಎಳೆತಂದರು. ಮೆಜಿಸ್ಟ್ರೇಟರು ತೀರ್ಪನ್ನು ಹೇಳಿದರು. "ಹಜರತ್ ಮೋಹಾನಿಯವರು ಸುಶಿಕ್ಷಿತರಿದ್ದಾರೆ, ಜಾಣರಿದ್ದಾರೆ, ರಾಷ್ಟ್ರಸೇವಕರೆಂದು ಹೇಳಿಸಿಕೊಳ್ಳುತ್ತಾರೆ. ಇಂಥವರು ಜೈಲು ನಿಯಮಗಳನ್ನು ಪಾಲಿಸುವದು ಅವರ ಕರ್ತವ್ಯವು. ಹಜರತ್ ಮೋಹಾನಿಯವರ ಅಜ್ಞಾ ಇತರ ಕೈದಿ ಬಾಂಧವರಿಗೆ ಇದೊಂದು ಉದಾಹರಣೆಯಾಗಿ, ಅವರು ಜೈಲಿನ ನಿಯಮಗಳನ್ನು ಉಲ್ಲಂಘಿಸಿದಂತೆ, ಶಿಕ್ಷೆಯನ್ನೀಯುತ್ತೇವೆಂದು ನುಡಿದು, ಮೋಹಾನಿಯವರಿಗೆ ೩ ವರುಷಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು. ಮೌಲಾನಾರವರಂತೆ, ಇತರರೂ ಈ ಮುಂಚೆ ಇದೇ ರೀತಿಯಿಂದ ವೃತ್ತಪತ್ರಗಳನ್ನು ತರಿಸಿ ಓದುತ್ತಿದ್ದರೆಂದೂ, ತಾವೂ ಇದೇ ರೀತಿಯಿಂದ ನಡೆದೆವೆಂತಲೂ, ಇದೇನು ಅಪರಾಧವಲ್ಲೆಂತಲೂ ಮೌಲಾನಾರವರ ಹೇಳಿಕೆಯಿತ್ತು.

***

ಬಡವರ ಮನೆ ತೆಗೆದು, ಯುವರಾಜರ ಸ್ಮಾರಕ.

೧೯೨೧ ಸಾಲಿನಲ್ಲಿ ಯುವರಾಜರು ಹಿಂದುಸ್ಥಾನಕ್ಕೆ ಆಗಮಿಸಿದ್ದರು. ಆಗ ಅವರು ಮದ್ರಾಸ, ಅತ್ತಕಡೆಗೂ ಹೋಗಿದ್ದರು. ಅಲ್ಲಿ ಅವರ ಆಗಮನದ ಸ್ಮಾರಕ ಮಾಡುವದೆ, ಅಲ್ಲಿ ಈಗ ಒಂದು ಯೋಜನೆಯು ತಯಾರಾಗಿದೆ. ಈ ಯೋಜನೆಯಂತೆ, ಮದ್ರಾಸದ ವ್ಯಾಸಪೂರ ಸೆರೆಯ ಸಮುದ್ರ ದಂಡೆಯ ಮೇಲಿನ ಒಂದು ಹಳ್ಳಿಯು 'ಲ್ಯಾಂಡ ಎಕ್ವಿಝಿಶನ್ ಕಾಯಿದೆ'ಯಂತೆ ಸರಕಾರವು ಪಡೆಯುವದು. ಈ ಹಳ್ಳಿಯಲ್ಲಿ ಮೀನು ಹಿಡಿದು, ಸಂಸಾರ ಮಾಡುವ ಕೋಳೀ ಜಾತಿಯ ಜನರು ಈಗ ಪರಂಪರೆಯಿಂದ ಅಲ್ಲಿ ವಾಸವಾಗಿಕೊಂಡಿರುವರು. ಮೀನು ಹಿಡಿಯಲಿಕ್ಕೆ ಈ ಸ್ಥಳವು ಬಹಳ ಅನುಕೂಲವಿದೆ. ಇಂಥ ಪ್ರಶಸ್ತ ಹಳ್ಳಿಯೊಳಗಿನ ಬಡವರಿಗೆ ಈಗ ಮನೆಮಾರು ಮಾರಿಕೊಂಡು, ದೇಶಾಂತರ ಮಾಡಬೇಕಾಗಿದೆ. ಭಾರತೀಯರಿಗಂತು ಅನೇಕ ಕಾರಣಗಳಿಂದ, ಯುವರಾಜರ ಆಗಮನವು ಎಂದೂ ವಿಸ್ಮರಣೆಯಾಗದು. ಈ ಬಡ ಕೋಳೀ ಜನರಂತು ಯುವರಾಜರ ಆಗಮನದ ಸ್ಮಾರಕವನ್ನು, ತಮ್ಮ ದೇಶಾಂತರದ ಕಥೆಯನ್ನು ವಿಕಲ್ಪ ಮಾಡಿ, ವಂಶಪರಂಪರಾಗತ ಸ್ಮಾರಕವನ್ನು ನಡಿಸುವರು. ಯುವರಾಜರ ಆಗಮನದಿಂದ ಬಡವರಿಗೆ ದೇಶಾಂತರಕ್ಕೀಡುಮಾಡುವದು ಅಯೋಗ್ಯವೆಂದು ಅನೇಕರು ನುಡಿಯುತ್ತಾರೆ; 'ಲ್ಯಾಂಡ ಎಕ್ವಿಝಿಶನ್' ಕಾಯಿದೆಯ ದುರುಪಯೋಗವೆಂದು, ಬಡ ಹಳ್ಳಿಯ ಜನರು ಮದ್ರಾಸಿನ ಗವ್ಹರ್ನರರಾದ ವಿಲಿಂಗಡನ್ ದೊರೆಗಳಿಗೊಂದು ಅರ್ಜಿಯನ್ನು ಸಾದರ ಪಡಿಸಿರುವರು.

೨ನೇ ಕರ್ನಾಟಕ ಪ್ರಾಂತಿಕ ಪರಿಷತ್ತು.

(ವಾರ್ತಾಪ್ರಸಾರಕ ಸಂಘ, ಹುಬ್ಬಳ್ಳಿ.)

ಎರಡನೇ ಕರ್ನಾಟಕ ಪ್ರಾಂತಿಕ ಪರಿಷತ್ತು ಕೆಲವು ಅಪರಿಹಾರ್ಯ ಕಾರಣಗಳ ಮೂಲಕ ದಿನೇ ದಿನೇ ಮುಂದೆ ಹಾಕಲ್ಪಟ್ಟದ್ದು ಎಲ್ಲರಿಗೂ ವಿದಿತವಾದ ಸಂಗತಿಯು. ಆಗಸ್ಟ ೨೮ನೇ ತಾರೀಖಿಗೆ ಕೂಡಿದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯಲ್ಲಿ ಪ್ರಾಂತಿಕ ಪರಿಷತ್ತು ಬಾಗಲಕೋಟೆಯಲ್ಲಿ ಕೂಡಿಸಬೇಕೆಂದು ಗೊತ್ತಾಯಿತು. ದುರ್ದೈವದಿಂದ ಬಾಗಲಕೋಟೆಯಲ್ಲಿ ಪ್ಲೇಗು ಪ್ರಾರಂಭವಾಗಿರುವದು. ಆದ್ದರಿಂದ ವಿಜಾಪೂರ ಶಹರವು ಪರಿಷತ್ತಿಗೆ ಆಮಂತ್ರಣ ಕೊಡುವ ಭಾರವನ್ನು ತನ್ನ ಮೇಲೆ ತೆಗೆದುಕೊಂಡಿರುತ್ತದೆ. ಅವಧಿಯಾದರೂ ತೀರ ಕಡಿಮೆ ಇದ್ದದ್ದರಿಂದ, ಕಾರ್ಯದ ಬಲುವಾಗಿ ಸಂಶಯವೇ ಆದರೂ, ಈ ಜಿಲ್ಲೆಯ ಜನತೆಯ ಉದಾರತೆಯ ಹಾಗು ಸಹಾನುಭೂತಿಯ ಮೇಲೆ ಭರವಸ ಇಟ್ಟು ಮತ್ತು ಕರ್ನಾಟಕಸ್ಥರ ಕ್ರಮಶೀಲತೆಯ ಬಗ್ಗೆ ನಂಬಿ; ಈ ಕಾರ್ಯವನ್ನು ಕೈಕೊಂಡಿದ್ದೇವೆ. ಸ್ವಾಗತಮಂಡಳವನ್ನು ಇದೇ ತಿಂಗಳ ೨೦ನೇ ತಾರೀಖಿನೊಳಗಾಗಿ ರಚಿಸುವದಿರುವದರಿಂದ, ಪ್ರಾಂತದ ಎಲ್ಲ ಜಿಲ್ಲಾ ರಾಷ್ಟ್ರೀಯ ಮಂಡಳಗಳಿಗೆ ಪರಿಷತ್ತಿನ ಅಧ್ಯಕ್ಷರ ಹೆಸರನ್ನು ಇದೇ ತಿಂಗಳ ೧೫ನೇ ತಾರೀಖಿನೊಳಗಾಗಿ ಸೂಚಿಸಲಿಕ್ಕೆ ವಿನಂತಿ ಮಾಡಿಕೊಳ್ಳುತ್ತೇವೆ. ಅದೇ ಸಮಯದಲ್ಲಿಯೇ ಎಲ್ಲ ತರದ ಖಾದಿ ಹಾಗು ಸ್ವದೇಶೀ ವಸ್ತುಗಳ ಪ್ರದರ್ಶನವನ್ನು ಮಾಡುವದು ನಿಶ್ಚಯಿಸಿರುತ್ತದೆ. ಅದರ ಕಾರ್ಯದರ್ಶಿಗಳು, ಸ್ವದೇಶೀ ಪ್ರೇಮಿಗಳಿಗೆ ಈ ಸಂಗತಿಯನ್ನು ಲಕ್ಷ್ಯದಲ್ಲಿ ತೆಗೆದುಕೊಂಡು ಅವರ ಕಾರ್ಯದಲ್ಲಿ ಸಹಾಯ ಮಾಡಲಿಕ್ಕೆ ಸೂಚಿಸುತ್ತಾರೆ.

ನಮ್ಮ ವಾಚಕ ಮಹಾಶಯರಿಗೆ—

ಮಹನೀಯರೇ,

ಇದು 'ವೃತ್ತ'ದ ಸಪ್ತಮ ಸಂವತ್ಸರದ ೫೨ನೇ ಸಂಚಿಕೆಯು. ಈ ಸಂಚಿಕೆಯನ್ನು ನಿಮಗರ್ಪಿಸಿ, 'ವೃತ್ತ'ವು ಅಷ್ಟಮ ವರುಷದಲ್ಲಿ ಪ್ರವೇಶಿಸುವದು. ಕಳೆದ ಏಳು ವರುಷಗಳಲ್ಲಿ 'ವೃತ್ತ' ಕಿರಿವು ಸಾಧಿಸಿದ ದೇಶಸೇವೆಯನ್ನು ತಾವೆಲ್ಲರೂ ಅರಿತವರಿದ್ದೀರಿ. ನೌಕರಶಾಹಿಯುಗದ ಬಾಲ 'ವೃತ್ತ'ವು ಎಷ್ಟು ಧೈರ್ಯದಿಂದ, ಚಾತುರ್ಯದಿಂದ, ದಿಟ್ಟತನದಿಂದ, ಮರೆಮಾಚದೆ ಎದುರಾಗಿದೆಂಬುದೂ ತಾವು ಬಲ್ಲವರೇ. ಮಹಾತ್ಮರ ಅಹಿಂಸಾಪ್ರಧಾನ ಅಸಹಯೋಗದ ಕಾರ್ಯಕ್ರಮವನ್ನು ದೇಶದಲ್ಲಿ ಪುರಸ್ಕರಿಸುವರೆ, 'ವೃತ್ತ'ವು ಯಥಾಮತಿ, ಯಥಾಶಕ್ತಿ ದುಡಿದಿರುವದೆಂದು ತಾವಾಗಿ ಒಪ್ಪುವಿರಿ. ಚಳ್ವಳಿಯೊಳಗಿನ ವಾತಾವರಣದ ಶುಚಿತ್ವವನ್ನು ಕಾಪಾಡಲು, ಸ್ಥಾನಿಕ ವಿಷಯಗಳ ಮೇಲೆ ಸಹ, 'ವೃತ್ತ'ವು ದಾಕ್ಷಿಣ್ಯಕ್ಕೆ ಬಲಿಬೀಳದೆ, ನಿರ್ಧಾರದಿಂದ ಟೀಕಿಸಿ, ಕರ್ತವ್ಯದಕ್ಷತೆಯನ್ನು ಸಿದ್ಧಪಡಿಸಿದೆ ಪಟದ ಮೇಲೆ ದಾಖಲಾದ ತಾವೆಲ್ಲರೂ 'ವೃತ್ತ'ದ ಕಾರ್ಯಕ್ಷೇತ್ರದ ವ್ಯಾಪ್ತಿಯನ್ನೂ, ಜವಾಬದಾರಿಯನ್ನೂ ನೆನಿಸಿ, ಹಿಂದಿನಂತೆ, ಮುಂದೆಯೂ ತಮ್ಮ ಸಹಾಯವನ್ನು ಸಮರ್ಪಿಸುವರೆಂದು ಕೋರಿಕೆ. ಇದಲ್ಲದೆ, ಹೊಸ ಚಂದಾದಾರರನ್ನು ಸಹ ಒಟ್ಟುಮಾಡಿ, 'ವೃತ್ತ' ಸಂಗೋಪನಕ್ಕೆ ಅನುಕೂಲತೆಯನ್ನೀಯುವ ಜವಾಬದಾರಿಯು ಸಹ ತಮ್ಮದೇ. ಒಬ್ಬೊಬ್ಬರು ಇನ್ನೊಬ್ಬೊಬ್ಬ ಚಂದಾದಾರರನ್ನು ಸಂಪಾದಿಸಿಕೊಟ್ಟರೆ, 'ವೃತ್ತ'ಕ್ಕೆ ದೇಶಸೇವೆಯನ್ನು ನಡಿಸಲು ವಿಶೇಷ ಚೈತನ್ಯವೂ, ಸ್ಫೂರ್ತಿಯೂ ಪ್ರಾಪ್ತವಾಗುವವು. ವರ್ಷಾರಂಭದ ಚಂದಾದಾರರೆಲ್ಲರೂ ತಮ್ಮ ವರ್ಗಣಿ ರೂಪಾಯಿ ೩/-ನ್ನು ಮನಿಆರ್ಡರದ್ವಾರಾ ರವಾನಿಸುವರೆ, ನಮಗೂ ಅನುಕೂಲವು, ತಮಗೂ ಅನುಕೂಲವೇ ಯಾಕಂದರೆ, ವ್ಹಿ. ಪಿ. ಬಗ್ಗೆ ತಗಲುವ ೪ ಆಣೆಗಳು ತಮಗೆ ಉಳಿಯುವವು.

ಒಂದು ವಾರದ ಸೂಟಿ

ವಾಡಿಕೆಯಂತೆ 'ವೃತ್ತ'ವು ಒಂದು ವಾರದ ಸೂಟಿ ಪಡೆಯುವದು. ಅಷ್ಟಮ ವರುಷದ ಪ್ರಥಮ ಸಂಚಿಕೆಯು ತಾ. ೨೫-೧೦-೧೯೩೪ ನೇಗೆ ಹೊರಡುವದು. ಪ್ರಿಯ ವಾಚಕಮಹಾಶಯರೆಲ್ಲರೂ ಅದನ್ನು ಪ್ರೇಮಪೂರ್ವಕ ಆದರಿಸಬೇಕಾಗಿ ನಮ್ಮ ಬಿನ್ನಹವಿದೆ.

ಇತಿ ಮೆನೇಜರ

ಕಾನಡಾವೃತ್ತ.

ಗುರುವಾರ, ತಾರೀಖು ೧೧ ನೆಯ ಅಕ್ಟೋಬರ ೧೯೩೪

ದಿವಾಭೀತರ ರಾಜ್ಯ!

ನಾಭಾದ ಮಹಾರಾಜರಾದ ರಿಪುದಮನಸಿಂಗಜಿಯವರ ರಾಜ್ಯತ್ಯಾಗದ ಯಾನೆ ಪದಚ್ಯುತಿಯ ಕಥೆಯನ್ನು ನಮ್ಮ ವಾಚಕರು ಬಲ್ಲರು. ಈಗ ಅಲ್ಲಿ ಹಿಂದುಸ್ಥಾನ ಸರಕಾರದ ನೇತೃತ್ವದಲ್ಲಿ ಒಂದು ಕಾರಭಾರಿಗಳ ಮಂಡಳವು ಸ್ಥಾಪನೆಹೊಂದಿದೆ. ಅದರ ಅಧಿಪತಿಗಳು ಮಿ| ಜ್ಹೊನಸ್ಟನ್‌ರವರು ಸಂಸ್ಥಾನದಲ್ಲಿ ಈ ಕಾರಭಾರಿಗಳು ಅಕಾಲಿಗಳಿಗೆ ಬಹು ಪರಿಯಿಂದ ಕಾಡುತ್ತಿರುವರೆಂದು ಕೋಲಾಹಲ. ಮಹಾರಾಜರವರ ಅರಮನೆಯವರಿಗೆ ಇವರು ಬಹಳೇ ಉಪದ್ರವಗಳನ್ನು ಕೊಟ್ಟರು. ರಿಪುದಮನಸಿಂಗಜಿಯವರ ರಾಜ್ಯತ್ಯಾಗವು, ಹಿಂದುಸ್ಥಾನ ಸರಕಾರವು ನುಡಿಯುವಂತೆ, ಸ್ವಯಂಸ್ಫೂರ್ತಿಯಿಂದ ಒದಗಿಬರಲಿಲ್ಲೆಂದು ಅಕಾಲಿಗಳಿಗೆ ಖಾತ್ರಿಯಾಗಿ, ತಮ್ಮ ಮಹಾರಾಜರನ್ನು ಪುನಃ ಪ್ರಸ್ಥಾಪಿತ ಮಾಡುವರೆ ಅವರು ದಿವಾಣ ಮೊದಲಾ[illegible]ನ್ನು ಸೇರಿಸಿ, [illegible] ಮಾಡುತ್ತಿರುವ [illegible] ಜ್ಹೊನಸ್ಟನ್‌ರವರ ನೇತೃತ್ವದಲ್ಲಿ ಅಕಾಲಿ[illegible] ಅವರ್ಣನೀಯ ತಾಪವು ಒದಗಹತ್ತಿದ ಈ ಬಗ್ಗೆ ಅಲ್ಲಿ ನಡೆಯುವ ಸತ್ಯ ಸ್ಥಿತಿಯನ್ನು ಕಣ್ಣಾರೆ ಕಾಣುವರೆ, ರಾಷ್ಟ್ರಸೇವಕ ತ್ರಿಮೂರ್ತಿಗಳು ನಾಭಾ ಪಟ್ಟಣಕ್ಕೆ ಹೋಗಿದ್ದರು. ಪಂಡಿತ ಜವಾಹರಲಾಲ ನೆಹರು, ಆಚಾರ್ಯ ಗಿಡವಾನಿ, ತಮಿಳನಾಡು ಪ್ರಾಂತಿಕ ಕೊಂಗ್ರೆಸ ಕಮಿಟಿಯ ಕಾರ್ಯದರ್ಶಿಗಳಾದ ಪಂಡಿತ ಸಂತಾನಂ ಮಹಾಶಯರು ದಿಲ್ಲಿಯೊಳಗಿನ ರಾಷ್ಟ್ರೀಯ ಸಭೆಯ ಕಾರ್ಯವನ್ನು ಮುಗಿಸಿ, ನಾಭಾ ಸಂಸ್ಥಾನವನ್ನು ಸಪ್ಟಂಬರ ತಾರೀಖು ೨೧ ನೇಗೆ ಸೇರಿಕೊಂಡರು. ಅವರಿಗೆ ಒದಗಿದ ಬಂಧನವನ್ನು ವಾಚಕರು ಅರಿತಿರುವರು. ಪಂಡಿತ ಜವಾಹರಲಾಲ ನೆಹರೂರವರು ಈ ಕಥೆಯನ್ನು ಕೋರ್ಟಿಗೆ ಸಾದರಪಡಿಸಿದ ಕೈಫಿಯತಿನಲ್ಲಿ ತಮ್ಮ ಹಾಗು ಸಹಕಾರಿಗಳ ಬಂಧನದ ಕಥೆಯನ್ನು ಮನೋಹರವಾಗಿ ವಿವರಿಸಿರುವರು. ಅದರ ಮೇಲಿಂದ, ರಿಪುದಮನಸಿಂಗಜಿಯವರ ಕಾರಭಾರಕ್ಕೆ 'ಪ್ರಜಾಪೀಡಕ'ವೆಂದು ಅಚ್ಚು ಹೊಡೆದು, ಹಿಂದುಸ್ಥಾನ ಸರಕಾರವು ಏರ್ಪಡಿಸಿದ ಪಾಶ್ಚಾತ್ಯ ಸುಧಾರಣೆಯ ಕಾರಭಾರದ ಅರಿವು ಪ್ರಜೆಗಳಿಗುಂಟಾಗುವದು.

ಪಂಡಿತ ಜವಾಹರಲಾಲ ನೆಹರು, ಆಚಾರ್ಯ ಗಿಡವಾನಿ, ಪಂಡಿತ ಸಂತಾನಂ ಈ ಮೂವರು ಕೆಲ ಹಾದಿಯನ್ನು ಕುದುರೆಯ ಮೇಲಿಂದ, ಕೆಲ ಹಾದಿಯನ್ನು ಗಾಡಿಯ ಮೇಲಿಂದ, ಹೀಗೆ ಜೈತು ಪಟ್ಟಣದ ಕಡೆಗೆ ಸಾಗುತ್ತಿದ್ದರು. ಅವರೊಡನೆ ಅಕಾಲಿಗಳೇನೂ ಇದ್ದಿಲ್ಲ. ಜೈತು ಪಟ್ಟಣವು ಇನ್ನೂ ೨ ಮೈಲು ದೂರವಿರುವಾಗ, ಅವರಿಗೊಂದು ಅಕಾಲಿಗಳ ಜಥಾ ಸಿಕ್ಕಿತು. ಕೂಡಲೆ, ಜವಾಹರಲಾಲ ಮೊದಲಾದವರು ಕಾಲು ನಡಿಗೆಯಿಂದ ಅಕಾಲಿಗಳನ್ನು ಹಿಂಬಾಲಿಸಿದರು. ಏನೇನು ನಡೆಯುತ್ತದೆ ನೋಡುವ, ಎಂದು ಅವರಿಗೆ ಕುತೂಹಲವುಂಟಾಯಿತು ಹಾಗೆಯೇ ಅವರು ಜಥಾವನ್ನು ಹಿಂಬಾಲಿಸಿ, ಜೈತು ಪಟ್ಟಣಕ್ಕೆ ಮುಟ್ಟಿದರು. ಸಾಮಾನು ತುಂಬಿದ ಗಾಡಿಯನ್ನು ಅವರು ಸ್ಟೇಶನಿಗೆ ಕಳಿಸಿದರು. ಯಾಕಂದರೆ, ಅದೇ ದಿನ ಸಾಯಂಕಾಲಕ್ಕೆ ಜೈತು ಪಟ್ಟಣದಿಂದ ಹೊರಡಬೇಕೆಂತು ಅವರ ಮಾನಸವಿತ್ತು. ಪೋಲೀಸನೊಬ್ಬನು "ನೀವು ಜಥಾದ ಸಂಗಡಿಗರೇನು?" ಎಂದು ಪ್ರಶ್ನಿಸಲು, "ನಾವೇನು ಅಕಾಲಿಗಳಲ್ಲ, ಈ ಜಥಾಕ್ಕೆ ಸಂಬಂಧಿಸಿದವರೂ ಅಲ್ಲ. ಇಲ್ಲಿ ನಡೆಯುವ ಹಕೀಕತನ್ನು ಅರಿತುಕೊಳ್ಳಲು ಮಾತ್ರ ನಾವು ಬಂದಿದ್ದೇವೆ" ಎಂದು ನುಡಿದು, ಅವರು ಮಾರ್ಗದ ಬದಿಗಾದರು. ಕೆಲ ಹೊತ್ತಿನಲ್ಲಿ ಪೋಲೀಸ ಸುಪರಿಂಟೆಂಡೆಂಟರು ಮಿ| ಜ್ಹೊನಸ್ಟನ್‌ರವರ ಸಹಿಸಹಿತ ಕ್ರಿ. ಪ್ರೊ. ಕೋ. ೧೪೪ನೇ ಕಲಮಿನನ್ವಯ ಪ್ರತಿಬಂಧಕ ಹುಕುಮನ್ನು ಜವಾಹರಲಾಲರಿಗೆ ತೋರಿಸಿದರು. ನಾಭಾ ಸಂಸ್ಥಾನದ ಪ್ರದೇಶವನ್ನು ಪ್ರವೇಶಿಸಬಾರದೆಂದು ಅದರಲ್ಲಿ ಫರ್ಮಾಯಿಸಲ್ಪಟ್ಟಿತ್ತು. ಜವಾಹರಲಾಲರವರು ಈ ಮೊದಲೇ ನಾಭಾ ಸಂಸ್ಥಾನವನ್ನು ಪ್ರವೇಶಿಸಿ, ಜೈತು ವರೆಗೆ ಬಂದು ಮುಟ್ಟಿದ್ದರಿಂದ, ಈ ಹುಕುಮು ನಿರರ್ಥಕವಾಗಿತ್ತು. ಇಷ್ಟಾದ ಬಳಿಕ, ಜವಾಹರಲಾಲ, ಗಿಡವಾನಿ, ಸಂತಾನಂರವರೆಲ್ಲರೂ ನೆರೆಯ ಧರ್ಮಶಾಲೆಯಲ್ಲಿ ಹೋಗಿ ಉಳಕೊಂಡರು. ಕೆಲ ಹೊತ್ತಿನಲ್ಲಿ ಸುಪರಿಂಟೆಂಡೆಂಟರು ಡಿ| ಮೆಜಿಸ್ಟ್ರೇಟ, ಹಾಗು ಕೆಲ ಪೋಲೀಸರನ್ನು ಕೂಡಿಕೊಂಡು ೧೪೪ನೇ ಕಲಮಿನನ್ವಯ ಅವರನ್ನು ಸೆರೆಹಿಡಿದರು. ಜವಾಹರಲಾಲರವರು, ಹುಕುಮಿನೊಳಗಿನ ಬೇಕಾಯಿದೇಶೀರತನವನ್ನು ತೋರಿಸಲು ಯತ್ನಿಸಿದರು. ಆದರೆ, ಇಂಗ್ಲೀಷು ಬಲ್ಲಾದವರು ಈ ಮಂಡಳಿಯಲ್ಲಿ ಯಾರೂ ಇದ್ದಂತೆ ತೋರಲಿಲ್ಲ. ಜ್ಹೊನಸ್ಟನ್‌ರವರಿಗೆ ೧೪೪ನೇ ಕಲಮಿನನ್ವಯ ಹುಕುಮು ಹೊರಡಿಸುವ ಅಧಿಕಾರವು ಸಹ ಪ್ರಾಪ್ತವಾದದ್ದಿಲ್ಲೆಂದು ಜವಾಹರಲಾಲರವರು ವಾದಿಸಿದರು. ಗಿಡವಾನಿ-ಸಂತಾನಂರವರು ತಮ್ಮ ಮೇಲೆ ಯಾವದೊಂದೂ ಹುಕುಮಿಲ್ಲದೆ, ತಮಗೇಕೆ ಕಾಡುತ್ತೀರೆಂದು ಪ್ರಶ್ನಿಸಲು, ಡಿ| ಮೆಜಿಸ್ಟ್ರೇಟರು ಬಾಯಿಯಿಂದಲೇ ೧೪೪ ನೇ ಕಲಮಿನನ್ವಯ ಹುಕುಮನ್ನು ಉಚ್ಚರಿಸಿದರು. ೧೪೪ ನೇ ಕಲಮಿನನ್ವಯ ತೋಂಡೀ ಹುಕುಮು ಜ್ಯಾರಿ ಮಾಡಲಿಕ್ಕೆ ಬರುವದಿಲ್ಲೆಂದು ರಾಷ್ಟ್ರಸೇವಕರು ಕಾಯಿದೆಯಂತೆ ವಾದಿಸಲು ನಾಭಾ ಸಂಸ್ಥಾನದ ಅಗುತ್ತದೆಂದು ಸ್ಪಷ್ಟೀಕರಣವಾಯಿತು. ಈ ಪ್ರಕಾರ ರಾಷ್ಟ್ರಸೇವಕರು ಸೆರೆಯಾಳಾದರು.

ಬಳಿಕ, ಅವರನ್ನು ಪೋಲೀಸ ಸ್ಟೇಶನ್ನಿಗೆ ಒಯ್ದರು. ಅಲ್ಲಿ ರಾತ್ರಿ ೧೦ ಘಂಟೆ ವರೆಗೆ

ಇಟ್ಟುಕೊಂಡು, ಬಳಿಕ, ಬೇಡಿ ಹಾಕಿ, ರೇಲ್ವೆ ಸ್ಟೇಶನ್ನಿಗೆ ಒಯ್ದು, ೩ನೇ ವರ್ಗದ ಡಬ್ಬಿಯಲ್ಲಿ ಒತ್ತಿದರು. ಹೀಗೆ, ಜವಾಹರಲಾಲ ಮೊದಲಾದವರು ೨೨ನೇ ತಾರೀಖಿನ ಉಷಃಕಾಲಕ್ಕೆ ನಾಭಾ ಪಟ್ಟಣಕ್ಕೆ ತಲ್ಪಿದರು. ಅಲ್ಲಿ ಅವರನ್ನು ಪೋಲೀಸ ಚೌಕಿಯಲ್ಲಿಟ್ಟರು. ಹೊತ್ತೇರಿದ ಬಳಿಕ, ಸೆಂಟ್ರಲ ಜೈಲಿಗೆ ಕಾಲು ನಡಿಗೆಯಿಂದಲೇ ಒಯ್ದರು. ಅಲ್ಲಿ ಹೋದ ಬಳಿಕ ಈ ವರೆಗಿದ್ದ ಬೇಡಿಗಳು ತೆಗೆಯಲ್ಪಟ್ಟವು. ತರುವಾಯ, ಸುನಾವಣಿಗೆ ಪ್ರಾರಂಭವಾಯಿತು. ಸುನಾವಣಿಯು ಸಾರ್ವಜನಿಕವಂತೆ! ಆದರೆ, ಸುನಾವಣಿಯನ್ನು ಕೇಳಲು ದೂರದೂರದಿಂದ ಬಂದ ಪಂಡಿತ ಕಪಿಲದೇವ ಮಾಲವೀಯರಂಥವರಿಗೆ ಸಹ ಕೋರ್ಟಿಗೆ ಹೋಗಲು ಮನಾಯಿ! ಹೀಗೆ, ೨ ದಿವಸ ತನಖಿ ನಡೆದು, ಈ ತ್ರಿಮೂರ್ತಿಗಳಿಗೂ ೨॥ ವರುಷಗಳ ಶಿಕ್ಷೆಯಾಯಿತು. ತೀರ್ಪಾದ ಬಳಿಕ, ಅವರನ್ನು ಜೈಲಿಗೆ ಒಯ್ದರು. ಅಲ್ಲಿ ಸಾಯಂಕಾಲ ೭ ಘಂಟೆಗೆ ಪುನಃ ಕರೆದು, ಕ್ರಿ. ಪ್ರೊ. ಕೋ. ೪೦೧ನೇ ಕಲಮಿನನ್ವಯ ಅವರಿಗೆ ವಿಧಿಸಿದ ಶಿಕ್ಷೆಯನ್ನು ಮಿ॥ ಜ್ಯೋನಸ್ಟನ್‌ರವರು ತಹಕೂಬ ಮಾಡಿದ್ದಾರೆಂಬ ಹುಕುಮು ಓದಲಾಯಿತು. ಬಳಿಕ, ಮತ್ತೊಂದು ಹುಕುಮೂ ಓದಲ್ಪಟ್ಟಿತು. ಅದರಂತೆ, ಮೂವರೂ ನಾಭಾ ಪ್ರದೇಶವನ್ನು ಕೂಡಲೆ ತೊರೆಯಬೇಕೆಂದೂ, ಕಾರಭಾರಿಗಳಾದ ಮಿ॥ ಜ್ಯೋನಸ್ಟನ್‌ರವರ ಹುಕುಮು ಪಡೆಯದೆ, ಪ್ರದೇಶವನ್ನು ಪ್ರವೇಶಿಸಲಾಗದೆಂದೂ ವಿಧಿಸಲಾಗಿತ್ತು. ಈ ಹುಕುಮಿಗೆ ಕಾಯಿದೆಯ ಆಧಾರವಿಲ್ಲ, ನೆಹರು - ಗಿಡವಾನಿ - ಸಂತಾನಂರವರು ಈ ಹುಕುಮುಗಳ ನಕಲು ಕೊಡಹೇಳಿದರು. ಈ ಬೇಡಿಕೆಯು ಮಾನ್ಯವಾಗಲಿಲ್ಲ. ತಾವೇ ನಕಲು ಕೊಳ್ಳುತ್ತೇವೆಂದರೂ, ಅದಕ್ಕೂ ಸಮ್ಮತಿ ದೊರಕಲಿಲ್ಲ. "ಈಗ ನೀವೇನು ಮಾಡುತ್ತೀರಿ?" ಎಂದು ಜೈಲ ಸುಪರಿಂಟೆಂಡೆಂಟರು ಪ್ರಶ್ನಿಸಲು, ಈ ಬಗ್ಗೆ ನಾಭಾದೊಳಗಿನ ಅಧಿಕಾರಿಗಳಿಗೆ ಸಂಬಂಧವೇನಿಲ್ಲೆಂದು ಅವರು ನುಡಿದರು. ಮರು ದಿನ, ಉಗಿಬಂಡಿಯಿಂದ ಜವಾಹರಲಾಲರವರು ಅಲಹಾಬಾದಿಗೆ, ಗಿಡವಾನಿಯವರು ಅಹಮದಾಬಾದಿಗೆ, ಸಂತಾನಂರವರು ಮದ್ರಾಸಿಗೆ, ಈ ಪ್ರಕಾರ ಸ್ವಸ್ಥಾನಕ್ಕೆ ತೆರಳಿದರು.

ಪಂಡಿತ ಜವಾಹರಲಾಲ ನೆಹರುರವರು ತಮ್ಮ ಕೈಫಿಯತಿನಲ್ಲಿ ನಾಭಾದೊಳಗಿನ ಬ್ರಿಟಿಶ ಅಧಿಕಾರಿಗಳು ಆಚರಿಸಿದ ಕೃತ್ಯಗಳ ಬೇಕಾಯಿದೇಶೀರತನವನ್ನು ಸ್ಪಷ್ಟವಾಗಿ ನಿರ್ದೇಶಿಸಿರುವರು. ಪೀನಲ್ ಕೋಡ ೧೮೮ ನೇ ಕಲಮಿನನ್ವಯ ಅಪರಾಧವಿದ್ದರೆ, ಅದರಂತೆ, ಸೆರೆಹಿಡಿಯಲಿಕ್ಕಾಗದೆಂದೂ, ೧೪೪ ನೇ ಕಲಮಿನನ್ವಯ ಹೊರಡಿಸಿದ ಹುಕುಮನ್ನು ಉಲ್ಲಂಘಿಸಿದರೂ, ಅದರಿಂದ ಶಾಂತತಾಭಂಗವಾದ ಹೊರತು, ತಾವು ಅಪರಾಧಿಗಳಾಗುವದಿಲ್ಲೆಂದೂ, ಪಂಡಿತ ಮೋತೀಲಾಲ ನೆಹರುರವರಿಗೆ ಮಿ॥ ಜ್ಯೋನಸ್ಟನ್‌ರವರಿಗೆ ಬರೆದ ಪತ್ರದಲ್ಲಿ ತಮ್ಮ ಆಗಮನವು ಅನಿಷ್ಟವೆಂದು ತೋರಿದ್ದರಿಂದ ೧೪೪ ನೇ ಕಲಮಿನ ಹುಕುಮನ್ನು ಜ್ಯಾರಿಮಾಡಿದೆವೆಂದು ಹೇಳಿದ್ದರ ಮೇಲಿಂದ, ಶಾಂತತಾಭಂಗವನ್ನು ಪ್ರತಿಬಂಧಿಸುವ ಕಾಯಿದೆಯ ದುರುಪಯೋಗವು ಸಂಭವಿಸಿತೆಂತಲೂ ಸ್ಪಷ್ಟವಾಗಿ ತೋರಿಸಿರುವರು. ಆದರೆ, ಈ ದುರುಪಯೋಗದ ರಹಸ್ಯವೇನೆಂದು ಬಲ್ಲಿರಾ? ನಾಭಾದಲ್ಲಿ ಎಬ್ಬಿಸಿದ ಹಾವಳಿಯ ಕಥೆಯು ಜಾಹೀರಾಗಕೂಡದು. 'ಎಸೋಸಿಯೇಟೆಡ್ ಪ್ರೆಸ್' ಎಂಬ ಹಿಂದುಸ್ಥಾನದೊಳಗಿನ 'ವಾರ್ತಾಪ್ರಸಾರಕ ಸಂಸ್ಥೆ'ಯ ಸುದ್ದಿಗಾರರಿಗೆ ಸಹ ಅಲ್ಲಿಂದ ಹೊರನೂಕಿ, ಅಲ್ಲಿಯ ಅಧಿಕಾರಿಗಳು ತಮ್ಮ ಕೃಷ್ಣ ಕಾರಸ್ಥಾನಗಳನ್ನೂ, ಅತ್ಯಾಚಾರಗಳನ್ನೂ ಬಚ್ಚಿಡಲು ಯತ್ನಿಸುತ್ತಿರುವರು. ಪಂಡಿತ ಜವಾಹರಲಾಲ ಮೊದಲಾದವರಿಗೊದಗಿದ ಸಂಕಟಪರಂಪರೆಯು ಸಹ, ಅಲ್ಲಿಯ ಹಕೀಕತು ಹೊರಬೀಳಬಾರದೆಂಬುದರಿಂದಲೇ ಆಗಿರುತ್ತದೆಂದು ಇನ್ನು ಹೇಳಬೇಕಾಗಿಲ್ಲ. ಸರ್ವಾಧಿಪತಿ ನ್ಯಾಯದೇವಿಯ ಉಪಾಸಕರಾದ ರೀಡಿಂಗ ದೊರೆಗಳ ಆಧಿಪತ್ಯದಲ್ಲಿ ಸ್ಥಾಪನೆಹೊಂದಿದ ಕಾರಭಾರಿಗಳು ಇಷ್ಟು ದಿಗಾಭೀತರಾದದ್ದರ ಮೇಲಿಂದ ನಾಭಾ ಸಂಸ್ಥಾನದೊಳಗಿನ ಹೊಸ ಸುಧಾರಣೆಯ ಆಡಳಿತೆಯಲ್ಲಿ ಪ್ರಜೆಗಳಿಗೆ ಕಲ್ಪನಾತೀತ ಅನರ್ಥಗಳೊದಗುತ್ತವೆಂದು ವಾಚಕರು ಅನುಮಾನಿಸಬಲ್ಲರು. ಆಂಗ್ಲಾಯಿಯ ಉಪಾಸಕರು, ಪಾಶ್ಚಿಮಾತ್ಯರ ಕಾರಭಾರದಲ್ಲಿ ದೇಶಬಾಂಧವರು ಎಂಥೆಂಥ ನಿಂದ್ಯ ಪ್ರಕಾರಗಳು ಸಂಭವಿಸುತ್ತವೆಂದು ವಿಮರ್ಶಿಸಲಿ. ರಿಪುದಮನಸಿಂಗ ಮಹಾರಾಜರವರ ಪದಚ್ಯುತಿಯು ಬಹಾಥ್ಥಿ ಒದಗಿಬಂತೆಂದು ಆತಾಲಿಗಳಿಗೆ ತೋರುವದು ಸಾಧಾರವಿದೆಂದು ಯಾರಾದರೂ ಅನುಮಾನಿಸಿದರೆ, ಅದು ಅಯಥಾರ್ಥವಾಗುವದೇನು? ಇಲ್ಲದಿದ್ದರೆ, ಶಿಕ್ಷೆಯನ್ನಿತ್ತು, ಅಮಲಬಜಾವಣಿಯನ್ನು ತಹಕೂಬ ಮಾಡಿ, ರಾಷ್ಟ್ರಸೇವಕರನ್ನು ನಾಭಾ ಪ್ರದೇಶದಿಂದ ಓಡಿಸುವಷ್ಟು ದಿಗಾಭೀತಿಯನ್ನು ಅಲ್ಲಿಯ ಕಾರಭಾರಿಗಳು ಪ್ರದರ್ಶಿಸುವ ಅವಶ್ಯಕತೆಯೇನಿತ್ತು? ಹಿಂದುಸ್ಥಾನ ಸರಕಾರವು ಈ ಬಗ್ಗೆ ತಕ್ಕ ಖುಲಾಸೆ ಮಾಡಿ, ಅಲ್ಲಿಯ ನಿಜ ಸ್ಥಿತಿಯನ್ನು ಪ್ರಜೆಗಳಿಗೆ ಅರುಹುವದಲ್ಲದೆ, ಅಲ್ಲಿ ಸ್ಥಾನಿಕ ಅಧಿಕಾರಿಗಳು ಪ್ರಚಾರಿಸಿದ ಪ್ರತಿಬಂಧಕ ಹುಕುಮುಗಳ ಕೋಟೆಯನ್ನು ನಿರ್ಮೂಲಿಸುವದೇನು?

ಸ್ಫುಟ ಸೂಚನೆಗಳು.

೧ ಬಂಗಾಲ ಪ್ರಾಂತದಲ್ಲಿ ಹಾಗೊಂದು ಗಲಭೆ. ಪ್ರಾಂತಿಕ ಸರಕಾರವು, ಪ್ರಾಂತದಲ್ಲೆಲ್ಲ ಕ್ರಾಂತಿಕಾರಕ ಚಳವಳಿಯು ಹಬ್ಬಿರುವದೆಂದು ಅಭಿಪ್ರಾಯಪಟ್ಟು, ೧೮೧೮ನೇ ಇಸವಿಯ ೩ನೇ ರೆಗ್ಯುಲೇಶನಿನನ್ವಯ ಅನೇಕ ಮಂದಿಗಳನ್ನು ಸೆರೆಹಿಡಿದಿರುವದು. ಪ್ರಾಂತಿಕ ಕೊಂಗ್ರೆಸ ಕಮಿಟಿ, ಚೆರಿ ಹಾಗು ಪರಸ್ಪರ ಅಣ್ಣುಕೂಟಗಳು ಝುಪತಿಮಾಡಲ್ಪಟ್ಟವು. ಆಸಾಮ ಲೇಬರ ಬೋರ್ಡಿನ ಕರ್ನಲ್ ಕೆನೇಡಿ ಎಂಬವರನ್ನು ಉಗಿಬಂಡಿಯಲ್ಲಿ ಕೊಲೆ ಮಾಡಿದರೆಂದು ಕಲಕತ್ತೆಯಲ್ಲಿ ಬಂಗಾಲದ ಪ್ರಾಂತಿಕ ಕೊಂಗ್ರೆಸ ಕಮೀಟಿಯ ಸೆಕ್ರೆಟರಿಗಳಾದ ಬಾಬು ಅಮರೇಂದ್ರನಾಥ ಚತರ್ಜಿ, ಬಾಬು ಭೂಪತಿ ಮುಝುಂದಾರ, ದೇಶಬಂಧುಗಳ ಸಹಕಾರಿಗಳಾದ ಬಾಬು ಯದುಗೋಪಾಲ ಮುಖರ್ಜಿ, 'ಆತ್ಮಶಕ್ತಿ'ಯ ಸಂಪಾದಕರಾದ ಬಾಬು ಉಪೇಂದ್ರನಾಥ ಬಾನರ್ಜಿ, ಬಾಬು ಭೂಪೇಂದ್ರನಾಥ ದತ್ತ, ರಬೀಂದ್ರನಾಥ ಸೇನ, ರಾಮಚಂದ್ರ ಚೌಧರಿ, ಮನಮೋಹನ ಭಟ್ಟಾಚಾರ್ಯ, ಮನೋರಂಜನ ಗುಪ್ತ, ಪ್ರೊಫೆಸರ ಜ್ಯೋತಿಷಚಂದ್ರ ಘೋಷ, ಹೀಗೆ ಬಂಗಾಲದ ದೊಡ್ಡದೊಡ್ಡ ಮುಖಂಡರನ್ನು ಕ್ರಾಂತಿಕಾರಕ ಚಳವಳಿಯವರೆಂದು ಅಭಿಪ್ರಾಯಪಟ್ಟು, ಪೋಲೀಸರು ಸೆರೆಹಿಡಿದಿರುವರು. ಈ ಕಾಯಿದೆಯು ಒಂದು ಶತಮಾನದ ಹಿಂದಿನದು. ಇಂಥ ಕಾಯಿದೆಯಂತೆ, ಹಿಂದುಸ್ಥಾನದ ಪ್ರಜೆಗಳ ಸುನಾವಣಿ ಮಾಡದೆ, ಅಪರಾಧವನ್ನು ತಿಳಿಯಗೊಡದೆ, ಸೆರೆಹಿಡಿಯುವ ದಡಪಶಾಹಿ ಕಾನೂನುಗಳನ್ನೆಲ್ಲ ಹಪ್ತಬಂದಿ ಸ್ವರಾಜ್ಯದ ಹೊಸಯುಗದಲ್ಲಿ ರದ್ದುಪಡಿಸಬೇಕೆಂದು ಡಾ॥ ತೇಜಬಹಾದ್ದೂರ ಸಪ್ರೂರವರ ನೇತೃತ್ವದಲ್ಲಿ ಒಂದು ಕಮಿಟಿಯು ನೇಮಕಹೊಂದಿತು. ಈ ಕಮಿಟಿಯ ಶಿಫಾರಸುಗಳಂತೆ, ಕೆಲ ಕಾಯಿದೆಗಳು ರದ್ದಾದವು. ಪ್ರಸ್ತುತವ ೩ನೇ ರೆಗ್ಯುಲೇಶನವು ವಾಯುವ್ಯ ಸರಹದ್ದಿನ ಕಾಕಪೋಕರಿಗೆ, ದಂಗೆಖೋರ ವೃತ್ತಿಯವರಿಗೆ ಮಾತ್ರ ಲಾಗುಮಾಡಬೇಕೆಂದು ಕಮಿಟಿಯ ಶಿಫಾರಸು ಇತ್ತು. ಹಿಂದುಸ್ಥಾನ ಸರಕಾರವು ಅದನ್ನು ಮಾನ್ಯ ಮಾಡಿತ್ತು. ವಾಯುವ್ಯ ಸರಹದ್ದು ಎತ್ತ! ಬಂಗಾಲವೆತ್ತ! ಬಂಗಾಲದಲ್ಲಿ ಈ ಕಾಯಿದೆಯನ್ವಯ ಅನೇಕರು ಸೆರೆಯಾಳಾದ ಸುದ್ದಿಯನ್ನು ಕಮಿಟಿಯ ಸಭಾಸದರಲ್ಲೊಬ್ಬರಿದ್ದ ರಾ॥ ಜೆ. ಚೌಧರಿಯವರು ನಂಬಲೇ ಇಲ್ಲವಂತೆ! ಅಷ್ಟು ಹಿಂದುಸ್ಥಾನ ಸರಕಾರದ ವಚನದ ಬಗ್ಗೆ ಅವರಿಗೆ ವಿಶ್ವಾಸವಿತ್ತು. ಈ ಕಾಯಿದೆಯಂತೆ ಸೆರೆಹಿಡಿದವರ ಸುನಾವಣಿಯಾಗುವದಿಲ್ಲ. ಕಾಗದ-ಪತ್ರಗಳನ್ನು, ಅವಶ್ಯವಿದ್ದರೆ, 'ಡಿಫೆನ್ಸ ಆಫ್ ಇಂಡಿಯಾ ಕಾಯಿದೆ'ಯ ನಿಯಮಗಳಂತೆ, ಇಬ್ಬ ನ್ಯಾಯಮೂರ್ತಿಗಳ ಮುಂದೆ ಅಭಿಪ್ರಾಯಾರ್ಥವಾಗಿ ಸರಕಾರವು ಇಡುವದು, ಆರೋಪಿಗಳಿಗೆ ತಮ್ಮ ನಿರಪರಾಧಿತ್ವವನ್ನು ಸಿದ್ಧಪಡಿಸಲು ಇಂಬಿಲ್ಲ. 'ಡಿಫೆನ್ಸ ಆಫ್ ಇಂಡಿಯಾ ಕಾಯಿದೆ'ಯು ರದ್ದಾದ್ದರಿಂದ, ಅದರನ್ವಯ ಆದ ನಿಯಮಗಳೂ ರದ್ದಾಗಿವೆಂದು ರಾ॥ ಚೌಧರಿಯವರು ವಾದಿಸುತ್ತಾರೆ. ಬಂಗಾಲ ಸರಕಾರವು ಸುನಾವಣಿ ಮಾಡಿದ ಹೊರತು, ಯಾರಿಗೂ ಪ್ರತಿಬಂಧಿಸಲಿಕ್ಕಿಲ್ಲೆಂದು ಆಶ್ವಾಸನವನ್ನಿತ್ತಿತ್ತು. ಆದರೆ, ಆ ಆಶ್ವಾಸನಗಳೂ, ಕಾಯಿದೆಗಳೂ, ವಚನಗಳೂ ಒಂದೆಡೆಗೆ; ಅದಾ

ತವೇ ಮತ್ತೊಂದೆಡೆಗೆ ನವಯುಗದಲ್ಲಿ ನೌಕರಶಾಹಿಯು ನಾಮಶೇಷವಾಯಿತೆಂತಲೂ ಸುಧಾರಣಾಯುಗದಿಂದ ಭಾರತೀಯರಿಗೆ ಸತ್ತೆಯು ಪ್ರಾಪ್ತವಾಯಿತೆಂತಲೂ ಹೇಳುವವರಿಗೆ ಇದೊಂದು ಅಂಜನು. ದಿವಾಣಪದದಲ್ಲಿ ಆರೂಢರಾದ ಸರ್ ನರೇಂದ್ರನಾಥ ಬಾನರ್ಜಿಯವರು ಪೂರ್ವಾಶ್ರಮದಲ್ಲಿ ಈ ಕಾಯಿದೆಯ ವಿರುದ್ಧ ಸಿಂಹಗರ್ಜನೆ ಮಾಡುತ್ತಿದ್ದರು ಈಗ ಸ್ತಬ್ಧರಾಗಿರುವದನ್ನು ನೋಡಿ ಅಖಿಲ ಬಂಗಾಲಿಯರು ಬೆರಗಾಗಿರುವರು ಭಾರತೀಯರಿಗೂ ಸಖೇದಾಶ್ಚರ್ಯವಾಗುವದು

• ಸ್ವರಾಜ್ಯ-ಪರರಾಜ್ಯಗಳೊಳಗಿನ ಭೇದವನ್ನು ಅನೇಕ ಸರ್ತಿ ನಾವು ನಿರ್ದೇಶಿಸಿದ ಪ್ರಕಾರ ಇಂದು ಮತ್ತೊಂದು ಉದಾಹರಣೆಯನ್ನು ನಮೂದಿಸುವೆವು. ವಿಲಾಯತಿಯಲ್ಲಿ ಸರಕಾರಿ ನೌಕರರ ಸಂಬಳದ ಚೌಕಶಿ ನಡಿಸಲು ಒಂದು ಕಮಿಟಿಯು ನೇಮಕಹೊಂದಿತ್ತು. ಈ ಕಮಿಟಿಯವರು ಸೈನ್ಯಖಾತೆ ನೌಕಾ ಖಾತೆ, ವೈಮಾನಿಕ ಖಾತೆಗಳೊಳಗಿನ ಅಧಿಕಾರಿಗಳ ಸಂಬಳದ ಮಾನವು ಹೆಚ್ಚೆಂದು ಅಭಿಪ್ರಾಯಪಟ್ಟು, ಅವರ ಸಂಬಳವನ್ನು ತಗ್ಗಿಸಬೇಕೆಂದು ಬ್ರಿಟಿಶ ಪ್ರಧಾನಮಂಡಳಕ್ಕೆ ಶಿಫಾರಸು ಮಾಡಿತಷ್ಟೇ ಅಲ್ಲ, ದಿವಾಣಿ ಮೊದಲಾದ ಇತರ ಖಾತೆಗಳೊಳಗಿನ ನೌಕರರಿಗೆ ಸಂಬಳವನ್ನೇರಿಸುವ ಗರಜಿಲ್ಲೆಂದು ಕಮಿಟಿಯವರು ಅಭಿಪ್ರಾಯಪಟ್ಟರು. ಹಿಂದುಸ್ಥಾನದಲ್ಲಿ ಬಡೇ ಅಧಿಕಾರಿಗಳಿಗೆ ಇಲ್ಲಿ ಬಿತ್ತಿಯಾದರೂ, ಪುನಃ ಕಾಳು ಕಡಿಗಳ ದರವೇರಿತು. ಸಂಸಾರದ ಖರ್ಚು ಈಗಿನ ಸಂಬಳದಿಂದ ಸಾಗಲೊಲ್ಲದು. ಅದರಿಂದ ಸಂಬಳವನ್ನೇರಿಸಬೇಕೆಂದು ಅವರ ಬೊಬ್ಬೆ. ಅದನ್ನು ಲಾಲಿಸಿ, ಹಿಂದುಸ್ಥಾನ ಸರಕಾರವು ಪರಿಷತ್ ಕಾಯಿದೆ ಕೌನ್ಸಿಲಿನಂಥ ಹೊಸ ಯುಗದಲ್ಲಿ ಜನಿಸಿದ ಜವಾಬದಾರ ಸಂಸ್ಥೆಯು ಪಿಚಾರಪೂರ್ವಕ ನಿಷೇಧವನ್ನು ಬದಿಗೊತ್ತಿ, ೩ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿ ಬಾದಶಾಹಿ ಕಮೀಶನವನ್ನು ನೇಮಿಸುತ್ತದೆ. ವಿಲಾಯತಿಯಲ್ಲಿ ಸಂಸಾರದ ಖರ್ಚಿನ ಮಾನವು ಇಲ್ಲಿಗಿಂತ ಮಿಗಿಲಾಗಿದ್ದರೂ, ಸಂಬಳವನ್ನು ತಗ್ಗಿಸಿದರೂ, ಅಲ್ಲಿಯ ಅಧಿಕಾರಿಗಳು ಸುಮ್ಮನೆ ರಾಜ್ಯಶಕಟವನ್ನು ನಡಿಸುತ್ತಾರೆ. ಇಲ್ಲಿ ಮಾತ್ರ ಎಷ್ಟು ಕೊಟ್ಟರೂ, ಅಧಿಕಾರಿಗಳ ಕೋಲಾಹಲ ಇದು ಯಾಕೆ? ತೆರುವವರು ಪರಸ್ಪರ ಭಾರತೀಯರಿದ್ದದರಿಂದ, ಮಂದೂರ ಮಾಡುವವರು ಸವರ್ಣೀಯ ದೇಶಬಾಂಧವರಿದ್ದದರಿಂದ, ಇಲ್ಲಿಯ ಬಡೇ ಅಧಿಕಾರಿಗಳು ಪುನಃ ಪುನಃ ಕೋಲಾಹಲವನ್ನೆಬ್ಬಿಸುತ್ತಾರಲ್ಲವೇ?

• ಈಗ ಕರ್ನಾಟಕದಲ್ಲಿ ದಡಪಶಾಹಿಯು ಪ್ರಾದುರ್ಭೂತವಾಗಿದೆ. ಪರಲೋಕವಾಸಿ ಗೋವಿಂದರಾವ ಯಾಳಗಿಯವರ ಬೆಟ್ಟಿಕೊಳ್ಳಲು ಶ್ರೀ ದತ್ತೋಪಂತ ಮುಜಲಿಯವರು ಗದಗಿಗೆ ಹೋದಾಗ, ಅಲ್ಲಿ ಅವರಿಗೆ ಕ್ರಿ. ಪ್ರೊ. ಕೋ. ೧೪೪ನೇ ಕಲಮಿನನ್ವಯ ಮುಚಿಬಂದಿ ಹುಕುಮು ಜ್ಯಾರಿ ಮಾಡಲ್ಪಟ್ಟಿತು. ಶ್ರೀ ಮುಜಲಿಯವರು ಹುಕುಮನ್ನು ಮುರಿದು, ಭಾಷಣಮಾಡಿದರು. ಈ ಬಗ್ಗೆ ಧಾರವಾಡದಲ್ಲಿ ಕಳೆದ ೩-ಇನೇ ತಾರೀಖಿಗೆ ಸಬ್ ಡಿವ್ಹಿಜನಲ್ ಮೆಜಿಸ್ಟ್ರೇಟರ ಮುಂದೆ ತನಿಖೆ ನಡೆಯಿತು. ಶ್ರೀ ಮುಜಲಿಯವರು ಖಟ್ಲೆಯಲ್ಲಿ ಯಾವ ರೀತಿಯಿಂದಲೂ ಪ್ರವೇಶಿಸಲಿಲ್ಲ. ೧೪೪ನೇ ಕಲಮಿನನ್ವಯದ ಹುಕುಮನ್ನು ಮುರಿದರೂ, ಸಾರ್ವಜನಿಕ ಶಾಂತತೆಯು ಭಂಗವಾಗಲಿಲ್ಲೆಂದು ಶ್ರೀ ದತ್ತೋಪಂತರವರು ಹೇಳಿದರು. ಇಬ್ಬರ ಸಾಕ್ಷಿಗಳಾಗಿ, ಖಟ್ಲೆಯು ಮುಂದೆ ತಾರೀಖು ೧೬ನೇಗೆ ಇಡಲ್ಪಟ್ಟಿತು. ಬೆಳಗಾಂವಿಯಿಂದ ಶ್ರೀ ಗಂಗಾಧರರಾಯರು ಧಾರವಾಡಕ್ಕೆ ತಾ. ೩ನೇ ಬುಧವಾರ ೧೧॥ ಘಂಟೆಯ ಸಮಯಕ್ಕೆ ಮೋಟಾರಾರಥರಾಗಿ ಬಂದು ತಲ್ಪಿದರು. ಅಂದು ಅವರು ಕೋರ್ಟಿನಲ್ಲಿ ಹಾಜರಾಗಿ ದತ್ತೋಪಂತರವರ ಖಟ್ಲೆ ಸುನಾವಣಿಯನ್ನು ಕೇಳಿದರು. ಸಾಯಂಕಾಲಕ್ಕೆ ತಿರುಗಿ ಬೆಳಗಾಂವಿಗೆ ಹೋಗಬೇಕೆಂದು ಮೋಟಾರಿನಲ್ಲಿ ಕಾಲಿಡುವಷ್ಟರಲ್ಲಿ ಪೊಲೀಸರು ಬಂದು ೧೪೪ನೇ ಕಲಮಿನ ಹುಕುಮನ್ನು ಜ್ಯಾರಿಮಾಡಿ, ಭಾಷಣಬಂದಿಯನ್ನು ಮಾಡಿದರು. ಬೆಳಗಾಂವಿಗೆ ಹೋಗಲು ಮೋಟಾರರೂಢರಾದ ಶ್ರೀ ಗಂಗಾಧರರಾಯರಿಗೆ ಆ ದಿನ ಬೆಳಗಾಂವಿಗೆ ಹೋಗಬೇಕಾದ್ದರಿಂದ ಹಾಗೇ ಅವರು ತೆರಳಿದರು. ಸ್ವಗೃಹಾಭಿಮುಖವಾದ ಗಂಗಾಧರರಾಯರು ಭಾಷಣಕೊಡುವರೆಂದು ಪೋಲೀಸರಿಗೆ ಯಾರು ಸೂಚಿಸಿದರೋ ಏನೋ! ಕಾಯಿದೆಯ ದುರುಪಯೋಗ ಮಾಡುವಾಗ ಸಾಮಾನ್ಯ ಬುದ್ಧಿಯನ್ನು ಸಹ ತೊರೆಯುವಷ್ಟು ಅವರು ಮಗ್ನರಾಗುತ್ತಾರೆಂದು ನಮಗೆ ತಿಳಿಯದು.

• ಉತ್ತಿಷ್ಠ ಸತ್ಯಾಗ್ರಹೀ' ಪತ್ರಿಕೆಯ ಪ್ರಕಾಶಕ-ಸಂಪಾದಕರಾದ ಶ್ರೀ ನಾರಾಯಣರಾವ ಹಾಗು ರಾಮರಾಯ ಮಲ್ಯ ಇವರ ಮೇಲೆ ೧೨೪ನೇ ಕಲಮಿನನ್ವಯ ತನಿಖೆಯು ಮಂಗಳೂರಿನಲ್ಲಿ ಕಳೆದ ತಾರೀಖು ೫ನೇಗೆ ಡಿ। ಮೆಜಿಸ್ಟ್ರೇಟರ ಕೋರ್ಟಿನಲ್ಲಿ ನಡೆಯಿತು. ಶ್ರೀ ನಾರಾಯಣರಾವ-ರಾಮರಾಯರವರು ಖಟ್ಲೆಯಲ್ಲಿ ಭಾಗ ಕೊಳ್ಳಲಿಲ್ಲ. 'ಕನ್ನಡಿಗರ ಪೀಳಿಗೆ ಜಾಗ್ರತರಾಗಿರಿ' ಎಂಬ ಲೇಖದ ಭಾಷಾಂತರವು ಓದಲಾಯಿತು. ಉಡುಪಿಯ ಅಸಹಕಾರಿತೆಯ ಚಳವಳಿಯಲ್ಲಿ ಆರೋಪಿಗಳು ವಿಶೇಷವಾಗಿ ದುಡಿದಿರುವರೆಂದೂ, ನಾಗಪುರದಿಂದ ಬಂದ ರಾಷ್ಟ್ರವಾದಿಗಳಿಗೆ ಅವರು ಸ್ವಾಗತವನ್ನಿತ್ತರೆಂದೂ, ಇಬ್ಬರೂ ರಾಷ್ಟ್ರೀಯ ಶಾಲೆಯ ಅಧ್ಯಾಪಕರೆಂದೂ ಸರಕಾರಿ ವಕೀಲರ ಜಬಾನಿಯಾಯಿತು. ಆರೋಪಿಗಳಿಗೆ ಜವಾಬೇನಾದರೂ ಕೊಡುವದಿದೆಯೋ? ಎಂದು ಡಿ। ಮೆಜಿಸ್ಟ್ರೇಟರು ಕೇಳಲು, 'ಏನೂ ಇಲ್ಲವೆಂದು, ಶ್ರೀ॥ ನಾರಾಯಣರಾವ-ರಾಮರಾಯರು ಉತ್ತರ ಕೊಟ್ಟರು. ಖಟ್ಲೆಯನ್ನು ನಾಳೆ ತಾ. ೧೨ನೇ ಶುಕ್ರವಾರಕ್ಕಿಟ್ಟು, ೩೦೦ ರೂಪಾಯಿಗಳ ಹಾಜರಿ ಜಾಮೀನು ಕರಾರು ಬರಕೊಟ್ಟು ಆರೋಪಿಗಳಿಗೆ ಹೋಗಹೇಳಿದರು. ಜಾಮೀನು ಕರಾರು ಬರಕೊಡಲು ಶ್ರೀ॥ ನಾರಾಯಣರಾವ-ರಾಮರಾಯರು ಒಪ್ಪಲಿಲ್ಲ. ಬೇಕಾದರೆ, ತಾ. ೧೨ನೇಗೆ ಹಾಜರಾಗಲು ಅಡ್ಡಿ ಇಲ್ಲವೆಂದು ಅವರು ಹೇಳಿದರು. ವಚನದ ಮೇಲೆ ವಿಶ್ವಾಸವಿಟ್ಟು ಬಿಡುವದಾದರೆ ಬಿಡಿರೆಂದು, ಆರೋಪಿಗಳಿಬ್ಬರೂ ನುಡಿದರು. 'ಅದಕ್ಕೆ ಕಾಯಿದೆ ಇಲ್ಲ'ವೆಂದು ಡಿ। ಮೆಜಿಸ್ಟ್ರೇಟರು ಉದ್ಗರಿಸಿದರು. ಬಳಿಕ, ಬೇಡಿ ಹಾಕಿ, ಅವರನ್ನು ಜೈಲಿಗೆ ಒಯ್ದರು. ಕರ್ನಾಟಕದೊಳಗಿನ ದಡಪಶಾಹಿಯ ಕಾರಭಾರದ ಸ್ವರೂಪವಿದು.

ಸ್ಥಾನಿಕ ವೃತ್ತಾಂತ.

ಕುಮಟಾ— ಬಿಸಿಲು ತಾಪ, ಶಕೆ ವಿಪರೀತ

ಕಳೆದ ತಾ ೮ನೇ ಸೋಮವಾರಕ್ಕೆ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಶ್ರೀ॥ ಗೋವಿಂದರಾವ ಯಾಳಗಿಯವರ ನಿಧನದ ಬಗ್ಗೆ ದುಃಖಪ್ರದರ್ಶನ ಮಾಡುವರ ಸಭೆ ಸೇರಿತ್ತು. ಗೋವಿಂದರಾಯರ ಗುಣವರ್ಣನಪರ ಭಾಷಣಗಳಾದ ಬಳಿಕ, ಮೃತರ ಆತ್ಮಕ್ಕೆ ಚಿರಶಾಂತಿಯನ್ನೀಯಲು ಪ್ರಾರ್ಥನೆ ನಡೆಯಿತು. ರಾಷ್ಟ್ರಸೇನಾ ಮಂಡಳದ ಚಾಲಕರಾದ ಡಾ। ನಾರಾಯಣರಾವ ಹರ್ಡೀಕರರ ವಿಜ್ಞಾಪನೆಯಂತೆ, ಮೃತರ ಸ್ಮಾರಕದ ಬಗ್ಗೆ ಕೆಲ ಸ್ವಯಂಸೇವಕರು ೧-೧ ರೂಪಾಯಿಗಳನ್ನು ಕೆಲ್ಲನವರ ಗೂಡ ಅರ್ಪಿಸಿದರೆಂದು ತಿಳಿಯುತ್ತದೆ.

ಇಂದು ಆಶ್ವಿನ ಶುದ್ಧ ಪ್ರತಿಪದೆ ಘಟಸ್ಥಾಪನೆಯ ದಿನ ಶ್ರೀ ಶಾಂತೇರಿ ಕಾಮಾಕ್ಷಿ, ಶ್ರೀ ಕಾಮರಿಕಾಮಾಕ್ಷಿ, ಶ್ರೀ ಮಹಾಲಸಾ, ಶ್ರೀ ಗ್ರಾಮದೇವತಾ ಸ್ಥಾನಗಳಲ್ಲಿ ಘಟಸ್ಥಾಪನೆಯಾಗಿ, ರಾತ್ರಿ ಕೀರ್ತನೆ, ಪುರಾಣ, ಮೊದಲಾದ ಸೇವೆಗಳು ನಡೆಯುವವು.

ಇಲ್ಲಿಯ ಅಡಿಕೆಯ ದಲಾಲರ ಎರಡೂ ಪಕ್ಷಗಳೊಳಗಿನ ದಲಾಲರೂ, ವ್ಯಾಪಾರಸ್ಥರೂ ಒಟ್ಟಾದರೆಂದು ತಿಳಿಯುತ್ತದೆ. ಕೋಲಿಯಾಳು ಮೊದಲಾದವರ ದೊಡ್ಡ ಯಾನೆ ಕಳವಿನ ಪದ್ಧತಿಯನ್ನು ದಲಾಲರು ವಿಶೇಷವಾಗಿ ಪುನರಾಲೋಚಿಸಿ, ಈ ಕಳವಿನಿಂದ ಬಡ ಆಸಾಮಿಗಳಿಗೆ ಕಾಯುವರೆಂದು ಕೋರಿಕೆ.

ವಾರ್ಷಿಕ ವಹಿವಾಟಿಯಂತೆ, 'ವೃತ್ತ'ವು ಒಂದು ವಾರದ ಸೂಟಿ ಪಡೆಯುವದು. ಕಾರಣ, ತಾರೀಖು ೧೮ ೧೦ ೧೯೩೪ ನೇಗೆ ಸಂಚಿಕೆಯು ಹೊರಡಲಿಕ್ಕಿಲ್ಲ. ಹೊಸ ವರುಷದ ಪ್ರಥಮ ಸಂಚಿಕೆಯು ತಾ. ೨೫-೧೦-೧೯೩೪ ನೇಗೆ ಹೊರಡುವದು.

ಸಾಭಾರ ಸ್ವೀಕಾರ.

ಶ್ರೀ ಕೇಶವದಾಸರ ಕೀರ್ತನೆಗಳು— (ಭಾಗ ೧.) ಪ್ರಕಾಶಕ— ಶ್ರೀ॥ ತಿಮ್ಮಣ್ಣ ಪುಟ್ಟ ಭಾಗ್ವತ ಮಹಾಲಿಂಗ ಮತ್ತು ಶ್ರೀ॥ ವೆಂಕಟಸುಬ್ಬ ಗೋಪಾಲ ಹೆಗಡೆ ಶಶಿ (ಭಾಗ ೨) ಪ್ರಕಾಶಕ— ಶಿವಶ್ಯಾಮ ದೇವರ ಭಟ್ಟ, ಶಶಿ ಬೆಲೆ ಅನುಕ್ರಮವಾಗಿ ೪-೨ ಆಣೆ

ಪರಶುರಾಮ ರಾಮಾಯಣ— ೧ನೇ ಭಾಗ ಕರ್ನಾಟಕ ಸುಕಾವ್ಯ ರತ್ನಮಾಲೆಯ ಪ್ರಥಮ ಮಣಿ ಕವಿರಾಜ ದೊಡ್ಡೂರ ರಂಗಪ್ಪ ಇವರಿಂದ ರಚಿತವಾದದ್ದು. ಪ್ರಕಾಶಕ — ವೆಂಕಪ್ಪ ಪರಮಯ್ಯ ಹೆಗಡೆ, ಕದೆಕೋಡಿ ಕರ್ನಾಟಕ ಸ ಕಾವ್ಯ ರತ್ನಾಗಾರ, ಧಾರೇಶ್ವರ ಬೆಲೆ ೮॥ ಆಣೆ

ಕಿರ್ಲೋಸ್ಕರ ಖಬರ— (ಮರಾಠಿ ಮಾಸಿಕ) ೪ನೆ ವರ್ಷದ ೩ನೇ ಸಂಚಿಕೆ ಸಂಪಾದಕ-ಪ್ರಕಾಶಕ-ರಾ॥ ಶಂ. ವಾ ಕಿರ್ಲೋಸ್ಕರ, ಕಿರ್ಲೋಸ್ಕರವಾಡಿ (ಸಾತಾರಾ) ವಾರ್ಷಿಕ ಚಂದಾ ಅಂಚೆ ವೆಚ್ಚ ಸಹಿತ ೧॥ ರೂಪಾಯಿ

ಅಂಕೋಲಾ— ಅಂಕೋಲೆಯ ಪೇಟೆಯಿಂದ ಕಸ್ಬಾ ಕಚೇರಿಗೆ ಹೋಗುವ ಇಂಜಿನಿಯರ ಖಾತೆಯ ರಸ್ತೆಯು ಬಹಳೇ ಕೆಟ್ಟದಾಗಿದ್ದು, ಅದನ್ನು ದುರುಸ್ತ

ಮಾಡುವ ಬಗ್ಗೆ ಪ್ರ। ಎಗ್ಜಿಕ್ಯೂಟಿವ ಇಂಜನಿಯರ ಸಾಹೇಬರಿಗೆ ಇಲ್ಲಿಯ ಹಲವರು ಅರ್ಜಿ ಮಾಡಿದ್ದಲ್ಲಿ, "ಆ ರಸ್ತೆಯು ತಮ್ಮದಲ್ಲ ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನದು" ಎಂತ ಜವಾಬು ಬಂದಿತಂತೆ! ಡಿ। ಲೋ। ಬೋರ್ಡಿನವರಿಗೆ ಕೇಳಿದರೆ, ಅವರು ತಮ್ಮದಲ್ಲ ಎಂತ ಹೇಳಿದರಂತೆ! ಆ ನಂತರ, ಕೆಲವು ದಿವಸಗಳಲ್ಲಿ ಮೇ। ಎ। ಇಂಜನಿಯರ ಸಾಹೇಬರು ಸದ್ರಿ ರಸ್ತೆಯನ್ನು ಸ್ವತಃ ಬಂದು ನೋಡಿ ತಮ್ಮ ಖಾತೆಗೆ ಒಳಪಟ್ಟದ್ದೇ ಎಂತ ಖಾತ್ರಿಯಾದ ಬಳಿಕ ಸದ್ರಿ ರಸ್ತೆಗೆ ಮೋರಮ್ ಯಾನೆ ಗೊಜ್ಜು ಮಣ್ಣು ಹಾಕಿ ದುರುಸ್ತ ಮಾಡಲಿಕ್ಕೆ ಹುಕುಂ ಕೊಟ್ಟು ಹೋದರು. ಇಲ್ಲಿಯ ವ್ಯಾಪಾರಸ್ಥರ ಸಾಮಾನು ಪಟ್ಟಣದಿಂದ ಇಳಿದದ್ದು ಬಜಾರಕ್ಕೆ ತರಲಿಕ್ಕೆ ಈ ರಸ್ತೆಯ ಮೇಲಿಂದ ಗಾಡಿಗಳು ಕಾಯಂ ತಿರುಗುವದರಿಂದ್ದು ರಸ್ತೆ ಕೆಟ್ಟದ್ದರಿಂದ, ಗಾಡಿಯ ಚಕ್ರಗಳು ರಸ್ತೆಯಲ್ಲಿ ಹುಗಿದು, ಎತ್ತುಗಳಿಗೆ ಎಳೆಯಲಿಕ್ಕೆ ಬಹಳೇ ತ್ರಾಸವಾಗುತ್ತಿರುವದರಿಂದ ಸದ್ರಿ ರಸ್ತೆಗೆ ಕಲ್ಲಿನ ಖಡಿಹಾಕಿ ದುರುಸ್ತಿ ಮಾಡುವ ಅವಶ್ಯಕತೆಯಿರುತ್ತಾ ಸಾಹೇಬ ಜನರ ಮೋಟಾರುಗಳು ಆ ದಾರಿಯಿಂದ ಓಡ್ಯಾಡುವ ಪ್ರಸಂಗ ಬರುವದಿಲ್ಲವಾದ್ದರಿಂದ ಬರೇ ಗೊಜ್ಜು ಮಣ್ಣನ್ನು ಹಾಕುವ ಹುಕುಂ ಕೊಟ್ಟರೇನು?

ಡಾ। ಶ್ರೀನಿವಾಸ ಕೃಷ್ಣ ಹುಬ್ಳೀಕರ ಎಂಬ ದುಕಾನದಾರರ ಮೇಲೆ, ರಸ್ತೆಯ ಮೇಲೆ ಪೆಟ್ಟಿಗೆಗಳನ್ನಿಟ್ಟು ರಹದಾರಿಗೆ ಅತಂಕ ಮಾಡಿದರೆಂತ ವೃಥಾ ಆರೋಪವನ್ನಿಟ್ಟು, ಇಲ್ಲಿಯ ಪೋಲೀಸರು ಡಿ ಪೋಲೀಸ ಆಕ್ಟಿನನ್ವಯ ೩ನೇ ವರ್ಗದ ಮೆಜಿಸ್ಟ್ರೇಟರಲ್ಲಿ ಮಾಡಿದ ಖಟ್ಲೆಯು ವಿಚಾರಣೆಯಾಗಿ, ಆರೋಪಿಗೆ ಬಿಟ್ಟುಕೊಟ್ಟರು ಹಿಡಿ। ಪೋಲೀಸರ ಆಟದಿಂದ ಆ ಬಡ ದುಕಾನದಾರರಿಗೆ ಪತ್ತೆಂಟು ರೂಪಾಯಿಗಳ ಖರ್ಚು.

ಸಂಕೇರಿ— ಕಳೆದ ಮಂಗಳವಾರ ತಾ ೨ನೇ ದಿವಸ ೫ ಘಂಟೆಗೆ ಇಲ್ಲಿ ಮ. ಗಾಂಧಿ ಜಯಂತಿಯ ಉತ್ಸವವಾಯಿತು ಶ್ರೀ। ಮಠದಲ್ಲಿ ವೇ। ಅನಂತಭಟ್ಟರ ಕಾಲೋಚಿತ ಸಮಯೋಚಿತ ಭಾಷಣವಾಗಿ ಮಹಾತ್ಮರ ಭಾವಚಿತ್ರವೊಡನೆ ರಾಷ್ಟ್ರಗೀತ ಭಜನೆಗಳಿಂದ ಯುಕ್ತವಾದ ಮೆರವಣಿಗೆಯು ತೆಗೆಯಲ್ಪಟ್ಟಿತು.

ತಾ ೩ನೇ ದಿವಸ ಇಲ್ಲಿಯ ಗ್ರಾ. ಕಾಂ. ಕ. ಯ ವಾರ್ಷಿಕ ಸಭೆ ಕೂಡಿ, ಕಳೆದ ೩ ವರ್ಷಗಳ ರಿಪೋರ್ಟ ಓದಿ, ಹೊಸ ಕಾರ್ಯಕಾರಿ ಮಂಡಳವನ್ನು ನೇಮಿಸಲಾಯಿತು.

ಇಲ್ಲಿಯ ಬಾಲಬಂಧು ಸಮಾಜದ ತರ್ಫೆಯಿಂದ ನವರಾತ್ರಿಯಲ್ಲಿ ತಾ ೧೧-೧೮ರ ವರೆಗೆ ಶಾರದೋತ್ಸವವನ್ನು ಹಿಂದೆಗಿಂತಲೂ ಹೆಚ್ಚು ಹುರುಪಿನಿಂದಲೂ ಠರಾವು ನಾಗೂ ಹಿರಿಯರ ಪುರಾಣ, ಕೀರ್ತನ, ವ್ಯಾಖ್ಯಾನಗಳಿಂದ ಯುಕ್ತ ಕಾರ್ಯಕ್ರಮದಿಂದಲೂ ಬಹಳೇ ರಭಸದಿಂದ ನೆರವೇರಿಸಲು ಎಲ್ಲರೂ ಟೊಂಕಕಟ್ಟಿರುವರು. ಮಹಾನವಮಿಯ ದಿನ, ಹೋದ ೬ ವರ್ಷಗಳ ರಿಪೋರ್ಟು ಪ್ರಕಾಶಿಸಲ್ಪಡುವದಂತೆ.

ಸಿದ್ದಾಪುರ— ತಾ ೨ನೇ ಅಕ್ಟೋಬರು ಮಹಾತ್ಮರ ಹುಟ್ಟಿದ ದಿವಸವಿದ್ದದರಿಂದ, ಅಂದು ರಾಷ್ಟ್ರೀಯ ಶಾಲೆಯ ಉಪಾಧ್ಯಾಯರೂ ವಿದ್ಯಾರ್ಥಿಗಳೂ, ಈ ಊರ ಮುಖಂಡರೂ ಮಹಾತ್ಮರ ಭಾವಚಿತ್ರದೊಂದಿಗೆ ಭಜನೆ ಮೇಳದಿಂದ ಊರೆಲ್ಲ ತಿರುಗಿ ಅಲ್ಲಲ್ಲಿ ದೇವರಿಗೆ ಫಲಸಮರ್ಪಣ ಮಾಡಿ ಮಹಾತ್ಮರ ಆಯುರಾರೋಗ್ಯದ ಬಗ್ಗೆ ಅವರು ಕೈಕೊಂಡ ಕಾರ್ಯದಲ್ಲಿ ಯಶಸ್ಸು ಸಿಗಲೆಂದೂ ಪ್ರಾರ್ಥಿಸುತ್ತ ನಡೆದಿದ್ದರು. ಅಂದು ಹರಿಜನರಲ್ಲಿ ಎಷ್ಟೋ ಹೊಸ ಬಂದದ್ದಾಗಿ ತಿಳಿಯುತ್ತದೆ.

ಈ ೧ನೇ ಅಕ್ಟೋಬರ ದಿವಸ ಶ್ರೀ। ಕರ್ಕಿಯವರು ತಮ್ಮ ಕೌನ್ಸಿಲ ಉಮೇದವಾರಿಯ ವಿಷಯವಾಗಿಯೂ ಮತದಾರರ ಮಹತ್ವದ ವಿಷಯವಾಗಿಯೂ ಜಾಹೀರ ವ್ಯಾಖ್ಯಾನ ಕೊಟ್ಟರು. ತಾವು ರಾಷ್ಟ್ರೀಯ ಪಕ್ಷದಿಂದ ನಿಲ್ಲುತ್ತೇವೆ. ಮತದಾರರು ಯಾವಾಗ ತಮಗೆ ಕೌನ್ಸಿಲು ಬಿಟ್ಟು ಹೊರಗೆ ಬಂದು ಕಾರ್ಯ ಮಾಡಿಕೊಳ್ಳಲಿ ಎಂತ ಹೇಳುತಾರೋ, ಅಂದು ಕೌನ್ಸಿಲು ಬಿಟ್ಟು ಬರಲಿಕ್ಕೆ ತಯಾರಿದ್ದೇನೆ ಮತ್ತು ನಾನು ಬಿಟ್ಟು ಬಂದೇನೋ, ಇಲ್ಲವೋ ಎಂದು ತಿಳಕೊಳ್ಳುವರಿದ್ದರೆ, ನಾನು ಕೊಡಲು ಅಸಹಕಾರದ ಠರಾವು ಪಾಸಾದ ಕೂಡಲೇ (Printed) ಸರಕಾರದಿಂದ ಆರಿಸಲ್ಪಟ್ಟ ಹೊನ್ನಾವರ ತಾಲೂಕಾ ಲೋಕಲ್ ಬೋರ್ಡಿನಲ್ಲಿ ಒಬ್ಬ ಹುದ್ದೆದಾರನಿದ್ದೆನು. ಆ ಜಾಗಾಕ್ಕೆ ಅಸಹಕಾರ ತತ್ವಕ್ಕನುಸರಿಸಿ ಕರಾರು ಕೊಡದೆ ಹೊರಗೆ ಬಂದು, ರಾಷ್ಟ್ರಕಾರ್ಯದಲ್ಲಿ ದುಡಿದಿದ್ದೇನೆ ಮತ್ತು ಸ್ವಲ್ಪ ತಿಂಗಳಾದರೂ ಜೈಲಿಗೆ ಕರಾರು ಹೋಗಿದ್ದೇನೆ ಆದ್ದರಿಂದ ಇದೆಲ್ಲ ತಿಳಿದು, ಮತದಾರರು ಮತ ಕೊಡತಕ್ಕವರಿದ್ದರೆ, ರಾಷ್ಟ್ರೀಯ ಪಕ್ಷದ ಮೆಂಬರನಾದ ನನಗೇ ಕೊಡಬೇಕೆಂದು ಹೇಳಿದರು ಮತ್ತು ರಾಷ್ಟ್ರೀಯ ಪಕ್ಷಕ್ಕೆ ಜಯ ಸಿಗುತ್ತದೋ? ಅಥವಾ ಇತರ ಪಕ್ಷದವರಿಗೆ ಜಯ ಸಿಗುತ್ತದೋ ನೋಡಬೇಕು ಎಂದು ಹೇಳಿ ತಮ್ಮ ನಾಲ್ಕು ಮಾತು ಮುಗಿಸಿದರು. ಮತದಾರರು ಹೆಚ್ಚಿಗೇ ಕೂಡಿರಲಿಲ್ಲ.

ಈ ವಾರದಲ್ಲಿ ಮುಸ್ಸಂಜೆ ಹೊತ್ತಿಗೆ ಅಕ್ಕಿ (ತಾ ೬-೧೦-೩೪) ೧೪ ಗಿದ್ನಕ್ಕೆ ೪ ಸೇರು ಬಂದಿರುತ್ತದೆ. ನಗರಿ ೮-೧೦-೩೪

ತಾ ೭-೧೦-೩೪ ರವಿವಾರ ಶ್ರೀ। ಕೃಷ್ಣಭಟ್ಟರು ರಾಷ್ಟ್ರೀಯ ಶಾಲೆಯಲ್ಲಿ ಭಗಿನೀ ಮಂಡಳದ ತರ್ಫೆಯಿಂದ "ನಿತ್ಯದ ಪ್ರಭಾವ" ವೆಂಬ ನೂತನವಾದ ಮಹಿಮೆಯ ಭಕ್ತನ ವಿಷಯದ ಕೀರ್ತನ ಮಾಡಿದರು. ಭಗಿನೀ ವರ್ಗವು ಬಹಳವಿತ್ತು. ಆರತಿ ಪಟ್ಟಲಲ್ಲಿ ಬಂದ ಹಣ ಶಾಲೆಗೇ ಕೊಟ್ಟಿರುತ್ತಾರೆ.

ದಿಲ್ಲಿಯ ಜಾಗಾ ಕಾಂಗ್ರೆಸಿಗೆ ಹೋದ ಶ್ರೀ। ದೇವರಾವರು ತಾ ೭-೧೦-೩೪ಕ್ಕೆ ಇಲ್ಲಿಗೆ ಬಂದರು.

ಇಲ್ಲಿಯ ಕಾಂಗ್ರೆಸ ಕಮಿಟಿಯವರು ಹೊಸ ವರ್ಷದ ಕೆಲಸದ ಸಂಬಂಧ ಸದ್ಯದಲ್ಲೇ ತಾಲೂಕಾ ಮಹಾಸಭೆ ಕರೆಯುವವರಿದ್ದಾರೆ.

ಸ್ವಯಂಸೇವಕರು, ರಾಷ್ಟ್ರೀಯ ಶಾಲೆಯ ಉಪಾಧ್ಯಾಯರೂ, ಈ ವಿದ್ಯಾರ್ಥಿಗಳೂ, ತಾ ೭-೧೦-೩೪ರಿಂದ ಉದಯರಾಗ ಹೇಳಿಕೊಳ್ಳುತ್ತಾ ಊರ ಸುತ್ತ ತಿರುಗಲು ಪ್ರಾರಂಭಿಸಿದ್ದಾರೆ ಸ್ತುತ್ಯ.

ಈ ವರೆಗೆ ಮಳೆ ೧೫೬ ಇಂಚು ಬಿದ್ದು ಈಗ ಈಗ ಮೋಡ ಹಾಜನು ರಜಾ ಪಡಕೊಂಡಿದ್ದಾನಾಗಿ ತೋರುತ್ತದೆ.

ತಾ ೮-೧೦-೩೪ನೇ ದಿವಸ ಸೋಮವಾರ ಅಂದು ಯಾಳಗೀ ದಿನವಿದ್ದದರಿಂದ, ರಾಷ್ಟ್ರೀಯ ಶಾಲೆಯಲ್ಲಿ ಶ್ರೀ। ಗೋವಿಂದರಾವ ಯಾಳಗಿಯವರ ನಿಧನದ ಬಗ್ಗೆ ಶ್ರೀ। ಹರಿಯಪ್ಪ ವಾಸುದೇವಪ್ಪ ಚಂದ್ರಭಟ್ಟ ಇವರ ಅಧ್ಯಕ್ಷತೆಯ ಕೆಳಗೆ ಸಭೆ ಸೇರಿ ಈ ಕೆಳಗಿನಂತೆ ಠರಾವುಗಳು ಪಾಸ ಮಾಡಲ್ಪಟ್ಟವು.

(೧) ಅ. ಭಾ. ಕಾ. ಕಮಿಟಿಯ, ಕರ್ನಾಟಕ ಪ್ರಾಂತಿಕ ಕಮಿಟಿಯ ಮೆಂಬರರಾಗಿದ್ದ ಮತ್ತು ಅವಿಶ್ರಾಂತದೇಶ ಸೇವೆಯನ್ನು ಪರಿಪರಿಯಿಂದ ಮಾಡಿ ಕರ್ನಾಟಕಕ್ಕೆ ಅಲಂಕಾರಭೂತರಾದಂಥ ಶ್ರೀ। ಗೋವಿಂದರಾವ ಯಾಳಗಿ ಇವರ ಅಕಾಲಿಕ ನಿಧನದಿಂದ ಕರ್ನಾಟಕಕ್ಕೆ ಅತ್ಯಂತ ಹಾನಿಯಾಗಿರುತ್ತದೆಂದು ಈ ಸಭೆಯು ವ್ಯಕ್ತ ಮಾಡುತ್ತದೆ ಮತ್ತು ಇವರ ಕುಟುಂಬದ ದುಃಖದಲ್ಲಿ ಈ ಸಭೆಯು ಸಮಭಾಗಿಯಾಗಿರುತ್ತದೆಂಬ ಠರಾವು ಪಾಸಾಯಿತು.

(೨) ಶ್ರೀ। ಯಾಳಗಿ ಇವರ ಸಂಸ್ಮರಣಾರ್ಥವಾಗಿ ಹಣ ಕೂಡಿಸಿ, ಹುಬ್ಬಳ್ಳಿಗೆ ಮಾಯರೆಸ್ವರ ವ್ಹಾಲೆಂಟಿಯರ ಬೋರ್ಡ ಇವರ ಕಡೆಗೆ ಕಳಿಸಬೇಕಾಗಿ ಠರಾವು ಮಾಡಲಾಯಿತು.

ನೋಟೀಸು.

ಸಿದ್ದಾಪುರ ತಾಲುಕಾ ಕಾಂಗ್ರೆಸ ಕಮಿಟಿಯ ಮಹಾಸಭೆಯು (General Committee) ೨೮-೧೦-೩೪ನೇ ದಿವಸ ಸಿದ್ದಾಪುರ ರಾಷ್ಟ್ರೀಯ ಶಾಲೆಯ ಇಮಾರತಿನಲ್ಲಿ ಮಧ್ಯಾನ್ಹ ಘಂಟೆ ೩ಕ್ಕೆ ಕೂಡುವದು. ಆದ್ದರಿಂದ ಈ ತಾಲೂಕಿನ ಎಲ್ಲಾ ಕಾಂಗ್ರೆಸ ಸಭಾಸದರು ಬರಬೇಕಾಗಿ ವಿನಂತಿ ಸದ್ರಿ ಸಭೆಯಲ್ಲಿ ಈ ಕೆಳಗೆ ನಮೂದಮಾಡಿದ ವಿಷಯಗಳು ಚರ್ಚಿಸಲ್ಪಡುವವು.

(೧) ಚಾಲೂ ವರ್ಷದ ಕೆಲಸದ ರಿಪೋರ್ಟ ಓದುವದು.

(೨) ಮುಂದಿನ ವರ್ಷದ ಜಮಾಖರ್ಚಿನ ಅಂದಾಜ ಪತ್ರಿಕೆ ಮಂಜೂರ ಮಾಡುವದು.

(೩) ಮುಂದಿನ ವರ್ಷದ ಕಾಂಗ್ರೆಸ ಕಮಿಟಿಯ ಅಧಿಕಾರಿಗಳನ್ನು ನೇಮಿಸುವದು

(೪) ತಾಲುಕಾ ಕಮಿಟಿಯ ಅಧ್ಯಕ್ಷ, ಉಪಾಧ್ಯಕ್ಷ, ಖಜಿನದಾರ, ಕಾರ್ಯದರ್ಶಿ

(೫) ಜಿಲ್ಲಾ ಕಮಿಟಿಗೆ ಈ ತಾಲೂಕಿನಿಂದ ಮೆಂಬರರನ್ನು ಆರಿಸುವದು

(೬) ಪ್ರಾಂತಿಕ ಕಮಿಟಿಯ ಮೆಂಬರರನ್ನು ಆರಿಸುವದು

(೭) ವಿಜಾಪುರದಲ್ಲಿ ಆಗುವ ಪ್ರಾಂತಿಕ ಪರಿಷತ್ತಿಗೆ ಪ್ರತಿನಿಧಿಗಳನ್ನು ಆರಿಸುವದು.

(೮) ಕೋಕೋನಾಡಿನಲ್ಲಿ ಆಗುವ ರಾಷ್ಟ್ರೀಯ ಮಹಾಸಭೆಗೆ ಪ್ರತಿನಿಧಿಗಳನ್ನು ಆರಿಸುವದು

(೯) ರಾಷ್ಟ್ರೀಯ ಶಾಲೆಯ ಬಗ್ಗೆ ಫಂಡು ಕೂಡಿಸುವ ಬಗ್ಗೆ ಯೋಜನೆ ತಯಾರ ಮಾಡುವದು

(೧೦) ಅಧ್ಯಕ್ಷರ ಪರವಾನಗಿಯಿಂದ ಚರ್ಚಿಸಬಹುದಾದ ಇತರ ವಿಷಯಗಳು

ಹೊನ್ನಾವರ— ಶ್ರೀಯುತ ಕರ್ಕಿಯವರು ತಮಗೆ ಮತಗಳನ್ನು ಒಟ್ಟುಮಾಡುವದರ ಸಲುವಾಗಿ ಶಿರ್ಸಿ, ಸಿದ್ದಾಪುರ ಅತ್ತಕಡೆಗೆ ಹೋಗಿರುವರು.

ಧಾರವಾಡದಿಂದ ಶ್ರೀಯುತ ಕೇಶವಮ್ಯಾನವರು ತಮ್ಮ ಸ್ನೇಹಿತರೊಡಗೂಡಿ, ಇಲ್ಲಿಯ ಮತ ತಮಗೆ ದೊರೆಕಿಸುವರೆ ಇಲ್ಲ ಬಂದು ಪ್ರಯತ್ನದಲ್ಲಿದ್ದಾರೆ.

ಯಕ್ಷಗಾನ ದಶಾವತಾರ ಮಂಡಳಿಯವರು ಕಳೆದ ಶನಿವಾರ ದಿವಸ ಆಡಿದ ಆಟದ ಉತ್ಪನ್ನ ಒಟ್ಟು ರೂ ೧೨೦-೩-೦ ಆಗಿಯದೆ.

ತಾ ೮ನೇ ಸೋಮವಾರ ದಿವಸವು ಪ. ದೇಶಭಕ್ತ ಯಾಳಗಿಯವರ ದಿನವೆಂದು ಇಲ್ಲಿಯ ಸ್ವಯಂಸೇವಕರು ಉಪವಾಸ ಮಾಡಿ, ಸದ್ರಿಯವರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಪ್ರಾರ್ಥನೆ ಮಾಡಿದರು.

ಜಾಹೀರ ವಿನಂತಿ.

ಹೊನ್ನಾವರ ತಾಲುಕಾ ಕಾಂಗ್ರೆಸ ಕಮಿಟಿಯಿಂದ ಈ ಕೆಳಗೆ ಬರೆದ ವಿಷಯಗಳ ಕುರಿತು ಇದೇ ತಿಂಗಳ ತಾರೀಕು ೨೧-೧೦-೩೪ನೇ ರವಿವಾರ ಮಧ್ಯಾನ್ಹ ೪ ಘಂಟೆ ಸಮಯಕ್ಕೆ ತಾಲುಕಾ ಕಾಂಗ್ರೆಸ ಕಮಿಟಿಯ ಮಹಾಸಭೆಯು ಟಿಪ್ಪರಹೋಲಿನಲ್ಲಿ ಕೂಡುವದು. ಇದಕ್ಕೆ ಈ ತಾಲೂಕಿನ ಕಾಂಗ್ರೆಸ ಮೆಂಬರರೆಲ್ಲರು ತಪ್ಪದೆ ಬರಬೇಕಾಗಿ ಸವಿನಯ ವಿನಂತಿ.

ವಿಷಯಗಳ ಯಾದಿ

(೧) ಕಳೆದ ೧೯೩೩ನೇ ಅಕ್ಟೋಬರ ೧ನೇಯಿಂದ ೧೯೩೪ನೇ ಸಪ್ಟಂಬರ ಅಖೈರ ತನಕ ನಡೆದ ೧ ವರ್ಷದ ಜಮಾಖರ್ಚಿನ ಅಢಾವೆಯ ಪತ್ರಕವನ್ನು ಓದಿ, ಮಂಜೂರಮಾಡುವದು

(೨) ಮುಂದಿನ ವರ್ಷದ ಬಗ್ಗೆ ಹೊಸ ಕಾರ್ಯಕಾರಿ ಮಂಡಳ

(೩) ಜಿಲ್ಲಾ ಕಮಿಟಿಗೆ ಮೆಂಬರರನ್ನಾರಿಸುವದು.

(೪) ಪ್ರಾಂ. ಕಾಂ. ಕಮಿಟಿಯ ಮೆಂಬರರನ್ನಾರಿಸುವದು

(೫) ಕೋಕೋನಾಡಾ ಕಾಂಗ್ರೆಸಿಗೆ ಪ್ರತಿನಿಧಿಗಳನ್ನಾರಿಸುವದು.

(೬) ಅಧ್ಯಕ್ಷರ ಪರವಾನಗಿಯಿಂದ ಇತರ ವಿಷಯಗಳನ್ನು ವಿಚಾರಿಸುವದು

ಹೊನ್ನಾವರ } ಕೊಡ್ಲ ವಾಸುದೇವ ಶ್ಯಾನಭಾಗ
೯-೧೦-೩೪, } ಸೆಕ್ರೆಟರಿ, ತಾ. ಕಾಂ. ಕ. ಹೊನ್ನಾವರ

ಲೋಕನಾಯಕರ ಜಾಹೀರನಾಮೆ

ಸಮಾಜಗಳಲ್ಲಿ ಐಕ್ಯಮತ್ಯದಿಂದ ಪರಮತಸಹಿಷ್ಣುತೆಯಿಂದ ವರ್ತಿಸಬೇಕೆಂದು ಜಾಹೀರನಾಮೆಯನ್ನು ತೆಗೆಯುವವರಿದ್ದಾರೆಂದು ಮೌಲಾನಾ ಮಹಮ್ಮದ ಅಲ್ಲಿಯವರು ರಾಷ್ಟ್ರೀಯ ಸಭೆಗೆ ತಿಳಿಸಿದ್ದರು. ಆ ಜಾಹೀರನಾಮೆಯು ಈಗ ಪ್ರಕಟವಾಗಿದೆ. ಅದೇನಂದರೆ —

ಸದ್ಯಕ್ಕೆ ಅನೇಕ ಕೋಮುವಾರು ಪ್ರಕಾರಗಳ ಜಗಳ ಹತ್ತಿವೆ. ಈ ಕಲಹಗಳನ್ನು ಸ್ವಲ್ಪ ಮಾಡುವ ನಾವು ಮುಸಲ್ಮಾನರೂ ಹಿಂದೂಗಳೂ ಕೂಡಿ ಇದರ ಮೂಲಕ ಜಾಹೀರಪಡಿಸುವದೇನಂದರೆ — ಯಾವದೇ ಸಮಾಜದ ವ್ಯಕ್ತಿಯಿರಲಿ ಅಥವಾ ವ್ಯಕ್ತಿಗಳ ಸಮೂಹವಿರಲಿ ಅವನು ಕೆರೆಯ ಉಪಯೋಗ ... ಅವನ ಸೊತ್ತಿಗೆ ... ಮಂದಿರ ಮಸೀದಿ ಇಗರ್ಜಿ ಗುರುದ್ವಾರ ಮೊದಲಾದ ಪೂಜಾಸ್ಥಾನಗಳಿಗೆ ಪಕ್ಕದ ಬಾಂಧವರಿಗೆ ಯಾವದೇ ತರದ ಅಪಕೃತ್ಯವನ್ನು ಮಾಡಿದ್ದಲ್ಲಿ ಅಥವಾ ಇಂಥ ಅಪಕೃತ್ಯಗಳನ್ನು ಮಾಡುವವರಿಗೆ ಸಹಾಯ ಮಾಡಿದ್ದಲ್ಲಿ ಅವನು ಧಾರ್ಮಿಕ ದೃಷ್ಟಿಯಿಂದ ಮಹಾಪಾಪಿಯಾಗಿರುವನು. ಹಾಗೂ ಇಂಥ ಅಪಕೃತ್ಯ ಮಾಡುವವರ ಸದರಿಯವರು ಅವರನ್ನು ವಿರೋಧಿಸಿ ಅತ್ಯಾಚಾರದಿಂದ ಪೀಡಿಸಲ್ಪಡುವ ಪರಧರ್ಮೀಯರಿಗೆ ಸಂರಕ್ಷಿಸಬೇಕು. ಮತ್ತೊಂದು ಬಿನ್ನಹವೇನಂದರೆ ಪ್ರತಿ ಒಂದು ಧರ್ಮದವರು ತಮ್ಮ ನೆರೆಹೊರೆಯವರ ಪಕ್ಕದ ಬಾಂಧವರ ಧಾರ್ಮಿಕ ಭಾವನೆಗಳನ್ನು ನೋಯಿಸದೆ ಅನ್ಯೋನ್ಯ ಸಹವಾಸದಿಂದ ನಡೆಕೊಳ್ಳಬೇಕು.

೧ ಲಾಲಾ ಲಜಪತರಾಯ ೨ ಮೌ. ... ದಿಲ್ಲಿ ೩ ಪಂಡಿತ ಮದನಮೋಹನ ಮಾಲವೀಯ ೪ ಮೌ. ಅಬುಲ ಕಲಮ ಆಝಾದ ಕಲಕತ್ತಾ ೫ ಸ್ವಾಮಿ ಶ್ರದ್ಧಾನಂದ ದಿಲ್ಲಿ ೬ ಮೌ. ... ಕಾದೀರ ... ಉಸ್ಮಾನಿ ೭ ಪಂಡಿತ ದೀನದಯಾಳ ಶರ್ಮಾ ೮ ಹಕೀಮ ಅಜಮಲಖಾನ ದಿಲ್ಲಿ ೯ ಶ್ರೀ ಸಿ. ಆರ. ದಾಸ ಕಲಕತ್ತಾ ೧೦ ಮೌ. ಮಹಮ್ಮದ ಅಲ್ಲಿ ೧೧ ಪಂಡಿತ ಮೋತೀಲಾಲ ನೆಹರು ೧೨ ಮೌ. ಅಹಮದ ಸೈದ ದಿಲ್ಲಿ ೧೩ ಡಾ. ಸತ್ಯಪಾಲ ಲಾಹೋರ ೧೪ ಮೌ. ಹುಸೇನ ಅಹಮದ ... ೧೫ ಬಾಬು ಭಗವಾನದಾಸ ಬನಾರಸ ೧೬ ಮೌ. ಮಹಮ್ಮದ ಸಜ್ಜದ ... ಬಿಹಾರ ೧೭ ಪಂಡಿತ ನೇಕೀರಾಮ ಶರ್ಮಾ ಭಿವಾನಿ ೧೮ ಡಾ. ಮುಕ್ತಾರ ಅಹಮದ ಅನಸಾರಿ ದಿಲ್ಲಿ ೧೯ ಪಂಡಿತ ಜವಾಹರಲಾಲ ನೆಹರು ಅಲಹಾಬಾದ ೨೦ ಮೌಲಾನಾ ಮಹಮ್ಮದ ಬಷೀರ ದೇವಬಂದ ೨೧ ಬಿ. ಪುರಷೋತ್ತಮದಾಸ ಟಂಡನ್ ೨೨ ಮೌ. ಆಝಾದ ಸೋಬಾನಿ ೨೩ ಶ್ರೀ ರಾಜೇಂದ್ರ ಪ್ರಸಾದ ಬಿಹಾರ, ೨೪ ಮೌ. ಸಯ್ಯದ ಸುಲೇಮಾನ ನಾದವಿ ೨೫ ... ಪಂಡಿತ ಕೇ. ಸಂತಾನಂ ಲಾಹೋರ ೨೬ ಮೌ. ಅಬ್ದುಲ ಹಲೀಮ ಸಿದ್ದೀಕಿ ದಿಲ್ಲಿ ೨೭ ಶ್ರೀ ಕೊಂಡವೆಂಕಟಪ್ಪಯ್ಯಾ ಗುಂಟೂರು ೨೮ ಮೌ. ಮಸೂದ ಅಲ್ಲೀ ನಾದೀರ, ೨೯ ಶ್ರೀ ವಲ್ಲಭಭಾಯಿ ಪಟೇಲ, ೩೦ ಪೀರ ಘುಲಾಮ ಮೊಜಿದದ್ ಸಿಂಧ, ೩೧ ಶ್ರೀ ಸಿ. ರಾಜಗೋಪಾಲಾಚಾರಿಯರ್ ೩೨ ಖಾಜೆ ಅಬ್ದುಲ ಕರೀಮ ಢಾಕ್ಕಾ ೩೩ ಗೋಪಾಲಕೃಷ್ಣಯ್ಯ, ೩೪ ಅಬ್ದುಲ್ಲಾ ಹರೂನ, ಕರಾಚಿ ೩೫ ... ಭೋಗರಾಜ ೩೬ ಡಾ. ಸೈಫುದ್ದೀನ ಕಿಚಲು ಅಮೃತಸರ ೩೭ ಲಾಲಾ ಗಿರಿಧರಲಾಲ ಅಮೃತಸರ ೩೮ ಶ್ರೀ ಅಬ್ಬಾಸ ತಯ್ಯಬಜಿ ೩೯ ಟಿ. ಪ್ರಕಾಶಂ ೪೦ ಆಸಫ್ ಅಲ್ಲಿ ದಿಲ್ಲಿ ೪೧ ವ್ಹಿ. ಜೆ. ಪಟೇಲ, ೪೨ ಎಮ್. ಎಸ್. ಎಚ್., ಜೆ. ಎಮ್. ಜೋಷಿ ಮುಂಬಯಿ ೪೩ ಎಮ್. ಆರ್. ಜಯಕರ, ಮುಂಬಯಿ ೪೪ ಸಯ್ಯದ ಮಹಮೂದ ಬಿಹಾರ ೪೫ ಕೇ. ನಟರಾಜನ, ಮುಂಬಯಿ ೪೬ ಮಹಮೂದ ಕಫೀ, ... ರಘುಪತಿ ೪೭ ಜಮನಾಲಾಲ ಬಜಾಜ ೪೮ ಅಹಮದಾಬಾದ ೪೯ ಸಿ. ಎಚ್. ಖಲಿಖುಜ್ಜಮಾನ್ ಲಖನೌ ೫೦ ಶ್ರೀ ಸಾಂಕಳಚಂದ, ಶಹಾ, ಢಾಕ್ಕಾ ೫೧ ಮುಖ್ತಾರ ... ಅಲ್ಲಿ ೫೨ ಸುಭಾಷಚಂದ್ರ ಬೋಸ ಕಲಕತ್ತಾ, ೫೩ ಕಸ್ತೂರ ಬಾಯಿ ಗಾಂಧೀ, ಅಹಮದಾಬಾದ, ೫೪ ಅಬಾದಿ ಬಾನು (ಬಾಯಿ ಅಮ್ಮಾ) ೫೫ ಅವಜಾದಿ, (ಬೇಗಮ್ ಮಹಮ್ಮದ ಅಲ್ಲಿ) ೫೬ ಸರೋಜಿನಿ ನಾಯಡು ಮುಂಬಯಿ ೫೭ ಎಚ್. ಎಸ್. ಕರಮಾಲಿ ೫೮ ಜೋಶಿರಾಮ ಪಿ. ಗಿಡವಾನಿ ೫೯ ಮೌ. ಮಝರುದ್ದೀನ ದಿಲ್ಲಿ ೬೦ ಪಂಡಿತ ದೀನಾನಾಥ ಅಮೃತಸರ ೬೧ ಶ್ರೀ ಎಚ್. ಪಿ. ಎಸ್. ಖತ್ರಿ ಮುಂಬಯಿ ೬೨ ಜೋರ್ಜ ಜೋಸೆಫ್ ಅಹಮದಾಬಾದ ೬೩ ಡಿ. ಎಮ್. ಭರ್ಗ್ರಿ ಸಿಂಧ ೬೪ ಎನ್. ಸಿ. ಕೇಳಕರ ಪುಣೆ ಮೊದಲಾದ ೧೦೦ ಲೋಕನಾಯಕರ ಸಹಿಗಳಿವೆ.

ಮೊದಲನೇ ಕರ್ನಾಟಕ ಪ್ರಾಂತಿಕ ರಾಷ್ಟ್ರಸೇವಕ ಪರಿಷತ್ತು.

(ವಾರ್ತಾ ಪ್ರಸಾರಕ ಸಂಘದಿಂದ)

ಪ್ರಕಟಣಾ ಪತ್ರಿಕೆ ನಂಬರ ೧

ಈ ಪ್ರಾಂತದಲ್ಲಿಯ ರಾಷ್ಟ್ರಸೇವಕ ಸಂಘಗಳನ್ನು ಆದಷ್ಟು ಸುಸಂಘಟಿತವಾಗಿ ಮಾಡುವ ಉದ್ದೇಶದಿಂದಲೂ ರಾಷ್ಟ್ರಸ್ವಾತಂತ್ರ್ಯದ ಕೆಲಸವು ಒಳ್ಳೇ ರಭಸದಿಂದಲೂ ಸುವ್ಯವಸ್ಥಿತೆಯಿಂದಲೂ ನಡೆಯುವದಕ್ಕೆ ಪ್ರಾಂತದಲ್ಲಿ ರಾಷ್ಟ್ರಸೇವಕರು ಬಹಳಷ್ಟಿಗೆ ಕಲೆತು ಇತರ ಮುಂದಾಳುಗಳ ಸಲಹೆಯಿದ್ದಷ್ಟು ಉಪದೇಶವನ್ನು ತೆಗೆದುಕೊಂಡು ಮುಂದಿನ ಕಾರ್ಯವನ್ನು ಗೊತ್ತುಪಡಿಸಬೇಕಾಗಿದೆಯಷ್ಟೇ. ಇದೇ ಕಾರಣದ ಸಲುವಾಗಿ ವಿಜಾಪುರದೊಳಗೆ ಮುಂದಿನ ತಿಂಗಳ ಮಧ್ಯದಲ್ಲಿ ಕೂಡುವ ಎರಡನೇ ಪ್ರಾಂತಿಕ ಪರಿಷತ್ತಿನೊಡನೆಯೇ ಈ ಪ್ರಾಂತದ ರಾಷ್ಟ್ರಸೇವಕರ ಮೊದಲನೆ ಪರಿಷತ್ತನ್ನು ಕೂಡಿಸುವದು ದಿನಾ ಗೊತ್ತಾಗಿರುವದು. ಈ ಪರಿಷತ್ತು ಯಶಸ್ವೀ ರೀತಿಯಿಂದ ಪಾರ ಬೀಳಲಿಕ್ಕೆ ಪ್ರಾಂತದಲ್ಲಿಯ ಯಾವತ್ತು ರಾಷ್ಟ್ರಸೇವಕರ ಸಹಕಾರತೆಯೂ, ಸಹಾನುಭೂತಿಯೂ ಅವಶ್ಯವೆಂದು ಬೇರೆ ಹೇಳಬೇಕಾಗಿಲ್ಲ. ಈ ಪರಿಷತ್ತನ್ನು ಕೂಡಿಸುವ ಉದ್ದೇಶಗಳ ಪೈಕಿ ಮುಖ್ಯವಾದವುಗಳನ್ನು ಕೆಳಗೆ ಕೊಟ್ಟಿರುತ್ತೇವೆ.

೧ ಈ ಪ್ರಾಂತದಲ್ಲಿ ಸದ್ಯಕ್ಕೆ ಅಸ್ತಿತ್ವದಲ್ಲಿದ್ದ ರಾಷ್ಟ್ರಸೇವಕರ ಸಂಘವನ್ನು ಸುವ್ಯವಸ್ಥಿತೆಯಿಂದ ನಡಿಸುವದು.

೨ ತಾಲೂಕುಗಳ ಕಪ್ತಾನರನ್ನು ಹಾಗು ಜಿಲ್ಹಾ ದಿಕಾರಿಗಳನ್ನು ಹೊಸದಾಗಿ ನೇಮಿಸುವದು.

೩ ಅವರವರ ಕೆಲಸಗಳನ್ನು ಹಾಗು ಕಾರ್ಯಕ್ಷೇತ್ರಗಳನ್ನು ಗೊತ್ತುಪಡಿಸುವದು.

೪ ಅಖಿಲ ಭಾರತೀಯ ರಾಷ್ಟ್ರಸೇವಕರ ಪರಿಷತ್ತಿನ ಸಲುವಾಗಿ ಈ ಪ್ರಾಂತದಿಂದ ಪ್ರತಿನಿಧಿಗಳನ್ನು ಆರಿಸುವದು.

೫ ಅಖಿಲ ಭಾರತೀಯ ರಾಷ್ಟ್ರಸೇವಕ ಪರಿಷತ್ತಿಗೆ ಅದರ ಕಾರ್ಯಕಾರೀ ಮಂಡಳದವರು ಮಾಡಿದ ಸೂಚನೆಗಳನ್ನು ಲಕ್ಷದಲ್ಲಿ ತೆಗೆದುಕೊಂಡು ಈ ಪ್ರಾಂತದವರಿಗೆ ಹೊಸದಾಗಿ ಏನಾದರೂ ಸೂಚನೆಗಳನ್ನು ಮಾಡುವದಿದ್ದಲ್ಲಿ ಸೂಚಿಸುವದು.

ಮೇಲ್ಕಾಣಿಸಿದವುಗಳ ಮೇಲಿಂದ ಪರಿಷತ್ತಿನ ಮಹತ್ವವು ಕಾಣಬರುವದು. ಇಲ್ಲಿ ಕೊಟ್ಟ ಉದ್ದೇಶಗಳನ್ನು ಹೊರತುಪಡಿಸಿ, ಯಾರಾದರೂ ಇತರ ಸೂಚನೆಗಳನ್ನು ಮಾಡುವದಿದ್ದಲ್ಲಿ ಅವುಗಳ ಚರ್ಚೆಯನ್ನೂ ಮಾಡುವದರಲ್ಲಿ ಬರುವದು.

ವಿಶೇಷ ಸೂಚನೆ ಈ ಪರಿಷತ್ತಿಗೆ ಬರಲಿಚ್ಛಿಸುವವರು ಮುಂದಾಗಿಯೇ ತಿಳಿಸಿದಲ್ಲಿ ವ್ಯವಸ್ಥೆ ಮಾಡುವದಕ್ಕೆ ಸರಿಹೋಗುವದು.

ಹುಬ್ಬಳ್ಳಿ } N S Hardikar
ತಾ ೧೦-೧೦ } ಕ ಪ್ರಾಂ ರಾಷ್ಟ್ರಸೇವಕ ಮಂಡಳ

ವೃತ್ತಸಾರ.

— ಗುರುದ್ವಾರದ ಮ್ಯಾನೇಜರರಾದ ಭಾಯಿ ಭಗತಸಿಂಗರವರಿಗೆ ಪೈತು ಪಟ್ಟಣದಲ್ಲಿ ಸೆರೆಹಿಡಿದು, ೧ ವರುಷದ ಸಾದಾ ಕಾರಾಗೃಹ ಶಿಕ್ಷೆಯನ್ನು ವಿಧಿಸಿರುವರು. ಪ್ರಬಂಧಕ ಕಮಿಟಿಯವರು ಪೈತು ಪಟ್ಟಣದೊಳಗಿನ ಕಾರಭಾರಿಗಳಿಗೆ ಅಧಿಕಾರಗಳು ಜಾದಾ ಕಮಿಟಿಗಳನ್ನು ನೇಮಿಸುವರು.

— ಬಿಹಾರ ಪ್ರಾಂತದ ಚಂಪಾರಣ ಜಿಲ್ಹೆಯಲ್ಲಿ ಕಳೆದ ಅಕ್ಟೋಬರ ೧ನೇ ತಾರೀಖಿಗೆ ನದಿಗಳಿಗೆ ನೆರೆ ತುಂಬಿ, ಅನೇಕರು ಹೊಳೆಗೆ ಸತ್ತರು. ದನಕರುಗಳೂ ನಾಶಹೊಂದಿದವು. ೩೦೦ ಮೈಲು ಅಚೆ-ಇಚೆಗಿರುವ ಭತ್ತದ ಪೈರು ಸಂಪೂರ್ಣವಾಗಿ ನಾಶವಾಗಿದೆ.

— ಮೌಲಾನಾ ಶೌಕತ ಅಲ್ಲಿಯವರು ಎಂದು ಬಿಡುಗಡೆ ಹೊಂದುವರು? ಎಂದು ರಾಜಕೋಟ ಜೈಲಿನ ಸುಪರಿಂಟೆಂಡೆಂಟರಿಗೆ ಸೆಂಟ್ರಲ್ ಖಿಲಾಫತ ಕಮಿಟಿಯವರು ಕೇಳಿದ್ದಕ್ಕೆ ಇನ್ನೂ ಈ ಬಗ್ಗೆ ತಮಗೇನೂ ಮಾಹಿತಿ ದೊರಕಿಲ್ಲೆಂದು ಅಧಿಕಾರಿಗಳು ಸ್ಪಷ್ಟೀಕರಣ ಮಾಡಿರುವರು.

— ಬರ್ಮಾ ಪ್ರಾಂತದ ಶಾನ್ ಸಂಸ್ಥಾನದ ಪಾಂಗ್ಲೊಂಗ ಎಂಬಲ್ಲಿ ಕಳೆದ ಸಪ್ಟಂಬರ ತಾ ೨೯ನೇಗೆ ಒಂದು ಸಣ್ಣ ದಂಗೆಯಾಯಿತು. ಅಲ್ಲಿ ವಿಧಿಸಿದ ಅಬ್ಕಾರಿ ತೆರಿಗೆಯನ್ನು ವಸೂಲ ಕೊಡಲು ಅಲ್ಲಿ ಥಂಕಸ್ಸೀ ಜಾತಿಯವರು ಒಪ್ಪದ್ದರಿಂದ, ಅವರನ್ನು ಸೆರೆಹಿಡಿದರು. ಜನರು ಅವರನ್ನು ಬಿಡುಗಡೆ ಮಾಡಲು ಹೋದರು. ಆಗ, ಪೋಲೀಸರಿಗೂ ಅವರಿಗೂ ಬಡಿದಾಟವಾಯಿತು. ಇಬ್ಬರು ಥಂಕಸ್ಸೀ ಜನರು ಕೊಲ್ಲಲ್ಪಟ್ಟರು. ಸೈನಿಕರಿಗೆ ಕರೆ ಹೋಯಿತು. ಈಗ ಅಲ್ಲಿ ಶಾಂತವಿದೆ.

— ಮುಂಬಯಿ ಹಾಗು ಪುಣೆಯಿಂದ ಸುಮಾರು ೧೫೦ ಸ್ತ್ರೀಯರು ಮಹಾತ್ಮಾಜೀಯವರ ದರ್ಶನ ಪಡೆಯಲೋಸ್ಕರವಾಗಿ ಕಳೆದ ತಾ ೩ನೇಗೆ ಯರೋಡಾ ಜೈಲಿಗೆ ಹೋಗಿದ್ದರು. ಅಲ್ಲಿ ಅವರಿಗೆ ಗಾಂಧಿಯವರ ದರ್ಶನಪಡೆಯುವ ಅಪ್ಪಣೆ ದೊರಕಲಿಲ್ಲ. ಜೈಲು ಬಾಗಿಲಲ್ಲಿ ಮಹಾತ್ಮರ ಪಟವನ್ನಿಟ್ಟು, ಅದನ್ನು ಸ್ತ್ರೀಯರು ಪೂಜಿಸಿದರು. ಭಾವಪೂರ್ವಕ ಅರ್ಪಿಸಿದ ಪುಷ್ಪ ಮಾಲಿಗೆಗಳನ್ನು ಜೈಲ ಅಧಿಕಾರಿಗಳು ಮಹಾತ್ಮರಿಗೆ ಅರ್ಪಿಸಿದರಂತೆ.

— ಜರ್ಮನಿಯಲ್ಲಿ ಈಗ ವಿಲಕ್ಷಣ ಸ್ಥಿತಿಯಾಗಿದೆ. ಜರ್ಮನ ಮಾರ್ಕ ನಾಣ್ಯದ ಬೆಲೆಯು ಕಲ್ಪನಾತೀತ ಕುಗ್ಗಿದ್ದರಿಂದ ರ್‍ಹ್ವರ ಪ್ರದೇಶದಲ್ಲಿ ಕೂಲಿಕಾರರನ್ನು ಸೋಮಾರಿಯಾಗಿಟ್ಟು ಅವರಿಗೆ ಸರಕಾರ ತರ್ಫೆನಿಂದ ಸಾಕಿ ಫ್ರೆಂಚರಿಗೆ ಹಣ್ಣಿಗೆ ತರುವ ಯೋಜನೆಯನ್ನು ಜರ್ಮನ ಸರಕಾರವು ತೊರೆದಿತು. ಈಗ ಈ ಧೋರಣದಿಂದ ಜರ್ಮನ ರಾಷ್ಟ್ರದೊಳಗಿನ ಬಾವೇರಿಯಾ ಪ್ರಾಂತದವರು ಜರ್ಮನ ರಾಷ್ಟ್ರದೊಳಗಿದ್ದ ಪ್ರತ್ಯೇಕವಾಗಿರುವರೆ ಚಳವಳಿ ನಡಿಸಿರುವರು. ಆದರಿಂದ ಜರ್ಮನಿಯಲ್ಲಿ ಈಗ ಯಾದವಿ ಉತ್ಪನ್ನವಾಗಿದೆ. ಜರ್ಮನ ಮಂಡಳವು ರಾಜಿನಾಮೆಯನ್ನಿತ್ತಿದೆ. ಬಾವೇರಿಯಾದಲ್ಲಿ ಲಷ್ಕರೀ ಕಾಯಿದೆಯು ಜಾಹೀರ ಮಾಡಲ್ಪಟ್ಟಿದೆ.

— ಬ್ರಿಟನದಿಂದ ಪ್ರತಿವರ್ಷಕ್ಕೆ ಸರಾಸರಿ ೪ ಕೋಟಿ ರೂಪಾಯಿ, ಅಂದರೆ, ೬೦ ೭೦ ಕೋಟಿ ರೂಪಾಯಿಗಳ ಸರಕು ಹಿಂದ ಸ್ಥಾನಕ್ಕೆ ರಫ್ತಾಗುತ್ತದೆಂದು ಬ್ರಿಟಿಷ ಮಂತ್ರಿಗಳಾದ ಕೆಲ ದೊರೆಗಳು ಸಾಮ್ರಾಜ್ಯ ಪರಿಷತ್ತಿನಲ್ಲಿ ನುಡಿದರು. ಇಷ್ಟು ವ್ಯಾಪಾರವು ಕಡಿಮೆ ತೋರಿದರೂ, ಸಾಮ್ರಾಜ್ಯದೊಳಗಿನ ಜನರು ಹಿಂದೀಯರ ರಕ್ಷಣೆಯನ್ನರಿತು ಅವರನ್ನು ನಡಿಸಿಕೊಂಡರೆ, ಈ ವ್ಯಾಪಾರದ ಪ್ರಮಾಣವು ಇನ್ನೂ ಹೆಚ್ಚಾಗಬಹುದೆಂದು ಕೆಲ ದೊರೆಗಳು ಅಭಿಪ್ರಾಯ ಪಟ್ಟರು. ಅಂತಲೇ ಇಲ್ಲಿನ ಕಕ್ಷ್ಯಾ ಹಿಂದೀಯರು ಕೇಳ್ವ ಸರಿಸಿ ನ ರ (ಲೆ

ಮದ್ರಾಸಿನ ಹಿಂದೂ ವೃತ್ತಪತ್ರವನ್ನು ತಮ್ಮ ಸಂ ಸದಸ್ಯ ಕರಿಸಬಾರದೆಂದು ಹೈದರಾಬಾದದ ನಿಜಾಮ ಸರಕಾರದವರು ಫರ್ಮಾನವನ್ನು ಹೊರಡಿಸಿರುವರು

- ಶ್ರೀ ಗೋವಿಂದರಾವ ಯಾಳಗಿಯವರ ನಿಧನದ ಬ ದ್ದು ಪ್ರಕಟಿಸಲು ಪ್ರಕರಣ ಮಾಡುವದಕ್ಕೆ ಧಾರವಾಡದಲ್ಲಿ ಕಳೆದ ರವಿವಾರ ತಾ ೨೩ ಕ್ಕೆ ನೆರೆದ್ದ ಜಾಹೀರ ಸಭೆಯು ಇವರ ಅಕಾಲಿಕ ನಿಧನದ ಬಗ್ಗೆ ಕರ್ನಾಟಕ ಕ್ಕೊದಗಿದ ಹಾನಿಯನ್ನು ಸಭೆಯು ನಮೂದ ಮಾಡಿ ತರ ಆಪ್ತರಿಗೆ ತನ್ನ ಸಹಾನುಭೂತಿಯನ್ನು ವ್ಯಕ್ತಪಡಿಸಿತು

ಪಾರ್ಲಿಕೋಟೆಯಲ್ಲಿ ಒಂದು ಚಿತ್ರ ಬಹಳೇ ಹಾ ವಳಿ ಎಬ್ಬಿಸಿತ್ತು ಒಂದು ದಿನ ಹಗಲಿಗೇ ಊರನ್ನು ಹೊ ಕ್ಕು ಹಾಳು ಮನೆಯನ್ನು ಸೇರಿಕೊಂಡಿತು ಜನರು ಸ ಮಾಜದ ಹೋಗಿ ಬಾಗಿಲವನ್ನು ಎಳಕೊಂಡರು ಪೋಲೀಸರಿಗೆ ನಿಮಂತ್ರಣವಾಯಿತು ಬಹಾದ್ದೂರರು ಒಂದು ಗುಂಡು ಹಾರಿಸಿದರು ಚಿಹ್ನೆ ಸಾಯುವದರಿಂದಲಿ ಹೊರಗೆ ಸಹ ಬರಲಿಲ್ಲ ನಾಲ್ವರು ಬಾಗಿಲ ತೆಗೆದು ಒಳ ಹೊಕ್ಕರು ಚಿರ್ತನ ಕೂಡ ಮಲ್ಲಯುದ್ಧ ನಡೆಯಿತು ಬಡಗೋಲಿನಿಂದ ಬರ್ಕನ್ನು ಕೊಂದರು ಒಬ್ಬನಂತು ಪದ ಬಾಯೊಳಗೆ ಕೈ ಹಾಕಿದ್ದನು ಧೈರ್ಯ ವೆಂತಹದೇ!

- ಶ್ರೀ ದತ್ತಾತ್ರಯ ವೆಂಕಟೇಶ ಬೆಳವಿಯವರು ಸ ವಾಕ್ಯ ಕದ ಕಡೆಯಿಂದ ದಕ್ಷಿಣ ಭಾಗಕ್ಕೆ ವರಿಷ್ಠ ಕಾಯಿದ ಮಂಡಲ ಸಭಾಸದತ್ವಕ್ಕೆ ಉಮೇದವಾರರಾಗಿ ನಿಂತಿ ದ್ದಾರೆ

- ಮಂಗಳೂರಿನಲ್ಲಿ ಕಳೆದ ೧ನೇ ತಾರೀಖಿಗೆ ಇಂಡಿಯ ಕ್ರಾನಿಕಲ್ ಎಂಬ ಹೊಸ ಇಂಗ್ಲೀಷ ವಾರಪತ್ರಿಕೆಯ ಪ್ರಥಮ ಸಂಚಿಕೆಯನ್ನು ಶ್ರೀ ವಿ ಬಾಲಕೃಷ್ಣ ಪೈಗಳ ರು ಪ್ರಕಟಿಸಿದರು ಇನ್ನು ಮುಂದೆ ಈ ಪತ್ರಿಕೆ ಯು ಪ್ರತಿವಾರಕ್ಕೆ ಹೊರಡಿಸಲ್ಪಡುವದು

- ಮೈಸೂರಿನ ಸಂಸ್ಥಾನ ದಿವಾನರಾದ ಶ್ರೀ ಕಾಂತರಾಜ ಅರಸರವರು ಕಳೆದ ತಾ ೨೦ನೇಗೆ ಪರಲೋಕವಾಸಿ ಯಾದರು

- ಪುಲ್ಕಿ ಊರ ಬಳಿ ಪಾವಂಜೆ ಗ್ರಾಮದಲ್ಲಿ ನಿತ್ಯಾನಂ ದ ಸ್ವಾಮಿಯವರ ದರ್ಶನಕ್ಕಾಗಿ ಅಲ್ಲಿ ನಿತ್ಯವೂ ೪ ೫ ಸಾವಿರ ಜನರು ಬಟ್ಟುಗುತ್ತಿರುವರು ಈ ಸನ್ಯಾಸಿಗಳ ಆಶೀರ್ವಾದದಿಂದ ಪಿಶಾಚ ಬಾಧೆ ರೋಗ ಮೊದಲಾದ ಕಷ್ಟಗಳು ದೂರವಾಗುತ್ತವೆಂದು ಖ್ಯಾತಿಯಾಗಿದೆ ಅದರಿಂದ ನಿತ್ಯವೂ ಅಲ್ಲಿ ಜಾತ್ರೆ ನೆರೆದಂತೆ ಜನಸ್ತೋಮ ವು ನೆರೆಯುತ್ತದೆ

ತ್ರಿವೇಂಡ್ರಂನಲ್ಲಿ ಖೋಟ್ಟಿ ನೋಟುಗಳನ್ನು ತಯಾ ರು ಮಾಡುವವರನ್ನು ಶೋಧಿಸುವ ಬಗ್ಗೆ ಇಬ್ಬ ಬ್ರಾಹ್ಮಣ ರನ್ನು ಹಿಡಿದಿದರು ಇಬ್ಬರ ಮನೆಯಲ್ಲಿ ಝಡತಿಯಲ್ಲಿ ೧೦೦ ರೂಪಾಯಿಗಳ ೧೩೦ ನೋಟುಗಳು ದೊರೆ ತವಂತೆ

- ಬೆಳಗಾಂವ ಜಿಲ್ಲಾ ಪೈಕಿ ಮುರಗೋಡದಲ್ಲಿ ಹೊಸ ಮೀಟಿಯವರು ಆಕರಿಸಿದ ಮನೆ ಪಟ್ಟಿಯನ್ನು ತೆರ ಲಾರದೆಂದು ಜನರು ಸತ್ಯಾಗ್ರಹ ಮಾಡಿದ್ದಾರೆ ಕರ ಕೊಡಲಿಲ್ಲೆಂದು ಒಬ್ಬರ ಆರ ಬಂಡಿಗೆಯು ಜಪ್ತಿಯಾಯಿತು ಆದರೆ, ಜಪ್ತಿಗೆ ಸಂಚಾರವೇ ಆಗಲಿಲ್ಲ

- ಇಂಗ್ಲೀಷ ಚೆನೆಲ್ ಎಂಬ ಸಮುದ್ರಧುನಿಯಲ್ಲಿ ಕಳೆದ ತಾ ೪ನೇ ಮಧ್ಯರಾತ್ರಿಗೆ ಬಿರುಗಾಳಿಯೆದ್ದು ಬಹಳೇ ಹಡಗಗಳಿಗೆ ಸಂಕಟವೊದಗಿದೆ

- ಸರ್ ವ್ಯಾಕೆಲ್ ಒಡ್ವಾಯರರು ಸರ್ ಶಂಕರನ್ ನಾಯರರ ಮೇಲೆ ವಿಲಾಯತಿಯಲ್ಲಿ ದಾಖಲ ಮಾಡಿದ ಬ್ರೈಬಲ್ಲಾನಿಯ ದಾವೆಯೊಳಗಿನ ಪುರಾವೆಯನ್ನು ಮದ್ರಾಸು ಹೈಕೋರ್ಟಿನ ನ್ಯಾಯಮೂರ್ತಿಗಳು ನಾಳೆ ೧೫ನೇಯಿಂದ ಕೇಳ್ಳುವವರಿದ್ದಾರೆ

- ಜಪಾನಿನ ಯೋಕಿಯೋ ಪಟ್ಟಣದಲ್ಲಿ ಕಳೆದ ತಾ ೩ನೇಗೆ ಪುನಃ ಭೂಕಂಪವಾಯಿತು ಆದರೆ ಇದರಿಂದ ಬಹಳ ಹಾನಿಯಾಗಲಿಲ್ಲ

The District Authorities & Honavar Relief Work.

To The Editor of the 'Kanara News'

Sir

I am very sorry to find that you have criticised Mr Haigh in your note in the issue dated 13th September and that also some others have found fault with him and other officials in previous issues It is not ordinarily mine to answer any criticisms against Mr Haigh or any other official if it is directed against any official act of his But as I consider the present criticism to be quite uncalled for and undeserved, I think I should not allow it to remain unanswered We are told that the District Authorities in South Kanara did not move in the matter of the relief of the Districts people in the first instance For this they are being blamed Now in our District, Authorities have taken prompt measurs for the relief of the distressed under the lead of Mr Haigh along with the Congress Committees Surely, this is what ought to be when we are faced with such distress Had it not been for the tactful handling of the situation by Mr Haigh so much money would not have been collected in so short a time In fact he has been able to turn back some donations as unnecessary He has invited the cooperation, of even congressmen in the various committees appointed for the relief work and has freely recognised their services When such is the case, I leave it to the readers to say whether he deserves blame or praise Objection is taken by you to the estimate of loss given by him and also to the statement made by him that 'The estimate is based on the statements of the sufferes them selves? In the absence of any other estimate arrived at by any other body independently and in the absence of evidence to show the sufferers were influenced by the officials to give those statements, would it be right to attribute motives to him? Again it is asked whether he has given government money? Is it possible for him to do so? We should surely spare the officials an unkind word when we find them doing all they can in such a work of charity

KARWAR 20 9 23 Yours truly *M M. SHANBHAG*

[*,* Mr M. M Shanbhag's pleadings on behalf of Mr Haigh and his subordinates are * given above. On our part, we are to say this - We are not concerned with the personalities of officials We are prepared to admit that all officials including Mr. Haigh are good and charitable gentlemen. Our chief complaint is, Mr Haigh has not done officially what he ought to It is news to read that Mr. Haigh was able to return some of the donations as unnecessary, as if all the distrssed people were relieved to the utmost extent. In the bureaucratic regime all officials are good but their official acts are not in keeping with their charitable intentions. Here is the rub We think Mr Shanbhag knows this

Editor]

ಮನೆ ವಿಕ್ರಿ.

ಹೆರವಟ್ಟೆ ವಿಠೋಬ ದೇವಸ್ಥಾನದ ಮುಂದೆ ೬೩ ನೇ ಸರ್ವೇ ನಂಬರದಲ್ಲಿ ಇರುವ ಹೆಂಚಿನ ೧೬ ಅಂಕಣದ ಮನೆ, ಅದಕ್ಕೆ ಹಾಗಿಕ್ಕ ೨ ಅಂಗಡಿಗಳೂ ಹಾಗೂ ೧೬ ಗುಂಟೆ ಹಿತ್ತಲು ಮಾರಾಟ ಮಾಡ ತಕ್ಕದ್ದಿವೆ ಖಾಯಿಷ ಇದ್ದವರು ಅವನ್ನು ನೋಡಿ, ಕೆಳಗಿನ ಪತ್ತೆಗೆ ಪತ್ರವ್ಯವಹಾರ ನಡಿಸಬಹುದು

ಆರ್. ವ್ಹಿ. ಪ್ರಭು.
ಪೋಸ್ಟ ಮಾಸ್ತರ, ಹೊನ್ನಾವರ

ಗ್ಯಾಸ ದೀಪಗಳು
ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ದರಾ ೬೩ ಕೆಳಗಿನ ಪತ್ತೆಗೆ ಮುದ್ದಾಂ ಕೇಳಿ ತಿಳಕೊಳ್ಳ ಬಹುದು

ಪುರುಷೋತ್ತಮ ಲಕ್ಷ್ಮಣಯ್ಯ ಗ್ಯಾನಭಾಗ
ಹೆಗಡೇಕರ, ದುಕಾನ, ಕುಮಟಾ.

कारवारांत आयुर्वेदिक पाठविद्यालय
उघडण्यांत येणार.

सन १९२४ च्या जानेवारी महिन्या पासून कारवार येथे वरील पाठशाळा उघडण्यात येणार आहे. आयुर्वेदांतील प्रत्येक विषय प्रमाणपूर्वक व सशास्त्र शिकविण्यात येईल. पूर्ण आयुर्वेदिक शिक्षण तीन वर्षांत शिकविले जाईल. विद्यार्थी निदान मराठी पाच इयत्ता शिकलेला व भांडारकरकृत, संस्कृत तीन पुस्तके पठलेला असावा. त्याचे वय १८ ते २२ वर्षापर्यंत व प्रकृति सदृढ असावी. सदर पाठशाळेचे वर्ग १ जानेवारी १९२४ पासून सुरू होतील. फीचे दर १ल्या वर्षास दरमहा ८ रुपये, दुसऱ्यास दरमहा

१२ रुपये व तिसऱ्या वर्षीं दरमहा १६ रुपये प्रमाणें ठेविली आहे. पहिल्या वर्षांत फक्त २५ विद्यार्थीच निवडण्यांत येतील. विद्यार्थ्यांनीं आपले अर्ज ता. १५ डिसेंबरच्या आंत पाठविले पाहिजेत. अर्जाबरोबर प्रवेश फीचे ३ रुपये पाठविण्यांत आले पाहिजेत. ज्यांची निवड होणार नाहीं त्यांची फी परत करण्यांत येईल. पत्रव्यवहार मराठींत अगर कानडी मध्यें करावा.

प्रत्येक वर्षांत शिकविले जाणारे विषय खालील प्रमाणें.—

पहिलें वर्ष.

१. प्रत्येक वनस्पतींचे गुण धर्मांसहित वर्णन संख्या आणि प्रत्येक औषधींचे अनेक भाषांतील नामाहि वगैरे

२. निदान शास्त्र त्यांत प्रत्येक रोगाचें निदान (हेतु) सप्रमाण आणि लक्षणें वार (परिक्षा करण्यास शिकविले जाईल

३. सदर निदान शास्त्रांत रोग गणनेंत आलेले विषय औषधालयांत समक्ष प्रयोग करून दाखविले जातील.

दुसरें वर्ष

१. प्रत्येक रोगावर निरनिराळ्या शास्त्रोक्त पद्धतीनें चिकित्सा (उपचार) करण्यास शिकविलें जाईल.

२. प्रत्येक वस्तुद्रव्यादिचे गुणदोष व तत्व विचार शिकविले जातील.

३. प्रत्येक रोगावर पथ्यापथ्य विषय शिकविले जातील.

तिसरें वर्ष.

१. आर्य शरीर शास्त्र, कला, स्नायु, मज्जातंतु वाहिनी रहितपिंड; रुधिराभिसरण चक्रादि प्रत्येक भागांत होणाऱ्या निरनिराळ्या क्रिया. प्रत्येक भागांचीं नांवें, त्याच प्रमाणें प्रत्येक भाग चित्र रूपानें 'काढून घेणें व तेच विषय त्यांना वर्णन करून स्पष्ट करून देणें' वगैरे.

२. प्रत्येक रोगावरील हिमफाटकाड्यापासून रसायनां पर्यंत तयार करण्याचे प्रयोग औषधालयांत समक्ष करून दाखविले जातील.

३. रसायनें व कुपिस्त रसायनें यांची संपूर्ण माहिती आणि प्रत्येक विषयां विषयी संशयनिवृत्ति स्पष्ट रितीनें करण्यांत येईल.

विशेष माहिती— खालील पत्त्यावर पत्रद्वारें अगर समक्ष मिळेल.

वि. सू. उमेदवारांकरितां राहण्याची सोय करून देतां येईल.

शिकविणारे— वैद्य जे. एफ. फर्नांडिस.
आर्यौषधालय, कारवार.

एड्रेस— व्यवस्थापक,
आयुर्वेदिक पाठविद्यालय, कारवार.

ಸಂಶಯಾತ್ಮಾ ವಿನಶ್ಯತಿ.

ತಿಂಗಳಿಗೆ ರೂಪಾಯಿ ೧೦೦ರಿಂದ ೫೦೦ರ ವರೆಗೆ ಗಳಿಸಿರಿ.

ಬೇಕಾದಲ್ಲಿ ಸುಲಭವಾಗಿ ಗಳಿಸಿರಿ.

ರೂಪಾಯಿ ೧೯-೧೩-೦ ಖರ್ಚುಮಾಡಿರಿ ಮತ್ತು ಸ್ವತಂತ್ರರಾಗಿರಿ.

ಸಬಕಾರವು ಪ್ರತಿಯೊಬ್ಬ ಮಾನವನಿಗೆ ಅವಶ್ಯವಿದ್ದ ವಸ್ತುವು. ಅವನು ಬೇಕಾದರ ಶ್ರೀಮಂತನಿರಲಿ, ಬಡವನಿರಲಿ, ಹಳ್ಳಿಗನಿರಲಿ, ಪಟ್ಟಣಿಗನಿರಲಿ, ಪಾಶ್ಚಾತ್ಯ ಮಾದರಿಯ ಸಬಕಾರವನ್ನು ತಯಾರಿಸುವ ನಮ್ಮ ಕ್ರಮವು ಅತಿ ಉತ್ತಮವೆಂದು ಖ್ಯಾತಿಹೊಂದಿದೆ. ಈ ಕ್ರಮದಿಂ ಶ್ರೇಷ್ಠ ಕನಿಷ್ಠ ಪ್ರತಿಯ, ಮೈಗೆ ಹಚ್ಚುವ ಯಾ ಅರಿವೆಗೆ ಹಾಕುವ, ಪರಿಮಳದ ಹಾಗು ಬಣ್ಣ ... ಸಬಕಾರವನ್ನು ಸುಲಭವಾಗಿ ಯಾರೂ ತಯಾರಿಸಬಲ್ಲನು. **ಈ ಕ್ರಮಕ್ಕೆ ಬೆಂಕಿಯ ಅವಶ್ಯಕತೆಯಿರುವದಿಲ್ಲ.** ನಮ್ಮ ವಿದ್ಯಾರ್ಥಿಗಳು ಯತ್ನಮಾಡುವಾಗ ನಾವು ಬಲು ಜಾಗ್ರತೆಯಿಂದ ಅವರನ್ನು ನಿರೀಕ್ಷಿಸಿ, ಅವರಿಗೆ ಬೇಕಾದ ಮಾಹಿತಿಯನ್ನು ಪೂರೈಸುತ್ತೇವೆ. ಈ ... ನಮಗೆ ಅನೇಕರು ಶಿಫಾರಸು ಪತ್ರಗಳನ್ನು ಕಳುಹಿಸಿರುವರು. ಈ ಪೂರ್ಣ ಕ್ರಮವನ್ನು ರೂ ೧೯-೧೩-೦ಕ್ಕೆ ವ್ಹಿ. ಪಿ. ಮುಖಾಂತರ ಕಳಿಸುವೆವು. ಈ ಕ್ರಮವು ನಿಯಮಿತ ಮಂದಿಗಳಿಗೆ ಮಾತ್ರ ಕಳಿಸಲ್ಪಡುವದು.

... ಹೋದಬಾರದೆಂದು ಇಚ್ಛೆ ಇದ್ದವರು ಕೆಳಗಿನ ಪತ್ತೆಗೆ ಕೂಡಲೆ ಬರೆಕೊಳ್ಳತಕ್ಕದ್ದು.

International Business Corporation,
Dept. (F) *5.8?, Gowdigudu*, **Hyderabad.** (*Dn.*)

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿಗಳ ಮೇಲೆ, ರಾಮಬಾಣದಂತಾಗಿರುವದು. ಕಳೆದ ೩೫ ವರ್ಷ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಲೆ ಜನಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೇಗು, ಸಂಧಿವಾತ ... ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಆಯುದವರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ... ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೊ, ಫೋರ್ಟ
ಮುಂಬ

ಮನೆ ಕಟ್ಟುವವರಿಗೆ ಸುಸಂಧಿಯು.





ಮೋಟಿಂತಸ್ಥಿಗೆ ಶೋಭೆ ಬರುವದಕ್ಕೆ ನಾನಾ ತರ ನಕ್ಷೀ ಕೊರೆಯಲ್ಪಟ್ಟ ಬಿ ... ಕಟಾಂಜನಗಳೂ, ಹೂದೋಟ, ಬಳಂಗಳ, ಉಪ್ಪರಿಗೆ, ದಿವಾನಖಾನೆ ಮೊದಲಾದ ... ಗಳಲ್ಲಿ ವಿಶ್ರಾಂತಿಗೊಳ್ಳುವದಕ್ಕೆ ತಕ್ಕ ಬಾಕುಗಳೂ ಕಿರ್ಲೋಸ್ಕರ ಕಾರಖಾನೆಯಲ್ಲಿ ... ರ್ಖದಿಂದ ದೊರೆಯುತ್ತವೆ. ಪತ್ರ ಬರೆದು ... ಕ್ಯಾಟಲಾಗು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ.)

Printed and Published by Krishnarao Keshav Shenvi (Editor) at his Star of Kanara Press Kumta

1923-24

[illegible] ಹೆಸರಲ್ಲಿ ಮಾಣಿಕುವರ ಬಾಯಿಯನ್ನು [illegible] ದಿನಕ್ಕೆ ಪೋಲಿನ ದಾವೆಯನ್ನು [illegible] ಅವ್ವರಲ್ಲಿ ಪೋಲೀಸರ ಚೌಕಶಿಯು [illegible] ಪೋಲೀಸರು ಮಾಣಿಕು ವರ ಬಾಯಿ, ಗೋವರ್ಧನದಾಸ, ಲಕ್ಷ್ಮೀದಾಸರವರನ್ನು [illegible] ಮಾಡಿಕೊಟ್ಟರು. ಇಬ್ಬ ಆರೋಪಿಗಳು [illegible] ಕಬೂಲು ಮಾಡಿದರು. ಮೂರನೇಯವರ [illegible] ನಡೆದು, ನ್ಯಾಯಮೂರ್ತಿ ಮಾರ್ಟಿನ್‌ರವರು ಮಾಣಿಕುವರ ಬಾಯಿಗೆ ೧ ವರ್ಷದ ಸಾದಾ ಶಿಕ್ಷೆ ಹಾಗು ೬ ಸಾವಿರ ರೂಪಾಯಿ ದಂಡ; ಗೋವರ್ಧನದಾಸರವರಿಗೆ ೯ ತಿಂಗಳ ಕಠಿಣ ಸಜೆ, ೧॥ ವರುಷ ಸಾದಾ ಶಿಕ್ಷೆ [illegible] ವರುಷಗಳ [illegible]. ಹಾಗು ೪ ಸಾವಿರ ರೂಪಾಯಿ ದಂಡ. ಲಕ್ಷ್ಮೀದಾಸರವರಿಗೆ ೧ ವರುಷದ ಸಾದಾ ಸಜೆ ಹಾಗು ೩ ಸಾವಿರ ರೂಪಾಯಿ ದಂಡ, ಹೀಗೆ ಶಿಕ್ಷೆಯನ್ನು ವಿಧಿಸಿದರು. ಪಾಪ ಕರ್ಮದ ಪ್ರಾಯಶ್ಚಿತ್ತ [illegible] ಫಲಿಸಿದು.

ಡಾ। ಕಲ್ಯಾಣಪುರಕರರ ಕೌನ್ಸಿಲ ಉಮೇದ್ವಾರಿ.

(೧)

ಡಾ। [illegible]ರರ ಪ್ರಶ್ನೆಗಳಿಗೆ ಅವರು ಕೊಟ್ಟ ಉತ್ತರಗಳು.

ಮೊದಲನೇ ಪ್ರಶ್ನೆಗೆ ನನ್ನ ಉತ್ತರವು ನಕಾರಾರ್ಥದ್ದು.

ದಿಲ್ಲಿಯಲ್ಲಿ ನಡೆದ ಜಾದಾ ಕೊಂಗ್ರೆಸ್ಸು ಕೌನ್ಸಿಲ ಕೀರ ಲಿಕ್ಕೆ [illegible] ಕೊಡುವದಿಲ್ಲವಾದ ಕಾರಣ, ಎರಡನೇ ಪ್ರಶ್ನೆ ಈಗ [illegible]ವದಿಲ್ಲ. ಮತ್ತು ನಿಜವಾದ ಸದಸದ್ವಿವೇಕ ಬುದ್ಧಿಯುಳ್ಳ ಕೊಂಗ್ರೆಸ ಭಕ್ತನು ಉಮೇದ್ವಾರನಾಗಿ ನಿಲ್ಲಲಾರನು.

ಮೂರನೇ ಪ್ರಶ್ನೆ— ಹಿಂದು ಮುಸಲ್ಮಾನರ ಐಕ್ಯ, ಅಸ್ಪೃಶ್ಯತಾ ನಿವಾರಣ ಮತ್ತು ಖಾದಿ ಧರಿಸೋಣ ಇವು ಕೊಂಗ್ರೆಸಿನ ವಿಧಾಯಕ ಕಾರ್ಯಕ್ರಮದ ಭಾಗಗಳಾಗಿದ್ದರೆ. ನಾನು ಅವುಗಳ ಪ್ರಸಾರಮಾಡುವದರಲ್ಲಿ ಭಾಗ ತಕ್ಕೊಳ್ಳರಿದ್ದರೂ, ಯಾವಾಗಲೂ ಸಾಧ್ಯವಿದ್ದಷ್ಟರ [illegible] ವಿಷಯದಲ್ಲಿ ಉತ್ತೇಜನ ಕೊಡುತ್ತಾ ಬಂದಿರು[illegible].

[illegible]ನೇ ಪ್ರಶ್ನೆ— ನಾನು ಎಂದೂ ಮುನಿಸಿಪಾಲಿಟಿಯ ಅಥವಾ ಲೋಕಲಬೋರ್ಡಿನ ಮೆಂ[illegible] ಅವುಗಳ ವಿಷಯವಾಗಿ ನಾನು ಕಾ[illegible] ಕಾದ್ದರಿಂದಲೂ ಮತ್ತು ಆ ಸಂಸ್ಥೆಗ[illegible] ಒಬ್ಬೊಬ್ಬ ಮೆಂಬರನ ಹಕ್ಕು [illegible] ಯವಾಗಿ ಬರುವ ದಾವೆ ಮತ್ತು [illegible] ಕೊಡಬೇಕಾದ್ದರಿಂದಲೂ ಮತ್ತು [illegible] ತಗಳ ಕ್ರಮದ ವಿಷಯವಾದ ಪ್ರಶ್ನೆ [illegible] ಕಾದ್ದರಿಂದಲೂ ಅವುಗಳ ವಿಷಯ[illegible] ವವಿದೆ.

ಐದನೇ ಪ್ರಶ್ನೆ— ಈ ವಿಷಯವಾ[illegible] ಪುಸ್ತಕಗಳನ್ನು ಓದಿರುವದರಿಂದಲ[illegible] ಸ್ವತಃ ವಿಚಾರ ಮಾಡಿರುವದರಿಂದ [illegible] ಜ್ಞರ ಹತ್ತರ ವಾದ ಮಾಡಿದ್ದರಿಂದ [illegible] ಉಪದ್ರವದ ಸ್ವರೂಪವನ್ನು [illegible] ಸಮಾಧಾನಕರವಾದ ಸ್ಥಿತಿಯು ಯಾ[illegible] ತಬಹುದೆನ್ನು, ತಿಳಕೊಳ್ಳುವವಕ್ಕೆ [illegible] ಯತ್ನ ಮಾಡಿರುವೆನು.

ಕೌನ್ಸಿಲಕ್ಕೆ ಆರಿಸಲ್ಪಟ್ಟರೆ, ಜಂ[illegible] ದ್ರವ ನಿವಾರಣಾರ್ಥವಾಗಿ ಅಲ್ಲಿ ನಾ[illegible] ದ ನಡೆಯುತ್ತೇನೆಂಬುದನ್ನು ಪ್ರಸ್ತ[illegible] ಪರೀಕ್ಷಣೆ ಮಾಡುವದೆಂದರೆ [illegible] ಅಲ್ಲದೆ, ಮುಂದೆ ಯಾವ ಮಾರ್ಗ[illegible] ಬೇಕೆಂಬುದನ್ನು ಪ್ರಕಟ ಮಾಡಿದೆ[illegible].

ಭಾಗ ತಂದೀತು. [illegible] ಜಿಲ್ಹೆಯ ವಿಷಯವಾಗಿ ಕೌನ್ಸಿಲಿನ ಇತರೇ ಸ[illegible] ಸಹಾನುಭೂತಿಯನ್ನು ಕೋರುವಂತೆ [illegible] ಲಕ್ಷ್ಯ [illegible] ಸನ್ನದ್ದದಾದಷ್ಟು [illegible] ಮಾಡುವೆನು. [illegible] ಸರಕಾರದ ಸಿಟ್ಟಿಗೆ ಅಥ[illegible] ಅನುಗ್ರಹಕ್ಕೆ ಲಕ್ಷ್ಯ ಕೊಡದೆ, ನಮ್ಮ ದುಃಖಗಳನ್ನು ಹೋಗಲಾಡಿಸಲಿಕ್ಕೆ ಸಮಯವನ್ನು ಉಪಯೋಗಿಸುವದರಲ್ಲಿಯೂ, ಶ್ರಮಪಡುವದರಲ್ಲಿಯೂ ನಾನು ಹಿಂದು ಮುಂದು ನೋಡಲಿಕ್ಕಿಲ್ಲ.

ಆರನೇ ಪ್ರಶ್ನೆ— ನನ್ನನ್ನು ಆರಿಸಿದರೆ, ನನಗೆ ಬೇರೆ ಏನೂ ಉದ್ಯೋಗವಿಲ್ಲವಾದ್ದರಿಂದ, ನನ್ನ ಬಹುತರ ಎಲ್ಲಾ ವೇಳೆಯು ಜಿಲ್ಹೆಯ ಜನರ ಹಿತದ ಬಗ್ಗೆ ಉಪಯೋಗಿಸಲ್ಪಡುತ್ತದೆಂದು ಹೇಳುವದು ಅಗತ್ಯವಿಲ್ಲ.

ಏಳನೇ ಪ್ರಶ್ನೆ— ಈ ಪ್ರಶ್ನೆಯ ವಿಷಯವಾಗಿ ಕೌನ್ಸಿಲದಲ್ಲಿರುವ ಜನರ ಪ್ರತಿನಿಧಿಗೆ ಜನತೆಯ ಅಭಿಪ್ರಾಯದ ಬಲವಾದ ಬೆಂಬಲವು ಇರುವದು ಅವಶ್ಯವಾದ್ದರಿಂದ, ಜಿಲ್ಹೆಯ ಹಲವು ಸ್ಥಳಗಳಲ್ಲಿ ಸಂಘಗಳನ್ನು ಸ್ಥಾಪಿಸಿ, ಅವುಗಳದ್ವಾರಾ ಸಾರ್ವಜನಿಕ ಹಿತದ ಸಂಬಂಧವುಳ್ಳ ಮಹತ್ವದ ಪ್ರಶ್ನೆಗಳನ್ನು ಚರ್ಚಿಸಿ, ಅಭಿಪ್ರಾಯವನ್ನು ಕೊಡುವದು ಸ್ಪೃಹಣೀಯವೆಂದು ನಾನು ಯಾವಾಗಲೂ ತಿಳಿದಿದ್ದೇನೆ. ನನ್ನನ್ನು ಆರಿಸಿದರೆ, ಇಂಥಾ ಸಂಘಗಳನ್ನು ಜಿಲ್ಹೆಯಲ್ಲಿ ಸ್ಥಾಪಿಸಲು ಯತ್ನಿಸುವೆನು. ಅವನ್ನು ಸ್ಥಾಪಿಸಿದ ನಂತರ ಕೌನ್ಸಿಲದಲ್ಲಿರುವ ಜನರ ಪ್ರತಿನಿಧಿಗೂ, ಅವರಿಗೂ ಇರುವ ಸಂಬಂಧವನ್ನು ಮತ್ತು ಕೆಲಸವನ್ನು ನಿರ್ಣಯಿಸಬಹುದು. ನನ್ನನ್ನು ಆರಿಸಿದರೆ, ನನ್ನ ಮೇಲೆ ಬೀಳಬಹುದಾದ ಕರ್ತವ್ಯಗಳನ್ನು ನೆರವೇರಿಸಲಿಕ್ಕೆ ಬೇಕಾಗುವಷ್ಟು ಮಾಹಿತಿ ಮಾಡಿಕೊಳ್ಳುವೆನು.

ಎಂಟನೇ ಪ್ರಶ್ನೆ— ಜಿಲ್ಹೆಯೊಳಗಿನ ಜನರ ಕೊರತೆಯನ್ನು ತಿಳಿದುಕೊಳ್ಳುವದಕ್ಕು, ಅವರ ಇಚ್ಛೆಯನ್ನು ಖಾತ್ರಿಮಾಡಿಕೊಳ್ಳಲಿಕ್ಕು, ಅವುಗಳನ್ನು ನೆರವೇರಿಸಲಿಕ್ಕೆ ಕೌನ್ಸಿಲದಲ್ಲಿ ತಾನು ಮಾಡಿದ್ದ ಯತ್ನದ ಸ್ವರೂಪವನ್ನು ತಿಳಿಸಲಿಕ್ಕೂ, ಜನರ ಪ್ರತಿನಿಧಿಯು ಜಿಲ್ಹೆಯೊಳಗೆ ತಿರುಗಿ ಅವರ ಸಂಗಡ ಬೆರೆಯುವ ಅವಶ್ಯಕತೆಯು ನನಗೆ ಕಂಡುಬರುತ್ತದೆ. ಅದ್ದರಿಂದ, ನನ್ನನ್ನು ಆರಿಸಿದರೆ, ನಾನು ಬಂದಷ್ಟು ಸಾರೆ ಜಿಲ್ಹೆಯೊಳಗಿನ ಪ್ರತಿಯೊಂದು ತಾಲೂಕಾ ಸಂಘಕ್ಕೆ (ಸಂಘವಾದರೆ) ಹೋಗುವದಲ್ಲದೆ, ಹಳ್ಳಿಗಳಿಗೂ ಅಗತ್ಯವಿದ್ದಷ್ಟು ಸಾರೆ ಭೆಟ್ಟಿ ಕೊಡುವೆನು.

(ಧುರೀಣದೊಳಗಿಂದ.)

(೨)

ಇವೇ ಉತ್ತರಗಳೋ !

ಶ್ರೀ ಕಾನಡಾವೃತ್ತ ಪತ್ರಕರ್ತರ ಬಳಿಗೆ—

ಮಹಾಶಯರೇ,

ಕೌನ್ಸಿಲ ಉಮೇದವಾರ ಡಾ। ಕಲ್ಯಾಣಪುರಕರರು ಹಳಿಯಾಳದ ಶ್ರೀ। ದತ್ತೋಪಂತ [illegible]ಕರರ ಪ್ರಶ್ನೆಗಳಿಗೆ ಕೊಟ್ಟಿರುವ ಉತ್ತರಗಳನ್ನು ಓದಿ, ಯಾರೂ ವಿಸ್ಮಿತರಾಗದೆ ಇರರು ! ಕೊಂಗ್ರೆಸ ಸಭಾಸದರಾಗಿರುವಿರಾ, ಇಲ್ಲವಾದರೆ, ಈಗಾದರೂ [illegible] ಎಂಬ ಮೊದಲನೇ ಪ್ರಶ್ನೆಗೆ ಆರಂಭದಲ್ಲಿಯೇ ಸ್ಪಷ್ಟವಾದ ನಕಾರಾರ್ಥದ ಉತ್ತರವನ್ನು ಕೊಟ್ಟಿರುವರು. ಅದು ಹ್ಯಾಗೂ ಇರಲಿ, ಮುಂದೆ ದಿಲ್ಲಿಯ ಕೊಂಗ್ರೆಸಿನ ಠರಾವದ ವಿಷಯದ ಎರಡನೇ ಪ್ರಶ್ನೆಗೆ ಅವರು ಉತ್ತರ ಕೊಟ್ಟದ್ದು ನೋಡಿದರಂತೂ ಆ ಉತ್ತರ ಕೊಟ್ಟ ಅವರ ಪ್ರಾಮಾಣಿಕ ಬುದ್ಧಿಯು ಸಹ ಸಂಶಯಾಸ್ಪದವೆನಿಸುವಂತೆ ಇರುತ್ತದೆ. "ನಿಜವಾದ ಸದಸದ್ವಿವೇಕ ಬುದ್ಧಿಯುಳ್ಳ ಕೊಂಗ್ರೆಸ ಭಕ್ತನು ಉಮೇದ್ವಾರನಾಗಿ ನಿಲ್ಲಲಾರನು." ಎಂದು ಜಜ್ಜಮೆಂಟನೊಳಗಿನ ತೀರ್ಮಾನೋಪಾದಿಯಲ್ಲಿ ಒಂದು ವಿಧಾನವನ್ನು ಮಾಡಿರುವರು. ಈ ಬೋಧವನ್ನು ಅವರು ಯಾವ [illegible]ಕಡೆಯಲ್ಲಿ ಪಡೆದರೋ, ಅವರೇ ಬಲ್ಲರು! [illegible] ದಿಲ್ಲಿ ಕೊಂಗ್ರೆಸಿನ ಠರಾವಿನ ಸರಳವಾದ ಅರ್ಥವನ್ನು [illegible] ಬರುವದೆದರು. [illegible] ಭಾಷೆಯ ಜ್ಞಾನವು ಅವರಿಗೆ [illegible]

[illegible] ಸಲು ಅವ[illegible] ದಿಲ್ಲಿ [illegible] ಕೊಂಗ್ರೆಸ [illegible] ಸಂಗ[illegible] ಮತ್ತು ಮುಖ್ಯ [illegible] ಸರಳವಾದ [illegible] ಅವರ ಮನಸ್ಸಿನ [illegible] ತನ್ನ [illegible] ಸ್ವತಂತ್ರ [illegible] ಕಲ್ಯಾಣಪುರಕರರಂತೆ [illegible] ಅವರಲ್ಲಿ [illegible] ಸ್ಪ[illegible] ಕಟ್ಟಿದ್ದು [illegible] ಸದಸದ್ವಿವೇಕ ಬುದ್ಧಿಯಲ್ಲಿ [illegible] ಮತ್ತು [illegible] ತ್ರ[illegible] ಡಾ। ಕಲ್ಯಾಣಪುರಕರರು [illegible] ಕೊಂಗ್ರೆಸ [illegible] ವಿನ ಅರ್ಥವಾದರೆ, [illegible] ಕೌನ್ಸಿಲಿನ ಮೆಂಬರರಾಗಲಿ[illegible] ಚ್ಛಿಸುವ ಶ್ರೀ। [illegible] ಕೌನ್ಸಿಲ ಉಮೇದವಾರ[illegible] ಅವರಿಗೆ [illegible] ತ್ತಿರುವ ಶ್ರೀ। [illegible] "ನಿಜವಾದ ಸದಸದ್ವಿವೇಕ ಬುದ್ಧಿಯಲ್ಲದ" [illegible] ಸರಿ [illegible] ಅವರ ಅಭಿಪ್ರಾಯವೇ ?

ಮತ್ತೊಂದು ಸಂಗತಿಯೇನಂದ್ರೆ ಕೊಂಗ್ರೆಸ[illegible] ಗಳ ಅರ್ಥವು ಹ್ಯಾಗೂ ಇರಲಿ, ಕೊಂಗ್ರೆಸ ಸಭಾಸದರಾ[illegible] ಗಲಿಕ್ಕೆ ಅದರಿಂದ ಏನೂ ಆತಂಕವಾಗುವದಿಲ್ಲ. ಸಹಕಾರಿಗಳಾಗಲಿ, ಅಸಹಕಾರಿಗಳಾಗಲಿ, ಕೊಂಗ್ರೆಸ ಧ್ಯೇಯವನ್ನು ಮನ್ನಿಸಿ ಸಹಿಮಾಡುವವರು ಕೊಂಗ್ರೆಸ ಸಭಾಸದರಾಗಲಿಕ್ಕೆ ಏನೊಂದು ಅಡ್ಡಿಯಿರುವದಿಲ್ಲ.

ಖಾದಿಯ ಪ್ರಸಾರದ ಬಗ್ಗೆ ಯತ್ನ ಮತ್ತು ಮ್ಯುನಿಸಿಪಲ ವ ಲೋಕಲ್‌ಬೋರ್ಡ ಕಾರಭಾರಗಳ ಜ್ಞಾನ, ಈ ವಿಷಯಗಳಲ್ಲಿಯೂ ಅವರು ಕೊಟ್ಟರುವ ಉತ್ತರಗಳು ಹಾಸ್ಯಾಸ್ಪದವಾಗಿರುತ್ತವೆ. ಯಾವದಾದರೂ ಸಂಗತಿಯ [illegible] ತಗಲು [illegible] ರಿಗೆ ಉತ್ತೇಜನ ಕೊಡುತ್ತೇನೆಂದು ಹೇಳುವ [illegible] ದೇಶ ಪಾಂಡಿತ್ಯ"ದ ಸಂಗತಿಗಳಿಂದ ಜನರು ಸ[illegible] ನ ಪಡೆಯುವ ಕಾಲವು ಈಗ ಉಳಿದಿರುವದಿಲ್ಲ. [illegible] ರೀತಿಯಲ್ಲಿ, ಮ್ಯುನಿಸಿಪಾಲಿಟಿ ಮೊದಲಾದ ಸಂಸ್ಥೆಗಳಿಗೆ ಸಂಬಂಧಿಸಿದ ವ್ಯಾಜ್ಯಗಳಲ್ಲಿ ನ್ಯಾಯ ಕೊಡುವಾಗ ಮಾಡಿಕೊಂಡ ಆಯಾ ಸಂಸ್ಥೆಗಳ ಕಾಯಿದೆಯ ಜ್ಞಾನವೇ ಆ ಸಂಸ್ಥೆಗಳ ಕಾರಭಾರದ ಅನುಭವಜ್ಞಾನವೆಂದಾದರೆ, ಈಗಲಾದರೂ ಡಾ। ಕಲ್ಯಾಣಪುರಕರರು ತಮ್ಮ ಯಲ್ಲಿ [illegible] ಕೌನ್ಸಿಲ ಸಂಬಂಧದ ಕಾಯಿದೆ[illegible] ಮತ್ತು ನಿಯಮಾವಳಿಗಳ [illegible] ಜ್ಞಾನವನ್ನು ಮಾಡಿಕೊಂಡು ಕೌನ್ಸಿಲ ಮೆಂಬರರು [illegible] ಅನುಭವ ಜ್ಞಾನ[illegible] ವನ್ನು [illegible] ಪಡೆಯಬಹುದಲ್ಲವೇ ? [illegible]) ಬೋಧ [illegible]?

ಶಿರಸಿ, ತಾ. ೨೧-೧೦-೨೬. } [illegible] ಮತದಾರ.

(೩)

ಉತ್ತರಗಳ [illegible]

ಪ್ರಶ್ನೆ— ೧. [illegible] ಉತ್ತರ [illegible] [illegible] ಅಸಹಕಾರ [illegible] ಸಂಪಾದನೆ [illegible] ಧ್ಯೇಯವು [illegible] [illegible] ಇಟ್ಟುಕೊಳ್ಳುವದು ಅಲ್ಲ[illegible]

ಪ್ರಶ್ನೆ— ೨. ದಿಲ್ಲೀ ಕೊಂಗ್ರೆಸ್ಸು [illegible] ಪದ್ಧತಿ [illegible] ಕೊಡುವದಿಲ್ಲವೆಂಬ [illegible] ಅದೆ. ದಿಲ್ಲಿಯಲ್ಲಿ [illegible] ಹಳೇ ಕೋರ್ಟುಗಳ ಕೌನ್ಸಿಲಗಳಲ್ಲಿ [illegible] ಪ್ರದೇಶವನ್ನು ಎಂದರೆ [illegible] ಅವುಗಳ [illegible] ೧೦ ಅಂಗಗಳೂ [illegible]ಯನ್ನು ಎತ್ತುತ್ತಾರೆ[illegible]

ಗಂತು ಜಮವಿನ ಹೆಸರಲ್ಲಿ ಮಾರಾಟುವರ ಬಾಯಿಯನ್ನು ರಕ್ಷಕ ತೆರಿಸಿ ಮರುದಿನ ದಿನಕ್ಕೆ ಮೇಲಿನ ದಾವೆಯನ್ನು ದಾಖಲುಮಾಡಿದರು. ಇಷ್ಟರಲ್ಲಿ ಪೋಲೀಸರ ಚೌಕಶಿಯು ಪೂರ್ಣವಾಗಿ, ಮುಂಬಯಿಯ ಪೋಲೀಸರು ಮಾರಾಟು ವರ ಬಾಯಿ, ಗೋವರ್ಧನದಾಸ, ಲಕ್ಷ್ಮೀದಾಸರವರನ್ನು ಹಿಡಿದು ಒಪ್ಪಿಸಿಕೊಟ್ಟರು. ಇಬ್ಬರು ಆರೋಪಿಗಳು ಅಪರಾಧವನ್ನು ಕಬೂಲಮಾಡಿದರು. ಮೂರನೇಯವರ ಮೇಲೆ ತನಿಖಿ ನಡೆದು, ನ್ಯಾಯಮೂರ್ತಿ ಮಾರ್ಟಿನ್‌ರವರು ಮಾರಾಟುವರ ಬಾಯಿಗೆ ೧ ವರ್ಷದ ಸಾದಾ ಶಿಕ್ಷೆ ಹಾಗು ೨ ಸಾವಿರ ರೂಪಾಯಿ ದಂಡ, ಗೋವರ್ಧನದಾಸರವರಿಗೆ ೯ ತಿಂಗಳ ಕಠಿಣ ಸಜೆ, ೧॥ ವರುಷ ಸಾದಾ ಶಿಕ್ಷೆ ಹೀಗೆ ೨॥ ವರುಷಗಳ ಒಂದಿವಾಸ ಹಾಗು ೪ ಸಾವಿರ ರೂಪಾಯಿ ದಂಡ. ಲಕ್ಷ್ಮೀದಾಸರವರಿಗೆ ೧ ವರುಷದ ಸಾದಾ ಸಜೆ ಹಾಗು ೩ ಸಾವಿರ ರೂಪಾಯಿ ದಂಡ ಹೀಗೆ ಶಿಕ್ಷೆಯನ್ನು ವಿಧಿಸಿದರು. ಪಾಪ ಕರ್ಮದ ಪ್ರಾಯಶ್ಚಿತ್ತ ನೋಡಿರಿ ದುರಾಶೆಯ ಫಲವಿದು.

ರಾ। ಕಲ್ಯಾಣಪುರಕರರ ಕೌನ್ಸಿಲ ಉಮೇದ್ವಾರಿ.

(೧)

ರಾ। ಕೇಳಕರರ ಪ್ರಶ್ನೆಗಳಿಗೆ ಅವರು ಕೊಟ್ಟ ಉತ್ತರಗಳು.

ಮೊದಲನೇ ಪ್ರಶ್ನೆಗೆ ನನ್ನ ಉತ್ತರವು ನಕಾರಾರ್ಥದ್ದು.

ದಿಲ್ಲಿಯಲ್ಲಿ ನೆರದ ಜಂಟಾ ಕೊಂಗ್ರೆಸ್ಸು ಕೌನ್ಸಿಲ ಕೆಲಸಕ್ಕೆ ಪ್ರೋತ್ಸಾಹ ಕೊಡುವದಿಲ್ಲವಾದ ಕಾರಣ, ಎರಡನೇ ಪ್ರಶ್ನೆ ಈಗ ಹುಟ್ಟುವದಿಲ್ಲ. ಮತ್ತು ನಿಜವಾದ ಸದಸದ್ವಿವೇಕ ಬುದ್ಧಿಯುಳ್ಳ ಕೊಂಗ್ರೆಸ ಭಕ್ತನು ಉಮೇದ್ವಾರನಾಗಿ ನಿಲ್ಲಲಾರನು.

ಮೂರನೇ ಪ್ರಶ್ನೆ— ಹಿಂದು ಮುಸಲ್ಮಾನರ ಐಕ್ಯ, ಅಸ್ಪೃಶ್ಯತಾ ನಿವಾರಣ ಮತ್ತು ಖಾದಿ ಪ್ರಸಾರ ಇವು ಕೊಂಗ್ರೆಸಿನ ವಿಧಾಯಕ ಕಾರ್ಯಕ್ರಮದ ಭಾಗಗಳಾಗಿದ್ದರೆ ನಾನು ಅವುಗಳ ಪ್ರಸಾರಮಾಡುವದರಲ್ಲಿ ಭಾಗ ತಕ್ಕೊಳ್ಳದಿದ್ದರೂ, ಯಾವಾಗಲೂ ಸಾಧ್ಯವಿದ್ದಷ್ಟರ ಮಟ್ಟಿಗೆ ಆ ವಿಷಯದಲ್ಲಿ ಉತ್ತೇಜನ ಕೊಡುತ್ತ ಬಂದಿರುತ್ತೇನೆ.

ನಾಲ್ಕನೇ ಪ್ರಶ್ನೆ— ನಾನು ಎಂದೂ ಮುನಿಸಿಪಾಲಿಟಿಯ ಅಥವಾ ಲೋಕಲಬೋರ್ಡಿನ ಮೆಂಬರನಾಗಿಲ್ಲ ಆದರೆ, ಅವುಗಳ ವಿಷಯವಾಗಿ ನಾನು ಕಾಯಿದೇ ತಿಳಿಯಬೇಕಾದ್ದರಿಂದಲೂ ಮತ್ತು ಆ ಸಂಸ್ಥೆಗಳ ಸಮಸ್ತರ ಮತ್ತು ಒಬ್ಬೊಬ್ಬ ಮೆಂಬರನ ಹಕ್ಕು ವ ಜವಾಬದಾರಿಯ ವಿಷಯವಾಗಿ ಬರುವ ದಾವೆ ಮತ್ತು ಅಪೀಲುಗಳ ನಿರ್ಣಯ ಕೊಡಬೇಕಾದ್ದರಿಂದಲೂ ಮತ್ತು ಆ ಸಂಸ್ಥೆಗಳ ಆಡಳಿತಗಳ ಕ್ರಮದ ವಿಷಯವಾದ ಪ್ರಶ್ನೆಗಳನ್ನು ತೀರಿಸಬೇಕಾದ್ದರಿಂದಲೂ ಅವುಗಳ ವಿಷಯವಾಗಿ ನನಗೆ ಅನುಭವವಿದೆ.

ಐದನೇ ಪ್ರಶ್ನೆ— ಈ ವಿಷಯವಾಗಿ ಸಿಗುವ ಗ್ರಂಥ ಎಲ್ಲಾ ಪತ್ರಕಗಳನ್ನು ಓದಿರುವದರಿಂದಲೂ, ರೈತರ ಹತ್ತರ ಸ್ವತಃ ವಿಚಾರ ಮಾಡಿರುವದರಿಂದಲೂ ಈ ಜಿಲ್ಹೆಯ ತಜ್ಞರ ಹತ್ತರ ವಾದ ಮಾಡಿದ್ದರಿಂದಲೂ ಜಂಗಲ ಖಾತೆಯ ಉಪದ್ರವದ ಸ್ವರೂಪವನ್ನೂ ಮತ್ತು ಪ್ರಸ್ತುತ ಅಸಮಾಧಾನಕರವಾದ ಸ್ಥಿತಿಯು ಯಾವ ಕಾರಣದಿಂದಾಯಿತೆಂಬದನ್ನೂ ತಿಳಕೊಳ್ಳುವದಕ್ಕೆ ಮನಃಪೂರ್ವಕವಾಗಿ ಯತ್ನ ಮಾಡಿರುವೆನು.

ಕೌನ್ಸಿಲಕ್ಕೆ ಆರಿಸಲ್ಪಟ್ಟರೆ ಜಂಗಲ ಖಾತೆಯ ಉಪದ್ರವ ನಿವಾರಣಾರ್ಥವಾಗಿ ಅಲ್ಲಿ ನಾನು ಯಾವ ರೀತಿಯಿಂದ ನಡೆಯುತ್ತೇನೆಂಬದನ್ನು ಪ್ರಸ್ತುತದಲ್ಲಿ ಮುಂದಾಗಿ ವಿವೇಚನೆ ಮಾಡುವದೆಂದರೆ ಅಕಾಲಿಕವಾಗುವದು. ಇದಲ್ಲದೆ, ಮುಂದೆ ಯಾವ ಮಾರ್ಗವನ್ನು ಅನುಸರಿಸಬೇಕೆಂಬದನ್ನು ಪ್ರಕಟ ಮಾಡಿದರೆ, ಅದು ಉದ್ದೇಶಕ್ಕೆ ಭಂಗ ತಂದೀತು. ಆದ್ದರಿಂದ ಜಿಲ್ಹೆಯ ವಿಷಯವಾಗಿ ಕೌನ್ಸಿಲಿನ ಇತರೇ ಸಭಾಸದರ ಸಹಾನುಭೂತಿಯನ್ನು ತೋರ್ಪಡಿಸುವಂತೆ ಮತ್ತು ಸರಕಾರದ ಲಕ್ಷ್ಯ ಸೆಳೆಯುವಂತೆ ನನ್ನಿಂದಾದಷ್ಟು ಯತ್ನ ಮಾಡುವೆನು. ಇಷ್ಟು ಸರಕಾರದ ಸಿಟ್ಟಿಗೆ ಆಧಾರ ಅನುಗ್ರಹಕ್ಕೆ ಲಕ್ಷ್ಯ ಕೊಡದೆ, ನಮ್ಮ ದುಃಖಗಳನ್ನು ಹೋಗಲಾಡಿಸಲಿಕ್ಕೆ ಸಮಯವನ್ನು ಉಪಯೋಗಿಸುವದರಲ್ಲಿಯೂ, ಶ್ರಮಪಡುವದರಲ್ಲಿಯೂ ನಾನು ಹಿಂದು ಮುಂದು ನೋಡಲಿಕ್ಕಿಲ್ಲ.

ಆರನೇ ಪ್ರಶ್ನೆ— ನನ್ನನ್ನು ಆರಿಸಿದರೆ, ನನಗೆ ಬೇರೆ ಏನೂ ಉದ್ಯೋಗವಿಲ್ಲವಾದ್ದರಿಂದ, ನನ್ನ ಮತದಾರರ ಎಲ್ಲಾ ವೇಳೆಯು ಜಿಲ್ಹೆಯ ಜನರ ಹಿತದ ಬಗ್ಗೆ ಉಪಯೋಗಿಸಲ್ಪಡುತ್ತದೆಂದು ಹೇಳುವದು ಅಗತ್ಯವಿಲ್ಲ.

ಏಳನೇ ಪ್ರಶ್ನೆ— ಈ ಪ್ರಶ್ನೆಯ ವಿಷಯವಾಗಿ ಕೌನ್ಸಿಲದಲ್ಲಿರುವ ಜನರ ಪ್ರತಿನಿಧಿಗೆ ಜನತೆಯ ಅಭಿಪ್ರಾಯದ ಬಲವಾದ ಬೆಂಬಲವು ಇರುವದು ಅವಶ್ಯವಾದ್ದರಿಂದ, ಜಿಲ್ಹೆಯ ಹಲವು ಸ್ಥಳಗಳಲ್ಲಿ ಸಂಘಗಳನ್ನು ಸ್ಥಾಪಿಸಿ, ಅವುಗಳದ್ವಾರಾ ಸಾರ್ವಜನಿಕ ಹಿತದ ಸಂಬಂಧವಾದ ಮಹತ್ವದ ಪ್ರಶ್ನೆಗಳನ್ನು ಚರ್ಚಿಸಿ, ಅಭಿಪ್ರಾಯವನ್ನು ಕೊಡುವದು ಸ್ವೀಕಾರಣೀಯವೆಂದು ನಾನು ಯಾವಾಗಲೂ ತಿಳಿದಿದ್ದೇನೆ. ನನ್ನನ್ನು ಆರಿಸಿದರೆ, ಇಂಥಾ ಸಂಘಗಳನ್ನು ಜಿಲ್ಹೆಯಲ್ಲಿ ಸ್ಥಾಪಿಸಲು ಯತ್ನಿಸುವೆನು. ಅವನ್ನು ಸ್ಥಾಪಿಸಿದ ನಂತರ ಕೌನ್ಸಿಲದಲ್ಲಿರುವ ಜನರ ಪ್ರತಿನಿಧಿಗೂ, ಅವರಿಗೂ ಇರುವ ಸಂಬಂಧವನ್ನು ಮತ್ತು ಕೆಲಸವನ್ನು ನಿರ್ಣಯಿಸಬಹುದು. ನನ್ನನ್ನು ಆರಿಸಿದರೆ, ನನ್ನ ಮೇಲೆ ಬೀಳಬಹುದಾದ ಕರ್ತವ್ಯಗಳನ್ನು ನೆರವೇರಿಸಲಿಕ್ಕೆ ಬೇಕಾಗುವಷ್ಟು ಮಾಹಿತಿ ಮಾಡಿಕೊಳ್ಳುವೆನು.

ಎಂಟನೇ ಪ್ರಶ್ನೆ— ಜಿಲ್ಹೆಯೊಳಗಿನ ಜನರ ಕೊರತೆಯನ್ನು ತಿಳಿದುಕೊಳ್ಳುವದಕ್ಕೂ, ಅವರ ಇಚ್ಛೆಯನ್ನು ಖಾತ್ರಿಮಾಡಿಕೊಳ್ಳಲಿಕ್ಕೂ ಅವುಗಳನ್ನು ನೆರವೇರಿಸಲಿಕ್ಕೆ ಕೌನ್ಸಿಲದಲ್ಲಿ ತಾನು ಮಾಡಿದ ಯತ್ನದ ಸ್ವರೂಪವನ್ನು ತಿಳಿಸಲಿಕ್ಕೂ ಜನರ ಪ್ರತಿನಿಧಿಯು ಜಿಲ್ಹೆಯೊಳಗೆ ತಿರುಗಿ ಅವರ ಸಂಗಡ ಬೆರೆಯುವ ಅವಶ್ಯಕತೆಯು ನನಗೆ ಕಂಡುಬರುತ್ತದೆ. ಆದ್ದರಿಂದ, ನನ್ನನ್ನು ಆರಿಸಿದರೆ, ಸಮಯ ಒಂದಷ್ಟು ಸಾರೆ ಜಿಲ್ಹೆಯೊಳಗಿನ ಪ್ರತಿಯೊಂದು ತಾಲೂಕಾ ಸಂಘಕ್ಕೆ (ಸಂಘವಾದರೆ) ಹೋಗುವದಲ್ಲದೆ, ಹಳ್ಳಿಗಳಿಗೂ ಅಗತ್ಯವಿದ್ದಷ್ಟು ಸಾರೆ ಭೆಟ್ಟಿ ಕೊಡುವೆನು.

(ಧುರೀಣದೊಳಗಿಂದ.)

(೨)

ಇವೇ ಉತ್ತರಗಳೋ?

ಶ್ರೀ॥ ಕನ್ನಡವೃತ್ತ ಪತ್ರಕರ್ತರ ಬಳಿಗೆ—

ಮಹಾಶಯರೇ,

ಕೌನ್ಸಿಲ ಉಮೇದವಾರ ರಾ। ಕಲ್ಯಾಣಪುರಕರರು ಹಳಿಯಾಳದ ಶ್ರೀ॥ ದತ್ತೋಪಂತ ಕೇಳಕರರ ಪ್ರಶ್ನೆಗಳಿಗೆ ಕೊಟ್ಟಿರುವ ಉತ್ತರಗಳನ್ನು ಓದಿ, ಯಾರೂ ವಿಸ್ಮಿತರಾಗದ ಇರರು! ಕೊಂಗ್ರೆಸ ಸಭಾಸದರಾಗಿರುವಿರಾ, ಇಲ್ಲವಾದರೆ, ಈಗಾದರೂ ಆಗುವಿರಾ ಎಂಬ ಮೊದಲನೇ ಪ್ರಶ್ನೆಗೆ ಆರಂಭದಲ್ಲಿಯೇ ಸ್ಪಷ್ಟವಾದ ನಕಾರಾರ್ಥದ ಉತ್ತರವನ್ನು ಕೊಟ್ಟಿರುವರು. ಅದು ಹ್ಯಾಗೂ ಇರಲಿ, ಮುಂದೆ ದಿಲ್ಲಿಯ ಕೊಂಗ್ರೆಸಿನ ಠರಾವದ ವಿಷಯದ ಎರಡನೇ ಪ್ರಶ್ನೆಗೆ ಅವರು ಉತ್ತರ ಕೊಟ್ಟದ್ದು ನೋಡಿದರಂತೂ ಆ ಉತ್ತರ ಕೊಟ್ಟ ಅವರ ಪ್ರಾಮಾಣಿಕ ಬುದ್ಧಿಯು ಸಹ ಸಂಶಯಾಸ್ಪದವೆನಿಸುವಂತೆ ಇರುತ್ತದೆ. "ನಿಜವಾದ ಸದಸದ್ವಿವೇಕ ಬುದ್ಧಿಯುಳ್ಳ ಕೊಂಗ್ರೆಸ ಭಕ್ತನು ಉಮೇದ್ವಾರನಾಗಿ ನಿಲ್ಲಲಾರನು" ಎಂದು ಜಜ್ಜಮೆಂಟಿನೊಳಗಿನ ತೀರ್ಪಿನೋಪಾದಿಯಲ್ಲಿ ಒಂದು ವಿಧಾನವನ್ನು ಮಾಡಿರುವರು. ಈ ಬೋಧವನ್ನು ಅವರು ಯಾವ ಕಡೆಯಲ್ಲಿ ಪಡೆದರೋ, ಅವರೇ ಬಲ್ಲರು! ದಿಲ್ಲಿ ಕೊಂಗ್ರೆಸಿನ ಠರಾವಿನ ಸರಳವಾದ ಅರ್ಥವನ್ನು ತಿಳಿಯದಿದ್ದರು. ಭಾಷೆಯ ಜ್ಞಾನವು ಅವರಿಗೆ ಇಲ್ಲ ಎನ್ನಲು ಅಸ್ಪದವಿಲ್ಲ. ಯಾಕೆಂದರೆ, ಅವರು "ಬ್ಯಾರಿಸ್ಟರ-ಎಟ್-ಲಾ, ಹೈಕೋರ್ಟ ಜಜ್ಜ" ಎಂಬ ಸಂಗತಿಯನ್ನು ನಾವು ಮರೆಯಲಾಗದು. ದಿಲ್ಲಿಯ ಠರಾವಿನ ಸ್ಪಷ್ಟ ಮತ್ತು ಸರಳವಾದ ಅರ್ಥವು— "ಯಾರಿಗೆ ಧಾರ್ಮಿಕ ಇಲ್ಲವೆ ಅವನ ಮನೋದೌರ್ಬಲ್ಯತೆಯು ಆತಂಕವಿಲ್ಲವೋ, ಅವನು ತನ್ನ ಮರ್ಜಿಯಂತೆ ಉಮೇದವಾರನಾಗಿ ನಿಲ್ಲಲಿಕ್ಕೆ ಸ್ವತಂತ್ರನಿರುತ್ತಾನೆ." ಹೀಗೆ ಇರುತ್ತದೆ. ಹೀಗಿದ್ದು, ರಾ। ಕಲ್ಯಾಣಪುರಕರರಂಥ ಆಂಗ್ಲ ಭಾಷಾತಜ್ಞರು ಜನರಲ್ಲಿ ತೀರ ತಪ್ಪು ತಿಳುವಳಿಕೆಯಾಗುವಂಥ ಅರ್ಥವನ್ನು ಪ್ರಕಟಿಸಿದ್ದು ಯಾವ ಉದ್ದೇಶಕ್ಕಾಗಿಯೋ, ಅವರೇ ಬಲ್ಲರು! "ಸದಸದ್ವಿವೇಕ ಬುದ್ಧಿ"ಯಲ್ಲಿ "ನಿಜವಾದ" ಮತ್ತು "ಸುಳ್ಳಾದ" ಹೀಗಿನ ಎರಡು ಪ್ರಕಾರಗಳು ಇರುತ್ತವೋ ಏನೋ ಇದು ಆ ಮಾನಸ ಶಾಸ್ತ್ರಜ್ಞರಿಗೇ ಗೋಚರ! ರಾ। ಕಲ್ಯಾಣಪುರಕರರು ಹೇಳುವಂತೆ ಕೊಂಗ್ರೆಸ ಠರಾವಿನ ಅರ್ಥವಾದರೆ, ವರಿಷ್ಠ ಕೌನ್ಸಿಲಿನ ಮೆಂಬರರಾಗಲಿಚ್ಛಿಸುವ ಶ್ರೀ॥ ಪಂಡಿತ ಮಾಲವೀಯಜೀಯವರೂ, ಕೌನ್ಸಿಲ ಉಮೇದವಾರರಾಗಲಿಕ್ಕೆ ಜನರಿಗೆ ಪ್ರೋತ್ಸಾಹಿಸುತ್ತಿರುವ ಶ್ರೀ॥ ರಾಜಾಜಿಯವರೂ "ನಿಜವಾದ ಸದಸದ್ವಿವೇಕ ಬುದ್ಧಿಯಿಲ್ಲದ" ಗೃಹಸ್ಥರೇ ಸರಿ ಎಂಬುವದು ಇವರ ಅಭಿಪ್ರಾಯವೇ?

ಮತ್ತೊಂದು ಸಂಗತಿಯೇನಂದರೆ, ಕೊಂಗ್ರೆಸಿನ ಠರಾವುಗಳ ಅರ್ಥವು ಹ್ಯಾಗೆಯೇ ಇರಲಿ, ಕೊಂಗ್ರೆಸ ಸಭಾಸದರಾಗಲಿಕ್ಕೆ ಅದರಿಂದ ಏನೂ ಆತಂಕವಾಗುವದಿಲ್ಲ. ಸಹಕಾರಿಗಳಾಗಲಿ, ಅಸಹಕಾರಿಗಳಾಗಲಿ, ಕೊಂಗ್ರೆಸ ಧ್ಯೇಯವನ್ನು ಮನ್ನಿಸಿ ಸಹಿಮಾಡುವವರು ಕೊಂಗ್ರೆಸ ಸಭಾಸದರಾಗಲಿಕ್ಕೆ ಏನೊಂದು ಅಡ್ಡಿಯಿರುವದಿಲ್ಲ.

ಖಾದಿಯ ಪ್ರಸಾರದ ಬಗ್ಗೆ ಯತ್ನ ಮತ್ತು ಮ್ಯುನಿಸಿಪಲ ವ ಲೋಕಲ್‌ಬೋರ್ಡ ಕಾರಭಾರಗಳ ಜ್ಞಾನ ಈ ವಿಷಯಗಳಿಗೂ ಅವರು ಕೊಟ್ಟಿರುವ ಉತ್ತರಗಳು ಹಾಸ್ಯಾಸ್ಪದವಾಗಿರುತ್ತವೆ. ಯಾವದಾದರೂ ಸಂಗತಿಯ ಪ್ರಚಾರದಲ್ಲಿ ತಾನು ಭಾಗ ತೆಗೆದುಕೊಳ್ಳದೆ ಅದಕ್ಕೆ ಉತ್ತೇಜನ ಕೊಡುತ್ತೇನೆಂಬದು ಹೇಳುವದು ವೇದಾಂತ "ಪಾಂಡಿತ್ಯ"ದ ಸಂಗತಿಗಳಿಂದ ಜನರು ಸನ್ಮಾನ ಪಡೆಯುವ ಕಾಲವು ಈಗ ಉಳಿದಿರುವದಿಲ್ಲ. ಅದೇ ರೀತಿಯಲ್ಲಿ, ಮ್ಯುನಿಸಿಪಾಲಿಟಿ ಮೊದಲಾದ ಸಂಸ್ಥೆಗಳಿಗೆ ಸಂಬಂಧಿಸಿದ ವ್ಯಾಜ್ಯಗಳಲ್ಲಿ ನಿರ್ಣಯ ಕೊಡುವಾಗ ಮಾಡಿಕೊಂಡ ಆಯಾಯ ಸಂಸ್ಥೆಗಳ ಕಾಯಿದೆಯ ಜ್ಞಾನವೇ ಆ ಸಂಸ್ಥೆಗಳ ಕಾರಭಾರದ ಅನುಭವಜ್ಞಾನವೆಂದಾದರೆ, ಈಗಲಾದರೂ ರಾ। ಕಲ್ಯಾಣಪುರಕರರು ಮನೆಯಲ್ಲಿ ಕೂತಲ್ಲಿಯೇ ಕೌನ್ಸಿಲ ಸಂಬಂಧದ ಕಾಯಿದೆ ಮತ್ತು ನಿಯಮಾವಲಿಗಳ ಬೇಕಾದಷ್ಟು ಜ್ಞಾನವನ್ನು ಮಾಡಿಕೊಂಡು, ಕೌನ್ಸಿಲ ಮೆಂಬರಿಯ ಅನುಭವ ಜ್ಞಾನವು ಮನೆಯಲ್ಲೇ ಸುಲಭವಾಗಿ ಲಭ್ಯವಾಯಿತೆಂದು ತೃಪ್ತಿ ಪಡೆಯಬಹುದಲ್ಲವೇ? ಅದಕ್ಕೆ ಇಷ್ಟೆಲ್ಲ 'ಖಟಾಟೋಪ' ಯಾಕೆ?

ತಮ್ಮ

ಶಿರಸಿ, ತಾ. ೨೭-೧೦-೨೬. } ಓರ್ವ ಮತದಾರ.

(೩)

ಉತ್ತರಗಳ ಚರ್ಚೆ.

ಪ್ರಶ್ನೆ— ೧. ಇದರ ಉತ್ತರ ನಕಾರಾರ್ಥವಿದೆ. ಆದ್ದರಿಂದ ಶಾಂತತಾಮಯ ಅಸಹಕಾರ ಮಾರ್ಗದಿಂದ ಸ್ವರಾಜ್ಯ ಸಂಪಾದನೆ ಮಾಡುವ ಧ್ಯೇಯವು ಇವರಿಗೆ ಇಷ್ಟವಾದದ್ದು ಇಲ್ಲ. ವ ಇನ್ನು ಮುಂದೆ ಮಾನ್ಯ ಮಾಡಲು ಇಚ್ಛಿಸುವದೂ ಇಲ್ಲ.

ಪ್ರಶ್ನೆ— ೨. ದಿಲ್ಲೀ ಕೊಂಗ್ರೆಸು ಕೌನ್ಸಿಲ ಕೆಲಸಕ್ಕೆ ಪ್ರೋತ್ಸಾಹನ ಕೊಡುವದಿಲ್ಲವೆಂಬ ಇವರ ತಿಳುವಳಿಕೆಯ ಪದ್ಧತಿ ತಪ್ಪು ಇದೆ. ದಿಲ್ಲಿಯಲ್ಲಿ ತಪ್ಪಿದ ಸ್ವರಾಜ್ಯದವರು ಕಳೆದ ಕೌನ್ಸಿಲಗಳಲ್ಲಿ ಕೊಂಗ್ರೆಸು ಸ್ವರಾಜ್ಯದವರೇ ಪ್ರವೇಶವನ್ನು ವಿಂಗಡಿಸಿರಬೇಕು. ಇನ್ನು ಕೆಲವು ಅಡಚಣೆ ಅಡಗಂಟುಗಳೇನೂ ಇಲ್ಲ. ಅವುಗಳಿಗೆ ಎಕ್ಕ ೧೦ ಅಕ್ಷರಗಳಂತೆ ತೀರ್ಪು ಯನ್ನು ಎತ್ತು ಇನ್ನೂ

ಕಾನಡಾವೃತ್ತ.

ಗುರುವಾರ, ತಾರೀಖು ೨೮ ನೆಯ ಅಕ್ಟೋಬರ ೧೯೨೬

ಮುಂದಿನ ಗುರುವಾರ.

ಮುಂಬಯಿ ಇಲಾಖೆಯಲ್ಲೆಲ್ಲ ನಾಳಿನ ಗುರುವಾರಕ್ಕೆ ಒಂದು ನೈಮಿತ್ತಿಕ ಮಹತ್ವವು ಪ್ರಾಪ್ತವಾಗಿದೆ. ಅದೇನು? ನಾಳಿನ ಗುರುವಾರಕ್ಕೆ ನವಂಬರ ಮೊದಲನೇ ತಾರೀಖು ಅಂದು ಮೊಂಟೆಗ್ಯೂ ಸ್ವರಾಜ್ಯ ಕಾನೂನಿ[illegible]ಕೆ ಜನ್ಮವನ್ನಿತ್ತಿದ ಸುಧಾರಣಾ ಕೌನ್ಸಿಲು [illegible] ಉಮೇದ್ವಾರರನ್ನ ಪ್ರತಿನಿಧಿಗಳನ್ನಾಗಿ ಆರಿಸುವ ಗಲಾಟೆಯು ಇಡೀ ಮುಂಬಯಿ ಇಲಾಖೆಯಲ್ಲಿ ನಡೆಯುವದು. ಮತ [illegible] ತಮಗೇ ಮತ ಕೊಡಬೇಕು, [illegible] ತಮ್ಮ ತಮ್ಮ ಮತದಾರ ಮಂಡಳಗಳ ಪ್ರತಿನಿಧಿಗಳಾಗಿ ಕೌನ್ಸಿಲಿನಲ್ಲಿ ಆರಿಸಿ ತರಬೇಕು ಎಂಬ ಹವ್ಯಾಸದಿಂದ ಪ್ರೇರಿತರಾಗಿ ಉಮೇದ್ವಾರರೆಲ್ಲರೂ ಹಗಲಿರುಳು [illegible] [illegible]ಸುವರು. ಪ್ರತಿಯೊಬ್ಬ ಉಮೇದ್ವಾ[illegible] ತಮ್ಮ ತಮ್ಮ ದೇಶಸೇವೆಯ, ದೇಶೋದ್ಧಾರದ, ಪ್ರಜಾಹಿತದ ಯೋಜನೆಗಳ [illegible] ಮನೋಹರ ಕಲ್ಪನಾಚಿತ್ರಗಳನ್ನು ಮತದಾರರಿಗೆ ತೋರಿಸಿ, ತಮ್ಮ ತಮ್ಮ ಮೋಹಪಾಶಗಳಲ್ಲಿ ಅವರನ್ನು ಸಿಲುಕಿಸಾಕಲು ಯತ್ನಿಸುತ್ತಿರುವರು. ಸ್ವರಾಜ್ಯವೆಂದ ಕೂಡಲೆ, ಬೆದರುವವರು, ಬಾದಿಯಿಂದ ಕೂಡಲೇ [illegible] [illegible]ವರು ಸಹ, ಕೇವಲ ಮತದಾರರ ಮರ್ಜಿ [illegible]ಸಂಪಾದಿಸಿ, ಅವರ ಮತಗಳನ್ನು ಪಡೆ[illegible]ವದಕ್ಕಾಗಿ, 'ಸ್ವರಾಜ್ಯವು ತಮಗೂ ಇಷ್ಟವು, ಶೀಘ್ರವೇ ದೊರೆಯಬೇಕೆಂದು ನಾವೂ ದುಡಿಯುವೆವು. ಖಾದಿಯ ಪ್ರಚಾರದಿಂದ ಭಾರತೀಯರ ಆರ್ಥಿಕ ಕಲ್ಯಾಣವಾಗುವದೆಂದು [illegible]ಮ್ಮ ಮತವಿದೆ,' ಮೊದಲಾದ ಸವಿ ಸವಿ [illegible]ಮಾತುಗಳನ್ನಾಡಿ, ಮತದಾರರನ್ನು ಮರುಳುಗೊಳಿಸಲು ಯತ್ನಿಸುತ್ತಿರುವರು. ಹೀಗೆಲ್ಲ [illegible]ವಣೆಯ ಸಮಯದಲ್ಲಿ ದೇಶೋದ್ಧಾರದ [illegible] ಯೋಜನೆಗಳ ಜಾಲವೆಬ್ಬಿದೆ [illegible]ಸ್ಕರ ವಿಧಾಯಕ ಕಾರ್ಯಕ್ರಮದ ಕೇವಲ ಸ್ವಪರಾಕ್ರಮದಿಂದ, [illegible]ದ್ಧಾರ ಮಾಡಲು ಟೊಂಕ [illegible] ಕೌನ್ಸಿಲುಗಳು ನೌಕ[illegible] [illegible]ಯೆಂದು ಮನಗಂ[illegible]

ಅವರಿಗೆಂದೂ ಬಾ[illegible] [illegible]ಚುನಾವಣೆಯು ಬರಲಿ ಹೋಗಲಿ, ಅದ[illegible] [illegible]ಡವೆ ಅವರಿಗಿಲ್ಲ. [illegible]ಯಾಯಿಕ ಕಾರ್ಯ[illegible] [illegible]ವನ್ನು ಅವರು ಎಂದಿನಂತೆ ಚಾಲು ಇಡ[illegible]ರು. ಇಂದವರನ್ನು ಬಿಟ್ಟರೆ ಚುನಾವಣೆಯಲ್ಲಿ ಬರೇ ಮೂರು ಪಕ್ಷಗಳು ದೃಗ್ಗೋಚರವಾಗುತ್ತವೆ. (೧) ನೌಕರಶಾಹಿಯ ಸ್ತುತಿಪಾಠಕರು ಯಾನೆ ನೇಮಸ್ತರು, (೨) ಸ್ವತಂತ್ರವಾದಿಗಳು, (೩) ರಾಷ್ಟ್ರೀಯ ಸಭೆಯ ಮೇಲೆ ನಿಷ್ಠೆಯನ್ನಿಟ್ಟು, ಕೌನ್ಸಿಲುಗಳನ್ನು ಬಂಗಿಸಲು ಪ್ರವೇಶಿಸುವ ಸ್ವರಾಜ್ಯವಾದಿಗಳು. ನೇಮಸ್ತರ [illegible] [illegible]ದಿಂದ [illegible] [illegible]ರು [illegible] ಎರಡು ಅವತರಣಗಳನ್ನು [illegible] [illegible] [illegible] [illegible] [illegible] [illegible], [illegible] [illegible] [illegible] ನೇಮಸ್ತರನ್ನ, ನೌಕರ[illegible] [illegible] [illegible] ನಿರುಪವರಿಗೆ [illegible] [illegible] [illegible] [illegible]ವನ್ನು [illegible]ಗಳನ್ನು [illegible], ವಿಶೇಷವಾಗಿ [illegible] [illegible] [illegible] [illegible] ರಾಷ್ಟ್ರೀಯ' ಪತ್ರಿಕೆಗಳು [illegible] ಅವತರಣಗಳನ್ನು ಬ್ರ[illegible]ರ ಮತದಾರರೆ [illegible] [illegible]ರದ [illegible]ಗಳನ್ನು [illegible]ಕರಂತೆ, [illegible] [illegible] [illegible] ಉಮೇದ್ವಾರರಿಗೆ [illegible] ಸಂಪ್ರದಾಯ ವಂದೇ' ಈ ನ್ಯಾಯದಂತೆ ದೂರಿಂದಲೇ ನಮಸ್ಕಾರ ಮಾಡಿ, 'ಒಂದು ಹಾದಿಗೆ ಸುಂಕವಿಲ್ಲ' ಎಂತೆ [illegible] [illegible]ಸುವರೆಂದು ಯಾರೂ [illegible]ಳುವರು. ಈ ಉಮೇದ್ವಾರರು ಯಶಸ್ವಿಯಾಗುವದು ಪ್ರಚಲಿತ ಪರಿಸ್ಥಿತಿಯಲ್ಲಿ ದುರಾಪಾಸ್ತವೆಂದು ನಮ್ಮ ಮತವು. ಸ್ವತಂತ್ರವಾದಿಗಳ ಯಶಾಪಯಶವು ಅವರವರ ವ್ಯಕ್ತಿಗತ ಯೋಗ್ಯತೆಗೆ ಅನುಸರಿಸಿರುತ್ತದೆ. ಪೂರ್ವಚರಿತ್ರದ ಮೇಲೆ, ಅವರ ಶೀಲದ ಮೇಲೆ ಪ್ರಾಮುಖ್ಯವಾಗಿ ಅವಲಂಬಿಸಿರುತ್ತದೆ.

ಈಗ ಉಳಿಯಿತು ಸ್ವರಾಜ್ಯ ಪಕ್ಷವು. ಸ್ವರಾಜ್ಯ ಪಕ್ಷದ ಧ್ಯೇಯ [illegible] ಕೌನ್ಸಿಲುಗಳನ್ನು [illegible] [illegible]ರಶಾಹಿಯ ಏಕತಂತ್ರೀ[illegible] [illegible] ಯಾ ಜನಯಿಂದ ಯಾವದೇ ಪರಿಯ [illegible] ಕ್ಷೀಣಹೊಂದದೆ ಏಕಸವನೆ ನಡೆಯುತ್ತದೆಂದು ಭಾರತೀಯರಿಗೆ ಕೃತಿಯಿಂದ ತೋರಿಸಿ, ನೌಕರಶಾಹಿಯನ್ನು ನಿರ್ಮೂಲಿಸಲು ಪ್ರಜೆಗಳ ನಿರ್ಧಾರವನ್ನು ವಿಶೇಷ ಬಲಪಡಿಸುವದು. ರಾಷ್ಟ್ರೀಯ ಸಭೆಯ ಮೇಲೆ ನಿಷ್ಠೆಯನ್ನಿಟ್ಟು, ದೇಶೋದ್ಧಾರದ ಮಾರ್ಗವನ್ನು ಕೌನ್ಸಿಲು ಕಂಟಕಗಳಿಂದ ನಿವಾರಿಸುವರೆ, ದೇಶಬಂಧು ದಾಸ, ಹಕೀಮ ಅಜಮಲಖಾನ, ಪಂಡಿತ ಮೋತಿಲಾಲ ನೆಹರು ಈ ತ್ರಿಮೂರ್ತಿಗಳು ಟೊಂಕಕಟ್ಟಿರುವರು. ನೌಕರಶಾಹಿಯೇ ನಿರ್ಮಿಸಿದ ಕೌನ್ಸಿಲು ಕ್ಷೇತ್ರಗಳಲ್ಲಿ ನೌಕರಶಾಹಿಗೆ ಎದುರಾಗಿ, ಅದನ್ನು ಸೋಲಿಸಿ ಹಿಡಿಸಬೇಕೆಂದು ಇವರು ಮಾಡಿದ ಯತ್ನಗಳು ದೇಶದಲ್ಲಿ ಯಶಸ್ವಿಯಾಗುವ ಶುಭ ಚಿನ್ಹಗಳು ತಲೆದೋರುತ್ತಿವೆ. ಸರ್ವಾಧಿಪತಿ ರೀಡಿಂಗ ದೊರೆಗಳು ಕಳೆದ ತಾ[illegible] ನೇ ಬುಧವಾರ ರಾತ್ರಿ, ಬಿತಣ ಸಮಾರಂಭದಲ್ಲಿ ಮಾಡಿದ ಭಾಷಣವು ಸ್ವರಾಜ್ಯ ಪಕ್ಷಕ್ಕೆ [illegible]ರಕುವ ಯಶಸ್ಸಿನ ಪೂರ್ವ ಚಿನ್ಹವಿರುತ್ತದೆಂದು ಹೇಳಿದರೆ, ಅಯುಕ್ತವಾಗದು. 'ಕೌನ್ಸಿಲು ಭಂಗಕ್ಕಾಗಿ ಕೌನ್ಸಿಲು ಪ್ರವೇಶ[illegible]ಯುವ ಉಮೇದ್ವಾರರಿಗೆ ಎಂದೂ ಇಂಬುಗೊಡಬೇಡಿರಿ. ಅವರು ಯಶಸ್ವಿಯಾದರೆ, ಕೌನ್ಸಿಲುಗಳನ್ನು ಮುರಿದರೆ, ಸುಧಾರಣಾ ಯೋಜನೆಯನ್ನೇ ತಹಕೂಬ ಮಾಡುವೆವು' ಎಂದು ಸರ್ವಾಧಿಪತಿಗಳು ಅಖಿಲ ಭರತಖಂಡಕ್ಕೆ ಒಂದು ಬೆದರಿಕೆಯನ್ನು ಹಾಕಿರುವರು! ಸ್ವರಾಜ್ಯ ಪಕ್ಷದ ಯಶಸ್ಸಿನ ದುಃಸ್ವಪ್ನವು ಸರ್ವಾಧಿಪತಿಗಳಿಗೆ ಈಗಲೇ [illegible] [illegible]ದ [illegible]ವೇ! ಕೌನ್ಸಿಲುಗಳು ನೌಕರಶಾಹಿ[illegible] [illegible] [illegible]ಟದ ಮನೆಗಳೆಂದು ಇನ್ನಾರಿಗೆ ಹೇಳಬೇಕಾಗಿದೆ? ಆಟದ ಮನೆಗಳನ್ನು ತುಂಡರಿಸಲು ಹೊರಟಿದ್ದ ಸ್ವರಾಜ್ಯ ಪಕ್ಷದ ದೇಶಬಾಂಧವರನ್ನು ಮತದಾನ ಮಾಡಲೆಳಸುವ ಮತದಾರರೆಲ್ಲರೂ ತಮಗಿರುವ ಮತಗಳನ್ನಿತ್ತು, ರಾಷ್ಟ್ರೀಯ ಸಭೆಗೆ ದೇಶದಲ್ಲಿರುವ ಬಂಬಲ [illegible]ನ್ನು ಕೌನ್ಸಿಲುಗಳು ಅನಿಷ್ಟವೆಂದು ತೋರಿಸುವ ಸುಸಂಧಿಯನ್ನೂ ಹೋಗಲಾಡಿಸರೆಂದು ರಾಷ್ಟ್ರೀಯ ಸಭಾಭಿಮಾನಿಗಳು ಅಭಿಪ್ರಾಯಪಡುವದು ಸಹಜವಿದೆ.

ದೇಶದೊಳಗಿನ ಪರಿಸ್ಥಿತಿಯು ಹೀಗಾಯಿತು. ಜನದ ವಿಚಾರಣೆಯನ್ನು ಇಷ್ಟಕ್ಕೇ ಸಾಕು ಮಾಡಿ, ನಮ್ಮ ಜಿಲ್ಲೆಯ ಕಡೆಗೆ ದೃಷ್ಟಿಕ್ಷೇಪ ಮಾಡೋಣ. ಇಲ್ಲಿ ಉಮೇದ್ವಾರರು ಮೂವರಿರುವರು. ರಾ| ಪಿ. ವೆಂಕಟೇಶ್ವರ ಕಲ್ಯಾಣಪೂರಕರ, ರಾ| ಶಿವಗಿರಿ ಕೇಶವಯ್ಯ, ಶ್ರೀ| ಮಂಜನಾಥ ಭಟ್ಟ ಕರ್ಕಿ. ಮೂವರೂ ತಮ್ಮ ತಮ್ಮ ಯೋಗ್ಯತೆಗಳ ಗುಣಸಂಕೀರ್ತನ ಮಾಡಿ, ಪ್ರಕಟಣೆಗಳನ್ನು ಹೊರಡಿಸಿರುವರು. ಅವರವರ

ಯೋಗ್ಯತೆಗಳ[illegible]ರುವ ನಮ್ಮ ಮತದಾರ ಬಾಂಧವರಿಗುಂಟಾಗಿರುವದು. ಆದರೆ, ನಾಳಿನ ಗುರುವಾರ 'ನಿಮಗ್ಯಾರು ಬೇಕು?' ಎಂದು ಮತ ಕೊಡುವ ಠಾಣ್ಯಾಗಳಲ್ಲಿ ಮತದಾರರಿಗೆ ಕೇಳರು. ಹಾಗಾದರೆ, ಅವರು ಪ್ರತಿನಿಧಿಗಳನ್ನು ಆರಿಸುವ ಬಗೆ ಹೇಗೆ? 'ಮೂರು ಚಿತ್ರಗಳ ಒಂದು ಕಾಗದವನ್ನು ನಿಮಗೆ ಕೊಡುವರು, (೧) ಕುದುರೆ, (೨) ಕೈ, (೩) ಧ್ವಜ. ನಿಮಗೇನು ಬೇಕು? ಕುದುರೆ ಬೇಕೋ? ಕೈ ಬೇಕೋ? ಧ್ವಜ ಬೇಕೋ?' ಎಂಬ ಮೂರು ಪ್ರಶ್ನೆಗಳನ್ನು, ಮತದಾರರೇ, ನಿಮಗೆ ಕೇಳುವರು. ಇದಕ್ಕೇನು ಉತ್ತರ ಕೊಡುವಿರಿ? ನಿಮ್ಮ ಉತ್ತರದಂತೆ ಮೂವ ಉಮೇದವಾರರಲ್ಲಿ ಒಬ್ಬರು ನಿಮ್ಮ ಪ್ರತಿನಿಧಿಯಾಗಿ ಮುಂಬಯಿಯ ಪ್ರಾಂತಿಕ ಕೌನ್ಸಿಲಿನಲ್ಲಿ ಆರೂಢರಾಗುವರು."

ಕುದುರೆಯು ಮುಂದಾಗಿ ತನ್ನ ಬಡಿವಾರ ಬಡೆಯುವದು —"ಕೇಳಿರಿ, ನಾನು ಬಹಳ ಉಪಯುಕ್ತ ಪ್ರಾಣಿಯು. ನೀವೀಗ ಯುದ್ಧಕ್ಕೆ ಸನ್ನದ್ಧರಾಗಿರುವರಲ್ಲವೇ? ಮುಂದಾಗಿರಿ, ಜಡಿ ಲಗಾಮು ಏರಿಸಿರಿ; ಮತ್ತು ಆರೂಢರಾಗಿರಿ. ನಿಮಿಷಾರ್ಧದಲ್ಲಿ ನೌಕರಶಾಹಿಯು ವಿಧಿಸಿಕೊಟ್ಟ ದಾರಿಯಿಂದ ನೆಟ್ಟಗೆ ವಾಯು ವೇಗದಿಂದ ನಡೆದು, ನಿಮ್ಮ ಧ್ಯೇಯವನ್ನು ನಿಮಗೆ ದೊರಕಿಸಿ ಕೊಡುವೆನು. ಯುದ್ಧಕ್ಕೆ ಹೋಗುವಾಗ ಅಶ್ವವನ್ನು ಮರೆತರೆ, ಸಾಗುವದೆಂತು? ಕೌನ್ಸಿಲು[illegible]ಳೆಂದರೆ, ಮಾಟದ ಮನೆಗಳಲ್ಲ, ನೌಕರ[illegible]ಹಿಯುಗೂಡ ಹೋರಾಡುವ ರಣಕ್ಷೇತ್ರಗಳು [illegible]ಕೊಂಡು ಮಾಡುವದೇನು? ನೌಕರಶಾ[illegible] 'ಶೇಕಹೆಂಡ' ಮಾಡುವದಿದೆಯೆ? 'ಶೇಕಹೇಂಡ' ಮಾಡಿ, ಅವರ ಮರ್ಜಿ ಕಾಯಲಿಕ್ಕೆ, ಮುಗುಳು ನಗೆ ಮಾಡಲಿಕ್ಕೆ ನಾನು ಹೋಗುವದಿಲ್ಲ. ಧ್ವಜವು ಅರಿವೆಯ ತುಂಡು. ಇದರಿಂದ ಆಗುವದೇನು? ಅರಿವೆಯ ತುಂಡು, ಅದೂ ಸಹ ಬಣ್ಣ ಬಡೆದು ಸಾಂಸಾರಿಕರಿಗೆ ನಿರುಪಯೋಗಿಯಾದದ್ದು. ಅದರಿಂದ ಏನು ಮಾಡುವಿರಿ? ನನ್ನ ಮಾತು ಲಾಲಿಸಿರಿ." ಎಂದು ಕುದುರೆಯು ನುಡಿಯುವದು. ಮತದಾರರು "ಕುದುರೆ ನಮಗೇಕೆ, ಬಡವರಿಗೆ? ಈ ಬಿಳೇ ಕುದುರೆಯ ಚಾಕರಿ ಮಾಡುವವರ್ಯಾರು? ಇದನ್ನು ಸಾಕುವ ಸಾಮರ್ಥ್ಯವು ನಮಗೆಲ್ಲಿ? ಜಡಿ-ಲಗಾಮು ಎಲ್ಲಿಂದ ತರುವದು? ಭಂಗಾರದ ಚೂರಿಯೆಂದು ಹೊಟ್ಟೆಯಲ್ಲಿ ಹಾಕಿಕೊಳ್ಳುವದೇನು? ಕುದುರೆಯೂ ಬೇಡ, ಅದರ ಚಾಕರಿಯೂ ಬೇಡ," ಎಂದು ಅಲ್ಲಿಂದ ಮತದಾರರು ಮೋರೆ ತಿರುವಿದರೇನಾಶ್ಚರ್ಯ?

ಕುದುರೆಯ ವೃತ್ತಿಯಿಂದ ಬೇಸರಗೊಂಡು [illegible]ಂದ ಉಮೇದ್ವಾರರಿಗೆ ಕೈ ನುಡಿಯುವದೇನಂದರೆ— "[illegible]ರೇ, ಇತ್ತ ಬನ್ನಿ. ನಾನು ನೌಕರಶಾಹಿಯುಗೂಡ ಸಾಹಚರ್ಯದಿಂದ ಕೆಲಸ ಕೈಕೊಳ್ಳಲು ಮುಂದಾದವನಿದ್ದೇನೆ. ಅವರಿಗೆ ಸಂತೋಷಬಡಿಸಿ, ನಿಮ್ಮ ಹಿತವನ್ನು ನಾನು ಸಾಧಿಸುವೆನು. ಸರ್ವಾಧಿಪತಿಗಳು ಬ್ರಿಟಿಶರ ಸಹಕಾರದಿಂದಲೇ ನಿಮ್ಮ ಕಲ್ಯಾಣವಾಗುವದೆಂದು ಮೊನ್ನೆ ನುಡಿದಿರುವರಲ್ಲ. ನೌಕರಶಾಹಿಯು ಜವಾಬದಾರ ಸ್ವರಾಜ್ಯದ ಕೈ ಮುಂದೆ ಮಾಡಿದ್ದಕ್ಕೆ ನೀವು ನಿಮ್ಮ ಕೈಯನ್ನು ಮುಂದೆ ಮಾಡಿ, ನಿಮ್ಮ ಹಿತವನ್ನು ಸಾಧಿಸಿಕೊಳ್ಳಬೇಕು. ದುರಾಗ್ರಹಿಗಳಾಗಬೇಡಿರಿ, ನಿಮ್ಮದೇ ಹಟ ಹಿಡಿಯಬೇಡಿರಿ, ನೌಕರಶಾಹಿಯ ಕೈಗೆ ಕೈ ನೀಡಿರಿ; ಮತ್ತು ದೇಶೋದ್ಧಾರ ಮಾಡಿಕೊಳ್ಳಿರಿ. ಕುದುರೆಯು ಸ್ವಾರ್ಥಪರಾಯಣತೆಯಿಂದ ಮಾಡಿದ ನನ್ನ ನಿಂದೆಗೆ ಕಿವಿಗೊಡಬೇಡಿರಿ' ಎಂದು ಕೈಯು ಬಹು ಪರಿಯಿಂದ ಹೇಳಿಕೊಂಡೀತು. ಆದರೆ, ಕೆನಿಯಾ ನಿರ್ಣಯದಿಂದ, ಪಂಜಾಬ ಅತ್ಯಾಚಾರಗಳಿಂದ, ಖಿಲಾಫತ ವಚನಭಂಗದಿಂದ ಜಾಗ್ರತರೊಂದಿದ ಮತದಾರರು ನೌಕರಶಾಹಿಯುಗೂಡ ಸಾಹಚರ್ಯ ಮಾಡಿ, ದೇಶೋದ್ಧಾರವಾಗುವದಿಲ್ಲೆಂದು ಮನಗಂಡ ಮೂಲಕ, ಧ್ವಜದ ಕಡೆಗೆ ತಿರುಗಿ ನಿನ್ನ 'ಅಂಬೋಣವೇನಿ'ದೆಂದು ಪ್ರಶ್ನಿಸುವರು.

ಆಗ ಧ್ವಜವು ನುಡಿಯುವದೇನಂದರೆ.— "ಮತದಾರ ಬಾಂಧವರೇ, ನನ್ನ ಹೇಳಿಕೆಯನ್ನು ಲಾಲಿಸಿರಿ. ನೀವು ಇಲ್ಲಿ ಏಕೆ ಬಂದಿರುವಿರಿ? ಸ್ವರಾಜ್ಯ ಸಂಪಾದನೆಗಲ್ಲವೇ? ಸ್ವರಾಜ್ಯದ ದೃಶ್ಯ ಚಿನ್ಹವು ನಾನೇ. ಧ್ವಜವನ್ನು ಸಂಪಾದಿಸಿರಿ, ಧ್ವಜದ ಮಾನ ಕಾಯಿರಿ, ಅಂದರೆ, ಸ್ವರಾಜ್ಯವು ನಿಮ್ಮದೇ. ನಾಗಪುರದ ಧ್ವಜ ಸಂಗ್ರಾಮದ ವೀರ ಕಥೆಯು ನಿಮಗೆ ಗೊತ್ತಿಲ್ಲವೇ? ಕೇವಲ ಧ್ವಜಕ್ಕಾಗಿ, ಧ್ವಜದ ಮಾನರಕ್ಷಣೆಗಾಗಿ, ಶೇಟ ಜಮುನಾಲಾಲ ಬಜಾಜರಂಥ ಲಕ್ಷ್ಮೀಪುತ್ರರು ಕುದುರೆ, ಮೋಟಾರ ಮುಂತಾದ ಸರಂಜಾಮುಗಳನ್ನೆಲ್ಲ ತೊರೆದು, ಬಂಧನದಲ್ಲಿ ಬಿದ್ದರಲ್ಲವೇ? ಕೇಳಿರಿ, ಕುದುರೆಗೆ, ಧ್ವಜವು ಅರಿವೆ ತುಂಡಿದ್ದರೆ, ಕುದುರೆಯೇ ನಿಮ್ಮ ತರಣೋಪಾಯವಿದ್ದರೆ, ಶೇಟಜಿಯವರಂಥ ಲೋಕೋತ್ತರ ಪುರುಷರು ಸಹ ಕುದುರೆಯನ್ನು ತ್ಯಜಿಸಿ, ಅರಿವೆ ತುಂಡಿಗಾಗಿ ಏಕೆ ಸಂಕಟಕ್ಕೊಳಗಾದರು? ನಾನೇ ನಿಮ್ಮ ಹಿತಕರ್ತನು. ನನ್ನಿಂದಲೇ ಮುಕ್ತಿಯಾಗಬೇಕು. ಬ್ರಿಟಿಶರು ಸುಧಾರಿಸಿದವರಲ್ಲವೇ? ಅವರಿಂದ ಕಲಿಯಿರಿ ಧ್ವಜದ ಮಹಾತ್ಮೆಯನ್ನು. ಧ್ವಜದ ಸ್ವಾಭಿಮಾನಸಂರಕ್ಷಣಕ್ಕಾಗಿ, ಅನೇಕ ಮಹಾ ಯುದ್ಧಗಳನ್ನು [illegible] ಇದೇ[illegible]ದರು. [illegible]ನು ನೀವು ಅರಿಯದ ಸಂಗತಿ? [illegible] ಕುಚರಿತ್ರದ ಸಣ್ಣ ಅರಿವೆಯು [illegible]

ನನಗೇ ಮತ ಕೊಡಿರೆಂದು, [illegible]ರಂತೆ, ನಾನು ಹೇಳುವದಿಲ್ಲ. ನಿಮ್ಮ ಉಗ[illegible]ಗಬೇಕೆಂದಿದ್ದರೆ, ಸ್ವರಾಜ್ಯಪ್ರಾಪ್ತಿಯಾಗಿ ಭರತಭೂಮಾತೆಯ ಪಾರತಂತ್ರ್ಯದ ಕಲ[illegible] ಅಚ್ಚ ತೊಳೆದು ಹೋಗಬೇಕೆಂದಿದ್ದರೆ, [illegible] ಯಾರಿಗೆ ಮತ ಕೊಡಬೇಕೆಂದು ವಿಚಾ[illegible] ಆತ್ಮಶ್ಲಾಘನೆ ಮಾಡಿಕೊಂಡು ನಾನು [illegible] ಹಾಕುವವನಲ್ಲ. ಯಾರ ದಾಕ್ಷಿಣ್ಯ[illegible] ಬೀಳದೆ, ಅವರು ಹೇಳುತ್ತಾರೆ, ಇ[illegible]ತ್ತಾರೆ, ಎಂದು ಮತವನ್ನು ಶಿಕ್ಕಾ [illegible]ಕೊಡದೆ, ನಿಮ್ಮ ಉದ್ಧಾರವು ಹ್ಯಾ[illegible] ಯಾರು ನಿಮ್ಮ ಕಲ್ಯಾಣ ಮಾಡಬಲ್ಲ[illegible]ದನ್ನು ನಿಮ್ಮಷ್ಟಕ್ಕೇ ವಿಚಾರಿಸಿ, [illegible] ಯುಕ್ತ ತೋರಿದರೆ ನನಗೆ ಮತಕೆ[illegible]ದಿದ್ದರೆ ಬಿಡಿರಿ. ನಾನೇನು, ಸ್ವ[illegible]ಗಳಲ್ಲಿ ಮೆರೆಯುವವನು! ಮ[illegible]ಗಳು ನನ್ನ ಮಹಾತ್ಮ್ಯವನ್ನು ಮಹಾತ್ಮರ ಪುಣ್ಯದಿಂದ, ಶೇ[illegible]ತ್ವದಲ್ಲಿ ಸದ್ಯಕ್ಕುಂಟಾದ [illegible]ದಿಂದ, ನನ್ನ ಮಹತ್ವವನ್ನು [illegible]ಂಡು ನನ್ನ ಅಂದಾಜಿದೆ. ಈ [illegible]ರ್ಥವಿಡಿಸುವ ಶುಭ ಸಮಯ ಪ್ರಾಪ್ತವಾಗಿದೆ. ಹೇಳಿರಿ, ಯಾ[illegible]ರು ತ್ರೀರೆಂದು" ಧ್ವಜದ ವಿ[illegible]ನ್ನು ಕೇಳಿ, ಪತಿತ ರಾಷ್ಟ್ರ[illegible] ಯತ್ನಿಸುವ ಮತದಾರರು [illegible]ನಿಧಿಯಾಗಲು ಈ ಸಂದರ್ಭದಲ್ಲಿ [illegible] 'ಯೋಗ್ಯ ಪುರುಷನು' ಎಂದು [illegible] ಮತದಾನ ಪತ್ರಿಕೆಯ ಮೇಲೆ ಧ್ವಜದ ಮುಂದೆ ಗುಣಿಲೆ ಚಿನ್ಹ ಹಾಕಿ, ಧ್ವಜ[illegible] ಪ್ರತಿನಿಧಿಯಾಗಿ ನೇಮಿಸುವರೆಂದು [illegible]ಂದು ಭವಿಷ್ಯ ಹೇಳಿದರೆ, ಅದೇನು ಅಯಥಾರ್ಥವಾಗದು. ನೋಡುವ.

ಸ್ಫುಟ ಸೂಚನೆಗಳು.

೧ ಸರ್ವಾಧಿಪತಿ ರೀಡಿಂಗ ದೊರೆಗಳಿಗೆ ದಿಲ್ಲಿಯೊಳಗಿನ 'ಚೆಮ್ಸಫರ್ಡ ಕ್ಲಬ್ಬಿ'ನವರು ಕಳೆದ ತಾ. ೧೭ನೇ ಬುಧವಾರ ರಾತ್ರಿ ಒಂದು ಮೇಜವಾನಿಯನ್ನಿತ್ತರು. ಮೇಜವಾನಿಯ ನಿಮಿತ್ತ ಮಾಡಿದ್ದ[illegible] ಸರ್ವಾಧಿಪತಿಗಳು ಪ್ರಚಲಿತ ಪರಿಸ್ಥಿತಿಯ ಮೇಲೆ [illegible] ವಿಸ್ತಾರಪೂರ್ವಕ ಒಂದು ಭಾಷಣವನ್ನಿತ್ತ[illegible] ಮೊಟ್ಟಮೊದಲು, ಕೌನ್ಸಿಲುಭಂಗಕ್ಕಾಗಿ ಕೌ[illegible] ಪ್ರವೇಶಗೈಯ್ಯುವ ಸ್ವರಾಜ್ಯ ಪಕ್ಷದವರಿಗೆ [illegible] ಬೆದರಿಕೆ ಹಾಕಿದರು. ಕೌನ್ಸಿಲುಗಳನ್ನು [illegible] ವ ಯೋಜನೆಯಿಂದ ಹಿಂದುಸ್ಥಾ[illegible]ನ ಪದ್ಧತಿ ತಯಾರಿ ಮಾಡಲು ಬ್ರಿಟಿಶ ಪಾ[illegible]ಹಳೇ ಕಾಯಿದೆಗಳ [illegible] ಪ್ರದೇಶವನ್ನು [illegible] ಅವಧಿಯು ವಿನಾಶಕ ಚಳವಳಿ[illegible]ಗಿ ತಂಟೆಗಳೇನೂ ಇಲ್ಲ. [illegible] ಎತ್ತಿಗೆ ೧೦ [illegible] ತೀರ್ಪಿಯನ್ನು [illegible] ಎತ್ತುತ್ತಾರೆ.

ತಕತಕ ಕುಣಿ ಮಾಡಿ, ರಾಜ್ಯಕಾರಭಾರವನ್ನು, ಹಿಂದಿನಂತೆ, ಇದೆಯೂ ನಡಿಸುವೆವೆಂದರು. ಸಾಮ್ರಾಜ್ಯ ಪ್ರದಕ್ಷಿ ಬಹಿಷ್ಕಾರ ಹಾಕಿ, ಹಿಂದುಸ್ಥಾನವು ಕಾಲಮೇಲೆಯೇ ಕಲ್ಲು ಹಿಗೆದುಕೊಳ್ಳುತ್ತದೆಂದು ಅಧಿಪತಿಗಳು ಉದ್ಗರಿಸಿದರು. ಹಿಂದುಸ್ಥಾನವು ಯಾವ ಯಾವ ಜಿನಸುಗಳು ತಯಾರಾಗುತ್ತವೆ, ಅವುಗಳನ್ನು ವೃದ್ಧಿಪಡಿಸುವ ಬಗೆ ಹೇಗೆ? ಎಂಬುದನ್ನು ಸಾಮ್ರಾಜ್ಯದ ಚಾಲಕರಿಗೆ ತಿಳಿಸುವದು, ಅವರ ಸಹಾಯದಿಂದ ಹಿಂದುಸ್ಥಾನದ ವೃದ್ಧಿ ಪಡಿಸುವದು ಭಾರತೀಯರಿಗೆ ಕಲ್ಯಾಣಪ್ರದವು. ಬ್ರಿಟಿಗರ ಬಹಿಷ್ಕಾರವು ಎಂದೂ ಯಶಸ್ವಿ ಆದರೆ, ಇದರಿಂದ ಬ್ರಿಟಿಶರ ನಷ್ಟ, ಹಿಂದುಸ್ಥಾನಕ್ಕೆ ಅಹಿತವಾಗುವದು. ನ್ಯಾಯ-ನೀತಿಗಳಮೇಲೆ ಪಿಕಾಸಹಿಟ್ಟು, ಯಾವದೇ ರೀತಿಯಿಂದ ನೋಯಿಸಬೇಡಿರಿ ಎಂದು ಅಧಿಪತಿಗಳು ಸಾರಿ ಹೇಳಿದರು. ನಾಭಾ ರಾಜ್ಯತ್ಯಾಗವನ್ನು ರದ್ದಪಡಿಸಿ, ಪಟ್ಟವನ್ನು ಪುನಃ ಪಟ್ಟಾಭಿಷೇಕ ಮಾಡಬೇಕೆಂದು ಸರ್ವಾಧಿಪತಿಗಳು ಒತ್ತಿ ಹೇಳಿದರು.

ಸರ್ವಾಧಿಪತಿಗಳ ಭಾಷಣದೊಳಗಿನ ಸಾರವನ್ನು ವಿಮರ್ಶಿಸಿದರೆ, ನೌಕರಶಾಹಿಯು ಪ್ರಜೆಯ ಮೇಲೆ ಯಾವ ಧೋರಣೆ ಇದೆಂದು ತಿಳಿಯುವ ಹಾಗಿದೆ. ಸ್ವರಾಜ್ಯ, ಗಲೀ, ರಾಷ್ಟ್ರೀಯ ಸಭಾಧಿಪರನ್ನೂ ಸೇ, ಸರ್ವಾಧಿಪತಿಗಳ ಬಣ ಬೆದರಿಕೆ ಅಪ್ಪುಹಾಕರು. ಕಾಯಿದೆ ಕೌನ್ಸಿಲ [illegible] ರಾಜ್ಯಕಾರಭಾರ ಬೇರೆ, ಎರಡಕ್ಕೂ ಏನಿಲ್ಲೆಂದು ಸರ್ವಾಧಿಪತಿಗಳು ಜಾಹೀರವಾಗಿ ಎಲ್ಲರೂ ಲಕ್ಷವಲ್ಲಿಡಲಿ. ಸಾಮ್ರಾಜ್ಯದಿಂದ ನಮಗಾಗುವ ಲಾಭವು ಸಲಿಗೆಯು, ಕ್ಲೋಲನ್ನು ನಮ್ಮಲ್ಲಿ ತಯಾರ ಮಾಡುವನು. ಸ್ವಾನದ ಕಾರಖಾನೆಗಳಲ್ಲಿ ಪಕ್ಕಾ ಮಾಲು ತಯಾರಿಸುವದು, ಅದನ್ನೇ ಪುನಃ ನಮ್ಮಲ್ಲಿ ಅದು ಮಾರಿಕೊಂಡು ಸಾಮ್ರಾಜ್ಯವು ಹಣ ಸಂಪಾದಿಸುವದು; ಇದೇ ಹಿಂದುಸ್ಥಾನಕ್ಕೆ ಉಂಟಾಗುವ ಲಾಭವು ಇದು ಲಾಭವೋ? ಹಾನಿಯೋ? ಎಂಬದನ್ನು ತಿಳಕೊಳ್ಳುವಷ್ಟು ಬುದ್ಧಿಯು ನಮ್ಮಲ್ಲಿದೆ. ಸರ್ವಾಧಿಪತಿಲು ಅದನ್ನು ಹೇಳಿಕೊಡುವ ಕಾರಣವಿಲ್ಲ. ಬ್ರಿಟಿಶಸಾಮ್ರಾಜ್ಯಗರ ಮೇಲಿನ ಬಹಿಷ್ಕಾರವು ನಿರರ್ಥಕವಿಗುವದಾದರೆ, ಸರ್ವಾಧಿಪತಿಗಳು ಏಕೆ ಈ ಬಗ್ಗೆ ಕಷ್ಟಬಡುತ್ತಾರೆಂದು ಯಾರೂ ಕೇಳಬಹುದು. ಇದರಿಂದ ಬ್ರಿಟಿಶರು ನೋಯುವರು. ಅವರ ನ್ಯಾಯನೀತಿ ಬುದ್ಧಿಯು ಹಿಂದುಸ್ಥಾನಕ್ಕೆ ಕಲ್ಯಾಣಪ್ರದವಾಗಲು ತಯಾರಾಗದು. ಅದರಿಂದ ಸರ್ವಾಧಿಪತಿಗೆ ಪರೋಪಕಾರಕ್ಕಾಗಿ ಎಚ್ಚರಿಕೆ ಕೊಡಬೇಕಾಯಿತು. ಬ್ರಿಟಿಶ ನ್ಯಾಯದೇವತೆಯ ಉಪಾಸಕ ಸರ್ವಾಧಿಪಂಗರ ನೇತೃತ್ವದಲ್ಲಿ ಬ್ರಿಟಿಶರನ್ನು ಎಬ್ಬಿಸಿದ ಹಾವಳಿಯನ್ನೂ, ಅನರ್ಥ ಪರಂಪರೆಯನ್ನೂ ಲಕ್ಷಿಸಿದವರೆಂದು ಮರೆಯುವ ಬ್ರಿಟಿ[illegible] [illegible]

ವಿಟ್ಟು, ಅವರು ಹಾಕಿದ [illegible] ಸಿರಿ ಎಂದು ಹೇ[illegible] [illegible]ದುವವರಾರು? ರಿಪ್ಪರ್ ಪ್ರಸಂಗದಂಥ ಪರ[illegible]ಸ್ಥಿತಿಯನ್ನು ರದ್ದುಪಡಿಸಲು, ಶೀಘ್ರದ ನಿರ್ಧಾರ [illegible] ದುಡಿಯುತ್ತಿರುವರು. ಅವರ ಶಕ್ಯಾಶಕ್ಯತೆಯ [illegible] ನಿರ್ಣಯಿಸುವದು. ಸರ್ವಥಾ ಅವರ ಮೇಲೆ [illegible] ಅವಲಂಬಿಸಿಯದೆ. ಮಹಾ ಭಾರತ ಮಂತ್ರಿಗಳಾದ ಕ್ರಿಸ್ತವಾಸಿ ಮೊರ್ಲೆ ದೊರೆಗಳು ಪಂಗಡಂಗಳನ್ನು ರದ್ದುಪಡಿಸುವದು ಅಶಕ್ಯವಾಗಿದೆ. ಸರ್ವಾಧಿಪತಿ ರೀಡಿಂಗ ದೊರೆಗಳಂತೆಯೇ, ಸುಶಿಕ್ಷಿತರ ಆದರೆ ಅದನ್ನು ಪ್ರಜೆಗಳ ಚಳವಳಿಯ ಮೂಲಕ ರದ್ದು ಮಾಡಬೇಕಾಗಿತ್ತು. [illegible] ಪೂರ್ವೇತಿಹಾಸ [illegible]ದ ಸರ್ವಾಧಿಪತಿಗಳ ಭಾಷಣಕ್ಕೆ ಯೋಗ್ಯ [illegible] ಕೊಡುವರೆಂದು ನಮಗೆ ಸಂದೇಹವಿಲ್ಲ.

[illegible]

ಸ್ಥಾನಿಕ ವೃತ್ತಾಂತ.

ತಪ್ತ ಬಿಸಿಲು; ಕಳೆ ವಿಪರೀತ [illegible] [illegible]ಯ್ಯಲಾರಂಭಿಸಿರುವದು

ಕಳೆದ ತಾ. ೧೭ನೇ ಬುಧವಾರ ರಾತ್ರಿಯಿಂದ ಇಲ್ಲಿಯ ಗಿಬ್ ಹ್ಯಾಸ್ಕೂಲಿನಲ್ಲಿ ವಾರ್ಷಿಕ ಸಮ್ಮೇಲನ ಸಮಾರಂಭಕ್ಕೆ ಪ್ರಾರಂಭವಾಯಿತು. ರಾತ್ರಿ 'ತುರುಂಗಾಚ್ಯಾ ದಾರಾಂತ' ಎಂಬ ಮರಾಠಿ ನಾಟಕದ ಪ್ರಯೋಗವಾಯಿತು. ಮಾರನೇ ದಿನ ಸಾಯಂಕಾಲಕ್ಕೆ ಆಟಗಳು, ಕಯರತ್ತುಗಳು ನಡೆದವು. ಶುಕ್ರವಾರ ಮುಂಜಾವಿಗೆ ವಿದ್ಯಾರ್ಥಿಗಳ ಭಾಷಣಗಳು ನಡೆದವು. ಸಾಯಂಕಾಲಕ್ಕೆ ವಿವಿಧ ವಿಷಯಗಳಲ್ಲಿ ಪ್ರಾವೀಣ್ಯ ಹೊಂದಿದ ವಿದ್ಯಾರ್ಥಿಗಳಿಗೆ ಇನಾಮು ಹಂಚುವ-ಸಮಾರಂಭವು ಜರುಗಿತು. ಸ್ವಾಗತಪರ ಪದ್ಯಗಳಾದ ಬಳಿಕ, ಸುಪರಿಂಟೆಂಡೆಂಟರು ಕಳೆದ ವರುಷದ ವರದಿಯನ್ನು ಓದಿ ತೋರಿಸಿದರು. ಇನಾಮು ಹಂಚುವ ಕೆಲಸವಾದ ಬಳಿಕ, ಸಮ್ಮೇಲನದ ಅಧ್ಯಕ್ಷರಾದ ರಾ| ಬೆನ್ನಾಳಗುಂದರವರ ಸಮಯೋಚಿತ ಭಾಷಣವಾಯಿತು. ಇಷ್ಟಕ್ಕೆ ಈ ಸಮಾರಂಭವು ಮುಗಿಯಿತು. ರಾತ್ರಿ ಬಾಲಾ ಫಂಡಿಗಾಗಿ ಟಿಕೀಟುಗಳನ್ನಿಟ್ಟು, 'ಇಂದಿರಾ' ಎಂಬ ಕನ್ನಡ ನಾಟಕವನ್ನು ವಿದ್ಯಾರ್ಥಿಗಳು ಆಡಿ ತೋರಿಸಿದರು. ರವಿವಾರ ರಾತ್ರಿ ವಿದ್ಯಾರ್ಥಿಗಳು 'ತುರುಂಗಾಚ್ಯಾ ದಾರಾಂತ' ಎಂಬ ನಾಟಕದ ಮತ್ತೊಂದು ಪ್ರಯೋಗವನ್ನು ಮಾಡಿ, ಉತ್ಪನ್ನವನ್ನು ಬಾಲಾಫಂಡಿಗೆ ಅರ್ಪಿಸಿದರು. ಎರಡೂ ನಾಟಕಗಳಿಂದ ಸುಮಾರು ೧೫೦ ರೂಪಾಯಿಗಳು ಉತ್ಪನ್ನವಾಗಿರಬೇಕೆಂದು ಅಂದಾಜು.

ಇಲ್ಲಿಯ ಬಿ ಎಸ್. ಎಸ್ ಕಂಪನಿಯ ಏಜಂಟರಾಗಿದ್ದ ರಾ| ಧನಾರ್ಜಿಹಳ್ಳಿಸರವರು ರಜೆ ಕೊಂಡದ್ದರಿಂದ, ಅವರ ಜಾಗದಲ್ಲಿ ರಾ| ಕ್ಷೀರಸಾಗರರು ಏಜಂಟರಾಗಿ ಬಂದಿರುವರು. ಕಳೆದ ವಾರದಿಂದ ಪ್ರಯಾಣಿಕರ ಅನುಕೂಲತೆಗಾಗಿ ಈ ಕಂಪನಿಯವರು ಮತ್ತೊಂದು ಬೋಟಿಯನ್ನು ಚಾಲು ಮಾಡಿರುವರು.

ಕಳೆದ ಬುಧವಾರ ತಾ ೧೭ನೇ ರಾತ್ರಿ ಬಂದರದ ಸಮೀಪದ ಗುತ್ತದ ಮೇಲಿದ್ದ ಬಿ ಎಸ್ ಎನ್. ಕಂಪನಿಯ ಬಾವಟೆ ಕಂಬದ ಮೇಲೆ ಸಿಡಿಲು ಬಿದ್ದು, ಕಂಬವು ಹುಡಿ ಹುಡಿಯಾಯಿತು.

ಇಲ್ಲಿಯ ಹಂಸರಾಜ ಲದ್ದಾ ಶೇಟರವರು ತಮ್ಮ ಪಿತೃಗಳಾದ ಪ್ರೇಮಾಬಾಯಿಯವರ ಸ್ಮರಣಾರ್ಥವಾಗಿ ಕಟ್ಟಿಸಿದ ದನವಿನ ಆಸ್ಪತ್ರಿಯ ಅನಾವರಣ ಸಮಾರಂಭವು ಕಳೆದ ತಾರೀಖು ೨೨ನೇ ಸೋಮವಾರ [illegible]ಕ್ಕೆ ವೆಟರ್ನರಿ ಖಾತೆಯ ಸುಪರಿಂಟೆಂಡೆಂಟ [illegible] ಎಸ್ ಘಾರಪುರದರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಆಸ್ಪತ್ರಿಯು ನಲ್ಲೀಕೇರಿ ಮಾಸ್ತಿಗುಡಿಯ ಬಳಿ ಇರುತ್ತದೆ.

ಕುಮಟಾ ತಾಲೂಕಾ ಕೊಂಗ್ರೆಸ ಕಮಿಟಿಯು ವಾರ್ಷಿಕ ಮಹಾ ಸಭೆಯ ಅಧಿವೇಶನವು, ಕಮಿಟಿಯ ಆಫೀಸಿನಲ್ಲಿ, ಕಳೆದ ತಾ ೨೨ನೇಗೆ ನೆರೆಯಿತು. ತಾ. ೧-೧೦-೨೩ನೇಯಿಂದ ತಾ. ೩೦-೯-೨೪ ವರೆಗಿನ ಜಮಾಖರ್ಚು ಪತ್ರಕವು ಮಂಜೂರು ಮಾಡಲಾಯಿತು. ಬಳಿಕ, ಕಾರ್ಯಕಾರಿ ಮಂಡಳದ ಚುನಾವಣೆ, ಜಿಲ್ಲಾ ಕೊಂಗ್ರೆಸ ಕಮಿಟಿಯ ಪ್ರತಿನಿಧಿಗಳ ನೇಮಣೂಕಿ, ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಗೆ ಪ್ರತಿನಿಧಿಗಳ ಚುನಾವಣೆ, ಮೊದಲಾದ ಕೆಲಸಗಳು ರೀತಿಯಂತೆ ನಡೆದು, ಸಭೆಯು ವಿಸರ್ಜನಹೊಂದಿತು.

ವೈಷ್ಣವ ಮತಸ್ಥರಿಗೆ ಪವಿತ್ರವಾದ ಶ್ರೀ ಮಧ್ವಾಚಾರ್ಯರ ಜಯಂತ್ಯುತ್ಸವವು ವಾಡಿಕೆಯಂತೆ ಕಳೆದ ಶುಕ್ರವಾರಕ್ಕೆ ಸಾಂಗವಾಯಿತು. ಮುಂಜಾವಿಗೆ ಶ್ರೀ ಆಚಾರ್ಯರ ಭಾವಚಿತ್ರದ ಮೆರವಣಿಗೆಯಾಯಿತು. ರಾತ್ರಿ ಪ್ರವಚನ, ಅಷ್ಟಾವಧಾನ ಮೊದಲಾದ ಸೇವೆಗಳು ನಡೆದವು.

ಪ್ರಾಣಿಹಿಂಸಾ ನಿಷೇಧಕ ಮಂಡಳದವರು ಅಂದಿಗೆ, ತಮ್ಮ ವಾರ್ಷಿಕ ಪರಿಪಾಟಿಯಂತೆ, ಪ್ರಾಣಿಹಿಂಸೆಯನ್ನು ಜನರು ಮಾಡಬಾರದಾಗಿ ಮರಾಠಿ ಹಸ್ತಪತ್ರಿಕೆಗಳನ್ನು ಊರಲ್ಲೆಲ್ಲ ಹಂಚಿದ್ದರು. ಆದರೂ, ದೇವಸ್ಥಾನಗಳಲ್ಲಿ ಈ ವರುಷ ೩೦-೪೦ ಕುರಿಗಳೂ, ೪೦೦-೫೦೦ ಕೋಳಿಗಳೂ ಬಲಿಬಿದ್ದಿರುವವೆಂದು ತಿಳಿಯುತ್ತದೆ. ಸಮಾಜ

ರು ಈ ಪಂಚ್ಛೀ... ಏಕೆ ನಿರಪರಾಧಿ ಪ್ರಾಣಿಗಳನ್ನು ಕೆ ಹಿಂಸಿಸುತ್ತಾರೆಂದು ತಿಳಿಯದು.

ಮೊನ್ನೆ ಮಂಗಳವಾರ ಸಾಯಂಕಾಲಕ್ಕೆ ಇಲ್ಲಿಯ ಊರವರದೊಂದು ಜಾಹೀರ ಸಭೆಯು ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ನೆರೆಯಿತು. ಅಧ್ಯಕ್ಷಸ್ಥಾನದಲ್ಲಿ ... ನರಸಿಂಹ ಗೋವಿಂದ ಶ್ಯಾನಭಾಗರವರು ... ಕುಳಿತಿದ್ದರು. ಕೌನ್ಸಿಲು ಉಮೇದವಾರರಾದ ಶ್ರೀ ಮಂಜುನಾಥ ಭಟ್ಟ ಕರ್ಕಿಯವರು ವಿಸ್ತಾರಪೂರ್ವಕ ಭಾಷಣವನ್ನಿತ್ತು, ತಾವು ರಾಷ್ಟ್ರೀಯ ಸಭೆಯ ತರ್ಫೆನಿಂದ ಉಮೇದವಾರರಾಗಿ ನಿಂತಿರುವೆನೆಂತಲೂ, ರಾಷ್ಟ್ರೀಯ ಧ್ಯೇಯವಾದಿ ಮತದಾರರೆಲ್ಲರೂ ತಮಗೇ ಮತ ಕೊಡಬೇಕೆಂತಲೂ, ಮಾತೋಶ್ರೀದೇವತೆಯ ಸೇವ ಮಾಡಿ, ಸೋಲು ಉಂಟಾಗುವದು ಹೆಚ್ಚು ಕಷವೆಂತಲೂ ಪ್ರತಿಪಾದಿಸಿದರು. ಕಾರವಾರದ ಶ್ರೀ ಸುಬ್ರಾವ ಹಳದೀಪುರಕರರು ಮೂಲದ ಉಮೇದವಾರರ ... ನ್ನು ಪಾರಿಪಾಟದೆ ಚರ್ಚಿಸಿ, ಶ್ರೀ ಕರ್ಕಿಯವರೇ ನಮ್ಮ ಜಿಲ್ಲೆಯ ಪ್ರತಿನಿಧಿಯಾಗಲು ಯೋಗ್ಯ ಪುರುಷರೆಂತಲೂ, ರಾ॥ ಕಲ್ಯಾಣಪುರಕರ-ಕೇಶವೈನರವರು ಅವರಿಗೇ ... ಸ್ಪಷ್ಟವಾಗಿ ನಿರ್ದೇಶಿಸಿದರು. ಅಧ್ಯಕ್ಷರು ಉಪಸಂಹಾರ ಮಾಡುವಾಗ ಮತದಾರರಿಗೆ ರಾಷ್ಟ್ರೀಯ ಸಭೆಯ ವರ್ಚಸ್ಸನ್ನು ಬೆಳೆಸುವಂತೆ ಬೋಧಿಸಿದರು.

ಇಲ್ಲಿಯ 'ಹತ್ತು ಸಮಸ್ತರ' ಬಹಿಷ್ಕಾರವನ್ನು ಮನ್ನಿಸುವರು ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ ಮೊಕ್ತೇಸರಿಗೆ ವಾರ್ಷಿಕ ದೇವಕಾರ್ಯದ ಸಂಬಂಧ ನೋಟೀಸು ಕೊಟ್ಟಿದ್ದರಿಂದ, ಮೊನ್ನೆ ಮಂಗಳವಾರಕ್ಕೆ ಶ್ರೀ ದೇವಸ್ಥಾನದಲ್ಲಿ ಭಜಕರ ಸಭೆಯು ರಾ॥ ಗೋಪಾಳ ಮಂಜು ಶ್ಯಾನಭಾಗ ಅವರ ಅಧ್ಯಕ್ಷತೆಯಲ್ಲಿ ನೆರೆಯಿತು. ದೇವಕಾರ್ಯವು ಭಜಕರ ವರ್ಗಣಿಯ ಮೇಲೆ ನೆರವೇರಿಸಲ್ಪಡುತ್ತಿರುವದರಿಂದಲೂ, ಭಜಕರಲ್ಲಿ ಇತ್ತಂಡವಾಗಿರುವದರಿಂದಲೂ, ಇತ್ತಂಡಗಳಿಗೂ ಅನುಕೂಲವಾಗಬೇಕೆಂದು ನಿನ್ನಿನ ದೇವಕಾರ್ಯದ ಕೆಲಸವನ್ನು ಬಹಿಷ್ಕಾರ ಮನ್ನಿಸುವವರಿಗೆ ವಹಿಸಬೇಕೆಂತಲೂ, ಇತರರಿಗೆ ಇನ್ನೊಂದು ದಿನ ಕೊಡಬೇಕೆಂತಲೂ ಠರಾವಾಯಿತು. ಅದರಂತೆ, ರಾ॥ ಗೋಪಾಳ ಶ್ಯಾನಭಾಗರವರು ದೇವಸ್ಥಾನ ಹೊರಮಗ್ಗಲಿಗೆ ಜಾಹೀರನಾಮೆಯನ್ನು ಹಚ್ಚಿದರೆ ಗಿರ... ಬಹಿಷ್ಕಾರವನ್ನು ಮನ್ನಿಸುವವರು ನಿನ್ನಿನ ದೇವಕಾರ್ಯದ ಕೆಲಸವನ್ನು ನೆರವೇರಿಸಲಿಲ್ಲ. ಇಂದು ರಾ॥ ರಾಮಾ ಹನುಮಂತ ಶ್ಯಾನಭಾಗ ಮೊದಲಾದವರು ಜಾಹೀರನಾಮೆಯನ್ನು ಹಚ್ಚಿ 'ಹತ್ತು ಸಮಸ್ತರು' ಬಹಿಷ್ಕರಿಸಿದವರಿಗೆ ಪ್ರವೇಶಕೊಟ್ಟು, ಎಂದೂ ದೇವಕಾರ್ಯ ನಡಿಸಿದ್ದಲ್ಲಿ ಶಾಂತತಾಭಂಗವಾದೀತೆಂದು ತಿಳಿಸಿದರು.

ಶಿರವಾರ— ಕಳೆದ ೨೧ನೇ ತಾರೀಖು ಶನಿವಾರ ಸಾಯಂಕಾಲಕ್ಕೆ ಊರವರ ಜಾಹೀರ ಸಭೆಯು ರವಿ... ಪಾಠಶಾಲೆಯ ಪಟಾಂಗಣದಲ್ಲಿ ನೆರೆಯಿತು. ಸಭೆಗೆ ೫೦೦-೬೦೦ ಜನರು ಕೂಡಿದ್ದರು. ಅಧ್ಯಕ್ಷಸ್ಥಾನದಲ್ಲಿ ಮಂಗೇಶರಾವ ತೇಲಂಗರವರು ವಿರಾಜಮಾನರಾಗಿದ್ದರು. ಶ್ರೀ ಕರ್ಕಿ ಮಂಜುನಾಥ ಭಟ್ಟರು ಪ್ರಚಲಿತ ಪರಿಸ್ಥಿತಿಯ ಮೇಲೆ ಮಾಹಿತಿಪೂರ್ಣ ಭಾಷಣವನ್ನಿತ್ತರು. ...ಯಿಂದಲೇ ಭರತಖಂಡದ ಉದ್ಧಾರವಾಗುವದೆಂತ, ಖಾದಿಯ ಬಗ್ಗೆ ಜನರಲ್ಲಿರುವ ಭೀತಿಯನ್ನು ನಿವಾರಿಸಿ, ಖಾದಿಯನ್ನು ಉಪಯೋಗಿಸಲು ಉತ್ತೇಜಿಸುವದರ ಕುರಿತು ನುಡಿದರು. ಚುನಾವಣೆಯಲ್ಲಿ ... ತಾವು ಪೂರ್ಣವಾಗಿ ಲೋಕಸೇವೆಯನ್ನು ... ಅಭಿವಚನವನ್ನಿತ್ತರು. ಬಳಿಕ, ಶ್ರೀ ಸುಬ್ರಾವ ಹಳದೀಪುರಕರರವರು ಭಾಷಣ ಮಾಡಿದರು. ಕೌನ್ಸಿಲು ಚುನಾವಣೆಯಲ್ಲಿ ಜ್ಞಾತಿ, ಸ್ನೇಹ, ಸಂಬಂಧಗಳ ಮತದಾರರು ಲಕ್ಷಿಸಲಾಗದೆಂದೂ, ರಾ॥ ಕೇಶವೈನರ ರಾಜಕೀಯ ಚಟುವಟಿಕೆಯು ಜಿಲ್ಲೆಯಲ್ಲಿ ಹೆಸರಾಗಿದೆಂತಲೂ, ಅವರು ರಾಷ್ಟ್ರೀಯ ಸಭೆಯ ಸಭಾಸದರೆಂತಲೂ ನುಡಿದರು. ರಾ॥ ಕಲ್ಯಾಣಪುರಕರರವರು ಇ...

ನಮ್ಮ ಬಡದೇಶ ... ಮಾಡಿದರಿಂದಂತೆ ಅನನ್ನ ಧರಿಸದೆ ... ಖಾದಿಯನ್ನು ಧರಿಸುವವಕ್ಕೆ ಮನೋಧೈರ್ಯ...ದವರು ಕೌನ್ಸಿಲಿನಲ್ಲಿ ಹೋಗಿ ಏನು ಮಾಡುವರೆಂತಲೂ ಪ್ರಶ್ನಿಸಿದರು. ಅಂಕೋಲೆಯ ಶ್ರೀ ವಿಶ್ವನಾಥ ಪ್ರಭು ಯೋಗ್ಯ ಪುರುಷರನ್ನು ಪ್ರತಿನಿಧಿಯಾಗಿ ಆರಿಸುವ ಮಹತ್ವದ ಮೇಲೆ ಭಾಷಣ ಮಾಡಿ, ಶ್ರೀ ಕರ್ಕಿಯವರೇ ಜಿಲ್ಲೆಯ ಪ್ರತಿನಿಧಿಯಾಗಲು ಯೋಗ್ಯರೆಂದು ಪ್ರತಿಪಾದಿಸಿದರು. ಅಧ್ಯಕ್ಷರು ಕರ್ಕಿಯವರಿಗೆ ಬೇಕಾದ ಪ್ರಶ್ನೆ ಕೇಳಲು ಸಭಿಕರಿಗೆ ವಿಜ್ಞಾಪಿಸಿಕೊಂಡರು. ಯಾರೂ ಪ್ರಶ್ನಿಸಲಿಲ್ಲ. ಸಭೆಯು ವಿಸರ್ಜನ ಹೊಂದಿತು.

ರಾ॥ ವಿಶ್ವೇಶ್ವರ ಕಲ್ಯಾಣಪುರಕರರು ಅಸನೋಟಿಯ ರಾ॥ ಬಾಲಕೃಷ್ಣ ನಾಯಕರವರ ಚಿರಂಜೀವರ ಪುಣ್ಯತಿಥಿಯ ಸಮಾರಂಭಕ್ಕಾಗಿ ಮೊನ್ನೆ ಅಲ್ಲಿಗೆ ಹೋಗಿದ್ದರು. ಕೊಂಕಣ ಮರಾಠಾ ಜ್ಞಾತಿಯ ಮತದಾರರಿಂದ ಮತ ಸಂಗ್ರಹಿಸಲೆತ್ನಿಸಿದರು. ಆದರೆ, ಸಂಪ್ರದಾಯಗಳಿಲ್ಲೊಂದು ತಿಳಿಯುತ್ತದೆ. ರಾ॥ ಕೇಶವೈನರವರೂ ಮತಸಂಗ್ರಹಿಸಲು ಅಲ್ಲಿ ಹಿಂದಿದ್ದರು. ಖಾಸಗಿ ರೀತಿಯಿಂದ ಮತ ಸಂಪಾದಿಸಿ, ಮರಳಿದರೆಂದು ತಿಳಿಯುತ್ತದೆ.

ಇಲ್ಲಿಯ ಸರಕಾರಿ ನೌಕರ ಹಾಗು ಹ್ಯಾಸ್ಕೂಲಿನ ವಿದ್ಯಾರ್ಥಿಗಳು ಮಿತ್ರಸಮಾಜ ಸಭಾಮಂದಿರದಲ್ಲಿ 'ಪ್ರಾಣಘಾತಕ' ನಾಟಕದ ಪ್ರಯೋಗಗಳನ್ನು ಮಾಡಿದರು. ಮೊದಲಿನ ಪ್ರಯೋಗದ ಉತ್ಪನ್ನವು ರೂಪಾಯಿ ೨೦೦ ವಸೂರಿಗೆ ಎಸೋಸಿಯೇಶನ್ ದಾದಿಗೆ, ಎರಡನೇ ಪ್ರಯೋಗದ ಉತ್ಪನ್ನವು ರೂಪಾಯಿ ೧೫೦ ಬೊಯ್ ಸ್ಕೌಟ ಫಂಡಿಗೆ ಅರ್ಪಿಸಲಾಯಿತು.

ಸಿಂಕೇರಿ— ಇಲ್ಲಿಯ ಬಾಲಬಂಧು ಸಮಾಜದ ತರ್ಫೆನಿಂದ ನಡೆಯುತ್ತಿದ್ದ ನವರಾತ್ರಿಯಲ್ಲಿಯ ಈ ವರ್ಷದ ಶಾರದೋತ್ಸವವು ಕಳೆದ ೯-೧೦ ವರ್ಷಗಳ ಉತ್ಸವಕ್ಕಿಂತಲೂ ವಿಜೃಂಭಣೆಯಿಂದ ... ಆನಂದಾತಿಶಯದಿಂದಲೂ ಸಾಗಿತು. ದಿನಾಲು ವೇದಘೋಷ, ಪುರಾಣ, ಕೀರ್ತನ, ವ್ಯಾಖ್ಯಾನ, ಭಜನ, ಆರತಿ, ಮಂಗಲಾಷ್ಟಕಗಳಿಂದ ಇಡೀ ದೇವಾಲಯವು ಮುಮುದಮಯವಾಗುತ್ತಿತ್ತು. ಶ್ರೋತೃಸಮುದಾಯವು ಶುಕ್ಲಪಕ್ಷದ ಚಂದ್ರನಂತೆ ದಿನೇ ದಿನೇ ವೃದ್ಧಿಂಗತವಾಗುತ್ತ ನವಮಿಯ ದಿನ ಹುಣ್ಣಿವೆಯ ದಿನದ ಸಮುದ್ರದಂತೆ ಉಕ್ಕೇರಿ, ಮಹೋತ್ಸವವು ಸಾರ್ಥಕವಾಯಿತು. ಮಂಡಪವು ನಾಲ್ಕೂ ಬದಿಯಿಂದ ರಾಷ್ಟ್ರಧ್ವಜಗಳಿಂದಲೂ, ಪುಷ್ಪಹಾರಗಳ ಚಿತ್ರಗಳಿಂದಲೂ ಶೃಂಗರಿಸುತ್ತಿತ್ತು. ಶಾರದಾದೇವಿಯ ಮೂರ್ತಿಯೂ, ಮಂಟಪವೂ ಅತ್ಯಂತ ನಯನಮನೋಹರವಾಗಿತ್ತೆಂದರೆ, ಅನೇಕ ಭಕ್ತರಿಗೆ ಎರಡರ ಛಾಯಾ ಚಿತ್ರ ತೆಗೆದ ಕೊಳ್ಳದೆ ಇರುವದು ಕೇವಲ ಅಶಕ್ಯವಾಗಿ, ಎರಡು ತರದ ಛಾಯಾ ಚಿತ್ರಗಳು ತೆಗೆದು ಕೊಳ್ಳಲ್ಪಟ್ಟವು! ೨೦ ವರ್ಷಗಳೊಳಗಿನ ಆರು ಹುಡುಗರು ಸ್ವಯಂ ಜಾಹೀರಪಡಿಸಿದಂತೆ, "ಶಾರದೋತ್ಸವ ಮತ್ತು ಅದರಿಂದ ಲಾಭಗಳು" ಈ ವಿಷಯದ ಮೇಲೆ ಬರೆದು ತಂದ ಆರು ನಿಬಂಧಗಳಲ್ಲಿ ಒಬ್ಬನಿಗೆ ಉತ್ತೇಜನಾರ್ಥವಾಗಿ ಒಂದು ಪುಸ್ತಕವು ಇನಾಮು ಕೊಡಲ್ಪಟ್ಟಿದ್ದು ಒಂದು ಈ ವರ್ಷದ ವಿಶೇಷ ಸಂಗತಿಯು! ಈ ವರ್ಷದ ಉತ್ಸಾಹವು, ಹುರುಪು, ಕಾರ್ಯದಕ್ಷತೆಯೂ ಮುಂದೆಯೂ ವರ್ಷಂಪ್ರತಿ ನಡೆದರೆ, ಶಾರದಾದೇವಿಯ ಕೃಪಾಪ್ರಸಾದದಿಂದ ಯಾವತ್ತ ಭಕ್ತರ ಆತ್ಮಿಕ ತೇಜವು ಹೆಚ್ಚಾಗಿ, ಎಲ್ಲರ ಅಭ್ಯುದಯವಾಗಿ ಈ ಪುಟ್ಟ ಹಳ್ಳಿಯು ಇತರರಿಗೆ ಮಾದರಿಯದಾಗದೆ ಇರದು!

ಪಂಚಮಿಯ ದಿವಸ ಇಲ್ಲಿಯ ವೃಕ್ಷವರ ... ಮಧ್ವ ಜಯಂತಿಯ ಉತ್ಸವವು ... ಚರಿತ್ರರಿಂದ ಯುಕ್ತವಾದ ... ನಗಳಿಂದ ಸಾಂಗವಾಗಿ ಕೊನೆಗೂ ... ವಗಳು, ಧರ್ಮದ ಉಚ್ಚ ಕಲ್ಪ... ಶ್ರವಾದ್ದರಿಂದ, ಜರುಗಿದಷ್ಟು ಕ... ಮಾಡಿದರು.

ತಾ. ೧೭ನೇ ದಿವಸ ರಾತ್ರಿ ವೇ. ಭ. ಕರ್ಕಿಯವರು ವಾಚನಮಂದಿರಕ್ಕೆ ಭೆಟ್ಟಿ ಕೊಟ್ಟು ಉತ್ತಮ ಅಭಿಪ್ರಾಯವಿಟ್ಟು, ವಾಚನಮಂದಿರಕ್ಕೆ ಕೆಲವು ರೂಪಾಯಿ ದೇಣಿಗೆ ಕೊಟ್ಟಿರುವರು. ಅಂದು ಅವರ ವ್ಯಾಖ್ಯಾನವೂ ಆಯಿತು. ಜನರು ಅವರ ಜನಸೇವೆಗೆ ಮೆಚ್ಚಿರುವರು. ಅನ್ನು ಜನರು ಅವರಿಗೆ ವೋಟು ಕೊಟ್ಟು, ಅವರನ್ನೇ ಆಯಿದೆ ಕೌನ್ಸಿಲಿಗೆ ಆರಿಸಿಕೊಟ್ಟು, ತಮ್ಮ ಸಹಾನುಭೂತಿಯನ್ನು ಸಕ್ರಿಯ ರೀತಿಯಿಂದ ತೋರಿಸಬೇಕು.

ಸಿದ್ದಾಪುರ— ರಾಷ್ಟ್ರೀಯ ಶಾಲೆಯಲ್ಲಿ ತಾ ೧೬-೧೦-೩೩ನೇ ಮಂಗಳವಾರ ಶಾರದೆಯನ್ನು ಸ್ಥಾಪಿಸಿದ್ದರು. ಅಂದೇ ಶ್ರೀ ಪುತ್ತುಭಟ್ಟರು "ವೀರಬಾಹು ಮುದಕರಣ" ವೆಂಬ ಪೌರಾಣಿಕ ಕೀರ್ತನೆಯನ್ನು ಮಾಡಿದರು. ವೀರಬಾಹು ... ವನ್ನು ಹರಣ ಮಾಡುವದರ ಸಲುವಾಗಿ ತ್ಯಾಗ ದೈವಿಕ ಶಕ್ತಿಯಾದ "ಹರುದೇವಿಯು" ತ್ಯಾಗ ಜನ್ಮತಾಳಿತು ಎಂಬದನ್ನು ಚನ್ನಾಗಿ ವಿವರಿಸಿಹೇಳಿದರು. ಅಂದು ಆರತಿ ಹುಟ್ಟಲ್ಲಿ ಬಂದ ಹಣ ೦—೧೦—೯. ಶಾರದಾ ಕಮಿಟಿಗೆ ಕೊಟ್ಟರು.

ತಾ ೧೭-೧೦-೩೩ನೇ ದಿವಸ ರಾ॥ ಕಲ್ಯಾಣಪುರಕರ, ರಾ॥ ಪಾಸೂರಕರ್ (ಜಿಲ್ಲಾ ಕೊಂಗ್ರೆಸ ಕಮಿಟಿಯ ಅಧ್ಯಕ್ಷ) ರು ರಾಷ್ಟ್ರೀಯ ಶಾಲೆಗೆ ಭೆಟ್ಟಿಯನ್ನಿತ್ತರು. ಶಾಲೆಯ ಹುಡುಗರಿಗೆ ಪ್ರಶ್ನೆಗಳನ್ನು ಮಾಡಿ ಪರೀಕ್ಷಿಸಿ, ಹುಡುಗರ ಶಾರೀರಿಕ ಶಿಕ್ಷಣದ ಕೃತಿ ಆಸನೋದ, ಮಲಕಂಬ, ಆಸನ ನಾಕೋದ, ನೂಲು ತೆಗೆಯೋದ ಮುಂತಾದವನ್ನು ನೋಡಿದರು.

ಶ್ರೀ ಕರ್ಕಿಯವರು ಬಂದು ಹೋದಂದಿನಿಂದ ಎಲ್ಲಿ ನೋಡಿದರಲ್ಲಿ ಮತದಾರರು ಮತವನ್ನು ಕೊಡಬೇಕೋ ಯಾ ಕೊಡಬಾರದೋ? ಎಂದು ಚರ್ಚಿಸುತ್ತಾ, ಇರುವರು. ಮತ್ತು ಕೊಡುವದಿದ್ದರೆ ಯಾರಿಗೆ ಕೊಡಬೇಕು ಎಂದು ವಿಚಾರ ಮಾಡತೊಡಗಿದ್ದಾರೆ. ರಾ॥ ಕಲ್ಯಾಣಪುರಕರರೂ, ತಮಗೆ ಮತ ದೊರಕಿಸುವ ಸಂಬಂಧ ಸಿದ್ದಾಪುರಕ್ಕೆ, ಬೇಗಿಗೂ ಹೋಗಿಬಂದ, ತಿರುಗಿ ಇಲ್ಲಿಂದ ತಾ. ೧೮ನೇಗೆ ಸಿರ್ಸಿಯ ತರ್ಫೆವಾಗಿ ಊರಕಡೆಗೆ ಹೋದರೆಂದ ಕಾಣುತ್ತದೆ. ರಾ॥ ಕಲ್ಯಾಣಪುರಕರರೊಡನೆ ಜಿಲ್ಲಾ ಕೊಂಗ್ರೆಸ ಕಮಿಟಿ ಅಧ್ಯಕ್ಷರು ಬರುವ ಕಾರಣವೇನು?

ತಾ ೧೮-೧೦-೩೩ನೇ ಗಾಂಧೀ ದಿವಸ ಊರಲ್ಲೆಲ್ಲ ಭಜನೆ ಮೇಳದಿಂದ ತಿರುಗಿ, ರಾ. ಶಾಲೆಯ ಶಿಕ್ಷಕರು ಹಾಗೂ ಊರ ಹುಡುಗರು ರೂ. ೩-೭-೦ ಟಿ. ಸ್ವ. ಫಂಡು ಕೂಡಿಸಿರುತ್ತಾರೆ ಅಂದೇ ರಾಷ್ಟ್ರೀಯ ಶಾಲೆಯಲ್ಲಿ ಶ್ರೀ ಶಾನಗೋಡ ಸೀತಾರಾಮರಾಯರ 'ಗೃಹಸ್ಥಾಶ್ರಮದ' ಮೇಲೆ ಪ್ರವಚನವಾಯಿತು.

ಬಳಿಗೆ ಭತ್ತ ಕುಂಟಿಕೊಂಡು ಹೋಗುವ ಗಾಡಿಗಳ ಚಕ್ರದ ಚೀಲಗಳನ್ನು ಕದ್ದು ಒಯ್ಯಲಿಕ್ಕೆ ಆಡಿಕೆ ಸಮ್ಸಿನ ಹಳ್ಳದ ಹತ್ತರ ಬಂದ ಕಳ್ಳರ ಕೂಡಗೋಲು (ಕತ್ತಿ) ಶಿದ್ದಿಯಾಗಿ ವರ್ತಮಾನ ಉಂಟು. ಪೋಲೀಸರು ಅವರ ಶೋಧಕ್ಕೆ ಹಾಗಿದ್ದಾರಾಗಿ ತಿಳಿಯುತ್ತದೆ.

(ರಾಷ್ಟ್ರೀಯ ಶಾಲೆಯ ರಥಾಪವೆಯು ಮುಂದಿನ ಸಂಚಿಕೆಯಲ್ಲಿ)

ಅಂಕೋಲಾ— ಕಳೆದ ತಾ. ೧೮ನೇ ಸಾಯಂಕಾಲಕ್ಕೆ ಶ್ರೀ ಕರ್ಕಿಯವರ ಭಾಷಣವು ... ಲ್ಲಾಯಿತು. ಶ್ರೀ ವಿಶ್ವನಾಥ ಪ್ರಭುರವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಶ್ರೀ ಕರ್ಕಿಯವರು ಪ್ರಚಲಿತ ಪರಿಸ್ಥಿತಿಯ ಮೇಲೆ ವಿಸ್ತಾರಪೂರ್ವಕ ... ತ್ತರು. ಶ್ರೀ ಕರ್ಕಿಯವರು ರಾಷ್ಟ್ರೀಯ ... ರಿಂದ ಅವರಿಗೇ ಮತಕೊಡಿರೆಂದು ... ಸಿದರು.

ಭೂಮಿದೇವತಾ ದೇವಾಲಯ... ಹಳೇ ಕೋಟೆಗೆ ... ಪ್ರದೇಶವನ್ನು ... ಗಂಟೆಗಳವರೆಗೆ ... ಕ್ಕೆ ೧೦ ಅಡಿಗಳಂತೆ ಕೀರ್ತಿಯನ್ನು ಎತ್ತುತ್ತಾರೆ.

ವಕೀಲ), ಶಂಕರರಾವ ನಾಡಕರ್ಣಿ, ಸುಬ್ರಾವ ಹಳದೀಪುರಕರ ಮೊದಲಾದವರು ನೆರೆದಿದ್ದರು. ರಾತ್ರೆ ೮ ಘಂಟೆಗೆ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಶ್ರೀ ಸುಬ್ರಾವ ಹಳದೀಪುರಕರರ ಅಧ್ಯಕ್ಷಸ್ಥಾನದಲ್ಲಿ ಮತ್ತೊಂದು ಸಭೆಯಾಯಿತು.

ವೃತ್ತಸಾರ.

— ಪಂಜಾಬದಲ್ಲಿ ದೊಡ್ಡ ಚಳವಳಿ. ಸರಕಾರವು ಶಿರೋಮಣಿ ಗುರುದ್ವಾರ ಪ್ರಬಂಧಕ ಕಮಿಟಿ ಹಾಗು 'ಅಕಾಲಿ ದಾಲ' ಎಂಬ ಶೀಖರ ಎರಡು ಸಂಸ್ಥೆಗಳನ್ನು ಬೇಕಾಯದೇಶೀರ ಸಂಘಗಳೆಂದು ಜಾಹೀರಪಡಿಸಿದೆ. ಶಿರೋಮಣಿ ಕಮಿಟಿಯ ಕಾರ್ಯಕಾರಿ ಮಂಡಳದ ಸಭಾಸದ ಮೊದಲಾದ ೧೦೦-೨೦೦ ಜನರು ಸೆರೆಯಾಳಾಗಿರುವರು. ಹೊಸ ಕಾರ್ಯಕಾರಿ ಮಂಡಳವು ನೇಮಕಹೊಂದಿದೆ. ಜಲಂಧರದೊಳಗಿನ ಶೀಖ ಲೀಗಿನ ಅಧಿವೇಶನಕ್ಕಾಗಿ ಏರ್ಪಡಿಸಿದ ಸಭಾಮಂಟಪವನ್ನು ಪೋಲೀಸರು ಕಬಜೆಯಲ್ಲಿ ತಕ್ಕೊಂಡರು. ಅಧಿವೇಶನವು ಊರ ಹೊರಗೆ ಜರುಗಿತು. ಇದರಿಂದುಂಟಾದ ಪರಿಸ್ಥಿತಿಯನ್ನು ಚರ್ಚಿಸಲು ಅವಕಾಶವನ್ನೀಯುವರೆ ಪಂಜಾಬ-ಕೌನ್ಸಿಲು ಸಭಾಸದರು ತಂದ ಠರಾವನ್ನು ಅಧ್ಯಕ್ಷರು ಅಕ್ರಮವೆಂದು ಬದಿಗಿಟ್ಟರು.

— ಬೆಳಗಾಂವಿಯ ದೇಶಭಕ್ತರಾದ ಶ್ರೀ ದತ್ತೋಪಂತ ಮಜಲಿಯವರ ಖಟ್ಲೆಯ ತೀರ್ಪು ಕಳೆದ ತಾ. ೨೦ನೇ ಶನಿವಾರ ಧಾರವಾಡದಲ್ಲಿ ಆಯಿತು. ಶ್ರೀ ಮಜಲಿಯವರಿಗೆ ೬ ತಿಂಗಳ ಕಠಿಣ ಸಜೆ ಹಾಗು ೧೦೦೦ ರೂಪಾಯಿ ದಂಡ. ಶ್ರೀ ಮಜಲಿಯವರು ಶಿಕ್ಷೆಯನ್ನು ಸಂತೋಷದಿಂದ ಸ್ವೀಕರಿಸಿ, ಅಸ್ಸೀಯ ಅಪರಿಗ್ರಹ ತತ್ವಗಳಿಗನುಸರಿಸಿ ತಾವು ತಮ್ಮ ಸ್ಥಿರ-ಚರ ಸೊತ್ತನ್ನೆಲ್ಲ ರಾಷ್ಟ್ರಕ್ಕೆ ಅರ್ಪಿಸಿರುವೆನೆಂತಲೂ, ದಂಡ ತೆರದಿದ್ದರೆ, ತಮಗೆ ಹೆಚ್ಚು ಶಿಕ್ಷೆ ವಿಧಿಸಬೇಕೆಂತಲೂ ಶ್ರೀ ದತ್ತೋಪಂತರು ನುಡಿದರು. ಮಜಿಸ್ಟ್ರೇಟರು ಹೀಗೆ ಶಿಕ್ಷೆ ವಿಧಿಸಲಿಕ್ಕಾಗುವದಿಲ್ಲವೆಂದು ನುಡಿದರು. ಜನರು ಶ್ರೀ ಮಜಲಿಯವರಿಗೆ ಪುಷ್ಪಮಾಲೆಗಳನ್ನು ಅರ್ಪಿಸಹೋಗಲು, ಅವನ್ನು ಸರಕಾರ ಭಾಂಡಾರಕ್ಕೆ ಅರ್ಪಿಸಿರೆಂದು ಅಂದರು. ನುಡಿದರು. ಕಳೆದ ಸೋಮವಾರ ತಾ. ೨೨ ನೇಗೆ ಅವರನ್ನು ವಿಜಾಪುರ ಜೈಲಿಗೆ ಒಯ್ದರು.

— ಉಡುಪಿಯ 'ಸತ್ಯಾಗ್ರಹೀ' ಯ ಚಾಲಕರ ಮೇಲಿನ ಖಟ್ಲೆಯು ಕಳೆದ ತಾ. ೧೨ ನೇ ಮಂಗಳವಾರಕ್ಕೆ ಸಮಾಪ್ತಹೊಂದಿತು. ಮಾರನೇ ದಿನ, ತೀರ್ಪು ಒದಗಿಯಾಯಿತು. ಶ್ರೀ ರಾಮರಾಯರಿಗೆ ೧ ವರುಷದ ಕಠಿಣ ಸಜೆ, ಶ್ರೀ ನಾರಾಯಣರಾಯರಿಗೆ ೧ ವರುಷದ ಕಠಿಣ ಸಜೆ ಹಾಗೂ ೩೦೦ ರೂಪಾಯಿ ದಂಡ ಹೀಗೆ ಶಿಕ್ಷೆ ವಿಧಿಸಲ್ಪಟ್ಟಿತು. ಸಾಯಂಕಾಲಕ್ಕೆ ಕಾಂಗ್ರೆಸ ಕಮಿಟಿಯ ವಿದ್ಯಮಾನದಲ್ಲಿ ಅನೇಕ ಗಳಿಗೆಗಳಲ್ಲಿ ಜಾಹೀರ ಸಭೆಗೂಡಿ, ದೇಶಭಕ್ತರಿಬ್ಬರ ವಿಷಯ ಅಭಿನಂದನಪರ ಠರಾವು ಮಂಜೂರ ಆಯಿತು. ಉಭಯತರೂ ಸಂತೋಷದಿಂದ ಕಾರಾಗೃಹವಾಸವನ್ನು ಸ್ವೀಕರಿಸಿದರೆಂದು ಹೇಳಬೇಕಾಗಿಲ್ಲ.

— ರಾಜಕೋಟದ ರಾಷ್ಟ್ರೀಯ ಸಾಹೇಬರು ಮುಂಬಯಿ ಸರಕಾರದ ನಿಷೇಧವನ್ನು ಧಿಕ್ಕರಿಸಿ ಸಿಂಧನೇರಿಸಲಿಕ್ಕಿದ್ದ ಸಂಸ್ಥಾನಿಕರ ಪರಿಷತ್ತು ೧೨ನೇ ಜನವರಿಗೆ ರಾಜಕೋಟ ದಲ್ಲಿ ನೆರೆಯುವದೆಂದು ಜಾಹೀರಾಗಿದೆ.

— ಪಂಜಾಬ ಕಾಯಿದೆ ಕೌನ್ಸಿಲಿನಲ್ಲಿ ಕೋರ್ಟ ಫೀಯನ್ನು ಹಿಂಪಡೆಯಲು ಸರಕಾರವು ತಂದ ದುರುಸ್ತಿ ಕಾಯಿದೆಯನ್ನು ಕೌನ್ಸಿಲು ಬಹುಮತದಿಂದ ನಾಮಂಜೂರುಮಾಡಿತು. ಇದರಿಂದ ಇನ್ನೊಂದು ಪಂಜಾಬ ಸರಕಾರವು ಆ ಕ್ರಮವು ದುರುಸ್ತಿ ಕಾಯಿದೆ, ಪೋಲೀಸರು ತೀರಿಗೆ ಕಾಯಿದೆಯನ್ನು ಮುಂದೆ ತರಲಿಲ್ಲ.

ಶ್ರೀ [illegible]ಪುರಕರರ ಕೌನ್ಸಿಲ ಉಮೇದ್ವಾರಿ.

(ಹಿಂದಿನ ಪುಟದಿಂದ ಮುಂದರಿದದ್ದು.)

[illegible] ವ್ಯೇಯವು ಪೂರ್ಣ ಸ್ವಾತಂತ್ರ್ಯ ಎಂದು, ವಿಧಾಯಕ ಕಾರ್ಯಕ್ರಮ [illegible] ರುವರೆ ಪ್ರಯತ್ನಿಸುವ ಅತ್ಯಂತ [illegible] ರುವರೆಂದು ಪರಿಯ [illegible] [illegible]

ಸದ್ವಿವೇಕಬುದ್ಧಿಯು ನಿಜ [illegible] ಇರುವದು ಮತ್ತು ಡಾ. ಕೇಳಕರ [illegible] ಯಲ್ಲಿ ಎರಡನೇ ಪ್ರಶ್ನೆ ಉದ್ದೇಶವಾದರೂ [illegible] ಮತ್ತು ವಿಧಾಯಕ ಕಾರ್ಯಕ್ರಮವನ್ನು ಸಕ್ರಿಯವಾಗಿ ಮತ್ತು ಕೌನ್ಸಿಲಿನಲ್ಲಿ ತರುವರೇ ಪ್ರಯತ್ನಿಸುವ ರಾಷ್ಟ್ರೀಯ ಪಕ್ಷದವರೇ ಕೌನ್ಸಿಲಗಳಲ್ಲಿ ಹೋಗಬೇಕೆಂದು ಇರುವದು.

ಪ್ರಶ್ನೆ— ೩ (ಅ) ಕಾಂಗ್ರೆಸ ವಿಧಾಯಕ ಕಾರ್ಯಕ್ರಮದಲ್ಲಿ ಹಿಂದೂ-ಮುಸಲ್ಮಾನರ ಐಕ್ಯ, ಅಸ್ಪೃಶ್ಯತಾನಿವಾರಣ, ಖಾದಿ ಧರಿಸೋಣ ಇವೆ ಇರುವವಲ್ಲದೆ, ಸರಕಾರೀ ಕೋರ್ಟು, ಸ್ಕೂಲುಗಳ ಬಹಿಷ್ಕಾರ ವಗೈರೆ ಇತರ ಕಾರ್ಯಗಳು ಸಹ ಸಮಾವೇಶ ಹೊಂದಿರುವವು. ಅವುಗಳನ್ನು ಅರಿತುಕೊಳ್ಳುವ ಬಗ್ಗೆ ಸಹ ಡಾ. ಕಲ್ಯಾಣಪುರಕರರು ಪ್ರಯತ್ನ ಮಾಡಿಲ್ಲವೆಂಬಂತೆ ತೋರುತ್ತದೆ. ಮೇಲಾಗಿ, ಸದರಿ ಮೇಲ್ಕಾಣಿಸಿದ ಮೊದಲಿನ ಮೂರು ಕಾರ್ಯಕ್ರಮಕ್ಕೆ ಸಾಧ್ಯವಿದ್ದಷ್ಟರಮಟ್ಟಿಗೆ ಒರೇ ಉತ್ತೇಜಿಸುವದೆಂದರೆ ಅವುಗಳ ಪ್ರಸಾರಕ್ಕೆ [illegible] ಗ ತಗೆದುಕೊಂಡಂತೆ ಆಗುವದಿಲ್ಲ.

(ಬ) ಯಾವನಾದರೂ ಮೆಂಬರನಾಗಲಿಚ್ಛಿಸುವ ಉಮೇದವಾರನು ಹಿಂದೆ ಲೋಕಹಿತದ ಯಾವ ದಾದರೊಂದು ಕಾರ್ಯವನ್ನು ಮಾಡಿರುವನೋ ಹ್ಯಾಗೆ, ಮತ್ತು ಅದರ ಮೇಲಿಂದ ಅವನು ಮುಂದೆ ಮಾಡಬಹುದೋ ಹ್ಯಾಗೆ, ಇವನ್ನು ಅರಿತುಕೊಳ್ಳಲಿಕ್ಕೆ ಇದು ಯೋಗ್ಯವಾದ ಒಂದು ಮಹತ್ವದ ಪ್ರಶ್ನೆಯಿದ್ದು, ಇದಕ್ಕೆ ಉತ್ತರವಿಲ್ಲ.

ಪ್ರಶ್ನೆ ೪ ಮುನಸಿಪಾಲಿಟಿ, ಲೋಕಲಬೋರ್ಡ ಮೊದಲಾದ ಪ್ರಾತಿನಿಧಿಕ ಸಂಸ್ಥೆಗಳ ಒಳೆ ಶಾಸ್ತ್ರೀಕ ಜ್ಞಾನವು ಇವರಿಗೆ ಇದೆ, ಪ್ರತ್ಯಕ್ಷ ಅದರಲ್ಲಿ ಕಾರ್ಯ ಮಾಡಿ, ಅನುಭವ ಪಡಕೊಂಡಿರುವದಿಲ್ಲೆಂದು ಅವರ ಉತ್ತರದ ಮೇಲಿಂದ ಕಾಣುತ್ತದೆ.

ಪ್ರಶ್ನೆ— ೫ ಈ ಪ್ರಶ್ನೆಕ್ಕೆ ಅವರ ಉತ್ತರವು ಗ್ರಾಹ್ಯವಿದೆ. ಆದರೆ, ಮುಂದಿನ ಕಾರ್ಯಕ್ರಮವನ್ನು ಈಗಿನಿಂದ ಬೇರೆ ಬೇರೆ ಇಟ್ಟು [illegible] ವರ ಕಾರ್ಯವನ್ನು ಇದರಲ್ಲಿ ಬಿಂಬಿಸಿದ್ದರೆ ಒಳ್ಳೇದಾಗುತ್ತಿತ್ತು.

ಪ್ರಶ್ನೆ ೬ ಈ ಪ್ರಶ್ನೆಕ್ಕೆ ಅವರ ಉತ್ತರವು ಗ್ರಾಹ್ಯವಿದೆ.

ಪ್ರಶ್ನೆ— ೭ (ಅ) ಸಹಕಾರಾಂದೋಲನ ನಿರ್ಮಾಣವಾದ ಧರ್ಮನಿಂದ ಅಂಗೀಕರಿಸಿದ ನಿರ್ಣಯಿಸಿದ ಮತಕ್ಕನುಸಾರವಾಗಿಯೇ ಕೆಲಸ ಮಾಡೇನು ಎಂದು ತಾವು ಮಾಡಿದ ಕೆಲಸದ ರಿಪೋರ್ಟ ಪ್ರತಿ ಒಂದು ಸಲ ಸಾದರಪಡಿಸೇನು ಎಂಬ ಸ್ಪಷ್ಟವಾದ ಅನುಮತಿ ಸಿಕ್ಕಿರುವದಿಲ್ಲ.

(ಬ) ಕೌನ್ಸಿಲಕ್ಕೆ ಆರಿಸಲ್ಪಟ್ಟಂಥ ಲೋಕಸಿಕ್ಕವ ಮೆಂಬರರಾದರೂ ಒಂದು ಸಭೆಯನ್ನು ಕರೆದು, ಅದರ ಮತಿಯಿಂದ ಕೌನ್ಸಿಲದಲ್ಲಿ ತಮ್ಮ ಬಹುಮತವಾಗುವಂತೆ, ದೀರ್ಘ ಪ್ರಯತ್ನ ಮಾಡುವ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರವಿಲ್ಲ.

ಪ್ರಶ್ನೆ— ೮ ಕೌನ್ಸಿಲಕ್ಕೆ ಮೆಂಬರನಾದ ಪ್ರತಿ ಒಬ್ಬನು ಕೈಕರ ಅಡಚಣಿಗಳನ್ನು ತಿಳಕೊಂಡು, ಪ್ರತ್ಯಕ್ಷ ಮಾಹಿತಿ ಮಾಡಿಕೊಳ್ಳುವದಕ್ಕೆ ವರ್ಷಕ್ಕೆ ಒಂದಾವರ್ತಿಯಾದರೂ ಪ್ರತಿ ಹಳ್ಳಿಗೆ ಹೋಗಿ ಮಾಹಿತಿಯನ್ನು ದೊರೆಕಿಸುವದು ಪ್ರಾಪ್ತವಾಗುತ್ತದೆ. ಆದರೆ, ಇದಕ್ಕೆ ಡಾ. ಕಲ್ಯಾಣಪುರಕರರ ಉತ್ತರವು 'ಸಮಯ ಬಂದಷ್ಟು ಸಾರೆ' ಈ ಶಬ್ದಗಳ ಮೂಲಕ ಸಮಾಧಾನಕಾರಕವಿರುವದಿಲ್ಲ.

ಕೌನ್ಸಿಲಗಳಿಗೆ ಹೋಗಲಿಚ್ಛಿಸುವ ಪ್ರತಿ ಒಬ್ಬ ಉಮೇದವಾರನು ರಾಷ್ಟ್ರೀಯ ಪಕ್ಷದವನು ಇರುವದು ಅವಶ್ಯವದೆಯೆಂಬುವದು ನಿರ್ವಿವಾದವಾಗಿರುತ್ತದೆ. ನಮ್ಮ ಜಿಲ್ಲೆಯಿಂದೆ ನಿಂತ ಮೂವರು ಉಮೇದವಾರರಲ್ಲಿ ಡಾ. ಕಲ್ಯಾಣಪುರಕರರ ಮತವು, ಅವರ ಜಾಹೀರಪಡಿಸಿದ ಉತ್ತರಗಳ ಮೇಲಿಂದ, ಗ್ರಾಹ್ಯ ಆಗುತ್ತಿರುತ್ತದೆ. ಶಿರಸಿಯ [illegible] ಯಾವ ಪಕ್ಷದವರೂ ತಮಗೆ [illegible] ಮೊದಲೇ ಜಾಹೀರಪಡಿಸಿ [illegible] ಭಾವದ ಡಾ. ಕರ್ಕಿ ಅವರು ಅಲ್ಲಿ [illegible] ಪ್ರಕಟಿಯಲ್ಲಿ ಅವರಿಗೆ ಕೇಳಿದ ಈ ಎಲ್ಲ ಪ್ರಶ್ನೆಗಳಿಗೆ ಅವರ ಕಡೆಯಿಂದ ರಾತ್ರಿ ಸಮಾಧಾನಕಾರಕವಾದ ಉತ್ತರವು ಸಿಕ್ಕಿರುತ್ತದೆ. [illegible] ತಾವು ರಾಷ್ಟ್ರೀಯ ಪಕ್ಷದವರು ಇರುತ್ತೇವೆಂದು ಈ ಮೊದಲೇ ಜಾಹೀರಪಡಿಸಿರುತ್ತಾರೆ.

ಕಾರಣ, ಪ್ರತಿಯೊಬ್ಬ ಮತದಾರರು ಪೂರ್ಣ ವಿಚಾರ ಮಾಡಿ, ತಮ್ಮ ಅಡಚಣಿಗಳನ್ನು ಅರಿತಂಥ ಹ ಮುಂದೆ ಅರಿತುಕೊಳ್ಳಲಿಕ್ಕೆ ಪ್ರಯತ್ನ ಮಾಡಿ ನಿರ್ಭೀಡತನದಿಂದ ಕಾರ್ಯ ಮಾಡುವಂಥ ರಾಷ್ಟ್ರೀಯ ಪಕ್ಷದವರಿಗೇ ಆರಿಸಿ ಕಳಿಸಬೇಕಾಗಿ ವಿನಂತಿ ಅದೆ.

ಹಳಿಯಾಳ, ತಾ. ೨೧-೧೦-೨೩. } ಇಂತಿ ತಮ್ಮ, ಕೃಷ್ಣಾಜಿ ಶಿವರಾಮ ಮುಟಳೆ.

ಜಾಹೀರ ನೋಟೀಸು.

ಗೋದುಬಾಯಿ ಕೋಂ ಶ್ರೀನಿವಾಸ ಪುಂಡಲೀಕ ಪೈ ಸಾಕೀನ ಹೆರವಟ್ಟಾ ಇವರು ಈ ನೋಟೀಸಿನ ಮೂಲಕ ಜಾಹೀರಪಡಿಸುವದೇನಂದರೆ:— ಹೊನ್ನಾವರ ಪೋಸ್ಟ ಮಾಸ್ತರರಾದ ರಾಮಾ ವೆಂಕಟೇಶ ಪ್ರಭು ಇವರು ನಮ್ಮ ಕುಟುಂಬದ ಬಾಬತು ಶ್ರೀ ವಿಠೋಬ ದೇವಸ್ಥಾನದ ಮುಂದುಗಡೆಯಲ್ಲಿ ಸರ್ವೆ ನಂಬರ ೩೭ರಲ್ಲಿ ಇರುವ ಮನೆ ವ ಅಂಗಡಿ ಇವಾರತುಗಳನ್ನು, 'ಕಾನಡಾವೃತ್ತ' ತಾ. ೧೧-೧೦-೨೩ನೆ ಸಂಚಿಕೆಯಲ್ಲಿ ಜಾಹೀರಾತು ಕೊಟ್ಟು, ವಿಕ್ರಿಗೆ ತೆಗೆದಿದ್ದಾರೆ. ಈ ಇಮಾರತುಗಳು ನನ್ನ ಕಬಜಾದವು ಇದ್ದು, ಇವನ್ನು ಯಾವದೇ ರೀತಿಯಿಂದ ಪರಾಧೀನ ಮಾಡುವ ಯಾ ಮಾರುವ ಹಕ್ಕು ಯಾರಿಗೂ ಇಲ್ಲ. ಮೇಲ್ಕಂಡ ರಾಮ ಪ್ರಭು ಇವರು ಇಮಾರತುಗಳನ್ನು ಸತ್ಯಭಾಮಾಬಾಯಿ ಕೋಂ ನೀಲಕಂಠ ದಾಸಪೈ ಇವರಿಂದಾ ಪೋಕಳ ಕ್ರಯಕ್ಕೆ ಪಡೆದಿರುವರೆಂದು ಪವಕಿಯಲ್ಲಿ ತಿಳಿಸುತ್ತಿರುತ್ತದೆ. ಹೀಗೆ ಪರಾಧೀನ ಮಾಡುವ ಹಕ್ಕು ಸದ್ರಿ ಸತ್ಯಭಾಮಾಬಾಯಿಗೆ ಇರುವದಿಲ್ಲ. ಕಾರಣ, ಈ ಇಮಾರತುಗಳನ್ನು ಯಾರೂ ಕ್ರಯಕ್ಕೆ ಕೊಳ್ಳಬಾರದಾಗಿ ಈ ನೋಟೀಸಿನ ಮೂಲಕ ಜಾಹೀರ ಪಡಿಸುತ್ತೇನೆ. [illegible]ರೂ ನ್ನು ಮೀರಿ, ಯಾರಾದರೂ, ಯಾವದೇ ರೀತಿಯಿಂದ ಹಕ್ಕು ಮಾಡಿಕೊಂಡಲ್ಲಿ, ಸದ್ರಿ ರಾಮ ಪ್ರಭುರ ಪೋಕಳ ಕ್ರಯದಂತೆ, ಆ ಹಕ್ಕುಗಳು ನನಗಾಗಲೀ, ನನ್ನ ತರುವಾಯದ ಇತರ ಹಕ್ಕುದಾರರಿಗಾಗಲೀ ಇದರಿಂದ ಬಾಧಕವಾಗದು. ಎಂತಾ ಇವರ ಮೂಲಕ ಕಬೂಲಿಸುತ್ತೇನೆ. ಕಸ ಆ ತಾರೀಖು ೨೩-೧೦-೨೩.

☞ ಈ ಎಡ್ಡೆ ಹೆಬ್ಬೆಟ್ಟಿನ ಗುರ್ತು ಗೋದುಬಾಯಿ ಕೋಂ ಶ್ರೀನಿವಾಸ ಪೈ ಇವರದಿರುತ್ತದೆ.

ನೌಕರರು ಬೇಕು.

"ಮುಂಬಯಿ, ಪರೇಲ್, ಕಾಳಾಚೌಕಿ, ಟ್ರಾಮನಾಕೆಯಲ್ಲಿರುವ ಜಿ. ವಿ. ಕಾಮತರ ವಿಶ್ರಾಂತಿಭವನದಲ್ಲಿ ಕೆಲಸ ಮಾಡಲಿಕ್ಕೆ ಚುರುಕಾದ ಯೌವನಸ್ಥರು ಈಗಲೇ ಬೇಕು. ತಿಂಗಳಿನ ಪಗಾರ ಕೆಲಸ ನೋಡಿ ಕೊಡುವದು. ಸೇರಲಿಚ್ಛಿಸುವವರು ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ತಿಳಕೊಳ್ಳಬಹುದು."

Address— **G. V. Kamath,**
Tea-shop, Kalachowki Naka,
PAREL, *No 12, Bombay.*

ಶ್ರೀ ಹೆಡ್ ಮಾಸ್ತರರ ಹೆಡ್ಡತನ.

'ಬಡವನಿಗೆ ಭಾಗ್ಯ ಬಂದರೆ, ಮಧ್ಯರಾತ್ರಿಯಲ್ಲಿ ಕೊಡೆ ಹಿಡಿಸಿಕೊಂಡ' ಎಂಬಂತೆ ನಮ್ಮ ಊರಿನ ಇಂಗ್ಲೀಷ ಶಾಲೆಯ ಹೆಡ್ ಮಾಸ್ತರರ ಸ್ಥಿತಿಯಾಗಿದೆ. ಇವರಿಗೆ ವ್ಯವಹಾರಜ್ಞಾನವು ಸ್ವಲ್ಪವಾದರೂ, ಅಹಂಕಾರಕ್ಕೇನೂ ಕೊರತೆಯೇ ಇಲ್ಲ. ಇವರು ಅಧಿಕಾರಾರೂಢರಾದ ಕೂಡಲೆ, ಚೇರಮನ್ ಮೊದಲಾದವರನ್ನು ಶಾಲೆಗೆ ಕರೆದು, ಅಸಭ್ಯತನದ ತಮ್ಮ ಕರ್ತೃತ್ವವನ್ನು ತೋರಿದರು. ಕನ್ನಡ ಶಾಲೆಯ ಹೆಡ್ ಮಾಸ್ತರರ ಮೇಲೂ ದರ್ಪ ಬಜಾಯಿಸಿ, ಅವರ ಮುಂದೆ ತಮ್ಮ ಪಾಂಡಿತ್ಯವನ್ನು ಪ್ರಕಟಿಸಿದರು. ಶಾಲೆಯ ಮಾಸ್ತರರಿಗೆ ವೇಳಾಪತ್ರಿಕೆಯುಲ್ಲಿಲ್ಲದಿದ್ದರೂ, ತಾವು ಹೇಳಿದಷ್ಟು ಕೆಲಸವನ್ನು ಮಾಡದಿದ್ದರೆ, ದಂಡ ಮಾಡುವೆನೆಂದು ಧಮಕಿ ಕೊಟ್ಟು ನೋಡಿದರು. ಪ್ರೆಸಿಡೆಂಟರವರು ಮ್ಯುನಿಸಿಪಾಲಿಟಿಗೆ ಬರದಾಗ, ಖುರ್ಚಿಯಮೇಲೆ ಕೂಡ್ರುವಾಗಲೇ ಅವಿಚಾರದಿಂದ ವರ್ತಿಸಿ, ಕೆಲವು ಮಾತುಗಳನ್ನು ಆಡಿ, ಆಕ್ಷೇಪ ಬಂದ ಕೂಡಲೆ ಅವುಗಳನ್ನು ಮರಳ ತೆಗೆದುಕೊಂಡರು. ರಸ್ತೆಯಮೇಲೆ ಸಾಯಕಲ್ ಹತ್ತಿಕೊಂಡು ಹೋಗುವಾಗ ಒಬ್ಬ ವಕೀಲರಿಗೆ ಟಕ್ಕರ ಕೊಟ್ಟು, ಹೀಗೇಕೆ ಎಂದು ಕೇಳಲು, ನಿಮ್ಮದೇ ತಪ್ಪು ಎಂದು ಹೇಳಿ ಪಾರಾದರು. ಅಸಿಸ್ಟಂಟರು 'ಜಿ ಹುಕುಂ' ಎಂದು, ಹೇಳಿದ ಅವಿಚಾರದ ಕೆಲಸವನ್ನೆಲ್ಲ ಮಾಡಲಿಕ್ಕೆ ಸಿದ್ಧರಾಗದಿರಲು ಸಿಟ್ಟಿಗೆದ್ದು, ಖುರ್ಚಿ-ಮೇಜುಗಳನ್ನು ಅಸ್ತವ್ಯಸ್ತ ಗೊಂದಲವನ್ನೆಬ್ಬಿಸ ಹತ್ತಿದರು. ಇವೆಲ್ಲ ಸಾಮಾನ್ಯ ಸಂಗತಿಗಳಾದವು.

ಇದಕ್ಕೂ ಹೆಚ್ಚಿನ ಇವರ ಅಮಲಬಜಾವಣೆ ಎಂದರೆ— ಶಾಲೆಯಲ್ಲಿ ಒಬ್ಬ ಅಸ್ಪೃಶ್ಯ ವಿದ್ಯಾರ್ಥಿ ಇದ್ದು, ಅವನಿಗೆ ಸರಕಾರದಿಂದ ತಿಂಗಳೊಂದಕ್ಕೆ ರೂ. [illegible] ಸ್ಕಾಲರಶಿಪ್ ಸಿಗುತ್ತಿರುವದು. ಆದರೆ, 'ದೇವರು ಕೊಟ್ಟರೂ, ಪೂಜಾರಿ ಕೊಡ' ಎಂಬ ನ್ಯಾಯದಂತೆ ಹೊಟ್ಟೆಕಿಚ್ಚಿನಿಂದಲೋ ಏನೋ, ಈ ಮುಖ್ಯಾಧ್ಯಾಪಕರು ಆ ಬಡ ಹುಡುಗನ ಸ್ಕಾಲರಶಿಪ್ಪಿನ ಮೇಲೆ ಕಣ್ಣಿಟ್ಟರು. ಹೋದ ಜುಲೈ ತಿಂಗಳ ಪಗಾರವನ್ನು ಆಗಸ್ಟ ೧೮ ನೇ ತಾರೀಖಿಗೆ ಹುಡುಗನ ಕಡೆಯಿಂದ ಖಜಾನೆಯಿಂದ ತರವಾಡಿಕೊಂಡು, ೫ ತಿಂಗಳು ಗತಿಸುತ್ತ ಬಂದರೂ, ಅದನ್ನು ಆ ಹುಡುಗನಿಗೆ ಕೊಡದೆ, ತಮ್ಮಹತ್ತಿರಲಿಯೇ ಇಟ್ಟುಕೊಂಡಿರುವರಂತೆ! ಆ ಹುಡುಗನು ಕೇಳಿದರೆ, ಈಗ ಕೊಡುವದಿಲ್ಲ; ಹಿಡಿದಿಟ್ಟುಕೊಳ್ಳುತ್ತೇನೆ ಎಂದು ಹೆದರಿಸುತ್ತಾರಂತೆ! ಆದ್ದರಿಂದ ಈ ವಿಷಯವಾಗಿ ಮಾ। ಕಲೆಕ್ಟರ ಸಾಹೇಬರವರಿಗೆ ತಾರು, ಅರ್ಜಿಯೂ ಮತ್ತು ಮುನಿಸಿಪಾಲಿಟಿ, ಎ ಇನ್ಸ್ಪೆಕ್ಟರರವರಿಗೆ ಅರ್ಜಿಗಳೂ ಹೋಗಿರುವವಂತೆ. ಏನಾಗುತ್ತದೋ ನೋಡಬೇಕು.

ಶಾಲೆಯ ಶಿಪಾಯಿಯು, ಹೆಂಡತಿಯು ಮರಣಹೊಂದುವ ಸ್ಥಿತಿಯಲ್ಲಿದ್ದ ಸಮಯದಲ್ಲಿ, ಮ್ಯುನಿಸಿಪಾಲಿಟಿಯಿಂದು ರಜೆ ಪಡೆಕೊಂಡಿದ್ದನು. ಹೆಂಡತಿಯು ತೀರಿಕೊಂಡರೂ, ಬಾಗಿಲು ತೆಗೆಯುವ ಮತ್ತು ಹಾಕುವ ಕೆಲಸದ ವ್ಯವಸ್ಥೆಯನ್ನಿಟ್ಟಿದ್ದನು. ಹೀಗಿದ್ದರೂ, ಅವನಿಗೆ ಪಗಾರ ಬಂದ ಕೂಡಲೇ ೬ ಆಣೆ ದಂಡವನ್ನು ಮುರಕೊಂಡು, ಉಳಿದ ಹಣವನ್ನು ತೆಗೆದುಕೊಳ್ಳಲಿಕ್ಕೆ ಹೇಳಿದರಂತೆ! ಆದಕ್ಕೆ ಅವನು ಒಪ್ಪದೆ, ಮ್ಯುನಿಸಿಪಾಲಿಟಿಗೆ ಅರ್ಜಿ ಮಾಡಿರುವನಾಗಿ ತಿಳಿದು ಬರುತ್ತದೆ.

ಇವೆಲ್ಲದೆ, ಹುಡುಗರ ಮೇಲೆ ತಿಂಗಳೊಂದಕ್ಕೆ ೧ ಆಣೆಯಂತೆ ಜಾದಾ ಕರವನ್ನು ಹಾಕ್ತಿಸಿರುವರಂತೆ! ಶಾಲಾ ಖಾತೆಯು ಹುಕುಮಿನಂತೆ ಮ್ಯುನಿಸಿಪಾಲಿಟಿಯವರು ಪರಿಸಿದ ಫೀ ದರದೇ ಹೆಚ್ಚರುತ್ತ, ಪುನಃ ಶಾಲೆಗೆ ೧ ಆಣೆಯಂತೆ ವಿಸಿದರೆ, ಬಡವರು ಹ್ಯಾಗೆ ಕೊಡಬೇಕು? ಮೇಲಿಂದ ಫೀ ಹಣವನ್ನು ಪ್ರತಿ ತಿಂಗಳ ೨೫ ನೇ ತಾರೀಖಿನ ಒಳಗೆ ಕೊಡದಿದ್ದಲ್ಲಿ, ದಿನ ೧ ಕ್ಕೆ ॥ ಆಣೆಯಂತೆ ದಂಡವೆಂಬ ಹೊಸ ಕಾಯಿದೆ ಅಂತೆ! ಅದಲ್ಲದೆ, ವಿದ್ಯಾರ್ಥಿಗಳು ಸ್ವಂತ ಸಹಿಯ ಚೀಟಿಯನ್ನು ಕೊಡುತಕ್ಕದ್ದೆ, ಗೈರ ಹಾಜರಿ ದಿನಕ್ಕೆ ॥ ಆಣೆಯಂತೆ ದಂಡ!

ಕನ್ನಡ ಶಾಲೆಯಲ್ಲಿ ಉಚಿತ ಶಿಕ್ಷಣದ ವ್ಯವಸ್ಥೆ ಮಾಡಿರುವ ಮ್ಯುನಿಸಿಪಾಲಿಟಿಯವರಂತೂ ಇಂಗ್ಲೀಷ ಶಾಲೆಯಲ್ಲಿ ಬಡವರ ಮಕ್ಕಳ ಮಾಡಲಿಕ್ಕೆ ಪರವಾನಿಗಿಯನ್ನು ಕೊಟ್ಟಿರಲಿಕ್ಕಿಲ್ಲ. ಅದರಮೇಲೆ ಈ ಪಂಡಿತರಿಗೆ ಇಷ್ಟೆಲ್ಲ ಅಧಿಕಾರವು ಹ್ಯಾಗೆ ಬಂದಿರಬಹುದು?

ಶಿರ್ಶಿ, ತಾ। ೧೨-೧೧-೩೩	ನಿರ್ಭೀಡ

ಜಾಹೀರ ವಿನಂತಿ.

ಶಿರ್ಶಿ ಶ್ರೀ। ಮಾರೆಮ್ಮನ ದೇವಸ್ಥಾನದ ಮೊಕ್ತೇಸರರಿಗೆ—

ಮಹಾಶಯರೇ,

ಈ ವರ್ಷದ ಮಿತಿಮೀರಿದ ಮಳೆಯ ಮೂಲಕ ಘಟ್ಟದ ಕೆಳಗೂ, ದಕ್ಷಿಣ ಕಾನಡಾ ಜಿಲ್ಹೆಯ ಕಡೆಗೂ ಅಪರಿಮಿತ ಹಾನಿಯಾಗಿದೆ. ಪ್ರವಾಹದಿಂದುಂಟಾದ ಹಾನಿ ನಮಗೆ ಗೊತ್ತಿದ್ದ ಸಂಗತಿಯೇ ಆಗಿದೆ. ಹೊಲದ ಕೊಳೆ ರೋಗದಿಂದಲೂ, ಕಾಲಿ-ಕಷ್ಟದಿಂದಲೂ ತಮ್ಮ ಜೀವನಾಧಾರವನ್ನು ಸಹಿಸುತ್ತಲಿದ್ದ ಜನರ ಸ್ಥಿತಿಯಂತೂ ತೀರ ಕರುಣಾಜನಕವಾಗಿರುವದು. ಮನೆ-ಮಾಡುಗಳೂ, ದವಸ-ಧಾನ್ಯಗಳೂ, ಆಡಿಕೆ-ಅಂಚೆಗಳೂ ತೊಳೆದುಹೋದದ್ದರಿಂದ ಉಂಟಾದ ಅವರ ಗೋಳನ್ನು ವರ್ಣಿಸುವದು ಅಸಾಧ್ಯವೇ ಸರಿ.

ಹೀಗಿರುತ್ತ, ವಾಡಿಕೆಯಂತೆ ಈ ವರ್ಷ ಜಾತ್ರೆಯನ್ನು ಮಾಡಿದ್ದಲ್ಲಿ ಇಂಥ ನಿರಾಶ್ರಿತರಾದ ಬಡ ಜನರನ್ನು ಇನ್ನೂ ಹೆಚ್ಚಿನ ಸಂಕಟದಲ್ಲಿ ಹಾಕಿದಂತಾದೀತು. ಯಾಕಂದರೆ, ಶ್ರೀ ಮಾರೆಮ್ಮನ ಭಕ್ತ ಜನರಲ್ಲಿ ಇವರೇ ವಿಶೇಷವಾಗಿದ್ದು, ಪ್ರತಿ ಜಾತ್ರೆಯಲ್ಲಿ ತಮ್ಮ ಹಳೇ ಹರಕೆಗಳನ್ನೆಲ್ಲ ತೀರಿಸಲೇಬೇಕೆಂಬುದು ಅವರ ದೃಢವಾದ ತಿಳುವಳಿಕೆಯು. ಹಾಗೆ ಮಾಡಲಿಕ್ಕೆ ತಪ್ಪಿದ್ದಲ್ಲಿ, ಶ್ರೀ ದೇವಿಯು ತಮ್ಮನ್ನು ದಂಡಿಸದೆ ಬಿಡಲಿಕ್ಕಿಲ್ಲ, ಎಂಬುವೇ ಅವರ ಬಲವಾದ ಭಾವನೆಯಾಗಿದೆ. ಆದ್ದರಿಂದ, ಜಾತ್ರೆಯನ್ನು ಮಾಡಿದ್ದಲ್ಲಿ, ಹೊಟ್ಟೆ ಹೊರಕೊಳ್ಳುವದೇ ಕಠಿಣವಾಗಿರುವ ಈ ನಿರಾಧಾರಿಗಳಿಗೆ, ಬತ್ತಲೆಗೆ ಕೆರೆ, ಹುತ್ತಲೆಗೆ ಬಾವಿ, ಎಂಬಂತೆ ಆಗಿ ತಮ್ಮ ತಮ್ಮ ಹರಕೆಗಳನ್ನು ಬಿಟ್ಟುಬಿಡುವದು ಅಶಕ್ಯವಾಗಿಯು, ಮನೋರೋಗದಿಂದಲೇ ವಿಪತ್ತಿ ದುಃಖಗಳನ್ನು ಅನುಭವಿಸಬೇಕಾದೀತು. ಆದರೆ, ಜಾತ್ರೆಯನ್ನು ಮುಂದಕ್ಕೆ ಹಾಕಿದ್ದಲ್ಲಿ ದೇವಸ್ಥಾನದ ಉತ್ಪನ್ನಕ್ಕೆ ಯಾವ ರೀತಿಯಿಂದಲೂ ಹಾನಿ ತಟ್ಟುವ ಕಾರಣವಿಲ್ಲ. ಯಾಕಂದರೆ, ಒಮ್ಮೆ ಭಕ್ತಿಯಿಂದ ಹೇಳಿಕೊಂಡ ಹರಕೆಗಳು, ಇಂದಲ್ಲ ನಾಳೆಯಾದರೂ ಸಲ್ಲತಕ್ಕವೇ.

ಆದ್ದರಿಂದ, ನೆರೆಯಿಂದ ನಿರಾಶ್ರಿತರಾಗಿರುವ ಬಡ ಕಾನಡಿಗರ ಹಿತದ ಕಡೆಗೆ ಲಕ್ಷಗೊಟ್ಟು, ಈ ವರ್ಷ ಆಗಬೇಕಾದ ಜಾತ್ರೆಯನ್ನು ಮುಂದಿನ ವರ್ಷದ ವರೆಗೆ ತಡಕೂಡ ಇಡಬೇಕಾಗಿ ಪ್ರಾರ್ಥಿಸುವೆ.

ಶಿರ್ಶಿ, ತಾ। ೧೪-೧೧-೩೩.	ತಮ್ಮ, ವಿ. ಅ. ಹೆಗಡೆ.

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾದ ವಗೈರೆ ಕುರಿತು ಈ ಕೆಳಗಿನ ಪತ್ತೆಗೆ ಮುಕ್ತಾ। ಶಿಕ್ಕಿ ತಿಳಕೊಳ್ಳಬಹುದು.

ಪುರುಷೋತ್ತಮ ಲಕ್ಷ್ಮಣ ಯಾನೆ ಪಾಂಡುರಂಗ ಶೇಟ್ ಹೆಗಡೇಕರ, ದುಕಾನ [illegible] ಮಾಡಿದರು.

ಮನೆ ವಿಕ್ರಿ.

ಹೆರವಟ್ಟೆ ಪಿತೋಬ ದೇವಸ್ಥಾನದ ಮುಂದೆ ೬೩ ನೇ ಸರ್ವೇ ನಂಬರದಲ್ಲಿ ಇರುವ ಮಂಗಳೂರ ೧೬ ಅಂಕಣದ ಮನೆ, ಅದಕ್ಕೆ ತಾಗಿದ್ದ ೨ ಅಂಗಡಿಗಳೂ ಹಾಗೂ ೧೬ ಗುಂಟೆ ಹಿತ್ತಲು ಮಾರಾಟ ಮಾಡತಕ್ಕದ್ದಿದೆ. ಖರೀದಿಸ ಇಚ್ಛಿಸುವವರು ಅವನ್ನು ನೋಡಿ, ಕೆಳಗಿನ ಪತ್ತೆಗೆ ಪತ್ರವ್ಯವಹಾರ ನಡೆಸಬಹುದು.

ಆರ್. ವ್ಹಿ. ಪ್ರಭು,
ಪೋಸ್ಟ ಮಾಸ್ತರ, ಹೊನ್ನಾವರ.

ಏನೂ ಉಪದ್ರವವಾಗದೆ

ಕೂದಲು ತೆಗೆಯುವ

ಬಾದಶಾಹೀ ಸಾಬೂನು.

ಈ ಸಾಬೂನವನ್ನು ಲೋಕದಲ್ಲಿ ಹಚ್ಚಿರಿ; ಅಲ್ಲಿಯ ಕೂದಲುಗಳು, ಚರ್ಮವನ್ನು ಯಾವದೇ ರೀತಿಯಿಂದ ಕಲಂಕಿಸದೆ, ಅತ್ಯಂತ ಸಫಾಯಿಯಿಂದ ಉದುರಿಹೋಗುತ್ತವೆ. ಚರ್ಮವು ಮೃದುವಾಗುತ್ತದೆ. ೩ ಬಿಲ್ಲೆಗಳ ಕಟ್ಟಿಗೆ ೧ ರು ಬೆಲೆ ಇರುವದು. ಟಪಾಲು ಹಾಸಲು ೪ ಆಣೆ. ಒಂಟಿ ಬಿಲ್ಲೆಯನ್ನು ಕಳಿಸಲಾಗುವದಿಲ್ಲ. ೩ ೩ ಬಿಲ್ಲೆಗಳುಳ್ಳ ೪ ಪೆಟ್ಟಿಗೆಗಳ ಕಿಮ್ಮತ್ತು ರೂ ೩ ಆಣೆ ೩. ಅಂಚೆ ಹಾಸಲು ಮಾಫ. ಬಾದಶಾಹೀ ಸಾಬೂನಿನ ಉತ್ಕೃಷ್ಟತೆಯ ಬಗ್ಗೆ ಕಲಕತ್ತಾ, ಕರಾಚಿಗಳ ಪ್ರದರ್ಶನಗಳಲ್ಲಿ ಸುವರ್ಣ ಪದಕಗಳು ಇನಾಮಾಗಿ ದೊರೆತಿವೆ.

ನಕಲೀ ಮ್ಹಾಲಿನ ಬಗ್ಗೆ ಎಚ್ಚರಿಕೆ; ಮೋಸ ಹೋಗಬೇಡಿರಿ.

ರಜಿಸ್ಟರ ನಂ ೫೫೯. ತರಾಸ ಮಾಡಿಕೊಂಡು ಖರೀದಿ ಮಾಡಿರಿ. ಅಲ್ಲಲ್ಲಿ ಏಜಂಟರು ಬೇಕು.

ಸಿ. ಸಿ. ಮಹಾಜನ ಎಂಡ ಕಂಪನಿ,
ಮುಂಬಯಿ ನಂ. ೨.

ಟೀಪ:— ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಯಾ ಮರಾಠಿಯಲ್ಲಿ

कारवारांत आयुर्वेदिक पाठविद्यालय

उघडण्यांत येणार.

सन १९२४ च्या जानेवारी महिन्या पासून कारवार येथें वरील पाठशाळा उघडण्यांत येणार आहे. आयुर्वेदांतील प्रत्येक विषय प्रमाणपूर्वक व सशास्त्र शिकविण्यांत येईल. पूर्ण आयुर्वेदिक शिक्षण तीन वर्षांत शिकविलें जाईल. विद्यार्थी निदान मराठी पांच इयत्ता शिकलेला व भांडारकरकृत संस्कृत तीन पुस्तकें पठलेला असावा. [illegible] वय १८ ते १२ वर्षांपर्यंत व [illegible] असावी. [illegible] पासून सुरू होतील [illegible]

[illegible]

१२ रुपये व तिसऱ्या वर्षास दरमहा १५ रुपये प्रमाणे ठेविली आहे पहिल्या वर्षात फक्त २५ विद्यार्थीच निवडण्यात येतील विद्यार्थ्यांनीं आपले अर्ज ता १५ डिसेंबर च्या आत पाठविले पाहिजेत अर्जाबरोबर प्रवेश फीचे ३ रुपये पाठविण्यात आले पाहिजेत ज्यांची निवड होणार नाहीं त्यांची फी परत करण्यात येईल पत्रव्यवहार मराठीत अगर कानडी मध्ये करावा

प्रत्येक वर्षात शिकविले जाणारे विषय खाल ल प्रमाण —

पहिले वर्ष

१ प्रत्येक वनस्पतीचे गुण धर्मपरिचय वर्णन सख्या आणि प्रत्येक ओषधीचे अनेक भाषातील नामाहि वगैरे

२ निदान शास्त्र यात प्रत्येक रोगाचे निदान (हेतु) प्रमाण आणि नाडी (परिक्षा करण्याम) शिकविले जाईल

३ प्रत्येक निदान शास्त्रात रोग गणना आलेले विषय प्रत्यक्ष समजा वून दाखविले जातील

दुसरे वर्ष

१ प्रत्येक रोगावर [illegible] पद्धतीने चिकित्सा (उपचार) करण्यास शिकविले जाईल

२ प्रत्येक वस्तुद्रव्यादिके रसायन तत्व विचार शिकविले जातील

३ प्रत्येक रोगावर [illegible] शिकविले जातील

तिसरे वर्ष

१ आर्य शरीर शास्त्र [illegible] मज्जा तन्तु वाहिनी रक्तवाहिन्या चक्रादि प्रत्येक भागात होणाऱ्या निरनिराळ्या क्रिया प्रत्येक भागाची नावे, त्याच प्रमाणे प्रत्येक भाग चित्र रूपाने [illegible] व तेच विषय त्याना वर्णन करून [illegible] देणे वगैरे

२ प्रत्येक रोगावरील [illegible] ठरल्या पासून रसायना पर्यंत तयार करण्याचे योग आपल्यात समजा करून दाखविले जातील

३ रसायन व खनिज रसायन यांची संपूर्ण माहिती आणि प्रत्येक विषयाची [illegible] शास्त्रनिष्ठा स्पष्ट रीतीने करण्यात येईल

विशेष माहिती— खालील पत्त्यावर पत्र पाठवून समक्ष मिळेल

[illegible] उपद्व्यापी [illegible]

— [illegible] पत्ता

[illegible] व्यवस्थापक

"ಸಂಶಯಾತ್ಮಾ ವಿನಶ್ಯತಿ"

ಇಂಗ್ಲಿಷ ರೂಪಾಯಿ ೧೦೦ರಿಂದ ೫೦೦ರ ವರೆಗೆ ಗಳಿಸಿರಿ.

ಬೇಕಾದಲ್ಲಿ ಸುಲಭವಾಗಿ ಗಳಿಸಿರಿ

ರೂಪಾಯಿ [illegible] ಖರ್ಚುಮಾಡಿರಿ ಮತ್ತು ಸ್ವತಂತ್ರರಾಗಿರಿ

[illegible] ಅವಶ್ಯಕಿದ್ದ ವಸ್ತುವು ಅವನು ಬೇಕಾದರೆ [illegible] ಹಳ್ಳಿ ಗಳಲ್ಲಿ ಪಟ್ಟಣಗಳಲ್ಲಿ, ಪಾಶ್ಚಾತ್ಯ ವ್ಯಾಪಾರಿಯ [illegible] ಅತಿ ಉತ್ತಮವೆಂದು ಖ್ಯಾತಿಹೊಂದಿದೆ ಈ ಕ್ರಮದಿಂದ [illegible] ಹತ್ತುವ [illegible] ಹಾಕುವ, ಪರಿಮಳದ ಹಾಗು ಬಣ್ಣ [illegible] ತಯಾರಿಸಬಹುದು ಈ ಕ್ರಮಕ್ಕೆ ಬೆಂಕಿಯ ಅವಶ್ಯಕತೆಯಿರುವದಿಲ್ಲ [illegible] ಯತ್ನಮಾಡುವಾಗ ನಾವು [illegible] ಪ್ರೋತ್ಸಾಹಿಸುತ್ತೇವೆ [illegible] ಈ ಪೂರ್ಣ ಕ್ರಮವನು [illegible] ಈ ಕ್ರಮವು ನಿಯಮಿತ [illegible]

[illegible] ಬರೆಕೊಳ್ಳತಕ್ಕದ್ದು

International Business Corporation,

[illegible] Hyderabad. (Dn)

ಅಮೃತಾಂಜನ.

[illegible] ವಾತವೇದನೆ [illegible] ಕಳೆದ [illegible] ವರ್ಷ [illegible] ಲಕ್ಷಗಟ್ಟಲೆ [illegible] ಉಪಯೋಗಿಸುತ್ತಿರುವವು [illegible] ಕೆಮ್ಮು, ಬೇಗು, ಸಂಧಿವಾತ [illegible]

[illegible] ಪ್ರೊ. ಪ್ರೋಟ್, ಮುಂಬಯಿ

[illegible] ಸಂಪತ್ತಿಯು



ಅದಕವಾಗಿರುವದು

[illegible] ತಯಾರಾಗ [illegible]



ಕಿರ್ಲೋಸ್ಕರ [illegible]

[illegible] (ಸಾತಾರಾ)

Reg. No. B 1276. | Thursday, 1st November 1928.

ವರ್ಷ ೬.

ಪತ್ರದ ವರ್ಗಣಿ

ಕುಮಟೆಯಲ್ಲಿ ಒಂದು ವರ್ಷಕ್ಕೆ ರೂಪಾಯಿ 2 4 0

ಮನೆಯಾರ್ಡರಿಯಿಂದ ರೂ 3-0-0

ವ್ಹಿ ಪಿ ಅ ಚವೆಷ್ಟ ಸೇರಿ ರೂಪಾಯಿ 3 2-0

ಬಿಡಿ ಸ ಚಿಕೆಗೆ 0-1-0

ಕಾನಡಾವೃತ್ತ.

THE KANARA NEWS.

ಸಂಚಿಕೆ ೨.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಮ್ಯಾಕ್ಯಾಪಿನ (೧೫ ಎರ್ ಉದ್ದ) ೮ ಸಾಲುಗಳವರೆಗೆ ರೂ 1 0-0

ಆ ನಂತರ ಪ್ರತಿಸಾಲಿಗೆ 0-2 0

ಹೆಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟುಸಾಲುಗಳು ಹಿಡಿಯಲ್ಪಡುವವು

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೧ ಮಾಹೆ ನವಂಬರ ಸನ್ ೧೯೨೮ ನೇ ಇಸವಿ)—

हिंदुस्थानातील रहिवाशास त्याप्रमाणे हिंदुस्थानची हवा त्याप्रमाणेच हें औषध हिंदुस्थानातील लोकास ज्यास्त फायदेशीर आहे

द्राक्षासव- { द्वीड रतलचा किंमत १ रुपया

रामबाण औषधे

सर्दि घालविणारे,
भूक वाढविणारे,
शौच्यास साफ करणारे,
झोप आणणार,
शक्ति देणारें,
तेजस्वीपणा आणणारे,

पिण्यास रुचिकर

हिंदुस्थान मागवा,

**अंडो... स्युटिकलवर्क्स लिमिटेड,
मुंबई नं. १३**

GLAXO:- FRESH STOCK NEW BRAND a *food for infants and invalids*

Kalmegh :- *Well-tried remedy in Liver complaints especially of children*

Syrup of Vasaka :- *Highly efficacious in cold, cough crough and bronchitis.*

Besides we have in stock other patent medicines Thermometres, Glycerine Syringes etc.

Orders will be executed by V P. P

The New Emporium

Honavar. (N. Kanara)

ಡಾ| ನಾಗಸೂರಕರರ

ಸುಧಾಂಜನ.

ಅಂಜನುಗಳಿಗೆಲ್ಲ ಅರಸು.

ತಲೆಶೂಲಿ ನಂತ ವೇದನೆ, ಕಮ್ಮು ಹಲ್ಲಿನೊವು ಇತ್ಯಾದಿಗಳಿಗೆ ಕ್ಷಿಪ್ರ ಗುಣಕಾರಿ ಮದ್ದು ಬೆಲೆ 2 ಆಣೆ ಮಾತ್ರ ವ್ಯಾಪಾರಿಗಳಿಗೆ ವಿಶೇಷ ಸವಲತ್ತು ಹೆಚ್ಚಿನ ಮಾಹಿತಿ ಏಜಂಟರಿಂದ

ಏಜಂಟ್ಸ — **ನಾಗರ್ಕಟ್ಟಿ ಬ್ರದರ್ಸ್,**

ಸುಧಾಂಜನ ಡಿಪೋ

ಕುಮಟಾ. (ಜಿಲ್ಹಾ ಕಾನರಾ)

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ ಸಮಾಜಿಕ, ರಾಜಕೀಯ, ವಿಷಯುಗಳನ್ನೂ ಚರಿತ್ರೆ ಕಥೆ ಕಾದಂಬರಿಗಳನ್ನೂ ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯು ಅಲ್ಪ ಬೆಲೆಯ ಗ್ರಂಥಮಾಲೆ ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ

ಈ ವರೆಗೆ ಪ್ರಕಟವಾದ ಪುಸ್ತಕಗಳು.

(೧ ೨) ಗ್ರೀಸ ದೇಶದ ಗಂಧಿ (ಸಾಕ್ರೆಟಿಸ) (೩) ಸ್ವಾತಂತ್ರ್ಯಸಾಧನೆ (೪) ಗುರು-ಹಿರಿಯರೂ, ಬಂಧು-ಭಗಿನಿಯರೂ (೫) ರಾಷ್ಟ್ರೀಯ ಶಿಕ್ಷಣ (೬) ಸಮಣಮಂದಿರ (ಭಾಗ ೧) (೭) ಸ್ವರಾಜ್ಯ ಧರ್ಮ (ಇನಾಮಿನ ಪುಸ್ತ) ಇವಿಷ್ಟು ಪ್ರಕಟವಾಗಿದ್ದು, ೫ ಆಣೆಗೆ ೬ ಪರಂತೆ ದೊರೆಯುತ್ತವೆ ವರ್ಗಣಿದಾರರಿಗೆ ೬ ದಿನ ಬೇರಾದ ಪುಸ್ತಕಗಳು ೪ ಆಣೆಗೆ ಒಂದರಂತೆ ದೊರೆಯುವವು ೬ ಪುಸ್ತಕಗಳಿಗೆ ಕೂಡಿ ೧। ರೂಪಾಯಿ ಮಾತ್ರ ಅಂಚೆವೆಚ್ಚ ಬೇರೆ. ದ್ವಿತೀಯ ವರ್ಷ ಪ್ರಾರಂಭ, ಅನುಕ್ರಮವಾಗಿ ಮಾರ್ಚ, ಮೇ, ಜುಲೈ, ಸಪ್ಟಂಬರ ನವಂಬರ, ಜನವರಿ ೧೫ ನೆ ತಾರೀಖಿಗೆ ಒಂದೊಂದು ಪುಸ್ತ ಹೊರಡುವದು. ವ... ಅಂಚೆವೆಚ್ಚ ಸೇರಿ ೧-೧೦-೦ ಮಾತ್ರ

ವಾ ... ಮಾಡಿದರು ...

ರಾಷ್ಟ್ರೀಯ ...

ಎಲ್ಲ ತರದ ಜ್ವರಗಳಮೇಲೆ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ ಶೈತ್ಯ ಬಂಗಲಿ, ಅಥವಾ ದೂಷಿತ ಹವೆಯಿಂದ ಬರುವ ಸಾದಾ ವಿಷಮ ಅಥವಾ ಇತರ ಜ್ವರಗಳೂ, ಇನಫ್ಲುಎಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನ್ಯಾಯದ ದುಷ್ಪರಿಣಾಮರಹಿತ ಕೇವಲ ವನಸ್ಪತಿಯು ಈ ಮದ್ದು ಸೇವಿಸಿದರೆ ಅಶಕ್ತತೆಯಾಗದೆ, ಬೆವರು ಬಂದು ಜ್ವರ ಇಳಿಯುತ್ತದೆ ಹಾಗು ರೋಗಿಯು ತರಿತ ವಾಸಿಯಾಗುತ್ತಾನೆ

ದೊಡ್ಡ ಬಾಟ್ಲಿ ಕಿಂಮತ ರೂ ೧-೦-೦

ಇದರ ಹೊರತು ಇನ್ನೂ ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ, ಉಚ್ಚ ಪ್ರತಿಯ ಕೋಲನ ವೊಟರ ಲವೆಂಡರ ಇತ್ಯಾದಿ ಸಾಮಗ್ರಿಗಳು ಅಲೆಂಬಿಕದ ಕಾರಖಾನೆಯಲ್ಲಿ ತಯಾರಾಗುತ್ತವೆ ಮಾಹಿತಿ ಕೇಳಲಾಗು ತರಿಸಿರಿ

ಅಲೆಂಬಿಕ್ ಕೆಮಿಕಲ್ ವರ್ಕ್ಸ,

ಕಂಪನಿ, ಲಿಮಿಟೆಡ್.

ನಂ ೫೦ ಪ್ರಿನ್ಸೆಸ್‌ಸ್ಟ್ರೀಟ ಮುಂಬಯಿ

**अलेंबिक केमिकल वर्क्स कं० लिं०
नं. ५० प्रिन्सेस स्ट्रीट मुंबई.**

ಶುದ್ಧ ಖದ್ದರ್ ರೇಶ್ಮಿ ಮಡಿಗಳು.

ಸುಲಭ ಕ್ರಯಕ್ಕೆ ಖಾತ್ರಿಯಾದ ಎಲ್ಲಾ ರಂಗುಗಳಲ್ಲಿಯೂ ಈ ಕೆಳಗೆ ಬರೆದ ಕ್ರಯಕ್ಕೆ ದೊರೆಯುವದು

೧೮ ಮೊಳ ಉದ್ದ	೨॥ ಅಗಲ	ರೂ	೨೩	ರಿಂದ	೨೫	ವರೆಗೆ
೧೬	,,	೨॥	,,	೨೦	—	೩೦ ,,
೮	,,	೨॥	,,	೯	—	೧೫ ,,
೬	,,	೨॥	,,	೭	—	೧೧ ,,

ಅಂಗಿ ಬಟ್ಟೆಗಳು ೧೮ ಮೊಳ × ... ಮೊಳ ರೂಪಾಯಿ ೧೮ ರಿಂದ ೩೦ವರೆಗೆ ... ಪೇಟ ೧೨ ಮೊಳ × ೧॥ ... ಅಗಲ ರೂಪಾಯಿ ೧೦ರಿಂದ ೨೫ ... ಜೀನ್‌ಶಾನ್ ೧೪ ಮೊ... ಮೊಳ ರೂ ೨೪ ರಿಂ... ಇವುಗಳಲ್ಲದೆ ... ಕಾಟ್ಟರ್ ಶಾಲು ರುಮಾಲು, ಜಾಗೆಂ... ದಾನಿ, ಆಟದ ಸಾಮಾನುಗಳು, ... ಪ್ರದೇಶವನ್ನು ... ಒ... ಅಕ್ಕಿಗೆ ... —... ಗಳನ್ನು ... ೧೦ ... ತರಿಸಿಯಲ್ಲ ...

... ಎಷ್ಟು ...

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ (ರಿಜಿಸ್ಟರ್ಡ)

ಚೆಲುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ, ನಿಬಿಡವಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ,

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತ್ತದೆ ಈ ಆಯಿಲ್ ತೊಡೆದುಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ಕೊಡಯ ತೊಡಗಿದ ಬಳಿಕ ಎಂದಿಗೂ ಉಗುಳಿ ಬಿದ್ದು ಹೋಗಲಾರವು, ಆದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯು ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ "ಸರ್ಟಿಫಿಕೇಟ ಒಫ್ ಮೆರಿಟ" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ — ಸೀಸೆಗೆ ರೂಪಾಯಿ 1 0 0. ಸೀಸೆ 3ಕ್ಕೆ ರೂಪಾಯಿ 2-10-0, ವಿ.ಪಿ. ಖರ್ಚ 0 1 4 0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಆಸ್ವಾಕ್ತವೂ ಚನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ಘಟಿಸಿದ ವಾದುದು ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ಒಟ್ಟೆಯಲ್ಲಿ ಅಥವಾ ಅಂಗಿದಲ್ಲಿ ಈ ದ್ರವ್ಯದ ಕೆಲವು ತಟಕುಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು ಒಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0, 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0-12-0, ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0 ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 1 2 0.

Address - **The Anglo Indian Drug & Chemical Co**

16, Market, **BOMBAY. 2**

ಆರೋಗ್ಯಚಂದ್ರಿಕೆ.

ಈ ಪತ್ರಿಕೆಯ ಸಂಪಾದಕರು ಮದ್ರಾಸಿನ ಡಾಕ್ಟರ್ ಯು. ರಾಮರಾವ್, ಎಮ್. ಎಲ್. ಸಿ. ಯವರು. ಈ ಆರೋಗ್ಯ ಮತ್ತೂ ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೂ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ

ಒಂದು ಸಚಿತ್ರ ಮಾಸಪತ್ರಿಕೆ

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ

ಆರೋಗ್ಯಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು

ಹೆಲ್ತ ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯು ... ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ... ಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರ... ಪ್ರಥಮ ಸಂಚಿಕೆಯು ಈ ತಿಂಗಳಲ್ಲಿ ಪ್ರಕಟವಾ...

...ಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬ... ರೂಪಾಯಿ ೧—೮—೦ ಬಿಡಿ ಪತ್ರಿಕೆ ... ಹುವದು ಲಾಭಕರ

ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸು ವರು ಆರೋಗ್ಯಚಂದ್ರಿಕೆ'ಗೆ ಎಂದ ಸ್ಪಷ್ಟವಾಗಿ ಬರೆದ ತಿಳಿಸಬೇಕು ಪತ್ರವ್ಯವಹಾರ ವಿಳಾಸ —

ಮೆನೇಜರ್,

'ಹೆಲ್ತ್' ಅಥವಾ

'ಆರೋಗ್ಯಚಂದ್ರಿಕೆ' ಆಫೀಸ.

೩೨೩, ತಂಬುಶೆಟ್ಟಿ ಬೀದಿ, ಮದರಾಸ್.

ಮೂರ್ತಿಗಳು ಬೇಕೋ?

ನಮ್ಮಲ್ಲಿ ಬಂಗಾರ, ಬೆಳ್ಳಿ, ಪಂಚಧಾತು, ಹಿತ್ತಾಳಿ, ತಾಮ್ರದ ಕರೆಕಲ್ಲಿನ ಮೂರ್ತಿಗಳೂ, ಇದಲ್ಲದೆ ಬಾಣಲಿಂಗಗಳೂ, ಪ್ರಭಾವಳಿಗಳೂ, ಈಶ್ವರ ಮುಖವಾಟಗಳೂ, ನಾಗಾಭರಣಗಳೂ, ಕವಚುಗಳೂ ಮ ಯಾವದೇ ತರದ ಪ್ರತಿಮೆಗಳೂ ನಮ್ಮಲ್ಲಿ ಯೋಗ್ಯ ದರಕ್ಕೆ ವ ಯೋಗ್ಯ ಹೊತ್ತಿಗೆ ಮಾಡಿ ಕೊಡಲ್ಪಡುವವು. ಬೇಕಾದವರು ಪತ್ರವ್ಯವಹಾರ ಮಾಡಿ ಯಾವನುಕ್ಕ ಬಂದು ದರವ ತಿಳಕೊಳ್ಳಬಹುದು.

ಸತ್ಯ ನಾರಾಯಣ ಹುವಯ್ಯ ಶೇಟ್ಟಿ,

...ರ, ಗುಜರಗಲ್ಲಿ, ಕುಮಟಾ

(ಉ. ಕಾನಡಾ)

ರಾಗದ ಪೆಟ್ಟಿಗೆ...

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧. ರಾಗದ ಕೈಪೆಟ್ಟಿಗೆ ಕಿಂ ೩೦, ೪೦, ೪೫, ೫೦, ...

೨. „ ಕಾಲು ಪೆಟ್ಟಿಗೆ ಕಿಂ ೬೫, ೭೫, ೧೪೦, ೧...

೩. ತಬಲೆ ಜೋಡಿ ಕಿಂ. ೧೨, ೧೫, ೧೮ ೨೦

೪ ಹಾರ್ಮೋನಿಯಮ ಗ್ಯಾಡ ಕಿಂ ೧೧, ತಬಲೆ ... ಡ ಕಿಂ. ೧೨ ಆ

ವಿಶೇಷ ಮಾಹಿತಿ ಬಗೆ ನಮ್ಮ ಕ್ಯಾಟಲಾಗ ಪ್ರ... ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇದ್ದರೆ ... ಗ್ರಹಿಯದ ಮಾಡಬೇಕು.

ಪತ್ತೆ :— ಗೋಪಾಳ ಸಖಾರಾಮ ...

ಕಂಪನಿ, ನಂ ...

ಕಾಳಬಾದೇವಿ ರೋಡ, ಮುಂಬಯಿ

ಜಾಹೀರ [illegible] ಟೀಸಿಗೆ ಉತ್ತರ.

'ಕಾನಡಾವೃತ್ತ'ದ ತಾರೀಖು ೨೫–೧೦– ಸಂಚಿಕೆಯಲ್ಲಿ ಗೋದುಬಾಯಿ ಕೋಂ ಶ್ರೀನಿವಾಸ ಪ್ರಭು ವಕೀಲ ಇವರು ಕೊಟ್ಟ ಜಾಹೀರ ನೋಟೀಸು ನಾನು ಓದಿರುತ್ತೇನೆ. ಸದ್ರಿ ಗೋದೂಬಾಯಿಗೆ ನನ್ನ ಕ್ರಯ ವಸಾಲ್ಕಿಯು ಸ. ನಂ ೩೭ರಲ್ಲಿರುವ ಮನೆ ವ ಅಂಗಡಿ ಮೇಲೆ ಈಗ ಯಾವ ಶಾಶ್ವತ ಹಕ್ಕೂ ಇರುವದಿಲ್ಲ. ಅವಳಿಗೆ ಏನಾದರೂ ಹಕ್ಕು ಇದ್ದ ಪಕ್ಷಕ್ಕೂ ಅವಳು ಈ ಮೊದಲೇ ಕಳಕೊಂಡಿದ್ದಾಳೆ. ಕಾರಣ, ಪರರ ಮರ್ಬೋಧನೆಗೆ ಒಳಗಾಗಿ ಸದ್ರಿ ಬಾಯಿಯವರು ನನ್ನ ಹಕ್ಕಿನ ಮನೆ ವ ಅಂಗಡಿಯನ್ನು ಮಾರಾಟ ಮಾಡುವದಕ್ಕೆ ಆತಂಕ ಮಾಡಿ ನನಗೆ ಲುಕ್ಸಾನ ಪಡಿಸಬೇಕೆಂಬದೊಂದೇ ಅವರ ಹೇತುವೆಂದು ಸ್ಪಷ್ಟವಾಗುತ್ತದೆ. ನಾನು ಕಾನಡಾವೃತ್ತದಲ್ಲಿ ತಾ ೧೧–೧೦–೩೩ನೇ ಸಂಚಿಕೆಯಲ್ಲಿ ಕೊಟ್ಟ ಜಾಹಿರಾತ ಪ್ರಕಾರ ಸದ್ರಿ ಮನೆ ವ ಅಂಗಡಿಯನ್ನು ಕ್ರಯಕ್ಕೆ ತಕ್ಕೊಳ್ಳಲಿಚ್ಛಿಸುವವರಿಗೆ ಈ ಗೋದೂಬಾಯಿಗೆ ಏನೂ ಹಕ್ಕು ಇಲ್ಲೆಂಬದನ್ನು ಕಾಗದ ಪತ್ರ, ಕೋರ್ಟ ಡಿಕ್ರಿ ವಗೈರೆಗಳ ಮೇಲಿಂದ ಸಮಾಧಾನ ಮಾಡುವದಕ್ಕೆ ಸಿದ್ಧನಿದ್ದೇನೆ.

ತಾ ೨೮–೧೦–೧೯೩೩

ಆರ್. ವ್ಹಿ. ಪ್ರಭು,
ಪೋಸ್ಟ ಮಾಸ್ತರ, ಹೊನ್ನಾವರ.

ಕಾಡಿನ ಸುರಾಜ್ಯ.

ಹೊನ್ನಾವರದೊಳಗಿನ ಸಭೆಯ ಹಕೀಕತು.

ಕಳೆದ ತಾ ೨೧ನೇ ರವಿವಾರಕ್ಕೆ ಹೊನ್ನಾವರದಲ್ಲಿ ಬೇಸಾಯಗಾರರ [illegible] ತೋಟಗಾರ ಒಂದು ಸಭೆಯಾಯಿತು. ಈ ಸಭೆ [illegible] ಕೇಸ್ಸ ಜನಾಬ ಮುಕ್ರಿ ಲೇಖದ ಅಧ್ಯಕ್ಷತೆಯಲ್ಲಿ ಸರಕಾರವು ಪ್ರಜೆಗಳಿಗೆ ಹಂಚಿಕೊಟ್ಟ ಬೆಟ್ಟದ ಕ್ಷೇತ್ರದ ಚರ್ಚೆ ನಡೆಯಿತು. ಇದರ ತಾತ್ಪರ್ಯವೇನಂದರೆ:—

೧೯೩೦ ನೇ ಇಸ್ವಿಯ ಸಪ್ಟಂಬರ ೨೧ ನೇಗೆ ಹೊರಡಿಸಿದ ಪ್ರಕಟಣೆಯಂತೆ ಪರ್ಯಾಡಿಸಿದ ಗುಂಪಿನ ಪದ್ಧತಿಯು ಮೊದಲಿನ ಪದ್ಧತಿಗಿಂತ ಪ್ರಗತಿಪರವಿದೆ. ಆದರೂ ಅದರಿಂದ ಬೇಸಾಯಗಾರರಿಗೆ ವ್ಯವಹಾರದಲ್ಲಿ ಲಾಭವಾಗುವದಿಲ್ಲ. ಒಕ್ಕಲಿಗರಿಗೆ ಕಾಡುಗಳಿಂದ ಪಡೆಯುವ ಸವಲತ್ತುಗಳು ಮಾತ್ರ ಮುಂಚಿನಂತೇ ಇವೆ. ಬಾಕಿ ತೋರಿಕೆಯ ಪ್ರಗತಿಯು ಮಾತ್ರ ಸಂಪೂರ್ಣವಿದೆ. ಇಷ್ಟೇ ಅಲ್ಲ ಕೆಲ ಪ್ರಸಂಗಗಳಲ್ಲಿ ಹೊಸ ಯೋಜನೆಯು ಹಿಂದಿನ ಬದಿಗೆ ಪ್ರಗತಿ ಮಾಡಿದೆ.

(೧) ಈಗ ತರಿ ಹಾಗು ಬಾಗಾಯತುಗಳಿಗೆ ವಿಂಗಡಿಸಿಕೊಟ್ಟ ಕ್ಷೇತ್ರವು, ಸಾಧಾರಣ ೧ ಎಕ್ರೆಯಿಂದೇ ಹೇಳಬಹುದು. ಈ ಕೆಳಗಿನಂತೆ ಕಾದಿಟ್ಟ ಬೆಟ್ಟವನ್ನು ವಜಾ ಕಳೆಯಬೇಕು (ಅ) ಹೊಸ ಹಾಗು ಹಳೇ ಸಾಗವಾನಿ ಮರಗಳಿದ್ದ ಕ್ಷೇತ್ರ, (ಬ) ಈಗ ನಡೆಯುವ ಉರುವಲ ಡಿಪೋಗಳಿಗಾಗಿ ಕಾದಿಟ್ಟ ಕ್ಷೇತ್ರ, (ಕ) ಮಾನವರ ಪ್ರವೇಶಕ್ಕೆ ಅಸಾಧ್ಯವಾದ ಕ್ಷೇತ್ರ. (ಡ) ಕಂಟಿ ಮೊದಲಾದ ದುರ್ಬೀಜಗಳ ಕ್ಷೇತ್ರ, ಇವೆಲ್ಲ ಕಳೆದು ಎಕ್ರೆಗೆ ೧೦ ಗುಂಟೆ.

(೨) ಬಾಕಿ ಉಳಿದ ೩೦ ಗುಂಟೆಗಳಲ್ಲಿ ಸರಿಯಾಗಿ ೫ ಭಾಗಗಳನ್ನು ಮಾಡಿ, ಆರಾರು ಗುಂಟೆ ಕ್ಷೇತ್ರದ ಪ್ರದೇಶ ಒಂದನ್ನು ಅನುಕ್ರಮವಾಗಿ ೬ ವರುಷಗಳವರೆಗೆ ಉಪಯೋಗಿಸತಕ್ಕದ್ದು.

(೩) ಈ ಆರು [illegible] ಕ್ಷೇತ್ರದಲ್ಲಿ ಸಾಗು ಹೊದಿಸಿದ ೬ ಜಾತಿಯ ಮರಗಳು ಕಾದಿಡಲ್ಪಟ್ಟವೆ. ೯ ಜಾತಿಯ ಮರಗಳು ಪರವಾನಗಿ ಕೊಂಡು ಕಡಿಯಬೇಕೆಂದು ಅಪ್ಪಣೆ ಇದೆ. ಉಳಿದ ಮರಗಳನ್ನೆಲ್ಲ ಉಚಿತವಾಗಿ ಕಡಿಯಬಹುದೆಂದು ಅಪ್ಪಣೆಯಾಗಿದೆ. ಹಲಸು, ಸಂಪಿಗೆ, ಹೊನ್ನೆ, ಮೊದಲಾದ ಮರಗಳು ಉಚಿತ ಬಯ್ಯುವಂಥವು. ಇವು ಈ ಕ್ಷೇತ್ರದಲ್ಲಿ ಸಿಗುವದಿಲ್ಲ. ಹಂಗಾರಕ, ಬೂರಲ, ಅತ್ತಿ ಮೊದಲಾದವು ಸಿಗುತ್ತವೆ. ಆದರೆ ಇವು ಬೇಸಾಯಗಾರರಿಗೆ ಉಪಯೋಗವಾದಂಥವು ಸಿಗುವದಿಲ್ಲೆಂದು ಬೇಸಾಯಗಾರರು ಸ್ವಾನುಭವದಿಂದ ಅರಿತಿರುವರು.

(೪) ಬಿಲ್ಲಂಬಿ, ಹೊನಗಲ, ಜುಂಬೆ, ಸಾಗಡಿ, ಈ ಮರಗಳು ಸಿಕ್ಕಿದ್ದರೆ, ರೈತರಿಗೆ ಬಹಳೇ ಅನುಕೂಲ, ಆದರೆ, ಇವು ಬೇಕಷ್ಟು ಇರಲಿ, ಸಾಕಷ್ಟು ಸಹ ದೊರಕುವದಿಲ್ಲ.

(೫) ಗಿಡಗಂಟಿಗಳನ್ನು ಸವರಿಸಲು ಅಪ್ಪಣೆ ಇಲ್ಲ. ಅವುಗಳನ್ನು ಸವರಿಸಗೊಟ್ಟರೆ ದುಷ್ಟ ಬೇಸಾಯಗಾರರು ಗೊಬ್ಬರಗಳಿಗಾಗಿ ದೊಡ್ಡ ದೊಡ್ಡ ಮರಗಳಾಗುವ ಸಣ್ಣ ಸಸಿಗಳನ್ನು ಕಡಿದು, ಬೆಟ್ಟಗಳನ್ನು ನಾಶ ಮಾಡುವರೆಂಬ ಭೀತಿ. ಮರಗಳಾಗಿ ಬೆಳೆಯುವ ಗಿಡಗಳಲ್ಲಿ ಸಸಿಗಳನ್ನು ಬೇಸಾಯಗಾರರು ಗಿಡಗಂಟಿಗಳೆಂದು ಕಡಿಯುವ ಭೀತಿಯು ನಿರಾಧಾರವು. ಯಾಕಂದರೆ, ಮರಗಳಾಗಿ ಬೆಳೆಯುವ ಸಸಿಗಳಲ್ಲಿ ಗೊಬ್ಬರಕ್ಕೆ ಅವಶ್ಯವಿರುವ ಪೈತಸ್ಯವಿರುವದಿಲ್ಲ.

(೬) ಬೇಸಾಯಗಾರರು ಕಾಡನ್ನು ನಿರರ್ಥಕವಾಗಿ ಹಾಳುಗೆಡಹುತ್ತಾರೆಂದು ಗ್ರಹಿಸಿ ಹಿಡಿದ, ಸರಕಾರವು ಉರುವಲ ಕಟ್ಟಿಗೆಯ ಡಿಪೋ ಪದ್ಧತಿಯನ್ನು ವಿಸ್ತರಿಸುವರೆ ಯೋಚಿಸಿರುವದು. ಈ ಯೋಜನೆಯಿಂದ ಈಗಿನ ಪರವಾನಿಗೆ ಪದ್ಧತಿಯು ಕ್ರಮವಾಗಿ ಲೋಪವಾಗುವದು. ಡಿಪೋ ಪದ್ಧತಿಯು ವಿಸ್ತಾರ ಹೊಂದಿದಂತೆ, ವಿಂಗಡಿಸಿಕೊಟ್ಟ ಬೆಟ್ಟದ ಕ್ಷೇತ್ರದೊಳಗಿಂದ ಕಾದಿಡುವ ಡಿಪೋ ಕ್ಷೇತ್ರವು ವೃದ್ಧಿಯಾಗುವದು. ಮೇಲಿನ ಲೆಕ್ಕದಂತೆ ೬ ಗುಂಟೆ ಕ್ಷೇತ್ರವೂ ಬೇಸಾಯಗಾರರಿಗೆ ಸಿಗದು.

(೭) ಸರಕಾರವು ಬೆಲ್ಲ ಮಾಡುವ ಕ್ರಮವನ್ನು ಬಿನ್ ಶೇತಕಿಯೆಂದು ಆಚ್ಚ ಹೊಡೆದದೆ. ಇದರಿಂದ ಬೆಲ್ಲ ಮಾಡುವ ಬೇಸಾಯಗಾರರು ಆವಿಗೆ ಅವಶ್ಯವಿರುವ ಕಟ್ಟಿಗೆಯನ್ನು ದೂರ ದೂರದ ಡಿಪೋಗಳಿಂದಲೇ ತರಬೇಕಾಗುವದು. ಪರವಾನಿಗೆ ಪದ್ಧತಿಯು ಲೋಪಹೊಂದಿದ ಮೇಲೆ ಬೆಲ್ಲಮಾಡುವವರಿಗೆ ಡಿಪೋಗಳ ಹೊರತು ಅನ್ಯ ಉಪಾಯವಿಲ್ಲ. ಈ ತರ್ಕವು ನಿಜವಿದ್ದರೆ, ಹೊಸ ವಿಂಗಡಿಸಿ ಕೊಟ್ಟ ಕ್ಷೇತ್ರವೇ ಜಿಲ್ಲೆಯೊಳಗಿನ ಬೆಲ್ಲಕ್ಕಾಗಿ ಅವಶ್ಯವಿರುವ ಉರುವಲವನ್ನು ಪೂರೈಸಬೇಕಾದೀತು. ೬ ಗುಂಟೆಗಳ ಮೇಲಿನ ಇನ್ನೊಂದು ಜಬಾಬುದಾರಿಯಿದು.

ಸಮುದ್ರದ ದಂಡೆಗುಂಟವಿರುವ ತಾಲೂಕುಗಳಲ್ಲಿ ಗಿಡಗಂಟಿಗಳಿಲ್ಲದ ಪ್ರದೇಶವಿದೆ. ಅದನ್ನು "ಗಾಯ ರಾನ" ಅಂದರೆ ದನಕರುಗಳ ಮೇವಿಗಾಗಿ ಉಪಯೋಗಿಸುತ್ತಿದ್ದರು. ಈ ಮೇವಿನ ಬಗ್ಗೆ ಸರಕಾರಕ್ಕೆ ಏನೂ ಕೊಡತಕ್ಕದ್ದಿಲ್ಲ. ಕೊಡಲು ಮುಲ್ಕೀ ಖಾತೆಯು ಅವುಗಳ ಆಡಳಿತೆಯನ್ನು ನೋಡುತ್ತಿತ್ತು. ಜಂಗಲಖಾತೆಗೆ ಇವನ್ನು ವರ್ಗಾಯಿಸಿ ಕೊಟ್ಟ ಬಳಿಕ ಬಾಲಕ್ಕೆ ೨ ಆಣೆಯಂತೆ ಗೋಚರಾದ ಫೀಯನ್ನು ಜಂಗಲಖಾತೆಯು ಎತ್ತಹತ್ತಿತು. ಈ ಕ್ಷೇತ್ರವನ್ನು ವರ್ಗಾಯಿಸಿ ಕೊಡುವಾಗ ಜಂಗಲಖಾತೆಯು ಗೋಚರದ ಫೀಯನ್ನು ಎತ್ತಲಿಕ್ಕಿಲ್ಲೆಂದು ವಚನಕೊಟ್ಟಿತ್ತು. ಆದರೆ, ಆ ವಚನವು ಪತ್ತರದಲ್ಲಿ ಬಿದ್ದದ್ದು, ಫೀ ವಸೂಲಿ ಮಾತ್ರ ಸು[illegible] ನಡೆದದೆ. ಸೆಟ್ಲಮೆಂಟ ಆಫೀಸರರು ಬಾಲಕ್ಕೆ ಮೂರು ಎಕ್ರೆಗಳಂತೆ ಮೇವಿನ ಕ್ಷೇತ್ರವನ್ನು ಇಡಬೇಕೆಂದು ಶಿಫಾರ[illegible] ಮಾಡಿದ್ದರು. ಅದಕ್ಕೆ ಜಂಗಲಖಾತೆಯವರೇನು [illegible]ನ ಬೆಳೆ[illegible] ವಾ! ಮೇವು ಬೆಳೆಯದಂಥ ಬೆಟ್ಟವು [illegible] ಮಾಡಿದರು. [illegible]ಗ [illegible]ಗೆ ಕೊಡಿಸಲ್ಪಟ್ಟವು. ಗೋಚರಗಳ ಏರ್ಪಾಟಾಯಿತು. ನಿಯಮಗಳು ಮೊದಲು ಅನುಕೂಲ ತೋರಿದವು. ಕಡೆಗೆ ಅವುಗಳಲ್ಲಿ ಬದಲಾವಣೆಗಳಾದವು. ಈ ಬದಲಾವಣೆಗಳಿಂದ ಬೇಸಾಯಕ್ಕೆ ಉಪದ್ರವವಾಯಿತು. ಕಾಡಿನ ರಾಜ್ಯಕ್ಕೆ ಅನುಕೂಲವಾಯಿತು. ಒಂದು ರೇಂಜಿನಲ್ಲಿ ಮೇಯಬೇಕಾಗಿದ್ದ ದನವು ಇನ್ನೊಂದು ರೇಂಜಿನಲ್ಲಿ ಮೇಯಬಾರದು. ಹೀಗೆ ಅನ್ಯಾಯಕರ ಪ್ರತಿಬಂಧಗಳಾದವು. ರೇಂಜುಗಳ ಪುನರ್ವ್ಯವಸ್ಥೆಯಾಯಿತು. ಹೊಸ ವ್ಯವಸ್ಥೆಯಿಂದ ಗೋಚರಾದಿಗೆ ಮತ್ತಿಷ್ಟು ಎಡರುಗಳುಂಟಾಗಿವೆ. ಜಲೋ ಮೇವು ಬೆಳೆಯಲಿಕ್ಕೆ ಗಿಡಗಂಟಿಗಳ ನೆರಳಿಲ್ಲದ ಸ್ಥಳ ಬೇಕು. ಸರಕಾರವು ಇದನ್ನರಿತು, ಕಂಟಿ ಮೊದಲಾದ ದುರ್ಬೀಜಗಳನ್ನು ನಾಶಪಡಿಸಬೇಕೆಂದು ಯೋಜಿಸಿತು. ಇದರಿಂದಲೇ ಈ ಕ್ಷೇತ್ರಗಳನ್ನೆಲ್ಲ ಕಾಡಿನ ಆಡಳಿತೆಯೊಳಗಿಂದ ತೆಗೆಯಬೇಕೆಂದು ಸೆಟ್ಲಮೆಂಟ ಆಫೀಸರರು ಶಿಫಾರಸು ಮಾಡಿದ್ದರು. ಆದರೆ ಈ ಶಿಫಾರಸು ಸರಕಾರಕ್ಕೆ ಮಾನ್ಯವಾಗಲಿಲ್ಲ. ಈ ಕ್ಷೇತ್ರಗಳನ್ನೆಲ್ಲ ಗ್ರಾಮ ಪಂಚಾಯತುಗಳಿಗೆ ಒಪ್ಪಿಸಿ, ಸರಕಾರವು ಅವುಗಳನ್ನು ಬೆಟ್ಟವಾಗಿ ರೂಪಾಂತರಿಸಬೇಕೆಂದು ಯೋಚಿಸಿದೆ. ಇದರಿಂದ ಗೋಚರವು ಸಿಗುವದು ಅಶಕ್ಯವಾಗುವದು. ದನಕರುಗಳನ್ನು ಪೋಷಣ ಮಾಡುವದು ಕಠಿಣವು. ದನಕರುಗಳ ಹೊರತು ಬೇಸಾಯ ನಡೆಯುವದು ಅಶಕ್ಯವು. ಈ ಕ್ಷೇತ್ರಗಳಲ್ಲಿ ಏರ್ಪಾಟು ಹೊಂದಿದ ಹೊಸ ಅಡವಿಯಲ್ಲಿ ಕಾಡು ಮೃಗಗಳಿಗೆ ಬೇಕಾದಷ್ಟು ಆಶ್ರಯ ಸಿಗುವದು. ಮತ್ತು ಬೇಸಾಯಕ್ಕೆ ಮತ್ತಿಷ್ಟು ಉಪದ್ರವ ಉಂಟಾಗುವದು. ಊರೊಳಗಿನ ಭೂಮಿಗಳಲ್ಲಿ ಅಡವಿಗಳೊಳಗಿನ ಭೂಮಿಗಳೊಳಗಿಂದಲ್ಲಿ ಮಿಕಗಳಿಗೆ ಸುಖವಾಗುವದು.

ಶಿಕಾರಿ ಮಾಡುವ ನಿಯಮಗಳನ್ನು ಕೆಲಮಟ್ಟಿಗೆ ಶಿಥಿಲ ಮಾಡಿದ್ದಾರೆಂಬ ಸಂಗತಿಯು ಮಾನ್ಯವಿದೆ. ಆದರೆ, ಇದು ಹಂಗಾಮಿ ಯೋಜನೆಯು. ಬೆಳೆ ರಕ್ಷಣೆಗಾಗಿ ಕೊಟ್ಟ ಬಂದೂಕಿ ಲಾಯಸನ್ಸುಗಳನ್ನು ಕಸಕೊಳ್ಳುವ ಪದ್ಧತಿಯು ಸೋಲಿಂದ ಹಾಗು ಗ್ರಾಮದ ಪ್ರೊಟೆಕ್ಶನ್ ಕಮಿಟಿ ಯಾನೆ ಬೆಳೆ ರಕ್ಷಣೆಯ ಬಗ್ಗೆ ಕೈಕೊಳ್ಳಬೇಕಾದ ಇಲಾಜುಗಳ ಚೌಕಶಿ ಮಾಡಲು ನೇಮಿಸಿದ ಕಮಿಟಿಗೆ ಹಿಂಸ್ರಪಶುಗಳನ್ನು ನಾಶಗೊಳಿಸಲು ಯಾವ ಯಾವ ಉಪಾಯ ಯೋಜನೆ ಮಾಡಿಕೊಳ್ಳಬೇಕೆಂದು ಚೌಕಶಿ ಮಾಡಹೇಳದಿದ್ದದರಿಂದ, ಸರಕಾರದ ಧೋರಣವು ವ್ಯಕ್ತವಾಗುತ್ತದೆ. ಇದಲ್ಲದೆ, ಜಲೋ ಶಿಕಾರಿ ಸಿಗುವ ಈಗಿನ ಅಡವಿಯನ್ನೆಲ್ಲ ಹೊಸ ಕಾನೂನುಗಳನ್ನು ಮಾಡಿ, ಸಂರಕ್ಷಿಸಬೇಕೆಂದು ಜಬಾಬುದಾರ ಅಧಿಕಾರಿಗಳು ನುಡಿಯುತ್ತಾರೆ. ೧೯೦೩ನೇ ಇಸವಿಯ ೩೨೦೫ನೇ ಸರಕಾರಿ ಠರಾವಿನಂತೆ (ಮುಲ್ಕೀ ಖಾತೆ) ಮಾಯನ್‌ಫಾರೆಸ್ಟದೊಳಗಿನ ಈ ಜಿಲ್ಲೆಯ ತಾಲೂಕುಗಳ ಅಡಿಕೆ ತೋಟಗಾರರಿಗೆಲ್ಲ ಎಕ್ರೆಗೆ ೯ ಎಕ್ರೆಯಂತೆ ಬೆಟ್ಟ ಸಿಗಬೇಕು. ಆದರೆ ೧೯೦೭–೧೯೦೮ರಲ್ಲಿ ಮಾಡಿದ ಸೆಟ್ಲಮೆಂಟಿನಲ್ಲಿ ಆಫೀಸರರು ನಾಲ್ಕು ಎಕ್ರೆಗಳಂತೆ ಕೊಡಬೇಕೆಂದು ಠರಾಯಿಸಿದರು. ಕಾರಣವೇನು ಕೊಟ್ಟರೆಂದು ತಿಳಿಯಿತೇನು? ಮಾಯನ್‌ಫಾರೆಸ್ಟದೊಳಗಿನ ಬೆಟ್ಟವು ದಟ್ಟವಾಗಿದ್ದು ಘಟ್ಟದ ಮೇಲಿನ ೯ ಎಕ್ರೆ ಬೆಟ್ಟಕ್ಕೆ ಸರಿಯಾಗುತ್ತದೆಂದು ತರ್ಕಿಸಿದರು. ಕುಮಟಾ, ಹೊನ್ನಾವರ ತಾಲೂಕುಗಳಲ್ಲಿಯೂ, ಭಟ್ಕಳ ಪೇಟ್ಯಲ್ಲಿಯೂ ನಾಲ್ಕು ಎಕ್ರೆಗಳಂತೆ ಬೆಟ್ಟವನ್ನು ಪ್ರತ್ಯೇಕ ಮಾಡಿ ಕೊಡಲಿಲ್ಲ. ಆದರೂ ತೋಟಗಾರರೆಲ್ಲರೂ ಬೆಟ್ಟದ ಕಂದಾಯವನ್ನು ಹಿ[illegible]ಮು, ತೋಟಗಳಿಗೆ ಆಕರಣೆ ಮಾಡಿದ ಶಿರ್ಧವಯನ್ನು [illegible] ವರುಷಗಳ ವರೆಗೆ ಕೊಟ್ಟರು. ಈಗ ವಿಂಗಡಿಸಿ[illegible]ಟ್ಟ ಕ್ಷೇತ್ರವು ೧೯೦೩ನೇ ಇಸ್ವಿಯ ನಂಬರ ೩೨[illegible] ರದಾವಿನನ್ವಯವಾಗಲೀ, ೧೯೦೯ನೇ ಇಸ್ವಿಯ [illegible] ೩೦೬೫ನೇ ಠರಾವಿನನ್ವಯವಾಗಲೀ ಇರುವದಿಲ್ಲ. [illegible]ಗಿನ ಪದ್ಧತಿಯು ನೂತನವಿದೆ. [illegible] ಹಳೇ ತೋಟಗಳಿಗೆ [illegible] ಪ್ರದೇಶವನ್ನು ವಿಂಗಡಿಸಿ [illegible] ಗಿಡಗಂಟಿಗಳೇನೂ ಇಲ್ಲ. ಅವುಗಳ ಬಗ್ಗೆ ಎಕ್ರೆಗೆ ೧೧ ಆಣೆಗಳಂತೆ ಶಿರ್ಧವಯನ್ನು ಎತ್ತುತ್ತಾರೆ.

ಹೊಸ ತೋಟಗಳಿಗೆ ಇದೇ ಪ್ರಮಾಣದ ಮೇಲೆ ಇದೇ ಶೀರ್ವೆಯಂತೆ, ಇದೇ ಮಾದರಿಯ ಬಟ್ಟಿ ಸಿಗುತ್ತದೆ. ಆದರೆ, ಅವರು ಈ ಕ್ಷೇತ್ರವನ್ನು ಕಬ್ಜೆಯಲ್ಲಿ ಪಡೆಯಬೇಕಾದರೆ ಎಕ್ರೆಗೆ ೨೦ ರೂಪಾಯಿಗಳಂತೆ ಕ್ರಯ ಕೊಡಬೇಕು. ಈ ಪ್ರದೇಶಗಳಲ್ಲಿ ಗಿಡಗಂಟಿಗಳಿದ್ದರೆ, ಅವುಗಳಿಗೆ ಹಾಡಿಯೆಂದು ಎಣಿಸಿ, ಹಾಡಿಯ ನಿಯಮಗಳನ್ನು ಲಾಗೂ ಮಾಡುತ್ತಾರೆ ಮತ್ತು ಎಕ್ರೆಗೆ ರೂಪಾಯಿಯಂತೆ ತೀರ್ವೆ ಕಟ್ಟುತ್ತಾರೆ. ಈ ಹಕೀಕತನ್ನೆಲ್ಲ ಸರಕಾರಕ್ಕೆ ತಿಳಿಸುವ ಎಲ್ಲ ಉಪಾಯಗಳನ್ನು ಪ್ರಜೆಗಳು ಕೈಕೊಂಡಾಯಿತು. ಸರಕಾರಕ್ಕೆ ಅವನ್ನು ದೂರ[illegible]ಸುವ ಆಲೋಚನೆಯಿಲ್ಲ. ತಾ. ೨೬-೨ ೧೯೨೩ನೇ[illegible] ನಂಬರ ಪಿ ೫೭೭ನೇ ಠರಾವನ್ನು (ಮುಲ್ಕಿ ಖಾತೆ) ಸರಕಾರವು ಹೊರಡಿಸಿ, ಪ್ರಜೆಗಳ ಯೋಗ್ಯ ದೂರುಗಳು ದೂರವಾದವೆಂತಲೂ, ಚಳವಳಿಯು ಇಲ್ಲದ್ದರಿಂದ ಸಮಾಧಾನವಾಯಿತೆಂದು ತಿಳಿಯಬೇಕೆಂತಲೂ ಜಾಹೀರ ಮಾಡಿರುವರು.

ಜಂಗಲ ಚೌಕಶಿಯ ಕಮಿಟಿಯನ್ನು ನೇಮಿಸುವ ವಿಚಾರದಿಂದ ಇಲ್ಲಿಯ ಸ್ಥಿತಿಯನ್ನು ಸ್ವತಃ ಅರಿತುಕೊಳ್ಳಲು ದಿವಾಣರು ಬೆಟ್ಟಿಯನ್ನಿತ್ತಾಗ ಕೆಲ ಆಪಾದಿಗಳಿಗೆ ದಿವಾಣರು ಕಟ್ಟಕಡೆಗೆ ಏನಾದರೂ ಒಳಿತು ಮಾಡುವರೆಂದು ಕಲ್ಪನೆಯಾಗಿತ್ತು. ಆದರೆ ಕಾನಡಾ ಜಿಲ್ಹೆಯಿಂದ ದಿವಾಣರು ಮರಳಿ ವಷ್ಟರಲ್ಲಿ, ಕನ್ನರ[illegible]ರು ತಾ ೧೧-೪-೧೯೨೩ನೇ[illegible] ಸರಕ್ಯೂಲರನ್ನು ಹೊರಡಿಸಿ, ಮುಳ್ಳು, ಒಣಗಿದ ಬಿದುರು ಮೊದಲಾದ ದುರ್ಬೀಜಗಳನ್ನು ಸಹ ಪ್ರತಿಬಂಧಿಸಿದರು. ಇದರ ಮೇಲಿಂದ ದಿವಾಣರ ಮಾರೀಗ[illegible]ತು ತಮ್ಮ ಉದ್ಧಾರ ಮಾಡಿಕೊಳ್ಳಲು ಪ್ರಜೆಗಳೇ ಯತ್ನಿಸುತ್ತಿರುವಾಗ ಆಮಲದಾರರು, ಎಷ್ಟು ತಿರಸ್ಕಾರದಿಂದ ಅವರನ್ನೆಲ್ಲ ಅಧಿಕಾರಿಗಳು ಹೇಗೆ ಬರಿಗೊಡುತ್ತಾರೆಂಬ ಸಂಗತಿಯ ಪೂರ್ವಸೂಚನೆಯಾಯಿತು. ಅದರಂತೆಯೇ ಪರಿಣಾಮವಾಗಿದೆ. ಇದರಿಂದಲೇ ಪ್ರಜೆಗಳು ಚೌಕಶಿ ಕಮಿಟಿ ಮೊದಲಾದವುಗಳ ಬಗ್ಗೆ ಅನಾಸ್ಥೆಯನ್ನು ಪ್ರದರ್ಶಿಸಿರುವರು. ಅಸಂತೋಷವೂ ಕಾಯಂ ಇದೆ.

ವಿವಿಧ ಸಂಗ್ರಹ.

ಸೂರ್ಯ ಪರಿವೇಷದ ಭವಿಷ್ಯ

ಕಳೆದ ಸಪ್ಟಂಬರ ತಾ ೨೫ ಹಾಗು ೨೬ ನೇ ತಾರೀಖುಗಳಲ್ಲಿ ಅಂದರೆ, ಭಾದ್ರಪದ ಶುಕ್ಲ ೧೫ ಮೆ ಹಾಗು ವದ್ಯ ಪ್ರತಿಪದೆ, ಈ ೨ ದಿನಗಳಲ್ಲಿ ಸೂರ್ಯನ ಸುತ್ತಲು ಪರಿವೇಷವು ಕಂಡುಬಂದಿತು. ಇದು ಚಕ್ರಾಕಾರವಿದ್ದು, ಅನೇಕ ಬಣ್ಣಗಳಿಂದ ಕೂಡಿದ್ದಿತ್ತು. ಮೊದಮೊದಲು, ಈ ಪರಿವೇಷವು ಬೆಳಗಾಂವಿಯಲ್ಲಿ ೪೦ ಅಂಶ ತ್ರಿಜ್ಯವುಳ್ಳದ್ದಿತ್ತು. ಆದರೆ, ಅಷ್ಟು ಸ್ಪಷ್ಟವಾಗಿ ಕಾಣುತ್ತಿದ್ದಿಲ್ಲ. ಕಡೆಗೆ ಅದು ಸ್ಪಷ್ಟವಾಯಿತು. ಅಂದರೆ, ತ್ರಿಜ್ಯವು ೨೫ ಅಂಶದ್ದಾಯಿತು. ಭಾದ್ರಪದ ಶುದ್ಧ ೧೫ಮೆಗೆ ಈ ಪರಿವೇಷವು ಬೆಳಿಗ್ಗಿನ ೯ ಘಂಟೆಗೆ ಪ್ರಾರಂಭವಾಯಿತು. ೧೧॥ ಘಂಟೆಯವರೆಗೆ ಏರುತ್ತ ಹೋಯಿತು. ೨॥ ಘಂಟೆಗೆ ಆಗ್ನೇಯ ದಿಕ್ಕಿನ ಬದಿಗೆ ಮೋಕ್ಷವಾಯಿತು. ಮಾರನೇ ದಿನ [illegible] ಪರಿವೇಷವು ಅಷ್ಟು ಅಖಂಡವಿದ್ದಿಲ್ಲ. ಏಕಸಮನೆ ಸ್ಪಷ್ಟ[illegible] ಇದ್ದಿಲ್ಲ. ಕೆಲಕಾಲ ವಿಶೇಷ ಸ್ಪಷ್ಟವಾಗಿ ಹೊಳೆ[illegible]ಯುತ್ತಿತ್ತು. [illegible] ಹಾಪಿನ ಮರಿಗೆಯಂತೆ, ಕೆಲಕಾಲ ವಿಶೇಷ ವರ್ತುಲದಂತೆ, ಪರಿವೇಷವು ಬದಲಾಗುತ್ತಿತ್ತು. [illegible]ರಾಯವರು ಜಂ ಸೂರ್ಯನ [illegible] ವರ್ಣಗಳಿಂದ [illegible] ನಿಯ[illegible] ಚರವಾಗಲಿಲ್ಲ. ಚಂದ್ರನ [illegible] ಇಂಥ ಪರಿವೇಷಗಳು ಬಹಳ ಸರ್ತಿ [illegible] ಸೂರ್ಯನ ಸುತ್ತಲೂ ಒದಗುವದು ಅಪೂರ್ವವು. ಪರಿವೇಷದ ಬಣ್ಣಗಳು [illegible]ಸ್ಥಾನಾಂತರದಿಂದ ಬದಲು ಕಾಣಬಹುದು. ಆ ಮಾನದಿಂದ [illegible] ಫಲಗಳೂ ಬೇರೆಬೇರೆಯಿವೆ. ಬೆಳಗಾಂವಿಯಲ್ಲಿ ಪರಿವೇಷವು ನಸಿಲಿನ ಗುಬೆಯೋಪಾದಿಯಲ್ಲಿ ಹೊಳೆಯಿತು. ಬಣ್ಣವು ಹಳದಿ ಹಾಗು ಸಾಧಾರಣ ಬೆಳ್ಳಗಿತ್ತು.

* * *

ಇದರ ಫಲಗಳು

ಈ ಪರಿವೇಷದ ಬಗ್ಗೆ [illegible] ಬೆಳಗಾಂವಿಯ [illegible] ಆಚಾರ್ಯ ಜ್ಯೋತಿಷಿಯವರು ಭವಿಷ್ಯ ಮಾಡುವದೇನಂದರೆ — ಈ ಬಣ್ಣಗಳು ಶುಭ [illegible] ಅಶುಭ [illegible] ಗ್ರಹಗಳ ಸ್ಥಿತಿ, ನಕ್ಷತ್ರಪ್ರವೇಶ ಮೊದಲಾದ ಹಾಗು ಪರಿವೇಷ ಲಗ್ನಗಳನ್ನು [illegible], ಮುಂದಿನ [illegible] ಅಂದರೆ ರಕ್ತಾಕ್ಷಿ ಸಂವತ್ಸರದ [illegible] ಬರಬಹುದಾದ ಫಲಗಳು [illegible] — ಈ ಪರಿವೇಷದ ಹೊತ್ತಿಗೆ ಚಂದ್ರನು [illegible]. ಅದರಿಂದ ಪ್ರೋಟೆಸ್ಟಂಟ [illegible] ಸಹಾರಾ ಪ್ರದೇಶ, ಈ [illegible] ಒದಗಬಹುದು. [illegible] ರಾಜ್ಯಸೂತ್ರಗಳ [illegible] [illegible] ಪ್ರದೇಶದಲ್ಲಿ [illegible] ಹಾಗೂ [illegible] ಪ್ರಜೆಗಳು [illegible] ಹೋಗುವರು. [illegible] ಹಂಗೇರಿ, ಸ್ಪೇನ, [illegible]ರಗಿನ ಪ್ರದೇಶ ಹಾಗು [illegible] ರಾಜ್ಯಗಳಲ್ಲಿ [illegible] ರಾಜ್ಯಪದ್ಧತಿಯನ್ನು ಪ್ರಜೆಗಳು ಉತ್ಪಾದಿಸುವರು [illegible] ಅವ್ಯವಸ್ಥಿತ ರೀತಿಯಿಂದ ನಡೆಯುವದು. ಜನರು ರೋಗಗ್ರಸ್ತರಾಗುವರು. ಹಿಂದುಸ್ಥಾನ, [illegible], [illegible]ಯಾ, ಗ್ರೀಸ, [illegible] ಮೊದಲಾದ ಪ್ರದೇಶಗಳಲ್ಲಿ ಈ ಪರಿವೇಷವು ರಾಜಕೀಯ ದೃಷ್ಟಿಯಿಂದ ಒಳಿತಾಗವದು. [illegible] ಅಧಿಕಾರಿಗಳ [illegible]ಪ್ರವೃತ್ತಿ ಕಡಿಮೆಯಾಗುವದು. ರಾಜಕೀಯ ಹಕ್ಕು-[illegible]ಗಳು ಹೆಚ್ಚುತ್ತಿಗುವವು. ಲೋಕಪ್ರಿಯ [illegible] ಲೋಕನಾಯಕರನ್ನು ಸರಕಾರವು ಬಿಡುಗಡೆ ಮಾಡುವದು. ಈ ಪ್ರಸಂಗದಲ್ಲಿ ಇತರ ದೇಶೀಯರ ಅಧಿಕಾರಿಗಳು ಹಾಗೂ ಪ್ರಜೆಗಳು ಸ್ನೇಹಭಾವದಿಂದ ಹಾಗು ಪ್ರೇಮದಿಂದ ನಡೆಯುವರು. ರಾಜಕೀಯ ಸಂಕಟ, ಒಡಂಬಡಿಕೆಗಳ ದೃಷ್ಟಿಯಿಂದ ಪ್ರಜೆಗಳಿಗೆ ಒಳಿತಾದರೂ ನೈಸರ್ಗಿಕ ಆಪತ್ತುಗಳು ಪ್ರಜೆಗಳಿಗೆ ಪೀಡಿಸುವವು. ಬಂಗಾಲ, ಪಂಜಾಬ, ಖಾನದೇಶ, ಕಾಶೀ ಪ್ರಾಂತ, ದೇಶೀ ಸಂಸ್ಥಾನಗಳು, ಪಶ್ಚಿಮ ದಂಡೆ, ಈ ಪ್ರದೇಶಗಳಲ್ಲಿ ಅತಿವೃಷ್ಟಿ-ಅನಾವೃಷ್ಟಿಗಳಿಂದ ಪೈರು ನಾಶವಾಗುವದು. ವಿದ್ವಾನ್, ಹಾಗು ಶ್ರೀಮಂತರಿಗೆ ಪುನಃ ಪುನಃ ವಾತವಿಕಾರಗಳಿಂದ ಕಷ್ಟಗಳೊದಗುವವು. [illegible]ಕ ಲೋಕನಾಯಕರಿಗೂ ಬಹು ಕಾಲದ ವರೆಗೆ [illegible]ಸ್ವಸ್ಥತೆಯು ಪ್ರಾಪ್ತವಾಗುವದು. ಅಯರ್ಲಂಡ, ಇರಾಣ, [illegible]ಕೀಸ್ಥಾನ, ರಶಿಯಾ, ಚೀನ, ಜಪಾನ, ಈ ದೇಶಗಳಿಗೆ ಈ ಪರಿವೇಷವು [illegible]ಕವಾಗುವದು. ಕಷ್ಟಕರವಾದ [illegible] ಮತಭೇದಗಳನ್ನು ಬಗಿಗಿಟ್ಟು, ಒಗ್ಗಟ್ಟು ಇಕ್ಕಟ್ಟು ಕಡೆಗೋಲು [illegible] ಇವರ ರಾಜಕೀಯ ಸೂತ್ರಗಳು [illegible] ಬಹಳ ವ್ಯವಸ್ಥಿತವಾಗಿ ನಡೆದು, ಸಾಂಪತ್ತಿಕ [illegible]ಯು ಬೆಳೆಯುತ್ತ ಹೋಗುವದು. ತಿಂಬುಂಬುವ ಪದಾರ್ಥಗಳು ಕಡಿಮೆ ಪ್ರಮಾಣದಿಂದ ಬೆಳೆಯುವವು. ಹಾಗು ರೋಗರಾಯಿ ಪ್ರಮಾಣವು ಮಿಗಿಲಾಗುವದು. ಭೂಕಂಪ, ಚಳಿ ನೆಡಕು, ಬಿರುಗಾಳಿಯ ಭರಗಳಿಂದ ಉಪದ್ರವವಾಗಿ ಬಹಳೇ ಹಾನಿಯಾಗುವದು. ಅಮೇರಿಕೆಯೊಳಗಿನ ಸಂಯುಕ್ತ ಸಂಸ್ಥಾನಗಳು, ಬೆಲ್ಜಮ್, ಇಜಿಪ್ತ, ಇಂಗ್ಲಂಡದ ಪಶ್ಚಿಮ ಭಾಗ ಮತ್ತು ವೇಲ್ಸ ಈ ದೇಶಗಳಿಗೆ ಈ ಪರಿವೇಷಗಳು ಮಿಶ್ರ ಫಲದವು, ಅಂದರೆ, ಸುಖ ದುಃಖಗಳ ಸಮಪ್ರಮಾಣವವು ಆಗುವವು. ಅರಸರಿಗೂ, ಅಧಿಕಾರಿಗಳಿಗೂ ಈ ಪರಿವೇಷಗಳು ಸುಖಕಾರಕವಲ್ಲ. ಅವರು ಈ ಆರು ತಿಂಗಳ ಕಾಲವನ್ನು ಚಿಂತೆಯಲ್ಲಿ, ವ್ಯಥೆಯಲ್ಲಿ ಹಾಗು ಇತರ ತೊಂದರೆಗಳಲ್ಲಿ ಕಳೆಯಬೇಕಾಗುವದು. ಜನನ ಕಾಲದ ಗ್ರಹಸ್ಥಿತಿಗಳಿಗನುರೂಪವಾಗಿ ಪ್ರಾಣಹಾನಿಯ ಸಂಕಟಗಳು ಒದಗುವವು.

— ತರುಣ ಭಾರತ

* * *

ಸಕ್ಕರೆಯು ಆಹಾರವೇ ಅಥವಾ ವಿಷವೇ?

ಸಕ್ಕರೆಯೆಂಬುದು ತೀವ್ರವಾದ ಒಂದು ಬಗೆಯ ರಸಾಯನ ಪ್ರಯೋಗದಿಂದ ಹುಟ್ಟಿದ ವಸ್ತುವಾಗಿದೆ. ಅದು ಪರಿಂದ ದೇಹಾರೋಗ್ಯ ಸಂಬಂಧವಾಗಿ ಯೋಚಿಸಿದಲ್ಲಿ, ಮನುಷ್ಯ ದೇಹಕ್ಕೆ ಇದೊಂದು ಫಿರಂಗಿಯ ಮದ್ದೆಂದು ಹೇಳಬಹುದು. ಸಾಧಾರಣವಾದ ಫಿರಂಗಿಯ ಮದ್ದು ಹೇಗೋ, ಹಾಗೆ ಇದೂ ಕೂಡ ಮನಷ್ಯನ ಜೀರ್ಣಾವಯವಗಳಲ್ಲಿ ಹತ್ತಿಕೊಂಡು ಸಿಡಿಯುವುದು. ಈ ವಸ್ತು ಜಠರದಲ್ಲಿ ಹತ್ತಿಕೊಳ್ಳುವದರಲ್ಲಿ, ಮೂತ್ರ, ಇಂಗಾಲ ಆಕ್ಸಾಲಿಕ್ ಈ ಸಂಬಂಧವಾದ ಆಮ್ಲಗಳು, ಮತ್ತು ಸಾರಾಯ ಇವು ನಾಲ್ಕು ಅದರಿಂದ ಪರಿಣಮಿಸುವವು.

ಆದರೆ, ಬಹಳವಾಗಿ ಮನಸ್ಸಿಗೂ, [illegible] ಶ್ರಮ ಕೊಟ್ಟು ದುಡಿದು ಕೆಲಸವ[illegible], ಕೆಲಸ ಮಾಡಿ ದುರ್ಬಲವಾದ ಧಾತುಗಳಿಗೆ ಪುಷ್ಟಿ ಕೊಡುವದಕ್ಕಾಗಿ, ಸಕ್ಕರೆಯಲ್ಲಿರುವ ಉತ್ತೇಜನ ಶಕ್ತಿಯೇನೋ ಆಗಾಗ ಸ್ವಲ್ಪಮಟ್ಟಿಗೆ ಅವಶ್ಯವು. ಆದರೆ, ಸುಖಜೀವನವುಳ್ಳವರು ಇದರಿಂದ ಅಷ್ಟು ಪ್ರಯೋಜನಹೊಂದುವದಾಗಿಲ್ಲ. ಸಕ್ಕರೆಯು ಹೊಟ್ಟೆ ಹೋದೊಡನೆ ಹುಳಿಯುತ್ತ ಬಂದು, ಅಲ್ಲಿಯೇ ಸಾರಾಯವನ್ನು ಕುಡಿಯುವುದರ ಪರಿಣಾಮವೇನೆಂಬದು ನಾವು ಹೇಳಬೇಕಾಗಿಲ್ಲ. ಅದುದರಿಂದ ಸಕ್ಕರೆಯನ್ನು ಮಿತಿಮೀರಿ ತಿನ್ನುವದರಿಂದ, ಅದರಲ್ಲಿಯೂ ಸಣ್ಣ ಮಕ್ಕಳಿಗೆ ಇದನ್ನು ಹೆಚ್ಚಾಗಿ ತಿನ್ನಿಸುವದರಿಂದ, ಮದ್ಯಪಾನಕ್ಕಿಂತಲೂ ಹೆಚ್ಚಾದ ಅಪಾಯವನ್ನುಂಟುಮಾಡುವದು. ಇದು ದೃಷ್ಟಿಮಾಂದ್ಯಕ್ಕೂ, ಹೃದಯ ದೌರ್ಬಲ್ಯಕ್ಕೂ, ನೇತ್ರನಾಡಿಗಳು ಕೆಟ್ಟುಹೋಗುವದಕ್ಕೂ ಮುಖ್ಯ ಕಾರಣವೆನಿಸಿದೆ. ಆದುದರಿಂದ ಸಕ್ಕರೆಯನ್ನು ಅವರವರು ತಮ್ಮ ದೇಹಕ್ಕೆ ಬೇಕಾದುದಕ್ಕಿಂತ ಹೆಚ್ಚಾಗಿ ತಿನ್ನಬಾರದು.

— ಆರೋಗ್ಯಚಂದ್ರಿಕೆ

* * *

ಪತ್ರಿಕಾಕರ್ತರ ಕರ್ತವ್ಯ

ಶ್ರೀಯುತ ರಾಮರಾಯ ಮಲ್ಯರೂ, ನಾರಾಯಣರಾಯರೂ ಕೋರ್ಟಿನ ಮುಂದೆ ಮಾಡಿದ ಹೇಳಿಕೆಯಲ್ಲಿ, 'ಕರ್ನಾಟಕ ಮಿತ್ರ' ಎಂಬ ಲೇಖವನ್ನು

ಪುನರ್ಮುದ್ರಿಸಿದ ಲೇಖದಲ್ಲಿ "ಪತ್ರಿಕಾಕರ್ತರ ಕರ್ತವ್ಯವೆಂದು ತಿಳಿದು ... ಮನಸ್ಸಾಕ್ಷಿಯ ಪ್ರೇರಣೆಯಿಂದ ಆ ಲೇಖವನ್ನು ಪುನರ್ಮುದ್ರಿಸಿ, ಪುನಃ ಪ್ರಕಾಶಗೊಳಿಸಿರುವೆವು." ಎಂದು ಹೇಳಿದರು. ಶ್ರೀ. ಮಲ್ಯರು ವಿಚಾರಣೆಯ ಕೆಲವು ದಿನಗಳ ಹಿಂದೆ ಬರೆದ ಈ ಕೆಳಗಿನ ಮಾತುಗಳಿಂದ ಅವರ ಉದ್ದೇಶವು ಸ್ಪಷ್ಟವಾಗುವದೆಂದು ನಾವು ನಂಬುತ್ತೇವೆ

ಶ್ರೀಯುತ ಮೋಹರೆಯವರ ಲೇಖವನ್ನು ಪುನರ್ಮುದ್ರಿಸಿದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುವದಗತ್ಯವಿದೆ ರಾಜದ್ರೋಹದ ಖಟ್ಲೆಯು ಅವರ ಮೇಲೆ ನಡೆಯುತ್ತಿರುವಾಗ ನಾನು ಆ ಲೇಖವನ್ನು ಮುದ್ರಿಸಿದುದನ್ನು ನೋಡಿ ಜೈಲಿಗೆ ಹೋಗುವ ಉದ್ದೇಶದಿಂದಲೇ ಹಾಗೆ ಮಾಡಿದೆನೆಂದು ತಿಳಿದುಕೊಳ್ಳುವದು ಸರಿಯಲ್ಲ ಶ್ರೀಯುತ ಮೋಹರೆಯವರ ಲೇಖದಲ್ಲಿ ಉಜ್ವಲವಾದ ದೇಶಪ್ರೇಮವು ತುಂಬಿತುಳುಕುತ್ತಿದೆ. ಅಂಥ ದೇಶಪ್ರೇಮವನ್ನು ಈ ಸರಕಾರವು ಹೇಗೆ ಕ್ರೂರತನದಿಂದ ಶಿಕ್ಷಿಸುತ್ತಿದೆಯೆಂಬುದನ್ನು ಜನರಿಗೆ ಸ್ಪಷ್ಟಗೊಳಿಸುವದು ನನ್ನ ಕರ್ತವ್ಯವಾಗಿತ್ತು ಮಹಾತ್ಮಾಜಿಯವರ 'ಯಂಗ್ ಇಂಡಿಯಾ' ಪತ್ರದಲ್ಲಿ ಇದೇ ಉದ್ದೇಶದಿಂದ ರಾಜದ್ರೋಹಾತ್ಮಕ ಲೇಖಗಳೆಷ್ಟೋ ಪ್ರಕಟಿಸಲ್ಪಟ್ಟಿವೆ ಆ ಪತ್ರದಿಂದಲೇ ಪತ್ರಕರ್ತರ, ಕರ್ತವ್ಯವನ್ನು ಕಲಿತುಕೊಂಡಿರುವೆನಾದುದರಿಂದ, ನನ್ನ ಕರ್ತವ್ಯದಲ್ಲಿ ಆಶ್ಚರ್ಯವೇನೂ ಇಲ್ಲ. ಕನ್ನಡಿಗ ಪತ್ರಿಕಾಕರ್ತರಾಗಿರುವ ಶ್ರೀ. ಮೋಹರೆಯವರ ಕಡೆಗೆ ಸಂಪೂರ್ಣ ನ್ಯಾಯವಿದೆಯೆಂದು ಸ್ಥಾಪಿಸುವದು ನನ್ನ ಕರ್ತವ್ಯವವೇನು? ಅವರು ಲೇಖವನ್ನು ಪ್ರಕಟಿಸಿ ಅನುಭವಿಸುವ ಶಿಕ್ಷೆಯನ್ನು ನಾನೂ ಅನುಭವಿಸಲು ಸಿದ್ಧನಿದ್ದರೆ ಮಾತ್ರ, ಅವರ ಕಡೆಗಿರುವ ನ್ಯಾಯವನ್ನು ಸಾರಿ ಹೇಳಲು ನನಗೆ ಅಧಿಕಾರವಿದೆಯೆಂದು ತಿಳಿಯುತ್ತೇವೆ. ವಿಜಾಪುರದ ಪತ್ರಕರ್ತರ ಕಡೆಗಿರುವ ನ್ಯಾಯವನ್ನು ತೋರಿಸಲೆತ್ನಿಸಿದುದರಿಂದ ದಕ್ಷಿಣ ಕನ್ನಡದಲ್ಲಿರುವ ನನಗೆ ಕಾರಾಗೃಹವು ಸಿಕ್ಕಿದರೆ, ಅದ ಕನ್ನಾಗಿರ್ಬಹುದು ನಿಜವಾಗಿಯೂ ಸಂತೋಷಪಡುತ್ತೇನೆ. ಇಂಥ ಕೆಲಸಗಳಿಂದ ಕನ್ನಡಿಗರಲ್ಲಿ ಐಕ್ಯವು ಬೆಳೆಯಲು ಹೇಗೆ ಸಹಾಯವಾಗುವದೆಂಬುದನ್ನು ನಾನು ಚಿತ್ರಿಸಬಲ್ಲೆನು. —ಸತ್ಯಾಗ್ರಹೀ, ಉಡುಪಿ.

* * *

ಅಮೇರಿಕೆಯ ಒಬ್ಬ ದೈವಜ್ಞನ ಭವಿಷ್ಯ.

೧೯೩೦ರಲ್ಲಿ ಪ್ರಪಂಚದಮೇಲೆ ಜರಗುವ ವಿಶೇಷ ವಿಷಯಗಳು:—

(೧) ಫ್ರಾನ್ಸ ದೇಶದಲ್ಲಿ ಅತಿ ದಾರುಣವಾದ ವಿಪ್ಲವವು ಜರಗುವದು (೨) ಜರ್ಮನಿಗೂ, ರಶಿಯಾ ದೇಶಕ್ಕೂ ಮೈತ್ರಿಯು ಹೆಚ್ಚುವದು (೩) ಸ್ಪೇನ ದೇಶದಲ್ಲಿ ರಾಜಪ್ರಭುತ್ವವು ಸಂಪೂರ್ಣವಾಗಿ ತೊಲಗಿ, ಪ್ರಜಾಪ್ರಭುತ್ವವು ಪ್ರಾರಂಭವಾಗುವದು (೪) ಇಟಲಿ ದೇಶಕ್ಕೆ ಅತ್ಯಧಿಕ ಬಲವು ಉಂಟಾಗಲು ಅವಕಾಶವೇರ್ಪಡುವದು. (೫) ಆಸ್ಟ್ರೇಲಿಯಾ ದೇಶವು ಎರಡು ಭಾಗವಾಗಿ ವಿಭಜಿಸಲಾಗುವುದು. (೬) ಕ್ಯಾನಡಾ ದೇಶವು ಬ್ರಿಟಿಶ್‌ಸಾಮ್ರಾಜ್ಯದಿಂದ ಬಿಡುಗಡೆ ಹೊಂದಿ, ಅಮೇರಿಕೆಯ ಕೂಡ ಸೇರುವುದು. (೭) ಐರ್ಲಂಡ್‌ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವು ಲಭಿಸುವುದು (೮) ಭರತಖಂಡಕ್ಕೆ ಸ್ವಾತಂತ್ರ್ಯವು ಲಭಿಸದಿದ್ದರೂ, ಕೆಲ ಪ್ರಜಾಧಿಕಾರಪರಿಪಾಲನಕ್ರಮವೇರ್ಪಡುವುದು. (೯) ಚೀನಾ ರಾಜ್ಯದಲ್ಲಿ ಐಕಮತ್ಯವು ಕುದುರುವುದು; ಜಪಾನಿನಲ್ಲಿ ಚೀನಾದವರಿಗೆ ಅಧಿಕ ಪ್ರಾಬಲ್ಯವು ಉಂಟಾಗುವುದು. — ಮೈಸೂರ ಸ್ಟಾರ

ಸೀಮೋಲ್ಲಂಘನದ ಅರ್ಥವು.

ಹುಬ್ಬಳ್ಳಿಯ ಶ್ರೀ ಡ ದಿವಾಕರ ಇವರ ಉಪನ್ಯಾಸದ ಸಾರಾಂಶವು.

ಹುಬ್ಬಳ್ಳಿಯ 'ಕರ್ನಾಟಕ ಪ್ರೆಸ್ಸಿನಲ್ಲಿ' ಮೊನ್ನಿನ ದಸರೆಯ ದಿವಸ ಸೀಮೋಲ್ಲಂಘನವಾದ ಮೇಲೆ ದಿವಾಕರರವರ ಉಪನ್ಯಾಸವಾಯಿತು ಮಳೆಯಾಗಹತ್ತಿದ್ದರಿಂದ ಸಭೆಯು ಶ್ರೀ. ಆನಂದರಾಯರ ಮನೆಯ ಪಡಸಾಲೆಯಲ್ಲಿಯೇ ಮಾಡಬೇಕಾಯ್ತು. ಅದೇ ಕಾಲಕ್ಕೆ ಶ್ರೀ. ಸರಸ್ವತೀ ವಿದ್ಯಾರ್ಥಿ ವಾಚನ ಮಂದಿರದ ವಾರ್ಷಿಕ ವರದಿಯಾದರೂ ಓದಲ್ಪಟ್ಟಿತು. ಶ್ರೀ. ಬಾಬುರಾವ ಟಂಕಸಾಲೆಯವರು ಅಧ್ಯಕ್ಷಸ್ಥಾನದಲ್ಲಿ ವಿರಾಜಮಾನರಾಗಿದ್ದರು. ಶ್ರೀ. ಅನಂತರಾವ ದೇಸಾಯಿ— ವಾಚನ ಮಂದಿರದ ಅಧ್ಯಕ್ಷರು— ಪ್ರಾಸ್ತಾವಿಕ ಭಾಷಣ ಮಾಡಿದ ಮೇಲೆ ಹಾಗೂ ವಾಚನ ಮಂದಿರದ ವರದಿಯನ್ನು ಶ್ರೀ. ಗೋಖಲೆ ಎಂಬವರು ಓದಿದ ಮೇಲೆ ದಿವಾಕರರವರ ವ್ಯಾಖ್ಯಾನವು ಆರಂಭವಾಯಿತು ಅದರ ಸಾರಾಂಶವೇನಂದರೆ.—

ಬಂಧುಭಗಿನಿಯರೇ, ನಮ್ಮಲ್ಲಿ ಎಷ್ಟೋ ರೂಢಿಗಳು ಜರುಗುತ್ತಿರುವವು ನಾವು ಎಷ್ಟೋ ಹಬ್ಬಗಳನ್ನು ಮಾಡುತ್ತಿರುವೆವು ಸಾಮಾನ್ಯತಃ ಈ ಹಬ್ಬಗಳ ಅರ್ಥವು ನಮಗೆ ಗೊತ್ತಾಗುವದಿಲ್ಲ. ಸಮಾಚೀನವಾಗಿ ಊಟಮಾಡಿ, ಒಳ್ಳೇ ಬಟ್ಟೆಗಳನ್ನು ಹಾಕಿಕೊಂಡು ಅಡ್ಡಾಡಿದರೆ, ಹಬ್ಬದ ಕೆಲಸವಾಯಿತು ಎಂದು ನಾವು ತಿಳಿದಿರುತ್ತೇವೆ ಆದರೆ, ಆರ್ಯರು ಹಾಗೆ ಮಾಡಿರಲಿಲ್ಲ ಅವರು ಎಂದಿಗೂ ಉತ್ತಮ ತತ್ವಗಳನ್ನವಲಂಬಿಸಿಯೇ ಹಬ್ಬಗಳನ್ನು ಸ್ಥಿರಪಡಿಸಿದ್ದಾರೆ ಈಗ ವಿಜಯಾದಶಮಿಯ ಉದಾಹರಣೆಯನ್ನೇ ನೋಡುವ

ಊರ ಹೊರಗೆ ಹೋಗಿ ಬನ್ನೀ ಗಿಡಕ್ಕೆ ಪೂಜೆಯನ್ನು ಮಾಡಿ, ಆ ತೊಪ್ಪಲವನ್ನು ಹರಿದುಕೊಂಡು ಬಂದು, ಈ ಬಂಗಾರವನ್ನು ತಕ್ಕೊಳ್ಳಿರೆಂದು ಒಬ್ಬರಿಗೊಬ್ಬರು ಕೊಟ್ಟು ಅಥವಾ ಹಿರಿಯರಿಗೆಲ್ಲ ಹೇಳುತ್ತ ತಿರುಗಿದರೆ ನಮ್ಮ ಕೆಲಸವು ಮುಗಿಯಿತೆಂದು ನಾವು ತಿಳಿದಿದ್ದೇವೆ. ಇಷ್ಟೇ ಕೆಲಸವನ್ನು ಮಾಡುವದರ ಸಲುವಾಗಿ ನಮ್ಮ ಪೂರ್ವಜರು ನಮಗೆ ಇಷ್ಟು ತೊಂದರೆಯನ್ನು ಕೊಡುವದು ಅವಶ್ಯವಿದ್ದಿಲ್ಲವೆಂದು ನನಗೆ ತೋರುತ್ತದೆ ಇದರೊಳಗೇನಾದರೂ ಹೆಚ್ಚಿನ ಗೂಢಾರ್ಥವು ಇರುವದು ಅದನ್ನು ನಾವು ಶೋಧಿಸಿ ತೆಗೆದು ಅದರಂತೆ ವರ್ತಿಸಿದರೆ, ನಾವು ಕರ್ತವ್ಯವನ್ನು ಮಾಡಿದಂತಾಗುವದು. ಇಲ್ಲದೆ, "ಬಾಬಾ ವಾಕ್ಯ ಪ್ರಮಾಣಂ" ಎಂಬಂತೆ ಬನ್ನಿ ಗಿಡಕ್ಕೆ ಹೋಗು, ಅಂಥ ಕೂಡಲೇ ಬನ್ನಿ ಗಿಡಕ್ಕೆ ಹೋಗುವದು, ತೊಪ್ಪಲವನ್ನು ಹರಿ, ಅಂದ ಕೂಡಲೇ ತೊಪ್ಪಲವನ್ನು ಹರಿಯುವದು ಹೀಗೆ ಬಾಬ್ತಿಕ ಅನುಸರಣೆಯಿಂದ ನಮ್ಮ ಪೂರ್ವಜರ ಆತ್ಮಕ್ಕೂ ಶಾಂತಿಯು ದೊರೆಯಲಾರದು ಅಥವಾ ನಮ್ಮ ಪ್ರಗತಿಯೂ ಆಗಲಾರದು ಅವರು ಹಾಕಿದ ರೂಢಿಗಳ ರಹಸ್ಯವನ್ನು ತಿಳಿದು ಅದನ್ನು ಜನರಿಗೆ ತಿಳಿಸಿ,ಅದರಂತೆ ಅವರ ಕಡೆಯಿಂದ ವರ್ತನ ಮಾಡಿಸಲಿಕ್ಕೆ ಹಚ್ಚುವದೇ ಆಯಾ ಕಾಲದ ವಿದ್ವಾಂಸರ ಕೆಲಸವದೆ. ಆ ರೀತಿಯಾಗಿ ವಿದ್ವಾಂಸರು ಹೇಳಿದ ಎಂಥ ಮಾತುಗಳನ್ನೇ ನಾನು ತಮ್ಮೆಲ್ಲರಿಗೂ ಅರಿಕೆ ಮಾಡಿಕೊಳ್ಳುತ್ತೇನೆ.

ಪಾಂಡವರು ೧೨ ವರ್ಷಗಳವರೆಗೆ ವನವಾಸವನ್ನು ಭೋಗಿಸಿ, ತಿರುಗಿ ಕೌರವರನ್ನು ಸೋಲಿಸುವದರ ಸಲುವಾಗಿ ಸಾಯುಧರಾಗಬೇಕಾಯಿತು. ಅಗ್ಗ ಬನ್ನಿ ವೃಕ್ಷದಲ್ಲಿಟ್ಟ ತಮ್ಮ ಆಯುಧಗಳನ್ನು ತಕ್ಕೊಳ್ಳಬೇಕಾದರೆ, ಯಥಾಸಾಂಗವಾಗಿ ಆ ವೃಕ್ಷದ ಪೂಜೆ ಮಾಡಿ ಆ ಮೇಲೆ ತಮ್ಮ ಶಸ್ತ್ರಾಸ್ತ್ರಗಳನ್ನು ಧರಿಸಬೇಕಾಯಿತು. ವಿಜಯಾದಶಮಿಯ ಪವಿತ್ರ ಮುಹೂರ್ತದ ಮೇಲೆ ನಮ್ಮ ಆರ್ಯಕುಲಕ್ಕೆ ಅತ್ಯಂತ ಸಂತೋಷಕರವಾದ ದಿವಸ ಈ ರೀತಿಯಾಗಿ ತಮ್ಮ ಆಯುಧಗಳನ್ನು ತೆಗೆದುಕೊಂಡು ಬಂದು, ಶ್ರೀಕೃಷ್ಣ ಪರಮಾತ್ಮನ ಮುಖ್ಯ ಸಹಾಯದಿಂದ ದುಷ್ಟ ಕೌರವರ ಪೂರ್ಣ ನಾಶವನ್ನು ಮಾಡಿದರು. ನಮ್ಮಲ್ಲಿ ಇದ್ಯಕ್ಕೆ ಪ್ರಚಲಿತವಿದ್ದ ರೂಢಿಯು ಉಗಮವು ಪಾಂಡವರು ಆ ದಿನವಾಗಿದ ಸೀಮೋಲ್ಲಂಘನದಲ್ಲಿಯೇ ಇದೆ ಮಹಾರಾಷ್ಟ್ರೀಯರಾಗಲಿ, ಕ್ಷತ್ರಿಯರಾಗಲಿ, ಕನ್ನಡಿಗರಾಗಲಿ, ಪಾಂಡವರ ಮೇಲಿನ ಪದ್ಧತಿಗನುಸರಿಸಿಯೇ ತಾವಾದರೂ ಯುದ್ಧಕ್ಕೆ ಅಥವಾ ದಾಳಿಗೆ ಹೊರಡಬೇಕಾದರೆ ವಿಜಯಾದಶಮಿಯ ಮುಹೂರ್ತದ ಮೇಲೆಯೇ ಹೊರಡುತ್ತಿದ್ದರು ಆದರೆ, ಈಗ್ಗೆ ಅಂಥ ಪ್ರಸಂಗವೇ ಉಳಿದಿಲ್ಲವೆಂದ ಮೇಲೆ, ನಾವು ದಸರೆಯ ಹಬ್ಬವನ್ನು, ಕೇವಲ ಹೊಸದು ವಿಜೃಂಭಣೆಯಿಂದ ಬನ್ನಿ ವೃಕ್ಷಕ್ಕೆ ಹೋಗಿ ಹೊಸ ಉಡುಪು-ತೊಡಪುಗಳನ್ನು ಹಾಕಿಕೊಂಡು, ನಾಲ್ಕು ಜನರಿಗೆ "ಬಂಗಾರ" ಕೊಟ್ಟರಾಯಿತು, ಎಂದು ಅನ್ನಬಹುದು ಆದರೆ, ಇದು ಪೂರ್ಣ ತಪ್ಪು. ದಸರೆಯ ಅಥವಾ ಸೀಮೋಲ್ಲಂಘನದ ಅರ್ಥವು ಇಷ್ಟು ಪೊಳ್ಳು ಇಲ್ಲ

ದಸರೆಯ ಹಬ್ಬವು ನಮ್ಮಲ್ಲಿ ಜೀವದಿಂದಿದ್ದು, ಕೇವಲ ಅದರ ಬಾಹ್ಯಿಕ ಅನುಸರಣದಿಂದ ಅಥವಾ ಹೋಳಿಗೆ ಹೊಡೆಯುವದರಿಂದ ಇಲ್ಲ ಆದರೆ, ಅದರ ಗೂಢ ಲಾಕ್ಷಣಿಕ ಅರ್ಥದಿಂದಲೇ ಅದು ಜೀವಂತವಿರುವದು. ಜಗತ್ತಿನಲ್ಲಿ ದುಷ್ಟತನ, ಕೆಟ್ಟತನ, ಕಲಹ ಎಲ್ಲಿಯ ವರೆಗೆ ಇರುವವೋ, ಅಲ್ಲಿಯ ವರೆಗೆ ದಸರೆಯು ಇರಲಿಕ್ಕೇ ಬೇಕು ಈ ದಿನ ನಾವು ಯುಕ್ತಿನ ಶಸ್ತ್ರಗಳನ್ನು ಉಪಯೋಗಿಸುತ್ತಿರಲಿಕ್ಕಿಲ್ಲ. ಉಪಯೋಗಿಸುವ ಅವಶ್ಯಕತೆ ಇರಲಿಕ್ಕಿಲ್ಲ ಆದರೆ, ಕೌರವರನ್ನು ದಂಡಿಸುವದು ಎಷ್ಟು ಅವಶ್ಯವಿತ್ತೋ ಅಷ್ಟೇ, ಈ ದಿನ ನಮ್ಮಲ್ಲಿಯ ಕೆಟ್ಟತನವನ್ನು, ನಮ್ಮಲ್ಲಿಯ ದೌರ್ಬಲ್ಯವನ್ನು, ದಾಸ್ಯವನ್ನು, ವ್ಯಸನಗಳನ್ನು, ದುಷ್ಟ ಚಟಗಳನ್ನು ನಾಶಗೊಳಿಸಬೇಕಾಗಿದೆ ಕೌರವರನ್ನು ದುಡಿಸಲಿಕ್ಕೆ ಹಾಗೂ ಧರ್ಮರಾಜ್ಯವನ್ನು ಸ್ಥಾಪಿಸಲಿಕ್ಕೆ ಪಂಚ ಪಾಂಡವರು ಯಾವ ಉತ್ಸಾಹದಿಂದ ಯಾವ ಕರ್ತವ್ಯಬುದ್ಧಿಯಿಂದ ಹಂದಾದರೋ, ಅದೇ ಉತ್ಸಾಹದಿಂದಲೂ, ಕರ್ತವ್ಯಬುದ್ಧಿಯಿಂದಲೂ ನಾವು ನಮ್ಮ ದುರ್ಗುಣಗಳನ್ನು ಹೋಗಲಾಡಿಸಲಿಕ್ಕೆ ಮುಂದಾಗಲಿಕ್ಕೆಬೇಕು ಅವರು ಶ್ರೀ ಕೃಷ್ಣನ ಅನುಗ್ರಹದಿಂದ ತಮ್ಮ ಕಾರ್ಯದಲ್ಲಿ ಯಶಸ್ಸನ್ನು ದೊರಕಿಸಿ, ರಾಜ್ಯ ಮೋಕ್ಷ ಪದವಿಯನ್ನು ಪಡದರೋ, ಅದೇ ಪದವಿಯನ್ನು ನಾವಾದರೂ ಪಡೆಯಬಹುದು ಆದರೆ, ಈ ಕಾರ್ಯಕ್ಕೆ ತಕ್ಕ ಆಯುಧಗಳನ್ನು ತರಲಿಕ್ಕೆ ನಾವು ಸೀಮೋಲ್ಲಂಘನ ಮಾಡಿ,ಮುಂದಿನ ಕಾರ್ಯವನ್ನು ಆರಂಭಿಸುವ ಶುಭ ಮುಹೂರ್ತವು ಇರುವದು ಆಗಿನ ಕುರುಕ್ಷೇತ್ರವು ಬೇರೆ ಇತ್ತು ಆಗಿನ ಆಯುಧಗಳು ಬೇರೆ ಆದರೆ ಮೂಲತತ್ವ ಕಾರ್ಯ ಒಂದೇ

ಈ ರೀತಿಯಿಂದಲೇ ನಾವು ಹಬ್ಬದ ಗೂಢವನ್ನು ಅರಿತುಕೊಂಡು ವರ್ತಿಸಬೇಕಾಗಿದೆ. ಕೇವಲ ಅಂಧಪರಂಪರೆಯಿಂದ ನಡೆಯುತ್ತ ಬಂದ ಹಬ್ಬಗಳನ್ನು ಅರ್ಥದ ಮನನ ಮಾಡದೇ ನಡೆಸುವದೆಂದರೆ, ಕತ್ತೆಯು ಪುಸ್ತಕಗಳ ಹೊತ್ತಿಗೆಯನ್ನು ಹೊತ್ತಂತೆಯೇ ಸರಿ ನಮ್ಮ ಹಿರಿಯರು ಪ್ರಾಣಾಯಾಮ ಮಾಡುವದನ್ನು ಕಂಡು ನಾವೂ ಬಾಯಿ ಮೂಗು ಹಿಡಿದು ಕೂಡ್ರುವದ್ದೇ ಇದಾದರೂ ಮೂರ್ಖತನದ್ದಾಗುವದು ಹೆಚ್ಚು ಬಿಗಿ ಹಿಡಿದರೆ, ಉಸಿರು ಸಿಕ್ಕು, ನಾವು ಸಾವಿಗೆ ಮಾತ್ರ ಈಡಾಗುವೆವು!

ಆದ್ದರಿಂದ, ಪ್ರತಿ ಕ್ಷಣವೂ ದುರುಳತನದ ಕೂಡ ಕರ್ಮ ಭೂಮಿಯೆಂಬ ಕುರುಕ್ಷೇತ್ರದಲ್ಲಿ ನಡೆದ ಈ ಮಹಾ ಯುದ್ಧದ ಸಲುವಾಗಿ ಬೇಕಾದ ಎಲ್ಲ ಆಯುಧಗಳನ್ನು ಜೋಡಿಸಿಕೊಂಡು, ಪರಮಾತ್ಮನನ್ನೇ ಸಾರಥಿಯಾಗಿ ಸ್ವೀಕರಿಸಿ, ಆತನ ಅಧಿಷ್ಠಾನದಿಂದಲೇ ನಾವು ಕಾರ್ಯಗಳನ್ನು ಮಾಡುತ್ತ ಹೋಗಿ, ದಸರೆಯಂಥ ಹಬ್ಬಗಳನ್ನು ಸಾರ್ಥವಾಗಿ ಆಚರಿಸಬೇಕು ಅಂದರೆ ... ಸಂಸ್ಕೃತಿಗೆ ಅನುಸರಿಸಿ, ನಮ್ಮ ಪ್ರಗತಿ ... ಮಾಡಿಕೊಂಡ ಶ್ರೇಯವು ನಮಗೆ ಬರ್‍ವುದು. ನಮ್ಮ ಕಾರ್ಯವೂ ಆಗುವದು.'

ಇವ್ವಾದ ಬಳಿಕ ... ವಾಚನಾಲಯದ ವಿಷಯಕ್ಕೆ ... ಶ್ರೀ. ... ತಮ್ಮ ಭಾಷಣವನ್ನು ದಿವಾಕರ ... ಮುಗಿಸಿದರು. —ಕರ್ಮವೀರ, ಧಾರವಾಡ

ಕಾನಡಾವೃತ್ತ.

ಗುರುವಾರ, ತಾರೀಖು ೨೫ ಮಾಹೆ ನವಂಬರ ೧೯೨೬

ಇದಿರಾಗಿರಿ.

ಲಾಲಾಜಿಯವರ ಉಪದೇಶ.

ಕಳೆದ ಬುಧವಾರ ತಾರೀಖು ೧೭ನೇ ರಾತ್ರೆ ಸಮಯದಲ್ಲಿ ಸರ್ವಾಧಿಪತಿ ರೀಡಿಂಗ ದೊರೆಗಳು ದಿಲ್ಲಿ ನಗರಿಯೊಳಗಿನ ಚೆಮ್ಸಫರ್ಡ ಕ್ಲಬ್ಬಿನಲ್ಲಿ ಮಾಡಿದ ಭೋಜನೋತ್ತರ ಭಾಷಣದ ಸಂಕ್ಷಿಪ್ತ ವಿವೇಚನವನ್ನು ಕಳೆದ ಸಂಚಿಕೆಯಲ್ಲಿ ನಾವು ಮಾಡಿರುವೆವು. ಇಂದಿಗೆ ಈ ಭಾಷಣದಿಂದ ಉಂಟಾದ ಹೊಸ ಪರಿಸ್ಥಿತಿಯನ್ನು ಸಮಾಲೋಚಿಸಬೇಕಾಗಿದೆ.

ಸರ್ವಾಧಿಪತಿಗಳ ಭಾಷಣದೊಳಗಿನ ಮುಖ್ಯ ಭಾಗವು ಬೆದರಿಕೆಯದು. ಸುಧಾರಣೆಯ ಕಾನೂನಿನನ್ವಯ ಏರ್ಪಾಟು ಹೊಂದಿದ ಹೊಸ ಕೌನ್ಸಿಲುಗಳನ್ನು ಮುರಿಯಲು ಟೊಂಕ ಕಟ್ಟಿದ ಸ್ವರಾಜ್ಯವಾದಿಗಳಿಗೆ ದೊರೆಗಳು ಮುದ್ದಾಂ ಎಚ್ಚರಿಕೆಯನ್ನಿತ್ತಿರುವರು. ಸರಕಾರಕ್ಕೆ ಇದಿರಾಗಿ, ಕೌನ್ಸಿಲುಗಳಲ್ಲಿ ಹೋರಾಡುವವರಿಗೆ ಸರ್ವಾಧಿಪತಿಗಳು ಮುಂಜಾಗ್ರತೆಯನ್ನಿತ್ತು, ಹೀಗೆ ಹಟ ಮಾಡಿ ಕೌನ್ಸಿಲುಗಳನ್ನು ಮುರಿಯಲೆತ್ನಿಸಿದರೆ, ಹಸ್ತಬಂದಿ ಸ್ವರಾಜ್ಯದ ಕಾಯಿದೆಯನ್ನೇ ರದ್ದುಪಡಿಸಿ, ಹಿಂದಿನ ಬೇಜವಾಬದಾರ ರಾಜ್ಯಪದ್ಧತಿಯನ್ನೇ ಮುಂದೆಯೂ ಕೈಕೊಳ್ಳುವೆವೆಂದು ಜಾಹೀರಪಡಿಸಿರುವರು. ಇದೇ ಸಮಯದಲ್ಲಿ ಪಂಜಾಬದಲ್ಲಿ ನಡೆದ ದಡಪಶಾಹಿಯ ಮೇಲಿಂದ ಸರ್ವಾಧಿಪತಿಗಳು ಪ್ರಜೆಗಳ ಚಳವಳಿಯನ್ನು ಬಗ್ಗುಬಡಿಯಲು ಪುನಃ ಸಜ್ಜರಾಗಿರುವರೆಂದು ಯಾರೂ ಹೇಳುವರು. ಪಂಜಾಬದಲ್ಲಿ ಪ್ರಜಾಮಾನ್ಯತೆಯನ್ನು ಪಡೆದ, ಪ್ರಾಂತಿಕ ಸರಕಾರವು ಕಾಯಿದೆಯಿಂದ ಮಾನ್ಯತೆ ಕೊಟ್ಟ, ಶಿರೋಮಣಿ ಗುರುದ್ವಾರ ಪ್ರಬಂಧಕ ಕಮಿಟಿಯ ಅಧ್ಯಕ್ಷ ಮೊದಲಾದ ಕಾರ್ಯಕಾರಿ ಮಂಡಳದವರನ್ನು ಸೆರೆಹಿಡಿದರು. ಅಕಾಲಿ ದಳ ಹಾಗು ಶಿರೋಮಣಿ ಕಮಿಟಿ, ಈ ಎರಡೂ ಸಂಸ್ಥೆಗಳಿಗೆ ಬೇಕಾಯಿದೇಶೀರ ಎಂಬ ... ಠಸ್ಸ ಹೊಡೆದು, ಪಂಜಾಬದಲ್ಲಿ ದೊಂಬಿ ... ಬ್ಬಿಸಿರುವರು. ಅಂತರ್ಹೇತುವು ಸ್ಪಷ್ಟವದೆ. ಶೀಖ ಸಮಾಜದ ಸಂಘಟನೆಯನ್ನು ಮುರಿಯುವುದು ನೌಕರಶಾಹಿಯ ಮೂಲಹೇತುವು. ಇದರಿಂದಲೇ ಪಂಜಾಬದ ನೌಕರಶಾಹಿಯು ದಡಪಶಾಹಿಯ ಕಾನೂನುಗಳಿಗೆ ಕಾರಣವನ್ನೆಸೆದಿರುವದು. ಸರ್ವಾಧಿಪತಿಗಳೂ ಭೋಜನೋತ್ತರ ಮಾಡಿದ ಭಾಷಣದಲ್ಲಿ ಪ್ರಜೆಗಳಿಗೆ ಅವ್ಹಾನ ಮಾಡಿರುವರು. "ನಿಮಗೆ ನಿಮ್ಮ ಯೋಗ್ಯತೆಯಂತೆ ಸ್ವರಾಜ್ಯದ ಹಕ್ಕುಗಳನ್ನು ದಾನ ಮಾಡುವದು ಬ್ರಿಟಿಶ್ ಕೇವಲ ಮರ್ಜಿಯು. ಅವರ ಸಹಾನುಭೂತಿಯನ್ನೇ ನೀವು ಯಾವಾಗಲೂ ನಿರೀಕ್ಷಿಸುತ್ತಿರಬೇಕು. ಅದನ್ನು ಧಿಕ್ಕರಿಸಿ, ನೀವು ಮನಸ್ವೀ ವರ್ತಿಸಿದರೆ, ನಿಮಗೆ ನಾವು ಹಾಗೆ ಮಾಡಗೊಡೆವು." ಎಂಬುದೇ ಸರ್ವಾಧಿಪತಿಗಳ ಭಾಷಣದ ಇತ್ಯರ್ಥವು. ಈ ಭಾಷಣದಿಂದ ಪಂಜಾಬದೊಳಗಿನ ಅವಿಚಾರಕೃತ್ಯಗಳಿಂದ ನೌಕರಶಾಹಿಯ ಅಂತರಂಗವು ಸ್ಪಷ್ಟವಾಗುತ್ತದೆಂದು ಲಾಲಾ ಲಜಪತರಾಯರು ನುಡಿದದ್ದು ಯಥಾರ್ಥವೆಂದು ಯಾರು ಹೇಳರು!

ದೊರೆಗಳ ಅವ್ಹಾನವನ್ನು ಪ್ರಜೆಗಳು ಸ್ವೀಕರಿಸಿ, ಅದಕ್ಕೆ ಇದಿರಾಗುವದು ನಮ್ಮೆಲ್ಲರ ಪ್ರಥಮ ಕರ್ತವ್ಯವು. ನೌಕರಶಾಹಿಯುಗೂಡ ಮಲ್ಲಯುದ್ಧ ಮಾಡಿ, ನಮ್ಮ ಪೌರುಷವನ್ನು ಜಗತ್ತಿಗೆ ಜಾಹೀರು ಮಾಡುವ ಶುಭ ಸಂಧಿಯು ಅಖಿಲ ಭಾರತೀಯರಿಗೆ ಈಗ ಪ್ರಾಪ್ತವಾಗಿದೆ. ಶೀಖ ಸಮಾಜದ ಮೇಲೆ ಈಗ ಸತ್ವಪರೀಕ್ಷೆಯ ಕಾಲವು ಬಂದೊದಗಿದೆಂದು ಹೇಳಿದರೆ, ಅತಿಶಯೋಕ್ತಿಯಾಗದು. ಪಂಜಾಬದೊಳಗಿನ ಶೀಖ ಸಮಾಜವು ಸಂಘಟಿತವಿದ್ದು, ಮಹಾತ್ಮರ ಅಹಿಂಸಾವ್ರತವನ್ನು ವ್ಯವಹಾರದಲ್ಲಿ ತಂದವರಿದ್ದು, ದೊರೆಗಳ ಅವ್ಹಾನಕ್ಕೆ ಪ್ರಾಂತಿಕ ನೌಕರಶಾಹಿಯ ದಡಪಶಾಹಿಗೆ, ಯೋಗ್ಯ ಹಾಗು ಚೊಕ್ಕ ಉತ್ತರವನ್ನೀಯುವರೆಂದು ಲಾಲಾ ಲಜಪತರಾಯರು ಉದ್ಗರಿಸಿರುವರು. ಶಿರೋಮಣಿ ಕಮಿಟಿಯ ಈ ವರೆಗಿನ ಪರಾಕ್ರಮವನ್ನರಿತವರು ಕೂಡ ಶೀಖ ಸಮಾಜಕ್ಕೆ ಅನುರೂಪವಾಗಿ ಕಮಿಟಿಯವರು ನಡಕೊಳ್ಳುವರೆಂದು ಖಾತ್ರಿಪೂರ್ವಕ ಎಣಿಸಬಹುದು.

ಇತರ ಸಮಾಜಗಳ ಮೇಲೂ ಮಹತ್ವದ ಜವಾಬದಾರಿಯು ಬಿದ್ದಿರುವದು. ಈ ಸಮಯದಲ್ಲಿ ಪಂಜಾಬದಲ್ಲಿಯೇ ವಿಶೇಷವಾಗಿ ಹಿಂದೂ-ಮುಸಲ್ಮಾನರೊಳಗೆ ವಿಕೋಪವಾದದ್ದು ನಮ್ಮೆಲ್ಲರ ದುರ್ದೈವವು. ಈಗಾದರೂ ಅವರು ಎಚ್ಚರಾಗಬೇಕು. ದೇಶಬಾಂಧವರೊಡನೆ ಕಲಹಮಾಡಿ, ಪರಸ್ಪರಿಗೆ ತಾವು ಹೇಗೆ ಇಂಬುಗೊಡುತ್ತೇವೆಂದು ಅವರು ಲಕ್ಷಿಸಲಿ. ಹಿಂದೂಗಳಿರಲಿ, ಮುಹಮ್ಮದೀಯರಿರಲಿ, ಶೀಖರಿರಲಿ, ಎಲ್ಲರೂ ಭರತಪುತ್ರರೇ. ಶೀಖ ಸಮಾಜದ ಮೇಲೆ ಪಂಜಾಬದ ನೌಕರಶಾಹಿಯು ಎಸೆದ ಅಸ್ತ್ರಕ್ಕೆ ಪ್ರತ್ಯಸ್ತ್ರವನ್ನು ಹೂಡಲಿಕ್ಕೆ, ಹಿಂದೂ-ಮುಹಮ್ಮದೀಯ ಮೊದಲಾದ ಎಲ್ಲ ಸಮಾಜದವರು ಒಕ್ಕಟ್ಟಾಗಿ ಶೀಖರೊಡನೆ ಸಹಕಾರ್ಯ ಮಾಡಲಿ. ಸಂಕಟ ಸಮಯಕ್ಕೆ ದೇಶಬಾಂಧವರಿಗೆ ನೆರವಾಗಿ, ಭರತ ಪುತ್ರರೆಲ್ಲರೂ ಒಂದೇ ದೇಶಮಾತೆಯ ಪುತ್ರರೆಂದು ಕೃತಿಯಿಂದ ಸಿದ್ಧಪಡಿಸುವ ಸಮಯವು ಇದೇ. ಹಿಂದೂ ಮುಹಮ್ಮದೀಯರು ಈಗ ಸಣ್ಣ ಕ್ಷುಲ್ಲ ಅಥ ಕಾರಸ್ಥಾನಗಳಿಗಾಗಿ ದೇಶಬಾಂಧವರೊಡನೆ ಕಾದಾಡುವ ಹವ್ಯಾಸವನ್ನು ತೊರೆದು, ನಮ್ಮೆಲ್ಲರಿಗೆ ಎದುರಾಗುವ ನೌಕರಶಾಹಿಯುಗೂಡ ಒಮ್ಮನಸ್ಸಿನಿಂದ, ಏಕ ರಾಷ್ಟ್ರೀಯ ಭಾವನೆಯಿಂದ ಕಾದಾಡಲು ಪ್ರಾಪ್ತವಾದ ಸುಸಂಧಿಯನ್ನು ಹೋಗಲಾಡಿಸಬಾರದೆಂದು ಲಾಲಾ ಲಜಪತರಾಯರು ಸೋಲನಿನಿಂದ ಮಾಡಿದ ವಿನಂತಿಯನ್ನು ಅಖಿಲರೂ ಮನ್ನಿಸುವರೆಂದು ನಾವು ನೆರೆ ನಂಬಿದ್ದೇವೆ.

ಮತ್ತೊಂದು ಸೂಚನೆಯನ್ನೂ ಲಾಲಾಜಿಯವರು ಮಾಡಿರುವರು. ಅದೇನಂದರೆ.— ಕೌನ್ಸಿಲು ಚುನಾವಣೆಯಲ್ಲಿ ಸ್ವರಾಜ್ಯ ಪಕ್ಷದ ಶಿಫಾರಸು ಪಡೆದವರನ್ನೇ ಆರಿಸಿಕೊಡುವದು. ಸ್ವತಂತ್ರವಾದ ಉಮೇದವಾರರು, ಎಷ್ಟೂ ಯೋಗ್ಯ ಪುರುಷರಿದ್ದರೂ, ಅವರಿಗೆಂದೂ ಮತ ಕೊಡದೆ, ಪ್ರಜೆಗಳು ಸ್ವರಾಜ್ಯ ಪಕ್ಷದವರನ್ನೇ ಆರಿಸಿ ಕಳಿಸಬೇಕು. ಯಾಕಂದರೆ, ಸರ್ವಾಧಿಪತಿಗಳ ಕಟಾಕ್ಷವು ಸ್ವರಾಜ್ಯ ಪಕ್ಷದ ಮೇಲಿದೆ. ಸ್ವರಾಜ್ಯ ಪಕ್ಷಕ್ಕೆ ದೇಶದಲ್ಲಿ ಮಾನ್ಯತೆ ಸಿಗಬಾರದೆಂದು ಸರ್ವಾಧಿಪತಿಗಳ ಇಚ್ಛೆಯಿದೆ. ಆದರಿಂದಲೇ ಸ್ವರಾಜ್ಯ ಪಕ್ಷವನ್ನೇ ಪ್ರಜೆಗಳೂ ಮನ್ನಿಸುತ್ತಾರೆಂತಲೂ, ದೊರೆಗಳ ಬೆದರಿಕೆಗೆ ಸೊಪ್ಪು ಹಾಕುವ ಪ್ರಜಾ ಜನರು ಈಗಿರುವದಿಲ್ಲೆಂತಲೂ ದೊರೆಗಳಿಗೆ ಖಂಡಿತವಾಗಿ ತಿಳಿಸುವದು ನಮ್ಮ ಕರ್ತವ್ಯವು. ಸ್ವತಂತ್ರ ಉಮೇದವಾರರಾಗಿ ನಿಂತವರು ಸ್ವರಾಜ್ಯ ಪಕ್ಷದ ಧ್ಯೇಯವನ್ನು ಮನ್ನಿಸಿ, ಆ ಪಕ್ಷವನ್ನು ಸೇರಬೇಕೆಂದು ಲಾಲಾಜಿಯವರು ಮಾಡಿದ ಸೂಚನೆಯನ್ನು ಸ್ವತಂತ್ರ ಉಮೇದವಾರರು ನಿರ್ವಿಕಾರ ಬುದ್ಧಿಯಿಂದ ಆಲೋಚಿಸಿ, ಉಂಟಾದ ಹೊಸ ಪರಿಸ್ಥಿತಿಯನ್ನು ಲಕ್ಷಿಸಿ, ಅಮಲಬಜಾವಣೆ ಮಾಡಬೇಕೆಂದು ನಮ್ಮ ಕೋರಿಕೆ.

ಲಾಲಾಜಿಯವರು ಮಾಡಿದ ಸೂಚನೆಗಳನ್ನು ಮೇಲೆ ವಿವರಿಸಿರುವೆವು. ಇದಲ್ಲದೆ, ಲಾಲಾಜಿಯವರು ಸರ್ವಾಧಿಪತಿಗಳ ಭಾಷಣದಿಂದ ಉಂಟಾದ ಪರಿಸ್ಥಿತಿಯನ್ನು ಸಮಾಲೋಚಿಸಿ, ಅದಕ್ಕನುಗುಣವಾದ ಪ್ರತೀಕಾರ ಯೋಜನೆಯನ್ನು ಅಖಿಲ ಭಾರತೀಯ ಲೋಕನಾಯಕರ ಸಲ್ಲೆಯಿಂದ ಕೈಕೊಳ್ಳಬೇಕೆಂದು ಠರಾಯಿಸಿರುವರು. ಮತ್ತು ಇದೇ ಉದ್ದೇಶದಿಂದ ಕಳೆದ ತಾ. ೨೦ನೇ ಶನಿವಾರಕ್ಕೆ ಸೋಲನಿನಲ್ಲಿ ಡಾ| ಕಿಚಲೂ, ಶ್ರೀ| ಗಿರಿಧರಲಾಲ, ಶ್ರೀ| ಪ್ರಕಾಶಂ ಮೊದಲಾದ ರಾಷ್ಟ್ರೀಯ ಸಭೆಯ ಚಾಲಕರಿಗೆ ನಿಮಂತ್ರಿಸಿ, ಆಲೋಚನೆ

ನಡಿಸಿರುವರೆಂತಲೂ ಸುದ್ದಿ ಇದೆ. ಲಾಲಾಜಿಯವರು ಅ... ದ್ದರೂ, ದೊರೆಗಳ ಭಾಷಣದಿಂದ ಉಂಟಾದ ಪರಿಸ್ಥಿತಿಗೆ ಇದಿರಾಗಲು ಶಕ್ತಿ ಮೀರಿ ನಡಿಯುವದು ಪ್ರತಿಯೊಬ್ಬ ದೇಶಬಾಂಧವನ ಕರ್ತವ್ಯವೆಂದು ಮನೋನಿರ್ಧಾರ ಮಾಡಿ, ಅವರು ಲೋಕನಾಯಕರನ್ನು ನಿಮಂತ್ರಿಸಿದ್ದನ್ನು ಕೇಳಿ, ನಮಗೆ ಬಲು ಆನಂದವಾಗುತ್ತದೆ. ಲೋಕನಾಯಕರು ನಿರ್ಧರಿಸಿದ ಮಾರ್ಗವನ್ನು ಅಖಿಲ ಪ್ರಜೆಗಳು ಅಕ್ರಮಿಸಿ, ನೌಕರಶಾಹಿಗೆ ಇದಿರಾಗಬೇಕೆಂದು ನಾವು ಅಗ್ರಹಪೂರ್ವಕ ಸೂಚಿಸುವೆವು.

ಸ್ಫುಟ ಸೂಚನೆಗಳು.

೧. ವಿಖ್ಯಾತ ಕರಾಚಿ ಖಟ್ಲೆಯಲ್ಲಿ ಶಿಕ್ಷೆ ಹೊಂದಿದ ಮೌಲಾನಾ ಶೌಕತ ಅಲ್ಲಿಯವರು ವಧವಾನಿನಲ್ಲಿ ಕಳೆದ ೩೧ನೇ ತಾರೀಖು ಶುಕ್ರವಾರ ಮಧ್ಯಾಹ್ನ ೨॥ ಘಂಟೆ ಸಮಯಕ್ಕೆ ಬಿಡುಗಡೆ ಹೊಂದಿದ ವರ್ತಮಾನವನ್ನು ಅರುಹಲು, ನಮಗೆ ಅತ್ಯಾನಂದವಾಗುತ್ತದೆ. ಶೌಕತ ಅಲ್ಲಿಯವರನ್ನು ರಾಜಕೋಟ ಜೈಲಿನೊಳಗಿಂದ ಶುಕ್ರವಾರ ಬೆಳಗಿನ ೫ ಘಂಟೆಗೆ ಮೋಟಾರಿನಿಂದ ಒಯ್ದು, ವಧವಾನಿನಲ್ಲಿಟ್ಟರು. ಅಲ್ಲಿ ಅವರಿಗೆ ಮಾತೋಶ್ರೀಯವರಾದ ಬಾಯಿಅಮ್ಮಾ ಹಾಗು ತಮ್ಮಂದಿರಾದ ಮೌಲಾನಾ ಮುಹಮ್ಮದ ಅಲ್ಲಿಯವರ ಬೆಟ್ಟಿಯಾಯಿತು. ಎಲ್ಲರೂ ಅಹಮದಾಬಾದಿಗೆ ಬಂದಿರುವರು. ಶೌಕತ ಅಲ್ಲಿಯವರು ಇಂದು ೧ನೇ ತಾರೀಖಿಗೆ ಬಿಡುಗಡೆಯಾಗುವರೆಂದು ಮುಹಮ್ಮದ ಅಲ್ಲಿಯವರು ನುಡಿದಿದ್ದರಿಂದ, ಈ ಬಿಡುಗಡೆಯು ಕೆಲ ದಿನಗಳ ಮುಂಚೆಯೇ ಒದಗುವ ಕಲ್ಪನೆ ಇದ್ದಿಲ್ಲವಾದ್ದರಿಂದ, ಮಾತೋಶ್ರೀಯವರಿಗೂ, ಮುಹಮ್ಮದ ಅಲ್ಲಿಯವರಿಗೂ ಆನಂದ-ಆಶ್ಚರ್ಯಗಳಾಗುವದು ಸಹಜವು. ಶೌಕತ ಅಲ್ಲಿಯವರು ಹೊಸ ರಾಜಕಾರಣದೊಳಗಿನ ಪ್ರಸಿದ್ಧ ...ಕೇಸರು. ಹಿಂದೂ-ಮುಹಮ್ಮದೀಯರ ಐಕ್ಯರಕ್ಷಣಕ್ಕಾಗಿ, ಹಗಲಿರುಳು ಅವಿಶ್ರಾಂತ ದುಡಿಯುವ ಪುಣ್ಯಾತ್ಮರವರು. ಮಹಾತ್ಮರ ಅದ್ಭುತ ಚಮತ್ಕಾರಗಳನ್ನು ರಾಜಕಾರಣದಲ್ಲಿ ಉಂಟುಮಾಡಲು, ಮಹಾತ್ಮರಿಗೆ ನೆರವಾದ ಬಂಟರಿವರು. ಇವರ ಕಾರ್ಯಕೌಶಲ್ಯವು ಪ್ರಶಂಸನೀಯವಿದೆ. ಮೌಲಾನಾ ಮುಹಮ್ಮದ ಅಲ್ಲಿಯವರು ನುಡಿದಂತೆ, ಶೌಕತ ಅಲ್ಲಿಯವರು ದಿಲ್ಲಿಯ ಕೊಂಗ್ರೆಸ್ಸಿನಲ್ಲಿದ್ದರೆ, ಸ್ವರಾಜ್ಯವಾದಿಗಳಿಗೂ, ಕಡು ಅಸಹಕಾರಿಗಳಿಗೂ ಸಂತೋಷಬಡಿಸಿ, ರಾಷ್ಟ್ರೀಯ ಸಭೆಯ ಕಾರ್ಯವನ್ನು ಚಾತುರ್ಯದಿಂದ ನಡಿಸುತ್ತಿದ್ದರು. ಇಂಥ ರಾಷ್ಟ್ರಕಾರ್ಯಕ್ಷಮ ಪುರುಷರು ಸರ್ವಾಧಿಪತಿಗಳ ಆಜ್ಞಾನ ಕಾಲದಲ್ಲಿ ಬಿಡುಗಡೆ ಹೊಂದಿದ್ದು ಭಾರತೀಯರ ಸುದೈವವು. ಮುಹಮ್ಮದ ಅಲ್ಲಿಯವರಿಗೂ ಹೊಸ ಹುರುಪು ಪ್ರಾಪ್ತವಾಗುವದು. ಅಖಿಲ ಭರತಖಂಡದಲ್ಲಿಯೂ ಏಕಪ್ರಕಾರದ ಸ್ಫುರಣವು ಉಂಟಾಗುವದು. ಇಂಥ ಇಕ್ಕಟ್ಟಿನ ಸಂದರ್ಭದಲ್ಲಿ ಬಿಡುಗಡೆ ಹೊಂದಿದ ಮೌಲಾನಾ ಶೌಕತ ಅಲ್ಲಿಯವರನ್ನು ಅಂತಃಕರಣಪೂರ್ವಕ ಸ್ವಾಗತೀಕರಿಸಿ, ದೇಶದೊಳಗುಂಟಾದ ಪಕ್ಷಭೇದದ ಭೂತವು ಶೀಘ್ರವೇ ಅಸ್ತವಾಗಲೆಂದು ನಾವು ಪರಮೇಶನೆಡೆಗೆ ಮನಃಪೂರ್ವಕ ಪ್ರಾರ್ಥಿಸುವೆವು.

೨. ಮೌ॥ ಶೌಕತ ಅಲ್ಲಿಯವರನ್ನು ಸ್ವಾಗತೀಕರಿಸುವಾಗ, ಕ...ಬಕದೊಳಗಿನ ರಾಷ್ಟ್ರೀಯ ಸಭೆಯ ಏಕನಿಷ್ಠ ಭಕ್ತರಾದ ಶ್ರೀ॥ ದತ್ತೋಪಂತ ಮುಜಲಿ, ರಾಮರಾಯ ಮುಲ್ಕಿ, ನಾರಾಯಣರಾವ ಈ ತ್ರಿಮೂರ್ತಿಗಳು ಕಾರಾಗೃಹವಾಸವನ್ನು ಸಂತೋಷದಿಂದ ಸ್ವೀಕರಿಸಿದ ಬಗ್ಗೆ ಅವರಿಗೆ ಅಭಿನಂದಿಸಬೇಕಾಗಿದೆ. ಈ ರಾಷ್ಟ್ರಸೇವಕರ ಅಂದೋಲನಗಳನ್ನು ಇನ್ನೊಂದೆಡೆಯಲ್ಲಿ ಪ್ರಕಟಿಸಿರುವೆವು. ಅದರ ಮೇಲಿಂದ ಈ ಪುರುಷರ ಯೋಗ್ಯತೆ, ನಿರ್ಮಲ ಸ್ವಾರ್ಥತ್ಯಾಗಗಳ ಅರಿವು ವಾಚಕರಿಗುಂಟಾಗುವದು. ಶ್ರೀ॥ ಮುಜಲಿಯವರ ಕಾರಾಗೃಹವಾಸವು ಭಾಷಣಸ್ವಾತಂತ್ರ್ಯದ ಪ್ರಸ್ಥಾಪನೆಗಾಗಿ ಒದಗಿಬಂದಿದ್ದರೆ, ಶ್ರೀ॥ ನಾರಾಯಣರಾವ-ರಾಮರಾಯರು ಪತ್ರಿಕಾಕರ್ತರ ಕರ್ತವ್ಯವನ್ನು ನೆರವೇರಿಸಿದ್ದಕ್ಕಾಗಿ ಬಂಧನದಲ್ಲಿ ಬಿದ್ದಿರುವರು. ಇವರು ಮಹಾತ್ಮರ ಅಹಿಂಸಾಮಯ ಅಸಹಕಾರಿತೆಯ ಉಪಾಸಕರಿದ್ದದರಿಂದ, ತಮ್ಮ ಬಚಾವನ್ನು ಯಾವದೇ ರೀತಿಯಿಂದ ಮಾಡಿಕೊಳ್ಳಲಿಲ್ಲ. ಕಾಯಿದೆಯ ಸ್ಥಾಪನೆಗಾಗಿ ಬಡಿದಾಡುವ ನೌಕರಶಾಹಿಯು, ಕಾಯಿದೆಯಂತೆ ವರ್ತಿಸದಿದ್ದರೂ, ಶ್ರೀ॥ ಮುಜಲಿಯವರು ಆ ಬಗ್ಗೆ ಯಾವದೇ ತರದ ಆತಂಕ ಹೇಳದೆ, ಹುಕುಮು ಉಲ್ಲಂಘನೆಯ ಹೇತುವನ್ನು ಜಾಹೀರುಪಡಿಸಿ, ಅಸಹಕಾರಿಗಳ ಕಾದಾಟದ ನಿರ್ಮಲತ್ವವನ್ನು ಪ್ರದರ್ಶಿಸಿರುವರು. ಅಸ್ತೇಯ-ಅಪರಿಗ್ರಹ ತತ್ವಗಳನ್ನು ತಾವು ಆಚರಿಸುವವರಿದ್ದದರಿಂದ, ದಂಡದ ಶಿಕ್ಷೆಯನ್ನು ವಿಧಿಸುವದು ನಿರರ್ಥಕವೆಂದು ಮೆಜಿಸ್ಟ್ರೇಟರಿಗೆ ತಿಳಿಸಿ, ದಂಡದ ಹುಕುಮಿನ ಹೇತುವನ್ನೇ ನಿಷ್ಫಲಗೊಳಿಸಿದರು. ರಾಮರಾಯ ಮುಲ್ಕಿ-ನಾರಾಯಣರಾಯರೂ ಇದೇ ಪ್ರಕಾರದ ನಿರ್ಮಲ ವರ್ತನವನ್ನು ಪ್ರದರ್ಶಿಸಿ, ಕಾರಾಗೃಹವನ್ನು ಸೇರಿಕೊಂಡಿರುವರು. ಶ್ರೀ॥ ನಾರಾಯಣರಾಯರಿಗೆ ವಿಧಿಸಿದ ೩೦೦ ರೂಪಾಯಿಗಳ ದಂಡವನ್ನು ವಸೂಲ ಮಾಡಿಕೊಳ್ಳುವದಕ್ಕಾಗಿ ಮೆಜಿಸ್ಟ್ರೇಟರು ಜಪ್ತಿಯ ಹುಕುಮನ್ನು ಹೊರಡಿಸಿ, ಹಿರಿಯತ್ಮದೊಳಗಿನ ಅವರ ಚಿಕ್ಕ ತಂದೆಯವರ ಮನೆಯಿಂದ ಕರುಗಳ ಸಹಿತ ೭ ಕರೆಯುವ ದನ, ೧ ಇತರ ದನ, ೧೭ ಮುಡಿ ಪಚ್ಚೆಸರು, ೩ ಮುಡಿ ಎಳ್ಳು, ೧ ದೊಡ್ಡ ಗಡಿಯಾರ, ೧ ಮರದ ಪೆಟ್ಟಿಗೆ ಹೀಗೆ ಸಾಮಾನುಗಳನ್ನು ಜಪ್ತು ಮಾಡಿರುವರು. ಇಂಥ ಕಚೇಷ್ಟೆಗಳಿಂದ ರಾಷ್ಟ್ರಸೇವಕರನ್ನು ಹಣ್ಣಿಗೆ ತರುವ ಹವ್ಯಾಸ ಹಿಡಿಯುವದು ಕೇವಲ ತಪ್ಪೆಂದು ನೌಕರಶಾಹಿಗೆ ಈ ವರೆಗೆ ಅನೇಕರು ತಿಳಿಸಿರುವರು. ಆದರೂ, ಇಂಥ ನಿಂದ್ಯ ಚೇಷ್ಟೆಗಳನ್ನು ಅವರು ಆಚರಿಸುವದನ್ನು ನೋಡಿ, ನಮಗೆ ವ್ಯಸನವಾಗುತ್ತದೆ. ಶ್ರೀ॥ ರಾಮರಾಯ-ನಾರಾಯಣರಾಯರು ಸಹೋದರರಂತೆ ನಡಿಸಿದ 'ಸತ್ಯಾಗ್ರಹೀ' ಪತ್ರಿಕೆಯ ವಾಚಕರಿಗೆ ಅವರ ನಿರ್ಮಲ ರಾಷ್ಟ್ರಸೇವೆಯ ವಿಸ್ಮರಣೆಯು ಎಂದೂ ಘಟಿಸದು. ಶ್ರೀ॥ ಮುಲ್ಕಿ ವಾಮನ ಕುಡವರವರು 'ಸತ್ಯಾಗ್ರಹೀ'ಯ ಚಾಲಕತ್ವವನ್ನು ವಹಿಸಿಕೊಂಡು ರಾಷ್ಟ್ರಸೇವೆಯನ್ನು ನಡಿಸುವದನ್ನು ನೋಡಿ, ಎಲ್ಲರಿಗೂ ಆನಂದವಾಗುವದು. ಈ ತ್ರಿಮೂರ್ತಿಗಳಿಗೆ, ಸ್ವಾರ್ಥತ್ಯಾಗದಿಂದ, ಸಂತೋಷದಿಂದ ಪ್ರಜೆಗಳ ಹಕ್ಕುಪ್ರಸ್ಥಾಪನೆಗಾಗಿ ಬಂಧನದಲ್ಲಿ ಸೇರಿಕೊಂಡ ಬಗ್ಗೆ ಆದರಪೂರ್ವಕ ಅಭಿನಂದಿಸಿ, ಅವರ ಕಾರ್ಯವನ್ನು ವಿಶೇಷ ಉತ್ಸಾಹದಿಂದ ನಡಿಸುವ ಸಾಮರ್ಥ್ಯವು ದೇಶಬಾಂಧವರಿಗೆ ಪ್ರಾಪ್ತವಾಗಲೆಂದು ನಾವು ಮನಃಪೂರ್ವಕ ಬಯಸುವೆವು.

೩. ಕಳೆದ ೩೧ ನೇ ತಾರೀಖಿಗೆ ಹೊನ್ನಾವರದಲ್ಲಿ ಕೂಡಿದ ರೈತರ ಹಾಗು ತೋಟಿಗರ ಸಭೆಯ ಹಕೀಕತಿನ ತಾತ್ಪರ್ಯವನ್ನು ಇನ್ನೊಂದೆಡೆಯಲ್ಲಿ ಪ್ರಕಟಿಸಿರುವೆವು. ಅದರ ಮೇಲಿಂದ ಹೊಸ ಮುದ್ರಣ ಲೇಖದನ್ವಯ ಜ್ಯಾರಿಗೆ ಬಂದ ಕಾಡಿನ ಸುರಾಜ್ಯದ ಅರಿವು ವಾಚಕರಿಗುಂಟಾಗುವದು. ವಿಂಗಡಿಸಿ ಕೊಟ್ಟ ಕ್ಷೇತ್ರವು, ಬಾಹ್ಯತಃ ಒಂದು ಎಕರೆಯೆಂದು ತೋರಿದರೂ, ನಿಜವಾಗಿ, ರೈತರಿಗೆ ಸಿಗುವಂಥಾದ್ದು ಬರೇ ೬ ಗುಂಟೆ ಸ್ಥಳ. ಇದರೊಳಗೆ ಬೇಸಾಯೋಪಯೋಗಿ ಮರಗಳು ಸಿಗುವದು ದುರ್ಲಭವೆಂದು ಸ್ವಾನುಭವದಿಂದ ಅಲ್ಲಿಯ ರೈತರು ತಿಳಿಸಿರುವರು. ಗೋಚರಾವ ಫೀಯ ಬಗ್ಗೆ ಅವರು ಕೊಟ್ಟ ಇತಿಹಾಸವು ಮನನೀಯವಿದೆ. ಜಂಗಲ ಖಾತೆಯು, ಮುಲ್ಕಿ ಖಾತೆಯಿಂದ ಯಾವ ವಚನ ಕೊಟ್ಟು, ಮೇವಿನ ಕ್ಷೇತ್ರವನ್ನು ತನ್ನ ಅಧಿಕಾರತೆಯಲ್ಲಿ ಸೆಳಕೊಂಡಿತು? ಈಗ ಅದನ್ನು ಧಿಕ್ಕರಿಸಿ, ಹೇಗೆ ಗೋಚರಾವ ಫೀಯನ್ನು ಆಕರಿಸಿತು? ಎಂಬ ಹಕೀಕತನ್ನು ಎಲ್ಲರೂ ಲಕ್ಷದಲ್ಲಿಡತಕ್ಕದ್ದು. ಮತ್ತೂ ಒಂದು ಉಪಕಾರವು ಹೊಸ ಮುದ್ರಣ ಲೇಖಗಳಿಂದ ಒದಗಿ ಬಂದಿದೆ. ಮೇವಿನ ಕ್ಷೇತ್ರಗಳನ್ನು, ಗ್ರಾಮ ಪಂಚಾಯತುಗಳಿಗೆ ಬೆಟ್ಟದ ಬೆಳವಣಿಗೆಗಾಗಿ ವಿಂಗಡಿಸಿಕೊಟ್ಟದ್ದರಿಂದ, ಇದ್ದ ಮೇವಿನ ಕ್ಷೇತ್ರವು ಅಲ್ಪಾವಧಿಯಲ್ಲಿಯೇ ನಾಮಶೇಷವಾಗುವದು. ಇಷ್ಟಾದರೂ, ಗೋಚರಾವ ಫೀಯ ವಸೂಲಿಯ ಕೆಲಸವು ಮಾತ್ರ, ನಿತ್ಯನೇಮದಂತೆ ನಡೆಯುತ್ತಲಿದೆ. ತೋಟಿಗರ ಬಗ್ಗೆ ವಿಧಿಸಿದ ಕಾನೂನುಗಳೂ ವಿಚಾರಾರ್ಹವಿವೆ. ತೋಟಿಗರಿಗೆ ೧ ಎಕರೆ ತೋಟಕ್ಕೆ ೯ ಎಕರೆ ಬೆಟ್ಟವನ್ನು ಕೊಡುತ್ತೇವೆಂದು ೧೯೦೩ ನೇ ಇಸವಿಯಲ್ಲಿ ನಂಬಿಸಿ, ತೋಟ ಎಕರೆಗೆ ರೂಪಾಯಿ ೮ ರಂತೆ ತೀರ್ವೆ ಕೂಡ್ರಿಸಿದರು. ೫ ವರುಷಗಳಲ್ಲಿ ಅದರೊಳಗೆ ಮತ್ತೊಂದು ಸುಧಾರಣೆಯಾಯಿತು. ಘಟ್ಟದ ಮೇಲಿನ ೯ ಎಕರೆ ಬೆಟ್ಟವು ಘಟ್ಟದ ಕೆಳಗೆ ೪ ಎಕರೆ ಬೆಟ್ಟಕ್ಕೆ ಸರಿಯಿರುತ್ತದೆಂದು ಸಿದ್ಧಾಂತ ಹೂಡಿ, ೪ ಎಕರೆ ಕ್ಷೇತ್ರವನ್ನು ಘಟ್ಟದ ಕೆಳಗೆ ಕೊಡಬೇಕೆಂದು ಶಿಫಾರಸು ಮಾಡಿದರು. ೯ ಎಕರೆ ಬೆಟ್ಟದ ಮಾನದ ಮೇಲೆ ಕೂಡ್ರಿಸಿದ ತೀರ್ವೆಯನ್ನು ಮಾತ್ರ ಕಡಿಮೆ ಮಾಡಲಿಲ್ಲ. ಹೊಸ ಯೋಜನೆಯಂತೆ ೪ ಎಕರೆ ಬೆಟ್ಟ ವಿಂಗಡಿಸಿಕೊಡಲ್ಪಟ್ಟಿದೆ. ಬೆಟ್ಟವೆಂದು ಕೊಟ್ಟ ಕ್ಷೇತ್ರವೆಲ್ಲ ಬೈಲೇ ಬೈಲು; ಇಷ್ಟೇ ಅಲ್ಲ, ಈ ಬೈಲು-ಬೆಟ್ಟದ ಬಗ್ಗೆ ಎಕರೆಗೆ ೧೨ ಆಣೆಯಂತೆ ತೀರ್ವೆ ಆಕರಣೆಯಾಗಿದೆ. ಹೊಸ ತೋಟಿಗರಿಗೆ ಈ ಬೆಟ್ಟ ಸಿಗಬೇಕಾದರೆ, ಎಕರೆಗೆ ರೂಪಾಯಿ ೩೦ ರಂತೆ, ಜಾ... ಕಪ್ಪವನ್ನು ಕೊಡಬೇಕೆಂದೂ ಠರಾವಾಗಿದೆ. ಸ... ಮಾನದಿಂದ, ಹೊಸ ಯೋಜನೆಯ ಸ್ವರೂಪವಿದು. ಇದನ್ನು ಕಂಡು, ತೃಪ್ತಿಪಡುವರಾರು? ...ರೂ, ನಮ್ಮ ಪ್ರಾಂತಿಕ ಸರಕಾರವು, ಪ್ರಜೆಗ... ಸಮಾಧಾನಪಟ್ಟಿರುವರೆಂದು ಸಾರುತ್ತದೆ ... ಯಾತರ ದ್ಯೋತಕವು? 'ಸವಲತುಗಳನ್ನು ಕೊಡದೆ, ಪ್ರಜೆಗಳನ್ನು ನಾವು ... ಸಮಾಧಾನಪಡಿಸಿದೆವು ನೋಡಿರಿ' ಎಂದು ಆತ್ಮಶ್ಲಾಘನೆಗಾಗಿ ಅವರು ಮಾಡಿದ್ದರೆ, ಹಿಂದಾಪರ್ತಿ, ಅದು ಅಸತ್ಯವಿದ್ದರೂ

ಕ್ಷಮ್ಯವಾಗಬಹುದು. ದೇ[illegible]ಗಾರರು ಯಾವಾಗಲೂ ಬೆಟ್ಟದ ಮೇಲೆಯೇ ಅವಲಂಬಿಸಿರುವದರಿಂದ ರಾಷ್ಟ್ರಿಕ ಯೋಜನೆಗಳನ್ನು ತಯಾರಿಸಿ, ಅವರನ್ನು ಸಂತೋಷಪಡಿಸುವದು ಎಂದೂ ಸಾಧ್ಯವಾಗದ ಮಾತು. ಬಳವಳಿಯ ಅಭಾವವು ಸಂಕೋಚಪಡದ ತರ್ಕವೆಂದು ಅಧಿಕಾರಿಗಳು ವಿಚಾರಿಸುವದು ತೀರ ಅಯಥಾರ್ಥವು. ಯಾಕಂದರೆ, ಜಾಹೀರ ಸಭೆ, ರಸ್ತಾವ ಶಿಷ್ಟಮಂಡಳ ಮೊದಲಾದವುಗಳಿಂದ ವ್ಯಥಾ ದೊಬ್ಬೆಯೆಂದು ಅಧಿಕಾರಿಗಳು ಅವರಿಗೆ ತೋರಿಸಿರುವರು. ಈಗ ರಾಜ್ಯವ್ಯವಸ್ಥೆಯೇ ಬದಲಾಗಿ, ಭಾರತೀಯ ಸ್ವರಾಜ್ಯವು ಪ್ರಾಪ್ತವಾದ ಹೊರತು ಕಾಡಿನ ಸ್ವರಾಜ್ಯವು [illegible] ಅಸಂಭವನೆಯಾಗಿದೆ ಇದು ಸತ್ಯವಲ್ಲವೇ?

---

೬ ಕಳೆದ [illegible] ವೃತ್ತಾಂತ ಪತ್ರದಲ್ಲಿ [illegible] ಹುಡುಗರ [illegible] ನಾಟಕ ಪ್ರಯೋಗ ಮಾಡಿ [illegible], ಬೊಂಬಾಯಿ [illegible] ವಿಷಯಗಳಿಗೆ [illegible] ಉತ್ತರವನ್ನು [illegible] ಪ್ರಕಟಿಸಿವೆ [illegible] ಸಂಸ್ಥೆಗಳಿಗೆ ಸಹಾಯ ಮಾಡುವ [illegible] ವಿದ್ಯಾರ್ಥಿಗಳಿಗೆ ಹೆಚ್ಚಿನ [illegible] ಅಲ್ಲ, ಭರತಖಂಡದ ಶಿಕ್ಷಣ [illegible] ವಿದ್ಯಾರ್ಥಿಗಳೆಲ್ಲರೂ ನಾಟಕಕಾರ ಮಾಡುವ ಉತ್ಸಾಹದಿಂದ ಪ್ರೇರಿತರಾಗಬೇಕೆಂದು ನಮ್ಮ ಮತವಿದೆ. ಆದರೆ, ನಾಟಕ ಪ್ರಯೋಗಗಳಂಥ ಶೃಂಗಾರರಸ ಪ್ರಧಾನ ರಂಗಭೂಮಿಯಲ್ಲಿ ವಿದ್ಯಾರ್ಥಿಗಳು ಕಲಿಯುವದು ಬಹಳ ಅಪಾಯಕರವು. ಎಳೆ ಹುಡುಗರು ಸ್ತ್ರೀವೇಷ ಹಾಕಿಕೊಂಡು, ಕಾಮುಕರೂಪವಾದ ಅಭಿನಯಗಳನ್ನು ಮಾಡಿ ಬ್ರಹ್ಮಚಾರಿಗಳಿಗೆ ನಿಷಿದ್ಧ ಕೆಲಸಗಳನ್ನು ಕೈಕೊಳ್ಳುವದು ಮತ್ತೂ ಆಕ್ಷೇಪಕರವು ಗಹನೀಯವೆಂದು. ಸಹ ಹೇಳಲಿಕ್ಕಿಯಿಲ್ಲ. ಶಾಲೆಯ ವಿದ್ಯಾರ್ಥಿಗಳ ಅಂತಃಕರಣವು ಕೋಮಲವಿದ್ದು, ಈ ರೀತಿ ಇಂಥ ಬಾಹ್ಯ ವಿಷಯಗಳ ಜ್ಞಾನವನ್ನು ಕಲಾಜ್ಞಾನದ ದೃಷ್ಟಿಯಿಂದ ಸಹ ಈಗಲೇ ಮಾಡಿಕೊಡುವದು ತಪ್ಪೆಂದು ವಯೋವೃದ್ಧ ಶಿಕ್ಷಕರು ನಿರ್ವಿಕಾರ ಬುದ್ಧಿಯಿಂದ ವಿಚಾರಿಸಿದರೆ, ತಿಳಿಯುವದಾಗಿದೆ. ವಿದ್ಯಾವಾತಾವರಣವು ಯಾವಾಗಲೂ ಬ್ರಹ್ಮಚರ್ಯಪಾಲನಪೋಷಕವಿರಬೇಕು. ಆದರಿಂದಲೇ ನಮ್ಮ ಪೂರ್ವಜರು ವಿದ್ಯಾರ್ಜನಕ್ಕಾಗಿ ತಮ್ಮ ಮಕ್ಕಳನ್ನು ತಪೋವನದಲ್ಲಿ ಕಳಿಸುತ್ತಿದ್ದರು. ಈಗಿನ ವಾತಾವರಣವೂ, ನಡಾವಳಿಯೂ ಚಿತ್ತಚಾಂಚಲ್ಯಕ್ಕೆ ಎಡೆಗೊಡುತ್ತವೆ. ಅದರೊಳಗೂ ಶಾಲಾಧಿಕಾರಿಗಳೇ ನಾಟಕ ಪ್ರಯೋಗಗಳನ್ನು ಮಾಡಿಸಿ, ಶಾಲಾ ಪಂತನ್ನ ಎತ್ತಿಹತ್ತಿದ ಬಳಿಕ, ಶಾಲೆಗಳು ನಾಟಕಗಳ ಕಾರಖಾನೆಗಳಾಗುವವು. ವಿದ್ಯಾರ್ಥಿಗಳು ರಾಷ್ಟ್ರದ ಅಮೂಲ್ಯ ಭಂಡಾರವಿದ್ದು, ಅವರನ್ನು ತಕ್ಕ ರೀತಿಯಿಂದ ಪೋಷಣ ಮಾಡುವದು ಹಿರಿಯರಾಗು ಗುರುಗಳ ಕರ್ತವ್ಯವು. ಆದ್ದರಿಂದ ಶಿಕ್ಷಕರು ನಾಟಕ ಪ್ರಯೋಗಗಳಿಗಾಗಿ ವಿದ್ಯಾರ್ಥಿಗಳನ್ನು ಎಂದೂ ತಯಾರು ಮಾಡಬಾರದಾಗಿ ನಮ್ಮ ಆಗ್ರಹದ ವಿನಂತಿಯಿದೆ. ಇದನ್ನು ಮೀರಿ ಅವರು ಸ್ವಾರ್ಥಬುದ್ಧಿಯಿಂದ ನಾಟಕಗಳನ್ನು ಮಾಡಿಸಿದರೆ ಪಾಲಕರು ತಮ್ಮ ತಮ್ಮ ಹುಡುಗರಿಗೆ ನಾಟಕಗಳಲ್ಲಿ ಸೇರದಂತೆ [illegible] ಯನ್ನಿತ್ತು [illegible]ಅಲ್ಲದೆ, ಊರವರು ಎಳೆ ಹುಡುಗರಿಂದ ಅಭಿನಯಿಸಲ್ಪಡುವ [illegible]ವು ಬೇಕಾದಷ್ಟು ಸತ್ಕಾರ್ಯೋತ್ತೇಜಕವಿರಲಿ–ನಾಟ[illegible]ವನ್ನು ಬಹಿಷ್ಕರಿಸಬೇಕೆಂಬುದೂ ನಮ್ಮ ವಿನಂತಿಯಿದೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಒಕ್ಕಲಿಗರು ಪೈರು ಕಟಾವಿನ ಹಂಗಾಮಿನಲ್ಲಿ ಮಗ್ನರಾಗಿರುವರು. ಚೋಕ್ ಬಿಸಿಲು, ಸೆಕೆ. ಮುಂಜಾವಿಗೆ ಅಲ್ಪಸ್ವಲ್ಪ ಚಳಿ. ಅಂತು ಹವಾಮಾನದ ಮೇಲೆ ಸದ್ಯಕ್ಕೆ ಆಕ್ಷೇಪವಿಲ್ಲ.

ಇಂದು ನವಂಬರ ೧ನೇ ತಾರೀಖು ಮುಂಬಯಿ ಪ್ರಾಂತಿಕ ಕೌನ್ಸಿಲ ಚುನಾವಣೆಯ ದಿನ. ಉಮೇದ್ವಾರರ ಪರೀಕ್ಷೆಯ ದಿನ, ಮತದಾರರ ಗೊಂದಲದ ದಿನ. ಸರಕಾರೀ ಆಫೀಸುಗಳಿಗೊಂದು ರಜಾ ದಿವಸ.

ಶ್ರೀ ಶಾಂತೇರಿಕಾಮಾಕ್ಷಿ ದೇವಸ್ಥಾನದ ಮೊಕ್ತೇಸರರೊಬ್ಬರಾದ ರಾ| ರಾ| ಮಾ. ಹನುಮಂತ ಶ್ಯಾನಭಾಗರವರು ಇಲ್ಲಿಯ 'ಹತ್ತು ಸಮಸ್ತರಿಂದ' ಬಹಿಷ್ಕಾರ ಹೊಂದಿದವರನ್ನು ಶ್ರೀ ದೇವತಾ ದರ್ಶನ ಸಮಯದಲ್ಲಿ ಪ್ರವೇಶ ಕೊಡದಂತೆ ಕ್ರಿ. ಪ್ರೊ. ಕೋಡಿನ ೧೪೪ನೇ ಕಲಮಿನನ್ವಯ ಬಹಿಷ್ಕೃತರಾಗಿದವರಿಗೆ ಹುಕುಮನ್ನು ಜಾರಿ ಮಾಡಬೇಕೆಂದು ಇಲ್ಲಿಯ ಮೆಜಿಸ್ಟ್ರೇಟರಿಗೆ ಕಳೆದ ಶನಿವಾರ ತಾರೀಖು ೨೭ನೇಗೆ ಅರ್ಜಿ ಮಾಡಿರುವರು. ಅರ್ಜಿಯು ವಿಚಾರಣೆಯಲ್ಲಿ ಸಿಲುಕಿಕೊಂಡಿದೆ.

ಜಿಲ್ಲಾ ಕೊಂಗ್ರೆಸ ಕಮಿಟಿಯ [illegible] ಇಲ್ಲಿಯ ಕಮಿಟಿಯ ಆಫೀಸಿನಲ್ಲಿ ಇದೇ ತಾರೀಖು ೪ನೇ ರವಿವಾರಕ್ಕೆ ನಡೆಯುತ್ತದೆಂದು ತಿಳಿಯಬರುತ್ತದೆ.

ಸಾಭಾರ ಸ್ವೀಕಾರ

ತರುಣ ಭಾರತ:—([illegible] ಮಾಸಿಕ) ಸಪ್ಟೆಂಬರ ಸಂಚಿಕೆ ಸಂಪಾದಕ ಹಾಗು ಪ್ರಕಾಶಕ ಧೋಂಡೋ ರಾಮರಾವ ರಾಕೋಡ, ಸಮಾದೇವಿಗಲ್ಲಿ ಬೆಳಗಾಂವ. ವಾರ್ಷಿಕ ವರ್ಗಣಿ ವಿದ್ಯಾರ್ಥಿಗಳಿಗೆ ೨ ರೂ. ೨ ಆಣೆ. ಇತರರಿಗೆ ೨ ರೂ. ೬ ಆಣೆ.

ಸರಸ್ವತಿ:— ಆಕ್ಟೋಬರ ಸಂಚಿಕೆ ಸಂಪಾದಿಕೆ ಆರ್. ಕಲ್ಯಾಣಮ್ಮ ಪ್ರಕಾಶಕ ಸರಸ್ವತಿ ಪಬ್ಲಿಸಿಂಗ ಕಂಪನಿ, ಚಾಮರಾಜಪೇಟ, ಬೆಂಗಳೂರ ಸಿಟಿ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ೩ ರೂಪಾಯಿ.

ಶಿರಸಿ— ಅಂತೇಬೈಲ ಎಂಬಲ್ಲಿ ಶ್ರೀ ವೆಂಕಟ್ರಮಣ ನಿಲೇಕಣಿ ಇವರ ಹೊಲದ ಪೀಕ ಪ್ರದರ್ಶನವಾಯಿತು. ಇಲ್ಲಿಂದ ನೂರಾರು ಜನರು ಹೋಗಿದ್ದರು. ಮೇ|| ಕಲೆಕ್ಟರ ಸಾಹೇಬರವರೂ ಹಾಜರಿದ್ದು ಉತ್ತಮ ಬೆಳೆ ಬೆಳೆಸಿದವರಿಗೆ ಬಹುಮಾನ ಕೊಡಲಾಯಿತು. ಅಂತೂ ಪ್ರದರ್ಶನದ ನಾಯಕರಿಗೆ ೧೦೮–೨೦೦ ರೂಪಾಯಿಯಾದರೂ ಖರ್ಚ ಬಂದಿರಬಹುದು.

ಕಂಬ್ಯಾನ್ಡ ಕ್ಲಾಸಿನ ಬಟಾಬೋಳ ಮಾಡಿದ್ದು, ಇದೇ ನವಂಬರ ೧ನೇ ತಾರೀಖಿನಿಂದ ಮೊದಲಿನಂತೆಯೇ ೩ ಕ್ಲಾಸುಗಳನ್ನು ಇಂಗ್ಲೀಷ ಶಾಲೆಗೆ ಕೂಡಿಸುವ ಠರಾವ ಆಗಿದ್ದು, ಮೊದಲು ಕಡಿಮೆ ಮಾಡಿದ ಶಿಕ್ಷಕರನ್ನು ಪುನಃ ನೇಮಿಸಲಾಗಿದೆ. ಅಂತೂ ನೂತನ ವ್ಯವಸ್ಥೆಯು ೫ ತಿಂಗಳ ವರೆಗೆ ನಡೆದು ಮೂಲ ಸ್ವರೂಪಕ್ಕೆ ಬಂದಂತಾಯಿತು. ಇದನ್ನು ಸಾಧಿಸಲು ಟೊಂಕಕಟ್ಟಿ ಸತತ ಶ್ರಮಪಟ್ಟ ಶ್ರೀ ವೀರಭದ್ರಯ್ಯಾ ಕವಲೂರ ಮತ್ತು ಶ್ರೀ ಸುಬ್ರಾಯ ಮಸೂರೆ ಇವರನ್ನು ವಿದ್ಯಾರ್ಥಿಗಳೂ, ಪಾಲಕರೂ ಕೂಡಿಯೇ ಅಭಿನಂದಿಸಬೇಕಾಗಿದೆ. ಮತ್ತು ಮತದಾರರ ಮಾತಿಗೆ ಮಾನ ಕೊಟ್ಟು, ಅದರಂತೆ ವರ್ತಿಸಿದ ಮ್ಯುನಿಸಿಪಾಲಿಟಿಯವರನ್ನಾದರೂ ಅವರು ಮರೆಯಬಹುದೇ.

ಮ[illegible] ಶ್ರೀನಿವಾಸ [illegible] ೨ ಚಹಾ ದುಕಾನುಗಳು ಚಾಲು ಆಗಿದ್ದು [illegible]ಲಾಟವು ಜೋರಿಯಿಂದ ನಡೆದಿದೆ. ಬಂಗದ ರವರ ಮೇಜುಗಳು, ದೊಡ್ಡ ದೊಡ್ಡ ಕನ್ನಡಿಗಳು, ಅಂದವಾದ ಖುರ್ಚಿಗಳು, ಮನೋಹರವಾದ ಹೂವಿನ ಕುಂಡಗಳು, ಗ್ಯಾಸಲೈಟುಗಳು ಮೊದಲಾದ ಪಟಂಬರಗಳು ಅಂಗಡಿಗಳನ್ನು ಅಲಂಕರಿಸುತ್ತಿವೆ. ಪಾನ-ಸುಪಾರಿ, ಬೀಡಿ-ಸಿಗರೇಟುಗಳು, ಸೋಡಾಗಳೂ ಸಿಗುತ್ತಿವೆ. ಒಟ್ಟಿನಮೇಲೆ, ಪ್ರತಿ ಒಬ್ಬ ದುಕಾನದಾರನು ಗಿರಾಕಿಗಳನ್ನು ಮೋಹಗೊಳಿಸಿ, ಅವರನ್ನು ತನ್ನ ಕಡೆಗೆ ಎಳೆಕೊಳ್ಳಲು ಸಾಧ್ಯವಿರುವ ಸಾಹಸಗಳನ್ನೆಲ್ಲ ಸಾಧಿಸಲು ಸಿದ್ಧನಾಗಿರುವನು. ಇದು ಎಲ್ಲಿಯ ವರೆಗೆ ಮುಟ್ಟುತ್ತದೋ ನೋಡಬೇಕು.

ಹಳಿಯಾಳ— ತಾರೀಖು ೨೮-೧೦-೩೪ನೆಯ ದಿವಸ ಹಳಿಯಾಳ ಶಿಕ್ಷಕ ಸಂಘದ ಸಭೆ ಕೂಡಿ, ಕೆಳಗಿನ ಠರಾವುಗಳು ಪಾಸಾದವು.

೧ ೧೮೮೩ನೇ ಇಸವಿಯ ಧಾರಣೆ ಮತ್ತು ೧೯೨೩ನೆಯ ಇಸವಿಯ ಧಾರಣೆ ನೋಡಲಾಗಿ ತಾ ೧೧-೧೦-೩೪ನೇ ಗ್ಯಾಝೆಟಿನಲ್ಲಿ ಪ್ರಸಿದ್ಧವಾದ ಶಿಕ್ಷಕರ ಸ್ಕೇಲು ಹೆಚ್ಚಿದ್ದದೆ ಇದನ್ನು ತಿಳಿಸಲು ಸಂಘಕ್ಕೆ ಅತ್ಯಂತ ವಿಷಾದವಾಗುವದು. ಪ್ರಸಿದ್ಧವಾದ ಸ್ಕೇಲಿನಿಂದ ಶಿಕ್ಷಕರಲ್ಲಿ ಅತ್ಯಂತ ನಿರಾಶೆಯೂ, ಔದಾಸೀನ್ಯವೂ ಉಂಟಾಗಿವೆ.

೨ ಶಿಕ್ಷಕರ ಅನ್ನ ವಸ್ತ್ರದ ಚಿಂತೆ ತಪ್ಪಿಸದೆ, ಅವರ ಕಡೆಯಿಂದ ಜನತೆಯು ಬೇಡುವ ಕೆಲಸವು ಸಮಾಧಾನಕರವಾಗದು.

೩ ಇಲಾಖಾ ಶಿಕ್ಷಕ ಸಂಘದವರು ಬೇಡಿದ ಸ್ಕೇಲು ಪೂರ್ವವಿಚಾರದಿಂದ ಸ್ಥಾನಿಕ ಸಂಸ್ಥೆಗಳ ಸ್ಥಿತಿಗಳ ಕಡೆಗೆ ಪೂರ್ಣ ಲಕ್ಷವಿಟ್ಟು ಬೇಡಲ್ಪಟ್ಟಿದೆ. ಆದರಂತೆ ಕಾಯಮ ಸ್ಕೇಲು ಮಂಜೂರ ಆಗಬೇಕೆಂದು ಈ ಸಂಘವು ಬೇಡುವದು. ಇದು ಶಕ್ಯವಿರದಿದ್ದರೆ ಸಾರ, ಪರಾಂಜಪೆ ಸ್ಕೀಮಿನಂತೆಯಾದರೂ ಕೂಲಿ ಬಡತಿಯು ಕಾಯಮ ಸ್ಕೇಲಿನೊಡನೆ ಮಂಜೂರಾಗಬಹುದು.

೪ ಅಂತಿಮ ಪಗಾರ ದೊರೆಯುವ ಅವಧಿಯು ೨೫ ವರ್ಷ ಕಾಣಿಸಿದ್ದು ಸಾರ-ಪರಾಂಜಪೆಯವರ ಸ್ಕೀಮಿನಂತೆಯಾದರೂ ೨೦ ವರ್ಷಕ್ಕಿಂತ ಮೀರಬಾರದು.

೫ ಸುಪರವಾಯಿಝರರಂತೆ ಶಿಕ್ಷಕರ ಕಾಯಮ ಸ್ಕೇಲೂ ರಚಿಸುವದು ಅತ್ಯವಶ್ಯವಿದೆ.

೬ ಮಾಸ್ತರ ಜನರ ಪಗಾರದ ವಿಷಯದಲ್ಲಿ ಈಗಿದ್ದ ಮಾಸ್ತರರು, ಹೊಸದಾಗಿ ಬರುವ ಮಾಸ್ತರರು ಹೀಗೆ ಪಂಕ್ತಿ ಪ್ರಪಂಚ ಮಾಡದೆ, ಎಲ್ಲರಿಗೂ ಒಂದೇ ಸ್ಕೇಲು ಮಂಜೂರಾಗಬೇಕು.

'ನನ್ನ ರಜೆ ಮುಗಿಯಿತು.'

ಮೌ| ಶೌಕತಅಲ್ಲಿಯವರ ಉದ್ಗಾರ.

ಅಹಮದಾಬಾದಿನಲ್ಲಿ ಮೌಲಾನಾ ಶೌಕತ ಅಲ್ಲಿಯವರ ಮುಲಾಖತು ಆಯಿತು. ಅದರೊಳಗೆ ಅವರು ನುಡಿದದ್ದೇನಂದರೆ,— 'ನನ್ನೊಬ್ಬನೆ ಕೆಲಸಮಾಡಲು ನನಗೊಬ್ಬ ತಮ್ಮನಿರುವನು. ಇದೊಂದು ನನ್ನ ಪುಣ್ಯವು. ದೇವರು ಮತ್ತೂ ದಯಾವಂತನು. ತಮ್ಮನು ವಿಲಾಯತಿಗೆ ಹೋದ ಬಳಿಕ, ನಾನು ಬೇಟೂಲ ಜೈಲಿನೊಳಗಿಂದ ಹೊರಬಿದ್ದ ಕೂಡಲೆ, ನನಗೊಬ್ಬ ಅಣ್ಣಯ್ಯನವರು ಪ್ರಾಪ್ತರಾದರು. ಇವರ್ಯಾರೆಂದು ನಾನು ಹೇಳುವ ಕಾರಣವಿಲ್ಲ. ಒಂದು ಬದಿಗೆ ನನ್ನ ಅಣ್ಣಯ್ಯನೋಪಾದಿಯಲ್ಲಿರುವ ಒಡೆಯ, ಮಹಾತ್ಮಾ ಗಾಂಧಿ, ಇನ್ನೊಂದು ಬದಿಗೆ ನನ್ನ ತಮ್ಮ ಮಹಮ್ಮದಅಲ್ಲಿ ನನ್ನನ್ನು ಎರಡೂ ಬದಿಗಳಿಂದ ಒತ್ತಿ ನನ್ನ ಪ್ರಕೃತಿ ಹಾರಿಸುತ್ತಾರೆ. ಹೀಗಾಗಿ ನನ್ನ ಅಲ್ಪ ರಾಷ್ಟ್ರಸೇವೆಗಾಗಿ ಸಹ ದೇಶದಲ್ಲೆಲ್ಲ ಕಲ್ಪನಾತೀತ ಶಕ್ತಿಯು ಪ್ರಾಪ್ತವಾಗುತ್ತದೆ. ಹಿಂದೂ-ಮಹಮ್ಮದೀಯರು, ಪಾರಸಿ ಕ್ರಿಶ್ಚನ್ ಹಾಗೂ ಶೀಖ ಇವರೆಲ್ಲರೂ, ವಿಶೇಷವಾಗಿ ನಮ್ಮ ಹಿಂದೂ ಭಗಿನಿಯರೂ ನನ್ನ ಬಗ್ಗೆ ಪ್ರದರ್ಶಿಸಿದ ಪ್ರೇಮವೂ, ಸ್ನೇಹವೂ ದಯೆಯೂ ಅಮೂಲ್ಯ ಭಂಡಾರವೆಂದು ನಾನು ಕಾಪಿಟ್ಟಿದ್ದೇನೆ. ಇದರಿಂದಲೇ ನಾನು ಯಾವಾಗಲೂ ಸೌಖ್ಯದಿಂದಲೂ, ಉತ್ಸಾಹದಿಂದಲೂ, ಕಾಲಕಳೆಯುತ್ತೇನೆ

ಅವರ ಸಹಾಯದಿಂದಲೂ, ದೇವರ ಸದ್ಭಕ್ತಿಯಿಂದಲೂ, ಪುರೋಹಿತದಲ್ಲಿರುವ ಸಜ್ಜನರಿಗೆ ನಾನು ಕೆಲಸದ ಲೆಕ್ಕ ಕೊಡಬೇಕೆಂಬ ಭಾವನೆಯಿಂದಲೂ, ನಾನು ಈ ವರೆಗೆ ಸೋಮಾರಿ, ಉಂಡಾಡಿಗನಂತೆ ಏನಾದರೂ ಕೆಲಸ ಮಾಡಬೇಕಾಗಿದೆ. ನನ್ನ ರಜೆಯು ಮುಗಿಯಿತು. ಈಗ ನಾನು ಬಹಳೇ ಕೆಲಸ ಮಾಡಬೇಕಾಗಿದೆ. ದೇವರ ದಯೆಯಿಂದ ಇದನ್ನೆಲ್ಲ ಕೊನೆಗಾಣಿಸುವೆನೆಂದು ನನ್ನ ವಿಶ್ವಾಸವಿದೆ

ಜೈಲಿನಲ್ಲಿದ್ದಾಗ ಮೌಲಾನಾರವರು ಕೆಲಸ ಮಾಡಲಿಲ್ಲೆಂಬ ಸುದ್ದಿಯ ಬಗ್ಗೆ ಅವರು ಖುಲಾಸೆ ಮಾಡಿದ್ದೇನಂದರೆ - ನಾನು ಜೈಲಿನೊಳಗಿನ ಕೆಲಸವಮಾಡಲು ಎಂದೂ ನಿರಾಕರಿಸಲಿಲ್ಲ. ನವೆಂಬರ ೧ನೇ ತಾರೀಖಿನಿಂದ ಸಾಧಾರಣ ಮೂರ್ತ ಅಂತ್ಯವಾಗುವ ವರೆಗೆ ನಾನು ಕೆಲಸ ಮಾಡಿರುವೆನು. ಕಡೆಗೆ, ಅಪಮಾನಾಸ್ಪದ ಜೈಲು ಪದ್ಧತಿಯು ಕ್ರಮವು ಪ್ರಾರಂಭವಾಯಿತು. ಕರ್ಚೀಪ, ಅಂಗಿಗಳನ್ನು ನಾವು ತೆಗೆದಿಡಬೇಕು. ಒಳಗಿನ ಸಣ್ಣ ಚಡ್ಡಿಯನ್ನು ಬಿಡಿಸಬೇಕು, ಮತ್ತು ಹಾರಬೇಕು. ಇದನ್ನೆಲ್ಲ ನಾವು ವಿನಾ ಅಡಗಿಸಿಕೊಳ್ಳಲಿಲ್ಲೆಂದು ತೋರಿಸಲಿಕ್ಕೆ. ಈ ಕ್ರಮವ ನಿಷೇಧವೆಂದು ನಾನು ಕೆಲಸಮಾಡಲು ನಿರಾಕರಿಸಿದೆನು. ಈ ಅಪಮಾನಾಸ್ಪದ ಕ್ರಮಗಳನ್ನು ಮನ್ನಿಸದೆ ಇಟ್ಟಿದ್ದಲ್ಲಿ, ನನಗೆ ಅಧಮನಂತೆ ನಡಿಸಿಕೊಂಡರ್ಕ, ನನಗೆ ಚಿತ್ರಪ್ರಕಾರ ಮಾಡಿದ ಹೊರತು ಜೈಲು ಅಧಿಕಾರಿಗಳಿಗೆ ಗತ್ಯಂತರವಿಲ್ಲೆಂದು ನಾನು ಅರಿತಿದ್ದೆನು. ಆದರೆ, ಅವರ್‍ಯಾರೂ ನನಗೆ ಚಿತ್ರಪ್ರಕಾರ ಮಾಡಲಿಲ್ಲೆಂದು ತಿಳಿಸಲು ವ್ಯಸನವಾಗುತ್ತದೆ

ಅಹಮದಾಬಾದಿನಲ್ಲಿ ಕಳೆದ ರವಿವಾರಕ್ಕೆ ಜಾಹೀರ ಸಭೆಯಾಯಿತು. ಮೌಲಾನಾ ಶೌಕತ ಅಲ್ಲಿಯವರು, ಮಹಾತ್ಮರ ನೇತೃತ್ವದಲ್ಲಿ ಹಿಂದೂ ಬಾಂಧವರು ಮುಹಮ್ಮದೀಯರಿಗೆ ಮಾಡಿದ ಉಪಕಾರವನ್ನು ಮನದಣಿ ನೆನಿಸಿದರು. ಕಾಯಿದೇಭಂಗ ಹಾಗು ಕರನಿರಾಕರಣೆಗಳ ಬಗ್ಗೆ ರಾಷ್ಟ್ರೀಯ ಸಭೆಯು ವಿಧಿಸಿದ ಆಜ್ಞೆಗಳನ್ನೆಲ್ಲ ಪಾಲಿಸಲು ಸಿದ್ಧರಾಗಿರೆಂದು ಶ್ರೋತೃವೃಂದಕ್ಕೆ ಬೋಧಿಸಿದರು. ಮೌಲಾನಾ ಮಹಮ್ಮದಲ್ಲಿಯವರು ತಾವು ಅಲ್ಲಾ ಕನ್ಯಂದಿರು ದೇಶ ಹಾಗು ಧರ್ಮಕ್ಕಾಗಿ ಪ್ರಾಣವನ್ನರ್ಪಿಸಲು ಸಹ ಸಿದ್ಧರಿರುತ್ತೇವೆಂದು ಉದ್ಗರಿಸಿದರು

ಪತ್ರಸಾರ.

— ಧಾರವಾಡ ಗೋಳೀಬಾರಿನ ಬಗ್ಗೆ 'ಕ್ರಾನಿಕಲ' ದಲ್ಲಿ ಲೇಖಗಳನ್ನು ಪ್ರಕಟಿಸಿ, ತಮ್ಮ ಅಬ್ರುಬುಕ್ಸಾನಿ ಮಾಡಿದರೆಂದು ಮಿ। ಹೇಂಟರ ವಗೈರೆಯು ದಾಖಲು ಮಾಡಿದ ದಾವೆಯ ವಿಚಾರಣೆಯು ಧಾರವಾಡದಲ್ಲಿ ಕಳೆದ ನವೆಂಬರ ತಾರೀಖು ೨೯ನೆ ಯಿಂದ ಶುರುವಾಗಿದೆ. 'ಕ್ರಾನಿಕಲ' ಪತ್ರಿಕೆಯ ವಕೀಲಿಯನ್ನು ಶ್ರೀ। ವಿಶ್ವನಾಥರಾವ ಜೋಶಿಯವರು ನಡಿಸುತ್ತಿದ್ದಾರೆ. ವಾದಿಯ ಕಡೆಯಿಂದ ಮುಂಬಯಿಯ ಬೆರಿಸ್ಟರ ಕೇಂಪರವರು ಕೆಲಸ ನಡಿಸುತ್ತಾರೆ. ಸರಕಾರಿ ವಕೀಲರಾದ ರಾವಸಾಹೇಬ ಕಟ್ಟಿಯವರು ಕೆಲಸ ನಡಿಸುತ್ತಾರೆ.

— ಅಜಮೀರದಲ್ಲಿ ಈಗ ಸುಮಾರು ೮೫ ಮಂದಿ ಮುಸಲ್ಮಾನರು ದೀಕ್ಷೆಯಾಗಿ ಕ್ರೈಸ್ತರು ಮಾಡಿದ ಸುದ್ದಿ. ಕಮಿಶನರರ ಮೇಲೆ ಟೀಕೆ ಮಾಡಿ, ಮೌಲಾನಾ ಮೊಹದ್ದೀನರವರು ಒಂದು ಸಣ್ಣ ಪುಸ್ತಕವನ್ನು ಬರೆದರೆಂತಲೂ, ಅದರೊಳಗೆ ಮಾಡಿದ ವಿಧಾನಗಳನ್ನು ಅವರು ಹಿಂತಗೆದುಕೊಳ್ಳಲು ಒಪ್ಪಲಿಲ್ಲೆಂದು ಕಮಿಶನರು ರೇಗಿಗೆದ್ದು, ವಿ-ಧ್ಯಾ ರೋಪಗಳನ್ನು ಹೊರಿಸಿ, ಹಾವಳಿಯನ್ನೆಬ್ಬಿಸಿರುವರೆಂದು ಸುದ್ದಿ.

— ಬೋಕಿಯೋ, ಯೊಕೋಹಾಮಾ ಪಟ್ಟಣಗಳಲ್ಲಿ ಚಿಂಕಿ ಹತ್ತಿ ಪ್ರಜೆಗಳೆಲ್ಲರೂ ನಿರಾಧಾರಿಗಳಾಗಿ ಅಡ್ಡಾಡುತ್ತಿರುವಾಗ, ಕೆಲ ಅಧಮರು ಕೋರಿಯನ್ನರ ಮೇಲೆ ಸೇಡು ತೀರಿಸಿಕೊಳ್ಳುವ ಸಮಯವು ಇದೇ ಎಂದು ಅನೇಕ ಕೋರಿಯನ್ನರನ್ನು ಕೊಂದರು. ಕೋರಿಯನ್ನರ ಹೋಳಿ ಕೆಯಲ್ಲಿ ಅನೇಕ ಜಪಾನಿಯರೂ ಮೃತ್ಯುಮುಖಕ್ಕೀಡಾದರು.

— ಪಂಜಾಬದ ಹೊಶಿಯಾರಪುರ ಜಿಲ್ಲೆಯಲ್ಲಿ ಧನಸಿಂಗ ನೆಂಬವನನ್ನು ಐವರು ಪೋಲೀಸರು ಕೌಶಲ್ಯದಿಂದ ಸೆರೆ ಹಿಡಿದರು. ದುರ್ದೈವದಿಂದ ಅವನ ಮನುಷ್ಯರೆಸೆಲ್ಲಿದ್ದ ಒಂದು ಬೋಂಬು ಹಾರಿ, ಧನಸಿಂಗನೂ, ಐವರು ಪೋಲೀಸರೂ ಸತ್ತುಹೋದರು

— ಕಳೆದ ವಾರದಲ್ಲಿ ಧಾರವಾಡದಲ್ಲಿ ಒಂದು ಚಮತ್ಕಾರವು ಸಂಭವಿಸಿತು. ೨೫-೩೦ ವರುಷದ ಒಬ್ಬ ವಿಧವೆಯು ತಾವು ಮಹಾತ್ಮರ ಮಗಳೆಂದು ಹೇಳಿ, ಕೆಲ ಗುರ್ಜರರ ಕಡೆಯಿಂದ ಆದರಾತಿಥ್ಯ ಹೊಂದುತ್ತಿದ್ದಳು. ಮಹಾತ್ಮರು ತಮಗೆ ಹೆಣ್ಣುಮಕ್ಕಳಿಲ್ಲೆಂದು ಜಾಹೀರು ಮಾಡಿದ ಸಂಗತಿಯನ್ನು ಶ್ರೀ। ಗೋವಿಂದಾಚಾರ್ಯರು ತಿಳಿಸಲು ವಿಧವೆಯ ವಂಚನವು ಬಯಲಾಯಿತು

— ನೀಲಗಿರಿಯಲ್ಲಿ ಅತಿವೃಷ್ಟಿ. ಕೊಟ್ಟೂರಾಳ್ಯ-ಕೂನೂರುಗಳ ನಡುವಿನ ರೇಲ್ವೆ ದಾರಿಯು ಒಳಮುಹೋಯ್ತು.

— ತುಲಾ ಸಂಕ್ರಮಣದ ಕಾವೇರಿ ಯಾತ್ರೆಯ ಸಮಯದಲ್ಲಿ ಕುಂದಾಪುರ ತಕಸೀಲೆಯು ಐವರು ಗಾಂಧಿ ಟೊಪ್ಪಿಗೆ ಧರಿಸಿ ಹೋಗಿದ್ದರು. ಅವರನ್ನು ಪೋಲೀಸರು ಹಿಡಿದು ಹೆಸರುಗಳನ್ನು ಬರಕೊಂಡರು. ತಂದೆ ಹೆಸರು ಬರಕೊಳ್ಳ ಹೇಳಿದರೂ ಬರಕೊಳ್ಳಲಿಲ್ಲ. ನೀವೇನು ಭಾಷಣ ಕೊಡುವದಿಲ್ಲವಲ್ಲ? ಎಂದು ಪೋಲೀಸರು ಮನಸ್ಸಿನ ಸಮಾಧಾನ ಮಾಡಿಕೊಂಡು ಅವರನ್ನು ಬಿಟ್ಟರು. ಕೂಡಲೇ ನೂರಾರು ಜನರು ಗಾಂಧಿ ಟೊಪ್ಪಿಗೆಗಳನ್ನು ಧರಿಸಿದರಂತೆ

— ಸುಪ್ರಸಿದ್ಧ ಪ್ರಾಚ್ಯವಿದ್ಯಾಸಂಶೋಧಕರಾದ ಡಾ। ಸರ್ ರಾಮಕೃಷ್ಣ ಗೋಪಾಲ ಭಂಡಾರಕರವರು ಬಹಳೇ ಅಲಸ್ಯದಲ್ಲಿದ್ದಾರೆಂದು ತಿಳಿಯುತ್ತದೆ

— ಅಮೃತಸರದೊಳಗಿನ ಖಾಲಸಾ ಕೊಲೇಜಿನ ಮೂವರು ಪ್ರೊಫೆಸರರಿಗೆ ಕೈದು ಮಾಡಿರುವರು. ಆದರೂ, ಕೊಲೇಜಿನ ವ್ಯವಸ್ಥೆಯು ಶಿಸ್ತಿನಿಂದ ನಡೆದದೆ

— ಜರ್ಮನಿಯಲ್ಲಿ ಈಗ ಬಹಳೇ ಕಷ್ಟವಾಗಿದೆ, ಗೊಂದಲವೆಬ್ಬಿದೆ. ಅಲ್ಲಲ್ಲಿ ಸಣ್ಣ ಸಣ್ಣ ಪ್ರಜಾಸತ್ತಾತ್ಮಕ ಸಂಸ್ಥೆಗಳು ಜಾಹೀರಾದ ಸುದ್ದಿಗಳು ಬರುತ್ತಿವೆ. ಆಹಾರ ಸಾಮಗ್ರಿಗಳಿಲ್ಲದೆ, ಪ್ರಜೆಗಳೆಲ್ಲರೂ ಗೋಳಾಡುತ್ತಿರುವರು.

— ಮಾಜಿ ಭಾರತ ಮಂತ್ರಿಗಳಾದ ಮಿ। ಮೊಂಟೆಗ್ಯೂರವರು ಸಪತ್ನೀಕರಾಗಿ ಡಿಸೆಂಬರ ತಾ ೨೧ನೇಗೆ ಮುಂಬೈಗೆ ಬರುವವರಿದ್ದಾರಾಗಿ ತಿಳಿಯುತ್ತದೆ. ಮಾರ್ಚ ತಿಂಗಳ ವರೆಗೆ ಅವರ ಮುಕ್ಕಾಮು ಅಲ್ಲಿರ ವದಂತೆ.

— ಸಾಮ್ರಾಜ್ಯ ಪರಿಷತ್ತಿನಲ್ಲಿ ಕಳೆದ ತಾ. ೨೫ನೇಗೆ ಭಾರತೀಯರ ದರ್ಜೆಯ ಬಗ್ಗೆ ಚರ್ಚೆಯಾಯ್ತು. ಡಾ। ತೇಜಬಹಾದ್ದೂರ ಸಪ್ರುರವರು ಧೈರ್ಯದಿಂದ ಮಾತಾಡಿದರೆಂತಲೂ, ಕೆಲ ಸವಲತ್ತುಗಳು ಸಿಗಬಹುದೆಂತಲೂ ಮಿ। ಬೊಮ್ಮನಜಿಯವರು ತಿಳಿಸುತ್ತಾರೆ. ಈ ಸಮಯಕ್ಕೆ ಬ್ರಿಟಿಶ ಮಾಲಿನ ಬಹಿಷ್ಕಾರವನ್ನು ತ್ಯಜಿಸುವದು ಅತ್ಯ ಘಾತಕವೆಂತಲೂ ಅವರ ಅಭಿಪ್ರಾಯ

— ಕಾರ್ಪೋರೇಶ ರಾಜಕೀಯ ಪರಿಷತ್ತಿನ ಕಾರ್ಯಕಾರಿ ಮಂಡಳದವರು ರಾಜಕೀಯದ ರಾಕೂರ ಸಾಹೇಬರಿಗೆ ಮಾನಪತ್ರವನ್ನರ್ಪಿಸಬೇಕೆಂದು ರಚ್ಯಿಸಿರುವರು

— ಲಾಲಾ ಲಜಪತರಾಯ ಹಾಗು ಡಾ। ಅನಸಾರಿಯವರು ರಾಷ್ಟ್ರೀಯ ಯೋಜನೆಯ ಸ್ಥೂಲ ಸ್ವರೂಪವನ್ನು ಕಗ್ಗಾರಿಸಿ, ಎಲ್ಲ ಪಕ್ಷಗಳ ಮುಖಂಡರಿಗೆ ಅದರ ನಕಲುಗಳನ್ನು ಅಭಿಪ್ರಾಯಾರ್ಥವಾಗಿ ರವಾನಿಸುವರೆ ಯೋಚಿಸಿರುವರು. ಅವರ ಅಭಿಪ್ರಾಯವನ್ನು ಕೇಳಿಕೊಂಡು ಯೋಗ್ಯ ತಿದ್ದುಪಡಿ ಮಾಡಿ, ಅದನ್ನು ಕೋಕೋನಾಡಾದೊಳಗಿನ ರಾಷ್ಟ್ರೀಯ ಪರಿಷತ್ತಿಗೆ ಸಾದರಪಡಿಸುವರು.

— ಅಲಹಾಬಾದ ಮುನಿಸಿಪಾಲಿಟಿಯು ಸರ್ವಾಧಿಪತಿಗಳ ಆಗಮನ್ನು ಬಹಿಷ್ಕರಿಸಬೇಕೆಂದು ಠರಾಯಿಸಿದೆ. ಅಲಹಾಬಾದದ ನಾಗರಿಕರು ಕಳೆದ ೨೮ನೇ ಸಭೆ ಸೇರಿಸಿ, ನಾಗರಿಕರ ತರ್ಫೆನಿಂದ ಮಾನಪತ್ರ ಕೊಡಲು ಯಾರಿಗೂ ಅಧಿಕಾರವಿಲ್ಲೆಂದು ಜಾಹೀರು ಪಡಿಸಿದರು

— ಸಂಯುಕ್ತಪ್ರಾಂತದ ಕಾಯದೆ ಕೌನ್ಸಿಲಿನ ಅಧಿವೇಶನದಲ್ಲಿ ಚಿತ್ರಪ್ರಕಾರ ಮಾಡಬಾರದೆಂದು ಠರಾವು ಮಂಜೂರು ಆಗಿದೆ. ದಿವಾಣಿ ಹಾಗು ಅಮಲಬಜಾವಣಿ ಅಧಿಕಾರಗಳನ್ನು ಪ್ರತ್ಯೇಕಿಸಬೇಕೆಂದು ಈ ಬಗ್ಗೆ ನೇಮಿಸಿದ ಕಮಿಟಿಯು ಮಾಡಿದ ಶಿಫಾರಸುಗಳನ್ನು ಶೀಘ್ರದಲ್ಲಿ ತರುವೆವೆಂದು ಸರಕಾರದಿಂದ ಅಭಿವಚನ ಕೊಡಲಾಗಿದೆ. ಬ್ರಿಟಿಶ ಸಾಮ್ರಾಜ್ಯ ಪ್ರದರ್ಶನವನ್ನು ಬಹಿಷ್ಕರಿಸುವ ಠರಾವು ಬಹುಮತದಿಂದ ನಾಮಂಜೂರಾಯಿತು

— ಪಂಜಾಬದ ದಿವಾಣರಾಗಿದ್ದ ಲಾಲಾ ಹರಕಿಸನಲಾಲರವರು ತಮ್ಮ ದಿವಾಣಪದಕ್ಕೆ ರಾಜೀನಾಮೆಯನ್ನಿತ್ತಿರುವರು. ಗವ್ಹರ್ನರರವರು ದಿವಾಣರ ರಾಜೀನಾಮೆಯ ಸುದ್ದಿಯನ್ನರುಹುವಾಗ, ಲಾಲಾ ಹರಕಿಸನಲಾಲರವರ ಸಮಾಧಾನ ವೃತ್ತಿಯನ್ನು ಹೊಗಳಿದರು. ಪಂಜಾಬದಲ್ಲಿ ಹೀಗೆ ದಡಬಡಾಟ ನಡೆಯುತ್ತಿರುವಾಗ ದಿವಾಣಪದವನ್ನು ಈ ವರೆಗೆ ಆಕ್ರಮಿಸಿದ್ದು ಸಮಾಧಾನವೆಂತಲ್ಲೆಂದು ಯಾರು ಹೇಳರು?

— ಮೈಸೂರಿನ ಪ್ರತಿನಿಧಿಕ ಸಭೆಯು ಕಳೆದ ೨೭ನೇಗೆ ಮುಗಿಯಿತು. ಮಹಾರಾಜರವರು ಅಧಿವೇಶನವನ್ನು ಸಮಾಪ್ತಗೊಳಿಸುವಾಗ, ಪ್ರಜೆಗಳಿಗೆ ಕೊಟ್ಟ ಅಧಿಕಾರಗಳನ್ನು ವಿಸ್ತರಿಸಿದರು. ಇದರಿಂದ ಕಾಯದೆ ಕೌನ್ಸಿಲಿಗೆ ಅಂದಾಜು ಪತ್ರಕದ ಮೇಲೆ ಮತಕೊಡುವ ಅಧಿಕಾರವು ಪ್ರಾಪ್ತವಾಗುವದು. ಮತದಾರರ ಸಂಖ್ಯೆಯು ನಾಲ್ಕು ಪಟ್ಟು ಬೆಳೆಯುವದು

ಅಖಿಲ ಭಾರತೀಯ ಸ್ವಯಂಸೇವಕರ ಪರಿಷತ್ತು.

(ರಾಷ್ಟ್ರಸೇವಾಮಂಡಳದ ಪ್ರೋವರ್ತಯಾರಿಗಾಗಿ.)

ದಿಲ್ಲಿಯಲ್ಲಿ ಕೂಡಿದ ಹಂಗಾಮಿ ಬೋರ್ಡು, ಈ ಪರಿಷತ್ತಿನ ಬಗ್ಗೆ ನಡಿಸಿದ ಕೆಲಸದ ವೃತ್ತಾಂತ (೧) ರಾಷ್ಟ್ರಸೇವಾಮಂಡಳದ ಘಟನೆಗಾಗಿ ಮೂವರ ಕಮೀಟಿಯೊಂದನ್ನು ನೇಮಿಸಿ ಕೋಕೋನಾಡಾದಲ್ಲಿ ಕೂಡಲಿಕ್ಕಿದ್ದ ಪರಿಷತ್ತಿಗೆ ಆಖೈರ ಮಸೂದೆಯನ್ನು ಸಾದರ ಪಡಿಸಬೇಕೆಂದು ನಿರ್ಣಯಿಸಿತು.

(೨) ಪ್ರಾಂತದೊಳಗಿನ ಸ್ವಯಂಸೇವಕ ಸಂಸ್ಥೆಗಳೆಲ್ಲ ಒಟ್ಟುಗೂಡಿ, ಪ್ರಾಂತಿಕ ಪರಿಷತ್ತನ್ನು ನೆರೆಯಿಸಿ, ಕೋಕೋನಾಡಾದೊಳಗಿನ ಪರಿಷತ್ತಿಗಾಗಿ, ೧೧ ಪ್ರತಿನಿಧಿಗಳನ್ನು ಆರಿಸತಕ್ಕದ್ದು. ಈ ಪ್ರತಿನಿಧಿಗಳೆಲ್ಲ ಸ್ಥಳೀಕ ಸ್ವಯಂಸೇವಕ ದಳವಳಿಯ ಚಾಲಕರಾಗಿರಬೇಕು. ಇವರೊಳಗಿನೊಬ್ಬರು ಪ್ರಾಂತಿಕ 'ಕಮಾಂಡರ' ರಾಗಿ ನೇಮಿಸಲ್ಪಡಬೇಕು. ಕೋಕೋನಾಡಾದಲ್ಲಿ ಪರಿಷತ್ತಿಗೆ ಹಾಜರಾಗುವ ಮೊದಲು, ಇವರು ೧ ತಿಂಗಳ ವರೆಗೆ ಶಿಕ್ಷಣ ಪಡೆಯತಕ್ಕದ್ದು: ಕಸ್ತಿ ಹಿಡಿಯುವದು, ಓಡುವದು, ಸಾಯಕಲ್ ಹತ್ತುವದು, ಕುದುರೆ ಸವಾರಿ ಮಾಡುವದು, ಈಸಾಡುವದು, ಮೊದಲಾದ ಶಾರೀರಿಕ ವ್ಯಾಯಾಮಗಳು, ಹಿಂದೀ ತಾಲೀಮು, ಜನಸ್ತೋಮವನ್ನು ಅಂಕೆಯಲ್ಲಿಡುವ ಕೌಶಲ್ಯ, ಬೆಂಕಿ ನಂದಿಸುವ ಚಾತುರ್ಯ, ನೆರೆಯ ಕಾಲದಲ್ಲಿ ಜನರನ್ನು ಬದುಕಿಸುವ ಜ್ಞಾನ, ರಾಷ್ಟ್ರೀಯ ಸಭೆಯ ಘಟನೆ ಹಾಗು ಚಳವಳಿಗಳ ಮಾಹಿತಿ, ಹಿಂದುಸ್ಥಾನದ ಸಂಕ್ಷಿಪ್ತ ಇತಿಹಾಸ ಹಾಗು ಭೂಗೋಲವಿಷಯಕ ಜ್ಞಾನ, ರಾಷ್ಟ್ರೀಯ ಸಭೆಯ ಪ್ರಾಂತಗಳ ಮಾಹಿತಿಯೂ, ಪ್ರಚಲಿತ ಸರಕಾರದ ಕೆಲ ಕಾಯಿದೆಗಳ ಮಾಹಿತಿಯೂ ಇರಬೇಕು

(೩) ಈ ಪ್ರತಿನಿಧಿಗಳಿಗೆ ಫೀ ಇರುವದಿಲ್ಲ. ಪ್ರತಿನಿಧಿಗಳೆಲ್ಲ ಅಹಮದಾಬಾದದೊಳಗಿನ ಸ್ವಯಂಸೇವಕ ಪ್ರತಿಜ್ಞಾಪತ್ರವನ್ನು ಸಹಿ ಮಾಡಿರಬೇಕು. ಹಾಗು ಪ್ರಾಂತಿಕ ಸ್ವಯಂಸೇವಕ ಅಧ್ಯಕ್ಷರ ಪರಿಷತ್ತಿನಿಂದ ಶಿಫಾರಸು ಪತ್ರಗಳನ್ನು ತರಿಯಬೇಕು. ಯಾವದೇ ಕಾರಣದಿಂದ ಪ್ರಾಂತಿಕ ಪರಿಷತ್ತು ಆಗದಿದ್ದಲ್ಲಿ, ಕೆಲ ಪ್ರಮುಖ . ಸ್ವಯಂಸೇವಕ ಸಂಸ್ಥೆಗಳ ಚಾಲಕರಿಂದ ಶಿಫಾರಸು ಪತ್ರಗಳನ್ನು ಒಯ್ದು ... ಶಿಫಾರಸು

ಪತ್ರ ಹಾಗು ಪ್ರತಿಜ್ಞಾಪತ್ರಗಳ ಫಾರ್ಮಗಳನ್ನು ಈ ಹಂಗಾಮಿ ಬೋರ್ಡಿನಿಂದ ಪೂರೈಸಲ್ಪಡುವವು. ಇವನ್ನು ತುಂಬಿ ಸಹಿಮಾಡಿ ಶಿಕ ಬರ ೫ನೇ ತಾರೀಖಿನೊಳಗೆ ಹುಬ್ಬಳ್ಳಿಯೊಳಗಿನ ಜನರಲ್ ಸೆಕ್ರೆಟರಿಯವರಿಗೆ ರವಾನೆ ಮಾಡತಕ್ಕದ್ದು.

(೪) ಪ್ರತಿಯೊಂದು ಪ್ರಾಂತಕ್ಕೆ ಹಿಂದೇ ನಿಶ್ಚಯಿಸಿದ್ದ, ಪ್ರಾಂತವಾರ ಮತದಾನವಾಗತಕ್ಕದ್ದು.

(೫) ಸ್ವಯಂಸೇವಕರ ಹಿಬೇಸಿಂದ ಕೊಡುವ ಸಾಡಾದಲ್ಲಿ ಒಂದು 'ಕೇಂದ್ರ' ಮಾಡಿ ಪ್ರತಿನಿಧಿಗಳಿಗೆ ಊಟ ಹಾಗು ಉಳಕೊಳ್ಳುವ ವ್ಯವಸ್ಥೆ ಮಾಡಬೇಕೆಂದು ಗೊತ್ತಾಯಿತು.

(೬) ಈ ಇಡೀ ಪರಿಷತ್ತಿನ ಖರ್ಚಿಗಾಗಿ, ನಾಲ್ಕು ಸಾವಿರ ರೂಪಾಯಿಗಳನ್ನು ಖರ್ಚ ಮಾಡಬೇಕು. ಪ್ರತಿಯೊಂದು ಕೊಂಗ್ರೆಸ ಪ್ರಾಂತವು ... ರೂಪಾಯಿಗಳನ್ನು ಕೊಟ್ಟರೆ, ಪರಿಷತ್ತಿನ ಖರ್ಚಿನಿಂದ ೧ ಸಾವಿರ ರೂಪಾಯಿಗಳು ಉಳಿಯುವವು.

(೭) ಎಲ್ಲ ಸ್ವಯಂಸೇವಕರೂ ಪ್ರತಿನಿಧಿಗಳೂ ಶುದ್ಧ ಖಾದಿಯ ಏಕಪ್ರಕಾರದ ಪೋಷಾಕು ಧರಿಸತಕ್ಕದ್ದು. ಪ್ರಾಂತಿಕ ಕಮಿಟಿ ಅಧ್ಯಕ್ಷರು ಚಿನ್ಹವನ್ನು ಧರಿಸಬೇಕು. ಪೋಷಾಕು ಯಾವದೆಂದರೆ — (ಅ) ನಾಲ್ಕು ಕಿಸೆ ... ಗಳುಳ್ಳ ಒಂದು ಕಪ್ಪು ಅಂಗಿಯು ಅರ್ಧ ತೊಡೆಯ ವರೆಗೆ ... ಬೇಕು (ಆ) ಒಂದು ಮೊಣಕಾಲು ವರೆಗಿನ ಚಡ್ಡಿ. (ಇ) ಒಂದು ಅಲಂಕಾರರಹಿತ ಗಾಂಧಿ ಟೊಪ್ಪಿಗೆ (ಉ) ಒಂದು ... (ಊ) ... ಅಚ್ಚ ಕಪ್ಪು ಕಂಬಳಿ ... ಗಳು ಪ್ರತಿಯೊಬ್ಬ ಪ್ರತಿನಿಧಿಗೆ ಅತ್ಯವಶ್ಯವಾದವು. ಇವರ ಹೊರತು ಇತರ ಅವಶ್ಯಕ ಸಾಮಗ್ರಿಯು ಅವರ ಹತ್ತರ ಇರಬಹುದು. ಆದರೆ, ಅವುಗಳ ... ಯು ಯಾವಾಗಲೂ ಸುಲಭವಾಗಿ ಒಯ್ಯುವಂಥಾದ್ದೂ, ಸ್ವಚ್ಛವಾದದ್ದೂ ಇರಬೇಕು.

ಈ ಬಗ್ಗೆ ಅವಶ್ಯವುಳ್ಳ ಎಲ್ಲ ಮಾಹಿತಿಯನ್ನು ಪೂರೈಸಲು ತಯಾರಿದ್ದೇವೆಂದು ಹುಬ್ಬಳ್ಳಿಯಿಂದ ಕಾರ್ಯದರ್ಶಿಗಳಾದ ಡಾ ನಾರಾಯಣರಾವ ಹರ್ಡೀಕರರು ತಾ ೭-೧೦-೧೯೩೩ ನೇಗೆ ಪ್ರಕಟನಾಪತ್ರಿಕೆಯನ್ನು ಜಾಹೀರ ಮಾಡಿರುತ್ತಾರೆ.

ದೇ॥ ಭ॥ ಮುಜಲಿಯವರ ಕೈಫಿಯತು.

—o—

ಬೆಳಗಾಂವಿಯ ಶ್ರೀ॥ ದತ್ತೋಪಂತ ಮುಜಲಿಯವರಿಗೆ ಕಳೆದ ೨೦ನೇ ತಾರೀಖಿಗೆ ಶಿಕ್ಷೆಯಾದ ಸುದ್ದಿಯು ಈ ಮೊದಲೇ ಪ್ರಕಟಗೊಂಡಿದೆ. ದತ್ತೋಪಂತರವರು ಕೋರ್ಟಿಗೆ ಸಾದರಪಡಿಸಿದ ಕೋರಿಕೆ ಕೈಫಿಯತ್ತು ಏನಂದರೆ.— ನನ್ನ ಇಡೀ ಭಾಷಣವನ್ನಾಗಲೀ, ವಾಕ್ಯರಚನೆಯನ್ನಾಗಲೀ ಈಗ ನನಗೆ ಚಲೋ ನೆನಪಿಲ್ಲ. ಆದರೂ, ನಾನು ಮಾಡಿದ ಭಾಷಣದ ಸರಕಾರಿ ರಿಪೋರ್ಟಿನಲ್ಲಿ ಕೆಲ ತಪ್ಪುಗಳು ಕಾಣುತ್ತವೆ. ಈ ತಪ್ಪುಗಳನ್ನು ನಾನೆಂದಾದರೂ ... ಸುವದು ಅಶಕ್ಯವೆಂದು ನಾನು ಖಾತ್ರಿಯಾಗಿ ... ಬಲ್ಲೆನು. ನಾನು ಅಹಿಂಸಾತ್ಮಕದ ಅಸಹಕಾರಿಯು. ಪರಮಾತ್ಮನನ್ನು ಸಾಕ್ಷಿಯಾಗಿಟ್ಟು, ಕಾಯಾ-ವಾಚಾ-ಮನೋ ಯಾವಾಗಲೂ ಅಹಿಂಸೆಯಿಂದಲೇ ವರ್ತಿಸುವೆನೆಂದು ನಾನು ಪ್ರತಿಜ್ಞೆ ಮಾಡಿದ್ದೇನೆ. ಡಿ॥ ಮ್ಯಾಜಿಸ್ಟ್ರೇಟರ ಹುಕುಮನ್ನು ಬುದ್ಧಿಪೂರ್ವಕ ಉಲ್ಲಂಘಿಸಿದೆನೆಂದು ನನ್ನ ಮೇಲೆ ಆರೋಪವಿದೆ. ... ಗಿನಾಯಿತು. ಆ ... ದಂಗೆಯಾಗಬಹುದೆಂತಲೂ ನನ್ನ ಮೇಲೆ ಆರೋಪವಿದೆ. ಬುದ್ಧಿಪೂರ್ವಕ ಹುಕುಮನ್ನು ಉಲ್ಲಂಘಿಸಿದ ಸಂಗತಿಯನ್ನು ಒಪ್ಪುತ್ತೇನೆ. ಆದರೆ, ಈ ಉಲ್ಲಂಘನೆಯು ದಂಗೆಗೆ ಕಾರಣವೆಂದು ನಾನು ನಿರಾಕರಿಸುತ್ತೇನೆ. ಗದಗಿನಲ್ಲಾಗಲೀ, ...ಟಗೇರಿಯಲ್ಲಾಗಲೀ, ದಂಗೆಯಾಗುವ ಲಕ್ಷಣಗಳು ಇದ್ದವೆಂದು ಕಲ್ಪಿಸಲಿಕ್ಕೆ ಸಹ ಅಶಕ್ಯವು. ನನ್ನ ಭಾಷಣದಿಂದ ಪ್ರಚಲಿತ ರಾಜ್ಯಪದ್ಧತಿಯು ಕೆಡಕಿರುವದೆಂದು ಶ್ರೋತೃಸಮುದಾಯದ ಭಾವನೆಯಾಯಿತೆಂದು ಕೆಲವರು ಸಾಕ್ಷಿ ಹೇಳಿದರು. ಈ ಪ್ರಕರಣದಲ್ಲಿ ಈ ಪ್ರಶ್ನೆಯು ಅಸಂಬದ್ಧವಿದೆ. ಪ್ರಚಲಿತ ರಾಜ್ಯಪದ್ಧತಿಯು ವಿರೋಧವಾಗಿ ಚಳವಳಿ ಎಬ್ಬಿಸುವದರಲ್ಲಿ ನಾನು ಒಬ್ಬ ಕಂಕಣನಾಗಿರುವೆನು. ಅಹಿಂಸೆಯಿಂದ ನಾನು ವರ್ತಿಸುವವರೆಗೆ, ದೇಶಬಾಂಧವನನ್ನು ನೋಯಿಸುವದು ಧರ್ಮನಿಷಿದ್ಧವಿದ್ದು ಪಾಪವೆಂದು ನಾನು ತಿಳಿದವರೆಗೆ ... ಳವಳಿಯು ನಿರ್ಬಲವೆಂತಲೇ ಎಣಿಸಬೇಕು. ನಾನು ಭಾಷಣ ಕೊಡುವ ಮುಂದೆಯೇ ಶಾಂತತಾಭಂಗವಾಗುವ ಏನೂ ಸಂಭವವಿದ್ದಿಲ್ಲೆಂದು ನಾನು ಖಾತ್ರಿ ಮಾಡಿರುತ್ತೇನು. ಭಾಷಣ ಮುಗಿದ ಬಳಿಕ ನನ್ನ ಭಾಷಣದ ಪರಿಣಾಮವೇನಾಯಿತೆಂದು ನಾನು ಶ್ರೋತೃಗಳ ... ಪ್ರಶ್ನಿಸಿದೆನು. 'ಹಿಂಸೆ ಮಾಡಬೇಕೆಂದು ನಿಮಗನಿಸಿತೇನು? ಅಥವಾ ಹುಕುಮನ್ನು ಉಲ್ಲಂಘಿಸಲಿಕ್ಕೆ ಪರವಾನಿಗೆ ನಿಮಗೆ ಪ್ರೇರಣೆ ಮಾಡಿತೇನು?' ಎಂದು ನಾನು ಪ್ರಶ್ನಿಸಲು, ಅನೇಕ ಸಭಿಕರು ... ಹಿಂಸೆಯ ವಿಚಾರವು ನಮಗೆ ತೋಚದ ... ಅಸಹಕಾರವೆಂತಲೂ ... ಪ್ರೈದಾಸ್ಯ ಮಾಡಿ, ಉದ್ಯೋಗಿಯಾಗ ... ನಮಗನಿಸಿತೆಂದು ... ದರಿಸಿದರು. ಇವೆಲ್ಲ ಪೋಲೀಸ ಸಬ್ ಇನ್ಸಪೆಕ್ಟರರ ಪ್ರತ್ಯಕ್ಷ ನಡೆಯಿತು. ನನ್ನ ಹೇಳಿಕೆಗೆ ಅವರ ತಲೆದೂಗುವರೆಂದು ನನ್ನ ನಂಬಿಗೆ. ನನ್ನ ಭಾಷಣದ ಉದ್ದೇಶವು ಖಾದಿಯು ಪ್ರಚಾರ ಇದ್ದು ಪರಿಣಾಮವು ಸಹ ಅದೇ ... ಡಿ. ಮ್ಯಾಜಿಸ್ಟ್ರೇಟರ ಹುಕುಮು, ಸ್ಥಳ ಕಾಲಗಳನ್ನು ನಿರ್ದೇಶಿಸದೆ ಇಡೀ ಜಿಲ್ಲೆಗೇ ಲಾಗೂ ಆಗುವದರಿಂದ ಬೇಕಾದ ದೀರ್ಘ ಇರುವದೆಂದು ಅನೇಕ ಮಿತ್ರರು ನನಗೆ ಹೇಳುತ್ತಾರೆ. ಇದ ಕಾಯಿದೆಯ ಪ್ರಶ್ನೆಯು ಕಾಯಿದೆಯನ್ನು ಪ್ರಜೆಗಳಿಗೆ ಕೊಡುವ ನ್ಯಾಯಾಸನದ ಅಧಿಕಾರದೊಳಗಿನ ಪ್ರಶ್ನೆಯಿದೆ. ಅದನ್ನು ನ್ಯಾಯಾಸನವೇ ವಿಚಾರಿಸಲಿ. ನಾನು ಅಸಹಕಾರಿಯಿದ್ದೇನೆ. ಎಂದು ಸ್ಪಷ್ಟವಾಗಿ ಒಪ್ಪಿಕೊಂಡೆ. ನನಗೆ ಈ ಕಾಯಿದೆಯ ಸಂರಕ್ಷಣೆಯು ಬೇಡ. ಇಷ್ಟೇ ಅಲ್ಲ ಪತ್ರಾಮುಖವಾಗಿ ನುಡಿಯುವದೇನೆಂದರೆ — ಹುಕುಮವನ್ನು ಕಾಯಿದೆಯು ಶಾಸ್ತ್ರದಂತೆ ಹೊರಡಿಸಿದ್ದರೂ, ಅದನ್ನು ನಾನು ಉಲ್ಲಂಘಿಸುತ್ತಿದ್ದೆನು. ಯಾಕೆಂದರೆ ಹುಕುಮು ಅನ್ಯಾಯದ್ದಿದ್ದು, ಶಾಂತತೆಯಿಂದ ವಿರೋಧವಾಡುವವರಿಗೆ ನ್ಯಾಯವಾಗಿ ಸತಾಯಿಸಬೇಕೆಂದು ಈ ಹುಕುಮು ಹೊರಡಿಸಲಾಗಿದೆಯೆಂದು ನನ್ನ ಮತವಿದೆ. ಈ ಕಾಲ್ಪನಿಕ ಹಾಗು ಕೆಡಿಗೇಡಿ ಹುಕುಮನ್ನು ಉಲ್ಲಂಘಿಸಿದ ಬಗ್ಗೆ ಯಾರಿಗೂ ಶಿಕ್ಷೆಯಾಗಲಾರದು. ಅಕ್ಟೋಬರ ೩ನೇ ತಾರೀಖಿಗೆ ಪುನಃ ಇದೇ ಮಾದರಿಯ ಹುಕುಮು ನನ್ನ ಮೇಲೆ ಜ್ಯಾಗಿಯಾಯಿತು. ಧಾರವಾಡ ಜಿಲ್ಲೆಯಲ್ಲಿ ಗಂಡಾಂತರಪ್ರದ ಸಂಗತಿಗಳು ಸಂಭವಿಸಿದ್ದು ನನಗೆ ಗೊತ್ತಿಲ್ಲ. ಈ ಹುಕುಮೂ ಉಪದ್ರ ಕಾರಕವಿದೆ. ನ್ಯಾಯಾಸನವೂ, ಸರಕಾರಿ ವಕೀಲರೂ ನನ್ನನ್ನು ಯೋಗ್ಯ ರೀತಿಯಿಂದ ನಡಿಸಿದ ಬಗ್ಗೆ ಅವರ ಆಭಾರ ಮನ್ನಿಸಿ ಸಮಾರೋಪ ಮಾಡುವೆನು.

ಗ್ಯಾಸ ದೀಪಗಳು
ಬಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ನಮ್ಮ ಕೆಳಗಿನ ಪತ್ತೆಗೆ ಮುಕ್ತಾ ಕಿಕ್ಕಿ ತಿಳಕೊಳ್ಳಬಹುದು.

ಪುರುಷೋತ್ತಮ ಲಕ್ಷ್ಮಣಯ್ಯ ಕ್ಯಾಸಭಾಗ
ಹೆಗಡೇಕರ, ದುಕಾನ್, ಕುಮಟಾ.

"ಕಷ್ಟನಿವಾರಣ ಸಂಘ" ಉಡುಪಿ.

ಉಡುಪಿ ನೆರೆ ಹಾವಳಿಯಿಂದ ನಿರ್ಗತಿಕರಾದ ವ್ಯವಸಾಯಕಾರರು ತಮ್ಮ ತಮ್ಮ ವ್ಯವಸಾಯಗಳನ್ನು ಪುನಃ ನಡೆಸಲು ಆಯುಧಗಳನ್ನು ಖರೀದಿ ಮಾಡಲಿಕ್ಕೆ ಈ ಸಂಘವು ಸಹಾಯ ಮಾಡುತ್ತಲಿದೆ. ಇತರರು ನೋಡುವದರಿಂದ ಹೊಟ್ಟೆ ಹೊರಕೊಳ್ಳುವಂತೆ, ಏರ್ಪಾಡು ಮಾಡಿದ್ದಾರೆ. ಉಡುಪಿಯಲ್ಲಿ ಒಂದು ನೂರು ಮನೆಯವರು ನೂಲಲಿಕ್ಕೆ ಹತ್ತಿದ್ದು, ದಿನಾಲು ೩೦ ಪೌಂಡು ನೂಲು ಕವಿಗೆ ಬರುತ್ತದೆ. ಈಗಿನ ವರೆಗೆ ಸುಮಾರು ೫೦ ಸಾವಿರ ರೂಪಾಯಿಗಳು ಕೇವಲ ಅಕ್ಕಿಯನ್ನು ಹಂಚುವದರಲ್ಲಿಯೇ ಖರ್ಚಾಗಿವೆ. ಅಸ್ಪೃಶ್ಯರ ಬಗ್ಗೆ ವಿಶೇಷ ಲಕ್ಷ್ಯ ಕೊಡಲ್ಪಡುತ್ತದೆ. ಮುಂಬಯಿಯ ಗಿರಣೀ ಮಾಲಕರೂ, ಇತರ ಸದ್ಗೃಹಸ್ಥರೂ ಬಟ್ಟೆಗಳ ಸಹಾಯವನ್ನು ಮಾಡಿದ್ದಾಗ್ಯೂ ಅದು ಸಾಲದು. ಹೆಂಗಸರಿಗೂ, ಹುಡುಗರಿಗೂ ಬಟ್ಟೆಯ ಅಡಚಣೆಯು ಬಹಳವಾಗಿರುತ್ತದೆ. ಸದ್ಯಕ್ಕೆ ಈ ಕಮಿಟಿಯಲ್ಲಿ ೩೦ ಸಾವಿರ ರೂಪಾಯಿಗಳು ಲಿಲಕು ಇದ್ದು ಅವುಗಳನ್ನು ಅನಾಶ್ರಿತರ ಸಹಾಯಕ್ಕಾಗಿ ತೀವ್ರ ಖರ್ಚು ಮಾಡಬೇಕೆಂದು ಈ ಕಮಿಟಿಯವರು ತಯಾರಿದ್ದಾರೆ. ಎಲ್ಲರಿಗೂ ಸಹಾಯವು ದೊರೆಯಬೇಕಾದರೆ, ಇನ್ನೂ ಎರಡು ಲಕ್ಷ ರೂಪಾಯಿಗಳ ಸಹಾಯವು ಬೇಕಾಗುವದು. ಎಲ್ಲ ಉದಾರ ಬುದ್ಧಿಯ ಸದ್ಗೃಹಸ್ಥರೂ ಸಡಿಲ ಹಸ್ತದಿಂದ ಸಹಾಯ ಮಾಡುವರೆಂದು ಆಶಿಸುತ್ತೇವೆ.

ವಾರ್ತಾಪ್ರಸಾರಕ ಸಂಘ, ಹುಬ್ಬಳ್ಳಿ

ಮುಂಬಯಿ.

ತಾ ೨೧-೧೦-೩೩ ನೇ ದಿವಸ ವಿಜಾಪುರದಿಂದ ಶ್ರೀ ಶ್ರೀನಿವಾಸರಾವ ಕೌಜಲಗಿಯವರು ಮೌಲಾನಾ ಮಹಮ್ಮದ ಅಲ್ಲಿಯವರನ್ನು ಭೆಟ್ಟಿಯಾಗಿ, ಕರ್ನಾಟಕಕ್ಕೆ ಬಂದು ಹೋಗುವದಕ್ಕೆ ಟಿಕಣ ಕೊಡುವದರ ಸಲುವಾಗಿ ಬಂದಿರುತ್ತಾರೆ.

ತಾ ೨೨-೧೦-೩೩ ನೇ ದಿವಸ ಮುಂಜಾನೆ ದಿಲ್ಲಿ ಎಕ್ಸ್‌ಪ್ರೆಸ್ಸಿನಿಂದ ಮೌ॥ ಮಹಮ್ಮದ ಅಲ್ಲಿ ಮತ್ತು ಅವರ ಮತೋಶ್ರೀಯವರು ಇಲ್ಲಿಗೆ ದಯಮಾಡಿಸಿದರು. ಸ್ಟೇಶನಕ್ಕೆ ಸುಮಾರು ೧೦ ಸಾವಿರಕ್ಕಿಂತ ಹೆಚ್ಚು ಜನ ... ಸ್ವಾಗತ ಮಾಡಲಿಕ್ಕೆ ಬಂದಿದ್ದರು.

ಬಂಡಿಯಿಂದ ಇಳಿದ ಕೂಡಲೆ, ಶ್ರೀ ಕೌಜಲಗಿಯವರು ಕರ್ನಾಟಕದ ಮತ್ತು ಮುಂಬಯಿ ಅಖಿಲ ಕರ್ನಾಟಕದ ಪರಿಯಿಂದ ಹೂವಮಾಲೆಗಳನ್ನು ಹಾಕಿದರು. ಶ್ರೀ॥ ಆರ್. ಎಸ್. ಪಡಬಿದ್ರಿಯವರೂ ಇವರ ಜೊತೆಗೆ ಬಂದಿದ್ದರು.

ಬೆಂಕಾಪುರ.

ಐನೇ ತಾರೀಖಿನ ದಿವಸ ಯಾಳಗಿ ದಿನವು ಇಲ್ಲಿ ಪಾಲಿ ಸಲ್ಪಟ್ಟಿತು. ಧಂಡು ಕೂಡಿಸುವದು ನಡೆದಿರುತ್ತದೆ.

ಹುಬ್ಬಳ್ಳಿ

ತಾ ೨೪ನೇ ಅಕ್ಟೋಬರ ದಿವಸ ಇಲ್ಲಿಯ ಮ್ಯುನಿಸಿಪಲ್ ಕಚೇರಿಯಲ್ಲಿ 'ಕೋ-ಆಪರೇಟಿವ್ ಸೇಲ್ಸ' ಈ ವಿಷಯದ ಮೇಲೆ ಮುಂಬಯಿ ಇಲಾಖೆಯ ಕೆತಕೀ ಖಾತೆಯ ಸ್ಪೆಶಲ್ ಆಫೀಸರಾದ ರಾ॥ ಮೆನ್ ಇವರ ಆಖ್ಯಾನವಾಯಿತು.

ಇಲ್ಲಿಯ 'ಕಾಟನ್ ಸೇಲ್ಸ' ಸೊಸಾಯಿಟಿಯ ಕಾರ್ಯದರ್ಶಿಗಳಾದ ರಾವಸಾಹೇಬ ಶಿರಹಟ್ಟಿಯವರು ಆ ಸಂಸ್ಥೆಯ ಅಹವಾಲವನ್ನು ಓದಿದ ಮೇಲೆ, ರಾ॥ ಮೆನ್ ಇವರು ಇಂಗ್ಲೀಷಿನಲ್ಲಿ ಭಾಷಣ ಮಾಡಿದರು. ಹತ್ತಿಯ ಬೆಳೆಯ ಹೆಚ್ಚುವಿಕೆಯನ್ನೂ, ಅದರ ವ್ಯಾಪಾರದ ಉನ್ನತಿಯನ್ನೂ, ಆ ವ್ಯಾಪಾರಕ್ಕಾಗಿ ಅವಶ್ಯ ಸ್ಥಾಪಿಸಬೇಕಾದ ಪರಸ್ಪರ ಸಹಾಯಕಾರೀ ಮಂಡಳಿಗಳನ್ನೂ ಕುರಿತು ಬಹಳ ಬೋಧಪ್ರದವಾಗಿ ಹೇಳಿದರು. ಇವರ ಭಾಷಣವನ್ನು ರಾ॥ ಶಿರಹಟ್ಟಿಯವರು ಕನ್ನಡಿಸಿ ಹೇಳಿದರು.

ಶರೀರ ಬಲವರ್ಧಕ ಸಂಘ.

(ವಾರ್ತಾಪ್ರಸಾರಕ ಸಂಘ ಹುಬ್ಬಳ್ಳಿ.)

ಜನರ ಶಕ್ತಿಯನ್ನು ಬೆಳೆಸುವ ಕಡೆಗೆ ಲಕ್ಷ್ಯಗೊಡುವಂಥ ಯಾವದಾದರೂ ಒಂದು ಸಂಸ್ಥೆಯು ಹುಬ್ಬಳ್ಳಿಯಲ್ಲಿ ಇರುವದು ಆವಶ್ಯವೆಂದು ಕಂಡು ಇಲ್ಲಿಯ ಅನೇಕ ಸದ್ಗೃಹಸ್ಥರು ಪುಢಾಕಾರವನ್ನು ತೆಗೆದುಕೊಂಡು ಇಂಥದೊಂದು ಸಂಘವನ್ನು ಸ್ಥಾಪಿಸುವದಕ್ಕೂ, ಮತ್ತು ಅದರ ಸಂಘಟನೆಯನ್ನು ತಯಾರಿಸುವದಕ್ಕೂ ಅಕ್ಟೋಬರ ತಾ ೨೫ನೇ ದಿವಸ ಶ್ರೀ ವೆಂಕಟರಾವ ಶಿರೂರ ಇವರ ಅಧ್ಯಕ್ಷತೆಯ ಕೆಳಗೆ ಜಾಹೀರ ಸಭೆಯನ್ನು ಕರೆದಿದ್ದರು. ಜನಸಮುದಾಯವು ಬಹಳಾಗಿ ಕೂಡಿತ್ತು. ಈ ಸಭೆಯಲ್ಲಿ "ಶರೀರ ಸಂಪತ್ತು" ಈ ವಿಷಯದ ಮೇಲೆ ಪ್ರೊ! ಗೋಖಲೆ, ಡಾ! ಸಾ! ಶಿರಹಟ್ಟಿ, ಶ್ರೀ! ಪಟ್ಟಣಶೆಟ್ಟಿ ಪಾಟೀಲ ಮುಂತಾದವರ ಸ್ಫೂರ್ತಿದಾಯಕ ಭಾಷಣಗಳಾದವು. ಈ ಸಂಸ್ಥೆಗೆ "ಶರೀರ ಬಲವರ್ಧಕ ಸಂಘ" ವೆಂಬ ಹೆಸರು ಕೊಡಬೇಕೆಂದು ನಿಶ್ಚಯಿಸಲ್ಪಟ್ಟಿತು. ಈ ಸಂಘದ ಘಟನೆಯನ್ನು ತಯಾರಿಸುವದಕ್ಕಾಗಿ ಕೆಲವು ಸದ್ಗೃಹಸ್ಥರದೊಂದು ಕಮೀಟಿಯು ನೇಮಿಸಲ್ಪಟ್ಟಿದೆ.

ನೈಸರ್ಗಿಕ ಹಕ್ಕು.

ರಾಜಕೋಟದ ದೊರೆಗಳಾದ ಠಾಕೋರ ಸಾಹೇಬರು ಠಾಕೋರ ಸಂಸ್ಥಾನಿಕರ ಮಂಡಳವನ್ನು ಸ್ಥಾಪಿಸಲಿಕ್ಕೆ ಪ್ರಯತ್ನಿಸಹತ್ತಿದ್ದನ್ನೂ, ಅದರ ವಿರುದ್ಧವಾಗಿ ಮುಂಬಯಿ ಸರಕಾರದವರು ನಡೆಯಿಸಿದ ಪ್ರಯತ್ನಗಳನ್ನೂ ನೋಡಿದರೆ, ದೇಶದಲ್ಲಿ ಯಾವ ತರಹದ ಸ್ವಾತಂತ್ರ್ಯ ಗಾಳಿಯು ಬೀಸಹತ್ತಿರುತ್ತದೆಂಬುದರ ನಿಜವಾದ ಕಲ್ಪನೆಯಾಗುತ್ತದೆ. ಮೊದಮೊದಲು, ಸಂಸ್ಥಾನದಲ್ಲಿಯ ಪ್ರಜೆಗಳು ಸಹಿತ ರಾಜಕಾರಣದಲ್ಲಿ ಭಾಗವನ್ನು ತೆಗೆದುಕೊಳ್ಳಲಿಕ್ಕೆ ಬಹಳೇ ಹೆದರುತ್ತಿದ್ದರು. ಈಗ ಖುದ್ದ ಸಂಸ್ಥಾನದ ದೊರೆಗಳೇ, ವ್ಯಕ್ತಿಸ್ವಾತಂತ್ರ್ಯದ ಮೇಲೆ ದಾಳಿ ತಂದಿರುವ ಸರಕಾರದವರ ಕಟ್ಟಳೆಗಳನ್ನು ಒದಿಗೊತ್ತಿ, ಸ್ವಾಭಿಮಾನವನ್ನು ವ್ಯಕ್ತಪಡಿಸುವ ಮಾರ್ಗವನ್ನು ಅವಲಂಬಿಸುವರೆಂದರೆ, ಹಿಂದುಸ್ಥಾನದ ಭಾಗ್ಯೋದಯದ ಸುಚಿನ್ಹವೇ ಸರಿ. ತಮ್ಮ ಈ ಕಾರ್ಯಕ್ಕೆ ಸಮ್ಮತಿಯನ್ನು ಕೊಡದಿದ್ದಕ್ಕಾಗಿ, ಠಾಕೋರ ಸಾಹೇಬರು ಮುಂಬಯಿ ಸರಕಾರದ ಏಜಂಟರಿಗೆ ಕಠಕಠಿಕವಾಗಿ ಒಂದು ಪತ್ರವನ್ನು ಬರೆದಿರುವರು. ಅದರ ಸಾರಾಂಶವೇನಂದರೆ "ಸರಕಾರದವರು ನಮ್ಮ ಕಾರ್ಯದ ಬಗ್ಗೆ ಇಷ್ಟೇಕೆ ಸಂಶಯ ವ್ಯಕ್ತಪಡಿಸಬೇಕು? ಸಂಸ್ಥಾನಿಕರ ಮಂಡಳವನ್ನು ಸ್ಥಾಪಿಸುವದು ಕೇವಲ ಪ್ರಜರ ಹಿತಕ್ಕಾಗಿಯೇ ಇದ್ದರೂ ಕೂಡ, ಅದನ್ನು ಮುರಿಬಡಿಯುವ ಯತ್ನವೇಕೆ? ಇಷ್ಟೆಲ್ಲ ಸುಧಾರಣೆ ಹಕ್ಕುಗಳನ್ನು ಕೊಟ್ಟದ್ದೂ ಮತ್ತು ದಿಲ್ಲಿಯಲ್ಲಿ ಪ್ರತಿ ವರ್ಷ "ಚೇಂಬರ ಆಫ್ ಪ್ರಿನ್ಸಿಸ್" ನ್ನು ಭರಾಯಿಸುವದೂ, ಇದೆಲ್ಲ ಕೇವಲ ನಾಟಕಿ ಫಾರ್ಸ ಎಂತಲೇ ತಿಳಿಯಬೇಕೇನು?"

ಸಂಸ್ಥಾನಿಕರ ಮಂಡಳವನ್ನು ಸ್ಥಾಪಿಸುವದು ನಮ್ಮ ನೈಸರ್ಗಿಕ ಹಕ್ಕುಗಳಲ್ಲಿ ಒಂದಾಗಿದ್ದು, ಇತರ ಯಾವದೇ ಸ್ವತಂತ್ರ ರಾಷ್ಟ್ರದಲ್ಲಿ ಸರಕಾರದಿಂದ ಈ ಕಾರ್ಯಕ್ಕೆ ಈ ಪ್ರಕಾರ ವಿರೋಧ ಬಂದಿದ್ದರೆ ಅಲ್ಲಿ ಒಮ್ಮೆಲೇ ಹಾಹಾಕಾರವೆದ್ದು, ಸರಕಾರದ ಪ್ರಯತ್ನಗಳೆಲ್ಲ ಕೇವಲ ನಿಷ್ಫಲ ಮಾಗುತ್ತಿದ್ದವು. ಠಾಕೋರರು ಈ ಪ್ರಕಾರ ಬರೆದು ತಾವು ಇತರ ಸಂಸ್ಥಾನಿಕರಿಗೆ ಕೊಟ್ಟ ಆಮಂತ್ರಣವನ್ನು ಎಂದಿಗೂ ತಿರುಗಿ ತೆಗೆದುಕೊಳ್ಳಲಾರೆವೆಂತಲೂ, ಈ ತರಹದ ಸಂಘಟನೆಯ ಕಾರ್ಯಗಳಿಗೆ ಉತ್ತೇಜನ ಕೊಡುವದರಲ್ಲಿಯೇ ಸರಕಾರದ ನಿಜವಾದ ಹಿತವಿರುತ್ತದೆಂದೂ, ಅದೇ ಕಾರಣ, ಮುಂಬಯಿ ಸರಕಾರದ ಏಜಂಟರ ಆಜ್ಞೆಯನ್ನು ತಾವು ಆದರಪೂರ್ವಕವಾಗಿ ಉಪೇಕ್ಷಿಸುವೆವೆಂತಲೂ ಕಡೆಗೆ ಅವರು ಸ್ಪಷ್ಟವಾಗಿ ಬರೆದಿದ್ದಾರೆ.

ಇದೇ ಪ್ರಕಾರ ಠಾಕೋರರು ಕಾಠೇವಾಡದ ಇತರ ಸಂಸ್ಥಾನಿಕರಿಗೆ, ಸರಕಾರದವರ ಆಜ್ಞೆಯು ನೈಸರ್ಗಿಕ ಹಕ್ಕುಗಳ ವಿರುದ್ಧ ವಿದ್ದದರಿಂದ ಅದನ್ನು ಲಕ್ಷಿಸದೇ, ಮೊದಲೇ ಗೊತ್ತಾದಂತೆ, ಎಲ್ಲರೂ ಮಿಲಿತರಾಗಬೇಕೆಂದು ವಿನಂತಿ ಮಾಡಿಕೊಂಡಿದ್ದಾರೆ.

ಸಿದ್ದಾಪುರ ರಾ. ಶಾಲೆಯ ಅಢಾವೆ.

ಸಿದ್ದಾಪುರ ರಾಷ್ಟ್ರೀಯ ಶಾಲೆಯ ತಾ ೧-೧೧-೨೨ ರಿಂದ ತಾ ೧-೯-೧೯೨೩ ರ ವರೆಗೆ, ಅಂದರೆ, ಹತ್ತು ತಿಂಗಳ ಅಢಾವೆ ಹೊರಗೆಡವಿದೆ. ವರ್ಷ ಅಢಾವೆ ಜಾಹೀರಾದಾಗ, ೧೪ ತಿಂಗಳದ ಅಢಾವೆ ಕೂಡಿತು. ಆದರೆ, ಮುಂದಿನ ವರ್ಷ ಲೆಕ್ಕಕ್ಕೆ ಸರಿಯಾಗಬೇಕೆಂದು ಶಾಲೆಯು ಸ್ಥಾಪನೆ ಆಗಿ ೨ ವರ್ಷ ಮುಗಿದ ದಿವಸ, ಅಂದರೆ, ದುರ್ಧರೋದ್ಗಾರಿ ಸಂ! ಶ್ರಾವಣ ಬಹುಳ ೧೦ (ಅಂದರೆ ೫-೯-೨೩ಕ್ಕೆ) ಈ ಕೆಳಗಿನ ಅಢಾವೆ ಓದಿಯದೆ.

ಜಮಾ.

		ರೂ ಆ ಪೈ
೧	ಹೋದ ವರ್ಷ ಉಳಿದ್ದಿಲ್ಕು (ಅಢಾವೆ ಹೊರಗೆಡವಿದಾಗ)	೬೩ ೧೦-೧೧
೨	ಶಾಲಾ ಫೀ	೬೦-೪-೦
೩	ಗಾಂಧಿ ಕಾಣಿಕೆ.	೫-೧೨-೦.
೪	ಭತ್ತದಿಂದ ಬಂದ ಉತ್ಪನ್ನ	೨೫-೧೧-೪
೫	ದೇಣಿಗಿ.	೨೦-೦-೦.
೬	ಹಬ್ಬಿ ಉತ್ಪನ್ನ (ಕಾವಗೋಡ ಚಂದ್ರಗುತ್ತಿ, ಭುವನಗಿರಿ) ಜಾತ್ರೆ ಉತ್ಪನ್ನ ಕೂಡಿ.	೧೯-೧೩-೧೦.
೭	ಸಂಭಾವನೆ ಅಕ್ಕಿ.	೩೬-೩-೦
೮.	ಮುಷ್ಟಿಫಂಡ ನಗದಿ	೬-೧-೩
೯	ಮುಷ್ಟಿ ಫಂಡ ಅಕ್ಕಿ ಉತ್ಪನ್ನ	೩೨೦-೨-೩
೧೦	ಬೆಳಗಿಯಿಂದ ನಗದಿ ಬಂದದ್ದು	೧೭-೫ ೦
೧೧	ಜನಾವರಿಂದ ಬಂದ ಉತ್ಪನ್ನ	೧೮-೧೪ ೦
೧೨	ಜಿಲ್ಹಾ ಕಮಿಟಿ ಗ್ರೇಂಟ	೧೦೦-೦-೦
೧೩	ತಾಲೂಕಾ ಕಾಂಗ್ರೆಸ ಕಮಿಟಿಯಿಂದ ಸಾಲಾ	೧೧೦-೦-೦.
	ಒಟ್ಟು	೭೯೩-೬-೭

ಖರ್ಚು.

		ರೂ ಆ ಪೈ
೧	ಸ್ವಯಂಸೇವಕರಿಗೆ ಕಮಿಶನ್	೯ ೧೪-೬
೨	ಗಾಡಿ ಭಾಡಿಗೆ (ಶಾಲೆಯ ಒಳಗಿನ ಜಲಿಗೆ ತಂದ ಒಗ್ಗ)	೧-೮-೦.
೩	ಶಾಲಾ ಜಾಗದ ಎರಡು ವರ್ಷದ ಗೇಣಿ	೧೨-೦-೦
೪	ಶಾಲಾ ಉಪಕಾರಣ (ಖರ್ಚನಾಗಿ ತೆಗೆದುಕೊಳ್ಳದ) ಕಟ್ಟದ ಒಗ್ಗ ದಂಡ.	೬೬ ೬ ೯
೫	ಶಾಲೆಗೆ ಕಳೆದ ವರ್ಷ ತಂದ ಹಂಚಿನ ಬಾಬತು	೨೯-೧೨-೦
೬	'ಜಯಕರ್ನಾಟಕ ಮಾಸಿಕ ಪುಸ್ತಕಕ್ಕೆ	೪-೦-೦
೭	ಶಾಲಾ ಫೋಟೋಕ್ಕೆ	೭-೪ ೦
೮	ಮಾಸ್ತರರು ಶಿಕ್ಷಕರ ಪಗಾರ.	೬೨೩-೧೩-೧.
	ಒ. ಖರ್ಚು	೭೫೪-೧೦-೪.
	ತಾರೀಖು ೩೦ ೮-೨೨ ಕ್ಕೆ ಶಿಲಕು	೩೯ ೩ ೩.
	ಒಟ್ಟು	೭೯೩-೧೩-೭

ಸಿದ್ದಾಪುರ, ತಾ. ೧-೯-೨೩ } ಜಿ. ವ್ಹಿ. ಸಿದ್ಧೇಶ್ವರ, ಅ. ಸ. ಶಾ ಕಾಂ ಕ. ಸಿದ್ದಾಪುರ.

ಮನೆ ವಿಕ್ರಿ.

ಹೆರವಟ್ಟೆ ವಿಠೋಬ ದೇವಸ್ಥಾನದ ಮುಂದೆ ೬೭ ನೇ ಸರ್ವೆ ನಂಬರದಲ್ಲಿ ಇರುವ ಕ. ಬಟೂತ ೧೬ ಅಂಕಣದ ಮನೆ, ಅದಕ್ಕೆ ಹಾಗಿದ್ದ ೨ ಅಂಗಡಿಗಳೂ ಹಾಗೂ ೧೬ ಗುಂಟೆ ಹಿತ್ತಲು ಮಾರಾಟ ಮಾಡತಕ್ಕದ್ದಿವೆ. ಖಾಯಿಸ ಇದ್ದವರು ಅದನ್ನು ನೋಡಿ, ಕೆಳಗಿನ ವಕ್ತಿಗೆ ಪತ್ರವ್ಯವಹಾರ ನಡೆಸಬಹುದು

ಆರ್. ವ್ಹಿ. ಪ್ರಭು,
ಪೋಸ್ಟ ಮಾಸ್ತರ, ಹೊನ್ನಾವರ.

ನೌಕರರು ಬೇಕು.

"ಮುಂಬಯಿ, ಪರೇಲ್, ಕಾಳಾಚೌಕಿ, ಟ್ರಾಮ ನಾಕೆಯಲ್ಲಿರುವ ಜಿ ವಿ. ಕಾಮತರ ಪಿಶ್ರಾಂತಿಭವನದಲ್ಲಿ ಕೆಲಸ ಮಾಡಲಿಕ್ಕೆ ಹುರುಕಾದ ಯೌವನಸ್ಥರು ಈಗಲೇ ಬೇಕು ತಿಂಗಳಿನ ಪಗಾರು ಕೆಲಸ ನೋಡಿ ಕೊಡುವದು. ಸೇರಲಿಚ್ಛಿಸುವವರು ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ತಿಳಕೊಳ್ಳಬಹುದು."

Address — **G. V. Kamath,**
Tea-shop, Kalachowki Naka,
PAREL, *No 12, Bombay*

ಏನೂ ಉಪದ್ರವವಾಗದೆ
ಕೂದಲು ತೆಗೆಯುವ

ಬಾದಶಾಹೀ ಸಾಬೂನು.

ಈ ಸಬಕಾರವನ್ನು ಬೇಕಾದಲ್ಲಿ ಹಚ್ಚಿರಿ, ಅಲ್ಲಿಯ ಕೂದಲುಗಳು, ಚರ್ಮವನ್ನು ಯಾವದೇ ರೀತಿಯಿಂದ ಕಲಂಕಿಸದೆ, ಅತ್ಯಂತ ಸುಖದಿಯಿಂದ ಉದುರಿಹೋಗುತ್ತವೆ. ಚರ್ಮವು ಮೃದುವಾಗುತ್ತದೆ ೩ ಬಟ್ಟಿಗಳ ಪೆಟ್ಟಿಗೆ ೧ ರ ಬೆಲೆ ಒರೇ ೧ ರೂಪಾಯಿ. ಟಪಾಲ ಹಾಸಲು ೪ ಆಣೆ. ಒಂಟಿ ಬಟ್ಟಿಯನ್ನು ಕಳಿಸಲಾಗುವದಿಲ್ಲ. ೩-೩ ಬಟ್ಟಿಗಳುಳ್ಳ ೪ ಪೆಟ್ಟಿಗೆಗಳ ಕಿಮ್ಮತ್ತು ರೂಪಾಯಿ ೩, ಅಂಚೆ ಹಾಸಲು ಮಾಫ. ಬಾದಶಾಹೀ ಸಾಬೂನಿನ ಉತ್ಕೃಷ್ಟತೆಯ ಬಗ್ಗೆ ಕಲಕತ್ತಾ, ಕರಾಚಿಗಳ ಪ್ರದರ್ಶನಗಳಲ್ಲಿ ಸುವರ್ಣ ಪದಕಗಳು ಇನಾಮವಾಗಿ ದೊರೆತಿವೆ.

ನಕಲೀ ಮಾಲಿನ ಬಗ್ಗೆ ಎಚ್ಚರಿಕೆ, ಮೋಸ ಹೋಗಬೇಡಿರಿ

ರಜಿಸ್ಟರ ನಂ ೫೭೯, ತಪಾಸ ಮಾಡಿಕೊಂಡು ಖರೇದಿ ಮಾಡಿರಿ. ಅಲ್ಲಲ್ಲಿ ಏಜಂಟರು ಬೇಕು.

ಸಿ. ಸಿ. ಮಹಾಜನ ಎಂಡ್ ಕಂಪನಿ,
ಮುಂಬಯಿ ನಂ. ೨

ಟೀಪು — ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಯಾ ಮರಾಠಿಯಲ್ಲಿ

कारवारांत आयुर्वेदिक पाठविद्यालय

उघडण्यांत येणार.

सन १९२४ च्या जानेवारी महिन्यापासुन कारवार येथें वरील पाठशाळा उघडण्यात येणार आहे. आयुर्वेदातील प्रत्येक विषय प्रमाणपूर्वक व सशास्त्र शिकविण्यात येईल. पूर्ण आयुर्वेदिक शिक्षण तीन वर्षांत शिकविले जाईल. विद्यार्थी निदान मराठी पाच इयत्ता शिकलेला व भांडारकरकृत, संस्कृत तीन पुस्तके पठलेला असावा. अथवा आयुर्वेद औषध पुस्तकांतील श्लोकाचा अर्थ समजून घेण्या इतका संस्कृत ज्ञान असलेला असावा. त्यांचे वय १८ ते २२ वर्षांपर्यंत व प्रकृति सदृढ असावी. सदर पाठशाळेचे वर्ग १ जानेवारी १९२४ पासुन सुरू होतील. फीचे दर १ ल्या वर्षास दरमहा ६ रुपये, दुसऱ्यास दरमहा

१० रुपये व तिसऱ्या वर्षांत दरमहा १२ रुपये प्रमाणे ठविली आहे पहिल्या वर्षांत फक्त २५ विद्यार्थीच निवडण्यात येतील. विद्यार्थ्यांनीं आपले अर्ज ता १५ डिसेंबरच्या आत पाठविले पाहिजेत अर्जासोबत प्रवेश फीचे ३ रुपये पाठविण्यात आले पाहिजेत. ज्याची निवड होणार नाहीं त्याची फी परत करण्यात येईल पत्रव्यवहार मराठीत अगर कानडी मध्ये करावा.

प्रत्येक वर्षांत शिकविले जाणारे विषय खालील प्रमाणे —

पहिले वर्ष.

१. प्रत्येक वनस्पतीचे गुण धर्मपरिचय वर्णन सह्या आणि प्रत्येक औषधीचे अनेक भाषांतील नामाहि वगैरे

२. निदान शास्त्र त्यांत प्रत्येक रोगाचें निदान (हेत) मत्रमाण आणि स्तुलाविचार (परिक्षा करण्यास) शिकविले जाईल

३ सदर निदान शास्त्रात राग गणनत आलेले विषय औषधालयात समक्ष प्रयोग करून दाखविले जातील

दुसरे वर्ष

१ प्रत्येक रोगावर निरनिराळ्या शास्त्रोक्त पद्धतीने चिकित्सा उपचार) करण्यास शिकविले जाईल

२. प्रत्येक वस्तुद्रव्यादिचे गुणदोष व तत्त्व विचार शिकविले जातील.

३ प्रत्येक रोगावर पथ्यापथ्य विषय शिकविले जातील

तिसरे वर्ष

१. आर्य शरीर शास्त्र, कला, स्नायु, मज्जातंतु वाहिनी रहितपिंड, रुधिराभिसरण चक्रादि प्रत्येक भागात होणाऱ्या निरनिराळ्या क्रिया प्रत्येक भागाची नावे, त्याच प्रमाणें प्रत्येक भाग चित्र रूपाने 'काढून देणें व तेच विषय त्यांना वर्णन करून स्पष्ट करून देणे' वगैरे.

२. प्रत्येक रोगावरील हिमफाटकाढ्यापासून रसायना पर्यंत तयार करण्याचे प्रयोग औषधालयांत समक्ष करून दाखविले जातील

३ रसायनें व कुपित्त रसायनें याची संपूर्ण माहिती आणि प्रत्येक विषयां विष ! संशयनिवृत्ति स्पष्ट रितीनें करण्यात येईल.

विशेष माहिती— खालील पत्त्यावर पत्रद्वारें अगर समक्ष मिळेल.

टिं मू. उमेदवारांकरिता राहण्याची सोय करून देता येईल.

शिकविणारे— वैद्य जे. एफ फर्नांडिस.
आर्योषधालय, कारवार.

पत्ता— व्यवस्थापक,
आयुर्वेदिक पाठविद्यालय, कारवार.

"ಸಂಶಯಾತ್ಮಾ ವಿನಶ್ಯತಿ."

ತಿಂಗಳಿಗೆ ರೂಪಾಯಿ ೧೦೦ರಿಂದ ೫೦೦ರ ವರೆಗೆ ಗಳಿಸಿರಿ.

ಬೇಕಾದಲ್ಲಿ ಸುಲಭವಾಗಿ ಗಳಿಸಿರಿ.

ರೂಪಾಯಿ ೧೯-೧೨-೦ ಖರ್ಚುಮಾಡಿರಿ ಮತ್ತು ಸ್ವತಂತ್ರರಾಗಿರಿ.

ಸಬಕಾರವು ಪ್ರತಿಯೊಬ್ಬ ಮಾನವನಿಗೆ ಅವಶ್ಯವಿದ್ದ ವಸ್ತುವು. ಅವನು ಬೇಕಾದರೆ, ಶ್ರೀಮಂತನಿರಲಿ, ಬಡವನಿರಲಿ, ಹಳ್ಳಿಗನಿರಲಿ, ಪಟ್ಟಣಿಗನಿರಲಿ, ಪಾಶ್ಚಾತ್ಯ ಮಾದರಿಯ ಸಬಕಾರವನ್ನು ತಯಾರಿಸುವ ನಮ್ಮ ಕ್ರಮವು ಅತಿ ಉತ್ತಮವೆಂದು ಖ್ಯಾತಿಹೊಂದಿದೆ. ಈ ಕ್ರಮದಿಂದ ಶ್ರೇಷ್ಠ, ಕನಿಷ್ಠ, ಪ್ರತಿಯ, ಮೈಗೆ ಹಚ್ಚುವ ಯಾ ಅರಿವೆಗೆ ಹಾಕುವ, ಪರಿಮಳದ ಹಾಗು ಬಣ್ಣಗಳ ಸಬಕಾರವನ್ನು ಸುಲಭವಾಗಿ ಯಾರೂ ತಯಾರಿಸಬಹುದು. **ಈ ಕ್ರಮಕ್ಕೆ ಬೆಂಕಿಯ ಅವಶ್ಯಕತೆಯಿರುವದಿಲ್ಲ.** ನಮ್ಮ ವಿದ್ಯಾರ್ಥಿಗಳು ಯತ್ನಮಾಡುವಾಗ ನಾವು ಬಲು ಜಾಗ್ರತೆಯಿಂದ ಅವರನ್ನು ನಿರೀಕ್ಷಿಸಿ, ಅವರಿಗೆ ಬೇಕಾದ ಮಾಹಿತಿಯನ್ನು ಪೂರೈಸುತ್ತೇವೆ ಈ ಒಗ್ಗ ನಮಗೆ ಅನೇಕರು ಶಿಫಾರಸು ಪತ್ರಗಳನ್ನು ಕಳುಹಿಸಿರುವರು. ಈ ಪೂರ್ಣ ಕ್ರಮವನ್ನು ರೂ ೧೯-೧೨-೦ಕ್ಕೆ ವ್ಹಿ. ಪಿ ಪಿ ಮೂಲಕ ಕಳಿಸುವೆವು. ಈ ಕ್ರಮವು ನಿಯಮಿತ ಮಂದಿಗಳಿಗೆ ಮಾತ್ರ ಕಳಿಸಲ್ಪಡುವದು.

ನಿರಾಶೆ ಹೊಂದಬಾರದೆಂದು ಇಚ್ಛೆ ಇದ್ದವರು ಕೆಳಗಿನ ಪತ್ತೆಗೆ ಕೂಡಲೆ ಬರೆಕೊಳ್ಳತಕ್ಕದ್ದು.

International Business Corporation,
Dept. (F) *5357, Goualiguda*, **Hyderabad.** (*Dn*)

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳ ಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲು ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಈ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆ ವ್ಹಿ ಪಿ ಖರ್ಚು ಬೇರೆ.

ಅಮೃತಾಂಜನ ಡಿಪೊ, ಫೋರ್ಟ, ಮುಂಬಯಿ.

ಹಸನಾದ ಸಾಗುವಳಿಯಲ್ಲಿಯೇ ಸಂಪತ್ತಿಯು



ಅಡಕವಾಗಿರುವದು.

ನಮ್ಮ ಕಾರಖಾನೆಯಲ್ಲಿ ತಯಾರಾಗುವ ಸುಧಾರಿಸಿದ ಕಬ್ಬಿಣ ನೇಗಿಲಗಳೂ, ಕಬ್ಬಿನ ಗಾಣಗಳೂ ಇವೇ ಮುಂತಾದ ವ್ಯವಸಾಯದ ಮುಟ್ಟುಗಳನ್ನು ತರಿಸಿಕೊಂಡು . ನಿಮ್ಮ ಒಕ್ಕಲತನವನ್ನು ಬೆಳೆಸಿಕೊಳ್ಳಿ. ೨೫ ವರ್ಷಗಳ ಅನುಭವದಿಂದ ಈ ಸಾಮಾನುಗಳನ್ನು ತಯಾರ ಮಾಡಿರುತ್ತೇವೆ ೮೦,೦೦೦ ರೈತರು ಕೂಡುತ್ತಾರೆ ಇಂದೇ ಪತ್ರ ಬರೆದು 'ಕೃ' ಎಂಬ ಕ್ಯಾಟಲಾಗು ತರಿಸಿಕೊಳ್ಳಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ)

Printed and Published by Krishnarao Keshav Shenvi (Editor) at his Star of Kanara Press, Kumta.

eg. No. B. 1270. Thursday, 8th November 1923.

ವರ್ಷ ೮.

ಕಾನಡಾವೃತ್ತ.

ಸಂಚಿಕೆ ೩.

THE KANARA NEWS.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಮನೆಯಾರ್ಡರಿಯಿಂದ ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಪೈಕಾ ಟೈಪಿನ (೧೫ ಎಂಸ್ ಉದ್ದ) ೮ ಸಾಲುಗಳವರೆಗೆ ರೂ. ೧-0-0 ೮ ನಂತ್ರ ಪ್ರತಿಸಾಲಿಗೆ 0-2-0.
ಜಾಹಿರಾತಿನ ಸಾಲು ಎಷ್ಟು ದೊಡ್ಡದಿರುವದೋ ಆ ಪ್ರಮಾಣದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

(ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೮ ಮಾಹೆ ನವಂಬರ ಸನ್ ೧೯೨೩ ನೇ ಇಸವಿ.)

हिंदुस्थानातील रहिवाशांस ज्यामधाणें हिंदुस्थानची हवा त्यामधाणेंच हें औषध हिंदुस्थानांतील लोकांस ज्यास्त फायदेशीर आहे.

द्राक्षासव- { दीड रत्तलची किंमत २ रुपये,

रामबाण औषधें

सर्दि घालविणारें,
भूक वाढविणारें,
श्वोच्छास साफ करणारें,
झोंप आणणारें,
शक्ति देणारें,
तेजस्वीपणा आणणारें,

पिण्यास रुचिकर.

क्याटलाग मागवा,

संडु फार्मास्युटिकल वर्क्स लिमिटेड,
मुंबई नं. १३

1924 ನೇ ಇಸವಿಯ ಸ್ವರಾಜ್ಯ ಡೈರಿ.

ಸಂಪಾದಕ – ಡಿ. ಕೆ. ಭಾರದ್ವಾಜ, ವಿದ್ಯಾಭೂಷಣ.

ರಾಜಕೀಯ, ಆರ್ಥಿಕ, ವ್ಯಾಪಾರ, ಸ್ವದೇಶಿ, ಕೈಗಾರಿಕೆ ಮೊದಲಾದ ವಿಷಯಗಳ ಹೊಸ ಸಂಗ್ರಹ! ದೇಶಭಕ್ತರ ನವೀನ ಭಾವಚಿತ್ರಗಳು! ಪ್ರತಿಯೊಬ್ಬರೂ ಅಗತ್ಯವಾಗಿ ಉಪಯೋಗಿಸತಕ್ಕದ್ದು.

ನಮ್ಮಲ್ಲಿ ಯಾವತ್ತೂ ಪೇಟೆಂಟ್ ಔಷಧ ಸ್ಟೇಶನರಿ ವಗೈರೆ ಹೊಸ ಸ್ಟಾಕ ಬಂದಿದೆ. ಸ್ಟೇವಮಾಡಿರಿ!

ದಿ. ನ್ಯೂ. ಎಂಪೋರಿಯಮ್,
ಜನರಲ್ ಮರ್ಚಂಟ್ಸ, ಹೊನ್ನಾವರ.

ಡಾ| ಪಾಸೂರಕರರ

ಸುಧಾಂಜನ.

ಅಂಜನುಗಳಿಗೆಲ್ಲ ಅರಸು.

ತಲೆಶೂಲಿ, ವಾತ ವೇದನೆ, ಕೆಮ್ಮು, ಹಲ್ಲು ನೋವು ಇತ್ಯಾದಿಗಳಿಗೆ ಕ್ಷಿಪ್ರ ಗುಣಕಾರಿ ಮದ್ದು. ಬೆಲೆ 2 ಆಣೆ ಮಾತ್ರ. ವ್ಯಾಪಾರಿಗಳಿಗೆ ವಿಶೇಷ ಸವಲತು. ಹೆಚ್ಚಿನ ಮಾಹಿತಿ ಪಡೆಯಿರಿ.

ಏಜಂಟ್ಸ್:— **ನಾಗರ್ಕಟ್ಟಿ ಬ್ರದರ್ಸ್,**
ಸುಧಾಂಜನ ಡಿಪೋ,
ಕುಮಟಾ. (ಜಿಲ್ಲಾ ಕಾರವಾರ.)

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ವಿಷಯಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ.

ಈ ವರೆಗೆ ಪ್ರಕಟವಾದ ಪುಸ್ತಕಗಳು.

(೧-೨) ಗ್ರೀಸ ದೇಶದ ಗಾಂಧಿ. (ಸಾಕ್ರೆಟೀಸ) (೩) ಸ್ವಾತಂತ್ರ್ಯಸಾಧನೆ. (೪) ಗುರು-ಹಿರಿಯರೂ, ಬಂಧು-ಭಗಿನಿಯರೂ. (೫) ರಾಷ್ಟ್ರೀಯ ಶಿಕ್ಷಣ (೬) ಸದ್ಗುಣಮಂದಿರ. (ಭಾಗ ೧.) (೭) ಸ್ವರಾಜ್ಯ ಧರ್ಮ. (ಇನಾಮಿನ ಪುಸ್ತ) ಇವಿಷ್ಟು ಪ್ರಕಟವಾಗಿದ್ದು, ೫ ಆಣೆಗೆ ಒಂದರಂತೆ ದೊರೆಯುತ್ತವೆ. ವರ್ಗಣೀದಾರರಿಗೆ ಹಿಂದಿನ ಬೇಕಾದ ಪುಸ್ತಕಗಳು ೪ ಆಣೆಗೆ ಒಂದರಂತೆ ದೊರೆಯುವವು. ೬ ಪುಸ್ತಕಗಳಿಗೆ ಕೂಡಿ ೧॥ ರೂಪಾಯಿ ಮಾತ್ರ. ಅಂಚೆವೆಚ್ಚ ಬೇರೆ. ದ್ವಿತೀಯ ವರ್ಷ ಪ್ರಾರಂಭ. ಅನುಕ್ರಮವಾಗಿ ಮಾರ್ಚ, ಮೇ, ಜುಲೈ, ಸಪ್ಟಂಬರ, ನವಂಬರ, ಜನವರಿ ೧೫ ನೇ ತಾರೀಖಿಗೆ ಒಂದೊಂದು ಪುಸ್ತ ಹೊರಡುವವು. ವಾ. ವ. ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ.

ವಾ. ಅ. ಹೊದ್ಕೆ,
ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ.

ಎಲ್ಲ ತರದ ಜ್ವರಗಳಮೇಲೆ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ, ಕೃತ್ಯ, ಬಂಗಲಿ, ಅಥವಾ ದೂಷಿತ ಹವೆಯಿಂದ ಬರುವ ಸಾದಾ ವಿಷಾರ್ಥಿ ಅಥವಾ ಇತರ ಜ್ವರಗಳೂ, ಇನಫ್ಲುಎಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನಾಯನದ ದುಷ್ಪರಿಣಾಮರಹಿತ ಕೇವಲ ವನಸ್ಪತಿಯ ಈ ಮದ್ದು ಸೇವಿಸಿದರೆ ಅಶಕ್ತತೆಯಾಗದೆ, ಬೆವರು ಬಂದು ಜ್ವರ ಇಳಿಯುತ್ತದೆ. ಹಾಗು ರೋಗಿಯು ಹರಿಕ ವಾಸಿಯಾಗುತ್ತಾನೆ.

೩ ಔಂಸ ಬಾಟ್ಲಿ ಕಿಂಮತ ರೂ. ೧-೦-೦. ಇದರ ಹೊರತು ಇನ್ನೂ ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ, ಉಚ್ಚ ಪ್ರತಿಯ ಕೋಲನ ವಾಟರ, ಲವೆಂಡರ ಇತ್ಯಾದಿ ಸಾಮಗ್ರಿಗಳು ಅಲೆಂಬಿಕದ ಕಾರಖಾನೆಯಲ್ಲಿ ತಯಾರಾಗುತ್ತವೆ. ಸುರಾಬಿ ಕೆಟಲಾಗು ತರಿಸಿರಿ.

ಅಲೆಂಬಿಕ್ ಕೆಮಿಕಲ್ ವರ್ಕ್ಸ್,
ಕಂಪನಿ, ಲಿಮಿಟೆಡ್.
ನಂ ೫೦, ಪ್ರಿನ್ಸೆಸ್‌ಸ್ಟ್ರೀಟ, ಮುಂಬಯಿ.

अलेंबिक केमिकल वर्क्स कं० लि०
नं. ५० प्रिन्सेस स्ट्रीट मुंबई.

ಶುದ್ಧ ರೋಮದ ಧಾವಳಿಗಳು.

4 ಮೊಳ ಉದ್ದ		1¼ ಮೊಳ ಅಗಲ			ರೂ. 1¼ ರಿಂದ 2 ವರೆಗೆ			
5	,,	,,	1½	,,	,,	,,	1-10-0 –5	,,
6	,,	,,	1¾	,,	,,	,,	2¼ —6	,,
8	,,	,	2	,,	,,	,,	3¾ —10	,,
12	,,	,,	2½	,,	,,	,,	6 —12	,,
16	,,	,,	2½	,,	,,	,,	9 —16	,

SUN SEED
BENARES CITY.

ಇವುಗಳಲ್ಲದೆ ಶುದ್ಧ ಖದ್ದರ್ ರೇಶ್ಮೆ ಮಡಿಗಳು, ಸಾಮು-ತಿಗಳು, ಕಾಶೀ ಪೀತಾಂಬರಿಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಜಾಳಿಂದು, ಕಾಶ, ಪನ್ನೀರ್ ದಾನಿ, ಆಟದ ಸಾಮಾನುಗಳು, ದೇವರ ಮತ್ತು ಗಾಂಧಿ ಮುಂತಾದವರ ಪಟಗಳಿರುವ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ಯೋಗ್ಯ ಕ್ರಯಕ್ಕೆ ದೊರೆಯುವವು. ಕ್ಯಾಟಲಾಗ್ ಇನಾಂ.

ಪ್ರೊಪ್ರೈ— ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪನಿ, ದೌಕಘಾಟ್, ಕಾಶಿಕ್ಷೇತ್ರ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ (ರಿಜಿಸ್ಟರ್ಡ

ಸ್ವಚ್ಛವಾದ, ಗುಂಗುರು ಗುಂಗುರಾಗಿರುವ, ನೀಲಿಕಾಯಿಂದ ನಿಬಿಡವಾದ ಕೇಶವನ್ನು ಯಾವ ನಾರಿಯು ಬಯಸುವದಿಲ್ಲವು ? ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ,

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿರುವದೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅತ್ಯಂತ ಅಗತ್ಯದ ಸಹಕಾರಿಯಾಗಿರುತ್ತದೆ ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ತಗ್ಗಿ ಹೋಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ಹಚ್ಚಿದ ಕೂಡಲೆ ಉದುರುವುದು ಎಂದಿಗೂ ಬಿದ್ದು ಹೋಗಲಾರವು, ಅದರ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆಯುವದು ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯು ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ 'ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ.— ಸೀಸೆಗೆ ರೂಪಾಯಿ 1 0 0. ಸೀಸೆ 3 ಕ್ಕೆ. ರೂಪಾಯಿ 2-10-0, ವಿ.ಪಿ ಖರ್ಚ 0 14 0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ಯಾಸಿದ ಮಾಡುದು ಅದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು, ಒಂದೇ ಒಂದು ಸಲ ನಿಮ್ಮ ಕೈ ಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ತಟುಕುಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0–8 0 1 ಡ್ರಾಮಿನ (ಮಿಡಿಯಂ) ಸೀಸೆ 1 ಕ್ಕೆ 0–12–0, ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2–0–0 ಅಂಚೆಯ ವೆಚ್ಚ ಬೇರೆ 0–4–0

ಒಟ್ಟೋ ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0.

Address - **The Anglo Indian Drug & Chemical Co,**
16, Market, **BOMBAY. 2.**

ಆರೋಗ್ಯಚಂದ್ರಿಕೆ.

ಈ ಪತ್ರಿಕೆಯು ಸಂಪಾದಕರು ಮದ್ರಾಸಿನ ಡಾಕ್ಟರ್ ಯು ರಾಮರಾವ್, ಎಮ್. ಎಲ್. ಸಿ ಯವರ ಈ ಆರೋಗ್ಯ ಮತ್ತೂ ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೂ ಶಿಕ್ಷಣ ದೊರೆಯುವದಕ್ಕಾಗಿ ಪ್ರಕಟಿಸಿದ

ಒಂದು ಸಚಿತ್ರ ಮಾಸಪತ್ರಿಕೆ

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ

ಆರೋಗ್ಯಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು

ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯು ಸ್ಪರ್ಧಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸಿ ಪ್ರಥಮ ಸಂಚಿಕೆಯು ಈ ತಿಂಗಳಲ್ಲಿ ಪ್ರಕಟವಾಗಿಯದೆ

ಅಂಚೆಯವೆಚ್ಚ ಸೇರಿ ಈ ಪತ್ರಿಕೆಯ ಚಂದಾ ವೊಬಲಗು ವರ್ಷಕ್ಕೆ ರೂಪಾಯಿ ೧—೮—೦ ಬಿಡಿ ಪತ್ರಿಕೆ ಒಂದಕ್ಕೆ ೦—೩—೦

ಚಂದಾದಾರರಾಗುವವರು ವಿ ಪಿ ವ ಮೂಲಕವಾಗಿ ತರಿಸಿಕೊಳ್ಳುವದರಿಂದಲೂ ಹಣವನ್ನು ಮುಂಗಡವಾಗಿ ಕಳುಹುವದು ಲಾಭಕರ

ಮೋಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು ಆರೋಗ್ಯಚಂದ್ರಿಕೆಗೆ ಎಂದ ಸ್ಪಷ್ಟವಾಗಿ ಬರೆದು ತಿಳಿಸಬೇಕು ಪತ್ರವ್ಯವಹಾರದ ವಿಳಾಸ —

ಮೆನೇಜರ್

'ಹೆಲ್ತ್' ಅಥವಾ
'ಆರೋಗ್ಯಚಂದ್ರಿಕೆ' ಆಫೀಸ.
೩೨೩, ತಂಬುಚೆಟ್ಟಿ ಬೀದಿ ಮದರಾಸ್

ಮೂರ್ತಿಗಳು ಬೇಕೋ?

ನಮ್ಮಲ್ಲಿ ಭಂಗಾರ, ಬೆಳ್ಳಿ, ಪಂಚಧಾತು, ಹಿತ್ತಾಳಿ ತಾಮ್ರ ವ ಕರೇಶಿಲೆಯ ಮೂರ್ತಿಗಳೂ, ಇದಲ್ಲದೆ ಬಾಣಪೀಠಗಳೂ, ಪ್ರಭಾವಳಿಗಳೂ, ಈಶ್ವರ ಮುಖಟಗಳೂ, ನಾಗಾಭರಣಗಳೂ, ಕವಚುಗಳೂ ವ ಯಾವದೇ ತರದ ಪ್ರತಿಮೆಗಳೂ ನಮ್ಮಲ್ಲಿ ಯೋಗ್ಯ ದರಕ್ಕೆ ವ ಯೋಗ್ಯ ಹೊತ್ತಿಗೆ ಮಾಡಿ ಕೊಡಲ್ಪಡುವವು ಬೇಕಾದವರು ಪತ್ರವ್ಯವಹಾರ ಮಾಡಿ ಯಾ ಸಮಕ್ಷ ಬಂದು ದರವಾರ ತಿಳಕೊಳ್ಳಬಹುದು.

ಪತ್ತ —ನಾರಾಯಣ ಹುವಯ್ಯ ಶೇಟ್ಟಿ,
ಗುಡಗಾರ ಗುಜರಗಲ್ಲಿ ಕ. ಮಟಾ
(ಉ ಕಾನಡಾ)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧ ರಾಗದ ಕೈಪೆಟ್ಟಿಗೆ ಕಿಂ ೩೦, ೪೦, ೪೫, ೫೦ ರೂ
೨ ಕಾಲು ಪೆಟ್ಟಿಗೆ ಕಿಂ ೩೫, ೭೫, ೧೪೦, ೧೬
೩ ತಬಲೆ ಜೋಡಿ ಕಿಂ. ೧೨, ೧೫, ೧೮ ೨೦
೪ ಹಾರ್ಮೋನಿಯಮ ಗ್ಯಾಡ ಕಿಂ ೧೧, ತಬಲೆ ಗ್ಯಾಡ ಕಿಂ ೧೨ ೮

ವಿಶೇಷ ಮಾಹಿತಿ ಬಗ್ಗೆ ನಮ್ಮ ಕ್ಯಾಟಲಾಗ ಫುಕ್ಕಟ ಕೊಡುವೆವು

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು

ಪತ್ತೆ **ಗೋಪಾಳ ಸಖಾರಾಮ ಮಿಸ್ತ್ರಿ ಕಂಪನಿ, ನಂ ೨೩೨ ಕಾಳಬಾದೇವಿ ರೋಡ, ಮುಂಬಯಿ**

ನೋಟೀಸು.

ಮಿ। ರಜಿಸ್ಟ್ರಾರ ಸಾಹೇಬ ಬಹಾದ್ದೂರ ಕೋ ಆಪರೇಟಿವ್ಹ ಸೊಸಾಯಿಟೀಜ ಇಲಾಖಾ ಮುಂಬಯಿ. ಇವರು ೧೯೧೨ನೇ ಇಸವಿ II ಆಕ್ಟಿನ ಕಲಮ ೪೯ (೧) ಅನ್ವಯ ತಾರೀಖು ೪—೧೦—೩೩ನೇದಿಗೆ ಅಘನಾಶಿನಿ ಸಹಕಾರಿ ಸಂಘ (ತಾಲೂಕ ಕುಮಟಾ) ವನ್ನು ರದ್ದುಪಡಿಸಿ, ಕೆಳಗೆ ಸಹಿ ಮಾಡಿದವರಿಗೆ ಲಿಕ್ವಿಡೇಟರರನ್ನಾಗಿ ನೇಮಿಸಿರುತ್ತಾರೆ ಆದ್ದರಿಂದ, ಇದರ ಮೂಲಕ ತಿಳಿಸುವದೇನಂದರೆ ಸದರಿ ಸಂಘದಿಂದ ಏನಾದರೂ ಸಲ್ಲತಕ್ಕವರು ಈ ನೋಟೀಸ ಪ್ರಕಟವಾದ ೨ ತಿಂಗಳೊಳಗಾಗಿ ಕೆಳಗೆ ಸಹಿ ಮಾಡಿದವರ ಕಡೆಗೆ ತಮ್ಮ ಹಕ್ಕುಗಳನ್ನು ಜಾಹೀರ ಪಡಿಸತಕ್ಕದ್ದು.

ಕುಮಟಾ,
ತಾ ೩—೧೧ ೧೯೩೩ } **M. A. Warty,**
ಲಿಕ್ವಿಡೇಟರ, ಅಘನಾಶಿನಿ ಸಹಕಾರಿ ಸಂಘ

ತಾ ೨೧—೧೦—೩೩ನೇ ದಿವಸ

ಹೊನ್ನಾವರದಲ್ಲಿ ಸೇರಿದ ತೋಟಗರ ಮತ್ತು ಬೇಸಾಯಗಾರರ ಸಭೆಯಲ್ಲಿ ಪಾಸಾದ

ಮಹತ್ವದ ಠರಾವುಗಳು.

(ಅಧ್ಯಕ್ಷ ಶ್ರೀ। ಶಿವರಾಮ ಶಾಸ್ತ್ರಿಯವರ ಕಡೆಯಿಂದ)

(೧) ಕಾನಡಾ ಜಿಲ್ಹೆಯಲ್ಲಿಯ ಬೇಸಾಯಗಾರರ ಮತ್ತು ತೋಟಗಾರರ ಮೇಲೆ ೧೮೯೦ನೇ ಇಸವಿಯಿಂದ ಫಾರೆಸ್ಟ ಖಾತೆಯು ಹಾಗೂ ಆ ಖಾತೆಗೆ ಬೆಂಬಲ ಕೊಡುವ ಸರಕಾರದ ವಕ್ರದೃಷ್ಟಿಯಿದ್ದದ್ದು ಕ್ರಮೇಣ ಹೆಚ್ಚಾಗುತ್ತ ಹೋಗಿ, ಬೇಸಾಯಿದ ಹಾಗೂ ತೋಟಗಳ ಸ್ಥಿತಿಯು ದಿನೇ ದಿನೇ ನಿಕೃಷ್ಟವಾಗುತ್ತ ಹೋದದ್ದು ಈಗ ಎಲ್ಲ ಜನರಿಗೂ ಸ್ಪಷ್ಟವಾಗಿ ಕಂಡುಬರುತ್ತಿರುವದರಿಂದ ಈ ಜಿಲ್ಹೆಯ ಆಯಾ ತಾಲೂಕುಗಳಲ್ಲಿ ಬೇಸಾಯದ ತೋಟಗಾರ ಜನರ ಸಂಘಗಳನ್ನು ಸ್ಥಾಪಿಸಿ, ಅವುಗಳ ಮುಖಾಂತರ ಸ್ವಲ್ಪವಟ್ಟಿಗಾದರೂ ತಮ್ಮ ಹಿತಾಹಿತಗಳನ್ನು ಜನರೆದುರಿಗೆ ಖಂಡಿತವಾಗಿ ಇಡುವದು ಮತ್ತು ತಮ್ಮ ಹಿತಸಂರಕ್ಷಣೆ ಮಾಡಿಕೊಳ್ಳುವದು ಅತ್ಯವಶ್ಯಕವೆಂದು ಬೇಸಾಯ ಹಿತೇಚ್ಛುಗಳು ಅಭಿಪ್ರಾಯಪಟ್ಟದ್ದರಿಂದ, ಹೊನ್ನಾವರ ತಾಲೂಕಿನ ತೋಟಗಾರರ ಪಟ್ಟಿಗೆ ಒಂದು ಸಂಘವನ್ನು ಇವತ್ತಿನ ಸಭೆಯಲ್ಲಿ ಸ್ಥಾಪಿಸಬೇಕೆಂದು ಠರಾಯಿಸುತ್ತದೆ

(೨) ಸದರಿ ಹೊನ್ನಾವರ ತೋಟಗಾರರ ಸಂಘದ ಪತಿಯಿಂದ ಕೆಲಸ ಮಾಡುವ ಬಗ್ಗೆ ಕೆಳಕಂಡ ಮಂಡಳಿಗಳಲ್ಲಿ ಒಂದು ಕಾರ್ಯಕಾರೀ ಕಮಿಟಿಯನ್ನು ಈ ಸಭೆಯು ನೇಮಿಸುತ್ತದೆ ಮತ್ತು ಸದರಿ ಕಮಿಟಿಯು ಉದ್ಯೋಗಸ್ಥರು ಕೆಳಗೆ ಕಾಣಿಸಿದಂತೆ ಇರತಕ್ಕದ್ದೆಂದು ಠರಾಯಿಸುತ್ತದೆ ಮತ್ತು ಸದರಿ ಕಮಿಟಿಯವರಿಗೆ ಸಂಸದ ನೇಮಕಗಳನ್ನು ಮಾಡುವ ಅಧಿಕಾರ ಕೊಟ್ಟಿರುತ್ತದೆ

೧ ಶ್ರೀ। ಮಾದಪ್ಪ ಹೆಗಡೆ ಶರ್ಸಿ
೨ „ ಸುಬ್ರಾಯ ರಾಯಣ್ಣ ನಾಯ್ಕ ಹಳದಿಪುರ
೩ „ ಪರಮೇಶ್ವರ ಯಾಜ ಬಳ್ಕೂರ
೪ „ ಈಶ್ವರ ಸುಬ್ಬ ಹೆಗಡೆ ಬೆಳ್ಳನ ಹೊಸಾಕುಳಿ
೫ „ ಈಶ್ವರ ಶಿವಣ್ಣ ಭಟ್ಟ ಕಡಿನಬಾಳ
೬ „ ಹೈಗುಂದ ಗಣೇಶ ಹೆಗಡೆ
೭ „ ಮಂಜನಾಥ ಭಟ್ಟ ಶರ್ಸಿ (ಅಧ್ಯಕ್ಷ)
೮ „ ಶಿರಾರ ರಾಮಾ ಶಿವಪ್ಪ ಭಟ
೯ „ ಕೊಪ್ಪ ಮುಕುದೇವ ವ್ಯಾಸಭಾಗ
೧೦ „ ಶಿವರಾಮ ಶಾಸ್ತ್ರಿ, ಉಪಾಧ್ಯಕ್ಷ
೧೧ „ ರಾಘವೇಂದ್ರ (ಬಾಲಚಂದ್ರ) ರಾವ ಬಸ್ರೂರ ಕಾರ್ಯದರ್ಶಿ

(೩) ಮುಂಬಯಿ ಸರಕಾರ ರೆವಿನ್ಯೂ ಡಿಪಾರ್ಟಮೆಂಟ ನಂ ೨೬೯೯—ತಾ ೨೧—೯—೧೯೨೦ನೇದನ್ನು ಆಧರಿಸಿ ಏರ್ಪಡಿಸಿದ ಸೆಟ್ಲಮೆಂಟಿನ ಯೋಜನೆಗಳಲ್ಲಿ ರೈತ ಜನರಿಗೆ ತಮ್ಮ ಹಕ್ಕುಗಳ ಸ್ವರೂಪವು ಹಾಗೂ ಸೆಟ್ಲಮೆಂಟ ಯೋಜನೆಗಳ ವಾಸ್ತವಿಕ ಪದ್ಧತಿ ಇಂಥವೇ ಎಂದು ನಿಶ್ಚಿತವಾಗಿ ತಿಳಿದದ್ದರ ಹೊರತು, ಬೇರೆ ಯಾವ ತರದಿಂದಲೂ ಫಾಯದೆ ಆದದ್ದು ಕಂಡುಬರುವದಿಲ್ಲ ಮಾತ್ರವಲ್ಲ—ಈ ಯೋಜನೆಗಳಿಂದ ಮೊದಲಿನ ಹಕ್ಕುಗಳ ಸ್ವರೂಪವು ಹೆಚ್ಚಾಗಿ ಮೊದಲಿನಕಿಂತಲೂ ಸಂಕುಚಿತವಾಗಿರುತ್ತದೆ. ಸದರಿ ಯೋಜನೆಗಳ ಬಾಹ್ಯ ಸ್ವರೂಪವು ಸುಂದರವಾಗಿ ಕಂಡಾಗ್ಯೂ, ಅಂತರ್ಯದಲ್ಲಿ ಜನರಿಗೆ ಕೊಟ್ಟಿರುವ ಸವಲತ್ತುಗಳಿಂದ ಬೇಸಾಯದ ಸ್ಥಿತಿಯು ಅಭಿವೃದ್ಧಿಯಾಗುವ ಸಂಭವವು ಹೆಚ್ಚಾದ್ದರಿಂದ ಈ ಸೆಟ್ಲಮೆಂಟ ಯೋಜನೆಗಳಿಂದ ರೈತ ಜನರಿಗೆ ಏನೂ ಸಮಾಧಾನವಾಗಿರುವದಿಲ್ಲೆಂದು ಈ ಸಭೆಯು ಖಂಡಿತ ಅಭಿಪ್ರಾಯಪಡುತ್ತದೆ ಮತ್ತು ಈ ರೀತಿ ಬಾಹ್ಯಾಂಗಸುಂದರ ಹಾಗೂ ಅಂತರಂಗದೂಷಿತವಾದ ಯೋಜನೆಗಳನ್ನು ಅಮಲಿನಲ್ಲಿ ತಂದು, ಭೋಳೇ ರೈತ ಜನರಿಗೆ ದಿಕ್ಕುಭ್ರಾಂತಮಾಡಿದ ಬಗ್ಗೆ ಸದರಿ ಸೆಟ್ಲಮೆಂಟನ್ನೂ ಅದನ್ನು ಪೂರ್ಣ ವಿಚಾರ ಮಾಡದೆ ಅಥವಾ ಅದರ ವಿರುದ್ಧ ರೈತರ ಅಭಿಪ್ರಾಯಗಳನ್ನು ಸಾರಿ ಹೇಳಿದರೂ ಅದಕ್ಕೆ ಲಕ್ಷ್ಯ ಕೊಡದೆ, ಅಮಲಿನಲ್ಲಿ ತಂದ ಬಗ್ಗೆ ಮುಂಬಯಿ ಸರಕಾರದವರನ್ನೂ ಈ ಸಭೆಯು ತೀವ್ರ ನಿಷೇಧ ಮಾಡುತ್ತದೆ

(೪) ಮುಂಬಯಿ ಸರಕಾರದ ಠರಾವು ನಂಬರ ೬ ೫೭ ತಾ ೨೩—೨—೧೯೩೩ (ರೆವಿನ್ಯೂ ಡಿಪಾರ್ಟಮೆಂಟು) ನೇದರ ೯ನೇ ಕಲಮಿನಲ್ಲಿ ಸರಕಾರದವರು ಸದರಿ ಸೆಟ್ಲಮೆಂಟಿನಿಂದ ರಕ್ಷಿತ ಸರ್ಕಲದಲ್ಲಿ ಫಾರೆಸ್ಟ ಖಾತೆಯ ವಿರುದ್ಧ ತಕರಾರುಗಳು ಈಗ ಕಡಿಮೆ ಆಗಿರುತ್ತವೆಂದೂ ಸದರಿ ಸೆಟ್ಲಮೆಂಟಿನ ಫಾರೆಸ್ಟ ಸವಲತ್ತುಗಳಿಂದ ಜನರ ಅಸಮಾಧಾನವು ದೂರವಾಗಿರುತ್ತದೆಂದೂ ಸೆಟ್ಲಮೆಂಟ ಆಫೀಸರ ಕೋಲಿನ್ಸ ಸಾಹೇಬರು ಮತ್ತು ಫಾರೆಸ್ಟ ಕ್ಷೇತ್ರವನ್ನು ಬೆಳೆಸುವ ಬಗ್ಗೆ ವಿಚಾರದಿಂದ ತಯಾರಿಸಿದ ಯೋಜನೆಗಳಿಂದ ಕಾನಡಾ ಜಿಲ್ಹೆಯ ರೈತರು ಫಾರೆಸ್ಟ ಖಾತೆಯ ವಿರುದ್ಧ ನಡಿಸಿರುವ ಚಳವಳಿಯ ಮೂಲ ಕಾರಣಗಳು ಸ್ಪಷ್ಟವಾಗುವವೆಂದೂ ವ್ಯಕ್ತಪಡಿಸಿದ ಅಭಿಪ್ರಾಯವು ತೀರ ತಪ್ಪು, ಎಂದು ಮತ್ತು ಈ ಅಭಿಪ್ರಾಯದಿಂದ ರೈತರಿಗೆ ನ್ಯಾಯ ದಕ್ಕುವುದು ಕಠಿಣವಾಗಿದೆ ಎಂದು ಈ ಸಭೆಯು ಠರಾಯಿಸುತ್ತದೆ

ಏನೂ ಉಪದ್ರವವಾಗದೆ ಕೂದಲು ತೆಗೆಯುವ

ಬಾದಶಾಹೀ ಸಾಬೂನು

ಈ ಸಾಬೂನವನ್ನು ಬೇಕಾದಲ್ಲಿ ಹಚ್ಚಿರಿ. ಅಲ್ಲಿಯ ಕೂದಲುಗಳು, ಚರ್ಮವನ್ನು ಯಾವದೇ ರೀತಿಯಿಂದ ಕಲಂಕಿಸದೆ ಅತ್ಯಂತ ಸಫಾಯಿಯಿಂದ ಉದುರಿಹೋಗುತ್ತವೆ ಚರ್ಮವು ಮೃದುವಾಗುತ್ತದೆ ೩ ವಡ್ಡಿಗಳ ಪೆಟ್ಟಿಗೆ ೧ ರ ಬೆಲೆ ಒಂದು ರೂಪಾಯಿ ಟಪಾಲ ಹಾಸಲು ೪ ಆಣೆ ಒಂಟಿ ವಡಿಯನ್ನು ಕಳಿಸಲಾಗುವದಿಲ್ಲ ೩ ೩ ವಡ್ಡಿಗಳುಳ್ಳ ೪ ಪೆಟ್ಟಿಗೆಗಳ ಕಿಮ್ಮತ್ತು ರೂಪಾಯಿ ೩ ಅಂಚೆ ಹಾಸಲು ಮಾಫ ಬಾದಶಾಹೀ ಸಾಬೂನಿನ ಉತ್ಕೃಷ್ಟತೆಯ ಬಗ್ಗೆ ಕಲಕತ್ತಾ, ಕರಾಚಿಗಳ ಪ್ರದರ್ಶನಗಳಲ್ಲಿ ಸುವರ್ಣ ಪದಕಗಳು ಇನಾಮಾಗಿ ದೊರೆತಿವೆ

ನಕಲೀ ಮಾಲಿನ ಬಗ್ಗೆ ಎಚ್ಚರಿಕೆ, ಮೋಸ ಹೋಗಬೇಡಿರಿ

ರಜಿಸ್ಟರ ನಂ ೫೨೯, ತಪಾಸ ಮಾಡಿಕೊಂಡು ಖರೇದಿ ಮಾಡಿರಿ ಅಲ್ಲಲ್ಲಿ ಏಜಂಟರು ಬೇಕು

ಸಿ. ಪಿ. ಮಹಾಜನ ಎಂಡ್ ಕಂಪನಿ,
ಮುಂಬಯಿ ನಂ ೨.

ಟೀಪು — ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಯಾ ಮರಾಠಿಯಲ್ಲಿ

ಕಳೆದ ಕೌನ್ಸಿಲು ಇಲೆಕ್ಶನು.

(ಸಂಗ್ರಹಿಸಿದ್ದು)

ಕಾನಡಾ ಜಿಲ್ಹೆಯೊಳಗಿನ ಮುಸಲಮಾನ ಹಾಗು ಮುಸಲಮಾನೇತರ ಮತದಾರ ಸಂಘಗಳ ಕೌನ್ಸಿಲು ಚುನಾವಣೆಯು ಕಳೆದ ಗುರುವಾರ ಸಾಯಂಕಾಲಕ್ಕೆ ಕೊನೆಗಂಡಿತು ಮುಸಲಮಾನ ಸಂಘದ ಚುನಾವಣೆಯೊಳಗೆ ಮತದಾರರ ಉತ್ಸುಕತೆಯು ಕಂಡುಬರಲಿಲ್ಲ ಮುಸಲಮಾನೇತರ ಸಂಘದ ಉಮೇದ್ವಾರರ ಮೋಟಾಟದಲ್ಲಿ ಹಳ್ಳಿಗಳಲ್ಲಿಯ, ಶಹರುಗಳಲ್ಲಿಯೂ ಉಮೇದ್ವಾರರ ಪಕ್ಷಪಾತ ಆಶ್ರಯದಾರರು, ಮತದಾರರು ಮತಗಳನ್ನು ಪಡೆಯಲಿಕ್ಕೆ ಬಹಳೇ ದಣಿದರೆಂದು ಹೇಳಬಹುದು ನಮಗೆ ತಿಳಿದಷ್ಟರ ಮಟ್ಟಿಗೆ ಎಲ್ಲ ಕಡೆಯ ಸುದ್ದಿಗಳ ಮೇಲಿಂದ ಕಂಡುಬರುವದೇನಂದರೆ – ಘಟ್ಟದ ಮೇಲೆ ಶ್ರೀ ಶರ್ಸಿ ಹಾಗು ಶ್ರೀ ಕೇಶವೈನರೊಳಗೆ ಮೋಟಾಟವು ನಡೆದಿತ್ತು ಘಟ್ಟದ ಕೆಳಗೆ ಶ್ರೀ ಶರ್ಸಿ ಹಾಗು ಶ್ರೀ ಕಲ್ಯಾಣಪುರಕರರೊಳಗೆ ಮೋಟಾಟವಾಗಿತ್ತೆಂದು ಸರ್ವಸಾಧಾರಣವಾಗಿ ಹೇಳಬಹುದು ಬಾತ್ಮೀದಾರರ ಅಂದಾಜು ನಿಜವಿದ್ದರೆ, ಅವರು ಪ್ರತಿಸ್ಪರ್ಧಿಗಳಿಗೂ ಸಿಕ್ಕಿದ ಮತಗಳನ್ನು ಎಣಿಸಿದರೆ, ಶ್ರೀ ಶರ್ಸಿಯವರಿಗೆ ಬಿದ್ದ ಮತಗಳ ಶೇಕಡಾ ೩೦ ಮತಗಳು ಸಹ ಅವರ ಜೊತೆಗಾರರಿಗೆ ದೊರೆಯಲಿಲ್ಲ ಶಹರುಗಳಲ್ಲಿ ಎಲ್ಲ ಕಡೆಗಳಲ್ಲಿ ಸ್ವಯಂಮನ್ಯ ಧುರೀಣರು ತಮ್ಮ ಬಹಳೇ ಧುರೀಣತ್ವದಿಯು ಪೂರ್ಣ ಪ್ರಭಾವವನ್ನು ಕೊನೆಯ ಪ್ರಯೋಗವೆಂದು ಖರ್ಚುಮಾಡಿ ನೋಡಿದರು ಪರಿಣಾಮದ ಬಗ್ಗೆ ಮಾತ್ರ ತೀರ ಕಳವಳಿಸುತ್ತಿರುವರು. ಕಾರವಾರ ಅಂಕೋಲಾ, ಕುಮಟಾಗಳಂಥ ಶಹರುಗಳು ಈ ಪ್ರಯೋಗಗಳು ಅಂಥ ಆತ್ಮವಿಶ್ವಾಸದಿಂದ ನಡೆದರೂ, ಕುಮಟೆಯಲ್ಲಿ ಮಾತ್ರ ಅದರ ಯಶಸ್ವಿತದ್ದಾ ಪರಿಣಾಮವಾಗಿ, ಕಾತ್ರ ಅಸಹಕಾರಿತಯೋ, ಆತ್ತ ಸಹಕಾರಿತಯೋ ಏನೂ ತಿಳಿಯದೆ, ಲೋಕಮತದ ಗೊಂದಲವೇ ಗೊಂದಲ! ಒಂದು ದಿವಸದ ಪೂರ್ತ ಕುಮಟೆಯು ಸಂಪೂರ್ಣವಾಗಿ ನೇಮಸ್ತತನದ ಪಕ್ಷಪಾತಿಯಾಯಿತೆಂದು ಮೇಲಿಂದ ಮೇಲೆ ನೋಡುವವರಿಗೆ ಕಂಡುಬಂತು ಜಿಲ್ಹಾ ಕೊಂಗ್ರೆಸ ಕಮಿಟಿಯ ಅಧ್ಯಕ್ಷರು ಸಹ ನೇಮಸ್ತತನದ ಪಾರುಪಳಿಗಾಗಿ, ತಮ್ಮ ಬುದ್ಧಿ ಖಾದಿಯು ಹೊಸ ಧರ್ಮವನ್ನು ಮರೆತು, ತಮ್ಮ ಹಳೇ ಧರ್ಮದ ಪಾರಾಯಣ ಮಾಡಿದರು ಒಟ್ಟಿಗೆ ಧುರೀಣತ್ವದಿಯು ಎಲ್ಲ ಶಹರುಗಳಲ್ಲಿ ಅಲ್ಪ ಕಲೆದೋರಿದರೂ ಅದಕ್ಕೆ ಬಿರುಸಾದ ಹೊಡತ ಬಿತ್ತೆಂದು ಹೇಳಲಡ್ಡಿಯಿಲ್ಲ ಹಳ್ಳಿಗಳು ಮಾತ್ರ, ಲೋಕಪಕ್ಷವನ್ನು ಯಾರ ದಾಕ್ಷಿಣ್ಯ, ಬೆದರಿಕೆಗೆ ಒಳಗಾಗದೆ, ಆದರಿಸಿದವೆಂದು ಹೇಳಬಹುದು ನಮ್ಮ ಜಿಲ್ಹೆಯೊಳಗ ಶಹರುಗಳಿಗೆ ನಿಷ್ಕಾರಣವಾಗಿ ದೊರೆತ ಪ್ರಾಧಾನ್ಯವನ್ನು ಹಳ್ಳಿಗಳು ಹಕ್ಕಿನಿಂದ ಕಸುಕೊಂಡವೆಂದು ಹೇಳಬಹುದು ನಿಜವಾದ ರಾಷ್ಟ್ರವು ಹಳ್ಳಿಗಳಲ್ಲಿರುತ್ತದಲ್ಲವೇ! ಹಳ್ಳಿಗಳಲ್ಲಿ ಶೇಕಡಾ ೩–೪ ಮತಗಳು ಸಹ ಸರಾಸರಿ ಮಾನದಿಂದ ಕೊಂಗ್ರೆಸೇತರ ಉಮೇದ್ವಾರರಿಗ ಬೀಳಲಿಲ್ಲ ಶೇಕಡಾ ೫೦–೬೦ ಹಳ್ಳಿಗಳಲ್ಲಂತು ಎಲ್ಲ ಮತಗಳು ಕೊಂಗ್ರೆಸ ಉಮೇದ್ವಾರರಿಗೇ ಬಿದ್ದಿರಬೇಕು ಶಹರುಗಳಲ್ಲಿ ಮಾತ್ರ ಸರಾಸರಿ ಶೇಕಡಾ ೩೦ ಮತಗಳು ಧುರೀಣಶಾಹಿಗ ಅನುಕೂಲವಾಗಿ ಬಿದ್ದಿರಬಹುದು. ಅಂತು ಶ್ರೀ ಶರ್ಸಿಯವರಿಗೆ ಬಲು ದೊಡ್ಡ ಮತಾಧಿಕ್ಯವು ದೊರೆತಿರುವದೆಂದು ಬಾತ್ಮೀದಾರರ ಅಂದಾಜಿದೆ ಪರಿಣಾಮವು ನಾಳಿನ ೧೨ನೇ ತಾರೀಖಿಗೆ ಕಾರವಾರದಲ್ಲಿ ಜಾಹೀರಾಗುವದು

— ಜಮಖಂಡಿಪುರದಲ್ಲಿ ಉತ್ಸವಪ್ರಿತ್ಯರ್ಥ ಕೆಲವರು ಮದ್ದನ್ನು ಸಾರಿಸುವದರಲ್ಲಿ ತೊಡಗಿರುವಾಗ, ಧಕ್ಕನೆ ಸ್ಫೋಟವಾಗಿ ಮೂವರು ನಿಧನಹೊಂದಿದರು

ಕೋಕೋನಾಡಿನಲ್ಲಿ ಕೂಡುವ ಅ. ಇಂ. ವ್ಹಾ. ಕಾನ್ಫರನ್ಸಿನ ಕಾರ್ಯದರ್ಶಿಗಳು ಹಿಂದುಸ್ಥಾನದ ಎಲ್ಲ ಮುಂದಾಳುಗಳಿಗೆ ಕೆಳಗಿನ ವಿನಂತಿಯನ್ನು ಮಾಡಿಕೊಂಡಿರುವರು.

ಹಿಂದುಸ್ಥಾನದ ಮುಂದಾಳುಗಳಿಗೆ ವಿನಂತಿ.

(ಕೋಕೋನಾಡಿನಲ್ಲಿ ಕೂಡುವ ಅಖಿಲ ಭಾರತೀಯ ಸ್ವಯಂಸೇವಕರ ಪರಿಷತ್ತಿನ ವತಿಯಿಂದ.)

(ವಾರ್ತಾಪ್ರಸಾರಕ ಸಂಘ, ಹುಬ್ಬಳ್ಳಿ.)

ಮಹನೀಯರೇ,

ಬರುವ ಡಿಸೆಂಬರದ ರಾಷ್ಟ್ರೀಯ ಸಭೆಯ ಕಾಲಕ್ಕೆ ಕೋಕೋನಾಡಿನಲ್ಲಿ ಕೂಡುವ ಆಲ್ ಇಂಡಿಯಾ ವ್ಹಾಲಂಟಿಯರ ಕಾನ್ಫರನ್ಸಿನ ತಾತ್ಪೂರ್ತಿಕ ಮಂಡಳದ ವತಿಯಿಂದ ಈ ಪತ್ರಿಕೆಯ ರೂಪದಲ್ಲಿ ನಾನು ತಮ್ಮ ಸನ್ನಿಧಿಗೆ ಬಂದಿದ್ದೇನೆ. ನಗರದಲ್ಲಿ ಶಾಂತತೆಯನ್ನೂ, ವ್ಯವಸ್ಥೆಯನ್ನೂ ನೆಲೆಗೊಳಿಸುವದಕ್ಕಾಗಿಯೂ, ನಾಗರಿಕರನ್ನು ರಕ್ಷಿಸುವ ಸಂಬಂಧದಿಂದ ಇತರ ಕಾರ್ಯಗಳನ್ನು ಮಾಡುವದಕ್ಕಾಗಿಯೂ ಅಲ್ಲಲ್ಲಿ ನಗರಸಂರಕ್ಷಕ ತಂಡಗಳನ್ನು ಸ್ಥಾಪಿಸತಕ್ಕದ್ದೆಂದು ಮೊನ್ನಿನ ದಿಲ್ಲಿಯ ಅಧಿವೇಶನದಲ್ಲಿ ಠರಾಯಿಸಿದ್ದು ತಮ್ಮೆಲ್ಲರಿಗೂ ಗೊತ್ತೇ ಇದೆ. ಈ ಸೃಷ್ಟಿಗೆ ಈಗೇಕೆ ಇಷ್ಟು ಮಹತ್ವ ಬಂದಿದೆ ಎಂಬುದನ್ನು ಒಡೆದುಹೇಳುವ ಅವಶ್ಯಕತೆಯಿಲ್ಲ. ದೀರ್ಘ ಕಾಲದಿಂದಲೂ ಏಕ ಪ್ರಕಾರವಾಗಿ ಸಾರ್ವಜನಿಕ ಕಾರ್ಯವನ್ನು ಮಾಡುತ್ತ ಬಂದ ತಮಗೆ, ಸಧ್ಯಕ್ಕೆ ನಮ್ಮಲ್ಲಿದ್ದ ಸುಶಿಕ್ಷಿತ ಮತ್ತು ಶಿಸ್ತಿನ ರಾಷ್ಟ್ರಸೇವಕರ ಕೊರತೆಯು ಕಂಡುಬಂದಿರಬಹುದು. ರಾಷ್ಟ್ರೀಯ ಸಭೆಯಲ್ಲಿ ಪಾಸಾದ ಅನೇಕ ಠರಾವುಗಳು ಕೇವಲ ಪುಸ್ತಕದಲ್ಲಿಯೇ ಉಳಿಯುವವಲ್ಲದೆ, ಅಮಲಿನಲ್ಲಿ ಮಾತ್ರ ತರಲ್ಪಡುವದಿಲ್ಲೆಂಬುದು ನಮ್ಮಲ್ಲಿಯ ರಾಷ್ಟ್ರಸೇವಕರ ಕೊರತೆಯ ಸ್ಪಷ್ಟವಾದ ದ್ಯೋತಕವಿದೆ. ಇಂದಿನ ವರೆಗೆ ರಾಜಕಾರಣದಲ್ಲಿ ಕಳಕಳಿಯಿಂದ ಕೆಲಸ ಮಾಡುತ್ತ ಬಂದ ಎಷ್ಟೋ ಸದ್ಗೃಹಸ್ಥರಿಗಾದರೂ, ಇದೇ ಅನುಭವವು ಬಂದಿದೆ. ಆದ್ದರಿಂದ ಇಂಥ ಮಹತ್ವದ ವಿಷಯದ ಯೋಗ್ಯ ನಿರ್ಣಯವನ್ನು ಮಾಡಿದ ಬಗ್ಗೆ ದಿಲ್ಲಿಯ ಜಾದಾ ಅಧಿವೇಶನವನ್ನು ಎಷ್ಟು ಅಭಿನಂದಿಸಿದರೂ ಅಲ್ಪವೇ ಆಗುವದು. ಜಾದಾ ಅಧಿವೇಶನದ ಕಾಲಕ್ಕೆ ದಿಲ್ಲಿಯಲ್ಲಿ ಕೂಡಿದ ಹಿಂದುಸ್ಥಾನದ ಎಲ್ಲ ಪ್ರಾಂತಗಳ ಸ್ವಯಂಸೇವಕರಿಗೂ ತಮ್ಮದೊಂದು ಅಖಿಲ ಹಿಂದುಸ್ಥಾನದ ರಾಷ್ಟ್ರಸೇವಕ ಮಂಡಳವನ್ನು ಸ್ಥಾಪಿಸಿ, ವ್ಯವಸ್ಥಿತ ರೀತಿಯಿಂದ ಕೆಲಸ ನಡಿಸಿದರೆ, ದೇಶಕಾರ್ಯಕ್ಕೆ ಸಹಾಯವಾಗುವದೆಂದು ಒಳ್ಳೇ ಮನವರಿಕೆಯಾಗಿ, ಸಪ್ಟಂಬರ ೧೬ನೇ ತಾರೀಖಿನ ದಿವಸ ಅವರು ತಮ್ಮದೊಂದು ಸಭೆಯನ್ನು ಕೂಡಿಸಿ, ಬರುವ ಡಿಸೆಂಬರ ತಿಂಗಳಲ್ಲಿ ರಾಷ್ಟ್ರೀಯ ಮಹಾ ಸಭೆಯ ಕಾಲಕ್ಕೆ ಈ ವಿಷಯವನ್ನು ವಿಸ್ತಾರವಾಗಿ ಚರ್ಚಿಸುವದಕ್ಕಾಗಿ, ಅಖಿಲ ಭಾರತ ರಾಷ್ಟ್ರಸೇವಕ ಪರಿಷತ್ತನ್ನು ಕೋಕೋನಾಡಿನಲ್ಲಿ ಕೂಡಿಸಬೇಕೆಂದು ಠರಾಯಿಸಿದರು. ಈ ಕಾರ್ಯದಲ್ಲಿ ತಮಗೆ ಸಹಾಯ ಮಾಡಲಿಕ್ಕೆಂದು ಅನುಭವಿಕ ಸದ್ಗೃಹಸ್ಥರದೊಂದು ತಾತ್ಪೂರ್ತಿಕ ಮಂಡಳವನ್ನಾದರೂ ಅದೇ ಕಾಲಕ್ಕೆ ಅವರು ನೇಮಿಸಿರುವರು. ಮತ್ತು ಇಡೀ ಹಿಂದುಸ್ಥಾನದಲ್ಲಿ ಪ್ರವಾಸ ಮಾಡಿ ರಾಷ್ಟ್ರಸೇವಕರ ಸಂಬಂಧದಿಂದ ಎಲ್ಲ ಮಾಹಿತಿಯನ್ನು ಒಟ್ಟಿಗೇ ಮಾಡುವದಕ್ಕಾಗಿ ಆ ತಾತ್ಪೂರ್ತಿಕ ಮಂಡಳದವರಿಗೆ ಅಧಿಕಾರವನ್ನಾದರೂ ಕೊಟ್ಟಿರುವರು. ಈಗಿನ ವರೆಗೆ ಈ ಮಂಡಳದಿಂದ ಎರಡು ಪ್ರಕಟನಾಪತ್ರಿಕೆಗಳನ್ನು ಹೊರಡಿಸಿದ್ದೇವೆ. ಎಲ್ಲ ಪ್ರಾಂತಿಕ ಕೊಂಗ್ರೆಸ ಕಮಿಟಿಗಳಿಗೂ, ಇತರ ರಾಷ್ಟ್ರೀಯ ಸಂಸ್ಥೆಗಳಿಗೂ, ತಮ್ಮ ತಮ್ಮ ಪ್ರಾಂತಗಳಲ್ಲಿ ರಾಷ್ಟ್ರಸೇವಕರ ಸಭೆಗಳನ್ನು ಕೂಡಿಸಿಯೂ, ಮತ್ತು ಇತರ ವಿಧವಾಗಿ ಲೋಕಸಂಗ್ರಹವನ್ನು ಮಾಡಿಯೂ, ನಮ್ಮ ಕಾರ್ಯಕ್ಕೆ ಸಹಾಯ ಮಾಡಿರೆಂದು ವಿನಂತಿ ಪತ್ರಗಳನ್ನು ಬರೆದಿರುವೆವು.

ಆದರೆ, ತಮ್ಮಂಥ ಅನುಭವಿಕ ಮುಂದಾಳುಗಳು ಈ ಕಾರ್ಯವನ್ನು ಮನಸ್ಸಿನ ಮೇಲೆ ತೆಗೆದುಕೊಂಡ ಹೊರತು ಮತ್ತು ನಾಲ್ಕು ಕಡೆಗೆ ತಿರುಗಾಡಿ, ಅನೇಕ ಜನರಿಗೆ ಭೆಟ್ಟಿಯಾಗಿ ಈ ಕಾರ್ಯದಲ್ಲಿ ಅವರಿಗೆ ಅಭಿರುಚಿಯನ್ನು ಹುಟ್ಟಿಸಿದ ಹೊರತು ನಮ್ಮ ಯತ್ನವು ಸಫಲವಾಗುವದೆಂದು ನಮಗಂತೂ ಅನಿಸುವದಿಲ್ಲ. ತಮ್ಮಂಥ ಯಾರಾದರೂ ಮುಂದಾಳುಗಳು ನಮ್ಮ ಮಾರ್ಗದರ್ಶಕರಾದರೆ, ಬೇಕಾದ ಕಾರ್ಯವನ್ನು ಕೈಕೊಳ್ಳಲಿಕ್ಕೆ ನಾವು ಸಿದ್ಧರಿದ್ದೇವೆ. ನಮ್ಮಲ್ಲಿ ಕುಂದುಕೊರತೆಗಳಿರುವವೆಂದು ನಾವು ಮರೆಮಾಚದೆ ಒಪ್ಪಿಕೊಳ್ಳುತ್ತೇವೆ. ಆದರೂ, ಅಂತಃಕರಣದಿಂದ ರಾಷ್ಟ್ರಕಾರ್ಯವನ್ನು ಮಾಡಲಿಕ್ಕೆ ನಾವು ತತ್ಪರರಿದ್ದು, ಆ ನಮ್ಮ ಕೆಲಸದ ಉದ್ಯೋಗವನ್ನು ಮಾಡಿಕೊಳ್ಳುವದು ಸರ್ವಥೈವ ತಮ್ಮನ್ನೇ ಕೂಡಿದೆ. ಆದ್ದರಿಂದ ಕೋಕೋನಾಡಿನಲ್ಲಿ ಕೂಡುವ ಈ ರಾಷ್ಟ್ರಸೇವಕರ ಸಭೆಯನ್ನು ಪೂರ್ಣ ಯಶಸ್ವಿಯಾಗಿ ನಡಿಸಲು ಸಹಾಯ ಮಾಡಲಿಕ್ಕೆ ಕಳಕಳಿಯಿಂದ ತಮಗೆ ಬೇಡಿಕೊಳ್ಳುತ್ತೇವೆ. ಯಾವ ವಿಧದಿಂದ ನಾವು ಸಹಾಯವನ್ನು ಮಾಡತಕ್ಕದ್ದೆಂದು ತಾವು ಕೇಳಬಹುದು. ಹೋದ ಹೋದಲ್ಲಿ ರಾಷ್ಟ್ರಸೇವಕರ ಶಿಸ್ತಿನ ಬಗ್ಗೆ, ಜಾಹೀರ ವ್ಯಾಖ್ಯಾನ ಕೊಟ್ಟು ಮತ್ತು ವೃತ್ತಪತ್ರಗಳಲ್ಲಿ ಲೇಖಗಳನ್ನು ಬರೆದು. ಅಲ್ಲದೆ ಇತರ ಯಾವದೇ ತರದ ಕಾರ್ಯದಿಂದ ನೈತಿಕ ಅಥವಾ ಆರ್ಥಿಕ ಸಹಾಯವನ್ನು ಕೊಡಬಹುದು. ತಾವು ಸಹಾಯ ಮಾಡುವದರಿಂದ ನಮ್ಮ ಕಾರ್ಯಕ್ಕೆ ದೇಶದಲ್ಲಿಯ ಪುಢಾರಿಗಳ ಬೆಂಬಲವಿದೆ ಎಂದು ನಮಗೆ ಖಾತ್ರಿಯಾಗಿ ಕೆಲಸ ಮಾಡಲಿಕ್ಕೆ ಇಮ್ಮಡಿ ಹುರುಪು ಬರುವದು.

ಈ ನಮ್ಮ ಕಾರ್ಯಕ್ಕೆ ಸಹಾಯ ಮಾಡುವದೆಂದರೆ, ಮೇಲ್ಕಾಣಿಸಿದ ಠರಾವಿನ ಪ್ರಕಾರ, ನಗರ ಸಂರಕ್ಷಕ ತಂಡಗಳನ್ನು ತಯಾರಿಸಲಿಕ್ಕೆ ಬೇರೆ ಬೇರೆ ಪ್ರಾಂತಿಕ ಕೊಂಗ್ರೆಸ ಕಮಿಟಿಗಳಿಗೆ ಸಹಾಯ ಮಾಡಿದಂತೆಯೇ ಆಗುವದು.

ಈ ಬಿನ್ನಹಕ್ಕೆ ಮಾನ ಕೊಟ್ಟು, ನಮ್ಮ ಕೆಲಸದಲ್ಲಿ ಪೂರ್ಣ ಸಹಾಯವನ್ನು ಮಾಡಿರೆಂದು ನಾವು ತುಂಬ ನಂಬಿದ್ದೇವೆ.

ನಾ. ಸು. ಹರ್ಡೀಕರ,
ಕಾರ್ಯದರ್ಶಿ.

ಮನೆ ವಿಕ್ರಿ.

ಹೆರವಟ್ಟೆ ವಿಠೋಬ ದೇವಸ್ಥಾನದ ಮುಂದೆ ೩೩ನೇ ಸರ್ವೆ ನಂಬರದಲ್ಲಿ ಇರುವ ಮಜಬೂತ ೧೩ ಅಂಕಣಿನ ಮನೆ, ಅದಕ್ಕೆ ಹಾಗಿದ್ದ ೨ ಅಂಗಡಿಗಳೂ ಕೂಡಿಕೊಂಡ ೧೩ ಗುಂಟೆ ಹಿತ್ತಲು ಮಾರಾಟ ಮಾಡತಕ್ಕದ್ದಿದೆ. ಖಾಯಿಷ ಇದ್ದವರು ಅವನ್ನು ನೋಡಿ, ಕೆಳಗಿನ ಪತ್ತೆಗೆ ಪತ್ರವ್ಯವಹಾರ ನಡಿಸಬಹುದು.

ಆರ್. ವಿ. ಪ್ರಭು,
ಪೋಸ್ಟ ಮಾಸ್ತರ, ಹೊನ್ನಾವರ.

ಗ್ಯಾಸ ದೀಪಗಳು
ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಕರಾರು ಕೆಳಗಿನ ಪತ್ತೆಗೆ ಮುಕ್ತಾ ಶಿಕ್ಕೆ ತಿಳಕೊಳ್ಳಬಹುದು.

ಪುರುಷೋತ್ತಮ ಲಕ್ಷ್ಮಣ ಶ್ಯಾನಭಾಗ
ಹೆಗಡೇಕರ, ದುಕಾನ, ಕುಮಟಾ

ವಿವಿಧ ಸಂಗ್ರಹ.

ಜಜಿರಾತ-ಅಲ್-ಅರಾಬ ಪ್ರದೇಶದ ಸ್ವಾತಂತ್ರ್ಯದ ದಿನ.

ಸೆಂಟ್ರಲ್ ಖಿಲಾಫತ ಕಮಿಟಿಯು ೧೬ನೇ ನವಂಬರ ತಾರೀಖನ್ನು ಜಜಿರಾತ-ಅಲ್-ಅರಾಬ ದಿನವೆಂದು ಠರಾಯಿಸಿದೆ. ಈ ಬಗ್ಗೆ ಮೌ| ಅಬುಲ ಕಲಮ್ ಆಝಾದ, ಡಾ| ಅನ್ಸಾರಿ, ಡಾ| ಕಿಚಲೂ ಇವರವೊಂದು ಪ್ರಕಟಣಾ ಪತ್ರಿಕೆಯನ್ನು ಹೊರಡಿಸಿರುವರು. ಅದರ ತಾತ್ಪರ್ಯವೇನೆಂದರೆ:— ಲೌಸೇನ ತಹಪರಿಷತ್ತಿನಿಂದ ತುರ್ಕಿ ರಾಷ್ಟ್ರಕ್ಕೆ ಸ್ವತಂತ್ರ ಅಸ್ತಿತ್ವವಿದೆಂದು ಎಣಿಸಲಾಗಿದೆ. ಖಿಲಾಫತ ಚಳವಳಿಯ ಈಗ ಎರಡನೇ ಅಂಕವು ಪ್ರಾರಂಭವಾಗುತ್ತದೆ. ಇದು ಕೊನೆಯ ಅಂಕವೇ. ಈ ಬಗ್ಗೆ ನವಂಬರ ತಾ. ೧೬ನೇ ಶುಕ್ರವಾರವನ್ನು ಇಡೀ ಭರತಖಂಡದಲ್ಲಿ ಜಜಿರಾತ-ಅಲ್-ಅರಾಬ ಪ್ರದೇಶದ ಸ್ವಾತಂತ್ರ್ಯದ ದಿನವೆಂದು ಪಾಲಿಸಬೇಕೆಂದು ಸೆಂಟ್ರಲ್ ಖಿಲಾಫತ ಕಮಿಟಿಯು ನಿಶ್ಚಯಿಸಿದೆ. ನಮ್ಮ ಕಾರ್ಯದ ಮೂಲಾಧಾರವು ಪೈಗಂಬರರ ಕೊನೆಯ ಆಜ್ಞೆಯು. ಜಜಿರಾತ-ಅಲ್-ಅರಾಬ ಪ್ರದೇಶವನ್ನು ಮಹಮ್ಮದೀಯರ ಪವಿತ್ರ ಕ್ಷೇತ್ರವೆಂದೆಣಿಸಿ, ಅದನ್ನು ಸುರಕ್ಷಿತ ಕಾಪಾಡಬೇಕೆಂದು ನಮಗೆ ಕೊಟ್ಟ ಆಜ್ಞೆಯು. ಜಜಿರಾತ-ಅಲ್-ಅರಾಬ ಪ್ರದೇಶದ ಸ್ವಾತಂತ್ರ್ಯ ಘೋಷಣವು ಖಿಲಾಫತ ಕಾದಾಟದ ಚೇತನೆಯು. ತುರ್ಕರಿಗಾಗಿ, ಅವರ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಮಹಮ್ಮದೀಯರು ಪ್ರಶಂಸನೀಯ ಸಂತೋಷದಿಂದ ತಮ್ಮ ಧನವನ್ನೂ, ಕಾಲವನ್ನೂ, ಸೌಖ್ಯವನ್ನೂ ತ್ಯಜಿಸಿರುವರು. ಇದಕ್ಕೆಲ್ಲ ಪ್ರೇರಣೆಯು ಜಜಿರಾತ-ಅಲ್-ಅರಾಬ ಪ್ರದೇಶವನ್ನು ಮುಸಲಮಾನೇತರರ ಅಂಕೆಯಿಂದ ವಿಮೋಚಿಸುವದು. ಈ ಧ್ಯೇಯವು ಇನ್ನೂ ಸಾಧ್ಯವಾಗಲಿಕ್ಕಿಲ್ಲ. ಪೈಗಂಬರರು ಮೃತ್ಯುಶಯ್ಯೆಯಲ್ಲಿರುವಾಗ, ಅನುಯಾಯಿಗಳಿಗೆ ವಿಧಿಸಿದ ಅಪ್ಪಣೆಯನ್ನು ಪಾಲಿಸಲು, ಅದಕ್ಕಾಗಿ ಅವಶ್ಯವುಳ್ಳ ಸ್ವಾರ್ಥತ್ಯಾಗವನ್ನೂ, ನಿರ್ಧಾರವನ್ನೂ ಪ್ರದರ್ಶಿಸಲು ಮಹಮ್ಮದೀಯರಿಗೆ ಈಗ ಎಚ್ಚರಿಕೆ ಕೊಡಬೇಕಾಗಿದೆ. ತಾ. ೧೬ ನೇ ನವಂಬರ ಶುಕ್ರವಾರವು ಭಾರತೀಯ ಮಹಮ್ಮದೀಯರಿಗೆಲ್ಲ ಸತ್ವಪರೀಕ್ಷೆಯ ದಿನವು. ಜಜಿರಾತ-ಅಲ್-ಅರಾಬ ಪ್ರದೇಶವನ್ನು ಸುರಕ್ಷಿತವದಕ್ಕಾಗಿ ಹಾಗು ಅದನ್ನು ಮುಸಲಮಾನೇತರರ ಅಂಕೆಯಿಂದ ವಿಮೋಚಿಸುವದಕ್ಕಾಗಿ ಎಷ್ಟರ ವರೆಗೆ ಸ್ವಾರ್ಥತ್ಯಾಗ ಮಾಡಬಲ್ಲರೆಂದು ಪ್ರದರ್ಶಿಸುವ ದಿನವದು. ಜಜಿರಾತ-ಅಲ್-ಅರಾಬ ದಿನವನ್ನು ಯಾವ ರೀತಿಯಿಂದ ನಾವು ಪಾಲಿಸುತ್ತೇವೋ, ಅದೇ ರೀತಿಯಿಂದ, ಅಷ್ಟೇ ಪ್ರಮಾಣದಿಂದ ನಮ್ಮ ಇಸ್ಲಾಮಿಯದ ನಿರ್ಧಾರವೂ, ಪೈಗಂಬರರ ಮೇಲಿರುವ ನಮ್ಮ ನಿಷ್ಠೆಯೂ ಪ್ರಕಟವಾಗುವವು. ಈ ಪರೀಕ್ಷೆಯಲ್ಲಿ ನಾವು ಯಶಸ್ಸು ಪಡೆಯುವೆವೆಂದು ನಮ್ಮ ನಂಬಿಗೆಯಿದೆ.

* * *

ಪಾಲಿಸುವ ಬಗೆ.

ತಾ. ೧೬ ನೇ ನವಂಬರಕ್ಕೆ ಏನು ಮಾಡಬೇಕೆಂಬ ಬಗ್ಗೆ ಸೆಂಟ್ರಲ್ ಖಿಲಾಫತ ಕಮಿಟಿಯ ಕಾರ್ಯದರ್ಶಿಗಳಾಗಿ ಡಾ| ಸಯ್ಯದ ಮಹಮೂದ, ...

ಅದ್ದುದು ಅಲ್ಲಿ, ಉಸ್ಮಾನ ಸೋಭಾನಿಯವರು ಪ್ರಕಟಿಸುವದೇನಂದರೆ:— ಜಜಿರತ್-ಅಲ್-ಅರಾಬ ದಿನ ಪ್ರತಿಯೊಂದು ಮಸೀದಿಯಲ್ಲಿ ಶುಕ್ರವಾರದ ಪ್ರಾರ್ಥನೆಗಳು ಮುಗಿದ ಬಳಿಕ, ಜಜಿರತ್-ಅಲ್-ಅರಾಬ ಪ್ರದೇಶವನ್ನು ಸ್ವತಂತ್ರವಾಗಿಡಬೇಕೆಂದು ಮುಹಮ್ಮದೀಯರೆಲ್ಲರೂ ಆಗ್ರಹಪೂರ್ವಕ ಠರಾಯಿಸಬೇಕು. ಮುಹಮ್ಮದೀಯರೆಲ್ಲರೂ ಅಂತಃಕರಣಪೂರ್ವಕ ಖಿಲಾಫತ ನಿಧಿಯನ್ನು ಕೂಡಿಸಬೇಕು. ನವಂಬರ ತಾ. ೧೬ ನೇಯಿಂದ ತಾ. ೨೪ನೇ ವರೆಗಿನ ದಿನಗಳ ವಾರವೊಂದನ್ನು ಜಜಿರತ್-ಅಲ್-ಅರಾಬ ಸಪ್ತಾಹವೆಂದು ಎಣಿಸಿ, ಖಿಲಾಫತ ನಿಧಿಯ ಸಂಗ್ರಹಕ್ಕಾಗಿ ದುಡಿಯಬೇಕು. ಖಿಲಾಫತ ಸಂಸ್ಥೆಗಳು ಆರ್ಥಿಕ ರೀತಿಯಿಂದ ಭದ್ರವಾದ ಹೊರತು, ನಮ್ಮ ಚಳವಳಿಯು ಊರ್ಜಿತ ಹೊಂದಲಾರದು; ಕಾದಾಟವೂ ಬಹುಕಾಲ ತಾಳಲಾರದು. ಸಾಮಾಜಿಕ ಯಾದವಿಗಳನ್ನೂ, ಜ್ಞಾತಿಕಲಹಗಳನ್ನೂ ನಾವು ಈಗ ಒತ್ತಟ್ಟಿಗಿಟ್ಟು, ಇಸ್ಲಾಮು ಧರ್ಮಕ್ಕೆ ಅವಶ್ಯವಿರುವ ಕರ್ತವ್ಯವನ್ನು ಪಾರಗಾಣಿಸಲಿಕ್ಕೆಬೇಕು. ಧಾರ್ಮಿಕ ಜವಾಬದಾರಿಯು ಬಲು ದೊಡ್ಡದು. ಆದರಿಂದ ಜಜಿರತ್-ಅಲ್-ಅರಾಬ ಪ್ರದೇಶದ ಸ್ವಾತಂತ್ರ್ಯಗೀತದಿಂದ ಇಡೀ ವಾತಾವರಣವನ್ನೆಲ್ಲ ದುಮುದುಮಿಸಿ, ನಮ್ಮ ಧರ್ಮನಿಷ್ಠೆಯನ್ನು ಪ್ರದರ್ಶಿಸಿ, ಸತ್ವಪರೀಕ್ಷೆಯಲ್ಲಿ ವಿಜಯಿಯಾದೆವೆಂದು ಅಖಿಲ ಭೂಮಂಡಲಕ್ಕೆ ಜಾಹೀರುಪಡಿಸುವಾ.

***

ಕಾಡಿನ ಸುರಾಜ್ಯ.

ಮುಂಬಯಿಯ ಬೆರಿಸ್ಟರ ಪೆಟ್ಟಿಸ್ಟಾರವರೆಂದರೆ, ಒಂದು ವಿಚಿತ್ರ ಮೂರ್ತಿಯು. ಇವರು ಇಂಜಿನಿಯರಿಂಗ ಪರೀಕ್ಷೆಯಲ್ಲಿ ಪಾಸಾಗಿರುವರು. ಕಾಡಿನ ಖಾತೆಯಲ್ಲಿ ಫೊರೆಸ್ಟರರಾಗಿ ಕೆಲ ಕಾಲ ಸರಕಾರಿ ಸೇವೆಯನ್ನು ಜರುಗಿಸಿರುವರು. ಬಳಿಕ, ಬೆರಿಸ್ಟರಿ ಪಾಸಾಗಿ, ಕೆಲ ಕಾಲ ಪಕ್ಷಗಾರರ ವಕೀಲಿ ನಡಿಸಿ, ಇತ್ತೀಚೆಗೆ ಕೂಲಿಕಾರರ ವಕೀಲಿಯನ್ನೂ ಸರಕಾರದ ಹತ್ತರ ನಡಿಸಿರುವರಲ್ಲದೆ, ಅವರಿಗಾಗಿ ಸ್ವಾರ್ಥತ್ಯಾಗಪೂರ್ವಕ ದುಡಿಯುತ್ತಿರುವರು. ಇವರು ಪ್ರಾಂತಿಕ ಕಾಯಿದೆ ಕೌನ್ಸಿಲಿನ ಮುಂಬಯಿಯ ಉತ್ತರ ಭಾಗದ ಕಡೆಯಿಂದ ಉಮೇದವಾರರಾಗಿ ನಿಂತಿದ್ದರು. ಪ್ರಾಸ್ತಾವಿಕ ಮತ ಎಣಿಕೆಯಲ್ಲಿ ಬೆರಿಸ್ಟರ ಪೆಟ್ಟಿಸ್ಟಾರವರು ಯಶಸ್ವಿಯಾಗಿಲ್ಲೆಂದು ಜಾಹೀರಾಗಿದೆ. ಚುನಾವಣೆಯ ಬಗ್ಗೆ ಮಾಡಿದ ಭಾಷಣದಲ್ಲಿ ಅವರು ಠಾಣಾ ಜಿಲ್ಹೆಯಲ್ಲಿ ಫೊರೆಸ್ಟರಿ ಕೆಲಸ ತಾವು ನಡಿಸುವಾಗ ತಮಗೊದಗಿದ ಕಾಡಿನ ಸುರಾಜ್ಯದ ಅನುಭವಗಳ ಬಗ್ಗೆ ನುಡಿದದ್ದೇನಂದರೆ:— "ನಾನು ಏಳು ವರುಷಗಳ ವರೆಗೆ ಫೊರೆಸ್ಟರನಿದ್ದೆನು. ಕಾಡಿನ ರಕ್ಷಣೆಯ ನೆವಮಾಡಿ, ಸರಕಾರವು ಅಡವಿಗಳ ಹಾಗು ಅವುಗಳಲ್ಲುಂಟಾಗುವ ಉತ್ಪತ್ತಿಗಳ ಮುಕ್ತಿಯನ್ನು ಪಡೆದಿದೆ. ಇದರಿಂದ ಉರುವಲ ಕಟ್ಟಿಗೆಯ ದರವು ವಿಪರೀತ ಏರಿದೆ. ನಾನು ಠಾಣಾ ಜಿಲ್ಹೆಯನ್ನು ಬಿಟ್ಟಂದಿನಂತು ಈ ದರವು ಶೇಕಡಾ ೩೦೦ರಷ್ಟು ಬೆಳೆಯಿತು. ದನಗಳ ಮೇವು, ಬತ್ತು, ಗಳ್ಳು, ಹಾವುಗಳ ಬಗ್ಗೆ ಹಳ್ಳಿಗರಿಗಿರುವ ಪುರಾತನ ಹಕ್ಕುಗಳನ್ನು ಅಪಹರಿಸಬೇಡಿರೆಂದು ನಾನು ನಿಷೇಧ ಪ್ರದರ್ಶನ ಮಾಡಿದ ನೆನಪು ಕಾಣುತ್ತದೆ. ಆಗ ನನಗೆ ಏನು ಹೇಳೋಣಾಯಿತು, ಬಲ್ಲಿರಾ? ನನ್ನ ಕೆಲಸವು ಹುಕುಮುಗಳನ್ನು ಅಮಲಬಜಾವಣಿ ಮಾಡುವದೆಂದು ಎಚ್ಚರಿಕೆ ಕೊಡಲಾಯಿತು. ಹುಕುಮನ್ನು ಅಮಲಬಜಾವಣಿ ಮಾಡಹತ್ತಿದಾಗ್ಗೆ, 'ಅತ್ಯುತ್ಸಾಹದಿಂದ ನಡೆಯುದೇತ' ಎಂದು ನನಗೆ ತಾಕೀದು ಕೊಡಲಾಯಿತು. ಪ್ರಜಾಹಕ್ಕುಗಳಿಗಾಗಿ ನಾನು ಆಗ್ರಹ ಹಿಡಿಯಲು, ವರಿಷ್ಠಾಧಿಕಾರಿಗಳು ಜಂಗಲ ಜುಲುಮಿನ ಪ್ರವರ್ತಕನಾಗುವೆನೆಂದು ನನಗೆ ಹೀಯಾಳಿಸಿದರು. ಇಡೀ ಕಾಡಿನ ಖಾತೆಯ ಆಡಳಿತೆಯನ್ನು ಕೂಡಲೆ ಹಿಂದೀಯರಿಗೆ ಯಾಕೆ ವಹಿಸಿಕೊಡಬಾರದು? ಎಂಬದು ನಮಗೆ ತಿಳಿಯದು. ಕಾಡಿನ ಸಂರಕ್ಷಣೆಯೇನು ದೊಡ್ಡ ಶಾಸ್ತ್ರೀಯ ಕೆಲಸವಲ್ಲ; ಪೋಲೀಸರು ಮಾಡುವಂಥ ಬರೇ ಕಾವಲಿನ ಕೆಲಸವು. ನಮ್ಮಲ್ಲಿಯ ಕಾಡುಗಳನ್ನು ಶಾಸ್ತ್ರೀಯ ರೀತಿಯಿಂದ ಸಂರಕ್ಷಿಸಲಿಕ್ಕಾಗಲಿ, ಅವುಗಳಿಂದ ಉತ್ಪನ್ನ ಪಡೆಯಲಿಕ್ಕಾಗಲಿ, ಇಂಜಿಲ್ಲೆಂದು ನನ್ನ ಮತವಿಲ್ಲ. ಆದರೆ, ವಿಲಾಯತಿಯಿಂದ ಬರುವ ಫೋರೆಸ್ಟರರು ಭಾರತೀಯ ಕಾಡುಗಳ ಸಂರಕ್ಷಣೆಯ ರಹಸ್ಯವನ್ನು ಅರಿಯಲಾರರು. ಶಾಸ್ತ್ರೀಯ ಕೆಲಸಕ್ಕೆ ವನಸ್ಪತಿಶಾಸ್ತ್ರಜ್ಞ ಫೋರೆಸ್ಟರರು ಅವಶ್ಯವಿದ್ದರೂ, ಆ ಕೆಲಸಕ್ಕೆ ೧೨-೧೫ ಮಂದಿಗಳಿದ್ದರೆ, ಇಡೀ ಹಿಂದುಸ್ಥಾನಕ್ಕೆ ಸಾಕು. ಉಳಿದವರೆಲ್ಲರೂ ಅನಾವಶ್ಯಕರು." ಬೆರಿಸ್ಟರ ಪೆಟ್ಟಿಸ್ಟಾರವರು ಕಾಡಿನ ಸುರಾಜ್ಯದ ಬಗ್ಗೆ ಹೇಳಿದ ಸ್ವಾನುಭವದ ನುಡಿಗಳಿವು.

***

ಚುನಾವಣೆಯ ಹೊಸ ನಮೂನೆ.

ಚುನಾವಣೆಯಲ್ಲಿ ಮತಗಳನ್ನು ಸಂಪಾದಿಸಲು ಅನೇಕ ಪ್ರಕಾರಗಳನ್ನು ಆಚರಿಸುತ್ತಾರೆ. ಮತದಾರರಿಗಾಗಿ ಚಹಾಪಾರ್ಟಿಗಳನ್ನು ಕೊಡುವ ವ್ಯವಸ್ಥೆ ಮಾಡುವದು, ಮತದಾನದ ಸ್ಥಳಗಳಿಗೆ ಬರಹೋಗಲು ವಾಹನಗಳನ್ನು ಪೂರೈಸುವದು, ದೇಶೋದ್ಧಾರದ, ಸಮಾಜೋದ್ಧಾರದ, ಸಾಮ್ರಾಜ್ಯೋದ್ಧಾರದ ದೊಡ್ಡ ದೊಡ್ಡ, ಉದ್ದುದ್ದ ಜಾಹೀರನಾಮೆಗಳನ್ನು ಪ್ರಕಟಿಸುವದು, ಇವೆಲ್ಲ ಮತಗಳನ್ನು ಅಪಹರಿಸುವ ಉಪಾಯಗಳನ್ನು ಮತದಾರರು ಅರಿತಿರಬೇಕು. ಕಳೆದ ಅಕ್ಟೋಬರ ತಾ. ೩೧ನೇ ಬುಧವಾರಕ್ಕೆ ಮದ್ರಾಸಿನಲ್ಲಿ ಪ್ರಾಂತಿಕ ಹಾಗು ವರಿಷ್ಠ ಕಾಯಿದೆ ಕೌನ್ಸಿಲುಗಳ ಚುನಾವಣೆಯು ನಡೆಯಿತು. ಆಗ, ಒಂದು ಹೊಸ ಪ್ರಕಾರವು ಅಲ್ಲಿ ಕಂಡುಬಂತು. ಮುಂಚಿನ ದಿನ ರಾತ್ರಿ ಭಜನೆ ಮಂಡಳಗಳು ಇಡೀ ಊರಲ್ಲೆಲ್ಲ ತಿರುಗಿದವು. ದೇವರ ಅಗಾಧ ಲೀಲೆಗಳನ್ನೂ, ಮಹಿಮೆಯನ್ನೂ ಕೊಂಡಾಡುವ ಬದಲ, ಕೆಲ ಉಮೇದವಾರರ ಗುಣಸಂಕೀರ್ತನೆ ಮಾಡುತ್ತ, ಅವರಿಗೇ ಮತದಾನ ಮಾಡಬೇಕೆಂದು ಮತದಾರರಿಗೆ ಬೋಧಿಸುತ್ತ ಉಮೇದವಾರರ ಭಜಕರು ರಾತ್ರಿಗಳೆದರು. ಪವಿತ್ರ ಭಜನೆ ಸಂಸ್ಥೆಯ ದುರ್ಗತಿ ನೋಡಿರಿ.

***

ರಾಷ್ಟ್ರೀಯ ಸಭೆಯ ಅಧಿವೇಶನ.

ಕೋಕನಾಡಾದಲ್ಲಿ ಇದೇ ಬರುವ ಡಿಸೆಂಬರ ತಿಂಗಳಿನಲ್ಲಿ ನೆರೆಯಲಿಕ್ಕಿದ್ದ ಭಾರತೀಯ ರಾಷ್ಟ್ರೀಯ ಸಭೆಯ ಅಧಿವೇಶನದ ಬಗ್ಗೆ ಕಾರ್ಯದರ್ಶಿಗಳು ಜಾಹೀರುಪಡಿಸುವದೇನಂದರೆ:— ಈ ಅಧಿವೇಶನದ ತಯಾರಿಯು ಪೂರ್ಣವಾಗುತ್ತಿದೆ. ಸಭಾಮಂಟಪ, ಪ್ರತಿನಿಧಿಗಳ ಬಿಡಾರು, ಮೊದಲಾದ ರಾಷ್ಟ್ರೀಯ ಸಭೆಗೆ ಸಂಬಂಧಿಸಿದ ಎಲ್ಲ ಕಟ್ಟಡಗಳು ಗಾಂಧೀ ನಗರದಲ್ಲಿ ಕಟ್ಟಲ್ಪಟ್ಟಿವೆ. ಇದು ಕೋಕೋನಾಡಾ ರೇಲ್ವೆ ಸ್ಟೇಶನಿನ ಪಶ್ಚಿಮ ದಿಕ್ಕಿಗಿದ್ದು, ಗಾಂಧೀ ನಗರಕ್ಕೆ ಬರಹೋಗುವ ಪ್ರತಿನಿಧಿ-ಪ್ರೇಕ್ಷಕರಿಗೆ ಅನುಕೂಲವಾಗುವಂತೆ ಹಂಗಾಮಿ ಸ್ಟೇಶನ್ನಿಡುವದೆ ರೇಲ್ವೆ ಅಧಿಕಾರಿಗಳು ಒಪ್ಪಿರುವರು. ಮ್ಯುನಿಸಿಪಾಲಿಟಿಯ ಅಧಿಕಾರಿಗಳೂ ತಮ್ಮಿಂದಾದಷ್ಟು ಸಹಾಯ ಮಾಡಿರುವರು. ಸಭಾಮಂಟಪವು ಗಾಂಧೀ ನಗರದ ಮಧ್ಯಭಾಗದಲ್ಲಿರುವದು. ಇದಕ್ಕೆ ೧೦ ಎಕರೆ ಕ್ಷೇತ್ರವು ತಗಲಿದೆ. ಪ್ರತಿನಿಧಿಗಳ ಬಿಡಾರಿನ ವ್ಯವಸ್ಥೆಯು ಸಭಾಮಂಟಪದ ಉತ್ತರಕ್ಕಿದ್ದು, ಆ ಬಗ್ಗೆ ೧೧ ಎಕರೆ ಸ್ಥಳವು ಗೊತ್ತು ಮಾಡಲಾಗಿದೆ. ಇಲ್ಲಿ ೬ ಸಾವಿರ ಪ್ರತಿನಿಧಿಗಳ ವ್ಯವಸ್ಥೆಯಾಗುವದು. ಪ್ರತಿನಿಧಿಗಳಿಗಾಗಿ ಒಂದು ದೊಡ್ಡ ವಾಚನಾಲಯದ ಏರ್ಪಾಟೂ ಮಾಡಲಾಗಿದೆ. ಮುಹಮ್ಮದೀಯರಿಗಾಗಿ ಪ್ರತ್ಯೇಕ ಉಳಕೊಳ್ಳುವ ವ್ಯವಸ್ಥೆಯೂ ಮಾಡಲಾಗಿದೆ. ಪ್ರಾಂತಿಕ ಕಮಿಟಿಗಳ ಕಾರ್ಯದರ್ಶಿಗಳು ೧೫ನೇ ತಾರೀಖಿನೊಳಗೆ ಮುಹಮ್ಮದೀಯ ಪ್ರತಿನಿಧಿಗಳ ಸಂಖ್ಯೆಯನ್ನು ತಿಳಿಸಬೇಕೆಂದು ಸೂಚಿಸಲಾಗಿದೆ. ಸಕುಟುಂಬ ಬರುವ ಪ್ರತಿನಿಧಿಗಳಿಗೆ ಪ್ರತ್ಯೇಕ ವ್ಯವಸ್ಥೆ ಬೇಕಾದ್ದಲ್ಲಿ, ಇದೇ ೧೫ನೇ ತಾರೀಖಿನೊಳಗಾಗಿ ಅವರು ತಿಳಿಸಬೇಕು. ಅಂದರೆ, ಅವರ ಬಗ್ಗೆಯೂ ಪ್ರತ್ಯೇಕ ವ್ಯವಸ್ಥೆಯಾಗುವದು. ಇಲ್ಲಿ ಒಂದು ಅಖಿಲ ಭಾರತೀಯ ಖಾದೀ ಪ್ರದರ್ಶನವಾಗುವದು. ಇದರೊಳಗೆ ಅಖಿಲ ಭರತಖಂಡದೊಳಗಿನ, ಅಂಧ್ರದೇಶದೊಳಗಿನ ಕೈಗಾರಿಕೆ ಸಾಮಾನುಗಳ ಪ್ರದರ್ಶನವಾಗುವದು. ನೂಲುವ, ನೇಯುವ, ಬಣ್ಣ ಕೊಡುವ ಪ್ರಯೋಗಗಳನ್ನು ನಡಿಸುವ ವ್ಯವಸ್ಥೆ ಮಾಡಲಾಗಿದೆ. ಪ್ರಾಂತಿಕ ಕಮಿಟಿಗಳು ಈ ಮಾಹಿತಿಯ ಪ್ರಸಾರ ಮಾಡಿ, ನೂಲುವವರಿಗೆ ತಮ್ಮ ನೂಲುಗಳ ನಮೂನೆಯನ್ನು ಕಳುಹಲು ಉತ್ತೇಜಿಸಬೇಕು. ತಂತಿಯಿಂದ ಯಾವದೇ ಸುದ್ದಿಯನ್ನು ತಿಳಿಸಬೇಕೆಂದಿದ್ದರೆ, "ಕಾಂಗ್ರೆಸ್, ಕೋಕೋನಾಡಾ" ಎಂಬ ಎರಡೇ ಶಬ್ದಗಳ ಪತ್ತೆಗೆ ಕಳಿಸತಕ್ಕದ್ದು.

ದಿವಾಣರ ಸ್ಥಿತಿ.

ಕಳೆದ ತಾ. ೨೭ನೇ ಶನಿವಾರಕ್ಕೆ ಮುಂಬಯಿಯೊಳಗಿನ ಭಾರತ ಸೇವಕ ಸಮಾಜ ಮಂದಿರದಲ್ಲಿ ರ್ಯಾಂಗ್ಲರ ಪರಾಂಜಪೇಯವರು ತಮ್ಮ ಕ್ಷೇತ್ರೀಯ ಮತದಾರರಿಗೆ ಉಪನ್ಯಾಸವನ್ನಿತ್ತರು. ಮತದಾರರು ದಿವಾಣರವರಿಗೆ ಅನೇಕ ಪ್ರಶ್ನೆಗಳನ್ನು ಕೇಳಿ, ಉಪದ್ರವ ಕೊಟ್ಟರು. ಅವುಗಳೊಳಗಿನ ಒಂದು ಪ್ರಶ್ನೋತ್ತರವು ಸುಧಾರಣಾ ಕಾಯಿದೆಯೊಳಗಿನ ದಿವಾಣರ ಸ್ಥಿತಿಯನ್ನು ಬಣ್ಣಿಸುತ್ತದೆ. ಆನಂತರೆ,

ಪ್ರ:— ಡಾ। ಸಾಮಡಿಯಾರವರನ್ನು ಕೆಟ್ಟ ರೀತಿಯಿಂದ ನಡಿಸಿದ ಬಗ್ಗೆ ಸುಪರಿಂಟೆಂಡೆಂಟ ಕಾರ್ಟರರವರಿಗೆ ಶಾಸನ ಮಾಡಬೇಕೆಂದು ಕೌನ್ಸಿಲಿನಲ್ಲಿ ಪಾಸಾದ ಠರಾವಿನ ಬಗ್ಗೆ ನಿಮ್ಮ ಅಂಬೋಣವೇನು?

ಉ:— ಸರಕಾರವು ಬಾಳ ಕಮಿಟಿಯನ್ನು ನೇಮಿಸಬೇಕಾಗಿತ್ತು. ಈ ಠರಾವಿಗೆ ಅನುಕೂಲವಾಗಿ ನಾನು ಮತಕೊಡುತ್ತಿದ್ದೆ. ಆದರೆ, ನಾನು ದಿವಾಣನಿದ್ದರಿಂದ ಹಾಗೆ ಮಾಡಲು ಅನುಕೂಲವಾಗಲಿಲ್ಲ.

ಪ್ರ:— ಸುಪರಿಂಟೆಂಡೆಂಟ ಕಾರ್ಟರರನ್ನು ದಂಡಿಸಬೇಕೆಂದು ಕೌನ್ಸಿಲಿನಲ್ಲಿ ಪಾಸಾದ ಠರಾವನ್ನು ಸರಕಾರವು ಅಮಲಿನಲ್ಲಿ ತರಲಿಲ್ಲ. ಈ ಠರಾವನ್ನು ಅಮಲಿನಲ್ಲಿ

(ಮುಂದೆ ೧೧ನೇ ಪುಟ ನೋಡಿರಿ.)

ಕಾನಡಾವೃತ್ತ.

ಗುರುವಾರ ತಾರೀಖು ೮ ಮಾಹೆ ನವಂಬರ ೧೯೨೩

" ಸರ್ವನಾಶ. "

ಕೆನಿಯಾ ನಿರ್ಣಯವು

ಯಥಾಪೂರ್ವಂ ಅಕಲ್ಪಯತ.

ಸದ್ಯದ ರಾಜಕಾರಣದೊಳಗೆ ದೊಡ್ಡ ದೊಡ್ಡ ಶಬ್ದಗಳ ಆಡಂಬರವೇ ಕಣ್ಣಿಗೆ ಬೀಳುತ್ತದೆ. ಸಾಮ್ರಾಜ್ಯಪರಿಷತ್ತು, ರಾಷ್ಟ್ರಸಂಘ, ಹಿಂದೀ ಪಾರ್ಲಿಮೆಂಟು, ಬ್ರಿಟಿಶ ನಾಗರಿಕತ್ವ, ಕಾಯಿದೆ ಮತ್ತು ನ್ಯಾಯ ಹೀಗೆ ಶಬ್ದಸಮೂಹಗಳ ಮಾಲಿಕೆಯನ್ನು ಹಚ್ಚಿದರ, ಅದೆಷ್ಟು ಉದ್ದ ಬೆಳೆಯುವದೆಂದು ಹೇಳಲಾಗದು. ಈ ಶಬ್ದಗಳು ಎಷ್ಟು ಪೊಳ್ಳೆಂದು ಪ್ರತಿಯೊಂದು ದಿವಸದ ಅನುಭವವೇ ಹೇಳುವದು. ಮೊನ್ನೆ ವಿಲಾಯತಿಯೊಳಗೆ ಸಾಮ್ರಾಜ್ಯದೊಳಗಿನ ದೊಡ್ಡ ದೊಡ್ಡ ಮುತ್ಸದ್ದಿಗಳು ಕೂಡಿದರ ಪರಿಷತ್ತು ನೆರೆಯಿತು, ಉದ್ಬುದ್ಧ ಭಾಷಣಗಳಾದವು ಎಲ್ಲ ಔಪಚಾರಿಕ ವಿಧಿಯು ಯಥಾಶಾಸ್ತ್ರ ಸಾಂಗವಾಯಿತು. ಆದರೆ, ನಮ್ಮ ದೇಶಕ್ಕೆ ಸಂಬಂಧಿಸಿರುವ ವಸಾಹತುಗಳೊಳಗಿನ ಹಿಂದೀ ನಾಗರಿಕತನದ ಹಕ್ಕುಗಳ ಪರವಾಗಿ ನಡೆದ ಚರ್ಚೆಯನ್ನೂ, ನಿರ್ಣಯವನ್ನೂ ನೋಡಿದರೆ, ಸಾಮ್ರಾಜ್ಯಪರಿಷತ್ತು, ಅದರೊಳಗೆ ಹಿಂದುಸ್ಥಾನ ಸರಕಾರವು ನೇಮಿಸಿದ " ಹಿಂದೀ ಪ್ರತಿನಿಧಿ " ಗಳ ಸಭಾಸದತ್ವವೂ, ಇವೆಲ್ಲ ಬರೇ ನಾಟಕದಂತೆ ನಿರರ್ಥಕವಾದವೆಂದು ಕೊನೆಯ ತೀರ್ಪುಗಳಿಂದ ಈಗ ಹೇಳಬೇಕಾಗಿದೆ.

ನಮ್ಮ ಪ್ರತಿನಿಧಿಗಳೆಂದು ಹೇಳಲ್ಪಡುವ ಸರದಾರ ತೇಜಬಹಾದ್ದೂರ ಸಪ್ರುಗಳು ವಸಾಹತುಗಳೊಳಗಿನ ನಮ್ಮ ನಾಗರಿಕತ್ವದ ಹಕ್ಕುಗಳಿಗಾಗಿ ಕಾದಾಡಿ, ನೇಮಸ್ತತನದ ಸಹಕಾರಿತೆಯಿಂದ ಸಾಮ್ರಾಜ್ಯಪರಿಷತ್ತಿಗೆ ಬಗ್ಗಿಸಿ, ಕೆನಿಯಾ ಅನ್ಯಾಯವನ್ನೂ, ವಸಾಹತುಗಳಲ್ಲಾಗುವ ಅನ್ಯಾಯವನ್ನೂ ನಿಶ್ಚಿತವಾಗಿ ದೂರಪಡಿಸಿಕೊಳ್ಳುವರೆಂದು ಆಶಾವಾದಿ ಸಹಕಾರಿಗಳು ಚಾತಕಪಕ್ಷಿಗಳಂತೆ ಹಾರೈಸುತ್ತಿದ್ದರು. ಆದರೆ, ಈ ವಿಷಯು ಬರೇ ವಾದ-ವಿವಾದವನ್ನೆಷ್ಟು ಮಾಡಿಸಿ, ಸರದಾರ ಸಪ್ರುಗಳು ಏನು ಗೆದ್ದರೆಂದು ಹುಡುಕಿದರೆ, ಕೈಗೇನೂ ಹತ್ತುವದಿಲ್ಲ. ೧೯೨೧ ನೇ ಇಸ್ವಿಯಲ್ಲಾದ ಸಾಮ್ರಾಜ್ಯದೊಳಗಿನ ಸಮಾನತೆಯ ನಾಗರಿಕತ್ವದ ಪುನರುಚ್ಚಾರವನ್ನು ಮಾಡಿಸಿದರೂ, ಈ ತತ್ವದ ಆಚರಣೆಯನ್ನು ಮಾಡಿಸಲಿಕ್ಕೆ ಕಮಿಟಿಗಳನ್ನು, ವಸಾಹತುಗಳೂ ಹಿಂದುಸ್ಥಾನ ಸರಕಾರವೂ, ನಿರ್ಮಿಸಬೇಕೆಂದು ಆಲೋಚನೆಯನ್ನಷ್ಟು (forumla) ಮಾಡಿರುವರೆಂದು ತಿಳಿಯುತ್ತದೆ. ಯಾವದೇ ಠರಾವೇನು ಪಾಸಾಗಿಲ್ಲ. ಕೆನಿಯಾ ಪ್ರಶ್ನೆಯು ಮೊದಲಿನ ನಿರ್ಣಯದ ಪುನರುಚ್ಚಾರಣೆಯನ್ನು ಈಗೇನು ಮಾಡಲಿಕ್ಕಾಗದೆಂದು ಸ್ಪಷ್ಟವಾಗಿ ವಸಾಹತು ಮಂತ್ರಿಗಳು ಸಹಾನುಭೂತಿಪೂರ್ವಕ ತಿಳಿಸಿದರು. ಸಹಕಾರಿಗಳು ಅಲ್ಪಸಂತುಷ್ಟರಿದ್ದು, ಅವರಿಗೆ ಒಮ್ಮೊಮ್ಮೆ ಸಹಾನುಭೂತಿಯ ಶಬ್ದಗಳಲ್ಲಿ ಸಹ ತೃಪ್ತಿಯಾಗುತ್ತದೆ. ಅನುಕೂಲ ನಿರ್ಣಯಗಳನ್ನು ಸಂಪಾದಿಸಲಿಕ್ಕಾಗದಿರುವಾಗ, ಇಂದಿಗಿದ್ದ ನಾವನ್ನು ನಾಳೆಗೆ ದೂಡುವಂತೆ, ಕಮಿಟಿಗಳನ್ನು ನೇಮಿಸಿ, ತಮಗಾದ ಅಪಮಾನವನ್ನು ಮುಚ್ಚಿಡುವ ನೇಮಸ್ತರ ಮಾಡಿಕೆಯ ಯುಕ್ತಿಯನ್ನೇ ಸರದಾರ ತೇಜಬಹಾದ್ದೂರರು ನಡಿಸಿದ್ದನ್ನು ನೋಡಿ, ಇನ್ನೇನು ಯಾರೂ ಮೋಸಹೋಗರು. ಒಟ್ಟಿಗೆ, ಇದೊಂದು ದೊಡ್ಡ ನಿರ್ಣಯದ ಮೇಲೆ ಸಹಕಾರಿಗಳ ಸಹಕಾರಿತೆಯು ಭವಿಷ್ಯವು ಅವಲಂಬಿಸಿತ್ತು. ಕೆಳ ತರಗತಿಯ ನಾಗರಿಕತ್ವವು ನಮಗೆ ಬೇಡ, ಕೆನಿಯಾದ ಹಕ್ಕುಗಳನ್ನು ಕಳಕೊಳ್ಳುವದಿದ್ದರೆ, ಅದೇ ನಮ್ಮ ಸರ್ವನಾಶವೆಂದು ತಿಳಿಯತಕ್ಕದ್ದೆಂದು ನಾಮದಾರ ಶಾಸ್ತ್ರಿಗಳೇ ತಮ್ಮ ಸಹಕಾರಿ ಮಿತ್ರರಾದ ಸರ್ ತೇಜಬಹಾದ್ದೂರರಿಗೆ ಬೆಂಗಳೂರಿನಿಂದ ಕೂಗಿಹೇಳಿರುವಾಗ, ನಾವೇನು ಹೇಳುವದದೆ ! ಅಂತು ಸಾಮ್ರಾಜ್ಯದೊಳಗಿನ ಸರಿಸಮಾನ ನಾಗರಿಕತ್ವದ ಮತ್ತು ಅದರ ಸ್ವಾಭಿಮಾನದ ಸರ್ವನಾಶವು ಕೆನಿಯಾ ನಿರ್ಣಯದಿಂದ ಆಗದ್ದು ಸಾಮ್ರಾಜ್ಯಪರಿಷತ್ತಿನಲ್ಲಿ ತಿಕ್ಕಿ, ತಿಕ್ಕಿ ಭದ್ರಪಡಿಸಿದಂತಾಯಿತು. ಶಬ್ದಾಡಂಬರವನ್ನು ತ್ಯಜಿಸಿ ಹೇಳಬೇಕಾದರೆ, ಸಾಮ್ರಾಜ್ಯಪರಿಷತ್ತಿನಲ್ಲಾದ ನಿರ್ಣಯವೆಂಬುದು ಇದೇ

ಕೆನಿಯಾದ ನಿರ್ಣಯದ ಬಗ್ಗೆ ಸಾಮ್ರಾಜ್ಯಪ್ರದರ್ಶನದ ಮೇಲೆ ಬಹಿಷ್ಕಾರವನ್ನು ಹಾಕಬೇಕು, ನೇಮಸ್ತರು ಅಧಿಕಾರಪದಗಳನ್ನು ತ್ಯಜಿಸಬೇಕು, ಡಾ| ಸಪ್ರೂರವರು ಸಹ ಸಾಮ್ರಾಜ್ಯ ಪರಿಷತ್ತಿನ ಸಭಾಸದತ್ವಕ್ಕೆ ರಾಜಿನಾಮೆಯನ್ನು ಕೊಡಬೇಕು, ಹೀಗೆಲ್ಲ ಸೂಚನೆಗಳನ್ನನುಲಕ್ಷಿಸಿ, ನೇಮಸ್ತರೊಳಗಾದ ಗೋಳಾಟ ನೋಡಿ, ನಕ್ಕು, ಮೊನ್ನೆ ಮೌ| ಮಹಮ್ಮದ ಅಲ್ಲಿಯವರು ಮುಂಬಯಿಯಲ್ಲಿ ಹೇಳಿದ್ದೇನಂದರೆ — ಒಂದೇ ಕೆನಿಯಾದಿಂದ ನಮ್ಮ ಭ್ರಮಪರಿಹಾರವಾಗದು, ಹತ್ತೆಂಟು ಕೆನಿಯಾಗಳು ಮೇಲಿಂದ ಮೇಲೆ ಸಂಭವಿಸಬೇಕೆಂದು ನನ್ನ ಇಚ್ಛೆಯಿದೆ, ಅಂದರೆ ಸಾಮ್ರಾಜ್ಯವೆಂದರೇನು? ನಾವೆಲ್ಲಿದ್ದೇವೆ? ನಿಜವಾದ ಮೋಕ್ಷವು ನಮಗೆ ಹ್ಯಾಗೆ ಪ್ರಾಪ್ತವಾಗುವದು! ಎಂಬ ಸತ್ಯ ಸಂಗತಿಗಳು ತಿಳಿಯುವವಾಗಿವೆ. ಮೌಲಾನಾರವರ ಉದ್ಗಾರಗಳ ಮತಿತಾರ್ಥವಿದು. ನಮ್ಮ ದೇಶದ ಮನೆಯೊಳಗೆ ನಮಗೆ ನಾಗರಿಕತ್ವದ ಹಕ್ಕುಗಳು ಎಷ್ಟರ ಮಟ್ಟಿಗಿದ್ದಾವೆ; ನಮ್ಮಲ್ಲಿ ನಮಗೆ ಸ್ವರಾಜ್ಯದ ಹಕ್ಕುಗಳು ಎಷ್ಟರ ಮಟ್ಟಿಗೆ ದೊರೆತಿದ್ದಾವೆ; ಅವಕ್ಕಿಂತ ಹೆಚ್ಚು ಹಕ್ಕುಗಳನ್ನು ನಾವು ವಸಾಹತುಗಳಲ್ಲಿ ಬೇಡುವದೆಂದರೆ, ವಿಸಂಗತವಷ್ಟೇ ಅಲ್ಲ, ಅದೊಂದು ಆತ್ಮವಂಚನೆಯೆಂದು ನಮ್ಮ ಸಹಕಾರಿ ಬಾಂಧವರಿಗೆ ಇನ್ನೂ ಏಕೆ ತಿಳಿಯುವದಿಲ್ಲ? ಮಾಜಿ ಸರ್ವಾಧಿಪತಿ ಲಾರ್ಡ ಹಾರ್ಡಿಂಜರೂ ಈ ಸತ್ಯ ಸಂಗತಿಯನ್ನು ಬಾಯಿಬಿಟ್ಟು ಲಾರ್ಡ ಸಭೆಯಲ್ಲಿ ಹೇಳಿದರೂ, ಮರುಳರ ಮರುಳುತನವು ಮತ್ತೂ ಹೋಗದು. ದಕ್ಷಿಣ ಆಫ್ರಿಕೆಯ ಪ್ರಧಾನರಾದ ಸ್ಮಟ್ಸರವರಿಗೆ ಅವರ ಸ್ವತಂತ್ರ ನಿರ್ಣಯಗಳ ಹೊರತು ಬೇರೆ ನಿರ್ಣಯಗಳು ಮಾನ್ಯವಿಲ್ಲ. ತಮಗೆ ಬೇಕಾದಂತೆ ತಾವು ವರ್ತಿಸುವೆವು, ಎಂಬ ಅವರ ಮೋರೆಯದ ಪ್ರಾಮಾಣಿಕತನಕ್ಕೆ ನಾವು ಮೆಚ್ಚಿದೆವು. ಈ ಎಲ್ಲ ವಸಾಹತಿನ ರಾಜಕಾರಣದ ಬೀಜವು ಇನ್ನು ಎಲ್ಲರಿಗೂ ತಿಳಿದಿರುವದು. ನಮ್ಮ ದೇಶದೊಳಗೆ ನಿಜವಾದ ಲೋಕಶಾಹಿಯ ಬಲವತ್ತರ ಸ್ವರಾಜ್ಯವು ಸ್ಥಾಪಿತವಾದರೆ, ಸ್ಮಟ್ಸ ಸಾಹೇಬರು ದಿಟ್ಟತನದಿಂದ ನುಡಿಯುವಂತೆ, ನಮ್ಮ ಸ್ವರಾಜ್ಯ ಸರಕಾರದ ಪ್ರತಿನಿಧಿಗಳಾಗಬಹುದಾದ ಇದೇ ಡಾ| ಸಪ್ರು ವಕೀಲರು ಹಿಂದುಸ್ಥಾನದ ತರ್ಫೆನಿಂದ ದಿಟ್ಟತನದಿಂದ "ಯೂಯಂ ಯೂಯಂ, ವಯಂ ವಯಂ," ನಿಮ್ಮಷ್ಟಕ್ಕೆ ನೀವು, ನಮ್ಮಷ್ಟಕ್ಕೆ ನಾವು ಎಂದು ನುಡಿದು, ಸಾಮ್ರಾಜ್ಯದ ಐಕ್ಯಭಂಗವಾಗುತ್ತದೆಂದು ಸಹ ನೋಡದೆ, ನಮ್ಮ ದೇಶದ ಸ್ವಾಭಿಮಾನವನ್ನು ಸಹಜವಾಗಿ, ಸುಲಭವಾಗಿ ಕಾಪಾಡದಿರುತ್ತಿದ್ದರೇನು? ಈ ವಸಾಹತಿಯ ರಾಜಕಾರಣವು, ಹಿಂದೀ ಸ್ವರಾಜ್ಯಕ್ಕೆ ಈಗಿನ ಅಪಮಾನಾಸ್ಪದ ನಿರ್ಣಯಗಳಿಂದ ಅಪಕಾರವಾಗಿದೆ, ಉಪಕಾರವಾಗಿಲ್ಲ ಎಂದು ತಿಳಿಯುವದು ಮೂಢತನವು. ವಸಾಹತಿಯೊಳಗಿನ ಮಹಾತ್ಮಾ ಗಾಂಧಿಯವರ ಚಳವಳಿಯಿಂದಲೇ ಸತ್ಯಾಗ್ರಹದಂಥ ಅಮೋಘ ಅಸ್ತ್ರವು ಜನ್ಮವನ್ನೆತ್ತಿದಲ್ಲವೇ? ಮಹಾತ್ಮರ ಅಸಹಕಾರಿತೆಯೂ, ಸತ್ಯಾಗ್ರಹವೂ ದಕ್ಷಿಣ ಆಫ್ರಿಕೆಯಿಂದ ಪ್ರಯಾಣ ಮಾಡಿ, ಈಗ ಹಿಂದುಸ್ಥಾನದಲ್ಲೆಲ್ಲ ಹಬ್ಬುತ್ತಿರುವದಲ್ಲವೇ! ಅನತ್ಯಾಚಾರಿ-ಅಸಹಕಾರಿತೆಯಿಂದ ನಾವು ಹಿಂದೀ ಸ್ವರಾಜ್ಯವನ್ನು ಸಂಪಾದಿಸಿದರೆ, ವಸಾಹತುಗಳೊಳಗಿನ ಅಪಮಾನಾಸ್ಪದ ನಿರ್ಣಯಗಳು, ಇತರ ಎಲ್ಲ ಅನ್ಯಾ

ಯುಗಳು ಅಲ್ಲಿಂದಲ್ಲೇ ಕರಗಿಹೋಗುವವು. ಅವುಗಳಿಗೆ ಬೇರೆ ಸಣ್ಣ ದೊಡ್ಡ ಬಹಿಷ್ಕಾರಗಳ ಪ್ರಯೋಗವು ಸಾಲದು. ಇಷ್ಟೊಂದು ಬೋಧವನ್ನು, ಶಾಸ್ತ್ರಗಳು ಹೇಳುವ 'ಸರ್ವನಾಶ'ದಿಂದ ಪಡೆದರೆ, ಡಾ। ಸಪ್ರುಗಳೂ ಗೆಲ್ಲುವರು; ಅವರೊಂದಿಗೆ ನಮ್ಮ ಸಾಮ್ರಾಜ್ಯವೂ ಗೆಲ್ಲುವದು. ಇಷ್ಟಕ್ಕಾಗಿ ಶ್ರೀ ಮೌಲಾನಾರವರು ಹೇಳುವ ೮-೧೦ ಕೆನಿಯಾಗಳ ಅವಶ್ಯಕತೆ ಇದೆಯೋ? ಸಹಕಾರಿಗಳೇ ಉತ್ತರ ಕೊಡಲಿ.

ಸ್ಫುಟ ಸೂಚನೆಗಳು.

೧. 'ಹಿಡುವದು ಕಾಗೆಬಂಡ, ತಿನ್ನುವದು ಮಣಿ ಕೆಂಡ' ಎಂಬದೊಂದು ನಾಣ್ಣುಡಿಯು. ಈ ಗಾದೆ ಮಾತಿನ ಪ್ರತ್ಯಯವು ಪಂಜಾಬದಲ್ಲಿ ಪ್ರತ್ಯಕ್ಷ ಅನುಭವಕ್ಕೆ ಬರಹತ್ತಿದೆ. ಸರ್ವಾಧಿಪತಿ ರೀಡಿಂಗ ದೊರೆಗಳು ಲಾಹೋರಿನ ಹೈಕೋರ್ಟಿಗೆ ಸಸ್ಯಕ್ಕೆ ಭೆಟ್ಟಿಯನ್ನಿತ್ತರು. ನ್ಯಾಯಮೂರ್ತಿಗಳನ್ನು ಸ್ವಾಗತೀಕರಿಸುವಾಗ, ಪಂಜಾಬದ ನ್ಯಾಯದೇವತೆಯ ಮುಖ್ಯ ಅರ್ಚಕರಾದ ಸರ್ ಶಾದಿಲಾಲರವರು ಒಂದು ಉಚ್ಚ ವಿಚಾರವನ್ನು ಸರ್ವಾಧಿಪತಿಗಳಿಗೆ ಪ್ರದರ್ಶಿಸಿದರು. 'ನಮ್ಮಲ್ಲಿಯ ನ್ಯಾಯಮಂದಿರಗಳು ಬಹಳೇ ಸಂಕುಚಿತವಿವೆ ಇದ್ದರಿಂದ, ಅವುಗಳಲ್ಲಿ ನಡೆಯುವ ನ್ಯಾಯವಿಚಾರಣೆಯು ಸಾಕಷ್ಟು ಜಾಹೀರ ರೀತಿಯಿಂದ ನಡೆಯುವದಿಲ್ಲ. ಜಾಹೀರ ಪ್ರಕಟಣೆಯು ನ್ಯಾಯದ ಆತ್ಮವೆಂದು ಪ್ರಸಿದ್ಧ ಬೆಂಥೆಮುದವರೇ ಉದ್ಗರಿಸಿರುವರು. ಸಂಕುಚಿತ ಮಂದಿರಗಳಿದ್ದರೂ, ನಾವು ಪ್ರಜೆಗಳಿಗೆ ಸುನಾವಣಿಯನ್ನು ಕೇಳಿಕೊಳ್ಳಲು ಶಕ್ತಿಮೀರಿ ಅವಕಾಶ ಕೊಟ್ಟೆವು. ಯಾಕಂದರೆ, ಸಾರ್ವಜನಿಕ ಸುರಕ್ಷಿತತೆಯ ಪೋಷಕವಾಗಿರುವ ಈ ಹಕ್ಕು ವಿಖ್ಯಾತ ಹೆಲಿಸ್ವಾರರವರೂ ಪಾರ್ಲಿಮೆಂಟಿನ ಹಕ್ಕುಗಳಿಗಿಂತ ಶ್ರೇಷ್ಠವೆಂದು ಎಣಿಸಿರುವರಲ್ಲವೇ! ಸರ್ ಶಾದಿಲಾಲರವರು ಸಾರ್ವಜನಿಕ ಸುರಕ್ಷಿತತೆಗಾಗಿ, ನ್ಯಾಯದಾನಕ್ಕಾಗಿ ಕೋರ್ಟುಗಳೊಳಗಿನ ಸುನಾವಣಿಯನ್ನೆಲ್ಲ ಜಾಹೀರ ರೀತಿಯಿಂದ ನಡೆಯುವದು ಅತಿ ಅವಶ್ಯವೆಂತಲೂ, ಅದಕ್ಕಾಗಿ ತಮ್ಮಲ್ಲಿಯ ನ್ಯಾಯಮಂದಿರಗಳನ್ನು ವಿಸ್ತರಿಸಬೇಕೆಂತಲೂ ಬ್ರಿಟಿಶ ನ್ಯಾಯದೇವತೆಯ ಪುನಸ್ಸ್ಥಾಪನಕ್ಕಾಗಿ ಭರತಖಂಡಕ್ಕೆ ಮುದ್ದಾಂ ಬಿಜಯಂಗೈದ ರೀಡಿಂಗ ದೊರೆಗಳಿಗೆ ಅರುಹುವದು ಸ್ವಾಭಾವಿಕವು. ಇದೆಲ್ಲ ಸರ್ ಶಾದಿಲಾಲರವರ ಕಾಗೇ ಬಂಡದ ಪಾರಾಯಣವು.

೨. ಆದರೆ, ಇದೇ ಸಮಯದಲ್ಲಿ ಪಂಜಾಬದಲ್ಲಿ ಏನು ನಡೆದಿದೆ? ನಾಭಾದ ಮಹಾರಾಜರನ್ನು ಪುನಃ ರಾಜ್ಯಾರೂಢ ಮಾಡುವರೆ ಅಕಾಲಿಗಳು ಸ್ವಾರ್ಥತ್ಯಾಗಪೂರ್ವಕ ಚಳವಳಿಯನ್ನು ನಡಿಸುತ್ತಿರುವರು. ಅವರಿಗೆ ಪಂಜಾಬ ಸರಕಾರವು ಪಟವಶಾಹಿ ಕಾನೂನುಗಳಿಂದ ಸೆರೆ ಹಿಡಿದು, ನ್ಯಾಯ ಸುನಾವಣಿಯ ಕೆಲಸಗಳನ್ನು ಎಲ್ಲಿ ನಡಿಸುತ್ತದೆ? ಕೇಳಿರುವಿರೇನು? ಸಂಕುಚಿತ ನ್ಯಾಯಮಂದಿರಗಳಲ್ಲಿ ಅಲ್ಲ; ಹಾಗಾದರೆ, ಯಾವ ವಿಸ್ತಾರ ಕ್ಷೇತ್ರದಲ್ಲಿ? ಪ್ರಜೆಗಳ ಪ್ರವೇಶವಿಲ್ಲದ ವಿಶೇಷ ಸಂಕುಚಿತವಾಗಿರುವ ಕೈದುಖಾನೆಗಳಲ್ಲಿ ದೇಶಸೇವಕರಾದ ಅಕಾಲಿ ಬಾಂಧವರ ನ್ಯಾಯವಿಚಾರಣೆಯು ನಡೆದಿದೆ. ಈ ಬಗ್ಗೆ ಪಂಜಾಬಿನ ನ್ಯಾಯಮೂರ್ತಿಗಳಾಗಲಿ, ಮಹಾ ಬ್ರಿಟಿಶ ನ್ಯಾಯಮೂರ್ತಿಗಳಾಗಲಿ, ಏನೊಂದೂ ಉಪಾಯ ಯೋಚಿಸುವದಿಲ್ಲ. ಬೆಂಥೆಮರು ಉದ್ಗರಿಸಿದಂತೆ, ಸರ್ ಶಾದಿಲಾಲರು ನುಡಿದಂತೆ, ಜಾಹೀರ ಪ್ರಕಟಣೆಯು ನ್ಯಾಯದೇವತೆಯ ಆತ್ಮವಿದ್ದರೆ, ಅಕಾಲಿಗಳಿಗೆ ಕೈದುಖಾನೆಗಳಲ್ಲಿ ಸಿಗುವ ನ್ಯಾಯವು ಆತ್ಮವಿಹೀನವೆಂದು ಸರ್ ಶಾದಿಲಾಲರವರ ವಚನದಿಂದಲೇ ಸಿದ್ಧವಾಗುತ್ತದೆ. ಇದು ಇರಲಿ, ಪಂಜಾಬ ಪ್ರಾಂತದ ಮಹಾ ಅಧಿಪತಿಗಳಾದ ಸರ್ ಮ್ಯಾಕಲ ಒಡ್ವಾಯರರು ಸರ್ ಶಂಕರನ್ ನಾಯರರ ಮೇಲೆ ಹಿಂದೆ ಅಬ್ರುನುಕಸಾನಿಯ ದಾವೆಯನ್ನು ವಿಲಾಯಿತಿಯಲ್ಲಿ ದಾಖಲ ಮಾಡಿರುವರು. ಈ ಪ್ರಕರಣದಲ್ಲಿ ಎರಡೂ ಬದಿಗಳಿಂದ ಹಿಂದುಸ್ಥಾನದೊಳಗಿನ ಪುರಾವೆ ಸಂಗ್ರಹಿಸುವ ಕೆಲಸವು ಪಂಜಾಬ ಹೈಕೋರ್ಟಿಗೆ ವಹಿಸಲ್ಪಟ್ಟಿದೆ. ಪುರಾವೆ ಸಂಗ್ರಹವು ನ್ಯಾಯ ನೀತಿಗಳಂತೆ ಜಾಹೀರ ರೀತಿಯಿಂದ ನಡೆಯಬೇಕೆಂದು ಯಾರೂ ಹೇಳುವರು. ಜಾಹೀರ ಪ್ರಕಟಣೆಯು ನ್ಯಾಯದ ಆತ್ಮವೆಂದು ತಿಳಿಯುವ, ಜಾಹೀರು ಪ್ರಕಟಣೆಯ ಹಕ್ಕು ಪಾರ್ಲಿಮೆಂಟ ಹಕ್ಕಿಗಿಂತ ಶ್ರೇಷ್ಠವೆಂದು ತಿಳಿಯುವ ಸರ್ ಶಾದಿಲಾಲ ಮೂರ್ತಿಗಳ ನೇತೃತ್ವದಲ್ಲಿ ಈ ಪುರಾವೆ ಸಂಗ್ರಹವು ಜಾಹೀರ ರೀತಿಯಿಂದ ನಡೆಯದಿರದೆಂದು ಎಲ್ಲರೂ ತಿಳಿಯುವರು. ಆದರೆ, ಈ ಪ್ರಕರಣದಲ್ಲಿ ಕಳೆದ ತಾ. ೩೦ ನೇ ಮಂಗಳವಾರಕ್ಕೆ ನ್ಯಾಯಮೂರ್ತಿಗಳು ಈ ಪುರಾವೆಯ ಸಂಗ್ರಹವೆಲ್ಲ ಪರದೆಯೊಳಗೆ, ಅಂದರೆ, ಪಕ್ಷಗಾರರು, ಅವರ ಪ್ರತಿನಿಧಿಗಳು, ವಕೀಲರು ಇಷ್ಟು ಮಂದಿಗಳ ಮುಂದೆ ಮಾತ್ರ ನಡಿಸಬೇಕೆಂದು ಕಟ್ಟಪ್ಪಣೆಯನ್ನಿತ್ತಿರುವರು. ಈ ಹುಕುಮನ್ನು ಕೇಳಿ, ಪಂಜಾಬಿನೊಳಗಿನ ಬ್ರಿಟಿಶ ನ್ಯಾಯದೇವತೆಯ ಉಪಾಸಕರಿಗೆಲ್ಲ ಬಲು ಅಸಮಾಧಾನವಾಗಿದೆ. ಸುನಾವಣಿಯು ಪರದೆಯೊಳಗೇ ನಡೆಯಬೇಕೆಂದು ಇತ್ತಂಡದವರೂ ನ್ಯಾಯಮೂರ್ತಿಗಳ ಹತ್ತರ ಬೇಡಿಕೊಂಡಿದ್ದಿಲ್ಲೆಂದು ತಿಳಿಯುತ್ತದೆ. ಹೀಗಿದ್ದು, ನ್ಯಾಯಮೂರ್ತಿಗಳ ಸ್ವಯಂಸ್ಫೂರ್ತಿಯಿಂದ ಇಂಥ ಹುಕುಮನ್ನು ಹೀಗೆ ಮಾಡಿದರೆಂದು ನಮಗೆ ತಿಳಿಯದು. ಜಾಹೀರ ಪ್ರಕಟಣೆಯು ನ್ಯಾಯದೇವತೆಯ ಆತ್ಮವಿದ್ದಾಗ, ನ್ಯಾಯಮೂರ್ತಿಗಳು ತಾವಾಗಿ ಪ್ರತಿಬಂಧಿಸಿ, ನ್ಯಾಯದೇವಿಯ ಆತ್ಮವನ್ನೇ ಅಪಹರಿಸಿ, ಬುದ್ಧ್ಯಾ ಕೊಲೆ ಮಾಡಿದರೆಂದು ಪ್ರಜೆಗಳು ಉದ್ಗರಿಸಿದರೆ, ಅದಕ್ಕೆ ನಾವೇನು ಉತ್ತರ ಕೊಡುವದು? ನ್ಯಾಯಮೂರ್ತಿಗಳು ಏನು ಉತ್ತರ ಕೊಡಬಲ್ಲರು? ಕಾಗೇ ಬಂಡ ಹಿಡಿ, ಮಣಿ ಕೆಂಡ ತಿನ್ನುವದೆಂಬುದು ಹೀಗೇ ಅಲ್ಲವೇ?

೩. ಸಾಮ್ರಾಜ್ಯ ಪರಿಷತ್ತಿನ ಪೂರ್ಣಾಹುತಿಯು ಕಳೆದ ತಾ. ೩೧ನೇ ಬುಧವಾರಕ್ಕೆ ಲಂಡನಿನಲ್ಲಾಯಿತು. ಸೋಮವಾರ ತಾ. ೨೯ನೇಯಿಂದ ಹಿಂದೀಯರ ಪರಿಸ್ಥಿತಿಯ ಬಗ್ಗೆ ಸಾಮ್ರಾಜ್ಯ ಪರಿಷತ್ತು ಕೈಕೊಳ್ಳಬೇಕಾದ ಆಲೋಚನೆಯು ಸ್ವರೂಪವು ನಿರ್ಣಯವಾಯಿತು. ಡಾ। ತೇಜಬಹಾದ್ದೂರರವರು ಬಲು ಯತ್ನದಿಂದ ಕೆನಿಯಾ ಪ್ರಶ್ನೆಯನ್ನು ಕಮೀಟಿಯ ಚೌಕಶಿಯಲ್ಲಿ ಸೇರಿಸಬೇಕೆಂದು ಆಗ್ರಹ ಮಾಡಿದರು. ಆದರಂತೆ ಅದನ್ನು ಚೌಕಶಿಯಲ್ಲಿ ಸೇರಿಸಿದರು. ಇದರಿಂದ ತೇಜಬಹಾದ್ದೂರರವರಿಗೆ ಸಮಾಧಾನವಾಯಿತು. ಅಧ್ಯಕ್ಷರಾದ ಡ್ಯೂಕ ಆಫ್ ಡಿವ್ಹೋನ್‌ಶಾಯರರವರು ಭಾಷಣ ಮಾಡಿ, ಕೆನಿಯಾ ನಿರ್ಣಯವನ್ನು ಕೂಡಲೆ ತಿದ್ದುಪಡಿಸುವ ಸಂಭವವು ತಮಗೆ ತೋರದಿದ್ದರೂ, ಆ ಬಗ್ಗೆ ಆಲೋಚನೆ ನಡೆಯಲು ಹಿಂದುಸ್ಥಾನದಿಂದ ಮುಂದೆ ಬರುವ ಕಮಿಟಿಗೆ ತಾವು ಕಿವಿಗೊಡುವೆವೆಂದೂ ಆಶ್ವಾಸನವನ್ನಿತ್ತರು. ಸಪ್ರು ಮಹಾಶಯರೂ ಕೊನೆಯ ಭಾಷಣವನ್ನು ಮಾಡಿದರು. ಬ್ರಿಟಿಶ ಪ್ರಧಾನ ಮಂಡಳದ ಈಗಿನ ಕೆನಿಯಾ ನಿರ್ಣಯವು ಕೊನೆಯ ತೀರ್ಪೆಂದು ಹಿಂದುಸ್ಥಾನವು ಎಣಿಸುವದಿಲ್ಲೆಂತಲೂ, ಕಮಿಟಿಯ ಆರ್ಜಿಗಳಿಂದ ಹಾಗು ಮಾತುಕತೆಗಳಿಂದ ಕೆನಿಯಾ ನಿರ್ಣಯವನ್ನು ತಿದ್ದುಪಡಿ ಮಾಡಿಕೊಳ್ಳುವ ಒಂದು ಸಾಧನವು ತಮಗೆ ಪ್ರಾಪ್ತವಾಗಿದೆಯೆಂತಲೂ, ಆದರಿಂದ ಕೆನಿಯಾ ಪ್ರಶ್ನೆಯು ಸಮಾಧಾನಕರ ರೀತಿಯಿಂದ ನಿರ್ಣಯವಾಗುವದೆಂತಲೂ ಆಶಾಪ್ರದರ್ಶನ ಮಾಡಿದರು. 'ಈ ಆಲೋಚನಾತ್ಮಕ ಠರಾವಿನ ಅರ್ಥವು ಇದಲ್ಲದಿದ್ದರೆ, ನಾನೆಂದೂ ಇದಕ್ಕೆ ಸಮ್ಮತಿಸುತ್ತಿದ್ದಿಲ್ಲ' ಎಂದು ಸರ್ ತೇಜಬಹಾದ್ದೂರರವರು ಬಹಿಷ್ಕಾರ ಮಾಡಿ ಹೇಳಿದರು. ಡ್ಯೂಕ ಆಫ್ ಡಿವ್ಹೋನ್‌ಶಾಯರರವರು ಆಲೋಚನಾತ್ಮಕ ಠರಾವಿನಲ್ಲಿ ಕೆನಿಯಾ ಪ್ರಶ್ನೆಯನ್ನು ಸೇರಿಸಿದರೂ, ಅದನ್ನು ತಿದ್ದುಪಡಿ ಮಾಡುವ ಸಂಭವವಿಲ್ಲೆಂದು ಸ್ಪಷ್ಟವಾಗಿ ಹೇಳಿರುವಾಗ ತಿದ್ದುಪಡಿಯಾಗುವದೆಂದು ಮನಸ್ಸಿನ ಸಮಾಧಾನ ಮಾಡಿಕೊಳ್ಳುವ ಸಪ್ರು ಮಹಾಶಯರ ನೇಮಸ್ತತನವನ್ನು ಎಷ್ಟು ಬಣ್ಣಿಸಿದರೂ ತೀರದು. ಒಟ್ಟಿಗೆ, ಕೆನಿಯಾ ಪ್ರಶ್ನೆಯನ್ನು ತಿದ್ದುಪಡಿ ಮಾಡಿಕೊಳ್ಳುವರೆ ಬೆಂಚುಪ್ರವೇಶವೊಂದು(?) ತಾವು ಮಾಡಿದೆವು, ಎಂಬ ನೇಮಸ್ತರ ಆಶಾವಾದಿತನವು ನಿಜವಾಗಿ ಪ್ರಶಂಸನೀಯವು; ಹಿಂದುಸ್ಥಾನದ ಅಭಿವೃದ್ಧಿಯ ದೃಷ್ಟಿಯಿಂದ ವಿಚಾರಿಸಿದರೆ, ಶೋಚನೀಯವು. ಡಾ। ತೇಜಬಹಾದ್ದೂರ ಸಪ್ರು ಮಹಾಶಯರು ಸಾಮ್ರಾಜ್ಯ ಪರಿಷತ್ತನ್ನು ಸೇರಿಕೊಂಡು, ಕೆನಿಯಾ ಪ್ರಶ್ನೆಯ ಮೇಲೆ ಹಚ್ಚಿದ ಧ್ವಜವು ಇದೇ. ಈ ಬಗ್ಗೆ ವಾದ ನಡೆದಾಗ, ದಕ್ಷಿಣ ಆಫ್ರಿಕಾ ಸಂಸ್ಥಾನದ ಪ್ರತಿನಿಧಿಗಳಾದ ಜನರಲ್ ಸ್ಮಟ್ಸರವರು ಒಂದು ಚಕಾರ ಶಬ್ದ ಸಹ ತೆಗೆಯಲಿಲ್ಲ. ಅಂದಮೇಲೆ, ಈ ಆಲೋಚನಾತ್ಮಕ ಠರಾವಿನಿಂದ ನಮಗೇನೂ ದೊರೆಯದೆಂದು 'ಮುಂಬಯಿ ಕ್ರಾನಿಕಲ'ದ ಸಂಪಾದಕರಾಗಿ, ಹದ್ದುಪಾರಿಯಲ್ಲಿದ್ದ ಮಿ। ಹೊರ್ನಿಮನ್‌ರವರು ವಿಲಾಯತಿಯೊಳಗಿಂದ ತಿಳಿಸಿರುವರು. ಇದು ಯಥಾರ್ಥವಲ್ಲವೇ?

೪. ಬಿಟ್ಟಿ ಪದ್ಧತಿಯಿಂದ ಹಿಡಿಯುವ ತೊಂದರೆಗಳು ಸರಕಾರದ ಲಕ್ಷಕ್ಕೆ ಬರಹತ್ತಿವೆಯೆಂಬಂತೆ ತೋರುತ್ತದೆ. ಕಳೆದ ತಾ. ೨೪ ನೇ ಅಕ್ಟೋಬರಕ್ಕೆ ಜಿಲ್ಲಾಧಿಕಾರಿಯಾದ ಮಿ। ಹೇಗರವರು ಹೊರಡಿಸಿದ ಜಾಹೀರನಾಮೆಯೊಳಗಿನ ಸಾಲದ ಶರ್ತುಗಳನ್ನು ಇನ್ನೊಂದೆಡೆಯಲ್ಲಿ ಕೊಟ್ಟಿರುವೆವು. ಅವುಗಳ ಮೇಲಿಂದ ಅಧಿಕಾರಿಗಳು ತಮ್ಮ ಸರಕಾರಿ ಕೆಲಸದ ಬಗ್ಗೆ ಗಾಡಿ-ಎತ್ತುಗಳನ್ನು ಕೊಂಡುಕೊಳ್ಳಲು ೨೦೦ ರೂಪಾಯಿಗಳ ವರೆಗೆ ಬಿನ್ ಬಡ್ಡಿಯಿಂದ ಸಾಲವನ್ನು ಕೊಡುವ ಏರ್ಪಾಟು ಮಾಡಲಿರುವರು.

ಸಾಲಗಾರ ಗಾಡಿಕಾರರು ಈ ಹಣವನ್ನು ೪ ವರುಷಗಳಲ್ಲಿ ಕಂತುಪಿಂದಿಯಿಂದ ಸರಕಾರಕ್ಕೆ ಸಲ್ಲಿಸಬೇಕು. ೪ ವರುಷಗಳ ವರೆಗೆ ಸರಕಾರಿ ಅಮಲದಾರರು ಗಾಡಿ ತರಹೇಳಿದಾಗ, ಗಾಡಿಕಾರರು ತಮ್ಮ ಗಾಡಿಗಳನ್ನು ಹಾಜರಿಡಬೇಕು. ಗೊತ್ತುಮಾಡಿದ ಬಾಡಿಗೆಯನ್ನು ಕೊಡಬೇಕು ಎಂದು ಜಾಹೀರಾಗಿದೆ. ಬಾಡಿಗೆಯು ದರವೇನು? ವರುಷಕ್ಕೆ ಎಷ್ಟು ದಿವಸಗಳ ವರೆಗೆ ಸರಕಾರಿ ಬಿಟ್ಟಿಯನ್ನು ಗಾಡಿಕಾರರ ಸಾಗಿಸಬೇಕ, ಎಂಬವರ ನಿರ್ದೇಶವಿಲ್ಲದ್ದರಿಂದ ಈ ಪದ್ಧತಿಯಿಂದ ಸಾಲಗಾರ ಗಾಡಿಕಾರರಿಗೆ ಎಷ್ಟರ ಮಟ್ಟಿಗೆ ಸುಖವಾದೀತೆಂಬುದನ್ನು ನಾವೇನು ಹೇಳಲಾರೆವು. ಗಾಡಿಕಾರರೂ ತಿಳಿಯಲೊಲ್ಲರು. ದುರ್ದೈವದಿಂದ ಎತ್ತುಗಳ ಘಾತವಾದರೆ, ಗಾಡಿಕಾರರ ಹೊಸ ಎತ್ತುಗಳನ್ನು ಕೊಂಡು, ಸರಕಾರಿ ಬಿಟ್ಟಿಯನ್ನು ಸಾಗಿಸಬೇಕೋ, ಹ್ಯಾಗೆ? ಎಂಬುದೂ ಗೂಢವೇ. ಕಂತುಗಳನ್ನೂ ತುಂಬಬೇಕೊ ಹೇಗೆ? ಎಂಬುದೂ ತಿಳಿಯಲಿಲ್ಲ. ಇದಲ್ಲದೆ ಈ ಯೋಜನೆಯೊಳಗಿನ ದೋಷಗಳು ಈ ರೀತಿಯು ನೋಡಿ ಮತ್ತೊಂದೂ ದೊಡ್ಡ ಆಕ್ಷೇಪವಿದೆ, ಅದೇನಂದರೆ, ಗಾಡಿಕಾರರಿಗೆ ಸರಕಾರಿ ಬಿಟ್ಟಿಯ ಸಲ್ಲಿಸುವದಿಸಿದಷ್ಟು ಬಾಡಿಗೆಯು ದೊರಕುವದೇ ದುಸ್ತರವೆಂದು ಬಿಟ್ಟಿಗೆ ಹೋದ ಅನೇಕ ಗಾಡಿಕಾರರ ದೂರಿದೆ. ಈ ಬಗ್ಗೆ ಈ ಹೊಸ ಯೋಜನೆಯಲ್ಲಿ ವ್ಯವಸ್ಥೆಯೇನಿಲ್ಲ. ಇದಲ್ಲದೆ, ಬಿಟ್ಟಿಗಾಗಿ ಗಾಡಿ ಹೋದಾಗ, ಅವು ಸರಕಾರಿ ಕೆಲಸಕ್ಕಾಗಿ ೮-೧೦ ದಿವಸಗಳ ವರೆಗೆ ಉದ್ಯೋಗ ಬಿಟ್ಟು ಕಾದ ಕೊಂಡು ಕೂತುಕೊಳ್ಳಬೇಕಾಗುತ್ತದೆ. ಈ ಉಪದ್ರವವೇನು ಕಡಿಮೆಯಾಗದ ಊರೊಳಗಿನ ಗಾಡಿಕಾರರ ಮೇಲಿನ ಉಪದ್ರವಗಳ ಬಯಲಾಗಿ, ಈ ಪದ್ಧತಿಯಿಂದ ಅವು ಸಾಲಗಾರ ಗಾಡಿಕಾರರ ಪೀಡೆಗಳು ಇಷ್ಟೇ ಈ ಹೊಸ ಯೋಜನೆಯ ಫಲವಿಷ್ಟು.

ಖಾದಿ ಧರಿಸುವವರಿಗೆ ಸೂಚನೆ.

ಖಾದೀ ಅರಿವೆಗಳನ್ನು ಅಗಸರು ಸೋಡಾ ಹಾಕಿ ಒಗೆಯುವದರಿಂದ, ವಿಚಿತ್ರ ರೀತಿಯಿಂದ (miraculously) ತೀವ್ರವೇ ಜರ್ಜರಿತವಾಗುತ್ತವೆಂದು ರಸಾಯನಶಾಸ್ತ್ರಜ್ಞ ಡಾ। ಪ್ರಫುಲ್ಲಚಂದ್ರ ರೊಯರು ಅಭಿಪ್ರಾಯಪಟ್ಟಿರುವರು. ಅದ್ದರಿಂದ ಡಾ। ರೊಯರು ತಮ್ಮ ಉಡಿಗೆ-ತೊಡಿಗೆಗಳನ್ನು ಸ್ವತಃ ಒಗೆಯುತ್ತಿರುವರಂತೆ! ಖಾದೀ ಧರಿಸುವವರು ಇವನ್ನೆಲ್ಲ ಚನ್ನಾಗಿ ನೆನಪಿಸಲ್ಲಿಟ್ಟು, ಸದೈವ ವರ್ತಿಸಲಿ.

ಸ್ಥಾನಿಕ ವೃತ್ತಾಂತ.

ಕುಮಟಾ— ಈಗ ಮುಂಜಾವಿಗೆ ಚಳಿ. ಪೈರು ಕಟಾವು ಇತ್ತ ಮುಗಿಯಿತು.

ಪ್ರಾಥಮಿಕ ಶಿಕ್ಷಕರ ಚತುರ್ಥ ಸಮ್ಮೇಲನವು ಇಲ್ಲಿಯ ಧೆಂಪೆ ಸಭಾಮಂದಿರದಲ್ಲಿ ರವಿವಾರ ತಾ ೧೧/ನೇಗೆ ನಡೆಯುವದು. ಗಿಬ್ ಹೈಸ್ಕೂಲಿನ ಸುಪರಿಂಟೆಂಡೆಂಟರಾದ ರಾ। ನಾರಾಯಣ ಸುಬ್ರಾವ ಕಾಮತರವರು ಸಮ್ಮೇಲನದ ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡಿರುವರು.

ಕಳೆದ ಗುರುವಾರಕ್ಕೆ ಇಲೆಕ್ಶನ ಮುಗಿಯಿತು. ಶಹರಿನಲ್ಲಿ ಸಾಧಾರಣ ೨೦೦ ಮತಗಳು ಬಿದ್ದವು. ಅವುಗಳಲ್ಲಿ ಶೇಕಡಾ ೫೦ ರಾ। ಕಲ್ಯಾಣಪುರಕರರಿಗೆ, ಶೇಕಡಾ ೪೦ ರಾ। ಕೇಶವೈನರವರಿಗೆ, ಉಳಿದವು ಶ್ರೀ ಕರ್ಕಿಯವರಿಗೆ, ಹೀಗೆ ಮತವಿಭಾಗಣಿಯಾಗಿರಬೇಕೆಂದು ಅಂದಾಜು. ಹಳ್ಳಿಗಳೊಳಗಿನ ಸುದ್ದಿಗಳ ಮೇಲಿಂದ ಶೇಕಡಾ ೮೦ ಕ್ಕಿಂತ್ಹೆಚ್ಚು ಮತಗಳು ಶ್ರೀ ಕರ್ಕಿಯವರಿಗೆ ಬಿದ್ದಿರಬೇಕೆಂದು ತಿಳಿಯುತ್ತದೆ.

ಕಳೆದ ಸೋಮವಾರಕ್ಕೆ ವಿಶ್ವವಿದ್ಯಾಲಯದ ಮತದಾರ ಮಂಡಳದ ಚುನಾವಣೆಯು ಇಲ್ಲಿಯ ತಾಲೂಕಾ ಕಚೇರಿಯಲ್ಲಿ ನಡೆಯಿತು. ಹೊನ್ನಾವರದ ಗ್ರ್ಯಾಜ್ಯುಏಟರೂ ಇಲ್ಲಿಯೇ ಬಂದು, ಮತ ಕೊಡಬೇಕಾದ್ದರಿಂದ ಅಂದಿಗೆ ಅಲ್ಲಿಂದಲೂ ಗ್ರ್ಯಾಜ್ಯುಏಟರು ಬಂದಿದ್ದರು. ಇಲ್ಲಿ ಬಹುಮತವು ಸ್ವರಾಜ್ಯ ಪಕ್ಷದ ಬೆರಿಸ್ಟರ ಮುಕುಂದರಾವ ಜಯಕರರಿಗೇ ಸಿಕ್ಕಿರಬೇಕೆಂದು ತರ್ಕ.

ಶ್ರೀ ದತ್ತಾತ್ರಯ ವೆಂಕಟೇಶ ಬೆಳವಿಯವರು ದಕ್ಷಿಣ ಭಾಗದ ತರ್ಫೆನಿಂದ ವರಿಷ್ಠ ಕಾಯದೆ ಕೌನ್ಸಿಲಿಗೆ ಉಮೇದವಾರರಾಗಿ ನಿಂತಿರುವರು. ಅವರ ಬಗ್ಗೆ ಮತ ಕೂಡಿಸಲು ಅಂಕೋಲೆಯ ಶ್ರೀ ವಿಶ್ವನಾಥ ಪ್ರಭುಗಳವರು ಕಳೆದ ರವಿವಾರಕ್ಕೆ ಇಲ್ಲಿ ಬಂದು ಹೊನ್ನಾವರಕ್ಕೆ ತೆರಳಿದರು.

ಸಾಭಾರ ಸ್ವೀಕಾರ.

ಗೌಡ ಸಾರಸ್ವತ ಬ್ರಾಹ್ಮಣ ಸ್ಕೊಲರಶಿಪ ಲೀಗ, ೧೦ನೇ ವರ್ಷದ ವರದಿ:— ಪ್ರಕಾಶಕ— ರಾ। ಕೃಷ್ಣ ಪದ್ಮನಾಭ ಪ್ರಭು, ರಾ। ರಾಮಚಂದ್ರ ಶ್ರೀಧರ ಗೊಳಿ, ಕಾರ್ಯದರ್ಶಿಗಳು, ವೆಣಶಿವಾಲ ಹೌಸ ನಂ. ೨, ಗಿರಗಾವ, ಮುಂಬಯಿ.

ಆರೋಗ್ಯಚಂದ್ರಿಕೆ:— ಅಕ್ಟೋಬರ ಸಂಚಿಕೆ. ಸಂಪಾದಕ— ಡಾ। ಯು. ರಾಮರಾವ, ಎಮ್. ಎಲ್. ಸಿ., ೩೨೨, ತಂಬುಶೆಟ್ಟಿ ಬೀದಿ, ಮದರಾಸು. ವಾರ್ಷಿಕ ಚಂದಾ ರೂ. ೧ ೮-೦.

ಸೊಂಕೇರಿ— ಇಲ್ಲಿಯ ವಾಚನ ಮಂದಿರಕ್ಕೆ ಬೀಳಗಿಯ ಶ್ರೀ ಅನಂತ ರಾಮಚಂದ್ರಜ್ಯೋತಿಷಿ ಅವರು ತಮ್ಮ 'ಭಾರತೀ ಭವನ' ದೊಳಗಿಂದ ಸದ್ಯಕ್ಕೆ ದುರ್ಲಭವಾದ ಉತ್ಕೃಷ್ಟವಾದ ೫೦ ಗ್ರಂಥಗಳನ್ನು ಉದಾರ ಅಂತಃಕರಣದಿಂದ ಜನತೆಯ ಜ್ಞಾನಪ್ರಸಾರಾರ್ಥವಾಗಿ ಉಚಿತ ಕೊಟ್ಟಿರುವರು. ಇತರೇ ಸದ್ಗೃಹಸ್ಥರೂ ಶ್ರೀ ಜ್ಯೋತಿಷಿಯವರ ಈ ಅಭಿನಂದನೀಯ ಕೃತ್ಯದ ಅನುಕರಣ ಮಾಡಿದಲ್ಲಿ ಈ ಲೋಕೋಪಯೋಗಿ ಸಂಸ್ಥೆಯು ಚಿರಕಾಲದಲ್ಲಿಯೇ ಬಲು ಭರಭರಾಟಿಗೆ ಬರಬಹುದು.

ಇಲ್ಲಿಯ ಹೆಣ್ಣು ಹುಡುಗಿಯರಿಗೇ, ನೆರೆಯ ಕಾರವಾರದಲ್ಲಿ ಶಿಕ್ಷಣ ಸಿಗುತ್ತಿದ್ದರೂ, ಇಲ್ಲಿಯ ಕನ್ನಡ ಶಾಲೆಯಲ್ಲಿ ಸಹ ಶಿಕ್ಷಣ ಸಿಗದಿದ್ದ ಮೂಲಕ ಕೆಲ ದೈವಜ್ಞರೂ ಬ್ರಾಹ್ಮಣರೂ ಕೂಡಿ ವರ್ಗಣಿ ಕೂಡಿಸಿ ಒಂದು ವರ್ಷದ ವರೆಗಾದರೂ ಹೆಣ್ಣು ಹುಡುಗಿಯರಿಗಾಗಿ ಒಂದು ಮರಾಠಿ ಶಾಲೆಯನ್ನು ಪ್ರಯೋಗದಂತೆಯಾದರೂ ನಡಿಸುವ ಉದ್ದೇಶದಿಂದ ಹೋದ ವರ್ಷದ ಜನವರಿ ೪ನೇ ತಾರೀಖಿಗೆ ತೆರೆದರು. ವರ್ಗಣಿ ಉತ್ಪನ್ನವು ದೈವಜ್ಞರಿಂದ ಹೋದ ಡಿಶಂಬರ ವರೆಗೆ ರೂ. ೭೪-೦-೦ ಬ್ರಾಹ್ಮಣರಿಂದ ರೂ ೮೨-೩-೦ ಇತರರ ಕಡೆಯಿಂದ ರೂ ೩-೧೪-೧೧ ಕೂಡಿದವು. ಶಿಕ್ಷಕಿಯ ಪಗಾರು ೮ ಅವಧಿಯಲ್ಲಿ ರೂ ೧೩೮ ೧-೦, ಇತರ ಖರ್ಚು ರೂ ೮ ೧೫-೩, ಹೀಗೆ ಒಟ್ಟು ರೂ ೧೪೭-೦-೩ ಆದವು. ಇದಕ್ಕಾಗಿ ರೂ ೩೬-೧೪-೪ ಕಡಾ ತೆಗೆಯಲ್ಪಟ್ಟವು. ಇಷ್ಟು ಅವಧಿಯಲ್ಲಿಯೇ ಶಾಲೆಯು ಈ ಶೋಚನೀಯ ಸ್ಥಿತಿಯಾದದ್ದನ್ನು ಕಂಡು, ದೈವಜ್ಞರೊಳಗೆ ಒಬ್ಬಿಬ್ಬರನ್ನು ಬಿಟ್ಟು ಇತರರು ವರ್ಗಣಿ ಕೊಡುತ್ತಿರಲಿಕ್ಕೆ ಒಪ್ಪಿರಿದ್ದದರಿಂದಲೂ, ಬ್ರಾಹ್ಮಣರಿಗೆ ಅದನ್ನು ನಡಿಸಲೇಬೇಕೆಂಬ ಇಚ್ಛೆಯಿದ್ದದರಿಂದಲೂ, ಶಾಲೆಯನ್ನು ರಜಿಸ್ಟರ ಮಾಡುವ ಪ್ರಯತ್ನಗಳು ನಡೆದುಹೋದ ೩-೪ ಬರ ತಿಂಗಳಲ್ಲೇ ಪ್ರಯತ್ನಗಳು ಸಫಲಗೊಂಡು, ಶಾಲೆಗೆ ಗ್ರಾಂಟು ಕೊಡುವ ಸರಕಾರದ ನಿಶ್ಚಯವಾಯಿತು. ಗ್ರಾಂಟನಿಂದಲೇ ಶಾಲೆಯ ಖರ್ಚು ನಡೆಯದಿದ್ದದರಿಂದ ಸಹೃದಯ ಜನರು ಹಸ್ತಪರಹಸ್ತದಿಂದ ಮದ್ದತು ಮಾಡಿ, ಶಾಲೆಯು ಚಿರಕಾಲ ಬಾಳುವಂತೆ ವರ್ತಿಸುವರೆಂದು ಉತ್ಕಟ ಇಚ್ಛೆ.

ಭಟಕಳ— ಭಟಕಳದಿಂದ ಮೌ। ಸಿದ್ದಿಕ ಆಬುಲ ಹಸನ್ ವಲ್ಲದ ಹುಸೇನ ಸಾಹೇಬ ಯಾನೆ ವಳಪ್ಪಾರವರು ತಿಳಿಸುವದೇನಂದರೆ:— ಕಳೆದ ತಾರೀಖು ೧ನೇ ಯಿಂದ ಇಲ್ಲಿಯ ಮೌ। ಕಾಮುಜಿ ಅಹಮ್ಮದ ಸಾಹೇಬ ಬ್ರದರ್ಸರವರಲ್ಲಿ ಮದುವೆಯ ಮಹೋತ್ಸವ. ತಾ ೪ನೇ ರವಿವಾರ ಮಧ್ಯಾಹ್ನಕ್ಕೆ ಮೌ। ಕಾಮುಜಿಯವರು ೫೦೦ ಮಂದಿ ಬಕ್ಕಲಿಗರಿಗೆ ಒಬ್ಬೊಬ್ಬರಿಗೆ ೪ ಶೇರು ಅಕ್ಕಿ, ೨ ಶೇರು ಬೆಲ್ಲ, ॥ ಶೇರು ಸಕ್ಕರೆ, ೨ ಕಾಯಿ, ಎಲೆ ಅಡಿಕೆ ಹೀಗೆ ದಾನ ಮಾಡಿದರು. ಅಪರಾಹ್ನ ೪ ಘಂಟೆಗೆ ಊರೊಳಗಿನ ಜ್ಞಾತಿ-ಪರಜ್ಞಾತಿಯ ಗೃಹಸ್ಥರಿಗೆ ಪತ್ರಗಳಿಂದ ಆಮಂತ್ರಿಸಿ, ಪಾನಸುಪಾರಿ ಸಮಾರಂಭವನ್ನು ಜರುಗಿಸಿದರು. ರಾತ್ರಿಗೆ ಜ್ಞಾತಿ ಗೃಹಸ್ಥರಿಗೂ, ಅಂಜುಮಾನ ಹಾಮಿಯ ಮುಸ್ಲಿಮ ಸಂಘದ ಸಭಾಸದರಿಗೂ ಚಹಾ ಪಾರ್ಟಿಯನ್ನಿತ್ತರು. ಈ ಶುಭ ಸಮಯದಲ್ಲಿ ಮೌ। ಕಾಮುಜಿ ಸಾಹೇಬರೂ, ಶಮಸುದ್ದೀನ ಸಾಹೇಬರೂ, ಮೊಹಿದ್ದೀನ ಸಾಹೇಬರೂ ಕೂಡಿ, ೮೦೦ ರೂಪಾಯಿ ಕ್ರಯ ಬಾಳುವ ಭೂಮಿಯನ್ನು ಸಂಘಕ್ಕೆ ಅರ್ಪಿಸಿದರು. ಇದಲ್ಲದೆ ಎರಡು ಪವನುಗಳು ಕೊಡಲ್ಪಟ್ಟವು. ಅನೇಕರು ಸಂಘಕ್ಕೆ ಯಥಾಶಕ್ತಿ ರಕಮುಗಳನ್ನು ದಾನ ಮಾಡಿದರು. ಮದುಮಗಂದಿರು ತಮಗೆ ಹಾಕಿದ ಹೂವಿನ ಮಾಲೆಗಳನ್ನು ಅರ್ಪಿಸಿದರು. ಅವು ಲಿಲಾಂವ ಮಾಡಲು ೧೨೫ ರೂಪಾಯಿಗಳು ಬಂದವು. ಅಂತು ೨೫೦ ರೂಪಾಯಿಗಳು ಸಂಘಕ್ಕೆ ಉತ್ಪನ್ನವಾದವು. ಆಗ ಭಾಟೆ ಸಾಹೇಬ, ಬಿ ಎ ರವರು ಅತಿ ಆನಂದದಿಂದ ಉದ್ಗರಿಸಿದ್ದೇನಂದರೆ— "ನಾನು ಈ ದಿವಸ ಇಲ್ಲಿ ಮದುವೆ ಸಮಾರಂಭಕ್ಕಾಗಿ ಬಂದಿದ್ದೇನೆ. ಆದರೆ, ಇಲ್ಲಿ ಬಂದು ನೋಡಿದ್ದಲ್ಲಿ ನನಗೆ ಬಹಳ ಆನಂದ-ಆಶ್ಚರ್ಯಗಳುಂಟಾದವು. ಇದು ಮದುವೆಯ ಮನೆಯೋ, ನಮ್ಮ ವಿದ್ಯಾವರ್ಧನಕ್ಕಾಗಿ ಸ್ಥಾಪಿಸಿದ ಅಂಜುಮಾನ ಹಾಮಿಯ ಮುಸ್ಲೀಮ ಲೀಗಿನ ಸಂಘದ ಸಭೆಯೋ, ಎಂದು ತಿಳಿಯುವದು ಅಶಕ್ಯವಾಗಿದೆ. ಮಹಮ್ಮದೀಯರು ವಿದ್ಯೆ ಕಲಿಯಲಿಕ್ಕೆ, ವಿದ್ಯಾ ಸಂಘಗಳಿಗೆ ಸಹಾಯ ಮಾಡಲಿಕ್ಕೆ ಬಹಳೇ ಹಿಂದುಳಿದವರು. ಇಲ್ಲಿ ಮಾತ್ರ ಮದುವೆಯ ಸಮಯವಿದ್ದು, ಸಂಘದ ಬಗ್ಗೆ ಇಷ್ಟು ಉತ್ಸಾಹಪ್ರದರ್ಶನವಾದದ್ದನ್ನು ನೋಡಿ, ನನಗುಂಟಾದ ಸಂತೋಷವು ವರ್ಣಿಸಲಸದಳವು" ಎಂದು ಅವರು ಉದ್ಗರಿಸಿ, ತಮ್ಮ ಕಾಣಿಕೆಯೆಂದು ಕೆಲ ರಕಮನ್ನು ಸಂಘಕ್ಕೆ ಅರ್ಪಿಸಿದರು.

ಸಿದ್ದಾಪುರ— ಮಧ್ಯಾಹ್ನದಲ್ಲಿ ಸೂರ್ಯನಾರಾಯಣನ ಕಾಟವು, ಮುಂಜಾನೆ ಇಬ್ಬನಿಯಿಂದ ಕೂಡಿದ ಚಳಿಯ ಕಾಟವು ಪ್ರಾರಂಭವಾಗಿವೆ.

ಅಂತೂ ತಾ ೧ನೇ ನವಂಬರವು ಮುಗಿಯಿತು. ಸದರಿ ದಿವಸ ಮತದಾರರು ಲೋಕಲ್‌ಬೋರ್ಡ ವ್ಹಾಯಿಸ ಪ್ರೆಸಿಡೆಂಟರ ಮನೆಯಲ್ಲಿ ಕಲೆತಿದ್ದರು. ನೊಸ್ಕಾಟ ಕಾರಕೂನರು ಮತದಾರರನ್ನು ಕರಕೊಂಡು ಹೋಗಿ ಮತವನ್ನು ಕೇಶವೈನವರಿಗೆ ಹಾಕಿರಿ ಎಂತ ಹೇಳುತ್ತಾ ಅವರ ಸಂಗಾತ ಹಿಂಬಾಲಿಸಿ ಹೋಗಿಬರುವ ಕೆಲಸ ಆ ದಿವಸ ನಡಿಸಿಯೋ ಇದ್ದರು. ಶ್ರೀ ಕೇಶವೈನವರು ನೊಸ್ಕಾಟಿಯ ಬಡಿವಾರದ್ದರಿಂದ ಈ ಪ್ರಕಾರ ಮಾಡಿದರೇನು? ಅಂತೂ ಜನರ ಹಿತ ಮಾಡುವ ಜನರು ಹೋಗಲಿ ಎಂದು ಸಂಕ್ಷಿಪ್ತರಿಗೇ ತಿಳಿಯದ ಮೇಲೆ, ಬಡ ಮತದಾರರು ಏನು ಮಾಡಬಲ್ಲರು? ಅಂತೂ ಇಂತೂ ಆ ದಿವಸವು ಮುಗಿಯಿತು. ಇನ್ನು ಪರಿಣಾಮದ ಕಡೆಗೆ ನೋಡುತ್ತಿದ್ದರೆ ಈ ತಾಲೂಕಿನಲ್ಲಿ ಬಹುಮತವು ಶ್ರೀ ಕರ್ಕಿ (ದ್ವಾರ) ಯವರಿಗೇ ಬಿದ್ದಿರುತ್ತದೆಂಬ ವಾರ್ತೆಯುಂಟು.

ಕೃಷ್ಣಪಕ್ಷವು ಬಂದಿದೆ. ರಸ್ತೆಯ ದುರುಸ್ತಿಬಗ್ಗೆಂತ ತಂದ ಮಣ್ಣು ಗುಡ್ಡೆಯಾದದ್ದು ಹರಡಿಸಿರುವರು ಆದರೆ, ಕಲ್ಲು ದಿನ್ನೆಯು ಮಾತ್ರ ಇನ್ನೂ ಹಾಗೇ ಬಿದ್ದಿರುವದು. ಅತ್ತ ಲಕ್ಷ ಕೊಟ್ಟಿದ್ದರೆ ಬಹಳ ಉಪಕಾರವಾಗುತ್ತಿತ್ತು

ತಾ. ೩-೧೧-೨೩ನೇ ಶನಿವಾರ ಮುಷ್ಟಿಘಂಡು ಆಕ್ಟ ೧೫ ಗಿಷ್ಟದ ೧ ಕೇಸ್ ಬಂದಿದೆ.

ತಾಲೂಕಾ ಸಭೆಯು ತಾ. ೩೧-೧೦-೨೩ಕ್ಕೆ ಯಥಾ ಪ್ರಕಾರ ನಡೆದು, ಮುಂದಿನ ವರ್ಷದ ಹೊಸ ಕೆಲಸಗಾರರ ಚುನಾವಣೆ ಆಯಿತು

ಭಗಿನೀವರ್ಗದಲ್ಲಿ ದೇಶಾಭಿಮಾನ ಹುಟ್ಟಿಸುವದರ ಸಲುವಾಗಿಯೂ, ಮತ್ತು ಉತ್ತೇಜನಾರ್ಥವಾಗಿಯೂ, ವಿಜಾಪುರದಲ್ಲಿ ಕೂಡುವ ಮೊದಲನೇ ಪರಿಷತ್ತಿಗೆ ಹೋಗುವ ಪ್ರತಿನಿಧಿಗಳಿಗೆ ಅವರ ಗಾಡಿ ಭಾಡಿಗೆ ಹಾಗೂ ರೇಲ್ವೆ ಖರ್ಚು ಪ್ರಮಾಣದ ಖರ್ಚು ಮಾತ್ರ ಕೊಡಬೇಕೆಂತ ಠರಾವಾಗಿದೆ

ಕಾರವಾರ— ಇಲ್ಲಿ ಗುರುವಾರಕ್ಕೆ ರಾಷ್ಟ್ರೀಯ ಸಭಾಭಿಮಾನಿಗಳು ತಮ್ಮ ಇಲೆಕ್ಷನ ಚಟುವಟಿಕೆಯಿಂದ ಎಲ್ಲರನ್ನೂ ಆಶ್ಚರ್ಯಗೊಳಿಸಿದರು ಹಸ್ತ ಪತ್ರಿಕೆಗಳು ಹಂಚಲಾದವು. ಅಲ್ಲಲ್ಲಿ ಪಟಗಳು ತೂಗಡಿಸುತ್ತಿವೆ ರಾಷ್ಟ್ರೀಯ ಸಭೆಯು ಶ್ರೀ ಕಕಿರ್ಯವರಿಗೆ ಮತಕೊಡಿರೆಂದು ಮತದಾರರಿಗೆ ಬೋಧನೆಯಾಯಿತು ಶೇಕಡಾ ೬೦ರಷ್ಟು ಮತಗಳು ಶ್ರೀ|| ಕಕಿರ್ಯವರಿಗೆ, ಶೇಕಡಾ ೩೦ರಷ್ಟು ಮತಗಳು ರಾ| ಕಲ್ಯಾಣಪುರಕರರಿಗೆ, ಉಳಿದವು ರಾ| ಶೇಣ್ವಿನವರವರಿಗೆ ಬಿದ್ದಿರಬೇಕೆಂದು ತಿಳಿಯುತ್ತದೆ

ಕಳೆದ ಸೋಮವಾರಕ್ಕೆ ಜರುಗಿದ ವಿಶ್ವವಿದ್ಯಾಲಯದ ಇಲೆಕ್ಶನಿನಲ್ಲಿ ಬಹುಮತವು ಧಿಮಾಣ ಡಾ| ಪರಾಂಜಪೇಯವರಿಗೆ ಬಿತ್ತೆಂದು ಹೇಳುತ್ತಾರೆ

ಬಿಟ್ಟಿಯ ಬಗ್ಗೆ ಗಾಡಿಕಾರರಿಗೆ ಸರಕಾರವು ಕೊಡುವ ಸಾಲದ ಶರ್ತುಗಳು.

(ಅ) ಪ್ರತಿ ಒಂದು ಗಾಡಿ ವ ಎತ್ತಿನ ಜೋಡಿ ಸಂಬಂಧ ಆಗಾವು ಕೊಡತಕ್ಕ ರಕಂ ಪರಮಾವಧಿ ೨೦೦ ರೂಪಾಯಿಗಳಿಗೆ ಮಿಕ್ಕಬಾರದು ಮತ್ತು ಖರೇದಿಮಾಡಿದ ಗಾಡಿ ವ ಎತ್ತುಗಳಿಗೆ ಕೊಟ್ಟ ಕಿಮ್ಮತ್ತಿನ ಕ್ಕಿಕ್ಕಿಂತ ಹೆಚ್ಚು ರಕಂ ಕೊಡುವದರಲ್ಲಿ ಬರಲಿಕ್ಕಿಲ್ಲ

(ಬ) ಸದ್ರೀ ಆಗಾವು ಕೊಟ್ಟ ರಕಂ ಬಿನ್ನಬಡ್ಡಿಯಿಂದ ಸರಕಾರಕ್ಕೆ ನಾಲ್ಕು ವಾರ್ಷಿಕ ಕಂತುಗಳಿಂದ ಪರತ ಕೊಡತಕ್ಕದ್ದು.

(ಕ) ಸಾಲದ ರಕಮಿನ ಬಗ್ಗೆ ಸದ್ರೀ ಗಾಡಿ ವ ಎತ್ತುಗಳನ್ನು ಸರಕಾರಕ್ಕೆ ಅಡವು ಬರೆದುಕೊಡಬೇಕು ವ ಅವುಗಳಿಗೆ ಕೊಟ್ಟ ನಂಬರವನ್ನು ಹಚ್ಚಿಡಬೇಕ. ಸಾಲದ ರಕಂ ಪೂರ್ಣ ಫೇಡಾಗುವ ವರೆಗೆ ಸರಕಾರದ ಅಡವಿನ ಬೋಜೆಯು ಊರ್ಜಿತ ಇರುವದು.

(ಡ) ಹೀಗೆ ಸಾಲ ತೆಗೆದುಕೊಂಡವನು, ಸರಕಾರಿ ಕೆಲಸದ ದೆಸೆಯಿಂದ ಫಿರ್ತಿಮಾಡುವ ಸರಕಾರಿ ನೌಕರರ ಸಾಮಾನು ಮೆ|| ಕಲೆಕ್ಟರ ಸಾ|| ರು ಮಂಜೂರು ಮಾಡಿದ ದರಗಳಂತೆ ಬಾಡಿಗೆ ತೆಗೆದುಕೊಂಡು, ಅವನ ಗಾಡಿ ನೋಂದಿಸಲ್ಪಟ್ಟ ಗ್ರಾಮದಿಂದ ೪೦ ಮೈಲುಗಳಿಗೆ ಮಿಕ್ಕದಷ್ಟು ದೂರ ಒಯ್ಯಲಿಕ್ಕೂ ವ ಸದ್ರಿ ಹದ್ದಿನೊಳಗೆ ಇತರೇ ಸರಕಾರಿ ಕೆಲಸ ಮಾಡಲಿಕ್ಕೂ ಬದ್ಧನಿರುವ ಸಂಬಂಧದ ಕರಾರನ್ನು ಬರಕೊಡತಕ್ಕದ್ದು

ಈ ಜವಾಬದಾರಿಯು ಸಾಲದ ರಕಂ ಪೂರ್ಣ ಫೇಡಾಗುವ ವರೆಗೆ ಅವನ ಮೇಲೆ ಇದ್ದೀತು

(ಇ) ಜಿಲ್ಹೆಯೊಳಗಿನ ಬೇರೆ ಬೇರೆ ಪ್ರದೇಶಗಳಲ್ಲಿ ಕಾಲಕಾಲಕ್ಕೆ ಠರಾಯಿಸಿದ ಗಾಡಿ ಭಾಡಿಗೆಯ ದರಗಳು ಮಾಮ್ಲೇದಾರ ಯಾ ಮಹಾಲ್ಕರಿ ಸಾಹೇಬರ ಕಛೇರಿಯಲ್ಲಿ ನೋಡಲಿಕ್ಕೆ ಸಿಗುವವು

ಶ್ರೀ| ಬೆಳವಿಯವರಿಗೇ ಮತ ಕೊಡಿರಿ.

ಲೆಜಿಸ್ಲೇಟಿವ್ ಎಸಂಬ್ಲಿ ಯಾನೆ ವರಿಷ್ಠ ಕಾಯಿದೆ ಕೌನ್ಸಿಲಿನ ಚುನಾವಣೆಯು ಇದೇ ಬರುವ ತಾರೀಖು ೧೪ ನೇ ಬುಧವಾರಕ್ಕೆ ಜರುಗ ಪದು. ಈ ಕಾಯಿದೆ ಕೌನ್ಸಿಲಿಗೆ ನಮ್ಮ ದಕ್ಷಿಣಭಾಗದ ತರ್ಫೆನಿಂದ ಬೆಳಗಾವಿಯ ಶ್ರೀ| ದತ್ತಾತ್ರಯ ವೆಂಕಟೇಶ ಬೆಳವಿಯವರು ಉಮೇದ್ವಾರರಾಗಿ ನಿಂತಿರುವರು ಶ್ರೀಯುತರ ಪರಿಚಯವು ನಮ್ಮ ಕಾನಡಾ ಜಿಲ್ಹಾ ನಿವಾಸಿಕರಿಗೆಲ್ಲ ಇರುವದು, ಅವರು ಹಳೇ ಕೌನ್ಸಿಲಿನಲ್ಲಿ ಹಾಣೇಕಟ್ಟೆಯ ಉಪ್ಪಿನ ಕಾಲೀಕರ ಸಂಘ, ಜಂಗಲ ಉಪದ್ರವ ನೊಂದಜನರುಗಳ ಬಗ್ಗೆ ಪ್ರಶ್ನೆ ಕೇಳಿ, ನಮ್ಮ ಸೇವೆ ಮಾಡಿರುವರು. ಇವರು ರಾಷ್ಟ್ರೀಯ ಭಕ್ತರು ಲೋಕಮಾನ್ಯರು ನಿರ್ಮಿಸಿದ ಕಾಂಗ್ರೆಸ ಡೆಮೊಕ್ರೆಟಿಕ ಪಕ್ಷದ ತರ್ಫೆನಿಂದ ಇಲೆಕ್ಶನಿಗೆ ನಿಂತವರು. ಕಲಕತ್ತೆಯಲ್ಲಿ ಅಸಹಕಾರಿತೆಯ ಠರಾವು ಮಂಜೂರಾದ ಬಳಿಕ, ತಮ್ಮ ಉಮೇದ್ವಾರಿಯನ್ನು ಹಿಂತೆಗೆದುಕೊಂಡು, ರಾಷ್ಟ್ರೀಯ ಸಭೆಯ ವರ್ಚಸ್ವವನ್ನು ಬೆಳೆಸಿದರು. ಈಗ ಇವರು ಸ್ವರಾಜ್ಯ ಪಕ್ಷದ ತರ್ಫೆನ ಉಮೇದ್ವಾರರು. ಕೌನ್ಸಿಲುಗಳಲ್ಲಿ ಸ್ವರಾಜ್ಯ ಪಕ್ಷವೆಂದರೆ ಲೋಕಪಕ್ಷವೇ ವರಿಷ್ಠ ಕಾಯಿದೆ ಕೌನ್ಸಿಲುಗಳ ಚುನಾವಣೆಗಿಂತ ವಿಶೇಷ ಮಹತ್ವದ್ದು ಎಲ್ಲರೂ ಅರಿತ ಸಂಗತಿಯೇ ಅಲ್ಲಿ ನೌಕರಶಾಹಿಗೂ, ಸ್ವರಾಜ್ಯಪಕ್ಷಕ್ಕೂ ಘನಘೋರ ಸಂಗ್ರಾಮವಾಗುವದು. ಇಂಥ ಕಾರ್ಯಕ್ಷೇತ್ರದಲ್ಲಿ, ಕೌನ್ಸಿಲು ಸಭಾಸತ್ವವನ್ನು ಹಿಂದೆ ನಡಿಸಿ, ಖ್ಯಾತಿಹೊಂದಿದ ಬೆಳವಿಯವರಿಗೇ ಮತ ಕೊಡಬೇಕೆಂದು ಮತದಾರಬಾಂಧವರ ಕೂಡ ನಮ್ಮ ಆಗ್ರಹದ ವಿನಂತಿ ಮತದಾನದ ಸ್ಥಳಗಳು ಯಾನೆ ಪೋಲಿಂಗ ಸ್ಟೇಶನುಗಳು ಆಯಾ ತಾಲೂಕುಗಳ ಕಚೇರಿಯಲ್ಲಿವೆ ಮತದಾರರು, ವಿಶೇಷವಾಗಿ ಹಳ್ಳಿಗಳೊಳಗಿನ ಮತದಾರರು, ಶ್ರೀ| ಬೆಳವಿಯವರ ದೇಶಸೇವೆಯನ್ನೂ ವರಿಷ್ಠ ಕಾಯಿದೆ ಕೌನ್ಸಿಲಿನ ಚುನಾವಣೆಯ ಮಹತ್ವವನ್ನೂ ನೆನಸಿ, ತಾರೀಖು ೧೪ನೇ ಬುಧವಾರಕ್ಕೆ, ಎಷ್ಟು ಸಾಂಸಾರಿಕ ತಾಪತ್ರಯಗಳಿದ್ದರೂ ಅವನ್ನೆಲ್ಲ ಒಂದಿಗೆ ಬದಿಗಿಟ್ಟು, ಮತದಾನ ಮಾಡಲು ತಾಲೂಕ ಕಚೇರಿಗೆ ಬರಬೇಕಾಗಿ ಮತದಾರರಿಗೆ ವಿನಂತಿ. ಶ್ರೀ| ಬೆಳವಿಯವರ ಹೆಸರು, ಮತ ಪತ್ರಿಕೆಯ ಮೇಲೆ ಕೆಂಪು ಬಣ್ಣದಿಂದ ಅಚ್ಚು ಮಾಡಿದ್ದಿರತ್ತದೆ

ಮುಕ್ಕಾಂ ಕುಮಟಾ } V P Prabhu
ತಾ ४ - ११—१९२३ }

☞ ಬೇಕು.

ಕನ್ನಡು ಝಟಕೀಯಿಂದ ಬರೆಯಲಿಕ್ಕೆ ಬಲ್ಲಾದ ಚಲೋ ಹಸ್ತಾಕ್ಷರದ ಕಾರಕೂನನು ಬೇಕು. ಪಗಾರ ಲಾಯಖಿ ಪ್ರಕಾರ.

ಶಿರಸಿ, } **ಸುಂದರರಾವ ಪಂಡಿತ,**
6-11-23 } ಹೈಕೋರ್ಟ ವಕೀಲ

ವೃತ್ತಸಾರ.

— ವಿಲಾಯತಿಯೊಳಗಿನ ಆರೋಗ್ಯ ಖಾತೆಯ ಮಂತ್ರಿಗಳು ಡಾಕ್ಟರರ ಪಗಾರ ಮಾನವನ್ನು ಕಡಿಮೆ ಮಾಡಿದರೆಂದು ಲಂಡನಿನೊಳಗಿನ ೧೬೪೦ ವೈದ್ಯರ ಪೈಕಿ ೯೦೦ ಮಂದಿಗಳು ರಾಜೀನಾಮೆ ನೀಡುತ್ತಿರುವರು.

— 'ಕರ್ಮವೀರ'ದ ಸಂಪಾದಕರಾದ ಶ್ರೀ| ರಂಗರಾವ ದಿವಾಕರರ ಮೇಲೆ ರಾಜದ್ರೋಹದ ಆರೋಪ ಬಂದಿದೆ. ಕಳೆದ ತಾರೀಖು ೨ನೇಗೆ ಧಾರವಾಡದ ಗೋಳೀಬಾರದ ಹಕೀಕತನ್ನು ಪ್ರಕಟಿಸಿದ ಬಗ್ಗೆ ಕ್ರಿಮಿನಲ್ ಪಕ್ರದ ಮೇಲೆ ನಡೆದ ಮಾನಹಾನಿಯ ದಾವೆಯಲ್ಲಿ ಅವರು ಸಾಕ್ಷಿಕೊಟ್ಟು, ತಾರೀಖು ೨ನೇ ದಿವಸ ಮರಳುವಾಗ ಅವರಿಗೆ ವಾರಂಟು ತೋರಿಸಲ್ಪಟ್ಟಿತು ರಾತ್ರಿ ಅವರು ಲೋಕಪ್ಪಿನಲ್ಲಿಯೇ ಇರಬೇಕಾಯಿತು ಖಟ್ಲೆಯ ವಿಚಾರಣೆಯು ೫ನೇ ಸೋಮವಾರಕ್ಕೆ ಮಿ| ಪಂಡಿತರವರ ಮುಂದೆ ನಡೆಯುವದಿತ್ತು ಈಗ 'ಕರ್ಮವೀರ' ಹಾಗೂ 'ನವಶಕ್ತಿ' ಪತ್ರಿಕೆಗಳ ವ್ಯವಸ್ಥೆಯನ್ನು ಶ್ರೀ| ರಾಮಚಂದ್ರ ಶ್ರೀನಿವಾಸ ಹುಕ್ಕೇರಿಕರ ಇವರಿಗೆ ವಹಿಸಿರುತ್ತದೆ

— ಮುಂಬಯಿಯಲ್ಲಿ ಕಳೆದ ೨ನೇ ಶುಕ್ರವಾರಕ್ಕೆ ಪ್ರಾಂತಿಕ ಕಾಯಿದೆ ಕೌನ್ಸಿಲಿಗೆ ಉಮೇದ್ವಾರರಿಗೆ ದೊರಕಿದ ಮತಗಳ ಪ್ರಾಸ್ತಾವಿಕ ಎಣಿಕೆಯಾಯಿತು ಈ ಎಣಿಕೆಯಂತೆ ಆರು ಸಭಾಸದರಲ್ಲಿ ನಾಲ್ಕು ಸಭಾಸದರು ಸ್ವರಾಜ್ಯಪಕ್ಷದ ತರ್ಫೆನಿಂದ ಮುಂಬಾಪುರಿಯ ಪ್ರತಿನಿಧಿಗಳಾಗುವರು

— ಪಂಜಾಬದಲ್ಲಿ ನೌಕರಶಾಹಿಯಿಂದೊದಗಿದ ಪರಿಸ್ಥಿತಿಯನ್ನು ವಿಚಾರಿಸಲಿಕ್ಕಾಗಿ ಇದೇ ಬರುವ ತಾರೀಖು ೧೩ನೇಗೆ ಅಮೃತಸರದಲ್ಲಿ ಕಾಂಗ್ರೆಸ ಕಾರ್ಯಕಾರಿ ಮಂಡಳವು ನೆರೆಯುವದು ನೆರೆಬಿದ್ದ ಅಕಾಲಿ ದೇಶಭಕ್ತರಿಗೆ ಅವಶ್ಯವುಳ್ಳ ಕಾಯಿದೆಯ ಸಹಾಯವನ್ನೀಯುವರೆ ಪಂಡಿತ ಮದನಮೋಹನ ಮಾಲವೀಯ, ಪಂಡಿತ ಮೋತೀಲಾಲ ನೆಹರು, ದೇ| ದಾಸ ಇವರು ಒಪ್ಪಿರುವರು ಸುನಾವಣೆಯು ಕಳೆದ ೩ನೇ ಸೋಮವಾರದಿಂದ ಅಮೃತಸರದಲ್ಲಿ ಪ್ರಾರಂಭವಾಗಿದೆ ಶೀಖ ಲೀಗಿನ ಜಲಂದರ ಅಧಿವೇಶನದ ಅಧ್ಯಕ್ಷರಾದ ಸರದಾರ ಮಂಗಲಸಿಂಗರವರೂ ತಮ್ಮ ಮೇಲೆ ಹೊರಟ ವಾರಂಟಿನ ಸುದ್ದಿ ಕೇಳಿ ತಾವಾಗಿ ಪೋಲೀಸರ ವಶವಾಗಿರುವರು ಈ ಚಳವಳಿಯ ವಿಶ್ವಸನೀಯ ಬಾತ್ಮಿಯನ್ನು ಪೂರೈಸುವರೆ, ಕಾಂಗ್ರೆಸ ವಾರ್ತಾಪ್ರಸಾರ ಸಂಘವನ್ನು ನಿರ್ಮಿಸುವ ವಿಚಾರ ನಡೆದದೆ

— ಇದೇ ಬರುವ ತಾರೀಖು ೧೯-೨೦ನೇಗೆ ವಿಜಾಪುರದಲ್ಲಿ ಕರ್ನಾಟಕ ಪ್ರಾಂತಿಕ ಪರಿಷತ್ತು ನೆರೆಯುವದು ಶ್ರೀ| ರಾಜಗೋಪಾಲಾಚಾರಿಯವರು ಅಧ್ಯಕ್ಷರಾಗಲು ಒಪ್ಪಿರುವರು ಶ್ರೀ| ಶ್ರೀನಿವಾಸರಾವ ಕೌಜಲಗಿಯವರು ಸ್ವಾಗತಾಧ್ಯಕ್ಷರು

— ಗುಜರಾಥದೊಳಗಿನ ಬೋರಸದ ಮುನಸಿಪಾಲಿಟಿಯವರು ಮೌಲಾನಾ ಮಹಮ್ಮದ ಅಲ್ಲಿಯವರಿಗೆ ಮಾನಪತ್ರ ಅರ್ಪಿಸಬೇಕೆಂದು ಠರಾವು ಮಾಡಿದರು. ಕಲೆಕ್ಟರು ಹಣದ ಕೊರತೆಯ ನಿಮಿತ್ತ ಹೇಳಿ ಮಂಜೂರಿ ಕೊಡಲಿಲ್ಲ. ಆದರೂ ಬಹುಮತದಿಂದ ಠರಾವು ಮಂಜೂರು ಆಯಿತು.

—ಜರ್ಮನ ಖಂಡಣಿಯ ಪ್ರಶ್ನೆಯನ್ನು ಮಿತ್ರಪಕ್ಷದವರು ಪರಿಷತ್ತನ್ನು ನೆರೆಯಿಸಿ ನಿರ್ಣಯಿಸಬೇಕೆಂದು ಠರಾಯಿಸಿರುವರು ಫ್ರಾನ್ಸವು ಈ ಯೋಜನೆಯನ್ನು ಅಂತಃಕರಣಪೂರ್ವಕ ಪುರಸ್ಕರಿಸಲಿಲ್ಲ

— ಮುಂಬಯಿ ಮುನಿಸಿಪಾಲಿಟಿಯು ಬ್ರಿಟಿಶ ಸಾಮಗ್ರಿಗಳನ್ನು ಬಹಿಷ್ಕರಿಸಬೇಕೆಂಬ ಠರಾವನ್ನು ಜ್ಯಾರಿಯಲ್ಲಿ ತಂದಿದೆ.

— ಶೇಟ ಜಮನಾಲಾಲ ಬಜಾಜರವರ ಮೋಟಾರಗಾಡಿಯನ್ನು ಯಾರೂ ಕೊಳ್ಳಲು ಮರ್ಯಾದಲ್ಲಿ ಮುಂದೆ ಬರದ್ದರಿಂದ, ಅದನ್ನು ರಾಜಕೋಟಿಗೆ ಲಿಲಾಂವಿಗಾಗಿ ಒಯ್ದಿರುವರು.

— ಬರುವ ಮಾಘ ಮಾಸದಲ್ಲಿ ಅರ್ಧಕುಂಭಪುರದ ಹೊತ್ತಿಗೆ, ಪ್ರಯಾಗದಲ್ಲಿ ಅಖಿಲ ಭಾರತೀಯ ವೈಷ್ಣವ ಪರಿಷತ್ತು ನೆರಿಸಬೇಕೆಂದು ಗೊತ್ತಾಗಿದ್ದು, ಆ ಬಗ್ಗೆ ಸ್ವಾಗತ ಮಂಡಳವು ನೇಮಕವಾಗಿದೆ. ಸದ್ವೈಷ್ಣವರೆಲ್ಲರೂ ಈ ಪರಿಷತ್ತಿನಲ್ಲಿ ಸೇರಬೇಕೆಂದು ಚಾಲಕರ ವಿನಂತಿ. ಪತ್ರವ್ಯವಹಾರ ಮಾಡುವವರೆಲ್ಲರೂ ಶ್ರೀ ಜಗನ್ನಾಥ ಪ್ರಸಾದ ಶುಕ್ಲ ದಾರಾಗಂಜ ಪ್ರಯಾಗ, ಈ ಪತ್ತೆಯ ಮೇಲೆ ಮಾಡತಕ್ಕದ್ದೆಂದು ಜಾಹೀರಾಗಿದೆ

— ಇರಾಣದಲ್ಲಿ ಬ್ರಿಟಿಶರಿಗೆ ವಿರುದ್ಧವಾಗಿ, ಲೋಕಮತವು ಪ್ರಕ್ಷುಬ್ಧವಾಗಹತ್ತಿದೆ ಪ್ರಚಂಡ ಮೆರವಣಿಗೆಗಳನ್ನು ತೆಗೆದು ತಮ್ಮ ದ್ವೇಷವನ್ನು ಇರಾಣದವರು ಪ್ರದರ್ಶಿಸುತ್ತಿರುವರು.

— ನಾಭಾ ಪ್ರಕರಣದ ಸಂಬಂಧ ದಕ್ಷಿಣ ಆಫ್ರಿಕಾದೊಳಗಿನ ನೈರೋಬಿ ಪಟ್ಟಣದಲ್ಲಿ ನಿಷೇಧಪ್ರದರ್ಶನಕ್ಕಾಗಿ ಶೀಖ ನಿವಾಸಿಕರು ಪ್ರಚಂಡ ಮೆರವಣಿಗೆ ತೆಗೆದರು ಎಲ್ಲ ಶೀಖರು ಮಡಿಮೆನ್ನುಟ್ಟು ಗಾಂಭೀರ್ಯದಿಂದ ಕೂಚು ಮಾಡುತ್ತಿದ್ದರು ಬಳಿಕ ಅವರೆಲ್ಲರೂ ದೇವಾಲಯದಲ್ಲಿ ಹೋಗಿ, ಪ್ರಾರ್ಥನೆ ಮಾಡಿಕೊಂಡರು.

— ಮೌಲಾನಾ ಮಹಮ್ಮದ ಅಲ್ಲಿಯವರು ಮುಂಬಯಿಯಲ್ಲಿ ಕಳೆದ ತಾ. ೨೨ನೇ ಸೋಮವಾರಕ್ಕೆ ಬಂದರು ಆಗ ಅವರಿಗೆ ಅಲ್ಲಿ ಪ್ರಚಂಡ ಸ್ವಾಗತವಾಯಿತು ಸ್ಟೇಶನಿನ ಬಳಿಯಲ್ಲಿ ೫ ಸಾವಿರಕ್ಕೆ ಮಿಕ್ಕಿ ಜನರು ನೆರೆದಿದ್ದರು. ಬಳಿಕ ಮೌಲಾನಾರವರ ಮೆರವಣಿಗೆಯಾಯಿತು ಮರುದಿನ ಸಾಯಂಕಾಲ ೫॥ ಘಂಟೆಗೆ ಮೌಲಾನಾರವರ ದೇಶಕಾರ್ಯ ಪ್ರೇರಕ ಭಾಷಣವಾಯಿತು.

—ದೇಶಬಂಧು ದಾಸರವರು “ ಫೋರವರ್ಡ ” ಎಂಬ ಹೊಸ ಇಂಗ್ಲೀಷ ದೈನಿಕ ಪತ್ರಿಕೆಯನ್ನು ಕಲಕತ್ತೆಯಲ್ಲಿ ಹೊರಡಿಸಿರುವರು.

ಎರಡನೇ ಕರ್ನಾಟಕ ಪ್ರಾಂತಿಕ ಪರಿಷತ್ತು.

ಸ್ವದೇಶೀ ವಸ್ತುಗಳ ಪ್ರದರ್ಶನವು.

೧ನೇ ಪ್ರಸಿದ್ಧಿ ಪತ್ರಿಕೆ

ವಿಜಾಪುರದಲ್ಲಿ ತಾರೀಖು ೧೯-೨೦ ನವಂಬರದಲ್ಲಿ ನೆರೆಯತಕ್ಕ ಎರಡನೇ ಪ್ರಾಂತಿಕ ಪರಿಷತ್ತಿನ ಕಾಲಕ್ಕೆ ಸ್ವದೇಶೀ ವಸ್ತುಗಳ ಪ್ರದರ್ಶನವನ್ನು ಮಾಡಬೇಕೆಂದು ಸತ್ಕಾರ ಮಂಡಳದವರು ನಿರ್ಣಯಿಸಿರುವರು. ಸತ್ಕಾರ ಮಂಡಳದವರು ಪ್ರದರ್ಶನದ ವ್ಯವಸ್ಥೆಯನ್ನು ಕೆಳಗೆ ಬರದಂತೆ ಮಾಡಿರುವರು.

೧. ಪ್ರದರ್ಶನದ ಸ್ಥಳದಲ್ಲಿ ಮಾರುವದಕ್ಕೆ ಸ್ವದೇಶೀ ವಸ್ತುಗಳನ್ನು ಇಡಬೇಕೆಂದು ಇಚ್ಛಿಸುವ ಕಾರಖಾನೆಯವರಿಗೆ ಯೋಗ್ಯ ದರದಿಂದ ಅಂಗಡಿಗಳು ಬಾಡಿಗೆಯಿಂದ ಸಿಗುವ ವ್ಯವಸ್ಥೆಯನ್ನು ಮಾಡಿದೆ. ಅಂಗಡಿಗಳು ಬೇಕಾದವರು ನವಂಬರ ತಿಂಗಳ ೧ನೇ ತಾರೀಖಿನೊಳಗಾಗಿ ನಮಗೆ ತಿಳಿಸಬೇಕು.

೨. ಪ್ರದರ್ಶನದ ಸಲುವಾಗಿ ಕಳಿಸಿದ ವಸ್ತುಗಳನ್ನು ಬೇರೆ ಇಡುವ ವ್ಯವಸ್ಥೆಯನ್ನು ಮಾಡಿದೆ

೩. ಪ್ರದರ್ಶನದ ಸಲುವಾಗಿ ಎಲ್ಲ ತರದ ಕೇವಲ ಸ್ವದೇಶೀ ವಸ್ತುಗಳನ್ನೇ ಕಳಿಸತಕ್ಕದ್ದು

೪. ಪ್ರದರ್ಶನದಲ್ಲಿ ಕೈನೂಲು ತೆಗೆಯುವ, ಅರಳೆಯನ್ನು ಹಿಂಜುವ, ಹಾಗು ಕೈಮಗ್ಗದ ಬಗೆಬಗೆಯ ಉಪಕರಣಗಳನ್ನು ಇಡುವದರಲ್ಲಿ ಬರುತ್ತದೆ

೫ ಪ್ರದರ್ಶನಕ್ಕೆ ವಸ್ತುಗಳನ್ನು ಕಳಿಸುವವರು ತಮ್ಮ ಖರ್ಚಿನಿಂದಲೇ ಕಳಿಸತಕ್ಕದ್ದು ಮತ್ತು ಅವುಗಳ ಮಾರಾಟವಾಗದಿದ್ದರೆ ತಮ್ಮ ಖರ್ಚಿನಿಂದಲೇ ತಿರುಗಿ ಒಯ್ಯತಕ್ಕದ್ದು.

೬ ಪ್ರದರ್ಶನಕ್ಕೆ ನವ್ಹೆಂಬರ ೧೨ನೇ ತಾರೀಖಿನ ಒಳಗಾಗಿ ವಸ್ತುಗಳನ್ನು ಕಳಿಸತಕ್ಕದ್ದು.

೭. ಎಲ್ಲ ಪತ್ರವ್ಯವಹಾರವನ್ನೂ, ವಸ್ತುಗಳನ್ನು ಕಳಿಸುವದನ್ನೂ ಕೆಳಗಿನ ಪತ್ತೆಯ ಮೇಲೆ ಮಾಡತಕ್ಕದ್ದು.

ಹಣಮಂತ ಶ್ರೀಪತ ನೌಜಲಗಿ,

ಖಾದೀ ಸೆಕ್ರೆಟರಿ ವಿಜಾಪುರ

ಕರ್ನಾಟಕ ಪತ್ರಿಕಾಕರ್ತರ ಪರಿಷತ್ತು.

ಹಲವು ವರುಷಗಳಿಂದೀಚೆಯಿಂದ ಕರ್ನಾಟಕದ ಭಾಷೆಯ ಏಕೀಕರಣಕ್ಕಾಗಿ ಅನೇಕ ಸಾಹಿತ್ಯಸೇವಕರು ಶ್ರಮಪಡುತ್ತಿರುವರು. ಕರ್ನಾಟಕದ ದುರ್ದೈವದಿಂದ ಆಂಗ್ಲ ರಾಜ್ಯದೊರೆತನದಲ್ಲಿ ಅದು ಹಾಳು ಹೋಳಾಗಿ ಒಡೆಯಲ್ಪಟ್ಟು, ಒಂದಿಷ್ಟು ಮೈಸೂರಿಗೆಂದೂ ಒಂದಿಷ್ಟು ಹೈದರಾಬಾದಿಗೆಂದೂ, ಒಂದಿಷ್ಟು ಮುಂಬಾಯಿ ಪ್ರಾಂತಕ್ಕೆಂದೂ, ಒಂದಿಷ್ಟು ಮದ್ರಾಸ ಸಂಸ್ಥಾನಕ್ಕೆಂದೂ ಹಂಚಲ್ಪಟ್ಟಿತು. ಹೀಗೆ ಒಂದು ಕಡೆಯಲ್ಲಿ ಪರಕೀಯ ಪ್ರಭುತ್ವದೊತ್ತನೆಯೂ, ಒಂದು ಕಡೆಯಲ್ಲಿ ಹೇರಿಗೊಡನೆಯೂ ಒಂದು ಕಡೆಯಲ್ಲಿ ಉದರ್ಭಾವದೊಂದಿಗೂ ಕರ್ನಾಟಕಕ್ಕೆ ಶ್ರಮಿಸಿದ ಯಾದವನ್ನೇ ಮಾಡಬೇಕಾಗಿ ಬಂದಿತು ಒಂದು ಸಮಯದಲ್ಲಿ ವಿಜಯನಗರದ ವೆಂದು ಶಾಶ್ವತವಾದ ಕೀರ್ತಿಯನ್ನು ಪಡೆದ ಆ ಕರ್ನಾಟಕ ದೇಶವು ಇಂದು ಹಗ್ಗವಿಲ್ಲದ ಕಾವಿನಂತೆ ಚಲ್ಲಿಬಿದ್ದುಕೊಂಡು ವ್ಯರ್ಥತೆಯ ಅಭಿನ ಯಿಸಿ ಇರುವದು. ಒಂದು ಕಡೆ ಹಿಂದ ಸ್ಥಾನಿಯೀತ ಕನ್ನಡ ಇನ್ನೊಂದೆಡೆಗೆ ತೆಲಗುವಿಕ್ರಿಃ, ಇನ್ನು ಕೆಲವೆಡೆಗಳಲ್ಲಿ ವಿಚಿತ್ರವಾದ ವೈರೂಪ್ಯವನ್ನು ಹೊಂದಿದ ಕನ್ನಡ ಅಂತೂ ಇಂತೂ ಕನ್ನಡದ ಭಾಷೆಯೂ, ಕೀರ್ತಿಯ ವೈಭವವೂ ಚಲ್ಲಿಹೋಯಿತು.

ಇಂದು ಕರ್ನಾಟಕಕ್ಕೆ ಭಾಷೆ ಮತ್ತು ರಾಜಕೀಯ ಭೇದಗಳು ಪರಿಮ್ಯ ಶತ್ರುಗಳೆಂದೇ ಆಗಿಲ್ಲ ಮರೂರನೆಯದಾಗಿ ಇನ್ನೊಂದು ಶತ್ರುವಿದೆ ಇವೆಲ್ಲಾ ಪ್ರಾಂತ್ಯಗಳನ್ನು ರಾಜಕೀಯ ವಿಭಜನೆಗಳಿಂದಲೂ, ರಕ್ಷಿಸಿ ಗ್ರಂಥಿಸುವ ಆಧುನಿಕ ನಾಗರಿಕತೆಯ ಮಹಾ ವಿಷಯವಾದ ರೈಲು ದಾರಿಯು ಕೂಡ ಕನ್ನಡ ನಾಡನ್ನು ಸರಿಯಾಗಿ ಪೋಣಿಸಲಿಲ್ಲ ಆದುದರಿಂದಲೇ ದಕ್ಷಿಣ ಕನ್ನಡವೆಂದರೆ, ಉತ್ತರ ಕನ್ನಡಕ್ಕೆ ತಿಳಿದಿಲ್ಲ— ಉತ್ತರ ಕನ್ನಡವೆಂದರೆ, ದಕ್ಷಿಣ ಕನ್ನಡಕ್ಕೆ ತಿಳಿದಿಲ್ಲ

ಇನ್ನು ನಾಲ್ಕನೆಯ ಒಂದು ಕಾರಣವನ್ನು ನಾವು ಇಲ್ಲಿ ಉಲ್ಲೇಖಿಸದಿರಲಾರೆವು. ಆಯಾ ಆಂಗ್ಲ ರಾಜಕೀಯ ವಿಭಾಗದೊಳಗಿನ ಜನರ ಪ್ರಾಂತಿಕತೆ ಧಾರವಾಡದವರಿಗೆ ಮಂಗಳೂರ ಜಿಲ್ಲೆ (ನಮ್ಮ ಜಿಲ್ಲೆಯನ್ನು ಮಂಗಳೂರು ಜಿಲ್ಲೆಯೆಂದೇ ಅವರು ಕರೆಯುವರು, ದಕ್ಷಿಣಕನ್ನಡವೆನ್ನಲಿಕ್ಕೂ ಅವರಿಗೆ ಸಂತೋಷವಿಲ್ಲ) ಯವರ ಮೇಲೆ ಅನಾದರ. ಮೈಸೂರಿನವರಿಗೆ ಧಾರವಾಡವೆಂದರೆ, ಬಹಳ ಬೇಸರ, ಮಂಗಳೂರಿಗೆ ತನ್ನ ಚಿಕ್ಕ ಜಿಲ್ಲೆಯ ಮೇರೆಯನ್ನು ವಿನಾ ಗೊತ್ತಿಲ್ಲ. ಅತ್ತ ಬಳ್ಳಾರಿಯವರೇನೆಂದು ಯಾರಿಗೂ ಗೊತ್ತಿಲ್ಲ. ಹೈದರಾಬಾದಿನಲ್ಲಿ ಕರ್ನಾಟಕರೆಂದು ಕರ್ನಾಟಕದ ಭಾಷಾವಾರು ಪ್ರಾಂತಿಕ ವಿಭಾಗವನ್ನು ನಿರ್ಧರಿಸಲಿಕ್ಕೆ ಹೊರಟವರಿಗೇ ಹೊರತು ಇನ್ನಾವ್ಬರಿಗೆ ತಿಳಿದಿಲ್ಲ. ಒಬ್ಬರ ಭಾಷೆಯ ಪರಿಹಾಸವನ್ನು ಇನ್ನೊಬ್ಬರು ಮಾಡುವರು. ಹೀಗೆ ಪರಸ್ಪರತಿರಸ್ಕಾರವೂ, ಪರಿಹಾಸವೂ ಒಂದಾಗಿ, ನಮ್ಮೊಳಗಿನ ಭೇದಭಾವವನ್ನು ಮತ್ತಿಷ್ಟು ವೃದ್ಧೀಕರಿಸುತ್ತಿವೆ.

ಆದರೂ ಭಾಷೆಯ ಉದ್ಧಾರಕ್ಕಾಗಿಯೂ, ಸಮಾಜದ ಸೇವೆಗಾಗಿಯೂ ಅಲ್ಲಲ್ಲಿ ಮಾಸಿಕ, ಪಕ್ಷ, ಸಾಪ್ತಾಹಿಕ, ದೈನಿಕ ಈ ರೀತಿಯಲ್ಲಿ ಪತ್ರಿಕೆಗಳು ಹೊರಟು, ಜನತೆಯಲ್ಲಿ ವಿಚಾರೋದಯವನ್ನು ಮಾಡುವದು ಕರ್ನಾಟಕದ ಏಳಿಗೆಯ ಶುಭಸೂಚನೆ. ಆದರೆ, ಅಂತಹ ಪತ್ರಿಕೆಗಳಾದರೂ ಇತರ ಪ್ರಾಂತಗಳಷ್ಟು ಇಲ್ಲವೆಂದೂ, ಇತರ ಪ್ರಾಂತಗಳಲ್ಲಿರುವ ಪ್ರೋತ್ಸಾಹವೂ ಕರ್ನಾಟಕ ಪತ್ರಿಕೆಗಳಿಗಿಲ್ಲವೆಂದೂ, ನಮಗೆ ಕಾಣುತ್ತದೆ. ಮರಾಠಿಯಲ್ಲಿ ಹಲವು ದೈನಿಕ-ವಾರಪತ್ರಿಕೆಗಳಿವೆಯಲ್ಲದೆ, ಅವುಗಳಿಗೆ ಅನೇಕ ಚಂದಾದಾರರೂ ಇರುವರು. ಮಾಸಿಕ ಪತ್ರಿಕೆಗಳು ಕನ್ನಡಕ್ಕಿಂತಲೂ ಸುಂದರವಾಗಿಯೂ, ಸಮಯದಲ್ಲಿಯೂ ಹೊರಬೀಳುತ್ತಿವೆ. ಹಾಗೂ ಬಂಗಾಲೀ, ಹಿಂದೀ, ಮರಾಠಿ, ತೆಲುಗು ಭಾಷೆಗಳಲ್ಲಿ ಎಲ್ಲಾ ಪತ್ರಿಕೆಗಳೂ ಚೆನ್ನಾಗಿ ನಡೆಯುತ್ತಿವೆಯಲ್ಲದೆ, ಸಾಕಷ್ಟು ಚಂದಾದಾರರೂ ಇರುವರು ಕಾರಣವೇನೆಂದರೆ, ಕರ್ನಾಟಕದಲ್ಲಿದ್ದಷ್ಟು ಭೇದವು ಆ ಮೇಲಿನ ಭಾಷೆಗಳಿಗಿಲ್ಲ, ಮೇಲಿನ ನಾಲ್ಕು ಕಾರಣಗಳೂ ಈ ಪ್ರಾಂತ್ಯಗಳಲ್ಲಿ ಇಲ್ಲವೆಂದರೂ, ಸುಳ್ಳಾಗದು ಇದುದರಿಂದ ಪ್ರತಿ ಪತ್ರಿಕೆಗೆ ಕಾರ್ಯಕ್ಷೇತ್ರವು ದೊಡ್ಡದಿದ್ದು, ಪ್ರಚಾರವಾಗಲಿಕ್ಕೂ ಸುಲಭವಾಗುತ್ತಿದೆ. ಜನರೊಳಗೆ ವಾಚನಾಭಿರುಚಿಯು ಬೆಳೆಯಲಿಕ್ಕೂ ಕಾರಣವಾಗುತ್ತಿದೆ

ಆದದರಿಂದ, ಕರ್ನಾಟಕ ಪತ್ರಿಕೆಗಳ ಬೆಳವಣಿಗೆಯು ಮುಂದೆ ಸಾಗಬೇಕೆಂದಾದರೆ, ಮೇಲೆ ತೋರಿದ ಅಭಾವಗಳಿಂದುಂಟಾಗುವ ಪರಿಣಾಮವನ್ನು ಸಾಧ್ಯವಿದ್ದಷ್ಟು ಕಡಿಮೆ ಮಾಡಬೇಕು ಆಗ ಮಾತ್ರವೇ ಕರ್ನಾಟಕ ಪತ್ರಿಕೆಗಳು ಧೈರ್ಯವಾಗಿ ಬೆಳೆಯಬಹುದು. ಮತ್ತು ಕರ್ನಾಟಕದ ಈ ತರದ ಏಕೀಕರಣವು ಕರ್ನಾಟಕದ ಪತ್ರಿಕೆಗಳಿಂದಲೇ ಸಾಧ್ಯವಲ್ಲದೆ, ಬೇರಾವ ಉಪಾಯವೂ ನಮಗೆ ಕಾಣ ಬರಿಲ್ಲ

ಅದಕ್ಕಾಗಿ ಕರ್ನಾಟಕದ ಎಲ್ಲಾ ಪತ್ರಗಳ, ಪತ್ರಿಕೆಗಳ ಸಂಪಾದಕರೂ ಪ್ರಚಾರಕರೂ ಕೂಡಿ ಒಂದು ಪರಿಷತ್ತನ್ನು ಜರುಗಿಸಿ, ಕನ್ನಡ ನಾಡಿನ ಏಕೀಕರಣವನ್ನು ಸಾಧಿಸಬೇಕಾಗಿ ನಾವು ಸೂಚಿಸುವೆವು ಇಂತಹ ಪರಿಷತ್ತಿನ ಉದ್ದೇಶವನ್ನು ಬಹಳ ಜಾಗರೂಕತೆಯಿಂದ ರೂಪಿಸಬೇಕು ಅದು ಪತ್ರಿಕೆಗಳ ಸ್ವಾತಂತ್ರ್ಯಾಭಿಪ್ರಾಯಗಳನ್ನು ನಿರ್ಬಂಧಿಸುವಂತಹುದಾಗಿರಬಾರದು ಕೇವಲ ಕರ್ನಾಟಕದ ಏಕೀಕರಣಕ್ಕಾಗಿಯೂ ಪತ್ರ-ಪತ್ರಿಕೆಗಳ ಅಭಿವೃದ್ಧಿಗಾಗಿಯೂ ಯಾವ ತರದಲ್ಲಿ ಪತ್ರಿಕೆಗಳು ಕೆಲಸ ಮಾಡಬೇಕೆಂದೂ, ಜನರಲ್ಲಿ ವಾಚನಾಭಿರುಚಿಯನ್ನು ಯಾವ ರೀತಿಯಲ್ಲಿ ಉಂಟುಮಾಡಬಹುದೆಂದೂ, ಎಲ್ಲಾ ಪತ್ರಿಕೆಗಳು ಯಾವ ಭಾಷಾಶೈಲಿಯನ್ನು ಉಪಯೋಗಿಸಬಹುದೆಂದೂ ಆ ಪರಿಷತ್ತಿನಲ್ಲಿ ವಿಚಾರಿಸಬೇಕು. ಹೀಗೆ ವಿಶಾಲವಾದ ಉದ್ದೇಶವನ್ನಿಟ್ಟು, ಎಲ್ಲಾ ಪತ್ರಕರ್ತರೂ ಅನ್ಯೋನ್ಯ ಅಭಿಪ್ರಾಯ ಭೇದಗಳನ್ನು ಮರೆತು, ಸರ್ವಸಮ್ಮತವಾದ ಈ ಮೇಲಿನ ಉದ್ದೇಶಗಳನ್ನು ಚೆನ್ನಾಗಿ ಚರ್ಚಿಸಿ, ಕಾರ್ಯಕ್ರಮವನ್ನು ರೂಪಿಸಿದರೆ ಬಹು ಉತ್ತಮವಾಗುವದೆಂದು ನಮ್ಮ ಭಾವನೆಯಿದೆ

ಇನ್ನೊಂದು ಎಚ್ಚರಿಕೆಯ ಮಾತಿದೆ. ಕನ್ನಡದಲ್ಲಿ ಹೆಚ್ಚಿನ ಪತ್ರಗಳು ರಾಷ್ಟ್ರೀಯ ಸಭೆಯ ಕಾರ್ಯಕ್ರಮವನ್ನು ಅನುಮೋದಿಸುವಂಥವುಗಳಾಗಿದ್ದು ಅಂತಹ ರಾಜಕೀಯ ಅಭಿಪ್ರಾಯಗಳನ್ನು ಈ ಪರಿಷತ್ತಿನ ಮೂಲಕ ಇತರರ ಮೇಲೂ ಹೊರಿಸಬಹುದೆಂದು ಆಲೋಚಿಸಬಹುದು. ಭಾವನಾ ಸ್ವಾತಂತ್ರ್ಯವನ್ನು ನಾವು ಹೇಗೆ ಇಚ್ಛಿಸುತ್ತೇವೋ, ಹಾಗೆಯೇ ಇತರರೂ ಇಚ್ಛಿಸುವರು. ಹಾಗೆ ಅಭಿಪ್ರಾಯ ಭೇದವಿದ್ದವರು ನಮ್ಮ ಪರಿಷತ್ತಿನಿಂದ ಹೊರಗಿರುವದಲ್ಲ. ಎಲ್ಲರೂ ಇದರೊಳಗೆ ಕಲೆತಿರಬೇಕಾದುದರಿಂದ, ಈ ಪರಿಷತ್ತನ್ನು ಯಾವದೊಂದು ರಾಜಕೀಯ ಪಕ್ಷದ ಪತ್ತಾಯಕ್ಕೆ ಗಂಟಿಮಾಡಬಾರದು. ಈ ಉದ್ದೇಶದಿಂದ ವರುಷಕ್ಕೊಂದು ಬಾರಿ ಇಂತಹ ಪರಿಷತ್ತು ಕೂಡಿ ಯೋಗ್ಯ ಕಾರ್ಯಕ್ರಮವನ್ನು ರೂಪಿಸಿ, ಅನುಸರಿಸಲು ಪ್ರಯತ್ನಪಟ್ಟಲ್ಲಿ, ದೇಶದ ಭಾಷೆಯ ಮತ್ತು ಭಾವನೆಗಳ ಏಕೀಕರಣವಾಗಿ ಪತ್ರ ಪತ್ರಿಕೆಗಳ ಪ್ರಚಾರವೂ ಹೆಚ್ಚುವದೆಂದು ನಮ್ಮ ಅಭಿಪ್ರಾಯವಿದೆ. ಈ ವಿಷಯದಲ್ಲಿ ಇತರ ಪತ್ರಿಕಾಕರ್ತರು ಏನು ಹೇಳಲಿರುವರೆಂದು ನಾವು ತಿಳಿಯಲು ಅತ್ಯಾತುರದಿಂದಿರುವೆವು.

(ಸತ್ಯಾಗ್ರಹೀ)

ದಿವಾಣರ ಸ್ಥಿತಿ.

(ಹಿನೇ ಪಾನಿನಿಂದ ಮುಂದರಿದದ್ದು.)

ತರಬೇಕೆಂದು ಈಗ ಮುತ್ತೊಂದು ಠರಾವನ್ನು ತಂದರೆ, ಆ ಠರಾವಿಗೆ ನೀವು ಅನುಕೂಲ ಮತಕೊಡುವಿರೇನು?

ಉ:— ಠರಾವಿನ ಪಕ್ಕಾ ಸ್ವರೂಪವನ್ನು ತಿಳಕೊಂಡ ಹೊರತು, ನಾನು ಈ ಪ್ರಶ್ನೆಯನ್ನು ಉತ್ತರಿಸಲಾರೆ.

ಪ್ರ:— ಸುಪರಿಂಟೆಂಡೆಂಟ ಕಾರ್ಟರರವರಿಗೆ ದಂಡಿಸ ಬೇಕೆಂಬ ಠರಾವಿಗೆ ನೀವು ಅನುಕೂಲ ಮತ ಕೊಟ್ಟಿದ್ದಿರೇನು ?

ಉ.— ಹೌದು, ನಾನು ಅನುಕೂಲವಾಗಿ ಮತ ಕೊಟ್ಟಿದ್ದೆ.

ಪ್ರ:— ದಿವಾಣರಿದ್ದದರಿಂದ, ನೀವು ಯಾವಾಗಲೂ ಸರಕಾರದ ಬದಿಗೇ ಮತ ಕೊಡಬೇಕೆಂದಿರೆಯೋ ?

ಉ:— ಅಲ್ಲ. ನಾನು ಮತದಾನ ಮಾಡದೆ, ತಟಸ್ಥ ವೃತ್ತಿಯನ್ನು ಧರಿಸಬಹುದು. ಆದರೆ, ಸರಕಾರದ ವಿರುದ್ಧವಾಗಿ ಎಂದೂ ಮತ ಕೊಡಲಾರೆ.

ಪ್ರ:— ನೀವು ತಟಸ್ಥರಿರಬೇಕಾಗಿತ್ತು

ಉ:— ಯಾವಾಗಲೂ ತಟಸ್ಥವೃತ್ತಿಯನ್ನು ಧರಿಸುವದು ಯಾರಿಗೂ ಸಾಧ್ಯವಿಲ್ಲ. ಅತಿ ಅಗತ್ಯದ ಪ್ರಶ್ನೆಗಳಿದ್ದಾಗ ಮಾತ್ರ ತಟಸ್ಥವೃತ್ತಿಯನ್ನು ಧರಿಸಬೇಕಾಗುತ್ತದೆ.

ಪ್ರ:— ನಿಮ್ಮ ಮನೋದೇವತೆಗೆ ವಿರೋಧವಾಗಿ ನೀವು ಮತ ಕೊಟ್ಟಿರಿ.

ಉ.— ಇಂಥ ಪ್ರಸಂಗಗಳಲ್ಲಿ ಮನೋ ದೇವತೆಯ ಪ್ರಶ್ನೆಯಿಲ್ಲ. ಆದರೆ, ಅದೊಂದು ವಹಿವಾಟಿಯು.

ಪ್ರ:— ಡಾ। ಕಾಬುಡಿಗಾರವರ ಬಗ್ಗೆ ಕೌನ್ಸಿಲಿನಲ್ಲಿ ಸರಕಾರವು ಪ್ರದರ್ಶಿಸಿದ ಧೋರಣದಿಂದ, ಸ್ಥಲವಾನದ ಮೇಲಾದರೂ, ನಿಮಗೆ ಸಮಾಧಾನವಾಯಿತೋ ?

ಉ:— ಇಲ್ಲ; ನನಗೆ ಸಮಾಧಾನವಾಗಲಿಲ್ಲ.

ಪ್ರ:— ಈ ಪ್ರಕರಣದ ಬಗ್ಗೆ ಸರಕಾರವು ಕೊಟ್ಟ ಉತ್ತರಗಳಿಂದ ನಿಮಗೆ ಸಮಾಧಾನವಾಯಿತೋ ?

ಉ:— ವಿಶಿಷ್ಟ ಪ್ರಶ್ನೋತ್ತರಗಳು ನನಗೆ ನೆನಪಿಗೆ ಬರುವದಿಲ್ಲ.

ಪ್ರ.— ಈ ಕೆಳಗಿನ ಉದಾಹರಣೆಗಳಿಂದ ನಿಮಗೆ ನೆನಪಿಕೆಯಾಗುವಂತಿದೆ. ಸುಪರಿಂಟೆಂಡೆಂಟ ಕಾರ್ಟರರವರಿಗೆ ಹಿಂದೆ ಏನು ಶಿಕ್ಷೆಯಾಗಿದೆ ? ಎಂದು ಪ್ರಶ್ನೆಯಾಗಲು, ಸರ್ ಮೊರಿಸ ಹೇವರ್ಡರವರು ಕೆಲವೊಂದು ಕ್ರೂರ ಅಪರಾಧಕ್ಕಾಗಿ ಕ್ಷುದ್ರ ಶಾಸನವಾಯಿತೆಂದು ಉತ್ತರವನ್ನಿತ್ತರು. ಅದೇ ಪ್ರಶ್ನೆಯನ್ನು ಕೌನ್ಸಿಲಿನ ಇನ್ನೊಂದು ಅಧಿವೇಶನದಲ್ಲಿ ಪುನಃ ಕೇಳಲು, ಸುಪರಿಂಟೆಂಡೆಂಟ ಕಾರ್ಟರರವರಿಗೆ ೫ ತಿಂಗಳುಗಳ ವರೆಗೆ ಡಿಗ್ರೇಡ ಆಗಿತ್ತೆಂದು ಸರ್ ಮೊರಿಸ ಹೇವರ್ಡರವರು ನುಡಿದರು

ಉ.— ನನ್ನ ಸಹಕಾರಿಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ನಾನು ಟೀಕಿಸಲಿಚ್ಛಿಸುವದಿಲ್ಲ.

ಪ್ರ:— ಸುಪರಿಂಟೆಂಡೆಂಟ ಕಾರ್ಟರರವರು ತಪ್ಪು ತಿಳುವಳಿಕೆಯಿಂದಾಗಲಿ, ಅವಿವೇಕದಿಂದಾಗಲಿ ಡಾ। ಕಾಬುಡಿಯಾರವರಿಗೆ ಕಾಡಿದರೆಂದು ಸರಕಾರವು ಒಪ್ಪುತ್ತಿರುವಾಗ, ಡಾಕ್ಟರರವರಿಗೆ ಒದಗಿದ ಅತ್ಯಕ್ಲೇಶಗಳಬಗ್ಗೆ ಸರಕಾರವು ಸಹಾನುಭೂತಿಯನ್ನಾಗಲೀ, ವ್ಯಸನವನ್ನಾಗಲೀ ಪ್ರದರ್ಶಿಸುವದು ವಿಹಿತವಿದ್ದಿತ್ತೇನು ?

ಉ:— ನಾನು ದುಃಖ ಪ್ರದರ್ಶನಕ್ಕೆ ಏನೂ ಮಹತ್ವ ಕೊಡುವದಿಲ್ಲ.

— ಶ್ರೀಮತಿ ಸರೋಜಿನಿ ದೇವಿಯವರು ಸೋಲಿನಲ್ಲಿ ಪುನಃ ಅಸ್ವಸ್ಥರಾದ ವರ್ತಮಾನ.

— ೯ನು ಲೀಗಿನ ಜಲಂಧರದೊಳಗಿನ ಅಧಿವೇಶನವನ್ನು ಏನು ಸಮಯದಲ್ಲಿ ಗಳಿಳಬೇ ಕಲಮಿನನ್ವಯ ಪ್ರತಿಬಂಧಿಸಿ, ಸಭಾಮಂಟಪವನ್ನ ಪೋಲೀಸರು ವಹಿಸಿಕೊಂಡದ್ದರಿಂದ, ಊರ ಹೊರಗೆ ಸಭೆಯಾಗಿ, ಸಮಯೋಚಿತ ಠರಾವುಗಳು ಪಾಸಾದವು. ಡಾ, ಮೌ। ಮಹಮ್ಮದ ಅಲ್ಲಿಯವರು ಲೀಗಿಗೆ ರಾಷ್ಟ್ರೀಯ ಸಭೆಯು ಸಹಾಯ ಮಾಡುವದೆಂದು ರಾಷ್ಟ್ರೀಯ ಸಭೆಯ ತರ್ಫೆನಿಂದ ಅಭಿವಚನವನ್ನಿತ್ತಿರುವರು.

ಪ್ರಯಾಣಸ್ಥರ ಸೋಯಿಯಾಯಿತು.

ಡಿ. ಪಿ. ಪಿ. ಮೋಟಾರಸರ್ವಿಸ ಕಂಪನಿ, ಹಾವೇರಿ.

ಹಾವೇರಿಯಿಂದ ಶಿರ್ಶಿಗೆ ಮತ್ತು ಶಿರ್ಶಿಯಿಂದ ಹಾವೇರಿಗೆ.

ತಾರೀಕು ೧೫—೧೧—೧೯೨೩ ನೇ ಗುರುವಾರದಿಂದ ಶುರುವು.

ಹೊರಡುವ ದಿವಸದ ಟ್ಯಾಮ್.

ಶಿರ್ಶಿಯಿಂದ ಹಾವೇರಿಗೆ.	ಹಾವೇರಿಯಿಂದ ಶಿರ್ಶಿಗೆ.
ಗುರುವಾರ, ರವಿವಾರ, ಮಂಗಳವಾರ ಈ ದಿವಸಗಳಲ್ಲಿ ಬೆಳಗ್ಗಿನ ೭ ಘಂಟೆಗೆ ಶಿರ್ಶಿಯಿಂದ ಹೊರಟು, ಹಾವೇರಿಗೆ, ಬೊಂಬೈಗೆ ಹೋಗುವ ಮೇಲಿಗೆ ಮುಟ್ಟಿಸುತ್ತದೆ.	**ಗುರುವಾರ, ರವಿವಾರ, ಮಂಗಳವಾರ** ಈ ದಿವಸಗಳಲ್ಲಿ ಹಾವೇರಿಯಿಂದ ಸಾಯಂಕಾಲದ ಬೊಂಬೈ ಮೇಲ ನೋಡಿ, ೫॥ ಘಂಟೆಗೆ ಹೊರಡುತ್ತದೆ.

ಹಾವೇರಿಯಿಂದ ಹಾನಗಲ್ಲಿಗೆ ಮೋಟಾರ ಬಂಡಿಯು ಪ್ರತಿ ದಿವಸ ಹೋಗಿ ಬರುತ್ತದೆ.

ಟಿಕೇಟುಗಳು ಶಿರ್ಶಿಯಲ್ಲಿ **ವೆಂಕಟರಮಣ ನಾರಾಯಣ ಭಟ್ಟ, ಹಂದಿಗೋಣಕರ** ಇವರಲ್ಲಿ, ವ ಹಾವೇರಿಯಲ್ಲಿ ಸ್ಟೇಶನದ ಹತ್ತರಿರುವ **ನಮ್ಮ ಕಂಪನಿ ಆಫೀಸಿನಲ್ಲಿ ಸಿಗುತ್ತವ.**

ಅಲ್ಲದೆ ಪ್ಯಾಸೆಂಜರರಿಗೆ ಉಳಕೊಳ್ಳುವ ಸೋಯಿ ಮಾಡಿರುತ್ತದೆ ಇದಲ್ಲದೆ ಗೋಕರ್ಣ, ಜೋಗ, ವಗೈರೆ ಬೇಕಾದ ಕಡೆಗೆ ಹೋಗಲಿಕ್ಕೆ ಸ್ಪೇಶಲ್ ಭಾಡೆಯಿಂದ ಸಿಗುತ್ತದೆ.

ಮೇನೇಜರ— ಬಿ. ವ್ಹಿ. ಪುಸಾಳಕರ.

Twelve Tissue Remedies.

ಈರಾರು ಲವಣಗಳು

ಕೆಳಗೆ ಬರೆದ ಕ್ರಯಕ್ಕೆ ಸಿಗುವವು.

ನಂಬ್ರ ೧ರಿಂದ ೧೨ರ ವರೆಗೆ

೧ಔನ್ಸ ಬಾಟ್ಲಿಗೆ ಕ್ರಯ ರೂ. ೦-೧೦-೦,
,, ,, ,, ೨ ಔನ್ಸ ಬಾಟ್ಲಿಗೆ ,, ರೂ. ೧-೦-೦.
,, ,, ,, ೪ ಔನ್ಸ ಬಾಟ್ಲಿಗೆ ,, ರೂ. ೧-೧೨-೦.

ಇವಲ್ಲದೆ, ಗಜಕರ್ಣ, ಕಜ್ಜಿ, ತಲೆಹೊಡತ, ಚಳಿಜ್ವರ, ಜ್ವರಗಡ್ಡೆ ಮೊದಲಾದವುಗಳಿಗೆ ಅತ್ಯುತ್ತಮ ಔಷಧಗಳು ನಮ್ಮಲ್ಲಿ ದೊರೆಯುವವು. ವಿಶೇಷ ಮಾಹಿತಿ ಪತ್ರದ್ವಾರ ಯಾ ಸಮಕ್ಷ.

ಪತ್ತೆ:— ಎನ್. ಈ. ವರ್ಗೀಝ್,
ಹಳದೀಪುರ.
(ಉ. ಕಾನಡಾ)

ನೌಕರರು ಬೇಕು.

" ಮುಂಬಯಿ, ಪರೇಲ್, ಕಾಳಾಚೌಕಿ, ಟ್ರಾಮ ನಾಕೆಯಲ್ಲಿರುವ ಜಿ. ವಿ. ಕಾಮತರ ವಿಶ್ರಾಂತಿಭವನದಲ್ಲಿ ಕೆಲಸ ಮಾಡಲಿಕ್ಕೆ ಚುರುಕಾದ ಯೌವನಸ್ಥರು ಈಗಲೇ ಬೇಕು. ತಿಂಗಳಿನ ಪಗಾರ ಕೆಲಸ ನೋಡಿ ಕೊಡುವದು. ಸೇರಲಿಚ್ಛಿಸುವವರು ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ತಿಳಕೊಳ್ಳಬಹುದು. "

Address:— **G. V. Kamath,**
Tea-shop, Kalachowki Naka,
PAREL, *No. 12*, *Bombay*.

ಶುದ್ಧ ಖಾದಿ

ವಿಕ್ರಿಗೆ ತಯಾರ.

ಹೊನ್ನಾವರ ತಾಲೂಕಾ ಕೊಂಗ್ರೆಸ ಕಮಿಟಿಯಿಂದ ಕೈಮಗ್ಗದ ಕೈರಾಟಿಯ ಶುದ್ಧ ನೂಲಿನ ಖಾದಿ ಮಾರಾಟಕ್ಕೆ ಕೊಂಗ್ರೆಸ ಆಫೀಸಿನಲ್ಲಿ ಸಿಗುವದು.

ಹೊನ್ನಾವರ, ೧೦-೧೨-೨೩ } ಸೆಕ್ರೆಟರಿ, ತಾ. ಕಾ. ಕಮಿಟಿ, ಹೊನ್ನಾವರ.

कारवारांत आयुर्वेदिक पाठविद्यालय

उघडण्यांत येणार.

सन १९२४ च्या जानेवारी महिन्या पासुन कारवार येथें वरील पाठशाळा उघडण्यांत येणार आहे. आयुर्वेदांतील प्रत्येक विषय प्रमाणपूर्वक व सशास्त्र शिकविण्यांत येईल. पुर्ण आयुर्वेदिक शिक्षण तीन वर्षांत शिकविलें जाईल. विद्यार्थी निदान मराठी पांच इयत्ता शिकलेला व भांडारकरकृत, संस्कृत तीन पुस्तकें पठलेला असावा. अथवा आयुर्वेद औषध पुस्तकांतील श्लोकांचा अर्थ समजून घेण्या इतका संस्कृत ज्ञान असलेला असावा. त्यांचे वय १८ ते २२ वर्षांपर्यंत व प्रकृति सदृढ असावी. सदर पाठशाळेचे वर्ग १ जानेवारी १९२४ पासुन सुरू होतील. फीचे दर १ ल्या वर्षास दरमहा ६ रुपये, दुसऱ्यास दरमहा

१० रुपये व तिसऱ्या वर्षात दरमहा १२ रुपये प्रमाणे ठरविली आहे पहिल्या वर्षात फक्त २५ विद्यार्थीच निवडण्यात येतील. विद्यार्थ्यांनी आपले अर्ज ता १५ डिसेंबर च्या आत पाठविले पाहिजेत अर्जासोबत प्रवेश फीचे ३ रुपये पाठविण्यात आले पाहिजेत. ज्यांची निवड होणार नाहीं त्यांची फी परत करण्यात येईल पत्रव्यवहार मराठीत अगर कानडी मध्ये करावा.

प्रत्येक वर्षात शिकविले जाणारे विषय खालील प्रमाणे —

पहिले वर्ष

१ प्रत्येक वनस्पतीचे गुण धर्मपरिचय वर्णन मराठी आणि प्रत्येक औषधीचे अनेक भाषांतील नामाहि वगैरे

२ निदान शास्त्र त्यात प्रत्येक रोगाचे निदान हेतु समप्राप्ति आणि त्याप्रमाणे परीक्षा करण्यास शिकविले जाईल

३ मद्य ... न शास्त्रात रोग गणनेत आलेले विषय आयाप्यात समक्ष प्रयोग करून दाखविले जातील

दुसरे वर्ष

१ प्रत्येक रोग वर निरनिराळ्या शास्त्रोक्त पद्धतीने चिकित्सा (उपचार) करण्यास शिकविले जाईल

२ प्रत्येक वनस्पत्यादिंचे गुणदोष व सत्व विचार शिकविले जातील

३ प्रत्येक रोगावर पथ्यापथ्य विषय शिकविले जातील

तिसरे वर्ष

१. आर्य शरीर शास्त्र, कला, स्नायु, मज्जातंतु वाहिनी रक्तपिंड रुधिराभिसरण चक्रादि प्रत्येक भागात होणाऱ्या निरनिराळ्या क्रिया प्रत्येक भागाची नावे, त्याच प्रमाणें प्रत्येक भाग चित्र रूपाने 'काढून घेणें व तेच विषय त्यांना वर्णन करून स्पष्ट करून देणे' वगैरे

२. प्रत्येक रोगावरील हिमफाटकाऱ्यापासून रसायना पर्यंत तयार करण्या चे प्रयोग औषधालयांत समक्ष करून दाखविले जातील

३ रसायनें व कुपिस्त रसायने यांची संपूर्ण माहिती आणि प्रत्येक विषया विषयीं संशयनिवृत्ति स्पष्ट रितानें करण्यात येईल.

विशेष माहिती— खालील पत्त्यावर पत्रद्वारें अगर समक्ष मिळेल

वि सू उमेदवारांकरितां राहण्याची सोय करून देता येईल.

शिकविणारे— वैद्य जे. एफ फर्नांडिस. आर्योषधालय, कारवार.

पत्ता— व्यवस्थापक, आयुर्वेदिक पाठविद्यालय, कारवार

"ಸಂಶಯಾತ್ಮಾ ವಿನಶ್ಯತಿ."

ತಿಂಗಳಿಗೆ ರೂಪಾಯಿ ೧೦೦ರಿಂದ ೫೦೦ರ ವರೆಗೆ ಗಳಿಸಿರಿ.

ಬೇಕಾದಲ್ಲಿ ಸುಲಭವಾಗಿ ಗಳಿಸಿರಿ.

ರೂಪಾಯಿ ೧೯-೧೩-೦ ಖರ್ಚುಮಾಡಿರಿ ಮತ್ತು ಸ್ವತಂತ್ರರಾಗಿರಿ.

ಸಬಕಾರವು ಪ್ರತಿಯೊಬ್ಬ ಮಾನವನಿಗೆ ಅವಶ್ಯವಿದ್ದ ವಸ್ತುವು ಅವನು ಬೇಕಾದರೆ, ಶ್ರೀಮಂತನಿರಲಿ, ಬಡವನಿರಲಿ, ಹಳ್ಳಿಗನಿರಲಿ, ಪಟ್ಟಣಿಗನಿರಲಿ, ಪಾಶ್ಚಾತ್ಯ ಮಾದರಿಯ ಸಬಕಾರವನ್ನು ತಯಾರಿಸುವ ನಮ್ಮ ಕ್ರಮವು ಅತಿ ಉತ್ತಮವೆಂದು ಖ್ಯಾತಿಹೊಂದಿದೆ. ಈ ಕ್ರಮದಿಂದ ಶ್ರೇಷ್ಠ, ಕನಿಷ್ಠ ಪ್ರತಿಯ, ಮೈಗೆ ಹಚ್ಚುವ ಯಾ ಅರಿವೆಗೆ ಹಾಕುವ, ಪರಿಮಳದ ಹಾಗು ಬಣ್ಣಗಳ ಸಬಕಾರವನ್ನು ಸುಲಭವಾಗಿ ಯಾರೂ ತಯಾರಿಸಬಲ್ಲನು, **ಈ ಕ್ರಮಕ್ಕೆ ಬೆಂಕಿಯ ಅವಶ್ಯಕತೆಯಿರುವದಿಲ್ಲ.** ನಮ್ಮ ವಿದ್ಯಾರ್ಥಿಗಳು ಯತ್ನಮಾಡುವಾಗ ನಾವು ಬಲು ಜಾಗ್ರತೆಯಿಂದ ಅವರನ್ನು ನಿರೀಕ್ಷಿಸಿ, ಅವರಿಗೆ ಬೇಕಾದ ಮಾಹಿತಿಯನ್ನು ಪೂರೈಸುತ್ತೇವೆ ಈ ಬಗ್ಗೆ ನಮಗೆ ಅನೇಕರು ಶಿಫಾರಸು ಪತ್ರಗಳನ್ನು ಕಳುಹಿಸಿರುವರು. ಈ ಪೂರ್ಣ ಕ್ರಮವನ್ನು ರೂ ೧೯-೧೩-೦ಕ್ಕೆ ವ್ಹಿ. ಪಿ. ಮೂಲಕ ಕಳಿಸುವೆವು. ಈ ಕ್ರಮವು ನಿಯಮಿತ ಮಂದಿಗಳಿಗೆ ಮಾತ್ರ ಕಳಿಸಲ್ಪಡುವದು.

ನಿರಾಶೆ ಹೊಂದಬಾರದೆಂಬ ಇಚ್ಛೆ ಇದ್ದವರು ಕೆಳಗಿನ ಪತ್ತೆಗೆ ಕೂಡಲೆ ಬರೆಕೊಳ್ಳತಕ್ಕದ್ದು.

International Business Corporation.
Dept. (F) *5357, Gowliguda*, **Hyderabad.** (*Dn*)

ಅಮೃತಾಂಜನ.

ಇದರ ಉಪಯೋಗದಿಂದ, ನಾಶವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು ಕಿಮ್ಮತು ೧೦ ಆಣೆ ವ್ಹಿ ಪಿ ಖರ್ಚು ಬೇರೆ

ಅಮೃತಾಂಜನ ಡಿಪೋ, ಫೋರ್ಟ್, ಮುಂಬಯಿ

ಹಸನಾದ ಸಾಗುವಳಿಯಲ್ಲಿಯೇ ಸಂಪತ್ತಿಯು



ಅಡಕವಾಗಿರುವದು.

ನಮ್ಮ ಕಾರಖಾನೆಯಲ್ಲಿ ತಯಾರಾಗುವ ಸುಧಾರಿಸಿದ ಕಬ್ಬಿಣ ನೇಗಿಲಗಳೂ, ಕಬ್ಬಿಣ ಗಾಣಗಳೂ, ಇವೇ ಮುಂತಾದ ವ್ಯವಸಾಯದ ಮುಟ್ಟುಗಳನ್ನು ತರಿಸಿಕೊಂಡು ನಿಮ್ಮ ಒಕ್ಕಲತನವನ್ನು ಬೆಳೆಸಿಕೊಳ್ಳಿ. ೨೫ ವರ್ಷಗಳ ಅನುಭವದಿಂದ ಈ ಸಾಮಾನುಗಳನ್ನು ತಯಾರ ಮಾಡಿರುತ್ತೇವೆ. ೮೦,೦೦೦ ರೈತರು ಕೂಡುತ್ತಾರೆ ಇಂದೇ ಪತ್ರ ಬರೆದು 'ವ್ಹಿ' ಎಂಬ ಕ್ಯಾಟಲಾಗು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ)

Reg. No. B. 1270. Thursday, 15th November 1923.

ವರ್ಷ ೮. ಸಂಚಿಕೆ ೪.

ಕಾನಡಾವೃತ್ತ.

THE KANARA NEWS.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.

ಮನೆಯಾರ್ಡರಿಯಿಂದ ರೂ. 3-0-0.

ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಮ್ಯಾಟರ (೧೫ ಎಮ್ ಉದ್ದ) ೮ ಸಾಲುಗಳವರೆಗೆ ರೂ. 1-0-0

೮ ನಂತ್ರ ಪ್ರತಿಸಾಲಿಗೆ 0-2-0.

ಕಡಿಂಗದ ಸಾಲು ಎಷ್ಟು ತೊಡ್ತಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಟಾಕ್ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖ ೧೫ ಮಾಹೆ ನವಂಬರ ಸನ್ ೧೯೨೩ ನೇ ಇಸವಿ.)—

हिंदुस्थानातील रहिवाशांस ज्याप्रमाणे हिंदुस्थानची हवा त्याप्रमाणेच हे औषध हिंदुस्थानातील लोकांस ज्यास्त फायदेशीर आहे.

द्राक्षासव- { दीड रतलची किंमत २ रुपये;

रामबाण औषधें

सर्दि घालविणारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

विण्यास रुचिकर.

क्याटलाग मागवा,

झंडु फार्मास्युटिकल वर्क्स लिमिटेड, मुंबई नं. १३

ಡಾ। ಮಾಸೂರಕರರ

ಸುಧಾಂಜನ.

ಅಂಜನುಗಳಿಗೆಲ್ಲ ಅರಸು.

ತಲೆಶೂಲಿ, ವಾತ ವೇದನೆ, ಕೆಮ್ಮು, ಹಲ್ಲು ನೋವು ಇತ್ಯಾದಿಗಳಿಗೆ ಕ್ಷಿಪ್ರ ಗುಣಕಾರಿ ಮದ್ದು ಬೆಲೆ ೭ ಆಣೆ ಮಾತ್ರ. ವ್ಯಾಪಾರಿಗಳಿಗೆ ವಿಶೇಷ ಸವಲತು ಹೆಚ್ಚಿನ ಮಾಹಿತಿ ಏಜಂಟರಿಂದ.

ಏಜಂಟ್ಸ್— ನಾಗರ್ಕಟ್ಟೆ ಬ್ರದರ್ಸ್, ಸುಧಾಂಜನ ಡಿಪೋ, ಕುಮಟಾ. (ಜಿಲ್ಹಾ ಕಾರವಾರ)

ಶುದ್ಧ ರೋಮದ ಧಾವಳಿಗಳು.

4 ಮೊಳ ಉದ್ದ	1½ ಮೊಳ ಅಗಲ ರೂ.	1½ ರಿಂದ 2 ವರೆಗೆ						
5	,,	,,	1½	,,	,,	,,	1-10-0 -5	,,
6	,,	,,	1½	,,	,,	,,	2½ —6	,,
8	,,	,,	2	,,	,,	,,	3½ —10	,,
12	,,	,,	2½	,,	,,	,,	6 —12	,,
16	,,	,,	2½	,,	,,	,,	9 —16	,,

ಇವುಗಳಲ್ಲದೆ ಶುದ್ಧ ಖದ್ದರ್ ರೇಶಮಡಿಗಳು, ನಾರ್ಮಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಜಾಘಂಟೆ, ತಾಳ, ಪನ್ನೀರ್‌ದಾನಿ, ಆಟದ ಸಾಮಾನುಗಳು, ದೇವರ ಮತ್ತು ಗಾಂಧಿ ಮುಂತಾದವರ ಪಟಗಳಿರುವ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ಯೋಗ್ಯ ಕ್ರಯಕ್ಕೆ ದೊರೆಯುವವು ಕ್ಯಾಟಲಾಗ್ ಇನಾಂ.

ವಿಳಾಸ:— ಎಸ್ ಯು ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

1924 ನೇ ಇಸವಿಯ ಸ್ವರಾಜ್ಯ ಡ್ಯಾರಿ.

ಸಂಪಾದಕ— ಡಿ. ಕೆ ಭಾರದ್ವಾಜ, ವಿದ್ಯಾಭೂಷಣ

ರಾಜಕೀಯ, ಆರ್ಥಿಕ, ವ್ಯಾಪಾರ, ಸ್ವದೇಶಿ, ಕೈಗಾರಿಕೆ ಮೊದಲಾದ ವಿಷಯಗಳ ಹೊಸ ಸಂಗ್ರಹ ದೇಶಭಕ್ತರ ನವೀನ ಭಾವಚಿತ್ರಗಳು! ಪ್ರತಿಯೊಬ್ಬರೂ ಅಗತ್ಯವಾಗಿ ಉಪಯೋಗಿಸತಕ್ಕದ್ದು.

ನಮ್ಮಲ್ಲಿ ಯಾವತ್ತೂ ಪೇಟೆಂಟ್ ಔಷಧ ಸ್ಪೆಶನರಿ ವಗೈರೆ ಹೊಸ ಸ್ಟಾಕ ಬಂದಿದೆ. ತ್ವರೆಮಾಡಿರಿ!

ದಿ. ನ್ಯೂ. ಎಂಪೋರಿಯಮ್, ಜನರಲ್ ಮರ್ಚಂಟ್ಸ, ಹೊನ್ನಾವರ.

ಪ್ರಯಾಣಸ್ಥರ ಸೋಯಿಯಾಯಿತು.

ಡಿ. ಪಿ. ಪಿ. ಮೋಟಾರಸರ್ವಿಸ ಕಂಪನಿ, ಹಾವೇರಿ.

ಹಾವೇರಿಯಿಂದ ಶಿರ್ಶಿಗೆ ಮತ್ತು ಶಿರ್ಶಿಯಿಂದ ಹಾವೇರಿಗೆ.

ತಾರೀಖು ೧೫—೧೧—೧೯೨೩ ನೇ ಗುರುವಾರದಿಂದ ಶುರುವು.

ಹೊರಡುವ ದಿವಸ ವ ಟ್ಯಾಮ್.

ಶಿರ್ಶಿಯಿಂದ ಹಾವೇರಿಗೆ

ಗುರುವಾರ, ರವಿವಾರ, ಮಂಗಳವಾರ ಈ ದಿವಸಗಳಲ್ಲಿ ಬೆಳಿಗ್ಗಿನ ೩ ಘಂಟೆಗೆ ಶಿರ್ಶಿಯಿಂದ ಹೊರಟು, ಹಾವೇರಿಗೆ, ಬೊಂಬೈಗೆ ಹೋಗುವ ಮೇಲಿಗೆ ಮುಟ್ಟಿಸುತ್ತದೆ.

ಹಾವೇರಿಯಿಂದ ಶಿರ್ಶಿಗೆ.

ಗುರುವಾರ, ರವಿವಾರ, ಮಂಗಳವಾರ ಈ ದಿವಸಗಳಲ್ಲಿ ಹಾವೇರಿಯಿಂದ ಸಾಯಂಕಾಲದ ಬೊಂಬೈ ಮೇಲ ನೋಡಿ, ೫॥ ಘಂಟೆಗೆ ಹೊರಡುತ್ತದೆ.

ಹಾವೇರಿಯಿಂದ ಹಾನಗಲ್ಲಿಗೆ ಮೋಟಾರ ಬಂಡಿಯು ಪ್ರತಿ ದಿವಸ ಹೋಗಿ ಬರುತ್ತದೆ.

ಟಿಕೇಟುಗಳು ಶಿರ್ಶಿಯಲ್ಲಿ ವೆಂಕಟರಮಣ ನಾರಾಯಣ ಭಟ್ಟ, ಹಂದಿಗೋಣಕರ ಇವರಲ್ಲಿ, ವ ಹಾವೇರಿಯಲ್ಲಿ ಸ್ಟೇಶನದ ಹತ್ತರಿರುವ ನಮ್ಮ ಕಂಪನಿ ಆಫೀಸಿನಲ್ಲಿ ಶಿಗುತ್ತವೆ.

ಅಲ್ಲದೆ ಪ್ಯಾಸೆಂಜರರಿಗೆ ಉಳಕೊಳ್ಳುವ ಸೋಯಿ ಮಾಡಿರುತ್ತದೆ. ಇದಲ್ಲದೆ ಗೋಕರ್ಣ, ಜೋಗ, ವಗೈರೆ ಬೇಕಾದ ಕಡೆಗೆ ಹೋಗಲಿಕ್ಕೆ ಸ್ಪೇಶಲ್ ಭಾಡೆಯಿಂದ ಶಿಗುತ್ತದೆ.

ಮೇನೇಜರ— ಬಿ. ವ್ಹಿ. ಪುಸಾಳಕರ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. (ರಿಜಿಸ್ಟರ್ಡ

ಮೃದವಾದ ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶರಾಶಿಯನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾವುದೋ.

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ ಈ ಆಯಿಲ್ ತೊಡೆದುಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ಶಾಂತವಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಹಗುರಿ ಬಿದ್ದು ಹೋಗಲಾರವು, ಆದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವದು

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆಯುವಷ್ಟು ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ 'ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ" ಎಂಬ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ

ಕ್ರಯ — ಸೀಸೆ ರೂಪಾಯಿ 100. ಸೀಸೆ 3ಕ್ಕೆ ರೂಪಾಯಿ 2-10-0, ವಿ.ಪಿ. ಖರ್ಚು 0 11 0

ಅತಿ ಮನೋಹರವಾದ ಸುರಭಿಯು!

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ, ಕೋಮಲ ಒಲಸಾಯು ಮತ್ತು ಅತ್ಯುತ್ತಮವು ಚನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ಲೇ ಮಾಡಿದ್ದು ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ತೊಟ್ಟುಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವಾಭಾವಿಕವಾದೊಂದು ಪುಷ್ಪವಾಟಿಕೆಯ ಅರಳಿದಂತಾಗುವದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಸುಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0 1 ಡ್ರಾಮಿನ (ಪಿಡಿಯ) ಸೀಸೆ 1 ಕ್ಕೆ 0-12 0 ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0.

Address - **The Anglo Indian Drug & Chemical Co,**
16, Market, **BOMBAY. 2.**

ಆರೋಗ್ಯಚಂದ್ರಿಕೆ.

ಈ ಪತ್ರಿಕೆಯು ಸಂಪಾದಕರು ಮದ್ರಾಸಿನ ಡಾಕ್ಟರ್ ಯು ರಾಮರಾವ್, ಎಮ್ ಎಲ್ ಸಿ ಯವರು. ಈ ಆರೋಗ್ಯ ಮತ್ತು ಚಿಕಿತ್ಸೆಯ ವಿಷಯಗಳಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ

ಒಂದು ಸಚಿತ್ರ ಮಾಸಪತ್ರಿಕೆ

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ

ಆರೋಗ್ಯಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರ ಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಾಗ್ಗೆ ಪ್ರಕಟವಾಗುವವು

ಹೆಲ್ತ್ ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯ ನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಪಡಿಸಿ ಪ್ರಥಮ ಸಂಚಿಕೆಯು ಈ ತಿಂಗಳಲ್ಲಿ ಪ್ರಕಟವಾಗಿಯದೆ

ಅಂಚೆಯವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಪೊಟಲಗು ವರ್ಷಕ್ಕೆ ರೂಪಾಯಿ ೧—೮—೦ ಬಿಡಿ ಪತ್ರಿಕೆ ಒಂದಕ್ಕೆ ೦—೩—೦

ಚಂದಾದಾರರಾಗುವವರು ವಿ ಪಿ ಮೂಲಕವಾಗಿ ತರಿಸಿಕೊಳ್ಳುವದರಿಂದಲೂ ಹಣವನ್ನು ಮುಂಗಡವಾಗಿ ಕಳುಹುವದು ಲಾಭಕರ

ಮೊಲ್ಕಂಡ ಪತ್ರಿಕೆಯನ್ನು ಪೇಕ್ಷಿಸುವವರು ಆರೋಗ್ಯಚಂದ್ರಿಕೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು ಪತ್ರವ್ಯವಹಾರದ ವಿಳಾಸ

ಮೆನೇಜರ್

'ಹೆಲ್ತ್' ಅಥವಾ

'ಆರೋಗ್ಯಚಂದ್ರಿಕೆ' ಆಫೀಸ.

೩೨೩, ತಂಬು ಶೆಟ್ಟಿ ಬೀದಿ ಮದರಾಸ್

ಮೂರ್ತಿಗಳು ಬೇಕೋ?

ನಮ್ಮಲ್ಲಿ ಭಂಗಾರ, ಬೆಳ್ಳಿ, ಪಂಚಧಾತು, ಹಿತ್ತಾಳಿ ತಾಮ್ರ ವ ಕರೇಶಿಲೆಯ ಮೂರ್ತಿಗಳೂ, ಇವಲ್ಲದೆ ಬಾಣಪೀಠಗಳೂ, ಪ್ರಭಾವಳಿಗಳೂ, ಈಶ್ವರ ಮುಖಟಗಳೂ, ನಾಗಾಭರಣಗಳೂ, ಕವಚಗಳೂ ವ ಯಾವದೇ ತರದ ಪ್ರತಿಮೆಗಳೂ ನಮ್ಮಲ್ಲಿ ಯೋಗ್ಯ ದರಕ್ಕೆ ವ ಯೋಗ್ಯ ಹೊತ್ತಿಗೆ ಮಾಡಿ ಕೊಡಲ್ಪಡು. ವವು ಬೇಕಾದವರು ಪತ್ರವ್ಯವಹಾರ ಮಾಡಿ ಯಾ ಸಮಕ್ಷ ಬಂದು ದರವಾರ ತಿಳಕೊಳ್ಳಬಹುದು.

ಪತ್ತೆ — **ನಾರಾಯಣ ಹುವಯ್ಯ ಶೇಟ.**

ಬುಡಗಾರ, ಗುಗರಜಿಲ್ಲಿ, ಕುಮಟಾ

(ಉ ಕಾನಡಾ)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧ ರಾಗದ ಕೈಪೆಟ್ಟಿಗೆ ಕಿಂ ೩೦, ೪೦, ೪೫, ೫೦ ೬೦

೨ „ ಕಾಲು ಪೆಟಿಗೆ ಕಿಂ ೬೫, ೭೫, ೧೪೦, ೧೬೦

೩ ತಬಲೆ ಜೋಡಿ ಕಿಂ ೧೩, ೧೫ ೧೮ ೨೦ ರೂ

೪ ಹಾರ್ಮೋನಿಯಮ ಗ್ಯಾಡ ಕಿಂ ೧, ತಬಲೆ ಗ್ಯಾಡ ಕಿಂ ೧೨ ಆ.

ವಿಶೇಷ ಮಾಹಿತಿ ಬಗ್ಗೆ ನಮ್ಮ ಕ್ಯಾಟಲಾಗ ಧುಕ್ಕಟೆ ಕೊಡುವೆವು

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು

ಪತ್ತೆ — **ಗೋಪಾಳ ಸಖಾರಾಮ ಮತ್ತು ಕಂಪನಿ, ೫೦**

ಕಾಳಬಾದೇವಿ ರೋಡ್, ಮುಂಬಯಿ

ನೋಟೀಸಿನ ಉತ್ತರ.

ಅಬ್ದುಲ್ಲಾ ವಲ್ಲದ ಕಾಶೀಮು ಸಾಹೇಬ ಹರಿಟಾ ಇವರಿಗೆ ಕಾಜಿ ಸೈಯ್ಯದ ಇಸ್ಮಾಯಿಲ್ ಶರೀಫ ಕಾಜಿ ಸೈಯದ ಸಾಹೇಬ ಅಲ್ವಿ ಕೊಡುವ ಜವಾಬು.

ನೀವು 'ವಿಚಾರಿ' ವರ್ತಮಾನ ಪತ್ರದಲ್ಲಿ ತಾರೀಖು 1-11-1923 ನೇ ದಿವಸ ಕೊಟ್ಟ ನೋಟೀಸಿನ ಮಜಕೂರಿನ ಕುರಿತು ಜವಾಬು ಕೊಡುವರೆ, ಅವು ನಮ್ಮ ಶಾಸ್ತ್ರಕ್ಕೆ ಸಂಬಂಧಪಟ್ಟವಿರುವದರಿಂದ ವರ್ತಮಾನ ಪತ್ರಗಳಲ್ಲಿ ನಮ್ಮ ಶಾಸ್ತ್ರದ ಸಂಗತಿಗಳನ್ನು ಫ್ಯಾಶ ಮಾಡುವದು ನಮ್ಮ ಶಾಸ್ತ್ರದ ನೀತಿಗೆ ಅಹಿತವಾದದ್ದು. ಹೀಗಿದ್ದ, ವರ್ತಮಾನ ಪತ್ರದಲ್ಲಿ ಖುಲಾಸ ಜವಾಬ ಕೊಡುವದು ಸಾಧ್ಯವಿಲ್ಲ. ಬರೇ ಹಾ ಅರಿಯದವರಿಷ್ಟೆ ಮುಖೇನ, ನೀವು ಸ್ವತಃ ನಮ್ಮಲ್ಲಿ ಬಂದಿದ್ದಾದರೆ, ಸದ್ರಿ ನೋಟೀಸಿನಲ್ಲಿ ಕೇಳಿದ ಸವಾಲುಗಳಿಗೆ ನಮ್ಮ ಶಾಸ್ತ್ರೋಕ್ತ ಆಧಾರಗಳನ್ನು ಓದಿಹೇಳಿ, ನಿಮಗೆ ಸಮಾಧಾನವಾಗುವಂತೆ ಖಾತ್ರಿ ಮಾಡಿಕೊಟ್ಟೇವು. ಕಾರಣ, ನಿಮ್ಮ ಮರ್ಜಿ ಇದ್ದರೆ, ನಮ್ಮ ಶಾಸ್ತ್ರದ ಸಂಗತಿಗಳನ್ನು ಕೇಳಿಕೊಳ್ಳುವ ಕುತೂಹಲವಿದ್ದರೆ, ವೇಳಿನಂತೆ ನಮ್ಮ ಹತ್ತರ ಬೇಕಾದಂತೆ ಚರ್ಚೆಮಾಡಿ, ನಿಮ್ಮ ಮನಸ್ಸಿಗೆ ಖಾತ್ರಿ ಮಾಡಿ ಹೋಗಬಹುದು. ವರ್ತಮಾನ ಪತ್ರಗಳಲ್ಲಿ ಅಂಥಾ ಸಂಗತಿಗಳ ಕುರಿತು ವಿಚಾರಿಸಿದಲ್ಲಿ ಆ ಬಗ್ಗೆ ನಿಮಗೆ ವರ್ತಮಾನ ಪತ್ರದ್ವಾರಾ ಜವಾಬು ಸಿಗಲಾರದು. ತಾ. 8-11-1923

ಕಾಜಿ ಸಯ್ಯದ ಇಸ್ಮಾಯಿಲ ಶರೀಫ
ವ| ಕಾಜಿ ಸಯ್ಯದ ಅಲ್ವಿ,
[illegible]

ಕಾರವಾರ ಜಿಲ್ಹಾ ಪ್ರಾ. ಶಿಕ್ಷಕ ಸಂಘದ ಪಂಚಮ ಮಹಾ ಸಭೆ.

ಈ ಮೊದಲೇ ವೃತ್ತಪತ್ರಗಳಲ್ಲಿ ಪ್ರಸಿದ್ಧಿಸಿದಂತೆ, ಜಿಲ್ಹಾ ಶಿಕ್ಷಕ ಸಂಘದ ಪಂಚಮ ಮಹಾ ಸಭೆಯು, ಶಿಕ್ಷಣವ್ಯವಸಾಯದಲ್ಲಿ ಬಹು ಕಾಲ ಶ್ರಮಪಟ್ಟವರೂ ತಜ್ಞರೂ ಆದ ಶ್ರೀಯುತ ನಾರಾಯಣ ಸುಬ್ರಾಯ ಕಾಮತ, ಸುಪರಿಂಟೆಂಡೆಂಟ ಗರ್ಲ್ಸ ಹೈಸ್ಕೂಲ ಕಾರವಾರ ಇವರ ಅಧ್ಯಕ್ಷತೆಯಲ್ಲಿ ತಾರೀಖು ೧೧ನೇಯದರಿಂದ ಪ್ರಾರಂಭವಾಗಿ, ಎರಡು ದಿವಸಗಳ ತನಕ ಬಹು ವಿಜೃಂಭಣೆಯಿಂದ ಕೊನೆಗಂಡಿತು. ಈ ಸಭೆಗೆ ಯಾವತ್ತು ತಾಲೂಕಾ ಸಂಘಗಳ ಪ್ರತಿನಿಧಿಗಳೂ, ಶ್ರೇಷ್ಠರಾದ ಶಿಕ್ಷಕರೂ, ಹೈಸ್ಕೂಲಿನ ಶಿಕ್ಷಕರೂ, ಊರೊಳಗಿನ ಸಭ್ಯ ಗೃಹಸ್ಥರೂ ಮಿಳಿತರಾಗಿದ್ದರು. ಮೊದಲನೇ ದಿವಸ ಮುಂಜಾನೆ ಸ್ವಾಗತಾಧ್ಯಕ್ಷ ರಾ|| ಮಂಜುನಾಥ ಪಾಂಡುರಂಗ ಕಾಮತ ಹೆ|| ಮಾ|| ಕುಮಟಾರವರು ಸಮಯೋಚಿತವಾಗಿ ಸಭಿಕರ ಸ್ವಾಗತವನ್ನು ಮಾಡುವಾಗ ಸಂಘದ ಪೂರ್ವೋತ್ತರ ಹಲಕೆಲವು ಸಂಗತಿಗಳನ್ನು ವಿವೇಚಿಸಿ, ಸಂಘದ ಸಂಘಟನೆಯ ಬಗ್ಗೆ ಅವಶ್ಯವುಳ್ಳ ಸೂಚನೆಗಳನ್ನು ಕೊಟ್ಟು, ಅಧ್ಯಕ್ಷಪದವನ್ನು ಸ್ವೀಕರಿಸಿದ ಬಗ್ಗೆ ಆದರವನ್ನು ವ್ಯಕ್ತಪಡಿಸಿದರು. ಬಳಿಕ, ಅಧ್ಯಕ್ಷರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಸಂಘದ ಮಹತ್ವವನ್ನೂ, ಶಿಕ್ಷಣದ ಮುಖ್ಯ ಧ್ಯೇಯವನ್ನೂ, ಶಿಕ್ಷಕರ ಕರ್ತವ್ಯಕರ್ಮವನ್ನೂ ವಿಶದವಾಗಿ ತಿಳಿಸಿ, ಶಿಕ್ಷಕರು ಸದಾಸರ್ವದಾ ಲೋಕಹಿತವನ್ನೇ ಮುಂದಿಟ್ಟು, ಭಾವೀ ಜನತೆಯನ್ನು ಸುಧಾರಿಸಲು[illegible]ವಿಸಬೇಕೆಂತಲೂ ತಿಳಿಸಿದರು. ಸರಕಾರದವ[illegible]ಸಿದ್ಧಿಸಿದ ಭಾವೀ ಜಿಲ್ಹಾ ಸ್ಕೂಲಬೋರ್ಡಿನ ಅವಶ್ಯವಾದ ನಿಯಮಗಳನ್ನು ಓದಿ ಹೇಳಿದರು. ಅನಂತರ, ಜಿಲ್ಹಾ ಸೆಕ್ರೆಟರಿ ಮಿ| ಅನಂತ ವಿಠ್ಠಲ ಪ್ರಭು ಇವರು ಸಂಘದ ವಾರ್ಷಿಕ ರಿಪೋರ್ಟನ್ನು ಓದಿ, ಸಂಘದ ರಹಸ್ಯವನ್ನೂ ವಿಶದೀಕರಿಸಿ, ಶಿಕ್ಷಕರು ಮುಖ್ಯವಾಗಿ ನೈತಿಕ ಶಿಕ್ಷಣದ ಮಹತ್ವವನ್ನವಲಂಬಿಸಿ, ಸಮಾಜ ಸುಧಾರಣೆಯನ್ನು ಮಾಡಬೇಕೆಂತಲೂ ವಿವರಿಸಿದರು. ಮಧ್ಯಾಹ್ನದಲ್ಲಿ ಠರಾವುಗಳು ಪಾಸ ಮಾಡಲ್ಪಟ್ಟವು. ಮರುದಿವಸ ಟೀಚರ್ಸ ಕೋಆಪರೇಟಿವ್ಹ ಸೊಸೈಟಿಯು ತೆರೆಯಲ್ಪಟ್ಟಿತು. ಅದರ ಮುಖ್ಯ ಆಫೀಸ ಕಾರವಾರದಲ್ಲಿಯೂ, ಕುಮಟಾ, ಹೊನ್ನಾವರ, ಹಳಿಯಾಳ ಶಹರಗಳಲ್ಲಿ ಬ್ರೆಂಚ ಆಫೀಸ ಇಡಬೇಕೆಂದೂ ನಿಶ್ಚಯಿಸಿ, ಅದರಂತೆ ವ್ಯವಸ್ಥಾಪಕ ಕಮಿಟಿಯು ನೇಮಿಸಲ್ಪಟ್ಟಿತು. ಎಷ್ಟೋ ಶಿಕ್ಷಕರು ಈ ಸೊಸೈಟಿಯ ಮಹತ್ವವನ್ನರಿತು ಕೂಡಲೇ ಮೆಂಬರರಾದರು. ಸಂಘದ ಹೊಸ ಕಾರ್ಯಕಾರಿ ಮಂಡಳ ನೇಮಿಸಲ್ಪಟ್ಟಿತು. ಇದಲ್ಲದೆ, ಮಿ|| ವ ಜ ಹೆಗಡೆ, ಇಡೇಕೋಡಿ ಎಂಬ ಒಬ್ಬ ಶಿಕ್ಷಕರು ಪ್ರಸಿದ್ಧಿಸಿದ "ಪದುಕರಾಸು ರಾಮಾಯಣ" ವೆಂಬ ಕನ್ನಡ ಹಳೇ ಕಾವ್ಯವನ್ನು ಪರಿಶೀಲಿಸಿ, ಅವರಿಗೆ ಕನ್ನಡ ವಾಙ್ಮಯ ಸೇವೆಗೆ ಸಹಾಯ ಮಾಡಬೇಕೆಂತಲೂ, ಉಳಿದ ಶಿಕ್ಷಕರಿಗೆ ಇದರಿಂದ ಹೊಸ ಸ್ಫೂರ್ತಿಯುಂಟಾಗಿ ಅವರು ಇಂಥ ಕೆಲಸಕ್ಕೆ ಪ್ರವರ್ತಿಸಬೇಕೆಂತಲೂ ಸಂಘದವರೂ, ಅಧ್ಯಕ್ಷರೂ ಕೂಡಿ ಅಧ್ಯಕ್ಷರ ಕೈಯಿಂದ ಅವರಿಗೆ ೩೦ ರೂಪಾಯಿ ಇನಾಮು ಕೊಡಲ್ಪಟ್ಟಿತು.

ಅಧ್ಯಕ್ಷರ ಸಮಾರೋಪದ ಭಾಷಣದ ಸಾರಾಂಶವು

ಅಧ್ಯಕ್ಷರು ತಮ್ಮ ವ್ಯಾಖ್ಯಾನದಲ್ಲಿ ಹೇಳಿದ್ದೇನಂದರೆ ಯಾವದೊಂದು ಕೆಲಸವನ್ನು ಮಾಡಲಿಕ್ಕೆ ಆರಂಭಿಸಿದ ಬಳಿಕ, ಅದರಲ್ಲಿ ಬೇಕಾದಷ್ಟು ಗಂಡಾಂತರಗಳೊದಗಿದರೂ ಅದನ್ನು ಲಕ್ಷಕ್ಕೆ ತರದೆ, ಒಮ್ಮನಸ್ಸಿನಿಂದಲೂ, ದೃಢನಿಶ್ಚಯದಿಂದಲೂ ಪ್ರಯತ್ನಿಸಿ ಒಕ್ಕಟ್ಟನ್ನು ಭದ್ರಪಡಿಸುವದೇ ಆದ್ಯ ಕರ್ತವ್ಯವು. ಇದರಿಂದ ಎಂಥ ದುರ್ಘಟ ಕೆಲಸವಾದರೂ ಕೊನೆಗಾಣಿಸಲಿಕ್ಕೆ ಅನುವಾಗುವದು. ದೊರೆದಂಥ ಹಕ್ಕನ್ನು ಚನ್ನಾಗಿ ಕಾದುಕೊಂಡು, ಉಳಿದ ಹಕ್ಕಿನ ಸಲುವಾಗಿ ಪ್ರಯತ್ನಿಸುವದು ಲೇಸು. ಕೊಟ್ಟ ಕೆಲಸವನ್ನು ಅರ್ಧಮರ್ಧ ಮಾಡಿ, ತಮಗೂ ಸಮಾಜಕ್ಕೂ ಹಿತವಲ್ಲದ ಸಂಗತಿಗಳಲ್ಲಿ ಪ್ರವರ್ತಿಸುವದು ಸರಿಯಲ್ಲ. ಸಂಘವು ಬೇಡಿದ ಹಲವು ಸಂಗತಿಗಳು ಒಮ್ಮೆಲೇ ಕೊನೆಗಾಣದಿದ್ದರೂ, ಈ ವರೆಗೆ ಶಿಕ್ಷಕರ ಹಲವು ಕುಂದು-ಕೊರತೆಗಳೂ ನೀಗಿಸಲ್ಪಟ್ಟು ಆರಂಭದ ಪಗಾರ ಸ್ಕೇಲವೂ ದೊರೆತಿರುವದಷ್ಟೇ. ಹೊಸ ಜಿಲ್ಹಾ ಸ್ಕೂಲ ಬೋರ್ಡಿನಲ್ಲಿ ತಮಗೆ ಹಲವು ತರದ ಆತಂಕಗಳು ಒದಗಬಹುದೆಂದು ಶಿಕ್ಷಕರು ಊಹಿಸಿದ್ದು ಶಿಕ್ಷಕವೃಂದದ ಪರಿಸ್ಥಿತಿಯನ್ನವಲೋಕಿಸಿದರೆ ಯಾವ ಸುಜ್ಞ ಮನುಷ್ಯನಿಗಾದರೂ ತಿಳಿಯದಿರದು. ಆದರೆ, ಶಿಕ್ಷಕರು ಇಂಥ ಬೋರ್ಡಿನಲ್ಲಿ ಸುಶಿಕ್ಷಿತರೇ ಆರಿಸಿ ಬರುವಂತೆ ಪ್ರಯತ್ನಿಸಬಹುದಲ್ಲವೇ? ಇದಲ್ಲದೆ, ತಮ್ಮ ಸಾಧಕ-ಬಾಧಕ ಸಂಗತಿಗಳನ್ನು ವಿಮರ್ಶಿಸಿ ಲೋಕಮತವನ್ನು ಆಕರ್ಷಣ ಮಾಡಿಕೊಳ್ಳಬೇಕು. ತಮ್ಮ ವ್ಯವಸಾಯಬಂಧುಗಳಲ್ಲಿಯು ಹಾಗೂ ಸಮಾಜದ ಜಾತಿ ಜಾತಿಗಳಲ್ಲಿಯ ಕ್ಷುಲ್ಲಕ ಮಾತ್ಸರ್ಯವನ್ನು ಹೋಗಲಾಡಿಸಿ, ಶಿಕ್ಷಣ ಸುಧಾರಣೆಯನ್ನು ಮಾಡಲಿಕ್ಕೆ ಪ್ರಯತ್ನಿಸುವದು ಮುಖ್ಯ ಕರ್ತವ್ಯಕರ್ಮವೆಂಬುದನ್ನು ಮರೆಯಲಾಗದು. ಆದಕ್ಕೆ "ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ" ಎಂಬೀ ಭಗವದ್ವಾಕ್ಯವೇ ಪ್ರಧಾನವಾಗಿಟ್ಟುಕೊಂಡು ಸಂಘಶಕ್ತಿಯನ್ನು ಪ್ರವರ್ಧಿಸತಕ್ಕದ್ದು. ನಮ್ಮ ದೇಶದ ನಿಜವಾದ ಕಲ್ಯಾಣವಾಗಬೇಕಾದರೆ ಮುಖಂಡರ ಮೇಲೆ ಟೀಕೆ ಮಾಡುವದರಿಂದ ಆಗಲಾರದೆಂಬುದು ಸಹಜವದೆ. ಶಿಕ್ಷಣಮಂತ್ರಿ, ನಾ|| ಡಾಕ್ಟರ ಪರಾಂಜಪೆಯವರು ಕೇವಲ ಸ್ವಾರ್ಥಸಾಧಕರಾಗಿ ಶಿಕ್ಷಕರಿಗೆ ಬಹು ಪರಿಯಿಂದ ಲುಕ್ಸಾನು ಮಾಡಿದರೆಂದು ಹಲವರ ಮತವದೆ. ಆದರೆ, ಅವರಿಗೆ ಈ ಪರಿಸ್ಥಿತಿಯಲ್ಲಿ ಯಾವ ಯಾವ ತರದಿಂದ ಎಡರುಗಳೊದಗುತ್ತವೆಂಬುದನ್ನು ಸ್ವಲ್ಪ ವಿಚಾರ ಮಾಡಿದರೆ, ತಿಳಿಯಬಂದೀತು. ಅವರಿಗೆ ಶಿಕ್ಷಕರ ವಾತ್ಸಲ್ಯವಿಲ್ಲೆಂದೂ, ಪ್ರಾಥಮಿಕ ಶಿಕ್ಷಣದಲ್ಲಿ ಏನೊಂದೂ ಸುಧಾರಣೆ ಮಾಡದೆ ಪ್ರತಿಗಾಮಿ ಧೋರಣದಿಂದ ನಿಯಮಗಳನ್ನು ಮಾಡಿರುವರೆಂದೂ ನಾಲ್ಕೂ ಕಡೆಯಿಂದ ಕೇಳಬರುತ್ತಿದೆ. ಆದರೆ ಶಿಕ್ಷಣದಲ್ಲಿ ನಿಜವಾದ ಸುಧಾರಣೆ ಮಾಡಬೇಕಾದರೆ, ಅವರಿಂದಲೇ ಆದೀತೆಂದು ನನಗೆ ತೋರುತ್ತದೆ. ಯಾಕಂದರೆ, ಅವರೇ ಈಗ ಪರಿಸ್ಥಿತಿಗನುಗುಣವಾಗಿ ಹೀಗೆ ಮಾಡಬೇಕಾಯಿತು. ಕ್ರಮದಿಂದ ಸಧಾರಣೆಯಾಗದಿರಲಾರದು. ಯಾವದೊಂದು ಜವಾಬದಾರಿ ಕೆಲಸವು ಬಹು ಮಹತ್ವದು. ಅದರಲ್ಲಿ ದ್ವಿದಳ ಪದ್ಧತಿಯಲ್ಲಂತೂ ಕೆಲಸ ಮಾಡುವದೂ, ಲೋಕಪ್ರಿಯರಾಗುವದೂ ಸುಲಭವಲ್ಲ. ಆದರೆ ನೀವು ನಿಮ್ಮ ಬೇಡಿಕೆಯನ್ನು ಮೇಲಿಂದಮೇಲೆ ತಿಳಿಸಿ ಸನದಶೀರ ಚಳವಳವನ್ನು ಮಾಡಿದರೆ, ಅದು ಅಯೋಗ್ಯವಾಗಲಿಕ್ಕಿಲ್ಲ. ಆದರೆ, ನಾವು ವಗೈರೆ ಮಾಡುವ ಝುಂಜಾವಾತದ ಸುಳಿಯಲಿಕ್ಕೆ ಇಂಬುಕೊಡಬೇಡಿರಿ. ನೈತಿಕ ಸಧಾರಣೆಯನ್ನು ಮಾಡಿ, ವಿದ್ಯಾರ್ಥಿಗಳ ಪ್ರತಿಭಾಶಕ್ತಿಯನ್ನು ಬೆಳೆಸಲಿಕ್ಕೆ ಪ್ರವರ್ತಿಸಿರಿ ಮತ್ತು "ಸಂಘೇ ಶಕ್ತಿಃ ಕಲೌ ಯುಗೇ" ಎಂಬ ವಾಕ್ಯವನ್ನು ಸದಾಸರ್ವದಾ ಚಿಂತಿಸುತ್ತ ಕರ್ತವ್ಯಕರ್ಮವನ್ನು ಸಾಗಿಸಿರಿ, ಅಂದರೆ ನಿಮ್ಮ ಎಲ್ಲ ಕೋರಿಕೆಗಳು ಈಡೇರುವವು. ಇತ್ಯಾದಿ

ಸಭೆಯಲ್ಲಿ ಪಾಸಾದ ಮಹತ್ವದ ಠರಾವುಗಳು

(೧) ಈ ಮೊದಲೇ ಪ್ರಸಿದ್ಧಿಸಲ್ಪಟ್ಟ ಪ್ರಾಯಮರಿ ಶಿಕ್ಷಣದ ನಿಯಮಗಳ ಮಸೂದೆಯ ೧೭ ನೇ ನಿಯಮದ (೧) ನೇ ಕಲಮಿನಲ್ಲಿ ಶಿಕ್ಷಣದಲ್ಲಿ ಅನುಭವಪಟ್ಟ ಒಬ್ಬ ಮೆಂಬರನ ಬದಲಾಗಿ ಇಬ್ಬರು ಮೆಂಬರರು ಇರಬೇಕು. ಹಾಗೂ ಅವರೊಳಗೆ ಒಬ್ಬನಾದರೂ ಪ್ರಾಥಮಿಕ ಶಿಕ್ಷಕರು (ಪೇನಶನ್ ಪಟ್ಟವರು ಅಥವಾ ಸರ್ವಿಸಿನಲ್ಲಿ ಇರುವವರು) ಇರತಕ್ಕದ್ದು.

(೨) ಮೇಲುತರಗತಿಯ ಟ್ರೇಂಡರಿಗೆ ಹಿಂದಿನ ಸರ್ವಿಸಿಗೆ ಬಡತಿ ಕೊಟ್ಟಂತೆ ಅಂಟ್ರೇಂಡ ಸರ್ವಿಸಿಗಾದರೂ ಬಡತಿಯನ್ನು ಕೊಡತಕ್ಕದ್ದು.

(೩) ತಾರೀಖು ೧೧-೧೦-೨೩ ನೇ ಗವ್ಹರ್ನಮೆಂಟ ಗ್ಯಾಜೇಟಿನಲ್ಲಿ ಪ್ರಸಿದ್ಧವಾದ ಶಿಕ್ಷಕರ ಪಗಾರ ಸ್ಕೇಲು ನಿರುತ್ಸಾಹಜನಕವೂ, ಪ್ರತಿಗಾಮಿ ಧೋರಣವುಳ್ಳದ್ದೂ ಇರುವದರಿಂದ, ಮುಂಬಯಿ ಇಲಾಖಾ ಪ್ರಾಥಮಿಕ ಶಿಕ್ಷಕ ಸಂಘದ ಸೋಲ್ಲಾಪೂರ ಅಧಿವೇಶನದ (೩೦ ರಿಂದ ೧೫೦) ಸ್ಕೇಲನ್ನು ಅಮಲಿನಲ್ಲಿ ತರತಕ್ಕದ್ದು. ಆದರೆ, ಸದ್ಯದ ಪರಿಸ್ಥಿತಿಯಲ್ಲಿ ಅದು ಅಮಲಿನಲ್ಲಿ ತರಲಿಕ್ಕೆ ಹಣದ ಅನುಕೂಲತೆ ಇಲ್ಲದಿದ್ದರೆ ನಾ|| ಪರಾಂಜಪೆ ಸ್ಕೇಲನ್ನಾದರೂ ಅಮಲಿನಲ್ಲಿ ತರಬೇಕೆಂತ ಈ ಸಭೆಯ ಮತವದೆ.

(೪) ವಿದ್ಯಾಖಾತೆಯವರು ಅಸ್ಪೃಶ್ಯ ವರ್ಗದ ವಿದ್ಯಾರ್ಥಿಗಳನ್ನು ಶಾಲೆಯಲ್ಲಿ ತೆಗೆದುಕೊಳ್ಳುವ ಸಂಬಂಧ ತೆಗೆದ ಸರಕ್ಯುಲರವು ನಮಗೆ ಸಂಪೂರ್ಣ ಮಾನ್ಯವಿದ್ದು, ಅದನ್ನು ಅಮಲಿನಲ್ಲಿ ತರಲಿಕ್ಕೆ ಶಿಕ್ಷಕರು ಮನಃಪೂರ್ವಕ ಪ್ರಯತ್ನಿಸಬೇಕೆಂದು ಈ ಸಭೆಯ ಮತವದೆ.

ಇವೇ ಮೊದಲಾದವುಗಳು

ಓರ್ವ ಶಿಕ್ಷಣಾಭಿಮಾನಿ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಮುಕ್ತಾ ಶಿಕ್ಕಿ ತಿಳಕೊಳ್ಳಬಹುದು.

ಪುರುಷೋತ್ತಮ ಲಕ್ಷ್ಮಣಯ್ಯ ಕ್ಯಾನಭಾಗ

ಹೆಗಡೇಕರ, ದುಕಾನ್, ಕುಮಟಾ.

ವಿವಿಧ ಸಂಗ್ರಹ.

ಖಾದಿ.

ಪಂಜಾಬದ ದೇಶಭಕ್ತ ಲಾಲಾ ಲಜಪತರಾಯರು 'ಮುಂಬಯಿ ಕ್ರಾನಿಕಲ' ಪತ್ರಿಕೆಯಲ್ಲಿ 'ಅಸಹಕಾರಿತೆಯ ಧ್ಯೇಯಗಳು' ಎಂಬ ವಿಷಯದ ಮೇಲೆ ಮಾಲಿಕೆಯ ಲೇಖಮಾಲೆಯನ್ನು ಪ್ರಕಟಿಸಿರುವರು. ೫ನೇ ಲೇಖದಲ್ಲಿ ಲಾಲಾಜಿಯವರು ಖಾದಿಯ ಮಹತ್ವವನ್ನೂ, ಮರ್ಮವನ್ನೂ ಚರ್ಚಿಸಿರುವರು. ಅದರ ತಾತ್ಪರ್ಯವೇನಂದರೆ:— ಅನಾದಿಕಾಲದಿಂದ ಭಾರತೀಯರು ತಮ್ಮ ತಮ್ಮ ಮನೆಗಳಲ್ಲಿ ಸಣ್ಣ ಪುಟ್ಟ ಉದ್ಯೋಗಗಳನ್ನು ಕೈಕೊಂಡು, ಜೀವಿಸುತ್ತ ಬಂದವರು. ಬ್ರಿಟಿಶರ ಆಗಮನವಾಗುವ ಮೊದಲು, ನಮಗೆ ಬೇಕಾದಷ್ಟು ಪಕ್ಕಾ ಮಾಲನ್ನು ನಾವು ತಯಾರಿಸುತ್ತಿದ್ದೆವು. ಇಷ್ಟೇ ಅಲ್ಲ. ಭೂಮಂಡಲದೊಳಗಿನ ಕೋಟಿ ಮಂದಿಗಳಿಗೆ ಸಹ ಅವಶ್ಯವುಳ್ಳ ಅತಿ ಚಿನುಗು ಮಾಲನ್ನು ಸಹ ನಾವು ಪೂರೈಸುತ್ತಿದ್ದೆವು. ಮನೆಗಳಲ್ಲಿ ಉಪಯೋಗಿಸಬಹುದಾದ ಯಂತ್ರಗಳ ಬಗ್ಗೆ ನಮ್ಮ ಆಕ್ಷೇಪವಿರಲಾರದು. ಈ ಯಂತ್ರ ಸಾಮಗ್ರಿಗಳು ಸಾದುರುಸ್ತಾದರೆ, ವಿಶೇಷ ಯಂತ್ರಶಾಸ್ತ್ರದ ಜ್ಞಾನವಿಲ್ಲದ ಸಾಮಾನ್ಯ ಮಂದಿಗಳು ಸಹ, ಅವನ್ನು ನೆಟ್ಟಗೆ ಮಾಡುವಂಥವಿರಬೇಕು. ಜನರಿಗೆ ಅವಶ್ಯಕ ಸಾಮಗ್ರಿಗಳನ್ನು ಪೂರೈಸಿ, ಅವುಗಳಿಂದ ನಮ್ಮ ಮನೆ ಮಾಡಿಕೊಳ್ಳಬೇಕೆಂದು ನಮ್ಮ ಅಭಿಲಾಷೆಯಿಲ್ಲ. ಆದ ಬಳಿಕ, ಸಾಮುದಾಯಿಕ ಉತ್ಪನ್ನಕ್ಕಾಗಿ ನಾವೇಕೆ ದುಡಿಯಬೇಕು? ಸಾಮಾನ್ಯ ಜೀವನವುಳ್ಳ, ಉಚ್ಚ ವಿಚಾರಗಳುಳ್ಳ, ಲೋಕಶಾಹಿಯು ನಮ್ಮ ಜೀವನದ ಧ್ಯೇಯವು. ಇಂಥ ಸಮಾಜದಲ್ಲಿ ಕೂಲಿಗೆಲಸ ಮಾಡುವ ಪ್ರಸಂಗವು ತೀರ ಕಡಿಮೆಯಾಗಿರಬೇಕು. ಪ್ರತಿಯೊಬ್ಬರು ಸಾಂಸಾರಿಕ ಸಾಮಗ್ರಿಗಳನ್ನೆಲ್ಲ ತಮ್ಮಷ್ಟಕ್ಕೆ ಪೂರೈಸುತ್ತಿರಬೇಕು. ಇದರಿಂದ ಅವರು ಬೇರೆಯವರ ಸ್ಥಿತಿಯ ಆಲೋಚನೆ ಮಾಡಬಾರದೆಂದಲ್ಲ. ಕೂಪಮಂಡೂಕವೃತ್ತಿಯು ನಮಗೆ ಇಷ್ಟವಿಲ್ಲ. ಇತರ ಪ್ರದೇಶಗಳಗೂಡ ನಾವು ಸ್ನೇಹಭಾವದಿಂದ ವರ್ತಿಸತಕ್ಕದ್ದು. ನಾವು ಎಲ್ಲರೂ ಸರಿಸಮಾನರಾಗಿರಬೇಕು. ಅಂದರೆ, ನಾವು ಒಡೆಯರಾಗಿರಬಾರದು; ಸೇವಕರೂ ಆಗಿರಬಾರದು. ಭರತಖಂಡದ ಸ್ವತಂತ್ರ ಲೋಕಶಾಹಿಯೆಂಬುದು ಇದೇ. ಈ ಧ್ಯೇಯವನ್ನು ಪ್ರಚುರಗೊಳಿಸುವದು, ಅದಕ್ಕಾಗಿ ದೇಶಬಾಂಧವರನ್ನು ತಯಾರಿಸುವದು ನಮ್ಮ ಪ್ರಥಮ ಕರ್ತವ್ಯವು.

ಖಾದಿಯ ಧ್ಯೇಯವೇನು? ವ್ಯಕ್ತಿ-ಕುಟುಂಬ-ಪಟ್ಟಣ-ರಾಷ್ಟ್ರಗಳಿಗೆ ಅವಶ್ಯವುಳ್ಳ ಸಾಮಗ್ರಿಗಳನ್ನು ತಯಾರಿಸುವದು. ಅವನ್ನು ಕೈಯಿಂದ, ಸಾಮಾನ್ಯ ಯಂತ್ರಗಳಿಂದ ಹುಟ್ಟಿಸುವದು; ರಾಷ್ಟ್ರದೊಳಗಿನ ಎಲ್ಲ ಸಮಾಜಗಳಿಂದ ಉತ್ಪನ್ನ ಮಾಡುವದು; ದೊಡ್ಡ ದೊಡ್ಡ ಕಾರಖಾನೆಗಳಲ್ಲಿ ಸಾಮಗ್ರಿಗಳನ್ನು ತಯಾರಿಸುವದಲ್ಲ; ಮನೆಗಳಲ್ಲಿ, ಅಂಗಡಿಗಳಲ್ಲಿ. ಸರಕುಗಳನ್ನು ತಯಾರಿಸುವವನಿಗೆ ತನ್ನ ಮಾಲನ್ನು ಸಾರ್ವಜನಿಕ ಪೇಟೆಯಲ್ಲಿ ವಿಕ್ರಯಿಸುವ ಸ್ವಾತಂತ್ರ್ಯವಿರಬೇಕು. ಅವನು ಯಾವದೇ ರೀತಿಯಿಂದ ಸಾವುಕಾರರ ಅಧೀನವಾಗಿರಬಾರದು. ಸಹಕಾರಿತೆಯನ್ನು ಆಶ್ರಯಿಸಿ, ನಾವು ಪೇಟೆಯೊಳಗೆ ನಡೆಯುವ ಹೋರಾಟವನ್ನು ನಿಯಂತ್ರಿಸುವೆವು. ಸಾಹಚರ್ಯದಿಂದ ಸಾಮಗ್ರಿಗಳನ್ನು ಹುಟ್ಟಿಸುವೆವು; ಸಹಕಾರಿತೆಯಿಂದ ಅವುಗಳನ್ನು ನಮ್ಮ ನಮ್ಮಳಗೆ ಹಂಚಿಕೊಳ್ಳುವೆವು. ಕೆಲವರಿಗೆ ಇದೊಂದು ಪುರಾತನ ಪ್ರಕಾರವೆಂದು, ಪರಾಗತಿಯೆಂದು ಸಹ ತೋರಬಹುದು. ಆದರೆ, ಜಗತ್ತು ಎಂದೂ ಪರಾಗತಿ ಹೊಂದುವದಿಲ್ಲ. ೧೮-೧೯ ಶತಮಾನಗಳಲ್ಲಿ ಯಾಂತ್ರಿಕ ಕ್ರಮಗಳ ಪ್ರಗತಿಯಾಯಿತು. ಇದನ್ನು ಮಾನವರ ಕಲ್ಯಾಣಕ್ಕಾಗಿ ನಾವು ಉಪಯೋಗಿಸಬೇಕಲ್ಲದೆ, ಮಾನವರನ್ನು ಅವುಗಳ ಸಹಾಯದಿಂದ ಸುಲಿಯಬಾರದು. ಯಂತ್ರಗಳನ್ನು ಲಾಭದಾಸೆಯಿಂದ, ಅಧಿಕಾರದ ಆಶೆಯಿಂದ ಉಪಯೋಗಿಸಲು ಕೆಲ ಮನುಷ್ಯರ ಮಂಡಳಿಗೆ ಸಾಧನವಾಗದಂತೆಯೂ ನಾವು ಎಚ್ಚರರಾಗಿರತಕ್ಕದ್ದು. ಇಂಥ ಸಾಮರ್ಥ್ಯವನ್ನು ಕೆಲವರಲ್ಲಿ ಕೇಂದ್ರೀಕೃತ ಮಾಡಗೊಡುವದು ಮಾನವ ಜಾತಿಯ ಮೇಲಿನ ದೊಡ್ಡ ಆಪತ್ತು.

* * *

ಮತ್ತೊಂದು ದುರಾಲೋಚನೆ.

ನೌಕರಶಾಹಿಯು ಅನೇಕ ಜುಲ್ಮಶಾಹಿಯ ಕಾನೂನುಗಳನ್ನು ನಿರ್ಮಿಸಿ, ದೇಶಸೇವಾತತ್ಪರ ರಾಷ್ಟ್ರವೀರರನ್ನು ದಣಿಸುತ್ತದೆ. ಈಗ ಕಲಕತ್ತೆಯ 'ಇಂಗ್ಲಿಷಮನ್' ಎಂಬ ಎಂಗ್ಲೋ-ಇಂಡಿಯನ್ ಪತ್ರಿಕೆಯು ಒಂದು ದುರಾಲೋಚನೆಯನ್ನು ನೌಕರಶಾಹಿಗೆ ತಿಳಿಸಿದೆ. ರಾಷ್ಟ್ರೀಯ ಸಭೆ, ಖಿಲಾಫತ ಕಮಿಟಿ, ಶಿರೋಮಣಿ ಗುರುದ್ವಾರ ಪ್ರಬಂಧಕ ಕಮಿಟಿ ಮೊದಲಾದ ರಾಜಕೀಯ ಸಂಸ್ಥೆಗಳು, ಪ್ರಜೆಗಳಿಂದ ದೇಶಕಾರ್ಯಕ್ಕಾಗಿ ಹಣಿಕಣಿ ರೂಪದಿಂದ ಧನಸಂಚಯಮಾಡಿ, ತಮ್ಮ ಕಾರ್ಯವನ್ನು ಉತ್ಸಾಹದಿಂದ ನಡಿಸುತ್ತಿವೆ. ಈ ಸಂಸ್ಥೆಗಳನ್ನು ಬಗ್ಗುಬಡಿಯುವ ಬಗೆ ಹೇಗೆ? ಇವೆಲ್ಲ ಬೇಕಾಯಿದೇಶೀರ ಸಂಸ್ಥೆಗಳೆಂದ ನೌಕರಶಾಹಿಯು ಕರಾ ಹೊಡೆಯುವದು. ಈ ಸಂಸ್ಥೆಗಳ ತಿಜೋರಿಯಲ್ಲಿದ್ದ ಹಣವನ್ನೆಲ್ಲ ಸರಕಾರ ಜಪ್ತಮಾಡತಕ್ಕದ್ದು-ಹೀಗೆ ಹೊಸ ಹಣ ಹುಟ್ಟದಂಗೆ ಇದೆಂದ ನೌಕರಶಾಹಿಗೆ ಇಷ್ಟ ಸೂಚನೆಯು. ಮತ್ತೊಂದ ಸೂಚನೆಯನ್ನ 'ಇಂಗ್ಲಿಷಮನ್' ಪತ್ರಿಕೆಯು ಮಾಡಿದೆ. ಇಂಥ ಬೇಕಾಯಿದೇಶೀರ ಚಳವಳಿಗಾಗಿ ಹಣ ಕೂಡಿಸುವದನ್ನು ಬೇಕಾಯಿದೇಶೀರ ಎಂದು ಠರಾಯಿಸಬೇಕು. ಅಸಹಕಾರಿತೆಯು ಒಂದು ಗುನ್ಹೆಯು; ಅಸಹಕಾರಿತೆಯ ಪ್ರಚಾರ ಮಾಡುವದೂ ಒಂದು ಶಾಸನಾರ್ಹ ಗುನ್ಹೆಯೇ. ಕೌನ್ಸಿಲುಗಳನ್ನು ಬಹಿಷ್ಕರಿಸುವದು ಗುನ್ಹೆಯು, ಬಹಿಷ್ಕರಿಸಹೇಳುವದೂ ಗುನ್ಹೆಯೇ. ಕೌನ್ಸಿಲುಗಳ ಮೇಲೆ ವಿರೋಧದರ ಟೀಕೆಮಾಡುವದೂ ಗುನ್ಹೆಯೇ. ಹೀಗೆಲ್ಲ ಗುನ್ಹೆಗಳ ಮಾಲಿಕೆಯನ್ನೂ, ಬೇಕಾಯಿದೇಶೀರ ಕೃತ್ಯಗಳ ಯಾದಿಯನ್ನೂ ಪೂರೈಸಿ, ಅದಕ್ಕೆ ತಕ್ಕ ಕಾಯಿದೆಯನ್ನು ತಯಾರಿಸಲು ಹಿಂದುಸ್ಥಾನ ಸರಕಾರಕ್ಕೆ 'ಇಂಗ್ಲಿಷಮನ್' ಪತ್ರಿಕೆಯು ಸೂಚಿಸಿದೆ. ಇಂಥ ಕಾಯಿದೆಯೊಂದು ತಯಾರಾದರೆ, ಸತ್ಯಾಗ್ರಹದ ದಾರಿಯು ವಿಶೇಷ ಸುಲಭವಾಗುವದು.

* * *

ತುರ್ಕರ ಕೃತಜ್ಞತೆ.

ದಿಲ್ಲಿಯ ಖಾಸಾ ರಾಷ್ಟ್ರೀಯ ಸಭೆಯಲ್ಲಿ ಮಂಜೂರಾದ ಠರಾವನ್ನು ತುರ್ಕಸ್ಥಾನದೊಳಗಿನ ಗ್ರಾಂಡ ನೇಶನಲ್ ಎಸೆಂಬ್ಲಿಯ ಅಧ್ಯಕ್ಷರಾದ ಮಿ| ಮುಸ್ತಫಾ ಕೆಮಾಲ ಪಾಶಾರವರಿಗೆ ಕಳಿಸಿತ್ತು. ಅದಕ್ಕೆ ಉತ್ತರವಾಗಿ, ಅವರು ರಾಷ್ಟ್ರೀಯ ಸಭೆಯ ಕಾರ್ಯದರ್ಶಿಗಳಿಗೆ ತಿಳಿಸುವದೇನಂದರೆ:— ತುರ್ಕ ರಾಷ್ಟ್ರ ಹಾಗು ನನ್ನ ಕಡೆಯಿಂದ ನಾನು ಹಿಂದೀ ರಾಷ್ಟ್ರೀಯ ಸಭೆಗೆ, ದೇಶದ ಸ್ವಾತಂತ್ರ್ಯದ ಕಾದಾಟದಲ್ಲಿ ವಿಜಯಿಯಾದ ಬಗ್ಗೆ ಕಳಿಸಿದ ಅಭಿನಂದನೆಗಳ ಬಗ್ಗೆ ಅಂತಃಕರಣಪೂರ್ವಕ ವಂದನೆಗಳನ್ನು ಸಮರ್ಪಿಸುತ್ತೇನೆ. ಪೌರ್ವಾತ್ಯ ರಾಷ್ಟ್ರಗಳಿಗೆಲ್ಲ ಪಾರತಂತ್ರ್ಯದಿಂದ ವಿಮೋಚಿಸುವ ರಾಷ್ಟ್ರೀಯ ಸಭೆಯ ಯತ್ನಗಳಲ್ಲೆಲ್ಲ ನಾನು ಅಂತಃಕರಣಪೂರ್ವಕ ಭಾಗ ತೆಗೆದುಕೊಳ್ಳುವೆನು.

* * *

ನಾಗಪುರದೊಳಗಿನ ಶೋಚನೀಯ ಹಕೀಕತು.

ನಾಗಪುರದೊಳಗಿನ ಗಣೇಶ ಪೇಟೆಯಲ್ಲಿ ಒಂದು ಶೋಚನೀಯ ಪ್ರಕಾರವು ಈಗ ಚಾಲು ಇದೆ. ೧-೧॥ ವರ್ಷಗಳ ಹಿಂದೆ ಅಲ್ಲಿಯ ಮುಸಲ್ಮಾನರು ಹಿಂದೂಗಳ ಕಡೆಯಿಂದ ಮಸೀದಿ ಕಟ್ಟಲಿಕ್ಕೆಂದು ಸ್ಥಳ ಪಡೆದರು. ಕಟ್ಟಡಕ್ಕಾಗಿ ಹಿಂದೂ ಬಾಂಧವರಿಂದ ವಂತಿಗೆಯನ್ನೂ ಪಡೆದರು. ಈ ಹೊಸ ಮಸೀದಿಯ ಮುಂದುಗಡೆಯಿಂದ ಹಿಂದೂ ದೇವರ ಮೆರವಣಿಗೆಯಾದಲ್ಲಿ, ಅದನ್ನು ತಾವು ಆತಂಕಪಡಿಸೆವು ಎಂತಲೂ ಅವರು ವಚನ ಕೊಟ್ಟಿದ್ದರು. ಆದರೆ, ಈಗ ಅಲ್ಲಿಂದ ಉತ್ಸವಗಳನ್ನು ಹಾದುಹೋಗಲು ಮುಸಲ್ಮಾನರು ಆತಂಕ ಮಾಡುತ್ತಾರೆ. ಆದರಿಂದ ಪೋಲೀಸರು ಶಾಂತತಾಭಂಗದ ನೆವ ಮಾಡಿ, ಆ ಮಾರ್ಗದಿಂದ ಮೆರವಣಿಗೆಯನ್ನು ಹೊರಡಿಸಬಾರದೆಂದು ಹುಕುಮು ಹೊರಡಿಸಿರುವರು. ಕಾರ್ತಿಕ ಹುಣ್ಣಿವೆಯ ವರೆಗೆ ಈ ಉತ್ಸವವು ಹೊರಡತಕ್ಕದ್ದಿದೆ. ಅನಾದಿಕಾಲದ ವಹಿವಾಟಿಯಂತೆ, ಆ ಮಾರ್ಗದಿಂದ ಮೆರವಣಿಗೆಯನ್ನು ಹೊರಡಿಸುವ ಹಕ್ಕನ್ನು, ಮುಸಲ್ಮಾನರ ವಚನಭ್ರಷ್ಟತೆಯ ಮೂಲಕ, ಪೋಲೀಸರ ದೊಡ್ಡಶಾಹಿಗೆ ಬೆದರಿ, ಹಿಂದೀಯರು ಕಳಕೊಳ್ಳಲಿಕ್ಕೆ ತಯಾರಿಲ್ಲ. ಆದರಿಂದ, ಈ ಮೆರವಣಿಗೆಯ ದಿನಗಳಲ್ಲೆಲ್ಲ ಅಂದರೆ, ಕಾರ್ತಿಕ ಹುಣ್ಣಿವೆಯ ವರೆಗೆ ಈ ಮಾರ್ಗದ ಮೇಲೆ ಪೋಲೀಸ ಹುಕುಮನ್ನು ಮುರಿದು, ನಿತ್ಯವೂ -೬ ಮಂದಿ ಹಿಂದೂ ಬಾಂಧವರು ಸತ್ಯಾಗ್ರಹ ಮಾಡಿ, ಕಾರಾಗೃಹ ವಾಸವನ್ನು ಸೇರುತ್ತಿರುವರು. ಈ ಬಗ್ಗೆ ನಾಗಪುರದೊಳಗಿನ ಹಿಂದೂ ಧರ್ಮಾಭಿಮಾನಿಗಳಲ್ಲಿ ವಿಲಕ್ಷಣ ಕಲ್ಲೋಲವೆದ್ದಿದೆ. ಅಖಿಲ ಹಿಂದೂ ಬಾಂಧವರು ಈ ಧಾರ್ಮಿಕ ಯುದ್ಧದಲ್ಲಿ ಪಕ್ಷಭೇದಗಳನ್ನೆಲ್ಲ ಮರೆತು, ಒಕ್ಕಟ್ಟಾಗಿರುವರು. ಕಳೆದ ತಾ. ೩೦ನೇ ಅಕ್ಟೋಬರ ರಾತ್ರಿ ಪ್ರಚಂಡ ಜಾಹೀರ ಸಭೆಯು ಶ್ರೀ| ರಾಜೇಲಕ್ಷ್ಮಣರಾವ ಭೋಸಲೆ ಇವರ ಅಧ್ಯಕ್ಷತೆಯಲ್ಲಿ ಸೇರಿ, ಹಿಂದೂ ಸಭೆಯ ಶಾಖೆಯನ್ನು ಸ್ಥಾಪಿಸಬೇಕೆಂದು ಠರಾವಾಯಿತು. ಈಗ ಚಾಲು ಇರುವ ಸತ್ಯಾಗ್ರಹದ ಖರ್ಚಿಗಾಗಿ ಒಂದು ನಿಧಿಯನ್ನು ಎತ್ತುವ ಠರಾವಾಗಿ, ಸಭೆಯಲ್ಲಿಯೇ ೩೦೦-೪೦೦ ರೂಪಾಯಿಗಳ ಅಂಕಡೆಗಳು ಬಿದ್ದವು. ಡಾ| ಮುಂಜೇಯವರ ನೇತೃತ್ವದಲ್ಲಿ ರಾಜಿ ಮಾಡಿಕೊಳ್ಳಲು ಕೋಂಗ್ರೆಸ ಕಮಿಟಿಯ ಮಾರ್ಫತ ಬಹು ಯತ್ನಗಳು ನಡೆದವು. ರಾಜಿಯ ಶರ್ತುಗಳು ಸಹ ನಿಶ್ಚಯಿಸಲ್ಪಟ್ಟವು. ಆದರೆ, ಮುಸಲ್ಮಾನರ ದುರಾಗ್ರಹದ ಮೂಲಕ ಅವು ಸಫಲವಾಗಲಿಲ್ಲ. ಆದರಿಂದ ಈಗಲೂ ಹಿಂದೂ ಬಾಂಧವರು ಸತ್ಯಾಗ್ರಹ ಮಾಡಿ, ಸೆರೆಮನೆಯನ್ನು ಸೇರಿಕೊಳ್ಳುತ್ತಿರುವರು. ಅಲ್ಲೀ ಬಂಧುಗಳಾಗಲಿ, ಮೌ| ಅಬುಲ್ ಕಲಾಮ್ ಆಝಾದರವರಾಗಲಿ ಈ ಕಲಹವನ್ನು ಶಾಂತಪಡಿಸಬಾರದೇನು?

* * *

ಇದೇನು ಚೋದ್ಯ?

ಕಳೆದ ಆಗಸ್ಟ ತಾ. ೩೧ನೇಗೆ ಯರೋಡಾ ಜೈಲಿನಲ್ಲಿ ಸಕ್ಕರಖಾನ ಎಂಬ ಹೆಸರಿನ ಒಬ್ಬ ಸಿಂಧ ಪ್ರಾಂತದ ಕೈದಿಯು ಕೊಲೆಗೀಡಾದನು. ಈ ಕೊಲೆಯು ಹಗಲಿಗೇ ಸಂಭವಿಸಿತು. ಜೈಲಿನಲ್ಲಿ, ನೌಕರಶಾಹಿಯ ಶಿಸ್ತಿನ ಆಗಾರದಲ್ಲಿ ಇಂಥ ಕೊಲೆಯು ಸಂಭವಿಸಿದ ಬಗ್ಗೆ ಕೋಲಾಹಲವೆದ್ದಿತು. ಪೋಲೀಸ ಚೌಕಿಗೆ ಪ್ರಾರಂಭವಾಯಿತು. ೧೧ ಮಂದಿ ಕೈದಿಗಳನ್ನು ಆರೋಪಿಗಳೆಂದು ಪೋಲೀಸರು ಆಚ್ಚುಹೊಡೆದು, ಅವರನ್ನು ಮೆಜಿಸ್ಟ್ರೇಟ ಕೋರ್ಟಿನ ಮುಂದೆ ತಂದರು. ಮೂವರು ಪೂರ್ವ ಚೌಕಶಿ ಕಾಲಕ್ಕೆ ಖಟ್ಲೆಯೊಳಗಿಂದ ನಿರಪರಾಧಿಗಳೆಂದು ಮುಕ್ತಹೊಂದಿದರು. ೭ ಜನರ ಖಟ್ಲೆ ಸುನಾವಣಿಯನ್ನು ಸೆಶನ್ಸ ಜಡ್ಜರು ಮಾಡಿ ಅವರನ್ನ ನಿರ್ದೋಷಿಗಳೆಂದು ವಿಮೋಚಿಸಿದರು. ಸಕ್ಕರಖಾನನ ಕೊಲೆಗಡುಕನ ಪತ್ತೆಯಾಗಲಿಲ್ಲವೆಂಬುದು ಸಿದ್ಧ. ಕೈದು ಖಾನೆಯಲ್ಲಿ, ಪೋರ್ಟ-ಜೈಲು ಸುಪರಿಂಟೆಂಡೆಂಟ ಇವರ ಸಂರಕ್ಷಣೆಯಲ್ಲಿ ಇದ್ದ ಕೈದಿಯನ್ನು ಹಗಲಲ್ಲಿ ಹೀಗೆ ಯಮಸದನಕ್ಕಟ್ಟಿದಾಗ ಅಪರಾಧಿಯನ್ನು ಶೋಧಿಸಲು ನಮ್ಮ ಪೋಲೀಸರು ಅಸಮರ್ಥರಾದದ್ದು ನೋಡಿ ಎಲ್ಲರೂ ಬೆರಗಾಗುವರು. ಇದೇನೋ ಚೋದ್ಯವೆಂದು ಅನೇಕರು ತರ್ಕಿಸದಿರಲಾರರು. ಕಾಯಿದೆ-ಸುವ್ಯವಸ್ಥೆಗಳ ಪಾಠ ಕಲಿಸುವ ನೌಕರಶಾಹಿಯ ಜೋಪಾನದಲ್ಲಿದ್ದ, ಕಾವಲಲ್ಲಿದ್ದ ಕೈದಿಯ ಕೊಲೆಗಡುಕನು ಅದೃಶ್ಯನಾಗಿರುವದು ಬಹಳೇ ಸಂಶಯಾಸ್ಪದವು. ಸರಕಾರವು ಮತ್ತೊಮ್ಮೆ ಚವಕಶಿ ನಡಿಸಲಿ.

ಪರಲೋಕವಾಸಿ ಅಶ್ವಿನೀಕುಮಾರ ದತ್ತ.

ಬಾರಿಸಾಲದ ಸುಪ್ರಸಿದ್ಧ ದೇಶಸೇವಕರಾದ ಬಾಬು ಅಶ್ವಿನೀಕುಮಾರ ದತ್ತರವರು ಕಳೆದ ತಾ. ೭ನೇ ಬುಧವಾರ ಅಪರಾಹ್ನ, ಕಲಕತ್ತೆಯಲ್ಲಿ ನಿಧನಹೊಂದಿದರು. ಮರಣಕಾಲದಲ್ಲಿ ಅವರ ಪ್ರಾಯವು ೬೮. ಇವರು ಡಾಕ್ಕಾ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷರೂ, ೧೯೦೬ನೇ ಇಸವಿಯಲ್ಲಿ ಜರುಗಿದ ಬಾರಿಸಾಲ ಪ್ರಾಂತಿಕ ಪರಿಷತ್ತಿನ ಸ್ವಾಗತಾಧ್ಯಕ್ಷರೂ ಆಗಿದ್ದರು. ಇವರು ಬಂಗಾಲದಲ್ಲಿ ನಡೆದ ವಂಗಭಂಗ ಹಾಗು ಸ್ವದೇಶಿ ಚಳವಳಿಗಳಲ್ಲಿ ಅಗ್ರೇಸರತ್ವವನ್ನು ವಹಿಸಿದವರಿದ್ದರು. ೧೯೦೮ರಲ್ಲಿ ಇವರಿಗೆ ಹದ್ದಪಾರಿಯ ಶಿಕ್ಷೆಯಾಗಿತ್ತು. ಇವರ ಸಂಘಟನಾ ಶಕ್ತಿಯು ಅದ್ಭುತವಿತ್ತು. ಕಳೆದ ವರುಷ ಬಂಗಾಲದ ಪ್ರಾಂತಾಧಿಪರು ಬಾರಿಸಾಲ ಜಿಲ್ಲೆಯನ್ನು ಸಂದರ್ಶಿಸಿದಾಗ, ಅಶ್ವಿನೀಬಾಬುವಿನ ಆಜ್ಞೆಯ ಹೊರತು, ಹೊಟ್ಟೆ ಹೊರೆಗಾಗಿ ಕೂಲಿಗಳು ಸಿಗರು. ಪೇಟೆಯಲ್ಲಿ ಬಂದಿಷ್ಟು ಉಪ್ಪು ಸಿಗದು. ಅಷ್ಟು ಭದ್ರ ರೀತಿಯಿಂದ ಅವರು ಪ್ರಜೆಗಳನ್ನು ಸುಸಂಘಟಿಸಿದ್ದರೆಂದು ಪ್ರಾಂತಾಧಿಪರೇ ಒಪ್ಪಬೇಕಾಯಿತು. ಅನಾಥರಿಗೆ, ಆಪದ್ಗ್ರಸ್ತರಿಗೆ ಸಹಾಯ ಮಾಡುವದಕ್ಕಾಗಿ ಸೇವಾಸಮಿತಿಗಳನ್ನು ಬಾಬು ಮಹಾಶಯರು ಏರ್ಪಡಿಸಿದ್ದರು. ಎಲ್ಲ ಕೆಲಸವನ್ನು ಯಾರಿಗೂ ವಿಶೇಷ ತೋರಗೊಡದೆ, ಮಾಡುವದು ಬಾಬುಜಿಯವರ ಲಕ್ಷಣವಿತ್ತು. ಧಾರ್ಮಿಕ ಹಾಗು ತಾತ್ವಿಕ ಗ್ರಂಥಗಳನ್ನು ಅವರು ರಚಿಸಿರುವರು. ತಮ್ಮ ತಂದೆಯವರ ಸ್ಮರಣಾರ್ಥ, ಅವರು ಬಾರಿಸಾಲದಲ್ಲಿ 'ವ್ರಜಮೋಹನ' ಕಾಲೇಜನ್ನು ಸ್ಥಾಪಿಸಿರುವರು. ಮಹಾತ್ಮರ ಅಸಹಯೋಗದಲ್ಲಿ, ಜೀರ್ಣದೇಹದ ಮೂಲಕ ಪ್ರತ್ಯಕ್ಷ ಅವರು ಸೇರಿಕೊಳ್ಳದಿದ್ದರೂ, ಅಸಹಕಾರಿತೆಯ ಅಭೀಷ್ಟಚಿಂತನವನ್ನೇ ಅವರು ಮಾಡುತ್ತಿದ್ದರು. ೩ ವರುಷಗಳ ಹಿಂದೆ, ಮಹಾತ್ಮರು ಅವರಿಗೆ ಬೆಟ್ಟಿಯಾದಾಗ, 'ಈ ಮಹಾ ಕಾರ್ಯದಲ್ಲಿ ನಿಮಗೆ ದೇವರು ಯಶಸ್ಸನ್ನು ಕೊಡಲಿ' ಎಂದು ಮಹಾತ್ಮರಿಗೆ ಅವರು ಆಶೀರ್ವಾದವನ್ನಿತ್ತಿದ್ದರು. ಅಂಥವರ ನಿಧನದಿಂದ ಭರತಖಂಡಕ್ಕೆ, ವಿಶೇಷವಾಗಿ, ಬಂಗಾಲ ಪ್ರಾಂತಕ್ಕೆ ಬಹಳೇ ಹಾನಿಯಾಗಿದೆ.

ವೃತ್ತಸಾರ.

— ಬೋರಸಾದ ಹಾಗು ಆನಂದ ಈ ಮ್ಯುನಿಸಿಪಾಲಿಟಿಗಳು ಮೌ॥ ಮಹಮ್ಮದ ಅಲ್ಲಿಯವರಿಗೆ ಮಾನಪತ್ರವನ್ನು ಸಮರ್ಪಿಸುವ ಠರಾವನ್ನು ಪಾಸು ಮಾಡಿರುವವು. ಕಲೆಕ್ಟರರು ವಿರೋಧಿಸಿದರೂ, ಅದಕ್ಕೆ ಲಕ್ಷ್ಯಗೊಡಲಾರದೆ, ತಮ್ಮ ಠರಾವನ್ನು ಕಾಯಂ ಮಾಡಿರುವವು.

— ಹಿಂದೂ-ಮಹಮ್ಮದೀಯರೊಳಗಿನ ದ್ವೇಷಭಾವದ ವಿಚಾರ ಮಾಡಲು ಮೌ॥ ಅಬುಲ್ ಕಲಾಮ ಆಝಾದರವರು ದಿಲ್ಲಿಯಲ್ಲಿ ಉಭಯ ಸಮಾಜಗಳ ಪರಿಷತ್ತನ್ನು ಇಂದು ತಾ. ೧೫ನೇ ನವಂಬರಕ್ಕೆ ನಿಮಂತ್ರಿಸಿರುವರು.

— ಬಡೇ ಅಧಿಕಾರಿಗಳ ಸಂಬಳದ ಪ್ರಶ್ನೆಯನ್ನು ಪುನರಾಲೋಚಿಸಲು ಟಾಟರಾಹಿ ಕಮೀಶನು ನೇಮಣೂಕಿ ಹೊಂದಿದ್ದು, ಅದರ ವಿಚಾರಣೆಯು ಕಳೆದ ತಾ. ೬ನೇಯಿಂದ ದಿಲ್ಲಿಯಲ್ಲಿ ಪ್ರಾರಂಭವಾಗಿದೆ. ಈ ಕಮೀಶನಿನ ಮುಂದೆ ಕೊಡುವ ಜಬಾನಿಗಳನ್ನು ಬರೆಕೊಳ್ಳಲಿಕ್ಕೆ ಲಘುಲೇಖಕರನ್ನು ಸಹ ವಿಲಾಯತಿಯಿಂದಲೇ ತಂದಿರುವರು! ಸಾಕ್ಷಿಗಾರರ ಜಬಾನಿಗಳು, ಸಾಕ್ಷಿಗಾರರ ಇಚ್ಛೆಯಂತೆ ಸಾರ್ವಜನಿಕ ಯಾ ಗುಪ್ತ ರೀತಿಯಿಂದ ನಡೆಯಬೇಕೆಂದು ಠರಾವು ಪಾಸಾಗಿದೆ.

— ಕಳೆದ ತಾ. ೨೯ನೇ ಅಕ್ಟೋಬರಕ್ಕೆ ಅಲಹಾಬಾದಿನ ಹತ್ತರ ಈಸುವ ಶರ್ಯತ್ತು ನಡೆಯಿತು. ಅದರೊಳಗೆ ಮಿ॥ ಬುಧಾ ಮಲ್ಲ ಎಂಬವರು ೩೧ ಮೈಲುಗಳವರೆಗೆ ಈಸಿ ಹೋದರು. ಆದರೆ, ಡಾ॥ ರೋಬಿನ್ ಚಟರ್ಜಿಯವರು ೪೩ ಮೈಲು ಈಸಿ ಹೋದರು. ಡಾ॥ ರೋಬಿನ್ ಚಟರ್ಜಿಯವರಿಗೆ ಪಾರಿತೋಷಕವು ದೊರೆಯಿತು.

— ಮುಂಬಯಿಯ ಪ್ರಾಂತಾಧಿಪರಾದ ಸರ್ ಜೋಜ ಲೋಯಿಡ್‌ರವರು ನಿವೃತ್ತರಾಗಿ ತಾ. ೮ನೇ ಡಿಸೆಂಬರ ಶನಿವಾರಕ್ಕೆ ತಮ್ಮ ಅಧಿಕಾರವನ್ನು ತ್ಯಜಿಸಿ, ಸ್ವದೇಶಕ್ಕೆ ತೆರಳುವರು. ಹೀಗೆ, ಅವರಿಗೆ ಮಾನಪತ್ರ ಕೊಡಬೇಕೆಂದು ಮುಂಬಯಿ ಮ್ಯುನಿಸಿಪಾಲಿಟಿಯಲ್ಲಿ ಹಿಂದೆ ಚರ್ಚೆ ನಡೆದಿತ್ತು. ಆದರೆ, ಅದಕ್ಕೆ ಲೋಕಮತವು ಅನುಕೂಲವಾಗದ್ದರಿಂದ, ಆ ಪ್ರಶ್ನೆಯನ್ನು ಅಷ್ಟಕ್ಕೇ ತಡಹಿಡಿ ಇಟ್ಟಿದ್ದರು. ಈಗ ಈ ಪ್ರಶ್ನೆಯು ಎಂದು ಮುಂದೆ ಬರುವದೆಂದು ಇನ್ನೂ ತಿಳಿಯಲಿಲ್ಲ. ಮಾನಪತ್ರದ ಪ್ರಶ್ನೆಗೆ ವಿಶೇಷ ಮಹತ್ವ ಕೊಡದೆ, ರೀತಿಯಂತೆ, ಅನುಕ್ರಮ ನಂಬರಿನಿಂದ ವಿಚಾರಿಸಬೇಕೆಂದು ಅನೇಕ ಮೆಂಬರರು ಅಧ್ಯಕ್ಷರಿಗೆ ತಿಳಿಸಿರುವರು. ಹೀಗೆ ಚರ್ಚೆ ಮಾಡಹೋದರೆ, ಮಾನಪತ್ರದ ಪ್ರಶ್ನೆಯು ವಿಚಾರವು ಮುಗಿಯುವವರೆಗೆ ನಾಮದಾರರು ವಿಲಾಯತಿಗೆ ಮುಟ್ಟುತ್ತಾರೋ, ಏನೆಂದು ಮಾನಪತ್ರಭಕ್ತರಿಗೆ ಭೀತಿಯಾಗಿದೆ. ಹೊಸ ಗವ್ಹರ್ನರರಾದ ಲೆಫ್ಟನಂಟ ಕರ್ನಲ್ ಸರ್ ಲೆಸ್ಲೀ ವಿಲ್ಸನ್‌ರವರು ದೊರೆಸಾನಿಯ ಸಹಿತ ಡಿಸೆಂಬರ ತಾ. ೧೦ ನೇ ಸೋಮವಾರ ಮುಂಜಾನೆ ಮುಂಬಯಿ ಪುರಿಯಲ್ಲಿ ಆಗಮಿಸುವರೆಂದು ತಿಳಿಯುತ್ತದೆ.

— ದೀನಬಂಧು ಸಿ. ಎಫ್. ಎಂಡ್ರ್ಯೂಸರವರು ಕಳೆದ ತಾ. ೧೦ನೇ ಶನಿವಾರಕ್ಕೆ ಹವಾಬದಲಾವಣೆಗಾಗಿ ವಿಲಾಯತಿಗೆ ತೆರಳಿದರು. ಅಲ್ಲಿ ಮಹಾತ್ಮಾ ಗಾಂಧಿಯವರ ಬಗ್ಗೆ ತಮ್ಮ ದೇಶಬಾಂಧವರಲ್ಲಿ ನೆಲಸಿದ್ದ ತಪ್ಪು ತಿಳುವಳಿಕೆಗಳನ್ನು ಪರಿಹರಿಸಲು ತಾವು ಹೋಗುವೆವೆಂದು, ಅವರು 'ಮುಂಬಯಿ ಕ್ರಾನಿಕಲ್' ಪತ್ರಿಕೆಯ ಪ್ರತಿನಿಧಿಗಳಿಗೆ ತಿಳಿಸಿರುವರು.

— ಸಹಕಾರಿ ಭಾರತ ಮಂತ್ರಿಗಳಿಂದ ಎಂಟರಬಿನ್ ದೊರೆಗಳು ಸದ್ಯಕ್ಕೆ ಒಲು ದೊಡ್ಡ ರಾಜಕೀಯ ಕಲಹವಾಗುವದಿದೆಂದು ಲಿವ್ಹರ್‌ಪೂಲದೊಳಗೆ ಮಾಡಿದ ಭಾಷಣದಲ್ಲಿ ಅಭಿಪ್ರಾಯಪಟ್ಟಿರುವರು. ಎಲ್ಲಿ, ಯಾವ ರೀತಿಯಿಂದ, ಎಂಬುದೇನು ತಿಳಿಯಲಿಲ್ಲ.

— ಮುಂಬಯಿಯ ಸಿಂಹವೆಂದು ಖ್ಯಾತಿಗೊಂಡ ಸರ್ ಫಿರೋಜಶಹಾ ಮೆಹರವಾನಜಿ ಮೆಹತಾರವರ ಜಯಂತ್ಯುತ್ಸವವು ಕಳೆದ ತಾ. ೪ನೇ ರವಿವಾರಕ್ಕೆ ಮುಂಬಯಿಯೊಳಗಿನ ಪಾರ್ಸಿ ಯುವಜನ ಸಂಘದ ವಿದ್ಯಮಾನದ ಸಮಾಚರಿಸಲ್ಪಟ್ಟಿತು. ಸಭೆಯಲ್ಲಿ ಫಿರೋಜಶಹಾರವರ ವಿದ್ವತ್ತೆ, ದೇಶಾಭಿಮಾನ, ಮುತ್ಸದ್ದಿತನ, ಇವುಗಳ ಗುಣವರ್ಣನಪರ ಭಾಷಣಗಳಾದವು.

— ಬ್ರಿಟಿಶ ಮುಖ್ಯ ಪ್ರಧಾನರಾದ ಮಿ॥ ಬೋಲ್ಡವಿನ್‌ರವರು ಮೆಂಚೆಸ್ಟರದಲ್ಲಿ ಒಂದು ಭಾಷಣಮಾಡಿ, ಹಿಂದುಸ್ಥಾನವು ಸಂರಕ್ಷಕ ವೃತ್ತಿಯನ್ನು ಸ್ವೀಕರಿಸಿ, ಪರದೇಶೀ ಸಾಮಗ್ರಿಗಳ ಆಮದಿಗೆ ಪ್ರತಿಬಂಧಿಸಿದರೆ, ಬ್ರಿಟಿಶರಿಗೆ ಬಹಳೇ ಲುಕ್ಸಾನಾಗುವದೆಂದು ಅಭಿಪ್ರಾಯಪಟ್ಟರು. ಇಡೀ ಬ್ರಿಟಿಶಸಾಮ್ರಾಜ್ಯವನ್ನೇ ಒಂದು ದೊಡ್ಡ ರಾಷ್ಟ್ರವೆಂದು ಕಲ್ಪಿಸಿ, ಈ ಸಾಮ್ರಾಜ್ಯದ ಘಟಕಗಳಲ್ಲೆಲ್ಲ ಅಪ್ರತಿಹತ ವ್ಯಾಪಾರವು ನಡೆಯಬೇಕೆಂದು ಮುಖ್ಯ ಪ್ರಧಾನರು ಅಭಿಪ್ರಾಯಪಟ್ಟರು. ಹಿಂದುಸ್ಥಾನದ ಗತಿಯು ಹೇಗೇ ಇರಲಿ, ನಮ್ಮ ಸರಕುಗಳನ್ನು ಅದು ಕೊಂಡರಾಯಿತು, ಎಂಬುದೇ ಬ್ರಿಟಿಶರ ಧೋರಣ.

— ಸಿಂಧ ಪ್ರಾಂತದೊಳಗಿನ ಹೈದರಾಬಾದ ಮ್ಯುನಿಸಿಪಾಲಿಟಿಯು ಶ್ರೀ॥ ಜೆಠ್ಮಲ್ ರಾಮ ಜಯರಾಮದಾಸ ಹಾಗು ಪೀರ ಘುಲಾಮ ಮುಜಾದಿದ್ದ ಈ ಉಭಯ ರಾಷ್ಟ್ರಸೇವಕರಿಗೆ ಬಂಧವಿಮೋಚನವಾದ ಬಗ್ಗೆ ಮಾನಪತ್ರವನ್ನರ್ಪಿಸುವ ಠರಾವನ್ನು ಪಾಸು ಮಾಡಿತ್ತು. ಆದರೆ, ಅವರು ಮಾನಪತ್ರ ಕೊಳ್ಳುವಷ್ಟು ಮಹಾಕಾರ್ಯವನ್ನು ತಾವು ಮಾಡಿದ್ದು ತಮಗೆ ತೋರದ್ದರಿಂದ, ತಾವು ಮಾನಪತ್ರ ಕೊಳ್ಳುವದಿಲ್ಲೆಂದು ಮ್ಯುನಿಸಿಪಾಲಿಟಿಗೆ ಆಭಾರಪೂರ್ವಕ ತಿಳಿಸಿರುವರು.

— ಕವಿವರ್ಯ ರವೀಂದ್ರನಾಥ ಟಾಗೋರರವರ 'ಶಾಂತಿನಿಕೇತನ'ದಲ್ಲಿ ಸ್ವಾರ್ಥತ್ಯಾಗಪೂರ್ವಕ ಸೇವೆ ಮಾಡಿ, ಸ್ವಿಝರ್ಲಂಡದಲ್ಲಿ ಮರಣಹೊಂದಿದ ಮಿ॥ ಪಿಯರಸನ್‌ರವರ ಸ್ಮಾರಕಕ್ಕಾಗಿ ಒಂದು ಚಿಕಿತ್ಸಾಲಯವನ್ನು ಸ್ಥಾಪಿಸಬೇಕೆಂದು ಕವಿವರ್ಯರು ಯೋಚಿಸಿರುವರು. ಇದಕ್ಕೆ ೨೦ ಸಾವಿರ ರೂಪಾಯಿಗಳು ತಗಲುವವೆಂದು ಅಂದಾಜು. ಈ ರಕಮನ್ನು ಕ್ರಿಸ್ತವಾಸಿ ಪಿಯರಸನ್‌ರವರ ಬಗ್ಗೆ ಆದರವಿದ್ದವರು ಪೂರೈಸಬೇಕೆಂದು ಕವಿವರ್ಯರು ಆಗ್ರಹದ ವಿನಂತಿ ಮಾಡಿರುವರು.

— ಕಾಬೂಲಿನಲ್ಲಿ ತುರ್ಕ, ಅಫಗಾನ, ಹಿಂದೀ, ಮುಸಲಮಾನ ಹಾಗು ಶೀಖ ಇವರದೊಂದು ಮಹತ್ವದ ಸಭೆಯು ಕಳೆದ ಅಕ್ಟೋಬರ ತಾ. ೧೯ನೇಗೆ ಒಬ್ಬರ ಬಾಗದಲ್ಲಿ ನೆರವೇರಿತು. ಹಾಜಿ ಅಬ್ದುಲ್ ರಝಾಕ್ ರೈಸೂಲ ಮುಜಾಹಿದೀನ ವಶಿಖಲಿಸಾನರವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಮೊದಲನೇ ಠರಾವಿನಿಂದ ಮಿತ್ರಪಕ್ಷದ ಸೈನಿಕರು ಕಾನಸ್ಟಾಂಟಿನೋಪಲ್ ಶಹರವನ್ನು ತ್ಯಜಿಸಿದ ಬಗ್ಗೆ ಖಿಲಾಫತ-ಉಲ್-ಮುಸ್ಲಿಮೀನ ಬಾದಶಹರಿಗೂ, ಘಾಜೀ ಮುಸ್ತಫಾ ಕಮಾಲ ಪಾಶಾರವರಿಗೂ ಅಭಿನಂದನ ಮಾಡಲಾಯಿತು. ಖಿಲಾಫತ ಚಳವಳಿಯ ಪುರಸ್ಕರ್ತರಾದ ಮಹಾತ್ಮಾಗಾಂಧಿಯವರಿಗೆ ಶಾಂತರೀತಿಯಿಂದ ವಿಮೋಚಿಸುವ ಬಗ್ಗೆ ನಡೆಯುವ ಕಾದಾಟದಲ್ಲಿ ಹಿಂದುಸ್ಥಾನದೊಳಗಿನ ಎಲ್ಲ ಸಮಾಜಗಳೂ ಐಕ್ಯದಿಂದ ಬಾಳಬೇಕೆಂಬ ಎರಡನೇ ಠರಾವು ಮಂಜೂರಾಯಿತು. ಇದಾದ ಬಳಿಕ ಹಿಂದೆ, ಮೌ॥ ಅಬುಲ್ ಕಲಾಮ ಆಝಾದ, ಲಾಲಾ ಲಜಪತರಾಯ, ಮೌ॥ ಮಹಮ್ಮದ ಅಲ್ಲಿ ಹಾಗು ಡಾ॥ ಸೈಫುದ್ದೀನ ಕಿಚಲೂರವರನ್ನು ಅಂತಃಕರಣಪೂರ್ವಕ ಅಭಿನಂದಿಸುವ ಮೂರನೇ ಠರಾವು ಪಾಸಾಯಿತು.

— ಕರ್ನಾಟಕ ಪ್ರಾಂತಿಕ ರಾಷ್ಟ್ರಸೇವಕರ ಪ್ರಥಮ ಪರಿಷತ್ತು ವಿಜಾಪುರದಲ್ಲಿ ಇದೇ ಬರುವ ತಾ. ೨೧ನೇಗೆ ನೆರೆಯುವದಿದೆಂದು ಡಾ॥ ಹರ್ಡೀಕರರು ತಿಳಿಸುತ್ತಾರೆ. ಈ ಪರಿಷತ್ತಿಗೆ ಪ್ರಾಂತದೊಳಗಿನ ಎಲ್ಲ ರಾಷ್ಟ್ರಸಂಘಗಳು ತಮ್ಮ ತಮ್ಮ ಪ್ರತಿನಿಧಿಗಳನ್ನು ಕಳಿಸಬೇಕೆಂದು ಅವರ ವಿನಂತಿಯಂತೆ.

— ಪೀರ ಹಾಜಿ ಮಹಮ್ಮದ ಶಾಹೀದ ಕಹಾ ಚಿಸ್ತಿ, ಹೈದರಾಬಾದ ಇವರ ವಿಂಚಸ್ಟರ ರೋಡಿನ ಬಂಗಲೆಯೊಳಗಿಂದ ಕಳೆದ ತಾ. ೨೯ನೇ ಅಕ್ಟೋಬರಕ್ಕೆ ೫ ಲಕ್ಷ ರೂಪಾಯಿಗಳ ಕಳವಾಯಿತು. ಅವುಗಳಲ್ಲಿ ೪ ಲಕ್ಷಗಳ ಕರೆನ್ಸಿ ನೋಟುಗಳು; ಸುಮಾರು ೧ ಲಕ್ಷ ಬೆಲೆಯ ಒಂದು ರತ್ನಖಚಿತ ಕಂಠಿ. ಪೋಲೀಸರು ತಪಾಸು ಮಾಡುತ್ತಿರುವರು.

— ವೃತ್ತಪತ್ರಗಳಲ್ಲಿ ಲೇಖ ಬರೆದು, ಜೀವಿಸುವವರ ಸ್ಥಿತಿ ಸುಧಾರಿಸಲು ಮುಂಬಯಿಯಲ್ಲಿ ಒಂದು ಸಂಘವು ಕಳೆದ ತಾ. ೪ನೇ ರವಿವಾರಕ್ಕೆ ಜನ್ಮವನ್ನೆತ್ತಿದೆ. 'ಮುಂಬಯಿ ಕ್ರಾನಿಕಲ್' ಪತ್ರಿಕೆಯ ಸಂಪಾದಕರಾದ ಸಯ್ಯದ ಅಬ್ದುಲ್ಲಾ ಬ್ರೇಲ್ವಿಯವರು ಈ ಸಂಘದ ಚಾಲಕರು.

— ಕಳೆದ ತಾರೀಖು ೧ನೇಗೆ ಮಹಮ್ಮದೀಯರ ಚುನಾವಣೆಯು ನಡೆಯಿತು. ಈ ಚುನಾವಣೆಯ ಕಾಲಕ್ಕೆ ಯಾರೋ ಒಬ್ಬರು ಒಂದು ಕುಚೋದ್ಯ ಮಾಡಿದರು. ಅದೇನೆಂದರೆ, ಮಧ್ಯಭಾಗದ ಮುಸಲ್ಮಾನರ ಕಡೆಯಿಂದ ಮಿ॥ ರಫೀಉದ್ದೀನ ಎಂಬ ಮಹಮ್ಮದೀಯರೊಬ್ಬರು ಉಮೇದವಾರರಿದ್ದರು. ಮುಂಬಯಿಯಿಂದ ಮುಂಚಿನ ದಿನ ಸಾಯಂಕಾಲಕ್ಕೆ ಅವರಿಗಾಗಿ ದುಡಿಯುವವರಿಗೆಲ್ಲ ತಂತಿಗಳು ಹೋದವು. ಮಿ॥ ರಫೀ ಉದ್ದೀನರವರು ಮತದಾರರ ಲಕ್ಷ್ಯವಿಲ್ಲದ್ದರಿಂದ, ತಮ್ಮ ಉಮೇದವಾರಿಯನ್ನು ಹಿಂತೆಗೆದುಕೊಂಡರು ಎಂದು ಇದೇ ಮಧ್ಯಭಾಗದೊಳಗಿನ ಮಿ॥ ರಫೀಉದ್ದೀನರವರ ಮತಸಂಗ್ರಹ ಮಾಡುವವರಿಗೆಲ್ಲ ಇಲೆಕ್ಷನಿನ ದಿನ ಮುಂಜಾವಿಗೆ ತಂತಿಗಳು ಕೈಸೇರಿದವು. ಗುಜರಾಥದಲ್ಲಿ ಮಿ॥ ರಫೀಉದ್ದೀನರವರಿಗೂ ಈ ತಂತಿಯೊಂದು ತೋರಿಸಲಾಯಿತು. ಈ ಮೋಸದಿಂದ ಮಿ॥ ರಫೀಉದ್ದೀನರವರಿಗೆ ಬಹಳ ಮತಗಳು ದೊರೆಕಲಿಲ್ಲ. ಈ ತಪ್ಪು ತಿಳುವಳಿಕೆಯನ್ನು ಪರಿಹರಿಸಲು ಸಹ ಅವಕಾಶ ದೊರೆಯಲಿಲ್ಲ. ಮೋಸಗಾರರನ್ನು ಪತ್ತೆ ಮಾಡುವದಕ್ಕಾಗಿ ಪೋಲೀಸರು ಯತ್ನಿಸುತ್ತಿರುವರು.

ಕಾನಡಾವೃತ್ತ

ಗುರುವಾರ, ತಾರೀಖು ೧೮ ಮಾಹೆ ನವಂಬರ ೧೯೩೭.

ಧ್ವಜದ ವಿಜಯ!

ಕಾಯಿದೇ ಕೌನ್ಸಿಲ ಚುನಾವಣೆಯ ಪರೀಕ್ಷೆಯು, ಕಳೆದ ೧ನೇ ತಾರೀಖಿಗೆ ನಡೆದ ವರ್ತಮಾನವು, ವಾಚಕರಿಗೆ ವಿದಿತವಾದದ್ದೇ. ನಮ್ಮ ಜಿಲ್ಹೆಯೊಳಗಿನ ಪರೀಕ್ಷೆಯ ಪರಿಣಾಮವು ಕಳೆದ ಸೋಮವಾರಕ್ಕೆ ಕಾರವಾರದಲ್ಲಿ ರಿಟರ್ನಿಂಗ ಆಫೀಸರರಾದ ಮಿ| ಹೇಗರವರು ಜಾಹೀರಪಡಿಸಿರುವರು. ಈ ಪರೀಕ್ಷೆಯಲ್ಲಿ ಒಟ್ಟು ೪,೮೮೪ ಮತದಾರರು ವೋಟು ಕೊಟ್ಟರು. ಅವುಗಳಲ್ಲಿ ರಾಷ್ಟ್ರೀಯ ಸಭಾಭಿಮಾನಿಗಳಾದ ಶ್ರೀ| ಮಂಜುನಾಥ ದೇವರಭಟ್ಟ ಕರ್ಕಿಯವರಿಗೆ ೩,೪೪೮; ರಾ| ವಿಶ್ವೇಶ್ವರ ವೆಂಕಟೇಶಯ್ಯಾ ಕಲ್ಯಾಣಪುರಕರರಿಗೆ ೭೫೩; ರಾ| ಶೇಷಗಿರಿ ನಾರಾಯಣ ಕೇಶವೈನರಿಗೆ ೬೮೩; ಹೀಗೆ ಮತವಿಭಾಗಣಿಯಾಗಿದೆ ಶ್ರೀ| ಕರ್ಕಿಯವರು ನಮ್ಮ ಜಿಲ್ಹೆಯ ಪ್ರತಿನಿಧಿಯಾಗಿ ಮುಂಬಯಿಯ ಕಾಯಿದೇ ಕೌನ್ಸಿಲಿನಲ್ಲಿ ವಿರಾಜಮಾನರಾಗುವರು. 'ಮುಂದಿನ ಗುರುವಾರ'ದ ಲೇಖದಲ್ಲಿ ಅನುಮಾನಿಸಿದಂತೆ, ಶ್ರೀ| ಕರ್ಕಿಯವರ ಧ್ವಜವು ಧ್ವಜ ಹಚ್ಚಿತೆಂದು ತಿಳಿದು, ನಮ್ಮ ಭವಿಷ್ಯವು ನಿಜವಾದ ಬಗ್ಗೆ ಸಾತ್ವಿಕ ಆನಂದವು ನಮಗುಂಟಾದರೆ, ಅದೇನು ಆಶ್ಚರ್ಯವಲ್ಲ. ಆದರೆ, ಇಂದಿಗೆ ಈ ಚುನಾವಣೆಯಿಂದ ನಮ್ಮ ಮನೋಭೂಮಿಯಲ್ಲುಂಟಾದ ಕೆಲ ವಿಚಾರಗಳನ್ನು ಇಲ್ಲಿ ನಮೂದಿಸಲಿಚ್ಛಿಸುವೆವು.

ಈ ಚುನಾವಣೆಯಲ್ಲಿ ಬಹಳೇ ಮಂದಿಗಳು ಮತದಾನ ಮಾಡಿದರು. ಶೇಕಡಾ ೬೦ ರಷ್ಟು ಮತದಾರರು ನಮ್ಮ ಜಿಲ್ಹೆಯಲ್ಲಿ ಮತದಾನವನ್ನಿತ್ತರೆಂದು ಹೇಳಲಡ್ಡಿಯಿಲ್ಲ. ಈ ಪ್ರಮಾಣವು ನಿಜವಾಗಿ ಪ್ರಶಂಸನೀಯವು. ವಿಲಾಯತಿಯಂಥ ಸುಧಾರಿಸಿದ ರಾಷ್ಟ್ರಗಳಲ್ಲಿ ಸಹ, ಶೇಕಡಾ ೬೦ ರಷ್ಟು ಮಂದಿಗಳು ಮತದಾನ ಮಾಡುವದು ಅಪರೂಪದ ಸಂಗತಿಯು. ಮುಂಬಯಿಯಂಥ ಸುಧಾರಣೆಯ ಕೇಂದ್ರ ನಗರಿಯಲ್ಲಿ ಸಹ, ಕಳೆದ ನವಂಬರ ತಾರೀಖು ೧ ನೇಗೆ ಜರುಗಿದ ಚುನಾವಣೆಯಲ್ಲಿ ಶೇಕಡಾ ೩೮ ರಷ್ಟು ಮತಗಳು ದಾಖಲಾಗಿವೆ. ಈ ಮಾನದಿಂದ ನೋಡಿದರೆ, ನಮ್ಮ ಜಿಲ್ಹೆಯು ಜಾಗೃತಾವಸ್ಥೆಯಲ್ಲಿದೆಂದು ಹೇಳಲಿಕ್ಕೇನೂ ಅಡ್ಡಿ ಇಲ್ಲ. ಮತ್ತೊಂದು ಲಕ್ಷಣವನ್ನೂ ಇಲ್ಲಿ ನಮೂದ ಮಾಡುವದು ಅಪ್ರಾಸಂಗಿಕವಾಗಲಾರದು. ಜಿಲ್ಹಾ ಕೊಂಗ್ರೆಸ ಕಮಿಟಿಯ ಅಧ್ಯಕ್ಷರಾದ ಶ್ರೀ| ಗಣಪತಿ ರಾಮರಾವ ಮಾಸೂರರು ಕೊಂಗ್ರೆಸೇತರ ಉಮೇದವಾರರ ಪಕ್ಷವನ್ನು ವಹಿಸಿಕೊಂಡು, ಜಿಲ್ಹೆಯಲ್ಲೆಲ್ಲ ಚಳವಳಿ ನಡಿಸಿದರೂ, ಮತದಾರರು ದಿಙ್ಮೂಢರಾಗದೆ, ರಾಷ್ಟ್ರೀಯ ಸಭಾಭಿಮಾನಿ ಉಮೇದವಾರರಿಗೇ ಮತ ಕೊಟ್ಟದ್ದು, ಜಾಗೃತಿಯ ಲಕ್ಷಣವಲ್ಲೇನು? "ತಾವು ಧುರೀಣರು; ತಾವು ಹೊತ್ತಿಗೊಂದು ರೂಪ ಮಾಡಿದರೂ, ಜನತೆಯು ತಮ್ಮ ಹಿಂದೆಯೇ ಕುರುಡನಂತೆ ಹಿಂಬಾಲಿಸುತ್ತದೆ," ಎಂಬ ಧುರೀಣಶಾಹಿಯು ಬಣ ಪೆಪ್ಪೆಯು. ಈಗ ಈ ಇಲೆಕ್ಶನಿನ ಪರಿಣಾಮದಿಂದ ನಷ್ಟವಾದರೆ, ಅದೊಂದು ಇಷ್ಟ ಸಂಗತಿಯೇ. ಅಂತು ಕಾನಡಿಗ ಜನತೆಯು, ಅಧಿಕಾರದ ದುರುಪಯೋಗ ಮಾಡಿ, ಸಿಕ್ಕ ಹಾಗೆ ವರ್ತಿಸುವವರಿಗೆ ಚೊಕ್ಕ ಉತ್ತರವನ್ನಿತ್ತು ದಂಡಿಸಿದೆ ಇದೊಂದು ಅಭಿನಂದನೀಯ ಸಂಗತಿಯು.

ಈ ಇಲೆಕ್ಶನಿನಲ್ಲಿ ಇನ್ನೊಂದು ಸಂಗತಿಯು ಪ್ರಾಮುಖ್ಯವಾಗಿ ದೃಗ್ಗೋಚರವಾಗಿದೆ. ಅದೇನಂದರೆ:— ಕೊಂಗ್ರೆಸ ಸಂಸ್ಥೆಗೆ ಜಿಲ್ಹೆಯಲ್ಲಿ ಬಹು ಮಾನವಿದೆ. ಜನತೆಯು ರಾಷ್ಟ್ರೀಯ ಸಭೆಯನ್ನು ತನ್ನ ಕಲ್ಯಾಣಪರ ಸಂಸ್ಥೆಯೆಂದು ಎಣಿಸುತ್ತದೆ. ಕೊಂಗ್ರೆಸ ಉಮೇದವಾರರು ಕೊಂಗ್ರೆಸಿನ ಸ್ತುತಿ ಮಾಡುವದಂತು ಸಹಜವೇ. ಆದರೆ, ರಾಷ್ಟ್ರೀಯ ಸಭೆಯ ಧ್ಯೇಯವನ್ನು ಮನ್ನಿಸದೆ, ಅದಕ್ಕೆ ಯಾವದೇ ರೀತಿಯಿಂದ ಸಂಬಂಧಿಸಿರದ ಉಮೇದವಾರರು ಸಹ, 'ಸ್ವರಾಜ್ಯವು ತಮಗೂ ಇಷ್ಟವು,' ಮೊದಲಾದ ರಾಷ್ಟ್ರೀಯ ಸಭೆಯ ಧ್ಯೇಯಕ್ಕನುಗುಣವಾದ ವಚನಗಳನ್ನಾಡಿ, ಮತದಾರರಿಗೆ ಮೋಹಿಸಲೆತ್ನಿಸಿದರು. ಇದು ಕೊಂಗ್ರೆಸ ಸಂಸ್ಥೆಯ ವರ್ಚಸ್ವದ ದ್ಯೋತಕವೆಂದು ಯಾರು ಹೇಳರು?

ಇನ್ನೊಂದು ವಿಚಾರವೂ ಮಹತ್ವದ್ದಿದೆ. ಮತದಾನ ಸ್ಥಳಗಳನ್ನು, ಪಟ್ಟಣಗಳು, ಹಳ್ಳಿಗಳು, ಹೀಗೆ ಇಬ್ಭಾಗ ಮಾಡಿದರೆ, ಒಂದು ಹೊಸ ನೋಟವು ದೃಷ್ಟಿಗೆ ಬೀಳುತ್ತದೆ. ಕಾರವಾರ, ಕುಮಟಾ, ಶಿರ್ಸಿ, ಈ ಶಹರುಗಳಲ್ಲಿ ಚುನಾವಣೆಯು ಅಷ್ಟು ಚೊಕ್ಕ ರೀತಿಯಿಂದನಾಗಲಿಲ್ಲ. ಅನೇಕ ವಿಚಾರಗಳು ಮತದಾರರಿಗೆ ಬಾಧಿಸಿದವು ಕೊಂಗ್ರೆಸಿಗಿಂತ ಕೊಂಗ್ರೆಸೇತರರಿಗೇ ಇಲ್ಲಿ ಹೆಚ್ಚು ಮತಗಳು ಬಿದ್ದವೆಂದು ಹೇಳುತ್ತಾರೆ. ನಮ್ಮ ಕುಮಟೆಯಲ್ಲಂತು ಕೊಂಗ್ರೆಸ ಉಮೇದವಾರರಿಗೆ ಬರೇ ೩೦-೪೦ ಮತಗಳು ದೊರಕಿರಬೇಕು. ಇದರ ಮೇಲಿಂದ ಶಹರುಗಳಲ್ಲಿ ಬಾಯಿಬಡಕ ದೇಶಾಭಿಮಾನವು ವಿಪುಲವೆಂದು ಹಳ್ಳಿಗಳು ಪಟ್ಟಣಗಳಿಗೆ ಹೀಯಾಳಿಸಿದರೆ, ಅದೇನು ಅಯೋಗ್ಯವೆನಿಸದು. ಹಳ್ಳಿಗಳು ಮಾತ್ರ ಪಾಶ್ಚಾತ್ಯದೃಷ್ಟಿಕೋನದಂತೆ, ಸುಧಾರಿಸಿದವಲ್ಲದಿದ್ದರೂ, ತಮ್ಮ ತಮ್ಮ ಮತಗಳನ್ನು ಬಹು ಸಂಖ್ಯೆಯಿಂದ ಕೊಂಗ್ರೆಸ ಉಮೇದವಾರರಿಗೇ ಸಮರ್ಪಿಸಿ, ರಾಷ್ಟ್ರೀಯ ಸಭೆಯ ಮೇಲಿನ ತಮ್ಮ ಪ್ರೀತಿಯನ್ನು ವ್ಯಕ್ತಗೊಳಿಸಿವೆ. ಇದು ನಿಜವಾಗಿ ಭೂಷಣಾಸ್ಪದವು. ಮಹಾತ್ಮರು ನುಡಿದಂತೆ, ಭರತಖಂಡದ ಭವಿತವ್ಯತೆಯು ಹಳ್ಳಿಗಳ ಮೇಲೆಯೇ ಸರ್ವಥಾ ಅವಲಂಬಿಸಿದೆ. ಅವು ಜಾಗೃತವಾದರೆ, ರಾಷ್ಟ್ರೀಯ ಸಭಾಭಿಮಾನವನ್ನು ವಿಶೇಷ ಉತ್ಸುಕತೆಯಿಂದ, ಶಿಸ್ತಿನಿಂದ ವ್ಯಕ್ತಗೊಳಿಸಲು, ಭರತಖಂಡವು ಶೀಘ್ರವೇ ಪಾರತಂತ್ರ್ಯಶೃಂಖಲೆಯಿಂದ ವಿಮೋಚನವಾಗಲೇಬೇಕು. ಸುಸಂಸ್ಕೃತರೆಂದು, ಸುಧಾರಿಸಿದವರೆಂದು ಮೆರೆಯುವ ಪಟ್ಟಣಿಗರು ಹಳ್ಳಿಗರಿಂದ ದೇಶಾಭಿಮಾನದ ಬೋಧವನ್ನು ಪಡೆದು, ಜಾಣರಾಗಲಿ; ದೇಶಸೇವಾತತ್ಪರರಾಗಲಿ.

ಈ ಚುನಾವಣೆಯಲ್ಲಿ ಜಿಲ್ಹಾ ಕೊಂಗ್ರೆಸ ಕಮಿಟಿಯು ತನ್ನ ಮುಖ್ಯ ಚಾಲಕರನ್ನು ಕೊಂಗ್ರೆಸೇತರ ಉಮೇದವಾರರಿಗೆ ಸಮರ್ಪಿಸಿ, ತನ್ನ ವರ್ಚಸ್ವವನ್ನು ಕಳಕೊಂಡಿದೆಂದು ಹೇಳಬೇಕಾಗಿದೆ. ದಿಲ್ಲಿಯೊಳಗಿನ ಜಾದಾ ರಾಷ್ಟ್ರೀಯ ಸಭೆಯ ಆಜ್ಞೆಯಂತೆ, ಕೊಂಗ್ರೆಸ ಸಂಸ್ಥೆಗಳೆಲ್ಲ ತಟಸ್ಥವೃತ್ತಿಯನ್ನು ಧರಿಸಬೇಕೆಂಬದಿತ್ತು. ಇದನ್ನು ಎಲ್ಲ ಕೊಂಗ್ರೆಸ ಸಂಸ್ಥೆಗಳೂ, ಚಾಲಕರೂ ಮನ್ನಿಸುವಂತೆ, ನಮ್ಮಲ್ಲಿಯ ಕೊಂಗ್ರೆಸ ಕಮಿಟಿಯವರಾದರೂ ಮನ್ನಿಸುವರೆಂದು ನಮ್ಮ ಅಂದಾಜಿತ್ತು. ಆದರೆ, ಜಿಲ್ಹಾ ಕೊಂಗ್ರೆಸ ಕಮಿಟಿಯ ಅಧ್ಯಕ್ಷರೇ ಈ ಚುನಾವಣೆಯಲ್ಲಿ ಅಗ್ರೇಸರತ್ವವನ್ನು ವಹಿಸಿಕೊಂಡದ್ದು ಕೇವಲ ಅಧಿಕಪ್ರಸಂಗತನವೆಂದು ನಮಗೆ ತೋರುತ್ತದೆ. ವ್ಯಕ್ತಿಶಃ ಅಧ್ಯಕ್ಷರ ಮನಸ್ಸು ಚುನಾವಣೆಯಲ್ಲಿ ಸಿಲುಕಿಕೊಂಡಿದ್ದರೆ, ಅವರು ತಮ್ಮ ಅಧಿಕಾರಪದಕ್ಕೆ ರಾಜಿನಾಮೆಯನ್ನು ಕೊಡಬಹುದಿತ್ತು. ಅದೂ ಇರಲಿ, ಕೊಂಗ್ರೆಸ ಕಮಿಟಿಯ ಅಧ್ಯಕ್ಷರು, ಕೊಂಗ್ರೆಸ ಉಮೇದವಾರರಿಗಾಗಿ ಯತ್ನಿಸಿದ್ದರೆ, ಯಾರದೂ ವಿಶೇಷ ಆಕ್ಷೇಪವಿದ್ದಿಲ್ಲ. ಯಾಕಂದರೆ, ಕೊಂಗ್ರೆಸ ಪಕ್ಷದವರು ತಮ್ಮ ಉಮೇದವಾರರ ಯಶಸಂಪಾದನೆಗಾಗಿ ದುಡಿಯುವದು ಸಹಜವೆಂದು ಯಾರೂ ತಿಳಿಯುತ್ತಿದ್ದರು; ತಿಳಿಯಲು ಆಸ್ಪದವಿತ್ತು. ಆದರೆ, ಶ್ರೀ| ಗಣಪತ ಮಾಸೂರರು ಕೊಂಗ್ರೆಸೇತರ ಉಮೇದವಾರರಿಗಾಗಿ ಮತಸಂಚಯ ಮಾಡಲು ಹೊರಟದ್ದು ಗರ್ಹಣೀಯವೆಂದು ಯಾರು ಹೇಳರು? ಶ್ರೀ| ಮಾಸೂರರು ಈ ವರ್ತನದಿಂದ ಜಿಲ್ಹಾ ಕಮಿಟಿಯು ವರ್ಚಸ್ವವನ್ನೇ ನಷ್ಟಪಡಿಸಿದರೆಂದು ಹೇ|

ಅತಿಶಯೋಕ್ತಿಯಾಗದು; ಅಯಥಾರ್ಥವಾಗದು. ಇದು ನಿಜವಾಗಿ ಶೋಚನೀಯವು. ಮಹಾತ್ಮರ ಕಾರಾಗೃಹವಾಸದಿಂದ ಅನೇಕ ಕಡೆಗಳಲ್ಲಿ ಕೊಂಗ್ರೆಸ ಸಂಸ್ಥೆಗಳು ನೀತಿಭ್ರಷ್ಟ (demoralise) ವಾದವೆಂದು ನಾವು ಕೇಳಿಬಲ್ಲೆವು. ನಮ್ಮಲ್ಲಿಯ ಜಿಲ್ಹಾ ಕಮಿಟಿಯೂ ಇದೇ ಹಾದಿಯನ್ನು ಹಿಡಿದಿದೆಯೆಂದು ನೋಡಿ ಮನಸ್ಸು ಬಹಳೇ ಬೇಸರಗೊಳ್ಳುತ್ತದೆ. ಕೊಂಗ್ರೆಸ ಸಭಾಸದರು ಇನ್ನಾದರೂ ಎಚ್ಚರಾಗಿ, ಈ ವಿಷಯ ವಿಚಾರ ಮಾಡಿ, ಇಂಥ ಪರಿಸ್ಥಿತಿಯು ಮುಂದೊದಗದಂತೆ ಸತ್ವಶಾಲಿ ಧೀರರನ್ನೇ ತಮ್ಮ ಚಾಲಕರನ್ನಾಗಿ ನೇಮಿಸಿಕೊಳ್ಳಲೆಂದು ನಮ್ಮ ಆಗ್ರಹದ ಸೂಚನೆ.

ಚಿತ್ತವೇಧಕ ಕಥೆ.

ಮಹಾತ್ಮರ 'ನವಜೀವನ'ವೆಂಬ ಗುಜರಾಥಿ ಪತ್ರಿಕೆಯಲ್ಲಿ ಒಂದು ಚಿತ್ತವೇಧಕ ಕಥೆಯು ಪ್ರಕಟವಾಗಿದೆ. ಮೌಲಾನಾ ಶೌಕತ ಅಲ್ಲಿಯವರು, ತಮ್ಮ ಬಿಡುಗಡೆಯಾದ ಬಳಿಕ ಕೆಲ ದಿನಗಳ ಹಿಂದೆ ಅಹಮ್ಮದಾಬಾದಿಗೆ ಚಿತ್ತೈಸಿದ್ದರು. ಆಗ ತಮ್ಮ ಬಂದಿವಾಸದೊಳಗೆ ಸಂಭವಿಸಿದ ಕಥೆಯೊಂದನ್ನು ಗೆಳೆಯರಿಗೆ ನಿವೇದಿಸಿದರು. ಮಹಾವೋ ಎಂಬೊಬ್ಬ ಭಂಗಿಯಿದ್ದನು; ಹೆಂಡಗುಡುಕನವನು. ಒಂದು ದಿನ ಅಮಲಿನ ಭರದಲ್ಲಿ ತನ್ನ ಹೆಂಡತಿಯನ್ನು ಕೊಂದನು. ಆ ಬಗ್ಗೆ ಅವನ ಮೇಲೆ ಖಟ್ಲೆಯಾಯಿತು. ಅವನನ್ನು ಗಲ್ಲಿಗೇರಿಸಬೇಕೆಂದು ನ್ಯಾಯಮೂರ್ತಿಗಳು ತೀರ್ಪುಕೊಟ್ಟರು. ಗಲ್ಲಿಗೇರಿಸುವ ಮೊದಲು, ಅವನನ್ನು ರಾಜಕೋಟ ಜೈಲಿಗೆ ಒಯ್ದರು. ದೈವವಶಾತ್ ಮೌಲಾನಾ ಶೌಕತ ಅಲ್ಲಿಯವರ ಕೋಣೆಯ ನೆರೆಯಲ್ಲಿಯೇ ಅವನನ್ನು ಇಟ್ಟರು. ಮೌಲಾನಾರವರು ಅವನ ಕಥೆ ಕೇಳಿದರು. ಮಹಾವೋನು ತನ್ನ ಕರ್ಮಕಥೆಯನ್ನೆಲ್ಲ ಅರುಹಿ, ಪಶ್ಚಾತ್ತಾಪ ಪೂರ್ವಕ ನುಡಿದದ್ದೇನಂದರೆ:— "ನನಗೆ ಕೊಟ್ಟ ಶಾಸನವು ತೀರ ಯೋಗ್ಯವಿದೆ. ಆ ಬಗ್ಗೆ ನನ್ನ ಆಕ್ಷೇಪವೇನೂ ಇಲ್ಲ. ನನ್ನ ಆಯುಷ್ಯವು ಮುಗಿಯುತ್ತ ಬಂತು. ಉಳಿದ ದಿನಗಳಲ್ಲಿ ಶ್ರೀ ದೇವರನ್ನು ನೆನಿಸಿ, ಅವನ ಭಜನೆಯನ್ನೇ ಮಾಡುವದರಲ್ಲೇ ನನಗೆ ಪರಮಾನಂದವು." ಕೆಲ ದಿನಗಳು ಕಳೆದವು. ಒಂದು ದಿನ ರಾತ್ರಿ, ಮೌಲಾನಾರವರಿಗೆ ಭಜನೆಯ ಹಾಗು ಗೀತದ ಆಲ್ಹಾದಕರ ಧ್ವನಿಯು ಕೇಳಬಂತು. ಇದೆಲ್ಲಿಯದು? ಎಂದು ಮೌಲಾನಾರವರು ಆಲಿಸಲು, ಅದು ಮಹಾವೋನ ಕೋಣೆಯೊಳಗಿಂದ ಬರುತ್ತದೆಂದು ತಿಳಿಯಬಂತು. ಮರುದಿನವೇ ಮಹಾವೋನಿಗೆ ಗಲ್ಲಿಗೇರಿಸುವದಿತ್ತು. ಆ ದಿನ ರಾತ್ರಿಯೇ ಅವನ ಆತ್ಮವು ಪರಮಾತ್ಮನಲ್ಲಿ ತನ್ಮಯವಾಗಿತ್ತು. ಮಹಾವೋನು ಪರಮಾನಂದದಲ್ಲಿ ಮಗ್ನನಾಗಿದ್ದು, ಮೈಮರೆತು ಕುಣಿಯುತ್ತಿದ್ದನು; ಹಾಡುತ್ತಿದ್ದನು; ಆಗ ಅವನಷ್ಟು ಸ್ವತಂತ್ರ ಪ್ರಾಣಿಗಳು ಮತ್ತ್ಯಾರಿದ್ದಿಲ್ಲ. ಈ ಪ್ರಸಂಗದಲ್ಲಿ ಮೌಲಾನಾರವರಿಗೆ ಆನಂದಾಶ್ರುಗಳು ಸುರಿದವು. ಮರುದಿನ ಮುಂಜಾವಿಗೆ ಮಹಾವೋನನ್ನು ಗಲ್ಲಿಗೇರಿಸಲು ಹೊರತಂದರು. ಆಗ ಅವನು ನಗುತ್ತಿದ್ದನು; ಗಲ್ಲಿಗೇರಲು, ಕುಣಿಯುತ್ತ ಹೋಗುತ್ತಿದ್ದನು. ಕೊಲೆಗಡಕರು ಮಹಾವೋನ ತಲೆಯ ಮೇಲೆ ಉಕ್ಕಿನ ಟೊಪ್ಪಿಗೆಯನ್ನು ಹಾಕಿದರು. ಕೂಡಲೆ, 'ಮಹಾತ್ಮಾ ಗಾಂಧಿ ಕೀ ಜೈ' ಎಂದು ಮಹಾವೋನು ಜಯಘೋಷ ಮಾಡಿದನು. ಇಡೀ ಜೈಲಿನಲ್ಲೆಲ್ಲ ಇದೇ ಘೋಷವು ಎಲ್ಲ ಕೈದಿಗಳಿಂದ ಪ್ರತಿಧ್ವನಿಸಲ್ಪಟ್ಟಿತು. ಹೀಗೆ ಆನಂದದಿಂದ ಮಹಾವೋನು ಪರಲೋಕವನ್ನೈದಿದನು. ಈ ಸುದ್ದಿಯು ಮೌಲಾನಾರವರಿಗೆ ತಿಳಿಯಿತು. ಅನೇಕರು ಇಂಥ ನಿಧನವನ್ನು ಈ ಇಪ್ಪತ್ತೈದು ವರುಷಗಳಲ್ಲಿ ತಾವೆಂದೂ ನೋಡಲಿಲ್ಲೆಂದು ಮೌಲಾನಾರವರಗೂಡ ಉದ್ಗರಿಸಿದರು. ಇಂಥ ನಿರ್ಭಯ-ಪರಲೋಕಗಮನವನ್ನು ನಾನೆಂದೂ ನೋಡಿಲ್ಲೆಂದು ಜೈಲ ಸುಪರಿಂಟೆಂಡೆಂಟರು ಉದ್ಗರಿಸಿ, ಆಶ್ಚರ್ಯ ಮುದ್ರೆಯಿಂದ ಮೌಲಾನಾರವರಿಗೆ ಪ್ರಶ್ನಿಸಿದ್ದೇನಂದರೆ:— 'ಮಹಾತ್ಮಾ ಗಾಂಧಿಗೂ, ಈ ಭಂಗಿಗೂ ಸಂಬಂಧವೇನು?' ಮೌಲಾನಾರವರು ಅದಕ್ಕೆ ಉತ್ತರವೇನಿತ್ತರೆಂದು, ವಾಚಕಮಹಾಶಯರೇ ಲಾಲಿಸಿರಿ. "ಯಾಕಂದರೆ, ಪುನರ್ಜನ್ಮವನ್ನೀಯುವದಾದರೆ, ತನಗೆ ಭಂಗಿ ಅಥವಾ ಢೇಡರ ಯೋನಿಯಲ್ಲಿ ನಿರ್ಮಿಸುವರೆ, ಪರಮಾತ್ಮನಿಗೆ ಪ್ರಾರ್ಥಿಸಿಕೊಳ್ಳುವ ಪುರುಷನು ಇಡೀ ಭೂಮಂಡಲದಲ್ಲಿ ಒಬ್ಬೊಬ್ಬಟಿಗನೇ ಇರುವನು" ಅಸ್ಪೃಶ್ಯರ ಉದ್ಧಾರಕ್ಕಾಗಿ ಮಹಾತ್ಮರ ಆತ್ಮವು ಹೇಗೆ ತಳಮಳಿಸುತ್ತದೆ, ಎಂಬುದು ಈ ಕಥೆಯಿಂದ ಸ್ಪಷ್ಟವಾಗುವದಿಲ್ಲವೇ! ಇಂಥ ಲೋಕೋತ್ತರ ಪುರುಷರು ಯರೋಡಾ ಜೈಲಿನಲ್ಲಿ ನಮಗಾಗಿ, ಕಾರಾಗೃಹವಾಸವನ್ನು ಅನುಭವಿಸುತ್ತಿರುವರು. ನಾಳಿನ ೧೫ ನೇ ತಾರೀಖಿನ ಶನಿವಾರದ ಗಾಂಧೀ ದಿನಕ್ಕೆ ಅವರ ಲೋಕೋತ್ತರತೆಯನ್ನು ಸ್ಮರಿಸಿ, ಇಂಥ ಮಹಾತ್ಮರನ್ನು ಬಿಡುಗಡೆ ಮಾಡುವ ಸಾಮರ್ಥ್ಯವು ತಮಗೆ ಶೀಘ್ರವೇ ಲಭಿಸಲೆಂದು, ಅಖಿಲ ಭಾರತೀಯರೂ ಪ್ರಾರ್ಥಿಸಿ, ಮಹಾತ್ಮರು ವಿಧಿಸಿದ ರಾಷ್ಟ್ರೀಯ ವಿಧಾಯಕ ಕಾರ್ಯಕ್ರಮವನ್ನು ಕೈಗೊಳ್ಳಲುದ್ಯುಕ್ತರಾಗುವರೆಂದು ನಮ್ಮ ಮನಃಪೂರ್ವಕ ಕೋರಿಕೆ.

ಸ್ಫುಟ ಸೂಚನೆಗಳು.

೧. ಸಾಮ್ರಾಜ್ಯ ಪರಿಷತ್ತಿನಿಂದ ಹಿಂದುಸ್ಥಾನಕ್ಕೆ ನಿಷ್ಪನ್ನವೇನಾಗಲಿಲ್ಲೆಂದು ನಾವು ಕಳೆದ ಸಂಚಿಕೆಯಲ್ಲಿ ನಿವೇದಿಸಿರುವೆವು. ಆದರೆ, ಸಾಮ್ರಾಜ್ಯ ಪರಿಷತ್ತಿನಲ್ಲಿ ಕೆಲ ಬೋಧಪ್ರದ ಮಾತುಕಥೆಗಳು ನಡೆದವು. ಐಯರ್ಲಂಡ ದೇಶದ ಪ್ರತಿನಿಧಿಗಳಾದ ಮಿ। ಡೆಸ್ಮಂಡ ಫಿಜರಾಲ್ಡರವರು ಭರತಖಂಡದ ಬಗ್ಗೆ ಸತ್ಯ ಮಾತುಗಳನ್ನು ನುಡಿದರು. ಸಾಮ್ರಾಜ್ಯ ಪರಿಷತ್ತಿಗೆ ಹಿಂದುಸ್ಥಾನದ 'ಪ್ರತಿನಿಧಿಗಳು' ಇತರ ಪ್ರತಿನಿಧಿಗಳಿಗೆ ಸಮಾನರಲ್ಲೆಂದು ಅವರು ಎಲ್ಲ ಪ್ರತಿನಿಧಿಗಳ ಮುಂದೆ ಹೇಳಿಬಿಟ್ಟರು. ಡಾ। ಸಪ್ರುರವರಾಗಲಿ, ಅಲ್ವಾರ ಸಂಸ್ಥಾನದ ಮಹಾರಾಜರವರಾಗಲಿ, ಹಿಂದೀಯರ ಪ್ರತಿನಿಧಿಗಳಲ್ಲ. ಯಾಕಂದರೆ, ಅವರಿಗೆ ಸ್ವತಂತ್ರ ಹಿಂದೀ ಸರಕಾರವು ಕಳಿಸಿರುವದಿಲ್ಲ. ಆದರಿಂದಲೇ ಅವರು ನಮ್ಮಗೂಡ ಸರಿಕರಾಗಿ ಪರಿಷತ್ತಿನಲ್ಲಿ ಆಸನಾಧಿಷ್ಠಿತರಾಗಲಾರರು. ವಸಾಹತುಗಳಲ್ಲಾಗಲಿ, ಇತರ ರಾಷ್ಟ್ರಗಳಲ್ಲಾಗಲಿ, ಹಿಂದೀಯರಿಗೆ ಒದಗುವ ಅಪಮಾನಾಸ್ಪದ ಸ್ಥಿತಿಯು ಯಾತರ ಪರಿಣಾಮವು, ಬಲ್ಲಿರಾ? ಹಿಂದುಸ್ಥಾನದಲ್ಲಿ ಸ್ವಾತಂತ್ರ್ಯಾಭಾವವಿದ್ದದರಿಂದ, ಅವರಿಗೆ ಈ ರೀತಿಯಿಂದ ನಡೆಸಿಕೊಳ್ಳುತ್ತಾರೆ. ತಾವು ಹಿಂದೀಯರಿದ್ದರೆ, ಈ ಸ್ಥಿತಿಯು ಮಾತೃದೇಶದ ಪಾರತಂತ್ರ್ಯದ ಮೂಲಕವೇ ಒದಗಿರುವದೆಂದು ತಾವು ತಿಳಿಯುತ್ತಿದ್ದೆವೆಂದು ಮಿ। ಡೆಸ್ಮಂಡರವರು ಉದ್ಗರಿಸಿದರು.

೨. ಮಿ। ಡೆಸ್ಮಂಡರವರು ಇಷ್ಟಕ್ಕೇ ತಡಿಯಲಿಲ್ಲ. ಹಿಂದೀಯರ ಉದ್ಧಾರಕ್ಕಾಗಿ ವಿಲಾಯತಿಯವರೆಗೆ ಪ್ರವಾಸ ಮಾಡಿದ ಹಿಂದುಸ್ಥಾನ ಸರಕಾರದ ಪ್ರತಿನಿಧಿಗಳಿಗೆ ಹಿಂದೀಯರ ಸ್ಥಿತಿಯನ್ನು ಸುಧಾರಿಸಲು ಉಪಾಯವನ್ನೂ ಸೂಚಿಸಿದರು. ಹಿಂದೀಯರು ವಸಾಹತುಗಳ ಕೂಡ, ಪರರಾಷ್ಟ್ರಗಳ ಕೂಡ ಪರಸ್ಪರ ವ್ಯವಸ್ಥೆ ಮಾಡಿಕೊಳ್ಳುವ ಸಾಮರ್ಥ್ಯವನ್ನು ಮೊಟ್ಟಮೊದಲು ಸಂಪಾದಿಸಲಿ; ಆದರೆ, ಹಿಂದೀಯರ ಸ್ಥಿತಿಯು, ತಾವು ಮಾಡಿದಂತೆ, ಒಮ್ಮೆಲೇ ಸುಧಾರಿಸುವದು. ಕೆನಿಯಾ ನಿರ್ಣಯವನ್ನು ತಿದ್ದುಪಡಿಸಲು ಒಪ್ಪದ ದಕ್ಷಿಣ ಆಫ್ರಿಕದ ಪ್ರಧಾನರಾದ ಜನರಲ್ ಹರ್ಟ್ಸರವರೂ ಇದೇ ಅರ್ಥದ ಒಂದು ವಚನವನ್ನಾಡಿದರು. "ವಸಾಹತುಗಳ ನಿವಾಸಿಗಳಿಗೆ ಬೇಕಾದಂತೆ ವರ್ತಿಸಿಕೊಳ್ಳಲು ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವಿರಬೇಕು. ಇಂಥ ವ್ಯವಸ್ಥೆಯಾದರೆ, ವಸಾಹತುಗಳು ತಮಗೆ ಕೆಟ್ಟ ರೀತಿಯಿಂದ ನಡಿಸುತ್ತವೆಂದು ಹಿಂದೀಯರು ದೂರಲಾರರು. ವಸಾಹತುಗಳ ನಿವಾಸಿಗಳಿಗಾದರೂ ಹಿಂದೀಯರು ತಮಗೆ ಹೀಗೆ ನಡಿಸಿಕೊಂಡರು, ಎಂದು ಗುಣುಗುಟ್ಟಲಿಕ್ಕೆ ಆಸ್ಪದ ಸಿಗದು. ಸಂಕ್ಷೇಪತಃ ಹೇಳಬೇಕಾದರೆ, ವಸಾಹತುಗಳ ಹಾಗು ಹಿಂದೀಯರ ವ್ಯವಹಾರವು ಸ್ವತಂತ್ರ ರಾಷ್ಟ್ರಗಳಂತಿರಬೇಕು." ಒಂದೇ ವಾಕ್ಯದಲ್ಲಿ ಮಿ। ಡೆಸ್ಮಂಡ ಹಾಗು ಜನರಲ್ ಹರ್ಟ್ಸರವರ ಅಂಬೋಣಗಳನ್ನು ಹೇಳಬೇಕಾದರೆ, ಹಿಂದುಸ್ಥಾನಕ್ಕೆ ಸ್ವರಾಜ್ಯ ಪ್ರಾಪ್ತವಾದ ಹೊರತು, ಪರದೇಶಗಳೊಳಗಿನ ಹಿಂದೀಯರ ಸ್ಥಿತಿಯು ಸುಧಾರಿಸಲಾರದು. ಪರದೇಶಗಳೊಳಗಿನ ಹಿಂದೀಯರ ಕಷ್ಟಗಳು ಪರಿಹಾರವಾಗಬೇಕೆಂದಿದ್ದರೆ, ಭರತಖಂಡವು ಸ್ವರಾಜ್ಯವನ್ನು ಸಂಪಾದಿಸಬೇಕು. ಪರರಾಷ್ಟ್ರಗಳಿಗೆ 'ಪೆಟ್ಟಿಗೆ ಪೆಟ್ಟು' ಕೊಡುವಷ್ಟು ಸಾಮರ್ಥ್ಯವನ್ನು ಸಂಪಾದಿಸಬೇಕು. ಹಿಂದೀ ಸ್ವರಾಜ್ಯವೆ ನಮ್ಮ ದೇಶಬಾಂಧವರ ಕಷ್ಟ ಪರಿಹಾರದ ಮಾರ್ಗವು. ಅದನ್ನೇ ಸಂಪಾದಿಸಿರೆಂದು ಸ್ವಾತಂತ್ರ್ಯದ ಮರ್ಮವನ್ನರಿತ ಡೆಸ್ಮಂಡ-ಹರ್ಟ್ಸರವರು ನುಡಿಯಲು, ಡಾ। ತೇಜಬಹಾದ್ದೂರರವರು ನುಡಿದದ್ದೇನು? ಗ್ರಹಿಸಿರಿ, "ಹಿಂದುಸ್ಥಾನದಲ್ಲಿ ಪೂರ್ಣ ಸ್ವಾತಂತ್ರ್ಯ ದೊರಕುವವರೆಗೆ, ಹಿಂದುಸ್ಥಾನದ ಹೊರಗೆ, ನಮ್ಮ ಬಾದಶಹರ ಸಾಮ್ರಾಜ್ಯದಲ್ಲಿ ನಮಗೆ ಕೆಳ ತರಗತಿಯವರೆಂದು ಯಾಕೆ ನಡಿಸಬೇಕು?" ಎಂದು ಡಾ। ಸಪ್ರು ಮಹಾಶಯರು ಪ್ರಶ್ನಿಸಿದರು. ಹಿಂದುಸ್ಥಾನದಲ್ಲಿಲ್ಲದ ಸ್ವಾತಂತ್ರ್ಯವು ವಸಾಹತುಗಳಲ್ಲಿ ಹಿಂದೀಯರಿಗೆ ಹೇಗೆ ಪ್ರಾಪ್ತವಾಗುವದು? ಇದೇ ಮಹತ್ವದ ಪ್ರಶ್ನೆ. ಬಾದಶಹರ ಸಾಮ್ರಾಜ್ಯದಲ್ಲಿ ನಾವು ವಾಸಿಸುತ್ತೇವೆಂಬ ಮಾತ್ರದಿಂದ ನಮಗೆ, ಬಾದಶಹರ ಇತರ ಸುದೈವಿ ಪ್ರಜೆಗಳಿಗಿರುವ ಅಮೂಲ್ಯ ಹಕ್ಕುಗಳು ಪ್ರಾಪ್ತವಾಗವು. ಆದರಿಂದಲೇ, ಮಹಾತ್ಮರು ಹಿಂದೀಯರ ಅನೇಕ ರೋಗಗಳ ಮೇಲೆ ಸ್ವರಾಜ್ಯವೇ ರಾಮಬಾಣ ಮದ್ದೆಂದು ನಿರ್ಧರಿಸಿ, ಅದಕ್ಕಾಗಿಯೇ ಅವಿಶ್ರಾಂತ ಹಗಲಿರುಳು ಮಡಿದರು. ದೇಶಭಕ್ತ ಬಾಂಧವರು ಸಾಮ್ರಾಜ್ಯ ಪರಿಷತ್ತಿನೊಳಗಿನ ಈ ಮಾತುಕಥೆಯ ಮೇಲಿಂದ

ತಕ್ಕ ಬೋಧ ಪಡೆದು, ಹುಟ್ಟಿಹುಟ್ಟಿದ ಸಣ್ಣ ಹುಣ್ಣುಗಳಿಗೆ ದಿನಾಲು ನೇಮದಿಂದ ಮುಲಾಮು ಹಚ್ಚುವಂತೆ, ಹಿಂದೀಯರ ಸಣ್ಣ ಸಣ್ಣ ಕಷ್ಟಗಳನ್ನು ಪರಿಹರಿಸಲು ದೇಶಾಂತರ ಮಾತುಮತವನ್ನು ಬಿಟ್ಟುಕೊಟ್ಟು, ರಕ್ತಶುದ್ಧ ಮಾಡುವ ದಿವ್ಯೌಷಧವಾದ ಸ್ವರಾಜ್ಯ ಸಂಪಾದನೆಯ ಕಾರ್ಯವನ್ನೇ ಇನ್ನಾದರೂ ಪ್ರಾರಂಭಿಸಿದರೆ, ದೇಶಬಾಂಧವರು ಅವರಿಗೆ ಕೋಟಿ ಹರಸುವರು. ಅಷ್ಟೊಂದು ಉಪಕಾರವನ್ನು ಅವರು ಮಾಡುವರೇನು?"

---

೩. ನಾಳಿನ ಶುಕ್ರವಾರಕ್ಕೆ ಸಮಾಪ್ತಿ ೧೭ನೇ ತಾರೀಖು. ಅಂದು ಅಖಿಲ ಭರತಖಂಡದೊಳಗಿನ ಮಹಮ್ಮದೀಯರೆಲ್ಲರೂ [illegible]-ಅರಬ ಪ್ರದೇಶ ಸ್ವಾತಂತ್ರ್ಯಕ್ಕಾಗಿ [illegible] ಕೊಳ್ಳುವರು. [illegible]-ಅರಬ ಪ್ರದೇಶವು ಮಹಮ್ಮದೀಯರಿಗೆ [illegible]. ಅತಿ ಪ್ರಿಯವಾದದ್ದು ಯಾಕೆಂದರೆ ಇಸ್ಲಾಮ ಧರ್ಮದ ಸಂಸ್ಥಾಪಕರಾದ [illegible] ಅಲ್ಲಿ ವಾಸಿಸುತ್ತಿದ್ದರು. ಈ ಪ್ರದೇಶವು [illegible] ಆಜ್ಞೆಯಂತೆ, ಈ ಪ್ರದೇಶವನ್ನು [illegible] ಅಂಕಿತದಿಂದ [illegible] ಮಹಮ್ಮದೀಯರೆಲ್ಲರೂ ಧರ್ಮನಿಷ್ಠರಾಗಿರುವರು. [illegible] ಇಸ್ಲಾಮು ಧರ್ಮಗುರುಗಳು, [illegible]-ಅಲ್-ಅರಬ ಪ್ರದೇಶವು ಇಸ್ಲಾಮ ಧರ್ಮಕ್ಷೇತ್ರವು ಇದನ್ನು ಸಂರಕ್ಷಿಸುವ ಜವಾಬದಾರಿಯು ಭೂಮಂಡಲದೊಳಗಿನ ಮಹಮ್ಮದೀಯ ಸಮಾಜದ ಮೇಲಿದೆ. ಅಲ್ಲೀ ಬಂಧುಗಳು ಧರ್ಮಬಾಂಧವರಿಗೆ ತಮ್ಮ ಕರ್ತವ್ಯದ ಅರಿವು ಮಾಡಿಕೊಟ್ಟು, ಜಝೀರಾತ-ಅಲ್-ಅರಬ ಪ್ರದೇಶದ ಸ್ವಾತಂತ್ರ್ಯಕ್ಕಾಗಿ [illegible] ವಿಜ್ಞಾಪಿಸಿರುವರು. ದಕ್ಷಿಣ ಆಫ್ರಿಕಾ ಮೊದಲಾದ ಪ್ರದೇಶಗಳಲ್ಲಿ ವಾಸಿಸುವ ಮಹಮ್ಮದೀಯರಿಗೂ, ಈ ಸುದ್ದಿಯನ್ನರುಹಿ, ನಾಳಿನ ಶುಕ್ರವಾರಕ್ಕೆ ಈಶಪ್ರಾರ್ಥನೆ ಮಾಡುವದಲ್ಲದೆ, ಜಝೀರಾತ-ಅಲ್-ಅರಬ ಪ್ರದೇಶದ ವಿಮೋಚನೆಗಾಗಿ ಅವಶ್ಯವುಳ್ಳ ನಿಧಿಯನ್ನೂ ಈ ಸಪ್ತಾಹದಲ್ಲಿ ಸಂಚಯ ಮಾಡಬೇಕೆಂತಲೂ ವಿಜ್ಞಾಪಿಸಿರುವರು. ನಮ್ಮ ಮಹಮ್ಮದೀಯ ಬಾಂಧವರೆಲ್ಲರೂ ಧರ್ಮಸ್ಥಳಗಳ ಪಾವಿತ್ರ್ಯದ ಮಹಾತ್ಮೆಯನ್ನರಿತು, ಧರ್ಮಗುರುಗಳು ವಿಧಿಸಿದ ಆಜ್ಞೆಯನ್ನು ನೆನಸಿ, ಅಲ್ಲೀ ಬಂಧುಗಳ ವಿಜ್ಞಾಪನೆಯಂತೆ ನಾಳಿನ ಶುಕ್ರವಾರಕ್ಕೆ ತಮ್ಮ ತಮ್ಮ ಮಶೀದಿಗಳಲ್ಲಿ ಸೇರಿಕೊಂಡು ನಿಶ್ಚಯದ ಪ್ರಾರ್ಥನೆಯಾದ ಬಳಿಕ, ಜಝೀರಾತ-ಅಲ್-ಅರಬ ಪ್ರದೇಶವನ್ನು ಪರಕೀಯರ ಅಂಕಿತದೊಳಗಿಂದ ಬಿಡುಗಡೆ ಮಾಡುವ ಸಾಮರ್ಥ್ಯವನ್ನು ತಮಗೆ ದಯಪಾಲಿಸೆಂದು ದೈನ್ಯಗೊಂಡು ಪ್ರಾರ್ಥಿಸಿ, ತಮ್ಮ ನಿರ್ಧಾರದ ದ್ಯೋತಕವೆಂದು ಖಿಲಾಫತ ಪ್ರತಿನಿಧಿಗೆ ಶಕ್ತಿಮೀರಿ ಕಾಣಿಕೆಯನ್ನೀಯುವರೆಂದು ನಾವು ಮನಃಪೂರ್ವಕ ಬಯಸುವೆವು.

---

೪. ಕಳೆದ ಸಂಚಿಕೆಯಲ್ಲಿ ನಮ್ಮ ದಿವಾಣರಾದ ಪರಾಂಜಪೇಯವರಿಗೂ, ವೈದ್ಯಕೀಯ ಮತದಾರರಿಗೂ ನಡೆದ ಒಂದು ಪ್ರಶ್ನೋತ್ತರವನ್ನು ವಿವರಿಸಿರುವೆವು. ಈ ಪ್ರಶ್ನೋತ್ತರಗಳ ಮೇಲಿಂದ ಮೊಂಟೆಗ್ಯೂ ಸ್ವರಾಜ್ಯದೊಳಗಿನ ದಿವಾಣರ ದೀನಸ್ಥಿತಿಯು ನೆನವರಿಕೆಯಾಗುತ್ತದೆ. ಕೆಲ ಖಾತೆಗಳ ಮಂತ್ರಿಗಳು ಜವಾಬದಾರರು, ದಿವಾಣರು ಬಬಾಬವಾರ ಸ್ವರಾಜ್ಯದ ಅಮಲದಾರರು, ಹೀಗೆ ಒಂದೇ ಸರಕಾರದ ಭಿನ್ನ ಭಿನ್ನ ಪ್ರಕೃತಿ ಮಾನವ ಎರಡು ಅಂಗಗಳಲ್ಲಿ ದಿವಾಣರು ಹೇಗೆ ಬರ್ಬರಿಕರಾಗುತ್ತಾರೆ ಎಂಬದನ್ನು ಪರಾಂಜಪೇಯವರು ವಿಶದವಾಗಿ ಒಪ್ಪಿಸಿರುವರು. ಕಾದಿಟ್ಟ ಖಾತೆಗಳ ಅಂದೋಣವನ್ನು ಒತ್ತಟ್ಟಿಗೆ ಬಿಟ್ಟುಕೊಟ್ಟು ಸ್ವತಂತ್ರ ರೀತಿಯಿಂದ ವರ್ತಿಸುವಾ, ಅಂದರೆ ಅದಕ್ಕೆ ಅಸ್ಪದವಿಲ್ಲ. ಸರಕಾರದ ಅಂಗಿವೆಂಬಂತೆ ವರ್ತಿಸಲಿಕ್ಕೆ ಕೌನ್ಸಿಲುಗಳು ಬಿಡುವದಿಲ್ಲ. ಕೌನ್ಸಿಲುಗಳ ಅಂದೋಣವನ್ನು ಅಮಲಿನಲ್ಲಿ ತರಹೋದರೆ ಕಾದಿಟ್ಟ ಖಾತೆಗಳ ಮಂತ್ರಿಗಳು ಅಡ್ಡಗಟ್ಟುತ್ತಾರೆ, ಒಂದು ಪರಿಗೆ ಕಾದಿಟ್ಟ ಖಾತೆಗಳ ಮಂತ್ರಿಗಳು ಅಂದರೆ, ಜವಾಬದಾರ ನೌಕರಶಾಹಿಯು, ಮತ್ತೊಂದು ಪರಿಗೆ ಜವಾಬದಾರ ಮೊಂಟೆಗ್ಯೂ ಸ್ವರಾಜ್ಯಾಧಿಕಾರದ ಅನುಕೂಲವಿರುವ ಕೌನ್ಸಿಲುಗಳು, ಅವುಗಳ ಬೆನ್ನಿಗಿದ್ದ ಮತದಾರರು, ಹೀಗೆ ಇತ್ತಟ್ಟಿನಲ್ಲಿ ದಿವಾಣರು ಸಿಕ್ಕಿಕೊಂಡು, ಇತ್ತ ಇಳಿಯಲಿಲ್ಲ; ಅತ್ತ ಏರಲಿಲ್ಲ, ಎಂಬಂತೆ ಆಕಾಶ ಮಧ್ಯದಲ್ಲಿ ವಿಖ್ಯಾತ ತ್ರಿಶಂಕುರಾಯನಂತೆ ತೂಗಾಡುವದಾಗುತ್ತದೆ. ನಮ್ಮ ದಿವಾಣ ಪರಾಂಜಪೇಯವರು ಈ ಸ್ಥಿತಿಯನ್ನು ಪ್ರತ್ಯಕ್ಷ ಅನುಭವಿಸಿ, ತಮ್ಮ ಮತದಾರರಿಗೆ ನುಡಿದ ನುಡಿಗಳವು. ಇದರ ಮೇಲಿಂದ ಮೊಂಟೆಗ್ಯೂರವರು ನಿರ್ಮಿಸಿದ ಹಸ್ತಬಂದಿ ಸ್ವರಾಜ್ಯದಲ್ಲಿ ತಿರುಳಿಲ್ಲದೆಂಬಿದು ಸ್ಪಷ್ಟವಾಗುತ್ತದೆ. ಯಾಕೆಂದರೆ, ದಿವಾಣರೇ ಈಗ ಹಸ್ತಬಂದಿ ಸ್ವರಾಜ್ಯದ ಕೇಂದ್ರಗಳು. ಇಷ್ಟು ಅನುಕಂಪನೀಯ ಸ್ಥಿತಿಯಾದರೂ ನಮ್ಮ ಪರಾಂಜಪೇಯವರಿಗೆ ಇನ್ನೂ ದಿವಾಣಪದದ ಮೋಹ ಬಿಡದು ಇದು ನೇಮಸ್ತರ ಭಾವಿಕತೆಯ ಪ್ರಭಾವವೋ? ನೌಕರಶಾಹಿಯ ಮಾಯಾ ಸೃಷ್ಟಿಯ ಪ್ರಭಾವವೋ? ನಾವರಿಯೆವು.

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿಗಾಲಕ್ಕೆ ಪ್ರಾರಂಭವಾಯಿತು. ಈಗ ವಿಶೇಷ ಚಳಿ ಬೀಳಹತ್ತಿದೆ. ಊರಲ್ಲಿ ಜ್ವರ, ಹೊರಕಡೆ, ಮೊದಲಾದ ಬೇನೆಗಳು ತಲೆದೋರಹತ್ತಿವೆ.

ಶಿರಗುಂಜಿ, ಚಂದಾವರ ಅತ್ತಕಡೆ ಹುಲಿಗಳ ಕಾಟ. ಶಿರಗುಂಜಿಯಲ್ಲಿ ಹುಲಿಯು ದನಗಳನ್ನು ಸಂಹರಿಸಹತ್ತಿದೆ. ಚಂದಾವರದಲ್ಲಿ ಹೀಗೆಯೇ ದನಗಳನ್ನು ಸಂಹರಿಸುತ್ತಿದ್ದ ಒಂದು ಹುಲಿಯನ್ನು ಬಲೆ ಹಾಕಿ, ಬರ್ಚಿಯಿಂದ ಒಕ್ಕಲಿಗರು ಕೊಂದರು. ಈ ಹುಲಿಯನ್ನು ಕಳೆದ ಶನಿವಾರ ತಾರೀಖು ೩ನೇಗೆ ಇಲ್ಲಿ ತಂದಿದ್ದರು. ಹುಲಿಯು ತಲೆಯಿಂದ ಬಾಲದ ವರೆಗೆ ೯ ಫೂಟು ಉದ್ದವಿತ್ತಂತೆ!

ನಿನ್ನೆ ಬುಧವಾರಕ್ಕೆ ವರಿಷ್ಠ ಕಾಯಿದೆ ಕೌನ್ಸಿಲಿನ ಚುನಾವಣೆ ನಡೆಯಿತು. ಇಲ್ಲಿ ಒಟ್ಟು ಸುಮಾರು ೧೨೦ ಮತಗಳು ದಾಖಲಾದವು. ೧೦೦ ಕ್ಕೆ ಮಿಕ್ಕಿ ಮತಗಳು ಶ್ರೀ ದತ್ತಾತ್ರೇಯ ವೆಂಕಟೇಶ ಬೆಳವಿಯವರಿಗೆ ದೊರಕಿರಬೇಕೆಂದು ಒಂದು ಅಂದಾಜು.

ಇಲ್ಲಿಯ ಮಿಲಾದ ಕಮಿಟಿಯ ಕಾರ್ಯದರ್ಶಿಗಳು, ಖಾಸಗಿ ಕೆಲಸದ ಮೂಲಕ, ೬ ತಿಂಗಳ ರಜೆ ಪಡಕೊಂಡಿದ್ದಾರಾಗಿ ತಿಳಿಯುತ್ತದೆ.

ಮಾಜಾಳಿ— ಇಲ್ಲಿ ಶನಿವಾರ ತಾ ೧೧ನೇ ದಿವಸ ೫ ಘಂಟೆ ಸಮಯಕ್ಕೆ ಒಂದು ಜಾಹೀರ ಸಭೆಗೂಡಿತು. ಸಭೆಯ ವಿಶೇಷವೆಂದರೆ ಅನೇಕ ಸ್ತ್ರೀಯರೂ ಪ್ರೇಕ್ಷಕರಾಗಿ ಹಾಜರಿದ್ದರು. ವ್ಯಾಖ್ಯಾತರು ಶ್ರೀ ಗಣಪತರಾವ ನಾಡಕರ್ಣಿಯವರು. ಹಿಂದೊಂದು ಸಾರೆ ವ್ಯಾಖ್ಯಾನದ ಬಗ್ಗೆ ಬಂದಾಗ ನೋಡಿದದಕ್ಕಿಂತಲೂ, ಅಂದಿನ ಹೆಚ್ಚಿನ ಸಮುದಾಯವನ್ನು ನೋಡಿ, ಹಿಗ್ಗುತ್ತ ಮಹಾತ್ಮರ "ವಿಧಾಯಕ ಕಾರ್ಯಕ್ರಮ"ವನ್ನು [illegible] ತನಕ ಬಹಳೇ ವಿಸ್ತಾರವಾಗಿ ಅನೇಕ ಉದಾಹರಣೆಗಳನ್ನು ಕೊಟ್ಟು ಅವರು ವಿವರಿಸಿಹೇಳಿದರು. "ಖಾದಿಯ ಮಹತ್ವವನ್ನರಿತು, ಪರದೇಶಕ್ಕೆ ನಮ್ಮಿಂದ ಬಟ್ಟೆಗಳ ರೂಪದಿಂದ ಹೋಗುವ ಲಕ್ಷ್ಮೀಯನ್ನು ಅಡ್ಡಗಟ್ಟಿ, ಸ್ವತಃ ಅನ್ನ-ವಸ್ತ್ರಭರಿತರಾಗಿ, ಬಡಬಗ್ಗರ ಹೊಟ್ಟೆ ಹೊರೆರಿ. ಹಿಂದೂ, ಮುಸಲಮಾನ, ಕ್ರಿಶ್ಚನ್ ವಗೈರೆ ಎಲ್ಲ ಹಿಂದೀ ಜನರ ಒಕ್ಕಟ್ಟೇ ನಮ್ಮ ಸ್ವರಾಜ್ಯದ ನೆಲಗಟ್ಟು, ಅದೇ ನೌಕರಶಾಹಿಯ ಪ್ರಾಣಸಂಕಟವು. ನಮ್ಮ ಅಂತಃಕಲಹವೇ (ಯಾರಿಂದಲೂ ಹುಟ್ಟಿಸಿದ್ದೂ, ಯಾವ ಕಾರಣದಿಂದಲೂ ಹುಟ್ಟಿದ್ದು ಇರಲಿ) ನೌಕರಶಾಹಿಯ ಜೀವನ ಕ್ರಮವು. ಅದ್ದರಿಂದಲೇ ಎಲ್ಲರೂ ಪ್ರೇಮಬದ್ಧರಾಗಿ, ಸ್ವಾವಲಂಬಿಯಾಗಿ, ನೌಕರಶಾಹಿಯ ವರ್ಚಸ್ವವನ್ನು ಅಪ್ರತ್ಯಕ್ಷವಾಗಿ, ಅದ್ಭುತ ವೇಗದಿಂದ ಹೆಚ್ಚಿಸುವ ಸರಕಾರಿ ಕೌನ್ಸಿಲು-ಕೋರ್ಟು-ಶಾಲೆಗಳಿಗೆ ಬಹಿಷ್ಕರಿಸಬೇಕು. ಸಾಕ್ಷಾತ್ ಭಗವಂತನೇ "ಚಾತುರ್ವರ್ಣ್ಯಂ ಮಯಾ ಸೃಷ್ಟಂ" ಹೇಳಿರುತ್ತ, ಈಗ ನಮ್ಮಲ್ಲಿ ದುರ್ದೈವದಿಂದ ಕಂಡುಬರುವ "ಅಸ್ಪೃಶ್ಯ" ರೆಂಬ ಐದನೇ ವರ್ಣಕ್ಕೆ ಶಾಸ್ತ್ರಗಳ ಹಾಗು ನೈತಿಕ ಆಧಾರವಿಲ್ಲೆಂತಲೂ, ಅವರನ್ನು ಶ್ಯಾಗೆ ಶ್ಯಾಗೆ ಸ್ಪೃಶ್ಯರನ್ನಾಗಿ ಮಾಡುವೆವೋ, ಅಷ್ಟಷ್ಟು ನಮ್ಮ ಸ್ವರಾಜ್ಯವು ಸಮೀಪಿಸುವದು. ಈ ಧ್ಯೇಯವು ಕೈಗೂಡಲಿಕ್ಕೆ ಇತರ ರಾಷ್ಟ್ರಗಳಂತೆ ರಕ್ತಪಾತವು ನಮಗೆ ಅಸಾಧ್ಯವೂ, ಅಶಕ್ಯವೂ, ಇದರಿಂದ ಯಶಸ್ಸು ಸಿಗುವದು ಕ್ಷಣಿಕವೂ, ಆಗಿರುವದರಿಂದ, ಅನತ್ಯಾಚಾರಿ ಅಸಹಕಾರಿತೆಯೇ ನಮ್ಮ ಸದಾ ಸರ್ವದಾ ಶರಣೋಪಾಯವು. ಅದ್ದರಿಂದಲೇ ಎಲ್ಲರೂ ಕೊಂಗ್ರೆಸದ ಸಭಾಸದರಾಗಿರಿ; ಟಿಳಕ ಸ್ವರಾಜ್ಯ ಫಂಡನ್ನು ಒಟ್ಟುಗೂಡಿಸಿರಿ" ಇತ್ಯಾದಿ ಹೇಳಿ, ಅವರು ಸ್ಥಾನಾಪನ್ನರಾದ ಮೇಲೆ, ಮಹಾತ್ಮರ ಜಯಘೋಷವಾಗಿ ಸಭೆಯು ಕೊನೆಗಂಡಿತು.

ರವಿವಾರಕ್ಕೆ ಶ್ರೀಯುತರು ಸುಂಕೇರಿಯಿಂದ ಖಾದಿ ತಕ್ಕೊಂಡು ಹೋದ ಸ್ವಯಂಸೇವಕರಿಂದ ಕೂಡಿಕೊಂಡು ಊರೊಳಗಿನ ಮನೆಮನೆಗೆ ಹೋಗಿ, ಖಾದಿ ಮಾರಾಟ ಮಾಡಿದರು. ಖಾದಿ ಕೊಳ್ಳಲು ಸ್ತ್ರೀಯರ ಲವಲವಿಕೆಯು ಕಂಡುಬಂತು. ಇದೇ ರೀತಿ ಯಾವತ್ತೂ ಸಮಾಜದವರು ದೇಶಪ್ರೀತಿಯನ್ನು ಬೆಳೆಸಿಕೊಂಡು, ತಮ್ಮ ಹಳ್ಳಿಯ ಉದ್ಧಾರ ಮಾಡಿಕೊಳ್ಳಲಿ.

ಸುಂಕೇರಿ— ಇಲ್ಲಿಯ ಹಾಗೂ [illegible] ಯಾವತ್ತೂ ಮತದಾರರು ತಮ್ಮ ಕೇವಲ ಕರ್ತವ್ಯವೆಂದು ದೇ॥ ಸೇ॥ ಕರ್ಕಿಯವರಿಗೆ ಮತ ಕೊಟ್ಟದ್ದರ ಫಲವು ದೃಗ್ಗೋಚರವಾಗಿ, ದೇಶಸೇವಕರೇ [illegible] ಮತಗಳಿಂದ ಆರಿಸಿ ಬಂದದ್ದು ನೋಡಿ ಜನರೆಲ್ಲರೂ ಹಿಗ್ಗುತ್ತಿರುವರು. ಇನ್ನೂ ಮುಂದೆಯೂ ಶ್ರೀಯುತ ಕರ್ಕಿಯವರು ತಮ್ಮ ಹೊಸ ಜವಾಬದಾರಿಯನ್ನರಿತು, ಯಾವತ್ತೂ ಜನರನ್ನು ಕೃತಿಯಿಂದ ಆನಂದಗೊಳಿಸುವರೆಂತ ಎಲ್ಲರ ಪೂರ್ಣ ಭರವಸೆ. ಇದೇ ಮೇರೆಗೆ ಮತದಾರರು ವರಿಷ್ಠ ಕಾಯಿದೆ ಕೌನ್ಸಿಲಿಗೆ ಉಮೇದವಾರರಾಗಿ ನಿಂತ ರಾಷ್ಟ್ರೀಯ ಪಕ್ಷದ ಶ್ರೀ ಬೆಳವಿಯವರಿಗೇ ತಮ್ಮೆಲ್ಲರ ಮತ ಕೊಡುವರೆಂದು ಅಂದಾಜು.

— ಕಾರವಾರದ ಮ್ಯುನಿಸಿಪಾಲಿಟಿಯು ಮಾ॥ [illegible] ಅಲ್ಲಿಯವರ ಆಗಮನವಾದಾಗ ಅವರಿಗೆ ಮಾನಪತ್ರ ಕೊಡಬೇಕೆಂದು ಬಹುಮತದಿಂದ ಠರಾಯಿಸಿರುವದು.

— ನವಂಬರ ತಾ. ೬ನೇಗೆ [illegible] ಎಂಬಲ್ಲಿ ಮಿ॥ ಟೆಂಪಲ್‌ರವರು ಮೋಟಾರ ಸೈಕಲಿನ ಮೇಲಿಂದ ತಾಸಿಗೆ ೧೧೩ಕ್ಕೆ ಮಿಕ್ಕಿದಷ್ಟು ಮೈಲು ವೇಗದಿಂದ ನಡೆಯುವ ಅದ್ಭುತ ಚಮತ್ಕಾರವನ್ನು ಮಾಡಿ ತೋರಿಸಿದರು. ಈ ಮೋಟಾರ ಎಂಜಿನು ಬ್ರಿಟಿಶ ಇಂಜನು ಆಗಿರುವದು.

ಪಂಜಾಬದೊಳಗಿನ ಪರಿಸ್ಥಿತಿ.

ಅಮೃತಸರದಲ್ಲಿ ಕಳೆದ ತಾ. ೫ನೇಗೆ ಸೆರೆಹಿಡಿದ ಅಕಾಲಿ ದೇಶಭಕ್ತರ ಸುನಾವಣಿಗೆ ಪ್ರಾರಂಭವಾಗಿದೆ. ಅಂದಿಗೆ ಫಿರ್ಯಾದಿಯೊಳಗಿನ ಕೆಲ ತಪ್ಪುಗಳನ್ನು ತಿದ್ದುವ ಕೆಲಸವು ನಡೆದು. ವಿಚಾರವು ಮೊನ್ನೆ ಮಂಗಳವಾರ ತಾ. ೧೩ ನೇಗೆ ಇಟ್ಟಿತ್ತು. ಆರೋಪಿಗಳ ತರ್ಫೆನಿಂದ ಕೆಲಸ ನಡಿಸುವ ಮಿ। ರಘುನಾಥ ಸಹಾಯಿಯವರು ಆರೋಪಿಗಳಿಗೆ ಬಂಧನದಲ್ಲಿಟ್ಟು ತಿಂಗಳಾಗುತ್ತ ಬಂತೆಂತಲೂ, ಈ ವರೆಗೆ ಅವರ ಸುನಾವಣೆ ನಡೆಯದೆ, ಅವರು ಬಂಧನದಲ್ಲಿ ನರಳುತ್ತಿರುವರೆಂತಲೂ, ಅವರನ್ನು ಜಾಮೀನಿನ ಮೇಲೆ ಬಿಡಬೇಕೆಂತಲೂ ಅರ್ಜಿ ಮಾಡಿದರು. ಸರಕಾರಿ ವಕೀಲರು ಈ ಅರ್ಜಿಯನ್ನು ನಿರೋಧಿಸಿದರು. ಕಟ್ಟಕಡೆಗೆ, ಆರೋಪಿ ಸರದಾರ ಮೆ.ಹತಬಸಿಂಗರವರು ತಮಗೆ ಜಾಮೀನು ಬಿಡುಗಡೆಯು ಅವಶ್ಯವಿಲ್ಲೆಂದು ನುಡಿದು, ಈ ವಾದ ಮುಗಿಸಿದರು. ಶಿರೋಮಣಿ ಗುರುದ್ವಾರ ಪ್ರಬಂಧಕ ಕಮಿಟಿಯ ಆಫೀಸುಗಳನ್ನು ಪೋಲೀಸರು ಝಡತಿ ಮಾಡುತ್ತಿರುವರು. ಇಡೀ ಪ್ರಾಂತದಲ್ಲೆಲ್ಲ ಅಕಾಲಿಗಳ ಸಭೆಗಳ ಸ್ಟಾಪವು(?), ಅಕಾಲಿಗಳಿಗೆ ಅನ್ನಪುರವಠೆ ಯಾರಿಂದ ಎಷ್ಟಾಯಿತು, ಗ್ರಾಮಗಳಿಗೆ ಎಷ್ಟು ಮಂದಿ ಅಕಾಲಿಗಳ ಆಗಮನವಾಯಿತು, ಅಕಾಲಿ ಚಳವಳಿಯ ಸ್ಥಾನಿಕ ಸೂತ್ರಧಾರರ್ಯಾರು, ಎಂಬ ಸಂಗತಿಗಳನ್ನೆಲ್ಲ, ಚಿತ್ರಗುಪ್ತರನ್ನಿಟ್ಟು, ತಮಗೆ ರಿಪೋರ್ಟ ಮಾಡಬೇಕೆಂದು ಪಂಜಾಬ ಪ್ರಾಂತಿಕ ಸರಕಾರವು ಅಲ್ಲಿಯ ಪಟವಾರಿಯವರಿಗೆ ಆಜ್ಞಾಪಿಸಿದೆ. ಕೋಟಕಾಪುರಾ ಎಂಬಲ್ಲಿ ಪೋಲೀಸರು ಅಕಾಲಿ ಮನೆಗಳ ಕಾವಲು ಮಾಡುತ್ತಿರುವರು. ಹೊಸ ಕಾರ್ಯಕಾರಿ ಮಂಡಳದವರು ಕಳೆದ ತಾರೀಕ ೪ನೇ ರವಿವಾರ ರಾತ್ರಿ ಅಮೃತಸರದಲ್ಲಿ ನೆರೆದು, ಕೆಲ ಠರಾವುಗಳನ್ನು ಸರ್ವಾನುಮತದಿಂದ ಮಂಜೂರು ಮಾಡಿದರು. ಮೊದಲಿನ ಎರಡು ಠರಾವುಗಳಿಂದ ಧಾರ್ಮಿಕ ಕಾದಾಟವನ್ನು ನಡಿಸುವ ನಿರ್ಧಾರವನ್ನು ಕಮಿಟಿಯು ನಮೂದ ಮಾಡಿದೆ. ಸಂಘಗಳನ್ನು ಏರ್ಪಡಿಸುವ ಹಕ್ಕಿಗಾಗಿ ತಾವು ಬಡಿದಾಡುತ್ತೇವೆಂದು ಮೂರನೇ ಠರಾವಾಗಿದೆ. ನಾಭಾ ಸಂಸ್ಥಾನದ ಬಗ್ಗೆ ಕಮಿಟಿಯ ಹತ್ತಿರ ಇದ್ದ ಕಾಗದ-ಪತ್ರಗಳನ್ನು ಪ್ರಕಟಿಸುವ ಸಮಯವು ಇನ್ನೂ ದೂರವಿರುವದೆಂತಲೂ, ಅನಕವರೆಗೆ ತಡೆಯಬೇಕೆಂತಲೂ ಒಂದು ಠರಾವು ಪಾಸಾಗಿದೆ. ಸರಕಾರಿ ನ್ಯಾಯದಲ್ಲಿ ಕಮಿಟಿಗೆ ಎಳ್ಳಷ್ಟು ವಿಶ್ವಾಸವಿಲ್ಲದಿದ್ದರೂ, ಸೆರೆ ಬಿದ್ದ ಲೋಕನಾಯಕರು ಸರಕಾರದ, ಅಪಕೃತ್ಯಗಳನ್ನು ಹೊರಗೆಡಹಲು ಶಕ್ತ ಸ್ಥಿತಿಯನ್ನು ನಮೂದ ಮಾಡಲು ತಮ್ಮ ತಮ್ಮ ಖಟ್ಲೆಗಳಲ್ಲಿ ಬಚಾವು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುವ ಮತ್ತೊಂದು ಠರಾವೂ ಪಾಸಾಗಿದೆ. ನಾಭಾ ಸಂಸ್ಥಾನ ಮೊದಲಾದವುಗಳ ಬಗ್ಗೆ ಕಮಿಟಿಯಗೂಡ ಇರುವ ಕಾಗದ-ಪತ್ರಗಳ ಕಬಜಾ ಪಡೆಯಲು ಪೋಲೀಸರು ಗುರುದ್ವಾರ ಕಮಿಟಿಯ ಆಫೀಸುಗಳನ್ನು ಝಡತಿ ಮಾಡುತ್ತಿರುವರು. ಮುಕ್ತಾಸರ, ಜೈತುಗಳೊಳಗಿನ ಪ್ರಯಾಣಿಕರಿಗೆ ಸಹ ಹಾದಿಯಮೇಲೆ ಪೋಲೀಸರು ಝಡತಿ ಮಾಡುತ್ತಿದ್ದರಂತೆ. ಅವರು ಗುರುದ್ವಾರ ಕಮಿಟಿಯ ಸುದ್ದಿಗಾರರಿರಬಹುದೆಂದು ಪೋಲೀಸರ ಸಂಶಯ.

ಅಮೃತಸರದೊಳಗಿನ ಸುವರ್ಣ ಮಂದಿರದಲ್ಲಿ ದೀಪಾವಳೀ ಸಮಯಕ್ಕೆ ದೊಡ್ಡ ಜಾತ್ರೆಯಾಗುತ್ತದೆ. ಈ ಜಾತ್ರೆಗೆ ನಾಲ್ಕೂ ಬದಿಗಳಿಂದ ಅಕಾಲಿ ತಖ್ತಕ್ಕೆ, ದರಬಾರ ಗ್ರಂಥ ಸಾಹೇಬಕ್ಕೆ ವಂದನೆಗಳನ್ನು ಸಮರ್ಪಿಸಲು ನಾಲ್ಕೂ ಕಡೆಗಳಿಂದ ಅಕಾಲಿಗಳು ಕೂಡುತ್ತಿರುವರು. ಹೀಗೆ ಅಕಾಲಿಗಳ ಸಮೂಹವು ಕೂಡಬಾರದೆಂದು ಸರಕಾರವು ಬೆದರಿಕೆ ಹಾಕಿತ್ತು. ಆದರೆ, ಶಿರೋಮಣಿ ಕಮಿಟಿಯವರು ಸರಕಾರದ ಎಚ್ಚರಿಕೆಗಳನ್ನೆಲ್ಲ ಬದಿಗೊತ್ತಿ, ಜಾತ್ರೆಗೆ ಪಂಥದವರೆಲ್ಲರೂ ಹಾಜರಾಗಬೇಕೆಂದು ಪ್ರಕಟಣಾ ಪತ್ರಿಕೆಗಳನ್ನು ಹೊರಡಿಸಿದ್ದರು. ಇದರಂತೆ, ಕಳೆದ ತಾ. ೮ನೇ ಗುರುವಾರ ವರೆಗೆ ಅಕಾಲಿ ಜಥಗಳು ಅಮೃತಸರದಲ್ಲಿ ಏಕಸವನೆ ಬರುತ್ತಿದ್ದವು. ಅಂದು ಸುಮಾರು ೧ ಲಕ್ಷ ಅಕಾಲಿಗಳು, ಸುವರ್ಣ ಮಂದಿರದ ಒಳ-ಹೊರಗೆ ನೆರೆದಿದ್ದರು. ಸೇವಾಧಾರಿಗಳು ವ್ಯವಸ್ಥೆಯನ್ನು ಕಾಪಾಡುತ್ತಿದ್ದರು. ಶಿಸ್ತಿನಿಂದ ಕೇವಿ(?) ಯಾತ್ರಿಕರು ಸುವರ್ಣಮಂದಿರವನ್ನು ಸೇರಿಕೊಂಡು, ದರಬಾರ ಸಾಹೇಬಿಗೆ ತಮ್ಮ ವಾರ್ಷಿಕ ವಂದನೆಗಳನ್ನು ಸಮರ್ಪಿಸುವದನ್ನು ನೋಡಿ, ಯಾರೂ ಚಕಿತರಾಗುವರು. ಅಲ್ಲಿಯ ಅಡಿಗೆ ಮನೆಯಲ್ಲಿ ಯಾತ್ರಿಕರಿಗೆಲ್ಲ ಉಚಿತವಾಗಿ ಅಡಿಗೆ ತಯಾರಿಸಿದ್ದರು. ಆ ದಿನ ೧೫೦ ಮಣ ಹಿಟ್ಟಿನ ರೊಟ್ಟಿ ಸುಟ್ಟಿದ್ದರು. ಮುಂಜಾನೆಗೆ ಅಕಾಲಿ ಜಥಗಳನ್ನೆಲ್ಲ ಜಿಲ್ಹಾ ನಿಹಾಯ ವಿಭಾಗಿಸಿ, ಉತ್ತರಿ ವ್ಯವಸ್ಥೆಯಿಂದ ಮೆರವಣಿಗೆಯಾಯಿತು. ಮೆರವಣಿಗೆಯು ಬೆಳಿಗ್ಗೆ ೮ ಘಂಟೆಗೆ ಸುವರ್ಣಮಂದಿರದಿಂದ ಹೊರಟು, ಊರ ಸುತ್ತ ತಿರುಗಿ ಮಂದಿರವನ್ನು ಪ್ರವೇಶಿಸುವ ವರೆಗೆ ೪ ಬಡೆದವು(?). ಸಾಯಂಕಾಲ ೬ ಘಂಟೆಗೆ ಅಲ್ಲಿಯ ಸರೋವರದ ಸುತ್ತಲು ಹಣತಿಗೆಗಳನ್ನಿಟ್ಟು, ಅಸಂಖ್ಯ ದೀಪಗಳನ್ನು ಹಚ್ಚಿದರು. ಸುವರ್ಣಮಂದಿರವೂ ದೀಪಾವಲಿಯಿಂದ ಕಂಗೊಳಿಸುತ್ತಿತ್ತು. ಈ ನೋಟವು ಅಸಂಖ್ಯ ಪ್ರೇಕ್ಷಕರಿಗೆ ಬಹಳೇ ರಮಣೀಯವಾಯಿತು; ಆಲ್ಹಾದಜನಕವಾಯಿತು. ಘಳಿಗೆಗೊಮ್ಮೆ ಬಾಣ-ಬಿರುಸುಗಳು ಹೊಡೆಯಲ್ಪಟ್ಟವು. ಅವುಗಳ ಪ್ರತಿಬಿಂಬದಿಂದ ಕೆರೆ ನೀರು ಚಿತ್ರವಿಚಿತ್ರವಾಗಿ ಪರಿಣಮಿಸಿತು. ೮ ಘಂಟೆಗೆ ಈ ಸಮಾರಂಭವೆಲ್ಲ ಮುಗಿದು, ಎಲ್ಲರೂ ಮನೆಗೆ ತೆರಳಿದರು. ಇಷ್ಟು ಶಿಸ್ತಿನಿಂದ, ಈ ಅಸಂಖ್ಯ ಪ್ರೇಕ್ಷಕವರ್ಗವು ವಿಸರ್ಜನವಾದದ್ದು ನೋಡಿ, ಅನೇಕರಿಗೆ ಚಮತ್ಕಾರವೆನಿಸದಿರದು. ಯಾಕಂದರೆ, ಪ್ರಜೆಗಳ ರಕ್ಷಕನಾದ ಪೋಲೀಸನು ಅಲ್ಲಿ ಕಾಣುತ್ತಿದ್ದಿಲ್ಲ. ಬಳಿಕ, ಅಲ್ಲಿ ಒಂದು ದಿವಾಣ ಯಾನೆ ಅಕಾಲಿಗಳ ಸಭೆಗೂಡಿತು.

ದೇಶಭಕ್ತ ಲಾಲಾ ಲಜಪತರಾಯರು ಈಗ ಅಮೃತಸರದಲ್ಲಿರುವರು. ಅಕಾಲಿಗಳಿಗೆ ಸಹಾಯ ಮಾಡುವ ಉಪಾಯಯೋಜನೆಗೆ ನಿಮಂತ್ರಿಸಿದ ಸಭೆಯ ತಯಾರಿಯಲ್ಲಿರುವರು. ಅಲ್ಲೇ ಬಂಧುಗಳೂ ಕಳೆದ ಸೋಮವಾರಕ್ಕೆ ಅಲ್ಲಿ ಚಿತ್ತೈಸುವವರಿದ್ದರು. ಆಂಧ್ರ ಪ್ರಾಂತ ಕೊಂಗ್ರೆಸ ಕಮಿಟಿಯ ಅಧ್ಯಕ್ಷರಾದ ಶ್ರೀ। ಪ್ರಕಾಶಂರವರು ಕಳೆದ ತಾ. ೯ ನೇ ಶುಕ್ರವಾರಕ್ಕೆ ಔರೇಶರದಿಂದ(?) ಹೊರಟು, ಅಮೃತಸರಕ್ಕೆ ತಾ. ೧೦ ನೇಗೆ ಮುಟ್ಟುವರು. ರಾಜಮಹೇಂದ್ರಿಯಿಂದ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಅಧ್ಯಕ್ಷರಾದ ದೇ। ಭ। ಕೊಂಡವೆಂಕಟಪ್ಪಯ್ಯನವರೂ ಅಮೃತಸರಕ್ಕಾಗಿ ಕಳೆದ ತಾ. ೯ನೇ ಶುಕ್ರವಾರ ಹೊರಟಿರುವರು. ಲೋಕನಾಯಕರ ಆಲೋಚನೆಯಿಂದ ಏನು ನಿಷ್ಪನ್ನವಾಗುತ್ತದೆಂಬದು ಅರಿತುಕೊಳ್ಳಲು ಎಲ್ಲರೂ ಆತುರರಾಗಿರುವರು.

ಖಾದಿಯ ಮಹತ್ವವು.

ರಸಾಯನಶಾಸ್ತ್ರಜ್ಞರಾದ ಆಚಾರ್ಯ ಪ್ರಫುಲ್ಲಚಂದ್ರ ರಾಯರು ಕಲಕತ್ತೆಯಲ್ಲಿ ಖಾದಿಯ ಬಗ್ಗೆ ೧೪ನೇ ಅಕ್ಟೋಬರಕ್ಕೆ ಒಂದು ಸುಂದರ ಉಪನ್ಯಾಸವನ್ನು ಮಾಡಿದರು. ಅದರ ಸಾರಾಂಶವೇನಂದರೆ:—

ನಾನು ಖಾದೀ ಮತ್ತು ರಾಟೆಗಳ ಬಗ್ಗೆ ಹಲವು ಸ್ಥಳಗಳಲ್ಲಿ ಉಪನ್ಯಾಸವನ್ನು ಮಾಡಿದ್ದೇನೆ. ಕನಿಷ್ಠ ೨೦೦೦ ಮೈಲುಗಳನ್ನಾದರೂ ಖಾದೀ ಹಾಗೂ ರಾಟೆಗಳ ಪ್ರಸಾರಾರ್ಥವಾಗಿ ಸುತ್ತಿರುವೆನು. ಆದರೆ, ನಮ್ಮ ಜನಸ್ಥಿತಿಯು ಅಫೀಮುಖೋರರಂತೆ ಇದೆ. ನಮ್ಮನ್ನು ಗದಗದನೆ ನಡುಗಿಸಿದರೆ ಮಾತ್ರ, ಸ್ವಲ್ಪ ಎಚ್ಚರಾಗುವೆವು. ಮೊದಲು ಖಾದಿಯನ್ನು ಮಾರುತ್ತಿದ್ದ ಅಂಗಡಿಗಳಲ್ಲಿಯೇ ಈಗ ಜಪಾನ-ಮಾಂಚೆಸ್ಟರಗಳ ಬಟ್ಟೆ ತುಂಬಿದೆ. ಮಹಾ ಯುದ್ಧವು ಮುಗಿಯುತ್ತಲೆ ಎಕ್ಸಚೇಂಜ (ವಿನಿಮಯದ ದರವು) ೨ರೂ.ಗಳಿಂದ ಹೆಚ್ಚಾಯಿತು. ಅದರಿಂದ ಹಿಂದೀ ವ್ಯಾಪಾರಿಗಳು ಮುಂಗಡ ಬೇಡಿಕೆ ಮಾಡಿದ ಅಳತೆಗೆಟ್ಟ ಅರಿವೆಯ ಗಂಟುಗಳು ಹೆಚ್ಚಿನ ಬೆಲೆ ಹಾಕಿ ಹಿಂದುಸ್ಥಾನದ ಬಂದರಕ್ಕೆ ಬಂದವು. ಗಂಟುಗಳು ಈ ದೇಶದ ದಡಕ್ಕೆ ಹತ್ತುವ ಅವಧಿಯೊಳಗಾಗಿ ಮತ್ತೆ ವಿನಿಮಯದ ದರವು ವಿಲಕ್ಷಣವಾಗಿ ಇಳಿಯಿತು; ಇಲ್ಲಿಯ ಮಾಂಚೆಸ್ಟರ ಅರಿವೆಯ ವ್ಯಾಪಾರವೂ ಮಂದವಾಗುತ್ತ ನಡೆದಿತ್ತು. ಅರ್ಥಾತ್ ಎಲ್ಲ ವರ್ತಕರೂ ತರಿಸಿದ ಮಾಲನ್ನು ನಿರಾತಂಕವಾಗಿ ಸ್ವೀಕರಿಸಲೊಪ್ಪಲಿಲ್ಲ. ಆಗ ಇಂಗ್ಲೀಷ ವರ್ತಕರು ಗಾಬರಿಯಾಗಿ ಎದೆಯೊಡೆದು. ಹಿಂದೀ ವರ್ತಕರಿಗೆ "ಮಹಾರಾಯರೇ, ಪುಕ್ಕಟೆ ನಮ್ಮ ಬಟ್ಟೆ ತಕ್ಕೊಳ್ಳಿರಿ; ಮಾರಾಟವಾದ ಮೇಲೆ ನಿಮಗೆ ತಿಳಿದ ದರದಿಂದ ಬೆಲೆಕೊಡಿರೆಂದರಾಯಿತು" ಎಂದು ಮಾಡಿದ ಯುಕ್ತಿಯೇ ಈಗ ಖಾದೀ ವ್ಯಾಪಾರವು ತಗ್ಗಿರುವ ಕಾರಣವು.

ಹಿಂದೀ ಜನರ ಇಷ್ಟೊಂದು ಅವನತಿ, ಅಪಮಾನಗಳ ಕಾರಣವು ನಮ್ಮಲ್ಲಿ ದೇಶಾಭಿಮಾನವಿಲ್ಲದ್ದೇ. ನಮ್ಮಲ್ಲಿ ರಾಷ್ಟ್ರೀಯತ್ವ ಸ್ವದೇಶಾಭಿಮಾನಗಳಿಲ್ಲ. ಹಿಂದಕ್ಕೆ ನಮ್ಮ ಜನರಿದೊಂದು ಉಗಿಹಡಗದ ಕಂಪನಿ ತೆಗೆದು ಕೆಲವೊಂದು ಬಂದರಗಳ ನಡುವೆ ೧ ರೂ. ದರವನ್ನಿಟ್ಟಿದ್ದರು. ಆದರೆ, ಹಿಂದೆ ಇಂಗ್ಲೀಷ ಕಂಪನಿಯು ಹೋಟು, ಅವರು ೧ ಆಣೆ ಮಾತ್ರ ದರವಿಟ್ಟರು! ನಮ್ಮ ಮೂಢ ಜನರು ೧ ರೂಪಾಯಿ ಹಾಗೂ ಒಂದು ಆಣೆಗಳಲ್ಲಿ ಲೆಕ್ಕಹಾಕಿ, ಇಂಗ್ಲೀಷ ಕಂಪನಿಗೇ ಆಶ್ರಯಕೊಟ್ಟರು. ಇದು ನಮ್ಮ ಸ್ವದೇಶಾಭಿಮಾನ!! ನಮ್ಮ ಅಲ್ಪ ದೃಷ್ಟಿಯ ಮೂರ್ಖ ಕೃತ್ಯದಿಂದ ಹಿಂದೀ ನೌಕಾ ಕಂಪನಿಯು ಮುಣುಗಿ, ಇಂಗ್ಲೀಷ ಕಂಪನಿಯು ಒಂದಾಣೆಯ ಸ್ಥಳದಲ್ಲಿ ಒಂದು ರೂಪಾಯಿ ನಾಲ್ಕಾಣೆ ಹೆಚ್ಚಿಸಿದರೂ ಅದರ ಪರಿವೆ ನಮಗಿಲ್ಲ!

ಮಹಾತ್ಮಾಜೀಯವರೂ, ನಮ್ಮ ಮುಖಂಡರೂ ನಮಗೆ ಮಾಡಲಿಕ್ಕೆ ಹೇಳಿದ ಕಾರ್ಯಕ್ಕೆ ಯಾರೂ ಗಮನಕೊಡಲೊಲ್ಲರು. ಖಾದಿಯು ಮಾಂಚೆಸ್ಟರದ ಅರಿವೆಯಷ್ಟು ನಯವಾಗಿಲ್ಲೆಂದು ಕೆಲವರ ಆಕ್ಷೇಪ! ಬೆದರು ಕಂಡು ಎತ್ತು ಓಡುವಂತೆ, ಖಾದೀ ಕಂಡು ನಮ್ಮವರ ಮನಸ್ಸು ಗಾಬರಿಯಾಗುತ್ತದೆ. ನಮ್ಮಲ್ಲಿ ಅಲ್ಪಾಂಶದಿಂದಾದರೂ ಸ್ವದೇಶಾಭಿಮಾನವಿದ್ದರೆ, ಇಂಥ ಮೂರ್ಖತನದ ಮಾತುಗಳೇ ಅವರ ಬಾಯಿಂದ ಬರುತ್ತಿದ್ದಿಲ್ಲ. ಕಲ್ಲಿನಂತೆ ಜಡ ಮೂಢರಾಗಿ

ತಾಮಸಿಗಳಾಗಿ ನಾವು ಬಿದ್ದುಕೊಂಡಿದ್ದೇವೆ. ನಮ್ಮ ಹಳೇ ಉದ್ಯೋಗಗಳನ್ನು ಪುನರುಜ್ಜೀವಿತ ಮಾಡಲಿಕ್ಕೆ ನಮ್ಮಲ್ಲಿ ಸ್ವಲ್ಪವೂ ಹುರುಪಿಲ್ಲ! ಉತ್ಸಾಹವಿಲ್ಲ! ಪ್ರೇರಣೆಯಿಲ್ಲ! ನಮ್ಮ ಸುತ್ತಲಿನ ಕಲ್ಲು ಹೆಂಟೆಯಂತೆ ಜಗತ್ತನ್ನು ಮುಗ್ಧತನದಿಂದ ಕಣ್ಣು ತೆಕ್ಕರಿಸಿ ನೋಡುತ್ತ ಹೌಹಾರಿದವರಾಗಿದ್ದೇವೆ.

ಖಾದಿಯು ಅತ್ಯಂತ ಸುಪರಿಣಾಮಕಾರಿಯೆಂಬುದನ್ನು ನಾನು ಮನಗಂಡಿದ್ದೇನೆ. ಉತ್ತರ ಬಂಗಾಲದ ನೆರೆಹಾವಳಿಯಿಂದ ಕಂಗೆಟ್ಟ ಪ್ರದೇಶದಲ್ಲಿ ರಾಟಿಯ ಉಪಯೋಗದಿಂದಾದ ಸುಪರಿಣಾಮಗಳನ್ನು ಕಣ್ಣಾರೆ ಕಂಡಿದ್ದೇನೆ. ಉತ್ತಮ ಹಾಗೂ ದೊಡ್ಡ ಪರಿಣಾಮದಲ್ಲಿ ನೂಲು ಹೊರಡುತ್ತಿದೆ. ಆ ಭಾಗದ ಎಲ್ಲ ಜನರಿಗೂ ಅದರ ಮನವರಿಕೆಯಾಗಿದೆ. ಪ್ರಾಚೀನ ಕಾಲದ ಢಾಕ್ಕಾ ಮಲಮಲಿಯು ಜಗತ್ತಿಗೆ ಒಂದು ಆಶ್ಚರ್ಯಕರ ವಸ್ತುವಾಗಿತ್ತು. ನಮ್ಮ ನಾಡು ಬಡತನದ್ದು. ನಮ್ಮಲ್ಲಿ ಬಿ. ಎ., ಎಮ್. ಎ., ಬಿ. ಗಳು ತುಂಬಿದ್ದಾರೆ. ರಾಟಿಯೇ ಇವರೆಲ್ಲರಿಗೆ ಹೊಟ್ಟೆಗೆ ಹಾಕೀತೆಂದು ನನ್ನ ವಿಶ್ವಾಸವಿದೆ. ಇವರು ಈ ಕೆಲಸ ಕೈಕೊಂಡರೆ ಬಣ್ಣಗಾರರಲ್ಲಿಯೂ, ನೇಕಾರರಲ್ಲಿಯೂ, ನೂಲುವವರಲ್ಲಿಯೂ ಹೊಸ ಹುರುಪು ಹುಟ್ಟುವದು.

ನಾನು ರಸಾಯನಶಾಸ್ತ್ರಜ್ಞನಿದ್ದೂ ರಾಟೆ, ಖಾದಿ ಮಹಾತ್ಮೆ ಹೇಳಿ, ಅದರ ಪ್ರಸಾರ ಮಾಡುತ್ತಿದ್ದನ್ನು ಟೀಕಿಸುತ್ತಿದ್ದಾರೆ. ರಾಟಿಯು ಗಿರಣಿಗಳೊಡನೆ ಜಿದ್ದು ಕಟ್ಟಿ ಗೆಲಿಯುವುದೇ? ಎಂದು ಟೀಕಾಕಾರರು ನನಗೆ ಕೇಳುತ್ತಾರೆ. ನಾನು ಅವರಿಗೆ ಅನ್ನುವದೇನಂದರೆ, ಗಿರಣಿಗಳು ಹಿತಕಾರಿಯೆಂದು ಕಲ್ಪಿಸಿದರೂ ಅವುಗಳಿಂದಾದರೂ ನಿಮಗೆ ಸಾಕಷ್ಟು ಸಿಗುವದೆ? ಹಿಂದೀ ಜನರ ಒಡೆತನದ ಗಿರಣಿಗಳು ತೀರ ಸ್ವಲ್ಪವಿದ್ದು, ಇಂಗ್ಲಿಷ ಜನರವೇ ಹೆಚ್ಚಾಗಿವೆ. ಒಂದು ವೇಳೆ ಗಿರಣಿಗಳನ್ನೇ ಹಾಕಬೇಕೆಂದು ನಮ್ಮ ಪ್ರಯತ್ನಗಳು ನಡೆಯಲಾರಂಭಿಸುತ್ತಲೇ ಮ್ಯಾಂಚೆಸ್ಟರದ ಕೋಟ್ಯಾಧೀಶರು ನಮ್ಮ ಆ ಮನಸ್ಥಿತಿಯ ಲಾಭವನ್ನು ತಕ್ಕೊಳ್ಳದೆ ಬಿಡರು. ಅವರು ಇಲ್ಲಿ ಬಂದು ಗಿರಣಿಗಳನ್ನು ಹಾಕಿ ಈಗ ಜೂಟ ಗಿರಣಿಗಳಂತೆ ನಮ್ಮ ದ್ರವ್ಯವನ್ನು ಸೆಳೆಯದಿರರು. ಅಲ್ಲದೆ ನೈತಿಕ ದೃಷ್ಟಿಯಿಂದ ಗಿರಣಿಗಳು ನಮ್ಮ ರಾಷ್ಟ್ರೀಯ ಅಭಿವೃದ್ಧಿಗೆ ಘಾತುಕವಾಗಿವೆ. ಗಿರಣಿಗಳು ಆಗುತ್ತಲೆ ಅಲ್ಲಿ ದುಡಿದು ಹಣ್ಣಾಗುವ ಕೂಲಿಕಾರರಿಗೆ ತಮ್ಮ ದಣುವಿನ ಅರಿವು ಸಹ ಉಂಟಾಗಬಾರದೆಂದು ಕಳೆಯ ಅಂಗಡಿಗಳು ಬೇಕು; ಅವು ಗಿರಣಿಯ ಹಿಂದೆ ಬಂದವೇ. ವೇಶ್ಯಾಗೃಹಗಳು ಉಂಟಾದವೇ. ಕೂಲಿಕಾರರಿಂದ ಬೆವರಿಸಿ ತಕ್ಕೊಳ್ಳಲಿಕ್ಕೆಂದಿರುವ (ಕಾಬೂಲೀ ಭಯ್ಯಾ ಪಠಾಣ) ಜನರ ಕಾಟವು ಹೆಚ್ಚಿದ್ದೇ. ಗಿರಣಿಗಳಿರುವ ಭಾಗದಲ್ಲಿ ಎಂಥ ಹೇಸಿ ಅನೀತಿಕರ ಸಂಗತಿಗಳು ಒದಗುತ್ತವೆಂಬುದನ್ನು ಬಹು ಜನರು ಬಲ್ಲರು. ನಮ್ಮಲ್ಲಿ ಸಾಕಷ್ಟು ದುಡ್ಡಿಲ್ಲದ್ದರಿಂದಲೂ, ಆಳಿಕೆಯ ಸಾಮರ್ಥ್ಯವಿಲ್ಲದ್ದರಿಂದ ಗಿರಣಿಗಳನ್ನು ನಡಿಸುವದರಲ್ಲಿ ನಮಗೆ ಬಹಳ ಹಾನಿ ತಟ್ಟಿವೆ. ಬೇಕಾದಷ್ಟು ಗಿರಣಿಗಳನ್ನು ತೆಗೆಯುವದಂತೂ ಶಕ್ಯವಿಲ್ಲ. ಒಂದು ಗಿರಣಿಯು ೪-೫ ಸಾವಿರ ಕೂಲಿಕಾರರಿಗೆ ಮಾತ್ರ ಹೊಟ್ಟೆಗೆ ಕೊಟ್ಟೀತು. ದೇಶದಲ್ಲೆಲ್ಲ ತುಂಬಿದ ಉಳಿದ ಬಡವರ ಗತಿಯೇನು? ಗಿರಣಿಯಿಂದ ಲಕ್ಷಾಧೀಶರೇ ಮತ್ತೆ ಕೊಬ್ಬುವರಲ್ಲದೆ. ಬಡವರು ಆವರಿಗೆ ತುತ್ತಾಗುವರು! ಆದರೆ, ರಾಟಿಯಿಂದ ಪ್ರತಿಯೊಬ್ಬನೂ ಸ್ವಾವಲಂಬಿಯೂ, ನೀತಿವಂತನೂ ಆಗುವನು.

ನಮ್ಮ ವ್ಯಾಪಾರೋದ್ಯೋಗಗಳಿಗೆ ರಾಜಾಶ್ರಯವಿಲ್ಲ. ಕಾರಣ, ದೇಶಾಭಿಮಾನ, ಸ್ವದೇಶಪ್ರೀತಿಗಳ ಬಲದಿಂದಲೇ ನಮ್ಮ ಉದ್ಧಾರ ಮಾಡಿಕೊಳ್ಳಲಿಕ್ಕೆ ಬೇಕು. ಫ್ರೆಂಚ ರಿವೊಲ್ಯೂಶನ (ಬಂಡಾಯ) ಕಾಲಕ್ಕೆ ಶತ್ರುಗಳು ಮುತ್ತಿದಾಗ, ದೇಶದಲ್ಲಿ ಸಕ್ಕರೆಯ ಕೊರತೆಯುಂಟಾಯಿತು. ಸಕ್ಕರೆಯನ್ನು ಬೇರೆ ವಸ್ತುವಿನಿಂದ ತಯಾರಿಸುವ ಶೋಧ ಮಾಡಿರೆಂದು ಶಾಸ್ತ್ರಜ್ಞರಿಗೆ ಕೇಳಿಕೊಳ್ಳಲು ಸ್ವದೇಶಾಭಿಮಾನವೇ ಈಗ ಜಗತ್ತಿನಲ್ಲಿ ವ್ಯಾಪಿಸಿರುವ 'ಬೀಟ ಸಕ್ಕರೆ'ಯ ಶೋಧ ಮಾಡಿಸಿತು! ನಾವು ಇನ್ನೊಂದು ವರುಷ ಹೀಗೆ ಖಾದೀ ಚಳವಳಿ ಜೋರಿನಿಂದ ನಡಿಸಿದರೆ, ನಮಗೆ ಅದು ಅಗ್ಗವಾಗಿ ಸಿಕ್ಕಲಿಕ್ಕೇ ಬೇಕು. ಖಾದಿಯ ಉಪಯೋಗವನ್ನೂ, ಮಹತ್ವವನ್ನೂ ಹಲವು ತರದಿಂದ ಮನಗಂಡು ಹೇಳಿದ್ದಾರೆ. ಅದರ ಅಭಿವೃದ್ಧಿ ಮಾಡಲಿಕ್ಕೆ ದೇಶಾಭಿಮಾನದ ಬೆಂಬಲವೇ ಬೇಕು. ಖಾದಿಯನ್ನು ಅಗಸರಿಗೆ ಗಂಜಿಗೆ ಕೊಟ್ಟರೆ ಹಾಳಾಗುವದು. ಒಗೆಯಲಿಕ್ಕೆ ಸೋಡಾ, ಬ್ಲೀಚಿಂಗ ಪೌಡರ ಉಪಯೋಗಿಸುವದರಿಂದ ಖಾದಿಯು ಕೆಡುವದು. ನಾನು ನನ್ನ ಖಾದಿ ಬಟ್ಟೆಗಳನ್ನು ಸ್ವಂತ ಒಗೆಯುತ್ತೇನೆ.

ಭಾಟಿಯಾ ಜನರು ಪಾರ್ಶಿಗಳ ಅನುಕರಣ ಮಾಡಿ, ವಿಲಾಯತಿ ಬಟ್ಟೆಗಳನ್ನು ಧರಿಸಿ ಖಟು ಮಾಡುತ್ತಿದ್ದರು. ಆದರೆ, ಮಹಾತ್ಮಾಜೀಯವರ ಉಪದೇಶದಿಂದ ಅವರು ಖಾದಿಯನ್ನೇ ತೊಡುತ್ತಿದ್ದಾರೆ. ಅವರ ಖಟು ಮಂದಿರಗಳಲ್ಲಿ ಹೋಗಿಬಿಟ್ಟಿವೆ. ಖಾದಿಯಿಂದ ಹೆಚ್ಚು ಉಳಿಯುವದು. ನೀತಿಗೆ ಉತ್ತೇಜನ ಸಿಗುವದು. [illegible] ಖಾದಿಯು ಬಹಳ ದಿನ [illegible] ನಮ್ಮಲ್ಲಿ ರಾಷ್ಟ್ರಾಭಿಮಾನವಿದ್ದ [illegible] ನಾವು [illegible] ನಮ್ಮ [illegible] ಕಾರಣವು ಇದರಲ್ಲಿದೆ. [illegible] ಖಾದೀ [illegible] ಸ್ವದೇಶ [illegible] ಭಾವನಾಗಳಿವೆ.

ನನಗೆ ನನ್ನ [illegible] ನಾಚಿಕೆಯ ಮಾತು. [illegible] ಪಿ. ಸಿ. [illegible] ಯುರೋಪಕ್ಕೆ ಹೋಗುತ್ತಿರುವ ನಮ್ಮ ದೇಶದ ಸಂಪತ್ತಿಯನ್ನು ಉಳಿಸಿಕೊಳ್ಳಿರಿ. ಭಾವನಾಪ್ರಧಾನರಾದ ಬಂಗಾಲದಲ್ಲಿ [illegible] ಕಷ್ಟವನ್ನು ಕಳೆಯಲು ಸಿದ್ಧರಾದ ೧೨,೦೦೦ ತರುಣರು ಸಿಕ್ಕುವರು. ಆದರೆ, ರಾಟಿಯನ್ನು ತಿರುವಲಿಕ್ಕೆ ಸತತ ಉದ್ಯೋಗಿ ೧೦ ಜನ ತರುಣರು ಸಿಗುವದೂ ದುರ್ಲಭ! ರಾಟಿಯು ನಮ್ಮ ಚಾಂಚಲ್ಯ, ದುರ್ಬಲ ವೃತ್ತಿಗಳನ್ನು ಹೋಗಲಾಡಿಸುವದು. ಓ ತರುಣರೇ, ರಾಟಿಯನ್ನು ತಿರುವಿರಿ! ಆಲಸ್ಯವನ್ನು ಓಡಿಸಿರಿ!! ದೇಶೋದ್ಧಾರ ಮಾಡಿರಿ!!!

(ಕರ್ಮವೀರ.)

ಚೊಕ್ಕ ಚಿನ್ನ.

ಸಾಮ್ರಾಜ್ಯ ಪರಿಷತ್ತಿನಲ್ಲಿ ಐರ್ಲಂಡದ ಪ್ರತಿನಿಧಿಗಳಾದ ಮಿ। ಫಿಜರಾಲ್ಡರವರು ಮಾಡಿದ ಭಾಷಣಕ್ಕೆ ಲೀಡರ ಪತ್ರದವರು 'ಚೊಕ್ಕ ಚಿನ್ನ' ವೆಂದು ಸಂಬೋಧಿಸಿರುವರು. ಈ ಭಾಷಣವನ್ನು ಪ್ರತಿಯೊಬ್ಬ ಭಾರತಪುತ್ರನು ಓದಿ ಮನನ ಮಾಡಬೇಕೆಂದು ಅವರ ಮನೀಷೆ ಇದೆ. ಈ ಭಾಷಣದ ಭಾಷಾಂತರವನ್ನು ನಮ್ಮ ವಾಚಕರಿಗಾಗಿ ಇದರಡಿಗೆ ಕೊಡುವೆವು.

ಮಿ। ಫಿಜರಾಲ್ಡರವರು ನುಡಿದದ್ದೇನಂದರೆ:—“ಮುಖ್ಯ ಪ್ರಧಾನರೇ, ನಮ್ಮ ದೇಶದಲ್ಲಿ ಈ ವರ್ಣಭೇದಗಳೇ ಇಲ್ಲೆಂದು ನಾನು ಹೇಳಬೇಕಾಗಿಲ್ಲ. ಐರ್ಲಂಡದಲ್ಲಿ ಹಿಂದೀಯರೂ, ಇಂಗ್ಲೀಷರೂ, ದಕ್ಷಿಣ ಆಫ್ರಿಕೆಯ ನಾಗರಿಕರೂ ಸಮಾನರೇ. ಸ್ಥೂಲಮಾನದಿಂದ ಈ ಪ್ರಶ್ನೆಯಲ್ಲಿ ಎರಡು ಭಾಗಗಳಿವೆ. ಡೊಮಿನಿಯನು ಯಾನೆ ಕೆನಡಾ ಮೊದಲಾದವುಗಳಲ್ಲಿ ವಾಸಿಸುವ ಹಿಂದೀಯರು; ದಕ್ಷಿಣ ಆಫ್ರಿಕಾ ಮೊದಲಾದ ವಸಾಹತುಗಳಲ್ಲಿ ವಾಸಿಸುವ ಹಿಂದೀಯರು. ಡೊಮಿನಿಯನುಗಳು ಸ್ವತಂತ್ರ ರಾಷ್ಟ್ರಗಳಿರುವವೆಂದು ನಾವು ಎಣಿಸುತ್ತೇವೆ. ಅವುಗಳಿಗೆ ತಮ್ಮ ತಮ್ಮ ಕೆಲಸಗಳನ್ನು ಇಷ್ಟವಿದ್ದಂತೆ ಮಾಡಿಕೊಳ್ಳುವ ಅಧಿಕಾರವಿದೆ. ಅವುಗಳಲ್ಲಿ ಕೈ ಹಾಕುವ ಅಧಿಕಾರವು ನಮಗಿಲ್ಲ. ಬ್ರಿಟಿಶ ಸರಕಾರದ ಅಧೀನವಿದ್ದ ಪ್ರದೇಶಗಳಲ್ಲಿ ನಮಗೇನೂ ಜವಾಬದಾರಿಯಿಲ್ಲ. ಆದರಿಂದ ನಾನು ಕೊಡುವದೆಂಬುದು ನನ್ನ ಅಭಿಪ್ರಾಯವು. ನಮಗೆ ಇತರ ಪ್ರದೇಶಗಳ ಬಗ್ಗೆ ಯಾವದೇ ರೀತಿಯಿಂದ ಜವಾಬದಾರಿಯಿದ್ದರೆ, ವರ್ಣಭೇದಗಳನ್ನು ಮಾಡುವ ಬಗ್ಗೆ ನಾವು ತೀವ್ರಾತಿತೀವ್ರ ನಿಷೇಧ ಮಾಡುತ್ತಿದ್ದೆವು. ನಾವು ಎಂಗ್ಲೋ-ಸೆಕ್ಸನ್‌ರಲ್ಲ. ಅದರಿಂದ ನಮಗೆ ಎಂಗ್ಲೋ-ಸೆಕ್ಸನ್ ಯಾನೆ ಬ್ರಿಟಿಶರ ಕೈಯಿಂದ ಹೀನ ವರ್ಣೀಯರೆಂದು ಎಣಿಸಲಾಯಿತು. ಈ ಬಗ್ಗೆ ನಾವು ಅನೇಕ ಪರಿಯ ಕಷ್ಟಗಳನ್ನು ಅನುಭವಿಸಬೇಕಾಯಿತು. ನಾನೊಬ್ಬ “ಹಿಂದೀಯನೆಂದು ಕಲ್ಪಿಸಿದರೆ, ಇಲ್ಲಿದ್ದ ಹಿಂದೀ ಪ್ರತಿನಿಧಿಗಳು, ನಮ್ಮ ಸರಿಕರೆಂದು ನನಗೆ ತೋರುವದಿಲ್ಲ “ಯಾಕಂದರೆ, ಅವರು ಪ್ರತಿನಿಧಿಗಳಾಗಿ ಇಲ್ಲಿ ಬಂದಿಲ್ಲ.” ಸ್ವತಂತ್ರ ಹಿಂದುಸ್ಥಾನ ಸರಕಾರದಿಂದ ಇವರು ಕಳಿಸಲ್ಪಟ್ಟಿಲ್ಲ. ಅದರಿಂದ ನಮಗೆ ಸಮಾನರೆಂದು ನಾವು ಎಣಿಸಲಾಗದು. ನಾನು ಹಿಂದೀಯನಿದ್ದರೆ, ಹಿಂದುಸ್ಥಾನದ ಹೊರಗೆ ಹಿಂದೀಯರ ನಡಾವಳಿಯ ಆಕ್ಷೇಪದ ಕಾರಣವು, ನಮ್ಮಷ್ಟು, ನಮ್ಮಂತೆ ಸ್ವಾಯತ್ತತೆಯನ್ನು ಹಿಂದುಸ್ಥಾನವು ಸಂಪಾದಿಸಿಲ್ಲದ್ದರಿಂದಲೇ ಒದಗಿರುತ್ತದೆಂದು ನಾನು ಎಣಿಸುತ್ತೇನೆ. ಪ್ರೊಟೆಕ್ಟೊರೇಟು ದರ್ಜೆಯ ವಸಾಹತುಗಳಲ್ಲಿ ವ್ಯಾಪಿಸುವ ಹಿಂದೀಯರ ಬಗ್ಗೆ ವಿಚಾರಿಸಹತ್ತಿದರೆ, ಈ ಪ್ರದೇಶಗಳ ಆಡಳಿತೆಯ ಬಗ್ಗೆ ಜವಾಬದಾರ ಇರುವ ಸರಕಾರವು, ಹಿಂದುಸ್ಥಾನದ ಆಡಳಿತೆಯ ಬಗ್ಗೆ ಜವಾಬದಾರ ಇರುವ ಸರಕಾರವೂ ಒಂದೇ ಇರುವದರಿಂದ, ಅಲ್ಲಿ ವಾಸಿಸುವ ಹಿಂದೀ ಹಾಗು ಇತರ ಬ್ರಿಟಿಶ ಪ್ರಜೆಗಳಲ್ಲಿ ಭೇದ ಮಾಡುವದು ಅನ್ಯಾಯವೆಂದು ನಮಗೆ ತೋರುತ್ತದೆ. ಈ ಪ್ರಶ್ನೆಯನ್ನು ಬಿಡಿಸುವ ಒಂದೇ ಮಾರ್ಗವಿದೆ. ಅದೇನಂದರೆ, ಹಿಂದುಸ್ಥಾನವು ಪರದೇಶಗಳ ಕೂಡ ಪರಸ್ಪರ ವ್ಯವಸ್ಥೆ ಮಾಡಲು ಸಾಮರ್ಥ್ಯವನ್ನು ಸಂಪಾದಿಸತಕ್ಕದ್ದು. ಅಂದರೆ, ಸ್ವಾಯತ್ತತೆಯನ್ನು ತ್ವರೆಯಿಂದ ಸಂಪಾದಿಸಬೇಕು. ಇಲ್ಲದಿದ್ದರೆ, ಸರ್ ತೇಜ ಬಹಾದ್ದೂರ ಸಪ್ರು, ಹಾಗು ಅಲ್ವಾರ ಮಹಾರಾಜರವರು ನುಡಿದಂತೆ, ಉತ್ಕ್ರಾಂತಿಕರ ಚಳವಳಿಯ ಬದಲು ಕ್ರಾಂತಿಕಾರಕ ಚಳವಳಿಯು ಪ್ರಾದುರ್ಭೂತವಾಗುವದು. ಹೀನ ವರ್ಣೀಯರೆಂದು ಎಣಿಸುವ ಬಗ್ಗೆ ನಡೆಯುವ ನಿಷೇಧದಲ್ಲಿಯೂ ಸ್ವಾತಂತ್ರ್ಯ ಸಂಪಾದನೆಯ ಆಕಾಂಕ್ಷೆಯಲ್ಲಿಯೂ ಹಿಂದೀಯರಿಗೂ ನಾವು, ನಮ್ಮ ದೇಶದವರು ಅವಶ್ಯವಾಗಿ ಸಹಾನುಭೂತಿಯನ್ನು ಪ್ರದರ್ಶಿಸತಕ್ಕದ್ದು. ಬೇರೆ ವಸಾಹತುಗಳು ಬೇಗ ತಮ್ಮ ಪ್ರದೇಶದ ಆಡಳಿತೆಯನ್ನು ನಡಿಸತಕ್ಕದ್ದು, ಎಂದು ಹೇಳುವದೂ ಹಿತವಲ್ಲೆಂದು ನನ್ನ ಮತವು. ಇಷ್ಟೇ ನನ್ನ ಹೇಳಿಕೆಯು.”

ನೋಟೀಸು.

ಮೆ॥ ರಜಿಸ್ಟ್ರಾರ ಸಾಹೇಬ ಬಹಾದ್ದೂರ ಕೋಆಪರೇಟಿವ್ಹ ಸೊಸಾಯಿಟೀಜ ಇಲಾಖಾ ಮುಂಬಯಿ ಇವರು ೧೯೧೨ನೇ ಇಸವಿ II ಆಕ್ಟಿನ ಕಲಮು ೪೯ (೧) ಅನ್ವಯ ತಾರೀಖು ೪—೧೦—೨೩ನೇಗೆ ಅಘನಾಶಿನಿ ಸಹಕಾರಿ ಸಂಘ (ತಾಲೂಕ ಕುಮಟಾ) ವನ್ನು ರದ್ದುಪಡಿಸಿ, ಕೆಳಗೆ ಸಹಿ ಮಾಡಿದವರಿಗೆ ಲಿಕ್ವಿಡೇಟರರನ್ನಾಗಿ ನೇಮಿಸಿರುತ್ತಾರೆ. ಅದ್ದರಿಂದ, ಇದರ ಮೂಲಕ ತಿಳಿಸುವದೇನಂದರೆ, ಸದರಿ ಸಂಘದಿಂದ ಏನಾದರೂ ಸಲ್ಲತಕ್ಕವರು ಈ ನೋಟೀಸು ಪ್ರಕಟವಾದ ೨ ತಿಂಗಳೊಳಗಾಗಿ ಕೆಳಗೆ ಸಹಿ ಮಾಡಿದವರ ಕಡೆಗೆ ತಮ್ಮ ಹಕ್ಕುಗಳನ್ನು ಜಾಹೀರ ಪಡಿಸತಕ್ಕದ್ದು.

ಕುಮಟಾ, ತಾ. ೩—೧೧ ೧೯೨೩ } **M. A. Warty,** ಲಿಕ್ವಿಡೇಟರ, ಅಘನಾಶಿನಿ ಸಹಕಾರಿ ಸಂಘ.

[illegible]ಡೋದೆಯ ಮಹಾರಾಜರಾದ ಶ್ರೀಮಂತ ಸಯಾಜಿ [illegible]ಯಕವಾಡರವರು ಕಳೆದ ತಾ. ೯ನೇಗೆ ವಿಹಾರ್ಯ [illegible]ದ ಹೊರಟು, ಇದೇ ಬರುವ ತಾ. ೨೩ ನೇಗೆ [illegible]ಯಿಗೆ ಬಂದು ಮುಟ್ಟುವರು. ಆಗ ಮುಂಬಯಿ [illegible]ಗಿನ ಬರೋಡೆಯ ನಿವಾಸಿಕರೆಲ್ಲರೂ ಮಹಾರಾ[illegible] ಬಾಬಾದಿಯನ್ನು ಸಮರ್ಪಿಸುವರು. ಬರೋಡ ಮಹಾರಾಜರ ಜಂಗೀ ಸ್ವಾಗತದ ತಯಾರಿಯು [illegible]ದ ನಡೆದದೆ. ಪ್ರಜೆಗಳೆಲ್ಲರೂ ಮಹಾರಾಜರ [illegible] ದರ್ಶನವನ್ನು ಪಡೆಯಲು ಉತ್ಸುಕರಾಗಿರುವರು.

[illegible]ರ್ಾಧಿಪತಿ ರೀಡಿಂಗ ದೊರೆಗಳು ಅಲಹಾಬಾದ [illegible]ವನ್ನು ಸಂದರ್ಶಿಸಿದಾಗ, ಅಲ್ಲಿ ಹರತಾಳ ಆಚರ[illegible]ಯಿತು.

೯ನೇ ಕರ್ನಾಟಕ ಸಾಹಿತ್ಯ ಸಮ್ಮೇಲನವು

ಇದೇ ತಿಂಗಳ (ನವ್ಹಂಬರ ೧೯೨೩) ೨೧-೨೨-೨೩ [illegible]ೕಖಿನ ದಿವಸ ವಿಜಾಪುರದಲ್ಲಿ ನೆರೆಯುವದು. [illegible]ವ್ಯ, ಅಲಂಕಾರ, ವ್ಯಾಕರಣ, ವಿಜ್ಞಾನ ನಾಟಕ, [illegible]ರ್ನಾಟಕ ಭಾಷೆಯ ಇತಿಹಾಸ ಮೊದಲಾದವುಗಳಿ[illegible] ಸಂಬಂಧಪಟ್ಟ ನಿಬಂಧಗಳನ್ನು ಓದಲಿಚ್ಛಿಸು[illegible]ರು ಅವುಗಳನ್ನು ತಮ್ಮ ಜೊತೆಯಲ್ಲಿ ತರಬೇ[illegible]ಗಿ ಪ್ರಾರ್ಥನೆ! ಬರುವದಕ್ಕೆ ಅನಾನುಕೂಲವಿದ್ದ[illegible] ಕಾರ್ಯದರ್ಶಿ, ಸಾಹಿತ್ಯ ಸಮ್ಮೇಲನ ಇವರ ವಿಳಾ[illegible]ಕ್ಕೆ ಕಳುಹಿಸಬಹುದು. ಕರ್ನಾಟಕ ಭಾಷಾಭಿ[illegible]ಮಾನಿಗಳೆಲ್ಲ ಈ ಸಮ್ಮೇಲನಕ್ಕೆ ದಯಮಾಡಿ ಬಂದು, [illegible]ಷಾಭಿವೃದ್ಧಿಗೆ ನೆರವಾಗುವರೆಂದು ಹಾರೈಸುತ್ತೇವೆ.

ವಿಜಾಪೂರ, [illegible]. ೯—೧೧—೨೩. } ಕಾರ್ಯದರ್ಶಿಗಳು. ೯ನೇ ಕ.ಸಾ.ಸ. ವಿಜಾಪೂರ.

ಮನೆ ವಿಕ್ರಿ.

ಹೆರವಟ್ಟೆ ವಿಠೋಬ ದೇವಸ್ಥಾನದ ಮುಂದೆ ೬೩ [illegible] ಸರ್ವೇ ನಂಬರದಲ್ಲಿ ಇರುವ ಮ.ಜಬೂತ ೧೩ [illegible]ಂಕಣದ ಮನೆ, ಅದಕ್ಕೆ ತಾಗಿಷ್ಟ ೨ ಅಂಗಡಿಗಳೂ [illegible]ಗೂ ೧೩ ಗುಂಟೆ ಹಿತ್ತಲು ಮಾರಾಟ ಮಾಡ[illegible]ಕ್ಕಿದ್ದೇವೆ. ಖಾಯಿಸ ಇದ್ದವರು ಅವನ್ನು ನೋಡಿ, [illegible]ಳಗಿನ ಪತ್ತೆಗೆ ಪತ್ರವ್ಯವಹಾರ ನಡಿಸಬಹುದು.

ಆರ್. ವ್ಹಿ. ಪ್ರಭು,
ಪೋಸ್ಟ ಮಾಸ್ತರ, ಹೊನ್ನಾವರ.

Twelve Tissue Remedies.

ಈರಾರು ಲವಣಗಳು

ಕೆಳಗೆ ಬರೆದ ಕ್ರಯಕ್ಕೆ ಸಿಗುವವು.

[illegible]ಂಬ್ರ ೩ರಿಂದ ೧೨ರ ವರೆಗೆ

೧ಔನ್ಸ ಬಾಟ್ಲಗೆ ಕ್ರಯ ರೂ. ೦-೧೦-೯,
" " " ೨ ಔನ್ಸ ಬಾಟ್ಲಿಗೆ " ರೂ. ೧--೮--೦.
" " " ೪ ಔನ್ಸ ಬಾಟ್ಲಿಗೆ " ರೂ. ೧-೧೨-೦.

ಇದಲ್ಲದೆ, ಗಬಕಣ್ಣ, ತದ್ದು, ತಲೆಹೊಡತ, ಚಳಿ ಜ್ವರ, ಚಾತುರ್ಥಜ್ವರ, ಜ್ವರಗಳು ಮೊದಲಾದವುಗಳಿಗೆ [illegible]ತ್ಯುತ್ತಮ ಔಷಧಗಳು ನಮ್ಮಲ್ಲಿ ದೊರೆಯುವವು. [illegible]ಶೇಷ ಮಾಹಿತಿ ಪತ್ರದ್ವಾರ ಯಾ ಸಮಕ್ಷ.

ಪತ್ತೆ:— ಎನ್. ಈ. ವರುಗೀಸ್,
ಮಿಶನ್ ಮಾಸ್ತರ,
ಹಳದೀಪುರ.
(ಉ. ಕಾನಡಾ)

ಬೇಕು.

ಕನ್ನಡ ಝುಟಿಕೀಯಿಂದ ಬರಿಯಲಿಕ್ಕೆ ಬಲ್ಲಾದೆ ಚಲೋ ಹಸ್ತಾಕ್ಷರದ ಕಾರಕೂನನು ಬೇಕು. ಪಗಾರ ಲಾಯಖಿ ಪ್ರಕಾರ.

ಶಿರಸಿ, 6-11-23. } **ಸುಂದರರಾವ ಪಂಡಿತ,** ಹ್ಯಾಕೋರ್ಟ ವಕೀಲ

ಏನೂ ಉಪದ್ರವವಾಗದೆ
ಕೂದಲು ತೆಗೆಯುವ

ಬಾದಶಾಹೀ ಸಾಬೂನು.

ಈ ಸಬುಕಾರವನ್ನು ಬೇಕಾದಲ್ಲಿ ಹಚ್ಚಿರಿ; ಅಲ್ಲಿಯ ಕೂದಲುಗಳು, ಚರ್ಮವನ್ನು ಯಾವದೇ ರೀತಿಯಿಂದ ಕಂಲಂಕಿಸದೆ, ಅತ್ಯಂತ ಸಫಾಯಿಯಿಂದ ಉದುರಿಹೋ ಗುತ್ತವೆ. ಚರ್ಮವು ಮೃದುವಾಗುತ್ತದೆ. ೩ ಬಿಲ್ಲೆಗಳ ಪೆಟ್ಟಿಗೆ ೧ ರ ಬೆಲೆ ಬರೇ ೧ ರೂಪಾಯಿ. ಟಪಾಲ ಹಾಸಲು ೪ ಆಣೆ. ಬಿಂಟಿ ಬಿಲ್ಲೆಯನ್ನು ಕಳಿಸಲಾಗುವದಿಲ್ಲ. ೩-೩ ಬಿಲ್ಲೆಗಳುಳ್ಳ ೪ ಪೆಟ್ಟಿಗೆಗಳ ಕಿಮ್ಮತ್ತು ರೂಪಾಯಿ ೩/- ಅಂಚೆ ಹಾಸಲು ಮಾಫ. ಬಾದಶಾಹೀ ಸಾಬೂನಿನ ಉತ್ಕೃಷ್ಟತೆಯ ಬಗ್ಗೆ ಕಲಕತ್ತಾ, ಕರಾಚಿಗಳ ಪ್ರದರ್ಶನಗಳಲ್ಲಿ ಸುವರ್ಣ ಪದಕಗಳು ಇನಾಮಾಗಿ ದೊರೆತಿವೆ.

ನಕಲೀ ಮಾಲಿನ ಬಗ್ಗೆ ಎಚ್ಚರಿಕೆ; ಮೋಸಹೋಗಬೇಡಿರಿ.

ರಜಿಸ್ಟರ ನಂ. ೫೨೫, ತಪಾಸ ಮಾಡಿಕೊಂಡು ಖರೀದಿ ಮಾಡಿರಿ. ಅಲ್ಲಲ್ಲಿ ಏಜಂಟರು ಬೇಕು.

ಸಿ. ಸಿ. ಮಹಾಜನ ಎಂಡ್ ಕಂಪನಿ,
ಮುಂಬಯಿ, ನಂ. ೨.

ಟೀಪು:— ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಯಾ ಮರಾಠಿಯಲ್ಲಿ.

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ವಿಷಯಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ.

ಈ ವರೆಗೆ ಪ್ರಕಟವಾದ ಪುಸ್ತಕಗಳು.

(೧-೨) ಗ್ರೀಸ ದೇಶದ ಗಾಂಧಿ. (ಸಾಕ್ರೆಟೀಸ) (೩) ಸ್ವಾತಂತ್ರ್ಯಸಾಧನೆ. (೪) ಗುರು–ಹಿರಿಯರೂ, ಬಂಧು–ಭಗಿನಿಯರೂ. (೫) ರಾಷ್ಟ್ರೀಯ ಶಿಕ್ಷಣ. (೬) ಸದ್ಗುಣಮಂದಿರ. (ಭಾಗ ೧.) (೭) ಸ್ವರಾಜ್ಯ ಧರ್ಮ. (ಅನಾಮಿಕ ಪುಸ್ತ) ಇವಿಷ್ಟು ಪ್ರಕಟವಾಗಿದ್ದು, ೫ ಆಣೆಗೆ ಒಂದರಂತೆ ದೊರೆಯುತ್ತವೆ. ವರ್ಗಣೀದಾರರಿಗೆ ಹಿಂದಿನ ಬೇಕಾದ ಪುಸ್ತಕಗಳು ೪ ಆಣೆಗೆ ಒಂದರಂತೆ ದೊರೆಯುವವು. ೬ ಪುಸ್ತಕಗಳಿಗೆ ಕೂಡಿ ೧॥ ರೂಪಾಯಿ ಮಾತ್ರ. ಅಂಚೆವೆಚ್ಚ ಬೇರೆ. ದ್ವಿತೀಯ ವರ್ಷ ಪ್ರಾರಂಭ. ಅನುಕ್ರಮವಾಗಿ ಮಾರ್ಚ, ಮೇ, ಜುಲೈ, ಸಪ್ಟಂಬರ, ನವಂಬರ, ಜನವರಿ ೧೫ ನೇ ತಾರೀಖಿಗೆ ಒಂದೊಂದು ಪುಸ್ತ ಹೊರಡುವದು. ವಾ. ವ. ಅಂಚೆವೆಚ್ಚ ಸೇರಿ ೧–೧೨–೦ ಮಾತ್ರ.

ವಾ. ಅ. ಹೊದ್ಕೆ,
ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ.

ಎಲ್ಲ ತರದ ಜ್ವರಗಳಮೇಲೆ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ, ಕೈತ್ಯ, ಬಂಗಲಿ, ಅಥವಾ ದೂಷಿತ ಹವೆಯಿಂದ ಬರುವ ಸಾದಾ ವಿಷಾರೀ ಅಥವಾ ಇತರ ಜ್ವರಗಳೂ, ಇನಫ್ಲ್ಯುಎಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನ್ಯಾಸದ ದುಷ್ಪರಿಣಾಮರಹಿತ ಕೇವಲ ವನಸ್ಪತಿಯ ಈ ಮದ್ದು ಸೇವಿಸಿದರೆ ಅಶಕ್ತತೆಯಾಗದೆ, ಬೆವರು ಬಂದು ಜ್ವರ ಇಳಿಯುತ್ತದೆ. ಹಾಗು ರೋಗಿಯು ಹರಿತ ವಾಸಿಯಾಗುತ್ತಾನೆ.

೭ ಔಂಸ ಬಾಟ್ಲಿ ಕಿಂಮತ ರೂ. ೧–೦–೦.

ಇದರ ಹೊರತು ಇನ್ನೂ ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ, ಉತ್ಕೃಷ್ಟ ಪ್ರತಿಯ ಕೋಲನ ವೋಟರ, ಲವೆಂಡರ ಇತ್ಯಾದಿ ಸಾಮಗ್ರಿಗಳು ಅಲೆಂಬಿಕದ ಕಾರಖಾನೆಯಲ್ಲಿ ತಯಾರಾಗುತ್ತವೆ. ಮುದ್ರಿತ ಕೆಟಲಾಗು ತರಿಸಿರಿ.

ಅಲೆಂಬಿಕ್ ಕೆಮಿಕಲ್ ವರ್ಕ್ಸ,
ಕಂಪನಿ, ಲಿಮಿಟೆಡ್.
ನಂ. ೫೦, ಪ್ರಿನ್ಸೆಸ್‌ಸ್ಟ್ರೀಟ, ಮುಂಬಯಿ.

अलेंबिक केमिकल वर्क्स कं० लि०
नं. ५० प्रिन्सेस स्ट्रीट मुंबई.

ನೌಕರರು ಬೇಕು.

" ಮುಂಬಯಿ, ಪರೇಲ್, ಕಾಳಾಚೌಕಿ, ಟ್ರಾಮನಾಕೆಯಲ್ಲಿರುವ ಜಿ. ವಿ. ಕಾಮತರ ವಿಶ್ರಾಂತಿಭವನದಲ್ಲಿ ಕೆಲಸ ಮಾಡಲಿಕ್ಕೆ ಚುರುಕಾದ ಯೌವನಸ್ಥರು ಈಗಲೇ ಬೇಕು. ತಿಂಗಳಿನ ಪಗಾರು ಕೆಲಸ ನೋಡಿ ಕೊಡುವದು. ಸೇರಲಿಚ್ಛಿಸುವವರು ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ತಿಳಕೊಳ್ಳಬಹುದು. "

Address:— **G. V. Kamath,**
Tea-shop, Kalachowki Naka,
PAREL, *No. 12, Bombay.*

कारवारांत आयुर्वेदिक पाठविद्यालय
उघडण्यांत येणार.

सन १९२४ च्या जानेवारी महिन्या पासुन कारवार येथें वरील पाठशाळा उघडण्यांत येणार आहे. आयुर्वेदांतील प्रत्येक विषय प्रमाणपूर्वक व सशास्त्र शिकविण्यांत येईल. पूर्ण आयुर्वेदिक शिक्षण तीन वर्षांत शिकविलें जाईल. विद्यार्थी निदान मराठी पांच इयत्ता शिकलेला व भांडारकरकृत, संस्कृत तीन पुस्तकें पठलेला असावा. अथवा आयुर्वेद औषध पुस्तकांतील श्लोकांचा अर्थ समजून घेण्या इतका संस्कृत ज्ञान असलेला असावा. त्यांचें वय १८ ते २२ वर्षांपर्यंत व प्रकृति सदृढ असावी. सदर पाठशाळेचे वर्ग १ जानेवारी १९२४ पासून सुरू होतील. फीचे दर १ ल्या वर्षास दरमहा ६ रुपये, दुसऱ्यास दरमहा

१० रुपये व तिसऱ्या वर्षास दरमहा १२ रुपये प्रमाणे ठेविली आहे पहिल्या वर्षांत फक्त २५ विद्यार्थीच निवडण्यात येतील विद्यार्थ्यांनीं आपले अर्ज ता १५ डिसेंबर च्या आत पाठविले पाहिजेत अर्जासोबत प्रवेश फीचे २ रुपये पाठविण्यात आले पाहिजेत. ज्याची निवड होणार नाहीं त्याची फी परत करण्यात येईल. पत्रव्यवहार मराठीत अगर कानडी मध्यें करावा.

प्रत्येक वर्षांत शिकविले जाणारे विषय खालील प्रमाण —

पहिलें वर्ष

१ प्रत्येक वनस्पतीचे गुण धर्मपरिचय वर्णन सह्या आणि प्रत्ये वस्तूचे अनेक भाषांतील नामाहि वगैरे

२ निदान शास्त्र त्यात प्रत्येक रोगाचें निदान (हेत) समप्राप्त आणि नाडीपरिक्षा (परिक्षा करण्यास) शिकविले जाईल

३. सदर निदान शास्त्रात रोग गणनेत आलेले विषय औषधालयात समक्ष प्रयोग करून दाखविले जातील

दुसरें वर्ष

१ प्रत्येक रोगावर निरनिराळ्या शास्त्रोक्त पद्धतीने चिकित्सा (उपचार) करण्यास शिकविले जाईल

२ प्रत्येक वस्तुद्रव्यादिचे गुणदोष व तत्व विचार शिकविले जातील.

३ प्रत्यक रोगावर पथ्यापथ्य विषय शिकविले जातील

तिसरें वर्ष.

१. आर्य शरीर शास्त्र, कला, स्नायु, मज्जातंतु वाहिनी रक्तपिंड रुधिराभिसरण चक्रादि प्रत्येक भागात होणाऱ्या निरनिराळ्या क्रिया प्रत्येक भागाचीं नाव, त्याच प्रमाणें प्रत्येक भाग चित्र रूपाने 'काढून वर्णे व तेच विषय त्यांना वर्णन करून स्पष्ट करून देणे' वगैरे.

२. प्रत्येक रोगावरील हिमफाटकाढ्या पासून रसायना पर्यंत तयार करण्याचे प्रयोग औषधालयात समक्ष करून दाखविले जातील.

३ रसायनें व कुपित्त रसायनें याची संपूर्ण माहिती आणि प्रत्येक विषया विषयी संशयनिवृत्ति स्पष्ट रितीनें करण्यात येईल.

विशेष माहिती— खालील पत्त्यावर पत्रद्वारें अगर समक्ष मिळेल.

वि सू उमेदवारांकरिता राहण्याची सोय करून देतां येईल.

शिकविणारे— वैद्य जे. एफ फर्नांडिस.
आर्यौषधालय, कारवार.

एड्रेस— व्यवस्थापक,
आयुर्वेदिक पाठविद्यालय, कारवार.

ಫಕ್ತ ಒಂದು ತಿಂಗಳ ಪೂರ್ತ ಸವಲತ್ತು.
ತಿಂಗಳಿಗೆ ರೂಪಾಯಿ ೧೦೦ರಿಂದ ೫೦೦ರ ವರೆಗೆ ಗಳಿಸಿರಿ.
ಬೇಕಾದಲ್ಲಿ ಸುಲಭವಾಗಿ ಗಳಿಸಿರಿ.
ರೂಪಾಯಿ ೭-೮-೦ ಖರ್ಚುಮಾಡಿರಿ ಮತ್ತು ಸ್ವತಂತ್ರರಾಗಿರಿ.
ಸಬಕಾರವು ಪ್ರತಿಯೊಬ್ಬ ಮಾನವನಿಗೆ ಅವಶ್ಯವಿದ್ದ ವಸ್ತುವು. ಅವನು ಬೇಕಾದರೆ, ಶ್ರೀಮಂತನಿರಲಿ, ಬಡವನಿರಲಿ, ಹಳ್ಳಿಗನಿರಲಿ, ಪಟ್ಟಣಿಗನಿರಲಿ, ಪಾಶ್ಚಾತ್ಯ ಮಾದರಿಯ ಸಬಕಾರವನ್ನು ತಯಾರಿಸುವ ನಮ್ಮ ಕ್ರಮವು ಅತಿ ಉತ್ತಮವೆಂದು ಖ್ಯಾತಿಹೊಂದಿದೆ. ಈ ಕ್ರಮದಿಂದ ಶ್ರೇಷ್ಠ, ಕನಿಷ್ಠ ಪ್ರತಿಯ, ಮೈಗೆ ಹಚ್ಚುವ ಯಾ ಅರಿವೆಗೆ ಹಾಕುವ, ಪರಿಮಳದ ಹಾಗು ಬಣ್ಣಗಳ ಸಬಕಾರವನ್ನು ಸುಲಭವಾಗಿ ಯಾರೂ ತಯಾರಿಸಬಲ್ಲರು. **ಈ ಕ್ರಮಕ್ಕೆ ಬೆಂಕಿಯ ಅವಶ್ಯಕತೆಯಿರುವದಿಲ್ಲ.** ನಮ್ಮ ವಿದ್ಯಾರ್ಥಿಗಳು ಯತ್ನಮಾಡುವಾಗ ನಾವು ಬಲು ಜಾಗ್ರತೆಯಿಂದ ಅವರನ್ನು ನಿರೀಕ್ಷಿಸಿ, ಅವರಿಗೆ ಬೇಕಾದ ಮಾಹಿತಿಯನ್ನು ಪೂರೈಸುತ್ತೇವೆ. ಈ ಬಗ್ಗೆ ನಮಗೆ ಅನೇಕರು ಶಿಫಾರಸು ಪತ್ರಗಳನ್ನು ಕಳುಹಿಸಿರುವರು. ಈ ಪೂರ್ಣ ಕ್ರಮವನ್ನು ರೂ ೧೯-೧೨-೦ಕ್ಕೆ ವ್ಹಿ. ಪಿ. ಪಿ. ಮಾಡಿ ಕಳಿಸುವೆವು ಈ ಕ್ರಮವು ನಿಯಮಿತ ಮಂದಿಗಳಿಗೆ ಮಾತ್ರ ಕಳಿಸಲ್ಪಡುವದು
ನಿರಾಶೆ ಹೊಂದಬಾರದೆಂದು ಇಚ್ಛೆ ಇದ್ದವರು ಕೆಳಗಿನ ಪತ್ತೆಗೆ ಕೂಡಲೆ ಬರೆಕೊಳ್ಳತಕ್ಕದ್ದು.
International Business Corporation,
Dept. (F) *5357, Goualiguda*, **Hyderabad.** (*Dn*)



ಅಮೃತಾಂಜನ.
ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಇದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚ ಬೇರೆ
ಅಮೃತಾಂಜನ ಡಿಪೋ, ಫೋರ್ಟ, ಮುಂಬಯಿ.

ಪಸನಾದ ಸಾಗುವಳಿಯಲ್ಲಿಯೇ ಸಂಪತ್ತಿಯು



ಅಡಕವಾಗಿರುವದು.
ನಮ್ಮ ಕಾರಖಾನೆಯಲ್ಲಿ ತಯಾರಾಗುವ ಸುಧಾರಿಸಿದ ಕಬ್ಬಿಣ ನೇಗಿಲಗಳೂ, ಕಬ್ಬಿಣ ಗಾಣಗಳೂ, ಇವೇ ಮುಂತಾದ ವ್ಯವಸಾಯದ ಮುಟ್ಟುಗಳನ್ನು ತರಿಸಿಕೊಂಡು ನಿಮ್ಮ ಒಕ್ಕಲತನವನ್ನು ಬೆಳೆಸಿಕೊಳ್ಳಿ ೨೫ ವರ್ಷಗಳ ಅನುಭವದಿಂದ ಈ ಸಾಮಾನುಗಳನ್ನು ತಯಾರ ಮಾಡಿರುತ್ತೇವೆ. ೮೦,೦೦೦ ರೈತರು ಹೂಡುತ್ತಾರೆ ಇಂದೇ ಪತ್ರ ಬರೆದು 'ವ್ಯ' ಎಂಬ ಕ್ಯಾಟಲಾಗು ತರಿಸಿಕೊಳ್ಳಿರಿ.



ಕಿರ್ಲೋಸ್ಕರ ಬಂಧು
ಲಿಮಿಟೆಡ್.
ಕಿರ್ಲೋಸ್ಕರವಾಡಿ. (ಸಾತಾರಾ)

Printed and Published by Krishnarao Keshav Shenvi (Editor) at his Star of Kanara Press

Reg. No. B. 1270. Thursday, 22nd November 1923.

ವರ್ಷ ೮. ಸಂಚಿಕೆ ೫.

ಕಾನಡಾವೃತ್ತ.

THE KANARA NEWS.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಮನೆಯಾರ್ಡರಿಯಿಂದ ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0
ಬಿಡಿ ಸಂಚಿಕೆಗೆ 0-1-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಪ್ಯೂಕಾ ಟೈಪಿನ (೧೫ ಎಮ್ ಉದ್ದ) ೮ ಸಾಲುಗಳವರೆಗೆ ರೂ. 1-0-0
೮ ನಂತ್ರ ಪ್ರತಿಸಾಲಿಗೆ 0-1-0
ಹಡಿಂಗದ ಸಾಲು ಎಷ್ಟು ದೊಡ್ಡದಿರುವದೋ ೮ ವಾಪ ದಿಂದ ಅಷ್ಟುಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖ ೨೨ ಮಾಹೆ ನವಂಬರ ಸನ್ ೧೯೨೩ ನೇ ಇಸವಿ)—

हिंदुस्थानातील रहिवाशांस ज्याप्रमाणे हिंदुस्थानची हवा त्याप्रमाणेंच हें औषध हिंदुस्थानांतील लोकास ज्यास्त फायदेशीर आहे

द्राक्षासव- { दीड रत्तलची किंमत २ रुपये,

रामबाण औषधें

सर्दि घालविणारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

पिण्यास रुचिकर.

क्याटलाग मागवा,

झंडु फार्मास्युटिकल वर्क्स लिमिटेड,
मुंबई नं. १३

ಡಾ। ವಾಸೂರಕರರ

ಸುಧಾಂಜನ.

ಅಂಜನುಗಳಿಗೆಲ್ಲ ಅರಸು.



ತಲೆಶೂಲಿ, ವಾತವೇದನೆ, ಕೆಮ್ಮು, ಹಲ್ಲುನೋವು ಇತ್ಯಾದಿಗಳಿಗೆ ಕ್ಷಿಪ್ರ ಗುಣಕಾರಿ ಸಬ್ಬು ಬೆಲೆ 2 ಆಣೆ ಮಾತ್ರ ವ್ಯಾಪಾರಿಗಳಿಗೆ ವಿಶೇಷ ಸವಲತ್ತು ಕೆಜ್ಜಿನ ಮಾಹಿತಿ ಏಜೆಂಟರಿಂದ.

ಏಜೆಂಟ್ಸ — **ನಾಗರ್ಕಟ್ಟೆ ಬ್ರದರ್ಸ,**
ಸುಧಾಂಜನ ಡಿಪೋ,
ಕುಮಟಾ. (ಜಿಲ್ಲಾ ಕಾರವಾರ)

ಶುದ್ಧ ರೇಶ್ಮದ ಧಾವಳಿಗಳು.

4 ವಾರ	ಉದ್ದ	1½	ವಾರ	ಅಗಲ	ರೂ.	1½	ರಿಂದ	2		ವರೆಗೆ
5	,,	,,	1½	,,	,,	,,	1-10-0	—	5	,,
6	,,	,,	1½	,,	,,	,,	2½	—	6	,,
8	,,	,,	2	,,	,,	,,	3½	—	10	,,
12	,,	,,	2½	,,	,,	,,	6	—	12	,,
16	,,	,,	2½	,,	,,	,,	9	—	16	,,

SUN & CO
BENARES CITY.

ಇವುಗಳಲ್ಲದೆ ಶುದ್ಧ ಖದ್ದರ್ ರೇಶ್ಮೆ ಮಡಿಗಳು, ಸಾರ್ಮಡಿಗಳು, ಶಾಲೆ ಪೀತಾಂಬರಗಳು, ಕ್ಯಾಲ್ಯೆರ್ ಶಾಲುಗಳು ರುದ್ರಾಕ್ಷಿ, ಜಾಘಂಟೆ, ತಾಳ, ಪನ್ನೀರ್ ದಾನಿ, ಆಟದ ಸಾಮಾನುಗಳು, ದೇವರ ಮತ್ತು ಗಾಂಧಿ ಮಂಗಳು ಖಾದವರ ಪಟಗಳಿರುವ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ಯೋಗ್ಯ ಕ್ರಯಕ್ಕೆ ದೊರೆಯುವವು ಕ್ಯಾಟಲಾಗ್ ಇನಾಂ.

ವಿಳಾಸ:— ಎಸ್ ಯು. ನಾರಾಯಣಾಚಾರ್ಯ ಮತ್ತು ಕಂಪನಿ, ಧೌಕಂಬಾ, ಕಾಶೀಕ್ಷೇತ್ರ.

1924 ನೇ ಇಸವಿಯ ಸ್ವರಾಜ್ಯ ಡೈರಿ.

ಸಂಪಾದಕ - ಡಿ. ಕೆ. ಭಾರದ್ವಾಜ, ವಿದ್ಯಾಭೂಷಣ. ರಾಜಕೀಯ, ಆರ್ಥಿಕ, ವ್ಯಾಪಾರ, ಸ್ವದೇಶಿ, ಕೈಗಾರಿಕೆ ಮೊದಲಾದ ವಿಷಯಗಳ ಹೊಸ ಸಂಗ್ರಹ! ದೇಶಭಕ್ತರ ನವೀನ ಭಾವಚಿತ್ರಗಳು! ಪ್ರತಿಯೊಬ್ಬರೂ ಅಗತ್ಯವಾಗಿ ಉಪಯೋಗಿಸತಕ್ಕದ್ದು.

ನಮ್ಮಲ್ಲಿ ಯಾವತ್ತೂ ಪೇಟೆಂಟ್ ಔಷಧ ಸ್ಟೇಶನರಿ ವಗೈರೆ ಹೊಸ ಸ್ಟೊಕ ಬಂದಿದೆ ತ್ವರೆಮಾಡಿರಿ!

ದಿ ನ್ಯೂ. ಎಂಪೋರಿಯಮ್,
ಮರ್ಚಂಟ್ಸ, ಹೊನ್ನಾವರ

ಪ್ರಯಾಣಸ್ಥರ ಸೋಯಿಯಾಯಿತು

ಡಿ. ಪಿ. ಪಿ. ಮೋಟಾರಸರ್ವಿಸ ಕಂಪನಿ, ಹಾವೇರಿ.

ಹಾವೇರಿಯಿಂದ ಶಿರ್ಶಿಗೆ ಮತ್ತು ಶಿರ್ಶಿಯಿಂದ ಹಾವೇರಿಗೆ.

ತಾರೀಕು ೧೫—೧೧—೧೯೨೩ ನೇ ಗುರುವಾರದಿಂದ ಶುರುವು.

ಹೊರಡುವ ದಿನಸ ವ ಟೈಮ್.

ಶಿರ್ಶಿಯಿಂದ ಹಾವೇರಿಗೆ.

ಗುರುವಾರ, ರವಿವಾರ, ಮಂಗಳವಾರ ಈ ದಿವಸಗಳಲ್ಲಿ ಬೆಳಿಗ್ಗಿನ ೭ ಘಂಟೆಗೆ ಶಿರ್ಶಿಯಿಂದ ಹೊರಟು, ಹಾವೇರಿಗೆ, ಬೊಂಬೈಗೆ ಹೋಗುವ ಮೇಲಿಗೆ ಮುಟ್ಟಿಸುತ್ತದೆ.

ಹಾವೇರಿಯಿಂದ ಶಿರ್ಶಿಗೆ.

ಗುರುವಾರ, ರವಿವಾರ, ಮಂಗಳವಾರ ಈ ದಿವಸಗಳಲ್ಲಿ ಹಾವೇರಿಯಿಂದ ಸಾಯಂಕಾಲದ ಬೊಂಬೈ ಮೇಲ ನೋಡಿ, ೫। ಘಂಟೆಗೆ ಹೊರಡುತ್ತದೆ.

ಹಾವೇರಿಯಿಂದ ಹಾನಗಲ್ಲಿಗೆ ಮೋಟಾರ ಬಂಡಿಯು ಪ್ರತಿ ದಿವಸ ಹೋಗಿ ಬರುತ್ತದೆ.

ಟಿಕೇಟುಗಳು ಶಿರ್ಶಿಯಲ್ಲಿ **ವೆಂಕಟರಮಣ ನಾರಾಯಣ ಭಟ್ಟ, ಹಂದಿಗೋಣಕರ** ಇವರಲ್ಲಿ, ವ ಹಾವೇರಿಯಲ್ಲಿ ಸ್ಟೇಶನದ ಹತ್ತರಿರುವ **ನಮ್ಮ ಕಂಪನಿ ಆಫೀಸಿನಲ್ಲಿ ಸಿಗುತ್ತವೆ.**

ಅಲ್ಲದೆ ವ್ಯಾಸಂಜರರಿಗೆ ಉಳಕೊಳ್ಳುವ ಸೋಯಿ ಮಾಡಿರುತ್ತದೆ ಇವಲ್ಲದೆ ಗೋಕರ್ಣ, ಜೋಗ, ವಗೈರೆ ಬೇಕಾದ ಕಡೆಗೆ ಹೋಗಲಿಕ್ಕೆ ಸ್ಪೇಶಲ್ ಭಾಡೆಯಿಂದ ಸಿಗುತ್ತದೆ.

ಮೇನೇಜರ— ಬಿ. ವ್ಹಿ. ಪುಸಾಳಕರ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. (ರಿಜಿಸ್ಟರ್ಡ)

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ,

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ತೊಡೆದುಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆಯಿಸಿ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ವೆಂಬ್ಲೀ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಒಫ್ ಮೆರಿಟ" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ. — ಶೀಸೆಗೆ ರೂಪಾಯಿ 1-0-0. ಶೀಸೆ 3ಕ್ಕೆ ರೂಪಾಯಿ 2-10-0, ವಿ.ಪಿ. ಖರ್ಚು 0-14-0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಆತ್ಯುತ್ತಮವು. ಚನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಇಳಿಸಿದ ಸಾರವು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ತಟಕುಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವರ್ಗೀಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಕಡೆಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆ 1 ಕ್ಕೆ 0-8-0 1 ಡ್ರಾಮಿನ (ಮಿಡಿಯಮ್) ಸೀಸೆ 1 ಕ್ಕೆ 0-12-0, ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12-0.

Address - **The Anglo Indian Drug & Chemical Co,**
16, Market, **BOMBAY. 2.**

ಆರೋಗ್ಯಚಂದ್ರಿಕೆ.

ಈ ಪತ್ರಿಕೆಯ ಸಂಪಾದಕರು ಮದ್ರಾಸಿನ ಡಾಕ್ಟರ್ ಯು. ರಾಮರಾವ್, ಎಮ್. ಎಲ್. ಸಿ. ಯವರು. ಈ ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೂ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ

ಒಂದು ಸಚಿತ್ರ ಮಾಸಪತ್ರಿಕೆ

ಈ ಮಾಸಪತ್ರಿಕೆಯು 'ಹೆಲ್ತ್' ಎಂಬ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು.

'ಹೆಲ್ತ್' ಎಂಬ ನಮ್ಮ ಇಂಗ್ಲಿಷ್ ಮಾಸಪತ್ರಿಕೆಯನ್ನೋದಿ ಸಂತೋಷಿಸಿದ ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದ ಮೇಲೆ ಈ ಕನ್ನಡ ಪತ್ರಿಕೆಯನ್ನು ಹೊರಡಿಸಿ, ಪ್ರಥಮ ಸಂಚಿಕೆಯು ಈ ತಿಂಗಳಲ್ಲಿ ಪ್ರಕಟವಾಗಿದೆ.

ಅಂಚೆಯವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ರೂಪಾಯಿ ೧—೮—೦ ಬಿಡಿ ಪತ್ರಿಕೆಯವಕ್ಕೆ ೦—೩—೦

ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವದರಿಂದಲೂ ಹಣವನ್ನು ಮುಂಗಡವಾಗಿ ಕಳುಹಿಸುವದರಿಂದಲೂ ಚಂದಾದಾರರಾಗಬಹುದು.

ಮಾದರಿಯ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯಚಂದ್ರಿಕೆಗೆ' ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರದ ವಿಳಾಸ —

ಮೆನೇಜರ್,

'ಹೆಲ್ತ್' ಅಥವಾ
'ಆರೋಗ್ಯಚಂದ್ರಿಕೆ' ಆಫೀಸ.
೩೨, ತಂಬುಶೆಟ್ಟಿ ಬೀದಿ, ಮದರಾಸ್.

ಮೂರ್ತಿಗಳು ಬೇಕೋ?

ನಮ್ಮಲ್ಲಿ ಭಂಗಾರ, ಬೆಳ್ಳಿ, ಪಂಚಧಾತು, ಹಿತ್ತಾಳಿ, ತಾಮ್ರ ಈ ತರೇಶಿಯ ಮೂರ್ತಿಗಳೂ, ಇದಲ್ಲದೆ ಪಾಣಿಪೀಠಗಳೂ, ಪ್ರಭಾವಳಿಗಳೂ, ಈಶ್ವರ ಮುಖವಟಿಗಳೂ, ನಾಗಾಭರಣಗಳೂ, ಕವಚುಗಳೂ ಮತ್ತು ಯಾವದೇ ತರದ ಪ್ರತಿಮೆಗಳೂ ನಮ್ಮಲ್ಲಿ ಯೋಗ್ಯ ದರಕ್ಕೆ ಯೋಗ್ಯ ಹೊತ್ತಿಗೆ ಮಾಡಿ ಕೊಡಲ್ಪಡುವವು. ಬೇಕಾದವರು ಪತ್ರವ್ಯವಹಾರ ಮಾಡಿ ಯಾ ಸಮಕ್ಷ ಬಂದು ದರವಾರ ತಿಳಕೊಳ್ಳಬಹುದು.

ಪತ್ತೆ — **ನಾರಾಯಣ ಹುವಯ್ಯ ಶೇಟ,**
ಬಂಗಾರ, ಗುಗರಜಿಲ್ಲಿ, ಕುಮಟಾ
(ಉ ಕಾನಡಾ)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧ ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೪೫, ೫೦ ೬೦.
೨ ಕಾಲು ಪೆಟ್ಟಿಗೆ ಕಿಂ ೬೫, ೭೫, ೧೪೦, ೧೬೦.
೩. ತಬಲೆ ಜೋಡಿ ಕಿಂ ೧೩, ೧೫, ೧೮ ೩೦ ೫೦
೪ ಹಾರ್ಮೋನಿಯಮ ಗ್ಯಾಡ ಕಿಂ. ೧॥, ತಬಲೆ ಗ್ಯಾಡ ಕಿಂ ೧೨ ೪

ವಿಶೇಷ ಮಾಹಿತಿಗೆ ನಮ್ಮ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ — **ಗೋಪಾಳ ಸಖಾರಾಮ** ಮತ್ತು **ಕಂಪನಿ,** ನಂ ೩೬೨
ಕಾಳಬಾದೇವಿ ರೋಡ್ಮ್ಯ

ಆತ್ಮಕ್ಲೇಶದ ಸಾಮರ್ಥ್ಯ.

ಪ್ರೊ॥ ರಂಗನಾಥ ದಿವಾಕರರ ಪ್ರವಚನ

'ಕರ್ಮವೀರ' ಹಾಗು 'ನವಶಕ್ತಿ' ಪತ್ರಗಳ ಸಂಪಾದಕರಾದ ಪ್ರೊ॥ ರಂಗನಾಥ ರಾಮಚಂದ್ರ ದಿವಾಕರ ಇವರ ಮೇಲೆ ಧಾರವಾಡದ ೧ನೇ ವರ್ಗ ಮೆಜಿಸ್ಟ್ರೇಟರ ಮುಂದೆ ರಾಜದ್ರೋಹದ ಆರೋಪದ ಬಗ್ಗೆ ತನಿಖಿ ನಡೆದು, ಕಳೆದ ಸೋಮವಾರ ತಾ. ೧೨ ನೇ ವಂಜಾವಿಗೆ ತೀರ್ಪಾಯಿತು. ಶ್ರೀ ದಿವಾಕರರು ತಮ್ಮ 'ಕರ್ಮವೀರ' ಛಾಪಖಾನೆಯಲ್ಲಿ ಒಂದು ಕವಿತೆ ಪುಸ್ತಕವನ್ನು ಮುದ್ರಿಸಿದ್ದರು. ಆ ಬಗ್ಗೆ ರಾಜದ್ರೋಹದ ಕಲಮಿನನ್ವಯ ಅವರು ಅಪರಾಧಿಯೆಂದು ನಿಶ್ಚಯಿಸಿ, ಅವರಿಗೆ ೨ ವರ್ಷದ ಕಠಿಣ ಶಿಕ್ಷೆ, ೫೦೦ ರೂಪಾಯಿ ದಂಡ ವಿಧಿಸಲಾಯಿತು. ಈ ತನಿಖಿಯಲ್ಲಿ ಆರೋಪಿ ರಂಗನಾಥರಾಯರು ಕೋರ್ಟಿನಲ್ಲಿ ಸಾದರಪಡಿಸಿದ ಕೈಫಿಯತು ಮನನೀಯವಿದೆ. ಅದೇನಂದರೆ.—

ಕಳೆದ ೨॥ ವರ್ಷಗಳ ಅವಧಿಯಲ್ಲಿ ನನ್ನ ಮೇಲೆ ೪ ಖಟ್ಲೆಗಳು ನಡೆದವು. ಇವುಗಳಲ್ಲಿ ಯಾವ ಯಾವ ಥರಿಯ ತೀರ್ಪುಗಳಿಗೆ ನಾನು ಗುರಿಯಾಗಬೇಕಾಯಿತು ಎಂಬುದು ಪ್ರಸಿದ್ಧವಿದೆ. ಈ ತನಿಖಿಯನ್ನು ಸಹ ಮೊದಲಿನಂತೆಯೇ ನಾನು ಎಣಿಸುವೆನು. ಅಂದರೆ, ಆ ಖಟ್ಲೆಯ ಹಕೀಕತಿನ ಬಗ್ಗೆ ನಾನು ಮುಗ್ಧತೆಯನ್ನೇ ಸ್ವೀಕರಿಸುವೆನು. ಖಟ್ಲೆಯ ಹಕೀಕತಿನ ಪಾರಾಯಣದಿಂದ ಯಾರಿಗೂ ಲಾಭವಾಗುವದಿಲ್ಲ. ಇದೆಲ್ಲ ವ್ಯಕ್ತಿವಿಷಯಕವಿದ್ದು, ಕ್ಷಣಿಕ ಮಹತ್ವದ್ದಿದೆ. ಆದರೆ ಇಂಥ ಪ್ರಕಾರದ ಖಟ್ಲೆಗಳಲ್ಲಿ ಕೆಲ ಉಚ್ಚ ತತ್ವಗಳು ಒಳಗೊಂಡಿವೆ. ಅವುಗಳ ಬಗ್ಗೆ ಕೆಲ ಮಾತುಗಳನ್ನು ನಾನು ಆಡದಿದ್ದರೆ, ಕರ್ತವ್ಯಪರಾಙ್ಮುಖನಾಗಬೇಕಾದೀತು. ಆದ್ದರಿಂದ ಇವುಗಳ ಬಗ್ಗೆ ಕೆಲ ಮಾತುಗಳನ್ನಾಡುವೆನು.

ನಾನು ಆಡುವ ಮಾತುಗಳಿಗೂ, ಈ ಖಟ್ಲೆಯಲ್ಲಿ ನನಗೆ ವಿರೋಧಿಸುವ ವ್ಯಕ್ತಿಗಳಿಗೂ ಏನೂ ಸಂಬಂಧವಿಲ್ಲ. ಚಾಲು ಇರುವ ದುಷ್ಟ ಪದ್ಧತಿಯ ಬಗ್ಗೆ ಮಾತ್ರ ನನ್ನ ಆಕ್ಷೇಪವಿದೆ. ವ್ಯಕ್ತಿಗಳನ್ನು ಒತ್ತಟ್ಟಿಗಿಟ್ಟು, ಕೇವಲ ತತ್ವಗಳನ್ನಷ್ಟೇ ನಾನು ಚರ್ಚಿಸಬಿಚ್ಛಿಸುವೆನು. ನನಗೆ ವಿರೋಧವಾಗಿ ಕಾಯಿದೆಯ ಅಮಲಬಜಾವಣಿ ಮಾಡುವ ವ್ಯಕ್ತಿಗಳು ಕೂಡ, ವ್ಯಕ್ತಿ ನಾತೆಯಿಂದ ನನಗೆ ಆದರಾರ್ಹ ಗೃಹಸ್ಥರೇ. ಈ ವ್ಯಕ್ತಿಗಳು ಅಧಿಕಾರಿಯೆಂದು ಪ್ರಾಪ್ತವಾಗುವ ಕಾಯಿದೇಶೀರ ಕರ್ತವ್ಯಗಳನ್ನೆಲ್ಲ ಪಾರಗಾಣಿಸಲು ಪ್ರಾಮಾಣಿಕತನದಿಂದ ಮಾಡಿಯಾರೆಂದು ಮತ್ತು ಅವರ ಹೇತುವಾದರೂ ಇಷ್ಟಕ್ಕೇ ನಿಯಂತ್ರಿತವಾಗಿರುವದೆಂದು ಎಣಿಸಲು ನಾನು ಸಿದ್ಧನಿದ್ದೇನೆ. ನಾನಾದರೋ, ಪ್ರಚಲಿತ ರಾಜ್ಯಪದ್ಧತಿಯಲ್ಲಿ ಅಧಿಕಾರಪ್ರಾಪ್ತಿಯಾಗುವವರೆಗೆ ದೀರ್ಘ ವಿಚಾರ ಮಾಡುವವನಿದ್ದೆನಾದರೂ, ಅಧಿಕಾರ ದೊರೆತ ಮೇಲೆ, ನಾನಾದರೂ ಈ ಅಧಿಕಾರಿಗಳಂತೆಯೇ ಹೆಚ್ಚು-ಕಡಿಮೆ ವರ್ತಿಸುತ್ತಿದ್ದೆನು. ಆದರಿಂದ, ವ್ಯಕ್ತಿಗಳ ಬಗ್ಗೆ ನನ್ನ ವಿಶೇಷ ಹೇಳಿಕೆಯಿಲ್ಲ.

ಈ ಖಟ್ಲೆಯಲ್ಲಿ ಅನೇಕ ಅಕ್ರಮಗಳಿವೆ. ನಾನು ರಾಜದ್ರೋಹ ಪತ್ರಿಕೆಯ ಮುದ್ರಣದ ಆರೋಪಿಯು. ಪ್ರಕಾಶಕರು ಇನ್ನೊಬ್ಬರಿದ್ದು, ನನ್ನ ಮೇಲೆ ಮಾತ್ರ ಖಟ್ಲೆ ಮಾಡಿದ್ದು, ಪ್ರಥಮ ದರ್ಶನದ ಅಕ್ರಮವು. ರಾಜದ್ರೋಹ ಪತ್ರಿಕೆಗಳ ಮುದ್ರಣಕ್ಕಿಂತ ಪ್ರಕಾಶನವು ವಿಶೇಷ ಅಪರಾಧವೆಂದು ಎಣಿಸುವ ಪ್ರಘಾತವಿದೆ. ಇದರಂತೆ, ನನ್ನೊಡನೆ, ಅಂದರೆ, ಮುದ್ರಕನೊಡನೆ ಪ್ರಕಾಶಕರನ್ನೂ ಖಟ್ಲೆಯಲ್ಲಿ ಸೇರಿಸಬೇಕಾಗಿತ್ತು. ಲೇಖಕರಿಗೂ, ಪ್ರಕಾಶಕರಿಗೂ ಸಿಗುವ [illegible] ಶಿಕ್ಷೆಯಿಂದಲೇ ಮುದ್ರಕರು ಪಾರಾಗಿರುವರು. ಕೆಲ ಖಟ್ಲೆಗಳಲ್ಲಂತು ಮುದ್ರಕರು ನಿರಪರಾಧಿಗಳಾಗಿ, ಏನೂ ಶಾಸನ ಹೊಂದದೆ, [illegible]ದವರಿರುವರು. ಅವರೂ, ಈ ಪತ್ರಿಕೆಯ ಪ್ರಕಾಶಕರ ಮೇಲೆ ಇನ್ನೂ ಖಟ್ಲೆಯಾಗಿಲ್ಲೆಂದು ನನ್ನ ಅನುಮಾನ. ಯಾಕಂದರೆ, ಅವರ ಮೇಲೆ ಇಲಾಜು ನಡೆದದ್ದಿದ್ದರೆ, ಈ ಖಟ್ಲೆಯಲ್ಲಿ ಮುದ್ರಕರೊಡನೆ, ಅವರು ನ್ಯಾಯಾಸನದ ಮುಂದೆ ಹಾಜರಿರುತ್ತಿದ್ದರು. ಒಬ್ಬರು ಒಂದು ಅಪರಾಧ ಮಾಡಿದರೆ, ಅದು ಶಾಸನಾರ್ಹವಾಗುತ್ತದೆ, ಮತ್ತೊಬ್ಬರು ಅದನ್ನೇ ಉಗ್ರ ಸ್ವರೂಪದಲ್ಲಿ ಆಚರಿಸಿದರೂ, ಶಾಸನಾರ್ಹವಾಗುವದಿಲ್ಲ. ಅಧಿಕಾರಿಗಳ ವರ್ತನದಿಂದ ನನ್ನ ಈ ನಂಬಿಗೆಯಾಗಿದೆ. ಸರಕಾರಕ್ಕೆ ಮುದ್ರಕನೆಂಬ ನೆವ ಮಾಡಿ, ವಿಶಿಷ್ಟ ವ್ಯಕ್ತಿಯನ್ನೇ ದಂಡಿಸುವ ಇರಾದೆಯಿತ್ತೆಂಬುದು ಸ್ಪಷ್ಟವಾಗುತ್ತದೆ. ಸರಕಾರದ ಕಟಾಕ್ಷವು ವ್ಯಕ್ತಿಗಳ ಮೇಲೆ, ಹೊರತು ಅಪರಾಧಿಗಳ ಮೇಲಲ್ಲವೆಂಬುದೂ ಇದರ ಮೇಲಿಂದ ಸ್ಪಷ್ಟವಾಗುತ್ತದೆ. ವಿಶಿಷ್ಟ ವ್ಯಕ್ತಿಗಳ ಮೇಲೆಯೇ ಕಣ್ಣಿಡುವ ಧೋರಣದ ಬಗ್ಗೆ ನನ್ನ ಆಕ್ಷೇಪವಿಲ್ಲ. ಆದರೆ, ಅದರಿಂದ ಹಾಸ್ಯಾಸ್ಪದ ಪರಿಣಾಮಗಳು ಮಾತ್ರ ಸಂಭವಿಸದಿರುವದಿಲ್ಲ. ನನ್ನ ಮೇಲೆ ನಡಿಸಿದ ಎರಡು ಖಟ್ಲೆಗಳಲ್ಲಿ ಇಂಥ ಪ್ರಕಾರಗಳು ಒದಗಿಬಂದವು. ಫಿರ್ಯಾದಿ ಪಕ್ಷವು ಬಲು ದೊಡ್ಡ ಸಾಹಸ ಮಾಡಿ, ಅಗ್ನಿಪ್ರಯೋಗ, ದರೋಡೆ, ಖೂನಿ, ಮೊದಲಾದ ಆರೋಪಗಳನ್ನು ನನ್ನ ಮೇಲೆ ಹೊರಿಸಿತು. ನಾನೇನು ಬಚಾವು ಮಾಡಲಿಲ್ಲ. ೩ ತಿಂಗಳುಗಳ ವರೆಗೆ ತನಿಖಿ ನಡೆಯಿತು. ನಾನು ದೋಷಮುಕ್ತನಾಗಿ ಬಿಡುಗಡೆ ಹೊಂದಿದೆ. ಬಳಿಕ, ನನ್ನ ಮೇಲೆ ರಾಜದ್ರೋಹಿ ಲೇಖ ಬರೆದ ಆರೋಪ ಹಾಕಿ, ನ್ಯಾಯಾಸನಕ್ಕೆ ಎಳೆತಂದರು. ಆ ಬಗ್ಗೆ ಫಿರ್ಯಾದಿ ದಾಖಲ ಮಾಡಲು ಮಂಜೂರಿ ಪಡೆದಾಯಿತು, ನನಗೆ ಸೆರೆಹಿಡಿದಾಯಿತು, ಶಾಸ್ತ್ರದಂತೆ, ತನಿಖಿಯೂ ನಡೆಯಿತು, ಕಟ್ಟಕಡೆಗೆ, ನಾನೇ ಆಕ್ಷೇಪಾರ್ಹ ಲೇಖದ ಲೇಖಕನೆಂಬ ಬಗ್ಗೆ ಎಳ್ಳಷ್ಟು ಸಹ ಪುರಾವೆ ದೊರೆಯದೆ, ಫಿರ್ಯಾದಿಯು ಸಹ ಮಾರೆ ಮಾಡಿಕೊಂಡು, ಫಿರ್ಯಾದನ್ನು ಮರಳಿ ಪಡೆಕೊಳ್ಳಬೇಕಾಯಿತು.

ರಾಜದ್ರೋಹವೆಂದರೆ, ನಾಗರಿಕರು ಸರಕಾರದ ವಿರುದ್ಧ ಮಾಡುವ ಗುನ್ಹೆಯು. ಈ ಪ್ರಕರಣದಲ್ಲಿ ಸರಕಾರವು ಲುಕ್ಸಾನಿ ಹೊಂದಿದ ಪಕ್ಷವು. ನಾಗರಿಕರ ಈ ಅಪರಾಧದ ಚೌಕಶಿಯನ್ನು ಮಾಡಲಿಕ್ಕೆ ಯಾರು ಪಾತ್ರರು? ನಾಗರಿಕನಾಗಲಿ, ಸರಕಾರವಾಗಲಿ ಇಂಥ ಖಟ್ಲೆಗಳ ತೀರ್ಪು ಕೊಡುವದು ಅನ್ಯಾಯವಾಗುವದು. ಅಪರಾಧಿಯಾಗಲಿ, ಲುಕ್ಸಾನು ಹೊಂದಿದವನಾಗಲಿ ಜಡ್ಜೋ ನ್ಯಾಯಾಧೀಶನಾಗಲಾರನು. ಆದರ ಹಿಂದುಸ್ಥಾನದಲ್ಲಿ ಈ ತರದ ಖಟ್ಲೆಗಳನ್ನು ಸರಕಾರವೇ ತನ್ನ ನೌಕರರ ಮುಖಾಂತರ ನಿರ್ಣಯ ಮಾಡಿಸಿ, ನ್ಯಾಯದ ಮೂಲಭೂತ ತತ್ವವನ್ನೇ ಧಿಕ್ಕರಿಸುತ್ತದೆ. ನ್ಯಾಯಾಸನಪ್ರತಿಷ್ಠ ಸಂಗತಿಗಳಲ್ಲೆಲ್ಲ ನ್ಯಾಯಾಧೀಶರು ತಟಸ್ಥವೃತ್ತಿಯವರಿರಬೇಕೆಂಬುದು ಸ್ವಯಂಸಿದ್ಧವು. ರಾಜದ್ರೋಹದ ಖಟ್ಲೆಗಳಲ್ಲಿ ಪ್ರತ್ಯಕ್ಷ ಫಿರ್ಯಾದಿಯು ಸರಕಾರವೇ. ನಾಗರಿಕರ ನಿಯಂತ್ರಣವಿಲ್ಲದ, ಸರಕಾರದ ಪ್ರತಿನಿಧಿಯಾಗಲಿ, ನೌಕರನಾಗಲಿ, ತೀರ್ಪು ಕೊಟ್ಟರೆ, ಫಿರ್ಯಾದಿಯೇ ನ್ಯಾಯಮೂರ್ತಿಯಾಗುತ್ತಾನೆಂತಲೂ, ಇಂಥ ತೀರ್ಪು ನ್ಯಾಯವೆಂದು ಅಥವಾ ಸುಧಾರಿಸಿದ ರಾಷ್ಟ್ರಗಳ ಎಣಿಕೆಯಂತೆ, ತೀರ್ಪೆಂದು ಹೇಳಿಸಿಕೊಳ್ಳಲಿಕ್ಕೆ ಅನರ್ಹವೆಂದೂ ನಾನು ಸ್ಪಷ್ಟವಾಗಿ ಹೇಳಬೇಕಾದೀತು. ಅದರೊಳಗೂ ಪರಸ್ಪರ ಅಧಿಕಾರಯುತರಾದಾಗ, ಇಂಥ ಪ್ರಕಾರಗಳು ವಿಶೇಷವಾಗಿ ಸಂಭವಿಸುತ್ತವೆ.

ಮತ್ತೊಂದು ಅಕ್ರಮವನ್ನು ಇಲ್ಲಿ ನಾನು ವಿವರಿಸಬೇಕಾಗಿದೆ. ರಾಜದ್ರೋಹದ ಪ್ರಕರಣಗಳನ್ನು ಸೇಶನ್ಸ ಜಡ್ಜರಿಗೆ ತೀರ್ಪಿಗಾಗಿ ಒಪ್ಪಿಸುವ ಪ್ರಘಾತವಿದೆ. ಸೇಶನ್ಸ ಜಡ್ಜರು ಅಮಲಬಜಾವಣಿ ಖಾತೆಗಳಿಂದ ಸ್ವಲ್ಪ ಸ್ವತಂತ್ರರಿರುತ್ತಾರೆಂದು ಹೇಳಬಹುದು. ಯಾಕಂದರೆ, ಬರೇ ನ್ಯಾಯದಾನದ ಕೆಲಸವನ್ನು ಮಾತ್ರ, ಅವರು ಮಾಡುವರಿರುತ್ತಾರೆ. ಅಮಲಬಜಾವಣಿ ಖಾತೆಗಳಿಗೆ ಯಾವದೇ ಪ್ರಕಾರದಿಂದ ಅವರು ಸಂಬಂಧಿಸಿರುವದಿಲ್ಲ. ಈ ಸ್ವತಂತ್ರತೆಯ ಪರದೆಯು ಸಹ, ನನ್ನ ಪ್ರಕರಣದಲ್ಲಿ ಕಳೆದೋರುವದಿಲ್ಲ. ಯಾಕಂದರೆ, ರಾಜದ್ರೋಹ ಪ್ರಕರಣಗಳನ್ನು ವಿಚಾರಿಸಲು ಮೆಜಿಸ್ಟ್ರೇಟರಿಗೆ ಜಾದಾ ಅಧಿಕಾರ ಕೊಡಲ್ಪಟ್ಟರೆ ಸೇಶನ್ಸ ಜಡ್ಜರಿಗೆ ರಾಜದ್ರೋಹ ಖಟ್ಲೆಗಳನ್ನು ವಿಚಾರಿಸಲು ಅನುವಾಗದಿದ್ದರೆ, ಅಷ್ಟು ಪ್ರಕರಣಗಳು ಉಪಸ್ಥಿತ ಹೊಂದಿದ್ದರೆ ಅಥವಾ ಈ ಖಟ್ಲೆಗಳನ್ನು ಲಗುಲಗುಯಿಂದ ವಿಚಾರಿಸುವದಿದ್ದಲ್ಲಿ ಈ ಅಧಿಕಾರವನ್ನು ಮೆಜಿಸ್ಟ್ರೇಟರಿಗೆ ಕೊಟ್ಟ ಬಗ್ಗೆ ಏನಾದರೂ ಸಮರ್ಥನೆ ಮಾಡಬಹುದಿತ್ತು. ಈ ಎರಡೂ ಕಾರಣಗಳು ಆಗಲೂ ಇದ್ದಿಲ್ಲ, ಈಗಲೂ ಇಲ್ಲ. ಆದರೂ, ಮೆಜಿಸ್ಟ್ರೇಟರ ರಾಜದ್ರೋಹ ಖಟ್ಲೆಗಳ ವಿಚಾರಣೆಯ ಅಧಿಕಾರವು ಸಾಗಿದೆ. ಸರಕಾರವು ಸ್ವತಂತ್ರ ನ್ಯಾಯಾಸನಗಳಿಗುಚಿತವಾದ ಅಧಿಕಾರಗಳನ್ನು ಜುಲುಮೆಯಿಂದ, ಬುದ್ಧ್ಯಾ ಕಸುಕೊಂಡು, ಅಮಲಬಜಾವಣಿ ಅಧಿಕಾರಿಗಳಿಗರ್ಪಿಸಿದೆಂದು ಹೇಳಬೇಕಾಗಿದೆ. ಇದರ ಮೇಲಿಂದ ಇದೊಂದೇ ಅನುಮಾನವು ಹೊರಡುತ್ತದೆ. ರಾಜದ್ರೋಹ ಪ್ರಕರಣಗಳಲ್ಲಿ ಅಧಿಕಾರದ ಸ್ಥಾನಾಂತರವು ವಿಶೇಷ ಗರ್ಹಣೀಯವು. ಯಾಕಂದರೆ, ಸರಕಾರದ ಅಮಲಬಜಾವಣಿ ಅಂಗವೇ ಈ ಖಟ್ಲೆಗಳಲ್ಲಿ ಪ್ರತ್ಯಕ್ಷ ಪಕ್ಷಗಾರ ರೂಪದಿಂದ ಸೇರಿಕೊಂಡಿರುತ್ತದೆ.

ಈ ಅಕ್ರಮ ಪದ್ಧತಿಯನ್ನು ತರ್ಕಶಾಸ್ತ್ರದೃಷ್ಟಿಯಿಂದ ವಿಚಾರಿಸುವ. ನಾಗರಿಕನ ಮೇಲೆ ರಾಜದ್ರೋಹ ಮಾಡಿದ ಆರೋಪವು ಹೊರಡುತ್ತದೆ. ಖಟ್ಲೆ ಮಂಜೂರಿ ಬಗ್ಗೆ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಶಿಫಾರಸು ಮಾಡುತ್ತಾರೆ; ಪ್ರಾಂತಿಕ ಸರಕಾರವು ಮಂಜೂರಿಯನ್ನೀಯುತ್ತದೆ. ಪೋಲೀಸರು ಫಿರ್ಯಾದನ್ನು ದಾಖಲ ಮಾಡುತ್ತಾರೆ; ಮೆಜಿಸ್ಟ್ರೇಟರು ವಾರಂಟು ಹೊರಡಿಸಿ, ಆರೋಪಿಯನ್ನು ಸೆರೆಹಿಡಿದು, ತನಿಖಿ ನಡಿಸಿ, ಹಾಗೆಯೇ ರಾಜದ್ರೋಹದ ಅಪರಾಧವನ್ನು ಆರೋಪಿಯು ಮಾಡಿದ್ದಾನೆಂದು ತೀರ್ಪು ಕೊಡುತ್ತಾರೆ, ಒಟ್ಟಂಟಿಗೆ ಮೆಜಿಸ್ಟ್ರೇಟನ ಅಭಿಪ್ರಾಯದಿಂದಲೇ ಆರೋಪಿಯು ಶಾಸನಹೊಂದಲು ಯೋಗ್ಯನೆಂದು ಎಣಿಸಲ್ಪಡುತ್ತಾನೆ, ಮೇಲಾಗಿ, ಈ ಮೆಜಿಸ್ಟ್ರೇಟರು ಸರಕಾರದ ನೌಕರರು. ಇದೇ ಸರಕಾರದ ವಿರುದ್ಧ ತಿರಸ್ಕಾರ ಬುದ್ಧಿಯನ್ನು ಜನಿಸಲು, ಆರೋಪಿಯು ಯತ್ನಿಸಿದನೆಂದು ಆರೋಪಿಯ ಮೇಲೆ ದೂರು. ತಾನೇನು ಅಸಂತೋಷವನ್ನು ಜನಿಸಿಲ್ಲ, ಎಂದು ಆರೋಪಿಯು ಹೇಳಿಕೆಯಿದ್ದರೂ, ಅದನ್ನು ಅವನು ಯಾರಿಗೆ ಸಿದ್ಧಮಾಡಿಕೊಡುವದು? ಅಥವಾ, ಅವನು ಆ ಬಗ್ಗೆ ಯಾರ ಮನವೊಲಿಸುವದು? ಅವನ ಮೇಲೆ ತೀರ್ಪು ಕೊಡಲು ನ್ಯಾಯಾಸನ ಅಧಿಷ್ಠಿತನಾದ ತನ್ನ ಪ್ರತಿಪಕ್ಷಿಗೇ ಅಲ್ಲವೇ? ಇಂಥ ನ್ಯಾಯದ ಕಾರಭಾರದಲ್ಲಿ ಆರೋಪಿಯು ಅಪರಾಧಿಯಾಗಿರಬಹುದೆಂಬುದರಿಂದ ಮಾತ್ರ ಶಿಕ್ಷೆಯಾಗುವದಿಲ್ಲ. ಆದರೆ, ಬಿನ್ನಾಭಿಪ್ರಾಯವುಳ್ಳ ಸರಕಾರದ ಹತ್ತರ ತನ್ನ ಇಚ್ಛೆಯನ್ನು ಅಮಲಬಜಾವಣಿ ಮಾಡುವ ಸತ್ತಾಬಲವಿದ್ದದರಿಂದಲೇ ಆರೋಪಿಯು ಶಿಕ್ಷೆಗೆ ಗುರಿಯಾಗುತ್ತಾನೆ. ರಾಜದ್ರೋಹದ ಪ್ರಕರಣಗಳನ್ನಾಗಲಿ, ಸರಕಾರದ ವಿರುದ್ಧ ಇರುವ ಇತರೇ ಅಪರಾಧಗಳ ಚೌಕಶಿಗಳನ್ನಾಗಲಿ, ನಿಷ್ಪಕ್ಷಪಾತದಿಂದ ನಿರ್ಣಯಿಸಬೇಕಾದರೆ, ನ್ಯಾಯಾಸನವು, ನ್ಯಾಯವರ್ತಿ ಹಾಗು ನಾಗರಿಕ ಇವರಿಂದ ನಿಶ್ಚಿತವಾಗಿರಬೇಕು. ಈ ಮುದ್ದೆಯ ಬಗ್ಗೆ ಇಲ್ಲಿ ವಿಶೇಷ ವಿಸ್ತಾರ ಮಾಡುವ ಅವಶ್ಯಕತೆಯಿಲ್ಲ.

ರಾಜದ್ರೋಹದ ಆರೋಪದ ಬಗ್ಗೆ ಅಪರಾಧಿಯೆಂದು ಹೇಳುವಂಥವನು ನಾನು. ಅದನ್ನು ನಾನು ಯಾವ ವಿಶಿಷ್ಟ ಕೃತ್ಯದಿಂದ ಆಚರಿಸಿರುವೆನು, ಎಂದು ನನಗೆ ಕೇಳಿದರೆ, ನಾನು ಸ್ಪಷ್ಟೀಕರಿಸಲಾರೆ. ವಿಶಿಷ್ಟ ಕೃತ್ಯವನ್ನು ವಿಶಿಷ್ಟ ಕಾಲದಲ್ಲಿ ಆಚರಿಸುವಾಗ, ನಾನು ಮಾಡಿದ ಹೇತು ಹಾಗು ಪ್ರಯುಕ್ತ ಇವುಗಳ ಮೇಲೆ ಇದು ಅವಲಂಬಿಸಿದೆ. ಪುನಃ ಪುನಃ ವಿಚಾರಿಸಿ, ಸ್ಥೂಲಮಾನದಿಂದ ಪ್ರಚಲಿತ ರಾಜ್ಯಪದ್ಧತಿಯು ದೇಶಹಿತವಿಘಾತಕವೆಂಬ ನಾವು ಸಿದ್ಧಾಂತ ಹೊಡಿದಾಗ, ನಮಗೆ ಬರೇ ಮೂರು ಉಪಾಯಗಳಿವೆ. ಸರಕಾರವು ಮಾಡಿದ ಪ್ರತಿ ಒಂದು ಕೃತ್ಯವನ್ನು ಸರಸಾ ಮನ್ನಿಸಿ ನಡೆಯುವದು ಮೊದಲನೇದು, ರಕ್ಷ

ಮಾತ ಅಥವಾ ದೊಂಬಿಯೆಬ್ಬಿಸಿ, ಪ್ರತ್ಯಕ್ಷ ಯಾ ಗುಪ್ತ ದಂಗೆಯನ್ನೆಬ್ಬಿಸುವದು ಎರಡನೇದು. ಶಾಂತತಾಮಯ, ಅಹಿಂಸಾಮಯ, ಶಿಸ್ತಿನ ಕಾಯಿದೆಭಂಗಕ್ಕಾಗಿ ದೇಶವನ್ನು ತಯಾರಿಸುವದು ಮೂರನೇ ಉಪಾಯವು. ಮಾನಧನ ಭಾರತೀಯನಿಗೆ ಮೊದಲನೇ ಉಪಾಯವು ಅಶಕ್ಯವು. ಎರಡನೇ ಉಪಾಯವು ನನಗೆ ಅಶಕ್ಯವು. ಯಾಕಂದರೆ, ನಾನು ಕಾಂಗ್ರೆಸ ಧ್ಯೇಯವನ್ನು ಮನ್ನಿಸಿದವನಿದ್ದೇನೆ. ಹಿಂಸೆಯನ್ನು ಯಾವದೇ ರೀತಿಯಿಂದ ಆಚರಿಸಕೂಡದೆಂದು ಕಾಂಗ್ರೆಸ ಧ್ಯೇಯವಿದೆ. ಉಳಿದದ್ದು ಮೂರನೇ ಉಪಾಯವು. ಶಾಂತತಾಮಯ ರಾಜಕೀಯ ವಿಮೋಚನಕ್ಕಾಗಿ ಇದೊಂದೇ ಉಪಾಯವಿದೆ. ಇತ್ಯರ್ಥ, ಸ್ತುತಿಪಾಠಕರ ಮಾರ್ಗವು ಮೊದಲನೇದು. ಎರಡನೇದು ಹಲತಿರುಕರದು ವಿಚಾರ. ವಿವೇಕಿ ಮಾನವರಿಗೆಲ್ಲ ಅತಿ ಯೋಗ್ಯ ಮಾರ್ಗವು ಮೂರನೇದು. ರಾಜದ್ರೋಹವೆಂದರೆ, ಈ ಮೂರನೇ ಉಪಾಯವೇ ಅಲ್ಲವೇ? ದೇಶದೊಳಗಿನ ಅನೇಕ ದಾಸಪ್ರವರು, ಈ ಲೋಕೋತ್ತರ ಪುರುಷನು, (ಮಹಾತ್ಮರು) ಇಂದಿಗೆ ಅಸಹಕಾರ ಪ್ರಚಾರಕರೇ. ಯಾಕಂದರೆ ಸರಕಾರವು ರಾಷ್ಟ್ರೇಚ್ಛೆಯಂತೆ ನಡೆಯುವದಿಲ್ಲೆಂದು ಅವರ ಮನೋನಿರ್ಧಾರವಾಗಿದೆ. ಸರಕಾರವು ಲೋಕಮತಾನುವರ್ತಿಯಾದಲ್ಲಿ, ಅಸಂತೋಷಕ್ಕೆ ಇಂಬು ದೊರೆಯಲಿಕ್ಕಿಲ್ಲ. ರಾಜದ್ರೋಹವನ್ನು ನಿರ್ಮೂಲಿಸಬೇಕಾದರೆ, ಅಸಂತೋಷಪ್ರಚಾರಕರಿಗೆ ದಂಡಿಸಿ ಫಲವಿಲ್ಲ. ಸರಕಾರಕ್ಕೆ ಗಂಡಾಂತರಪ್ರದವಾಗಿರುವಂಥ ಪ್ರಚಾರವನ್ನು ಹಿಂದಿನ ಕ್ರಿಮಿನಲ್ ಸಂಹಿತೆಯನ್ನೇ ಬದಲು ಮಾಡಬೇಕು. ಈ ಬದಲಾವಣೆಯು ಒದಗದವರೆಗೆ ಸರಕಾರದ ನಿಜ ರೂಪವನ್ನು ಪ್ರಜೆಗಳಿಗೆ ತಿಳಿಸಬೇಕು, ಸರಕಾರವು ಕಣ್ದೆರೆಯುವಂತೆ ಶಿಸ್ತಿನ, ಕಾಯಿದೆಭಂಗದ ತಯಾರಿಗಾಗಿ ಪ್ರಯತ್ನಿಸುವದೇ ಪ್ರತಿ ಒಬ್ಬ ಪ್ರಾಮಾಣಿಕ ನಾಗರಿಕನ ಅಧಿಕಾರವು ಕರ್ತವ್ಯವೂ ಆದೆ. ಅವರು ತಮ್ಮ ಪ್ರಾಮಾಣಿಕ ಮತಕ್ಕಾಗಿ ಆತ್ಮಕ್ಲೇಶವನ್ನು ಸಹಿಸಬೇಕು. ಅವರು ಅನುಸರಿಸಿದ ಧರ್ಮಮಾರ್ಗವೇ. ಸರಕಾರವು ಕಾಯದಾ ಪರ್ವ ಸಮರ್ಥನಿದ್ದು ಅದರೊಂದಿಗೆ ಅಹಿಂಸಾ ತತ್ವದಂತೆ ಕಾದಾಡುವ ಉಪಾಯವು ಇದೊಂದೇ.

ಇದೇನೂ ಇರಲಿ. ಭಿನ್ನ ಮತಪ್ರಿಯರಿಗೆ ಕಾಯಿಕ ಉಪದ್ರವ ಕೊಟ್ಟು ದಂಡಿಸುವ ಯೋಜನೆಯು ನಮ್ಮ ಪುರಾತನ ಕಾಡು ಪದ್ಧತಿಯ ಅವಶೇಷವು ನಮ್ಮ ಪಶುಸ್ಥಿತಿಯ ದ್ಯೋತಕವು. ನಮ್ಮ ಪ್ರಾಮಾಣಿಕ ಮತಗಳನ್ನು ಪಶುಶಕ್ತಿಯಿಂದ ಬಗ್ಗುಬಡಿಯಲು ಯಾವದೇ ಸರಕಾರವು ಇನ್ನೂ ವರೆಗೆ ಸಮರ್ಥವಾಗಲಿಲ್ಲ. ಪ್ರಜಾಪೀಡಕರಾಗಬೇಕಾದ ಸರಕಾರಗಳಿಗೆ ಇತಿಹಾಸದಿಂದ ಬೋಧ ಪಡೆಯುವ ಇರಾದೆ ಇಲ್ಲ. ಅಧಿಕಾರದಿಂದ ಅಂಧರಾಗಿರುವದರಿಂದ, ಚಳವಳಿಯೊಳಗಿನ ಆತ್ಮವು ಅವರಿಗೆ ಕಾಣುವದಿಲ್ಲ ಅವರಿಗೆ ಕಾಣುವದು ಶರೀರವು. ಅದನ್ನು ಹಿಡಿದು ಬೇಕಾದಲ್ಲಿ ಒಟ್ಟಬಿಡುತ್ತಾರೆ. ಅವರು ಮಾಡುವ ಉಗಬುಗೆಯೇ, ಹಲತಿರುಕತನವೇ ಅವರ ಸ್ವಭಾವದೋಷವನ್ನು ಹೊರಗೆಡಹುತ್ತದೆ. ತಮ್ಮ ಮತಗಳಿಗಾಗಿ ಕ್ಲೇಶ ಪಡುವವರಿಗೆ ಸಹ ಸಾಮಾನ್ಯ ಘೋರಕರ್ಮಿಗಳಂತೆ, ಸುಧಾರಿಸಿದ ಸರಕಾರವು ನಡಿಸುವದು ವಿಷಾದಕರವು. ಇಂಥ ಪುರುಷರ ಮನೋಭೂಮಿಗಳು ಈ ಮಾನಹಾನಿಕರ ಪ್ರಕಾರಗಳಿಂದ ಬದಲಾಗುವವೆಂದು ಅಥವಾ ಹೊಸ ಮಂದಿಗಳು ಈ ಕಾರ್ಯದಲ್ಲಿ ಪ್ರವೇಶಿಸರೆಂದು ಸರಕಾರದ ಇನ್ನೂ ವಿಚಾರವಿದ್ದಂತೆ ತೋರುತ್ತದೆ. ಹೀಗಿದ್ದರೆ, ಸರಕಾರವು ಎಷ್ಟು ಮಂದಿಗಳನ್ನು ಮತಾಂತರ ಮಾಡಿತೆಂದು ಅಂದಾಜು ಮಾಡಿಕೊಂಡು ಮುಂದರಿಯುವದು ಲೇಸು. ಉತ್ಕ್ರಾಂತಿ ಮಾರ್ಗವನ್ನು ಅನುಸರಿಸುವವರಿಗೆ ಆತ್ಮಕ್ಲೇಶವು ಮಾಡಿಕೆಯಂತೆ ಒದಗುತ್ತದೆ. ಕ್ಲೇಶ ಸಹಿಸುವದು ಚೈತನ್ಯಹೀನನಾದಲ್ಲಿ ಆ ಮಾರ್ಗವನ್ನು ಆಕ್ರಮಿಸಲು ಅವನು ಅಯೋಗ್ಯನೆಂಬದು ಸ್ಪಷ್ಟವು. ಕ್ಲೇಶವು ಪಡದೆ ಪ್ರಾಯಶ್ಚಿತ್ತರೂಪದಿಂದ ಅಥವಾ ಅನುಭವವನ್ನಿತ್ತು, ವಿಶೇಷ ಸಾಮರ್ಥ್ಯ ಬೆಳಸುವ ಉಪಾಯರೂಪದಿಂದ ಒದಗುತ್ತದೆ. ಮೊದಲನೇ ಪ್ರಸಂಗದಲ್ಲಿ ಪಶ್ಚಾತ್ತಾಪವಾಗಿ, ಆತ್ಮಶುದ್ಧಿಯಾಗಿ, ಅವನು ಲಾಭಹೊಂದುತ್ತಾನೆ. ಎರಡನೇದಿದ್ದಲ್ಲಿ ಕ್ಲೇಶದಿಂದ ಸಾಮರ್ಥ್ಯ ಬೆಳೆದು, ಹೊಸ ಹುರುಪಿನಿಂದ ಅವನು ಮುಂದರಿಯುತ್ತಾನೆ. ಕ್ಲೇಶದ ಆಘಾತವೆಲ್ಲ ಶರೀರದ ಮೇಲೆ, ಹೊರತು, ಆತ್ಮಕ್ಕೆ ಇಲ್ಲ. ಕ್ಲೇಶದಿಂದ ಅನುಭವವನ್ನೂ, ಸಾಮರ್ಥ್ಯವನ್ನೂ ಹೀರಿಕೊಳ್ಳುವ ಕಲೆಯು ಮಾತ್ರ ಅಂತರ್ಯಾಮಿ ಆತ್ಮನದು. ಆತ್ಮಕ್ಲೇಶ, ಸ್ವಾರ್ಥತ್ಯಾಗ, ಈ ಯೋಜನೆಗಳಿಂದಲೇ ಪರಮಾತ್ಮನು ಸೃಷ್ಟಿಯಲ್ಲಿ ತನ್ನ ಕಾರ್ಯವನ್ನು ಸಾಧಿಸುತ್ತಾನೆ. ಇವು ಸೃಷ್ಟಿಯೊಳಗಿನ ಮಾಡಿಕೆಯ ಕ್ರಮಗಳು. ಪರಮಾತ್ಮನಿಗೆ ಇದೆಲ್ಲ ಆನಂದಮಯ ಲೀಲೆಯು. ಈಶಪ್ರೀತ್ಯರ್ಥವಾಗಿ, ಒದಗುವವೆಲ್ಲ ಪರಮಾತ್ಮನ ಕೃಪಾಪ್ರಸಾದವೆಂದು ಈ ಆತ್ಮಕ್ಲೇಶವನ್ನು ಸ್ವಾಗತೀಕರಿಸುವದು.

ಉಪಕಾರಸ್ಮರಣೆ.

ಕಾನಡಾ ಜಿಲ್ಹೆಯ ಮತದಾರರಲ್ಲಿ ಬಹುಜನರ ಸಹಾನುಭೂತಿಯಿಂದಲೂ, ಉದಾರ ಆಶ್ರಯದಿಂದಲೂ ಹೆಚ್. ಸಂಖ್ಯಾಕ ಮತದಿಂದ ನಾನು ಮುಂಬಯಿ ಕಾಯದೆ ಕೌನ್ಸಿಲಕ್ಕೆ ಮೆಂಬರನಾಗಿ ಆರಿಸಿ ಬಂದಿದ್ದೇನೆ. ಈ ಸಂಗತಿಯನ್ನು ಮತದಾರ ಬಂಧು-ಭಗಿನಿಯರಿಗೂ, ಹಿತಚಿಂತಕರ ಬಂಧು-ಭಗಿನಿಯರಿಗೂ ತಿಳಿಸಲಿಕ್ಕೆ ತುಂಬಾ ಸಂತೋಷವಾಗುತ್ತದೆ. ಅವರೆಲ್ಲರೂ ನನ್ನಮೇಲೆ ಪ್ರೇಮವಿಟ್ಟು, ನಾನು ಅನುಸರಿಸಿದ ಸ್ವರಾಜ್ಯ ಪಕ್ಷದ ವರ್ಚಸ್ಸನ್ನು ಕಾನಡಾ ಜಿಲ್ಹೆಯಲ್ಲಿ ತುಂಬಾ ಮೆರಿಸಿದ ಬಗ್ಗೆ ಅವರೆಲ್ಲರನ್ನೂ ಕೃತಜ್ಞತಾಪೂರ್ವಕ ಸ್ಮರಿಸುತ್ತೇನೆ. ಕೇವಲ ಪರಾನುಗ್ರಹ ವಾಂಛೆಯಿಂದ ನನ್ನ ಪಕ್ಷಕ್ಕೆ ವಿಜಯಶ್ರೀ ಸಿಗುವ ಬಗ್ಗೆ ಮತದಾರರಲ್ಲಿ ಮತ್ತು ಮತದಾರೇತರರಲ್ಲಿ ಕೆಲವರು ಬಹು ಪ್ರೇಮದಿಂದ, ತಮ್ಮ ಹುದ್ದೆ ಮತ್ತು ಮಾನ್ಯತೆಯ ಕಡೆಗೆ ಸಹ ಲಕ್ಷಿಸದೆ, ಸೇವಾಪರವಾದ ಪೋಲಿಂಗ ಏಜಂಟರ ಕೆಲಸವನ್ನು ಬಹು ದಕ್ಷತೆಯಿಂದ ಬಜಾಯಿಸಿರುವರು. ಕೆಲವರು ಮತಾಧಿಕಾರದ ಮಹತ್ವವನ್ನೂ, ಅದರ ನಿಜಾರ್ಥವನ್ನೂ ಮತದಾರರಲ್ಲಿ ಪ್ರಸಾರಮಾಡಿ ಅವರು ಸ್ವತಂತ್ರ ರೀತಿ ಮತ ಕೊಡುವ ಹಾಗೆ ಮತದಾರ ವರ್ಗದಲ್ಲಿ ಜಾಗ್ರತೆಯನ್ನುಂಟುಮಾಡಲಿಕ್ಕೆ ಹೇರಳ ದುಡಿದಿರುವರು. ಇವರೆಲ್ಲರ ಹೆಸರನ್ನು ಇದರಲ್ಲಿ ಕೊಡಲಿಕ್ಕೆ ಲೇಖನವಿಸ್ತಾರದ ಭೀತಿಯಿಂದ ಕೊಡದೆ, ನನ್ನ ಅಮಲಾಂತಃಕರಣದ ಪಟದಲ್ಲಿ ಅವರ ಹೆಸರುಗಳನ್ನೆಲ್ಲಾ ಸುವರ್ಣಾಕ್ಷರದಿಂದ ಬರೆದಿಟ್ಟುಕೊಂಡಿದ್ದೇನೆ. ಇವರೆಲ್ಲರ ಉಪಕಾರವನ್ನು ಶಬ್ದಗಳಿಂದ ಬರೆದು ತೀರಿಸಲಿಕ್ಕೆ ಅಶಕ್ಯವೇ ಸರಿ. ಆದ್ದರಿಂದ, ಎಲ್ಲಾ ಉಪಚಾರಗಳಲ್ಲಿ ಅತಿ ಶ್ರೇಷ್ಠವಾದ ವಂದನೋಪಚಾರದಿಂದ ಅವರನ್ನೆಲ್ಲ ವಂದಿಸಿ, ಇನ್ನು ಮುಂದೆ ಸಹ ನನ್ನ ಕಾರ್ಯದಲ್ಲಿ ನನ್ನನ್ನು ಎತ್ತಿ ಹಿಡಿದು ನನಗೆ ಯಶ ಸಿಗುವ ಹಾಗೆ ಉದಾರ ಸಹಾಯವನ್ನು ಮಾಡಬೇಕಾಗಿ ಅವರಿಗೆಲ್ಲ ವಿನಯಪೂರ್ವಕವಾಗಿ ವಿನಂತಿ ಮಾಡಿ, ಧೈರ್ಯದಿಂದ ದೇಶಸೇವೆ ಮಾಡಲಿಕ್ಕೂ, ನನಗೆ ಪ್ರಾಪ್ತವಾದ ಜವಾಬದಾರಿ ಕೆಲಸವನ್ನು ಜರುಗಿಸಲಿಕ್ಕೂ ಕೂಡಾ ಪರಮೇಶ್ವರನು ಶಕ್ತಿಯನ್ನು ಕೊಡಲೆಂದು ಆತನನ್ನು ಬೇಡಿಕೊಳ್ಳುತ್ತೇನೆ.

ಕೊನ್ನಾವರ, | ಇತಿ
೧೬-೧೧-೨೩ | ಮಂಜನಾಥ ದೇವರ ಭಟ್ಟ ಕರ್ಕಿ.

ಶೇತಕೀ-ಬಿನ್‌ಶೇತಕೀ ಪಿಶಾಚವು!

ಕದ್ರೆಯ ಶ್ರೀ ಮಹಾಮಾಯಾ ಜಾತ್ರೆಯು.

(ಸುಂಕೇರಿಯಿಂದ ಬರೆದುಬಂದದ್ದು.)

ಕಳೆದ ವರುಷ ಹೊಸದಾಗಿ ನಮ್ಮ ಜಿಲ್ಹೆಯಲ್ಲಿ ಉದಿಸ್ಥಿತವಾದ 'ಶೇತಕೀ–ಬಿನ್‌ಶೇತಕೀ' ವಿಚಾರವು ಈ ವರ್ಷ ಬ್ರಹ್ಮರಾಕ್ಷಸನ ಸ್ವರೂಪವನ್ನು ತಾಳಿದೆ. ಮೊನ್ನೆ ಕದ್ರೆಯಲ್ಲಿ ವರ್ಷದ ಮಾಡಿಕೆಯಂತೆ ನೆರೆದ ಶ್ರೀ ಮಹಾಮಾಯಾ ಜಾತ್ರೆಯ ಹೊತ್ತಿನಲ್ಲಿ ಈ ಪಿಶಾಚದ ಸಂಚಾರವಾಗಿ, ಚಿಕ್ಕ ಪುಟ್ಟ ವ್ಯಾಪಾರಕ್ಕಾಗಿ ಜಾತ್ರೆಗೆ ಹೋದ ಬಡ ಹಾಗೂ ಅಜ್ಞಾನದ ಅಂಗಡಿಕಾರರ ಮೇಲೆ ಪ್ರಯೋಗವಾಗಿ, ಸುಮಾರು ೩೫ ರೂಪಾಯಿಗಳನ್ನು ಒಂದೇ ರಾತ್ರಿಯಲ್ಲಿ ಸರಕಾರದ ಭಂಡಾರಕ್ಕೆ ಸೇರಿಸಲಾಯಿತು! ಮಿ। ಹೇಗರವರು ದೊಡ್ಡ ಅಂಗಡಿಗಳಿಗೆ ೦-೮-೦ ಯಂತೆಯೂ, ಸಣ್ಣ ಅಂಗಡಿಗಳಿಗೆ ೦-೨-೬ ಯಂತೆಯೂ ಕರವನ್ನು ಎತ್ತುವರೆ ಸರಕ್ಯುಲರವನ್ನು ತೆಗೆದಿದ್ದಾರಂತೆ! ಕರ ಪಟ್ಟಿಯು ೧ ದಿವಸದ ವರೆಗೆ ಅಂಗಡಿ ಇಟ್ಟುಕೊಂಡವರಿಗೆ ಎಷ್ಟು, ಮತ್ತು ೩-೪ ದಿವಸ ಇಟ್ಟುಕೊಂಡವರಿಗೆ ಎಷ್ಟು, ಇದರ ಬಗ್ಗೆ ಏನೂ ನಿಶ್ಚಿತವಾಗಿ ಗೊತ್ತಿಲ್ಲ! ಕರ ವಸೂಲಿಯು ಅಂಗಡಿಯ ಆಕಾರದ ಮೇಲೋ, ಅಂಗಡಿಯಲ್ಲಾಗುವ ವ್ಯಾಪಾರದ ಮೇಲೋ? ವ್ಯಾಪಾರವೇ ೨-೩ ಆಣೆದಿದ್ದರೆ, ೨ ಆಣೆಯ ಕರವನ್ನು ಅವರು ಹೇಗೆ ಕೊಡಬೇಕು? ಕರವನ್ನು ಜಾತ್ರೆಯಲ್ಲಿ ವ್ಯಾಪಾರ ಮುಗಿಸಿ ತಿರುಗಿ ಹೋಗುವಾಗ ಕೊಡಬೇಕೋ, ಅಥವಾ ಜಾತ್ರೆಯ ಕ್ಷೇತ್ರದಲ್ಲಿ ದಾಖಲ ಆದ ಮಾತ್ರಕ್ಕೆ ಕರಪಟ್ಟಿಯು ಲಾಗು! ಬಡ ಅಂಗಡಿಕಾರರು ವ್ಯಾಪಾರ ಆಗುವ ಮೊದಲೇ ಕರ ಕೊಡುವ ಬಗೆ ಹೇಗೆ? ಹೊಲದಲ್ಲಿಯೇ ಸಾಗುವಳಿಯಾದ ಭತ್ತ, ತೆಂಗು, ಬಾಳೇಹಣ್ಣು ಮೊದಲಾದವುಗಳನ್ನೂ ಜಾತ್ರೆಯಲ್ಲಿ ಮಾರುವದಾದರೆ, ಆವಾಗ ಸಹ ಕರ ವಸೂಲಿಯಾಗುವದೋ ಹೇಗೆ? ಜಿಲ್ಹಾಧಿಕಾರೀ ಉತ್ತರ ಕೊಡಲಿ. ಮಿ। ಹೇಗರು ಈ ಅಪೂರ್ವ ಸರಕ್ಯುಲರವನ್ನು ಯಾವ ಕಾನೂನಿನ ಆಧಾರದಿಂದ ತೆರೆದಿರುವರು? ಜಾಹೀರ ಪ್ರಕಟಣೆಯನ್ನೂ ಮಾಡಿ, ಅವರು ಸ್ಪಷ್ಟೀಕರಿಸುವರೇನು? ಮೇಲೆ ವಿವರಿಸಿದಂತೆ (Land Revenue Code) ದೊಳಗಿನ್ನು ಈ ಕಾಯಿದೆಯ ಸ್ವರೂಪವು ಅನ್ವಿತವಿದ್ದಲ್ಲಿ, ಮಿ। ಹೇಗರು ಕರ ವಸೂಲಮಾಡುವ ಅಧಿಕಾರವನ್ನು ಸರ್ವಜ್ಞರಿದ್ದ (!) ಗ್ರಾಮಸ್ಥರ ಮೇಲೆಯೇ ಒಪ್ಪಿಸುವದೆಂದರೆ, ಅದೂರದರ್ಶಿತನದ ಪರಮಾವಧಿಯಲ್ಲವೇ? ಮಿ। ಹೇಗರಂಥ ಸೂಕ್ಷ್ಮ ನಿರೀಕ್ಷಣ ಮಾಡುವ ಅಧಿಕಾರಿಗಳಿಗೆ ಗ್ರಾಮಸ್ಥರ ಕೈಯಿಂದ ಆಗುವ ಅನ್ಯಾಯದ ಹಾಗೂ ಜುಲುಮೆಯ ಅರಿವು ಇರಲಿಕ್ಕಿಲ್ಲವೇನು? ಇದ್ದೇ ಇರುವದು. ಅಂದಮೇಲೆ ಯಾವ ರೀತಿಯಿಂದಲೂ ಜನರನ್ನೂ ಕಾಡಿ, ಯೇನ ಕೇನ ಪ್ರಕಾರೇಣ ಹಣ ಹುಟ್ಟಿಸಲು ಆಳರಸರು ಪ್ರವೃತ್ತರಾಗಿದ್ದಾರೆಂದು ಯಾರಾದರೂ ಅನುಮಾನಿಸಿದರೆ, ಅದು ಅಯಥಾರ್ಥವಾಗುವದೇನು?

ಕದ್ರೇ ಜಾತ್ರೆಯ ವೇಳೆಯಲ್ಲಿ ಅಂಗಡಿಕಾರರು ಕೂತುಕೊಂಡ ಸರ್ವೇ ನಂಬರು ಅರಣ್ಯ ಖಾತೆಗೆ ಸೇರಿದ್ದದ್ದರಿಂದ 'ಶೇತಕೀ–ಬಿನ್‌ಶೇತಕೀ' ಪಿಶಾಚದ ಕಕ್ಷೆಯೊಳಗಿನದಿದ್ದಿಲ್ಲ! ಅಂದಮೇಲೆ ಮುಲಕಿ ಖಾತೆಯವರು ಕರವನ್ನು ಅಂಗಡಿಕಾರರ ಕಡೆಯಿಂದ ಯಾಕೆ, ಹೇಗೆ, ಎತ್ತಿದರು? ಬೇಕಾದರೆ ಅರಣ್ಯ ಖಾತೆಯೇ ಎತ್ತಬಹುದಾಗಿತ್ತು. ಕದ್ರೇ ಜಾತ್ರೆಯಲ್ಲಿ ಗ್ರಾಮಸ್ಥರು ವ್ಯಾಪಾರ ಆಗುವ ಮೊದಲೇ ಬಡ ಅಂಗಡೀಕಾರರಿಂದ ಕರ ವಸೂಲ ಮಾಡಿದರು! ತೀರ ಸಣ್ಣ ಅಂಗಡಿಗಳಿಂದಲೂ ಕನಿಷ್ಠ ಪಕ್ಷಕ್ಕೆ ೦—೨—೬ಗಳನ್ನೂ ಎತ್ತಿದರು! ನಾವ ತಿಯನ್ನು ಕಡೆಗೆ ಕೊಟ್ಟೇವೆಂದು ಹೇಳಿ, ನಾಟ ಪೊಂದರೇ ಹಣ ಕೇಳಿದರಂತೆ! ಪಾಪ... ಸಗೆದ

ಹೊರತು ಹಣವನ್ನು ಕೊಡಲಿಕ್ಕಿಲ್ಲವೆಂದು ಖಂಡಿತವಾಗಿ ಹೇಳಲು ಮಾತ್ರ, ಪಾವತಿಯನ್ನು ಆಗಲೇ ಕೊಟ್ಟರಂತೆ! ಒಂದೇ ಆಕಾರದ ಎರಡು ಅಂಗಡಿಯವರ ಕಡೆಯಿಂದ ಪಕ್ಷಪಾತ ಮಾಡಿ, ತಮ್ಮ ಮನಸ್ಸಿಗೆ ಬಂದಂತೆ, ಹೆಚ್ಚು ಕಡಿಮೆ ಹಣವನ್ನೂ ಸಹ ವಸೂಲಮಾಡಿದರಂತೆ! ಒಂದೇ ಅಂಗಡಿಯಲ್ಲಿ ಇಬ್ಬರು ಕೆಲಸಮಾಡುವವರಿದ್ದಲ್ಲಿ, ಅವರು ಒಂದೇ ಅಂಗಡಿ ಇದ್ದುದರಿಂದ ಒಂದೇ ಪಾವತಿಯನ್ನು ಮಾಡಲಿಕ್ಕೆ ಹೇಳಿದರೂ ಕೇಳದೆ, ಇಬ್ಬರ ಹೆಸರಲ್ಲಿ ಎರಡು ಪಾವತಿಗಳನ್ನು ಮಾಡಿ, ಇಮ್ಮಡಿ ಹಣವನ್ನು ವಸೂಲಮಾಡಿದರಂತೆ! ಇದಕ್ಕೆ ಅನೇಕರು ಹಗಲೆಗೆ ಲೂಟಿಮಾಡಿದರಲ್ಲ, ಎಂದು ಉದ್ಗರಿಸಿದರು. ಕಡೆಯ ಪ್ರಕಟಣದಲ್ಲಿ ರಾಯರು ಕೊಟ್ಟ ದೀಪಟಗೆಯನ್ನು ಕೆಳನೌಕರರು ಯಾವ ಪರಿಯಿಂದ, ಎಲ್ಲಿ ಹಚ್ಚಿ, ಎಂಥ ಪ್ರಕಾರದಿಂದ ಪ್ರಜೆಗಳಿಗೆ ಸಹಾಯಿಸಿದರೆಂದು ನಾವು ಹೇಗೆರು ಛೌಕಶಿ ಮಾಡಲಿಕ್ಕಿಲ್ಲೇನು? ಇದಕ್ಕೆ ಹೊಣೆಗಾರರ್ಯಾರು? ಕೆಳ ನೌಕರರ ಇಂಥ ಅಂತಃಕರಣಶೂನ್ಯ ವೃತ್ತಿಯಿಂದಲೇ ಪ್ರಜೆಗಳಲ್ಲಿ ಪ್ರಚಲಿತ ರಾಜ್ಯಪದ್ಧತಿಯ ಬಗ್ಗೆ ಉದ್ವೇಗ ಉಂಟಾಗುತ್ತದೆ. ಇದು ಸ್ವತಃ ಇಂದು ಅಸಹಕಾರಿಗಳು ಸಂತೋಷ ಪಡುವರು.

ಕಡ್ರೆಯಲ್ಲಾದ ಅನ್ಯಾಯವನ್ನು ಕೇಳಿ, ಎಲ್ಲ ಲೋಕಮತವು ಪ್ರಬುದ್ಧವಾಗಿ, ಜನರಲ್ಲಿ ಗಲಭೆ ಎಬ್ಬಿದೆ. ಪರಿಣಾಮವೇನಾಗುವದು ? ನೋಡೋಣ.

ವಿವಿಧ ಸಂಗ್ರಹ.

ರಾಷ್ಟ್ರೀಯ ಸಭೆಯ ತಯಾರಿ.

ಕೋಕೋನಾಡದಲ್ಲಿ ರಾಷ್ಟ್ರೀಯ ಸಭೆಯ ತಯಾರಿಯು ಭರದಿಂದ ನಡೆದದೆ. ಪ್ರತಿನಿಧಿಗಳ ಬಿಡಾರಗಳ, ಸಭಾಮಂಟಪದ ಚಪ್ಪರಗಳು ತಯಾರಾಗಿವೆ. ಸಭಾಮಂಟಪವನ್ನೆಲ್ಲ ಖಾದಿಯ ಗುಡಾರಗಳಿಂದ ಹೊದಿಸುವರು. ಈ ಕಂಟ್ರಾಕ್ಟನ್ನು ಕಲಕತ್ತೆಯ ಡಾ| ಮುಕರ್ಜಿಯವರು ವಹಿಸಿಕೊಂಡಿರುವರು. ಇಷ್ಟರಿಂದಿಗೆ ಸ್ವಾಗತ ಕಮಿಟಿಯ ಸಭಾಸದರಿಂದ ಅರ್ಧ ಲಕ್ಷ ರೂಪಾಯಿಗಳು ಬಂದಿವೆ. ರಾಷ್ಟ್ರಸೇವಕರು ಇನ್ನೂ ನಿಧಿಸಂಚಯ ಮಾಡುತ್ತಿರುವರು. ಕಳೆದ ತಾ. ೧೧ನೇಗೆ ಕೋಕೋನಾಡದಲ್ಲಿ ಸ್ವಾಗತ ಕಮಿಟಿಯ ಸಭೆಯಾಯಿತು. ತಾ. ೩೦ನೇ ನವಂಬರ ವರೆಗೆ ಸ್ವಾಗತ ಕಮಿಟಿಯ ಮೆಂಬರರನ್ನು ದಾಖಲ ಮಾಡಿಕೊಳ್ಳಬೇಕೆಂದು ನಿಶ್ಚಯಿಸಲಾಗಿದೆ. ಇಷ್ಟರಿಂದಿಗೆ ೧೨೦೦ ಸ್ವಯಂಸೇವಕರು ದಾಖಲಾಗಿರುವರು. ಸೈನಿಕಗಳ ಸೇನಾಪತಿಗಳು ಕೋಕೋನಾಡದಲ್ಲಿ ಬಂದುಗೂಡಿರುವರು. ಅಲ್ಲಿ ಇವರಿಗೆಲ್ಲ ಶಿಕ್ಷಣಕೊಟ್ಟು, ಹೇಗೆ ಶಿಸ್ತನ್ನು ಕಾಯಬೇಕೆಂದು ಕಲಿಸುವ ಏರ್ಪಾಡಾಗಿದೆ. ವಿಷಯನಿಯಾಮಕ ಮಂಡಳವು ಡಿಸೆಂಬರ ತಾ. ೨೩ನೇಯಿಂದ ತಾ. ೨೭ನೇ ವರೆಗೆ ಕೆಲಸ ನಡಿಸಬೇಕೆಂತಲೂ, ತಾ. ೨೮ನೇ ಡಿಸೆಂಬರಕ್ಕೆ ಸರಿಯಾಗಿ ೧॥ ಘಂಟೆಗೆ ರಾಷ್ಟ್ರೀಯ ಸಭೆಯ ಅಧಿವೇಶನವು ಪ್ರಾರಂಭವಾಗತಕ್ಕದ್ದೆಂತಲೂ ನಿರ್ಣಯಿಸಲಾಗಿದೆ. ರಾಷ್ಟ್ರಸೇವಕರೆಲ್ಲರೂ ತಮ್ಮ ತಮ್ಮ ಕೆಲಸಗಳನ್ನು ಉತ್ಸಾಹದಿಂದ, ಅನ್ಯೋನ್ಯ ಪ್ರೀತಿಯಿಂದ ನಡಿಸುತ್ತಿರುವರೆಂದು ತಿಳಿಯುತ್ತದೆ. –

* * *

ವನಸ್ಪತಿ ಶಾಸ್ತ್ರಜ್ಞ ಸರ್ ಜಗದೀಶ ಚಂದ್ರ ಬೋಸರವರು

ಬಂಗಾಲದ ವಿಖ್ಯಾತ ವನಸ್ಪತಿಶಾಸ್ತ್ರಜ್ಞರಾದ ಸರ್ ಜಗದೀಶ ಚಂದ್ರ ಬೋಸರವರು ಈಗ ಯುರೋಪ ಖಂಡದಲ್ಲಿ ತಮ್ಮ ಶೋಧಗಳನ್ನು ಪ್ರಚಾರಮಾಡುತ್ತಿರುವರು. ಪ್ರೇಗದೊಳಗಿನ ವಿಶ್ವವಿದ್ಯಾಲಯದಲ್ಲಿ ಅವರಿಗೆ ಪ್ರಚಂಡ ಸ್ವಾಗತವಾದ ಸುದ್ದಿ ಬಂದು ತಲ್ಪಿದೆ. ತಮ್ಮ ಶೋಧಗಳ ಬಗ್ಗೆ ಅವರು ಎರಡು ಉಪನ್ಯಾಸಗಳನ್ನಿತ್ತರು. ವನಸ್ಪತಿಗಳು ಒಳಗಿಂದೊಳಗೆ ಅವ್ಯಾಹತವಾಗಿ ನೀರನ್ನು ತಮ್ಮ ಶಿಖರದ ವರೆಗೆ ಹೇಗೆ ಪಂಪುಮಾಡಿ ಸೆಳೆದು ಹೀರಿಕೊಳ್ಳುತ್ತವೆಂದು ಅವರು ಸಪ್ರಯೋಗ ತೋರಿಸಿದರು. ಈ ಕ್ರಿಯೆಗೆ ಚೈತನ್ಯ ಬೇಕಾಗುತ್ತದೆ. ಈ ಚೈತನ್ಯವನ್ನು ವೃಕ್ಷಗಳು, ಹೇಗೆ ಸಂಪಾದಿಸುತ್ತವೆ, ಗಾಳಿಯೊಳಗಿಂದ ಕಾರ್ಬೋನಿಕ ಆಸಿಡ್ ದ್ರವ್ಯವನ್ನು ಸೇರಿಕೊಂಡು ಸೂರ್ಯಪ್ರಕಾಶವನ್ನು ಹಸರು ಎಲೆಗಳು ಸಂಗ್ರಹಿಸಿಕೊಳ್ಳುತ್ತವೆ, ಕಾರ್ಬೋನಿಕ ಆಸಿಡ್ ದ್ರವ್ಯವನ್ನು ಸೇರಿಕೊಂಡು ಹೀರಿಕೊಳ್ಳುವ ಪ್ರಯೋಗವನ್ನು ಸಹ ಅವರು ಒಂದು ಯಂತ್ರದ್ವಾರಾ ತೋರಿಸಿದರು. ಈ ಯಂತ್ರದಲ್ಲಿ ಹೀರಿಕೊಳ್ಳುವ ಕ್ರಮವು ಸಹ ನೋಂದಾಗುತ್ತದೆ. ಈ ಯಂತ್ರ ನೋಡಿ, ನೆರೆದ ವಿದ್ವಾಂಸರಿಗೆಲ್ಲ ಆಶ್ಚರ್ಯವಾಯಿತು. ಹೊಸ ಶೋಧದಿಂದ ವನಸ್ಪತಿಗಳು ಅಸ್ವಸ್ಥವಾದಲ್ಲಿ, ಸಹ ತಿಳಿಯುವ ಹಾಗಿದೆ. ಮಾನವನ ನಾಡಿಮಾನವನ್ನು ಅರಿಯುವಂತೆ, ಈ ಯಂತ್ರದಿಂದ ವನಸ್ಪತಿಗಳ ಚೈತನ್ಯ ಹೀರುವ ಕ್ರಮವನ್ನು ಸಹ ಅಳೆಯಬಹುದು. ಸರ ಜಗದೀಶರವರು ಉದ್ಭಿಜ್ಜ ಹಾಗು ಮಾನವ ಕೋಶಗಳೊಳಗಿನ ಜೀವನ ಕ್ರಮವು ಒಂದೇ ಪ್ರಕಾರದವೆಂದು ಸಿದ್ಧಪಡಿಸಿರುವರು. ಈ ಶೋಧಗಳಿಂದ ವೈದ್ಯಶಾಸ್ತ್ರಕ್ಕೆ ಬಹಳೇ ಲಾಭವಾಗಬಹುದು ! ಪ್ರಾಣಿ–ವನಸ್ಪತಿಗುಣಧರ್ಮ ಶಾಸ್ತ್ರಗಳ ಪ್ರೊಫೆಸರರಾದ ಪ್ರೊ| ನೆಮೆಕರವರು ವಿಶ್ವವಿದ್ಯಾಲಯದ ತರ್ಫೆನಿಂದ ಮಾತಾಡುವಾಗ ಸರ್ ಬೋಸರವರ ಹೊಸ ಕ್ರಮಗಳಿಂದ, ಅದ್ಭುತ ಶೋಧನಗಳಿಂದ ಉಂಟಾದ ಪ್ರಗತಿಯನ್ನು ನೆನಿಸಿದರು. ಸರ್ ಬೋಸರವರಿಗೆ ಬರ್ಲಿನ್, ಸ್ಕಂಡೆನೆವಿಯಾ, ಡೆನ್ಮಾರ್ಕ ಮೊದಲಾದವುಗಳಲ್ಲಿ ಉಪನ್ಯಾಸವನ್ನೀಯಲು ಆಮಂತ್ರಣ ಬಂದಿರುತ್ತದೆಂದು ತಿಳಿಯುತ್ತದೆ.

* * *

ಲಾಲಾ ಲಜಪತರಾಯರ ಮತ.

"ಸಾಮ್ರಾಜ್ಯ ಪರಿಷತ್ತಿನಿಂದ ಡಾ| ತೇಜಬಹಾದ್ದೂರ ಸಪ್ರುರವರು ಏನು ಸಾಧಿಸಿದರೋ" ಎಂದು ಮುಂಬಯಿ ಕ್ರಾನಿಕಲ್ ಪತ್ರಿಕೆಯ ಪ್ರತಿನಿಧಿಗಳೊಬ್ಬರು ಲಜಪತರಾಯರಿಗೆ ಪ್ರಶ್ನಿಸಿದರು. ಅದಕ್ಕೆ ಲಜಪತರಾಯರು ಏನೂ ನಿಷ್ಪತ್ತಿಯಾಗಲಿಲ್ಲೆಂದು ಉದ್ಗರಿಸಿ, ಇದರಿಂದ ಪರಿಸ್ಥಿತಿಯು ನಿಜ ರೂಪವು ಬಯಲಾಗುವ ಬದಲು, ಮುಸುಕಿಕೊಂಡಿದೆಂದು ಉದ್ಗರಿಸಿದರು. "ಕಾನಡಾದ ಮಂತ್ರಿಗಳೂ, ಜನರಲ್ ಸ್ಮಟ್ಸಂಥವರೂ, ನಾಮಧಾರಿ ಶಾಸ್ತ್ರಿಗಳೂ ನಡಿಸಿದ ಸಾಮ್ರಾಜ್ಯದ ಯಾತ್ರೆಯ ಬಗ್ಗೆ ನಿಷೇಧ ಪ್ರದರ್ಶನ ಮಾಡಿದ್ದೆಂದು ಉತ್ಕೃಷ್ಟವಾಯಿತು. ಯಾಕಂದರೆ, ನಾಮಧಾರಿ ಶಾಸ್ತ್ರಿಗಳ ಯಾತ್ರೆಗೆ ಖರ್ಚಾದ ಹಣವು ನಿರರ್ಥಕವೆಂದು ಇದರಿಂದ ಸಿದ್ಧವಾಯಿತು. ಕಮೀಟಿಗಳ ನಿರ್ಮಾಣದಿಂದ ಸಾಧಿಸಿದ್ದೆಂಬುದು ನಿರರ್ಥಕ ದಕೆಯು. ಆದರಿಂದ ಕೆನಿಯಾ ಪ್ರಶ್ನೆಯ ವಿಚಾರಕ್ಕೆ ಶಾಸ್ತ್ರೀಯು ಇಂಬು ದೊರೆತರೂ, ಪುನರ್ವಿಚಾರವಾಗದು. ಡಾ| ಸಪ್ರುರವರು ಸಾಮ್ರಾಜ್ಯ ಪರಿಷತ್ತಿನಲ್ಲಿ ಆಡಿದ ನುಡಿಗಳ ಮೇಲಿಂದ ಅವರು ಶ್ರೇಷ್ಠ ಮಧುರ ಉಪನ್ಯಾಸಕರೆಂದು ಹೇಳಬೇಕಾಗಿದೆ. ಆಯರ್ಲಂಡದ ಪ್ರತಿನಿಧಿಗಳು ಕೊಟ್ಟ ಭಾಷಣವು ಮರ್ಮವನ್ನು ಅರುಹುತ್ತದೆ. ಜನರಲ್‌ಸ್ಮಟ್ಸರವರು ಮಾಡಿದ ಭಾಷಣವು ಪ್ರಾಮಾಣಿಕವಿತ್ತು. ಇತರೇ ಮಂದಿಗಳ ಭಾಷಣಗಳೆಲ್ಲ ಹಿಂದುಸ್ಥಾನಕ್ಕೆ ಸಮಾಧಾನ ಮಾಡುವದೆ, ಹಿಂದುಸ್ಥಾನದ ಬಗ್ಗೆ ಉದಾರ ಧೋರಣವಿದೆಂದು ಜಗತ್ತಿಗೆ ಕಣ್ಣುಕಟ್ಟುವದೆ ಮಾಡಿದ್ದಾಗಿವೆ. ಇದರಿಂದ ನೇಮಸ್ತರ ಉತ್ಸಾಹವು ಭಂಗಹೊಂದುವದು; ದೇಶಕ್ಕೆ ತಕ್ಕ ದಾರಿ ಸಿಗದು; ಬ್ರಿಟಿಶರ ನ್ಯಾಯಬುದ್ಧಿಯನ್ನು ಹಲಂಬಿಸುವ ಇಚ್ಛೆಯಾಗಬಹುದು. ಆದರೆ, ದೇಶಬಾಂಧವರು ಈ ತಪ್ಪು ಮಾಡಬಾರದೆಂದು ನನ್ನ ಎಚ್ಚರಿಕೆ ಅದೆ." ಅದೇ ದಿನವೇ, ಅಂದರೆ, ತಾರೀಖು ೧೩ನೇಗೆ ಪುಣ್ಯಪಟ್ಟಣದೊಳಗಿನ ನೇಮಸ್ತರು ಡೆಕ್ಕನ ಸಭೆಯ ವಿದ್ಯಮಾನ ನೆರೆದು, ಡಾ: ತೇಜಬಹಾದ್ದೂರ ಸಪ್ರುರವರು ಭಾರತೀಯರ ಬಗ್ಗೆ ಸಾಮ್ರಾಜ್ಯ ಪರಿಷತ್ತಿನಲ್ಲಿ ನಡಿಸಿದ ಸೇವೆಯನ್ನು ನಮೂದಿಸಿ, ಕೆನಿಯಾ ನಿರ್ಣಯದ ಪುನರಾಲೋಚನೆಯ ಕುರಿತು ಇಂಬು ಸಂಪಾದಿಸಿದ ಬಗ್ಗೆ ಅವರನ್ನು ಅಂತಃಕರಣಪೂರ್ವಕ ಅಭಿನಂದಿಸಿದರು. ಹಿಂದುಸ್ಥಾನ ಸರಕಾರಕ್ಕೂ, ಭಾರತ ಮಂತ್ರಿ ಪೀಲ ದೊರೆಗಳಿಗೂ ಆಭಾರಪ್ರದರ್ಶಕ ಠರಾವುಗಳು ಮಂಜೂರಾದವು. ಲಜಪತರಾಯರು ನುಡಿದಂತೆ, ನೇಮಸ್ತರ ಉತ್ಸಾಹವು ಭಂಗವಾಗಲಿಲ್ಲೆಂದು ಪುಣ್ಯಪಟ್ಟಣದೊಳಗಿನ ನೇಮಸ್ತರು ಕೃತಿಯಿಂದ ತೋರಿಸಿರುವರು. ನೇಮಸ್ತರ ಮಾನಸಿಕ ಲಕ್ಷಣವನ್ನು ಪ್ರಜೆಗಳು ತಿಳಿಯಲಿ.

* * *

ಸ್ತ್ರೀಚರಿತ್ರ.

ಲಂಡನ್ ನಗರವಾಸಸ್ಥಳಾದ ೫೬ ವರ್ಷ ವಯಸ್ಸಿನ ಜೇನ ರೆಬೆಕ್ಕಾ ವಿಲಿಯಮ್ಸ್ ಎಂಬ ತರುಣಿಮಣಿಯು ೬೩ ವರ್ಷ ವಯಸ್ಸಿನ ಒಬ್ಬ ವಿಧುರನನ್ನು ವರಿಸಿ, ಈಗ ತಾನೇ ವಿವಾಹ ಮಾಡಿಕೊಂಡಳು. ಇದು ಆಕೆಗೆ ೭ನೆಯ ಲಗ್ನವು. ಅವಳ ೬ನೆಯ ಗಂಡನಿಗೆ ಇಬ್ಬರು ಹೆಂಡರನ್ನು ಮಾಡಿಕೊಂಡಿದುದಕ್ಕಾಗಿ, ಶಿಕ್ಷೆಯಾಗಿತ್ತು. ಈಕೆಯು ತನ್ನ ಎಡಗೈ ಬೆರಳುಗಳಿಗೆ ಮೊದಲು ೫ ಲಗ್ನಗಳ ಸಂಬಂಧ ಸೂಚಕವಾದ ೫ ಉಂಗುರಗಳನ್ನೂ, ಬಲಗೈಯ ಎರಡು ಬೆರಳುಗಳಿಗೆ ಕಡೆಯ ಎರಡು ಲಗ್ನ ಸಂಬಂಧ ಸೂಚಕವಾದ ಎರಡು ಉಂಗುರಗಳನ್ನೂ ಧರಿಸಿಕೊಂಡಿರುವಳು. ಕಳೆದ ಮೂರು ಲಗ್ನಗಳನ್ನೂ ೬ ವರ್ಷಗಳಲ್ಲಿ ಮಾಡಿಕೊಂಡಿದ್ದಳು. ಈಗಿನ ಲಗ್ನವಾದಾಗ "ಈ ಗಂಡನನ್ನು ನಾನು ಒಂದು ವರ್ಷ ಕಾಲದಿಂದಲೂ ಬಲ್ಲವಳಾಗಿದ್ದು, ಪ್ರೀತಿಸುತ್ತಿದ್ದೆನು. ಈ ವೇಳೆ ಈತನನ್ನು ಪತಿಯನ್ನಾಗಿ ಆರಿಸುವಲ್ಲಿ ಬಹಳ ಜಾಗರೂಕಳಾಗಿದ್ದೆನು. ಈತನು ನನ್ನ ಗೃಹಕ್ಕೆ ಸೂರ್ಯಕಿರಣದಂತಿರುವನು. ಮತ್ತು ನಾನು ಬಹಳವಾಗಿ ಪ್ರೀತಿಸುತ್ತಿರುವ ಉದ್ಯಾನವನ್ನು ಮಾಡಿಕೊಳ್ಳುವನು" ಎಂದು ಹೇಳಿದಳು. — ಮೈಸೂರ ಸ್ಟಾರ.

ಸತ್ಯಾಗ್ರಹಿಯ ಕಾಣಿಕೆ.

ಹಿ. ರಾಮರಾಯ ಮಲ್ಯರು ಸಾಧಾರಣ ೨೩ ವರುಷದ ಯುವಕರು. ಉಡುಪಿ ಮಿಶನ್ ಶಾಲೆಯಲ್ಲಿ ಸ್ಕೂಲ್ ಫಾಯನಲ್ ವರೆಗೆ ಅಭ್ಯಸಿಸಿ, ಮಂಗಳೂರಿನ ಎಲೋಯ್ಸಿಯಸ್ ಕೊಲೇಜಿನಲ್ಲಿ ಇಂಟರ್‌ಮೀಡಿಯಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಬಿ. ಎ ಯಲ್ಲಿ ಕಲಿಯುತ್ತಿದ್ದರು. ಅಸಹಕಾರ ಚಳವಳದ ಸಮಯದಲ್ಲಿ ಶಾಲೆಗೆ ಬಹಿಷ್ಕಾರವನ್ನಿತ್ತು, ಅಂದಿನಿಂದ ಅವರು ಸ್ವರಾಜ್ಯಸಾಧನೆಯನ್ನೇ ಧ್ಯೇಯವಾಗಿಟ್ಟುಕೊಂಡು, ನಿಃಸ್ವಾರ್ಥವಾಗಿ ಕೆಲಸಮಾಡುತ್ತಿದ್ದರು. ಅವರು ಗುಜರಾಥ ವಿದ್ಯಾಪೀಠದ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದರು. ಆ ಮೇಲೆ, ಉಡುಪಿಯ ರಾಷ್ಟ್ರೀಯ ವಿದ್ಯಾಮಂದಿರದಲ್ಲಿ ಅಧ್ಯಾಪಕರಾಗಿದ್ದು, ಈಗ ಕೆಲವು ತಿಂಗಳ ಹಿಂದೆ ಆ ಕೆಲಸದಿಂದ ನಿವೃತ್ತರಾಗಿ "ಸತ್ಯಾಗ್ರಹೀ" ಗಾಗಿ ತಮ್ಮ ಸಮಯವನ್ನು ಸಮರ್ಪಿಸಿದ್ದರು.

ಹಿ. ನಾರಾಯಣ ರಾಯರು ದೇ. ಭ. ಮಲ್ಯರ ಸಹಪಾಠಿಗಳಾಗಿದ್ದು, ಮಲ್ಯರೊಡನೆಯೇ ಕೊಲೇಜಿಗೆ ಬಹಿಷ್ಕಾರವನ್ನಿತ್ತು, ಉಡುಪಿಯಲ್ಲಿ ರಾಷ್ಟ್ರಸೇವೆಯನ್ನು ಉತ್ಸಾಹದಿಂದ ಮಾಡುತ್ತಿದ್ದರು. ದೇಶಸೇವೆಯೆಂಬುದು ಅವರಿಗೆ ಕೇವಲ ನೈಸರ್ಗಿಕವಾಗಿತ್ತು. ಕಳೆದ ನೆರೆಹಾವಳಿ ಸಮಯದಲ್ಲಿ ಪೀಡಿತ ಜನರಿಗಾಗಿ ಇವರು ಪಡೆದ ಪರಿಶ್ರಮವು ಸಾಮಾನ್ಯವಲ್ಲ. ಸಮಯಾಭಾವದಿಂದ ಅವರಿಗೆ ಅನೇಕ ಬಾರಿ ಊಟವೇ ಆಗುತ್ತಿರಲಿಲ್ಲ. ಈ ಅವಿಶ್ರಾಂತ ಪರಿಶ್ರಮದಿಂದ ಜೈಲಿಗೆ ಹೋಗುವ ಸಮಯದಲ್ಲಿ ಅವರಿಗೆ ದೇಹಸ್ವಾಸ್ಥ್ಯವು ಚನ್ನಾಗಿರಲಿಲ್ಲ. ಆದರೂ ಅವರು ಹಸನ್ಮುಖರಾಗಿಯೇ ಇದ್ದು ಜೈಲಿಗೆ ಹೋದರು. (ಸತ್ಯಾಗ್ರಹೀ.

— ನಾಗಪುರದೊಳಗಿನ ಹಿಂದು–ಮುಸಲಮಾನರ ಕಲಹವು ಗವರ್ನರರ ಮಧ್ಯಸ್ಥಿಕೆಯಿಂದ ನಿವಾರಿಸಲಾಗುವದೆಂದು ಜಾಹೀರಾಗಿದೆ.

ಕಾನಡಾವೃತ್ತ.

ಅಧ್ಯ ಮಿತಿ ಕಾರ್ತಿಕ ಕೃಷ್ಣ ೧೧ ಗುರುವಾರ

ಶಿಕ್ಷಕರ ಗೋಳು.

ಪ್ರಾಥಮಿಕ ಶಿಕ್ಷಕರು ತಮ್ಮ ದುರ್ದೆಶೆಯ ನಿವಾರಣೆಯ ಬಗ್ಗೆ ಈಗ ಬಹು ಕಾಲದಿಂದ ಸರಕಾರದಗೂಡ ಪ್ರಾರ್ಥನೆ ನಡಿಸಹತ್ತಿರುವರು. ನೌಕರಶಾಹಿಯು ಇವರ ಬೇಡಿಕೆಗಳನ್ನು ನವಯುಗದ ಹೊಸ ಪೋಂಟೆಗ್ಯೂ ಸ್ವರಾಜ್ಯ ಸರಕಾರಕ್ಕೆ ವಹಿಸಿ, ಪಾರಾಯಿತು. ಹಳೇ ಕಾಯಿದೆ ಕೌನ್ಸಿಲಿನ ಶ್ರೀಶಿಕ್ಷಕರ ವಶೀಲಿಯನ್ನು ಅಂತಃಕರಣಪೂರ್ವಕ ನಡಿಸಿದ ನಾಮದಾರ ರಘುನಾಥರಾವ ಪರಾಂಜಪೇಯವರು ಶಿಕ್ಷಣಮಂತ್ರಿಪದಾರೂಢರಾದರು. ಶಿಕ್ಷಕರಿಗೆ ಆಶೆಯಾಯಿತು. ಆಗಲೆ, ಪರಾಂಜಪೇಯವರ ಮಂತ್ರಿಪದಾವಧಿಯು ಕಳೆಯುತ್ತ ಬಂದರೂ, ಶಿಕ್ಷಕರ ಗೋಳು ಇನ್ನೂ ತಪ್ಪದು. ಪ್ರಾಥಮಿಕ ಶಿಕ್ಷಕರು ತಮ್ಮ ತಮ್ಮ ಸಂಘಗಳನ್ನು ಏರ್ಪಡಿಸಿಕೊಂಡು, ಚಳವಳಿ ನಡಿಸಹತ್ತಿರುವರು. ಇನ್ನೂ ಅವು ಸಾಕಷ್ಟು ಫಲಪ್ರದವಾಗಲಿಲ್ಲ, ಫಲಪ್ರದವಾಗುವ ಲಕ್ಷಣಗಳು ಸಹ ತೋರುವದಿಲ್ಲ.

ಸದ್ಯಕ್ಕೆ, ಅಂದರೆ, ಕಳೆದ ತಾ. ೧೧ ೧೦ ೨೩ ನೇಗೆ ಪ್ರಾಥಮಿಕ ಶಿಕ್ಷಕರ ಸಂಬಳದ ಪೂರ್ವಯೋಜನೆಯೊಂದು ಜಾಹೀರಾಗಿದೆ. ಅದರ ಮೇಲೆ ಈಗ ಪ್ರಾಥಮಿಕ ಶಿಕ್ಷಕರ ಚರ್ಚೆ ನಡೆದದೆ. ಈ ಯೋಜನೆಯಂತೆ, ಮುಲ್ಕಿ ಪರೀಕ್ಷೆ ಕಲಿಯದ, ಹಾಗು ಮುಲ್ಕಿ ಪರೀಕ್ಷೆ ಉತ್ತೀರ್ಣ ಹೊಂದಿದವರ ಸಂಬಳದ ಮಾನವು, ಹಿಂದಿನ ಸಂಚಿಕೆಯಿಂದ ಮುಂದರಿದಂತೆ, ಏನೂ ಬದಲಾಗದೆ, ಚಾಲು ಇರುವದು. ಟ್ರೇಂಡರಲ್ಲಿ ಮೂರು ವರ್ಗಗಳು. ಮೊದಲನೇ ವರ್ಷ ಪಾಸಾದವರಿಗೆ ರೂಪಾಯಿ ೩೦ ರಿಂದ ಸಂಬಳವು ಪ್ರಾರಂಭವಾಗಿ ೪೦ ರ ವರೆಗೆ ಏರುವದು; ೨ ನೇ ವರ್ಷದವರಿಗೆ ಮೂಲ ಪಗಾರು ೩೫; ತುದಿಯ ಪಗಾರು ೫೦, ಮೂರನೇ ವರ್ಷದವರಿಗೆ ಆದಿ ವೇತನವು ರೂಪಾಯಿ ೪೦; ಅಂತ್ಯದ್ದು ೬೦. ಈ ಏರಿಕೆಯು ಮೊದಲಿನ ೨ ವರ್ಷದವರಿಗೆ ೩-೩ ವರ್ಷಕ್ಕೆ ಒಂದೊಂದು ರೂಪಾಯಿಯಂತೆ, ಮೂರನೇ ವರ್ಷದವರಿಗೆ ಎರಡೆರಡು ರೂಪಾಯಿಗಳಂತೆ, ಪರಮಾವಧಿಯ ಪಗಾರು ದೊರೆಯುವದು ೨೫ ವರ್ಷಗಳಲ್ಲಿ. ವರಿಷ್ಠಾಧಿಕಾರಿಗಳ ಮರ್ಜಿಯಾದಲ್ಲಿ, 'ಸಿಲೆಕ್ಶನ' ಎಂಬ ಹೊಸದೊಂದು ಗ್ರೇಡಿದೆ. ಅದರಲ್ಲಿ ಸೇರಿಕೊಂಡರೆ, ಅಥವಾ ಸೇರಿಸಲ್ಪಟ್ಟರೆ, ೧-೨-೩ ನೇ ವರ್ಷದ ಟ್ರೇಂಡ ಶಿಕ್ಷಕರಿಗೆ ೫೦-೬೦-೭೦ ರೂಪಾಯಿಗಳ ವರೆಗೆ ಸಂಬಳ ದೊರೆಯಬಹುದು. ಸಿಲೆಕ್ಶನ ಗ್ರೇಡು ಎಲ್ಲ ಶಿಕ್ಷಕರಿಗೆ ಸರ್ವಿಸಿನಂತೆ ಸಿಗುವದಲ್ಲ, ವರಿಷ್ಠಾಧಿಕಾರಿಗಳ ಪಸಂತಿಯ ಮೇಲಿದೆ. ಆದರಿಂದ ಈ ೧೦ ರೂಪಾಯಿಗಳ ಪರಮಾವಧಿಯ ಸಂಬಳವು ಸಾಮಾನ್ಯ ಶಿಕ್ಷಕರಿಗೆ ಲಭಿಸದು. ಕಾರಣ, ಈ ಪ್ರಮಾಣವನ್ನು ಸಾಮಾನ್ಯ ಶಿಕ್ಷಕರ ಗೋಳನ್ನು ವಿಮರ್ಶಿಸುವಾಗ ಎಣಿಕೆ ಮಾಡಲಾಗದು.

ಈ ಸ್ಕೇಲಿನಂತೆ, ಲಾಭವಾಗುವದಿದ್ದರೆ, ಅದು ಬರೇ ಹೊಸಬರಿಗೇ, ಹೊರತು, ೮-೧೦-೧೫ ವರುಷ ಸರ್ವಿಸ ಮಾಡಿದವರಿಗೆ ವಿಶೇಷ ಲಾಭವೇನೂ ಇಲ್ಲ. ಕೆಲವರಿಗಂತು ಹೊಸ ಸ್ಕೇಲಿನಂತೆ ಕೊಡಹೋದರೆ, ಈಗಿದ್ದ ಸಂಬಳಕ್ಕಿಂತ ಮತ್ತೂ ಕಡಿಮೆಯಾಗುವ ಸಂಭವವಿದೆ. ಆದರೆ, ಹೊಸ ಸ್ಕೇಲಿನಂತೆ, ಸಂಬಳ ಕಡಿಮೆಯಾದಲ್ಲಿ, ಈಗಿದ್ದ ಸಂಬಳವನ್ನೇ ಚಾಲು ಇಡಬೇಕೆಂದು ಠರಾವಾದ ಮೂಲಕ, ಲುಕ್ಸಾನೊಂದು ಆಗಲಾರದು, ಇದೇ ಒಂದು ಸಮಾಧಾನವು. ಹೊಸ ಸ್ಕೇಲಿನಿಂದ ಪ್ರಾಥಮಿಕ ಶಿಕ್ಷಕರ ಗೋಳು ಎಷ್ಟರ ಮಟ್ಟಿಗೆ ಪರಿಹಾರವಾಯಿತೆಂದು ಅಧಿಕಾರಿಗಳು ಇದರ ಮೇಲಿಂದ ವಿಚಾರಿಸಲಿ.

ಈ ಸ್ಕೇಲಿನ ಬಗ್ಗೆ ಮುಂಬಯಿಯಲ್ಲಿ ಶ್ರೀ॥ ಮುಕುಂದರಾವ ಜಯಕರ ಇವರ ಅಧ್ಯಕ್ಷತೆಯಲ್ಲಿ ಒಂದು ಜಾಹೀರ ಸಭೆಯು ಕಳೆದ ಮಂಗಳವಾರ ತಾ ೬ನೇಗೆ ಜರುಗಿತು. ಶ್ರೀ॥ ಮುಕುಂದರಾಯರು ಪ್ರಾಥಮಿಕ ಶಿಕ್ಷಕರಿಗೆ ಇಷ್ಟ ಫಲಪ್ರಾಪ್ತಿಯಾಗುವ ವರೆಗೆ ದುಡಿಯಿರೆಂದು ಬೋಧಿಸಿ, ಜವಾನರಿಗಿಂತ ಶಿಕ್ಷಕರ ಸಂಬಳವು, ಬಡತಿಯ ಮಾನವು ತೀರ ಕನಿಷ್ಠ ಪ್ರತಿಯವೆಂದು ಅಭಿಪ್ರಾಯಪಟ್ಟರು. ಪ್ರಾಥಮಿಕ ಶಿಕ್ಷಕರಷ್ಟು ಕನಿಷ್ಠ ಸಂಬಳ ಪಡೆಯುವ ಸರಕಾರಿ ನೌಕರರು ಎಲ್ಲಿರುವರೆಂದು ಅವರು ಸವಾಲು ಮಾಡಿದರು. ಸಕ್ತಿ ಶಿಕ್ಷಣದ ಕಾಯಿದೆಯಿಂದ ಪ್ರಾಥಮಿಕ ಶಿಕ್ಷಕರ ಗೋಳು ಪರಿಹಾರಹೊಂದಲಿಕ್ಕಿಲ್ಲೆಂದು ತಮ್ಮ ಸಿದ್ಧಾಂತವಾಗಿದೆಂದು ಅವರು ತಿಳಿಸಿದರು. ಪ್ರಾಥಮಿಕ ಶಿಕ್ಷಕರ ಹಿತರಕ್ಷಣಕ್ಕಾಗಿ ತಕ್ಕ ಕಾನೂನುಗಳನ್ನು ಸರಕಾರವು ಏರ್ಪಡಿಸಿ, ಬಳಿಕ, ಅವರನ್ನು ಸ್ಥಾನಿಕ ಸಂಸ್ಥೆಗಳಿಗೆ ವಹಿಸಬೇಕೆಂದು ಅವರು ನುಡಿದರು. ಈ ಸಭೆಯಲ್ಲಿ ಪ್ರಾಥಮಿಕ ಶಿಕ್ಷಕರ ಸೊಲ್ಲಾಪುರದ ಪ್ರಾಂತಿಕ ಪರಿಷತ್ತಿನಲ್ಲಿ ಮಂಜೂರಾದಂತೆ, ರೂಪಾಯಿ ೩೦ ರಿಂದ ೧೫೦ರ ವರೆಗಿನ ಸ್ಕೇಲನ್ನು ಸರಕಾರವು ಮಂಜೂರ ಮಾಡುವವರೆಗೆ ಶಿಕ್ಷಕರು ಸಂತುಷ್ಟರಾಗರೆಂದು ಪುನಃ ಜಾಹೀರ ಮಾಡಲಾಯಿತು.

ನಮ್ಮ ಜಿಲ್ಹೆಯೊಳಗಿನ ಪ್ರಾಥಮಿಕ ಶಿಕ್ಷಕರು ಇಲ್ಲಿ ಮಹಾ ಸಭೆಸೇರಿ, ಈ ವಿಷಯ ವಿಚಾರ ಮಾಡಿದರು. 'ಓವರ ಶಿಕ್ಷಣಾಭಿಮಾನಿ' ಗಳು ಕೊಟ್ಟ ಹಕೀಕತಿನ ಮೇಲಿಂದ ನಮ್ಮಲ್ಲಿಯ ಶಿಕ್ಷಕವರ್ಗಕ್ಕೆ ಸಹ ಹೊಸ ಸ್ಕೇಲು ಇಷ್ಟವಿಲ್ಲೆಂದು ಸ್ಪಷ್ಟವಾಗುತ್ತ● ಲಾಭವಾಗದಮೇಲೆ, ಹೊಸ ಯೋಜನೆಯ ಬಗ್ಗೆ ಯಾರಾದರೂ ಏನು ಹೇಳುವರು! ನಮ್ಮಲ್ಲಿಯ ಶಿಕ್ಷಕರು ಸೊಲ್ಲಾಪುರದ ಸ್ಕೇಲನ್ನು ಅಮಲಿನಲ್ಲಿ ತರಲು ಸರಕಾರಕ್ಕೆ ಹಣದ ಅಡಚಣಿಯಾದಲ್ಲಿ, ನಾಮದಾರ ಸಾಠೇ-ಪರಾಂಜಪೇಯವರು ತಯಾರಿಸಿದ ಸ್ಕೇಲನ್ನಾದರೂ ಅಮಲಿನಲ್ಲಿ ತರಬೇಕೆಂದು ಠರಾವು ಮಾಡಿರುವರು. ಈ ಸ್ಕೇಲಿನಂತೆ, ಆರಂಭದ ಪಗಾರು, ಹೊಸ ಯೋಜನೆಯಲ್ಲಿಟ್ಟದ್ದರೂ, ೧-೨-೩ ನೇ ವರ್ಷದ ಟ್ರೇಂಡರಿಗೆ, ವರ್ಷಕ್ಕೆ ಅನುಕ್ರಮವಾಗಿ ೧-೧॥-೨ ರೂಪಾಯಿಗಳಂತೆ ಬಡತಿ ದೊರೆತು, ಪರಮಾವಧಿಯ ಪಗಾರು ೨೫ ವರುಷಗಳಲ್ಲಿ ೫೫-೭೦-೮೦ ರೂಪಾಯಿಗಳು ಆಗುವವು. ಸಿಲೆಕ್ಶನು ಸಿಗುವಷ್ಟು ಭಾಗ್ಯವಂತ ಶಿಕ್ಷಕರು ಅನುಕ್ರಮವಾಗಿ ರೂಪಾಯಿ ೬೦-೮೦-೧೦೦ ರ ವರೆಗೆ ವೇತನ ಪಡೆಯುವರು.

ಪ್ರಾಥಮಿಕ ಶಿಕ್ಷಕರ ಗೋಳನ್ನು ಪರಿಹರಿಸುವದು, ಅವರಿಗೆ ದರ್ಜೆಗನುರೂಪವಾದ ಸಂಬಳವನ್ನೀಯುವದು ಅಧಿಕಾರಿಗಳ ಕರ್ತವ್ಯವು, ಶಿಕ್ಷಣೋದ್ಧಾರಕ್ಕಾಗಿ ಮಂತ್ರಿಪದವನ್ನು ಸ್ವೀಕರಿಸಿದ ಶಿಕ್ಷಣ ಮಂತ್ರಿಗಳ ಅದ್ಯ ಕರ್ತವ್ಯವು ಇದೇ. ಹಣದ ಅಡಚಣಿ ಹೇಳಿ, ಶಿಕ್ಷಕರ ನ್ಯಾಯ್ಯ ಬೇಡಿಕೆಗಳನ್ನು ಬದಿಗೊತ್ತುವದು ನವಯುಗದೊಳಗಿನ ಶಿಕ್ಷಣಮಂತ್ರಿಗಳಿಗೆ ಶೋಭಿಸದು. ಯಾಕಂದರೆ, ಹಣದ ಅಡಚಣಿಯಿದ್ದರೂ, ದೊಡ್ಡ ದೊಡ್ಡ ಅಫೀಸರರಿಗೆ ಬಂಗಲೆ ಕಟ್ಟಿ ಕೊಡುವ ಯೋಜನೆಯನ್ನೇನು ಅಧಿಕಾರಿಗಳು ತಹಕೂಬ ಮಾಡಲಿಲ್ಲ. ಡೆವಲಪಮೆಂಟ ಖಾತೆ, ಸಕ್ಕರ ಬ್ಯಾರೇಜ, ಮೊದಲಾದ ಪ್ರಚಂಡ ಖರ್ಚಿನ ಯೋಜನೆಗಳು ನಡೆದೇ ಇವೆ. ಸರಕಾರವು ಅವಕ್ಕೇನು ತಡೆ ಹಾಕಲಿಲ್ಲ. ಪ್ರಾಥಮಿಕ ಶಿಕ್ಷಕರಿಗೆ ಹಣದ ಕೊರತೆಯ ಮಾತ ಹೇಳುವ ನಾಮದಾರ ಪರಾಂಜಪೇಯವರು, "ಈ ಖರ್ಚಿಗೆ ನೀವು ಎಲ್ಲಿಂದ ಹಣ ತರುತ್ತೀರಿ?" ಎಂದು ತಮ್ಮ ಮಂತ್ರಿಮಂಡಳದಲ್ಲಿ ಪ್ರಶ್ನಿಸಿ, ಕಾದಿಟ್ಟ ಖಾತೆಗಳಿಗೆ ಹಣ ಖರ್ಚು ಮಾಡುವಾಗ, ನಿರ್ಭಯದಿಂದ, ನಿದಾಕ್ಷಿಣ್ಯದಿಂದ ಒದ್ದಾಡಿದ್ದರೆ, ಪ್ರಾಥಮಿಕ ಶಿಕ್ಷಕರ ಗೋಳು ಈ ಮೊದಲೇ ಪರಿಹಾರವಾಗುತ್ತಿತ್ತು. ಪ್ರಾಥಮಿಕ ಶಿಕ್ಷಕ,

...ಗೆ ತಾವೇ ಸಾರೇ-ಪರಾಂಜಪೇ ಸ್ಕೇಲಿನಿಂದ ...ನಿರ್ದಿಷ್ಟ ಮಾಡಿದ ಸಂಬಳವನ್ನು ಕೊಡುವ ...ಷ್ಟು ಸಾಮರ್ಥ್ಯವೆನ್ನು ಮಂತ್ರಿಪಟಾಲರೊಡನಾ..., ನಾಮದಾರ ಪರಾಂಜಪೇಯವರು ಕೊಡ... ...ಸಲಿಲ್ಲ. ಆದರೂ, ನಮ್ಮಲ್ಲಿಯ ಪ್ರಾಥಮಿಕ ...ಕ್ಷಕರ ಪಂಚಮ ಮಹಾಸಭೆಯ ಅಧ್ಯಕ್ಷ ...ನ ರಾ| ನಾರಾಯಣರಾವ ಕಾಮತರವರು, ...ಶಿಕ್ಷಣದಲ್ಲಿ ನಿಜವಾದ ಸುಧಾರಣೆಯಾಗಬೇಕಾಗಿದ್ದರೆ, ನಾ| ಪರಾಂಜಪೇಯವರಿಂದಲೇ ಆದೀತು. ಅವರೇ ಈಗ ಪರಿಸ್ಥಿತಿಗನುಗುಣವಾಗಿ ಹೀಗೆ ಮಾಡಬೇಕಾಯಿತು. ಕ್ರಮದಿಂದ ಸುಧಾರಣೆಯಾಗದೆ ಇರಲಾರದು ” ಮೊದಲಾದ ಉದ್ಗಾರಗಳನ್ನು, ಭಾಷಿಕರಂತೆ ಪ್ರದರ್ಶಿಸಿದರು. ೩ ವರ್ಷಗಳ ವರೆಗೆ ಪ್ರಾಥಮಿಕ ಶಿಕ್ಷಕರಿಗೆ ಹಳೇ ನೌಕರಶಾಹಿಯು ಹೇಳದ ಕೊರತೆಯು ಹಾಡಿದ್ದೇ ಹಾಡನ್ನು ಪುನಃ ನಾ| ಪರಾಂಜಪೇಯವರು ಹಾಡಿ, ಈ ವರೆಗೆ ದಿನಗಳೆದರು. ಪರಿಸ್ಥಿತಿಯು ಸುಧಾರಣೆಯಾದ ಮೇಲೆ, ಕ್ರಮದಿಂದ ಪ್ರಾಥಮಿಕ ಶಿಕ್ಷಕರಿಗೆ ...ಗುವದೆಂಬುದು ಕನ್ನಡಿಯೊಳಗಿನ ಗಂಟು ಎಂದು ಅಧ್ಯಕ್ಷರಿಗೆ ದೀರ್ಘ ವಿಚಾರ ಮಾಡಿದರೆ, ತೋರುವದಾಗಿದೆ. ನೌಕರಶಾಹಿಯು ಹಿಂದುಸ್ಥಾನಕ್ಕೆ ಕೊಡುವ ಸ್ವರಾಜ್ಯದ ವಚನವೂ, ನಾಮದಾರ ಪರಾಂಜಪೇಯವರು ಪ್ರಾಥಮಿಕ ಶಿಕ್ಷಕರಿಗೆ ಬಡತಿ ಕೊಡುವ ಆಶ್ವಾಸನವೂ ಒಂದೇ ಮಾಲಿಕೆಯೊಳಗಿನವೆಂದು ಹೇಳಿದರೆ, ಅತಿಶಯೋಕ್ತಿಯಾಗದು.

ಮತ್ತೊಂದು ಹೊಸ ಕಾಲವು ಪ್ರಾಥಮಿಕ ಶಿಕ್ಷಕರಿಗೆ ಪ್ರಾಪ್ತವಾಗುವ ಚಿನ್ಹಗಳು ತೋರುತ್ತವೆ. ಸಕ್ತಿಯ ಶಿಕ್ಷಣದ ಕಾಯಿದೆಯಂತೆ, ಪ್ರಾಥಮಿಕ ಶಿಕ್ಷಣವನ್ನು ಸ್ಕೂಲ ಬೋರ್ಡುಗಳಿಗೆ ಅರ್ಪಿಸುವರು. ಈ ವ್ಯವಸ್ಥೆಯು ಇದೇ ಬರುವ ಜನವರಿ ೧ ನೇ ತಾರೀಖಿನಿಂದ ಪ್ರಾರಂಭವಾಗಬೇಕೆಂದು ಯೋಜಿಸಲ್ಪಟ್ಟಿದೆ. ತಾ. ೨-೧೧-೧೯೨೩ ನೇಗೆ ಹೊರಡಿಸಿದ ಸರ್ಕ್ಯೂಲರ ನಂಬರ ೩೩೭೨ ನೇದರಂತೆ ಈ ಸ್ಥಾನಿಕ ಅಧಿಕಾರಿಗಳು ಶಿಕ್ಷಕ ಇನ್ಸಪೆಕ್ಟರ ಮೊದಲಾದ ಕಾರಭಾರಿಗಳ ಸಂಬಳವನ್ನು ನಿರ್ಣಯಿಸಬೇಕೆಂದು ಸೂಚಿಸಲಾಗಿದೆ. ಈ ಯೋಜನೆಯಂತೆ, ಈಗ ಪ್ರಾಥಮಿಕ ಶಿಕ್ಷಕರು ಸ್ಥಾನಿಕ ಸ್ಕೂಲ ಬೋರ್ಡುಗಳಗೂಡ ಒದ್ದಾಡಬೇಕಾಗುವದು. ಸ್ಕೂಲ ಬೋರ್ಡುಗಳ ಹತ್ತಿರ ಚಾಲು ಶಿಕ್ಷಣವನ್ನು ಚಾಲು ಖರ್ಚಿನಿಂದ ನಡಿಸುವಷ್ಟು ನಿಧಿಯು ದೊರಕುವದು ಅಪರೂಪ. ಅದರೊಳಗೆ ಶಿಕ್ಷಕರ ಸಂಬಳವನ್ನು ಏರಿಸುವ ಬಗೆ ಹೇಗೆಂದು ವಿಚಾರಿಸಿದರೆ, ಯಾರಿಗೂ ತಿಳಿಯುವದಾಗಿದೆ 'ಹೊಸ ಕರಗಳನ್ನೆತ್ತಿರಿ', 'ಶಿಕ್ಷಣ ಬೇಕಾದರೆ, ... ಕೆರಿರಿ' ಎಂದು ಹೇಳಬಹುದು.

ಆದರೆ, ನೌಕರಶಾಹಿಯು ಈ ವರೆಗೆ ಅನೇಕ ರೂಪಗಳಿಂದ ಕರಗಳನ್ನೆತ್ತಿ, ಕರದ ಮಾನವು ಈಗ ಪರಮಾವಧಿಯಾಯಿತು, ಎಂದು ಅರಿತು, ಮತ್ತಷ್ಟು ಕರಗಳನ್ನೇರಿಸುವದು ಸುರಕ್ಷಿತವಲ್ಲೆಂದು 'ಸ್ವರಾಜ್ಯ' ರೂಪದಿಂದ ಖರ್ಚಿನ ಖಾತೆಗಳನ್ನು ನಮಗೆ ವಹಿಸಿದೆ. ದೊಡ್ಡ ದೊಡ್ಡ ಕರಗಳನ್ನು ಎತ್ತುವ ಹಾಗು ಅವನ್ನು ಖರ್ಚು ಮಾಡುವ ಅಧಿಕಾರವು ಇನ್ನೂ ನಮಗೇ ಪ್ರಾಪ್ತವಾಗಿಲ್ಲ, ಅದನ್ನು ಪ್ರಜೆಗಳಿಗೆ ಕೊಡುವ ಇರಾದೆಯೂ ನೌಕರಶಾಹಿಗಿಲ್ಲ ಇದರಿಂದಲೇ ಶ್ರೀ|| ಮುಕುಂದರಾಯರು ಪ್ರಾಥಮಿಕ ಶಿಕ್ಷಕರ ಹಿತರಕ್ಷಣೆಯ ಬಗ್ಗೆ ತಕ್ಕ ಕಾನೂನುಗಳನ್ನು ಏರ್ಪಡಿಸಿದ ಹೊರತು, ಅವರನ್ನು ಸ್ಥಾನಿಕ ಸ್ಕೂಲ ಬೋರ್ಡುಗಳಿಗೆ ಕೊಡಲಾಗದೆಂದು ಅಭಿಪ್ರಾಯಪಟ್ಟಿರುವರು. ಸ್ಕೂಲಬೋರ್ಡುಗಳ ಕಾರಭಾರವು ಸರ್ಕ್ಯೂಲರಿನಂತೆ, ಶೀಘ್ರವೇ ಪ್ರಾರಂಭವಾಗುವದಿದ್ದದರಿಂದ, ಶಿಕ್ಷಕರು ಈ ವರೆಗೆ ತಮ್ಮ ದುರ್ದಶೆಯನ್ನು ಪರಿಪರಿಯಿಂದ ಸರಕಾರಕ್ಕರುಹಿರುವ ಮೂಲಕ, ಅವರ ದರ್ಜೆಗನುರೂಪವಾದ ಸಂಬಳದ ಮಾನವನ್ನು ನಿರ್ಣಯಿಸಿ, ಆ ಬಗ್ಗೆ ಅವಶ್ಯವಿರುವ ಗ್ರಾಂಟುಗಳನ್ನು ಸ್ಥಾನಿಕ ಬೋರ್ಡುಗಳಿಗೆ ಪೂರೈಸಿದ ಹೊರತು, ಅವರನ್ನು ಬೋರ್ಡುಗಳಿಗೆ ವಹಿಸಿಕೊಡಬಾರದೆಂದು ಯಾರೂ ಹೇಳುವರು. ಮುಂಬಯಿಯ ಸಭೆಯಲ್ಲಿ ನಿರ್ಣಯವಾದಂತೆ, ಸೊಲ್ಲಾಪುರದ ಸ್ಕೇಲನ್ನೇ ಅಮಲಿನಲ್ಲಿ ತರಬೇಕೆಂದು ನಮ್ಮ ಮತವಿದೆ ಆದರೂ, ನಮ್ಮಲ್ಲಿಯ ಶಿಕ್ಷಕರು ಸೂಚಿಸಿದ ಮಧ್ಯಸ್ಥಿಕೆಯಂತೆ, ನಾಮದಾರ ಪರಾಂಜಪೇಯವರು ಪ್ರತ್ಯಕ್ಷ ಒಪ್ಪಿದಂತೆ, ಸಾರೇ-ಪರಾಂಜಪೇಯವರ ಸ್ಕೇಲನ್ನಾದರೂ ಕೂಡಲೆ ಅಮಲಿನಲ್ಲಿ ತಂದು ಪ್ರಾಥಮಿಕ ಶಿಕ್ಷಕರ ಹೊಟ್ಟೆಯ ಗೋಳನ್ನು ಪರಿಹರಿಸುವದು ಸಮಯೋಚಿತವೆಂದು ನಮಗೆ ತೋರುತ್ತದೆ. ಇಂದಿಗೆ ಮತ್ತೇನು ಹೇಳುವದು ?

ಸ್ಫುಟ ಸೂಚನೆಗಳು.

೧ ನಮ್ಮ ಸರಕಾರಿ ರಿಪೋರ್ಟುಗಳಲ್ಲಿ ಮಹಾತ್ಮರಿಗೆ ದೇಶದೊಳಗೆ ಒದಗಿದ ಅನರ್ಥಪರಂಪರೆಗಳ ಕರ್ತರೆಂದು, ಇತ್ತಲಾಗಿ ಹೇಳುವ ಒಂದು ಪ್ರಘಾತ ಬಿದ್ದಿದೆ ಆದರೆ, ಬಡೋದಾ ಸಂಸ್ಥಾನದ ೧೯೨೧ನೇ ಇಸವಿಯ ಖಾನೇಸುಮಾರಿ ರಿಪೋರ್ಟಿನಲ್ಲಿ ಮಹಾತ್ಮರ ಪ್ರಭಾವದಿಂದ ಉಂಟಾದ ಕಲ್ಯಾಣವನ್ನು ಖಾನೆಸುಮಾರಿ ಸುಪರಿಂಟೆಂಡೆಂಟರು ಈ ಪ್ರಕಾರ ನಮೂದಿಸಿರುವರು — "ಮಹಾತ್ಮರ ವ್ಯಕ್ತಿಗತ ಪ್ರತಾಪದಿಂದ ಬಹುಜನಸಮಾಜದ ಮೇಲೆ ಪ್ರಚಂಡ ಪರಿಣಾಮವಾಗಿದೆ. ಗುಜರಾಥಿ ಸಮಾಜವೆಲ್ಲ ಅವರನ್ನು ಸಾಧುಪುರುಷರೆಂದು ಸತ್ಕರಿಸುತ್ತದೆ. ಅವರಿಗೆ ಕಾರಾಗೃಹವಾಸವನ್ನು ವಿಧಿಸುವ ಶಿಕ್ಷೆಯಲ್ಲಿಯೇ ಅವರ ನಿರ್ಮಲ ಉದ್ದೇಶವೂ, ಉಚ್ಚ ಶೀಲವೂ ಹೊರಗೊಂಡಿವೆ. ಇವರ ಚಳವಳಿಯಿಂದ ಪ್ರಜೆಗಳೊಳಗಿರುವ ಇಸ್ಲಾಮವಿರೋಧಕ ಬುದ್ಧಿಗೆ ಕಡೆಬಿದ್ದಿದೆ. ಇದೊಂದು ಧಾರ್ಮಿಕ ಜೀವನಕ್ರಮದಲ್ಲಿ ಉಂಟಾದ ಜಾದಾ ಬದಲಾವಣೆಯು ಇದಲ್ಲದೆ, ಅಸ್ಪೃಶ್ಯತಾಕಲಂಕನಿವಾರಣೆಗಾಗಿ, ಹಿಂದುಳಿದ ವರ್ಗದವರ ಉದ್ಧಾರಕ್ಕಾಗಿ, ಪ್ರಜೆಗಳ ಮನೋಭೂಮಿಯನ್ನು ಅವರು ತಯಾರಿಸಿರುವರು. ಕ್ರೈಸ್ತಮತ ಹಾಗು ಅವರ ಸಂಸ್ಥಾಪಕರ ಬಗ್ಗೆ ಗಾಂಧಿ ಚಳವಳಿಯು ಅನುಸರಿಸಿದ ಧೋರಣವು ಸಹ, ಜನನೀಯುವಿದೆ ಹಿಂದೂ ಮತದ ಪೂರ್ವದ ಪುನರುದ್ಧಾರದ ಕಾಲದಲ್ಲಿ ಪ್ರಕಟವಾದ ಧರ್ಮಾಂಧ ಅಸಹಿಷ್ಣುತೆಯು ಗಾಂಧಿ ಚಳವಳಿಯಲ್ಲಿಲ್ಲ ಕ್ರೈಸ್ತ ಧರ್ಮಗುರು ಹಾಗು ಬೈಬಲದೊಳಗಿನ ಬೋಧಗಳ ಬಗ್ಗೆ ಅವರು ಪ್ರದರ್ಶಿಸಿದ ಆದರದಿಂದ ಪುರಾತನ ಮತದ್ವೇಷವನ್ನು ಅಳಿಯಲು ಬಲು ಅನುವಾಗಿದೆ. ಈ ಪರಿಣಾಮಗಳು ಎಷ್ಟರಮಟ್ಟಿಗೆ ಚಿರಸ್ಥಾಯಿಯಾಗುವದೆಂಬುದು ಭವಿಷ್ಯಕಾಲವೇ ನಿರ್ಣಯಿಸಬೇಕು" ಬಡೋದಾ ಸಂಸ್ಥಾನಕ್ಕೊಳಪಟ್ಟ ತಮ್ಮ ಗುರ್ಜರ ಬಾಂಧವರಲ್ಲಿ ಮಹಾತ್ಮರು ಉಂಟುಮಾಡಿದ ಜಾಗೃತಿಯನ್ನೂ, ಸುಪರಿಣಾಮಗಳನ್ನೂ ಲಕ್ಷಿಸಿದರೆ, ಮಹಾತ್ಮರ ಮುಖ್ಯ ಕಾರ್ಯಕ್ಷೇತ್ರವಾದ ಬ್ರಿಟಿಶ ಹಿಂದುಸ್ಥಾನದಲ್ಲಿ ಬಹಳೇ ಸುಪರಿಣಾಮಗಳಾಗಿರುವವೆಂದು ಯಾರೂ ಹೇಳುವರು. ಆದರೂ, ನಮ್ಮ ಸರಕಾರಿ ರಿಪೋರ್ಟುಗಳಲ್ಲಿ ಈ ಬಗ್ಗೆ ಮಹಾತ್ಮರ ಸ್ತುತಿಪರ ಶಬ್ದ ದೊರಕುವದೇನು? ಮಹಾತ್ಮರು ಲೋಕಕಲ್ಯಾಣಕರರು; ಲೋಕೋತ್ತರ ಪುರುಷರು. ಅವರಿಗೆ ಸ್ತುತಿಯೂ, ನಿಂದೆಯೂ ಒಂದೇ ಆದರೆ, ಪ್ರಜೆಗಳ ಕಲ್ಯಾಣ ಇಚ್ಛಿಸುವ, ಪ್ರಜಾ ಕಲ್ಯಾಣಕ್ಕಾಗಿ ದುಡಿಯುತ್ತದೆಂದು ಮೆರೆಯುವ ನೌಕರಶಾಹಿಯು ಅವರು ಮಾಡಿದ ದೇಶಸೇವೆಯನ್ನು ಗಣಿಸುವಷ್ಟು ಏಕೆ ಉದಾರಬುದ್ಧಿಯನ್ನು ಪ್ರದರ್ಶಿಸಬಾರದು ?

---

೨. ನಮ್ಮ ಪ್ರಾಂತಾಧಿಪರಾದ ನಾಮದಾರ ಸರ್ ಜೋರ್ಜ ಲ್ಲೊಯ್ಡ್‌ರವರ ಕಾರಕೀರ್ದಿಯು ಈಗ ಸಮಾಪ್ತವಾಯಿತು, ನಾಳೆ ತಾರೀಖು ೮ ನೇ ಡಿಶಂಬರಕ್ಕೆ ಅವರು ಮುಂಬಾಪುರಿಗೆ ಅಖೈರ ಸಲಾಮು ಹೊಡೆಯುವರು. ಆಗ, ಮುಂಬಯಿಯ ಮ್ಯುನಿಸಿಪಾಲಿಟಿಯು, ಅವರಿಗೆ ಮುಂಬಾಪುರಸ್ಥರ ವಿದ್ಯಮಾನ ಮಾನಪತ್ರವನ್ನೊಂದು ಸಮರ್ಪಿಸಬೇಕೆಂದು ಕೆಲ ಗವ್ಹರ್ನರನಿಷ್ಠರು ಯೋಜಿಸಿದರು ಆದರೆ, ಈ ಪ್ರಶ್ನೆಯು ರೀತಿಯಂತೆ ಚರ್ಚಿಸಬೇಕೆಂದು ಅನೇಕ ಸಭಾಸದರು ತಕರಾರು ಮಾಡಿದರೂ, ಈ ಮಾನಪತ್ರದ ಪ್ರಶ್ನೆಯನ್ನು ಮೊಟ್ಟಮೊದಲು ಚರ್ಚಿಸಬೇಕೆಂದು ಕಳೆದ ಗುರುವಾರ ತಾ. ೧೫ನೇಗೆ ರಾ| ವಸಂತ ದಾಭೋಲಕರರವರು ಸೂಚನೆ ತಂದರು. ಇದಕ್ಕೆ ಮ್ಯುನಿಸಿಪಲ್ ನೆಶನಲ್ ಪಾರ್ಟಿಯು ವಿದ್ಯಮಾನ ಶ್ರೀ| ವಿಠ್ಠಲಭಾಯಿ ಪಟೇಲ ಮೊದಲಾದವರು ಅಡ್ಡಿ ತಂದರೂ, ಅವರಿಂದ ಏನೂ ಫಲಪ್ರಾಪ್ತಿಯಾಗದೆ, ನಾಮದಾರರಿಗೆ ಅಖೈರ ಸಲಾಮು ಹೊಡೆಯುವಾಗ, ಮಾನಪತ್ರವನ್ನೀಯಬೇಕೆಂಬ ಠರಾವು ಬಹುಮತದಿಂದ ಮಂಜೂರಾಯಿತು. ೪೫ ಮಂದಿಗಳು ಅನುಕೂಲ ಮತಕೊಟ್ಟರೆ; ೩೯ ಮತಗಳು ಪ್ರತಿಕೂಲವಾದವು ಹೀಗೆ ೬ ಮತಗಳಿಂದ ಠರಾವು ಮಂಜೂರಾಯಿತು. ಅನುಕೂಲ ಮತ ಕೊಟ್ಟವರಲ್ಲಿ ೧೫ ಮಂದಿಗಳು ಸರಕಾರದಿಂದ

ನೇಮಣೂಕಿ ಹೊಂದಿದವರಿರುವರಂತೆ. ಅಂದರೆ, ಪ್ರಜಾ ಪ್ರತಿನಿಧಿಗಳಲ್ಲಿ ೩೦ ಅನುಕೂಲ ಮಂದಿಗಳು ನಾಮದಾರರಿಗೆ ಮಾನಪತ್ರ ಕೊಡಬೇಕೆನ್ನುವವರಾದರು. ೩೯ ಮಂದಿಗಳು ಪ್ರತಿಕೂಲಪಟ್ಟದರಿಂದ, ಸೂಕ್ಷ್ಮವಾಗಿ ನೋಡಿದರೆ ಈ ಠರಾವು ಬಹುಮತದಿಂದ ನಾಮಂಜೂರಾಯಿತೆಂದೇ ಹೇಳಬಹುದು. "ಮುಂಬಾಪುರಸ್ಥರ ಹೆಸರಿಲೆ ನೀವು ಮಾನಪತ್ರ ಕೊಡುತ್ತೀರಿ ಮುಂಬಯಿಯ ಮ್ಯುನಿಸಿಪಾಲಿಟಿಯ ಮತದಾರರ ಮತಗಳನ್ನು ಈ ಬಗ್ಗೆ ಕೇಳ್ಕೊಳ್ಳಿರಿ ಮುಂಬಾಪುರಸ್ಥರು ಬಹುಮತದಿಂದ ಕೊಡಬೇಕೆಂದು ಮತಕೊಟ್ಟರೆ, ನಮ್ಮದೇನು ಅಡ್ಡಿ ಇಲ್ಲ" ಎಂದು ಶ್ರೀ। ನಿಸ್ತಾರ್ಲೆ ಮೊದಲಾದ ಸದಸ್ಯರು ಇಷ್ಟು ಸಹ ಸೂಚನೆ ತಂದುಕೊಂಡರು. ಅದಕ್ಕೂ ಒಪ್ಪದೆ ಪ್ರಜಾಮತ ಪಡೆಯದೇ, ಬರೇ ಮ್ಯುನಿಸಿಪಾಲಿಟಿಯಲ್ಲಿ ಪ್ರತಿನಿಧಿಗಳಾಗಿದ್ದ, ಸಭಾಸದರ ಮತಗಳನ್ನು ಮಾತ್ರ ಎಣಿಕೆಯನ್ನು ಮಾಡಿ, ಅವರಲ್ಲಿ ಮಾನಪತ್ರ ಕೊಡಬೇಕೆನ್ನುವವರೆಷ್ಟು? ನಿರಾಕರಿಸುವವರೆಷ್ಟು? ಎಂಬುದನ್ನು ನೋಡಿದರೆ, ಬಹುಮತದಿಂದ ಮಾನಪತ್ರವು ನಾಮಂಜೂರಾಗುತ್ತಿತ್ತೆಂದು ಈಗಿನ ಮತಗಳ ಎಣಿಕೆಯಿಂದಲೇ ಸಿದ್ಧವಾಗುತ್ತದೆ. ಇತ್ತ ವಿರೋಧದಿಂದ, ಸರಕಾರದಿಂದ ನೌಕರರಿಂದ ಹಾಗು ಭಕ್ತರು ಸರಕಾರದಿಂದ ನೇಮಣೂಕಿ ಹೊಂದಿದವರ ಮತದ ಬಲದಿಂದ ಪಾಸು ಮಾಡಿಕೊಂಡ ಮಾನಪತ್ರದ ಬೆಲೆಯು ಬರೆದ ಕಾಗದಕ್ಕಿಂತ ಕಡಿಮೆ. ಇದೆಂದು ವಿಚಾರಿಗಳು ತಿಳಿಯುವರು. ಅಧ್ಯಕ್ಷರಾದ ರಾ। ಮೋದಿಯವರು ಸಹ ಇಂಥ ಮಾನಪತ್ರಕ್ಕೆ ಅನುಕೂಲರಿಲ್ಲೆಂದು ತಿಳಿಯುತ್ತದೆ. ಇಷ್ಟು ಹೀನ ಪ್ರತಿಯ ಮಾನಪತ್ರವನ್ನು ಪಡೆಯುವದು ಭೂಷಣವೆಂದು ನಾಮದಾರರ ಮತವಿದ್ದರೆ, ಅವರು ಅದನ್ನು ಪಡೆದು, ಆನಂದ ಹೊಂದಬಹುದು. ಸರ್ವಾನುಮತದಿಂದ, ಸಂತೋಷದಿಂದ ಮಾನಪತ್ರದ ಠರಾವು ಮಂಜೂರಾಗಿದ್ದರೆ, ಮುಂಬಯಿ ಮ್ಯುನಿಸಿಪಾಲಿಟಿಯ ಮಾನಪತ್ರಕ್ಕೆ ಮುಂಬಾಪುರಸ್ಥರ ಅಪ್ರತ್ಯಕ್ಷ ಬೆಂಬಲ ದೊರಕಿ, ಅದಕ್ಕೆ ವಿಶೇಷ ಮಹತ್ವವು ಪ್ರಾಪ್ತವಾಗುತ್ತಿತ್ತು, ನಾಮದಾರರಿಗೂ ಅದೊಂದು ಭೂಷಣವೆನಿಸುತ್ತಿತ್ತು. ಸದ್ಯ ಸ್ಥಿತಿಯಲ್ಲಿ ಮಾನಧನ ಪುರುಷರು ಇಂಥ ಮಾನಪತ್ರವನ್ನು ಎಂದೂ ಪಡೆಯರೆಂದು ನಮ್ಮ ಅಂದಾಜು. ಗವ್ಹರ್ನರರಾದರೋ, ಇಷ್ಟು ಅಸಂತೋಷದಿಂದ ಕೊಡಲ್ಪಡುವ ಮಾನಪತ್ರವನ್ನು ತಾವಾಗಿ ನಿರಾಕರಿಸಬೇಕೆಂದು ಯಾರಾದರೂ ಸೂಚಿಸುವದೂ ಸಮಯೋಚಿತವು

---

೩. ಮಾನಪತ್ರದ ಪ್ರಶ್ನೆಯನ್ನು ಬದಿಗೊತ್ತಿ. ನಾಮದಾರರ ಕಾರಭಾರವನ್ನು ವಿಮರ್ಶಿಸಿದರೆ, ನಮಗೇನು ತೋರುತ್ತದೆ? ವಿಖ್ಯಾತ 'ಕ್ರಾನಿಕಲ್' ಪತ್ರಿಕೆಯ ಸಂಪಾದಕರಾದ ಮಿ। ಹೊರ್ನಿಮನ್ ಸಾಹೇಬರಿಗೆ ಮೃತ್ಯುಶಯ್ಯೆಯ ಮೇಲಿಂದ ನಾಮದಾರರು ಹದ್ದುಪಾರು ಮಾಡಿದರು. ಈ ವರೆಗೆ ಅವರ ವಿಚಾರವಿಲ್ಲ. ಅಪರಾಧವ್ಯಾವದೆಂದು ಸಹ ಅವರಿಗೆ ತಿಳಿಸಲಿಲ್ಲ. ೩-೪ ವರ್ಷಗಳಿಂದ ಮಿ। ಹೊರ್ನಿಮನ್‌ರವರು ತಮ್ಮ ಕರ್ಮಭೂಮಿಯ ವಿರಹತಾಪವನ್ನು ಸಹಿಸುತ್ತಲಿರುವರು. ವಿಲಾಯತಿಯಲ್ಲಿ ಅವರಿಗೆ ಬಹಳೇ ಅಡಚಣೆಯ ಸ್ಥಿತಿಯು ಪ್ರಾಪ್ತವಾಗಿದೆ. ಇದಕ್ಕೆ ಜವಾಬದಾರರ್ಯಾರು! ವಿಖ್ಯಾತ ಕಂಗಾಲಿ ಬಿಟ್ಟೆ ಉರು, ಅಲ್ಲೀಬಂಧು ಮೊದಲಾದ ದೇಶಭಕ್ತರ ಕಾರಾಗೃಹವಾಸವು, ಇವರ ಕಾರಕೀರ್ದಿಯಲ್ಲಿಯೇ ಒದಗಿಬಂತು. ಅಲ್ಲಿ। ಬಂಧುಗಳಂಥ ದೇಶಸೇವಕರಿಗೆ ಕಾರಾಗೃಹವಾಸ ವಿಧಿಸಿದ ಕಾರಕೀರ್ದಿಯನ್ನು ಯಾವ ದೇಶಾಭಿಮಾನಿಯು ಮರೆಯುವನು? ಜಗದ್ವಂದ್ಯ ಮಹಾ ಪುರುಷನ ಕಾರಾಗೃಹವಾಸವೂ ಇದೇ ಕಾರಭಾರದಲ್ಲಿ ಸಂಭವಿಸಿತು. ಮಹಾತ್ಮರಂಥ ಅಹಿಂಸಾಪ್ರಸಾರಕರಿಗೆ ಧೈರ್ಯದಿಂದ ಕಳಿಹಿಸಿದ ಶ್ರೇಯಸ್ಸು ಸಹ ನಮ್ಮ ಈಗಿನ ಪ್ರಾಂತಾಧಿಪರದೇ. ಅವರಿಗೆ ೬ ವರುಷಗಳ ಶಿಕ್ಷೆಯಾದದ್ದೂ ಇವರ ಕಾಲದಲ್ಲಿಯೇ. ಇಂಥ ಪ್ರಚಂಡ ಕೃತ್ಯಗಳನ್ನು ತಮ್ಮ ಕಾರಕೀರ್ದಿಯಲ್ಲಿ ನೆರವೇರಿಸಿ, ಸ್ವದೇಶಕ್ಕೆ ಮರಳುವ ನಾಮದಾರ ಸರ್ ಲೆಸ್ಲಿ ವಿಲ್ಸನರವರನ್ನು ದೇಶಾಭಿಮಾನಿಗಳು ಎಂದೂ ಮರೆಯರು. ಇವರ ಗುಣವರ್ಣನವು ಈ ಮೂರು ಕೃತ್ಯಗಳಲ್ಲಿಯೇ ಒಳಗೊಂಡಿದೆ. ಈ ಮೂರೂ ಕೃತ್ಯಗಳು ಇತಿಹಾಸಪ್ರಸಿದ್ಧವಾಗುವದರಿಂದ, ಚಿರಸ್ಮರಣೀಯವಿವೆ. ಇಂಥ ಸತ್ಕೃತ್ಯಗಳನ್ನು ಮಾಡಿದ ನಾಮದಾರರಿಗೆ ಮಾನಪತ್ರವಿತ್ತು, ಅವರ ಗುಣಸಂಕೀರ್ತನೆ ಮಾಡುವ ಅವಶ್ಯಕತೆಯು ಯಾತಕ್ಕದೆ, ನಾಮದಾರ ಗವ್ಹರ್ನರರು ಈ ಕೃತ್ಯಗಳಿಂದ ದೇಶಾಭಿಮಾನಿಗಳ ಅಂತಃಕರಣ ಪಟಲಗಳಲ್ಲಿ ಅಮರರಾಗಿರುವರಲ್ಲವೇ?

---

೪. ಧಾರವಾಡದ 'ಕರ್ಮವೀರ', 'ನವಶಕ್ತಿ' ಪತ್ರಿಕೆಗಳ ಸಂಪಾದಕರಾದ, ಅಹಿಂಸಾಮಯ ಅಸಹಕಾರಿಗಳ ಪುರಸ್ಕರ್ತರಾದ ಶ್ರೀ॥ ರಂಗನಾಥ ರಾಮಚಂದ್ರ ದಿವಾಕರರವರಿಗೆ, ರಾಜದ್ರೋಹದ ಹಸ್ತಪತ್ರಿಕೆಯೊಂದನ್ನು ಮುದ್ರಣ ಮಾಡಿದ ಬಗ್ಗೆ, ೨ ವರುಷಗಳ ಕಠಿಣ ಶಿಕ್ಷೆ, ೫೦೦ ರೂಪಾಯಿಗಳ ದಂಡವಾದದ್ದು ಇದನ್ನು ಕೇಳಿ, ಅಖಿಲ ಕರ್ನಾಟಕಸ್ಥರಿಗೆ ಶ್ರೀ। ರಂಗನಾಥರಾಯರ ವಿರಹಶೋಕ ಉಂಟಾಗದಿರದು. ಶ್ರೀ। ರಂಗನಾಥರಾಯರು ನ್ಯಾಯಾಸನಕ್ಕೆ ಸಾದರಪಡಿಸಿದ ಹೇಳಿಕೆಯು ಮನನೀಯವಿದೆ. ಪ್ರತಿಯೊಬ್ಬ ದೇಶಾಭಿಮಾನಿಯು ಅದನ್ನು ಲಕ್ಷಪೂರ್ವಕ ಓದಬೇಕೆಂದು ನಮ್ಮ ಸೂಚನೆ ಇದೆ. ಅದನ್ನು ಇನ್ನೊಂದೆಡೆಯಲ್ಲಿ ಪ್ರಕಟಿಸಿರುವೆವು. ಅದರ ಮೇಲಿಂದ ನೌಕರಶಾಹಿಯು ಶ್ರೀ। ದಿವಾಕರರ ದೆಸ್ಸಿಗೆ ಶುಕ್ಲಕಾಷ್ಟದಂತೆ ಹೇಗೆ ತಾಗಿದೆಂಬುದು ಸ್ಪಷ್ಟವಾಗಿ ಕಾಣುವದು. ಆಕ್ಷೇಪಿತ ಲಾವಣಿಗಳ ಹಸ್ತಪತ್ರಿಕೆಯು 'ಕರ್ಮವೀರ' ಅಚ್ಚುಕೂಟದಲ್ಲಿ ಮುದ್ರಿತವಾಗಿ, ಈಗ ೮-೯ ತಿಂಗಳುಗಳಾದವು. ೪-೫ ತಿಂಗಳುಗಳ ಪೂರ್ವದಲ್ಲಿ, ಅಂದರೆ, ಲಾವಣಿ ಮುದ್ರಿತವಾದ ೨-೩ ತಿಂಗಳುಗಳಲ್ಲಿ ಹಸ್ತಪತ್ರಿಕೆಯನ್ನು ರಾಜದ್ರೋಹಿಯೆಂದು ಅಚ್ಚು ಹೊಡೆದು, ಅದರ ಪ್ರತಿಗಳನ್ನೆಲ್ಲ ಸರಕಾರವು ಜಪ್ತು ಮಾಡಿತು, ಆಗ ಪ್ರಕಾಶಕರ ಮೇಲಾಗಲಿ, ಮುದ್ರಕರ ಮೇಲಾಗಲಿ, ಏನೊಂದೂ ಖಟ್ಲೆ ನಡೆಯಲಿಲ್ಲ. ಪ್ರಕಾಶಕರಂತು ಇನ್ನೂ ವರೆಗೆ ತಮ್ಮ ಪ್ಟಕ್ಕೆ ಸಂಸಾರ ನಡಿಸುತ್ತಿರುವರು. ಹಸ್ತ ಪತ್ರಿಕೆಯು ರಾಜದ್ರೋಹಿಯೆಂದು ಸರಕಾರವು ಅಭಿಪ್ರಾಯಪಟ್ಟು, ಪ್ರತಿಗಳನ್ನೆಲ್ಲ ಜಪ್ತು ಮಾಡಿ ೪-೫ ತಿಂಗಳುಗಳಾದ ಮೇಲೆ, ಮುದ್ರಕರನ್ನು ಮಾತ್ರ ಸೆರೆಹಿಡಿದು, ೨ ವರುಷಗಳ ಸಶ್ರಮ ಶಿಕ್ಷೆಯನ್ನು ವಿಧಿಸುವದು ಕೇವಲ ನ್ಯಾಯವೆಂದು ಹೇಳುವವರು ಹೇಳಲಿ. ಅಸಹಕಾರಿಗಳು ಬಚಾವು ಮಾಡುವದಿಲ್ಲೆಂದು ವೀರರಿಗೆ ಈ ಪರಿಯಿಂದ ಕಾಡುವದು ಧರ್ಮವೆಂದು, ಅವರಿಗಿರುವ ಅಧಿಕಾರದ ಸದುಪಯೋಗವೆಂದು ಅಧಿಕಾರಿಗಳು ತಿಳಿದಿದ್ದರೆ, ಅದಕ್ಕೆ ಯಾರದೇನು ಉಪಾಯ? ಶ್ರೀ। ದಿವಾಕರರು ನುಡಿದಂತೆ, ಆತ್ಮಕ್ಲೇಶದ ಸಾಮರ್ಥ್ಯವು ಅವರ್ಣನೀಯವಿದೆ. ಅಸಹಯೋಗಿಗಳ ಆತ್ಮಕ್ಲೇಶ ಪರಂಪರೆಯಿಂದಲೇ ಅಸಹಯೋಗವು ದೇಶದಲ್ಲೆಲ್ಲ ಹಬ್ಬಿ, ದಿನೇ ದಿನೇ ಮುಂದರಿಯುತ್ತದೆ. ಅಸಹಯೋಗದ ದೃಷ್ಟಿಯಿಂದ ವಿಚಾರಿಸಿದರೆ, ಶ್ರೀ। ರಂಗರಾಯರು ಸಂತೋಷದಿಂದ ಕಾರಾಗೃಹವಾಸವನ್ನು ಸೇರಿಕೊಂಡು, ಅಮೂಲ್ಯ ದೇಶಸೇವೆಯನ್ನೇ ಜರುಗಿಸುವರೆಂದು ಎಲ್ಲರೂ ಉದ್ಗರಿಸಿ, ಶ್ರೀಯುತರಿಗೆ ಮನಃಪೂರ್ವಕ ಅಭಿನಂದಿಸುವರು, ಅವರ ಆಯುರಾರೋಗ್ಯಚಿಂತನ ಮಾಡುವರು. 'ಕರ್ಮವೀರ', 'ನವಶಕ್ತಿ' ಪತ್ರಿಕೆಗಳು ಅವರ ಸೇವೆಗೆ ವಿಮುಖವಾಗವವು ಕರ್ನಾಟಕ ಮಾತೆಯು ವೀರ ಪುತ್ರನ ವಿರಹಶೋಕದಿಂದ ಬಳಲುವದು. ಆದರೂ, ಕರ್ನಾಟಕಸ್ಥರೆಲ್ಲರು ಎದೆಗುಂದದೆ, ಶ್ರೀ। ರಂಗನಾಥರಾಯರ ಕಾರ್ಯವನ್ನು, ಅಂದರೆ, ಅಸಹಯೋಗವನ್ನು ವಿಶೇಷ ತೀವ್ರತೆಯಿಂದ ನಡಿಸಿ, ಅವರ ಬಂಧಮುಕ್ತತೆಯನ್ನು ಸಾಧಿಸಲೆತ್ನಿಸಬೇಕು. ಅದರಿಂದಲೇ ಅವರಿಗೆ ಸಂತೋಷವಾಗುವದು; ತಮ್ಮ ಕಲ್ಯಾಣವಾಗುವದು. ರಾಷ್ಟ್ರಸೇವೆಯನ್ನು ಉತ್ಸಾಹದಿಂದ ನಡಿಸಲು ಕರ್ನಾಟಕಸ್ಥರು ಉದ್ಯುಕ್ತರಾದರೆ, ಶ್ರೀ। ದಿವಾಕರರ ಕಾರಾಗೃಹವಾಸವು ಸಾರ್ಥಕವಾಗುವದೆಂದು ನಾವು ಹೇಳಬೇಕೇನು?

---

೫. 'ಧ್ವಜದ ವಿಜಯ'ದ ಲೇಖದಲ್ಲಿ ಕಾರವಾರ, ಕುಮಟಾ, ಶಿರ್ಸಿ ಶಹರುಗಳಲ್ಲಿ ಮತದಾರರು ಕೊಂಗ್ರೆಸ್ಸಿನ ಉಮೇದವಾರರಿಗೇ ಹೆಚ್ಚಾಗಿ ಮತ ಕೊಟ್ಟರೆಂದು ನಾವು ಒಂದು ವಿಧಾನ ಮಾಡಿದ್ದೆವು. ಈ ಬಗ್ಗೆ ಕಾರವಾರದಿಂದ ಶ್ರೀ। ಎಮ್. ಡಿ. ನಾಡಕರ್ಣಿಯವರು ಖುಲಾಸೆ ಮಾಡುವದೇನಂದರೆ:— "ಕಾರವಾರ ಶಹರಿನಲ್ಲಿ ೨ ಮತದಾನ ಸ್ಥಳಗಳಿದ್ದವು. ಒಂದು ಕಡೆಯಲ್ಲಿ ಶ್ರೀ। ಕಕೀಯವರಿಗೆ ಶೇಕಡಾ ೬೦ರಷ್ಟು ಮತಗಳು ಬಿದ್ದವು. ರಾ। ಕಲ್ಯಾಣಪುರಕರರಿಗೆ ಸುಮಾರು ಶೇಕಡಾ ೪೦ರಷ್ಟು ಮತಗಳು ದೊರಕವು. ಬರೇ ೪-೫ ಮತಗಳು ರಾ। ಕೇಶವೈನವರು ಪಡೆದರು. ೨ನೇ ಮತದಾನ ಸ್ಥಳದಲ್ಲಿ ಶ್ರೀ। ಕಕೀಯವರಿಗೆ ಶೇಕಡಾ ೮೦; ಕಲ್ಯಾಣಪುರಕರರಿಗೆ ಉಳಿದ ೨೦; ಹೀಗೆ ಮತವಿಭಾಗಣಿಯಾಯಿತು." ಶ್ರೀ। ನಾಡಕರ್ಣಿಯವರು ಮತ್ತೊಂದು ಸಂಗತಿಯನ್ನು ನಮೂದಿಸಿರುವರು. ಕಾರವಾರ ಶಹರದಲ್ಲಿ ಬಹುಭಾಗಿ ಹಾಗು ಇಬ್ಬ ಚಮಗಾರ ಮತದಾರರು ದ ಸ್ಟ್ರೀಯ ಸಭಾಭಿಮಾನಿಯವರಾದ ಶ್ರೀ। ಕರ್ಕಿಯವರಿಗೇ ಮತದಾನ ಮಾಡಿದ್ದಲ್ಲದೆ, ನೇಮಸ್ತ—ಸ್ವತಂತ್ರ ಪಕ್ಷಗಳ ಉಮೇದ್ವಾರರಿಗೆ ಮತ ಕೊಡಲಿಲ್ಲ. ಶ್ರೀ। ನಾಡಕರ್ಣಿಯವರ ಹೇಳಿಕೆಯಂತೆ, ಕಾರವಾರಸ್ಥರಿಗೆ ಮೂರಿದ್ದ ನಮ್ಮ ತಪ್ಪು ಗ್ರಹಿಕೆಯೆಂದು ನಾವು ಆನಂದದಿಂದ ಒಪ್ಪುವೆವು. ಇಂಥ ತಪ್ಪುಗಳನ್ನು ತಿದ್ದುಕೊಳ್ಳಲು ನಾವು ಯಾವಾಗಲೂ ತಯಾರಿರುವೆವು. ಈ ಬಗ್ಗೆ ಶ್ರೀ। ನಾಡಕರ್ಣಿಯವರ ಮನಃಪೂರ್ವಕ ಆಭಾರ ಮನ್ನಿಸಿ, ಕಾರವಾರಸ್ಥರ ರಾಷ್ಟ್ರಾಭಿಮಾನವನ್ನು ಸಂತೋಷದಿಂದ ನಮೂದಿಸುವೆವು.

ಶ್ರೀ। ಬೆಳವಿಯವರ ವಿಜಯ.

ವರಿಷ್ಠ ಕಾಯದೇ ಕೌನ್ಸಿಲಿನ ಚುನಾವಣೆಯ ಪರಿಣಾಮವು ಮೊನ್ನೆ ಮಂಗಳವಾರ ತಾರೀಖು ೨೦ ನೇಗೆ ಬೆಳಗಾಂವಿಯಲ್ಲಾಯಿತು. ದಕ್ಷಿಣ ಭಾಗದ ತರ್ಫೆನ ಸಭಾಸದತ್ವಕ್ಕೆ ಇಬ್ಬ ಉಮೇದವಾರರು ನಿಂತಿದ್ದರು. ಅವರಲ್ಲಿ ಶ್ರೀ। ದತ್ತಾತ್ರೇಯ ವೆ. ಕಟೀಲ ಬೆಳವಿಯವರು ವಿಜಯಿಯಾಗಿರುವರು. ಶ್ರೀ। ಕರವೀರಪ್ಪ ಕುಲಕರ್ಣಿಯವರಿಗಿಂತ ಇವರಿಗೆ ೨೫೮೦ ಮತಗಳುಗಳು ಹೆಚ್ಚು ದೊರೆತವು. ದಕ್ಷಿಣಭಾಗದ ತರ್ಫೆನಿಂದ ವರಿಷ್ಠ ಕಾಯದೇ ಕೌನ್ಸಿಲಿನಲ್ಲಿ ಅವರೀಗ ಪ್ರತಿನಿಧಿಗಳಾಗುವರು.

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ವಿಶೇಷ. ಊರ ಅಡಿಕೆಯ ಹಂಗಾಮು ತೀರುತ್ತ ಬಂತು. ಘಟ್ಟದ ಮೇಲಿಂದ ಅಲ್ಪ ಸ್ವಲ್ಪ ಅಡಿಕೆ ಬರಹತ್ತಿದೆ.

ಧಾರೇಶ್ವರ ಅತ್ತ ಕಡೆಗೆ ವ್ಯಾಘ್ರರಾಜನ ಹಾವಳಿ

ರಾ। ರಾಮಾ ಹನುಮಂತ ಶ್ಯಾನಭಾಗರು ಇಂದೊತ್ತನು ಬೇಡಿ, ಮಾಡಿದ ಅರ್ಜಿಯ ನಿಕಾಲಿಯು, ಮೊನ್ನೆ ಮಂಗಳವಾರ ತಾ ೨೦ ನೇಗೆ ಹೇಳಲಾಯಿತು. ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ ವಿಶ್ವಸ್ತರಾದ ರಾ। ಗೋಪಾಳ ಸುಬ್ಬಯ್ಯ ಶ್ಯಾನಭಾಗ, ಗಣಪಯ್ಯಾ ಕೃಷ್ಣಪ ಕಿಣಿ, ರಾಮಾ ಹನುಮಂತ ಶ್ಯಾನಭಾಗ (ಅರ್ಜದಾರ) ಈ ಮೂವರಿಗೆ ದೇವಸ್ಥಾನದಲ್ಲಿ ದೇವಕಾರ್ಯ ಮಾಡಗೊಡದಾರದೆಂದು ಪ್ರತಿಬಂಧಕ ಹುಕುಮು ಆಗಿದೆ.

ಕಳೆದ ಶುಕ್ರವಾರ ೧೬ ನೇ ತಾರೀಖಿಗೆ ಮಧ್ಯವರ್ತಿ ಖಿಲಾಫತ ಕಮಿಟಿಯ ಆಜ್ಞೆಯಂತೆ, ಇಲ್ಲಿಯ ಮಹಮ್ಮದೀಯರು ಮಸೀದಿಯಲ್ಲಿ ಸೇರಿಕೊಂಡು, ನಾಡಿಕೆಯ ಪ್ರಾರ್ಥನೆಯಾದ ಬಳಿಕ, ಜಜಿರಾತ-ಅಲ್-ಅರಾಬ ಪ್ರದೇಶದ ಸ್ವಾತಂತ್ರ್ಯಪ್ರಾಪ್ತಿಯ ಬಗ್ಗೆ ಪ್ರಾರ್ಥನೆ ನಡಿಸಿದರು.

ಇಂದಿನ ಪತ್ರಿಕೆಯ ಜೋಡಿಯಲ್ಲಿರುವ ಹಳಿಯಾಳ ಮ್ಯುನಿಸಿಪಾಲಿಟಿಯ ಜಮಾಖರ್ಚಿನ ಪತ್ರಿಕೆಯನ್ನು ವಾಚಕರು ಅವಲೋಕಿಸುವರೆಂದು ತೋರಿತು.

ಬಂಕೇರಿ— ಇಲ್ಲಿ ತಾರೀಖು ೧೬ ನೇ ದಿವಸ ಮಧ್ಯವರ್ತಿ ಖಿಲಾಫತ ಕಮಿಟಿಯಿಂದ ಬರೆದು ಬಂದಂತೆ, ತಾಲೂಕಾ ಖಿಲಾಫತ ಕಮಿಟಿಯ ತರ್ಫೆನಿಂದ 'ಜಜಿರಾತ್-ಅಲ್-ಅರಾಬ' ಸ್ವಾತಂತ್ರ್ಯ ದಿನವನ್ನು ಪಾಲಿಸಲಿಕ್ಕೆಂದು ಜಾಹೀರ ಸಭೆಗೂಡಿತ್ತು. ಅಧ್ಯಕ್ಷಸ್ಥಾನದಲ್ಲಿ ಶ್ರೀ। ಹೈದರ ಸಾಹೇಬರು ವಿರಾಜಮಾನರಾಗಿದ್ದರು. ಶ್ರೀ। ಹಲದೀಪೂರ ಕೃಷ್ಣರಾಯರು—ಧರ್ಮಾಭಿಮಾನವಿದ್ದ ಪ್ರತಿಯೊಬ್ಬ ಮುಸಲ್ಮಾನನು ತಮ್ಮ ಪವಿತ್ರ ಸ್ಥಾನಗಳನ್ನು ಸ್ವತಂತ್ರ ಮಾಡಲಿಕ್ಕೆ ಯಾಕೆ ಪ್ರಯತ್ನಿಸಬೇಕೆಂತಲೂ, ತುರ್ಕಸ್ಥಾನವು ಸ್ವತಂತ್ರವಾದರೂ, ಮುಸಲ್ಮಾನರ ಪವಿತ್ರ ಸ್ಥಾನಗಳು ಇನ್ನೂ ಸ್ವತಂತ್ರವಾಗದೆ ಇದ್ದದರಿಂದ, ನಿಜವಾಗಿ ಖಿಲಾಫತ ಪ್ರಶ್ನೆಯು ಪೂರ್ಣ ಬಿಡುಗಡೆಯಾಗಲಿಲ್ಲವೆಂತಲೂ, ಮುಸಲ್ಮಾನರು ಈ ಕೆಲಸದಲ್ಲಿ ಹಿಮ್ಮನಸ್ಸಿನಿಂದಲೂ, ಸುಸಂಘಟಿತವಾಗಿಯೂ ಪ್ರಯತ್ನ ಮಾಡಬೇಕೆಂತಾ ಹೇಳಿ, ಪರಿಣಾಮಕರ ವ್ಯಾಖ್ಯಾನವನ್ನು ಮಾಡಿದರು. ಮಿ। ಆದಮ ಸಾಹೇಬರು ಮುಸ್ಲಿಮ್-ಮುದೀನಾದ ಸದ್ಯದ ಸ್ಥಿತಿಯು ವಿಷದವಾಗಿ ತಿಳಿಸಿಹೇಳಿದರು. ಮಹಾತ್ಮರ ಹಾಗೂ ಅಲ್ಲೀಬಂಧುಗಳ ಜಯಘೋಷದಲ್ಲಿ ಸಭೆಯು ಮುಕ್ತಾಯವಾಯಿತು.

ಅದೇ ದಿವಸ ರಾತ್ರಿ ೮। ಘಂಟೆಗೆ, ಕಪ್ರೆ ಜಾತ್ರೆಯಲ್ಲಿ ಲೇತಕೀ-ಬಿನ್‌ಲೇತಕೀ ಸಂಬಂಧ ಗ್ರಾಮಸ್ಥರು ಹಣವನ್ನೆತ್ತಿದ್ದರ ತೀವ್ರ ಪ್ರತೀಕಾರ ಮಾಡಲಿಕ್ಕೆ ಶ್ರೀ। ಸುಬ್ರಾಯ ಹಲದೀಪೂರಕರರ ಅಧ್ಯಕ್ಷತೆಯಲ್ಲಿ ಜಾಹೀರ ಸಭೆಗೂಡಿತು. ಶ್ರೀ। ಗಣಪತರಾವ ನಾಡಕರ್ಣಿಯವರು, ಗ್ರಾಮಸ್ಥರು ದೇವಾಯದೇಳರತನದಿಂದ ಅಜ್ಞ ಜನರ ಕಡೆಯಿಂದ ಹೇಗೆ ಕರವನ್ನು ವಸೂಲ ಮಾಡಿದರೆಂಬ ಬಗ್ಗೆ ಸಾಧಾರ ವಿವರಿಸಿಹೇಳಿ, ಅಂದದ್ದೇನಂದರೆ— "ಈ ಕಾಯಿದೆಯ ಪ್ರತೀಕಾರವನ್ನು ಎಲ್ಲರೂ ತಮ್ಮ ತಮ್ಮ ರೀತಿಯಿಂದ ಮಾಡಿ, ಇದರ ದುರುಪಯೋಗವಾಗದಂತೆ ದುರುಸ್ತ ಮಾಡಿಕೊಂಡ ಹೊರತು, ನಮ್ಮ ತರುಣೋದಯವಿಲ್ಲ ಇದು ಆಗದಿದ್ದರೆ, ನಮ್ಮ ಬಡ ಬಂಗಲೀ ಜಿಲ್ಲೆಗ ಮತ್ತಷ್ಟು ನಿಕೃಷ್ಟಾವಸ್ಥೆ ಪ್ರಾಪ್ತವಾಗುವದು. ಅಸಹಕಾರಿಗಳು ಅತ್ಯಂತ ಲೇಶವನ್ನು ಸಹಿಸಲಿಕ್ಕೆ ಸಿದ್ಧರಾಗಿಯೂ, ಸ್ವರಾಜ್ಯ ಪಂಗಡದವರು ಕಾಯದೆ ಮಂಡಲದ ಸಹಾಯದಿಂದಲೂ, ಮಂದವಕ್ಷದವರೂ, ರಾಜನಿಷ್ಠರೂ ಸರಕಾರದ ಕಡೆಗೆ ಡೆಪ್ಯುಟೇಶನದಿಂದಲೂ, ಈ ಕಾಯಿದೆಯನ್ನು ತಿದ್ದಿಕೊಳ್ಳಲಿಕ್ಕೆ ಪ್ರಯತ್ನಪಡಬೇಕು. ಈ ಎರಡು ತಿಂಗಳಲ್ಲಿ ಜಾತ್ರೆಯ ಸುಗ್ಗಿಯು. ಆದುದರಿಂದ ಪ್ರತಿಯೊಂದು ಗ್ರಾಮದವರು ತಮ್ಮೂರಲ್ಲಿ ಜಾತ್ರೆಯಾಗುವ ಮುಂಚೆಯೇ ಊರಿನ ಜನರಿಗೆ ಮುಂಗಡ ಸೂಚನೆಯನ್ನು ಕೊಟ್ಟು, ಅವರಿಗೆ ತಮ್ಮ ನಿಜವಾದ ಹಕ್ಕುಗಳ ಅರಿವು ಮಾಡಿಕೊಡಬೇಕು. ಅಲ್ಲಲ್ಲಿ ಸಭೆಗೂಡಿ, ಇಂಥ ಕೃತ್ಯಗಳ ತೀವ್ರ ನಿಷೇಧವ್ಯಂಜಕ ಮೂರು ಠರಾವುಗಳನ್ನು ಸಭೆಯು ಮುಂದಿಟ್ಟಲು, ಅವು ಸರ್ವಾನುಮತದಿಂದ ಪಾಸಾದವು. ಅವು ಕಲೆಕ್ಟರರಿಗೆ ಕಳಿಸುವ ವ್ಯವಸ್ಥೆಯಾಯಿತು. ಸಭೆಯಲ್ಲಿ ಕಪ್ರೆ ಜಾತ್ರೆಗೆ ಹೋದ ಕೆಲವು ಅಂಗಡಿಕಾರರು ತಮ್ಮ ಸ್ವಂತ ಅನುಭವಗಳನ್ನೂ ನಿವೇದಿಸಿ, ಗ್ರಾಮಸ್ಥರ ಕೈಯಿಂದ ಹೇಗೆ ಅನ್ಯಾಯವಾಯಿತೆಂದು ಹೇಳಿದರು. ಆ ಮೇಲೆ ಸಭೆಯು ಕೆಲಸವಾಯಿತು.

ಇಲ್ಲಿ ತಾ ೧೮ ನೇ ದಿವಸ ಪಾಠಶಾಲೆಯಂತೆ ೨೦ನೇ ಗಾಂಧೀ ದಿನವು ಪಾಲಿಸಲ್ಪಟ್ಟಿತು.

ಕಾರವಾರ— ನೆರೆನಿವಾರಣಾ ಕಮಿಟಿಯಲ್ಲಿ ಇಲ್ಲಿ ಇದ್ದ ೨ ಸಾವಿರ ರೂಪಾಯಿಗಳು ಇಲ್ಲಿ ಅವಶ್ಯವಿಲ್ಲದ್ದರಿಂದ, ಅವನ್ನು ದಕ್ಷಿಣ ಕನ್ನಡ ಜಿಲ್ಹೆಯೊಳಗಿನ ನೆರೆನಿವಾರಣಾ ಕಮಿಟಿಗೆ ಕಳಿಸಬೇಕೆಂದು ಠರಾವಾಯಿತು. ಈ ಸಭೆಯು ಕಳೆದ ತಾರೀಖು ೧೫ನೇ ಗುರುವಾರ ಮಿತ್ರಸಮಾಜ ಹಾಲಿನಲ್ಲಿ ಕೂಡಿತು. ಅಧ್ಯಕ್ಷರು ಮಿ। ಹೇಗಡೆ

ಹಳಿಯಾಳ— ಚಳಿ ಬೀಳಹತ್ತಿದೆ. ಪ್ಲೇಗ ಬಾಧೆಯು ದೂರವಾಯಿತು. ಜನರು ಪಟ್ಟಣವನ್ನು ಸೇರುತ್ತಿರುವರು. ನಾಡು ಪಡುಗಳು ತಮ್ಮ ವ್ಯವಸಾಯಿಕ ಕಾರ್ಯಕ್ರಮವನ್ನು ಚಾಲು ಮಾಡಿದೆ.

ಗೋಪೂಜನದ ನಿಮಿತ್ತ ಗೋಗ್ರಾಸ ಭಿಕ್ಷಾಮಂಡಳದ ತರ್ಫೆನಿಂದ ಗೋವುಗಳ ಮೆರವಣಿಗೆಯಾಯಿತು. ಮೆರವಣಿಗೆಯ ಕಾಲಕ್ಕೆ ೨೪ ರೂಪಾಯಿಗಳ ಭಿಕ್ಷೆ ದೊರೆಯಿತ್ತು. ಶ್ರೀ ವಿಠ್ಠಲ ಮಂದಿರದಲ್ಲಿ ಬೆಳಗಾಂವಿಯ ಗೋಸೇವಕರಾದ ಶ್ರೀ। ಕುಂಟೋಳಕರರವರ 'ಗೋಧನದ ಮಹತ್ವ ಹಾಗು ನಮ್ಮ ಕರ್ತವ್ಯ' ಇವುಗಳ ಮೇಲೆ ಚಿತ್ತವೇಧಕ ಭಾಷಣವಾಯಿತು.

ಹೊನ್ನಾವರ— ಚಳಿ ಬೀಳಲಿಕ್ಕೆ ಶುರುವಾಗಿಯದೆ. ಗದ್ದೆಯ ಕೊಯ್ಲು ಮುಗಿಯುತ್ತ ಬಂತು.

ವಿಜಾಪುರದಲ್ಲಿ ನೆರೆಯುವ ಪ್ರಾಂತಿಕ ಪರಿಷತ್ತಿಗೆ ಇಲ್ಲಿಂದ ಶ್ರೀ। ದೇವಣ್ಣಾ ನಾರಾಯಣ ಕೊಪ್ಪಿಕರ ಮತ್ತು ಶ್ರೀ। ಮಹಾಬಲೇಶ್ವರರಾವ ನಾಡಕರ್ಣಿ ಇವರೀರ್ವರು ಹೋಗಿರುತ್ತಾರೆ.

ಕಳೆದ ೧೪ನೇ ತಾರೀಖಿಗೆ ಆದ ವರಿಷ್ಠ ಕಾಯದೆ ಕೌನ್ಸಿಲಿನ ಚುನಾವಣೆಯಲ್ಲಿ ಪಟ್ಟು ಬಿದ್ದ ಮತಗಳಲ್ಲಿ ೮೫-೯೬ ಮತಗಳು ಶ್ರೀ। ಬೆಳವಿಯವರಿಗೆ; ೬-೭ ಮತಗಳು ರಾ। ಕರವೀರಪ್ಪಾ ಕುಲಕರ್ಣಿಯವರಿಗೆ ಬಿದ್ದಿರಬೇಕೆಂದು ಅಂದಾಜು.

ಕಾನಡಾವೃತ್ತದಲ್ಲಿ ಗೇರಸಪ್ಪೆ ಅಳತೆ ಬಗ್ಗೆ ಕೊಟ್ಟ ಜಾಹೀರ ವಿನಂತಿಗೆ ಸಹಿ ಹಾಕಿದವರ ಜವಾಬು ಪೋಲೀಸರು ತಕ್ಕೊಳ್ಳಲಿಕ್ಕೆ ಶುರು ಮಾಡಿದ್ದಾರೆ. ಮುಂದೆ ಏನು ಮಾಡುತ್ತಾರೆ. ನೋಡಬೇಕು.

ತೆಂಕಲಾಗಿನ ದಶಾವತಾರ ಆಟದ ಮಂಡಳಿಯವರ ಆಟಗಳು ರಮ್ಯವಾಗಿ ಸಾಗಿವೆ. ಹಳ್ಳಿಯಿಂದ ಆಟ ನೋಡುವರೆ ಬಹಳೇ ಜನರು ಬರುತ್ತಲಿದ್ದಾರೆ.

ಬಂದರ ಕಸ್ಟಮ ಕಂಪೌಂಡಿನ ಮಾಲು ಇಳಿಸುವ ಸ್ಥಳದ ದಕ್ಕೆಯು ತೆರೆಗಳೊಡ್ಡಿತು ಹೋಗಿದ್ದಲ್ಲದೆ, ಅಲ್ಲಿದ್ದ ೧ ಸೀಟು ಸಹ ಹೋಗಿಯದೆ, ಮಾಲು ಇಳಿಸುವಾಗ ಕೂಲಿ ಜನರಿಗೆ ಅಪಾಯವಾಗುವ ಸಂಭವವುಂಟು. ಈ ಕಡೆಗೆ ಯಾರು ಲಕ್ಷ್ಯ ಕೊಡುವರು.

ಕಿರ್ಲೋಸ್ಕರ ಬಂಧು ಲಿಮಿಟೆಡ್.

ಈ ಕಂಪನಿಯ ಪಾಲುಗಾರರ ಮೂರನೇ ವಾರ್ಷಿಕ ಸಭೆಯು ಕಳೆದ ತಾರೀಖು ೪-೧೧-೨೩ನೇಗೆ ಕಿರ್ಲೋಸ್ಕರವಾಡಿಯಲ್ಲಿ ಸೇರಿತು. ಸದರ ಸಭೆಯಲ್ಲಿ ಕಳೆದ ವರುಷದ ರಿಪೋರ್ಟ್ ಓದಲಾಯಿತು. ಅದರ ಮೇಲಿಂದ ಕಂಪನಿಗೆ ರಿಪೋರ್ಟಿನ ಸಾಲಿನಲ್ಲಿ, ೧ ಲಕ್ಷ, ೯೨ ಸಾವಿರ ೪೬೦ ರೂಪಾಯಿಗಳು ನಿವ್ವಳ ಮುನಾಫೆಯಾಗಿದೆ. ಚಾಲಕರು ಯಂತ್ರ, ಇಮಾರತು, ಕಾಯಂ ನಿಧಿ, ಕಾಲಿಕಾರದ ಅನುಕೂಲತೆ ಮೊದಲಾದವುಗಳಿಗಾಗಿ ೧ ಲಕ್ಷ ರೂಪಾಯಿಗಳನ್ನು ಪ್ರತ್ಯೇಕ ತೆಗೆದಿಟ್ಟು, ಉಳಿದ ರಕಮನ್ನು ಪಾಲುಗಾರರಿಗೆ ಹಂಚಿದರು. ಶೇಕಡಾ ೧೫ರಂತೆ ಪಾಲುಗಾರರಿಗೆ ನಫೆಯಾಯಿತು. ಇದರ ಮೇಲಿಂದ ಕಿರ್ಲೋಸ್ಕರ ಕಂಪನಿಯ ಸ್ಥಿತಿಯು ಬಲು ಭರಭರಾಟೆಯದೆಂದು ಹೇಳಲಡ್ಡಿಯಿಲ್ಲ. ಇದರ ಶ್ರೇಯಸ್ಸೆಲ್ಲ ಕಿರ್ಲೋಸ್ಕರ ಬಂಧುಗಳಿಗೇ ಸಲ್ಲತಕ್ಕದ್ದು. ಅತಿ ಸಣ್ಣ ಪ್ರಮಾಣದ ಮೇಲೆ ಹೊರಡಿಸಿದ ಈ ಧಂದೆಯನ್ನು ಈಗಿನಷ್ಟು ಊರ್ಜಿತ ಸ್ಥಿತಿಗೆ ತರಲು ಕಿರ್ಲೋಸ್ಕರ ಬಂಧುಗಳು ಬಹುಪರಿಯಿಂದ ದುಡಿದಿರುವರು. ಕಂಪನಿಯ ಈಗಿನ ಭಂಡವಲು ೧೨ ಲಕ್ಷ ರೂಪಾಯಿಗಳದಿದ್ದು, ದಿನೇ ದಿನೇ ವೃದ್ಧಿ ಹೊಂದುವ ಈ ಸಂಸ್ಥೆಗೆ ಅದೀಗ ಸಾಕಾಗದಿರುವದರಿಂದ, ಅದನ್ನು ೧ ಕೋಟಿಗೆ ಏರಿಸಬೇಕೆಂದು ಪಾಲುಗಾರರ ಸಭೆಯಾಗಿ ಆ ಬಗ್ಗೆ ಠರಾವು ಪಾಸಾಗಿದೆ. ಇದು ಸ್ತುತ್ಯವೂ, ಸಮಯೋಚಿತವೂ. ಬೇಸಾಯಗಾರರಿಗೆ ತಗಲುವ ನೇಗಿಲು, ಕಬ್ಬಿನ ಗಾಣ, ಕತ್ತರಿ ಯಂತ್ರ, ಸಾಂಸಾರಿಕರಿಗೆ ಅವಶ್ಯವಿರುವ ಕಪಾಂಜನ—ಬಾಕು ಮೊದಲಾದವುಗಳನ್ನು ಕಿರ್ಲೋಸ್ಕರ ಬಂಧುಗಳು ತಯಾರಿಸಿ, ಬಹು ಪರಿಯಿಂದ ದೇಶಸೇವೆಯನ್ನೇ ಮಾಡುತ್ತಾರೆಂದು ಹೇಳಿದರೆ, ಅತಿಶಯೋಕ್ತಿಯಾಗದು. ಯಾಕೆಂದರೆ, ಈ ಸಾಮಗ್ರಿಗಳ ಬಾಬತು ಪರದೇಶಕ್ಕೆ ಹೋಗುವ ಲಕ್ಷಾವಧಿ ರೂಪಾಯಿಗಳ ಉಳಿತಾಯವಾಗುವದಲ್ಲದೆ, ಬೇಸಾಯಗಾರರಿಗೆ ಉತ್ತಮ ಮಾಲು ಅಗ್ಗದರದಿಂದ ದೊರೆಯುತ್ತದೆ. ಕಿರ್ಲೋಸ್ಕರ ಬಂಧುಗಳ ಈ ಸಾಹಸ ಕಾರ್ಯಕ್ಕೆ ಎಲ್ಲರೂ ಪ್ರೋತ್ಸಾಹವನ್ನಿತ್ತು, ಸ್ವದೇಶದೊಳಗಿನ ಉದ್ಯೋಗವನ್ನು ಊರ್ಜಿತಾವಸ್ಥೆಗೆ ತರಬೇಕಾಗಿ ವಿನಂತಿ.

ಗಾಂಧಿಯ ಪ್ರಚಂಡ ಪ್ರಯೋಗ.

ನಾಮದಾರ ಗವ್ಹರ್ನರರ ಅರ್ಥಪೂರ್ಣ ಉದ್ಗಾರಗಳು.

" ಗಾಂಧಿಯನ್ನು ಜೈಲಿನಲ್ಲಿಡುವ ಬಗೆಯು ಅವನನ್ನು ಸಜೀವ ಹುಗಿಯುವದೇ "

ಒಂದು ಮನೋರಂಜಕ ಹಕೀಕತು.

[ಆಸ್ಟ್ರೇಲಿಯಾದೊಳಗಿನ ಎಡಿಲೇಡ ಪಟ್ಟಣದಲ್ಲಿ ಪ್ರಕಟವಾಗುವ ಎಡ್ವರಟ್ಯಾಜರ ಎಂಬ ಪತ್ರಿಕೆಯಲ್ಲಿ ಒಂದು ಮಹತ್ವದ ಹಕೀಕತು ಪ್ರಕಟಹೊಂದಿದೆ ಆದನ್ನು ನಾಬುರಮತಿಯ ಸತ್ಯಾಗ್ರಹಾಶ್ರಮದ ಶ್ರೀ ಬನಾರಸೀ ದಾಸ ಚತುರ್ವೇದಿಯವರು 'ಮುಂಬಯಿ ಕ್ರಾನಿಕಲ್' ನಲ್ಲಿ ಪ್ರಕಟಿಸಿರುವರು ಮಿ। ಡಬ್ರ್ಯು ಪಿಯರಸನ್ ಎಂಬುವರು ಪುಣ್ಯಪಟ್ಟಣಕ್ಕೆ ಬಂದಿದ್ದರು ಅವರು ಮಹಾತ್ಮರ ಕೀರ್ತಿ ಕೇಳಿ ಅವರನು ಕಾಣಲು ಅಪೇಕ್ಷಿಸಿದರೆಂದು ತೋರುತ್ತದೆ ಆಗ ಅವರಿಗೂ ನಾಮದಾರ ಗವ್ಹರ್ನರರಿಗೂ ನಡೆದ ಸಂಭಾಷಣವನ್ನು ಅವರು 'ಎಡ್ವರಟ್ಯಾಜರ' ಪತ್ರಿಕೆಗೆ ತಿಳಿಸಿರುವರು ಅದನ್ನೇ ಇದರಡಿಗೆ ಭಾಷಾಂತರಿಸಿರುವೆವು ಸಂ. ಕಾ. ವೃ.]

ಮಹಾತ್ಮರು ಕಾರಾಗೃಹವನ್ನು ಸೇರಿ ೧½ ವರ್ಷಗಳಾದ ಬಳಿಕ, ಗಾಂಧೀ ದಿನದ ಸಮಯದಲ್ಲಿ ಈ ಪಟ್ಟಣದ (ಪುಣೆ, ಸನಿಹದಲ್ಲಿರುವ ಅವರಿಗೆ ಒಂದು ಸಿದ್ಧ ಜೈಲನ್ನು ಸಂದರ್ಶಿಸಿದೆನು ಬಳಿಕ ಅವರ ಕಾರಾಗೃಹವಾಸಕ್ಕೆ ಪ್ರಾಧಾನ್ಯವಾಗಿ ಕಾರಣವಾಗಿರುವ ಪುರ ಪರಗೂಡ ಮಾತಾಡಿದೆನು ಅವರು ಹಿಂದುಸ್ಥಾನದೊಳಗಿನ ಉಚ್ಚ ಅಧಿಕಾರಸ್ಥರೊಬ್ಬರು ಅವರ ಹೆಸರನ್ನು ನಾನು ಸ್ಪಷ್ಟೀಕರಿಸಬಾರದು ಅವರು ಮಾತಾಡುವ ನಮೂನೆಯ ಮೇಲಿಂದ ಮಹಾತ್ಮರ ಕೃಶ ಶರೀರವು ಅವರ ಮುಂದೆ ಕೂತುಕೊಂಡ ಚಿತ್ರದ ಭಾಸವು ನನಗಾಯಿತು ಅವರು ಮಹಾತ್ಮರಗೂಡ ನಡೆದ ಮಾತುಕಥೆಗಳನ್ನು ನಿವೇದಿಸಿ, ಸೆರೆಹಿಡಿಯುವ ವರೆಗಿನ ಹಕೀಕತನ್ನು ವಿವರಿಸಿದರು ಈ ಕಥೆಯನ್ನು ಕೇಳಿದವರು ಶೀರ ಕಡಿಮೆ ಇರಬೇಕು

ಅಸಹಕಾರಿತೆಯ ಏನ ಭರದಲ್ಲಿ ನನ್ನ ಸುದ್ದಿಗಾರನು ತನ್ನ ಆಫೀಸಿಗೆ ಗಾಂಧಿಯನ್ನು ಕರೆದನು ಗಾಂಧಿಯು ದೊಡ್ಡ ದೊಡ್ಡ ಹೋಳಿ ಮಾಡಿ ಇಂಗ್ಲಿಷ ಅರಿವೆಯನ್ನು ಬಹಿಷ್ಕರಿಸುವ ಝುಪಾಟೆಯಲ್ಲಿದ್ದನು ಶಾಲೆ ಹಾಗು ಕೋರ್ಟುಗಳ ಬಹಿಷ್ಕಾರವನ್ನು ಸಾಧಿಸಿದ್ದನು ಯುವರಾಜರಿಗೆ ವಿರೋಧವಾಗಿ ಚಳವಳಿ ಮಾಡಿ, ಮೆರವಣಿಗೆ ಹೋದ ಮಾರ್ಗಗಳನ್ನೆಲ್ಲ ನಿರ್ಜನವನ್ನಾಗಿ ಮಾಡಿದ್ದನು

ಗಾಂಧಿ ಗವ್ಹರ್ನರರ ಭಾಷಣ

ನನ್ನ ಸುದ್ದಿಗಾರನ ಭಾಷೆಯನ್ನೇ ನಾನು ಉಪಯೋಗಿಸುವೆನು " ಗಾಂಧಿಯು ಬರಿಗಾಲಿನಿಂದ ಇಲ್ಲಿ ಬಂದನು ಮತ್ತು ನೀನು ಕೂತ್ರುವಲ್ಲಿ ಕೂತುಕೊಂಡನು, ಆಗ, ನೀನೇನು ಮಾಡುತ್ತೀ ಎಂದು ನನಗೆ ತಿಳಿಯುವದಿಲ್ಲ, ಎಂದು ನಾನು ಅವನಿಗೆ ಎಚ್ಚರಿಕೆ ಕೊಟ್ಟೆ ಆದರೆ, ಹೀಗೆಯೇ, ಇದೇ ರಾಕ್ಷಸೀ ಕಾರ್ಯಕ್ರಮವನ್ನು ಹಟನಿಗ್ರಹದಿಂದ ಮುಂದರಿಸಿದರೆ, ಈ ಕಾರ್ಯಕ್ರಮದ ಮೂಲಕ ಹಿಂಸೆ ಹೊಂದುವ ಸ್ತ್ರೀ-ಪುರುಷ-ಬಾಲಕ ಬಗ್ಗೆ ನಾನು ನಿನಗೆ ಜವಾಬದಾರ ಹಿಡಿಯುವೆನು. "

" ನಾಮದಾರರೇ, ಇಂಥ ಘಾತವಾಗದು " ಎಂದು ಅವನು ಹೇಳಿದನು

ನಾನು ಉತ್ತರವಿತ್ತಿದ್ದೆನಂದರೆ " ಖಂಡಿತವಾಗಿ ಒಂದಾನೊಂದು ಅಹಿಂಸೆಯನ್ನು ಬೋಧಿಸುತ್ತೀ ಆದರೆ, ಅದೆಲ್ಲ ಸಿದ್ಧಾಂತವು ವ್ಯವಹಾರದಲ್ಲಿ ಅದು ಕೆಲಸಕ್ಕೆ ಬರದು ನೀನು ಮಾಡುವ ಚಳವಳಿಯಲ್ಲಿ ಅಹಿಂಸೆಯು ನಾಮ ಗ್ರಾಹ್ಯವೇ ಇಲ್ಲ ಮಾಗಿದವರ ಪಿತರಗಳನ್ನು ನೀನು ತಿರಸ್ಕರಿಸುವೆ ನೆನಪು. ನಾನು ನಿನ್ನನ್ನು ಜವಾಬದಾರ ಹಿಡಿಯುತ್ತೇನೆ "

ನಾಮದಾರರ ಅವರ ಎದುರಿಗೆ ಕೂತುಕೊಂಡ ನನ್ನ ಕಡೆಗೆ ನಾನು ಗಾಂಧಿ ಎಂಬಂತೆ, ಬೊಟ್ಟು ತೋರಿಸಿದರು ಮುಂದೆ ಕೆಲವು ದಿನ ಗಳಿದ ಬಳಿಕ, ಅಂದರೆ ಚೌರಿಚೌರಾದಲ್ಲಿ ದಂಗ-ಖೂನಿಗಳಾದ ಬಳಿಕ, ಗಾಂಧಿಯು ಪುನಃ ನನ್ನೆಡೆಗೆ ಬಂದನು ಆಗ ನಾನು ನುಡಿದದ್ದೇನಂದರೆ— " ಹೀಗಾಗುವದೆಂದು ಸಂಭವಿಸುವದೆಂದು ನಾನು ಹೇಳಿಬಿಟ್ಟಿದ್ದ ನೀನೇ ಜವಾಬದಾರನಿರುತ್ತೀ "

ಅವನು ಎರಡೂ ಕೈಗಳಿಂದ ಮುಖವನ್ನಾವರಿಸಿಕೊಂಡು, "ನನಗೆ ತಿಳಿಯಿತು " ಎಂದು ನುಡಿದನು

' ನಿನಗೆ ತಿಳಿಯಿತು? ನಿನ್ನ ಹಿಂದೀ ಸ್ತೋಮದಿಂದ ತುಳಿದು ಮಣ್ಣುಪಾಲು ಮಾಡಿದ ಸ್ತ್ರೀ-ಪುರುಷರನ್ನು ನಿನ್ನ ಗ್ರಹಿಕೆಯು ಈಗ ಜೀವರಿಸಬಲ್ಲದೇನು ? "

" ನಾಮದಾರರೆ ನನ್ನನ್ನು ಜೈಲಿನಲ್ಲಿ ಹಾಕಿರಿ " ಎಂದು ಅವರು ಮರುಗಿದರು

' ಹೈ ' ನಿನಗೆ ಜೈಲಿನಲ್ಲಿ ಹಾಕುತ್ತೇನೆ, ಆ ಬಗ್ಗೆ ನಾನು ಸ್ವಲ್ಪ ತಯಾರಿ ಮಾಡಿಕೊಳ್ಳಬೇಕಾಗಿದೆ ನಿನಗೆ ದೊಡ್ಡ ಸಾಧುವಿನ ಸದರಿನಲ್ಲಿ ನಾನು ಪರಿಣಮಿಸಬೇಕೆಂದು ನಿನ್ನ ಮನೋಗತವಿರುವದೇನು ?"

ಒಂದು ಸಪ್ತಾಹ ತಾನು ಉಪೋಷಣ ಮಾಡುತ್ತೇನೆಂದು ಅವನು ನುಡಿದನು.

ಪ್ರಚಂಡ ಪ್ರಯೋಗ.

ಇಷ್ಟು ಮಾತುಗಳನ್ನಾಡಿ, ನಾಮದಾರರು ಸುಮ್ಮಗಾದರು ಒರಗಿದರು ಸ್ವಲ್ಪ ತಣ್ಣಗಾಗಿ ನುಡಿದದ್ದೇನಂದರೆ — " ತೋರಿಕೆಗೆ ಅವನು ತೆಳ್ಳಗಿರುವನು, ಕುಳ್ಳ ಪ್ರಾಣಿಯು. ಆದರೆ, ಅವನು ೩೧,೯೦,೦೦,೦೦೦ ಮೋಹಿಸಿ, ಅವರನ್ನೆಲ್ಲ ತನ್ನ ಆಜ್ಞಾಧಾರಕ ಸೇವಕರನ್ನಾಗಿ ಪರಿಣಮಿಸಿದನು ಅವನಿಗೆ ಭೌತಿಕದ ಅರಿವಿದ್ದಿಲ್ಲ ಭರತಖಂಡದ ಉಚ್ಚ ತತ್ವ ನೀತಿಗಳನ್ನು ಅವನು ಬೋಧಿಸುತ್ತಿದ್ದನು ಉಚ್ಚ ತತ್ವಗಳಿಂದ ದೇಶವನ್ನು ಆಳಲಾಗದು. ಆದರೆ, ಅವನ ಪ್ರಜೆಗಳ ಮೇಲಿನ ವರ್ಚಸ್ವದ ರಹಸ್ಯವು ಇದೇ ಅವನೇ ಪ್ರಜೆಗಳ ದೈವತವು ಮೊದಲು ಟಿಳಕನಾದನು, ಬಳಿಕ, ಗಾಂಧಿ, ನಾಳೆ ಮತ್ತ್ಯಾರಾದರೂ ಆಗುವರು ನಮಗೆ ಅವನು ಭಯಂಕರ ಬೆದರಿಕೆ ಹಾಕಿಬಿಟ್ಟನು. ಅವನ ಕಾರ್ಯಕ್ರಮದಿಂದ ನಮ್ಮ ಜೈಲುಗಳು ತುಂಬಿ ಸೂಸಿದವು ಸರ್ವದಾ ಜನರನ್ನು ಸೆರೆ ಹಿಡಿದು ಕೆಲಸನಡಿಸುವದು ಶಕ್ಯವೇ? ೩೧,೯೦,೦೦,೦೦೦ ಮಂದಿಗಳಿಗಂತು ಅಶಕ್ಯವು ಪ್ರಜೆಗಳು ಇನ್ನೊಂದು ಹೆಜ್ಜೆ ಮುಂದಿಟ್ಟು ಕರಿಗೆಗಳನ್ನು ನಿರಾಕರಿಸಿಬಿಟ್ಟಿದ್ದರೆ, ನಮ್ಮ ಅವಸ್ಥೆಯು ಯಾವಲ್ಲಿಗೆ ಮುಟ್ಟುತ್ತಿತ್ತೆಂದು ಶ್ರೀ ದೇವರಿಗೇ ಗೋಚರ ' ಜಗತ್ತಿನ ಇತಿಹಾಸದಲ್ಲಿ ಗಾಂಧಿಯವರ ಪ್ರಯೋಗವು ಬಹಳೇ ಪ್ರಚಂಡ ಸ್ವರೂಪದ್ದು. ಅದು ಯಶಪ್ರಾಪ್ತಿ ಹೊಂದುವ ತಯಾರಿಯಲ್ಲಿತ್ತು. ಆದರೆ ಮಾನವರ ಮನೋವಿಕಾರಗಳ ದಮನಶಕ್ತಿಯು ಅವನಲ್ಲಿರಲಿಲ್ಲ ಪ್ರಜೆಗಳು ಹಿಂಸಾಪ್ರೇರಿತರಾದರೆ. ಕೂಡಲೇ, ಅವನು ಕಾರ್ಯಕ್ರಮವನ್ನು ಹಿಂದೊತ್ತಿಬಿಟ್ಟನು ಮುಂದಿನ ಹಕೀಕತು ನೀವು ಬಲ್ಲಿರಿ ನಾವು ಅವನಿಗೆ ಸೆರೆ ಹಾಕಿದೆವು, ೭ ದಿನ ಮಾತ್ರವೇ ಜೈಲಿನಲ್ಲಿ ನಾನು ಅವನಿಗೆ ಬಿಟ್ಟುಕೊಟ್ಟೆನು ಅವನಿಗೆ ಹೊರಬರುವ ಅಭಿಲಾಷೆಯಿದೆಂದು ತೋರುತ್ತದೆ ನನ್ನ ಒಳಗೆ ವೃತ್ತಪತ್ರಗಳನ್ನೇನೂ ನಾನು ಕೊಡಗೊಡದಿಲ್ಲೆಂದು ಅವನ ತಕರಾರು

" ಮುಖ್ಯ ಪ್ರಧಾನರ್ಯಾರೆಂದು ಸಹ ನನಗೆ ಗೊತ್ತಿಲ್ಲ " ಎಂದು ಅವನು ಉದ್ಗರಿಸಿದನು

" ರಾಜಕಾರಣವನ್ನು ದಿನೇ ದಿನೇ ತಿಳಕೊಳ್ಳುವದಾದರೆ, ಜೈಲಿನ ಹೊರಗಿರಬೇಕು. ಇನ್ನು ಕೆಲ ತಿಂಗಳಲ್ಲಿಯೇ ನಾನು ಸ್ವದೇಶಕ್ಕೆ ಮರಳುತ್ತೇನೆಂದು ತಿಳಿದು ನಿನಗೆ ಸಂತೋಷವಾಗಬಹುದು, ನಾವೀರ್ವರು ಎಂದೂ ಪರಮ ಮಿತ್ರರಿದ್ದಿಲ್ಲ ಆದರೆ, ನಮ್ಮ ಅನ್ಯೋನ್ಯ ವರ್ತನವು ನಿಷ್ಕಪಟವಿದ್ದಿತ್ತು ಇಷ್ಟು ನೀನು ಒಪ್ಪಬೇಕು "

ಇಷ್ಟರಲ್ಲಿ ಗಾಂಧಿಯನ್ನು ಜೈಲಿನಲ್ಲಿ ಕಾಣಲು ನಾನು ಅಪ್ಪಣೆಯನ್ನು ಬೇಡಿದೆನು ಅದಕ್ಕಾಗಿಯೇ ನಾನು ಗವ್ಹರ್ನರರೆಡೆಗೆ ಹೋಗಿದ್ದೆನು

ಆಗ ಮುಂದರಿಯಗೊಡದೆ, ನಾಮದಾರರು ನುಡಿದದ್ದೇನಂದರೆ " ಅಶಕ್ಯ, ಅಶಕ್ಯ, ಗಾಂಧಿಯನ್ನು ಜೈಲಿನಲ್ಲಿಡುವ ಬಗೆಯು ಅವನನ್ನು ಸಜೀವ ಹುಗಿಯುವದೇ. ಜನರಿಗೆ ಇಲ್ಲಿ ವಿಸ್ತಾರ ಮಾಡಗೊಟ್ಟರೆ, ಅವನು ಮಹಾಪುರುಷರ ಮಾಲಿಕೆಯಲ್ಲಿ ಸೇರುವನು ಜಗತ್ತಿಗೆ ಈ ಜೈಲು ಮಕ್ಕಾ ಕ್ಷೇತ್ರವಾಗುವದು ಗಾಂಧಿಯನ್ನು ಸಾಧುಪುರುಷರ ಮಾಲಿಕೆಯಲ್ಲಿ ಸೇರಿಸಲು ನಾವು ಅವನನ್ನು ಸೆರೆಹಾಕಲಿಲ್ಲ "

'ಆರು ವರುಷಗಳ ಕಾರಾಗೃಹವಾಸದ ಅವಧಿ ಮುಗಿಯುವದಕ್ಕಿಂತ ಮುಂಚಿತವಾಗಿಯೇ ಗಾಂಧಿಯವರನ್ನು ಬಿಡುಗಡೆ ಮಾಡುವ ಸಂಭವವಿದೇನೆಂದು ನಾನು ಪ್ರಶ್ನಿಸಿದೆನು

ನಾಮದಾರರು ಖಂಡಿತವಾಗಿ ನುಡಿದದ್ದೇನಂದರೆ - " ನಾನಿಲ್ಲಿರುವವರೆಗೆ ಈ ಮಾತು ತೆಗೆಯಬೇಡಿರಿ ನನ್ನ ಕಾರಕೀರ್ದಿಯು ಡಿಸೆಂಬರದಲ್ಲಿ ಮುಗಿಯುತ್ತದಷ್ಟೇ ನಾನು ವಿಲಾಯತಿಗೆ ಮರಳಿದ ಬಳಿಕ ಇವರು ಬೇಕಾದ್ದನ್ನು ಮಾಡಿಕೊಳ್ಳಲಿ "

ತುಲನಾರ್ಥವಾಗಿ ಸನ್ 1921—22ನೇ ಸಾಲಿನ ಜಮಾಖರ್ಚನ್ನು ಇದರ ಕೂಡ ಕೊಟ್ಟಿರುತ್ತದೆ:—

ಜಮೂವ ಬಾಬುಗಳು	೧೯೨೦—೨೧ನೇ ಸಾಲ ಬಾಬತು	೧೯೨೧—೨೨ನೇ ಸಾಲ ಬಾಬತು	ಕಡಿಮೆ.	ಹೆಚ್ಚು.	ಖರ್ಚಿನ ಬಾಬುಗಳು.	೧೯೨೦—೨೧ನೇ ಸಾಲ ಬಾಬತು	೧೯೨೧—೨೨ನೇ ಸಾಲ ಬಾಬತು.	ಕಡಿಮೆ	ಹೆಚ್ಚು
ವರ್ಷಾರಂಭದ ಶಿಲ್ಕು	6738 15 10	5161 0 7			ಆಫೀಸ ಶಿಬಂದಿ	1117 5 3	1085 12 5	31 8 10	
ಅಕಟ್ರಾಯ	2132 13	2704 2 3		571 5 [illegible]	ಸಾದಿಲವಾರ	77 13	141 15 6		64 2 6
ಮನೆಕೆರಿಗೆ	2088 2	2941 13		853 11	ಫಾರ್ಮ ಛಾಪನಾವಳಿ	211 2 9	166 4	44 14 9	
ಕಾಯಂ ನೆಲಕೆರಿಗೆ	21 10	38 11		17	[illegible]ಪ ಖರ್ಚು	33 12	13	20 12	...
ಜಾನವರ ಕೆರಿಗೆ	90 14	124 14		34	ಪೆನ್ಶನ್ ಫಂಡ	155 5 11	165		10 5 11
ಗಾಡೀ ಕರಿಗೆ.	1011	1483 6		472 6	ಜಕಾತ್ ವಸೂಲಿ ಶಿಬಂದಿ	270 13 10	337 15 2		67 1 4
ವ್ಯಾಪಾರಗಳ ಮೇಲಿನ ತೆರಿಗೆ	15	20		5	ಅಕಟ್ರಾಯ ಟೋಲ ಶಿಬಂದಿ	474 5 1	518 3 3		43 14 2
ಟೋಲು	758 9	789 13 9		31 13	ಸಾದಿಲವಾರ	21 8 1	19 1 10	2 6 3	
ನಾಯೀ ತೆರಿಗೆ	11	20 8		9 8	ಉಪಕಾರಕ ರಿಪೇರಿ ಸಾಗಗಳ ...	14 11 2	74 12 2		60 1
ಕೊಂಡವಾಡೆ	1019 11 3	984 1 6	35 9 9		ಅಕಟ್ರಾಯ ಹೊಸ [illegible]	2	103		101
ಕನ್ನರವಸ್ತಿ ಉತ್ಪನ್ನ.	10 8	152 8		142	ದೀಪಗಳು ಶಿಬಂದಿ.	167 8	206 6 11		39 6 3
ಶಾಲೆಗಳ ”	86 6	82 2		1 12	ದೀಪಗಳ ಖರೆ ಎ ಮ ದುರುಸ್ತಿ	62 11	208 7 9		145 12 9
ಡಿಸ್ಪೆನ್ಸರೀ ”	97 1	116 9		18 15 9	ಎಣ್ಣೆ ಸ್ವಚ್ಛ ಕಂದೀ ಖರ್ಚು	314 7 6	340 14		26 6 6
ಮಾರ್ಕೆಟ ”	1301 1 10	1927 12		626 10 2	ರಾತ್ರ ಪ್ರಾಣಿಗಳನ್ನು ಕೊಂದವರಿಗೆ ಇನಾಮು	6 8	1	5 8	
ಎರಡನೇ ಕಿರೀ ಉತ್ಪನ್ನ	87 2 6	250 6 2		163 3 8	ರಸ್ತೆ ರಿಪೇರಿ	37 13	160 3		118 6
ಮ್ಯುನಿಸಿಪಾಲ್ ಪ್ರೋ ಅ ಪ್ರ ದಂಡ.	44	132 8		88 8	ಗಟಾರ ರಿಪೇರಿ	199 3 8	329 4 7		130 11
ಒತ್ತೀ ಉತ್ಪನ್ನ	240	240			ಕನ್ನರವಸ್ತಿ ಶಿಬಂದಿ	[illegible] 8 3	1240 1 11		475 12 8
ಓಮೂನ ಮ ಮ ನೆಗಳ ಭಾಡೆ	4 14	19 10		14 12	ಕನ್ನರವಸ್ತಿ ಜಾನವರ [illegible]	38 [illegible]	576 8 4		191 4 4
ಜುಲ್ಮಾನೆ ಸಾರಾಂಚ ಉತ್ಪನ್ನ	45 5	35	13 5		ಕನ್ನರವಸ್ತಿ [illegible]ಸಾಮಾನು [illegible]	96 9	272 [illegible]		175 10
ಗ್ರ್ಯಾಂಟುಗಳು					ದವಾಖಾನಾ	3157	2511	638 4 5	
ಸರಕಾರದಿಂದ					ಪ್ಲೇಗ ಕೊಲೆರಾ ಖರ್ಚ		200 10		200 10
ಸಾಮಾನಿನ ಕೆಲಸಕ್ಕೆ	399 12	114	285 12		ವ್ಯಾಕ್ಸಿನೇಶನ್	81	72	9	
					ಮಾರ್ಕೇಟ ಶಿಬಂದಿ	50	60		10
ವಿದ್ಯಾ ಕೆಲಸಕ್ಕೆ ...	2973	4173		1200	ಮಾರ್ಕೇಟ ಉಪಕಾರಕ ರಿಪೇರಿ	108 4 10	70 13	37 7 10	
ವೈದ್ಯಕೀ ಕೆಲಸಕ್ಕೆ	400	400			ಕೊಂಡವಾಡೇ ರಿಪೇರಿ	3 12	78 6 9		74 10 9
ಲೋಕಲ್‌ಫಂಡದಿಂದ					ಕೊಂಡವಾಡೆ ಶಿಬಂದಿ	117 12 5	104 2	13 10 5	
ಸಾಮಾನ್ಯ ಕೆಲಸಕ್ಕೆ	63 15 11	56 12 6	7 3 5		ಕೊಂಡವಾಡೆ ಜಾನಾವರ ಖೋರಾಕಿ	12 3		12 3	
ವಿದ್ಯಾ ಕೆಲಸಕ್ಕೆ	625	625			ಧರ್ಮಶಾಲಾ ಶಿಬಂದಿ	24	24		
ವೈದ್ಯಕೀ ಕೆಲಸಕ್ಕೆ	293	293			ಧರ್ಮಶಾಲಾ ರಿಪೇರಿ	49 10	35 3	14 9 9	

[ಪೃಷ್ಟ ತಿರುವಿರಿ

[illegible]

ಇತರೇ ಗ್ರ್ಯಾಂಟುಗಳು				
ಸಾಮಾನ್ಯ ಕೆಲಸಕ್ಕೆ		405		407
ವಿದ್ಯಾ ಕೆಲಸಕ್ಕೆ	127		127	
ವೈದ್ಯಕೀ ಕೆಲಸಕ್ಕೆ	120	120		
ಇತರೇ ಬಾಬುಗಳು	311 3 6	140	1 1 3	
ಲಾಯಬ್ರರಿಗೆ				
ಡಿಪೋಜಿಟ್				
ತಸಲ್ಮಾತ	200	200		
	21314 3 7	23751 4 1	64 1 8	46
ಒಟ್ಟು ಜೆರಿಜು	21314 3 7	23751 4 1		

ವೈಟರ್ನರಿ ದವಾಖಾನಾ	100	100		
ಜನರ ರಕ್ಷಣಾ ಶಿಬಂದಿ	54	72		18
ವಿ ಟ್‌ವಾಯಿ ಫ್ ಶಿಬಂದಿ	2	15 6	1 1 10	
ಸಾರ್ವಜನಿಕ ಕಾಮಗಾರಿ ಶಿಬಂದಿ	2[illegible] 7 1	518 15 2		48 8 1
ಸಾರ್ವಜನಿಕ ರಸ್ತೆಗಳು	98[illegible] 1 10	1395 7		406 [illegible]
ಸಾರ್ವಜನಿಕ ಇಮಾರತು	167 1	37 2 4	130 8	
ಹತ್ಯಾರ [illegible]		31		31
[illegible]	[illegible]4 5 9	67 [illegible]		352 3
ತಸಲ್ಮಾತ		200		200
[illegible]	45			18
[illegible]		12 8		12 8
[illegible]	[illegible]			
	1 153 [illegible]	19[illegible] 1 4	102 11	300 2 0
[illegible]	16 0	1111 [illegible]		
[illegible]	[illegible]1 14	[illegible]51 4		

ತಯಾರಿಸಿದವರು.

(ಸಹಿ) ಎಮ್. ಎಸ್. ತೇಲಂಗ.

ಚೀಫ ಆಫೀಸರ,

ಸ್ವೀಕರಿಸಿದ ಮಾಡಿದವರು

(ಸಹಿ) ಸಿಂ. ಪ. ಹಳ್ಳಿಕೇರಿ.

ಚೇರಮನ್ ನೋ. ಕ

ತಪಾಸ ಮಾಡಿದವರು

(ಸಹಿ) ಶಾ. ಗೋ. ಭದ್ರಿ.

ಪ್ರೆಸಿಡೆಂಟ, (ಅಧ್ಯಕ್ಷ)

ತಾ 24—10—1923

ಶೆರಾ:— ಈ ಮೇಲೆ ಕಾಣಿಸಿದ ಪ್ರಕಾರ ೧೯೨೨—೨೩ನೆ ಸಾಲಿನ ಬಾಬತು ಜಮಾಖರ್ಚಿನ ಪತ್ರಕವಿರುತ್ತದೆ. ಸನ್ ೧೯೨೧—೨೨ನೇ ಸಾಲಿನಕಿಂತ ರಿಪೋರ್ಟಿನ ಸಾಲಿನಲ್ಲಿ, ಯಾವದೇ ತರದ ಕರಗಳನ್ನು ವಗೈರೆ ಏರಿಸದ್ದಾಗ್ಯೂ ಆಕಟ್ರಾಯ್, ಕನ್ಸರವನ್ಸಿ, ಮಾರ್ಕೆಟ ಫೀ ವಗೈರೆ ಉತ್ಪನ್ನದ ಬಾಬುಗಳಲ್ಲಿ ಮೊದಲಿಗಿಂತ ಬಹಳ ಹೆಚ್ಚು ಉತ್ಪನ್ನವು ಬೆಳೆದದ್ದನ್ನು ನೋಡಿ, ಹೊಸ ಬೋರ್ಡಿನವರು ಮ್ಯುನಿಸಿಪಾಲಿಟಿಯ ಕೆಲಸದ ಕಡೆಗೆ ವಿಶೇಷ ಲಕ್ಷ್ಯ ಪೂರೈಸಿ ತಮ್ಮ ಕರ್ತವ್ಯವನ್ನು ಬಹಳೆ ದಕ್ಷತೆಯಿಂದ ಬಿರ ಗಿಸಿರುತ್ತಾರೆಂಬುವದು ಸಹಜವಾಗಿ ಕಂಡು ಬರುವಂತಿದೆ. ಇದರಂತೆ ವಿ ವಿಗೆ, ನೀರಿನ ರಿಪೇರಿ ಗಟರ ರಿಪೇರಿ, ಕನ್ಸರವನ್ಸಿ, ಸ್ಯಾನಿಟೇಶನ್ ಪ್ಲೇಗ, ಕಾಲೆರಾ ಪ್ರತಿಬಂಧಕ ಉಪಾಯ, ಇಮಾರತ ರಿಪೇರಿ ಸಾರ್ವಜನಿಕ ರಸ್ತೆಗಳ ರಿಪೇರಿ ವ ವಿದ್ಯಾ ಖಾತೆ ವಗೈರೆ ಸಾರ್ವಜನಿಕ ಹಿತದ ವ ಅತ್ಯವಶ್ಯಕ ಕೆಲಸಗಳ ಕಡೆಗೆ ವಿಶೇಷ ಲಕ್ಷ್ಯ ಪೂರೈಸಿ ಶಕ್ಯವಿದ್ದಷ್ಟರಮಟ್ಟಿಗೆ ಹೆಚ್ಚಿಗೆ ಹಣ ಖರ್ಚ ಮಾಡಿದ್ದು ನೋಡಿ ಈಗ ಬೋರ್ಡಿನವರು ತಮ್ಮ ಕರ್ತವ್ಯತತ್ಪರತೆಯ ತೋರಿಸಿರುತ್ತಾರೆಂಬುದು ಸಹಜವಾಗಿ ತಿಳಿಯುವಂತಿದೆ. ಈ ಪ್ರಕಾರ ಈಗಿರುವ ಬೋರ್ಡಿನವರು ಹೆಚ್ಚು ಉತ್ಸುಕತೆಯಿಂದ ತಮ್ಮ ಮೇಲಿನ ಸಾರ್ವಜನಿಕ ಕೆಲಸದ ಜವಾಬದಾರಿಯನ್ನು ಯೋಗ್ಯ ರೀತಿಯಿಂದ ಕೊನೆಗಾಣಿಸಿರುವರೆಂಬುದಕ್ಕೆ ಸಂದೇಹವಿಲ್ಲ. "ಮ್ಯಾನೇಜಿಂಗ ಕಮಿಟಿಯವರು" ಮಾಡಿದ ಖಟಪಟಿ ವ ಅವರು ವಿಶೇಷವಾಗಿ ತಕ್ಕೊಂಡ ಶ್ರಮದಿಂದಲೇ ಈಗಿನ ಬೋರ್ಡಿಗೆ ಮೇಲೆ ಕಾಣಿಸಿದ ಪ್ರಕಾರ ಕರ್ತವ್ಯದಕ್ಷತೆಯ ಶ್ರೇಯವು ದೊರಕಿರುತ್ತದೆ. ಇದರ ಮೇಲಿಂದ ಮ್ಯುನಿಸಿಪಾಲಿಟಿಯ ಕೆಲಸವು ಯೋಗ್ಯವಾಗಿ ವ ಸಮಾಧಾನಕರವಾಗಿ ನಡೆದದೆ ಎಂಬುದನ್ನು ಪ್ರತ್ಯೇಕವಾಗಿ ಹೇಳುವಕಾರಣವಿಲ್ಲ

ತಾ ೨೭—೧೦—೧೯೨೩

S. G. BADRI,
President,

ಕಂಧರಾಬಾದಿನೊಳಗಿನ ನಬಾಬ ಒಬ್ಬರು ಖುದ್ದು ಅವರ ಮನೆಯಲ್ಲಿ ಕಳೆದ ೧೩ನೇ ದಿನಗಳವರೆ ದೊಡ್ಡ ಕಳುವಾಯಿತು ಸುಮಾರು ೨॥ ಲಕ್ಷ ರುಪಾಯಿ ಬೆಲೆಯ ರತ್ನಾದಿಗಳು ಕಳವಾದವಂತೆ! ಪೋಲೀಸರು ತಪಾಸು ಮಾಡುತ್ತಿರುವರು

ತಿರುವಣ್ಣಾಮಲಾದ ಕಾಂಗ್ರೆಸ ಕಮಿಟಿಯವರು ಸ್ಥಾನಿಕ ಮುನಿಸಿಪಾಲಿಟಿಯ ಚುನಾವಣೆಯಲ್ಲಿ ತಮ್ಮ ಉಮೇದವಾರರನ್ನು ದಾಖಲ ಮಾಡಬೇಕೆಂದು ನಿರ್ಧರಿಸಿರುವರು

ಹೊಸ ವರಿಷ್ಠ ಶಾಸನ ಸಭೆ ಕೌನ್ಸಿಲಿನ ಅಧಿವೇಶನವು ಬರುವ ಜನವರಿ ತಿಂಗಳ ಕೊನೆಯ ವಾರದಲ್ಲಿ ಆಗುವದೆಂಬದೊಂದು ವರ್ತಮಾನ

ಬಿಹಾರ ಪ್ರಾಂತಿಕ ಪರಿಷತ್ತಿನ ಸಮಯದಲ್ಲಿ ಸೋನಪೂರದೊಳಗೆ ಅಸಹಯೋಗಿಗಳ ಒಂದು ಸಭೆಯಾಯಿತು. ಈ ಸಭೆಯಲ್ಲಿ ಗಾಂಧಿ ಸಂಘ ಎಂಬದೊಂದು ಸಂಘವನ್ನು ಸ್ಥಾಪಿಸಬೇಕೆಂದು ಠರಾವಾಗಿದೆ ದೇಶಕ್ಕಾಗಿ ಸ್ವಾರ್ಥತ್ಯಾಗ ಮಾಡಲು ತಯಾರಿದ್ದ ಕಾರ್ಯಕರ್ತರ ತಯಾರ ಮಾಡಿ, ಆಚರಿಸುವವರು ಈ ಸಂಘದ ಸಭಾಸದರಾಗಬೇಕೆಂದು ಠರಾಯಿಸಲಾಗಿದೆ

ನಾಸಿಕ ಮುನಿಸಿಪಾಲಿಟಿಯವರು ಮೌಲಾನಾ ಮಹಮ್ಮದ ಅಲ್ಲಿಯವರಿಗೆ ಮಾನಪತ್ರ ಕೊಡಬೇಕೆಂದು ಮಾಡಿ ಆ ಬಗ್ಗೆ ೫೦ ರೂಪಾಯಿಗಳನ್ನು ಮಂಜೂರ ಮಾಡಿರುವರು ಸೊಲ್ಲಾಪುರ ಮುನಿಸಿಪಾಲಿಟಿಯವರೂ ಮಾನಪತ್ರದ ಠರಾವನ್ನು ಮಂಜೂರು ಮಾಡಿ ಆ ಬಗ್ಗೆ ಬರುವ ಖರ್ಚನ್ನು ಸಹ ಪಾಸು ಮಾಡಿದ್ದರು ಆದಕ್ಕೆ ಸರಕಾರಿ ಅಧಿಕಾರಿಗಳು ಅಡ್ಡಿ ತೆಗೆದಿರುವರು

ಬ್ರಿಟಿಶ ಪಾರ್ಲಿಮೆಂಟು ವಿಸರ್ಜನಹೊಂದಿತ ಹೊಸ ಇಲೆಕ್ಶನು ಈ ಡಿಸೆಂಬರದಲ್ಲಿ ಜರಗ ಬೇಕಿದೆ ನಿರುದ್ಯೋಗಿ ಕೂಲಿಕಾರರ ಬಗ್ಗೆ ತಕ್ಕ ವ್ಯವಸ್ಥೆಯನ್ನು ಮಾಡದ್ದರಿಂದ ಕೂಲಿಕಾರಪಕ್ಷದ ಮುಂದಾಳುಗಳಾದ ರ್ಯಾಮ್ಸೆ ಮೆಕಡೊನಲ್ಡ ರವರು ನಿಂದಾವ್ಯಂಜಕ ಠರಾವ ತಂದರು ಮುಖ್ಯ ಪ್ರಧಾನ ಮಿ। ಬೋಲ್ಡವಿನ್‌ರವರು ಕೊಂದಿನ ಧೋರಣವನ್ನು ಸ್ಪಷ್ಟೀಕರಿಸಿದರು.

ಜಝಿರಾತ-ಅಲ್ ಅರಬ ದಿನವನ್ನು ಮುಂಬಯಿಯ ಮುಸಲ್ಮಾನರೆಲ್ಲರೂ ಭಕ್ತಿಯಿಂದ ಪಾಲಿಸಿದರು ಕ್ರಾನಿಕಲ್ ಪತ್ರಿಕೆಯ ಸಂಪಾದಕರಾದ ಮಿ। ಮಾರ್ಮಡ್ಯೂಕ ಪಿಕ್‌ಥೊರ್‌ರವರ ಅಧ್ಯಕ್ಷತೆಯಲ್ಲಿ ಜಮಾಮಸೀದಿಯಲ್ಲಿ ಮುಸಲ್ಮಾನರ ಪ್ರಚಂಡ ಸಭೆಯಾಯಿತು ಅದರೊಳಗೆ ಜಝಿರಾತ್-ಅಲ್-ಅರಬ ಪ್ರದೇಶದ ಸ್ವಾತಂತ್ರ್ಯದ ಬಗ್ಗೆ ಠರಾವು ಮಂಜೂರಾಯಿತು

ಏನೂ ಉಪದ್ರವವಾಗದೆ

ಕೂದಲು ತೆಗೆಯುವ

ಬಾದಶಾಹೀ ಸಾಬೂನು.

ಈ ಸಾಬೂನವನ್ನು ಬೇಕಾದಲ್ಲಿ ಹಚ್ಚಿರಿ, ಅಲ್ಲಿಯ ಕೂದಲುಗಳು, ಚರ್ಮವನ್ನು ಯಾವದೇ ರೀತಿಯಿಂದ ಬಾಧಿಸಲಂಕಿಸದೆ ಅತ್ಯಂತ ಸಫಾಯಿಯಿಂದ ಉದುರಿಹೋಗುತ್ತವೆ ಚರ್ಮವು ಮೃದುವಾಗುತ್ತದೆ ೩ ಬಟ್ಟಿಗಳ ಪೆಟ್ಟಿಗೆ ೧ ರ ಬೆಲೆ ಒಂದೇ ೧ ರೂಪಾಯಿ ಟಪಾಲ ಹಾಸಲು ಆಠ ಆಣೆ ಒಂಟಿ ಬಟ್ಟಿಯನ್ನು ಕಳಿಸಲಾಗುವದಿಲ್ಲ ೬ ಬಟ್ಟಿಗಳುಳ್ಳ ೪ ಪೆಟ್ಟಿಗೆಗಳ ಕಿಮ್ಮತ್ತು ರೂಪಾಯಿ ೩ ಅಂಚೆ ಹಾಸಲು ಮಾಫಿ ಬಾದಶಾಹೀ ಸಾಬೂನಿನ ಉತ್ಕೃಷ್ಟತೆಯ ಬಗ್ಗೆ ಕಲಕತ್ತಾ, ಕರಾಚಿಗಳ ಪ್ರದರ್ಶನದಲ್ಲಿ ಸುವರ್ಣ ಪದಕಗಳು ಇನಾಮಾಗಿ ದೊರೆತಿವೆ ನಕಲೀ ಮಾಲಿನ ಬಗ್ಗೆ ಎಚ್ಚರಿಕೆ, ಮೋಸಹೋಗಬೇಡಿರಿ

ಜಿಲ್ಲೆಯ ನಂ ೧೦೯, ತಪಾಸ ಮಾಡಿಕೊಂಡು ದಿ ಮಾತಿರಿ ಅಲ್ಲಲ್ಲಿ ಏಜಂಟರು ಬೇಕು

ಸಿ. ಮಹಾಜನ ಎಂಡ್ ಕಂಪನಿ,

ಮುಂಬಯಿ ನಂ ೨.

ಸೂಚನೆ— ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಮಾಡಬೇಕು ಹಿಂದುಸ್ಥಾನಿಯಲ್ಲಿ

ಆನಂದ ಮಂದಿರ.

ಮಾರ್ಮಗೋವಾ ಹಾರ್ಬರ.

ಉತ್ತಮ ಭೋಜನ-ಉಪಹಾರದ ವ್ಯವಸ್ಥೆ.

ಈ ಹೋಟೇಲು ಮಾರ್ಮಗೋವಾ ಹಾರ್ಬರದಲ್ಲಿ ಕೇವಲ ಪ್ರವಾಸಿಕರ ಅನುಕೂಲತೆಗಾಗಿ, ನೂತನವಾಗಿ ಸ್ಥಾಪಿಸಲ್ಪಟ್ಟಿದೆ ಇದು ಹಾರ್ಬರದ ಸೆರೆಯ ದಿನ್ನೆಯ ಮೇಲೆ ಭವ್ಯ ಮಂದಿರದಲ್ಲಿದೆ ಉತ್ತಮ ಭೋಜನ-ಉಪಹಾರವು ದೊರೆಯುವದು ಪ್ರಯಾಣಿಕರೆಲ್ಲರೂ ಇದರ ಉಪಯೋಗ ಮಾಡಿಕೊಳ್ಳಬೇಕಾಗಿ ವಿನಂತಿ

ಮೆನೇಜರ.

Twelve Tissue Remedies

ಈರಾರು ಲವಣಗಳು

ಕೆಳಗೆ ಬರೆದ ಕ್ರಯಕ್ಕೆ ಸಿಗುವವು

ನಂಬ್ರ ೧ರಿಂದ ೧೨ರ ವರೆಗೆ

೧ಟಿನ್ನ ಬಾಟ್ಲಿಗೆ ಕ್ರಯ ರೂ ೦-೧೦-೦,

,, ,, ,, ೨ ಟಿನ್ನ ಬಾಟ್ಲಿಗೆ ರೂ ೧-೮-೦

,, ,, ೪ ಟಿನ್ನ ಬಾಟ್ಲಿಗೆ ,, ರೂ ೧-೧೨-೦

ಇನ್‌ಫ್ಲುಯೆನ್ಜಾ, ಗಡಕರ್ಣ, ಕಫ, ತಲೆತಿರುಗುತ, ಚಳಿಜ್ವರ ಚಾತುರ್ಥಿಜ್ವರ, ಜ್ವರಗಡ್ಡೆ ಮೊದಲಾದವುಗಳಿಗೆ ಅತ್ಯುತ್ತಮ ಔಷಧಗಳು ನಮ್ಮಲ್ಲಿ ದೊರೆಯುವವು ವಿಶೇಷ ಮಾಹಿತಿ ಪತ್ರದ್ವಾರ ಯಾಚಿಸತಕ್ಕದ್ದು

ಪತ್ತೆ:— ಎನ್. ಈ. ವರುಗೀಸ್,

ಮಿಶನ ಮಾಸ್ತರ,

ಹಳದೀಪುರ (ಉ ಕಾನಡಾ)

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ ರಾಜಕೀಯ, ವಿಷಯಗಳನ್ನೂ, ಚರಿತ್ರ ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ

ಈ ವರೆಗೆ ಪ್ರಕಟವಾದ ಪುಸ್ತಕಗಳು

(೧-೨) ಗ್ರೀಸ ದೇಶದ ಗಾಂಧಿ (ಸಾಕ್ರೆಟೀಸ) (೩) ಸ್ವಾತಂತ್ರ್ಯಸಾಧನೆ (೪) ಗುರು-ಹಿರಿಯರೂ, ಬಂಧು-ಭಗಿನಿಯರೂ (೫) ರಾಷ್ಟ್ರೀಯ ಶಿಕ್ಷಣ (೬) ಸದ್ಗುಣಮಂದಿರ (ಭಾಗ ೧) (೭) ಸ್ವರಾಜ್ಯ ಧರ್ಮ (ಅನಾಮಿನ ಪುಷ್ಪ) ಇವಿಷ್ಟು ಪ್ರಕಟವಾಗಿದ್ದು, ೫ ಆಣೆಗೆ ಒಂದರಂತೆ ದೊರೆಯುತ್ತವೆ ವರ್ಗಣೀದಾರರಿಗೆ ಹಿಂದಿನ ಬೇಕಾದ ಪುಸ್ತಕಗಳು ೪ ಆಣೆಗೆ ಒಂದರಂತೆ ದೊರೆಯುವವು ೬ ಪುಸ್ತಕಗಳಿಗೆ ಕೂಡಿ ೧। ರೂಪಾಯಿ ಮಾತ್ರ ಅಂಚೆವೆಚ್ಚ ಬೇರೆ. ದ್ವಿತೀಯ ವರ್ಷ ಪ್ರಾರಂಭ. ಅನುಕ್ರಮವಾಗಿ ಮಾರ್ಚ, ಮೇ, ಜುಲೈ ಸಪ್ಟಂಬರ, ನವಂಬರ, ಜನವರಿ ೧೫ ನೇ ತಾರೀಖಿಗೆ ಒಂದೊಂದು ಪುಸ್ತಕ ಹೊರಡುವದು, ವಾರ್ಷಿಕ ವ ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ

ವಾ ಅ ಹೊದ್ಕೆ,

ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ

ಎಲ್ಲ ತರದ ಜ್ವರಗಳಮೇಲೆ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ, ಶೀತ, ಬಂಗಲಿ, ಅಥವಾ ದೂಷಿತ ಹವೆಯಿಂದ ಬರುವ ಸಾದಾ ವಿಷಾರೀ ಅಥವಾ ಇತರ ಜ್ವರಗಳೂ, ಇನಫ್ಲುಎಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನ್ಯಾಯದ ದುಷ್ಪರಿಣಾಮರಹಿತ ಕೇವಲ ವನಸ್ಪತಿಯ ಈ ಮದ್ದು ಸೇವಿಸಿದರೆ ಅಶಕ್ತತೆಯಾಗದೆ, ಬೆವರು ಬಂದು ಜ್ವರ ಇಳಿಯುತ್ತದೆ ಹಾಗು ರೋಗಿಯು ತರಿತ ನಾಶವಾಗುತ್ತಾನೆ

೬ ಔಂಸ ಬಾಟ್ಲಿ ಕಿಂಮತ ರೂ ೧-೦-೦

ಇದರ ಹೊರತು ಇನ್ನೂ ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ, ಉಚ್ಚ ಪ್ರತಿಯ ಕೋಲನ ವೋಟರ, ಲವೆಂಡರ ಇತ್ಯಾದಿ ಸಾಮಗ್ರಿಗಳು ಅಲೆಂಬಿಕದ ಕಾರಖಾನೆಯಲ್ಲಿ ತಯಾರಾಗುತ್ತವೆ ಎಲ್ಲರು ಕೇಳಬೇಕು ತರಿಸಿರಿ

ಅಲೆಂಬಿಕ್ ಕೆಮಿಕಲ್ ವರ್ಕ್ಸ,

ಕಂಪನಿ, ಲಿಮಿಟೆಡ್.

ನಂ ೫೦, ಪ್ರಿನ್ಸೆಸ್‌ಸ್ಟ್ರೀಟ, ಮುಂಬಯಿ

अलेंबिक केमिकल वर्क्स कं० लिं०

नं. ५० प्रिन्सेस स्ट्रीट मुंबई.

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಮಕ್ತಾ ಕೇಳಿ ತಿಳಕೊಳ್ಳಬಹುದ

ಪುರುಷೋತ್ತಮ ಲಕ್ಷ್ಮಣಯ್ಯ ಜ್ಞಾನಭಾಗ

ಹೆಗಡೇಕರ, ದುಕಾನ, ಕುಮಟಾ.

कारवारांत आयुर्वेदिक पाठविद्यालय

उघडण्यांत येणार.

सन १९२४ च्या जानेवारी महिन्यापासून कारवार येथें वरील पाठशाळा उघडण्यांत येणार आहे आयुर्वेदांतील प्रत्येक विषय प्रमाणपूर्वक व सशास्त्र शिकविण्यांत येईल. पूर्ण आयुर्वेदिक शिक्षण तीन वर्षांत शिकविलें जाईल. विद्यार्थी निदान मराठी पांच इयत्ता शिकलेला व भाडारकरकृत, संस्कृत तीन पुस्तकें पठलेला असावा अथवा आयुर्वेद औषध पुस्तकांतील श्लोकाचा अर्थ समजून घेण्या इतकें संस्कृत ज्ञान असलेला असावा. त्याचें वय १८ ते २२ वर्षांपर्यंत व प्रकृति सदृढ असावी सदर पाठशाळेचे वर्ग १ जानेवारी १९२४ पासून सुरू होतील. फीचे दर १ ल्या वर्षास दरमहा ६ रुपये, दुसऱ्यास दरमहा

१० रुपये व तिसऱ्या वर्षास दरमहा १२ रुपये प्रमाणें ठेविली आहे. पहिल्या वर्षांत फक्त २९ विद्यार्थीच निवडण्यात येतील. विद्यार्थ्यांनीं आपले अर्ज ता १५ डिसेंबर च्या आंत पाठविले पाहिजेत अर्जासोबत प्रवेश फीचे ३ रुपये पाठविण्यांत आले पाहिजेत. ज्यांची निवड होणार नाहीं त्यांची फी परत करण्यांत येईल. पत्रव्यवहार मराठीत अगर कानडी मध्यें करावा.

प्रत्येक वर्षांत शिकविले जाणारे विषय खालील प्रमाणें:—

पहिलें वर्ष.

१. प्रत्येक वनस्पतीचे गुण धर्मपरिचय वर्णन संख्या आणि प्रत्येक औषधाचे अनेक भाषांतील नामाहि वगैरे

२ निदान शास्त्र त्यात प्रत्येक रोगाचे निदान (हेतु) सप्रमाण आणि ग्लुखासेवार (परिक्षा करण्यास) शिकविले जाईल

३. सदर निदान शास्त्रात रोग गणनेत आलेले विषय औषधालयात समक्ष प्रयोग करून दाखविले जातील.

दुसरें वर्ष

१. प्रत्येक रोगावर निरनिराळ्या शास्त्रोक्त पद्धतीनें चिकित्सा (उपचार) करण्यास शिकविलें जाईल

२. प्रत्येक वस्तुद्रव्यादिचे गुणदोष व तत्व विचार शिकविले जातील

३. प्रत्येक रोगावर पथ्यापथ्य विषय शिकविले जातील.

तिसरें वर्ष

१. आर्य शरीर शास्त्र, कला, स्नायु, मज्जातंतु वाहिनी रहितपिंड, रुधिराभिसरण चक्रादि प्रत्येक भागात होणाऱ्या निरनिराळ्या क्रिया. प्रत्येक भागाची नावे, त्याच प्रमाणें प्रत्येक भाग चित्र रूपानें 'काढून घेणे व तेच विषय त्यांना वर्णन करून स्पष्ट करून देणे' वगैरे.

२. प्रत्येक रोगावरील हिमफाटकाद्या पासून रसायना पर्यंत तयार करण्याचे प्रयोग औषधालयात समक्ष करून दाखविले जातील

३ रसायने व कुपित्त रसायने यांची सपूर्ण माहिती आणि प्रत्येक विषया विषयी संशयनिवृत्ति स्पष्ट रितीनें करण्यात येईल.

विशेष माहिती— खालील पत्यावर पत्रद्वारें अगर समक्ष मिळेल.

वि सू उमेदवाराकरितां राहण्याची सोय करून देता येईल.

शिकविणारे— वैद्य जे एफ फर्नांडिस,
आर्यौषधालय, कारवार.

एड्रेस— व्यवस्थापक.
आयुर्वेदिक पाठविद्यालय, कारवार

ಫಕ್ತ ಒಂದು ತಿಂಗಳ ಪೂರ್ತ ಸವಲತ್ತು.

ತಿಂಗಳಿಗೆ ರೂಪಾಯಿ ೧೦೦ರಿಂದ ೫೦೦ರ ವರೆಗೆ ಗಳಿಸಿರಿ.

ಬೇಕಾದಲ್ಲಿ ಸುಲಭವಾಗಿ ಗಳಿಸಿರಿ.

ರೂಪಾಯಿ ೭-೮-೦ ಖರ್ಚುಮಾಡಿರಿ ಮತ್ತು ಸ್ವತಂತ್ರರಾಗಿರಿ.

ಸಬಕಾರವು ಪ್ರತಿಯೊಬ್ಬ ಮಾನವನಿಗೆ ಅವಶ್ಯವಿದ್ದ ವಸ್ತುವು. ಅವನು ದೇಕಾದರೆ, ಶ್ರೀಮಂತನಿರಲಿ ಬಡವನಿರಲಿ, ಹಳ್ಳಿಗನಿರಲಿ, ಪಟ್ಟಣಿಗನಿರಲಿ, ಪಾಶ್ಚಾತ್ಯ ಮಾದರಿಯ ಸಬಕಾರವನ್ನು ತಯಾರಿಸುವ ನಮ್ಮ ಕ್ರಮವು ಅತಿ ಉತ್ತಮವೆಂದು ಖ್ಯಾತಿಹೊಂದಿದೆ. ಈ ಕ್ರಮದಿಂದ ಶ್ರೇಷ್ಠ, ಕನಿಷ್ಠ ಪ್ರತಿಯ, ಮೈಗೆ ಹಚ್ಚುವ ಯಾ ಅರಿವೆಗೆ ಹಾಕುವ, ಪರಿಮಳದ ಹಾಗು ಬಣ್ಣಗಳ ಸಬಕಾರವನ್ನು ಸುಲಭವಾಗಿ ಯಾರೂ ತಯಾರಿಸಬಲ್ಲರು. **ಈ ಕ್ರಮಕ್ಕೆ ಬಂಡವಲದ ಅವಶ್ಯಕತೆಯಿರುವದಿಲ್ಲ.** ನಮ್ಮ ವಿದ್ಯಾರ್ಥಿಗಳು ಯತ್ನಮಾಡುವಾಗ ನಾವು ಬಲು ಜಾಗ್ರತೆಯಿಂದ ಅವರನ್ನು ನಿರೀಕ್ಷಿಸಿ, ಅವರಿಗೆ ಬೇಕಾದ ಮಾಹಿತಿಯನ್ನು ಪೂರೈಸುತ್ತೇವೆ. ಈ [illegible] ಅನೇಕರು [illegible] ವತ್ರ [illegible] ಕರೆಹಿಸಿರುವರು ಈ ಪೂರ್ಣ ಕ್ರಮವನ್ನು ರೂ [illegible] ವಿ. ಪಿ. ಮೂಲಕ ಕಳಿಸುವೆವು ಈ ಕ್ರಮವು ನಿಯಮಿತ ಮಂದಿಗಳಿಗೆ ಮಾತ್ರ ಕಳಿಸಲ್ಪಡುವದು

[illegible] ಹೊಂದಬಾರದೆಂದು ಇಚ್ಛೆ ಇದ್ದವರು ಕೆಳಗಿನ ಪತ್ತೆಗೆ ಕೂಡಲೆ ಬರಕೊಳ್ಳತಕ್ಕದ್ದು.

International Business Corporation,
Dept. (F) 557, Goulligoda, Hyderabad. (Dn)



ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿಗಳ ಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಲೆ ಜನಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವರು. ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತ್ತು ೧೦ ವ್ಹಿ ಪಿ ಖರ್ಚು ಬೇರೆ

ಅಮೃತಾಂಜನ ಡಿಪೋ, ಫೋರ್ಟ, ಮುಂಬಯಿ

ಪ್ರಸನ್ನಾದ ಸಾಗುವಳಿಯಲ್ಲಿಯೇ ಸಂಪತ್ತಿಯು



ಅಡಕವಾಗಿರುವದು.

ನಮ್ಮ ಕಾರಖಾನೆಯಲ್ಲಿ ತಯಾರಾಗ ಸುಧಾರಿಸಿದ ಕಬ್ಬಿಣ ನೇಗಿಲಗಳೂ, ಕಬ್ಬಿನ ಗಾಣಗಳೂ, ಇವೇ ಮುಂತಾದ ವ್ಯವಸಾಯದ ಮುಟ್ಟುಗಳನ್ನು ತರಿಸಿಕೊಂಡು ನಿಮ್ಮ ಒಕ್ಕಲುತನವನ್ನು ಬೆಳಿಸಿಕೊಳ್ಳಿ ೨೫ ವರ್ಷಗಳ ಅನುಭವದಿಂದ ಈ ಸಾಮಾನುಗಳನ್ನು ತಯಾರ ಮಾಡಿರುತ್ತೇವೆ ೫೦,೦೦೦ ರೈತರು ಕೂಡುತ್ತಾರೆ ಇಂದೇ ಪತ್ರ ಬರೆದು 'ವ್ಹ' ಎಂಬ ಕ್ಯಾಟಲಾಗು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು
ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ)

Printed and Published by Krishnarao Keshav Shenvi (Editor) at his Star of Kanara Press Kumta

ರಂಜಿ. No. B. 1270. Thursday, 29th November 1923.

ವರ್ಷ ೮. ಸಂಚಿಕೆ ೬.

ಕಾನಡಾವೃತ್ತ.

THE KANARA NEWS.

ಪತ್ರದ ವರ್ಗಣಿ.

ಮುಟೆಯಲ್ಲಿ ಅಗಾವು ರೂಪಾಯಿ 2-4-0.
ನೆಯಾರ್ತರಿಯಿಂದ ರೂ. 3-0-0.
ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.
ಪ್ರತಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेंद्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಪ್ಯಾಕಾ ಟೈಪಿನ (೧೫ ಎಮ್ ಉದ್ದ)
೮ ಸಾಲುಗಳವರೆಗೆ ರೂ. 1-0-0
ಆ ನಂತರ ಪ್ರತಿಸಾಲಿಗೆ 0-1-0
ಹೆಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

(ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖ ೨೯ ಮಾಹೆ ನವಂಬರ ಸನ್ ೧೯೨೩ ನೇ ಇಸವಿ)

हिंदुस्थानांतील हवेच्या मानाने हिंदुस्थानची हवा त्यामानाने हे औषध हिंदुस्थानांतील लोकांस ज्यास्त फायदेशीर आहे

द्राक्षासव- { दीड रतलाची किंमत २ रुपये;

रामबाण औषधें

सर्दी चालविणारें,
मूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

पिण्यास रोचक.

कचाटलाग मागवा,

हिंदु फार्मास्युटिकल वर्क्स लिमिटेड,
मुंबई नं. १२

1924ನೇ ಇಸವಿಯ ಸ್ವರಾಜ್ಯ ಡೈರಿ.

ಸಂಪಾದಕ – ಡಿ. ಕೆ. ಭಾರದ್ವಾಜ, ವಿದ್ಯಾಭೂಷಣ. ರಾಜಕೀಯ, ಆರ್ಥಿಕ, ವ್ಯಾಪಾರ, ಸ್ವದೇಶಿ, ನಾಗರಿಕ ಮೊದಲಾದ ವಿಷಯಗಳ ಹೊಸ ಸಂಗ್ರಹ' ದೇಶಭಕ್ತರ ನವೀನ ಭಾವಚಿತ್ರಗಳು ' ಪ್ರತಿಯೊಬ್ಬರೂ ಅಗತ್ಯವಾಗಿ ಉಪಯೋಗಿಸತಕ್ಕದ್ದು

ನಮ್ಮಲ್ಲಿ ಯಾವತ್ತೂ ಪೇಟೆಂಟ' ಔಷಧ ಚಿಕನರಿ ವಗೈರೆ ಹೊಸ ಸ್ಟಾಕ ಬಂದಿದೆ. ನೋಡಿರಿ !

ದಿ. ನ್ಯೂ. ಎಂಪೋರಿಯಮ್,
ಜನರಲ್ ಮರ್ಚಂಟ್ಸ, ಹೊನ್ನಾವರ.

ಡಾ| ವಾಸೂರಕರರ

ಸುಧಾಂಜನ.

ಅಂಜನಗಳಿಗೆಲ್ಲ ಅರಸು.



ತಲೆಶೂಲಿ, ವಾತ ಪೇಡನೆ, ಕಜ್ಜು, ಹಲ್ಲು ನೋವು ಇತ್ಯಾದಿಗಳಿಗೆ ಕ್ಷಿಪ್ರ ಗುಣಕಾರಿ ಸುಧ್ಧ. ಬೆಲೆ ೭ ಆಣೆ ಮಾತ್ರ. ವ್ಯಾಪಾರಿಗಳಿಗೆ ವಿಶೇಷ ಸವಲತ್ತು ಹೆಚ್ಚಿನ ಮಾಹಿತಿ ಎಜಂಟರಿಂದ.

ಏಜಂಟ್ಸ — ನಾಗರ್ಕಟ್ಟಿ ಬ್ರದರ್ಸ,
ಸುಧಾಂಜನ ಡಿಪೋ,
ಕುಮಟಾ. (ಜಿಲ್ಲಾ ಕಾರವಾರ)

ಶುದ್ಧ ರೇಶಿಮದ ಧಾವಳಿಗಳು.

4 ಮೊಳ ಉದ್ದ	1¼ ಮೊಳ ಅಗಲ	ರೂ. 1¼ ರಿಂದ 2 ವರೆಗೆ						
5	,,	,,	1½	,,	,,	,,	1 10 0–5	,,
6	,,	,,	1½	,,	,,	,,	2¼ —6	,,
8	,,	,,	2	,,	,,	,,	3½ —10	,,
12	,,	,,	2¼	,,	,,	,,	6 —12	,,
16	,,	,,	2½	,,	,,	,,	9 —16	,,

SUN & CO
BENARES CITY.

ಇವುಗಳಲ್ಲದೆ ಶುದ್ಧ ಖದ್ದರ್ ರೇಶಿಮಡಿಗಳು, ಸಾರ್ಮಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು ರುದ್ರಾಕ್ಷಿ, ಜಾಘಂಟೆ, ತಾಳ, ಪನ್ನೀರ್ ದಾನಿ, ಆಟದ ಸಾಮಾನುಗಳು, ದೇವರ ಮತ್ತು ಗಾಂಧಿ ಮುಂತಾದವರ ಪಟಗಳಿರುವ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ಯೋಗ್ಯಕ್ರಮಕ್ಕೆ ದೊರೆಯುವವು ಕ್ಯಾಟಲಾಗ್ ಇನಾಂ.

ವಿಳಾಸ:— ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಆನಂದ ಮಂದಿರ.

ಮಾರ್ಮಗೋವಾ ಹಾರ್ಬರ.
ಉತ್ತಮ ಭೋಜನ-ಉಪಹಾರದ ವ್ಯವಸ್ಥೆ.

ಈ ಹೋಟೇಲು ಮಾರ್ಮಗೋವಾ ಹಾರ್ಬರ ಪಕ್ಕ ಕೇವಲ ಪ್ರವಾಸಿಕರ ಅನುಕೂಲತೆಗಾಗಿ, ನೂತನವಾಗಿ ಸ್ಥಾಪಿಸಲ್ಪಟ್ಟಿದೆ ಇದು ಹಾರ್ಬರದ ಸರಿಯ ದಿನ್ನೆಯ ಮೇಲೆ ಭವ್ಯ ಮಂದಿರವಲ್ಲಿದೆ ಉತ್ತಮ ಭೋಜನ-ಉಪಹಾರವು ದೊರೆಯುವವು ಪ್ರಯಾಣಿಕರೆಲ್ಲರೂ ಇದರ ಉಪಯೋಗ ಮಾಡಿಕೊಳ್ಳಬೇಕಾಗಿ ವಿನಂತಿ

ಮೆನೇಜರ.

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಪತ್ರ ಹಿತ ಕೆಳಗಿನ ಪತ್ತೆಗೆ ಮುಕ್ತಾ ಶಿಕ್ಕಿ ತಿಳಕೊಳ್ಳಬಹುದು.

ಪುರುಷೋತ್ತಮ ಲಕ್ಷ್ಮುಮಯ್ಯ ಶ್ಯಾನಭಾಗ
ಹೆಗಡೇಕರ, ದುಕಾನ, ಕುಮಟಾ.

ಎಲ್ಲ ತರದ ಜ್ವರಗಳಮೇಲೆ ಖ್ಯಾತಿಗೊಂಡ

ಅಲೆಂಬಿಕ್ ಫೆಬ್ರೋಲೀನ.

ಮಲೇರಿಯಾ, ಚಳಿಜ್ವರ, ಶೈತ್ಯ, ಬಂಗಲಿ, ಅಥವಾ ದೂಷಿತ ಹವೆಯಿಂದ ಬರುವ ಸಾದಾ ವಿಷಾರೀ ಅಥವಾ ಇತರ ಜ್ವರಗಳೂ, ಇನಫ್ಲುಎಂಝಾ ಇತ್ಯಾದಿಗಳ ಮೇಲೆ ರಾಮಬಾಣ ಕ್ವಿನ್ಯಾ ಪದ ದುಷ್ಪರಿಣಾಮರಹಿತ ಕೇವಲ ವನಸ್ಪತಿಯ ಈ ಮಸ್ದುನ ವಿಸಿದರೆ ಅಶಕ್ತತೆಯಾಗದೆ, ಬೆವರು ಬಂದು ಜ್ವರ ಇಳಿಯುತ್ತದೆ. ಹಾಗು ರೋಗಿಯು ಹರಿತ ವಾಸಿಯಾಗುತ್ತಾನೆ.

೩ ಔಂಸ ಬಾಟ್ಲಿ ಕಿಂಮತ ರೂ ೧-೦-೦ ಇದರ ಹೊರತು ಇನ್ನು ಬೇರೆ ಬೇರೆ ಔಷಧಗಳು, ದ್ರಾಕ್ಷಾಸವ, ಕುಮಾರಿ ಆಸವ, ಉತ್ಕೃಷ್ಟ ಪ್ರತಿಯ ಕೋಲನ ವೋಟರ, ಲವೆಂಡರ ಇತ್ಯಾದಿ ಸಾಮಗ್ರಿಗಳು ಅಲೆಂಬಿಕದ ಕಾರಖಾನೆಯಲ್ಲಿ ತಯಾರಾಗುತ್ತವೆ. ಮಾಹಿತಿ ಕೆಟಲಾಗು ತರಿಸಿರಿ.

ಅಲೆಂಬಿಕ್ ಕೆಮಿಕಲ್ ವರ್ಕ್ಸ,
ಕಂಪನಿ, ಲಿಮಿಟೆಡ್.
ನಂ. ೫೦, ಪ್ರಿನ್ಸೆಸ್‌ಸ್ಟ್ರೀಟ, ಮುಂಬಯಿ.

अलेंबिक केमिकल वर्क्स कं० लि०
नं. ५० प्रिन्सेस स्ट्रीट मुंबई.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. (ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶಕುಲವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಅಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವುದೋ.

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿರುವುದೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ತೊಡೆದುಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇವನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಇದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆಯುವ ಹಾಳುವಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ.— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0, ವಿ.ಪಿ. ಖರ್ಚು 0-14 0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ಮಾಡಿದವಾದುದು ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ತೊಟ್ಟುಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8 0 1 ಡ್ರಾಮಿನ (ಮೀಡಿಯಂ) ಸೀಸೆ 1 ಕ್ಕೆ 0-12-0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0. ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ-ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12 0.

Address - **The Anglo Indian Drug & Chemical Co,**

16, Market, **BOMBAY. 2.**

ಏನೂ ಉಪದ್ರವವಾಗದೆ

ಕೂದಲು ತೆಗೆಯುವ

ಬಾದಶಾಹೀ ಸಾಬೂನು.

ಈ ಸಬಕಾರವನ್ನು ಬೇಕಾದಲ್ಲಿ ಹಚ್ಚಿರಿ, ಅಲ್ಲಿಯ ಕೂದಲುಗಳು, ಚರ್ಮವನ್ನು ಯಾವದೇ ರೀತಿಯಿಂದ ಕಳಂಕಿಸದೆ, ಅತ್ಯಂತ ಸಫಾಯಿಯಿಂದ ಉದುರಿಹೋಗುತ್ತವೆ ಚರ್ಮವು ಮೃದುವಾಗುತ್ತದೆ ೩ ಬಿಲ್ಲೆಗಳ ಪೆಟ್ಟಿಗೆ ೧ ರ ಬೆಲೆ ಒಂದೇ ೧ ರೂಪಾಯಿ. ಟಪಾಲು ಹಾಸಿಲು ೪ ಆಣೆ ಒಂಟಿ ಬಿಲ್ಲೆಯನ್ನು ಕಳಿಸಲಾಗುವದಿಲ್ಲ ೬-೩ ಬಿಲ್ಲೆಗಳುಳ್ಳ ೪ ಪೆಟ್ಟಿಗೆಗಳ ಕಿಮ್ಮತ್ತು ರೂಪಾಯಿ ೪/- ಅಂಚೆ ಹಾಸಲು ಮಾಫಿ ಬಾದಶಾಹೀ ಸಾಬೂನಿನ ಉತ್ಕೃಷ್ಟತೆಯ ಬಗ್ಗೆ ಕಲಕತ್ತಾ, ಕರಾಚೆಗಳ ಪ್ರದರ್ಶನಗಳಲ್ಲಿ ಸುವರ್ಣ ಪದಕಗಳು ಇನಾಮಾಗಿ ದೊರೆತಿವೆ

ನಕಲೀ ಮಾಲಿನ ಬಗ್ಗೆ ಎಚ್ಚರಿಕೆ, ಮೋಸ ಹೋಗಬೇಡಿರಿ

ರಜಿಸ್ಟರ ನಂ ೪೯೯, ತಪಾಸ ಮಾಡಿಕೊಂಡು ಖರೆದಿ ಮಾಡಿರಿ. ಅಲ್ಲಲ್ಲಿ ಏಜಂಟರು ಬೇಕು

ಸಿ. ಸಿ. ಮಹಾಜನ ಎಂಡ್ ಕಂಪನಿ,

ಮುಂಬಯಿ ನಂ. ೨.

ಟೀಪು — ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಯಾ ಮರಾಠಿಯಲ್ಲಿ

ಸರಸ್ವತಿ.

ಉತ್ತಮವರ್ಗದ ಶ್ರೇಷ್ಠವಾದ ಮಾಸಪತ್ರಿಕೆ.

ಈ ಪತ್ರಿಕೆಯಲ್ಲಿ ಸಾಮಾಜಿಕ, ನೈತಿಕ ಇತಿಹಾಸಿಕ ವಿಷಯಗಳಿಗೆ ಸಂಬಂಧಪಟ್ಟ ಅತ್ಯುತ್ತಮವಾದ ಲೇಖನಗಳೂ ಸ್ವಾರಸ್ಯ ಮತ್ತು ಮನೋರಂಜಕವಾದ ನಾಟಕ ಮತ್ತು ಕಾದಂಬರಿಗಳೂ, ಬಾಲಬಾಲಕಿಯರಿಗೂ ಮತ್ತು ಸ್ತ್ರೀಯರಿಗೂ ತಿಳಿಯುವಂತಹ ಉತ್ತಮಶೈಲಿಯಲ್ಲಿ ಪ್ರಕಟಿಸಲ್ಪಡುವವು ನೂತನ ಚಂದಾದಾರರಿಗೆ ಶಾರದಾ "ಗ್ರಂಥಮಾಲೆ" ಯಲ್ಲಿ ಈ ವರೆಗೆ ಪ್ರಕಟಿಸಲ್ಪಟ್ಟಿರುವ "ಪ್ರಿಯಂವದೆ, ನಿರ್ಮಲೆ, ನಿರ್ಭಾಗ್ಯವನಿತೆ, ಸೇತು ಬಂಧನ ಭಾಗ್ಯೋದಯ, ಇತ್ಯಾದಿ ಗ್ರಂಥಗಳಲ್ಲೊಂದು ಬಹುಮಾನವಾಗಿ ಕೊಡುವದಲ್ಲದೆ ರೂಪಾಯಿ ೩ ಬೆಲೆಬಾಳತಕ್ಕ ಶಾರದಾ ಗ್ರಂಥಮಾಲೆಯ ಪ್ರಕಟನೆಗಳೆಲ್ಲವನ್ನೂ ವಿ. ಪಿ. ಹಾಸಲಿಲ್ಲದೆ ರೂಪಾಯಿ ೨-೧೨-೦ಕ್ಕೆ ಕೊಡಲ್ಪಡುವದು. ಚಂದಾದಾರರಾಗತಕ್ಕವರು ತಮ್ಮ ವಿಳಾಸವನ್ನು ತಿಳಿಸಿ ಚಂದಾಹಣವನ್ನು ಮನಿಯಾರ್ಡರ್ ಮೂಲಕ ಕಳುಹಿಸಿಯಾಗಲಿ, ವಿ. ಪಿ. ಮೂಲಕವಾಗಿ ತರಿಸಿಕೊಳ್ಳಬಹುದು ವಾರ್ಷಿಕ ಚಂದಾ ರೂ ೩-೦-೦ ಮಾತ್ರ.

ವಿಳಾಸ— **ಸಂಪಾದಕಿ "ಸರಸ್ವತಿ."**

Post Box 57

ಚಾಮರಾಜಪೇಟೆ, ಬೆಂಗಳೂರು ಸಿಟಿ

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧. ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೪೫, ೫೦, ೬೦

೨. ಕಾಲು ಪೆಟ್ಟಿಗೆ ಕಿಂ. ೬೫, ೭೫, ೧೪೦, ೧೬೦

೩. ತಬಲೆ ಜೋಡಿ ಕಿಂ. ೧೩, ೧೫, ೧೮ ೨೦ ೨೫

೪ ಹಾರ್ಮೋನಿಯಮ ಗೈಡ ಕಿಂ ೧।, ತಬಲೆ ಗೈಡ ಕಿಂ. ೧॥ ಅ.

ವಿಶೇಷ ಮಾಹಿತಿ ಬಗೆ ನಮ್ಮ ಕ್ಯಾಟಲಾಗ ಪುಕ್ಕಟೆ ಕೊಡುವೆವು

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು

ಪತ್ತೆ — ಗೋಪಾಳ ಸಖಾರಾಮ ಮತ್ತು ಕಂಪನಿ, ನಂ ೨೬೭

ಕಾಳಬಾದೇವಿ ರೋಡ, ಮುಂಬಯಿ

ಕರ್ನಾಟಕ ಪ್ರಾಂತಿಕ ಪರಿಷತ್ತು.

—**—

ಅಧ್ಯಕ್ಷರ ಭಾಷಣ

ವಿಜಾಪುರದೊಳಗೆ ಕಳೆದ ಸೋಮವಾರ ತಾ ೧೯ನೇಗೆ ಕೂಡಿದ ಕರ್ನಾಟಕ ಪ್ರಾಂತಿಕ ಪರಿಷತ್ತಿನ ದ್ವಿತೀಯ ಅಧಿವೇಶನದ ಅಧ್ಯಕ್ಷರಾದ ಶ್ರೀ ರಾಜಗೋಪಾಲಾಚಾರ್ಯರು ಮಾಡಿದ ಭಾಷಣದ ಸಾರಾಂಶವು:—

ಮೊಟ್ಟಮೊದಲು, ಅಧ್ಯಕ್ಷಸ್ಥಾನವನ್ನಿತ್ತು ತಮಗೆ ಸತ್ಕರಿಸಿದ ಬಗ್ಗೆ ಆಭಾರ ಪ್ರದರ್ಶಿಸಿ, ಈ ದಿನಗಳಲ್ಲಿ, ಉಡುಪಿ ಕಾಂಗ್ರೆಸ ಕಮಿಟಿಗಳು ನೆರೆ ನಿವಾರಣಾರ್ಥವಾಗಿ ನಡಿಸಿದ ಕಾರ್ಯವನ್ನು ಅಧ್ಯಕ್ಷರು ಹೊಗಳಿದರು. ಶ್ರೀ ಕೃಷ್ಣರಾವ ಕರಗುಪ್ಪೀಕರ, ಜಯರಾವ ದೇಶಪಾಂಡೆ, ಕೀ|| ನಾರಾಯಣದಾಸ ದರಬಾರ, ಗೋವಿಂದರಾವ ಯಾಳಗಿಯವರ ನಿಧನಗಳ ಬಗ್ಗೆ ದುಃಖಪ್ರದರ್ಶನವಾಯಿತು. ಶ್ರೀ ದತ್ತೋಪಂತ ಕ. ಕಲಿ, ರಂಗನಾಥ ದಿವಾಕರ, ಸುಬ್ರಾಯರಾವ-ರಾಮರಾವರವರಿಗೆ ಅಭಿನಂದನ ಮಾಡೋಣಾಯಿತು.

ರಾಷ್ಟ್ರೀಯ ಸಭಾಭಿಮಾನಿಗಳೊಳಗಿನ ಕಲಹನಿರ್ಮೂಲನಕ್ಕಾಗಿ ದಿಲ್ಲಿಯಲ್ಲಿ ನಾವು ತಟಸ್ಥ ವೃತ್ತಿಯ ಧರುವನ್ನು ಮುಂದೂಡು ಮಾಡಿ, ಕೌನ್ಸಿಲು ಬಹಿಷ್ಕಾರದ ಪ್ರಚಾರಕ್ಕೆ ತಡೆಹಾಕಿದೆವು. ೧೯೨೦ ನೇ ಇಸವಿಯ ಕೌನ್ಸಿಲು ಬಹಿಷ್ಕಾರದ ಚಳವಳಿಯಿಂದ ಉಂಟಾದ ಲೋಕಜಾಗೃತಿಯನ್ನೂ, ಸ್ವರಾಜ್ಯ ಪಕ್ಷದ ಕೌನ್ಸಿಲು ಪ್ರವೇಶ ಚಳವಳಿಯಿಂದ ಉಂಟಾದ ಪರಿಣಾಮವನ್ನೂ ಲಕ್ಷ್ಯಕ್ಕೆ ತಂದರೆ, ಬಹಿಷ್ಕಾರ ಪಕ್ಷದವರು ಸ್ವರಾಜ್ಯ ಪಕ್ಷದ ಮನವೊಲಿಕೆಗಾಗಿ ಎಷ್ಟು ಸ್ವಾರ್ಥತ್ಯಾಗ ಮಾಡಿದರು ಎಂಬುದರ ಅರಿವುಂಟಾಗುತ್ತದೆ. ಭೂತಕಾಲದ ಕಥೆಯು ಹಿನ್ನೂ ಇರಲಿ; ಇನ್ನು ಮುಂದೆ ಸ್ವರಾಜ್ಯ ಪಕ್ಷದ ಮಾಯಾಜಾಲದಲ್ಲಿ ನಾವು ಸಿಲುಕಿಕೊಳ್ಳದಂತೆ ಯತ್ನಿಸಬೇಕಾಗಿದೆ. ಕೌನ್ಸಿಲುಗಳನ್ನು ಸೇರಿದ ಮೇಲೆ, ಯಾವ ಕಾರ್ಯಕ್ರಮವನ್ನು ಸ್ವರಾಜ್ಯ ಪಕ್ಷದವರು ಅಂಗೀಕರಿಸುವರು? ಎಂಬುದು ಇನ್ನೂ ಗೊತ್ತಿಲ್ಲ. ಆದುದರಿಂದ, ಅವರ ಬೆನ್ನು ಹಿಂದೆ ಇನ್ನು ರಾಷ್ಟ್ರೀಯ ಸಭೆಯ ಮಂದಿ ಹೋಗಲಾರರೆಂದು ನಾವು ನಿಶ್ಚಯಿಸಬೇಕು. ಹೀಗೆ ನಿರ್ಣಯ ಮಾಡದಿದ್ದರೆ, ಅಸಹಕಾರಿತೆಯ ಕಾರ್ಯಕ್ರಮವು ಮುಗಿಯಲಾಗುವ ಭೀತಿಯಿದೆ. ರಾಜಕೀಯ ಪರಿಸ್ಥಿತಿಯೂ ಸಹ ಬಹಳೇ ನಿರುತ್ಸಾಹಜನಕವಾಗಿದೆ. ಮಹಾತ್ಮರ ಉಚ್ಚ ತತ್ವಗಳ, ಕಾರ್ಯಕ್ರಮಗಳ ಪ್ರಥಮ ಪ್ರಚಾರ ಕಾಲದಲ್ಲಿ ಉಂಟಾದ ಹುರುಪು ಈಗ ಕಾಣದು. ಅವೇ ತತ್ವಗಳ ಚರ್ವಿತ ಚರ್ವಣದಿಂದ ಪ್ರಜೆಗಳಿಗೆ ಬೇಸರ ಬಂದಿರಬಹುದು; ಧೈರ್ಯ-ಆಶೆಗಳ ಬದಲು, ಈಗ ಸಂಶಯ-ಜಾಗರೂಕತೆಗಳು ಪ್ರಾದುರ್ಭೂತವಾಗಿವೆ. ಜ್ಞಾನ-ಅನುಭವಗಳಿಂದ ಪ್ರಜೆಗಳು ಜಾಣರಾಗಿರುವರೆಂದು ಒಪ್ಪಿಗೆ. ಆದರೆ, ಈ ವೃತ್ತಿಯಿಂದ ಅಪಯಶಸ್ಸಿನ ಭೀತಿಯುಂಟಾಗಿ, ಅಕಾರ್ಯ ಪ್ರವೃತ್ತಿಯೂ ಜನಿಸಿತೆ. ಇಂದಿಗೆ ಸರಕಾರವು ವಿಶೇಷ ಸಾಮರ್ಥ್ಯವಂತವಾಗಿದೆಂದು ಜನರಿಗೆ ಭಾಸವಾಗಿದೆ. ಮಹಾತ್ಮರಿಗೂ ಸಹ ಈ ಪ್ರಕಾರದ ಬದಲಾವಣೆಯು ಲಕ್ಷ್ಯಕ್ಕೆ ಬಂದಿದ್ದು, ಅದನ್ನು ನಿವಾರಿಸಲು ಅವರು ಉಪಾಯ ಯೋಜಿಸುತ್ತಿದ್ದರು. ಅಷ್ಟರಲ್ಲಿ ಅವರು ಸ್ವರಾಜ್ಯಾಶ್ರಮವನ್ನು ಸೇರಬೇಕಾಯಿತು. ನಮ್ಮಂಥ ಕನಿಷ್ಠ ಪ್ರತಿಯ ಹುಂಬರಿಗಂತು ಈ ಪ್ರಕ್ರಿಯು ಕಠಿಣವೆನಿಸಿದರೆ, ಆಶ್ಚರ್ಯವೇನಿಲ್ಲ.

ಮಹಾತ್ಮಾಜೀಯವರ ಗೈರಹಾಜರಿಯಲ್ಲಿ ದೇಶದಲ್ಲುಂಟಾದ ನಿರುತ್ಸಾಹ ಪರಿಸ್ಥಿತಿಯಲ್ಲಿ ಒಂದು ಪ್ರಕಾರದ ಸುಲಭ ಸತ್ಯಾಗ್ರಹವು ಅವತೀರ್ಣವಾಗಿದೆ. ಗಾಂಧಿಯ ಸತ್ಯಾಗ್ರಹಕ್ಕೂ, ಈ ಹೊಸ ಸತ್ಯಾಗ್ರಹ ರೂಢಕ್ಕೂ ಅಜಗಜಾಂತರವಿದೆ. ಗಾಂಧಿ ಸತ್ಯಾಗ್ರಹವು ಪ್ರೇಮಪ್ರೇರಿತವು, ಈ ಸತ್ಯಾಗ್ರಹವು ದ್ವೇಷಪ್ರೇರಿತವು. ಅಹಿಂಸೆಯು ಗಾಂಧಿಯವರದು, ಶಕ್ಯವಿದ್ದಷ್ಟು ಹಿಂಸಾಪ್ರದರ್ಶನ ಮಾಡುವದು ಹೊಸ ಗಾಂಧಿ ಕಾರ್ಯಕಾರಿಗಳವರದು. ಆತ್ಮಕ್ಲೇಶವು ಹಳೇ ಅಸಹಯೋಗಿಗಳದು, ತೀರ ಕನಿಷ್ಠ ಆತ್ಮಕ್ಲೇಶವನ್ನು ಸಹಿಸಿ, ಪ್ರತಿಸ್ಪರ್ಧಿಯನ್ನು ಸುಸಂಘಟಿತವಾಗಿ ಧೂರ್ತತೆಯಿಂದ ನಾಲ್ಕು ಬದಿಯಿಂದ ಮುತ್ತಿ ಗೊಂದಲ ಹಾಕುವದು ಹೊಸ ಅಸಹಕಾರಿಗಳದು. ಮಾನವನು ಭೌತಿಕ ಪ್ರಾಣಿಯು, ಅಂದರೆ, ಪ್ರಾಮುಖ್ಯವಾಗಿ ಸ್ವಾರ್ಥಿಯು, ಹಿಂಸಾಪ್ರೇರಿತನು; ಪರರಿಗೆ ಅದರ ಪ್ರದರ್ಶನ ಮಾಡಲು ಅವನನ್ನು ಶಾಸನ ಮಾಡಬೇಕು. ಈ ತರದ ಮಾನವನ ಕಲ್ಪನೆಯು ಹೊಸ ಅಸಹಕಾರಿಗಳದು. ಗಾಂಧಿಯವರ ಕಲ್ಪನೆಯು ತೀರ ಭಿನ್ನವಿದೆ. ಮಾನವನು ಪ್ರಾಮುಖ್ಯವಾಗಿ ಶೀಲ ಸ್ವಭಾವದವನಿದ್ದು, ಧಾರ್ಮಿಕ ಬುದ್ಧಿಯುಳ್ಳವನಿರುವನು. ಅವನನ್ನು ಪ್ರೇಮದಿಂದ, ಸಹಾನುಭೂತಿಯಿಂದ ನಡಿಸಿಕೊಂಡರೆ, ಅವನೂ ಅದೇ ರೀತಿ ಪರರೊಡನೆ ವರ್ತಿಸುತ್ತಾನೆ. ಭೀತಿ-ಶಾಸನ ಇವುಗಳಿಂದ ಅವನ ಮನವೊಲಿಸಲಾಗದು! ಜರ್ಮನ್ ಸರಕಾರವು ನೂತನ ಸ್ವರೂಪದ ಅಸಹಕಾರಿತೆಯನ್ನು ಪ್ರಚಂಡ ಪ್ರಮಾಣದ ಮೇಲೆ ಆಚರಿಸಿತು. ಸರಕಾರವು ಪ್ರಜೆಗಳನ್ನು ಪ್ರೋತ್ಸಾಹಿಸಿ, ಅವರ ಕ್ಲೇಶ ನಿವಾರಣವನ್ನು ಬಹುಪರಿಯಿಂದ ಮಾಡಿತು. ಆದರೆ, ಅದರಿಂದ ಯಶಸ್ಸು ಪ್ರಾಪ್ತಿಯಾಗಲಿಲ್ಲ. ಗಾಂಧಿ ಸತ್ಯಾಗ್ರಹದ ಬೀಜವು ಬೇರೆ. ಜರ್ಮನಿಯ ವಿರೋಧದ ಬೀಜವು ಬೇರೆ. ಯಂತ್ರವು ಎಷ್ಟು ಉತ್ತಮ ಪ್ರತಿಯದಿದ್ದರೂ, ಅದು ಎಂದೂ ಜೀವಂತ ಪ್ರಾಣಿಗೆ ಸರಿಬರಲಾರದು.

ಅಸಹಕಾರಿತೆಯ ಅರ್ಥವನ್ನು ಸರಕಾರಕ್ಕೆ ಗೊಂದಲ ಹಾಕುವದೆಂದು ಮಾಡಿದರೆ, ಅದೆಂತೂ ನಿಜವಾದ ಅಸಹಯೋಗವಾಗದು, ಯಶಸ್ಸೂ ಪ್ರಾಪ್ತವಾಗದು. ಪುನಃ ನಿರರ್ಥಕ ಚಳವಳಿಯಲ್ಲಿಯೇ ಈ ರಾಜಕೀಯ ಗೊಂದಲದ ಅಸಹಕಾರಿತೆಯು ಅಂತರ್ಭೂತವಾಗುವದ. ಗಾಂಧಿ ಚಳವಳಿಯಲ್ಲಿ ವಿಶ್ವಾಸ ಹಾಗು ಧೈರ್ಯಗಳಿದ್ದರೆ ಮಾತ್ರ, ನಾವು ಗಾಂಧಿ ಸತ್ಯಾಗ್ರಹವನ್ನು ಸಂಘಟಿಸಬಲ್ಲೆವು. ಅದೊಂದು ದೇವ-ದಾನವರ ಯುದ್ಧವಾಗುವದು. ಅದರೊಳಗೆ ಯಶಪ್ರಾಪ್ತಿಯಾಗುವದು ಸ್ಪಷ್ಟವು. ಪರಮಾವಧಿಯ ಆತ್ಮಕ್ಲೇಶವನ್ನು ಸಹಿಸಲು ತಯಾರಾಗಿ, ಪ್ರತಿಪಕ್ಷಿಯ ಬಗ್ಗೆ ಪ್ರೇಮಮಯ ಅಂತಃಕರಣಪೂರಿತರಾಗಿ ಚಳವಳಿಯನ್ನು ನಡಿಸಿದ್ದರೆ, ಅಸಹಕಾರಿತೆಯು, ಕಾಯಿದೆಭಂಗವು ನಿರರ್ಥಕವಾಗುವವು, ಬಹುಕಾಲ ಸಹ ತಾಳಲಾರವು.

ಪ್ರಚಲಿತ ಪರಿಸ್ಥಿತಿಯಲ್ಲಿ ಒಂದೇ ಉಪಾಯವು ನನಗೆ ತೋರುತ್ತದೆ. ಅದೇನಂದರೆ ಮಹಾತ್ಮರು ವಿಧಿಸಿದ ವಿಧಾಯಕ ಕಾರ್ಯಕ್ರಮವು. ಈಗ ಉತ್ಸಾಹಭಂಗವಾದ ಸಮಯದಲ್ಲಿ ವಿಧಾಯಕ ಕಾರ್ಯಕ್ರಮವನ್ನು ನಡಿಸಹೇಳುವದು ಹಸಿ ಕಟ್ಟಿಗೆಯಿಂದ ಬೆಂಕಿ ಮಾಡ ಹೇಳುವಂತೆಯೇ. ಆದರೆ, ಈ ಕೆಲಸವನ್ನು ನಾವು ಮಾಡಿ ತೀರಬೇಕಾಗಿದೆ. ಉಣ್ಣಬೇಕಾದರೆ, ಹಸಿ ಕಟ್ಟಿಗೆಯಿಂದ ಸಹ ಅಡಿಗೆ ಮಾಡಬೇಕಷ್ಟೇ! ವಿಧಾಯಕ ಕಾರ್ಯಕ್ರಮದಲ್ಲಿ ಅನೇಕ ಸಂಗತಿಗಳಿವೆ, ಎಲ್ಲ ಸಂಗತಿಗಳನ್ನು ಒಮ್ಮೆಲೇ ಕೈಕೊಳ್ಳುವದು ಕಠಿಣವು. ಆದ್ದರಿಂದ, ಒಂದೊಂದೇ ಪ್ರಕ್ರಿಯೆಯನ್ನು ಕೈಕೊಂಡು, ಅದನ್ನೇ ಕೇಂದ್ರೀಕರಿಸಬೇಕಾಗಿದೆ. ಪ್ರತಿಯೊಂದು ಮನೆಯಲ್ಲಿ ನೂಲುವ ಕೆಲಸವು ಭರದಿಂದ ಸಾಗಲೇಬೇಕು. ಕೈರಾಟೆಯೆಂದರೆ ಅಹಿಂಸೆಯು; ಅಸ್ಪೃಶ್ಯತಾ ನಿವಾರಣೆಯು, ಮದ್ಯಪಾನಮುಕ್ತಿಯು, ಹಿಂದೂ-ಮುಸಲ್ಮಾನರ ಐಕ್ಯವು; ಸ್ವಲ್ಪದರಲ್ಲಿ ಹೇಳಬೇಕಾದರೆ ಗಾಂಧಿ ಸುಧಾರಣೆಯೆಲ್ಲ ಕೈರಾಟೆಯಲ್ಲೇ ಒಳಗೊಂಡಿದೆ. ಇದೇನು ಕೇವಲ ಕವಿಕಲ್ಪನೆಯಲ್ಲ, ಸತ್ಯಸ್ಥಿತಿಯು. ಕೈರಾಟೆ ಹಾಗು ಅಹಿಂಸಾಪ್ರಚಾರ ಇವೆರಡೂ ನಮ್ಮ ಪ್ರಥಮ ಕಾರ್ಯಗಳು. ಕೈರಾಟೆಯ ಬಗ್ಗೆ ಮಾತಾಡುವದನ್ನು ಬಿಟ್ಟು, ಪ್ರತ್ಯಕ್ಷ ಅದರಿಂದ ನೂಲಹತ್ತಿರಿ. ನೂಲು ಪರರನ್ನೂ ಹಚ್ಚಿರಿ.

ಅಹಿಂಸೆಯನ್ನು ದಿಟ್ಟತನದಿಂದ, ಧೈರ್ಯದಿಂದ, ನಿರ್ಭೀಕತ್ವದಿಂದ ಪ್ರಸಾರ ಮಾಡಿರಿ. ಅಹಿಂಸಾ ಶ್ರದ್ಧೆಯು ಈಗೀಗ ನಷ್ಟವಾಗಹತ್ತಿದೆ. ಅದನ್ನು ಪುನಃ ಪ್ರಸ್ಥಾಪಿಸುವದು ನಮ್ಮ ಕರ್ತವ್ಯವು. ಹಿಂದೂ-ಮುಸಲ್ಮಾನರ ಐಕ್ಯದ ರಹಸ್ಯವೂ ಇದೇ. ಒಂದಾಯಿತು ಮಂಡಳಿಗಳು ಐಕ್ಯವನ್ನು ಸಾಧಿಸಲು ಅಸಮರ್ಥವು. ಪಂಚಾಯತುಗಳ ನಿರ್ಮಾಣದಿಂದ ಹೊಸ ಹೊಸ ವಾದಗಳು ತಲೆದೋರುವವು. ಕೋರ್ಟು ಸ್ಥಾಪನೆಗಳಿಂದ ಭಯಂಕರಗಳು ಹೆಚ್ಚುವವೆಂಬ ನೆನಪಿರಲಿ. ಅಹಿಂಸೆಯ ಮೂಲ ತತ್ವವನ್ನಷ್ಟು ಆಗಿಂದಾಗ ಪ್ರಸಾರ ಮಾಡಿದರೆ, ಸಾಮಾಜಿಕ ಪ್ರಕೃತಿಯು ನಿರೋಗಿಯಾಗಿ, ಐಕ್ಯಪ್ರಸ್ಥಾಪನೆಯಾಗುವದು. ಅಹಿಂಸೆಯೆಂದರೆ, ಅದೊಂದು ಗಾಂಧಿಯ ಸ್ವಭಾವದೋಷದ ದ್ಯೋತಕವೆಂದು ಅಸಹಕಾರಿತೆಯ ಕಾರ್ಯಕ್ರಮದಲ್ಲಿ ಅದಕ್ಕೆ ವಿಶೇಷ ಮಹತ್ವವು ಕೊಡಲ್ಪಡುತ್ತಿಲ್ಲ. ಆದರೆ, ಇದೇ ಕಾರ್ಯಕ್ರಮದ ಚೈತನ್ಯಶಕ್ತಿಯು ಅಹಿಂಸೆಯೇ. ಸರಕಾರದ ಹಿಂಸಾಪ್ರವೃತ್ತಿ, ಪ್ರಜೆಗಳ ಅರಾಜಕಪ್ರವೃತ್ತಿಗಳಿಗೆ ಇದಿರಾಗಲು ಚೈತನ್ಯ ಕೊಡುವದು ಅಹಿಂಸೆಯೇ. ಅಹಿಂಸೆಯು ಅದೃಶ್ಯವಾದರೆ, ಇದೇ ಚಳವಳಿಯೂ ಬುಡ ಮೇಲಾಗುವದು. ಶಾಂತತೆ, ಸುವ್ಯವಸ್ಥೆಗಳು ನಮ್ಮ ಚಳವಳಿಗೆ ಅವಶ್ಯವಿವೆ. ಅಹಿಂಸಾ ಧೈರ್ಯದಿಂದ ದೇಶರಕ್ಷಣ ಮಾಡುವದೇ ಗಾಂಧಿ ಚಳವಳಿಯ ರಹಸ್ಯವು.

ಈ ಕಡೆಗೆ ನಿರುತ್ಸಾಹವುಂಟಾಗಿದೆ ಎಂಬ ಮಾತು ನಿಜವು. ಆದರೆ, ಅದರ ದೋಷವು ನಮ್ಮ ಕಾರ್ಯಕ್ರಮದಲ್ಲಿಲ್ಲ. ಪ್ರತಿಸ್ಪರ್ಧಿಯ ಸಾಮರ್ಥ್ಯದಿಂದ ಸಹ ನಮ್ಮ ಕಾರ್ಯಹಾನಿಯಾಗಲಿಲ್ಲ. ಸ್ವಾತಂತ್ರ್ಯದ ಹಸು ಈಗ ಸ್ವಲ್ಪ ಕ್ಷೀಣವಾಗಿದೆ. ಅದನ್ನು ನಾವು ವೃದ್ಧಿಪಡಿಸಿಕೊಳ್ಳುವ. ಅಂದರೆ, ನಮ್ಮ ಸಕಲ ಕಾರ್ಯಗಳು ತಮ್ಮ ಪ್ರಕೃತ್ಯ ಇವೇ ಸಂದೇಶವು. ಈ ರಾಷ್ಟ್ರೀಯತ್ವವು ತನ್ನ ಕಲ್ಯಾಣವನ್ನು ನೆನಿಸಿ, ಸ್ವಾತಂತ್ರ್ಯವೇ ಜೀವನವೆಂತಲೂ, ಪಾರತಂತ್ರ್ಯವೇ ಮೃತ್ಯುವೆಂತಲೂ ಎಣಿಸುತ್ತದೆಂದು ನನ್ನ ಅಚಲ ಶ್ರದ್ಧೆ. ಗಾಂಧಿಯ ಹಾದಿಯಿಂದಲೇ ನಾವು ಸ್ವಾತಂತ್ರ್ಯಪ್ರಾಪ್ತಿ ಮಾಡಿಕೊಳ್ಳಬೇಕೆಂಬುದೂ ಸತ್ಯವು. ನಿರುತ್ಸಾಹ ಹೊಂದಲಿಕ್ಕೆ, ವ್ಯಸನಪಡಲಿಕ್ಕೆ ಕಾರಣವಿಲ್ಲ. ಅಸಹಕಾರಿತೆಯು ನಿಧನಹೊಂದಿದೆಂದು ತಿಳಿಯುವದು ಮೂರ್ಖತನದ ಪರಮಾವಧಿಯು.

ಅನೇಕ ಸಂಗತಿಗಳನ್ನು ನಾನು ವಿಚಾರಿಸಲಿಲ್ಲ. ಆದರೂ, ನಾಭಾ ಪ್ರಕ್ರಿಯನ್ನು ನೆನಿಸಿದರೆ, ಹಾಲೀಹಾಸಿಯ ರಾಜ್ಯಪದಭ್ರಷ್ಟತೆಯ ಚಳವಳಿಯು ನೆನಪಾಗುತ್ತದೆ. ಸಂಸ್ಥಾನಿಕರ ಸ್ಥಿತಿಯು ಹೇಗೂ ಇರಲಿ, ಅವರನ್ನು ಕಾಯಿದೆಯಲ್ಲಿ ಹಿಂದುಸ್ಥಾನ ಸರಕಾರದಷ್ಟು ಸ್ವತಂತ್ರ ಅರಸರೆಂದು ಎಣಿಸುತ್ತಾರೆ. ಹೈದರಾಬಾದ, ಮೈಸೂರ, ನಾನಾ ಪರಿಯವರು ಸಂಸ್ಥಾನಗಳಂಥ ಅನೇಕ ಸಂಸ್ಥಾನಗಳು ದ್ವಿಮೇರ ಬಂಧದಲ್ಲೂ ಇವೆ. ಅಲ್ಲಿ ಕಾರಭಾರವು ನೆಟ್ಟಗೆ ಸಾಗುತ್ತಿಲ್ಲೆಂದು ನೆರೆಯ ರಾಷ್ಟ್ರವು ಅವನ್ನು ಅಂತ್ಯಪಡಿಸಿ, ಅಲ್ಲಿಯ ಕಾರಭಾರವನ್ನು ತಾವು ಕೈಕೊಳ್ಳುವದಿಲ್ಲ. ಕ್ಲೈವರು ಖೊಟ್ಟಿ ದಸ್ತಾವಜುಗಳನ್ನು ಮಾಡಿದಂತೆ, ಹೇಸ್ಟಿಂಗ್ಸರು ಸುಲಿಗೆ ಮಾಡಿದಂತೆ, ಇಂಥ ಪ್ರಕಾರಗಳು ಹಿಂದುಸ್ಥಾನದಲ್ಲಿ ಭೂತಕಾಲದಲ್ಲಿ ಸಂಭವಿಸಿದವು. ಅವನ್ನು ನಾವು ಪುನಃ ಬರಗೊಡಲಾರೆವು. ನಾಭಾ ಸಂಸ್ಥಾನದ ಮಹಾರಾಜರನ್ನು ರಾಜ್ಯತ್ಯಾಗ ಮಾಡಲು ಒತ್ತಾಯಮಾಯಿತೆಂಬುದು ಸ್ಪಷ್ಟವಿದೆ. ಸಂಸ್ಥಾನದ ಕಾರಭಾರವು ಪ್ರಜಾಪೀಡಕವಿದ್ದರೆ, ನೀವೂ ನಾನು ಮಹಾರಾಜರನ್ನು ಪದಭ್ರಷ್ಟ ಮಾಡಲಾರೆವು. ಬ್ರಿಟಿಶ ಕಾರಭಾರಿಗಳಿಗೆ ನಮಗಿಂತ ಹೆಚ್ಚು ಕಾಯಿದೆಯ ಹಾಗು ನೈತಿಕ ಅಧಿಕಾರವಿಲ್ಲ. ತಮ್ಮ ಮಹಾರಾಜರು ಪ್ರಜಾಪೀಡಕರಿದ್ದಲ್ಲಿ, ಸಂಸ್ಥಾನದ ಪ್ರಜೆಗಳೇ ಅವರನ್ನು ಪದಚ್ಯುತಮಾಡಿ, ಕಾರಭಾರಿ ಮಂಡಳವನ್ನು ನೇಮಿಸುವ

ಅಧಿಕಾರವು ಸಹ ಅವರದೇ ಪ್ರಜೆಗಳ ಹಕ್ಕು-ಸ್ವಾತಂತ್ರ್ಯಗಳಿಗಾಗಿ ಬಳಲುವ ರಾಷ್ಟ್ರೀಯ ಸಭೆಯು ಬ್ರಿಟಿಶ ಕಾರಭಾರಿಯ ಪ್ರವೇಶವು ಬೇಕಾದದ್ದೇನಿಲ್ಲವೆಂದು ಎಣಿಸಿ, ಅದನ್ನು ವಿರೋಧಿಸಲು ಸಹಾಯ ಮಾಡಬೇಕು. ಸಿಖರು ಶೌರ್ಯದಿಂದ ಕಾದಾಡುತ್ತಿರುವರು. ನಮಗೆ ಕರೆದಾಗ ನಾವೆಲ್ಲರೂ ಸಹಾಯ ಮಾಡಲು ಕಂಕಣಬದ್ಧರಾಗಿರಬೇಕು. ಗುರುದ್ವಾರ ಪ್ರಬಂಧಕ ಕಮಿಟಿ, ಅಕಾಲಿ ಸಂಸ್ಥೆಗಳನ್ನು ಬೇಕಾಯಿದೇಶೀರ ಎಂದು ಠರಾಯಿಸಿ, ಅವನ್ನು ನಿರ್ಮೂಲಿಸುವ ಯತ್ನ ನಡೆದದೆ. ಇದಕ್ಕೆ ಎದುರಾಗಿ, ಹಿಂದುಸ್ತಾನವು ಕಮಿಟಿಗಳಿಗೆ ಬೆಂಬಲವನ್ನೀಯುವದು ನಿಶ್ಚಿತವು. ಒಂದು ತಾತ್ವಿಕ ತಪ್ಪು ಈ ಪ್ರಕರಣದಲ್ಲಿ ಸಂಭವಿಸಿದೆ. ಅಕಾಲಿಗಳು ಗುರುಕಾಬಾಗ ಪ್ರಕರಣದಲ್ಲಿ ಒಬಾವು ಮಾಡಿಕೊಳ್ಳದೆ, ಆತ್ಮಕ್ಲೇಶದ ಸಾಮರ್ಥ್ಯದ ಕೃಪೆಯಿಂದ ಕಾದಾಡಿದರು. ಈಗ ವಕೀಲರನ್ನು ನೇಮಿಸಿಕೊಂಡು, ಬಚಾವು ನಡಿಸಹತ್ತಿರುವರು. ಇದರ ಪರಾಗತಿಯು ಶಾಸನವನ್ನು ತಪ್ಪಿಸಿಕೊಳ್ಳಲು ಬಚಾವು ನಡಿಯುವದಿಲ್ಲೆಂದು ನಾನು ಅರಿತಿರುವೆನು. ಸರಕಾರದ ಅಪಕೃತ್ಯಗಳನ್ನು ಹೊರಗೆಡಹ ಮದೇ ಅವರ ಬಚಾವಿನ ಮೂಲ ಉದ್ದೇಶವೆಂದೂ ನನ್ನ ನಂಬಿಗೆ ಇದರೆ ಸತ್ಯ-ಆತ್ಮಕ್ಲೇಶಗಳಿಗೆ ಪ್ರಚಾರದ ಅವಶ್ಯಕತೆಯಿಲ್ಲ. ಬಚಾವು ಆತ್ಮಕ್ಲೇಶಗಳು ಪರಸ್ಪರ ಬಿನ್ನವಿವೆ ವಕೀಲಿಯು, ಅಸಹಕಾರಿತೆಯು ಇವು ಪರಸ್ಪರ ವಿರೋಧಕ ಸಂಗತಿಗಳು.

ನಿಮ್ಮ ಪ್ರಾಂತದಲ್ಲಿ ವಿಧಾಯಕ ಕಾರ್ಯಕ್ರಮವನ್ನು ಆಮ್ಯಾಹತವಾಗಿ ನಡಿಸಲು ತಕ್ಕ ವ್ಯವಸ್ಥೆಯನ್ನು ಈ ಪರಿಷತ್ತು ಕೈಕೊಳ್ಳುವದೆಂದು ನಾನು ನೆರೆ ನಂಬಿದ್ದೇನೆ. ನಮ್ಮ ಲೋಕೋತ್ತರ ಲೋಕನಾಯಕರ ಕೃಪೆ ಹಾಗೂ ಧೈರ್ಯಗಳು ನಿಮ್ಮ ಕರ್ನಾಟಕದಲ್ಲಿ ಸ್ಥಾನವತ್ ಸ್ಥಿರಹೊಂದಿ, ವಿಕಾಸಗೊಳ್ಳುವವೆಂದು ನನಗೆ ತುಂಬ ವಿಶ್ವಾಸವಿದೆ.

ಕರ್ನಾಟಕ ಪ್ರಾಂತಿಕ ಪರಿಷತ್ತು.

ವಿಜಾಪುರದೊಳಗಿನ ದ್ವಿತೀಯ ಅಧಿವೇಶನದ ಹಕೀಕತು.

ಕರ್ನಾಟಕ ಪ್ರಾಂತಿಕ ಪರಿಷತ್ತಿನ ದ್ವಿತೀಯ ಅಧಿವೇಶನವು ವಿಜಾಪುರದಲ್ಲಿ ಕಳೆದ ಸೋಮವಾರ ತಾ. ೧೭ನೇಯಿಂದ ಛತ್ರೀ ನಾಟಕಗೃಹದಲ್ಲಿ ಪ್ರಾರಂಭವಾಯಿತು. ಸ್ಥಾನಿಕ ರಾಷ್ಟ್ರಸೇವಕರೆಲ್ಲರೂ ಅಖಿಲ ಭಾರತೀಯ ಲೋಕನಾಯಕರ ದರ್ಶನದಿಂದ ಉತ್ಸಾಹಭರಿತರಾಗಿದ್ದರು. ನಾಟಕಗೃಹವೆಲ್ಲ ಪ್ರತಿನಿಧಿ-ಪ್ರೇಕ್ಷಕರಿಂದ ತುಂಬಿಹೋಗಿತ್ತು. ನೂರಾರು ಮಂದಿಗಳಿಗೆ ಸ್ಥಳಸಂಕೋಚದ ಮೂಲಕ ಸಭಾಸ್ಥಾನದಲ್ಲಿ ಪ್ರವೇಶ ಸಿಗಲಿಲ್ಲ. ಆದರೂ, ಹಾದಿಯ ಮೇಲೆ ಅವರೆಲ್ಲ ಗುಂಪುಗುಂಪಾಗಿ ನಿಂತುಕೊಂಡು, ಮೌ॥ ಮಹಮ್ಮದ ಅಲಿ, ಬಾಯಿ ಅಮ್ಮಾ, ಶ್ರೀಮತಿ ಸರೋಜಿನಿ ನಾಯುಡು ಮೊದಲಾದ ಲೋಕನಾಯಕರ ದರ್ಶನಸುಖವನ್ನು ಪಡೆಯುತ್ತಿದ್ದರು. ಅವರಿಗೆ ಜಯಘೋಷಗಳಿಂದ ಸತ್ಕರಿಸುವ ಗಲಾಟೆಯೂ ನಡೆದಿತ್ತು. ಸಭಾಪೀಠದ ಮೇಲೆ ಅಧ್ಯಕ್ಷ-ಸ್ವಾಗತಾಧ್ಯಕ್ಷರ ಹೊರತು, ಮೌ॥ ಮಹಮ್ಮದ ಅಲಿ, ಬಾಯಿ ಅಮ್ಮಾ, ಶ್ರೀಮತಿ ಸರೋಜಿನಿ ನಾಯುಡು, ಶ್ರೀ॥ ರಘುನಾಥವಂತ ಕರಂದೀಕರ, ಗಂಗಾಧರರಾವ ದೇಶಪಾಂಡೇ, ವಿನಾಯಕರಾವ ಜೋಶಿ (ಧಾರವಾಡ), ಡಾ॥ ನಾರಾಯಣರಾವ ಹರ್ಡೀಕರ, ಶ್ರೀ॥ ಕಾರ್ನಾಡ ಸದಾಶಿವರಾವ, ಮೊದಲಾದ ಮುಂದಾಳುಗಳು ವಿರಾಜಮಾನರಾಗಿದ್ದರು. ಸರಿಯಾಗಿ ೪॥ ಘಂಟೆಗೆ ಅಧಿವೇಶನದ ಕಾರ್ಯವು ಪ್ರಾರಂಭಿಸಿತು. ಹಿಂದೀ, ಕನ್ನಡ, ಸ್ವಾಗತಪರ ಪದ್ಯಗಳು ಇಂಪಾಗಿ ಹಾಡಲ್ಪಟ್ಟವು. ರಾಷ್ಟ್ರಗೀತದ ಗಾಯನವು ನಡೆಯಿತು. ಬಳಿಕ,

ಸ್ವಾಗತಾಧ್ಯಕ್ಷರಾದ ಶ್ರೀ॥ ಶ್ರೀನಿವಾಸರಾಯರು

ತಮ್ಮಲ್ಲಿಯ ಪರಿಷತ್ತಿಗೆ ಬಂದ ಪ್ರತಿನಿಧಿ—ಅತಿಥಿಗಳನ್ನೆಲ್ಲ ಅಂತಃಕರಣಪೂರ್ವಕ ಸ್ವಾಗತೀಕರಿಸಿ, ತಮ್ಮ ಆದರಾತಿಥ್ಯವನ್ನು ಔದಾರ್ಯದಿಂದ ಸ್ವೀಕರಿಸಬೇಕೆಂದು ನುಡಿದರು. ಕರ್ನಾಟಕದ ರಾಷ್ಟ್ರಸೇವಕರ ನಿಧನದ ಬಗ್ಗೆ ದುಃಖಪ್ರದರ್ಶನ ಮಾಡಿ, ಶ್ರೀ॥ ಪತ್ತೋಪಂತ ಮಜಲಿ, ರಂಗನಾಥ ದಿವಾಕರ ಮೊದಲಾದ ಜೈಲಿನ ಶಾಹಿಯ ಆಹುತಿಗಳನ್ನು ಕೊಂಡಾಡಿದರು. ಮೊಂಟೆಗ್ಯೂ ಸ್ವರಾಜ್ಯವನ್ನು ಉಚ್ಛೇದಿಸಲು ಹೊರಬಿದ್ದ ಸ್ವರಾಜ್ಯವಾದಿ ಕೌನ್ಸಿಲುಪ್ರವೇಶಕರಿಗೆ ಚೇಮ್ಸಫರ್ಡ ಕ್ಲಬ್ಬಿನಲ್ಲಿ ಭಾಷಣವನ್ನಿತ್ತು, ಸರ್ವಾಧಿಪತಿಗಳು ಪೂರ್ವ ಪದ್ಧತಿಯಂತೆ, ಕಾರಭಾರ ನಡಿಸುವ ನಿರ್ಧಾರವನ್ನು ಪ್ರದರ್ಶಿಸಿರುವಾಗ, ಹಸ್ತಬಾಧಿ ಸರಾಜ್ಯವನ್ನು ಮುರಿಯುವ ಅವಶ್ಯಕತೆ ಎಲ್ಲಿದೆಂದು ಶ್ರೀನಿವಾಸರಾಯರು ಪ್ರಶ್ನಿಸಿದರು.

“ ರಾಷ್ಟ್ರೀಯ ಸಭೆಯಲ್ಲುಂಟಾದ ಪಕ್ಷಭೇದಗಳಿಂದ ಸಮಾಜದೊಳಗಿನ ಜಾತಿದ್ವೇಷವು ವೃದ್ಧಿಹೊಂದಿ, ಪುನಃ ಅನರ್ಥಗಳುಂಟಾಗಹತ್ತಿವೆ. ಇವನ್ನು ಅಳಿಯುವ ಮಾರ್ಗವು ಒಂದೇ: ಜಗತ್ತಿನೊಳಗಿನ ಎಲ್ಲ ಧರ್ಮಗಳನ್ನು ಒಂದೇ ಪರಮಾತ್ಮಪ್ರಾಪ್ತಿಮಾರ್ಗದ ಭಿನ್ನ ಭಿನ್ನ ಅಂಗಗಳೆಂದು ಭಾವಿಸುವದು. ಹಿಂದೂ—ಮಹಮ್ಮದೀಯರೊಳಗಿನ ಕಲಹಕಾರಣಗಳು ಮೂರು — (೧) ಮಸಕಾಂತರ; (೨) ವಾದ್ಯ; (೩) ಗೋಹತ್ಯ. ಮತಾಂತರದ ಬಗ್ಗೆ ಕುರಾನವನ್ನೇ ಉಲ್ಲೇಖಿಸುವೆನು. ಮಾನವನ ಮನಸ್ಸು ತನ್ನ ಧರ್ಮದ ಕಡೆಗೆ ಒಲಿದ ಹೊರತು, ಧರ್ಮದೀಕ್ಷೆ ಕೊಡಬಾರದೆಂದು ಪೈಗಂಬರರ ಕಟ್ಟಾಜ್ಞೆಯಿದೆ. ಆದರಿಂದ, ಈ ಬಗ್ಗೆ ಪ್ರತಿಯೊಂದು ಸಮಾಜವು ಪ್ರಸಾರವನ್ನು ಬಿಟ್ಟುಬಿಡಬೇಕು. ಧರ್ಮಲಂಡತನವು ಪ್ರಾಬಲ್ಯಹೊಂದದಂತೆ ಎಲ್ಲ ಸಮಾಜಗಳೂ ಜಾಗರೂಕವಾಗಿರಬೇಕು. ಮಹಮ್ಮದೀಯರು ಪ್ರಾರ್ಥನೆ ನಡಿಸುವಾಗ, ವಾದ್ಯ ಬಾರಿಸಿ, ಚಿತ್ತಚಾಂಚಲ್ಯ ಮಾಡಬಾರದೆಂಬ ಬಗ್ಗೆ ಮತಭೇದವಿರಲಾರದು. ಮಸೀದಿಯಲ್ಲಿ ಯಾವಾಗಲೂ ಪ್ರಾರ್ಥನೆ ನಡಿಸುವ ಹಕ್ಕು ಒಜಾಯಿಸುವ ಹಟವನ್ನು ಮಹಮ್ಮದೀಯರು ಹಿಡಿಯಬಾರದು. ಕುರಾನಿನೊಳಗ ವಿಧಿಸಿದಂತೆ, ಐದು ಸಮಯಗಳಲ್ಲಿ, ಹಿಂದೂಗಳು ಮಸೀದಿಯ ಮುಂದೆ ವಾದ್ಯ ಬಾರಿಸದಂತೆ ವ್ಯವಸ್ಥೆ ಇಡುವದು ಹಿಂದೂಗಳ ಕರ್ತವ್ಯವು. ಈ ನಿಯಮಗಳನ್ನು ಲಕ್ಷಿಸಿ, ಈ ಚಳ್ವಳಿಯೊಳಗಿನ ಹಿಂದೂ-ಮಹಮ್ಮದೀಯರ ಕಲಹವನ್ನು ರಾಷ್ಟ್ರೀಯ ಸಭೆಯವರು ಪಂಚರ ಮುಖಾಂತರ ನಿರ್ಣಯಿಸಿರುವರು. ಗೋಹತ್ಯ ಮಾಡುವದು, ಮಾಡದಿರುವದು ಹಿಂದೂಗಳ ಸಾಹಚರ್ಯವನ್ನಪೇಕ್ಷಿಸುವ ಮಹಮ್ಮದೀಯರಿಗೇ ಒಪ್ಪಿಸತಕ್ಕದ್ದು. ಪ್ರೇಮದಿಂದ ಗೋಹತ್ಯವನ್ನು ಪ್ರತಿಬಂಧಿಸಬೇಕು. ಜುಲುಮೆಯಿಂದ ಅದನ್ನು ಪ್ರತಿಬಂಧಿಸಲಾಗದು. ನಾವು ಮೊಟ್ಟಮೊದಲು ಸ್ವರಾಜ್ಯವನ್ನು ಸಂಪಾದಿಸುವಾ; ಬಳಿಕ, ಸ್ವರಾಜ್ಯ, ಕಾಯಿದೇ ಮಂಡಳಗಳನ್ನು ಆಶ್ರಯಿಸಿ, ಗೋಹತ್ಯವನ್ನು ಪ್ರತಿಬಂಧಿಸುವಾ.

ದಕ್ಷಿಣ ಹಿಂದುಸ್ಥಾನದಲ್ಲಿ ಹಿಂದೂ-ಮಹಮ್ಮದೀಯರ ಪ್ರಶ್ನೆಗಿಂತ ಬ್ರಾಹ್ಮಣ-ಬ್ರಾಹ್ಮಣೇತರರ ಕಲಹವೇ ವಿಶೇಷ ತೀವ್ರವಾಗಿದೆ. ಕಲಹದ ಮೂಲ ಬೀಜವು ಸಾಮಾಜಿಕ ಉನ್ನತಿಯು; ಉನ್ನತಿಯನ್ನು ಸಾಧಿಸುವ ಮಾರ್ಗವು ಅನ್ಯ ಸಮಾಜಗಳನ್ನು ದ್ವೇಷಿಸುವದು. ಇದರಿಂದ ಎಲ್ಲರಿಗೂ ಬಹಳೇ ಹಾನಿಯಾಗುತ್ತದೆ. ಬ್ರಾಹ್ಮಣೇತರರ ಉನ್ನತಿಗೆ ಮೂಲ ಪ್ರತಿಬಂಧವು ಬಡ ಬ್ರಾಹ್ಮಣನದಲ್ಲ; ಆದರೆ, ತಾನು ಸುರಕ್ಷಿತನಿರಬೇಕೆಂದು ಅಂತಃಕಲಹಗಳನ್ನು ಸ್ಥಿರಪಡಿಸಲು, ಹಾತೊರೆಯುವ ಧೂರ್ತ ಅಧಿಕಾರಿಯದೇ. ಬ್ರಾಹ್ಮಣೇತರನು ಉಪದ್ರವ ಕೊಟ್ಟರೆ. ಬ್ರಾಹ್ಮಣನ ಸಹಾಯದಿಂದ ಬ್ರಾಹ್ಮಣೇತರನ ಟೊಂಕ ಮುರಿಯಲು ಅವನೆಂದೂ ಹಿಂಜರಿಯನು. ಆದ್ದರಿಂದ, ಸ್ವಸಮಾಜೋನ್ನತಿಗಾಗಿ, ಜಾಣರೆಂದೂ ನೌಕರಶಾಹಿಯನ್ನು ನಂಬಿರರು. ನಿಜವಾದ ಉನ್ನತಿಯು ಎಲ್ಲ ಸಮಾಜಗಳಿಗೆ ಸರಿಯಾಗಿ ಬರುವದು. ಸ್ವರಾಜ್ಯವು ಪ್ರಾಪ್ತವಾದ ಮೇಲೆ, ಲೋಕಹಿತದಕ್ಷ ಸರಕಾರವು ಅಖಿಲ ಜನತೆಯನ್ನು ಉದ್ಧರಿಸುವದು. ಆದರಿಂದಲೇ ಸಮಾಜಗಳು ಉನ್ನತಿಹೊಂದುವವು. ”

ಖಾದಿ ಹಾಗು ರಾಷ್ಟ್ರೀಯ ಶಿಕ್ಷಣಗಳ ಬಗ್ಗೆ ಸಾಲ್ಯ ಮಾಡಿ, ಸ್ವದೇಶದೊಳಗಿನ ಗಿರಣಿ ಸಾವುಕಾರರು ಧನಲೋಭವನ್ನು ತ್ಯಜಿಸಿ, ಸ್ವದೇಶಿ ಚಳವಳಿಗೆ ಪ್ರೋತ್ಸಾಹವನ್ನೀಯಬೇಕೆಂದು ನುಡಿದು, ಅವು ಪ್ರತಿಸ್ಪರ್ಧಿಗಳ ಚಳವಳಿಯಲ್ಲಿ ಸೇರಗೊಡದಂತೆ, ಖಾದಿಯ ಪ್ರವರ್ತಕರು ಅವರಗೂಡ ಒಪ್ಪಂದರೂ ವ್ಯವಸ್ಥೆ ಮಾಡಬೇಕೆಂಬದೊಂದು ವಿಚಾರವನ್ನು ಪ್ರದರ್ಶಿಸಿದರು. ಸಾಮ್ರಾಜ್ಯ ಪರಿಷತ್ತಿನಿಂದ ಹಿಂದುಸ್ಥಾನಕ್ಕೆ ಲಾಭವೇನಾಗಲಿಲ್ಲೆಂದು ಅವರು ನುಡಿದರು. ಕೂಲಿಕಾರ ಪಕ್ಷವು ವಿಲಾಯತಿಯ ಪ್ರಧಾನ ಮಂಡಳವನ್ನು ವಹಿಸಿಕೊಂಡರೂ, ನಮ್ಮ ಹಣೇಬರಹದೊಳಗಿನ ಪಾರತಂತ್ರ್ಯದೋಷದ ಪರಿಹಾರವಾಗಲಿಕ್ಕಿಲ್ಲೆಂದು ಆ ಪಕ್ಷದ ನಾಯಕರಾದ ಮಿ॥ ಥೋಮಸ್‌ರವರ ಉದ್ಗಾರಗಳನ್ನಿತ್ತು ಸ್ಪಷ್ಟೀಕರಿಸಿದರು. ಅನ್ಯ ಪಕ್ಷದವರು ಬೇಕಾದ್ದನ್ನು ಮಾತಾಡಲಿ, ರಾಷ್ಟ್ರೀಯ ಸಭೆಯವರು ತಮ್ಮ ಕಾರ್ಯಕ್ರಮವನ್ನು ತೀವ್ರದಿಂದ ನಡಿಸಿ, ಕಾಯಿದೇಭಂಗಕ್ಕಾಗಿ ದೇಶವನ್ನು ತಯಾರಿಸಿ, ಸರಕಾರಕ್ಕೆ ಪರಾಜಯಮಾಡದೇ ಬಿಡಕೂಡದೆಂದರು. ಏಶಿಯಾಖಂಡದೊಳಗಿನ ರಾಷ್ಟ್ರಗಳನ್ನೆಲ್ಲ ಒಂದು ರಾಷ್ಟ್ರಸಂಘದಲ್ಲಿ ಒಕ್ಕಟ್ಟು ಮಾಡಿಕೊಂಡು, ಏಶಿಯಾಖಂಡದ ನಿವಾಸಿಕರೋನ್ನತಿಗಾಗಿ ಅವರು ಯತ್ನಿಸಬೇಕೆಂತಲೂ ಶ್ರೀನಿವಾಸರಾವ ಕೌಜಲಗಿಯವರು ನುಡಿದು, ನೆರೆದ ಶ್ರೋತೃವೃಂದದ ಆಭಾರ ಮನ್ನಿಸಿ, ಸಭಾಪತಿಗಳನ್ನು ನೇಮಿಸಿಕೊಂಡು, ಅಧಿವೇಶನವನ್ನು ನಡಿಸಲು ಪ್ರತಿನಿಧಿಗಳಿಗೆ ವಿಜ್ಞಾಪಿಸಿ, ಪ್ರಚಂಡ ಜಯಘೋಷದಲ್ಲಿ ಸ್ವಸ್ಥಾನಾಪನ್ನರಾದರು.

ಬಳಿಕ, ಅಧ್ಯಕ್ಷರ ಚುನಾವಣೆಯಾಯಿತು.* ಶ್ರೀ॥ ರಾಜಗೋಪಾಲಾಚಾರ್ಯರು ಅಧ್ಯಕ್ಷಸ್ಥಾನವನ್ನು ಚಪ್ಪಾಳೆಗಳ ಜಯಘೋಷದಲ್ಲಿ ವಿರಾಜಿಸಿ, ತಮ್ಮ ಭಾಷಣವನ್ನೋದಿದ ಬಳಿಕ, ಅಂದಿನ ಕಾರ್ಯಕ್ರಮವು ಮುಗಿಯಿತು.

ಪಾಸಾದ ಠರಾವುಗಳು

ಮಾರನೇ ದಿನ, ಅಂದರೆ, ಮಂಗಳವಾರ ತಾ. ೨೨ನೇ ೧॥ ಘಂಟೆಗೆ ಪುನಃ ಅಧಿವೇಶನಕ್ಕೆ ಪ್ರಾರಂಭವಾಯಿತು ಕಾಂಗ್ರೆಸವಾದವನ್ನನುಭವಿಸಿ,

ಬಿಡುಗಡೆಹೊಂದಿದ ದೇ॥ ಲಾಲಾ ಲಜಪತರಾಯ, ಅಲ್ಲೀಬಂಧು, ಡಾ॥ ಕಿಚಲು ಮೊದಲಾದ ದೇಶಬಾಂಧವರನ್ನು ಅಭಿನಂದಿಸುವ ಠರಾವು ಅಧ್ಯಕ್ಷರೇ ಸೂಚಿಸಿ, ಪಾಸು ಮಾಡಿಕೊಂಡರು. ಎರಡನೇ ಠರಾವು ಪ್ರಚಲಿತ ಸ್ಥಿತಿಯ ಮೇಲಿತ್ತು.

ಮಹಾತ್ಮಾ ಗಾಂಧಿಯವರು ಉಪಕ್ರಮಿಸಿದ ಅಹಿಂಸಾತ್ಮಕ ಅಸಹಕಾರಿತೆಯಿಂದಲೇ ಸ್ವರಾಜ್ಯ ಸಾಧ್ಯವಾಗುವದೆಂದು ಈ ಪರಿಷತ್ತಿನ ಅಭಿಪ್ರಾಯ. ಸರಕಾರವು ಸ್ಥಾಪಿಸಿದ ಕಾಯಿದೆ ಕೌನ್ಸಿಲುಗಳ ಬಗ್ಗೆ ರಾಷ್ಟ್ರೀಯ ಸಭೆಯು ಧರಿಸಿದ ಸಂಪೂರ್ಣ ಅಲಿಪ್ತವೃತ್ತಿಯನ್ನೇ ಮುಂದರಿಸಬೇಕೆಂದು ಈ ಪರಿಷತ್ತಿನ ಮತವಿದೆ. ರಾಷ್ಟ್ರದ ಉದ್ಧಾರವಾಗಬೇಕಾದರೆ, ವಿಧಾಯಕ ಕಾರ್ಯಕ್ರಮವನ್ನು ಅಂಗೀಕರಣಪೂರ್ವಕ ನಡಿಸಬೇಕೆಂದು ಈ ಪರಿಷತ್ತಿನ ನಿಶ್ಚಿತ ಮತವಾಗಿದೆ. ಅದರಿಂದ, ಅದನ್ನು ಶೀಘ್ರವೇ ಕೊನೆಗಾಣಿಸಲು ಪ್ರಜೆಗಳು ದೀರ್ಘ ಯತ್ನ ನಡಿಸುವಂತೆ ರಾಷ್ಟ್ರೀಯ ಸಭೆಯು ತಕ್ಕ ಉಪಾಯಯೋಜನೆ ಮಾಡಬೇಕೆಂದು ಈ ಪರಿಷತ್ತು ರಾಷ್ಟ್ರೀಯ ಸಭೆಗೆ ಶಿಫಾರಸು ಮಾಡುತ್ತದೆ.

ಈ ಠರಾವನ್ನು ಶ್ರೀ॥ ಗಂಗಾಧರರಾವ ದೇಶಪಾಂಡೆಯವರು ಚಿತ್ತವೇಧಕ ಭಾಷಣ ಮಾಡಿ, ಮಂಡಿಸಿದರು. ಈ ಠರಾವಿಗೆ ಕೆಲ ಉಪಸೂಚನೆಗಳು ವಿಷಯನಿಯಾಮಕ ಮಂಡಳಿಯಲ್ಲಿ ಸೂಚಿಸೋಣಾಗಿದ್ದವು. ಆದರೆ, ವಿಷಯನಿಯಾಮಕ ಕಮಿಟಿಯೊಳಗಿನ ಮುಖ್ಯ ಉಪಸೂಚಕರಾದ ಶ್ರೀ॥ ಶ್ರೀನಿವಾಸರಾವ ಕೌಜಲಗಿಯವರೇ ಪರಿಷತ್ತಿನಲ್ಲಿ ಈ ಠರಾವನ್ನು ಸ್ವೀಕರಿಸಿದರು. ವಿರೋಧವು ಬಹಳ ಆಯಿತು. ಭಾಷಣಗಳಾದ ಬಳಿಕ, ಅಧ್ಯಕ್ಷರು ಮತಕೊಳ್ಳುವಾಗ, ಪ್ರತಿನಿಧಿಗಳಿಗೆ ಈ ಠರಾವಿನ ಮಹತ್ವದ ಅರಿವನ್ನಿತ್ತು, ಮತಕೊಡಬೇಕಾದರೆ, ವಿಚಾರ ಮಾಡಿ, ಮತದಾನ ಮಾಡಿರೆಂದು ಪುನಃ ಪುನಃ ಸೂಚಿಸಿದರು. ಈ ಠರಾವನ್ನು ಮಂಜೂರು ಮಾಡುವ ಪ್ರತಿ ಒಬ್ಬ ಪ್ರತಿನಿಧಿಯು, ಅದನ್ನು ಆಚರಣೆಯಲ್ಲಿ ತರಲು ಬದ್ಧನಿರುವನೆಂತಲೂ ಹೇಳೋಣಾಯಿತು. ಠರಾವು ಸರ್ವಾನುಮತಿಯಿಂದ "ಮಹಾತ್ಮಾ ಗಾಂಧೀಕೀ ಜಯ" ಎಂಬ ಜಯಘೋಷದಿಂದ ಮಂಜೂರಾಯಿತು. ಖಿಲಾಫತ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷರಾದ ಪಿ॥ ಶಮಾರ್ದತ್ತ್ಯಕ ಶೇಕ್‌ಫೋಲರವರೂ, ಮೌ॥ ಮಹಮ್ಮದ ಅಲ್ಲಿಯವರೂ ಈ ಠರಾವಿಗೆ ಒಮ್ಮತ ಕೊಟ್ಟರು.

ತುರ್ಕಿಯ ಮುಕ್ತತಾ ಕೆಮಾಲಪಾಶಾ ಇವರ ಅಭಿನಂದನ ಮಾಡಿ, ಏಶಿಯಾಖಂಡದ ಪಾರತಂತ್ರ್ಯವಿಮೋಚನೆಯ ಕಾರ್ಯದಲ್ಲಿ ಅವರು ಮುಂದಾಗಬೇಕೆಂದು ಪರಿಷತ್ತು ಆಶಾಪ್ರದರ್ಶನ ಮಾಡಿತು. ಜಜೀರಾತ-ಉಲ್-ಅರಾಬ ಪ್ರದೇಶಸ್ವಾತಂತ್ರ್ಯಕ್ಕಾಗಿ ಕಾದಾಡುವ ಮಹಮ್ಮದೀಯ ಬಾಂಧವರಿಗೆ ಅಖಿಲ ಕರ್ನಾಟಕಸ್ಥರು ಸಹಾಯವನ್ನೀಯಬೇಕೆಂದು ಪರಿಷತ್ತು ಆಶಾಪ್ರದರ್ಶನ ಮಾಡಿತು. ಅಕಾಲಿ ಶೀಖರ ಧೈರ್ಯ-ಶೌರ್ಯ-ಸುಸಂಘಟನೆ-ಅಹಿಂಸೆಗಳಿಗಾಗಿ ಅಭಿನಂದಿಸಿ, ರಾಷ್ಟ್ರೀಯ ಸಭೆಯು ಅವರಿಗೆ ಸಹಾಯ ಮಾಡಲು ನಿರ್ಣಯಿಸಿದ ಪ್ರತಿಯೊಂದು ಕಾರ್ಯಕ್ರಮದಲ್ಲಿ ಕರ್ನಾಟಕಸ್ಥರು ನೆರವಾಗುವರೆಂದು ಪರಿಷತ್ತು ಅಭಿವಚನವನ್ನಿತ್ತಿತು. ದೇಶದ ನೈತಿಕ, ಆರ್ಥಿಕ ಉನ್ನತಿಗಳಿಗೆ, ಸ್ವಾತಂತ್ರ್ಯಸಂಪಾದನೆಗೆ ಖಾದಿಯ ಪ್ರಸಾರ, ಅಸ್ಪೃಶ್ಯತಾನಿವಾರಣೆಗಳು ಅತ್ಯಾವಶ್ಯಕವೆಂದು ಪುನಃ ನಮೂದಿಸಿ, ಅಖಿಲ ಸಮಾಜಗಳು ಧರ್ಮಬುದ್ಧಿಯಿಂದ ಈ ಕಾರ್ಯವನ್ನು ಕೈಕೊಳ್ಳಬೇಕೆಂದು ಸಭೆಯು ವಿಜ್ಞಾಪನೆಯಾಯಿತು. ಉತ್ತರ-ದಕ್ಷಿಣ ಕನ್ನಡ ಮೊದಲಾದ ನೆರೆಪೀಡಿತ ಆಪದ್ಗ್ರಸ್ತರಿಗಾಗಿ ಸಹಾನುಭೂತಿಪ್ರದರ್ಶನ ಮಾಡಿ, ದುಃಖನಿವಾರಣೆಯ ಬಗ್ಗೆ ಅಲ್ಲಲ್ಲಿ ತೆಗೆದ ಪ್ರತ್ಯನಿಧಿಗಳಿಗೆ ಔದಾರ್ಯದಿಂದ ಸಹಾಯ ಮಾಡಿದ ಗೃಹಸ್ಥರನ್ನೆಲ್ಲ ಅಭಿನಂದಿಸಿ, ಇನ್ನೂ ಅಪೇಕ್ಷಿತ ನಿಧಿಯನ್ನರ್ಪಿಸಿ, ಆಪದ್ಗ್ರಸ್ತರನ್ನು ವಿಮೋಚಿಸಬೇಕೆಂದು ಪರಿಷತ್ತು ಬಿನ್ನೈಸಿತು. ಈ ದುಃಖನಿವಾರಣೆಯ ಕೆಲಸವನ್ನು ಜಾಗ್ರತೆಯಿಂದಲೂ, ತತ್ಪರತೆಯಿಂದಲೂ ಕೈಕೊಂಡ ಬಗ್ಗೆ ರಾಷ್ಟ್ರಸೇವಕರನ್ನೂ ಪರಿಷತ್ತು ಕೊಂಡಾಡಿತು. ರಾಷ್ಟ್ರೀಯ ಶಿಕ್ಷಣವನ್ನು ಕಾರ್ಯಕ್ಷಮವಾಗುವಂತೆ ನಡಿಸಲು, ಪರಿಷತ್ತು ಶ್ರೀ॥ ವಿನಾಯಕರಾವ ಜೋಶಿ ಮೊದಲಾದವರನ್ನು ಬಿನ್ನೈಸಿಕೊಂಡಿತು. ರಾಷ್ಟ್ರೀಯ ಸಭೆಯ ಮುಂದಾಳುಗಳು ಕರ್ನಾಟಕದೊಳಗಿನ ಕೆಲ ನಿಶ್ಚಿತಭಾಗಗಳನ್ನೇ ಆರಿಸಿಕೊಂಡು, ಅಲ್ಲಿ ಸಮಿತಿ, ಗ್ರಾಮಪಂಚಾಯತ, ಸ್ವಯಂಸೇವಕರ ಸಂಘಟನೆ ಮೊದಲಾದ ಕಾರ್ಯಕ್ರಮವನ್ನು ವಿಶೇಷ ತೀವ್ರತೆಯಿಂದ ನಡಿಸಬೇಕೆಂತಲೂ, ಪ್ರಾಂತದೊಳಗಿನ ಕೊಂಗ್ರೆಸ ಸಂಸ್ಥೆಗಳೆಲ್ಲ ಈ ಕಾರ್ಯಕ್ಕೆ ಅವಶ್ಯವುಳ್ಳ ಎಲ್ಲ ಬಗೆಯ ಸಹಾಯವನ್ನೀಯಬೇಕೆಂತಲೂ ಸಭೆಯು ವಿನಂತಿ ಮಾಡಿತು. ಹಿಂದುಸ್ಥಾನಿ ಭಾಷೆಯನ್ನು ಅಖಿಲ ರಾಷ್ಟ್ರಭಾಷೆಯಾಗಿ ಪರಿಣಮಿಸುವದು ರಾಷ್ಟ್ರೈಕ್ಯಕ್ಕೆ ಪೋಷಕವಾಗಿರುವದರಿಂದ ಕರ್ನಾಟಕದೊಳಗಿನ ರಾಷ್ಟ್ರಸೇವಕರೆಲ್ಲರೂ ವಿಶೇಷ ಯತ್ನ ಮಾಡಬೇಕಾಗಿ ಪರಿಷತ್ತು ಆಗ್ರಹಪೂರ್ವಕ ಸೂಚಿಸಿತು. ಸಂಘಸ್ವಾತಂತ್ರ್ಯ, ಭಾಷಣಸ್ವಾತಂತ್ರ್ಯ, ಮುದ್ರಣಸ್ವಾತಂತ್ರ್ಯಗಳ ಮೇಲೆ ಹಲ್ಲೆ ಮಾಡಲು ಹಿಂದೀ ಸಂಸ್ಥಾನಿಕರು ಪ್ರವೃತ್ತರಾದದ್ದು ನ್ಯಾಯವಿರುದ್ಧವೆಂದು ಪರಿಷತ್ತು ಅಭಿಪ್ರಾಯಪಟ್ಟು, ಮೈಸೂರಿನೊಳಗಿನ ವೃತ್ತಪತ್ರಗಳಿಗೆ ಮೃತ್ಯುರೂಪವಾಗಿರುವ ಸರಕಾರಿ ಅಧಿಕಾರಿಗಳ ನಿಯಂತ್ರಣಕ್ಕೆ ವೃತ್ತಪತ್ರಗಳನ್ನು ಒಳಪಡಿಸುವ ಮುದ್ರಣ ಕಾನೂನುಗಳನ್ನು ಪ್ರಕಟಿಸಿ, ಪ್ರದರ್ಶಿಸಿದ ಮೈಸೂರ ಸರಕಾರದ ಪರಾಗತಿಯ ಧೋರಣವನ್ನು ಪರಿಷತ್ತು ತೀವ್ರದಿಂದ ನಿಷೇಧ ಮಾಡಿತು. ಈ ಠರಾವಿನ ಮೇಲೆ 'ಮುಂಬಯಿ ಕ್ರಾನಿಕಲ್' ಪತ್ರಿಕೆಯ ಶ್ರೀ॥ ವೆಂಕಟರಾಮನವರು ಉಪನ್ಯಾಸ ಮಾಡಿದರು. ಹೈದರಾಬಾದ, ಮೈಸೂರು ಸಂಸ್ಥಾನಗಳೊಳಗಿನ ಪ್ರಜೆಗಳ ಕಷ್ಟಗಳನ್ನು ಸಭಿಕರಿಗರುಹಿ, ಸದ್ಯಕ್ಕೆ ಮೈಸೂರ ಸರಕಾರವು ಪ್ರಜೆಗಳಿಗರ್ಪಿಸಿದ ಸುಧಾರಣಾ ಯೋಜನೆಯು ದೊಡ್ಡದೊಂದು ಮಾಯಾಜಾಲವೆಂದು ಸಂಬೋಧಿಸಿದರು. ಹೈದರಾಬಾದ ಸಂಸ್ಥಾನದೊಳಗಿನ ಶ್ರೀ॥ ರಾಘವೇಂದ್ರ ಶರ್ಮಾರವರು ತಮ್ಮಲ್ಲಿ ಮುನಿಸಿಪಾಲಿಟಿಯು ಇಲ್ಲ; ಕಾಯಿದೆ ಕೌನ್ಸಿಲವೂ ಇಲ್ಲ; ಎಸೆಂಬ್ಲಿಯನ್ನಂತೂ ಕೇಳಬೇಡಿರಿ; ಎಂದು ಹೇಳಿ ತಮ್ಮಲ್ಲಿಯ ಏಕತಂತ್ರೀ ಅಧಿಕಾರದ ಪರಮಾವಧಿಯೆಂದು ಬಣ್ಣಿಸಿದರು. ಕರ್ನಾಟಕದೊಳಗಿನ ಸಮಾಜಗಳೊಳಗಿನ ತಪ್ಪು ತಿಳುವಳಿಕೆ, ಮತಭೇದಗಳಿಗೆ ಆಸ್ಪದ ದೊರೆಯದಂತೆ ಮುಂಜಾಗ್ರತೆ ಕೊಳ್ಳಬೇಕೆಂದು ರಾಷ್ಟ್ರಸೇವಕರಿಗೆ, ಸಮಾಜದ ಮುಂದಾಳುಗಳಿಗೆ, ಪರಿಷತ್ತು ವಿಜ್ಞಾಪಿಸಿ, ಐಕ್ಯವನ್ನು ನೆಲೆಗೊಳಿಸಲು, ತಕ್ಕ ದಾರಿಯಿಂದ ಪ್ರಜಾಮತವನ್ನು ಜಾಗೃತ ಮಾಡಬೇಕೆಂದು ಆಗ್ರಹಪೂರ್ವಕ ಪರಿಷತ್ತು ಬೇಡಿಕೊಂಡಿತು. ರಾಷ್ಟ್ರೀಯ ಸಭೆಯ ಹೊಸ ಘಟನೆಯಂತೆ ಕರ್ನಾಟಕವು ಸ್ವತಂತ್ರ ಪ್ರಾಂತವಾದಂದಿನಿಂದ ರಾಷ್ಟ್ರೀಯ ಸಭೆಯ ಅಧಿವೇಶನದ ಸಂಯೋಗವು ನಮ್ಮೀ ಪ್ರಾಂತಕ್ಕೆ ಪ್ರಾಪ್ತವಾಗಿಲ್ಲವಾದ್ದರಿಂದ, ಕರ್ನಾಟಕಸ್ಥರಿಗೆ ತಮ್ಮಲ್ಲಿ ರಾಷ್ಟ್ರೀಯ ಸಭೆಯನ್ನು ನೆರೆಯಿಸಬೇಕೆಂಬ ಉತ್ಕಟ ಇಚ್ಛೆಯಾಗಿರುವದರಿಂದ ಮುಂದಿನ ವರುಷದ ಮಹಾಸಭೆಗೆ, ಅಂದರೆ, ೧೯೨೪ನೇ ಇಸ್ವಿಯ ರಾಷ್ಟ್ರೀಯ ಸಭೆಯ ಅಧಿವೇಶನಕ್ಕೆ ಕರ್ನಾಟಕ ಪ್ರಾಂತಿಕ ಕಮಿಟಿಯು ನಿಮಂತ್ರಿಸಬೇಕೆಂತಲೂ, ಅದನ್ನು ರಾಷ್ಟ್ರೀಯ ಸಭೆಯು ಮನ್ನಿಸಬೇಕೆಂತಲೂ ಪರಿಷತ್ತು ಠರಾಯಿಸಿತು. ಬಳಿಕ ಅಧ್ಯಕ್ಷರ ಸಮಯೋಚಿತ ಸಮಾರೋಪದ ಭಾಷಣವಾದ ಬಳಿಕ, ಸಭಾಕಾರ್ಯವು, "ಮಹಾತ್ಮಾ ಗಾಂಧೀಕೀ ಜೈ", "ವಂದೇ ಮಾತರಂ" ಮೊದಲಾದ ಜಯಘೋಷಗಳಿಂದ ವಿಸರ್ಜನಹೊಂದಿತು.

ಸಭಾಕಾರ್ಯವು ಮುಗಿದ ಬಳಿಕ, ತಾಸಿನಾವಧಿ ಮೈದಾನಿನಲ್ಲಿ ಖಾದೀ ಪ್ರದರ್ಶನ ಮಂದಿರದ ಹಿಂಬದಿಗೆ ಪ್ರಚಂಡ ಸಭೆಯಾಯಿತು. ಶ್ರೋತೃವೃಂದವು ಸುಮಾರು ೧೦ ಸಾವಿರಕ್ಕೆ ಮಿಕ್ಕಿತ್ತು. ಶ್ರೀ॥ ಗಂಗಾಧರರಾವ ದೇಶಪಾಂಡೆ, ಶ್ರೀಮತಿ ಅವಂತಿಕಾಬಾಯಿ ಗೋಖಲೇ, ಮೌ॥ ಮಹಮ್ಮದ ಅಲ್ಲಿಯವರು ಸದ್ಯಸ್ಥಿತಿಯ ಮೇಲೆ ಚಿತ್ತವೇಧಕ ಭಾಷಣವನ್ನಿತ್ತರು. ಶ್ರೋತೃಸಮೂಹವೆಲ್ಲ ಚಿತ್ರಾಂಕಿತವಾದಂತೆ ನಿಶ್ಚಲವೃತ್ತಿಯಿಂದ ಮುಂದಾಳುಗಳ ಉಪನ್ಯಾಸಗಳನ್ನು ಗ್ರಹಿಸುತ್ತಿತ್ತು.

— ಗಯಾ ಕ್ಷೇತ್ರದಲ್ಲಿ ಹಿಂದೂಗಳಲ್ಲಿ ಒಂದು ಗಡಿಬಿಡಿ ಎದ್ದಿತು. ಗೃಮಾಳರು ನಾ॥ ಗವರ್ನರರಿಗೆ ವಿಷ್ಣುಪಾದದ ಪವಿತ್ರ ಸ್ಥಾನದಲ್ಲಿ ಬೂಟು ಸಹಿತ ಪ್ರವೇಶಗೊಟ್ಟು, ಧರ್ಮಸ್ಥಳದ ಪಾವಿತ್ರ್ಯವನ್ನು ಭಂಗಿಸಿದರೆಂದು ವಿರೋಧದ ಠರಾವುಗಳು ಪಾಸಾಗುತ್ತಲಿವೆ. ವಿಷ್ಣುಪಾದ ದೇವಸ್ಥಾನದಲ್ಲಿ ಪಾದರಕ್ಷೆಯ ಸಹಿತ ಪ್ರವೇಶಿಸಿದರೆ, ಪಾವಿತ್ರ್ಯಭಂಗವಾಗುತ್ತದೆಂದು, ಭಟ್ಟಿಕೊಡುವ ಬುದ್ಧಿಯನ್ನರಿತ ಕೂಡಲೆ, ಹಿಂದೂಗಳು ನಾ॥ ಗವರ್ನರರಿಗೆ ಮೊದಲೇ ಜಾಹೀರ ಸಭೆ ಸೇರಿಸಿ ತಿಳಿಸಿದ್ದರು. ನಾ॥ ಗವರ್ನರರು ಹಾಗಾದರೆ, ತಾವು ಅಲ್ಲಿ ಹೋಗುವದೇ ಇಲ್ಲವೆಂದು ಉತ್ತರವನ್ನಿತ್ತಿದ್ದರು. ಗೃಮಾಳರ ಆಗ್ರಹದ ಮೂಲಕ, ಮಾನ ತಕ್ಕ ದೊರೆಯುತ್ತದೆಂತಲೋ, ಏನೋ, ಗವರ್ನರರು ತಮ್ಮ ಆಶ್ವಾಸನವನ್ನು ಬದಿಗೊತ್ತಿ, ವಿಷ್ಣುಪಾದ ಮಂದಿರವನ್ನು ಅನುಗ್ರಹಿಸಿದರು. ಧಾರ್ಮಿಕ ತಟಸ್ಥವೃತ್ತಿಯು ಭಂಗವಾಯಿತೆಂದು ಹಿಂದೂಗಳ ಗಲಭೆ.

Twelve Tissue Remedies

ಈರಾರು ಲವಣಗಳು

ಕೆಳಗೆ ಬರೆದ ಕ್ರಯಕ್ಕೆ ಸಿಗುವವು

ನಂಬರ ೧ರಿಂದ ೧೨ರ ವರೆಗೆ

೧ ಔನ್ಸ ಬಾಟ್ಲಿಗೆ ಕ್ರಯ ರೂ. ೦-೧೦-೦.

,, ,, ,, ೨ ಔನ್ಸ ಬಾಟ್ಲಿಗೆ ,, ರೂ. ೧-೦-೦.

,, ,, ,, ೪ ಔನ್ಸ ಬಾಟ್ಲಿಗೆ ,, ರೂ. ೧-೧೨-೦.

ಇದಲ್ಲದೆ, ಗಡಕರ್ಣ, ತದ್ದು, ತಲೆಶೂಲೆ, ಚಳಿಜ್ವರ, ಚಾತುರ್ಥಿಕಜ್ವರ, ಜ್ವರಗತ್ತೆ ಮೊದಲಾದವುಗಳಿಗೆ ಅತ್ಯುತ್ತಮ ಔಷಧಗಳು ನಮ್ಮಲ್ಲಿ ದೊರೆಯುವವು. ವಿಶೇಷ ಮಾಹಿತಿ ಪತ್ರದ್ವಾರ ಯಾ ಸಮಕ್ಷ.

ಪತ್ತೆ:— ಎನ್. ಈ. ವೆರುಗೀಸ್,
ಮಿಶನ್ ಮಾಸ್ತರ,
ಹಳದೀಪುರ. (ಉ. ಕಾನಡಾ)

ಕಾನಡಾವೃತ್ತ.

ಅದ್ಯ ಮಿತಿ ಕಾರ್ತಿಕ ಕೃಷ್ಣ ಷಷ್ಠಿ ಗುರುವಾರ

ಸುಸಂಘಟಿತರಾಗಿರಿ.

ಪ್ರಾಂತಿಕ ಪರಿಷತ್ತಿನ ಸಂದೇಶ.

ಕರ್ನಾಟಕ ಪ್ರಾಂತಿಕ ಪರಿಷತ್ತಿನ ದ್ವಿತೀಯ ಅಧಿವೇಶನವು ಒಳ್ಳೇ ವಿಜೃಂಭಣೆಯಿಂದ ನೆರವೇರಿತು. ಕಳೆದ ಸೋಮವಾರ ಮಂಗಳವಾರ ತಾರೀಖು ೧೯ ೨೦ ರಂದು ನಡೆದ ಪ್ರಾಂತಿಕ ಪರಿಷತ್ತಿನ ಹಕೀಕತನ್ನು ಇನ್ನೊಂದೆಡೆಯಲ್ಲಿ ಪ್ರಕಟಿಸಿರುವೆವು. ಅಧ್ಯಕ್ಷರಾದ ಶ್ರೀ॥ ರಾಜಗೋಪಾಲಾಚಾರ್ಯ, ಸ್ವಾಗತಾಧ್ಯಕ್ಷರಾದ ಶ್ರೀ॥ ಶ್ರೀನಿವಾಸರಾವ ಕೌಜಲಗಿ ಇವರ ಭಾಷಣಗಳ ಮುಖ್ಯಾಂಶಗಳನ್ನೂ, ಮಹತ್ವದ ಠರಾವುಗಳನ್ನೂ ವಿಮರ್ಶಿಸಿದರೆ, ಪರಿಷತ್ತಿನಿಂದ ಕರ್ನಾಟಕಸ್ಥರಿಗೆ ಪ್ರಶಸ್ತವಾದ ಮಾರ್ಗದರ್ಶಕತ್ವವು ಸ್ಪಷ್ಟವಾಗಿ ಕಾಣುವದು.

ಸ್ವಾಗತಾಧ್ಯಕ್ಷರಾದ ಶ್ರೀನಿವಾಸರಾಯರು ಹಿಂದುಸ್ಥಾನದ ಕೆಲ ಪ್ರಶ್ನೆಗಳನ್ನು ಚರ್ಚಿಸಿರುವರು. ಸ್ವರಾಜ್ಯ ಪಕ್ಷದವರಿಗೆ ಸರ್ವಾಧಿಪತಿ ರೀಡಿಂಗ ದೊರೆಗಳು ಭೋಜನೋತ್ತರ ಭಾಷಣ ಮಾಡಿ, ಕೌನ್ಸಿಲು ಬಂಗವಾದ ಬಳಿಕ ಮುಂದೆ ತಾವೇನು ಮಾಡುವೆವು, ಎಂಬ ಸಂಗತಿಯನ್ನು ವಿಶದೀಕರಿಸಿ, ಸ್ವರಾಜ್ಯ ಪಕ್ಷದ ಧ್ಯೇಯವನ್ನು ಪಾರಗಾಣಿಸಿರುವರು. ಅಂದಮೇಲೆ, ಇನ್ನಾದರೂ ಕೌನ್ಸಿಲ ಪಾಲಿಯನ್ನು ಅವರು ಯಾಕೆ ತ್ಯಜಿಸಬಾರದು? ಎಂದು ಅವರ ಸವಾಲು. ಹಿಂದೀ-ಮುಹಮ್ಮದೀಯರ ಐಕ್ಯರಕ್ಷಣೆಯ ಬಗ್ಗೆ ಅವರು ಮಾಡಿದ ಸೂಚನೆಗಳು ವ್ಯವಹಾರಿಕವಿವೆ. ಬ್ರಾಹ್ಮಣ-ಬ್ರಾಹ್ಮಣೇತರರ ಕಲಹನಿವಾರಣೆಯನ್ನುದ್ದೇಶಿಸಿ, ಬ್ರಾಹ್ಮಣದ್ವೇಷಪ್ರೇರಿತರಾಗಿ, ಕಾಲ್ಪನಿಕ ಬ್ರಾಹ್ಮಣರ ಪೀಡನೆಯಿಂದ ಪಾರಾಗಹೋಗಿ, ಧೂರ್ತ ನೌಕರಶಾಹಿಯ ಸೂತ್ರ ಗೊಂಬೆಯಾಗಬೇಡಿರೆಂದು ಬೋಧಿಸಿದ್ದು ಸರ್ವಥಾ ಪ್ರಾಸಂಗಿಕವೆಂದು ಯಾರೂ ಒಪ್ಪುವರು. ಬ್ರಾಹ್ಮಣೇತರರಲ್ಲಿಯೂ ಈಗ ಸ್ವಲ್ಪ ಜಾಗೃತಿಯಾಗಹತ್ತಿದೆ. ಇಲ್ಲದಿದ್ದರೆ, ಕಳೆದ ಕೌನ್ಸಿಲು ಚುನಾವಣೆಯಲ್ಲಿ ಬ್ರಾಹ್ಮಣೇತರರಿಲ್ಲದಾಗ ಸ್ವರಾಜ್ಯ ಪಕ್ಷದವರಿಗೇ ಮತ ಕೊಡಿರೆಂದು ಬ್ರಾಹ್ಮಣೇತರ ಪತ್ರಿಕಾಕರ್ತರು ಬೋಧಿಸುತ್ತಿದ್ದಿಲ್ಲ. ರಾಷ್ಟ್ರೀಯ ಸಭೆಯು ದೇಶಕಲ್ಯಾಣಕ್ಕಾಗಿ ದುಡಿಯುತ್ತದೆಂದು ಬ್ರಾಹ್ಮಣೇತರರಿಗೂ ಹೊಳೆಯಹತ್ತಿದೆ. ಇದು ಶುಭ ಸೂಚಕವು. ರಾಷ್ಟ್ರೀಯ ಸಭೆಯ ಪರೋಪಕಾರ ಬುದ್ಧಿಯು ದೇಶಹಿತಬುದ್ಧಿಯು ಪ್ರಚುರಗೊಂಡ ಹಾಗೆ, ಬ್ರಾಹ್ಮಣೇತರ ಬಾಂಧವರೂ ರಾಷ್ಟ್ರೀಯ ಸಭೆಯಲ್ಲಿ ಸೇರಿಕೊಂಡು, ಬ್ರಾಹ್ಮಣ-ಬ್ರಾಹ್ಮಣೇತರರೊಳಗಿನ ವೈಷಮ್ಯ ಪರಿಹಾರ ಮಾಡಿ, ರಾಷ್ಟ್ರವನ್ನುದ್ಧರಿಸುವರೆಂಬುದರಲ್ಲಿ ಸಂದೇಹವಿಲ್ಲ.

ಅಧ್ಯಕ್ಷರಾದ ಶ್ರೀ॥ ರಾಜಗೋಪಾಲಾಚಾರ್ಯರ ಭಾಷಣವು ಗಾಂಧೀ ಕಾರ್ಯಕ್ರಮ ಮಂಡಣಪರವಿತ್ತು. ಆಚಾರ್ಯರು ಮಹಾತ್ಮರ ಏಕನಿಷ್ಠ ಭಕ್ತರಿದ್ದು, ಗಾಂಧಿ ಕಾರ್ಯಕ್ರಮವನ್ನು ಸ್ಫುಟ ಮಾಡಲು ಇವರಷ್ಟು ಯೋಗ್ಯ ಪುರುಷರು ಇನ್ನಾರಿಲ್ಲೆಂದು ಹೇಳಿದರೂ ಸಲ್ಲಬಹುದು. ಆಚಾರ್ಯರು ಮಹಾತ್ಮರ ಕಾರ್ಯಕ್ರಮದ ರಹಸ್ಯವನ್ನೂ, ಸ್ವರಾಜ್ಯ ಪಕ್ಷದವರ ಚಟುವಟಿಕೆಯ ಮರ್ಮವನ್ನೂ ಬಲು ಮನೋಹರವಾಗಿ ಚರ್ಚಿಸಿರುವರು. ಅತ್ಯಕ್ಲೇಶವನ್ನು ಕಡಿಮೆ ಮಾಡಿ, ಪ್ರತಿಪಕ್ಷವನ್ನು ಗೊಂದಲದಲ್ಲಿ ಹಾಕಿ, ಸ್ವಕಾರ್ಯ ಸಾಧಿಸುವ ಭೌತಿಕ ಆಟವನ್ನು ಅವರು ರಾಜಕಾರಣ ಕ್ಷೇತ್ರದಲ್ಲಿ ಆಡುತ್ತಿರುವರೆಂದು ಆಚಾರ್ಯರು ನುಡಿದರು. ಸ್ವರಾಜ್ಯ ಪಕ್ಷದ ದೇಶಸೇವೆಯು ದ್ವೇಷಕ್ಷೇತ್ರದಲ್ಲಿ ಬೀಜಾರೋಪಣವಾಗದಂತಲೂ, ಶಕ್ಯವಿದ್ದ ಸ್ಥಿತಿಯಲ್ಲಿ ಹಿಂಸೆ ಮಾಡಲು ಸಹ ಅವರು ತಯಾರಿರುವರೆಂತಲೂ, ಆಚಾರ್ಯರು ಸಭಿಕರಿಗೆ ನಿವೇದಿಸಿದರು. ಗಾಂಧಿ ಕಾರ್ಯಕ್ರಮದ ಮರ್ಮವು ತೀರ ಭಿನ್ನವಿದೆ. ಪರಪೀಡನೆಯು ಗಾಂಧಿ ಕಾರ್ಯಕ್ರಮಕ್ಕೆ ತೀರ ಅಪಥ್ಯವು, ಹಿಂಸೆಯದಂತೂ ಹೆಸರು ಸಹ ತ್ಯಾಜ್ಯವೇ. ಪ್ರೇಮ, ಅಹಿಂಸೆ, ಪರಮಾವಧಿಯ ಆತ್ಮಕ್ಲೇಶ ಇವೇ ಮಹಾತ್ಮರ ಅಸಹಯೋಗದ ಮೂಲ ತತ್ವಗಳು. ಅಹಿಂಸೆಯಿಂದ ಹಿಂದೂ-ಮುಹಮ್ಮದೀಯರ ಏಕೆ, ಅಖಿಲ ಸಮಾಜಗಳೊಳಗಿನ, ಐಕ್ಯರಕ್ಷಣೆ ಹೇಗಾಗುತ್ತದೆ, ಸರಕಾರಿ ಹಿಂಸೆಯ ನಿವಾರಣೆಯು ಹೇಗೆ ಸಾಧಿಸುತ್ತದೆ, ದೇಶದಲ್ಲಿ ಸುವ್ಯವಸ್ಥೆಯು ಹೇಗೆ ನೆಲೆಗೊಳ್ಳುತ್ತದೆ, ಎಂದು ಆಚಾರ್ಯರು ಮಾಡಿದ ಸ್ಪಷ್ಟೀಕರಣವು ಸರ್ವಮಾನ್ಯವಾಗುವದು.

ಮಹಾತ್ಮರ ಕಾರ್ಯಕ್ರಮದಿಂದಲೇ ನಮ್ಮ ಉದ್ಧಾರವಾಗಬೇಕು, ಎಂಬ ಮಾತನ್ನು ಜರ್ಮನಿಯೊಳಗಿನ ತಾಮಸೀ ಸತ್ಯಾಗ್ರಹವನ್ನು ಉದಾಹರಿಸಿ ಅವರು ಸಭಿಕರ ಮೇಲೆ ಬಿಂಬಿಸಿದರು. ಕ್ರೈಸ್ತರ ಮಹಾತ್ಮೆಯನ್ನು ನೆನಿಸಿ, ಸ್ವತಃ ನೀವು ನೂಲಿರಿ, ಪರರಿಗೆ ನೂಲಹಚ್ಚಿರಿ; ಎಂದು ಅವರು ಮಾಡಿದ ಉಪದೇಶದಿಂದ ಕರ್ನಾಟಕದೊಳಗಿನ ಸಂದಿಗೊಂದಿಗಳಲ್ಲಿ ಧೂಳು ತಿನ್ನುತ್ತ ಬಿದ್ದ ಕೈರಾಟಿಗಳ ಪುನರುದ್ಧಾರವಾಗಲೆಂದು ನಮ್ಮ ಬಯಕೆ. ದೇಶದೊಳಗಿನ ಪರಿಸ್ಥಿತಿಯು ವಿಧಾಯಕ ಕಾರ್ಯಕ್ರಮಪುರಸ್ಕಾರಕ್ಕೆ ಅಷ್ಟು ಉತ್ತೇಜನಪರವಿಲ್ಲೆಂದು ಯಾರೂ ಒಪ್ಪತಕ್ಕಂಥ ಮಾತು. ಆದರೂ, ಆತ್ಮೋದ್ಧಾರವನ್ನು ಸಾಧಿಸಲಿಚ್ಛಿಸುವವರು ಪ್ರಚಂಡ ಯೋಜನೆಗಳಿಂದ ತಲೆತಿರುಕರಾಗದೆ, ತೋರಿಕೆಗೆ ಅಲ್ಪವಿರುವ, ದೇಶಾರೋಗ್ಯಪ್ರದ ವಿಧಾಯಕ ಕಾರ್ಯಕ್ರಮದ ಮಹತ್ವವನ್ನು ನೆನಿಸಿ, ಕಾರ್ಯಕ್ಷಮರಾಗಬೇಕೆಂದು ಶ್ರೀ॥ ರಾಜಗೋಪಾಲಾಚಾರ್ಯರು ಮಾಡಿದ ವಿಜ್ಞಾಪನೆಯನ್ನು ನಾವು ಅಂತಃಕರಣಪೂರ್ವಕ ಪುಷ್ಟೀಕರಿಸುವೆವು. ಅಕಾಲಿಗಳು ಗಾಂಧಿ ಕಾರ್ಯಕ್ರಮದ ಸಾತ್ವಿಕತೆಯನ್ನೂ, ಪ್ರತಾಪವನ್ನೂ, ಕಾರ್ಯಕ್ಷಮತೆಯನ್ನೂ ಮನಗಂಡು, ಗುರುಕಾಬಾಗ ಪ್ರಕರಣವನ್ನು ಇಷ್ಟಫಲಪ್ರಾಪ್ತಿಯಾಗುವವರೆಗೆ ನಡಿಸಿದ ಹಕೀಕತು ದೇಶಬಾಂಧವರಿಗೆಲ್ಲ ಬೋಧಪ್ರದವಿತ್ತು. ಸದ್ಯದ ನಾಭಾ ಸಂಸ್ಥಾನದ ಚಳವಳಿಯಲ್ಲಿ ವಕೀಲರನ್ನು ನೇಮಿಸಿಕೊಂಡು, ಕೋರ್ಟ ವ್ಯವಹರಣೆಯನ್ನು ಸಾಮಾನ್ಯ ಮಂದಿಗಳಂತೆ ಇವರು ನಡಿಸುವದು ಅಸಹಯೋಗದ ಪರಾಗತಿಯೆಂದು ಆಚಾರ್ಯರು ಕರಾ ಹೊಡೆದದ್ದು ಯಥಾರ್ಥವೆಂದು ಯಾರು ಹೇಳರು!

ಪರಿಷತ್ತಿನಲ್ಲಿ ಪಾಸಾದ ಠರಾವುಗಳು ಸಹ ಅಧ್ಯಕ್ಷರ ಭಾಷಣಕ್ಕನುರೂಪವಾಗಿಯೇ ಇರುವವು. ಮಹಾತ್ಮರು ಪ್ರಚುರಗೊಳಿಸಿದ ಅಹಿಂಸಾತ್ಮಕ ಅಸಹಯೋಗದಿಂದಲೇ ಸ್ವರಾಜ್ಯ ಸಂಪಾದನೆಯಾಗುವದೆಂದು ಈ ಪರಿಷತ್ತು ನಿರ್ಣಯಿಸಿ, ರಾಷ್ಟ್ರೋದ್ಧಾರಕ್ಕಾಗಿ ವಿಧಾಯಕ ಕಾರ್ಯಕ್ರಮವನ್ನೇ ನಿಷ್ಠಾಪೂರ್ವಕ ನಡಿಸಬೇಕೆಂದು ಕರ್ನಾಟಕಸ್ಥರಿಗೆ ಅಜ್ಞಾಪಿಸಿತು. ಈ ಠರಾವು ಅತಿ ಮಹತ್ವದ್ದಿದೆ. ವಿಧಾಯಕ ಕಾರ್ಯಕ್ರಮವು, ಅಂದರೆ, ರಾಷ್ಟ್ರಸಂಘಟನೆಯು ನಮ್ಮ ಚಳವಳಿಯ ಮೂಲಾಧಾರವು. ಸ್ವರಾಜ್ಯದ ನೆಲಗಟ್ಟು ವಿಧಾಯಕ ಕಾರ್ಯಕ್ರಮವು. ವಿಧಾಯಕ ಕಾರ್ಯಕ್ರಮದಿಂದ ನಾವು ಚ್ಯುತರಾಗಿದ್ದದರಿಂದಲೇ, ದೇಶದಲ್ಲಿ ಕಲಹಗಳು, ದೊಂಬಿಗಳು ಎದ್ದೇಳುತ್ತವೆ. ವಿಧಾಯಕ ಕಾರ್ಯಕ್ರಮವನ್ನು ನಿಷ್ಠೆಯಿಂದ ಏಕಸವನೆ ನಡಿಸಿದ್ದರೆ, ಮಹಾತ್ಮರ ಬಾರ್ಡೋಲಿಯೊಳಗಿನ ಕಾರ್ಯಕ್ರಮದಂತೆ ದೇಶವು ತಯಾರಾಗಿದ್ದರೆ, ನಮ್ಮ ಉದ್ಧಾರವು ವಿಶೇಷ ಆಯಾಸವಿಲ್ಲದೆ, ಕಾಯಿದೇಭಂಗ ಮೊದಲಾದ ತೀಕ್ಷ್ಣ ಉಪಾಯಗಳ ಗರಜಿಲ್ಲದೆ ಶೀಘ್ರವೇ ಕೊನೆಗಾಣುತ್ತಿತ್ತು. ವಿಧಾಯಕ ಕಾರ್ಯಕ್ರಮವನ್ನು ಪ್ರಜೆಗಳು ದೊಡ್ಡ ದೊಡ್ಡ ಯೋಜನೆಗಳಿಗೆ ಮೋಹಿತರಾಗಿ ತ್ಯಜಿಸಿದ್ದರಿಂದಲೇ, ನಾವೀಗ ಸ್ವಲ್ಪ ಚೈತನ್ಯಹೀನರಾಗಿದ್ದೇವೆ. ವಿಧಾಯಕ ಕಾರ್ಯಕ್ರಮವನ್ನು ಮಹಾತ್ಮರ ಆಜ್ಞೆಗನುಸಾರವಾಗಿ ಸ್ಥಿರ ಚಿತ್ತದಿಂದ ನಡಿ

ಸಿರಿ, ಸಂಕ್ಷೇಪತಃ ಹೇಳಬೇಕಾದರೆ, ಸುಸಂಘಟಿತರಾಗಿರಿ, ಅಂದರೆ ಸ್ವರಾಜ್ಯಪ್ರಾಪ್ತಿಯು ನಿಮ್ಮದೇ; ದೇಶೋದ್ಧಾರಕರೂ ನೀವೇ. ಪ್ರಾಂತಿಕ ಪರಿಷತ್ತಿನ ದ್ವಿತೀಯ ಅಧಿವೇಶನದ ಸಂದೇಶವು ಇದೇ.

ಸ್ಫುಟ ಸೂಚನೆಗಳು.

೧. ಭಾರತೀಯ ರಾಜಕಾರಣದಲ್ಲಿ ಹೊಸ ವಾಯುಸಂಚಾರವಾಗಹತ್ತಿದೆ. ಮ್ಯುನಿಸಿಪಾಲಿಟಿ, ಲೋಕಲ್‌ಬೋರ್ಡು ಮೊದಲಾದ ಸ್ಥಾನಿಕ ಸ್ವರಾಜ್ಯಸಂಸ್ಥೆಗಳು, ಗವ್ಹರ್ನರ, ಗವ್ಹರ್ನರ ಜನರಲ್ ಮೊದಲಾದ ಪ್ರಾಂತಾಧಿಪರನ್ನು ಸತ್ಕರಿಸುವ ಪರಿಪಾಠವನ್ನು ತ್ಯಜಿಸಿ, ಮಹಾತ್ಮಾ ಗಾಂಧಿ, ಮೌ। ಮಹಮ್ಮದ ಅಲ್ಲೀಪ್ರಭೃತಿ ಲೋಕನಾಯಕರನ್ನು ಸತ್ಕರಿಸಹತ್ತಿವೆ. ಪುಣ್ಯಪಟ್ಟಣದ ಮ್ಯುನಿಸಿಪಾಲಿಟಿಯು ಸ್ವದೇಶಕ್ಕೆ ಮರಳುವ ನಾಮದಾರ ಗವ್ಹರ್ನರರಿಗೆ ಮಾನಪತ್ರವನ್ನು ಕೊಡಲೊಪ್ಪಲಿಲ್ಲ. ಆದರೆ, ಮೌ। ಮಹಮ್ಮದ ಅಲ್ಲೀಯವರಿಗೆ ಮಾನಪತ್ರವನ್ನರ್ಪಿಸುವ ಠರಾವು ಮಾಡಿ, ಕಳೆದ ಗುರುವಾರ ತಾ. ೨೨ ನೇಗೆ ಅದನ್ನು ಅರ್ಪಿಸಿತು. ಮಧ್ಯದಲ್ಲಿ ಪುಣ್ಯಪಟ್ಟಣದೊಳಗಿನ ಸರಕಾರಿ ವಕೀಲರು ಕಳೆದ ಸೋಮವಾರ ತಾ. ೧೯ ನೇಗೆ ಮಾನಪತ್ರಕ್ಕೆ ತಗಲುವ ಖರ್ಚನ್ನು ಮ್ಯುನಿಸಿಪಾಲಿಟಿಯ ಕೋಶದೊಳಗಿಂದ ಮಾಡಬಾರದೆಂದು ಹಂಗಾಮಿ ತಾಕೀದನ್ನು ಕೋರ್ಟಿನಿಂದ ಪಡೆದು, ಅಧ್ಯಕ್ಷರಾದ ಶ್ರೀ। ನರಸಿಂಹ ಕೇಳಕರರವರ ಮೇಲೆ ಅದೇ ದಿನವೇ ಜ್ಯಾರಿಮಾಡಿದರು. ಆದರೂ, ಮ್ಯುನಿಸಿಪಾಲಿಟಿಯವರು ಗುರುವಾರ ಸಾಯಂಕಾಲಕ್ಕೆ ರೇ ಮಾರ್ಕೇಟಿನ ಪಟಾಂಗಣದಲ್ಲಿ ನೆರೆದು, ಬೆಳ್ಳಿಯ ಕರಂಡಿಗೆಯಲ್ಲಿ ಮಾನಪತ್ರವನ್ನು ನಗರ ಮ್ಯುನಿಸಿಪಾಲಿಟಿಯ ಸ್ಥಾನಮಾನ ಅರ್ಪಿಸುವ ಸಮಾರಂಭವನ್ನು ವಿಜೃಂಭಣೆಯಿಂದ ಜರುಗಿಸಿದರು. ವಿಜಾಪುರದ ಮ್ಯುನಿಸಿಪಾಲಿಟಿಯವರು ತಾರೀಖು ೨೧ ನೇಗೆ ಮೌ। ಮಹಮ್ಮದ ಅಲ್ಲೀ, ಶೇಟ ಜಮನಾಲಾಲ ಬಜಾಜ, ಶ್ರೀ। ರಾಜಗೋಪಾಲಾಚಾರ್ಯರಿಗೆ ಮಾನಪತ್ರವನ್ನು ಅರ್ಪಿಸಿ, ಮುಂಬಯಿ ಸರಕಾರಕ್ಕೆ ಆಹ್ವಾನವನ್ನಿತ್ತಿರುವರು. ಅಲಹಾಬಾದದ ಮ್ಯುನಿಸಿಪಾಲಿಟಿಯವರೂ ಮಾನಪತ್ರಾರ್ಪಣೆಯ ಕಾದಾಟದಲ್ಲಿ ಪ್ರವೇಶ ಮಾಡಿರುವರು. ಪ್ರಾಂತಿಕ ಸರ್ಕ್ಯೂಲರಿನಂತೆ ಪ್ರಾಂತಾಧಿಪತಿ-ಸರ್ವಾಧಿಪತಿಗಳ ಹೊರತು, ಅನ್ಯರಿಗೆ ಮಾನಪತ್ರವನ್ನರ್ಪಿಸಲು ಏನೂ ಖರ್ಚು ಮಾಡಬಾರದೆಂದು ಸಕಲ ಸ್ಥಾನಿಕಸಂಸ್ಥೆಗಳಿಗೆ ವಿಧಿಸಲ್ಪಟ್ಟಿದೆ. ಕಳೆದ ತಾ. ೨೧ ನೇ ಬುಧವಾರಕ್ಕೆ ಅಲಹಾಬಾದ ಮ್ಯುನಿಸಿಪಾಲಿಟಿಯವರು ಸಭೆಸೇರಿ, ಮೌ। ಶೌಕತ ಅಲ್ಲೀಯವರಿಗೆ ಮಾನಪತ್ರವನ್ನೀಯಬೇಕೆಂದು ಠರಾಯಿಸಿ, ಆ ಬಗ್ಗೆ ರೂಪಾಯಿ ೫೦ನ್ನು ಮಂಜೂರು ಮಾಡಿರುವರು. ನೌಕರಶಾಹಿಗೆ ಇವೆ ಆಹ್ವಾನಗಳು ನಾಲ್ಕೂ ಬದಿಯಿಂದ, ಒಂದರ ಮೇಲೊಂದು ಬರಹತ್ತಿವೆ. ಅವನ್ನು ಅದು ಸ್ವೀಕರಿಸಿ, ವರ್ತಿಸುತ್ತದೆಂಬದನ್ನು ನೋಡಲು ಪ್ರಜೆಗಳು ಆತುರರಾಗಿರುವದು ಸ್ವಾಭಾವಿಕವು.

ಮುಂಬಯಿಯಲ್ಲಿ ಈಗೊಂದು ಪರಸ್ಪರ ಕಾರಿತೆಯ ಗಲಭೆ. ಇದೇ ಡಿಸೆಂಬರ ತಾ. ೩ ನೇ ಸೋಮವಾರಕ್ಕೆ 'ಎಸೋಸಿಯೇಟೆಡ್ ಚೇಂಬರ್ಸ ಆಫ್ ಕಾಮರ್ಸ' ಎಂಬ ಹೊಸ ವ್ಯಾಪಾರಿ ಸಂಸ್ಥೆಯ ಅನಾವರಣ ಸಮಾರಂಭವನ್ನು ನಮ್ಮ ನಾಮದಾರ ಗವ್ಹರ್ನರರಾದ ಸರ್ ಜೋರ್ಜ ಲೊಯ್ಡರವರು ನೆರವೇರಿಸುವರು. ಈ ಸಮಾರಂಭಕ್ಕೆ ಹಿಂದುಸ್ಥಾನ ಸರಕಾರದ ಕಾರ್ಯಕಾರಿ ಮಂಡಳದ ಮೂವ ಸಭಾಸದರೂ ಹಾಜರಿರುವರೆಂದು ಪ್ರಕಟವಾಗಿದೆ. ಈ ಸಂಸ್ಥೆಯ ಮುಖ್ಯ ಧ್ಯೇಯವು ವಿಲಾಯತಿಯ ವ್ಯಾಪಾರಿಗಳ ಹಿತಸಂಬಂಧಗಳನ್ನು ರಕ್ಷಿಸುವದು; ಈ ಸಮಾರಂಭವನ್ನು ಅನುಗ್ರಹಿಸಲು ಚಾಲಕರು ಮುಂಬಾಪುರಿಯೊಳಗಿನ ಗಿರಣಿ ಸಾವುಕಾರರನ್ನೂ ನಿಮಂತ್ರಿಸಿದ್ದರು. ಮುಂಬಾಪುರಿಯೊಳಗಿನ ಗಿರಣಿ ಸಾವುಕಾರರ ಈ ವರೆಗಿನ ವರ್ತನದ ಮೇಲಿಂದ ಸಾವುಕಾರರೂ ನಿಮಂತ್ರಣವನ್ನು ಸ್ವೀಕರಿಸುವರೆಂದು ಚಾಲಕರ ಅಂದಾಜಿತ್ತು. ಆದರೆ, ದುರ್ದೈವದಿಂದ, ಭರತಖಂಡದ ಸುದೈವದಿಂದ, ಸರ್ ಜೆಮ ಶೇಟಜೀ ಜಿಜಿಭಾಯಿ, ಸರ್ ದಿನಶಾ ವಾಚ್ಹಾ, ಮೊದಲಾದ ಈ ಸಹಕಾರಿಗಳಿಗೆ ಅಸಹಕಾರಿತೆಯ ಭೂತಬಾಧೆಯಾಗಿ, ತಾವು ಈ ಸಭೆಗೆ ಹಾಜರಿರಲಾರೆವೆಂದು ದಿಟ್ಟತನದಿಂದ ತಿಳಿಸಿರುವರು. ಈ ಸಭೆಯಲ್ಲಿ ಪ್ರಮುಖ್ಯವಾಗಿ ಹಿಂದುಸ್ಥಾನದೊಳಗಿನ ಉಕ್ಕಿನ ಉದ್ಯೋಗವನ್ನು ಉರ್ಜಿತಾವಸ್ಥೆಗೆ ತರಲು ಸಂರಕ್ಷಕ ಪದ್ಧತಿಯನ್ನು ಇಡಬೇಕೆಂದು ಹಿಂದುಸ್ಥಾನ ಸರಕಾರವು ನೇಮಿಸಿದ ಆರ್ಥಿಕ ಕಮಿಶನಿನ ಶಿಫಾರಸಿನ ನಿಷೇಧವಾಗುವದಿದೆ. ಟಾರೀಫ ಬೋರ್ಡ ಯಾನೆ ಜಕಾತ ಚೌಕಶಿ ಮಂಡಳವು ಯಾವ ಪ್ರಕಾರದ ಸಂರಕ್ಷಣವನ್ನು ಕೊಡಬೇಕೆಂದು ಸರಕಾರದ ತರ್ಫೆನಿಂದ ವಿಚಾರಿಸಹತ್ತಿದೆ. ಈ ಬೋರ್ಡಿನ ಮುಂದೆ ಈ ಸಭೆಯ ಚಾಲಕರು ತಮ್ಮ ಜಬಾನಿಗಳನ್ನು ಕೊಡದೆ, ಅಸಹಯೋಗವನ್ನಾಶ್ರಯಿಸಿದರು; ಮತ್ತು ಮುಂಬಯಿಯಲ್ಲಿ ಸರಕಾರಿ ಅಧಿಕಾರಿಗಳ ಆಶ್ರಯದಲ್ಲಿಯೇ ಸರಕಾರದ ಕಮಿಟಿಗಳ ಶಿಫಾರಸಿನ ನಿಷೇಧ ನಡಿಸಿರುವರು. ದೇಶೀ ಉಕ್ಕಿನ ಉದ್ಯೋಗವನ್ನು ಸಂರಕ್ಷಿಸುವದು ನಮ್ಮ ಧ್ಯೇಯ. ಸಾವುಕಾರರ ಸ್ವಾರ್ಥವು. ಪರದೇಶೀ ಉಕ್ಕನ್ನು, ವಿಶೇಷವಾಗಿ, ವಿಲಾಯತಿಯೊಳಗಿನ ಉಕ್ಕನ್ನು ಇಲ್ಲಿ ಅಗ್ಗ ಮಾಡುವದು, ವಿಲಾಯತಿಯ ವ್ಯಾಪಾರಿಗಳ ಸ್ವಾರ್ಥವು. ಈ ಸ್ವಾರ್ಥಸಾಧನಕ್ಕಾಗಿ ಯುರೋಪಿಯನ್ ವ್ಯಾಪಾರಿಗಳು ಟಾರಿಫ ಬೋರ್ಡಿನಗೂಡ, ದೇಶೀ ಸಾವುಕಾರರು ಯುರೋಪಿಯನ್ ವ್ಯಾಪಾರಿಗಳಗೂಡ ಅಸಹಕಾರಿತೆಯ ಶಸ್ತ್ರವನ್ನೆಸೆದಿರುವರು. ಯುರೋಪಿಯನ್ ವ್ಯಾಪಾರಿಗಳಿಗೆ ಹಿಂದುಸ್ಥಾನ ಸರಕಾರವೂ, ನಮ್ಮ ಪ್ರಾಂತಾಧಿಪರೂ ಕೂಡಿಕೊಂಡು, ತಮ್ಮ ಸರಕಾರಿ ನಿರ್ಣಯಗಳಿಗೆ ವಿರೋಧವಾಗಿ ಚಳವಳಿ ನಡಿಸುವ ನೋಟವು ಬೋಧಪ್ರದವಿದೆ. ಭಾರತೀಯ ನೌಕರಶಾಹಿಯ ಅಂತರಂಗವು ಇದರಿಂದ ಸ್ಫುಟಗೊಳ್ಳುತ್ತದೆ. ಹಂಟರ ಕಮಿಟಿಯ ಗೂಡ ರಾಷ್ಟ್ರೀಯ ಸಭೆಯವರು ಸಾಕ್ಷಿ ಕೊಡದ ಮೂಲಕ, ದೇಶನಿಷ್ಠರೆಂಬ ಅಚ್ಚು ಹೊಡೆದ ಸನದಶೀರ ಚಳವಳಿಯ ಉಪಾಸಕರು ಯುರೋಪಿಯನ್ ವ್ಯಾಪಾರಿಗಳ ಅಸಹಕಾರಿತೆಯನ್ನೂ ಈ ಅಸಹಯೋಗಿಗಳಿಗೆ ಪ್ರಾಪ್ತವಾದ ಸರಕಾರಿ ಆಶ್ರಯವನ್ನೂ ನೆನಿಸಲಿ, ಮತ್ತು ಜಾಗರಾಗಲಿ. ನಮ್ಮ ಗಿರಣಿ ಸಾವುಕಾರರಾದರೂ ನಮ್ಮ ನೌಕರಶಾಹಿಯ ಅಂತರಂಗವನ್ನರಿತುಕೊಂಡು, ಇನ್ನಾದರೂ ಸಹಕಾರಿತೆಯ ಮರುಳನ್ನು ತ್ಯಜಿಸಿ, ರಾಷ್ಟ್ರೀಯ ಸಭೆಯನ್ನು ಸೇರಿಕೊಳ್ಳಲಿ.

ನಮ್ಮ ಮುಂಬಯಿಯ ವಿಶ್ವವಿದ್ಯಾಲಯದ ಮತದಾರ ಸಂಘದ ಚುನಾವಣೆಯು ತೀರ್ಪು ಕಳೆದ ತಾ. ೨೦ ನೇ ಮಂಗಳವಾರಕ್ಕೆ ಮುಂಬಯಿಯಲ್ಲಾಯಿತು. ಶ್ರೀ। ಮುಕುಂದರಾವ ಜಯಕರರವರಿಗೆ ೧೫೩೧ ಮತಗಳು; ದಿವಾಣರಾದ ಡಾ॥ ರಘುನಾಥರಾವ ಪರಾಂಜಪೇಯವರಿಗೆ ೧೧೮೩; ಹೀಗೆ ಮತಗಳು ಬಿದ್ದು, ಶ್ರೀ। ಮುಕುಂದರಾಯರು ಯಶಸ್ವಿಯಾದರೆಂದು ತಿಳಿಸಲು ತುಂಬಾ ಸಂತೋಷವೆನಿಸುತ್ತದೆ. ಈ ಚುನಾವಣೆಗೆ ವಿಶೇಷ ಮಹತ್ವವಿದೆ. ಯಾಕಂದರೆ, ಮತದಾರರು ಸುಶಿಕ್ಷಿತರು. ಉಮೇದವಾರರೂ ಪ್ರಾಂತದೊಳಗಿನ ಪ್ರಮುಖ ಪುರುಷರೇ. ಡಾ। ಪರಾಂಜಪೇಯವರನ್ನು ಸ್ವತಃ ಸ್ಪಷ್ಟವಾಗಿ ನಮ್ಮ ಪ್ರಾಂತದೊಳಗಿನ ಸುಶಿಕ್ಷಿತರು ಪರಾಂಜಪೇಯವರ ಕಾರಕೀರ್ದಿಯು ತಮಗೆ ಸಮ್ಮತವಿಲ್ಲೆಂದು ಪ್ರದರ್ಶಿಸಿದ್ದಲ್ಲದೆ, ಮುಂದೆ ಸಹ ಅವರಿಂದ ವಿಶೇಷ ಕಾರ್ಯಸಿದ್ಧಿಯಾಗುವ ಲಕ್ಷಣವಿಲ್ಲೆಂದು ಸ್ಪಷ್ಟವಾಗಿ ನಿರ್ದೇಶಿಸಿರುವರು. ಪರಾಂಜಪೇಯವರ ಪಕ್ಷದವರು ಮುಕುಂದರಾಯರ ಚಳವಳಿಗೆ ಹೆಸರಿಟ್ಟು, ಪರಾಂಜಪೇಯವರನ್ನು ಬಚಾವು ಮಾಡಲು ಸಹ ಆಸ್ಪದವಿಲ್ಲ. ಯಾಕಂದರೆ, ಮತಕೊಟ್ಟವರೆಲ್ಲರೂ ಸುಶಿಕ್ಷಿತ, ಅನುಭವಿಕ ಗೃಹಸ್ಥರೇ. ಇದಲ್ಲದೇ ನಿಯಮದಂತೆ, ಪದವೀಧರರಾಗಿ, 2 ವರುಷಗಳಾದ ಹೊರತು, ಮತದಾನದ ಅಧಿಕಾರವು ಅವರಿಗೆ ಪ್ರಾಪ್ತವಾಗುವದಿಲ್ಲ. ಮತ್ತೊಂದು ಸಂಗತಿಯೂ ಸ್ಫುಟವಾಗಿದೆ. ದಿವಾಣ ಪರಾಂಜಪೇಯವರು ಸಹಕಾರಿತೆಯ ಭಕ್ತರಿದ್ದು, ಸಹಕಾರಿತೆಯೇ ನಮ್ಮ ದೇಶೋದ್ಧಾರದ ರಾಜಮಾರ್ಗವೆಂದು ತಿಳಿಯುವ ನೇಮಸ್ತಾಗ್ರಣಿಗಳು. ಇಂಥವರನ್ನು ಕಿತ್ತೊಗೆದು, ಸುಶಿಕ್ಷಿತ ಸಮಾಜವು ಸಹಕಾರಿ ಕಾರಭಾರವು ದೇಶಕ್ಕೆ ಇಷ್ಟವಿಲ್ಲೆಂದು ಜಾಹೀರುಪಡಿಸಿವೆ. ಶ್ರೀ। ಮುಕುಂದರಾಯರು ರಾಷ್ಟ್ರೀಯ ಸಭಾಭಿಮಾನಿಗಳಿದ್ದು, ರಾಷ್ಟ್ರೀಯ ಸಭೆಯು ನೇಮಿಸಿದ ಸಂಘಾಪಿ ಅತ್ಯಾಚಾರಗಳ ಚೌಕಶಿ ಕಮೀಟಿಯಲ್ಲಿ ಧೈರ್ಯದಿಂದ ಕೆಲಸ ಮಾಡಿದವರಿರುವರು. ಇಂಥವರ ಧೋರಣವು ಸುಶಿಕ್ಷಿತ ಸಮಾಜಕ್ಕೆ ಗ್ರಾಹ್ಯವಿರುವದೆಂದು ವಿಶ್ವವಿದ್ಯಾಲಯದ ಪದವೀಧರರು ಬಹುಮತದಿಂದ ನಿರ್ಣಯಿಸಿರುವರು. ದೇಶದೊಳಗಿನ ರಾಜಕಾರಣದ ವಾಯುಸಂಚಾರವು ಯಾವ ದಿಕ್ಕಿನಿಂದ ಹರಿಯುತ್ತದೆಂಬುದು ಜಯಕರ-ಪರಾಂಜಪೇಯವರ ಇಲೆಕ್ಶನಿನ ನಿರ್ಣಯದಿಂದ ಸ್ಪಷ್ಟವಾಗಿದೆ. ನೇಮಸ್ತರು ಇನ್ನಾದರೂ ತಮ್ಮ ಧೋರಣವನ್ನು ತಿದ್ದುಕೊಳ್ಳಲಿ

---

೪. ಹಿಂದೂ-ಮುಹಮ್ಮದೀಯರ ಕಲಹಸುದ್ದಿಗಳಿಂದ ಮನೋವ್ಯಥೆಯಾಗಿರುವಾಗ, ಉಡುಪಿಯಲ್ಲಿ ಸಂಭವಿಸಿದ ಒಂದು ಬೋಧಪ್ರದ ಹಕೀಕತನ್ನು ನಮೂದಿಸಲು ಆನಂದವಾಗುತ್ತದೆ. ಸನ್ನಿಕ್ಕೆ ೩೦ ವರುಷ ಪ್ರಾಯದ ಎಳೆ ಯುವಕರೊಬ್ಬರು ಶ್ರೀವೆಂಕಟರಮಣ ದೇವಸ್ಥಾನದ ಕೆರೆಯೊಳಗೆ ಈಜುತ್ತಿರುವಾಗ, ಕೆರೆ ಮಧ್ಯ ಹೋಗುವಷ್ಟರಲ್ಲಿ, ಕೈಕಾಲು ಸೋತು ಮುಳುಗಿ ನಿಧನಹೊಂದಿದರು. ಮೃತರು ದೇಹದಾಶೆಗಾಗಿ ತಳಮಳಿಸುತ್ತಿರುವಾಗ, ಕೆರೆಯ

ಕಾನಡಾವೃತ್ತ.

ಆದ್ಯ ಮಿತಿ ಕಾರ್ತಿಕ ಕೃಷ್ಣ ಷಷ್ಠಿ ಗುರುವಾರ

ಸುಸಂಘಟಿತರಾಗಿರಿ.

ಪ್ರಾಂತಿಕ ಪರಿಷತ್ತಿನ ಸಂದೇಶ.

ಕರ್ನಾಟಕ ಪ್ರಾಂತಿಕ ಪರಿಷತ್ತಿನ [illegible]ಯ ಅಧಿವೇಶನವು ಬಹಳ ವಿಜೃಂಭಣೆಯಿಂದ ನೆರವೇರಿತು. ಕಳೆದ ಸೋಮವಾರ ಮಂಗಳವಾರ ತಾರೀಖು [illegible] ನೇ ದಿವಸ ಪ್ರಾಂತಿಕ ಪರಿಷತ್ತಿನ [illegible] ಇನ್ನೊಂದೆಡೆಯಲ್ಲಿ ಪ್ರಕಟಿಸಿರುವೆವು. ಅಧ್ಯಕ್ಷರಾದ ಶ್ರೀ| ರಾಜಗೋಪಾಲಾಚಾರ್ಯ, ಸ್ವಾಗತಾಧ್ಯಕ್ಷರಾದ ಶ್ರೀ| ಶ್ರೀನಿವಾಸರಾವ ಕೌಜಲಗಿ ಇವರ ಭಾಷಣಗಳ ಮುಖ್ಯಾಂಶಗಳನ್ನು, ಮಹತ್ವದ ಠರಾವುಗಳನ್ನು ವಿಮರ್ಶಿಸಿದರೆ ಪರಿಷತ್ತಿನಿಂದ ಕರ್ನಾಟಕಸ್ಥರಿಗೆ ಸ್ಪಷ್ಟವಾದ ಮಾರ್ಗದರ್ಶಕತ್ವವು ಸ್ಪಷ್ಟವಾಗಿ ಕಾಣುವದು.

ಸ್ವಾಗತಾಧ್ಯಕ್ಷರಾದ ಶ್ರೀನಿವಾಸರಾಯರು ಹಿಂದುಸ್ಥಾನದ ಕೆಲ ಪ್ರಾಂತಗಳನ್ನು ಸಂಚರಿಸಿರುವರು. ಸ್ವರಾಜ್ಯ ಪಕ್ಷದವರ [illegible] ಭಾಷಣ ಮಾಡಿ ಕೌನ್ಸಿಲು ಪ್ರವೇಶದ ಒಳಕ ಮುಂದೆ ತಾವೇನು ಮಾಡುವೆವು, ಎಂಬ ಸಂಗತಿಯನ್ನು ವಿಶದೀಕರಿಸಿ ಸ್ವರಾಜ್ಯ ಪಕ್ಷದ ಧ್ಯೇಯವನ್ನು ಪ್ರತಿಪಾದಿಸಿರುವರು. ಅಂದ ಮೇಲೆ, ಇನ್ನಾದರೂ ಕೌನ್ಸಿಲು ಪ್ರವೇಶವನ್ನು ಅವರು ಯಾಕೆ ತ್ಯಜಿಸಬಾರದು? ಎಂದು ಅವರ ಸವಾಲು. ಹಿಂದೂ-ಮಹಮ್ಮದೀಯರ ಐಕ್ಯರಕ್ಷಣೆಯ ಬಗ್ಗೆ ಅವರು ಮಾಡಿದ ಸೂಚನೆಗಳು ಪ್ರಶಂಸನೀಯವಿವೆ. ಬ್ರಾಹ್ಮಣ-ಬ್ರಾಹ್ಮಣೇತರರ ಕಲಹನಿವಾರಣೆಯನ್ನುದ್ದೇಶಿಸಿ, ಬ್ರಾಹ್ಮಣದ್ವೇಷಪ್ರೇರಿತರಾಗಿ, ಕಾಲ್ಪನಿಕ ಬ್ರಾಹ್ಮಣರ ಪೀಡನೆಯಿಂದ ಪಾರಾಗಹೋಗಿ, ಧೂರ್ತ ನೌಕರಶಾಹಿಯ ಸೂತ್ರ ಗೊಂಬೆಯಾಗಬೇಡಿರೆಂದು ಬೋಧಿಸಿದ್ದು ಸರ್ವಥಾ ಪ್ರಾಸಂಗಿಕವೆಂದು ಯಾರೂ ಒಪ್ಪುವರು. ಬ್ರಾಹ್ಮಣೇತರರಲ್ಲಿಯೂ ಈಗ ಸ್ವಲ್ಪ ಜಾಗೃತಿಯಾಗಹತ್ತಿದೆ. ಇಲ್ಲದಿದ್ದರೆ, ಕಳೆದ ಕೌನ್ಸಿಲು ಚುನಾವಣೆಯಲ್ಲಿ ಬ್ರಾಹ್ಮಣೇತರರಿಲ್ಲದಾಗ ಸ್ವರಾಜ್ಯ ಪಕ್ಷದವರಿಗೇ ಮತ ಕೊಡಿರೆಂದು ಬ್ರಾಹ್ಮಣೇತರ ಪತ್ರಿಕಾಕರ್ತರು ಬೋಧಿಸುತ್ತಿದ್ದಿಲ್ಲ. ರಾಷ್ಟ್ರೀಯ ಸಭೆಯು ದೇಶಕಲ್ಯಾಣಕ್ಕಾಗಿ ದುಡಿಯುತ್ತದೆಂದು ಬ್ರಾಹ್ಮಣೇತರರಿಗೂ ಹೊಳೆಯಹತ್ತಿದೆ. ಇದು ಶುಭ ಸೂಚಕವು. ರಾಷ್ಟ್ರೀಯ ಸಭೆಯ ಪರೋಪಕಾರ ಬುದ್ಧಿಯು ದೇಶಹಿತಬುದ್ಧಿಯು ಪ್ರಚುರಗೊಂಡ ಹಾಗೆ, ಬ್ರಾಹ್ಮಣೇತರ ಬಾಂಧವರೂ ರಾಷ್ಟ್ರೀಯ ಸಭೆಯಲ್ಲಿ ಸೇರಿಕೊಂಡು, ಬ್ರಾಹ್ಮಣ-ಬ್ರಾಹ್ಮಣೇತರರೊಳಗಿನ ವೈಷಮ್ಯ ಪರಿಹಾರ ಮಾಡಿ, ರಾಷ್ಟ್ರವನ್ನುದ್ಧರಿಸುವರೆಂಬುದರಲ್ಲಿ ಸಂದೇಹವಿಲ್ಲ.

ಅಧ್ಯಕ್ಷರಾದ ಶ್ರೀ| ರಾಜಗೋಪಾಲಾಚಾರ್ಯರ ಭಾಷಣವು ಗಾಂಧೀ ಕಾರ್ಯಕ್ರಮ ಮಂಡನಪರವಿತ್ತು. ಆಚಾರ್ಯರು ಮಹಾತ್ಮರ ಪಟ್ಟಶಿಷ್ಯರಿದ್ದು, ಗಾಂಧಿ ಕಾರ್ಯಕ್ರಮವನ್ನು ಸ್ಫುಟ ಮಾಡಲು ಇವರಷ್ಟು ಯೋಗ್ಯ ಪುರುಷರು ಇನ್ನ್ಯಾರಿಲ್ಲೆಂದು ಹೇಳಿದರೂ ಸಲ್ಲಬಹುದು. ಆಚಾರ್ಯರು ಮಹಾತ್ಮರ ಕಾರ್ಯಕ್ರಮದ ರಹಸ್ಯವನ್ನೂ, ಸ್ವರಾಜ್ಯ ಪಕ್ಷದವರ ಚಟುವಟಿಕೆಯ ಮರ್ಮವನ್ನೂ ಬಹಳ ಮನೋಹರವಾಗಿ ಚರ್ಚಿಸಿರುವರು. ಆತ್ಮಕ್ಲೇಶವನ್ನು ಕಡಿಮೆ ಮಾಡಿ, ಪ್ರತಿಪಕ್ಷವನ್ನು ಗೊಂದಲದಲ್ಲಿ ಹಾಕಿ, ಸ್ವಕಾರ್ಯ ಸಾಧಿಸುವ ಯಾಂತ್ರಿಕ ಆಟವನ್ನು ಅವರು ರಾಜಕಾರಣ ಕ್ಷೇತ್ರದಲ್ಲಿ ಆಡುತ್ತಿರುವರೆಂದು ಆಚಾರ್ಯರು ನುಡಿದರು. ಸ್ವರಾಜ್ಯ ಪಕ್ಷದ ದೇಶಸೇವೆಯು ದ್ವೇಷಕ್ಷೇತ್ರದಲ್ಲಿ ಬೀಜಾರೋಪಣವಾಗದಂತೆಯೂ, ಶಕ್ಯವಿದ್ದ ಹಿಂಸೆ ಮಾಡಲು ಸಹ ಅವರು ತಯಾರಿರುವರೆಂತಲೂ, ಆಚಾರ್ಯರು ಸಭಿಕರಿಗೆ ನಿವೇದಿಸಿದರು. ಗಾಂಧಿ ಕಾರ್ಯಕ್ರಮದ ಮರ್ಮವು ತೀರ ಭಿನ್ನವಿದೆ. ಪರಪೀಡನೆಯು ಗಾಂಧಿ ಕಾರ್ಯಕ್ರಮಕ್ಕೆ ತೀರ ಅಪಥ್ಯವು, ಹಿಂಸೆಯಂತೂ, ನೆರಳು ಸಹ ತ್ಯಾಜ್ಯವೇ. ಪ್ರೇಮ, ಅಹಿಂಸೆ, ಪರಮಾವಧಿಯ ಆತ್ಮಕ್ಲೇಶ ಇವೇ ಮಹಾತ್ಮರ ಅಸಹಯೋಗದ ಮೂಲ ತತ್ವಗಳು. ಅಹಿಂಸೆಯಿಂದ ಹಿಂದೂ-ಮಹಮ್ಮದೀಯರ, [illegible], ಅಖಿಲ ಸಮಾಜಗಳೊಳಗಿನ, ಐಕ್ಯರಕ್ಷಣೆ ಹೇಗಾಗುತ್ತದೆ, ಸರಕಾರಿ ಹಿಂಸೆಯ ನಿವಾರಣೆಯು ಹೇಗೆ ಸಾಧಿಸುತ್ತದೆ, ದೇಶದಲ್ಲಿ ಸುವ್ಯವಸ್ಥೆಯು ಹೇಗೆ ನೆಲೆಗೊಳ್ಳುತ್ತದೆ, ಎಂದು ಆಚಾರ್ಯರು ಮಾಡಿದ ಸ್ಪಷ್ಟೀಕರಣವು ಸರ್ವಮಾನ್ಯವಾಗುವದು.

ಮಹಾತ್ಮರ ಕಾರ್ಯಕ್ರಮದಿಂದಲೇ ನಮ್ಮ ಉದ್ಧಾರವಾಗಬೇಕು, ಎಂಬ ಮಾತನ್ನು ಜರ್ಮನಿಯೊಳಗಿನ ತಾಮಸೀ ಸತ್ಯಾಗ್ರಹವನ್ನು ಉದಾಹರಿಸಿ ಅವರು ಸಭಿಕರ ಮೇಲೆ ಬಿಂಬಿಸಿದರು. ಕೈರಾಟಿಯ ಮಹಾತ್ಮೆಯನ್ನು ನೆನಿಸಿ, ಸ್ವತಃ ನೀವು ನೂಲಿರಿ; ಪರರಿಗೆ ನೂಲಹಚ್ಚಿರಿ; ಎಂದು ಅವರು ಮಾಡಿದ ಉಪದೇಶದಿಂದ ಕರ್ನಾಟಕದೊಳಗಿನ ಸಂದಿಗೊಂದಿಗಳಲ್ಲಿ ಧೂಳು ತಿನ್ನುತ್ತ ಬಿದ್ದ ಕೈರಾಟಿಗಳ ಪುನರುದ್ಧಾರವಾಗಲೆಂದು ನಮ್ಮ ಬಯಕೆ. ದೇಶದೊಳಗಿನ ಪರಿಸ್ಥಿತಿಯು ವಿಧಾಯಕ ಕಾರ್ಯಕ್ರಮಪುರಸ್ಕಾರಕ್ಕೆ ಅಷ್ಟು ಉತ್ತೇಜನಪರವಿಲ್ಲೆಂದು ಯಾರೂ ಒಪ್ಪತಕ್ಕಂಥ ಮಾತು. ಆದರೂ, ಅಸ್ಪೃಶ್ಯೋದ್ಧಾರವನ್ನು ಸಾಧಿಸಲಿಚ್ಛಿಸುವವರು ಪ್ರಚಂಡ ಯೋಜನೆಗಳಿಂದ ತಲೆತಿರುಕರಾಗದೆ, ಕೋರಿಕೆಗೆ ಅಲ್ಪವಿರುವ, ದೇಶಾರೋಗ್ಯಪ್ರದ ವಿಧಾಯಕ ಕಾರ್ಯಕ್ರಮದ ಮಹತ್ವವನ್ನು ನೆನಿಸಿ, ಕಾರ್ಯಕ್ಷಮರಾಗಬೇಕೆಂದು ಶ್ರೀ| ರಾಜಗೋಪಾಲಾಚಾರ್ಯರು ಮಾಡಿದ ವಿಜ್ಞಾಪನೆಯನ್ನು ನಾವು ಅಂತಃಕರಣಪೂರ್ವಕ ಸ್ವೀಕರಿಸುವೆವು. ಅಕಾಲಿಗಳು ಗಾಂಧಿ ಕಾರ್ಯಕ್ರಮದ ಸಾತ್ವಿಕತೆಯನ್ನೂ, ಪ್ರಭಾವವನ್ನೂ, ಕಾರ್ಯಕ್ಷಮತೆಯನ್ನೂ ಮನಗಂಡು, ಗುರುಕಾಬಾಗ ಪ್ರಕರಣವನ್ನು ಇಷ್ಟಫಲಪ್ರಾಪ್ತಿಯಾಗುವವರೆಗೆ ನಡಿಸಿದ ಹಕೀಕತು ದೇಶಬಾಂಧವರಿಗೆಲ್ಲ ಬೋಧಪ್ರದವಿತ್ತು. ಸದ್ಯದ ನಾಭಾ ಸಂಸ್ಥಾನದ ಚಳವಳಿಯಲ್ಲಿ ವಕೀಲರನ್ನು ನೇಮಿಸಿಕೊಂಡು, ಕೋರ್ಟ ವ್ಯವಹರಣೆಯನ್ನು ಸಾಮಾನ್ಯ ಮಂದಿಗಳಂತೆ ಇವರು ನಡಿಸುವದು ಅಸಹಯೋಗದ ಪರಾಗತಿಯೆಂದು ಆಚಾರ್ಯರು ಕರಾ ಹೊಡೆದದ್ದು ಯಥಾರ್ಥವೆಂದು ಯಾರು ಹೇಳರು!

ಪರಿಷತ್ತಿನಲ್ಲಿ ಪಾಸಾದ ಠರಾವುಗಳು ಸಹ ಅಧ್ಯಕ್ಷರ ಭಾಷಣಕ್ಕನುರೂಪವಾಗಿಯೇ ಇರುವವು. ಮಹಾತ್ಮರು ಪ್ರಚುರಗೊಳಿಸಿದ ಅಹಿಂಸಾತ್ಮಕ ಅಸಹಯೋಗದಿಂದಲೇ ಸ್ವರಾಜ್ಯ ಸಂಪಾದನೆಯಾಗುವದೆಂದು ಈ ಪರಿಷತ್ತು ನಿರ್ಣಯಿಸಿ, ರಾಷ್ಟ್ರೋದ್ಧಾರಕ್ಕಾಗಿ ವಿಧಾಯಕ ಕಾರ್ಯಕ್ರಮವನ್ನೇ ನಿಷ್ಠಾಪೂರ್ವಕ ನಡಿಸಬೇಕೆಂದು ಕರ್ನಾಟಕಸ್ಥರಿಗೆ ಅಜ್ಞಾಪಿಸಿತು. ಈ ಠರಾವು ಅತಿ ಮಹತ್ವದ್ದಿದೆ. ವಿಧಾಯಕ ಕಾರ್ಯಕ್ರಮವು, ಅಂದರೆ, ರಾಷ್ಟ್ರಸಂಘಟನೆಯು ನಮ್ಮ ಚಳವಳಿಯ ಮೂಲಾಧಾರವು. ಸ್ವರಾಜ್ಯದ ನೆಲಗಟ್ಟು ವಿಧಾಯಕ ಕಾರ್ಯಕ್ರಮವು. ವಿಧಾಯಕ ಕಾರ್ಯಕ್ರಮದಿಂದ ನಾವು ಚ್ಯುತರಾಗಿದ್ದದರಿಂದಲೇ, ದೇಶದಲ್ಲಿ ಕಲಹಗಳು, ದೊಂಬಿಗಳು ಎದ್ದೇಳುತ್ತವೆ. ವಿಧಾಯಕ ಕಾರ್ಯಕ್ರಮವನ್ನು ನಿಷ್ಠೆಯಿಂದ ಏಕಸವನೆ ನಡಿಸಿದ್ದರೆ, ಮಹಾತ್ಮರ ಬಾರ್ಡೋಲಿಯೊಳಗಿನ ಕಾರ್ಯಕ್ರಮದಂತೆ ದೇಶವು ತಯಾರಾಗಿದ್ದರೆ, ನಮ್ಮ ಉದ್ಧಾರವು ವಿಶೇಷ ಆಯಾಸವಿಲ್ಲದೆ, ಕಾಯಿದೇಭಂಗ ಮೊದಲಾದ ತೀಕ್ಷ್ಣ ಉಪಾಯಗಳ ಗರಜಿಲ್ಲದೆ ಶೀಘ್ರವೇ ಕೊನೆಗಾಣುತ್ತಿತ್ತು. ವಿಧಾಯಕ ಕಾರ್ಯಕ್ರಮವನ್ನು ಪ್ರಜೆಗಳು ದೊಡ್ಡ ದೊಡ್ಡ ಯೋಜನೆಗಳಿಗೆ ಮೋಹಿತರಾಗಿ ತ್ಯಜಿಸಿದ್ದರಿಂದಲೇ, ನಾವೀಗ ಸ್ವಲ್ಪ ಚೈತನ್ಯಹೀನರಾಗಿದ್ದೇವೆ. ವಿಧಾಯಕ ಕಾರ್ಯಕ್ರಮವನ್ನು ಮಹಾತ್ಮರ ಆಜ್ಞೆಗನುಸಾರವಾಗಿ ಸ್ಥಿರ ಚಿತ್ತದಿಂದ ನಡಿ

ಸಿರಿ, ಸಂಕ್ಷೇಪತಃ ಹೇಳಬೇಕಾದರೆ, ಸುಸಂಘಟಿತರಾಗಿರಿ, ಅಂದರೆ ಸ್ವರಾಜ್ಯಪ್ರಾಪ್ತಿಯು ನಿಮ್ಮದೇ; ದೇಶೋದ್ಧಾರಕರೂ ನೀವೇ. ಪ್ರಾಂತಿಕ ಪರಿಷತ್ತಿನ ದ್ವಿತೀಯ ಅಧಿವೇಶನದ ಸಂದೇಶವು ಇದೇ.

ಸ್ಫುಟ ಸೂಚನೆಗಳು.

೧. ಭಾರತೀಯ ರಾಜಕಾರಣದಲ್ಲಿ ಹೊಸ ವಾಯುಸಂಚಾರವಾಗಹತ್ತಿದೆ. ಮ್ಯುನಿಸಿಪಾಲಿಟಿ, ಲೋಕಲ್‌ಬೋರ್ಡು ಮೊದಲಾದ ಸ್ಥಾನಿಕ ಸ್ವರಾಜ್ಯಸಂಸ್ಥೆಗಳು, ಗವ್ಹರ್ನರ, ಗವ್ಹರ್ನರ ಜನರಲ್ ಮೊದಲಾದ ಪ್ರಾಂತಾಧಿಪರನ್ನು ಸತ್ಕರಿಸುವ ಪರಿಪಾಠವನ್ನು ತ್ಯಜಿಸಿ, ಮಹಾತ್ಮಾ ಗಾಂಧಿ, ಮೌ॥ ಮಹಮ್ಮದ ಅಲ್ಲೀಪ್ರಭೃತಿ ಲೋಕನಾಯಕರನ್ನು ಸತ್ಕರಿಸಹತ್ತಿವೆ. ಪುಣ್ಯಪಟ್ಟಣದ ಮ್ಯುನಿಸಿಪಾಲಿಟಿಯು ಸ್ವದೇಶಕ್ಕೆ ಮರಳುವ ಸಾಮುದಾರ ಗವ್ಹರ್ನರರಿಗೆ ಮಾನಪತ್ರವನ್ನು ಕೊಡಲೊಪ್ಪಲಿಲ್ಲ. ಆದರೆ, ಮೌ॥ ಮಹಮ್ಮದ ಅಲ್ಲೀಯವರಿಗೆ ಮಾನಪತ್ರವನ್ನರ್ಪಿಸುವ ಠರಾವು ಮಾಡಿ, ಕಳೆದ ಗುರುವಾರ ತಾ. ೧೮ನೇಗೆ ಅವನ್ನು ಅರ್ಪಿಸಿತು. ಮುಫ್ಫಸಲ್ಲಿ ಪುಣ್ಯಪಟ್ಟಣದೊಳಗಿನ ಸರಕಾರಿ ವಕೀಲರು ಕಳೆದ ಸೋಮವಾರ ತಾ. ೧೫ನೇಗೆ ಮಾನಪತ್ರಕ್ಕೆ ತಗಲುವ ಖರ್ಚನ್ನು ಮ್ಯುನಿಸಿಪಾಲಿಟಿಯ ಕೋಶದೊಳಗಿಂದ ಖರ್ಚು ಮಾಡಬಾರದೆಂದು ಪಂಗಾಮಿ ತಾಕೀದನ್ನು ಕೋರ್ಟಿನಿಂದ ಪಡೆದು, ಅಧ್ಯಕ್ಷರಾದ ಶ್ರೀ॥ ನರಸೋಪಂತ ಕೇಳಕರರವರ ಮೇಲೆ ಅದೇ ದಿನವೇ ಜ್ಯಾರಿ ಮಾಡಿದರು. ಆದರೂ, ಮ್ಯುನಿಸಿಪಾಲಿಟಿಯವರು ಗುರುವಾರ ಸಾಯಂಕಾಲಕ್ಕೆ ರೇ ಮಾರ್ಕೆಟಿ ಪಟಾಂಗಣದಲ್ಲಿ ನೆರೆದು, ಬೆಳ್ಳಿಯ ಕರಡಿಗೆಯಲ್ಲಿ ಮಾನಪತ್ರವನ್ನು ನಗರ ಮ್ಯುನಿಸಿಪಾಲಿಟಿಯು ಸನ್ಮಾನ ಅರ್ಪಿಸುವ ಸಮಾರಂಭವನ್ನು ವಿಜೃಂಭಣೆಯಿಂದ ಜರುಗಿಸಿದರು. ವಿಜಾಪುರದ ಮ್ಯುನಿಸಿಪಾಲಿಟಿಯವರು ತಾರೀಖು ೨೦ನೇಗೆ ಮೌ॥ ಮಹಮ್ಮದ ಅಲ್ಲೀ, ಶೇಟ ಜಮನಾಲಾಲ ಬಜಾಜ, ಶ್ರೀ॥ ರಾಜಗೋಪಾಲಾಚಾರ್ಯರಿಗೆ ಮಾನಪತ್ರವನ್ನು ಅರ್ಪಿಸಿ, ಮುಂಬಯಿ ಸರಕಾರಕ್ಕೆ ಆಹ್ವಾನವನ್ನಿತ್ತಿರುವರು. ಅಲಹಾಬಾದದ ಮ್ಯುನಿಸಿಪಾಲಿಟಿಯವರೂ ಮಾನಪತ್ರಾರ್ಪಣೆಯ ಕಾದಾಟದಲ್ಲಿ ಪ್ರವೇಶಮಾಡಿರುವರು. ಪ್ರಾಂತಿಕ ಸರಕಾರಗಳಂತೆ ಪ್ರಾಂತಾಧಿಪತಿ–ಸರ್ವಾಧಿಪತಿಗಳ ಹೊರತು, ಅನ್ಯರಿಗೆ ಮಾನಪತ್ರವನ್ನರ್ಪಿಸಲು ಏನೂ ಖರ್ಚು ಮಾಡಬಾರದೆಂದು ಸಕಲ ಸ್ಥಾನಿಕಸಂಸ್ಥೆಗಳಿಗೆ ವಿಧಿಸಲ್ಪಟ್ಟಿದೆ. ಕಳೆದ ತಾ. ೧೭ನೇ ಬುಧವಾರಕ್ಕೆ ಅಲಹಾಬಾದದ ಮ್ಯುನಿಸಿಪಾಲಿಟಿಯವರು ಸಭೆಸೇರಿ, ಮೌ॥ ಶೌಕತ ಅಲ್ಲೀಯವರಿಗೆ ಮಾನಪತ್ರವನ್ನೀಯಬೇಕೆಂದು ಠರಾಯಿಸಿ, ಆ ಬಗ್ಗೆ ರೂಪಾಯಿ ೫೦೦ನ್ನು ಮಂಜೂರು ಮಾಡಿರುವರು. ನೌಕರಶಾಹಿಗೆ ಇವೆ ಆಹ್ವಾನಗಳು ನಾಲ್ಕೈದು ಬದಿಯಿಂದ, ಒಂದರ ಮೇಲೊಂದು ಬರಹತ್ತಿವೆ. ಅವನ್ನು ಅದು ಸ್ವೀಕರಿಸಿ, ವರ್ತಿಸುತ್ತದೆಂಬುದನ್ನು ನೋಡಲು ಪ್ರಜೆಗಳು ಆತುರರಾಗಿರುವದು ಸ್ವಾಭಾವಿಕವು.

೨. ಮುಂಬಯಿಯಲ್ಲಿ ಈಗೊಂದು ಪರಸ್ಪರ ಸಹಕಾರಿತೆಯ ಗಲಭೆ. ಇದೇ ಡಿಸೆಂಬರ ತಾ. ೬ನೇ ಸೋಮವಾರಕ್ಕೆ 'ಎಸೋಸಿಯೇಟೆಡ್ ಚೇಂಬರ್ಸ ಆಫ್ ಕೊಮರ್ಸ' ಎಂಬ ಹೊಸ ವ್ಯಾಪಾರಿ ಸಂಸ್ಥೆಯ ಅನಾವರಣ ಸಮಾರಂಭವನ್ನು ನಮ್ಮ ಸಾಹುದಾರ ಗವ್ಹರ್ನರರಾದ ಸರ್ ಜೋರ್ಜ ಲೊಯ್ಡರವರು ನೆರವೇರಿಸುವರು. ಈ ಸಮಾರಂಭಕ್ಕೆ ಹಿಂದುಸ್ಥಾನ ಸರಕಾರದ ಕಾರ್ಯಕಾರಿ ಮಂಡಳದ ಮೂವರು ಸಭಾಸದರೂ ಹಾಜರಿರುವರೆಂದು ವ್ಯಕ್ತವಾಗಿದೆ. ಈ ಸಂಸ್ಥೆಯ ಮುಖ್ಯ ಧ್ಯೇಯವು ವಿಲಾಯತಿಯ ವ್ಯಾಪಾರಿಗಳ ಹಿತಸಂಬಂಧಗಳನ್ನು ರಕ್ಷಿಸುವದು; ಈ ಸಮಾರಂಭವನ್ನು ಅನುಗ್ರಹಿಸಲು ಚಾಲಕರು ಮುಂಬಾಪುರಿಯೊಳಗಿನ ಗಿರಣಿ ಸಾವುಕಾರರನ್ನೂ ನಿಮಂತ್ರಿಸಿದ್ದರು. ಮುಂಬಾಪುರಿಯೊಳಗಿನ ಗಿರಣಿ ಸಾವುಕಾರರ ಈ ವರೆಗಿನ ವರ್ತನದ ಮೇಲಿಂದ ಸಾವುಕಾರರೂ ನಿಮಂತ್ರಣವನ್ನು ಸ್ವೀಕರಿಸುವರೆಂದು ಚಾಲಕರ ಅಂದಾಜಿತ್ತು. ಆದರೆ, ದುರ್ದೈವದಿಂದ, ಭರತಖಂಡದ ಸುದೈವದಿಂದ, ಸರ್ ಜೆಮಶೇಟಜೀ ಜಿಜಿಭಾಯಿ, ಸರ್ ದಿನಶಾ ವಾಛಾ, ಮೊದಲಾದ ಕಟ್ಟು ಸಹಕಾರಿಗಳಿಗೆ ಅಸಹಕಾರಿತೆಯ ಭೂತಬಾಧೆಯಾಗಿ, ತಾವು ಈ ಸಭೆಗೆ ಹಾಜರಿರಲಾರೆವೆಂದು ದಿಟ್ಟತನದಿಂದ ತಿಳಿಸಿರುವರು. ಈ ಸಭೆಯಲ್ಲಿ ಪ್ರಮುಖ್ಯವಾಗಿ ಹಿಂದುಸ್ಥಾನದೊಳಗಿನ ಉಕ್ಕಿನ ಉದ್ಯೋಗವನ್ನು ಊರ್ಜಿತಾವಸ್ಥೆಗೆ ತರಲು ಸಂರಕ್ಷಕ ಪದ್ಧತಿಯನ್ನು ಇಡಬೇಕೆಂದು ಹಿಂದುಸ್ಥಾನ ಸರಕಾರವು ನೇಮಿಸಿದ ಆರ್ಥಿಕ ಕಮಿಶನಿನ ಶಿಫಾರಸಿನ ನಿಷೇಧವಾಗುವದಿದೆ. ಟಾರೀಫ ಬೋರ್ಡ ಯಾನೆ ಜಕಾತ ಚೌಕಶಿ ಮಂಡಳವು ಯಾವ ಪ್ರಕಾರದ ಸಂರಕ್ಷಣವನ್ನು ಕೊಡಬೇಕೆಂದು ಸರಕಾರದ ತರ್ಫೆನಿಂದ ವಿಚಾರಿಸಹತ್ತಿದೆ. ಈ ಬೋರ್ಡಿನ ಮುಂದೆ ಈ ಸಭೆಯ ಚಾಲಕರು ತಮ್ಮ ಜಬಾನಿಗಳನ್ನು ಕೊಡದೆ, ಅಸಹಯೋಗವನ್ನಾಶ್ರಯಿಸಿದರು; ಮತ್ತು ಮುಂಬಯಿಯಲ್ಲಿ ಸರಕಾರಿ ಅಧಿಕಾರಿಗಳ ಆಶ್ರಯದಲ್ಲಿಯೇ ಸರಕಾರದ ಕಮಿಟಿಗಳ ಶಿಫಾರಸಿನ ನಿಷೇಧ ನಡಿಸಿರುವರು. ದೇಶೀ ಉಕ್ಕಿನ ಉದ್ಯೋಗವನ್ನು ಸಂರಕ್ಷಿಸುವದು ನಮ್ಮಲ್ಲಿಯ ಸಾವುಕಾರರ ಸ್ವಾರ್ಥವು; ಪರದೇಶೀ ಉಕ್ಕನ್ನು, ವಿಶೇಷವಾಗಿ, ವಿಲಾಯತಿಯೊಳಗಿನ ಉಕ್ಕನ್ನು ಇಲ್ಲಿ ಅಮದು ಮಾಡುವದು, ವಿಲಾಯತಿಯ ವ್ಯಾಪಾರಿಗಳ ಸ್ವಾರ್ಥವು. ಈ ಸ್ವಾರ್ಥಸಾಧನಕ್ಕಾಗಿ ಯುರೋಪಿಯನ್ ವ್ಯಾಪಾರಿಗಳು ಟಾರಿಫ ಬೋರ್ಡಿನಗೂಡ, ದೇಶೀ ಸಾವುಕಾರರು ಯುರೋಪಿಯನ್ ವ್ಯಾಪಾರಿಗಳಗೂಡ ಅಸಹಕಾರಿತೆಯ ಶಸ್ತ್ರವನ್ನೆಸೆದಿರುವರು. ಯುರೋಪಿಯನ್ ವ್ಯಾಪಾರಿಗಳಿಗೆ ಹಿಂದುಸ್ಥಾನ ಸರಕಾರವೂ, ನಮ್ಮ ಪ್ರಾಂತಾಧಿಪರೂ ಕೂಡಿಕೊಂಡು, ತಮ್ಮ ಸರಕಾರಿ ನಿರ್ಣಯಗಳಿಗೆ ವಿರೋಧವಾಗಿ ಚಳವಳಿ ನಡಿಸುವ ನೋಟವು ಬೋಧಪ್ರದವಿದೆ. ಭಾರತೀಯ ನೌಕರಶಾಹಿಯ ಅಂತರಂಗವೂ ಇದರಿಂದ ಸ್ಫುಟತೋರುತ್ತದೆ. ಹಂಟರ ಕಮಿಟಿಯಗೂಡ ರಾಷ್ಟ್ರೀಯ ಸಭೆಯವರು ಸಾಕ್ಷಿ ಕೊಡದ ಮೂಲಕ, ದೇಶನಾಶಕರೆಂದು ಅಟ್ಟು ಹೊಡೆದ ಸನದಶೀರ ಚಳವಳಿಯ ಉಪಾಸಕರು ಯುರೋಪಿಯನ್ ವ್ಯಾಪಾರಿಗಳ ಅಸಹಕಾರಿತೆಯನ್ನೂ ಈ ಅಸಹಯೋಗಿಗಳಿಗೆ ಪ್ರಾಪ್ತವಾದ ಸರಕಾರಿ ಆಶ್ರಯವನ್ನೂ ನೆನೆಸಲಿ; ಮತ್ತು ಜಾಣರಾಗಲಿ. ನಮ್ಮ ಗಿರಣಿ ಸಾವುಕಾರರಾದರೂ ನಮ್ಮ ನೌಕರಶಾಹಿಯ ಅಂತರಂಗವನ್ನರಿತುಕೊಂಡು, ಇನ್ನಾದರೂ ಸಹಕಾರಿತೆಯ ಮರುಳನ್ನು ತ್ಯಜಿಸಿ, ರಾಷ್ಟ್ರೀಯ ಸಭೆಯನ್ನು ಸೇರಿಕೊಳ್ಳಲಿ.

ನಮ್ಮ ಮುಂಬಯಿಯ ವಿಶ್ವವಿದ್ಯಾಲಯ ಮತದಾರ ಸಂಘದ ಚುನಾವಣೆಯ ಪೂರ್ಣ ಕಳೆದ ತಾ. ೨೨ನೇ ಸೋಮವಾರಕ್ಕೆ ಮುಂಬಯಿಯಲ್ಲಾಯಿತು. ಶ್ರೀ॥ ಮುಕುಂದರಾವ ಜಯಕರರವರಿಗೆ ೧೫೩೭ ಮತಗಳು; ದಿವಾಣರಾದ ಡಾ॥ ರಘುನಾಥರಾವ ಪರಾಂಜಪೇಯವರಿಗೆ ೧೧೮೬; ಹೀಗೆ ಮತಗಳು ಬಿದ್ದು, ಶ್ರೀ॥ ಮುಕುಂದರಾಯರು ಯಶಸ್ವಿಯಾದರೆಂದು ತಿಳಿಸಲು ತುಂಬಾ ಸಂತೋಷವೆನಿಸುತ್ತದೆ. ಈ ಚುನಾವಣೆಗೆ ವಿಶೇಷ ಮಹತ್ವವಿದೆ. ಯಾಕಂದರೆ, ಮತದಾರರು ಸುಶಿಕ್ಷಿತರು. ಉಮೇದವಾರರೂ ಪ್ರಾಂತದೊಳಗಿನ ಪ್ರಮುಖ ಪುರುಷರೇ. ಡಾ॥ ಪರಾಂಜಪೇಯವರನ್ನು ಸ್ಥಾನಭ್ರಷ್ಟಮಾಡಿ, ನಮ್ಮ ಪ್ರಾಂತದೊಳಗಿನ ಸುಶಿಕ್ಷಿತರು ಪರಾಂಜಪೇಯವರ ಕಾರಕೀರ್ದಿಯು ತಮಗೆ ಸಮ್ಮತವಿಲ್ಲೆಂದು ಪ್ರದರ್ಶಿಸಿದ್ದಾರೆ; ಮುಂದೆ ಸಹ ಅವರಿಂದ ವಿಶೇಷ ಕಾರ್ಯಸಿದ್ಧಿಯಾಗುವ ಲಕ್ಷಣವಿಲ್ಲೆಂದು ಸ್ಪಷ್ಟವಾಗಿ ನಿವೇದಿಸಿರುವರು. ಪರಾಂಜಪೇಯವರ ಪಕ್ಷದವರು ಮುಕುಂದರಾಯರ ಚಳವಳಿಗೆ ಹೆಸರಿಟ್ಟು, ಪರಾಂಜಪೇಯವರನ್ನು ಬಚಾವು ಮಾಡಲು ಸಹ ಅಸ್ಪದವಿಲ್ಲ. ಯಾಕಂದರೆ, ಮತಕೊಟ್ಟವರೆಲ್ಲರೂ ಸುಶಿಕ್ಷಿತ, ಅನುಭವಸ್ಥ ಗೃಹಸ್ಥರೇ. ಇದಲ್ಲದೇ ನಿಯಮದಂತೆ, ಪದವೀಧರರಾಗಿ, 2 ವರುಷಗಳಾದ ಹೊರತು, ಮತದಾನದ ಅಧಿಕಾರವು ಅವರಿಗೆ ಪ್ರಾಪ್ತವಾಗುವದಿಲ್ಲ. ಮತ್ತೊಂದು ಸಂಗತಿಯೂ ಸ್ಫುಟವಾಗಿದೆ. ದಿವಾಣ ಪರಾಂಜಪೇಯವರು ಸಹಕಾರಿತೆಯ ಭಕ್ತರಿದ್ದು, ಸಹಕಾರಿತೆಯೇ ನಮ್ಮ ದೇಶೋದ್ಧಾರದ ರಾಜಮಾರ್ಗವೆಂದು ತಿಳಿಯುವ ನೇಮಸ್ತಾಗ್ರಣಿಗಳು. ಇಂಥವರನ್ನು ಕಿತ್ತೊಗೆದು, ಸುಶಿಕ್ಷಿತ ಸಮಾಜವು ಸಹಕಾರಿ ಕಾರಭಾರವು ದೇಶಕ್ಕೆ ಇಷ್ಟವಿಲ್ಲೆಂದು ಜಾಹೀರುಪಡಿಸಿದೆ. ಶ್ರೀ॥ ಮುಕುಂದರಾಯರು ರಾಷ್ಟ್ರೀಯ ಸಭಾಭಿಮಾನಿಗಳಿದ್ದು, ರಾಷ್ಟ್ರೀಯ ಸಭೆಯು ನೇಮಿಸಿದ ಪಂಜಾಬ ಅತ್ಯಾಚಾರಗಳ ಚೌಕಶಿ ಕಮಿಟಿಯಲ್ಲಿ ಧೈರ್ಯದಿಂದ ಕೆಲಸ ಮಾಡಿದವರಿರುವರು. ಇಂಥವರ ಧೋರಣವು ಸುಶಿಕ್ಷಿತ ಸಮಾಜಕ್ಕೆ ಗ್ರಾಹ್ಯವಿರುವದೆಂದು ವಿಶ್ವವಿದ್ಯಾಲಯದ ಪದವೀಧರರು ಬಹುಮತದಿಂದ ನಿರ್ಣಯಿಸಿರುವರು. ದೇಶದೊಳಗಿನ ರಾಜಕಾರಣದ ವಾಯುಸಂಚಾರವು ಯಾವ ದಿಕ್ಕಿನಿಂದ ಹರಿಯುತ್ತದೆಂಬುದು ಜಯಕರ–ಪರಾಂಜಪೇಯವರ ಇಲೆಕ್ಷನಿನ ನಿರ್ಣಯದಿಂದ ಸ್ಪಷ್ಟವಾಗಿದೆ. ನೇಮಸ್ತರು ಇನ್ನಾದರೂ ತಮ್ಮ ಧೋರಣವನ್ನು ತಿದ್ದುಕೊಳ್ಳಲಿ.

---

೪. ಹಿಂದೂ–ಮಹಮ್ಮದೀಯರ ಕಲಹಸುದ್ದಿಗಳಿಂದ ಮನೋವ್ಯಥೆಯಾಗಿರುವಾಗ, ಉಡುಪಿಯಲ್ಲಿ ಸಂಭವಿಸಿದ ಒಂದು ಬೋಧಪ್ರದ ಹಕೀಕತನ್ನು ನಮೂದಿಸಲು ಆನಂದವಾಗುತ್ತದೆ. ಸುಮಾರು ೨೦ ವರುಷ ಪ್ರಾಯದ ಎಳೆ ಯುವಕರೊಬ್ಬರು ಶ್ರೀವೆಂಕಟರಮಣ ದೇವಸ್ಥಾನದ ಕೆರೆಯೊಳಗೆ ಈಸುತ್ತಿರುವಾಗ, ಕೆರೆ ಮಧ್ಯ ಹೋಗುವಷ್ಟರಲ್ಲಿ, ಕೈಕಾಲು ಸೋತು ಮುಳುಗಿ ನಿಧನಹೊಂದಿದರು. ಮೃತರು ಜೀವದಾಶೆಗಾಗಿ ಹಲುಬುಳಿಸುತ್ತಿರುವಾಗ, ಕೆರೆಸು

ಸುತ್ತುಮುತ್ತು ೧೦೦-೨೦೦ ಸಜಾತೀಯ ಜನರು ನೆರೆದಿದ್ದರೂ, ಒಬ್ಬರು ಸಹ ಸಾಹಸ ಮಾಡಿ ಮುಂದಾಗಿ ಸಾಯುವ ಧರ್ಮಬಾಂಧವನ ರಕ್ಷಣೆಗೆ ಸಾಗಿ ಹೋಗಲಿಲ್ಲ. ಮೃತನ ಮೃತ್ಯುಯಾತ್ರೆಯನ್ನು ಹೇಗೆ ಸರಂತೆ, ನಿರಾಧಾರವೃತ್ತಿಯಿಂದ ನೋಡುತ್ತಿದ್ದರು. ಕಟ್ಟಕಡೆಗೆ ಮೃತನ ಆತ್ಮವು ದೂರಾದ ಬಳಿಕ, ಅವನ ಶವವನ್ನೆತ್ತುವಷ್ಟು ಸಹ ಧೈರ್ಯವು ಅಲ್ಲಿಯ ಸಧರ್ಮೀಯರಿಗೆ ಒದಗಲಿಲ್ಲೆಂದು "ಬಸ್ವಗ್ರಹಿಯು" ತಿಳಿಸುತ್ತದೆ. ಶವವನ್ನು ಮೇಲಕ್ಕೆತ್ತಿದವರ್ಯಾರೆಂದು ವಾಚಕರೇ ಆಲಿಸಿರಿ; ಅಷ್ಟರಲ್ಲಿ ಅಲ್ಲಿಗೆ ಬಂದ ಮುಹಮ್ಮದೀಯ ಬಾಂಧವರೊಬ್ಬರು ಸಾಹಸದಿಂದ ಕೆರೆಯನ್ನು ಸೇರಿಕೊಂಡು, ಶವವನ್ನು ಮೇಲಕ್ಕೆತ್ತಿಕೊಂಡು ಬಂದರಂತೆ! ಈ ಹಕೀಕತು ಹಿಂದೂ ಸಮಾಜದ ದೌರ್ಬಲ್ಯವನ್ನು ಪ್ರಕಟಿಸುವಾಗ ಹಿಂದೂ-ಮುಹಮ್ಮದೀಯರೊಳಗಿನ ಪರಸ್ಪರ ಸ್ನೇಹ ಭಾವವನ್ನು ವ್ಯಕ್ತಗೊಳಿಸುತ್ತದೆ. ಹಿಂದೂ-ಮುಹಮ್ಮದೀಯರಿಗೆ ಯಾವಾಗಲೂ ಕೂಡಿ ಇರಲಿಕ್ಕಿಲ್ಲೆಂದು ತಿಳಿಯುವ ನಿರಾಶಾವಾದಿಗಳು ಈ ಕಥೆಯಿಂದ ತಕ್ಕ ಬೋಧ ಪಡೆದು ವರ್ತಿಸಿದರೆ ದೇಶಕ್ಕೂ ಹಿತವಾಗುವದು, ಸಮಾಜಗಳಿಗೂ ಕಲ್ಯಾಣವಾಗುವದು. ಹಿಂದೂ-ಮುಹಮ್ಮದೀಯರು ತಮ್ಮ ತಮ್ಮ ಧಾರ್ಮಿಕ ಕಟ್ಟಳೆಗಳನ್ನು ಪಾಲಿಸಿ, ಪರಸ್ಪರರರಗೂಡಿ ಸ್ನೇಹಭಾವದಿಂದ ವರ್ತಿಸಲೆಂತಲೂ ಜ್ಞಾತಿಕಲಹಬೀಜವು ನಷ್ಟವಾಗಲೆಂತಲೂ, ನಮ್ಮ ಅಂತಃಕರಣಪೂರ್ವಕ ಬಯಕೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಅತಿಶಯ ಚಳಿ. ಶೀತ್ಸ್ನ ಜ್ವರ ಮತ್ತು ಕೆಮ್ಮ ಬೇನೆಗಳು.

ಉಪ್ಪಿನಪಟ್ಟಣದಿಂದ ಸಾಣೆಕಟ್ಟೆಯವರೆಗೆ ಒಂದು "ಮೋಟಾರ ಬೋಟಿಯ" ಸರ್ವಿಸು ಸದ್ಯಕ್ಕೆ ಚಾಲು ಆಗುವದಿದೆಂದು ಸುದ್ದಿ. ಬೋಟಿಯಲ್ಲಿ ಎರಡು ವರ್ಗಗಳಿರುವವಂತೆ! ದರವು ಉಪ್ಪಿನಪಟ್ಟಣದಿಂದ ಸಾಣೆಕಟ್ಟೆವರೆಗೆ ೪ ಆಣೆ ಇರುವದಂತೆ!

ಸ್ಥಾನಿಕ ಮ್ಯುನಿಸಿಪಾಲಿಟಿಯವರು ಮನೆಪಟ್ಟಿಯನ್ನು ಸುಧಾರಿಸಲು ಪುನಃ ಪ್ರಾರಂಭಮಾಡಿದ್ದಾರೆ. ತೆರಿಗೆ ಆಕರಣೆ ಸುಧಾರಣೆಯಾಗಿ, ೩ ವರ್ಷಗಳು ಮುಗಿಯುವಷ್ಟರಲ್ಲಿ, ಪುನಃ ಸುಧಾರಣೆಯು ನಡೆದು, ತೆರಿಗೆ ಏರಿಸುವ ಯೋಜನೆಯೆಂದು ಜನರ ದೂರು.

ಕಳೆದ ಶುಕ್ರವಾರ ತಾರೀಖು ೨೩ನೇಗೆ ಇಲ್ಲಿ ವನಭೋಜನದ ಸಮಾರಂಭವಿತ್ತು. ಶ್ರೀವೆಂಕಟರಮಣ ದೇವಸ್ಥಾನದ ಮೊಕ್ತೇಸರರು ಡಿ. ಮೆಜಿಸ್ಟ್ರೇಟ ಮಿ॥ ಹೇಗರ ಕೂಡ ಬಹಿಷ್ಕೃತನ "ಉತ್ಸವದಲ್ಲಿ ಪ್ರವೇಶವಾಗದಂತೆ, ಗುರುವಾರ ಸಾಯಂಕಾಲಕ್ಕೆ ನಾಂತ ಗಲ್ಲಿ ಮುಕ್ತಾಯದಲ್ಲಿ ಕ್ರಿ. ಪ್ರೊ. ಕೋ. ೧೪೪ ಕಲಮಿನನ್ವಯ ಪ್ರತಿಬಂಧಕ ಹುಕುಮು ಪಡೆದರು. ಊರಲ್ಲಿ ಪಕ್ಷಗಳಿದ್ದು, ಪಕ್ಷಗಳಲ್ಲಿ ಉತ್ಸವ ಸಮಯ ಶಾಂತತಾಭಂಗವಾಗುವ ಸಂಭವವಿದೆಂದು, ಸ್ಥಾನಿಕ ಪೋಲೀಸರು ಗುರುವಾರಕ್ಕೆ ಶೀ ಡಿಸ್ಟ್ರಿಕ್ಟಿನ ಪ್ರಾಂತಾಧಿಪರಾದ ರಾ॥ ಬಿ॥ ಕೊಯಿಮುತ್ತೂರರವರಿಗೂ ವರದಿಕೊಟ್ಟು, ವನಭೋಜನ ಸಮಾರಂಭವನ್ನು ಆರು ದಿವಸಗಳ ವರೆಗೆ ಅಂದರೆ, ಇಂದಿನ ವರೆಗೆ ತಹಕೂಬ ಇಡಬೇಕೆಂದು ಶ್ರೀ ವೆಂಕಟರಮಣ, ಶ್ರೀ ಹನುಮಂತ, ಶ್ರೀ ಶಾಂತೇರಿಕಾಮಾಕ್ಷಿ ದೇವಾಲಯಗಳ ಮೊಕ್ತೇಸರ-ವ್ಯವಸ್ಥಾಪಕ-ವೈವಾಟದಾರ-ಪೂಜಾರಿಗಳ ಮೇಲೆ ಕ್ರಿ. ಪ್ರೊ. ಕೋ. ೧೪೪ ಕಲಮಿನನ್ವಯ ಹುಕುಮನ್ನು ಜಾರಿ ಮಾಡಿದರು. ಶ್ರೀ ವೆಂಕಟರಮಣ ದೇವಸ್ಥಾನದ ಮೊಕ್ತೇಸರರ ಪ್ಲೀಡರರಾದ ರಾ॥ ಶಾಂತಪ್ಪ ಪೈಯು ಸಬ್‌ಡಿವ್ಹಿಜನಲ್ ಮೆಜಿಸ್ಟ್ರೇಟರ ಹುಕುಮನ್ನು ರದ್ದುಪಡಿಸಿಕೊಳ್ಳಲು, ಪ್ರಸ್ತುತ ಶುಕ್ರವಾರಕ್ಕೆ ಕಾರವಾರಕ್ಕೆ ಹೋದರು. ಮಿ॥ ಹೇಗರು ಸಬ್ ಡಿವ್ಹಿಜನಲ್ ಮೆಜಿಸ್ಟ್ರೇಟರ ಹುಕುಮು ರದ್ದುಮಾಡುವರೆಂದು ಸುದ್ದಿ ಎದ್ದದರಿಂದ, ರಾ॥ ಬಿ॥ ಕೊಯಿಮುತ್ತೂರರು ತಮ್ಮ ಹಕ್ಕುಮನ್ನು ತಮ್ಮಷ್ಟಕ್ಕೆ ರದ್ದುಮಾಡಿಕೊಂಡರೆಂತ ವಾರ್ತೆಯಾದ್ದರಿಂದ, ಪೇಟೆಯಲ್ಲೆಲ್ಲಾ ಮಧ್ಯಾಹ್ನದೊಳಗೆ ತೋರಣಗಳು ಕಟ್ಟಲ್ಪಟ್ಟವು. ಕಾರವಾರಕ್ಕೆ ಹೋದ ರಾ॥ ಶಾಂತಪ್ಪ ಪೈಯು ಹುಕುಮನ್ನು ರದ್ದುಪಡಿಸಿಕೊಂಡು ಸಾಯಂಕಾಲಕ್ಕೆ ಮರಳಿ ಬಂದದ್ದರಿಂದ, ರಾತ್ರಿ ೮ ಗಂಟೆಗೆ ದೇವರ ಉತ್ಸವ ನಡೆಯಿತು.

ಕಾರಣ ಉಳಿದದ್ದರಿಂದ, ಜಾಮಿನ ವನಭೋಜನ ಉತ್ಸವವು ಈ ವರ್ಷ ನೆರವೇರಲಿಲ್ಲ. ಆದರೆ ಜನರಲ್ಲಿ ಪಕ್ಷಾಭಿಮಾನದ ಮನೋವ್ಯಥೆಯು ಹೆಚ್ಚಾಗಿದೆ. ಇದು ಬೇಗ ಬಿಡುವದು ಪ್ರಿಯತರ. ಆದ್ದರಿಂದ ಶಕ್ತಿಶಾಲಿಗಳೂ ಈ ಕಲಹಬೀಜವನ್ನು ತೆಗೆದುಹಾಕಲು ತಕ್ಕ ಉಪಾಯ ಯೋಜಿಸಿದರೆ "ಜನಹಿತವಾದದ್ದು" ಎಂದು ಪ್ರತ್ಯೇಕವಾಗಿ ಹೇಳಬೇಕೆ.

ಮೈಸೂರ ಸಾಮಂತ ಪ್ರವಾಸಿಗರವರು ಶಿರ್ಸಿಯಿಂದ ಕುಮಟೆಗೆ ಮೋಟಾರ ಸರ್ವಿಸನ್ನು ಚಾಲೂ ಮಾಡಿದರೆ ನಿತ್ಯವೂ ನಿಯಮಿತವಾಗಿ ಬಿಡಿಸುವದು ಒಳ್ಳೆಯದಾಗುತ್ತದೆ.

ಅಂಕೋಲಾ— ಬ್ರಿ. ಪೊಲೋ ಪಟ್ಟಿ ಕೋ ಇವರ ಇಂಗ್ಲೀಷಿನಲ್ಲಿ ಪತ್ರ ಬರೆ... ಕುವರೆಂದರೆ — ಕಳೆದ ತಾ. ೨೩ನೇಗೆ ಇಲ್ಲಿ ಕಾರ್ತೀಕೋತ್ಸವವಾಯಿತು. ಆ ದಿನ ಊರಲ್ಲೆಲ್ಲ ದೊಡ್ಡ ದೊಡ್ಡ ಶಾಮಿಯಾನಗಳನ್ನು ಹಚ್ಚಿ, ಸಹಕಾರಿ ಸಂಘದಿಂದ ಸಾಲ ಪತ್ರಗಳನ್ನು ನಾಗ ಶೇಕಡಾ ೧೦ರಿಂದ ೫ರ ತನಕ ಲಂಚ ಕೊಡಬೇಕಾದವರೆಲ್ಲರೂ ಮನೆಯಂಗ ಳಲ್ಲಿಯ ಇಂತಹ ಸಭಾಸದರಗೂಡಿ ಬಂದಿ ಕೊಡಲು ನಿರ್ಧಾರದಿಂದ ಮುಂದಾಗಿದೆಂದು. ಅಕಂಟಂಟರ ಉಪದೇಶವಿತ್ತು. ಸಾಲ ಮಂಗೂರ ಮಾಡುವ ಮೊದಲು, ಶೇಕಡಾ ೧೦ರಿಂದ ೫ರವರೆಗೆ ಇನಾಮು ಪಡೆಯುವ ಶಹನಾಮೆಯು ಮೊದಲಾಗಿ, ಬಳಿಕ, ಸಾಲ ಮಂಜೂರಾಗುತ್ತದೆಂದು ಸಾಲ ಪಡೆವ ಮೇಲೆ, ಶಹನಾಮೆಯಂತೆ, ಇನಾಮಿನ ರಕಮು ಮುರಕೊಳ್ಳಲ್ಪಡುತ್ತದೆಂತಲೂ ಈಗ ಕೆಲಕಾಲದಿಂದ ಒಂದು ಪಕ್ಷ ಪನಂತಿ ಬಿದ್ದಿತ್ತು. ಅದಕ್ಕೆ ಕಾರ್ತೀಕೋತ್ಸವದ ದಿನ ಮೃತಸ್ವರೂಪ ಬಂತು. ಸಹಕಾರಿ ಸಂಘದ ಚಾಲಕರು ಈ ವಿಷಯ ಸೂಕ್ಷ್ಮ ರೀತಿಯಿಂದ ಚೌಕಶಿ ನಡೆಸಿ, ಸಹಕಾರಿ ಸಂಘವನ್ನು ಲೋಕಾಪವಾದದಿಂದ ರಕ್ಷಿಸಬೇಕಾಗಿ ವಿನಂತಿ.

ಕಾರವಾರ— ಕಳೆದ ೧೭ನೇ ತಾರೀಖಿಗೆ ಜಾಹೀರ ಸಭೆಯಲ್ಲಿ ನಿರ್ಣಯವಾದಂತೆ, ಅಧ್ಯಕ್ಷರಾದ ರಾ॥ ಪತ್ತಾರ್ಕರ ಭಾಸ್ಕರ ನಾಡಕರ್ಣಿಯವರ ನೇತೃತ್ವದೊಳಗಿನ ಶಿಷ್ಟಮಂಡಳವು ೨೧ನೇ ಬುಧವಾರಕ್ಕೆ ಕಲೆಕ್ಟರರಾದ ಮಿ॥ ಹೇಗರವರ ದರ್ಶನ ಪಡೆಯಿತು. ರಾ॥ ನಾಡಕರ್ಣಿಯವರು ಬಿನ್‌ಶೇತಕಿ ಉಪಾಯದಿಂದ ಕದ್ರೆ ಜಾತ್ರೆಯಲ್ಲಿ ನಡೆಸಿದ ಹಾವಳಿಯನ್ನು ಪರಿಹರಿಸಲು ಬಿನ್ನೈಸಿದರು. ಮಿ॥ ಹೇಗರು ಈ ಸರ್ಕ್ಯೂಲರಿನ ಕೆಲ ಬಾಬುಗಳ ಜವಾಬದಾರಿಯನ್ನೇ ಅಲ್ಲಗಳೆದರು. ಅವುಗಳ ಬಗ್ಗೆ ತಕ್ಕ ಚೌಕಶಿ ಮಾಡುವೆವೆಂತಲೂ, ಕೂಡಲೆ ಸರ್ಕ್ಯೂಲರನ್ನು ತಹಕೂಬ ಮಾಡುವೆವೆಂತಲೂ, ಚೌಕಶಿಯಾದ ಬಳಿಕ, ಶಿಷ್ಟಮಂಡಳವನ್ನು ನಿಮಂತ್ರಿಸಿ, ಆಲೋಚನೆ ಪಡೆದು, ಈ ಪ್ರಶ್ನೆಯ ಅಖೈರ ನಿಕಾಲೆ ಮಾಡುವೆವೆಂತಲೂ ನುಡಿದರು. ಕದ್ರಾ ಜಾತ್ರೆಯಲ್ಲಿ ಒಟ್ಟು ಮಾಡಿದ ಹಣವನ್ನೆಲ್ಲ ರಿಫಂಡ ಕೊಡುವರೆ ಕಲೆಕ್ಟರರು ಹುಕುಂ ಫರ್ಮಾಯಿಸಿರುವರು. ಮಿ॥ ಹೇಗರು ಬಿನ್‌ಶೇತಕೀ ವಿಶಾಟವನ್ನು ಹಂಗಾಮಿಯಾಗಿ ತಹಕೂಬ ಮಾಡಿದ್ದರ ಬಗ್ಗೆ ಜನರೆಲ್ಲರೂ ಆಭಾರಿಯಾಗಿರುವರು.

ಗೋಕರ್ಣ— ಇಲ್ಲೊಂದು ಸಣ್ಣ ಗಲಾಟೆ. ಪೋಲೀಸ ಕಾನ್ಸಟೇಬಲನೊಬ್ಬನು, ಕೆಲ ಊರವರು ಕೂಡಿ, ಟಪಾಲ ಮಾಸ್ತರರ ವರ್ತನವನ್ನು ಟಪಾಲ ಖಾತೆಯ ಮೇಲಧಿಕಾರಿಗಳಿಗೆ ವರದಿ ಮಾಡಿದ್ದರು. ಆ ವರದಿಯು ಟಪಾಲ ಮಾಸ್ತರರ ಕಡೆಗೇ ಚೌಕಶಿಗೆ ಬಂದಿರುವದಂತೆ! ಆ ವರದಿಯೊಳಗಿನ ಹಕೀಕತನ್ನು ಸುಳ್ಳು ಮಾಡಲು, ಟಪಾಲ ಮಾಸ್ತರರು ಖಟಪಟಿಸುವದೆಂತು ಆಯಿತು. ಆ ಬಗ್ಗೆ ನಾಲ್ವರ ಸಾಹೇಬರೂ ಬದ್ಧರಾಗುತ್ತಿರುವರೆಂದು ತಿಳಿಯುತ್ತದೆ. ಪೋಲೀಸ ಕಾನ್ಸಟೇಬಲನಿಗೂ ಅವನ ಸ್ಥಾನಿಕ ಮೇಲಧಿಕಾರಿಗಳ ಮಾರ್ಫತು ಜವಾಬು ಸಹ ಕೇಳಲಾಯಿತಂತೆ! ಸ್ವಂತ ನಾತೆಯಿಂದ ಟಪಾಲ ಮಾಸ್ತರರ ಕುಚೇಷ್ಟೆಗಳ ಕುರಿತು ಮಾಡಿದ ಅರ್ಜಿಯ ಬಗ್ಗೆ ಸ್ಥಾನಿಕ ಪೋಲೀಸ ಖಾತೆಯವರೂ ಏಕೆ ಒತ್ತಾಯಿಸಬೇಕು? ಇತ್ಯಾದಿ ಗೋಕರ್ಣಸ್ಥರ ಪ್ರಶ್ನೆ.

ಸದಾಶಿವಗಡ— ಇಲ್ಲಿ ತಾ. ೨೧ನೇ ದಿವಸ ಸಾಯಂಕಾಲ ಶ್ರೀ ಸುಬ್ರಾಯ ಪರ್ಸೆ ಇವರ ಅಧ್ಯಕ್ಷತೆಯ ಕೆಳಗೆ ಕದ್ರೆಯೊಳಗೆ ಜಾತ್ರೆಯ ಕಾಲಕ್ಕೆ ಸರಕಾರ ದೂಕರ ನಡೆಸಿದ ದಾಳಿಯ ಬಗ್ಗೆ ನಿಷೇಧ ಪ್ರದರ್ಶಿಸುವ ಬಗ್ಗೆ ಸಭೆಗೂಡಿತ್ತು. ಈಗೀಗ ಇಲ್ಲಿ ಸಭೆಗೆ ಜನಸಮುದಾಯವು ಬೆಳೆಯ ಹತ್ತಿದೆ. ಯಾಕೆಂದರೆ, ಇಷ್ಟು ದಿವಸ "ಧಾರ್ಮಿಕ ಶಿಸ್ತ" ಎಂದು ತೋರುವದು ತೀರ ಅಳಿದುಹೋಗಹತ್ತಿದೆ. ಯಾಕೆಂದರೆ, ಅಂಥಾದ್ದೇ ದುಃಖದ ಸಾಳಿಯು ಸ್ವತಃದ ಮೇಲೆಯೇ ಬಂದಿದೆ! ರಾಜನಿಷ್ಠರೆಂದು ಅಂದುಕೊಳ್ಳುವವರು ಅನೇಕರು ಹಾಜರಿದ್ದರು! ಶ್ರೀ ಗಣಪತ ನಾಡಕರ್ಣಿಯವರು ಬಹಳೇ ಹೊತ್ತಿನ ವರೆಗೆ ಎಲ್ಲರಿಗೂ ಸರಕಾರದ ಕೃತ್ಯಗಳ ಪೂರ್ಣ ನಿಷೇಧಪರ ಅರಿವಾಗುವಂತೆ ವ್ಯಾಖ್ಯಾನವನ್ನಿತ್ತರು! ಮಧ್ಯದಲ್ಲಿಯೇ ಮಿ॥ ಕಲೆಕ್ಟರರು ಇನ್ನು ಮುಂದೆ ಯಾವ ಜಾತ್ರೆಯಲ್ಲಿಯೂ, ಆ ತರದ ಕರ ವಸೂಲ ಮಾಡಬಾರದೆಂಬ ಅರ್ಜಿಯ ಹುಕುಂ ಕೊಟ್ಟಿರುವರೆಂಬ ಸುದ್ದಿ ಬಂದು ಮುಟ್ಟಿತು! ಕೂಡಲೇ ಯಾತಕ್ಕೆ ಜನರು ವಿಶೇಷತಃ ವ್ಯಾಖ್ಯಾತರು ಆನಂದಭರಿತರಾದರು. ಆದ್ದರಿಂದ, ವ್ಯಾಖ್ಯಾತರು ತಮ್ಮ ಇತರ ಹಳ್ಳಿಗಳೊಳಗಿನ ಈ ಪಸಿಯಿಂದ ದೌರನ್ನು ರದ್ದು ಮಾಡಿರುವರು.

— 'ರಂಗೂನ ಮೇಲ' ಪತ್ರಿಕೆಯ ಸಂಪಾದಕರಾದ ಶ್ರೀ ಮುಂರ್ಯುರಲ್ಲಿ ಸೋಲಿಯಾದವರು ಯರೋಡಾ ಜೈಲಿನಲ್ಲಿ ೬ ತಿಂಗಳ ವರೆಗೆ ಮಹಾತ್ಮರ ಜೊತೆಯಲ್ಲಿದ್ದರು. ಅವರು ಸದ್ಯಕ್ಕೆ ಬಿಡುಗಡೆ ಹೊಂದಿ, ಮಹಾತ್ಮರ ಪತ್ನಿಯವರಿಗೆ ಭೆಟ್ಟಿಯನ್ನಿತ್ತು, ಮಹಾತ್ಮರು ಕ್ಷೇಮದಿಂದಿರುವರೆಂದು ತಿಳಿಸಿರುವರು. ಆನಂದ ವಾರ್ತೆ.

— ಕವಿವರ್ಯ ರವೀಂದ್ರನಾಥ ಠಾಗೋರರವರು ವಿಶ್ವಭಾರತೀ ವಿದ್ಯಾಲಯಕ್ಕಾಗಿ ಕಾರ್ಯವಾಹ ಸಂಸ್ಥಾನಿಕರಿಂದ ಬಿಕ್ಷೆಯೆತ್ತುತ್ತಿದರು. ಈ ವರೆಗೆ ೮೦ ಸಾವಿರ ರೂಪಾಯಿಗಳು ಬಿಟ್ಟಿಗಿವೆ.

— ಮಿ॥ ಶೌಕತ ಅಲ್ಲಿಯವರು ಮುಂಬಯಿಯಲ್ಲಿ ಜ್ವರಗ್ರಸ್ತರಾಗಿರುವರು.

ಜಿಲ್ಹಾ ಲೋಕಲ್ ಬೋರ್ಡ್.

ಲೋಕಲ್ ಫಂಡ ಪಟ್ಟಿಯ ಪುನರ್ಯೋಜನೆ;

ಪ್ರಾಥ: ಶಾಲೆಗಳು

ಕಳೆದ ತಾರೀಖು ೨೧-೨೨ರಲ್ಲಿ ಜಿಲ್ಹಾ ಲೋಕಲ್ ಬೋರ್ಡಿನ ಜಾದಾ ಸಭೆಯೊಂದು ಕಾರವಾರದಲ್ಲಿ ನೆರೆಯಿತು. ಈ ಸಭೆಗೆ ೯ ಮಂದಿ ಚೋನಾಯಿತರು, ೩ ಮಂದಿ ಸರಕಾರ ನಿಯಾಮಕರಕೊಂಡವರು, ಹೀಗೆ ೧೨ ಮಂದಿ ಮೆಂಬರರು ಹಾಜರಿದ್ದರು. ಅಧ್ಯಕ್ಷಸ್ಥಾನದಲ್ಲಿ ವಿ. ಪ್ರಿ. ಪಿ. ಕೊಯಿಲೋರವರು ವಿರಾಜಮಾನರಾಗಿದ್ದರು. ಲೋಕಲ್ ಫಂಡ ಪ್ರಕ್ರಿಯ ವಿಚಾರಕ್ಕಾಗಿ ಬೋರ್ಡಿನ ಸಭೆಯು ಬೆಳಗಿನ ೮ ಘಂಟೆಗೆ ನೆರೆಯಿತು. ಸಭೆಗೆ ಈ ಅನೇಕ ಪ್ರೇಕ್ಷಕರೂ ಹೋಗಿದ್ದರು. ಡಾ| ಎಸ್. ಟಿ. ಶೆಟ್ಟಿಯವರು ಲೋಕಲ್ ಫಂಡಿನ ದರವನ್ನು ೧ ಆಣೆಯಿಂದ ೧॥ ಆಣೆಗೆ ಏರಿಸಬೇಕೆಂದು ಸೂಚಿಸಿದರು. ರಾ| ಪಡೇಕರರವರು ರಾ| ಶೆಟ್ಟಿಯವರಿಗೆ ಎತ್ತಿಹಿಡಿದು, ಲೋಕಲ್ ಫಂಡ ಪಟ್ಟಿಯ ಆವಶ್ಯಕತೆಯನ್ನೂ, ಮಹತ್ವವನ್ನೂ ಚಿತ್ತವೇಧಕ ಉಪನ್ಯಾಸ ಮಾಡಿ, ನೆರೆದ ಸಭಿಕರಿಗೆ ಬಿಂಬಿಸಲೆತ್ನಿಸಿದರು. ಕಳೆದ ಜುಲಾಯಿ ತಿಂಗಳ ಅಧಿವೇಶನದಲ್ಲಿ ನಿರ್ಣಯವಾದಂತೆ, ಹೊಸ ಕಾಯಿದೆಯನ್ವಯ ಚುನಾವಣೆಯಾಗಿ ಹೊಸ ಬೋರ್ಡು ಅಧಿಕಾರಾರೂಢವಾಗುವವರೆಗೆ, ಈ ದರವನ್ನು ಚರ್ಚಿಸಬಾರದೆಂಬರ್ಥದ ಉಪಸೂಚನೆಯನ್ನು ರಾ| ಮುಕುಂದರಾವ ಉದ್ಯಾವರರವರು ತಂದರು. ಅಧ್ಯಕ್ಷರು ಒಂದು ಶಾಸ್ತ್ರೀಯ ಅಡ್ಡಿಯನ್ನು ಮುಂದೆ ಮಾಡಿದರು ಈ ಉಪಸೂಚನೆಯು ಮೂಲ ಠರಾವಿನೊಳಗಿಂದ ಯಾವ ಪರಿಯಿಂದ ವಿಚಾರಿಸಿದರೂ ಪ್ರಾದುರ್ಭೂತವಾಗುವದಿಲ್ಲೆಂದು ಅಧ್ಯಕ್ಷರು ಇದನ್ನು ಚರ್ಚೆಗೆ ತೆಗೆದುಕೊಳ್ಳಲಿಲ್ಲ. ಬಳಿಕ, ಮೂಲ ಠರಾವಿನ ಮೇಲೆಯೇ ವಾದ-ವಿವಾದವಾಯಿತು ಕಟ್ಟಕಡೆಗೆ, ಮತಕೊಳ್ಳಲಾಯಿತು ನ್ಯಾ[illegible] ಅನುಕೂಲ, ೮ ಮತ ೪ ಪ್ರತಿಕೂಲ, ಹೀಗೆ ಮತ ಬಿದ್ದವು. ಅಧ್ಯಕ್ಷರು ತಮ್ಮ ಮತವನ್ನು ಠರಾವಿಗೆ ಅನುಕೂಲವಾಗಿ ಕೊಟ್ಟರು. ಆದರೂ, ಠರಾವೇನು ಪಾಸಾಗಲಿಲ್ಲ. ಠರಾವಿಗೆ ಅನುಕೂಲ ಮತಕೊಟ್ಟವರ ಹೆಸರುಗಳು — (೧) ಡಾ| ಎಸ್. ಟಿ. ಶೆಟ್ಟಿ, (೨) ರಾ| ಪಡೇಕರ, (೩) ಮಿ| ಆದಮ್ ಸಾಹೇಬ, (೪) ರಾ| ಸುಭೇದಾರ ನಾಯ್ಕ. (ಕಡೆಯ ಮೂವರು ಸರಕಾರದಿಂದ ನೇಮಕಹೊಂದಿದವರು) ಪ್ರತಿಕೂಲ ಮತಕೊಟ್ಟವರು- ರಾ| (೧) ಉದ್ಯಾವರ, (೨) ಗೋಟೆ, (೩) ಪ್ರಭು, (೪) ಕೇಳಕರ, (೫) ಹಲೇರ್ಕರ, (೬) ಹೆಗಡೆ, (೭) ಕಾಮತ, (೮) ರಾವಬಹದ್ದೂರ ಬೋರಕರ. ಇಷ್ಟಾದ ಬಳಿಕ, ಮುಂಜಾವಿನ ಕಾರ್ಯಕ್ರಮವು ಮುಗಿಯಿತು.

ಬಳಿಕ, ಸಂಜೆಗೆ ಹಾಗು ಮಾರನೇ ದಿವಸ ಕೂಡಿ, ಬೋರ್ಡಿನ ಅನೇಕ ಪ್ರಶ್ನೆಗಳ ಚರ್ಚೆಯಾಯಿತು. ಅವುಗಳಲ್ಲಿ ಈ ಕೆಳಗಿನವು ಮುಖ್ಯವಾಗಿವೆ:—

(೧) ದೀವಗಿಯೊಳಗಿನ ಖುಲಿಬಿದ್ದ ಲೋಕಲ್ ಬೋರ್ಡ ಸ್ಥಳದಲ್ಲಿ ತೆಂಗಿನ ತೋಟ ಮಾಡುವದು;

(೨) ಕಾಂಬಾರವಾಡದಲ್ಲಿ ಒಂದು ದವಾಖಾನೆಯನ್ನು ಸ್ಥಾಪಿಸತಕ್ಕದ್ದು. ಇವುಗಳ ಖರ್ಚನ್ನು ಸರಕಾರವು ಕೊಡಲು ತಯಾರಿದ್ದರೆ ಮಾತ್ರ, ಈ ಯೋಜನೆಯನ್ನು ಕೈಕೊಳ್ಳತಕ್ಕದ್ದು.

(೩) ಲೋಕಲ್ ಬೋರ್ಡಿನ ಶಾಲಾ ಮಂದಿರಗಳ ಧರ್ಮಶಾಲೆಗಳ, ಬಾವಿಗಳ ಉಪಯೋಗವನ್ನು ಅಸ್ಪೃಶ್ಯರು ಸಹ ಮಾಡಿಕೊಳ್ಳಬಹುದು.

(೪) ದೇವಿಹೊಸೂರದೊಳಗೆ ಬೇಸಾಯ ಶಾಲೆಯಲ್ಲಿ ಕಾಸಗಿ ಟಿಕ್ಕಿದೊಳಗಿಂದ ಇಬ್ಬ ವಿದ್ಯಾರ್ಥಿಗಳು ಕಲಿಯುತ್ತಿರುವದರಿಂದ, ಆ ಶಾಲೆಗೆ ರೂ. ೧೪೪ ಮಂಜೂರು ಮಾಡಲ್ಪಟ್ಟವು.

(೫) ಸಿರ್ಸಿಯೊಳಗಿನ ದನಗಳ ದವಾಖಾನೆಯಕ್ಕಾಗಿ, ಶಸ್ತ್ರಪ್ರಯೋಗ ಮಂದಿರವನ್ನು ಸ್ಥಾಪಿಸಲು ರೂ. ೪೯ ಮಂಜೂರಾದವು.

(೬) ಕಾರವಾರಿಯ ಡಾ| ಅಣ್ಣಪ್ಪೈರವರು ಅಲ್ಲಿಯ ದನಗಳ ದವಾಖಾನೆಯಕ್ಕೆ ಹೊಂದಿಸಿ, ಒಂದು ಶಸ್ತ್ರಪ್ರಯೋಗಶಾಲೆಯನ್ನು ಕಟ್ಟಿಸಿ, ಅದನ್ನು ಅವರ ಮೃತ ತಂದೆ ರಾವಸಾಹೇಬ ರಾಮಚಂದ್ರ ಅಣ್ಣಪ್ಪೈರವರ ಸ್ಮಾರಕದ ಹೆಸರಿಡಬೇಕೆಂದು ಕೊಟ್ಟ ೫೦೦ ರೂಪಾಯಿಗಳ ಸ್ವೀಕಾರವಾಗಿ, ಈ ಪ್ರಯೋಗಶಾಲೆಗೆ ತಗಲುಬಿದ್ದ ರಕಮನ್ನು ಸಹ ಕೊಡಲು ಡಾ| ಅಣ್ಣಪ್ಪೈರವರಿಗೆ ವಿನಂತಿ ಮಾಡಬೇಕು.

(೭) ಕುಮಟೆಯೊಳಗಿನ ಶೇಟ ಹಂಸರಾಜ ಲದ್ದಾ ಶೇಟರವರು ದನಗಳ ಆಸ್ಪತ್ರೆಯ ನೆಲದಲ್ಲಿ ಬಾವಿ ತೋಡಿಸಬೇಕೆಂದು ಆ ಬಗ್ಗೆ ಕೊಟ್ಟ ರೂಪಾಯಿ ೫೦೦ಗಳ ಸ್ವೀಕಾರವಾಗಿ, ಅದಕ್ಕೆ ತಗಲುವ ಹೆಚ್ಚು ರಕಮನ್ನು ಸಹ, ಕೊಡಲು ಅವರಿಗೆ ವಿನಂತಿ ಮಾಡಬೇಕು.

(೮) ಅಮದಳ್ಳಿಯೊಳಗಿನ ಧರ್ಮಶಾಲೆಯ ಭಂಗಿಯ ಸಂಬಳವನ್ನು ರೂಪಾಯಿ ೫ರಿಂದ ೬ಕ್ಕೆ ಏರಿಸತಕ್ಕದ್ದು. ಈ ಬಗ್ಗೆ ಪ್ರತಿ ತಿಂಗಳಿಗೆ ತಗಲುವ ರೂಪಾಯಿ ೧ರ ಖರ್ಚನ್ನು ಕುಸಿರ್ವಾಟ ಧರ್ಮಶಾಲೆಯ ಭಂಗಿಯ ಸಂಬಳದೊಳಗಿಂದ ೧ ರೂಪಾಯಿ ಕಡಿಮೆ ಮಾಡಿ ವ್ಯವಸ್ಥೆ ಮಾಡತಕ್ಕದ್ದು.

(೯) ಬನವಾಸಿ ದಾಸನಕೊಪ್ಪ ಮಾರ್ಗದ ಬಗ್ಗೆ ಸ್ಥಳಿಕ ಜವಾಬ-ಖರ್ಚಿನ ಪತ್ರಕವನ್ನು ತಯಾರಿಸಿದ ಠರಾವನ್ನು ಸರಕಾರವು ಹೊರಿಸಿದರೆ, ಅದನ್ನು ತಯಾರಿಸಿದ ಸಬ್‌ಓವರಸೀಯರರನ್ನು ಸಸ್ಪೆಂಡ ಮಾಡತಕ್ಕದ್ದು.

ಅಸ್ಪೃಶ್ಯ ೨ ಠರಾವಗಳು ವಿಚಾರಣೀಯವಾಗಿವೆ. ಭಂಗಿಗೆ ೧ ರೂಪಾಯಿ ಒಡಕ ಕೊಡಬೇಕಾದರೆ, ಅಸ್ಪೃಶ್ಯ ಭಂಗಿಯು ೧ ರೂಪಾಯಿ ಆದಾರ ಮಾಡಬೇಕು. ನಮ್ಮ ಜಿಲ್ಹಾ ಬೋರ್ಡು, ಗ್ರಾಂಟಿನ ಬೋರ್ಡು, ಅಧ್ಯಕ್ಷರ ಸಾವಿರಾರು ರೂಪಾಯಿಗಳ ಭತ್ತೆ ಮಂಜೂರು ಮಾಡಲು ಬೋರ್ಡಿಗೆ ಹಣದ ಅಡಚಣೆಯಿಲ್ಲ. ಅಸ್ಪೃಶ್ಯೋದ್ಧಾರದ ಬಗ್ಗೆ ಜಿಲ್ಹಾ ಬೋರ್ಡಿಗೆ ಕಳಕಳಿಯಿಷ್ಟಿದೆಂದು ನೋಡಿರಿ! ಸಸ್ಪೆಂಡ ಮಾಡುವ ಠರಾವು ಮತ್ತು ಮಹ[illegible] ಸಬ್‌ಓವರಸೀಯರರ ಮೇಲೆ ಸುಳ್ಳು ಜವಾಬ-ಖರ್ಚಿನ ಪತ್ರಕ ತಯಾರಿಸಿದ ಆರೋಪವು ಇನ್ನೂ ಸರಕಾರದ ವಿಚಾರಣೆಯಲ್ಲಿದೆ. ಅಷ್ಟರೊಳಗೆ ಸಸ್ಪೆಂಡ ಮಾಡುವ ಠರಾವನ್ನು ಈಗಲೇ ಮಂಜೂರು ಮಾಡಿ, ತಮ್ಮ ಸೇವಕರ ಒದನಾಮಿ ಮಾಡಿದೆ. ಸರಕಾರವು ಆರೋಪಕ್ಕೆ ಇಂಬಿಲ್ಲವೆಂದು ಅಭಿಪ್ರಾಯಪಟ್ಟರೆ, ಬೋರ್ಡಿನ ಠರಾವೊಂದು ವಿಶೇಷ ಉಪಹಾಸ್ಯಪರವಾಗುವದಿಲ್ಲವೇನು? ಠರಾವ ಒಂದಾಗ, ಸಸ್ಪೆಂಡ ಮಾಡಲಿಕ್ಕೆ ಬೋರ್ಡು ಎಲ್ಲಿ ಓಡಿ ಹೋಗುತ್ತಿತ್ತು? ಘಾಬರಿ ಏಕೆ?

ದಕ್ಷಿಣ ಭಾಗದ ಸಹಕಾರಿ ಸಂಘಗಳ ಆಸಿ| ರಿಜಿಸ್ಟ್ರರರು, ಸಹಕಾರಿ ಚಟುವಟಿಕೆಗಳ ಬಗ್ಗೆ ರೂಪಾಯಿ ೫೦೦ರ ಗ್ರಾಂಟು ಬೇಡಿ, ನಂ. ಡಿ. ಎಲ್ ಬಿ./ ೧೭, ತಾ ೮—೯—೧೯೨೩ನೇ ಪತ್ರ ಬರೆದಿದ್ದರು. ಅದರ ವಿಚಾರವಾಗಿ, ಹಣವಿಲ್ಲದ್ದರಿಂದ, ಈ ಪ್ರಶ್ನೆಯನ್ನು ಮುಂದೆ ವಿಚಾರ ಮಾಡಬೇಕೆಂದು ಮುಂದೂಡಿದರು. ಸಹಕಾರಿ ಚಟುವಟಿಕೆಗಾಗಿ ಜಿಲ್ಹಾ ಬೋರ್ಡ ಗ್ರಾಂಟು ಕೊಡುವ ಹೊಸ ಕಾಯುಕ್ತಿಯನ್ನು ಆಸಿಸ್ಟಂಟ ರಿಜಿಸ್ಟ್ರರರು ಕೈಕೊಂಡು, ಸರಕಾರಿ ಖರ್ಚನ್ನು ಕಡಿಮೆ ಮಾಡುವ ವಿಚಾರದಲ್ಲಿದ್ದರೆಂದು ಕಾಣುತ್ತದೆ. ಜಿಲ್ಹಾ ಬೋರ್ಡು, ಮ್ಯುನಿಸಿಪಾಲಿಟಿಗಳಿಂದ ಹೀಗೆ ಗ್ರಾಂಟು ಪಡೆಕೊಂಡರೆ, ಸಹಕಾರಿ ಖಾತೆಯ ತಮ್ಮ ಖರ್ಚು ಪರಸ್ಪರವಾದರೆ, ಸರಕಾರಕ್ಕೆ ಒಂದು ಖರ್ಚಿನ ಬಾಬು ತಪ್ಪಿದಂತಾಯಿತು ಸಹಕಾರಿ ಖಾತೆಯ ನೌಕರರು ಕುಶಲರೆಂದು ಸರಕಾರವು ಭಾರಸು ಕೊಡಲಿಕ್ಕೆಂದು ಮಾರ್ಗವಾಯಿತು. ಲೋಕಲ್ ಬೋರ್ಡು, ಮ್ಯುನಿಸಿಪಾಲಿಟಿಗಳಿಗೆ ಇದ್ದ ಖರ್ಚ ನಡಿಸುವ ಗತಿ ಇಲ್ಲ. ಇದು ಆಸಿಸ್ಟಂಟ ರಿಜಿಸ್ಟ್ರಾರರಿಗೆ ಗೊತ್ತಿಲ್ಲದ ಸಂಗತಿಯಲ್ಲ. ಬೋರ್ಡಿನವರು ಹೊಸ ಹೊಸ ಬಾಬುಗಳನ್ನು ಕೈಕೊಂಡು ನಾಲ್ಕು ಬದಿಯಿಂದ ಲೋಕೋದ್ಧಾರ ಮಾಡುವ ಹಮ್ಮಿಗಕ್ಕೆ ಬೀಳದೆ, ತಮ್ಮ ಖರ್ಚಿನೊಳಗಿನ ಯಾವ ಬಾಬುಗಳನ್ನು ಸರಕಾರಕ್ಕೆ ವಹಿಸಲಿಕ್ಕಾಗುತ್ತದೆಂಬದನ್ನು ವಿಚಾರಿಸಿ, ಜವಾಬ-ಖರ್ಚಿನ ಬಾಬುಗಳ ಹಿಡಿಯಲೆತ್ನಿಸಬೇಕು. [illegible] ಡಿಸ್ಟ್ರಿಕ್ಟ್ ಎಸೋಸಿಯೇಶನ್ ಸಂಸ್ಥೆಗೆ ೫೦ ರೂಪಾಯಿ ಮಂಜೂರು ಮಾಡಿದ್ದು, ಲೋಕೋಪಕಾರದ[illegible]ವಿದ್ದರೂ, ಅದು ಯೋಗ್ಯವಿಲ್ಲ. [illegible] ರೂಪಾಯಿ ೧೪೪ ಮಂಜೂರು ಮಾಡಿ, ವಿದ್ಯಾರ್ಥಿಗಳನ್ನು [illegible] ಅವರ ಖರ್ಚು ಸಹಿಸಬೇಕೆಂಬ ಹೊಸ ನಿಯಮವನ್ನು ಜಿಲ್ಹಾ ಬೋರ್ಡು ಮಾಡಿದ [illegible] ವ್ಯವಸ್ಥೆಯನ್ನು ಲೋಕಲ್ ಬೋರ್ಡು ಮಾಡಿ ಕೊಂಡರೆ ಸಾಕು.

[ಕಾ. ವ.

Notice.

The President, District Local Board, Kanara, hereby notifies to the public residing within the limits of Municipalities and Local Boards the following:—

There will be only one "Local Authority" in this District under the Primary Education Act No. IV of 1923 from the date to be notified by Government. All Municipalities are transferring their primary schools and their management to this "Local Authority" from the date to be notified by Government in accordance with the rules framed by Government. The District Local Board has passed resolution No. 38 on 22-11-23 to take steps for the establishment of a "School Board" which is necessary to be formed by election before taking the control and management of all primary schools in the District under the Primary Education Act as suggested by Government in their resolution No. 2711—F dated 31-10-23 E.D. Those who wish to be elected as members on the "School Board" are therefore requested to send in their written applications duly recommended by two respectable gentlemen so as to reach the undersigned, at Karwar, by the 25th of December, 1923

2. The School Board consists of 12 members who are to be elected by the District Local Board — which is the Local Authority. The No. of members showing the special interests of the public is 9 as shown below. These members shall not necessarily be members of the Local Authority

	Seat.
1. Persons experienced in Education.	1
2. Women.	1.
3. Representatives of Minorities	
(a) Mahomdens.	1.
(b) Christians	1.

4	Representatives of backward classes	2
5	Do Do depressed classes	1
6	Do Do Municipalities which are not local Authorities	2

Two representatives of Municipalities are to be elected by turn as there are 6 Municipalities which are not Local Authorities themselves in this District

3 The remaining three seats are open to public or general interests. Members of any of the special classes who are members of the Local Authority but have not been elected to represent any of these special classes are not excluded from election as ordinary members of the School Board.

4 Those who wish to send their applications for being elected as members on the School Board shall be residents of this District and shall not have disqualifications to be a member of the District Local Board within the meaning of section 9 of the Bombay Local Boards Act. In these applications it should clearly be mentioned for which particular class of interests or the general interests they stand for election.

V. A. COELHO.
President
D. L. B. Kanara

ಜಾಹೀರನಾಮೆ.

[illegible]

31-10-1923 [illegible]

[illegible]

ಅಂತು

[illegible]

ತಾರೀಖ 25-11-1923

V. A. COELHO,
President,
D. L. B. KANARA

ಪ್ರಾಂತಿಕ ಖಿಲಾಫತ ಪರಿಷತ್ತು.

ಕರ್ನಾಟಕ ಪ್ರಾಂತಿಕ ಖಿಲಾಫತ ಪರಿಷತ್ತಿನ ಪ್ರಥಮ ಅಧಿವೇಶನವು [illegible] ಬುಧವಾರ [illegible] ರೀತಿಯಿಂದ ನೆರವೇರಿತು. [illegible] ಪತ್ರಿಕೆಯ ಸಂಪಾದಕರಾದ ಮಿ। [illegible] ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. [illegible] ಮಹಮ್ಮದ ಅಲ್ಲಿ, [illegible] ಗಂಗಾಧರರಾವ ದೇಶಪಾಂಡೇ ಮೊದಲಾದವರು ವಿರಾಜಮಾನರಾಗಿದ್ದರು. [illegible], ರಾಷ್ಟ್ರಗೀತ, ಸ್ವಾಗತಪರ ಪದ್ಯಗಳಾದ ಬಳಿಕ, ಸ್ವಾಗತಾಧ್ಯಕ್ಷರಾದ [illegible] ಸ್ವಾಗತಪರ ಭಾಷಣ ಮಾಡಿದರು. ಬಳಿಕ, [illegible] ಮಹಮ್ಮದ ಅಲ್ಲಿಯವರು [illegible] ಸೇವೆಯನ್ನು [illegible] ಈ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಬೇಕೆಂದು [illegible] ಮಹಮ್ಮದ ಅಲ್ಲಿಯವರು ಸೂಚಿಸಿದರು. ಈ ಸೂಚನೆಯು [illegible]

[illegible]

ಖಾನರವರಿಗೆ ನಿಮ್ಮ ಪ್ರದರ್ಶನ ಮಾಡಿ, ಘಾಜಿ ಮುಸ್ತಫಾ ಕಮಾಲಪಾಷಾರವರಿಗೆ ಅಭಿನಂದನ ಮಾಡಿ, ಮಹಮ್ಮದೀಯರ ಮಾತಿನಂತೆ, ಟರ್ಕಿಯ ಆಜ್ಞೆಗಳಂತೆ, ಖಿಲಾಫತ ಸಂಸ್ಥೆಯನ್ನು ತುರ್ಕರು ಪುನರುದ್ಧರಿಸುವರೆಂದು ವಿಶ್ವಾಸಪ್ರದರ್ಶನ ಮಾಡಿತು. ಜಮಿಯತ-ಉಲ್-ಉಲೆಮಾ ಪ್ರವೇಶವು ಖಲೀಫರ ಅಧಿಕಾರದಲ್ಲಿಯೇ ಇರಬೇಕೆಂತಲೂ, ಮುಸಲ್ಮಾನೇತರರ ಅಂಕಿತದಿಂದ ಬಿಡುಗಡೆ ಮಾಡುವದು ಮಹಮ್ಮದೀಯರ ಪ್ರಥಮ ಕರ್ತವ್ಯವೆಂತಲೂ ಜಾಹೀರು ಮಾಡಿ, ಕರ್ನಾಟಕದೊಳಗಿನ ಮಹಮ್ಮದೀಯರೆಲ್ಲರೂ ತಮ್ಮ ತಮ್ಮ ಖಿಲಾಫತ ಮಂಡಳಗಳನ್ನು ಸುಸಂಘಟಿಸಿ, ಈ ಕಾರ್ಯಕ್ಕೆ ಅವಶ್ಯವಿರುವ ಲೋಕಮತವನ್ನೂ, ನಿಧಿಯನ್ನೂ ಒಟ್ಟುಗೂಡಿಸಬೇಕೆಂತಲೂ ಪರಿಷತ್ತು ಠರಾಯಿಸಿತು. ಈ ಠರಾವಿನ ಮೇಲೆ ಮೌ॥ ಮಹಮ್ಮದ ಅಲ್ಲಿಯವರು ಧರ್ಮಾಂಧರವರಿಗೆ ಜಾಗೃತರಾಗಿ ಧರ್ಮರಕ್ಷಣೆ ಮಾಡಿರೆಂದು ಆಗ್ರಹಪೂರ್ವಕ ಬಿನ್ನೈಸಿಕೊಂಡರು. ಠರಾವಿನ ಚರ್ಚೆ ಮುಗಿದ ಬಳಿಕ, ಖಿಲಾಫತ ನಿಧಿಗಾಗಿ ಸಭೆಯಲ್ಲಿ ಅಲ್ಲಲ್ಲಿ ನಿಧಿಯು ಒಟ್ಟುಗೂಡಿಸಲಾಯಿತು. ಮೌ॥ ಮಹಮ್ಮದ ಅಲ್ಲಿಯವರು ಕೈಯಲ್ಲಿ ಜೋಳಿಗೆ ಹಿಡಿದು ಭಿಕ್ಷೆಬೇಡಲು ಅಬಾಲವೃದ್ಧರು ಸಭಾಸ್ಥಾನದಲ್ಲಿ ಯಥಾಶಕ್ತಿ ದಾನ ಮಾಡತೊಡಗಿದನ್ನು ಕಂಡು, ವಿಶಪ್ರಕಾರ ಆನಂದಪ್ರೇರಣೆಯು ಸಮುದಾಯದಲ್ಲಿ ಸಂಚಾರ ಹೊಂದಿತು. ಮೂರನೇ ಠರಾವಿನಿಂದ ಅಹಿಂಸಾತ್ಮಕ ಅಸಹಕಾರಿತೆಯಿಂದಲೇ ಸ್ವರಾಜ್ಯಸಂಪಾದನೆಯಾಗಬೇಕೆಂತಲೂ, ಕರ್ನಾಟಕದೊಳಗಿನ ಮಹಮ್ಮದೀಯರೆಲ್ಲರೂ ಇತರ ದೇಶಬಾಂಧವರೊಡನೆ ಪ್ರೇಮದಿಂದ, ದೇಶೋದ್ಧಾರಕ್ಕಾಗಿ ಐಕ್ಯದಿಂದ ವರ್ತಿಸಬೇಕೆಂತಲೂ ಠರಾಯಿಸಿತು. ಸ್ವಾರ್ಥತ್ಯಾಗಪೂರ್ವಕ ದೇಶೋದ್ಧಾರಕ್ಕಾಗಿ ಕಾರಾಗೃಹವಾಸವನ್ನನುಭವಿಸಿ ಮರಳಿದ ಲೋಕನಾಯಕರ ಸ್ವಾಗತವನ್ನು ನಾಲ್ಕನೇ ಠರಾವು ಮಾಡಿತು, ಐದನೇ ಠರಾವಿನಿಂದ ಅಕಾಲಿಗಳಿಗೆ ಅಭಿನಂದಿಸಿ, ಮಹಮ್ಮದೀಯರ ಸಹಾಯದ ಅಭಿವಚನ ಕೊಡಲಾಯಿತು. ಕರ್ನಾಟಕದ ರಾಷ್ಟ್ರಸೇವಕರ ನಿಧನದ ಬಗ್ಗೆ ದುಃಖಪ್ರದರ್ಶನದ ೬ನೇ ಠರಾವು ಮಂಜೂರಾದ ಬಳಿಕ ಡಿವಾನ ಸಾಹೇಬ ಜಾನವೇಕರರವರು ಅಧ್ಯಕ್ಷರ ಆಭಾರ ಮನ್ನಿಸಿದರು. ಅಧ್ಯಕ್ಷರು ಸಮಾರೋಪ ಮಾಡುವಾಗ, ಧರ್ಮಸ್ಥಳಗಳನ್ನೆಲ್ಲ ಸ್ವಕೀಯರ ಸ್ವಾಧೀನ ಮಾಡಿರೆಂದು ಆಗ್ರಹಪೂರ್ವಕ ಬಿನ್ನೈಸಿ ಸಭಾವಿಸರ್ಜನೆ ಮಾಡಿದರು. ಆಗ, "ಅಲ್ಲಾ ಹೋ ಅಕಬರ" ಎಂಬ ಒಂದೇ ಧ್ವನಿಯಿಂದ ಸಭಾಗೃಹವೆಲ್ಲ ದುಮುದುಮಿಸಿತು.

ಪಂಜಾಬದೊಳಗಿನ ಪರಿಸ್ಥಿತಿ.

ಲೋಕನಾಯಕರ ಬೆಂಬಲ.

ಕಳೆದ ೨೦ ನೇ ಬುಧವಾರಕ್ಕೆ ಪಂಜಾಬದೊಳಗಿನ ಪರಿಸ್ಥಿತಿಯನ್ನು ವಿಚಾರಿಸಲು ಅಖಿಲ ಭರತಖಂಡದೊಳಗಿನ ೧೬ ಮುಂದಾಳುಗಳು ಅಮೃತಸರದಲ್ಲಿ ನೆರೆದಿದ್ದರು. ಈ ಬಗ್ಗೆ ಇವರೊಳಗೆ ಬಹು ಕಾಲ ಚರ್ಚೆಯಾಗಿ, ಈ ಕೆಳಗಿನಂತೆ ಠರಾವುಗಳನ್ನು ಕೊಂಗ್ರೆಸ ಕಾರ್ಯಕಾರಿ ಮಂಡಳಕ್ಕೆ ಶಿಫಾರಸು ಮಾಡಬೇಕೆಂದು ನಿಶ್ಚಯಿಸಲಾಯಿತು —

೧. ಗುರುದ್ವಾರ ಪ್ರಬಂಧಕ ಕಮಿಟಿ ಹಾಗು ಅಕಾಲಿ ದಳ ಸಂಸ್ಥೆಗಳ ಮೇಲಿನ ಸರಕಾರದ ಹಲ್ಲೆಯು ಇಡೀ ಭರತಖಂಡದೊಳಗಿನ ಅಹಿಂಸಾಮಯ ಚಳವಳಿಯ ಮೇಲಿನದೆಂದು ಈ ಪರಿಷತ್ತಿನ ಮತವಾಗಿದೆ. ೨. ಸಿಖರಿಗೆ ಬೆಂಬಲವನ್ನೀಯುವರೆ ಹಿಂದೂ-ಮುಸಲ್ಮಾನ, ಕ್ರಿಶ್ಚನ್, ಪಾರ್ಸಿ, ಮೊದಲಾದ ಭಾರತೀಯರೆಲ್ಲರೂ ಮುಂಬರಿಯಬೇಕೆಂದು ಆಹ್ವಾನ ಮಾಡುತ್ತದೆ. ಅಕಾಲಿಗಳಿಗೆ ಸಹಾಯವನ್ನೀಯುವರೆ ಅವರ ಬಗ್ಗೆ ಅನುಕೂಲ ಪ್ರಚಾರ ಮಾಡುವರೆ ಒಂದು ಅಕಾಲಿ ಸಹಾಯಕ್ಯ ಮಂಡಳವನ್ನು ನಿರ್ಮಾಣಿಸುವರು. ಅದರೊಳಗಿನ ಸಭಾಸದರು.— ಶ್ರೀ॥ ಸರೋಜಿನೀ ನಾಯಡು, ರಾಜಗೋಪಾಲಾಚಾರ್ಯ, ಪ್ರಕಾಶಂ, ದೇಶಪಾಂಡೆ, ಕೃಷ್ಣಸ್ವಾಮಿ ಅಯ್ಯರ, ನರಸೋಪಂತ ಕೇಳಕರ, ವಲ್ಲಭಭಾಯಿ ಪಟೇಲ, ಜಮನಾದಾಸ, ಜವಾಹರಲಾಲ ನೆಹರು, ಮೋತೀಲಾಲ ನೆಹರು, ಡಾ॥ ಕಿಚಲು, ಬಜಾಜ, ಅಣೆ, ರಾಜೇಂದ್ರ ಪ್ರಸಾದ, ದಾಸ, ಫೂಕನ್ ಮಹಮ್ಮದ ಅಲ್ಲೀ, ಶೌಕತ ಅಲ್ಲೀ, ಸಂತಾನಂ.

ಈ ಕಮಿಟಿಯ ಇಬ್ಬರು ಸಭಾಸದರು ಅಮೃತಸರದಲ್ಲಿ ವಾಸಿಸತಕ್ಕದ್ದು. ಅಕಾಲಿಗಳಿಗೆ ಕಳ್ಳುವಿದ್ದ ಸಹಾಯವನ್ನಿತ್ತು, ರಾಷ್ಟ್ರೀಯ ಸಭೆಯ ವಿದ್ಯಮಾನ ಕಾರ್ಯಕಾರಿ ಕಮಿಟಿಗೂ, ದೇಶಕ್ಕೂ ಅಲ್ಲಿಯ ಪರಿಸ್ಥಿತಿಯನ್ನು ತಿಳಿಸುವ ಏರ್ಪಾಟು ಮಾಡತಕ್ಕದ್ದು.

ಬಳಿಕ, ಕಾಯಿದೇಭಂಗ ಕಮಿಟಿಯ ಸಭಾಸದರು ನೆರೆದು, ಈ ಕೆಳಗಿನಂತೆ ನಿರ್ಣಯಗಳನ್ನು ಮಾಡಿದರು

ಲೋಕನಾಯಕರ ಪರಿಷತ್ತಿನಲ್ಲಿ ನಿರ್ಣಯವಾದಂತೆ, ಅಕಾಲಿಗಳಿಗೆ ಸಹಾಯವನ್ನೀಯಲು ಅಮೃತಸರದಲ್ಲಿ ರಾಷ್ಟ್ರೀಯ ಸಭೆಯು ಪ್ರತಿನಿಧಿಗಳನ್ನಿಡತಕ್ಕದ್ದು. ಅಕಾಲಿಗಳ ಸ್ಥಿತಿಯನ್ನರುಹಲು ಶಕ್ಯ ವಾರ್ತಾಪ್ರಸಾರಕ ಕಾರ್ಯವನ್ನು ನಿರ್ಮಾಣಿಸಬೇಕು. ರಾಷ್ಟ್ರೀಯ ಸಭೆಯ ಪ್ರತಿನಿಧಿಗಳಿಗೆ ನೆರೆಹಿಡಿದಲ್ಲಿ ಅವರ ಸ್ಥಳಗಳನ್ನು ಕೂಡಲೆ, ಭರ್ತಿ ಮಾಡುವ ವ್ಯವಸ್ಥೆ ಇಡತಕ್ಕದ್ದು.

ಅಕಾಲಿಗಳ ಸಹಕಾರಿಯಾಗುವದು ಇಷ್ಟವಿದ್ದದರಿಂದ, ಅಕಾಲಿ ದಳದ ಮೆಂಬರರಾಗಲು ಸಿಖ ಪಂಥದವರೇ ಇರಬೇಕೆಂಬ ನಿಯಮವಿಲ್ಲೆಂದು ತಿಳಿಯುತ್ತದರಿಂದ, ಸರಕಾರವು ಬೇಕಾಯಿದೇಶೀರ ಸಂಘವೆಂದು ಜಾಹೀರಪಡಿಸಿದ ಅಕಾಲಿಗಳ ಸಂಸ್ಥೆಯ ಸಭಾಸದರ ಪಟದಲ್ಲಿ ರಾಷ್ಟ್ರೀಯ ಸಭಾವಿಧಾಯಿಗಳು ತಮ್ಮ ಹೆಸರುಗಳನ್ನು ದಾಖಲ ಮಾಡಿಕೊಳ್ಳತಕ್ಕದ್ದು.

ಸತ್ಯಾಗ್ರಹೀ

ಪರ್ಯಾಯ ಸಂಚಿಕೆ.

——೦——

ಉಡುಪಿ, ಶ್ರೀ ಕೃಷ್ಣನ ಪರ್ಯಾಯ ಮಹೋತ್ಸವದ ಗೌರವಾರ್ಥವಾಗಿ!

ಡಿಶಂಬರ ಆಖೈರಿಗೆ ಮುಗಿಯುವ ಕೊಂಗ್ರೆಸ್ಸಿನ ಗೌರವಾರ್ಥವಾಗಿ!!

ಸಮಸ್ತ ವಿಷಯಗಳೂ ಅನೇಕ ಚಿತ್ರಗಳೊಡನೆ ಚರ್ಚಿಸಲ್ಪಡುವವು. ಹತ್ತು ಹದಿನೆರಡು ಫುಲಸ್ಕೇಪ್ ಸೈಜಿನ ಆರ್ಟಪೇಪರಿನ ಪುಟಗಳ ಮೇಲೆ ರಾಜಕೀಯ ಸಾಮಾಜಿಕ, ಮತವಿಷಯಿಕ ಚಿತ್ರಗಳು ಮುದ್ರಿಸಲ್ಪಡುವವು.

ವಿಷಯಗಳು:— (೧) ರಾಜಕೀಯ, (೨) ಲೋಕವೃತ್ತಾಂತ, (೩) ಮತವಿಷಯಕ, (೪) ಸಾಮಾಜಿಕ, (೫) ವೈದ್ಯಕೀಯ (೬) ವೈಜ್ಞಾನಿಕ, (೭) ಔದ್ಯೋಗಿಕ. (೮) ಕೃಷಿ, (೯) ಸಾಹಿತ್ಯ, (೧೦) ವರ್ತಮಾನಸಾರ— ಇತ್ಯಾದಿ. ಇನ್ನು ಎಷ್ಟೋ ಭಾವಗರ್ಭಿತವೂ, ಉತ್ಸಾಹಕವೂ ಆಗಿರುವ ಲೇಖಗಳು ಉತ್ತಮ ಲೇಖಕರಿಂದ ಬರೆಯಲ್ಪಡುವವು.

ಇಡೀ ಕರ್ನಾಟಕದ ಎಲ್ಲಾ ತರದ ಜನರ ಕೈಗೂ ಇದು ಸೇರುವದರಿಂದ ಜಾಹೀರಾತುಗಳನ್ನು ಕೊಡುವವರಿಗೆ ಸುಸಂದರ್ಭ. ದರ — ಸಾಧಾರಣ ಪುಟ ಒಂದಕ್ಕೆ ರೂ ೧೦, ಅರ್ಧ ಪುಟಕ್ಕೆ ರೂ ೬, ಕಾಲು ಪುಟಕ್ಕೆ ರೂ ೪ ಒಂದು ಎಂಟನೇ ಪುಟಕ್ಕೆ ರೂ ೨-೮-೦ ಪ್ರಕಟಣಗಳನ್ನು ಡಿಶಂಬರ ಆಖೈರಿಯೊಳಗೆ ಕಳುಹಿಸಬೇಕು.

ಗ್ರಾಹಕರೂ ಡಿಶಂಬರ ಆಖೈರಿಯೊಳಗೇನೇ ಹೆಸರು ಬರಕೊಂಡರೆ ಒಳ್ಳೆಯದು. ಸಂಚಿಕೆಯ ಒಂದು ಪ್ರತಿಗೆ ಸತ್ಯಾಗ್ರಹೀ ಚಂದಾದಾರರಿಗೆ ಆಣೆ ಆರು, ಇತರರಿಗೆ ಆಣೆ ಎಂಟು. ಹದಿನೆರಡು ಪ್ರತಿಗಳಿಗಿಂತ ಕಡಿಮೆ ವ್ಹಿ. ಪಿ. ಮಾಡುವದಿಲ್ಲ. ಕಡಿಮೆ ಕೊಳ್ಳುವವರು ಟಪಾಲು ಚೀಟು ಮೂಲಕವಾಗಲೀ, ಮನಿ-ಆರ್ಡರು ಮೂಲಕವಾಗಲೀ ಹಣವನ್ನು ಪೂರಾ ಕಳುಹಿಸಬೇಕು. ಹೆಚ್ಚು ಕೊಳ್ಳುವವರು ರೊಕ್ಕ ಎರಡನ್ನು ಮುಂದಾಗಿ ಕಳುಹಿಸಬೇಕು. ಸಂಚಿಕೆಯು ಜನವರಿ ತಾರೀಖು ೨೦ರ ಒಳಗೆ ಪ್ರಕಟಿಸಲ್ಪಡುವದು. ಸತ್ಯಾಗ್ರಹಿಯ ಆಕಾರದ್ದೇ, ಆರ್ಟಪೇಪರಿನ ರಕ್ಷಾಪತ್ರ (ಕವರು) ಇದ್ದು, ೩೨ ಅಂ ಪುಟಗಳ ಲೇಖಗಳಿರುವವು. ಉತ್ತಮ ಕಾಗದದ ಮೇಲೆ ಮುದ್ರಣ.

ಉಡುಪಿ, ತಾ ೧೮-೧೧-೨೩. } ವ್ಯವಸ್ಥಾಪಕ, ಸತ್ಯಾಗ್ರಹೀ ಕಾರ್ಯಾಲಯ

ಆತ್ಮೋದ್ಧಾರ ಗ್ರಂಥಮಾಲಾ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ವಿಷಯಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ

ಈ ವರೆಗೆ ಪ್ರಕಟವಾದ ಪುಸ್ತಕಗಳು

(೧-೨) ಗ್ರೀಸ ದೇಶದ ಗಾಂಧಿ. (ಸಾಕ್ರೆಟೀಸ) (೩) ಸ್ವಾತಂತ್ರ್ಯಸಾಧನೆ (೪) ಗುರು-ಹಿರಿಯರೂ. ಬಂಧು-ಭಗಿನಿಯರೂ. (೫) ರಾಷ್ಟ್ರೀಯ ಶಿಕ್ಷಣ, (೬) ಸದ್ಗುಣಮಂದಿರ, (ಭಾಗ ೧) (೭) ಸ್ವರಾಜ್ಯಧರ್ಮ (ಅನಾಮಿಕನ ಪುಸ್ತಕ) ಇವಿಷ್ಟು ಪ್ರಕಟವಾಗಿದ್ದು, ೫ ಆಣೆಗೆ ಒಂದರಂತೆ ದೊರೆಯುತ್ತವೆ. ವರ್ಗಣೀದಾರರಿಗೆ ಹಿಂದಿನ ಬೇಕಾದ ಪುಸ್ತಕಗಳು ೪ ಆಣೆಗೆ ಒಂದರಂತೆ ದೊರೆಯುವವು. ೬ ಪುಸ್ತಕಗಳಿಗೆ ಕೂಡಿ ೧। ರೂಪಾಯಿ ಮಾತ್ರ ಅಂಚೆವೆಚ್ಚ ಬೇರೆ. ದ್ವಿತೀಯ ವರ್ಷ ಪ್ರಾರಂಭ, ಅನುಕ್ರಮವಾಗಿ ಮಾರ್ಚ, ಮೇ, ಜುಲೈ, ಸಪ್ಟಂಬರ, ನವಂಬರ, ಜನವರಿ ೧೫ ನೇ ತಾರೀಖಿಗೆ ಒಂದೊಂದು ಪುಸ್ತಕ ಹೊರಡುವವು. ವಾ॥ ವ ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ.

ವಾ॥ ಆ ಹೊದ್ಕೆ,
ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ.

कारवारांत आयुर्वेदिक पाठविद्यालय
उघडण्यांत येणार.

सन १९२४ च्या जानेवारी महिन्या पासून कारवार येथें वरील पाठशाळा उघडण्यांत येणार आहे. आयुर्वेदांतील प्रत्येक विषय प्रमाणपूर्वक व सशास्त्र शिकविण्यात येईल. पूर्ण आयुर्वेदिक शिक्षण तीन वर्षांत शिकविले जाईल. विद्यार्थी निदान मराठी पाच इयत्ता शिकलेला व भांडारकरकृत, संस्कृत तीन पुस्तकें पठलेला असावा. अथवा आयुर्वेद औषध पुस्तकांतील श्लोकाचा अर्थ समजून घेण्या इतका संस्कृत ज्ञान असलेला असावा. त्याचे वय १८ ते २२ वर्षांपर्यंत व प्रकृति सदृढ असावी. सदर पाठशाळेचे वर्ग १ जानेवारी १९२४ पासून सुरू होतील फीचे दर १ ल्या वर्षास दरमहा ६ रुपये, दुसऱ्यास दरमहा

१० रुपये व तिसऱ्या वर्षास दरमहा १२ रुपये प्रमाण ठरविली आहे. पहिल्या वर्षांत फक्त २५ विद्यार्थीच निवडण्यांत येतील. विद्यार्थ्यांनी आपले अर्ज ता. १५ डिसेंबर च्या आंत पाठविले पाहिजेत. अर्जासोबत प्रवेश फीचे ३ रुपये पाठविण्यांत आले पाहिजेत. ज्यांची निवड होणार नाही त्यांची फी परत करण्यांत येईल. पत्रव्यवहार मराठीत अगर कानडी मध्ये करावा.

प्रत्येक वर्षांत शिकविले जाणारे विषय खालील प्रमाणे —

पहिले वर्ष

१ प्रत्येक वनस्पतीचे [illegible] धर्मपरिचय वर्णन [illegible] औषधाचे अनेक [illegible]

२ [illegible] शास्त्र [illegible] प्रत्येक रोगाचें निदान [illegible] लक्षणें [illegible] निवारण करण्यास शिकविले जाईल

३ वरील निदान शास्त्रांत रोग जाणतेनं आलेले विषय [illegible] समक्ष प्रयोग करून [illegible] जातील

दुसरें वर्ष

१ प्रत्येक रोग व निरनिराळ्या शास्त्रीय पद्धतीने (चिकित्सा उपचार) करण्यास शिकविले जाईल

२ प्रत्येक वनस्पतीचे गुणदोष व तत्व विचार शिकविले जातील

३ प्रत्येक रोगावर पथ्यापथ्य विषय शिकविले जातील

तिसरें वर्ष

१. आर्य शरीर शास्त्र, कफ, स्नायु, मज्जातंतु वाहिनी [illegible] चक्रादि प्रत्येक भागांत होणाऱ्या निरनिराळ्या क्रिया प्रत्येक भागाचीं नावें, त्याच प्रमाणें प्रत्येक भाग चित्र रूपानें 'काढून देणें व तेच विषय त्यांना वर्णन करून स्पष्ट करून देणें' वगैरे

२ प्रत्येक रोगावरील हितकारक त्या पासून रसायनां पर्यंत तयार करण्याचे प्रयोग औषधालयांत समक्ष करून दाखविले जातील

३ रसायनें व कृत्रिम रसायन यांची संपूर्ण माहिती आणि प्रत्येक विषया विषयीं संशयनिवृत्ति स्पष्ट रीतीने करण्यात येईल

विशेष माहिती— खालील पत्त्यावर पत्रद्वारें अगर समक्ष मिळेल.

वि सू उमेदवाराकरितां राहण्याची सोय करून देता येईल

शिकविणारे— वैद्य जे एफ फर्नांडिस
आर्योपचालय, कारवार.

एड्रेस— व्यवस्थापक.
आयुर्वेदिक पाठविद्यालय, कारवार

ಫಕ್ತ ಒಂದು ತಿಂಗಳ ಪೂರ್ತ ಸವಲತ್ತು.

ತಿಂಗಳಿಗೆ ರೂಪಾಯಿ ೧೦೦ರಿಂದ ೫೦೦ರ ವರೆಗೆ ಗಳಿಸಿರಿ.

* ಬೇಕಾದಲ್ಲಿ ಸುಲಭವಾಗಿ ಗಳಿಸಿರಿ.

ರೂಪಾಯಿ ೭-೮-೦ ಖರ್ಚುಮಾಡಿರಿ ಮತ್ತು ಸ್ವತಂತ್ರರಾಗಿರಿ.

ಸಹಕಾರವು ಪ್ರತಿಯೊಬ್ಬ ಮಾನವನಿಗೆ ಅವಶ್ಯವಿದ್ದ ವಸ್ತುವು. ಅವನು ಬೇಕಾದರೆ, [illegible] ಬಡವನಿರಲಿ, ಹಳ್ಳಿಗನಿರಲಿ, ಪಟ್ಟಣಗನಿರಲಿ, ಪಾಶ್ಚಾತ್ಯ ಮಾದರಿಯ ಸಹಕಾರ ವನ್ನು ತಯಾರಿಸುವ ನಮ್ಮ ಕ್ರಮವು ಅತಿ ಉತ್ತಮವೆಂದು ಖ್ಯಾತಿಹೊಂದಿದೆ. ಈ ಕ್ರಮದಿಂದ ಶ್ರೇಷ್ಠ, ಕನಿಷ್ಠ, ಪ್ರತಿಯು, ಮೈಗೆ ಹಚ್ಚುವ ಯಾ ಅರಿವೆಗೆ ಹಾಕುವ, ಪರಿಮಳದ ಹಾಗು ಬಣ್ಣಗಳ [illegible] ವನ್ನು ಸುಲಭವಾಗಿ ಯಾರೂ ತಯಾರಿಸಬಲ್ಲನು. **ಈ ಕ್ರಮಕ್ಕೆ ಬೆಂಕಿಯ ಅವಶ್ಯಕತೆಯಿರುವದಿಲ್ಲ.** ನಮ್ಮ ವಿದ್ಯಾರ್ಥಿಗಳು ಯತ್ನಮಾಡುವಾಗ ನಾವು ಬಲು [illegible] ಅವರನ್ನು ನಿರೀಕ್ಷಿಸಿ, ಅವರಿಗೆ ಬೇಕಾದ ಮಾಹಿತಿಯನ್ನು ಪೂರೈಸುತ್ತೇವೆ. ಈ [illegible] ಶಿಫಾರಸು ಪತ್ರಗಳನ್ನು ಕಳುಹಿಸಿರುವರು. ಈ ಪೂರ್ಣ ಕ್ರಮವನ್ನು ರೂ ೭-೮- [illegible] ವ್ಹಿ. ಪಿ. ಮೂಲಕ ಕಳಿಸುವೆವು. ಈ ಕ್ರಮವು ನಿಯಮಿತ ಮಂದಿಗಳಿಗೆ ಮಾತ್ರ ಕಳಿಸಲ್ಪಡುವದು.

[illegible] ಇಚ್ಛೆ ಇದ್ದವರು ಕೆಳಗಿನ ಪತ್ತೆಗೆ ಕೂಡಲೆ ಬರೆಕೊಳ್ಳತಕ್ಕದ್ದು.

International Business Corporation,
Dept. (F) *5357, Gounliguda,* **Hyderabad.** (*Dn*)



ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಅದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಅದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೋ, ಫೋರ್ಟ, ಮುಂಬಯಿ.

ಪಸನಾದ ಸಾಗುವಳಿಯಲ್ಲಿಯೇ ಸಂಪತ್ತಿಯು



ಅಡಕವಾಗಿರುವದು.

ನಮ್ಮ ಕಾರಖಾನೆಯಲ್ಲಿ ತಯಾರಾಗುವ ಸುಧಾರಿಸಿದ [illegible] ನೇಗಿಲಗಳೂ, ಕಬ್ಬಿನ ಗಾಣಗಳೂ, ಇನ್ನೇ ಮುಂತಾದ ವ್ಯವಸಾಯದ ಮುಟ್ಟುಗಳನ್ನು ತರಿಸಿಕೊಂಡು ನಿಮ್ಮ ಬಿಕ್ಕಲಿತನವನ್ನು ಬೆಳೆಸಿಕೊಳ್ಳಿ. ೨೫ ವರ್ಷಗಳ ಅನುಭವದಿಂದ ಈ ಸಾಮಾನುಗಳನ್ನು ತಯಾರ ಮಾಡಿರುತ್ತೇವೆ. ೮೦,೦೦೦ ರೈತರು ಹೊಡುತ್ತಾರೆ. ಇಂದೇ ಪತ್ರ ಬರೆದು 'ವೃ' ಎಂಬ ಕ್ಯಾಟಲಾಗು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ)

Printed and Published by Krishnarao Keshav S[illegible] (E[illegible]) at his Star of Kanara Press Kumta

Reg. No. B. 1270 — Thursday, 6th December, 1923.

ವರ್ಷ ೮. — ಸಂಚಿಕೆ ೭.

ಕಾನಡಾವೃತ್ತ.

THE KANARA NEWS.

ಪತ್ರದ ವರ್ಗಣಿ.
ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಮನೆಯಾರ್ಡರಿಯಿಂದ ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0
ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ
ಕನ್ನಡ, ಇಂಗ್ಲಿಷ ಮ್ಯಾಲಾ ಟೈಪಿನ (೧೫ ಎಮ್ ಉದ್ದ)
೮ ಸಾಲುಗಳವರೆಗೆ ರೂ. 1-0-0
೮ ಸಂತ್ರ ಪ್ರತಿಸಾಲಿಗೆ 0-2-0.
ಹೆಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನ ದಿಂದ ಅಷ್ಟು ಸಾಲುಗಳು ಹಿಡಿ ಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿ ಸಲ್ಪಡುವದು.

—(ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೬ ಮಾಹೆ ಡಿಸೆಂಬರ ಸನ್ ೧೯೨೩ ನೇ ಇಸವಿ.)—

हिंदुस्थानातील रहिवाशांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानातील लोकांस ज्यास्त फायदेशीर आहे

द्राक्षासव- { दीड रतलची किंमत २ रुपये,

रामबाण औषधें —

सर्दी घालविणारें,
मूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

— पिण्यास रुचकर.

क्याटलॉग मागवा,

झंडु फार्मास्युटिकल वर्क्स लिमिटेड,
मुंबई नं. १३

1924 ನೇ ಇಸವಿಯ ಸ್ವರಾಜ್ಯ ಡೈರಿ.

ಸಂಪಾದಕ – ಡಿ. ಕೆ ಭಾರದ್ವಾಜ, ವಿದ್ಯಾಭೂಷಣ.

ರಾಜಕೀಯ, ಆರ್ಥಿಕ ವ್ಯಾಪಾರ, ಸ್ವದೇಶಿ, ಕೈಗಾರಿಕೆ ಮೊದಲಾದ ವಿಷಯಗಳ ಹೊಸ ಸಂಗ್ರಹ! ದೇಶಭಕ್ತರ ನವೀನ ಭಾವಚಿತ್ರಗಳು! ಪ್ರತಿಯೊಬ್ಬರೂ ಅಗತ್ಯವಾಗಿ ಉಪಯೋಗಿಸತಕ್ಕದ್ದು.

ನಮ್ಮಲ್ಲಿ ಯಾವತ್ತೂ ಪೇಟೆಂಟ ಔಷಧ ಸ್ಟೇಶನರಿ ವಗೈರೆ ಹೊಸ ಸ್ಟಾಕ ಬಂದಿದೆ. ತ್ವರೆಮಾಡಿರಿ!

ದಿ. ನ್ಯೂ. ಎಂಪೋರಿಯಮ್,
ಜನರಲ್ ಮರ್ಚಂಟ್ಸ, **ಹೊನ್ನಾವರ.**

ಡಾ। ಮಾಸೂರಕರರ

ಸುಧಾಂಜನ.

ಅಂಜನುಗಳಿಗೆಲ್ಲ ಅರಸು.

ತಲೆಶೂಲಿ, ವಾತ ವೇದನೆ, ಕಮ್ಮು, ಹಲ್ಲು ನೋವು ಇತ್ಯಾದಿಗಳಿಗೆ ಕ್ಷಿಪ್ರ ಗುಣಕಾರಿ ಮದ್ದು ಬೆಲೆ ೭ ಆಣೆ ಮಾತ್ರ. ವ್ಯಾಪಾರಿಗಳಿಗೆ ವಿಶೇಷ ಸವಲತ್ತು ಹೆಚ್ಚಿನ ಮಾಹಿತಿ ಏಜಂಟರಿಂದ

ಏಜಂಟ್ಸ — **ನಾಗರ್ಕಟ್ಟೆ ಬ್ರದರ್ಸ್,**
ಸುಧಾಂಜನ ಡಿಪೋ,
ಕುಮಟಾ. (ಜಿಲ್ಲಾ ಕಾರವಾರ)

ಆನಂದ ಮಂದಿರ.

ಮಾರ್ಮಗೋವಾ ಹಾರ್ಬರ.

ಉತ್ತಮ ಭೋಜನ-ಉಪಹಾರದ ವ್ಯವಸ್ಥೆ.

ಈ ಹೊಟೇಲು ಮಾರ್ಮಗೋವಾ ಹಾರ್ಬರ ದಲ್ಲಿ ಕೇವಲ ಪ್ರವಾಸಿಕರ ಅನುಕೂಲತೆಗಾಗಿ, ನೂತನವಾಗಿ ಸ್ಥಾಪಿಸಲ್ಪಟ್ಟಿದೆ ಇದು ಹಾರ್ಬರದ ನೆರೆಯ ಗುಡ್ಡದ ಮೇಲೆ ಭವ್ಯ ಮಂದಿರದಲ್ಲಿದೆ ಉತ್ತಮ ಭೋಜನ-ಉಪಹಾರವು ದೊರೆಯುವದು ಪ್ರಯಾಣಿಕರೆಲ್ಲರೂ ಇದರ ಉಪಯೋಗ ಮಾಡಿಕೊಳ್ಳಬೇಕಾಗಿ ವಿನಂತಿ.

ಮೆನೇಜರ.

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುನೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಬರೆದು ತಿಳಿದುಕೊಳ್ಳಬಹುದು.

ಪುರುಷೋತ್ತಮ ಲಕ್ಷ್ಮಣಯ್ಯ ಶ್ಯಾನಭಾಗ
ಹೆಗಡೇಕರ, ದುಕಾನ, ಕುಮಟಾ.

ಶುದ್ಧ ರೇಶಮದ ಧೋತರಗಳು.

4 ಮೊಳ ಉದ್ದ	1½ ಮೊಳ ಅಗಲ	ರೂ. 1½ ರಿಂದ 2 ವರೆಗೆ						
5	,,	,,	1½	,,	,,	,,	1-10-0 –5	,,
6	,,	,,	1½	,,	,,	,,	2½ —6	,,
8	,,	,,	2	,,	,,	,,	3½ —10	,,
12	,,	,,	2½	,,	,,	,,	6 —12	,,
16	,,	,,	2½	,,	,,	,,	9 —16	,,

SUN & CO
BENARES CITY

ಇವುಗಳಲ್ಲದೆ ಶುದ್ಧ ಖದ್ದರ್ ರೇಶಿಮೆ ಮಡಿಗಳು, ಸಾಪ್ಟಿಗಳು, ಶಾಲು ಪೀತಾಂಬರಗಳು, ಕಾಶ್ಮೀರ್ ಶಾಲುಗಳು ರುದ್ರಾಕ್ಷಿ, ಜಂಘಂಟೆ, ತಾಳ, ಕಸ್ತೂರಿ ದಾಸಿ, ಆಟದ ಸಾಮಾನುಗಳು, ದೇವರ ಮತ್ತು ಗಾಂಧಿ ಮುಂತಾದವರ ಪಟಗಳಿರುವ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ಯೋಗ್ಯ ಕ್ರಯಕ್ಕೆ ದೊರೆಯುವವು ಕ್ಯಾಟಲಾಗ್ ಇನಾಂ.

ವಿಳಾಸ:— ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶಿಕ್ಷೇತ್ರ.

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ವಿಷಯಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ.

ಈ ವರೆಗೆ ಪ್ರಕಟವಾದ ಪುಸ್ತಕಗಳು.

(೧-೨) ಗ್ರೀಸ ದೇಶದ ಗಾಂಧಿ. (ಸಾಕ್ರೆಟೀಸ) (೩) ಸ್ವಾತಂತ್ರ್ಯಸಾಧನೆ. (೪) ಗುರು-ಹಿರಿಯರೂ. ಬಂಧು-ಭಗಿನಿಯರೂ (೫) ರಾಷ್ಟ್ರೀಯ ಶಿಕ್ಷಣ, (೬) ಸದ್ಗುಣಮಂದಿರ. (ಭಾಗ ೧) (೭) ಸ್ವರಾಜ್ಯ ಧರ್ಮ (ಅನಾಮಿನ ಪುಷ್ಪ) ಇವಿಷ್ಟು ಪ್ರಕಟವಾಗಿದ್ದು, ೫ ಆಣೆಗೆ ಒಂದರಂತೆ ದೊರೆಯುತ್ತವೆ. ವರ್ಗಣಿದಾರರಿಗೆ ಹಿಂದಿನ ಬೇಕಾದ ಪುಸ್ತಕಗಳು ೪ ಆಣೆಗೆ ಒಂದರಂತೆ ದೊರೆಯುವವು. ೬ ಪುಸ್ತಕಗಳಿಗೆ ಕೂಡಿ ೧॥ ರೂಪಾಯಿ ಮಾತ್ರ. ಅಂಚೆವೆಚ್ಚ ಬೇರೆ. ದ್ವಿತೀಯ ವರ್ಷ ಪ್ರಾರಂಭ. ಅನುಕ್ರಮವಾಗಿ ಮಾರ್ಚ, ಮೇ, ಜುಲೈ, ಸಪ್ಟಂಬರ, ನವಂಬರ, ಜನವರಿ ೧೮ ನೇ ತಾರೀಖಿಗೆ ಒಂದೊಂದು ಪುಷ್ಪ ಹೊರಡುವದು. ವಾ. ವ. ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ.

ವಾ. ಅ. ಹೆಗ್ಡೆ,
ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. (ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ,

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತ್ತದೆ. ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ಕಡಿಮೆಯಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹಚ್ಚಿದ ಹೊತ್ತಿನಿಂದ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಸಲವು ಬಾರಿ ಈ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ವೈಸೂರು ಪ್ರದರ್ಶನದಲ್ಲಿ "ಸರ್ಟಿಫಿಕೇಟು ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ:— ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0, ವಿ.ಪಿ. ಖರ್ಚು 0-14 0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ.)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮವು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ಸಿದ್ದವಾದುದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈ ವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲೂ ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0–8–0. 1 ಡ್ರಾಮಿನ (ಪಿಚಕಾರಿ) ಸೀಸೆ 1 ಕ್ಕೆ 0–12–0; ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2–0–0. ಅಂಚೆಯ ವೆಚ್ಚ ಬೇರೆ 0–4–0

ಒಟ್ಟೋದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0-12-0.

Address:- **The Anglo Indian Drug & Chemical Co,**

16, Market, **BOMBAY. 2.**

ಹೊಸ ಉಪದ್ರವನಾಗದೆ

ಕೂದಲು ತೆಗೆಯುವ

ಬಾದಶಾಹೀ ಸಾಬೂನು.

ಈ ಸಾಬೂನವನ್ನು ಬೇಕಾದಲ್ಲಿ ಹಚ್ಚಿದರೆ, ಅಲ್ಲಿನ ಕೂದಲುಗಳು, ಚರ್ಮವನ್ನು ಯಾವದೇ ರೀತಿಯಿಂದ ಕಾಂಟಿಸದೆ, ಅತ್ಯಂತ ಸಫಾಯಿಯಿಂದ ಉದುರಿಹೋಗುತ್ತವೆ. ಚರ್ಮವು ಮೃದುವಾಗುತ್ತದೆ. ೩ ಬಿಲ್ಲೆಗಳ ಪೆಟ್ಟಿಗೆ ೧ ರ ಬೆಲೆ ಒಂದೇ ೧ ರೂಪಾಯಿ. ಟಪಾಲು ಖರ್ಚು ೪ ಆಣೆ. ಒಂಟಿ ಪೆಟ್ಟಿಗೆಯನ್ನು ತರಿಸುವುದರಿಂದ ೩–೩ ಪೆಟ್ಟಿಗೆಗಳಲ್ಲಿ ೪ ಪೆಟ್ಟಿಗೆಗಳ ತರಿಸುತ್ತಿದ್ದ ರೂಪಾಯಿ ೨. ಅಂಚೆ ಹಾಸಲು ಮಾಫಿ. ಬಾದಶಾಹೀ ಸಾಬೂನಿನ ಉತ್ಕೃಷ್ಟತೆಯ ಬಗ್ಗೆ ಕಲಕತ್ತಾ, ಕರಾಚೆಗಳ ಪ್ರದರ್ಶನಗಳಲ್ಲಿ ಸುವರ್ಣ ಪದಕಗಳು ಇನಾಮವಾಗಿ ದೊರೆತಿವೆ.

ನಕಲೀ ಮಾಲಿನ ಬಗ್ಗೆ ಎಚ್ಚರಿಕೆ; ಮೋಸ ಹೋಗಬೇಡಿರಿ.

ರಜಿಸ್ಟರ ನಂ. ೫೬೯. ಇದನ್ನು ನೋಡಿಕೊಂಡು ಖರೆದಿ ಮಾಡಿರಿ. ಅಲ್ಲಿಲ್ಲಿ ವಿಚಾರಿಸ ಬೇಕು.

ಸಿ. ಸಿ. ಮಹಾಜನ ಎಂಡ್ **ಕಂಪನಿ,**

ಮುಂಬಯಿ ನಂ. ೭.

ಟೀಪು:-- ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಯಾ ಮರಾಠಿಯಲ್ಲಿ

ಸರಸ್ವತಿ.

ಉತ್ತಮವರ್ಗದ ಶ್ರೇಷ್ಠವಾದ ಮಾಸಪತ್ರಿಕೆ.

ಈ ಪತ್ರಿಕೆಯಲ್ಲಿ ಸಾಮಾಜಿಕ, ಸ್ತ್ರೀಶಿಕ್ಷಣ, ಐತಿಹಾಸಿಕ ವಿಷಯಗಳಿಗೆ ಸಂಬಂಧಪಟ್ಟ ಅತ್ಯುತ್ತಮವಾದ ಲೇಖನಗಳೂ ಸ್ವಾರಸ್ಯವುಳ್ಳ ಮನೋರಂಜಕವಾದ ನಾಟಕ ಮತ್ತು ಕಾದಂಬರಿಗಳೂ, ಬಾಲಬಾಲಿಕೆಯರಿಗೂ ಮತ್ತು ಸ್ತ್ರೀಯರಿಗೂ ತಿಳಿಯುವಂತಹ ಉತ್ತಮ ಶೈಲಿಯಲ್ಲಿ ಪ್ರಕಟಿಸಲ್ಪಡುವವು. ನೂತನ ಚಂದಾದಾರರಿಗೆ ಕಾರದಾ "ಗ್ರಂಥಮಾಲೆ" ಯಲ್ಲಿ ಈ ವರೆಗೆ ಪ್ರಕಟಿಸಲ್ಪಟ್ಟಿರುವ "ಪ್ರೇಮಂವದೆ, ವಿಮಲ ಸೌಭಾಗ್ಯವತಿ, ಸ್ನೇಹಲತೆ ಹಿಂದೂ ಮಾಹಾತ್ಮ್ಯೆಯರು, ಇತ್ಯಾದಿ ಗ್ರಂಥಗಳೆಲ್ಲಾ ಉಡುಗೊರೆಯಾಗಿ ಕೊಡುವದಲ್ಲದೆ, ಮುಂದೆಯೂ ಪ್ರತಿ ವರ್ಷಕ್ಕೆ ಶಾರದಾ ಗ್ರಂಥಮಾಲೆಯ ಪ್ರಕಟನೆಗಳೆಲ್ಲವನ್ನು ೧ ರೂಪಾಯಿ ೩–೧೨–೦ಕ್ಕೆ ಕೊಡಲಾಗುವದು. ಚಂದಾದಾರರಾಗತಕ್ಕವರು ತಮ್ಮ ವಿಳಾಸವನ್ನು, ಪೂರ್ಣ ಚಂದಾಹಣವನ್ನು ಮನಿಯಾರ್ಡರ್ ಮೂಲಕ ಕಳಿಸಬೇಕಾಗಿ, ವಿ. ಪಿ. ಮೂಲಕವಾಗಿ ತರಿಸಿಕೊಳ್ಳಬಹುದು. ವಾರ್ಷಿಕ ಚಂದಾ ರೂ. ೩–೦–೦ ಮಾತ್ರ.

ವಿಳಾಸ— **ಸಂಪಾದಕ "ಸರಸ್ವತಿ"**

Post Box 57.

ಬಸವನಗುಡಿ, ಬೆಂಗಳೂರು ಸಿಟಿ.

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧. ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೪೫, ೫೦, ೬೦.

೨. ಕಾಲು ಪೆಟ್ಟಿಗೆ ಕಿಂ. ೬೫, ೭೫, ೧೪೦, ೧೬೦

೩. ತಬಲೆ ಜೋಡಿ ಕಿಂ. ೧೨, ೧೫, ೧೮ ೨೦ ೨೫

೪. ಹಾರ್ಮೋನಿಯಮ ಗ್ಯಾಡ ಕಿಂ. ೧, ತಬಲೆ ಗ್ಯಾಡ ಕಿಂ. ೧೨ ೮.

ವಿಶೇಷ ಮಾಹಿತಿಗೆ ನಮ್ಮ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು.

ಪತ್ತೆ :- **ಗೋಪಾಳ ಸಖಾರಾಮ** ಮತ್ತು **ಕಂಪನಿ,** ನಂ ೨೬೩

ಕಾಳಬಾದೇವಿ ರೋಡ, ಮುಂಬಯಿ

Notice.

The President, District Local Board, Kanara, hereby notifies to the public residing within the limits of Municipalities and Local Boards the following :—

There will be only one "Local Authority" in this District under the Primary Education Act No. IV of 1923 from the date to be notified by Government. All Municipalities are transferring their primary schools and their management to this "Local Authority" from the date to be notified by Government in accordance with the rules framed by Government. The District Local Board has passed resolution No. 38 on 22-11-23 to take steps for the establishment of a "School Board" which is necessary to be formed by election before taking the control and management of all primary schools in the District under the Primary Education Act as suggested by Government in their resolution No 2711—F dated 31-10-23 E.D. Those who wish to be elected as members on the "School Board" are therefore requested to send in their written applications duly recommended by two respectable gentlemen so as to reach the undersigned, at Karwar, by the 25th of December, 1923.

2. The School Board consists of 12 members who are to be elected by the District Local Board—which is the Local Authority. The No. of members showing the special interests of the public is 9 as shown below. These members shall not necessarily be members of the Local Authority.

	Seat.
1. Persons experienced in Education.	1.
2. Women.	1.
3. Representatives of Minorities.	
(a) Mahomdens.	1.
(b) Christians.	1.
4. Representatives of bakward classes.	2.
5. ... Do ... Do depressed classes.	1.
6. ... Do ... Do Municipalities which are not local Authorities.	2.
	9.

Two representatives of Municipalities are to be elected by turn as there are 6 Municipalities which are not Local Authorities themselves in this District.

3. The remaining three seats are open to public of general interests. Members of any of the special classes who are members of the Local Authority but have not been elected to represent any of these special classes are not excluded from election as ordinary members of the School Board.

4. Those who wish to send their applications for being elected as members on the School Board shall be residents of this District and shall not have dispualifications to be a member of the District Local Board within the meaning of section 9 of the Bombay Local Boards Act. In these applications it should clearly be mentioned for which special class of interests or for general interests they stand for election.

V. A. COELHO.
President,
D. L. B. Kanara.

ಜಾಹೀರನಾಮೆ.

ವೆ.॥ ಪ್ರೆಸಿಡೆಂಟ ಸಾಹೇಬ ಡಿಸ್ಟ್ರಿಕ್ಟ ಲೋಕಲ ಬೋರ್ಡ ಕಾನಡಾ ಇವರ ಕಡೆಯಿಂದ ಈ ಜಿಲ್ಹೆಯ ಮುನಿಸಿಪಾಲಿಟಿಗಳ ಮತ್ತು ಲೋಕಲಬೋರ್ಡಿನ ಹದ್ದಿನೊಳಗಿನ ಮಹಾಜನ ಜನರಿಗೆ ತಿಳಿಯಪಡಿಸುವದೇನಂದರೆ :—

ಮುಂಬಯಿ ಇಲಾಖೆಯ ಪ್ರಾಥಮಿಕ ಶಿಕ್ಷಣದ ಕಾಯದೇ (ಆಕ್ಟ, ನಂಬರ IV - 1923) ನೇ ದರಂತೆ ಸರಕಾರದವರು ನಿರ್ದಿಷ್ಟ ಮಾಡಿದ ದಿವಸದ ನಂತರ ಪ್ರಾಥಮಿಕ ಶಿಕ್ಷಣದ ಬಗ್ಗೆ ಈ ಜಿಲ್ಹೆಯ "ಲೋಕಲ ಓಥೋರಿಟಿಯು" ಒಂದೇ ಇರುವದು. ಎಲ್ಲಾ ಮುನಿಸಿಪಾಲಿಟಿಗಳು ತಮ್ಮ ಪ್ರಾಥಮಿಕ ಶಾಲೆಗಳನ್ನು ಮತ್ತು ಅವುಗಳ ವ್ಯವಸ್ಥೆ ಮಾಡುವದನ್ನು ಸರಕಾರದವರು ನಿಶ್ಚೈಸಿದ ದಿವಸದಿಂದ ಈ ಲೋಕಲ ಓಥೋರಿಟಿಗೆ ಸರಕಾರು ಮಾಡಿದ ಕೆಲವು ನೇಮಗಳಿಗೆ ಅನುಸರಿಸಿ ಒಪ್ಪಿಸಿಕೊಡುತ್ತವೆ. ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯ ಜವಾಬದಾರಿಯನ್ನು ಈ "ಲೋಕಲ ಓಥೋರಿಟಿಯು" ತೆಗೆದುಕೊಳ್ಳುವದಕ್ಕಿಂತ ಮುಂಚಿತವಾಗಿ ಸದರಿ ಕಾಯದೆಯ ಕಲಂ 3ನೇದರಂತೆ "ಸ್ಕೂಲಬೋರ್ಡ" ಎಂಬ ಸಂಸ್ಥೆಯನ್ನು ಸ್ಥಾಪಿಸಲಿಕ್ಕೆ ಯೋಗ್ಯವ್ಯವಸ್ಥೆ ಮಾಡಬೇಕಾಗಿ ಸರಕಾರ ಠರಾವ 2711 - F. 31-10-1923 (ಎಜ್ಯುಕೇಶನಲ ಡಿಪಾರ್ಟಮೆಂಟ) ನೇದು ಆದಂತೆ, ಡಿಸ್ಟ್ರಿಕ್ಟ ಲೋಕಲಬೋರ್ಡಿನಲ್ಲಿ ಈ ಕುರಿತು ತಾರೀಖು 22-11-1923ನೇ ದಿವಸ ನಂಬರ 38ನೇ ಠರಾವ ಆಗಿರುತ್ತದೆ. ಅದಕಾರಣ, ಈ ಸ್ಕೂಲಬೋರ್ಡ ಎಂಬ ಸಂಸ್ಥೆಯ ಸಭಾಸದರಾಗಿ ಆರಿಸಲ್ಪಡಲಿಕ್ಕೆ ಇಚ್ಛಿಸುವವರಿಗೆ ತಾರೀಖು 25—12—1923ನೇ ದರ ವಳಗೆ ನಮ್ಮ ಕಚೇರಿಯಲ್ಲಿ ಮುಟ್ಟುವಂತೆ ಎರಡು ಜನ ಸಭ್ಯಗ್ರಹಸ್ಥರಿಂದ ಶಿಫಾರಸಿಸಲ್ಪಟ್ಟ ತಮ್ಮ ಲೇಖಿ ಅರ್ಜಿಗಳನ್ನು ಕೆಳಗೆ ಸಹಿ ಮಾಡಿದವರ ಕಡೆಗೆ ಕಳುಹಿಸಿಕೊಡಬೇಕೆಂಬಾ ವಿನಂತಿ ಇರುತ್ತದೆ.

2. ಸ್ಕೂಲಬೋರ್ಡಿನ ಸಭಾಸದರ ಸಂಖ್ಯೆಯು ೧೨ ಇರುತ್ತದೆ. ಲೋಕಲ ಓಥೋರಿಟಿಯಾದ ಡಿಸ್ಟ್ರಿಕ್ಟ ಬೋರ್ಡಿನವರು ಅವರನ್ನು ಆರಿಸಿ ತೆಗಿಯುವರು. ಜನರ ಶೇಷ ಹಿತಗಳನ್ನು ತೋರಿಸುವ ಸಭಾಸದರ ಸಂಖ್ಯೆಯು ಈ ಕೆಳಗಿನಂತೆ ೯ (ಒಂಬತ್ತು) ಇರುತ್ತದೆ. ಈ ಸಭಾಸದರು ಲೋಕಲ ಓಥೋರಿಟಿಯ ಸಭಾಸದರೇ ಇರಬೇಕೆಂಬಾ ಇಲ್ಲ.

	ಸಂಖ್ಯೆ.
(1) ಶಿಕ್ಷಣದಲ್ಲಿ ಅನುಭವಪೂರ್ಣ ಜನರು	1.
(2) ಹೆಂಗಸರು.	1.
(3) ಕಡಿಮೆ ಜನಸಂಖ್ಯೆಯ ವರ್ಗದ ಜನರು.	
(ಅ) ಮುಸಲ್ಮಾನ ಜನರು. ...	1
(ಬ) ಕ್ರಿಶ್ಚನ ಜನರು. ...	1
(4) ಹಿಂದೆ ಉಳಿದ ಜಾತಿಯ ಜನರು. ...	2
(5) ಅಸ್ಪೃಶ್ಯ ವರ್ಗದ ಜನರು. ...	1
(6) ಮುನಿಸಿಪಾಲಿಟಿಗಳಬಗ್ಗೆ ಪ್ರತಿನಿಧಿಗಳು	2
ಅಂತು,	9

ಈ ಜಿಲ್ಹೆಯಲ್ಲಿ ಲೋಕಲ ಓಥೋರಿಟಿಯಲ್ಲದ ಅಂದರೆ, ಪ್ರಾಥಮಿಕ ಶಿಕ್ಷಣವನ್ನು ಸರಕಾರದವರು ನಿರ್ದಿಷ್ಟ ಮಾಡಿದ ಕೆಲವು ನೇಮಗಳಿಗೆ ಅನುಸರಿಸಿ ಡಿಸ್ಟ್ರಿಕ್ಟ ಲೋಕಲಬೋರ್ಡಿಗೆ ಒಪ್ಪಿಸಿಕೊಡುವ ಆರು ಮುನಿಸಿಪಾಲಿಟಿಗಳು ಇರುವದರಿಂದ ಅವುಗಳಬಗ್ಗೆ ಪಾಳಿಯಿಂದ ಎರಡು ಪ್ರತಿನಿಧಿಯರನ್ನು ಆರಿಸುವರು.

3. ಉಳಿದ ಮೂರು ಜಾಗೆಗಳು ಮೇಲೆ ತೋರಿಸಿದ ಆರು ವಿಶೇಷ ಹಿತದ ವರ್ಗದವರನ್ನು ಬಿಟ್ಟು ಬೇರೆ ಸಾಮಾನ್ಯ ವರ್ಗದವರಿಗೆ ತೆರದವಿರುತ್ತವೆ. ಅದರೆ, ಯಾರಾದರು ಲೋಕಲ ಓಥೋರಿಟಿಯು ಅಂದರೆ ಡಿಸ್ಟ್ರಿಕ್ಟ ಲೋಕಲಬೋರ್ಡಿನ ಸಭಾಸದರಾಗಿದ್ದು, ಮೇಲೆ ತೋರಿಸಿದ ಆರು ವಿಶೇಷ ಹಿತದ ವರ್ಗದವರ ಬಗ್ಗೆ ಆರಿಸಲ್ಪಡದಿದ್ದರೆ, ಅವರು ಸ್ಕೂಲಬೋರ್ಡಿನ ಸಾಮಾನ್ಯ ಸಭಾಸದರಾಗಿ ಆರಿಸಲ್ಪಡಲಿಕ್ಕೆ ಪ್ರತಿಬಂಧ ಇರುವದಿಲ್ಲ.

4. ಸ್ಕೂಲಬೋರ್ಡಿನ ಸಭಾಸದರಾಗಿ ಆರಿಸಲ್ಪಡುವ ಬಗ್ಗೆ ಅರ್ಜಿಗಳನ್ನು ಕಳುಹಿಸುವವರು ಈ ಜಿಲ್ಹೆಯ ನಿವಾಸಿಕರಿರಲೇ ಬೇಕು. ಮತ್ತು ಅವರಿಗೆ ಮುಂಬಯಿ ಲೋಕಲಬೋರ್ಡ ಆಕ್ಟಿನ ಕಲಂ 9ನೇ ದರಲ್ಲಿ ನಮೂದಿಸಿರುವ ಅಯೋಗ್ಯತೆಗಳು ಇರಕೂಡದು. ಸಭಾಸದರಾಗಿ ಆರಿಸಲ್ಪಡಲಿಕ್ಕೆ ಅರ್ಜಿಗಳನ್ನು ಕಳಿಸುವವರು ಯಾವ ವಿಶೇಷ ಹಿತದ ವರ್ಗದವರ ಬಗ್ಗೆ ತಾವು ಉಮೇದ್ವಾರರಾಗಿ ನಿಂತಿದ್ದೇವೆಂಬದು ಅರ್ಜಿಯಲ್ಲಿ ಸ್ಪಷ್ಟವಾಗಿ ಬರೆಯತಕ್ಕದ್ದು ಬೇಕು. ತಾರೀಖು 25-11-1923.

V. A. COELHO,
President,
D. L. B. KANARA.

೯ನೇ ಕರ್ನಾಟಕ ಸಾಹಿತ್ಯ-ಸಮ್ಮೇಳನವು.

ಮೊದಲೇ ಗೊತ್ತಾದಂತೆ ತಾರೀಖು ೪ನೇ ... ಸಾಯಂಕಾಲದಲ್ಲಿ ... ಮಹಾಮಹೋಪಾಧ್ಯಾಯ ಮದ್ರಾಸ ಇವರ ಅಧ್ಯಕ್ಷತೆಯಲ್ಲಿ ಕೆಲಸಕ್ಕೆ ಆರಂಭವಾಯಿತು. ಶ್ರೀ ಕೆಂಭಾವಿ ವಕೀಲ ಶ್ರೀನಿವಾಸ ... [illegible] ... ಕರ್ನಾಟಕದ ... [illegible] ... ಸ್ವಾಗತದ ಪದಗಳಾದ ಬಳಿಕ. ಸ್ವಾಗತ ಸಮಿತಿ ಅಧ್ಯಕ್ಷರಾದ ... ಭಾಷಣವಾಯಿತು. ಅದರ ಸಾರಾಂಶವು- ಪ್ರತಿನಿಧಿಗಳ ಸ್ವಾಗತ ಮಾಡಿದ ಬಳಿಕ ಅವರು ಅಂದದ್ದೇನಂದರೆ ಕರ್ನಾಟಕದ ಬೇರೆ ಬೇರೆ ಭಾಗಗಳಿಂತಲೂ ನಮ್ಮ ವಿಜಾಪುರ ಜಿಲ್ಲೆಯು ಬಹಳ ಹಿಂದುಳಿದಿದೆ. ನಮ್ಮ ಜಿಲ್ಲೆಯಲ್ಲಿರುವ ಮರಾಠಿ ... ಅಲ್ಪಸಂಖ್ಯಾತರಾದ ನಮ್ಮ ಮೇಲೆ ಪ್ರಬಲವಾದ್ದರಿಂದ, ಇಲ್ಲಿಯ ಕರ್ನಾಟಕಸ್ಥರಲ್ಲಿ ಕರ್ನಾಟಕತ್ವದ ಭಾವನೆಯೇ ಈಗ ಲೋಪವಾಗಿದೆ. ಇದರಿಂದ ನಮ್ಮ ಜನರಲ್ಲಿ ಸ್ವಭಾಷಾಭಿಮಾನವು ದೂರವಾಗಿ ಹೋಗಿಬಿಟ್ಟಿದೆ. ಉತ್ತಮ ಗ್ರಂಥಕರ್ತರೂ ಭಾಷಾಪ್ರೇಮಿಗಳೂ ಬಹಳ ವಿರಳವಾಗಿದ್ದಾರೆಂಬುದು ಬಹಳ ಶೋಚನೀಯವು. ಆದರೆ, ಇಂಥ ಸ್ಥಿತಿಯು ನಮ್ಮ ಪೂರ್ವದ ಕರ್ನಾಟಕದಲ್ಲಿರಲಿಲ್ಲ. ಈ ದೇಶವು ಆ ಕಾಲಕ್ಕೆ ಎಲ್ಲ ತರದ ಸುಧಾರಣಾ ಕಾರ್ಯಗಳಲ್ಲಿ ಉಚ್ಛಸ್ಥಾನವನ್ನು ಪಡೆದಿತ್ತು. ಹಿಂದೂ ದೇಶದಲ್ಲಿ ಕಾಲ ಕಾಲಕ್ಕೆ ಹೊರಟ ಸುಧಾರಣಾ ತರಂಗಗಳಲ್ಲನೇಕವುಗಳು ನಮ್ಮ ಕರ್ನಾಟಕ ಭೂಮಿಯಿಂದಲೇ ಹೊರಟಿವೆ. ರಾಮಾನುಜಾಚಾರ್ಯ, ಮಧ್ವಾಚಾರ್ಯ, ಬಸವೇಶ್ವರರಂಥ ಮಹಾನುಭಾವರ ಪವಿತ್ರ ಧರ್ಮಗಂಗೆಯ ಉಗಮವು ಕರ್ನಾಟಕದಲ್ಲಿ ಆಗಿದೆ; ಅದರಂತೆಯೇ ವಿಜ್ಞಾನೇಶ್ವರರಂಥ ಧರ್ಮಶಾಸ್ತ್ರಕರ್ತರೂ, ವಿದ್ಯಾರಣ್ಯ, ಸಾಯಣಾಚಾರ್ಯರಂಥ ವಿದ್ವನ್ಮಣಿಗಳೂ ನಮ್ಮ ದೇಶದಲ್ಲಿ ಹುಟ್ಟಿ, ತಮ್ಮ ಶ್ರೇಷ್ಠ ವಿಚಾರಗಳಿಂದ ಹಿಂದೂ ಸುಧಾರಣೆಯಲ್ಲಿ ಕ್ರಾಂತಿಯನ್ನು ಮಾಡಿದರು. ನಮ್ಮ ದೇಶದಲ್ಲಿ ಆ ಕಾಲಕ್ಕೆ ಚಾಲುಕ್ಯ, ರಾಷ್ಟ್ರಕೂಟ, ಹೊಯಿಸಳ, ವಿಜಯನಗರ ಮೊದಲಾದ ಪ್ರಬಲ ರಾಷ್ಟ್ರಗಳು ನೆಲಸಿದ್ದವು. ಮತ್ತು ಈ ರಾಜರುಗಳಲ್ಲಿ ಬಹು ಜನರು ವಿದ್ವಜ್ಜನಪ್ರೇಮಿಗಳಾಗಿದ್ದರು. ಇವರು ಸಂಸ್ಕೃತ ಮತ್ತು ಕನ್ನಡ ಭಾಷೆಗಳ ಹೆಚ್ಚಳಕ್ಕೆ ಬಹಳ ಉತ್ತೇಜನ ಕೊಟ್ಟರು. ಆದ್ದರಿಂದಲೇ ಆಗ ಅನೇಕ ವಿದ್ವಜ್ಜನರು ಪ್ರಾದುರ್ಭವಿಸಿ ಕನ್ನಡ ಭಾಷೆಯಲ್ಲಿ ಮಹತ್ತ್ವದ ಗ್ರಂಥಗಳನ್ನು ರಚಿಸಿದರು. ಈಗಿನ ಕರ್ನಾಟಕಕ್ಕೆ ನಮ್ಮ ವಿಜಾಪುರದ ಜಿಲ್ಲೆಯೇ ಮಧ್ಯಸ್ಥಾನವಾದುದರಿಂದಲೂ, ಈ ಜಿಲ್ಲೆಯಲ್ಲಿರುವ ಇದರ ಮೇರೆಯ ಸಮೀಪದಲ್ಲಿಯೂ ಬೇರೆ ಬೇರೆ ಕಾಲಕ್ಕೆ ಕನ್ನಡ ರಾಜರ ರಾಜಧಾನಿ ಪಟ್ಟಣಗಳಿದ್ದವರಿಂದಲೂ, ಈ ಪ್ರದೇಶದಲ್ಲಿ ಸಹ ಅನೇಕ ಗ್ರಂಥಕರ್ತರು ಆಗಿ ಹೋಗಿದ್ದಾರೆ. ಕವಿ ಚಕ್ರವರ್ತಿಯೆಂದೆನಿಸಿಕೊಂಡ ಕವಿ ರನ್ನನು ಈ ಜಿಲ್ಲೆಗೆ ಸಮೀಪವಾಗಿರುವ ಮುಧೋಳದವನು. ಕವಿಶಿರೋಮಣಿಯಾದ ಆದಿಪಂಪನು ... ನಮ್ಮ ವಿಜಾಪುರದಲ್ಲಿಯೇ ಜನಿಸಿದನು. ಕನ್ನಡ ಪಂಚತಂತ್ರಕರ್ತನಾದ ... ಸಿಂಹನು ಪಟ್ಟದಕಲ್ಲಿನವನು. ಮಹಾಕವಿಯೆಂದೆನಿಸಿಕೊಂಡ ಆಗರವನು ... ಕವಿಶ್ರೇಷ್ಠನಾದ ಕೇಶಿರಾಜನು ... ವೀರಶೈವ ಮತೋದ್ಧಾರಕನಾದ ಬಸವೇಶನು ಬಾಗೇವಾಡಿಯವನು. ಪ್ರಸಿದ್ಧ ವಚನಕಾರರಲ್ಲಿ ಗಣನೆಹೊಂದಿದ ಮಾಚಿದೇವನು ಹಿಪ್ಪರಗಿಯವನು. ಇದರಂತೆಯೇ ಬೇರೆ ವಚನಕಾರರಾದ ಹಾವಿನಾಳ ಕಲ್ಲಯ್ಯನವರೂ, ಚಿಕ್ಕಬಳ್ಳಿಗೆಯ ಚನ್ನರಾಮನೂ, ಕಕ್ಕಳವೇರಿಯ ಕಕ್ಕಯ್ಯನೂ ಇದೇ ಜಿಲ್ಲೆಯವರಾಗಿದ್ದರು. ರಾಮಾಯಣವನ್ನು ಸೊಗಸಾದ ಕನ್ನಡದಲ್ಲಿ ರಚಿಸಿ, ಹೆಸರುವಾಸಿಯಾದ ಕವಿ ನರಹರಿಯು ವಿಜಾಪುರದಿಂದ ಮೂರು ಮೈಲುಗಳ ಮೇಲಿರುವ ತೊರವಿಯವನು. ಪ್ರೌಢವಾದ ಕಾವ್ಯವನ್ನು ಬರೆದ ಆದ್ಯನು ಕೊಲ್ಹಾರದವನು. ಇದಲ್ಲದೆ ಈಗಿನ ಆಲ್ಲಿಯ ದೇಶಾಯಿಯರ ಪೂರ್ವಜರು ... ಈ ಕಾಲಕ್ಕೆ ನಮ್ಮ ವಿಜಾಪುರ ಜಿಲ್ಲೆಯಲ್ಲಿ ಆಗಿ ಹೋದ ಜೈನ, ವೀರಶೈವ, ಬ್ರಾಹ್ಮಣ ಕವಿಶ್ರೇಷ್ಠರ ಅನೇಕ ಹೆಸರುಗಳನ್ನು ಕೊಡಬಹುದು. ಇವರೆಲ್ಲರೂ ಅನೇಕ ಉದ್ಗ್ರಂಥಗಳನ್ನು ಬರೆದು, ಕರ್ನಾಟಕದ ಸಂಸ್ಕೃತಿಯ ಅಭಿವೃದ್ಧಿಯನ್ನು ಮಾಡಿರುವರು. ವಿಜಾಪುರವು ಮೊಗಲರ ಕೈಸೇರುವವರೆಗೂ ಮುಸಲ್ಮಾನರು ವಿಜಾಪುರದಲ್ಲಿ ಆಳುತ್ತಿದ್ದಾಗ ಸಹ, ನಮ್ಮ ಜಿಲ್ಲೆಯು ಶ್ರೇಷ್ಠ ಸ್ಥಿತಿಯಲ್ಲಿಯೇ ಇತ್ತು. ಇದಕ್ಕೆ ವಿಜಾಪುರ ಪಟ್ಟಣದಲ್ಲಿ ಈಗ ಸಹ ಕಂಗೊಳಿಸುತ್ತಿರುವ ಭವ್ಯವಾದ ಜಗತ್ಪ್ರಸಿದ್ಧ ಕಟ್ಟಡಗಳೇ ಸಾಕ್ಷಿಯಾಗಿವೆ. ಆದರೆ, ವಿಜಾಪುರದ ಬಾದಶಾಹಿಯು ನಾಶವಾದ ಬಳಿಕ, ನಮ್ಮ ದೇಶದಲ್ಲಿ ಅರಾಜಕತೆಯು ಉತ್ಪನ್ನವಾಗಿ, ಈ ಅರಾಜಕತೆಯ ಕಾಲದಲ್ಲಿ ನಮ್ಮ ಪ್ರದೇಶವು ಬೇರೆ ಬೇರೆ ಮಹಾರಾಷ್ಟ್ರ ಮಾಂಡಲಿಕರ ಅಧೀನಕ್ಕೆ ಒಳಪಟ್ಟಿತು. ಇವರ ಸ್ವಂಶಾಹಿಕೆಯ ಕಾಲದಲ್ಲಿ ಕರ್ನಾಟಕಸ್ಥರ ಬೆಳವಣಿಗೆಯೂ, ಅವರ ಪೂರ್ವದ ಶ್ರೇಷ್ಠ ಸ್ಥಿತಿಯೂ ತೀರ ಕುಗ್ಗಿ ಹೋದವು. ಆದರೆ, ಇತ್ತಲಾಗಿ ಕನ್ನಡಿಗರಲ್ಲಿ ಸ್ವಾಭಿಮಾನದ ಜ್ಯೋತಿಯು ಬೆಳಗಿದ್ದು, ಈ ಭಾಷೆಯು ಮೋಹಕವು ಕಾಣಿಸಿಯಾಗುತ್ತಲಿದೆ. ಹೊಸ ಬರಹಗಾರರು ಮುಂದೆ ಬರುತ್ತಿದ್ದಾರೆ. ಆದರೂ, ಪರಪ್ರಾಂತಗಳಲ್ಲಿ ನಡೆದ ಸಾಹಿತ್ಯ ಪ್ರಗತಿಯ ಮಾನದಿಂದ ನಾವು ತೀರ ಹಿಂದುಳಿದವರಾಗಿದ್ದೇವೆ. ಕನ್ನಡ ನುಡಿಯ ವಿಷಯಕ್ಕಿರುವ ತಿರಸ್ಕಾರಭಾವವನ್ನು ತೊರೆದು, ಇಂಗ್ಲಿಷ ವಿದ್ಯಾಕೋವಿದರಾದ ಕರ್ನಾಟಕಸ್ಥರೂ ಗ್ರಂಥರಚನಾಕಾರ್ಯಕ್ಕೆ ಆರಂಭಿಸಿದ ಹೊರತು, ನಮ್ಮ ಭಾಷಾಭಿವೃದ್ಧಿಯಾಗದು. ಆದ್ದರಿಂದ, ನಮ್ಮ ಕನ್ನಡಿಗರು ಇನ್ನು ಮೇಲೆ ಈ ತರದ ತಮ್ಮ ತಾತ್ಸಾರಭಾವವನ್ನು ತೊಲಗಿಸಿ, ಕನ್ನಡ ವಾಙ್ಮಯ ಸೇವೆಯಲ್ಲಿ ಈಗಿನ ಕಾಲಕ್ಕೆ ಬೇಗ ತೊಡಗುವದು ಅತ್ಯಂತ ಅವಶ್ಯವಾಗಿದೆ. ಇತಿಹಾಸ ಸಂಶೋಧಿಸುವದು, ಹಳೇ ಕಾವ್ಯಗಳನ್ನು ಬೆಳಕಿಗೆ ತರುವದು, ಅರ್ವಾಚೀನ ಶಾಸ್ತ್ರಗಳ ಮೇಲೆ ಗ್ರಂಥ ಬರೆಯುವದು ಮುಂತಾದ ಹಲವು ವಿಧದಿಂದ ನಾವು ವಾಙ್ಮಯಸೇವೆಯನ್ನು ಮಾಡಬಹುದು.

ಸ್ವಾಗತಾಧ್ಯಕ್ಷರ ಭಾಷಣವಾದ ಬಳಿಕ, ಸಭಾಧ್ಯಕ್ಷ ಶ್ರೀ ಶಿವಶಂಕರ ಶಾಸ್ತ್ರಿಗಳ ಭಾಷಣವಾಯಿತು. ಅದು ಅಷ್ಟೊಂದು ಆಳವಾದ ವಿಚಾರಗಳುಳ್ಳದ್ದಿರಲಿಲ್ಲ; ಮೇಲಾಗಿ, ಗಡಚಾದ ಹಳ ಭಾಷೆಯಲ್ಲಿ ಬರೆಯಲ್ಪಟ್ಟದ್ದರಿಂದ ಬಹುಜನರಿಗೆ ಅರ್ಥವಾಗದೆ ಹೋಗಿ ಅವರು ನಿರಾಶೆಯುಳ್ಳವರಾದರು. ಹಳೇ ಕಾವ್ಯಗಳೇ ಕಾವ್ಯ, ಈಗಣ ಕವಿಗಳು ಕವಿಗಳಲ್ಲ; ಕವಿಗಳೆಂದು ಅವರಂದ ಮಾತು ತರುಣ ಸಾಹಿತ್ಯ ಸೇವಕರಿಗೆ ಅಸಂತೋಷವನ್ನುಂಟು ಮಾಡಿತು. ಈ ಭಾಷಣವಾದ ಬಳಿಕ ಅಂದಿನ ಕಾರ್ಯಕ್ರಮವು ಮುಗಿದು, ವಿಷಯನಿಯಾಮಕ ಕಮಿಟಿಯ ಜನರು ಆರಿಸಲ್ಪಟ್ಟರು. ಮುಂದೆ ೨೨ ಹಾಗೂ ೨೩ ನೇ ತಾರೀಖಿಗೆ ವಿಷಯನಿಯಾಮಕ ಕಮಿಟಿಯಲ್ಲಿ ಪಾಸಾದ ಠರಾವುಗಳ ಸಭೆಯ ಎದುರಿಗಿಡಲ್ಪಟ್ಟು ಪಾಸಾದವು; ಮಧ್ಯ ಮಧ್ಯ ಕೆಲವು ನಿಬಂಧಗಳೂ, ಸವಿಗವನಗಳೂ ಓದಲ್ಪಟ್ಟವು. ಇಂತು ಮೂರು ದಿನದ ಕಾರ್ಯಕ್ರಮವು ಮುಗಿದ ಬಳಿಕ, ಶುಕ್ರವಾರ ದಿನ ಮುಂಜಾನೆ ಸಾಹಿತ್ಯ ಸಭೆಗೆ ಬಂದ ಅತಿಥಿಗಳ ಹಾಗೂ ಕವಿಗಳ ಮತ್ತು ಲೇಖಕರ ಫೋಟೋ ತಕ್ಕೊಳ್ಳುವ ಕೆಲಸವಾಯಿತು.

ಈ ಸಮ್ಮೇಳನದಲ್ಲಿ ಪಾಸಾದ ಕೆಲವು ಠರಾವುಗಳ ಮತಿತಾರ್ಥವು:—

೧ ಇಂಗ್ಲಿಷ ಶಾಲೆಗಳಲ್ಲಿ ಮಾತೃಭಾಷೆಯ ದ್ವಾರವಾಗಿಯೇ ಶಿಕ್ಷಣ ಕೊಡಬೇಕು.

೨. ಕರ್ನಾಟಕದೊಳಗಿನ ಮುದ್ರಾ ಸಂಸ್ಥಾನಗಳಲ್ಲಿ ಕೋರ್ಟು-ಕಚೇರಿಗಳಲ್ಲಿ ಕನ್ನಡವೇ ದರ್ಬಾರಿ ಭಾಷೆಯಾಗಬೇಕು. ಕರ್ನಾಟಕದೊಳಗಿನ ಸಂಸ್ಥಾನಿಕರೆಲ್ಲರೂ (ಹೈದ್ರಾಬಾದ ಸಹಿತ) ಪ್ರತಿಯೊಂದು ಊರಲ್ಲಿ ಕನ್ನಡ ಶಾಲೆಗಳನ್ನೇ ಇಡಿಸಬೇಕು.

೩ ಸಾಹಿತ್ಯ ಪರಿಷತ್ತಿನ ನಿರ್ಬಂಧನೆಗಳಲ್ಲಿ ಹೊಸ ಬದಲಾವಣೆಗಳನ್ನು ಬೇಗ ಮಾಡಬೇಕು. ಆದಾಗುವವರೆಗೆ, ಅಧ್ಯಕ್ಷರನ್ನು ಆರಿಸುವ ಕ್ರಮವು ಹೀಗಿರಬೇಕು: ಸ್ವಾಗತ ಸಭೆಯವರು ಸೂಚಿಸಿದ ನಾಲ್ಕು ಹೆಸರುಗಳಲ್ಲಿ ಯಾವದೊಂದನ್ನು ಬೆಂಗಳೂರಿನ ಕಾರ್ಯಕಾರಿ ಸಭೆಯು ಪರಿಷತ್ತಿನ ಕಾರ್ಯಕಾರಿ ಸಭಾಸದರ ಅಭಿಪ್ರಾಯಗಳನ್ನು ಬರಹಮೂಲಕವಾಗಿ ತರಿಸಿಕೊಂಡು, ಬಹುಮತದಿಂದ ಗೊತ್ತಾದವರನ್ನು ಆರಿಸಬೇಕು.

೪. ಮುಂಬಯಿ, ಮದ್ರಾಸ, ಕೊಡಗು, ಹಾಗು ಬೇರೆ ಬೇರೆ ಸಂಸ್ಥಾನಗಳಲ್ಲಿ ಹರಿದು ಹಂಚಲ್ಪಟ್ಟ ಕರ್ನಾಟಕವನ್ನು ಏಕೀಕರಿಸಿ, ಸ್ವತಂತ್ರ ಒಂದು ಪ್ರಾಂತವನ್ನು ಮಾಡಬೇಕು.

೫. ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳಿಗಾಗಿ ಅಧಿಕಪಾಠ (Suplimentary) ನೀತಿ ಪುಸ್ತಕಗಳೆಂದು ಹೊಸ ಪುಸ್ತಕ ರಚಿಸಬೇಕು, ಅದಕ್ಕಾಗಿ ಪ್ರೊ. ವೆಂಕಣ್ಣಯ್ಯ, ಎಮ್. ಆರ್. ಶ್ರೀನಿವಾಸ ಮೂರ್ತಿ, ಮು ಕೃಷ್ಣರಾವ ಹಾಗು ಕಳಕಟ್ಟಿ ಇವರುಗಳ ಉಪಸಭೆಯಾಗಬೇಕು. (ಇದರ ವೆಚ್ಚವನ್ನು ವಿಜಾಪುರದ ಶ್ರೀ ಕೆಂಭಾವಿ ವಕೀಲ ಮುಂತಾದವರು ಕೊಡತಕ್ಕವರು ವರು. ಅಭಿನಂದನೀಯವು.)

ಸಭೆಯಲ್ಲಿ ಓದಲ್ಪಟ್ಟ ನಿಬಂಧಗಳಲ್ಲಿ ಗೆಳೆಯರ ಗುಂಪಿನಿಂದ ೧ ಪ್ರಕೃತಿ, ೨ ಅಲಂಕಾರ, ೩. ಕಾವ್ಯ, ೪. ಹಳ್ಳಿಯ ಹಾಡುಗಳು, ೫. ಕನ್ನಡ-ಸಾಹಿತ್ಯದೊಳಗಿನ ಹೊಸ ದಾರಿಗಳು, ೬. ಸರ್ವಜ್ಞಮೂರ್ತಿ ಎಂಬುವುಗಳಿದ್ದವು. ಇವುಗಳನ್ನು ಶ್ರೀ ಬೆಳಗಾಂವಕರ, ಶ್ರೀ ನರಗುಂದ, ಶ್ರೀ ಬೇಂದ್ರೆ, ಶ್ರೀ ಚನ್ನಮಲ್ಲಪ್ಪ ಗಲಗಲಿ, ಹಾಗು ಶ್ರೀ ಕೃಷ್ಣಶರ್ಮರು ಕ್ರಮವಾಗಿ ಓದಿದರು. ೧ ಇವುಗಳಲ್ಲಿ ಮೊದಲನೆಯದು ಬಹಳ ಚನ್ನಾಗಿರುವದೆಂದು ನೋಡಿ, ಸಾ. ಪರಿಷತ್ತಿನವರು ತಾವಾಗಿಯೇ ೨೫ ರೂಪಾಯಿಗಳನ್ನು ಬಹುಮಾನಾರ್ಥವಾಗಿ ಕೊಟ್ಟರು. ಶ್ರೀ ಆರ್. ಬಿ. ಪೋಕಶಿರಾರ, ಬರೆದ ವೈ. ವಾ. ವಾಸುದೇವಾಚಾರ್ಯ ಕೆರೂರರ ಗ್ರಂಥಗಳ ಸಮಾಲೋಚನೆಯು ನೆಟ್ಟಗಿತ್ತು. ಸಮಾಜಕವಿಗಳಾದ ಶ್ರೀ ಮನೋಳಕರರು ತಮ್ಮ ಎರಡು ಕವಿತಗಳನ್ನೋದಿ, ಜನರಂಜನ ಮಾಡಿದರು. ಪಂಡಿತ ಕ. ನಂಜುಂಡ ಶಾಸ್ತ್ರಿಗಳು ಭಾರತದ ಕೆಲವು ಪದಗಳನ್ನು ಹಾಡಿದರು. ಬಳಿಕ, ಶ್ರೀನಿವಾಸನ ಚಿತ್ರಹಾರದೊಳಗಿನ ಕೆಲವು ಸರಸ ಹಾಡುಗಳನ್ನು ಬಸ್ತಿ ಗುರುಯೋಗಿಂದ್ರರು

— ಕರ್ಮವೀರ.

. ವಿಮರ್ಶೆ.

ಜಯಕರ್ನಾಟಕ:— ೧ನೇ ವರ್ಷದ ಪ್ರಥಮ ಸಂಚಿಕೆಯು ನಮ್ಮ ಕೈಸೇರಿತು. ಪ್ರಥಮ ಲೇಖವು 'ಜಯಕರ್ನಾಟಕ' ಮುಂಬದ ಆತ್ಮಿಕ ನಿರೂಪಣೆಯನ್ನು ಮಾಡುತ್ತದೆ. ಸಂಪಾದಕರು 'ಜಯಕರ್ನಾಟಕ'ದ ವ್ಯಾಪಕ ಅರ್ಥವನ್ನು ವಿಶದವಾಗಿ ನಿವೇದಿಸಿ, ಅದರ ಸಾರ್ಥಕ್ಯನುರೂಪವಾಗಿ ಮಾಸಪತ್ರಿಕೆಯನ್ನು 'ಸಫಲ'ಗೊಳಿಸಿಕೊಡಲು ಶ್ರೀ ಶಾರದಾಂಬೆಯನ್ನು ಪ್ರಾರ್ಥಿಸಿರುವರು. ಶ್ರೀ ರಂಗನಾಥ ದಿವಾಕರ 'ಜೋಗಿಯ ಪದುಮಸ್ಮರಣೆ'ಯ ಮಹತ್ವವನ್ನು ನಿರೂಪಿಸುತ್ತಾರೆ. ಚಾಲುಕ್ಯರು ಐತಿಹಾಸಿಕ ಟಿಪ್ಪಣಿಗಳನ್ನು ಕೊಟ್ಟಿರುವರು. ಬೆಂಗಳೂರಿನ ಮಿಸರ್ಸ ಪಿ. ಎಸ್. ಬೆರ್ನಾರ್ಡ ಮತ್ತು ಜೋಸೆಫರವರು 'ಬರುತ್ತಿರುವ ಲೋಕ' ವೆಂಬುದರಿನಲ್ಲಿ ಜಗತ್ತಿನಲ್ಲಿ ನಾಲ್ಕು ಬದಿಯಿಂದ ಕಾಣುವ ಲಕ್ಷಣ ಪ್ರಗತಿಯನ್ನು ಚಿತ್ರನೀಯಕ ರೀತಿಯಿಂದ ವರ್ಣಿಸಿರುವರು. ಶ್ರೀ ಕೊಣ್ಣೂರು ಹಣಮಂತರಾಯರು ರಾಜ್ಯಮಿಸೀ ಭಾರತವನ್ನು ಭಕ್ತಿಯ ದೃಷ್ಟಿಯಿಂದ ಸಮಾಲೋಚಿಸಿರುವರು. ಕಥೆಗಾರ ಬೀರಣ್ಣರವರು 'ಶಾಮಣ್ಣನ ಕರುಣ ಕಥೆ'ಯನ್ನು ಅರುಹುತ್ತಾರೆ. ಶ್ರೀ ಸಾರಥಿ ವೆಂಕಟೇಶ ಕುಂದಿಯವರು ಸ್ವಾಮಿ ಶ್ರೀ ರಾಮಕೃಷ್ಣ ಪರಮಹಂಸರ ಚಿಕ್ಕ ಕಥೆಗಳನ್ನು ಕೊಟ್ಟಿರುವರು. ಎಲ್ಲರಿಗೂ ಬೇಕಾದ ಬ್ಯಾಂಕ ಸಂಸ್ಥೆಯ ದಿವಾಳಿಯ ಬಗ್ಗೆ ಶ್ರೀ ಗುರುರಾವ ವಾಳವೇಕರರು ಬರೆದ ಲೇಖವು ಮನನೀಯವಿದೆ. ಸರಕಾರವು ತನ್ನ ಪರಿಗಳ ಹಕ್ಕುಗಳಿಗಾಗಿ ಹೇಗೆ ಹೋರಾಡುತ್ತಿದೆಂಬುದೂ ಸ್ಪಷ್ಟವಾಗುತ್ತದೆ. ಸಂಪಾದಕರು ಕರ್ನಾಟಕದ ಮಹಾಪುರುಷರ ಪರಿಚಯವೆಂಬ ಹೊಸ ಸದರನ್ನು ನಿರ್ಮಿಸಿ, ಅದರೊಳಗೆ 'ಸಾಧ್ವೀ' ಪತ್ರಿಕೆಯ ಸಂಪಾದಕರಾಗಿರುವ ಶ್ರೀ ಎಮ್. ವೆಂಕಟಕೃಷ್ಣಯ್ಯನವರ ಪರಿಚಯವನ್ನು ಮಾಡಿ ಕೊಟ್ಟಿರುವರು. ಇದಲ್ಲದೆ, ಜ್ಞಾನಕಂಟಕ, ಪ್ರಪಂಚದ ಚರ್ಚೆ, ಬಿಡಿನುಡಿಗಳು, ಚಿಕ್ಕ ಕವಿತೆಗಳು ವಾಚನೀಯವಿವೆ. ಈ ಸಂಚಿಕೆಯಲ್ಲಿ ಪಂಡಿತ ಮೋತೀಲಾಲ ನೆಹರು, ಚಿತ್ತರಂಜನ ದಾಸ, ಪಂಡಿತ ಮದನ ಮೋಹನ ಮಾಳವೀಯ, ಅಲ್ಲೀ ಬಂಧು, ಮುಸ್ತಫಾ ಕೆಮಾಲ ಪಾಶಾ, ಶ್ರೀ ವೆಂಕಟಕೃಷ್ಣಯ್ಯರವರ ಭಾವಚಿತ್ರಗಳಿದ್ದು, ದಿಲ್ಲಿಯೊಳಗಿನ ಜಾದೂ ರಾಷ್ಟ್ರೀಯ ಸಭೆಯ ಕೆಲ ಪ್ರಸಂಗಗಳ ಹಾಗು ಅಧ್ಯಕ್ಷ-ಸ್ವಾಗತಾಧ್ಯಕ್ಷರ ಚಿತ್ರಗಳೂ ಕೊಡಲ್ಪಟ್ಟಿವೆ. ಅಂತು ಸಂಚಿಕೆಯು 'ಜಯ ಕರ್ನಾಟಕ' ವೆಂಬ ಹೆಸರಿಗೆ ತಕ್ಕದ್ದಾಗಿದೆ. ಕರ್ನಾಟಕಸ್ಥರೆಲ್ಲರೂ ಲೋಕಾಶ್ರಯವನ್ನಿತ್ತು, ಚಾಲಕರಿಗೆ ಉತ್ತೇಜಿಸುವದು ಕರ್ತವ್ಯವು.

ಗೌಡಸಾರಸ್ವತ ಬ್ರಾಹ್ಮಣ ಸ್ಕಾಲರಶಿಪ್ ಲೀಗ, ಮುಂಬಯಿ:— ಈ ಸಂಸ್ಥೆಯ ೧೦ನೇ ವರ್ಷದ ವರದಿಯು ನಮ್ಮ ಕೈಸೇರಿದೆ. ಈ ಸಂಸ್ಥೆಯು ೧೯೧೩ನೇ ಇಸವಿಯಲ್ಲಿ ಸ್ಥಾಪನೆಯಾಯಿತು. ಆ ಸಾಲಿಗೆ ಈ ಸಂಸ್ಥೆಯ ಬಳಿ ೫೫ ರೂಪಾಯಿಗಳಿದ್ದವು. ಈಗ ಅದು ಹತ್ತು ವರ್ಷಗಳಲ್ಲಿ ರೂ. ೯,೬೪೦ರ ವರೆಗೆ ಮುಟ್ಟಿದೆ. ಸಭಾಸದರ ಸಂಖ್ಯೆಯು ಪ್ರಥಮ ವರುಷದಲ್ಲಿ ೩ ಇತ್ತು. ಈಗ ಅದು ೩೩೫ರ ತನಕ ಮುಟ್ಟಿದೆ. ಕಳೆದ ವರುಷ, ಅಂದರೆ, ೩೧-೩ ೧೯೩೩ನೇಗೆ ಅಂತ್ಯವಾಗುವ ವರುಷದಲ್ಲಿ ಈ ಸಂಸ್ಥೆಯ ಜಮೆಯು ರೂ. ೨,೭೩೫ಕ್ಕೆ ಮುಟ್ಟಿತು. ಈ ಸಂಸ್ಥೆಯು ಗೌಡಸಾರಸ್ವತ ಜ್ಞಾತಿಯ ವಿದ್ಯಾರ್ಥಿಗಳಿಗೆ ಧನಸಹಾಯ ಮಾಡುವ ಉದ್ದೇಶದಿಂದ ಸ್ಥಾಪಿತವಾಗಿದೆ. ಈ ವರೆಗೆ ಸುಮಾರು ೪ ಸಾವಿರ ರೂಪಾಯಿಗಳನ್ನು ವಿದ್ಯಾರ್ಥಿಗಳಿಗೆ ಹಂಚಿತು. ಜ್ಞಾತಿಯಲ್ಲಿ ದಿನೇ ದಿನೇ ಸರಸ್ವತೀದೇವಿಯ ಉಪಾಸನಾಪ್ರೀತಿಯು ವೃದ್ಧಿಹೊಂದುತ್ತಲಿದ್ದು, ಕೇವಲ ಬಡತನದ ಮೂಲಕ ವಿದ್ಯಾಮೃತ ಆಸ್ವಾದವನ್ನು ಹೊಂದಲು ಸಮರ್ಥರಾಗದವರಿಗೆ ಅವಶ್ಯವಿದ್ದ ಸಹಾಯವನ್ನೀಯುವರೆ, ಸಂಸ್ಥೆಗೆ ತಕ್ಕ ನಿಧಿಯನ್ನು ಕೂಡಿಸಿಕೊಡುವದು ಜ್ಞಾತಿಯೊಳಗಿನ ಧನಿಕರ ಕರ್ತವ್ಯವು. ಬಾಲಕರ, ಸ್ವಾರ್ಥತ್ಯಾಗಪೂರ್ವಕ, ಪರಿಶ್ರಮದಿಂದ ಸ್ಥಾಪಿಸಿದ ಸಂಸ್ಥೆಯ ಮಹತ್ವವನ್ನು ನೆನಿಸಿ, ಜ್ಞಾತಿಗೃಹಸ್ಥರೆಲ್ಲರೂ ಸಂಸ್ಥೆಯ ಸಭಾಸದರಾಗಿ, ವೃದ್ಧಿಪಡಿಸುವ ಮಾಡಬೇಕೆಂದು ಕೋರಿಕೆ.

ಮಹಾತ್ಮರ ಪತ್ರಗಳು:— ಶ್ರೀಯುತ ಶ್ರೀ ವಾಮನ ಅನಂತ ಜೋಶಿಯವರು ಪ್ರಸಿದ್ಧಿಸುವ ಆತ್ಮೋದ್ಧಾರ ಗ್ರಂಥಮಾಲೆಯ ದ್ವಿತೀಯ ವರ್ಷದ ಚತುರ್ಥ ಪುಷ್ಪವಿದು. ಮಹಾತ್ಮರ ಪತ್ರಗಳ ಮೊದಲನೇ ಭಾಗವಿದು. ಇದರೊಳಗೆ ಮಹಾತ್ಮರು ಅನೇಕ ವಿಷಯಗಳ ಮೇಲೆ ಬರೆದ ಅಭಿಪ್ರಾಯಗಳು ಗ್ರಥಿತವಾಗಿವೆ. ಮಹಾತ್ಮರ ಅಂತರಂಗವನ್ನು ತಿಳಿಯ ಬಯಸುವವರಿಗೆ ಈ ಪತ್ರಗಳಷ್ಟು ಉತ್ತಮ ಅನ್ಯ ಸಾಧನಗಳಿಲ್ಲ. ಈ ಭಾಗದಲ್ಲಿ ೬೩ ಪತ್ರಗಳ ಭಾಷಾಂತರವು ಕೊಡಲ್ಪಟ್ಟಿದೆ. ರಾಜಕಾರಣ, ಸಮಾಜ ಧರ್ಮ, ಆರೋಗ್ಯ ಮೊದಲಾದ ಅನೇಕ ವಿಷಯಗಳು ಈ ಪತ್ರಗಳಲ್ಲಿ ಚರ್ಚಿಸಲ್ಪಟ್ಟಿವೆ. ಆತ್ಮೋದ್ಧಾರಕ್ಕೆ ಮಹಾತ್ಮರ ಪತ್ರಗಳು ತೀರ ಅನುಕೂಲವಾಗುವವೆಂದು ಹೇಳುವ ಆವಶ್ಯಕತೆಯಿಲ್ಲ. ಈ ಕಾಲದ ಮಹಾಪುರುಷರ ಲೇಖನಗಳನ್ನು ತಿಳಿಯಬಯಸುವವರು ಈ ಪತ್ರಗಳನ್ನು ಓದುವದು ಅತ್ಯವಶ್ಯವು. ಬೆಲೆ ೫ ಆಣೆ.

ಸರಸ್ವತಿ:— ಈ ಪತ್ರಿಕೆಯು ಬೆಂಗಳೂರಿನ ಶ್ರೀಮತಿ ಆರ್. ಕಲ್ಯಾಣಮ್ಮನವರು ಪ್ರಕಟಿಸುತ್ತಿರುವರು. ಕರ್ನಾಟಕ ಮಹಿಳೆಯರಲ್ಲಿ ಪುನಃ ಪ್ರವೇಶಗೊಂಡ ಶ್ರೀಮತಿ ಕಲ್ಯಾಣಮ್ಮನವರನ್ನು ನಾವು ಮನಃಪೂರ್ವಕ ಸ್ವಾಗತಿಸುತ್ತೇವೆ. ಕಳೆದ ಭಾದ್ರಪದ ತಿಂಗಳಿನಿಂದ 'ಸರಸ್ವತಿ' ಮಾಸ ಪತ್ರಿಕೆಯು ಇವರ ಸಂಪಾದಕತ್ವದಲ್ಲಿ ಪುನಃ ಪ್ರಕಟಗೊಂಡಿದೆ. ಮಾಸಪತ್ರಿಕೆಯು, ವಿಶೇಷವಾಗಿ ಸ್ತ್ರೀಯರ ಉನ್ನತಿಗಾಗಿ ಹೊರಡಿಸಲ್ಪಟ್ಟಿದೆ. ಸ್ತ್ರೀಯರ ಯೋಗ್ಯತೆ, ಜನದಕ್ಷತೆ ಮೊದಲಾದ ಲೇಖಗಳು ವಾಚನೀಯವಿವೆ. 'ದಾಕ್ಷಾಯಣಿ', ಎಂಬ ನಾಟಕವು ಆಲ್ಲದದಾಯಕವಿದೆ. ಕರ್ನಾಟಕಸ್ಥರು, ಭಗಿನಿಸೇವೆಯು ಕರ್ನಾಟಕಕ್ಕೆ ಚಿರಕಾಲ ಲಭಿಸುವಂತೆ 'ಸರಸ್ವತಿ'ಗೆ ಆಶ್ರಯವನ್ನಿತ್ತು, ಪೋಷಿಸಬೇಕಾಗಿಯೂ, ಶ್ರೀಮತಿ ಕಲ್ಯಾಣಮ್ಮನವರಿಗೆ ಸರಸ್ವತೀಸೇವೆಯನ್ನು ಅಧಿಕವಾಗಿ ಮಾಡಲು ಉತ್ತೇಜಿಸಬೇಕಾಗಿಯೂ ವಿನಂತಿ.

— ವಿಜಾಪುರ ಜಿಲ್ಲೆಯಲ್ಲಿ ಕಳೆದ ತಾ. ೧೭ ನೇಗೆ ಹೊತ್ತು ಬಿದ್ದಾಗ ಎಲ್ಲ, ಬಹಳ ಬಿರುಸಾದ ಮಳೆಯಾಯಿತು. ಸುಮಾರು ೩೪ ಹೂದಿ ಮಳೆ ಬಿದ್ದಿತೆಂದೂ, ೫೦ ಮೈಲು ವರೆಗೆ ರೀತ್ಯಾ ಹಾರಿ ಹೋಯಿತೆಂದೂ ತಿಳಿಯುತ್ತದೆ.

ಬರುತ್ತದೆ! ಬರುತ್ತದೆ!! ಸದ್ಯದಲ್ಲಿ ಬರುತ್ತದೆ!!!

ಕೆನರಾ ರಿವರ್ ಮೋಟರ್ ಸರ್ವೀಸು.

ದಿನವಹಿ ಪ್ರಯಾಣಸ್ಥರ ಹಾಗೂ ಗೋಕರ್ಣ ಮಹಾಕ್ಷೇತ್ರಕ್ಕೆ ಹೋಗತಕ್ಕ ಯಾತ್ರಸ್ಥರ ಅನುಕೂಲಕ್ಕಾಗಿ ಶೀಘ್ರ ಚಲಾವಣೆಯ ಮೋಟರ್ ಬೋಟ್ ಎಂಬ ಒಂದು ವಾಹನು ಬರುವ ಡಿಸೆಂಬರ ತಾರೀಖು 10ನೇ ಆರಂಭವಾಗಿ ತದಡಿ, ಮಣಕಿ, ಉಪ್ಪಿನಪಟ್ಟಣ ಹೊಳೆಯಲ್ಲಿ ಚಲಾಯಿಸಲ್ಪಡುವದು.

ಉಪ್ಪಿನಪಟ್ಟಣದಿಂದ ಸಾಣೇಕಟ್ಟೆಗೆ ಇರುವ 18 ಮೈಲುಗಳನ್ನು ಎರಡೇ ಘಂಟೆಯೊಳಗೆ ಮುಗಿಸುತ್ತದೆ. ಫೀಸು ಕಡಿಮೆ. ಸೌಕರ್ಯಗಳನ್ನು ಕೊಡುವ ಈ ಬೋಟಿಯ ಸುಖವನ್ನು ಒಮ್ಮೆ ಅನುಭವಿಸಿ ನೋಡಿದರೆ ಕಳಕಳಿಯಿಂದ ಸಿಕ್ಕುವದನ್ನು ಮರೆಯಲಾರಿರಿ.

ಇದು ಉಪ್ಪಿನಪಟ್ಟಣ-ಮಣಕಿ ಧಕ್ಕೆಗಳಿಂದ ಕುಮಟೆ ಬಂದರಕ್ಕೆ ಹೋಗುವ ವ್ಯಾಪಾರಿಗರಿಗೂ, ಕೋರ್ಟ-ಕಚೇರಿಗಳಿಗೆ ಹೋಗತಕ್ಕವರಿಗೂ, ಗೋಕರ್ಣಕ್ಕೆ ಹೋಗುವ ಯಾತ್ರಸ್ಥರಿಗೂ ತುಂಬಾ ಅನುಕೂಲವಾಗಿದೆ.

ಮೋಟರ್ ಬೋಟು ಪ್ರಾತಃಕಾಲ 6 ಘಂಟೆಯಿಂದ ಪ್ರಾರಂಭವಾಗಿ ಈ ಕೆಳಗೆ ನಮೂದಿಸಿದ ಪ್ರಕಾರ ಚಲಾವಣೆ ಆಗುವದು.

	ಹೊರಡುವ ಸಮಯ.		ಮುಟ್ಟುವ ಸಮಯ.	
	ಬೆಳಿಗ್ಗೆ.	ಮಧ್ಯಾಹ್ನ.	ಬೆಳಿಗ್ಗೆ.	ಮಧ್ಯಾಹ್ನ.
ಮೂಡಂಗಿ...	... 6— 0	1— 0	... ... 7—15	2—15
ಮಣಕಿ ...	... 7—30	3—20	... ... 8—10	3—10
ಉಪ್ಪಿನಪಟ್ಟಣ	... 8—20	3—20	... ... 9— 0	4— 0
ಮಣಕಿ ...	... 9—15	4—15	... ... 10—30	5—30

ಸಾಣೇಕಟ್ಟೆಯಲ್ಲಿ ಇಳಿತದ ಸಮಯ ನೀರು ಆಗದೆ ಕಡಿಮೆಯಾದದರಿಂದ ಮೂಡಂಗಿಯಲ್ಲೇ ನಿಲ್ಲಿಸಲಿಕ್ಕೆ ಕಾರಣ.

ಮೇಲಿನ ಸಮಯ ಪಟ್ಟಿಯು ಪ್ರಯಾಣಸ್ಥರಿಗೆ ಅನುಕೂಲವಲ್ಲ ಎಂತಾದರೆ ಬೇರೆ ಯಾವ ತರದಲ್ಲಿ ಬದ್ಲಿಯಾಗಬೇಕೆಂಬ ವಿಷಯದಲ್ಲಿ ಪ್ರಯಾಣಸ್ಥರು ತಮ್ಮ ಅಭಿಪ್ರಾಯಗಳನ್ನು ನನಗೆ ತಿಳಿಸಬಹುದಲ್ಲದೆ, ಶೀಘ್ರಗಮನದ ಈ ವಾಹನಕ್ಕೆ ಸರ್ವರು ಪ್ರೋತ್ಸಾಹವನ್ನೀಯಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇನೆ. ಮಾಸೂರು, ಮಿರ್ಜಾನ ಎಂಬೀ ಇವೆರಡು ಸ್ಥಳಗಳಲ್ಲಿ ನಿಲ್ಲಿಸುವ ವಿಷಯ ಆಲೋಚಿಸಬಹುದು.

ಫೀಸಿನ ದರಗಳು ಮೂಡಂಗಿ, ಮಣಕಿ, ಉಪ್ಪಿನಪಟ್ಟಣ ಈ ಸ್ಥಳಗಳಲ್ಲಿ ಪ್ರಕಟಿಸಲ್ಪಡುವವು.

ಡಾಕ್ಟರ್ ಯೆನ್. ಪಾಂಡುರಂಗರಾವ್.

ಕಾನಡಾವೃತ್ತ.

[illegible] ೧೯೨೩ [illegible]

ಗಚ್ಛ, ಗಚ್ಛ, ನೌಕರಶ್ರೇಷ್ಠ!

ನಾಳಿನ [illegible] ತಾರೀಖು [illegible] ನೇ ಅದ ರಾತ್ರಿ [illegible] ಘಂಟೆಗೆ ನಮ್ಮ [illegible] ಕಾಪಿವರದ ನಾಮದಾರ [illegible] ನ್ನು ತ್ಯಜಿಸಿ ಮಾಳೆಗಾಂವ [illegible] ಸ್ವಸ್ಥಾನಕ್ಕೆ ತೆರಳುವರು. [illegible] ಯುವದು. ಅಂದು [illegible] ಒಡೆ ಅಧಿಕಾರಿಗಳೂ, ಮಂಡಿಗಳೂ ನಾಮದಾರರಿಗೆ ಆಪ್ತರ ಸಲಾಮು ಹೊಡೆಯಲು ಎಪ್ಪೊಲೋ ಬಂದರಕ್ಕೆ ಹೋಗುವರು. ಮುಂಬಯಿಯ ಮ್ಯುನಿಸಿಪಾಲಿಟಿಯೂ ಯುರೋಪಿಯನ್ ವ್ಯಾಪಾರಿಗಳ 'ಚೆಂಬರ್ ಆಫ್ ಕೋಮರ್ಸ' ಎಂಬ ಸಂಸ್ಥೆಯೂ ನಾಮದಾರರಿಗೆ ಮಾನಪತ್ರಗಳನ್ನರ್ಪಿಸಿ ಆಪ್ತರ [illegible] ನೆಗಳನ್ನರ್ಪಿಸುವವು. ನಾಮದಾರರು ಹಡಗ ಹತ್ತಿದ ಕೂಡಲೆ, ೧೯ ತೋಫುಗಳ ಸಲಾಮಿಯೂ ಕೊಡಲ್ಪಡುವದು. ಹೀಗೆ ನಾಮದಾರರಿಗೆ ಆಪ್ತರ ಸಲಾಮು ಹೊಡೆಯುವ ವಿಧಿಯು ನಾಡದು ಶನಿವಾರಕ್ಕೆ ಮುಂಬಯಿಯಲ್ಲಿ ಜರಗುವದು. ಇದೇ ಸಮಯದಲ್ಲಿ ನಾಮದಾರರಿಗೆ ನಾವು 'ಗಚ್ಛ, ಗಚ್ಛ, ನೌಕರಶ್ರೇಷ್ಠ' ಎಂಬ ಉಕ್ತಿಯಿಂದ [illegible] ಕಾಗಿದೆ.

ಈ ಮಂತ್ರವನ್ನುಚ್ಚರಿಸುವಾಗ, ನಾಮದಾರರ ಕಾರಕೀರ್ದಿಯ ನೆನಪರಿಕೆಯನ್ನು ಮಾಡುವದು ಸಯುಕ್ತಿಕವು. [illegible] ರಾಜ್ಯಸೂತ್ರಗಳನ್ನು ಕೈಕೊಳ್ಳುವಾಗ, ಹಿಂದುಸ್ಥಾನದಲ್ಲೆಲ್ಲ ಏಕಪ್ರಕಾರದ ತಪ್ತ ವಾತಾವರಣವು ತುಂಬಿಹೋಗಿತ್ತು. ಮುಂಬಯಿಯು ಅಖಿಲ ಭರತಖಂಡದ ಕೇಂದ್ರವಿತ್ತು. [illegible] ಲೋಕಮಾನ್ಯರು ರಾಷ್ಟ್ರಸೂತ್ರಧಾರರು, ಅವರ ತರುವಾಯ ಮಹಾತ್ಮರು, ಈ ರೀತಿಯಿಂದ ಮುಂಬಯಿ ಪ್ರಾಂತಕ್ಕೆ ಅಖಿಲ ಭರತಖಂಡದ ರಾಜಕಾರಣದಲ್ಲಿ ಅಗ್ರೇಸರತ್ವವು ಪ್ರಾಪ್ತವಾಗಿತ್ತು. ಮೊಂಟೆಗ್ಯೂ ಸ್ವರಾಜ್ಯದ ಘಟಸ್ಥಾಪನೆಯು ಇದೇ ಕಾರಕೀರ್ದಿಯಲ್ಲಿ ಒದಗಿಬಂತು. ಬಿ। ಹೊರ್ನಿಮನ್‌ರವರ ನೇತೃತ್ವದಲ್ಲಿ ಸುಪ್ರಸಿದ್ಧ ರೌಲೆಟ್ ಆಕ್ಟಿನ ಚಳವಳಿಯೂ ಇದೇ ಸಮಯದಲ್ಲಿಯೇ ನಡೆಯಿತು. ಮಹಾತ್ಮರಿಗೆ [illegible] ಉದ್ಧಾರಕ ಆ [illegible] ಇವರ ಅಧಿಕಾರ ಸಮಯದಲ್ಲಿಯೇ [illegible] ಯಿತು. ಮಹಮ್ಮದೀಯ ಬಾಂಧವರ ಖಿಲಾ[illegible] ಜೀವನದ ಚಳವಳಿಯು [illegible] ಇದೇ ಕಾಲದಲ್ಲಿಯೇ [illegible] ವಸ್ತ್ರದ ಸಂಗತಿ [illegible] ಅವಧಿಯು ನಾಡದು [illegible] ಯೋಜಿಸುವ ನಾಮ[illegible] ಗಿದೆ.

ಈ [illegible] ನಮ್ಮ ನಾಮದಾರರು [illegible] ಆಯಾ ಕಾಲಕ್ಕೆ [illegible] ಸಂಗತಿಯಾಗಿಸಿ, ಮೊಂ[illegible] ತವಾಗಿ ನಡಿ[illegible] ನಾವಳಿಯಲ್ಲಿಯೇ [illegible] ಗಿದ ಅಪಯ [illegible] ಸಹಕಾರಿತೆಯಿಂದ [illegible] ಎಂದು ಸುಶಿಕ್ಷಿತ ಸ[illegible] ಅರಿವಾಗಿದೆಂದು ಪ್ರಾಂತ [illegible] ಸುಶಿಕ್ಷಿತರು ದಿವಾನ ಪರಾಂಜಪೇಯವರ [illegible] ಕರಿಸಿರುವರು. [illegible] ಕ್ರಾನಿಕಲ್ ಪತ್ರಿಕೆಯ ಸಂಪಾದಕರಾದ ಮಿ। ಹೊರ್ನಿಮನ್ ಸಾಹೇಬರ [illegible] ಗಡೀಪಾರು ಮಾಡಿ 'ಕ್ರಾನಿಕಲ್' ಪತ್ರಿಕೆಯ ಮೇಲೆ [illegible] ಸನ್ನು [illegible] ಯಿಂದ ಬಗ್ಗು[illegible] ಮಹಾರಾಯರು ಇವರೇ. 'ಕ್ರಾನಿಕಲ್' ಪತ್ರಿಕೆಯ ಬಗ್ಗೆ ನುಡಿಯುವಾಗ, [illegible] ದಲ್ಲಿ ಒದಗಿದ ಗೋಳೀಬಾರ ಪ್ರಕರಣದ [illegible] ಮಾಡಬೇಕಾಗಿದೆ. [illegible] ಯಲ್ಲಿ ಒದಗಿದ ಈ ಅನಿಷ್ಟ ಪ್ರಕಾರಗಳ ಬಗ್ಗೆ ಚೌಕಶಿ ನಡಿಸಿ, ಅಪರಾಧಿಗಳನ್ನು ದಂಡಿಸಲು ಪ್ರಜೆಗಳು ಬೇಡಿಕೊಂಡಾಗ್ಯೂ ಆ ಬಗ್ಗೆ ನಾಮದಾರರ ಸರಕಾರವು ತಕ್ಕ ಉಪಾಯ ಯೋಜಿಸಲಿಲ್ಲ. ಖಿಲಾಫತ ಚಳವಳಿಯ ತಾಪವನ್ನು ಸಹಿಸಲಾರದೆ, ಅದರ ಮುಖ್ಯ ಪ್ರವರ್ತಕರಾದ ಅಲ್ಲೀ ಬಂಧುಗಳು, [illegible] ಮೊದಲಾದ ಲೋಕನಾಯಕರನ್ನು ವಿಖ್ಯಾತ ಕರಾಚಿ ಖಟ್ಲೆಯಲ್ಲಿ ಬಂಧಿಸಿದ್ದು ಇವರ ಅಮಲತೆಯಲ್ಲಿಯೇ. ಕರಾಚಿ ಖಟ್ಲೆಯ ಲೋಕನಾಯಕರ ಅಪರಾಧವನ್ನೇ ಮಹಾತ್ಮಾ ಗಾಂಧಿ, ಮೊದಲಾದ ಲೋಕ[illegible] ಪುನರುಚ್ಚರಿಸಲು, ಅವರನ್ನು ಸೆರೆ ಹಿಡಿವಷ್ಟು ಧೈರ್ಯವು, ತಯಾರಿ ಇಲ್ಲದ [illegible] ನಾಮದಾರರ ಸರಕಾರಕ್ಕೆ ಒದಗಲಿಲ್ಲ. ಅಸಹಯೋಗದ ಜನಕರಾದ ಮಹಾತ್ಮರನ್ನು ಕಾರಾಗೃಹವಾಸಕ್ಕಟ್ಟಿ, ಅವರ [illegible] ಹೋಗದಷ್ಟು ಕಠೋರ ಕಾವಲನ್ನು ನಾಮದಾರರೇ ಇಟ್ಟಿರುವರು. ಇವೆಲ್ಲ ನಾಮದಾರರು ಆಯಾ ಕಾಲಕ್ಕೆ ಯೋಜಿಸಿದ ಉಪಾಯಗಳ ಸಂಕೀರ್ತನವು.

ಗತ ಸಂಗತಿಗಳ ಬಗ್ಗೆ ಬರೆಯುವದು ಈಗ ನಮ್ಮ ಉದ್ದೇಶವಲ್ಲ. ಆದರೆ, ಮಹಾತ್ಮರ ಪ್ರೇರಣೆಯಿಂದ ಭರತಖಂಡದಲ್ಲಿ ಜನ್ಮವನ್ನಿತ್ತಿದ ಅಸಹಯೋಗದ ಮಹಾತ್ಮ್ಯವೇನಿದೆ? ಎಂಬದನ್ನು ಈ ಪ್ರಾಂತಿಕ ನೌಕರಶ್ರೇಷ್ಠರ ಅಭಿಪ್ರಾಯದಿಂದ ಪ್ರಜೆಗಳಿಗರುಹಿ, ಇವರಿಗೆ ಸಲಾಮು ಹೊಡೆಯಬೇಕಾಗಿದೆ. ಅಸ್ಟ್ರೇಲಿಯಾ ದೇಶದಗಿನ ಮಿ। ಡ್ಯೂ ಪಿಯರಸನ್‌ರವರು ನಾಮದಾರರಿಗೆ ಗಮನ ಕಾಲದಲ್ಲಿ ಬೆಟ್ಟಿಯಾಗಿ, ಅವರ ಅಂತಃಕರಣವನ್ನು ಸ್ಫುಟ ಮಾಡಿರುವರು. ಅಸಹಯೋಗವು ಯಾವ ಪರಿಯಿಂದ ಸುಸಂಘಟಿತವಾಗಿತ್ತು, ಅದರ ಶೀ ಜೋಬಲದಿಂದ ನೌಕರಶಾಹಿಯ ಅಧಿಕಾರ ಸೂತ್ರವು ಹೇಗೆ ನಡುಗುತ್ತಿತ್ತು, ಎಂಬದನ್ನು ನಾಮದಾರರು ಬಲು ವಿಶದವಾಗಿ ಬಣ್ಣಿಸಿರುವರು. "ನಮಗೆ ಅವನು ಭಯಂಕರ ಬೆದರಿಗೆ ಹಾಕಿ ಬಿಟ್ಟನು. ಅವನ ಕಾರ್ಯಕ್ರಮದಿಂದ ನಮ್ಮ ಜೈಲುಗಳು ತುಂಬಿ ಸೂಸಿದವು" ಎಂಬ ಒಂದೆರಡು ವಾಕ್ಯಗಳಿಂದ ಅಸಹಯೋಗವು ತನ್ನ ಲಕ್ಷ್ಯಕ್ಕೆ ತಪ್ಪದೆ ಗುರಿ ಹೊಡೆಯುತ್ತಿತ್ತೆಂದು ಪ್ರಜೆಗಳಿಗೆ ತಿಳಿಯುವ ಹಾಗಿದೆ.

ಅಸಹಯೋಗದ ಇನ್ನೊಂದು ಮರ್ಮವನ್ನೂ ನಾಮದಾರರು ಹೊರಗೆಡಹಿರುವರು. 'ನಿರಪರಾಧಿಯಾಗಿ ಜೈಲುಗಳನ್ನು ಸೇರಿಕೊಳ್ಳಿರಿ, ಅಂದರೆ, ಸ್ವರಾಜ್ಯವು ನಿಮಗೆ ಪ್ರಾಪ್ತವಾಗುವದು. ಸ್ವರಾಜ್ಯದ ಹಾದಿಯು ಕಾರಾಗೃಹದಿಂದಲೇ ನಡೆದಿದೆ" ಎಂದು ಮಹಾತ್ಮರು ಆಗಿಂದಾಗ್ಗೆ ಬೋಧಿಸುತ್ತಿದ್ದರು. ನಮ್ಮ [illegible] ಕೊಡದೆ, ಕಾರಾಗೃಹವನ್ನು ಸೇರಿಕೊಂಡರೆ, ನೌಕರಶಾಹಿಗೆ ಅದೊಂದು ಉಪಕಾರವಾಗದೆ, ಅಪಕಾರ ಹೇಗಾಗುತ್ತದೆ, ಎಂದು ಅನೇಕ ಸಂಶಯಗ್ರಸ್ತರು, ಅದೂರದೃಷ್ಟಿಯವರು ಮಹಾತ್ಮರಿಗೆ ಪ್ರಶ್ನಿಸಿದ್ದರು, ಇನ್ನೂ ತಮ್ಮಷ್ಟಕ್ಕೆ ಪ್ರಶ್ನಿಸುತ್ತಿರಬಹುದು. ಅಂಥವರಿಗಾಗಿ ನಾವು ನಾಮದಾರರ ಪ್ರಾಮಾಣಿಕ ಅಭಿಪ್ರಾಯವನ್ನೇ ಎತ್ತಿಕೊಳುವೆವು — "ಸರ್ವದಾ ಪ್ರಜೆಗಳನ್ನು ಸೆರೆ ಹಿಡಿದು, ಕಾರಭಾರ ನಡಿಸುವದು ಶಕ್ಯವೇ?" ಎಂಬುದೇ ನಾಮದಾರರ ಪ್ರಶ್ನೆ. ಮಹಾತ್ಮರದಾದರೂ ಅದೇ ಪ್ರಶ್ನೆಯಲ್ಲವೇ? ಯಾವದೇ ಪ್ರಕಾರದ ಪಾಪಕರ್ಮವನ್ನಾಚರಿಸದೆ, ದೇಶಕ್ಕಾಗಿ ಆತ್ಮಕ್ಲೇಶವನ್ನು ಸಹಿಸಬುದ್ಯುಕ್ತರಾಗಿ, ನಿರ್ಮಲ ಚಿತ್ತದಿಂದ ಕಾರಾಗೃಹವನ್ನು ಸೇರುವ, ಪ್ರಜೆಗಳಿಗೆ ಸೆರೆಮನೆಗಟ್ಟುವ ಕಾರ್ಯಕ್ರಮದಿಂದ ಯಾವದೇ ದೇಶವನ್ನು ಬಹುಕಾಲದ ವರೆಗೆ ಆಳಲಗದೆಂದು ನಾಮದಾರರು

ಉದ್ಗರಿಸಿದ ಮಾತನ್ನು ಅಖಿಲ ಪ್ರಜೆಗಳೂ ಮನನ ಮಾಡಲಿ; ಚೌರಿಚೌರಾ ಅಪಘಾತದಿಂದ ದೇಶಕ್ಕೊದಗಿದ ಹಾನಿಯನ್ನು ವಿಮರ್ಶಿಸಲಿ. ಮಹಾತ್ಮರ ಸ್ವರಾಜ್ಯ ವಚನವನ್ನು ಕೃತಿಯಲ್ಲಿ ರೂಪಾಂತರಿಸಲು ಸಹಜವಾತ್ರವಾದ ಅಪೂರ್ವ ಸುಸಂಧಿಯನ್ನು ಹೋಗಲಾಡಿಸಿದ ಕಥೆಯನ್ನು ನೆನಿಸಿ, ತಮ್ಮ ದೈವದುರ್ವಿಪಾಕವೆಂದು ದೇಶಬಾಂಧವರೆಲ್ಲರೂ ಮರುಗದಿರರು. ಕರನಿರಾಕರಣೆಯ ಚಳವಳಿಯನ್ನು ಮಹಾತ್ಮರು ಸಂಘಟಿಸಿ, ದೇಶದಲ್ಲಿ ಉಪಕ್ರಮಿಸುವ ವರೆಗೆ, ಅವರು ಆಗಿಂದಾಗ ಅವಿಶ್ರಾಂತ ಉಪದೇಶಿಸಿದ ಅಹಿಂಸಾ ತತ್ವವನ್ನು ಚೌರಿಚೌರಾದವರು ನಿಕಾರವಕರಾಗಿ ತ್ಯಜಿಸಿ, ಅನರ್ಥಗಳನ್ನುಂಟುಮಾಡಿದರು. ಮಹಾತ್ಮರ ಕಾರ್ಯಕ್ರಮವು ಭಾರತವರ್ಷದ ಬಂಧವಿಮೋಚನೆಗೆ ತಕ್ಕದ್ದಾಗಿತ್ತೆಂದು ಪ್ರಾಂತಿಕ ನೌಕರಶಾಹಿಯ ಅಧಿಪತಿಗಳಾದ, ಇಕ್ಕಟ್ಟಿನ ಸಮಯದಲ್ಲಿ ಪ್ರತ್ಯಕ್ಷ ರಾಜ್ಯಾಡಳಿತೆಯನ್ನು ನಡಿಸಿದ, ಮಹಾನುಭಾವರೇ ಕೊಟ್ಟ ಅಭಿಪ್ರಾಯವನ್ನು ಅಖಿಲರೂ ವಿಮರ್ಶಿಸಿ, ತಕ್ಕ ಬೋಧ ಪಡೆಯಲಿ.

ನಾಮದಾರರ ಉದ್ಗಾರಗಳಿಂದ ದೇಶದೊಳಗೆ ಅಸಹಯೋಗದ ಪುರಸ್ಕಾರಕ್ಕೆ ಹೊಸ ಹುರುಪು ದೊರೆಯುವದು. ಶ್ರೀ ರಾಜಗೋಪಾಲಾಚಾರ್ಯರು ನುಡಿದಂತೆ, ಸ್ವರಾಜ್ಯ ಪಕ್ಷದ ಹೊಸ ಕಾರ್ಯಕ್ರಮವು ಅರ್ಜಿ, ಶಿಷ್ಟ ಮಂಡಳ ಮೊದಲಾದ ಪುರಾತನ ಚಳವಳಿಗಳ ಮುಟ್ಟಿ, ನಾವು ನಿರರ್ಥಕ ವಾದದಲ್ಲಿ ತೊಡಗಿ, ದಿಙ್ಮೂಢರಾಗುವ ಭೀತಿಯು ಸಾಧಾರವಿದೆಂದು ಅನೇಕರು ಒಪ್ಪದಿರರು. ಅಹಿಂಸಾ ವೃತ್ತಿಯನ್ನು ದೇಶದೊಳಗೆ ಪ್ರಸ್ಥಾಪಿಸಿ, ವಿಧಾಯಕ ಕಾರ್ಯಕ್ರಮದಿಂದ ದೇಶವನ್ನು ಸಂಘಟಿಸಿ, ನೌಕರಶಾಹಿಯ ಕಾರಾಗೃಹವಾಸಗಳಿಗೆ ಕೊಪ್ಪು ಹಾಕಿದೆ, ಅವನ್ನು ನಿಷ್ಪಾಪದಿಂದ ಸೇರಿಕೊಳ್ಳುವದೇ ದೇಶೋದ್ಧಾರದ ಮಾರ್ಗವು. ಕರನಿರಾಕರಣೆಯ ತೀಕ್ಷ್ಣ ಪ್ರಹಾರವು ಸಹ ನೌಕರಶಾಹಿಗೆ ಅಷ್ಟು ಗಂಜಿಸದು ನಮ್ಮ ಸಂಘಟನೆಯು, ಶಿಸ್ತಿನ, ಶಾಂತ ಚಳವಳಿಯು, ದೇಶವಿಮೋಚನೆಗಾಗಿ ಆತ್ಮಕ್ಲೇಶವನ್ನು ಸಹಿಸುವ ತಯಾರಿಯು, ಇವೇ ಈಗ ಬೇಕಾದವು. ಮಹಾತ್ಮರ ಅಸಹಯೋಗದ ಮರ್ಮವು ಇದೇ. ಇದರಿಂದಲೇ ನಾವು ಸ್ವರಾಜ್ಯ ಸಂಪಾದನೆಯ ಕಾರ್ಯದ ಪೂರ್ತಿಮಾಡುವ ತಯಾರಿಯಲ್ಲಿದ್ದೆವೆಂದು ನಾಮದಾರರೇ ಉದ್ಗರಿಸಿದ ಬಳಿಕ, ಅಸಹಯೋಗದ ಮೇಲೆ ಆಧುನಿಕ ರಾಜಕಾರಣಧುರಂಧರರು ಮಾಡಿದ ಟೀಕೆಯು ಅಯಥಾರ್ಥವೆಂದು ಯಾರು ಹೇಳರು? ದೇಶದಲ್ಲೆಲ್ಲ ಏಕಪ್ರಕಾರದ ನಿರುತ್ಸಾಹವುಂಟಾಗಿರುವಾಗ, ಸ್ವರಾಜ್ಯ ಪಕ್ಷದವರು ಕೌನ್ಸಿಲು ಭಂಗದಿಂದ ಸ್ವರಾಜ್ಯಪ್ರಾಪ್ತಿಯಾಗುವದೆಂದು ಮಹಾಯುಕ್ತಿಯೊಂದು ನಿರ್ಮಿಸಿದಾಗ, ಅಸಹಯೋಗದ ಮರ್ಮವನ್ನರಿಯುವ ನಾಮದಾರರ ಅಂತಃಕರಣದೊಳಗಿನ ವಚನಗಳಿಂದ ಪ್ರಜೆಗಳಿಗೆ ದೇಶೋದ್ಧಾರಕ ಮಾರ್ಗವನ್ನಾಕ್ರಮಿಸಲು ಬಲು ಅನುಕೂಲವಾಗುವದು. ಅಸಹಯೋಗದ ಮೇಲೆ ಇಷ್ಟು ಉತ್ಕೃಷ್ಟ ಅಭಿಪ್ರಾಯವನ್ನರುಹಿ, ದಿಕ್ಕುತಪ್ಪಿದ ಪ್ರಜೆಗಳಿಗೆ ಸನ್ಮಾರ್ಗಕ್ಕೆ ಹತ್ತಲು ಅನುಕೂಲ ಮಾಡಿಕೊಟ್ಟ ಸ್ವಸ್ಥಾನಕ್ಕೆ ತೆರಳುವ ನಾಮದಾರರಿಗೆ ದೇಶಹಿತೈಷಿಗಳೆಲ್ಲರೂ ಆನಂದದಿಂದ ಆತ್ಮೀಯ ಹಸ್ತಾಂದೋಲನವನ್ನು ಮನಃಶಕ್ತಿಯಿಂದಲೇ ಮಾಡಿ, 'ಗಚ್ಛ, ಗಚ್ಛ, ಸುರಶ್ರೇಷ್ಠ' ಎಂಬ ಮಂತ್ರದಿಂದ ಸತ್ಕರಿಸುವರೆಂದು ನಾವು ಕೋರುವದು ಯಥಾರ್ಥವೆಂದು ವಾಚಕರು ತಿಳಿದೂಗುವರು.

ಸ್ಫುಟ ಸೂಚನೆಗಳು.

೧. ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಳವು ಕಳೆದ ತಾ ೨೯-೩೦ನೇಗೆ ಅಹಮದಾಬಾದದೊಳಗಿನ ಸತ್ಯಾಗ್ರಹಾಶ್ರಮದಲ್ಲಿ ನೆರೆಯಿತು. ಲೋಕನಾಯಕರು ಅಮೃತಸರದೊಳಗೆ ನೆರೆದು ಮಾಡಿದ ಠರಾವಿನ ಚರ್ಚೆಯು ಈ ಸಭೆಯಲ್ಲಿ ನಡೆಯಿತು. ಶಿಖರಿಗೆ ಈ ಕಾದಾಟದಲ್ಲಿ ಸಿಕ್ಕಿಬಿದ್ದ ಸಹಾಯವನ್ನೀಯಬೇಕೆಂತಲೂ, ಆ ಬಗ್ಗೆ ದೇಶದಲ್ಲಿ ಪ್ರಚಾರ ಕಾರ್ಯವನ್ನು ನಡಿಸಬೇಕೆಂತಲೂ, ಧನಸಹಾಯಕ್ಕಾಗಿ ತಕ್ಕ ಯತ್ನ ನಡೆಸಬೇಕೆಂತಲೂ ಠರಾವಾಯಿತು. ಅಕಾಲಿ ಸಹಾಯಕ ಕಮಿಟಿಯೆಂಬ ಹೊಸ ಕಮಿಟಿಯನ್ನು ನೇಮಿಸಿ, ಶಿಖರ ಸಹಾಯಕ್ಕೆ ಅವಶ್ಯವಿರುವ ಎಲ್ಲ ಉಪಾಯ ಯೋಜನೆ ಮಾಡುವದು ಈ ಕಮಿಟಿಗೆ ವಹಿಸಲ್ಪಟ್ಟಿದೆ. ಈ ಕಮಿಟಿಗೆ ಕೊಂಗ್ರೆಸ ಸಂಸ್ಥೆಗಳದ್ವಾರಾ ವಿಶಿಷ್ಟ ನಿಧಿಯ ಸ್ವೀಕಾರದ ಅಧಿಕಾರವೂ ಕೊಡಲ್ಪಟ್ಟಿದೆ. ಡಾ। ಸೈಫುದ್ದೀನ ಕಿಚಲು, ಪಂಡಿತ ಜವಾಹರಲಾಲ ನೆಹರು ಹಾಗು ಆಚಾರ್ಯ ಗಿಡವಾನಿ, ಈ ಮೂವರನ್ನು ಅಕಾಲಿ ಕಾದಾಟದ ವಾರ್ತಾಪ್ರಸಾರಕ್ಕಾಗಿ ನೇಮಿಸಿ, ಅವರಿಗೆ ಈ ಚಳವಳಿಯ ಹಕೀಕತನ್ನು ಕೊಂಗ್ರೆಸ ಕಾರ್ಯಕಾರಿ ಕಮಿಟಿಗೂ, ದೇಶಕ್ಕೂ ಆಗಿಂದಾಗ ತಿಳಿಸಬೇಕೆಂದು ಸಮರ್ಪಿಸಲ್ಪಟ್ಟಿದೆ. ಈ ಪ್ರಸಾರಕ್ಕಾಗಿ ೧ ಸಾವಿರ ರೂಪಾಯಿಗಳು ಮಂಜೂರಾಗಿವೆ. ಇದೇ ಡಿಶಂಬರ ತಿಂಗಳಿನ ಅಂತ್ಯಕ್ಕೆ ಮೊಂಬಾಸಾ ಪಟ್ಟಣದಲ್ಲಿ ನೆರೆಯುವ ಪೂರ್ವ ಆಫ್ರಿಕದೊಳಗಿನ ಹಿಂದೀ ಜನರ ರಾಷ್ಟ್ರೀಯ ಸಭೆಗೆ ಭಾರತೀಯ ರಾಷ್ಟ್ರೀಯ ಸಭೆಯ ಪ್ರತಿನಿಧಿಯೆಂದ 'ಯಂಗ ಇಂಡಿಯಾ' ಪತ್ರಿಕೆಯ ಸಂಪಾದಕರಾದ ಮಿ। ಜೋರ್ಜ ಜೋಸೆಫ್‌ರವರನ್ನು ನೇಮಿಸಿದೆ. ಅಲ್ಲಿಯ ಪರಿಸ್ಥಿತಿಯನ್ನು ಸಮಾಲೋಚಿಸಿ, ಕೊಂಗ್ರೆಸ ಕಾರ್ಯಕಾರಿ ಕಮಿಟಿಗೆ ಅವರು ವರದಿ ಕೊಡಬೇಕೆಂತಲೂ ಠರಾಯಿಸಲಾಗಿದೆ.

೨. ಕಾರ್ಯಕಾರಿ ಕಮಿಟಿಯು ಮತ್ತೊಂದು ಠರಾವನ್ನೂ ಮಂಜೂರು ಮಾಡಿದೆ. ಅದು ಹಿಂದುಸ್ಥಾನದ ವೃತ್ತಕಾರರಿಗೆ ಉದ್ದೇಶಿಸಲ್ಪಟ್ಟಿದೆ. ಭಿನ್ನ, ಭಿನ್ನ ಸಮಾಜಗಳೊಳಗಿನ ಸಂಬಂಧಗಳು ಅನೇಕ ಕಾರಣಗಳ ಮೇಲಿಂದ ಕಷ್ಟಕ್ಕೆ ದೂಷಿತವಾಗಿವೆ. ಅವನ್ನು ಚೊಕ್ಕ ಮಾಡಿ, ಅವುಗಳ ಮೇಲೆ ತಕ್ಕ ಉಪಾಯಯೋಜನೆ ಮಾಡುವದು, ದೇಶೋನ್ನತಿಯನ್ನು ಸಾಧಿಸುವವರ ಕರ್ತವ್ಯವು. ರಾಷ್ಟ್ರದೊಳಗಿನ ಮಾನಸಿಕ ಬುದ್ಧಿಯನ್ನು ವಿಶಿಷ್ಟ ರೀತಿಯಿಂದ ಪರಿಣಮಿಸಲು ವಿಶೇಷವಾಗಿ ಇಲ್ಲಿಯ ವೃತ್ತಪತ್ರಗಳೇ ಕಾರಣ. ಸದ್ಯಕ್ಕೆ ಸಾರ್ವಜನಿಕ ಸಂಸ್ಥೆಗಳು ಬಾಲ್ಯಾವಸ್ಥೆಯಲ್ಲಿರುವಾಗ, ಸಾಮಾಜಿಕ ಐಕ್ಯವನ್ನು ಸಂಪಾದಿಸುವ ಜವಾಬದಾರಿಯು ಪ್ರಾಧಾನ್ಯವಾಗಿ ಪತ್ರಕರ್ತರದೇ. ಅದರಿಂದ, ಪತ್ರಕರ್ತರು ಯಾವದೇ ರಾಜಕೀಯ ಮತದವರಿರಲಿ, ಸಾಮಾಜಿಕ ಮತದವರಿರಲಿ, ಧರ್ಮದವರಿರಲಿ, ಭಿನ್ನ ಭಿನ್ನ ಸಮಾಜಗಳೊಳಗಿನ ಸುಪ್ರಸನ್ನತೆಯ ಮಹತ್ವವನ್ನರಿತು, ಅದನ್ನು ಕಾಪಾಡಲು ತಕ್ಕ ಜಾಗೃತಿಯಿಂದ ವರ್ತಿಸಬೇಕೆಂದು ಕಾರ್ಯಕಾರಿ ಕಮಿಟಿಯು ಠರಾಯಿಸಿದೆ. ಈ ಠರಾವು ಪತ್ರಕರ್ತರಿಗಾಗಿ ಉದ್ದೇಶಿಸಲ್ಪಟ್ಟಿದೆ. ಅದರೆ, ಇದು ದೇಶದೊಳಗಿನ ಎಲ್ಲ ಮುಖಂಡರಿಗೆ, ಅವರು ಬೇಕಾದರೆ, ಯಾವದೇ ಮತದವರಿರಲಿ, ಕೊಂಗ್ರೆಸ ಕಾರ್ಯಕಾರಿ ಮಂಡಳದವರು ತಮಗೆ ಕೊಟ್ಟ ಇಷ್ಟಕ್ಷೇರಿಯೆಂದು ಗ್ರಹಿಸಿ, ಅಲ್ಲಲ್ಲಿಯ ಸಾಮಾಜಿಕ ಕಲಹಗಳನ್ನು ನಿಕೋಪಗೊಳ್ಳುವಂತೆ, ತಕ್ಕ ಜಾಗರೂಕತೆಯನ್ನು ಕೈಕೊಳ್ಳಬೇಕೆಂದು ಕಾರ್ಯಕಾರಿ ಮಂಡಳದ ಆಶಯ ಹೇಳುವದೆ. ವೃತ್ತಪತ್ರಕಾರರು ತಮ್ಮ ಉದ್ಯೋಗದ ಮಹಾತ್ಮ್ಯವನ್ನರಿತು, ಸಾಮಾಜಿಕ ಸುಪ್ರಸನ್ನತೆಗಾಗಿ ಕೊಂಗ್ರೆಸ ಕಾರ್ಯಕಾರಿ ಮಂಡಳಕ್ಕೆ ತಕ್ಕ ಸಹಾಯವನ್ನೀಯ ಬೇಕೆಂದು ನಮ್ಮ ವಿನಂತಿಯಿದೆ.

೩. ಸೋಮವಾರ ತಾರೀಖು ೨೬ನೇ ಸಾಯಂಕಾಲಕ್ಕೆ ಹಿಂದುಸ್ಥಾನ ಸರಕಾರದಿಂದ ನೇಮಕಗೊಂಡಿದ್ದ ಸಂರಕ್ಷಕ ಪದ್ಧತಿಯ ಚೌಕಶಿ ಮಾಡುವ ಟಾರಿಫಬೋರ್ಡು, ಕಿರ್ಲೋಸ್ಕರವಾಡಿಯೊಳಗಿನ ಕಿರ್ಲೋಸ್ಕರ ಬಂಧು ಕಂಪನಿಯ ಪ್ರತಿನಿಧಿಗಳ ಜಬಾನಿಯನ್ನು ಮುಂಬಯಿಯಲ್ಲಿ ಪಡೆಯಿತು. ಬಂಗಾಲಪ್ರಾಂತದೊಳಗಿನ ಟಾಟಾ ನಗರದಲ್ಲಿ ತಯಾರಾಗುವ ಉಕ್ಕಿಗೆ ೬೭ ರೂ. ಗಳಷ್ಟು ನೇರ ಬಿದ್ದರೆ, ಮುಂಬಯಿಯಿಂದ ಕಿರ್ಲೋಸ್ಕರವಾಡಿಗೆ ಪರದೇಶಿ ಉಕ್ಕಿಗೆ ೧೫ ರೂ. ಗಳಷ್ಟು ಬೀಳುತ್ತದೆಂದು ಅವರು ನುಡಿದರು. ಪರದೇಶಿ ಉಕ್ಕಿಗೆ ನಮ್ಮ ದೇಶದೊಳಗಿನ ರೇಲ್ವೆ ಕಂಪನಿಗಳು ಕೊಡುವ ಸವಲತ್ತಿನ ಪರಿಣಾಮವಿದು. ಈ ತೋರಿಕ ಮೂಲಕವೇ ತಾವು ವರ್ಷಕ್ಕೆ ೬ ಸಾವಿರ ಟನ್ನುಗಳ ವರೆಗೆ ಉಕ್ಕನ್ನು ಪರದೇಶದಿಂದಲೇ ತರಿಸಬೇಕಾಗುತ್ತದೆಂದು ಅವರು ಉದ್ಗರಿಸಿದರು. ಪರದೇಶೀ ಉಕ್ಕಿನ ಮೇಲೆ ಶೇಕಡಾ ೩೩ ಇದ್ದಂತೆ, ಸಂರಕ್ಷಕ ಜಕಾತನ್ನಿಟ್ಟರೆ, ಆ ಮಾನದಿಂದ ತಮ್ಮ ರೆಂಟೆಗಳು ತುಟ್ಟಿಯಾಗುವವೆಂತಲೂ, ಆ ಪ್ರಸಂಗದಲ್ಲಿ ಪರದೇಶೀ ರೆಂಟೆಗಳ ಮೇಲೆ ಸಹ ಶೇಕಡಾ ೩೩ ರಷ್ಟು ಸಂರಕ್ಷಕ ಜಕಾತಿಇಡಬೇಕಾಗುವದೆಂತಲೂ ಅವರು ಸೂಚಿಸಿದರು. ಒಂದು ಮಹತ್ವದ ಉದ್ಗಾರವನ್ನು ಕಿರ್ಲೋಸ್ಕರ ಬಂಧು ಕಂಪನಿಯ ಪ್ರತಿನಿಧಿಗಳು ಧೋರಣೆಗೂಡ ತೆಗೆಯಬೇಕಾಯಿತು. ಬೇಸಾಯ ಖಾತೆಯ ಅಧಿಕಾರಿಗಳು ಪರದೇಶೀ ನೇಗಿಲುಗಳ ಪ್ರೇಮಪಾಶದಲ್ಲಿ ಸಿಲುಕಿಕೊಂಡಿರುವರೆಂತಲೂ, ಪರದೇಶೀ ನೇಗಿಲುಗಳನ್ನು ತಮ್ಮ ಖಾತೆಯ ಮುಖಾಂತರ ಬೇಸಾಯಗಾರರಲ್ಲಿ ರೂಢ ಮಾಡಲು ಯತ್ನಿಸುತ್ತಾರೆಂತಲೂ, ತಮ್ಮ ನೇಗಿಲುಗಳನ್ನು ಬೇಸಾಯಗಾರರಲ್ಲಿ ಪ್ರಚುರಗೊಳಿಸಲು ಪುನಃ ಪ್ರಮಾ

ತಿಳಿಸಿದಾಗ್ಯೂ, ಅವಕ್ಕೆ ಅವರು ಕಿವಿಗೊಡಲಿಲ್ಲ. ಶಾಸನ ಸಭೆಯ ಪ್ರತಿನಿಧಿಗಳು ನುಡಿದರು. ನೌಕರಶಾಹಿಯ ವ್ಯಾಪಾರಿ ದೃಷ್ಟಿಯು ಇವರ ಮೇಲಿಂದ ಸ್ಪಷ್ಟವಾಗುತ್ತದೆ. ಬೇಸಾಯ ಖಾತೆಯನ್ನು ನಿರ್ಮಿಸುವ ಉದ್ದೇಶವೂ ಇದರಿಂದ ಸ್ಫುಟವಾಗುತ್ತದೆ. ಭರತಖಂಡವು ಬೇಸಾಯದಾರರದಿದ್ದು ಬೇಸಾಯಕ್ಕೆ ತಗಲುವ ಸಾಮಗ್ರಿಯನ್ನಲ್ಲಿ ಅನವಿಗ [illegible] ಮುದು ಮಾಡುವ ಚಟ ಹಚ್ಚಿ [illegible] ಗುವದೆ ಮು ಬೇಸಾಯೋಪ [illegible] ಜಾಹೀರಾತ [illegible] ಗಳನ್ನು ಹಚ್ಚಿ [illegible] ಯೋಗ ಕೊಲ [illegible] ಕರ್ತೃತ್ವ [illegible]

[illegible]

[illegible] ಇನ್ನೊಂದು ಉಪಾಯ [illegible] ರಾ. ದಾಮುಲೆಯವರ [illegible] ಪತ್ರಿಕೆಯಲ್ಲಿ [illegible] ಬಾಗ ಖಾತೆಯು [illegible] ಪ್ರವೃತ್ತಿ [illegible] ಮತ್ತು ಅದು ಕ್ಷೇತ್ರದೊಳಗಿನ [illegible] ತಕವಾಗಿ ಬೆಳಿಸಿ, [illegible] ಪಗರ [illegible] ಮಾಡುವ [illegible] ತ್ತದೆ. ಈ ಭಾಗದಲ್ಲಿ [illegible] ಹಿಂಸ್ರ ಪಶುಗಳು ಆಕ್ರ [illegible] ದೀರ್ಘಯಾಗಿರುವ [illegible] ಮಾಡುತ್ತವೆ. [illegible] ಬೇಸಾಯ [illegible] ವರು [illegible] ಪದ್ಧತಿ, ಈ [illegible] ಅವರಲ್ಲಿ [illegible] ಪ್ರಾವೀಣ್ಯವನ್ನು [illegible] ಸೂಚಿಸಿದ್ದರು. [illegible] ದಿನಗಳ [illegible] ಗಳ [illegible] ವೇನೋ [illegible] ಗಳು [illegible] ಹುಲಿಗಳೇ ಇರಲಿಲ್ಲ. [illegible] ವ್ಯಕ್ತಿಯನ್ನೇ [illegible] ದಿಂದ ಹುಲಿಗಳ ಕಾಟವು [illegible] ಬಿಡಲಿಕ್ಕೆ [illegible] ವಿಷದ ಉಪಯುಕ್ತತೆಯನ್ನು [illegible] ಇವಿಗಳಿಗೆ [illegible] ಕೊಲ್ಲಬೇಕೆಂಬ [illegible]

ಇಂಗಳು ಸಹ [illegible] ಗಳನ್ನು ಸ್ಪರ್ಶಿಸುವಷ್ಟು [illegible] ಅವರ ಅನುಭವ ಇಂಥ [illegible] ಯುಗಳನ್ನು ಬೇಸಾಯ ಖಾತೆಯು [illegible] ಮಾಡಿ [illegible] ಪ್ರಶ್ನೆಗಳನ್ನು [illegible] ಗಿ ಮಾಡುತ್ತ [illegible] ದಾಮುಲೆಯವರ ಪ್ರಶ್ನೆ ಅದಕ್ಕೆ ಉತ್ತರ [illegible] ಬಾಕಿ [illegible] ಗಳ [illegible] ಪ್ರಜೆಗಳಿಗೆ ಬಹ [illegible] ಸಮಾಧಾನ [illegible] ಕ್ಕಿಸುತ್ತದೆ.

[illegible] ಈಗ [illegible] ಹೊಸ [illegible] ಸರಕಾರವು ನಿಯ [illegible] ದೊಡ್ಡ [illegible] ಅ ದರೆ [illegible] ಉಮೇದವಾರರಾಗು ಸರ [illegible] ಗಿನವರಿಗೆ [illegible] ಕೊಡುವವರಿಗೆ [illegible] ಕೊಡುವವರಿ [illegible] ಲೋಕರ [illegible] ಅಂತ [illegible] ಖಾತೆಯು [illegible] ವಾಗಿದೆ. ಯಾವ [illegible] ಸರಕಾರಕ್ಕೆ [illegible] ಇವರ [illegible] ಕೇವಲ [illegible] ಸರಕಾರವು [illegible] ಅಲಭ್ಯ [illegible] ಸಾಮ್ರಾಜ್ಯದಲ್ಲಿ [illegible] ಗದಲ್ಲಿ [illegible] ರಾಜುಗಳನ್ನು ಕೊ [illegible] ಗಳನ್ನು [illegible] ಉದಾರ [illegible] ಈ ಉದಾರ [illegible] ಉಪಯೋಗ [illegible] ವೇಳೆ [illegible] ಮನಃಪೂರ್ವಕ [illegible] ಪ್ರವೃತ್ತಿ [illegible] ಇದೊಂದು [illegible] ಕಾನೂನುಗ [illegible] ಸುಧಾರಣೆಯೆಂದು [illegible] ಕರ್ತವ್ಯ [illegible] ಇವರ [illegible] ಸ್ಪಷ್ಟ [illegible]

ಈ ಹೊಸ [illegible] ಕೌನ್ಸಿಲ ಗಳ ಇಲೆಕ್ಷನು [illegible] ಅವರಿಂದ [illegible] ನಮ್ಮ ಹಿಸ [illegible] ಒದಲಿಕ್ಕೆ [illegible] ವೃತ್ತ [illegible] ಕೆಂದು (gratitude) ಪ್ರದರ್ಶಿಸಿದ್ದ [illegible] ಅಕ್ರಿಯ [illegible]

ರವೆಂದು ತಿಳಿಸಿರವರು ವೃತ್ತವನ್ನು ಕ್ರಮದಿಂದ ಓದಿದವರಿಗೆ ವೃತ್ತದ ಧೋರಣವು ಬದಲಾಗಲಿಲ್ಲೆಂದು ನಾವು ಪ್ರತ್ಯೇಕ ಹೇಳುವ ಕಾರಣವಿಲ್ಲ. ಇಲೆಕ್ಷನುಗಳಲ್ಲಿ ಬೇರೆ ಬೇರೆ ಉಮೇದವಾರರು ತಮ್ಮ ತಮ್ಮ ಪರಿಯಿಂದ ದೇಶಸೇವೆ ಮಾಡಲಿಳಿಸುವದೂ, ಆ ಬಗ್ಗೆ ಸ್ವಮತಪ್ರಸಾರ ಮಾಡುವದೂ, ತಮಗೆ ಯಶಪ್ರಾಪ್ತಿಯಾಗಬೇಕೆಂದು ಬಯಸುವದೂ ಸಹಜವು. ಅವರವರಿಗೆ ಸ್ಥಲಾನುಕೂಲತೆಯಂತೆ ನಾವು ಎಡೆಕೊಟ್ಟಿರುವೆವು. ಆದರೆ ಉಮೇದವಾರರು ಪ್ರತಿನಿಧಿಯಾಗಲು ಮುಂದೆ ಬಂದಾಗ ಸಮಯೋಚಿತವಾಗಿ ಪರಿಸ್ಥಿತಿಯನ್ನು ಸಮಾಲೋಚಿಸಿ, ಅವರವರ ಬಗ್ಗೆ ಲೋಕದ ತಪಲ್ಲೆಷ್ಟ ವಿಚಾರತರಂಗಗಳನ್ನು ವೃತ್ತಪತ್ರ ಧರ್ಮದಂತೆ, ನಾವು ಸ್ಫುಟಮಾಡಬೇಕಾಯಿತು. ಇದರೊಳಗೆ ನಾವು ಪಕ್ಷಾಂಧತೆಯನ್ನು ಸ್ವೀಕರಿಸಿದೆವೆಂದು ನಮಗೇನು ತೋರಲಿಲ್ಲ. ತ್ರಯಸ್ಥ ವಾಚಕರಿಗೂ ತೋರುವ ಸಂಭವವಿಲ್ಲೆಂದು ಕೋರಿಕೆ. ಪಕ್ಷಾಂಧತೆಯ ಬಗ್ಗೆ ಮಾತಾಡಬೇಕಾದರೆ, ಪ್ರತಿಯೊಂದು ವೃತ್ತಪತ್ರಕ್ಕೆ ವಿಶಿಷ್ಟ ಧೋರಣವಿದೆ. ಅದು ಬೇಕಾದರೆ ಯಾವದೇ ಮತದ್ದಿರಲಿ. ನಮ್ಮ ಮೇಲೆ ಪಕ್ಷಾಂಧತೆಯ ಆರೋಪ ಮಾಡುವವರು ನಿಷ್ಪಕ್ಷಪಾತ ಬುದ್ಧಿಯಿಂದ ನಿರ್ವಿಕಾರ ಬುದ್ಧಿಯಿಂದ ಆಲೋಚಿಸಿದ್ದರೆ, ಪಕ್ಷಾಂಧತೆಯ ಬೀಜವು ಅವರ ಮನೋಭೂಮಿಯಲ್ಲಿ ಇಲೆಕ್ಷನ ಮೂಲಕ ಹುಟ್ಟಿಗಿದೆ ಎಂದು ಅವರಿಗೇ ತಿಳಿಯುವಹಾಗಿದೆ. ಅದೇನೂ ಇರಲಿ. ಪಕ್ಷಾಂಧತೆಯ ಅಪರಾಧಕ್ಕಾಗಿ ನಮ್ಮನ್ನು ದಂಡಿಸಲು ವೃತ್ತಾಶ್ರಯವನ್ನು ಕಡಿಮೆ ಮಾಡುವಷ್ಟು ಕ್ಷುದ್ರ ಬುದ್ಧಿಯನ್ನು ತಾಳುವ ಗೃಹಸ್ಥರ ವರ್ತನವನ್ನು ನೋಡಿ ನಮಗೆ ಅತಿ ವ್ಯಸನವಾಗುತ್ತದೆ. ಅಖಿಲ ದೇಶದಲ್ಲಿ ಲೋಕಶಾಹಿಯು ಸಂಚಾರವಾಗಿದೆ. ರಾಷ್ಟ್ರೀಯ ಸಭೆಯು ವರ್ಚಸ್ವವು ಕಲ್ಪನಾತೀತ ಬೆಳದಿದೆ. ಕೊಂಗ್ರೆಸ್ಸೇತರರು ಸರಕಾರಿ ಕಿತಾಬು [illegible] ಸ್ವಾರ್ಥಸಾಧನೆ ಮಾಡಲಾದವುಗಳಿಗಾಗಿ ಹಾತೊರೆಯುವವರೆಂದು ಪ್ರಜೆಗಳ ತಿಳುವಳಿಕೆಯಾಗಿದೆ. ಸುಮ್ಮನೆ ಅನಪೇಕ್ಷಿತ ರಾಜ್ಯಗಳಿಂದ ವಿರೋಧವಾಯಿತೆಂದೂ (adverse forces from unexpected quarters) 'ವೃತ್ತ'ವು ಪಕ್ಷಾಂಧತೆಯನ್ನು ಸ್ವೀಕರಿಸಿತೆಂದೂ ದೂರುವದು ಕೇವಲ ಅಯಥಾರ್ಥವು. ಆದ್ದರಿಂದ, ಇಂಥವರು ಆತ್ಮನಿರೀಕ್ಷಣೆ ಮಾಡಿ ಆತ್ಮಶುದ್ಧತೆಯನ್ನು ಸಾಧಿಸಿ, ತಮ್ಮ ವರ್ತನವನ್ನು ಪ್ರಜೆಗಳಿಗೆ ಗ್ರಾಹ್ಯವಾಗುವಂತೆ ಸುಧಾರಿಸಬೇಕೆಂದು ನಾವಾಗಿ ಹೇಳಬೇಕೆಂದಿಲ್ಲ. 'ಆತ್ಮೈವ ರಿಪುರಾತ್ಮನಃ। ಆತ್ಮೈವ ಬಂಧುರಾತ್ಮನಃ' ಈ ಭಗವದುಕ್ತಿಯ ನೆನಪರಿಕೆ ನಾವು ಮಾಡಿಕೊಡುವದವಶ್ಯವಲ್ಲವೇ?

ಸ್ಥಾನಿಕ ವೃತ್ತಾಂತ.

ಕುಮಟಾ— [illegible] ದಿವಸಗಳಿಂದ ಕಡೆ ಮೋಡ ಮೊನ್ನೆ ರಾತ್ರಿ ಮೋಡಗವಿದು ಸ್ವಲ್ಪ ಹನಿಸಿತು.

ಉಪ್ಪಿನಪಟ್ಟಣದಿಂದ ಮುಂತಗಿ ವರೆಗೆ ಮೋಟರ ಜೋಡಿಯನ್ನು ಇದೇ ಬರುವ ತಾ ೧೦ ನೇ ಸೋಮವಾರದಿಂದ ಚಾಲು ಮಾಡುವದರಿದ್ದೇವೆಂದು [illegible] ತಿಳಿಸುತ್ತಾರೆ.

ಬರುವ ಒಂದೆರಡು ತಿಂಗಳಿನಿಂದ ಕಾರವಾರ ಕುಮಟಾ [illegible] ಮೋಟಾರಿನಿಂದ ತರುವ ವ್ಯವಸ್ಥೆಯಾಗುವದೆಂದು [illegible] ಇದರಿಂದ ಕಾರವಾರ ಚಾಲು ವಾರದೇ ದಿನ [illegible] ಹಸ್ತಗತವಾ

ಗವ ಬಿಸಿಲು ಮಸ್ಸಿಣ ದಿನ ಮಧ್ಯಾಹ್ನಕ್ಕಿಂ ಶಿಗುವದು

ಈ ಸಭೆಯ ಪ್ರಕರಣವನ್ನು ಅವಲೋಕಿಸಬೇಕಾಗಿ ವಿನಂತಿ

ಸಾಭಾರ ಸ್ವೀಕಾರ

ತರುಣ ಭಾರತ:— (ಮರಾಠಿ ಮಾಸಿಕ) ಅಕ್ಟೋಬರ ತಿಂಗಳ ಸಂಚಿಕೆ ಸಂಪಾದಕ ಮತ್ತು ಪ್ರಕಾಶಕ— ಶ್ರೀ ಗೋಂದೋ ರಾಜಾರಾಮ ರಾಕೂಡೆ ಸವನಾದೆ ವಿಗಲ್ಲಿ, ಬೆಳಗಾವ ವಾರ್ಷಿಕ ವರ್ಗಣಿ ಅಂಚೆ ವೆಚ್ಚ ಸೇರಿ ವಿದ್ಯಾರ್ಥಿಗಳಿಗೆ ರೂ ೨ ೨-೦ ಇತರರಿಗೆ ರೂ ೩ ೬-೦

ಅಂಕೋಲಾ— ಹವಾಮಾನ ನೆಟ್ಟಗಿದೆ ಪ್ರಾತಃಕಾಲಕ್ಕೆ ಚಳಿ ಬೀಳುತ್ತದೆ ರೋಗರಾಯಿ ವಿಶೇಷ ಏನೂ ಇಲ್ಲ

ಇಲ್ಲಿಯ ಲೋಕಪ್ರಿಯ ಶಿರಸ್ತೇದಾರ ಮತ್ತು ಸದ್ಯಕ್ಕೆ ಆಕ್ಟಿಂಗ ಮಾಮಲೇದಾರರಾಗಿದ್ದ ಮಿ। ವೆಂಕಟರಾವ ಕೊಯಿಮತ್ತೂರರವರಿಗೆ ಪ್ರಾಂತ ಹೆಡಕ್ವಾರ್ಟರಿಯು ಜಾಗೆಗೆ ವರ್ಗವಾಗಿ ಅವರು ಇಲ್ಲಿಯ ಶಿರಸ್ತೇದಾರಿಗೆ ನೇಮಿಸಲ್ಪಟ್ಟ ಮಿ। ನಾಗರಕಟ್ಟೆಯವರಿಗೆ ಚಾರ್ಜು ಕೊಟ್ಟು ಮೋಕಳೀಕ ಆದರು ಮಿ। ಕೊಯಿಮತ್ತೂರರವರಿಗೆ ಎಜ್ಯುಕೇಶನ ಕ್ಲಬ್ಬಿನಲ್ಲಿ ಕೆಸ್ತುರಂಗ ವರ್ಗಸರವರು ಮಾನಪತ್ರ ಕೊಟ್ಟು ಸತ್ಕಾರ ಮಾಡಿದರು ಇವರು ಜನರೊಳಗೆ ಬಹಳೇ ಲೋಕಪ್ರಿಯರಿದ್ದು ಸರಕಾರಿ ಕೆಲಸದಲ್ಲಿ ಕಾಯಿದೇಶೀರ ಕರ್ತವ್ಯದಕ್ಷರಿದ್ದರು

ನಮ್ಮ ಡಿಸ್ಟ್ರಿಕ್ಟ ಡೆ। ಕಲೆಕ್ಟರ ಮೇ। ದಿವೇಕರ ಸಾಹೇಬರವರು ವಾಂಟ್ಕ್ಯಾಮು ಸರ್ಕೀಟಿಗೆ ತಿರುಗಾಡಿ ಇಲ್ಲಿಗೆ ಬಂದಿರುವರು.

ಇಲ್ಲಿ ಕಳೆದ ೨೯ನೇ ತಾರೀಖಿನ ದಿವಸ ಪ್ರಚಂಡ ಸಭೆ ಕೂಡಿತ್ತು ಇಂಡಿಯನ್ ಟೆರಿಟೋರಿಯಲ್ ಲಷ್ಕರದೊಳಗೆ ರಿಕ್ರೂಟ ಸೇರಿಸಲಿಕ್ಕೆ ಈ ಸಭೆಯು ಕೂಡಿಸಲ್ಪಟ್ಟಿತ್ತು ಸಭೆಯ ಕೆಲಸಕ್ಕೆಂತ ದಿವಾನ ಬಹಾದ್ದೂರ ರೂ ಲೆಫ್ಟನೆಂಟ ಸುಭೇದಾರ ಜೋಗಿ ನಾಯ್ಕರೂ ಮತ್ತು ಕೆಲವು ಪ್ರಾ. ವ್ಹ. ಕ್ಯಾ. ಕೊಂಕಣ ಮರಾಠಿಯ ರೂ ಬಂದಿದ್ದರು ಊರೊಳಗಿನ ಪ್ರಮುಖ ಜನರು ಹಾಜರಿದ್ದರು ಮೇ। ದಿವೇಕರ ಸಾಹೇಬರೂ, ವರ್ಗವಾಗಿ ಹೋದ ಮಿ। ಕೊಯಿಮತ್ತೂರರವರು ಈ ಕೆಲಸಕ್ಕೆಂತ ಕಾರವಾರದಿಂದ ಮುದ್ದಾಂ ಬಂದವರೂ ಹಾಜರ ಇದ್ದರು ದಿವಾನ ಬಹಾದ್ದೂರರು ಅಧ್ಯಕ್ಷರಾಗಿ ಆರಿಸಲ್ಪಟ್ಟ ಮೇಲೆ ಅವರು ಪ್ರಾಸ್ತಾವಿಕ ಭಾಷಣ ಮಾಡಿ, ಈ ಲಷ್ಕರ ಭರ್ತಿ ಬಗ್ಗೆ ಕೊಂಕಣ ಮರಾಠಿ ಮಾಸ್ತರರಿದ್ದ ರಾಜೇಶ್ರೀ ನಾಯ್ಕರಿಗೆ ಈ ವಿಷಯದ ಎಲ್ಲಾ ಮಾಹಿತಿಯನ್ನು ಕೊಡಲಿಕ್ಕೆ ಸೂಚಿಸಿದ ಮೇರೆಗೆ, ಅವರು, ಒಬ್ಬ ಶಿಕ್ಷಕರು ಹುಡುಗರಿಗೆ ಪಾಠ ತಿಳಿಸಿಹೇಳುವಂತೆ ಸುಲಭವಾಗಿ, ಚಲೋ ರೀತಿಯಿಂದ ಎಲ್ಲಾ ಮಾಹಿತಿಯನ್ನು ತಿಳಿಸಿಹೇಳಿದರು.

ಲೆಫ್ಟನೆಂಟ ಸುಭೇದಾರ ಜೋಗಿ ನಾಯ್ಕ ಪಗ್ಗಿಯವರು ಸ್ವಾನುಭವದ ನಾಲ್ಕು ಮಾತುಗಳನ್ನು ಹೇಳಿದ ನಂತರ ಮೇ। ದಿವೇಕರ ಸಾಹೇಬರು ಉತ್ತಮ ಭಾಷಣ ಮಾಡಿ, ಈ ಸ್ವಯಂಸೇವಕರ ಸೈನ್ಯದೊಳಗೆ ಸೇರುವದರಿಂದ ನಮ್ಮ ದೇಶಕ್ಕೆ ಮತ್ತು ಸೇರುವವರಿಗೆ ಎಷ್ಟು ಮಹತ್ವದ ಲಾಭಗಳಾಗುವವು ಮತ್ತು ಸರಕಾರದಿಂದ ಹ್ಯಾಗೆ ನಮ್ಮ ರಕ್ಷಣೆ ಆದೀತು ಹದಿನಾರು ರೂಪಾಯಿ ಪಗಾರು ದೊರೆತ ಇಪ್ಪತ್ತು ದಿವಸಗಳೊಳಗೆ, ನಮ್ಮ ಉದ್ಯೋಗ ಧಂದೆಗಳಿಗೆ ಏನೂ ಹರಕತ್ತು ಆಗದೇ ಲಷ್ಕರೀ ಶಿಕ್ಷಣವು ಸುಲಭ ರೀತಿಯಿಂದ ಈ ಸೈನಿಕರಿಗೆ ಹ್ಯಾಗೆ ಸಿಗುವದು ಎಂಬ ತಿಳಿಸಿಹೇಳಿ ಈ ಹೊತ್ತಿನ ಅಪೂರ್ವವಾದ ಮಹಾಸಭೆಯನ್ನು ಕೂಡಿಸಲಿಕ್ಕೆ ಇಷ್ಟೆಲ್ಲಾ ಹಳ್ಳಿ ಜನರನ್ನು ಕರೆತರಿಸಲಿಕ್ಕೆ ಉತ್ತಮವಾದ ವ್ಯವಸ್ಥೆಯನ್ನು ಮಾಡಿದಲಿಕ್ಕೆ ಮಹಾಲ ಎಕ್ಟಿಂಗ ಮಾಮಲೇದಾರರಾಗಿದ್ದ ಮತ್ತು ಈ ಹೊತ್ತಿಗೆ ಇಲ್ಲಿ ಮುದ್ದಾಂ ಬಂದಿರುವ ಮಿ। ವೆಂಕಟರಾವ ಕೊಯಿಮತ್ತೂರರು ಅವಿಶ್ರಾಂತ ಶ್ರಮಪಟ್ಟಿದ್ದರೆಂತಲೂ ಇದರ ಎಲ್ಲಾ ಶ್ರೇಯಸ್ಸು ಹೆಚ್ಚಾಗಿ ಅವರ ಪಾಲಿಗೇ ಇದೆಂತಲೂ, ಹೊಸ ಮಾಮಲೇದಾರರೂ ಶಕ್ಯ ಮದ್ದತು ಮಾಡಿದರೆಂತಲೂ ಹೇಳಿ ಮಿ। ಕೊಯಿಮತ್ತೂರರವರ ಆಭಾರ ಎಣಿಸಲಿಕ್ಕೆ ಅಧ್ಯಕ್ಷರಿಗೆ ಮುದ್ದಾಂ ವಿನಂತಿ ಮಾಡಿ ತಮ್ಮ ಭಾಷಣವನ್ನು ಮುಗಿಸಿದರು ನಂತರ, ಅಧ್ಯಕ್ಷರು ಸಭೋದ್ದೇಶಕ್ಕಾಗಿ ಸಮಯೋಚಿತ ನಾಲ್ಕು ಶಬ್ದಗಳನ್ನು ಹೇಳಿ ಶೂರತನದ ನೈತಿಕ ವಿಚಾರಗಳ ಚರ್ಚೆ ಮಾಡಿ, ತಮ್ಮ ಭಾಷಣವನ್ನು ಮುಗಿಸಿದರು ಸಭೆಗೆ ಹೊತ್ತು ಬಹಳ ಆದ್ದರಿಂದಲೋ ಏನೋ ಅಧ್ಯಕ್ಷರು ಮಿ। ಕೊಯಿಮತ್ತೂರರ ಆಭಾರ ಎಣಿಸಲಿಕ್ಕೆ ಮರೆತು ಹೋದರು! ಹಳ್ಳಿಗಳಿಂದ ಕೂಡಿದ ಐನೂರು ಜನಸ್ತೋಮದ ಇಷ್ಟು ದೊಡ್ಡ ಪ್ರಚಂಡ ಸಭೆಯು ಅಂಕೋಲೆಯಲ್ಲಿ ಎಷ್ಟೋ ವರ್ಷಗಳ ಲಾಗಾಯ್ತು ಕೂಡಿದ್ದಿಲ್ಲೆಂದು ಜನರು ಹೇಳಾಡುತ್ತಿದ್ದರು ಸಭೆಯು ಯಶಸ್ವಿಯಾಗಿ ಮತ್ತು ಇಷ್ಟು ಪ್ರಚಂಡವಾಗಿ ಕೂಡಲಿಕ್ಕೆ ಮಿ. ಕೊಯಿಮತ್ತೂರರವರ ಪರಿಶ್ರಮಗಳೂ ಮೇ। ದಿವೇಕರ ಸಾಹೇಬರ ಪ್ರಯತ್ನಗಳೂ ಕಾರಣವಾಗಿದ್ದವು

ಮಿ। ಎ ಆ ಪಿ। ಕಾ.ರಿ. ಸಾಹೇಬರವರ ಸ್ವಾರಿಯು ೧ನೇ ತಾರೀಖಿಗೆ ತಪಾಸಣಿಗಾಗಿ ಇಲ್ಲಿಗೆ ಬಂದಿತ್ತು ಮತ್ತು ಇದು ನಮ್ಮ ಜಿಲ್ಲೆಗೆ ಅವರ ಮೊದಲನೇ ಭೆಟ್ಟಿಯಾಗಿದೆ ಹ್ಯಾಸ್ಕೂಲ ಶಿಕ್ಷಣವನ್ನು ಸುಧಾರಿಸಿ, ವಿದ್ಯಾರ್ಥಿಗಳ ಹಿತವಾಗುವಂತ ಶಿಕ್ಷಣದ ಕಾರಭಾರವನ್ನು ಅವರು ನಡಿಸುವರೆಂದು ನಂಬಿಗೆಯಿದೆ ವಿದ್ಯಾರ್ಥಿಗಳ ಹಿತಕ್ಕಾಗಿ ಶಾಲೆಗಳಿದ್ದಾವೆ, ಹೊರತು ಮಾಸ್ತರ ಜನರಿಗಾಗಿ ಅಲ್ಲವೇ ವೆ ಸೇಜರರ ಫಾಯಿದೆಗಾಗಿಲ್ಲೆಂದು ಅವರು ಅರಿತವರೇ ಇದ್ದಾರೆ

ನ್ಯೂಬಿಸರ ಟ್ರಸ್ಟ ಸೊಸ್ಸಾಯಿಟಿಯ ಕಾರಭಾರದ ಬಗ್ಗೆ ಬಹಳ ಕಡೆಯಲ್ಲಿ ಚರ್ಚೆ ನಡೆದಂತೆ ಕಾಣುತ್ತದೆ ಇದೇನು ಗಡಬಡಿ?

ಶ್ರೀ ಬೋರ್ಗೋ ಪಬ್ಲಿಕೇಶ ರವರು ಬಂದ ಅನ್ನದ ಆಕ್ಷೇಪ ಬಂದದ್ದು ಸಹಕಾರಿ ಸಂಘದಲ್ಲಿ ಕೆಲಸ ಗಾರರ ನೌಕರರ ವಿಷಯದ ವೆಂತಲೂ ... ಓಯು ಸಭಾಸದರ ನೆಲ್ಲವೆಂತಲೂ ಖುಲಾಸೆ ಮಾಡುತ್ತಾರೆ

ಶಿರವಾಡ— ಅಮದಳ್ಳಿ ಮೊದಲಾದ ಹಳ್ಳಿಗಳಲ್ಲಿ ಇಂಡಿಯನ್ ಟೆರಿಟೋರಿಯಲ್ ಫೋರ್ಸ ದಲಕ್ಕೆ ರಿಕ್ರೂಟ ದಾಖಲ ಮಾಡುವ ಸಭೆಗಳಾಗಿದ್ದವು ಈ ಚಳವಳಿಯ ಪ್ರವರ್ತಕರು ದಿವಾನಬಹಾದ್ದೂರ ಜೋಗಿ ನಾಯ್ಕ ಹಾಗು ಟಿಲಕ್ಯಾಪ ನಾಯ್ಕ ಇವರು ಅರಸ್ಸು ಬಲಿ ದೇಶವನ್ನು ರಕ್ಷಿಸಲು ಸೈನ್ಯದಲ್ಲಿ ಸೇರಿಕೊಳ್ಳಿರೆಂದು ಇವರು ಬೋಧಿಸುತ್ತಿದ್ದರು ಮುದಿ ಪ್ರಾಯವಾದ ದಿವಾನ ಬಹಾದ್ದೂರರಿಗೆ ಪ್ರಸ್ತುತವಾದ ವೀರವೃತ್ತಿಯನ್ನು ನೋಡಿ ಅನೇಕರು ಕೊಂಡಾಡಿದರು ದಿವಾನ ಬಹಾದ್ದೂರರು ಮಹಾಭಾರತದೊಳಗಿನ ವೀರಪುರುಷರ ಉದಾಹರಣೆಗಳನ್ನು ಮನದಣಿ ಬಣ್ಣಿಸಿ ಜನರನ್ನು ಹುರಿದುಂಬಿಸುತ್ತಾರೆ ದಿವಾನಬಹಾದ್ದೂರರ ವೀರವೃತ್ತಿಯನ್ನು ಕಂಡು ಶ್ರೋತೃವರ್ಗದೊಳಗೆ ಒಬ್ಬರಂತೆ ಇವರೂ ಪ್ರಸಂಗ ಬಿದ್ದಲ್ಲಿ ದೇಶರಕ್ಷಣೆಗಾಗಿ ಪ್ರದರ್ಶಿಸಿದ ಈ ಪಥಕದಲ್ಲಿ ದಾಖಲಾಗುವರೆಂದು ತೋರಿದರೇ ಆಶ್ಚರ್ಯ

ಹೊಸ ಪೋಲೀಸ ಸುಪರಿಂಟೆಂಡೆಂಟರು ಮೋಟಾರುಗಳಲ್ಲಿ ಕೂಡ್ರುವ ಹೊಸ ವ್ಯವಸ್ಥೆಯನ್ನು ಮಾಡಿರುವರು ಹೊಸ ವ್ಯವಸ್ಥೆಯಂತೆ ನಾಲ್ವರು ಹಿಂಬದಿಗಿನ ಆಸನದ ಮೇಲೆ ಕೂಡ್ರತಕ್ಕದ್ದು ಡ್ರೈವರು ಹಾಗು ಪ್ಯಾಸೆಂಜರನು ಹೀಗೆ ಇಬ್ಬರು ಮುಂಬದಿಯ ಆಸನದ ಮೇಲೆ ಕೂಡ್ರತಕ್ಕದ್ದು ಇದರಿಂದ ಪ್ರಯಾಣಿಕರಿಗೆ ಬಹಳೇ ಉಪದ್ರವವಾಗುತ್ತದೆ ಹಿಂಬದಿಗೆ ಕೂತುಕೊಂಡ ನಾಲ್ವರು ಇಕ್ಕಟ್ಟಿನಲ್ಲಿ ಸಿಲುಕಿದಂತಾಗುತ್ತದೆ ಮೊದಲಿನ ಸುಪರಿಂಟೆಂಡೆಂಟರು ಈ ಸಧಾರಣೆ ಮಾಡಿದ ಬಳಿಕ, ಇದರ ಅನಾನುಕೂಲತೆಯನ್ನು ಲಕ್ಷಕ್ಕೆ ತಂದು, ರದ್ದು ಪಡಿಸಿದ್ದರು ಪುನಃ ಹೊಸ ಸುಪರಿಂಟೆಂಡೆಂಟರು ಈ ವ್ಯವಸ್ಥೆಯನ್ನು ಮಾಡುವ ಕಾರಣವೇನು?

ಹಳಿಯಾಳ— ಚಳಿ ಬೀಳಹತ್ತಿದೆ ಪ್ಲೇಗು ಹಳಿಗಳನ್ನು ಇನ್ನೂ ತ್ಯಜಿಸಿರುವದಿಲ್ಲ

ಗೋಗ್ರಾಸ ಭಿಕ್ಷಾ ಮಂಡಳದ ೬ ತಿಂಗಳ ಜಮಾಖರ್ಚು —

ಜಮಾ

ರೂ ೧೦೫೮ ೩ ೧ ಹಿಂದಿನ ಶಿಲ್ಕು
, ೬೩-೯ ೧ ಬತ್ತ
, ೩೪ ೫-೫ ಅಕ್ಕಿ ವಿಕ್ರಯಿಂದ
೨ ೧೨-೮ ದಕ್ಷಿಣೆ
, ೧ ೦ ೦ ಫಂಡು
೯-೦-೦ ಅಮಾನತ
ರೂ ೧೨೮೯-೧-೩ ಒಟ್ಟು ಜಮಾ
೧೫೨-೯ ೬ ಒಟ್ಟು ಖರ್ಚು ವಜಾ
ರೂ ೧೧೩೬ ೭-೯ ಸಪ್ಟಂಬರ ಅಖೈರಿಗೆ ಶಿಲ್ಕು

ಖರ್ಚು

ರೂ ೫ ೬ ೯ ಪಾದಿಲವಾರ
೧೬ ೭-೯ ತೌಡು
,, ೧ ೭- ಕೊಟ್ಟಿಗೆ ದುರುಸ್ತಿ
, ೨೩ ೬ ೦ ಹುಲ್ಲು
೧ ೧೩ ೦ ದೊಡ್ಡಿ
, ೯೦-೦-೦ ಸಂಬಳ
೧೪ ೦ ೦ ಹೊಸ ಆಕಳ ಖರೀದಿ
ರೂ ೧೫೨ ೯-೬ ಒಟ್ಟು ಖರ್ಚು.

ತ್ವರೆ ಮಾಡಿರಿ! ತ್ವರೆ ಮಾಡಿರಿ!!

ಅಚ್ಚಿನಲ್ಲಿದೆ!

ಬಗ್ಗೋಣ ರಾಮಾ ತಿಮ್ಮಣ್ಣ ಪಂಡಿತರವರಿಂದ
ಗುಣಿಸಿ ಪರಿಶೋಧಿಸಲ್ಪಟ್ಟ

ರಕ್ತಾಕ್ಷಿ ಸಂವತ್ಸರದ ಪಂಚಾಂಗವು

ಈ ತಿಂಗಳ ಆಖೈರೊಳಗೆ ತಯಾರಾಗುವದು

ಡಿಸೆಂಬರ ತಿಂಗಳ ತಾ ೨೦ರೊಳಗೆ
ಮುಂಗಡ ಹಣ ಕೊಡುವವರಿಗೆ

೧೦೦೦ ಕ್ಕೆ ರೂಪಾಯಿ ೧೦೫,
೫೦೦ಕ್ಕೆ ರೂಪಾಯಿ ೫೫ ೧೦೦ಕ್ಕೆ ರೂಪಾಯಿ ೧೧|.
ತಾ ೧೫ರ ನಂತರ ಮುಂಗಡ ಹಣ ಕೊಳ್ಳಲಾಗದು
ತಯಾರಾದಮೇಲೆ ಶೇಕಡಾ ರೂಪಾಯಿ ೧೩
ಅಂಚೆ ವೆಚ್ಚ ಪ್ರತ್ಯೇಕ

ಪತ್ರ — ಕೃಷ್ಣ ಕೇಶವ ವೇಣವಿ ಹೆಗಡೆಕರ
ಮಾಲಿಕ
ಸ್ಟಾರ ಆಫ್ ಕನರಾ ಪ್ರೆಸ್, ಕುಮಟಾ

ನೆಯ್ಗೆಯವರಿಗೆ ಸುಸಮಯ.

ನಮ್ಮಲ್ಲಿ ನೆಯ್ಗೆಗೆ ಸಂಬಂಧಪಟ್ಟ ನೂಲಿನ ಬಿದಗಳು (Cotton healds) ತಂತಿ ಬಿದಗಳು (Wire healds) ಉಕ್ಕಿನ ತಟ್ಟುಗಳು (Steel reeds) ಸಾದಾ ಮತ್ತು ಗಾಲಿ ಲಾಳಿಗಳು, (Plain & roller shuttles) ಪಿಕ್ಕರುಗಳು (Pickers) ಎಳೆಗಳನ್ನು ತೆಗೆದುಕೊಳ್ಳುವ ಕೊಂಡಿಗಳು (Reed hooks) ಮತ್ತು ಗಣಿಕೆಗಳು (Pirns) ಅಲ್ಲದೆ ಇನ್ನೂ ಬೇಕಾದ ಸಾಮಾನುಗಳು ಚಿಲ್ಲರೆಯಾಗಲಿ, ಒಟ್ಟಿಗೆಯಾಗಲಿ ಸರಿಯಾದ ಬೆಲೆಗೆ ದೊರೆಯುತ್ತವೆ

ಕ್ರಯದ ಪಟ್ಟಿ ಬೇಕಾದಲ್ಲಿ ಇಂಗ್ಲೀಷಿನಲ್ಲಿ ಬರೆಯಿರಿ

Indo-British
Trading Bureau
15/19 Ghoga Street Fort,
BOMBAY

ವೃತ್ತಸಾರ.

— ಬ್ರಿಟಿಶ ಪಾರ್ಲಿಮೆಂಟಿಗೆ ಗ್ಲಾಸಗೋ ತರ್ಫೆನಿಂದ ಮಿಸ್| ಮಾಯೊಲೆಟ್ ರೊಬರ್ಟಸನ್ ಎಂಬ ಹೆಂಗಸು ಉಮೇದವಾರಳಾಗಿ ನಿಂತಿದ್ದಳು ಅವಳು ಪ ತದಾರರಿಗೆ ಕಳೆದ ೩೦ ನೇ ಬುಧವಾರಕ್ಕೆ ಶಾಲಾಮಂದಿರದಲ್ಲಿ ಉಪನ್ಯಾಸ ಕೊಡುತ್ತಿದ್ದಳು. ವಿರುದ್ಧ ಪಕ್ಷದವರು ಅವಳಿಗೆ ಕಲ್ಲುಗಳು ಉಗುಳಿದರು ಈಗ ಅವಳು ಹಾಸಿಗೆ ಹಿಡಿದಿರುವಳು ಇಲೆಕ್ಶನಿನ ಮಹಿಮೆ!

— ಲಾಲಾ ಲಜಪತರಾಯರ ವಿಶ್ರಾಂತಿ [illegible] ಕರಾಚಿಗೆ ಹೋಗಿರುವರು. ಲಾಲಾಜಿಯವರು ಈಗ ಕ್ಷಯರೋಗದಿಂದ ಪೂರ್ಣವಾಗಿ [illegible] ಪ್ರಕೃತಿಯು [illegible] ಗಿನ ಇಲೆಕ್ಶನ [illegible] ರು [illegible]

— [illegible]

— ಮುಂಬಯಿಯಲ್ಲಿ ಕಳೆದ ತಾ ೨ ನೇ ರವಿವಾರ ಸಾಯಂಕಾಲಕ್ಕೆ ಮುಂಬೈ ಪುರಸ್ಥರ ಪ್ರಚಂಡ ಜಾಹೀರ ಸಭೆಯಾಯಿತು. ಶ್ರೀ| ವಿಠ್ಠಲಭಾಯಿ ಪಟೇಲರವರು ನಾವದಾರ ಗವ್ಹರ್ನರರ ಕಾರಕೀರ್ದಿಯು ಪ್ರಜಾಪೀಡಕವಾಯಿತೆಂತಲೂ, ಶಿಕ್ಷಣದ ಬಗ್ಗೆ ಅವರ ಕಾರಕೀರ್ದಿಯಲ್ಲಿ ಜನಿಸಿದ ಸಕ್ತಿ ಶಿಕ್ಷಣದ ಕಾಯದೆಯಿಂದ ಪ್ರಾಥಮಿಕ ಶಿಕ್ಷಣವು ಪ್ರಗತಿಹೊಂದುವಬದಲು ಪರಾಗತಿ ಹೊಂದುತ್ತದೆಂತಲೂ, ಸರಕಾರವು ಈ ಮುಂಚೆ ಶೇಕಡಾ ೮೦ ರಂತೆ ಶಿಕ್ಷಣ ಖರ್ಚು ಕೊಡುತ್ತಿದ್ದು ಹೊಸ ಕಾಯಿದೆಯನ್ನಯ ಬರೇ ಶೇಕಡಾ ೬೬ ರಂತೆ ಕೊಡುವದೆಂತಲೂ, ಮ್ಯುನಿಸಿಪಾಲಿಟಿಯು ಕೊಟ್ಟ ಮಾನಪತ್ರಕ್ಕೆ ಮುಂಬೈ ಪುರಸ್ಥರು ಸಮ್ಮತಿಸುವದಿಲ್ಲೆಂತಲೂ ನುಡಿದು ಬರಹೋಗುವ ನಾಮದಾರರಿಗೆ ಕೊಡಮಾಡಿದ ಮಾನಪತ್ರಗಳ ನಿಷೇಧಪರ ಠರಾವನ್ನು ಸೂಚಿಸಿದರು. ಸಭೆಯಲ್ಲಿ ಮಿ| ಕೇ ಕೇ ನಂಟೊ'ಕ, ಭರೂಚಾ ಬತ್ರಿ ಪುರಂದರೆ ಮೊದಲಾದವರ ಭಾಷಣಗಳಾಗಿ ಠರಾವು ಸರ್ವಾನುಮತದಿಂದ ಮಂಜೂರಾಯಿತು ಅಧ್ಯಕ್ಷಸ್ಥಾನವನ್ನು ಶ್ರೀಮತಿ ಸರೋಜಿನಿ ನಾಯುಡ ರವರು ಅಲಂಕರಿಸಿದ್ದರು. ನಾಳೆ ಬುಧವಾರಕ್ಕೆ ಮತ್ತೊಂದು ಜಾಹೀರ ಸಭೆಯಾಗುವದೆಂದು ಶ್ರೀ| ಪಟೇಲರು ಜಾಹೀರ ಪಡಿಸಿದ ಬಳಿಕ, ಸಭೆ ವಿಸರ್ಜನ ಹೊಂದಿತು

ಶೌಕತ ಅಲ್ಲಿಯವರು ಈಗ ಸ್ವಸ್ಥರಾಗಿರುವರು ಕಳೆದ ಶನಿವಾರ ತಾರೀಖು ೧ ನೇ ಸಾಯಂಕಾಲಕ್ಕೆ ಮುಂಬಯಿಯಲ್ಲಿ ಮೌಲಾನಾರವರ ಭಾಷಣವಾಯಿತು ಮೌಲಾನಾರವರು ವಿನೋದದಿಂದ ತಮ್ಮ ಅಸ್ವಸ್ಥತೆಯ ವರ್ಣನ ಮಾಡಿ, ಒಳಿತು ಅಸಹಯೋಗವು ಎಂದರೆ ನಾವ [illegible] ಮಾಗಲಾರವೆಂದೂ, ಅದು ಮೃತಿಯನ್ನೈದಿತೆಂದು ಹೇಳುವವರಿಗೆ ಅದರ ಸಾಮರ್ಥ್ಯದ ಅರಿವು ಪುನಃ ಪುನಃ [illegible] ಯೋಜನೆಯೆಂದು ಹೇಳಿಯಾಳಿಸಿದ [illegible] ನಮ್ಮ [illegible] ಈ ಕಾರ್ಯ [illegible] ಮೌಲಾನಾರವರು [illegible] ದೇವರಿಗೆ ವಹಿಸಿ, [illegible] ಮೌಲಾನಾರವರು ಅಂತಃಕರಣಪೂರ್ವಕವಾಗಿ [illegible] ಮೌಲಾನಾರವರ ತಮ್ಮ [illegible] ಮೌಲಾನಾರವರಿಗೆ ವಂದನೆಗಳನ್ನರ್ಪಿಸಿ [illegible]

— [illegible] ಮಾನಪತ್ರವ [illegible]

— [illegible] ಸಂತೋಷವಾಗಿದೆ

— [illegible] ದತ್ತ [illegible]

— [illegible] ದಪೆ [illegible] ಕೊಂಡಿರ [illegible] ಮಾನಪತ್ರಾರ್ಪಣ ಕೊಡಬೇಕೆಂತಲೂ [illegible] ಸರಕಾರದಿಂದ ಈ ಆಕ್ಷೇಪ ಬಂದಿದೆ

— ಶ್ರೀ ಕಾಮಕೋಟಿ ಪೀಠದ ಶ್ರೀ ಸಚ್ಚಿದಾನಂದ [illegible] ಸ್ವಾಮಿಗಳವರಿಗೆ [illegible] ಪ್ರಭುರವರು ವಿವಾಹ ಮೊಕದ್ದಮೆ ನಡೆಸಿ ಹೂಡಿದ್ದಾರೆಂದು ತಿಳಿಯುತ್ತದೆ

— ಮುಂಗಳೂರಿನೊಳಗಿನ ರಾಷ್ಟ್ರೀಯ ಹೆಣ್ಣುಮಕ್ಕಳ ಶಾಲೆಗೆ ಶೇಟ ಜಮನಾಲಾಲ ಬಜಾಜರವರು ೩೦೦೦ ರೂಪಾಯಿಗಳನ್ನು ಅರ್ಪಿಸಿರುವರೆಂತಲೂ, ಈ ಬಗ್ಗೆ ಅಲ್ಲಿಯ ಶ್ರೀ| [illegible] ಅವರ ಮಾನ ಪೂರ್ವಕ ಮಾಡಿದರೆಂತಲೂ ತಿಳಿಯುತ್ತದೆ.

— ವಿಲಾಯತಿಯ ವೇಲ್ಸ, ಲಂಕಶಾಯರ ಮೊದಲಾದ ಪ್ರದೇಶದಲ್ಲಿ ಬಿರುಗಾಳಿ, ಮಳೆ ಬಿದ್ದು ನದಿಗಳೆಲ್ಲ ನೆರೆಯಿಂದ ತುಂಬಿ ಸುಮಾರು ೫೦೦ ಮನೆಗಳು ನಾಶಹೊಂದಿದವಂತೆ ಗ್ಯಾಸು ನಿಂತು ಹೋದ್ದರಿಂದ ಪಟ್ಟಣಗಳೆಲ್ಲಲ್ಲ ಕತ್ತಲೆಯ ಸಾಮ್ರಾಜ್ಯ. ಇಂಥ ಗಾಳಿ ಮಳೆಗಳು ೪೦-೫೦ ವರ್ಷಗಳೀಚೆಗೆ ಸಂಭವಿಸಿದ್ದಿಲ್ಲವೆಂದು ಹೇಳುತ್ತಾರೆ

— ತಿನೆವೆಲ್ಲಿಯಲ್ಲಿ ಈಗ ಜಂಬುಲಿಂಗವನ ಹೊಸ ಅವತಾರವಾದ ಹೊಸ ದರೋಡೆ ತಂಡಗಳೆದ್ದು ಜನರನ್ನು ಸುಲಿಯುತ್ತಿರುವವು

— ಮೌ| ಮಹಮ್ಮದ ಅಲ್ಲಿಯವರು ಪ್ರಣೆಯನ್ನು ಸ ದರ್ಶಿಸಿದಾಗ, ಯುರೋಪಾ ಟ್ಯಲಿನ ಮುಹಾದ್ವಾರಕ್ಕೆ ಹೋಗಿ, ಅಲ್ಲಿಂದಲೇ ಮಹಾತ್ಮರಿಗೆ ತಮ್ಮ ವಂದನೆಗಳನ್ನರ್ಪಿಸಿದರು ಮಹಾತ್ಮರ ದರ್ಶನ ಪಡೆಯಲು ಯಾರ ಅಪ್ಪಣೆಯ ನ್ನು ಕೇಳಲಿಲ್ಲ

— ಬಂಗಾಲ ಕಾಯಿದೇ ಕೌನ್ಸಿಲಿನ ಚುನಾವಣೆಯಲ್ಲಿ ದಿವಂಗತರಾದ ಸರ್ ಸುರೇಂದ್ರನಾಥ ಬ್ಯಾನರ್ಜಿಯವರು ೨೪ ಪರಗಣಾದ ಜಿಲ್ಹೆಯ ತರ್ಫೆನಿಂದ ಉಮೇದವಾರರಾಗಿ ನಿಂತಿದ್ದರು. ಅದರೊಳಗೆ ಅವರು ಸೋತು ಹೋದರು ಸ್ವರಾಜ್ಯ ಪಕ್ಷದ ಡಾ| ಬಿಧನಚಂದ್ರ ರೋಯರವರು ಯಶಸ್ವಿಯಾದರು. ಸರ್ ಸುರೇಂದ್ರನಾಥರಿಗೆ ೨೨೮೫ ಮತಗಳು, ಡಾ| ರೋಯರಿಗೆ ೫೬೮೮ ಹೀಗೆ ಮತಗಳು ಬಿದ್ದವು.

— ಡಾ| ತೇಜಬಹಾದ್ದೂರ ಸಪ್ರುರವರು ಕಳೆದ ಶುಕ್ರವಾರ ತಾ ೩೦ ನೇ ಮುಂಜಾವಿಗೆ ಸಾಮ್ರಾಜ್ಯ ಪರಿಷತ್ತಿನ ಕಾರ್ಯ ಮುಗಿಸಿ, ವಿಲಾಯತಿಯಿಂದ ಮುಂಬಯಿಗೆ ಬಂದಿಳಿದರು 'ಮುಂಬಯಿ ಕ್ರಾನಿಕಲ್' ಪತ್ರಿಕೆಯ ಪ್ರತಿನಿಧಿಗಳು ಡಾ| ಬಹಾದ್ದೂರರಗೊತೆ ಮಲಾಖತು ಕೊಡಹೇಳಲು, ಅಸ್ವಸ್ಥತೆಯ ನೆವ ಹೇಳಿ, ಅವರು ಪಾರಾದರು. ಸಾಯಂಕಾಲಕ್ಕೆ ಸರ್ ಕಾವಸಜೀ ಜಹಾಂಗೀರ ಸಭಾಮಂದಿರದಲ್ಲಿ ಪ್ರಚಂಡ ಜಾಹೀರ ಸಭೆಯಾಯಿತು ಡಾ| ತೇಜಬಹಾದ್ದೂರರವರು ತಮ್ಮ ಕವಿಲಾಟಗಳ ಕಾರ್ಯಕ್ರಮದ ಸ್ಥೂಲ ಸ್ವರೂಪವನ್ನರುಹಿ ಜನರಲ್ ಸ್ಮಟ್ಸರವರ ಧ ರಾಗ್ರಹವನ್ನು ಟಿಸ್ಸಿಸಿ, ಸಹಾನುಭೂತಿಯನ್ನು ಪ್ರದರ್ಶಿಸಿದ ಬಗ್ಗೆ ಮುಖ್ಯ ಪ್ರಧಾನರನ್ನು ಹೊಗಳಿದರು

— ಇಂದೂರಿನ ಹೋಳಕರ ಮಹಾರಾಜರವರ ವರ್ಧಂತಿಯು ಕಳೆದ ತಾ ೨೯ ನೇ ನವಂಬರಕ್ಕೆ ಇಂದೂರಿನಲ್ಲಿ ಜರುಗಿತು ಈ ಸಮಯದಲ್ಲಿ ಮಹಾರಾಜರು ಒಂದು ಉಚ್ಚ ಕಲ್ಪನೆಯ ಸಂಸ್ಥೆಯನ್ನು ಸ್ಥಾಪಿಸಿದರು. ಜಗತ್ತಿನೊಳಗಿನ ಎಲ್ಲ ಪರಲೋಕವಾಸಿ ಲೋಕೋತ್ತರ ಪುರುಷರ ಭಾವಚಿತ್ರವನ್ನು ಒಂದು ಮಂದಿರದಲ್ಲಿ ತೂಗಡಿಸುವದು ಅಲ್ಲಿ ಒಂದು ವಾಚನಾಲಯವಿಡುವದು, ಈ ಲೋಕೋತ್ತರ ಪುರುಷರ ಮಹತಿಯ ಬಗ್ಗೆ ಆಗಿಂದಾಗ ಈ ಮಂದಿರದಲ್ಲಿ ಉಪನ್ಯಾಸಗಳನ್ನು ಮಾಡಿಸುವದು ಈ ಮಂದಿರದ ಅನಾವರಣ ಸಮಾರಂಭವು ತಾ ೨೯ ನೇಗೆ ನಡೆಯಿತು ಎಲ್ಲ ಧರ್ಮಗಳ ಪ್ರತಿನಿಧಿಗಳೂ ಹಾಜರಾಗಿ, ಮಂದಿರಕ್ಕೆ ಈಶ್ವರ್ಯದವನ್ನಿ ಯುಟ ಪರಮಾತ್ಮನನ್ನು ಪ್ರಾರ್ಥಿಸಿಕೊಂಡರು ಮಂದಿರದಲ್ಲಿ ತೂಗಡಿಸಲು ಕೆಲ ಚಿತ್ರಗಳನ್ನು ಮಹಾರಾಜರು ಈ ಪೊದಲೇ ಸಂಗ್ರಹಿಸಿಟ್ಟಿದ್ದರು.

— ಉತ್ತರ ಇಟಾಲಿಯಲ್ಲಿ ಕಳೆದ ಶನಿವಾರಕ್ಕೆ ಪ್ರಚಂಡ ಮಳೆ ಬಿತ್ತು ಗ್ಲಿನೋ ಸರೋವರದ ಕಟ್ಟು ಹುಸಿದು ಹೋಯಿತು ರೇಲ್ವೆ, ಉಸ್ಲೆ ಮೊದಲಾದವುಗಳ ಗಿರಣಿಗಳೆಲ್ಲ ಒಳದು ಹೋದವು ಸಂಕಗಳೂ, ಉಗಿಬಂಡಿಗಳೂ ಹರಿದು ಹೋದವು ಅನೇಕ ಗ್ರಾಮಗಳು ನಾಮಶೇಷವಾಗಿವೆ ೬೦೦ ಮಂದಿಗಳ ಪತ್ತೆಯೇ ಇಲ್ಲ

— ಕಳೆದ ಶನಿವಾರ ತಾ ೨ನೇ ಅಕ್ಟೋಬರಕ್ಕೆ ಮುಂಬಯಿಯಲ್ಲಿ ಪ್ರಾಂತಿಕ ಸ್ವಯಂಸೇವಕರ ಪರಿಷತ್ತು ನೆರೆಯಿತು ಅದರೊಳಗೆ ಅಖಿಲ ಭಾರತೀಯ ಪರಿಷತ್ತಿಗೆ ೧೧ ಪ್ರತಿನಿಧಿಗಳು ಆರಿಸಲ್ಪಟ್ಟರು ಹಾಗು ಅಖಿಲ ರಾಷ್ಟ್ರೀಯ ಸ್ವಯಂಸೇವಕ ಸಂಸ್ಥೆಯ ಸ್ಥಾಪನೆಯ ಬಗ್ಗೆ ಕೆಲ ಸೂಚನೆಗಳು ಮಾಡಲಾದವು

— ಮದ್ರಾಸಿನ ವಿಲಿಂಗ್ಡನ್ ದೊರೆಗಳ ಕಾರಕೀರ್ದಿಯು ಸದ್ಯಕ್ಕೆ ಮುಗಿಯುತ್ತದೆ. ಅವರ ಸ್ಥಳಕ್ಕೆ ಗೋಶನ್ ಎಂಬ ದೊರೆಗಳ ನೇಮಣೂಕಿಯಾಗಿದೆಯಂತೆ!

— ಅಖಿಲ ಭಾರತೀಯ ಸಮಾಜ ಸೇವಕರ ಪರಿಷತ್ತು ಕಳೆದ ಗುರುವಾರ ತಾರೀಖು ೨೯ನೇ ಸಾಯಂಕಾಲಕ್ಕೆ ಬಿಝೆಂಟ ಅಮ್ಮನವರ ನೇತೃತ್ವದಲ್ಲಿ ಜರುಗಿತು

— ನಿಜಾಮ ಸಾಹೇಬರು ಸರ್ವವಿಷಯಗಳ ಸುಪಾಸಿನಿಯಾದ ಲೆ ಡಿ ರೀಡಿಂಗರವರ ಲೋಕಹಿತಸಂವರ್ಧಕ ನಿಧಿಗೆ ೨೫ ಸಾವಿರ ರೂಪಾಯಿಗಳನ್ನು ದಾನ ಮಾಡಿರುವರು

— ಪ್ರಿನ್ಸಿ ಪಾಲ ಎ.| ಪರಾಂಜಪೇಯವರು ಪುನಃ ತಮ್ಮ ಪುಣ್ಯ ಪಟ್ಟಣದೊಳಗಿನ ಫರ್ಗ್ಯುಸನ ಕೊಲೇಜಿನ ಮುಖ್ಯಾಧ್ಯಾಪಕತ್ವವನ್ನು ವಹಿಸಿಕೊಳ್ಳಲಿಕ್ಕಿದ್ದಾರೆಂದು ಪ್ರಸಿದ್ಧ

— ಶ್ರೀಮಂತ ಸಯಾಜೀರಾವ ಗಾಯಕವಾಡರವರು ಕಳೆದ ಶುಕ್ರವಾರ ೩೦ ನೇಗೆ ಮುಂಬಯಿಯಲ್ಲಿ ಬಂದಿಳಿದರು. ಜಾಯನ್ ಹಾಲ ಮಂದಿರದಲ್ಲಿ ಹಿಂದೂ ಮಹಾಸಭಾ ಜನರು ನೆರೆದು, ನಾಮದಾರ ಗಾಯಕವಾಡರವರ ವಿದ್ಯಾದಾನ [illegible] ಮಾನಪತ್ರನ್ನರ್ಪಿಸಿದರು

ಶಿರ್ಶಿ ಹೆಡ್ ಮಾಸ್ತರರ ಹೆಡ್ಡತನ!

ಶಾಲೆ-ಕಾಲೇಜಗಳಲ್ಲಿ ವ್ಯವಹಾರಜ್ಞಾನದ ವಿಷಯವಾಗಿ ಕಾಣಲು ಸಿಗದಂತಿದ್ದು, ಜನರ ಸುಖ-ದುಃಖಗಳನ್ನರಿಯದ ಅನನುಭವಿಕರಿಗೆ ದೊರಗೆ ಬಂದ ಕಾಲದಲ್ಲಿ, ಯಾವದೊಂದು ಅಧಿಕಾರದ ಕೆಲಸವು ಪ್ರಾಪ್ತವಾದರೆ "ನಾನು ನೆಲದ ಮೇಲೋ, ನೆಲ ನನ್ನ ಮೇಲೋ" ಎಂಬಂತೆ ಆಗಿ, ಅವರು ಹ್ಯಾಗೆ ವರ್ತಿಸುತ್ತಾರೆಂಬುವದಕ್ಕೆ ನಮ್ಮ ಶಿರ್ಶಿ ಇಂಗ್ಲೀಷ ಶಾಲೆಯ ಹೆಡ್ ಮಾಸ್ತರರು ಒಂದು ಉದಾಹರಣೆಯಾಗಿರುತ್ತಾರೆಂಬ ಹೇಳಲಿಕ್ಕೆ ಅಡ್ಡಿ ಇಲ್ಲ. ಯಾಕಂದರೆ, ನನ್ನ ಮಿತ್ರರಾದ ವಿಘ್ನೇಶನವರು ಹಿಂದಕ್ಕೊಮ್ಮೆ ಅವರ ವಿಷಯವಾಗಿ ಪ್ರಕಟಿಸಿದ ಕೆಲವು ಸಂಗತಿಗಳನ್ನೋದಿ ಬೆರಗಾದ ನಾನು ಅಂಥ ವಿಲಕ್ಷಣವಾದ ವ್ಯಕ್ತಿಯ ವಿಷಯವಾಗಿ ಹೆಚ್ಚಿನ ಮಾಹಿತಿಯನ್ನು ಪಡೆಯಲು ಉತ್ಸುಕನಾಗ ತಡ ಸಹಜವೇ. ಮತ್ತು ನಾನು ಹೆಚ್ಚೆಚ್ಚು ಚೌಕಶಿ ಮಾಡಿದಂತೆ, ಹೆಚ್ಚೆಚ್ಚು ಸೋಜಿಗದ ಸಂಗತಿಗಳು ಹೊರಬೀಳಹತ್ತಿದವು. ಅವು ಸ್ವಲ್ಪ ವಿಚಿತ್ರವೂ, ಮನೋರಂಜಕವೂ ಎಂತ ಕಂಡು ಬಂದದ್ದರಿಂದ, ವಾಚಕರಿಗಾಗಿ ಕೆಲವು ಮಾತ್ರ ಇಲ್ಲಿ ಕೊಟ್ಟಿರುತ್ತೇನೆ.

ಒಂದು ದಿನ ಇಂಗ್ರೇಜಿ ಭಾಷೆಯನ್ನರಿಯದ ಒಬ್ಬ ಗೃಹಸ್ಥನು ತಾರು ಬಂದದ್ದರಿಂದ ಗಾಬರಿಯಾಗಿ, ಅದನ್ನು ಓದಿ ಕೇಳುವ ಕುತೂಹಲತೆಯಿಂದ ತನಗೆ ಗೊತ್ತಾಗಿರುವ ಭಾಷೆಯು ಉಗಮ ಸ್ಥಾನವೆನಿಸುವ ಇಂಗ್ಲೀಷ ಶಾಲೆಗೇ ಹೋಗಿ, ಅದನ್ನು ದಯಮಾಡಿ ಓದಿ ಹೇಳಲು ಹೆಡ್‌ಮಾಸ್ತರರವರಿಗೆ ಬೇಡಿಕೊಂಡನಂತೆ. ಆದರೆ, ಅಧಿಕಾರದ ಮುಂದೆ ಸಾಮಾನ್ಯ ಜನರ ಸುಖ-ದುಃಖಗಳನ್ನರಿಯದ ಆ ಸುಶಿಕ್ಷಿತರು ಈಗ ಪುರಸತ್ತು ಇಲ್ಲವೆಂತ ಹೇಳಿ, ಆ ಬಡವನನ್ನು ಹಾಗೆಯೇ ಹಿಂದಕ್ಕೆ ಕಳಿಸಿದರಂತೆ! ಇಂಥ ಕಠೋರವಾದ ಕೃತಿಯಿಂದ ಸುಶಿಕ್ಷಿತರೆನಿಸಿಕೊಳ್ಳುವವರ ವಿಷಯವಾಗಿ ಆವನಿಗೆ ಬಂದಿರಬಹುದಾದ ಕಲ್ಪನೆಗಳನ್ನೂ, ವಿದ್ಯಾರ್ಥಿಗಳ ಮನಸ್ಸಿನ ಮೇಲಾಗಿರಬಹುದಾದ ನೈತಿಕ ಮತ್ತು ಸಾಮಾಜಿಕ ಪರಿಣಾಮವನ್ನೂ ವಾಚಕರೇ ಊಹಿಸಲಿ.

* * * *

ಕನ್ನಡ ಶಾಲೆಗೂ, ಇಂಗ್ಲೀಷ ಶಾಲೆಗೂ ಒಬ್ಬನೇ ಆಗಿರುವ ಶಿಪಾಯಿಯು ತನ್ನ ಹೆಂಡತಿಯು ಸಾಯ ಬಿದ್ದ ಸಮಯದಲ್ಲಿ ಈ ಮಹನೀಯರಿಗೆ ತನ್ನ ಬಡತನದ ಸ್ಥಿತಿಯ ವಿಷಯವಾಗಿ ಕನಿಕರ ಹುಟ್ಟುವ ಸಂಭವವಿಲ್ಲೆಂಬ ಭಾವನೆಯಿಂದ, ಕನ್ನಡ ಶಾಲೆಯ ಹೆಡ್ ಮಾಸ್ತರರ ವಿದ್ಯಮಾನ ಮುನಿಸಿಪಾಲಿಟಿಯಿಂದ ೧೦ ದಿವಸಗಳ ರಜೆಯನ್ನು ಪಡೆದು, ಈ ಸಂಗತಿಯನ್ನು ವಿದ್ಯಾರ್ಥಿಯ ಕಾಲೇಜ ಶಿಕ್ಷಕರ ಮುಖಾಂತರ ತನ್ನ ಈ ಮೇಲಧಿಕಾರಿಗೆ ತಿಳಿಸಿದ್ದಲ್ಲದೆ, ಶಾಲೆಯ ಬಾಗಿಲುಗಳನ್ನು ತೆರೆಯುವ ಹಾಕುವ ವ್ಯವಸ್ಥೆಯನ್ನಿಟ್ಟಿದ್ದನಂತೆ. ಇಷ್ಟರಲ್ಲಿ ಆ ದುರ್ದೈವಿಯ ಹೆಂಡತಿಯು ಮುಂಗಾರೀಕಳಾಗಲು ರಜೆ ಮುಗಿದ ಕೂಡಲೆ, ಆವನು ಹೊಟ್ಟೆಯ ಸಲುವಾಗಿ ಕೆಲಸದ ಮೇಲೆ ಹಾಜರಾದನು. ಆದರೆ, ರಜೆಯ ಸಂಗತಿಯನ್ನು ತನಗೆ ಸ್ವತಃ ಬಂದು ತಿಳಿಸಲಿಲ್ಲವೆಂತ ಸಿಟ್ಟಿಗೆದ್ದ ಈ ಶಿಸ್ತಿನ ಸುಶಿಕ್ಷಿತರು, ಹೆಂಡತಿಯ ಮರಣದ ದುಃಖದಿಂದ ಚಿಕ್ಕ ಮಕ್ಕಳ ದುಃಸ್ಥಿತಿಯ ವಿಷಯವಾಗಿ ಮೊದಲೇ ಕೊರಗುತ್ತಲಿದ್ದ ಆ ಬಡವನಿಗೆ ೬ ಆಣೆ ದಂಡ ಮಾಡಿ, ಉಳಿದ ಪಗಾರವನ್ನು ತೆಗೆದುಕೊಳ್ಳಲು ಹುಕುಮು ಮಾಡಿದರಂತೆ! ಆದರೆ, ಆವನು ಈ ಬಗ್ಗೆ ಮುನಿಸಿಪಾಲಿಟಿಗೆ ಅರಿಕೆ ಮಾಡಿಕೊಳ್ಳಲು ಪ್ರಾರಂಭಿಸಿದ್ದಾನೆ. ಆವನಿಗೆ ನ್ಯಾಯ ದೊರೆಯುವದಾಗಿ ತಿಳಿಯುತ್ತದೆ. ಇದಲ್ಲದೆ, ಈ ಪದವೀಧರರು ಅಮಲಿನಲ್ಲಿ ಬಂದ 'ವಿದ್ಯಾರ್ಥಿಗಳು ೨೫ ನೇ ತಾರೀಖಿನ ಒಳಗೆ ಫೀ ಕೊಡದಿದ್ದರೆ ಅಥವಾ ಮುಂಚಿತವಾಗಿಯೇ ಪಾಲಕನ ಚೀಟಿಯನ್ನು ಕೊಟ್ಟು ರಜೆ ಪಡೆಯದ ಗೈರಹಾಜರಿ ಇದ್ದರೆ, ದಿನ ೧ ಕ್ಕೆ ॥ ಆಣೆಯಂತೆ ದಂಡ' ವೆಂಬ ಕಾಯಿದೆಯು ಮುನಿಸಿಪಾಲಿಟಿಯಿಂದ ಸಿಸ್ತುಪೂರ್ವಕ ಒಪ್ಪಿರುವದಲ್ಲದೆ, ಶಾಲೆಯ ವಿಷಯದಲ್ಲಿ ಯಾರಿಗೂ ದಂಡ ಮಾಡುವ ಅಧಿಕಾರವು ನಿಮಗೆ ಇಲ್ಲವೆಂತ ಸ್ಪಷ್ಟವಾಗಿ ತಿಳಿಸುವದಂತೆ!

* * *

ಅಧಿಕಾರಾರೂಢರಾದ ಕೂಡಲೆ, ಇವರು ಪ್ರತಿ ದಿವಸ ಕಡೆಯ ತಾಸು ಶಾಲೆಯಿಂದ ಜಾರುವ ಹ್ಯಾಂಗ್ಲರಿ ಘಾಟನ್ನಿಟ್ಟಿದ್ದರಂತೆ. ಮತ್ತು ಚೇರಮನ್, ಪ್ರೆಸಿಡೆಂಟ ಮೊದಲಾದವರು ೧-೩ ಸಾರೆ ಶಾಲೆಗೆ ಬಂದ. ಹೆಡ್ ಮಾಸ್ತರರ ಗೈರಹಾಜರಿಯು ಕಂಡು ಬರೆದು, ಆದರ ಬಗ್ಗೆ ಹಿಂದಿನಿಂದ ಕಾರಣ ಕೇಳಲು, ಪ್ರತಿ ಸಾರೆಯೂ ತಿಂಬೊಟ್ಟುಗಳನ್ನು ತೋರಿಸಿದ್ದಲ್ಲದೆ, 'ಕಳ್ಳನು ಎದ್ದು, ಕೊತವಾಲನನ್ನು ಹಿಡಿದನು' ಎಂಬಂತೆ ಶಾಲೆಯ ವ್ಯವಸ್ಥೆಯನ್ನಿಟ್ಟಿಲ್ಲವೆಂಬ ಅಪರಾಧವನ್ನು ಮುನಿಸಿಪಾಲಿಟಿಯ ಮೇಲೆ ಹೊರಿಸಿದರಂತೆ! ಇದಲ್ಲದೆ, ಇನ್ನೊಮ್ಮೆ ಸ್ವತಃ ಚೇರಮನ್‌ರವರೇ ಸಂಜೆಯ ಮುಂಚೆ ಶಾಲೆಗೆ ಹೋಗಿ, ವಿದ್ಯಾರ್ಥಿಗಳೇ ಅದೃಶ್ಯವಾಗಿರುವ ಕಾರಣವನ್ನು ಬೇರೊಬ್ಬ ಶಿಕ್ಷಕರಿಗೆ ಕೇಳಲು, ಬೆಳಿಗ್ಗೆ ಶಾಲೆಗೆ ಬಂದ ಕೂಡಲೆ ಅವರ ಹಾಜರಿ ತೆಗೆದುಕೊಂಡು, ಮನೆಗೆ ಹೋಗಲು ಪರವಾನಗಿ ಕೊಟ್ಟಿರುತ್ತದೆಂತ ನಡೆದ ಸಂಗತಿಯನ್ನೇ ತಿಳಿಸಿದರಂತೆ. ಆದರೆ, ಇದೇ ಪ್ರಶ್ನೆಯನ್ನೇ ಹೆಡ್ ಮಾಸ್ತರರವರಿಗೆ ಕೇಳಲು ಒಟ್ಟು ೧೫ ಮಿನಿಟುಗಳ ಮುಂಚೆ ಬಿಟ್ಟಿರುತ್ತದೆಂತ ಉತ್ತರ ಕೊಡಲು, ಹೀಗೆ ಇಬ್ಬರ ಹೇಳಿಕೆಯಲ್ಲಿ ಪರಸ್ಪರ ವಿರೋಧವು ಕಂಡುಬರುವ ಕಾರಣವನ್ನು ಕೇಳಲಾಗಿ ತಾವು ಹೇಳಿದ್ದೇ ಖರೇ ಎಂತ ಪ್ರತಿಪಾದಿಸಹತ್ತಿದರಂತೆ!

* * * *

ಒಂದು ದಿನ ಬೆಳಿಗ್ಗೆ ಒಂದೇ ಅಂಗಿಯ ಮೇಲಿದ್ದ ಒಬ್ಬ ಬಾಲಕನು ಹೋಟೆಲು ಬಿಟ್ಟು ಬಿಸಿಲಿಗೆ ಬೆನ್ನು ಮಾಡಿ ಕೊಂಡು ಶಾಲೆಯ ಕಂಪೌಂಡಿನ ಒಳಗೆ ಕೂಡಿದ್ದನಂತೆ. ಅದನ್ನು ಶೋಧಿಸಿತೆಗೆದ ಈ ಮಹಾಶಯರು ಆ ಹುಡುಗನು ಕನ್ನಡ ಶಾಲೆಗೆ ಸಂಬಂಧಿಸಿದ ಹುಡುಗನೆಂತ ತರ್ಕಿಸಿ, ಅಂಥ ಭಯಂಕರವಾದ ಗುನ್ಹೆಗೆ ಕನ್ನಡ ಶಾಲೆಯ ಹೆಡ್‌ಮಾಸ್ತರರೇ ಜವಾಬದಾರರೆಂತ ನಿರ್ಣಯಿಸಿ ಆವರ ಈ ಕ್ಷಮಾ ಅಕ್ಷಮ್ಯವಾದ ಅಪರಾಧವನ್ನು ಮುದ್ದೇಮಾಲಿನ ಸಹಿತ ಆವರ ನಜರಿಗೆ ತಂದುಕೊಡುವ ಉದ್ದೇಶದಿಂದ ಆವರಿಗೆ ವಾರಂಟು ಕಳಿಸಿ, ಹಾಜರಾದ ಮೇಲೆ ಗುನ್ಹೆಯನ್ನು ಶಾಬೀತ ಮಾಡಿ, ಅಪರಾಧಿಗೆ ತಕ್ಕ ಶಿಕ್ಷೆಯನ್ನು ವಿಧಿಸಲು ಆ ಬಾಲಕನನ್ನು ಹಿಡತರುವದಕ್ಕಾಗಿ, ಶಾಲೆಯ ಶಿಪಾಯಿಯನ್ನು ಅಟ್ಟಿದರಂತೆ. ಆದರೆ ನಡೆದ ಕಥೆಯನ್ನು ಕಂಡು, ಒಬ್ಬಿಬ್ಬ ಬಾಲಕನು ಗಾಬರಿಯಾಗಿ ಶಾಲೆಗೆ ಓಡ್ಯೋಡಿ ಹೇಳಿ, ತನ್ನ ಮನೆಯನ್ನು ಸೇರಲು ಅಷ್ಟಕ್ಕೆ ಬಿಡದೆ, ತನ್ನ ಹೆಸರು ಹೇಳಿ ಗುನ್ಹೆಗಾರನನ್ನು ಹಿಡಕೊಂಡು ಬರಲು ಶಿಪಾಯಿಯನ್ನು ಮನೆಗೆ ಕಳಿಸಿದರಂತೆ! ಮತ್ತು ಅವನು ಹೋಗಿ ಅದರಂತೆ ಹೇಳಲು, ಬೇಕಾದರೆ ನಿಮ್ಮ ಹೆಡ್ ಮಾಸ್ತರರನ್ನೇ ಇಲ್ಲಿಗೆ ಕರಕೊಂಡು ಬಾ, ಎಂತ ಹೇಳಿ ಕಳಿಸಿದನಂತೆ! ಒಬ್ಬನ ವೇಳೆ, ಕನ್ನಡ ಶಾಲೆಯ ಹೆಡ್ ಮಾಸ್ತರರು ಶಾಲೆಯ ಹೊರಗೂ ಯಾವತ್ತೂ ಹುಡುಗರ ಪ್ರತಿ ಒಂದು ಆಚರಣೆ ಕಡೆಗೆ ದುರ್ಬೀನ್ ಹಿಡಕೊಂಡು ನೋಡುತ್ತಿರಬೇಕಾಯಿತು ಇವನ್ನೆಲ್ಲ ಕಂಡು ಅವರು ಈ ಮಹಾಶಯರಿಗೆ ಯಾವ ವಿಶೇಷಣವನ್ನು ಕೊಟ್ಟಿರಬಹುದು?

* * * *

ಕೆಲವು ದಿವಸಗಳ ಹಿಂದೆ ಒಬ್ಬ ಬಡ ಕೂಲಿಕಾರನು ಏನೊಂದು ಕೆಲಸದ ಸಲುವಾಗಿ ಶಾಲೆಯ ಹೊರಮನೆಗೆ ಬಂದಿರಲು, ಈ ಪದವೀಧರರು ಹುಡುಗರನ್ನು ಕಳಿಸಿ ಅವನ್ನು ಹೊರಗೆ ನೂಕಿಸಿದರಂತೆ! ಇಷ್ಟೇ ಅಲ್ಲ, ಹಳ್ಳಿಗಳಲ್ಲಿ ಕೂಲಿ ಕಷ್ಟ ಮಾಡಿ, ಹೊಟ್ಟೆ ಹೊರಕೊಳ್ಳಬೇಕೆಂತ ಘಟ್ಟದ ಕೆಳಗಿಂದ ಬಂದಿದ್ದ, ಕೆಲ ಬಡ ಹೆಂಗಸ್ಸರು ಬಿಸಿಲಿನಿಂದ ಬೆಂಡಾಗಿ, ರಸ್ತೆಗೆ ತಾಗಿ ಶಾಲೆಯ ಕಂಪೌಂಡಿನ ಒಳಗಿರುವ ಕೊಳವೆಗೆ ಹೊಂದಿದ್ದ ಒಂದು ಮರದ ನೆರಳಲ್ಲಿ ತಮ್ಮ ಗಂಟು-ಮೂಟೆಗಳನ್ನಿಟ್ಟುಕೊಂಡು ಕೂತು ದಣುವಾರಿಸಿಕೊಳ್ಳುತ್ತಿದ್ದರಂತೆ. ಆದರೆ, ನವಶಿಕ್ಷಿತ ಭೂಷಿತರಾದ ಈ ಅಧಿಕಾರಿಗಳು ಸಹಾವಿಗೆ ಒಂದೇ ಒಂದು ಹರಕು ಬಟ್ಟೆಯನ್ನು ಸುತ್ತಿಕೊಂಡು ದೇಶದ ದಾರಿದ್ರ್ಯವನ್ನು ವ್ಯಕ್ತಪಡಿಸುವ ಕಪ್ಪು ವರ್ಣದ ಕೂಲಿಕಾರರನ್ನು ಅಲ್ಲಿ ಕೂತ್ಕೊಳ್ಳುವದು ಅಸಹ್ಯಕರವೂ, ತಮ್ಮ ಯೋಗ್ಯತೆಗೆ ಕಡಿಮೆಯಾದದ್ದೂ ಎಂತ ಭಾವಿಸಿಯೋ ಏನೋ, ಅಲ್ಲಿಂದ ತಾಬಡತೋಬ ಎದ್ದು ಹೋಗಲು ಆ ಬಡ ಪರದೇಶಿಗಳಿಗೆ ಹುಕುಮು ಮಾಡಿದರಂತೆ! ಈ ರೀತಿಯಲ್ಲಿ ಗಡಿಪಾರು ಮಾಡಲ್ಪಟ್ಟ ಆ ದಣಿದ ದಾರಿಕಾರರು ಅತಿಮಾನವ ಎದ್ದು, ೮-೧೦ ಮಾರು ಆಚೆಗೆ ಇದ್ದ ಇನ್ನೊಂದು ಮರದ ನೆರಳಿಗೆ ಹೋಗಿ ಕೂತುಕೊಂಡು, ಈ ಪಂಡಿತರು 'ಸರಕಾರದವರು' ಇರಬೇಕು ಎಂತ ಭಾವಿಸಿ, ಭೀತಿಯಿಂದ ಅವರ ಕಡೆಗೆ ಮಿಕಿಮಿಕಿ ನೋಡಹತ್ತಿದರಂತೆ! ಶಾಭಾಸ್ ಸುಶಿಕ್ಷಿತರೇ, ಶಾಭಾಸ್! ಒಂದಕ್ಕಿಂತ ಮತ್ತೊಂದು ವಿಚಿತ್ರವಾಗಿರುವ ಮೇಲಿನ ಕೃತಿಗಳನ್ನು ಕೇಳಿ, ನಿಮಗೆ ಯಾರೂ ಧನ್ಯವಾದವನ್ನು ಮಾಡದೇ ಇರಲಿಕ್ಕಿಲ್ಲ!

ಸ್ಪಷ್ಟವಕ್ತಾ

Twelve Tissue Remedies

ಈರಾರು ಲವಣಗಳು

ಕೆಳಗೆ ಬರೆದ ಕ್ರಯಕ್ಕೆ ಸಿಗುವವು

ನಂಬರ ೧ರಿಂದ ೧೨ರ ವರೆಗೆ

೧ ಔನ್ಸ ಬಾಟ್ಲಿಗೆ ಕ್ರಯ ರೂ ೦-೧೦-೦.

" " " ೨ ಔನ್ಸ ಬಾಟ್ಲಿಗೆ " ರೂ. ೧-೧-೦

" " " ೪ ಔನ್ಸ ಬಾಟ್ಲಿಗೆ " ರೂ. ೧-೧೨-೦

ಇದಲ್ಲದೆ, ಗಜಕರ್ಣ, ಕುಷ್ಠ, ಕರೆಹೊಡತ, ಚಳಿಜ್ವರ, ಟಾಯಫೈಡಜ್ವರ, ಜ್ವರಗಡ್ಡೆ ಮೊದಲಾದವುಗಳಿಗೆ ಅತ್ಯುತ್ತಮ ಔಷಧಗಳು ನಮ್ಮಲ್ಲಿ ದೊರೆಯುವವು. ವಿಶೇಷ ಮಾಹಿತಿ ಪತ್ರದ್ವಾರ ಯಾ ಸಮಕ್ಷ.

ಪತ್ತೆ:— ಎನ್. ಈ. ಮರುಗೀಸ್,

ಮಿಶನ್ ಮಾಸ್ತರ,

ಹಳದೀಪುರ (ಉ. ಕಾನಡಾ)

कारवारांत आयुर्वेदिक पाठविद्यालय

उघडण्यांत येणार.

सन १९२४ च्या जानेवारी महिन्यापासुन कारवार येथे वरील पाठशाळा उघडण्यात येणार आहे. आयुर्वेदांतील प्रत्येक विषय प्रमाणपूर्वक व शास्त्रशुद्ध शिकविण्यात येईल. पूर्ण आयुर्वेदिक शिक्षण तीन वर्षांत शिकविले जाईल. विद्यार्थी निदान मराठी पाच इयत्ता शिकलेला व भांडारकरकृत, संस्कृत तीन पुस्तकें पढलेला असावा. अथवा आयुर्वेद औषध पुस्तकांतील श्लोकांचा अर्थ समजून घेण्या इतका संस्कृत ज्ञान असलेला असावा. त्याचे वय १८ ते २२ वर्षांपर्यंत व प्रकृति सदृढ असावी. सदर पाठशालेचे वर्ग १ जानेवारी १९२४ पासुन सुरू होतील. फीचे दर १ ल्या वर्षास दरमहा ६ रुपये, दुसऱ्यास दरमहा

१० रुपये व तिसऱ्या वर्षीस दरमहा १२ रुपये प्रमाणें ठेविली आहे. पहिल्या वर्षांत फक्त २९ विद्यार्थीच निवडण्यांत येतील. विद्यार्थ्यांनीं आपले अर्ज ता १५ डिसेंबरच्या आंत पाठविले पाहिजेत. अर्जांसोबत प्रवेश फीचे २ रुपये पाठविण्यांत आले पाहिजेत. ज्यांची निवड होणार नाहीं त्यांची फी परत करण्यांत येईल. पत्रव्यवहार मराठींत अगर कानडी मध्यें करावा.

प्रत्येक वर्षांत शिकविले [illegible] विषय खालील प्रमाणें—

पहिलें वर्ष.

१. प्रत्येक [illegible] [illegible] वर्णन [illegible] प्रत्येक औषधांचे [illegible] [illegible] [illegible]

२. [illegible] शास्त्र. त्यांत प्रत्येक [illegible] [illegible] [illegible] [illegible] परीक्षा [illegible] शिकविले जाईल

३. [illegible] [illegible] [illegible] आलेले विषय औषधालयांत समक्ष प्रयोग करून दाखविले जातील.

दुसरें वर्ष.

१. प्रत्येक रोगावर निरनिराळ्या शास्त्रीय पद्धतीनें चिकित्सा उपचार करण्यास शिकविलें जाईल.

२. प्रत्येक वनस्पद्रव्यादिचे गुणदोष व तत्व विचार शिकविले जातील.

३. प्रत्येक रोगावर पथ्यापथ्य विषय शिकविले जातील.

तिसरें वर्ष.

१. आर्य शरीर शास्त्र, कला, स्नायु, मज्जातंतु वाहिनी [illegible] [illegible] चक्रादि प्रत्येक भागास होणाऱ्या निरनिराळ्या क्रिया. प्रत्येक भागाचीं नांवें, त्याच प्रमाणें प्रत्येक भाग चित्र रूपानें काढून घेणें व तेच विषय त्यांना वर्णन करून स्पष्ट करून देणें वगैरे.

२. प्रत्येक रोगावरील हिमफाटकाढ्या पासून रसायनां पर्यंत तयार करण्याचे प्रयोग औषधालयांत समक्ष करून दाखविले जातील.

३. रसायनें व कृत्रिम रसायन यांची संपूर्ण माहिती आणि प्रत्येक विषयां विषयीं संशयनिवृत्ति स्पष्ट रितीनें करण्यांत येईल.

विशेष माहिती— खालील पत्त्यावर पत्रद्वारें अगर समक्ष मिळेल.

वि. सू. उमेदवारांकरितां राहण्याची सोय करून देता येईल.

शिकविणारे— वैद्य ज. एफ. फर्नांडिस.
आयुर्वेद [illegible], कारवार.

पत्ता— व्यवस्थापक.
आयुर्वेदिक पाठविद्यालय [illegible]

ಫಕ್ತ ಒಂದು ತಿಂಗಳ ಪೂರ್ತ ಸವಲತ್ತು.

ತಿಂಗಳಿಗೆ ರೂಪಾಯಿ ೧೦೦ರಿಂದ ೫೦೦ರ ವರೆಗೆ ಗಳಿಸಿರಿ.

ಬೇಕಾದಲ್ಲಿ ಸುಲಭವಾಗಿ ಗಳಿಸಿರಿ.

ರೂಪಾಯಿ ೭ ೮ ೦ ಖರ್ಚುಮಾಡಿರಿ ಮತ್ತು ಸ್ವತಂತ್ರರಾಗಿರಿ.

[illegible] ಪ್ರತಿಯೊಬ್ಬ ಮಾನವನಿಗೆ ಅವಶ್ಯವಿದ್ದ ವಸ್ತುವು. ಅವನು ಬೇಕಾದರೆ, [illegible], [illegible], ಹಳ್ಳಿಗನಿರಲಿ, ಪಟ್ಟಣಿಗನಿರಲಿ, ಪಾಶ್ಚಾತ್ಯ ಹಾದರಿಯ ಸಬಕಾರ [illegible] ತಯಾರಿಕ [illegible] ಕ್ರಮವು ಅತಿ ಉತ್ತಮವೆಂದು ಖ್ಯಾತಿಹೊಂದಿದೆ. ಈ ಕ್ರಮದಿಂದ [illegible] ಯಾರ ಅರಿವೆಗೆ ಹಾಕುವ, ಪರಿಮಳದ ಹಾಗು ಬಣ್ಣ [illegible] ಯಾರೂ ತಯಾರಿಸಬಲ್ಲರು. ಈ ಕ್ರಮಕ್ಕೆ ಬೆಂಕಿಯ ಅವಶ್ಯಕತೆಯಿರುವದಿಲ್ಲ. ನಮ್ಮ ವಿದ್ಯಾರ್ಥಿಗಳು ಯತ್ನಮಾಡುವಾಗ ನಾವು ಬಲು [illegible] ಲಕ್ಷ್ಯ ವಹಿಸಿ, ಅವರಿಗೆ ಬೇಕಾದ ಮಾಹಿತಿಯನ್ನು ಪೂರೈಸುತ್ತೇವೆ. ಈ [illegible] ಪತ್ರಗಳನ್ನು ಕಳುಹಿಸಿರುವರು. ಪೂರ್ಣ ಕ್ರಮವನ್ನು [illegible] ಮಾಹಿತಿ ಕಳಿಸುವೆವು. ಈ ಕ್ರಮವು ನಿಯಮಿತ ಮಂದಿಗಳಿಗೆ [illegible]

[illegible] ಇದ್ದಪಕ್ಷ ಕೆಳಗಿನ ಪತ್ತೆಗೆ ಕೂಡಲೆ ಬರೆಕೊಳ್ಳತಕ್ಕದ್ದು.

International Business Corporation,
Dept. (F) [illegible], *Gowliguda*, Hyderabad. (*Dn.*)

ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳಮೇಲೆ, ರಾಮಬಾಣದಂತಾಗಿರುವದು. ಕಳೆದ ೩೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ ಡಿಪೊ, ಫೋರ್ಟ, ಮುಂಬಯಿ.

ಹಸನಾದ ನಾಗುವಳಿಯಲ್ಲಿಯೇ ಸಂಪತ್ತಿಯು



ಅಡಕವಾಗಿರುವದು.

ನಮ್ಮ ಕಾರಖಾನೆಯಲ್ಲಿ ತಯಾರಾಗುವ ಸುಧಾರಿಸಿದ ಕಬ್ಬಿಣ ನೇಗಿಲಗಳೂ, ಕಬ್ಬಿಣ ಗಾಣಗಳೂ, ಇವೇ ಮುಂತಾದ ವ್ಯವಸಾಯದ ಮುಟ್ಟುಗಳನ್ನು ತರಿಸಿಕೊಂಡು ನಿಮ್ಮ ಒಕ್ಕಲತನವನ್ನು ಬೆಳಸಿಕೊಳ್ಳಿ ೩೫ ವರ್ಷಗಳ ಅನುಭವದಿಂದ ಈ ಸಾಮಾನುಗಳನ್ನು ತಯಾರ ಮಾಡಿರುತ್ತೇವೆ ೮೦,೦೦೦ ರೈತರು ಕೂಡುತ್ತಾರೆ ಇಂದೇ ಪತ್ರ ಬರೆದು 'ವೃ' ಎಂಬ ಕ್ಯಾಟಲಾಗು ತರಿಸಿಕೊಳ್ಳಿರಿ.



ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ)

Printed and Published by Krishnarao Keshav Shenvi (Editor) at his Star of Kanara Press, Kumta.

ಭೂತದಯೆಯುಳ್ಳವರಾದ ತಾವುಗಳು ತಮ್ಮಗಳ ಸ್ವಹಸ್ತದಿಂದ ದೊಡ್ಡ ಪ್ರಮಾಣದಿಂದ ಧನದ ಧರ್ಮ ಸಹಾಯವನ್ನು ಮಾಡುವುದಲ್ಲದೆ, ಬೇಗ ಬೇಗನೇ ಆ ಆ ಕಡೆಗಳಲ್ಲಿ ತಮ್ಮಗಳ ಕಡೆಯಿಂದ ಸಾಧ್ಯವಿದ್ದಷ್ಟು ದೊಡ್ಡ ದೊಡ್ಡ ಸಭೆಗಳನ್ನು ಮುದ್ದಾಮು ನೆರೆಯಿಸಿ, ಆ ಆ ಮೀಟಿಂಗಿನಲ್ಲಿ ಕೂಡಿದ ಮಹಾಜನಗಳ ಮುಂದೆ ಈ ನನ್ನ ಹಸ್ತಪತ್ರಿಕೆಯನ್ನು ತಾವುಗಳು ಅವರುಗಳಿಗೆ ಸ್ಪಷ್ಟವಾಗಿ ತಿಳಿಯುವ ಹಾಗೆ ಓದಿ ಹೇಳಿದಾನಂತರದಲ್ಲಿ ಅದಕ್ಕೆ ಪುಟ ಬರುವ ಹಾಗೆ ಚೆನ್ನಾಗಿ ತಮ್ಮಗಳ ಸ್ವಂತ ಅಭಿಪ್ರಾಯಗಳನ್ನೂ ಕೊಟ್ಟು, ಪರಹಸ್ತದಿಂದಲೂ ಸಹಾಯವನ್ನು ಮಾಡಿಸಿಕೊಡುವ ಈ ಬಹುದೊಡ್ಡ ಕೀರ್ತಿಗೆ ಪಾತ್ರರಾಗಲೆಬೇಕೆಂದು (ಪರಮ ಪುಣ್ಯವನ್ನು ಕಟ್ಟಿಕೊಳ್ಳಬೇಕೆಂದು) ಈವಾಗ ನಾನು ತಮ್ಮಗಳ ಪಾದದಲ್ಲಿ ಬಹು ಶರಗೊಡ್ಡಿ ಬೇಡಿಕೊಳ್ಳುವೆನು.

ತಮ್ಮಗಳ ಈ ಭಾರೀ ಸಹಾಯದ ಹಣವನ್ನು ಪೋಸ್ಟು ಮನಿಯಾರ್ಡರ್ ಮುಖೇನವಾಗಲೀ, ಅಥವಾ ತಮ್ಮಗಳಿಗೆ ಅನುಕೂಲವಾದ ಅನ್ಯರೀತಿಗಳಿಂದಾಗಲಿ, ಮುಂದೆ ಬರುವ ಸನ್ 1924 ನೇ ಇಸವಿ ಜನವರಿ ತಿಂಗಳ ತಾರೀಕು 31 ನೆಯ ಗುರುವಾರ ದಿವಸದ ಸಾಯಂಕಾಲ 5 ಘಂಟೆಯ ಒಳಗಾಗಿ ನನ್ನ ಕಡೆಗೆ ತಲುಪುವ ಹಾಗೆ ಯೋಗ್ಯವಾದ ವ್ಯವಸ್ಥೆಯನ್ನು ಮಾಡಿಸುವಿರೆಂದು ನೆರೆ ನಂಬಿರುವೆನು, ಇಷ್ಟು ಒಂದೆರಡು ವೇಳೆ ಯಾವುದಾದರೂ ದಿ ಹತ್ತರ ಕಾರಣಗಳ ಬಲೆಯಿಂದ ಕೆಲವು ದಿವಸಗಳು ತಾಮಸವಾದರೂ ಪರವಾ ಇಲ್ಲ. ನನ್ನ ಬಾಬತ್ತ ಈ ಪತ್ರಿಕೆಯು ಯಾವ ದಿವಸ ತಮ್ಮಗಳ ಹಸ್ತಗತವಾಗುವುದು ಎಂಬುವುದನ್ನು ತಾವುಗಳು ನನಗೆ ದಯ ಮಾಡಿ ತಿಳಿಸಿ ಕೊಡಬೇಕೆಂದು ಸವಿನಯ ವಿಜ್ಞಾಪಿಸುತ್ತೇನೆ.

ತಾವುಗಳು ಪೋಸ್ಟು ಮನಿಯಾರ್ಡರ್ ಮುಖಾಂತರವಾಗಿ ನನ್ನ ಕಡೆಗೆ ರವಾನಿಸಿ ಕೊಟ್ಟ ಹಣಕ್ಕೆ ಅದರ ಪಾವತಿಯು ಪೋಸ್ಟು ಖಾತೆಯ ಮೂಲಕ ತಮ್ಮಗಳಿಗೆ ದೊರೆಯುವುದು ಸಹಜವಷ್ಟೇ?, ಆದರೆ ತಾವುಗಳು ಬೇರೆ ತರಹೆಯಿಂದ ನನ್ನ ಕಡೆಗೆ ಕಳುಹಿಸಿಕೊಡುವ ದ್ರವ್ಯಕ್ಕೆ ನನ್ನಿಂದ ಯೋಗ್ಯ ಪಾವತಿಯನ್ನು ಪಡೆಯತಕ್ಕದ್ದು;

ಗೀತಾರಹಸ್ಯದ ವಚನದಂತೆ ಮುಂದಿನ ಫಲವನ್ನು ಮುಂಚೆಯೇ ಅಪೇಕ್ಷಿಸದೆ ಮೊದಲು ನಮ್ಮ ಕರ್ತವ್ಯ ಕರ್ಮವನ್ನು ಮಾಡತಕ್ಕದ್ದೇ ಬೇಕೆನ್ನುವ ವಿಧಿಗನುಸಾರವಾಗಿ ಮೊದಲು ಮನೋನಿರ್ಧಾರ, ಸಂಕಲ್ಪ ಸಾಧನೆ, ಆ ಮೇಲೆ ಆಚರಣೆಯ ಕ್ರಮ, ಈ ನಿಯಮದಂತೆ ಸನ್ 1924 ನೇ ಇಸವಿ ಫೆಬ್ರವರಿ ತಾರೀಕು 10 ನೇ ರವಿವಾರ ದಿನದ ಲಾಗಾಯತು ನನ್ನ ಆ ಆ ಕೆಲಸಕಾರ್ಯಗಳಿಗೆ ಪ್ರಾರಂಭಿಸಬೇಕೆಂದು ನಿಶ್ಚಯಿಸಿಕೊಂಡಿರುತ್ತೇನು, ಅದುವರಿಂದ ಆ ಆ ಕೆಲಸ ಕಾರ್ಯಗಳಿಗೆ ಸಂಬಂಧಿಸಿದ ಪೂರಾ ಅನುಕೂಲಗಳೂ ಆ ಅವಧಿಯೊಳಗೇನೆ ಸಿದ್ಧವಾಗಲೀ ಎಂದು ಶ್ರೀಹರಿ ಸೇವ್ಯಪಾದರಲ್ಲಿ!

ಕರ್ಕಿಸವಾಲ್‌ದಲ್ಲಿಯೇ (ನನ್ನ ಸ್ವಂತ ನಾಗುವಳಿಯಲ್ಲಿ) ಇರುವ ಜಮೀನಿನಲ್ಲಿ ಪೂರ್ವದಂತೆಯೇ ಹತ್ತು ಖಂಡಿ ಅಡಿಕೆ, ಎರಡು ಖಂಡಿ ಕಾಳುಮೆಣಸು, ಅರುವತ್ತು ಏಲಕ್ಕಿ, ಈ ಮೂರೂ ಬೆಳೆಗಳೂ ಕ್ರಮವಾಗಿ ನನ್ನ ಕೈಗೆ ದೊರೆಯಬೇಕಾದರೆ (ಅವನ್ನು ಬೇಗನೇ ಆ ಆ ಕೃಷಿಯನ್ನು ದೊಡ್ಡ ಪ್ರಮಾಣದಿಂದ ಮಾಡಿಸಿದರೆ ಮಾತ್ರ) ಸುಮಾರು ಇಪ್ಪತ್ತು ವರ್ಷಗಳು ಬೇಕಾಗುವುವು.

ತಮ್ಮಗಳ ಈ ಮಹದುಪಕಾರಕ್ಕೆ ನಾನು ಮತ್ತೇನು ಪ್ರತ್ಯುಪಕಾರವನ್ನು ಮಾಡಬಲ್ಲೆನು?, ಆದರೂ ಆ ಮೊರಗೆ ಐದು ಸಹಸ್ರ (5000–0–0) ರೂಪಾಯಿಗಳು ಈ ನನ್ನ ಖಜಾನೆಗೆ ಜಮಾ ಸೇರಿದ ಒಡನೆಯೇ ನಮ್ಮ ಜಿಲ್ಲೆಯ ಆ ಆ ಭಾಗಗಳಿಂದ ಹೊರಡುವ ಯಾವುದಾದರೂ ಒಂದು ವರ್ತಮಾನಪತ್ರಿಕೆಯಲ್ಲಿ ತಾವುಗಳು ನನ್ನ ಆ ಆ ಸತ್ಕಾರ್ಯಗಳಿಗಾಗಿ ಧರ್ಮ ಸಹಾಯ ಮಾಡಿದ ರಕಮುಗಳನ್ನೂ, ತಮ್ಮಗಳ ಹೆಸರನ್ನೂ, ಪ್ರಸಿದ್ಧಿಪಡಿಸುವೆನು,

ಈವಾಗ ನಾನು ತಮ್ಮಗಳ ಮನಸ್ಸಿಗೆ ಮನನ ಮಾಡಿಕೊಳ್ಳುವುದಕ್ಕೆ ಅರ್ಹವಾದ ಒಂದೆರಡು ದೃಷ್ಟಾಂತಗಳ ಕೆಲವು ಪಂಕ್ತಿಗಳನ್ನು ಇದರ ಕೆಳಗೆ ಬರೆಯುವುದೇನೆಂದರೆ—"ಕರ್ಮಯೋಗಿನ್" ಎಂಬ ಪತ್ರಿಕೆಯನ್ನು ಮುದ್ರಿಸುತ್ತಿದ್ದಾಗ ಬಾಬು ಅರವಿಂದ ಘೋಷರವರು ಬಹಳ ಕಷ್ಟ ದೆಶೆಯಲ್ಲಿದ್ದರು. ಅಂತಹ ಕಷ್ಟ ದೆಶೆಯಲ್ಲಿದ್ದರೂ ಕೂಡ ಅವರು ಇತರರ ಸಹಾಯಕ್ಕೋಸ್ಕರ ಕೈಯನ್ನು ಚಾಚುತ್ತಿರಲಿಲ್ಲ, ಇವರಂಥ ಕರ್ಮ ಸನ್ಯಾಸಿಗಳಿಗೆ ದಾನವನ್ನು ಮಾಡಬೇಕೆಂಬ ಅಭಿಲಾಷೆಯು ಅನೇಕರಿಗೆ ಇತ್ತು, ಅವರು ನಜರನ್ನು ತಂದು ಒಪ್ಪಿಸುವುದಕ್ಕೆ ಬಂದರೆ, ಅವರಿಗೇ ಯಥಾಶಕ್ತಿ ಉಪಚಾರಗಳನ್ನು ಮಾಡಿ ಕಳುಹಿಸುತ್ತಿದ್ದರು ಅವರು ಕೊಡುವುದಕ್ಕೆ ಬಂದುದನ್ನು ಪರಿಗ್ರಹಿಸುತ್ತಿರಲಿಲ್ಲ, ಕೊನೆಗೆ ಧರ್ಮಿಷ್ಠರಾದವರು ಕಿಟಕಿಗಳಿಂದ ನೋಟುಗಳು, ರೂಪಾಯಿಗಳು, ಇವುಗಳನ್ನು ಅವರ ಮನೆಗೆ ಬಿಸಾಡಿ ಹೋಗುವುದಕ್ಕೆ ಉಪಕ್ರಮಿಸಿದರು, ಅದನ್ನು ತಪ್ಪಿಸುವುದಕ್ಕೆ ಕಿಟಕಿ ಬಾಗಿಲು ಹಾಕುವುದಕ್ಕೆ ಉಪಕ್ರಮವಾಯಿತು, ಆ ಮೇಲೆ ಅವರ ಮನೆಗೆ ಕನ್ನವನ್ನು ಹಾಕಿ ದ್ರವ್ಯವನ್ನು ಅಲ್ಲಿಟ್ಟು ಆ ಕನ್ನವನ್ನು ಮುಚ್ಚಿ ಹೊರಟು ಹೋಗುತ್ತಿದ್ದರು, ಧರ್ಮಿಷ್ಠರ ವಿಷಯದಲ್ಲಿ ಕೇವಲ ಅಧರ್ಮಿಷ್ಠರಿಗೂ ಕೂಡ ಇಂತಹ ಭಕ್ತಿಯೂ, ವಿಶ್ವಾಸವೂ ಹುಟ್ಟುವುದು, ಫ್ರೆಂಚ್ ಮಹಾಪ್ರಲಯದಲ್ಲಿ ಒಬ್ಬ ಮಹಾತ್ಮನ ಮನೆಗೆ ಆರಮನೆ ಮೊದಲಾದ ಸ್ಥಳದಲ್ಲಿ ಲೂಟಿ ಮಾಡಿದ ಪದಾರ್ಥದಲ್ಲಿಲ್ಲ ನಾಲ್ಕರಲ್ಲೊಂದು ಭಾಗವನ್ನು ಹೇಗೆ ಬಿಸಾಟು ಹೊರಟು ಹೋಗಿರೋ ಅದೂ ಕೂಡ ಈ ನನ್ನ ವಿಷಯದಲ್ಲಿ ಒಂದು ಉದಾಹರಣೆಯಾಗಿರುವುದು;

ಧರ್ಮ ಸಂಸ್ಥಾಪನೆಗೋಸ್ಕರವಾಗಿ ಅವರು ಧರ್ಮವಾಗಿ ನಡೆದು, ಜೀವನವನ್ನು ಕಳೆಯುಕೊಂಡೇಗ್ಯಾ, ಅವರನ್ನು ದೇವರು ರಕ್ಷಿಸುವನಲ್ಲವೇ?, ಅವರಲ್ಲಿ ಪಕ್ಷಪಾತದವರೆಲ್ಲರೂ ಅನುತಾಪವುಳ್ಳವರಾಗುವವರಲ್ಲವೇ?, ಜೀವನಕ್ಕೆ ಬಾಧಕ ಬರುವುದೆಂದು ಭಯಪಟ್ಟು ಅಸತ್ಯಕ್ಕೂ, ಅಧರ್ಮಕ್ಕೂ, ಯಾರು ಬೀಳುವುದಿಲ್ಲವೋ ಅವರು ಸರ್ವರಿಂದಲೂ ದೇವರಂತೆ ಕಾಣಲ್ಪಡುವರಲ್ಲವೇ?, ಅಂತೆಯೇ ನಾನಾದರೂ ಅಂದಿನಿಂದ ಇಂದಿನ ವರೆಗೂ ಧರ್ಮದ ಕಡೆಗೆ ದೃಷ್ಟಿ ಇಟ್ಟೇ ಬಹು ಕಷ್ಟದಿಂದ ಕಾಲಕ್ಷೇಪವನ್ನು ಮಾಡುತ್ತ ಬಂದಿರುವೆನು, ಅದರಿಂದ ಪರಮ ದಯಾಳುವಾದ ತಾವುಗಳಾದರೂ ಧರ್ಮಿಷ್ಠರಲ್ಲಿ ಪ್ರೀತಿಯನ್ನು ತೋರಿಸುವುದು ಅತ್ಯವಶ್ಯಕವಲ್ಲವೇ?, ಈವಾಗ ತಮ್ಮಗಳ ಕಡೆಗೆ ಧನವನ್ನು ಧರ್ಮವಾಗಿ ಬೇಡುವ ಪರಿಸ್ಥಿತಿಯು ನನಗೆ ಒದಗಿದೆ, ಏನು ಮಾಡಲಿ! ಶ್ರೀಪತಿ ಬಲ್ಲನು!

ಕಿರಿದ ಮಹನೀಯರಾದ ತಮ್ಮಗಳಿಗೆ ಈವಾಗ ನಾನು ಪತ್ರ ವಿಸ್ತರಿಸದೆ ಬರೆದುಕೊಳ್ಳುತ್ತೇನು, ಸದಾ ಲೋಕಕ್ಷೇಮವಿರಲಿ! ಇಂತು ತಮ್ಮಗಳ ನಿರಂತರ ಭಕ್ತ ಮಾಧವಸಾಸಿಯವನು:—

ಕರ್ಕಿಸವಾಲ್,	ರಾಮಕೃಷ್ಣ ಗಣಪತಿ ಹೆಗ್ಗಡೆ, ಮುಕ್ಕಾಮು ಕರ್ಕಿಸವಾಲ್,
22—11-1923.	ಪೋಸ್ಟಾಫೀಸು ಸಿದ್ದಾಪುರ, ಡಿಸ್ಟ್ರಿಕ್ಟ್ ಉತ್ತರ ಕನ್ನಡ.

ನನ್ನ ... ಈ ವಿಸ್ತಾರ ಪತ್ರಿಕೆಗಳನ್ನು ... ಇತರೇ ... ಶ್ರೀರಾಮಕೃಷ್ಣ ಮುದ್ರಣಾಲಯ ... ರಾಮಕೃಷ್ಣ ಗಣಪತಿ ಹೆಗ್ಗಡೆ ಕರ್ಕಿಸವಾಲ್.

ಶ್ರೀ ರಾಮಕೃಷ್ಣ ಪ್ರಿಂಟಿಂಗ್ ವರ್ಕ್ಸ್, ಲಿಮಿಟೆಡ್ ಕುಮಟಾ.

ಶ್ರೀರಾಮ ಪ್ರಸನ್ನ! ಶ್ರೀಃ ವಿನಂತಿ ಪತ್ರಿಕೆ!

ನಮ್ಮ ಆರ್ಯ [illegible]ಗಳೇ! ಮತ್ತು ಭಗಿನಿಯರೇ!

[illegible]!

[illegible] ಇದ್ದೇವೆ ಪರಮ ದಯಾಳುಗಳಾದ ತಾವುಗಳು ನನ್ನ [illegible] ಮೇಲೆ ಪತ್ರವನ್ನು [illegible]

[illegible] ಪ್ರಾರ್ಥನೆಗಳನ್ನು ಮಾಡಿಕೊಳ್ಳುವುದಕ್ಕೆ ಕಾರಣವೇ ನಂದರೆ —

[illegible] ವಂದಿಗಳಿಂದ ಒಡಗೂಡಿದ ಈ ನನ್ನ ಸಂಸಾರವು [illegible]

ಆದುದರಿಂದ [illegible] ಮಾಡಿ [illegible] ನಾನು ಈ ಜನ್ಮದಲ್ಲಿ [illegible] ನನ್ನ ತಂದೆ ಮತ್ತು [illegible] ಇವರ ಉದರದಿಂದ ಈ [illegible] ಸರ್ವ ವಿಷಯಗಳಲ್ಲಿಯೂ [illegible] ತಂದು [illegible] ಈ ನನ್ನ [illegible]

ಸರ್ವ ವಿಷಯಗಳಲ್ಲಿಯೂ ಈ ನನ್ನ [illegible] ಇಪ್ಪತ್ತೈದು ಸಹಸ್ರ (25000—0—0) ರೂಪಾಯಿಗಳ [illegible] ನನ್ನ ಮಾಡಿ [illegible] ನನ್ನ ಒಬ್ಬನಿಂದಲೇ ಸಾಧ್ಯವಿಲ್ಲ, ಅದಿರಲಿ, [illegible] ಕನಿಷ್ಠ [illegible] ಐದು ಸಾವಿರ ([illegible]000—0—0) [illegible] ಕಡಿಮೆಯಾಗಿ ಆಗುವಂಥಾದ್ದೇ ಅಲ್ಲ,

[illegible] ಕೆಲವು [illegible] ಮಾತ್ರವೇ ತಮ್ಮ [illegible] —

[illegible] ಮಾಡುವುದು, ಇನ್ನೊಂದು [illegible] ಪ್ರಮಾಣದ ಮೇಲೆ ಮಾಡಿಸುವುದು, ನನ್ನ ಗೃಹದ ಕೆಲವು [illegible] ವಗೈರೆ ಧಾತುಗಳಿಂದ ತಯಾರುಮಾಡಿದ ಪಾತ್ರೆ, ಪಗಡಗ [illegible] ಪ್ರಮಾಣದಿಂದ [illegible] ಎರಡನೆಯವರ ಗೃಹದಿಂದ ನನ್ನ ಮನೆಗೆ ತರತಕ್ಕ [illegible], ಮತ್ತು ಬಳ್ಳಿಯ ಒಡವೆಗಳನ್ನೂ, ಆಸ್ಥಾನದಲ್ಲಿ ದೊಡ್ಡ ಪ್ರಮಾಣದಿಂದ [illegible], ([illegible] ಯಲ್ಲಿಯಾದರೂ ತಯಾರು ಇದ್ದ ಸರ್ವ ವಸ್ತ್ರಗಳನ್ನು [illegible] ವುದು) [illegible] ಒಂದು ಹೆಣ್ಣು ಪುತ್ರಿಯ [illegible] ಮೇಲೆ ಧರಿಸತಕ್ಕ ಚಿನ್ನ ಮ ಬೆಳ್ಳಿ ಈ ಧಾತುಗ [illegible] ಪ್ರಮಾಣ [illegible], ಈ ಮೇಲೆ ಬರೆದ ಜಮೀನನ್ನು ಸಾಗುವಳಿ [illegible] ಕಬ್ಬಿಣದ ಹತಿಯಾರ [illegible] ಮತ್ತು ಸಾಮುಗ್ರಿಯಗಳು, ಅಂದರೆ ಗುದಲಿಗಳು, ಕೊಡಲಿ [illegible], ಬಿದಿರಿನ ಕಣಜಗಳು [illegible] ಗಳು, ಇತ್ಯಾದಿ ಇತ್ಯಾದಿ ಬೆಲೆಕೊಟ್ಟು ಪಡಕೊಳ್ಳುವುದು

[illegible] ಇಪ್ಪತ್ತೈದು (25[illegible]0—0) ರೂಪಾಯಿಗಳು, ಮತ್ತು ಬೇರೆ ಬೇರೆ [illegible] ನೂರು (100 0—0) ರೂಪಾಯಿಗಳು, ಒಟ್ಟಾರೆಯ [illegible] ನೂರಾ ಇಪ್ಪತ್ತೈದ (1[illegible]5—0—0) ರೂಪಾಯಿಗಳೇ ಆಗುವವು, ಇದರಲ್ಲಿ ನನ್ನ ಸ್ವಂತ [illegible] (60—0—0) ರೂಪಾಯಿಗಳನ್ನು ಸರಕಾರಕ್ಕೆ ತೆರಬೇಕಾಗುವುದು

ಇನ್ನು [illegible] ಈ ನನ್ನ [illegible] ಹೊಟ್ಟೆಗಳಿಗೂ ಮತ್ತು ಬಟ್ಟೆಗಳಿಗೂ, ಕನಿಷ್ಠ ತರಗತಿಯಿಂದ [illegible] (500 0—0) ರೂಪಾಯಿಗ[illegible] ವರೂ ಬೇಕೇ ಬೇಕಾಗಬಹುದಲ್ಲವೇ?

Reg. No. B.1720

Thursday, 13th December. 1923.

ವರ್ಷ ೮.

ಕಾನಡಾವೃತ್ತ.

THE KANARA NEWS.

ಸಂಚಿಕೆ ೮.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0

ಮು ನೆಯಾರ್ಡರಿಯಿಂದ ರೂ. 3-0-0.

ವ್ಹಿ. ಪಿ ಅಂಚೆವೆಚ್ಚ ಸೇರಿ ರೂಪಾಯಿ 3-೭-0.

ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಪ್ರಾಕಾಟ್ಯಾಟಿನ (೧೫ ಎಮ್ ಉದ್ದ) ೮ ಸಾಲುಗಳವರೆಗೆ ರೂ 1-0-0

೮ ನಂತ್ರ ಪ್ರತಿಸಾಲಿಗೆ 0-2-0

ಹೆಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನ ದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೧೩ ಮಾಹೆ ಡಿಶಂಬರ ಸನ್ ೧೯೨೩ ನೇ ಇಸವಿ)—

हिंदुस्थानातील राहिवाशास ज्याप्रमाणें हिंदुस्थानची हवा त्याप्रमाणेच हें औषध हिं दुस्थानातील लोकांस ज्यास्त फायदेशीर आहे.

द्राक्षासव- { दीड रतलची किंमत २ रुपये.

रामबाण औषधें

सर्दि घालविणारें,
भूक वाढविणारें,
शौच्यास साफ करणारें,
झोंप आणणारें,
शक्ति देणारें,
तेजस्वीपणा आणणारें,

पिण्यास रुचिकर.

कॅटलॉग मागवा,

झंडु फार्मास्युटिकल वर्क्स लिमिटेड, मुंबई नं. १३

1924ನೇ ಇಸವಿಯ ಸ್ವರಾಜ್ಯ ಡ್ಯಾರಿ.

ಸಂಪಾದಕ— ಡಿ. ಕೆ ಭಾರದ್ವಾಜ, ವಿದ್ಯಾಭೂಷಣ. ರಾಜಕೀಯ, ಆರ್ಥಿಕ, ವ್ಯಾಪಾರ, ಸ್ವದೇಶಿ, ಕೈಗಾರಿಕೆ ಮೊದಲಾದ ವಿಷಯಗಳ ಹೊಸ ಸಂಗ್ರಹ ದೇಶಭಕ್ತರ ನವೀನ ಭಾವಚಿತ್ರಗಳು! ಪ್ರತಿಯೊಬ್ಬರೂ ಅಗತ್ಯವಾಗಿ ಉಪಯೋಗಿಸತಕ್ಕದ್ದು.

ನಮ್ಮಲ್ಲಿ ಯಾವತ್ತೂ ಪೇಟೆಂಟ್ ಔಷಧ ಸ್ಟೇಶನರಿ ವಗೈರೆ ಹೊಸ ಸ್ಟಾಕ ಬಂದಿದೆ ತ್ವರೆಮಾಡಿರಿ!

ದಿ. ನ್ಯೂ. ಎಂಪೋರಿಯಮ್, ಜನರಲ್ ಮರ್ಚಂಟ್ಸ, ಹೊನ್ನಾವರ.

ಡಾ। ಮಾಸೂರಕರರ

ಸುಧಾಂಜನ.

ಅಂಜನಗಳಿಗೆಲ್ಲ ಅರಸು.

ತಲೆಶೂಲಿ, ವಾತ ವೇದನೆ, ಕಮ್ಮು, ಹಲ್ಲು ನೋವು ಇತ್ಯಾದಿಗಳಿಗೆ ಕ್ಷಿಪ್ರ ಗುಣಕಾರಿ ಮದ್ದು ಬೆಲೆ ೭ ಆಣೆ ಮಾತ್ರ. ವ್ಯಾಪಾರಿಗಳಿಗೆ ವಿಶೇಷ ಸವಲತು ಹೆಚ್ಚಿನ ಮಾಹಿತಿ ಪಡೆಯಿರಿಂದ

ಏಜಂಟ್ಸ — ನಾಗರ್ಕಟ್ಟೆ ಬ್ರದರ್ಸ್, ಸುಧಾಂಜನ ಡಿಪೋ, ಕುಮಟಾ. (ಜಿಲ್ಹಾ ಕಾರವಾರ)

ಶುದ್ಧ ರೋಮದ ಧಾವಳಿಗಳು.

4 ಮೊಳ ಉದ್ದ		1½ ಮೊಳ ಅಗಲ			ರೂ.	1¼ ರಿಂದ 2	ವರೆಗೆ
6	,,	,, 1½	,,	,,	,,	1 10-0-5	,,
6	,,	,, 1½	,,	,,	,,	2½ —6	,,
8	,,	,, 2	,,	,,	,,	3½ —10	,,
12	,,	,, 2½	,,	,,	,,	6 —12	,,
16	,,	,, 2½	,,	,,	,,	9 —16	,,

SUN & CO BENARES CITY

ಇವುಗಳಲ್ಲದೆ ಶುದ್ಧ ಖದ್ದರ್ ರೇಶಿಮೆ ಮಡಿಗಳು, ಸಾಮುರ್ಡಿಗಳು, ಕಾಶೀ ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಜಾಘಂಟೆ, ಶಂಖ, ಪನ್ನೀರ್ ದಾನಿ, ಆಟದ ಸಾಮಾನುಗಳು, ದೇವರ ಮತ್ತು ಗಾಂಧಿ ಮುಂತಾದವರ ಪಟಗಳಿರುವ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ಯೋಗ್ಯ ಕ್ರಯಕ್ಕೆ ದೊರೆಯುವವು ಕ್ಯಾಟಲಾಗ್ ಇನಾಂ.

ವಿಳಾಸ:— ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಆನಂದ ಮಂದಿರ.

ಮಾರ್ಮಗೋವಾ ಹಾರ್ಬರ. ಉತ್ತಮ ಭೋಜನ-ಉಪಹಾರದ ವ್ಯವಸ್ಥೆ.

ಈ ಹೊಟೇಲು ಮಾರ್ಮಗೋವಾ ಹಾರ್ಬರ ದಲ್ಲಿ ಕೇವಲ ಪ್ರವಾಸಿಕರ ಅನುಕೂಲತೆಗಾಗಿ, ನೂತನವಾಗಿ ಸ್ಥಾಪಿಸಲ್ಪಟ್ಟಿದೆ ಇದು ಹಾರ್ಬರದ ನೆರೆಯ ಸ್ಟೇಶನ್ನಿಯ ಮೇಲೆ ಭವ್ಯ ಮಂದಿರದಲ್ಲಿದೆ ಉತ್ತಮ ಭೋಜನ-ಉಪಹಾರವು ದೊರೆಯುವದು ಪ್ರಯಾಣಿಕರೆಲ್ಲರೂ ಇದರ ಉಪಯೋಗ ಮಾಡಿಕೊಳ್ಳಬೇಕಾಗಿ ವಿನಂತಿ.

ಮೆನೇಜರ.

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಮುಕ್ತಾ ಶಿಕ್ಕಿ ತಿಳಕೊಳ್ಳಬಹುದು.

ಪುರುಷೋತ್ತಮ ಲಕ್ಷ್ಮಣಯ್ಯ ಕ್ಯಾನಭಾಗ ಹೆಗಡೇಕರ, ದುಕಾನ್, ಕುಮಟಾ.

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ ವಿಷಯಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ.

ಈ ವರೆಗೆ ಪ್ರಕಟವಾದ ಪುಸ್ತಕಗಳು

(೧-೨) ಗ್ರೀಸ ದೇಶದ ಗಾಂಧಿ (ಸಾಕ್ರೆಟೀಸ) (೩) ಸ್ವಾತಂತ್ರ್ಯಸಾಧನೆ (೪) ಗುರು-ಹಿರಿಯರೂ. ಬಂಧು-ಭಗಿನಿಯರೂ (೫) ರಾಷ್ಟ್ರೀಯ ಶಿಕ್ಷಣ, (೬) ಸದ್ಗುಣಮಂದಿರ (ಭಾಗ ೧) (೭) ಸ್ವರಾಜ್ಯ ಧರ್ಮ (ಆನಾಮಿಕ ಪುಷ್ಪ) ಇವಿಷ್ಟು ಪ್ರಕಟವಾಗಿದ್ದು, ೫ ಆಣೆಗೆ ಒಂದರಂತೆ ದೊರೆಯುತ್ತವೆ ವರ್ಗದಾರರಿಗೆ ಹಿಂದಿನ ಬೇಕಾದ ಪುಸ್ತಕಗಳು ೪ ಆಣೆಗೆ ಒಂದರಂತೆ ದೊರೆಯುವವು ೬ ಪುಸ್ತಕಗಳಿಗೆ ಕೂಡಿ ೧। ರೂಪಾಯಿ ಮಾತ್ರ, ಅಂಚೆವೆಚ್ಚ ಬೇರೆ. ದ್ವಿತೀಯ ವರ್ಷ ಪ್ರಾರಂಭ. ಅನುಕ್ರಮವಾಗಿ ಮಾರ್ಚ, ಮೇ, ಜುಲೈ, ಸಪ್ಟಂಬರ, ನವಂಬರ, ಜನವರಿ ೧೫ ನೇ ತಾರೀಖಿಗೆ ಒಂದೊಂದು ಪುಷ್ಪ ಹೊರಡುವದು. ವಾ. ವ ಅಂಚೆವೆಚ್ಚ ಸೇರಿ ೧-೫-೦ ಮಾತ್ರ

ವಾ. ಅ. ಹೊದ್ದೈ,
ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. (ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶ ದುವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ! ಅಂತಹ ಕೇಶರಾಶಿಯನ್ನು ಸ್ತ್ರೀ ರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ.

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಆವಶ್ಯದ ಸಹಕಾರಿಯಾಗಿರುತ್ತದೆ ಈ ಆಯಿಲ್ ಹೊಡೆದುಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ತಗ್ಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ಹೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆಯುವುದು ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಸಲ ಒಮ್ಮೆ ಬಾರಿ ಈ " ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ " ಸರ್ಟಿಫಿಕೇಟ ಆಫ್ ಮೆರಿಟ " ಅಥವಾ ಯೋಗ್ಯತಾಪತ್ರವೂ, ಇತರ ಅನೇಕರು ಗೃಹಸ್ಥರ ಉತ್ತಮೋತ್ತಮವಾದ ಶಿಫಾರಸಪತ್ರಗಳೂ ದೊರಕಿವೆ.

ಕ್ರಯ — ಸೀಸಗೆ ರೂಪಾಯಿ 1 0 0, ಸೀಸ 3ಕ್ಕೆ ರೂಪಾಯಿ 2 10-0, ವಿಪಿ ಖರ್ಚ 0 14 0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ ಕೋಮಲ ಜಿರಸಾರ ಮತ್ತು ಅತ್ಯುತ್ತಮವು ಚನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ತಯಾರಿಸಿದ ಪಾದುದು ಇದರಲ್ಲಿ ಮದಿರೆಯ (ಅಲ್ಕೊಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈ ಒಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯ ಆರ್ವಿಭಾವವಾಗುವುದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0–8 0 1 ಡ್ರಾಮಿನ (ಮಧ್ಯಮ) ಸೀಸೆ 1 ಕ್ಕೆ 0 12 0, ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2–0–0 ಅಂಚೆಯ ವೆಚ್ಚ ಬೇರೆ 0–4–0

ಒಟ್ಟೋದಿಲ್ ಬಹಾರ್ ಪರಿಮಳ ಕಾರ್ಡುಗಳು. ಡಜನ್ 1 ಕ್ಕೆ 0 12 0.

Address **The Anglo Indian Drug & Chemical Co,**
16, Market, **BOMBAY. 2.**

ಏನೂ ಉಪದ್ರವವಾಗದೆ
ಕೂದಲು ತೆಗೆಯುವ

ಬಾದಶಾಹೀ ಸಾಬೂನು.

ಈ ಸಾಬೂನವನ್ನು ಬೇಕಾದಲ್ಲಿ ಹಚ್ಚಿದರೆ ಅಲ್ಲಿಯ ಕೂದಲುಗಳು, ಚರ್ಮವನ್ನು ಯಾವದೇ ರೀತಿಯಿಂದ ಕಲಂಕಿಸದೆ ಅತ್ಯಂತ ಸಫಾಯಿಯಿಂದ ಬಿದ್ದು ಹೋಗುತ್ತವೆ ಚರ್ಮವು ಮೃದುವಾಗುತ್ತದೆ ೩ ಬಿಲ್ಲೆಗಳ ಪೆಟ್ಟಿಗೆ ೧ ರ ಬೆಲೆ ಒಂದು ರೂಪಾಯಿ. ಅಂಚೆ ಹಾಸಲು ೪ ಆಣೆ ಒಂಟಿ ಬಿಲ್ಲೆಯನ್ನು ಕಳಿಸುವದಿಲ್ಲ ೩ ೩ ಬಿಲ್ಲೆಗಳ್ಳ ೪ ಪೆಟ್ಟಿಗೆಗಳ ಕಿಮ್ಮತ್ತು ರೂಪಾಯಿ ೨ ಅಂಚೆ ಹಾಸಲು ಮಾಫ ಬಾದಶಾಹೀ ಸಾಬೂನಿನ ಶ್ರೇಷ್ಠತೆಯ ಬಗ್ಗೆ ಕಲಕತ್ತಾ ಕರಾಚಿಗಳ ಪ್ರದರ್ಶನಗಳಲ್ಲಿ ಸುವರ್ಣ ಪದಕಗಳು ಇನಾಮವಾಗಿ ದೊರಕಿವೆ

ನಕಲೀ ಮಾಲಿನ ಬಗ್ಗೆ ಎಚ್ಚರಿಕೆ ಮೋಸ ಹೋಗಬೇಡಿರಿ

ರಜಿಸ್ಟರ ನಂ ೧೮೯ ಸ್ವಸ್ತಿಕ ಮಾರ್ಕನ್ನೊಂದು ನೋಡಿ ಖರೀದಿ ಮಾಡಿರಿ ಅಲ್ಲಲ್ಲಿ ಏಜಂಟರು ಬೇಕು

ಸಿ. ಸಿ. ಮಹಾಜನ ಎಂಡ್ ಕಂಪನಿ,
ಮುಂಬಯಿ ನಂ ೪

ಟೀಪು — ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಮಾಡುವದು ಹಾಗುಳ್ಳಿ.

ಸರಸ್ವತಿ.

ಕನ್ನಡದಲ್ಲಿ ಶ್ರೇಷ್ಠವಾದ ಮಾಸಪತ್ರಿಕೆ

ಈ ಪತ್ರಿಕೆಯಲ್ಲಿ ಸಾಮಾಜಿಕ ನೈತಿಕ ಐತಿಹಾಸಿಕ ವಿಷಯಗಳಿಗೆ ಸಂಬಂಧಪಟ್ಟ ಉತ್ಕೃಷ್ಟವಾದ ಲೇಖನಗಳೂ ಸ್ವಾರಸ್ಯವೂ ಮನೋರಂಜಕವಾದ ನಾಟಕ ಮತ್ತು ಕಥೆಗಳೂ ಬಾಲಬಾಲಿಕೆಯರಿಗೂ ಸ್ತ್ರೀಯರಿಗೂ ಬೇಕಾದ ವಿಷಯಗಳೂ ಉತ್ತಮ ಶೈಲಿಯಲ್ಲಿ ಪ್ರಕಟಿಸಲ್ಪಡುವವು ನೂತನ ಚಂದಾದಾರರಿಗೆ ಸಾರದಾ ಗ್ರಂಥಮಾಲೆ " ಯಲ್ಲಿ ಈ ವರೆಗೆ ಪ್ರಕಟಿಸಲ್ಪಟ್ಟಿರುವ ಪ್ರಿಯಂವದೆ " ವರ್ತಕ ಸಿಂಹ " ಸ್ನೇಹಲತೆ ಒಂದೂ ಭಾಗ್ಯೋದಯ , ಇತ್ಯಾದಿ ಗ್ರಂಥಗಳಲ್ಲೊಂದು ಉಚಿತವಾಗಿ ಕೊಡಲಾಗುವದು ರೂಪಾಯಿ ೩ ಬೆಲೆ ಬಾಳತಕ್ಕ ಸಾರದಾ ಗ್ರಂಥಮಾಲೆಯ ಪ್ರಕಟನೆಗಳನ್ನು ಕೊಡಲಾಗುವದು ರೂಪಾಯಿ ೩-೧೨-೦ಕ್ಕೆ ಕೊಡಲ್ಪಡುವದು ಚಂದಾದಾರರಿಗೆ ತಕ್ಕವರ ತಮ್ಮ ವಿಳಾಸವನ್ನು ಕೀಳು ಬಹುಮಾನವನ್ನು ಪಡೆಯಬಹುದು ಮೂಲಕ ಕಳುಹಿಸಿಯಾಗಲಿ, ವಿ ಪಿ ಮೂಲಕವಾಗಿ ತರಿಸಿಕೊಳ್ಳಬಹುದು ವಾರ್ಷಿಕ ಚಂದಾ ರೂ ೩ ೦-೦ ಮಾತ್ರ

ವಿಳಾಸ— **ಸಂಪಾದಕ " ಸರಸ್ವತಿ."**
Post Box 17
ಚಾಮರಾಜಪೇಟೆ, ಬೆಂಗಳೂರ ಸಿಟಿ

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧ ರಾಗದ ಕೈಪೆಟ್ಟಿಗೆ ಕಿಂ ೩೦, ೪೦, ೪೫, ೫೦ ೬೦
೨ ,, ಕಾಲು ಪೆಟ್ಟಿಗೆ ಕಿಂ ೩೫, ೬೫, ೧೪೦, ೧೬೦
೩ ತಬಲೆ ಜೋಡಿ ಕಿಂ. ೧೨, ೧೫, ೧೮ ೨೦ ೨೫
೪ ಹಾರ್ಮೋನಿಯಮ ಗ್ಯಾಡ ಕಿಂ ೧।, ತಬಲೆ ಗ್ಯಾಡಿ ಕಿಂ ೧೨ ಆ

ವಿಶೇಷ ಮಾಹಿತಿ ಬಗೆ ನಮ್ಮ ಕ್ಯಾಟಲಾಗ ಪುಕ್ಕಟೆ ಕೊಡುವೆವು

ಪತ್ರವ್ಯವಹಾರ ಮರಾಠಿಯಿಂದ ಇಲ್ಲವೆ ಇಂಗ್ರಜಿಯಿಂದ ಮಾಡಬೇಕು

ಪತ್ತೆ - ಗೋಪಾಳ ಸಖಾರಾಮ ಮುಕ್ಕಿ
ಕಂಪನಿ, ನಂ ೨೬೨
ಕಾಳಬಾದೇವಿ ರೋಡ, ಮುಂಬಯಿ

ಮಧ್ಯಪ್ರಾಂತದ ಜೈಲುಗಳು.

(ವಾ ಪ್ರ ಸಂಘ, ಹುಬ್ಬಳ್ಳಿ)

ಮಧ್ಯಪ್ರಾಂತ ಜೈಲುಗಳ ವಿಷಯದಲ್ಲಿ, ನಾನು ಸ್ವತಃ ಅನುಭವಿಸಿದ ಮತ್ತು ಆಗ್ಗಾಗ್ಗೆ ಕಂಡ ಕೆಳಗಿನ ವಿಷಯಗಳನ್ನು ಪ್ರಸಿದ್ಧಪಡಿಸುವೆನೆಂದು ನಂಬುತ್ತೇನೆ ನನ್ನ ಅನುಭವಗಳು ನಾಗಪೂರ ಮತ್ತು ಅಕೋಲಾ ಜೈಲುಗಳ ಮಟ್ಟಿಗೆ ಮಾತ್ರವಿದೆ ಇತರರು ಹೇಳಿದ್ದನ್ನು ಇದರ ಕೂಡ ತುಲನೆ ಮಾಡಿ ನೋಡುತ್ತಿರಲಿಕ್ಕೆ ಸಾಮಾನ್ಯ ಮಧ್ಯಪ್ರಾಂತದ ಎಲ್ಲಾ ಜೈಲುಗಳ ಸ್ಥಿತಿಯು ಇದೇ ಪ್ರಕಾರವಾಗಿದೆ ಎಂದು ಹೇಳಬಹುದಾಗಿದೆ

ನಾವು ಮೊದಲು ಲಕ್ಷ್ಯದಲ್ಲಿಡತಕ್ಕ ಮಾತೆಂದರೆ ಇಷ್ಟೇ ಯಾರ್‍ಯಾರು ಕಾಂಗ್ರೆಸ ಕಮಿಟಿಗಳೊಳಗೆ ಮತ್ತು ಇತರ ಸಾರ್ವಜನಿಕ ಸಂಸ್ಥೆಗಳೊಳಗೆ ಕೆಲಸ ಮಾಡುವವರೆಂದು ತಿಳಿದುಬರುತ್ತದೋ, ಅಂಥವರ ಮತ್ತು ಜೈಲಿನಲ್ಲಿ ಯಾರ ಮಾತನ್ನು ಇತರರು ಮನ್ನಿಸುತ್ತಾರೋ, ಅಂಥವರ ವಿಷಯದಲ್ಲಿ ಕಷ್ಟ ಕೊಡುವ ಉದ್ದೇಶದಿಂದಲೇ ಕಠಿಣತರವಾದ ಕೆಲಸಗಳಿಗೆ ಹಚ್ಚುತ್ತಿದ್ದರು ಕೆಲಸ ಮಾಡಿಸಿಕೊಳ್ಳಬೇಕು, ನೀಚ ತೋರಿಸಿಕೊಳ್ಳಬೇಕು, ಇಷ್ಟಕ್ಕೇ ಜೈಲುಗಳಲ್ಲಿ ಕೆಲಸಕ್ಕೆ ಹಚ್ಚುವ ರೂಢಿಯಿದ್ದರೆ ಅದರಿಂದ ಕೈದಿಯ ಮನಸ್ಸಿನ ಮೇಲೆ ಪರಿಣಾಮವಾಗಿ ಅವನು ಕೆಟ್ಟ ಕೆಲಸ ಮಾಡುವದನ್ನು ಆದಷ್ಟು ಕಡಿಮೆ ಮಾಡಬೇಕೆಂಬ ಉದ್ದೇಶವೇ ಇಲ್ಲ

ಕೆಳಗಿನ ಕೆಲವು ವಿಷಯಗಳು ವಿಶೇಷ ಲಕ್ಷ್ಯದಲ್ಲಿಡತಕ್ಕವುಗಳಾಗಿವೆ.

(೧) ಉಣ್ಣುವದಕ್ಕೆ ಯೋಗ್ಯವಾದ ಸ್ವಚ್ಛ ಅಡಿಗೆ ಮಾಡುವ ವಿಷಯದಲ್ಲಿ ಏನೇನೂ ಕಾಳಜಿ ತೆಗೆದುಕೊಳ್ಳುತ್ತಿರಲಿಲ್ಲ ಕೆಲವು ಸಾರೆ ಬೇಳೆ (ಸಾರು) ಯೊಳಗೆ ಸಾಧಾರಣ ಒಂದು ಅಂಚು ಉದ್ದದ ಹುಳಗಳು ಇರುತ್ತಿದ್ದವು ರೊಟ್ಟಿಯೊಳಗೆ ಕೂಡ ನಾರಿನ ತುಂಡುಗಳು ಕಲ್ಲು ಕೂದಲು ಮತ್ತು ಇತರ ಹೊಲಸು ಬರುತ್ತಿದ್ದವು

(೨) ರೊಟ್ಟಿಯ ಭಾರವು ಮೊದಲಿನ ಒಂದು ಮೂರರಷ್ಟು ಕಡಿಮೆ ಮಾಡಲ್ಪಟ್ಟಿತು

(೩) ಘಾಣ ಅಥವಾ ಕೋಲ್ಹು (ಮಧ್ಯಪ್ರಾಂತದಲ್ಲಿ ಎಣ್ಣೆ ತೆಗೆಯುವ ಗಾಣಕ್ಕೆ ಹೀಗೆ ಅನ್ನುತ್ತಾರೆ) ಇದು ಎಲ್ಲಕ್ಕೂ ಕಠಿಣವಾಗಿದೆ ಯಾವನೊಬ್ಬನು ಅದರಲ್ಲಿ ಏಳು ದಿನಕ್ಕಿಂತ ಹೆಚ್ಚು ಕೆಲಸ ಮಾಡಿದನೆಂದರೆ, ಅವನ ಆರೋಗ್ಯವು ಖಚಿತವಾಗಿ ಕೆಟ್ಟು ಹೋಯಿತೆಂತಲೇ ಹೇಳಬೇಕು ಗಾಣದಲ್ಲಿ ಮುಂಜಾನೆ ಆರು ಘಂಟೆಯಿಂದ ಸಂಜೆ ಆರು ಅಥವಾ ಏಳು ಹೊಡೆಯುವ ತನಕ ಕೆಲಸ ಮಾಡಬೇಕು ನಡುವೆ ಏನೇನೂ ವಿರಾಮವಿಲ್ಲ. ದಿನವೊಂದಕ್ಕೆ ನಾಲ್ಕು ಸೇರು (೮ ಪೌಂಡು) ಎಣ್ಣೆ ಕೊಡಬೇಕಾಗಿ ಬರುತ್ತಿತ್ತು ಒಬ್ಬನೇ ಒಬ್ಬ ಮನುಷ್ಯನು ಘಾಣ ತಿರುವಬೇಕಾಗುತ್ತಿತ್ತು ಇಡೀ ಒಂದು ದಿವಸದ ಕೆಲಸಕ್ಕೆ ಘಾಣದ ಸುತ್ತ ತಿರುಗುವ ಉದ್ದವು ಸಾಮಾನ್ಯ ೩೨ ಮೈಲುಗಳಷ್ಟಕ್ಕೆ ಬರುತ್ತಿತ್ತು

(೪) ಕನ್ವಿಕ್ಟ ವಾರ್ಡರ ದೇಖರೇಖೆ ಮಾಡುವವ ಮೊದಲಾದವರು ಸತ್ಯಾಗ್ರಹಿಗಳ ಕಪಾಳಕ್ಕೆ ಹೊಡೆಯುತ್ತಿದ್ದರು ಆ ವಿಷಯದಲ್ಲಿ ಯಾರೂ ಕೇಳುವವರೇ ಇಲ್ಲ

(೫) ಧಾರ್ಮಿಕ ವಿಷಯಗಳಲ್ಲಿ ಜೈಲು ಅಧಿಕಾರಿಗಳು ಕೈಹಾಕುತ್ತಿದ್ದರು. ಜೈಲುಗಳೊಳಗೆ ಧಾರ್ಮಿಕ ನೇಮಗಳನ್ನು ಎಲ್ಲಾ ಬಿಟ್ಟುಬಿಡಬೇಕೆಂದು ಸತ್ಯಾಗ್ರಹಿಗಳಿಗೆ ಹೇಳುತ್ತಿದ್ದರು

(೬) ಒಂದೇ ತಪ್ಪಿಗೆ ಒಂದಕ್ಕಿಂತ ಹೆಚ್ಚು ಸಾರೆ ಒಂದರ ಹಿಂದೊಂದರಂತೆ (ಮೊದಲನೇದು ಮುಗಿಯುವ ಮೊದಲು ಇನ್ನೊಂದು) ಶಿಕ್ಷೆಗಳನ್ನು ಕೊಡುತ್ತಿದ್ದರು ಕಡಿಮೆ ಕೆಲಸದ ಬಗ್ಗೆ ಕೊಟ್ಟ ಶಿಕ್ಷೆಯನ್ನು ಪೂರ್ಣ ಕೆಲಸ ಕೊಟ್ಟ ಮೇಲೂ ಅನುಭವಿಸಬೇಕಾಗುತ್ತಿತ್ತು ಕಡಿಮೆ ಕೆಲಸ ಮೊದಲಾದ್ದಕ್ಕೆ ಕಾರಣವೇನೂ ಕೇಳದೆ ಬರೇ ಶಿಕ್ಷೆಯನ್ನು ಕೊಡುತ್ತಿದ್ದರು

(೭) ಡಾಕ್ಟರರೂ, ಕಂಪೌಂಡರರೂ ಏನೇನೂ ಗೊತ್ತಿಲ್ಲದವರು ಇರುತ್ತಿದ್ದರು ಅಜೀರ್ಣಕ್ಕೂ, ಹೊಟ್ಟೆ ಜಾಡಿಸುವದಕ್ಕೂ, ರಕ್ತಾತಿಸಾರಕ್ಕೂ, ಹೊಟ್ಟೇ ನೋವಿಗೂ ಎಲ್ಲಾ ಒಂದೇ ಔಷಧ ಕೊಡುತ್ತಿದ್ದರು ಕೈದಿಗಳ ಚಿಕಿತ್ಸಾ ವಿಷಯಕ್ಕೆ ಡಾಕ್ಟರ ಮೊದಲಾದವರು ಬಹಳ ದುರ್ಲಕ್ಷ್ಯ ಮಾಡುತ್ತಿದ್ದರು ರಾತ್ರಿ ರೋಗಿಗಳ ಉಪಚಾರಕ್ಕೆ ಯಾರೂ ಇರುತ್ತಿರಲಿಲ್ಲ ರೋಗಿಗಳಿಗೆ ಸರಿಯಾದ ಆಹಾರ ಸಿಗುತ್ತಿರಲಿಲ್ಲ ಹಾಸಿಗೆಯಂತೂ ಇಲ್ಲವೇ ಇಲ್ಲ ಕಡೆಗೆ ಮಲಗಿಕೊಳ್ಳುವದಕ್ಕೆ ಸ್ಥಳವೇ ಸಿಗುತ್ತಿರಲಿಲ್ಲ ಸುಳ್ಳುಸುಳ್ಳು ವಜನ (ಯಾವಾಗಲೂ ಇದ್ದಕ್ಕಿಂತ ಹೆಚ್ಚು) ವನ್ನು ಬರೆದುಕೊಳ್ಳುತ್ತಿದ್ದರು ಅನೇಕ ಸಾರಿ ಜ್ವರ ಬರುತ್ತಿದ್ದವರಿಗೆ ನೀನು ನೆಟ್ಟಗಿದ್ದೀ, ಕೆಲಸಕ್ಕೆ ಹೋಗು ಎಂದು ಹೇಳಿ ಕಳುಹಿಸುತ್ತಿದ್ದರು

(೮) ಕಲೇ ಕೂದಲನ್ನು ಮೊಂಡು ಕತ್ತರಿಗಳಿಂದ ಕತ್ತರಿಸುತ್ತಿದ್ದರು ಇದು ತಲೆ ಮೇಲೆ ನೇಗಿಲು ಹೊಡೆದಂತೆ ಸಾಲು ಸಾಲು ಕಾಣುತ್ತಿತ್ತು ಕತ್ತಿಯನ್ನು ಉಪಯೋಗಿಸುತ್ತಿರಲಿಲ್ಲ ತಮ್ಮ ಸ್ವಂತ ಖರ್ಚಿನಿಂದ ಉಪಯೋಗಿಸಿಕೊಳ್ಳುವದಕ್ಕೂ ಪರವಾನಗಿ ಕೊಡುತ್ತಿರಲಿಲ್ಲ

(೯) ಅಕಾಲೀ ಜನರನ್ನು ಒಬ್ಬೊಬ್ಬರನ್ನಾಗಿ ಒಂದೊಂದು ಕೋಣೆಯೊಳಗೆ ಇಡುತ್ತಿದ್ದರು ಅವರ "ಕಿರ್ಪಾನ್" ಧಾರ್ಮಿಕ ಆಯುಧವನ್ನು ಅವರ ಸಂಗಡ ಇಟ್ಟುಕೊಳ್ಳಲಿಕ್ಕೆ ಬಿಡುತ್ತಿರಲಿಲ್ಲ. ಅಂಥಾದ್ದೇ ನಮೂನೆಯ ೩ ಇಂಚಿನ ಸಣ್ಣದೊಂದು ಆಯುಧವನ್ನು ಮಾಡಿಕೊಡುತ್ತಿದ್ದರು

(೧೦) ಶೌಚಕ್ಕೆ ಕೂಡ್ರುತ್ತಿದ್ದ ವೇಳೆಯು ಏನೇನೂ ಸಾಕಾಗದು ಯಾವದೊ ಹೆಚ್ಚು ವೇಳೆ ಕೂತನೆಂದರೆ ಅವನ ಕೈ ಹಿಡಿದು ಎಳೆಯುತ್ತಿದ್ದರು ಶೌಚಕ್ಕೆ ಹೋಗಿ ಅಲ್ಲಿಂದ ಮಾರ್ಜನ ಮಾಡಿಕೊಳ್ಳುವದಕ್ಕೆ ಬಹಳ ದೂರ ಅರೆ ಬತ್ತಲೆಯಾಗಿ ನಡೆದು ಹೋಗಬೇಕಾಗುತ್ತಿತ್ತು ಶೌಚಕ್ಕೆ ಹೋಗುವದಕ್ಕೂ ಊಟಕ್ಕೂ, ಸ್ನಾನಕ್ಕೂ ನೀರು ಕುಡಿಯುವದಕ್ಕೂ ಎಲ್ಲಾ ಒಂದೇ ಪಾತ್ರೆಯನ್ನು ಉಪಯೋಗಿಸಬೇಕಾಗಿ ಬರುತ್ತಿತ್ತು ಕೆಲವು ಜೈಲುಗಳಲ್ಲಿ ಶೌಚಕ್ಕೆ ಏಕಾಂತವೇ ಇಲ್ಲ ಎಲ್ಲರೂ ಸಾಲಾಗಿ ಕೂಡಬೇಕಾಗುತ್ತಿತ್ತು

(೧೧) ಸ್ನಾನಕ್ಕೂ ಬೇಕಾದಷ್ಟು ಸಮಯವಿರುತ್ತಿರಲಿಲ್ಲ ಬರೇ ಒಂದೊಂದು ಅರಿವೆಗಳನ್ನು ಕೊಡುತ್ತಿದ್ದರು ಒಂದು ಸಣ್ಣ ಅಗಲ ಕಿರಿದಾದ ಟುವೆಲನ್ನು ಕೊಡುತ್ತಿದ್ದರು ಅದನ್ನೇ ಸ್ನಾನದ ವೇಳೆಯಲ್ಲಿ ಉಟ್ಟುಕೊಳ್ಳಬೇಕು ಅಂದರೆ ಹೆಚ್ಚಿನ ಮಟ್ಟಿಗೆ ನಗ್ನಾವಸ್ಥೆಯೇ ಸ್ನಾನ ಮಾಡಿದ ಮೇಲೆ ಮೈ ಒರಸಿಕೊಳ್ಳದೆ ಹಾಗೆಯೇ ಒಣ ಅರಿವೆಗಳನ್ನು ಹಾಕಿಕೊಳ್ಳಬೇಕಾಗುತ್ತಿತ್ತು

(೧೨) ಗುನ್ಹಾ ಖಾನೆ (ಅಲ್ಲಿ ಒಂದು ಕೋಣೆಯೊಳಗೆ ಒಬ್ಬನನ್ನೇ ಇಡುತ್ತಾರೆ) ಯಲ್ಲಿ ಒಂದು ಸಣ್ಣ ಪಾತ್ರೆಯಲ್ಲಿ ನೀರು ಇಟ್ಟುಕೊಂಡರೆ ಕುಡಿಯುವದಕ್ಕೂ ಶೌಚಕ್ಕೂ ಎಲ್ಲಕ್ಕೂ ಅದೇ

(೧೩) ಗಿಟ್ಟಿ (ಕಲ್ಲು ಒಡೆಯುವದು) ಮತ್ತು ಕೋಲ್ಹು, (ಎಣ್ಣೆ ತೆಗೆಯುವ ಘಾಣ) ಗಳಲ್ಲಿ ಕೆಲಸ ಮಾಡುವವರು ಪೂರ್ಣ ಕೆಲಸ ಮಾಡದಿದ್ದರೆ, ಎಷ್ಟೇ ಸಮಯವಾದರೂ ಕೆಲಸ ಪೂರ್ಣ ಮುಗಿಸದೆ, ತನ್ನ ಖೋಲಿಯೊಳಗೆ ಹೋಗಕೂಡದು. ಅಲ್ಲೇ ಕೆಲಸ ಮಾಡುತ್ತಿರಬೇಕು

(೧೪) ರಾತ್ರಿ ಪಹರೆಯುವರು ಕೈದಿಗಳನ್ನು ಎಣಿಸುವಾಗ ವಿಪರೀತ ಗದ್ದಲ ಮಾಡುತ್ತಿದ್ದರು ಮತ್ತು ಗುನ್ಹಾಖಾನೆಯಲ್ಲಿ ಸಿದ್ಧ ಮಾಡುವವರನ್ನು ರಾತ್ರಿ ಐದಾರು ಸಾರೆ ಹೊರಗಿನಿಂದ ಪಹರೆ ಮಾಡುವವರು ಎಬ್ಬಿಸುತ್ತಿದ್ದರು.

(೧೫) ರಾತ್ರಿ ಗುನ್ಹಾಖಾನೆಯೊಳಗಂತೂ ದೀಪವೇ ಇಲ್ಲ ದೊಡ್ಡ ಕೋಣೆಗಳಲ್ಲೂ ಸಾಕಷ್ಟು ಬೆಳಕಿಲ್ಲ

(೧೬) ರಾತ್ರಿ ಶೌಚ ಮೊದಲಾದ್ದಕ್ಕೆ ಹೋಗಬೇಕಾದರೆ ಬಹಳ ಕಷ್ಟವಾಗುತ್ತಿತ್ತು

ಈ ಲೇಖವನ್ನು ಮುಗಿಸುವ ಮೊದಲು ಅಕೋಲಾ ಜೈಲಿನ ಸುಪರಿಂಟೆಂಡೆಂಟ ಫೌಲರ ಸಾಹೇಬನ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳದಿದ್ದರೆ ನಾನು ನನ್ನ ಕರ್ತವ್ಯವನ್ನು ಪೂರ್ಣ ಮುಗಿಸಿದಂತೆ ಆಗಲಾರದು ಆತನು ನೌಕರಶಾಹಿಯ ಕರ್ತವ್ಯನಿಷ್ಠ ಸೇವಕರಲ್ಲಿ ಅಗ್ರಗಣ್ಯನು. ಯಜಮಾನನಂತಿರುವ ಆಳ ನಮ್ಮ ಫೌಲರ 'ಸಾಹೇಬರಿ'ಗೆ ಜೈಲೊಳಗೆ ಇರುವಷ್ಟು ಕಾಲ ಅತ್ತ ಇಲ್ಲ, ದೇವರಿಲ್ಲ ಧರ್ಮ ಇಲ್ಲ, ಏನೇನೂ ಇಲ್ಲ ಸತ್ಯಾಗ್ರಹಿಗಳನ್ನು ಪೀಡಿಸುವದೆಂದರೆ ಅವರಿಗೆ ಬಹಳ ಸಂತೋಷ. ದೇವರು ಅವರನ್ನು ಆಶೀರ್ವದಿಸಲಿ!

ಇದರ ಜೊತೆಗೆ ಸಿಂಧದ ಒಬ್ಬ ಸತ್ಯಾಗ್ರಹಿ ತನ್ನ ಸಹಿ ಮಾಡಿ ಬರೆದು ಕೊಟ್ಟ ಚಾಂದಾ ಜೈಲಿನ ವಿಷಯ ಲೇಖ ವಿರುತ್ತದೆ ಅದರ ವಿಷಯದಲ್ಲಿ ಇಲ್ಲಿ ಬರೆಯುವ ಅಗತ್ಯವಿಲ್ಲ ಅದನ್ನೇ ನೋಡಿ ತಿಳಕೊಳ್ಳಬಹುದು

Sd / ಸಿ. ಪಿ ಶಿವಂ,

ಜಂಟಿ ಕಾರ್ಯದರ್ಶಿ,

ಮುಂಬಯಿಯ ಉಪನಗರ ಜಿಲ್ಲಾ ಕಾಂಗ್ರೆಸ ಕಮಿಟಿ

ಚಾಂದಾ ಜೈಲು.

ಸತ್ಯಾಗ್ರಹೀ ಕೈದಿಗಳನ್ನು ನಡಿಸಿಕೊಂಡ ರೀತಿ.

(ವಾ ಪ್ರ ಸಂಘ, ಹುಬ್ಬಳ್ಳಿ)

ಮುಂಬಯಿ ಸಂಸ್ಥಾನಕ್ಕೆ ಪ್ರಸಿದ್ಧ ವಿಸಾಪೂರ ಜೈಲು ಇರುವ ಹಾಗೆ, ಮಧ್ಯಪ್ರಾಂತಕ್ಕೆ ಚಾಂದಾ ಜೈಲು ಇರುತ್ತದೆ ಜೈಲರನು ಸತ್ಯಾಗ್ರಹೀ ಸ್ವಯಂಸೇವಕರನ್ನು ಎಲ್ಲಾ ತರದ ಕೆಟ್ಟ ಹೆಸರುಗಳಿಂದ ಕರೆಯುತ್ತಿದ್ದನು ಶಿಕ್ಷೆಗಾಗಿ ಕೊಡುವ ಗಂಜಿಯು ಬಿಸಿ ನೀರೊಳಗೆ ಜೋಳದ ಹಿಟ್ಟೇ ಮತ್ತು ಒಂದಿಷ್ಟು ಉಪ್ಪು ಇವುಗಳನ್ನು ಹಾಕಿ ಮಾಡಿದ್ದಿರುತ್ತದೆ ಕೆಲಸ ತೆಗೆದುಕೊಳ್ಳುವ ಕೈದಿ (Convict Warder) ಗಳಿಗೆ ಕಡಿಮೆ ಕೆಲಸ ಮಾಡುವವರ ವಿಷಯದಲ್ಲಿ ಏನಾದರೂ ತಪ್ಪು ಹುಡುಕಿ ಅರ್ಧ ತಾಸಿಗೊಮ್ಮೆ ರಿಪೋರ್ಟ ಮಾಡುವವಕ್ಕೆ ಜೈಲರನ್ನು ಹುಕುಂ ಮಾಡುತ್ತಿದ್ದನು ಪಾಯಖಾನೆ ಕೂಡುವಲ್ಲಿ ಏಕಾಂತವೇ ಇಲ್ಲ ಇಬ್ಬಿಬ್ಬರು ಮಧ್ಯದಲ್ಲಿ ಏನೂ ಮರೆಯಿಲ್ಲದೆ ಕೂಡ್ರಬೇಕಾಗುತ್ತಿತ್ತು ಊಟಕ್ಕೆ ಕೊಟ್ಟದ್ದನ್ನೆಲ್ಲಾ ತಿನ್ನದೇ ಇದ್ದವರಿಗೆ ಶಿಕ್ಷೆಯಾಗುತ್ತಿತ್ತು ಯಾರಾದರೂ ಕೆಟ್ಟ ರೊಟ್ಟಿಯನ್ನಾಗಲೀ, ಬೇಳೆಯನ್ನಾಗಲೀ, ಹಾಗೆಯೇ ತಿನ್ನದೆ ಅದರಂತ ಏನಾದರೂ ಹೊಲಸು ಪದಾರ್ಥಗಳನ್ನು ತೆಗೆದು ಹೊರಗೆ ಒಗೆದರೆ, ಅವರಿಗೂ ಶಿಕ್ಷೆಯಾಗುತ್ತಿತ್ತು ರಾತ್ರಿ ಸಮಯದಲ್ಲಿ ಮಲಗಿಕೊಳ್ಳುವಲ್ಲಿ ಪಾಯಖಾನೆಗೆ ಹೋಗುವದಕ್ಕೆ ವ್ಯವಸ್ಥೆ ಇರಲಿಲ್ಲ ಅನೇಕ ವೇಳೆ ತಡೆಯಲಿಕ್ಕೆ ಆಗದಿದ್ದರೆ, ಚೊಣ್ಣ ಹಾಕಿಕೊಂಡು ಮಲಗಿಕೊಂಡಲ್ಲೇ ಸ್ವಲ್ಪ ನಿವೃತ್ತಿ ಮಾಡಿಕೊಂಡು, ಹಾಗೆಯೇ ಮುಂಜಾನೆ ತನಕ ಇರಬೇಕಾಗುತ್ತಿತ್ತು ನಿಂತುಕೊಂಡಲ್ಲಿ ಹಾಕುವ ಕೈಬೇಡಿಯು ಗೋಡೆಯಲ್ಲಿ ಬಹಳ ಎತ್ತರಕ್ಕೆ ಇದ್ದು ಇಡೀ ದಿವಸ ಸ್ವಲ್ಪ ಮುಂದಕ್ಕೆ ನಿಲ್ಲಬೇಕಾಗುತ್ತಿತ್ತು ಹಗಲು ಹೊತ್ತಿನಲ್ಲಿ ಅವರಿಗೆ ಕುಡಿಯಲಿಕ್ಕೆ ನೀರು ಬೇಕಾದರೆ, ಅದನ್ನು ತಂದು ಕೊಡುವದಕ್ಕೆ ಬೇಕೆಂತಲೇ ಬಹಳ ಹೊತ್ತು ಮಾಡುತ್ತಿದ್ದರು. ಮತ್ತು ಅವನು ನೀರು ಕೇಳುವದು ಒಂದೇ ಸಾರಿ ಇರಬೇಕು ತಡವಾಯಿತೆಂದು ಎರಡನೇ ಸಾರಿ ಕೇಳಿದರೆ ಅದಕ್ಕೋಸ್ಕರ ಶಿಕ್ಷೆಯಾಗುತ್ತಿತ್ತು ಊಟ ಮಾಡುವ, ಪಾಯಖಾನೆಗೆ ಹೋಗುವ, ವಗೈರೆ ವೇಳೆಗಳನ್ನು ಬಿಟ್ಟು ಇಡೀ ರಾತ್ರಿ–ಹಗಲು ಎರಡು ಮೂರು ವಾರಗಳವರೆಗೆ

ಬೆನ್ನ ಹಿಂದೆ ಕೈ [illegible]ಗಳನ್ನು ಕೊಡುತ್ತಿದ್ದರು. ಮಾಹೀ ಬೇಡಿಸುವ ಉದ್ದೇಶದಿಂದ ಮಲಗಿಕೊಳ್ಳುವಾಗ ತಲೆ ದಿಂಬಿನ ಹತ್ತರ ಭಂಗಿಯ ತಟ್ಟೆಗಳನ್ನು ಇಡುತ್ತಿದ್ದರು. ಕೆಲಸ ಮಾಡುವಾಗ ಘಾವ ವಾದರೆ ಕೆಲಸ ಮುಗಿಯುವವರೆಗೆ ಮದ್ದು ಪಟ್ಟಿ ಕಟ್ಟಿಸಿಕೊಳ್ಳುವದಕ್ಕಾಗಲೀ [illegible] ಕಟ್ಟಿಸಿಕೊಳ್ಳುವದಕ್ಕಾಗಲೀ ಬಿಡುತ್ತಿರಲಿಲ್ಲ. ಕಠಿಣ ಪ್ರಸಂಗಗಳಲ್ಲಿ ಕೂಡ ಹಾಗೆಯೇ ಮಾಡುತ್ತಿದ್ದರು. ಕಾರಿಗೆ, ಅಷ್ಟು ಜರ್ಮನ ಬೇಡಿ ಕೊಡುವಲ್ಲಿ ಆ ಸವಳುಗಳ [illegible] ತನಕ ಉದ್ಧರಿಸುತ್ತಿದ್ದ [illegible]

Twelve Tissue Remedies

ಈರಾರು ಲವಣಗಳು

ಕೆಳಗೆ ಬರೆದ ಕ್ರಮದಲ್ಲಿ ಸಿಗುವವು

[illegible]

ಗಿಪ್ಪು ಬಾಟ್ಲಿಗಳ [illegible] ೧೦-೦.

" " " [illegible]

" " " [illegible]

ಇನ್ನುಳಿದ, ಗಜಕರ್ಣ [illegible] ಜ್ವರ, [illegible] ಜ್ವರ, [illegible] ಮೊದಲಾದ [illegible] ಅತ್ಯುತ್ತಮ ಔಷಧಗಳು [illegible] ವಿಶೇಷ ಮಾಹಿತಿ ಪತ್ರದ್ವಾರ [illegible]

ಪತ್ತೆ:— ಎಸ್. ಈ. ವರುಗೀಸ್,

ಮಿಶನ್ ದವಾಖಾನ,

ಹಳದೀಪುರ (ಉ. ಕಾನಡಾ)

ನೇಯ್ಗೆಯವರಿಗೆ ಸುಸಮಯ.

ನಮ್ಮಲ್ಲಿ ನೇಯ್ಗೆಗೆ ಸಂಬಂಧಪಟ್ಟ ನೂಲಿನ ಬಿದಿಗಳು (Cotton heads) ತಂತಿ ಬದಿಗಳು (Wire heads) ಉಕ್ಕಿನ ಪಟ್ಟಿಗಳು (Steel reelds) ಸಾದಾ ಮತ್ತು ಗಾಲಿ ನಾಳಿಗಳು (Plain & roller shuttles) ಪಿಕ್ಕರುಗಳು (Pickers) ಎಳೆಗಳನ್ನು ತೆಗೆಯುಕೊಳ್ಳುವ ಕೊಂಡಿಗಳು (Reed hooks) ಮತ್ತು ಗಣಿಕೆಗಳು (Pirns) ಅಲ್ಲದೆ, ಇನ್ನೂ ಬೇಕಾದ ಸಾಮಾನಗಳು ಚಿಲ್ಲರೆಯಾಗಲಿ, ಒಟ್ಟಿಗೆಯಾಗಲಿ ಸರಿಯಾದ ಬೆಲೆಗೆ ದೊರೆಯುತ್ತವೆ.

ಕೃಯಾದ ಪಟ್ಟಿ ಬೇಕಾದಲ್ಲಿ ಇಂಗ್ಲೀಷಿನಲ್ಲಿ ಬರೆಯಿರಿ

Indo-British

Trading Bureau

15-19 Ghoga Street Fort,

BOMBAY

ವೃತ್ತವ್ಯವಸಾಯ.

ಲೇಖಕ:— ವಾಚಕ.

ಉಡುಪಿಯೊಳಗಿನ 'ಸತ್ಯಾಗ್ರಹೀ' ಪತ್ರಿಕೆಯ ಚಾಲಕರಾದ ಶ್ರೀ ಮೂಲ್ಕಿ ವಾಮನ ಕುಡುವರವರು ಕರ್ನಾಟಕದೊಳಗಿನ ಪರಿಷತ್ತೊಂದನ್ನು ನೆರೆಯಿಸುವರೆ ಲೋಕಮತವನ್ನು ಜಾಗೃತಪಡಿಸುತ್ತಿರುವರು. ಇತರ ಪತ್ರಿಕೆಗಳೂ ಈ ಹೊಸ ವಿಚಾರಕ್ಕೆ ಪುಷ್ಟಿ ಕೊಡುತ್ತಲಿವೆ. ಪತ್ರಿಕಾಕರ್ತರ ಪರಿಷತ್ತಿನ ಉಪಯುಕ್ತತೆ-ಆವಶ್ಯಕತೆಗಳನ್ನು ಪ್ರತಿಪಾದಿಸಬೇಕಾಗಿಲ್ಲ. ಯಾಕೆಂದರೆ, ಯಾವದೇ ವಿಷಯವನ್ನು ಸಂಘಶಃ ಆಲೋಚಿಸುವ ಯೋಜನೆಯು ಯಾವಾಗಲೂ ಇಷ್ಟವೇ. ಪತ್ರಿಕಾಕರ್ತರ ಬಗ್ಗೆ ವಾಚಕರ ದೃಷ್ಟಿಯಿಂದ ಕೆಲ ವಿಚಾರಗಳನ್ನು ನಾನು ನಮೂದಿಸಲೆತ್ನಿಸುತ್ತೇನೆ. ಪರಿಷತ್ತಿನವರು ಇದಕ್ಕೆ ಲಕ್ಷ್ಯ ಕೊಡಬೇಕಾಗಿ ಪ್ರಾರ್ಥನೆ.

ಮೊಟ್ಟಮೊದಲು, ಕರ್ನಾಟಕ ಪತ್ರಿಕೆಗಳಲ್ಲಿರುವ ಕೆಲ ನ್ಯೂನತೆಗಳ ದಿಗ್ದರ್ಶನ ಮಾಡುವೆನು. ಅನೇಕ ಪತ್ರಿಕೆಗಳು ಸರಿಯಾಗಿ, ಪ್ರಕಟಿಸಿದ ದಿನ ಹೊರಡುವದೇ ಇಲ್ಲ. ನಿಯಮಿತತನವು ವೃತ್ತಪತ್ರಗಳ ಪ್ರಾಣವೆಂದೂ ಅನ್ನಬಹುದು. ಅಷ್ಟು ಮಹತ್ವವನ್ನು ಪತ್ರಿಕಾಕರ್ತರು ಪ್ರಕಾಶನ ಕಾಲಕ್ಕೆ ಕೊಡಬೇಕು. ಒಂದು ಸರ್ತಿ ವಾಚಕರಿಗೆ ಪತ್ರಿಕೆಯು ಅನಿಯಮಿತವೆಂದು ತೋರಿದ ಕೂಡಲೆ, ಪತ್ರಿಕೆಯು ವಾಚಕರ ಲವಲವಿಕೆಯು ದೂರವಾಗಿ ಅನಾದರವು ಸಹ ಪ್ರಾದುರ್ಭೂತವಾಗುತ್ತದೆ. ಪತ್ರಿಕೆಗಳ ಮುದ್ರಣವು ಮತ್ತೊಂದು ನ್ಯೂನತೆಯು. ಮುದ್ರಣವು ಚಟ್ಟಾಗಿದ್ದರೆ, ವಾಚಕರ ಲಕ್ಷವು ಪತ್ರಿಕಾವಾಚನಕ್ಕೆ ತಾನಾಗಿಯೇ ಸೆಳೆಯುತ್ತದೆ. ಕೆಟ್ಟ ಗಾವದೀ ಮಾಡಿ ಕಾಲಮ್ಮುಗಳನ್ನು ತುಂಬಿ, ಸಾಗಿಸಿದರಾಯಿತು ಎಂಬ ಧೋರಣೆಯಿಂದ ವಾಚಕರ ಸಮಾಧಾನವಾಗುವದಿಲ್ಲ. ವೃತ್ತಪತ್ರಗಳ ಮುದ್ರಣದಿಂದಲೇ ವಾಚಕರಿಗೆ ಪ್ರೋತ್ಸಾಹನೆಯಾಗುವಷ್ಟು ಮುದ್ರಣವು ಸುಧಾರಿಸಬೇಕು. ಲೇಖಗಳು ಎಷ್ಟು ಪ್ರಯಾಸದಿಂದ ಗುಂಫಿತವಾದರಿಂದ, ವಿನೋದದಿಂದ ಬರೆದಿದ್ದರೂ, ಮುದ್ರಣವು ಸೊಗಸಾಗಿರದಿದ್ದರೆ, ಪತ್ರದ ಕಡೆಗೆ ಮನಸ್ಸೇ ಎಳೆಯುವದಿಲ್ಲ. ಇನ್ನೊಂದು ದೋಷವೆಂದರೆ, ಪತ್ರಿಕೆಗಳ ಧೋರಣದ್ದು. ಅನೇಕ ಪತ್ರಿಕೆಗಳಿಗೆ ಧೋರಣವೇ ಇರುವದಿಲ್ಲ. 'ಕೇಸರೀ' ಮೊದಲಾದ ಮರಾಠಿ ಪತ್ರಿಕೆಗಳಂತೆ ವಿಶಿಷ್ಟ ಧೋರಣದ ಮೇಲೆಯೇ ನಡೆಯುವ ಪತ್ರಿಕೆ [illegible] ಅಪರೂಪವೆಂದರೂ ಅಡ್ಡಿಯಿಲ್ಲ. ಕೆಲ ಪತ್ರಿಕೆಗಳಲ್ಲಂತು ಒಂದು ಸಂಚಿಕೆಯು ವೇಷ ಬೇರೆ, ಕಳೆದ ಸಂಚಿಕೆಗೂ, ಬರುವ ಸಂಚಿಕೆಗೂ ಏನೂ ಸಂಬಂಧವಿರುವದಿಲ್ಲ. ಅಷ್ಟು ಸ್ವಚ್ಛಂದದಿಂದ ಪತ್ರಿಕಾಕರ್ತರು ವರ್ತಿಸುತ್ತಾರೆ. ಪತ್ರಿಕೆಗಳ ನಾಮನಿರ್ದೇಶ ಮಾಡುವ ಅವಶ್ಯವಿಲ್ಲ. ಇವೆಲ್ಲ ಪತ್ರಿಕಾಕರ್ತರ ದೋಷಗಳ ಪಾಲಿಕೆಯು. ಪತ್ರಿಕಾಕರ್ತರನ್ನೇ ದೂರಬೇಕೆಂದು ನಾನು ಇದನ್ನು ಬರೆದಿಲ್ಲ. ಪತ್ರಿಕೆಗಳ ಉನ್ನತಿಯಾಗಬೇಕಾದರೆ, ಸಾಮಾನ್ಯ ವಾಚಕರು ಸಹ ಅವನ್ನು ಓದಬೇಕೆಂದಿದ್ದರೆ, ಪತ್ರಿಕೆಯನ್ನು ಸುಧಾರಿಸುವದು ನಮ್ಮ ಕರ್ತವ್ಯವು. ಕರ್ನಾಟಕ ಪ್ರಾಂತವು ತುಂಡು ತುಂಡಾಗಿ ಹಂಚಿಹೋಗಿದ್ದದರಿಂದ, ಭಾಷಾಸ್ಥಿತಿಯು ಕೆಟ್ಟು ಕಡಿಮೆಯಿದೆ. ಆದರೆ, ಇದೇನು ದೊಡ್ಡ ಮಾತಲ್ಲ. ಕಾಲಾನುಕ್ರಮದಿಂದ ಭಾಷೆಯು ಸುಧಾರಿಸಬಲ್ಲದು, [illegible] ಚಿತ್ತಾಕರ್ಷಕವಾಗುವದು. ಪತ್ರಿಕೆಗೆ ಅವಶ್ಯವೆಂದು ನನಗೆ ತೋರುವ ಮೂಲ ತತ್ವಗಳನ್ನಷ್ಟು ಇಲ್ಲಿ ನಮೂದಿಸಿರುವೆನು. ಈ ಬಗ್ಗೆ ಪತ್ರಿಕಾಕರ್ತರು ಆಲೋಚಿಸಿ, ತಕ್ಕ ಉಪಾಯ ಯೋಜಿಸಬೇಕಾಗಿ ನನ್ನ ವಿನಂತಿ.

ಪತ್ರಿಕೆಗಳ ಅಂತರಂಗ-ಬಹಿರಂಗ ಪರೀಕ್ಷೆಯಾದ ಬಳಿಕ, ನಮ್ಮಂಥ ವಾಚಕರ ದೋಷಗಳನ್ನೂ ವಿಮರ್ಶಿಸುವೆನು. ಸಾಮಾನ್ಯವಾಗಿ, ವಾಚಕರು ಲೋಭಿ ಮಂದಿಗಳು. ಹಣ ತೆತ್ತು ವೃತ್ತಪತ್ರವನ್ನೋದುವ ಪಟುತ್ವ ಅವರಿಗಿಲ್ಲ. ಇದರಿಂದ ಹೊಟ್ಟೆ ತುಂಬುತ್ತದೇನು? ಎಂದು ಅವರ ಸ್ವಾಭಾವಿಕ ಪ್ರಶ್ನೆ. ಹೊಟ್ಟೆ ತುಂಬುವದೊಂದೇ ಸಂಸಾರಿಕರ ಧ್ಯೇಯವಾದರೆ, ಮಾನವನಿಗೂ, ಪಶುಗಳಿಗೂ ಭೇದವೇನಿರುವದು? ಕೆಲವರಿಗೆ ಪತ್ರಿಕೆಯ ವಾಚನದ ಆಸಕ್ತಿಯಿದೆ. ಆದರೆ, ಧನದ ಲೋಭವು ಅದಕ್ಕಿಂತ ವಿಶೇಷ. ಅದರಿಂದ ಪುಕ್ಕಟೆ ವರ್ತಮಾನಪತ್ರ ಸಿಕ್ಕಿದಲ್ಲಿ ಓದುವ ಗಿರಾಕಿಗಳಿವರು. ಹಿಂದುಸ್ಥಾನದಲ್ಲಿ ವೃತ್ತಪತ್ರಗಳು ಏಕೆ ಏಳ್ಗೆ ಹೊಂದುವದಿಲ್ಲೆಂದು ದೇ| ಭ| ಲಾಲಾ ಲಜಪತರಾಯರು ಒಮ್ಮೆ ಒಂದು ಲೇಖ ಬರೆದಿದ್ದರು. ಅಮೇರಿಕಾ, ಜರ್ಮನಿ ಮೊದಲಾದ ರಾಷ್ಟ್ರಗಳಲ್ಲಿ ಉಪ್ಪಾರರು ಸಹ ನಿತ್ಯವೂ ದುಡ್ಡು ಕೊಟ್ಟು ಪತ್ರಿಕೆಗಳನ್ನು ಓದುತ್ತಾರೆ. ಜಗತ್ತಿನಲ್ಲಿ ನಡೆಯುವ ಕಾರಸ್ಥಾನಗಳನ್ನೆಲ್ಲ ಅರಿತುಕೊಳ್ಳುವ ಅವರ ಲವಲವಿಕೆ ನೋಡಿರಿ. ಈ ಪ್ರಕಾರ ಸಕಲ ಪ್ರಜೆಗಳಿಂದ ಆಶ್ರಯಿಸಲ್ಪಡುವ ಪತ್ರಿಕೆಗಳು ದೇಶದಲ್ಲಿ ಲೋಕಮತವನ್ನು ಜಾಗೃತಪಡಿಸಲು, ಲೋಕಶಿಕ್ಷಣ ಮಾಡಲು ಎಷ್ಟು ಸಾಮರ್ಥ್ಯವಂತವಾಗುತ್ತವೆಂದು ಹೇಳಬೇಕಾಗಿದೇನು? ಹಿಂದುಸ್ಥಾನದಲ್ಲಿ ಪುಕ್ಕಟೆ ಓದುವ ರಸಿಕರೇ ಬಹಳ. ಅದರಿಂದಲೇ ನಮ್ಮ ಭರತಖಂಡಕ್ಕೆ ದಾರಿದ್ರ್ಯಪ್ರಾಪ್ತವಾಗಿದೆಯೋ, ಏನೋ? ಲಜಪತರಾಯರು ನುಡಿದಂತೆ, ನಮ್ಮ ದೇಶದಲ್ಲಿ ಉದ್ಯೋಗಗಳಿಲ್ಲದಿದ್ದದರಿಂದ, ಉದ್ಯೋಗಗಳ ಜಾಹೀರಾತುಗಳನ್ನು ಪ್ರಕಟಿಸಿ, ಪರದೇಶಗಳಲ್ಲಿಯಂತೆ, ನಮ್ಮಲ್ಲಿಯ ವೃತ್ತಕಾರರಿಗೆ ಉತ್ಪನ್ನ ದೊರಕುವದಿಲ್ಲ. ಆದರಿಂದ ಹಿಂದೀ ವೃತ್ತಪತ್ರಕರ್ತರು ವಾಚಕವರ್ಗದ ಮೇಲೆಯೇ ವಿಶೇಷವಾಗಿ ಅವಲಂಬಿಸಿರುವರು. ಹಿಂದುಸ್ಥಾನದೊಳಗಿನ ದೊಡ್ಡ ದೊಡ್ಡ ವೃತ್ತಪತ್ರಗಳ ಸ್ಥಿತಿಯು ಇಷ್ಟಾದ ಬಳಿಕ, ಕರ್ನಾಟಕದೊಳಗಿನ ಪತ್ರಿಕೆಗಳ ಅವಸ್ಥೆಯನ್ನು ಇನ್ನು ಬಣ್ಣಿಸಬೇಕೇ? ಅನೇಕ ಪತ್ರಿಕೆಗಳಿಗೆ ಪುಕ್ಕಟೆ ಓದಿ, ಪ್ರಶಂಸೆ ಮಾಡುವವರು ಬಹಳ ಮಂದಿ, ಆಶ್ರಯ ಕೊಡ ಹೇಳಿದರೆ, ಒಬ್ಬರೂ ಒಪ್ಪುವದಿಲ್ಲ. ಚಂದಾ ಹಣ ತೆರಲು ಇವರಿಗೆ ಅನೇಕ ಅಡಚಣಿ. ಇನ್ನೊಂದು ವಾಚಕರ ದೊಡ್ಡ ದೋಷವು. ವಾಚಕರಲ್ಲಿ ಇದೊಂದು ಪ್ರಕಾರವಿದೆ. ಕೆಲವರು ದೊಡ್ಡ ವಿಚಾರವಂತರೆಂದು ಮೆರೆಯುತ್ತಾರೆ. ಅದೊಂದು ತಮ್ಮ ಗೌರವದಂತ ಸಹ ಅವರ ಭಾವನೆ. ಮೊದಲೇ ಕರ್ನಾಟಕ ಪತ್ರಿಕೆಗಳ ಬಗ್ಗೆ ಅನಾದರ. ವರ್ಗಣಿ ಕೊಡುವದು ಧರ್ಮವೆಂದು ತಿಳಿವಳಿಕೆ. ಪ್ರತಿ ವರ್ಷಕ್ಕೆ ಚಂದಾ ಕೊಟ್ಟರೆ, ಪ್ರತಿಫಲವಾಗಿ ಕಾಲಕಾಲಕ್ಕೆ ಪತ್ರಿಕೆಗಳು ಬರುತ್ತವೆಂದು ಇವರಿಗೆ ಅರಿವೇ ಇಲ್ಲ. ಅಷ್ಟು ಮಹಾಂಧರಿವರು. ಇಂಗ್ಲೀಷ ವರ್ತಮಾನಪತ್ರಗಳನ್ನೋದುವದೆಂದರೆ, ಅದೊಂದು ದೊಡ್ಡಸ್ತನ. ಕನ್ನಡ ಪತ್ರಗಳನ್ನು ತರಿಸುವದೇ, ಓದುವದಿರಲಿ, ಚಾಲಕರ ಮೇಲಿನ ದೊಡ್ಡ ಉಪಕಾರ. ಕನ್ನಡ ಪತ್ರಿಕೆಗಳ ನಡಾವಳಿಯಿಂದ ಈ ಅನಾದರವು ಒಮ್ಮೆ ಕ್ಷಮ್ಯವೆಂದು ತೋರಿದರೂ, ಅನುಚಿತವೆಂತು ನನ್ನ ಹೇಳಿಕೆ. ಕೆಲ ವಾಚಕರಿಗೆ ಪತ್ರಿಕೆಯ ಧೋರಣವು ಸಮ್ಮತವಾಗುವದಿಲ್ಲ. ತಮ್ಮ ಧೋರಣದಂತೆ ನಡಿಸಬೇಕೆಂದು ಅವರ ಅಭಿಪ್ರಾಯ. ವಾಚಕರಲ್ಲಿ ಪ್ರಕೃತಿಭೇದವಿದೆ. ಆದರಂತೆ, ಪ್ರತಿಯೊಬ್ಬ ವಾಚಕರು ಇದೇ ಪರಿಯಿಂದ ವಿಚಾರಿಸಿದರೆ, ಪತ್ರಿಕೆಯು ಬಡವಾಗಿ, ನೆಲಕ್ಕುರುಳುವದು. ಯಾವ ಪತ್ರಿಕೆಯೂ ಹೀಗೆ ಪ್ರತಿಯೊಬ್ಬ ವಾಚಕನ ಅಭಿಪ್ರಾಯವನ್ನು ಸರ್ವದಾ ಪ್ರದರ್ಶಿಸಲಾರದು. ಆದರಿಂದ ವಾಚಕರು ಯಾವದೊಂದು ಪತ್ರಿಕೆಯ ಗುಣದೋಷಗಳನ್ನು ಚರ್ಚಿಸುವಾಗ, ಸಾಮಾನ್ಯ ಧೋರಣವು ಜನಸಮ್ಮತವಿದೆಯೋ, ಹೇಗೆ ಎಂಬುದನ್ನೇ ವಿಚಾರಿಸಬೇಕು. ಇದೆಲ್ಲ ವಾಚಕರ ದೋಷಗಳ ವಿವರಣೆಯಾಯಿತು.

ಇನ್ನು ಸುತ್ತಲಿನ ಪರಿಸ್ಥಿತಿಯನ್ನು ವಿಚಾರಿಸುವೆನು. ಪತ್ರಿಕೆಗಳನ್ನು ಕಾಲಕ್ಕೆ ಪ್ರಕಟಿಸುವದು ಚಾಲಕರ ಕರ್ತವ್ಯವೆಂದು ನಾನು ಮೊದಲನೇ ಹೇಳಿಬಿಟ್ಟಿರುವೆನು. ಆದರೆ, ಚಾಲಕರು ಎಷ್ಟು ಉದ್ಯೋಗಶೀಲರಾಗಿದ್ದರೂ,

ಪ್ರಾಮುಖ್ಯವಾಗಿ ಸರಕಾರದ ಟಪಾಲಖಾತೆಯಿಂದಲೇ ಮುಟ್ಟಿಸಬೇಕು. ಕರ್ನಾಟಕದಲ್ಲಿ ದೊಡ್ಡ ದೊಡ್ಡ ಪಟ್ಟಣಗಳಿಗಿಂತ ಹಳ್ಳಿಗಳೇ ವಿಶೇಷ. ಹಳ್ಳಿಗಳೊಳಗಿನ ವಾಚಕರ ದುರ್ದೆಶೆಯನ್ನು ನಾನು ಎಷ್ಟೆಂದು ಹೇಳಲಿ! ತಿಂಗಳುಗಟ್ಟಲೆ ವೃತ್ತಪತ್ರದ ದರ್ಶನವಿಲ್ಲದೆ ಕಳೆಯಬೇಕಾಗುತ್ತದೆ. ಮತ್ತು ಅವರ ವಾಚನಾಭಿರುಚಿಯು ಇದರಿಂದ ಬೇಗನೆ ಅಳಿದು ಹೋಗುತ್ತದೆ. ಹಳ್ಳಿಗಳೊಳಗಿನ ಟಪಾಲು ಹಂಚುವವರು ತಿಕ್ಕಾತಿಕ್ಕವಾಗಿ ಹತ್ತರ ಪತ್ರಿಕೆಯನ್ನು ಕೊಟ್ಟು ಕಳುಹುತ್ತಾರೆ. ಮಾಲಿಕರಿಗೆ ಅವುಗಳ ಪಟ್ಟಿ ಸಿಗುವದು ಅಪರೂಪವೇ. ಒಂದೊಂದು ಸರ್ತಿ ತಿಂಗಳಿನ ಸಂಚಿಕೆಗಳೆಲ್ಲ ಒಟ್ಟಾಗಿ ಕೈಸೇರುತ್ತವೆ. ಈ ಅವ್ಯವಸ್ಥೆಯಲ್ಲಿ ಪತ್ರಿಕೆಗಳ ಹೊರೆಯಿಂದ ಮಾರುಗಟ್ಟೆ ವಾಚಕನು ವಂತಿಗೆಯನ್ನೇ ನಿಲ್ಲಿಸಿಬಿಡುತ್ತಾನೆ. ಹೊರತು ಟಪಾಲಖಾತೆಯವರಿಗೊಂದು ವಾಚಕರು ಫಿರ್ಯಾದು ಮಾಡುವದಿಲ್ಲ. ತಮ್ಮ ಹಕ್ಕುಗಳೇನು? ಎಂಬ ಅರಿವು ಅವರಿಗಿರುವದಿಲ್ಲ. ಕೆಲವು ಸರ್ತಿ ಪತ್ರಿಕೆಗಳ ವ್ಹಿ. ಪಿ. ಗಳಲ್ಲಿ ಟಪಾಲು ಖಾತೆಯವರು ವರ್ಗಣಿದಾರರಿಗೆ ತೋರಿಸದೆ, "ಮಾಲೀಕರು ಅನಕಾರ ಮಾಡಿದ್ದಾರೆ" ಮೊದಲಾದ ಅಳಿದಿಟ್ಟ ಶರಾ ಹೊಡೆದು, ಪತ್ರಿಕಾಕರ್ತರಿಗೆ ಹಿಂತಿರುಗಿ ಕಳಿಸುತ್ತಾರೆ. ಅಷ್ಟು ವಾಚನಾಭಿರುಚಿಯಿದ್ದವರು ಮಾತ್ರ, ಪತ್ರಿಕೆಯು ನಿಂತುಹೋದಲ್ಲಿ, ಪುನಃ ವ್ಯವಸ್ಥೆ ಮಾಡಿಕೊಂಡರಾಯಿತು. ಹಳ್ಳಿಹಳ್ಳಿಗಳಲ್ಲಿ ಟಪಾಲ ಆಫೀಸುಗಳಿದ್ದಲ್ಲಿ ಮಾತ್ರ, ನಮಗೆ ಪತ್ರಿಕೆಗಳು ದೊರೆತು, ಆದರಿಂದ ಲಾಭವಾಗುವದು. ಇಲ್ಲದಿದ್ದರೆ, ಬರೇ ಹಳೇ ಸುದ್ದಿಗಳನ್ನು ತಿಳಕೊಳ್ಳುವದರಲ್ಲಿ ಸ್ವಾರಸ್ಯವೇನಿದೆ? ಅಲ್ಲಲ್ಲಿ ಟಪಾಲ ಆಫೀಸುಗಳನ್ನು ಸ್ಥಾಪಿಸಲು ಪತ್ರಿಕಾಕರ್ತರು ಯತ್ನಿಸತಕ್ಕದ್ದು. ಅಥವಾ ಸರಕಾರವು ಒಪ್ಪದಿದ್ದಲ್ಲಿ, ಗ್ರಾಮ ಕಾಂಗ್ರೆಸ ಕಮಿಟಿಗಳ ವಿದ್ಯಮಾನವಾದರೂ, ನೆರೆಹೊರೆಯ ಪತ್ರಿಕೆಗಳನ್ನು ಕಾಲಕಾಲಕ್ಕೆ ಪೂರೈಸುವ ವ್ಯವಸ್ಥೆಯನ್ನು ಸಂಘದ್ವಾರಾ ಕೈಕೊಳ್ಳತಕ್ಕದ್ದು. ಇನ್ನೊಂದು ಮಾತು. ಹಿಂದುಸ್ಥಾನದಲ್ಲಿ ಶಿಕ್ಷಣದ ಮಾನವು ತೀರ ಕಡಿಮೆ ಇದೆ. ಆ ಮಾನದಿಂದ ವಾಚನಾಭಿರುಚಿಯೂ ಕಡಿಮೆಯೇ. ಈ ಬಗ್ಗೆ ಶಿಕ್ಷಣೋತ್ತೇಜಕ ಸಂಸ್ಥೆಗಳ ವಿಸ್ತಾರಕ್ಕಾಗಿ ಪತ್ರಿಕಾಕರ್ತರ ಪರಿಷತ್ತು ಹೆಣಗಬೇಕು. ಶಿಕ್ಷಣವೂ, ವಾಚನಾಭಿರುಚಿಯೂ ಅನ್ಯೋನ್ಯ ಸಂಬಂಧವುಳ್ಳವು. ಆದರಿಂದ ಪ್ರಜೆಗಳಲ್ಲಿ ವಿದ್ಯಾಪ್ರಸಾರವಾಗುವಂತೆ ಪರಿಷತ್ತಿನಲ್ಲಿ ಯೋಜನೆಯಾಗಬೇಕು.

ವೃತ್ತವ್ಯವಸಾಯದ ಬಗ್ಗೆ ನನಗೆ ತೋಚಿದ ವಿಚಾರಗಳಿವು. ಇವುಗಳನ್ನು ಪರಾಂಬರಿಸಿ, ಪರಿಷತ್ತು ಪತ್ರಿಕಾಕರ್ತರ ಉನ್ನತಿಯನ್ನೂ, ಪ್ರಜೆಗಳ ಕಲ್ಯಾಣವನ್ನೂ ಸಾಧಿಸಬೇಕಾಗಿದೆ.

ತ್ವರೆ ಮಾಡಿರಿ! ತ್ವರೆ ಮಾಡಿರಿ!!

ಅಚ್ಚಿನಲ್ಲಿದೆ!

ಬಗ್ಗೋಣ ರಾಮಾ ತಿಮ್ಮಣ್ಣ ಪಂಡಿತರವರಿಂದ
ಗುಣಿಸಿ ಪರಿಶೋಧಿಸಲ್ಪಟ್ಟ

ರಕ್ತಾಕ್ಷಿ ಸಂವತ್ಸರದ ಪಂಚಾಂಗವು

ಈತಿಂಗಳ ಅಖೈರೊಳಗೆ ತಯಾರಾಗುವದು.

ಡಿಶೆಂಬರ ತಿಂಗಳ ತಾ. ೨೦ ರೊಳಗೆ
ಮುಂಗಡ ಹಣ ಕೊಡುವವರಿಗೆ

೧,೦೦೦ ಕ್ಕೆ ರೂಪಾಯಿ ೧೦೫,
೫೦೦ಕ್ಕೆ ರೂಪಾಯಿ ೫೫; ೧೦೦ಕ್ಕೆ ರೂಪಾಯಿ ೧೧।
ತಾ. ೨೦ರ ನಂತರ ಮುಂಗಡ ಹಣ ಕೊಡಲ್ಪಡಲಾಗದು
ತಯಾರಾದಮೇಲೆ, ಶೇಕಡಾ ರೂಪಾಯಿ ೧೨.
ಅಂಚೆ ವೆಚ್ಚ ಪ್ರತ್ಯೇಕ.

ಪತ್ರ:— ಕೃಷ್ಣ ಕೇಶವ ಶೇಣವಿ, ಹೆಗಡೇಕರ
ಮಾಲಕ
ಸ್ಟಾರ ಒಫ್ ಕೆನರಾ ಪ್ರೆಸ್, ಕುಮಟಾ.

ವಿವಿಧ ಸಂಗ್ರಹ.

ಈ ಚಿತ್ರ ನೋಡಿರಿ.

ಸ್ವದೇಶಕ್ಕೆ ಮರಳುವ ಮಾಮುದಾರ ಗವ್ಹರ್ನರರಿಗೆ ಮಾನಪತ್ರವನ್ನೀಯಬಾರದೆಂದು ಮುಂಬಯಿಯ ಮ್ಯುನಿಸಿಪಾಲಿಟಿಯೊಳಗಿನ ರಾಷ್ಟ್ರೀಯ ಪಕ್ಷದವರು ಬಹಳಿಯಿಂದ ಯತ್ನಿಸಿದರು. ಆದರೆ, ಸ್ಥಿತಿಪಾಲಕರ ಹಾಗು ಅಧ್ಯಕ್ಷರ ಕುಯುಕ್ತಿಗಳಿಂದ ಠರಾವು ಮಂಜೂರಾಯಿತು. ಮ್ಯುನಿಸಿಪಾಲಿಟಿಯ ಮೆಂಬರರಲ್ಲೊಬ್ಬರಾದ ಶ್ರೀ॥ ಖುರ್ಶೇದ ನರಿಮಾನರವರು ಗವ್ಹರ್ನರರಿಗೆ ಮಾನಪತ್ರ ಕೊಡದಂತೆ, ಅಧ್ಯಕ್ಷರಿಗೂ, ಮ್ಯುನಿಸಿಪಾಲಿಟಿಗೂ ಕೂಡಲೆ ಪ್ರತಿಬಂಧವಾಗಬೇಕೆಂದು ಮುಂಬಯಿಯ ಹೈಕೋರ್ಟಿನಲ್ಲಿ ಬುಧವಾರ ತಾ. ೫ನೇಗೆ ದಾವೆ ದಾಖಲ ಮಾಡಿದರು. ವಿಚಾರವು ನ್ಯಾಯಮೂರ್ತಿ ಮಾರ್ಟಿನ್‌ರವರ ಮುಂದೆ ಮರುದಿನವೇ ನಡೆಯಿತು. ವಾದಿಯ ವಕೀಲಿಯನ್ನು ಬೆರಿಸ್ಟರ ಜಿನ್ನಾರವರು ನಡಿಸಿದರು. ಪ್ರತಿವಾದಿರ ತರ್ಫೆನಿಂದ ಎಡ್ವೋಕೇಟ ಜನರಲ್‌ರು ಕೆಲಸ ನಡಿಸುತ್ತಿದ್ದರು. ಮ್ಯುನಿಸಿಪಾಲಿಟಿಯು ೧೫ ದಾಖ್ಲೋಳಕರರ ಸೂಚನೆಯನ್ನು ಮುಂಚಿತವಾಗಿಯೇ ಚರ್ಚಿಸಿ, ಹೇಗೆ ಬೇಕಾಯಿತೇ ಕಾರ್ಯವನ್ನಾಚರಿಸಿತು? ಮಾನಪತ್ರದ ಮಸೂದೆಯನ್ನು ಮ್ಯುನಿಸಿಪಾಲಿಟಿಯ ಕಾಯಿದೆಯಂತೆ ಮೆಂಬರರಿಗೆ ಕಳಿಸದೆ, ಥಟ್ಕನೆ ಹೇಗೆ ಚರ್ಚಿಸಲಾಯಿತು? ಎಂಬುದನ್ನು ವಾದಿಯು ಸ್ಪಷ್ಟವಾಗಿ ದಾವೆಯಲ್ಲಿ ನಮೂದಿಸಿದ್ದರು. ನ್ಯಾಯಮೂರ್ತಿಗಳು, ಸಾಹೇಬರು ಅಂದರೆ, ತಾ. ೮ನೇಗೆ ಮಾನಪತ್ರವನ್ನರ್ಪಿಸುವ ಸಮಾರಂಭವಿದ್ದಾಗ, ಇಷ್ಟು ಕಾಲಹರಣವನ್ನು ಏಕೆ ಮಾಡಿದರು? ಎಂಬ ಮುದ್ದೆಯನ್ನು ಮಿ॥ ಜಿನ್ನಾರವರಿಗೂ ಸ್ಪಷ್ಟೀಕರಿಸಹೇಳಿದರು. ವಾದಗ್ರಸ್ತ ೩ನೇ ಠರಾವು ತಾ. ೨೬ನೇ ನವಂಬರಕ್ಕೆ ಮಂಜೂರಾಯಿತೆಂತಲೂ, ಅಂದಿನಿಂದ ೯ ದಿನಗಳಲ್ಲಿಯೇ ದಾವೆ ದಾಖಲ ಮಾಡಲ್ಪಟ್ಟಿತೆಂತಲೂ ಸಮಾಧಾನ ಹೇಳಿದರು. ಇದಕ್ಕೆ ಮುಂಚಿತವಾಗಿ ದಾವೆ ದಾಖಲ ಮಾಡುವದು ಶಕ್ಯವಾಗಲಿಲ್ಲವೆಂದು ವಾದಿಯ ಕಡೆ ಹೇಳಲಾಯಿತು. ಎಡ್ವೋಕೇಟ ಜನರಲ್‌ರು ಪ್ರತಿವಾದಿಯ ತರ್ಫೆನಿಂದ ವಾದಿಸಿ, ಮಾನಪತ್ರವನ್ನು ಅರ್ಪಿಸಿದ್ದಲ್ಲಿ ತುಂಬಿಕೊಡದಷ್ಟು ಲುಕ್ಸಾನು ಬರಗದೆಂತಲೂ, ಮಾನಪತ್ರದ ಹಣವನ್ನು ಕೊಡಲು ಪ್ರತಿವಾದಿಯು ಸಮರ್ಥರಿದ್ದಾರೆಂತಲೂ, ವಾದಿಯು ತಡವಾಗಿ ನ್ಯಾಯಾಶ್ರಯವನ್ನು ಬೇಡುತ್ತಾರೆಂತಲೂ, ಈಗಲೇ ವಿಚಾರದ ಮೊದಲು ಪ್ರತಿಬಂಧಕ ಹುಕುಮು ಕೊಡುವದು ಅವಶ್ಯವಿಲ್ಲೆಂತಲೂ ಪ್ರತಿಪಾದಿಸಿದರು. ನ್ಯಾಯಮೂರ್ತಿಗಳು ದಾವಾ ಹಕೀಕತನ್ನು ನಮೂದಿಸಿ, ತೀರ್ಪು ಕೊಟ್ಟದ್ದೇನಂದರೆ — "ವಾದಿಗೆ ತಾ. ೮ನೇಗೆ ಮಾನಪತ್ರವನ್ನರ್ಪಿಸುವ ಸಂಗತಿಯು ಗೊತ್ತಿದ್ದು, ವಾದಗ್ರಸ್ತ ಠರಾವುಗಳಲ್ಲಿ ಮೊದಲನೇದು ತಾ. ೧೫ನೇ ನವಂಬರಕ್ಕೆ ೩ನೇದು ಈ ೨೬ನೇ ನವಂಬರಕ್ಕೆ ಹೀಗೆ ಮಂಜೂರಾಗಿರುತ್ತ, ಕೂಡಲೆ ನ್ಯಾಯಾಶ್ರಯ ಬೇಡದೆ, ಬರೇ ೨ ದಿನಗಳಿರುವಾಗ, ಹಂಗಾಮಿ ಹುಕುಮನ್ನು ಬೇಡುವದು ಪ್ರಶಸ್ತವಲ್ಲೆಂತಲೂ, ಹೀಗೆ ಕಾಲಹರಣ ಮಾಡುವ ಪಕ್ಷಗಾರರಿಗೆ ಕೋರ್ಟು ವಿಚಾರ ಮಾಡದೆ ರಕ್ಷಣೆ ಕೊಡಬಾರದೆಂತಲೂ ಪ್ರತಿಪಾದಿಸಿ, 'ತಡವಾಯಿತು' ಎಂಬ ಒಂದೇ ಮುದ್ದೆಯ ಮೇಲೆ ಪ್ರತಿಬಂಧಕ ಹುಕುಮಿನ ಅರ್ಜಿಯನ್ನು ಕಿತ್ತೊಗೆದರು. ಮತ್ತೊಂದು ಮಾತನ್ನೂ ನ್ಯಾಯಮೂರ್ತಿಗಳು ನಮೂದಿಸುತ್ತಾರೆ. ವಾದಿಯು ಹೇಳುವಂತೆ, ಎಲ್ಲ ಕೃತ್ಯಗಳು ಸಂಭವಿಸಿದವೆಂದು ಒಪ್ಪಿ ಗ್ರಹಿಸಿದರೂ, ಮಾನಪತ್ರ ಅರ್ಪಣೆಯ ಠರಾವಿನ ಪ್ರಶ್ನೆಯನ್ನು ನ್ಯಾಯಕೋರ್ಟುಗಳಲ್ಲಿ ವಿಚಾರಿಸಬಹುದೋ ಹೇಗೆ, ಎಂಬ ಪ್ರಶ್ನೆ ಉಳಿಯುತ್ತದೆ. ಮಾನಪತ್ರಾರ್ಪಣದಿಂದ ಮ್ಯುನಿಸಿಪಾಲಿಟಿಯ ಸ್ಥಿರ-ಚರ ಸೊತ್ತು ನಷ್ಟವಾಗುತ್ತಿದ್ದರೆ, ಈ ಬಗ್ಗೆ ನ್ಯಾಯಕೋರ್ಟು ವಿಚಾರಿಸಬೇಕು." ನ್ಯಾಯಮೂರ್ತಿ ಮಾರ್ಟಿನ್ ದೊರೆಗಳು ಪ್ರತಿಬಂಧಕ ಹುಕುಮನ್ನು ನಿರಾಕರಿಸುವಾಗ ಮಾಡಿದ ವಿಧಾನಗಳಿವು.

* * *

ಈ ಚಿತ್ರ ನೋಡಿರಿ.

ಪೂನಾ ಮ್ಯುನಿಸಿಪಾಲಿಟಿಯು ಮೌ॥ ಮಹಮ್ಮದ ಅಲ್ಲೀಯವರಿಗೆ ಮಾನಪತ್ರವನ್ನರ್ಪಿಸುವ ಠರಾವನ್ನು ಬಹು ದಿವಸಗಳ ಹಿಂದೆ ಪಾಸ ಮಾಡಿತ್ತು. ಮೌಲಾನಾರವರಿಗೆ ಗುರುವಾರ ತಾ. ೬ನೇ ಸಾಯಂಕಾಲಕ್ಕೆ ಮಾನಪತ್ರವನ್ನರ್ಪಿಸುವದಿದ್ದದರಿಂದ, ಸರಕಾರಿ ವಕೀಲರು ಸೋಮವಾರ ತಾ. ೧೯ನೇಗೆ ಮ್ಯುನಿಸಿಪಾಲಿಟಿಯ ಮೇಲೆ ದಾವೆ ದಾಖಲ ಮಾಡಿ, ಅಧ್ಯಕ್ಷರಾದ ಶ್ರೀ॥ ಪರಸೋತಂ ಕೇಳಕರರವರ ಮೇಲೆ ಮಾನಪತ್ರಕ್ಕಾಗಿ ಮ್ಯುನಿಸಿಪಾಲಿಟಿಯ ಕೋಶದೊಳಗಿಂದ ಹಣ ಖರ್ಚು ಮಾಡಬಾರದೆಂದು ಪ್ರತಿಬಂಧಕ ಹುಕುಮನ್ನು ಪಡೆದರು. ಜಿಲ್ಲೆಯ ನ್ಯಾಯಮೂರ್ತಿಗಳಾದ ಮಿ॥ ಜಜ್ಜರು 'ತಡವಾಯಿತು' ಎಂಬ ಮುಂಬಯಿಯ ಹೈಕೋರ್ಟಿನ ನ್ಯಾಯಮೂರ್ತಿ ಮಾರ್ಟಿನ್‌ರವರ ಪ್ರಶ್ನೆಯನ್ನು ಉಪಸ್ಥಿತ ಮಾಡಲಿಲ್ಲ. ಮಾನಪತ್ರ ಖರ್ಚಿಗೆಂದು ಮಂಜೂರು ಮಾಡಿದ ೫೦-೬೦ ರೂಪಾಯಿಗಳನ್ನೂ ತೆರುವಷ್ಟು ಸಾಮರ್ಥ್ಯವು ಶ್ರೀ॥ ಕೇಳಕರರಿಗೆ ಇರುವದೆಂಬ ವಿಚಾರವು ಸಹ ಅವರಿಗೆ ಹೊಳೆಯಲಿಲ್ಲ. ಆದರಿಂದ, ದಾವೆಯ ವಿಚಾರವಾಗುವ ಮೊದಲೇ ಪ್ರತಿಬಂಧಕ ಹುಕುಮು ಜ್ಯಾರಿಯಾಯಿತು. ಮಾನಪತ್ರಾರ್ಪಣಕ್ಕೆ 'ಇನ್ನು ಬರೇ ೩ ದಿನಗಳುಳಿದಿವೆ; ಮಾನಪತ್ರಾರ್ಪಣದಿಂದ ಅಪರಿಮಿತ ಹಾನಿಯಾಗದು, ಬಂದಾವತ್ತರೆ, ಖರ್ಚು ಬೇಕಾಯಿತೇನೇ ಎಂದು ಕಂಡುಬಂದಲ್ಲಿ, ಮಾನಪತ್ರ ಕೊಡುವ ಸಭಾಸದರು ಅದನ್ನು ತೆರುವಷ್ಟು ಸಮರ್ಥರಿದ್ದ ಪುರುಷರೇ ಎಂದು ಹೇಳಿ, ಮಿ॥ ಜಜ್ಜರು ಸರಕಾರಿ ವಕೀಲರಿಗೆ ಅವಕಾಶ ಮಾಡಲಿಲ್ಲ. ಮಾನಪತ್ರದ ಪ್ರಕರಣದಲ್ಲಿ ನಮ್ಮ ಬ್ರಿಟಿಶ ನ್ಯಾಯದೇವತೆಯ ಸುಣ್ಣ-ಬಣ್ಣಗಳ ಚಿತ್ರವನ್ನು ನೋಡಿರಿ.

* * *

ಮತ್ತೊಂದು ಚಿತ್ರ.

ಹಿಂದುಸ್ಥಾನದೊಳಗಿನ ಉಕ್ಕಿನ ಉದ್ಯೋಗವನ್ನು ಉದ್ಧಾರ ಮಾಡಲು ಯಾವ ಯಾವ ಉಪಾಯಯೋಜನೆಯಾಗಬೇಕು ಎಂಬುದನ್ನು ವಿಚಾರಿಸುವರೆ, ಟಾರಿಫ ಬೋರ್ಡು ಭರತಖಂಡದಲ್ಲಿ ಮಾಹಿತಿಗೂಡಿಸುತ್ತದೆ. ಅಷ್ಟರಲ್ಲಿ ಯುರೋಪಿಯನ್ ವ್ಯಾಪಾರಿಗಳ ಸಂಸ್ಥೆಗಳೆಲ್ಲ ಮುಂಬಯಿಯಲ್ಲಿ ಪರಿಷತ್ತೊಂದನ್ನು ನೆರೆಯಿಸಿ, ಉಕ್ಕಿನ ಉದ್ಯೋಗಕ್ಕೆ ಸಂರಕ್ಷಣ ಮಾಡಬಾರದು; ಅದರಿಂದ ಹಿಂದೀ ಪ್ರಜೆಗಳ ಮೇಲೆ ಬಹಳ ದೊಡ್ಡ ಒಜ್ಜೆ ಬೀಳುತ್ತದೆಂದು ಠರಾಯಿಸಿ, ತಮ್ಮ ಜನ್ಮಭೂಮಿಯೊಳಗಿನ ಪರದೇಶಿ ಉಕ್ಕನ್ನೇ ಹಿಂದುಸ್ಥಾನದಲ್ಲಿ ಪ್ರಚುರಗೊಳಿಸಲು ಯತ್ನಿಸುತ್ತಿರುವರು. ಇದೇ ಉದ್ದೇಶದಿಂದ ಅವರು ಡಿಸೆಂಬರ ತಾ. ೩ನೇಗೆ ಪರಿಷತ್ತೊಂದನ್ನು ನೆರೆಯಿಸಿ, ನಮ್ಮ ಹಿಂದೀ ಮಹಾನುಭಾವರಿಗೂ ಆಮಂತ್ರಿಸಿದರು. ಸರ್ ಜಮಶೇಟಜಿ ಜಿಜಿಭಾಯಿ, ಸರ್ ದಿನಶಾ ವಾಚ್ಛಾ ಮೊದಲಾದ ಸಾವುಕಾರರು ಎಸೋಸಿಯೇಟೆಡ್ ಚೇಂಬರ್‌ನ ಧೋರಣವು ತಮಗೆ ಮಾನ್ಯವಿಲ್ಲೆಂದು ಬರೆದು, ತಾವು ಈ ಪರಿಷತ್ತಿಗೆ ಹಾಜರಿರಲಾರೆವೆಂದು ತಿಳಿಸಿಬಿಟ್ಟರು. ಈ ಅನಪೇಕ್ಷಿತ ಧೈರ್ಯದ ಬಗ್ಗೆ ಅವರನ್ನು ಎಲ್ಲರೂ ಕೊಂಡಾಡುತ್ತಿರುವಷ್ಟರಲ್ಲಿ, ಡಿಸೆಂಬರ ತಾ. ೩ನೇಗೆ ಪರಿಷತ್ತಿನ ಉಚ್ಚಾಸನದ ಮೇಲೆ ಈ ನಿಷೇಧಕರ್ತರು ವಿರಾಜಮಾನರಾದರು. ಇವರಿಗೆ ಟಾಟಾಕರು ಸಮಜಾಯಿಷಿ ಕೊಟ್ಟರೆಂದು ಜಾಹೀರಾಗಿತ್ತು. ಏನು ಸಮಜಾಯಿಷಿ ಕೊಟ್ಟರು, ಎಂದು ತಿಳಿಯದಿದ್ದರೂ, ಉಕ್ಕಿನ ಉದ್ಯೋಗಕ್ಕೆ ಸಂರಕ್ಷಣ ಕೊಡಬಾರದೆಂಬ ಧೋರಣವು ಕಾಯಂ

(ಮುಂದೆ ೧೧ನೇ ಪಾನು ನೋಡಿರಿ.)

ಕಾನಡಾವೃತ್ತ.

ಆದ್ಯ ಮಿತಿ ಮಾರ್ಗಶೀರ್ಷ ಶುಕ್ಲ ೬ಷ್ಟಿ ಗುರುವಾರ

ಕಾಯಿ ಚೆಲ್ಲಿತು!

ಆಳರಸರ ಸಂಕಟಪುರಾಣ.

ವಿಖ್ಯಾತ ಲೊಯ್ಡ ಜೋರ್ಜರು ಉದ್ಗರಿಸಿದಂತೆ, ಉಕ್ಕಿನ ಚೌಕಟ್ಟನೋಪಾದಿಯಲ್ಲಿರುವ ಹಿಂದುಸ್ಥಾನದ ರಾಜ್ಯಭಾರವನ್ನು ನಡೆಸುವ ಪ್ರಚಂಡ ಸೇವಕರು ಮೋಂಟೆಗ್ಯೂ ಸ್ವರಾಜ್ಯದ ಉದಾರ ದಾನವಾದಂದಿನಿಂದ ತಮ್ಮ ಸಂಬಳವನ್ನು ಬಢತಿ ಮಾಡಿಕೊಂಡು ಹಿಂದುಸ್ಥಾನವನ್ನು ಸುಲಿದರು ಆದರೂ 'ಅಶಾಪದಂಕೆ ಗತಃ' ಎಂಬ ಉಕ್ತಿಯಂತೆ, ಇದರಿಂದ ಅವರಿಗೆ ತೃಪ್ತಿಯಾಗಲಿಲ್ಲ. ಪರಸ್ಪರ ಹಿಂದುಸ್ಥಾನವು ಖರ್ಚು ಕೊಡುತ್ತಿದ್ದರೆ, ದ್ರವ್ಯತೃಷ್ಣೆಯು ಹೇಗೆ ತೃಪ್ತಿಗೊಳ್ಳುವದು? "ದಿನಮಾನಗಳು ಬದಲಾಗಿವೆ, ಹೊಸದಾಗಿ ತಿದ್ದಿದ ಹಳೆ ಸಂಬಳ ಸಾಕಾಗದು, ನಮ್ಮ ಸ್ಥಿತಿಯನ್ನು ಮತ್ತೆ ಸುಧಾರಿಸಿರಿ: ಸಂಬಳದ ಮಾನವನ್ನು ಇನ್ನೂ ಏರಿಸಿರಿ; ಹಿಂದುಸ್ಥಾನದಲ್ಲಿ ಸಂಸಾರ ಕಳೆಯುವದು ಕಠಿಣವಾಗಿದೆ," ಎಂದು ಆಗಿಂದಾಗ, ಮೇಲಿಂದಮೇಲೆ ಅವರು ಕೋಲಾಹಲವನ್ನೆಬ್ಬಿಸಿ, ಬಾಡಕಹರಕಡೆಯಿಂದ ಚೌಕಶಿ ಕಮಿಶನನ್ನು ನೇಮಿಸಿಕೊಂಡರು. ಜವಾಬದಾರ ಸ್ವರಾಜ್ಯದ ಸಂಸ್ಥೆಯಾದ ವರಿಷ್ಠ ಕಾಯಿದೆ ಕೌನ್ಸಿಲವು ಈ ಬಗ್ಗೆ ತಗಲುವ ೩ ಲಕ್ಷ ರೂಪಾಯಿಗಳ ಖರ್ಚನ್ನು ನಾಮಂಜೂರು ಮಾಡಿದರೂ, ಸರ್ವಾಧಿಪತಿಗಳು ಬ್ರಿಟಿಶ ರಾಜ್ಯಾಡಳತೆಗೆ ಕಮಿಶನು ಅತ್ಯಾವಶ್ಯಕವೆಂದು ಕರಾ ಹೊಡೆದು, ಅವಶ್ಯಕಾಲಕ್ಕೆ ಉಪಯೋಗಿಸುವ ಅಧಿಕಾರದಿಂದ ಈ ಖರ್ಚನ್ನು ಮಂಜೂರು ಮಾಡಿದರು. ಈಗ ಈ ಕಮಿಶನು ಲೀ ದೊರೆಗಳ ಅಧಿಪತ್ಯದಲ್ಲಿ ಭರತಖಂಡದಲ್ಲೆಲ್ಲ ಚೌಕಶಿಗಾಗಿ ಅಡ್ಡಾಡುತ್ತಿದೆ. ನಾಮದಾರ ಭೂಪೇಂದ್ರನಾಥ ಬಸು, ಎನ್. ಎಮ್. ಸಮರ್ಥ, ಹಬೀಬುಲ್ಲಾ, ಹೀಗೆ ಹಿಂದೀಯರೂ ಈ ಕಮಿಶನಿನಲ್ಲಿ ಸೇರಿಕೊಂಡದ್ದನ್ನು ನೋಡಿ, ದೇಶಬಾಂಧವರಿಗೆ ವ್ಯಸನವಾಗದಿರದು. ಅದಿರಲಿ ಈ ಕಮಿಶನಿನ ಮುಂದೆ ಈ ವರೆಗೆ ಸಂಯುಕ್ತ ಪ್ರಾಂತ, ಮುಂಬಯಿ ಮೊದಲಾದವುಗಳಲ್ಲಿ ಉಕ್ಕಿನ ಚೌಕಟ್ಟಿನ ಪ್ರತಿನಿಧಿಗಳ 'ಸಾಕ್ಷಿ'ಗಳಾದವು. ಕಳೆದ ವಾರ ಮುಂಬಯಿಯ ಯುರೋಪಿಯನ್ ಸರಕಾರಿ ಸೇವಕರ ಸಂಘ, ಆಯ್. ಸಿ. ಎಸ್. ಸಂಘ, ಈ ಎರಡು ಸಂಸ್ಥೆಗಳ ಪ್ರತಿನಿಧಿಗಳ ಜಬಾನಿಗಳಾದವು. ಈ ಎರಡೂ ಸಂಘಗಳ ಅಂಬೋಣವು, ಸ್ಥೂಲ ಮಾನದಿಂದ ಒಂದೇ ಇದೆ. ಸಂಯುಕ್ತ ಪ್ರಾಂತದೊಳಗಿನ ಈ ಆಳುಗಳ ಹೇಳಿಕೆಗೂ ಸರಿಹೋಲುತ್ತದೆ. ಆದರಿಂದ ಮುಂಬಯಿಯಲ್ಲಿ ನಡೆದ ಈ ಎರಡೂ ಜಬಾನಿಗಳ ಸ್ಥೂಲಸ್ವರೂಪಗಳನ್ನಷ್ಟು ವಾಚಕರಿಗೆ ನಿವೇದಿಸಬೇಕಾಗಿದೆ.

ಯುರೋಪಿಯನ್ ಆಳುಗಳ ಸಂಬಳದ ಮಾನವನ್ನು ವಿಶೇಷವಾಗಿ ಸುಧಾರಿಸತಕ್ಕದ್ದು. ಪೆನಶನು, ಬಢತಿ, ಮೊದಲಾದವುಗಳ ಬಗ್ಗೆ ಶಕ್ಯ ಸವಲತ್ತುಗಳನ್ನು ಕೈಕೊಳ್ಳಬೇಕು; ಹಿಂದೀ ರಾಜಕಾರಣಿಗಳಿಂದ ಅವರನ್ನು ಸಂರಕ್ಷಿಸುವ ಉಪಾಯ ಯೋಜನೆಯಾಗಬೇಕು, ತಮ್ಮನ್ನು ನಿಯಂತ್ರಿಸಲು ಹಿಂದೀ ರಾಜಕಾರಣಿಗಳು ನಿರ್ಧರಿಸಿಟ್ಟವರೆಂಬ ಸಿದ್ಧಾಂತವನ್ನು ನಾಮದಾರ ಶಾಸ್ತ್ರಿ, ದಾಗು [illegible] ಗೌರ ಇವರ ಭಾಷಣಗಳನ್ನು ಉದಾಹರಿಸಿ ಪ್ರತಿನಿಧಿಗಳು ಸಿದ್ಧಪಡಿಸಿದರು. ಈಗಿನ ಭಾರತೀಯ [illegible] ಸೇವಕರನ್ನು ಹಿಂದುಸ್ಥಾನ ಸರಕಾರಕ್ಕೆ ಹಾಗು ಕಾಯಿದೆ ಕೌನ್ಸಿಲುಗಳಿಗೆ ಒಪ್ಪಿಸುವ ಅಧಿಕಾರವು ಭಾರತ ಮಂತ್ರಿಗಳಿಗೆ ಕೊಡಲ್ಪಟ್ಟಿದೆಯಂತೆ ತೋರುತ್ತದೆ. ಈ ಕಾಯಿದೆಯ ಮೂಲ ಉದ್ದೇಶವು ಪ್ರಾಂತಿಕ ಹಾಗು ಕೆಳ ತರಗತಿಯ ಸೇವಕರನ್ನು ಹಿಂದುಸ್ಥಾನ ಸರಕಾರಕ್ಕೆ ಒಪ್ಪಿಸುವದಿದ್ದದರಿಂದ, ತಮ್ಮನ್ನು ಹಿಂದುಸ್ಥಾನ ಸರಕಾರ ಹಾಗು ಕಾಯಿದೆ ಕೌನ್ಸಿಲುಗಳ ಅಂಕೆಗೆ ಒಳಪಡಿಸಬಾರದೆಂಬ ಕಾಯಿದೆಯ ದುರುಸ್ತಿಯನ್ನು ಪ್ರತಿನಿಧಿಗಳು ಸೂಚಿಸಿದರು. ಹಿಂದುಸ್ಥಾನ ಸರಕಾರವು ಕಾಯಿದೆ ಕೌನ್ಸಿಲುಗಳ ಮನಸ್ಪ್ರೀತಿಗಾಗಿ ಯತ್ನಿಸುತ್ತದೆಂತಲೂ, ತಮಗೆ ರಕ್ಷಣೆ ಮಾಡುವದಿಲ್ಲೆಂತಲೂ ಅವರು ದೂರಿದರು! ಹಿಂದೀ ವೃತ್ತಪತ್ರಕಾರರಂತು ಅವರಿಗೆ ಹೆದರಿಕೆ ಹಾಕಿ ಬಿಟ್ಟಿರುವರಂತೆ! ಅವರ ಧೋರಣದ ಮೇಲಿಂದ, ಬರೆಯುವ ಲೇಖಗಳ ಮೇಲಿಂದ, ತಮ್ಮನ್ನು ಹಿಂದೀ ರಾಜಕಾರಣಿಗಳಿಗೆ ಒಪ್ಪಿಸಿದರೆ, ತಮ್ಮ ದುರ್ದಶೆಯಾಗುವದೆಂದು ಪ್ರತಿನಿಧಿಗಳು ಕಮಿಶನಿನಗೂಡ ಹೇಳಿಕೊಂಡರು. ನೇಮುಸ್ತರ ಪರಿಷತ್ತಿನಲ್ಲಿ ತಮ್ಮ ಮೇಲೆ ಅನುಚಿತ ಹಲ್ಲೆಯಾಯಿತೆಂತಲೂ ಮುಂಬಯಿ ಸರಕಾರದ ದಿವಾಣರಿವರು ಅಲ್ಲಿ ಹಾಜರಿದ್ದರೂ ಈ ಬಗ್ಗೆ ನಿಷೇಧಪ್ರದರ್ಶನ ಮಾಡಲಿಲ್ಲೆಂತಲೂ ಅವರ ನೇಮುಸ್ತರ ಮೇಲಿನ ಗುತ್ತೊಂದು ದೂರು! ಹಿಂದುಸ್ಥಾನ ಸರಕಾರವು ಸಹ ಅವರನ್ನು ಸಹಾನುಭೂತಿಯಿಂದ ನಡಿಸಿಕೊಳ್ಳುವದಿಲ್ಲವಂತೆ! ತಮ್ಮ ಬಗ್ಗೆ ಅವರು ನಡಿಸಿದ ವಕೀಲಿಯು ಸಹ ತೋರಿಕೆಯದ್ದಾಗಿ ನಡಿಸಲ್ಪಟ್ಟಿತ್ತೆಂತಲೂ ಅವರು ಗುಣುಗುಟ್ಟುತ್ತಾರೆ! ಸಂಸಾರದ ಖರ್ಚು ಇಮ್ಮಡಿಯಾಗಿರುವಾಗ ಸಂಬಳವು ಮಾತ್ರ ಶೇಕಡಾ ೧೩ ರಷ್ಟು ಏರಿರುವದೆಂತಲೂ ಅವರ ಹೇಳಿಕೆ.

ಇನ್ನು ಈ ದುಃಖನಿವಾರಣೆಯ ಉಪಾಯಗಳನ್ನು ಪ್ರತಿನಿಧಿಗಳು ಸೂಚಿಸಿದರು. ೧೬ ವರ್ಷಗಳ ವರೆಗೆ ಆಯ್. ಸಿ. ಎಸ್. ನೌಕರರಿಗೆ ರೂಪಾಯಿ ೧೨೦೦ ರಂತೆ ಈಗಿನ ಮಾನದಿಂದ ಸಂಬಳ ದೊರಕುತ್ತದೆ. ಈ ಸಂಬಳವನ್ನು ೮ ವರ್ಷಗಳ ವರೆಗೆ ಕೊಟ್ಟು, ಬಳಿಕ, ಅವರನ್ನು ವರಿಷ್ಠ ವರ್ಗದಲ್ಲಿ ಸೇರಿಸಿ, ೨೫ನೇ ವರ್ಷಕ್ಕೆ ತಿಂಗಳಿಗೆ ೩೦೦೦ ರೂಪಾಯಿ ದೊರಕುವಷ್ಟು ವ್ಯವಸ್ಥೆಯಾಗಬೇಕು. ಕಮಿಶನರರು [illegible]ಳಿಗೆ ರೂ. ೩೫೦೦ ರಿಂದ ೪೦೦೦ ರೂಪಾಯಿಗಳ ವರೆಗೆ ಸಂಬಳ ಪಡೆಯತಕ್ಕದ್ದು. ಈ ಯೋಜನೆಯಿಂದ ವರ್ಷಕ್ಕೆ ಬರೇ ೫೦ ಲಕ್ಷ ರೂಪಾಯಿಗಳು ಹೆಚ್ಚು ತಗಲುವವು. ಮುಂಬಯಿ ಮೊದಲಾದ ಪಟ್ಟಣಗಳಲ್ಲಿ ವಾಸಿಸುವ ಅಧಿಕಾರಿಗಳಿಗೆ ಹೆಚ್ಚು ಖರ್ಚು ತಗಲುವದರಿಂದ, ಆ ಬಗ್ಗೆ ಅವರಿಗೆ ಜಾದಾ ಭತ್ತೆಯನ್ನು ಕೊಡಬೇಕು. ಜಿಲ್ಹೆಯಲ್ಲಿ ಕೆಲಸ ನಡಿಸುವ ಅಧಿಕಾರಿಗಳಿಗಾಗಿ ಯುರೋಪದಲ್ಲಿ ಕಲಿತ ಆಯ್. ಎಮ್. ಎಸ್. ಎಂಬ ವೈದ್ಯಶಾಸ್ತ್ರಜ್ಞರನ್ನಿಡಬೇಕು. ಇವರು ಯುರೋಪಿಯನ್ ಆಳುಗಳ ಕುಟುಂಬಗಳಿಗುಚಿತವಾಗಿ ಚಿಕಿತ್ಸೆ ನಡಿಸಬೇಕು. ಆ ಬಗ್ಗೆ ಈ ವೈದ್ಯರಾಜರಿಗೆ ಜಾದಾ ಭತ್ತೆಯನ್ನು ಸರಕಾರಿ ಕೋಶದಿಂದ ತೆರಬೇಕು. ಭತ್ತೆಗಳನ್ನು ಈಗ ಕಾಯಿದೆ ಕೌನ್ಸಿಲುಗಳ ಮಂಜೂರಿಯ ಬಗ್ಗೆ ಇಡುವ ಪ್ರಘಾತವನ್ನು ನಿಲ್ಲಿಸಬೇಕು. ಭತ್ತೆಯ ಮಾನವನ್ನೂ ಹೆಚ್ಚಿಸತಕ್ಕದ್ದು. ಆದರೆ, ಇವೆಲ್ಲ ಬೇಡಿಕೆಗಳು ಪರದೂವಥಿಯವಲ್ಲ; ಹಿಂದುಸ್ಥಾನ ಸರಕಾರದ ಕೋಶವು ವಿಶೇಷ ಊರ್ಜಿತಾವಸ್ಥೆಯಲ್ಲಿಲ್ಲವೆಂದು ಪ್ರತಿನಿಧಿಗಳಿಗೆ ಅರಿವಿದೆ. ಆ ಬಗ್ಗೆ ಅವಶ್ಯವಿರುವ ಸಂಕಷ್ಟಗಳನ್ನು ಸಹಿಸಲು ಸಹ ಅವರು ತತ್ಪರರಿರುವರು. ಅದರಿಂದ ತೀರ ಕಡಿಮೆಯೆಂದು ಈ ಸೂಚನೆಗಳು ಮಾಡಲ್ಪಟ್ಟವೆ. ಕಷ್ಟಗಳೂ ತೀರ ತೀವ್ರವಾಗಿರುವದರಿಂದ, ಕಮಿಶನಿನ ನಿರ್ಣಯದ ಮೇಲೆ ಹಾದಿ ಕಾಯುಹೇಳದೆ, ಕೂಡಲೆ ಸುಧಾರಣೆ ಮಾಡಬೇಕೆಂದು ಪ್ರತಿನಿಧಿಗಳು ನುಡಿದರು. ಉತ್ತಮ ಪ್ರತಿಯ (first class) ಆಡಳತೆಯು ಬೇಕಾದರೆ, ಉತ್ತಮ ಪ್ರತಿಯ ಸೇವಕರು ಬೇಕಾದರೆ, ಉತ್ತಮ ಪ್ರತಿಯ ವ್ಯವಸ್ಥೆಯಿರಬೇಕು; ಅಂದರೆ ಮಾತ್ರ, ಎಲ್ಲ ವ್ಯವಸ್ಥೆಯು ಉತ್ತಮ ಪ್ರತಿಯದಾಗುವದು. ಇವೆಲ್ಲ ವ್ಯವಹಾರಜ್ಞರು ಅರಿತಿರುವರೆಂದು "ಅಂಗಡಿಕಾರರ ದೇಶದಿಂದ" ಆಮದಾದ ವ್ಯವಹಾರಪಟು ಪ್ರತಿನಿಧಿಗಳು ನುಡಿದರು.

ಕೆಳನೌಕರರು ಪಡಿದು, ದುಡಿದು, ಬರೇ ಹೊಟ್ಟೆಗೆ ಸಾಲುವಷ್ಟು ಸಂಬಳ ಸಹ ದೊರಕುವದಿಲ್ಲೆಂದು ಹೊಯ್ಯಿಕೊಳ್ಳುತ್ತಾರೆ; ಪ್ರಚಂಡ ಸಂಬಳ ತಿನ್ನುವ ಆಳುಗಳೂ ಸಂಬಳ ಪೂರೈಸುವದಿಲ್ಲೆಂದೂ ಅಳುತ್ತಾರೆ. ಹಿಂದುಸ್ಥಾನದಲ್ಲಿ ಬೇಕಾದ ಹಾಗೆ ಕೈ ಬೀಸಲು ಇವರಿಗೆ ಬೇಕು. ಆದರೆ, ಕಾಯಿದೆ ಕೌನ್ಸಿಲುಗಳ ಅಂಕೆಯು ಮಾತ್ರ ಇವರಿಗೆ ಬೇಡ. ಹಿಂದುಸ್ಥಾನ ಸರಕಾರದಲ್ಲಿ ಇವರ ಪ್ರಾಬಲ್ಯವಿದ್ದರೂ, ಹಿಂದುಸ್ಥಾನ ಸರಕಾರವು, ಪ್ರಾಂತಿಕ ಸರಕಾರಗಳು ಹಗಲಿರುಳು ಈ ಆಳುಗಳ ಸೇವೆಯಲ್ಲಿಯೇ ನಿಮಗ್ನರಾಗಿದ್ದರೂ, ಗಾಣಿಗ-ದಂಪತಿಗಳ ಕಲಹದಂತೆ, ಹಿಂದುಸ್ಥಾನ ಸರಕಾರವು ನಮ್ಮನ್ನು ರಕ್ಷಿಸುವದಿಲ್ಲೆಂದು ಧೂರ್ತ ಕೋಲಾಹಲವನ್ನೆಬ್ಬಿಸಿ, ತಮ್ಮ ಅಂಕೆಯನ್ನೆಲ್ಲ ಆರೇಳು ಸಾವಿರ ಮೈಲು ದೂರವಿರುವ ಪ್ರದೇಶದೊಳಗಿನ ತಮ್ಮವರಲ್ಲಿಯೇ ಇಡಬೇಕೆಂದು ಇವರು ಹಾತೊರೆಯುತ್ತಿರುವರು. ಸಂಬಳವು ಪೂರೈಸುವದಿಲ್ಲವಾದರೆ, ಹಿಂದೀ ರಾಜಕಾರಣಿಗಳು ದುಷ್ಟರಿದ್ದರೆ, ಪತ್ರಕಾರರ ಕಠಿಣ ಟೀಕೆಯನ್ನು ಸಹಿಸಲಾಗದಿದ್ದರೆ, ಈ ಮಂದಿಗಳಿಗೆ ಹಿಂದೀ ಪ್ರಜೆಗಳ ಅಧಿಪತ್ಯದಲ್ಲಿ, ಅಂಕೆಯಲ್ಲಿ ಆಡಳಿತ ನಡಿಸುವದು ಇಷ್ಟವಿಲ್ಲದಿದ್ದರೆ, ಈ ಉತ್ತಮ ಪ್ರತಿಯ ಚಿನ್ನದ ಚಾಕರಿಗಳು ನಮಗೇನು ಬೇಡ. ಇವರು ಬೇಕಾದರೆ ಸ್ವದೇಶಕ್ಕೆ ಹೋಗಿ, ಬೇಕುಬೇಕಾದಷ್ಟು ಸಂಬಳ ಪಡೆದು, ಉತ್ತಮ ಪ್ರತಿಯ ವ್ಯವಸ್ಥೆ ಮಾಡಿಕೊಂಡು, ದೇಶಬಾಂಧವರನ್ನುದ್ಧರಿಸಲಿ. ಇವರ ಸೇವೆಯ ಉಪಕಾರದ ಹೊರೆಯನ್ನು ಬಡಬಿದ್ದ ಹಿಂದೀ ಪ್ರಜೆಗಳು ಹೊರಲಾರರು. ಕೊಟ್ಟ ಸಂಬಳವನ್ನು ತಗ್ಗಿಸುವ ಯೋಜನೆಯಲ್ಲಿ ಹಿಂದೀ ಪ್ರಜೆಗಳಿರುವಾಗ, 'ತಮ್ಮ ಈಗಿನ ಸಂಬಳವು ಕಡಿಮೆ; ಕಷ್ಟಗಳು ಮಿಗಿಲು; ಸಂಸಾರ ಕಳೆಯುವದು ಕಠಿಣವು;' ಮೊದಲಾದ ನೆವ ಮಾಡಿಕೊಂಡು ಅಳುವದನ್ನು ನೋಡಿ, 'ಎಣ್ಣೆ ಚೆಲ್ಲಿಹೋಯಿತೆಂದು ಅಳುವ ಕೆಳನೌಕರರಗೂಡ, ತಾಯಿ ಚೆಲ್ಲಿತೆಂದು ಅಳುವ ದುರಾತ್ಮನ ನೆನವರಿಕೆಯಾಗುವದು ಸಹಜವಲ್ಲವೇ!

ಸ್ಫುಟ ಸೂಚನೆಗಳು.

೧. ಸಂಬಳ ಪೂರೈಸದ-ದೊಡ್ಡ ಸಂಬಳ ತಿನ್ನುವ ಆಳುಗಳ ಖರ್ಚನ್ನು ಸ್ವಲ್ಪ ಸೂಕ್ಷ್ಮ ದೃಷ್ಟಿಯಿಂದ ಸಮಾಲೋಚಿಸುವಾ. ಯಾಕಂದರೆ, ಸಂಬಳವು ಹೆಚ್ಚಿದ್ದು ಖರ್ಚ ಅವರಿಗೆ ಅಳತೆಗೆಟ್ಟು ತಗಲಿದರೆ, ಅವರಾದರೂ ನಮ್ಮಲ್ಲಿ ಹೇಗೆ ಕಾಲ ಕಳೆಯಬೇಕು? ಸಂಯುಕ್ತ ಪ್ರಾಂತದ ಯುರೋಪಿಯನ್ ಆಳುಗಳ ಸಂಘವು ತನ್ನ ಸಭಾಸದರ ಒಂದು ಆಯ-ವ್ಯಯ ಪತ್ರಿಕೆಯನ್ನು ಲೀ ಕಮಿಶನಿಗೆ ಸಾದರಪಡಿಸಿದೆ. ಈ ಪತ್ರಿಕೆಯಲ್ಲಿ ೪೮ ವರ್ಷ ಪ್ರಾಯದ ಗೌರಕಾಯದ ಆಳಿನ ೧ ತಿಂಗಳ ಖರ್ಚ ನಮೂದಿಸಲ್ಪಟ್ಟಿದೆ:-- ಪ್ರೊವಿಡೆಂಟ ಫಂಡು ರೂ. ೧೪೨; ವಿಮೆ ರೂ. ೧೦೮; ಇನ್‌ಕಮಟೇಕ್ಸ ರೂ. ೧೩೩; ಬಂಗಲೆ ಬಾಡಿಗೆ ರೂ. ೧೪೨; ಸೇದೆಗಳ ಸಂಬಳ ರೂ. ೨೦೮, ಅರಿವೆ-ಅಂಚಡಿ ೧೭೧; ಮನೆಖರ್ಚ ರೂ. ೨೫೦; ವಿಲಾಸ ಮಂದಿರಕ್ಕೆ (ಕ್ಲಬ್ಬಿಗೆ) ವರ್ಗಣಿ ರೂ. ೫೦; ಶೀತ ಹವೆಗಾಗಿ ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುವ ಖರ್ಚ ರೂ. ೨೫೮; ಇಬ್ಬ ಹುಡುಗರಿಗೆ ಶಿಕ್ಷಣಕ್ಕಾಗಿ ವಿಲಾಯತಿಗೆ ಕಳಿಸಬೇಕಾದ ಖರ್ಚ ರೂ. ೫೦೦; ಕುದುರೆ ವಾಹನ ರೂ. ೫೦; ಚಿಕಿತ್ಸೆ ರೂ ೫೦; ಇತರ ರೂ. ೧೫೮; ಹೀಗೆ ರೂ. ೨೧೫೯ ಖರ್ಚ; ಪ್ರತಿ ತಿಂಗಳಿಗೆ ಈಗ ಸಿಗುವ ಪಗಾರ ರೂ. ೧೭೨೫. ವ್ಯಯದಲ್ಲಿ ಆಯವನ್ನು ವಜಾ ಕಳೆದರೆ, ೪೩೪ ರೂಪಾಯಿಗಳು ಕೊರತೆಯೆಂದು ಸ್ಪಷ್ಟವಿದೆ. ಹಿಂದೀಯರ ಸೇವೆ ಮಾಡಿ, ನಮ್ಮ ಆಳುಗಳು ಇಷ್ಟು ಖರ್ಚನ್ನು ಸಹಿಸುತ್ತಾರೆ. ಒದಗುವ ಖರ್ಚನ್ನು ಅವರು ಬೇಡಿದರೆ, ನಾವು ಅಲ್ಲಗಳೆಯುವದು ಹೇಗೆ? ಖರ್ಚ ಕೊಡದಿದ್ದರೆ, ಸೇವೆ ಮಾತ್ರ ಬೇಕೆನ್ನುವ ಯಜಮಾನನು ಕೃತಘ್ನನಲ್ಲವೇ? ಎಂಬುದೇ ಅವರ ಪ್ರಶ್ನೆ.

೨. ಖರ್ಚ ಕೊಡಬೇಕೆಂದು ಅವರು ಬೇಡುವದು ಸಹಜವು; ಯೋಗ್ಯ ಖರ್ಚ ತೆರಬೇಕೆಂಬ ಮಾತೂ ಉಚಿತವೇ. ಖರ್ಚಿನ ವಿವರವನ್ನು ಸ್ವಲ್ಪ ಸೂಕ್ಷ್ಮ ರೀತಿಯಿಂದ ವಿಚಾರಿಸುವ. ಪ್ರೊವಿಡೆಂಟ ಫಂಡ ತುಂಬಿದ ಬಗ್ಗೆ ಆಳುಗಳಿಗೆ ಸ್ವದೇಶಕ್ಕೆ ಹೋಗುವಾಗ, ಬಡ್ಡಿ, ಸರಕಾರಿ ವರ್ಗಣಿ ಕೂಡಿ, ಒಂದಕ್ಕೆ ಇಮ್ಮಡಿ ಗ್ರಂಟು ಕೈಸೇರುತ್ತದೆ. ವಿಮೆಯ ಬಗ್ಗೆ ತುಂಬುವ ೧೦೮ ರೂಪಾಯಿಗಳಿಗೆ ಪ್ರತಿಫಲವಾಗಿ ಕಂಪನಿಯ ನಿಯಮದಂತೆ, ರಕಮು ದೊರಕುತ್ತದೆ. ವಿಲಾಸ ಮಂದಿರ ಹಾಗು ಶೀತಲಪ್ರದೇಶಗಮನ ಖರ್ಚ, ಆಳುಗಳಿಗೆ, ವಿಶೇಷವಾಗಿ ಹಿಂದುಸ್ಥಾನದ ಸರಕಾರಿ ಕೋಶದ ಆರ್ಥಿಕ ಅವನತಿಯನ್ನು ಮನಗಂಡ ಆಳುಗಳಿಗೆ, ಈ ಖರ್ಚ ಅವಶ್ಯವಲ್ಲೆಂದೂ, ಇವನ್ನು ಒಮ್ಮೆಲೇ ಕಿತ್ತೊಗೆಯಬೇಕೆಂದೂ ಯಾರೂ ಹೇಳುವರು. ಹುಡುಗರಿಗೆ ವಿಲಾಯತಿಯಲ್ಲಿ ಶಿಕ್ಷಣ ಕೊಡುವ ಬದಲು ಹಿಂದೀ ಪ್ರಜೆಗಳನ್ನು ಸುಸಂಸ್ಕೃತ ಮಾಡಲು ಅವರೇ ಪ್ರವರ್ತಿಸಿದ, ಪ್ರತ್ಯಕ್ಷ ಅವರ ಚಾಲಕತ್ವದಲ್ಲಿ ನಡೆಯುವ ಶಿಕ್ಷಣ ಸಂಸ್ಥೆಗಳಲ್ಲಿಟ್ಟರೆ, ವಿಲಾಯತಿಗೆ ಕಳಿಸಲ್ಪಡುವ ೫೦೦ ರೂಪಾಯಿಗಳು ಉಳಿತಾಯವಾಗುವವು. ಎಲ್ಲ ಖರ್ಚಿನ ಸದರುಗಳನ್ನು ಕೊಟ್ಟಿರುವಾಗ, ಪುನಃ 'ಇತರ' ಬಾಕಿಯಲ್ಲಿ ೧೫೦ ರೂಪಾಯಿಗಳಷ್ಟು ಖರ್ಚ ತೋರಿಸುವ ಅವಶ್ಯಕತೆಯೇನಿದೆಂದು ನಾವರಿಯೆವು. ಹೀಗೆ ತೋರಿಕೆಯ ಖರ್ಚಿನ ಬಾಬುಗಳನ್ನು ಕಡಿಮೆ ಮಾಡಿದರೆ, ೯೬೨ ರೂಪಾಯಿಗಳು ಸಾಧಾರಣ ಖರ್ಚೆಂದು ಹೇಳಬಹುದು. ಈ ಖರ್ಚಿನಲ್ಲಿ ಸೇದೆಗಳ ಸಂಬಳ, ವಾಹನ, ಬಂಗಲೆ, ಅರಿವೆ, ಚಿಕಿತ್ಸೆ ಇಷ್ಟು ಒಳಗೊಂಡಿವೆ. ಇವುಗಳಲ್ಲಿ ಸಹ ಮಿತವ್ಯಯ ಮಾಡಬಹುದು. ಆದರೂ, ಅವನ್ನು ಸಂಘವು ನಮೂದಿಸಿದಷ್ಟೇ ಇಟ್ಟರೂ, ತಿಂಗಳಿಗೆ ೧೦೦೦ ರೂಪಾಯಿಗಳಿಂದಲೆ, ಮಿತಿಮೀರಿ ಹೋಯಿತು. ಅಧಿಕಾರಿ ಜಾತಿಯೆಂದ, ಗೌರಕಾಯದವರೆಂಬ ಭಾವನೆಯಿಂದ, ಅವರಿಗೆ ಪ್ರಾಪ್ತವಾಗುವ ಇತರ ಸವಲತ್ತುಗಳನ್ನು ನಾವು ಇಲ್ಲಿ ಎಣಿಸಲಿಲ್ಲ. ಆದರೂ, ಅವರ ಖರ್ಚ ಎಂದೂ ೧೦೦೦ ರೂಪಾಯಿಗಳಿಗೆ ಮಿಕ್ಕಲಾರದು; ಇದು ಅವರ ಪತ್ರಿಕೆಯ ಮೇಲಿಂದಲೇ ಹೊರಡುವ ಸಿದ್ಧಾಂತವು. ಸಾಮಂತು ರೂ. ೧೭೨೫ ಗಳನ್ನು ತೆರುತ್ತೇವೆ. ಅಂದ ಬಳಿಕ, ೭೨೫ ರೂಪಾಯಿಗಳು ಹೆಚ್ಚು ಸಂದಾಯವಾಗುತ್ತಿರುವಾಗ, ಪುನಃ ಸಂಬಳ ಪೂರೈಸದು; ಖರ್ಚ ಮಿಗಿಲಾಗಿದೆ; ಎಂದು ಹೇಳುವದು ದುರಾತ್ಮರ ಲಕ್ಷಣವಲ್ಲವೇ?

೩. ಸಂಯುಕ್ತ ಪ್ರಾಂತದಲ್ಲಿ ಮತ್ತೊಂದು ವಿಕ್ಷಿಪ್ತ ಸಂಬಳದ ಪ್ರಮಾಣವು ಸೂಚಿಸಲ್ಪಟ್ಟಿತು. ಈ ಸೂಚನೆಯು ಅಲ್ಲಿಯ ಯುರೋಪಿಯನ್ ವೈದ್ಯ ಖಾತೆಯಿಂದ ಬಂದಿದೆ. ಕರ್ನಲ್ ಡನ್ ಎಂಬುವರು ಅಲ್ಲಿಯ ವೈದ್ಯ ಖಾತೆಯ ಪ್ರತಿನಿಧಿಗಳು. ಗೌರಕಾಯದ ಆಳುಗಳ ಸಂಕಟಪರಿಹಾರಕ್ಕಾಗಿ ಅವರು ಮದುವೆ ಭತ್ತೆಯ ಪ್ರಮಾಣವೊಂದನ್ನು ಏರ್ಪಡಿಸಬೇಕೆಂದು ಸೂಚಿಸಿರುವರು. ಮದುವೆಯಾದ ಕೂಡಲೆ, ಮದುವೆಯ ಭತ್ತೆಯು ಅಮಲಿನಲ್ಲಿ ಬರಬೇಕು. ಪ್ರಥಮ ಶಿಶುವಿನ ದರ್ಶನವಾದ ಕೂಡಲೆ, ಮದುವೆಯ ಭತ್ತೆಯನ್ನು ರೂ. ೧೫೦ ರಿಂದ ಏರಿಸಬೇಕು; ೨ ನೇ ಶಿಶುವು ಹುಟ್ಟಿದ ಕೂಡಲೆ, ಇನ್ನು ೧೦೦ ರೂಪಾಯಿ; ೩ ನೇ ಶಿಶುವು ಕರ್ಮಭೂಮಿಯಲ್ಲಿ ಅವತರಿಸಿದ ಕೂಡಲೇ, ಮತ್ತು ೧೦೦ ರೂಪಾಯಿ; ಹೀಗೆ ೩ ಶಿಶುಗಳ ಬಗ್ಗೆ ತಿಂಗಳಿಗೆ ೩೫೦ ರೂಪಾಯಿಗಳು ವಿಶೇಷ ದೊರಕಬೇಕು. ಶಿಶುವು ಬೆಳೆದ ಹಾಗೆ ಭತ್ತೆಯೂ ಬೆಳೆಯಬೇಕೆಂದು ಅವರ ಬೇಡಿಕೆಯಿಲ್ಲ; ಮತ್ತು ಶಿಶುಗಳು ಹುಟ್ಟಿದರೆ, ಭತ್ತೆಯು ಏರಿಸಲ್ಪಡಬೇಕೆಂದೂ ಅವರ ಹೇಳಿಕೆಯಿಲ್ಲ. ಇದೆಲ್ಲ ಸ್ವಾರ್ಥತ್ಯಾಗವನ್ನು ಹಿಂದುಸ್ಥಾನದ ಆರ್ಥಿಕ ಅವನತಿಯನ್ನು ನೆನಿಸಿ, ಕರ್ನಲ್ ಡನ್‌ರವರು ಮಾಡಲೊಪ್ಪಿರುವರೋ? ಅಥವಾ ಯುರೋಪಿಯನ್ ಆಳುಗಳ ಆತಳತೆಯ ಕರ್ಮಶಾಸ್ತ್ರದಲ್ಲಿ ತ್ರಿಮೂರ್ತಿಗಳನ್ನು ಕರ್ಮಭೂಮಿಯಲ್ಲಿ ಅವತರಿಸಲೇಬೇಕೆಂದು ನಿರ್ಬಂಧವಿದೆಯೋ? ಕರ್ನಲ್ ಡನ್‌ರವರೇ ಸ್ಪಷ್ಟೀಕರಿಸಿದ್ದರೆ, ಉಪಕಾರವಾಗುತ್ತಿತ್ತು. ಕಮಿಶನಿನ ಅಧ್ಯಕ್ಷರಾದ ಲೀ ದೊರೆಗಳಿಗೆ ಸಹ ಮದುವೆಯಾದ ಬ್ರಹ್ಮಚಾರಿಗಳ ಸಂಕಟ ನಿವಾರಣೆಗಾಗಿ ಏನಾದರೂ ವ್ಯವಸ್ಥೆ ಮಾಡಬೇಕೆಂದು ತೋರಿತಂತೆ! ಮದುವೆಯೇ ಸಂಕಟಕ್ಕೆ ಕಾರಣವಿದ್ದರೆ, ಈ ಬ್ರಹ್ಮಚಾರಿಗಳಿಗೆ ಅದರಿಂದ ದೂರವಿರಲು ಬೋಧಿಸಿದರೆ, ಅಥವಾ ವಿಧಿಸಿದರೆ, ಮತ್ತೂ ಒಳಿತು. ಭತ್ತೆ ಕೊಟ್ಟರೂ, ಮಾನವ ಧರ್ಮದ ಸಂಸಾರದ ಕಾಯಿಕ-ಮಾನಸಿಕ ಉಪದ್ರವಗಳನ್ನು ಅವರೇ ಸಹಿಸಬೇಕಲ್ಲವೇ? ಈ ಕಷ್ಟಗಳನ್ನು ಎಷ್ಟು ಭತ್ತೆ ಕೊಟ್ಟರೂ ಪರಿಹರಿಸಲಿಕ್ಕಾಗದು. ಅದಿರಲಿ. ಈ ಯೋಜನೆಯಲ್ಲಿ ಹೆಂಡತಿಯು ಮೃತಪಟ್ಟರೆ, ಹುಡುಗರು ನಿಧನಹೊಂದಿದರೆ, ಭತ್ತೆಯನ್ನು ಕಡಿಮೆ ಮಾಡಬೇಕೋ, ಹೇಗೆ, ಎಂಬ ನಿರ್ದೇಶವಿಲ್ಲ. ಭಾರ್ಯಾ-ಶಿಶುವಿರಹದಿಂದ ಬಳಲುವ ಆಳುಗಳಿಗೆ ಧನಶೋಕದ ಉರುಳು ಹತ್ತಬಾರದೆಂದು ಕರ್ನಲ್ ಡನ್‌ರವರು ಭತ್ತೆ ಕಡಿಮೆಮಾಡಹೇಳುವ ಕಲಮನ್ನು ಸೂಚಿಸಲಿಲ್ಲವೇನು? ಇಷ್ಟು ದಿವಸ ಸಂಬಳ ಬಡತಿಗೆ, ಕಾರ್ಯಕ್ಷಮತೆ, ಹುಟ್ಟಿದಿನಗಳು, ಹೀಗೆ ನೆವಗಳಿದ್ದವು. ಈಗ ಕರ್ನಲ್ ಡನ್‌ರವರು ಶಿಶುಸಂಗೋಪನದ, ಸುವಾಸಿನಿಯ ಸುಖದ ಕಾರಣಗಳನ್ನು ಮುಂದೊಡ್ಡಿ, ಬಡತಿ ಮಾಡಿಕೊಳ್ಳಲಿಚ್ಛಿಸುತ್ತಿರುವರು. ಇದನ್ನೋದಿ, ಇವರಿಗೆ ನಾಚಿಕೆಯಿಲ್ಲೇನು? ಎಂದು ಯಾರಾದರೂ ಉದ್ಗರಿಸಿದರೆ, ಸೋಜಿಗವೇನು?

೪. ಭಾರತ ಮಂತ್ರಿಗಳು ೧೯೧೯ನೇ ಇಸವಿಯ ಡಿಸೆಂಬರ ತಿಂಗಳಿನಲ್ಲಿ ಮಾಡಿದ ಹುಕುಮಿನನ್ವಯ ಮುಂಬಯಿ, ಪುಣೆ, ಕರಾಚಿ, ಸಾಲಿಸಿಟ್ ಈ ಪಟ್ಟಣಗಳಲ್ಲಿ ನೇಮಕಹೊಂದಿದ ಅಧಿಕಾರಿಗಳಿಗೆ ಲುಕ್ಸಾನುಭರಪಾಯಿ ಭತ್ತೆ ಕೊಡಬೇಕೆಂದು ಮುಂಬಯಿ ಸರಕಾರವು ನಿರ್ಣಯಿಸಿದೆಂದು ಮುಂಬಯಿಯ 'ಡ್ಯಾರೆಕ್ಟರ ಅಫ್ ಇನ್ಫೊರ್ಮೇಶನ್'ರವರು ತಾರೀಖು ೭—೧೨—೩೩ನೇಗೆ ಪ್ರಕಟಣೆ ತೆಗೆದು ತಿಳಿಸುತ್ತಾರೆ. ಪಟ್ಟಣಗಳೊಳಗಿನ ಸಂಸಾರದ ಖರ್ಚು ಮಿಗಿಲಾಗಿರುವದರಿಂದ, ಅಧಿಕಾರಿಗಳಿಗೊದಗುವ ಲುಕ್ಸಾನು ಭರಪಾಯಿಗಾಗಿ ಈ ಹಂಗಾಮಿ ಯೋಜನೆಯು ಕೈಕೊಳ್ಳಲಾಗಿದೆ ಈ ಯೋಜನೆಯಿಂದ ಅಲ್ಲಿಯ ಕಾರಕೂನರಿಗಾಗಲಿ, ಪೇದೆಗಳಿಗಾಗಲಿ ಭತ್ತೆ ಸಿಗಲಾರದು. ಅಧಿಕಾರಸ್ಥರಿಗೆ ಮಾತ್ರ, ಇದರಿಂದ ಫಾಯಿದೆಯಾಗುವದು ೩೫೦ ರೂಪಾಯಿಗಳವರೆಗೆ ಸಂಬಳ ದೊರಕುವವರಿಗೆ ಶೇಕಡಾ ೪೦ ರಂತೆ ಜಾದಾ ಭತ್ತೆ ದೊರಕುವದು, ರೂ ೧೫೦೦ ಹಾಗು ಅದಕ್ಕೆ ಮಿಕ್ಕಿ ಸಂಬಳ ತಿನ್ನುವವರಿಗೆ ರೂಪಾಯಿ ೨೫೦ ಭತ್ತೆ ಸಿಗುವಂತೆ ಈ ಯೋಜನೆಯಿದೆ. ಈ ಪ್ರಮಾಣವು ಮುಂಬಾಪುರಿ ಹಾಗು ದಕ್ಷಿಣ ಸಾಲಿಸಿಟ್‌ದೊಳಗಿನ ಅಧಿಕಾರಸ್ಥರಿಗೆ ಲಾಗು ಅದೆ. ಕರಾಚಿ, ಪುಣೆ, ಉತ್ತರ ಸಾಲಿಸಿಟ್, ಈ ಪಟ್ಟಣಗಳೊಳಗಿನ ೩೫೦ ರೂಪಾಯಿಗಳಿಗೆ ಮಿಕ್ಕದ ಸಂಬಳ ತಿನ್ನುವ ಅಧಿಕಾರಸ್ಥರಿಗೆ ಶೇಕಡಾ ೩೦ ರಂತೆ, ರೂ ೧೫೦೦ ಹಾಗು ಅದಕ್ಕೂ ಮಿಕ್ಕಿ ಸಂಬಳ ಸಿಗುವವರಿಗೆ ರೂ. ೨೦೦ ದೊರಕುವವು ಹೀಗ ಈ ಯೋಜನೆಯ ಸ್ಥೂಲ ಸ್ವರೂಪವಿದೆಂದು ಮುಂಬಯಿಯ 'ಡ್ಯಾರೆಕ್ಟರ ಅಫ್ ಇನ್ಫೊರ್ಮೇಶನ್' ರವರು ತಿಳಿಸಿರುವರು ತಿಂಗಳಿಗೆ ೧೦-೨೦ ರೂಪಾಯಿ ಸಂಬಳ ಪಡೆಯುವ ಬಡ ಪ್ರಾಥಮಿಕ ಶಿಕ್ಷಕರಿಗ ಸಂಬಳ ಏರಿಸಲು ಮುಂಬಯಿ ಸರಕಾರಕ್ಕೆ ಹಣದ ಅಡಚಣೆ. ದೊಡ್ಡ ದೊಡ್ಡ ಅಧಿಕಾರಸ್ಥರಿಗೆ 'ಶಹರು ಭತ್ತೆ'' ಏರ್ಪಡಿಸಲು ಬೇಕಾದಷ್ಟು ಹಣ ಅದರೂ, ನಮಗೆ ಸಂಬಳವು ಪೂರೈಸುವದಿಲ್ಲೆಂದು ಪ್ರಚಂಡ ಸಂಬಳ ಎಳೆಯುವ ಅಳುಗಳ ದೂರು ಪರಿಹಾರವಾಗದು. ಇದು ಹಿಂದುಸ್ಥಾನದ ದೈವದುರ್ವಿಲಾಸವಲ್ಲವೇ?

---

೫ ನೂತನವಾಗಿ ಜನ್ಮತನ್ನೆತ್ತಿದ ಜಾತ್ರೆಯ ತೆರಿಗೆಯ ಬಗ್ಗೆ ಕಾರವಾರದ ನಾಗರಿಕರು ಕಲೆಕ್ಟರರಿಗೆ ಬೆಟ್ಟಿ ಕೊಟ್ಟ ಹಕೀಕತನ್ನು 'ಸ್ಥಾನಿಕವೃತ್ತಾಂತ' ಸದರಿನಲ್ಲಿ ಈ ಮೊದಲೇ ಪ್ರಕಟಿಸಿರುವೆವು ಈ ತೆರಿಗೆಯು ಎಷ್ಟರ ಮಟ್ಟಿಗೆ ಕಾಯಿದೆಗನುರೋಧವಾಗಿದೆ, ಎಷ್ಟರ ಮಟ್ಟಿಗೆ ನ್ಯಾಯ್ಯಬುದ್ಧಿದೆ ಎಂಬ ವಿಚಾರವನ್ನು ನಾವೀಗ ಮಾತಾಡಲೆಳಿಸುವದಿಲ್ಲ ಒಂದು ಸಂಗತಿಯನ್ನು ಮಾತ್ರ ನಿವೇದಿಸಬೇಕಾಗಿದೆ ಮಿ। ಹೇಗರವರು ತಮ್ಮ ಸಂಭಾಷಣದಲ್ಲಿ ಶಿಷ್ಟಮಂಡಳಕ್ಕೆ ಒಂದು ಸಂಗತಿಯನ್ನರುಹಿದರು ಇದನ್ನು ಇನ್ನೂ ನಿರಾಕರಿಸದ್ದರಿಂದ ಇದರ ಸತ್ಯತೆಯ ಬಗ್ಗೆ ಈಗ ಸಂದೇಹವಿರಲಾರದು ಜಾತ್ರೆಯಲ್ಲಿ ಸಣ್ಣಪುಟ್ಟ ಅಂಗಡಿಕಾರರಿಂದ ಸಣ್ಣಪುಟ್ಟ ಪಂತಿಗೆಗಳನ್ನು ಏರಿಸಲು ಕೊಟ್ಟ ಸಕ್ಯೂಲರವನ್ನು ತಾವರಿಯೆವೆಂದು ಮಿ। ಹೇಗರು ಎರಡೂ ಕಿವಿಗಳ ಮೇಲೆ ಕೈಯಿಟ್ಟರು. ಇದೊಂದು ನಮ್ಮ ಜಿಲ್ಲೆಯೊಳಗಿನ ಮಾಮ್ಲೆಕದಾರ ಭಾರದ ಕಣ್ಣುಮುಚ್ಚಾಲೆಕೆಯ ಆಟವೆಂದು ಹೇಳಬೇಕಾಗಿದೆ ಈ ಜಾತ್ರೆಯ ತೆರಿಗೆಯು ಇತ್ತ ಅನೇಕ ತಾಲೂಕುಗಳಲ್ಲಿ ಜಾರಿಗೆ ಬಂದಿದೆ ತೆರಿಗೆ ವಸೂಲಿಯು ಮಾಮಲೇದಾರರ ಸೂಚನೆಯಂತೆ ನಡೆಯುತ್ತಿದೆ ಇಂಥ ಹೊಸ ತೆರಿಗೆಯನ್ನು ಅನೇಕ ಮಾಮಲೇದಾರರು ತಮ್ಮಷ್ಟಕ್ಕೆ ಸ್ವಯಂಸ್ಫೂರ್ತಿಯಿಂದ ಘೋಷಿಸಿ ತೆಗೆದಿರುವರೆಂದು ಅನುಮಾನಿಸುವದಕ್ಕಿಂತ, ಮಧ್ಯವರ್ತಿ ಆಫೀಸೇ ಈ ತೆರಿಗೆಗೆ ಪ್ರೇರಕವೆಂದು ಅನುಮಾನಿಸುವದು ಯಥಾರ್ಥವಲ್ಲೇನು? ಇದಕ್ಕೆ ಮತ್ತೊಂದು ಕಾರಣವಿದೆ ಅಂಕೋಲೆಯಲ್ಲಿ ಬಂಡಿಹಬ್ಬದ ಸಮಯ ಜಾತ್ರೆ ತೆರಿಗೆಯನ್ನೆತ್ತಿದರೆಂದು ರಾ। ಎಸ್ ಡಿ ನಾಡಕರ್ಣಿಯವರು ನಮ್ಮ ಸ್ಥಾನಿಕ ವ್ಯವಸಾಯ ಬಂಧುಗಳಿಗೆ ತಿಳಿಸಿದ್ದರು ಇದು ಬೇಕಾಯಿ ದೇಶೀರ ಎಂತಲೂ ರಾ ನಾಡಕರ್ಣಿಯವರ ಹೇಳಿಕೆಯಿತ್ತು ಮಿ। ಹೇಗರವರ ಗೈರ ಹಾಜರಿಯಲ್ಲಿ ಜಿಲ್ಲಾತರಳತೆಯ ಸೂತ್ರಧಾರರಾದ ಮಿ। ಕೊಲಿನ್ಸರವರು ಆ ತರಿಗೆಯು ನ್ಯಾಯ್ಯವೆಂದು ಪ್ರತಿಪಾದಿಸಿ ಸಮರ್ಥಿಸಿದ್ದರ ಹೀಗೆಲ್ಲ ಪ್ರತೀತಿಯಾಗುತ್ತ, ಮಿ। ಹೇಗರು "ನಾನರಿಯೆ" ಎಂದು ಹೇಳಿದರೆ, ಅವರು ಅಜ್ಞಾನಿಗಳೆಂದು ತಿಳಿಯುವದು ಮುಂದಾಳುಗಳು ಈಗ ಯಾರಿಲ್ಲ ಅದದ್ದಾಯಿತು ಇಂಥ ಸಕ್ಯೂಲರು ಹೊರಡಿಸುವದು ಅನ್ಯಾಯವೆಂತಲೂ ಮಿ ಹೇಗರ ಮನವರಿಕೆಯಾಗಿರುವದರಿಂದ, ಅವರೀಗ ಅಜ್ಞಾನದ ವೇಷ ತಾಳುತ್ತಾರೆಂಬುದು ಸ್ಪಷ್ಟವಿದೆ ಸದ್ಯಕ್ಕೆ ಕಹಕರೂಪ ಆದ ಸಕ್ಯೂಲರವು ಪ್ರಸರಣಕ್ಕೆ ಯೋಗ್ಯವಾಗದಿದ್ದರಾಯಿತು ಸಕ್ಯೂಲರದ ತೆ ಹಣ ತೆತ್ತವರಿಗೆ ಮರಳಿ ಸಿಕ್ಕಿದರಾಯಿತು ಇಷ್ಟೇ ನಮ್ಮ ಹೇಳಿಕೆ

ಸ್ಥಾನಿಕ ವೃತ್ತಾಂತ.

ಕುಮಟಾ— ಮುಂಜಾವಿನ ಚಳಿ ಬಿಸಿಲು ಕಾವ

ಕೆನರಾ ರಿವರ್ ಮೋಟಾರ ಸರ್ವಿಸ ಕಂಪನಿಯು ಮೋಟರ ಲೊಂಚು ಮೊನ್ನೆ ಅಘನಾಶಿನಿ ನದಿಯಲ್ಲಿ ಸಂಚರಿಸಿತು ಲೊಂಚು ಸಾಧಾರಣ ದೊಡ್ಡ ಮನೋಹರವಾಯಿತ್ತು, ೫೦ ಪ್ರವಾಸಿಕರನ್ನು ಒಯ್ಯುತ್ತದೆ ಅವಶ್ಯವಿದ್ದರೆ, ಹಿಂಬದಿಗೆ ದೋಣಿಗಳನ್ನು ಕಟ್ಟಿದರೆ, ಅವು ಲೊಂಚಿನ ಸಂಗಡವೇ ನಡೆಯುವವು

ನಾಳೆ ಶುಕ್ರವಾರಕ್ಕೆ ಡಿಸ್ಟ್ರಿಕ್ಟ ಜಜ್ಜ ಮಿ। ಮಿರ್‌ನೆಯವರು ಇಲ್ಲಿಯ ಕೋರ್ಟು ತಪಾಸಣೆಗಾಗಿ ಬರುವವರಿದ್ದಾರಾಗಿ ತಿಳಿಯುತ್ತದೆ ಹ್ಯಾಕೋರ್ಟಿನ ನ್ಯಾಯಮೂರ್ತಿಗಳೂ ಪಾಂತಗಳಲ್ಲಿ ಶಿಕಾರಿ ಮಾಡಲು ಈ ಬದಿಗೆ ಇದೇ ತಿಂಗಳಿನ ಅಂತ್ಯದ ವಾರದಲ್ಲಿ ಬರುವವರಿದ್ದಾರೆ ಆಗ ನ್ಯಾಯಮೂರ್ತಿಗಳು ಸ್ಥಾನಿಕ ಕೋರ್ಟುಗಳ ದರ್ಶನ ಪಡೆಯುವರು.

ಇಲ್ಲಿಯ ಗೌಡಸಾರಸ್ವತ ಸಮಾಜದಲ್ಲಿ ಪಕ್ಷಗಳಿರುವ ಮೂಲಕ, ವನಭೋಜನದ ಕಾಲಕ್ಕೆ ಶಾಂತತಾಭಂಗವಾಗುವ ಸಂಭವವಿದ್ದದರಿಂದ, ಉತ್ಸವ ನಡೆಸದಂತೆ, ಮೊಕ್ತೇಸರರಿಗೆ ಪ್ರತಿಬಂಧಕ ಹುಕುಮು ಕೊಡಬೇಕೆಂದು ಸ್ಥಾನಿಕ ಪೋಲೀಸರು ಮೆಜಿಸ್ಟ್ರೇಟರಿಗೆ ಅರ್ಜಿ ಮಾಡಿದ್ದರ ಅರ್ಜಿಯ ವಿಚಾರಣೆಯು ನಡೆದು, ಕಳೆದ ವಾರದಲ್ಲಿ ಮೆಜಿಸ್ಟ್ರೇಟರು ತೀರ್ಪು ಕೊಟ್ಟರು ಶಾಂತತಾಭಂಗವಾಗುವ ಭೀತಿಯಿದ್ದರೆ, ಉತ್ಸವದ ಚಾಲಕರಿಗೆ ಪೋಲೀಸ ಬಂದೋಬಸ್ತನ್ನು ಕೊಡಬೇಕೆಂದು ವಿಧಿಸಿ ಪ್ರತಿಬಂಧಕ ಹುಕುಮು ಮಾಡಲು ಮೆಜಿಸ್ಟ್ರೇಟರು ನಿರಾಕರಿಸಿದರು ನಾಡದು ಶನಿವಾರಕ್ಕೆ ವನಭೋಜನೋತ್ಸವವು ಜರಗುವದೆಂದು ಸುದ್ದಿ. ಅಂತು, ಕುಚೋದ್ಯಗಾರರ ಬಹಿಷ್ಕಾರ ಪ್ರಕರಣವು ದಿನಗಳೆದ ಹಾಗೆ, ಹನುಮಂತನ ಬಾಲದಂತೆ ಹೆಚ್ಚೆಚ್ಚು ವಿಸ್ತಾರದಿಂದ ಬಲಿಯುತ್ತದೆ. ವನಭೋಜನ ಮುಗಿಯುವ ವರೆಗೆ ಏನೇನು ಸಂಭವಿಸುವದೆಂದು ಅಗಾಧಲೀಲೆಯ ಶ್ರೀವೆಂಕಟರಮಣನಿಗೇ ಗೋಚರ

ಹೆರವಟ್ಟೆ, ವಾಣಿ, ಹಳಕಾರ, ಹೆಗಡೆ ಮೊದಲಾದ ಹಳ್ಳಿಗಳೊಳಗಿನ ನಾಗರಿಕರು ತಿಳಿಸುವದೇನೆಂದರೆ — ಹಳಕಾರ ಗ್ರಾಮದ ಸರ್ವೇ ನಂಬರು ೨೫ ನೇದು ಸಾಧಾರಣ ಈ ಗ್ರಾಮಗಳ ನಡುಮಧ್ಯದಲ್ಲಿದೆ ಈ ಸರ್ವೇ ನಂಬರವು ಬಹಳೇ ಲೋಕೋಪಯೋಗಿ ಇದೆ ಇಲ್ಲಿ ಕಟ್ಟೆಗಳಿವೆ ದೊಡ್ಡ ದೊಡ್ಡ ಅಶ್ವತ್ಥ ಮಾವಿನ ಮರಗಳಿವೆ ಕಲ್ಲು ಖಂಬಗಳಿವೆ ಆಗಾಗ ವಿಸ್ತೀರ್ಣ ಬೈಲಿದೆ ಈ ಸರ್ವೇ ನಂಬರದಲ್ಲಿ ಘಟ್ಟಕ್ಕೆ ಬರಹೋಗುವ ಪಾಂಥಸ್ಥರಿಗೆ ನೆರೆಹೊರೆಯಲ್ಲಿ ಕಟ್ಟಿಗೆಹೊರೆ ಮೊದಲಾದವನ್ನು ಹೊತ್ತುಕೊಂಡು ಜೀವನ ನಡೆಸುವವರಿಗೆ ವಿಶ್ರಾಂತಿ ತೆಗೆದುಕೊಳ್ಳಲು ಅನುಕೂಲವು ಘಟ್ಟದ ಮೇಲಿನ ಇಲ್ಲಿ ಮಾರಾಟಕ್ಕೆ ತರುವ ದನಗಳಿಗೂ ಇಲ್ಲಿ ನಿಲ್ಲಿಸಿಕೊಳ್ಳುವ ವಹಿವಾಟಿದೆ ಹಳ್ಳಿಗರ ಮನರಂಜನೆಕ್ಕಾಗಿ ನಡೆಯುವ ಬೈಲಾಟಗಳೂ ಈ ಸ್ಥಾನದ ಬಯಲಲ್ಲೇ ನಡೆಯ ಬೇಕು ಆಟ ನಡೆದಾಗ, ಸಣ್ಣ ಪುಟ್ಟ ಅಂಗಡಿಕಾರರು ಇಲ್ಲಿ ಮಿಠಾಯಿಯ ಸ್ಪಿರಿಟ್ ಮಾಡಿ, ದುಡ್ಡು-ಕಾಸು ಗಳಿಸುತ್ತಾರೆ. ಇದು ಸ್ವಾಭಾವಿಕ ಜಾಗವಿದೆ ಇಷ್ಟು ಲೋಕೋಪಯೋಗಿ ಇದೆ ಆದುದರಿಂದ ಇದನ್ನು ಅನಾದಿ ಕಾಲದಿಂದ ವ್ಯಕ್ತಿಗಳಿಗೆ ಮಾಲಕಿ ಕೊಡದೆ, ಸಾರ್ವಜನಿಕವಾಗಿ ಕಾದಿಟ್ಟಿತ್ತು ಈಗ ಈ ಸರ್ವೇ ನಂಬರವು ಮಾಲಕಿಗೆ ಕೊಟ್ಟಿದೆಂದು ತಿಳಿಯುತ್ತದೆ. ಅಲ್ಲದೆ ಆ ಹುಕುಮು ಲೋಕಹಿತಕ್ಕೆ ವಿರೋಧವಾಗಿರುವದೆಂತಲೂ ಅದನ್ನು ರದ್ದಪಡಿಸಬೇಕೆಂತಲೂ ಈ ಗ್ರಾಮಗಳ ತರ್ಫೆಯಿಂದ ಒಂದು ಶಿಷ್ಟಮಂಡಳವು ಕಳೆದ ತಾ ೩ನೇಗೆ ಮಿ। ಹೇಗರವರಿಗೆ ಬೆಟ್ಟಿಯನ್ನಿತ್ತಿತು. ಕಲೆಕ್ಟರರು ಅರ್ಜಿ ಮಾಡಿಕೊಳ್ಳಹೇಳಿದಂತೆ ಊರವರು ತಾ ೫ನೇಗೆ ಕಾರಣಗಳನ್ನೆಲ್ಲ ನಮೂದಿಸಿ, ಅರ್ಜಿಯನ್ನು ಮಾಡಿರುವರು ಮತ್ತೊಂದು ಕಾರಣವಿದೆ ಹಳಕಾರ ಗ್ರಾಮಕ್ಕೆ ಸಾಧಾರಣ ೩೫೦ ಎಕರೆ ಕ್ಷೇತ್ರವು ಗೋಚರಾಯಿಗೆ ಬಿಟ್ಟಿದೆ. ಸರ್ವೇನಂಬರು ೨೫ ಸಹ ಅ ಪೈಕಿಯದೇ ಇದನ್ನು ಕಡಿಮೆ ಮಾಡಿದರೆ ಗೋಚರಾಯಿಗೂ ತೊಂದರೆ. ಇದನ್ನೆಲ್ಲ ವಿಚಾರಿಸಿ, ಮಿ ಹೇಗರವರು ಸರ್ವೇನಂಬರ ೨೫ನ್ನು ಯಾರ ಖಾತೆಗೂ ಸೇರಿಸಿಕೊಡದೆ, ಈ ಮೊದಲಿನಂತೆ ಸಾರ್ವಜನಿಕವಾಗಿ ಕಾದಿಡುವರೆಂದು ಕೋರಿಕೆ.

ಸಾಭಾರಸ್ವೀಕಾರ

ಮಾತೃಭೂಮಿ— ಕೈ। ವಾ। ದೇ। ಕರಗುಪ್ಪಿ ಕೃಷ್ಣರಾಯರ ಸ್ಮಾರಕ ಸಂಚಿಕೆ ಸಂಪಾದಕ ಮುದ್ರಕ ಪ್ರಕಾಶಕ — ಕವಿಭೂಷಣ ಕೃ ಶ್ರೀ ಜಟಗೇರಿ, ಹನುಮಂತಬೀದಿ, ಬೆಳಗಾವಿ ವಾರ್ಷಿಕ ಚಂದಾ ಅಂಚೆ ವೆಚ್ಚ ಸಹಿ ರೂ ೨—೮—೦

ಆರೋಗ್ಯಚಂದ್ರಿಕೆ— ನವಂಬರ ತಿಂಗಳಿನ ಸಂಚಿಕೆ ಸಂಪಾದಕ.— ಡಾ। ಯ. ರಾಮರಾವ, ಎಮ್. ಎಲ್ ಸಿ, ೨೨೨, ತಂಬುಶೆಟ್ಟಿ ಬೀದಿ,

ಮದ್ರಾಸ. ಟಪಾ ಅಂಚೆವೆಚ್ಚಸಹಿತ ರೂ. ೧॥

ಶ್ರೀಮದನಂತನ ಕಥಾ— ಕರ್ನಾಟಕ ಸುಕಾವ್ಯ ರತ್ನಮಾಲೆಯ ದ್ವಿತೀಯ ಮಣಿ ಪ್ರಕಾಶಕ — ರಾ। ವೆಂಕಪ್ಪಾ ಪರಮಯ್ಯ ಹೆಗ್ಗಡೆ, ಕಡಿಕೋಡಿ ಕರ್ನಾಟಕ ಸುಕಾವ್ಯರತ್ನಾಗಾರ, ಧಾರೇಶ್ವರ. ಬೆಲೆ ರೂ. ೦—೪—೪

ಕಾರಿರವಾರ— ಕೆಲವು ದಿವಸಗಳ ಹಿಂದೆ ಖಾದಿಯನ್ನು ಧರಿಸುವ ದುರ್ಗಾದಾಸ ಎಂಬ ಹೆಸರಿನ ಒಬ್ಬ ಮನುಷ್ಯನು ತಾನು ವೃಂದಾವನದ ಗುರುಕುಲದ ತರ್ಫೆನಿಂದ ಬಂದಿರುವೆನೆಂದು ಹೇಳಿ ಮತ್ತು ಆ ಸಂಸ್ಥೆಯ ಹೆಸರಿನ ಛಾಪಿಸಿದ ಪಾವತೀ ಪುಸ್ತಕಗಳನ್ನೂ, ಅಧಿಕಾರ ಪತ್ರವನ್ನೂ ತೋರಿಸಿ, ಬಹಳೇ ಜನರ ಕಡೆಯಿಂದ ಆ ಸಂಸ್ಥೆಯ ಬಗ್ಗೆ ದೇಣಿಗೆಯ ರಕಮನ್ನು ವಸೂಲ ಮಾಡಿಕೊಂಡು ಹೋದನು ಅವನು ರತ್ನಾಗಿರಿ, ವೆಂಗುರ್ಲಾ ಅತ್ತಕಡೆಗೂ, ಗೋವೆಯಲ್ಲಿಯೂ ಇದೇ ರೀತಿಯಲ್ಲಿ ಬಹಳ ವರ್ಗಣಿಯನ್ನು ವಸೂಲ ಮಾಡಿಕೊಂಡು ಬಂದದ್ದು ನೋಡಿ, ಜನರು ಅವನ ಮೇಲೆ ವಿಶ್ವಾಸವಿಟ್ಟು ದೇಣಿಗೆಗಳನ್ನು ಕೊಟ್ಟರು ಆದರೆ, ಪೋಲೀಸರಿಗೆ ಸಂಶಯ ತೋರಲಿಕ್ಕೆ ಕಾರಣವಾಗಿ, ಅವರು ತಪಾಸ ನಡಿಸಿದ್ದಲ್ಲಿ ವೃಂದಾವನದ ಗುರುಕುಲದವರು ಅವರು ತಮ್ಮ ತರ್ಫೆನ ಮನುಷ್ಯನೆಂಬ ಸಂಗತಿಯನ್ನು ಅಲ್ಲಗಳೆದಿರುವರಾಗಿ ತಿಳಿದುಬರುತ್ತದೆ ಸದರಿ ಮನುಷ್ಯನು ಈಗ ಎಲ್ಲಿ ಇರುವನೆಂಬ ಪತ್ತೆಯು ಹತ್ತಿರುವದಿಲ್ಲ ಅವನು ಯಾವ ಊರಲ್ಲಾದರೂ ಕಂಡುಬಂದರೆ, ಜನರು ಸಾವಧ ಉಳಿದು, ಅವನಿಗೆ ವರ್ಗಣಿಯನ್ನು ಕೊಡುವ ಮೋಸಕ್ಕೆ ಬಲಿಬೀಳದೆ, ಅವನ ಮಾಹಿತಿಯನ್ನು ಕೂಡಲೆ ಪೋಲೀಸರಿಗೆ ಕೊಟ್ಟರೆ, ಸತ್ಯವು ಬೈಲಿಗೆ ಬರುವದು

— ನಾಮದಾರ ಗವರ್ನರ ದೊರೆಗಳಿಗೆ ಗಮನ ಕಾಲಕ್ಕೆ ಮಾನಪತ್ರವನ್ನೀಯಲು ಇಲ್ಲಿಂದ ಲೆಫ್ಟನೆಂಟ ಜೋಗಿನಾಯ್ಕ, ರಾ। ದತ್ತಾತ್ರಯ ರಾಮಚಂದ್ರ ರಾಣೆ, ವಿರೋಬಾ ರಾಮ ದೇಸಾಯಿರವರು ಮುದ್ದಾಂ ಇಲ್ಲಿಂದ ಕಳೆದ ತಾ ೬ನೇ ಗುರುವಾರಕ್ಕೆ ಮುಂಬಯಿಗೆ ಹೋಗಿರುವರು

ಪ್ರಾಥಮಿಕ ಶಿಕ್ಷಣದ ನಿಯಮಗಳ ಚರ್ಚೆಮಾಡಲು ಬೆಳಗಾಂವಿಯಲ್ಲಿ ಸಧ್ಯಕ್ಕೆ ಒಂದು ಪರಿಷತ್ತು ಕೂಡ ಮದು ಜಿಲ್ಲಾ ಲೋಕಲ್‌ಬೋರ್ಡಿನ ತರ್ಫೆನಿಂದ ಅಧ್ಯಕ್ಷ-ಉಪಾಧ್ಯಕ್ಷರೀರ್ವರು ಬಯಮಾಲಿಸುವವರಿದ್ದಾರಾಗಿ ಸುದ್ದಿ ಈ ಬಗ್ಗೆ ಜಿಲ್ಲಾ ಬೋರ್ಡಿನ ಸಭೆಯನ್ನು ನೆರಿಸಿ, ಪ್ರತಿನಿಧಿಗಳನ್ನು ಆರಿಸಿ ಕಳಿಸುವದು ಏಹಿತವಲ್ಲೇನು ?

ಬೀಣಗಿಯಲ್ಲಿ ಕಳೆದ ಕಾರ್ತಿಕ ಶುದ್ಧ ೧೦ಮಿಗೆ ಶ್ರೀ ಸೋಮನಾಥ ಗ್ರಾಮ ದೇವಸ್ಥಾನದ ವನಭೋಜನ ಉತ್ಸಹವು ಜರುಗಿತು. ಈ ವರ್ಷದ ಉತ್ಸಹದ ವಿಶೇಷವೆಂದರೆ, ವಾದ್ಯದವರ ಗೈರ ಹಾಜರಿ ಚಾಲಕರಿಗೆ ಶ್ರೀ ದೇವರ ಉತ್ಸವಕ್ಕೆ ವಾದ್ಯದವರನ್ನೇಕೆ ತರಲಿಲ್ಲೆಂದು ಕೆಲವರು ಪ್ರಶ್ನಿಸಲು, ಉತ್ಸಹವು ವಾದ್ಯದವರ ಹೊರತು ಆದೀತೋ ಇಲ್ಲ ಎಂಬ ಪ್ರಯೋಗ ನೋಡಬೇಕೆಂದು ಉತ್ತರ ಕೊಟ್ಟರಂತೆ. ಮುಂದಿನ ಉತ್ಸವಕ್ಕೆ ಮತ್ಯಾವ ಪ್ರಯೋಗ ಮಾಡಿ ತೋರಿಸುತ್ತಾರೆಂದು ಅನೇಕರ ಸವಾಲು

ಸದಾಶಿವಗಡದಿಂದ ಸಯ್ಯದ ರಹಿಮಾನ ಸಯ್ಯದ ಅಬ್ದುಲ್ಲಾರವರು ಜಾಹೀರ ಪಡಿಸುವದೇನಂದರೆ-ಸದಾಶಿವಗಡ ಮುಡಗೇರಿ, ಶಿವೇಶ್ವರ-ಅಂಗಡಿ, ಈ ಊರುಗಳೊಳಗಿನ ಜಮಾತುಗಳ ಕಾಜೀ ಕೆಲಸ ನಡಿಸಲು ಯೋಗ್ಯ ಗೃಹಸ್ಥರನ್ನು ಆರಿಸಿ ತೆಗೆಯುವದು ಅತ್ಯವಶ್ಯಕವಿದ್ದದರಿಂದ, ಆ ಕುರಿತು ಯಾವ ರೀತಿ ಕೆಲಸ ನಡಿಸಬೇಕೆಂದು ಪರಾಮಿಸಲಿಕ್ಕೆ ಇದೇ ಬರುವ ಡಿಶಂಬರ ತಾ ೩೦ನೇಗೆ ಶಿವೇಶ್ವರದೊಳಗಿನ ಮಸೀದಿಯಲ್ಲಿ ಎಲ್ಲ ಜಮಾತದ ಜನರು ನೆರೆಯಬೇಕೆಂದು ನಿಶ್ಚಿತವಾಗಿದೆ ಸದರಿ ಸಭೆಗೆ ಸಬಬ ಜದವರೆಲ್ಲರೂ ಹಾಜರಾಗಬೇಕಾಗಿ ಬಿನ್ನೈಸುತ್ತಾರೆ

ವೃತ್ತಸಾರ.

— ಹಾಸನದಲ್ಲಿ ೧೬ನೇ ದನಗಳ ಪ್ರದರ್ಶನವು ಜನವರಿ ತಾ. ೩ನೇಯಿಂದ ೩ ದಿನಗಳ ವರೆಗೆ ನಡೆಯುವದು

— ಧಾರವಾಡ ಜಿಲ್ಲಾ ಪರಿಷತ್ತಿನ ಕಾಲಕ್ಕೆ ತಾರೀಖು ೨೪-೨೫ನೇಗೆ ಹಾವೇರಿಯಲ್ಲಿ ದನಗಳ ಪ್ರದರ್ಶನವಾಯಿತು. ಶ್ರೀ। ಕಾನಾಗ ಸದಾಶಿವರಾಯರು ಈ ಪ್ರದರ್ಶನದ ಉದ್ಘಾಟನ ಸಮಾರಂಭವನ್ನು ಮಾಡಿದರು.

— ಅಹಮದಾಬಾದಿನಲ್ಲಿ ಅಂಧ ಕವಿಯೊಬ್ಬರು ಹಸ್ತ್ರೀಯ ಪದ್ಯಗಳನ್ನು ಹಾಡುತ್ತಿದ್ದರು. ಅವರಿಗೆ ಸರಕಾರದಿಂದ ಸಧ್ವರ್ತನದ ಬಗ್ಗೆ ಜಾಮೀನು ಕೇಳಲಾಯಿತು. ಜಾಮೀನು ಕೊಡಲೊಪ್ಪದ್ದರಿಂದ, ೧ ವರುಷದ ಸಾದಾ ಕಾರಾಗೃಹವಾಸವು ವಿಧಿಸಲಾಯಿತು.

— ಪುಣ್ಯಪಟ್ಟಣದಲ್ಲಿ ಕಾಯಿದೆಯ ಕಾಲೇಜು ಒಂದನ್ನು ಸ್ಥಾಪಿಸಬೇಕೆಂಬ ಬಗ್ಗೆ ಮುಂಬಯಿಯಲ್ಲಿ ವಿಶ್ವವಿದ್ಯಾಲಯದ ತಾ ೩ನೇ ಸೋಮವಾರದ ಸಿನೇಟ್ ಸಭೆಯಲ್ಲಿ ವಾದವಾಯಿತು ಕಟ್ಟಕಡೆಗೆ ವಿಚಾರಕ್ಕೆ ಅವಕಾಶವನ್ನೀಯಬೇಕೆಂದು, ಈ ವಿಚಾರವನ್ನು ಮುಂದಿನ ಸಭೆಯ ವರೆಗೆ ತಹಕೂಬ ಇಡಲಾಗಿದೆ

— ಅಖಿಲ ಭಾರತೀಯ ಸ್ವಯಂಸೇವಕರ ಪರಿಷತ್ತಿನ ತಾತ್ಪೂರ್ತಿಕ ಮಂಡಳವು (ಪ್ರೊವಿಜನಲ್ ಬೋರ್ಡ) ಡಿಶಂಬರ ತಿಂಗಳ ೨೪ ನೇ ತಾರೀಖು ಸೋಮವಾರ ಸಂಜೆಯ ೬ ಗಂಟೆಗೆ ಕೋಕೋನಾಡದಲ್ಲಿ ನೆರೆಯುವದು ಮರುದಿವಸ ಅಂದರೆ, ಮಂಗಳವಾರ ೨೫ ನೇ ತಾರೀಖಿಗೆ ಮೇಲ್ಕಾಣಿಸಿದ ಪರಿಷತ್ತು ಕೂಡಿ ಅದು ಹಾಗೇ ೨೬ ನೇ ತಾರೀಖು ಬುಧವಾರ ಮುಂಜಾವಿನಲ್ಲು ಮತ್ತು ನಂತರದಿಲ್ಲು ಮುಂದೆ ಸಾಗುವದು. ಪಂಡಿತ ಜವಾಹರಲಾಲ ನೆಹರೂರವರು ಅಧ್ಯಕ್ಷರಾಗಲಿಕ್ಕೆ ಸಮ್ಮತಿಸಿದ್ದಾರೆ

— ಕಳೆದ ೩ನೇ ಸೋಮವಾರಕ್ಕೆ ಕರಾಚಿಯ ನಾಗರಿಕರು ಲಿ.ಲಾ ಲಜಪತರಾಯರಿಗೆ ಮಾನಪತ್ರವನ್ನರ್ಪಿಸಿದರು. ಹಾಗು ೧೦೦೦೦ ರೂಪಾಯಿಗಳ ಥೈಲಿಯನ್ನು ಸಮರ್ಪಿಸಿದರು.

— ಅಖಿಲ ಭಾರತೀಯ ಖಾದಿ ಹಾಗು ಕೈಗಾರಿಕೆಗಳ ಪ್ರದರ್ಶನವನ್ನು ಕೋಕೋನಾಡದಲ್ಲಿ ಡಿಶಂಬರ ತಾ ೨೫ ನೇ ಮುಂಜಾವು ೮ ಘಂಟೆಗೆ ಆಚಾರ್ಯ ರಾಯರವರು ತೆರೆಯುವರು ಪ್ರದರ್ಶನದಲ್ಲಿ ಚರಕೋ ನೂಲು ತೆಗೆಯುವವರಿಗೆ ಬಹುಮಾನಗಳು ಕೊಡಲಾಗುವವು ಈ ಪ್ರದರ್ಶನದಲ್ಲಿ ಹತ್ತಿ, ಹತ್ತಿಯ ಬೀಜ, ಮೊದಲಾದವುಗಳನ್ನು ಸಹ ಇಡುವ ವ್ಯವಸ್ಥೆಯಾಗಿದೆ

— ಹಿಂದೂ ಮಹಮ್ಮದೀಯರ ಹಿತಸಂಬಂಧಗಳ ಚೌಕಶಿ ಕಮಿಟಿಯು ಕಳೆದ ತಾರೀಖು ೯ನೇಯಿಂದ ಸಹರಾಣಪುರದಲ್ಲ ಚೌಕಶಿ ನಡಿಸಹತ್ತಿದೆ

— ವಿಲಾಯತಿಯಲ್ಲಿ ಕಳೆದ ಗುರುವಾರ ಇಂಗ್ಲೆಂಡಿನ ಗದ್ದಲ ಮಂಜು ದಟ್ಟಾಗಿ ಬಿದ್ದದರಿಂದ ಮಹತ್ವಾರದ ಗಾಡಿಗಳು ಎಲ್ಲ ವಾಹನಗಳ ಓಡಾಟವು ನಿಂತುಹೋಗಿದೆ ಅನೇಕರು ಬರ್ಫಮಯ ನೆಲದ ಮೇಲೆ ಆಡ್ಡಾಡುವಾಗ, ನೆಲಕ್ಕುರುಳಿ ಬಿದ್ದರು ಬ್ರುಸೆಲ್ಸಿನಲ್ಲಿ ಒಬ್ಬ ಹೆಂಗಸು ಮೃತಪಟ್ಟಳು. ಡರ್‌ಹೇಮಿನಲ್ಲಿ ಮೋಟಾರು ಮುರಿದು ಹೋದ ಮೂಲಕ ಒಬ್ಬನು ಕೂಲಿಗಾರ ಸತ್ತನು.

— ಅಂಬಾಲಾ-ಸಿಮುಲಾದೊಳಗಿನ ನಡುವೆ ತಂತಿಗಳಿಗೆ ಪೆಟ್ಟು ತಗಲಿ, ತಂತಿ ವ್ಯವಹಾರವು ಸುಸೂತ್ರ ನಡೆಯುವದಿಲ್ಲ. ಆದರಿಂದ ಅಂಬಾಲಾ-ಸಿಮುಲಾದೊಳಗಿನ ತಂತಿಗಳನ್ನು ಕಳೆದ ತಾ. ೫ನೇ ಬುಧವಾರಕ್ಕೆ ವಿಮಾನದಿಂದ ಒಯ್ದರು ಅಂಬಾಲಾದೊಳಗಿನ ತಂತಿಗಳು ಒಂದು ತಾಸಿನಲ್ಲಿ ಸಿಮುಲಾ ಪಟ್ಟಣಕ್ಕೆ ಮುಟ್ಟಿದವಂತೆ

— ಹೊಸ ಮುಂಬಯಿ ಕಾಯಿದೆ ಕೌನ್ಸಿಲಿನ ಅಧಿವೇಶನವು ಮುಂಬಯಿಯ ನಗರಭುವನದಲ್ಲಿ ಫೆಬ್ರುವರಿ ೧೮ ನೇ ತಾರೀಖಿನ ಅಪರಾಹ್ನ ೨ ಘಂಟೆಗೆ ನೆರೆಯುವದಿದೆಂದು ಜಾಹೀರಾಗಿದೆ ತಮ್ಮ ಸಂಸ್ಥಾನದೊಳಗಿನ ಅಧಿಕಾರಿಗಳು ಲಂಚ ತಿನ್ನುತ್ತಾರೆಂದು ತಿಳಿಯಲಿಕ್ಕೆ ಸಾಕಷ್ಟು ಕಾರಣಗಳಿರುವದರಿಂದ ಇನ್ನು ಮುಂದೆ ಲಂಚ ತಿಂದವರನ್ನು ದಂಡಿಸುವರೆಂದು, ಧರ್ಮಾನು ಹೊರಡಿಸಿರುವರು

— ಕಲಕತ್ತೆಯ ಇಂಡಸ್ಟ್ರಿಯಲ್ ಬ್ಯಾಂಕು ರಾ। ಮಾಧವ ಪ್ರಸಾದರೆಂಬವರನ್ನು ವರ್ಷಕ್ಕೆ ೧೮,೦೦೦ ರೂಪಾಯಿ ಸಂಬಳ ಹಾಗು ಅಷ್ಟೇ ಬೋನಸ ಗೊತ್ತು ಮಾಡಿಕೊಂಡು ನೇಮಿಸಿಕೊಂಡಿತು ದುರ್ದೈವದಿಂದ ೬ ತಿಂಗಳುಗಳಲ್ಲಿಯೇ ಬ್ಯಾಂಕಿನ ದಿವಾಳಿಯಾಯಿತು ರಾ। ಪ್ರಸಾದರವರು ತಮ್ಮ ಬೋನಸಿನ ೧೮೦೦೦ ರೂಪಾಯಿಗಳನ್ನು ಬೇಡಿ ದಾವೆ ಮಾಡಿದರು. ಸುದೈವದಿಂದ ಕಳೆದ ಡಿಶಂಬರ ೩ನೇಗೆ ಕಲಕತ್ತೆಯ ನ್ಯಾಯಮೂರ್ತಿಗಳು ರಾ। ಪ್ರಸಾದರ ದಾವೆಯನ್ನು ಸೈಸಲಮಾಡಿರುವರು

— ಅಜಮೀರದೊಳಗೆ ಹಿಂದೂ-ಮಹಮ್ಮದೀಯರ ಕಲಹವನ್ನು ಡಾ। ಸಯ್ಯದ ಮಹಮೂದರವರು ಉಭಯತರಿಗೂ ಸಮಾಧಾನವಾಗುವಂತೆ ರಾಜಿಯಿಂದ ನಿಕಾಲೆ ಮಾಡಿದರು. ಕಳೆದ ೨೩ ೩ನೇ ನವಂಬರಕ್ಕೆ ರಾಜಿಯ ಆನಂದೋತ್ಸಹವನ್ನು ಸಾದರಪಡಿಸಲು ಜಾಹೀರ ಸಭೆಯಾಯಿತು ಸಭೆಯೊಳಗೆ, ಕಾಂಗ್ರೆಸ-ಖಿಲಾಫತು ಸಂಸ್ಥೆಗಳಿಗೆ ಸಭಿಕರಿಂದ ಹಣವನ್ನೆತ್ತಿದರು ೪೦೦ ರೂಪಾಯಿಗಳು ಬಂದ್ದವು ಅರ್ಧ ರಕಮು ಕಾಂಗ್ರೆಸಿಗೆ, ಅರ್ಧ ರಕಮು ಖಿಲಾಫತಕ್ಕೆ ಹೀಗೆ ಹಂಚಲಾಯಿತ. ನಾಗಪುರದಲ್ಲಿಯೂ, ಇದೇ ರೀತಿ ಕಲಹನಿರ್ಮೂಲವಾಗಲೆಂದು ಬಯಕೆ

— ಕಪೀಲ್ವರೊಳಗಿನ ಕಲ್ಲಿದ್ದಲಿ ಖಣಿಯಲ್ಲಿ ಒಂದು ಅಪಘಾತ ಸಂಭವಿಸಿ, ೪೦ ಮಂದಿಗಳು ಕೂಡಲೆ ನಿಧನಹೊಂದಿದರು

— ಅಮೇರಿಕೆಯೊಳಗಿನ ಸಂಯುಕ್ತ ಸಂಸ್ಥಾನಗಳ ವಾರ್ಷಿಕ ವರದಿಯು ಪ್ರಕಟವಾಗಿದೆ ಕೋಶಪಾಲಕರು ವರ್ಷಕ್ಕೆ ೯೦ ಕೋಟಿ ರೂಪಾಯಿಗಳಷ್ಟು ತೆರಿಗೆಗಳನ್ನು ಕಡಿಮೆ ಮಾಡಬೇಕೆಂದು ಸೂಚಿಸಿರುವರು

— ಸಂಯುಕ್ತ ಪ್ರಾಂತದೊಳಗಿನ ಚುನಾವಣೆಯಲ್ಲಿ ಹಳೇ ಕೌನ್ಸಿಲಿನ ಡೆಪ್ಯುಟಿ ಪ್ರೆಸಿಡೆಂಟರಿದ್ದ ರಾಯ ಬಹಾದ್ದೂರ ಅನುಕೂಲ ಸ್ವರೂಪರವರು ಪರಾಜಯ ಹೊಂದಿದರು ಇಲ್ಲಿ ಸಹ ಸ್ವರಾಜ್ಯ ಪಕ್ಷದವರ ವಿಜಯವೇ

— ಬರ್ಲಿನ ಪಟ್ಟಣದಲ್ಲಿ ಪ್ರತಿಬಂಧಕ ಸಾಮಗ್ರಿಯನು ಕಳವಿನಿಂದ ಆಮದು ಮಾಡಿದ ಬಗ್ಗೆ, ೩೦ ಸಾವುಕಾರರನ್ನು ಸೆರೆಹಿಡಿದಿರುವರು ಆಮದಾದ ಸರಕಿನ ಬೆಲೆಯು ೩ ಕೋಟಿ ೭೫ ಲಕ್ಷ ರೂಪಾಯಿ

— ಮದ್ರಾಸ ಇಂಜಿನಿಯರಿಂಗ ಕಾಲೇಜಿನ ರಸಾಯನ ಶಾಸ್ತ್ರದ ಪ್ರೊಫೆಸರರಾದ ಎಸ್ ಎನ್ ಧುರರವರು ಕಳೆದ ತಾ ೮ ನೇ ಶನಿವಾರಕ್ಕೆ ಆತ್ಮಹತ್ಯ ಮಾಡಿಕೊಂಡರ ಕಾರಣವು ತಿಳಿಯಲಿಲ್ಲ

— ಮುಂಬಯಿಯೊಳಗಿನ ಪತ್ರಿಕಾಲೇಖಕರ ಸಂಘವೊಂದು ಹೊಸದಾಗಿ ಕಳೆದ ರವಿವಾರ ತಾ ೯ನೇಗೆ ಸ್ಥಾಪನೆಹೊಂದಿತು ಈ ಸಂಸ್ಥೆಯ ಅಧ್ಯಕ್ಷರು ಮದ್ರಾಸಿನ 'ಹಿಂದೂ' ಪತ್ರಿಕೆಯ ಸಂಪಾದಕರಾದ ಶ್ರೀ। ಕಸ್ತೂರಿರಂಗ ಅಯ್ಯಂಗಾರರವರು ಚೆಅರಮನ್‌ರವರು ಶ್ರೀ। ನಟರಾಜನರವರು. ಕಾರ್ಯದರ್ಶಿಗಳು ಮುಂಬಯಿ ಕ್ರಾನಿಕಲ್ ಪತ್ರಿಕೆಯ ಉಪಸಂಪಾದಕರಾದ ಸಯ್ಯದ ಅಬ್ದುಲ್ಲಾ ಬ್ರೇಲವಿಯವರು

— ಸರ್ವಾಧಿಪತಿ ರೀಡಿಂಗ ದೊರೆಗಳು ಈಗ ಮದ್ರಾಸ ಕಡೆಗೆ ಪ್ರವಾಸ ಮಾಡುತ್ತಿರುವರು ಮಾನಪತ್ರಗಳೂ, ಔತಣಗಳೂ, ಕವಾಯತುಗಳೂ ನಡೆದು, ಸರ್ವಾಧಿಪತಿಗಳ ಮನರಂಜನ ಕೆಲಸವು ರಭಸದಿಂದ ನಡೆದಿತೆ. ಅಂತು ಮೋಜೇ ಮೋಜು. ಮದ್ರಾಸ ಪಟ್ಟಣಕ್ಕೆ ಹೋದಾಗ, ಅಲ್ಲಿ ಕಾಂಗ್ರೆಸ-ಖಿಲಾಫತ ಲೋಕನಾಯಕರ ಬಿನ್ನಹದಂತೆ, ನಾಗರಿಕರು ಹರತಾಳ ಆಚರಣೆ ಮಾಡಿದರು. ಮೈಲಿರಡು ಮೈಲು ಉದ್ದವಾಗಿರುವ ಬೀದಿಯೊಳಗಿನ ಎರಡೂ ಪಕ್ಕದ ಅಂಗಡಿ ಸಾಲುಗಳೆಲ್ಲ ಸರ್ವಾಧಿಪತಿಗಳ ಆಗಮನದ ನಿಷೇಧವನ್ನು ವ್ಯಕ್ತಗೊಳಿಸುತ್ತಿದ್ದವು ಚುಟ್ಟಾ ಅಂಗಡಿಗಳು ಸಹ ಮುಚ್ಚಿಕೊಂಡಿದ್ದವು ಮಧುರೆಗೆ ಹೋದಾಗ ಅಲ್ಲಿಯೂ ಹರತಾಳವೇ ವಿಶೇಷವೆಂದರೆ, ಕಪ್ಪು ಪತಾಕೆಗಳ ಆರೋಹಣ ಪೋಲೀಸರು ಅವನ್ನು ಕಿತ್ತೊಗೆದು, ತಮ್ಮ ಬಹಾದ್ದೂರಿಯನ್ನು ಪ್ರಕಟಿಸಿದರು

— ಅಕಾಲಿ ದೇಶಭಕ್ತರ ಸಮಾವೇಶವು ಅಮೃತಸರ ದಲ್ಲಿ ನಡೆದದೆ. ಸರಕಾರದ ಕಡೆಯಿಂದ [illegible] ವಕೀಲರು ಕೆಲಸ ನಡಿಸುತ್ತಿರುವರು. ಅವರಿಗೆ [illegible] ೧೦ ೦೦೦ ರೂಪಾಯಿ ಕಲಬು ಮಿಕ್ಕವ್ಯಯದ ದಿನಗಳೊಳಗಿನ ಖರ್ಚಿನ ಮಾಪವಿದು.

— ಹುಬ್ಬಳ್ಳಿಯಲ್ಲಿ ಮ್ಯುನಿಸಿಪಾಲಿಟಿಯ ಹಿಂಬದಿಯ ದೊಡ್ಡ ಬೈಲಲ್ಲಿ ಕಳೆದ ತಾ ೨ನೇ ಡಿಸೆಂಬರಕ್ಕೆ [illegible] ಬಲವರ್ಧಕ ಸಂಘದ ವಿದ್ಯಮಾನ [illegible], ಬೈಠಾಟಗಳೂ ನಡೆದವು. [illegible] ವು ಯಾವದೇ ಪಕ್ಷಕ್ಕೆ ಸೇರಿದ್ದಲ್ಲ [illegible] ಈ ಸಂಘದಲ್ಲಿ ಸೇರಿಕೊಂಡಿದ್ದರು [illegible] ಯೋಗ, ಮಲಖಾಂಬ, ಕುಸ್ತಿ ಸಾಮು [illegible] ದ ಆಟಗಳಲ್ಲಿ ಮೊದಲು [illegible] ಬಹುಮಾನಗಳು ಹಂಚಲ್ಪಟ್ಟವು.

— [illegible] ಕಾಯಿದೆ ಕೌನ್ಸಿಲಿನ ಸಭಾಸದರಾದ ಸರದಾರ [illegible] ದೇಶದ [illegible] ಮೇಲೆ ಒಂದು ಮಾನಹಾನಿಯ ದಾವೆಯನ್ನು ಹೂಡಿದರು. ಸರಕಾರರಿಗೆ ಸ್ವರಾಜ್ಯ ಪಕ್ಷದವರೆ [illegible] ಸಿದ್ಧರಿಂದ, ಮಾನಹಾನಿಯಾಯಿತೆಂದು ಅವರ ಮೊ[illegible].

— ಗೋದಾವರೀ ಜಿಲ್ಲೆಯ [illegible] ಮಹಮ್ಮದ ಅಲ್ಲೀಯವರಿಗೆ [illegible] ಮಾನಪತ್ರವನ್ನರ್ಪಿಸಲು [illegible].

— ಅಮೃತಸರದಲ್ಲಿ [illegible] ಸರದಾರ [illegible] ಸಿಂಗರವರು [illegible] ಗುರುದ್ವಾರ ಪ್ರಬಂಧಕ ಕಮಿಟಿ [illegible] ವಾರವಾಗಿ ನಿಲ್ಲಿಸಿ [illegible] ಕದಾನ ಮಾಡಿದರು. [illegible] ಸರಕಾರರಿಗೆ ಬೆಂಬಲಿಸಿದರು [illegible] ಸರ ಕೇಳಿ [illegible] ಕೊಳ್ಳಲು [illegible] ಲೋಕಸಮಾಜಕ್ಕೆ [illegible].

— [illegible] ಬಿಟ್ಟರು. ಕಳೆದ [illegible] ತ್ತ, [illegible] ಬಿಸ್ಸರು. [illegible] ಘಂಟೆ ವರೆಗೆ ಮುಂಬಯಿ [illegible] ಗಾರರ ವಕೀಲಿ [illegible] ದ ನೋಟ್ಸು ಪ್ರಾರಂಭವಾಗಿದ್ದು [illegible] ಡೊಮಿಯಮ್ ಜನರಲ್ [illegible] ರಾತ್ರಿ ೯ ಘಂಟೆಗೆ ಪ್ರಾರಂಭ [illegible] ವಯಸ್ಸು ೬೫ ಹಿಂದೆ ಸ್ವಾ[illegible] ದುವವರೆಗೆ ವಕೀಲಿ ನಡಿಸಿದ [illegible] ಒಗ್ಗೆ ಮರುದಿನ ದಿನ ೧೧॥ ಘಂಟೆಗೆ [illegible] ಮೂರ್ತಿಗಳಾದ ಸರ್ ವಿ. [illegible] ಯಲ್ಲಿ ದುಃಖಪ್ರದರ್ಶಕ ಸಭೆ [illegible] ಹೈಕೋರ್ಟಿನಲ್ಲಿ ನಡೆಯಿತು. ನ್ಯಾಯಮೂರ್ತಿಗಳೂ, ಎಡ್ವೋಕೇಟ್ ಜನರಲ್‌ರೂ, ಸರಕಾರಿ ವಕೀಲರೂ ಅವರ ಗುಣಾನುವಾದಗಳನ್ನು ಮಾಡಿದರು.

— ಪೆಗ್ ಕೌಶಲ ಅಲ್ಲಿಯವರು [illegible] ಹೋದಾಗ, ಅವರಿಗೆ ಪ್ರಚಂಡ ಸ್ವಾಗತವಾಯಿತು. ಮ್ಯುನಿಸಿಪಾಲಿಟಿಯ ಕಡೆಯಿಂದ ಪಂಡಿತ ಜವಾಹರಲಾಲರವರು ಮಾನಪತ್ರವನ್ನರ್ಪಿಸಿದರು.

— ಕಲ್ಲಿಕೋಟೆಯಲ್ಲಿ ಸಣ್ಣ ಗಲಭೆ. ಥಿಯಾ ಜಾತಿಯ ವಕೀಲರೊಬ್ಬರು ದಿವಾಣಿ ಮೈಲಿಕರವರ ಕೋರ್ಟಿನಲ್ಲಿ ಒಂದು ಜರೂರಿನ ಅಪೀಲನ್ನು ದಾಖಲಮಾಡಹೋಗಿದ್ದರು. ಬಿಮಾಣಿರು ಕೋರ್ಟನ್ನು ಒಂಕಾರ ಮಂದಿರದಲ್ಲಿ ನೆರಸಿದ್ದರು. ಥಿಯಾ ವಕೀಲರ ಪ್ರವೇಶದಿಂದ ಭ್ರಷ್ಟವಾಯಿತೆಂದು ಅವರನ್ನು ಕೂಡಲೇ ಹೊರಹೋಗಹೇಳಿದರಂತೆ. ವಕೀಲರು ಅಪೀಲು ಅತಿ ಜರೂರಿನದೆಂದು ವಾದಿಸಿದರೂ ಮೆಜಿಸ್ಟ್ರೇಟರು ಹೊರಹೋಗಬೇಕೆಂಬ ಹಠ ಬಿಡದೆ, ಅವರನ್ನು ಹೊರಹೋಗಹೇಳಿದರಂತೆ.

— ಸಂಯುಕ್ತ ಪ್ರಾಂತದ ಕೊಂಗ್ರೆಸ ಕಮಿಟಿಯು ಕಳೆದ ತಾರೀಖು ೪ನೇ ಮಂಗಳವಾರಕ್ಕೆ ನೆರೆದು, ರಾಷ್ಟ್ರೀಯ ಸಭೆಯ ಧ್ಯೇಯದೊಳಗಿನ 'ಸ್ವರಾಜ್ಯ' ವೆಂಬದರ ಅರ್ಥವನ್ನು 'ಪೂರ್ಣ ಸ್ವಾತಂತ್ರ್ಯ' ವೆಂದು ಮಾಡಬೇಕೆಂದು ರಾಷ್ಟ್ರೀಯ ಸಭೆಗೆ ಶಿಫಾರಸು ಮಾಡಿದೆ.

ಮದ್ರಾಸಿನ ಕಾಯಿದೆ ಕೌನ್ಸಿಲಿನಲ್ಲಿ ಮಂತ್ರಿಮಂಡಳದ ಮೇಲೆ ನಿಂದಾವ್ಯಂಜಕ ಠರಾವು ಚರ್ಚೆಯಾಗುವ ದಿನ ಶ್ರೀ ಸತ್ಯಮೂರ್ತಿಯವರು ಮಂಡಳವು ರಾಜಕೀಯ ಕೈದಿಗಳನ್ನು ತೀರ ಕೆಟ್ಟ ರೀತಿಯಿಂದ ನಡಿಸಿಕೊಂಡು ತನ್ನ ಅಪಾತ್ರತೆಯನ್ನು ಸಿದ್ಧಪಡಿಸಿರುತ್ತದೆಂದು [illegible] ದರಿಸಿದರು. ಅಷ್ಟರಲ್ಲಿ ಮಂತ್ರಿಮಂಡಳದ ಕಡೆ [illegible] ರಾಜ ಶೆಟ್ಟಿಯವರು ರಾಜಕೀಯ ಕೈದಿಗಳು [illegible] ದರೋಡೆಖೋರರು ಎಂದು ಉತ್ತರ ಕೊಟ್ಟರು. ಕೌನ್ಸಿಲಿನಲ್ಲಿ 'ಧಿಕ್ಕಾರ, ಧಿಕ್ಕಾರ' ಎಂಬ ಧ್ವನಿ [illegible].

— [illegible] ಮ್ಯುನಿಸಿಪಾಲಿಟಿಯಲ್ಲಿ ಹಾಲು ಕೊಡುವ [illegible] ಕೊಳೆ ಪಾತಬೂರವೆಂದು ಸೂಚಿಸಿದ ಠರಾವನ್ನು [illegible] ಮ್ಯುನಿಸಿಪಾಲಿಟಿಯವರು ವಿಚಾರಕ್ಕಾಗಿ [illegible] ಮಂಡಳಕ್ಕೆ ವಹಿಸಿರುವರು.

— [illegible] ಸಾಹೇಬರವರು ಕವಿವರ್ಯರ [illegible] ವಿದ್ಯಾಲಯಕ್ಕೆ ಅರ್ಧ ಲಕ್ಷ ರೂಪಾಯಿಗಳ [illegible].

[illegible] ದೇಶದೊಳಗಿನ [illegible] ಪ್ರಜೆಗಳು ದಂಗೆಯನ್ನೆಬ್ಬಿಸಿರುವ [illegible] ಸರಕಾರವು ಸಂಸ್ಥಾನಗಳ ಪ್ರಭು [illegible] ಕಾನೂನಗಳನ್ನು ವಿಧಾಯಿ [illegible] ದಂಗೆಗಾರರ ಸೈನ್ಯ [illegible].

ಕರ್ನಾಟಕ ಸ್ವಯಂಸೇವಕರ ಪರಿಷತ್ತು.

([illegible] ಹುಬ್ಬಳ್ಳಿ)

ವಿಜಾಪುರದಲ್ಲಿ ತಾ ೨೦ ಮತ್ತು ೨೧ನೇ ನವಂಬರ [illegible] ದಿವಸಗಳಲ್ಲಿ ದೇ. ಭ. ಜಮನಾಲಾಲ ಬಜಾಜ ಇವರ ಅಧ್ಯಕ್ಷತೆಯ ಕೆಳಗೆ ಕೂಡಿದ ಕರ್ನಾಟಕ ಸ್ವಯಂಸೇವಕರ ಪ್ರಥಮ ಪರಿಷತ್ತಿನಲ್ಲಿ ಕೆಳಗಿನ ಠರಾವುಗಳು ಪಾಸಾದವು.

೧ ಹಿಂದುಸ್ಥಾನದ ಎಲ್ಲ ಕಡೆಯಿಂದ ಬಂದ ಸ್ವಯಂಸೇವಕರ ದಿಲ್ಲಿಯಲ್ಲಿ ಕಲೆತು, ಹಿಂದುಸ್ಥಾನ [illegible] ಮಂಡಳವನ್ನು ನೇಮಿಸಿ, ಆ ಮಂಡಳದ ಮುಖಾಂತರ ಇಡೀ ಹಿಂದುಸ್ಥಾನದಲ್ಲೆಲ್ಲ ಸುಸಂಘಟಿತ ಸ್ವಯಂಸೇವಕರ ಪಥಕಗಳನ್ನು ಸ್ಥಾಪಿಸುವ ಒಂದು [illegible] ಯೋಜನೆಯನ್ನು ಈ ಪ್ರಥಮ ಕರ್ನಾಟಕ ಸ್ವಯಂಸೇವಕರ ಪರಿಷತ್ತು ಪೂರ್ಣ ಸಮ್ಮತಿಸುತ್ತದೆ. ಮತ್ತು ಅವರ ಈ ಅಂಗೀಕೃತ ಕಾರ್ಯದಲ್ಲಿ ತನ್ನ ಸಂಪೂರ್ಣ ಬೆಂಬಲವಿರುವದೆಂದು ಆ ಮಂಡಳದವರಿಗೆ ವಚನವನ್ನು ಕೊಡುತ್ತದೆ. ಮತ್ತು [illegible] ಕೋಕೋನಾಡಿನ ಸ್ವಯಂಸೇವಕರ ಪರಿಷತ್ತಿಗೆ ಈ ಪ್ರಾಂತದಿಂದ ಹನ್ನೊಂದು ಸ್ವಯಂಸೇವಕ ಪ್ರತಿನಿಧಿಗಳನ್ನು ಆರಿಸಿರುತ್ತದೆ.

೨. ಮಹಾತ್ಮಾ ಗಾಂಧಿಯವರು ಪ್ರತಿಪಾದಿಸಿದ ಅನತ್ಯಾಚಾರ ಅಸಹಕಾರತೆಯ ಕಾರ್ಯಕ್ರಮದಲ್ಲಿ ಈ ಪರಿಷತ್ತು ತನ್ನ ಪೂರ್ಣ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ. ಮತ್ತು ಬಾರ್ಡೋಲಿಯಲ್ಲಿ ರಚಿಯಿಸಿದ ವಿಧಾಯಕ ಕಾರ್ಯಕ್ರಮವನ್ನು ಜೋರಿನಿಂದ ಅಮಲಿನಲ್ಲಿ ತರಲಿಕ್ಕೆ ನಿಶ್ಚಯಿಸುತ್ತದೆ.

೩. ಕೆಳಗೆ ನಮೂದಿಸಿದ ಎರಡು ತರಹದ ಸ್ವಯಂಸೇವರಿಗೆ [illegible] ಕ್ಷೇತ್ರವನ್ನು ಕೊಡುವ ಬಗೆ ಎಲ್ಲ ರೀತಿಯಿಂದಲೂ, ವಿಧಾಯಕ ಮಾಡತಕ್ಕದ್ದೆಂದು ಕರ್ನಾಟಕ ಸ್ವಯಂಸೇವಕ ಮಂಡಳಕ್ಕೆ ಈ ಪರಿಷತ್ತು ವಿನಂತಿಮಾಡಿಕೊಳ್ಳುತ್ತದೆ.

(ಅ) ದೇಶಕಾರ್ಯಕ್ಕಾಗಿ ತುರಂಗಕ್ಕೆ ಹೋಗುವದನ್ನೊಳಗೊಂಡು ಎಲ್ಲ ರೀತಿಯಿಂದಲೂ ಕಷ್ಟ ಸೋಸಲಿಕ್ಕೆ ಸಿದ್ಧರಿದ್ದ ಸ್ವಯಂಸೇವಕರು.

(ಬ) ತುರಂಗಕ್ಕೆ ಹೋಗಲಿಚ್ಛಿಸದೆ, ಗ್ರಾಮ ಪಟ್ಟಣ-ಶಹರುಗಳಲ್ಲಿಯೇ ಇದ್ದು, ಕೇವಲ ಸಾಮಾಜಿಕ, ವಿಧಾಯಕ ಕಾರ್ಯಕ್ರಮವನ್ನು ಕೈಕೊಳ್ಳಲಿಚ್ಛಿಸುವ ಸ್ವಯಂಸೇವಕರು.

೪. ಸ್ವಯಂಸೇವಕ ಪಥಕಗಳ ಸಂಘಟನೆಯ ಕಾರ್ಯವನ್ನು ಶೀಘ್ರವಾಗಿ ಕೈಕೊಳ್ಳಲಿಕ್ಕೆ ರಾಷ್ಟ್ರೀಯ ಮಹಾಸಭೆಗೆ ಈ ಪರಿಷತ್ತು ಒತ್ತಾಯ ಮಾಡುತ್ತದೆ. ಮತ್ತು ಈ ಬಗ್ಗೆ ತಾನು ಮಾಡುವದಾದಿದ ಠರಾವುಗಳನ್ನು ಅಮಲಿ [illegible] ರುವ ಹಾಗೆ ತನ್ನ ಕಾರ್ಯಕಾರೀ ಮಂಡಳದವರಿಗೆ ಆಜ್ಞೆ ಮಾಡತಕ್ಕದ್ದೆಂದು ಆ ಮಹಾಸಭೆಗೆ ವಿನಂತಿ ಮಾಡಿಕೊಳ್ಳುತ್ತದೆ.

ಸತ್ಯಾಗ್ರಹೀ

ಪರ್ಯಾಯ ಸಂಚಿಕೆ.

ಉಡುಪಿ ಶ್ರೀ ಕೃಷ್ಣನ ಪರ್ಯಾಯ
ಮಹೋತ್ಸವದ ಗೌರವಾರ್ಥವಾಗಿ!
ಡಿಸೆಂಬರ ಅಖೈರಿಗೆ ಜರುಗಿಯುವ
ಕೊಂಗ್ರೆಸ್ಸಿನ ಗೌರವಾರ್ಥವಾಗಿ!!

ಸಮಸ್ತ ವಿಷಯಗಳೂ ಅನೇಕ ಚಿತ್ರಗಳೂ ಚೆಲುವಾಗಿ ಕಟ್ಟಿಸಲ್ಪಡುವವು. ಹತ್ತು ಹದಿನೆರಡು ಫುಲ್‌ಸ್ಕೇಪ್ ಸ್ಕ್ಯಾಜಿನ ಆಂಟಿಕ್‌ಪೇಪರಿನ ಪುಟಗಳ ಮೇಲೆ ರಾಜಕೀಯ ಸಾಮಾಜಿಕ, ಮತವಿಷಯಿಕ ಚಿತ್ರಗಳು ಮುದ್ರಿಸಲ್ಪಡುವವು.

ವಿಷಯಗಳು:— (೧) ರಾಜಕೀಯ, (೨) ಲೋಕವೃತ್ತಾಂತ, (೩) ಮತವಿಷಯಿಕ, (೪) ಸಾಮಾಜಿಕ, (೫) ವೈದ್ಯಕೀಯ, (೬) ವೈಜ್ಞಾನಿಕ, (೭) ಔದ್ಯೋಗಿಕ, (೮) ಕೃಷಿ, (೯) ಸಾಹಿತ್ಯ, (೧೦) ವರ್ತಮಾನಸಾರ— ಇತ್ಯಾದಿ. ಅನೇಕ ಎಷ್ಟೋ ಭಾವಗರ್ಭಿತವೂ, ಉತ್ಸಾಹಕವೂ ಆಗಿರುವ ಲೇಖಗಳು ಉತ್ತಮ ಲೇಖಕರಿಂದ ಬರೆಯಲ್ಪಡುವವು.

ಇಡೀ ಕರ್ನಾಟಕದ ಎಲ್ಲಾ ತರದ ಜನರ ಕೈಗೂ ಇದು ಸೇರುವದರಿಂದ ಜಾಹೀರಾತುಗಳನ್ನು ಕೊಡುವದಕ್ಕಿದು ಸುಸಂದರ್ಭ ದರ— ಸಾಧಾರಣ ಪುಟ ಒಂದಕ್ಕೆ ರೂ. ೧೬, ಅರ್ಧ ಪುಟಕ್ಕೆ ರೂ. ೬, ಕಾಲು ಪುಟಕ್ಕೆ ರೂ. ೪, ಒಂದು ಎಂಟನೇ ಪುಟಕ್ಕೆ ರೂ. ೨-೮-೦. ಪ್ರಕಟಣೆಗಳನ್ನು ಡಿಸೆಂಬರ ಅಖ್ಯೇರಿಯೊಳಗೆ ಕಳುಹಿಸಬೇಕು.

ಗ್ರಾಹಕರೂ ಡಿಸೆಂಬರ ಅಖೈರಿಯೊಳಗೇನೇ ನಮಗೆ ಬರೆಕೊಂಡರೆ ಒಳ್ಳೆಯದು. ಸಂಚಿಕೆಯು ಒಂದು ಪ್ರತಿಗೆ ಸತ್ಯಾಗ್ರಹೀ ಚಂದಾದಾರರಿಗೆ ಆಣೆ ಆರು; ಇತರರಿಗೆ ಆಣೆ ಎಂಟು. ಹದಿನೆರಡು ಪ್ರತಿಗಳಿಗಿಂತ ಕಡಿಮೆ ವಿ. ಪಿ. ಮಾಡುವದಿಲ್ಲ. ಕಡಿಮೆ ಕೊಳ್ಳುವವರು ಟಪಾಲು ಟಿಕೀಟು ಮೂಲಕವಾಗಲೀ, ಮನಿ-ಆರ್ಡರು ಮೂಲಕವಾಗಲೀ ಹಣವನ್ನು ಪೂರಾ ಕಳುಹಿಸಬೇಕು. ಏಜಂಟರಾಗಿ ಕೊಳ್ಳುವವರು ಠೇವು ಎರಡನ್ನು ಮುಂದಾಗಿ ಕಳುಹಿಸಬೇಕು. ಸಂಚಿಕೆಯು ಜನವರಿ ತಾರೀಖು ೨೦ರ ಒಳಗೆ ಪ್ರಕಟಿಸಲ್ಪಡುವದು. ಸತ್ಯಾಗ್ರಹಿಯ ಆಕಾರದಲ್ಲೇ ಆಂಟಿಕ್‌ಪೇಪರಿನ ರಕ್ಷಾಪತ್ರ (ಕವರು) ಇದ್ದು, ೩೨-೪೦ ಪುಟಗಳ ಲೇಖನಗಳಿರುವವು. ಉತ್ತಮ ಕಾಗದದ ಮೇಲೆ ಮುದ್ರಣ.

ಉಡುಪಿ, ತಾ ೧೫-೧೧-೨೭ } ವ್ಯವಸ್ಥಾಪಕ, ಸತ್ಯಾಗ್ರಹೀ ಕಾರ್ಯಾಲಯ.

ವಿವಿಧ ಸಂಗ್ರಹ.

(೫ನೇ ಪಾನಿನಿಂದ ಮುಂದರಿದದ್ದು.)

ಇದೆ. « ಗಲಿಹದ್ದರೆ, ಬ್ರೋಕರಿಯಿಂದ ಸಹಾಯ ಕೊಡಬೇಕೆಂದು ಸರಕಾರಕ್ಕೆ ತೋರಿದ್ದಲ್ಲಿ, ಪರದೇಶ ಉಕ್ಕಿನ ಮೇಲೆ ಜಕಾತನ್ನಿಹದೆ, ಸರಕಾರವು ತನ್ನ ಕೋಶದೊಳಗಿಂದ ಕೆಲ ರಕಮುಗಳನ್ನು ಹಿಂದುಸ್ಥಾನದೊಳಗೆ ಉಕ್ಕಿನ ಉದ್ಯೋಗವನ್ನು ನಡಿಸುವವರಿಗೆ ಬಹುಮಾನ ಬೇಕೆಂದು ಠರಾವಾಗಿದೆ. ಸರಕಾರಿ ಕೋಶವು ಬರಿದಾಗಿರುವ ಸಮಯದಲ್ಲಿ ಉಕ್ಕಿನ ಉದ್ಯೋಗಕ್ಕೆ ಗ್ರಾಂಟು ಸಿಗುವದು ಗೊತ್ತಿದ್ದದ್ದೇ ಸರಿ. ಅದಿರಲಿ. ನಮ್ಮ ಸಾವ್ರಕಾರರು ತಮ್ಮ ನಿಷೇಧವನ್ನು ತಾವೇ ಧಿಕ್ಕರಿಸಿ, ಪರಿಷತ್ತಿಗೆ ಹೋಗುವಷ್ಟು ಸ್ವಾಭಿಮಾನಶೂನ್ಯರಾದರೇಕೆ? ಬುದ್ಧಿಕನಿಷೇಧವು ಸಾಕೆಂದು ಅವರು ತಿಳಿದರೇನು? ಮಹಾನುಭಾವರ ಸ್ವಾಭಿಮಾನಶೂನ್ಯತೆಯು ಈ ಚಿಕ್ಕವು ತೀರ ಕರುಣಾಸ್ಪದವು.

***

ಮಹಾಯುದ್ಧಕ್ಕಾಗಿ ಪಂಜಾಬದಲ್ಲಿ ಹೇಗೆ ರಿಕ್ರೂಟ ಒಟ್ಟು ಮಾಡಿದರು?

ಪಂಜಾಬದ ಗವ್ಹರ್ನರಾದ್ದ ಸರ್ ಮ್ಯಾಕೇಲ ಒಡ್ವಾಯರರು ಸರ್ ಶಂಕರನ್ ನಾಯರರ ಮೇಲೆ ಮಾನಹಾನಿಯ ದಾವೆ ಮಾಡಿರುವರು. ಈ ಬಗ್ಗೆ ಇಂಗ್ಲೆಂಡಿನಲ್ಲಿ ಸಾಕ್ಷಿ ಕೊಳ್ಳುತ್ತಲಿರುವರು. ಈ ಸಾಕ್ಷಿಗಳಲ್ಲಿ ಸರ್ ಮ್ಯಾಕೇಲ ಒಡ್ವಾಯರರ ನೇತೃತ್ವದಲ್ಲಿ ಹೇಗೆ ರಿಕ್ರೂಟರು ಒಟ್ಟುಗೂಡಿಸಲ್ಪಟ್ಟರು? ಎಂಬ ಕಥೆಯು ನಿವೇದನವಾಗಿದೆ. ಕಪೂರೂರ ಜಿಲ್ಹೆಯೊಳಗಿನ ಮುಸಾಮುಕ್ ಬಾನು ಎಂಬ ಮುಸಲ್ಮಾನೀಯ ಹೆಂಗಸು ನುಡಿದದ್ದೇನಂದರೆ.— «ರಿಕ್ರೂಟರನ್ನು ಸಂಗ್ರಹಿಸಲು ತಹಶೀಲದಾರರು ಬಂದ ಊರಸುದ್ದಿಯಾದ ಕೂಡಲೆ, ಊರವರೆಲ್ಲರೂ ಓಡಿ ಹೋದರು. ೧೦-೧೨ ಹೆಂಗಸರು ಮಾತ್ರ ಊರಲ್ಲುಳಿದರು. ಅವರಿಗೆ ಹಿಡಿದು ಚೆನ್ನೆ ಎಂಬಲ್ಲಿ ಒಯ್ದು, ಒಂದು ಗುಡಿಸಲಿನಲ್ಲಿ ಬಂಧಿಸಿದರು. ಅವರಿಗೆ ಅಂದು ಆಹಾರವಿಲ್ಲ. ಮಾರನೇ ದಿನ ಸಿಪಾಯಿಯರು ಮುಳ್ಳು ತಂದರು, ಸ್ತ್ರೀಯರಿಗೆ ನಗ್ನರಾಗಹೇಳಿದರು. ಅವರ ಕಾಲೊಳಗಿಂದ ಆ ಮುಳ್ಳನ್ನು ಎಳೆಯಬೇಕೆಂತಲೂ ಹುಕುಮಾಯಿತು. ಮುರಾದ ಎಂಬ ಒಬ್ಬ ಪುರುಷನನ್ನು ಸಿಪಾಯರೊಬ್ಬರು ಹಿಡಿದಿದ್ದರು. ಅವನ ಕೊರಳಿಗೆ ಕಟ್ಟಿದ ಸರ ಹಾಕಲಾಯಿತು. ಅವನ ಸುತ್ತಲು ನಗ್ನ ಸ್ತ್ರೀಯರಿಗೆ ವರ್ತುಳಾಕಾರವಾಗಿ, ವಿವಾಹೋತ್ಸವದೊಳಗಿನ ಪದ್ಯಗಳನ್ನು ಹಾಡಲು ಅಜ್ಞಾಪಿಸಿದರು. ಮುರಾದನ ಕೈಯನ್ನು ಹಿಂಬದಿಗೆ ಮಾಡಿ ಕಟ್ಟಿದರು. ಅವನ ಗುಹ್ಯಕ್ಕೆ ಉದ್ದ ಹಗ್ಗವನ್ನು ಹಾಕಿ, ಅದನ್ನು ಆಗ್ಗಿಂದಾಗ ಎಳೆಯುತ್ತಿದ್ದರು. ಸ್ತ್ರೀಯರು ಹಾಡು ಹಾಡಲು ಒಪ್ಪಲಿಲ್ಲ.»

***

ಮತ್ತೊಂದು ಕಥೆ.

ಜಿವಾಟ ಎಂಬವರು ತಮ್ಮ ಸಾಕ್ಷಿಯಲ್ಲಿ ನುಡಿದದ್ದೇನಂದರೆ:— ತಹಶೀಲ ಸಾಹೇಬರು ನಮ್ಮ ಊರನ್ನು ಮುಟ್ಟುವಷ್ಟರಲ್ಲಿ, ಊರೊಳಗಿನ ಪ್ರಾಯದವರೆಲ್ಲರೂ ದೂರ ಓಡಿಹೋಗಿಬಿಟ್ಟಿದ್ದರು. ಊರಲ್ಲಿ ತಹಶೀಲದಾರರು ಲೂಟಿ ಮಾಡಿದರು; ಹೆಂಗಸರ ಮೇಲೆ ಅತ್ಯಾಚಾರಗಳನ್ನಾಚರಿಸಿದರು. ಕಡೆಗೆ ನನ್ನನ್ನು ಕರೆಹಿಡಿದರು. ಚಿತ್ರವ್ರಹಾರ ಮಾಡಬೇಕೆಂದು ಹುಕುಮಾಯಿತು. ನನಗೆ ಬತ್ತಲೆಯಾಗ ಹೇಳಿದರು. ಆದರೆ, ಸುತ್ತು ಮುತ್ತು ಜನರು ನೆರೆದಿದ್ದರಿಂದ, ನಾನು ಬತ್ತಲೆಯಾಗಲೊಪ್ಪಲಿಲ್ಲ. ಬಳಿಕ, ಚಿತ್ರವ್ರಹಾರವಾಯಿತು. ಮತ್ತು ಮೊಣಕಾಲೊಳಗಿಂದ ಕೈಗಳನ್ನು ತೂರಿಸಿಕೊಂಡು ಕಿವಿಗಳನ್ನು ಹಿಡಿದು, ನಿಲ್ಲಬೇಕೆಂದು ಹುಕುಮಾಯಿತು. ನನ್ನಂತೆಯೇ ಇನ್ನು ೫-೬ ಮಂದಿಗಳಿಗೆ ಅದೇ ಶಿಕ್ಷೆಯು ವಿಧಿಸಲಾಯಿತು. ಹೀಗೆ ಮಾಡಿದ್ದರೂ ಕಿವಿ ಹಿಡಿದು ನಿಂತುಕೊಂಡಾಗ, ಬೆನ್ನು ಮೇಲೆ ಮುಳ್ಳುಗಳನ್ನಿಟ್ಟರು; ಕಾಲುಗಳೊಳಗಿಂದ ಮುಳ್ಳು ಕೊಂಗೆಗಳನ್ನು ಒಂದು ಬದಿಯಿಂದ ಇನ್ನೊಂದು ಬದಿಗೆ ಎಳೆದರು. ಕಾಲುಗಳೊಳಗಿಂದ ನೆತ್ತರ ಸುರಿಯಿತು. ಬಳಿಕ, ಅದೇ ರೀತಿಯಲ್ಲಿ ೩-೪ ಮೈಲುಗಳವರೆಗೆ ನಡಿಸಿ ಒಯ್ದರು. ಅನ್ನವೂ ಇಲ್ಲ; ನೀರು ಕೇಳಬೇಡಿರಿ. ನಮ್ಮ ಹುಡುಗರನ್ನು ರಿಕ್ರೂಟ ಆಗಿ ಕೊಡಬೇಕೆಂದು ನಮಗೆ ಈ ಪ್ರಕಾರ ಶಿಕ್ಷೆಯನ್ನು ಕೊಟ್ಟರು. ನಮಗೆ ಅಲ್ಲಿಂದ ಪುನಃ ತಹಶೀಲದಾರರು ಎಂಬಲ್ಲಿ ಒಯ್ದರು. ಅಲ್ಲಿ ಹೋದ ಮೇಲೆ, ಪುನಃ ನಾವು ಬತ್ತಲೆ. ಪುನಃ ಕಾಲೊಳಗಿಂದ ಕೈ ತೂರಿಸಿ, ಕಿವಿಹಿಡಿದು ನಿಂತೆವು. ಅಷ್ಟರಲ್ಲಿ, ಕೆಲ ಬತ್ತಲೆ ಸ್ತ್ರೀಯರನ್ನು ತಂದರು. ಅವರನ್ನು ನಮಗೆ ನೋಡಹೇಳಿದರು. ನಾವು ಅವರನ್ನು ನೋಡಲೊಪ್ಪದ್ದರಿಂದ, ಅವರ ತಲೆಯ ಮೇಲೆ ಥಪಡಾಕಿ ಕೊಟ್ಟರು.

***

ಇನ್ನೊಂದು ಪ್ರಕಾರ,

ಜವಾಲ ಎಂಬ ಹೆಸರಿನ ೬೦ ವರ್ಷಗಳ ವೃದ್ಧ ಹೆಂಗಸು ನುಡಿದದ್ದೇನಂದರೆ:— ಮಹಾಯುದ್ಧವು ನಡೆಯುತ್ತಿರುವಾಗ, ತಹಶೀಲದಾರರು ಒಮ್ಮೆ ನಮ್ಮ ಊರಿಗೆ ಬಂದರು. ಅವರಗೂಡ ಪೇದೆಗಳ ತಂಡವೊಂದಿತ್ತು. ಪೇದೆಯೊಬ್ಬನು ನನ್ನ ಕೈಯೊಳಗಿನ ಕೋಲನ್ನು ಹಿಡಿದು, ನಿನ್ನ ಹುಡುಗನೆಲ್ಲಿರುವನು? ಎಂದು ಪ್ರಶ್ನಿಸಿದನು. ಹುಡುಗನು ಎಲ್ಲಿ ಹೋದನೆಂದು ನನಗೆ ಗೊತ್ತಿಲ್ಲ. ಅದರಂತೆ ನಾನು ಅವರಿಗೆ ಹೇಳಿದೆನು, ಮತ್ತು ಮುದುಕಿಗೆ ಉಪದ್ರವ ಕೊಡಬೇಡಿರೆಂದು ಬೇಡಿಕೊಂಡೆನು. ಆದರೆ, ಕೇಳುವವರ್ಯಾರು? ನನಗೆ ಮಿಥರಂಝಾ ಊರಿಗೆ ಒಯ್ದರು. ಅಲ್ಲಿ ಇತರ ಕಡೆಯಿಂದ ಅನೇಕ ಹೆಂಗಸರನ್ನು ತಂದಿದ್ದರು. ನಮಗೆಲ್ಲರಿಗೆ ಕಾಲೊಳಗಿಂದ ಕೈ ತೂರಿಸಿ ಕಿವಿ ಹಿಡುಕೊಂಡು ನಿಲ್ಲಲು ಅಪ್ಪಣೆಯಾಯಿತು. ನಾನು ಅಪ್ಪಣೆಯಾದಂತೆ ನಿಂತೆ. ಬಳಿಕ ನನ್ನ ಬೆನ್ನು ಮೇಲೆ ಭಾರವಾದ ಒಜ್ಜೆಯನ್ನಿಟ್ಟರು. ಮತ್ತು ನನ್ನ ಹಿಂದೆ ಮುಳ್ಳನ್ನು ರಾಶಿಹಾಕಿದರು. ಬಳಿಕ, ನೆರೆಯ ಗ್ರಾಮದಿಂದ ಮೂವ ಪುರುಷರನ್ನು ಹಿಡತಂದು, ನನ್ನ ಮುಂದೆ ಬತ್ತಲೆ ನಿಲ್ಲಹೇಳಿದರು. ಬಳಿಕ, ಆ ಮೂವರಿಗೆ ಕಟ್ಟಿದ ಬಳ್ಳಿಯನ್ನು ನನ್ನ ಕೈಯಲ್ಲಿ ಕೊಟ್ಟು, ಅದನ್ನು ಎಳೆಯಹಚ್ಚಿದರು. ನನಗೆ ಭೀತಿಯಾಯಿತು. ನಾನು ಅಳಲಾರಂಭಿಸಿದೆನು. ಮೂವರೂ ಬಿಕ್ಕಿ ಬಿಕ್ಕಿ ಅಳುತ್ತಿದ್ದರು. ಬಳಿಕ, ನಮ್ಮನ್ನು ಭುಲಕಲಕ್ಕೆ ಒಯ್ದರು, ಅಲ್ಲಿ ಕೋಣೆಯಲ್ಲಿ ಹಾಕಿಬಿಟ್ಟರು. ಆಗ ರೋಝಾ ಉಪವಾಸದ ದಿನಗಳು. ಸಾಯಂಕಾಲಕ್ಕೆ ಉಪೋಷಣವ್ರತದ ಪಾರಣೆ ಮಾಡಲು ಒಂದು ಬಟಕು ನೀರು ಸಹ ಕೊಡಲಿಲ್ಲ. ೨೦ ದಿವಸಗಳ ತರೆಗೆ ಹೀಗೆ ಕಳೆದವು. ಬಳಿಕ, ಈ ೨೦ ದಿವಸಗಳ ಅನ್ನ ಖರ್ಚಿಗೆಂದು ನಮ್ಮ ಕಡೆಯಿಂದ ೬ ೬ ರೂ ವಸೂಲ ಕೊಂಡು, ನಮ್ಮನ್ನು ಬಿಟ್ಟುಕೊಟ್ಟರು. ಈ ರೂಪಾಯಿಗಳನ್ನು ನಾವು ಸಾಲಕೊಂಡು ತೆತ್ತೆವು. ಬಳಿಕ, ನಾನು ಮನೆಗೆ ಬಂದೆನು ನನ್ನ ಹುಡುಗನು ಸೈನ್ಯದಲ್ಲಿ ದಾಖಲ ಮಾಡಿಕೊಳ್ಳಲ್ಪಟ್ಟನೆಂತಲೂ. ಅವನು ಅಷ್ಟರಲ್ಲಿ ಮೃತ ಹೊಂದಿದನೆಂತಲೂ ನನಗೆ ತಿಳಿಯಿತು.

***

ದೈವುಳ್ಳ ಹಿಂದುಸ್ಥಾನ.

ಹಿಂದುಸ್ಥಾನವು ದರಿದ್ರದೇಶವೆಂತಲೂ, ಬ್ರಿಟಿಶ ಆಡಳಿತಯಲ್ಲಿ ಅದು ತೀರ ಗತಿಗೇಡಾಯಿತೆಂತಲೂ ಪರಿಹು ದಾದಾಭಾಯಿ ನವರೋಜಿ ಮೊದಲಾದವರು ಹಿಂದೀಯರ ಉತ್ಪನ್ನವನ್ನು ನಿಶ್ಚಯಿಸಿ, ಸಿದ್ಧಪಡಿಸಿರುವರು. ಸದ್ಯಕ್ಕೆ 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ನಮ್ಮ ಉತ್ಪನ್ನವು ವರ್ಷಕ್ಕೆ ಒರೇ ರೂಪಾಯಿ ೪೧ ಎಂದು ಸಿದ್ಧಪಡಿಸಲಾಗಿದೆ. ಆದರೆ, ಇದೇ ತಾ ೩ ನೇ ಡಿಸೆಂಬರಕ್ಕೆ ನಮ್ಮ ನಾಮದಾರ ಗವ್ಹರ್ನರರು ಯುರೋಪಿಯನ್ ವ್ಯಾಪಾರಿಗಳ ಪರಿಷತ್ತಿನ ಆನಾವರಣ ಸಮಾರಂಭ ಮಾಡುವಾಗ «ಹಿಂದುಸ್ಥಾನವು ಎಷ್ಟು ಭರದಿಂದ ದೊಡ್ಡಸ್ಥಿತಿಯನ್ನು ಸಂಪಾದಿಸಹತ್ತಿದೆ, ಪ್ರವೃತ್ತಿಯು ಎಷ್ಟು ರಭಸದಿಂದ ಸಾಗಿದೆ, ಎಂದು ತಿಳಿದು ಯಾರೂ ಅಚ್ಚರಿಗೊಳ್ಳುವರು» ಎಂದು ನಾಮದಾರರು ಉದ್ಗರಿಸಿದರು. ಬಳಿಕ, ಅವರು ಕೆಲ ಅಂಕಿಗಳನ್ನು ಕೊಟ್ಟು, ತಮ್ಮ ಸಿದ್ಧಾಂತವನ್ನು ಮುಂಡಿಸಿದರು. ಹಿಂದುಸ್ಥಾನದಲ್ಲಿ ೩೧ ಕೋಟಿ ಜನಸಂಖ್ಯೆಯಿದೆ. ೨೫ ಕೋಟಿ, ೬೦ ಲಕ್ಷ ಎಕರೆ ಭೂಮಿಯು ಸಾಗುವಳಿಯಾಗುತ್ತದೆ. ಈ ಸಾಗುವಳಿಯಿಂದ ವರ್ಷಕ್ಕೆ ೧ ಖರ್ವ, ೭ ಅಬ್ಜ, ೧೫ ಕೋಟಿ ರೂಪಾಯಿಗಳು ಉತ್ಪನ್ನವಾಗುತ್ತವೆಂದು ಅಂದಾಜಿದೆ. ಇದಲ್ಲದೆ, ೯ ಕೋಟಿ ಎಕರೆ ಚರೋ ಉತ್ಪನ್ನದ ಕಾಡಿದೆ. ೧೧ ಕೋಟಿ, ೫೦ ಲಕ್ಷ ಎಕರೆ ಭೂಮಿಯನ್ನು ಸಾಗುವಳಿ ಮಾಡಬಹುದು. ಸಿಂಧದೊಳಗಿನ ಕಾಲುವೆ ತೆಗೆಯುವ ಯೋಜನೆಯಿಂದ ೬೦ ಲಕ್ಷ ಎಕರೆ ಭೂಮಿಯು ಬೆಳೆದು, ೧೮ ಕೋಟಿ ರೂಪಾಯಿಗಳ ಉತ್ಪನ್ನವಾಗುವದು. ಇದೇನು ಒರೇ ಅಂಕಿಗಳಲ್ಲ. ೨೦ ವರುಷಗಳ ಮೊದಲು ಒರೇ ೨೦ ಕೋಟಿ ೩೦ ಲಕ್ಷ ಎಕರೆ ಭೂಮಿಯು ಸಾಗುವಳಿಯಾಗುತ್ತಿತ್ತು. ಈಗ ಅದು ೨೫ ಕೋಟಿ, ೬೦ ಲಕ್ಷ ಎಕರೆಗೆ ಮುಟ್ಟಿದೆ. ಈ ಪ್ರಕಾರ ಸಾಗುವಳಿಯು ಮಾನವು ನಾಲ್ಕು ಬದಿಯಿಂದ ಏರೇರುತ್ತಿರುವಾಗ, ಆ ಮಾನದಿಂದ ಜನಸಂಖ್ಯೆಯೇನು ಹೆಚ್ಚು ಬೆಳೆಯಲಿಲ್ಲ. ಇದರ ಮೇಲಿಂದ ಹಿಂದುಸ್ಥಾನವು ಈಗೀಗ ಅಲ್ಪಸಾಹಿತ ಶ್ರೀಮಂತವಾಗಿರುವದೆಂದು ನಿಷ್ಪಕ್ಷಪಾತಿಗಳು ಒಪ್ಪಲೇಬೇಕು. ಹೀಗೆ ನಾಲ್ಕು ಬದಿಯಿಂದ ಪ್ರಗತಿ ಹೊಂದುತ್ತಿರುವಾಗ, ಹಿಂದುಸ್ಥಾನವು ದರಿದ್ರವೆಂದು ಪ್ರತಿಪಾದಿಸಿ, ಭರತಖಂಡದ ಉಪರ್ಜನಕ್ಕೆ ಬಹುಪರಿಯಿಂದ ನಿಷ್ಠಾಪೂರ್ವಕ ದುಡಿದ ಅಧಿಕಾರಿಗಳಿಗೆ ಮಾತ್ರ ಬೇಕಷ್ಟು ಸಂಬಳ ಕೊಡದಿರುವದು ಅಧರ್ಮಕರವು. ನಾಮದಾರ ಗವ್ಹರ್ನರರು ತಮ್ಮ ಲೆಕ್ಕದಲ್ಲಿ ಹಿಂದೀ ಪ್ರಜೆಗಳಿಂದ ಪ್ರತಿ ವರ್ಷಕ್ಕೆ ಎತ್ತಲ್ಪಡುವ ಕರದ ಮಾನವನ್ನು ವಿಚಾರಿಸಲಿಲ್ಲ. ಅವರಿಗೆ ತಗಲುವ ಖರ್ಚಿನ ರಕಮು ಎಷ್ಟೆಂದು ಸಹ ವಿಚಾರಿಸುವಷ್ಟು ಅವರಿಗೆ ಪುರಸತ್ತಿಲ್ಲ. ನಾಮದಾರರು ನುಡಿಯುವಂತೆ, ೩೧ ಕೋಟಿ ಪ್ರಜೆಗಳ ವಾರ್ಷಿಕ ಉತ್ಪನ್ನವು ೧ ಖರ್ವ, ೭ ಅಬ್ಜ, ೧೫ ಕೋಟಿ ಎಂದು ಹಿಡಿದರೂ, ತಲೆಗೆ ಒರೇ ೪೯ ರೂಪಾಯಿಗಳು ಬರುತ್ತವೆ. ಕೋಟಿ-ಖರ್ವ ಲೆಕ್ಕಗಳಿಂದ ರಕಮು ದೊಡ್ಡದೆಂದು ಕಾಣಬಂದರೂ, ಲೆಕ್ಕ ಮಾಡಿದರೆ, ಹಿಂದೀ ಪ್ರಜೆಗಳಿಗೆ ವರ್ಷಕ್ಕೆ ೫೦ ರೂಪಾಯಿಗಳು ದೊರೆತರೆ ಪರಮಾವಧಿಯಾಯಿತು. ಅಷ್ಟು ಗರ್ಭಶ್ರೀಮಂತರವರು. ಆಳುಗಳಿಗೆ ತಿಂಗಳಿಗೆ ೧೬-೨೫ ರೂಪಾಯಿಗಳಷ್ಟು ಸಂಬಳ ತೆತ್ತರೂ, ಅವರಿಗೆ ಅದು ಸಾಲದು. ಹೀಗಿರಲಂತೆ ಅಷ್ಟು ಸಂಬಳ ತೆರುವ ಹಿಂದೀ ಪ್ರಜೆಗಳು ಕೃತಘ್ನರು, ಅಧಮರು ಎಂದು ನಾಮದಾರರ ಹೇಳಿಕೆ.

कारवारांत आयुर्वेदिक पाठविद्यालय
उघडण्यांत येणार.

सन १९२४ च्या जानेवारी महिन्या पासून कारवार येथें वरील पाठशाळा उघडण्यांत येणार आहे. आयुर्वेदांतील प्रत्येक विषय प्रमाणपूर्वक व सशास्त्र शिकविण्यांत येईल. पूर्ण आयुर्वेदिक शिक्षण तीन वर्षांत शिकविलें जाईल. विद्यार्थी निदान मराठी पाच इयत्ता शिकलेला व भांडारकरकृत, संस्कृत तीन पुस्तकें पठलेला असावा. अथवा आयुर्वेद औषध पुस्तकांतील श्लोकांचा अर्थ समजून घेण्या इतकें संस्कृत ज्ञान असलेला असावा. त्यांचे वय १८ ते १२ वर्षांपर्यंत व प्रकृति सदृढ असावी. सदर पाठशाळेचे वर्ग १ जानेवारी १९२४ पासून सुरू होतील. फीचे दर १ ल्या वर्षास दरमहा ६ रुपये, दुसऱ्यास दरमहा

१० रुपये व तिसऱ्या वर्षात दरमहा १२ रुपये प्रमाणे ठरविली आहे. पहिल्या वर्गाकरितां २५ विद्यार्थीच निवडण्यात येतील. विद्यार्थ्यांनी आपले अर्ज ता. १५ डिसेंबरच्या आत पाठविले पाहिजेत. अर्जाबरोबर प्रवेश फीचे ३ रुपये पाठविण्यात आले पाहिजेत. ज्यांची निवड होणार नाही त्यांचे फी परत करण्यात येईल. पत्रव्यवहार मराठीत अगर कानडा मध्ये करावा.

प्रत्येक वर्षात शिकविले जाणारे विषय खालील प्रमाणे —

पहिले वर्ष

१. प्रत्येक वनस्पतीचे गुण धर्म शरीरावर वर्णन करण्या आणि प्रत्येक औषधाचे भिन्न भाषांतील नामादि वगैरे.

२. निदान शास्त्र त्यात प्रत्येक रोगाचे निदान (हेतु) सप्रमाण आणि मूल निदान (परिक्षा करण्यास) शिकविले जाईल.

३. सदर निदान शास्त्रात रोग ग्रासित आलेले विषय औषधालयात समक्ष प्रयोग करून दाखविले जातील.

दुसरें वर्ष

१. प्रत्येक रोगावर निरनिराळ्या शास्त्रीय पद्धतीने चिकित्सा [illegible] शिकविले जाईल.

२. प्रत्येक वनस्पती [illegible] व तत्व विचार शिकविले जातील.

३. प्रत्येक रोगावर [illegible] विषय शिकविले जातील.

तिसरें वर्ष.

१. आर्य शरीर रचना [illegible] मज्जातंतु वाहिनी [illegible] चक्रादि प्रत्येक भागात [illegible] क्रिया. प्रत्येक भागाची नावे, त्याचे [illegible] प्रत्येक भाग चित्र [illegible] व तेच विषय त्यांना वर्णन करून स्पष्ट करून देणे' वगैरे

२. प्रत्येक रोगावरील [illegible] पासून त्याच्या [illegible] करण्याचे [illegible] औषधालयात समक्ष करून दाखविले जातील.

३. रसायनें व कुपिल रसायन यांची संपूर्ण माहिती आणि प्रत्येक विषया विषयी संशयनिवृत्ति [illegible] करण्यात येईल.

विशेष माहिती— खालील पत्त्यावर पत्रद्वारें अगर समक्ष मिळेल.

वि. सू. [illegible] करून देता येईल.

शिकावण.रे— वैद्य जे. एल. फर्नांडिस, [illegible], कारवार.

प्रेस— [illegible] व्यवस्थापक, आयुर्वेदिक पाठशाळा, कारवार.

ಸ್ವಕ ಒಂದು ತಿಂಗಳ ಪೂರ್ತ ಸವಲತ್ತು.

ತಿಂಗಳಿಗೆ ರೂಪಾಯಿ ೧೦೦ರಿಂದ ೩೦೦ರ ವರೆಗೆ ಗಳಿಸಿರಿ.

ಬೇಕಾದಲ್ಲಿ ಸುಲಭವಾಗಿ ಗಳಿಸಿರಿ.

ರೂಪಾಯಿ ೭-೮-೦ ಖರ್ಚುಮಾಡಿರಿ ಮತ್ತು ಸ್ವತಂತ್ರರಾಗಿರಿ.

[illegible] ಪ್ರತಿಯೊಬ್ಬ [illegible] ಅವಶ್ಯವಿದ್ದ ವಸ್ತುವು ಅವನು ಬೇಕಾದರೆ, [illegible] ಹಳ್ಳಿಗಳಿರಲಿ, ಪಟ್ಟಣಗಳಿರಲಿ, [illegible] ನಮ್ಮ ಕ್ರಮವು ಅತಿ ಉತ್ತಮವೆಂದು ಖ್ಯಾತಿಹೊಂದಿದೆ. ಈ ಕ್ರಮದಿಂದ [illegible], ಹಚ್ಚುವ [illegible] ಹಾಕುವ, ಪರಿಮಳದ ಹಾಗು ಬಣ್ಣಗಳ [illegible] ತಯಾರಿಸಬಹುದು. ಈ ಕ್ರಮಕ್ಕೆ ಬಂಡವಲಿನ ಅವಶ್ಯಕತೆಯಿರುವದಿಲ್ಲ. ನಮ್ಮ ವಿದ್ಯಾರ್ಥಿಗಳ [illegible] ನಾವು ಬಲು [illegible] ಬೇಕಾದ ಮಾಹಿತಿಯನ್ನು ಪೂರೈಸುತ್ತೇವೆ. ಈ [illegible]. ಈ ಪೂರ್ಣ ಕ್ರಮವನ್ನು [illegible] ವಿ. ಪಿ. ಮೂಲಕ ಕಳಿಸುವೆವು. ಈ ಕ್ರಮವು ನಿಯಮಿತ ಮಂದಿಗಳಿಗೆ ಮಾತ್ರ ಕಳಿಸಲ್ಪಡುವದು.

[illegible] ಇಚ್ಛೆ ಇದ್ದವರು ಕೆಳಗಿನ ವಿಳಾಸಕ್ಕೆ ಬರೆಯಬೇಕು.

International Business Corporation,
Dept. (F) 3357, Gowliguda, Hyderabad. (Dn.)



ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳ ಮೇಲೆ, ರಾಮಬಾಣದಂತಾಗಿರುವದು. ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಾರ್ವಜನಿಕವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಅದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳ ಮೇಲೆ ಅದು ಗುಣಕಾರಿಯೆಂದು ಉಪಯೋಗಿಸುವವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು. ಕಿಮ್ಮತ್ತು ೧೦ ಆಣೆ ವ್ಹಿ. ಪಿ. ಖರ್ಚು ಬೇರೆ.

ಅಮೃತಾಂಜನ. ಡಿಪೋ, ಫೋರ್ಟ, ಮುಂಬಯಿ.

ಹಸನಾದ ಸಾಗುವಳಿಯಲ್ಲಿಯೇ ಸಂಪತ್ತಿಯು



ಅಡಕವಾಗಿರುವದು.

ನಮ್ಮ ಕಾರಖಾನೆಯಲ್ಲಿ ತಯಾರಾಗುವ ಸುಧಾರಿಸಿದ ಕಬ್ಬಿಣ ನೇಗಿಲುಗಳು, ಕಬ್ಬಿಣ ಗಾಣಗಳು, [illegible] ವ್ಯವಸಾಯದ ಮುಟ್ಟುಗಳನ್ನು ತರಿಸಿಕೊಂಡು ನಿಮ್ಮ ಒಕ್ಕಲತನವನ್ನು ಬೆಳಿಸಿಕೊಳ್ಳಿ. ೨೫ ವರ್ಷಗಳ ಅನುಭವದಿಂದ ಈ ಸಾಮಾನುಗಳನ್ನು ತಯಾರ ಮಾಡುತ್ತೇವೆ. ೫೦,೦೦೦ ರೈತರು ಹೊಗಳುತ್ತಾರೆ. ಇಂದೇ ಪತ್ರ ಬರೆದು "ಪ್ರ" ಎಂಬ ಕ್ಯಾಟಲಾಗು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್,

ಕಿರ್ಲೋಸ್ಕರವಾಡಿ. (ಸಾತಾರಾ)

Printed and Published by Krishnarao Keshav Shenvi (Editor) at his Star of Kanara Press, Kumta.

Reg. No. B.1720

Thursday, 20th December, 1923.

ವರ್ಷ ೮.

ಕಾನಡಾವೃತ್ತ.

THE KANARA NEWS.

ಸಂಚಿಕೆ ೯.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಮನೆಯಾರ್ಡರಿಯಿಂದ ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-3-0.
ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಮ್ಯಾಕಾ ಪೈಕಿನ (೧೫ ಏಮ್ ಉದ್ದ) ೮ ಸಾಲುಗಳವರೆಗೆ ರೂ. 1-0-0 ೮ ನಂತ್ರ ಪ್ರತಿಸಾಲಿಗೆ 0-2-0. ಹೆಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟುಸಾಲುಗಳು ಹಿಡಿಯಲ್ಪಡುವವು

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖ ೨೦ ಮಾಹೆ ಡಿಶಂಬರ ಸನ್ ೧೯೨೩ ನೇ ಇಸವಿ)—

हिंदुस्थानातील रहिवाशास ज्याप्रमाणें हिंदुस्थानची हवा त्याप्रमाणेंच हें औषध हिंदुस्थानांतील लोकास ज्यास्त फायदेशीर आहे.

द्राक्षासव- { दीड रतलची किंमत २ रुपये;

रामबाण औषधें

सर्दि घालविणारें,
भूक वाढविणारें,
शौच्यास साफ करणारें,
झोप आणणारें,
शक्ति देणारें,
तेजस्वीपणा आणणारें,

पिण्यास रुचिकर.

क्याटलाग मागवा,

झंडु फार्मास्युटिकल वर्क्स लिमिटेड, मुंबई नं. १३

ದಿ॥ ಮಾಸೂರಕರರ

ಸುಧಾಂಜನ.

ಅಂಜನುಗಳಿಗೆಲ್ಲ ಅರಸು.

ತಲೆಶೂಲಿ, ವಾತವೇದನೆ, ಕೆಮ್ಮು, ಹಲ್ಲು ನೋವು ಇತ್ಯಾದಿಗಳಿಗೆ ಕ್ಷಿಪ್ರ ಗುಣಕಾರಿ ಮದ್ದು. ಬೆಲೆ ೭ ಆಣೆ ಮಾತ್ರ. ವ್ಯಾಪಾರಿಗಳಿಗೆ ವಿಶೇಷ ಸವಲತ್ತು ಹೆಚ್ಚಿನ ಮಾಹಿತಿ ಏಜಂಟರಿಂದ.

ಏಜಂಟ್ಸ್:— ನಾಗರಕಟ್ಟೆ ಬ್ರದರ್ಸ್, ಸುಧಾಂಜನ ಡಿಪೋ, ಕುಮಟಾ. (ಜಿಲ್ಹಾ ಕಾರವಾರ.)

ಶುದ್ಧ ರೋಮದ ಧಾವಳಿಗಳು.

4 ಮೊಳ ಉದ್ದ	1½ ಮೊಳ ಅಗಲ	ರೂ. 1½ ರಿಂದ 2 ವರೆಗೆ						
5	,,	,,	2½	,,	,,	,,	1-10-0 —5	,,
6	,,	,,	1½	,,	,,	,,	4½ —6	,,
8	,,	,,	2	,,	,,	,,	3½ —10	,,
12	,,	,,	2½	,,	,,	,,	6 —12	,,
16	,,	,,	2½	,,	,,	,,	9 —16	,,

ಇವುಗಳಲ್ಲದೆ ಕುದ ಖದ್ದರ್ ಕಲಮುದಿಗಳು, ನಾರ್ಮದಿಗಳು, ಕಾಶೀಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಜಾಘಂಟೆ, ಶಾಳ, ಪನ್ನೀರ್ ದಾನಿ, ಆಟದ ಸಾಮಾನುಗಳು, ದೇವರ ಮತ್ತು ಗಾಂಧಿ ಮುಂತಾದವರ ಪಠಗಳಿರುವ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ಯೋಗ್ಯದರಕ್ಕೆ ದೊರೆಯುವವು. ಕ್ಯಾಟಲಾಗ್ ಇನಾಂ.

ವಿಳಾಸ:— ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಆನಂದ ಮಂದಿರ.

ಮಾರ್ಮಗೋವಾ ಹಾರ್ಬರ.
ಉತ್ತಮ ಭೋಜನ-ಉಪಹಾರದ ವ್ಯವಸ್ಥೆ.

ಈ ಹೊಟೇಲು ಮಾರ್ಮಗೋವಾ ಹಾರ್ಬರದಲ್ಲಿ ಕೇವಲ ಪ್ರವಾಸಿಕರ ಅನುಕೂಲತೆಗಾಗಿ, ನೂತನವಾಗಿ ಸ್ಥಾಪಿಸಲ್ಪಟ್ಟಿದೆ. ಇದು ಹಾರ್ಬರದ ನೆರೆಯ ಪ್ರಶಸ್ತ ಸ್ಥಳದಲ್ಲಿಯ ಮೇಲೆ ಭವ್ಯ ಮಂದಿರದಲ್ಲಿದೆ. ಉತ್ತಮ ಭೋಜನ-ಉಪಹಾರವು ದೊರೆಯುವದು. ಪ್ರಯಾಣಿಕರೆಲ್ಲರೂ ಇದರ ಉಪಯೋಗ ಮಾಡಿಕೊಳ್ಳಬೇಕಾಗಿ ವಿನಂತಿ.

ಮೆನೇಜರ.

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ ವಿಷಯಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯ ಅಲ್ಪ ಬೆಲೆಯ ಗ್ರಂಥಮಾಲೆ. ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ.

ಈ ವರೆಗೆ ಪ್ರಕಟವಾದ ಪುಸ್ತಕಗಳು.

(೧-೨) ಗ್ರೀಸ ದೇಶದ ಗಾಂಧಿ. (ಸಾಕ್ರೆಟೀಸ) (೩) ಸ್ವಾತಂತ್ರ್ಯಸಾಧನೆ. (೪) ಗುರು-ಹಿರಿಯರೂ, ಬಂಧು-ಭಗಿನಿಯರೂ. (೫) ರಾಷ್ಟ್ರೀಯ ಶಿಕ್ಷಣ, (೬) ಸದ್ಗುಣಮಂದಿರ. (ಭಾಗ ೧.) (೭) ಸ್ವರಾಜ್ಯ ಧರ್ಮ. (ಇನಾಮಿನ ಪುಸ್ತಕ) ಇವಿಷ್ಟು ಪ್ರಕಟವಾಗಿದ್ದು, ೫ ಆಣೆಗೆ ಒಂದರಂತೆ ದೊರೆಯುತ್ತವೆ. ವರ್ಗಣಿದಾರರಿಗೆ ಹಿಂದಿನ ಬೇಕಾದ ಪುಸ್ತಕಗಳು ೪ ಆಣೆಗೆ ಒಂದರಂತೆ ದೊರೆಯುವವು. ೬ ಪುಸ್ತಕಗಳಿಗೆ ಕೂಡಿ ೧॥ ರೂಪಾಯಿ ಮಾತ್ರ. ಅಂಚೆವೆಚ್ಚ ಬೇರೆ. ದ್ವಿತೀಯ ವರ್ಷ ಪ್ರಾರಂಭ, ಅನುಕ್ರಮವಾಗಿ ಮಾರ್ಚ, ಮೇ, ಜುಲೈ, ಸಪ್ಟಂಬರ, ನವಂಬರ, ಜನವರಿ ೧ನೇ ತಾರೀಖಿಗೆ ಒಂದೊಂದು ಪುಸ್ತಕ ಹೊರಡುವದು. ವಾ. ವ. ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ.

ವಾ. ಅ. ಹೊದ್ಕೆ, ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ.

1924ನೇ ಇಸವಿಯ ಸ್ವರಾಜ್ಯ ಡೈರಿ.

ಸಂಪಾದಕ:— ಡಿ. ಕೆ. ಭಾರದ್ವಾಜ. ವಿದ್ಯಾಭೂಷಣ.

ರಾಜಕೀಯ, ಆರ್ಥಿಕ, ವ್ಯಾಪಾರ, ಸ್ವದೇಶಿ, ಕೈಗಾರಿಕೆ ಮೊದಲಾದ ವಿಷಯಗಳ ಹೊಸ ಸಂಗ್ರಹ! ದೇಶಭಕ್ತರ ನವೀನ ಭಾವಚಿತ್ರಗಳು! ಪ್ರತಿಯೊಬ್ಬರೂ ಅಗತ್ಯವಾಗಿ ಉಪಯೋಗಿಸತಕ್ಕದ್ದು.

ನಮ್ಮಲ್ಲಿ ಯಾವತ್ತೂ ಪೇಟೆಂಟ್ ಔಷಧ, ಸ್ಟೇಶನರಿ ವಗೈರೆ ಹೊಸ ಸ್ಟಾಕ ಬಂದಿದೆ. ಕೃಪೆಮಾಡಿರಿ!

ದಿ. ನ್ಯೂ. ಎಂಪೋರಿಯಮ್, ಜನರಲ್ ಮರ್ಚಂಟ್ಸ, ಹೊನ್ನಾವರ.

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುತ್ತೇವೆ.

ಬೇಕಾದವರು ಭಾಡಿಗೆಯ ಪರವಾರ ವಗೈರೆ ಕತಹಿ ಕೆಳಗಿನ ಸತ್ತೆಗೆ ಮುಕ್ತಾ ತಿಳಿಸಿಕೊಳ್ಳಬಹುದು.

ಪುರುಷೋತ್ತಮ ಲಕ್ಷ್ಮಣಯ್ಯ ಕ್ಯಾನಭಾಗ. ಹೆಗಡೇಕರ, ದುಕಾನ, ಕುಮಟಾ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. (ರಿಜಿಸ್ಟರ್ಡ)

ಸ್ವೈರವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶ ಪಾಶವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ! ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿರುವದೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತ್ತದೆ ಈ ಆಯಿಲ್ ಹಚ್ಚಿಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ಕಡಿಮೆಯಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಅವಮ್ಮ ಕೂಡಿಯು ತೊಡಗಿದ ಬಳಿಕ ಎಂದಿಗೂ ಹಡುಗಿ ಬಿದ್ದು ಹೋಗಲಾರವು, ಅದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವದು

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನು ಕಳೆಯುವದಕ್ಕಿಂತ ಒಂದೇಸಾರಿ ಈ "ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಇದಕ್ಕೆ ಮೈಸೂರ ಪ್ರದರ್ಶನದಲ್ಲಿ "ಸರ್ಟಿಫಿಕೇಟ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಅನೇಕ ಖ್ಯಾತಿವಂತರ ಗೃಹಸ್ಥರ ಉತ್ತಮೋತ್ತಮವಾದ ಪ್ರಮಾಣಪತ್ರಗಳೂ ದೊರೆತಿವೆ.

ಕ್ರಯ — ಸೀಸೆಗೆ ರೂಪಾಯಿ 1 0 0, ಸೀಸೆ 3ಕ್ಕೆ ರೂಪಾಯಿ 2-10-0, ವಿ.ಪಿ ಖರ್ಚು 0 14 0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ [illegible] ಪರಿಮಳವು ಅತ್ಯುತ್ತಮವೂ ಚನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ಲ ಸಿದ್ಧವಾದುದು [illegible] ಸಲ ನಿಮ್ಮ ಕೈ ಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿ [illegible] ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾ [illegible] ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

[illegible] 1 ಕ್ಕೆ 0 12 0 [illegible] ದೊಡ್ಡ ಸೀಸೆ 1 ಕ್ಕೆ 2-0-0 ಅಂಚೆಯ ವೆಚ್ಚ ದರ 0-4-0

ಒಟ್ಟೋ ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0.

Address **The Anglo Indian Drug & Chemical Co,**

16, Market, **BOMBAY. 2.**

[illegible]

ಬಾದಶಾಹಿ ನಾಟೂಸು

ಈ [illegible]

ನಕಲೀ ವಸ್ತುವಿನ ಬಗ್ಗೆ ಎಚ್ಚರಿಕೆ, ಮೋಸ ಹೋಗಬೇಡಿರಿ

ರಜಿಸ್ಟರ [illegible] ಖರೆದಿ ಮಾಡಿರಿ [illegible]

ಸಿ. ಸಿ. ಮಹಾಜನ ಎಂಡ್ ಕಂಪನಿ,

ಮುಂಬಯಿ ನಂ [illegible]

ಟೀಪು — ಪತ್ರವ್ಯವಹಾರ ಇಂಗ್ಲೀಷಿನಲ್ಲಿ [illegible]

ಸರಸ್ವತಿ.

ಸ್ತ್ರೀವರ್ಗದ ಶ್ರೇಷ್ಠವಾದ ಮಾಸಪತ್ರಿಕೆ

ಈ ಪತ್ರಿಕೆಯಲ್ಲಿ ಸಾಮಾಜಿಕ ನೈತಿಕ ಐತಿಹಾಸಿಕ [illegible] ಸಂಬಂಧಪಟ್ಟ ಅತ್ಯುತ್ತಮವಾದ ಲೇಖನಗಳು [illegible] ಮನೋರಂಜಕವಾದ ನಾಟಕ ಮತ್ತು ಕಾದಂಬರಿಗಳೂ ಬಾಲಬಾಲಿಕೆಯರಿಗೂ [illegible] ಸ್ತ್ರೀಯರಿಗೂ ತಿಳಿಯ ಮಂತಹ ಉತ್ತಮ ಶೈಲಿಯಲ್ಲಿ ಪ್ರಕಟಿಸಲ್ಪಡುವವು ನೂತನ ಚಂದಾದಾರರಿಗೆ ಖರದು ಗ್ರಂಥಮಾಲೆಯಲ್ಲಿ ಈ ವರೆಗೆ ಪ್ರಕಟಿಸಲ್ಪಟ್ಟಿರುವ [illegible] ಇತ್ಯಾದಿ ಗ್ರಂಥಗಳಲ್ಲೊಂದು ಬಹುಮಾನವಾಗಿ ಕೊಡುವದಲ್ಲದೆ [illegible] ಗ್ರಂಥಮಾಲೆಯ ಪ್ರಕಟನೆಗಳಲ್ಲ [illegible] ರೂಪಾಯಿ [illegible] ಚಂದಾದಾರರ [illegible] ವಾರ್ಷಿಕ ಚಂದಾ ರೂ [illegible]

ವಿಳಾಸ— ಸಂಪಾದಕಿ "ಸರಸ್ವತಿ."

Post Box 7

ಚಾಮರಾಜಪೇಟೆ ಬೆಂಗಳೂರು ಸಿಟಿ

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧ ರಾಗದ ಕೈಪೆಟ್ಟಿಗೆ ಕಿಂ ೩೦, ೪೦, ೪೫, ೫೦ ೬೦
೨ „ ಕಾಲು ಪೆಟಿಗೆ ಕಿಂ ೬೫, ೭೫, ೧೪೦, ೧೬೦
೩ ತಬಲೆ ಜೋಡಿ ಕಿಂ ೧೨ ೧೫, ೧೮ ೨೦ ೨೫
೪ ಹಾರ್ಮೋನಿಯಮ ಗ್ಯಾಡ ಕಿಂ ೧, ತಬಲೆ ಗ್ಯಾಡ ಕಿಂ ೧ ೮

ವಿಶೇಷ ಮಾಹಿತಿ ಬಗ್ಗೆ ನಮ್ಮ ಕ್ಯಾಟಲಾಗ ಪುಕ್ಕಟೆ ಕೊಡುವೆವು

ಪತ್ರವ್ಯವಹಾರ ಮರಾಠಿಯಿಂದ ಇದ್ದರೆ ಅನುಗ್ರಹಿಸಿ ಡ ಮಾಡಬೇಕು

ಪತ್ತೆ – ಗೋಪಾಳ ಸಖಾರಾಮ ಮುಕ್ತಿ ಕಂಪನಿ, ನಂ ೨೬೨

ಕಾಳಬಾದೇವಿ ರೋಡ, ಮುಂಬಯಿ

ಓಡುತ್ತಿರುವ ಲೋಕ.

ಲೇಖಕರ — ಮೆಸರ್ಸ್ ಏ ಎನ್ ಜೆನ ಕರ್ತ ಮತ್ತು ಜೋಸೆಫ್, ಬೆಂಗಳೂರು

ಲೋಕವು ಓಡುತ್ತಿದೆ. ಅದರಲ್ಲಿ ಕುಳಿತಿರುವವರಿಗಾಗಲಿ, ನಿಂತಿರುವವರಿಗಾಗಲಿ ಎಡೆಯಿಲ್ಲ. ಅದರ ನೋಟವನ್ನು ನೋಡಲಾರಂಭಿಸುವವರು ತಾವೂ ಓಡಲಾರಂಭಿಸುತ್ತಾರೆ. ಅಜ್ಞಾನವೆಂಬ ಅಂಧಕಾರದಲ್ಲಿ ಕುಳಿತಿರುವ ಜಡ ವ್ಯಕ್ತಿಗಳು ಹಿಂದುಳಿಯುತ್ತಾರೆ. ಹಿಂದುಳಿದವರನ್ನು ಓಡುವ ಲೋಕವು ನೆಲಕ್ಕೆ ತಳ್ಳುತ್ತದೆ. ನೆಲಕ್ಕೆ ಬಿದ್ದವರನ್ನು ಕಾಲುಗಳಿಂದ ತುಳಿಯುತ್ತದೆ. ಕಾಲಿಗೆ ತುಳಿದವರನ್ನು ತನ್ನ ದಾಸರನ್ನಾಗಿ ಮಾಡಿಕೊಂಡು ಅವರ ಪ್ರಾಣವನ್ನೇ ಹೀರುವದು ಲೋಕದ ಗೋಜು. ಸಮಾಧಾನ ಬೇಕವೆನ್ನುವವರಿಗೆ ಎಡೆಯಿಲ್ಲ. ಅವರು ಬೇಕವೆನ್ನಬಹುದು; ಲೋಕವು ಅವರನ್ನು ಬಿಡುವದಿಲ್ಲ. ಅದರೊಡನೆ ಓಡುತ್ತಿದ್ದರೆ, ಪರಿಣಾಮ ಫಲಗಳೇನಾಗುವವೂ ಯಾರು ಬಲ್ಲರು? ಆತ್ಮರಕ್ಷಣೆಗಾದರೂ ಅದರ ಪ್ರವರ್ತನೆಗಳನ್ನು ಕಂಡುಕೊಂಡಿರುವದು ಅವಶ್ಯಕ.

ಕೆಲವು ಶತಮಾನಗಳ ಹಿಂದೆ ಲೋಕವು ನಡೆಯುತ್ತಿದ್ದು, ಬರುತ್ತಾ ಬರುತ್ತಾ ಅದರ ನಡಿಗೆಯ ವೇಗವು ಹೆಚ್ಚು ಓಡಲಾರಂಭಿಸಿ ಈಗ ಅದರ ಓಟವನ್ನು ನೋಡಿದರೆ ತಲೆಯು ತಿರುಗುವದು. ಪ್ರತಿ ನಿಮಿಷದಲ್ಲಿಯೂ ಅದರ ವೇಗವು ಅಧಿಕವಾಗುತ್ತಿದೆ. ನಿನ್ನೆ ಹೊಸದಾಗಿ ಕಂಡುಹಿಡಿದ ವಿಷಯವು ಈ ಹೊತ್ತಿಗೆ ಹಳೆಯದಾಗಿ, ಅಷ್ಟರಲ್ಲೇ ಅದಕ್ಕಿಂತ ಹೊಸ ಹೊಸ ವಿಷಯಗಳನ್ನು ಕಂಡುಹಿಡಿಯುತ್ತಿರುತ್ತಾರೆ. ಇದಕ್ಕೆ ನವಯುಗದ ಮಹಿಮೆಯೆಂದೂ, ನವನಾಗರಿಕತೆಯ ಏಳಿಗೆಯೆಂದೂ ವಿಜ್ಞಾನವೈಚಿತ್ರ್ಯಗಳೆಂದೂ ಕರೆಯುತ್ತಾರೆ. ಗಂಟೆಗೆ ಇಪ್ಪತ್ತು ಮೂವತ್ತು ಮೈಲುಗಳಂತೆ ಓಡುತ್ತಿದ್ದ ಹಳೆಯ ಗಾಡಿಗಳು ಈಗ ೫೦—೬೦ ಮೈಲುಗಳಂತೆ ಓಡುತ್ತಿವೆ. ಎರಡು ಕಂಬಿಗಳ ಮೇಲೆ ಹೋಗುತ್ತಿದ್ದ ಬಂಡಿಗಳು ಈಗ ಒಂದೇ ಕಂಬಿಯ ಮೇಲೆ ಹರಿಯುವಂತೆ ಮಾಡುತ್ತಿರುತ್ತಾರೆ! ಇವಕ್ಕೆ ಬೈಸಿಕಲ್ಲಿಗಿರುವಂತೆ ಚಕ್ರಗಳು ಒಂದರ ಹಿಂದೆ ಒಂದಿರುತ್ತವೆ. ಇಂಥ ಬಂಡಿಗಳ ವೇಗವನ್ನು ಗಂಟೆಗೆ ನೂರು! ಇನ್ನೂರು! ಮುನ್ನೂರು!! ಮೈಲಿಗಳಂತೆ ಎಣಿಸುತ್ತಾರೆ. ಹಾರಿಗೆಬುಟ್ಟಿಗಳಲ್ಲಿ ಕುಳಿತು ವಿಧಿವಶಕ್ಕೆ ತಮ್ಮ ಪ್ರಾಣಗಳನ್ನೊಪ್ಪಿಸಿ ಗಗನಕ್ಕೇರಿ, ಬೆಟ್ಟದ ಮೇಲೋ ಗುಡ್ಡದ ಮೇಲೋ ಮನೆಯ ಮೇಲೋ, ಬೈಲಿನಲ್ಲೋ, ಕೆರೆಯಲ್ಲೋ, ತೋಟದಲ್ಲೋ, ಸಮುದ್ರದಲ್ಲೋ, ಪುನಃ ಕೆಳಕ್ಕೆ ಬಂದು ಬೀಳುತ್ತಿದ್ದದ್ದಕ್ಕೆ ಪ್ರತಿಯಾಗಿ ಈಗ ಸೊಗಸಾದ ವಿಮಾನಗಳಲ್ಲೂ ಆಕಾಶಯಾನಗಳಲ್ಲೂ ಕುಳಿತು ಗಂಟೆಗೆ ನೂರು-ನೂರಾಯೆಪ್ಪತ್ತು ಮೈಲುಗಳಿಗೆ ಕಡಿಮೆಯಿಲ್ಲದಂತೆ ಸುರಕ್ಷಿತವಾಗಿ ಬೇಕಾದ ಕಡೆಗೆ ಗುರಿಯಿಟ್ಟಂತೆ ಹೋಗಿ ಇಳಿಯುತ್ತಿರುತ್ತಾರೆ. ಸಮುದ್ರದಲ್ಲಿ ಸಂಚರಿಸುತ್ತಿದ್ದ ನಾವೆಗಳಿಗೆ ಪೂರ್ವಕಾಲದಲ್ಲಿ ಪಟಗಳನ್ನು ಕಟ್ಟಿ ವಾಯುದೇವನ ವಶಕ್ಕೆ ತಮ್ಮ ಪ್ರಾಣಗಳನ್ನು ಒಪ್ಪಿಸಿಬಿಡುತ್ತಿದ್ದರು. ವಾಯುವು ಅನುಕೂಲವಾಗಿ ಬೀಸಿದ್ದರೆ ಅವರು ಆರು ತಿಂಗಳಿಗೋ, ವರ್ಷಕ್ಕೋ ಬೇರೆ ಗಡ್ಡೆಗೆ ಹೋಗಿ ಸೇರುತ್ತಿದ್ದರು. ಸಮುದ್ರವು ಅಲ್ಲೋಲಕಲ್ಲೋಲವಾಗಿ ತುಫಾನುಗಳು ಹುಟ್ಟಾಗಿರುತ್ತಿದ್ದರೆ, ನಾವೆಯು ಸಮುದ್ರದ ಪಾಲಾಗಿ ಅದರಲ್ಲಿದ್ದ ಜನರು ಜಲಸಮಾಧಿಗೀಡಾಗುತ್ತಿದ್ದರು. ಈಗ ವಾಯುದೇವನ ಕರುಣೆಯನ್ನೇ ಕೋರದೆ ತಮಗೆ ಬೇಕಾದ ಕಡೆಗೆ ಸ್ವಲ್ಪವಾದ ಕಾಲದೊಳಗೆ ಹೋಗತಕ್ಕ ಹಡಗುಗಳನ್ನು ನಿರ್ಮಿಸಿಕೊಂಡಿರುತ್ತಾರೆ. ಇವುಗಳಲ್ಲಿ ತಮ್ಮ ಸ್ವಂತ ಮನೆಯಲ್ಲಿರುವಾಗ ಎಷ್ಟು ಅನುಕೂಲಗಳಿರುತ್ತವೆಯೋ, ಅಷ್ಟನ್ನೂ ನಿರ್ಮಿಸಿಕೊಳ್ಳಲು ಯತ್ನಿಸುತ್ತಿರುತ್ತಾರೆ. ಆಟವಾಡುವದಕ್ಕೆ ಮೈದಾನಗಳನ್ನೂ, ವಿಹರಿಸುವದಕ್ಕೆ ಉದ್ಯಾನವನಗಳನ್ನೂ, ಸ್ನಾನಕ್ಕೆ ಕೆರೆಗಳನ್ನೂ ಈ ಪ್ರಕಾರವಾಗಿ ನಾವು ಕೋರಬಹುದಾದ ವಿಷಯಗಳನ್ನೆಲ್ಲಾ ಹಡಗಿನಲ್ಲಿ ಕಾಣಬಹುದು. ಭೂಮಿಯನ್ನು ಬಿಟ್ಟು ಸಾವಿರಾರು ಮೈಲುಗಳ ದೂರದಲ್ಲಿ ಸಮುದ್ರದ ಮಧ್ಯದಲ್ಲಿ ಸಂಚರಿಸುತ್ತಿರುವ ಹಡಗುಗಳಲ್ಲಿ ವೃತ್ತಾಂತ ಪತ್ರಿಕೆಗಳು ಕೂಡಾ ಇರುತ್ತವೆ! ಅವು ಲೋಕದ ಎಲ್ಲಾ ಭಾಗಗಳಲ್ಲೂ ನಡೆಯುವ ಮುಖ್ಯವಾದ ವಿಷಯಗಳನ್ನು ಪ್ರಕಟಿಸುತ್ತವೆ. ಸಮುದ್ರದ ಮಧ್ಯದಲ್ಲಿರುವ ಹಡಗಿಗೂ, ಇತರ ಭೂಪ್ರದೇಶಗಳಿಗೂ ಸಂಬಂಧವೆಲ್ಲಿಯದು? ಸಮಾಚಾರಗಳು ಇಲ್ಲಿಗೆ ಹ್ಯಾಗೆ ಬರಬೇಕೆಂದು ಆಶ್ಚರ್ಯವಾಗುವದಿಲ್ಲವೇ? ಇದು ತಂತಿಯಿಂದ (ಸಮಾಚಾರ) ಯಂತ್ರಗಳಿಂದ ಬರುವದು. ಅಷ್ಟೇಯಲ್ಲ. ಈ ಯಂತ್ರದ ಸಹಾಯದಿಂದ ಸಮುದ್ರದ ಮಧ್ಯದಲ್ಲಿರುವ ಹಡಗಿನಲ್ಲಿರುವವರು ಲೋಕದ ಇತರ ಪ್ರದೇಶಗಳಲ್ಲಿರುವ ತಮ್ಮ ಬಂಧು ಮಿತ್ರರೊಡನೆ ಮಾತಾಡಬಹುದು. ಹೀಗೆ ಮಾತಾಡುವಾಗ ತಮ್ಮ ಬಂಧು-ಮಿತ್ರರ ಕಂಠಸ್ವರವನ್ನು ಗುರ್ತು ಹಿಡಿಯಬಹುದು. ಕರಾರಿಗೆಂದ ಹಡಗು ಪಕ್ಕಗಳಿಗೆ ಓಲಾಡುವದರಿಂದ ಪ್ರಯಾಣಿಕರಿಗೆ ಅನಾನುಕೂಲಗಳಾಗುವವು. ಹಡಗು ಹೀಗೆ ಓಲದೆ, ನಿಶ್ಚಲವಾಗಿ ಹೋಗುವಂತೆ ವಿಮಾನಗಳನ್ನು ಮಾಡುತ್ತಾರೆ. ಏಕಲೋಹಮಾರ್ಗದ ಬಂಡಿಗಳು ಯಾವ ಉಪಕರಣದಿಂದ ತಮ್ಮ ಸಮತೋಲವನ್ನು ಕಾಪಾಡಿಕೊಳ್ಳುವಂತೆ ಮಾಡಿರುತ್ತಾರೋ ಅದೇ ಯಂತ್ರವನ್ನೇ ಇದಕ್ಕೂ ಉಪಯೋಗಿಸಿರುತ್ತಾರೆ. ಮೊದಲು ಮೊದಲು ಇದನ್ನು ಉಪಯೋಗಿಸುವ ಸರಿಯಾದ ವಿಧವನ್ನು ತಿಳಿಯದೆ ಉಪಯೋಗಿಸಿದ್ದರಿಂದ ಹಡಗು ಹೊರಳಿದಾಗ ಅದನ್ನು ಈ ಯಂತ್ರವು ಥಟ್ಟನೆ ತಡೆದುಬಿಟ್ಟು, ಹೊರಳುತ್ತಿದ್ದ ಬಿರುಸನ್ನು ಥಟ್ಟನೆ ತಡೆದದ್ದರಿಂದ ಹಡಗು ಎರಡು ತುಂಡಾಗಿ ಸೀಳಿ, ಒಡೆದುಹೋಯಿತು. ಈ ಅನುಭವದಿಂದ ಆ ಯಂತ್ರವನ್ನು ತಿದ್ದಿ ಈಗ ಹೀಗಾಗುವ ಸಂಭವವಿಲ್ಲದಂತೆ ಮಾಡಿರುತ್ತಾರೆ.

ವಿದ್ಯುಚ್ಛಕ್ತಿಯ ಕಡೆ ನಮ್ಮ ದೃಷ್ಟಿಯನ್ನು ತಿರುಗಿಸಿದರೆ ಕೆಲವು ವರ್ಷಗಳಿಂದೀಚೆಗೆ ಕಂಡುಹಿಡಿದಿರುವ ವಿಷಯಗಳು ದಿಗ್ಭ್ರಮೆಯನ್ನುಂಟುಮಾಡುತ್ತವೆ. ನಮಗಾದರೂ ವಿದ್ಯುಚ್ಛಕ್ತಿಯ ವಿಷಯವಾಗಿ ಬಹು ಸ್ವಲ್ಪವಾಗಿ ತಿಳಿದಿರುವದು. ಮೊದಲು ಮೊದಲು ವಿದ್ಯುತ್ತನ್ನು ಕೈಗಳಿಂದ ತಿರುಗಿಸುತ್ತಿದ್ದ ಯಂತ್ರಗಳಿಂದಲೂ ನಂತರ ಹಬೆಯ ಯಂತ್ರಗಳಿಂದಲೂ ಕೊನೆಗೆ ಜಲಪಾತಗಳ ಶಕ್ತಿಯಿಂದಲೂ ಉತ್ಪತ್ತಿ ಮಾಡತೊಡಗಿದರು. ಶಿವಸಮುದ್ರದಲ್ಲಿರುವ ಜಲಪಾತದ ಸಹಾಯದಿಂದ ವಿದ್ಯುತ್ತನ್ನು ಉತ್ಪತ್ತಿಮಾಡಿ ಬಹು ದೂರದಲ್ಲಿರುವ ಮೈಸೂರು ಬೆಂಗಳೂರು ಮತ್ತು ಕೋಲಾರದ ಚಿನ್ನದ ಗಣಿಗಳಿಗೆ ವಿದ್ಯುಚ್ಛಕ್ತಿಯನ್ನು ತಾಮ್ರದ ತಂತಿಗಳ ಮೂಲಕ ಸಾಗಿಸಿರುತ್ತಾರೆ. ಈ ವಿದ್ಯುಚ್ಛಕ್ತಿಯಿಂದ ಬೀದಿಗಳಲ್ಲೂ, ಸಂದುಗೊಂದಿಗಳಲ್ಲೂ ರಾತ್ರಿಯಲ್ಲಿ ದೀಪಗಳನ್ನು ಉರಿಸುವದು ಮಾತ್ರವಲ್ಲದೆ, ಕೋರಿದವರೆಲ್ಲರೂ ಇದನ್ನು ತಮ್ಮ ಮನೆಗಳಲ್ಲೂ ಉಪಯೋಗಿಸಬಹುದು. ನವರಾತ್ರಿಯಲ್ಲಿ ವಿದ್ಯುದ್ದೀಪಗಳ ರಮ್ಯವಾದ ನೋಟವು ಮಾತ್ರವೇ ಮೈಸೂರಿಗೆ ಹೋದವರಿಗೆ ತಮ್ಮ ಶ್ರಮಕ್ಕೆ ಪ್ರತಿಫಲದಾಯಕವಾಗುವದೆನ್ನುವರು. ಕುದುರೆಯು ಓಡುವದರಿಂದ ನಮ್ಮ ಬಂಡಿಯನ್ನು ಎಳೆಯುವದು. ಅದರಂತೆಯೇ ವ್ಯರ್ಥವಾಗಿ ಓಡುತ್ತಿರುವ ನದಿಯ ನೀರಿಗೂ ತಕ್ಕ ಯಂತ್ರಗಳನ್ನು ಕಟ್ಟಿದರೆ, ಅದೂ ನಮ್ಮ ಕೆಲಸಗಳನ್ನು ಮಾಡುವದು. ಆದರೆ, ಕುದುರೆಗೆ ಪ್ರಾಣವಿರುವದರಿಂದ ನಮಗೆ ಬೇಕಾದ ಕಡೆಗೆ ಅದನ್ನು ಓಡಿಸಿ, ನಮಗೆ ಬೇಕಾದ ಸ್ಥಳದಲ್ಲಿ ಅದರಿಂದ ನಮ್ಮ ಕೆಲಸಗಳನ್ನು ನಡಿಸಿಕೊಳ್ಳಬಹುದು. ನದಿಯಾಗಲಿ ಜಲಪಾತವಾಗಲಿ ನಮ್ಮ ಇಷ್ಟದಂತೆ ಕಡೆಗೆ ಬರಲಾರದು. ಅದು ಇದ್ದಲ್ಲಿಯೇ ಕೆಲಸವನ್ನು ನಡೆಯಿಸಿಕೊಳ್ಳಬೇಕು. ಅದು ಇರುವ ಸ್ಥಳದಲ್ಲಿ ಅದರ ಶಕ್ತಿಯು ನಮಗೆ ಅನಾವಶ್ಯಕವಾಗಿರಬಹುದು. ಆಗ ಆ ಸ್ಥಳದಲ್ಲಿ ಶಕ್ತಿಯನ್ನು ಉತ್ಪತ್ತಿ ಮಾಡಿ ಕಾಡಿನಲ್ಲಿರುವ ಸೌದೆಯನ್ನು ಮನೆಗೆ ಸಾಗಿಸಿ, ಅಡಿಗೆಮಾಡಲು ಉಪಯೋಗಿಸುವಂತೆ, ನೂರಾರು ಮೈಲುಗಳ ವರೆಗೆ ಈ ಶಕ್ತಿಯನ್ನು ತಂತಿಗಳ ಮೂಲಕ ಸಾಗಿಸಿ ಬೇಕಾದ ಸ್ಥಳದಲ್ಲಿ ಕೆಲಸವನ್ನು ನಡಿಸುತ್ತಾರೆ. ಕಾವೇರಿಯ ಜಲಪಾತವಿರುವದು ಶಿವಸಮುದ್ರದಲ್ಲಿ. ಅದರ ಶಕ್ತಿಯಿಂದ ನೂರಾರು ಮೈಲುಗಳ ದೂರದಲ್ಲಿರುವ ಮೈಸೂರಿನ ಮತ್ತು ಬೆಂಗಳೂರಿನ ಅರಮನೆಗಳಲ್ಲಿಯೂ, ಬೀದಿಗಳಲ್ಲಿಯೂ ಒಂದು ಕೀಲನ್ನು ಮುಟ್ಟಿದ ಮಾತ್ರಕ್ಕೆ ದೀಪಗಳು ಉರಿಯಲಾರಂಭಿಸುವವು. ಈ ಪಟ್ಟಣಗಳಲ್ಲೂ, ಕೋಲಾರದ ಚಿನ್ನದ ಗಣಿಯಲ್ಲಿಯೂ ಮಹಾ ಯಂತ್ರಗಳು ಘರ್ಘರದೊಡನೆ ನಡೆಯಲಾರಂಭಿಸುವವು.

ಈಗ ಹಬೆಯನ್ನಾಗಲಿ, ಜಲಪಾತವನ್ನಾಗಲಿ ಕೋರದೆ ಎಲ್ಲೆಲ್ಲಿಯೂ ಆವರಿಸಿರುವ ಆಕಾಶದ ವಿದ್ಯುತ್ತಿಗೇನೇ ಲಗಾಮನ್ನು ಹಾಕಿ ಅದರಿಂದ ಕೆಲಸಗಳನ್ನು ನಡಿಸಿಕೊಳ್ಳಲು ಯತ್ನಿಸುತ್ತಿರುತ್ತಾರೆ! ಕೆಲವರು ಈ ಯತ್ನವು ಸಫಲವಾಗುತ್ತಿದೆಯೆಂದು ತಿಳಿಸುತ್ತಾರೆ. ಬಹುಶಃ ಕೆಲವು ವರ್ಷಗಳಲ್ಲಿ ನಾವು ಇದನ್ನು ನೋಡಬಹುದು.

ಅಮೆರಿಕದ ಒಬ್ಬ ಬಹು ಜಾಣನಾದ ಎಂಜಿನಿಯರ್ (Engineer) ಒಂದು ಊರಿನಲ್ಲಿರುವ ವೃತ್ತಾಂತ ಪತ್ರಿಕೆಯ ಮುದ್ರಾಲಯದಲ್ಲಿ ಮೊಳೆಗಳನ್ನು ಜೋಡಿಸಿದರೆ ಅದೇ ಕಾಲಕ್ಕೆ ವಿದ್ಯುತ್ತಿನ ಸಹಾಯದಿಂದ ಇತರ ನಗರಗಳಲ್ಲಿರುವ ಮುದ್ರಾಲಯಗಳಲ್ಲೂ ನಡೆಯಿಸಲಾಗುವ ಯಂತ್ರವನ್ನು ನಿರ್ಮಿಸಿರುತ್ತಾನಂತೆ! ಅದರಿಂದ ಸಮಾಚಾರವನ್ನು ತಂತಿಯ ಮೂಲಕವಾಗಿಯಾಗಲಿ, ಪತ್ರಗಳ ಮೂಲಕವಾಗಿಯಾಗಲಿ ಕಳುಹಿಸಿ ಒಂದೊಂದು ಪತ್ರಿಕೆಯವರೂ ಪ್ರತ್ಯೇಕ ಪ್ರತ್ಯೇಕವಾಗಿ ಮೊಳೆಗಳನ್ನು ಜೋಡಿಸುವ ಕೆಲಸವೂ ಕಾಲವಿಳಂಬವೂ ತಪ್ಪುವವು.

ಇಷ್ಟೇ ಮಾತ್ರವಲ್ಲ, ಒಂದು ಕಡೆ ಸಂಗೀತ ಕಛೇರಿಯು ನಡೆಯುತ್ತಿದ್ದರೆ ಇದನ್ನು ತಮ್ಮ ತಮ್ಮ ಮನೆಗಳಲ್ಲಿದ್ದುಕೊಂಡು ತಂತಿಯಿಲ್ಲದ ಯಂತ್ರದ ಸಹಾಯದಿಂದ ಕೇಳುತ್ತಿರುತ್ತಾರೆ. ಒಂದು ಸ್ಥಳದಲ್ಲಿ ನಡೆಯುವ ಉಪನ್ಯಾಸವನ್ನೂ ಹೀಗೆಯೇ ತಮ್ಮ ತಮ್ಮ ಮನೆಗಳಲ್ಲಿದ್ದುಕೊಂಡು ಕೇಳುತ್ತಿರುವರು. ಕಾಲಕ್ರಮವನ್ನೇರ್ಪಡಿಸಿಕೊಂಡು ವೃತ್ತಾಂತಪತ್ರಿಕೆಗಳಿಗೆ ಪ್ರತಿಯಾಗಿ ಸಮಾಚಾರಗಳನ್ನೂ ಮಳೆ-ಬೆಳೆಯ ವಿಷಯಗಳನ್ನೂ ಪೇಟೆಯ ಧಾರಣೆಗಳನ್ನೂ ತಿಳಿಸುತ್ತಿರುವರು. ಜನರು ತಮ್ಮ ತಮ್ಮ ಮನೆಗಳಲ್ಲೂ ಹೊಲ-ಗದ್ದೆಗಳಲ್ಲೂ, ಅಂಗಡಿಗಳಲ್ಲೂ ಇದ್ದುಕೊಂಡು ಇವನ್ನು ಕೇಳಿ ತಿಳಿದುಕೊಳ್ಳುವರು. ಇವೆಲ್ಲವೂ ಈಗ ಅಮೇರಿಕದಲ್ಲಿ ನಡೆಯುತ್ತಿರುವ ವಿಷಯಗಳು.

ಮತ್ತೊಂದು ವಿಚಿತ್ರ. ಒಂದು ನರಪ್ರಾಣಿಯೂ ಇಲ್ಲದ ಹಡಗವನ್ನು ಸಮುದ್ರದಲ್ಲಿ ನಡಿಸುವರು. ಇವನ್ನು ನಡಿಸುವವರು ನೆಲದ ಮೇಲಿರುವರು! ಇವರಿಗೂ ಹಡಗಿಗೂ ಸಂಬಂಧವಿರುವದಿಲ್ಲ. ತಂತಿಯಿಲ್ಲದ ಯಂತ್ರದಿಂದ ನೆಲದ ಮೇಲಿದ್ದುಕೊಂಡು ಸಮುದ್ರದಲ್ಲಿರುವ ಹಡಗಿಗೆ ಆಜ್ಞೆ ಮಾಡುವರು. ಇದು ಪ್ರಾಣವಿರುವ ಜೀವಿಯಂತೆ ವಿಧೇಯವಾಗುವದು. ಹೇಳಿದ ಕಡೆಗೆ ಹೋಗುವದು, ಬೇಕಾದ ಕಡೆಗೆ ತಿರುಗುವದು! ಅದರಂತೆಯೇ ಬಹು ದೊಡ್ಡ ಗುಂಡುಗಳನ್ನು ಆಕಾಶಕ್ಕೆ ಹಾರಿಸಿ, ನಂತರ ಇವನ್ನು ತಮಗೆ ಬೇಕಾದ ಕಡೆಗೆ ಸಾವಿರಾರು ಮೈಲುಗಳ ದೂರವಿರುವ ಸ್ಥಳಗಳಿಗೆ ಗುರಿಯಿಟ್ಟಂತೆ ಹೊಡೆಯಬಹುದಂತೆ!! ತಂತಿಯಿಲ್ಲದ ಯಂತ್ರದ ಸಹಾಯದಿಂದ ಇದು ಹೋಗಿ ಬೀಳಬೇಕಾದ ಸ್ಥಳವನ್ನು ಇದಕ್ಕೆ ಸೂಚಿಸುತ್ತಾರೆಂದು ಹೇಳುತ್ತಾರೆ.

ವಿದ್ಯುತ್ತಿನ ಒಂದು ವಿಧವಾದ ಕಿರಣಗಳು ಮೊದಲು ತಿಳಿಯಬಂದಾಗ ಅವುಗಳ ವಿಷಯವಾಗಿ ಏನೂ ತಿಳಿಯದೆ ಇದ್ದುದರಿಂದ ಇವನ್ನು ಅವ್ಯಕ್ತಕಿರಣಗಳೆಂದು (X Ray) ಕರೆದರು. ಇದರ ಸಹಾಯದಿಂದ ಜೀವದೊಂದಿಗಿರುವ ಮನುಷ್ಯನ ಅಸ್ಥಿಪಂಜರದ (ಮಾಂಸ ಖಂಡಗಳೊಳಗಿರುವ ಎಲುಬುಗಳ) ಛಾಯಾಚಿತ್ರವನ್ನು ತೆಗೆಯುವರು! ಮನುಷ್ಯನ ದೇಹದೊಳಗೆ ಗುಂಡು ಮೊದಲಾದ ಲೋಹದ ತುಂಡುಗಳು ಯಾವದಾದರೂ ಸೇರಿದ್ದರೆ,

ಇವು ಇರುವ ಸರಿಯಾದ ಸ್ಥಳವು ಕಂಡುಬರುವದು. ಈ ಉಪಕರಣವನ್ನು ಕಂಡುಹಿಡಿಯುವದಕ್ಕೆ ಮೊದಲು ಮುಣಿಗಿ ಸತ್ತು ಬಿದ್ದವರ ದೇಹದಲ್ಲಿ ಲೋಹದ ಚೂರುಗಳು ಯಾವವಾದರೂ ನಿಂತಿವೆಯೋ ಇಲ್ಲವೋ ಎಂದು ಕಂಡುಹಿಡಿಯಲಾಗುತ್ತಿರಲಿಲ್ಲ. ಕೆಲವು ವೇಳೆಗಳಲ್ಲಿ ಒಂದು ಕಳವೆ ಗುಂಡು ನಿಂತಿದ್ದರೆ, ಮತ್ತೊಂದು ಇದೆ ಶಸ್ತ್ರವನ್ನು ಪ್ರಯೋಗಿಸಿ, ಮನುಷ್ಯರಿಗೆ ಬಹು ಹಿಂಸೆಯಾಗುವ ಸಂಭವವಿತ್ತು. ಈಗ ಈ ಉಪಕರಣದಿಂದ ಇಂಥ ವ್ಯರ್ಥವಾದ ಹಿಂಸೆಗೆ ಕಾರಣವಿಲ್ಲದಂತಾಗಿದೆ. ಮುತ್ತುಗಳನ್ನು ಆಯುವವರು ಸಮುದ್ರದಿಂದ ಹೇರಳವಾಗಿ ಚಿಪ್ಪುಗಳನ್ನು ಆಯ್ದುಕೊಂಡು ಬಂದು ಅವನ್ನು ಒಡೆದು ಮುತ್ತನ್ನು ಹುಡುಕುತ್ತಿದ್ದರು. ಎಲ್ಲೋ ಒಂದೊಂದು ಚಿಪ್ಪಿನಲ್ಲಿ ಮಾತ್ರ ಮುತ್ತು ದೊರಕುವದು. ಚಿಪ್ಪನ್ನು ಒಡೆಯುವದರಿಂದ ಅದರೊಳಗಿರುವ ಪ್ರಾಣಿಯು ಅನ್ಯಾಯವಾಗಿ ಸಾಯುವದು. ಈಗಲಾದರೋ ಆ ಕ್ಷ-ಕಿರಣದ ಸಹಾಯದಿಂದ ಮುತ್ತು ಇದೆಯೋ ಇಲ್ಲವೋ ಎಂದು ಮತ್ತು ಅದರ ಗಾತ್ರವನ್ನೂ ಕಂಡುಕೊಳ್ಳಬಹುದು. ಮುತ್ತು ಚಿಕ್ಕದಾಗಿದ್ದರೂ, ಇಲ್ಲದಿದ್ದರೂ ಚಿಪ್ಪುಗಳನ್ನು ಪುನಃ ಸಮುದ್ರದಲ್ಲಿ ಹಾಕಿದರೆ ಅವು ಮುತ್ತುಗಳು ದೊಡ್ಡವಾಗುತ್ತವೆ. ಇದರಿಂದ ಪ್ರಾಣಿಹಿಂಸೆಯು ಕಡಿಮೆಯಾಗುವದು. ಲಾಭವೂ ಹೆಚ್ಚುವದು.

ಸಂ॥

ಕನ್ನಡ ನಾಡಿನ ಪತ್ರಿಕೆಗಳು

ಲೇಖಕರು — ಶ್ರೀ ಹನುಮಂತ ದಾಮೋದರ ವಜ್ರಾಂತ್ರೀಕರ (ವಾಙ್ಮಯ-ವಿಶಾರದ)

(೧)

ಇದು ಸಂಘಟನೆಯ ಯುಗವೆಂದು ಎಲ್ಲರೂ ಹೇಳುತ್ತಿರುವರು. ಒಂದು ವಿಶಿಷ್ಟ ಕ್ಷೇತ್ರದಲ್ಲಿ ಕೆಲಸಮಾಡುವವರು ಪರಸ್ಪರರಲ್ಲಿ ಸಹಕಾರ ಮಾಡಿ, ಸಾಂಘಿಕ ಶಕ್ತಿಯಿಂದ ಕೆಲಸಕ್ಕೆ ಪ್ರವೃತ್ತರಾದರೆಂದರೆ, ಆ ವ್ಯವಸಾಯದಲ್ಲಿ ಯಶಸ್ಸು ಆನಾಯಾಸವಾಗಿ ದೊರೆವದು. ಈ ಮಹತ್ತ್ವದ ಸತ್ಯತತ್ವವನ್ನು ಕಂಡುಹಿಡಿದ ಶ್ರೇಯಾದರೆ ನೇವು ಅಮೇರಿಕೆಯ ಕಡೆಗೆ ಹೋಗಬೇಕು. ಅಲ್ಲಿ ಪ್ರತಿಯೊಂದು ವ್ಯವಸಾಯದ ಜನರು ತಮ್ಮವೊಂದು ಸಂಘವನ್ನೇರ್ಪಡಿಸಿ, ಅದರ ಮುಖಾಂತರವೇ ತಮ್ಮ ಪ್ರಗತಿಮಾಡಿಕೊಳ್ಳುವ ಪ್ರಘಾತವಿದ್ದದ್ದರಿಂದ, ಅಮೇರಿಕವು ಜಗತ್ತಿನ ಯಾವದೇ ಜನಾಂಗಕ್ಕಿಂತ ಹೆಚ್ಚಿನ ಉನ್ನತಿ ಪಡೆದಿರುವದು. ಅದರ ಅನುಕರಣವು ನಮ್ಮಲ್ಲಿಯೂ ಕೆಲಮಟ್ಟಿಗೆ ಆಗುತ್ತಿರುತ್ತದೆಂಬುದು ಸಮಾಧಾನದ ಮಾತು. ಉದಾಹರಣೆಗಾಗಿ— ಸ್ವಯಂಸೇವಕರ ಸಂಘಟನೆ, ಹಿಂದೂ ಸಂಘಟನೆ, ಮಹಮ್ಮದೀಯರ 'Pan-Islamism' ಮಹಾರಾಷ್ಟ್ರ ವೋಧಶಾಲೆಗಳ ಸಂಘ, ಹುಬ್ಬಳ್ಳಿಯ ಮಾರ್ಗಪ್ರಸಾರಕ ಸಂಘ, ಇವೇ ಮೊದಲಾದವುಗಳ ಕಡೆಗೆ ಬೆಟ್ಟು ತೋರಿಸಬಹುದು. ಈ ಸಂಘಟನಾಶಕ್ತಿಯ ಬೀಜವನ್ನು ನಮ್ಮ ಕರ್ನಾಟಕದಲ್ಲಿ ಬಿತ್ತಿದ್ದರ ಶ್ರೇಯಸ್ಸು ಅವು ಗಳಿಕೆಯಿಂದ ಮರೆ ಬಂದ ನಾ॥ ಹರ್ಡೀಕರ ನಾರಾಯಣರಾಯರಿಗೇ ಸಲ್ಲಿಸತಕ್ಕದ್ದು. ಈ ನವಶಕ್ತಿಯ ಪ್ರೇರಣೆಯಿಂದಲೇ ಕರ್ನಾಟಕದಲ್ಲಿ ಸದ್ಯಕ್ಕೆ ಅನೇಕ ಸಂಘಗಳು ಉದಯಹೊಂದಿವೆ. ಅದರ ಮತ್ತೊಂದು ಪ್ರತ್ಯಕ್ಷ ಫಲವೆಂದರೆ, ಉಡುಪಿಯಲ್ಲಿ ಪರ್ಯಾಯದ ಹೊತ್ತಿಗೆ ನೆರೆಯಲಿಕ್ಕಿದ್ದ "ಕರ್ನಾಟಕ ಪತ್ರಿಕಾಕರ್ತರ ಪರಿಷತ್ತು."

ಹೊಸ್ತ ಹೊಸ್ತ ಮೆಟ್ಟಿಲಯಲ್ಲಿ, ಲೇಖನ ಸ್ವಾತಂತ್ರ್ಯದಿಂದ ಉದಯಿಸುವವರೆಂದು 'ಅಖಿಲ ಭಾರತೀಯ ಲೇಖಕ-ಸಮಿತಿ'ಯ ಪರ್ಯಾಯವಿದ್ದು ಎಲ್ಲರಿಗೂ ಗೊತ್ತಿರಬಹುದು. ಕನ್ನಡಿಗರ ಅನಾದರದಿಂದ ಸದ್ಯಕ್ಕೆ ಗತಿಸಿಹೋದ ಬೆಳಗಾಂವಿಯ 'ಕರ್ನಾಟಕ ಮಿತ್ರ'ನು ಹಿಂದೊಮ್ಮೆ ಸಂಪಾದಕರದೊಂದು ಸಂಘವನ್ನು ಸ್ಥಾಪಿಸುವದರ ಸೂಚಿಸಿದ್ದು ನನ್ನ ನೆನಪಿನಲ್ಲಿಯುಂಟು. ಆದರೆ, ಆಗ 'ಮಿತ್ರ'ನ ಬಿನ್ನಹಕ್ಕೆ ಯಾರೂ ಬೆಂಬಲವನ್ನೀಯದಿಲ್ಲದ್ದರಿಂದ, ಆ ಸೂಚನೆಯು ಅಲ್ಲೇ ನಿಂತುಹೋಯಿತು. ಇತ್ತೀಚೆಗೆ ಕರ್ನಾಟಕದಲ್ಲಿ ದಟ್ಟಿಣೆಯ ಕಾರುಬಾರವನ್ನು ತಾಳಿದ್ದರಿಂದಲೂ, 'ಕರ್ಮವೀರ' 'ಸತ್ಯಾಗ್ರಹ', 'ಕರ್ನಾಟಕ-ವೈಭವ', ಮೊದಲಾದ ವೃತ್ತಪತ್ರಗಳ ಸಂಪಾದಕರು ಅದಕ್ಕೆ ಬಲಬದ್ಧರಾದದರಿಂದಲೂ, ಇಂಥದೊಂದು ಸಂಘದ ಮಹತ್ವವು ಎಲ್ಲರ ಲಕ್ಷ್ಯಕ್ಕೆ ಬಂದದೆ ಆದರೆ, ಈ ವಿಷಯದ ಬಗ್ಗೆ ಲೋಕಮತವು ವಿಶೇಷ ಜಾಗ್ರತವಾಗದೆ ಇದ್ದ ಹೊತ್ತಿನಲ್ಲಿ ಉಡುಪಿಯ 'ಸತ್ಯಾಗ್ರಹ'ಯ ನಾಯಕರು ಧೈರ್ಯದಿಂದ ಮುಂದುವರಿದದ್ದು ನೋಡಿ, ಯಾರಿಗೆ ಸಂತೋಷವಾಗದೆ ಇರಲಿಕ್ಕಿಲ್ಲ? ಈ ಮಹತ್ವದ ಕಾರ್ಯದಲ್ಲಿ ಅವರಿಗೆ ಕರ್ನಾಟಕದ ಇತರ ಪತ್ರಿಕಾಕರ್ತರು ತಮ್ಮ ಜನ್ಮಸಿದ್ಧ ಆನಾಸ್ಥೆಯನ್ನೂ ತೊರೆದು ನೆರವಾಗಬೇಕು.

ಕನ್ನಡ ಪತ್ರಿಕೆಗಳ ಹಾಗೂ ಪತ್ರಿಕಾಕರ್ತರ ಸದ್ಯದ ಸ್ಥಿತಿಯನ್ನು ಕಂಡು, ಈ ಸಮ್ಮೇಲನದ ಹೊಸ ಕಲ್ಪನೆಯಿಂದ ನನ್ನ ಮನಸ್ಸಿನಲ್ಲಿ ಉದ್ಭವಿಸಿದ ವಿಚಾರತರಂಗಗಳನ್ನು ಕನ್ನಡಿಗರ ಅವಗಾಹನೆಗಾಗಿ ಇದಿರಿಡುವ ಧೈರ್ಯಮಾಡುತ್ತೇನೆ. ವರ್ತಮಾನಪತ್ರದ ಕಲೆಯು ಪಾಶ್ಚಾತ್ಯ ಸಂಪರ್ಕದಿಂದ ಬಂದ ಒಂದು ಪಾಶ್ಚಾತ್ಯ ಸುಧಾರಣೆಯು ನಮ್ಮ ವಿಶಿಷ್ಟ ಸಂಸ್ಕೃತಿಯಲ್ಲಿ ಬೆರಸಿ, ಪ್ರಗತಿಯನ್ನು ಹೊಂದುತ್ತಿದ್ದ ಮಹಾರಾಷ್ಟ್ರದಲ್ಲಾದಷ್ಟು ಈ ವರ್ತಮಾನಪತ್ರ-ಸೃಷ್ಟಿಯಲ್ಲಿ ಬೆಳವಣಿಗೆಯು ನಮ್ಮಲ್ಲಾಗಲಿಲ್ಲ. ಇದರ ಕಾರಣವೇನೆಂದರೆ, ನಮ್ಮಲ್ಲಿ ಮಾತೃಭಾಷಾಭಿಮಾನವು ಸಾಕಷ್ಟು ಬೆಳೆದಿಲ್ಲವದ್ದು. ಜನಾಭಿಮಾನವೇ ಆರಣ್ಯವಾಸವಾಗಿದೆ. ಭಾಷಾಸೇವನೆ ಮಾಡತಕ್ಕವರು ನಮ್ಮಲ್ಲಿ ಕಡಿಮೆ. ವಹಿಸಿಕೊಂಡವರಲ್ಲಿ ವೃತ್ತಪತ್ರದ ವ್ಯವಸಾಯ ಮಾಡುವವರಂತೂ ತೀರ ಕಡಿಮೆ. ಹೀಗಾಗಿ ಲೇಖನಕಲೆಯಲ್ಲಿ ಪ್ರಾಂತ ಸಂಪಾದಕರ ಬದಲಾಗಿ ಸಾಮಾನ್ಯ ಜನರೇ ಪತ್ರಿಕೆಗಳ ಕೆಲಸವನ್ನೂ ಕೈಕೊಂಡಿದ್ದರೆ ಹೇಗಾಗಬಹುದು ವಗೆಂತು ಆನಿಷ್ಟವೆಂದು ತೋರುತ್ತದೆ. ಯಾಕಂದರೆ, ಈ ಸಾಮಾನ್ಯ ಜನರಲ್ಲಿ ಸಮಾಜದ ವಿಚಾರಗಳಿಗೆ ಹೊಸ ದಾರಿಯನ್ನು ಹಚ್ಚಿಕೊಡುವ ಸ್ವಪ್ರಜ್ಞೆಯೂ, ಯೋಗ್ಯತೆಯೂ ಇರುವದಿಲ್ಲ. ಸಮಾಜದ ವಿಶ್ವಾಸವನ್ನು ಕಾಯ್ದುಕೊಳ್ಳುವ ಶಕ್ತಿಯೂ ಇವರಲ್ಲಿಲ್ಲ. ಕನ್ನಡ ಪತ್ರಿಕೆಗಳಿಗೆ ಸಾಕಷ್ಟು ಚಂದಾದಾರರು ಸಿಗದಿರಲಿಕ್ಕೆ ಇದೇ ಕಾರಣವು. ಇದರಿಂದ ಬೋಧ ಪಡೆದು, ಇನ್ನು ಮುಂದಾದರೂ ಸಮಾಜದಲ್ಲಿ ಆದರವಿದ್ದ ಭಾಷಾಸೇವಕರೇ ವೃತ್ತಪತ್ರದ ವ್ಯವಸಾಯವನ್ನು ಕೈಕೊಳ್ಳುವರೆಂದು ಕೋರಿಕೆ.

ಪತ್ರಿಕೆಗಳ ಬೆಳವಣಿಗೆಯು ಕರ್ನಾಟಕದಲ್ಲಿ ಸಾಕಷ್ಟು ಆಗಲಿಲ್ಲವೆಂದು ಮೇಲೆ ಹೇಳಿದ್ದೇನಷ್ಟೇ. ಆದರೆ, 'ನವ ಕಾಲ' ಹಾಗೂ 'ಕೇಸರಿ'ಯ ಸಾವಿರಾರು ಪ್ರತಿಗಳು ನಮ್ಮಲ್ಲಿ ಖರ್ಚು ಆಗುತ್ತವೆಂದು ಕೆಳವರು ನಿಮಗೆ ಒಂದು ಆಕ್ಷೇಪವನ್ನು ತರಬಹುದು. ಕನ್ನಡ ಭಾಷೆಯ ಎಲ್ಲಾ ಪತ್ರಿಕೆಗಳ ಚಂದಾದಾರರನ್ನು ಕೂಡಿಸಿದರೂ, ಈ ಗಣನೆಯು 'ಕೇಸರಿ'ಯ ಚಂದಾದಾರ ಸಂಖ್ಯೆಯನ್ನು ಎಂದೂ ಮೀರಲಿಕ್ಕಿಲ್ಲವೆಂದು ಧಾರಾಳವಾಗಿ ಹೇಳಬಹುದು. ಕನ್ನಡ ಪತ್ರಿಕೆಗಳ ಹಣೇಬರಹವು ಹೀಗೇಕೆ? ಅವು ಒಂದೇ ಸವನೆ ಅಸ್ಥಿರತೆಯನ್ನು ಹೊಂದುತ್ತಲಿರುವದೇಕೆ? ಪತ್ರದ ಸ್ಥಿರತೆಯ ಬಗ್ಗೆ ಹೊಣೆಯನ್ನು ಹೊರುವವರು ಯಾರೂ ಇಲ್ಲ. ಹೀಗಾಗಿ, ಹೊಸದಾಗಿ ಉದಯಹೊಂದಿದ ಪತ್ರಿಕೆಯು ಯಾವಾಗ ನಿಂತುಹೋಗುವದೋ ಎಂಬ ವಿಚಾರವು ಜನರಲ್ಲಿ ತಲೆದೋರಿದರೆ, ಅದು ನಿರಾಧಾರವೆಂದು ಹೇಳುವ ಧೈರ್ಯವು ಯಾರಿಗಿದೆ? ಈ ಶೋಚನೀಯ ಪರಿಸ್ಥಿತಿಯನ್ನು ಹೋಗಲಾಡಿಸುವ ಬಗೆ ಹೇಗೆ? ಕನ್ನಡಿಗರಲ್ಲಿ ಸಾರ್ವಜನಿಕ ಕೆಲಸಗಳಲ್ಲಿ ತೋರಿಬರುವ ಆಲಸ್ಯ—ಉದಾಸೀನತೆಯಲ್ಲಿಯೇ ಈ ಪರಿಸ್ಥಿತಿಯ ಬೀಜವಿದೆ. ಇಂಥ ಉದಾಸೀನತೆಯನ್ನು ತೊಲಗಿಸಲಿಕ್ಕೆ ತಮ್ಮ ಕ್ಷೇತ್ರದಲ್ಲಿ ಸ್ಥಿರವಾಗಿ ಬೇರೂರಿದ ಪತ್ರಿಕಾಕರ್ತರು ಪ್ರಯತ್ನ ಮಾಡಿದಂತೆ ತೋರುವದಿಲ್ಲ. ನಾನು ಕರ್ನಾಟಕಸ್ಥನು, ನೀನು ಕನ್ನಡಿಗನು ಎಂಬ ಕರ್ನಾಟಕತ್ವದ ಭಾವನೆಯನ್ನು ಜನರಲ್ಲಿ ಹರಡಿ ಬೆಳೆಸಲಿಕ್ಕೆ, ಸಂಪಾದಕರಂತೂ ಇತ್ತಿತ್ತಲಾಗಿ, ನಮ್ಮ ಮುಂದಾಳುಗಳು ಸಹ ಪ್ರಯತ್ನಿಸಲಿಲ್ಲ! ನಮ್ಮ ಉತ್ತರಕನ್ನಡ ಜಿಲ್ಲೆಗಳ ಧುರೀಣರಿಗಂತೂ ಕರ್ನಾಟಕದ ವಿಶಿಷ್ಟ ಸಂಸ್ಕೃತಿಯ ಅರಿವು ಇದ್ದೇ ಇಲ್ಲ; ಕರ್ನಾಟಕದ ಭಾಷಾ—ಇತಿಹಾಸಗಳ ಅಭಿಮಾನವು ಅವರಲ್ಲಿ ಕಮ್ಮಿ. ಅಂದಮೇಲೆ ಜನತೆಯನ್ನು ಈ ದಿಶೆಯಿಂದ ಜಾಗೃತಗೊಳಿಸುವದು ಇತ್ತಿತ್ತಲಾಗಿ! ಇರಲಿ. ಪತ್ರಿಕಾಕರ್ತರೂ, ಮುಂದಾಳುಗಳೂ ಈ ಪ್ರಾಂತಿಕ ಅಭಿಮಾನವನ್ನು, ಅತಿರೇಕವಾಗದಂತೆ, ಸಾಕಷ್ಟು ಪ್ರಜ್ವಲಿಸಿದರೆ, ಮುಂದಿನ ಪ್ರಗತಿಯ ಮಾರ್ಗವು ಸುಲಭವಾಗುವದು.

ಹೇಗಾಗಿ ವರ್ತಮಾನಪತ್ರದ ವ್ಯವಸಾಯದ ಕಡೆಗೆ ನಮ್ಮ ಜನರು ಉಪಜೀವಿಕೆಯ ಸಾಧನವೆಂಬ ದೃಷ್ಟಿಯಿಂದ ನೋಡುತ್ತಿರುವದು ದೊಡ್ಡ ತಪ್ಪು. ಪಾಶ್ಚಾತ್ಯ ದೇಶಗಳಲ್ಲಿ ಈ ವ್ಯವಸಾಯದ ಅಪಾರವಾದ ಬೆಳವಣಿಗೆಯಾಗಿರುವದರಿಂದಲೂ, ಅಲ್ಲಿಯ ವೃತ್ತಪತ್ರಗಳಲ್ಲಿ ಮೇಲ್ಮೆಗಾಗಿ ಹೋರಾಟ ನಡೆಯುತ್ತಿರುವದರಿಂದಲೂ, ಈ ಧಂದೆಯು ಅತಿಶಯ ಲಾಭದಾಯಕವಾಗಿದೆ. ಇಂಗ್ಲಂಡಿನ ವಿಖ್ಯಾತ ಸಂಪಾದಕರಾದ ಮಿ॥ ಆರ್ಥರ ಲಾರೆನ್ಸರವರು ೧೯೦೩ರಲ್ಲಿ ಬರೆದಿರುವದೇನಂದರೆ -"Journalism has now become a fashionable avocation." 'ವೃತ್ತವ್ಯವಸಾಯವು ಈಗ ಒಂದು ದೊಡ್ಡಸ್ತಿಕೆಯ ಉದ್ಯೋಗವಾಗಿದೆ.' ಆದರೆ, ಈ ದಿಕ್ಕಿನಲ್ಲಿ ಸಾಕಷ್ಟು ಪ್ರಗತಿಯನ್ನು ಹೊಂದದಿದ್ದ ನಮ್ಮ ಕನ್ನಡ ನಾಡಿನಲ್ಲಿ ಈ ವ್ಯವಸಾಯಕ್ಕೆ ಉಪಜೀವಿಕೆಯ ಸ್ವರೂಪ ಬಂದಿರುವುದು. 'ವರ್ತಮಾನ ಪತ್ರಿಕೆಗಳು ಜನಸಾಮಾನ್ಯಕ್ಕೆ ಶಿಕ್ಷಣಕೊಡುವ ಸಾಧಕರು' ಎಂಬುದೊಂದೇ ಉಚ್ಚ ಭಾವನೆಯಿಂದ ಪ್ರೇರಿತರಾದರೆ, ಎಷ್ಟೋ ಕೆಲಸವಾಗುವದು. ವ್ಯಾಪಾರಿಯ ಕಡೆಗೆ ಜೀವನಸಾಧನದ ದೃಷ್ಟಿಯಿಂದ ನೋಡಿದರೆ ಹಾಸ್ಯಾಸ್ಪದವಾಗುವದಷ್ಟೇ, ಇದರ ಕಡೆಗೆ ನೋಡಿದರೂ ಆಗುವದೆಂದು ಹೇಳುವದು ಬೇಕಿಲ್ಲ.

(೨)

ಸಂಪಾದಕರು ತಮ್ಮ ಸ್ವಂತ ಮತಗಳನ್ನು ಜನರ ಮೇಲೆ ಒತ್ತಲಿಕ್ಕೆ ಪ್ರಯತ್ನಮಾಡಬೇಕೋ, ಮಾಡಬಾರದೋ ಎಂಬುದೊಂದು ತಾತ್ವಿಕ ಚರ್ಚೆಯು ಪ್ರಕೃತಿ. ನಾನಂತೂ ವೃತ್ತಪತ್ರಗಳಲ್ಲಿ ಎರಡು ಭೇದಗಳನ್ನು ಕಲ್ಪಿಸುತ್ತೇನೆ. ಬಿಂಬ; ಪ್ರತಿಬಿಂಬ. ಪರಮಾತ್ಮನ ಪ್ರೇರಣೆಯಿಂದ ಪ್ರತಿಭಾಸಂಪನ್ನ ಬರಹಗಳನ್ನು ಬರೆದು, ಜನತೆಯಲ್ಲಿ ಹೊಸ ಚೈತನ್ಯವಂ ಬೀರಿ, ಕ್ರಾಂತಿಯನ್ನುಂಟುಮಾಡುವ ಮಹಾತ್ಮರ 'ಯಂಗ ಇಂಡಿಯಾ', ಭಗವಾನ್ ಮಾಝಿನಿಯ 'ಯಂಗ ಇಟಲಿ', ಲೆನಿನ್ನನ 'ಧೋರವರ್ಡ' ಅರವಿಂದರ 'ಆರ್ಯ' ಇವುಗಳಂಥ ಪತ್ರಗಳು ಮೊದಲಿನ ಸಭೆಯಲ್ಲಿ ಬರುತ್ತವೆ. ಇವುಗಳಿಂದ ವಿಚಾರಕ್ರಾಂತಿಯನ್ನು ಹೊಂದುತ್ತಿದ್ದ ಜನತೆಯ ಆಕಾಂಕ್ಷೆಗಳನ್ನೂ, ಮತಗಳನ್ನೂ, ಪತ್ರಗಳಲ್ಲಿ ಪ್ರತಿಬಿಂಬಿಸುವಂಥವು ಎರಡನೆಯ ಸಭೆಯಲ್ಲಿ ಬರುವವು. ನಮ್ಮ ವರ್ತಮಾನಪತ್ರಗಳು ಎರಡನೆಯ ತರಗತಿಯವಾದಾಗ್ಯೂ, ಸಂಪಾದಕಮಹಾಶಯರು ತಮ್ಮ ವಿಶಿಷ್ಟ ಮತಗಳನ್ನೇ ಜನತೆಯ ಮೇಲೆ ಒತ್ತಲಿಕ್ಕೆ ಪ್ರಯತ್ನ ಮಾಡುತ್ತಾರೆ. ಹೀಗೆ ಮಾಡದೆ, ಪ್ರೋ॥ ದಿವಾಕರರು 'ನವಶಕ್ತಿ'ಯ ಮೊದಲನೆಯ ಸಂಚಿಕೆಯಲ್ಲಿ ಬರೆದ— "I am but simply their mouthpiece sheaking out the thought that seeks expression" 'ಪ್ರಕಟಪಡಿಸಲು ಬರುವ ವಿಚಾರಗಳನ್ನು ಮಾತ್ರ ನಾನು ಉಚ್ಚರಿಸುತ್ತೇನೆ.' ಈ ಧೋರಣದಿಂದ ತಮ್ಮ ಭೂಮಿಕೆಯನ್ನು ಕಲ್ಪಿಸಿದರೆ, ಎಷ್ಟೋ ಗೊಂದಲವು ಕಡಿಮೆಯಾಗುವದು.

ಇನ್ನೊಂದು ಮಾತು. ಕರ್ನಾಟಕದಲ್ಲಿ 'ಕೇಸರಿ' ಯಂಥ ಇಡೀ ಪ್ರಾಂತಕ್ಕೆ ಮಾರ್ಗದರ್ಶಕವಾದ ಹಾಗು ಪ್ರಾಂತದ ಎಲ್ಲ ಸುದ್ದಿಗಳನ್ನು ಪೂರೈಸುವ ಮಧ್ಯವರ್ತಿ ವಾರಪತ್ರಿಕೆಯು ದಾವದೂ ಇಲ್ಲ. ಎಲ್ಲ ಪತ್ರಿಕೆಗಳು ತಮ್ಮ ತಮ್ಮ ಜಿಲ್ಲೆಗೆ ಸಂಬಂಧಪಟ್ಟವುಗಳು. ಅಂಥವುಗಳ ಉದ್ದೇಶವು, ಜಿಲ್ಲೆಯ ಸಾಮಾನ್ಯ ಜನತೆ (masses) ಯಲ್ಲಿ ಉದ್ಬೋಧನೆಯನ್ನು ಮಾಡುವದೂ, ಪರಸ್ಥಳದಲ್ಲಿದ್ದ ಜಿಲ್ಲೆಯ ಜನರಿಗೆ ತಮ್ಮೂರಲ್ಲೇನು ನಡೆದದೆ ಎಂಬುದರ ಪೂರ್ಣ ಅರಿವು ಮಾಡಿಕೊಡುವದೂ ಆಗಬೇಕು. ಮತ್ತು ಅದುತ್ತವೆಂಬುದೇ ನನ್ನ ಕಲ್ಪನೆ. ಒಂದೆರಡು ವರ್ತಮಾನಪತ್ರಗಳನ್ನು ಬಿಟ್ಟರೆ, ಉಳಿದವುಗಳಲ್ಲಿ ಈ ಉದ್ದೇಶವು ಕಂಡುಬರುವದಿಲ್ಲ. ಆದರಿಂದಲೇ ನಮ್ಮ ಪತ್ರಿಕೆಗಳು ಹೀನಸ್ಥಿತಿಗೀಡಾಗಿವೆ. ಅಂತರ್‌ರಾಷ್ಟ್ರೀಯ ಪ್ರಶ್ನೆಗಳನ್ನು ಚರ್ಚಿಸಿ, ತಮ್ಮ ಪಾಂಡಿತ್ಯವನ್ನು ತೋರ್ಪಡಿಸುವ ಭರದಲ್ಲಿ, ಸ್ಥಾನಿಕ ಪರಿಸ್ಥಿತಿಯ ವಿಷಯವಾಗಿ, ತಮ್ಮ ಸಂಸ್ಕೃತಿಯ ವಿಷಯವಾಗಿ, ಹಾಗೂ ವಾಙ್ಮಯೀತಿಹಾಸದ ಬಗೆ ಅರಿವು ದಾಶಗೊಡುವದನ್ನು ಈ ಸಂಪಾದಕರು ಮರೆಯುತ್ತಾರೆಂಬುದು ಶೋಚನೀಯ ಸಂಗತಿಯು. ಸುಶಿಕ್ಷಿತರೆನಿಸಿಕೊಳ್ಳುವ ಗೃಹಸ್ಥರು ಜಿಲ್ಲೆಯ ವಾರಪತ್ರಿಕೆಯನ್ನು ಸ್ಥಾನಿಕ ವೃತ್ತಾಂತಕ್ಕಾಗಿಯೇ ಸಾಧಾರಣತಃ ಓದುತ್ತಿರುವದರಿಂದ, ಪ್ರತಿಯೊಂದು ತಾಲೂಕಿನಲ್ಲಿ ಸುದ್ದಿಗಾರರನ್ನಿಟ್ಟು ಇಡೀ ಜಿಲ್ಲೆಯ ವೃತ್ತಾಂತ ಪೂರೈಸುವ ಏರ್ಪಾಡಾಗುವದು ಅವಶ್ಯವದೆ. ಪರಿಷತ್ತಿನವರು ಒಂದು ಮಧ್ಯವರ್ತಿ ವಾರಪತ್ರಿಕೆಯನ್ನು ಹೊರಡಿಸುವ ಆವಶ್ಯಕತೆಯನ್ನು ಚರ್ಚಿಸಬೇಕು.

ನಮ್ಮಲ್ಲಿ ಎಲ್ಲ ವೃತ್ತಪತ್ರಗಳು ರಾಜಕೀಯ ಧ್ಯೇಯವೊಂದನ್ನೇ ಮುಂದಿಟ್ಟುಕೊಂಡು ಕೆಲಸ ಮಾಡುತ್ತಿರುವವು. ದೇಶದ ಪರಿಸ್ಥಿತಿಯಲ್ಲಿ ರಾಜಕಾರಣಕ್ಕೇ ಪ್ರಾಮುಖ್ಯತೆಯನ್ನು ಕೊಡಬೇಕಾದರೂ, ಇತರ ವಿಷಯಗಳನ್ನು ಗೌಣವೆಂದು ಕಲ್ಪಿಸಿ, ದುರ್ಲಕ್ಷಿಸತಕ್ಕದ್ದು ಒಂದೊಂದು ಜಿಲ್ಲೆಗೆ ೨-೩ ಪತ್ರಗಳು ಇದ್ದು ಅವುಗಳಲ್ಲಿ ಸಹಕಾರ್ಯ ಬೆಳೆಸಿ, ಒಂದಕ್ಕೆ ರಾಜಕೀಯವಾದರೆ, ಇನ್ನೊಂದಕ್ಕೆ ಸಾಮಾಜಿಕ ಮತ್ತೊಂದಕ್ಕೆ ವಾಙ್ಮಯ ಹೀಗೆ ವಿಷಯಗಳನ್ನೂ ಹಂಚಿಕೊಳ್ಳಬಹುದೋ, ಹೇಗೆ ಎಂಬುದನ್ನು ಪತ್ರಿಕಾಕರ್ತರು ಪರಿಷತ್ತಿನಲ್ಲಿ ಠರಾಯಿಸಬೇಕು. ಹೀಗಾದರೆ, ಪರಸ್ಪರರಲ್ಲಾಗುವ ಪ್ರಾಸಂಗಿಕ ತಿಕ್ಕಾಟವು ನಿಂತುಹೋಗಿ, ಪ್ರಾಂತವು ಸರ್ವಾಂಗ ಪೂರ್ಣತೆಯನ್ನು ಹೊಂದುವದು. ಕರ್ನಾಟಕದ ದುರ್ದೈವದಿಂದ ಹೀಗಾಗುವದು ಅಶಕ್ಯವೆಂತಾದರೆ, ತಮ್ಮ ಪತ್ರದಲ್ಲಿ ವಿವಿಧ ವಿಷಯಗಳ ಮೇಲೆ ಲೇಖಗಳನ್ನು ಬರೆಯುವ ಏರ್ಪಾಡಾಗಬೇಕು. ವಿನೋದ, ಅರ್ಥಶಾಸ್ತ್ರ, ಶೇತ್ಕಿಯ, ಕ್ರೀಡಾ-ಯುಗ್ಗಗಳು, ಆರೋಗ್ಯ ಇತ್ಯಾದಿ ವಿಷಯಕ ಲೇಖಗಳನ್ನು ಅವುಗಳಲ್ಲಿ ಸಮಾವಿಷ್ಟ ಮಾಡಬೇಕು. ವಿವಿಧತೆ ಸಜೀವತೆಯ ಲಕ್ಷಣವು. ಧಾರ್ಮಿಕ-ಸಾಮಾಜಿಕ, ಆಚಾರ-ವಿಚಾರಗಳ ಮೇಲೆ ದಾಕ್ಷಿಣ್ಯ ಕೊಳ್ಳಗಾಗದಲೆ, ಟೀಕಿಸುವ ಧೈರ್ಯವು ಯಾರಲ್ಲಿಯೂ ಇಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಉಡಿಗೆ-ತೊಡಿಗೆಗಳ ಮೇಲೂ ನಡೆನುಡಿಗಳ ಮೇಲೂ ಬರೆಯುವದನ್ನು ಸಂಪಾದಕರು ತಮ್ಮ ಕರ್ತವ್ಯವೆಂದು ತಿಳಿಯುತ್ತಾರೆ. ಅಲ್ಲಿ ರಾಜಕಾರಣವು ಗೌಣವಿರುತ್ತದೆ. ಸಾಮಾನ್ಯ ಜನರಿಗಾಗಿ ಉಪಯುಕ್ತ ವಿಷಯಗಳನ್ನೊಳಗೊಂಡ ಪತ್ರಿಕೆಯು ಯಶಸ್ವಿಯಾಗುವದು. ವಾಙ್ಮಯಾಭಿವೃದ್ಧಿಯನ್ನು ಸಂಪಾದಕರು ಧ್ಯೇಯವಾಗಿಟ್ಟುಕೊಳ್ಳಬೇಕು. ಕನ್ನಡ ಭಾಷೆಯ ಭವಿತವ್ಯತೆಯು ಅವರ ಮೇಲೇ ಅವಲಂಬಿಸಿ ಅದೆ. ವೃತ್ತಪತ್ರಕಾರರು ದೇಶದ ಹಾಗು ಭಾಷೆಯ ಶಿಕ್ಷಕರೆಂಬುದನ್ನು ಎಂದೂ ಮರೆಯತಕ್ಕದ್ದು.

ವೃತ್ತಪತ್ರದ ವ್ಯವಸಾಯವು ಯಶಸ್ವಿಯಾಗಬೇಕಾದರೆ, ಸದ್ಯದ ಸ್ಥಿತಿಯಲ್ಲಿ ಅವುಗಳಲ್ಲಿ ಯಾವ ಯಾವ ತಿದ್ದುಪಡಿಗಳನ್ನು ಮಾಡಬೇಕು ಎಂಬ ಮಹತ್ವದ ವಿಷಯದ ಚರ್ಚೆಯು ಪರಿಷತ್ತಿನಲ್ಲಿ ಆಗುವದು ಅವಶ್ಯವದೆ. ಲೇಖಗಳನ್ನು ಗಹನವಾದ ಗ್ರಂಥಸ್ಥ ಭಾಷೆಯಲ್ಲಿ ಬರೆಯದೆ, ಎಲ್ಲರಿಗೆ ತಿಳಿಯುವಂತೆ ತಿಳಿಗನ್ನಡದಲ್ಲಿಯೇ ಬರೆಯಬೇಕು. ಅಂದರೆ, ಎಲ್ಲರಿಗು ಅದರ ಉಪಯೋಗ ಮಾಡಿಕೊಳ್ಳಬಹುದು. ವ್ಯಕ್ತಿವಿಷಯಕ ಹಾಗೂ ವಿಶಿಷ್ಟ ಜಾತಿವಿಷಯಕ ಟೀಕೆಗೆ ಎಂದೂ ಎಡೆ ಕೊಡಬಾರದು. ಸ್ಥಾನಿಕ ಸಂಸ್ಥೆಗಳಲ್ಲಿಯೂ ಸುಧಾರಣೆಯಾಗುವದು ಅವಶ್ಯವದೆ. ರಾಷ್ಟ್ರದ ಪರಿಸ್ಥಿತಿಯಲ್ಲಿ ತಿರೋಲೇಖಗಳಿಗೆ ಪ್ರಾಶಸ್ತ್ಯವನ್ನು ಕಡಿಮೆಗೊಳಿಸಿ, ಜನರ ಭಾವನೆಗಳನ್ನು ಉದ್ದೀಪಿಸಿ, ಅವರಿಗೆ ಕೆಲಸ ಮಾಡಲಿಕ್ಕೆ ಹುರುಪುಗೊಡಬೇಕು. ಅಭಿಪ್ರಾಯಗಳನ್ನು ಅಚ್ಚುಕಟ್ಟಾಗಿಯೂ, ಅರ್ಥಬೋಧವಾಗುವಂತೆಯೂ ಮಂಡಿಸದೆ, ಜನತೆಯನ್ನು ದಿಙ್ಮೂಢ ಮಾಡಬಾರದು. ವೃತ್ತಕಾರರು 'ಜಯಕರ್ನಾಟಕ' ದಲ್ಲಿರುವಂತೆ, ಜೇನುಹುಟ್ಟನ್ನು ಕಲ್ಪಿಸಿ, ಅದರಲ್ಲಿ ಕುರಿ ದನಗಳು ಬಣ್ಣಗಳು ಮೊದಲಾದ ಔದ್ಯೋಗಿಕ ವಿಷಯಗಳ ಮಾಹಿತಿಯನ್ನು ಕಾಲಕಾಲಕ್ಕೆ ಸಂಗ್ರಹಿಸಬೇಕು. ಪತ್ರದ ಅಂತರಂಗದೊಡನೆಯೇ ಬಹಿರಂಗವಾದರೂ ಮನೋಹರವಾಗಿರಬೇಕು.

ಮಾಸಪತ್ರಿಕೆಗಳ ವಿಷಯವಾಗಿ ಇನ್ನೊಂದು ಮಾತು. ಕನ್ನಡ ಮಾಸಪತ್ರಿಕೆಗಳು ಬೇರೆ ಬೇರೆ ಧ್ಯೇಯವನ್ನು ಕಣ್ಮುಂದಿಟ್ಟುಕೊಂಡು ಕೆಲಸ ನಡೆಸುತ್ತಿರುವದು ಅಭಿನಂದನೀಯವು. ಆದರೆ ಇನ್ನೂ ಅನೇಕ ವಿಷಯಗಳ ಮೇಲೆ ಮಾಸಪತ್ರಿಕೆಗಳು ಬೇಕು. ಅವು ಉದಯವಾದ ದಿನವೇ ಸುದಿನವು. ಬಹಿರಂಗದ ಕಡೆಗೆ ಹೆಚ್ಚು ಲಕ್ಷ ಪೂರೈಸಿ, ಅಂಕಗಳನ್ನು ನಿಯಮಿತ ಕಾಲಕ್ಕೆ ಹೊರಡಿಸಬೇಕು. ಮಾಸಪತ್ರಿಕೆಯಲ್ಲಿ ಅರ್ಥಪೋಷಕ ಚಿತ್ರಗಳನ್ನು ಸೇರಿಸಿ, ಸಾಹಿತ್ಯಕ್ಕೆ ಚಿತ್ರಕಲೆಯ ಜೋಡು ಕೊಟ್ಟು, ಅಂತರಂಗ-ಬಹಿರಂಗವು ನಯನಮನೋಹರವಾಯಿತೆಂದರೆ, ಪತ್ರಿಕೆಯ ವಿಷಯವಾಗಿ ಯಾರಿಗೆ ತಾನೇ ಪ್ರೀತಿ ಹುಟ್ಟಲಿಕ್ಕಿಲ್ಲ?

ನನ್ನ ಅಲ್ಪಮತಿಗೆ ಸೂಕ್ತವಾಗಿ ತೋಚಿದ ವಿಷಯಗಳನ್ನು ನಿರ್ದಾಕ್ಷಿಣ್ಯದಿಂದ ಈ ಲೇಖಗಳಲ್ಲಿ ನಾನು ವಿವರಿಸಿರುತ್ತೇನೆ. ಕನ್ನಡಿಗರೆಲ್ಲರೂ ಯೋಗ್ಯ ವಿಚಾರಮಾಡಿ ಪರಿಷತ್ತಿನ ಧ್ಯೇಯವನ್ನು ಸಾಧಿಸುವರೆ ತಮ್ಮಿಂದಾದಷ್ಟು ನೆರವಾದರೆ, ಕರ್ನಾಟಕದಲ್ಲಿ ವೃತ್ತಪತ್ರದ ವ್ಯವಸಾಯಕ್ಕೆ ಸ್ಥೈರ್ಯವೂ, ಉಜ್ಜ್ವಲಾವಸ್ಥೆಯೂ ಪ್ರಾಪ್ತವಾಗದ ಎಂದೂ ಇರಲಿಕ್ಕಿಲ್ಲ. ಪರಿಷತ್ತಿನ ಮುಂದಿರುವ ಕಾರ್ಯವು ಗುರುತರವಾದದ್ದು, ಒಮ್ಮನಸ್ಸಿನಿಂದ ದುಡಿದರೆ ಸಾಧ್ಯವಾಗುವದು. ಇದರಲ್ಲಿ ಕರ್ನಾಟಕದ ಮುಂದಾಳುಗಳು ತಮ್ಮ ಸಕ್ರಿಯ ಸಹಾನುಭೂತಿಯನ್ನು ತೋರಿಸಿ ನೆರವಾಗಬೇಕು. ಪರಿಷತ್ತಿಗೆ ಸುಸಂಘಟಿತವಾದ ಸ್ವರೂಪವನ್ನು ಕೊಟ್ಟು, ಅದನ್ನು ಪತ್ರಿಕಾಕರ್ತರ ಸಂಘದಲ್ಲಿ ಪರಿಣಮಿಸುವ ಹಾಗೆ ಮಾಡಿದರೆ ಮಾತ್ರ, ಸ್ವಲ್ಪವಾದರೂ ಕಾರ್ಯವಾಗುವದೇ ಹೊರತು, ಎಂಟು ವರ್ಷಕ್ಕೊಮ್ಮೆ ಯಾವಾಗಾದರೂ ಬಿಡುವು ಆದಾಗ ಕೂಡಿ, ದೊಡ್ಡ ದೊಡ್ಡ ಉಪನ್ಯಾಸಗಳನ್ನಿತ್ತರೆ, ಏನೂ ಫಲನಿಷ್ಪತ್ತಿಯಾಗಲಿಕ್ಕಿಲ್ಲ. ಸಂಘದಂಥ ಏನಾದರೊಂದು ಸ್ಥಿರ ಸ್ವರೂಪವನ್ನು ತಾಳಿ, ಕನ್ನಡ ಸಾರಸ್ವತಾಂಗಣದಲ್ಲಿ ನಲಿದಾಡಲು ಬಯಸುವ ಕರ್ನಾಟಕದ ಯುವಕರಿಗೆ ಅದು ಮಾರ್ಗದರ್ಶಕವಾಗಲೆಂದು ಹಾರೈಸುತ್ತೇನೆ. 'ಮಿತ್ರ'ನಿಗೆ ೨-೩ ವರ್ಷಗಳ ಹಿಂದೆ ಬಿದ್ದ ಕನಸಾದ ಕನಸು ನಿಜವಾಗುವದೇನು?

॥ ಸಿರಿಗನ್ನಡಂ ಗೆಲ್ಗೆ ॥

— ಪಂಡಿತ ಮದನಮೋಹನ ಮಾಲವೀಯರವರು ಕಾಶೀ ಕ್ಷೇತ್ರದಲ್ಲಿ ಚುನಾವಣೆಯ ಮೇಲೆ ಉಪನ್ಯಾಸ ಕೊಡುತ್ತಿರುವಾಗ ಅಧಮರು ಕಲ್ಲೆಸೆದಿದ್ದಾರೆ. ಒಬ್ಬ ನರಾಧಮನು ಪಂಡಿತಜೀಯವರ ಕಡೆಗೆ ಕಲ್ಲೆಸೆದನು. ದೈವದಿಂದ ಅದು ಪಂಡಿತಜೀಯವರಿಗೆ ಸ್ಪರ್ಶಿಸಲಿಲ್ಲ.

ತ್ವರೆ ಮಾಡಿರಿ ತ್ವರೆ ಮಾಡಿರಿ !!

ಅಚ್ಚಿನಲ್ಲಿದೆ!

ಬಗ್ಗೋಣ ರಾಮಾ ತಿಮ್ಮಣ್ಣ ಪಂಡಿತರವರಿಂದ ಗುಣಿಸಿ ಪರಿಶೋಧಿಸಲ್ಪಟ್ಟ

ರಕ್ತಾಕ್ಷಿ ಸಂವತ್ಸರದ ಪಂಚಾಂಗವು

ಈ ತಿಂಗಳ ಅಖೈರೊಳಗೆ ತಯಾರಾಗುವದು.

ಡಿಶಂಬರ ತಿಂಗಳ ತಾ. ೨೦ ರೊಳಗೆ ಮುಂಗಡ ಹಣ ಕೊಡುವವರಿಗೆ

೧,೦೦೦ ಕ್ಕೆ ರೂಪಾಯಿ ೧೦೫;

೫೦೦ಕ್ಕೆ ರೂಪಾಯಿ ೫೫; ೧೦೦ಕ್ಕೆ ರೂಪಾಯಿ ೧೧|

ತಾ. ೨೦ರ ನಂತರ ಮುಂಗಡ ಹಣ ಕೊಟ್ಟರಾಗಲಿ ತಯಾರಾದಮೇಲೆ, ಶೇಕಡಾ ರೂಪಾಯಿ ೧೨.

ಅಂಚೆ ವೆಚ್ಚ ಪ್ರತ್ಯೇಕ.

ಪತ್ತೆ:— ಕೃಷ್ಣ ಕೇಶವ ಶೇಣವಿ, ಹೆಗಡೇಕರ. ಮಾಲಕ ಸ್ಟಾರ ಒಫ್ ಕೆನರಾ ಪ್ರೆಸ್, ಕುಮಟಾ.

ಸತ್ಯಾಗ್ರಹೀ

ಪರ್ಯಾಯ ಸಂಚಿಕೆ.

ಉಡಪಿ ಶ್ರೀ ಕೃಷ್ಣನ ಪರ್ಯಾಯ ಮಹೋತ್ಸವದ ಗೌರವಾರ್ಥವಾಗಿ !

ಡಿಸೆಂಬರ ಅಖೈರಿಗೆ ಮುಗಿಯುವ ಕೊಂಗ್ರೆಸ್ಸಿನ ಗೌರವಾರ್ಥವಾಗಿ !!

ಸಮಸ್ತ ವಿಷಯಗಳೂ ಅನೇಕ ಚಿತ್ರಗಳೊಡನೆ ಚರ್ಚಿಸಲ್ಪಡುವವು. ಹತ್ತು ಹದಿನೆರಡು ಫುಲ್‌ಸ್ಕೇಪ್ ಸೈಜಿನ ಆರ್ಟಪೇಪರಿನ ಪುಟಗಳ ಮೇಲೆ ರಾಜಕೀಯ ಸಾಮಾಜಿಕ, ಮತವಿಷಯಕ ಚಿತ್ರಗಳು ಮುದ್ರಿಸಲ್ಪಡುವವು.

ವಿಷಯಗಳು:— (೧) ರಾಜಕೀಯ, (೨) ಲೋಕವೃತ್ತಾಂತ, (೩) ಮತವಿಷಯಕ, (೪) ಸಾಮಾಜಿಕ, (೫) ವೈದ್ಯಕೀಯ. (೬) ವೈಜ್ಞಾನಿಕ, (೭ ಔದ್ಯೋಗಿಕ, (೮) ಕೃಷಿ, (೯) ಸಾಹಿತ್ಯ. (೧೦) ವರ್ತಮಾನಸಾರ—ಇತ್ಯಾದಿ. ಇನ್ನೂ ಎಷ್ಟೋ ಭಾವಗರ್ಭಿತವೂ, ಉಜ್ವಲವೂ ಆಗಿರುವ ಲೇಖಗಳು ಉತ್ತಮ ಲೇಖಕರಿಂದ ಬರೆಯಲ್ಪಡುವವು.

ಇಡೀ ಕರ್ನಾಟಕದ ಎಲ್ಲಾ ತರದ ಜನರ ಕೈಗೂ ಇದು ಸೇರುವದರಿಂದ ಜಾಹೀರಾತುಗಳನ್ನು ಕೊಡುವವರಿಗೆ ಸುಸಂದರ್ಭ. ದರ:— ಸಾಧಾರಣ ಪುಟ ಒಂದಕ್ಕೆ ರೂ. ೧೦ ಅರ್ಧ ಪುಟಕ್ಕೆ ರೂ. ೬, ಕಾಲು ಪುಟಕ್ಕೆ ರೂ. ೪, ಒಂದು ಎಂಟನೇ ಪುಟಕ್ಕೆ ರೂ. ೨-೮-೦. ಪ್ರಕಟಣೆಗಳನ್ನು ಡಿಸಂಬರ ಅಖೈರಿಯೊಳಗೆ ಕಳುಹಿಸಬೇಕು.

ಗ್ರಾಹಕರೂ ಡಿಸಂಬರ ಅಖೈರಿಯೊಳಗೇನೇ ಹಣಗೆ ಬರೆಕೊಂಡರೆ ಒಳ್ಳೆಯದು. ಸಂಚಿಕೆಯ ಒಂದು ಪ್ರತಿಗೆ ಸತ್ಯಾಗ್ರಹೀ ಚಂದಾದಾರರಿಗೆ ಆಣೆ ಆರು; ಇತರರಿಗೆ ಆಣೆ ಎಂಟು. ಹದಿನೆಂಟು ಪ್ರತಿಗಳಿಗಿಂತ ಕಡಿಮೆ ವ್ಹಿ. ಪಿ. ಮಾಡುವದಿಲ್ಲ. ಕಡಿಮೆ ಕೊಳ್ಳುವವರು ಟಪಾಲು ಚೀಟು ಮೂಲಕವಾಗಲೀ, ಮನಿ-ಆರ್ಡರು ಮೂಲಕವಾಗಲೀ ಹಣವನ್ನು ಪೂರಾ ಕಳುಹಿಸಬೇಕು. ಹೆಚ್ಚು ಕೊಳ್ಳುವವರು ರೂಪಾಯಿ ಎರಡನ್ನು ಮುಂದಾಗಿ ಕಳುಹಿಸಬೇಕು. ಸಂಚಿಕೆಯು ಜನವರಿ ತಾರೀಖು ೨೦ರ ಒಳಗೆ ಪ್ರಕಟಿಸಲ್ಪಡುವದು. ಸತ್ಯಾಗ್ರಹಿಯು ಆಕಾರದ್ದೇ ಆರ್ಟಪೇಪರಿನ ರಕ್ಷಾಪತ್ರ (ಕವರು) ಇದ್ದು, ೩೨-೪೦ ಪುಟಗಳ ಲೇಖಗಳಿರುವವು ಉತ್ತಮ ಕಾಗದದ ಮೇಲೆ ಮುದ್ರಣ

ಉಡಪಿ, ತಾ. ೧೮-೧೧-೩೩. } ವ್ಯವಸ್ಥಾಪಕ, ಸತ್ಯಾಗ್ರಹೀ ಕಾರ್ಯಾಲಯ.

ಕಾನಡಾವೃತ್ತ.

ಅದ್ಯ ಮಿತಿ ಮಾರ್ಗಶೀರ್ಷ ಶುಕ್ಲ ೧೪ ಗುರುವಾರ

ಸ್ತುತಿಯೋ? ನಿಂದೆಯೋ?

ಭರತಖಂಡವನ್ನಾಳುವ ಆಂಗ್ಲರಾಷ್ಟ್ರವು ನೇಮಿಸಿದ ಆಳುಗಳು ಅರಸರಂತೆ ಹಿಂದುಸ್ಥಾನದಲ್ಲಿ ಕಾರಭಾರ ನಡಿಸಿ, ಪ್ರಜೆಗಳನ್ನು ಹಿಂಡಿ ಹಿಪ್ಪೆ ಮಾಡಿದರೆಂದು ದಾದಾಭಾಯಿ ನವರೋಜಿ ಮೊದಲಾದ ಭರತಪುತ್ರರ ಆರೋಪವಿದೆ. ಮಹಾತ್ಮರು ಸಹ ಬ್ರಿಟಿಶರ ನೆಂಟಸ್ತಿಕೆಯಾದಂದಿನಿಂದ ಭಾರತವರ್ಷದ ರಾಜಕೀಯ, ಆರ್ಥಿಕ ಅವನತಿಯು ವಿಶೇಷವಾಗಿ ತೀವ್ರವಾಯಿತೆಂದು ಸಿದ್ಧಪಡಿಸಿರುವರು. ಅಸಹಯೋಗದ ಜನ್ಮವು, ಧ್ಯೇಯವು ಬ್ರಿಟಿಶರ ಸಂಬಂಧವನ್ನು ತುಂಡರಿಸುವದು. ಆದರೂ, ಈ ವರೆಗಿನ ರಾಜ್ಯಪದ್ಧತಿಯಿಂದ ಭಾರತೀಯರ ಕಲ್ಯಾಣವಾಗಲಿಲ್ಲೆಂತಲೇ ಅಸಹಯೋಗವನ್ನು ರಾಷ್ಟ್ರವು ಆಶ್ರಯಿಸಿದೆ. ಪ್ರಚಲಿತ ರಾಜ್ಯಪದ್ಧತಿಯನ್ನು ಕಿತ್ತೊಗೆಯುವದು ಅಸಹಯೋಗದ ಕಾರ್ಯವು. ಮಹಾತ್ಮರ ಶಬ್ದದಲ್ಲಿ ಪ್ರಚಲಿತ ರಾಜ್ಯಪದ್ಧತಿಯು ದೋಷಾವಿಷ್ಕರಣವು ಎಷ್ಟು ಶೀಘ್ರವಾಗಿ ನಡೆಯಿತು ' ಇನ್ನೂ ನಡೆದಿದೆ. ಎಂಬ ಸಂಗತಿಯನ್ನು ಈಗ ವಿವರಿಸಬೇಕಾಗಿಲ್ಲ. ಈ ಪ್ರಚಾರದಿಂದುಂಟಾದ ತಪ್ಪು ತಿಳುವಳಿಕೆಯನ್ನು ಪರಿಹರಿಸಲು ಹಿಂದುಸ್ಥಾನದ ಗೃಹಮಂತ್ರಿಗಳಾಗಿ, ಸ್ವದೇಶಕ್ಕೆ ಮರಳಿದ ಸರ್ ವಿಲಿಯಮ್ ವಿನ್ಸೆಂಟರವರು ಕಳೆದ ತಾರೀಖು ೧೩ನೇ ಬುಧವಾರಕ್ಕೆ ಲಂಡನಿನೊಳಗಿನ 'ರೊಯಲ್ ಕೊಲೋನಿಯಲ್ ಇನ್‌ಸ್ಟಿಟ್ಯೂಟ' ಸಂಸ್ಥೆಯಲ್ಲಿ ಒಂದು ನಿಬಂಧವನ್ನೋದಿದರು. ಆಗ ಭಾರತಮಂತ್ರಿಗಳಾದ ಪೀಲ ದೊರೆಗಳು ಅಧ್ಯಕ್ಷಸ್ಥಾನವನ್ನಾಕ್ರಮಿಸಿದ್ದರು. ಸಭೆಗೆ ಲಾರ್ಡ ಮೆಸ್ಟನ್, ಸರ್ ಮ್ಯಾಕೆಲ ಒಡ್ವಾಯರ್, ಸರ್ ಚಾರ್ಲಸ್ ಮೆಕಲೊಯ್ಡರವರು ಹಾಜರಿದ್ದರು.

ಸರ್ ವಿಲಿಯಮ್ ವಿನ್ಸೆಂಟರವರು ಮಾಡಿದ ಭಾಷಣವು ಮನನೀಯವಿದೆ. ಮೊಟ್ಟಮೊದಲು, ಅವರು ತಮ್ಮ ದೇಶಬಾಂಧವರು ಹಿಂದುಸ್ಥಾನದಲ್ಲಿ ನಡಿಸಿದ ಕಾರಭಾರವನ್ನು ಕೊಂಡಾಡಿ, ಅವರು ಮಾಡಿದ ಸಾಮ್ರಾಜ್ಯಸೇವೆಯನ್ನು ನೆನಿಸಿದರು. ಕಾರಭಾರದಲ್ಲಿ ಪ್ರಾಮಾಣಿಕತೆಯನ್ನೂ, ಕಾರ್ಯಕ್ಷಮತೆಯನ್ನೂ ಅವರು ಬೆಳೆಸಲೆತ್ನಿಸಿದರಂತೆ! ದೇಶಕಲ್ಯಾಣ ಮಾಡಲು ಅವರು ಬಳಲಿದರು, ದೇಶದಲ್ಲಿ ಪೀಡನೆ, ರಕ್ಕಸತನಗಳನ್ನು ಪ್ರತಿಬಂಧಿಸಿ, ನ್ಯಾಯದಾನವನ್ನೀಯಲು ಅವರು ಹೊಯ್ದಾಡಿದರಂತೆ, ಈ ಕರ್ತವ್ಯವನ್ನು ಜರುಗಿಸಲು ಅವರಿಗೆ ಪ್ರಾಣಾರ್ಪಣ ಮಾಡಬೇಕಾಯಿತು; ಹೆಂಡರು ಮಕ್ಕಳ ವಿರಹತಾಪವನ್ನು ಸಹಿಸಬೇಕಾಯಿತು. ಧನ್ಯಸಂಚಯ ಮಾಡುವ ತಮ್ಮ ವಿಶೇಷ ಉದ್ಯೋಗಗಳನ್ನು ಸಹ ತೊರೆಯಬೇಕಾಯಿತು. ಸರ್ ವಿಲಿಯಮ್ ವಿನ್ಸೆಂಟರವರು ಬ್ರಿಟಿಶರ ಆಗಮನಕಾಲದ ಹಿಂದುಸ್ಥಾನದ ಸ್ಥಿತಿಯನ್ನೂ, ಈಗಿನ ಸ್ಥಿತಿಯನ್ನೂ ತುಲನೆ ಮಾಡಿ, ಭರತಖಂಡವು ಈಗ ಜನಸಂಖ್ಯೆಯಿಂದಲೂ, ವೈಭವದಿಂದಲೂ, ಮಿಗಿಲಾಗಿದೆಯೆಂದು ಅಭಿಪ್ರಾಯಪಟ್ಟರಂತೆ! ಈ ಬಗ್ಗೆ ವಿನ್ಸೆಂಟರವರು ಏನೇನು ಆಧಾರ ಕೊಟ್ಟರೆಂದು ವಿಲಾಯತಿಯಿಂದೀಗಿನ ರೊಯ್ಟರ ಚಿತ್ರಗುಪ್ತರು ತಿಳಿಸಲಿಲ್ಲ.

ಸರ್ ವಿಲಿಯಮ್‌ರವರು ತಮ್ಮ ದೇಶಬಾಂಧವರು ಸಾಧಿಸಿದ ಕಾರ್ಯದ ಸ್ತುತಿಪಾಠಗಳನ್ನು ಹಾಡಿದ ಬಳಿಕ, ಅವರು ಸಾಧಿಸದ, ಸಾಧಿಸಬೇಕಾದ ಕೆಲ ಸಂಗತಿಗಳನ್ನು ನಮೂದಿಸಿದರು. ಇವು ಯೋಚಿಸೀಯವೆಂತಲೂ, ಅವರ ಮಾತಾಯಿತು. "ಶಿಕ್ಷಣಕ್ರಮವು ಗುರಿ ತಪ್ಪಿ ಹೋಯಿತು. ಬೇಸಾಯೋನ್ನತಿಗೆ ಲಕ್ಷ್ಯಕೊಡಲು ನಮಗೆ ಅವಕಾಶವಾಗಲಿಲ್ಲ. ಸಾಕಷ್ಟು ಹಣವು ದೊರೆಯಲಿಲ್ಲ. ಪ್ರಜೆಗಳಿಗೆ ಸೈನಿಕ ಶಿಕ್ಷಣ ಲಭಿಸಲಿಲ್ಲ. ರಾಜ್ಯಕಾರಭಾರದ ಅನುಭವವು ಪ್ರಾಪ್ತವಾಗಲಿಲ್ಲ. ಸ್ಥಾನಿಕ ಸ್ವರಾಜ್ಯ ಪದ್ಧತಿಯು ಸ್ವಧಿಗ್ಯಯಲಿಲ್ಲ. ಜನರಿಗೂ ಸ್ಥಾನಿಕ ಸ್ವರಾಜ್ಯಕ್ಕೆ ತಕ್ಕುದಾದ ಶಿಕ್ಷಣ ಕೊಡಲಿಲ್ಲ. ಭಾರತೀಯರು ಕೊಟ್ಟ ಸಹಾಯದ ಮಹತ್ವವನ್ನು ಎಣಿಸುವಷ್ಟು ಔದಾರ್ಯವನ್ನು ನಾವು ತಳೆಯಲಿಲ್ಲೆಂತಲೂ, ಅವರ ಜ್ಞಾನ ಹಾಗು ಯೋಗ್ಯತೆಗಳಿಗೆ ತಕ್ಕುದಾಗಿ ನಾವು ವರ್ತಿಸಲಿಲ್ಲೆಂತಲೂ, ಪ್ರಜೆಗಳಿಂದ ಅಪೇಕ್ಷಿತವಿರುವ ಕಾರಭಾರದ ಮಂಡಳವನ್ನು ನಾವು ಸ್ಥಾಪಿಸಲಿಲ್ಲವೆಂತಲೂ, ಇತಿಹಾಸಜ್ಞರ ಮತವಿದೆ. ನಮ್ಮ ರಾಜ್ಯಕಾರಭಾರವು ಬಲು ತುಟ್ಟಿ, ನಮ್ಮ ಸೇನಾಖಾತೆಯು ಖರ್ಚು ವಿಪರೀತ, ಭಾರತೀಯರಿಗೆ ದೊಡ್ಡ ದೊಡ್ಡ ಅಧಿಕಾರಗಳನ್ನೀಯಲು, ನಾವು ಕೃಪಣರು; ಅವರು ಪ್ರಾಮಾಣಿಕರೆಂದು ತಿಳಿಯಲು, ನಮ್ಮ ಮನಸ್ಸು ಒಪ್ಪುವದಿಲ್ಲ." ಸರ್ ವಿಲಿಯಮ್ ವಿನ್ಸೆಂಟರವರು, ಇವೆಲ್ಲ ತಮ್ಮ ರಾಜ್ಯಕಾರಭಾರದ ನ್ಯೂನತೆಗಳೆಂದು ಒಪ್ಪಿದರು. ಆದರೂ, ಹಿಂದುಸ್ಥಾನದಲ್ಲಿ ಬ್ರಿಟಿಶರು ಸಾಧಿಸಿದ ಕಾರ್ಯವು ಮಹತ್ವದ್ದಿದ್ದು, ಮುಂದಿನ ಇತಿಹಾಸಜ್ಞರು ಈ ಬಗ್ಗೆ ತಮಗೆ ಪ್ರಶಂಸೆ ಕೊಡದಿರಲಿಕ್ಕಿಲ್ಲೆಂದು ಉದ್ಗರಿಸಿದರು.

ಸರ್ ವಿಲಿಯಮ್ ವಿನ್ಸೆಂಟರವರು ನಮೂದಿಸಿದ ನ್ಯೂನತೆಗಳನ್ನು ಪರ್ಯಾಲೋಚಿಸುವ. 'ಪ್ರಜೆಗಳಿಗೆ ರಾಜ್ಯಕರ್ತರು ಶಿಕ್ಷಣ ಕೊಡಲಿಲ್ಲ, ಹಿಂದುಸ್ಥಾನವು ಬೇಸಾಯ ದೇಶವಿದ್ದು, ಅದನ್ನುದ್ಧರಿಸಲು ಅವರಿಗೆ ಸಾಕಷ್ಟು ಅವಕಾಶವಿಲ್ಲ; ಹಣವೂ ದೊರಕಲಿಲ್ಲ; ಸೈನಿಕರ ಶಿಕ್ಷಣವನ್ನು ಕೊಟ್ಟು, ಸ್ವಸಂರಕ್ಷಿಸಲು ಪ್ರಜೆಗಳನ್ನು ತಯಾರು ಮಾಡಲಿಲ್ಲ; ರಿಪನ್ ದೊರೆಗಳು ಸಂಸ್ಥಾಪಿಸಿದ ಸ್ಥಾನಿಕ ಸ್ವರಾಜ್ಯವನ್ನು ನಡಿಸುವಷ್ಟು ಜನತೆಯಲ್ಲಿ ಶಿಕ್ಷಣಪ್ರಸಾರವಾಗಲಿಲ್ಲ.' ಅಂದ ಮೇಲೆ ಆಳರಸರು ವಿರಹತಾಪವನ್ನು ಸಹಿಸಿ ಮಾಡಿದ್ದೆಂಬುದೇನು! ಕಾರ್ಯಕ್ಷಮತೆ, ಪ್ರಾಮಾಣಿಕತನ, ನ್ಯಾಯಪ್ರೇಮ, ಇವುಗಳೆಂದ! ಹಿಂದುಸ್ಥಾನದ ಪ್ರಜೆಗಳಿಗೆ ಪ್ರಾಪ್ತವಾದದ್ದೆಂಬುದು ವಿಪರೀತ ಸೈನ್ಯವ್ಯಯ, ದಂಡ ಸಂಬಳ ತಿನ್ನುವ ಮಹಾ ಯೋಗ್ಯತೆಯ ನಿಷ್ಕ್ರಿಯ ಕಾರಭಾರಿಗಳು. ಇದು ಸ್ತುತಿಯೋ! ನಿಂದೆಯೋ? ಮಹಾತ್ಮರಾಗಲೀ, ಲೋಕಮಾನ್ಯರಾಗಲೀ, ಪಿತಾಮಹರಾಗಲೀ, ಈ ರಾಜ್ಯಪದ್ಧತಿಯಿಂದ ನಮ್ಮ ಒಳಿತಾಗಲಿಲ್ಲ; ಮುಂದೆ ಒಳಿತಾಗದು; ಎಂದು ಸಾಧಾರ ಸಿದ್ಧಪಡಿಸಿದ ಸಿದ್ಧಾಂತವನ್ನು ಸರ್ ವಿಲಿಯಮ್ ವಿನ್ಸೆಂಟರವರು, ರಾಜ್ಯಕಾರಭಾರದ ಸೂತ್ರಚಾಲಕತ್ವವನ್ನು ನಿಷ್ಠೆಯಿಂದ ನಡಿಸಿ ನಿವೃತ್ತರಾದ ಬಳಿಕ, ಸ್ವಾನುಭವವೆಂದು ನಿವೇದಿಸಿರುವರು. ಈ ನಿಬಂಧವಾಚನದಿಂದ ಆಳರಸರು ಹಿಂದುಸ್ಥಾನದಲ್ಲಿ ನಡಿಸಿದ ಕಾರಭಾರದ ಧೋರಣವು ಸ್ಪಷ್ಟವಾಗಿ ಹೊಳೆಯುವದು. ಹಿಂದೀಯರ ಪ್ರಾಮಾಣಿಕತನವನ್ನು ನಂಬಲು, ತಮ್ಮ ಮನಸ್ಸು ಅನಾವಶ್ಯಕವಾಗಿ ಹಿಂದೆ ಮುಂದೆ ನೋಡಿತೆಂಬ ಸರ್ ವಿಲಿಯಮ್ ವಿನ್ಸೆಂಟರವರ ಉಕ್ತಿಯ ಸರಳ ಅರ್ಥವೇನು! ಆಳರಸರು ತಮ್ಮ ಕಾರಭಾರವನ್ನು ಪ್ರಜೆಗಳನ್ನು ನಂಬದೆ, ಅವರ ಮೇಲೆ ವಿಶ್ವಾಸವನ್ನಿಡದೆ, ಅವರು ಅಪ್ರಾಮಾಣಿಕರು, ಠಕ್ಕರು ಎಂಬ ಗೃಹೀತ ಭಾವನೆಯಿಂದಲೇ ನಡಿಸಿದರೆಂಬುದು ಸ್ಪಷ್ಟವಾಗುವದಿಲ್ಲವೇ? ಇದರಿಂದಲೇ ಸೈನ್ಯಖಾತೆಯ ಖರ್ಚು ವಿಪರೀತ ಬೆಳೆಯಿತು; ಪೋಲೀಸರ ತಂಡು ಹೆಚ್ಚಿಸಬೇಕಾಯಿತು; ಶಿಕ್ಷಣ ಬೇಸಾಯಗಳಿಗೆ ಹಣದ ಕೊರತೆಯಾಯಿತು. ಪ್ರಜೆಗಳನ್ನು ನಂಬಿರಿ, ಅಂದರೆ, ಸೈನ್ಯ ಖರ್ಚು ಒಮ್ಮೆಲೇ ಕುಗ್ಗುವದೆಂದು ಲೋಕನಾಯಕರು ಆಗಿಂದಾಗ ಹೇಳಿದ ವಚನಗಳನ್ನು ನಿರಾಕರಿಸಿದ ಕಾರಣವು ಸಹ ಆಳರಸರ ಕ್ಷುದ್ರ ಬುದ್ಧಿಯ ಪರಿಣಾಮವೇ. ಮಹಾಯುದ್ಧದಿಂದ ದಿಲಸಫಾಯಿಯಾಗಲಿಲ್ಲೆಂಬುದಕ್ಕೆ ಸರ್ ವಿಲಿಯಮ್ ವಿನ್ಸೆಂಟರವರ ಭಾಷಣವೇ ಸಾಕ್ಷಿಯು.

' ಸರ್ ವಿಲಿಯಮ್‌ರವರ ನಿಬಂಧವಾಚನವಾದ ಬಳಿಕ, ಸಭೆಯಲ್ಲಿ ವಾದ-ವಿವಾದವಾಯಿತು. ವಾದಕ್ಕೆ ಉತ್ತರ ಕೊಡುವಾಗ ಸರ್

ವಿಲಿಯಮ್‌ರವರು ಆಡಿದ ನುಡಿಗಳನ್ನು ಇಲ್ಲಿ ಕಾರಭಾರ ನಡಿಸಲಿಚ್ಛಿಸುವ ಆಳರಸರೆಲ್ಲರೂ ಲಕ್ಷ್ಯದಲ್ಲಿಡತಕ್ಕದ್ದು. “ನವಯುಗದಲ್ಲಿ ಹಳೇ ರಾಜ್ಯಪದ್ಧತಿಯನ್ನು ಸ್ಥಿರಪಡಿಸುವದು ಅಶಕ್ಯವು. ಕಾಲಚಕ್ರವು ತಿರುಗಿದಂತೆ, ಅವರಾದರೂ ತಮ್ಮ ದೃಷ್ಟಿಕೋನವನ್ನು ತಿರುಗಿಸಬೇಕು. ಇದಕ್ಕೆ ಅವರು ಶೀಘ್ರವೇ ತಯಾರಾದರೆ, ಅದರಿಂದ ಬ್ರಿಟಿಶರಿಗೂ, ಹಿಂದುಸ್ಥಾನಕ್ಕೂ ಹಿತವಾಗುವದು.” “ಆಳರಸರು ತಮ್ಮ ದೃಷ್ಟಿಕೋನವು ಬದಲಾದ ಲಕ್ಷಣವನ್ನು ತೋರಿಸಲಿ” ಎಂಬ ಮಹಾತ್ಮರ ವಚನಕ್ಕೂ ಸರ್ ವಿಲಿಯಮ್‌ರವರ ನುಡಿಗಳಿಗೂ ಭೇದವೇನಿದೆ! ಈ ಕಮಿಶನಿನ ಮುಂದೆ ಆಳರಸರು ತಮ್ಮ ಸಂಕಟಪುರಾಣವನ್ನರುಹುವಾಗ, ಕಾಲಚಕ್ರದ ತಿರುಗಾಟವಾದರೂ ತಮ್ಮ ಸ್ಥಿತಿ-ಗತಿಯು ಸ್ಥಾನುವತ್ ಸ್ಥಿರವಿರಬೇಕೆಂದು ಅದಕ್ಕೆ ಸಾದರಪಡಿಸಿದ ಹೇಳಿಕೆಯು ಸಮಯದಲ್ಲಿಯೇ, ರಾಜ್ಯಶಕಟದ ಸೂತ್ರಚಾಲಕತ್ವವನ್ನು ನಡಿಸಿ, ನಿವೃತ್ತರಾದ ಸರ್ ವಿಲಿಯಮ್‌ರವರ ಉಪದೇಶಪರ ನಿಬಂಧವಾಚನವು ಒದಗಿಬರುವ ಯೋಗಾಯೋಗವು ಅಪೂರ್ವವೆಂತಲೇ ಎಣಿಸಬೇಕಾಗಿದೆ. ಈ ಕಮಿಶನಿನ ಮುಂದೆ ಆಳರಸರು ಮಾಡಿದ ಪ್ರತಿಪಾದನೆಯಿಂದ, ಅನುಸರಿಸುವ ಧೋರಣದಿಂದ ಬ್ರಿಟನ ಹಾಗು ಹಿಂದುಸ್ಥಾನಗಳ ಒಳಿತಾಗಲಾರದೆಂದು ಸರ್ ವಿಲಿಯಮ್‌ರ ನುಡಿಗಳಿಂದ ಸ್ಪಷ್ಟವಿರುವಾಗ, ಪುನಃ ನಾವೇನು ಹೇಳಬೇಕು! ಅದೇನೂ ಇರಲಿ. ಪ್ರಚಲಿತ ರಾಜ್ಯಪದ್ಧತಿಯ ಧೋರಣವು ಗುರಿತಪ್ಪಿರುವದೆಂತಲೂ, ಅದನ್ನು ಸುಧಾರಿಸಲು ದೃಷ್ಟಿಕೋನವನ್ನು ಬದಲಿಸುವ ಅವಶ್ಯಕತೆಯಿರುವದೆಂತಲೂ, ಸರ್ ವಿಲಿಯಮ್‌ರಂಥವರಿಗೆ ತೋರಿದ್ದು ಶುಭ ಸೂಚಕವೇ. ಅವರ ಭಾಷಣದಿಂದ ಆಳರಸರ ರಾಜ್ಯಪದ್ಧತಿಯ ಅಂತರಂಗವು ಅನಪೇಕ್ಷಿತವಾಗಿ ಹೊರಬಿದ್ದಿದೆ. ಆಳರಸರು ಇದೊಂದು ಸ್ತುತಿಯೆಂದು ಭಾವಿಸಿದರೆ, ಭಾವಿಸಲಿ; ನಮ್ಮದೇನು ಅಡ್ಡಿ ಇಲ್ಲ. ಸರ್ ವಿಲಿಯಮ್‌ರವರು ನಮೂದಿಸಿದ ಶೋಚನೀಯ ಸಂಗತಿಗಳ ಪಠಣದಿಂದ ಆಳರಸರ ರಾಜ್ಯಪದ್ಧತಿಯು ನಿಂದೆಗೆ ಪಾತ್ರವಾಗಿರುವದೆಂದು ಹೇಳಿದರೆ, ಅಯಥಾರ್ಥವಾಗದು.

ಸ್ಫುಟ ಸೂಚನೆಗಳು.

೧. ಗುಜರಾಥ ಪ್ರಾಂತದೊಳಗಿನ ಬೋರಸದ ತಾಲೂಕಿನಲ್ಲಿ ಈಗ ಕರನಿರಾಕರಣೆಯ ಚಳವಳಿಯೊಂದನ್ನು ಗುರ್ಜರ ಲೋಕನಾಯಕರು ಕೈಕೊಂಡಿರುವರು. ಈ ಚಳವಳಿಯ ಹಕೀಕತು ಬೋಧಪ್ರದವಿದೆ. ಕಳೆದ ತಾ. ೯ನೇ ಸೋಮವಾರ ಬೋರಸದ ತಾಲೂಕಿನ ಪರಿಷತ್ತು ನೆರೆಯಿತು. ಶ್ರೀ ವಲ್ಲಭಭಾಯಿ ಪಟೇಲರವರು ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು. ಅವರು ಬೋರಸದ ತಾಲೂಕಿನ ಮೇಲೆ ಒದಗಿದ ಆಪತ್ತಿನ ಕಥೆಯನ್ನು ನಿವೇದಿಸಿದರು. ಬಾಬರ ಎಂಬ ಕಳ್ಳನು ಗ್ವಾಲಿಯರ್ ಎಂಬಲ್ಲಿ ೧೯೧೭ ನೇ ಇಸ್ವಿಯಿಂದ ಕಳವು ಮಾಡತೊಡಗಿದನು. ಈ ಕಳ್ಳನ ವಿರುದ್ಧ ೨೨ ಮಂದಿಗಳು ಪೋಲೀಸರಿಗೆ ಸುದ್ದಿ ಕೊಟ್ಟರು. ಅದರಿಂದ ಅವನು ರೊಚ್ಚಿಗೆದ್ದು ಈ ೨೨ ಮಂದಿಗಳನ್ನೆಲ್ಲ ಯಮಸದನಕ್ಕಟ್ಟಿದನು. ಇವನ ಪತ್ತೆ ಹಚ್ಚಿ, ದಂಡಿಸಲು ಸ್ಥಾನಿಕ ಪೋಲೀಸರು ಸಮರ್ಥರಾಗಲಿಲ್ಲ. ಹಳ್ಳಿಗರು ತಮಗೆ ಈ ಕಳ್ಳನ ಸುದ್ದಿಯನ್ನೇ ಕೊಡದಿದ್ದರೆಂದು ಹಳ್ಳಿಗರಮೇಲೆ ಆರೋಪ ಹೊರಿಸಿ, ಅವನ ಕಳವಿನಿಂದ ಪೀಡನೆ ಹೊಂದಿದ ಖಾನಾಪೂರ, ದೋಗನ ಹಳ್ಳಿಗಳ ಮೇಲೆ ಜಾದಾ ಪೋಲೀಸರನ್ನು ಕೂಡ್ರಿಸಿ, ಪಣಜಾವಾಡಿ, ಧಾರಳಾ ಎಂಬ ಜಾತಿಯ ಹಳ್ಳಿಗರಮೇಲೆ ತಲೆಕರಿಗೆಯನ್ನಿಕ್ಕರಿಸಿ, ಈ ವಿಶೇಷ ಪೋಲೀಸ ತಂಡಿನ ಖರ್ಚನ್ನು ಕಳೆದ ೨ ವರ್ಷಗಳಿಂದ ವಸೂಲ ಮಾಡಿದರು. ಆದರೂ, ಬಾಬರನ ಕಾಟದಿಂದ ಹಳ್ಳಿಗರೇನು ಮುಕ್ತರಾಗಲಿಲ್ಲ. ಸ್ಥಾನಿಕ ಪೋಲೀಸರು, ಅವರ ಬೆಂಬಲಕ್ಕೆ ತಲೆಕರಿಗೆಯನ್ನಿತ್ತು ಸಾಕಲ್ಪಡುವ ಜಾದಾ ಪೋಲೀಸರು, ಹೀಗಿರುತ್ತ ಶಿಬಾಯಿ ಎಂಬುವನನ್ನು ದೋಗನಿನಲ್ಲಿ ಹಗಲಿಗೇ ಬಾಬರನು ಕೊಂದನು. ಆದರೂ, ಪೋಲೀಸರು ಬಾಬರನನ್ನು ಹಿಡಿಯಲೊಲ್ಲರು. ನೆವವೇನು? ಜನರು ಪೋಲೀಸರಿಗೆ ಸುದ್ದಿ ಕೊಡಲಿಲ್ಲ! ಹೀಗೆಯೇ ದಿವಗಳೆಯುವಷ್ಟರಲ್ಲಿ, ಪೋಲೀಸರಿಗೆ ಅಲಿಯಾ, ಎಂಬ ಮಹಮ್ಮದೀಯನೊಬ್ಬನು ದೊರೆಯಹತ್ತಿದನು. ಇವನು ಒಬ್ಬ ಪಕ್ಕಾ ಕಳ್ಳನೇ. ಒಂದು ಪೋಲೀಸ ಸ್ಟೇಶನಿನ ಸಮೀಪವೇ ಇವನು ಬೋರಸದದೊಳಗಿನ ವಕೀಲರೊಬ್ಬರ ಕೊಲೆ ಮಾಡಿದನು. ‘ಕಳ್ಳನ ಸುಳುವು ಕಳ್ಳನೇ ಬಲ್ಲ,’ ಎಂದು ಪೋಲೀಸರು ಆಲೋಚಿಸಿ, ಅಲಿಯಾ ಇವನಗೂಡ ಗೆಳತನ ಮಾಡಿದರು. ಅವನಿಗೆ ಕುಬಾಕಿ ಗುಂಡುಗಳನ್ನು ಪೂರೈಸಿ, ಬಾಬರನನ್ನು ಹಿಡಿಯಬೇಕೆಂದು, ಈ ಕಳ್ಳನನ್ನು ಬಿಟ್ಟರು. ಏನು ಹೇಳುವದದೆ? ಪೋಲೀಸರ ಪುಷ್ಟಕತ್ತು; ಕುಬಾಕಿಗುಂಡುಗಳ ಪೂರೈಕೆ; ಇಷ್ಟು ಸರಂಜಾಮಿನಿಂದ ಅಲಿಯಾನು ಊರಲ್ಲಿ ಪಕ್ಕಾ ದರೋಡೆಕೋರನಾದನು. ಬಾಬರನ ಪೀಡನೆಯಿಂದ ಬಳಲುವ ಬಡಬಗ್ಗರಿಗೆಲ್ಲ ಇದೊಂದು ಪೋಲೀಸರ ಶಾಪವಾಯಿತು. ಬಾಬರ, ಅಲಿಯಾ, ಇವರ ದರೋಡೆಯಿಂದ ಪ್ರಜೆಗಳನ್ನು ಹೇಗೆ ಕಾಯುವದು, ಎಂಬ ಹೊಸ ಪ್ರಶ್ನೆಯ ಚರ್ಚೆಯು ಪೋಲೀಸರಲ್ಲಿ ನಡೆಯಿತು. ಪೋಲೀಸ ಸುಪರಿಂಟೆಂಡೆಂಟರು ಎರಡು ಹಳ್ಳಿಗಳ ಮೇಲಿನ ತಲೆಕರಿಗೆಯ ಕ್ರಮವನ್ನು ಇನ್ನೊಂದು ವರ್ಷ ಚಾಲು ಮಾಡಬೇಕೆಂದರು. “ಪ್ರಜೆಗಳು ಬಡವರು. ಇನ್ನು ಈ ಕರ ತೆರಲಾರರು.” ಎಂದು ಮಾಮಲೇದಾರರು ಬರೆದರು. ಆದರೆ ಸುಪರಿಂಟೆಂಡೆಂಟರಿಗೆ ಅದು ಮಾನ್ಯವಾಗಲಿಲ್ಲ. ಪ್ರಕರಣವು ಕಲೆಕ್ಟರರ ಕಡೆಗೆ ಹೋಯಿತು. ಹಳ್ಳಿಗಳೊಳಗಿನ ಜಾದಾ ಪೋಲೀಸರು ನಿರರ್ಥಕರೆಂದು ಕಲೆಕ್ಟರರು ಅಭಿಪ್ರಾಯಬಟ್ಟು, ಇಡೀ ತಾಲೂಕಿನಲ್ಲಿಯೇ ಜಾದಾ ಪೋಲೀಸರನ್ನು ಕೂಡ್ರಿಸಬೇಕೆಂದರು. ಬಳಿಕ್ಕೆ ಕಮೀಶನರರು ಪ್ರಕರಣವನ್ನು ಸಮಾಲೋಚಿಸಿದರು. ಪೋಲೀಸ ಸುಪರಿಂಟೆಂಡೆಂಟರ ಅಭಿಪ್ರಾಯವನ್ನೇ ಅವರು ಎತ್ತಿಹಿಡಿದು, ಹಳ್ಳಿಗಳ ಮೇಲೆಯೇ ತಲೆಕರಿಗೆಯ ಕ್ರಮವನ್ನು ಮುಂದುವರಿಸಬೇಕೆಂದು ಅಭಿಪ್ರಾಯಪಟ್ಟು, ಅದರಂತೆ ಜೂನ ತಿಂಗಳಿನಲ್ಲಿ ಹುಕುಮುಗಳನ್ನು ಹೊರಡಿಸಿದರು. ಕಡೆಗೆ, ಆಕ್ಟೋಬರ ತಿಂಗಳಿನಲ್ಲಿ ಇಡೀ ಬೋರಸದ ತಾಲೂಕಿನ ಮೇಲೆಯೇ ಜಾದಾ ಪೋಲೀಸರನ್ನು ಕೂಡ್ರಿಸಿದ ಹುಕುಮುಗಳಾದವು. ಮತ್ತು ಅವರ ಖರ್ಚಿನ ರಕಮು ರೂಪಾಯಿ ೨,೪೦,೦೦೦ ವನ್ನು ತಲೆಕರಿಗೆಯಿಂದ ಇಡೀ ತಾಲೂಕಿನ ಪ್ರಜೆಗಳಿಂದ ವಸೂಲ ಮಾಡಬೇಕೆಂದು ವಿಧಿಸಲಾಗಿದೆ. ಈ ಹಣವನ್ನು ಬಡವರು ಎಲ್ಲಿಂದ ತೆರುವರು? ಎಂದು ಆಲೋಚಿಸುವ ಕಾರಣವಿಲ್ಲ. ಯಾಕಂದರೆ, “ಬೇಕಾದರೆ ಸಾಲ ತೆಗೆಯಿರಿ; ಅಥವಾ ಕಳುವು ಮಾಡಿರಿ; ಬೇಕಾದ್ದನ್ನು ಮಾಡಿರಿ; ಅಂತು ನಮ್ಮ ಕರ ತೆರಿರಿ; ಇಲ್ಲದಿದ್ದರೆ, ನಿಮ್ಮ ಘಾತವಾಗುವದು” ಎಂದು ಮೆಜಿಸ್ಟ್ರೇಟರೇ ಹೇಳಿರುವಾಗ, ಪ್ರಜೆಗಳಿಗೆ ಯುಕ್ತಿಯ ಬರಗಾಲವೆಲ್ಲಿ! ಎಲ್ಲಿಂದ ಹಣ ತರುವದೆಂಬ ವಿವಂಚನೆ ಏಕೆ?

---

೨. ಬೋರಸದ ತಾಲೂಕಿನೊಳಗಿನ ಕಥೆಯಿದು. ಇದನ್ನು ಕೇಳಿ ನಾವು ಗೊಂದಲದಲ್ಲಿ ಬಿದ್ದಿರುವೆವು. ಪೋಲೀಸರು ಪ್ರಜೆಗಳ ರಕ್ಷಣೆಗಾಗಿ ನೇಮಿಸಲ್ಪಟ್ಟಿರುವರು. ಕಾಕ-ಪೋಕರಿಂದ ಕಾಯಿದೆಪಾಲಕ ನಿರಪರಾಧಿ ಪ್ರಜೆಗಳನ್ನು ಸಂರಕ್ಷಿಸುವದು ಅವರ ಕರ್ತವ್ಯವು. ಸಂರಕ್ಷಿಸಲು ಬೇಕಾದ ಉಪಾಯಯೋಜನೆ ಮಾಡುವದೂ ಸರಕಾರದ ಧರ್ಮವು. ಪ್ರಜೆಗಳು ಪೋಲೀಸರಿಗೆ ಸುದ್ದಿ ಕೊಟ್ಟರೂ, ಅವರನ್ನು ರಕ್ಷಿಸಲು ಅವರೇನು ಸಮರ್ಥರಾಗಲಿಲ್ಲ. ಸುದ್ದಿ ಕೊಟ್ಟ ಅಪರಾಧದ ಬಗ್ಗೆ ಬಾಬರನು ಅವರನ್ನು ಗತಿಗೇರಿಸಿದನು. ಆದರೂ, ಹಳ್ಳಿಗರು ಬಾಬರನ ಸುದ್ದಿ ಕೊಡುವದಿಲ್ಲೆಂದು ಅವರ ಮೇಲೆಯೇ ಪುನಃ ಆರೋಪ. ಬಾಬರನ ಸುದ್ದಿ ಪೋಲೀಸರಿಗೆ ಕೊಡುವದು ಎಷ್ಟು ಗಂಡಾಂತರಪ್ರದವೆಂದು ಅಧಿಕಾರಿಗಳಿಗೆ ಗೊತ್ತಿರುತ್ತ, ಹಳ್ಳಿಗರೇ ಬಾಬರನಿಗೆ ಆಶ್ರಯ ಕೊಡುತ್ತಾರೆಂದು ದೂರುವದು ‘ಕಳ್ಳನನ್ನು ಬಿಟ್ಟು, ಸನ್ಯಾಸಿಗೆ ಶೂಲಕ್ಕೇರಿಸುವ’ ಬಗೆಯಲ್ಲವೇ? ಜಾದಾ ಪೋಲೀಸರು ದೋಗನಹಳ್ಳಿಯಲ್ಲಿರುತ್ತ, ಬಾಬರನು ಹಗಲಿಗೆ ಕಾವಳಿ ಹಾಕಿದ ಸುದ್ದಿ ಕೇಳಿ, ಪೋಲೀಸರು ನಿರರ್ಥಕರೆಂದು ಸ್ಪಷ್ಟವಾಗಿದೆ. ಇಷ್ಟಾದರೂ, ಜಾದಾ ಪೋಲೀಸರ ಖರ್ಚು ತೆರುವದೇನು ಬಡ ಪ್ರಜೆಗಳಿಗೆ ತಪ್ಪುವದಿಲ್ಲ. ಕಳುವು ಮಾಡಿ ಸಹ ಈ ದಂಡ ತೆರಿರೆಂದು ಮೆಜಿಸ್ಟ್ರೇಟರು ಹೇಳುವದನ್ನು ನೋಡಿ, ಬೋರಸದ ತಾಲೂಕಿನಲ್ಲಿ ಸರಕಾರದ ಅಧಿಕಾರವು ಇನ್ನುಳಿದದೆಂದು ಯಾರೂ ಹೇಳಲಾರರು. ಅಲಿಯಾ ತಕ್ಕನಗೂಡ ಪೋಲೀಸರು ಗೆಳತನ ಬೆಳಸಿ, ಅವನನ್ನು ಬಾಬರನಿಗೆ ಹಿಡಿಯ ಹೇಳಿದ್ದರೂ, ಅವನು ಕಾವಳಿ ಎಬ್ಬಿಸಿದ್ದರೂ ಮನೋರಂಜಕವಿದ್ದಷ್ಟು ಸಂತಾಪಜನಕವಿದೆ. ತಸ್ಕರನ್ನು ಆಶ್ರಯಿಸಿ, ಪ್ರಜೆಗಳನ್ನು ಸುಲಿಯುವ ಸರಕಾರಕ್ಕೆ ಶಾಸನ ಕೊಡುವವರು ದೇವರೊಬ್ಬನೇ ಎಂದು, ಶ್ರೀ ವಲ್ಲಭಭಾಯಿ ಪಟೇಲರವರು ನುಡಿದದ್ದು ಯಥಾರ್ಥವೆಂದು ಯಾರೂ ಹೇಳುವರು. ಬೋರಸದ ಸ್ಥಿತಿಯು ತೀರ ಕರುಣಾಸ್ಪದವಾಗಿದೆ. ಬಾಬರ-ಅಲಿಯರ ಕಳವುಗಳಿಂದ ಅವರು ಬೆಂದು ಬೆಂಡಾದರು; ಮೇಲೆ ಈ ದರೋಡೆಕೋರರಿಗೆ ಆಶ್ರಯ ಕೊಡುತ್ತಾರೆಂದು ಸರಕಾರದ ದುಷ್ಟ ಆರೋಪ; ಇದರ ಮೂಲಕ ಜಾದಾ ಪೋಲೀಸರು, ಹಾಗು ಅವರ ಖರ್ಚಿನ ಬಗ್ಗೆ ತಲೆಕರಿಗೆಯ ಆಕರಣೆ; ಸರಕಾರವು

ತನ್ನ ಕರ್ತವ್ಯ ಮಾಡದೆ, ಪ್ರಜೆಗಳ ಮೇಲೆ ದುಷ್ಟ ಆರೋಪವ ಹೊರಿಸಿ, ಕಲ್ಪಿಸಿದ ಅನ್ಯಾಯದ ತೆರಿಗೆಯನ್ನು ನಿರಾಕರಿಸಲು ಶ್ರೀ ವಲ್ಲಭಭಾಯಿ ಪಟೇಲರವರು ಬೋರಸದ ತಾಲೂಕಿನಲ್ಲಿ ಪ್ರಜೆಗಳಿಗೆ ಉತ್ತೇಜಿಸುತ್ತಿರುವರು. ಈ ಚಳವಳಿಯು ಕೇವಲ ನ್ಯಾಯ್ಯದ್ದೆಂದು ಯಾರು ಹೇಳರು?

---

೩. ಸರಕಾರವು ಬೋರಸದ ತಾಲೂಕಿನ ಪ್ರಜೆಗಳಿಗೆ ಡಾಕಾಯಿತರ ಪೀಡನೆಯಿಂದ ಸಂರಕ್ಷಿಸಲು ಅಸಮರ್ಥವಿದೆಂಬದನ್ನು ಹಕೀಕತು ಸ್ಪಷ್ಟವಾಗಿ ವಿವೇಚಿಸುತ್ತದೆ. ತನ್ನ ದೌರ್ಬಲ್ಯವನ್ನು ಅಡಗಿಸಿಡಲು ಪ್ರಜೆಗಳೇ ಕಳುವುಗಾರರಿಗೆ ಆಶ್ರಯಕೊಡುತ್ತಾರೆಂದು ಹೂಲಿಯೆಬ್ಬಿಸಿ, ಸರಕಾರವು ತನ್ನ ಗೌರವವನ್ನು ರಕ್ಷಿಸಲೆತ್ನಿಸುತ್ತಿರುವದು. ಆದರೆ, ಶ್ರೀ ವಲ್ಲಭಭಾಯಿಯವರು ಒಂದು ಉದಾಹರಣೆಯನ್ನು ಕೊಟ್ಟು ಸರಕಾರದ ಗೌರವಹಾನಿ ಮಾಡಿದರು. ೧ನೇ ವ[illegible] ಮೆಜಿಸ್ಟ್ರೇಟರೊಬ್ಬರು ಬಾಸದಿಂದ ಬೋರಸದಕ್ಕೆ ಹೋಗುತ್ತಿದ್ದರು. ಮಧ್ಯದಲ್ಲಿ ಡಾಕಿಯರ ಭೆಟ್ಟಿಯಾಯಿತು. ಡಾಕಿಯರು ಮೆಜಿಸ್ಟ್ರೇಟರ [illegible] ಯನ್ನು [illegible] ಸರಕಾರದ ಧರ್ಮವಿದ್ದ ಮೂಲಕ, ಆ ಬಗ್ಗೆ [illegible] ಕಾರವು ಸಹಿಸುವದು ಯುಕ್ತವು. ಸರಕಾರದ ವರ್ಚಸ್ಸ್ಥಾಪನೆಯಾಗಬೇಕಾದರೆ, ಈ ಖರ್ಚನ್ನು ಸಹಿಸಿ, ತಮ್ಮ ಅಧಿಕಾರವನ್ನು ಸ್ಥಿರಗೊಳಿಸುವದು ರಾಜ್ಯಕರ್ತರೆಂದು ಮೆರೆಯುವವರದು. ಹೀಗಿದ್ದು ಬಡ ಪ್ರಜೆಗಳಿಗೆ ತೆರಿಗೆಯನ್ನು ಕೇಳಲು ವ್ಯಥಾ ಕಾಡುವದೇಕೆ? ಬಡಬಗ್ಗರೆಂದು ಮೆಜಿಸ್ಟ್ರೇಟರೇ ನುಡಿದಿರುವಾಗ, ಕಳೆದ ೨ ವರುಷಗಳ ವರೆಗೆ ಬರ ಬೀಳುತ್ತಿರುವಾಗ, ಸರಕಾರವು ತನ್ನ ಅಮಲನ್ನು ಸ್ಥಾಪಿಸುವ ಪ್ರಥಮ ಕರ್ತವ್ಯ ಪರಿಪಾಲನಕ್ಕಾಗಿ ವ್ಯಥಾ ಪ್ರಜೆಗಳನ್ನು ಪೀಡಿಸುವದೇಕೆ? ಶ್ರೀ ವಲ್ಲಭಭಾಯಿಯವರು ನುಡಿದಂತೆ, ಇದೊಂದು ತತ್ವದ ಪ್ರಶ್ನೆಯು. ಇದರ ಪ್ರಸ್ಥಾಪನೆಗಾಗಿ ಶ್ರೀ ವಲ್ಲಭಭಾಯಿಯವರು ನಡಿಸಿದ ಕರನಿರಾಕರಣೆಯ ಚಳವಳಿಯು ಯಶಸ್ವಿಯಾಗಿ, ಬೋರಸದವರು ಈ ಅನ್ಯಾಯದ ಸುಲಿಗೆಯಿಂದ ವಿಮೋಚನಹೊಂದಲೆಂದು ನಾವು ಮನಃಪೂರ್ವಕ ಬಯಸುವೆವು.

---

೪. ನಮ್ಮ ಜಿಲ್ಹಾ ಲೋಕಲ್‌ಬೋರ್ಡಿನಲ್ಲಿ ಹಣವನ್ನೆತ್ತುವ ಹಂಚಿಕೆಯು ಸ್ಥಿರದಿಂದ ನಡೆದಿದೆ. ಅಧ್ಯಕ್ಷರು ಕೆಲ ಅಭ್ಯಾಸುಗಳು ಮೆಂಬರರ ಬೆಂಬಲದಿಂದ ಲೋಕಲ್ ಫಂಡನ್ನು ಇಮ್ಮಡಿ ಮಾಡಿ ಹಣವನ್ನು ಹುಟ್ಟುಗೊಳಿಸಲು ಎರಡು ಸರತಿ, ಏಕ, ಮೂರು ಸಲ ಯತ್ನಿಸಿದರು. ಮೊಟ್ಟಮೊದಲು, ಅವರು ಯಶಸ್ವಿಯಾದರೂ, ಅದು ಕಾಯಿದೆಗೆ ವಿರೋಧವಾದ್ದರಿಂದ, ಆ ಬಗ್ಗೆ ಜಾದಾ ಸಭೆಯನ್ನೇ ನೆರಿಸಬೇಕಾಯಿತು. ಇದರಿಂದ ಲೋಕಲ್ ಫಂಡಿನ ಏರಿಕೆಯು ಕೈಗೂಡಲಿಲ್ಲ. ಲೋಕಲ್‌ಬೋರ್ಡಿಗೆ ಹಣದ ಅಡಚಣೆಯಿದೆಂದು ಯಾರೂ ಒಪ್ಪತಕ್ಕಂಥ ಮಾತು. ಅದನ್ನು ಬಿಡಿಸುವ ಬಗೆ ಹೇಗೆ? ಎಂಬುದೇ ಪ್ರಶ್ನೆ. ರೈತರು ರೂಪಾಯಿಗೆ ಒಂದಾಣೆಯಂತೆ ಕರವನ್ನು ತೆರುತ್ತಿರುವರು. ಇದರಿಂದ ವರುಷಕ್ಕೆ ೯೦,೦೦೦ ರೂಪಾಯಿಗಳನ್ನು ಉತ್ಪನ್ನವಾಗುತ್ತದೆ. ನಮ್ಮ ಜಿಲ್ಹೆಯಲ್ಲಿ ನಾಗು ಭೂಮಿಗೆ ಮಿಗಿಲಾಗಿ, ಹಳ್ಳ ಕಾಡಿನ ಕ್ಷೇತ್ರವಿದೆ. ಜಂಗಲದಿಂದ ಲಕ್ಷಾವಧಿ ರೂಪಾಯಿಗಳು ಸರಕಾರಕ್ಕೆ ಉತ್ಪನ್ನವಾಗುತ್ತವೆ. ಕಳೆದ ೧೯೨೮-೨೯ ನೇ ಸಾಲಿನಲ್ಲಿ ನಮ್ಮ ಜಂಗಲ ಉತ್ಪನ್ನವು ೬೪ ಲಕ್ಷಕ್ಕೆ ಮುಟ್ಟಿತು. ಜಂಗಲು ಕ್ಷೇತ್ರವು ನಾಗು ಭೂಮಿಯೇ ಆಗಿದ್ದರೆ, ಆ ಬಗ್ಗೆ ರೂಪಾಯಿಗೆ ಒಂದಾಣೆಯಂತೆ ಲೋಕಲ್ ಫಂಡು ಸಿಗುತ್ತಿತ್ತು. ಅದರಂತೆ ಸರಕಾರವು ಈ ಉತ್ಪನ್ನದ ಮೇಲೆ ರೂಪಾಯಿಗೆ ಒಂದಾಣೆಯಂತೆ, ಲೋಕಲ್‌ಫಂಡವನ್ನು ಕೊಟ್ಟರೆ, ಜಿಲ್ಹಾ ಲೋಕಲ್‌ಬೋರ್ಡಿಗೆ ೪॥ ಲಕ್ಷ ರೂಪಾಯಿಗಳು ಅನಾಯಾಸವಾಗಿ ಸಿಗಬಹುದು. ಈಗ ಸರಕಾರವು [illegible] ಸಾವಿರ ರೂಪಾಯಿಗಳನ್ನು [illegible] ಕೊಡುತ್ತದೆ. ಇದು ರೂಪಾಯಿಗೆ [illegible] ಬೀಳುತ್ತದೆ. ಈ ಕರವನ್ನು ಎತ್ತಲು, ಅಥವಾ ಆ ಬಗ್ಗೆ ಚಳವಳಿ ನಡೆಸಲು ನಮ್ಮ ಅಧ್ಯಕ್ಷರಿಗೆ ಸಾಮರ್ಥ್ಯವಿಲ್ಲ. 'ನೀಲ್ಗೋ ಪ್ರತಿಬಂಧಕತ್ತಿ' ಎಂಬಂತೆ, ಅಧಿಕ ಪ್ರಯತ್ನವಿಲ್ಲದೆ ರೈತರನ್ನು ಬಡಿಯುವದು ಸುಲಭವು. ಜಂಗಲ ಖಾತೆಯಿಂದ ಹೆಚ್ಚು ಪಾಲಿಗೆ ಪಡೆಯಲು ಮತ್ತೊಂದು ಕಾರಣವಿದೆ. ಲೋಕಲ್‌ಬೋರ್ಡಿನ ಮಾರ್ಗಗಳಲ್ಲಿ ಅರ್ಧ ಪಾಲು ಮಾರ್ಗಗಳು ಜಂಗಲಿನಲ್ಲಿಯೇ ಇವೆ. ಜಂಗಲ ಸಾಮಗ್ರಿಗಳನ್ನು ಸಾಗಿಸುವದಕ್ಕೆ ಅವು ಉಪಯೋಗವಾಗಿ, ಬಹಳೇ ಜೀರ್ಣವಾಗುತ್ತವೆ. ಎಲ್ಲ ಮಾರ್ಗಗಳ ವಾರ್ಷಿಕ ಖರ್ಚ ಸಾಧಾರಣ ೬೯ ಸಾವಿರ ರೂಪಾಯಿಗಳಿಗೆ ಬರುತ್ತದೆ. ಜಂಗಲ ಖಾತೆಯು ಕಾಣಿಕೆಯು ಮಾರ್ಗಗಳ ಲೆಕ್ಕಕ್ಕೇ ಖರ್ಚಾಗುತ್ತದೆಂದು ಹೇಳಬಹುದು. ಅಂದ ಮೇಲೆ ಲೋಕಲ್‌ಬೋರ್ಡಿನ ಲೆಕ್ಕಕ್ಕೆ ಜಂಗಲ ಕ್ಷೇತ್ರವು ಇಲ್ಲೆಂದು ಸ್ಪಷ್ಟವಾಗುತ್ತದೆ. ಜಂಗಲ ಖಾತೆಯು ಈ ರೀತಿ ಲಾಭಹೊಂದಿದರೂ, ಪ್ರಜೆಗಳು ಲೋಕಲ್ ಬೋರ್ಡಿಗೆ ಕೊಡುವಷ್ಟು ವಂತಿಗೆಯನ್ನು ಸಹ ಅದು ಕೊಡದಿದ್ದ ಬಳಿಕ, ಆ ಬಗ್ಗೆ ಲೋಕಲ್ ಬೋರ್ಡು ಚಳವಳಿ ಮಾಡದೆ, ಪ್ರಜೆಗಳಿಗೇ ಸುಲಿಯುವದನ್ನು ನೋಡಿ, ಈ ಸ್ಥಾನಿಕ ಸ್ವರಾಜ್ಯದ ದಾನವನ್ನು ಹಿಂತೆಗೆದುಕೊಳ್ಳಲು ಪ್ರಜೆಗಳು ಸರಕಾರಕ್ಕೆ ಪ್ರಾರ್ಥಿಸುವದು ಸಮಯೋಚಿತವಾಗಲಿಕ್ಕಿಲ್ಲೇನು?

---

೫. ಮತ್ತೊಂದು ಪ್ರಕಾರದಿಂದ ಪ್ರಜೆಗಳ ಮೇಲೆ ಖರ್ಚ ಕೆರುವ ಪ್ರಸಂಗ ಬಂದಿದೆ. ಸ್ಕೂಲ ಬೋರ್ಡ ಎಂಬ ಹೊಸ ಸಂಸ್ಥೆಯನ್ನೇರ್ಪಡಿಸಿ, ಅರಸರು ಸ್ಥಾನಿಕ ಪ್ರಾಥಮಿಕ ಶಿಕ್ಷಣವನ್ನು ಪ್ರಜೆಗಳಿಗೆ ವಹಿಸುವ ಮಾತ ಮಾಡಿರುವರು. ಈ ಮಾತಿನಿಂದ ಜಿಲ್ಹೆಯೊಳಗಿನ ಶಿಕ್ಷಣದ ೩ ದಷ್ಟು ಖರ್ಚನ್ನು ಲೋಕಲ್ ಬೋರ್ಡು ತೆರಬೇಕಾಗುವದು. ಇದರಿಂದ ಲೋಕಲ್‌ಬೋರ್ಡು ತನ್ನ ಶಾಲೆಗಳ ಖರ್ಚ, ಸರಕಾರಿ ಶಾಲೆಗಳ ಖರ್ಚ, ಡೆಪ್ಯುಟಿ ಇನ್ಸಪೆಕ್ಟರ ಮೊದಲಾದ ತಪಾಸಕರ ಖರ್ಚ, ಸ್ಕೂಲ ಬೋರ್ಡ ಸಂಸ್ಥೆಯ ಕಾರಭಾರದ ಖರ್ಚ, ಹೀಗೆಲ್ಲ ಹೊಸ ಹೊಸ ಖರ್ಚುಗಳನ್ನು ಪೂರೈಸಬೇಕು. ಇಷ್ಟು ದಿವಸ ಲೋಕಲ್‌ಬೋರ್ಡಿನವರು ತಮ್ಮ ಶಾಲೆಗಳ ಖರ್ಚೆಂದು ೨೦,೦೦೦ ರೂಪಾಯಿಗಳನ್ನು ಖರ್ಚ ಮಾಡಿದರಾಗಿತ್ತು. ಈ ರಕಮು ಸಾಧಾರಣ ೧ ತಿಂಗಳ ಖರ್ಚ. ಉಳಿದ ೧೧ ತಿಂಗಳ ಖರ್ಚನ್ನು, ಅಂದರೆ, ೧೨ರಲ್ಲಿ ೧೧ ಪಾಲು ಶಿಕ್ಷಣ ಖರ್ಚನ್ನು ಸರಕಾರವೇ ಸಹಿಸುತ್ತಿದೆ. ಇದಲ್ಲದೆ, ಸರಕಾರಿ ಶಾಲೆಗಳ ಖರ್ಚ, ಇನ್ಸಪೆಕ್ಟರ ಮೊದಲಾದ ತಪಾಸಕರ ಖರ್ಚ ಪೂರ್ಣವಾಗಿ ಸರಕಾರವೇ ನಡಿಸುತ್ತದೆ. ಈಗ ಇವುಗಳಿಗೂ ಲೋಕಲ್ ಬೋರ್ಡು ೩ರಲ್ಲಿ ೧ ಪಾಲು ಖರ್ಚ ಕೊಡಬೇಕು. ಅಂದರೆ, ಪ್ರಾಥಮಿಕ ಶಿಕ್ಷಣವು ಈಗಿದ್ದಷ್ಟು ಇದ್ದರೂ, ಲೋಕಲ್‌ಬೋರ್ಡ ಸಾಧಾರಣ ೧ ಲಕ್ಷ ರೂಪಾಯಿಗಳನ್ನು ಎತ್ತಿದ ಹೊರತು, ಗತಿಯಿಲ್ಲ. ಪ್ರಾಥಮಿಕ ಶಿಕ್ಷಕರ ಪಗಾರು ಏರಿದರೆ, ಆ ಮಾನದಿಂದ ಖರ್ಚ ಮತ್ತೂ ಮಿಗಿಲಾಗುವದು. ಈ ಹಣವನ್ನೆಲ್ಲ ಪ್ರಜೆಗಳಿಂದಲೇ ಎತ್ತಿ, ಶಿಕ್ಷಣದ ಸ್ವರಾಜ್ಯ ಪ್ರಾಪ್ತವಾಗುವದಿದ್ದರೆ, ಈ ಶಿಕ್ಷಣದ ಸ್ವರಾಜ್ಯವು ಹಿಂದಿ: ಸ್ವರಾಜ್ಯ ಪ್ರಾಪ್ತವಾದ ಬಳಿಕ, ನಾವು ತೆಗೆದುಕೊಳ್ಳುವೆವೆಂದು ಪ್ರಜೆಗಳು ಹೇಳಿದರೇನಾಶ್ಚರ್ಯ?

---

೬. ಜಂಗಲ ಖಾತೆಯಿಂದ ಉತ್ಪನ್ನ ಬೆಳಿಸುವ ಮಾರ್ಗವನ್ನು ನಾವು ಮೇಲೆ ಸೂಚಿಸಿರುವೆವು. ಅಬಕಾರಿ ಖಾತೆಯಿಂದಲೂ ಉತ್ಪನ್ನ ಪಡೆಯಬಹುದು. ಪ್ರಜೆಗಳನ್ನು ವ್ಯಸನಾಧೀನ ಮಾಡಿ, ಅದರಿಂದ ಉತ್ಪನ್ನವಾದ ಧನದಿಂದ ಶಿಕ್ಷಣದಂಥ ಪವಿತ್ರ ಕಾರ್ಯವನ್ನು ನಡಿಸುವದು ತೀರ ಅಶಕ್ಯವೆಂದು ನಾವು ಒಪ್ಪುವೆವು. ಮತ್ತು ಅಬಕಾರಿ ಉತ್ಪನ್ನವು ನಾಮಶೇಷವಾದರೆ, ನಮಗೆ ಆನಂದವು. ಆದರೆ, ಸರಕಾರವು ಅದರಿಂದ ದ್ರವ್ಯಸಂಚಯ ಮಾಡುವಾಗ ನಮಗೂ ಅದರ ಒಂದಿಷ್ಟು ಪಾಲು ಕೊಡಿರೆಂದು ನಾವು ಕೇಳುವದು ಸಹಜವಿದೆ. ನಮ್ಮ ಜಿಲ್ಹೆಯಿಂದ ಅಬಕಾರಿ ಖಾತೆಗೆ ೪ ಲಕ್ಷ ೮೦ ಸಾವಿರ ರೂಪಾಯಿಗಳು ಉತ್ಪನ್ನವಾಗುತ್ತವೆ. ಈ ಬಗ್ಗೆ ಸರಕಾರವು ಲೋಕಲ್ ಬೋರ್ಡಿಗೆ ೬॥ ಸಾವಿರ ರೂಪಾಯಿಗಳನ್ನು ಕೊಡುತ್ತದೆ. ರೂಪಾಯಿಗೊಂದು ಬಿಲ್ಲೆಯಂತೆ, ಈ ಖಾತೆಯಿಂದ ಲೋಕಲ್‌ಬೋರ್ಡಿಗೆ ಸಿಗುತ್ತದೆ. ಈ ಉತ್ಪನ್ನದ ಮೇಲೆ ರೂಪಾಯಿಗೊಂದಾಣೆಯಂತೆ ಎತ್ತಿದರೆ, ೩೦ ಸಾವಿರ ರೂಪಾಯಿಗಳು ಉತ್ಪನ್ನವಾಗುವವು. ಲೋಕಲ್ ಫಂಡು ಇಮ್ಮಡಿ ಮಾಡಿದರೆ, ಇನ್ನು ೯೦ ಸಾವಿರ ರೂಪಾಯಿಗಳು ದೊರಕುವವು. ಇದರ ಬದಲು ರೈತರಿಂದ ಎತ್ತುವ ಬರೇ ೧ ಆಣೆಯ ಮಾನವನ್ನು ಜಂಗಲ ಹಾಗು ಅಬಕಾರಿ ಖಾತೆಗಳಿಗೆ ಹಚ್ಚಿದರೆ, ೧-೧॥ ಲಕ್ಷ ರೂಪಾಯಿಗಳು ಅನಾಯಾಸವಾಗಿ ಲೋಕಲ್ ಬೋರ್ಡಿಗೆ ಲಭಿಸುವವು. ಇದರಿಂದ ಸರಕಾರಕ್ಕೆ ಹಾನಿಯೆನಿಲ್ಲ. ಯಾಕಂದರೆ, ಪ್ರಜೆಗಳಿಂದ ರೂಪಾಯಿಗೊಂದಾಣೆಯಂತೆ, ಲೋಕಲ್‌ಫಂಡು ಎತ್ತುತ್ತಿರುವಾಗ, ತಾವು ಮಾತ್ರ ಏಷ್ಟೆ ೧ ಬಿಲ್ಲೆಯಂತೆ ಕೊಟ್ಟು, ಫಕ್ತ ರೈತರೇ

ಕರಣೀಕ, ಎಂದು ಹೇಳುವುದು ಕೇವಲ ಸತ್ಯವೇ. ಅಧ್ಯಕ್ಷರು ಲೋಕಲ್ ಬೋರ್ಡಿನ ಕೆಲಸವನ್ನು ಬಹುಕಾಲಪರ್ಯಂತರ ನಡಿಸಿ, ಹಿರಿಯ ಗೃಹಸ್ಥರು. ಅವರು ಈ ವಿಷಯ ಆಲೋಚಿಸಿ ಪ್ರಜೆಗಳ ಮೇಲೆ ಇನ್ನು ಭಾರಹಾಕದೆ, ಲೋಕಲ್ ಬೋರ್ಡ ಉತ್ಪನ್ನವನ್ನು ಹೆಚ್ಚಿಸುವ ಯೋಜನೆ ಮಾಡದೇ ಹೋಗಿ ಅಗ್ರಹಪೂರ್ವಕ ವಿನಂತಿಯಿದೆ.

ಸ್ಥಾನಿಕ ವೃತ್ತಾಂತ.

ಕುಮಟಾ— ೧೬-೧೨ ಯಥಾಸ್ಥಿತ.

ಇಲ್ಲಿಯ ಮ್ಯುನಿಸಿಪಲ್ ಮೊದಲನೇ ವಾರ್ಡಿನ ಸಭಾಸದರಾಗಿದ್ದ ರಾ। ಮಂಗೇಶರಾವ ಮಿಜಾರ್ನಕರರವರು ತಮ್ಮ ಸಭಾಸದತ್ವಕ್ಕೆ ರಾಜೀನಾಮೆ ಕೊಟ್ಟದ್ದರಿಂದ, ಹೊಸ ಚುನಾವಣೆಯು ಅದೇ ತಿಂಗಳ ತಾ. ೨೭ನೇಗೆ ನಡೆಯುವದು. ಈ ಸ್ಥಳಕ್ಕೆ ರಾ। ಎಮ್. ಪಿ. ದೀವಗಿ, ವಕೀಲ ಹಾಗು ರಾ। ಕೇಶಗಿರಿ ಹರಿ ಶ್ಯಾನಭಾಗ, ಹೀಗೆ ಇಬ್ಬರು ಉಮೇದವಾರರಾಗಿ ನಿಂತಿರುವರು. ಮತದಾರರ ಒಲವು ಯಾರ ಬಗ್ಗೆ ಇರುವದೆಂದು ತಿಳಿಯುತ್ತದೆ.

ಭಾರತೀ ರಾಷ್ಟ್ರೀಯ ಶಾಲೆಯ ಶಿಕ್ಷಕರಾಗಿದ್ದ ಶ್ರೀ ವೆಂಕಟಸುಬ್ಬ ಭಟ್ಟ ಕಲಗೋಡರವರು ಕಳೆದ ಗುರುವಾರ ನ್ಯುಮೋನಿಯಾ ಜ್ವರದ ರೋಗದಿಂದ ನಿಧನಹೊಂದಿದರೆಂದು ತಿಳಿಸಲು ವ್ಯಸನವಾಗುತ್ತದೆ.

ಗುಡೇಅಂಗಡಿಯಲ್ಲಿದ್ದ ಟಪಾಲ ಆಫೀಸನ್ನು ಟಪಾಲ ಖಾತೆಯವರು ಕಡಿಮೆ ಮಾಡಿದರಂತೆ! ಕಾರಣವು ಖರ್ಚಿಗೆ ತಕ್ಕ ಉತ್ಪನ್ನ ಸಿಗುತ್ತಿದ್ದಿಲ್ಲವಂತೆ.

ಕಳೆದ ಶನಿವಾರಕ್ಕೆ ಜರಗಲಿಕ್ಕಿದ್ದ ವನಭೋಜನ ಉತ್ಸವಕ್ಕೆ ಧನಃ ಎಡರುಗಳು ಬಂದವು. ಶಾಂತಿಭಂಗವಾಗುವ ಭೀತಿಯಿದ್ದದರಿಂದ, ಮೆಜಿಸ್ಟ್ರೇಟರು ೨ ತಿಂಗಳುಗಳ ತನಕ ಸದರ ಉತ್ಸವವನ್ನು ನಡಿಸಬಾರದೆಂದು ಆಜ್ಞೆ ಕೊಟ್ಟಿರುವರು.

ನೂತನವಾಗಿ ಜನ್ಮತಳೆದಿದ್ದ ಚಿತ್ರಪುರಕರರ ಶ್ರೀ ಸಂಗೀತ ನಾಟಕ ಮಂಡಳಿಯು ನಿನ್ನೆಯಿಂದ ತಮ್ಮ ಪ್ರಯೋಗಗಳನ್ನು ಮಾಡಲಾರಂಭಿಸಿರುವದು.

ಕಳೆದ ಶನಿವಾರದಿಂದ ಶ್ರೀ ದತ್ತಜಯಂತಿಯ ಉತ್ಸವದ ಬಗ್ಗೆ ಊರಲ್ಲಿ ಭಜನೆ ನಡೆದವು.

ಗೋಕರ್ಣ— ಓರ್ವ ಮತಧಾರಿಯಾದ ಧರ್ಮಾಭಿಮಾನಿಯು ತಿಳಿಸುವದೇನಂದರೆ:—

ಕುಮಟಾ ವ ಅಂಕೋಲಾ ತಾಲೂಕಗಳಿಗೆ ಕೂಡಿ ೧೧ ಜನರದೊಂದು ಒಂದು ದೇವಾಲಯ ಕಮಿಟಿ ಇದ್ದು, ಈ ಕಮಿಟಿಯು ಮೆಂಬರರ ನೇಮಣೂಕಿಯು ರಿಲೀಜಸ್ ಎಂಡೋವಮೆಂಟ ಆಕ್ಟ ೨೦ ಕಲಂ ೧೧ನ ಅನ್ವಯ ಆಗತಕ್ಕದ್ದು. ಆದರೆ, ಸ್ಥಾನಿಕ ಸರಕಾರದವರು ಮತದಾರರ ಲೀಸ್ಟು ಪಗ್ಗಾರಿ ತಯಾರಿಸದೇ ಇದ್ದದರಿಂದ, ಈ ವರೆಗೆ ಜನರ ಅರ್ಜಿಯ ಮೇಲೆ ಖಾಲಿಬಿದ್ದ ಜಾಗವನ್ನು ಮೆಂಬರರು ಬಹುಮತದಿಂದ ತುಂಬಿಕೊಳ್ಳುತ್ತಿದ್ದರು. ಈ ತರದ ವಹಿವಾಟಿನ ಮೂಲಕ ಸದ್ರಿ ಕಮಿಟಿಯಲ್ಲಿ ಎಲ್ಲಾ ಮತದಾರರ ಯೋಗ್ಯ ಪ್ರತಿನಿಧಿಗಳಿದ್ದೇ, ಎಂತೂ ತಾಲೂಕುಗಳಲ್ಲಿ ಈ ಬಾಬಿನಲ್ಲಿ ಅಲ್ಲಲ್ಲಿ ಅಸಮಾಧಾನತೆ ಇತ್ತು. ಇಂಥ ಪರಿಸ್ಥಿತಿಯಲ್ಲಿ ವಹಿವಾಟಿನಂತೆ ನೇಮಿಸಲ್ಪಟ್ಟ ಮೆಂಬರರ ನೇಮಣೂಕಿ ರದ್ದುಪಡಿಸುವ ಕುರಿತು ಕಾನಡಾ ಡಿಸ್ಟ್ರಿಕ್ಟ ಕೋರ್ಟ ಮಿ. ಸ್ಲೇನಿಯಸ್ ನಂಬರು ೫೯ನೇಗೆ ಅರ್ಜಿ ಬಂದು, ಆ ಅರ್ಜಿ ಪ್ರಕರಣದಲ್ಲಿ ಸದ್ರಿ ವಹಿವಾಟಿನಂತೆ ಬಂದ ಎಲ್ಲ ಮೆಂಬರರ ನೇಮಣೂಕಿಗಳು ಬೇಕಾಯದೇಶೀರ ಎಂತ ಕೋರ್ಟಿನವರು ಠರಾಯಿಸಿ, ಆ ಜನರ ನೇಮಣೂಕಿ ಕಾಯಿದೆಯಂತೆ ರದ್ದು ಪಡಿಸಿ ಹೊಸ ನೇಮಣೂಕಿಯನ್ನು ಹುಕುಮ ಮಾಡಿರುವರಂತೆ. ಇಂಥ ಹೊಸ ಕಮಿಟಿಯು ಇದೇ ಕಳೆದ ತಾರೀಖು ೧೦—೧೨—೨೩ಕ್ಕೆ ಮುಖ್ಯವಾಗಿ ಮ್ಹೆ. ರಾಮಚಂದ್ರ ಅಣ್ಣಪ್ಪ ನಾಯಕ ಇವರ ನಿಧನದಿಂದ ಖಾಲಿಬಿದ್ದ ಜಾಗಾ ತುಂಬಿಸುವ ಬಗ್ಗೆ ಗೋಕರ್ಣದಲ್ಲಿ ಕೂಡಿತ್ತು. ಖಾಲಿ ಬಿದ್ದ ಜಾಗವನ್ನು ಹಿಂದಿನ ಪರಿಪಾಟಿಯಂತೆ ಮೆಂಬರರು ತಮ್ಮ ತಮ್ಮೊಳಗೆ ಆರಿಸಿ (cooption) ನೇಮಿಸಲಿಕ್ಕೆ ಬರಲಾರದೆಂತ ತಿಳಿದು ಎಷ್ಟೋ ಜನರು ಕಮಿಟಿಗೆ ಆ ಬಾಬಿನಲ್ಲಿ ಅರ್ಜಿ ಮಾಡಿಕೊಂಡಿಲ್ಲ. ಆದರೆ, ಕಮಿಟಿ ಕೂಡಿದ ವೇಳ್ಯಾ ಸದರಿ ಕಮಿಟಿಯ ಚೇರಮನ್ ಮಿ। ವಿ. ಎ. ಕಲ್ಯಾಣಪುರಕರ ಇವರು ಶ್ರೀ ಮಾಧವ ರಾಮ ಶ್ಯಾನಭಾಗ ಕಲಬಾಗಕರ ಇವರಿಗೆ ಸದ್ರಿ ಖಾಲಿಬಿದ್ದ ಜಾಗಕ್ಕೆ ನೇಮಿಸಬೇಕಾಗಿ ತಮ್ಮ ಕಡಿಗೆ ಕುಮಟೆ ಜನರದೊಂದು ಬಂದ ಅರ್ಜಿಯನ್ನು ಸಾದರಪಡಿಸಿದರಂತೆ! ಸದರಿ ಕಮಿಟಿಯಲ್ಲಿ ಹಾಜರಿದ್ದ ೯ ಜನ ಮೆಂಬರರಲ್ಲಿ ೪ ಜನ ಮೆಂಬರರು ಕಾಯಿದೆಯಂತೆ ತಮ್ಮ ತಮ್ಮೊಳಗೆ ಆರಿಸಿ (cooption) ನೇಮಣೂಕಿ ಮಾಡಲಿಕ್ಕೆ ಬರಲಾರದೆಂತಲೂ ಈ ಬಗ್ಗೆ ಮಿ। ಡಿಸ್ಟ್ರಿಕ್ಟ ಜಜ್ಜ ಸಾಹೇಬರು ಕಳೆದ ಅಕ್ಟೋಬರ ೧೯೨೩ರಲ್ಲಿ ಇಂಥ ವಹಿವಾಟ ಬೇಕಾಯದೇಶೀರ ಎಂತ ಠರಾಯಿಸಿದ್ದಾರೆಂತ ವಾದಿಸಿದರೂ, ಕಮಿಟಿಯವರು ಬಹುಮತದಿಂದ ಸದ್ರಿ ಶ್ರೀ ಕಲಬಾಗಕರ ಇವರಿಗೆ ಸದ್ರಿ ಕಮಿಟಿಯ ಮೆಂಬರರನ್ನಾಗಿ ನೇಮಣೂಕಿ ಮಾಡಿದರಂತೆ! ಹೊಸ ಕಮಿಟಿಯವರು ತಮ್ಮ ತಮ್ಮೊಳಗೆ ಆರಿಸಿ ನೇಮಣೂಕಿ ಮಾಡಿಕೊಂಡಿದ್ದರಿಂದ ಬಹಳೇ ಅಸಮಾಧಾನವಾಗಿದೆ.

ಕಾರಣ, ಸ್ಥಾನಿಕ ಸರಕಾರದವರು ಇನ್ನಾದರೂ ಈ ವಿಷಯದಲ್ಲಿ ತಮ್ಮ ಲಕ್ಷ್ಯವನ್ನು ಪೂರೈಸಿ ಮತದಾರರ ಲೀಸ್ಟು ಪಗ್ಗಾರಿ ಆದಷ್ಟು ತೀವ್ರ ತಯಾರಿಸಿ, ಈ ಸಂಬಂಧೀ ಜನರಲ್ಲಿ ಉಂಟಾದ ಅಸಮಾಧಾನತೆಯನ್ನು ದೂರಪಡಿಸ್ಯಾರೆಂದು ಆಶಿಸುತ್ತೇನೆ.

ವಿನಂತಿ.

ಮುಂಬಯಿ ಶಾಸನ ಕೌನ್ಸಿಲದ ಅಧಿವೇಶನವು ಸನ್ ೧೯೨೪ನೇ ಇಸವಿ ಫೆಬ್ರುವರಿ ತಿಂಗಳ ೧೮ನೇ ತಾರೀಖಿನ ದಿವಸ ಘಂಟೆ ೨ಕ್ಕೆ ಮುಂಬಯಿ ಟೌನ ಹೋಲದಲ್ಲಿ ಕೂಡುವದು ಗೊತ್ತಾಗಿದೆ. ಕಾನಡಾ ಜಿಲ್ಹಾ ವತಿಯಿಂದ ಯಾವದೇ ಸಾರ್ವಜನಿಕ ಹಿತಸಂಬಂಧದ ಸಂಗತಿಗಳ ವಿಷಯಕ್ಕೆ ಸರಕಾರಕ್ಕೆ ಪ್ರಶ್ನೆ ಮಾಡತಕ್ಕದ್ದು, ಇಲ್ಲವೆ ಠರಾವು ಮಾಡತಕ್ಕದ್ದು ಇದ್ದರೆ, ಅಂಥಾ ಸಂಗತಿಗಳ ಬಗ್ಗೆ ಪೂರ್ಣ ಮಾಹಿತಿ ಸಹಿತ ಕೆಳ ಕಾಣಿಸಿದ ನನ್ನ ವಿಳಾಸಕ್ಕೆ ಆದಷ್ಟು ಬೇಗನೇ ಬರೆದು ಕಳುಹಿಸಿ ಕೊಡಬೇಕು. ಮತ್ತೊಂದು ಮಾತೇನಂದರೆ, ಕಾನಡಾ ಜಿಲ್ಹೆಯ ಯಾವದೇ ಭಾಗದಲ್ಲಿ ಏನಾದರೂ ಸಾರ್ವಜನಿಕ ಹಿತಸಂಬಂಧದ ಸಂಗತಿಗಳು ತಲೆದೋರಿದ ಕೂಡಲೆ, ಅವನ್ನು ಆಧಾರಸಹಿತ ಸ್ಥಾನಿಕ ವೃತ್ತಪತ್ರಗಳಲ್ಲಿ ಪ್ರಕಟಿಸಲಿಕ್ಕೆ ಆ ವೃತ್ತಪತ್ರಕರ್ತರ ಕಡೆಗೆ ತಪ್ಪದೇ ಕಳುಹಿಸಿಕೊಡಬೇಕು. ಇದರಿಂದ ಲೋಕಹಿತ ಉಂಟಾಗಿ, ನನ್ನ ಕೆಲಸಕ್ಕೆ ಹೆಚ್ಚು ಸಹಾಯವಾಗುವದು.

ಹೊನ್ನಾವರ. } ಮಂಜುನಾಥ ದೇವರ ಭಟ್ಟ ಕರ್ಕಿ,
ತಾ. 17-12-23. } ಮು. ಕಾ. ಕೌ. ಮೆ. ಹೊನ್ನಾವರ

ಆಕ್ಷೇಪ ನಿರಸನ.

ಗೋಪಾಲ ರಾಮಚಂದ್ರ ದೇವ ಇವರ ವಿನಂತಿಗಳು: ಕಳೆದ ಸಂಚಿಕೆಯಲ್ಲಿ ಮತ್ತು ಅದರ ಹಿಂದಿನ ಸಂಚಿಕೆಯಲ್ಲಿ ಮಿ। ಕರ್ಕಿ ಇವರು ಕೊಂಗ್ರೆಸ್ಸಿನ ಉಮೇದವಾರರೆಂತ ಬರೆದಿರುತ್ತೀರಿ. ಇದರಿಂದ ಅವರು ಕೊಂಗ್ರೆಸ ಸಂಸ್ಥೆಯ ತರ್ಫೆಯಿಂದ ನಿಂತವರೆಂತ ಜನರೊಳಗೆ ತಪ್ಪು ತಿಳುವಳಿಕೆಯಾಗುವ ಸಂಭವವದೆ. ರಾಷ್ಟ್ರೀಯ ಸಭೆಯು ತನ್ನ ತರ್ಫೆಯಿಂದ ಹೋಗಲಿಕ್ಕೆ ಯಾರಿಗೂ ಹೇಳಿಲ್ಲವೆಂತ ನನ್ನ ತಿಳುವಳಿಕೆಯದೆ. ರಾಷ್ಟ್ರೀಯ ಸಭೆಯು ಠರಾವು ಮಾಡುವ ಕಾಲಕ್ಕೆ ದೇ. ಭ. ದಾಸರವರು ಇದನ್ನು ಸ್ಪಷ್ಟಮಾಡಿರುವರು. ಈ. ಸಭೆಯ ಠರಾವನ್ನು ನೋಡಿದರೂ ಇದು ತಿಳಿಯುವಂತೆ ಇದೆ. ಮತ ಕೊಟ್ಟವರ ಪೈಕಿ ಸಹ ಬಹಳ ಜನರು ತಪ್ಪು ತಿಳಕೊಂಡು ಮತ ಕೊಟ್ಟಂತೆ ತೋರುತ್ತದೆ— ಧ್ವಜದ ವಿಜಯವೆಂದರೆ— ಪೋಲೀಸಾಗರ ಮೇಲಿನ ನಿರ್ಜೀವ ಧ್ವಜದ ವಿಜಯದಿಂದ ಜನರು ಸಂತುಷ್ಟರಾಗಿದೆ, ಸ್ವಾತಂತ್ರ್ಯ ಆಕಾರದ ವ್ರತವನ್ನು ಆಚರಿಸಿ, ಸಂಪೂರ್ಣ ಸ್ವರಾಜ್ಯವನ್ನು ದೊರಕಿಸಲಿಕ್ಕೆ ವಿಧಾಯಕ ಕಾರ್ಯಕ್ರಮವು ಬೇಕೇ ಬೇಕೆಂದು ಜನರಿಗೆ ತಿಳಿಸುವದಕ್ಕೆ ಇದು ಸಮಯವಲ್ಲವೇ?

ಶಿದ್ದಾಪೂರ ತಾ. ೧೪-೧೨-೧೯೨೩.
ಗೋಪಾಲ ರಾಮಚಂದ್ರ ದೇವ.

[*.* ಶ್ರೀ ದೇವರವರು ಕೊಂಗ್ರೆಸಿನ ಉಮೇದವಾರ ಎಂಬ ಶಬ್ದಸಮುಚ್ಚಯದ ಅರ್ಥವನ್ನು ಅನ್ಯಥಾ ತಿಳಕೊಂಡಿರುವರು. ನಾವು 'ಹಿಂದಿನ ಗುರುವಾರ'ದ ಲೇಖದಲ್ಲಾಗಲಿ, 'ಧ್ವಜದ ವಿಜಯ'ದ ಲೇಖದಲ್ಲಾಗಲಿ, ಶ್ರೀ ಕರ್ಕಿಯವರು ಕೊಂಗ್ರೆಸ ಸಂಸ್ಥೆಯ ತರ್ಫೆಯಿಂದ ನಿಂತರೆಂದು ನಾವು ಹೇಳಲಿಲ್ಲ. ಕೊಂಗ್ರೆಸ ಉಮೇದವಾರರೆಂದರೆ, ಹಿರೇ ಕೊಂಗ್ರೆಸ ಧ್ಯೇಯವನ್ನು ಮನ್ನಿಸಿ, ರಾಷ್ಟ್ರಕಾರ್ಯವನ್ನು ಕೌನ್ಸಿಲುಗಳದ್ವಾರಾ ನಡಿಸಲುದ್ಯುಕ್ತರಾದವರು. ಇಷ್ಟೇ ಅರ್ಥವು ನಮಗೆ ಅಭಿಪ್ರೇತವಿದೆ. ದಿಲ್ಲಿಯೊಳಗಿನ ಜಾದಾ ರಾಷ್ಟ್ರೀಯ ಸಭೆಯ ಆಜ್ಞೆಯಂತೆ, ಕೊಂಗ್ರೆಸ ಸಂಸ್ಥೆಗಳ ತಟಸ್ಥವೃತ್ತಿಯನ್ನು ಧರಿಸಬೇಕೆಂಬರಿತು, ಎಲ್ಲದು ನಾವು ಸ್ಪಷ್ಟವಾಗಿ ನಮೂದಿಸಿರುವೆವು. ಕೊಂಗ್ರೆಸ ಉಮೇದವಾರರೆಂದು ಶ್ರೀ ಕರ್ಕಿಯವರಿಗೆ ಸಂಬೋಧಿಸುವದರಲ್ಲಿ ಅವರು ಕೊಂಗ್ರೆಸ ತರ್ಫೆಯಿಂದ ನಿಂತವರೆಂದು ನಮ್ಮ ಆಲೋಚನೆಯಿಲ್ಲ. ಹೀಗೆ ತಿಳಕೊಳ್ಳುವದೂ ತಪ್ಪು. ಸಂಪಾದಕ.]

ಪ್ರಥಮ ಅಖಿಲ ಭಾರತೀಯ ಸ್ವಯಂಸೇವಕರ ಪರಿಷತ್ತು, ಕೋಕೋನಾಡಾ.

ಶ್ರೀ ನಾರಾಯಣರಾವ ಹರ್ಡೀಕರರವರು ಇನ್ನೇ ಪ್ರಕಟಿಸುವ ಪತ್ರಿಕೆಯಲ್ಲಿ ಪ್ರಕಟಿಸುವದೇನಂದರೆ:—

೧. ಸ್ವಾಗತ ಮಂಡಳ: ಪರಿಷತ್ತಿಗಾಗಿ ಕೋಕೋನಾಡದಲ್ಲಿ ವ್ಯವಸ್ಥೆ ಮಾಡಲು ಒಂದು ಸ್ವಾಗತ ಮಂಡಳ ಏರ್ಪಟ್ಟಿದೆ. ಕಮಿಟಿಯ ಅಧಿಪತಿಗಳು ಶ್ರೀ ನಾಗೇಶ್ವರರಾವ ಪಂತಲು ಗರು, ಹಾಗು ಕಾರ್ಯದರ್ಶಿಗಳು ಶ್ರೀ ಅಯ್ಯಂಕಿ ವೆಂಕಟರಾಮಯ್ಯಾ, ಯ. ಪಟ್ಟಾಭಿರಾಮಯ್ಯಾ, ಸಾವಿತ್ರಿ ದೇವೇಂದ್ರುಡು ಹೀಗೆ ಇರುವರು. ಆಂಧ್ರದೊಳಗಿನ ಸ್ವಾಗತ ಕಮಿಟಿಯ ಸಭಾಸದರಾಗಬಿಚ್ಛಿಸುವ ಸ್ವಯಂಸೇವಕರು ೧ ರೂಪಾಯಿ ಪ್ರವೇಶ ಫೀ ತುಂಬಬೇಕು.

೨. ಅಧ್ಯಕ್ಷ: ರಾಷ್ಟ್ರೀಯ ಸಭೆಯ ಕಾರ್ಯಕಾರಿ ಕಾರ್ಯದರ್ಶಿಗಳಾಗಿದ್ದ ಪಂಡಿತ ಜವಾಹರಲಾಲ ನೆಹರು ರವರು ಈ ಪ್ರಥಮ ಅಖಿಲ ಭಾರತೀಯ ಸ್ವಯಂಸೇವಕ ಪರಿಷತ್ತಿನ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

೩. ಪ್ರೇಕ್ಷಕರು: ಪರಿಷತ್ತಿಗೆ ಪ್ರೇಕ್ಷಕರಾಗಬಿಚ್ಛಿಸುವವರಿಗಾಗಿ ೧ ರೂಪಾಯಿ ೧ ಫೀ ಇಡಲ್ಪಟ್ಟಿದೆ.

೪. ಕಚೇರಿ: ಈ ಪರಿಷತ್ತಿನ ಕಚೇರಿಯು ೧೬ನೇ ತಾರೀಖಿನಿಂದ ಗಾಂಧೀ ನಗರದೊಳಗಿನ ರಾಷ್ಟ್ರೀಯ ಸಭೆಯ ಮಂಟಪದ ಸಮೀಪ ಇಡಲ್ಪಟ್ಟಿದೆ.

ಬಾಲಮೋಹನ, ಕೋಕೋನಾಡಾ: ಇದು ತಂತಿ ಪತ್ತೆ.

೫ ಪ್ರತಿನಿಧಿಗಳು: (ಅ) ಪ್ರತಿನಿಧಿಗಳಿಗೆ ಫೀ ಇರುವದಿಲ್ಲ. ಮತಕೊಡುವದು ಪ್ರಾಂತವಾರ. ಪರಿಷತ್ತಿನ ಮಂಟಪದಲ್ಲಿ ಪ್ರತಿನಿಧಿಗಳಿಗೆ ಆಸನಗಳು ಸಹ ಪ್ರಾಂತವಾರು ಇಡಲ್ಪಡುವವು.

(ಬ) ಪ್ರಾಂತಿಕ ಸ್ವಯಂಸೇವಕರ ಪರಿಷತ್ತಾಗಲಿ, ಪ್ರಾಂತಿಕ ಕೊಂಗ್ರೆಸ ಕಮಿಟಿಯಾಗಲಿ, ಆರಿಸಿ ತೆಗೆದ ಪ್ರತಿನಿಧಿಗಳ ಟಿಕೇಟುಗಳು ಪೂರೈಸಲ್ಪಡುವವು. ಪ್ರತಿನಿಧಿಗಳು ತಮ್ಮೊಡನೆ ಆಯಾ ಸಂಸ್ಥೆಗಳಿಂದ ಅಧಿಕಾರಪತ್ರಗಳನ್ನು ತರತಕ್ಕದ್ದು.

೬. ಊಟ: ಪ್ರತಿನಿಧಿಗಳು ರಾಷ್ಟ್ರೀಯ ಸಭೆಯ ಸಾಮಾನ್ಯ ಆಹಾರ ಮನೆಯಲ್ಲಿ ಅಥವಾ ತಮ್ಮ ತಮ್ಮ

ಪ್ರಾಂತಿಕ ಅಡಿಗೆ ಮನೆಗಳಲ್ಲಿ ಊಟದ ವ್ಯವಸ್ಥೆ ಮಾಡಿಕೊಳ್ಳಲಾಗಿದ್ದು, ಪರಿಷತ್ತಿನ ಪ್ರತಿನಿಧಿಗಳಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲು ಅನುಕೂಲವಾಗಲಿಲ್ಲೆಂದು ತಿಳಿಸಲು ಚಾಲಕರಿಗೆ ವ್ಯಸನವಾಗುತ್ತದೆ.

೭. ಬಿಡಾರು. ಉಳಕೊಳ್ಳುವ ಬಗ್ಗೆ ಇನ್ನೊಂದೇ ಪರಿಷತ್ತಿನ ಪ್ರತಿನಿಧಿಗಳಿದ್ದವರಿಗೆ ಮಾತ್ರ ವ್ಯವಸ್ಥೆ ಮಾಡಲಾಗುವದು. ಈ ಬಗ್ಗೆ ಮುಂದಾಗಿ ತಿಳಿಸಬೇಕಾಗಿ ವಿನಂತಿ.

ಟೀಪು: ಕೋಕೋನಾಡದೊಳಗಿನ ಚಳಿಯು ವಿಶೇಷವಿರುವದಿಲ್ಲ, ಉಷ್ಣವೂ ಇರುವದಿಲ್ಲ. ಮುಂಬಯಿಯಂತೆ, ಸಮಶೀತೋಷ್ಣವಿದೆ. ಆದರಿಂದ ಹೆಚ್ಚು ಉಣ್ಣೆ ಕೊಡಿಗೆಗಳನ್ನು ತರುವ ಆವಶ್ಯಕತೆಯಿಲ್ಲ.

೮. ಕಾರ್ಯಕ್ರಮ (ಅ) ಈ ಪರಿಷತ್ತಿನ ಚಾಲಕ ಮಂಡಳವು ಪರಿಷತ್ತಿನ [illegible] ತಾ ೨೪ನೇ ಡಿಸೆಂಬರ ಸೋಮವಾರಕ್ಕೆ ನೆರೆಯುವದು. ನಿಯೋಜಿತ ಅಧ್ಯಕ್ಷರೂ, ಸ್ವಾಗತ ಮಂಡಳದ ಕಾರ್ಯಕರ್ತರೂ [illegible] ಕರೂ ಸಭೆಗೆ ಹಾಜರಿರಬೇಕಾಗಿ ವಿನಂತಿ ಮಾಡಲ್ಪಟ್ಟಿದೆ.

(ಬ) ಪ್ರಥಮ ಅಖಿಲ ಭಾರತೀಯ ಸ್ವಯಂಸೇವಕ ಪರಿಷತ್ತಿನ ಅಧಿವೇಶನವು ಮಂಗಳವಾರ [illegible] ಅಪರಾಹ್ನ ೨ ಘಂಟೆಗೆ ಕೂಡಲಿದೆ [illegible] ವದು.

(ಕ) ವಿಷಯನಿಯಾಮಕ ಮಂಡಳದ [illegible] ಸಂಜೆಗೆ ಪರಿಷತ್ತಿನ [illegible] ಕ್ಕೆ ಕಂಡಂತೆ ಮುಂದೆ ಕೂಡುವದು.

(ತ) [illegible] ಪ್ರಾರಂಭವಾಗಿ, ಮುಂದೆ ಕಾರ್ಯಕ್ರಮ [illegible] ಗುವವರೆಗೆ ನಡೆಯುವದು.

೯. ಪತ್ರವ್ಯವಹಾರ [illegible] ಮುಂದಿನ [illegible] ೨೪ನೇ ಡಿಸೆಂಬರ [illegible] ಇದ್ದು ೧೯ನೇ ತಾರೀಖಿನ [illegible] ಇರುವವರು ಕೋಕೋನಾಡದಲ್ಲಿ [illegible]

ಈ ಪರಿಪತ್ರವನ್ನು [illegible] ಅಭಿಮಾನ ಸಹಾಯ ಮಾಡಬೇಕೆಂದು [illegible] ಕರ್ನಾಟಕದ ಪ್ರಾಂತಿಕ [illegible]

ವೃತ್ತಸಾರ.

— ಸ್ಕಾಟ್‍ಲಂಡದ [illegible] ಪಟ್ಟಣದಲ್ಲಿ ಪಾರ್ಲಮೆಂಟ ಸದಸ್ಯ [illegible] ಒಬ್ಬ ಉಮೇದವಾರರು ಮದ್ಯಪಾನವನ್ನು [illegible] ತೆಗೆದುಹಾಕಬೇಕೆಂಬ ಪಕ್ಷದವರಿದ್ದು, ಅವರೇ ಜಯಹೊಂದಿದರು.

— ಹಿಂದುಸ್ಥಾನದೊಳಗಿನ ಕರ ತೆರುವ ಪ್ರಮಾಣದ ಪರೀಕ್ಷೆ ನೋಡಿರಿ: ೧೯೧೧—೧೯೧೨ರಲ್ಲಿ ತಲೆಗೆ ರೂ. ೨-೧೧-೮, ೧೯೧೫—೧೯೧೬ರಲ್ಲಿ ೩-೧೩-೧೦, ೧೯೧೭-೧೮ರಲ್ಲಿ ರೂ. ೩-೯-೧೦, ೧೯೨೦—೨೧ರಲ್ಲಿ ರೂ. ೪-೧೪-೯.

— ರಾಜದ್ರೋಹ ಚಳವಳಿಯ ಶ್ರೀ ಕೃಷ್ಣ [illegible] ಅಧ್ಯಕ್ಷ ಪ್ರವೇಶಗೊಳ್ಳುವ ಅಥವಾ ಸರಕಾರಕ್ಕೆ ರಾಜೀನಾಮೆ [illegible] ಇದರಿಂದ [illegible] ಬಿಡುಗಡೆ [illegible]

— ಸಾರ್ವಜನಿಕ ಕಟ್ಟಡಗಳ [illegible] ಮಾಡಿದ ಸ್ಥಳಗಳ [illegible] ಬಲ್ಲ ಮಾಡಬೇಕೆಂದು ಸೂರ್ಯ [illegible] ಆಜ್ಞಾಪಿಸಿರುವರು.

— [illegible] ಗಳೊಳಗಿನ 'ದೇವಾಲಯ ಗೋಲ' ಎಂಬ ಗ್ರಾಮದಲ್ಲಿ ಹಗಲು ಮಧ್ಯಾಹ್ನ ಸಮಯಕ್ಕೆ ವ್ಯಾಘ್ರರಾಜನು ಪ್ರವೇಶಗೊಂಡು ೮-೯ ಜನಗಳನ್ನು ಸಂಹರಿಸಿದನು. ಏನಿದು!

— ಜನಸಾ ದಯಲ್ಲಿ ಸದ್ಯಕ್ಕೆ ಪ್ರದರ್ಶನವಾಗುವದಿದೆ. ಅದರೊಳಗೆ ಉತ್ತಮ ಕಲಾಕೌಶಲ್ಯದ ಕೆಲಸ ಮಾಡಿ ತೋರಿಸುವವರಿಗೆ ಪಾಡಿಕೆಯಂತೆ ಇನಾಮುಗಳು ಸಿಗುವವು. ಈ ವರ್ಷ ಉತ್ತಮ ಮರ್ದನಿ [illegible] ಹಾಗು [illegible] ಚಿತ್ರ ಇವುಗಳಿಗಾಗಿ ಮಹಾರಾಜರವರು ಅನುಕ್ರಮವಾಗಿ ೧೫೦ ಹಾಗು ೫೦ ರೂಪಾಯಿಗಳ ಇನಾಮು ಇಟ್ಟಿರುವರು.

ವಿವಿಧ ಸಂಗ್ರಹ.

ವೈ। ವಾ। ಕಸ್ತೂರಿ ರಂಗ ಅಯ್ಯಂಗಾರ.

ಮದ್ರಾಸಿನೊಳಗಿನ ಪ್ರಸಿದ್ಧ 'ಹಿಂದೂ' ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಕಸ್ತುರಿರಂಗ ಅಯ್ಯಂಗಾರರವರು ಕಳೆದ ಬುಧವಾರ ತಾರೀಖು ೧೨ನೇ [illegible] ದೈವಾಧೀನರಾದರು [illegible] ಇವರಿಯಲ್ಲಿ 'ಹಿಂದೂ' ಪತ್ರಿಕೆ [illegible] ರಾಷ್ಟ್ರೀಯ [illegible] ಪ್ರಚಾರ ಮಾಡಲು [illegible] 'ಹಿಂದೂ' ಪತ್ರಿಕೆಯು [illegible] ಅಯ್ಯಂಗಾರರೇ ಕಾರಣರು. ಇದ [illegible] ಮದ್ರಾಸಿನ ಮಹಾಜನ ಸಭೆ [illegible] ಕಮಿಟಿಯ [illegible] ಹಲವು ವರುಷಗಳ ವರೆಗೆ [illegible] ಅಖಿಲ ಭಾರತೀಯ [illegible] ಹಕೀಮ [illegible] ನೇಮಿಸಿದ ಕಾ [illegible] ಇವರು ಸಭಾಸದರಲ್ಲೊ [illegible] ಬಹಿಷ್ಕಾರ ಪಕ್ಷದವರಿದ್ದ [illegible] ಇದೇ ಹಿಂದು [illegible] ರಾಷ್ಟ್ರೀಯ ಚಳವಳಿಯಲ್ಲಿ [illegible] ತಮ್ಮ ಕಾರ್ಯಭಾಗ ನಡೆಸುತ್ತಿದ್ದರು. [illegible] ಮದ್ರಾಸಿನೊಳಗಿನ ರಾಷ್ಟ್ರೀಯ ಪ್ರಚಾರವು [illegible] ಶ್ರೀ। ಅಯ್ಯಂಗಾರರಿಗೇ ಒಪ್ಪಿದ್ದೆಂದು ಹೇಳಿದರೆ, ಅತಿಶಯೋಕ್ತಿಯಾಗದು. [illegible] ಆ ಉದ್ಯೋಗದಲ್ಲಿ [illegible] ಹೇಳಬೇಕಾಗುತ್ತದೆ, [illegible] ದೇಶದ ವಿಶಿಷ್ಟ [illegible] ಕಡಿಮೆ ಮಾಡಿದರು. ಇವರ ಯೋಗ್ಯತೆಯು ಸರಕಾರಕ್ಕೂ ಮಾನ್ಯವಿದೆ. ೧೯೧೭ ರಲ್ಲಿ ಹಿಂದೀ ಪತ್ರಕಾರರ ಶಿಷ್ಟಮಂಡಳವನ್ನು ರಣಕ್ಷೇತ್ರಕ್ಕೆ ಕಳಿಸುವ ವಿಚಾರವಾಗಿ, ಆ ಬಗ್ಗೆ ಹಿಂದುಸ್ಥಾನ ಸರಕಾರವು ನೇಮಿಸಿದ ಪತ್ರಿಕಾಕರ್ತರಲ್ಲಿ ಇವರೊಬ್ಬರಾಗಿದ್ದರು. ಮೊನ್ನೆ ಮುಂಬಯಿಯಲ್ಲಿ ಸ್ಥಾಪಿಸಲ್ಪಟ್ಟ [illegible] ಭಾರತೀಯ ಪತ್ರಿಕಾಕರ್ತರ ಸಂಘಕ್ಕೆ ಇವರನ್ನು ಅಧ್ಯಕ್ಷರನ್ನಾಗಿ ಆರಿಸಿ, ಪತ್ರಿಕಾಕರ್ತರು [illegible] ಇವರು ಸಲ್ಲಿಸಿದ ಸೇವೆಯನ್ನು ನೆನಿಸಿದರು. ಇಂಥವರ ಯೋಗ್ಯ, ಜ್ಞಾನವೃದ್ಧ, ಶ್ರೇಷ್ಠ ದೇಶಸೇವಕರ ನಿಧನದಿಂದ ಭಾರತಕ್ಕೆ [illegible] ದೊಡ್ಡ ಶೋಕವಾಗಿದೆ. ಸಾಹಜಿಕವು.

ವಿಕ್ಷಿಪ್ತ ಹೆಡ್‍ಮಾಸ್ತರನ ಕಥೆ.

[illegible] ಸರಕಾರವು ಹಿಂದುಸ್ಥಾನದಿಂದ ವಿ । ಮೆಕ್ಸವೆಲ್ ಎಂಬ ಯುರೋಪಿಯನ್ ಹೆಡ್‍ಮಾಸ್ತರನನ್ನು ಆಮದು ಮಾಡಿ, ಅವರಿಗೆ ಅಲ್ಲಿ ದಿನಾ ಹೈಸ್ಕೂಲಿನ ಮುಖ್ಯಾಧ್ಯಾಪಕತ್ವವನ್ನು ಒಪ್ಪಿಸಿತು. ಈ ಶಾಲೆಯಲ್ಲಿ ಹಿಂದೀ ಹುಡುಗರು ವಿದ್ಯಾರ್ಥಿಗಳು. ಈ ಅಧ್ಯಾಪಕರು ಇಲ್ಲಿ ಅನೇಕ ವಿಕ್ಷಿಪ್ತ ಪ್ರಕಾರಗಳನ್ನು ಆಚರಿಸಿದರು, ಇವರಿಗೂ, ಸ್ಕೂಲ ಕಮೀಟಿಗೂ ಎಂದೂ ಕೂಡಿಬರುತ್ತಿದ್ದಿಲ್ಲ. ಸ್ಕೂಲ ಕಮೀಟಿ ಸದಸ್ಯರಿಗೆ ಅಂಕಿತರಾಗಿ ಕೆಲಸ ನಡಿಸಲು ಇವರು ತಯಾರಿಲ್ಲ. ಒಂದು ದಿನ ಕೆಲ ವಿದ್ಯಾರ್ಥಿಗಳು ಖುಷಿಯಿಂದ ಹುಡುಗರನ್ನು ಅವಹೇಳಿಸಿ, ಮನೆಗೆ ಒಯ್ದರು. ವಿದ್ಯಾರ್ಥಿಗಳ ತಾಯಿಯು ಮಾಸ್ತರರಿಗೆ ಇವರ ವರದಿ ಕೊಟ್ಟರು. ಕೂಡಲೆ, ಮಾಸ್ತರರು ಆ ಹುಡುಗರ ತನಿಖೆ ನಡಿಸಿದರು. ತನಿಖೆಯಲ್ಲಿ ಇನ್ನಿಬ್ಬರು ಖುಷಿಯಿಂದ ಹುಡುಗರನ್ನು ಕಳುವು ಮಾಡಿದ್ದರೆಂದು ಹೊರಬಿತ್ತು. ಕೂಡಲೆ, ಮಾಸ್ತರರು ರೇಗಿಗೆದ್ದರು. ಪೋಲೀಸರಿಗೆ ಕರೆಹೋಯಿತು. ಈ ಮೂವರ ಹುಡುಗರು ಪೋಲೀಸರ ವಶ ಕೊಡಲ್ಪಟ್ಟರು. ಎಲೆ ಹುಡುಗರಲ್ಲಿ, ಒಬ್ಬನು ೬ ವರುಷದವನು ; ಇನ್ನೊಬ್ಬನು ೮ ವರುಷದವನು ; ಮತ್ತೊಬ್ಬನು ೯ ವರುಷದವನು. ಪೋಲೀಸ ಅಧಿಕಾರಿಯು ಇದೇ ರಾತ್ರಿ ಅವರನ್ನು ಪೋಲೀಸ ಸ್ಟೇಶನಿನಲ್ಲಿ ಬಂಧಿಸಿ, ಮಾರನೇ ದಿನ ಮೆಜಿಸ್ಟ್ರೇಟರ ಮುಂದೆ ತಂದರು. ಮೆಜಿಸ್ಟ್ರೇಟರು ಹುಡುಗರ ಅಪರಾಧ ಕೇಳಿದ ಕೂಡಲೆ ಸಂತಾಪಗೊಂಡು, ಪೋಲೀಸರೂ, ಹೆಡ್‍ಮಾಸ್ತರರೂ ಇಷ್ಟು ಕ್ಷುದ್ರ ಅಪರಾಧಕ್ಕಾಗಿ ಈ ಚಿಕ್ಕ ಬಾಲಕರನ್ನು ಕಾಡಿದರೆಂದು ಬಹು ಹೊಡೆದು, ಖಟಲೆಯನ್ನು ಕಿತ್ತೊಗೆದರು. ಸ್ಕೂಲ ಕಮೀಟಿಯವರು ಹೆಡ್ ಮಾಸ್ತರರಿಗೆ ಈ ಅವಕೃತ್ಯದ ಬಗ್ಗೆ ಜವಾಬು ಕೇಳಲು, ಹೆಡ್‍ಮಾಸ್ತರರು ಕಮೀಟಿಯ ಸಭಾಸದರ ಹೆಸರುಗಳನ್ನೇ ತೆಗೆದರು. ಬಳಿಕ ಪ್ರಚಂಡ ಸಭೆಯಾಗಿ, ಈ ಹೆಡ್‍ಮಾಸ್ತರನನ್ನು ಸ್ಥಲಾಂತರ ಮಾಡಬೇಕೆಂತಲೂ ಒಬ್ಬ ಹಿಂದೀಯವನನ್ನೇ ಈ ಸ್ಥಳಕ್ಕೆ ನೇಮಿಸಬೇಕೆಂತಲೂ ಠರಾವು ಪಾಸಾದ್ದಲ್ಲದೆ, ಮಿ। ಮೆಕ್ಸವೆಲ್‍ರವ ಸ್ಥಾನಭ್ರಷ್ಟವಾಗುವ ವರೆಗೆ ಶಾಲೆಯನ್ನು ಬಹಿಷ್ಕರಿಸಬೇಕೆಂತಲೂ ನಿರ್ಣಯವಾಯಿತು. ಬಳಿಕ, ೬ [illegible] ನಡೆಯಿತು. ಹೆಡ್‍ಮಾಸ್ತರರು ಮಾಫಿ ಬೇಡಿದರು. ಆದರೂ, ಅವರನ್ನು ಕಿತ್ತೊಗೆಯಬೇಕೆಂಬ ಧೋರಣವನ್ನು ಹಿಂದೀಯರು ಬಿಡಲಿಲ್ಲ. ಕಟ್ಟಕಡೆಗೆ ಅವರನ್ನು ಸ್ಕಾರ್ಬರೋಬಿಗೆ ವರ್ಗ ಮಾಡಿ, ರಾ। ದುಬೆಂದರವರನ್ನು ಈ ಸ್ಥಳಕ್ಕೆ ನೇಮಿಸಿದರು.

***

ರಾಷ್ಟ್ರೀಯ ಸಭೆಯ ತಯಾರಿ.

ಪೂರ್ವ ದಂಡೆಯ ಮೇಲ್ಗಡೆ [illegible] ಗಾಲಿಯಿಂದ ಗಿ [illegible] ಯ ಮಾರ್ಗವು ಕಿತ್ತು ಬಿದ್ದದರಿಂದ, ಮುಂದಿನ ಕೊಂಗ್ರೆಸ ಅಧಿವೇಶನಕ್ಕೆ ಬರಲು ಅನುಕೂಲವಾಗುವಂತೆ ನೆಟ್ಟಗಾಗುವ ಲಕ್ಷಣಗಳು ತೋರದ್ದರಿಂದ, ಬಂಗಾಲದ ಪ್ರಾಂತಿಕ ಕೊಂಗ್ರೆಸ ಕಮಿಟಿಯವರು ಅಧಿವೇಶನದ ತಾರೀಖುಗಳನ್ನು ಮುಂದರಿಸಬೇಕೆಂದು ಕೋಕೋನಾಡದೊಳಗಿನ ಸ್ವಾಗತ ಕಮೀಟಿಗೆ ಪ್ರಾರ್ಥಿಸಿದ್ದರು. ಈ ಬಗ್ಗೆ ಕಳೆದ [illegible] ಬುಧವಾರಕ್ಕೆ ವಿಚಾರವಾಯಿತು. ಗಾಡಿಯ ಮಾರ್ಗವು ಕಿತ್ತು ಹೋದದ್ದರಿಂದ, ಬಂಗಾಲ, ಬಿಹಾರ, ಅಸಾಮ, ಉತ್ಕಲ ಪ್ರತಿನಿಧಿಗಳು ಅಧಿವೇಶನಕ್ಕೆ ಬರಲು ಕಠಿಣವಾಗುತ್ತದೆಂಬುದು ಕಮೀಟಿಯವರಿಗೆ ಮಾನ್ಯವಿದ್ದರೂ, ಅಧಿವೇ

ಕಾರ್ಯಕಾರಿಯು ಈ ವೇಳದಲ್ಲೇ ನೇಮಿಸಿದ ತಾರೀಖಿಗೆ ನಡೆಯುವದೆಂಬ ಭಾವನೆಯಿಂದ ವ್ಯಂದರಿಸಿದ್ದರಿಂದ ಅಧಿವೇಶನವನ್ನು ಮುಂದೂಡಿದರೆ, ಅವರಿಗಾಯ್ತ ಲುಕಸಾನು ಆಗುವದರಿಂದ, ಅಧಿವೇಶನವನ್ನು ಮುಂದರಿಸಲು ಅನುಕೂಲವಿಲ್ಲೆಂದು ಜಾಹೀರ ಮಾಡಲಾಯಿತು. ಈ ವೇಳದಲು ಜಾಹೀರ ಆದಂತೆ, ರಾಷ್ಟ್ರೀಯ ಸಭೆಯು ತಾ. ೨೬ ನೇ ಡಿಶಂಬರ ಅಪರಾಹ್ನ ೧॥ ಘಂಟೆಗೆ ನೆರೆಯುವದು. ಭರತಖಂಡದೊಳಗಿನ ಸಾಧುಗಳಿಗಾಗಿ ೧೦೦ ಪ್ರೇಕ್ಷಕರ ಟಿಕೆಟುಗಳು ಉಚಿತವಾಗಿ ಕೊಡಲ್ಪಡುವವು. ಆಂಧ್ರ ಪ್ರಾಂತದೊಳಗಿನ ಅಸ್ಪೃಶ್ಯ ಬಾಂಧವರಾದ ಆದಿದ್ರಾವಿಡರಿಗೆ ಜಿಲ್ಹಾ ಕೊಂಗ್ರೆಸ ಕಮಿಟಿಗಳ ಶಿಫಾರಸಿನ ಮೇರೆಗೆ ಪ್ರತಿಯೊಂದು ಜಿಲ್ಹೆಗೆ ೧೦ ರಂತೆ, ಗೋದಾವರಿ ಜಿಲ್ಹೆಗೆ ೨೦ ರಂತೆ, ಉಚಿತವಾಗಿ ಪ್ರೇಕ್ಷಕರ ಟಿಕೆಟುಗಳು ಸಿಗುವವು. ಪ್ರತಿನಿಧಿ-ಪ್ರೇಕ್ಷಕರಿಗೆ ದ್ರವ್ಯ ಜೋಪಾನವಾಗಲು ಅನುಕೂಲವಾಗಬೇಕೆಂದು ಗಾಂಧೀನಗರದಲ್ಲಿ ೨೦ನೇ ತಾರೀಖಿನಿಂದ ಸಹಕಾರಿ ಬೇಂಕಿನ ಶಾಖೆಯು ತೆರೆಯಲ್ಪಡುವದು. ಗುಜರಾಥ, ಬಂಗಾಲ, ಬಿಹಾರ, ಕರ್ನಾಟಕ ಹಾಗು ಬಿಹಾರದವರು ತಮ್ಮ ತಮ್ಮ ಊಟದ ವ್ಯವಸ್ಥೆಯನ್ನು ಪ್ರತ್ಯೇಕ ಮಾಡಿಕೊಳ್ಳುವರು. ತಾಮಿಳನಾಡು, ಮುಂಬಯಿ, ಮಧ್ಯಪ್ರಾಂತ ಹಾಗು ಕೇರಳದವರು ಆಂಧ್ರ ಮಾದರಿಯ ಮೇಲೆ ನಡಿಸುವ ಅಡಿಗೆ ಮನೆಯಲ್ಲಿಯೇ ಊಟಕೊಳ್ಳಲೊಪ್ಪಿರುವರು.

***

ದೈವಳ್ಳ ಹಿಂದುಸ್ಥಾನ.

ನೇಕ ನಾಮದಾರ ಗವ್ಹರ್ನರರು ಕಳೆದ ೮ನೇ ತಾರೀಖಿಗೆ ಸ್ವದೇಶಕ್ಕೆ ಮರಳುವಾಗ, ಹಿಂದುಸ್ಥಾನವು ಶ್ರೀಮಂತವೆಂದು ಕೊಟ್ಟ ಅಂಕಗಳನ್ನು ವಾಚಕರು ಓದಿರುವರು. ಇದಿಗೆ ನಮ್ಮ ಕೆಲವು ಅಂಕಗಳನ್ನು ಕೊಡಬೇಕಾಗಿದೆ. ನಾಮದಾರರು ಲೋಕಸಂಖ್ಯೆಯು ೩೫ ಕೋಟಿಯೆಂದು ನುಡಿದರು. ಉತ್ಪನ್ನವು ೧ ಖರ್ವ, ೭ ಅಬ್ಜ, ೧೫ ಕೋಟಿ ಎಂದು ನುಡಿದರು. ಲೋಕಸಂಖ್ಯೆಯು ಸರಿಯಾಗಿ ೩೨ ಕೋಟಿ ಇದೆ. ಮೈಸೂರಿನ ದಿವಾನರಾಗಿದ್ದ ಸರ್ ಎಮ್. ವಿಶ್ವೇಶ್ವರಯ್ಯನವರು ಹಿಂದುಸ್ಥಾನದ ದೇಶಾಯದ ಉತ್ಪನ್ನವು ೬ ಅಬ್ಜವೆಂದು ಬರೆದಿರುವರು. ಸರಕಾರವು ಕೆಲ ವರುಷಗಳ ಹಿಂದೆ ಮಾಡಿದ ಚೌಕಶಿಯಲ್ಲಿ ೧। ಖರ್ವವೆಂದು ನಿರ್ಣಯಿಸಿತ್ತು. ಅಂದರೆ, ನಾಮದಾರ ಗವ್ಹರ್ನರರ ಅಂದಾಜಿಗಿಂತ ॥ ಖರ್ವ ಕಡಿಮೆ. ಲೋಕಸಂಖ್ಯೆಯ ಮಾನವನ್ನು ವಿಚಾರಿಸಿದರೆ ಸಹ, ಆಳರಸರ ಕಾರಕೀರ್ದಿಯು ಹಿತಪ್ರದವಾಗಲಿಲ್ಲೆಂದು ತಿಳಿಯುವದಾಗಿದೆ. ೧೯೧೧ ರಿಂದ ೧೯೨೧ರ ವರೆಗೆ, ೧೦ ವರುಷಗಳಲ್ಲಿ ಮುಂಬಯಿ ಇಲಾಖೆಯ ಲೋಕಸಂಖ್ಯೆಯು ಏರುವ ಬದಲು, ಸಾವಿರಕ್ಕೆ ೧೮ ರಂತೆ ತಗ್ಗಿತು. ಅಹಮ್ಮದನಗರದಂಥ ಜಿಲ್ಹೆಗಳಲ್ಲಿ ಸಾವಿರಕ್ಕೆ ೫೦ ತಗ್ಗಿತು. ನಾಮದಾರ ಗವ್ಹರ್ನರರು ಕೊಟ್ಟ ಲೋಕಸಂಖ್ಯೆ ಉತ್ಪನ್ನ ನಿಜವೆಂದು ಹೇಳಿದರೂ, ಅದರಿಂದ ತಲೆಗೆ ೫೦ ರೂಪಾಯಿ ವಾರ್ಷಿಕ ಉತ್ಪನ್ನ ಬೀಳುತ್ತದೆ. ಅಂದರೆ, ತಿಂಗಳಿಗೆ ೪-೪॥ ರೂಪಾಯಿಗಳಾದವು. ಅಮೇರಿಕೆಯಲ್ಲಿ ಈ ಉತ್ಪನ್ನದ ಮಾನವು ತಲೆಗೆ ೬೦೦ ರೂಪಾಯಿಗಳಿವೆ. ಹಿಂದುಸ್ಥಾನದ ಸಾಂಪತ್ತಿಕ ಸ್ಥಿತಿಯ ತುಲನೆ ಮಾಡುವ ಮತ್ತೊಂದು ಪ್ರಮಾಣವಿದೆ. ಈ ದೇಶದ ಪ್ರಜೆಗಳು ಸೇವಿಂಗ್ಸ ಬೇಂಕುಗಳಲ್ಲಿ ತಿಂಗಳಿಗೆ ... ಇಟ್ಟ ಹಣವು ತಲೆಗೆ ೧೦ ಆಣೆಯಂತೆ ಬೀಳುತ್ತದೆ. ಜಪಾನದಲ್ಲಿ ಇದು ೮ ರೂಪಾಯಿ, ಇಂಗ್ಲಂಡದಲ್ಲಿ ೭೭ ರೂಪಾಯಿ, ನ್ಯುಝೀಲಂಡ ಸಂಖ್ಯೆಯನ್ನು ಲಕ್ಷಿಸಬಹುದು. ೧೦ ವರುಷಗಳ ಮೊದಲು ಹಿಂದುಸ್ಥಾನದಲ್ಲಿ ತಲೆಗೆ ೧೯ ಪಾವ ಹಾಲು ದೊರೆಯುತ್ತಿತ್ತು. ಈಗ ೬ ಪಾವು ಸಿಗುವದರಿಂದ, ಪರಮಾವಧಿಯಾಯಿತು. ಇದರ ಕಾರಣವನ್ನು ಮೆಂಚೆಸ್ಟರದೊಳಗಿನ ವ್ಯಾಪಾರಿಗಳು ಪ್ರಜೆಗಳ ದಾರಿದ್ರ್ಯವೆಂದು ನಮೂದಿಸಿರುವರು. ಹಿಂದುಸ್ಥಾನವು ದೈವಳ್ಳವೆಂದು ಖರಾ ಹೊಡೆಯುವ ನೇಕ ನಾಮದಾರರಿಗೆ ಅವರ ದೇಶಬಾಂಧವರ ಸಾಕ್ಷಿಯ ಹೊರತು ಮತ್ತೇನು ಪುರಾವೆ ಕೊಡಬೇಕು ?

***

ಹೊಲಸು ವ್ಯವಹಾರ.

ಮುಂಬಯಿಯ ವಿಖ್ಯಾತ ಬ್ಯಾರಿಸ್ಟರರಾದ ಮಿ। ಇನ್ನವರಿಟಿಯವರು ಕಳೆದ ತಾರೀಖು ೪ನೇ ಸಾಂಗಳವಾರಕ್ಕೆ ಧಕ್ಕನೆ ಕಾಲವಾದರು; ತಮ್ಮಕೀಲು ಜಾಹೀರಾಗಿದೆ. ಇವರಿಗೆ ತಾವು 'ಗೌರವಾಯುಕ್ತ'ರೆಂದು ಎಂದೂ ಅಭಿಮಾನವಿದ್ದಿಲ್ಲ. ಯಾವಾಗಲೂ ತಮ್ಮ ಕೆಲಸವನ್ನು ಗೃಹಸ್ಥನಿಗನುಗುಣವಾಗಿ ನಡಿಸುತ್ತಿದ್ದರು. ೧೯೦೮ರಲ್ಲಿ ಲೋಕಮಾನ್ಯರ ಖಟ್ಲೆಯಲ್ಲಿ ಮೊದಲು ಮಿ। ಇನ್ವರೆರಿಟಿಯವರು ಸರಕಾರದ ತರ್ಫೆನಿಂದ ಕೆಲಸ ನಡಿಸಿದ್ದರು. ಸರಕಾರದ ತರ್ಫೆನಿಂದ ಕೆಲಸ ನಡಿಸುವಾಗ, ತಪ್ಪು ಸಹ, ಕ್ರಿಸ್ತವಾಸಿಗಳು ಲೋಕಮಾನ್ಯರ ಬಗ್ಗೆ ಕ್ಷುದ್ರ ಉದ್ಗಾರಗಳನ್ನು ತೆಗೆದು, ತಮ್ಮ ನಾಲಿಗೆಯನ್ನು ದೂಷಿಸಿಕೊಳ್ಳಲಿಲ್ಲ. ಬಳಿಕ ಇವರು ತಮ್ಮ ಸರಕಾರಿ ವಕೀಲಿಯ ಚಾರ್ಜನ್ನು ಅನ್ಯರಿಗೆ ವಹಿಸಿ, ವಕೀಲರ ವಾಚನಾಲಯದಲ್ಲಿ ಕೊಂಡರಂತೆ ! ಆಗ ಇವರು ತೆಗೆದ ಉದ್ಗಾರಗಳನ್ನು ಬೆರಿಸ್ಟರರೊಬ್ಬರು 'ಮುಂಬಯಿ ಕ್ರಾನಿಕಲಿನಲ್ಲಿ' ಪ್ರಕಟಿಸಿರುವರು. ಅವರು ಹೇಳುವದೆಂದರೆ:— "ನಾನು ವಾಚನಾಲಯದಲ್ಲಿ ಆಸನಸ್ಥನಾಗಿದ್ದೆ. ಅಷ್ಟರಲ್ಲಿ ಪ್ರಸನ್ನವದನವಿಂದ ಮಿ। ಇನ್ವರೆರಿಟಿಯವರು ತಮ್ಮ ಕೋರ್ಟಿನ ಕೆಲಸ ಮುಗಿಸಿ, ನಾನಿದ್ದೆಡೆಗೆ ಬಂದರು. ನನ್ನನ್ನು ಕರೆದರು. ನಾವಿಬ್ಬರೂ ಮೇಲುಪರಿಗೆಯ ಮೇಲಿನ ಗೆಲರಿಯ ಮೇಲೆ ಹೋದೆವು. ಆಗ, ಮಿ। ಇನ್ವರೆರಿಟಿಯವರು ಒಮ್ಮೆಲೇ ಉದ್ಗರಿಸುವದೆಂದರೆ:— "ಈ ಹೊಲಸು ವ್ಯವಹಾರದಿಂದ ನಾನು ಇಂದಿಗೆ ಮುಕ್ತನಾದದ್ದು ನನಗೆ ಸಂತೋಷಕರವು. ನೋಡಿರಿ! ಇದು ನಿಜವಾಗಿ ಕೆಟ್ಟ ಕೇಸವು. ಆ ಪುರುಷನು (ಲೋಕಮಾನ್ಯರು) ನಿಜವಾಗಿ ಪ್ರಶಂಸಾಪಾತ್ರನು. ನಾನ ಹಿಂದೀಯನಿದ್ದಿದ್ದರೆ, ಅವನಂತೇ ನಾನೂ ಮಾಡುತ್ತಿದ್ದೆನೆಂದು ನನಗೆ ಅನಿಸುತ್ತದೆ. ಆಂಗ್ಲನೆಂದು ಮಾತ್ರ ಇಂಥ ಪುರುಷರು ಈ ದೇಶದಲ್ಲಿ ಕಡಿಮೆಯಾದ ಹಾಗೆ ನಮಗೆ ಸುರಕ್ಷಿತವೆಂದು ತೋರುವದು ಸಹಜವಿದೆ. ನೀವೆಲ್ಲರೂ ಅವನನ್ನು ದ್ರೋಹಿಯೆಂದು ಭಾವಿಸುತ್ತೀರೆಂದು ನನ್ನ ತಿಳುವಳಿಕೆ. ಇದು ಅಹುದಲ್ಲವೇ ? ಆದರೆ, ಇದು ತೀರ ಸ್ವಾಭಾವಿಕವು." ಮಿ। ಇನ್ವರೆರಿಟಿಯವರಲ್ಲಿ ಲೋಕಮಾನ್ಯರ ಬಗ್ಗೆ ಅಂತರ್ಯದಲ್ಲಿ ಎಷ್ಟು ಆದರವಿತ್ತು, ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಆದರಿಂದಲೇ ಅವರು ಲೋಕಮಾನ್ಯರ ಒಪ್ಪಿಗೆಯನ್ನು ಸರಕಾರ ತರ್ಫೆನಿಂದ ನಡಿಸುವದು 'ಹೊಲಸು ವ್ಯವಹಾರ' ವೆಂದು ಸಂಬೋಧಿಸಿದರು.

ನೆಯ್ಗೆಯವರಿಗೆ ಸುಸಮಯ.

ನಮ್ಮಲ್ಲಿ ನೆಯ್ಗೆಗೆ ಸಂಬಂಧಪಟ್ಟ ನೂಲಿನ ಬಿದಿಗೆ (Cotton healds) ತಂತಿ ಬಿದಿಗಳು, (Wire healds) ಉಕ್ಕಿನ ಹಟ್ಟುಗಳು, (Steel reelds) ಸಾದಾ ಮತ್ತು ಗಾಲಿ ಲಾಳಿಗಳು, (Plain & roller shuttles) ಪಿಕ್ಕರುಗಳು (Pickers) ಎಳೆಗಳನ್ನು ತೆಗೆದುಕೊಳ್ಳುವ ಕೊಂಡಿಗಳು (Reed hooks) ಮತ್ತು ಗಣಿಕೆಗಳು (Pirns) ಇಲ್ಲದೆ, ಇನ್ನೂ ಬೇಕಾದ ಸಾಮಾನುಗಳು ಚಿಲ್ಲರೆಯಾಗಲಿ, ಒಟ್ಟಿಗೆಯಾಗಲಿ ಸರಿಯಾದ ಬೆಲೆಗೆ ದೊರೆಯುತ್ತವೆ.

ಕ್ರಯದ ಪಟ್ಟಿ ಬೇಕಾದಲ್ಲಿ ಇಂಗ್ಲೀಷಿನಲ್ಲಿ ಬರೆಯಿರಿ.

Indo-British

Trading Bureau.

15-19 Ghoga Street, Fort,

BOMBAY.

Twelve Tissue Remedies.

ಈರಾರು ಲವಣಗಳು

ಕೆಳಗೆ ಬರೆದ ಕ್ರಯಕ್ಕೆ ಸಿಗುವವು

ನಂಬರ ೩ರಿಂದ ೧೨ರ ವರೆಗೆ

೧ ಔನ್ಸ ಬಾಟ್ಲಿಗೆ ಕ್ರಯ ರೂ. ೦-೧೦-೦.

" " " ೨ ಔನ್ಸ ಬಾಟ್ಲಿಗೆ " ರೂ. ೧-೦-೦.

" " " ೪ ಔನ್ಸ ಬಾಟ್ಲಿಗೆ " ರೂ. ೧-೧೨-೦.

ಇವಲ್ಲದೆ, ಗಜಕರ್ಣ, ಕಜ್ಜು, ತಲೆಹೊಡತ, ಚಳಿಜ್ವರ, ಚಾತುರ್ಥಿಜ್ವರ, ಜ್ವರಗಡ್ಡೆ ಮೊದಲಾದವುಗಳಿಗೆ ಅತ್ಯುತ್ತಮ ಔಷಧಗಳು ನಮ್ಮಲ್ಲಿ ದೊರೆಯುವವು. ವಿಶೇಷ ಮಾಹಿತಿ ಪತ್ರದ್ವಾರ ಯಾ ಸಮಕ್ಷ.

ಪತ್ತೆ:— ಎನ್. ಈ. ವರುಗೀಸ್,

ಮಿಶನ್ ಮಾಸ್ತರ,

ಹಳದೀಪುರ. (ಉ. ಕಾನಡಾ)

कारवारांत आयुर्वेदिक पाठविद्यालय

उघडण्यांत येणार.

सन १९२४ च्या जानेवारी महिन्यापासून कारवार येथें वरील पाठशाळा उघडण्यांत येणार आहे. आयुर्वेदांतील प्रत्येक विषय प्रमाणपूर्वक व सशास्त्र शिकविण्यांत येईल. पूर्ण आयुर्वेदिक शिक्षण तीन वर्षांत शिकविलें जाईल. विद्यार्थी निदान मराठी पाच इयत्ता शिकलेला व भांडारकरकृत, संस्कृत तीन पुस्तकें पढलेला असावा. अथवा आयुर्वेद औषध पुस्तकांतील श्लोकांचा अर्थ समजून घेण्या इतका संस्कृत ज्ञान असलेला असावा. त्याचे वय १८ ते १९ वर्षांपर्यंत व प्रकृति सदृढ असावी. सदर पाठशाळेचे वर्ग १ जानेवारी १९२४ पासून सुरू होतील. फीचे दर १ ल्या वर्षास दरमहा ६ रुपये, दुसऱ्यास दरमहा

१० रुपये व तिसऱ्या वर्षास दरमहा १२ रुपये प्रमाणे ठेविली आहे पहिल्या वर्षांत फक्त २५ विद्यार्थीच निवडण्यात येतील विद्यार्थ्यांनीं आपले अर्ज ता १५ डिसेंबर च्या आत पाठविले पाहिजेत अर्जासोबत प्रवेश फीचे ३ रुपये पाठविण्यात आले पा हिजेत, ज्याची निवड होणार नाहीं त्याची फी परत करण्यात येईल पत्रव्यवहार मरा ठीत अगर कानडी मध्ये करावा

प्रत्येक वर्षांत शिकविले जाणार विषय खालील प्रमाणे —

पहिलें वर्ष

१ प्रत्येक वनस्पतीचे गुण धर्मपरिचय वर्णन सख्या आणि प्रत्येक आपधाने अनेक भाषांतील नामाहि वगैरे

२ निदान शास्त्र त्यात प्रत्येक रोगाचें निदान (हेतु) प्रमाण आणि [illegible] (परिक्षा करण्यास शिकविले जाईल)

३. सदर निदान [illegible] आलेले विषय औषधालयात समक्ष प्रयोग करून दाखविले जातील

दुसरें वर्ष

१ प्रत्येक [illegible]

[illegible] शिकविले जाईल

२ प्रत्येक [illegible] विचार शिकविले जाईल

३ प्रत्येक [illegible] शिकविले जातील

तिसरें वर्ष

१ आर्य शरीर शास्त्र [illegible] मज्जातंतु वाहिनी [illegible] चक्रादि प्रत्येक भागाला [illegible] च्या क्रिया प्रत्येक भागाचा [illegible] र्णे प्रत्येक भाग चित्र रूपाने [illegible] व तेच विषय त्याना वर्णन करून स्पष्ट करून देणे वगैरे

२ प्रत्येक रोगावरील हिमफाटकाच्या पासून रसायुक्त यंत्र तयार करण्याचे प्रयोग औषधालयात समक्ष करून दाखविले जातील

३ रसायने व कुपित रसायन याची संपूर्ण माहिती आणि प्रत्येक विषया विषयी संशयनिवृत्ति स्पष्ट रितीने करण्यात येईल.

विशेष माहिती— खालील पत्त्यावर पत्रद्वारें अगर समक्ष मिळेल

वि सू उमेदवाराकरिता राहण्याची सोय करून देता येईल

शिकविणारे— वैद्य जे एफ फर्नांडिस, आर्यौषधालय, कारवार

पत्ता— व्यवस्थापक, आयुर्वेदिक पाठविद्यालय कारवार

ಫಕ್ತ ಒಂದು ತಿಂಗಳ ಪೂರ್ತ ಸವಲತ್ತು.

ತಿಂಗಳಿಗೆ ರೂಪಾಯಿ ೧೦೦ರಿಂದ ೫೦೦ರ ವರೆಗೆ ಗಳಿಸಿರಿ.

ಬೇಕಾದಲ್ಲಿ ಸುಲಭವಾಗಿ ಗಳಿಸಿರಿ.

ರೂಪಾಯಿ ೭ ೮ ೦ ಖರ್ಚುಮಾಡಿರಿ ಮತ್ತು ಸ್ವತಂತ್ರರಾಗಿರಿ.

[illegible] ಅವಶ್ಯವಿದ್ದ ವಸ್ತುವು ಅವನು ಬೇಕಾದರೆ, [illegible] ಹಳ್ಳಿಗನಿರಲಿ ಪಟ್ಟಣಿಗನಿರಲಿ, ಪಾಶ್ಚಾತ್ಯರ ಮಾದರಿಯ ಸಬಕಾರ [illegible] ಅತಿ ಉತ್ತಮವೆಂದು ಖ್ಯಾತಿಹೊಂದಿದೆ ಈ ಕ್ರಮದಿಂದ [illegible] ಹತ್ತುವ ಯಾ ಆರಿವೆಗೆ ಹಾಕುವ, ಪರಿಮಳದ ಹಾಗು ಬಣ್ಣ [illegible] ಯಾರೂ ತಯಾರಿಸಬಲ್ಲನು. **ಈ ಕ್ರಮಕ್ಕೆ ಬೆಂಕಿಯ ಅವಶ್ಯಕತೆಯಿರುವದಿಲ್ಲ.** ನಮ್ಮ ವಿದ್ಯಾರ್ಥಿಗಳು ಯತ್ನಮಾಡುವಾಗ ನಾವು ಬಲು [illegible] ಅವರಿಗೆ ಬೇಕಾದ ಮಾಹಿತಿಯನ್ನು ಪೂರೈಸುತ್ತೇವೆ ಈ [illegible] ಕಳುಹಿಸಿರುವರು ಈ ಪೂರ್ಣ ಕ್ರಮವನ್ನು [illegible] ಕಳಿಸವೆವು ಈ ಕ್ರಮ [illegible] ಮುಂದಿಗಳಿಗೆ [illegible]

[illegible] ಇಂದಿನ ದರದ ಪತ್ತೆಗೆ ಕೂಡಲೆ ಬರೆಕೊಳ್ಳತಕ್ಕದ್ದು.

International Business Corporation,

Dept (F) [illegible] *Goualiguda*, **Hyderabad.** (*Dn*)



ಅಮೃತಾಂಜನ.

ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳ ವಾಸಿ, ರಾಮಬಾಣವಂತಾಗಿರುವದು ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ [illegible] ವ್ಯಾಧಿಗಳಮೇಲೆ ಇದು ಗುಣಕಾರಿಯೆಂದು ಅರಿಯುವವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು ಕಿಮ್ಮತು ೧೦ ಆಣೆ [illegible] ಬೇರೆ

ಅಮೃತಾಂಜನ ಡಿಪೊ, ಫೋರ್ಟ, ಮುಂಬಯಿ.

ಫಲಪ್ರದ ನಾಗುವಳಿಯಲ್ಲಿಯೇ ಸಂಪತ್ತಿಯು



ಅಡಕವಾಗಿರುವದು.

ನಮ್ಮ ಕಾರಖಾನೆಯಲ್ಲಿ ತಯಾರಾಗುವ ಸುಧಾರಿಸಿದ ಕಬ್ಬಿಣ ನೇಗಿಲಗಳೂ, ಕಬ್ಬಿಣ ಗಾಣಗಳೂ ಇವೇ ಮುಂತಾದ ವ್ಯವಸಾಯದ

[illegible]ಟ್ಟಗಳನ್ನು ತರಿಸಿಕೊಂಡು ನಿಮ್ಮ ಒಕ್ಕಲತನವನ್ನು ಬೆಳಿಸಿಕೊಳ್ಳಿ ೩೫ ವರ್ಷಗಳ ಅನುಭವದಿಂದ ಈ ಸಾಮಾನುಗಳನ್ನ ತಯಾರ ಮಾಡಿರುತ್ತೇವೆ ೮೦,೦೦೦ ರೈತರು ಕೊಡುತ್ತಾರೆ ಇಂದೇ ಪತ್ರ ಬರೆದು [illegible] ಎಂಬ ಕ್ಯಾಟಲಾಗು ತರಿಸಿಕೊಳ್ಳಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ)

Printed and Publis[illegible] by Krishnarao Kesh[illegible] Shen[illegible] at [illegible] of K[illegible] Press Kumta

Reg. No. B.1720 | Thursday, 27th December, 1923.

ವರ್ಷ ೮. | ಸಂಚಿಕೆ ೧೦.

ಕಾನಡಾವೃತ್ತ.

THE KANARA NEWS.

ಪತ್ರದ ವರ್ಗಣಿ

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.

ಮನೆಯಾರ್ಡರಿಯಿಂದ ರೂ. 3-0-0.

ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0

ಬಿಡಿ ಸಂಚಿಕೆಗೆ 0-1-0.

ಜಾಹಿರಾತುಗಳ ದರ

ಕನ್ನಡ, ಇಂಗ್ಲಿಷ ಪ್ರಾಕಾಶ್ಯದ (೧೫ ಎಮ್ ಅಗಲ) ೮ ಸಾಲುಗಳವರೆಗೆ ರೂ 1-0. ಆ ನಂತರ ಪ್ರತಿಸಾಲಿಗೆ 0-2-0. ಹೆಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟುಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

स्वपरहितकर्ता श्रेयसां याति लोके ... ।
इति महति विरोधे वर्तमाने समाने ... कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

-(ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖ ೨೭ ಮಾಹೆ ಡಿಶಂಬರ ಸನ್ ೧೯೨೩ ನೇ ಇಸವಿ)-

हिंदुस्थानातील रहिवाशांस ज्याप्रमाणें हिंदुस्थानची हवा त्याप्रमाणेंच हें औषध हिंदुस्थानातील लोकांस ज्यास्त फायदेशीर आहे

द्राक्षासव— { दीड रत्तलची किंमत २ रुपये,

रामबाण औषधें —

सर्दि घालविणारें,
भूक वाढविणारें,
श्वोच्छ्वास साफ करणारें,
झोंप आणणारें,
शक्ति देणारें,
तेजस्वीपणा आणणारें,

— विश्वास रोचकर

क्याटलाग मागवा,

झंडु फार्मास्युटिकल वर्क्स लिमिटेड,
मुंबई नं. १३

1924 ನೇ ಇಸವಿಯ
ಸ್ವರಾಜ್ಯ ಡ್ಯಾರಿ.

ಸಂಪಾದಕ:- ಡಿ. ಕೆ. ಭಾರದ್ವಾಜ, ವಿದ್ಯಾಭೂಷಣ. ರಾಜಕೀಯ, ಆರ್ಥಿಕ, ವ್ಯಾಪಾರ, ಸ್ವದೇಶಿ, ಶೃಂಗಾರಿಕ ಮೊದಲಾದ ವಿಷಯಗಳ ಹೊಸ ಸಂಗ್ರಹ! ದೇಶಭಕ್ತರ ನವೀನ ಭಾವಚಿತ್ರಗಳು! ಪ್ರತಿಯೊಬ್ಬರೂ ಅಗತ್ಯವಾಗಿ ಉಪಯೋಗಿಸತಕ್ಕದ್ದು.

ನಮ್ಮಲ್ಲಿ ಯಾವತ್ತೂ ಪೇಟೆಂಟ್ ವಿವಿಧ, ಸ್ಟೇಶನರಿ ವಗೈರೆ ಹೊಸ ಸ್ಟೊಕ ಬಂದಿದೆ ತ್ವರೆಮಾಡಿರಿ!

ದಿ. ನ್ಯೂ. ಎಂಪೋರಿಯಮ್,
ಜನರಲ್ ಮರ್ಚಂಟ್ಸ್. ಹೊನ್ನಾವರ

ಡಾ|| ನಾಡಕರ್ಣಿಯವರ

ಸುಧಾಂಜನ.

ಅಂಜನುಗಳಿಗೆಲ್ಲ ಅರಸು.

ತಲೆಶೂಲಿ, ವಾತವೇದನೆ, ಕೆಮ್ಮು, ಹಲ್ಲುನೋವು ಇತ್ಯಾದಿಗಳಿಗೆ ಶೀಘ್ರ ಗುಣಕಾರಿ ಮದ್ದು ಬೆಲೆ ೭ ಆಣೆ ಮಾತ್ರ ವ್ಯಾಪಾರಿಗಳಿಗೆ ವಿಶೇಷ ಸವಲತು ಹೆಚ್ಚಿನ ಮಾಹಿತಿ ಏಜಂಟರಿಂದ.

ಏಜಂಟ್ಸ್ — ನಾಗರ್ಕಟ್ಟೆ ಬ್ರದರ್ಸ್,
ಸುಧಾಂಜನ ಡಿಪೋ,
ಕುಮಟಾ. (ಜಿಲ್ಲಾ ಕಾರವಾರ)

ಶುದ್ಧ ರೋಮದ ಧಾವಳಿಗಳು.

4 ಮೊಳ ಉದ್ದ	1½ ಮೊಳ ಅಗಲ	ರೂ	1½ ರಿಂದ 2 ವರೆಗೆ					
5	,,	,,	1½	,,	,,	,,	1 10-0 -5	,,
6	,,	,,	1½	,,	,,	,,	2½ —6	,,
8	,,	,,	2	,,	,,	,,	3½ —10	,,
12	,,	,,	2½	,,	,,	,,	6 —12	,,
16	,,	,,	2½	,,	,,	,,	9 —16	,,

ಅವುಗಳಲ್ಲದೆ ಶುದ್ಧ ಖದ್ದರ್ ರೇಶಿಮೆ ಮಡಿಗಳು, ಸಾರ್ಮೂಡಿಗಳು, ಶಾಲು ಪೀತಾಂಬರಗಳು, ಕಾಶ್ಮೀರ್ ಶಾಲುಗಳು, ರುದ್ರಾಕ್ಷಿ, ಪಾಕೆಟ, ಶಾಳ, ಪನ್ನೀರ ದಾನಿ, ಆಟದ ಸಾಮಾನುಗಳು, ದೇವರ ಮತ್ತು ಗಾಂಧಿ ಮುಂತಾದವರ ಪಟಗಳಿರುವ ಉಂಗುರಗಳು ಮತ್ತು ಇನ್ನೂ ಅನೇಕ ಸಾಮಾನುಗಳು ಯೋಗ್ಯ ಕ್ರಯಕ್ಕೆ ದೊರೆಯುವವು ಕ್ಯಾಟಲಾಗ್ ಇನಾಂ.

ವಿಳಾಸ — ಎಸ್. ಯು. ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಆನಂದ ಮಂದಿರ.

ಮಾರ್ಮುಗೋವಾ ಹಾರ್ಬರ.
ಉತ್ತಮ ಭೋಜನ-ಉಪಹಾರದ ವ್ಯವಸ್ಥೆ.

ಈ ಹೊಟೆಲು ಮಾರ್ಮುಗೋವಾ ಹಾರ್ಬರದಲ್ಲಿ ಕೇವಲ ಪ್ರವಾಸಿಕರ ಅನುಕೂಲಕ್ಕಾಗಿ, ನೂತನವಾಗಿ ಸ್ಥಾಪಿಸಲ್ಪಟ್ಟಿದೆ ಇದು ಹಾರ್ಬರದ ನೆರೆಯ ದಿನ್ನೆಯ ಮೇಲೆ ಭವ್ಯ ಮಂದಿರದಲ್ಲಿದೆ ಉತ್ತಮ ಭೋಜನ-ಉಪಹಾರವು ದೊರೆಯುವದು ಪ್ರವಾಸಿಕರೆಲ್ಲರೂ ಇದರ ಉಪಯೋಗ ಮಾಡಿಕೊಳ್ಳಬೇಕಾಗಿ ವಿನಂತಿ

ಮೆನೇಜರ.

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಪತ್ರ ಹಿತ ಕೆಳಗಿನ ಪತ್ತೆಗೆ ಮತ್ತು ಶೀಘ್ರ ತಿಳಕೊಳ್ಳಬಹುದು.

ಪುರುಷೋತ್ತಮ ಲಕ್ಷುಮಯ್ಯ ಗ್ಯಾಸಭಾಗ ಹೆಗಡೇಕರ, ದುಕಾನ, ಕುಮಟಾ.

ಆತ್ಮೋದ್ಧಾರ ಗ್ರಂಥಮಾಲೆ.

ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ ವಿಷಯಗಳನ್ನೂ, ಚರಿತ್ರೆ, ಕಥೆ, ಕಾದಂಬರಿಗಳನ್ನೂ, ಪರಭಾಷೆಗಳಲ್ಲಿಯ ಉತ್ತಮೋತ್ತಮ ಪುಸ್ತಕಗಳ ಭಾಷಾಂತರವನ್ನೂ ಪ್ರಸಿದ್ಧಿಸುವ ಉತ್ತಮ ಪ್ರತಿಯಲ್ಲ ದೊರೆಯ ಗ್ರಂಥಮಾಲೆ. ವರ್ಷಕ್ಕೆ ೫ ಆಣೆ ಬೆಲೆಯ ೬ ಪುಸ್ತಕಗಳು ಹೊರಡುತ್ತವೆ

ಈ ವರೆಗೆ ಪ್ರಕಟವಾದ ಪುಸ್ತಕಗಳು.

(೧-೨) ಗ್ರೀಸ ದೇಶದ ಗಾಂಧಿ, (ಸಾಕ್ರೆಟೀಸ) (೩) ಸ್ವಾತಂತ್ರ್ಯಸಾಧನ (೪) ಗುರು-ಹಿರಿಯರೂ, ಬಂಧು-ಭಗಿನಿಯರೂ, (೫) ರಾಷ್ಟ್ರೀಯ ಶಿಕ್ಷಣ, (೬) ಸದ್ಗುಣಮಂದಿರ (ಭಾಗ ೧) (೭) ಸ್ವರಾಜ್ಯಧರ್ಮ (ಅನಾಮಿಕ ಪುಷ್ಪ) ಇವಿಷ್ಟು ಪ್ರಕಟವಾಗಿದ್ದು, ೫ ಆಣೆಗೆ ಒಂದರಂತೆ ದೊರೆಯುತ್ತವೆ. ವರ್ಗಣೀದಾರರಿಗೆ ಹಿಂದಿನ ಜೇಕಾದ ಪುಸ್ತಕಗಳು ೪ ಆಣೆಗೆ ಒಂದರಂತೆ ದೊರೆಯುವವು. ೬ ಪುಸ್ತಕಗಳಿಗೆ ಕೂಡಿ ೧|| ರೂಪಾಯಿ ಮಾತ್ರ. ಅಂಚೆವೆಚ್ಚ ಬೇರೆ. ದ್ವಿತೀಯ ವರ್ಷ ಪ್ರಾರಂಭ, ಅನುಕ್ರಮವಾಗಿ ಮಾರ್ಚ, ಮೇ, ಜುಲೈ, ಸಪ್ಟಂಬರ, ನವಂಬರ, ಜನವರಿ ೧೮ ನೇ ತಾರೀಖಿಗೆ ಒಂದೊಂದು ಪುಷ್ಪ ಹೊರಡುವದು, ವಾ. ವ ಅಂಚೆವೆಚ್ಚ ಸೇರಿ ೧-೧೨-೦ ಮಾತ್ರ.

ವಾ. ಅ. ಹೊದ್ಕೆ
ರಾಷ್ಟ್ರೀಯ ಶಾಲಾಧ್ಯಾಪಕ ಶಿರಸಿ.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. (ರಿಜಿಸ್ಟರ್ಡ

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶ ವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಅಂತಹ ಕೇಶರಾಶಿಯನ್ನು ಸ್ತ್ರೀ ರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ.

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ ಈ ಆಯಿಲ್ ತೊಡಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ಶಮನವಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಅದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಅದರೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು

ಕೀಳು ತರದ ಎಣ್ಣೆಗಳನ್ನು ಕೊಂಡು ಕೊಂಡು ತನ್ನ ಹಣವನ್ನೂ ತಲೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ " ಕಾಮಿನಿಯಾ ಆಯಿಲ್" ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ " ಸರ್ಟಿಫಿಕೇಟ್ ಆಫ್ ಮೆರಿಟ್ " ಅಥವಾ ಯೋಗ್ಯತಾಪತ್ರವೂ, ಇತರ ಅನೇಕ ಪುರಸ್ಕಾರ ಉತ್ತಮೋತ್ತಮವಾದ ಮಾನಪತ್ರಗಳೂ ದೊರತಿವೆ.

ಕ್ರಯ — ಸೀಸೆಗೆ ರೂಪಾಯಿ 1 0 0, ಸೀಸೆ 3ಕ್ಕೆ ರೂಪಾಯಿ 2-10-0, ವಿಪಿ ಖರ್ಚ 0 14 0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ, ಕೋಮಲ ಪರಿಮಳ ಮತ್ತು ಅತ್ಯುತ್ತಮವು ಚನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ್ಧ್ಯಾಸಿದ ಮಾಡುವ ಅದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವೆ ಒಮ್ಮೆ ಒಂದು ಸಲ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯ ಆನಂದವಾಗುವುದು ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಕಡೆಗೆ ಸೆಳೆಕೊಳ್ಳುವದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0–8–0, 1 ಡ್ರಾಮಿನ (ಮೀಡಿಯಂ) ಸೀಸೆ 1 ಕ್ಕೆ 0–12 0 ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2–0–0 ಅಂಚೆಯ ವೆಚ್ಚ ಬೇರೆ 0–4–0

ಒಟ್ಟೋದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ 0 12 0.

Address:- **The Anglo Indian Drug & Chemical Co,**
16, Market, **BOMBAY. 2.**

ಏನೂ ಉಪದ್ರವವಾಗದೆ
ಕೂದಲು ತೆಗೆಯುವ

ಬಾದಶಾಹೀ ಸಾಬೂನು.

ಈ ಸಬುಕಾರವನ್ನು ಬೇಕಾದಲ್ಲಿ ಹಚ್ಚಿರಿ, ಅಲ್ಲಿನ ಕೂದಲುಗಳು, ಚರ್ಮವನ್ನು ಯಾವದೇ ರೀತಿಯಿಂದ ಕೆಡಿಸಿದೆ, ಅತ್ಯಂತ ಸಫಾಯಿಯಿಂದ ಉದುರಿಹೋಗುತ್ತವೆ ಚರ್ಮವು ಮೃದುವಾಗುತ್ತದೆ ೩ ಬಿಲ್ಲೆಗಳ ಪೆಟ್ಟಿಗೆ ೧ ರ ಬೆಲೆ ಒರೇ ೧ ರೂಪಾಯಿ ಟಪಾಲ ಹಾಸಲು ೪ ಆಣೆ ಒಂಟಿ ಬಿಲ್ಲೆಯನ್ನು ಕಳಿಸಲಾಗುವದಿಲ್ಲ ೩-೩ ಬಿಲ್ಲೆಗಳುಳ್ಳ ೪ ಪೆಟ್ಟಿಗೆಗಳ ಕಿಮ್ಮತ್ತು ರೂಪಾಯಿ ೨ ಅಂಚೆ ಹಾಸಲು ಮಾಫಿ ಬಾದಶಾಹೀ ಸಾಬೂನಿನ ಉತ್ಕೃಷ್ಟತೆಯ ಬಗ್ಗೆ ಕಲಕತ್ತಾ, ಕರಾಚಿಗಳ ಪ್ರದರ್ಶನಗಳಲ್ಲಿ ಸುವರ್ಣ ಪದಕಗಳ ಇನಾಮಾಗಿ ದೊರೆತಿವೆ

ನಕಲೀ ವಸ್ತುವಿನ ಬಗ್ಗೆ ಎಚ್ಚರಿಕೆ, ಮೋಸ ಹೋಗಬೇಡಿರಿ.

ರಜಿಸ್ಟರ ನಂ ೫೨೯, ತಪಾಸ ಮಾಡಿಕೊಂಡು ಖರೇದಿ ಮಾಡಿರಿ. ಅಲ್ಲಲ್ಲಿ ಏಜಂಟರು ಬೇಕು

ಸಿ. ಸಿ. ಮಹಾಜನ ಎಂಡ್ ಕಂಪನಿ,
ಮುಂಬಯಿ ನಂ. ೨

ಟೀಪು — ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಯಾ ಮರಾಠಿಯಲ್ಲಿ.

ಸರಸ್ವತಿ.

ಉತ್ತಮವರ್ಗದ ಶ್ರೇಷ್ಠವಾದ ಮಾಸಪತ್ರಿಕೆ.

ಈ ಪತ್ರಿಕೆಯಲ್ಲಿ ಸಾಮಾಜಿಕ, ಸ್ತ್ರೀ ಇತಿಹಾಸಿಕ ವಿಷಯಗಳಿಗೆ ಸಂಬಂಧಪಟ್ಟ ಅತ್ಯುತ್ತಮವಾದ ಲೇಖನಗಳೂ, ಸ್ವಾರಸ್ಯ ಮತ್ತು ಮನೋರಂಜಕವಾದ ನಾಟಕ ಮತ್ತು ಕಾದಂಬರಿಗಳೂ, ಬಾಲಬಾಲಿಕೆಯರಿಗೂ ಮತ್ತು ಸ್ತ್ರೀಯರಿಗೂ ತಿಳಿಯುವಂತಹ ಉತ್ತಮ ಶೈಲಿಯಲ್ಲಿ ಪ್ರಕಟಿಸಲ್ಪಡುವವು ನೂತನ ಚಂದಾದಾರರಿಗೆ ಶಾರದಾ " ಗ್ರಂಥಮಾಲೆ " ಯಲ್ಲಿ ಈ ವರೆಗೆ ಪ್ರಕಟಿಸಲ್ಪಟ್ಟಿರುವ " ಪ್ರಿಯಂವದೆ ನಿರ್ಮಲೆ, ನಿರ್ಭಾಗ್ಯವನಿತೆ, ಸ್ನೇಹಲತೆ, ಹಿಂದೂ ಭಾಗ್ಯೋದಯ, ಇತ್ಯಾದಿ ಗ್ರಂಥಗಳಲ್ಲೊಂದು ಬಹುಮಾನವಾಗಿ ಕೊಡುವದಲ್ಲದೆ ರೂಪಾಯಿ ೩ ಬೆಲೆ ಬಾಳತಕ್ಕ ಶಾರದಾ ಗ್ರಂಥಮಾಲೆಯ ಪ್ರಕಟನೆಗಳೆಲ್ಲವನ್ನೂ ವಿ ಪಿ ಹಾಸಲಿಲ್ಲದೆ ರೂಪಾಯಿ ೨ ೧೨-೦ಕ್ಕೆ ಕೊಡಲ್ಪಡುವದು. ಚಂದಾದಾರರಾಗತಕ್ಕವರು ತಮ್ಮ ವಿಳಾಸವನ್ನು ತಿಳಿಸಿ ಚಂದಾಹಣವನ್ನು ಮನಿಯಾರ್ಡರ್ ದ ಮೂಲಕ ಕಳುಹಿಸಿಯಾಗಲಿ, ವಿ ಪಿ ಮೂಲಕವಾಗಿ ತರಿಸಿಕೊಳ್ಳಬಹುದು ವಾರ್ಷಿಕ ಚಂದಾ ರೂ ೩-೪-೦ ಮಾತ್ರ.

ವಿಳಾಸ— **ಸಂಪಾದಕಿ " ಸರಸ್ವತಿ."**
Post Box 57.
ಚಾಮರಾಜಪೇಟೆ ಬೆಂಗಳೂರು ಸಿಟಿ

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.

೧. ರಾಗದ ಕೈಪೆಟ್ಟಿಗೆ ಕಿಂ. ೩೦, ೪೦, ೪೫, ೫೦, ...
೨ „ ಕಾಲು ಪೆಟಿಗೆ, ಕಿಂ. ೬೫, ೭೫, ೧೪೦, ೧೬೦
೩ ತಬಲೆ ಜೋಡಿ ಕಿಂ. ೧೩, ೧೫, ೧೮ ೨೦ ...
೪. ಹಾರ್ಮೋನಿಯಮ ಗ್ಯಾಡ ಕಿಂ. ೧೪, ತಬಲೆ ಗ್ಯಾಡ ಕಿಂ. ೧೨ ಆ.

ವಿಶೇಷ ಮಾಹಿತಿ ಬಗ್ಗೆ ನಮ್ಮ ಕ್ಯಾಟಲಾಗ ಪುಕ್ಕಟೆ ಕೊಡುವೆವು.

ಪತ್ರವ್ಯವಹಾರ ಮರಾಠಿಯಿಂದ ಇದ್ದರೆ ಅನುಗ್ರಹವಿಟ್ಟು ಮಾಡಬೇಕು.

ಪತ್ತೆ – ಗೋಪಾಳ ಸಖಾರಾಮ ಮತ್ತು
ಕಂಪನಿ, ನಂ ೨೬೨
ಕಾಳಬಾದೇವಿ ರೋಡ, ಮುಂಬಯಿ.

ಓಡುತ್ತಿರುವ ಲೋಕ.

ಲೇಖಕರು:— ಮೆಸರ್ಸ ಎ. ಎಮ್. ಬೆರ್ನಾರ್ಡ ಮತ್ತು ಜೋಸೆಫ್, ಬೆಂಗಳೂರು.

(ಕಳೆದ ಸಂಚಿಕೆಯಿಂದ ಸಮಾಪ್ತ.)

ಜ್ವರದೊಂದಿಗೆ ಕೆಮ್ಮಲು ಬರುವ ವ್ಯಾಧಿಯನ್ನು ನಮ್ಮವರು ಲೇಕ್ಕೀ ರೋಗವೆಂದು ಕರೆಯುತ್ತಾರೆ. ಇಂಗ್ಲೀಷಿನಲ್ಲಿ ನಿಮೋನಿಯಾ (Pnewmonia) ಎನ್ನುವರು. ಈ ವ್ಯಾಧಿಯು ಶ್ವಾಸಕೋಶಕ್ಕೆ ತಗಲುವದು. ಶ್ವಾಸಕೋಶದಲ್ಲಿ ಒಂದು ತರದ ಕ್ರಿಮಿಗಳು ವೃದ್ಧಿಯಾಗುವದೇ ಇದಕ್ಕೆ ಕಾರಣವೆನ್ನುವರು. ಬಹು ಸ್ವಲ್ಪಕಾಲಕ್ಕೆ ಹಿಂದೆ ಅಮೇರಿಕಾದಲ್ಲಿ ಈ ವ್ಯಾಧಿಯು ಮಿತಿಮೀರಿ ತಗಲಿದ ಕೆಲವು ವ್ಯಾಧಿಷ್ಟರಿಗೆ ವಿದ್ಯುಚ್ಛಕ್ತಿ ಪ್ರಯೋಗ ಮಾಡಿ ಗುಣಪಡಿಸಿರುತ್ತಾರೆ. ವಿದ್ಯುತ್ಕಿರಣಗಳನ್ನು ಶ್ವಾಸಕೋಶದಲ್ಲಿ ಕ್ರಿಮಿಗಳಿರುವ ಸ್ಥಳಕ್ಕೆ ಮಾತ್ರ ಬಿಡುವರು. ಅದರಿಂದ ಆ ಸ್ಥಳದಲ್ಲಿ ಮಾತ್ರ ಉಷ್ಣವು ಹೆಚ್ಚಾಗುವದು. ಹೆಚ್ಚಿದ ಉಷ್ಣಕ್ಕೆ ಕ್ರಿಮಿಗಳು ನಾಶವಾಗುತ್ತವೆ. ಅಧಿಕವಾಗುವ ಉಷ್ಣವು ವ್ಯಾಧಿಷ್ಟಗೆ ಹಾಯಾಗಿರುವದೇ ಹೊರತು ಹಿಂಸೆಯನ್ನು ಮಾಡುವದಿಲ್ಲ. ಶ್ವಾಸಕೋಶದ ಉಷ್ಣವನ್ನು ಹೆಚ್ಚಿಸುವದಕ್ಕೆ ಇತರ ಔಷಧವನ್ನು ಮಾಡುತ್ತಿದ್ದರು. ಅದರಿಂದ ಉಷ್ಣವು ದೇಹದ ಮೇಲಿನಿಂದ ಒಳಕ್ಕೆ ಇಳಿಯಬೇಕಾಗಿತ್ತು. ವಿದ್ಯುಚ್ಛಕ್ತಿಯಿಂದ ಬೇಕಾದ ಸ್ಥಳದಲ್ಲಿ ಮಾತ್ರ ಉಷ್ಣವು ಉತ್ಪತ್ತಿಯಾಗುತ್ತದೆ.

ವಜ್ರವನ್ನು ದೇದೀಪ್ಯಮಾನವಾದ (ಬಹು ಪ್ರಕಾಶಮಾನವಾದ) ವಿದ್ಯುತ್ತಿನ ಬೆಳಕಿಗೊಳಪಡಿಸಿದರೆ, ಅದು ಸ್ವಂತವಾಗಿ ಬೆಳಕನ್ನು ಕೊಡಲಾರಂಭಿಸುತ್ತದೆ. ಹೀಗೆ ಕತ್ತಲೆಯಲ್ಲಿ ಹೊಳೆಯುವ ರತ್ನವನ್ನಲ್ಲವೆ "ಜೀವರತ್ನ" ವೆನ್ನುವರು? ಹಾಗಾದರೆ ಇದು ಕೃತಕ ಜೀವರತ್ನವಾಗುವದು.

ಹಣ್ಣು ಹಣ್ಣು ಮುದುಕನೊಬ್ಬನ ಭಾವಚಿತ್ರವನ್ನು ತೆಗೆದು, ಅದರ ಸಹಾಯದಿಂದ ಅವನು ಕೌಮಾರ, ಬಾಲ್ಯದೆಶೆಗಳಲ್ಲಿದ್ದಂತೆ ಸಹಜವಾದ ಭಾವಚಿತ್ರಗಳನ್ನು ತೆಗೆಯಲೂ ಬಹುದು!

ನಮಗೆ ಸಾಧಾರಣವಾಗಿ ತಿಳಿದಿರುವ ಲೋಹಗಳ ಸಂಖ್ಯೆಯು ಬಹು ಕಡಿಮೆಯಾಗಿರುವದು. ಹೊಸಹೊಸದಾಗಿ ಕಂಡುಹಿಡಿದಿರುವ ಲೋಹಗಳು ಅನೇಕವಾಗಿಯೂ ವಿಚಿತ್ರವಾದ ಗುಣಗಳುಳ್ಳವುಗಳಾಗಿಯೂ ಇವೆ. ಸಿಲೇನಿಯಂ (Selenium) ಎಂಬ ಲೋಹದ ಮೇಲೆ ಬೆಳಕು ಬಿದ್ದರೆ, ವಿದ್ಯುತ್ತನ್ನು ಬಹು ಸುಲಭವಾಗಿ ಹರಿಯಬಿಡುವದು. ಕತ್ತಲೆಯಾದರೆ ವಿದ್ಯುತ್ತನ್ನು ಅಷ್ಟು ಚನ್ನಾಗಿ ಹರಿಯಬಿಡುವದಿಲ್ಲ. ಇದರ ಸಹಾಯದಿಂದ ಮೊದಲು ಮೊದಲು ತಂತಿಯ ಮೂಲಕ ವಿದ್ಯುತ್ತಿನ ಸಹಾಯದಿಂದ ಭಾವಚಿತ್ರಗಳನ್ನು ತಂತಿಯ ಸಮಾಚಾರದಂತೆ ಎರಡು ನಿಮಿಷಗಳಲ್ಲಿ ಇಲ್ಲಿಂದ ಇಂಗ್ಲಂಡಿಗೆ ಕಳುಹಿಸುತ್ತಿದ್ದರು. ಇಲ್ಲಿರುವ ಭಾವಚಿತ್ರವು ಅಲ್ಲಿಗೆ ಹೋಗುವದಿಲ್ಲ. ಅಲ್ಲಿ ಇದರಂತೆ ಬೇರೊಂದು ಚಿತ್ರವು ಏರ್ಪಡುವದು. ನಮಗೆ ತಿಳಿದಿರುವ ಲೋಹಗಳಲ್ಲಿ ಚಿನ್ನವೆ ಹೆಚ್ಚು ಬೆಲೆಯುಳ್ಳದ್ದಲ್ಲವೇ? ಆದರೆ, ಇದಕ್ಕಿಂತಲೂ ಬೆಲೆಯುಳ್ಳ ಲೋಹಗಳನ್ನು ಕಂಡು ಹಿಡಿದಿರುತ್ತಾರೆ. ಹಿತ್ತಾಳೆ ತಾಮ್ರಗಳಂತೆ ಜೇಡಿಲೋಹವು (Aluminum) ನಮ್ಮ ದೇಶದಲ್ಲಿ ವಾಡಿಕೆಗೆ ಬರುತ್ತಿದೆ. ಈ ಲೋಹವು ನಮ್ಮ ಪೂರ್ವಿಕರಿಗೆ ತಿಳಿದಿರಲಿಲ್ಲ. ಹದವನ್ನು ಕೊಟ್ಟ ಉಕ್ಕೇ ನಮಗೆ ತಿಳಿದ ಲೋಹಗಳಲ್ಲಿ ಬಹು ಗಟ್ಟಿಯಾದುದು. ಕೆಂಪಗೆ ಕಾದಿರುವ ಕಬ್ಬಿಣವನ್ನು ಕತ್ತರಿಸುವಾಗ ಉಕ್ಕಿನ ಉಳಿಯು ಕೂಡಾ ಕಾದು ಮೆತ್ತಗಾಗುತ್ತದೆ. ಇದಕ್ಕಾಗಿ ಈಗ ಒಂದು ಮಿಶ್ರಲೋಹವನ್ನು ಉಪಯೋಗಿಸುತ್ತಾರೆ. ಇದು ಉಷ್ಣವು ಹೆಚ್ಚಿದಷ್ಟು ಹೆಚ್ಚು ಗಟ್ಟಿಯಾಗುವದು

ವಾಯುವನ್ನು ಕಂಡವರು ಯಾರೆಂದರೆ? ಯಾರು ಇಲ್ಲವೆಂಬ ಉತ್ತರವು ಥಟ್ಟನೆ ಬರುವದು. ನಮ್ಮಲ್ಲಿ ಕಂಡವರು ಬಹು ಸ್ವಲ್ಪ ಮಂದಿಗಳಿರುತ್ತಾರೆ. ಈ ವಿಷಯವನ್ನು ಕೇಳಿರುವವರು ಕೂಡ ಕಡಿಮೆಯೇ. ವಾಯುವನ್ನು ದ್ರವರೂಪಕ್ಕೆ ತಂದು ನೀರಿನಂತೆ ಮಾಡಿರುತ್ತಾರೆ! ಆಗ ಅದು ಸೂಕ್ಷ್ಮವಾದ ನೀಲಿವರ್ಣವಾಗಿರುವದು. ಕಾಂತವನ್ನು ಆಕರ್ಷಿಸುವದು.

ಐದು ಅಂಗುಲ ದಪ್ಪವಿರುವ ಕಬ್ಬಿಣದ ತಗಡನ್ನು [ಇದನ್ನು ಕಬ್ಬಿಣದ ಗೋಡೆಯೆಂದರೂ ಒಪ್ಪುವದು.] ಕತ್ತರಿಸುವದೆಂದರೆ ಬಹು ಕಷ್ಟಸಾಧ್ಯವಾದ ಕೆಲಸವೆಂದು ತೋರುವದಲ್ಲವೇ? ಪ್ರಾಣವಾಯುವಿನ ಸಹಾಯದಿಂದ ಇದನ್ನು, ಹರಿತವಾದ ಕತ್ತಿಯಿಂದ ಬಾಳೆಯ ಮರವನ್ನು ಕತ್ತರಿಸಿದಂತೆ, ಕತ್ತರಿಸಿಬಿಡುತ್ತಾರೆ!

ವನಸ್ಪತಿ ವರ್ಗದ ಕಡೆ ನಮ್ಮ ದೃಷ್ಟಿಯನ್ನು ತಿರುಗಿಸಿದರೆ, ನೂರಾರು ವರ್ಷ ಪ್ರಾಯದ ಮರಗಳಿಗೆ, ಮನುಷ್ಯರಿಗೆ ಸ್ಮರಣೆಯನ್ನು ತಪ್ಪಿಸಿ ಶಸ್ತ್ರಚಿಕಿತ್ಸೆಯನ್ನು ಮಾಡುವಂತೆ, ಅವಕ್ಕೆ ಸ್ಮರಣೆಯನ್ನು ತಪ್ಪಿಸಿ, ಒಂದು ಕಡೆಯಿಂದ ಮತ್ತೊಂದು ಕಡೆಗೆ ಬೇರು ಸಹಿತ ತೆಗೆದುಕೊಂಡು ಹೋಗಿ ನೆಟ್ಟುಬಿಡುತ್ತಾರೆ. ಮರಗಳಿಗೆ ಸ್ಮರಣೆಯನ್ನು ತಪ್ಪಿಸದಿದ್ದರೆ, ಈ ಕಾರ್ಯವು ಅಸಾಧ್ಯವೆಂದೂ, ಅವು ಸಾಯುವವೆಂದೂ ತಿಳಿಸುತ್ತಾರೆ. ತರುಲತಾದಿಗಳ ಎಲೆಗಳು ವೀಣೆಯ ನಾದಕ್ಕೆ ವ್ಯತ್ಯಾಸವನ್ನು ತೋರ್ಪಡಿಸುತ್ತವೆ. ಬಹುಶಃ ಅವಕ್ಕೂ ಸಂಗೀತ ಜ್ಞಾನವಿದೆಯೋ ಏನೋ!

ಅಮೇರಿಕಾದಲ್ಲಿರುವ ಒಬ್ಬ ಮಹಾಶಯನು ವನಸ್ಪತಿ ವರ್ಗದ ಗಾರುಡಿಗನೆಂದು ಕರೆಯಲ್ಪಡುತ್ತಾನೆ. ಈತನು ಕಹಿಯಾದ ಫಲಗಳನ್ನು ಸಿಹಿಯಾಗಿಯೂ, ಸಿಹಿಯಾದ ಫಲಗಳನ್ನು ಕಹಿಯಾಗಿಯೂ, ಹಣ್ಣು ಬಿಡುವ ವೃಕ್ಷಗಳು ಹಣ್ಣು ಬಿಡದಂತೆಯೂ ಹಣ್ಣು ಬಿಡದವು ಫಲಗಳನ್ನು ಕೊಡುವಂತೆಯೂ, ಫಲಗಳಲ್ಲಿ ಬೀಜವಿರುವದಕ್ಕೆ ಬೀಜವಿಲ್ಲದೆ ಬೆಳೆಯುವಂತೆಯೂ, ಬೀಜವಿಲ್ಲದವು ಬೀಜಗಳನ್ನು ಬಿಡುವಂತೆಯೂ ಈ ಪ್ರಕಾರವಾಗಿ ಆಶ್ಚರ್ಯಕರವಾದ ಕೆಲಸಗಳನ್ನು ಮಾಡುತ್ತಾನೆ. ಈತನ ಭೇಟಿಯು ಅರಸರಿಗೂ ಲಭ್ಯವಾಗುವದು ಕಷ್ಟವಂತೆ!

ಈ ಪ್ರಕಾರವಾಗಿ ಲೋಕದ ಪ್ರವರ್ಧಮಾನ ಗತಿಗಳನ್ನೆಲ್ಲಾ ಹೇಳಹೋಗಿದರೆ, ಜಯಕರ್ನಾಟಕದ ಈ ಸಂಚಿಕೆಯಾದ್ಯಂತವೂ ಸಾಲದಾದುದರಿಂದ ಈ ವಿಷಯವನ್ನು ಇಷ್ಟಕ್ಕೇ ಉಪಸಂಹರಿಸಿ ನಮ್ಮ ದೇಶದ ಕಡೆಗೆ ದೃಷ್ಟಿಯನ್ನು ತಿರುಗಿಸಿದರೆ, ಭಾರತ ವರ್ಷವು ಲೋಕದೊಡನೆ ಓಡುತ್ತಲೂ ಇಲ್ಲ, ಅದರ ಓಟವನ್ನು ಮನಸ್ಸಿಟ್ಟು ನೋಡುತ್ತಲೂ ಇಲ್ಲ. ಅದರಲ್ಲಿ ಕೆಲವರು ಮಾತ್ರ ಈ ಓಟವನ್ನು ನೋಡುತ್ತಿರುತ್ತಾರೆಂದು ಕಾಣುವದು. ಅವರು ಅದನ್ನು ಕಂಡು ಹಿಂದೂ ದೇಶವೂ ಈ ಪ್ರವಾಹದಲ್ಲಿ ಕಲೆತುಹೋದರೆ, ಹಾನಿಯಾಗಬಹುದೆಂದು ನೆನಸುತ್ತಾರೆ. ಆದರೆ, ಇದನ್ನು ನೋಡುತ್ತಾ ಸುಮ್ಮನೆ ಕೈಕಟ್ಟಿಕೊಂಡಿರುವದು ನ್ಯಾಯವಲ್ಲ. ಸುಮ್ಮನಿರುವವರನ್ನು ಲೋಕವು ಸುಮ್ಮನೆ ಬಿಡುವದಿಲ್ಲವಾದ್ದರಿಂದ ಆತ್ಮರಕ್ಷಣೆಗಾದರೂ ಲೋಕದ ಚಿತ್ರವಿಚಿತ್ರಗಳನ್ನೂ, ವಿಶೇಷಗಳನ್ನೂ ತಿಳಿದುಕೊಂಡಿರಬೇಕು. ಇವನ್ನೆಲ್ಲಾ ಎಲ್ಲರಿಗೂ ತಿಳಿಸುವದು ಹ್ಯಾಗೆ? ಈಗಾಗ ನಡೆಯುತ್ತಿರುವ ವಿಷಯಗಳನ್ನು ಆಗಾಗಲೇ ತಿಳಿಸಲು ಪತ್ರಿಕೆಗಳ ಹೊರತು ಬೇರೆ ಮಾರ್ಗವು ಈಗ್ಗೆ ಕಂಡುಬರುವದಿಲ್ಲ. ಸಾಮಾನ್ಯರು ಪತ್ರಿಕಾಕರ್ತರಾಗಲಾರರು. ಸಂಪಾದಕರು ತಮ್ಮ ಸರ್ವಸ್ವವನ್ನು ತೊರೆದು ಲೋಕೋಪಕಾರ ಮಾಡಿ, ತಮ್ಮ ಮಾತೃಭೂಮಿಯನ್ನು ಮುಂದಕ್ಕೆ ತಂದು ಉದ್ಧಾರ ಮಾಡಬೇಕೆಂದು, ನಿರ್ದಾಕ್ಷಿಣ್ಯವಾಗಿ ದೋಷವನ್ನು ಖಂಡಿಸುತ್ತಲೂ ಹಾನಿಯು ತಲೆದೋರಿದರೆ ತತ್‌ಕ್ಷಣವೇ ಮಾತೃಭೂಮಿಯ ಮೈಗಾವಲಿನವರಂತೆ ಎಚ್ಚರಿಸಿ ರಕ್ಷಿಸಲೆತ್ನಿಸುತ್ತಲೂ, ನಿರ್ಭೀತರಾದ ವೀರಭಟರಂತೆ ಕ್ಲೇಶಕ್ಕೂ, ಸೆರೆಶಾಲೆಯ ಕಾಠಿಣ್ಯಕ್ಕೂ ಎದೆಗುಂದದೆ, ದೇಶವನ್ನು ಹುರಿದುಂಬಿಸಿ ಮುಂದಕ್ಕೆ ನೂಗಿಸಲು ಯತ್ನಿಸುತ್ತಿರಬೇಕು. ಇಂಥ ಮಹನೀಯರನ್ನು ಇತರ ದೇಶಗಳಲ್ಲಿ ಸ್ವರ್ಗದಿಂದಿಳಿದ ದೇವರಂತೆ ಭಾವಿಸಿ ಪೂಜಿಸಿ ಅವರ ಕಾರ್ಯವು ನೆರವೇರುವದಕ್ಕೆ ಬೇಕಾದವುಗಳನ್ನೆಲ್ಲಾ ಮೂಲೆಮೂಲೆಗಳಲ್ಲಿರುವವರೂ ಕೂಡಾ, ಒದಗಿಸಿ ತಮ್ಮಿಂದಾದಷ್ಟು ಸಹಾಯಮಾಡುತ್ತಾರೆ.

ಕರ್ನಾಟಕದ ಕಡೆ ನಮ್ಮ ದೃಷ್ಟಿಯನ್ನು ತಿರುಗಿಸಿದರೆ, ವಿಷಾದಕರವಾದ ನೋಟವನ್ನು ನೋಡುತ್ತೇವೆ. ಕನ್ನಡ ನಾಡಿಗೆಲ್ಲಾ ಜಯವನ್ನು ಬಯಸಿ ಸ್ವಾರ್ಥತ್ಯಾಗವನ್ನು ಮಾಡಿ ಕನ್ನಡಿಗರನ್ನು ಮುಂದಾಳುಗಳಾಗಿ ಮಾಡಲು ಹೊರಟು ದೇಶಸೇವಾನಿರತರಾದವರು ಇಷ್ಟು ಶ್ರಮಕ್ಕಾದರೂ ಪಡಬೇಕಾದ ಪ್ರತಿಫಲವನ್ನು ತಳೆದುಕೊಳ್ಳುವದನ್ನು ನೆನಸುವಾಗ ನಮ್ಮ ಹೃದಯವು ಕರಗಿ ನೀರಾಗುತ್ತದೆ. ಈ ವಿಷಯವು ಕನ್ನಡಿಗರಿಗೆ ಭೂಷಣವೇ?

ಕಂದ || ಪದನರಿದು ನುಡಿಯಲುಂ ನುಡಿ |
ದುದನರಿದಾರಯಲು ಮಾರ್ಪರಾ ನಾಡವರ್ಗಳ್ ||
ಚದುರರ್ನಿಜದಿಂ ಕುರಿತೋ |
ದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್ ||
ಕುರಿತವರಲ್ಲದೆ ಮತ್ತಂ |
ಪೆರರುಂ ತಂತಮ್ಮ ನುಡಿಯೊಳೆಲ್ಲಂ ಜಾಣರ್ ||
ಕಿರುವಕ್ಕಳ್ಕಂ ಮೂಗರು |
ಮರಿದಲ್ಕರವರ್ ವಿವೇಕಮುಂ ಮಾತುಗಳಂ ||

(ಕವಿರಾಜಮಾರ್ಗವು ಲಕ್ಷಣಗ್ರಂಥವಾಗಿರುವದರಿಂದ ಅದಕ್ಕೆ ಸಂಬಂಧಪಟ್ಟ ಗುಣಗಳನ್ನು ಮಾತ್ರ ಇಲ್ಲಿ ವರ್ಣಿಸಿರುತ್ತಾನೆ. ಇದರ ಆಧಾರದಿಂದ ಕನ್ನಡಿಗರ ಇತರ ವಿಷಯಗಳನ್ನು ಊಹಿಸಬಹುದು)

ನಮ್ಮ ವೈಭವವೂ, ಸಾಮರ್ಥ್ಯವೂ ಒಂದು ಸಾವಿರ ವರ್ಷಕ್ಕೆ ಹಿಂದೆಯೂ ತೀರಿ ಅಳಿದುಹೋಗಲಿಲ್ಲ. ಇತರ ರಾಜ್ಯಗಳು ನಿರ್ನಾಮವಾಗಿ ಹೋಗಿರಲು, ಅದು ಅನ್ಯಕನಿಷ್ಟರಕ್ಷಕ್ಕೆ ಹೆಸರಾಗಿದರೂ ಕರ್ನಾಟಕ ರಾಜ್ಯವೊಂದನ್ನು ಉಳಿಸಿಕೊಂಡಿತು. ೧೫೦೦ ವರ್ಷಗಳಿಂದೀಚೆಗೆ ಎರಡಾವರ್ತಿ ಕೈತಪ್ಪಿದ್ದ ಈ ರಾಜ್ಯವನ್ನು ಪುನಃ ಪುನಃ ತನ್ನದೇ ಎಂದು ಉಳಿಸಿಕೊಂಡಿತು! ಇದರ ವೈಭವದ ಚರಿತ್ರೆಯನ್ನು ಸರಿಯಾಗಿ ಬರೆಯುವ ಮಹಾತ್ಮರು ಯಾರು ಹುಟ್ಟುವರೋ! ನಮ್ಮ ಪೂರ್ವ ಚರಿತ್ರೆಗಳಲ್ಲಿ ಹೀಗಿರಲಾಗಿ ಈಗ ಕನ್ನಡಿಗರಿಗೆ ಇಂಥಾ ಜಡ ಸ್ವಭಾವವು ಎಲ್ಲಿಂದ ಬಂದಿತು? ಮುಖ್ಯಕ್ಕೆ ಭೂಗೋಳ ಶಾಸ್ತ್ರಜ್ಞರು ಚರಿತ್ರಕಾರರು ಕೂಡಾ ಕನ್ನಡಿಗರಿಗೆ ಪ್ರತ್ಯೇಕವಾದ ಗೌರವವನ್ನು ಕೊಟ್ಟಿರುತ್ತಾರೆ.

ಇದು ಬಹು ವಿಷಾದಕರ ಸಮಯವಾಗಿರುವದು. ಜನರೆಲ್ಲರೂ ವಿದೇಶ ಭಾಷೆಯನ್ನು ಕಲಿತು ಸ್ವಭಾಷೆಯಲ್ಲಿ ಮಾತಾಡುವದನ್ನು ಕಡಿಮೆ ಮಾಡಿಬಿಟ್ಟಿರುವದರಿಂದ, ಕನ್ನಡದಲ್ಲಿ ಉತ್ಕೃಷ್ಟವಾದ ಲೇಖನಗಳನ್ನು ಬರೆಯುವವರು ಬಹಳ ಮಂದಿ ಇಲ್ಲ. ಬರೆಯಲು ಸಮರ್ಥರಾದವರು ವಿದೇಶ ಭಾಷೆಯಲ್ಲಿ ಮಗ್ನರಾಗಿ ಲೋಕದ ಗೌರವ ಸಂಪಾದನೆಗಳಲ್ಲಿ ಮೈಮರೆತಿರುತ್ತಾರೆ. ಕನ್ನಡದಲ್ಲಿ ಬರೆಯಬಲ್ಲವರಾಗಿ ವಿಷಯಗಳು ಹೆಚ್ಚಾಗಿ ತಿಳಿದಿರುವದಿಲ್ಲ. ಇದರಿಂದ ಸಾಮಾನ್ಯರು ಲೇಖನಿಯನ್ನು ಹಿಡಿಯಲಾಗುವದಿಲ್ಲವೆಂದು ಸ್ಪಷ್ಟವಾಗುವದು. ಇದರಲ್ಲಿ ಬಹು ಮುಖ್ಯವಾದ ವಿಷಯವೇನೆಂದರೆ, ನಮ್ಮ ಸ್ವಭಾಷೆಯಲ್ಲಿ ಎಲ್ಲಾ ವಿಷಯಗಳು ಚರ್ಚಿಸಲ್ಪಟ್ಟರೆ, ನಮ್ಮ ಸ್ವಬುದ್ಧಿಯೂ, ಕಾರ್ಯಶಕ್ತಿಯೂ ಹೆಚ್ಚಿ, ಆತ್ಮಗೌರವವು ತಾನಾಗಿಯೇ ಹೆಚ್ಚುವದು. ವಿದೇಶಿಯರು ಇದನ್ನು ಕಂಡು ಹೆಚ್ಚಾಗಿ ಗೌರವಿಸುವರು.

ನಮ್ಮ ಗತವೈಭವಾದಿಗಳನ್ನು ಹೊಗಳಿದ್ದು ಸಾಕು. ನಮ್ಮ ಹೆಗಲಿನ ಮೇಲಿರುವ ಕರ್ತವ್ಯಭಾರವು ಅಧಿಕವಾದದ್ದಾಗಿದೆ. ಕೀರ್ತಿಶೇಷರಾದ ಪೂರ್ವಿಕರ ವಂಶಜರಾದ ನಾವು ನಮ್ಮ ಪೂರ್ವಿಕರ ಗೌರವವನ್ನು ಕಾಪಾಡುವಂತ ಕಾರ್ಯಗಳನ್ನು ಮಾಡುವದು ಮೊದಲನೆಯ ಕರ್ತವ್ಯ ಮತ್ತು ಇನ್ನು ಮುಂದೆ ಬರಲಿರುವ ನಮ್ಮ ಪುತ್ರ-ಪೌತ್ರರ ಕ್ಷೇಮಲಾಭಕ್ಕೂ, ಗೌರವಕ್ಕೂ ತಕ್ಕಂಥ

ವಿಚಾರಗಳನ್ನು ತಡೆಯುವದು ಎರಡನೆಯದು. ಲೋಕವೆಲ್ಲವೂ ಮುಂದರಿಯುತ್ತ, ನಮ್ಮ ಎಡಬಲಗಳಲ್ಲಿರುವ ತಮಿಳು-ತೆಲಗು ನಾಡುಗಳು ಕೂಡಾ ನಮ್ಮನ್ನು ಹಿಂದಕ್ಕೆ ಹಾಕಿ ಮುಂದಾಗುತ್ತಿರುವಾಗ, ನಾವು ಮಾತ್ರ ಕೈ ಕಟ್ಟಿಕೊಂಡು ಕುಳಿತು ನಮ್ಮ ಹಿತವನ್ನು ಕೋರಿ ನಮ್ಮನ್ನು ಮುಂದಕ್ಕೆ ಸಾಗಿಸಲು ನೀಡಿದ ಹಸ್ತವನ್ನು ತಿರಸ್ಕರಿಸಿದರೆ, ಮಹಾ ಪಾಪವಾಗುವದು. ನಮ್ಮ ಹಿಂದೆ ಬರುವವರಿಲ್ಲದೂ ನಮ್ಮನ್ನು ಕೆಡಿಸುವರು. ಗತಿಸಿದವರ ಗುಣಕಥನವನ್ನು ಮಾಡುವದು ಒಳ್ಳೆಯದಾದರೂ, ಜೀವಿಸಿರುವವರ ಗುಣಗಳನ್ನು ಗ್ರಹಿಸಿ ಅವರು ದೇಶಾಭ್ಯುದಯಕ್ಕಾಗಿ ನಡಸಬೇಕೆಂದಿರುವವುಗಳಿಗೆಲ್ಲಾ ಬೇಕಾದ ಅನುಕೂಲಗಳನ್ನೂ, ಸಹಾಯವನ್ನೂ ಒದಗಿಸುವದು ಶ್ರೇಷ್ಠವಾದುದು. ಇರುವವರ ಗುಣವನ್ನು ಗ್ರಹಿಸದೆ, ಗತಿಸಿದವರನ್ನು ಮಾತ್ರವೇ ಹೊಗಳುವದು ಗೌಣ.

ಜಾತ್ರೆಯನ್ನು ಮುಂದರಿಸಿರಿ.

ಶಿರ್ಶಿ ಶ್ರೀಮಾರೆಮ್ಮನ ದೇವಸ್ಥಾನದ ಮೊಕ್ತೇಸರರಿಗೆ—

ಮಹಾಶಯರೇ,

ಹಿಂದಕ್ಕೊಮ್ಮೆ ನಾನು ಇದೇ ವೃತ್ತಪತ್ರದ ಮೂಲಕ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಹೆಗಳ ನಾನಾ ಜನರ ಸ್ಥಿತಿ-ಗತಿಯನ್ನು ವರ್ಣಿಸಿ ಇಂಥ ಪ್ರತಿಕೂಲ ಪರಿಸ್ಥಿತಿಯಲ್ಲಿ ಜಾತ್ರೆಯನ್ನು ಮಾಡಿ, ಹೊಟ್ಟೆ ಹೊರಕೊಳ್ಳುವದೇ ಕಠಿಣವಾಗಿರುವ ಜನರನ್ನು, ಹೆಚ್ಚಿನ ಖರ್ಚಿಗೆ ಈಡುಮಾಡದೆ ಅದನ್ನು ಮುಂದಕ್ಕೆ ಹಾಕುವ ವಿಷಯವಾಗಿ ಶಿರಸಿಯಿಂದ ವಿನಂತಿ ಮಾಡಿಕೊಂಡಿದ್ದನಷ್ಟೇ. ಕಾಲವು ಬಹಳ ಕಠಿಣವಾಗಿರುತ್ತದೆಂಬುದನ್ನು ಪ್ರತಿಯೊಬ್ಬರೂ ಒಪ್ಪಲೇಬೇಕಾದ ಸಂಗತಿಯಾಗಿದೆ. ಆದರೆ, ಜಾತ್ರೆಯನ್ನು ಇಂಥ ಕಠಿಣ ಪರಿಸ್ಥಿತಿಯಲ್ಲಾದರೂ ಮಾಡಲೇಬೇಕೆಂಬ ನಿಮ್ಮ ನಾಲ್ವರ ಹೊರತು ಎಷ್ಟು ಜನರ ಮನಸ್ಸಿನಲ್ಲಿದೆ ಎಂಬುದನ್ನು ನಿಶ್ಚಯವಾಗಿ ತಿಳಿದಿರುವದಿಲ್ಲ. ಆದರೆ, ಸ್ವಲ್ಪ ತಿಳುವಳಿಕೆಯುಳ್ಳ ಇತರ ಯಾರನ್ನೇ ಕೇಳಿದರೂ ಜಾತ್ರೆಯನ್ನು ತಡಕೊಟ್ಟು ಇಡುವದೇ ಉತ್ತಮವೆಂಬ ಸ್ಪಷ್ಟವಾಗಿ ಹೇಳುವ ಮಾತುಗಳನ್ನು ಕೇಳುವ ಪ್ರಸಂಗವು ಬರಹತ್ತಿದೆ.

ಅದಲ್ಲದೆ, ಈ ವಿಷಯವಾಗಿ ಊರ ಪ್ರಮುಖರೂ, ಅಗ್ರ ಸೀಮೆಯ ನಿವಾಸಿಗಳೂ ಒಂದು ಕಡೆ ಸೇರಿ ಕೇಳಿಕೊಂಡು ಬರುತ್ತಿದ್ದಾರೆ. ಜಾತ್ರೆಯನ್ನು ನಿಶ್ಚಯ ಮಾಡುವ ಕಾಲದಲ್ಲಿ ಇಂಥ ಜನರನ್ನು ಕರೆಸಿ, ಅವರ ಅಭಿಪ್ರಾಯವನ್ನು ಕೇಳುವ ಪರಿಪಾಠವೆಂಬುದಿಲ್ಲ. ಆದರೆ, ಇದು ಕೇವಲ ಬಿಸಚಾರಿಕವಾಗಿದ್ದು, ತಮ್ಮ ಮತಕ್ಕೆ ಯೋಗ್ಯ ಮರ್ಯಾದೆಯು ಸಿಗುವದಿಲ್ಲವೆಂತಲೂ, ಮೊಕ್ತೇಸರರು ತಮಗೆ ಇಷ್ಟವಾದದ್ದನ್ನು ಮೊದಲೇ ನಿಶ್ಚಯಿಸಿಬಿಡುತ್ತಾರೆಂತಲೂ, ಈ ಜನರ ತಕರಾರು ಕೇಳಬರುತ್ತದೆ. ಒಂದು ವೇಳೆ ಇವೇ ನಾಗರಿಕರ ಪ್ರತಿನಿಧಿಗಳಂತೆ ತಿಳಿದು, ದೇವಸ್ಥಾನದ ಕಾರ್ಭಾರದಲ್ಲಿ ಊರ ಪ್ರಮುಖರ ಅಧಿಕಾರವು ಹೆಸರಿಗೆ ಮಾತ್ರವೆಂತ ಹಿಡಿದರೂ, ಸೀಮೆಯ ಜನರ ಅಧಿಕಾರಕ್ಕೆ ಮಾತ್ರ ಯಾವ ರೀತಿಯಿಂದಲೂ ವ್ಯತ್ಯಯ ಬರುವ ಕಾರಣವಿಲ್ಲ. ಯಾಕಂದರೆ, ಅವರು ತಮ್ಮ ವರ್ಗದವರಿಂದ ಪ್ರತಿ ವರ್ಷ ನೂರಾರು ರೂಪಾಯಿಗಳನ್ನು ವಸೂಲ ಮಾಡಿ ದೇವಸ್ಥಾನಕ್ಕೆ ಮುಟ್ಟಿಸುತ್ತಿದ್ದು, ಆಡಳಿತದಲ್ಲಿ ಮಾತ್ರ ಅವರಿಗೆ ಅಂಗವಿಲ್ಲದೆ ಇರುವದು ಆಶ್ಚರ್ಯವೇ ಸರಿ!

ಆದರೆ, ಈ ಜನರ ತಕರಾರು ಎಷ್ಟರ ಮಟ್ಟಿಗೆ ನಿಜವಿರುತ್ತದೆಂಬುದನ್ನು ಬರೆಗೆ ಹಚ್ಚಿ ನೋಡುವ ಪ್ರಸಂಗವು ಈಗ ಬಂದಿದೆ. ಯಾಕಂದರೆ, ಜಾತ್ರೆಯನ್ನು ಈ ವರ್ಷ ತಡಕೊಟ್ಟು ಇಡಬೇಕಾಗಿ ನೂರಾರು ಸಹಿಗಳುಳ್ಳ ವಿನಂತಿ ಅರ್ಜಿಯೊಂದು ಇಷ್ಟರಲ್ಲಿಯೇ ತಮ್ಮ ಕೈಸೇರಬಹುದು. ಅದಕ್ಕೆ ಸಹಿ ಮಾಡಿದವರು ಊರ ಪ್ರಮುಖರೂ ಇದ್ದಾರೆ. ಸೀಮೆಯವರೂ ಇದ್ದಾರೆ; ಸಾವುಕಾರರೂ ಇದ್ದಾರೆ, ವ್ಯಾಪಾರಿಗಳೂ ಇದ್ದಾರೆ. ಹೀಗಿರುತ್ತ, ಇಂಥವರ ಮನಸ್ಸಿನ ವಿರುದ್ಧ ಜಾತ್ರೆ ಮಾಡಿದಲ್ಲಿ ಅಸಮಾಧಾನಕ್ಕೆ ಕಾರಣವಾಗಿ ಅದು ವಿರಸವಾಗುವದಲ್ಲದೆ, ಐಕ್ಯವು ಬಿಡುವದರ ಮೂಲಕ ದೇವಸ್ಥಾನಕ್ಕೆ ಹಾನಿಯಾಗುವ ಸಂಭವವುಂಟು. ಯಾಕಂದರೆ, ಸೀಮೆಯವರಂತೂ ಇಂಥ ಪ್ರಸಂಗದಲ್ಲಿ ತಾವು ದೇವಸ್ಥಾನಕ್ಕೆ ಪ್ರತಿ ವರ್ಷ ಕೊಡುವ ಹಣವನ್ನು ವಸೂಲ ಮಾಡುವದನ್ನೇ ಸ್ವಾಭಿಮಾನದ ಮೂಲಕ ಬಿಟ್ಟುಬಿಡುವದನ್ನು ನಿಶ್ಚೈಸಿರುವಂತೆ ಕಾಣುತ್ತದೆ.

ಇದಲ್ಲದೆ, ಈ ಸಾರೆಯ ವಿಪರೀತವಾದ ಮಳೆಯಿಂದ ಒಂದೇ ಘಟ್ಟದ ಕೆಳಗೂ, ದಕ್ಷಿಣ ಕಾನಡಾ ಜಿಲ್ಹೆಯಲ್ಲಿಯೂ ಅಷ್ಟೇ ಅಲ್ಲ, ಘಟ್ಟದ ಮೇಲೆಯೂ ವಿಶೇಷವಾಗಿ ನಮ್ಮ ಶಿರ್ಸಿ ತಾಲೂಕಿನಲ್ಲಿಯಾದರೂ ಆಗುವಷ್ಟು ನಷ್ಟವು ಆಗೇ ಆಗಿದೆ. ಯಾಕಂದರೆ, ಸೀರನ ಸಳವಿಗೆ ಸಿಕ್ಕ ಎಷ್ಟೋ ತೋಟಗಳು ನಾಶವಾಗಿಹೋದವು. ತೋಟಗಳಷ್ಟೇ ಕೊಳೆರೋಗಕ್ಕೆ ತುತ್ತಾಗಿ ಪೂರ್ವಸ್ಥಿತಿಗೆ ಬರಲು ಕೆಲವು ವರ್ಷಗಳಾದರೂ ಬೇಕಾದೀತು. ಅಡಿಕೆಯು ಉದುರಿ ಹೋದದ್ದಲ್ಲದೆ ಇದ್ದ ಅಡಿಕೆಯೂ ಕೊಳೆತುಹೋಯಿತು. ಹುಲ್ಲು-ಸೊಪ್ಪು ಹಾಳಾಗಿ ದನಕರುಗಳು ಸಹ ಸತ್ತವು. ಇಂಥ ಕಠಿಣ ಪರಿಸ್ಥಿತಿಯಲ್ಲಿ ಜಾತ್ರೆ ಮಾಡಿದರೆ, ಅವರವರ ಊರುಗಳಿಗೆ ಬರಗಾಲದಲ್ಲಿ ಅಧಿಕ ಮಾಸದ ಹಾಗೆ ಆಗುವದಲ್ಲದೆ, ಬೀಗಲಲ್ಲಿ ಸಾಲಗಾರರ ಕಾಟವು ತಪ್ಪದು. ಯಾಕಂದರೆ, ಇಂಥ ಕಷ್ಟಕ್ಕೆ ಈಡಾಗಿದ್ದರೂ, ಖರ್ಚು ಕಡಿಮೆ ಮಾಡುವದು ತಪ್ಪುವದಿಲ್ಲ, ಕೆಲವರಂತೂ ಪೂರ್ಣ ಮನಸ್ಸಿಲ್ಲದಿದ್ದರೂ ಜಾತ್ರೆಯ ಕಾರಣ ಸಾಲ ಮಾಡಬೇಕಾಗುವದು. ಮೂಲಕ ಒಂದಿಲ್ಲೊಂದು ರೋಗವು ಬರದೆ ಇರದು. ಅನುಭವಸಿದ್ಧವಾದ ಸಂಗತಿಯಾಗಿದೆ, ಮೊದಲೇ ಅಪಾಯಕರವಾದ ಪ್ಲೇಗ್-ಕಾಲರಾ ಮೊದಲಾದ ರೋಗಗಳನ್ನು ಕೈಹಿಡಿದು ಕರೆತಂದಂತೆ ಜನರ ಕಷ್ಟಕ್ಕೆ ಎಣೆಯೇ ಇಲ್ಲದಾದೀತು.

ಮೇಲಿನ ಎಲ್ಲ ಮಹತ್ವದ ಸಂಗತಿಗಳನ್ನು ಲಕ್ಷ್ಯಕ್ಕೆ ತಂದು ಜನರ ಅಸಮಾಧಾನಕ್ಕೆ ಆಸ್ಪದ ಕೊಡದೆ ಈ ವರ್ಷ ಆಗಬೇಕಾದ ಜಾತ್ರೆಯನ್ನು ಮುಂದಿನ ವರ್ಷದ ವರೆಗೆ ತಡಕೊಟ್ಟು ಇಡುವದೇ ಉತ್ತಮವೆಂತ ವಿನಯಪೂರ್ವಕವಾಗಿ ಸೂಚಿಸುವ,

ಶಿರ್ಸಿ,
ತಾ. ೨೦-೧೨-೨೩

ತಮ್ಮ,
ವಿ. ಆ. ಹೆಗ್ಡೆ

ತ್ವರೆ ಮಾಡಿರಿ! ತ್ವರೆ ಮಾಡಿರಿ!!

ಬಸ್ರೂರ ರಾಮ ತಿಮ್ಮಣ್ಣ ಪಂಡಿತರವರಿಂದ ಗಣಿಸಿ ಪರಿಶೋಧಿಸಲ್ಪಟ್ಟ

ರಕ್ತಾಕ್ಷಿ ಸಂವತ್ಸರದ

ಪಂಚಾಂಗಗಳು

ಜನವರಿ ೧೧ ರೊಳಗೆ

ತಯಾರಾಗುವವು.

100ಕ್ಕೆ ೧೨ ರೂ. 50ಕ್ಕೆ ೬ ರೂ.
25 ಕ್ಕೆ ೩ ರೂ. 1ಕ್ಕೆ ೩ ಆಣೆ.

ಅಂಚೆ ವೆಚ್ಚ ಪ್ರತ್ಯೇಕ.

ಪತ್ತೆ:— ಕೃಷ್ಣ ಕೇಶವ ಶೇಣವಿ, ಹೆಗಡೆಕರ.

ಮಾಲಕ

ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ.

ಶ್ರೀ ಕರ್ಕಿಯವರಿಗೆ—

(ಲೇಖಕ:— ಕೌನ್ಸಿಲುಭಂಜಕ.)

ನಮ್ಮ ಜಿಲ್ಹೆಯ ಕೌನ್ಸಿಲು ಪ್ರತಿನಿಧಿಗಳಾದ ಶ್ರೀ ಕರ್ಕಿಯವರು ನಮ್ಮಲ್ಲಿಯ ದೂರುಗಳನ್ನು ತಿಳಿಸಲು ವಿನಂತಿ ಮಾಡಿಕೊಂಡಿದ್ದರಷ್ಟೇ. ನಮ್ಮಲ್ಲಿಯ ದೂರುಗಳನ್ನು ವಿವರಿಸಹೋದರೆ, ಅದೊಂದು ದೊಡ್ಡ ಗ್ರಂಥವಾಗುವದು. ಜಂಗಲ ಪ್ರಶ್ನೆ, ಇದೊಂದು ನಮ್ಮ ಪ್ರಜೆಗಳ ದೂರು, ಈ ದೂರಿನ ಪರಿಹಾರವಾಗುವದು ಯಾವಾಗಲೋ ಏನೋ! ಈ ಪ್ರಶ್ನೆಯು ಶ್ರೀ ಕರ್ಕಿಯವರಿಗೆ ಯಾರೂ ಹೇಳುವ ಗರಜಿಲ್ಲ. ಕಾನಡಾ ಜಿಲ್ಹೆಯ ಜಂಗಲ ಖಾತೆಗಳ ಯೋಗ್ಯ ವ್ಯವಸ್ಥೆಯನ್ನು ಕೈಕೊಳ್ಳಲು, ಅವರು ಬದ್ಧರಿರುವರು.

***

ಲೀಕರ ಬಿನ್‌ಲೀಕರ ಪಿಶಾಚವು ಮತ್ತೊಂದು ಹೊಸ ಭೂತವು. ಇದರಿಂದ ಅನೇಕರಿಗೆ ಅಮಿತ ಹಾನಿಯಾಗಿದೆ. ಮುಂದಾಗಿ ಅಪ್ಪಣೆ ಪಡೆಯದೆ, ರೈತರು ಮನೆಮಾರು ಕಟ್ಟಿದರೆ, ಅತಿಕ್ರಮ ಕ್ಷೇತ್ರಗಳ ಯೋಜನೆಯೆಂತು ಆಯಿತು; ಹೆಚ್ಚಿನ ಆಕಾರವು ಕೂಡಿಸಲಾಯಿತು. ಅಪ್ಪಣೆ ಪಡೆಯದೆ, ಇಮಾರತು ಕಟ್ಟಿಸಿದ ಕಾಯಿದೆ ಅಪರಾಧಕ್ಕೆ ಶಿಕ್ಷೆ ಶಿಕ್ಷೆ ಹಾಗೆ ದಂಡ ವಿಧಿಸಲಾಗಿದೆ. ಅತಿಕ್ರಮಣ ಕ್ಷೇತ್ರದಷ್ಟು, ಅದಕ್ಕೆ ವಿಧಿಸಿದ ವಿಶೇಷ ಆಕಾರದಷ್ಟು, ಕಾಯಿದೆಯಂತೆ ವರ್ತಿಸದೆ ಬಗ್ಗೆ ಆಜ್ಞೆ ಒಡೆದವರಿಗೆ ವಿಧಿಸಿದ ದಂಡವೆಷ್ಟು ಎಂಬ ಖುಲಾಸೆಯನ್ನು ಶ್ರೀ ಕರ್ಕಿಯವರು ಪಡಕೊಳ್ಳಬೇಕು.

***

ಇದರೊಳಗೆ ಮತ್ತೊಂದು ಸಂಗತಿಯ ಖುಲಾಸೆ ಮಾಡಿಕೊಳ್ಳಬೇಕು. ಲಂಡ ರೆವಿನ್ಯೂ ಕೋಡಿನೊಳಗಿನ ಬಿನ್‌ಲೀಕರ ಪಿಶಾಚವು ಈ ಮೊದಲು, ಎಷ್ಟು ಸಾರೆ ಆಹುತಿ ಪಡೆದದೆ, ಆಹುತಿಯು ಮೊಬಲಗೆಷ್ಟು, ಈ ವರೆಗೆ ಅದು ನಿದ್ದೆ ಮಾಡುತ್ತಿದ್ದಲ್ಲಿ, ಅದನ್ನು ಈಗಾಗಲೇ ಎಚ್ಚರಿಸುವ ಕಾರಣವೇನು? ಈ ಕಾನೂನು ಸಣ್ಣ ಪುಟ್ಟ ಹಳ್ಳಿಗಳಲ್ಲಿ, ಮತ್ತು ಕಾಡಿನ ವ್ಯಾಪಾರ ಮಾಡುವ ಬಡಬಗ್ಗರಿಗೆ ಸಹ ಹಚ್ಚಬೇಕೆಂದಿದೆಯೋ ಹೇಗೆ? ಅಥವಾ ಮುಂಬಯಿ, ಪುಣೆ, ಬೆಳಗಾಂವಿ, ಧಾರವಾಡ, ಅಹಮ್ಮದಾಬಾದ, ಕರಾಚಿ ಮೊದಲಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಸಾವಿರಾರು ಲಕ್ಷಾವಧಿ ಬೆಲೆಯ ವ್ಯಾಪಾರ ನಡಿಸುವ ಸ್ಥಳಗಳಿಗೆ ಮಾತ್ರ ಲಾಗು ಇದೆಂದು ಇತ್ತ ಕಡೆಗೆ ಈ ಪಿಶಾಚವು ಹಳೆಯನ್ನಿಕ್ಕಲಿಲ್ಲೇನು? ಅಥವಾ ಬೇಸಾಯಕ್ಕೆಂದು ಪಡೆದ ಸ್ಥಳಗಳನ್ನು ಬೇಸಾಯಕ್ಕಿಂತ ವಿಶೇಷ ಲಾಭದಾಯಕ ಉದ್ಯೋಗಗಳಿಗೆ ಉಪಯೋಗಿಸುವಾಗ, ಸರಕಾರಕ್ಕೂ ಹೆಚ್ಚು ತೀರ್ವೆಯಿಂದ ಪ್ರಜೆಗಳು ಲಾಭದ ಪಾಲು ಕೊಡಬೇಕೆಂದಿತ್ತೇ? ಇಷ್ಟು ವರುಷ ಮನೆ, ವ್ಯಾಪಾರ ಮುಂತಾದ ಬಿನ್‌ಲೀಕರ ಕೆಲಸಗಳನ್ನು ನಡಿಸುತ್ತಿರುವಾಗ, ಗ್ರಾಮಸ್ತರು ಎಲ್ಲಿ ಮಲಗಿದ್ದರು? ಹೀಗೆಲ್ಲ ಖುಲಾಸೆ ಕೇಳಿ ಈ ಕಾಯಿದೆಯ ವ್ಯಾಪ್ತಿಯನ್ನು ಪ್ರತಿನಿಧಿಗಳು ನಿಯಂತ್ರಿಸಲಿಕ್ಕಿಸತಕ್ಕದ್ದು.

***

ಇದೇ ಪಿಶಾಚದಿಂದ ಅಂಕೋಲೆ, ಕದ್ರ, ಜಾತ್ರೆಗಳಲ್ಲಿ ಸ್ಥಾನಿಕ ಅಧಿಕಾರಿಗಳು ಸಣ್ಣ ಪುಟ್ಟ ಅಂಗಡಿಕಾರರಿಂದ ಎತ್ತಿದ ಹಣದ ಖುಲಾಸೆಯೂ ಆಗಬೇಕಾಗಿದೆ. ಅಂಕೋಲೆಯ ಹಿಂದಿ ಹಬ್ಬದಲ್ಲಿ ಈ ಕಾನೂನಿನನ್ವಯ ಹಣ ಎತ್ತಿದಾಗ, ರಾ| ಎಸ್. ಬಿ. ನಾಡಕರ್ಣಿಯವರು ತಕರಾರು ಮಾಡಿದರು. ಆದರೆ, ಹಣ ಎತ್ತೋಣವು ಕಾಯಿದೆಯಂತಿದೆ ಎಂದು ಜಿಲ್ಹಾಧಿಪರಾಗಿದ್ದ ಕೊಲಿನ್ಸ ಸಾಹೇಬರು ಸಮರ್ಥಿಸಿದ್ದರು. ಕದ್ರೆಯಲ್ಲಿಯೂ ಇದೇ ಪ್ರಕಾರ ನಡೆಯಲು, ಆ ಬಗ್ಗೆ ಕಾರವಾರ-ಮುಂಕೇರಿಗಳಲ್ಲಿ ಚಳವಳಿಯಾಗಿ, ಮಿ| ಹೇಗರಗೂಡ ಶಿಷ್ಟ ಮಂಡಳ ಹೋಗಲು ಈ ಎತ್ತೋಣಕ್ಕೆ ತಮ್ಮ ಮಂಜೂರಿಯಿದ್ದಿಲ್ಲೆಂದು ಅವರು

ಹೇಳಿಬಿಟ್ಟರು. ಕಚೇರಿಯಲ್ಲಿಟ್ಟಿದ್ದ ಹಣವನ್ನು ಜಮಾ ಮಾಡುವರೆ ಅವರು ಹುಕುಮುಗಳನ್ನಿತ್ತರು. ಅಂಕೋಲೆಯ ಬಂಡಿಹಬ್ಬದಲ್ಲಿ ಎತ್ತಿದ ಹಣವೆಷ್ಟು, ಅದನ್ನು ರಕ್ಷಿಸಿ ಕೊಡುವ ವ್ಯವಸ್ಥೆಯಾಗಿದೇನು? ಈ ಎರಡು ಸ್ಥಳಗಳ ಹೊರತು ಜಾತ್ರೆ ಹಬ್ಬಗಳಲ್ಲಿ, ಯಾವ ಯಾವ ಹಬ್ಬದ ಸಮಯ ಎಷ್ಟೆಷ್ಟು ಎತ್ತುವಳಿ ನಡೆಯಿತು? ರಶೀದಿ ಕೊಡದೆ, ಹಣ ಪಡೆದದ್ದರೆ, ಆ ಮೊಬಲಗೆಷ್ಟು? ಅದನ್ನು ಮಾಲೀಕರಿಗೆ ಮುಟ್ಟಿಸುವ ಬಗೆ ಯಾವದು? ಇವೆಲ್ಲ ಕೇಳತಕ್ಕಂಥ ಪ್ರಶ್ನೆಗಳು.

***

ನಮ್ಮಲ್ಲಿಯ ದೇವಾಲಯ ಕಮಿಟಿಯ ಕಾರಭಾರದ ಬಗ್ಗೆಯೂ ಕೆಲ ಪ್ರಶ್ನೆಗಳನ್ನು ಕೇಳಬಹುದು. ಈ ಕಮಿಟಿಯು ಅಸ್ತಿತ್ವದಲ್ಲಿ ಬಂದು ಎಷ್ಟು ವರುಷಗಳಾದವು? ಸಭಾಸದರನ್ನು ಆರಿಸುವ ಬಗೆ ಯಾವದು? ಹೊಸ್ತವೊದಲು, ಮೆಂಬರರ ನೇಮಣೂಕಿಯು ಹೇಗಾಯಿತು? ಮತದಾರರು ಮೆಂಬರರನ್ನು ಆರಿಸಿಕೊಳ್ಳುವ ವ್ಯವಸ್ಥೆಯಿದೆಯೋ? ಯಾರಿಗೆ ಮತದಾನದ ಹಕ್ಕುಂಟು? ಎಷ್ಟು ವರ್ಷಕ್ಕೊಮ್ಮೆ ಚುನಾವಣೆ ನಡೆಯತಕ್ಕದ್ದು? ಮೆಂಬರರ ಕರ್ತವ್ಯಗಳೇನು? ದೇವಾಲಯಗಳ ಮೊಕ್ತೇಸರರು ಅಥವಾ ಅವರ ಮನೆಯವರು ಮೆಂಬರರಾಗಬಹುದೇನು? ಮೊಕ್ತೇಸರರ ಮೇಲೆ ದೇವಾಲಯ ಕಮಿಟಿಯ ಅಧಿಕಾರವೆಷ್ಟು? ದೇವಾಲಯಗಳ ಆಯವ್ಯಯವನ್ನು ತಪಾಸು ಮಾಡುವ ಹಕ್ಕು ಕಮಿಟಿಗುಂಟೇನು? ಇದ್ದರೆ, ದೇವಾಲಯ ಕಮಿಟಿಯು ತನ್ನ ಅಧಿಕಾರಕ್ಷೇತ್ರದಲ್ಲಿದ್ದ ಎಲ್ಲ ದೇವಾಲಯಗಳ ಜಮಾಖರ್ಚನ್ನು ತಪಾಸು ಮಾಡಿರುವರೇನು? ಮಾಡುತ್ತಾರೇನು? ಅರ್ಚಕರು ಮೊಕ್ತೇಸರರಾಗಬಹುದೋ ಹೇಗೆ? ಅರ್ಚಕರ ಮೇಲೆ ಕಮಿಟಿಯ ಅಧಿಕಾರವಿದೆಯೋ ಹೇಗೆ? ಇದ್ದರೆ, ಎಷ್ಟು? ಈ ಕಮಿಟಿಯ ಕಾರಭಾರದ ಬಗ್ಗೆ ನೇಮಗಳಾಗಿವೇನು?

***

ಕುಮಕಿ ಲಾಯಸನ್ಸುಗಳ ಬಗ್ಗೆ ಕೆಲ ಪ್ರಶ್ನೆಗಳು. ಕಾನಡಾ ಜಿಲ್ಲೆಯಲ್ಲಿ ಕಾಡು ಬೆಳೆಯುವ ಕ್ಷೇತ್ರವೆಷ್ಟು? ಸಾಗುಭೂಮಿಯೆಷ್ಟು? ಸಾಗುಭೂಮಿಯಲ್ಲಿ ಕಾಡಿನ ಉಪದ್ರವವೆಳ್ಳ, ಅಂದರೆ, ಕಾಡು ಮೃಗಗಳಿಂದ ವಿಶೇಷ ಹಾವಳಿಗೀಡಾಗುವ ಕ್ಷೇತ್ರವೆಷ್ಟು? ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಶಿರ್ಸಿ, ಸಿದ್ದಾಪುರ ಮೊದಲಾದವುಗಳಂಥ ಊರವಸ್ತಿಯಲ್ಲಿ ಸುರಕ್ಷಿತ ಸಾಗು ಆಗಬಹುದಾದ ಬೇಸಾಯ ಕ್ಷೇತ್ರವೆಷ್ಟು? ವಿಶೇಷ ಉಪದ್ರವವು ಯಾವ ಪ್ರಾಣಿಗಳಿಂದೊದಗುತ್ತದೆ? ಅದಕ್ಕೆ ಬೆಟ್ಟದ ನೆರೆಯು ಕಾರಣವಲ್ಲೇನು? ಇಂಥ ಪ್ರದೇಶದೊಳಗಿನ ಬೆಟ್ಟ ರಕ್ಷಣೆಯ ಬಗ್ಗೆ ಸ್ಥಾನಿಕ ಅಧಿಕಾರಿಗಳು ಎಷ್ಟು ಕುಮಕಿಗಳನ್ನು ರೈತರಿಗೆ ಕೊಟ್ಟಿರುವರು? ಕಳೆದ ೫ ವರುಷಗಳಲ್ಲಿ ಲಾಯಸನ್ಸುದಾರರ ಸಂಖ್ಯೆಯೆಷ್ಟು? ಕಡಿಮೆಯಾಗಿದ್ದರೆ, ಯಾರ ಯಾರ ಲಾಯಸನ್ಸುಗಳು ರದ್ದು ಮಾಡಲ್ಪಟ್ಟವು? ಕಾರಣಗಳ್ಯಾವವು? ಅಸಹಯೋಗದ ನೆವದಿಂದ ರದ್ದಾದವೆಷ್ಟು? ಈ ಅಸಹಯೋಗಿಗಳಿಂದ ಕಾಯಿದೆಯಂತೆ, ತೀರ್ವೆ ವಸೂಲಾಗಿದೆಯೋ, ಹೇಗೆ? ಅಸಹಯೋಗದ ಕಾರಣದಿಂದ ಲಾಯಸನ್ಸು ರದ್ದು ಮಾಡುವ ಹುಕುಮು ಸ್ಥಾನಿಕ ಅಧಿಕಾರಿಗಳಿಂದ ಹೊರಟಿತೋ, ಅಥವಾ ಮುಂಬಯಿ ಸರಕಾರದಿಂದ ಹೊರಟಿತು? ಇವೇ ಮುಂತಾದ ಪ್ರಶ್ನೆಗಳು.

***

ಸಾಣೇಕಟ್ಟೆಯ ಉಪ್ಪಿನ ಸಂಘದ ಬಗ್ಗೆ ಚೌಕಶಿ ಮಾಡಬಹುದು. ಸಾವುಕಾರರು ಮಾರುವ ಉಪ್ಪಿನ ಮಣಗಿನ ದರವೆಷ್ಟು? ಸರಕಾರಕ್ಕೆ ಮಾಡುವ ಅರ್ಜಿಯಲ್ಲಿ ನಮೂದಿಸಿದ ದರದಂತೆ ಲ್ಯಾಸನ್ಸದಾರರಿಗೆ ಉಪ್ಪು ಸಿಗುತ್ತದೋ ಹೇಗೆ? ಉಪ್ಪಿನ ಸಾವುಕಾರರು ತಮ್ಮ ಡಿಪೋಗಳನ್ನು ಸ್ಥಿರಪಡಿಸಲು ಉಪ್ಪಿನ ವ್ಯಾಪಾರವನ್ನೆಲ್ಲ ಒಕ್ಕಟ್ಟು ಮಾಡಲು ಲ್ಯಾಸನ್ಸದಾರರಿಂದ ಟೋಲ, ದೋಣಿ ಬಾಡಿಗೆ, ಸುಂಕ, ಕೊಡಲಾದ ಟೆಲ್ಲರ ಖರ್ಚೆಂದು ಅಲ್ಲಲ್ಲಿನ ಡಿಪೋದಲ್ಲಿ ಇಟ್ಟ ದರದಿಂದ ಮುರಕೊಳ್ಳುವ ಕ್ರಮವು ಚಾಲು ಇದೆಯೋ, ಹೇಗೆ? ಡಿಪೋದಲ್ಲಿ, ಸಾಣೇಕಟ್ಟೆಯಲ್ಲಿ ಉಪ್ಪಿನ ಮಾಲ್ಕೀ ದರ ಠರಾಯಿಸುವವರ್ಯಾರು? ಉಪ್ಪಿನ ಪಟ್ಟಣದಲ್ಲಿ ಉಪ್ಪನ್ನೊಯ್ಯುವ ಲ್ಯಾಸನ್ಸದಾರರಿಗೆ ಸಾಣೇಕಟ್ಟೆಯಲ್ಲಿ ಒಂದು ದರ, ಆತನ ಕಡೆಯಲ್ಲಿ ಒಯ್ಯುವವರಿಗೆ ಮತ್ತೊಂದು ದರ, ಹೀಗೆ ವೃತ್ತಪತ್ರಗಳಲ್ಲಿ ತಕರಾರು ಬಂದಿದ್ದು, ಸರಕಾರದ ಲಕ್ಷ್ಯಕ್ಕೆ ಬಂದಿರುವದೇನು? ಈ ಬಗ್ಗೆ ಸರಕಾರವು ಏನು ಯೋಜನೆ ಮಾಡಿದೆ? ಮಾಡಲಿಕ್ಕಿದೆ? ಸದಾಶಿವಗಡದ ಪ್ರಮುಖರಿಗೆ ಕಳೆದ ಎಪ್ರಿಲ್ ತಿಂಗಳಿನಲ್ಲಿ ಮಿ॥ ಹೇಗರು ನುಡಿದಂತೆ, ಮಾಲೀಕರ ಹತ್ತಿರ ಉಪ್ಪಿನ ದರ ಇಳಿಕದ ಆಲೋಚನೆ ನಡೆಯಿತೇನು? ನಡೆದರೆ, ಅದರ ಫಲವೇನಾಯಿತು? ಅಗ್ಗವಾಗಿ ಉಪ್ಪು ಸಿಗುವ ಇತರ ವ್ಯವಸ್ಥೆ ಮಾಡುತ್ತೇವೆಂದು ಮಿ॥ ಹೇಗರು ನುಡಿದದ್ದರಷ್ಟೇ ಆ ವ್ಯವಸ್ಥೆ ಯಾವದು? ಅದರ ಫಲವೇನು? ಉಪ್ಪಿನ ಮಾಲೀಕರಿಗೆ ಸಹಕಾರ ಕಾಯಿದೆಯ ಆಶ್ರಯವನ್ನಿತ್ತದ್ದರಿಂದ, ಉಪ್ಪಿನ ವ್ಯಾಪಾರದ ಮೇಲಾಟವು ನಾಮಶೇಷವಾಗಿದ್ದದ್ದು ವಸ್ತುಸ್ಥಿತಿಯಲ್ಲೇನು? ಈ ಬಗ್ಗೆ ಸರಕಾರದ ಯಾವ ವಿಚಾರವು ನಡೆದದೆ? ಉಪ್ಪಿನ ಸಂಘವಾಗುವ ಮೊದಲು ಉಪ್ಪಿನ ಮಣಗಿನ ಮಾಲಕಿ ದರ ಹೇಗಿತ್ತು? ಉಪ್ಪಿನ ಸಂಘವಾದಂದಿನಿಂದ ಅದು ಹೇಗೆ, ಹೇಗೆ ಏರಿತು? ಉಪ್ಪನ್ನು ತಯಾರಿಸುವ ದಗವು ಎಷ್ಟಿತ್ತು? ಈಗ ಎಷ್ಟಿದೆ?

***

ಕುಮಟೆಯೊಳಗಿನ ಪ್ರಯೋಗ ಹೊಲದ ಕಾರಭಾರದ ಬಗ್ಗೆ ಕೆಲ ಪ್ರಶ್ನೆಗಳು. ಈ ಹೊಲಕ್ಕೆ ಸರಕಾರವು ಕೊಟ್ಟ ರಕಮೆಷ್ಟು? ಪ್ರಜೆಗಳು ತೆತ್ತ ಹಣವೆಷ್ಟು? ಇವರು ಜಿಲ್ಲೆಯಲ್ಲಿ ಯಾವ ಯಾವ ಹೊಸ ಹೊಸ ಪ್ರಯೋಗ ಸುಧಾರಣೆಗಳನ್ನೇರ್ಪಡಿಸಿದರು? ಒಕ್ಕಲಿಗರಿಗೆ ಅವುಗಳೊಳಗೆ ಎಷ್ಟು ಗ್ರಾಹ್ಯವಾದವು? ಸ್ಥಾನಿಕ ಪರಿಸ್ಥಿತಿಗೆ ಅವರ ಪ್ರಯೋಗಗಳು ಅನುಕೂಲವಾಗಿರುವವೇನು? ಸ್ಥಾನಿಕ ಸಾಮಗ್ರಿಗಳು ಈ ಪ್ರಯೋಗಗಳಿಗೆ ಎಷ್ಟರ ಮಟ್ಟಿಗೆ ಉಪಯೋಗಕ್ಕೆ ಬೀಳುತ್ತವೆ? ಈ ಹೊಲದ ಸರಂಜಾಮಿಗೆ ವಾರ್ಷಿಕ ಖರ್ಚು ಏನು ತಗಲುತ್ತದೆ? ಈ ಖರ್ಚಿಗೂ ಬೇಸಾಯಗಾರರಿಗುಂಟಾದ ಲಾಭಕ್ಕೂ ಪ್ರಮಾಣವ್ಯಾವದು? ಈ ವರೆಗೆ ಇವರಿಂದ ಮೊದಲಾದ ಕಾಯಂ ಕಟ್ಟಡಗಳಿಗೆ ಎಷ್ಟು ಖರ್ಚು ತಗಲಿತು?

***

ಕಟ್ಟಿಗೆ ಡಿಪೋಗಳ ದರ ಏರಿಕೆಯ ಬಗ್ಗೆ ಒಂದು ಪ್ರಶ್ನೆ. ಡಿಪೋಗಳಲ್ಲಿ ದರ ಏರಿಸುವ ಕಾರಣವೇನು? ಕಂಟ್ರಾಕ್ಟರರಿಗೆ ಖರ್ಚು ಹೆಚ್ಚಾಗುತ್ತಿದ್ದರೆ, ಎಷ್ಟು ಹೆಚ್ಚು ಖರ್ಚಾಗುತ್ತದೆ? ಖರ್ಚು ಹೆಚ್ಚು ತಗಲುತ್ತಿರುವಾಗ, ನಾ ಹಿಂದೆ, ನೀ ಮುಂದೆ, ಎಂದು ಸವಾಲು ಮಾಡುತ್ತಿರುವದು ನಿಜವೇನು? ಕಂಟ್ರಾಕ್ಟರರು ಸಿಗದೆ, ಎಲ್ಲೆಲ್ಲಿ ಎಷ್ಟೆಷ್ಟು ವರುಷ ಡಿಪೋಗಳು ತಡಕೊಂಬ ಮಾಡಲ್ಪಟ್ಟವು? ಆ ಬಗ್ಗೆ ನಾಗರಿಕರ ದೂರುಗಳು ಸರಕಾರಕ್ಕೆ ಬಂದವೋ ಹೇಗೆ? ಪರವಾನಿಗಿ ಪಡೆದು ಉರುವಲವನ್ನು ಪೂರೈಸಿಕೊಳ್ಳಲು ನಾಗರಿಕರು ತಯಾರಿಲ್ಲೇನು? ಇದ್ದರೆ, ಪರವಾನಿಗಿ ಕೊಡಲಿಕ್ಕೆ ಅಡ್ಡಿಯೇನಿದೆ? ಕಾರವಾರದ ಡಿಪೋ ಸದಾಶಿವಗಡದ ಹೊಳೆಯಿಂದ ೨ ಮೈಲು ಅಂತರದಲ್ಲಿದ್ದು, ಅಲ್ಲಿ ಉರುವಲವನ್ನು ೪ ಆಣೆಗೆ ಮಣದಂತೆ ಮಾರಲು ಕಂಟ್ರಾಕ್ಟರರು ಸಿಗುತ್ತಿರುವಾಗ, ಹೊಳೆಯಿಂದ ಬರೇ ೧ ಮೈಲು ದೂರವಿದ್ದ ಸದಾಶಿವಗಡ ಡಿಪೋದಲ್ಲಿ ಮಾತ್ರ, ೪॥ ಆಣೆ ಕೆಳಗೆ ಮಾರಲು ಪೂರೈಸದ ಕಾರಣವೇನು? ಡಿಪೋ ಸ್ಥಾನದಿಂದ ಕಂಟ್ರಾಕ್ಟರರಿಗೆ ಕಟ್ಟಿಗೆ ಮಾರುವ ಮಕ್ತೆ ಸಿಗುತ್ತದರಿಂದ, ದರ ಪೂರೈಸುವದಿಲ್ಲೆಂದು ದರವನ್ನು ಏರಿಸುವ ಹಂಚಿಕೆಯಿಲ್ಲೇನಿದು? ಈ ಬಗ್ಗೆ ಸರಕಾರದ ಯೋಜನೆ ಏನು? ಬಂದೀ ಕಾಲದಲ್ಲಿ ಬೇಕಾದವರಿಗೆ ಡಿಪೋಗಳನ್ನಿಡಲು ಸರಕಾರವು ಅಪ್ಪಣೆ ಕೊಡುವದೇನು? ಅಥವಾ ಡಿಪೋಗಳಲ್ಲಿ ಯಾವದೇ ದರವಿರಲಿ, ಕಂಟ್ರಾಕ್ಟರರ ಒಕ್ಕಟ್ಟಿನ ಸ್ವರೂಪವನ್ನು ಅರಿಯಲು ಸರಕಾರವು ಡಿಪೋ ಕ್ಷೇತ್ರದೊಳಗಿನ ನಾಗರಿಕರಿಗೆ ಪರವಾನಿಗಿಯಿಂದ ಉರುವಲವನ್ನು ಸಂಗ್ರಹಿಸಿಕೊಳ್ಳಲು ಅಪ್ಪಣೆಯನ್ನೀಯುವದೇನು?

***

ಮೋಟಾರ ಬಂಡಿಗಳ ಬಗ್ಗೆ ಮತ್ತೊಂದು ಪ್ರಶ್ನೆ. ನಮ್ಮ ಜಿಲ್ಲೆಯಲ್ಲಿ ಮೋಟಾರಗಳನ್ನು ಹಳ್ಳಿ ಚಾಪುರುಗಳಿಂದಲೇ ನಡಿಸಬೇಕೆಂಬ ನಿರ್ಬಂಧವಿದೆಯೋ, ಹೇಗೆ? ಇದ್ದರೆ, ಏಕೆ? ದಕ್ಷಿಣ ಕನ್ನಡದಲ್ಲಿ ಮೋಟಾರುಗಳು ಘನ ಚಾಪುರುಗಳಿಂದ ಚಲಾವಣೆ ಆಗುವದಿಲ್ಲೇನು? ಮಾರ್ಗಗಳಿಗೆ ಪೆಟ್ಟು ತಗಲಬಾರದೆಂದು ಈ ನಿರ್ಬಂಧವಿದ್ದರೆ, ಇಲ್ಲಿಯ ಮಾರ್ಗಗಳಿಗೂ, ದಕ್ಷಿಣ ಕನ್ನಡದೊಳಗಿನ ಮಾರ್ಗಗಳಿಗೂ ಭೇದವೇನಿದೆ? ಈ ನಿರ್ಬಂಧದ ಮೂಲಕ ಮೋಟಾರು ಟಿಕೇಟುಗಳ ದರ ಹೆಚ್ಚಾಗಲು ಕಾರಣವಾಗಿದಲ್ಲೇನು? ದಕ್ಷಿಣ ಕನ್ನಡದಲ್ಲಿ ಮೋಟಾರ ವಾಹನದ ಪ್ರತಿ ಮೈಲಿನ ದರವೇನು? ಹಾಗು ಇಲ್ಲಿಯ ದರವೇನು?

ಸತ್ಯಾಗ್ರಹೀ

ಪರ್ಯಾಯ ಸಂಚಿಕೆ.

ಉಡುಪಿ ಶ್ರೀ ಕೃಷ್ಣನ ಪರ್ಯಾಯ
ಮಹೋತ್ಸವದ ಗೌರವಾರ್ಥವಾಗಿ!
ಡಿಸೆಂಬರ ಆಖೈರಿಗೆ ಮುಗಿಯುವ
ಕೊಂಗ್ರೆಸ್ಸಿನ ಗೌರವಾರ್ಥವಾಗಿ!!

ಸಮಸ್ತ ವಿಷಯಗಳೂ ಅನೇಕ ಚಿತ್ರಗಳೊಡನೆ ಚರ್ಚಿಸಲ್ಪಡುವವು. ಹತ್ತು ಹದಿನೆರಡು ಫುಲ್‌ಸ್ಕೇಪ್ ಸ್ಯಾಜಿನ ಆರ್ಟಪೇಪರಿನ ಪುಟಗಳ ಮೇಲೆ ರಾಜಕೀಯ ಸಾಮಾಜಿಕ, ಮತವಿಷಯಿಕ ಚಿತ್ರಗಳು ಮುದ್ರಿಸಲ್ಪಡುವವು.

ವಿಷಯಗಳು:—(೧) ರಾಜಕೀಯ, (೨) ಲೋಕವೃತ್ತಾಂತ, (೩) ಮತವಿಷಯಿಕ, (೪) ಸಾಮಾಜಿಕ, (೫) ವೈದ್ಯಕೀಯ, (೬) ವೈಜ್ಞಾನಿಕ, (೭) ಔದ್ಯೋಗಿಕ, (೮) ಕೃಷಿ, (೯) ಸಾಹಿತ್ಯ, (೧೦) ವರ್ತಮಾನಸಾರ—ಇತ್ಯಾದಿ, ಇನ್ನೂ ಎಷ್ಟೋ ಭಾವಗರ್ಭಿತವೂ, ಉದ್ಬೋಧಕವೂ ಆಗಿರುವ ಲೇಖನಗಳು ಉತ್ತಮ ಲೇಖಕರಿಂದ ಬರೆಯಲ್ಪಡುವವು.

ಇಡೀ ಕರ್ನಾಟಕದ ಎಲ್ಲಾ ತರದ ಜನರ ಕೈಗೂ ಇದು ಸೇರುವದರಿಂದ ಜಾಹೀರಾತುಗಳನ್ನು ಕೊಡುವವರಿಗೆ ಸುಸಂಧರ್ಭ. ದರ:— ಸಾ[illegible] ಪುಟ ಒಂದಕ್ಕೆ ರೂ. ೧೦, ಅರ್ಧ ಪುಟಕ್ಕೆ ರೂ. [illegible] ಪುಟಕ್ಕೆ ರೂ. ೪, ಒಂದು ಎಂಟನೇ ಪುಟಕ್ಕೆ ರೂ. [illegible] ಪ್ರಕಟನೆಗಳನ್ನು ಡಿಸೆಂಬರ ಅಖೈರಿಯೊಳಗೆ ಕಳುಹಿಸಬೇಕು.

ಗ್ರಾಹಕರೂ ಡಿಸೆಂಬರ ಅಖೈರಿಯೊಳಗೇನೇ ಹಣವನ್ನು ಬರಕೊಂಡರೆ ಒಳ್ಳೆಯದು. ಸಂಚಿಕೆಯ ಒಂದು ಪ್ರತಿಗೆ ಸತ್ಯಾಗ್ರಹೀ ಚಂದಾದಾರರಿಗೆ ಆಣೆ ಆರು; ಇತರರಿಗೆ ಆಣೆ ಎಂಟು ಹದಿನೆರಡು ಪ್ರತಿಗಳಿಗಿಂತ ಕಡಿಮೆ ವಿ. ಪಿ. ಮಾಡುವದಿಲ್ಲ. ಕಡಿಮೆ ಕೊಳ್ಳುವವರು ಟಪಾಲು ಚೀಟು ಮೂಲಕವಾಗಲೀ, ಮನಿ-ಆರ್ಡರು ಮೂಲಕವಾಗಲೀ ಹಣವನ್ನು ಪೂರಾ ಕಳುಹಿಸಬೇಕು. ಹೆಚ್ಚು ಕೊಳ್ಳುವವರು ರೂಪಾಯಿ ಎರಡನ್ನು ಮುಂದಾಗಿ ಕಳುಹಿಸಬೇಕು. ಸಂಚಿಕೆಯು ಜನವರಿ ತಾರೀಖು ೨೦ರ ಒಳಗೆ ಪ್ರಕಟಿಸಲ್ಪಡುವದು. ಸತ್ಯಾಗ್ರಹಿಯ ಆಕಾರದ್ದೇ. ಆರ್ಟಪೇಪರಿನ ರಕ್ಷಾಪತ್ರ (ಕವರು) ವಿದ್ದು, ೩೨—೪೦ ಪುಟಗಳ ಲೇಖನಗಳಿರುವವು. ಉತ್ತಮ ಕಾಗದದ ಮೇಲೆ ಮುದ್ರಣ.

ಉಡುಪಿ, ತಾ. ೧೮-೧೧-೨೭. } ವ್ಯವಸ್ಥಾಪಕ, ಸತ್ಯಾಗ್ರಹೀ ಕಾರ್ಯಾಲಯ.

ಕಾನಡಾವೃತ್ತ.

[illegible] ಮಾರ್ಗಶೀರ್ಷ ಕೃಷ್ಣ [illegible]

ಸದ್ಯಸ್ಥಿತಿ.

ಪೂರ್ವಸಂಕಲ್ಪದಂತೆ, [illegible] ರಾಷ್ಟ್ರೀಯ ಸಭೆಯ ಅಧಿವೇಶನವು ಕಾಕಿನಾಡದಲ್ಲಿ ನಿನ್ನೆ ಜರುಗುವದಿತ್ತು. ಆದರೆ ಪೂರ್ವದಂತೆ ಗುಂಟೆ ಒದಗಿದ [illegible] ದಿಯ ಮಾರ್ಗವು [illegible] ಬಂಗಾಲ ಬಿಹಾರ ಮೊದಲಾದ ಪ್ರಾಂತಗಳ [illegible] ಅಧಿವೇಶನವನ್ನು [illegible] ಕಮಿಟಿಯ ಅಧಿಪತಿಗಳು [illegible] ದರು ದೇಶಬಂಧು ಚಿತ್ತರಂಜನದಾಸರವರ ಅತ್ಯಾಗ್ರಹವನ್ನು ಮಾಡಿದದಿಂದ ಶ್ರೀ| [illegible] ವೆಂಕಟಪ್ಪಯ್ಯನವರು, [illegible] ಅಧಿವೇಶನವನ್ನು ೩ ದಿವಸ ಮುಂದೂಡಿದರು. ಅಂದರೆ, ಅಧಿವೇಶನವು [illegible] ಕಾಕಿನಾಡಿನಲ್ಲಿ ಮೌ| ಮಹಮ್ಮದ ಅಲಿಯವರ ನೇತೃತ್ವದಲ್ಲಿ ನಡೆಯುವದು. [illegible] ಸವು ಸಮೀಪಿಸಿದಂತೆ, [illegible] ಸದ್ಯಸ್ಥಿತಿಯು ಚರ್ಚೆ ನಡೆದಿದೆ. [illegible] ಗಿನ ಕಾರ್ಯದ ಆಲೋಚನೆ [illegible] ಮಾಡಿದೆವು, ಮುಂದೇನು ಮಾಡಬೇಕು, ಎಂಬ ವಿಚಾರಗಳು ಅಲ್ಲಲ್ಲಿ ಪ್ರಕಟವಾಗುತ್ತಲಿವೆ. ಇಂಥ ಸಮಯದಲ್ಲಿ ಸದ್ಯಸ್ಥಿತಿಯ ವಿಷಯ ನಾಲ್ಕು ಮಾತು ಬರೆಯುವದು ಸಮಯೋಚಿತವಾಗುವದೆಂದು ಕೋರಿಕೆ.

ಸದ್ಯಸ್ಥಿತಿಯಲ್ಲಿ [illegible] ರಾಜ್ಯ ಈ [illegible] ರಾಷ್ಟ್ರೀಯ ಜಾತಿಕೆ [illegible] ಳನ್ನು ಪರಿ[illegible] ಅಳರಸರನ್ನು [illegible] ತರಲು [illegible] ವಸ್ತ್ರ ದಾಸ-ನೆಹರೂಂವರ ನೇತೃತ್ವದೊಳಗಿನ ಸ್ವರಾಜ್ಯ ಪಕ್ಷದವರ ಅಪೂರ್ವ ದಿಗ್ವಿಜಯದಿಂದುಂಟಾದ ಪರಿಸ್ಥಿತಿಯು ಪ್ರಾಮುಖ್ಯವಾಗಿ ಕಲೆದೋರುತ್ತಿದೆ. ದಿಲ್ಲಿಯೊಳಗಿನ ವಿಶೇಷ ಅಧಿವೇಶನವು ತಹಕೂಬ ಮಾಡಿದ ಕೌನ್ಸಿಲು ಬಹಿಷ್ಕಾರದಿಂದ ಸ್ವರಾಜ್ಯ ಪಕ್ಷಕ್ಕೆ ದೇಶದಲ್ಲಿ ತಮ್ಮ ಉಮೇದವಾರ ಕಾದುರೆಗಳನ್ನು ಕಯ್ಯೇತ್ತಿನಲ್ಲಿ ಗೆಲ್ಲಲು ಬಲು ಅನುಕೂಲವಾಯಿತು. ಇದನ್ನು ಸ್ವರಾಜ್ಯ ಪಕ್ಷದ ನಾಯಕರೇ ಒಪ್ಪಿಕೊಂಡ ಮಾತು. ಕೌನ್ಸಿಲು ಚುನಾವಣೆಯಲ್ಲಿ ಸ್ವರಾಜ್ಯ ಪಕ್ಷದವರು ರಾಷ್ಟ್ರೀಯ ಸಭೆಯ ಗೌರವವನ್ನಾಶ್ರಯಿಸಿ, ತಮ್ಮ ಪಕ್ಷದ ಉಮೇದವಾರರನ್ನು ಪ್ರತಿನಿಧಿಗಳನ್ನಾಗಿ ಕಳಿಸಿದರು. ಈ ಪಕ್ಷವು ಸಂಪಾದಿಸಿದ ವಿಜಯದಿಂದ ಅನೇಕ ಪ್ರಾಂತಗಳಲ್ಲಿ ಅಳರಸರಿಗೊಂದು ಪೆಟ್ಟು ಉಂಟಾಗಿದೆಂಬುದು ಸ್ಪಷ್ಟವಿದೆ. ಮುದ್ರಾಸ ಕೌನ್ಸಿಲಿನಲ್ಲಿ ಸ್ವರಾಜ್ಯ ಪಕ್ಷಕ್ಕೂ, ಅಳರಸರಿಗೂ ಜಗ್ಗಾಟ ನಡೆದಿದೆ. ಮಧ್ಯಪ್ರಾಂತ, ಮುಂಬಯಿ, ಬಂಗಾಲ ಮೊದಲಾದ ಪ್ರಾಂತಗಳಲ್ಲಿ [illegible] ಕಾಯಿದೆ ಕೌನ್ಸಿಲಿನಲ್ಲಿ ಚಲೋ ತಿಕ್ಕಾಟ ನಡೆಯುವದೆಂದು ಹೇಳಬಹುದು.

ಬಂಗಾಲದಲ್ಲಂತೂ ಸ್ವರಾಜ್ಯ ಪಕ್ಷದ ಪ್ರಾಬಲ್ಯದಿಂದ ಹೊಸ ಕೌನ್ಸಿಲುಗಳನ್ನು ಸುಸೂತ್ರವಾಗಿ ನಡಿಸಲು ಅನನುಕೂಲವಾಗಬಾರದೆಂದು ಪ್ರಾಂತಾಧಿಪರಾದ ಪ್ರತ್ಯಕ್ಷ ಲಿಟನ್ [illegible] ಕರೆದೊಯ್ದು [illegible] ದಿವಾಣರನ್ನು [illegible] ನಿಮಂತ್ರಿಸಿ, ಲಿಟನ್ [illegible] ಸ್ವರಾಜ್ಯ ಪಕ್ಷದ ಪ್ರಾಬಲ್ಯ [illegible] ಅವಶ್ಯಕತೆ [illegible] ಅವರೇ ಒಪ್ಪಿ [illegible] ಕೌನ್ಸಿಲು ಪ್ರವೇಶಕರ [illegible] ಯಾರೂ ಒಪ್ಪ [illegible] ದಿವಾಣರನ್ನು [illegible] ಅಧಿಕಾರಸ್ಥಾನಗಳನ್ನು [illegible] ತಮ್ಮ ತತ್ವಗಳನ್ನು ಸ್ಥಿರ [illegible] ನಾವು ಬ[illegible] ತಮ್ಮ ಪಕ್ಷದ [illegible] ರಾಷ್ಟ್ರೀಯ ಬೇಡಿಕೆ [illegible] ಹೊರತು ಅಧಿಕಾರಸ್ಥಾನವನ್ನು [illegible] ತತ್ವವನ್ನು [illegible] ಮಾಡಿರುವರು ದೇಶಬಂಧು [illegible] ನಿಮಂತ್ರಿಸಿ, ಬ್ರಿ[illegible] ಒಂದು [illegible] ಅತಿ [illegible] ಅಮೇರಿಕ[illegible] ದೇಶ[illegible] ಮಹಾತ್ಮರು ಕಾರಾಗೃಹವಾಸದಲ್ಲಿ ನರಳುತ್ತಿರುವಾಗ ಅವರ ಶಿಷ್ಯರೆನಿಸಿಕೊಳ್ಳುವವರಿಗೆ [illegible] ದಿವಾಣರನ್ನು ಸೇರಿಸಲು ಆಮಂತ್ರಿಸಿದ್ದು ಸೋಜಿಗವೆಂದು ಅಮೇರಿಕೆಯವರ ಮತ. ಅದೇನೂ ಇರಲಿ. ಲಾರ್ಡ ಲಿಟನ್‌ರವರ ಆಲೋಚನೆಯಿಂದ ಹಿಂದೀ ರಾಜಕಾರಣದಲ್ಲಿ ಸ್ವರಾಜ್ಯ ಪಕ್ಷಕ್ಕೆ ಅನಪೇಕ್ಷಿತ ಮಹತ್ವವು ಪ್ರಾಪ್ತವಾಗಿದೆ. ಸ್ವರಾಜ್ಯ ಪಕ್ಷವನ್ನು ರಾಷ್ಟ್ರೀಯ ಸಭೆಯು ಎಷ್ಟರ ಮಟ್ಟಿಗೆ ಪುರಸ್ಕರಿಸತಕ್ಕದ್ದು ಎಂಬದೊಂದು ಮಹತ್ವದ ಪ್ರಶ್ನೆಯು ಅಧಿವೇಶನದಲ್ಲಿ ಚರ್ಚೆಯಾಗುವದು.

ರಾಷ್ಟ್ರೀಯ ಸಭೆಯು ಇನ್ನೊಂದು ಮಹತ್ವದ ಪ್ರಶ್ನೆಯನ್ನು ಚರ್ಚಿಸಬೇಕಾಗುವದು. ಮಹಾತ್ಮರ ಗೈರಹಾಜರಿಯಲ್ಲಿ ವಿಧಾಯಕ ಕಾರ್ಯಕ್ರಮವು ಅನೇಕ ಕಾರಣಗಳಿಂದ ಹಿಂದೆ ಬಿದ್ದಿದೆ; ಅಂತಃಕಲಹದಲ್ಲಿಯೇ ಕಾಲಾಪವ್ಯಯವಾಗುತ್ತಿದೆ, ಖಾದಿ, ಅಹಿಂಸಾಪ್ರಚಾರ, ಅಸ್ಪೃಶ್ಯತಾನಿವಾರಣ, ಮೊದಲಾದ ದೇಶಾರೋಗ್ಯಪರ ಯೋಜನೆಗಳು ದಿನೇ ದಿನೇ ಕಳೆಗುಂದುತ್ತಲಿವೆ. ವಿಜಾಪುರದಲ್ಲಿ ಶ್ರೀ| ರಾಜಗೋಪಾಲಾಚಾರ್ಯರು ಈ ಬಗ್ಗೆ ಎಚ್ಚರಿಕೆಯನ್ನಿತ್ತು, ಅದನ್ನೇ ನಿಷ್ಠೆಯಿಂದ ಪಾಲಿಸಿ, ರಾಷ್ಟ್ರೋದ್ಧಾರವನ್ನು ಮಾಡಲೆತ್ನಿಸಿರೆಂದು ಅವರು ಬೋಧಿಸಿದ್ದರು. ಈ ಕ್ರಮವನ್ನು ರಾಷ್ಟ್ರದಲ್ಲಿ ವಿಶೇಷ ಉತ್ಸಾಹದಿಂದ ಪುರಸ್ಕರಿಸಲು ತಕ್ಕ ಉಪಾಯಯೋಜನೆ ಮಾಡುವದು ರಾಷ್ಟ್ರೀಯ 7 ೨ ಪ್ರಥಮ ಕರ್ತವ್ಯವು. ಸಾಮಾಜಿಕ ಕಲಹಗಳಿಂದ ಮಹಾತ್ಮರು ವಿಧಿಸಿದ ವಿಧಾಯಕ ಕಾರ್ಯಕ್ರಮವು ಪ್ರಗತಿ ಹೊಂದುವ ಬದಲು, ಪರಾಗತಿಹೊಂದಿರುವದೆಂದು ಹೇಳಿದರೆ, ಅಯಥಾರ್ಥವಾಗದು. ಯಾಕಂದರೆ, ಸ್ವತಂತ್ರ ವಿಚಾರಿಗಳೆಂದು ಖ್ಯಾತಿಗೊಂಡ ದೇಶಭಕ್ತ ಲಾಲಾ ಲಜಪತರಾಯರು ಬಾರ್ಡೋಲಿಯ ಕಾರ್ಯಕ್ರಮವನ್ನೇ ಮತ್ತೂ ಪುರಸ್ಕರಿಸಿರಿ, ಸದ್ಯಸ್ಥಿತಿಯಲ್ಲಿ ರಾಷ್ಟ್ರಪುರುಷನ ಆರೋಗ್ಯಜೀವನವು ಇದೇ ಎಂದು ಕಳೆದ ೩ನೇ ತಾರೀಖಿಗೆ ನುಡಿದಿರುವರು. ರಾಷ್ಟ್ರಸಂಘಟನೆಯ ಮೂಲ ಜೀವನವು ಬಾರ್ಡೋಲಿ ಕಾರ್ಯಕ್ರಮದಲ್ಲಿ ಪ್ರತಿಬಿಂಬಿತವಾಗಿದೆ. ಅದನ್ನೇ ಪುರಸ್ಕರಿಸಿದ ಹೊರತು, ಕಾಯಿದೇ ಭಂಗ ಮೊದಲಾದ ತೀಕ್ಷ್ಣ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸುವದು ಗಂಡಾಂತರಪ್ರದವೆಂದು ಲಾಲಾಜಿಯವರು ಮುಂದಾಗಿ ಎಚ್ಚರ ಕೊಟ್ಟಿರುವರು.

ಇನ್ನೊಂದು ಮಾತನ್ನು ಯಾರೂ ಮರೆಯಲಾಗದು. ರಾಷ್ಟ್ರೋದ್ಧಾರಕ್ಕಾಗಿ ಕಾಕಿನಾಡಿನ ಯಾತ್ರೆಯನ್ನು ಕೈಕೊಂಡ ದೇಶಸೇವಕರಂತೂ ಇದನ್ನು ತಪ್ಪಗೆ ಲಕ್ಷದಲ್ಲಿಡತಕ್ಕದ್ದು. ಅದೇನು? ರಾಜಕೀಯ ಐಕ್ಯತೆ. ಸಭೆಯಲ್ಲಿ ಅನೇಕ ಪ್ರಾಂತಗಳ, ಅನೇಕ ಸ್ವಭಾವದ ದೇಶಸೇವಕರು ಒಟ್ಟಾಗುವರು. ಈ ಸಮಯ ಯಾರೂ ಪಕ್ಷಾಂಧತೆಯನ್ನು ಎಂದೂ ಹಿಡಿಯಲಾಗದು. ಮಹಾತ್ಮರ ದೋರಣದಂತೆ, ಪ್ರತಿಪಕ್ಷಿಗಳ-ಪರಪಕ್ಷಿಗಳ ಅಂಬೋಣವನ್ನು ವಿನಾಯದಿಂದ ವಿಚಾರಿಸಿ, ಇಷ್ಟವಿದ್ದದ್ದನ್ನು ಕೈಕೊಂಡು ರಾಷ್ಟ್ರಕ್ಕೆ ಪಾರತಂತ್ರ್ಯ ಶೃಂಖಲೆಯಿಂದ ವಿಮೋಚಿಸಲು ಎಲ್ಲರೂ ತನು ಮನ-ಧನ ಸಹಾಯರಾದಬೇಕು. ಯಾವದೇ ಪಕ್ಷದವರಿರಲಿ, ಎಲ್ಲರ ಹೇತುವು ಉದ್ದಿಷ್ಟವು ದೇಶೋದ್ಧಾರವೇ ದೆಂದು ಎಲ್ಲರೂ ನೆನಿಸತಕ್ಕದ್ದು. ಪ್ರಕೃತಿಭೇದದಂತೆ, ಪರಿಸ್ಥಿತಿಯ ಅಕಲನಾಶಕ್ತಿಯಂತೆ, ಕಾರ್ಯಕ್ರಮವು ಭಿನ್ನವಾಗುವದು ಸಹಜವೆಂದು ಎಲ್ಲರೂ ಎಣಿಸತಕ್ಕದ್ದು. ರಾಷ್ಟ್ರಕಾರ್ಯ ಮಾಡಲಿಚ್ಛಿಸುವ ಯಾವನೊಬ್ಬ ದೇಶ

ಬಾಂಧವರನ್ನು ರಾಷ್ಟ್ರೀಯ ಸಭೆಯು ತೊರದೂಡುವಂಥ ಕಾರ್ಯಕ್ರಮಲೇಶವನ್ನು ಸಹ ಕೈಕೊಳ್ಳಲಾಗದು. ಸ್ವಭಾವಭೇದದಂತೆ, ಅವರವರಿಗನುಕೂಲವಾಗುವಂತೆ, ರಾಷ್ಟ್ರೋದ್ಧಾರದ ಉಪಾಯಯೋಜನೆಯಾಗಬೇಕು. ಮಹಾತ್ಮರು ನುಡಿದಂತೆ, ಭರತಖಂಡದಲ್ಲಿ ನಿಷ್ಠಾವಂತ ದೇಶಸೇವಕರು ತೀರ ಕಡಿಮೆ. ಅದರೊಳಗೂ ಪಕ್ಷಭೇದಗಳ ದುಷ್ಟ ಜಾಲದಲ್ಲಿ ರಾಷ್ಟ್ರೀಯ ಸಭೆಯು ಸಿಲುಕಿಕೊಂಡಿತೆಂದರೆ, ರಾಷ್ಟ್ರೀಯ ಸಭೆಯ ವೈಭವವೂ, ಗೌರವವೂ, ಲೋಕಾದರವೂ, ರಾಷ್ಟ್ರೋದ್ಧಾರಕ ಸಾಮರ್ಥ್ಯವೂ ಒಮ್ಮೆಲೆ ಕುಗ್ಗುವವು. ಆದ್ದರಿಂದ, ಸದ್ಯಸ್ಥಿತಿಯ ಆಲೋಚನೆ ಮಾಡಿ, ರಾಷ್ಟ್ರಾಜ್ಞೆಗಳನ್ನು ಹೊರಡಿಸುವಾಗ, ರಾಷ್ಟ್ರೀಯ ಸಭೆಯು ಸಕಲ ರಾಷ್ಟ್ರಸೇವಕರಿಗೆ ಅನುಕೂಲವಾಗುವಂತೆ, ರಾಷ್ಟ್ರೀಯ ಸಭೆಯೊಳಗಿನ ಸಕಲ ಪ್ರತಿನಿಧಿಗಳ-ಏಕೆ, ರಾಷ್ಟ್ರೀಯ ಸಭಾಭಿಮಾನಿಗಳಾದ ಅಖಿಲ ಭಾರತೀಯರ ಐಕ್ಯವರ್ಧನವಾಗುವಂತೆ, ಜಾಗ್ರತೆಯನ್ನು ವಹಿಸಬೇಕಾಗಿ ನಮ್ಮ ಆಗ್ರಹಪೂರ್ವಕ ಬಿನ್ನಹವಿದೆ. ಯಾಕಂದರೆ, ಸಕಲ ಸಮಾಜಗಳ ಐಕ್ಯವೇ ಭಾರತಮಾತೆಯ ತರಣೋಪಾಯದ ಕೀಲಿಯೆಂದು ಮಹಾತ್ಮರು ನಮಗೆ ಬೋಧಿಸಿರುವರಲ್ಲವೇ !

ಸ್ಫುಟ ಸೂಚನೆಗಳು.

೧. ಸೌಭಾಗ್ಯವತಿ ಕಸ್ತುರಬಾಯಿ ಗಾಂಧಿಯವರು ತಮ್ಮ ಪತಿಗಳಿಗೆ ಕಳೆದ ತಾ. ೧೬ ನೇಗೆ ಯರೋಡಾ ಜೈಲಿನಲ್ಲಿ ಬೆಟ್ಟಿಯನ್ನಿತ್ತರು. ಮಹಾತ್ಮರ ಆರೋಗ್ಯವು ನೆಟ್ಟಗಿಲ್ಲೆಂದು ಸೌಭಾಗ್ಯವತಿಯವರು ನಿವೇದಿಸುತ್ತಾರೆ. ಮಹಾತ್ಮರ ತೂಕವು ಈಗ ೯೬ ರಾತ್ಲು ಇದೆಂದು ಅವರ ಹೇಳಿಕೆ. ಕಾರಾಗೃಹವನ್ನು ಸೇರಿದಾಗ, ಅವರ ತೂಕವು ೧೦೮ ರಾತ್ಲು ಇತ್ತು. ಮೊದಮೊದಲು ಮಹಾತ್ಮರ ವ್ಯವಸ್ಥೆಯು ನೆಟ್ಟಗೆ ನಡೆದದ್ದರಿಂದಲೋ ಏನೋ, ಅವರ ತೂಕವು ೩ ರಾತ್ಲಿನಿಂದ ಹೆಚ್ಚಿತು. ಈ ಮಾನದಿಂದ ೧೫ ರಾತ್ಲು ಈಗ ಕುಗ್ಗಿರುವದೆಂದು ಹೇಳಬೇಕಾಗಿದೆ. ಈ ಸುದ್ದಿಯನ್ನು ಕೇಳಿ, ಅಖಿಲ ಭಾರತವಾಸಿಯರು ತುಂಬಾ ಚಿಂತಾಮಗ್ನರಾಗುವರು. ಶ್ರೀ। ವಲ್ಲಭಬಾಯಿ ಪಟೇಲರವರು ಮಹಾತ್ಮರ ಆರೋಗ್ಯವನ್ನು ತಿಳಿಸುವರೆ ಮುಂಬಯಿ ಸರಕಾರಕ್ಕೆ ಬಿನ್ನೈಸಿಕೊಂಡಿದ್ದರು. ಮಹಾತ್ಮರ ವೈದ್ಯರಾದ ಡಾ। ತಳವಲಕರ-ಕಾನುಗಾರವರೂ ಮಹಾತ್ಮರ ತನಿರತಪಾಸಣೆ ಮಾಡುವದು ಅಗತ್ಯವಾದದ್ದೆಂತಲೂ ಮುಂಬಯಿ ಸರಕಾರಕ್ಕೆ ತಿಳಿಸಿದ್ದರು. ಯಾರಿಗೂ ಸರಕಾರದಿಂದ ಉತ್ತರ ದಯಪಾಲಿಸೋಣಾಗದ್ದರಿಂದ, ಭಾರತೀಯರು ವಿಶೇಷ ಚಿಂತಾತುರರಾಗಿರುವರು. ಸರಕಾರವು ವಶಕ್ಕೆಕೊಂಡ ಕೈದಿಯ ಮಹಾತ್ಮ್ಯವನ್ನೂ, ಲೋಕೋತ್ತರತೆಯನ್ನೂ, ಅವರ ಮೇಲಿನ ಭಾರತೀಯರ ನಿಷ್ಠೆಯನ್ನೂ ನೆನಿಸಿ, ಮಹಾತ್ಮರ ಆರೋಗ್ಯದ ಹಕೀಕತವನ್ನು ಶೀಘ್ರವೇ ಪ್ರಕಟಿಸಬೇಕಾಗಿ ನಮ್ಮ ಆಗ್ರಹಪೂರ್ವಕ ಬಿನ್ನಹವಿದೆ.

೨. ಬ್ರಿಟಿಶರು ಹಿಂದುಸ್ಥಾನದಲ್ಲಿ ಪರಮಾರ್ಥಬುದ್ಧಿಯಿಂದ ಕಾರಭಾರವನ್ನು ನಡಿಸಲಿದ್ದಾರೆಂದು ನಮಗೆ ಹೇಳೋಣಾಗುತ್ತದೆ. ಈ ವಿಧಾನವು ತೀರ ತಪ್ಪು; ಇಷ್ಟೇ ಅಲ್ಲ, ವಸ್ತುಸ್ಥಿತಿಯ ವಿಪರ್ಯಾಸವೆಂದು ಸಹ ಅನೇಕ ದೇಶಭಕ್ತರು ಅನೇಕ ಉದಾಹರಣೆಗಳಿಂದ ಸಿದ್ಧಪಡಿಸಿರುವರು. ಇಂದು ನಾವು ಅದನ್ನು ಖಾಸ ಸರ್ವಾಧಿಪತಿಗಳ ವಚನಗಳಿಂದ ದಿಗ್ದರ್ಶಿಸುವೆವು. ಡಫರಿನ್ ದೊರೆಗಳು ಇಲ್ಲಿ ೧೮೮೪ ರಿಂದ ೧೮೮೮ರ ವರೆಗೆ ಅವರು ಸರ್ವಾಧಿಪತಿಗಳಿದ್ದರು. ೧೮೮೮ನೇ ಇಸವಿಯ ಅಕ್ಟೋಬರ ತಾ. ೩೦ ನೆಗೆ ವಿಲಾಯತಿಯ ವ್ಯಾಪಾರಿ ಸಂಸ್ಥೆಯ ವಿಸ್ಮಯಮಾನ ನಡೆದ ಔತಣ ಸಮಾರಂಭದಲ್ಲಿ ಇವರದೊಂದು ಭಾಷಣವಾಗಿತ್ತು. ಅದರೊಳಗೆ ದೊರೆಗಳು ಆಡಿದ ನುಡಿಗಳು ಬೋಧಪ್ರದವಿವೆ. ಹಿಂದುಸ್ಥಾನದೊಳಗಿನ ಬ್ರಿಟಿಶರ ಸಾಮ್ರಾಜ್ಯದ ಅಂತಸ್ಥವು ಇದರಿಂದ ಸ್ಫುಟವಾಗುತ್ತದೆ. ದೊರೆಗಳು ನುಡಿದದ್ದೇನಂದರೆ — "ಭಾರತೀಯ ಸಾಮ್ರಾಜ್ಯದ ಗೂಡ ವ್ಯಾಪಾರ ನಡಿಸಿ, ಈ ದೇಶಕ್ಕೆ, ಅಂದರೆ, ಬ್ರಿಟಿಶ ರಾಷ್ಟ್ರಕ್ಕೆ ಉಂಟಾದ ಮಹತ್ತ್ವದ ಲಾಭವು ಇಂದಿನ ಸಮಾರಂಭದಲ್ಲಿ ಪ್ರದರ್ಶನವಾಗಿದೆ. ಇದರ ಮೇಲಿಂದ ಪೌರ್ವಾತ್ಯ ದೇಶಗಳ ಮೇಲಿನ ವರ್ಚಸ್ವವನ್ನು ಅಪ್ರತಿಹತ ಕಾಪಾಡುವ ಅವಶ್ಯಕತೆಯು ಸಹ ಸ್ಪಷ್ಟವಾಗಿದೆ. ಇಷ್ಟೇ ಅಲ್ಲ, ಹಿಂದುಸ್ಥಾನವು ಒಂದು ದೊಡ್ಡ ಉಗ್ರಾಣವೋಪಾದಿಯುಳ್ಳದೆ. ನಮ್ಮ ದೇಶದ ವೈಭವಕ್ಕೆ, ದೇಶಬಾಂಧವರ ಕಲ್ಯಾಣಕ್ಕೆ ಅವಶ್ಯವಿರುವ ಸಾಮಗ್ರಿಗಳನ್ನು ಕಾಲಕ್ಕೆ ಪೂರೈಸಲು ನಮ್ಮ ಮಾಡಿಕೆಯ ಗಿರಾಕಿಗಳಿಗ ಅನುಕೂಲವಾಗದಿದ್ದಲ್ಲಿ. ಅವನ್ನು ಪ್ರಸಂಗೋಪಾತ್ ನಾವು ಹಿಂದುಸ್ಥಾನದೊಳಗಿಂದ ಪೂರೈಸಿಕೊಳ್ಳಬಹುದು. ಹಿಂದೀ ಸಾಮ್ರಾಜ್ಯಕ್ಕೆ ಏನಾದರೊಂದು ಅಪಘಾತ ಸಂಭವಿಸಿದರೆ, ಅಥವಾ ನಮ್ಮ ಸಂಬಂಧವು ಅಲ್ಪಾಂಶದಿಂದ ಸಹ ತೊಂದರೆಗಳಿಗೀಡಾದರೆ, ವಿಲಾಯತಿಯೊಳಗಿನ ಪ್ರತಿಯೊಂದು ಮನೆಯಲ್ಲಿ, ವಿಶೇಷವಾಗಿ, ಕಾರಖಾನೆಗಳುಳ್ಳ ಪ್ರದೇಶಗಳಲ್ಲಿ ಈ ಗಂಡಾಂತರದ ಪರಿಣಾಮವು ದೃಗ್ಗೋಚರವಾಗದಿರದು."

೩. ಡಫರಿನ್ ದೊರೆಗಳು ಹಿಂದೀ ಸಾಮ್ರಾಜ್ಯದ ಅಂತರಂಗವನ್ನು ಸ್ಪಷ್ಟವಾಗಿ ಔತಣ ಸಮಾರಂಭದಲ್ಲಿ ಅರುಹಿ, ಬ್ರಿಟಿಶರು ತಮ್ಮ ಪ್ರಾಬಲ್ಯವನ್ನು ಎಳ್ಳಷ್ಟು ಸಹ ಕಳೆಗುಂದದಂತೆ ಜಾಗರೂಕರಾಗಿರಬೇಕೆಂದು ಬೋಧಿಸಿದ್ದು ಏಕೆ? ಹಿಂದುಸ್ಥಾನದ ಪ್ರಜೆಗಳಿಗೆ ಸುಖವಾಗಬೇಕು, ಸಮಾಧಾನವಾಗಬೇಕು; ಅವರ ಕಲ್ಯಾಣವಾಗಬೇಕು, ಎಂಬ ಸದ್ಹೇತುವಿನಿಂದೇನು? ಹಿಂದುಸ್ಥಾನದ ಪ್ರಜೆಗಳು ಬ್ರಿಟಿಶ ಸಾಮಗ್ರಿಯನ್ನು ಖರೀದಿ ಮಾಡುವ ಗಿರಾಕಿಗಳಾಗಿ, ಹಿಂದುಸ್ಥಾನವು ಬೇಕಾದಾಗ ಬೇಕಾದ ಸಾಮಗ್ರಿ ಪೂರೈಸಿಕೊಳ್ಳುವ ಉಗ್ರಾಣವಾಗಿ, ವಿಲಾಯತಿಯೊಳಗಿನ ತಮ್ಮ ದೇಶಬಾಂಧವರು ಮೈಮುರಿದು ಸುಖಸಮಾಧಾನದಿಂದಿರಬೇಕು, ಅದಕ್ಕಾಗಿಯೇ ಹಿಂದೀ ರಾಜಕಾರಣದ ಮೇಲೆ ಬ್ರಿಟಿಶರ ಪ್ರಾಬಲ್ಯವಿರಬೇಕು, ಎಂಬ ಅವರ ಹೇತುವು ಸ್ಪಷ್ಟವಾಗುತ್ತದೆ. ಸಂಕ್ಷೇಪತಃ ಹೇಳಬೇಕಾದರೆ, ಹಿಂದೀಯರು ವಿಲಾಯತಿಯ ವ್ಯಾಪಾರಿಗಳ ಕಾಯಂ ಗಿರಾಕಿಗಳಾಗಿರುವಷ್ಟು ರಾಜಕೀಯ ಪ್ರಾಬಲ್ಯವನ್ನು ಎಂದೂ ಬ್ರಿಟಿಶರು ತ್ಯಜಿಸಬಾರದು. ದೊರೆಗಳ ಮಂತ್ರವು ಇದೇ. ಈ ಧೋರಣವಿದ್ದುದರಿಂದಲೇ ಹಿಂದುಸ್ಥಾನದಲ್ಲಿ ಶಿಕ್ಷಣ, ಬೇಸಾಯ ಮೊದಲಾದ ಪ್ರಜಾಕಲ್ಯಾಣಪರ ಯೋಜನೆಗಳಿಗೆ ಖರ್ಚು ಮಾಡಲು ಹಣ ಸಿಗಲಿಲ್ಲ; ಹೊತ್ತು ಸಿಗಲಿಲ್ಲ; ಹಿಂದೀಯರನ್ನು ನಂಬಲು ಮನ ಒಪ್ಪಲಿಲ್ಲ; ಸರ್ ವಿಲಿಯಮ್ ವಿನ್ಸಂಟರವರು ಹಿಂದೀ ರಾಜ್ಯಕಾರಭಾರದ ಫಲಗಳನ್ನರುಹಿದರೆ, ಡಫರಿನ್ ದೊರೆಗಳು ಮೂಲ ಬೀಜವನ್ನೇ ೧೮೮೮ ನೇ ಇಸ್ವಿಯಲ್ಲಿ ಅರುಹಿರುವರು. ಇನ್ನು ಆಲ್ಪಸರ ರಾಜ್ಯಕಾರಭಾರದ ಸ್ವರೂಪದ ಕುರಿತು ಯಾರದೂ ಸಂಶಯವಿರಲಾಗದು. ಈ ಪದ್ಧತಿಯನ್ನು ಮಹಾತ್ಮರು ವಿಧಿಸಿದಂತೆ, ಆತ್ಮಸಾಮರ್ಥ್ಯವನ್ನು ವೃದ್ಧಿಪಡಿಸಿಕೊಂಡು, ನಾವು ಪರದೇಶಿ ವ್ಯಾಪಾರಸ್ಥರ ಗಿರಾಕಿ ಸಂಬಂಧವನ್ನು ತುಂಡರಿಸುವದು ನಮ್ಮ ಪ್ರಥಮ ಕರ್ತವ್ಯವು.

೪. ತಮಗೆ ಅಧಿಕಾರವಿದ್ದೆಂದು ಅದನ್ನು ಕೇವಲ ಸ್ವಾರ್ಥಾಂಧರಾಗಿ ಉಪಯೋಗಿಸುವದು ಮಹದನ್ಯಾಯವು. ಪ್ರಜೆಗಳಿಗೆ ಕಾಡುವದಂತು ಪಶುತುಲ್ಯವು. ಪೂರ್ವ ರಾಜಪುತಾನದಲ್ಲಿ ಕರೌಲಿ ಎಂಬ ಒಂದು ಸಂಸ್ಥಾನವಿದೆ. ಅಲ್ಲಿ ಪ್ರಜೆಗಳು ಕಾಡು ಮೃಗಗಳ ಬೇಟೆಯಾಡಬಾರದೆಂದು ಕಠೋರ ನಿರ್ಬಂಧವಿದೆ. ಇದರಿಂದ, ಶ್ವಾಪದಗಳಿಗೆ ಗ್ರಾಮಗಳ ಮೇಲೆ ಊಟಿ ಮಾಡಲು ಒಂದು ಸನದು ಸಿಕ್ಕಿದಂತಾಗಿದೆ. ಅವು ಕಾದಿಟ್ಟ ಜಂಗಲದೊಳಗಿಂದ ಹಳ್ಳಿಗಳ ಮೇಲೆ ಸಾಗಿಹೋಗಿ, ಪೈರು, ದನ, ಮನುಷ್ಯರಮೇಲೆ ಹಾವಳಿ ಎಬ್ಬಿಸುತ್ತಿವೆ. ಕಳೆದ ೬ ತಿಂಗಳಲ್ಲಿ ಇವು ೪ ಗ್ರಾಮಗಳಲ್ಲಿ ಮಾಡಿದ ಹಾವಳಿಯನ್ನು ಎಣಿಸುವದು ಅಶಕ್ಯವು. ೫೮ ಮಂದಿ ಕಿಸಾನ ಒಕ್ಕಲಿಗರು ಇವುಗಳಿಗೆ ತುತ್ತಾದರು. ಅನೇಕ ದನಗಳೂ, ನೂರಾರು ರೂಪಾಯಿ ಬೆಲೆಯ ಪೈರೂ, ಹುಲಿ-ಹಂದಿಗಳಿಗೆ ಬಲಿ ಬಿದ್ದಿರುವವು. ರಾಜಸ್ಥಾನ ಸೇವಾಸಂಘವು ಈ ವರೆಗೆ ಸನದಶೀರ ಚಳವಳಿಯಿಂದ ಪ್ರಜೆಗಳ ಬೇಟೆಯಾಡುವ ಶ್ವಾಪದಗಳ ಬೇಟೆಯಾಡಲು ಸಂಸ್ಥಾನಾಧಿಕಾರಿಗಳಿಗೆ ಪುನಃ ಪುನಃ ಬೇಡಿಕೊಂಡರೂ, ದರಬಾರವು ಅದಕ್ಕೆ ಕಿವಿಗೊಡಲಿಲ್ಲ. ಇದರಿಂದ, ಸದರ ಸಂಘದ ಚಾಲಕರಲ್ಲೊಬ್ಬರಾದ, ಸಂಸ್ಥಾನದ ಮಾಜಿ ದಿವಾನರ ಚಿರಂಜೀವರಾದ ಶ್ರೀ। ಕುಮಾರ ಮದನಸಿಂಗರವರು ಸಂಸ್ಥಾನಕ್ಕೆ ನೋಟೀಸು ಕೊಟ್ಟು, ಬೇಟೆಯ ನಿಯಮಗಳು ಜನವರಿ ತಾ. [illegible] ದೊಳಗೆ ತಿದ್ದುಪಡಿಯಾಗಿ, ಶ್ವಾಪದಗಳ ಪೀಡೆ[illegible] ಒಕ್ಕಲಿಗರನ್ನು ಮುಕ್ತ ಮಾಡಲು ಉಪಾಯ[illegible]ಯಾಗದಿದ್ದಲ್ಲಿ, ಜನವರಿ ತಾ. ೧೫ ನೇಗೆ ತಾವು ಈ ಕಾಯಿದೆಯನ್ನು ಉಲ್ಲಂಘಿಸಿ, ಬೇಟೆಯಾಡುವೆವೆಂದು ಸಂಸ್ಥಾನಕ್ಕೆ ತಿಳಿಸಿರುವರು. ಶ್ರೀ। ಕುಮಾರ ಮದನಸಿಂಗರವರಗೂಡ ಮೃಗಗಳ ಕಾಟದಿಂದ ಬೇಸತ್ತ ಅನೇಕ ಒಕ್ಕಲಿಗರೂ ಕಾಯಿದೆಯನ್ನು ಉಲ್ಲಂಘಿಸುವವರಿದ್ದಾರೆಂದು ತಿಳಿಯುತ್ತದೆ. ಈಗ್ಗೆ ಕರೌಲಿಯ ದರಬಾರದಲ್ಲಿ ಈ ವಿಷಯ ಏನು ಮಾಡಬೇಕೆಂಬ ವಿಚಾರ ನಡೆದದೆ. ದರಬಾರದ ದುರಾಗ್ರಹವನ್ನು ಕಾಯಿದೆಯ ಉಲ್ಲಂಘನೆಯಿಂದಲೇ ಬಗ್ಗುಬಡಿಯಲು ಟೊಂಕಕಟ್ಟಿದ ಶ್ರೀ। ಕುಮಾರ ಮದನಸಿಂಗರವರಿಗೆ ಯಶಪ್ರಾಪ್ತಿಯಾಗಿ, ಬೇಟೆಯ ಕಠೋರ ನಿಯಮಗಳಿಂದ, ಶ್ವಾಪದಗಳ ಪೀಡನೆಯಿಂದ ಬಳಲುವ ನಮ್ಮಂಥ ಕಾನಡಿಗರಿಗೆ ಅದೊಂದು ಬೋಧಪ್ರದ ಯೋಜನೆಯಾಗಲೆಂದು ಮನಃಪೂರ್ವಕ ಹಾರೈಸುವೆವು.

೫. ದೇಶಬಂಧು ದಾಸರು ಮುಂಬಯಿ ನಗರ[illegible] ದಿಂದ ಕಾಶೀಸಾಥಿಗೆ ತೆರಳಿದರು. [illegible] ಪತ್ರಿಕೆಯ ಪ್ರತಿನಿಧಿಗಳ. ದೇಶಬಂಧುಗಳ [illegible] ಖತನ್ನು ಕಳೆದ ರವಿವಾರ ತಾ ೬೭ ನೇ [illegible]. ದೇಶಬಂಧುಗಳು [illegible] ವನ್ನೇ ಎಲ್ಲರೂ ಪ್ರತಿಷ್ಠಿಸಬೇಕೆಂದು [illegible] ಹಿಂದೂ-ಮುಸಲ್ಮಾನರ [illegible] ಡ-ಅನ್‌ಸಾರಿಯವರು [illegible] ಕಾಂಗ್ರೆಸಿನ [illegible] ಧಾರುಗಳಿಂದ [illegible] ಮೂಲ [illegible] ಸಹಕಾರ [illegible] ಮಾಡಬೇಕೆಂದು [illegible] ಮಾಡಬೇಕೆಂದು [illegible] ಕಾಲ [illegible] ರಾಷ್ಟ್ರ [illegible] ಯತುಗಳನ್ನು [illegible] ದ ದೇಶಸೇವಕರ [illegible] ಸಹಾಯವನ್ನಿತ್ತು [illegible] ಹೇಳಿಕೊಳ್ಳಬೇಕೆಂದರು [illegible] ಬಹಿಷ್ಕಾರ [illegible] ದ ಧ್ಯೇಯ [illegible] ದನ್ನು [illegible] ನಲ್ಲಿ [illegible] ಧುಗಳ [illegible] ವೆಂಬ ಪ್ರಶ್ನೆ ಕೇಳಿದರು. [illegible] ವಾ ಅವರ ತಯಾರಿಯಾದ [illegible] ರಾಜ್ಯ ಸಿಗಲಿಕ್ಕಿಲ್ಲೆಂತಲೂ [illegible] ಬುಗಳ. ಪ್ರಜೆಗಳ [illegible] ಅವುಗಳಿಂದ [illegible] ಸ್ವರಾಜ್ಯ [illegible] ದೆಂತಲೂ [illegible] ಲುಗಳಲ್ಲಿ [illegible] ಪ್ರತ್ಯಕ್ಷ [illegible] ರ್ ರಾಷ್ಟ್ರವನ್ನು [illegible] ಯಾರಿ ಮಾಡಿಕೊಳ್ಳದೆ ಸ್ವರಾಜ್ಯವನ್ನು [illegible] ಸಬೇಕಾಗಿರುವ [illegible], ಈ ಧ್ಯೇಯ [illegible] ರಾಷ್ಟ್ರೀಯ ಸಭೆಯಲ್ಲಿ [illegible] ಲನ್ನು ತೆರೆದು ತಾವು [illegible]. ದೇಶಬಂಧುಗಳು ರಾಷ್ಟ್ರೀಯ ಕಾರ್ಯಕ್ಕೆ [illegible] ಕೊಟ್ಟು, ವಿಧಾಯಕ ಕಾರ್ಯಕ್ರಮವನ್ನು ಪ್ರತಿಷ್ಠಿಸದ ನಿರ್ಧಾರವನ್ನು ಬಾಹೀರಪಡಿಸಿ, ಸ್ವರಾಜ್ಯ ಪಕ್ಷದ [illegible] ರಾಷ್ಟ್ರಪಕ್ಷದರು [illegible] ರುವರೆಂದು ಹೇಳಿದ್ದು, ಅಯಥಾರ್ಥವಾಗದು.

---

೬. ಪ್ರಾಥಮಿಕ ಶಿಕ್ಷಣದ ಹೊಸ ವ್ಯವಸ್ಥೆಯ ಬಗ್ಗೆ ತಾ ೧೯-೧೨-೨೩ ನೇಗೆ ಸರ್ಕ್ಯೂಲರ ನಂ. ೨೨೭೬ ನ್ನು ಹೊರಡಿಸಿ, ಮುಂಬಯಿ ಸರಕಾರವು ಸ್ಪಷ್ಟೀಕರಿಸುವದೇನಂದರೆ — ಮುಂಬಯಿ ಸರಕಾರವು ಪ್ರಕಟಿಸಿದ ಪ್ರಾಥಮಿಕ ಶಿಕ್ಷಣದ ನಿಯಮಗಳಬಗ್ಗೆ ಅನೇಕ ಸೂಚನೆಗಳೂ, ಟೀಕೆಗಳೂ ಬಂದಿವೆ, ಇನ್ನೂ ಅವು ಬರುತ್ತಿರುವವು. ಅದರಿಂದ ಈ ಮೊದಲು ಜಾಹೀರ ಮಾಡಿದ್ದಂತೆ, ಸಾಳಿನ ಜನವರಿ ತಾ. ೧ ನೇಗೆ ಶಿಕ್ಷಣವನ್ನು ಸ್ಥಾನಿಕ ಅಧಿಕಾರಿಗಳಿಗೆ, ಅಂದರೆ, ಹೊಸ ಸ್ಕೂಲ ಬೋರ್ಡುಗಳಿಗೆ ವಹಿಸಿಕೊಡಲು ಅಶಕ್ಯವಾಗಿದೆ. ವಹಿಸಿಕೊಡುವ ನಿಶ್ಚಿತ ತಾರೀಖು ತಿಳಿಸುವದೂ ಸದ್ಯಕ್ಕೆ ಶಕ್ಯವಿಲ್ಲ. ತಾ ೨-೧೧-೩೩ ನೇಗೆ ಹೊರಡಿಸಿದ ಸರ್ಕ್ಯೂಲರದಲ್ಲಿ ಪೂರ್ವತಯಾರಿ ಮಾಡಬೇಕೆಂದು ಸೂಚಿಸಿತ್ತು. ಅದನ್ನು [illegible], ಜಿಲ್ಹಾ ಲೋಕಲ್ ಬೋರ್ಡಗಳು ಸ್ಕೂಲ ಬೋರ್ಡಿನ ಚುನಾವಣೆಯನ್ನು ಸಹ ಮಾಡಿದವೆಂದು ತಿಳಿಯುತ್ತದೆ. ನಿಯಮಗಳು ಇನ್ನೂ [illegible], ಈಗ ನಡಿಸಿದ ಚು[illegible]. ಜಿಲ್ಹಾ ಲೋಕಲ್ ಬೋರ್ಡುಗಳಾಗಲಿ, ಮ್ಯುನಿಸಿಪಾಲಿಟಿಗಳಾಗಲಿ, ಪೂರ್ವ ತಯಾರಿ ಮಾಡುವಾಗ, ತಾ. ೨-೧೧-೧೯೩೩ ನೇ [illegible] ಸರ್ಕ್ಯೂಲರಿನ ೩ ನೇ ಕಲಮನ್ನು [illegible] ಹಾಗು ಈಗಿನ ನಿಯಮ[illegible], ತಯಾ[illegible] ಮಗಳು ಕಾಯಂ ಆದ [illegible] ಪ್ರತ್ಯಕ್ಷ ಚುನಾವ[illegible].

[illegible] ಪನ್ನು ಜಿಲ್ಲೆಯ [illegible] ಹಳೇ ಮುಂಬಯಿ ಕಾ[illegible] ರಾ। ಶಂಕ[illegible] ಕಳೆದ ತಾ. ೧೯ [illegible] ರಾಘ ನರಾದರೆಂದು [illegible] ಪರಲೋಕವಾಸಿಗಳು [illegible] ದೋಣಿಯನ್ನು ಹತ್ತಿ, [illegible] ಹೋಗುತ್ತಿದ್ದರು ದೋಣಿ [illegible] ಇವರು [illegible] ಹಳೇ [illegible] ಕೌನ್ಸಿಲುಗಳ ಚುನಾವ[illegible] ಪ್ರೊ[illegible] ದುಭಾಷಿ [illegible] ಕಾಯಿದೆ ಕೌನ್ಸಿಲಿನಲ್ಲಿ [illegible] ಆಗಿದ್ದರು. ಅವರ ಪೂರ್ವ [illegible] ಕಾಯಿದೆ ಕೌನ್ಸಿಲಿನ [illegible] ಸ್ವಪ್ನದಲ್ಲಿ ಸಹ [illegible] ಪ್ರಸಕ್ತಿಯಲ್ಲಿ ಅವರು ಕೌನ್ಸಿಲಿನಲ್ಲಿ [illegible] ಮಾಡಿದ್ದರೆ, [illegible] ಅವರೆ, ಅಷ್ಟ ಚರ್ಚೆಯಾದ ತರಾ[illegible] ಮತ ಕೊಡುವಾಗ, ತಮ್ಮ ಮತ [illegible] ಒಡಿಗೇ ಕೊಟ್ಟು, ತಾವು [illegible] ರೆಂದು ಪ್ರದರ್ಶಿಸಿದ ಸಂಗತಿಯನ್ನು ನಾವು ಸಂತೋಷದಿಂದ ಸ್ಮರಿಸುವೆವು. ಪೂರ್ವ ಶ್ರೀಮಾನ ದುಭಾಷಿಯವರು ಮರಣಸಮಯದಲ್ಲಿ ಮುಂಬಯಿ ಕಾಯಿದೆ ಕೌನ್ಸಿಲಿನ ಮೆಂಬರರಾಗಿ ಇದ್ದರೆಂದು ಯಾವ ಭವಿಷ್ಯಜ್ಞನೂ ಅನುಮಾನಿಸಲಿಕ್ಕಿಲ್ಲ "ಸ್ತ್ರಿಯಶ್ಚರಿತ್ರಂ ಪುರುಷಸ್ಯ ಭಾಗ್ಯಂ ದೇವೋ ನ ಜಾನಾತಿ," ಅಂದ ಮೇಲೆ ನಮ್ಮಂಥ [illegible] ರ ಪಾಡೇನು? ಪ್ರೊ ಶಾ। ಗಳ ಕುಟುಂಬದ ಗೂಡ ನಮ್ಮ ಸಹಾನುಭವವನ್ನು ವ್ಯಕ್ತಗೊಳಿಸಿ, ಮೃತರಿಗೆ ಸದ್ಗತಿ ಪ್ರಾಪ್ತವಾಗಲೆಂದು ಬಯಸುವೆವು.

ಸ್ಥಾನಿಕ ವೃತ್ತಾಂತ.

ಕುಮಟಾ— [illegible] ಚಳಿ. ಕಬ್ಬು ಕಟಾವು [illegible] ನಡೆದದೆ [illegible] ಪ್ರಾರಂಭ

ಶ್ರೀ ದತ್ತಜನ್ಮೋತ್ಸವವು ಕಳೆದ ರವಿವಾರಕ್ಕೆ ಶ್ರೀ ಕುಂಭೇಶ್ವರ ದೇವಸ್ಥಾನದಲ್ಲಿ ಸಾಂಗವಾಗಿ ನೆರವೇರಿತು.

ಕಳೆದ ಗುರುವಾರಕ್ಕೆ ಊರೊಳಗಿನ ಉಪ್ಪಿನ ಲೈಸನ್ಸದಾರರು ಡೀಪೋದೊಳಗಿನ ಮಣದ ಚೀಲಗಳು ತೂಕದಲ್ಲಿ ಕಡಿಮೆಯಿರುತ್ತವೆಂದು ಮಾಡಿದ ಅರ್ಜಿಯ ಚೌಕಶಿಯು ಸರಕಾರದ ವಿದ್ಯಮಾನ ನಡೆಯಿತು. ಚೌಕಶಿಯ ಆಫೀಸರರು ಡೀಪೋದೊಳಗಿನ ಚೀಲಗಳ ತೂಕ ಮಾಡಿಸಲು, ಚೀಲಗಳು ೩ರಿಂದ ೮-೯ ರಾತ್ಲುಗಳ ವರೆಗೆ ಕಡಿಮೆ ಬಂದವಂತೆ. ಶನಿವಾರಕ್ಕೆ ಅರ್ಜಿದಾರರ ಜಬಾನಿಗಳಾದವು. ಮಣದ ಚೀಲಗಳು ಕನಿಷ್ಟ ೨-೩ ರಾತ್ಲು ಕಡಿಮೆ ಬರುತ್ತವೆ; ಅವನ್ನು ಡೀಪೋ ಏಜಂಟರು ತೂಕಮಾಡಿ ಕೊಡುವದಿಲ್ಲ. ಅಂಥ [illegible] ಏವಾಟು ಇಲ್ಲೆಂದು ಹೇಳುತ್ತಾರೆ; ಮುಂತಾದ ಜಬಾನಿ ಕೊಟ್ಟರೆಂದು ತಿಳಿಯುತ್ತದೆ.

ಸ್ಥಾನಿಕ ಕೋರ್ಟಿನಲ್ಲಿ ಕೆಲಸವು ಬಾಕಿ ಬಿದ್ದದರಿಂದ, ತಾ. ೧-೨-೩೪ ನೇಯಿಂದ ಇಲ್ಲಿ ಜ್ಯೋಂಟ ಸಬಜಜ್ಜರ ನೇಮಣೂಕಿಯಾಗುವದಿದೆಂದು ತಿಳಿಯುತ್ತದೆ. ಜ್ಯೋಂಟರು ಶಿರ್ಶಿಯ ಸಬ್‌ಜಜರಾದ ರಾ। ಕಂಭಾಪಿಯವರೆಂತಲೂ ಸುದ್ದಿ.

ಕಾರವಾರ— ಇಲ್ಲಿಯ ಸರಕಾರಿ ಕಟ್ಟಡಗಳಿಗೆ ಮ್ಯುನಿಸಿಪಲ್ ಮನೆಪಟ್ಟಿ ಇದ್ದಿಲ್ಲ. ಈ ಬಗ್ಗೆ ಮೊದಲೊಮ್ಮೆ ಮ್ಯುನಿಸಿಪಾಲಿಟಿಯು ಸರಕಾರಕ್ಕೆ ಅರ್ಜಿಮಾಡಿ, ಅವುಗಳ ಬಗ್ಗೆ ಮನೆಪಟ್ಟಿಯನ್ನು ತೆರಬೇಕೆಂದು ಬೇಡಿಕೊಂಡಿತ್ತು. ಸರಕಾರವು ಅದನ್ನು ಮಾನ್ಯಮಾಡಲಿಲ್ಲ. ಕಳೆದ ವಾರದಲ್ಲಿ ಪುನಃ ಮ್ಯುನಿಸಿಪಾಲಿಟಿಯಲ್ಲಿ ಸರಕಾರಿ ಇಮಾರತುಗಳಿಗೆ ಮನೆಪಟ್ಟಿಯನ್ನು ವಸೂಲ ಮಾಡಬೇಕೆಂತಲೂ, ಆ ಬಗ್ಗೆ ಸರಕಾರಕ್ಕೆ ಅರ್ಜಿಮಾಡಬೇಕೆಂತಲೂ ಮತ್ತೊಮ್ಮೆ ನಿರ್ಧರಿಸಲಾಗಿದೆ.

ಮೋಟಾರ ಬಂಡಿಗಳ ಬಗ್ಗೆ ತಾ. ೨೮-೯-೧೯೩೩ ನೇಗೆ ಕಲೆಕ್ಟರರು ಹೊರಡಿಸಿದ ಜಾಹೀರನಾಮೆಯನ್ನು ತಾ ೧೮-೧೨-೧೯೩೩ ನೇಗೆ ಅವರೇ ರದ್ದು ಮಾಡಿರುವರು. ಮೊದಲಿನಂತೆ ಮೋಟಾರ-ಲಾರಿಗಳನ್ನು ಬೇಕಾದ ಮಾರ್ಗದಲ್ಲಿ ಈಗ ಚಲಾವಣಿ ಮಾಡಬಹುದು. ಅವುಗಳಿಗೆ ಪೊಳ್ಳು ಟಾಯರುಗಳನ್ನು ಉಪಯೋಗಿಸಬಾರದು.

ಜಿಲ್ಲಾ ನಿವಾಸದ ಮಿ। ಹೇಗರು ತಾ. ೪-೪-೧೯೩೪ ನೇಯಿಂದ ದೀರ್ಘ ರಜೆ ಕೊಂಡು ಸ್ವದೇಶಕ್ಕೆ ಹೋಗುವರಿದ್ದರೂ, ಇಲ್ಲಿಂದ ಜನವರಿ ೮ನೇ ತಾರೀಖಿಗೆ ದಿಲ್ಲಿಗೆ ಹೋಗಿ, ಅಲ್ಲಿಂದ ಪರಸ್ಪರ ಸ್ವಗೃಹಕ್ಕೆ ತೆರಳುವರು. ಆಗ ಅವರ ಮಿತ್ರ ಮಂಡಳಿಯವರು—ಪ್ರಶಂಸಕರು ಅವರಿಗೆ ಜನವರಿ ತಾ. ೪ನೇ ಶುಕ್ರವಾರಕ್ಕೆ 'ಪಾರ್ಟಿ' ಕೊಡುವವರಿದ್ದಾರೆಂದು ತಿಳಿಯುತ್ತದೆ. ಮಿ। ಹೇಗರೂ ಇವರಿಗೆ ತಾ ೩ನೇ ಜನವರಿಗೆ ಅಂದರೆ, ಸಾಳಿನ ಬುಧವಾರಕ್ಕೆ 'ಪಾರ್ಟಿ' ಕೊಡುವವರಿದ್ದಾರಂತೆ!

ಅಂಕೋಲಾ— "ಹೇ ವಿಠ್ಠಲ ಹರಹರ ಮಹಾದೇವ" ರು ತಾ ೨೫-೧೨-೧೯೩೩ ನೇಗೆ ಪತ್ರ ಬರೆದು, ತಿಳಿಸುವದೇನಂದರೆ,— 'ಶ್ರೀ ಜೊಸೋ ವಲ್ಲಿಕೋರರವರ ಪತ್ರ ಪ್ರಸಿದ್ಧವಾದಂದಿನಿಂದ ಸಹಕಾರಿ ಸಂಘದ ಕಾರಬಾರದ ವಿಷಯವಾಗಿ ಇಲ್ಲಿ ಚರ್ಚೆ ನಡೆಯುತ್ತಲಿದೆ. ನಿನ್ನೆ ಸೋಮವಾರ ತಾ. ೨೪ನೇಗೆ ಕಮಿಟಿಯವರು ಸೆಕ್ರೆಟರಿ-ಕಾರಕೂನರಿಗೆ ಲಂಚ ಕೊಟ್ಟು, ಸಾಲ ಪಡೆಕೊಂಡವರು ತಮ್ಮ ಮುಂದೆ ಹಾಜರಾಗಿ ಪುರಾವೆ ಕೊಡಬೇಕು, ಇತ್ಯರ್ಥದ ಒಂದು ಜಾಹೀರನಾಮೆಯನ್ನು ತೆಗೆದಿದ್ದರೆಂತಲೂ, ಆ ಪ್ರಕಾರ ಯಾರೂ ಮುಂದೆ ಬರಲಿಲ್ಲವೆಂತಲೂ ತಿಳಿಯುತ್ತದೆ. ಸೊಸೈಟಿಯ ಅಧ್ಯಕ್ಷರೂ, ಚೀಫ ಸೆಕ್ರೆಟರಿಯವರೂ ಅಂತರ ಸೆಕ್ರೆಟರಿಯವರೂ ಪರಸ್ಪರ ಸಂಬಂಧಿಕರಿದ್ದು, ಆದರ ಮುಂದಲೋ, ಇವರ ನೇತೃತ್ವದಲ್ಲಿಯೋ ಕೂಡಿದ ಕಮಿಟಿಯಲ್ಲಿ ಪುರಾ

ನ ಕೊಡಲಿಕ್ಕೆ ಜನರ ವಿಶ್ವಾಸವುಂಟಾಗುವ ಬಗೆ ಹೇಗೆ? ಶ್ರೀ ಬೋನೋ ಪಬ್ಲಿಕೋರರು ಉಪದ್ವ್ಯಾಪ ಮಾಡಿರುವರೆಂದು ನನಗೆ ತೋರುತ್ತದೆ. ಆದರೂ, ಸೊಸೈಟಿಯವರು ನಿಷ್ಪಕ್ಷಪಾತದಿಂದ ಚೌಕಶಿ ನಡಿಸಿ, ಜನರ ವಿಶ್ವಾಸ ಸಂಪಾದಿಸಬೇಕು. ಸಹಕಾರಿ ಸಂಘಗಳ ರಜಿಸ್ಟ್ರಾರರು ಏನು ಚೌಕಶಿ ಮಾಡಿದರು? ಮುಂತಾಗಿ ಕೇಳುತ್ತಾರೆ.

ಹಳಿಯಾಳ— ಚಳಿಗೆ ಪ್ರಾರಂಭ. ಪ್ಲೇಗ ರಾಕ್ಷಸನು ಹಳ್ಳಿಗಳಲ್ಲಿ ೩-೪ ಬಲಿ ಕೊಂಡ ಸುದ್ದಿಯಿದೆ. ಇನೊಕ್ಯುಲೇಶನ್ ವ್ಯವಸ್ಥೆಯಾಗುವದು ಜರೂರಿದೆ. ಪ್ರಜೆಗಳು ಸ್ಥಳಾಂತರ ಮಾಡುವ ತಯಾರಿಯಲ್ಲಿರುವರು. ಬಂಗಾಲಿ ವೇದಿಕರು ಪರಸ್ಥಳದಿಂದ ಇಲ್ಲಿ ಬರಹತ್ತಿರುವರು. ಇಲ್ಲಿಂದ ರಾಷ್ಟ್ರೀಯ ಸಭೆಗೆಯಾರೂ ಪ್ರತಿನಿಧಿಗಳಾಗಿ ಹೋಗವ ಲಕ್ಷಣ ತೋರುವದಿಲ್ಲ. ಹಳಿಯಾಳ-ಅಳನಾವರ ಮಾರ್ಗವು ನಾದುರುಸ್ತಿದ್ದರಿಂದ ಪ್ರವಾಸಿಕರಿಗೆ ಉಪದ್ರವವಾಗುತ್ತದೆ. ಗಾಡಿಗಳನ್ನು ಬಿಟ್ಟು ಹಿಡಿಯುವ ಕ್ರಮವು ನಡೆದದೆ. ಹಳಿಯಾಳ-ಧಾರವಾಡದ ಮೇಲೆ ಒಬ್ಬಿಬ್ಬ ಪ್ರವಾಸಿಕರಿಗೆ ಕಳ್ಳರು ಹೊಡೆದ ಸುದ್ದಿ ಇದೆ.

ಕೊಂಗ್ರೆಸ ಸುದ್ದಿಗಳು.

ಗಾಂಧೀ ನಗರದಲ್ಲಿ ಕಟ್ಟಿದ ರಾಷ್ಟ್ರೀಯ ಸಭೆಯ ಡೇರೆಯ ಬೆಲೆಯು ೨೮ ಸಾವಿರ. ಈ ಗಾಂಧೀ ನಗರದ ಸುತ್ತಳತೆಯು ೧೨೦ ಎಕರೆ. ಮೌ। ಮಹಮ್ಮದ ಅಲ್ಲಿಯವರಿಗೆ ಕಾಕಿನಾಡಿನ ಮ್ಯೂನಿಸಿಪಾಲಿಟಿಯವರು ಮಾನಪತ್ರ ಕೊಡಬೇಕೆಂದು ಠರಾಯಿಸಿರುವರು. ಅದಕ್ಕೆ ತಗಲುವ ಖರ್ಚನ್ನು ಮ್ಯೂನಿಸಿಪಾಲಿಟಿಯ ಬೊಕ್ಕಸದೊಳಗಿಂದ ಖರ್ಚು ಮಾಡಬೇಕೆಂದು ಠರಾವಾಗಿದೆ. ಕಳೆದ ಜುಲ್ಯೆ ತಿಂಗಳಿನಲ್ಲಿ ದೇಶಬಂಧುಗಳಿಗೆ ಮಾನಪತ್ರ ಕೊಡಬೇಕೆಂದು ಈ ಮ್ಯೂನಿಸಿಪಾಲಿಟಿಯು ಠರಾಯಿಸಿತ್ತು. ಆಗ, ದೇಶಬಂಧುಗಳ ಆಗಮನವಾಗದ್ದರಿಂದ, ಇದೇ ಸಮಯದಲ್ಲಿ ಅವರಿಗೂ ಮಾನಪತ್ರವು ಸಮರ್ಪಿಸಲ್ಪಡುವದು. ತಾಲುಕಾ ಲೋಕಲ್‌ಬೋರ್ಡ ಮೌಲಾನಾರವರಿಗೆ ಮಾನಪತ್ರವನ್ನೀಯುವದು. ಕೋಕನಾಡದಲ್ಲಿ ಖಿಲಾಫತ ಪರಿಷತ್ತಿನ ಮಂಟಪದ ನಿರ್ಮಾಣವಾಗಿದೆ. ರಾಷ್ಟ್ರೀಯ ಸಭೆಯ ಮಂಟಪದ ಕೆಲಸವು ಅಪೂರ್ಣವಿರುವದು. ಪ್ರತಿನಿಧಿಗಳು ಕಾಕಿನಾಡಿನ ಕಡೆಗೆ ನಿತ್ಯವೂ ಬರುತ್ತಿರುವರು. ದಕ್ಷಿಣ ಹಿಂದುಸ್ಥಾನದಿಂದ ಕಾಕಿನಾಡಿಗೆ ಬಹು ಮಂದಿಗಳು ಬರುವ ಅಂದಾಜಿದೆ. ತಿನವೆಲ್ಲಿಯ ಅತಿವೃಷ್ಟಿಯಿಂದ ಅವರ ರಾಷ್ಟ್ರಯಾತ್ರೆಯ ಉತ್ಸಾಹವೇನು ಕಡಿಮೆಯಾಗಲಿಲ್ಲ. ಸರ್ ಸುರೇಂದ್ರನಾಥ ಬಾನರಜಿ, ಸರ್ ದಿನಶಾ ವಾಛ್ಛಾ, ಸಾಮದಾರ ಶಾಸ್ತ್ರೀ, ಮೊದಲಾದ ನೇಮಸ್ತ ಪಕ್ಷದವರಿಗೆ ನಿಮಂತ್ರಣಗಳು ಹೋಗಿವೆ. ಲಾಲಾ ಲಜಪತರಾಯರು ಅಸ್ವಸ್ಥತೆಯ ಮೂಲಕ ಅಧಿವೇಶನಕ್ಕೆ ಹಾಜರಾಗಲಿಕ್ಕಿಲ್ಲ. ಅದೊಂದು ವ್ಯಕ್ತಿಶಃ ತಮ್ಮ ಮೇಲೊದಗಿದ ಆಪತ್ತೆಂದು ಅವರು ಕರಾಚಿಯಲ್ಲಿ ನುಡಿದರು. ಆರೋಗ್ಯಕ್ಕಾಗಿ ಅವರು ಕರಾಚಿಯಲ್ಲಿಯೇ ಇರುವರು. ಅಕಾಲಿಗಳೂ ಕಾಕಿನಾಡಿನಲ್ಲಿ ಹೋಗಿ ತಮ್ಮ ಚಳವಳಿಯ ಪುರಸ್ಕರಣಕ್ಕಾಗಿ ವ್ಯವಸ್ಥೆ ಮಾಡುತ್ತಿರುವರು. ೫೦೦೦ ಮಂದಿಗಳಿಗೆ ಸಾಕಾಗುವಷ್ಟು ವಿಶಾಲ ಮಂಟಪದ ನಿರ್ಮಾಣವಾಗಿದೆ. ಮುಂಜಾವು-ಸಂಜೆ ಅಲ್ಲಿ ಅವರ ದಿವಾನ ಯಾನೆ ಧಾರ್ಮಿಕ ಸಭೆಗಳು ನೆರೆಯುವವು. ಕಲಕತ್ತೆಯಿಂದ ಕಾಕಿನಾಡಿಗೆ ಒಂದು ಅಕಾಲಿ ಜಥಾ ಈ ಮೊದಲೇ ಹೊರಟಿದೆ. ಪೂರ್ವ ದಂಡೆಯ ಮೇಲೆ ಉಗಿಬಂಡಿಯ ಮಾರ್ಗವು ಕಿತ್ತುಹೋದದ್ದರಿಂದ, ಉಗಿಬಂಡಿಯ ಒತ್ತಾಟವಿಲ್ಲದ್ದಲ್ಲಿ, ಇವರು ಕಾಲುನಡಿಗೆಯಿಂದಲೇ ಮುಂದರಿಯುವರು. ನಾಗಪುರ, ಮುಂಬಯಿ, ಪಂಜಾಬುಗಳಿಂದ ಅಕಾಲಿ ಜಥಾಗಳು ಹೋಗುವವು. ಪ್ರಚಂಡ ಮೆರವಣಿಗೆಯು ಗುವದು. ಗುರುವಾರ ತಾ. ೨೭ನೇಯಿಂದ ಅಂದರೆ, ಇಂದು ಸಾಯಂಕಾಲದಿಂದ ಗುರುಕಾ ಲಂಗರ, ಅಂದರೆ ಉಚಿತ ಅಡಿಗೆ ಮನೆಯು ತೆರೆಯಲ್ಪಡುವದು. ಅಲ್ಲಿ ಎಲ್ಲರಿಗೂ ಉಚಿತವಾಗಿ ಊಟ ಸಿಗುವದು. ಅಕಾಲಿಗಳು ಅಖಿಲ ಸಮಾಜಗಳಿಗೆ ತಮ್ಮ ಅಡಿಗೆ ಮನೆಯಲ್ಲಿ ಊಟ ಕೊಳ್ಳಲು ನಿಮಂತ್ರಿಸಿರುವರು. ರಾಷ್ಟ್ರೀಯ ಸಭೆಯ ಅಧ್ಯಕ್ಷ ಹಾಗು ಖಿಲಾಫತ ಪರಿಷತ್ತಿನ ಅಧ್ಯಕ್ಷರಾದ ಮೌ॥ ಶೌಕತಅಲ್ಲಿ—ಮಹಮ್ಮದ ಅಲ್ಲಿಯವರು ಕಳೆದ ಶನಿವಾರ ತಾ. ೨೨ನೇಗೆ ಮುಂಬಯಿಯಿಂದ ಹೊರಟಿರುವರು. ಬಂಧುದ್ವಯರು ತಮಗೆ ಪುಷ್ಪಮಾಲೆಗಳನ್ನು ಹಾದಿಯಲ್ಲಿ ಸಮರ್ಪಿಸಬಾರದೆಂದು ನುಡಿದು, ಅವುಗಳ ಬದಲು, ಟಿಳಕ ಸ್ವರಾಜ್ಯ-ಖಿಲಾಫತ ನಿಧಿಗಳಿಗಾಗಿ, ಸಣ್ಣ ಥೈಲಿ ಚೀಲಗಳಲ್ಲಿ ನಿಧಿಯನ್ನು ಅರ್ಪಿಸಬೇಕೆಂದು ತಮ್ಮ ಮಿತ್ರರಿಗೆ ಸೂಚಿಸಿರುವರು. ಈ ಶಾಂತತೆಯ ಯುದ್ಧದಲ್ಲಿ ಕೊಂಗ್ರೆಸ ಸಂಸ್ಥೆಯನ್ನು ಕಾರ್ಯಕ್ಷಮವಾಗಿ ನಡಿಸುವದು ಅತ್ಯವಶ್ಯವಿದೆಂತಲೂ ಅವರು ಪ್ರತಿಪಾದಿಸಿರುವರು. ಬಂಧುದ್ವಯರು ಕೋಕನಾಡದಲ್ಲಿಯೇ ಇಳಕೊಳ್ಳುವರು. ಖಿಲಾಫತ ಪರಿಷತ್ತಿನ ಪ್ರತಿನಿಧಿಗಳು ಕೋಕನಾಡದಲ್ಲಿ ಉಳಿಯುವರು. ಹುಬ್ಬಳ್ಳಿಯ 'ವಾರ್ತಾಪ್ರಸಾರಕ ಸಂಘ'ವು ಶನಿವಾರ ತಾ. ೨೨ ನೇಯಿಂದ ರಾಷ್ಟ್ರೀಯ ಸಭೆಯ ವೃತ್ತವನ್ನು ಕರ್ನಾಟಕಸ್ಥರಿಗೆ ತ್ವರೆಯಿಂದ ಅರುಹಲು 'ವಾರ್ತಾಪತ್ರಿಕೆ'ಯೊಂದನ್ನು ಶನಿವಾರ ತಾ. ೨೨ ನೇಯಿಂದ ೧೨ ದಿವಸಗಳ ವರೆಗೆ ನಿತ್ಯವು ಹೊರಡಿಸುವ ನಿಶ್ಚಯ ಮಾಡಿ, ಅದರಂತೆ ತಾ. ೨೨ ನೇಯಿಂದ ಪತ್ರಿಕೆಯನ್ನು ಪ್ರಕಟಿಸಹತ್ತಿರುವರು.

— ಮುಂಬಯಿಯ ಪ್ರಾಂತಾಧಿಕರು ದಿವಾಣರನ್ನು ನೇಮಿಸಿದರು. ಮಿ। ಹಿದಾಯತಲ್ಲಾರವರು ಹಳೇ ಮಂತ್ರಿಯಾಗಿದ್ದು, ಅವರನ್ನೇ ಮುಂದೆ ನೇಮಿಸಿ, ಹಿಂದಿನ ಖಾತೆಗಳನ್ನೇ ಅವರಿಗೆ ವಹಿಸಿರುವರು. ಮಿ। ದಹಲವಿಯವರು ಎರಡನೇ ದಿವಾಣರು. ಇವರು ಜಂಗಲ ಖಾತೆಯ ಕಾರಭಾರ ನೋಡುವರು. ಪೂರ್ವಾಶ್ರಮದಲ್ಲಿ ಇವರು ಮಂಗರೋಳ-ಪಾಲನಪೂರ ಸಂಸ್ಥಾನಗಳಲ್ಲಿ ದಿವಾಣರಿದ್ದರು. ಶಿಕ್ಷಣಮಂತ್ರಿಗಳು ರಾ। ಜಾಧವರವರು. ಶಿಕ್ಷಣದ ಮಂತ್ರಿಗಳು ಬ್ರಾಹ್ಮಣೇತರಪಕ್ಷದ ಮುಂದಾಳುಗಳವರು.

— ಮಧ್ಯಪ್ರಾಂತದ ಗವ್ಹರ್ನರರು ಸ್ವರಾಜ್ಯ ಪಕ್ಷದ ನಾಯಕರಾದ ಡಾ॥ ಮುಂಜೇಯವರನ್ನು ಕಳೆದ ಶುಕ್ರವಾರಕ್ಕೆ ನಿಮಂತ್ರಿಸಿ, ದಿವಾಣರನ್ನು ನೇಮಿಸಹೇಳಿದರಂತೆ ಪ್ರಚಲಿತ ದ್ವಿದಲ ರಾಜ್ಯಪದ್ಧತಿಯನ್ನು ನೆಟ್ಟಗೆ ಮಾಡಲು ಅಥವಾ ಅಂತ್ಯಪಡಿಸಲು ತಮ್ಮ ಪಕ್ಷವು ಟೊಂಕ ಕಟ್ಟಿರುವದರಿಂದ ದಿವಾಣರನ್ನು ನೇಮಿಸಿಕೊಂಡು ಕಾರಭಾರವನ್ನು ನಡಿಸಲು ಒಪ್ಪಲಿಲ್ಲ. ಸ್ವರಾಜ್ಯ ಪಕ್ಷದವರು ಟಿಳಕರ ಪ್ರತಿಯೋಗೀ ಸಹಕಾರದ ತತ್ವವನ್ನು ಪುರಸ್ಕರಿಸುವರೆಂದು ತಮ್ಮ ನಂಬಿಗೆಯಿತೆಂದು ಗವ್ಹರ್ನರರು ನುಡಿದರು. ಸ್ವರಾಜ್ಯ ಪಕ್ಷದ ಸದ್ಯದ ಧ್ಯೇಯವು ಪ್ರತಿಯೋಗಿ ಅಸಹಕಾರ ತತ್ವಕ್ಕೆ ವಿಸಂಗತವಾಗಿರುವದರಿಂದ, ಅದನ್ನು ಹಿಂಬಾಲಿಸಲು ಈಗ ಶಕ್ಯವಿಲ್ಲೆಂದು ಡಾ। ಮುಂಜೇಯವರು ಸ್ಪಷ್ಟೀಕರಣ ಮಾಡಿದರು.

— ಹಿಂದುಸ್ಥಾನ ಹಾಗು ನೇಪಾಳ ಇವುಗಳೊಳಗೆ ಕಳೆದ ಶುಕ್ರವಾರಕ್ಕೆ ಗೆಳೆತನದ ಹೊಸ ತಹನಾಮೆಯಾಗಿದೆ.

— ಮದ್ರಾಸ ಇಲಾಖೆಯ ಶ್ರೀ। ಬಾಲ ಸುಬ್ರಹ್ಮಣ್ಯ ಗಸ್ತರ ಮೇಲೆ ಕ್ರಿ. ಪ್ರೊ. ಕೋ. ೧೦೮ ನೇ ಕಲಮಿನನ್ವಯ ಜಾಮೀನು ಪ್ರಕರಣ ನಡೆದು, ಜಾಮೀನು ಕೊಡಲೊಲ್ಲದ್ದರಿಂದ ಅವರಿಗೆ ೧ ವರ್ಷದ ಸಾದಾ ಶಿಕ್ಷೆಯಾಯಿತು. ಮಹಾತ್ಮರ ಕಾರ್ಯಕ್ರಮದಂತೆ, ಪ್ರಜೆಗಳು ಸಶಕ್ತರಾಗಿದ್ದರೆ, ಇಂಥ ಸತ್ಯಕೋಸ್ಯರಿಗೆ ಸುಧಾರಿಸಲೆತ್ನಿಸುವದು ನಿರರ್ಥಕವು. ಆದ್ದರಿಂದ ನಾವು ಪರಮೇಶ್ವರನಿಗೆ ತನು ದೇಹವನ್ನು ದಕ್ಷಿಣಾರೂಪವಾಗಿ ಅರ್ಪಿಸುತ್ತೇವೆಂತಲೂ ಸಾವು ಬರುವವರೆಗೆ ಆಹಾರ ಗ್ರಹಿಸಲಿಕ್ಕಿಲ್ಲೆಂದೂ ಶ್ರೀ... ಕೊಟ್ಟು, ಇನ್ನಾದರೂ ಮಹಾತ್ಮರು ಹೇಳಿದಂತೆ ಆಚರಿಸಿರಿ ಎಂದು ಪ್ರಜೆಗಳಿಗೆ ಬೋಧಿಸಿ, ಡಿಸೆಂಬರ ತಾ. ೧೧ನೇಯಿಂದ ಉಪೋಷಣ ಮಾಡುತ್ತಿರುವರು.

— ಕಳೆದ ಶನಿವಾರಕ್ಕೆ ಮದ್ರಾಸ ಇಲಾಖೆಯ ತಿನವೆಲ್ಲಿಯಲ್ಲಿ ಒಂದು ರಾತ್ರಿಯೊಳಗೆ ೧೫ ಇಂಚು ವೃಷ್ಟಿಯಾಯಿತು. ಕೆಲಕೆಲವು ಕಡೆಯಲ್ಲಿ ೧೦-೧೨ ಅಡಿ ವರೆಗೆ ನೀರೇರಿತ್ತು. ಅಲ್ಲಲ್ಲಿಯ ಕೆರೆಗಳ ದಂಡೆಗಳು ಕುಸಿದು ಹೋಗಿ ಎಲ್ಲ ಕಡೆಯಲ್ಲಿ ನೀರೇ ನೀರಾಗಿದೆ. ತಾಮ್ರಪರ್ಣಿ ನದಿಗೆ ಮಹಾ ನೆರೆ ಬಂದು ಪೈರು ನಾಶವಾಯಿತು. ಬಹಳ ಮನೆಗಳು ಒಂದರ ಹಿಂದೊಂದು ಕಳಚಿಬಿದ್ದವು. ಕಲೆಕ್ಟರರ ಬಂಗ್ಲೆಯ ಸುತ್ತಲು ೧೦ ಫೂಟು ನೀರಿತ್ತಂತೆ. ಮಲಗುವ ಕೋಣೆಯಲ್ಲಿ ೩ ಫೂಟು ನೀರು. ಕೋರ್ಟುಗಳ ರೆಕಾರ್ಡ ಕೋಣೆಗಳನ್ನು ಮಾರನೇ ದಿನ ತೆರೆಯಲು, ಅವುಗಳಲ್ಲಿ ಹಾವುಗಳ ಪ್ರದರ್ಶನವೆಂಬಂತೆ ಭಾಸವಾಯಿತಂತೆ! ಅಷ್ಟು ತರತರದ ಹಾವುಗಳು ತುಂಬಿಕೊಂಡಿದ್ದವು. ತಿನವೆಲ್ಲಿ ತಾಲೂಕಿನಲ್ಲಿ ಈ ನೆರೆಯಿಂದ ವಿಶೇಷ ಹಾನಿ. ಪ್ರಾಣಘಾತವೇನೂ ಸಂಭವಿಸಲಿಲ್ಲೆಂದು ಕಲೆಕ್ಟರರ ತಿಳುವ

ಆರೋಗ್ಯಸ್ಥಿತಿಗೆ ರಾಜಮಾರ್ಗ!
ವೈದ್ಯ-ಡಾಕ್ಟರರ ಅವಶ್ಯಕತೆಯಿಲ್ಲ!!

ಮಹಾತ್ಮಾ ಗಾಂಧೀಕೃತ
(ಸಚಿತ್ರ)
ಆರೋಗ್ಯ ದಿಗ್ದರ್ಶನ.
(ಕನ್ನಡ ಅನುವಾದ)

ಬೆಲೆ ಬೇಡದ ಸುಲಭೋಪಾಯಗಳು! [illegible] ಸರ್ವರಿಗೆ [illegible] ಅತಿ ಉ[illegible]!!

ಇದರಲ್ಲಿ ಹವೆ, ನೀರು, ಅನ್ನ, ಉಡಿಗೆ-ತೊಡಿಗೆ, ವ್ಯಾಯಾಮ, ಸ್ತ್ರೀ-ಪುರುಷರ ಸಂಬಂಧ ಇವೇ ಮೊದಲಾದ ಮಹತ್ವದ ವಿಷಯಗಳಲ್ಲಿ ಮಹಾತ್ಮರ ಮಾರ್ಮಿಕ ಉಪದೇಶವಿದ್ದು, ಖರ್ಚು ತಗಲದೆ ಅನೇಕ ರೋಗಗಳನ್ನು ಸುಲಭವಾಗಿ ಗುಣಮಾಡುವದಕ್ಕಾಗಿ ವಾಯು-ಚಿಕಿತ್ಸೆ, ಜಲ-ಚಿಕಿತ್ಸೆ, ಮಣ್ಣಿನ ಉಪಚಾರಗಳೇ ಮೊದಲಾದ ಸ್ವಾಭಾವಿಕ ಉಪಾಯಗಳೂ, ಶಿಶು-ಜನನ, ಶಿಶು-ಸಂಗೋಪನ ಮೊದಲಾದ ಸಂದರ್ಭಗಳಲ್ಲಿಯ ನಮ್ಮ ಕರ್ತವ್ಯವೂ ಬಹು ಹೃದಯಂಗಮವಾಗಿ ತೋರಿಸಲ್ಪಟ್ಟಿರುವವು. ಕೆಲವು ಆಕಸ್ಮಿಕ ವಿಪತ್ತುಗಳ ನಿವಾರಣಾರ್ಥವಾಗಿ ತಾತ್ಕಾಲಿಕ ಉಪಾಯಗಳು ಸಹ ಹೇಳಲ್ಪಟ್ಟಿವೆ. ಒಟ್ಟಿನಮೇಲೆ ಗ್ರಂಥವು ಸದ್ಯಸ್ಥಿತಿಯಲ್ಲಿ ಸರ್ವರಿಗೂ ಅತಿ ಉಪಯುಕ್ತವಿದ್ದು, ವಿಶೇಷತಃ ಮುಂದಿನ ಪೀಳಿಗೆಗೆ ಸನ್ಮಾರ್ಗದರ್ಶಕವಿದೆ. ಈಗಲೇ ಬಹಳ ಪ್ರತಿಗಳು ಖರ್ಚಾಗಿರುವವು.

ಪುಸ್ತಕದ ಪುಟಗಳು— ೧೪೦. ಕ್ರಯ:— ಒಂದು ಪ್ರತಿಗೆ ರೂ ೦—೧೨—೦ ಹೆಚ್ಚು ಪ್ರತಿಗಳನ್ನು ಒಮ್ಮೆಲೇ ಕೊಳ್ಳುವವರಿಗೂ, ಪುಸ್ತಕ ವ್ಯಾಪಾರಿಗಳಿಗೂ ಯೋಗ್ಯ ಕಮಿಶನ್ನು. ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ಸಿದ್ಧಲಿಂಗಯ್ಯ ಕಾಲವಾಡ, ಹೆಡ್‌ಕ್ಲಾರ್ಕ,
ರಾಲಿ ಬ್ರದರ್ಸ ಆಫೀಸ, ಹುಬ್ಬಳ್ಳಿ.

ವಿವಿಧ ಸಂಗ್ರಹ.

ಬೋರಸದದೊಳಗಿನ ಸತ್ಯಾಗ್ರಹ

ಬೋರಸದ ಪಟ್ಟಣದಲ್ಲಿ ತಾಲುಕಾ ಪರಿಷತ್ತು ನಡೆಯಿತು. ಈ ಪರಿಷತ್ತಿಗೆ ೨ ಸಾವಿರಕ್ಕೆ ಮಿಕ್ಕಿ ಪ್ರತಿನಿಧಿಗಳು ನೆರೆದಿದ್ದರು. ಶ್ರೀ ವಲ್ಲಭಭಾಯಿ ಪಟೇಲರವರು ಅಧ್ಯಕ್ಷಸ್ಥಾನದಿಂದ ಭಾಷಣಮಾಡಿ ಬೋರಸದ ತಾಲೂಕಿನಲ್ಲಿ ಮುಂಬಯಿ ಸರಕಾರವು ಎಬ್ಬಿಸಿದ ಹಾವಳಿಯನ್ನು ವಿವರವಾಗಿ ಬಣ್ಣಿಸಿ ಪ್ರಜೆಗಳು ತಲೆಪಟ್ಟಿಯನ್ನು ನಿರಾಕರಿಸಬೇಕೆಂದು ಸೂಚಿಸಿದರು. ಇದಕ್ಕಿನ ಪರಿಷತ್ತಿನಲ್ಲಿ ಪೋಲೀಸರು ಗ್ರಾಮಗಳಲ್ಲಿ ನಡಿಸುವ ಅನಾಚಾರ-ದುರಾಚಾರಗಳನ್ನು ತಿಳಿಸಲು ಕಾಂಗ್ರೆಸ ಕಮೀಟಿಯು ವಿದ್ಯಮಾನ ಅಲ್ಲಲ್ಲಿ ಸ್ವಯಂಸೇವಕರನ್ನಿಡಬೇಕೆಂದು ಠರಾವಾಗಿದೆ. ಸ್ವಾಗತ ಕಮೀಟಿಯ ಅಧ್ಯಕ್ಷರು ಮುಂಬಯಿ ಕಾಯಿದೆ ಕೌನ್ಸಿಲಿನ ಪ್ರತಿನಿಧಿಗಳಾದವರು. ಅವರಿಂದಲೂ ತಲೆಗೆ [illegible] ೬ ಆಣೆಯಂತೆ, ತಲೆ ಪಟ್ಟಿ ವಸೂಲ ಮಾಡಬೇಕೆಂದು. ವಿಧಿಸಲಾಗಿದೆ ಕಾಯಿದೆ ಕೌನ್ಸಿಲಿನ ಪ್ರತಿನಿಧಿಗಳು ಈ ಜಿಲ್ಲೆಯಲ್ಲಿ ಇನ್ನೊಬ್ಬರು ಇದ್ದಾರೆ. ಅವರು [illegible] ತ್ತಿದ್ದರೂ, ಅಧ್ಯಕ್ಷರಿಗೆ [illegible] ತಲೆಪಟ್ಟಿಯು ಅನ್ಯಾಯವಾದ್ದೆಂದು [illegible] ಗ್ರಾಮಸ್ಥರಿಗೆ ತಲೆಪಟ್ಟಿಯು ಬಾರದ [illegible] ಅವರ ಮನೆಯ ಹೆಂಗಸರು-ಮಕ್ಕಳು ಮಾತ್ರ ತಲೆಪಟ್ಟಿಯನ್ನು ತೆರಬೇಕು. ಈ ತಲೆಪಟ್ಟಿಯಿಂದ ಮುದುಕರನ್ನು, ಹೆಂಗಸರನ್ನು, ಕುರುಡ-ಕುಂಟ ಮೂಕ ಮೊದಲಾದವರನ್ನು, ಹಾಸಿಗೆಯಲ್ಲಿ ಬಿದ್ದ ರೋಗಿಗಳನ್ನು [illegible] ಮೂರ್ಛೆಯಲ್ಲಿ ಪೋಷಿಸಿದ ಅಪ್ರಾಪ್ತರನ್ನು [illegible] ಈ ತಲೆ ಪಟ್ಟಿಯು ಬಿಡಲಿಲ್ಲ. ಒಬ್ಬ ಹೆಂಗಸಿನ ಗಂಡನ ತಲೆ ಪಟ್ಟಿಯು ಯಾವಿಯಲ್ಲಿ ಬಾಕಿ ಉಳಿದಿತ್ತು. ವಸೂಲಿಗೆ ಹೋದಾಗ ಆ ಹೆಂಗಸು ತಲೆ ಪಟ್ಟಿ ಕಾಯಿದೆ ಮೊದಲೇ ಮೃತಳಾಗಿದ್ದಳೆಂದು ತಿಳಿಯಿತು. [illegible], ಅವಳ ವಾರಸದಾರ [illegible] ತಲೆ ಪಟ್ಟಿ ವಸೂಲ ಮಾಡಲು [illegible] ಒಬ್ಬ ಕಾಕ್ಷಿಕಾರನ ಮೇಲೂ ತಲೆ ಪಟ್ಟಿಯ [illegible] ಬಗ್ಗೆ ನೋಟೀಸು ಹೊರಟಿದೆ. ಅವನು ಈ ದರೋಡೆಖೋರರ ಬಾಯಿಯಲ್ಲಿ ಸಿಲುಕಿ, ಅನೇಕ [illegible], ಬದುಕಿ ಉಳಿದ ಪ್ರಸಂಗದಲ್ಲಿ ಅವನ ೧೧೦೦ ರೂಪಾಯಿಗಳನ್ನು ದರೋಡೆಖೋರರು ಸುಲಿದುಕೊಂಡು ಹೋದರು. ಅವನೂ ತಲೆ ಪಟ್ಟಿಯನ್ನು ತೆರತಕ್ಕದ್ದು. ತಲೆ ಪಟ್ಟಿ ತೆರದಿದ್ದರೆ, [illegible] ಹೇಳಲಾಗಿದೆ.

[illegible] ಗದ್ದೆ [illegible]

[illegible] ಗುವರ

[illegible] ಕರ ಹಕೀಕತು.

ಪ್ರಾಂತ ಸಾಹೇಬರು ಆ ಬೋರಸದ ತಾಲೂಕಿನ ಒಂದು ಹಳ್ಳಿಗೆ ಹೋಗಿದ್ದರು. ಅಲ್ಲಿ ಒಬ್ಬ ಹೆಂಗಸು [illegible] ಧಾನ್ಯವನ್ನು ಬೀಸುತ್ತಿದ್ದಳು. ಆ ಧಾನ್ಯವು ತೀರ ಕನಿಷ್ಠ ತರಗತಿಯದಾಗಿತ್ತು. ಸಾಹೇಬರಿಗೆ ಅದನ್ನು ನೋಡಿ ಕನಿಕರ ಹುಟ್ಟಿತೋ, ಏನೋ "ಇಷ್ಟು ಹೀನ ಪ್ರತಿಯ ಕಾಳನ್ನು ಏಕೆ ಬೀಸುತ್ತಿ?" ಎಂದು ಅವರು ಪ್ರಶ್ನಿಸಿದರು. ಆಗ ಭಗಿನಿಯು ನುಡಿದದ್ದೇನೆಂದರೆ.— "ಈ ಕಾಳು ಸಹ ಲಭಿಸಿದ್ದು ನನ್ನ ಪುಣ್ಯವು. ಒಂದು ಕಟ್ಟಿಗೆ ಹೊರೆಯನ್ನು ಮಾರಿ, ಇಷ್ಟು ಕಾಳನ್ನು ತಂದಿದ್ದೇನೆ ಏನು ಹೇಳಲಿ? ಎಂದು ಅವಳು ಉದ್ಗರಿಸಿ, ಬಿಕ್ಕಿ ಬಿಕ್ಕಿ ನುಡಿದದ್ದೇನೆಂದರೆ:- "ಇಷ್ಟಾದರೂ ನನ್ನಿಂದ ಸಹ ತಲೆಪಟ್ಟಿ ವಸೂಲ ಮಾಡುವ ಕ್ರಮ ನಡೆದದೆ" ಸಾಹೇಬರಿಗೆ ಅವಳ ಮಾತು ಕೇಳಿ ಕನಿಕರ ಹುಟ್ಟಿತು. ಅವಳನ್ನು ಯಾದಿಯಿಂದ ಏಕೆ ತೆಗೆಯಲಿಲ್ಲ? ಎಂದು ಅವರು ಪಟೇಲರಿಗೆ ಪ್ರಶ್ನಿಸಿದರು. ಮತ್ತು ತಮ್ಮ ಜೇಬಿನೊಳಗಿಂದ ಒಂದು ರೂಪಾಯಿಯನ್ನು ಕೊಟ್ಟು ನಡೆದರು. ಇಷ್ಟೆಲ್ಲ ಖಟಾ-ಟೋಪಿಯಾಗಿ ಏಕೆ ನಡೆದದೆ? ಪ್ರಜೆಗಳು ದರೋಡೆಖೋರರಿಗೆ ಶಾಮೀಲರು. ಅವರ ಬಗ್ಗೆ ಸುದ್ದಿ ಕೊಡುವದಿಲ್ಲೆಂದು ಪೋಲೀಸರು ಈ ದಾರಿಯಿಂದ ಪ್ರಜೆಗಳನ್ನು ಕಾಡುತ್ತಿರುವರು. ಮೇಲಿನ ಉದಾಹರಣೆಗಳ ಮೇಲಿಂದ ಇದು ನಿರಾಧಾರವೆಂದು ವಸ್ತುಸ್ಥಿತಿಯು ವಿಪರ್ಯಾಸವೆಂದು ನಿರ್ಬ[illegible] ದನಿಸೆ [illegible] ರೈತರಿಗಂತು ದರೋಡೆಖೋರರ ಹಾವಳಿ, ತಲೆಪಟ್ಟಿಯ ಸುಲಿಗೆ, ಇವೆರಡೂ ತಪ್ಪುವದಿಲ್ಲ.

* * *

ಬಾಬರನ ಘೋರ ಪ್ರತಿಜ್ಞೆ

ಅವರೊಳಗೂ ಅಲ್ಲಿ ಹಾವಳಿ ಹಾಕುವ ಬಾಬರನ ಘೋರ ಪ್ರತಿಜ್ಞೆಯನ್ನು ಕೇಳಿರಿ. ಈ ದರೋಡೆಖೋರನ [illegible] ಮುಂಬಯಿಯ 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯ [illegible] ಈ ಪ್ರದೇಶದಲ್ಲಿ ಸಂಚ[illegible] ವಾರ್ತೆಯನ್ನು ಇದರ ಪತ್ರಿಕೆಯ [illegible] ಸಂಚಿಕೆಗಳಲ್ಲಿ ಪ್ರಕಟ[illegible] ಅವರ [illegible] ನಡೆಯುವದೇನಂ[illegible] ವವರನ್ನು [illegible] ಪ್ರತಿಜ್ಞೆ ಮಾಡುತ್ತಿದ್ದು ಪೋಲೀಸ[illegible] ಅವನ [illegible] ಸುದ್ದಿ [illegible] ತಾಯಿಯನ್ನೂ, [illegible] ವನನ್ನು [illegible] ದರೋಡೆ[illegible] ಮಹಮ್ಮದೀಯ[illegible] ವರಲ್ಲಿ ಅನೇ[illegible] ಅವನ ತಿಳುವಳಿಕೆ ಆದು [illegible] ನೆ ಚಿಕ್ಕ[illegible] ಅವನ ಕೈಯೊಳ[illegible] ಈ ಮೊದಲೇ ಪ್ರಸಿದ್ಧವಾಗಿದೆ [illegible] ದ ಬಾಬರನ ಸುದ್ದಿ ಕೊಡು[illegible] ನಜರಿಗೆ ಹೇಗಾಗಬೇಕ? [illegible] ಸರ್ವತ್ರ' [illegible] ಶಾಮೀಲಾದ ಅರೋಪವನ್ನು [illegible] ವದನ್ನು ಬಿಡಲೊಲ್ಲದು.

* * *

ಪೋಲೀಸರ ಹಾವಳಿ

ಪೋಲೀಸರ ತಲೆಪಟ್ಟಿ ವಸೂಲಿಗಾಗಿ ಗ್ರಾಮಗಳಲ್ಲೆಲ್ಲ [illegible] ಹಳ್ಳಿಗಳ ಮೇಲೆ ಸಾಗಿ ಹೋಗಿ [illegible] ಮನೆಗಳನ್ನು ಹೊಕ್ಕುವದು, ಕೈಗೆ ಸಿಕ್ಕ ಸಾಮಗ್ರಿಯನ್ನು ಹಿಡಕೊಂಡು ಹೋಗುವ ಕ್ರಮವು ಜ್ಯಾರಿಯಿಂದ ನಡೆದದೆ. ಈ ಬಗ್ಗೆ ಯಜಮಾನರಿಗೆ ರಸೀದಿ ಕೊಡುವದಾಗಲೀ, ಒಯ್ದ ಸರಕುಗಳ ಯಾದಿ ತಯಾರಿಸುವದಾಗಲೀ, ಜಪ್ತ ಮಾಡಲಿಕ್ಕೆ [illegible] ಅಗತ್ಯವಾದರೂ ಇವರಿಗೇನು ಅಡ್ಡಿಯಾಗುವದಿಲ್ಲ. ೧೫ ಮಂದಿ ರೈತರ ಮೇಲೆ ಸ್ಥಿರಾಸ್ತಿ ಜಪ್ತಿಯ ಹುಕುಮುಗಳು ಹೊರಟಿವೆ. ಇದಕ್ಕೆ ಕಾಯಿದೆಯ ಆಧಾರವಿಲ್ಲ. ತಲೆ ಪಟ್ಟಿಗಿಂತ ಅನೇಕ ಪಾಲು ಹೆಚ್ಚು ರಕಮು ವಸೂಲ ಮಾಡಲ್ಪಟ್ಟಿದೆ. ಜಪ್ತ ಮಾಡಿದ ಬಗ್ಗೆ ಜಪ್ತಿಯಾದ ಜಿನಸಿನ ಪಂಚನಾಮೆಯನ್ನು ಸಹ ಮಾಡಲಿಲ್ಲ. ಕಾಂಗ್ರೆಸ ಕಮಿಟಿಯ ಸ್ವಯಂಸೇವಕರು ಹಳ್ಳಿಗಳಲ್ಲಿ ದಾಖಲಾದಂದಿನಿಂದ ಪೋಲೀಸರ ಹಾವಳಿಗೆ ಚಲೋ ಲಗಾಮು ಬಿದ್ದಿದೆ ಸರಕಾರಕ್ಕೆ ಈ ಪ್ರಕಾರಗಳ ಅರಿವು ಹುಟ್ಟಿ, ಈಗ ಪೋಲೀಸರು ಎಬ್ಬಿಸಿದ ಹಾವಳಿಯು [illegible] ನಡೆದದೆ. ಈ ಪೋಲೀಸರ ಹಾವಳಿಯಿಂದ ರಕ್ಷಿಸಲು, ಇನ್ನು ಜಾದಾ ಪೋಲೀಸರನ್ನು ನೇಮಿಸಿ ಅವರ ಖರ್ಚನ್ನು ಆಯಾ ಹಳ್ಳಿಗರಿಂದ ವಸೂಲ ಮಾಡಿಕೊಳ್ಳದಿದ್ದರೆ, ಸಾಕು.

ಪ್ರಜೆಗಳ ನಿರ್ಧಾರ

ಬೋರಸದದೊಳಗಿನ ತಾಲುಕಾಪರಿಷತ್ತಿನಲ್ಲಿ ಕರನಿರಾಕರಣೆಯ ಠರಾವು ಮಂಜೂರಾದಂದಿನಿಂದ ವಿಲಕ್ಷಣ ಪರಿಸ್ಥಿತಿಯುಂಟಾಗಿದೆ. ಈ ತಲೆಪಟ್ಟಿಯನ್ನು ಬೋರಸದ ತಾಲೂಕಿನೊಳಗಿನ ೮೮ ಹಳ್ಳಿಗಳು, ಆನಂದ ತಾಲೂಕಿನೊಳಗಿನ ೧೪ ಹಳ್ಳಿಗಳು, ಅಂದರೆ, ಸಾಧಾರಣ ೧॥ ಲಕ್ಷ ಜನರು, ೨ ಲಕ್ಷ ೪೦ ಸಾವಿರ ರೂಪಾಯಿಗಳನ್ನು ತೆರತಕ್ಕದ್ದು. ಬೋರಸದದಲ್ಲಿ ಒಂದು ಸತ್ಯಾಗ್ರಹ ಬಿಡಾರು ಹೂಡಲ್ಪಟ್ಟಿದೆ. ಈ ಬಿಡಾರಿನಲ್ಲಿ ಮತ್ತು ಅದಕ್ಕೊಳಪಟ್ಟ ಉಪ-ಬಿಡಾರುಗಳಲ್ಲಿ ಕೂಡಿ ೩೦ ಸ್ವಯಂಸೇವಕರಿರುವರು. ಈ ಸ್ವಯಂಸೇವಕರೆಲ್ಲರೂ ಅಲ್ಲಲ್ಲಿ ಗ್ರಾಮಗಳನ್ನು ಸಂಚರಿಸಿ, ಕರನಿರಾಕರಣೆಯ ಚಳವಳಿಯನ್ನು ಸಂಘಟನೆ ಮಾಡುತ್ತಿರುವರು. ಎಲ್ಲರೂ ಕರನಿರಾಕರಣೆ ಮಾಡಬೇಕೆಂಬ ಕರಪತ್ರಗಳನ್ನು ಅಲ್ಲಲ್ಲಿ [illegible]ಮಾಡುತ್ತಿರುವರು ಸರಕಾರವು ಲಿಲಾಂವಿಗೆ ಹಚ್ಚಿದ ಸಾಮಗ್ರಿಗಳನ್ನು ಖರೀದಿ ಮಾಡಬಾರದೆಂತಲೂ [illegible] ಮಾಡುತ್ತಿರುವರು. ಇದನ್ನು ಮೀರಿ ಯಾರಾದರೂ ಖರೀದಿ ಮಾಡಿದ್ದಲ್ಲಿ, ಅವನಿಗೆ ಶಾಸನ ಮಾಡಬೇಕೆಂತಲೂ ಠರಾವುಗಳಾಗಿವೆ. ಬೋರಸದ ಮ್ಯುನಿಸಿಪಾಲಿಟಿಯೂ ತನ್ನ ಹದ್ದಿನೊಳಗಿನ ನಾಗರಿಕರಿಂದ ತಲೆ ಪಟ್ಟಿಯನ್ನು ವಸೂಲ ಮಾಡಬಾರದೆಂದು ನಿರ್ಣಯಿಸಿರುವರು. ಅನೇಕ ಹಳ್ಳಿಗಳಲ್ಲಿ ಗ್ರಾಮಸ್ಥರು ವರಿಷ್ಠಾಧಿಕಾರಿಗಳಿಗೂ ಸಹಕಾರ ಮಾಡಲು ಒಪ್ಪುವದಿಲ್ಲ. ವರಿಷ್ಠರ ಹುಕುಮುಗಳನ್ನು ಅಮಲಿನಲ್ಲಿ ತರಲಿಲ್ಲವೆಂದು ಅನೇಕ ಗ್ರಾಮಸ್ಥರಿಗೆ ಸ್ಥಾನಭ್ರಷ್ಟಮಾಡಿದ ಸುದ್ದಿಗಳಿವೆ. ಕಲೆಕ್ಟರರೂ, ಮಾಮಲೇದಾರರೂ, ಗ್ರಾಮಸ್ಥರ ಮನವಲಿಸಿಕೊಂಡು, ಪ್ರಜೆಗಳಿಂದ ತಲೆ ಪಟ್ಟಿಯನ್ನು ವಸೂಲ ಮಾಡಿಸಲು ಯತ್ನಿಸಿದರು. ಆದರೆ, ಗ್ರಾಮಸ್ಥರು ತಲೆಪಟ್ಟಿಯ ಅನ್ಯಾಯವನ್ನು ಸಾಂಗೋಪಾಂಗ ಚರ್ಚಿಸಿ, ವಾದದಲ್ಲಿ ವರಿಷ್ಠರನ್ನು ಸೋಲಿಸಿ, ಓಡಿಸಿದರು.

* * *

ಸ್ವಯಂಸೇವಕರ ಕಾರ್ಯ.

ಗುಜರಾಥ ಪ್ರಾಂತಿಕ ಕಾಂಗ್ರೆಸ ಕಮೀಟಿಯು ಈಗ ಹಳ್ಳಿಗೊಬ್ಬ ಸ್ವಯಂಸೇವಕನನ್ನು ನೇಮಿಸಿದೆ. ಈ ಸ್ವಯಂಸೇವಕರು ಸತ್ಯ-ಅಹಿಂಸೆಗಳನ್ನು ಪುರಸ್ಕರಿಸಲು ಪ್ರತಿಜ್ಞೆ ಮಾಡಿದವರು. ಪ್ರಜೆಗಳಿಗೆ ತಕ್ಕ ದಾರಿಯನ್ನು ತೋರಿಸಿಕೊಟ್ಟು, ಕಾಯಿದೆ ಭಂಗ ಕ್ಷೇತ್ರದೊಳಗಿನ ವಾತಾವರಣವನ್ನು ಅಶಾಂತತೆಯಿಂದ ಕಳಂಕಹೊಂದದಂತೆ ಕಾಪಾಡುವದು. ವಿಧಾಯಕ ಕಾರ್ಯಕ್ರಮವನ್ನು ಈ ಪ್ರದೇಶದಲ್ಲಿ ಪುರಸ್ಕರಿಸಲು ಇದೊಂದು ಅಪೂರ್ವ ಯೋಗವು ಸ್ವತಃ ನೂಲುವದು, ಪ್ರಜೆಗಳಿಗೆ ನೂಲಹಚ್ಚುವದು, ಖಾದಿ ವಿಕ್ರಯಿಸುವದು. ಇವೆಲ್ಲ ಕೆಲಸಗಳನ್ನು ಇವರು ಕೈಕೊಳ್ಳುವರು. ಪ್ರಾಂತಿಕ ಕಮೀಟಿಯು ಅವಶ್ಯ ಬಿದ್ದಲ್ಲಿ, ನೇಕಾರರನ್ನು, ಪಿಂಜಾರಿಗಳನ್ನೂ ಕಳಿಸುವ ವ್ಯವಸ್ಥೆ ಮಾಡುವದು. ಈ ಸ್ವಯಂಸೇವಕರು ಪೋಲೀಸರ ಅಚಾರ-ದುರಾಚಾರಗಳ ಮೇಲೆ ನಜರಿಟ್ಟು, ಚಿತ್ರಗುಪ್ತನಂತೆ, ಅವನ್ನು ನಮೂದಿಸಿಕೊಂಡು, ಕಾಂಗ್ರೆಸ ಕಮೀಟಿಗಳಿಗೆ ತಿಳಿಸುವರು. ಮೌಲಾನಾ ಶೌಕತ ಅಲ್ಲಿಯವರು ಈ ಪ್ರದೇಶವನ್ನು ಕಳೆದ ವಾರದಲ್ಲಿ ಸಂಚರಿಸಿ, ಶ್ರೀ ವಲ್ಲಭಭಾಯಿ ಪಟೇಲರವರ ನೇತೃತ್ವದಲ್ಲಿ ಸಂಘಟನೆ ಹೊಂದಿದ ಕಾಯದೇಭಂಗದ ತಯಾರಿಯನ್ನು ನೋಡಿ ಬೆರಗಾದರು. ಈಗ ಹಿಂದುಸ್ಥಾನವು ನಿಜವಾಗಿ ಕಾರ್ಯಾಸಕ್ತವಾಯಿತೆಂದು ಅವರು ನುಡಿದರು. ಬೋರಸದ ತಾಲುಕಾ ಪರಿಷತ್ತಿನ ಹಕೀಕತನ್ನು ಬೋರಸದದೊಳಗಿಂದ ಒಬ್ಬರು ತಂತಿಯ ಮೂಲಕ ದಿಸೆಂಬರ ತಾ. ೩ನೇಗೆ "ಮುಂಬಯಿ ಕ್ರಾನಿಕಲ್" ಗೆ ತಿಳಿಸಿದ್ದರು. ಅದು ಆಕ್ಷೇಪಾರ್ಹವೆಂದು ಅಚ್ಚು ಹೊಡೆದು ಮುಂಬಯಿಯ ತಂತಿ ಆಫೀಸಿ

ನಿಂದ ವಿರತ ಮಾಡಲಾಯಿತು. ತಾ. ೧೩ ನೇಗೆ ದರಬಾರ ಶ್ರೀ ಗೋಪಾಲಕೃಷ್ಣಸ್ವಾಮಿ ದೇಸಾಯಿಯವರು ಕರ ನಿರಾಕರಣೆಯ ಚಳವಳಿಯ ಹಕೀಕತನ್ನು "ಮುಂಬಯಿ ಕ್ರಾನಿಕಲ್"ಗೆ ತಂತಿಯಿಂದ ತಿಳಿಸಿದ್ದರು. ಅದೂ ಆಕ್ಷೇಪಾರ್ಹವೆಂದು, ಅಹಮದಾಬಾದಿನ ತಂತಿ ಆಫೀಸು ವಿರತ ಮಾಡಿತು. ಮುಂಬಯಿಯ "ಡೈರೆಕ್ಟರ ಅಫ್ ಇನ್ಫರ್ಮೇಶನ್" ರವರು ಮುಂಬಯಿ ಸರಕಾರದ ಈ ವಿಷಯದ ಕೃತಿಯನ್ನು ಪ್ರಕಟಿಸಿರುವರು. ಅಲ್ಲಿಯ ಪ್ರಜೆಗಳ ವರ್ತನವು ಹೇಗೆ ಆಕ್ಷೇಪಾರ್ಹವಿದೆ? ಪರೋಪಕಾರದ ಬಗ್ಗೆ ಹೇಗೆ ಪ್ರಜೆಗಳು ಸಿದ್ಧ ಕೊಡಲಿಲ್ಲ? ಪೋಲೀಸರು ಎಷ್ಟು ಪ್ರಶಂಸನೀಯ ಕಾರ್ಯವನ್ನು ಜರುಗಿಸಿದರು? ಕರನಿರಾಕರಣೆಯ ಚಳವಳಿಯು ಅಪರಾಧಿಗಳಿಗೆ ಶಾಸನದಿಂದ ವಿಮೋಚಿಸು ವದಿರುವದರಿಂದ, ಅದೊಂದು ಶಾಸನಾರ್ಹ ಅಪರಾಧವಾಗುತ್ತದೆಂದು ಮುಂಬಯಿ ಸರಕಾರವು ಹೇಗೆ ಅಭಿಪ್ರಾಯಪಟ್ಟಿದೆ? ಎಂದು ವಿವರಿಸಿರುವರು. ಅದರಿಂದಲೇ ಪರಿಷತ್ತಿನ ಹಕೀಕತನ್ನು ಆಕ್ಷೇಪಾರ್ಹವೆಂದು ನಿಮಗೆ ಹುಟ್ಟಿಸಲಿಲ್ಲೆಂದು "ಡೈರೆಕ್ಟರ ಅಫ್ ಇನ್ಫರ್ಮೇಶನ್" ರವರು "ಮುಂಬಯಿ ಕ್ರಾನಿಕಲ್" ಪತ್ರಿಕೆಗೆ ತಿಳಿಸಿರುವರು. ಬೋರಸದ ತಾಲೂಕಿನಲ್ಲಿ ನಡೆದ ಸತ್ಯಾಗ್ರಹದ ಹಕೀಕತಿದು.

***

ಕಪ್ಪು ಧ್ವಜದ ಸತ್ಯಾಗ್ರಹ.

ಸರ್ವಾಧಿಪತಿ ರೀಡಿಂಗ ದೊರೆಗಳು ಕಳೆದ ಪಕ್ಷದಲ್ಲಿ ಮದ್ರಾಸ ಪ್ರಾಂತವನ್ನು ಸಂದರ್ಶಿಸಿದರು. ಸರ್ವಾಧಿಪತಿಗಳಿಗೆ ಸಾರ್ವಜನಿಕ ಸ್ವಾಗತವಾಯಿತೆಂದು ಪ್ರದರ್ಶಿಸುವರೆ ಸ್ಥಾನಿಕ ಅಧಿಕಾರಿಗಳೂ, ಪೋಲೀಸರೂ ಬಲು ಯತ್ನ ಮಾಡಿದರು. ಕಾಂಗ್ರೆಸ ಕಮೀಟಿಯ ಆಜ್ಞೆಯಂತೆ ಅಲ್ಲಲ್ಲಿ ಹರತಾಳಗಳಾದವು. ತ್ರಿಚಿನಾಪಳ್ಳಿಯಲ್ಲಿ ಸರ್ವಾಧಿಪತಿಗಳ ಆಗಮನವಾದಾಗ, ಕಮೀಟಿಯವರು ಅಧಿಕಾರಿಗಳ 'ಸ್ವಾಗತ ನಾಟಕ'ದಲ್ಲಿ ಪ್ರವೇಶಗೊಳ್ಳಬಾರದೆಂಬ ಹಸ್ತಪತ್ರಿಕೆಗಳನ್ನು ಹಂಚಿ ಆಜ್ಞಾಪಿಸಿದ್ದರು. ಅದರಂತೆ, ಅಲ್ಲಿಯೂ ಹರತಾಳ ಆಚರಣೆಯಾಯಿತು. ಕಾಂಗ್ರೆಸ ಆಫೀಸಿನ ಮೇಲೆ ಎರಡು ಸ್ವರಾಜ್ಯ ಧ್ವಜಗಳಿದ್ದವು. ಅವುಗಳ ಜೊತೆಗೆ ಸ್ವಾಗತ ಸಮಾರಂಭದ ನಿಷೇಧದ ದ್ಯೋತಕವೆಂದು ಕಮೀಟಿಯವರು ಒಂದು ಕಪ್ಪು ಧ್ವಜವನ್ನು ಹಚ್ಚಿದ್ದರು. ಸರ್ವಾಧಿಪತಿಗಳು ತ್ರಿಚಿನಾಪಳ್ಳಿಯಲ್ಲಿ ಕಾಲೂರಿದ ದಿವಸವೇ ಪೋಲೀಸರು ಕಮೀಟಿಯ ಆಫೀಸಿನ ಮೇಲೆ ನುಗಿಹೋಗಿ, ಸ್ವರಾಜ್ಯ ಧ್ವಜಗಳನ್ನೂ, ಕಪ್ಪು ಧ್ವಜವನ್ನೂ ಕಿತ್ತೆಗೆದರು. ಕಪ್ಪು ಧ್ವಜ ಹಚ್ಚುವ ಮೊದಲು ಸ್ವರಾಜ್ಯ ಧ್ವಜಗಳನ್ನೇನು ಕಿತ್ತೆಗೆದಿದ್ದಿಲ್ಲ. ಮದ್ರಾಸ ಪಟ್ಟಣದಲ್ಲಿ ಸರ್ವಾಧಿಪತಿಗಳ ಮುಕ್ಕಾಮಿರುವವರೆಗೆ ಶ್ರೀ ಸಂಗರವೇಲು ಚೆಟ್ಟಿಯಾರರವರು ತಮ್ಮ ಮನೆಯ ಮೇಲೆ ಕಪ್ಪು ಧ್ವಜವನ್ನು ಹಚ್ಚಬೇಕೆಂದು ನಿರ್ಧರಿಸಿ, ಒಂದು ಕಪ್ಪು ಪತಾಕೆಯನ್ನು ಹಚ್ಚಿದ್ದರು. ಪೋಲೀಸರು ಅವರ ಅಪ್ಪಣೆ ಪಡೆಯದೆ ಒಳಹೊಕ್ಕು, ಪತಾಕೆಯನ್ನು ಸ್ಥಾನಭ್ರಷ್ಟ ಮಾಡಿದರು. ಕೂಡಲೇ, ಶ್ರೀ ಚೆಟ್ಟಿಯಾರರವರು ಇನ್ನೊಂದು ಪತಾಕೆಯನ್ನು ಹಚ್ಚಿದರು. ಅದನ್ನೂ ಪೋಲೀಸರು ಕಿತ್ತೊಯ್ದರು. ಇನ್ನೊಂದು ಪತಾಕೆಯನ್ನು ಹಚ್ಚಿದರು. ಅದನ್ನೂ ಪೋಲೀಸರು ಕಿತ್ತೊಯ್ದರು. ಇನ್ನೊಂದು ಪತಾಕೆಯು ಆ ಸ್ಥಳವನ್ನು ಅಲಂಕರಿಸಿತು. ಅದನ್ನೂ ಪೋಲೀಸರು ಒಯ್ದರು. ಹೀಗೆ, ಧ್ವಜಾರೋಹಣ-ಅವರೋಹಣ ಕ್ರಮವು ಒಂದು ದಿನ ವಿಕಸನವೆನೆ ನಡೆಯಿತು. ಆದರೂ ಶ್ರೀ ಚೆಟ್ಟಿಯಾರರವರು ಕಪ್ಪು ಧ್ವಜವನ್ನು ಹಾರಿಸುವ ತಮ್ಮ ನಿರ್ಧಾರವನ್ನು ಬಿಡಲಿಲ್ಲ. ಮೂರನೇ ದಿನ ಏನಾಯಿತೋ ಏನೋ! ಪೋಲೀಸರು ಪತಾಕೆಗಳನ್ನೆಲ್ಲ ಶ್ರೀ ಚೆಟ್ಟಿಯಾರರವರಿಗೆ ಮರಳಿ ಕೊಟ್ಟರು. ಶ್ರೀ ಚೆಟ್ಟಿಯಾರರವರು ಮದ್ರಾಸ ಪಟ್ಟಣವನ್ನು ತ್ಯಜಿಸುವವರೆಗೆ ಕಪ್ಪು ಧ್ವಜಗಳನ್ನು ತಮ್ಮ ಮನೆಗೆ ಹಚ್ಚಿದ್ದರು. ನಿರ್ಧಾರದ ಸಣ್ಣ ಸತ್ಯಾಗ್ರಹ.

ಪ್ರಾಥಮಿಕ ಶಿಕ್ಷಕರ ಹೊಸ ಸ್ಕೇಲು.

ಮುಂಬಯಿ ಸರಕಾರವು ಮುದ್ರಿತಪತ್ರಕವನ್ನು ಪ್ರಕಟಿಸಿ, ಪ್ರಾಂತದೊಳಗಿನ ಶಿಕ್ಷಕರ ಪಗಾರದ ಹೊಸ ಸ್ಕೇಲನ್ನು ಕಳೆದ ತಾ. ೩-೧೨-೨೩ನೇಗೆ ಪ್ರಕಟಿಸಿದೆ. ಅದರೊಳಗಿನ ಮುಖ್ಯಾಂಶಗಳೇನೆಂದರೆ.—

ಟೀಪು:— ಕಾಳಕತಿಗಳ ದರದ ಕಾಸವು ಕುಗ್ಗಿ ಸಂಸಾರದ ಖರ್ಚು ಕಡಿಮೆಯಾದ್ದರಿಂದ ವಿಶೇಷ ಕಡಿತಯಾದಲ್ಲಿ ಈ ಕೆಳಗಿನ ಸ್ಕೇಲು ಕಡಿಮೆಮಾಡಲ್ಪಡುವದು.

೧. ತಾ. ೩೦-೬-೧೯೨೩ನೇಗೆ ಸರಕಾರ, ಲೋಕಲ್ ಬೋರ್ಡ, ಮ್ಯುನಿಸಿಪಾಲಿಟಿ, ಈ ಸಂಸ್ಥೆಗಳಲ್ಲಿ ಕಾಯಂ ನೇಮಣೂಕಿಯಿಂದಿದ್ದ ಎಲ್ಲ ಪ್ರಾಥಮಿಕ ಶಿಕ್ಷಕರಿಗೆ ಈ ಸ್ಕೇಲು ಲಾಗು ಇದೆ. ಇದರಂತೆ, ತಾ. ೧-೩-೧೯೨೩ನೇಯಿಂದ ಸಂಬಳವು ದೊರೆಯುವದು.

(ಅ) ಯಾವದೇ ಸರ್ಟಿಫಿಕೇಟು ಪಡೆಯದಿದ್ದವರಿಗೆ ರೂ. ೨೦.

(ಬ) ಮುಲ್ಕಿ ಪರೀಕ್ಷೆ ಪಾಸಾದವರಿಗೆ ರೂ. ೨೫—೧/೫—೩೦.

(ಡ) ೧ನೇ ವರ್ಷದ ಟ್ರೇಂಡರಿಗೆ ರೂಪಾಯಿ ೩೦—೧/೨—೩೫—೧/೨—೪೦.

(ಕ) ೨ನೇ ವರ್ಷದ ಟ್ರೇಂಡರಿಗೆ ರೂಪಾಯಿ ೩೫—೧/೨—೪೫—೧—೫೦

(ಇ) ೩ನೇ ವರ್ಷದ ಟ್ರೇಂಡರಿಗೆ ರೂಪಾಯಿ ೪೦—೨/೨—೫೦—೧—೬೦.

ಇದಲ್ಲದೆ, ವರ್ಗವೊಳಗಿನ ಹುಡುಗರ ಹಾಜರಿಯಂತೆ, ಪ್ರತಿ ತಿಂಗಳಿಗೆ ಈ ಕೆಳಗಿನಂತೆ ಹೆಡ್ ಮಾಸ್ತರರಿಗೆ ಮಾತ್ರ ಭತ್ತೆ ಸಿಗುವದು.

ಹಾಜರಿಯ ಸರಾಸರಿ.	ಭತ್ತೆ ರೂಪಾಯಿ.
೫೦ರ ಒಳಗೆ	೩.
೫೧ರಿಂದ ೧೦೦	೬
೧೦೧ರಿಂದ ೧೫೦	೯.
೧೫೧ರಿಂದ ೨೦೦	೧೨
೨೦೧ರಿಂದ ೨೫೦.	೧೫
೨೫೦ರ ಮೇಲೆ	೨೦

ಹುಡುಗರ ಸರಾಸರಿ ತೆಗೆಯುವಾಗ, ಹಿಂದಿನ ವರ್ಷದ ಹಾಜರಿಯನ್ನು ತೆಗೆದು, ಬಳಿಕ, ತಿಂಗಳ ಸರಾಸರಿಯಿಂದ ಈ ಭತ್ತೆ ಕೊಡಲಾಗುವದು. ಈ ಭತ್ತೆಯು ಪ್ರತಿ ವರುಷ ಮಾರ್ಚ ತಿಂಗಳಲ್ಲಿ ನಿಶ್ಚಿತವಾಗಿ, ಮುಂದಿನ ಮಾರ್ಚ ವರೆಗೆ ಕೊಡಲಾಗುವದು. ಆದರೆ, ಈ ಭತ್ತೆಯನ್ನು ಪಡೆಯಬೇಕಾದರೆ, ಹೆಡ್‌ಮಾಸ್ತರನು ಮೂರನೇ ವರ್ಷದವನಿದ್ದರೆ, ೧೦ ವರ್ಷಗಳ ಸರ್ವಿಸನ್ನು, ೨ನೇ ವರ್ಷದವನಿದ್ದರೆ, ೫ ವರ್ಷದ ಸರ್ವಿಸನ್ನು ಪೂರ್ಣಮಾಡಿರಬೇಕು. ಅಸಿಸ್ಟಂಟ ಮಾಸ್ತರರು ಹೆಡ್‌ಮಾಸ್ತರರ ಬದಲಿ ನೋಡಿದಾಗ, ಅವರಿಗೆ ಈ ಹಾಜರಿ ಭತ್ತೆಯು ಸಿಗುವದು.

ಶಾಲೆಯಲ್ಲಿ ೨೦೦ಕ್ಕೆ ಮಿಕ್ಕಿ ವಿದ್ಯಾರ್ಥಿಗಳಿದ್ದಲ್ಲಿ, ೧ನೇ ಅಸಿಸ್ಟಂಟ ಶಿಕ್ಷಕರಿಗೆ ತಿಂಗಳಿಗೆ ರೂಪಾಯಿಗೆ ೩ರಂತೆ ಹಾಜರಿ ಭತ್ತೆ ಸಿಗುವದು. ೧೦ ವರುಷಗಳಾದ ಹೊರತು ೨ನೇ ವರ್ಷದವರು ಈ ಭತ್ತೆಯನ್ನು ಪಡೆಯಲಾರರು.

ಈ ಹೊಸ ಸ್ಕೇಲಿನಂತೆ, ಯಾವದೇ ಶಿಕ್ಷಕರಿಗೆ ದೊರೆಯತಕ್ಕ ಸಂಬಳವು ದೊರೆಯುವ ಸಂಬಳಕ್ಕಿಂತ ಕಡಿಮೆಯಾದ್ದಲ್ಲಿ, ಅದನ್ನು ಕಡಿಮೆ ಮಾಡಲಿಕ್ಕಿಲ್ಲ.

ಬರುವ ಮುಂಬಯಿ ಕಾಯಿದೆ ಕೌನ್ಸಿಲಿನ ಪ್ರಥಮ ಅಧಿವೇಶನದಲ್ಲಿ ಈ ಯೋಜನೆಯ ಚರ್ಚೆಯಾಗಿ, ಅದು ಮಂಜೂರಾದ ಬಳಿಕ, ತಾ. ೧-೩-೧೯೨೩ನೇಯಿಂದ ಶಿಕ್ಷಕರಿಗೆ ಈ ಸ್ಕೇಲಿನಂತೆ ಸಂಬಳಕೊಡಲ್ಪಡುವದು.

ಈ ಹೊಸ ಸ್ಕೇಲಿನಿಂದ ೭ ಲಕ್ಷ ರೂಪಾಯಿಗಳು ಸರಕಾರಕ್ಕೆ ೧ ವರ್ಷಕ್ಕೆ ಹೆಚ್ಚು ಖರ್ಚು ಬಗಲುವದೆಂದು ಅಂದಾಜು ಮಾಡಲ್ಪಟ್ಟಿದೆ.

Twelve Tissue Remedies

ಈರಾರು ಲವಣಗಳು

ಕೆಳಗೆ ಬರೆದ ಕ್ರಯಕ್ಕೆ ಸಿಗುವವು
ನಂಬರ ೨ರಿಂದ ೧೨ರ ವರೆಗೆ

೧ಔನ್ಸ ಬಾಟ್ಲಿಗೆ ಕ್ರಯ ರೂ. ೦-೧೦-೦.
'' '' '' ೨ ಔನ್ಸ ಬಾಟ್ಲಿಗೆ '' ರೂ. ೧-೦-೦.
'' '' '' ೪ ಔನ್ಸ ಬಾಟ್ಲಿಗೆ '' ರೂ. ೧-೧೨-೦.

ಇದಲ್ಲದೆ, ಗಜಕರ್ಣ, ಕಜ್ಜಿ, ತಲೆಹೊಡತ, ಚಳಿಜ್ವರ, ಚಾತುರ್ಥಿಕಜ್ವರ, ಜ್ವರಗಡ್ಡೆ ಮೊದಲಾದವುಗಳಿಗೆ ಅತ್ಯುತ್ತಮ ಔಷಧಗಳು ನಮ್ಮಲ್ಲಿ ದೊರೆಯುವವು. ವಿಶೇಷ ಮಾಹಿತಿ ಪತ್ರದ್ವಾರ ಯಾ ಸಮಕ್ಷ.

ಪತ್ತೆ:— ಎನ್. ಈ. ವರುಗೀಸ್,
ಮಿಶನ್ ಮಾಸ್ತರ,
ಹಳದೀಪುರ. (ಉ. ಕಾನಡಾ)

ನೆಯ್ಗೆಯವರಿಗೆ ಸುಸಮಯ.

ನಮ್ಮಲ್ಲಿ ನೆಯ್ಗೆಗೆ ಸಂಬಂಧಪಟ್ಟ, ನೂಲಿನ ದಿವಗಳು (Cotton ealds) ತಂತಿ ದಿವಗಳು, (Wire hea) ಉಕ್ಕಿನ ಕಟ್ಟುಗಳು, (Steel reelds) ಸಾದಾ ಮತ್ತು ಗಾಲಿ ಲಾಳಿಗಳು, (Plain & r ler shuttles) ; ಪಿಕ್ಕರುಗಳು (Pickers) ಫಣಿಗಳನ್ನು ತೆಗೆದುಕೊಳ್ಳುವ ಕೊಂಡಿಗಳು (Reed hooks) ಮತ್ತು ಗಣಿಕೆಗಳು (Pirns) ಅಲ್ಲದೆ, ಇನ್ನೂ ಬೇಕಾದ ಸಾಮಾನುಗಳು ಚಿಲ್ಲರೆಯಾಗಲಿ, ಒಟ್ಟಿಗಾಗಲಿ ಸರಿಯಾದ ಬೆಲೆಗೆ ದೊರೆಯುತ್ತವೆ.

ಕ್ರಯದ ಪಟ್ಟಿ ಬೇಕಾದಲ್ಲಿ ಇಂಗ್ಲೀಷಿನಲ್ಲಿ ಬರೆಯಿರಿ.

Indo-British
Trading Bureau,
15-19 Ghoga Street, Fort
BOMBA

कारवारांत आयुर्वेदिक पाठविद्यालय

उघडण्यांत येणार.

कांहीं अनानुकूलतेमुळे ... विद्यालय सन १९२४ च्या मार्च महिन्या पासुन कारवार येथें वरील पाठशाळा उघडण्यात येणार आहे. आयुर्वेदांतील प्रत्येक विषय प्रमाणपूर्वक व सशास्त्र शिकविण्यांत येईल. पूर्ण आयुर्वेदिक शिक्षण तीन वर्षांत शिकविलें जाईल. विद्यार्थी निदान मराठी पांच इयत्ता शिकलेला व भांडारकरकृत, संस्कृत तीन पुस्तकें पढलेला असावा. अथवा आयुर्वेद आर्ष पुस्तकांतील श्लोकांचा अर्थ समजून घेण्या इतका संस्कृत ज्ञान असलेला असावा. त्यांचें वय १८ ते ३२ वर्षांपर्यंत व प्रकृति सदृढ असावी. सदर पाठशाळेचे वर्ग १ जानेवारी १९२४ पासुन सुरू होतील. फीचे दर १ ल्या वर्षास दरमहा ६ रुपये, दुसऱ्यास दरमहा

१० रुपये व तिसऱ्या वर्षास दरमहा १२ रुपये प्रमाणे ठेविली आहे पहिल्या वर्षात फक्त २५ विद्यार्थीच निवडण्यात येतील विद्यार्थ्यांनी आपले अर्ज ता १५ डिसेंबर च्या आत पाठविले पाहिजेत अर्जासोबत प्रवेश फीचे २ रुपये पाठविण्यात आले पाहिजेत. ज्याची निवड होणार नाही त्यास फी परत करण्यात येईल पत्रव्यवहार मराठीत अगर कानडी मध्ये करावा

प्रत्येक वर्षात शिकविले जाणारे विषय खालील प्रमाणे —

पहिलें वर्ष

१ प्रत्येक वनस्पतीचे गुण धर्मपरिचय वर्णन मराठी आणि प्रत्येक औषधाचे अनेक भाषातील नामाहि वगैरे

२ निदान शास्त्र त्यात प्रत्येक रोगाचें निदान (हेतु) लक्षणा आणि त्याप्रमाणे (परिक्षा करण्यास शिकविले जाईल

३ सदर निदान शास्त्रात ... आलेले विषय औषधालयात ... प्रयोग करून दाखविले जातील

दुसरे वर्ष

१ प्रत्येक रोगावर निरनिराळ्या शास्त्रीय पद्धतीनें चिकित्सा (उपचार) करण्यास शिकविले जाईल

२ प्रत्येक वनस्पत्यादिच ... तत्व विचार शिकविले जातील

३ प्रत्येक रोगावर ... विषय शिकविले जातील

तिसरे वर्ष

१ आर्य शरीर शास्त्र ... तंतु वाहिनी ... अस्थि आदि प्रत्येक भागाला ... निरनिराळ्या क्रिया प्रत्येक भागाची नावें, त्याच प्रमाणें प्रत्येक भाग चित्र रूपानं 'काढून ... व तेच विषय ... करून स्पष्ट करून देणे ' वगैरे

२ ... रोगावरील हिमफाण्टकाड्या पासून रसायना पर्यंत तयार करण्याचे प्रयोग औषधालयात समक्ष करून दाखविले जातील

३ रसायनें व कुपिपक्व रसायन यांची संपूर्ण माहिती आणि प्रत्येक विषयां विषयी संशयनिवृत्ति स्पष्ट रितीने करण्यात येईल

विशेष माहिती— खालील पत्त्यावर पत्रद्वारें अगर समक्ष मिळेल.

वि सू उमेदवारांकरिता राहण्याची सोय करून देता येईल

शिकविणारे— वैद्य जे एफ फर्नांडिस
आर्यवैद्य कारवार

पत्ता— व्यवस्थापक,
आयुर्वेदिक विद्यालय कारवार

ಪ್ರಯಾಣಿಕರ ಸೋಯಿಯಾಯಿತು.

ಡಿ. ಪಿ. ಪಿ. ಮೋಟಾರಸರ್ವಿಸ ಕಂಪನಿ, ಹಾವೇರಿ.

ಹಾವೇರಿಯಿಂದ ಶಿರ್ಶಿಗೆ ಮತ್ತು ಶಿರ್ಶಿಯಿಂದ ಹಾವೇರಿಗೆ.

ತಾರೀಖು ೧೫—೧೧—೧೯೨೩ ನೇ ಗುರುವಾರದಿಂದ ಶುರುವು

ಹೊರಡುವ ದಿವಸ ವ ಟೈಮ್.

ಶಿರ್ಶಿಯಿಂದ ಹಾವೇರಿಗೆ	ಹಾವೇರಿಯಿಂದ ಶಿರ್ಶಿಗೆ
ಗುರುವಾರ, ರವಿವಾರ, ಮಂಗಳವಾರ ಈ ದಿವಸಗಳಲ್ಲಿ ... ಹೊರಟು ... ಹೋಗುವ ಮೇಲಿಗೆ ...	ಗುರುವಾರ, ರವಿವಾರ, ಮಂಗಳವಾರ ಈ ದಿವಸಗಳಲ್ಲಿ ಹಾವೇರಿಯಿಂದ ಸಾಯಂಕಾಲದ ಬೊಂಬೈ ಮೇಲ ನೋಡಿ, ೫॥ ಘಂಟೆಗೆ ಹೊರಡುತ್ತದೆ

... ಮೋಟಾರ ಬಂಡಿಯು ಪ್ರತಿ ದಿವಸ ... ಬರುತ್ತದೆ
... ಶಿರ್ಶಿಯಲ್ಲಿ ಎಸ್ ಎಲ್ ಧಾಕಪ್ಪಾ ಇವರಲ್ಲಿ, ವ ಹಾವೇರಿ ... ನಮ್ಮ ಕಂಪನಿ ಆಫೀಸಿನಲ್ಲಿ ಸಿಗುತ್ತವೆ.
... ಉರಕೊಳ್ಳುವ ಸೋಯಿ ಮಾಡಿರುತ್ತದೆ ಇದಲ್ಲದೆ ಗೋಕರ್ಣ ... ಹೋಗಲಿಕ್ಕೆ ಸ್ಪೇಶಲ್ ಭಾಡೆಯಿಂದ ಸಿಗುತ್ತದೆ.

ಮೇನೇಜರ— ಬಿ ವ್ಹಿ ಪುಸಾಳಕರ.

ಅಮೃತಾಂಜನ.



ಇದರ ಉಪಯೋಗದಿಂದ, ವಾತವೇದನೆ, ಉಳುಕು ಇತ್ಯಾದಿ ವ್ಯಾಧಿಗಳ ಮೇಲೆ, ರಾಮಬಾಣದಂತಾಗಿರುವದು ಕಳೆದ ೨೫ ವರ್ಷಗಳಿಂದ ಇದರ ಉಪಯುಕ್ತತೆಯು ಸಹಜವಾಗಿ ಸಿದ್ಧವಾಗುತ್ತದೆ. ಲಕ್ಷಗಟ್ಟಲೆ ಕುಟುಂಬಗಳು ಅಮೃತಾಂಜನವನ್ನು ಉಪಯೋಗಿಸುತ್ತಿರುವವು. ಆದದರಿಂದ ಎಲ್ಲ ಪ್ರಕಾರದ ವೇದನೆಗಳು, ಕೆಮ್ಮು, ಬೀಗು, ಸಂಧಿವಾತ ಮೊದಲಾದ ಎಷ್ಟೋ ವ್ಯಾಧಿಗಳ ಮೇಲೆ ಇದು ಗುಣಕಾರಿಯೆಂದು ಅರಿಯದವರು ಇದರ ಪ್ರತ್ಯಕ್ಷ ಅನುಭವದಿಂದ ಖಾತ್ರಿಮಾಡಿಕೊಳ್ಳಬಹುದು ಕಿಮ್ಮತು ೧೦ ಆಣೆ ವ್ಹಿ ಪಿ ಖರ್ಚು ಬೇರೆ

ಅಮೃತಾಂಜನ ಡಿಪೋ, ಫೋರ್ಟ, ಮುಂಬಯಿ.

ನನಗಾದ ನೇಗಿಲಿಯಲ್ಲಿಯೇ ಸಂಪತ್ತಿಯು



ಅಡಕವಾಗಿರುವದು.

ನಮ್ಮ ಕಾರಖಾನೆಯಲ್ಲಿ ತಯಾರಾಗುವ ಸುಧಾರಿಸಿದ ಕಬ್ಬಿಣ ನೇಗಿಲಗಳೂ, ಕಬ್ಬಿಣ ಗಾಣಗಳೂ, ಇವೇ ಮುಂತಾದ ವ್ಯವಸಾಯದ ವಸ್ತುಗಳನ್ನು ತರಿಸಿಕೊಂಡು ನಿಮ್ಮ ಒಕ್ಕಲುತನವನ್ನು ಬೆಳೆಸಿಕೊಳ್ಳಿ ೨೫ ವರ್ಷಗಳ ಅನುಭವದಿಂದ ಈ ಸಾಮಾನುಗಳನ್ನು ತಯಾರ ಮಾಡಿರುತ್ತೇವೆ ೮೦ ೦೦೦ ರೈತರು ಕೂಡುತ್ತಾರೆ ಇಂದೇ ಪತ್ರ ಬರೆದು '...' ಎಂಬ ಕ್ಯಾಟಲಾಗು ತರಿಸಿಕೊಳ್ಳಿರಿ



ಕಿರ್ಲೋಸ್ಕರ ಬಂಧು ಲಿಮಿಟೆಡ್.

ಕಿರ್ಲೋಸ್ಕರವಾಡಿ. (ಸಾತಾರಾ)

Printed and Published by K... Keshav Shenvi (Editor) at his Star of Kanara Press, Kumta